KARNATAKA
STATE
ARCHIVES

KARNATAKA
STATE
ARCHIVES

KARNATAKA STATE ARCHIVES

KARNATAKA
STATE
ARCHIVES

RollNo:137

Roll No: 137

RollNo:137

ARS 34 APP 82

NAVAYUGA KANNADA

WEEKLY

From: 23:3:1939

Contd from Roll No: 136

ARS 34 APP 82

NAVAYUGA KANNADA
WEEKLY

From: 23:3:1939

Contd from Roll No:136

ARS 34 APP 82

NAVAYUGA KANNADA

WEEKLY

From: 23:3:1939

Contd from Roll No: 136

ಅತ್ಯಲ್ಪ ಖರ್ಚು — ಪುಣ್ಯಾರ್ಜನೆಗೆ — ಅತ್ಯುತ್ತಮ ಸಮಯ

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ವೊಂಟ್ ಬುಕ್ಕಿಂಗ್ ಆಫೀಸು.

ಮಂಗಳೂರು. 2ನೇ ಮಖೆ — ಕೊಡಿಯಾಲಬೈಲು 3ನೇ ಮಖೆ

ತಾರೀಕು 5-3-1939 ಮತ್ತು 6-3-39 **ಮಖೆಜಾತ್ರೆ** ತಾರೀಕು 13-3-1939 ಮತ್ತು 14-3-39

ಪುಣ್ಯಪ್ರದಾಯಿನಿ ನೇತ್ರಾವತಿ ಮತ್ತು ಕುಮಾರಧಾರಿ ನದಿಗಳ ಸಂಗಮಸ್ನಾನವಾದ ಉಪ್ಪಿನಂಗಡಿಯಲ್ಲಿ ನಡಿಯುವ ಮಖೆಜಾತ್ರೆ ಸಮಯದಲ್ಲಿ ಉಪ್ಪಿನಂಗಡಿಗೆ ಅತ್ಯಲ್ಪ ಖರ್ಚಿನಲ್ಲಿ ಹೋಗಿ ಸಂಗಮಸ್ನಾನಮಾಡಿ ಪುಣ್ಯಾರ್ಜನೆಮಾಡಲಿಕ್ಕನುಕೂಲ ಸಮಯ.

ಇಂತಹ ಸುಸಂಧಿಯನ್ನು ಕಳಕೊಳ್ಳದಿರಿ.

ಪ್ರಯಾಣಿಕರ ಪ್ರಯಾಣ ಸೌಕರ್ಯಗಳ ಕಡೆಗೆ ಹೆಚ್ಚಿನ ಗಮನಕೊಡಲಾಗುವುದು

JOINT MANAGERS,

The Joint Booking Office
KODIALBAIL, Mangalore

The Combined Booking Agency,
MANGALORE

Supply Agency Limited.
(BANKERS)
ESTD] UDIPI [1933

Authorised Capital Rs. 1,00,000
Subscribed & Paid up Rs. 30,760

RATE OF INTEREST FOR FIXED DEPOSITS.

3 to 6 Months 4% p. a.
7 to 11 „ 5% „
12 to 18 „ 6% „

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

General Supplies Limited.
UDIPI
PROPRIETORS.
Sri Bharata Vastu Mandira,
Thulunad Stationery Mart.
Manipal Power Press,
Thulunad Press,
Antaranga

THE BEST MEDIUM FOR ADVERTISEMENT
Yugadi Special of Antaranga
to be published on **16—4—1939**
pages exceed 100
copies exceed 10,000
single copy 0 2 0

ತುಳುನಾಡ್ ತಿಲಕ ಪಂಚಾಂಗ
ಬೆಲೆ ೦—೧—೦
ಮಾರಾಟಕ್ಕೆ ತಯಾರಾಗಿದೆ.
ವ್ಯಾಪಾರಿಗಳಿಗೆ ಧಾರಾಳ ಕಮಿಶನ್
ಬೇಕಾದವರು ತರಿಸಿಕೊಳ್ಳಬಹುದು.

PRINTED BY S. S. KARANTH AT THE THULUNAD PRESS, UDIPI
and Published by R. H. SHETTY at "NAVAYUGA" OFFICE, UDIPI, South India.

Registered No. M. 361

NAVAYUGA

ನವಯುಗ

23-3-1939



† ತ್ರಿಪುರಿ ಕಾಂಗ್ರೆಸ್ ಅಧ್ಯಕ್ಷರನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲು ತಯಾರಿಸಿದ ಚಿತ್ತಾಕರ್ಷಕ ರಥ.



ತ್ರಿಪುರಿಯಲ್ಲಿ ವಿಷ್ಣುದತ್ತ ನಗರದ ಪ್ರವೇಶದ್ವಾರವೊಂದು.

† [illegible]



Registered No. M. 361

NAVAYUGA

ನವಯುಗ

23-3-1939



† ತ್ರಿಪುರಿ ಕಾಂಗ್ರೆಸ್ ಅಧ್ಯಕ್ಷರನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲು ತಯಾರಿಸಿದ ಚಿತ್ತಾಕರ್ಷಕ ರಥ.



† ತ್ರಿಪುರಿಯಲ್ಲಿ ವಿಷ್ಣುದತ್ತ ನಗರದ ಪ್ರವೇಶದ್ವಾರವೊಂದು.

† [illegible]



ಬಲು ಸುಲಭ ದರದಲ್ಲಿ

- ಉತ್ಕೃಷ್ಟ ಊಟ ಉಪಹಾರಾದಿಗಳಿಗಾಗಿ ಇತ್ತ ಗಮನಿಸಿರಿ !
- ನಾವು ನಮ್ಮನ್ನೇ ಪ್ರಶಂಸಿಸಿ ಕೊಳ್ಳಬಾರದಷ್ಟೆ !

ಲಕ್ಷ್ಮೀನಿವಾಸ ಹಿಂದೂ ಹೋಟೆಲ್

(ಸ್ಥಾಪನೆ 1926)

ವಿಠಲ್‌ಭಾಯಿ ಪಟೇಲ್ ರೋಡ್, ಗಿರ್ಗಾಂ, ಮುಂಬಯಿ.

Lakshmi Nivas Hindu Hotal

VITTALBHAI PATEL ROAD,
GIRGAUM - - - BOMBAY

ಎರಡನೇ ಮೈಸೂರು ಕಾಂಗ್ರೆಸ್ ಅಧಿವೇಶನ ಸ್ವಾಗತ ಕಮಿಟಿಯವರ ಆಶ್ರಯದಲ್ಲಿ

ವಿ ದು ರಾ ಶ್ವ ತ್ಥ

ಖಾದಿ, ಸ್ವದೇಶಿ ಮತ್ತು ಗ್ರಾಮ ಕೈಗಾರಿಕೆಗಳ ಪ್ರದರ್ಶನ

ಎಪ್ರಿಲ್ **12**ನೇ ತಾರೀಖಿನಿಂದ **19**ನೇ ತಾರೀಖಿನ ವರೆಗೆ

ವಿದುರಾಶ್ವತ್ಥ ಮಹಾಕ್ಷೇತ್ರದಲ್ಲಿ

ನಡೆಸಲಾಗುತ್ತದೆ

ಪ್ರದರ್ಶನದ ಕೈಪಿಡಿಯೊಂದನ್ನು ಇದರೊಡನೆ ಪ್ರಕಟಿಸಲಾಗುವುದು.

ಸ್ಥಳ (ಸ್ಟಾಲು) ಮತ್ತು ಜಾಹೀರಾತುಗಳಿಗೆ ಬರೆಯಿರಿ.

ಬಿ. ಎನ್. ಎಸ್. ರಾಜನ್ ಅಂಡ್ ಬ್ರದರ್, ಟ್ರೇಡ್‌ಮಾರ್ಕ್ ಮತ್ತು ಪಬ್ಲಿಶರ್ ಮಲ್ಲೇಶ್ವರ ಪೋಸ್ಟ್, (ಬೆಂಗಳೂರು ಸಿಟಿ.)	ಅ ಥ ವಾ	ಕಾರ್ಯದರ್ಶಿ ಎಕ್ಸಿಬೀಷನ್ ಕಮಿಟಿ ಇಂಡಿಯನ್ ಪ್ರೆಸ್, ಬಳೆಪೇಟೆ ಬೆಂಗಳೂರುಸಿಟಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಅಸನ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಮೃದ್ವೀಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತು ದಿವಸಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೈಷ್ಣೋರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD

HEAD OFFICE: MANGALORE
BRANCHES: Udipi, Coondapoor, Kaup & Karkal.

Fixed deposits are now received at all the offices of the Bank at the following terms:-

3 Months Fixed Deposits at 3 p. c. per annum.
6 Months | 9 months | Fixed Deposits at 3½ p. c. per annum.
One year Fixed Deposits at 4 p. c. per annum.
Two years' Fixed Deposits at 4½ p. c. per annum.

Interest on Fixed Deposits is payable every quarter.
Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary.

THE

PANGAL NAYAK BANK

Estd.] LIMITED. [1920

ದಿ ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್.

Paid up Capital Rs. 1,82,100/-. Reserves Rs. 2,02 800/-.
PRINCIPAL OFFICE: COURT ROAD, UDIPI.
OTHER OFFICES:
UDIPI MANGALORE, KATAPADI, & KANHANGAD.

Season Deposits so as to bear interest at 4per cent per annum till the end of June 1939 are accepted.

Cumulative Deposits are also received on the usual terms.

Banking business of every description is transacted. Further particulars may be had on application.

Transport & Car Owners



ARE SPECIALLY INVITED TO VISIT
OUR SHOW ROOM
for economical transport maintenance.
CANARA AUTOMOBILES - - - - - MANGALORE

WANTED

Organisers in Taluka centres either on salary or commission basis or both Influential young men need apply. Selected candidates should be prepared to deposit a sum of Rs. 100/-. For full particulars apply with an anna stamp to *Box No. 5,*
C/o **NAVAYUGA. UDIPI**

— ಕೂದಲು ರಂಗು ತೈಜಿಸಿರಿ —

ಈ ತೈಲದ ಲೇಪನಮಾತ್ರದಿಂದಲೇ ಕೂದಲು ಬೀಳುವುದು ನಿಲ್ಲುವುದು; ನರೆತ ಕೂದಲು ಪೂರ್ಣ ಕಪ್ಪಾಗಿ ಬೆಳೆಯಲು ಸಹಾಯವಾಗುವುದು. ಸಾವಿರಾರು ಸರ್ಟಿಫಿಕೇಟುಗಳು ನಮಗೆ ದೊರೆತಿವೆ. ಪ್ರತೀ ಸಿಸೆ ತೈಲದ ಯೋಗ್ಯತೆಯನ್ನು ಬೀರುವುದು. ಅಪ್ರಯೋಜನಕಾರಿಯೆಂದು ರುಜುಪಡಿಸಬಲ್ಲವರಿಗೆ ಕಟ್ಟಿದ ಹಣ ವಾಪಾಸು ಕೊಡುವ ಶರ್ತವಿದೆ. ಅಲ್ಪ ಸ್ವಲ್ಪ ನರೆತ ಕೂದಲುಗಳಿಗೆ ಬೇಕಾಗುವ ತೈಲಕ್ಕೆ ರೂ. 4, ಕಾಲುಪಾಲಿಗೂ ಮಿಕ್ಕಿರುವುದಾದರೆ ರೂ.7 ರಷ್ಟು ಬೆಲೆಯ ತೈಲವು ಬೇಕಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲೇ.

Hazra & Co,
P. O Behar Nersery(Darbhanga.

ESTD 1921
FOUNDER
Sri. A. B. SHETTY, M.L.A.
Parliamentary Secretary, Govt of Madras
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮
ಸಂಚಿಕೆ ೨೯
ಉಡುಪಿ, ಗುರುವಾರ ೨೩-೩-೧೯೩೯
Udipi, Thursday 23-3-1939
Vol. XVIII
No. 29

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ. ೩—೪—೦
೬ ತಿಂಗಳಿಗೆ ರೂ. ೧—೧೨—೦.
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ಸಹಸಂಪಾದಕ:
ಕೆ. ಎಚ್. ಶೆಟ್ಟಿ.

* ವಿದೇಶ ವಿಚಾರ *

ಹಿಟ್ಲರನು ಜೆಕೊಸ್ಲೋವೇಕಿಯವನ್ನು ಪೂರಾ ನುಂಗಿದ—

"ಮುಸ್ಸೋಲಿನಿಯು ಹಾಗೆ ತಿಂಗಳುಗಟ್ಲೆ ಸನ್ನಾಹಮಾಡುತ್ತ ತನ್ನ ಗುರಿಯೆಲ್ಲಿ ಎಂದು ಜಗತ್ತಿಗೆ ಸಾರುತ್ತ ಹೋಗುವುದು ನನಗೆ ಸೇರುವುದಿಲ್ಲ. ಕೊಳ್ಳೆಗೆ ಮುಂಜಾಗ್ರತೆ ಕೊಡದೆ ನನ್ನ ಬಲವನ್ನೆಲ್ಲ ಪ್ರಯೋಗಿಸಿ ಫಕ್ಕನೆ ಹಾರಿ ಹಿಡಿದು ಮತ್ತೇನಾಗುತ್ತೆಂದು ಸುತ್ತ ನೋಡುವುದು ನನ್ನ ಮೆಚ್ಚಿನ ಉಪಾಯ" ಹೀಗೆಂದು ಮೂರು ವರುಷಗಳ ಹಿಂದೆ ಹಿಟ್ಲರನು ಹೇಳಿದ್ದ. ಹೇಳಿದ್ದನ್ನು ಮಾಡಿಯೇ ತೋರಿಸಿದ. ಮುಸ್ಸೋಲಿನಿಯು ಈ ಮೂರು ವರುಷಗಳಿಂದ ಸ್ಪೈಯಿನಿನ ಹಿಂದೆ ನಿಂತು ಪೇಚಾಡಿಯೂ ಕೊನೆಗೆ ತನಗೇನು ಲಾಭ ಸಿಕ್ಕೀತೆಂದು ಪಿಳಿ ಪಿಳಿ ನೋಡುತ್ತಿದ್ದಂತೆಯೇ ಹಿಟ್ಲರನು ಯುದ್ಧರಂಗಕ್ಕಿಳಿಯದೆಯೇ ಮಧ್ಯ ಯುರೋಪದ ಒಡೆಯನಾಗಿ ಬಿಟ್ಟ! ಕಳೆದ ಮಾರ್ಚಿಯಲ್ಲಿ ಸದ್ದಿಲ್ಲದೆ ಆಸ್ಟ್ರಿಯವನ್ನು ಬಗಲಲ್ಲಿ ಹಾಕಿಕೊಂಡ. ಸೆಪ್ಟಂಬರದಲ್ಲಿ ಜಕೋಸ್ಲೋವೇಕಿಯದ ಒಂದು ತುಂಡಾದ ಸುಡೇಟನನ್ನು ಒಳಗೆ ಹಾಕಿದ. ಈಗ ಉಳಿದುದನ್ನು ನುಂಗಿಬಿಟ್ಟ. ಪ್ರತಿಸರ್ತಿಯೂ ಇಲ್ಲಿಗಾಯಿತು, ಇನ್ನು ಮುಂದುವರಿಸುವುದಿಲ್ಲ. ನನಗಿನ್ನು ರಾಜ್ಯವೇ ಬೇಡ ಎಂಬ ರಾಗ ಹಾಕುತ್ತಲೇ ಬ್ರಿಟಿಷರನ್ನೂ ಫ್ರೆಂಚರನ್ನೂ ಮಂಕುಗೊಳಿಸಿಬಿಟ್ಟ. ಇದನ್ನು ನಂಬಿ ಎಲ್ಲರ ದೃಷ್ಟಿಯೂ ತಲೆಯೂ ಸ್ಪೈಯಿನ್ ಮತ್ತು ಭೂಮಧ್ಯ ಸಾಗರದ ಕಡೆಗೋ ಫ್ರೆಂಚ ಇಟಾಲಿಯನ ಪ್ರಶ್ನೆಯಲ್ಲೋ ಇರುವಾಗ ಅತ್ತ ಹಿಟ್ಲರನು ತನ್ನ ಚದುರಂಗದ ಕಾಯಿಯನ್ನು ಜೆಕೊಸ್ಲೋವೇಕಿಯದ ಕಳದಲ್ಲಿ ಬಲವಾಗಿ ಒತ್ತಿಟ್ಟ ಮೇಲೆಯೇ ಎಲ್ಲರೂ ಮೂಗಿನ ಮೇಲೆ ಬೆರಳಿಟ್ಟು ಎಲಾ ಹೀಗಾಟವಾಡಿದನೇ! ಆಗಲಿ, ಇನ್ನೇನು ಮಾಡಲಿಕ್ಕಾಗುತ್ತದೆ ಎಂದು ಬೆರಗಾಗಿ ಸುಮ್ಮಗಿದ್ದಾರೆ. ಹಿಟ್ಲರನ ಕಾಯಿ ಹೀಗೆಯೇ ಇನ್ನೆರಡು ಕಳ ಹಾರಿ ರಶ್ಯದ ಗಡಿ ಮುಟ್ಟಲಿಕ್ಕಿದೆ ಎಂದು ಯಾವಾಗ ಎಂಬುದು ಆಟಗಾರನಿಗೇ ಗೊತ್ತಿಲ್ಲದೆ ನೋಟಗಾರರಿಗೆ ಸೋವೂ ತಿಳಿಯದು. ಹಿಟ್ಲರನು ತಾನು ಶಾಂತಿಪ್ರಿಯನೆಂಬುದರ ರಹಸ್ಯ ಇದು. ಯಾವುದರ ಮೇಲೆ ತಾನು ಹಾರಲಿಕ್ಕಿರುವನೋ ಆ ಗಡಿಯಲ್ಲಿ ತನ್ನ ಮಹಾಸೇನಾ ಸಮೂಹವನ್ನು ಒಂದೆರಡು ದಿನಗಳಲ್ಲಿ ಕೂಡಿ ಬರುವಂತೆ ಒಂದು ಆಜ್ಞೆ ಕೊಡುವನು. ಯಾಕೆಂದು ಕೇಳಲು ಯಾರಿಗೂ ಅಧಿಕಾರವಿಲ್ಲ. ಆದಾದ ಕೂಡಲೇ ಆ ನಿರ್ಬಲರಾಜ್ಯಕ್ಕೆ ನೀವು ಸುಮ್ಮನಿರಿ, ನೀವು ಜರ್ಮನರು. ಈಗ ಪ್ರತ್ಯೇಕವಾಗಿದ್ದು ಕೆಡಬೇಡಿರಿ. ನಮ್ಮ ಜರ್ಮನ್ ಮಹಾ ಸಾಮ್ರಾಜ್ಯದ ಪ್ರಜೆಗಳಾಗಿ ಸುಖದಿಂದ ಬಾಳಿ. ನಮ್ಮ ಸೈನ್ಯ ನಿಮ್ಮ ನಾಡೊಳಗೆ ಪ್ರವೇಶಿಸುತ್ತದೆ. ಗಲಾಟೆ ಮಾಡಬೇಡಿ! ಮಾಡಿದರೆ, ನೋಡಿ! ನಿಮ್ಮನ್ನು ಧೂಳು ಹಾರಿಸುವ ಮಹಾಸ್ತ್ರವಿದೆ! ವಿಮಾನ, ಬಾಂಬು, ಫಿರಂಗಿ! ಜೋಕೆ! ಸುಮ್ಮಗಿದ್ದು ಬಿಡಿ ನಿಮಗೆಲ್ಲ ನಾನಿದ್ದೇನೆ. ಎಂದು ಮತ್ತೊಂದು ಆಜ್ಞೆ ಕೊಡುತ್ತಾನೆ. ರಾಜ್ಯವು ಒಳಗೆ ಬೀಳುತ್ತದೆ. ಇದೀಗ ಮೊನ್ನೆ ಜೆಕೋಸ್ಲೋವೇಕಿಯವನ್ನು ಪೂರಾ ನುಂಗಿದ ಹಿಟ್ಲರನ ನೀತಿ.

ಲಂಡನಿನಲ್ಲಿ—ಪೆಲೆಸ್ತಾಯಿನ್ ಪ್ರಶ್ನೆಗೆ ಬ್ರಿಟಿಷರ ಮಧ್ಯಸ್ಥಿಕೆಯ ನಿರ್ಧಾರ

ಪೆಲೆಸ್ತಾಯಿನಿನ ಅರಬ್ ಮತ್ತು ಯೆಹೂದಿಗಳೊಳಗೆ ಸಂಧಾನಮಾಡಲಿಕ್ಕಾಗಿ ಬ್ರಿಟಿಷ್ ಸರಕಾರವು ಒಂದು ಪರಿಷತ್ತನ್ನು ಲಂಡನಿನಲ್ಲಿ ಜರಗಿಸಿ ಉಭಯ ಪಕ್ಷದ ಹೇಳಿಕೆಗಳನ್ನೂ ಕೇಳಿ ಈಗ ತನ್ನ ಮಧ್ಯಸ್ಥಿಕೆಯ ತೀರ್ಮಾನವನ್ನು ಮುಂದಿಟ್ಟಿದೆ.—ಪೆಲೆಸ್ತಾಯಿನಿನಲ್ಲಿ ಅರಬ್ಬರೂ ಯೆಹೂದಿಗಳೂ ಅನ್ಯೋನ್ಯ ಮಿತ್ರರಾಗಿ ಸೌಹಾರ್ದದಿಂದ ಕೂಡಿ ತಮ್ಮದೇ ಆದ ಒಂದು ರಾಜ್ಯಭಾರ ಪದ್ಧತಿಯನ್ನು ಮಾಡಿಕೊಳ್ಳುವ ತನಕ—ಅವಧಿಯಿಲ್ಲದ ಈ ತತ್ಕಾಲದಲ್ಲಿ—ಬ್ರಿಟಿಷ್ ಹೈ ಕಮಿಷನರರ ಅಂಕೆಗೊಳಗಾಗಿರುವ ಒಂದು ಎಡ್ವೈಜರಿ ಬೋರ್ಡ್ ಮತ್ತು ಎಕ್ಸಿಕ್ಯೂಟಿವ್ ಕೌನ್ಸಿಲ್ ಮೂಲಕ ಪೆಲೆಸ್ತಾಯಿನಿನ ಆಳ್ವಿಕೆ ನಡೆಯಬೇಕು. ಈ ಎಕ್ಸಿಕ್ಯೂಟಿವ್ (ಕಾರ್ಯನಿರ್ವಾಹಕ) ಮತ್ತು ಎಡ್ವೈಜರಿ (ಮತಬೋಧಕ) ಸಭೆಗಳಿಗೆ ಸದಸ್ಯರನ್ನು ಅರಬ್ ಮತ್ತು ಯೆಹೂದಿಗಳು ಚುನಾಯಿಸಿ ಕಳುಹಿಸುವುದಲ್ಲ. ಒಂದನೆಯದರಲ್ಲಿ ಬ್ರಿಟಿಷ್ ಅಧಿಕಾರಿಗಳೂ ಹೈ ಕಮಿಷನರರಿಂದ ನಾಮಧಾರಿಗಳಾಗುವ ಅರಬ್ ಮತ್ತು ಯೆಹೂದಿ ಮಂತ್ರಿಗಳೂ ಇರುವರು. ಈ ಮಂತ್ರಿಗಳಿಗೆ ಯಾವ ಖಾತೆಯ ಅಧಿಕಾರವೂ ಕೊಡಲ್ಪಡುವುದಿಲ್ಲ. ಎರಡನೆಯದರಲ್ಲಿ ಅರಬ್ ಮತ್ತು ಯೆಹೂದಿಗಳ ಪ್ರಜಾಸಂಖ್ಯಾ ಪರಿಮಾಣಾನುಸಾರ ಪ್ರತಿನಿಧಿಗಳು ನಾಮಧಾರಿಗಳಾಗಿ (ಚುನಾಯಿತರಾಗಿಯಲ್ಲ) ಇದ್ದು ಹೈ ಕಮಿಷನರ ಅಂಕೆಗೊಳಗಾಗಿ ಸರಕಾರವನ್ನು ನಡೆಯಿಸಬೇಕು. ಪ್ರಕೃತ ಐದು ವರುಷಗಳ ತನಕ ವಾರ್ಷಿಕ ಹದಿನೈದು ಸಾವಿರದಂತೆ ಯೆಹೂದಿಗಳು ಹೊಸದಾಗಿ ಬಂದು ಅಲ್ಲಿ ನೆಲೆಸಲು ಬಿಡಲಾಗುವುದು. ಆಮೇಲೆ ಈ ವಿಷಯ ಪುನರಾಲೋಚನೆಮಾಡತಕ್ಕದ್ದು. ಪೆಲೆಸ್ತಾಯಿನು ಮೂರು ವಿಭಾಗಗಳಾಗಿ ಮಾಡಲ್ಪಡುವುದು. ಮೊದಲನೆಯದರಲ್ಲಿ ಯೆಹೂದಿಗಳು ಇಚ್ಛಾನುಸಾರ ಭೂಮಿಯನ್ನು ಕೊಂಡುಕೊಳ್ಳಬಹುದು. ಎರಡನೆಯದರಲ್ಲಿ ಅದಕ್ಕೊಂದು ಮಿತಿ ಇಡಲಾಗುವುದು. ಮೂರನೆಯದರಲ್ಲಿ ಭೂವಿಕ್ರಯ ನಿಷೇಧಿಸಲಾಗುವುದು. ಅಂತೂ ಬ್ರಿಟಿಷ್ ಸರಕಾರದ ಸೆರಗು ಹಿಡಿದ ಮಗುವಿಗೆ ಏನಾದರೂ ಚೂರು ತಿಂಡಿಕೊಟ್ಟು ಹಿಡಿಯದುದನ್ನು ಗಮನಿಸಿ ಬಗ್ಗಿಸಿ ಪೆಲೆಸ್ತಾಯಿನಿನಲ್ಲಿ ತನ್ನ ಅಧಿಕಾರವನ್ನು ಬಲಗೊಳಿಸುವ ಹಂಚಿಕೆಯು ಈ ಮಧ್ಯಸ್ಥಿಕೆಯಲ್ಲಿ ಒಡೆದು ಕಾಣುತ್ತದೆ.

ಬ್ರಿಟಿಷ್ ಪಾರ್ಲಿಮೆಂಟ್ ಈಗ ಚೆನ್ನಾಗಿ ಕಣ್ತೆರೆದಿದೆ

ವಿದೇಶ ರಾಜತಂತ್ರಗಳಿಂದ ಚೇಂಬರ್ಲೇನನು ಮತ್ತು ಹಾಲಿಫೇಕ್ಸರು ಯುರೋಪಿಯ ಶಕ್ತಿಗಳಿಗೆ ಬಗ್ಗಿ ಬಗ್ಗಿ ಮಸ್ತು ಗಡ್ಡೆ ಬೀಳುತ್ತದೆಂಬುದು ಈಗ ಬ್ರಿಟಿಷ್

ನೆ. ಚೇಂಬರ್ಲೇನ್

ಸಿಂಹಕ್ಕೆ ಗೊತ್ತಾಗಿದೆ. ಹಿಟ್ಲರ್, ಮುಸ್ಸೋಲಿನಿ, ಫ್ರಾಂಕೋ ಇವರಿಗೆಲ್ಲ ದೊಗ್ಗೆಸಲಾಮು ಹಾಕಿ ಮಾಡಿಕೊಳ್ಳುವ ಇತ್ಯರ್ಥಗಳನ್ನು ಅವರು ಅವರಿಗನುಕೂಲ ಕಾಲ ಪ್ರಾಪ್ತಗಿದಾಗ ಇವರೊಡನೆ ಹೇಳದೆ ಕೇಳದೆ ಮುರಿದುಬಿಡುತ್ತಾರೆಂಬುದು ಈಗ ಬ್ರಿಟಿಷ್ ಪ್ರಭುತ್ವಕ್ಕೆ ಚೆನ್ನಾಗಿ ಒಗೆದುಬಿಟ್ಟಿದೆ. ಮ್ಯುನಿಚ್ ಒಪ್ಪಂದವು ಬರಸ್ಕಾಯಿಯೆಂದೂ ಹಿಟ್ಲರನು ಉಳಿದ ಜೆಕೋಸ್ಲೋವೇಕಿಯವನ್ನು ನುಂಗಲಾರನೆಂದೂ ಜೆಕ್ ಸರಕಾರಕ್ಕೆ ಚೆಂಬರ್ಲೇನರು ಅಭಯ ಮಿಲಿಯ ಪವನು ಸಾಲಕೊಟ್ಟಿದ್ದಾರೆ. ಈಗ ಜೆಕೋಸ್ಲೋವೇಕಿಯ ರಾಷ್ಟ್ರವು ನಿರ್ನಾಮವಾಯಿತು. ಆ ಹಣಕ್ಕೆ ಹೊಣೆಯಾರೆಂದು ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಬರಲು, ಹೀಗಾದೀತೆಂದು ಯಾರು ನೆನೆಸಿದ್ದರು ಎಂದು ಚೇಂಬರ್ಲೇನರ ಉತ್ತರ. ಅನುದಿನದಿಂದ ಜಗತ್ತಿನ ದೃಷ್ಟಿಯಲ್ಲಿ ತಮ್ಮ ಹೇಡಿತನವನ್ನು ಪ್ರದರ್ಶಿಸಿಯೂ ತಮ್ಮ ಸ್ಥಾನವು ಭದ್ರವಾಗದೆ ಅಪಾಯಕರವಾಗಿ ಪರಿಣಮಿಸುವಂತಹ ಧೋರಣೆಯನ್ನು ಕೈಗೊಂಡ ಚೇಂಬರ್ಲೇನರ ವಿದೇಶ ಮಂತ್ರಿತ್ವದ ಪಾರ್ಲಿಮೆಂಟಿನ ಭರವಸೆ ತಪ್ಪಿದೆ. ಹಿಟ್ಲರನ ಮೇಲಿನ ವಿಶ್ವಾಸವು ಕೆಟ್ಟು ಅಲ್ಲಿರುವ ಬ್ರಿಟಿಷ್ ರಾಯಭಾರಿಯನ್ನು ಹಿಂದೆ ಕರೆಯುವ ನಿಶ್ಚಯವಾಗಿದೆ. ಹಿಟ್ಲರ್ ಮುಸೋಲಿನಿ ಫ್ರಾಂಕೋರಿಗೆ ಎದುರಾಗಿ ವರ್ತಿಸುವ ಧೈರ್ಯವಿರುವ ಚರ್ಚಿಲ್ ಮತ್ತು ಎಂತೋನಿ ಈಡನ್ನರನ್ನು ವಿದೇಶ ಮಂತ್ರಿಗಳಾಗಿ ನೇಮಿಸುವ ಯೋಚನೆ ನಡೆಯುತ್ತಿದೆ.

ಸ್ಪೈನಿನಲ್ಲಿ ಫ್ರಾಂಕೋ ಸರಕಾರದ ನೀತಿ

ಬ್ರಿಟಿಷರು ಮತ್ತು ಫ್ರೆಂಚರು ದಂಗೆಗಾರ ಫ್ರಾಂಕೋವನು ಸ್ಪೈನಿನಲ್ಲಿ ಬಂಡಾಯೆಬ್ಬಿಸಿ ಸ್ಥಾಪಿಸಿ ಸರಕಾರವನ್ನು ಅಂಗೀಕರಿಸುವುದರ ತನಕ ಅವರು ಮನಸ್ಸಿನಲ್ಲಿ ಮುಂದಿಗೆ ಮೆಲ್ಲುವ ಒಲವನ್ನು ಫ್ರಾಂಕೋ ತೋರಿಸಿದ. ಇವನು ಹಿಟ್ಲರ್ ಮುಸೋಲಿನಿಗಳನ್ನು ಬಿಟ್ಟು ತಮ್ಮ ಪಕ್ಷ ಸೇರಿಯಾನೆಂಬ ಭ್ರಮೆಯಿಂದ ಬ್ರಿಟಿಷ್ ಫ್ರೆಂಚ್ ಸರಕಾರಗಳೆರಡೂ ಯಾವ ಶರ್ತವನ್ನೂ ಹಾಕದೆ ಫ್ರಾಂಕೋ ಸರಕಾರವನ್ನು ಸ್ಪೈನಿನ ರಾಷ್ಟ್ರಸರಕಾರವೆಂದು ಅಂಗೀಕರಿಸಿದವು. ಅಷ್ಟಾದ ಮೇಲೆ ಈಗ ಫ್ರಾಂಕೋ ಬಣ್ಣ ಬದಲಾಯಿಸಿ ನಿಜರೂಪ ತೋರಿಸಿದ್ದಾನೆ. ಸ್ಪೈನಿನ ಸುತ್ತಲ ಕಡಲಿಗೆ ನಾನೇ ಅಧಿಪತಿ. ಬ್ರಿಟಿಷರ ಹಡಗುಗಳು ಅಲ್ಲಿ ನನ್ನ ಅಂಕೆಗೊಳಗಾಗಿ ಚಲಿಸಬೇಕು ಎನ್ನುತ್ತಿದ್ದಾನೆ. ಮಾತ್ರವಲ್ಲ, ಹಿಟ್ಲರ್ ಮುಸಲೋನೀ ರಾಹಿಗಳೊಂದಿಗೆ ಫ್ರಾಂಕೋವೂ ಯೂ ಒಂದಾಗಿ ಕೂಡಿಯುರೋಪಿನ ಪ್ರಬಲ ಶಕ್ತಿಯಾಗುವ ಹಂಚಿಕೆ ನಡೆಯುತ್ತಿದೆ. ಸದ್ಯದಲ್ಲಿಯೇ ಈ ತ್ರಿಮೂರ್ತಿಗಳು ಕೂಡಿ ಮಾತಾಡಿ ಒಂದು ಒಪ್ಪಂದವಾಗುತ್ತದೆಂದು ತಿಳಿಯಲಾಗಿದೆ.

ರಶ್ಯದಲ್ಲಿ ಸರ್ವಾಧಿಕಾರಿ ಸ್ಟೇಲಿನ್‌ರ ಘರ್ಜನೆಯ ಉದ್ಘೋಷಣೆ—

ಹಿಟ್ಲರನ ಕಣ್ಣು ಎತ್ತ ಕಡೆ ಇದೆ ಎಂಬುದು ಸ್ಟೇಲಿನರಿಗೆ ಗೊತ್ತು. ಬ್ರಿಟಿಷ್ ಫ್ರೆಂಚ್ ಸರಕಾರಗಳಂತೆ ರಶ್ಯಕ್ಕೆ ದೃಷ್ಟಿಮಾಂದ್ಯ ಬಂದಿಲ್ಲ. ಹಿಟ್ಲರನು ಇನ್ನೊಂದು ಹೆಜ್ಜೆ ಮುಂದಿಟ್ಟು ರುಥೇನಿಯವನ್ನು ಮುಕ್ತಿ ರಶ್ಯದ ಫಲವತ್ತಾದ ಯುಕ್ರೇಯಿನ್ ಪ್ರಾಂತದವರಲ್ಲಿ ಸ್ವತಂತ್ರ ರಾಷ್ಟ್ರದ ಚಳವಳಿ ಎಬ್ಬಿಸಿ ಪ್ರೋತ್ಸಾಹಿಸಿ ತನಗೆ ಆಹ್ವಾನೆಯ ನೆಪದಿಂದ ಅಲ್ಲಿಗೆ ಹಾರಿ ಅದನ್ನೂ ನುಂಗಬೇಕೆಂಬ ಹಂಚಿಕೆಯುಳ್ಳವನೆಂದು ಸ್ಟೇಲಿನನಿಗೆ ಗೊತ್ತಿದೆ. ಆದುದರಿಂದ ಈಗಾಗಲೇ ಕಟುವಾಗಿ ಎಚ್ಚರಿಕೆ ಕೊಟ್ಟಿದ್ದಾನೆ. ನಮ್ಮ ಗಡಿಯೊಳಗೆ ಕಾಲಿಟ್ಟು ತಂಟೆ ಮಾಡಬೇಕೆಂದು ಬರುವ ತುಂಟರನ್ನು ಕುಟ್ಟಿ ಕಾಲು ಮುರಿದೋಡಿಸಲು ನಾವು ಸದಾ ಸಿದ್ಧರಾಗಿಯೇ ಇದ್ದೇವೆ. ಯುಕ್ರೇಯಿನಿನ ಮೇಲೆ ಬರುವವರನ್ನು ಧ್ವಂಸಗೊಳಿಸಲು

ಸ್ವದೇಶ ವಿಚಾರ

ಗಾಂಧೀ ವೈಸರಾಯರ ಭೇಟಿ ಯಾಯಿತೇ?

ಹೌದು. ವೈಸರಾಯರಿಗೂ ಗಾಂಧೀಜಿಗಳಿಗೂ ಎರಡು ದಿನ ತಾಸುಗಟ್ಟಲೆ ಮಾತುಕತೆ ನಡೆದು ಈಗಿನ ಪತ್ರವಾಖಲೆಗಳ ವಿಚಾರ ವಿಮರ್ಶೆಗಳಾಗಿ ನ್ಯಾಯಾಧೀಶರ ಮುಂದೆ ರಾಜಕೋಟೆಯ ವಿಷಯವಾಗಿ ತೀರ್ಮಾನಕ್ಕಿಡುವ ಪಕ್ಷಗಳ ತೀರ್ಮಾನವಾಗಿದೆ. ಯಾವ ಕಡೆಯಿಂದಲೂ ವಕಾಲತು ಬೇಡ. ಫೆಡರಲ್ ಕೋರ್ಟಿನ ಚೀಫ್ ಜಸ್ಟೀಸ್ ಸರ್ ಮೋರಿಸ್‌ರ ಮುಂದೆ ಎರಡು ಪ್ರಶ್ನೆಗಳನ್ನಿಟ್ಟರೆ ಸಾಕು. ಆ ವಿಷಯ ಅವರು ಕೊಡುವ ಎವಾರ್ಡ (ಮಧ್ಯಸ್ಥಿಕೆಯ ತೀರ್ಪು) ಮಾನ್ಯವಾಗಬೇಕು. ಪ್ರಶ್ನೆಗಳೇನೆಂದರೆ, ೧ ಸುಧಾರಣಾ ಸಮಿತಿಯಲ್ಲಿ ಸದಸ್ಯರನ್ನು ನೇಮಿಸುವ ವಿಷಯ ಠಾಕೋರಸಾಹೇಬರು ಸರದಾರ ಪಟೇಲರಿಗೆ ಬರೆದ ಪತ್ರದ ಮತ್ತು ದಶಂಬರ ೨೬ರಲ್ಲಿ ಕೊಟ್ಟ ಸಂಸ್ಥಾನದ ಪ್ರಕಟನೆಯ ದೃಷ್ಟಿಯಲ್ಲಿ ನೋಡಿ, ಸರದಾರ ಪಟೇಲರು ಹೆಸರು ಹೇಳುವ ಏಳು ಅನಧಿಕಾರಿ ಸದಸ್ಯರಲ್ಲದೆ ಜಾತೀಯತೆಯ ಪ್ರಾತಿನಿಧ್ಯದ ಕಾರಣದಿಂದ ಹೆಚ್ಚಿನ ಸದಸ್ಯರನ್ನು ಸಮಿತಿಗೆ ನೇಮಿಸುವ ಅಧಿಕಾರವನ್ನು ಠಾಕೋರರು ಕಳೆದುಕೊಂಡಿದ್ದಾರೋ? ೨ ಸರದಾರ ಪಟೇಲರು ಹೆಸರು ಹೇಳುವ ಏಳು ಜನರನ್ನು ಠಾಕೋರರು ನೇಮಿಸತಕ್ಕದ್ದೋ? ಅಥವಾ ಆ ವಿಷಯದಲ್ಲಿ ಯುಕ್ತಾಯುಕ್ತತೆಯನ್ನು ನೋಡಿ ಕೆಲವು ಹೆಸರುಗಳನ್ನು ಆರಿಸಿ ಕೆಲವನ್ನು ಬಿಡುವ ಅಧಿಕಾರವು ಠಾಕೋರ ಸಾಹೇಬರಿಗೆ ಇದೆಯೇ? ೩. ಸಂಸ್ಥಾನದ ಪ್ರಕಟಣೆಯಲ್ಲಿ ಒಕ್ಕಣಿಸಿರುವ "ಅತ್ಯಂತ ವ್ಯಾಪ್ತಿಯುಳ್ಳ ಅಧಿಕಾರ" ಪ್ರಜೆಗಳಿಗುಂಟಾಗುವಂತೆ ಸುಧಾರಣಾಸಮಿತಿಯು ಸೂಚನೆಗಳನ್ನು ಕೊಡಬೇಕೆಂದಿರುವ ಮಾತಿನ ವ್ಯಾಪ್ತಿಕ್ಷೇತ್ರದ ಅರ್ಥವೇನಿದೆ? ಸಮಿತಿಯು ಸಂಪೂರ್ಣ ಜವಾಬ್ದಾರಿಯ ರಾಜ್ಯಭಾರ ಪದ್ಧತಿಯನ್ನು ಶಿಫಾರಸು ಮಾಡಬಹುದೊ? ಸಮಿತಿಯ ಶಿಫಾರಸನ್ನು ಆ ಮೂಲಾಗ್ರವಾಗಿ ಠಾಕೋರರು ಪ್ರಯೋಗಕ್ಕಿಳಿಸಲು ಬದ್ಧರಾಗಿದ್ದಾರೋ? 'ಪರ್ಯಾಲೋಚಿಸಿ ಆಚರಣೆಗೆ ತರುವ ಸಂಕಲ್ಪವಿದೆ' ಎಂಬ ಮಾತಿನ ವ್ಯಾಪ್ತಿ ಎಷ್ಟು?

ಈ ಎರಡು ಪ್ರಶ್ನೆಗಳು ಅತ್ಯವಸರದವುಗಳಾಗಿರುವುದರಿಂದ ನ್ಯಾಯಾಧೀಶರು ಒಂದು ವಾರದೊಳಗೆ ತೀರ್ಮಾನಕೊಡುವರಾಗಿ ತಿಳಿದು ಬಂದಿದೆ. ಆ ತನಕ ಗಾಂಧೀಜಿಗಳೂ ಡಿಲ್ಲಿಯಲ್ಲಿಯೇ ಇರುವರಾಗಿ ತಿಳಿದು ಬಂದಿದೆ.

ರಾಷ್ಟ್ರಪತಿ ಸುಭಾಷ್ ಭೋಸರು ಆರೋಗ್ಯವೇ?

ಅವರು ತ್ರಿಪುರಿಯಿಂದ ಹೊರಟವರು ಕಲ್ಕತ್ತಾಕ್ಕೆ ಹೋಗಲಿಲ್ಲ. ಅದಕ್ಕೆ ಸಮೀಪದ ಜಾನಬಾಗ್ ಎಂಬಲ್ಲಿ ಇಳಿದು ಅಲ್ಲೇ ಆರೋಗ್ಯ ಹೊಂದುವ ತನಕ ಉಳಿಯುವ ವ್ಯವಸ್ಥೆ ಮಾಡಲಾಗಿದೆ. ಸಾವಧಾನವಾಗಿ ಗುಣಹೊಂದುತ್ತಿದ್ದಾರೆ.

ಈಜಿಪ್ತದ ನಿಯೋಗ ಮಂಡಳಿಯ ಸಂಚಾರ-ತ್ರಿಪುರಿ ಕಾಂಗ್ರೆಸ್ಸ ಅಧಿವೇಶನಕ್ಕೆ

ತ್ರಿಪುರಿ ಕಾಂಗ್ರೆಸ್ ಅಧಿವೇಶನಕ್ಕೆ ಸಹಾನುಭೂತಿ ಪ್ರದರ್ಶನಾರ್ಥವಾಗಿ ಈಜಿಪ್ತದಿಂದ ಬಂದ ವಾಫ್ಡಿಸ್ಟ (ಪ್ರಜಾಪಕ್ಷ) ನಿಯೋಗಮಂಡಳಿಯವರು ಅಧಿವೇಶನ ಮುಗಿದ ಮೇಲೆ ಅಲಹಾಬಾದ್, ಡಿಲ್ಲಿ ಕಲ್ಕತ್ತಾ ಮುಂತಾದ ಪ್ರಾಮುಖ್ಯ ನಗರಗಳನ್ನು ಸಂದರ್ಶಿಸುತ್ತಿರುವರು. ಹೋದಲ್ಲೆಲ್ಲ ಅವರಿಗೆ ಆದರಪೂರ್ವಕ ಸ್ವಾಗತ ಕೊಡಲಾಗಿದೆ. ಈಜಿಪ್ತ ಸರಕಾರದ ಪ್ರಜಾಪಕ್ಷ ಮುಂದಾಳಾದ ಮುಸ್ತಫಾ ನಾಹಾಸ್ ಪಾಶಾರವರು ತಾವು ಕಳುಹಿಸಿದ ಈ ನಿಯೋಗ ಮಂಡಳಿಗೆ ಕಾಂಗ್ರೆಸ್ಸಿನಲ್ಲಿಯೂ ಇತರ ಎಲ್ಲ ಕಡೆಗಳಲ್ಲಿಯೂ ತೋರಿರುವ ಪ್ರೇಮಾದರಗಳಿಗಾಗಿ ಗಾಂಧೀಜಿಯವರಿಗೆ ಧನ್ಯವಾದಾರ್ಪಣೆಯ ತಂತಿ ಕಳುಹಿಸಿರುತ್ತಾರೆ. ಅಲ್ಲಾಹಾಬಾದಿನಲ್ಲಿ ಈ ನಿಯೋಗಮಂಡಳಿಗೆ ಸಾರ್ವಜನಿಕ ಸುಸ್ವಾಗತವನ್ನು ನೆಹರೂಗಳ ಮುಂದಾಳುತನದಲ್ಲಿ ಇತ್ತಾಗ ಮಂಡಳಿಯ ನಾಯಕರಾದ ಮಹಮ್ಮದ್ ಸೈಯ್ಯದ್ ಬೇ ಇವರು ಭಾಷಣಗೈಯುತ್ತ, ಈಜಿಪ್ತದಲ್ಲಿ ನಾವು ಬ್ರಿಟಿಷ್ ಪ್ರಭುತ್ವವನ್ನು ಗೆದ್ದು ಪ್ರಜಾಪ್ರಭುತ್ವದ ಸರಕಾರವನ್ನು ಸಂಸ್ಥಾಪಿಸಿದುದು ನಮ್ಮ ಒಂದುತನದಿಂದ. ಪ್ರಜೆಗಳ ಬೇರೆ ಬೇರೆ ತಂಡ ಪಂಗಡಗಳೆಲ್ಲ ಒಂದುಗೂಡಿತು. ಬ್ರಿಟಿಷರು ನಮ್ಮೊಳಗೆ ಪಕ್ಷವಿಪಕ್ಷವಾಗುವಂತೆ ಎಷ್ಟು ಭೇದೋಪಾಯವನ್ನು ಹೂಡಿದರೂ ಅದರ ಆಕರ್ಷಣೆಗೆ ಮರುಳುಗೊಂಡು ನಾವು ಖಂಡಖಂಡವಾಗಿ ಹೊಡೆದಾಡಿಕೊಳ್ಳದೆ ಅಖಂಡವಾಗಿದ್ದು ಅವರನ್ನೇ ಎದುರಿಸಿದೆವು. ಇಂಡಿಯವೂ ಅಂತೆಯೇ ಒಂದುತನದಿಂದ ಮುಂದುವರಿದರೆ ಗೆಲವು ನಿಶ್ಚಯ. ಮಹಾತ್ಮಾಗಾಂಧೀ, ಜವಹಾರಲಾಲ್ ನೆಹರೂ, ಮೌಲಾನ ಅಬುಲ್ ಕಲಾಮ್ ಅಜಾದ್, ಅಬ್ದುಲ್ ಗಫಾರ್ ಖಾನ್, ಇವರ ಮುಂದಾಳುತನದಲ್ಲಿ ಒಂದಾಗಿ ಹೋರಾಡಿರಿ. ಐಕ್ಯತೆಯೇ ಇಂತಹದರಲ್ಲಿ ಪ್ರಾಮುಖ್ಯ. ನಾವದನ್ನು ಪ್ರಯೋಗದಲ್ಲಿ ಹಾಕಿನೋಡಿ ಜಯಶಾಲಿಗಳಾಗಿದ್ದೇವೆ. ನೀವೂ ಐಕ್ಯತೆಯನ್ನು ಮರೆಯದೆ ಮುಂದಾಗಿರಿ. ಜಯಶ್ರೀಯು ನಿಮ್ಮ ಬೆಂಬಲವಾಗಿದೆ, ಎಂದರು.

ಜಯಪುರದಲ್ಲಿ ಭಾಜಾಜಿಯವರು ಬಿಡುಗಡೆ ಹೊಂದುವರೇ?

ರಾಜಕೀಯ ಚಳವಳಿಯು ಒಂದು ತರದಲ್ಲಿ ಒಪ್ಪಂದಕ್ಕೆ ಬರುವ ಲಕ್ಷಣವಿದೆ. ಇದರ ಪೂರ್ವಸಿದ್ಧತೆಯಾಗಿ ಸೇಠ್ ಜಮ್ನಾಲಾಲ್ ಬಜಾಜಿಯವರನ್ನು ಬಂಧನದಿಂದ ಸದ್ಯ ಬಿಡುಗಡೆ ಮಾಡಲಾಗುವುದೆಂದು ಸುದ್ದಿ.

ಡಿಲ್ಲಿಯಲ್ಲಿ ರಾಜಕೀಯ ಕೈದಿಗಳು ಕೈಗೊಂಡ ಉಪವಾಸತ್ಯಾಗ

ಗಾಂಧೀಜಿಗಳು ಡಿಲ್ಲಿಗೆ ಬಂದಿಳಿದಿದ್ದರು. ಅಲ್ಲಿಯ ಜೈಲಿನಲ್ಲಿ ಉಪವಾಸವನ್ನು ಕೈಕೊಂಡಿದ್ದ ರಾಜಕೀಯ ಕೈದಿಗಳನ್ನು ಕಂಡು ಶಾಂತಿ ಸಮಾಧಾನಗಳ ಬೋಧೆಮಾಡಿ ಅವರು ಉಪವಾಸವನ್ನು ಬಿಡುವಂತೆ ಮಾಡಿದವರು. ಅವರೊಡನೆ ತಾನೂ ಕಿತ್ತಳೆ ರಸವನ್ನು ಸೇವಿಸಿ ವ್ರತ ಭಂಗಮಾಡಿಸಿದರು.

ಬಂಗಾಳದಲ್ಲಿ-ಸರಕಾರಕ್ಕೆ ಪ್ರಥಮ ಅಪಜಯ

ಬಂಗಾಳದ ಪ್ರಾಂತಿಕ ಸರಕಾರಕ್ಕೆ ನ್ಯಾಯವಿಧಾಯಕ ಸಭೆಯಲ್ಲಿ ಮೊನ್ನೆ ತಾನೇ ಮೊದಲ ಸಲವೆಂಬಂತೆ ಅಪಜಯ ಪ್ರಾಪ್ತವಾಯಿತು. ಪೋಲೀಸು ಸಂಬಂಧವಾಗಿ ಒಂದು ಉಪ ಮಸೂದೆಯು ಚರ್ಚೆಗೆ ಬಂತು. ಕಾಂಗ್ರೆಸ್ಸು ಮತ್ತು ಸರಕಾರ ಪಕ್ಷಕ್ಕೆ ಸಮಸಮ ಮತಗಳು ಸಿಕ್ಕಿದುವು. ಆಗ ಅಧ್ಯಕ್ಷ ಎಸ್. ಸಿ. ಮಿತ್ರರು ತಮ್ಮ ಮತವನ್ನು ಕಾಂಗ್ರೆಸ್ ಪಕ್ಷಕ್ಕೆ ಕೊಟ್ಟರು. ಸರಕಾರ ಪಕ್ಷಕ್ಕೆ ಅಪಜಯ ಪ್ರಾಪ್ತಿ.

[ಶೇಷ ಪುಟದಿಂದ ಮುಂದುವರಿದುದು]

ನಮಗೆ ತುಂಬ ಶಕ್ತಿ ಇದೆ, ಸನ್ನಾಹ ಇದೆ, ಪೂರ್ವಸಿದ್ಧತೆ ಇದೆ. ಆದರೆ ನಾವಾಗಿ ಯಾರ ತಂಟೆಗೂ ಹೋಗುವುದಿಲ್ಲ. ಶಾಂತತೆಯಿಂದ ಪ್ರಪಂಚದ ಎಲ್ಲ ರಾಷ್ಟ್ರಗಳೊಡನೆಯೂ ವ್ಯಾಪಾರ ವ್ಯವಹಾರಗಳನ್ನು ನಡೆಯಿಸುತ್ತ ಅವರವರ ಸ್ವಾತಂತ್ರ್ಯವನ್ನು ಮನ್ನಿಸುತ್ತ ಪ್ರಬಲರ ಆಘಾತಕ್ಕೆ ಬಲಿಬೀಳುವ ನಿರ್ಬಲರಾಷ್ಟ್ರಗಳಿಗೆ ಸಹಾಯಗೈಯುತ್ತ ನಮ್ಮ ರಾಷ್ಟ್ರಾಭ್ಯುದಯದಲ್ಲೇ ವಿಶೇಷ ಗಮನವಿಡುತ್ತಿರುವುದು ನಮ್ಮ ಧೋರಣೆ. ಇದಕ್ಕೆ ಭಂಗವನ್ನುಂಟುಮಾಡಲು ನಮ್ಮ ರಾಷ್ಟ್ರಕ್ಕೆ ಕಾಲಿಟ್ಟವರು ಅವರೆಷ್ಟು ಶಕ್ತರಾಗಲಿ ಟೊಂಕ ಮುರಿದೇ ಬಿಟ್ಟೇವು ಎಂದು ಸ್ಟೇಲೀನರು ಸಮತಾವಾದಿಯರ (ಕೊಮ್ಯೂನಿಸ್ಟರ) ೧೭ನೆಯ ಪರಿಷತ್ತಿನಲ್ಲಿ ಹೇಳಿ ಜರ್ಮನಿಗೆ ಎಚ್ಚರಗೊಟ್ಟಿರುವರು.

ಸ್ವಿಜರ್‌ಲಾಂಡಿನ ತರ್ಜನ

ಇಂದು ಯುರೋಪಿನ ಸಣ್ಣ ಸಣ್ಣ ರಾಷ್ಟ್ರಗಳು ರಾತ್ರಿ ಬೆಳಗಾಗುವುದರೊಳಗೆ ಒಂದೆ ಪ್ರಬಲ ರಾಜ್ಯಗಳ ಕಂಕುಳೊಳಗೆ ಸೇರಿ ಹೋಗುತ್ತಿರುವುದನ್ನು ಕಂಡಾಗ [illegible]ವಾದ ಪರ್ವತಾವಳಿಗಳ ನಡುವೆಯಿರುವ ಸ್ವಿಜರ್‌ಲಾಂಡಿಗೂ ಎದೆ ನಡುಗಿದಂತಾಗಿರಬಹುದು. ಮೇಲಿಂದ ಹಿಟ್ಲರ್ ಕೆಳಗಿಂದ ಮುಸೋಲಿನಿ ಹೀಗಿದೆ ಅದರ ಸ್ಥಾನ. ಆದುದರಿಂದ ಅದು ತನ್ನ ಫೆಡರಲ್ ಕೌನ್ಸಿಲಿನ ಮೂಲಕ 'ಯಾರೇ ಆಗಲಿ ನಮ್ಮ ಮೇಲೆ ಬೀಳಬಂದರೆ, ನಮ್ಮ ಸ್ವಾತಂತ್ರ್ಯದ ವ್ಯಾಪ್ತಿಯನ್ನು ಮಿತಗೊಳಿಸಲು ಹವಣಿಸಿದರೆ, ನಮ್ಮ ರಾಷ್ಟ್ರದ ಒಂದುತನಕ್ಕೆ ಭಂಗತರುವ ಪ್ರಯತ್ನಮಾಡಿದರೆ ನಾವು ಬಗ್ಗಲಾರೆವು. ಯುದ್ಧವೇ ನಿಶ್ಚಯ.' ಎಂದು ಸಾರಿದೆ.

WANTED.

Applications are invited from Graduates or Intermediates for an accountant's post as a Head clerk. The application which should reach Box No. 12 C/O Navayuga Office, Udipi, on or before 15 th April 1939 should contain the Name, Age, Qualifications, permanent residence; and previous experience. The Vacancy is permanent one

THE BOMBAY LIFE ASSURANCE CO., LTD.,

ತಿಂಗಳಿಗೆ ನೀವೆಷ್ಟು ಸಂಪಾದಿಸುತ್ತೀರೆಂಬುದು ದೊಡ್ಡ ವಿಷಯವಲ್ಲ. ಎಷ್ಟು ಉಳಿಸುತ್ತೀರೆಂಬುದೇ ಪ್ರಾಮುಖ್ಯ ಪ್ರಶ್ನೆ. ಏಕೆಂದರೆ ನಿಮ್ಮ ಸಂಪಾದನೆಯು ಕಡಿಮೆಯಾದಾಗ ಅಥವಾ ನಿಂತುಹೋದಾಗ ನಿಮ್ಮ ಮತ್ತು ನಿಮ್ಮ ಸಂಸಾರದ ಕನಿಷ್ಠ ಸುಖ ಸೌಕರ್ಯಗಳು ಯಥಾಪ್ರಕಾರ ಒದಗಿಸಿಕೊಡಬಲ್ಲುದು ಆ ಉಳಿತಾಯವೇ.

ಅಂತಹ ನಿಮ್ಮ ಉಳಿತಾಯವು ಬೆಳೆದು ಬಲವಾದ ಭಂಡವಾಳವಾಗಿ ಬರುವಂತೆ ನಿಕ್ಷೇಪಿಸಲಿಕ್ಕೆ ಅತ್ಯುತ್ತಮ ಸ್ಥಾನವೆಂದರೆ

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಏಕೆಂದರೆ ಅದು ಉತ್ಕೃಷ್ಟ ಭದ್ರತೆಯುಳ್ಳ ಉಪಯುಕ್ತ ಸಂಸ್ಥೆ.

ಪ್ರಾಮಾಣಿಕತೆ, ಉತ್ಸಾಹ ಪ್ರತಿಷ್ಠೆಗಳುಳ್ಳವರಿಗೆ ಸಮಾಜ ಸೇವೆ ಮಾಡಲಿಕ್ಕೂ ಯೋಗ್ಯವಾದ ನಿಶ್ಚಿತ ಪ್ರತಿಫಲವನ್ನು ಹೊಂದಲಿಕ್ಕೂ ಒಳ್ಳೆಯ ಅವಕಾಶವಿದೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,

ಮದ್ರಾಸ್ ಬ್ರಾಂಚ್ ಸೆಕ್ರೆಟರಿಗಳು.

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ದಿ ಬೊಂಬಾಯಿ ಲೈಫ್ ಬಿಲ್ಡಿಂಗ್ಸ್, ಗಾಂಧೀನಗರ, **ಉಡುಪಿ**,

ಎಂಬ ಮೇಲಿನ ವಿಳಾಸಕ್ಕಾಗಲೀ ಕೆಳಗೆ ಕಾಣಿಸಿದ ನಮ್ಮ ಇತರ ಯಾವ ಕಾರ್ಯಾಲಯಕ್ಕಾಗಲೀ ಅರ್ಜಿ ಬರೆದುಕೊಳ್ಳಿ.

ಪೋಸ್ಟ್ ಬಾಕ್ಸ್ ನಂ. 337 ಮೌಂಟ್ ರೋಡ್, **ಮದರಾಸು.**	ಎಡ್ವರ್ಡ್‌ಪುರ ಸರ್ಕಲ್ **ಬೆಂಗಳೂರು ಸಿಟಿ.**	ಕಾರ್ ಸ್ಟ್ರೀಟ್ **ಮಂಗಳೂರು.**	ಪುತಿಯಾರ **ಕಲ್ಲಿಕೋಟೆ.**

ಸೆಂಟ್ರಲ್ ಸ್ಟೇಶನ್ ರೋಡ್, **ಟ್ರಿವೇಂಡ್ರಮ್.**	ಚಾರ್ನಿರೋಡ್ ಗಿರ್ಗಾಮ್, **ಬೊಂಬಾಯಿ ನಂ. 4.**	ಒಟ್ಟಪಾಲಮ್ **ದ. ಮಲಬಾರ್.**

The Tropical Insurance
CO., LTD., DELHI.

ದಿ ಟ್ರೊಪಿಕಲ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಡೆಲ್ಲಿ.

ಅಧ್ಯಕ್ಷರು:—ಶ್ರೀ. ಸುಭಾಸಚಂದ್ರ ಬೋಸರು.
(ರಾಷ್ಟ್ರಪತಿಗಳು)

ಸಂಸ್ಥಾಪಕ ಡೈರೆಕ್ಟರರು:

ಪಂಡಿತ ಮೋತಿಲಾಲ ನೆಹರು. ಡಾಕ್ಟರ್ ಎಂ. ಎ. ಅನ್ಸಾರಿ.
ಶ್ರೀ। ಎಸ್. ಶ್ರೀನಿವಾಸ ಐಯ್ಯಂಗಾರ್. ಹಕೀಮ್ ಅಜ್ಮಲ್ ಖಾನ್.

ಪ್ರಗತಿಗಾಮಿಯಾದ ಈ ದೇಶೀ ವಿಮಾಕಂಪೆನಿಯು ಐವರು ರಾಷ್ಟ್ರಪತಿಗಳಿಂದ ಸ್ಥಾಪನೆ ಹೊಂದಿ ನಡೆಸಲ್ಪಟ್ಟದ್ದು.

ಪ್ರಾತಿನಿಧ್ಯಕ್ಕಾಗಿ ಸಂಬಳ ಯಾ ಕಮಿಶನಿನ ಮೇಲೆ ಅರ್ಜಿಗಳು ಸ್ವೀಕರಿಸಲ್ಪಡುತ್ತವೆ.

ಕೆ. ಎಸ್. ರಾಮಮೂರ್ತಿ, ಎಂ. ಎ.
ಬ್ರಾಂಚ್ ಸೆಕ್ರೆಟರಿ,
160, ಮೌಂಟ್ ರೋಡು, ಮದ್ರಾಸ್.

ಅಥವಾ

ಎಂ. ಸುಂದರ ರಾಮ ಶೆಟ್ಟಿ,
ಬ್ರಾಂಚ್ ಮೆನೇಜರ್,
ಹಂಪನಕಟ್ಟೆ, ಮಂಗಳೂರು.

ಭಾರತದ ಪೀಡಿತ ಕೃಷಿಕರು

ಜೀವನ್ಮೃತ ಕೃಷಿಕರ ಉದ್ಧಾರವೇ ದೇಶೋದ್ಧಾರ!

ನಮ್ಮೀ ಭರತಖಂಡದಲ್ಲಿ ಸರ್ವಸಾಧಾರಣವಾಗಿ ಅಧಿಕಾಂಶ ಜನರು ಕೃಷಿಯಿಂದ ಜೀವನವನ್ನು ನಡೆಸುತ್ತಿರುವರು. ಕೃಷಿಯೇ ದೇಶದ ಜೀವಾಳವಾಗಿದೆ. ನಾವು ಇಂದು ದೊಡ್ಡ ದೊಡ್ಡ ನಗರಗಳಲ್ಲಿಯ ಯಾವ ಅನಂತವೈಭವದ ಚಾಕ ಚೌಕಗಳನ್ನು ನೋಡುತ್ತಾ ಗಗನಚುಂಬಿತವಾದ ಅರಮನೆಗಳಂತಹ ಮಂದಿರಗಳ ದರ್ಶನ ಮಾಡುತ್ತೇವೋ ಅಂಥಾ ಮನೋಹರ ಪ್ರದರ್ಶನದ ಜೀವನ ಆದರ್ಶಗಳು ಸಮಸ್ತ ಭಾರತದ ಪೀಡಿತ ರೈತರ ಜಮೆಗೊಳಿಸಲ್ಪಟ್ಟ ಮಧುರ ಫಲವು. ಹಿಂದುಸ್ಥಾನದ ಅರ್ಧನಗ್ನ, ಹಸಿವೆ ತೃಷೆಗಳ ದೀನರೈತರ ಜೀವನದಲ್ಲಿ ನಾವು ಕೂಡಾ ಸಹಾನುಭೂತಿಯನ್ನು ತೋರಿಸಲೇಬೇಕು ಅದುವೇ ಜನಾಂಗದೇಳಿಗೆಯ ಮೊದಲ ಕರ್ತವ್ಯವು. ಆದರೆ ಇದರ ಬದಲಾಗಿ ಅವರಿಗೆ ದೊರೆಯುವ ಫಲವೇನು? ಕೂಳಿಗೆ ಗತಿಯಿಲ್ಲದೆ, ತೃಷೆಯಿಂದ ಕಂಗಾಲಾಗಿ, ಪ್ರತಿನಿತ್ಯ ವ್ಯಸನದಲ್ಲಿ ಹೊರಳಾಡಿ, ಮಹಾಮಾರಿರೋಗ ಪೀಡಿತರಾಗಿ, ಅವಿದ್ಯಾವಂತರಾಗಿ ದುರ್ದಶೆಗಿಳಿಯುವುದೇ ಪ್ರತಿಫಲವಾಯಿತು. ಅವರು ಜೀವನಪರ್ಯಂತವೂ ಕಾಯಕಷ್ಟದ ಶ್ರಮ ವಹಿಸಿಯೇ ತಂತಮ್ಮ ಅಂತ್ಯಗೊಳ್ಳುವರು. ಅವರ ಮಕ್ಕಳು ಮರಿಗಳ ಚೀತ್ಕಾರ! ಹರುಕುಮುರುಕಿನ ಮನೆ! ಇವುಗಳಿಂದ ಅವರು ಪಾರಾಗುವ ಗತಿಯು ಕಾಣುವುದಿಲ್ಲ. ದೊಡ್ಡವರ, ಕುಟುಂಬ, ಧರ್ಮಪರಿಪಾಲಕರ ಅನ್ನದಾತರಾದ ದೇಶದ ಜೀವಾಳರಾದ ಕೃಷಿಕ ಜೀವರು ಇಂಥಾ ಕಷ್ಟಗಳನ್ನು ಅನುಭವಿಸುವರಾದರೆ ನಮಗೆಲ್ಲಿಯ ಸ್ವಾತಂತ್ರ್ಯ? ಹಲವು ವರ್ಷಗಳಿಂದ ಇದರ ಪ್ರಶ್ನೆಯು ಪಾರಂಪರ್ಯವಾಗಿ ಉತ್ಪನ್ನವಾಗುತ್ತದೆ. ಅಧಿಕವಾಗಿ ವೈಸರಾಯರು ಗವರ್ನರರು ಮತ್ತು ಮಂತ್ರಿಗಳು ಬಂದರು, ಹೋದರು. ಅಸೆಂಬ್ಲಿ ಚುನಾವಣೆಯು ಆಯಿತು. ಉಪದೇಶಕಾರರು ಕೃಷಿಕರ ಕರುಣಾಜನಕ ಪರಿಸ್ಥಿತಿಯನ್ನು ನಿವೃತ್ತಿಪಡಿಸುವುದಾಗಿ ಮಾತು ಕೊಟ್ಟರು. ಆದರೆ ಅದು ಕೊನೆಮುಟ್ಟಲಿಲ್ಲ, ಮತ್ತು ಅವರ ಸುಧಾರಣೆಯನ್ನು ಮಾಡಲಾಗಲಿಲ್ಲ. ಕೆಲವರು ಸ್ವೇಚ್ಛೆಯಾಗಿ ವರ್ತಿಸಿದರು, ಕೆಲವರು ನಾವು ಮಾಡುತ್ತೇವೆ ಕಾಲವುಂಟು. ಅದರ ಪ್ರಯತ್ನವು ಮಾಡಲಾಗುವುದು ಎಂಬಿತ್ಯಾದಿ ಕಾರಣಗಳನ್ನು ಸೂಚಿಸಿದರು. ಆದರೆ ಅತಿವೃಷ್ಟಿ, ಅನಾವೃಷ್ಟಿ, ಮತ್ತು ಹುಳುಹುಪ್ಪಟೆಗಳಿಂದ ಬೆಳೆಯು ಕೆಟ್ಟುಹೋದರೂ ಮಕ್ಕಳಿಗೂ ಅವರ ಸಂಸಾರಕ್ಕೂ ತಿನ್ನುವಷ್ಟು ಕೂಡಾ ಬೆಳೆಯದಿದ್ದರೂ ಅವರನ್ನು ಪಶುಗಳಿಗಿಂತಲೂ ಕಡೆಯಾಗಿ ಗೇಣಿಯನ್ನು ವಸೂಲು ಮಾಡುವರು. ಹಾಗೆಯೇ ಅವರು ಕೊಡುವ ಕಂದಾಯಗಳೂ ಮಾಮೂಲಿನಂತೆ ವಸೂಲಾಗುವವು. ಇದರಿಂದಾಗಿ ಅವರು ದುಃಖಿತರು. ವ್ಯಸನಿಗಳು! ರೋಗಪೀಡಿತರು! ಬೇರೆಯವರ ದಾಸರು! ಬಂದೀಖಾನೆಯೇ ಅವರ ಮನೆಯು. ಬೆಳಿಗ್ಗೆ ಇದ್ದರೆ ಮಧ್ಯಾಹ್ನ ಇಲ್ಲ. ಒಪ್ಪೊತ್ತಿಗೂ ಗತಿ ಇಲ್ಲದವರಂತಾಗಿದೆ. ಅವರ ಮಕ್ಕಳು ಮರುಗಿ ಕೊರಗಿ ಸೊರಗಿ ಪ್ರಾಣ ಬಿಡುವವರಾದರು. ಆದರೆ ಧನವಂತರಲ್ಲಿ ಜಮೀನ್‌ದಾರರಲ್ಲಿ ತಿಲಾಂಶವಾದರೂ ದಯೆ ಹುಟ್ಟುವುದಿಲ್ಲ. ಇದರ ಅಂತ್ಯಕ್ಕಾಗಿ ಯಾರೊಬ್ಬರ ಹೃದಯವು ಕೂಡಾ ದ್ರವೀಭೂತವಾಗುವುದಿಲ್ಲ.

ಆದರೆ ಆ ದಿನವು ಕೂಡಾ ಬಂತು. ಬೇಸಾಯಗಾರರ ಮೂಕವದನವನ್ನು ಕೂಡ ಅವಲೋಕಿಸುವ ಸುದಿನವನ್ನು ದೇಶವು ಕಂಡಿತು. ಮಹಾತ್ಮಾ ಗಾಂಧಿಯವರೊಡನೆ ಕೋಂಗ್ರೆಸ್ ನೇತೃತ್ವವು ಲಭಿಸಿದೊಡನೆಯೇ ದೇಶವಾಸಿಗಳ ಧ್ಯಾಸವು ಈ ದೀನರೈತರ ಕಡೆಗೆ ಆಕರ್ಷಿತವಾಯಿತು. ಅವರ ಅವಸ್ಥೆಯ ಸುಧಾರಣೆಯ ಪ್ರಯತ್ನವು ಉತ್ಪನ್ನವಾಯಿತು. ಕೋಂಗ್ರೆಸಿನ ಅನೇಕಾನೇಕ ಅಧಿಕಾರಿಗಳು ದೇಹಾಂತವಾದ ಶಿಕ್ಷೆಯನ್ನು ಅನುಭವಿಸಿದರು. ಮತ್ತು ರೈತರ ಉನ್ನತಿಗಾಗಿ ಆಂದೋಲನವನ್ನು ಹೂಡಿದರು. ರೈತರಿಗೂ ಅವರ ಕರ್ತವ್ಯನಿಷ್ಠೆಯ ಜಾಗ್ರತಿಯೂ ಉತ್ಪನ್ನವಾಯಿತು. ಕೋಂಗ್ರೆಸಿನ ಆಂದೋಲನದ ಫಲಸ್ವರೂಪವಾಗಿ ಆತ್ಮವಿಶ್ವಾಸವೂ ಉಂಟಾಯಿತು. ಕೋಂಗ್ರೆಸ್ ಸಂಸ್ಥೆಯು ಈ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹದ ಬಿಗುಲನ್ನು ಬಾರಿಸಿತು. ದೇಶವಾಸಿಗಳ ಪವಿತ್ರ ಆತ್ಮಗಳು ಮಾತೃಭೂಮಿಯಲ್ಲಿ ಬಲಿದಾನ ರೂಪವಾಗಿ ಆಹ್ವಾನವಾಯಿತು. ಸಂಸ್ಥೆಯ ಈ ಆಹ್ವಾನದಲ್ಲಿ ರೈತರು ಮುಂದಾಗಿ ಬಂದು ಜೈಲುಖಾನೆಗಳಿಗೆ ಕಳುಹಿಸಲ್ಪಟ್ಟರು. ಅದರಲ್ಲಿ ಲಾಠಿ ಚಾರ್ಜುಗಳನ್ನು ಕೂಡಾ ಸಹಿಸಿಕೊಂಡು ತಂತಮ್ಮ ತನುಮನ ಧನಗಳನ್ನು ಅರ್ಪಣ ಮಾಡಿ ಜೀವರಕ್ಷಾಕಾಂಕ್ಷೆಯನ್ನು ಬಿಟ್ಟವರಾಗಿದ್ದರು. ಆದರೂ ಅವರು ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಿಲ್ಲ. ಆ ರಾಷ್ಟ್ರಮುಕ್ತಿಯ ಯಜ್ಞದಲ್ಲಿ ತಂತಮ್ಮ ಆಹುತಿಗಳನ್ನು ಅರ್ಪಣಮಾಡಿದರು. ಬ್ರಿಟಿಷ್ ಸಾಮ್ರಾಜ್ಯದ ಎಲ್ಲಾ ಶಕ್ತಿಗಳೂ ಬರಿದಾದುವು ಭಾರತದ ಮೂಲೆ ಮೂಲೆಗಳಲ್ಲಿಯೂ ನವಚೈತನ್ಯವು ಉಂಟಾಯಿತು.

ಇಂದು ಹಿಂದುಸ್ಥಾನದ ಎಂಟು ಪ್ರಾಂತಗಳಲ್ಲಿ ಕೋಂಗ್ರೆಸ್ ರಾಜ್ಯಭಾರವು ಸ್ಥಾಪಿತವಾಗಿದೆ. ಕೋಂಗ್ರೆಸ್ ಕಾರ್ಯಸಮಿತಿಯ ದ್ವಾರಾ ಈ ಎಂಟು ಪ್ರಾಂತಗಳಲ್ಲಿಯೂ ಶಾಸನಸೂತ್ರದ ಚಾಲನೆಯು ನಡೆಯುತ್ತದೆ. ಎಂದಿನ ವರೆಗೆ ಭಾರತವಾಸದ ಕೃಷಿಕ ಜೀವಿಗಳಿಗೆ ಸಂತೋಷವಾಗುವುದಿಲ್ಲವೋ ಅಂದಿನ ವರೆಗೆ ಸ್ವಾತಂತ್ರ್ಯವೆಲ್ಲಿಯಾದರೂ ಎಲ್ಲಿರುವುದು? 'ಯು. ಪಿ. ಸರಕಾರ'ವು ರೈತರಲ್ಲಿ ಬಾಧಿತವಾಗಿರುವ ದುಷ್ಟ ಪದ್ಧತಿಗಳನ್ನು ತೆಗೆದು ನವಶಾಸನವನ್ನು ಕೊಟ್ಟಿತು. ಅವರ ದೇಹಾಂತವಾದ ದುರ್ದಶೆಯನ್ನು ಸುಧಾರಿಸುವುದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿರುವುದು. ಅಲ್ಲಿಯ ಪ್ರಧಾನ ಮಂತ್ರಿವರ್ಯರಾದ ಮಾನ್ಯ ಪಂತಜಿಯವರು ಪ್ರಾಂತ್ಯದ ಗ್ರಾಮಗಳ ಶಿಕ್ಷಣರಕ್ಷಾವಿಷಯದಲ್ಲಿ ಹೆಚ್ಚಿನ ಪರಿಶ್ರಮ ತೆಗೆದುಕೊಂಡು ಅವರ ಸಂಪನ್ನತೆಯ ಏಳಿಗೆಯನ್ನು ಬಯಸುವಂತಾದರು. ಅವರ ಋಣಭಾರದ ನಿವಾರಣೆಗಾಗಿ "ಡೆಟ್ ರಿಲೀಫ್" ಬಿಲ್ ಪಾಸು ಮಾಡಿದರು. ಸಂಯುಕ್ತಪ್ರಾಂತದಂತೆಯೇ ಇತರ ಪ್ರಾಂತ್ಯಗಳಲ್ಲಿಯೂ ಕೋಂಗ್ರೆಸ್ ಸರಕಾರವು ಪ್ರಯತ್ನ ಮಾಡಲ್ಪಟ್ಟಿತು. ಮುಂಬಾಯಿ ಬಿಹಾರ್ ಮದ್ರಾಸ್ ಮುಂತಾದ ಪ್ರಾಂತಗಳಲ್ಲಿಯೂ ಕಾರ್ಯಗಳು ತೊಡಗಿವೆ.

"ಯು. ಪಿ. ಸರಕಾರದ" ಈ ಉದಾರತೆಯು ಭಾರತದ ಸ್ವಾತಂತ್ರ್ಯತೆಯ ಇತಿಹಾಸದಲ್ಲಿ ಸದಾ ಸ್ವರ್ಣಾಕ್ಷರಗಳಲ್ಲಿ ಬರೆಯಲ್ಪಡುವುದು. ಕೋಂಗ್ರೆಸ್ ಸರಕಾರವು ರೈತರ ಹಿತವೇ ದೇಶದ ಒಳ್ಳಿತನ್ನು ಬಯಸುವುದು ಎಂಬುದಾಗಿ ಘೋಷಣೆಮಾಡಿರುವುದು. ಹಾಗೆಯೇ ಅವರ ಉನ್ನತಿಗಾಗಿ ಪ್ರಯತ್ನಿಸುವುದು. ಕೋಂಗ್ರೆಸ್ ಸರಕಾರವು ಎಂದಿನ ವರೆಗೆ ಅಭಿಮಾನಪೂರ್ವಕವಾಗಿ ತಲೆಯೆತ್ತಲು ಯೋಗ್ಯವಲ್ಲವೋ ಅಂದಿನ ವರೆಗೆ ಕೃಷಿಕವರ್ಗವು ದುರ್ದಶಾ ಮತ್ತು ಹೀನ ಅವಸ್ಥೆಯಲ್ಲಿ ಇರಬೇಕಾಗುವುದು ಭಾರತದ ಕೃಷಿಕರ ಉನ್ನತಿಯಲ್ಲಿಯೇ ನಮ್ಮ ರಾಷ್ಟ್ರದ ಕಲ್ಯಾಣವಿದೆ. ರೈತರು ಭಾರತದ ಕಾಮಧೇನು! ಮತ್ತು ಪ್ರತಿ ಒಬ್ಬರೂ ಅವರ ಏಳಿಗೆಗಾಗಿ ಮಡಿಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಅದುದರಿಂದ ಮಂತ್ರಿವರ್ಯರು ಎಂದಿನ ವರೆಗೆ ಜನತೆಯ ವಿಶ್ವಾಸಾರ್ಹರಾಗುತ್ತಾರೋ ಅಂದಿಗೆ ಮಂತ್ರಿತ್ವದ ಪುಷ್ಪಹಾರವು ಅವರ ಕೊರಳಲ್ಲಿ ಶೋಭಾಯಮಾನವಾಗಬಹುದು. ಈ ಎಲ್ಲಾ ಅಧಿಕಾರಗಳನ್ನು ಜನತಾಸೇವೆಗಾಗಿಯೇ ಕೋಂಗ್ರೆಸ್ ಸ್ವೀಕಾರಮಾಡಿರುವುದು. ಕೋಂಗ್ರೆಸ್ ಮಂತ್ರಿಗಳ ವಿಧೇಯತ್ವದ ಈ ಭಾವನೆಯ ದೆಸೆಯಿಂದ ನಾವು ಕೂಡ ಅವರ ಉಪಯೋಗವನ್ನು ಮಾಡುವ! ಮತ್ತು ಭಾರತದ ದಲಿತ ಜನತೆಯ ಉತ್ಥಾನಕ್ಕಾಗಿ ತಂತಮ್ಮ ಸಂಪೂರ್ಣ ಶಕ್ತಿಯನ್ನು ಕೂಡಿಸುವ!! ಆಗ ಮಾತ್ರವೇ ಸ್ವಾತಂತ್ರ್ಯ!!!

(ನವಭಾರತದ ಆಧಾರದಿಂದ) ಸಂಗ್ರಹಕರ್ತ,
ಯಮ್. ಬಾಬೂ ದಾಸ್, ಮುಂಬಯಿ.

ಜಿಲ್ಲಾ ಮೆಜಿಸ್ಟ್ರೇಟರ ಪ್ರಕಟಣೆ

ಎಲ್ಲಾ ಕೋವಿ ಲೈಸನ್ಸ್‌ದಾರರು ತಮ್ಮ ಲೈಸನ್ಸುಗಳ ಮ್ಯಾದ ಮುಂದರಿಸುವ ಬಗ್ಗೆ ಮಾಡುವ ರಿನ್ಯೂವಲ್ ಅರ್ಜಿಗಳನ್ನು ಇನ್ನು ಮುಂದೆ ಅಕ್ಟೋಬರ ತಿಂಗಳ ಶುರುವಿಗೇನೇ ಜಿಲ್ಲಾ ಮೆಜಿಸ್ಟ್ರೇಟರವರ ಆಫೀಸಿಗೆ ತಲ್ಪುವಂತೆ ಕಳುಹಿಸತಕ್ಕದ್ದು. ಹಾಗೆ ಅಕ್ಟೋಬರ ತಿಂಗಳಲ್ಲಿ ಸದರಿ ಅರ್ಜಿಗಳು ಇಲ್ಲಿಗೆ ತಲ್ಪದಿದ್ದರೆ ಲೈಸನ್ಸುಗಳು ಮ್ಯಾದ ಮುಂದರಿಸಲಾಗಿ ದಸಂಬರ ತಿಂಗಳ ಒಳಗೆ ಅರ್ಜಿದಾರರಿಗೆ ವಾಪಾಸು ಸಿಕ್ಕಲು ಪ್ರಯಾಸವಾದೀತು.

ಮಂಗಳೂರು, ತಾ. 14-3-39 | ಎಂ ಪಿ ಮೆಲ್ಲೋಡಿ, ಜಿಲ್ಲಾ ಮೆಜಿಸ್ಟ್ರೇಟ್.

WANTED

A lady candidate to edit a high class Kannada monthly magazine for ladies to be started shortly. Apply stating minimum salary required with particulars as to qualification, experience etc., to Box No. 11,

C/o **NAYAYUGA**, Udipi.

ಬಜೆಟಿನ ಕುರಿತು ದ. ಕ. ಜಿಲ್ಲಾ ಬೋರ್ಡಿನ ಪ್ರೆಸಿಡೆಂಟರ ಭಾಷಣ

(ಇದೇ ಕಳೆದ ತಾ. 11ರಲ್ಲಿ ನಡೆದ ದ. ಕ. ಜಿಲ್ಲಾ ಬೋರ್ಡಿನ ಮೀಟಿಂಗಿನಲ್ಲಿ ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ಡಾಕ್ಟರ್ ಕೆ. ವಿಠಲಶೆಟ್ಟಿ ಬೋರ್ಡಿನ 1938–39ರ ರಿವೈಸ್ಡ್ ಎಸ್ಟಿಮೇಟ್ ಮತ್ತು 1939–40ರ ಬಜೆಟನ್ನು ಇಡುವಾಗ ನವಕ್ರಮವೊಂದನ್ನಾರಂಭಿಸಿ ಬಜೆಟಿನ ಪ್ರಾಮುಖ್ಯ ವಿಷಯಗಳ ಕುರಿತು ಪ್ರಸ್ತಾವನಾ ಭಾಷಣ ವಿತ್ತರು. ಅವನ್ನು ಈ ಕೆಳಗೆ ಕೊಡಲಾಗಿದೆ.)

ಹಳ್ಳಿಗಳನ್ನು ಸುಖ ಮತ್ತು ಸುಂದರಗೊಳಿಸಬೇಕು.

ಹಳ್ಳಿ ಜೀವನವನ್ನು ಸುಖ ಮತ್ತು ಸುಂದರಗೊಳಿಸುವುದು (Livable and lovable) ಗ್ರಾಮ ಪಂಚಾಯತು ಸಹಿತವಾದ ಜಿಲ್ಲಾಬೋರ್ಡಿನ ಮಹತ್ತಾದ ಉದ್ದೇಶವಾಗಿರತಕ್ಕದ್ದು. ಈ ಸಂಬಂಧವಾಗಿ ಸ್ಥಳೀಯ ಸಂಸ್ಥೆಗಳ ಸೇವೆಗೊಂದು ಮಿತಿಯೆಂಬುದೇ ಇಲ್ಲವೆಂಬುದಕ್ಕೆ ಲೋಕದ ಈ ಸಂಸ್ಥೆಗಳ ಇತಿಹಾಸವು ಉಜ್ವಲ ನಿದರ್ಶನವಾಗಿದೆ. ಸ್ಥಳೀಯ ಸಂಸ್ಥೆಗಳು ಮಾಡಬೇಕಾದ ಕೆಲಸಗಳು ದಿನೇದಿನೇ ಅಧಿಕವಾಗುತ್ತಿವೆ. ಆದರೆ ಅವುಗಳು ಪಡೆಯುವ ಹಣವು ಕಡಿಮೆಯಾಗುತ್ತಿದೆ. 1930ರ ಮತ್ತು ಅನಂತರದ ತಿದ್ದುಪಡಿ ಕಾನೂನುಗಳು ಸ್ಥಳೀಯ ಸಂಸ್ಥೆಗಳ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಗೊಡವೆಗೇನೇ ಹೋಗಿರುವುದಿಲ್ಲ. ರಸ್ತೆಗಳ ಬಗ್ಗೆ ಮಾತ್ರ ಸರಕಾರದಿಂದ ಬೋರ್ಡಿಗೆ ಕ್ರಮವಾಗಿ ವಾರ್ಷಿಕ ಗ್ರಾಂಟು ಸಿಗುತ್ತದೆ. ರೋಡು ಡೆವೆಲಪ್‌ಮೆಂಟ್ ಫಂಡಿನಿಂದ ದೊರೆಯುವಂತಹ ಹಣವು ಪ್ರಾಮುಖ್ಯ ರಸ್ತೆ ಕೆಲಸಗಳಿಗಾಗಿಯೇ ಪ್ರತ್ಯೇಕಿಸಲ್ಪಡುತ್ತದೆ ಆದುದರಿಂದ, ಪೂರ್ವನಿಶ್ಚಿತ ಕೆಲವೊಂದು ಕಾರ್ಯಗಳಿಗೆ ಸರಕಾರದ ಸಹಾಯ ಸಿಗುವುದೇ ಹೊರತು ಹಳ್ಳಿಗಳ ಸೌಕರ್ಯವನ್ನು ಹೆಚ್ಚಿಸುವುದಕ್ಕಾಗಿ ಹಣವೇನೂ ಸಿಗುವುದಿಲ್ಲ. ಬೋರ್ಡಿನ ಇತರ ಆದಾಯದ ಆಶಯಗಳು ಕುಂದುತ್ತಾ ಬರುತ್ತಿವೆ. ಪಂಚಾಯತುಗಳಿಂದಾಗಿ ವೃತ್ತಿತೆರಿಗೆ, ಅಪಾಯಕರ ವೃತ್ತಿಗಳ ಮೇಲಿನ ಲೈಸೆನ್ಸ್ ಫೀಸು, ಮಾರ್ಕೆಟು ಮತ್ತು ಗಾಡಿ ಸ್ಟೇಂಡುಗಳ ಮೇಲಿನ ಕರವೇ ಮೊದಲಾದವುಗಳಿಂದ ಬೋರ್ಡಿಗೆ ಬರುವ ಆದಾಯವು ಬಹಳವಾಗಿ ಇಳಿದುಹೋಗಿದೆ.

ಆಯ ಕುಂದುತ್ತಿದೆ, ವ್ಯಯ ಬೆಳೆಯುತ್ತಿದೆ!

ಆಯದಷ್ಟೇ ವ್ಯಯಮಾಡುವ ಮಿತಿಯನ್ನಿಟ್ಟುಕೊಳ್ಳಬೇಕೆಂದು ಸರಕಾರವು ನಮಗೆ ಯಾವಾಗಲೂ ಬೋಧಿಸುತ್ತಾ ಬಂದಿದೆ. ಸರ್ವಸಾಮಾನ್ಯ ವ್ಯಯವು ಆಯದ ಪರಿಮಿತಿಯೊಳಗಿರಬೇಕೆಂಬುದೇನೋ ನಿಜ. ಆದರೆ ಸ್ಥಿರವಾಗಿಯಾಗಲಿ ಒಂದೇ ಪ್ರಕಾರವಾಗಿಯಾಗಲಿ ಇರದೆ ದಿನೇ ದಿನೇ ಕಡಿಮೆಯಾಗುತ್ತಿರುವ ಆಯವನ್ನೂ ಸಾಮಾನ್ಯ ವೆಚ್ಚವನ್ನೂ ಬಾಯಿಗೂಡಿಸುವುದು ಹೇಗೆಂಬುದು ಮಾತ್ರ ಸೂಚಿಸುವುದಿಲ್ಲ. ಪ್ರಾಥಮಿಕ ಶಿಕ್ಷಣಕ್ಕೆ ನಿಯಮ ಪ್ರಕಾರ ಕೊಡುವ ಕಂಟ್ರಿಬ್ಯೂಷನ್ ಹೊರತು 1931ರಿಂದ ರೂ. 1,19,217ರಷ್ಟು ಹೆಚ್ಚಿಗೆಯಾಗಿ ಕೊಡಲ್ಪಟ್ಟಿವೆ. ಆದರೂ ಪ್ರಾಥಮಿಕ ಶಿಕ್ಷಣ ಫಂಡಿನ ಪರಿಸ್ಥಿತಿಯು ಇನ್ನೂ ಕೆಟ್ಟದೇ ಆಗಿದೆ. ಇದರಿಂದಾಗಿ ಬೋರ್ಡಿನ ಆರ್ಥಿಕ ಸ್ಥಿತಿಯು ವರ್ಷವರ್ಷ ಕೆಡುತ್ತಾ ಬಂದಿದೆ. ಆದಾಯವು ಕಡಿಮೆಯಾದುದಕ್ಕಾಗಿ ಪ್ರಾಂತಿಕ ಸರಕಾರವು ಏನೂ ಸಹಾಯಮಾಡಿದುದಿಲ್ಲ. ಹಾಗೆ ನಮ್ಮ ಆರ್ಥಿಕ ಸ್ಥಿತಿಯು ಅಸಮಾಧಾನಕರವೆಂದಾಗ, ರಸ್ತೆ, ಸೇತುವೆ, ಬಾವಿ, ಆಸ್ಪತ್ರೆ, ಸೂಲಗಿತ್ತಿ ಮತ್ತು ಶಾಲೆಗಳಿಗಾಗಿ ಹೆಚ್ಚೆಚ್ಚಾಗಿ ಬೇಡಿಕೆಗಳು ಎಡೆಬಿಡದೆ ಬರುತ್ತಿವೆ, ನ್ಯಾಯವಾದ ಈ ಬೇಡಿಕೆಗಳನ್ನು ಪೂರೈಸಲು ಬೋರ್ಡಿಗೆ ಸಾಧ್ಯವಿಲ್ಲ. ಬೋರ್ಡಿನ ಆದಾಯದ ಆಶಯಗಳಿಂದ ಮುಂದೆ ಎಂದೆಂದಿಗೂ ಹೆಚ್ಚುತ್ತಿರುವ ಗ್ರಾಮಜೀವನದ ಆವಶ್ಯಕತೆಗಳನ್ನು ಪೂರೈಸಲು ಸಾಧ್ಯವೇ ಇಲ್ಲ. ನಮ್ಮ ಅಧೀನದಲ್ಲಿರುವ ಹಳ್ಳಿಗರಿಗೆ ಮತ್ತು ಹಳ್ಳಿ ಪ್ರದೇಶಗಳಿಗೆ ಸರ್ವಸಾಧಾರಣ ಸೌಕರ್ಯಗಳನ್ನೀಯುವರೆ ಚೆನ್ನಾಗಿ ವಿಚಾರಿಸಲ್ಪಟ್ಟು ಕೈಕೊಳ್ಳಲ್ಪಡುವ ಕಾರ್ಯಕ್ರಮವನ್ನು ಜ್ಯಾರಿಗೆ ತರುವ ವೆಚ್ಚಕ್ಕಾಗಿ ಒಂದೇ ಸರಕಾರವು ಹಣ ಸಹಾಯಮಾಡಬೇಕು; ಇಲ್ಲವೆ ಆದಾಯದ ಹೊಸ ಆಶಯಗಳನ್ನು ಕಂಡುಕೊಳ್ಳಲು ಬೋರ್ಡಿಗೆ ಅಧಿಕಾರವೀಯಬೇಕು.



ಡಾಕ್ಟರ್ ಕೆ. ವಿಟ್ಠಲ ಶೆಟ್ಟರು.

1938—39ರ ರಿವೈಸ್ಡ್ ಎಸ್ಟಿಮೇಟು

ತಿದ್ದುಪಡಿಮಾಡಲ್ಪಟ್ಟ ಚಾಲ್ತಿ ವರ್ಷದ ಆಯವ್ಯಯ ಅಂದಾಜಿನಲ್ಲಿ ಆಯವು ರೂ. 25,720 ಹೆಚ್ಚಿರುತ್ತದೆ. ಟೋಲ್‌ಗೇಟ್ ಮತ್ತು ಮೋಟರ್ ವಾಹನಗಳ ಲೈಸೆನ್ಸ್ ಫೀಸಿನ ಬಾಬ್ತು ಸರಕಾರವು ಬೋರ್ಡಿಗೆ ಕೊಡುವ ಪಾಲನ್ನು ಹೆಚ್ಚಿಸಿದ್ದೇ ಈ ಹೆಚ್ಚಳಕ್ಕೆ ಕಾರಣವಾಗಿರುತ್ತದೆ. ಇದು ಪ್ರಾಂತಿಕ ಸರಕಾರದವರು ನಮಗೆ ಉದಾರಬುದ್ಧಿಯಿಂದ ದಾನಕೊಟ್ಟುದೇನೂ ಅಲ್ಲ. ಮೋಟರ್ ವಾಹನಗಳ ಲೈಸೆನ್ಸ್ ಸಂಬಂಧವಾಗಿ ಇತ್ತಲಾಗಿ ಜ್ಯಾರಿಗೆ ಬಂದ ಕಾನೂನು ಪ್ರಕಾರ ಮೋಟರ್ ವಾಹನಗಳ ಮೇಲಿನ ಲೈಸೆನ್ಸ್ ಫೀಸ್ ಮತ್ತು ಪೆಟ್ರೋಲ್ ತೆರಿಗೆಯನ್ನು ಅದೊಂದು ತತ್ವದ ಮೇರೆಗೆ ಹಂಚಬೇಕಾಗಿರುವುದರಿಂದ ಸರಕಾರವು ನಮಗೆ ಸಲುತಕ್ಕ ಹಣವನ್ನೇ ಕೊಟ್ಟಂದಾಗಿದೆ. ಇದರಿಂದಾಗಿ ಮೊದಲು ನಿರೀಕ್ಷಿಸಿದುದಕ್ಕಿಂತಲೂ ತೃಪ್ತಿಕರವಾದ ಪರ್ಯಾಂತ್ಯದ ಶಿಲ್ಕು ದೊರೆಯುವಂತಾಗಿದೆ. ಶಾಲಾ ಸಂಬಳದ ಕುರಿತು 9ನೇ ಕಂತೊಂದನ್ನು ಹೆಚ್ಚಿಸಿದುದರಿಂದ ಆ ಬಾಬ್ತಿನ ಆದಾಯವು ರೂ 3600ರಷ್ಟು ಹೆಚ್ಚಿದೆ. ಈ 9ನೇ ಕಂತನ್ನು ತೆಗೆದುಹಾಕಬೇಕೆಂಬ ಬೋರ್ಡಿನ ನಿರ್ಣಯಕ್ಕೆ ಸರಕಾರವು ಸಮ್ಮತಿ ಕೊಟ್ಟಿರುವುದಿಲ್ಲ. ವೃತ್ತಿತೆರಿಗೆ ಮಾರ್ಕೇಟು ಮತ್ತು ಕಾರ್ಟ್‌ಸ್ಟೇಂಡಿನಿಂದ ದೊರೆಯುವ ಆದಾಯವು ಬಹಳವಾಗಿ ಕಡಿಮೆಯಾದರೂ, ಜನರಲ್ ಫಂಡ್ಸಿನಿಂದ ರೂ 12,600ನ್ನು ರಸ್ತೆಗಳ ಬಾಬಿಗೆ ಮತ್ತು ರೂ. 17,000ವನ್ನು ಎಲಿಮೆಂಟರಿ ಎಜ್ಯುಕೇಶನ್ ಫಂಡಿಗೆ ಬಜೆಟಿಗಿಂತಲೂ ಹೆಚ್ಚಿಗೆಯಾಗಿ ವರ್ಗಾಯಿಸಿಯೂ, ಸಾಮಾನ್ಯ ಫಂಡ್ ಆಯವು ರೂ. 6,08,340 ಎಂದು ಅಂದಾಜು ಮಾಡಲ್ಪಟ್ಟಿದೆ. 1938-39ರ ಈ ಆಯವು ರೂ. 6,11,220 ಆಗಿದೆ. ತಿದ್ದುಪಡಿ ಮಾಡಲ್ಪಟ್ಟ ವ್ಯಯವು ರೂ. 4950 ರಷ್ಟು ಕಡಿಮೆಯಾಗಿದೆ. ಆಡಳಿತ ವೆಚ್ಚವು ರೂ. 1980ರಷ್ಟು ಹೆಚ್ಚಿದೆ. ರಸ್ತೆಗಳ ವೆಚ್ಚವು ರೂ. 5520 ಹೆಚ್ಚಿರುತ್ತದೆ ಸೆಕೆಂಡರಿ ಶಿಕ್ಷಣ ವೆಚ್ಚದಲ್ಲಿ ರೂ. 4940 ಮತ್ತು ಸಾರ್ವಜನಿಕ ಆರೋಗ್ಯದ ವ್ಯಯ

ಬಿಳಿತೊನ್ನು ಮತ್ತು ಪಾಂಡುರೋಗಕ್ಕೆ ದಿವ್ಯೌಷಧಿ

ಈ ಔಷಧಿಯನ್ನು ಬಿಳಿತೊನ್ನು ಮತ್ತು ರೋಗಗಳಿಗೆ ಉಪಯೋಗಿಸಿದ್ದ ಹಕೀಮ್, ಡಾಕ್ಟರರೇ ಮೊದಲಾದವರಿಂದ ಅಸಾಧ್ಯವೆಂದಾದವುಗಳು ಸಹ ಗುಣಹೊಂದುತ್ತವೆ. ಈ ಔಷಧವು ಅಪ್ರಯೋಜಕವೆಂದು ರುಜುಪಡಿಸಲ್ಪಟ್ಟಲ್ಲಿ 500 ರೂಪಾಯಿ ಬಹುಮಾನ ಕೊಡಲಾಗುವುದು.

ಸಂತತಿ ಬಂಧಕಕ್ಕೆ ಇದು ಅತ್ಯಾವಶ್ಯಕವಾದುದು, ಈ ಔಷಧ ಉಪಯೋಗಿಸುವುದನ್ನು ನಿಲ್ಲಿಸಿ ಬಿಟ್ಟರೆ ಮಕ್ಕಳಾಗುತ್ತವೆ. ಪ್ರತಿ ತಿಂಗಳಲ್ಲೂ ಎರಡು ಮೂರು ದಿವಸ ಈ ಔಷಧಿಯನ್ನು ಉಪಯೋಗಿಸತಕ್ಕದ್ದು. ಒಂದು ವರುಷಕ್ಕೆ ಬೇಕಾಗುವ ಔಷಧಕ್ಕೆ ರೂಪಾಯಿ ಎರಡು. ಜೀವಮಾನದಲ್ಲೇ ಮಕ್ಕಳು ಹುಟ್ಟಲಾರದಂತೆ ಮಾಡುವ ಇನ್ನೊಂದು ಔಷಧಕ್ಕೆ ಬೆಲೆ ರೂಪಾಯಿ ಎರಡು. ಈ ಔಷಧವು ದೇಹಾರೋಗ್ಯಕ್ಕೆ ಹಾನಿಕರವಲ್ಲ, ಮೋಸಗೊಳಿಸುವ ಔಷಧವೆಂದು ಋಜುಪಡಿಸುವವರಿಗೆ ರೂಪಾಯಿ 100 ಬಹುಮಾನ.

ಸ್ತಂಭಕ ವಟಿ—ಈ ಮಾತ್ರೆಯೊಂದನ್ನು ರಾತ್ರಿ ಸೇವಿಸಿದ್ದಲ್ಲಿ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು ಮಾತ್ರವಲ್ಲದೆ ಎರಡು ತಾಸುಗಳ ತನಕ ಇಂದ್ರಿಯಸ್ಖಲನವಾಗಲಾರದು. 16 ಮಾತ್ರೆಗಳಿಗೆ ಒಂದು ರೂಪಾಯಿ.

ಈ ಕೆಳಗಣ ವಿಳಾಸಕ್ಕೆ ಬರೆಯಿರಿ:—

Vaidraj Akhilkishore Ram

No 552 P. O. Katrisarai, (GAYA)



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯವೆಂಬಂತೆ ಸಾಮಾನುಗಳು ಹೇರುಗಟ್ಟಲೆ ಬರುತ್ತಿವೆ, ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

ಮದನರತಿಕಾಮಶಾಸ್ತ್ರವೆಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅದರಲ್ಲಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿರಿ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—T. V. ದೇವಕರ್ ಎಂಡ್ ಕಂಪೆನಿ, ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co., *Nambulier Street*, G. T. MADRAS.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತವೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ದಬ್ಬಿಗೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಶೀಸೆ 1ಕ್ಕೆ ರೂ. 5—0—0.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೬೪. ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ದಲ್ಲಿ ರೂ. 9250 ಕಡಿಮೆಯಾಗಿದೆ. ನಾವು ವೆಚ್ಚದ ಬಾಬುಗಳನ್ನು ಕಠಿಣವಾಗಿ ಹತೋಟಿಯಲ್ಲಿಟ್ಟುಕೊಂಡಿರುತ್ತೇವೆಂಬುವಕ್ಕೆ ವ್ಯಯವು ಕಡಿಮೆಯಾಗಿರುವುದೇ ಸಾಕ್ಷಿ. ಆಡಳಿತದ ಉತ್ಕೃಷ್ಟತೆಯು ಒಂದಿಷ್ಟು ಕಡಿಮೆಯಾಗದಂತೆ ನೋಡಿ ವ್ಯಯವನ್ನು ಸಾಧ್ಯವಾದಷ್ಟು ಕಡಿಮೆಮಾಡಲಾಗಿದೆ. ಒಟ್ಟಾರೆ ನಮ್ಮ ತಿದ್ದುಪಡಿಮಾಡಲ್ಪಟ್ಟ ಆಯವ್ಯಯ ಅಂದಾಜು ತೃಪ್ತಿಕರವಿರುತ್ತವೆಂದು ಭಾವಿಸಬಹುದು. ಈ ಪ್ರಕಾರ ರೂ. 15390ರಷ್ಟರ ಅಭಾವದಲ್ಲಿ ಕೊನೆಗೊಳ್ಳಬೇಕಾದ ಬಜೆಟು ವರ್ಷಾಂತ್ಯದಲ್ಲಿ ರೂ 44,730ರಷ್ಟರ ಉಳಿತಾಯವನ್ನು ಪಡೆಯುವಂತಾಗಿದೆ

1939-40ರ ಆಯವ್ಯಯ ಪಟ್ಟಿ

1939 ಮತ್ತು 40ರ ಆಯವ್ಯಯ ಅಂದಾಜುಪಟ್ಟಿಯ ಪ್ರಕಾರ ಸರ್ವಸಾಮಾನ್ಯ ಆಯವು ರೂ. 6,08,110 ಆಗಿದೆ ತಿದ್ದುಪಡಿಮಾಡಲ್ಪಟ್ಟ ಚಾಲ್ತಿವರ್ಷದ ಈ ಆಯವು ರೂ. 6,71,500 ಲೈಸೆನ್ಸ್, ಪ್ರೊಫೆಶನ್ ಟ್ಯಾಕ್ಸ್ ಮತ್ತು ಇತರ ಆದಾಯಗಳಿಂದ ಬರುವ ವರ್ಷ ಒಟ್ಟು ರೂ. 2,48,850 ದೊರೆಯಬಹುದೆಂದು ಅಂದಾಜುಮಾಡಲಾಗಿದೆ. ಚಾಲ್ತಿವರ್ಷದ ತಿದ್ದುಪಡಿಮಾಡಲ್ಪಟ್ಟ ಅಂದಾಜುಪಟ್ಟಿ ಮೇರೆಗೆ ಈ ಆಯವು ರೂ. 2,42,740 ಬರುವ ವರ್ಷ ವೃತ್ತಿತೆರಿಗೆಯು ಇನ್ನೂ ಕಡಿಮೆಯಾಗಬಹುದು. ಇನ್ನೂ ಕೆಲವು ವರ್ಗಗಳಲ್ಲಿ ಪಂಚಾಯತುಗಳು ಹೆಚ್ಚಾಗಿ ಸ್ಥಾಪಿಸಲ್ಪಟ್ಟಾಗ ಈ ಬಾಬಿನ ಆಯವು 3 ಅಂಕೆಗಳಿಗಿಳಿಯದಿರಲಾರದು. ರಸ್ತೆಗಳಿಗಾಗಿ ದೊರೆಯುವ ಹಣವು ಚಾಲ್ತಿವರ್ಷದ ತಿದ್ದುಪಡಿಮಾಡಲ್ಪಟ್ಟ ಅಂದಾಜಿನ ಮೇರೆಗೆ ರೂ. 3,34,480 ಬರುವ ವರ್ಷ ರಸ್ತೆಗಳಿಗಾಗಿ ರೂ. 3,25,780 ದೊರೆಯಬಹುದೆಂದು ಅಂದಾಜುಮಾಡಲಾಗಿದೆ ಇದರಲ್ಲಿ ಸರಕಾರದ ಗ್ರಾಂಟು ರೂ. 147,930 ಮತ್ತು ಕಡವಿನ ಬಾಡಿಗೆ ರೂ 45,000 ಸೇರಿರುತ್ತದೆ ಟೋಲ್ ಗೇಟ್‌ಗಳ ಪ್ರತಿಫಲವಾಗಿ ರೂ. 45,000 ಕ್ಕಿಂತ ಹೆಚ್ಚು ಸಿಗುವುದೆಂದು ನಿರೀಕ್ಷಿಸಲಾಗುವುದಿಲ್ಲ. ಮೋಟರ್ ವಾಹನಗಳ ಮೇಲಿನ ಲೈಸೆನ್ಸ್ ಫೀಸಿನಿಂದ ರೂಪಾಯಿ 84,100 ಮಾತ್ರ ದೊರೆಯಬಹುದು. ಮೂಡಬಿದ್ರೆಯ ಮಿಡ್ಲ್ ಸ್ಕೂಲನ್ನು ಮುಚ್ಚಿದುದರಿಂದ ಸರಕಾರವು ಬೋರ್ಡಿಗೆ ಕೊಡುವ ನಿಶ್ಚಿತ ಸಹಾಯವನ್ನು ರೂ. 2109ರಷ್ಟು ಕಡಿಮೆಮಾಡಿದೆ. ಈ ಸಹಾಯವು 1926ರಲ್ಲು ನಿಶ್ಚೈಸಲ್ಪಟ್ಟಿದೆ. ದಕ್ಷಿಣಕನ್ನಡದಷ್ಟೇ ಇಲ್ಲವೆ ಅದಕ್ಕಿಂತ ಕಡಿಮೆ ಶಾಲೆಗಳನ್ನು ನಡಿಸುವ ಪ್ರಾಂತದ ಇತರ ಬೋರ್ಡುಗಳಿಗೆ ಸಿಗುವ ಸಹಾಯಕ್ಕಿಂತ ಇದು ಬಹಳ ಕಡಿಮೆಯಾಗಿ ಏನೇನೂ ಸಾಲದಾಗಿದೆ. ಈ ಸಹಾಯವನ್ನು ಹೆಚ್ಚಿಸಬೇಕೆಂದು ಬೋರ್ಡಿನವರು ಮಾಡಿರುವ ನಿರ್ಣಯಗಳಿಗೆ ಸರಕಾರವು ಕಿವಿಕೊಟ್ಟಿರುವುದಿಲ್ಲ. ಸೆಕೆಂಡರಿ ಶಾಲೆಗಳಿಂದ ಬೋರ್ಡಿಗೆ ಬರುವ ವರ್ಷ ದೊರೆಯುವ ಆದಾಯವು ರೂ. 76,030 ಎಂದು ಅಂದಾಜುಮಾಡಲಾಗಿದೆ. ಚಾಲ್ತಿವರ್ಷದ ಅಂದಾಜು ರೂ. 74,840 ಶಾಲಾ ಸಂಬಳವು ಹೆಚ್ಚಿಸಲ್ಪಟ್ಟುದು ಈ ಆಯವು ಸ್ವಲ್ಪ ಹೆಚ್ಚಲು ಕಾರಣ. ಸಾರ್ವಜನಿಕ ಆರೋಗ್ಯಖಾತೆಯ ಆಯವು ರೂ 4790 ಎಂದು ಅಂದಾಜುಮಾಡಲಾಗಿದೆ. ಚಾಲ್ತಿವರ್ಷದ ಈ ಆಯವು ರೂ 4740. ಅಪಾಯಕರ ಹಾಗೂ ಹಾನಿಕ ವ್ಯಾಪಾರಗಳ ಮೇಲಿನ ಲೈಸೆನ್ಸ್ ಫೀಸು ಮತ್ತು ಸಾಲುಮರಗಳ ಉತ್ಪತ್ತಿಯ ಮಾರಾಟದ ಹೊರತು ಇನ್ನಾವ ರೀತಿಯಲ್ಲಿಯೂ ಬೋರ್ಡು ತನ್ನ ಆಯವನ್ನು ಹೆಚ್ಚಿಸುವ ಸಾಹಸದ ಉದ್ಯಮಗಳನ್ನು ಕೈಕೊಳ್ಳದುದು ನಮ್ಮ ದುರಾದೃಷ್ಟವೆನ್ನಬೇಕು. ಮೇಲಿನ ಬಾಬುಗಳಿಂದ ಬೋರ್ಡಿಗೆ ಬರುವ ವರ್ಷ ದೊರೆಯಬಹುದಾದ ಆ ಆದಾಯವು ರೂ. 10,370. ಬರುವ ವರ್ಷದ ಬಜೆಟಿನಲ್ಲಿ ರೂ. 1[illegible],730ನ್ನು ರಸ್ತೆ ಮೋರಿಗಳ ದುರಸ್ತಿಗೆ ವೆಚ್ಚಕ್ಕಾಗಿಯೂ, ರೂಪಾಯಿ 37,780 ಎಲಿಮೆಂಟರಿ ಎಜ್ಯುಕೇಶನ್ ಫಂಡಿಗೂ ವರ್ಗಾಯಿಸುವ ಸೂಚನೆಮಾಡಲ್ಪಟ್ಟಿದೆ ಎಲಿಮೆಂಟರಿ ಎಜ್ಯುಕೇಶನ್ ಫಂಡಿಗೆ ವರ್ಗಾಯಿಸಲ್ಪಡುವ ಹಣದಲ್ಲಿ ರೂ. 33,580 ಕ್ರಮಪ್ರಕಾರ ಸಪ್ರಿ ಫಂಡಿಗೆ ಕೊಡುವ ಸಾಲು ಮತ್ತು ರೂ. 4200 ಶಾಲಾ ಸಂಬಳ ಮಾಫಿ ಭರ್ತಿ ಮಾಡಲಿಕ್ಕಾಗಿದೆ.

1939-40ರ ವ್ಯಯ ಅಂದಾಜು

ಬರುವ ವರ್ಷದ ವ್ಯಯವು ರೂಪಾಯಿ 6,58,740 ಎಂದು ಅಂದಾಜುಮಾಡಲಾಗಿದೆ. ಇದು ಚಾಲ್ತಿವರ್ಷದ ತಿದ್ದುಪಡಿಮಾಡಲ್ಪಟ್ಟ ಅಂದಾಜು ವೆಚ್ಚದಿಂದ ರೂ. 20,970ರಷ್ಟು ಅಧಿಕವಾಗಿದೆ. ಆಡಳಿತ ವೆಚ್ಚಕ್ಕಾಗಿ ರೂ. 940 ಸಂಚಾರದನುಕೂಲತೆಗಾಗಿ ರೂ. 11,290 ಸೆಕೆಂಡರಿ ಶಿಕ್ಷಣಕ್ಕಾಗಿ ರೂ. 2190, ಸಾರ್ವಜನಿಕ ಆರೋಗ್ಯಕ್ಕಾಗಿ ರೂ 6,580 ಹೆಚ್ಚಿಗೆ ವ್ಯಯಮಾಡಲ್ಪಡುವುದೇ ವೆಚ್ಚವು ಹೆಚ್ಚಲು ಕಾರಣ ವೆಚ್ಚದ ಬಾಬುಗಳನ್ನೆಲ್ಲಾ ಬಜೆಟ್ ಕಮಿಟಿಯವರು ಚೆನ್ನಾಗಿ ಪರಿಶೀಲಿಸಿ, ತಮಗೆ ದೊರೆಯಬಹುದಾದ ಹಣವನ್ನು ನ್ಯಾಯವಾಗಿ ಎಲ್ಲಾ ಖಾತೆಗಳೊಳಗೂ ಹಂಚಿರುತ್ತಾರೆ. ಹೆಚ್ಚಿನ ಸೌಕರ್ಯಗಳಿಗಾಗಿ ಅವರು ಹಣದ ಏರ್ಪಾಡು ಮಾಡದಿದ್ದರೆ ಅದಕ್ಕೆ ಹಣದ ಅಭಾವವೇ ಕಾರಣವಲ್ಲದೆ, ಅವರಲ್ಲಿ ಆ ಉತ್ಸಾಹವಿಲ್ಲದೇನೂ ಅಲ್ಲ ಕ್ರಮಪ್ರಕಾರ ಬೋರ್ಡಿನ ಸರ್ವಸಾಮಾನ್ಯ ವೆಚ್ಚವು ಆಯಕ್ಕಿಂತ ಅಧಿಕವಾಗಬಾರದು. ಆದರೆ ನಾನು ಆರಂಭದಲ್ಲೇ ಸೂಚಿಸಿದಂತೆ ನಮ್ಮ ಸಾಮಾನ್ಯ ಆಯವು ಎಂದೂ ಏಕಪ್ರಕಾರವಾಗಿರದೆ ಅನಿಶ್ಚಿತವಾಗಿದೆ.

ವೆಚ್ಚದ ಬಾಬುಗಳನ್ನು ಆದಷ್ಟು ಕಡಿಮೆ ಮಾಡಿ ಬಜೆಟ್ ಕಮಿಟಿಯವರು ಹಣ ಉಳಿಸಿದರೂ 1939-40ರ ಬಜೆಟಿನಲ್ಲಿ ಆಯವ್ಯಯ ಬಾಯಿ ಗೂಡುವುದಿಲ್ಲ. ಜನರಲ್ ಎಕೌಂಟಿನಲ್ಲಿ ರೂ. 1110 ಕಡಿಮೆ ಬಿದ್ದಿದೆ ಕಾನೂನು ಪ್ರಕಾರ ರೂ. 10,710ರಷ್ಟರ ಶಿಲ್ಕು ಇರತಕ್ಕದ್ದು. ಬೋರ್ಡಿನ ಬಜೆಟಿನ ವರ್ಷದ ಆರ್ಥಿಕ ಸ್ಥಿತಿಯು ಈ ಕೆಳಗಣಂತಿದೆ.

ಆಯ (ವರ್ಷಾರಂಭದ ಶಿಲ್ಕು ಸೇರಿ) ರೂ. 6,57,630. ವ್ಯಯ 6,58,740 ರೂಪಾಯಿ. ಅಭಾವ ರೂ. 1110 ಕಾನೂನು ಪ್ರಕಾರ ವರ್ಷಾಂತ್ಯದಲ್ಲಿರಬೇಕಾದ ಶಿಲ್ಕು ರೂ. 10710. ಒಟ್ಟು ಅಭಾವ ರೂ. 17,820.

ಯೋಗ್ಯಕಂಡರೆ
ನವಯುಗಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

"THE PRIDE AND ENVY OF INDIAN INSURANCE"

Facts that call for your immediate attention:-

*The Company has just undergone its First Valuation as at 31st December, 1938

*The Valuation has been performed assuming an interest rate of 3½%, a low rate which is adopted by very few Indin Companies of good standing and nevertheless the surplus disclosed is substantial.

*A substantial Life Fund supported by clean assets and complete absence of preliminary expenses and organisation outlay in the assets of every one of the Balance Sheets.

*A very low expense ratio.

The above in the opinion of the Consulting Actuary, Prof. K. B. Madhava M. A., F. R. A. S., A. I. A. (London), "are undoubtedly such as to be the pride and envy of Indian Insurance". The Actuary recommends the declaration of a simple Reversionary Bonus at Rs 15/- per Rs 1000/- Sum Assured on Sial Whole Life Assurances and at Rs. 10/- per Rs. 1,000/- Sum Assured on Endowment Assurances.

Just the Company for you to insure with or represent.

THE
CANARA MUTUAL
ASSURANCE CO., LTD.

The Company is Mutual] UDIPI, S. INDIA. [There are no Shareholders.

ಎಲ್ಲೆಲ್ಲಿ ಏನೇನು?

- ವೈಸರಾಯರ ಭಾಷಣಕ್ಕೆ ಗಾಂಧಿಗಳ ಸರ್ಟಿಫಿಕೇಟು.
- ವಿಠಲಭಾಯಿ ಪಟೇಲರ ವೀಲ್ ಜಜ್ಮೆಂಟ್ ಮಾರಾಟದ ಮೊಬಲಗಿನ ಮೇಲೆ ಟೇಕ್ಸ್.

ಚೀನೀಯರಿಗೆ ಬ್ರಿಟಿಷ್ ಕಾರ್ಖಾನೆಯಿಂದ ೩೦೦ ಲೋರಿಗಳು. ಬೆಲೆ ೨೨೧೦೦೦ ಪವನು!

ಫೋರ್ಡ್ ಕ್ರೇಪ್ಸ್ ಎಂಬ ಲಂಡನಿನ ಮೋಟರ್ ಕಾರ್ಖಾನೆಗೆ ಚೈನವು ತನ್ನ ಬರ್ಮಾ-ಯೂನಾನ್ ರಸ್ತೆಯಲ್ಲಿ ಸಂಚಾರಕ್ಕಾಗಿ ಸಂಪೂರ್ಣ ಸಾಹಿತ್ಯ ಸಿದ್ಧವಾದ ೩೦೦ ಮೋಟಾರ್ ಲೋರಿಗಳನ್ನು ರಂಗೂನ್ ಬಂದರದಲ್ಲಿ ಇಳಿಸಿಕೊಡಬೇಕೆಂದೂ ಅವುಗಳ ಬೆಲೆ ೨೨೧೦೦೦ ಪವನನ್ನು ಕೊಡುತ್ತೇವೆಂದೂ ಕೂಡಲೇ ಮೊದಲ ಹಡಗದಲ್ಲಿ ಕೆಲವು ಬಂದು ಮುಟ್ಟಬೇಕೆಂದೂ ಆ ಕಂಪೆನಿಗೂ ಚೀನಾ ಸರಕಾರಕ್ಕೂ ತಹನಾಮೆ ಕರಾರು ಆಗಿದೆ.

ವೈಸರಾಯರ ಭಾಷಣಕ್ಕೆ ಗಾಂಧೀಜಿಗಳ ಸರ್ಟಿಫಿಕೇಟು

ಡಿಲ್ಲಿಯ ನರೇಂದ್ರರ ಪರಿಷತ್ತಿನ ಉದ್ಘಾಟನಾ ಸಮಾರಂಭ ನೆರವೇರಿಸುತ್ತ ವೈಸರಾಯರಿತ್ತ ಭಾಷಣವನ್ನು ಗಾಂಧೀಜಿಗಳು ಡಿಲ್ಲಿಗೆ ಹೋಗುತ್ತ ರೈಲುಬಂಡಿಯಲ್ಲಿ ಪಂಕ್ತಿ ಪಂಕ್ತಿಯನ್ನು ಓದಿ ಪರ್ಯಾಲೋಚಿಸಿ 'ಚಲೋ ಭಾಷಣ' ಎಂದರಂತೆ. ವೈಸರಾಯರು ಸಂಸ್ಥಾನಗಳ ರಾಜ್ಯಭಾರ ಸುಧಾರಣೆಯ ಕುರಿತು ವಿಶಾಲದೃಷ್ಟಿಯಲ್ಲಿ ಕೊಟ್ಟ ಸೂಚನೆಗಳು ಗಾಂಧೀಜಿಯವರಿಗೆ ಮೆಚ್ಚಿಕೆಯಾಗಿವೆ.

ಕರಾಚಿಯಲ್ಲಿ ಓಂ ಮಂಡಳಿಯ ವಿಚಾರಣಾ ಸಮಿತಿ

ಓಂ ಮಂಡಳಿಯ ಸಂಸ್ಥಾಪನಾಚಾರ್ಯರಾದ (ನವಕೃಷ್ಣಲೀಲಾವತಾರಿ?) ದಾದಾಭಾಯಿ ಲೇಖರಾಜ ಮತ್ತು ಅವರ ಓಂ ರಾಧೆ ಇವರ ವರ್ತನೆಯ ವಿಷಯದಲ್ಲಿಯೂ ಇವರ ಬೋಧನೆಯಿಂದಾಗಿ ಹಲವು ವಿವಾಹಿತ ಸ್ತ್ರೀಯರೂ ಅವಿವಾಹಿತೆಯರೂ ಮನೆಬಿಟ್ಟು ಇವರ ಆಶ್ರಮವನ್ನು ಸೇರಿದ ಪ್ರಯುಕ್ತವೂ ಆಶ್ರಮದ ಮುಂದೆ ಸತ್ಯಾಗ್ರಹ ಮುಂತಾದ ಚಳುವಳಿಗಳು ನಡೆದು ನಿಷ್ಪ್ರಯೋಜಕವಾಗಲು-ಆ ಊರವರನ್ನು ಖಿಲ್ಲೆಗೆ ಗುರಿಪಡಿಸಿ ಆ ಮಂಡಳಿಯು ಅನೀತಿಯ ಸಂಸ್ಥೆಯೆಂದು ಸರಕಾರವು ನಿಷೇಧಾಜ್ಞೆಯನ್ನು ಹೊರಡಿಸದಿದ್ದರೆ ತಾವು ತಮ್ಮ ಮಂತ್ರಿಪದಕ್ಕೆ ರಾಜೀನಾಮೆ ಕೊಡುತ್ತೇವಾಗಿ ಸಿಂಧ್ ಪ್ರಾಂತದ ಇಬ್ಬರು ಮಂತ್ರಿಗಳ ಪ್ರಧಾನ ಮಂತ್ರಿಗಳಿಗೆ ಹೇಳಿದರು. ಪರಿಣಾಮವಾಗಿ ಈ ಆಶ್ರಮದ ಮೇಲಿರುವ ಆರೋಪಣೆಗಳ ವಿಚಾರಣೆಗಾಗಿ ಒಂದು ನ್ಯಾಯಾಧೀಶರ ಮಂಡಲವು ನೇಮಕವಾಗಿದೆ. ಎಡಿಶನಲ್ ಜುಡಿಶಿಯಲ್ ಕಮಿಷನರರುಗಳಾದ ಸಿ. ಎಮ್. ಲೋಬೋ, ಇ. ವೆಸ್ಟನ್ ಇವರೂ ನಿವೃತ್ತ ನ್ಯಾಯಾಧೀಶರಾದ ರೂಪಚಂದ್ ಬಲರಾಮ್ ಇವರೂ ಆ ನ್ಯಾಯಾಧೀಶ ಮಂಡಲದ ಸದಸ್ಯರಾಗಿದ್ದಾರೆ. ಅವರು ಈ ವಾರದಲ್ಲಿ ವಿಚಾರಣೆಯನ್ನು ಪ್ರಾರಂಭಿಸುವರು.

ವಿಠಲಭಾಯಿ ಪಟೇಲರ ವೀಲ್-ಜಜ್ಮೆಂಟ್.

ವಲ್ಲಭಾಯಿ ಪಟೇಲರ ಪ್ರಕಟಣೆ

ಇಂಡಿಯದ ಉದ್ಧಾರಕ್ಕಾಗಿ ವಿನಿಯೋಗಿಸಲ್ಪಡಬೇಕೆಂದು ದಿವಂಗತ ವಿಠಲಭಾಯಿ ಪಟೇಲರು ತನ್ನ ವೀಲ್‌ನಾಮೆಯಲ್ಲಿ ಪ್ರತ್ಯೇಕಿಸಿಟ್ಟ ನಿಧಿಯ ಕುರಿತು ಬೊಂಬಾಯಿ ಹೈಕೋರ್ಟು ತೀರ್ಪು ಕೊಟ್ಟಿತು. ಆ ನಿಧಿಯನ್ನು ಅವರ ಉತ್ತರಾಧಿಕಾರಿಗಳೇ ಪಡೆಯತಕ್ಕದೆಂದೂ ಅದರ ವಾಕ್ಯದಿನ ಉದ್ದೇಶ ಸಾರ್ಥಕ್ಯಕ್ಕಾಗಿ ಯಾವ ರೀತಿಯಲ್ಲಿ ಅದನ್ನು ಉಪಯೋಗಿಸಬೇಕೆಂಬುದರ ನಿರ್ಧಾರವನ್ನು ಅವರೇ ಮಾಡಿಕೊಳ್ಳತಕ್ಕದೆಂದೂ ತೀರ್ಪು.

ವಿಠಲಭಾಯಿ ಪಟೇಲರು ೧೯೩೩ರಲ್ಲಿ ಸ್ವಿಜರ್‌ಲ್ಯಾಂಡಿನಲ್ಲಿ ಮೃತರಾದರು. ಅವರು ಬರೆದಿಟ್ಟ ವೀಲಿನಲ್ಲಿ ಹೆಸರು ಕಾಣಿಸಿದ ನಾಲ್ಕು ಮಂದಿಗೆ ದಾನವಾಗಿ ಕೊಡತಕ್ಕ ಅಂಶಗಳು ತನ್ನ ಆಸ್ತಿಯಿಂದ ಕೊಟ್ಟು ಉಳಿದುದನ್ನು ಸುಭಾಷ್ ಚಂದ್ರ ಭೋಸರಿಗಾಗಲೀ ಅವರ ನಿರ್ದೇಶದಂತೆ ಇತರರಿಗಾಗಲೀ ಇಂಡಿಯಾದ ರಾಜಕೀಯ ಉದ್ಧಾರ ಕಾರ್ಯ ನಿರ್ವಾಹಕ್ಕಾಗಿ, ವಿಶೇಷತಃ ಇತರ ರಾಜ್ಯಗಳಲ್ಲಿ ಇಂಡಿಯದ ಉತ್ಕರ್ಷಕ್ಕಾಗಿ ಪ್ರಚಾರ ಕಾರ್ಯ ನಿರ್ವಾಹದ ವೆಚ್ಚಕ್ಕಾಗಿ ಕೊಡಲ್ಪಡಬೇಕೆಂದು ಇತ್ತು. ಆದರೆ ಆ ಒಕ್ಕಣೆಗಳು ಅಸ್ಪಷ್ಟವಾಗಿದ್ದುದರಿಂದ ಆ ನಿಧಿಯು ಭೋಸರಿಗೇ ಕೊಡಲ್ಪಟ್ಟದ್ದೋ ಅಥವಾ ನಿಶ್ಚಿತವಾದ ಯಾವದಾದರೂ ಸಂಸ್ಥೆಗೆ ದತ್ತವಾದುದೋ ಎಂಬುದರ ವಿಷಯ ಕಾನೂನಿನ ತೊಡಕುಬಂದು ಹೈಕೋರ್ಟಿನಲ್ಲಿ ಮೇಲೆ ಹೇಳಿದಂತೆ ತೀರ್ಮಾನವಾಯಿತು.

ಮಾರಾಟದ ಮೊಬಲಗಿನ ಮೇಲೆ ಟೇಕ್ಸ್

ರಾಜಾಜಿಗಳ ನಿರ್ಧಾರ.

ಮದ್ರಾಸು ಪ್ರಾಂತಿಕ ಸರಕಾರವು ಕಳೆದ ಬಜೆಟ್ ಅಧಿವೇಶನದಲ್ಲಿ (ಸೇಲ್ಸ್‌ಟೇಕ್ಸ್) ವಿಕ್ರಯದ ಮೊಬಲಗಿನ ಮೇಲೆ ತೆರಿಗೆ ಹೊರಿಸುವ ನಿರ್ಧಾರ ಮಾಡಿತ್ತಷ್ಟೆ. ಅದನ್ನು ವಿರೋಧಿಸುವುದಕ್ಕಾಗಿ ಪ್ರಾಂತದ ಎಷ್ಟೋ ನಗರ ಪಟ್ಟಣಗಳಲ್ಲಿ ನಿಷೇಧ ಸಭೆಗಳೂ, ನಿರ್ಣಯಗಳೂ, ಹರತಾಳಗಳೂ ಆಗುತ್ತಾ ಇವೆ. ಈ ಕುರಿತು ನೊನ್ನೆ ನ್ಯಾಯವಿಧಾಯಕ ಸಭೆಯಲ್ಲಿ ತನ್ನ ಧೋರಣೆಯನ್ನು ಸಮರ್ಥಿಸುತ್ತ ಪ್ರಧಾನಮಂತ್ರಿಗಳಾದ ರಾಜಗೋಪಾಲಾಚಾರ್ಯರು—'ಬಡಜನರನ್ನು ಉದ್ಧರಿಸುವುದಕ್ಕಾಗಿ ದೊಡ್ಡವರು ಸ್ವಲ್ಪ ತ್ಯಾಗ ತೋರಲೇ ಬೇಕು. ಕುಡಿಕನನ್ನೂ ಒಕ್ಕಲಿಗನನ್ನೂ ಸಂರಕ್ಷಿಸುವುದಕ್ಕೆ ಬೇರೆ ಉಪಾಯವಿಲ್ಲ. ಇಂದಿನ ಆಕ್ಟು ಮೇರೆಗೆ ನಮಗೆ ಕೇಂದ್ರ ಸರಕಾರದಿಂದ ಹಣ ಪಡೆಯಲಿಕ್ಕಾಗುವುದಿಲ್ಲ. ಇಂಪೀರಿಯಲ್ ಅಧಿಕಾರಿಗಳ ಸಂಖ್ಯೆಯಲ್ಲಾಗಲೀ ಸಂಬಳದಲ್ಲಾಗಲೀ ಕಡಿಮೆ ಮಾಡಲಿಕ್ಕೆ ಕಾನೂನು ಬಿಡುವುದಿಲ್ಲ. ಆದುದರಿಂದ ನಮ್ಮ ಮೇಲೆಯೇ ನಾವು ತೆರಿಗೆ ಹೊರಿಸಿಕೊಳ್ಳಬೇಕಾಗಿದೆ ನಗರ ಪಟ್ಟಣಗಳ ಮೇಲೆ ತೆರಿಗೆ ಬಿದ್ದರೂ ಚಿಂತೆ ಇಲ್ಲ. ಹಳ್ಳಿಗಳ ಮೇಲೆ ಬೀಳಬಾರದು. ಇದು ನಮ್ಮ ಧೋರಣೆ. ಇದಕ್ಕೆ ಪ್ರಬಲ ವಿರೋಧ ತೋರಿಸಿದರೂ ನಾವು ತೆರಿಗೆ ಹೊರಿಸಿಯೇ ಬಿಡುವೆವು. ಜನರ ಅವಕೃಪೆಗೆ ಪಾತ್ರರಾಗುವೆವೆಂದು ನಾವು ಹಿಂಜರಿಯುವುದಿಲ್ಲ. ಮಂತ್ರಿಮಂಡಲದಿಂದ ಹೊರಗೆ ಹೋಗಲೂ ಸಿದ್ಧರೇ. ಹೊಸ ಮಂತ್ರಿಮಂಡಲ ನಿರ್ಮಾಣ ಮಾಡಿಕೊಳ್ಳಲಿ. ನಾವು ಮಾತ್ರ ಈ ತೆರಿಗೆಯನ್ನು ಹೊರಿಸದೆ ಇರಲಿಕ್ಕೆ ಸಾಧ್ಯವಿಲ್ಲ—ಎಂದು ಕಂಠೋಕ್ತವಾಗಿ ಸಾರಿದ್ದಾರೆ.

ಸಂಸ್ಥಾನಿಕ ರಾಜರ ಪರಿಷತ್ತಿನಲ್ಲಿ ವೈಸರಾಯರ ಸ್ಪಷ್ಟೋಕ್ತಿ

ಫೆಡರೇಶನಿಗೆ ನೀವು ಸೇರಬೇಕೋ ಬೇಡವೋ ಎಂಬುದನ್ನು ನೀವೇ ದೀರ್ಘ ವಿಚಾರಮಾಡಿ ನಿರ್ಧರಿಸಬೇಕಾಗಿದೆ. ಕುಂದುಕೊರತೆಗಳಿದ್ದರೂ ಅದಕ್ಕಿಂತ ಉತ್ತಮವಾದ ರಾಜ್ಯಪದ್ಧತಿಯ ಸೂತ್ರವು ಹಿಂದೂಸ್ಥಾನದ ಮಟ್ಟಿಗೆ ಪ್ರಕೃತ ಬೇರೆ ಉಂಟೆಂದು ನಾನು ನಂಬುವುದಿಲ್ಲ. ಆಶ್ರಿತ ಸಂಸ್ಥಾನಗಳ ಆಡಳಿತೆಗಳ ವಿಷಯದಲ್ಲಿ ತುಂಬ ಆಕ್ಷೇಪಣೆ ಆರೋಪಣೆಗಳು ದಿನದಿನವೂ ಬರುತ್ತಿವೆ. ಅನೇಕ ವೇಳೆ ಲವಾಂಶ ಸತ್ಯವಿಲ್ಲದವೂ ಪ್ರಚಾರವಾಗುತ್ತಿವೆ. ಅವನ್ನು ಬಿಟ್ಟು ನಿಜಾಂಶವನ್ನು ಪರಿಶೋಧಿಸಿ ಮಾತಾಡುವುದಾದರೂ ಕಾಲವನ್ನು ನೋಡಿ ರಾಜ್ಯಭಾರ ಪದ್ಧತಿಯಲ್ಲಿ ಪರಿವರ್ತನೆಯಾಗಬೇಕೆಂಬುದನ್ನು ತಳ್ಳಿಗಳೆಯಲಾಗುವುದಿಲ್ಲ. ನ್ಯಾಯವಾದ ಪ್ರಜಾಕಾಂಕ್ಷೆಗೆ ಲಕ್ಷ್ಯಗೊಡತಕ್ಕದು. ಈ ದೃಷ್ಟಿಯಿಂದ ಎಂತಹ ರಾಜಕೀಯ ಸುಧಾರಣೆಗಳಾಗಬೇಕೆಂಬುದನ್ನು ನಿರ್ಧರಿಸುವ ಹಕ್ಕು ರಾಜರದು. ಬ್ರಿಟಿಷ್ ಪ್ರಭುತ್ವಕ್ಕೂ ಆಶ್ರಿತ ರಾಜರಿಗೂ ಆದ ಒಪ್ಪಂದಗಳಿಗೆ ಅನುಗುಣವಾಗಿ ಆಡಳಿತೆಯನ್ನು ಸುಧಾರಿಸುವುದರಲ್ಲಿ ಪ್ರತಿಬಂಧಕವಿಲ್ಲ. ಸಂಧಿಯೊಪ್ಪಂದಗಳ ಶರತ್ತುಗಳ ಪ್ರಕಾರ ರಾಜರ ಸಂರಕ್ಷಣೆಗೆ ಸಹಾಯಮಾಡಲು ಬ್ರಿಟಿಷ್ ಪ್ರಭುತ್ವವು ಸಿದ್ಧವೇ. ಆದರೆ ಅಂತಹ ಪರಿಸ್ಥಿತಿಗಳು ಬಾರದಂತೆ ಪರಿಸ್ಥಿತಿಯನ್ನು ನೋಡಿಕೊಂಡು ಸುಧಾರಿಸಿಕೊಂಡು ವಿದೇಶಗಳಲ್ಲೇ ಕಾಲ ಕಳೆಯದೆ ಸ್ವದೇಶದಲ್ಲೇ ಪ್ರಜಾಪ್ರಿಯರಾಗಿ ಆಳುವ ಧೋರಣೆಯನ್ನು ರಾಜರುಗಳು ಮರೆತು ಬಿಡಬಾರದು. ಆರ್ಥಿಕ ಪರಿಸ್ಥಿತಿ ತಕ್ಕಷ್ಟು ಇಲ್ಲದ ರಾಜ್ಯಗಳು ಆಳ್ವಿಕೆಯ ಮಟ್ಟಿಗೆ ಒಟ್ಟಾಗಿ ಸಹಕಾರದಿಂದ ನಿರ್ವಹಿಸುವುದು ಕ್ಷೇಮಕರ ಎಂಬುದು ವೈಸರಾಯರ ಭಾಷಣದ ಮುಖ್ಯಾಂಶ.

SAVING MONEY AND TIME

Thousands of prudent and thriving businessmen prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906
CANARA BANK LIMITED



"ಶೆಂಕ್ಸ"
SHANKS
(ಇಂಗ್ಲಿಷ್ ಮೇಕ್)
ಕ್ರೂಡ್ ಆಯಿಲ್ ಎಂಜಿನುಗಳು

ಸುಲಭ ಚಲನೆ! ಭದ್ರತೆಯ ಬಾಳಿಕೆ! ಮಿತವ್ಯಯ!

ದಕ್ಷಿಣ ಕನ್ನಡದೊಳಗಿನ ಹೆಚ್ಚಿನ ಅಕ್ಕಿಯ ಮಿಲ್ಲುಗಳು "ಶೆಂಕ್ಸ" ಎಂಜಿನುಗಳಿಂದಲೇ ನಡಿಸಲ್ಪಡುತ್ತವೆ.

ಇದಲ್ಲದೆ ನಮ್ಮಲ್ಲಿ ಅಕ್ಕಿಯನ್ನು ತಯಾರಿಸುವ ಯಂತ್ರ (ಹಲ್ಲರ್ ಮತ್ತು ಕಂಬ್ಯಾಂಡ ಪ್ಲೆಂಟ), ನೀರಿನ ಪಂಪು, ಎಣ್ಣೆಯ ಗಾಣ, ಹಿಟ್ಟಿನ ಮಿಲ್ಲು ವಗೈರೆ ಎಲ್ಲಾ ತರದ ಯಂತ್ರಸಾಮಗ್ರಿಗಳು ಸಿಗುತ್ತವೆ.

ಕ್ಯಾಟಲಾಗಿಗೆ ಬರೆಯಿರಿ—

ಪೆರಮೌಂಟ್ ಇಂಜಿನೀಯರಿಂಗ್ ಕೊರ್ಪರೇಶನ್
೮೨, ಎಪ್ಪೋಲೊ ಸ್ಟ್ರೀಟ್, ಫೋರ್ಟ್, . . . ಮುಂಬಯಿ.

Paramount Engineering Corporation,
82 Appolo Street, Fort, BOMBAY.

THE
Canara Banking Corporation, Udipi, Ltd.
(Incorporated in British India.)
ESTD. 1906

THREE YEARS' CASH CERTIFICATES
bearing interest at 4% p. a. in denominations of Rs. 50/-, 100/-, 500/-, 1,000/- & 5000/-
are now issued at all our Branches.

For particulars call at or write to any of our nearest Branches.

ನವಯುಗ

ಉಡುಪಿ, ಗುರುವಾರ, ತಾ. ೨೩-೩-೩೯

ಜಗತ್ತಿನ ಕಳವಳ

ಜರ್ಮನಿಯು ಪ್ರಪಂಚದ ಎಲ್ಲ ರಾಷ್ಟ್ರಗಳನ್ನೂ ವಿಸ್ಮಯಗೊಳಿಸಿ ಅಲ್ಲೆಲ್ಲ ಕಳವಳವನ್ನುಂಟುಮಾಡಿ ತಾನಿಂದು ವಿಜಯೋತ್ಸವವನ್ನು ಜರಗಿಸುತ್ತದೆ. ಹಿಟ್ಲರನು ಜೆಕೋಸ್ಲೊವೇಕಿಯದಲ್ಲಿ ಬಿಟ್ಟಿದ್ದ ಸ್ಲೊವೇಕಿಯದೊಳಗೆ ಮೊನ್ನೆ ಗುಂಡಿನ ಸದ್ದಿಲ್ಲದೆಯೇ ದಂಡಯಾತ್ರೆಯನ್ನು ನಡೆಸಿ ಗೆದ್ದು ತನ್ನ ಸೇನಾಶಕ್ತಿಯ ಪ್ರಚಂಡ ಪ್ರದರ್ಶನದಿಂದ ಜೆಕ್ಕರನ್ನೆಲ್ಲ ಗಡಗಡ ನಡುಗಿಸಿ ವಿಜಯೋನ್ಮತ್ತನಾಗಿ ಹಿಂದಿರುಗಿ ತನ್ನ ರಾಜಧಾನಿಯಾದ ಬರ್ಲಿನ್ ಪುರಪ್ರವೇಶಮಾಡಿದ ಅ ತಾ. ೧೯ರಂದು ಅಲ್ಲಿ ನಡೆದ ದಿಗ್ವಿಜಯ ಸಮಾರಂಭದ ವೈಭವವೇನು! ಕಿಕ್ಕಿರಿದು ನೆರೆದಿದ್ದ ಜನಸ್ತೋಮವೇನು? ಸ್ಫೂರ್ತಿದಾಯಕವಾದ ಭಾಷಣಗಳೇನು! ಸರ್ವಸೇನಾಪತಿ ಗೋರಿಂಗನು ಹಿಟ್ಲರರನ್ನು ಅಭಿನಂದಿಸಿ ಸುಸ್ವಾಗತವನ್ನು ಬಯಸಿ ಭಾಷಣವೀಯುತ್ತ 'ಹಿಟ್ಲರನು ಜರ್ಮನಿಯ ಹಿಂದಿನ ಗೌರವವನ್ನು ಇಂದು ತಿರುಗಿ ಸಂಸ್ಥಾಪಿಸಿಕೊಟ್ಟಿದ್ದಾನೆ. ಇಂದಿದು ನಮ್ಮ ಹೆಮ್ಮೆಯ ದಿನ. ಹಿಟ್ಲರನು ಜರ್ಮನಿಗೆ ಮಾಡಿರುವ ಅಪಾರ ಉಪಕಾರಕ್ಕೆ ಕೃತಜ್ಞತಾ ಸೂಚಕವಾಗಿ ನಾನಿಂದು ಅವನ ಮುಂದೆ ದೃಢಪ್ರತಿಜ್ಞೆ ಮಾಡಬೇಕು. ಏನೆಂದರೆ ಹಿಟ್ಲರನು ಗಳಿಸಿಕೊಟ್ಟಿದ್ದನ್ನು ನಾವು ಉಳಿಸಿಕೊಂಡು ಬಂದೇವು. ಅವನು ನಮ್ಮನ್ನು ಧೀರವೀರರನ್ನಾಗಿ ಮಾಡಿರುವನು. ಆ ಧೈರ್ಯ ಶೌರ್ಯವನ್ನು ನಾವು ಪ್ರದರ್ಶಿಸಲು ಹಿಂಜರಿಯಲಾರೆವು, ಅವನಂತಹ ವೀರಾಧಿವೀರ ಯೋಧನನ್ನು ಶೂರ ಜರ್ಮನರಾದ ನಾವು ಬೆನ್ನು ಹಿಡಿದು ನಿಂತೇವು. ಇದೀಗ ನಮ್ಮ ದೃಢ ಪ್ರತಿಜ್ಞೆಯಾಗಿರಲಿ! ಎಂದು ವಿಜಯೋತ್ಸವದ ಸ್ಫೂರ್ತಿಯನ್ನು ಜರ್ಮನರಲ್ಲಿ ಬೇರೂರಿ ನಿಲ್ಲುವಂತೆ ಮಾಡಿರುವನು.

ಹೀಗೆ ಅಲ್ಲಿ ವಿಜಯೋತ್ಸವವು ನಡೆಯುತ್ತಿರುವಂದು ಜರ್ಮನಿಯ ಬಳಿಯುಲ್ಲಿರುವ ಚಿಕ್ಕ ಸ್ವತಂತ್ರ ರಾಷ್ಟ್ರಗಳೆಲ್ಲ ತಮ್ಮ ತಮ್ಮ ಆತ್ಮರಕ್ಷಣೆಯ ಪರಮಾವಧಿ ಸಿದ್ಧತೆಯನ್ನು ನಿದ್ದೆಗೆಟ್ಟು ಮಾಡುತ್ತಲಿವೆ. ಹಿಟ್ಲರನು ಇಂತಹ ಮಾತುಗೆಡುಕನಾಗಿ ತಮ್ಮ ನೆರೆಯಲ್ಲಿರುವಷ್ಟು ಕಾಲ ದಿನಬೆಳಗಾಗುವಷ್ಟರಲ್ಲಿ ತಮ್ಮ ಪಾಡೇನೆಂಬುದನ್ನು ಹೇಳಲೂ ನಿಶ್ಚಯವಿಲ್ಲವೆಂದೂ ತಾವು ಸದಾ ಸಂಪೂರ್ಣ ಸಿದ್ಧರಾಗಿ ನಿಲ್ಲುವುದೇ ಲೇಸೆಂದೂ ಅವುಗಳೆಲ್ಲ ಮನಗಂಡಿವೆ. ಇತರ ಪ್ರಬಲ ರಾಷ್ಟ್ರಗಳೆಂದೆನ್ನಿಸಿಕೊಂಡವುಗಳು ತಮ್ಮ ಬೆಂಬಲವಾಗಿ ನಿಂತಾವು ಎಂಬ ನಂಬಿಕೆಯು ಜೆಕೋಸ್ಲೊವೇಕಿಯದ ದುರ್ದಶೆಯನ್ನು ಕಂಡಮೇಲಂತೂ ಅವುಗಳಿಗಿಲ್ಲ. ತಮ್ಮ ತಲೆಗೆ ತಮ್ಮ ಕೈ ಎಂಬ ತತ್ವದ ಮೇಲೆ ಪೋಲೆಂಡ್, ಹಂಗೇರಿ, ರುಮೇನಿಯಾ ಈ ರಾಷ್ಟ್ರಗಳು ತಮ್ಮ ಗಡಿಗಳಲ್ಲಿ ಸೇನೆಗಳನ್ನು ತಂದೊಟ್ಟುಗೂಡುತ್ತಿವೆ. ೧೯೧೪ರಂದು ಮಹಾಯುದ್ಧ ಪರ್ಯವಸಾನದಲ್ಲಿ ಈ ಚಿಕ್ಕ ರಾಷ್ಟ್ರಗಳಿಗೂ ಮಧ್ಯ ಯುರೋಪಿನ ಇತರ ಸಣ್ಣ ರಾಜ್ಯಗಳಿಗೂ ಗೆದ್ದ ಪಕ್ಷದವರು ಅವರ ಸ್ವಾತಂತ್ರ್ಯರಕ್ಷಣೆಯನ್ನು ಪಾಲಿಸಿಕೊಂಡು ಬರುವವಾಗಿ ಒಂದಲ್ಲದಿದ್ದರಿನ್ನೊಂದು ರೀತಿಯ ವಾಗ್ದಾನ ಭರವಸೆ ಕರಾರುಗಳನ್ನು ಕೊಟ್ಟು ಅವನ್ನು ಜರ್ಮನಿಯೂ ಮನ್ನಿಸುವಂತೆ ಒಪ್ಪಿಗೆಕೊಡಿಸಿದ್ದವು. ಆದರೆ ಇಂದು ಜರ್ಮನಿಯು ಆ ಕರಾರುಗಳನ್ನು ಹರಿದೊಗೆದು ಮತ್ತೊಮ್ಮೆ ಜರ್ಮನ್ ಮಹಾಸಾಮ್ರಾಜ್ಯವನ್ನು ಸಂಸ್ಥಾಪಿಸಬೇಕೆಂಬ ಏಕಮಾತ್ರ ನ್ಯಾಯಾನುವರ್ತಿಯಾಗಿ ಮುಂದುವರಿಯುತ್ತ ಒಂದೊಂದೇ ರಾಷ್ಟ್ರಗಳನ್ನು ಸೇರಿಸುತ್ತ ಬರುತ್ತಿದೆ. ಆ ಚಿಕ್ಕ ರಾಜ್ಯಗಳು ಮೊರೆಯಿಟ್ಟರೆ ಅಂದು ಪಾಲನೆಯ ಮಾತುಕೊಟ್ಟವರು ಇಂದು ಅವರನ್ನು ಕಾಪಾಡಲು ಮುಂದಾಗುವ ಧೈರ್ಯವಿಲ್ಲದೆ ಕುಳಿತಿದ್ದಾರೆ. ಏನಾದರೂ ಸಂಧಾನದಿಂದ ಶಾಂತಿಸ್ಥಾಪನೆಮಾಡೋಣವೆಂದು ಅವರು ಬಗ್ಗಿದಷ್ಟು ಹಿಟ್ಲರನ ಗುದ್ದು ಪ್ರಬಲವಾಗುತ್ತ ಬಂದಿದೆ. ಪ್ರತಿ ಸರ್ತಿಯೂ ಹಿಟ್ಲರನ ಆಕ್ರಮಣವು ಅದೇ ಕೊನೆಯದಾಗಿರಬಹುದೆಂದೂ ಅದಕ್ಕಾಗಿ ತಾವೇಕೆ ಕಂಗೆಡಬೇಕೆಂದೂ ಉಪೇಕ್ಷೆಯಿಂದಿದ್ದ ರಾಷ್ಟ್ರಗಳ ಭ್ರಮೆಯೂ ಈಗ ನಿವಾರಣೆಯಾಗಿದ. ಇಟೆಲಿಯೊಂದು ಬಿಟ್ಟು ಯುರೋಪಿನ ಸಕಲರಾಷ್ಟ್ರಗಳೂ ತಮ್ಮ ತಮ್ಮ ಸ್ವಾತಂತ್ರ್ಯವನ್ನು ಹಿಟ್ಲರನು ಮನ್ನಿಸಿಯಾನೆಂಬ ಭರವಸೆಯನ್ನು ಕಳೆದುಕೊಂಡಿವೆ. ರಸ್ಯಾ ಅಮೇರಿಕದಂತಹ ಮಹಾರಾಷ್ಟ್ರಗಳೂ ಕಣ್ತೆರೆವ ಇಂತಹ ಪುಂಡಾಟಿಕೆಯು ಮಧ್ಯ ಯುರೋಪಿನಲ್ಲಿ ನಡೆಯುವುದನ್ನೂ ಚಿಕ್ಕ ರಾಷ್ಟ್ರಗಳನ್ನು ಹಿಟ್ಲರನು ಕಾಲ್ಚೆಂಡಿನಂತೆ ಒದೆದೊದೆದು ತನ್ನ ಕಡೆಗೆ ದೂಡುತ್ತಿರುವುದನ್ನೂ ಎಷ್ಟು ಕಾಲ ಹೀಗೆ ನೋಡುತ್ತಿರುವುದು ಎಂಬ ಅಸಮಾಧಾನ ತಲೆದೋರಿದೆ. ನಾರ್ವೇ ಬೆಲ್ಜಿಯಂ, ಹೋಲ್ಲಾಂಡ್ ಸ್ವಿಜರಲಾಂಡ್, ಮುಂತಾದ ಯುರೋಪಿನ ಚಿಕ್ಕ ಸ್ವತಂತ್ರರಾಷ್ಟ್ರಗಳು ಜರ್ಮನಿಯ ವರ್ತನೆಯನ್ನು ಖಂಡಿಸಿರುವುವಲ್ಲದೆ ತಮ್ಮನ್ನು ಕೆಣಕಿದವರನ್ನು ಸೆಣಸಾಡದೆ ಬಿಡುವವರಲ್ಲವೆಂದು ಗರ್ಜಿಸತೊಡಗಿವೆ. ಅಂತಹ ಸಂದರ್ಭ ಬಂದರೆ ಕಂಗೆಡದಂತೆ ಈಗಾಗಲೇ ಶತ್ರುಪ್ರತಿಭಟನೆಯ ಆತ್ಮಸಂರಕ್ಷಣೆಯ ಸಕಲ ಪೂರ್ವಸಿದ್ಧತೆಗಳ ವಿಚಾರವು ಪ್ರತಿಯೊಂದು ರಾಷ್ಟ್ರದ ಪ್ರಾಮುಖ್ಯ ಪ್ರಶ್ನೆಯಾಗಿ ಇಂದು ನಿಂತಿದೆ. ಹಿಂದಿನ ಮಹಾಯುದ್ಧದಲ್ಲಾದಂತೆ ಈ ಎಲ್ಲ ಚಿಕ್ಕ ರಾಷ್ಟ್ರಗಳು ಬ್ರಿಟನ್, ಫ್ರಾನ್ಸ್, ರಸ್ಯಾ, ಅಮೆರಿಕಾ ದೇಶಗಳೂ ಒಟ್ಟಾಗಿ ಹಿಟ್ಲರನನ್ನು ವಿರೋಧಿಸಿ ಆತನಿಗೆ ಬುದ್ಧಿ ಕಲಿಸಬಾರದೇಕೆಂಬ ಪ್ರಶ್ನೆಯು ಎಲ್ಲಕಡೆಯಲ್ಲಿಯೂ ತಲೆಯೆತ್ತಿದೆ. ಆದರೆ ಹಿಟ್ಲರನು ತನ್ನ ಈಗಿನ ಗಡಿಬಿಟ್ಟು ಮತ್ತೊಂದು ಹೆಜ್ಜೆ ಮುಂದಿಟ್ಟರೆ ಯುರೋಪಿನಲ್ಲಿ ಮಹಾಯುದ್ಧ ಪ್ರಾರಂಭವು ನಿಶ್ಚಯ. ಆದರೆ ಹಿಟ್ಲರನು ಈ ತನಕ ತೋರಿದ ಯುಕ್ತಿಯನ್ನು ಪರಿಶೀಲಿಸಿದರೆ ಆತನು ಪ್ರಕೃತ ಏನೂ ಮುಂದೊತ್ತದೆ ಸುಮ್ಮನಿದ್ದು ಹಿಂದೆಮಾಡಿದಂತೆ ಮುಂದೆಯೂ ತನ್ನ ಗಡಿಯಾಚೆಗಿರುವ ಒಂದೊಂದೇ ರಾಷ್ಟ್ರದಲ್ಲಿ ಪಂಗಡಗಳನ್ನುಂಟುಮಾಡಿ ಯಾವುದಾದರೊಂದು ಪಂಗಡದಿಂದ ಜರ್ಮನಿಯನ್ನಾಕ್ರಮಿಸಿಬಾಳುವ ಆಮಂತ್ರಣವನ್ನು ತರಿಸಿಕೊಂಡು ಯಾರೂ ನಿರೀಕ್ಷಿಸದಿರುವ ವೇಳೆಯಲ್ಲಿ ಕಾರ್ಯ ಸಾಧಿಸಿಬಿಡುತ್ತಾನೆ. ಅಂತೂ ಮಹಾಯುದ್ಧ ಪೂರ್ವದಲ್ಲಿ ಜರ್ಮನ್ ಸಾಮ್ರಾಜ್ಯವು ಯುರೋಪಿನಲ್ಲಿ ಎಷ್ಟು ವಿಸ್ತಾರವಾಗಿತ್ತೊ ಅಷ್ಟಕ್ಕೂ ನಿಲ್ಲಾರಿಯೇ ಆತನು ಹೊಸ ಜರ್ಮನ್ ಸಾಮ್ರಾಜ್ಯಸ್ಥಾಪನೆಮಾಡದಿರುವುದಿಲ್ಲ. ವಿದೇಶಗಳಲ್ಲಿ ಜರ್ಮನಿಗೆ ಹಿಂದೆ ಇದ್ದಿದ್ದ ವಸಾಹತುಗಳನ್ನೆಲ್ಲ ಪುನಃ ಸ್ವಸ್ತಿಕಾಧ್ವಜದ ಅಧೀನಕ್ಕೆ ತಾರದೆಯೂ ಇರಲಾರನು. ಆದರೆ ಇಂದು ಮುಂದುವರಿಯುವುದಿಲ್ಲ. ಅಷ್ಟಾದರೆ ಸಾಕಾಗಿದೆ ಇತರ ರಾಷ್ಟ್ರಗಳಿಗೆ. ಯುದ್ಧರಂಗಕ್ಕಿಳಿಯುವುದೆಂದರೆ ಯಾರಿಗೆ ಮನಸ್ಸಿದೆ? ಅಂತಹ ಅವಶ್ಯಕತೆಯ ಒತ್ತಾಯವನ್ನು ಹಿಟ್ಲರನು ಮತ್ತೊಂದು ಹೆಜ್ಜೆಯಿಟ್ಟು ತಂದುಕೊಳ್ಳದಿರಲೆಂದು ಹಾರೈಸುತ್ತಿವೆ ಅವೆಲ್ಲ ಹಿಟ್ಲರನಿಗೆ ಅದು ಗೊತ್ತು, ಆ ಗುಟ್ಟುಗೊತ್ತಿದ್ದೇ ಇಷ್ಟು ಕೆಲಸ ಮಾಡಿದ. ಇಷ್ಟು ಮುಂದೊತ್ತಿದ ಇನ್ನೂ ಮುಂದೊತ್ತುವುದು ನಿಶ್ಚಯ. ಆದರೆ ಯುದ್ಧಾಗ್ನಿಯ ಜ್ವಾಲೆಯೇಳದಂತೆ ಸುತ್ತುಮುತ್ತು ನೋಡಿಕೊಂಡು ಕಾರ್ಯಸಾಧಿಸುತ್ತಾನೆ. ಆದುದರಿಂದ ಇಂದಿನ ಜಗತ್ತಿನ ಕಳವಳವು ಮಹಾಯುದ್ಧಕ್ಕೆ ಅಸ್ಪದವೀಯಲಾರದು.

ಬ್ರಿಟನ್ ಮತ್ತು ಫ್ರಾನ್ಸ್ ಕಡೆಗೆ ಇಟೆಲಿಯ ಅಸಂತೃಪ್ತಿ

ಬ್ರಿಟನ್ ಮತ್ತು ಫ್ರಾನ್ಸ್ ಈ ಎರಡು ರಾಷ್ಟ್ರಗಳು ಇಟೆಲಿಯನ್ನು ಕುರಿತು ಅದು ಜರ್ಮನಿಯನ್ನು ಹೊಂದಿಕೊಂಡಿದ್ದುದಕ್ಕೆ 'ಅದಕ್ಕೆ ಸಿಕ್ಕಿದುದೇನೆಂದು ಕೇಳುವ ಪ್ರಶ್ನೆಗೆ ಪ್ರತ್ಯುತ್ತರವಾಗಿ ಇಟೆಲಿಯು ಹೀಗೆನ್ನುತ್ತದೆ: ೧೯೧೫ರಿಂದ ೧೯೩೫ರ ತನಕ ಇಪ್ಪತ್ತು ವರುಷಗಳಿಂದ ನಿಮ್ಮ ಮಿತ್ರ ರಾಷ್ಟ್ರವಾಗಿ ನಿಮ್ಮ ಸೆರಗು ಹಿಡಿದುಕೊಂಡದ್ದಕ್ಕೆ ನಿಮ್ಮಿಂದ ನಮಗಾದ ಪ್ರಯೋಜನವೇನು? ಮಹಾ ಯುದ್ಧದಲ್ಲಿ ಗೆದ್ದರೆ ನಮಗೆ ವಸಾಹತುಗಳಲ್ಲಿ ಸೌಕರ್ಯಗಳನ್ನು ಒದಗಿಸಿಕೊಡುತ್ತೇವೆಂದು ಭಾಷೆ ಕೊಟ್ಟುದನ್ನು ಸಾರ್ಥಕಗೊಳಿಸಿದಿರೇ? ಫ್ರಾನ್ಸು ೧೯೩೫ರಲ್ಲಿ ಇಟೆಲಿಯು ಎಬಿಸೀನಿಯಾದ ಕುರಿತು ಇಷ್ಟಾನುಸಾರ ವರ್ತಿಸಬಹುದೆಂದು ಒಪ್ಪಿಗೆಯಿತ್ತುದನ್ನು ರದ್ದುಪಡಿಸಿ ಬ್ರಿಟನ್ನಿನೊಂದಿಗೆ (ಸೆಂಕ್ಷನ್) ಬಹಿಷ್ಕಾರ ಧೋರಣೆಯನ್ನು ವಹಿಸಿಲ್ಲವೆ? ಇಂದಿನ ತನಕ ಯುರೋಪು ನಮಗೇನು ಔದಾರ್ಯ ತೋರಿಸಿದೆ? ಅನುಕೂಲ ಮಾಡಿಕೊಟ್ಟಿದೆ? ಎಲ್ಲಾ ಪ್ರತಿಕೂಲಗಳನ್ನೇ ತಂದೊಡ್ಡಿದುದಲ್ಲವೆ? ಇಷ್ಟು ಹೊತ್ತು ಕಾದೂ ಪರಿಣಾಮ ಹೀಗಲ್ಲವೆ? ಬ್ರಿಟನ್ ಫ್ರಾನ್ಸುಗಳು ನಮಗೇನಾದರೂ ಕೈನೀಡುವುದಿದ್ದರೆ ಇದೀಗ ಸುಸಂದರ್ಭ—ಎಂಬ ಅಭಿಪ್ರಾಯ ಸೂಚಿಸಿದೆ.

ಜೆಕ್ಕರ ಅಸಂತೃಪ್ತಿ ಪ್ರದರ್ಶನ

ಹಿಟ್ಲರನು ಜೆಕೋಸ್ಲೊವೇಕಿಯಾವನ್ನು ಜರ್ಮನಿಗೆ ಸೇರಿಸಿ ಜೆಕ್ಕರನ್ನು ಉದ್ಧಾರ ಮಾಡಿದೆನೆಂದು ಪ್ರೇಗ್‌ನಲ್ಲಿ ತನ್ನ ಮಹಾಸೈನ್ಯದ ವೈಭವ ಪ್ರದರ್ಶನ ಮಾಡಿದಾಗ ಸ್ವಸ್ತಿಕಾ ಧ್ವಜವನ್ನೇರಿಸಿ ಎರಡು ತಾಸುಗಳ ಪರ್ಯಂತ ತನ್ನ ಕಾಲಾಳುಗಳ, ಅಶ್ವಾರೋಹರ, ಫಿರಂಗಿ ಸಾಲುಗಳ, ವಿಮಾನ ಸಮೂಹಗಳ ಚಾತುರ್ಯವನ್ನು ತೋರಿಸಿದಾಗ ಎಷ್ಟೋ ಜೆಕ್ಕರು ಅದನ್ನು ಕಾಣಲಿಷ್ಟವಿಲ್ಲದೆ ಪಟ್ಟಣ ಬಿಟ್ಟು ಹಳ್ಳಿಯ ಕಡೆಗೆ ತಿರುಗಾಟಕ್ಕೆ ಹೊರಟುಹೋದರು. ಮನೆಯಲ್ಲಿದ್ದವರು ಕಿಟಕಿಯಿಂದಾದರೂ ಅದು ತಮಗೆ ಕಾಣಬಾರದೆಂದು ಪರದೆಗಳನ್ನು ಎಳೆದುಕೊಂಡರು. ಮಹಾ ಯುದ್ಧದಲ್ಲಿ ತನ್ನ ರಕ್ತವನ್ನು ಚೆಲ್ಲಿಕೊಟ್ಟು ತಮ್ಮನ್ನು ಸ್ವಾತಂತ್ರ್ಯದ ಗದ್ದುಗೆಯಲ್ಲೇರಿಸಿಕೊಟ್ಟ ಅಸಂಖ್ಯಾತ ಸೈನಿಕರ ನೆನಹಿನ ಆ ಅಜ್ಞಾತಯೋಧನ ಪ್ರತಿಮೆಯ ಪಾದತಲದಲ್ಲಿ ಕಣ್ಣೀರಿಟ್ಟು ಗೋಳಿಟ್ಟು ಬರುತ್ತಿರುವರು. ಎಷ್ಟೋ ಜನರು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿರುವರು. ಜರ್ಮನರ ಸೇನೆಯು ಪಟ್ಟಣವನ್ನು ಪ್ರವೇಶಿಸಿತೆಂಬುದನ್ನು ಕೇಳಿ ಪ್ರಖ್ಯಾತ ಸರ್ಜನ್ ವಿಶಾಹಲ್ ಮತ್ತು ಅವರ ಪತ್ನಿ ವಿಷಪಾನ ಮಾಡಿ ಪ್ರಾಣಕಳೆದುಕೊಂಡರು. ಎಷ್ಟೋ ಯೆಹೂದಿಗಳು ಆತ್ಮಹತ್ಯೆಯ ಕಾರ್ಯದಲ್ಲಿ ಜಯಶೀಲರಾಗದೆ ಆಸ್ಪತ್ರೆಗೊಯ್ಯಲ್ಪಟ್ಟಿರುವರು. ಅವರಲ್ಲೊಬ್ಬರು ಹೈಕೋರ್ಟು ಜಡ್ಜರು. ಮತ್ತೊಬ್ಬರು ದೊಡ್ಡದೊಂದು ಬ್ಯಾಂಕಿನ ನಿವೃತ್ತ ಮೆನೇಜರರು. ಒಬ್ಬನು ರೇಡಿಯೋ ಭವನದ ಮಾಡಿನಿಂದ ಹಾರಿ ಪ್ರಾಣ ಕಳೆದುಕೊಂಡ. ಜರ್ಮನರ ಆಕ್ರಮಣ ವಿರೋಧಿಗಳೆಂದು ತಿಳಿದುಬಂದವರನ್ನು ಸಾವಿರಗಟ್ಟಲೆಯಲ್ಲಿ ದಸ್ತಗಿರಿ ಮಾಡಲಾಗಿದೆ. ಅಂದು ಆಸ್ಟ್ರಿಯಾ ಸುಡೇಟನ್ ಪ್ರಾಂತವನ್ನು ಆಕ್ರಮಿಸಿದಾಗ ಅದನ್ನು ಸಹಿಸದೆ ಈ ಭಾಗದಲ್ಲಿ ಬಂದು ತಲೆತಪ್ಪಿಸಿಕೊಂಡಿದ್ದ ಪ್ರಮುಖ ವಿರೋಧಿಗಳೂ ಪತ್ರಿಕೋದ್ಯಮಿಗಳೂ ಈಗ ಸೆರೆಮನೆ ಸೇರಿದ್ದಾರೆ. ಹಿಟ್ಲರನು ತನ್ನ ಪ್ರವೇಶದಿಂದ ಮತ್ತು ಸ್ವಾಧೀನತೆಯಿಂದ ಉದ್ಧಾರವಾದರೆನ್ನುವ ಜೆಕ್ಕರ ಪರಿಸ್ಥಿತಿ ಹೀಗಿದೆ.

ಚಂದಾಹಣ ಬಾಕಿಯಿರಿಸಿಕೊಂಡವರು ದಯಮಾಡಿ ಕೂಡಲೇ ಅದನ್ನು ಕಳುಹಿಸುವಂತೆ ವಿನಂತಿ. ಪತ್ರಿಕೆ ಬೇಡವಾದವರು ನಮಗೆ ಸಕಾಲದಲ್ಲಿ ತಿಳಿಸಬಹುದು.

ಕಾಂಗ್ರೆಸ್ ಮುಂದಾಳುಗಳೊಬ್ಬರ ಭೀಕರ ಕೊಲೆ

ತಿರುವಾಂಕೂರು ಸಂಸ್ಥಾನದಲ್ಲಿ ಚಳುವಳಿ

ತಿರುವಾಂಕೂರಿನ ಸ್ಟೇಟ್ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ. ಪಟ್ಟಾಂ ಎ ತಾನು ಪಿಳ್ಳೆ, ಶ್ರೀ. ಜಿ. ರಾಮಚಂದ್ರನ್, ಸ್ಟೇಟ್ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೆಂಬರ್ ಮತ್ತು ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಮೆಂಬರ್, ಇವರೀರ್ವರನ್ನೂ ದಸ್ತಗಿರಿ ಮಾಡಲಾಗಿದೆ.

ತಿರುವಾಂಕೂರು ಸ್ಟೇಟ್ ಕಾಂಗ್ರೆಸ್ಸಿನ ಕೌನ್ಸಿಲ್ ಆಫ್ ಏಕ್ಷನ್ (ಕಾರ್ಯ ನಿರ್ಣಾಯಕ ಸಮಿತಿ) ಇದರ ಏಳು ಸದಸ್ಯರಲ್ಲಿ ಆರು ಮಂದಿಯನ್ನು ದಸ್ತಗಿರಿ ಮಾಡಿಯದೆ.

ಸ್ಟೇಟ್ ಕಾಂಗ್ರೆಸ್ಸು ತಾ. ೨೫ರಿಂದ ಸವಿನಯ ಕಾಯಿದೆ ಭಂಗದ ಕಾರ್ಯಕ್ರಮವನ್ನು ಕೈಗೊಳ್ಳುವುದೆಂದು ಪ್ರಕಟಿಸಿರುವುದರಿಂದ ಅದನ್ನು ಪ್ರತಿಬಂಧಿಸಲಿಕ್ಕೆ ಸರಕಾರವು ಮುಂಜಾಗ್ರತೆಯ ಸಾಧನವಾಗಿ ಈ ದಸ್ತಗಿರಿ ಅಸ್ತ್ರವನ್ನು ಹೊರ ತೆಗೆದಿದೆ.

ಸರಕಾರದ ಈ ವರ್ತನೆಯ ಖಂಡನೆ.. ಸೂಚನಾರ್ಥವಾಗಿ ತಿರುವಾಂಕೂರು ಲೆ.. ಸ್ಲೇಟಿವ್ ಎಸೆಂಬ್ಲಿಯ ಮೆಂಬರರೊಬ್ಬರಾದ ನಾರಾಯಣ ಕುರೂಪ್ ಎಂಬವರು ತನ್ನ ಸದಸ್ಯತನಕ್ಕೆ ರಾಜಿ ಕೊಟ್ಟಿರುವರು.

ಬಾಳೆಹಣ್ಣಿನ ಸಿಪ್ಪೆಯಿಂದ ಅಪಘಾತ

ಮೌಲಾನಾ ಅಬುಲ್ ಕಲಾಮ ಆಜಾದರು ತ್ರಿಪುರಿ ಕಾಂಗ್ರೆಸ್ಸಿಂದ ಹಿಂತೆರಳುತ್ತ ಅಲ್ಲಾಹಾಬಾದ್ ರೈಲ್ವೇ ಸ್ಟೇಶನಿನ ಅಂಗಳದಲ್ಲಿ ನಡೆಯುತ್ತಿದ್ದಾಗ ಬಾಳೆಯಹಣ್ಣಿನ ಸಿಪ್ಪೆಯ ಮೇಲೆ ಕಾಲಿಟ್ಟು ಜಾರಿಬಿದ್ದರು. ಅದರಿಂದ ಅವರ ಎಡಗಾಲಿನ ಎಲುಬು ಮುರಿದಿದೆ. ಒಂದು ತಿಂಗಳು ಕದಲದೆ ವಿಶ್ರಾಂತಿಯಲ್ಲಿರಬೇಕೆಂದು ಡಾಕ್ಟರರು ಅಭಿಪ್ರಾಯಕೊಟ್ಟಿರುವರು.

ಕಲ್ಕತ್ತದ ಹೌರಾದಲ್ಲಿ ದೊಡ್ಡ ಮುಷ್ಕರ

ಹೌರಾದ ಗಿರಣಿಯೊಂದು ಮುಚ್ಚಲ್ಪಟ್ಟುದರಿಂದ ಎರಡುಸಾವಿರ ಕೆಲಸಗಾರರಿಗೆ ಅನ್ಯಾಯವಾಗಿದೆ. ಅವರಲ್ಲಿ ಇಪ್ಪತ್ತು ಜನರು ಅನ್ನತ್ಯಾಗ ಸತ್ಯಾಗ್ರಹವನ್ನು ಕೈಗೊಂಡಿರುವರು. ಇಬ್ಬರ ಸ್ಥಿತಿಯು ದುರಂತವಾಗಿ ತೋರುತ್ತಿದೆ. ಆದರೆ ಕೆಲಸಗಾರರ ಮುಖಂಡರು ಎಷ್ಟು ಉಪದೇಶಮಾಡಿದರೂ ತಮ್ಮ ಕೇಳಿಕೆಗಳು ಗಿರಣಿಯ ಮಾಲಿಕರಿಂದ ಮನ್ನಿಸಲ್ಪಡುವ ತನಕ ಅನ್ನ ನೀರಿಲ್ಲದೆ ಬಿದ್ದುಕೊಳ್ಳುವೆವೆಂದೇ ಸತ್ಯಾಗ್ರಹಿಗಳ ಛಲ.

ಹೈದರಾಬಾದಿನಲ್ಲಿ ರಾಜಕೀಯ ಚಳವಳ

ಆರ್ಯಸಮಾಜದವರ ಸತ್ಯಾಗ್ರಹ ಚಳವಳಿಯು ಸಾಗುತ್ತಲೇ ಇದೆ. ತಂಡತಂಡವಾಗಿ ಹೊರ ಊರುಗಳಿಂದಲೂ ಸತ್ಯಾಗ್ರಹಿಗಳು ಬರುತ್ತಿದ್ದಾರೆ. ದಸ್ತಗಿರಿಯಾಗುತ್ತಿದೆ. ಶಿಕ್ಷೆ ವಿಧಿಸಲಾಗುತ್ತದೆ. ಸತ್ಯಾಗ್ರಹದ ಎರಡನೆಯ ಡಿಕ್ಟೇಟರರಾದ ಚಂದಕರಣ ಶಾರ್ದಾ ಇವರಿಗೆ ೧೨ತಿಂಗಳ ಕಠಿಣ ಶಿಕ್ಷೆ ಕೊಡಲಾಗಿದೆ ಸಂಸ್ಥಾನದ ಸರಕಾರವು ರಾಜ್ಯಾಡಳಿತೆಯಲ್ಲಿ ತಾನು ಕೈಗೊಳ್ಳುವ ಸುಧಾರಣೆಗಳ ಕುರಿತು ಇನ್ನೊಂದು ತಿಂಗಳೊಳಗೆ ಪ್ರಕಟಣೆ ಕೊಡುವುದಾಗಿ ಪ್ರಜೆಗಳಿಗೆ ತಿಳಿಸಿ ಪ್ರಬಲ ಚಳುವಳಿಯೇಳದಂತೆ ಉಪಶಮನದ ಮಾತ್ರೆ ಕೊಟ್ಟಿದೆ.

ಜಯಪುರದಲ್ಲಿ ಸತ್ಯಾಗ್ರಹ ನಿಲ್ಲಿಸಲಾಗಿದೆ.

ಗಾಂಧೀಜಿಗಳು ಅಲ್ಲಿಯ ಪ್ರಜಾ ಮಂಡಳದ ಪ್ರಮುಖರಿಗೆ ತಾತ್ಕಾಲಿಕವಾಗಿ ಚಳವಳವನ್ನು ನಿಲ್ಲಿಸಬೇಕೆಂದೂ ತಾನು ಅದರಲ್ಲಿ ಪ್ರವೇಶಿಸಿ ಸಂಧಾನಮಾಡಿ ನೋಡುವ ತನಕ ಮುಂದುವರಿಸಬಾರದೆಂದೂ ತಿಳಿಸಿರುವುದರಿಂದ ಅಲ್ಲಿಯ ಸತ್ಯಾಗ್ರಹ ಚಳುವಳಿಗಳೆಲ್ಲ ನಿಲ್ಲಿಸಲಾಗಿವೆ.

ಭೀರಾರದಲ್ಲಿ ಕಾಂಗ್ರೆಸ್ಸು ಮುಂದಾಳುಗಳೊಬ್ಬರ ಭೀಕರ ಕೊಲೆ.

ಮಧ್ಯ ಪ್ರಾಂತದ ಬೀರಾರಿನ ಸಮೀಪ ಚಂಡೂರು ವಿಶ್ವಾದಲ್ಲಿ ವಿದರ್ಭ ಪ್ರಾಂತಿಕ

ಶ್ರೀ. ಸಠ್ ಗೋವಿಂದ ದಾಸ್.
ತ್ರಿಪುರಿ ಕಾಂಗ್ರೆಸ್ ಸ್ವಾಗತ ಕಮಿಟಿಯ ಅಧ್ಯಕ್ಷರು.

ಕಾಂಗ್ರೆಸ್ ಕಮಿಟಿಯ ಸದಸ್ಯರೂ ಮಾಲ್ಕಾಪುರ ತಹಶೀಲಿನ ಕಾಂಗ್ರೆಸ್ಸು ಕಮಿಟಿಯ ಅಧ್ಯಕ್ಷರೂ ಆದ ಶ್ರೀ ಜಗದೇವರಾವ್ ಪಟೇಲ ಎಂಬವರು ಸಾಯಂಕಾಲ ಚಂಡೂರು ವಿಶ್ವಾ ರೈಲ್ವೇ ಸ್ಟೇಶನಿನಿಂದ ತನ್ನ ಮನೆಗೆ ಹೋಗುತ್ತಿದ್ದಾಗ ಹಾದಿಯಲ್ಲಿದ್ದ ಮಶೀದಿಯ ಸಮೀಪ ಮುಸಲ್ಮಾನರು ಗುಂಪು ಕೂಡಿ ಹೊಡೆದು ಅಲ್ಲೇ ಕೊಂದು ಹಾಕಿದರೆಂದು ವಾರ್ತೆ— ಆ ಜಾಗದ ಸುತ್ತುವಳೆಯದಲ್ಲಿ ಹಿಂದೂ ಮುಸ್ಲಿಮ ಜಾತಿ ವೈಮನಸ್ಯವು ಹೊಗೆಯುತ್ತಿದ್ದು ಈ ತಿಂಗಳ ಆದಿಯಲ್ಲೊಮ್ಮೆ ಕೈಕೈಯಾಗಿತ್ತಂತೆ. ಕೊಲೆಗಾರರ ಪತ್ತೆಯಿನ್ನೂ ಆಗಿಲ್ಲ.

ಮೈಸೂರಿನಲ್ಲಿ ಮತಾಂತರ ಹೊಂದಿದ ಹರಿಜನರ ಶುದ್ಧೀಕರಣ

ಮೈಸೂರು ಡಿಸ್ಟ್ರಿಕ್ ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳಾದ ಎಡ್ವೋಕೇಟ್ ಶೇಷಾದ್ರಿಯವರಿಂದ ೩೫ ಜನರ ಎಂಟು ಹರಿಜನ ಕುಟುಂಬವು ಶುದ್ಧೀಕರಿಸಲ್ಪಟ್ಟಿತು. ಕೆಲವು ಸಮಯದ ಹಿಂದೆ ಈ ಕುಟುಂಬಗಳು ಮೆಥೊಡಿಸ್ಟ್ ಮಿಶನರಿಗಳಿಂದ ಕ್ರಿಶ್ಚನ್ ಮತಾಂತರ ಹೊಂದಿದ್ದವು. ಅವರನ್ನೀಗ ತಿರುಗಿ ಹಿಂದೂ ಮತಕ್ಕೆ ಶುದ್ಧೀಕರಣ ಸಂಸ್ಕಾರದಿಂದ ಸೇರಿಸಿಕೊಂಡರು.

ಯುರೋಪಿನಲ್ಲಿ ರಾಷ್ಟ್ರಗಳೊಳಗೆ ಮಹಾ ಕ್ಷೋಭೆ.

ರುಥೇನಿಯವನ್ನು ಹಂಗೇರಿಯು ಆಕ್ರಮಿಸಿದೆ. ಜರ್ಮನಿಯು ಜೆಕೋಸ್ಲೊವೇಕಿಯನ್ನು ಸಂಪೂರ್ಣ ವಶ ಮಾಡಿಕೊಂಡಿದೆ. ಈಗ ರುಮೇನಿಯವನ್ನು ನುಂಗುವ ಮೊದಲಹೆಜ್ಜೆಯಾಗಿ ಒಂದು ಅಲ್ಟಿಮೇಟಮ್ (ಕಟ್ಟಾಜ್ಞೆ) ಕೊಟ್ಟಿದೆ. ರುಥೇನಿಯಾ ರುಮೇನಿಯಾಗಳು ತಮ್ಮ ಸಹಾಯಕ್ಕೆ ಬಂದು ಸಂರಕ್ಷಿಸಿರೆಂದು ಪ್ರಬಲ ರಾಷ್ಟ್ರಗಳಿಗೆ ಮೊರೆಯಿಡುತ್ತವೆ. ಇಂಗ್ಲಾಂಡು, ಫ್ರಾನ್ಸು ಅಮೇರಿಕಾ, ರಸ್ಯಾ ಸರಕಾರಗಳು ಜರ್ಮನಿಯ ಈ ಅತ್ಯಾಚಾರವನ್ನು ತಡೆಗಟ್ಟುವುದು ಹೇಗೆಂದು ಯೋಚನೆಗೀಡಾಗಿವೆ. ಅವುಗಳಲ್ಲೂ ಇಂಗ್ಲಾಂಡು ಫ್ರಾನ್ಸಿನಲ್ಲಿ ಹಗಲು ರಾತ್ರಿಯೆನ್ನದೆ ಮಂತ್ರಿಮಂಡಲಗಳು ಕೂಡಿ ಮಂತ್ರಾಲೋಚನೆ ಮಾಡುತ್ತಿವೆ. ಹಿಟ್ಲರನದು ಅನ್ಯಾಯವೆಂದೂ ಮ್ಯೂನಿಕ್ ಒಪ್ಪಂದಕ್ಕೆ ವಿರುದ್ಧವಾದ ಮತ್ತು ಆಗ ನಿರೀಕ್ಷಿಸಲಾಗದಿದ್ದ ನೀತಿಗೆಟ್ಟ ಕೆಲಸಕ್ಕೆ ಆತನು ಕೈಹಾಕಿದುದನ್ನು ಹಿಂತೆಗೆಯಬೇಕೆಂದೂ ಅಲ್ಲಿಯ ತಮ್ಮ ತಮ್ಮ ರಾಯಭಾರಿಗಳ ಮೂಲಕ ಹಿಟ್ಲರನಿಗೆ ತಿಳಿಸಿಯಾಯಿತು. ಆದರೆ ಆ ರಾಯಭಾರಿಗಳ ತರ್ಕವೇ ಕುತರ್ಕವೆಂದೂ ಅದಕ್ಕೆ ಯಾವ ರಾಜಕೀಯ ನೀತಿನ್ಯಾಯಗಳ ಆಧಾರವಿಲ್ಲದುದೆಂದೂ ಜರ್ಮನಿಯು ಪ್ರತ್ಯುತ್ತರ ಕೊಟ್ಟಾಯಿತು. ಜರ್ಮನಿಯ ಈ ಉದ್ಧಟತನದ ಉತ್ತರಕ್ಕೆ ಕ್ರೋಧಸೂಚಕವಾಗಿ ತಮ್ಮ ತಮ್ಮ ರಾಯಭಾರಿಗಳನ್ನು ಅಲ್ಲಿಂದ ಹಿಂದೆ ಕರೆದಿದ್ದಾರೆ. ಸ್ವಾತಂತ್ರ್ಯತತ್ವ ಪರಿಪಾಲನೆ, ನ್ಯಾಯ, ನೀತಿ ಯಾವುದೂ ಇಲ್ಲದೆ ತನ್ನ ಸಾಮ್ರಾಜ್ಯವಿಸ್ತಾರದ ಮಹತ್ವಾಕಾಂಕ್ಷೆಯಿಂದ ಜರ್ಮನಿಯು ಅವಶ್ಯಕಂಡಂತೆಲ್ಲ ತನ್ನ ಬಲಪ್ರದರ್ಶನದಿಂದ ಚಿಕ್ಕ ರಾಷ್ಟ್ರಗಳನ್ನು ನುಂಗಲು ಹಿಂಜರಿಯುವುದಿಲ್ಲವೆಂಬುದನ್ನು ಅದರ ಸುತ್ತುಮುತ್ತಲಿನ ಚಿಕ್ಕ ಸ್ವಾತಂತ್ರ್ಯರಾಜ್ಯಗಳು ಕಂಡು ದಿಗಿಲುಗಟ್ಟಿವೆ. ಅಂತೂ ಯುರೋಪಿನಲ್ಲಿ ನಾಳೆಯೋ ಇನ್ನೊಂದು ವಾರದಲ್ಲೋ ತಿಂಗಳಲ್ಲೋ ಯುದ್ಧಾಗ್ನಿಯು ಪ್ರಜ್ವಲಿಸಿದರೂ ಆಶ್ಚರ್ಯಪಡಿಸಲಿಕ್ಕಿಲ್ಲ. ರಾಷ್ಟ್ರಗಳೊಳಗಣ ರಾಜಕೀಯ ಘರ್ಷಣಗಳಿಂದ ಈಗಾಗಲೇ ಹೋರಾಟದ ಕಿಡಿಗಳು ಹಾರತೊಡಗಿವೆ.

ಪೋರ್ಚುಗಲ್ — ಫ್ರಾಂಕೋ ಒಪ್ಪಂದ

ಫ್ರಾಂಕೋವಿನ ಸ್ಪೈನಿನ ಸರಕಾರಕ್ಕೂ ಸ್ಪೈನಿನ ಪಡುಗಡಿಯಲ್ಲಿರುವ ಪೋರ್ಚುಗಲ್ ಸರಕಾರಕ್ಕೂ ಪರಸ್ಪರ ಅತಿಕ್ರಮ ನಿಷೇಧದ ಒಪ್ಪಂದ ಕರಾರು ಉಭಯ ಸರಕಾರಗಳ ಪ್ರತಿನಿಧಿಗಳಿಂದ ಸಹಿ ಮಾಡಲಾಯಿತು.

ಯುರೋಪಿಯನನೊಬ್ಬರು ಮದ್ರಾಸಿನಲ್ಲಿ ಛಲತೊಟ್ಟು ಆತ್ಮಹತ್ಯೆಮಾಡಿಕೊಂಡರು

ಅವರ ಹೆಸರು ಮೇಜರ್ ಜಿ ಡಬ್ಲ್ಯು. ಓವೆನ್. ದಕ್ಷಿಣಇಂಡಿಯದ ಓಟೊಮೊಬೈಲ್ ಎಸೋಶಿಯೇಶನಿನ ಸೆಕ್ರೆಟರಿ. ತಾ. ೧೫ನೇ ರಾತ್ರೆ ೯ಘಂಟೆಗೆ ಮದ್ರಾಸ್ ಬಂದರದ ಒಂದು ಕಟ್ಟೋಣದ ಬದಿಗೆ ಸಂಶಯಾಸ್ಪದವಾಗುವ ರೀತಿಯಲ್ಲಿ ಇವರು ಸಾಗುತ್ತಿದ್ದುದನ್ನು ಅಲ್ಲಿ ತಿರುಗಾಡುತ್ತಿದ್ದವರೊಬ್ಬರು ಕಂಡರು. ಮರುಕ್ಷಣದಲ್ಲಿ ಅವರು ಆ ಕಟ್ಟೋಣದ ಪಕ್ಕಾಸಿಗೆ ಹಗ್ಗಹಾರಿಸಿ ಸಿಕ್ಕಿಸಿ ತನ್ನ ಕೊರಳಿಗೆ ಉರುಳುಹಾಕಿಕೊಳ್ಳುವುದನ್ನು ನೋಡಿ ಇವರು ಓಡಿಹೋಗಿ ಬಿಡಿಸಲಾಗಿ ಅವರು ಮಾತೆತ್ತದೆ ತುಸುದೂರದಲ್ಲಿ ನಿಲ್ಲಿಸಿದ್ದ ತನ್ನ ಕಾರ್ ಹತ್ತಿ ಹೋಗಿಬಿಟ್ಟರು. ಕೂಡಲೆ ಅವರ ಗುರುತನ್ನೂ ಕಾರಿನ ನಂಬರನ್ನೂ ಪೋಲೀಸರಿಗೆ ತಿಳಿಸಲು ಅವರು ರಾತ್ರಿಯೆಲ್ಲ ಹುಡುಕಾಡುತ್ತಿದ್ದರು.

ಆದರೆ ಓವೆನ್ನರವರು ನೇರಾಗಿ ಎಗ್ಮೋರಿನ ತನ್ನ ಮನೆ ಸೇರಿ ಮರುದಿನ ತನ್ನ ಮಕ್ಕಳೊಡನೆ ಬೆಳಗಿನೂಟ ಮುಗಿಸಿಕೊಂಡು ಕಾರ್ ಹತ್ತಿ ನಾಯ್ಡು ಪೇಟೆ ರೈಲ್ವೇ ಸ್ಟೇಶನಿಗೆ ಬಂದು ಅಸಿಸ್ಟಾಂಟ್ ಸ್ಟೇಶನ್ ಮಾಸ್ತರೊಡನೆ ಮಾತಾಡುತ್ತಾ ಕುಳಿತು ರೈಲುಬಂಡಿ ಬರುವ ಹೊತ್ತಾದಾಗ ಅಲ್ಲಿಂದೆದ್ದು ಕಾರು ಹತ್ತಿ ಹೋದರು. ಸಿಗ್ನಲ್ ಕಂಬಕ್ಕಿಂತ ತುಸು ದೂರ ಹೋಗಿ ಕಾರು ನಿಲ್ಲಿಸಿ ರೈಲುಮಾರ್ಗದ ಬದಿಯಲ್ಲಿ ತಿರುಗುತ್ತ ಬಂಡಿ ಬರುವಾಗ ಫಕ್ಕನೆ ಅದಕ್ಕೆ ಅಡ್ಡಲಾಗಿ ಬಿದ್ದುಬಿಟ್ಟರು. ಹೀಗೆ ಛಲತೊಟ್ಟು ಆತ್ಮಹತ್ಯೆ ಮಾಡಿಕೊಂಡುದು ಏಕೋ ತಿಳಿಯದಾಗಿದೆ.

ಹೆಂಡತಿಯನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡ

ಹೆಂಡತಿ ಪದೇ ಪದೇ ಸಿನೆಮಕ್ಕೆ ಹೋಗುತ್ತಿದ್ದುದನ್ನು ಸಹಿಸಲಾರದೆ ತಿನ್ನವೆಲ್ಲಿಯಲ್ಲೊಬ್ಬ ಯುವಕನು ಅವಳ ಕುತ್ತಿಗೆ ಕಡಿದು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡ.

ಡಿಲ್ಲಿಯಲ್ಲಿ ಗಾಂಧೀಜಿಗಳಿಂದ ನವ ದೇವಸ್ಥಾನ ಉದ್ಘಾಟಣೆ

ಐವತ್ತು ಸಾವಿರ ಮಂದಿಯ ಮಹಾಜನಸ್ತೋಮ, ಮಂದಿಯ ಗಾಂಧೀ ಸಂದರ್ಶನೋತ್ಸಾಹದ ಆನಂದದ ಗೊಂದಲದಿಂದ ಭಾಷಣಕ್ಕೆ ತೊಂದರೆ.

ಬಿರ್ಲಾ ಸಹೋದರರು ನೂತನವಾಗಿ ಕಟ್ಟಿಸಿದ ಲಕ್ಷ್ಮೀನಾರಾಯಣ ದೇವಸ್ಥಾನವನ್ನೂ ಸಮೀಪದಲ್ಲೇ ಆ ಸಹೋದರರಿಂದ ಕಟ್ಟಿಸಲ್ಪಟ್ಟ ಬುದ್ಧ ವಿಹಾರವನ್ನೂ ತೆರೆಯುವ ಮಹೋತ್ಸವದಂದು ಜನಸಂದಣಿ ಉತ್ಸಾಹದ ಕೋಲಾಹಲದಿಂದ ನಿತ್ರಾಣದ ಗಾಂಧೀಜಿಗಳಿಗೆ ಭಾಷಣ ಕೊಡಲಾಗಲಿಲ್ಲ. ತಾನು ಹೇಳಲಿಕ್ಕಿದ್ದುದನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಅದರ ಕೆಲವು ಮಾತುಗಳನ್ನಿಲ್ಲಿ ಸಂಗ್ರಹಿಸಲಾಗಿದೆ.

ಪಂಡಿತ ಮದನ ಮಾಲವೀಯರ ಉಪದೇಶಾನುಸಾರ ಬಿರ್ಲಾಮನೆತನದ ಉದಾರ ದಾನವಾಗಿ ಈ ಎರಡು ಪೂಜಾ ಮಂದಿರಗಳು ಕಂಗೊಳಿಸುತ್ತವೆ. ಇಲ್ಲಿ ಬಂದು ಆರಾಧಿಸುವ ಭಕ್ತ ವೃಂದದಲ್ಲಿ ಮತ ತತ್ವದ ಸತ್ಯವು ಹೊಳೆಯಲೆಂದು ನನ್ನ ಅಭಿಲಾಷೆ. ಬುದ್ಧದೇವಸ್ಥಾನವು ಅಸ್ಪೃಶ್ಯತೆಯ ಅಥವಾ ಮೇಲು ಕೀಳಿನ ಭಾವನೆಗೆ ಅವಕಾಶ ಕೊಡದು.

ರಸ್ಯಾ ಗಡಿಯಲ್ಲಿ ಜಪಾನರ ಆಕ್ರಮಣ ಪ್ರಾರಂಭ

ಕೃಷ್ಣ ದೇವಸ್ಥಾನದಲ್ಲಿಯೂ ನಿಜವಾದ ಹಿಂದೂ ಮತ ತತ್ವ ಪ್ರಕಾರ ಆ ದುರ್ಭಾವನೆಯಿರಕೂಡದು. ಎಂದು ಅಸ್ಪೃಶ್ಯತೆ ಮತ್ತು ಉಚ್ಚ ನೀಚ ವರ್ಗಗಳೆಂಬ ಭಾವನೆಯು ಹಿಂದೂ ಮತದೊಳಗೆ ತೂರಿಕೊಂಡಿತೋ ಅಂದಿನಿಂದ ಹಿಂದೂ ಮತದ ಅವನತಿಯು ತೊಡಗಿತು. ಹಿಂದೂ ಮತದಲ್ಲಿ ೪ ವರ್ಣಗಳಿವೆ. ಆದರೆ ಯಾವ ವರ್ಣವೂ ಒಂದಕ್ಕಿಂತ ಮತ್ತೊಂದು ಉಚ್ಚವೆಂದಿಲ್ಲ. ವರ್ಣವ್ಯವಸ್ಥೆಯ ಉದ್ದೇಶವು ಉಚ್ಚನೀಚತೆಗಳನ್ನು ತೋರಿಸುವುದಕ್ಕಾಗಲೀ ಸೂಚಿಸುವುದಕ್ಕಾಗಲೀ ಮಾಡಲ್ಪಟ್ಟದ್ದಲ್ಲ. ವರ್ಣವು ವಿವಿಧ ಕರ್ಮಕರ್ತವ್ಯಗಳನ್ನು ಮಾತ್ರ ಸೂಚಿಸುತ್ತದಷ್ಟೆ! ಯಾರಲ್ಲಿ ಪಾರ್ಥಿವ ಸಂಪತ್ತು ಅಥವಾ ಪಾರಲೌಕಿಕ ಜ್ಞಾನ ಸಂಪತ್ತು ವಿಶೇಷವಾಗಿದೆಯೋ ಅವರು ಅಧಿಕಾಧಿಕ ವಿನೀತರಾಗಿದ್ದು ಹೆಚ್ಚು ಹೆಚ್ಚಾಗಿ ಜನತಾ ಸೇವೆಯನ್ನು ಮಾಡಬೇಕು. ಹಿಂದೂ ಮತವು ಸತ್ಯ-ಅಹಿಂಸೆಗಳ ತಳಹದಿಯಲ್ಲಿ ನಿಶ್ಚಲವಾಗಿ ಭದ್ರವಾಗಿ ನಿಂತಿದೆ. ಆದುದರಿಂದ ಜಾತಿ ಅಂತರ್ಜಾತಿ ಪರಜಾತಿಗಳೊಡನೆ ದ್ವೇಷಕಟ್ಟಿಕೊಳ್ಳಲಿಕ್ಕಾಗಲೀ ಹೋರಾಡಿಕೊಳ್ಳಲಿಕ್ಕಾಗಲೀ ಮೇಲುಕೀಳೆಂದು ಕಚ್ಚಾಡಿಕೊಳ್ಳಲಿಕ್ಕಾಗಿ ಹಿಂದೂ ಮತದಲ್ಲಿ ಅವಕಾಶವಿಲ್ಲ. ಆದುದರಿಂದಲೇ ಹಿಂದೂ ಮತೀಯರ ಅನುದಿನದ ಪ್ರಾರ್ಥನೆಯಲ್ಲಿ "ಸರ್ವೇ ಜನಾಸ್ಸುಖಿನೋ ಭವಂತು" ಎಂಬ ಅಖಿಳ ಮಾನವಕೋಟಿಯ ಅಭ್ಯುದಯಕಾಂಕ್ಷೆಯು ಅಡಕವಾಗಿದೆ. ಎಂದ ಮೇಲೆ ಮತೀಯ ಮಾತ್ಸರ್ಯ ಕಲಹಾದಿಗಳಿಗೆ ಅವಕಾಶವೆಲ್ಲಿ? ಈ ದೇವಸ್ಥಾನದಲ್ಲಿ ಭಜಿಸಿಬರುವವರು ಈ ದೃಷ್ಟಿಯಿಂದ ಹಿಂದೂ ಮತತತ್ವಸಾರ ಪ್ರಚಾರಕ್ಕೆ ವಿಶೇಷಪ್ರಾಧಾನ್ಯವನ್ನಿತ್ತಾರೆಂದು ನನ್ನ ಹಾರೈಕೆ.

ಇತ್ತಂಡಕ್ಕೂ ಬೇಡವಾದ ಮಧ್ಯಸ್ಥಿಕೆ

ಲಂಡನಿನಲ್ಲಿ ಬ್ರಿಟಿಷ್ ಮುತ್ಸದ್ದಿಗಳು ಒಂದೂವರೆ ತಿಂಗಳು ದಣಿದು ಸುಣ್ಣಾಗಿ ಅರೆಬ್ಬರನ್ನೂ ಯೆಹೂದಿಗಳನ್ನೂ ಒಂದುಗೂಡಿಸಿ ಅವರ ಆಶಾಕಾಂಕ್ಷೆ ಬೇಡಿಕೆಕೇಳಿಕೆಗಳನ್ನೆಲ್ಲ ಪ್ರತ್ಯೇಕಪ್ರತ್ಯೇಕ ಕೇಳಿ ಕೊನೆಗೆ ಒಟ್ಟು ಕೇಳಿ ಅಂತೂ ತಾವೊಂದು ದೊಡ್ಡ ಮಧ್ಯಸ್ಥಿಕೆ ಮಾಡಿದೆನೆಂದು ಅದನ್ನು ಪಾರ್ಲಿಮೆಂಟಿನ ಅನುಮೋದನೆಗಿಟ್ಟು ಮೋಹರ್ ಒತ್ತಿ 'ಇಗೊಳ್ಳಿ ನಮ್ಮ ವರಪ್ರಸಾದ' ಎಂದು ಅರಬ್ಬ ಪ್ರತಿನಿಧಿಗಳಿಗೆ ಕೊಡಲು ಇದು ಸಮರ್ಪಕವಿಲ್ಲ, ನಮಗೆ ಬೇಡ ಎಂದರು. ಯೆಹೂದಿರಿಗೆ ಕೊಡಲು, ಇದು ನಮ್ಮ ಇಷ್ಟಾನುಸಾರವಿಲ್ಲ—ನಮಗೆ ಬೇಡ ಎಂದರು. ಅಂತೂ ಪರಿಷತ್ತು ಏನೊಂದೂ ಫಲಕಾರಿಯಾಗದೆ ಬಿದ್ದುಹೋಯಿತು. ಇನ್ನು ಬ್ರಿಟಿಷ್ ಮುತ್ಸದ್ದಿಗಳು ತಮಗೆ ಇಷ್ಟವಿದ್ದಂತೆ ಒಂದು ರಾಜ್ಯಭಾರ ಪದ್ಧತಿಯ ರಚನೆ ಮಾಡಿ ಮುಂದಿನ ವಾರ ಪ್ರಕಟಿಸುವರಂತೆ.

ಇಂಗ್ಲೆಂಡಿನಲ್ಲಿ ನೌಕಾ ಬಲವನ್ನು ಹೆಚ್ಚಿಸುವ ಪ್ರಚಂಡ ಪ್ರಯತ್ನ

ಈ ವರುಷದಲ್ಲಿ ೪೦ ಅತ್ಯಾಧುನಿಕ ಯುದ್ಧ ಸೌಕರ್ಯಗಳನ್ನೊಳಗೊಂಡ ಮಹಾ ನೌಕೆಗಳನ್ನು ಸಿದ್ಧಗೊಳಿಸಿ ಮುಂದೆ ೧೯೪೦ರೊಳಗೆ ಮತ್ತು ೧೦೦ ಹಡಗುಗಳನ್ನೂ ಅನಂತರ ಮೂರು ವರುಷಗಳಲ್ಲಿ ೩೦೦ ಯುದ್ಧದ ಹಡಗುಗಳನ್ನೂ ಅನೇಕ ಸಮುದ್ರಾಂತರ್ಗಾಮಿ ನೌಕೆಗಳನ್ನೂ ಸಿದ್ಧಗೊಳಿಸಿಟ್ಟುಕೊಳ್ಳಬೇಕೆಂದು ಬ್ರಿಟಿಷ್ ಸರಕಾರವು ನಿರ್ಧಾರಮಾಡಿದೆ.

ಪೂರ್ವದ ರಸ್ಯಾ ಗಡಿಯಲ್ಲಿ ಜಪಾನಿಯರ ಆಕ್ರಮಣ ಪ್ರಾರಂಭ. ರಸ್ಯಾದ ಆಕ್ರೋಶ

ರಸ್ಯದ ಮೂಡುಗಡಿಯ ಕಡಲತಿನಾರೆಯಲ್ಲಿ ಜಪಾನಿಯರಿಗಿರುವ ಮಂಚುಕೋ ಮತ್ತು ಕೊರಿಯಾದಲ್ಲಿದ್ದ ಗಡಿಯನ್ನು ಮೀರಿ ದಾಳಿಯಿಟ್ಟುದಕ್ಕಾಗಿಯೂ ಜಪಾನು ಅಲ್ಲಿ ೪೦ ಸಾವಿರ ವಿಚಕ್ಷಣ ಸೈನಿಕರನ್ನು ಇಟ್ಟದಕ್ಕಾಗಿಯೂ ರಸ್ಯವು ಕ್ರೋಧಗೊಂಡಿದೆ.

ಜೆಕೊಸ್ಲೋವೇಕಿಯವನ್ನು ಪೂರಾ ನುಂಗಿಬಿಟ್ಟ ಹಿಟ್ಲರ್.

ಹಿಟ್ಲರನ ಗೌರವಾದರಪೂರ್ವಕ ಸಂದೇಶ.

ಹೊಸ ಪೋಪ್ ಗುರುಗಳಿಗೆ

ಹೊಸ ಪೋಪ್ ಗುರುಗಳ ಜಗದ್ಗುರು ಕಿರೀಟಧಾರಣಾ ಮಹೋತ್ಸವದ ಸಂದರ್ಭದಲ್ಲಿ ಹಿಟ್ಲರನು ಪೋಪರಿಗೆ ತನ್ನ ಗೌರವಾದರ ಪ್ರದರ್ಶಕವಾದ ಸಂದೇಶವನ್ನು ತನ್ನ ರಾಯಭಾರಿಯ ಮೂಲಕ ಅರ್ಪಿಸಿರುವನು.

ಜಪಾನಿಗೆ ತಾನಿರುವ ಶಾಂತ ಸಮುದ್ರದ ಸರ್ವಾಧಿಕಾರಿಯಾಗುವ ಮಹತ್ವಾಕಾಂಕ್ಷೆ

ಜಪಾನು ಶಾಂತ (ಪೆಸಿಫಿಕ್) ಸಮುದ್ರದಲ್ಲಿ ನೌಕಾಚಾಲನೆಯನ್ನು ಅಂಕೆಯಲ್ಲಿಟ್ಟುಕೊಳ್ಳಲಾಗುವಂತಹ ದ್ವೀಪಗಳ ಮೇಲೆ ಕಣ್ಣಿಟ್ಟಿರುವುದನ್ನು ಕಂಡು ಆಸ್ಟ್ರೇಲಿಯವೂ ಅಲ್ಲಿನ ದ್ವೀಪಸಮೂಹಗಳ ಸರಕಾರವೂ ಬ್ರಿಟನೂ ದಿಗಿಲುಗೊಂಡಿವೆ. ತಾವೆಲ್ಲ ಒಂದುಗೂಡಿ ಜಪಾನಿನ ಮಹದಾಶೆ ನೆರವೇರದಂತೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ನಿಷ್ಕರ್ಷೆ ಮಾಡಲಿಕ್ಕೆ ಶದ್ಯದಲ್ಲೇ ಪರಿಷತ್ತು ಕೂಡುವ ಯೋಚನೆಯಲ್ಲಿವೆ.

ಅಮೇರಿಕದಲ್ಲಿ ಮುಂಜಾಗ್ರತೆಯ ವ್ಯವಸ್ಥೆ

ಜರ್ಮನಿಯೊಡನೆ ಜೆಕೋಸ್ಲೋವೇಕಿಯವು ಸೇರಿಹೋದುದನ್ನು ಕಂಡು ಅಮೇರಿಕದ ಕಣ್ಣು ಕೆಂಪಾಗಿದೆ. ಹೀಗೆ ನಿರ್ಬಲರಾಷ್ಟ್ರಗಳನ್ನು ನುಂಗುವ ಹಿಟ್ಲರನ ಘೋರಣೆಯನ್ನು ಪ್ರೆಸಿಡೆಂಟ್ ರೂಸವೆಲ್ಟರು ಖಂಡಿಸಿರುವರಲ್ಲದೆ ಸಂದರ್ಭ ಬಂದಾಗ ಜರ್ಮನಿಯ ಮೇಲೆ ಕೈಯೆತ್ತುವವರಿಗೆ ಬೆಂಬಲವಾಗಿ ನಿಲ್ಲಬೇಕೆಂಬ ಅವರ ಅಭಿಮತಕ್ಕೆ ಜನಾಭಿಪ್ರಾಯದ ಅನುಮೋದನೆಯಿದೆ. ಆದುದರಿಂದ ಎತ್ತಣಿಂದಾದರೂ ಯುದ್ಧವೆದ್ದು ತಾವು ಕೈಹಾಕುವ ಸಂದರ್ಭದಲ್ಲಿ ಸನಾಮಾಕಾಲುವೆಯು ತಮ್ಮ ಅನುಕೂಲಕ್ಕಾಗಿ ಭದ್ರತೆಯಿಂದಿರುವಂತೆ ಅದನ್ನಿಡಲು ವಿಶೇಷ ದ್ರವ್ಯವನ್ನು ವಿನಿಯೋಗಿಸುವ ನಿರ್ಧಾರಮಾಡಿದೆ.

ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘಗಳು

ವಿದ್ಯಾ ಇಲಾಖೆಯ ಡೈರೆಕ್ಟರರುಗಳ ಹುಕುಂ.

ಆರ್. ಸಿ. ನಂ. 2821-B/36 ಮತ್ತು 4011-B/38 ತಾ. 3 ಮಾರ್ಚಿ 1938.

ಒಂದನೆಯ ಹುಕುಂ ಮೇರೆಗೆ ಸ್ಥಾಪಿತವಾಗುವ ಉಪಾಧ್ಯಾಯರ ಸಂಘವೂ ಅದರ ಸದಸ್ಯತನವೂ ತಿಂಗಳಿಗೊಮ್ಮೆ ಆ ಸಂಘದ ಸಭೆಗೂಡುವಲ್ಲಿ ಹಾಜರಿಯೂ ಐಚ್ಛಿಕವಾಗಿದೆ. ಈ ಸಂಘದ ಧ್ಯೇಯವು ಶಿಕ್ಷಣದ ವಿಷಯವಾಗಿ ಉಪಾಧ್ಯಾಯರ ಸಾಮಾನ್ಯ ಜ್ಞಾನವನ್ನು ವೃದ್ಧಿಗೊಳಿಸುವುದು. ವಿದ್ಯಾಇಲಾಖೆಯಿಂದ ಬರಬಹುದಾದ ವಿಷಯಗಳನ್ನು ಪರ್ಯಾಲೋಚಿಸಿ ಅಭಿಪ್ರಾಯಕೊಡುವುದು. ಈ ಸಂಘದಲ್ಲಿ ರಾಜಕೀಯ ಮುಂತಾದ ವಿದ್ಯಾಕ್ಷೇತ್ರಕ್ಕೆ ಹೊರಗಾದ ವಿಷಯಗಳನ್ನು ಚರ್ಚಿಸಕೂಡದು. ಮತ್ತು ಅಂತಹವುಗಳಲ್ಲಿ ಪ್ರವೇಶಿಸಬಾರದು. ಒಂದು ಕೇಂದ್ರಕ್ಕೆ ತಕ್ಕಷ್ಟು ಸುತ್ತು ಮುತ್ತಲಿನ ಮಂಜೂರಾದ ಸಾರ್ವಜನಿಕ ಯಾ ಖಾಸಗಿ ಶಾಲೆಗಳ ಉಪಾಧ್ಯಾಯ ಉಪಾಧ್ಯಾಯಿನಿಯರು ಟೀಚರ್ ಮೆನೇಜರರು ಆ ಕೇಂದ್ರದ ಸಂಘದ ಸದಸ್ಯರಾಗಿರತಕ್ಕದು. ಆ ಕೇಂದ್ರವು ಯಾವ ಡಪ್ಯುಟಿ (ಸೀನಿಯರ್ ಅಥವಾ ಜೂನಿಯರ್) ಇನ್ಸ್‌ಪೆಕ್ಟರರ ಆಡಳಿತೆಯೊಳಗಿದೆಯೋ ಅವರು ಆವರ ಅಧಿಕಾರಿ ವರ್ಗದ ಅಧ್ಯಕ್ಷ (ಎಕ್ಸ್‌ಅಫೀಸಿಯೋ) ರಾಗಿನ್ದು ಸಭೆಗಳಲ್ಲಿ ಹಾಜರಾಗಿ ಕಾರ್ಯಕಲಾಪಗಳನ್ನು ನೋಡಿಕೊಳ್ಳತಕ್ಕದ್ದು. ಅಂತಹವು ಬಾರದಿದ್ದ ಸಂದರ್ಭದಲ್ಲಿ ಅಧ್ಯಾಪಕರು ತಮ್ಮಲ್ಲೊಬ್ಬನನ್ನು ಅಂದಿನ ಸಭಾಧ್ಯಕ್ಷನನ್ನಾಗಿ ಚುನಾಯಿಸಿ ಕಾರ್ಯ ನಿರ್ವಹಿಸಬಹುದು. ಒಂದರ ನಂತರ ಮತ್ತೊಂದಾಗಿ ಎರಡು ಸಭೆಗಳಿಗೆ ಗೈರುಹಾಜರಾಗುವ ಸದಸ್ಯರು ಶಿಕ್ಷಾರ್ಹರು. ಸಂಘದ ಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳು ಉಪಾಧ್ಯಾಯರೊಳಗೆ ಚುನಾಯಿಸಲ್ಪಟ್ಟು ಅಧ್ಯಕ್ಷರಿಂದ ಮಂಜೂರಾತಿ ಹೊಂದಿದವರಾಗಿರತಕ್ಕದು. ವರ್ಷಾಂತ್ಯದಲ್ಲಿ ಪ್ರತಿಯೊಂದು ಸಂಘವೂ ತನ್ನ ಕಾರ್ಯಕಲಾಪಗಳ ಸಾರಾಂಶ ವರದಿಯನ್ನು ಅಧ್ಯಕ್ಷರ ಮೂಲಕ ಡಿ. ಇ. ಒ. ಗೆ ಕಳುಹಿಸಲ್ಪಟ್ಟು ಅಂಥವುಗಳ ಸಾರ ಸಂಗ್ರಹವಾಗಿ ಜಿಲ್ಲಾ ವರದಿಯನ್ನು ಡಿ. ಇ. ಓ. ರವರು ಡಿರೆಕ್ಟರರಿಗೆ ಒಪ್ಪಿಸಬೇಕು.

ಎರಡನೆಯ ಹುಕುಂ ಮೇರೆಗೆ ಆಯಾ ಸ್ವಭಾವಾನುಸಾರವಾಗಿ ಈ ಕೆಳಗಿನ ಸಂಘಗಳನ್ನು ಉಪಾಧ್ಯಾಯರು ಸ್ಥಾಪಿಸಿಕೊಳ್ಳಬಹುದು. ೧ ಆಯಾ ತಾಲೂಕಿನ ಖಾಸಗಿ ಶಾಲೆಗಳ ಉಪಾಧ್ಯಾಯರ ಸಂಘ. ೨. ಆಯಾ ತಾಲೂಕಿನ ಜಿಲ್ಲಾ ಮತ್ತು ಪಂಚಾಯತ ಶಾಲೆಗಳ ಅಧ್ಯಾಪಕರ ಸಂಘ. ೩. ಪ್ರತಿ ಮುನಿಸಿಪಾಲಿಟಿಗೆ ಸೇರಿದ ಮುನ್ಸಿಪಲ್ ಶಾಲೆಗಳ ಸಂಘ. ಈ ಸಂಘ ಸ್ಥಾಪನೆಗಳಿಗೆ ಯುಕ್ತದ್ವಾರಾ ಡಿರೆಕ್ಟರರಿಗೆ ಬರೆದು ಮಂಜೂರಾತಿಯನ್ನು ಹೊಂದತಕ್ಕದು. ಇವರ ಕಾರ್ಯಕಾರಿ ಅಧಿಕಾರಕೂಟವನ್ನು ಉಪಾಧ್ಯಾಯರೊಳಗೆ ಚುನಾವಣೆಯಿಂದ ಮಾಡಿಕೊಳ್ಳಬಹುದು. ಈ ಸಂಘಗಳು ಉಪಾಧ್ಯಾಯರ ತೊಡಕು ತೊಂದರೆ ಸಂಬಳ ಮುಂತಾದ ತಮ್ಮ ಅಧ್ಯಾಪಕ ಜೀವನದ ಸಮಸ್ಯೆಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಮುಂದಿಡಬಹುದು. ವಿದ್ಯಾ ಇಲಾಖೆಯ ಮುಂದಿರುವ ಅಥವಾ ಡಿರೆಕ್ಟರರು ಸರಕಾರಕ್ಕೆ ಸೂಚಿಸಿರುವ ಶಿಕ್ಷಣಸೂತ್ರಕ್ರಮಯೋಜನೆಗಳ ಜ್ಯಾರಿಯ ವಿಷಯದಲ್ಲಿ ತಮ್ಮ ಅಭಿಪ್ರಾಯ ಸಲಹೆ ಸೂಚನೆಗಳನ್ನು ಕೊಡಬಹುದು. ಆದರೆ ರಾಜಕೀಯಕ್ಕೆ ಕೈಯಿಕ್ಕಬಾರದು. ಚರ್ಚಿಸಲೂ ಕೂಡದು. ಇಂತಹ ಸಂಘಗಳಿಗೆ ಯಾವ ಉಪಾಧ್ಯಾಯನಾದರೂ ಸೇರುವುದೂ ಸೇರದಿರುವುದೂ ಅವನ ಇಷ್ಟ. ಸಭೆಯಲ್ಲಿ ಖಡ್ಡಾಯವಿಲ್ಲ. ಸಂಘದ ಪ್ರತಿಯೊಂದು ಸಭೆಯ ವರದಿಯನ್ನು ಮತ್ತು ನಿರ್ಣಯಗಳನ್ನು ಅಂದಿನ ಅಧ್ಯಕ್ಷರ ಸಹಿ ಸಹಿತ ಡಿ. ಇ. ಓ. ಗೆ ಕಳುಹಿಸತಕ್ಕದು.

NOTICE.

Applications are invited from qualified surveyors or Draftsmen to be appointed for two months for the purpose of preparing a topographical survey of Puttur town according to the Rules framed under the Town Planning Act 1920. The applicants are requested to state the minimum pay acceptable and their qualifications. The applications to reach the office by the end of March 1939.

M. Sadashiva Rao,
President
Panchayat Board, Puttur.

Puttur, S. Kanara.
Dated 15-3-1939.

To Insure is
The Husband's duty. The wife's right and the child's claim Hence seek for a policy of
THE ASIAN ASSURANCE CO, LTD,
The safest and one of the largest Indian Concerns.
Head Office:—
Asian Buildings
Ballard Estate,
ombay.
Branch Office:—
Hampankatta,
Mangalore.

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.
ಲಾಭದಾಯಕವಾದ ಮತ್ತು ಸುಭದ್ರತೆಯ ನಿಧಿಯನ್ನೊಳಗೊಂಡ ಈ ಕಂಪೆನಿಯಲ್ಲಿ ನಿಮ್ಮ ವಿಮಾ ಇಳಿಸಿರಿ.
ಏಜಂಟರು ಪ್ರಾಮುಖ್ಯಪಟ್ಟಣಗಳಲ್ಲೆಲ್ಲಾ ಬೇಕಾಗಿದ್ದಾರೆ
ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
J. A. PUTRAN,
Branch Manager,
Mangalore.

ಉಡುಪಿ

ತಾ. 19-3-39ರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಲಾಪಗಳನ್ನೂ ಚಳವಳಿಯನ್ನೂ ಉಡುಪಿಯಲ್ಲಿ ಹೇಗೆ ಮುಂದೊತ್ತಬಹುದೆಂಬುದನ್ನು ಯೋಚಿಸಲು ಕಿರಿಯರ ಪ್ರಪಂಚದ ಸೇವೆಯಿಂದ ಉಡುಪಿಯ ಕನ್ನಡ ಪ್ರೇಮಿಗಳ ಸಭೆಯೊಂದು ಶ್ರೀ. ಎಡ್ವೋಕೇಟ್ ಬೈಲೂರು ವಾಸುದೇವರಾಯರ ಅಧ್ಯಕ್ಷತೆಯಲ್ಲಿ ನವಯುಗ ಆಫೀಸಿನಲ್ಲಿ ಜರಗಿತು. ದಕ್ಷಿಣ ಕನ್ನಡ ಮತ್ತು ಕೊಡಗು ಪ್ರಾಂತೀಯ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ. ಕೆ. ಶಿವರಾಮ ಕಾರಂತರು ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಕೈಗೊಂಡ ವಿವಿಧ ಕಾರ್ಯಕ್ರಮಗಳನ್ನು ನೆರೆದವರಿಗೆ ವಿವರಿಸಿ ಪರಿಷತ್ತಿಗೆ ಕಿರಿಯರ ಪ್ರಪಂಚವನ್ನು ಸಂಬಂಧಗೊಳಿಸುವ ಕುರಿತಾಗಿಯೂ ಇದರ ಮೂಲಕ ಪರಿಷತ್ತಿನ ಉದ್ದೇಶ ಸಾಧನೆಯನ್ನು ಮಾಡಬೇಕಾಗಿಯೂ ಕೇಳಿಕೊಂಡರು. ಈ ಬಗ್ಗೆ ಸರಿಯಾದ ಕಾರ್ಯಕ್ರಮಗಳನ್ನು ಯೋಚಿಸಿ ನಿರ್ಣಯಿಸುವರೆ ಈ ಕೆಳಗೆ ಹೆಸರು ಕಾಣಿಸಿದ ಸದಸ್ಯರ ಕಮಿಟಿಯನ್ನು ರಚಿಸಲಾಯಿತು. ಶ್ರೀಗಳಾದ ಬೈಲೂರು ವಾಸುದೇವರಾವ್ ಎಡ್ವೊಕೇಟ್ ಯು. ವೆಂಕಟರಾವ್, ಎಸ್. ವೆಂಕಟರಾಜ, ಪಿ. ಎ. ಪೈ, ಕೊರಡ್ಕಲ್ ಶ್ರೀನಿವಾಸರಾವ್ ಬಿ. ಶಾಮರಾಯ ಸೆಟ್ಟಿ, ಬಿ. ರಾಮಕೃಷ್ಣ ಅಲಾರ್ ಮತ್ತು ಕೆ. ಹೊನ್ನಯ್ಯ ಸೆಟ್ಟಿ. ಅಧ್ಯಕ್ಷರ ಭಾಷಣ ಮತ್ತು ಧನ್ಯವಾದ ಅರ್ಪಣೆಯಾದ ಮೇಲೆ ಸಭೆ ಮುಕ್ತಾಯವಾಯಿತು.

ದ. ಕ. ಜಿಲ್ಲಾ ಮೋಟಾರ್ ಎಂಪ್ಲೋಯಿಸ್ ಯೂನಿಯನ್ನಿನ ಆಶ್ರಯದಲ್ಲಿ ತಾ. 19-3-39 ರಲ್ಲು ಸಂಜೆ ತೇರುಬೀದಿಯಲ್ಲಿ ಮಹಾಜನ ಸಭೆಯೊಂದು ಶ್ರೀ ಲಕ್ಷ್ಮಣ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಕೂ ವೈರ್ಡ್ ಶ್ರೀ ಪುರುಷೋತ್ತಮ ಪೈ ಮತ್ತು ರಮಾನಾಥನವರು ಯೂನಿಯನ್ನಿನ ಮತ್ತು ಇತರ ಅನಿರೀಕ್ಷಿತ ವಿಷಯಗಳನ್ನೆತ್ತಿ ಭಾಷಣವಿತ್ತರು. ಶ್ರೀಗಳಾದ ಯು. ನಾಗಪ್ಪ ಕಾಮತ್ ಮತ್ತು ಸದಾನಂದ ಭಟ್ಟರು ಕೆಲವು ಮಾತುಗಳನ್ನಾಡಿದರು. ಅಧ್ಯಕ್ಷರ ಮಾತುಗಳಾಗಿ ಸಭಾಂತ್ಯವಾಯಿತು.

ಕಟಪಾಡಿ— ತಾ. ೨೧ನೇ ಸಂಜೆ ಮಂಗಳೂರಿನಿಂದ ಉಡುಪಿಗೆ ಬರುವ (ಲಾಸ್ಟ್ ಸರ್ವಿಸ್) ಸಿ. ಪಿ. ಸಿ. ಕಂಪೆನಿಯ ಮೋಟಾರು ಬಸ್ಸು ಆಕಸ್ಮಾತ್ತಾಗಿ ಕಟ್ಟೆಕೆರೆಯೆಂಬಲ್ಲಿ ಗದ್ದೆಗೆ ಉರುಳಿ ಬಿತ್ತೆಂದೂ ನಾಲ್ಕೈದು ಪ್ರಯಾಣಿಕರಿಗೆ ಪೆಟ್ಟಾಗಿದೆಯೆಂದೂ ಪ್ರಾಣಾಪಾಯವೇನೂ ಆಗಿಲ್ಲವೆಂದೂ ಬಾತ್ಮಿದಾರರೊಬ್ಬರು ತಿಳಿಸುತ್ತಾರೆ.

ಹೆಚ್ಚು ಪುಟ
ಹೆಚ್ಚು ವಿಷಯಾದಿಗಳಿಂದ
ಬರುವವಾರ ಹೊರಡುವ
ತಿಂಗಳಕಾಣಿಕೆ
ಯನ್ನೋದಲು ಮರೆಯಬೇಡಿರಿ.
ಕ್ರಯ ಎಂದಿನಂತ ಒಂದಾಣೆ ಮಾತ್ರ.

ನೋಟೀಸು

ಪುತ್ತೂರು ತಾಲೂಕು ಬಂದಾರ ಗ್ರಾಮದ ಮೇಗಿನ ಬಾಲಂಪಾಡಿ ಗುಮ್ಮ ಗೌಡನ ಮಗ ನೀರಪ್ಪ ಗೌಡನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ—

ನನ್ನ ತಂದೆ ಗುಮ್ಮ ಗೌಡರು ವೃದ್ಧಾಪ್ಯದವರಾಗಿದ್ದು ಇತ್ತೀಚೆಗೆ ಸಂಭವಿಸಿದ ರಕ್ತ ಕಾಹಿಲೆಯಲ್ಲಿ ಸ್ಮೃತಿಸಹಾ ಇಲ್ಲದವರಾಗಿರುವ ಸಮಯ ಅಂದರೆ ಇದೇ ಕಳೆದ ತಾ. 9-1-39ರಲ್ಲು ಸದ್ರಿ ಬಂದಾರ ಗ್ರಾಮದ ಸಾಲ್ತಿಮಾರ ವೆಂಕಟ್ರಮಣ ಪಡ್ಡಿಲ್ಲಾಯರ ಮಗ ಜಿಲ್ಲರೆ ಪಂಡಿತ ವ ಜ್ಯೋತಿಷ್ಯಗಾರರು ಆದ ಸುಬ್ರಾಯ ಪಡ್ಡಿಲ್ಲಾಯ 1 ಮತ್ತು ಅವರ ಅಳಿಯ ಕಲ್ಲರ್ಬ ಸುಬ್ರಾಯ 1ಕೇದಾರ 2ನರು ನನ್ನ ಗೈರುಹಾಜರಿಯಲ್ಲಿ ರೋಗಿಗೆ ನೋಡುವ ನೆವನದಿಂದ ನನ್ನ ಮನೆಗೆ ಬಂದು ಸ್ಮೃತಿಯಿಲ್ಲದ ನನ್ನ ತಂದೆಯ ಹಸ್ತಪರೀಕ್ಷೆ ಆಯುಷ್ಯರೇಖೆ ವಗೈರೆ ನಿರ್ಣಯಿಸುವಂತೆ ನಟಿಸಿ ಎಡದ ಹೆಬ್ಬೆಟ್ಟಿನ ಮುದ್ರೆಯನ್ನು ಖಾಲಿ ಕಾಗದದಲ್ಲಿ ತೆಗೆದು ಕೊಂಡು ಹೋದ ಸಂಗ್ತಿ ಅನಂತರ ಮನೆಗೆ ಬಂದ ನನಗೆ ತಿಳಿದು ಬಂದದ್ದರಿಂದ ರಕ್ತಕಾಹಿಲೆಯಲ್ಲಿದ್ದ ನನ್ನ ತಂದೆಯು ತಾ 11-1-39ರಲ್ಲು ಮೃತಪಟ್ಟ ತರುವಾಯ ನಾನು ತಾ. 15-1-39ರಲ್ಲು ಮೇಲಿನ ಎಲ್ಲಾ ವಿಷಯಗಳು ಕಾಣಿಸಿ ಶ್ರೀ ದಕ್ಷಿಣ ಕನ್ನಡಾ ಜಿಲ್ಲಾ ಕಲೆಕ್ಟರ್ ದೊರೆಗಳವರ ಬಳಿಗೂ ಶ್ರೀ. ಬೆಳ್ತಂಗಡಿ ಸಬ್ ಮೆಜಿಸ್ಟ್ರೇಟರವರ ಬಳಿಗೂ ಸಹಿ ಅಲ್ಲದ ಅರ್ಜಿಗಳನ್ನು ಬರಕೊಂಡಿರುತ್ತೇನೆ. ಆದ್ದರಿಂದ ಸದರಿ ಸುಬ್ರಾಯ ಪಡ್ಡಿಲ್ಲಾಯ ವಗೈರೆರು ಮೋಸಕೃತ್ಯದಲ್ಲಿ ಕೊಂಡುಹೋದ ಸದರಿ ಎಡಹೆಬ್ಬೆಟ್ಟಿನ ಆಧಾರದಲ್ಲಿ ಅವರಿಂದ ನನಗೆ ಬರತಕ್ಕ ಸ್ಥಿರಾಸ್ತಿ ಈಡಿನ ಹಣ ದಕ್ಕಿಸಿಕೊಳ್ಳುವರೆ ಅಥವಾ ಏನೊಂದು ತರದ ದಬನಾವಣೆ ರಿಕಾರ್ಡ್ ಮಾಡಿದ್ದಲ್ಲಿಯೂ ಅಥವಾ ಬೇರೆಯಾಗಿ ದಾವಾದರೂ ಬನಾವಣೆ ರಿಕಾರ್ಡು ಸೃಷ್ಟಿಸಿಪಡಿಸಿದ್ದಲ್ಲಿ ಕೂಡಾ ಅವುಗಳೇನೊಂದು ನನಗೆ ಬಾಧಕವಾಗತಕ್ಕದ್ದಲ್ಲ ವ ಸಿಂದು ಆಗತಕ್ಕದ್ದು ಅಲ್ಲ ಎಂಬುದಾಗಿ ಈ ಮೂಲಕ ಎಲ್ಲಾ ಜನರ ತಿಳುವಳಿಕೆಬಗ್ಗೆ ಪ್ರಕಟಪಡಿಸಿದ್ದೇನೆ.

O||| ಈಗರೆ ವ ಎಡಗೈ ಹೆಬ್ಬೆಟ್ಟಿನ ಮುದ್ರೆ ಸಹಾ ನೀರಗೌಡನ ರುಜು.

ಮೊಕ್ಕಾಂ ಬಂದಾರ, ತಾ. 18-3-39.

ನೋರ್ವೇ ಸರಕಾರದ ಹೇಳಿಕೆ

ನೋರ್ವೆಯ ಪ್ರೆಸಿಡೆಂಟ್ ಹೇಂಬ್ರೋ ಇವರು ಇತ್ತೀಚೆಗೆ ಬ್ರಿಟಿಷ್ ಪಾರ್ಲಿಮೆಂಟುಗಳಲ್ಲಿ ಜರ್ಮನಿಯ ಅತಿಕ್ರಮಣ ಸಂಬಂಧವಾಗಿ ಚಿಕ್ಕ ರಾಷ್ಟ್ರಗಳ ರಕ್ಷಣೆಯ ಪ್ರಶ್ನೆಯ ಕುರಿತು ನಡೆದ ಚರ್ಚೆಗಳ ವಿಷಯವಾಗಿ ಹೀಗೆ ಹೇಳಿರುವರು—

ನಾವು ಯಾವುದೊಂದು ರಾಷ್ಟ್ರವನ್ನಾಗಲೀ ರಾಷ್ಟ್ರಸಮೂಹವನ್ನಾಗಲೀ ನಮ್ಮ ರಕ್ಷಣೆಯ ಭರವಸೆ ಕೊಡಿರೆಂದು ಕೇಳಿಕೊಂಡಿಲ್ಲ. ನಾವು ತಟಸ್ಥರಾಗಿರುವ ನಮ್ಮ ಧೋರಣೆಯು ಅಂತಹ ವಿಶ್ವಾಸಾರ್ಹವಲ್ಲದ ಭರವಸೆಗಳನ್ನು ಆಧರಿಸಿಕೊಂಡಿಲ್ಲ. ನಮ್ಮ ತಾಟಸ್ಥ್ಯವನ್ನೂ ರಕ್ಷಣೆಯನ್ನೂ ಕಾದುಕೊಳ್ಳುವ ದೃಢನಿರ್ಧಾರವೂ ಶಕ್ತಿಯೂ ನಮ್ಮಲ್ಲೇ ಇದೆ. ಅದನ್ನೇ ನಾವು ಆಧರಿಸಿಕೊಂಡಿದ್ದೇವೆ. ಯುರೋಪಿನ ಭದ್ರತೆಯನ್ನು ಪ್ರಬಲಗೊಳಿಸುವ ಪ್ರಶ್ನೆಯಲ್ಲಿ ನಾವು ಸಹಕರಿಸುವುದು ಈ ದೃಷ್ಟಿಯಿಂದಲ್ಲದೆ ಬೇರೊಂದರಿಂದಲ್ಲ ಎಂದು ರಾಜಕಾರಣ ವಿಷಯವಾದ ಸಭೆಯೊಂದರಲ್ಲಿ ನಾರ್ವೇಯ ಧೋರಣೆಯನ್ನು ಸ್ಪಷ್ಟಪಡಿಸಿರುವರು.

ವಧುವು ವರನನ್ನು ನಾಚಿಕೆಗೀಡುಮಾಡಿ ಮದುವೆಯನ್ನು ತಪ್ಪಿಸಿಕೊಂಡಳು

ಅಂಬಾಲದ ಸಮೀಪದ ಹಳ್ಳಿಯಲ್ಲಿ ಹದಿನೈದುವರುಷದ ವಧುವಿಗೆ ಐಂವರುಷದ ವರನು ನಿಶ್ಚಿತವಾಗಿ. ಲಗ್ನದ ಮುಹೂರ್ತ ಬಂದೊದಗಲು ಆ ದಿಟ್ಟ ಹುಡುಗಿಯು ವರನನ್ನು ಕುರಿತು, 'ನಾನು ನಿನ್ನ ಮೊಮ್ಮಗಳಾಗುವಂತಿದ್ದೇನೆ. ನನ್ನ ಕೈ ಹಿಡಿಯಲು ಹವಣಿಸುವ ನಿನಗೆ ಒಂದಿಷ್ಟು ನಾಚಿಕೆಯೂ ಆಗುವುದಿಲ್ಲವಲ್ಲ!' ಎಂದು ಜರೆದು ತನ್ನ ಹೆತ್ತವರೂ ಬಂಧುಬಳಗವೂ ಎಷ್ಟು ಒತ್ತಾಯಮಾಡಿದರೂ ಹಸೆಮಣೆಗೆ ಹೋಗಲು ಒಪ್ಪದೆ ಸತ್ಯಾಗ್ರಹ ಮಾಡಲು, ವರನು ಹತಾಶನಾಗಿ ಹಿಂತೆರಳಬೇಕಾಯಿತು.

ಪುಂಡುಗಾರರ ದಿಗಿಲುಗೊಳಿಸುವ ವಿನೋದ

ಡೆಕ್ಕನ್ ಹೈದರಾಬಾದಿನಲ್ಲಿ ಇತ್ತೀಚೆಗೆ ಒಂದು ಬಾಂಬುಸ್ಫೋಟನವಾದ ಕಾರಣ ಪಟ್ಟಣಿಗರು ಭಯಗೊಂಡಿರುವ ಪರಿಸ್ಥಿತಿಯನ್ನು ಕಂಡು ಯಾರೋ ಒಬ್ಬ ಪುಂಡುಗಾರನು ಅವರನ್ನು ದಿಗಿಲುಗೊಳಿಸುವ ವಿನೋದದ ಆಟವಾಡಿದ. ಆ ಬೊಂಬು ಸಿಡಿದ ಜಾಗಕ್ಕಿಂತ ಸುಮಾರು ಎರಡು ಫರ್ಲಾಂಗ್ ದೂರದಲ್ಲಿ ಒಬ್ಬನು ಒಂದು ಸಿಗರೇಟು ಕಡಿಗೆಯನ್ನು ಬಹು ಜಾಗರೂಕತೆಯಿಂದ ತಂದಿಟ್ಟು ಓಡಿದ. ಹೊಂಚುಹಾಕುತ್ತಿದ್ದ ಪೋಲೀಸರು ಅವನನ್ನು ಹಿಂಬಾಲಿಸಿ ಓಡಿದರು. ಸುದ್ದಿಯು ಪೋಲೀಸುಕಮಿಷನರಿಗೆ ಮುಟ್ಟಲು ಆ ಸ್ಥಾನದಲ್ಲಿ ಜನವಾಹನ ಸಂಚಾರಗಳಿಗೆ ಪ್ರತಿಬಂಧಕಾಜ್ಞೆ ಹೊರಟಿತು. ಆ ರಾತ್ರೆ ಮತ್ತು ಮರುದಿನ ಬೆಳಗ್ಗೆ ದೂರದಿಂದಲೇ ಆ ದಕ್ಕೆ ಪಹರೆ ಇಡಲಾಯಿತು. ಪಟ್ಟಣಿಗರು ಅದೆಂತಹ ಬಾಂಬೋ ಎಂದು ದಿಗಿಲುಗೊಂಡು ದೂರದಲ್ಲೇ ನಿಂತು ನೋಡುತ್ತಿರಲು ಪೋಲೀಸು ಪಡೆ ಬಂತು. ಕಮಿಷನರು ಬಂದರು. ಹೇಗೆ ಅದನ್ನು ಪರೀಕ್ಷಿಸುವುದೆಂದು ದೀರ್ಘಾಲೋಚನೆ ಮಾಡಿ, ಕೊನೆಗೆ ಒಂದು ದೊಡ್ಡ ಬಿದಿರಿನ ದಬ್ಬಿಯಿಂದ ಅದನ್ನು ಮುಟ್ಟಿ ದಬ್ಬಿಗೆ ಉದ್ದದ ಹಗ್ಗ ಕಟ್ಟಿ ಎಳೆದೆಳೆದು ಬಾಂಬನ್ನು ಎಷ್ಟು ಹೊರಳಾಡಿಸಿದರೂ ಅದು ಸಿಡಿಯದಿರಲು ಧೈರ್ಯಗೊಂಡು ಹತ್ತಿರ ಹೋಗಿ ಪರೀಕ್ಷಿಸಲು ಅದು ಸಾಮಾನ್ಯ ಸಿಗರೇಟು ಕಡಿಗೆಯೆಂದು ಗೊತ್ತಾಯಿತು. ಮುಚ್ಚಳ ತೆರೆದು ನೋಡಲು ಒಳಗೆ ಹಳೆ ಕಾಗದಗಳನ್ನು ತುರುಕಿತ್ತು.

ಇನ್ನೊಂದು ಕಡೆ ಒಂದು ತೆಂಗಿನ ಬುರುಡೆಯನ್ನು ಬಿರಡೆ ಹಾಕಿ ಯಾರೋ ಇಟ್ಟಿದ್ದರು. ಒಬ್ಬ ಪೋಲೀಸನು ಎದೆ ಗಟ್ಟಿಮಾಡಿಕೊಂಡು ಅದನ್ನು ನೀರಿನ ದಬ್ಬಿಯಲ್ಲಿ ಹಾಕಿದ. ಏನೂ ಆಗಲಿಲ್ಲ. ಅದರಿಂದ ಅದನ್ನು ತೆಗೆದು ಪರೀಕ್ಷಿಸಲು ಇಪ್ಪತ್ತನಾಲ್ಕು ಗಂಟೆ ಕಾದರೂ ಯಾರೂ ಧೈರ್ಯಗೊಂಡು ಮುಂದು ಬರಲಿಲ್ಲ. ಕೊನೆಗೆ ಒಬ್ಬ ಚತುರ ಪೋಲೀಸನು ದೂರದಿಂದು ಅದಕ್ಕೆ ಗುರಿಯಿಟ್ಟು ಗುಂಡು ಹೊಡೆಯಲು ಗರಟೆ ಒಡೆಯಿತು. ಒಳಗೇನೂ ಇರಲಿಲ್ಲ!

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಸ್ಮಾಲ್ ನಂಬ್ರ 1 1/39

ಪುರುಷೋತ್ತಮ ತೋಳ್ಪಾಡಿತ್ತಾಯ—ವಾದಿ.

ನಗ್ರಿ ಪದ್ಮನಾಭಾಚಾರ್ಯ—ಪ್ರತಿವಾದಿ.

ಸದ್ರಿ ಪ್ರತಿವಾದಿ ಮೈಸೂರು ಸಿಟಿ ಸುಖನಿವಾಸ ಕಾಫಿ ಹೋಟೆಲಿನಲ್ಲಿರುವ ಕೇಶವಾಚಾರ್ಯರ ಮಗ ನಗರಿ ಪದ್ಮನಾಭಾಚಾರ್ಯರಿಗೆ—

ವಾದಿಯು ನಿಮ್ಮ ಮೇಲೆ ಡಿಮಾಂಡ ಪ್ರೊಮಿಸರಿ ನೋಟಿನ ಅಸ್ಲು ಬಡ್ಡಿ ರೂ. 177-8-5ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಮಾಡಿದ ದಾವೆಯು ತಾ. 31-3-39ಕ್ಕೆ ಸದರೀ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುವದರಿಂದ ಆ ದಿವಸ ನೀವು ಹಗಲು 10 ಘಂಟೆಗೆ ಸದರಿ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಏಕಪಕ್ಷ ಮಾಡಿ ತೀರ್ಮಾನಿಸಲಾದೀತು.

B. Prabhakara Rao, M. A. B. L.
Vakil for Plaintiff.
ಪುತ್ತೂರು, ತಾ. 21-3-39.

ನವೀನ ಪುಸ್ತಕಗಳು

೧. **ಕೆರಿನೀರು**—ರಮ್ಯ ಭೀಷಣ ಕಾದಂಬರಿ ೪೦೦ ಪುಟ ನುಣುಪು ಕಾಗದ ಬೆಲೆ ಎರಡುರೂಪಾಯಿ.
೨. **ಪನ್ನೆ**—ಐತಿಹಾಸಿಕ ನಾಟಕ, ಪುಟ ೫೦ ನುಣುಪು ಕಾಗದ, ಬೆಲೆ ೬ ಆಣೆ
೩. **ಬಲಿದಾನ**—ಬುದ್ಧಕಾಲೀನ ಐತಿಹಾಸಿಕ ಕಾದಂಬರಿ ೨೭೬ ಪುಟ ಬೆಲೆ ರೂ. ೧-೪-೦.
೪. **ಎಚ್ಚಮ್ಮನಾಯಕ**—ವಿಜಯನಗರಕ್ಕೆ ಸಂಬಂಧಿಸಿದ ಕಥಾನಕವು ೧೬೮ ಪುಟ ಬೆಲೆ ೮ ಆಣೆ.
೫. **ಅನಾತ್ಮನಂದಿನಿ**—ಚಂದ್ರಹಾಸನ ಕಾಲದ ಪೌರಾಣಿಕ ಕಾದಂಬರಿ ೩೦೦ ಪುಟ ಬೆಲೆ ರೂ. ೧-೮-೦

ವಿಳಾಸ:—ಶ್ರೀ. ಶೇಷಾಚಲ ಪ್ರೆಸ್, ಪೊ. ಆನಂದವನ (ಹಾವೇರಿ) ಧಾರವಾಡ.

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಮೈಸೂರು, ಮಾ. ೧೯

ಹೆಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ— ತಾ. ೧೩ನೇ ಬೆಳಿಗ್ಗೆ ಮಾಮೂಲಿನ ಮೇಲೆ ಸತ್ಯಾಗ್ರಹಿಗಳು, ಶ್ರೀ. ಯಸ್. ಡಿ. ನಾರಾಯಣರಾಯರ ನಾಯಕತ್ವದಲ್ಲಿ, ಇನ್ನಿತರ ೯ ಸತ್ಯಾಗ್ರಹಿಗಳು, ಕಟ್ಟಡದ ಮುಂದೆ ಸತ್ಯಾಗ್ರಹವನ್ನಾಚರಿಸಿದರು. ಪೋಲೀಸಿನವರು ಇವರನ್ನು ದಸ್ತಗಿರಿಮಾಡಿದರು. ಮೇಜಿಸ್ಟ್ರೇಟರು, ವಿಚಾರಣೆನಡೆಸಿ, ನಾಯಕರಾಗಿದ್ದ ಶ್ರೀ. ಯಸ್. ಡಿ. ನಾರಾಯಣರಾಯರಿಗೆ ೧೦ ರೂ. ಜುಲ್ಮಾನೆ, ಜುಲ್ಮಾನೆಕೊಡದೆ ತಪ್ಪಿದ್ದಲ್ಲಿ, ೭ದಿನ ಸಾದಾ ಸಜೆ ವಿಧಿಸಿದರು. ಉಳಿದ ಇನ್ನಿತರ ೯ಜನಗಳಿಗೆ ಪ್ರತಿಯೊಬ್ಬನ ಮೇಲೂ 7ರೂ. ಜುಲ್ಮಾನೆ, ಜುಲ್ಮಾನೆಕೊಡದಿದ್ದಲ್ಲಿ ೫ದಿನ ಸಾದಾ ಸಜೆ ವಿಧಿಸಿದರು. ಸತ್ಯಾಗ್ರಹಿಗಳು ಜುಲ್ಮಾನೆಕೊಡಲಿಲ್ಲವಾಗಿ, ಜೈಲಿಗೆ ಹೋದರು.

೧೪ನೇ ದಿನ ಸತ್ಯಾಗ್ರಹ ಸಮಿತಿಯನ್ನೇ ವಜಾಮಾಡಿ, ಅದರ ಕನ್‌ವೀನರಾಗಿದ್ದ ಶ್ರೀ ಸುಬ್ಬರಾವ್ ಉಪಾಧ್ಯರನ್ನು ಮೊದಲೇ 'ಡಿಕ್ಟೇಟರ್'ರನ್ನಾಗಿ ನೇಮಕ ಮಾಡಲಾಯಿತು. ಇವರನ್ನೂ ಮತ್ತು ಇದಕ್ಕೆ ಸಂಬಂಧಪಟ್ಟ ಶ್ರೀ. ಎ. ಎನ್. ಸೂರ್ಯನಾರಾಯಣರಾಯರನ್ನೂ ಸೆ|| ೧೦೭ ಪ್ರಕಾರ ದಸ್ತಗಿರಿಮಾಡಿ ಮೇಜಿಸ್ಟ್ರೇಟರ ಮುಂದೆ ಹಾಜರ್‌ಮಾಡಿ ನಾಳೆಯವರೆಗೆ ರಿಮ್ಯಾಂಡ್‌ಪಡೆಯಲಾಯಿತು.

ಇತ್ತಲಾಗಿ ಈ ದಿನ (೧೫ನೇ ತಾ.) ಬೆಳಿಗ್ಗೆ ಪುನಃ ೭೦ವರ್ಷ ವಯಸ್ಸಿನ ಶ್ರೀಮತಿ ಎಂ. ಲಕ್ಷ್ಮೀದೇವಮ್ಮನವರೂ, ಶ್ರೀಮತಿ ಕೆ. ಅನ್ನಪೂರ್ಣಮ್ಮನವರೂ, (ಸ್ತ್ರೀಯರುಗಳು) ಮತ್ತು ವಿ. ಕೆಂಚಪ್ಪ ಮತ್ತು ಇನ್ನಿತರ ೯ಜನ ಪುರುಷ ಸತ್ಯಾಗ್ರಹಿಗಳು (ಒಟ್ಟು ೧೨ ಜನ, ಇಬ್ಬರು ಸ್ತ್ರೀಯರು, ಹತ್ತು ಪುರುಷರು.) ಸತ್ಯಾಗ್ರಹವನ್ನೂ ಆಚರಿಸಿದರು. ಇವರೆಲ್ಲರನ್ನೂ (ಇಬ್ಬರು ಸ್ತ್ರೀ ಸತ್ಯಾಗ್ರಹಿಗಳನ್ನು ಬಿಟ್ಟು) ಪೋಲೀಸ್ ರೆಗ್ಯುಲೇಷನ್ ೫೩ನೇ ಸೆ|| ಪ್ರಕಾರ ದಸ್ತಗಿರಿಮಾಡಿ ಕೋರ್ಟಿನ ಮುಂದೆ ಹಾಜರ್‌ಮಾಡಲು, ಇವರಿಗೆ ಮೇಜಿಸ್ಟ್ರೇಟರು ತಲಾ ರೂ. ೧೦೦ ಜುಲ್ಮಾನೆ ಇಲ್ಲದಿದ್ದಲ್ಲಿ 7ತಿಂಗಳು ಸಜೆ ವಿಧಿಸಿದರು. ಶ್ರೀ. ರಾಮರಾವ್ ಎನ್ನುವವರಿಗೆ ೧೫೦ರೂ. ಜುಲ್ಮಾನೆ, ತಪ್ಪಿದ್ದಲ್ಲಿ ೨ತಿಂಗಳು ೫ಳದಿನ ಸಜೆ ವಿಧಿಸಲಾಯಿತು, ಇವರುಗಳು ಜುಲ್ಮಾನೆಕೊಡದೆ ಜೈಲಿಗೆ ಹೊರಟರು.

ಇತ್ತಲಾಗಿ ಸ್ತ್ರೀ. ಸತ್ಯಾಗ್ರಹಿಗಳು ಆ ದಿನವಲ್ಲಾ ಕಟ್ಟಡದ ಮುಂದೆ ಕೂತು, ಸತ್ಯಾಗ್ರಹ ಆಚರಿಸಿದರು.

೧೫ನೇ ತಾ. ಬುಧವಾರ ದಿನ, ಎರಡನೆಯ ಡಿಕ್ಟೇಟರಾದ ಶ್ರೀ. ಡಿ. ಚಂದ್ರಶೇಖರಯ್ಯನವರು ಇನ್ನಿತರ ನಾಲ್ಕು ಸತ್ಯಾಗ್ರಹಿಗಳೊಡನೆ ಸತ್ಯಾಗ್ರಹ ಆಚರಿಸುತ್ತಿದ್ದಾಗ ಅವರುಗಳ ದಸ್ತಗಿರಿಯಾಗಿ, ಕೋರ್ಟಿನಲ್ಲಿ ವಿಚಾರಣೆ ನಡೆದು (ಇವರ ಮೇಲೆ ೫೩ನೇ ಸೆ|| ಪ್ರ||ರ ಪ್ರಕಾರ) ಇವರಿಗೆ ೧೦೦ರೂ. ಜುಲ್ಮಾನೆ ತಪ್ಪಿದಲ್ಲಿ 7ತಿಂಗಳು ಸಾದಾ ಸಜೆ ವಿಧಿಸಲಾಯಿತು. ಆ ದಿನ ಸತ್ಯಾಗ್ರಹದ ದಿನವಾದ್ದರಿಂದ ಸಾರ್ವಜನಿಕ ಸಭೆ ನಡೆದು, ಭಾಷಣಗಳಾದವು.

ತಾ. 16ರಲ್ಲಿ ಸತ್ಯಾಗ್ರಹ ಆಚರಿಸಿದ ಸತ್ಯಾಗ್ರಹಿಗಳಿಗೆ ಶಿಕ್ಷೆಯಾಯಿತು. ಇವರೆಲ್ಲರೂ ಜುಲ್ಮಾನೆ ಕೊಡಲಿಲ್ಲವಾಗಿ ಜೈಲಿಗೆ ತೆರಳಿದರು. ಇತ್ತಲಾಗಿ ಗುರುವಾರದ ದಿನ ಶ್ರೀ. ಯಂ. ಯನ್. ಜೋಯಿಸರನ್ನು ಸೆ|| ೧೦೭ ಪ್ರಕಾರ ದಸ್ತಗಿರಿಮಾಡಿ, ಮೆ|| ಮುಂದೆ ನಿಲ್ಲಿಸಲು, ಮೆ||ರು, ಒಂದು ವರ್ಷಕಾಲ ಒಳ್ಳೆಯ ನಡತೆಗಾಗಿಯೂ ಮತ್ತು ೫೧ರೂಗಳ ಒಂದು ಪರ್ಸನಲ್ ಬ್ಯಾರಟಿಯನ್ನೂ, ಮತ್ತು ೫೧ ರೂಗಳ ಇಬ್ಬರು ಶ್ಯೂರಿಟಿಗಳನ್ನು ಕೊಡಬೇಕೆಂದು ಶ್ರೀ ಜೋಯಿಸರನ್ನು ಕೇಳಲು, ಅವರು ಇದಕ್ಕೆ ಒಪ್ಪದೆ ಜೈಲಿಗೆ ತೆರಳಿದರು. ೨೩ನೇ ತಾ. ಮೊಕದ್ದಮೆಯಿದೆ.

ಶುಕ್ರವಾರ, ಶನಿವಾರ ಮತ್ತು ಭಾನುವಾರ ಈ ದಿನಗಳಲ್ಲಿ ಸತ್ಯಾಗ್ರಹ ನಡೆಸಿದ, ಸತ್ಯಾಗ್ರಹಿಗಳಿಗೆ ಶಿಕ್ಷೆಯಾಯಿತು, ಇವರೆಲ್ಲರೂ ಜೈಲಿಗೆ ತೆರಳಿದರು.

'ಹೆಮಿಲ್ಟನ್ ಬಿಲ್ಡಿಂಗ್' ಸತ್ಯಾಗ್ರಹವು ದಿನದಿನಕ್ಕೆ ಕುಂದುತ್ತಾ ಬರುತ್ತಿದೆ. ಇನ್ನೂ ಕೆಲವು ದಿನಗಳಲ್ಲಿ ಇದು ಸಂಪೂರ್ಣವಾಗಿ ನಿಂತುಹೋಗುವುದೆಂದು ಎಲ್ಲರಲ್ಲೂ ಒಂದು ವಿಧವಾದ ಅಭಿಪ್ರಾಯ ಹುಟ್ಟಿದೆ. ಒಂದುವೇಳೆ ಇದು ನಿಂತಲ್ಲಿ, ಈಗ ಜೈಲಿನಲ್ಲಿರುವ ಸತ್ಯಾಗ್ರಹಿಗಳು ಪುನಃ ಹಿಂದಕ್ಕೆ ಬಂದ ಮೇಲೆ, ಇದನ್ನು ಪುನಃ ನಡೆಸುವರೆಂದೂ ಹೇಳಲಾಗಿದೆ. ಇದು 'ಮದ್ರಾಸಿನಲ್ಲಿ ನಡೆದ ನೀಲ್ ಸ್ಟ್ಯಾಚು ಸತ್ಯಾಗ್ರಹದ ಮಾದರಿಯಲ್ಲಿ ನಡೆಯಬಹುದೆಂದು ಕಾಂಗ್ರೆಸಿನ ಮುಂದಾಳುಗಳೊಬ್ಬರು, ನಮ್ಮ ಪ್ರತಿನಿಧಿಗಳಿಗೆ ಅವರು ಮಾತನಾಡುತ್ತಿದ್ದಾಗ ತಿಳಿಸಿದರು.

ಅಂತೂ ಈ ಸತ್ಯಾಗ್ರಹವು ಪ್ರಾರಂಭವಾಗಿ, ಈ ಪತ್ರವನ್ನು ಬರೆಯುವ ದಿನಕ್ಕೆ ೩೪ ದಿನಗಳಾಯಿತು. ಇತ್ತೀಚೆಗಂತೂ, ಇದು ಸ್ವಲ್ಪ ಉಗ್ರರೂಪವನ್ನೇ ತಾಳಿದೆ, ಇನ್ನೂ ಇದು ಎಷ್ಟು ದಿನ ನಡೆಯುತ್ತೆ ನೋಡೋಣ.

ಕುಷ್ಠರೋಗ ನಿವಾರಣೆಯ ಆಸ್ಪತ್ರೆ ಮೇಲ್ಕಂಡ ಆಸ್ಪತ್ರೆಯೊಂದನ್ನು ಆಧುನಿಕ ರೀತಿಯಲ್ಲಿ ಬೆಂಗಳೂರು ಮಾಗಡಿ ರಸ್ತೆಯಲ್ಲಿ ಕಟ್ಟಲಾಗುತ್ತೆ ಇದರ ಸಮಿತಿಯ ಒಂದು ಸಭೆಯು ಸಂಸ್ಥಾನದ ಸೀನಿಯರ್ ಸರ್ಜನ್‌ರವರ ಅಧ್ಯಕ್ಷತೆಯಲ್ಲಿ ನಡೆದು ರೇಡಿಯೋ ಸಲಕರಣೆಗಳನ್ನು ಇಲ್ಲಿ ಇಡಲು ಅವಶ್ಯಕವೆಂದು ತೀರ್ಮಾನಿಸಿದರು.

ಕೋಮುವಾರು ಗಲಭೆ—ಮೈಸೂರು ಡಿ|| ಚಾಮರಾಜ ನಗರದ ಬಳಿಯಿರುವ ಹರದನಹಳ್ಳಿ ಎನ್ನುವ ಒಂದು ಹಳ್ಳಿಯಲ್ಲಿ ವಾಸವಾಗಿರುವ ಪಂಚಮರವರಿಗೂ, ಮುಸಲ್ಮಾನರಿಗೂ ಹಿಂದೆ ಇದ್ದ ವೈಷಮ್ಯದಿಂದ ಜಗಳ ನಡೆದು ಒಬ್ಬ ಮುಸಲ್ಮಾನನ ನುಸತ್ತನೆಂದೂ ಹದಿಮೂರು ಜನರಿಗೆ ಗಾಯವಾಯಿತೆಂದೂ ಆ ಹಿಂದುಗಳನ್ನೂ ಆ ಮುಸಲ್‌ಮಾನರನ್ನೂ ಪೋಲೀಸರು ದಸ್ತಗಿರಿಮಾಡಿರುತ್ತಾರೆಂದೂ ನಂಬಲರ್ಹವಾದ ಕಡೆಗಳಿಂದ ಸಮಾಚಾರವು ಇಲ್ಲಿಗೆ ಮುಟ್ಟಿದೆ. ಕಳೆದ ಮಂಗಳವಾರ ಈ ಜಗಳವು ನಡೆಯಿತೆಂದೂ ಹೇಳಲಾಗಿದೆ.

ಉಪಾಧ್ಯಕ್ಷ ಚುನಾವಣೆ—ರಾಜಧಾನಿಯ ಪೌರಸಭೆಗೆ ಉಪಾಧ್ಯಕ್ಷರನ್ನು ಚುನಾಯಿಸಲು ಒಂದು ವಿಶೇಷ ಸಭೆಯು, ಅದರ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮೊನ್ನೆ ಸಂಜೆ ನಡೆಯಿತು. ಈ ಉಪಾಧ್ಯಕ್ಷಸ್ಥಾನಕ್ಕೆ ಹಿಂದಿನ ಸಾಲಿನಲ್ಲಿ ಉಪಾಧ್ಯಕ್ಷರಾಗಿದ್ದ ಶ್ರೀ. ಕೆ. ಧನಕೋಟಿ ಶೆಟ್ಟರೂ ಇವರಿಗೆ ಪ್ರತಿಸ್ಪರ್ಧಿಗಳಾಗಿ ಮಿ|| ಉಮ್ಮರ್ ಷರೀಫರೂ ನಿಂತಿದ್ದರು. ಆದರೆ ಮಿ|| ಉಮ್ಮರ್ ಷರೀಫರು ತಮ್ಮ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡಿದ್ದರಿಂದ ಶ್ರೀ ಕೆ. ಧನಕೋಟಿ ಶೆಟ್ಟರೇ ಉಪಾಧ್ಯಕ್ಷರಾದರು.

ಪುನಃ ಕೆಲಸಕೊಟ್ಟಿತು— ಕಾಂಗ್ರೆಸ್ ಚಳುವಳಿಗಾರರೊಂದಿಗೆ ಸೇರಿಕೊಂಡು ಕಳಕಳಕು ಮಾಡುವ ಚಳುವಳಿಯಲ್ಲಿ ಭಾಗವಹಿಸಿದ್ದರೆಂದು ಕೆಲಸದಿಂದ ವಜಾಮಾಡಿದ್ದ ಚನ್ನಪಟ್ಟಣದ ನಾಲ್ಕು ಪಟೇಲರಿಗೆ ಪುನಃ ಮೈಸೂರು ಸರಕಾರದವರು ಕೆಲಸ ಕೊಟ್ಟಿದ್ದಾರೆ.

THE

Udipi Electric Supply Corporation Ltd, Udipi

NOTICE

Public notice is hereby given that from 15–3–39 onwards the town supply of current will be throughout 24 hours. The public will avail of the opportunity and make best use of the same at any time during the day.

MANAGER.

ಬೊಂಬಾಯಿ

(ಸ್ವಂತ ಬಾತ್ಮೀದಾರರಿಂದ)

ತಾ. 17–3–39.

ಸಾಧಾರಣ ಎರಡು ಮಾಸಗಳ ಮೊದಲಿನ್ನಿಂದು ಸಂಪು ಹೂಡುತ್ತಿದ್ದ ಹಡಗು ಕೆಲಸಗಾರರೊಡನೆ 'ಸಿಂಕರ್ ಲೈನ್'ನವರು ಸಂಧಿ ಮಾಡಿಕೊಂಡು, ಈ ಕೆಲಸಗಾರರನ್ನು ಕ್ರಮದಲ್ಲಿ ನೇಮಿಸುವೆವೆಂದು ಅಭಿಪ್ರಾಯ ಕೊಟ್ಟಿರುವರು. ಪಿ. & ಓ. ಮತ್ತು ಬಿ. ಐ. ಲೈನಿನವರು ಸಂಪಿನ ಅಂತವ ನೋಡುತ್ತಿದ್ದಾರೂ ಶೀಘ್ರದಲ್ಲೇ ರಾಜಿಮಾತುಕತೆಗೆ ಬರಬಹುದೆಂಬ ಹಾರೈಕೆ.

ಕಟಾವ್ ಮುಕಾಂಜೀ ಎಂಬ ಪ್ರಸಿದ್ಧ ಮಿಲ್ಲೊಂದರಲ್ಲಿ 5000 ಕಾಮಗಾರರು ಮಂಗಳವಾರದಿಂದ ಸಂಪು ನಡೆಸುತ್ತಿರುವರು. ಕಾರಣ ಮಿಲ್ಲಧಿಕಾರಿಗಳು ೩೦೦ ಮಂದಿ ಕೆಲಸಗಾರರಿಗೆ ನೋಟೀಸು ಕೊಟ್ಟಿದ್ದಕ್ಕಾಗಿ! "ಕೆಲಸವಿಲ್ಲ ಮನೆಗೆ ಹೋಗಿ" ಇನ್ನೇನು? ಪರಕೀಯ ಗತಿಯೇ?

ಮುಂಬಯಿ ಸರಕಾರವು ಫೇಕ್ಟರಿ ಆಕ್ಟನ್ನು ತಿದ್ದಿ ಮೇಲೂ ಹೊರಿಸಲಿರುವದೆಂಬ ಭಯದಿಂದ ಮುಂಬಯಿ ಟ್ರೇಡರ್ಸ್ ಅಸೋಸಿಯೇಶನಿನವರು ಈ ಆಕ್ಟಿನಿಂದ ತಮಗೇನೂ ಪ್ರಯೋಜನವೆಂದೂ ತಮ್ಮ ಅಸಮ್ಮತಿಯನ್ನು ಸೂಚಿಸಲೋಸುಗ ಮುಖ್ಯಮಂತ್ರಿಗಳೆದುರು ತಮ್ಮ ಡೆಪ್ಯುಟೇಶನನ್ನು ಕೊಂಡುಹೋಗುವದೆಂದು ನಿಶ್ಚೈಸಿರುವರು. ಪಾರ್ಲಿಮೆಂಟರಿ ಸೆಕ್ರೆಟರಿಯವರಾದ ಗುಲ್ಜಾರಿಲಾಲ್ ನಂದರವರು ಇವರನ್ನು ಸಾದರದಿಂದ ಸ್ವೀಕರಿಸಿ ಕಷ್ಟಪರಿಹರಿಸಲು ಪ್ರಯತ್ನಿಸುವೆನೆಂದು ಭಾಷೆಯೊತ್ತಿರುವರು. ಇದರ ಪರಿಣಾಮವನ್ನು ನೋಡಬೇಕಾಗಿದೆ.

ಮುಂಬಯಿ ಟ್ರೇಡಿಂಗ್ ಕಂಪನಿ ಯೂನಿಯನಿನವರು ವರ್ಷದ 365 ದಿವಸಗಳಲ್ಲಿ ನಮಗೆ ಒಂದು ದಿವಸದ ರಜೆಯೂ ಇಲ್ಲದಿರುವುದರಿಂದ ನಾವು ರವಿವಾರ ನಮ್ಮ ಅಂಗಡಿಗಳನ್ನು ಮುಚ್ಚುಡುವದೆಂದು ನಿಶ್ಚಯಿಸಿರುವೆವು, ಆದರೆ ಕೆಲವರು ತಮ್ಮ ಹೇಳಿಕೆಯನ್ನು ಗಣ್ಯಮಾಡದೆ, ಆದಿತ್ಯವಾರ ದಿವಸ ತಮ್ಮ ಅಂಗಡಿಗಳನ್ನು ತೆರೆದಲ್ಲಿ, ನಾಗರಿಕರು ಈ ಅಂಗಡಿಗಳಲ್ಲಿ ತಮ್ಮ ಬಟ್ಟೆಬರೆಗಳನ್ನು ಕೊಡದೆ ಅವುಗಳನ್ನು ತೊರೆಯಬೇಕು ಇಲ್ಲದಿದ್ದರೆ ಇಂಥ ಅಂಗಡಿಗಳೆದುರು ನಾವು ಸಂಪು ನಡೆಸಬೇಕಾಗುವುದು. ಎಂದು ಜನತೆಯೊಡನೆ ಬೇಡಿಕೊಂಡಿರುವರು, ಮಾನವನಿಗೆ ವಾರದಲ್ಲೊಂದು ದಿನ ಆರಾಮು ಅಗತ್ಯವಲ್ಲವೇ?

ಮುಂಬಯಿ ಸರಕಾರವು ಬರುವ ಜೂನ್ ತಿಂಗಳಿಂದ ಕೆಲವು ಹೈಸ್ಕೂಲುಗಳನ್ನು ಜೂನಿಯರ್ ವೊಕೇಶನಲ್ ಶಾಲೆಗಳನ್ನಾಗಿ ಮಾಡಿ ವಿದ್ಯಾರ್ಥಿಗಳಿಗೆ ಬರೇ ಸಾಧಾರಣ ವಿದ್ಯಾಭ್ಯಾಸವನ್ನು ಮಾತ್ರವಲ್ಲದೆ ಈ ವಿದ್ಯಾರ್ಥಿ ಜೀವನದ ನಂತರ ಯಾವೊಂದು ಉದ್ಯೋಗಕ್ಕೆ ಸೇರುವಂತಹ ಅನುಭವವನ್ನೂ ಕೊಡಬೇಕೆಂದು ನಿಶ್ಚೈಸಿ ಸೆಕೆಂಡರಿ ಎಜ್ಯುಕೇಶನ್ ಬೋರ್ಡ್ ಎಂಬ ಬೋರ್ಡೊಂದನ್ನು ಸ್ಥಾಪಿಸಿ, ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀ. ಪಿ. ಡಿ. ಘಾಟೆಯವರನ್ನು ಈ ಬೋರ್ಡಿನ ಕಾರ್ಯದರ್ಶಿಯವರನ್ನಾಗಿ ನೇಮಿಸಿರುವರು.

ನವಯುಗ ಸ್ಪರ್ಧೆ ೧.

ರೂಪಾಯಿ ೨೫ ಬಹುಮಾನ.

I	೨	3	4
			ತ
		ರ	
	ದೇ		
ಗ		ಷ್ಟ್ರ	ರಿ

I ಇನಾಂ ರೂ. 10/- II ರೂ. 5ರ ಇನಾಂ ೨. III ರೂ. 1ರ ಇನಾಂ ೫. ಒಟ್ಟು ರೂ. 25/- ರ 8 ಇನಾಮುಗಳು.

ಸೂಚನೆಗಳು:—

ಎಡದಿಂದ ಬಲಕ್ಕೆ:—(I) ಶ್ರೀಕೃಷ್ಣನು ಇದನ್ನು ಕದ್ದು ಗದ್ದು ತಿನ್ನುತ್ತಿದ್ದ.

ಮೇಲಿಂದ ಕೆಳಕ್ಕೆ.—(I) ಇದು ಕರ್ನಾಟಕದಲ್ಲೆಲ್ಲಾ ಪ್ರಚಾರದಲ್ಲಿರುವ ವಾರಪತ್ರಿಕೆಯಾಗಿದೆ. (೨) ಕಾಂಗ್ರೆಸಿಂದ ಬಂಧಿಸಲ್ಪಟ್ಟು ಹೆಂಡತಿಯೊಡನೆ ಜೈಲಲ್ಲಿದ್ದನು. ( ) ಶಾಪದಯಂತೆ ಕಷ್ಟದುಪ ಹೆಂಗಸರಿಗೆ ಹೀಗನ್ನುತ್ತಾರೆ. (4) ಇದು ಬೇಕಾದರೆ ಮಾರ್ಕೆಟಿಗೆ ಹೋಗಬೇಕು.

ನಿಯಮಗಳು:— (೧) ಉತ್ತರದೊಂದಿಗೆ 0–2–0 ಟಪ್ಪಾಲು ಚೀಟನ್ನು ಕಳಿಸಬೇಕು, (೨) 0–8–0ಗೆ 5 ಉತ್ತರದಂತೆ ಕಳಿಸಬಹುದು. (೩) ಇನಾಮುಗಳನ್ನು ಸರಿಯಾಗಿ ಬಿಡಿಸಿದವರೊಳಗೆ ನೋಡ್ಡು ಹಾಕಿ ಕೊಡಲಾಗುವುದು. (೪) ಇನಾಮುಗಳನ್ನು ಪುಸ್ತಕರೂಪದಲ್ಲಿ ಕೊಡಲಾಗುವುದು.

ಉತ್ತರವನ್ನು ತಾ. 15–4–39ರ ಒಳಗೆ ಸ್ವೀಕರಿಸಿ ತಾ. 20–4–39ಕ್ಕೆ ಪ್ರಕಟಿಸಲಾಗುವುದು.

ನವಯುಗ ಸ್ಪರ್ಧೆ,
ನವಯುಗ ಆಫೀಸು, ಉಡುಪಿ,

THE

PREMIER BANK OF INDIA, LIMITED.

Head Office: MADRAS.
Branches:
MADURA & NELLORE.
CHAIRMAN
Dr. U. L. Narayana Rao.
'Bhujanga Nivas' Madras.
FIXED DEPOSITS
are now received at the following Rates:

For 6 Months at 3½% P. A.
12 Months at 4½% P. A.
24 Months at 5% P. A.
(Interest Paid Half-yearly.)

S. V. Rau D. Com.,
Managing Director

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು,

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ ಬೋರ್ಡು, ಪೇಪರುಗಳ ಟೇಪು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿ ಕೊಡಲಾಗುವುದು.

CROWN RUBBER STAMP CO,
Balmat Road, MANGALORE.
Included by the Mysore Govt. Stores, Purchase Committee in the list of approved Firms

ದುರೀಕರಿಸಿರಿ—ಪ್ರಸ್ಟ್ರೈಟಕ್ರ—ನೆರತಕೂದಲು – ವೃದ್ಧಾಪ್ಯ ತರುಣರ.
ಎರಡು ತಿಂಗಳವರೆಗೂ, ವೃದ್ಧರು ನಾಲ್ಕು ತಿಂಗಳವರೆಗೂ ಬೂಟಿತೈಲವನ್ನು ಉಪಯೋಗಿಸಿದಲ್ಲಿ ದೃಷ್ಟಿ ವೃದ್ಧಿಯಾಗಿ ನೆರೆತ ಕೂದಲು ಕಪ್ಪಾಗಿ ಮೇಧ ಶಕ್ತಿ ಹೆಚ್ಚಿ ಆರೋಗ್ಯದ ಫಲ ಕಾಣದ ಪಕ್ಷದಲ್ಲಿ ಇಮ್ಮಡಿ ಕ್ರಯ ವಾಪಾಸು ಕೊಡುವ ಶರತ್ತಿನಿಂದ, ಟಾನಿಕಿನ ಕ್ರಯವು ಈ ತರವಾಗಿದೆ, ಒಂದು ತಿಂಗಳಿನ ಟಾನಿಕಿಗೆ ರೂ 3-8-0; 2 ತಿಂಗಳಿನದಕ್ಕೆ ರೂ. 6-0-0; ನಾಲ್ಕು ತಿಂಗಳಿನದಕ್ಕೆ ರೂ. 10 ಪತ್ರವ್ಯವಹಾರ ಇಂಗ್ಲಿಷಿನಲ್ಲೇ.

Jari Booti Dawakhana,
P. O. Behar Nursery (Darbhanga)

ಈ ವಾರದ ಫಲಿತಾಂಶವೇನು?

(ತಾ. 23—3—39ರಿಂದ 30—3—39ರ ವರೆಗಿನ ರಾಶಿಫಲ)

[ಜ್ಯೋತಿಶಾಸ್ತ್ರ ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ. ಸಂ. ನ.]

ಮೇಷರಾಶಿ—

ಶಿದ್ಯಸ್ಥಿತಿಯಲ್ಲಿ ಗುರು ಶುಕ್ರರು ನಿಮಗೆ ಅನುಕೂಲರಾಗಿರುವದರಿಂದ ಸ್ಥಾನದಲ್ಲಿರುವುದರಿಂದ ಸ್ವಸ್ವಕರ್ಮಧರ್ಮಗಳಲ್ಲಿ ನಿರತರಾದ ಆಸ್ತಿಕ ಜನರಿಗೂ ವ್ಯಾಪಾರ ವಹಿವಾಟುಗಳನ್ನು ನಡೆಸತಕ್ಕವರಿಗೂ ಸಂಪದ್ಭಾಗವು ಉತ್ತಮರೀತಿಯಲ್ಲಿರುವುದು. ಅನೇಕ ಸತ್ಪುತ್ರರ ಸಮಾಗಮವಾಗುವುದು. ಆದರೂ ವಿರೋಧಿಗಳು ಪ್ರಬಲರಾಗಿರುವುದರಿಂದ ಪದೇ ಪದೇ ವಿಘ್ನ ಸಮೂಹಗಳನ್ನೇ ನಿಮ್ಮ ಮುಂದೆ ತಂದೊಡ್ಡುತ್ತಿರುವರು. ಇದರಿಂದ ಸೇವಕ ವೃತ್ತಿಯಲ್ಲಿ ಇರತಕ್ಕವರಿಗೂ ಲಾಯರುಗಳಿಗೂ ನೌಕರಿಯನ್ನು ಮಾಡತಕ್ಕವರಿಗೂ ಹಿಡಿದಕಾರ್ಯದಲ್ಲಿ ಹೆಚ್ಚಿನಧನವ್ಯಯವಾಗುವದಲ್ಲದೆ ಕೆಲವಲ್ಲಿ ಅಪಜಯವೂ ಉಂಟಾಗುವುದು. ತರುಣ ತರುಣಿಯರಿಗೂ ದೇಹಾಲಸ್ಯ ಚಿಂತೆಗಳು ಅಧಿಕವಾಗಿದ್ದು ಆತ್ಮಶಕ್ತಿಯು ಕಡಮೆಯಾಗುವುದರಿಂದ ಸ್ತೋತ್ರಾದಿಗಳನ್ನು ನಿರ್ವಹಿಸಲು ಪರರನ್ನು ಆಶ್ರಯಿಸಬೇಕಾಗುವುದು. ಆದರೂ ನಿಮ್ಮ ಭಾಗಕ್ಕೆ ತಾ. 23, 24, 28, 29 ಈ ದಿನಗಳು ಸಾಕಷ್ಟು ತೃಪ್ತಿಕರಗಳಾಗಿಯೇ ಇರುತ್ತವೆ.

ವೃಷಭರಾಶಿ—

ನಿಮಗ ಈ ವಾರದಲ್ಲಿ ಇಷ್ಟಾನಿಷ್ಟಗಳು ಸಮಾನಗಳಾಗಿ ಪರಿಣಮಿಸುವವು ಕೆಲವು ಕಾರ್ಯಗಳು ನಿಮಗನುಕೂಲವಾಗುವಂತೆ ಕೊನೆಗೊಂಡರೂ ಮತ್ತೆ ಕೆಲವು ವಿಪರೀತಗಳಾಗಿ ಪರಿಣಮಿಸಬಹುದು. ಆದರೆ ಅನಿಷ್ಟಶಂಕೆಯಿಂದ ಕಾರ್ಯಪ್ರವೃತ್ತರಾಗದೆ ಕಾಲಹರಣಮಾಡತಕ್ಕ ಸಮಯವಿದಲ್ಲ. ವೈದ್ಯವೃತ್ತಿಯಿಂದ ಜೀವಿಸತಕ್ಕವರಿಗೂ ಹೆಚ್ಚಾಗಿ ಕೋರ್ಟುವ್ಯವಹಾರಗಳಲ್ಲಿರತಕ್ಕವರಿಗೂ ವಿದ್ಯಾರ್ಥಿಗಳಿಗೂ, ವಿದ್ಯೆಯಿಂದಲೇ ಜೀವನ ಸಂಗ್ರಾಮವನ್ನು ನಿರ್ವಹಿಸತಕ್ಕವರಿಗೂ ತಮ್ಮಕಾರ್ಯಗಳಲ್ಲಿ ಹೆಚ್ಚಿನ ಅನುಕೂಲ ಲಾಭಗಳೇ ಸಿಗುವವು ವರ್ತಕ ಜನರಿಗೆ ವಿಶೇಷ ಕಷ್ಟನಷ್ಟಗಳೊದಗುವವು, ನಾಲಗೆಯನ್ನು ಅದಷ್ಟು ಬಿಗಿಹಿಡಿದರೂ ಕೂಡ ಗಿರಾಕಿಗಳಲ್ಲಿ ಕಲಹವಾಗುವುದು, ಕಜ್ಜಿ, ಗಾಯ ರೋಗ ಮೊದಲಾದವುಗಳಿಂದ ಶರೀರ ದೌರ್ಬಲ್ಯವು ಹೆಚ್ಚುವುದು ಮಾತ್ರವಲ್ಲದೆ ಸಂಪಾದಿಸಿದ ಧನವೆಲ್ಲವೂ ಔಷಧಕ್ಕಾಗಿಯೇ ನಾಶವಾಗುವವು. ವಿರೋಧಿಗಳು ಎಷ್ಟೊಂದು ಪೀಡಿಸಿದರೂ ತಾ. 25, 26, 27 ಮತ್ತು 30 ಈ ದಿನಗಳಲ್ಲಿ ನಿಮ್ಮ ಇಷ್ಟಾರ್ಥಗಳು ಕೈಗೂಡುವುವು.

ಮಿಥುನರಾಶಿ—

ಮನಸ್ಸಿನ ನಿಸರ್ಗಜನ್ಯವಾದ ಚಂಚಲತೆಯನ್ನು ತಡೆದು ಅದನ್ನು ಸ್ಥಿರಗೊಳಿಸಲು ಜಿತೇಂದ್ರಿಯರೇ ಸಮರ್ಥರು. ಆದರೆ ನಿಮಗೆ ಸದ್ಯದ ಪರಿಸ್ಥಿತಿಯಲ್ಲಿ ಮನಸ್ಸುಬಿಗಿಹಿಡಿಯುವುದು ಕಷ್ಟಸಾಧ್ಯವಾಗಿರುವುದು ಆದಕಾರಣ ಕಟ್ಟಕಾರ್ಯವನ್ನು ಮಾಡಿ ಜನರಿಂದ ಕೇಳಬಾರದ ಮಾತುಗಳನ್ನು ಕೇಳಬೇಕಾಗಿಬರುವುದು. ಗೃಹದಲ್ಲಿ ಸಣ್ಣಪುಟ್ಟ ಕಾರಣಗಳಿಂದಾಗಿ ಪರಸ್ಪರ ಮನಸ್ತಾಪ ಉಂಟಾಗುವುದು, ಆದರೂ ನೀವು ನಿಮ್ಮ ನೈಪುಣ್ಯದಿಂದಾಗಿ ಅವನ್ನು ನಿವಾರಿಸುವಿರಿ. ರಾಜಕೀಯ ಭಾಗದಲ್ಲಿನನಿಮ್ಮ ಇಷ್ಟಾರ್ಥಗಳು ನೆರವೇರುವವು, ಶತ್ರುಗಳನ್ನು ಉಪಾಯದಿಂದ ವಶಮಾಡಿಕೊಳ್ಳುವಿರಿ. ಸಂಸಾರಕ್ಕೆ ಬೇಕಾದ ವಸ್ತುಗಳನ್ನು ಸಂಗ್ರಹಿಸುವಿರಿ. ಉದ್ಯಮದಲ್ಲಿ ತೃಪ್ತಿಕರವಾಗುವಂತೆ ಧನಲಾಭವಾಗುವುದು, ತಾ. 25, 26, 27, 30 ಈ ದಿನಗಳು ಸ್ವಲ್ಪ ಕೆಟ್ಟವುವಾದದರಿಂದ ಈ ದಿನಗಳಲ್ಲಿ ಧನ ಮಾನಗಳಿಗೆ ಹಾನಿಯೂ ಕಾರ್ಯಕ್ಕೆ ವಿಘ್ನಗಳೂ ಒದಗುವವು.

ಕರ್ಕಾಟಕರಾಶಿ—

ಉದ್ಯೋಗದಲ್ಲಿ ಸಮೋತ್ಸಾಹವುಳ್ಳ ನಿಮಗೆ ವಿರೋಧಿಗಳು ಹಲವಾರು ಬಗೆಯಿಂದ ಪೀಡಿಸುವರು, ಆದರೂ ನೀವು ಸ್ನೇಹಜನರ ಸಹಾಯದಿಂದ ಕೆಲವು ಭಾಗಗಳಲ್ಲಿ ವಿಜಯಿಗಳಾಗುವಿರಿ ಆದರೂ ನಿಮ್ಮ ಆರೋಗ್ಯವು ಸಂಪೂರ್ಣ ಕೆಟ್ಟಿರುವುದರಿಂದ ಸದ್ಯದಲ್ಲಿಯೇ ನಿಮ್ಮ ಉತ್ಸಾಹ ಪೂರಿತವಾದ ಬಯಕೆಯು ಆಕಾಶ ಕುಸುಮದಂತೆಯೇ ಸರಿ. ಹಣ ಸಂಬಂಧವಾಗಿ ಕೋರ್ಟುವ್ಯಾಜ್ಯಗಳು ಅಂಕುರಿಸಲಿವೆ, ಅಧರ್ಮದಲ್ಲೇ ಹೆಚ್ಚಾಗಿ ಪ್ರವೃತ್ತಿಸುವ ನಿಮಗೆ ಕಾಲಾಂತರದಲ್ಲಿ ನಿಮ್ಮವರೇ ವಿರೋಧಿಗಳಾಗುವರು, ಆಕಸ್ಮಾತ್ ಪ್ರವಾಸಗಳು ಸಂಭವಿಸಿ ವ್ಯರ್ಥ ಧನವ್ಯಯವಾಗುವುದಲ್ಲದೆ ಕಷ್ಟಕ್ಕೀಡಾಗುವಿರಿ, ಸದಾ ಮನಸ್ಸಿನಲ್ಲಿ ಒಂದಲ್ಲೊಂದು ಚಿಂತೆಯು ತಪ್ಪದೆ ಇದ್ದುದರಿಂದ ನಿಮ್ಮನ್ನು ದಹಿಸುತ್ತಲೇ ಇರುವುದು. ತಾ. 23ರಿಂದ 27 ವರೆಗೆ ನಿಮ್ಮ ಅಪೇಕ್ಷೆಯು ಹೆಚ್ಚಿನಂಶ ವ್ಯರ್ಥವಾಗಲಾರದು, ಮಿತ್ರರ ಸಮಾಗಮದಿಂದ ತದ್ದಿನಗಳನ್ನು ಹೆಚ್ಚಿನ ಸಂತೋಷದಿಂದಲೇ ಕಳೆಯುವಿರಿ,

ಸಿಂಹರಾಶಿ—

ಒಂದಲ್ಲೊಂದು ಕಾಹಿಲೆಯು ನಿಮ್ಮನ್ನು ಸದಾ ಪೀಡಿಸುತ್ತಲೇ ಇರುವುದು ಈ ವಾರದಲ್ಲಿ, ಗೃಹದಲ್ಲಿಯೂ ಸತ್ಪೀಪುತ್ರರ ಆರೋಗ್ಯವು ಕೆಡುವುದು, ನಿಮ್ಮ ಸಂಪಾದನೆಯ ಹೆಚ್ಚಿನ ಭಾಗವು ಈ ಸಲುವಾಗಿಯೇ ಖರ್ಚಾಗುವುದು. ಕ್ರಯ ವಿಕ್ರಯದಲ್ಲಿ ನಷ್ಟವು ಸಂಭವಿಸುವುದು, ವ್ಯವಹಾರ ಭಾಗದಲ್ಲಿ ಎಷ್ಟೇ ಜಾಗ್ರತೆ ವಹಿಸಿ ಕೆಲಸಮಾಡಿದರೂ ಸ್ತ್ರೀಯರೊಡನೆ ಕಲಹವಾಗುವುದು, ದಿನ ಬೆಳಗ್ಗೂ ನಿಮಗೂ ನಿಮ್ಮ ಅರ್ಧಾಂಗಿಗೂ ಜಗಳವಿದ್ದೇ ಇರುವುದು, ಆದರೂ ನೀವು ವಿವೇಕಿಗಳಿರುವುದರಿಂದ ಈ ಭಾಗದಲ್ಲಿ ಸುಧಾರಿಸಿಕೊಂಡೇ ಹೋಗುವಿರಿ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಈ ವಾರವು ಎಲ್ಲಾ ವಿಷಯದಲ್ಲೂ ಚೆನ್ನಾಗಿರುವುದು, ವಕೀಲರಿಗೂ ಬರವಣಿಗೆಯಿಂದ ಜೀವಿಸತಕ್ಕವರಿಗೂ ಹೆಚ್ಚಿನ ಹಾನಿಗಳಾಗಲಾರವು. ತಾ. 23-24 ಮತ್ತು 30 ಈ ದಿನಗಳಲ್ಲಿ ರಾಜಕೀಯ ಕಾರ್ಯಗಳಲ್ಲಿ ಭಯವೂ ಧನವ್ಯಯವೂ ಹುಟ್ಟುವುದು,

ಕನ್ಯಾರಾಶಿ—

"ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ" ಎಂಬ ಲೋಕೋಕ್ತಿಯಂತೆ ಮಾಡಿದ ಕರ್ಮವು ಒಳ್ಳೆಯದಿರಲಿ ಯಾ ಕೆಟ್ಟದಿರಲಿ ಅದರ ಫಲವನ್ನು ಜನ್ಮನೆತ್ತಿದಾತನು ಅನುಭವಿಸಿಯೇ ತೀರಿಸತಕ್ಕದ್ದು. ಪ್ರಕೃತ ನಿಮ್ಮ ದುಷ್ಕರ್ಮದ ಫಲಾನುಭವದ ಕಾಲ ಬಂದಿರುವುದು. ಆದಕಾರಣ ಈ ಕಾಲಕ್ಕನುಗುಣವಾಗಿ ದುರ್ಜನರ ಸಹವಾಸವೂ ನಿಮಗೆ ಗಂಟುಬಿದ್ದಿರುವುದು. ಇದರಿಂದ ನಿಮಗೆ ಮರ್ಯಾದೆಯನ್ನು ರಕ್ಷಿಸಿಕೊಳ್ಳುವುದು ಕಷ್ಟಕ್ಕೆ ಬರುವುದು. ವ್ಯರ್ಥ ಪ್ರಯಾಣವು ಸಂಭವಿಸಿ ಹಣವನ್ನು ಖರ್ಚುಮಾಡಿಸುವುದು. ದೇಹಾರೋಗ್ಯವೂ ಕೂಡ ಕೆಡುವುದು, ಸೇವಕರಿಗೂ ವ್ಯಾಪಾರಿಗಳಿಗೂ ವಿದ್ಯಾಭಿಲಾಷಿಗಳಿಗೂ ಕೂಡ ವಿಶೇಷ ಹಾನಿಯಿರುವುದು. ಪ್ರಬಲರಾದ ಶತ್ರುಗಳ ಉಪಟಳದಿಂದ ಅನೇಕ ಕಾರ್ಯಗಳಲ್ಲಿ ಪರಾಭವವುಂಟಾಗುವುದು. ಹುಚ್ಚೀಕೆ ಸ್ತ್ರೀ ಪುತ್ರರಿಂದ ವಿಯುಕ್ತರಾಗಿ ಬಹಳ ದೈನ್ಯಾವಸ್ಥೆಯನ್ನು ಹೊಂದುವಿರಿ. ತಾ. 23ರಿಂದ 27ರ ವರೆಗಿನ ದಿನಗಳು ವಿಶೇಷ ಅನಿಷ್ಟಕಾರಿಗಳಾಗಿರುವುದರಿಂದ ಯಾವ ಕಾರ್ಯಕ್ಕೂ ಮುಂದಾಗಿ ಹೋಗದೆ ಆರೋಗ್ಯದಲ್ಲಿ ಹೆಚ್ಚಿನ ಜಾಗ್ರತೆಯಿಂದಿರಿ,

ತುಲಾರಾಶಿ—

ನೀರಿನಿಂದ ಪೂರ್ಣವಾಗಿರತಕ್ಕ ಸಮುದ್ರಕ್ಕೆ ಇತರ ಹೊಳೆಗಳೂ ಕೂಡ ನೀರನ್ನು ಕೊಂಡೊಯ್ದು ಸೇರಿಸುವಂತೆ ಭಾಗ್ಯವಂತನಾದ ನರನಿಗೆ ಸುತ್ತುಮುತ್ತಲಿಂದಲೂ ಧನವು ಬಂದು ಸೇರುವುದು. ಕಾರ್ಯಗಳೂ ಅನುಕೂಲವಾಗಿಯೇ ಕೊನೆಗೊಳ್ಳುವವು. ಎದ್ದ ವೈರಿಯೂ ಕೂಡ ಮಿತ್ರನಾಗುವನು. ಇದೇ ಪರಿಸ್ಥಿತಿಯು ನಿಮಗೂ ಕೂಡ ಬಂದಿರುವುದು. ಈ ವಾರದಲ್ಲಿ ಆರೋಗ್ಯಭಾಗ್ಯದಿಂದ ಕೂಡಿದ ನಿಮಗೆ ಪುತ್ರರ ಮೂಲಕವಾಗಿಯೂ ಬೇರೆರಿಂದಲೂ ಧನ ಸಿಗಲಿದೆ. ಯೋಗ್ಯವಾದ ಸ್ಥಾನವನ್ನು ಹೊಂದಿದ ನೀವು ನಿಶ್ಚಿಂತರಾಗಿ ದಿನಗಳೆಯುವಿರಿ, ವಿದ್ಯಾರ್ಥಿಗಳು ಉನ್ನತ ಸ್ಥಾನವನ್ನು ಹೊಂದುವರು. ಡಾಕ್ಟರುಗಳೂ ವಕೀಲರೂ ತಮ್ಮತಮ್ಮ ಉದ್ಯೋಗದಲ್ಲಿ ಕೀರ್ತಿಯನ್ನೂ ಧನವನ್ನೂ ಸಂಪಾದಿಸುವರು, ವ್ಯಾಪಾರಿಗಳಿಗೆ ತುಂಬಾ ಮುನಾಫೆ ಸಿಗುವದು, ಕಷ್ಟಜೀವಿಗಳು ನಿಶ್ಚಿಂತೆಯಿಂದ ದಿನಗಳನ್ನು ಕಳೆಯುವರು. ತಾ. 23-24 ಮತ್ತು 30 ಈ ದಿನಗಳು ಸರ್ವತೋಮುಖದಿಂದಲೂ ಚೆನ್ನಾಗಿರುವವು,

ವೃಶ್ಚಿಕರಾಶಿ—

"ರಾಮೇಶ್ವರಕ್ಕೆ ಹೋದರೂ ಶನೀಶ್ವರನು ಬಿಡನು"ಎಂಬಲ್ಲಿಯ ವರೆಗೆ ಬಂದಿದೆ ನಿಮ್ಮ ಅವಸ್ಥೆ ಈ ವಾರದಲ್ಲಿ, ಗೃಹ ಕಲಹಗಳು ದಿನೇದಿನೇ ವೃದ್ಧಿಯಾಗುತ್ತಿರುವವು, ಶತ್ರುಗಳು ಹೆಚ್ಚೆಚ್ಚಾಗಿ ಪೀಡಿಸುತ್ತಿರುವರು, ಇದಿರುಗಡೆಯಿಂದ ನಿಮಗೆ ಬೇಕಾದಂತೆ ಮಾತನಾಡುತ್ತಿದ್ದು ಹಿಂಗಡೆಯಿಂದ ವಿಪರೀತವಾಗಿ ವರ್ತಿಸತಕ್ಕ ನಿಮ್ಮ ಬಂಧುಗಳಿಂದ ಹೆಚ್ಚಿನ ಚಿಂತೆಗೆ ಗುರಿಯಾಗುವಿರಿ, ಸದಾ ಚಿಂತಾಗ್ರಸ್ತರಾದ ನಿಮಗೆ ನಿದ್ರಾಹಾರಗಳು ಸರಿಯಾಗಿರದೆ ತತ್ಫಲರೂಪವಾಗಿ ದೇಹದಲ್ಲಿ ಉಷ್ಣ ಪಿತ್ತಗಳು ಅಧಿಕವಾಗಿ ರೋಗಪೀಡಿತರಾಗುವಿರಿ, ರಾಜಕೀಯ ಕ್ಷೇತ್ರದಲ್ಲಿ ಅನಿಷ್ಟಗಳು ಸಂಭವಿಸಲಿವೆ, ಹೆಚ್ಚಾಗಿ ಹಣವ್ಯಯದ ಮಾರ್ಗಗಳೇ ಅಧಿಕವಾಗಿದ್ದು ಖರ್ಚಿಗೆ ಕೈಯಲ್ಲಿ ಕಾಸಿಲ್ಲದೆ ಬಹಳ ಕಷ್ಟಕ್ಕೊಳಗಾಗುವಿರಿ, ವಾರಾಂತ್ಯದ ಮೂರು ದಿನಗಳು ಪ್ರಮೋದ್ವೇಗಾದಿ ಅನಿಷ್ಟಕಾರಿಗಳಾಗಿರುವವು.

ಧನೂರಾಶಿ—

ಸದ್ಯದ ಗ್ರಹಸ್ಥಿತಿಯಲ್ಲಿ ನಿಮಗೀವಾರವು ಬಹ್ವಂಶ ಹಾನಿಕರವಾಗಿರುವುದು, ಗ್ರಹಕೃತ್ಯದ ಸಲುವಾಗಿ ನಿಮ್ಮ ಹೆಚ್ಚಿನ ಹಣವ್ಯಯವಾಗುವುದು, ವಿಶಕ್ತಿಯರ ಬಾಹುಲ್ಯದಿಂದ ಇಷ್ಟಾರ್ಥಗಳಿಗೆ ಹೆಚ್ಚಾಗಿ ಹಾನಿಯಾಗುವುದರಿಂದ ಮನಸ್ಸಿನಲ್ಲಿ ಚಿಂತೆಯು ಹೆಚ್ಚುವುದು. ಚಿತ್ತಚಾಂಚಲ್ಯದಿಂದಲೂ ಯಾನಾದಿಗಳಲ್ಲಿ ಸಂಭವಿಸತಕ್ಕ ಅಪಘಾತಗಳಿಂದಲೂ ನಿಮ್ಮ ಸುಖಕ್ಕೆ ನಾಶವುಂಟಾಗುವುದು. ಅನಾರೋಗ್ಯವೂ ನ್ಯಾಯಸ್ಥಾನದ ಕಾರ್ಯಗಳಲ್ಲಿ ಉಂಟಾಗತಕ್ಕ ಪರಾಭವದಿಂದಲೂ ನಿಮ್ಮ ಮಾನಕ್ಕೂ ಚ್ಯುತಿ ಸಂಭವಿಸಲಿದೆ. ಆದರೂ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ವರ್ತಕ ಜನರಿಗೂ ಇಷ್ಟಸಿದ್ಧಿ ಧನಲಾಭಗಳು ಸಾಕಷ್ಟು ತೃಪ್ತಿಕರವಾಗಿ ದೊರೆಯುವವು, ಕುಟುಂಬಿಕರಿಂದ ಕೂಡಿರುವ ನಿಮ್ಮ ಮಿತ್ರವೃಂದವೂ ಅಭಿವೃದ್ಧಿಯಾಗುವುದು, ತಾ. 23-24 ಮತ್ತು 30 ಈ ದಿನಗಳಲ್ಲಿ ಪ್ರವಾಸದಿಂದ ಮಾರ್ಗಾಯಾಸ ವಿಪರೀತ ಖರ್ಚು, ಕಾರ್ಯನಾಶದಿಂದಾಗಿ ಕ್ಲೇಶವೂ ಹುಟ್ಟಲಿರುವುದು.

ಮಕರರಾಶಿ—

ಕುಜನೊಬ್ಬನು ನಿಮ್ಮ ಭಾಗಕ್ಕೆ ಹೆಚ್ಚಿನ ಪ್ರತಿಕೂಲಕಾರಿಯಾಗಿದ್ದರೂ ಇತರ ಗ್ರಹಬಲದಿಂದ ಆ ದೋಷಗಳು ಅಭಿಭೂತಗಳಾಗುವವು ಆದಕಾರಣ ಸದ್ಯದಲ್ಲಿ ನಿಮಗಾವಹಾನಿಯೂ ಆಗುವಂತಿಲ್ಲವು. ಕೈಗೊಂಡಿರುವಕಾರ್ಯದಲ್ಲಿ ವಿಶೇಷವಾಗಿ ಧನಲಾಭವಿರುವುದು. ಪಶುಪುತ್ರಾದಿ ಭೃತ್ಯವರ್ಗದಿಂದ ಕೂಡಿದ ನಿಮಗೆ ಸಾಂಸಾರಿಕ ಚಿಂತೆಯೊದಗಲಾರದು, ವ್ಯಾಪಾರಿಗಳಿಗೂ ವೇಶ್ಯಾಜನರಿಗೂ ವೈದ್ಯರಿಗೂ ವಿಶೇಷ ಲಾಭವಾಗುವ ಚಿಹ್ನೆಗಳು ಕಾಣಿಸುತ್ತಿವೆ. ಸೇವಕಜನರು ತೃಪ್ತಿಗೊಂಡ ಪ್ರಭುವಿನಿಂದ ಹೆಚ್ಚಿನ ಪ್ರಯೋಜನವನ್ನು ಪಡೆಯುವರು ವಿದ್ಯಾಭಿಲಾಷಿಗಳು ವಕೀಲರೂ ಮೊದಲಾದವರಿಗೂ ಈವಾರವು ಅಷ್ಟೊಂದು ಪ್ರಶಸ್ತವಾಗಿಲ್ಲವು, ಸಮಾಜಸಂಘಗಳಿಗೆ ಹಿತಕರವಾಗುವ ಅನೇಕಕಾರ್ಯಗಳನ್ನು ಮಾಡಿಕೀರ್ತಿಗಳಿಸುವಿರಿ. ತಾ. 28, 29, 30ಈ ದಿನಗಳು ಸರ್ವಕ್ಕೂ ಉತ್ತಮಗಳಾಗಿವೆ,

ಕುಂಭರಾಶಿ—

ಸಮಯವು ಗತಿಸಿದಂತೆ ನಿಮ್ಮಭಾಗ್ಯವು ಕೂಡಾ ಸುಧಾರಿಸ ತ್ತಾ ಬರುತ್ತದೆ.ಪ್ರಕೃತನಿಮ್ಮಲ್ಲಿ ಅಪಶಂಕೆಯೊಂದು ಬಲವಾಗಿರುವುದು ಈಕಾರಣದಿಂದ ನೀವು ಸ್ವತಃಯಾವ ಕಾರ್ಯವನ್ನು ಮಾಡಲುಶಕ್ತರಿಲ್ಲ, ಮಾತ್ರವಲ್ಲ ಪರರ ಸಹಕಾರವನ್ನೂ ಕೂಡ ಬಯಸುವುದಿಲ್ಲವು ಅಂತೂಕಾರ್ಯಹಾನಿಯಿಂದಾಗಿ ವ್ಯರ್ಥಧನವ್ಯಯವೇ ಆಗುವುದು. ಆದರೂ ನಿಮ್ಮ ಅದೃಷ್ಟಬಲದಿಂದ ಧನವು ನಿಮ್ಮನ್ನು ತಾನಾಗಿ ಬಂದು ಸೇರ್ದಂತೆ ಸೇರುವುದು, ಇದರಿಂದ ನಿಮ್ಮ ತಾಪತ್ರಯಗಳು ಸುಖವಾಗಿ ನಿವಾರಿಸಲ್ಪಡುವವು. ಆ ಮೇಲೆ ಕೈಯ್ಯಲೊಂದು ಕಾಸೂ ಉಳಿಯಲಾರದು, ಜನರು ಗೌರವದಿಂದ ನಿಮ್ಮನ್ನು ಕಾಣುವರು, ಅಂತೂ ಅನುದಿನದ ಖರ್ಚಿಗೆ ಸಾಕಷ್ಟು ಉತ್ಪತ್ತಿಯಿರುವುದು. ತಾ. 25ರಿಂದ 29ರವರೆಗಿನ ದಿನಗಳಲ್ಲಿ ಆಪ್ತಜನರ ವಿರೋಧ ಪ್ರವಾಸಗಳು ಸಂಭವಿಸಲಿವೆ.

ಮೀನರಾಶಿ—

ಅನೇಕ ವ್ಯಾಧಿಗಳಿದ್ದರೂ ಮನುಷ್ಯನಿಗೆ ಚಿಂತೆಗೆ ಸಮಾನವಾದ ವ್ಯಾಧಿಯು ಬೇರೊಂದಿಲ್ಲವೆನ್ನಬಹುದು. ವ್ಯಾಧಿಗಳನ್ನು ವೈದ್ಯರ ಮೂಲಕ ನಿವಾರಿಸಬಹುದು. ಚಿಂತೆಯಾದರೋ ಮನುಷ್ಯನ ಅಭೀಷ್ಟಸಿದ್ಧಿಯಿಂದಲೇ ನಿವಾರಿತವಾಗಬೇಕಾದುದು, ಸದ್ಯ ನಿಮ್ಮ ಇಷ್ಟಸಿದ್ಧಿಯು ಆಗುವ ಸಂಭವ ತೋರುವದಿಲ್ಲವು. ಸ್ವಕೀಯ ದೌರ್ಜನ್ಯ ಕಲಹ ಮತ್ಸರದಿಂದ ಹೆಚ್ಚಿನ ಧನವ್ಯಯವಾಗುವುದಲ್ಲದೆ ಜನರಿಂದ ತಿರಸ್ಕಾರವನ್ನು ಹೊಂದುವಿರಿ. ಅಧಿಕಾರಿಗಳ ಕೋಪಕ್ಕೆ ಸಿಲುಕುವಿರಿ. ವಿದ್ಯಾರ್ಥಿಗಳಿಗೆ ಈ ವಾರವು ಹಿತವಾಗಿಲ್ಲವು. ಕೋರ್ಟುವಗೈರೆಗಳ ವ್ಯವಹಾರಣೆಯಲ್ಲಿ ಧನವ್ಯಯವಾಗುವುದು. ವ್ಯಾಪಾರೀ ಜನರಿಗೆ ದಿನದ ಖರ್ಚು ಕಳೆಯುವಷ್ಟು ಉತ್ಪತ್ತಿಯುಂಟಾಗುವುದು, ತಾ. 25, 26, 27, ಈ ದಿನಗಳನ್ನು ಹೊರತು ಇತರ ದಿನಗಳು ಯಾವ ಭಾಗಕ್ಕೂ ಉತ್ತಮವಿಲ್ಲದಿರುವುದರಿಂದ ತದ್ದಿನಗಳಲ್ಲಿ ಹಿಡಿದ ಕಾರ್ಯವನ್ನು ಜಾಗ್ರತೆಯಿಂದ ಮುಂದುವರಿಸಿರಿ.

Established] THE [1906

UNITED INDIA

LIFE ASSURANCE Co., LTD.

HEAD OFFICE—MADRAS.

Trustee:—The Official Trustee to the Government of Madras.

Policies in force exceed SIX Crores.
Annual income exceeds – Rs. 30 lakhs.
Total assets exceeds – Rs. 110 lakhs.
Total claims paid exceed Rs. 40 lakhs.

The oldest & largest life assurance company of South India accepted by the Government as satisfactory for the purpose of exemption from the operation of the Provident Fund Rules to Teachers in aided Schools & for the purpose of utilisation of P. F. Contributions for payment of premiums on the lives of Government Local Board & Municipal servants.

For further particulars please apply to:—

THE BRANCH MANAGER,
THE UNITED LIFE ASSURANCE COMPANY, LTD.,
FELIX PAI BAZAR, MANGALORE, S. K.

K. R. Hebbar, B.A., ORGANISER, UDIPI, S. K. OR K. Keshava Shenoy, M.A., ORGANISER, Pentlannpet, MANGALORE.

Degrees: Books: Medicines.

Free H. L. M. S., H. M. B., H. M. D. etc Free Homeo-Ayur-Unani-Naturo degrees by post also—Practitioners also get soon. Homeo Materiamedica, Rs. 5. Homeo-Practice book Rs. 4. Insanity Cure Pills Rs. 10. Enclose 2 annas stamps:—

Principal, Indian Homeopathic Institute and Society (Govt. Regd.) P. O. MAHUVA, (Kathiawar Dt. India.)

ಪತ್ರ ವ್ಯವಹಾರ

(ಬಾತ್ಮೀದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.) [ಸಂ. ನ]

ಉಡುಪಿ ಟೌನ್ ಕಾಂಗ್ರೆಸ್ ಕಮಿಟಿ

ಶ್ರೀ ರಾಮಚಂದ್ರನವರಿಗೆ ಉತ್ತರ

ಕಳೆದ ನವಯುಗ ಸಂಚಿಕೆಯಲ್ಲಿ ಶ್ರೀ ರಾಮಚಂದ್ರನವರು ಬರೆದ ಬಾತ್ಮಿಯನ್ನು ನೋಡಿಯೂ ಅವರಿಗೆ ನನ್ನ ಬಾತ್ಮಿಯಿಂದ ಸಂದೇಹಾಸ್ಪದವಾಯಿತೆಂಬುದನ್ನು ಕೇಳಿಯೂ ನಾನು ಅತ್ಯಂತ ಚಕಿತನಾದೆ. ಶ್ರೀ. ರಾಮಚಂದ್ರನವರು ಮೀಟಿಂಗು ಆಗಿವೆಯೆಂಬುದನ್ನು ತೋರಿಸುವ ಭರದಲ್ಲಿ ಸತ್ಯಸಂಗತಿಯನ್ನೇ ಮರೆತಂತಿದೆ. ಉತ್ಸಾಹದುಬ್ಬರದಲ್ಲಿ ದೃಷ್ಟಿಯು ಮಂದವಾಗುವುದು, ಅಸ್ವಾಭಾವಿಕವಲ್ಲವಷ್ಟೆ. ಆದಕ್ಕೆ ಶ್ರೀ ರಾಮಚಂದ್ರನವರು ಹೀಗೆ ಅಪವಾದ ತರಲಾದೀತು. ಬರೇ ರಾಮಚಂದ್ರನೆಂದರೆ ತನ್ನದನ್ನು ಯಾರೂ ನಂಬರೆಂದು ತಿಳಿದರೋ ಏನೋ, ಅವರು ತನ್ನ ಹೆಸರಿನ ಜೊತೆಗೆ ಡಿ. ಬೊ. ಮೆಂಬರ ಮತ್ತು ಉಡುಪಿ ಮುನ್ಸಿಪಲ್ ಕೌನ್ಸಿಲರ ಎಂದು ಕೂಡಿಸಿಕೊಂಡು ಬಂದಿದ್ದಾರೆ. ಅವರು ಮೆಂಬರ ಮತ್ತು ಕೌನ್ಸಿಲರಲ್ಲವೆಂದಾಗಲಿ ಸಭೆಗೆ ಹೋಗಿ ಕುಳಿತುಕೊಳ್ಳುವುದಿಲ್ಲವೆಂದಾಗಲಿ ನನ್ನ ಅಭಿಪ್ರಾಯವಲ್ಲ. ಈ ಸಂದರ್ಭದಲ್ಲಿ ತನ್ನ ಆಡಂಬರವು ಬೇಕೆ? ಎಂದೇ ನನ್ನ ಪ್ರಶ್ನೆ. ಇರಲಿ. ಈಗ ಇಂಥಾ ಮೆಂಬರ ಕೌನ್ಸಿಲರೇ ಸುಳ್ಳನ್ನು ಸಾಧಿಸಬಂದರೆ ಹೇಗೆ? ನಿಜವಾಗಿಯೂ 5-45 ಗಂಟೆ ತನಕ ಮೀಟಿಂಗು ಪ್ರಾರಂಭಿಸಲೇ ಇಲ್ಲ. ಆಗ ನಾವಿಬ್ಬರೂ ಒಟ್ಟಿಗೆ ಇದ್ದು ಆ ನಂತ್ರ ಹೋದೆವೆಂದು ಕಳೆದವಾರ ಬರೆದುದನ್ನೇ ನಾನು ಈಗ ಒತ್ತಿ ಹೇಳಬೇಕಾಗಿದೆ. ಶ್ರೀ ರಾಮಚಂದ್ರನವರೇ, ನೀವು ಸಂಜೆ 5-30ರ ಮೊದಲೇ ಮೀಟಿಂಗೂ ಪ್ರಾರಂಭವಾಗಿ 6ರ ಒಳಗೆಯೇ ಮುಕ್ತಾಯವಾಗಿರುತ್ತದೆ ಎಂದು ಒತ್ತಿಹೇಳಿದುದನ್ನು ನೋಡುವಾಗ ಒತ್ತಾಯಕ್ಕೆ ಕೋಟುಭಟ್ಟನು ಸಾಕ್ಷಿ ಹಾಕಿದಂತಾಯಿತಲ್ಲಾ. ಗಿಳಿಪಾಠದ ನಿಮ್ಮ ಪರಿಸ್ಥಿತಿಗಾಗಿ ನನಗೆ ಅನುತಾಪವಾಗುತ್ತಿದೆಯಲ್ಲಾ. ದಾಕ್ಷಿಣ್ಯಕ್ಕೆ ಬಲಿಯಾಗದೆ ಹೀಗೆ ಮನಸಾಕ್ಷಿಯನ್ನು ಬಿಡಲಾಪರೇ? ಕೆಲವರು ತಮ್ಮ ಸ್ವಾರ್ಥಸಾಧನೆಗಾಗಿ ನಿಮ್ಮಂತ ಸುಲಭವಾಗಿ ಬಲಿಬೀಳುವವರನ್ನಿಲ್ಲಿ ಹಿಡಿದು ಏನೆಲ್ಲಾ ಕೆಲಸಗಳನ್ನು ಸಾಧಿಸಲು ಎಂಥೆಂಥಾ ಮಾತುಗಳನ್ನು ತಮಗೆ ಬೇಕಾದಂತೆ ನುಡಿಸಲು ಸದಾಸಿದ್ಧರಿದ್ದಾರೆಂಬುದು ನಿಮಗೆ ತಿಳಿಯದೆ? ಆದರೆ ಇದು ಯಾವಾಗಲೂ ಒಂದೇ ರೀತಿಯಾಗಿ ನಡೆದೀತು ಎಂದು ತಿಳಿದಿರುವಿರಾ? ಮಾಡಿದವರು ಫಲವನ್ನು ಬೇಗನೆ ಅನುಭವಿಸಬೇಕಾಗುವದೆಂಬದನ್ನು ನಾವು ದಿನನಿತ್ಯವೆಂಬಂತೆ ನೋಡುತ್ತಿದ್ದೇವೆ. ಇಂಥಾ ಸುಳ್ಳುಗಳಿಂದ ನಿಮಗೆ ಕ್ಷಣಿಕ ಲಾಭವಿರಬಹುದೇನೂ ಇರಲಿ. ನೀವು ಜೊತೆಕಾರ್ಯದರ್ಶಿಗಳಾಗಿ ಚುನಾಯಿತರಾಗಿದ್ದೀರೆಂದು ಮಂಗಳೂರು ವಾರಪತ್ರಿಕೆ ಒಂದರಲ್ಲಿ ಓದಿದ ನೆನಪು ಆದರೆ ಉಡುಪಿಯಲ್ಲಿ ಪ್ರಕಟವಾಗುವ ಪತ್ರಿಕೆಯಲ್ಲಿ ಅದು ಸುದ್ದಿಯೇ ಇಲ್ಲ. ಇದರ ಒಳಗುಟ್ಟೇನು? ಇದು ಸಾರ್ವಜನಿಕರನ್ನು ತುಂಟತನವೇ? ಕಮಿಟಿಯು ಆ ಸದಸ್ಯರದ್ದೇ? ಇಷ್ಟು ಸಂಕುಚಿತ ಬುದ್ಧಿಯು ಅವರಿಗಿದ್ದೀತೆ? ರಾಮಚಂದ್ರನವರೇ ಮೀಟಿಂಗು ಆಗಲಿ 5-30 ರೊಳಗೆ ಪ್ರಾರಂಭವಾಗಿದೆಯೆಂಬ ಸುಳ್ಳು ಯಾತಕೆ?

ಇದು ವರ್ಷದ ಮೊದಲಿನ ಮೀಟಿಂಗು, ಮೊದಲಿನ ಮೀಟಿಂಗಿಗೇ ಇಷ್ಟು ಉತ್ಸಾಹವೆ? ಟ್ರೆಜರರ್ ಬರಲಿಲ್ಲವಲ್ಲಾ. 11 ಮಂದಿ ಕಮಿಟಿ ಮೆಂಬರರಲ್ಲಿ ಐದೇ ಜನರು ಹಾಜರಿದ್ದರೆಂದೂ 6 ಗಂಟೆಗೆ ಸಭೆ ಆಯಿತೆಂದೂ ನನಗೆ ಮೆಂಬರೊಬ್ಬರು ಹೇಳಿದ್ದಾರೆ. 5 ಜನರು ಸೇರಿ 6 ಜನ ಆಫೀಸರನ್ನು ಆರಿಸಿದರು, ಆದು ಸವಾಲು ಮಮತೆ! ಮೀಟಿಂಗನ್ನು ಸಮಯ ತಪ್ಪಿಸಿ ಮಾಡಿಸಿದ್ದರ ಉದ್ದೇಶವೇ ಹಾಗೆ ಇತ್ತೋ ಏನೋ ಯಾರುಬಲ್ಲ! ಎಲ್ಲರೂ ಹಾಜರಿದ್ದರೆ, ಈ ಆಫೀಸು ಬೇರೆಯವರ ಪಾಲಾಗುತ್ತಿದ್ದರೋ ಏನೋ! ಆ ಭೀತಿಯಿಂದ 6 ಗಂಟೆಗೆ 5 ಜನರು ಸೇರಿ ಮೀಟಿಂಗು ನಿರ್ವಹಿಸಿದುದು ಯಾರಿಗೆ ಗೊತ್ತು? ಎಲ್ಲರ ಹಾಜರಿಯನ್ನು ಕಾದರೆ ಕೆಲವರ ಸ್ವಾರ್ಥವು ಬೇಯುಲಾರದೆಂದು ಅವರಿಗೆ ತಿಳಿದಿಲ್ಲವೆ? ಸ್ಥಾನಮಾನಗಳಿಗೆ ನಾಲಗೆಯೊಡ್ಡಿ ಅದಕ್ಕಾಗಿ ಏನೂ ಮಾಡುತ್ತಿರುವ ಸ್ವಾರ್ಥಿಗಳ ಈ ಕಾಲದಲ್ಲಿ ನಿಜವಾದ ಕಾಂಗ್ರೆಸಭಕ್ತರು ಹಿಂದುಳಿದಿರುವಾಗ ಯಾರನ್ನು ದೂರಿ ಫಲವೇನು? ಆಳಿದ ಊರಿಗೆ ಉಳಿದವನೇ ಗೌಡ. ಎಂಬಂತೆ ಆಗುವುದರಲ್ಲಿ ಆಶ್ಚರ್ಯವೇನು? ಶ್ರೀ ರಾಮಚಂದ್ರನವರು ಯಾರ ಹಂಗುದಾಕ್ಷಿಣ್ಯಕ್ಕೆ ಬಲಿಯಾಗದೆ ಸತ್ಯಸಂಗತಿಯನ್ನು ಪ್ರಕಟಿಸುವರೆಂದು ನಂಬುತ್ತೇನೆ. ಅವರು ಸತ್ಯವನ್ನು ಸುಳ್ಳಾಗಿ ಹೇಳಿದ್ದರೂ ಸತ್ಯವು ಸತ್ಯವಾಗಿಯೇ ಉಳಿಯುವದೆಂಬುದನ್ನು ಮಾತ್ರ ಅವರು ಮರೆಯದಿರಲಿ.

K. Vittal Shenoy
ತಾ॥ 19-3-1939

ಮೈಸೂರಲ್ಲಿ ನವಯುಗ ಸಿಕ್ಕುವ ಸ್ಥಳ
ಶ್ರೀ. ಕೆ. ಪಿ. ಪುರಾಣಿಕ,
ಮೋಡರ್ನ್ ಮೋಟರ್ ಸರ್ವಿಸ್.

ದಕ್ಷಿಣಕನ್ನಡ ಜಿಲ್ಲಾ ಬೋರ್ಡು ಹಂಗಾಮಿ ಉಪಾಧ್ಯಾಯರಲ್ಲಿ ವಿನಂತಿ.

ಪ್ರಕೃತ ಉಪಾಧ್ಯಾಯರ ಪರಿಸ್ಥಿತಿಯು ಕರುಣಾಜನಕವಾಗಿದೆಯೆಂಬದನ್ನು ನೀವೆಲ್ಲರೂ ತಿಳಿದಿರುವಿರಿ ನಮ್ಮ ಜಿಲ್ಲಾಬೋರ್ಡ ಆರ್ಥಿಕದುರವಸ್ಥೆ ಇಂದಪ್ರಾಥಮಿಕಶಾಲಾ ಉಪಾಧ್ಯಾಯರಸಂಬಳದಲ್ಲಿ ಕಡಿತಹಾಕಿದ ಅದು ವರ್ಷವರ್ಷವರುತ್ತಾ ಬಂದು ಈಗ ಬೋರ್ಡು ಎಲೆಕ್ಷನ್ ಎರಡಾಣೆಯಲ್ಲಿ ಬಂದು ನಿಂತರದೆಂಬ ವಿಷಯವು ನಿಮಗೆ ಗೊತ್ತಿದೆ. ಇದರಿಂದ ಜಿಲ್ಲಾ ಬೋರ್ಡ ಸಮಾಧಾನ ಹೊಂದದೆ ಈ ವರ್ಷ 'ಸ್ಪೆಷಲ್‌ಬೇಸರಿ' ಉಪಾಧ್ಯಾಯ ಉಪಾಧ್ಯಾಯಿನಿಯರಿಗೆ ಹೊಸತೊಂದು ಸಂಬಳದ ಸ್ಕೇಲನ್ನು ಜ್ಯಾರಿಗೆ ತಂದಿರುತ್ತದೆ. ಇದೇ ಕಳೆದ ಫೇಬ್ರವರಿ ಅಂತ್ಯದೊಳಗೆ ಟ್ರೈನಿಂಗ್ ಪರೀಕ್ಷೆ ಪಾಸಾದ ಮೇಲೆ ಎರಡುವರ್ಷ ಸರ್ವಿಸು ಯಾರಿಗೆ ಅಲ್ಲವೋ ಮತ್ತು ಆ ಸಮಯದೊಳಗೆಯಾರು ಸರ್ಟಿಫಿಕೇಟು ಸಂಪೂರ್ಣ ಹೊಂದುವದಿಲ್ಲವೋ ಅಂಥವರಿಗೆಲ್ಲಾ ಈ ಹೊಸ ಸ್ಕೇಲು—ಅಂದರೆ

ಹಯರ್ ಗ್ರೇಡ್ 18/-ರಿಂದ 25/-
ಸೆಕೆಂಡರಿಗ್ರೇಡು ರೂ. 20/-ರಿಂದ 35.

ಅನ್ವಯಿಸುತ್ತದೆ. ಈ ರೀತಿಯ ಸ್ಕೇಲನ್ನು ಜಿಲ್ಲಾ ಬೋರ್ಡ ಸಕ್ಷನ್ ಸರಕಾರಕ್ಕೆ ಕಳುಹಿಸಿರುತ್ತದೆ. ಸರಕಾರವು ಇದನ್ನು ಮಂಜೂರುಮಾಡಿದರೆ ನಮ್ಮೆಲ್ಲರ ಸ್ಥಿತಿಯು ಏನಾಗುವದೆಂಬುದನ್ನು ನೀವೇ ಊಹಿಸಿರಿ.

ಇದನ್ನು ತಿಳಿದೊಡನೆ ನಾನು ಕೆಲವು ಉಪಾಧ್ಯಾಯರೊಡನೆ ವಿಚಾರಿಸಿ, ನಾವು ಆರುಮಂದಿ ಸೇರಿ ಒಂದು ಮೆಮೋರಿಯಲನ್ನು ಸರಕಾರಕ್ಕೆ ಎಲ್ಲರ ಪರವಾಗಿ ಕಳುಹಿಸಿರುತ್ತೇವೆ. ಎಲ್ಲಾ ಉಪಾಧ್ಯಾಯರೊಡನೆ ವಿಚಾರಿಸಿಕೊಳ್ಳಲು ಸಮಯ ಸಂಕೋಚವಾದುದರಿಂದಲೂ ಅವರೆಲ್ಲರೂ ಜಿಲ್ಲೆಯ ನಾನಾ ಭಾಗಗಳಲ್ಲಿರುವುದರಿಂದಲೂ ಕಷ್ಟಸಾಧ್ಯವಾದ್ದರಿಂದ ನವರಿ ಮೆಮೋರಿಯಲನ್ನು ನಾವು ಕಳುಹಿಸಿದ್ದಾಗಿರುತ್ತದೆ.

ಇನ್ನು ಮುಂದೆ ನಾವು ಈ ವಿಷಯದಲ್ಲಿ ಹೇಗೆ ಮುಂದರಿಸಬೇಕೆಂಬ ಬಗ್ಗೆ ನಮ್ಮೆಲ್ಲರ ಸಹಾಯವು ಅತ್ಯಗತ್ಯ. ಆದ್ದರಿಂದ ದಯವಿಟ್ಟು ನಿಮ್ಮ ಅಭಿಪ್ರಾಯವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ಅಪೇಕ್ಷಿಸುತ್ತೇನೆ. ಇಂತಿ,

K. Dasappa, Teacher
Kotechery,
P. O. Kanhangad, S.K.

WANTED—Districts Organisers and Taluka Superintendents in Districts of Belgaum, Bijapur, Dharwar, Canara and Coorg on salary and commission basis. Special facilities for the Initial business of Rs. 10,000/-. Only influential gentlemen who can guarantee Rs. 50,000/ and Rs 25,000/- per year need apply, Messrs.
PADUBIDRI BROS., BOMBAY 8

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

I. P. No. ೨/೩೯

ಸೇಮಯ ಶೆಟ್ಟಿ, ಹೆರ್ಗ ಪೋನಪ್ಪ ಶೆಟ್ರ ಅಳಿಯ, ಉಡುಪಿ ತಾಲೂಕು ಹೆರ್ಗಗ್ರಾಮ. } ಅರ್ಜಿದಾರ

ಮತ್ತು

ಕೃಷ್ಣಪ್ಪ ಸಾವಂತ ಕೂಡಾ—ಎದ್ರಿರು.

6ನೇ ಎದ್ರಿ ಉಡುಪಿ ತಾಲೂಕು ಹಾವಂಜೆ ಗ್ರಾಮದಲ್ಲಿರುವ ಸುಬ್ರಾಯ ಶೆಟ್ರ ಅಳಿಯ ಶೀಕಂಜೆ ರಾಮಣ್ಣ ಶೆಟ್ಟಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ:—

ಅರ್ಜಿದಾರನು ತನ್ನನ್ನು ದಿವಾಳಿಯಾಗಿ ಸ್ಥಾಪಿಸಬೇಕೆಂತ ವಗೈರೆ ಕೊಟ್ಟ ಮೇಲ್ಕಂಡ ಅರ್ಜಿಯು ತಾ. 10-4-39ಕ್ಕೆ ತನಿಖೆಗೆ ಇಟ್ಟಿರುತ್ತದೆ. ಸದ್ರಿ ಅರ್ಜಿಯ ಕುರಿತು ನಿಮಗೇನಾದರೂ ಆಕ್ಷೇಪವಿದ್ದರೆ ಅಂಥಾ ಆಕ್ಷೇಪಗಳನ್ನು ಸದ್ರಿ ದಿವಸ ಹಗಲು ಘಂಟೆ 11ಕ್ಕೆ ಸರಿ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ಅರ್ಜಿಯು ಅರ್ಜಿದಾರನ ಗುಣಕ್ಕೆ ತೀರ್ಮಾನಿಸಲ್ಪಡುವುದು.

K. Jagannath Ballal, Vakil for Petitiner. | Udipi. Dated 17-3-'39

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 32/39

ಶ್ರೀಮದ್ವಿಶ್ವೇಂದ್ರತೀರ್ಥ ಸ್ವಾಮಿಯರು—ವಾದಿ.

ಅಪ್ಪು ಯಾನೆ ನರಸಿಂಹ ಶ್ಯಾನುಭಾಗ ಕೂಡ—ಪ್ರತಿವಾದಿ

ಸದ್ರಿ ವ್ಯಾಜ್ಯದ 1ನೇ ಪ್ರತಿವಾದಿ ಅಪ್ಪು ಯಾನೆ ನರಸಿಂಹ ಶ್ಯಾನುಭಾಗರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಮೇಲ್ಕಂಡ ವ್ಯಾಜ್ಯವು ತನಿಖೆ ಬಗ್ಗೆ ತಾ. 3-4-39ಕ್ಕೆ ಇಟ್ಟಿದೆ. ಅದರಲ್ಲಿ ಏನಾದ್ರು ಉದಹರಿಸುವದಿದ್ದರೆ ಆ ದಿವಸ 10 ಗಂಟೆಗೆ ಸರಿಯಾಗಿ ಸದ್ರಿ ಕೋರ್ಟು ಮುಂದೆ ಸ್ವತಃ ಆಗಲಿ ವಕೀಲರ ಮುಖಾಂತರವಾಗಲಿ ಹಾಜರು ಆಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ಏಕಪಕ್ಷ ವಿಚಾರಣೆಯಿಂದ ತೀರ್ಮಾನ ಮಾಡಲಾಗುವುದು.

ಪುತ್ತೂರು, ತಾ. 13-3-'39 | C. S. Shastry, Vakil for Petitioner.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಜಿಸ್ಟರ್ಡ್)

GONO KILLER ORIGINAL

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಇಂಗ್ಲೀಷ ಮತ್ತು ಆಯುರ್ವೇದ ಔಷಧಗಳಿಂದಲೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕಡೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 40 ಮಾತ್ರೆಗಳ ಬುದ್ದಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡೆಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೋಕಿಲರ್" ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer DR. D. N. JASANI, Vitalbhai Patel Road, BOMBAY 4.

ಫೇನ್ಸಿ ಲಿವರ್ ರಿಸ್ಟ್‌ವಾಚ್

ರೂ. 2—4—0.

ಸಣ್ಣ ಸುಂದರ, ಆಕಾರ ಗಟ್ಟಿ ಮುಟ್ಟಾದ ಮೆಶಿನರಿ ಸರಿಯಾದ ಸಮಯ ತೋರಿಸುವಂಥಾದ್ದು 5 ವರ್ಷದ ಗ್ಯಾರಂಟಿ ದುಂಡಾಕೃತಿಯ, ದೀರ್ಘಚತುಷ್ಕೋನಾಕೃತಿಯ ಇಲ್ಲವೆ ಚೌಕಾಕೃತಿಯ ವಾಚಿಗೆ ರೂ. 2-4-0 ಉತ್ತಮ ತರದ್ದಕ್ಕೆ 2-10-0, ಅತ್ಯುತ್ತಮವಾದುದಕ್ಕೆ 3-4-0, ಸುವರ್ಣದಕ್ಕೆ ರೂ. 3-8-0 ಅತ್ಯುತ್ತಮವಾದುದಕ್ಕೆ ರೂ. 4-8-0, ಚಿತ್ರದಲ್ಲಿ ತೋರುವ ಲೇಡಿ ರಿಸ್ಟ್‌ವಾಚಿಗೆ ರೂ. 6-0-0, ಖಾತರಿಯುವ ರೋಲ್ಡ್‌ಗೋಲ್ಡಿಗೆ ರೂ. 8-0-0, ಸರ್ವೋತ್ತಮವಾದುದಕ್ಕೆ ರೂ. 10-0-0 ವಿ. ಪಿ. ಪ್ರತ್ಯೇಕ.

ಎಚ್. ಡಾವಿಡ್ ಅಂಡ್ ಕೊ.
ಪೊ. ಬಾಕ್ಸ 11424 ಕಲ್ಕತ್ತ.

H. David & Co.
Post Box No. 11424, Calcutta

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ತಾ 20-3-39.

ಮೋಟರ್ ಕೆಲಸಗಾರರ ಸಭೆಗಳು- ಕಳೆದ ಕೆಲವು ದಿನಗಳಿಂದ ಮಂಗಳೂರು ನಗರದಲ್ಲಿ ಪ್ರತಿದಿನವೆಂಬಂತೆ ಮೋಟರ್ ಕೆಲಸಗಾರರ ಸಂಘದ ಆಶ್ರಯದಲ್ಲಿ ಸಭೆ ಸೇರುತ್ತಿರುವುದು. ಆಗಲೇ ತಾ. 15, 16 ಮತ್ತು 17ನೇ ತಾರೀಕುಗಳಲ್ಲಿ ಸಭೆಗಳು ಜರಗಿದುವು. ಕೆಲಸಗಾರರು ಮುಷ್ಕರಹಿಡಿಯಬೇಕಾದ ಸಂಭವ ಬರಬಹುದೆಂದೂ, ಹಾಗೆ ಸಂದರ್ಭ ಬಂದಾಗ ಅದನ್ನು ಯಶಸ್ವಿಗೊಳಿಸುವುದು ಪ್ರತಿಯೊಬ್ಬ ಮೋಟರ್ ಕೆಲಸಗಾರನ ಕರ್ತವ್ಯವೆಂದೂ ಭಾಷಣಗಳು ಮಾಡಲ್ಪಟ್ಟುವು.

ನಗರಸಭೆ—ಮಂಗಳೂರು ನಗರಸಭೆಯ ಮೀಟಿಂಗ ತಾ. 13ರಲ್ಲಿ ಶ್ರೀ. ಬಿ. ಐ. ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಯಂ. ಎಸ್. ಶ್ರೀನ್ನರು ಒಂದು ಠರಾವು ತಂದು, ವಿದ್ಯುತ್ತಿಗೆ ಬನ್ನು ನಗರಸಭೆಯವರು ಹೊಸತಾಗಿ ಹಾಕಿದ್ದಾರೆ. ಆದರೆ ಚರಂಡಿಗೆ, ನೀರಿನ ಸರಬರಾಯಿಗೆ ಏರ್ಪಾಡು ಮಾಡುವ ಆಲೋಚನೆ ನಡೆದಿಲ್ಲ. ಈ ಬಗ್ಗೆ ಒಂದು ಸಮಿತಿಯನ್ನು ಏರ್ಪಡಿಸಿ ಎಷ್ಟರಮಟ್ಟಿಗೆ ಖರ್ಚು ಕಡಿಮೆಮಾಡಬಹುದೆಂಬುದನ್ನು ವಿಚಾರಿಸಬೇಕೆಂದು ಸೂಚಿಸಿದರು. ಡಾ. ಉಪೇಂದ್ರ ಪೈಗಳು ಈ ಪ್ರಶ್ನೆಯನ್ನು ಜೂನ್ ತಿಂಗಳ ಮೀಟಿಂಗಿಗೆ ಮುಂದರಿಸಬೇಕೆಂದು ಸೂಚನೆತಂದರು. ಮಿ. ಶ್ರೀನ್ನರ ಠರಾವಿಗೆ ಬರೀ ಎರಡು ಮತಗಳು ಡಾ. ಪೈಗಳ ಠರಾವಿಗೆ ಅಧಿಕಮತಗಳು ದೊರೆತು, ಎರಡನೆಯವರ ಸೂಚನೆಯು ಮಂಜೂರಾಯಿತು.

ಜಿಲ್ಲಾ ಎಲ್. ಐ. ಯಂ. ಡಾಕ್ಟರರ ಸಂಘ—ದ. ಕ. ಜಿಲ್ಲಾ ಎಲ್. ಐ. ಯಂ. ಡಾಕ್ಟರರ ಸಭೆಯು ಹಂಪನಕಟ್ಟೆಯಲ್ಲಿ, ಡಾ. ಯು. ಸುಂದರರಾಯರ ಆಫೀಸನಲ್ಲಿ ಕಳೆದ ತಾ. 13ರಲ್ಲಿ ಸೇರಿತು. ಡಾ| ಕೆ. ವಿ. ಭಟ್ ಇವರು ಅಧ್ಯಕ್ಷತೆ ವಹಿಸಿದ್ದರು. ಎಲ್. ಐ. ಯಂ. ಡಾಕ್ಟರರ ಸಂಘದ ಆವಶ್ಯಕತೆಯ ಕುರಿತು ಅಧ್ಯಕ್ಷರು ಭಾಷಣಮಾಡಿದರು. ಅನಂತರದಲ್ಲಿ ಎಲ್. ಐ. ಯಂ. ಡಾಕ್ಟರರ ಸಭೆಗೆ ಅಧಿಕಾರಿಗಳ ಚುನಾವಣೆಯಾಗಿ ಡಾ. ಕೆ. ವಿ. ಭಟ್ ಇವರು ಅಧ್ಯಕ್ಷರಾಗಿಯೂ, ಡಾ. ಯು. ಸುಂದರರಾಯರು ಕಾರ್ಯದರ್ಶಿ ಮತ್ತು ಖಜಾನ್ಜಿಯರಾಗಿಯೂ ಆರಿಸಲ್ಪಟ್ಟರಲ್ಲದೆ ಏಳುಮಂದಿ ಸಧಸ್ಯರಿಂದ ಕೂಡಿದ ಕಾರ್ಯಕಾರಿ ಮಂಡಲಿಯೂ ಚುನಾಯಿಸಲ್ಪಟ್ಟಿತು. ಡಾ. ಸುಂದರ ರಾಯರು ತಮ್ಮ ವೃದ್ಧ ಬಂಧುಗಳಿಗೆ ಟೀಪಾರ್ಟಿಯನ್ನಿತ್ತು ಮನ್ನಿಸಿದರು.

ಮೋಟರ್ ಕೆಲಸಗಾರರಿಗೆ ಸರಕಾರದ ತಂತಿ—ಮದ್ರಾಸ್ ಸರಕಾರದವರು ಮೋಟರ್ ಕೆಲಸಗಾರರಿಗೆ ತಾ. 18ರಲ್ಲಿ ತಂತಿಕಳುಹಿಸಿ ಅದರಲ್ಲಿ ಚಳವಳ ಹೂಡಿ ವಿವಾದವು ರಾಜಿಯಲ್ಲಿ ತೀರ್ಮಾನವಾಗುವುದಕ್ಕೆ ತಡೆಯುಂಟುಮಾಡಬಾರದಾಗಿಯೂ, ತಾ. 20ರಂದು ಮದ್ರಾಸಿಗೆ ಬಂದು ಮಾನ್ಯ ಗಿರಿಯವರನ್ನು ಭೇಟಿಯಾಗಬೇಕೆಂದೂ ತಿಳಿಸಿದ ಮೇರೆಗೆ ಮೋಟರ್ ಕೆಲಸಗಾರರು ಎಲ್ಲಾ ಚಳವಳವನ್ನು ನಿಲ್ಲಿಸಿದ್ದಾರೆ

ಹೊಸ ಕಲೆಕ್ಟರ್ ದೊರೆಗಳು—ಖಾನ್ ಬಹದ್ದೂರರು ಷ.ಫತ್ ಅಹ್ಮದ್ ಆಲಿ ಸಾಹೇಬ್ ಬಹದೂರ್‌ರವರು ದಿವಾನ್ ಬಹದ್ದೂರ್ ಯಂ. ವಿ. ವೆಲ್ಲೋಡಿಯವರ ಸ್ಥಾನದಲ್ಲಿ ಜಿಲ್ಲಾ ಕಲೆಕ್ಟರರಾಗಿ ನೇಮಕಹೊಂದಿ ಚಾರ್ಜು ವಹಿಸಿದ್ದಾರೆ.

ರಾಜಿಮಾಡಿಸಲು ಕಲೆಕ್ಟರರ ಪ್ರಯತ್ನ

ಖಾನ್ ಬಹದೂರು ಷಫತ್ ಅಹ್ಮದ್ ಆಲಿ ಸಾಹೇಬ್ ಬಹದ್ದೂರರವರು ಮೋಟರ್ ಕೆಲಸಗಾರರನ್ನೂ ಸಿ. ಪಿ. ಸಿ ಜನರಲ್ ಮೆನೇಜರರನ್ನೂ ಕರೆಸಿ ರಾಜಿಯಿಂದ ವಿವಾದವನ್ನು ತೀರಿಸಿಕೊಳ್ಳಬೇಕೆಂದು ಸೂಚಿಸಿರುವರೆಂದು ತಿಳಿದುಬರುತ್ತದೆ.

ಗವರ್ನಮೆಂಟ್ ಬಾ ಎ ಟ್ರೈನಿಂಗ್ ಶಾಲೆ ಹಳೆ ಉಮೇದ್ವಾರ ಉಪಾಧ್ಯಾಯರ ಸಂಘದ ಮಹಾಸಭೆ—ಯು ತಾ. 16ರಲ್ಲಿ ಶ್ರೀ. ಉಳ್ಳಾಲ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಜರಗಿ ಈ ಶಾಲೆಯಲ್ಲಿ ಕಲಿತ ಉಮೇದ್ವಾರ ಉಪಾಧ್ಯಾಯರ ಸಂಘವನ್ನು ಸ್ಥಾಪಿಸಲಾಯಿತು. ಚಾಲ್ತಿ ವರ್ಷಕ್ಕೆ ಕಾರ್ಯಕಾರಿ ಮಂಡಳಿಯನ್ನೇರ್ಪಡಿಸಲಾಯಿತು. ಶ್ರೀ. ಕೆ. ಗೋಪಾಲರಾಯರ ತೈಲಚಿತ್ರವನ್ನಿರಿಸಬೇಕೆನ್ನುವ ಅವರ ಹೆಸರಲ್ಲಿ ಇನಾಮನ್ನು ಕೊಡುವ ವ್ಯವಸ್ಥೆ ಮಾಡಬೇಕೆನ್ನುವ ಇತ್ಯಾದಿ ಠರಾವುಗಳಾದವು. ಅಧ್ಯಕ್ಷ ಮತ್ತು ಖಜಾನ್ಜಿಗಳಾಗಿ ಶ್ರೀ. ಮಂಗೇಶರಾಯರೂ ಕಾರ್ಯದರ್ಶಿಗಳಾಗಿ ಶ್ರೀ ವಿ. ತಿಮ್ಮಣ್ಣ ಭಟ್ಟರೂ ಆರಿಸಲ್ಪಟ್ಟಿದ್ದಾರೆ.

AWAIT PUBLICATION

ನಿರೀಕ್ಷಿಸಿರಿ! ನಿರೀಕ್ಷಿಸಿರಿ!!

OF

WHITHER KARNATAKA

A Book that every Kannadiga must read OR ಪ್ರತಿಯೊಬ್ಬ ಕನ್ನಡಿಗನೂ ಓದಬೇಕಾದ ಪುಸ್ತಕ

ಕರ್ನಾಟಕ ದಿಗ್ದರ್ಶನ

BY

P. CHANDRASHEKAR HEGDE, B. A., B. L.

Copies can be had from all important Book sellers

AUGUSTINE & CO.,

Stockits.—

Well Known Ceylon, Nilgri, Darjeeling & Assam Tea & Coffee.

All sorts of Hotel & family Tea Mixures as well as Coffee can be had at moderate rates.

ಮುಂಬಾಯಿಯಲ್ಲಿ ನಮ್ಮ ಗಿರಾಕಿಗಳು ಹಲವು ವರ್ಷಗಳಿಂದ ನಮ್ಮ ಚಾ ಕಾಫಿಯನ್ನು ಉಪಯೋಗಿಸಿ ಸಂತುಷ್ಟರಾಗಿದ್ದಾರೆ.

ಹೋಟೆಲುಗಳಿಗೆ ಬೇಕಾಗುವ ಟೀ ಮಿಕ್ಸರ್, ವ ಕಾಫಿ ಹುಡಿ, ಮನೆಗಳಿಗೆ ಬೇಕಾಗುವ ಚಾ-ಕಾಫಿ, ನಮ್ಮಲ್ಲಿ ಸದಾ ಮಿತ ಹಿತದರಕ್ಕೆ ದೊರೆಯುತ್ತದೆ. ಪ್ರಾಮಾಣಿಕತೆಯೇ ನಮ್ಮ ಆದರ್ಶ. ಗಿರಾಕಿಗಳ ಸೌಕರ್ಯವೇ ನಮ್ಮ ಧ್ಯೇಯ. ಪರೀಕ್ಷಿಸಿರಿ! ಖಾತ್ರಿ ಮಾಡಿಕೊಳ್ಳಿರಿ

ವಿಳಾಸ: ಆಗಸ್ಟಿನ್ ಎಂಡ್ ಕೋ, ಮೌಂಟುರೋಡು, ಮಜಗಾಂ, ಮುಂಬಯಿ.

Mount Road, Mazagaon, BOMBAY.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟನಲ್ಲಿ.

O. S. 289/38. R. I. A. 164/37

REO 132/38

ಮುಂಡಾಡಿ ವೆಂಕಟರಮಣಯ್ಯ (ಪೌತಿ) } ಅರ್ಜಿ
ವಾರಿಸ್ದಾರಳು ಹೆಂಡ್ತಿ ನಾಗವೇಣಿಅಮ್ಮ } ದಾರಳು

ಮತ್ತು

1. ವೆಂಕಟರಮಣಯ್ಯ
2. ಸಣ್ಣಯ್ಯ ಯಾನೆ ನಾರಾಯಣ ಹೊಳ್ಳ
3. ವಿಷ್ಣುಮೂರ್ತಿ ಉಪಾಧ್ಯ
4. ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ
5. ದಾಸ್ತೀವ ಹೊಳ್ಳ

} ಎದ್ರಿರು

ಇವರೊಳಗೆ

ಮೇಲ್ಕಂಡ ಅಮಲ್ದಾರಿಯ 5ನೇ ಎದ್ರಿ ಉಡುಪಿ ತಾಲ್ಲೂಕು ಮೂಡುಹಡುಗ್ರಾಮದಲ್ಲಿರುವ ಕೃಷ್ಣಪ್ಪ ಹೊಳ್ಳರ ಮಗ ದಾಸ್ತೀವ ಹೊಳ್ಳರಿಗೆ

ಮೇಲ್ಕಂಡ ಅಮಲ್ದಾರಿಯಲ್ಲಿ ಅರ್ಜಿದಾರಳು ಸ್ಥಿರಾಸ್ತಿಯ ಏಲಂ ಕುರಿತು ಇಸ್ತಿಹಾರು ನೋಟೀಸು ಬಗ್ಗೆ ತಾರೀಖು 10-4-39ಕ್ಕೆ ತನ್ಮಗ ಇಟ್ಟಿರುವದ್ರಿಂದ ಆ ದಿವಸ ಸದ್ರಿ 5ನೇ ಎದ್ರಿ ಈ ಕೋರ್ಟಿನ ಮುಂದೆ 10 ಗಂಟೆಗೆ ಸ್ವತಃ ಯಾ ಪ್ಲೀಡರ್ ಮುಖಾಂತರ ಆಕ್ಷೇಪ ಇದ್ರೆ ಹೇಳತಕ್ಕದ್ದು. ತಪ್ಪಿದರೆ ಸದ್ರಿ ಎದ್ರಿಯ ಗೈರುಹಾಜರಿಯಿಂದ ಸದ್ರಿ ಸಂಬ್ರಮನ್ನು ತೀರ್ಮಾನಿಸಲಾದೀತೆಂಬ ಸಂಗ್ತಿ ಈ ಮೂಲಕ ಪ್ರಕಟಿಸೋಣಾಗಿಯದೆ.

ಉಡುಪಿ } P. Padmanabha Rao
21-3-39 } *Vakil for Petitioner*

ಸುಳ್ಳೆಂದು ರುಜುಪಡಿಸುವವರಿಗೆ

ರೂ 50 ಇನಾಂ

ಆಶ್ಚರ್ಯಕರ ಶಕ್ತಿಯುಕ್ತ ಯಂತ್ರಗಳು.

1 ವಶೀಕರಣ ಯಂತ್ರ: ನೀವು ಮೋಹಿಸುವ ಸುಂದರಿಯ ಮನಸ್ಸು ಎಷ್ಟು ಕಠಿಣವಾಗಿದ್ದರೂ ಈ ಯಂತ್ರಧರಿಸಿದ ಮಾತ್ರದಿಂದಲೇ ಅವಳು ನಿಮ್ಮೊಡನೆ ಮಾತನಾಡಬಯಸುವಳು. ಮಾತ್ರವಲ್ಲದೆ ನಿಮ್ಮ ವಶವಾಗುವಳು. ಸ್ನೇಹಿತರೂ ವೈರಿಗಳೂ ಏಕತ್ರ ನಿಮ್ಮ ಕಿಂಕರರಾಗುವರು. ಬೆಳ್ಳಿ ಯಂತ್ರಕ್ಕೆ ರೂ. 2-8-0; ಚಿನ್ನದ ತಾಯಿತಕ್ಕೆ ರೂ 7-8-0.

2 ಲಕ್ಷ್ಮೀಯಂತ್ರ: ಈ ತಾಯಿತವನ್ನು ಧರಿಸಿದ ಮಾತ್ರಕ್ಕೆ ನಿಮಗೆ ವ್ಯಾಪಾರ ವಹಿವಾಟುಗಳು ಹೆಚ್ಚಿ ಲಾಭದಾಯಕ ಸುಸಂಧಿಬರುವುದು. ಬೆಳ್ಳಿ ಯಂತ್ರಕ್ಕೆ ರೂ 2-8-0 ಚಿನ್ನದ್ದಕ್ಕೆ ರೂ. 7-8-0. ಇಂದೇ ಮೇಲಣ ವಿಳಾಸಕ್ಕೆ ಬರೆಯಿರಿ. ಪತ್ರ ವ್ಯವಹಾರ ಇಂಗ್ಲೀಷಿನಲ್ಲೇ.

SRI SADANAND RAM

No. 57, P. O. Warisaligunj,

(Gaya)

ತಿದ್ದುಪಡಿ

ದಿ ಕರ್ನಾಟಕ ಯಂಗ್ ಸ್ಟೂಡೆಂಟ್ಸ್ ಫೂಟ್ ಬಾಲರ್ಸ್—ಇದರ ಕುರಿತು ತಾ. 9-3-39ರಲ್ಲಿ ಪ್ರಕಟವಾದ ಸುದ್ದಿಯಲ್ಲಿ ಶ್ರೀ. ಜೆ. ಆರ್. ಶೆಟ್ಟರು ಅಧ್ಯಕ್ಷರಾಗಿಯೂ ಶ್ರೀ. ಟಿ. ಯನ್ ಸುವರ್ಣರು C ಸಂಗಡದ ದಳಪತಿಯಾಗಿಯೂ ಆರಿಸಲ್ಪಟ್ಟಿದ್ದಾರೆಂದು ತಿಳಿಯಬೇಕಾಗಿದೆ.

ಸಂ. ನ.

ಹಲ್ಸನಾಡು ಸೂರಪ್ಪಯ್ಯನವರ ಸ್ಮಾರಕ ಮಂದಿರ—ಇತ್ತೀಚೆ ದಿವಂಗತ ಹಲ್ಸನಾಡು ಸೂರಪ್ಪಯ್ಯನವರ ಸ್ಮಾರಕ ಕಮಿಟಿಯವರು ಇತ್ತೀಚೆಗೆ ಕಟ್ಟಿಸುತ್ತಿರುವ ಸ್ಮಾರಕ ಮಂದಿರವು ಏಪ್ರಿಲ್ ಅಂತ್ಯದ ಒಳಗೆ ಪೂರೈಸಲ್ಪಟ್ಟು, ಮಾನ್ಯ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿ ಪ್ರವೇಶ ಮಹೋತ್ಸವ ಜರಗುವುದು. ಈ ಸಾರ್ವಜನಿಕ ಕೆಲಸಕ್ಕೆ ಉದಾರ ಚಿತ್ತದಿಂದಧನಸಹಾಯಮಾಡುವವರು "ಶ್ರೀ. ಹಲ್ಸನಾಡು ಸೂರಪ್ಪಯ್ಯನವರ ಸ್ಮಾರಕ ಕಮಿಟಿಯ ಕಾರ್ಯದರ್ಶಿ, ಕಿಂಕರನಾರಾಯಣ ಇವರಿಗೆ ಕಳುಹಿಸಬಹುದೆಂದು ಕಾರ್ಯದರ್ಶಿಯವರು ತಿಳಿಸುತ್ತಾರೆ.

ಜಿಲ್ಲಾ ಸಮಾಚಾರ

ಬಾರಕೂರು—ಬಾರಕೂರು ಮಹತೋಭಾರ ಕೋಟೇಕೇರಿ ಶ್ರೀ. ಪಂಚಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ಅನೂಚಾನವಾಗಿ ನಡೆದುಬರುವಂತೆ ಈ ವರ್ಷವೂ ತಾ. 22-3-39ರಿಂದ ಧ್ವಜಾರೋಹಣಾದಿ ಉತ್ಸವಗಳು ಪ್ರಾರಂಭವಾಗಿ ತಾ. 28-3-39 "ಶ್ರೀಮನ್ಮಹಾರಥೋತ್ಸವ"ವು ನಡೆಯುವುದು.

ಘರಂಗಿಪೇಟೆ—ಹಾಯರ್ ಎಲಿಮೆಂಟರಿ ಶಾಲೆಯ ೨೨ನೇ ಶಾಲುವರ್ಧಂತಿಯು ತಾರೀಕು 29-3-39ನೇ ಬುಧವಾರ ಶ್ರೀ. ಎನ್. ರಾಮರಾವ್, ಬಿ. ಎ., ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ತೆಂಕಯೆಕ್ಕಾರು—ಇಲ್ಲಿಯ ಪಟೇಲ್ ಶ್ರೀ. ಕಿರಿಯಣ್ಣ ಹೆಗಡೆಯವರ ಕಳೆಯ್ಯಾರಿ ಪೇದ್ರು ಪಿಂತ್ರನು ಗ್ರಾಮದಿಂದ ಕಿಸ್ತ್ ವಸೂಲುಮಾಡಿಕೊಂಡು ಬರುವ ಸಮಯ ಯಾರೋ ಅಡ್ಡಹಾಯ್ದು ಕಳ ಯಾರಿಯ ಕೂಡೆ ಇದ್ದ ಐವೇಜನ್ನೂ, ರಿಕಾರ್ಡನ್ನೂ ಕಿತ್ತುಕೊಂಡು ಹೋಗಿರುತ್ತಾರಾಗಿಯೂ ಪೋಲೀಸರಿಂದ ಅವರನ್ನು ಪತ್ತೆಹಿಡಿದಿರುತ್ತಾರಾಗಿಯೂ ತಿಳಿದುಬರುತ್ತದೆ.

ಕೋಟ ಗಿಳಿಯಾರು—ಶ್ರೀ. ಶಾಂಭವೀ ವಿದ್ಯಾದಾಯಿನಿ ಹಯರ್ ಎಲಿಮೆಂಟರಿ ಶಾಲೆಯ ದ್ವಿತೀಯ ವರ್ಧಂತ್ಯುತ್ಸವವು ತಾ. 12ರಲ್ಲು ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ. ಡಾ. ಕೆ. ವಿಟ್ಠಲ ಶೆಟ್ಟರವರ ಅಧ್ಯಕ್ಷತೆಯಲ್ಲಿ ೨-೪ ಸಾವಿರ ಜನಸಮುದಾಯದಿಂದ ಕೂಡಿ ಸಂಭ್ರಮದಿಂದ ಜರಗಿತು. ಅಧ್ಯಕ್ಷರ ಸ್ವಾಗತವಾದಮೇಲೆ-ವಿವಿಧ ವಿನೋದ, ಚಿತ್ರಾವಳಿ, ಕೋಲಾಟ, ಭಜನೆ, ಡ್ರಿಲ್, ಜಿಮ್ನಾಸ್ಟಿಕ್ ಮುಂತಾದ ಮಕ್ಕಳ ಚಟುವಟಿಕೆಗಳು ಪ್ರದರ್ಶಿಸಲ್ಪಟ್ಟುವು. ಶ್ರೀ. ಬಿ. ನಾರಾಯಣ ಶೆಟ್ಟರು ಸ್ವಸ್ತಿ ವಾಚನಮಾಡಿದರು. ಸಭಿಕರ ಪರವಾಗಿ ಶ್ರೀ. ಯು. ಗೋಪಾಲಕೃಷ್ಣರಾವ್, ಶ್ರೀ. ಬಾಸ್ತಿಗಳು ಈ ಮಕ್ಕಳ ಚಟುವಟಿಕೆಗಳನ್ನು ಶ್ಲಾಘಿಸಿ ಶಾಲೆಯನ್ನು ಕೊಂಡಾಡಿದರು. ಅಧ್ಯಕ್ಷರು ಈ ಶಾಲೆಯ ಮೆನೇಜರರಾದ ಶ್ರೀ. ಶೇಷಕಾರಂತರಉತ್ಸಾಹ,ಕಾರ್ಯದಕ್ಷತೆ,ವಿದ್ಯಾರ್ಥಿಗಳ ಚಟುವಟಿಕೆಗಳನ್ನು ಬಹುವಾಗಿ ಕೊಂಡಾಡಿ ಇದು ಉತ್ತಮ ಶಾಲೆಗಳಲ್ಲಿ ಒಂದಾಗಿದೆಯೆಂದರು. ರಾತ್ರೆ ಯಕ್ಷಗಾನವೂ ಮತ್ತು ನಾಟಕ ಪ್ರದರ್ಶನವಿತ್ತು. ಉತ್ತಮ ಅಭಿನಯಗಳಿಗೆ ಇನಾಂ ಕೊಡಲಾಯಿತು ಅಧ್ಯಕ್ಷರೇ ಪದಕವನ್ನಿತ್ತು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು.

ಸ್ವಾನುಭವಕ್ಕಾಗಿ ಪರ್ಯಟನ—ನಮ್ಮ ಜಿಲ್ಲೆಯ ಪ್ರಾಕೃತಿಕ ನೈಸರ್ಗಿಕ ಮತ್ತು ಐತಿಹಾಸಿಕ ದೃಷ್ಟಿಯಲ್ಲಿ ವೈಶಿಷ್ಟ್ಯವನ್ನು ತಳೆದಿರುವ ಪ್ರದೇಶಗಳನ್ನು ಕಣ್ಣಾರೆ ಕಂಡು ತಮ್ಮ ಅನುಭವವನ್ನು ವೃದ್ಧಿಸಿಕೊಳ್ಳುವ ಬಗ್ಗೂ ನೈತಿಕ ಸುಧಾರಣೆ ಕಷ್ಟಸಹಿಷ್ಣುತೆ ಪರಸ್ಪರಾನುರಾಗ ಮೊದಲಾದ ಉಚ್ಚ ಗುಣಗಳು ಬೇರೂರುವ ಬಗ್ಗೂ ಕಿನ್ನಿಕಂಬಳ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯವರು ವರ್ಷಂಪ್ರತಿ ಕೈಕೊಳ್ಳುತ್ತಲಿರುವ ಸಂಚಾರಕಾರ್ಯದಲ್ಲಿ ಐದನೇ ಸರ್ತಿಯ ಪರ್ಯಟನವು ಇದೇ ತಿಂಗಳ ತಾ. 10ರಿಂದ 16ರವರೆಗೆ ಆಗಿತ್ತು. ಸಂಗಡದಲ್ಲಿ 7ಮಂದಿ ಅಧ್ಯಾಪಕರು ಮತ್ತು ಮೇಲಿನ ದರ್ಜೆಗಳ 14ಮಂದಿ ವಿದ್ಯಾರ್ಥಿಗಳು ಇದ್ದರು. ಈ ದಳವು ಕಿನ್ನಿಕಂಬಳದಿಂದ ಕಾಲ್ನಡೆಯಾಗಿ ಹೊರಟು ಮೂಡಬಿದರೆ, ವೇಣೂರು, ಬೆಳ್ತಂಗಡಿ, ನಡ, ಜಮಾಲಾಬಾದು, ಉಜಿರೆ, ಧರ್ಮಸ್ಥಳ, ಕೊಕ್ಕಡ, ಉಪ್ಪಿನಂಗಡಿ, ಮುಂಡೂರು, ನರಿಮೊಗರು, ಪುತ್ತೂರು ಜೋಡುಮಾರ್ಗ, ಕಳ್ಳಿಗೆ ಪೊಳಲಿಗಾಗಿ ತನ್ನ ಸ್ವಸ್ಥಾನವನ್ನು ಸೇರಿತು. ಒಟ್ಟು ಸಂಚರಿಸಿದ ಹಾದಿಯು 121 ಮೈಲು. ಕಾರ್ಯಕ್ರಮದಂತೆ ತಲಾ ಒಂದಕ್ಕೆ ತಗಲಿದ ವೆಚ್ಚ ರೂ. 1-1-5 ಈ ಸಂಚಾರಕಾಲದಲ್ಲಿ ತಮಗೆ ಅನುಕೂಲತೆಗಳನ್ನು ಮಾಡಿಕೊಟ್ಟ ಸರ್ವ ಬಗೆಯಲ್ಲೂ ನೆರವಾದ ಉದಾರ ಮಹನೀಯರುಗಳಿಗೆಲ್ಲಾ ತನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಸಂಗಡವು ಈ ಮೂಲಕ ವ್ಯಕ್ತಗೊಳಿಸುತ್ತಲಿದೆ.

ಶಂಕರನಾರಾಯಣ—ಇಲ್ಲಿಯ ಸಬ್ ರಿಜಿಸ್ಟ್ರಾರರಾದ ಶ್ರೀ. ಕೆ. ನಾರಾಯಣ ಇವರು ಕಳೆದ ಮೂರು ವರ್ಷಗಳಿಂದ ಇಲ್ಲಿ ಜನಪ್ರೀತರಾಗಿದ್ದವರು, ಬೈಂದೂರಿಗೆ ವರ್ಗಾಯಿಸಲ್ಪಟ್ಟಿರುವರು. ಸ್ಥಳೀಯರು ಚುನಾಲಯದವರು ಇವರಿಗೆ ಉಪಹಾರಕೂಟವನ್ನೇರ್ಪಡಿಸಿ ಸತ್ಕರಿಸಿದರು.

ವ್ಯಭಿಚಾರ—(DEBAUCHERY)

ಲೇಖಕರು: ಶ್ರೀ. ಬಿ. ಶಿವರಾಯ ಶೆಟ್ಟಿ ಬಿ. ಎ., ಎಲ್. ಟಿ., ಉಡುಪಿ.

Venus and Bacchus, or woman and wine, often go together. They dance on the giddy height of wealth. So wealth, woman and wine challenge the manliness of the world. Shallow people take as their ideal a life surrounded by these three w's and think that it is heaven. They are grievously mistaken. History shows that such a life leaves much to be desired, and so fails miserably. India has been warning against it down through the ages. That is her message to the world. The twentieth century man has a lot of achievements to his credit. 'It has been and is his destiny to control the elements, to ride the thunderbolt, to bring the raging fire and rushing and tumbling waters to his use; but most difficult of all for him has been to restrain and hold in check the passions that consume him. So long as he will not master them, he cannot enter fully into his human heritage;' and he cannot be congratulated and called a man. He is yet far away from this ideal of a true man; and as long as this state of things persists the world will travail, misery will continue moral grandeur will be lacking, there will be no rest, no peace there will be only chaos. It is only a big dose of morality that can save the world from what it is. The rich often look askance at morality, the poor often sell their virtue for bread; and there are various other circumstances in between which make man and woman stray away from this high virtue. Once he or she falls a prey to this sexual lust it is very difficult to reclaim them. They shed their delicacy, their talk stinks worse than their body and dress. Debauchery stands self-condemned from three fundamental aspects—hygienic, economic and ethic. No use arguing with people who become cristic. Hygienically it is abominable. People may think their purse is long. May be. **But what about their physical resources?** Here at least there is not much difference between man and man. The human body is a temple. It should be preserved as such. Moreover no one has a right to saddle posterity with the disease one acquires. Economically it impoverishes every one. Every debauchee will be played out financially within a few years. Ethically the less said of them the better. When a man deviates, the tone of the house will go down, peace will vanish. When a woman falls, O horror—nothing good remains to be said—the house and the home will be darkened and destroyed. God save us all from a woe like this! Indian sons must be pure and daughters purer. Then we need fear none.

೧

(ಆನಂದರಾಯರು ತಮ್ಮ ಕಣ್ಣಿಲ್ಲದ ಒಂದು ಮಗುವನ್ನೂ ಕಿವಿ ಕೇಳದ ಮತ್ತೊಂದನ್ನೂ ಡಾಕ್ಟರರಲ್ಲಿ ತಂದು ತೋರಿಸುವರು.)

ಆನಂದರಾಯರು—ಸ್ವಾಮಿಾ, ಡಾಕ್ಟರರೇ ನನ್ನ ದೌರ್ಭಾಗ್ಯವನ್ನು ಏನೆಂದು ಹೇಳಲಿ, ನನ್ನ ಪೂರ್ವಜನ್ಮದ ಕರ್ಮ, ನನ್ನ ಗ್ರಹಚಾರ, ಎರಡು ಮಕ್ಕಳಿಗೂ ಈ ಹಾಡು ಆಗಬೇಕೇ! ಒಂದಕ್ಕೆ ಕಣ್ಣಿಲ್ಲ ಮತ್ತೊಂದಕ್ಕೆ ಕಿವಿ ಇಲ್ಲ. ಏನಾದರೂ ಮಾಡಿ ಇವರನ್ನು ಮನುಷ್ಯ ಜಾತಿ ಅಂತ ಮಾಡಿದರೆ ನಾನು ನಿಮಗೆ ಚಿರ ಋಣಿಯಾಗುವೆನು.

[ಡಾಕ್ಟರರು ಮಕ್ಕಳನ್ನು ಪರೀಕ್ಷಿಸುವರು. ಆಮೇಲೆ ಆನಂದರಾಯರನ್ನೇ ಪರೀಕ್ಷಿಸುವರು.]

ಡಾಕ್ಟರ್—ಆನಂದರಾಯರೇ, ನಾನು ನಮ್ಮ ಉದ್ಯೋಗ ಧರ್ಮ ದೃಷ್ಟಿಯಿಂದ ಹೇಳುವದಾದರೆ, ನೀವು ಬೇಸರಪಡಲಾರಿರಾದರೆ, ಇದು ನಿಮ್ಮ ಪೂರ್ವ ಕರ್ಮವೂ ಅಲ್ಲ, ಗ್ರಹಚಾರವೂ ಅಲ್ಲ. ಈ ಜನ್ಮದಲ್ಲಿಯೇ ನೀವು ಮಾಡಿದ ಕರ್ಮ. ನೀವು ಹಲವು ರೋಗಗಳ ಬೀಡಾಗಿದ್ದೀರಿ. ನಿಮ್ಮಲ್ಲಿ ಸ್ತ್ರೀಸಂಬಂಧದ ಅನೇಕ ರೋಗಗಳು ಉಂಟು. ಆದಕಾರಣ ನಿಮ್ಮ ದುರಾಚಾರದ ಫಲ, ಪಾಪ, ನಿಮ್ಮ ಮಕ್ಕಳಲ್ಲಿ ಬಂದಿದೆ. ನಿಮ್ಮ ದೇಹಕ್ಕೆ ತಕ್ಕ ಚಿಕಿತ್ಸೆಮಾಡಿಸಿಕೊಂಡು ಇನ್ನು ಮುಂದಕ್ಕೆ ಜಾಗರೂಕರಾಗಿರದಿದ್ದರೆ ಇನ್ನು ನಿಮಗೆ ಹುಟ್ಟುವ ಮಕ್ಕಳು ಕಾಲಿಲ್ಲ, ತಲೆಯಿಲ್ಲ, ಎಂದಾಗುವ ಸಂಭವವಿದೆ.

[ಮಂಜಣ್ಣನು ಓಣಿಕೇರಿಗಳ ಸುಖಸಂತೋಷದಲ್ಲಿ ಮೈಮರೆದಿದ್ದು ತಾಳಲಾರದ ರೋಗ ಹಿಡಿದುಕೊಂಡು ಮನೆಯಲ್ಲಿ ನರಳಾಡುತ್ತಿದ್ದಾನೆ.]

ಮಂಜಣ್ಣ—ಅಯ್ಯೋ! ಅಯ್ಯೋ! ಅಯ್ಯೋ! ಒಮ್ಮೆ ಡಾಕ್ಟರರನ್ನು ಬರ ಹೇಳಿದಮ್ಮಯ್ಯಾ, ದಮ್ಮಯ್ಯಾ, ಏನೂ ಸಾಧ್ಯವಿಲ್ಲ, ತಡೆಯಲಿಕ್ಕಾಗೋದಿಲ್ಲ, ದಮ್ಮಯ್ಯಾ.

ಹೆಂಡ್ತಿ—ನೋಡಿ, ಆಗ ಕೇಳಲಿಲ್ಲ, ಎಷ್ಟು ಬೊಬ್ಬೆ ಹೊಡೆದರೂ ಕಿವಿಗೆ ಬೀಳಲಿಲ್ಲ. ಮನೆಗೆ ಬರುವಾಗ ರಾತ್ರಿ ಹನ್ನೆರಡರ ಮೇಲೆ ಒಂದು ಘಂಟೆ. ಅತ್ತು ಬೇಡಿದರೆ ಕಾಲಿಂದ ಒದ್ದಿರಿ. ಸಿಟ್ಟಿನಿಂದ ನುಡಿದರೆ ಪೆಟ್ಟು ಕೊಟ್ಟಿರಿ. ಈಗ, ಈಗ ಬೊಬ್ಬೆ ಹೊಡೆಯುತ್ತೀರಿ. ಅವಳನ್ನೇ ಕರೆಯಿರಿ. ನಿಮಗೆ ಸುಖಕೊಟ್ಟವಳು ಈ ದುಃಖ ನಿವಾರಿಸಿಯಾಳು. ನನಗೆ ಪೆಟ್ಟು ಕೊಟ್ಟು ಎಲುಬು ಪುಡಿಮಾಡಿ ನನ್ನ ವಜ್ರದ ಬೆಂಡೋಲೆ ಕಸ್ಕೊಂಡು ಅವಳ ಎದೆ ಮೇಲೆ ಹಾಕಿದಿರಲ್ಲ. ಕರೆಯಿರಿ, ಅವಳನ್ನೇ ಕರೆಯಿರಿ. ಆಗ ಓಡ್ಯೋಡಿ ಹೋದಂತೆ ಈಗಲೂ ಅಲ್ಲಿಯೇ ಹೋಗಿ ಬಿದ್ದುಕೊಳ್ಳಿ. ಈಗ ಮಾತ್ರ ಬಿದ್ದುಕೊಳ್ಳಲಿಕ್ಕೆ ಮನೆ ಬೇಕಾ? ನೋಡಿಕೊಳ್ಳಲಿಕ್ಕೆ ಹೆಂಡ್ತಿ ಬೇಕಾಯಿತಾ?

ಮಂಜಣ್ಣ—ಅಯ್ಯೋ, ನೀನು ಯಾವ ವಿಷ ಜಂತುವಪ್ಪಾ! ಈ ಸಮಯದಲ್ಲಿ ಹೀಗೆ ಚುಚ್ಚುತ್ತೀಯಲ್ಲಾ! ನೀನು ರಾಕ್ಷಸಿಯೇ, ಅಯ್ಯೋ, ಈ ನೋವನ್ನು ನನ್ನಿಂದ ತಡೆಯಲಿಕ್ಕೆ ಸಾಧ್ಯವಿಲ್ಲ. ನೆಳವು, ನಡಿಕೆ, ನೋವು, ಬಾವು! ಜೀವ ಹೋಗುತ್ತೆ, ದಮ್ಮಯ್ಯಾ, ಡಾಕ್ಟರರನ್ನು ಕರಕೊಂಡು ಬರಲಿಕ್ಕೆ ಯಾರನ್ನಾದರೂ ಕಳುಹಿಸು.

ಹೆಂಡತಿ—ನಾನು ರಾಕ್ಷಸಿಯೇ? ರಾಕ್ಷಸಿ ಅವಳೇ! ನಿಮಗೀ ನರಕ ಯಾತನೆ ಕೊಟ್ಟವಳು ಅವಳೇ ರಾಕ್ಷಸಿ. ನಾನಲ್ಲಾ! ದುಡ್ಡು ಕೊಟ್ಟದ್ದೀರಲ್ಲಾ ದೋಚಿ ದೋಚಿ! ಮುಷ್ಟಿ ಮುಷ್ಟಿ! ನೋಟು ನೋಟು! ಈಗ ಡಾಕ್ಟರರನ್ನು ಕಳುಹಿಸಿಕೊಡುತ್ತಾಳೋ ನೋಡೋಣವಾ? ಅವಳಿಗೆ ಹೇಳಿಕಳುಹಿಸಲಾ? ಅವಳು ಈಗ ಯಾರನ್ನು ನೋಡುತ್ತಾ? ಆಗ ಹೆಂಡ್ತಿಯೆಂದರೆ ಕಾಲಿನ ಕಸ! ಹೇಡಪ್ಪಾ! ಹೆಂಡ್ತಿ ನಿಮ್ಮ ಆಡಿಯಾಳು, ನೀವು ಹೇಳಿದ ಹಾಗೆ ಅವಳು ಕೇಳ್ಬೇಕು. ಪ್ರಕೃತಿಯೂ ಸಹಾ ನಿಮ್ಮ ಅಡಿಯಾಳೆ? ಪ್ರಕೃತಿ ನಿಯಮಕ್ಕೆ ವಿರೋಧ ಹೋದವರ ಗತಿಯೆಂದರೆ ಇದೇ ನೋಡಿ!

ಮಂಜಣ್ಣ—ಈ ಹಾದಿ ಹಿಡಿದರೆ ಇಂಥಾ ನರಕದ ಕುಂಡದಲ್ಲಿ ಬೀಳ್ತೀನೆಂತ ಯಾರು ಯೋಚಿಸಿದ್ರು.

ಹೆಂಡತಿ—ನಾನು ಯೋಚಿಸಿದ್ದೆ ನಾನು.

ಮಂಜಣ್ಣ—ಮಾರಾಯದಿಯೋ! ಈಗ ಬುದ್ಧಿ ಬಂತು! ಬಂದ ಬುದ್ಧಿ ಜನ್ಮಕ್ಕೆ ಸಾಕು! ಇಷ್ಟವಿದ್ದರೆ ನೋಡಿ ಬಚಾವು ಮಾಡು! ಇಲ್ಲವಾದರೆ ಎಲ್ಲಿಂದಾದರೂ ಒಂದಿಷ್ಟು ವಿಷ ತಂದು ಕೊಟ್ಟುಬಿಡು. ಅಂತೂ ಈ ಜನ್ಮ ಬೇಡಾ, ಬೇಡಾ! ಸಾಕೋ ಸಾಕು! ಅಯ್ಯಯ್ಯೋ! ನೋವೂ ನೋವೂ, ನೋವೂ!

ಹೆಂಡತಿ—ಪಿಟ್ಟೂ, ಓಡು, ಡಾಕ್ಟರರನ್ನು ಕರಕೊಂಡು ಬಾ ಮಗಾ!

ಡಾಕ್ಟರ್ (ಬಂದು ಪರೀಕ್ಷಿಸಿ)—ಮಂಜಣ್ಣನವರೇ ನಿಮ್ಮ ರೋಗವು ಘೋರವಾದ್ದು. ಅದನ್ನಿಲ್ಲಿ ಗುಣಪಡಿಸಲು ಸಾಧ್ಯವಿಲ್ಲ. ನೀವು ಮದ್ರಾಸ್ ಜನರಲ್ ಆಸ್ಪತ್ರಿಗೇ ಹೋಗತಕ್ಕದ್ದು. ಅಲ್ಲಿಗೆ ಹೋಗಲಾಗುವಷ್ಟು ತತ್ಕಾಲದ ಉಪಶಮನ ಮಾಡಿಕೊಡುತ್ತೇನೆ.

[ರಂಗರಾಯನು ಸಣ್ಣ ಪ್ರಾಯದಲ್ಲಿಯೇ ತಂದೆ ಸತ್ತು ಹೇರಳ ಸಂಪತ್ತಿಗೆ ದೊರೆಯಾಗಿರುವನು. ಆತನ ತಲೆಯಲ್ಲಿ ಸಂಪತ್ತಿನ ಅಮಲು ಏರಿಹೋಗಿರುವುದು. ಇದರ ಪ್ರದರ್ಶನವನ್ನು ವೇಶ್ಯೆಯ ಮನೆಯಲ್ಲಿ ಮಾಡುತ್ತಿರುವನು.]

ದಲ್ಲಾಲಿ—ನೋಡು, ನೀನು ಅವರನ್ನು ಮಂಕುಮಾಡಿ ಆ ಆಸ್ತಿಯನ್ನು ನಿನ್ನ ಹೆಸರಲ್ಲಿ ಹೊಡೆದುಬಿಡು. ಅವರು ಈಗ ನೀನು ಹೇಳಿದ ಹಾಗೆ ಕುಣಿಯುತ್ತಾರೆ. ಇದೇ ಈ ಕೆಲಸಕ್ಕೆ ಸುಸಂದರ್ಭ. ಇದೂ ಅಲ್ಲದೆ ಅವರಿಗೆ ಕುಡಿಯುವ ಸ್ವಭಾವವೂ ಉಂಟು. ಇದನ್ನೂ ನಾವು ಪ್ರಯೋಗಿಸಿಕೊಳ್ಳಬಹುದು.

ವೇಶ್ಯೆ—ಸರಿ, ಒಳ್ಳೇ ಆಲೋಚನೆ, ನನ್ನ ಅಜ್ಜಿ ಹೇಳುತ್ತಿದ್ದಳು, 'ಮಗಾ ಯಾವಾಗಲೂ ಯೌವನವೂ, ಸೌಂದರ್ಯವೂ ಸ್ಥಿರವಾಗಿ ನಿಲ್ಲಲಾರದು. ಹೆಚ್ಚೆಂದರೆ ಹತ್ತು ವರುಷ. ಅಷ್ಟರಲ್ಲಿ ಏನಾದರೂ ಸುಲಿದದ್ದು ಬಂತು. ಮತ್ತೆ ನಮ್ಮನ್ನು ಮೂಸುವವರು ಯಾರೂ ಇಲ್ಲ'ವೆಂತ, ಸುಳ್ಳಲ್ಲ. ನಮ್ಮ ಜಾತಿಯಲ್ಲಿ ಅನೇಕರಿಗೆ ಮುದಿಪ್ರಾಯದಲ್ಲಿ ಅನ್ನಾನ್ನ ಎಂತಾಗಿದೆ. ನನ್ನ ಗತಿ ಹಾಗಾಗದಂತೆ ಮಾಡುವ ಉಪಾಯ ಇದೇ.

ದಲ್ಲಾಲಿ—ಹಾಗಾದರೆ ಜಾಗ್ರತೆಯಾಗಿ ಕೆಲಸ ನಡಿಸಬೇಕು. ಅವರನ್ನು ಬಗ್ಗಿಸಲಿಕ್ಕೆ ನಿನ್ನ ರೂಪು, ಲಾವಣ್ಯ, ಬೆಡಗು, ಬಿನ್ನಾಣ, ಥಳಕು, ಸೌಂದರ್ಯ, ಸಾರಾಯಿಗಳು ಇವೆ. ಸ್ವಲ್ಪ ಹೊಗಳಿಬಿಟ್ಟರೆ ಏನು ಮಾಡಲಿಕ್ಕೂ ತಯಾರು. ಸಾರಾಯಿಗೆ

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ. ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1ಕ್ಕೆ 12 ಅಣೆ, ಟ. ಖ. ೯ ಅಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ.

ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪೋ, ಉಡುಪಿ.

Commonwealth Assurance Co., Ltd., Poona.

ಬೋನಸ್ಸು ದರವು 20% ಹೆಚ್ಚಿದೆ

30—4—38ರ

ಮೂರನೇ ವ್ಯಾಲ್ಯುಯೇಷನ್ ಫಲಿತಾಂಶ

ಜೀವಾವಧಿ	ತ್ರೈವಾರ್ಷಿಕ	ಎಂಡೋಮೆಂಟ್
ರೂ. 54—0—0	ಬೋನಸ್ಸು ಸಾವಿರಕ್ಕೆ	ರೂ 45—0—0

ಕಾಮನ್‌ವೆಲ್ತ್

ಏಜನ್ಸಿ ಮತ್ತು ಪಾಲಿಸಿ ವಿವರಗಳಿಗೆ ಇಂದೇ ಬರೆಯಿರಿ.

ಕಾಮನ್‌ವೆಲ್ತ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ.

ಗವಾಂಕರ್ ಅಂಡ್ ಸನ್ಸ್,

ಚೀಫ್ ಏಜಂಟ್ಸ್: ಆನಂದರಾವ್ ಸರ್ಕಲ್, ಬೆಂಗಳೂರು.

ಸ್ವಲ್ಪ ಬಂಗಿಯನ್ನು ಸೇರಿಸುವ ಏಲಿವಾರಿ ಮಾಡುತ್ತೇನೆ. ದಕ್ಕತಿಗೆ ದಸ್ತಾವೇಜು ತಯಾರಮಾಡಿ ತಂದಿಡುತ್ತೇನೆ. ಕೆಲಸವಾದ ನಂತರ ನನ್ನನ್ನು ಮರೆತು ಬಿಡಬೇಡ, ಕಂಡ್ಯಾ!

ವೇಶ್ಯೆ— ಇಲ್ಲ, ಎಂದೂ ಇಲ್ಲ. ನಾನು ನಿಜವಾಗಿಯೂ ನಿನ್ನ ಮನಸ್ಸನ್ನು ಸಂತೋಷಪಡಿಸುವೆನು.

ಂ ಂ ಂ ಂ

(ರಂಗರಾಯರ ಬಂಗಲೆ)

ದಲಾಲಿ—ಸ್ವಾಮಿ, ಒಳಗೆ ಬರಬಹುದಾ?

ರಂಗರಾಯ—ಯಾರದು?

ದಲಾಲಿ— ನಾನು —

ರಂಗರಾಯ—ನಾನಂದರೆ?

ದಲಾಲಿ—ಸ್ವರದಿಂದ ತಿಳಿಯುವುದಿಲ್ಲವೇ?

ರಂಗರಾಯ—ಓಹೋ! ಗೊತ್ತಾಯಿತು. ಏನು ವಿಶೇಷ?

ದಲಾಲಿ—ಮತ್ತೆ, ಮತ್ತೇ–ನೂ ಇಲ್ಲ–ಅವಳಿಗೆ–ನಿಮ್ಮವಳಿಗೆ–ಅದೇನೋ ನೀವು ಒಂದು ಗಳಿಗೆ ಅಲ್ಲಿಲ್ಲಾಂದ್ರೆ ಯುಗ ಯುಗವಾಗಿ ಕಾಣುತ್ತಂತ. ಹೋಗು, ಕರಕೊಂಡು ಬಾ, ಅಂತ ಪೀಡಿಸುತ್ತಾಳೆ. ನೀವಲ್ಲಿ ಇಲ್ದಿದ್ರೆ ಕಾಫಿ ಬೇಡ, ಊಟ ಬೇಡ, ಯಾವದೂ ಬೇಡ–ಏನು ವೈರಾಗ್ಯ ಬಂದುಬಿಡ್ತೆ ಅವಳಿಗೆ ನೀವು ಬಂದ್ರೀಂದ್ರೆ ತುದಿಗಾಲಲ್ಲಿ ಕುಣಿಕುಣಿದಾಡ್ತಾಳೆ! ನಿಜವಾದ ಪ್ರೇಮಾಂದ್ರೆ ಹಾಗೆ! ಈಗ ಎರಡು ಮೂರು ದಿನಗಳಿಂದ ಅವಳಿಗೆ ಸ್ನಾನವಿಲ್ಲ, ಊಟವಿಲ್ಲ, ನಿದ್ದೆಯಿಲ್ಲ–ಎಲ್ಲ ನೀವು ಬಂದಿಲ್ಲಾಂತ!

ರಂಗರಾಯ—ಗೇಣಿಗೀಣಿ ವಸೂಲಿನ ಸಮಯ–ತೀರ್ವೆಗೀರ್ವೆದ್ದು ಅರ್ಜೆಂಟು–ಸ್ವಲ್ಪ ಕೆಲ್ಸದ ಜರೂರು–ಬರಲಿಕ್ಕಾಗಲಿಲ್ಲ. ಆದರೆ ಅವಳು ಅಷ್ಟು ಚಿಂತೆಯಲ್ಲಿದ್ದಾಳಾ? ಹಾಗಾದರೆ ನಿಜವಾಗಿ ಅವಳಲ್ಲಿ ಪ್ರೇಮ ಧರ್ಮ ಎಂಬೋದುಂಟು!

ದಲಾಲಿ—ಇಂಥಾ ಪ್ರೇಮ ಧರ್ಮ ಎಂಬೋದು ಕೆಲವು ಸಲ ವೇಶ್ಯೇರಲ್ಲಿದ್ದಷ್ಟು ಗರತಿಯಲ್ಲಿರೋದಿಲ್ಲ. ಹಿಡಿದವರ ಮನೆ ತೆಗಿಯೋದರ ಬದಲಾಗಿ ತಮ್ಮ ಮನೆಕೊಟ್ಟವುಗಳೂ ಇವೆ. ಅಂಥಾ ಜಾತೀದ್ದು ನಿಮ್ಮ ಈಗಿನ ಕುಳುವಾರು. ಈ ಎರಡು ಮೂರು ದಿವಸಗಳಲ್ಲಿ ಅವಳು ಸುರಿಸಿದ ಕಣ್ಣೀರು ಕನ್ನಿಯಂದರೆ ಎರಡು ಮೂರು ಬಾಟ್ಲಿಗೆ ಕಡಿಮೆಯಾಗಲಿಕ್ಕೆ ಇಲ್ಲ.

ರಂಗರಾಯ—ಕಳೆದ ಸಾರಿ ಒಳ್ಳೇ ಮಾವಿನ ಹಣ್ಣು ಸಿಕ್ಕಿದರೆ ಸ್ವಲ್ಪ ತರಿಸಿಬಿಡಿ ಅಂತ ಹೇಳಿದ್ದಾಳೆ–ಅದಕ್ಕೆಲ್ಲಾ ಏಲಿವಾರಿ ಮಾಡಿದ್ದೇನೆ.

ದಲಾಲಿ— ಅದೆಲ್ಲಾ ಈಗ ಇಲ್ಲದಿದ್ದರೆ ಹಿಂದಿನಿಂದ ಬಂದರೂ ಚಿಂತೆಯಿಲ್ಲ–ಸ್ವಾಮಿ, ನಿಮ್ಮ ಮಾವಿನ ಹಣ್ಣು, ಹಣ, ಆಸ್ತಿ ಪಾಸ್ತಿ ಮೇಲೆ ಮೋಹಬಿದ್ದವಳಲ್ಲ ಅವಳು–ಅವಳಿಗೆ ಬೇಕಾದ್ದು ನೀವು–ನಿಮ್ಮ ಪ್ರೀತಿ–ಅದನ್ನು ಪರೀಕ್ಷಿಸಲಿಕ್ಕಾಗಿ ಕೆಲವು ಸಲ ಹುಚ್ಚಾಟ್ಟೆ ಕೇಳೋದುಂಟು! ಅದೆಲ್ಲಾ ಪ್ರೇಮ ಪರೀಕ್ಷೆ! ಅಂಥವಕ್ಕೆ ಅದೊಂದು ಹುಚ್ಚು ಕಾಣ್ರೀ! ಅಂತೂ ತಾನೊಂದ್ರೆ ಏನೂ ಕೊಟ್ಟುಬಿಡ್ತಾರೆಂತ ಆಸ್ಗೇಕು. ಅಷ್ಟಾದ ಮೇಲೆ ತಕ್ಕೊಂಡವಕ್ಕೆ ತಮ್ಮದೂ ಸೇರಿಸಿ ತಮ್ಮ ಪ್ರೇಮದ ಕಾಣಿಕೆಯೆಂತ ಹಿಂದೆ ಕೊಟ್ಟುಬಿಡ್ತವೆ. ಹಾಗೆ ನಡೀದಿದ್ದರೆ ತಮ್ಮನ್ನು ಹಿಡಿದವರು ಹಿಂಜರಿದ್ರೂಂತ ಕಂಡುಬಂದ್ರೆ ಪ್ರಾಣತೆಕ್ಕೊಳ್ತಾವ್ರೀ ಅಂಥವು–ವಿಚಿತ್ರ ಜಾತಿ! ವೇಶ್ಯೇರಲ್ಲಿ ಸಿಕ್ಕೋದೇ ಅಪರೂಪ! ನಿಮಗೇನೋ ಗಂಟುಬಿದ್ದಿದೆ ಅಂಥಾ ತಾಜಾ ಜಾತಿ!

ರಂಗರಾಯ—ಹಾಗಾದರೆ ಈಗಲೇ ಬಂದೆ—ನಡಿ.

[ವೇಶ್ಯೆಯ ಮನೆ]

ರಂಗರಾಯ—ಏನು, ಯಾಕೆ ಇಷ್ಟೆಲ್ಲಾ ವೈರಾಗ್ಯ? ನಾನೊಂದೆರಡು ದಿನ ಬಾರದಿದ್ದರೆ ನಿನ್ನನ್ನು ಮರೆತುಬಿಟ್ಟಂತೆ ತಿಳಿದೆಯಾ? ಜೀವ ಇಲ್ಲಿತ್ತು, ದೇಹ ಅಲ್ಲಿತ್ತು. ಕೆಲಸದ ಗರ್ಜು ಅಂಥಾದಿತ್ತು. ಹೋಗು ಇನ್ನಾದರೂ ಊಟಮಾಡು. ಚಲೋ ಮಾವಿನ ಹಣ್ಣಿನ ಏಲಿವಾರಿ ಮಾಡಿದ್ದೇನೆ, ನಾಳೆ ನಾಡದೇ ಇಲ್ಲಿಗೆ ಬರುವ್ರದು.

ವೇಶ್ಯೆ—ಅದು ಯಾವುದೂ ಬೇಡ, ನೀವು ಬಂದದ್ದೇ ನನಗೆ ಇವತ್ತು ಸ್ವರ್ಗ ಸಿಕ್ಕಿದ ಹಾಗೆ. ನಿಮ್ಮನ್ನು ಬಿಟ್ಟು ನಾನು ಊಟ ಮಾಡಲಾರೆ. ನಿಮ್ಮ ಮೋರೆಯನ್ನು ನೋಡಿ ಊಟ ಮಾಡುವುದೇ ನನಗೆ ಪರಮಾನಂದ.

[ಇಬ್ಬರೂ ಒಟ್ಟಿಗೆ ಊಟ ಮಾಡುವರು. ದಲಾಲಿಯು ಬಂಗಿ ಬೆರೆಸಿದ ಶರಾಬನ್ನು ಗ್ಲಾಸಿನಲ್ಲಿ ಹಾಕಿಕೊಡುವನು, ರಂಗನು ಮಂಗನಾಗುವನು]

ರಂಗರಾಯ—ಹಾ ಮೋಹಿನಿ, ನೀನೇ ನನ್ನ ಸರ್ವಸ್ವ! ನನ್ನ ಪ್ರಾಣದ ಪ್ರಾಣ! ನನ್ನ ಜೀವ, ನಿನ್ನಿಂದಲೇ ನನಗೆ ಸುಖ, ಸ್ವರ್ಗ, ನಾನೇ ಧನ್ಯನು. ಸಂಪತ್ತಿನ ಸುಖವು ತಂದೆಯಿಂದ ನನಗೆ ಸಿಕ್ಕಿತು. ಸ್ತ್ರೀ ಸುಖವು ನಿನ್ನಿಂದ ಸಿಕ್ಕಿತು. ನಾನು ಕೃತಾರ್ಥನು, ನೋಡು ನಿನಗೆ ಕೊಡಲು ನೋಟಿನ ಕಟ್ಟುಕಟ್ಟನ್ನೇ ತಂದಿರುವೆನು

ವೇಶ್ಯೆ—ನೀವಿರುವಾಗ ಇದು ನನಗೆ ತೃಣಸಮಾನ.

ರಂಗರಾಯ—ಹಾಗೋ,– ಹಾಗಾದರೆ ನಿನ್ನೆದುರಿಗೆ ಇದು ನನಗೂ ತೃಣಸಮಾನ! ನೋಡು, ಈ ತೃಣಕ್ಕೆ ಬೆಂಕಿಹಚ್ಚುತ್ತೇನೆ—

[ಒಂದು ನೋಟನ್ನು ಕಟ್ಟಿನಿಂದ ತೆಗೆದು ಬೆಂಕಿಕಡ್ಡಿ ಕೀರಿ ಸುಟ್ಟಾಗ]

ದಲಾಲಿ—ಸುಮ್ಮನೆ ಯಾಕೆ ಶ್ರಮ ತಗೋತೀರಿ! ಅಪರೂಪ ಸಮಾಗಮದ ಅಮೂಲ್ಯಸಮಯವನ್ನೇ ಹಾಳ್ಮಾಡ್ತೀರಿ–ಆ ಕಟ್ಟನ್ನು ಇತ್ತ ಕೊಡಿ! ನಾನೇ ಬಚ್ಚಲ ಒಲೆಗೆ ಇಟ್ಟು ಬಂದುಬಿಡ್ತೇನೆ.

ವೇಶ್ಯೆ—ಹ್ಞೂಂ! ಕೊಟ್ಟುಬಿಡಿ! ನಿಮ್ಮ ಪ್ರೇಮ ಎಷ್ಟೆಂಬುದರ ಒಂದು ದೃಷ್ಟಾಂತ ಕಂಡಂತಾಯಿತು. ನನಗಾಗಿ ಕಟ್ಟುಕಟ್ಟು ನೋಟು ಸುಡಲೂ ತಯಾರ್ ನೀವು! ಅಯ್ಯೋ ನನ್ನ ಭಾಗ್ಯ ಏನು ಹೇಳ್ಲೀ! ನನ್ನ ದೇವರನ್ನ ಇನ್ನೊಂದು ಪರೀಕ್ಷೆ ಮಾಡ್ಬೇಕೊ!

ರಂಗರಾಯ(ಅಮಲಿನಿಂದ)—ಹ್ಞೂಂ! ಆಗಲಿ ಇನ್ನೊಂದಲ್ಲ—ಹತ್ತು ಪರೀಕ್ಷೆ ಆಗಲಿ! ನಾನು ಪಾಸ್!

ವೇಶ್ಯೆ—ಪ್ರಾಣೇಶ—ನೋಡಿ ಈ ಕಾಗ್ದಕ್ಕೆ ಒಂದು ದಸ್ಕತ್ತು ಹಾಕಿ.

ರಂಗರಾಯ—ಒಂದು ಯಾಕೆ? ನೀನು ತಂದ ನೂರು ಕಾಗ್ದಕ್ಕೆ ಹಾಕುವೆನು. ಮೊದಲು ಒಂದು ಗ್ಲಾಸ್—ಆಗ ಕೊಟ್ಟದ್ದನ್ನು ಕೊಡು—ಹಾ—ಪರಮಾನಂದ.

[ಕುಡ್ದು ಅಮಲಿನ ಅರೆ ನಿದ್ದೆಯಿಂದ ದಸ್ಕತ್ತು ಹಾಕುವನು.]

ದಲಾಲಿ—ಹೊರಗೆ ಯಾರೋ ಕರಯುವರು—

ರಂಗರಾಯ—ಯಾ...ರ...ದು— ಒಳ...ಗೆ—ಬ....ರ...ಮಾ. ..ಡು.

ಕೆಲಸದವ—ನಾನು ಬುದ್ಧಿ—ಬಚ್ಚ,

ರಂಗರಾಯ—ಬ....ಚ್ಚ! ಬ...ಚ್ಚಾ! ಏ ...ನಾ?

ಬಚ್ಚ—ಬುದ್ಧಿ, ತಮ್ಮ ಹೆಂಡ್ತಿಗೆ ಪ್ರಾಣಾಂತಿಕಾಂತ ತಾರು ಬಂದಿದಂತೆ ತೌರುಮನೆಯಿಂದ! ತಮ್ಮ ತಾಯೋರು ಪ್ಯಾಟಿಗೆ ಓಡಿಹೋಗಿ ಹುಡುಕಿಕೊಟ್ಟು ಕರಕೊಂಡು ಬಾ ಅಂದ್ರು - ನೋಡಿ ಬುದ್ಧೀ—ಇಲ್ಲದೆ, ತಾರು!

ರಂಗರಾಯ–ಹೋಗ–ಹೋ–ಗಲಿಯಾ ಪ್ರಾ–ಣಾ–ಂ–ತಿ–ಕ–ವಾ? ಆಗಲಿ–ಬೇಗ ಅಂತ್ಯವಾಗ್ಲೀಂತ ತಾರ್ ಕೊಡೂ!ಚ–ಲೋ ಬಾ–ವ್! ಮೋಹಿನಿ ಇಲ್ಲಿ ಬಾ—ನೀನೇ–ನೀ–ನೇ– ನೀನೇ–ಸ್ವರ್ಗ–ನಿನ್ನ ಹತ್ತರವಿದ್ದವನಿಗೆ ಮ–ರ–ಣ–ವಿ–ಲ್ಲ.

ಂ ಂ ಂ ಂ

[ರಂಗರಾಯನ ಸಹಪಾಠಿ ವಿಠಲರಾಯನು ಒಂದು ದಿವಸ ಅವನ ಸಹಧರ್ಮಿಣಿ ರಮಾದೇವಿ ಒಟ್ಟಿಗೆ ತಿರುಗಾಡಲಿಕ್ಕೆ ಹೋದಾಗ]

ಭಿಕ್ಷುಕ—ಕಣ್ಣಿಲ್ಲ–ದಮ್ಮಯ್ಯಾ,–ಗತಿಯಿಲ್ಲ,–ಒಂದು ಕಾಸು ಕೊಡಿ. ಒಂದು ರುಪಿ, ದಮ್ಮಯ್ಯಾ ಒಂದು ರುಪೀ.

ರಮಾದೇವಿ (ಗಂಡನೊಂದಿಗೆ)—ನೋಡಿ ಜೇಬಿನಲ್ಲಿ ಪೈ ಉಂಟ ನೋಡಿ, ಆ ಭಿಕ್ಷುಕನಿಗೆ ಹಾಕಿ

ವಿಠಲರಾಯ (ಹತ್ತಿರಹೋಗಿ ಹಾಕುವನು)—ಪ್ರಿಯೇ, ಅದು ಯಾರೆಂದು ಬಲ್ಲಿಯಾ ನೀನು?

ರಮಾದೇವಿ—ಇಲ್ಲ.

ವಿಠಲರಾಯ—ಮನೆಗೆ ಹೋಗುವ ಅಲ್ಲಿ ಹೇಳುವೆನು. ಇಷ್ಟೆ ನೀನು ಮೂರ್ಛೆಯಾಗುವಿ–ಏನು ಶೋಚನೀಯ, ಅಯ್ಯೋ ಲೋಕವೇ!

ಬರುವ ಲೇಖನ:—

'ಕಾಬೂರ್'



ಸರಿಯಾದ ಸಮಯವನ್ನು ಸೂಚಿಸತಕ್ಕ ಅತ್ಯಾಧುನಿಕ ಲಿವರ್ ರಿಸ್ಟ್‌ವಾಚಿಗಳು ಉರುಟು ಯಾ ಚಚ್ಚೌಕ ಆಕಾರದಲ್ಲಿದ್ದುದಕ್ಕೆ ರೂ. 1-15-0 ಮಾತ್ರ. 4 ವರ್ಷಗಳ ಗ್ಯಾರಂಟಿ. ಉತ್ತಮ ಜಾತಿಗೆ ರೂ. 2-8-0, ಅತ್ಯುತ್ತಮದಕ್ಕೆ ರೂ. 3-0-0, ಚಿನ್ನದ ಕವಚದಕ್ಕೆ ರೂ. 3-8-0, ಕ್ರೋಮಿಯಮಿಗೆ ರೂ 4-8-0, ರೋಲ್ಡ್ ಗೋಲ್ಡಿಗೆ ರೂ.6-8-0, ಚಿತ್ರ ಪಟದಲ್ಲಿ ತೋರುವಂತಹದಕ್ಕೆ ರೂ. 8-8-0. ಅಂಚೆವೆಚ್ಚ 0-10-0 ಪ್ರತ್ಯೇಕ.

Empress Trading Co.,
***P.O. Box No. 6744,* Calcutta(G)**

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪ್ರೋವಿನ ರಿಂಗ್‌ವರ್ಮ್ ಮುಲಾಮು —

ಇಸ್ವರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪ್ರೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪ್ರೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು, ಕ್ರಯ ಬಾಟ್ಲಿ 1ಕ್ಕೆ ರೂ 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ

ಮೈಸೂರು ಸ್ಟೇಟಿನ ಏಜಂಟರು:— ಶ್ರೀ. ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, — ಯಂ. ಆರ್. ಪೂಂಜ,

President & Manager, — ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!!

K R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪ್ ಒಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,

ಗವರ್ನ್‌ಮೆಂಟ್ ಕೊಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ,ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ. 2—8—0.

ಕಸ್ತೂರಿಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ. ಬಾಟ್ಲಿ 1ರ ರೂ. 1—8—0.

ಬಾಲಗ್ರಹ ಗುಟಿಕೆ

ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಮುಟಿಕ, ಅಪಸ್ಮಾರ ಇವುಗಳಿಗೆ ದಿವ್ಯೌಷಧ. ಬಾಟ್ಲಿ 1ರ ರೂ. 0—10—0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,

Hampankatte, **MANGALORE**

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಡುನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ ಬಹಿಷ್ಟೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತು ಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ 1—0—0.

ನಮ್ಮ ರೆಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು "ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ ಅಗತ್ಯವಾಗಿ ಇರಲೇಬೇಕಾದ್ದು.

ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,

ಬ್ರಾಂಚ್—ಮಂಗಳೂರು.

NAVABHARAT BOOK DEPOT

BOOK-SELLERS & PUBLISHERS

Church Road-Udipi.

ನಮ್ಮಲ್ಲಿ

ಎಲ್ಲಾತರದ ಶಾಲಾಪುಸ್ತಕಗಳೂ

ಲೈಬ್ರರಿಗೆ ಬೇಕಾದ ಪುಸ್ತಕಗಳೂ

ದೊರೆಯುತ್ತವೆ.

ಕೆಟಲಾಗಿಗೂ

ಇತರ ಮಾಹಿತಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ

ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು

ಚರ್ಚ್ ರೋಡ್ ಉಡುಪಿ

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಅಜೀರ್ಣ, ಉಬ್ಬಸ, ಚುಚ್ಚುವ ಮತ್ತು ಎಳೆಯುವ ತರದ ವೇದನೆಗಳಲ್ಲಿಯೂ ವಾಂತಿ, ಜ್ವರ, ಅತಿಸಾರ, ಕೆಮ್ಮು, ಮಸ್ತಕ ಶೂಲೆ, ಪಾರ್ಶ್ವ ಶೂಲೆ, ಕಟಿಶೂಲೆ, ಚಂಡವಾಯು, ಎಲ್ಲಾ ತರದ ವಾತರೋಗ ಮತ್ತು ಆಮಾಶಯದಲ್ಲಿ ಉಂಟಾಗುವ ರೋಗಗಳ ಕೋಪಜನಿತ ರೋಗಗಳಲ್ಲಿಯೂ ಅಪ್ರತಿಮ. ಮೂತ್ರವಿಕಾರ ಸ್ತ್ರೀರೋಗ ಅಮ್ಲ ಪಿತ್ತ ಇವಕ್ಕೆ ದಿವ್ಯೌಷಧ. ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ. ಕ್ರಯ:-100 ಮಾತ್ರೆಗಳಿಗೆ ರೂ. 1-5-0, 500ಕ್ಕೆ ರೂ. 5-0-0. ಒಂದಾಣೆ ಸ್ಟಾಂಪು ಕಳಿಸಿದರೆ 12 ಮಾತ್ರೆ ಕಳಿಸಲ್ಪಡುತ್ತದೆ

ಆಮಲಕೀ ತೈಲ

(ಸುಗಂಧಯುಕ್ತ ಕೇಶವರ್ಧಕ ತೈಲ)

ಮಿದುಳಿಗೆ ತಂಪನ್ನೂ ನೇತ್ರಕ್ಕೆ ಆರೋಗ್ಯವನ್ನೂ ಸುಖ ನಿದ್ರೆಯನ್ನೂ ಕೊಟ್ಟು ಮನೋವಿಕಾಸಗೊಳಿಸುವ ಅಮೃತಪ್ರಾಯ ತೈಲ.

4 ಔನ್ಸಿನ ಸೀಸೆ ಒಂದರ 0—11—0.
2 ಔನ್ಸಿನ ಸೀಸೆ ಒಂದರ 0—6—0

ನಮ್ಮ ಔಷಧಿಗಳು ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ, ಇಲ್ಲಿ ಸಿಗುತ್ತವೆ. ಕಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ

ಸ್ವದೇಶೀ ಔಷಧಿ ಭಂಡಾರ, ಕುಂಜಾಲ್,
ಬ್ರಹ್ಮಾವರ ಪೋಸ್ಟ್, ದ. ಭಾರತ

ABSOLUTELY FREE!

Bring this coupon and you will get your own Photo absolutely free of charge

☞ The rate for the enlargement of the same Rupee one only (size 6"×8").

Send your old photo and you will get enlargement 6'×8' for Rs. 2—8—0. ony and big size 16'×20' for Rs. 5 only.
Our time every day 9 a. m. to 7 p. m. Sunday 9 a. m. to 4p. m.

K. J. PATHAK

276 Surya Mahal Girgaum Road, BOMBAY, 4.	Royal Art Studio 183 Hornby Road. BOMBAY, 1.

ಕೇವಲ ಧರ್ಮಾರ್ಥ!

ಈ ಜಾಹೀರಾತಿನ ಕೂಪನನ್ನು ತರುವವರಿಗೆ ಅವರ ಫೋಟೋವನ್ನು ಧರ್ಮಾರ್ಥವಾಗಿ ತೆಗೆದುಕೊಡಲಾಗುವುದು.

ತ್ವರೆ ಮಾಡಿರಿ! ಬೊಂಬಾಯಿ ಪಟ್ಟಣಿಗರೆ ತ್ವರೆ ಮಾಡಿರಿ!!

● ಈ ನಮ್ಮ ಫೋಟೋವನ್ನು ಎನ್‌ಲಾರ್ಜ್‌ಮೆಂಟಿಗೆ ಬರೇ ರೂ. 1/. ಮಾತ್ರ. (ಸೈಜ್ 6"×8").

ಹೊರಗಿನವರು ಈ ಕೂಪನಿನೊಂದಿಗೆ ತಮ್ಮ ಫೋಟೋ ಕಳುಹಿಸಿದರೆ ಅದನ್ನು 6'×8' ಸೈಜಿನಲ್ಲಿ ರೂ. 2-8-0ಕ್ಕೆ ಎನ್‌ಲಾರ್ಜ್ ಮಾಡಿಕೊಡಲಾಗುವುದು. 16×20'ರ ದೊಡ್ಡ ಸೈಜಿಗೆ ರೂ. 5 ಮಾತ್ರ. ನಮ್ಮ ಆಫೀಸು ಸಮಯ ಬೆಳಗ್ಗೆ 9ರಿಂದ ಸಂಜೆ 7, ಆದಿತ್ಯವಾರ ಬೆಳಗ್ಗೆ 9ರಿಂದ ಸಂಜೆ 4 ಗಂಟೆ ತನಕ

ಕೆ. ಜೆ. ಪಥಕ್

276, ಸೂರ್ಯಮಹಾಲ್ ಗಿರ್ಗಾಮ್‌ರೋಡು ಬೊಂಬಾಯಿ 4	ರೋಯಲ್ ಆರ್ಟ್ ಸ್ಟುಡಿಯೋ, 183 ಹೋರ್ನ್ಬಿರೋಡು, ಬೊಂಬಾಯಿ 1

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲರಾ ಪಿಲ್ಸ್	ಭೈರವ ಮಾತ್ರೆಗಳು
ಕೊಲರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Supply Agency Limited.
(BANKERS)

ESTD] **UDIPI** [1933

Authorised Capital Rs. 1,00,000
Subscribed & Paid up Rs. 30,760

RATE OF INTEREST FOR FIXED DEPOSITS.

3 to 6 Months	4%	p. a.
7 to 11 "	5%	"
12 to 18 "	6%	"

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

General Supplies Limited.
UDIPI

PROPRIETORS:

Sri Bharata Vastu Mandira,
Thulunad Stationery Mart.
Manipal Power Press.
Thulunad Press,
Antaranga

THE BEST MEDIUM FOR ADVERTISEMENT
Yugadi Special of Antaranga
to be published on 16—4—1939

pages exceed	....	100
copies exceed	....	10,000
single copy		0 2 0

ತುಳುನಾಡ್ ತಿಲಕ ಪಂಚಾಂಗ

ಬೆಲೆ ೦—೧—೦
ಮಾರಾಟಕ್ಕೆ ತಯಾರಾಗಿದೆ.
ವ್ಯಾಪಾರಿಗಳಿಗೆ ಧಾರಾಳ ಕಮಿಶನ್
ಬೇಕಾದವರು ತರಿಸಿಕೊಳ್ಳಬಹುದು.

PRINTED BY S. S. KARANTH AT THE THULUNAD PRESS, UDIPI and Published by K. H. SHETTY at "NAVAYUGA" OFFICE, UDIPI, South India.

Registered No. M. 3618

NAVAYUGA

ನವಯುಗ

30-3-1939
ತಿಂಗಳ ಕಾಣಿಕೆ-೭



ಕರ್ನಾಟಕದ ಪ್ರಸಿದ್ಧ ಕತೆಗಾರರಲ್ಲೊಬ್ಬರಾದ
ಶ್ರೀ. ಕೊರಡ್ಕಲ್ಲರ
ಹನ್ನೊಂದು ಕತೆಗಳ ಸಂಗ್ರಹ
ನಂದಾದೀಪ

ಪ್ರಕಾಶಕರು:
ಕಿರಿಯರ ಪ್ರಪಂಚ, ಉಡುಪಿ.

ಬೆಲೆ ಎಂಟಾಣೆ

ಕರ್ನಾಟಕದಲ್ಲೆಲ್ಲ ಅತ್ಯುತ್ತಮ
ಕಥಾಸಂಗ್ರಹವೆಂದು ಕೊಂಡಾಡಲ್ಪಟ್ಟ,
ಜನಜೀವನದ ಪಡಿನೆಳಲಂತಿರುವ
ಉಚ್ಚತಮ ಕತೆಗಳ ಸಂಗ್ರಹ.

9 ಆಣೆ ಸ್ಟಾಂಪು ಕಳಿಸಿದರೆ
ಒಂದು ಪ್ರತಿಯನ್ನು ಕಳಿಸಲಾಗುವುದು.
ನವಭಾರತ ಪುಸ್ತಕ ಭಂಡಾರ
ಉಡುಪಿ.



ಬಲು ಸುಲಭ ದರದಲ್ಲಿ

- ಉತ್ಕೃಷ್ಟ ಊಟ. ಉಪಹಾರಾದಿಗಳಿಗಾಗಿ ಇತ್ತ ಗಮನಿಸಿರಿ !
- ನೀವು ನಮ್ಮನ್ನೇ ಪ್ರಶಂಸಿಸಿ ಕೊಳ್ಳಬಾರದಷ್ಟೆ !

ಲಕ್ಷ್ಮೀನಿವಾಸ ಹಿಂದೂ ಹೋಟೆಲ್

(ಸ್ಥಾಪನೆ 1926)

ವಿಠಲ್‌ಭಾಯಿ ಪಟೇಲ್ ರೋಡ್, ಗಿರ್ಗಾಂ, ಮುಂಬಯಿ.

Lakshmi Nivas Hindu Hotal

VITTALBHAI PATEL ROAD,
GIRGAUM - - - BOMBAY

ಎರಡನೇ ಮೈಸೂರು ಕಾಂಗ್ರೆಸ್ ಅಧಿವೇಶನ ಸ್ವಾಗತ ಕಮಿಟಿಯವರ ಆಶ್ರಯದಲ್ಲಿ

ವಿದುರಾಶ್ವತ್ಥ

ಖಾದಿ, ಸ್ವದೇಶಿ ಮತ್ತು ಗ್ರಾಮ ಕೈಗಾರಿಕೆಗಳ ಪ್ರದರ್ಶನ

ಎಪ್ರಿಲ್ 12ನೇ ತಾರೀಖಿನಿಂದ 19ನೇ ತಾರೀಖಿನ ವರೆಗೆ

ವಿದುರಾಶ್ವತ್ಥ ಮಹಾಕ್ಷೇತ್ರದಲ್ಲಿ

ನಡೆಸಲಾಗುತ್ತದೆ.

ಪ್ರದರ್ಶನದ ಕೈಪಿಡಿಯೊಂದನ್ನು ಇದರೊಡನೆ ಪ್ರಕಟಿಸಲಾಗುವುದು.

ಸ್ಥಳ (ಸ್ಟಾಲು) ಮತ್ತು ಜಾಹೀರಾತುಗಳಿಗೆ ಬರೆಯಿರಿ.

ಬಿ. ಎಸ್. ಎಚ್ ರಾಜನ್ ಅಂಡ್ ಬ್ರದರ್, ಟ್ರೇಡ್‌ಮಾರ್ಕ್ಸ್ ಮತ್ತು ಪಬ್ಲಿಶರ್ಸ್ ಮಲ್ಲೇಶ್ವರ ಪ್ರೋನ್ಸ್, (ಬೆಂಗಳೂರು ಸಿಟಿ.)

ಅಥವಾ

ಕಾರ್ಯದರ್ಶಿ ಎಕ್ಸಿಬಿಷನ್ ಕಮಿಟಿ ಇಂಡಿಯನ್ ಪ್ರೆಸ್, ಬಳೆಪೇಟೆ ಬೆಂಗಳೂರುಸಿಟಿ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಬಿಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮಿ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಮೃದ್ವೀಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ಶಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE Vijaya Bank, LTD

HEAD OFFICE: **MANGALORE**

BRANCHES: **Udipi, Coondapoor, Kaup & Karkal.**

Fixed deposits are now received at all the offices of the Bank at the following terms:-

3 Months Fixed Deposits at 3 p. c. per annum.
6 Months / 9 months Fixed Deposits at 3½ p. c. per annum.
One year Fixed Deposits at 4 p. c. per annum.
Two years' Fixed Deposits at 4½ p. c. per annum.

Interest on Fixed Deposits is payable every quarter.
Every kind of Banking business undertaken.

Further particulars can be had on application to the Head Office or any of the branches.

K. Gopalkrishna Shetty,
Secretary.

THE
PANGAL NAYAK BANK
Estd.] LIMITED. [1920

ದಿ ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್.

Paid up Capital Rs. 1,82,100/-. Reserves Rs. 2,02 800/-.
PRINCIPAL OFFICE: COURT ROAD, UDIPI.
OTHER OFFICES:
UDIPI MANGALORE, KATAPADI, & KANHANGAD.

Season Deposits so as to bear interest at 4per cent per annum till the end of June 1939 are accepted.

Cumulative Deposits are also received on the usual terms.

Banking business of every description is transacted. Further particulars may be had on application.

Transport & Car Owners



ARE SPECIALLY INVITED TO VISIT
OUR SHOW ROOM
for economical transport maintenance.
CANARA AUTOMOBILES - - - - - MANGALORE

WANTED

Organisers in Taluka centres either on salary or commission basis or both Influential young men need apply. Selected candidates should be prepared to deposit a sum of Rs 100/-. For full particulars apply with an anna stamp to Box No. 5,
C/o NAVAYUGA. UDIPI

— ಕೂದಲು ರಂಗು ತ್ಯಜಿಸಿರಿ —

ಈ ತೈಲದ ಲೇಪನಮಾತ್ರದಿಂದಲೇ ಕೂದಲು ಬೆಳ್ಳಾಗುವುದು ನಿಲ್ಲುವುದು. ನರೆತ ಕೂದಲು ಪೂರ್ಣ ಕಪ್ಪಾಗಿ ಬೆಳೆಯುವುದು. ಸಾವಿರಾರು ಸರ್ಟಿಫಿಕೇಟುಗಳು ನಮ್ಮ ತೈಲದ ಯೋಗ್ಯತೆಯನ್ನು ಸಾರುತ್ತವೆ. ಉಪಯೋಗದಿಂದ ಗುಣ ಕಾಣದಿದ್ದರೆ ಕೊಟ್ಟ ಹಣ ವಾಪಾಸು ಕೊಡುವ ಶರ್ತವಿದೆ. ಅಲ್ಪಸ್ವಲ್ಪ ನರೆತ ಕೂದಲುಗಳಿಗೆ ಬೇಕಾಗುವ ತೈಲಕ್ಕೆ ರೂ. 4, ಕಾಲುಪಾಲಿಗೂ ಮಿಕ್ಕಿರುವುದಾದರೆ ರೂ.7. ರನ್ನು ಬೆಲೆಯ ತೈಲವು ಬೇಕಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲೇ.

Hazra & Co,
P. O Behar Nersery, Darbhanga

ESTD 1921
FOUNDER
Sri A B SHETTY MLA
Parliamentary Secretary Govt of Madras
ಸಂಸ್ಥಾಪಕರು
ಶ್ರೀ ಎ. ಬಿ. ಶೆಟ್ಟಿ, ಎಂ ಎಲ್ ಎ

ಸಂಪಾದಕ
ಕೆ ಕೆ ಶೆಟ್ಟಿ

ನವಯುಗ
NAVAYUGA WEEKLY UDIPI

ಸಂಪುಟ ೧೮ ಸಂಚಿಕೆ ೩೦ | ಉಡುಪಿ, ಗುರುವಾರ ೩೦-೩-೧೯೩೯ Udipi. Thursday 30—3—1939 | Vol XVIII No 30

ಸ್ಥಾಪನೆ. ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ ೩-೮-೦
೬ ತಿಂಗಳಿಗೆ ರೂ ೧-೧೨-೦

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ
ಕೆ. ಎಚ್. ಶೆಟ್ಟಿ.

ಹೈದರಾಬಾದ್ ಸತ್ಯಾಗ್ರಹ

ಹೈದರಾಬಾದ್ ಸಂಸ್ಥಾನದಲ್ಲಿ ಆರ್ಯ ಸಮಾಜ ಸತ್ಯಾಗ್ರಹ ಚಳವಳಿಯನ್ನು ಮುಂದೊತ್ತುವುದಕ್ಕಾಗಿ ೧೬೦ ಸತ್ಯಾಗ್ರಹಿಗಳೊಂದಿಗೆ ಲಾಲಾ ಖುಶಲ್‌ಚಂದರವರು ಬೊಂಬಾಯಿಯಿಂದ ಹೊರಟಿರುವರು ಸತ್ಯಾಗ್ರಹದ ಮೂರನೆಯ ಸರ್ವಾಧಿಕಾರಿ (ಡಿಕ್ಟೇಟರ್)ಗಳಾಗಿ ಹೊರಟ ಇವರು—'ಇಂದು ಸಂಸ್ಥಾನಗಳಲ್ಲಿಯ ಸತ್ಯಾಗ್ರಹ ಚಳುವಳಿಗಳು ತಾತ್ಕಾಲಿಕ ಶಾಂತಗೊಳಿಸಲ್ಪಟ್ಟಾಗಲೀ, ನಿಲ್ಲಿಸಲ್ಪಟ್ಟಾಗಲೀ ಕಾಲ ಮುಂದೂಡಲ್ಪಟ್ಟಾಗಲೀ ತಣ್ಣಗಾಗಿರುವಾಗ ನಾವು ಮಾತ್ರ ಮತಸ್ವಾತಂತ್ರ್ಯ ಸ್ಥಾಪನೆಗಾಗಿ ಈ ಚಳುವಳಿಯನ್ನು ಮತ್ತಷ್ಟು ರಭಸದಿಂದ ಮುಂದೊತ್ತುತ್ತಿದ್ದೇವೆ ನಮಗೆ ಸಂಸ್ಥಾನದಲ್ಲಿಯ ಇಲ್ಲವಾ ಹೊರಗಿನ ಮುಸ್ಲೀಮರೊಡನೆ ಕಲಹವಿಲ್ಲ ಸಂಸ್ಥಾನದೊಡೆಯರ ವ್ಯಕ್ತಿತ್ವದ ಮೇಲೂ ದ್ವೇಷವಿಲ್ಲ ಆರ್ಯರಿಗೂ ಹಿಂದೂಗಳಿಗೂ ಸಾಮಾನ್ಯ ಸಾಮಾಜಿಕ ಹಕ್ಕುಗಳೂ ಇಲ್ಲವಂತೆ ಮಾಡಿರುವ ಹೈದರಾಬಾದ್ ಸಂಸ್ಥಾನದ ಶಾಸನಪದ್ಧತಿಯನ್ನು ಮುರಿಯಲು ನಮ್ಮ ಪ್ರಯತ್ನ ಜಾತಿಗಳೊಳಗೆ ಪರಸ್ಪರ ಆತ್ಮೀಯತೆಯನ್ನೂ ಶಾಂತಿಯನ್ನೂ ನೆಲೆಗೊಳಿಸುವಂತಹ ಪ್ರಚಾರವೇ ನಮ್ಮ ಕಾರ್ಯಕ್ರಮ ಹಿಂದೂಗಳೂ ಮುಸಲ್ಮಾನರೂ ಸಮಾನರಾಗಿ ಸ್ನೇಹದಿಂದ ಬಾಳಿ ಬದುಕಬೇಕಲ್ಲದೆ ಅವರಲ್ಲಿ ಆಳೊಡೆಯರೆಂಬ ಭೇದಭಾವವಿರದಂತೆ ಬೋಧಿಸುವುದೇ ನಮ್ಮ ಕೆಲಸ,—ಎಂದು ಹೈದರಾಬಾದ್ ಸತ್ಯಾಗ್ರಹ ಚಳವಳಿಯ ಧ್ಯೇಯವನ್ನು ಸ್ಪಷ್ಟಗೊಳಿಸಿದರು ತನ್ನ ದಸ್ತಗಿರಿಯ ನಂತರ ಸಂಯುಕ್ತ ಪ್ರಾಂತದ ಪಂಡಿತ ದ್ರುವೇಂದ್ರ ಶರ್ಮಾರವರು ನಾಲ್ಕನೆಯ ಸರ್ವಾಧಿಕಾರಿಗಳಾಗಿಯೂ ಆ ಮೇಲೆ ಬಿಹಾರದ ಪಂಡಿತ್ ವಿದ್ಯಾನಂದ ವಾನಪ್ರಸ್ಥಿಯವರು ಐದನೆಯವರಾಗಿಯೂ ಸಮರವನ್ನು ಮುಂದೊತ್ತಬೇಕೆಂದು ವ್ಯವಸ್ಥೆ ಮಾಡಿರುವರು ಈ ಸತ್ಯಾಗ್ರಹ ಚಳವಳಿಯು ದಿನ ಹೋದಂತೆ ಪ್ರಬಲವಾಗುತ್ತ ಬರುತ್ತಿದೆ. ಹಿಂದೂಸ್ಥಾನದ ಬೇರೆ ಬೇರೆ ಪ್ರಾಂತಗಳಿಂದ ಆರ್ಯಸಮಾಜ ಸತ್ಯಾಗ್ರಹಿಗಳ ತಂಡ ಬರುತ್ತಲೇ ಇದೆ, ಬಂದಂತೆ ದಸ್ತಗಿರಿಯಾಗುತ್ತಿದೆ

ಬೆಂಗಳೂರಲ್ಲಿ ಪಾರ್ಸೀಯರ ಅಂತ್ಯೇಷ್ಟಿಯ ಗೋಪುರ ರಚನೆ.

ಈಗಾಗಲೇ ೬೦ ಸಾವಿರ ರೂಪಾಯಿ ಧನ ಸಂಗ್ರಹವಾಗಿದೆ

ಬೆಂಗಳೂರ ಪಾರ್ಸೀ ಜನರ ಶವಸಂಸ್ಕಾರ ಸೌಕರ್ಯಕ್ಕಾಗಿ ಸಮೀಪದ ಹೆಬ್ಬಾಳದಲ್ಲಿ ಮೌನಗೋಪುರದ ಶಂಕುಸ್ಥಾಪನೆಯು ಬರುವ ತಿಂಗಳ ಮೊದಲನೆಯ ವಾರದಲ್ಲಿ ಜರಗುವುದು. ಬೊಂಬಾಯಿ ಮತ್ತು ಇತರ ಕಡೆಗಳಿಂದ ಪಾರ್ಸಿ ಜನರು

ಸ್ವದೇಶ ವಿಚಾರ

ಈ ಪವಿತ್ರ ಕಾರ್ಯಾರಂಭವನ್ನು ನೋಡಲು ಬರಲಿಕ್ಕಿರುವರು

ಔಂದ್ ಸಂಸ್ಥಾನದಲ್ಲಿ ಎರಡೇ ತಿಂಗಳೊಳಗೆ ನಿರಕ್ಷರತೆಯು ಅರ್ಧಕ್ಕರ್ಧ ಇಳಿಯಿತು

ಕಳೆದ ಜನವರಿಯಲ್ಲಿ ಔಂದ್ ಸಂಸ್ಥಾನದ ರಾಜಕುಮಾರ್ ಅಪ್ಪಾ ಸಾಹೇಬರು ತನ್ನ ಪ್ರಜೆಗಳಿಗೆ ಪೂರ್ಣ ಜವಾಬ್ದಾರಿ ಸರಕಾರವನ್ನು ಕೊಡುವ ನಿರ್ಧಾರವನ್ನು ಸಾರುವ ಸಂದರ್ಭದಲ್ಲಿ ಪ್ರಜೆಗಳೆಲ್ಲ ತನ್ನೊಡನೆ ಸಂಸ್ಥಾನದ ನಿರಕ್ಷರತೆಯನ್ನು ಮೂರು ತಿಂಗಳೊಳಗೆ ನಿವಾರಿಸಲಿಕ್ಕೆ ಪ್ರತಿಜ್ಞೆಯನ್ನು ಕೈಗೊಳ್ಳಬೇಕೆಂದು ಕೇಳಿಕೊಂಡಿದ್ದರು. ಹೊಸ ರಾಜ್ಯಭಾರ ಪದ್ಧತಿಯು ಮೇರೆಗೆ ಬರಹಬಲ್ಲ ವಯಸ್ಕರಿಗೆ ಮಾತ್ರ (ವೋಟು) ಮತದಾನದ ಹಕ್ಕು ಇರುವುದೆಂದೂ ಎಚ್ಚರಿಸಿರುವರು ಮಾತ್ರವಲ್ಲ ತಾನೂ ರಾಜಕುಮಾರಿ ಸುಂದರೀ ಬಾಯಿಯೂ ಹಳ್ಳಿಹಳ್ಳಿಗಳಲ್ಲಿ ಸಂಚರಿಸಿ ಅಕ್ಷರ ಪ್ರಚಾರದ ಕೇಂದ್ರಗಳಿಗೆ ಉತ್ತೇಜನಕೊಟ್ಟರು ಪರಿಣಾಮವಾಗಿ ಎರಡು ತಿಂಗಳೊಳಗೆ ನಿರಕ್ಷರಿಗಳ ಸಂಖ್ಯೆಯು ಅರ್ಧಕ್ಕರ್ಧ ಇಳಿದಿದೆ

ಗಡಿನಾಡಿನ ಜಿಲ್ಲೆಗಳಲ್ಲೆಲ್ಲ ನಿಶಾನಿಷೇಧಾಜ್ಞೆ

ಗಡಿನಾಡಿನ ಜಿಲ್ಲೆಗಳಲ್ಲೆಲ್ಲ ಮಾದಕ ಪಾನ ಪ್ರತಿಬಂಧನೆಯ ಕಾನೂನು ಕ್ಷಿಪ್ರದಲ್ಲೇ ಆಚರಣೆಯಲ್ಲಿ ತರಲ್ಪಡುವುದೆಂದು ಆ ಪ್ರಾಂತದ ಮಂತ್ರಿಮಂಡಲವು ನಿಶ್ಚೈಸಿದೆ ಈ ಮೊದಲು ಅದು ಡೇರಾ ಇಸ್ಮಾಯಿಲ್‌ಖಾನ್ ಎಂಬ ಒಂದು ಜಿಲ್ಲೆಯಲ್ಲಿ ಮಾತ್ರ ಪ್ರಯೋಗಿಸಲ್ಪಟ್ಟಿತ್ತು ಅಲ್ಲಿ ಅದು ಸತ್ಪರಿಣಾಮಕಾರಿಯಾದುದರಿಂದ ಈಗ ಪ್ರಾಂತದ ಎಲ್ಲ ಜಿಲ್ಲೆಗಳಲ್ಲಿಯೂ ಅದನ್ನು ಪ್ರಯೋಗದಲ್ಲಿಳಿಸುವ ನಿರ್ಧಾರವಾಗಿದೆಯೆಂದು ವಿದ್ಯಾಖಾತೆಯ ಮಂತ್ರಿಗಳಾದ ಖಾಜಿ ಅಬ್ದುಲ್ಲಾ ಖಾನ್‌ರವರ ಹೇಳಿಕೆ

ಜಗತ್ತಿಗೆ ಗಾಂಧೀಜಿಗಳ ಸಂದೇಶ

ಇಂದಿನ ಜಾಗತಿಕ ಸಮಸ್ಯೆಗಳ ಕುರಿತು 'ನ್ಯೂಯೋರ್ಕ ಟೈಮ್ಸ್' ಪತ್ರಿಕೆಯ ಎಫ್ ಇ ಬರ್ವಾಖ್ ಎಂಬವರು ಗಾಂಧೀಜಿಯವರನ್ನು ಸಂದರ್ಶಿಸಿ ಕೆಲವು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದರು ಬ್ರಿಟಿಷ್ ಪ್ರಭುತ್ವವು ಯುರೋಪಿನ ಯುದ್ಧದಲ್ಲಿ ಸಹಭಾಗಿಯಾಗಬೇಕಾಗಿ ಬಂದರೆ ಕಾಂಗ್ರೆಸ್ಸಿನ ಒಲವು ಎತ್ತಕಡೆ? ಈಗ ಅದಕ್ಕೆ ಉತ್ತರ ಹೇಳುವುದು ಬಹಳ ಕಷ್ಟ ಇಂಡಿಯದ ಸ್ವಾತಂತ್ರ್ಯವೇ ರೆ ಬ್ರಿಟಿಷ ರಾಷ್ಟ್ರಸಮೂಹ ಸಂಘ (ಕಾಮನ್‌ವೆಲ್ತ್



ಆಫ ನೇಶನ್ಸ್)ಕ್ಕೆ ಸೇರಿಯೋ ಬರಕ್ಕೆ ಹೇಗಾಗಿಯೋ? ಅದೂ ಈಗ ಹೇಳಲಾಗದಷ್ಟು ಕಠಿಣ ಪ್ರಶ್ನೆ ತ್ರಿಪುರಿ ಕಾಂಗ್ರೆಸ್ಸಿನ ಪರಿಣಾಮದಲ್ಲಿ ಸಂತೃಪ್ತಿಯೇ? ತೃಪ್ತಿಯು ಸ್ಪರ್ಧೆ ಎಂದು ನಿಮ್ಮ ಗಾದೆಗಳಲ್ಲೊಂದಿದ್ದಲ್ಲ! ಇಂಡಿಯವು ನಿಮ್ಮ ಬಯಕೆಗೊಪ್ಪುವಂತೆ ಮುಂದುವರಿಯುತ್ತಿದೆಯೇ? ಹೌದು ಆದರೆ ಕೆಲವು ವೇಳೆ ಭಯಗೊಳಿಸುತ್ತೆ ಆದರೆ ಮೂಲದಲ್ಲಿ ಹಿತವಾದ ಪ್ರಗತಿ ಇದೆ ಅತಿ ದೊಡ್ಡ ಕೊರತೆಂದರೆ ಹಿಂದೂಮುಸ್ಲಿಮ್ ಬಿಕ್ಕಟ್ಟು ಇದೊಂದು ಮಹಾ ವಿಘ್ನಕಾರಿಯಾಗಿ ನಿಂತದೆ ಆದರೆ ನಿವಾರಣೆಯಲ್ಲಿ ಪ್ರಗತಿಯು ಸ್ಪಷ್ಟವಾಗಿ ತೋರುತ್ತಿದೆಯನ್ನಲ್ಲ ಬರೆ ಆದರ [illegible] ಇಂದಿನ ಜಗತ್ತಿನ ಅಶಾಂತಿಯ ಪರಿಸ್ಥಿತಿಯಲ್ಲಿ ಪ್ರಸಕ್ತದ ಹೃದಯದಲ್ಲಿ [illegible] ಸಂದೇಶವೇನಾದರೂ ಇದೆಯೇ? [illegible] ಇಂದಿನ ಕಾಲ ವಾತಾವರಣದಲ್ಲಿ ನನ್ನ [illegible] ಕಾಲವೇ [illegible] ಎಷ್ಟು ಬರೆದೀತು? ಹಾಗೆ ತಿಳಿದುಕೊಳ್ಳುವುದು ನಿಮ್ಮ ಇಷ್ಟ ನೀವು ಸಂದೇಶವನ್ನು ಕೇಳುತ್ತೀರಿ ಅದನ್ನು ಕೊಟ್ಟು ನಾನು ಹುಚ್ಚನೆಂದು ನಗಿಸಿಕೊಳ್ಳಲೇ? ಇಲ್ಲ, ಆಗಲಿ, ನಗೆಯಿಂದಲೂ ಹಿತವಾಗಬಹುದು ನನ್ನ ಸಂದೇಶವನ್ನು ಒರೆದುಕೊಳ್ಳಿ ಇಂದು ಬ್ರಿಟಿಷ ಪ್ರಧಾನ ಮಂತ್ರಿಗಳು ಯುರೋಪಿನ ಪ್ರಜಾಪ್ರಭುತ್ವ ರಾಷ್ಟ್ರಗಳೊಡನೆ ಇಂದಿನ ಪರಿಸ್ಥಿತಿಯನ್ನು ಎದುರಿಸುವ ಕುರಿತು ಮಂತ್ರಾಲೋಚನೆ ನಡೆಯಿಸುತ್ತಿದ್ದಾರೆಂದು ಪತ್ರಿಕೆಗಳಿಂದ ತಿಳಿಯುತ್ತೇನೆ ಎಲ್ಲ ರಾಷ್ಟ್ರಗಳೂ ಏಕಮುಹೂರ್ತದಲ್ಲಿ ಸರ್ವ ಸಮರಸನ್ನಾಹಗಳನ್ನು ಪರಿತ್ಯಜಿಸಿ ಶಸ್ತ್ರಸನ್ಯಾಸ ಸ್ವೀಕರಿಸೋಣವೆಂದು ಪ್ರಧಾನರು ಸೂಚಿಸಿದರೆ ಅದೇ ಹೃದಯದ ಬಯಕೆ ಅಂತಹ ಧೀರತ್ವತ್ಯದಿಂದ ಹಿಟ್ಲರನ ಕಣ್ಣು ತೆರೆಯಲ್ಪಟ್ಟು ಅವನೂ ಶಸ್ತ್ರಪಂತ್ಯಾಗ ಮಾಡುವುದು ನಾನಿಲ್ಲಿ ಕುಳಿತಿರುವುದು ಎಷ್ಟು ನಿಶ್ಚಯವೋ ಅಷ್ಟು ನಿಶ್ಚಯವೆಂದು ನನಗನ್ನಿಸುತ್ತದೆ'

೧೯೪೧ನೆ ಇಸವಿಯ ಜನಗಣತಿ

(ಸೆನ್‌ಸಸ್ ಲೆಖ್ಖ)

1931ನೆಯ ಇಸವಿಯಲ್ಲಿ ಡಕ್ಟರ್ ಹಟ್ಟನ್ ರವರು ಇಂಡಿಯಾ ಸೆನಸಸ್ ಕಮಿಷನರ್‌ರಾಗಿ ಕೆಲಸ ಮಾಡಿದರು.

1941ನೆಯ ಇಸ್ವಿಯ ಜನಗಣನೆಯು ಜಾತಿ (Caste) ಬಾಪ ಕುರಿತಾಗಿ ಮೂದಲಾದುವುಗಳ ವಿಷಯವಾಗಿ ಕೇಳರು. ಬ್ರಿಟಿಷ್ ಇಂಡಿಯಾದಲ್ಲಿ ಮಾತ್ರ ಸೆನ್‌ಸಸ್ ಲೆಖ್ಖಗಳನ್ನು ತಯಾರಿಸಲು 50ಲಕ್ಷ ರೂಪಾಯಿಗಳು ಬೇಕಾಗಿವೆ 37ಕೋಟಿ ಮಂದಿ ಪ್ರಜೆಗಳಿರುವರು. 20ಲಕ್ಷ ಮಂದಿಯ ಎನ್ಯೂಮರೇಟರುಗಳನ್ನೂ (ಲೆಖ್ಖಿಸುವವರನ್ನು) ನೇಮಿಸಿಕೊಳ್ಳಬೇಕಾಗಿದೆ ಒಬ್ಬೊಬ್ಬನಿಗೆ ಕನಿಷ್ಠಪಕ್ಷ ಒಂದು ರೂಪಾಯಿ ಕೊಟ್ಟಾಗ್ಯೂ 20ಲಕ್ಷ ರೂಗಳು ಬೇಕು ಇದುವರೆಗೆ ಬಹು ಮಂದಿ ಉಚಿತವಾಗಿಯೇ ಕೆಲಸಮಾಡಿರುವರು ಜನಗಣತಿಯ ಕೆಲಸವೂ ಕೂಡ ಈ ರೀತಿಯಾಗಿಯೇ ಲಭ್ಯಿಸುವವರೆಂದು ಅಧಿಕಾರಿಗಳು ನಂಬುತ್ತಿರುವರು ಎನ್ಯೂಮರೇಟರುಗಳೆಲ್ಲರೂ ಉಚಿತವಾಗಿಯೇ ಲಭ್ಯಿಸುವರು. ಗ್ರಾಮಗಳಲ್ಲಿ ಗ್ರಾಮದ ಪಟೇಲ, ಶ್ಯಾನುಭೋಗ, ಉಪಾಧ್ಯಾಯ ಮೊದಲಾದವರು ಆಯಾ ಬೀದಿಗಳಿಗೆ ಹೋಗಿ ಲೆಖ್ಖಗಳನ್ನು ಬರೆಯುತ್ತಿರುವವರು 1872ನೆಯ ಇಸ್ವಿಯಿಂದ ಹಿಂದೂದೇಶದಲ್ಲೆಲ್ಲ ಒಂದೇ ರಾತ್ರಿಯೇ ಜನಗಣನೆಯ ಲೆಖ್ಖಗಳು ಪೂರ್ತಿಮಾಡಲ್ಪಡುತ್ತಿರುವುವು. ಮತ್ಯಾವ ಲೋಕದಲ್ಲಿಯೂ ಈ ರೀತಿ ನಡೆಯುತ್ತಿರುವುದಿಲ್ಲ ರಷ್ಯಾ ದೇಶದಲ್ಲಿ ಜನಗಣನೆಯೇ ಇರುವುದಿಲ್ಲ ಅಮೇರಿಕಾದಲ್ಲಿ ಜನಗಣನೆಯ ಕಾರ್ಯವರು ಯಾವಾಗಲೂ ಕೆಲಸಮಾಡುತ್ತಲೇ ಇರುವರು ಇಂಡಿಯಾ ದೇಶದಲ್ಲಿ ಒಂದು ರಾತ್ರಿಯಲ್ಲಿಯೇ ಲೆಖ್ಖಗಳು ಬರೆಯುವದು ಮುಗಿಸಲ್ಪಡುತ್ತಿರುವುದೇ ಕೊರತೆ, ಇದಕ್ಕೆ ಮೊದಲು ಕೆಲವು ತಿಂಗಳು ಕಾಲ ಏರ್ಪಾಡುಗಳು ಮಾಡಲ್ಪಡುತ್ತಲಿರುವುವು ದೊಡ್ಡ ದೊಡ್ಡ ಸಂಸ್ಥಾನಗಳಲ್ಲಿ ಆಯಾ ಸಂಸ್ಥಾನಾಧಿಪತಿಗಳೇ ಜನಗಣನೆಯನ್ನು ಮಾಡಿಸುತ್ತಲಿರುವರು ಸಣ್ಣ ಸಂಸ್ಥಾನಗಳಲ್ಲಿ ಸಮೀಪವಿರುವ ರಾಷ್ಟ್ರೀಯ ಸರ್ಕಾರದವರು ನಡೆಯಿಸುವರು ಈಗ W M ಇಟ್ಸನ್

ವಿದೇಶ ವಿಚಾರ

ಲಂಡನಿನಲ್ಲಿ ಇಂಡಿಯನ್ ಮುಸ್ಲಿಮ್ ಲೀಗಿನವರು

ಇಂಡಿಯನ್ ಮುಸ್ಲಿಮ್ ಲೀಗಿನ ಪ್ರತಿನಿಧಿಗಳು ಲಂಡನಿನಲ್ಲಿ ಲಾರ್ಡ್ ಜೆಟ್ಲೆಂಡರನ್ನೂ ವಿದೇಶಸಚಿವರ ಉಪಕಾರ್ಯದರ್ಶಿಗಳಾದ ಬಟ್ಲರನ್ನೂ ಕಂಡು ಪೆಲೆಸ್ಟೈನ್ ಪರಿಷತ್ತಿನ ಅಸಿರೀಕ್ಷಿತ ವಿಫಲದ ಕುರಿತು ತಮ್ಮ ಖೇದಾಶ್ಚರ್ಯಗಳನ್ನು ವ್ಯಕ್ತಪಡಿಸಿದರು. ಇಂಡಿಯದ ಮುಸ್ಲೀಮರ ಅಭಿಮತವನ್ನು ಮನ್ನಿಸುವ ದೃಷ್ಟಿಯಿಂದ ಬ್ರಿಟಿಷ್ ಸರಕಾರವು ತನ್ನ ನಿರ್ಧಾರವನ್ನು ಪ್ರಕಟಿಸುವ ಮುಂಚೆ ಅದನ್ನು ಚೆನ್ನಾಗಿ ಪುನರಾಲೋಚಿಸಿ ಅರಬ್ಬರಿಗೆ ನ್ಯಾಯವಾಗುವಂತೆ ಪರಿವರ್ತಿಸಬೇಕಾಗಿಯೂ ಬೇಡಿಕೊಂಡರು.

ಅಮೇರಿಕದ ಮುಂಜಾಗ್ರತೆ

ನ್ಯೂಯೋರ್ಕದ ರೇವಿನಲ್ಲಿ ಎಂತಹ ಮಹಾ ಯುದ್ಧನೌಕೆಯೂ ನಿಲ್ಲುವಂತೆ

(೩ನೇ ಪುಟದಿಂದ)

ವರುಸೆನ್ಸ್ ಸಸ್ ಕಮಿಷನರಾಗಿರುವರು. ಎಲ್ಲರಿಗೂ ಬೋಧೆಯಾಗುವಂತೆ ಪ್ರಶ್ನೆಗಳನ್ನು ಕೇಳಬೇಕು. ವೃತ್ತಿ(Occupation) ಎಂದರೆ ಮಾಡುತ್ತಿರುವ ಕೆಲಸವಲ್ಲ ಜೀವನಾಧಾರವಾದುದೇ ವೃತ್ತಿಯು. ರೈತರು ವ್ಯವಸಾಯದ ಕೆಲಸಗಳಿಲ್ಲದಿರುವಾಗ ಇತರ ಕೆಲಸಗಳನ್ನು ಮಾಡುತ್ತಿರುವರು. ಕೆಲವರು ಜಮೀನಿನಿಂದಲೂ, ಬಡ್ಡಿಯ ವ್ಯಾಪಾರದಿಂದಲೂ ಬರುತ್ತಿರುವ ಆದಾಯದಿಂದಲೇ ಜೀವನಮಾಡುತ್ತಿರುವರು. ಅವರು ಏನೂ ಕೆಲಸಮಾಡರು. ಮೊದಲನೆ ಮಗುವು ಹುಟ್ಟಿದಾಗ ತಾಯಿಯ ವಯಸ್ಸೆಷ್ಟೆಂಬುದು ಮುಖ್ಯವಾಗಿ ತಿಳಿದುಕೊಳ್ಳಬೇಕು. ಮದುವೆಯಾಗಿರುವುದೂ, ಮದುವೆ ಇಲ್ಲದ್ದು ಹೆಂಡತಿಯಾಗಲಿ, ಗಂಡನಾಗಲಿ ಸತ್ತುಹೋಗಿರುವವರು ಎಂಬ ವಿಷಯಗಳು ಕೂಡ ಸರಿಯಾಗಿ ತಿಳಿಯಬೇಕು. ಹಿಂದೂಗಳ ಹಿಂದೂತ್ವವು ಸಮಗ್ರವಾಗಿ ಗಣನೆ ಮಾಡಬೇಕು.

ಕೊಪ್ಪದ ಶ್ರೀ. ರಾಮಸ್ವಾಮಿ ಐಯ್ಯಂಗಾರ್.

ಅದರ ವಿಸ್ತಾರಕ್ಕಾಗಿ ಹೇರಳ ಹಣವನ್ನು ವೆಚ್ಚಮಾಡುವ ವ್ಯವಸ್ಥೆ ಮಾಡಿದೆ. ಪನಮಾ ಕಾಲಿವೆಯ ರಕ್ಷಣೆಯ ಸುವ್ಯವಸ್ಥೆಗೂ ಶಾಂತಸಮುದ್ರದಲ್ಲಿ ಜಪಾನಿನ ಪ್ರಾಬಲ್ಯವು ತನಗೆ ಗಂಡಾಂತರವನ್ನು ತಂದೊಡ್ಡದಂತೆ ಅಲ್ಲಿಯ ಫಿಲಿಪ್ಪಾಯಿನ್ ದ್ವೀಪಸಮೂಹಗಳಲ್ಲಿ ತನ್ನ ನೌಕೆಗಳ ಉಪಕೇಂದ್ರ ನಿರ್ಮಾಣ ವಿಷಯದಲ್ಲಿಯೂ ತಕ್ಕ ಏರ್ಪಾಡುಗಳನ್ನು ಕ್ಷಿಪ್ರದಲ್ಲಿ ಕೈಗೊಳ್ಳುವ ನಿರ್ಧಾರ ಮಾಡಿದೆ.

ಬ್ರಿಟಿಷ್ ಮಂತ್ರಿಮಂಡಲದಲ್ಲಿ ಮತ್ತು ಪಾರ್ಲಿಮೆಂಟು ಸಭೆಗಳಲ್ಲಿ ಈಗಿನ ಅತ್ಯವಸರದ ಮಹತ್ವದ ಪ್ರಶ್ನೆ-ಜರ್ಮನಿಯ ಅತಿಕ್ರಮಣಶೀಲಕ್ಕೆ ಮದ್ದರೆಯಬೇಕು-ಹೇಗೆ?

ಬ್ರಿಟನ್ ಫ್ರಾನ್ಸ್ ರಷ್ಯಾ ಪೋಲಾಂಡ್ ಟರ್ಕಿ ಮತ್ತು ಯುರೋಪಿನ ಚಿಕ್ಕ ರಾಷ್ಟ್ರಗಳಲ್ಲಿ ತಮ್ಮ ಆತ್ಮ ರಕ್ಷಣೆಯನ್ನು ಭದ್ರಗೊಳಿಸಬೇಕೆಂದಿರುವವುಗಳೆಲ್ಲ ಒಂದಾಗಿ ಒಂದು ಒಪ್ಪಂದವನ್ನು ಮಾಡಿಕೊಂಡು ಅವುಗಳೊಳಗೆ ಯಾರ ಮೇಲಾಗಲೀ ಜರ್ಮನಿಯು ಅತಿಕ್ರಮ ಪ್ರವೇಶ ಮಾಡಿದರೆ ಎಲ್ಲರೂ ಒಂದಾಗಿ ಅದನ್ನು ಎದುರಿಸಬೇಕೆಂಬ ತಹಕಟ್ಟುಗಳ ವಿಷಯವಾಗಿ ಸಂಬಂಧಪಟ್ಟ ರಾಷ್ಟ್ರಗಳೊಡನೆ ವಿನಿಮಯವಾಗುತ್ತಿದೆ. ರಷ್ಯವು ಈ ಸೂಚನೆಯನ್ನು ಈ ಮೊದಲೇ ಕೊಟ್ಟಿತ್ತು. ಆಗ ಬ್ರಿಟನ್ ಅಂತಹ ಪರಿಸ್ಥಿತಿ ಬಂದಿಲ್ಲವೆಂದು ಉಪೇಕ್ಷೆಯಿಂದ ಇದ್ದು. ಈಗ ಜಾಗ್ರತವಾಗಿದೆ.

ಮೆಮೆಲ್‌ನಲ್ಲಿ ಹಿಟ್ಲರನ ಭಾಷಣ

'ಜರ್ಮನಿಯು ನಿರ್ಬಲವಾಗಿದ್ದಾಗ ನಿಮ್ಮನ್ನು ಕೈಬಿಟ್ಟಿತು ಆದರೆ ಅದು ನಿಮ್ಮನ್ನು ಮರೆತಿದ್ದಿಲ್ಲ. ನೀವೂ ಅದನ್ನು ಮರೆತಿಲ್ಲ. ಈಗ ಅದು ಪ್ರಬಲಗೊಂಡಿದೆ. ತನ್ನ ವಿಧಿಯನ್ನು ತಾನೇ ನಿರ್ಮಿಸಿಕೊಳ್ಳಬಲ್ಲುದಾಗಿದೆ. ಆದುದರಿಂದ ಅಂದಿಂದು ನಿಮ್ಮನ್ನು ತಿರುಗಿ ತನ್ನ ಮಡಿಲಲ್ಲಿ ಹಾಕಿಕೊಳ್ಳುತ್ತಿದೆ. ಹೊರಗಿನ ಪ್ರಪಂಚವು ಏನೇ ಹೇಳಿಕೊಳ್ಳುತ್ತಿರಲಿ, ಇಂದಿನ ಜರ್ಮನಿಯು ಎಂಭತ್ತು ಮಿಲಿಯ ಬಲವುಳ್ಳದಾಗಿದೆ. ಅದರ ಒಕ್ಕಟ್ಟು ಭದ್ರವಾಗಿದೆ. ಅದನ್ನು ಯಾವ ರಾಷ್ಟ್ರವೂ ಮುರಿಯಲಾರದು. ಹೊರಗಿನವರಿಂದ ನಮಗೇನು ದೊರಕೀತೆಂಬುದು ನಮಗೆ ಗೊತ್ತೇ ಇದೆ. ಯಾವ ರಾಷ್ಟ್ರವನ್ನಾಗಲೀ ಪೀಡಿಸಬೇಕೆಂದು ನಮಗಿಲ್ಲ. ಆದರೆ ಯಾರಿಂದಾದರೂ ನಮಗೆ ಪೀಡೆಯಾದರೆ ಅದನ್ನು ನಾವು ಸಹಿಸುವಂತಿಲ್ಲ ಜರ್ಮನಿಯು ಕಳೆದುಕೊಂಡುದೇನುಂಟೋ ಅದನ್ನು ಹೆಚ್ಚಿನ ಮಟ್ಟಿಗೆ ಅದಿಂದು ಹಿಂದೆ ಪಡೆದಿದೆ. ಬೇರೆ ಚದರಿ ಹೋದ ಜರ್ಮನ್ ಕುಟುಂಬಿಕರು ಒಂದಾಗಿ ಕೂಡಿ ಬಂದಾಗ ಉಂಟಾಗುವ ಆನಂದವೇನಿದೆಯೋ ಆ ಹೃದಯದಿಂದ ನಿಮ್ಮನ್ನಿಂದು ಅಭಿನಂದಿಸುತ್ತೇನೆ—ಎಂಬ ತತ್ವದ ಎಂಟು ಮಿನಿಟಿನ ಭಾಷಣಮಾಡಿದ ಹಿಟ್ಲರ್-ತನ್ನ ಸೈನ್ಯ, ನೌಕೆ, ವಿಮಾನ ಪಡೆಗಳ ಪ್ರದರ್ಶನ ಮಾಡಿದ. ಅಲ್ಲಿಂದ ಹೊರಟ. ಜಯಘೋಷದ ಉತ್ಸಾಹದಿಂದ ಕೂಗಿ ಕರವಸ್ತ್ರಹಾರಿಸುವವರ ನಡುವೆ ನಿಟ್ಟುಸಿರಿಟ್ಟು ಕರವಸ್ತ್ರದಿಂದ ಕಣ್ಣೀರೊರಸಿಕೊಳ್ಳುವವರ ಸಂಖ್ಯೆಯೂ ಕಡಿಮೆಯಾಗಿಲ್ಲ. ಈಗಾಗಲೇ ಎಷ್ಟೋ ಜನ ಮೆಮೆಲ್ ಪ್ರಾಂತವನ್ನು ಬಿಟ್ಟು ಲಿತುವೇನಿಯವನ್ನು ಸೇರುತ್ತಿದ್ದಾರೆ.

ಹಿಟ್ಲರನಿಗೆ ಮತ್ತೊಂದು ಗ್ರಾಸ ಮೆಮೆಲ್ ಪ್ರಾಂತ್ಯ

ಇತ್ತೀಚೆಗೆ ಹಿಟ್ಲರನು ಜೆಕೊಸ್ಲೋವೆಕಿಯವನ್ನು ಜರ್ಮನಿಗೆ ಸೇರಿಸಿದುದನ್ನು ಕಂಡು ಯುರೋಪಿನ ರಾಷ್ಟ್ರಗಳು ಅವನನ್ನು ತಡೆಗಟ್ಟುವುದು ಹೇಗೆಂದು ಯೋಚಿಸುವಷ್ಟರಲ್ಲಿ ಆತ ಬಾಲ್ಟಿಕ್ ಸಮುದ್ರದ ಪ್ರಾಮುಖ್ಯ ಬಂದರ ಸ್ಥಳವುಳ್ಳ ಮೆಮೆಲ್ ಪ್ರಾಂತ್ಯವನ್ನು ಲಿತುವೇನಿಯಾ ರಾಷ್ಟ್ರದಿಂದ ಸದ್ದು ಮಾಡದೆ ಕದ್ದುಕೊಂಡ. ಜೆಕೊಸ್ಲೋವೇಕಿಯಾವನ್ನು ವಶಪಡಿಸಿಕೊಂಡ ನಂತರ ಆತನ ಸೇನೆಯು ತಮ್ಮ ಗಡಿದಾಟಿ ತಮ್ಮ ಮೇಲೆ ಬರುವುದೋ ಎಂದು ಅದರ ಗಡಿಯ ರಾಷ್ಟ್ರಗಳಾದ ಹಂಗೇರಿಯಾ ರುಮೇನಿಯಾ ಪೋಲಾಂಡ್ ಇವು ದಿಗಿಲುಗೊಂಡು ತಮ್ಮ ತಮ್ಮ ಸೈನ್ಯ ಸಾರಂಜಾಮಗಳನ್ನು ಹಗಲು ರಾತ್ರಿಯೆನ್ನದೆ ಗಡಿಯಲ್ಲಿ ತಂದಿಡಲು ಧಾವಿಸುತ್ತಿದ್ದಾಗ ಹಿಟ್ಲರನು ನಗುತ್ತಿದ್ದಿರಬೇಕು. ಅವನ ದೃಷ್ಟಿಯಿದ್ದುದು ಉತ್ತರಕ್ಕೆ. ಎಲ್ಲರ ದೃಷ್ಟಿಯಿದ್ದುದು ಪೂರ್ವಕ್ಕೆ. ನಾಲ್ವತ್ತೆಂಟು ತಾಸುಗಳೊಳಗೆ ಮೆಮೆಲ್ ಪ್ರಾಂತವನ್ನು ಯಾವುದೊಂದು ಶರ್ತವಿಲ್ಲದೆ ಜರ್ಮನಿಗೆ ಬಿಟ್ಟುಕೊಡಬೇಕೆಂದೂ ಬಿಟ್ಟುಕೊಡದಿದ್ದರೆ ಲಿತುವೇನಿಯವು ಪುಡಿಯಾಗುವುದೆಂದೂ ಭಯ ಪ್ರದರ್ಶನದ ಪರಮಾಜ್ಞೆ (ಅಲ್ಟಿಮೇಟಮ್) ಕೊಟ್ಟೇಬಿಟ್ಟ. ಆ ಚಿಕ್ಕ ರಾಷ್ಟ್ರವು ಮತ್ತೇನು ಮಾಡೀತು? ಬಿಟ್ಟುಕೊಟ್ಟೇಬಿಟ್ಟಿತು. ಜರ್ಮನಿಗೆ ಸಮುದ್ರ ಕಿನಾರೆಯಾಗಲೀ ಯೋಗ್ಯ ಬಂದರದ ಸ್ಥಳವಾಗಲೀ ಇಲ್ಲದಿರುವುದೊಂದು ಕೊರತೆ. ಈ ಕುಂದನ್ನು ಕೂಡಿದಷ್ಟು ನಿವಾರಿಸಿಕೊಂಡು ತನ್ನ ಹಡಗ ಪಡೆಯನ್ನು ಬಲಗೊಳಿಸಲಿಕ್ಕೆ ಜರ್ಮನಿಗೆ ಮೆಮೆಲ್ ಪ್ರಾಂತ್ಯವು ಬೇಕಿತ್ತು. ನಿರಾಯಾಸವಾಗಿ ದೊರೆಯಿತು.

ಜಪಾನಿಗೂ ರಷ್ಯಕ್ಕೂ ಕಲಹ

ರಷ್ಯಾದ ಮೂಡುಕಡಲ ಕರೆಯಲ್ಲಿ ಜಪಾನೀಯರು ಮೀನುಹಿಡಿಯುವುದಿತ್ತು. ಈ ಮೀನಿನ ಕಾಮಗಾರಿಕೆಯಿಂದ ಜಪಾನಿಗೆ ಸುಮಾರು ಎರಡುಮಿಲಿಯ ಯೆನ್ನಿನ ಆದಾಯವಿದೆ. ಅಷ್ಟು ಮೀನು ಹಿಡಿದು ಪರದೇಶಗಳಿಗೆ ರಫ್ತುಮಾಡಿ ಜಪಾನಿನ ಬೆಸ್ತರು ದುಡ್ಡುಮಾಡುವ ಹುರುಬೆಯ ಕಾಲ ಸಮೀಪಿಸುತ್ತಿದೆ. ಆದರೆ ಮೀನುಹಿಡಿಯುವ ಜಾಗದ ಸಮುದ್ರದ ಹಕ್ಕು ರಷ್ಯಾ ಸರಕಾರದ್ದು. ಆದರಿಂದ ಪರವಾನೆ ಪಡೆದು ಜಪಾನು ಉದ್ಯಮ ಮಾಡುತ್ತಿತ್ತು. ೧೯೩೬ರಲ್ಲಿ ಒಂದು ವರುಷದ ಮಟ್ಟಿಗೆ ಪರವಾನೆ ಕೊಡಲ್ಪಟ್ಟಿದು ಮತ್ತೊಂದು ವರುಷದ ಅವಧಿಗೆ ಮುಂದುವರಿಸಲಾಗಿತ್ತು ಆಮೇಲೆ ಏನಾದರೊಂದು ತಹನಾಮೆಮಾಡಿಕೊಳ್ಳಬೇಕೆಂದು ಪತ್ರ ವ್ಯವಹಾರಗಳು ಉಭಯ ಸರಕಾರಗಳೊಳಗೆ ನಡೆಯುತ್ತಿದ್ದಾಗಲೇ ಜಪಾನು ಜರ್ಮನಿ ಇಟಲಿಗಳೊಂದಿಗೆ 'ಎಂಟೀಕೊಮಿಂಟರ್ನ್ ಪೇಕ್ಟ್' ಎಂಬ ಸಮಾಜವಾದಿ ರಾಷ್ಟ್ರಘೋರಣೆಯನ್ನು ವಿರೋಧಿಸುವ ಧ್ಯೇಯವುಳ್ಳ ತಹನಾಮೆಯಲ್ಲಿ ತಾನೂ ಸೇರಿಕೊಂಡಿತು. ಆದರಿಂದ ರಷ್ಯವು ಸಿಟ್ಟುಗೊಂಡು ತನಗೂ ಜಪಾನಿಗೂ ನಡೆಯುತ್ತಿದ್ದ ಆ ಪಂಚಾಯಿತಿಕೆಯನ್ನು ಮುರಿದು ಸುಮ್ಮನೆ ಕುಳಿತುಬಿಟ್ಟಿತು. ಬಹಿರಂಗವಾಗಿ ತಮಗೆ ಶತ್ರುತ್ವವನ್ನು ಸಾರಿ ಶತ್ರುಪಾಳೆಯದೊಳಗೆ ಸೇರಿದ ಜಪಾನಿಗೆ ತಾನೇಕೆ ರಿಯಾಯಿತಿ ತೋರಬೇಕೆಂದು ತಿಷ್ಟರತನಕ ಪರವಾನೆ ಕೊಡಲಿಲ್ಲ. ಜಪಾನು ಈ ಉದ್ಯಮವನ್ನು ಕಳೆದುಕೊಂಡರೆ ಅದಕ್ಕೆ ಆರ್ಥಿಕ ಸಂಕಷ್ಟದ ಮತ್ತೊಂದು

THE BOMBAY LIFE ASSURANCE CO., LTD.,

ತಿಂಗಳಿಗೆ ನೀವೆಷ್ಟು ಸಂಪಾದಿಸುತ್ತೀರೆಂಬುದು ದೊಡ್ಡ ವಿಷಯವಲ್ಲ. ಎಷ್ಟು ಉಳಿಸುತ್ತೀರೆಂಬುದೇ ಪ್ರಾಮುಖ್ಯ ಪ್ರಶ್ನೆ. ಏಕೆಂದರೆ ನಿಮ್ಮ ಸಂಪಾದನೆಯು ಕಡಿಮೆಯಾದಾಗ ಅಥವಾ ನಿಂತುಹೋದಾಗ ನಿಮ್ಮ ಮತ್ತು ನಿಮ್ಮ ಸಂಸಾರದ ಕನಿಷ್ಟ ಸುಖ ಸೌಕರ್ಯಗಳು ಯಥಾಪ್ರಕಾರ ಒದಗಿಸಿಕೊಡಬಲ್ಲುದು ಆ ಉಳಿತಾಯವೇ.

ಅಂತಹ ನಿಮ್ಮ ಉಳಿತಾಯವು ಬೆಳೆದು ಬಲವಾದ ಭಂಡವಾಳವಾಗಿ ಬರುವಂತೆ ನಿಕ್ಷೇಪಿಸಲಿಕ್ಕೆ ಅತ್ಯುತ್ತಮ ಸ್ಥಾನವೆಂದರೆ

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಏಕೆಂದರೆ ಅದು ಉತ್ಕೃಷ್ಟ ಭದ್ರತೆಯುಳ್ಳ ಉಪಯುಕ್ತ ಸಂಸ್ಥೆ.

ಪ್ರಾಮಾಣಿಕತೆ, ಉತ್ಸಾಹ ಪ್ರತಿಷ್ಠೆಗಳುಳ್ಳವರಿಗೆ ಸಮಾಜ ಸೇವೆ ಮಾಡಲಿಕ್ಕೂ ಯೋಗ್ಯವಾದ-ನಿಶ್ಚಿತ-ಪ್ರತಿಫಲವನ್ನು ಹೊಂದಲಿಕ್ಕೂ ಒಳ್ಳೆಯ ಅವಕಾಶವಿದೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,

ಮದ್ರಾಸ್ ಬ್ರಾಂಚ್ ಸೆಕ್ರಿಟರಿಗಳು.

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ದಿ ಬೊಂಬಾಯಿ ಲೈಫ್ ಬಿಲ್ಡಿಂಗ್ಸ್, ಗಾಂಧೀನಗರ, **ಉಡುಪಿ.**

ಎಂಬ ಮೇಲಿನ ವಿಳಾಸಕ್ಕಾಗಲೀ ಕೆಳಗೆ ಕಾಣಿಸಿದ ನಮ್ಮ ಇತರ ಯಾವ ಕಾರ್ಯಾಲಯಕ್ಕಾಗಲೀ ಅರ್ಜಿ ಬರೆದುಕೊಳ್ಳಿ.

ಪೋಸ್ಟ್ ಬಾಕ್ಸ್ ನಂ. 337 ಮೌಂಟ್ ರೋಡ್, **ಮದರಾಸು.**	ವಿಶ್ವೇಶ್ವರಪುರ ಸರ್ಕಲ್ **ಬೆಂಗಳೂರು ಸಿಟಿ.**	ಕಾರ್ ಸ್ಟ್ರೀಟ್ **ಮಂಗಳೂರು.**	ಪ್ರತಿಯಾರ **ಕಲ್ಲಿಕೋಟೆ.**

ಸೆಂಟ್ರಲ್ ಸ್ಟೇಶನ್ ರೋಡ್, **ತ್ರಿವೇಂದ್ರಮ್.**	ಹಾರ್ನಬಿ ರೋಡ್ ಗಿರ್ಗಾವ್, **ಬೊಂಬಾಯಿ ನಂ. 4.**	ಒಟ್ಟಪಾಲಮ್ **ದ. ಮಲಬಾರ್.**

The Tropical Insurance
CO., LTD., DELHI.

Chairman: Sjt. SUBASH CHANDRA BOSE
(Congress President)

Founder Directors
PANDIT MOTILAL NEHRU
DR. M. A. ANSARI
SJT. S. SRINIVASA IYENGAR
HAKIM AJMAL KHAN

This leading National Company founded and managed by five Congress Presidents invites applications for representation on salary and commission.

APPLY TO:

K. S. RAMAMURTHI, M.A.,
Branch Secretary,
16C, Mount Road,
Madras

OR

M. SUNDER RAM SHETTY
Branch Manager,
Hampankatta,
Mangalore.

ಹೊರಬಿದ್ದಂತಾಗುವುದು ಆದುದರಿಂದ ತನ್ನೊಳಗೆ ಏನಾದರೂ ಒಪ್ಪಂದವಾಗಲಿ, ಆಗದಿರಲಿ, ಎಂದಿನಂತೆ ಈ ವರುಷವೂ ಮಿಾನು ಹಿಡಿಯುವುದೇನೋ ನಿಶ್ಚಯವೆಂದು ಜಪಾನು ಸರಕಾರವು ರಷ್ಯಕ್ಕೆ ತಿಳಿಸಿದೆ. ತನ್ನ ಬೆಸ್ತರ ರಕ್ಷಣೆಗಾಗಿ ಯುದ್ಧನಾವೆಗಳನ್ನು ಅಟ್ಟುವುದಾಗಿ ನಿಶ್ಚೈಸಿದೆ. ಅಲ್ಲಿಯದೊಂದು ದ್ವೀಪವಾದ ಷೆಕಲಿನಿಗೆ ದೊಡ್ಡ ದಂಡನ್ನು ಕಳುಹಿಸಿಕೊಟ್ಟಿದೆ. ದಕ್ಷಿಣಚೈನದ ತನ್ನ ಪ್ರಾಂತದಿಂದ ಮಂಚುಕೋವಿಗೆ ಸೇನೆಯನ್ನು ಕಳುಹಿಸುತ್ತಾ ಇದೆ. ರಷ್ಯವೂ ಮಂಚುಕೋವಿನ ಗಡಿಗೆ ಸೇನೆಯನ್ನು ತರುವ ಪೂರ್ವಸನ್ನಾಹದಲ್ಲಿದೆ.

ಎಲ್ಲೆಲ್ಲಿ — ಏನೇನು?

ಸರ್. ಮಿರ್ಜಾರವರ ಸ್ತುತ್ಯ ನಿರ್ಧಾರ
ಆಗುಂಬೆ ರಸ್ತೆ ದುರುಸ್ತಿಗೆ ಹಣ ಮಂಜೂರಾತಿ

ಮೈಸೂರು ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರು ನಮ್ಮ ಜಿಲ್ಲೆಗೆ ಬಂದಾಗ ಕೆನರಾ ಪೆಸೆಂಜರ್ ಮತ್ತು ಗೂಡ್ಸ್ ಟ್ರಾಫಿಕ್ ಸಂಘದವರು ಅವರನ್ನು ಸಂದರ್ಶಿಸಿ ಆಗುಂಬೆ ಘಾಟಿ ರಸ್ತೆಯನ್ನು ದುರುಸ್ತಿ ಪಡಿಸಲು ಮೈಸೂರು ಸರಕಾರದವರು ತಕ್ಕ ಏರ್ಪಾಡು ಮಾಡಿದಲ್ಲಿ ಈ ಜಿಲ್ಲೆ-ಮೈಸೂರು ಇವುಗಳೊಳಗಿನ ವ್ಯಾಪಾರಕ್ಕೆ ತುಂಬ ಅನುಕೂಲವಾಗಬಹುದೆಂದು ಸೂಚಿಸಿದ ಮೇರೆಗೆ ದಿವಾನ್ ಸಾಹೇಬರು ತಮ್ಮ ಸರಕಾರದ ಇಂಜನಿಯರರಿಂದ ಆ ರಸ್ತೆಯನ್ನು ಪರಿಶೋಧಿಸುವಂತೆ ಮಾಡಿ, ಈಗ ಪ್ರಕೃತ ರಸ್ತೆ ದುರುಸ್ತಿನ ಬಗ್ಗೆ 10,000 ರೂಪಾಯಿ ಮಂಜೂರು ಮಾಡಿದ್ದಲ್ಲದೆ ಮಳೆಗಾಲ ದಾಟಿದ ಮೇಲೆ ಪುನಃ 10,000 ರೂ. ಗಳನ್ನು ವೆಚ್ಚಮಾಡಲು ನಿರ್ಧರಿಸಿದ್ದಾರೆ. ಈ ಹಣದ ವಿನಿಯೋಗದಿಂದ ಶಿವಮೊಗ್ಗ-ಮಂಗಳೂರು ರಸ್ತೆಯ ಆಗುಂಬೆ ಘಾಟಿ ಭಾಗವು ಎಲ್ಲಾ ತರದ ಪ್ರಯಾಣಕ್ಕನುಕೂಲವಾಗುವುದೆಂದು ದಿವಾನರು ಅಭಿಪ್ರಾಯ ಪಡುತ್ತಾರೆ ಈ ಸಂಗತಿಯು ಮೇಲಿನ ಸಂಘದ ಕಾರ್ಯದರ್ಶಿಗಳಿಗೆ ದಿವಾನರ ಪ್ರೈವೇಟ್ ಸೆಕ್ರೆಟರಿಗಳು ಬರೆದ ಪತ್ರದಿಂದ ತಿಳಿದುಬರುತ್ತದೆ.

ಎಲ್ಲ ಸಂಸ್ಥಾನಗಳಲ್ಲಿ ರಾಜಕೀಯ ಸತ್ಯಾಗ್ರಹ ಚಳವಳ ಪ್ರಕೃತ. ನಿಲ್ಲಿಸಲಾಗಿದೆ.

ಗಾಂಧೀಜಿಗಳ ಅಪೇಕ್ಷಾನುಸಾರವಾಗಿ ಜಯಪುರ, ತಿರುವಾಂಕೂರು ಮುಂತಾದ ಸಂಸ್ಥಾನಗಳಲ್ಲಿ ಉಗ್ರತರ ರಾಜಕೀಯ ಚಳವಳಗಳು ತಾತ್ಕಾಲಿಕವಾಗಿ ನಿಲ್ಲಿಸಲಾಗಿವೆ. ಗಾಂಧೀಜಿಗಳು ಹಾಗೆ ಅಪೇಕ್ಷಿಸಲು ಕಾರಣಗಳು: ಸಂಸ್ಥಾನದ ಪ್ರಜೆಗಳಲ್ಲಿ ಜಾಗೃತಿಯು ಬಹು ರಭಸದಿಂದ ಒಮ್ಮೆಂದೊಮ್ಮೆ ಎದ್ದುದರಿಂದ ಅವುಗಳನ್ನು ಅಣಗಿಸುವ ಗಡಿಬಿಡಿಯಲ್ಲಿ ನರೇಂದ್ರರಿಗೆ ಪರಿಸ್ಥಿತಿಯನ್ನು ನಿರಾಗ್ರಹ ಚಿತ್ತದಿಂದ ಪರಿಶೀಲಿಸಲು ಅವಕಾಶವಿಲ್ಲದಂತಾಗಿದೆ. ಇತ್ತೀಚೆಗೆ ಲಂಡನಿನಲ್ಲಿ ಲಾರ್ಡ್ ಜೆಟ್ಲೆಂಡರು ಇಂಡಿಯಾದಲ್ಲಿ ವೈಸರಾಯಿ ಮತ್ತು ಗವರ್ನರುಗಳೂ ಸಂಸ್ಥಾನಾಧಿಪತಿಗಳಿಗೆ ಸ್ಥೂಲವಾಗಿ ಕೊಟ್ಟ ಸೂಚನೆಗಳಲ್ಲ ಸಮಾವೇಶವಾಗಿರುವ ತತ್ವಗಳನ್ನು ಸೂಕ್ಷ್ಮವಾಗಿ ಬಿಡಿಸಿ ಮನಗಾಣಲು ಅವರಿಗೆ ತಕ್ಕ ಶಾಂತ ವಾತಾವರಣವನ್ನು ಕಲ್ಪಿಸಿಕೊಡಬೇಕು. ಆದುದರಿಂದ ಅತ್ಯುಗ್ರ ಚಳವಳಗಳನ್ನೆಲ್ಲ ನಿಲ್ಲಿಸಿ ನಿಯಮಬಾಹಿರವಲ್ಲದ ಜನಜಾಗೃತಿಗನುಗುಣವಾದ ಸಾಮಾನ್ಯ ಪ್ರಚಾರಕಾರ್ಯವನ್ನು ಕೈಗೊಳ್ಳುವುದೊಳ್ಳಿತು.

ಅಮೇರಿಕದಲ್ಲಿ ರೂಸ್ವೆಲ್ಟರ ಅಭಿಪ್ರಾಯ

ಯುನೈಟೆಡ್ ಸ್ಟೇಟ್ಸಿನ ಪ್ರೆಸಿಡೆಂಟ್ ರೂಸ್ವೆಲ್ಟರು ಮಧ್ಯಯುರೋಪಿನ ಘಟನೆಗಳ ಕುರಿತು ತನಗೆ ಅಸಮಾಧಾನವಾಗಿದೆಯೆಂದೂ ಆದರೆ ಜರ್ಮನಿಗೆ ಸಾರ್ವ ಆರ್ಥಿಕ ವ್ಯವಹಾರ ಬಹಿಷ್ಕಾರಹಾಕಬೇಕೆಂಬ ಸೂಚನೆಯು ತನ್ನಿಂದ ಹೊರಟಿದೆಯೆಂಬ ಸುದ್ದಿಯು ಸುಳ್ಳೆಂದೂ ಹೇಳಿದರು. ಆದರೆ ಜರ್ಮನಿಯ ಆತಿಕ್ರಮಣ ಪ್ರತಿಬಂಧಕ ನಿರ್ಧಾರವನ್ನು ಯುರೋಪಿನ ರಾಷ್ಟ್ರಗಳು ಒಕ್ಕಟ್ಟಿನಿಂದ ಮಾಡಿದರೆ ಅಂತಹ ನಿರ್ಧಾರದ ಉಪ್ಯೋಗಣೆಯು ನಮ್ಮ ರಾಷ್ಟ್ರದಿಂದಲೂ ಹೊರಡುವುದು ನಿಶ್ಚಯವೆಂದರು.

ಮುಸ್ಲಿಮ್ ಲೀಗಿನ ಸಂಕೋಚ ದೃಷ್ಟಿ

ಈಜಿಪ್ಟದಿಂದ ತ್ರಿಪುರಿ ಕಾಂಗ್ರೆಸ್ಸಿಗೆ ಸಹಾನುಭೂತಿ ಪ್ರದರ್ಶನಾರ್ಥವಾಗಿ ಅಲ್ಲಿಯ ಸರಕಾರದ ಪ್ರಜಾಪಕ್ಷದಿಂದೊಂದು ನಿಯೋಗ ಮಂಡಳಿ ಬಂದಿತ್ತಷ್ಟೆ. ಅವರು ಬೊಂಬಾಯಿಯಿಂದ ತೊಡಗಿ ಉತ್ತರ ಹಿಂದೂಸ್ಥಾನದ ಸಕಲ ಪ್ರಮುಖ್ಯ ನಗರಗಳನ್ನು ಸಂದರ್ಶಿಸಿ ಅಲ್ಲೆಲ್ಲ ಆದರಪೂರ್ವಕ ಸತ್ಕಾರವನ್ನು ಹೊಂದುತ್ತಿದ್ದಾರೆ. ಅದರ ಸದಸ್ಯರೆಲ್ಲ ಮುಸ್ಲೀಮರೇ; ಹಿಂದೂಸ್ಥಾನದ ಅತಿಥಿಗಳಾಗಿ ಬಂದಿದ್ದಾರೆ. ಸ್ವತಂತ್ರ ರಾಷ್ಟ್ರದ ಪ್ರತಿನಿಧಿಗಳಾಗಿ ಬಂದು ಇಲ್ಲಿಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಹಾನುಭೂತಿ ತೋರಿದ್ದಾರೆ. ಸಲಹೆ ಸೂಚನೆಗಳನ್ನು ನಾಡುತ್ತಿದ್ದಾರೆ. ತಾವೆಲ್ಲ ತಮ್ಮೊಳಗಿನ ಜಾತಿ ಜಂಗಡಗಳನ್ನು ಮರೆತು ಈಜಿಪ್ಟರೆಂದೇ ಒಂದುತನದಿಂದ ಕಾದಿಗೆದ್ದಂತೆ ನೀವೂ ಮತ ಜಾತಿ ಸಮಸ್ಯೆಗಳನ್ನು ರಾಜಕೀಯದಲ್ಲಿ ತಾರದೆ ಎಲ್ಲರೂ ಭಾರತೀಯರೆಂಬ ಐಕ್ಯಭಾವದಿಂದ ಹೋರಾಡಿರೆಂದು ಅವರು ಹೋದಲ್ಲೆಲ್ಲ ಸಾರುತ್ತಿದ್ದರು. ಲೀಗಿನವರಿಗೆ ಮೆಚ್ಚಿಕೆಯಾಗಲಿಲ್ಲವೆಂದು ತೋರುತ್ತದೆ. ಆ ಅಸಂತೃಪ್ತಿಯನ್ನು ಮೊನ್ನೆಯೊಂದು ಸಂದರ್ಭದಲ್ಲಿ ಪ್ರದರ್ಶಿಸಿ ದೂರ ದೇಶದವರಿಗೂ ತಮ್ಮ ಸಂಕೋಚ ದೃಷ್ಟಿಯ ಗುಟ್ಟು ಕೊಟ್ಟರು. ಡೆಲ್ಲಿಯ ಎಸೆಂಬ್ಲಿಯ ರಾಷ್ಟ್ರಪಕ್ಷದ ಮುಂದಾಳುಗಳಾದ ಭುಲಾಭಾಯಿ ದೇಸಾಯಿಗಳು ಈ ಈಜಿಪ್ಟದ ನಿಯೋಗ ಮಂಡಲಿಯ ಮರ್ಯಾದಾರ್ಥವಾಗಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಅದಕ್ಕೆ ಆ ಮಂತ್ರಿತರಾದವರಲ್ಲಿ ಮುಸ್ಲೀಮ್ ಲೀಗಿನ ಸದಸ್ಯರಾರೂ ಬಂದಿಲ್ಲ.

ಡಾಕ್ಟರ್ ಲಕ್ಷ್ಮೀಪತಿಗಳ 'ಆರೋಗ್ಯ ಯಾತ್ರಾ' ದಂಡು

ತಾ. ೨೨ನೆಯ ಯುಗಾದಿಯ ದಿನದಂದು ಆಂಧ್ರ ಆಯುರ್ವೇದ ವೈದ್ಯ ಮಂಡಲಿಯ ಅಧ್ಯಕ್ಷರಾದ ಡಾ| ಲಕ್ಷ್ಮೀಪತಿಗಳು ಆಂಧ್ರ ಜಿಲ್ಲೆಗಳಲ್ಲಿ ಆಯುರ್ವೇದ ಹಾಗೂ ಆರೋಗ್ಯ ಪ್ರಚಾರ ಧ್ಯೇಯದ ಯಾತ್ರಾ ಕಾರ್ಯ ಪ್ರಾರಂಭವನ್ನು ಕೈಗೊಂಡರು ಆ ಸಂದರ್ಭದಲ್ಲಿ ತನ್ನ ಯಾತ್ರಾ ದಂಡಿನ ಉದ್ದೇಶ ಮತ್ತು ಕಾರ್ಯಕ್ರಮಗಳನ್ನು ವಿವರಿಸುತ್ತ ಹೀಗೆಂದರು. ಇಂಡಿಯದಲ್ಲಿ ಯಾರೂ ಮದ್ದನ್ನು ಹುಡುಕಬೇಕಾಗಿಲ್ಲ. ಮನೆಯ ಸುತ್ತುಮುತ್ತಲಲ್ಲೇ ಬೆಳೆದಿದ. ತನ್ನ ಮೂವತ್ತು ವರುಷಗಳ ಅನುಭವದಿಂದ ತಾನು ಬರೆದ ಚಿಕ್ಕ ಪುಸ್ತಕದಲ್ಲಿ ನೂರು ಮೂಲಿಕೆಗಳ ಔಷಧ ತಯಾರಿಯ ಕ್ರಮವೂ ರೋಗನಿದಾನ ಮತ್ತು ಚಿಕಿತ್ಸಾ ವಿಧಾನವೂ ಇದೆ ಅಲ್ಲದೆ, ಆಯುರಾರೋಗ್ಯ ವರ್ಧನೆಯ ಸೂತ್ರಗಳೂ ಇವೆ. ಆರೋಗ್ಯ ಪ್ರಚಾರ ಕಾರ್ಯಕ್ಕೆ ಹಳ್ಳಿಯ ವೈದ್ಯರುಗಳನ್ನು ಸೇರಿಸಿ ಪ್ರಚಾರ ಕೇಂದ್ರಗಳನ್ನು ಸ್ಥಾಪಿಸಬೇಕು. ತಾಲೀಮುಖಾನೆ, ಆಟದ ಬಯಲು ಇವು ಪ್ರತಿಯೊಂದು ಹಳ್ಳಿಯಲ್ಲೂ ಇರತಕ್ಕದು. ಹಳ್ಳಿಗಳ ಕೊಳೆ ನಿವಾರಣೆ, ನೈರ್ಮಲ್ಯ ಪಾಲನೆ, ಸರಳ ಆರೋಗ್ಯ ಜೀವನ ದೀಕ್ಷೆ, ಆಯುರ್ವೇದ ಚಿಕಿತ್ಸಾ ಪ್ರೇಮ ವಿಶ್ವಾಸ, ಇವುಗಳ ಸಾಧನೆಗೆ ಸ್ವಯಂ ಸೇವಕ ತಂಡವನ್ನು ಕೂಡಿಸುವುದು ಇವೇ ಮುಂತಾದವುಗಳು ತನ್ನ ಯಾತ್ರೆಯ ಕಾರ್ಯಕ್ರಮಗಳೆಂದು ಹೇಳಿದರು.

ಮೈಸೂರಲ್ಲಿ ನವಯುಗ ಸಿಕ್ಕುವ ಸ್ಥಳ
ಶ್ರೀ. ಕೆ. ಪಿ. ಪುರಾಣಿಕ,
ಮೊಡರ್ನ್ ಮೋಟರ್ ಸರ್ವಿಸ್.

ಭರತಖಂಡದ ರಾಜಧಾನಿ

ದೆಹಲಿಯ ರೂಪರೇಖೆ

(ಲೇಖಕರು:—ಶ್ರೀ. ಎಸ್. ಗುಂಡುರಾವ್, ಮೈಸೂರು)

(ನವಯುಗದ ಮೈಸೂರು ಬಾತ್ಮೀದಾರರು)

ರೈಲಲ್ಲಿ ಇಳಿದೊಡನೆ—

ಭರತಖಂಡದ ರಾಜಧಾನಿಯಾದ ದೆಹಲಿಯು ಪಾಂಡವರ ಕಾಲದಿಂದಲ್ಲದೆ,ಮಹಮ್ಮದೀಯರು ರಾಜ್ಯಭಾರಮಾಡಿದಾಗಿನಿಂದಲೂ ಬಹಳ ಪ್ರಸಿದ್ಧಿ ಪಡೆದಿದೆ. ದೆಹಲಿ ಜಂಕ್ಷನಿಗೆ ಬಂದರೆ ಮೊಟ್ಟ ಮೊದಲು ದೊಡ್ಡ ರೈಲ್ವೆ ನಿಲ್ದಾಣವು ಸಿಗುವುದು. ಇಲ್ಲಿ ರೈಲು ನಿಲ್ಲಲು ಅತಿದೊಡ್ಡ ಪ್ಲಾಟ್‌ಫಾರಂಗಳು ಉಭಯ ಪಾರ್ಶ್ವಗಳಲ್ಲೂ ಇರುವುವಲ್ಲದೆ, ಇವುಗಳಿಗೆ ಸಂಖ್ಯೆಗಳನ್ನು ಕೊಟ್ಟಿದ್ದಾರೆ, ರೈಲಿನಿಂದ ಇಳಿದ ಕೂಡಲೆ ಟ್ಯಾಕ್ಸಿನಡೆಸುವವರೂ, ಟಾಂಗಹೊಡೆಯುವವರೂ ಬಂದು, ಎಲ್ಲಿಗೆ ಹೋಗುತ್ತೀರಿ, ಟ್ಯಾಕ್ಸಿ ಅಥವಾ ಟಾಂಗಬೇಕೆ, ಎಂದು ಕೇಳುವರು. ಇವರುಗಳೊಂದಿಗೆ ಮಾತನಾಡುತ್ತಿರುವಾಗಲೇ ಮತ್ತೊಬ್ಬರು ತಲೆಹಾಕಿ ಒಂದು ಕಾಗದವನ್ನೂ ಕೊಟ್ಟು ಹೋಟೇಲಿಗೆ ಬನ್ನಿ, ನಿಮಗೆ ಬೇಕಾದ ಸೌಕರ್ಯಗಳನ್ನು ಒದಗಿಸುತ್ತೇವೆ ಎನ್ನುತ್ತಾರೆ. ಇವರುಗಳ ಕಾಟವನ್ನು ತಪ್ಪಿಸಿಕೊಂಡು ಹೊರಗೆ ಬಂದರೆ, ಸಾಲಾಗಿ ನಿಂತಿರುವ ಟ್ಯಾಕ್ಸಿ ಮತ್ತು ಬಂಡಿಗಳನ್ನೂ ನೋಡಬಹುದು.

ಹಳೆಯ ಮತ್ತು ಹೊಸ ಡಿಲ್ಲಿ.

ಇಂದಿನ ದೆಹಲಿಯು ಪೂರ್ವ ಕಾಲದ ಹಾಗಿಲ್ಲ. ಈಗ ಹೊಸ ದೆಹಲಿ ಎಂದು, ಹಳೆಯ ದೆಹಲಿಯ ಉತ್ತರ ಭಾಗಕ್ಕೆ ಬಹು ಭಾಗವನ್ನು ಬಡಾಯಿಸಿದ್ದಾರೆ. ಹೊಸ ದೆಹಲಿಯು, ಹಳೆಯ ದೆಹಲಿಗೆ ಸುಮಾರು ೩ಮೈಲಿಗಳಾಗುತ್ತದೆ ಹೊಸ ದೆಹಲಿಯಲ್ಲಿ ಒಂದು ರೈಲ್ವೆ ನಿಲ್ದಾಣವುಂಟು. ಇತ್ತೀಚೆಗೆ ದೆಹಲಿಗೆ ಹೋಗುವವರು, ಹೊಸ ದೆಹಲಿಯಲ್ಲೇ ಬಿಡಾರಮಾಡುತ್ತಾರೆ. ಏಕೆಂದರೆ, ಭರತಖಂಡದ ಪ್ರತಿನಿಧಿಗಳಾದ ವೈಸರಾಯಿಂದ ಹಿಡಿದು ಆಧುನಿಕ ರೀತಿಯ ಅಂಗಡಿಗಳಿರುವುದು ಇಲ್ಲೇ. ಹೊಸ ದೆಹಲಿಯನ್ನು ಬಹು ಚೆನ್ನಾಗಿ ಕಟ್ಟಿದ್ದಾರೆ. ಇಲ್ಲೆಲ್ಲಾ ಬಹು ಸೊಗಸಾದ ಜಾಗವೆಂದರೆ 'ಕನ್ನಾಟ್' ಸರ್ಕಸ್ ಎನ್ನುವುದು. ಇದು ಏನೂ ಅಲ್ಲ. ಆದರೆ ಹೊಸ ದೆಹಲಿಯ ಒಂದು ಭಾಗದಲ್ಲಿ ಗುಂಡಗೆ ಕಟ್ಟಡಗಳನ್ನು ಕಟ್ಟಿದ್ದಾರೆ. ಇಲ್ಲಿ ಅಂಗಡಿಗಳಿರುವುದನ್ನು ನೋಡಬಹುದು. ಕನ್ನಾಟ ಸರ್ಕಸ್‌ನ ಒಳಗಡೆ ಬಂದರೆ, ಮೊಟ್ಟಮೊದಲು ದಾರಿಯೇ ಗೊತ್ತಾಗುವುದಿಲ್ಲ. ಒಂದು ಜಾಗದಿಂದ ನಡೆದು ಹೋದರೆ, ಅದೇ ಜಾಗಕ್ಕೆ ಪುನಃ ಬರುವುದಾಗುತ್ತದೆ. ಇದು ಗುಂಡಗಿರುವುದರಿಂದ ಹೀಗಾಗುತ್ತೆ. ಈ ಕನ್ನಾಟ ಸರ್ಕಸ್‌ನಲ್ಲಿ ಅತಿ ಮಧ್ಯದಲ್ಲಿ ಒಂದು ಸೊಗಸಾದ ತೋಟವನ್ನು ಮಾಡಿದ್ದಾರೆ. ಇಲ್ಲಿಂದ ಸುತ್ತಲೂ, ದಿಕ್ಕು ದಿಕ್ಕಿಗೂ ರಸ್ತೆಗಳನ್ನು ಮಾಡಿದ್ದಾರೆ. ಇದು ವಿವಿಧ ಸ್ಥಳಗಳಿಗೆ ಹೋಗುತ್ತದ.

ಹೊಸ ಡಿಲ್ಲಿಯಲ್ಲಿ.

ಹಳೆಯ ದೆಹಲಿಯಿಂದ ಬಂದರೆ ಮೊದಲು 'ಲೇಡಿ' ಹಾರ್ಡಿಂಜ್‌ರವರ ಮೆಡಿಕಲ್ ಆಸ್ಪತ್ರೆ ರಸ್ತೆಸಿಗುತ್ತದೆ. ಇದು ಹೊಸ ದೆಹಲಿಯ ರೈಲ್ವೆ ನಿಲ್ದಾಣದ ರಸ್ತೆಗೆ ಸೇರುತ್ತದೆ ಹೊಸ ದೆಹಲಿಯ ಕನ್ನಾಟ ಸರ್ಕಸ್‌ನಲ್ಲಿ ಬಿಡಾರಮಾಡಲು ಅನೇಕ ಹೋಟೆಲುಗಳುಂಟು. ಐರೋಪ್ಯರು ಮತ್ತು ಮದ್ರಾಸಿಗಳೂ ಹೋಟೆಲುಗಳಿಟ್ಟಿದ್ದಾರೆ ಕನ್ನಾಟ ಸರ್ಕಸ್‌ನಲ್ಲಿ, 'ಆರ್ಮಿ ಮತ್ತು ನೇವಿ' ಸ್ಟೋರ್ಸ್ ಎಂದು ಒಂದಂಗಡಿ ಉಂಟು, ಈ ಅಂಗಡಿಯ ಮತ್ತೊಂದು ಕೊನೆಗೆ, ಸುಪ್ರಸಿದ್ಧ ಬೇಂಕಾದ, ಲಾಯಿಡ್ಸ್ ಬೇಂಕುಂಟು. ಇದರ ಮುಂದೆ ಪಾರ್ಲಿಮೆಂಟ್ ರಸ್ತೆಯನ್ನುವುದಿದೆ. ಇದರಲ್ಲಿ ಸುಮಾರು ೩ ಫರ್ಲಾಂಗು ದೂರ ನಡೆದು ಹೋದರೆ, ಎರಡು ಕಡೆಗಳಲ್ಲೂ, ಅಧಿಕಾರಿಗಳ ಮನೆಗಳೂ, ಚಿಕ್ಕ ಮಕ್ಕಳಿಗೆ ಆಟವಾಡಲು, ಮೈದಾನ ಮತ್ತು 'ಇಂಪೀರಿಯಲ್ ಬೇಂಕ್', ದೆಹಲಿ ಪೋಲಿಸ್ ಠಾಣೆ ಸಿಗುತ್ತದೆ. ಈ ಪಾರ್ಲಿಮೆಂಟ್ ರಸ್ತೆಯು ನೆಟ್ಟಗೆ ಚೇಂಬರ್ ಕೌನ್ಸಿಲ್‌ಗೆ ಕರೆದುಕೊಂಡು ಹೋಗುತ್ತದೆ. ಈ ಚೇಂಬರ್ ಕೌನ್ಸಿಲ್ ಎನ್ನುವುದನ್ನೂ ಗುಂಡಗೆ ಕಟ್ಟಿದ್ದಾರೆ. ಇದರ ಮಗ್ಗುಲಲ್ಲೇ ನಡೆದು ಹೋದರೆ ಸೆಕ್ರಿಟರಿಯಟ್ ವೈಸರಾಯರ ಬಂಗಲೆ ಮತ್ತು ಅಸೆಂಬ್ಲಿ ಭವನ ಇವೆಲ್ಲವನ್ನೂ ನೋಡಬಹುದು. ಹೊಸ ದೆಹಲಿಯಲ್ಲಿ ಕಟ್ಟಿರುವ ಮನೆಗಳೂ, ಅಂಗಡಿಗಳೂ, ಬಹಳ ಆಧುನಿಕ ರೀತಿಯಲ್ಲಿವೆ.

ಸೌಕರ್ಯಗಳು.

ಕನ್ನಾಟ ಸರ್ಕಸ್‌ನಲ್ಲಿರುವ ಲಾಯಿಡ್ಸ್ ಬೇಂಕನ್ನು ಬಿಟ್ಟು ಅದರ ರಸ್ತೆಯ ಮಗ್ಗುಲಲ್ಲಿರುವ ಕಟ್ಟಡದಿಂದ ಸ್ವಲ್ಪ ನಡೆದರೆ ಸುಪ್ರಸಿದ್ಧ ಇಂಗ್ಲಿಷ್ ದೈನಂದಿನ ಪತ್ರಿಕೆಯಾದ ದಿ ಹಿಂದೂಸ್ಥಾನ್ ಟೈಮ್ಸ್ ಕಟ್ಟಡವು ಉಂಟು, ಇದರ ಇದಿರುನಲ್ಲಿ ದಿ. ಸ್ಟೇಟ್ಸ್ ಮನ್ ಮತ್ತು ಬರ್ಮಶೆಲ್ ಆಯಿಲ್ ಕಟ್ಟಡಗಳಿವೆ. ಇಷ್ಟಲ್ಲದೆ ಇನ್ನೂ ಅನೇಕ ಸುಪ್ರಸಿದ್ಧ ವರ್ತಕರುಗಳೂ ಅಂಗಡಿಗಳನ್ನಿಟ್ಟಿದ್ದಾರೆ. ಸಿನಿಮಾ ಮಂದಿರವೂ ಉಂಟು, ಹೊಸದೆಹಲಿಯಲ್ಲಿ ಆಧುನಿಕ ರೀತಿಯ ಟ್ರಾಮುಗಳಾಗಲಿ, ಬಸ್ಸುಗಳಾಗಲೀ ಇಲ್ಲ ಸೊಗಸಾದ ಟಾಂಗಗಾಡಿ ಉಂಟು, ಇವರೊಂದಿಗೆ ಘಂಟೆಗೆ ಇಷ್ಟು ಬಾಡಿಗೆ ಪ್ರಕಾರ ಮಾತನಾಡಿ ಎಲ್ಲವನ್ನೂ ನೋಡಬಹುದು. ಟಾಂಗಹೊಡೆಯುವವರೂ, ಟಾಕ್ಸಿನಡೆಸುವ ಡ್ರೈವರೂ, ಯಾವ ವಿಚಾರಬೇಕಾದರೂ ಮಾತಾಡಬಲ್ಲರಲ್ಲದೆ ಎಲ್ಲಿಗೆ ಬೇಕಾದರೂ ಕರೆದುಕೊಂಡುಹೋಗಿ ಎಲ್ಲವನ್ನೂ ತೋರಿಸುತ್ತಾರೆ.

ಚಾಂದನಿ ಚೌಕ.

ಹೊಸ ದೆಹಲಿಯನ್ನು ಬಿಟ್ಟು ಹಳೆಯ ದೆಹಲಿಗೆ ಬಂದರೆ ಗಲಾಟೆಯಲ್ಲದೆ ನೋಡಲು ಚೆನ್ನಾಗಿಲ್ಲ. ಹಳೆಯ ದೆಹಲಿಯಲ್ಲಿ ಬಹು ಸುಪ್ರಸಿದ್ಧವಾದ ಜಾಗವೆಂದರೆ 'ಚಾಂದನಿಚೌಕ್' ಇಲ್ಲಿಗೆ ಬಂದರೆ ಒಂದು ದೊಡ್ಡ ಗಡಿಯಾರದ ಗೋಪುರವನ್ನೂ ಸುತ್ತಲೂ ಇರುವ ಅಂಗಡಿಗಳನ್ನೂ ನೋಡಬಹುದು. ಈ ಗಡಿಯಾರದಿಂದ ಸ್ವಲ್ಪ ದೂರ ನಡೆದರೆ ದೆಹಲಿ ಕೋಟೆಯು ಸಿಗುತ್ತದೆ. ಇಲ್ಲಿ ನೋಡುವ ಅನೇಕ ವಸ್ತುಗಳುಂಟು.

ಚಾಂದನಿ ಚೌಕಕ್ಕೆ ಬಂದಾಗ, ನನಗೊಂದು ವಿಚಾರ ಜ್ಞಾಪಕಕ್ಕೆ ಬಂತು ಅದೇನೆಂದರೆ—ಒಂದು ಬಾರಿ ಕಾಂಗ್ರೆಸ್‌ನವರು ತಮ್ಮ ಅಧಿವೇಶನವನ್ನೂ ದೆಹಲಿಯಲ್ಲಿ ಮಾಡಿದಾಗ, ಪೋಲೀಸು ತಡೆಗಟ್ಟಲು, ಕೆಲವರು ಚಾಂದನಿಚೌಕದಲ್ಲಿರುವ ಗಡಿಯಾರದ ಗೋಪುರದ ಕೆಳಗೆ, ಸಭೆ ನಡೆಸಿ, ಕೆಲವು ನಿರ್ಣಯಗಳನ್ನೂ ಪಾಸು ಮಾಡಿಬಿಟ್ಟರು. ತರುವಾಯ ಪೋಲೀಸರು ಜನಗಳನ್ನು ಚದುರಿಸಿದರು ಎಂದು ಒಂದು ಪುಸ್ತಕದಲ್ಲಿ ಓದಿದ್ದೆ. ಇದನ್ನು ನೋಡಿದ ತಕ್ಷಣವೇ, ನನಗೆ ಇವೆಲ್ಲವೂ ಕಣ್ಣಿನ ಮುಂಭಾಗದಲ್ಲೇ ನಿಂತಿರುವಂತೆ ಕಾಣಿಸಿತು.

ಅತ್ಯಂತ ವ್ಯಾಪಾರ ನಡೆಯುವ ಸ್ಥಳವೆಂದರೆ ಚಾಂದನಿಚೌಕ್, ಹಿಂದುಮುಸ್ಲಿಮ್ ಗಲಾಟೆಯಾದರೆ ಚಾಂದನೀ ಚೌಕದಲ್ಲೇ ನಡೆಯುತ್ತದೆ ಇದರ ಸುತ್ತಮುತ್ತಲಿರುವ ಪ್ರದೇಶಗಳು, ಬಹು ಕಿರಿದಾದುವಲ್ಲದೆ, ಗಲ್ಲಿಗಳೇ ಜಾಸ್ತಿ. ಆದುದರಿಂದ ಹಿಂದೂಮುಸ್ಲಿಮ್ ಕಲಹವು ನಡೆಯಲು ಇಲ್ಲಿ ಸಹಜವಾಗಿದೆ.

ಸುಂದರ ಕಟ್ಟಡಗಳು.

ಹೊಸ ದೆಹಲಿಯಿಂದ ಸುಮಾರು ೧½ ಮೈಲಿ ಹೋದರೆ, 'ಅಜ್ಮೀರಿ ಗೇಟ್' ಎನ್ನುವುದು ಸಿಗುತ್ತದೆ. ಇದನ್ನು ದಾಟಿ, ಸ್ವಲ್ಪ ಮುಂದೆ ಹೋದರೆ, ಮಹಮ್ಮದೀಯರು ಪ್ರಾರ್ಥನೆ ನಡೆಸುವ ಜಮ್ಮಾ ಮಸೀದಿ ಸಿಗುತ್ತೆ. ಇದನ್ನು ಬಿಟ್ಟರೆ ಚಾಂದನಿ ಚೌಕ್ ಮತ್ತು ದೆಹಲಿಕೋಟೆ ಸಿಗುತ್ತೆ. ಹಳೆಯ ದೆಹಲಿಯ ಮತ್ತೊಂದು ಭಾಗಕ್ಕೆ ಬಂದು ದೆಹಲಿ ಗೇಟನ್ನೂ ದಾಟಿ, ಕಾಶ್ಮೀರಿಗೇಟಿನೊಳಗಿನಿಂದ ೨-೩ ಮೈಲಿಗಳು ಹೋದರೆ, ನಯನಮನೋಹರವಾಗಿ ಹರಿಯುವ, ಜಮುನಾ ನದಿ, ಅದರ ಹಿಂದೆ, ಗಂಭೀರವಾಗಿರುವ ವೈಸರಾಯರ ಹಳೆಯ ಬಂಗಲೆ ನೋಡಬಹುದು. ಇಷ್ಟಲ್ಲದೆ ಅನೇಕ ಹೋಟೆಲುಗಳೂ, ಪಬ್ಲಿಕ್ ಸರ್ವಿಸ್ ಕಮಿಷನ್ ಪರೀಕ್ಷೆನಡೆಯುವ ಮೆಟ್ಕಾಫ್ ಬಂಗಲೆ, ಮೈಸೂರು ರಾಜಮನೆತನದವರು ಬಿಡಾರಮಾಡುವ ಮೇಯ್ಡನ್ಸ್ ಹೋಟೆಲ್, ಸಿಸಿಲ್ ಹೋಟೇಲ್ ಮತ್ತು ಅನೇಕ ಕಛೇರಿಗಳನ್ನೂ ನೋಡಬಹುದು. ಇವೆಲ್ಲವನ್ನೂ ನೋಡಿ, 'ರಾಜಪುರ' ರಸ್ತೆಗೆ ಬಂದರೆ, ನಮ್ಮ ಭರತಖಂಡದ ಅನೇಕ ದೇಶೀಯ ರಾಜರುಗಳು ಕಟ್ಟಿಸಿರುವ ಬಂಗಲೆಗಳಿವೆ. ಹಳೆಯ ದೆಹಲಿಯಿಂದ ೭ ಮೈಲಿ ಹೋದರೆ ಸುಪ್ರಸಿದ್ಧವಾದ 'ಕುತುಬ್ ಮಿನಾರ್' ಇಲ್ಲಿಗೆ ಹೋಗುವವರೆವಿಗೂ ಹಳೆಯ ದೆಹಲಿಯು ವಿಸ್ತಾರವಾಗಿದೆಯಲ್ಲದೆ, ಕೆಲವು ಚಿಕ್ಕ ಚಿಕ್ಕ ಹಳ್ಳಿಗಳಿವೆ.

ಹಳೆಯ ದೆಹಲಿಯ ಮತ್ತೊಂದು ಭಾಗದಲ್ಲಿ ವಿಶ್ವವಿದ್ಯಾಲಯದ ಕಟ್ಟಡ ಮತ್ತು ಡೆಲ್ಲಿಬ್ರಾಡ್ ಕ್ಯಾಸ್ಟಿಂಗ್ ಸ್ಟೇಶನ್ ಸಿಗುತ್ತದೆ.

ಜನರ ಉಡಿಗೆತೊಡಿಗೆ

ದೆಹಲಿಯಲ್ಲಿ ಎಲ್ಲ ಕೋಮಿನ ಜನರೂ ವಾಸಮಾಡುತ್ತಾರೆ ಆಧುನಿಕ ರೀತಿಯಲ್ಲಿ ಬಹಳ ಚೆನ್ನಾಗಿ ಬಟ್ಟೆಬರೆಗಳನ್ನೂ ಧರಿಸಿ ಶೃಂಗಾರವನ್ನು ಮಾಡಿಕೊಂಡಿರುವ ಸ್ತ್ರೀಯರನ್ನೂ ನೋಡಬೇಕಾದರೆ ಹೊಸ ದೆಹಲಿಗೆ ಹೋಗಬೇಕು. ಅದರಲ್ಲೂ ಪಂಜಾಬಿ ಹೆಂಗಸರು ಒಂದು ಪೈಜಾಮ ಧರಿಸಿ, ಒಂದು ಉದ್ದವಾಗಿರುವ ಶರಟನ್ನು ಹಾಕಿಕೊಂಡು, ರೇಷ್ಮೆಯ ಒಂದು ವಸ್ತ್ರವನ್ನೂ ತಲೆಯ ಮೇಲೆ ಹೊದ್ದಿಕೊಂಡು ಠೀಕಾಗಿ ನಡೆಯುವುದನ್ನೂ ನೋಡಬಹುದು, ಸಿಕ್ಕರುಗಳು ತಮ್ಮ ಸುಪ್ರಸಿದ್ಧವಾದ ಗಡ್ಡವನ್ನೂ ಸರಿಮಾಡಿಕೊಂಡು, ಸೊಟ್ಟನೆಯ ರುಮಾಲಿನೊಂದಿಗೆ ಹೋಗುತ್ತಿರುತ್ತಾರೆ.

ಆಂಗ್ಲೋ ಇಂಡಿಯನ್ನರು ಲಿಪ್‌ಸ್ಟಿಕ್ ಮತ್ತು ಫೇಸ್‌ಪೌಡರ್‌ನಿಂದಲೇ ಕೂಡಿರುತ್ತಾರೆ. ಇವೆಲ್ಲವೂ ದೆಹಲಿಯಲ್ಲಿ ಕಾಣುವ ದೃಶ್ಯಗಳಲ್ಲಿ ಕೆಲವು ಕಾಲೇಜನಲ್ಲಿ ಓದುವ ಹುಡುಗ ಹುಡುಗಿಯರು ಇಲ್ಲೆಲ್ಲಾ ಇರುತ್ತಾರಲ್ಲದೆ ಗುಂಪು ಗುಂಪಾಗಿ ಹೋಗುವುದನ್ನು ನೋಡಬಹುದು.

ಅಂತೂ ದೆಹಲಿಯು ಬಹಳ ಪ್ರಸಿದ್ಧವಾದ ಜಾಗವಾಗಿದೆಯಲ್ಲದೆ, ಅದರ ವಿಚಾರವನ್ನೂ ಬರೆಯುತ್ತಿದ್ದರೆ ಒಂದು ಪುಸ್ತಕವಾಗುತ್ತದೆ. ಭರತಖಂಡ ಯಾವ ಮೂಲೆಯಲ್ಲಿ ಸ್ವಲ್ಪ ಗಲಭೆ ನಡೆದರೂ ಇಲ್ಲಿಗೆ ಸುದ್ದಿ ಬರುತ್ತೆ. ಇಂತಹ ಸುಪ್ರಸಿದ್ಧವಾದ ಸ್ಥಳಕ್ಕೆ ಇಂದು ಮಹಾತ್ಮಾ ಗಾಂಧಿಜಿಯವರು ಪ್ರಯಾಣ ಬೆಳೆಸಿ, ದೇಶಿಯ ಸಂಸ್ಥಾನವಲ್ಲಿ ಬರಬಹುದಾದ ಬಿಕ್ಕಟ್ಟನ್ನೂ ಅಳಿಸಲು ಯತ್ನಿಸುತ್ತಿದ್ದಾರೆ.

ಪ್ರಪಂಚದಲ್ಲಿ ಕಲವು ಸುಪ್ರಸಿದ್ಧ ರಾಜಧಾನಿಗಳು ಹೇಗೆಹೆಸರು ಪಡೆದಿವೆಯೋ ಅದೇ ರೀತಿಯಲ್ಲಿ ನಮ್ಮ ಭರತಖಂಡದ ರಾಜಧಾನಿಯಾದ ದೆಹಲಿಯೂ ಕೀರ್ತಿಪತಾಕೆಯನ್ನು ಎತ್ತಿ ಹಿಡಿದಿರುವರು. ದೆಹಲಿನಗರವು ಚಿರಕಾಲ ಬಾಳಲಿ.

ಮೈಸೂರು ಎಸೆಂಬ್ಲಿಯಲ್ಲಿ ೪೮ ಮೆಂಬರರ ರಾಜಿನಾಮೆ

ಮೈಸೂರು ಸ್ಟೇಟ ಕಾಂಗ್ರೆಸ್ಸು ನ್ಯಾಯ ವಿಧಾಯಕ ಸಭೆಯ ಮತ್ತು ಮುನ್ಸಿಪಲ್ ಮುಂತಾದ ಸ್ಥಳೀಯ ಸಂಸ್ಥೆಗಳ ಸದಸ್ಯರು ಅವನ್ನು ಬಿಟ್ಟು ಹೊರಬರಬೇಕೆಂದು ಕೇಳಿಕೊಂಡುದರ ಪರಿಣಾಮವಾಗಿ ಈ ವರೆಗೆ ೪೮ ಮಂದಿ ಎಸೆಂಬ್ಲಿ ಮೆಂಬರರೂ ೪೦ ಮುನ್ಸಿಪಲ್ ಮೆಂಬರರೂ ರಾಜಿನಾಮೆ ಕೊಟ್ಟಿರುವರು.

ವಿದೇಶೀ ಬಂದರಗಳಿಗೆ ಹೋಗುವ ಸರಕುಗಳ ಮೇಲೆ ವಿಮೆಯ ದರ ದುಬಾರಿಯಾಗಲಿಕ್ಕಿದೆ.

ಇಂಡಿಯಾದಿಂದ ಯುರೋಪ್ ಮತ್ತು ಅಮೇರಿಕಾ ದೇಶದ ಬಂದರುಗಳಿಗೆ ಹೋಗುವ ಸರಕುಗಳನ್ನು ವಿಮೆ ದೂಡಿಸುವಲ್ಲಿ ಅದರ ದರವು ಇಂದಿನ ಯುದ್ಧ ಭಯದ ಪರಿಸ್ಥಿತಿಯಿಂದಾಗಿ ದುಬಾರಿಯಾಗುವುದೆಂದು ಬೊಂಬಾಯಿಯ ಪ್ರಮುಖ ವಿಮಾ ಸಂಘಗಳಿಂದ ತಿಳಿದು ಬಂದಿದೆ.

ರೂಪಾಯಿಗೆ ನಾಲ್ಕಾಣೆ-ತಿರುವಾಂಕೂರ್ ನೇಶನಲ್ ಬ್ಯಾಂಕಿನ ಠೇವಣಾತಿದಾರರಿಗೆ

ತಿರುವಾಂಕೂರ್ ನ್ಯಾಶನಲ್ ಎಂಡ್ ಕ್ವಿಲೋನ್ ಬ್ಯಾಂಕಿನ ತಿರುವಾಂಕೂರು ಆಫೀಸುಗಳ ಸಾಲಗಾರರಿಗೆ ಪ್ರಕೃತ ರೂಪಾಯಿಗೆ ನಾಲ್ಕಾಣೆಯಂತೆ ಮರುಪಾವತಿ (ಡಿವಿಡೆಂಡ್) ಕೊಡೋಣಾಗುವುದೆಂದು ಕ್ವಿಲೋನ ಡಿಸ್ಟ್ರಿಕ್ಟ್ ಜಡ್ಜರು ಆ ಬ್ಯಾಂಕಿನ ಮೇಲೆ ನಡೆದ ದಿವಾಳಿ ಅರ್ಜಿಯ ತೃತೀಯವಾಗಿ ತೀರ್ಪುಕೊಟ್ಟಿದ್ದಾರೆ.

ಭಾರತಕ್ಕೊಬ್ಬ ಡಿಕ್ಟೇಟರರು ಬೇಕೇ?

(ಅನುವಾದಕರು—ಶ್ರೀ. S. L. ಸುಬ್ರಹ್ಮಣ್ಯಂ, ಉರ್ದುಸ್ಕೂಲ್ ಮಾಸ್ತರು, ಹರಿಹರ.)

ಈ ಪ್ರಶ್ನೆಯು ಬಹಳ ತೊಡಕಾದುದು. ಆದರೂ ಇದು ಈಗ ವಿಶ್ವವ್ಯಾಪೀ ಸಮಸ್ಯೆಯಾಗಿದ್ದೆ. ಪ್ರತಿದಿನವೂ ನಡೆಯುತ್ತಿರುವ ಘಟನೆಗಳನ್ನು ನೋಡಿ, ಪ್ರತಿಯೊಬ್ಬ ದೇಶವಾಸಿಯ ತಲೆಯಲ್ಲಿಯೂ ಈ ವಿಚಾರವು ಮನೆಮಾಡಿದೆ. ಇಂದು ದೇಶದ ಎಲ್ಲರ ಆಶೆಯೂ ದೇಶದ ಪ್ರಾಣದ ಸಂಚಾರವೂ ಕೇವಲ ಒಂದು ವ್ಯಕ್ತಿಯ ಮೇಲೆ ಕೇಂದ್ರಿತವಾಗಿದೆ. ಆ ವ್ಯಕ್ತಿಯೇ ಮಹಾತ್ಮ ಗಾಂಧಿಜಿ. ನಾವು ಮೊದಲು ಇಟಲಿ, ಜರ್ಮನಿ, ಟರ್ಕಿ, ಚೀಣ, ಸ್ಪೇನ್ ಮತ್ತು ಫ್ರಾನ್ಸುಗಳ ಅವಸ್ಥೆಯನ್ನು ನೋಡೋಣ. ಇವುಗಳ ಪೈಕಿ ಮೊದಲನೇ ಮೂರು ದೇಶಗಳಲ್ಲಂತೂ "ಡಿಕ್ಟೇಟರು"ಗಳ ಏಕಛತ್ರಾಧಿಪತ್ಯವಿದ್ದೇ ಇದೆ. ಉಳಿದ ಮೂರು ದೇಶಗಳಲ್ಲಿ ಪ್ರಜಾತಂತ್ರ ರಾಜ್ಯಭಾರವಿದೆ.

ಡಿಕ್ಟೇಟರರು ಯಾರಾಗಬೇಕು?

ಇಟಲಿ

ಮಹಾಯುದ್ಧಕ್ಕೆ ಮೊದಲು ಇಲ್ಲಿ ವಿಕ್ಟೋರಿಯೋ ಎಮ್ಯಾನುಯಲ್ ಎಂಬುವವನು ರಾಜನಿದ್ದನು. ಆಗ ಇಟಲಿಯ ಭಾಗ್ಯತಾರೆಯು ಮಂದಗಮನದಲ್ಲಿತ್ತು. ಯೂರೋಪಿನಲ್ಲಿ ಅದರ ಅಸ್ತಿತ್ವಕ್ಕೇನೂ ಬೆಲೆಯಿರಲಿಲ್ಲ. ಮಹಾಯುದ್ಧದ ಸಮಯದಲ್ಲೇ ಅಲ್ಲಿ ಮುಸೋಲಿನಿಯ ಪ್ರಾದುರ್ಭಾವವಾದುದು. ಯುದ್ಧದಲ್ಲಿ ಅದು ಮಿತ್ರಮಂಡಲಿಯ ಪಕ್ಷವನ್ನು ವಹಿಸಿದ್ದುದರಿಂದ ಯುದ್ಧವಾದ ಮೇಲೆ ಸುಲಿಗೆಯ ಕೆಲವು ತುಣುಕುಗಳು ಅದಕ್ಕೆ ದೊರೆತುವು. ವಿಜಯೀ ರಾಷ್ಟ್ರಗಳಾದ ಫ್ರಾನ್ಸು ಮತ್ತು ಇಂಗ್ಲೆಂಡ್ ದೇಶಗಳು ಉಳಿದುದನ್ನು ನುಂಗಿ ನೀರು ಕುಡಿದವು. ಮುಸಲೋನಿಯು ಮನಸ್ಸಿನಲ್ಲಿ ಹಲ್ಲು ಕಡಿಯುತ್ತಾ ಸುಮ್ಮನಾದನು. 1926ರಲ್ಲಿ ಇವನು ಇಟಲಿಯ ವಿಧಾತನಾಗಿ, ಅದರ ನಿರ್ಮಾಣಕಾರ್ಯದಲ್ಲಿ ತೊಡಗಿದನು.

ಟರ್ಕಿ

ಯುದ್ಧಕ್ಕೆ ಮೊದಲು ಇದರ ಅವಸ್ಥೆಯು ಚಿಂತಾಜನಕವೇ ಆಗಿತ್ತು. ಯುರೋಪಿನ ರಾಜನೀತಿಜ್ಞರು ಇದನ್ನು ಮೃತ್ಯುಶಯ್ಯೆಯಲ್ಲಿರುವ ರೋಗಿಯಂತೆ ಭಾವಿಸುತ್ತ ಅವನ ಮರಣದ ಮರುಕ್ಷಣದಲ್ಲಿಯೇ ಅವನ ಎಲ್ಲ ಆಸ್ತಿಗಳನ್ನೂ ಸ್ವಾಹ ಮಾಡಬೇಕೆಂಬ ಹಂಚಿಕೆಯಲ್ಲಿದ್ದರು. ಯುದ್ಧದಲ್ಲಿ ಇದಕ್ಕೆ ಸಂಪೂರ್ಣ ಸೋಲಾಗಿ ಮಿತ್ರರಾಷ್ಟ್ರಗಳು ಇದನ್ನು ನುಂಗುವುದರಲ್ಲಿದ್ದವು. ಜಗತ್ತಿನ ಭೂಪಟದಿಂದ ಈದೇಶದ ಹೆಸರೇ ಅಳಿದುಹೋಯಿತು. ಈ ಸಮಯದಲ್ಲೇ ಅಲ್ಲಿ ಕರ್ಮವೀರ ಕಮಾಲನ ಉದಯವಾದುದು. ತುರ್ಕಿಯ ರಕ್ಷಣೆಯಾದರೂ ತುರ್ಕೀ ಸಾಮ್ರಾಜ್ಯವು ನಷ್ಟವಾಗಿ ಹೋಯಿತು. ಕಮಾಲನು ಅಧಿಕಾರಕ್ಕೆ ಬರುವ ಸಮಯದಲ್ಲಿ ತುರ್ಕಿದೇಶವು ಆರ್ಥಿಕ, ಸಾಮಾಜಿಕ, ರಾಜನೀತಿಕ ಮತ್ತು ನಿರಕ್ಷರತೆ ಮೊದಲಾದ ಕಠಿಣ ರೋಗಗಳಿಂದ ಗ್ರಸ್ತವಾಗಿತ್ತು.

ಜರ್ಮನಿ

ಯುದ್ಧಕ್ಕೆ ಮೊದಲು ಜರ್ಮನಿಯು ಪ್ರಬಲರಾಷ್ಟ್ರವೇ ಆಗಿತ್ತು. ಆದರೆ ಯುದ್ಧದ ಪರಿಣಾಮವಾಗಿ ಇದು ಚೂರುಚೂರಾಗಿ ಹೋಯಿತು. ಇದು ಪರಾಜಿತ ದೇಶವಾದ್ದರಿಂದ ಅದನ್ನು ಧ್ವಂಸಮಾಡುವುದೊಂದೇ ಮಿತ್ರರಾಷ್ಟ್ರಗಳ ಕರ್ತವ್ಯವಾಗಿತ್ತು. ಜರ್ಮನಿಯು ಮೃತಾವಸ್ಥೆಯಲ್ಲಿರುವಾಗ ಡಿಕ್ಟೇಟರ್ ಹಿಟ್ಲರನ ಉದಯವಾಯಿತು. ದೇಶದಲ್ಲಿ ನವಜೀವನದ ಜ್ಯೋತಿಯು ಪ್ರಸರಿಸಿತು. ಹಿಟ್ಲರನಿಂದ ಜರ್ಮನಿಯ ಪುನರುತ್ಥಾನವಾಯಿತು.

ಚೀನ

ಇನ್ನು ಪ್ರಜಾತಂತ್ರಾತ್ಮಕ ರಾಷ್ಟ್ರಗಳ ಕಡೆ ನೋಡೋಣ. ೫1908ರಲ್ಲಿ ಚೀನದಲ್ಲಿ ಕ್ರಾಂತಿಯುಂಟಾಯಿತು. ಡಾ|| ಸನ್ ಯಾತಸೇನ್‌ನನೇ ಇದರ ಮುಖಂಡ. ಸಾಮ್ರಾಟನು ನಡುಗಿದನು. ಈ ಅಂದೋಳನವು ಸಫಲವಾಗಿ 1912ನೇ ಫೆಬ್ರವರಿ ತಾ.12 ದಿನ ಸಾಮ್ರಾಟನ ರಾಜತ್ಯಾಗವಾಗಿ ಅದೇ ದಿನ ಹೊಸ ಪ್ರಜಾತಂತ್ರದ ಘೋಷಣೆಯಾಯಿತು. ಆದರೆ ಇದಾದಮೇಲೆ ಅಲ್ಲಿನ ಸ್ಥಿತಿಯು ಉತ್ತಮಗೊಳ್ಳಲಿಲ್ಲ. ರಾಜಕೀಯ ದೃಷ್ಟಿಯಿಂದಂತೂ ದಿನ ದಿನಕ್ಕೆ ಕ್ಷೀಣತೆಯನ್ನು ಹೊಂದುತ್ತಬಂದು ಯುದ್ಧವಾದಮೇಲೆ ಆಂತರಿಕಸ್ವಾತಂತ್ರ್ಯದ ಹೊರತು ಅದಕ್ಕೆ ಮತ್ತೇನೂ ಲಾಭವಾಗಲಿಲ್ಲ.

ಸ್ಪೈನ್

ಇಲ್ಲಿ ರಾಜಕೀಯ ಕ್ರಾಂತಿಯಾದುದು 1925ರಲ್ಲಿ. ಚಕ್ರವರ್ತಿಯನ್ನು ಓಡಿಸಿ ಪ್ರಜಾತಂತ್ರವನ್ನು ಸ್ಥಾಪಿಸಿದರು. ಇದರಿಂದ ಈ ದೇಶವು ಬಲಯುತವಾದ ದೇಶವಾಗಬಹುದೆಂದು ಅಲ್ಲಿನವರು ಆಶಿಸಿದ್ದರು ಆದರೆ ಆ ಆಶೆಯು ನಿರಾಶೆಯಲ್ಲಿ ಪರ್ಯವಸಾನವಾಗಿ ಜನರಲ್ ಫ್ರಾಂಕೋವಿನ ಪ್ರಭಾವವು ಹೆಚ್ಚುತ್ತಿದೆ. ಎರಡು ವರ್ಷಗಳಿಂದ ಯುದ್ಧನಡೆಯುತ್ತ ಈ ದೇಶವು ಬಹಳ ಕಷ್ಟನಷ್ಟಕ್ಕೆ ಗುರಿಯಾಗಿದೆ ಪ್ರಾಯಶಃ ಕೆಲವು ದಿನಗಳಲ್ಲೇ ಅಲ್ಲಿ ಜನರಲ್ ಫ್ರಾಂಕೋವಿನ ರಾಜ್ಯಭಾರವಾರಂಭವಾಗಬಹುದು.

ಫ್ರಾನ್ಸ್

ಈ ದೇಶದಲ್ಲಿ ಸುಮಾರು 80 ವರ್ಷಗಳಿಂದ ಪ್ರಜಾತಂತ್ರಾತ್ಮಕ ರಾಜ್ಯ ಪದ್ಧತಿಯೇ ಇದೆ. ಯುದ್ಧದಲ್ಲಿ ಜಯವಾಗಲೂ ಇದರ ಕೀರ್ತಿ ಹೆಚ್ಚಿತು. ಇಡೀಯುರೋಪೇ ಇದರ ನೇತೃತ್ವದಲ್ಲಿದ್ದೂ ಇದು ಹೇಳಿದಂತೆ ಕೇಳುತ್ತಿತ್ತು. ಜರ್ಮನಿಯು ಇದರೆದುರು ಚಿಕ್ಕದಂತಾಗಿತ್ತು. ಈಗಂತೂ ವಿಶ್ವದಲ್ಲಿ ಇದು ಒಂದು ದೊಡ್ಡ ಸಾಮ್ರಾಜ್ಯವಾಗಿದ್ದು ಇದರ ಶಕ್ತಿಯು ಬರ್ಹವಾಗಿದೆ

ಈ ಆರು ದೇಶಗಳಲ್ಲಿ ಪ್ರಜಾತಂತ್ರರಾಷ್ಟ್ರಗಳು ದಿನದಿನಕ್ಕೆ ಹಳ್ಳದಲ್ಲಿ ಬೀಳುತ್ತಿವೆ. ಚೀಣವು ಜಪಾನವನ್ನು ನುಂಗುತ್ತಿದೆ. ಸ್ಪೈನಿನ ಬಹುಭಾಗವು ಫ್ರಾಂಕೋವಿಗೆ ಸೇರಿಹೋಗಿದೆ. ಫ್ರಾನ್ಸಿಗೆ ಇಂದು ಯುರೋಪಿನಲ್ಲಿ ಯಾರೂ ಮಿತ್ರರೇ ಇಲ್ಲದಂತಾಗಿದೆ. ಹಿಟ್ಲರ್ ಮತ್ತು ಮುಸೋಲಿನಿಗಳು ಮ್ಯೂನಿಚ್‌ನಲ್ಲಿ ಆಡಿದ ಮುಂಗನಾಟದಲ್ಲಿ ಫ್ರಾನ್ಸು ಮತ್ತು ಇಂಗ್ಲೆಂಡ್ ಎರಡೂ ಬೆಪ್ಪಾಗಿ ಹೋದವು. ಫ್ರಾನ್ಸಿನ ಈ ದುರವಸ್ಥೆಯು ಅದರ ಇತಿಹಾಸದಲ್ಲೇ ಇರಲಿಲ್ಲ ಹಿಟ್ಲರನು ತನಗೆ ಬೇಕಾದುದನ್ನು ಹೊಂದಲು ಕಂಕಣ ಬದ್ಧನಾಗಿದ್ದಾನೆ. ಆಗಲೇ ಅರ್ಧ ಯುರೋಪಿನಷ್ಟು ಅವನ ವಶವಾಗಿದೆ ಹೋಗಿದೆ. ಇಟಲಿಯು ಅಬಿಸೀನಿಯವನ್ನು ಧ್ವಂಸಮಾಡಿ, ಟ್ಯೂನಿಸ್ ಸಮಸ್ಯೆಯಿಂದ ಫ್ರಾನ್ಸಿನ ಬೆನ್ನು ಹತ್ತಿದೆ. ಈ ಡಿಕ್ಟೇಟರುಗಳು ತಮ್ಮ ತಮ್ಮ ದೇಶಗಳಲ್ಲಿ ಸರ್ವತೋಮುಖವಾದ ಅಭಿವೃದ್ಧಿಯನ್ನುಂಟುಮಾಡಿ ಜಗತ್ತನ್ನು ಬೆಂಗುಗೂಳಿಸಿರುವರು. ಇಂಗ್ಲೇಡ್ ಮತ್ತು ರಷ್ಯದವರು ಇವರನ್ನು ಎದುರಿಸುವ ಸಾಹಸ ಮಾಡಲಾರರು.

ಡಿಕ್ಟೇಟರುಗಳ ಯುಗ

ಮೇಲ್ಕಂಡ ಘಟನೆಗಳಿಂದ ಗೊತ್ತಾಗುವುದೇನಂದರೆ ಈ ಯುಗವೇ ಡಿಕ್ಟೇಟರುಗಳ ಯುಗವಾಗಿದೆ. ಭಾರತವನ್ನೆ ತೆಗೆದುಕೊಳ್ಳಿ. ಇಲ್ಲಿಯ ಶಾಸನಕ್ಕೆ ಇಂಗ್ಲೆಂಡಿನ ಪ್ರಜಾತಂತ್ರದ ಮಾತನ್ನೂ ಕೊಡಲಾಗುತ್ತಿದೆ. ಮಹಾತ್ಮಾಜಿಯವರ ಸತ್ಯಾಗ್ರಹವಾಗಿ 20 ವರ್ಷಗಳಾಗುತ್ತ ಬಂತು ಕಾಂಗ್ರೆಸ್ಸಿನವರು ಬ್ರಿಟಿಷ್ ಪ್ರಜಾತಂತ್ರದ ಮೇಲೆ ವಿಜಯವನ್ನು ಹೊಂದಿರುವರು. ಇಂದು ಕಾಂಗ್ರೆಸ್ಸಿನವರು 7 ಪ್ರಾಂತ್ಯಗಳಲ್ಲಿ ಅಧಿಕಾರ ನಡೆಸುತ್ತಿರುವರು. ಮಹಾತ್ಮ

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906

CANARA BANK LIMITED

AWAIT PUBLICATION

ನಿರೀಕ್ಷಿಸಿರಿ! ನಿರೀಕ್ಷಿಸಿರಿ!!

OF

WHITHER KARNATAKA

A Book that every Kannadiga must read OR ಪ್ರತಿಯೊಬ್ಬ ಕನ್ನಡಿಗನೂ ಓದಬೇಕಾದ ಪುಸ್ತಕ

ಕರ್ನಾಟಕ ದಿಗ್ದರ್ಶನ

BY

P. CHANDRASHEKAR HEGDE, B. A., B. L.

Copies can be had from all important Book sellers

ದೂರೀಕರಿಸಿರಿ—ದೃಷ್ಟಿಚಕ್ರ—ನೆರತಕೂದಲು—ವೃದ್ಧಾಪ್ಯ ತರುಣರು ಎರಡು ತಿಂಗಳವರೆಗೂ, ವೃದ್ಧರು ನಾಲ್ಕು ತಿಂಗಳವರೆಗೂ ಬೂಟಾಸನ್ನು ಉಪಯೋಗಿಸಿದಲ್ಲಿ ದೃಷ್ಟಿಮಾಂದ್ಯವು ತೊಲಗಿ ನೆರತ ಕೂದಲು ಕಪ್ಪಗಾಗಿ ದೇಹದ ನಿತ್ರಾಣವು ತೊಲಗಿ ತಾರುಣ್ಯದ ಫಲಕಾಣದೆ ಹೋದಲ್ಲಿ ಇಮ್ಮಡಿ ಕ್ರಯ ವಾಪಾಸು ಕೊಡುವ ಕರಾರಿದೆ. ಟಾನಿಕಿನ ಕ್ರಯವು ಈ ಕೆಳಗಿನಂತಿದೆ. ಒಂದು ತಿಂಗಳಿನ ಟಾನಿಕಿಗೆ ರೂ 3-8-0; 2 ತಿಂಗಳಿನದಕ್ಕೆ ರೂ. 6-0-0; ನಾಲ್ಕು ತಿಂಗಳಿನದಕ್ಕೆ ರೂ. 10. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Jari Booti Dawakhana,
P. O. Behar Nursery (Darbhanga)

ನಿಮ್ಮ ಕರ್ತವ್ಯ

ಬಡವನಿರಲಿ, ಶ್ರೀಮಂತನಿರಲಿ, ವಿವಾಹಿತನಾಗಿರಲಿ, ಅವಿವಾಹಿತನಾಗಿರಲಿ,
ಆತನನ್ನು ಆಶ್ರಯಿಸಿಕೊಂಡಿರುವವರ್‍ಯಾರಾದರೂ ಇದ್ದೇ ಇರುವರು.
ತನಗೆಲ್ಲಾದರೂ ಮರಣವುಂಟಾದರೆ ಅವರ ಬಾಳು ನಿರಾತಂಕವಾಗಿ ಸಾಗುವಂತೆ ವ್ಯವಸ್ಥೆ ಮಾಡಿಡುವುದು

ಪ್ರತಿಯೊಬ್ಬ ಯೌವನಸ್ಥನ ಕರ್ತವ್ಯ.

ಈ ಕರ್ತವ್ಯವನ್ನು ನೆರವೇರಿಸುವುದರಲ್ಲಿ 'ಓರಿಯಂಟಲ್' ನಿಮಗೆ ನೆರವಾಗಿ ಬರುವುದು.

ಏಕೆಂದರೆ ಕಳೆದ 64 ವರುಷಗಳಿಂದಲೂ ಸಾವಿರಾರು ಸಂಸಾರಗಳ ಸಂಪಾದನೆಯ ಕೈಗಳನ್ನು ಮೃತ್ಯುವು ಮುಕ್ಕಿತಿಂದಾಗ ಆ ಸಂಸಾರಗಳ ಅಂತಹ ಆಪತ್ಕಾಲದಲ್ಲಿ ಸಹಾಯವನ್ನಿತ್ತುದು
ಓರಿಯಂಟಲ್ ಪೊಲಿಸಿಗಳೇ!

ಶೀಘ್ರದಲ್ಲಾಗಲೀ ವಿಳಂಬವಾಗಿಯಾಗಲೀ ಪ್ರತಿಯೊಬ್ಬನೂ ವಿಮೆ ಮಾಡಲಿಕ್ಕೆ ಅನರ್ಹನಾಗುವ ಅವಸ್ಥೆಗೆ ಬರುತ್ತಾನೆ. ಆದುದರಿಂದ ನಿಮ್ಮ
ಕರ್ತವ್ಯವನ್ನು ನೆರವೇರಿಸುವುದರಲ್ಲಿ ತಡಮಾಡಬೇಡಿರಿ.

'ಓರಿಯಂಟಲ್'ನಲ್ಲಿ ನಿಮ್ಮ ಜೀವವಿಮೆ ಮಾಡಿ ನಿಮ್ಮ ಆಶ್ರಿತರ ಭವಿಷ್ಯವನ್ನು ನಿಶ್ಚಿತಗೊಳಿಸಿಡಿರಿ.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತ ವರ್ಷ 1874] ಭಾರತದೆಲ್ಲೆಲ್ಲಾ ನಮ್ಮ ಶಾಖೆಗಳೂ ಮತ್ತು ಪ್ರತಿನಿಧಿಗಳೂ ಇದ್ದಾರೆ. [ಹೆಡ್ ಆಫೀಸು—ಬೊಂಬಾಯಿ.
ಹೆಚ್ಚಿನ ಮಾಹಿತಿ ಬಗ್ಗೆ ಇವರಿಗೆ ಬರೆದು ತಿಳಿದುಕೊಳ್ಳಿ.

ಬ್ರಾಂಚ್ ಸೆಕ್ರೆಟರಿ, ಅ ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲೈಫ್ ಆಫೀಸು, ಥ ಓರಿಯಂಟಲ್ ಲೈಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು. ವಾ ಮೈನ್‌ರೋಡ್, ಮಡಿಕೇರಿ, (ಕೊಡಗು.)

Oriental Government Security Life Assurance Co., Ltd.

ಪುಟ ೫ರಿಂದ

ಜಿಯವರ ಶಕ್ತಿಯು ಯಕ್ಷಿಣಿಯಂತೆ ಕೆಲಸಮಾಡುತ್ತಿದೆ. ಶೀಘ್ರದಲ್ಲೇ ಸಂಪೂರ್ಣ ಸ್ವಾತಂತ್ರ್ಯವು ದೊರೆಯುವುದೆಂದು ಹಾರೈಸೋಣ. ಇಂತಹ ಶಕ್ತಿಯುತವಾದ ಸಂಸ್ಥೆಯನ್ನು ಮುಸ್ಲಿಂ ಲೀಗು ಬಹಿಷ್ಕರಿಸುತ್ತಿರುವುದರಿಂದ ಕಾಂಗ್ರೆಸ್ಸು ಇದರಿಂದ ದೂರವಾಗಬೇಕು. ದಾರಿಯಲ್ಲಿ ಆತಂಕಗಳನ್ನು ದೂರಮಾಡಿಕೊಳ್ಳಬೇಕು, ದೇಶವನ್ನು ಸುಧಾರಿಸುವ ಪ್ರಯತ್ನ ಮಾಡಬೇಕು. ಆದರೆ ಇದೆಲ್ಲಾ ಪ್ರಜಾತಂತ್ರಾತ್ಮಕ ರಾಜ್ಯಭಾರದಿಂದ ಸಾಧ್ಯವೇ ಎಂಬುದನ್ನು ವಿಚಾರಮಾಡಬೇಕು. ಕಾಂಗ್ರೆಸು ಸಹ ಪ್ರಜಾತಂತ್ರಾತ್ಮಕವೇ. ಇಂದು ದೇಶದಲ್ಲಿ ಮಹಾತ್ಮಾಜಿಯವರ ಸದಾಶಯದಲ್ಲಿ ಸಂದೇಹವನ್ನು ತೋರುವ ಅನೇಕ ಚಿಕ್ಕಪುಟ್ಟ ಮುಖಂಡರು ದೇಶದಲ್ಲಿದ್ದಾರೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರ ಕಠೋರವಾದ ನಿಯಂತ್ರಣವಿಲ್ಲದೆ ಹೋದರೆ ದಿನದಿನವೂ ವಿವಾದಾತ್ಮಕವಾದ ಉದಾಹರಣೆಗಳು ಹೆಚ್ಚುತ್ತ ಹೋಗುವವು. ನಮ್ಮ ದೇಶದ ಜನರನ್ನೂ ಹತೋಟಿಗೆ ತರಲು ಕೈಯಲ್ಲಿ ಚಬುಕನ್ನೂ ಹಿಡಿದು ಆಳಬಲ್ಲ ಒಬ್ಬ ಡಿಕ್ಟೇಟರನ ಅಗತ್ಯವು ಭಾರತಕ್ಕೆ ಅನಿವಾರ್ಯವೆಂದು ತೋರುವುದು.

ಡಿಕ್ಟೇಟರು ಯಾರಾಗಬೇಕು?

ಇದೇ ಮುಂದಿನ ಪ್ರಶ್ನೆ ಮಹಾತ್ಮಾಜಿಯವರು. ದೇಶದ ರಾಜನೀತಿಯು ಅವರ ಸಲಹೆಯನ್ನನುಸರಿಸಿ ನಡೆಯುತ್ತಿದೆಯೆಂಬುದು ನಿರ್ವಿವಾದವಾದ ವಿಚಾರ ಜನರ **ಹೃದಯ ಪರಿವರ್ತನೆಯನ್ನು ಮಾಡುವು**ದು ಮಹಾತ್ಮರ ನೀತಿ ಅಹಿಂಸೆ ಅವರ ಅಸ್ತ್ರ, ಗುರು ರಾಮದಾಸರು ಶಿವಾಜಿಯ ಮೇಲೆ ತಮ್ಮ ಶಕ್ತಿಯನ್ನು ಬೀರಿದಂತೆ ಮಾಡಬಲ್ಲವರು ಮಹಾತ್ಮರು ಕಾಂಗ್ರೆಸ್ಸಿಗೆ. ಅಂದರೆ ಈಗ ನಮಗೆ ಒಬ್ಬ ಶಿವಾಜಿ ಇರಬೇಕಾಯಿತಲ್ಲವೆ? ಇದಕ್ಕೆ ಯೋಗ್ಯರಾಗಿ ತೋರುವವರು ಪಂ. ಜವಹರಲಾಲರೊಬ್ಬರೇ. ಅವರದು ಬಹಳ ದೃಢವಾದ ಮನಸ್ಸು. ಅವರೇ ಯೋಗ್ಯವ್ಯಕ್ತಿಗಳು, ತ್ಯಾಗಿಗಳು. ಅವರಲ್ಲಿ ಕೆಲಸಮಾಡುವ ಸ್ಫೂರ್ತಿ ಇದೆ. ಕ್ಷುದ್ರ ವಿರೋಧವನ್ನೂ, ಸಮೂಲವಾಗಿ ಕಿತ್ತು ಬಿಸಾಡುವಶಕ್ತಿ ಅವರಲ್ಲಿದೆ, ದೇಶೋನ್ನತಿಯ ಸದಾಶೆಯ ಜ್ವಾಲೆಯು ಅವರ ಹೃದಯದಲ್ಲಿ ಸದಾ ಜ್ವಲಿಸುತ್ತಿದೆ. ಇವರೇ ಈ ಕಾರ್ಯಕ್ಕೆ ಸರ್ವಶ್ರೇಷ್ಠರು. ಇನ್ನುಳಿದಿರುವ ನಮ್ಮ ಅಭೀಷ್ಟವಾದರೂ ಏನು? ಸ್ವಾಧೀನತೆ! ಸ್ವರಾಜ್ಯ! ಸ್ವಾತಂತ್ರ್ಯ!! ಇವೆಲ್ಲ ಕೇವಲ ಆಡಂಬರದ ಶಬ್ದಗಳು ಮಾತ್ರ.

"ಶಾಸನತಂತ್ರದ ಆಕಾರ ಪ್ರಕಾರವು, ಧ್ಯೇಯ ಪ್ರಾಪ್ತಿಯ ಒಂದು ಸಾಧನ ಮಾತ್ರವೇ. ಸ್ವಾಧೀನತೆಯೂ ಸಹ ಕೇವಲ ಒಂದು ಸಾಧನೆ. ಏಕೆಂದರೆ ಮುಖ್ಯಗುರಿಯು ಮಾನವ ಜಾತಿಯ ವಿಕಾಸ ಮತ್ತು ಹಿತ, ಬಡತನ, ರೋಗ ಮತ್ತು ದುಃಖಗಳ ನಾಶ, ಮತ್ತು ಪ್ರತಿಯೊಂದು ವ್ಯಕ್ತಿಗೂ ಶಾರೀರಕ ಮತ್ತು ಮಾನಸಿಕ ರೀತಿಯಿಂದ ಉತ್ತಮ ಜೀವನವನ್ನೂ ನಡೆಸಿಕೊಂಡುಹೋಗಲು, ಅನುಕೂಲತೆಯನ್ನುಂಟುಮಾಡಬೇಕು.

ಭಾರತಕ್ಕೆ ಇಂತಹ ಡಿಕ್ಟೇಟರರೇ ಈಗ ಬೇಕಾಗಿರುವುದು [ಹಿಂದಿಯಿಂದ

ನೋಟೀಸು

ಪುತ್ತೂರು ತಾಲೋಕು ಬಂದಾರ ಗ್ರಾಮದ ಮೇಗಿನ ಬಾಲಂಪಾಡಿ ಗುಮ್ಮ ಗೌಡನ ಮಗ ವೀರಪ್ಪ ಗೌಡನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದ್ರೆ—

ನನ್ನ ತಂದೆ ಗುಮ್ಮ ಗೌಡರು ವೃದ್ಧಾಪ್ಯದವರಾಗಿದ್ದು ಇತ್ತೀಚೆಗೆ ಸಂಭವಿಸಿದ ಶಕ್ತ ಕಾಹಿಲೆಯಲ್ಲಿ ಸ್ಮೃತಿಸಹಾ ಇಲ್ಲದವರಾಗಿರುವ ಸಮಯ ಅಂದ್ರೆ ಇದೇ ಕಳೆದ ತಾ. 9-1-39ರಲ್ಲಿ ಸದ್ರಿ ಬಂದಾರ ಗ್ರಾಮದ ಪಾಲ್ತಿಮಾರ ವೆಂಕಟ್ರಮಣ ಪಡ್ಡಿಲ್ಲಾಯರ ಮಗ ಚಿಲ್ಲರೆ ಪಂಡಿತ ವ ಜ್ಯೋತಿಷ್ಯಗಾರರು ಆದ ಸುಬ್ರಾಯ ಪಡ್ಡಿಲ್ಲಾಯ 1 ಮತ್ತು ಅವರ ಅಳಿಯ ಕಲ್ಲಬೆ ಸುಬ್ರಾಯ 1 ಕೂಡಾ 2ಜನರು ನನ್ನ ಗೈರುಹಾಜರಿಯಲ್ಲಿರೋಗಿಗೆನೋಡುವ ನೆವನದಿಂದ ನನ್ನ ಮನೆಗೆ ಬಂದು ಸ್ಮೃತಿಯಿಲ್ಲದ ನನ್ನ ತಂದೆಯ ಹಸ್ತಪರೀಕ್ಷೆ ಆಯುಷ್ಯರೇಖೆ ವಗೈರೆನಿರ್ಣಯಿಸುವಂತೆನಟಿಸಿ ಎಡದಬೆಟ್ಟಿನ ಮುದ್ರೆಯನ್ನು ಖಾಲಿ ಕಾಗದದಲ್ಲಿ ತೆಗೆದು ಕೊಂಡು ಹೋದಸಂಗ್ತಿ ಅನಂತರ ಮನೆಗೆ ಬಂದ ನನಗೆತಿಳಿದುಬಂದದ್ದರಿಂದ ಶಕ್ತ ಕಾಹಿಲೆಯಲ್ಲಿದ್ದ ನನ್ನ ತಂದೆಯು ತಾ 11-1-39ರಲ್ಲಿ ಮೃತಪಟ್ಟು ತದನಂತರ ನಾನು ತಾ. 15-1-39ರಲ್ಲಿ ಮೇಲಿನ ಎಲ್ಲಾವಿಷಯಗಳು ಕಾಣಿಸಿ ಶ್ರೀ ದಕ್ಷಿಣ ಕನ್ನಡಾಜಿಲ್ಲಾ ಕಲೆಕ್ಟರ್ ದೊರೆಗಳವರ ಬಳಿಗೂ ಶ್ರೀ. ಬೆಳ್ತಂಗಡಿ ಸಬ್ ಮೆಜಿಸ್ಟ್ರೇಟುವರ ಬಳಿಗೂ ಸಹಿಲಾಹಿದ ಅರ್ಜಿಗಳನ್ನು ಬರೆಕೊಂಡಿರುತ್ತೇನೆ. ಆದ್ದರಿಂದ ಸದರಿ ಸುಬ್ರಾಯ ಪಡ್ಡಿಲ್ಲಾಯ ವಗೈರೆರು ಮೋಸಕೃತ್ಯದಲ್ಲಿ ಕೊಂಡುಹೋದ ಸದರಿ ಎಡಹೆಬ್ಬೆಟ್ಟಿನ ಆಧಾರದಲ್ಲಿ ಅವರಿಂದ ನನಗೆ ಬರತಕ್ಕ ಸ್ಥಿರಾಸ್ತಿ ... ಈ ದಕ್ಕಿಸಿಕೊಳ್ಳುವರೆ ... ನನ್ನ ತಂದೆಯ ದಸ್ತಾವೇಜು ತಯಾರು ಮಾಡಿದ್ದಲ್ಲಿಯೂ ಅಥವಾ ಬೇರೆ ಯಾರಾದರೂ ಬರೆವಣಿಗೆ ತಯಾರು ಸೃಷ್ಟಿಸಿದ್ದಲ್ಲಿ ಕೂಡಾ ಅವುಗಳೇನೆಂದು ನನಗೆ ಬಾಧ್ಯತೆಯಿಲ್ಲ ವ ಸಿಂಧು ಆಗತಕ್ಕದ್ದು ಅಲ್ಲ ಎಂಬಸಂಗ್ತಿ ಈ ಮೂಲಕ ಎಲ್ಲಾ ಜನರ ತಿಳುವಳಿಕೆಬಗ್ಗೆ ಪ್ರಕಟಪಡಿಸಿದ್ದೇನೆ.

O|| ಈನೆರೆ ವ ಎಡಗೈ ಹೆಬ್ಬೆಟ್ಟಿನ ಮುದ್ರೆ ಸಹಾ ವೀರಗೌಡನ ರುಜು.

ಮೊಕ್ಕಾಂ ಬಂದಾರ, ತಾ. 18-3-39.

ಸುಳ್ಳೆಂದು ರುಜುಪಡಿಸುವವರಿಗೆ

ರೂ 50 ಇನಾಂ

ಆಶ್ಚರ್ಯಕರ ಶಕ್ತಿಯುಕ್ತ ಯಂತ್ರಗಳು.
1 **ವಶೀಕರಣ ಯಂತ್ರ:** ನೀವು ಮೋಹಿಸುವ ಸುಂದರಿಯ ಮನಸ್ಸು ಎಷ್ಟು ಕಠಿಣವಾಗಿದ್ದರೂ ಈ ಯಂತ್ರಧರಿಸಿದ ಮಾತ್ರದಿಂದಲೇ ಅವಳು ನಿಮ್ಮೊಡನೆ ಮಾತನಾಡಬಯಸುವಳು, ಮಾತ್ರವಲ್ಲದೆ ನಿಮ್ಮ ವಶವಾಗುವಳು, ಸ್ನೇಹಿತರೂ ವೈರಿಗಳೂ ಏಕತ್ರ ನಿಮ್ಮ ಕಿಂಕರರಾಗುವರು, ಬೆಳ್ಳಿ ಯಂತ್ರಕ್ಕೆ ರೂ. 2-8-0; ಚಿನ್ನದ ತಾಯಿತಕ್ಕೆ ರೂ 7-8-0.
2 **ಲಕ್ಷ್ಮೀಯಂತ್ರ:** ಈ ತಾಯಿತವನ್ನು ಧರಿಸಿದ ಮಾತ್ರಕ್ಕೆ ನಿಮಗೆ ವ್ಯಾಪಾರ ವಹಿವಾಟುಗಳು ಹೆಚ್ಚು ಲಾಭದಾಯಕ ಸುಸಂಧಿಬರುವುದು, ಬೆಳ್ಳಿ ಯಂತ್ರಕ್ಕೆ ರೂ 2-8-0 ಚಿನ್ನದ್ದಕ್ಕೆ ರೂ. 7-8-0. ಇಂದೇ ಮೇಲಣ ವಿಳಾಸಕ್ಕೆ ಬರೆಯಿರಿ. ಪತ್ರ ವ್ಯವಹಾರ ಇಂಗ್ಲೀಷಿನಲ್ಲೇ.

SRI SADANAND RAM
No. 57, P. O. Warisaligunj,
(Gaya)

Degrees: Books: Medicines.

Free H. L. M. S., H. M. B., H. M. D. etc. Free Homeo-Ayur-Unani-Naturo degrees by post also—Practitioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamps:—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt, India)

ರಾಷ್ಟ್ರಪತಿ ಸುಭಾಸಚಂದ್ರ ಭೋಸರ ಹೇಳಿಕೆ.

'ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಕುರಿತು ಗಾಂಧೀಜಿಗಳ ಇಂದಿನ ಅಭಿಪ್ರಾಯವೇನೆಂಬುದನ್ನು ನಾನು ನಿಶ್ಚಯ ಮಾಡಿಕೊಳ್ಳಬೇಕಾಗಿದೆ. ಅದು ಒಂದು ಪಕ್ಷದವರೊಳಗಿಂದಲೇ ಆರಿಸಲ್ಪಟ್ಟ ಭಿನ್ನಾಭಿಮತವಿಲ್ಲದವರ ತಂಡವಾಗಿರಬೇಕೆಂಬ ಅಭಿಪ್ರಾಯವನ್ನೇ ಗಾಂಧೀಜಿಗಳು ಸಮರ್ಥಿಸುವರೋ ಅಥವಾ ಕಾಂಗ್ರೆಸ್ಸಿನ ವಿವಿಧ ಪಕ್ಷಗಳ ಅಭಿಮತಗಳು ಸಾಧ್ಯವಿದ್ದಷ್ಟು ಅದರಲ್ಲಿ ಪ್ರತಿಬಿಂಬಿತವಾಗಬೇಕೆಂಬ ನನ್ನ ಅಭಿಪ್ರಾಯವನ್ನು ಸ್ವೀಕರಿಸುವರೋ ಎಂದು ನೋಡಬೇಕಾಗಿದೆ. ಮೊದಲನೆಯದನ್ನೇ ಅವರು ಎತ್ತಿ ಹಿಡಿಯುವುದಾದರೆ ನನ್ನಂತಹ ವ್ಯಕ್ತಿಗಳಿಗೂ ಹಿಂದಿನ ಕಮಿಟಿಯ ಇತರ ಸದಸ್ಯರಿಗೂ ಸಹಕರಿಸಿಕೊಂಡಿರಲು ಆಸ್ಪದವಿಲ್ಲವೆಂಬುದು ಸುಸ್ಪಷ್ಟವೇ' ಈ ಮಾತು ವರ್ಕಿಂಗ್ ಕಮಿಟಿಯ ಸದಸ್ಯರ ಹೆಸರು ಪ್ರಕಟಣೆಯನ್ನು ವಿಳಂಬ ಮಾಡಿದುದಕ್ಕೆ ಕಾರಣವನ್ನು ವಿವರಿಸುತ್ತ ಭೋಸರವರು ಎಸೋಸಿಯೇಟೆಡ್ ಪ್ರೆಸ್ಸ್‌ಗೆ ಕೊಟ್ಟ ಹೇಳಿಕೆಯಲ್ಲಿದೆ. ಆ ಹೇಳಿಕೆಯ ಇತರ ಕೆಲವು ಮುಖ್ಯಾಂಶಗಳನ್ನು ಕೆಳಗೆ ಸಂಗ್ರಹಿಸಿ ಕೊಡಲಾಗಿದೆ.

ತ್ರಿಪುರಿ ಕಾಂಗ್ರೆಸ್ಸಿನ ನಂತರ ಹೊಸ ಕಮಿಟಿಯನ್ನು ಕೂಡಲೇ ನಿರ್ಣಯಿಸದೆ ಕಾಂಗ್ರೆಸ್ ಕಾರ್ಯಕಲಾಪಗಳನ್ನು ಹಳಸಲು ಮಾಡುತ್ತಾನೆಂದು ನನ್ನ ಮೇಲೆ ಆರೋಪವಿದೆ. ಆದರೆ ತ್ರಿಪುರಿ ಕಾಂಗ್ರೆಸ್ಸಿಗೆ ಮುಂಚಿತವಾಗಿ ಸಂದಿಗ್ಧ ಸಮಯದಲ್ಲಿ ಹಿಂದಿನ ಕಮಿಟಿಯವರು ಒಂದೇ ಸವನೆ ರಾಜಿನಾಮೆ ಕೊಟ್ಟು ಕಾಂಗ್ರೆಸ್ಸು ಕಾರ್ಯಕಲಾಪಗಳಲ್ಲಿ ಬಿಕ್ಕಟ್ಟುಂಟಾಗುವಂತೆ ಮಾಡಿದಾಗ ಇಂತಹ ಆರೋಪಣೆಗಳು ಬರಲಿಲ್ಲ. ಕಾಂಗ್ರೆಸ್ಸಿನ ಸಂಘಟನೆಯ ನಿಯಮಗಳಿಗೇ ಸ್ಪಷ್ಟ ವಿರುದ್ಧವೂ ಅಕ್ರಮವೂ ಆದ ಶರ್ತವನ್ನು ವರ್ಕಿಂಗ್ ಕಮಿಟಿಯ ನಿರ್ಮಾಣದ ವಿಷಯವಾಗಿ ಸೇರಿಸಲ್ಪಟ್ಟ ಒಕ್ಕಣೆಯನ್ನು ತ್ರಿಪುರಿ ಕಾಂಗ್ರೆಸ್ಸು ಮಂಜೂರು ಮಾಡದಿರುತ್ತಿದ್ದರೆ ಈ ತಿಂಗಳ ೧೩ರಲ್ಲೇ ವರ್ಕಿಂಗ್ ಕಮಿಟಿಯು ನಿರ್ಮಾಣವಾಗುತ್ತಿತ್ತು.

ಆ ಒಕ್ಕಣೆ ಬಂದು ವರ್ಕಿಂಗ್ ಕಮಿಟಿಯ ರಚನೆಯು ಗಾಂಧೀಜಿಗಳ ಬಯಕೆಯಂತಾಗಬೇಕಾಯಿತು. ನಮ್ಮಿಬ್ಬರ ಅಸ್ವಾಸ್ಥ್ಯದ ಸಂಬಂಧ ಅವರಿಗೆ ಇಲ್ಲಿಗೆ ಬರಲಿಕ್ಕಾಗಲೀ ನನಗೆ ಅಲ್ಲಿಗೆ ಹೋಗಲಿಕ್ಕಾಗಲೀ ಆಗಲಿಲ್ಲ. ಆದರೆ ನಾವಿಬ್ಬರೂ ಕೂಡಿ ಇತರ ಅನೇಕ ವಿಷಯಗಳಲ್ಲಿ ಮಾತಾಡಿಕೊಳ್ಳದೆ ಮೊದಲಾಗಿ ಈ ಕಮಿಟಿಯ ರಚನೆಯ ಕೆಲಸಕ್ಕೆ ಇಳಿಯಲಿಕ್ಕಾಗುವುದಿಲ್ಲ. ಆ ವಿಷಯಗಳಲ್ಲಿ ಮುಖ್ಯವಾದುವುಗಳ್ಯಾವುವೆಂದರೆ—

೧. ಈ ವರುಷದಲ್ಲಿ ಕಾಂಗ್ರೆಸ್ಸು ಕೈಗೊಳ್ಳುವ ಕಾರ್ಯಕ್ರಮಗಳು ಯಾವುವೆಂದು ಗಾಂಧೀಜಿಗಳ ಅಭಿಪ್ರಾಯವಿದೆ.

೨. ಅಧ್ಯಕ್ಷ ಚುನಾವಣೆಯ ನಂತರವೂ ವಿಶೇಷತಃ ತ್ರಿಪುರಿ ಕಾಂಗ್ರೆಸ್ಸಿನಲ್ಲಿಯೂ ನಡೆದ ವಿದ್ಯಮಾನಗಳಿಲ್ಲದರ ಮೇಲೂ ಕಾಂಗ್ರೆಸ್ಸಿನ ಎರಡು ಪ್ರಾಮುಖ್ಯ ಪಕ್ಷಗಳೊಳಗೆ ಪರಸ್ಪರ ಸಹಕರಿಸಿಕೊಂಡು ಮುನ್ನಡೆಯಲು ಅವಕಾಶವಿದೆಯೋ ಎಂದು ನೋಡಬೇಕಾಗಿದೆ.

೩. ವರ್ಕಿಂಗ್ ಕಮಿಟಿಯು ಅಖಂಡ ಏಕಪಕ್ಷ ಲಕ್ಷಣವುಳ್ಳದ್ದೋ ಅಥವಾ ಸಾಧ್ಯವಿದ್ದಷ್ಟು ವ್ಯಾಪಕ ದೃಷ್ಟಿಯಿಂದ ವಿವಿಧ ಪಕ್ಷ ಪ್ರಾತಿನಿಧ್ಯವುಳ್ಳದ್ದೋ?

೪. ಪಂಡಿತ ಪಂತರ ಠರಾವಿನ ಅರ್ಥವನ್ನು ಗಾಂಧೀಜಿಗಳು ಹೇಗೆ ಮಾಡಿಕೊಂಡಿದ್ದಾರೆ? ಅದು ನನ್ನ ಮೇಲೆ ಅವಿಶ್ವಾಸದ ಠರಾವೋ? ನಾನು ರಾಜಿನಾಮೆ ಕೊಡಬೇಕೆಂದು ಗಾಂಧೀಜಿಗಳ ಅಭಿಪ್ರಾಯವಿದೆಯೋ? ಅಥವಾ ಕೆಲವು ಮುಂದಾಳುಗಳು ಹೇಳುವಂತೆ ಅದು ಗಾಂಧೀ-ಬೋಸ್ ಸಂಧಾನ ಸೇತುವೋ?

ಕಾಂಗ್ರೆಸ್ಸಿನ ಒಂದು ಪಕ್ಷದಲ್ಲಿ ತ್ರಿಪುರಿ ಕಾಂಗ್ರೆಸ್ಸು ೧೯೨೨ರ ಗಯಾ ಕಾಂಗ್ರೆಸ್ಸಿನಂತೆ ದಾರಿಕವಲೊಡೆವಲ್ಲಿಗೆ ಬಂದುಮುಟ್ಟಿದೆಯೆಂಬ ಭಾವನೆಯಿರುವುದರಿಂದ ಮೇಲಿನ ಎಲ್ಲ ಪ್ರಶ್ನೆಗಳು ಚರ್ಚಿಸಲ್ಪಡದೆ ವರ್ಕಿಂಗ್ ಕಮಿಟಿಯ ರಚನೆಯ ಕೆಲಸವನ್ನು ಕೈಗೊಳ್ಳಲಿಕ್ಕಾಗುವುದಿಲ್ಲ. ವರ್ಕಿಂಗ್ ಕಮಿಟಿಯು ಅಖಂಡ ಏಕಪಕ್ಷೀಯವಾಗಿರಬೇಕೆಂದಿಲ್ಲವಾದರೆ ವಿವಿಧ ಪಕ್ಷದ ಪ್ರಾತಿನಿಧ್ಯದ ಸಂಖ್ಯಾಪ್ರಮಾಣ ಎಷ್ಟಿರಬೇಕೆಂಬುದು ನಿಶ್ಚಿತವಾಗಬೇಕಾಗಿದೆ.

ಇಂತಹ ಸಿಕ್ಕಿನ ಸಮಸ್ಯೆಗಳನ್ನೆಲ್ಲ ಬಿಡಿಸಬೇಕಾದರೆ ಗಾಂಧೀಗಳೊಡನೆ ಮುಖತಃ ತಾಸುಗಟ್ಟಳೆಯೋ ದಿನಗಟ್ಟಳೆಯೋ ಮಾತಾಡಬೇಕಾಗುತ್ತದೆ. ರಾಜಕಾರಣದಲ್ಲಿನನ್ನ ದೃಷ್ಟಿಯಿಂದ ನೋಡಲಿಕ್ಕಾಗದವರಿದ್ದಲ್ಲಿ ಈ ವಿಷಯವನ್ನು ಈ ದೃಷ್ಟಿಯಿಂದ ನೋಡಿ, ಗಾಂಧೀಜಿಗಳನ್ನು ಸಂದರ್ಶಿಸಲು ಹೊರಡುವಷ್ಟು ಉಸಿರಾಡುವ ಬಿಡುವನ್ನಾದರೂ ಕೊಡುವ ಕರುಣಾಂತಃಕರಣಗಳಿದ್ದೀತೆಂದು ನಾನು ನಿರೀಕ್ಷಿಸಿದ್ದೆ. ಗಾಂಧೀಜಿಗಳು ತನ್ನ ತಂತಿಗಳಿಂದ ಅದನ್ನು ಸ್ಪಷ್ಟಗೊಳಿಸಿದ್ದಾರೆ. ಆದರೆ ಆ ಪಕ್ಷದ ಇತರರಿಂದ ರಾಜಕೀಯ ವಿಷಯದಲ್ಲಿ ಅಂತಹದನ್ನು ಎಲ್ಲ ಸಂದರ್ಭಗಳಲ್ಲಿಯೂ ನಿರೀಕ್ಷಿಸಕೂಡದೆಂದು ತೋರಿಬರುತ್ತದೆ. ಆದುದರಿಂದ ಈಗ ನಾನು ವೈದ್ಯರ ಅಭಿಮತವನ್ನು ಮೀರಿ ಕಳೆದ ಕೆಲವು ದಿವಸಗಳಿಂದ ಕಾಂಗ್ರೆಸ್ಸು ಕಾರ್ಯನಿರ್ವಾಹದಲ್ಲಿ ತೊಡಗಿದ್ದೇನೆ. ಯಾವ ವಿಷಯಗಳನ್ನು ಮುಖತಃ ಮಾತಾಡಿ ನಿಶ್ಚೈಸಿಕೊಳ್ಳಬೇಕೆಂದಿದ್ದೆನೋ ಅವುಗಳ ಕುರಿತು ಗಾಂಧೀಜಿಗಳೊಡನೆ ಪತ್ರವ್ಯವಹಾರತೊಡಗಿರುವೆನು.

ಗಾಂಧೀಜಿಗಳ ಎಲ್ಲ ಅಭಿಪ್ರಾಯಕಾರ್ಯಕ್ರಮಗಳನ್ನು ಇತರರು ಬಹುಶಃ ನಿರ್ವಿವಾದವಾಗಿ ಅಂಗೀಕರಿಸುವಂತೆ ನಾನು ಒಪ್ಪಿಕೊಳ್ಳಲು ಸಿದ್ಧನಿಲ್ಲವಾದರೂ ಅವರ ವಿಶ್ವಾಸಾರ್ಹನಾಗಿರುವಂತೆ ಪ್ರಯತ್ನವನ್ನು ಮುಂದುವರಿಸುವೆನು. ಇಂದು ಕಾಂಗ್ರೆಸ್ ಕೆಸರಲ್ಲಿ ಸಿಕ್ಕಿಬಿದ್ದಿದೆ. ಅದನ್ನು ಮೇಲೆತ್ತಲಿಕ್ಕೆ ಗಾಂಧೀಜಿಗಳೊಬ್ಬರೇ ಸಮರ್ಥರು. ನಮ್ಮೊಳಗಿನ ಪಕ್ಷವಿಪಕ್ಷಗಳ ಇಕ್ಕಟ್ಟು ಬಿಕ್ಕಟ್ಟುಗಳನ್ನು ತಿದ್ದಿ ಒಕ್ಕಟ್ಟು ಉಂಟುಮಾಡಲೂ ಅವರೇ ಏಕಮಾತ್ರ ಸಮರ್ಥ ಪುರುಷರು. ಅವರು ತ್ರಿಪುರಿ ಕಾಂಗ್ರೆಸ್ಸಿಗೆ ಬಂದಿದ್ದರೆ ಪರಿಸ್ಥಿತಿ ಇಷ್ಟೊಂದು ಕೆಡುತ್ತಿದ್ದಿಲ್ಲ. ಬಾರದಿದ್ದುದು ನಮ್ಮ ದೌರ್ಭಾಗ್ಯ. ಈಗ ಅವರ ಮುಂದಿರುವುದು ಭಗೀರಥ ಕಾರ್ಯ. ಅವರಲ್ಲಾದರೂ ಸೋತರೆ-ಹಾಗಾಗದಿರಲಿ!—ಕಾಂಗ್ರೆಸ್ಸಿನ ನಾಳಿನ ಅವಸ್ಥೆ ಎಲ್ಲಿಗೆ ಮುಟ್ಟೀತೆಂಬುದನ್ನು ಯೋಚಿಸಿದರೆ ವ್ಯಸನದುಃಖವುಂಟಾಗುತ್ತದೆ.

ಗಾಂಧಿಜಿಗಳು ಹೆಸರು ಸೂಚಿಸಬಹುದೇ?

ತ್ರಿಪುರಿ ಕಾಂಗ್ರೆಸ್ಸಿನಲ್ಲಿ ಮಂಜೂರಾದ ಪಂತರ ಠರಾವಿಗನುಸಾರವಾಗಿ ಕಾಂಗ್ರೆಸ್ಸು ವರ್ಕಿಂಗ್ ಕಮಿಟಿಯ ನಿರ್ಮಾಣವು ಗಾಂಧೀಜಿಗಳ ಅಪೇಕ್ಷೆ ಪ್ರಕಾರ ಅಧ್ಯಕ್ಷರು ಮಾಡತಕ್ಕದ್ದೆಂದಿದೆಯಷ್ಟೆ! ಅದರ ಅರ್ಥಪ್ರಕಾರ ಯಾರ್ಯಾರು ಸದಸ್ಯರಾಗಬೇಕೆಂದು ಗಾಂಧೀಜಿಗಳಿಗೆ ಹೇಳುವ ಅಧಿಕಾರವಿದೆಯೋ ಎಂಬ ವಿಷಯ ಅಲ್ಲಾಬಾದಿನ ಮೌಲಾನಾ ಅಜಾದರಲ್ಲಿ ಗಾಂಧೀಜಿ-ಪಟೇಲ್-ನೆಹರೂ-ಕೃಪಾಲಿನಿ ಅಜಾದರು ಕೂಡಿ ದೀರ್ಘ ಚರ್ಚೆನಡೆಯಿತು. ಪರಿಣಾಮವಾಗಿ ಗಾಂಧೀಜಿಗಳಿಗೆ ಹೆಸರುಸೂಚಿಸುವ ಅಧಿಕಾರವಿಲ್ಲವೆಂಮೂ ಅಧ್ಯಕ್ಷರು ಕೇಳಿದರೆ ಮಾತ್ರ ಹೆಸರುಕೊಡಬಹುದೆಂದೂ ನಿಶ್ಚಿತವಾಗಿದೆ.

ಈ ವರೆಗೆ ಕರ್ನಾಟಕದಲ್ಲಿ ಲ್ಲಾ ಸಾವಿರಾರು ರೂಪಾಯಿಗಳ ಪುಸ್ತಕಗಳು ಪ್ರಚಾರವಾಗಿವೆ. ಕೇವಲ ಪ್ರಚಾರಾರ್ಥವಾಗಿ ಒಂದೇ ಒಂದು ತಿಂಗಳ ನವೀನ ಯೋಜನೆ!

8 ಆಣೆಗೆ 12 ಆಣೆ

೧ ದೇವರ ಮಗು, ೨ ಸೇವೆಯ ಸಮಸ್ಯೆ, ೩ ಕಣ್ಮುಚ್ಚಾಲೆ, ೪ ಹೊಸ ಹೊಸ, ೫ ಹಣವೆಂಬ ಹೆಣ, ೬ ದೇವನೆಲ್ಲಿ, ೭ ಅಪರಾಧಿ ಯಾರು? ೮ ಉತ್ಪಾತ, ೯ ಮಿಸ್ 1954, ೧೦ ಹಿಂದೀಗಾಳಿ, ೧೧ ಭಯನಿವಾರಣೆ, ೧೨ !!!, ಕರ್ನಾಟಕದ ಪ್ರಸಿದ್ಧ ಕತೆಗಾರರ ಈ ೧೨ ಕತೆಗಳಿಗೆ ಕೇವಲ 0–8 0. ತರಿಸುವವರಿಗೆ ಕ್ರಾಂತಿಕಾರಿ ಲೇಖಕರಾದ ಶ್ರೀ ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟ 'ಹೆಂಡ್ತಿ ಗಂಡನಾದರೆ' ಎಂಬ 0—4—0 ಕ್ರಯದ ನಕ್ಕಷ್ಟು ನಗಿಸುವ ನಾಟಕ ಪುಸ್ತಕವೊಂದನ್ನು ಉಚಿತವಾಗಿ ಕೊಡಲಾಗುವುದು. 0–8–0 ಸ್ಟ್ಯಾಂಪು ಕಳಿಸಿ 0–12–0ಯ ಉತ್ತಮ ಪುಸ್ತಕಗಳನ್ನು ಪಡೆಯಿರಿ ಟಪ್ಪಾಲು ಹಾಸಲು ಮುಫತ್ತು.

4 ಆಣೆಗೆ 6 ಆಣೆ

೧ ದೇವರ ಮಗು, ೨ ಉತ್ಪಾತ, ೩ ಮಿಸ್ 1954, ೪ ಹಿಂದೀಗಾಳಿ, ೫ ಭಯನಿವಾರಣೆ, ೬ !!! ಕರ್ನಾಟಕದ ಹೆಸರಾದ ಕತೆಗಾರರ ಈ ೬ ಕತೆಗಳಿಗೆ 0-4-0 ತರಿಸುವವರಿಗೆ ಕರ್ನಾಟಕದ ಪ್ರಸಿದ್ಧ ಕಥಾ ಲೇಖಕರಾದ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರಿಂದ ಬರೆಯಲ್ಪಟ್ಟ (೧) ಅಷ್ಟ ಬೆಳೆದ ಗಿಡ್ಡಿಯ ಮದುವೆ, (೨) ಮುದುಕನ ಹೆಂಡತಿ ಥಕಥೈ ರಾಧೆ ಎಂಬ ಅತ್ಯಂತ ವಿನೋದಪರ ಕತೆಗಳ ಎರಡಾಣೆಯ ಎರಡು ಪುಸ್ತಕಗಳನ್ನು ಉಚಿತವಾಗಿ ಕೊಡಲಾಗುವುದು. 0-4-0 ಸ್ಟ್ಯಾಂಪು ಕಳಿಸಿ 0-6-0 ಪುಸ್ತಕ ಪಡೆಯಿರಿ.

0–12–0 ಸ್ಟ್ಯಾಂಪು ಕಳಿಸಿ ಎರಡೂ ಸೆಟ್ ಪುಸ್ತಕ ತರಿಸುವವರಿಗೆ 'ಕನ್ನಡ ಪುಸ್ತಕಗಳು' ಎಂಬ ಪುಸ್ತಕವನ್ನಾಗಲೀ 1939ರ ಕೆಲೆಂಡರನ್ನಾಗಲೀ ಮುಫತ್ತಾಗಿ ಕಳಿಸಲಾಗುತ್ತೆ.

ನವಭಾರತ ಪುಸ್ತಕ ಭಂಡಾರ,
ಪ್ರಕಾಶಕರು ಮತ್ತು ಪುಸ್ತಕವ್ಯಾಪಾರಿಗಳು,
ಉಡುಪಿ.

Navabharat Book Depot,
Publishers & Book-Sellers,
UDIPI.

ಮದ್ರಾಸು ಹ್ಯಾಕೋರ್ಟು ಸಮುದ್ರ ಕಿನಾರೆಯಲ್ಲಿ ಮನುಷ್ಯನನ್ನು ಹಿಡಿಯುವ ಶಾರ್ಕ್ ಮೀನು.

ಹ್ಯಾಕೋರ್ಟು ಬೀಚ್ (ಕಡಲಕರೆ)ನಲ್ಲಿ ಒಂದು ಶಾರ್ಕ್ ಮೀನು ಕಳೆದ ತಿಂಗಳಲ್ಲಿ ಒಬ್ಬ ಯುರೋಪಿಯನ್ ಸೈನಿಕನನ್ನು ಕಡಲಿಗಿಳಿದಾಗ ಹಿಡಿದು ಸಾಯುವಂತೆ ಗಾಯಗೊಳಿಸಿತ್ತು. ಕಳೆದ ವಾರ ಮೂವರು ಮಲಯಾಳೀ ಯುವಕರು ಸಮುದ್ರದಲ್ಲಿ ಹದಿನೈದು ಮಾರು ದೂರದೊಳಗೆ ಸ್ನಾನ ಮಾಡುತ್ತಿದ್ದಾಗ ಅದು ಬಂದು ಅವರಲ್ಲೊಬ್ಬನನ್ನು ಹಿಡಿದು ಹಾರಾಡಿ ಹಲವು ಕಡೆಗಳಲ್ಲಿ ಗಾಯ ಮಾಡಿತು. ಜತೆಗಾರರು ಪ್ರಾಣದ ಹಂಗುತೊರೆದು ಅವನನ್ನು ಹಿಡಿದು ಬಿಡಿಸಿ ತಂದರೂ ಹೆಚ್ಚು ಹೊತ್ತು ಬದುಕಲಾಗಲಿಲ್ಲ.

ಈ ವಾರದ ಫಲಿತಾಂಶವೇನು?

(ತಾ 30—3—39ರಿಂದ 6—4—39ರ ವರೆಗಿನ ರಾಶಿಫಲ)

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ.
ಸಂ. ನ.]

ಮೇಷರಾಶಿ—

"ಪ್ರಯತ್ನಃ ಫಲದಾಯಕಃ" ಎಂಬ ಲೋಕೋಕ್ತಿಯಂತೆ ಉದ್ಯೋಗಿಯು ಎಲ್ಲಿ ಹೋದರೂ ತನ್ನ ನೈಸರ್ಗಿಕ ಗುಣದಿಂದ ಮುಂದಿನ ದಿನಗಳನ್ನು ಸುಲಭದಿಂದ ಕಳೆಯುವನು. ಸದ್ಯದ ಗ್ರಹಸ್ಥಿತಿಯಲ್ಲಿ ನೀವು ವ್ಯಗ್ರರಾಗಿರದೆ ಸತತೋದ್ಯಮಿಗಳಾಗಿರುವುದರಿಂದ ಯೋಗ್ಯವಾದ ಪ್ರತಿಫಲವನ್ನು ಪಡೆಯುವಿರಿ. ಸದಾಚಾರಸಕ್ತರಾದವರೂ ಕೂಡ ಸುಖದಿಂದ ದಿನಗಳೆಯುವರು. ವ್ಯಾಪಾರೀ ವೃತ್ತಿಯಲ್ಲಿ ಚೆನ್ನಾಗಿ ಧನಾಗಮವಿರುವುದು, ಕೂಲಿಕೆಲಸದಿಂದ ದಿನಹರಣ ಮಾಡುವವರಿಗೆ ಕಾಲಕಳೆಯುವುದು ಕಷ್ಟಸಾಧ್ಯವಾಗುವುದು. ಸಾಮಾನ್ಯವಾಗಿ ನಿಮಗೆ ಹೆಚ್ಚಿನಂಶ ಆರೋಗ್ಯವು ಸರಿಯಿರದು. ವಿರೋಧಿಗಳು ಹಲವು ಬಗೆಗಳಿಂದ ನಿಮ್ಮ ಪರಾಜಯವನ್ನು ನೋಡಬಯಸುವರು. ವಿದ್ಯಾರ್ಥಿಗಳಿಗೆ ಈವಾರವು ಚೆನ್ನಾಗಿಲ್ಲವು. ತಾ. 3, 4, 5, 6, ಈ ದಿನಗಳು ಸಾಕಷ್ಟು ತೃಪ್ತಿಕರಗಳಾಗಿವೆ.

ವೃಷಭರಾಶಿ—

ಈ ವಾರದಲ್ಲಿ ನೀವು ನಿಮ್ಮ ಖರ್ಚಿನ ಭಾಗದಲ್ಲಿ ಹೆಚ್ಚಿನ ದೃಷ್ಟಿಯನ್ನಿಡಿರಿ. ಅದು ನಿಮ್ಮ ಆದಾಯವನ್ನು ತಿಕ್ರಮಿಸಲಿರುವುದು. ನ್ಯಾಯಸ್ಥಾನಗಳಲ್ಲಿ ನೀವು ವಿಜಯಿಗಳಾಗಲಿರುವಿರಿ. ವಿದ್ಯಾರ್ಥಿಗಳಿಗೂ ಸೇವಾವೃತ್ತಿಯಿಂದ ಜೀವನನಿರ್ವಹಿಸುವವರಿಗೂ ಮತ್ತು ನೌಕರವರ್ಗದವರಿಗೂ ಈ ವಾರವು ಸಾಮಾನ್ಯತಃ ಉತ್ತಮವೆಂದೇ ಹೇಳಬಹುದು. ಆದರೂ ಆರೋಗ್ಯವು ತೃಪ್ತಿಕರವಾಗಿರದು. ಎಷ್ಟೊಂದು ನಾಲಿಗೆಯನ್ನು ಹಿಡಿತದಲ್ಲಿಟ್ಟುಕೊಂಡಿದ್ದರೂ ನಿಮಗೆ ಕಲಹವಾಗುವುದು ನಿಶ್ಚಯವೆನ್ನಬಹುದು. ಇದರ ಪರಿಣಾಮವಾಗಿ ಮಾನಹಾನಿ ಸಂಭವಿಸೀತು. ಮನಸ್ಸಿನ ನೆಮ್ಮದಿಗೆ ಹಲವು ಬಗೆಗಳಿಂದ ಭಂಗಬರುವುದು. ಅಕಸ್ಮಾತ್ ಶಸ್ತ್ರಗಳಿಂದಾಗಲೀ ಇನ್ನಿತರ ವಾಹನಾದಿಗಳ ಯಾನಗಳಲ್ಲಾಗಲೀ ದೇಹಕ್ಕೆ ಗಾಯ ವಗೈರೆ ಅಪಾಯಗಳುಂಟಾಗುವವು. ತಾ. 30 ಮತ್ತು 5, 6, ಈ ದಿನಗಳು ಉತ್ತಮಗಳಾಗಿವೆ.

ಮಿಥುನರಾಶಿ—

ಆರಂಭಿಸಿದ ಕಾರ್ಯಗಳಲ್ಲಿ ಜಯಶ್ರೀಯು ನಿಮ್ಮ ಹಸ್ತಗತವಾಗಿರುವುದು, ವ್ಯಾಪಾರ ವ್ಯವಹಾರಗಳಲ್ಲಿ ಒಳ್ಳೇ ಚತುರರಾಗಿರತಕ್ಕ ನಿಮ್ಮ ಮನೋರಥಗಳು ಹೆಚ್ಚಿನಂಶ ನೆರವೇರುವವು, ನಿಮ್ಮ ವಿಷಯದಲ್ಲಿ ವಿಪಕ್ಷೀಯರ ಕಾರ್ಯವೊಂದೂ ಸಾಗದು. ಧರ್ಮಕರ್ಮಗಳಲ್ಲಿ ನಿಮಗೆ ಹೆಚ್ಚಿನ ಶ್ರದ್ಧೆಯುಂಟಾಗುವುದು. ವಕೀಲರು ಉಪಾಧ್ಯಾಯರು ಮುಂತಾದ ವಿದ್ಯೋಪಜೀವಿಗಳು ತಮ್ಮ ದಿನಗಳನ್ನು ಸುಖದಿಂದ ಕಳೆಯುವರು. ಪ್ರತಿಯೊಂದು ಕಾರ್ಯದಲ್ಲೂ ಧನಲಾಭವು ಉತ್ತಮರೀತಿಯಲ್ಲಿರುವುದರಿಂದ ನಿಮ್ಮ ಹಿಂದಿನ ಋಣಗಳನ್ನೂ ಕೂಡ ನಿವಾರಿಸುವಿರಿ. ಆಯಕಷ್ಟದಿಂದ ಜೀವಿಸತಕ್ಕವರಿಗೆ ಅನಾರೋಗ್ಯ ಕುಟುಂಬಕಲಹಗಳುಂಟಾಗಲಿರುವವು. ತಾ. 1, 2 ಈ ದಿನಗಳು ಸರ್ವ ಭಾಗಗಳಲ್ಲೂ ಉತ್ತಮವಾಗಿರುವುದರಿಂದ ಏತದ್ದಿನಗಳಲ್ಲಿ ಗೃಹಸುಖ ಧನಲಾಭಗಳು ಬಹಳ ಉತ್ತಮರೀತಿಯಲ್ಲಿರುವವು.

ಕರ್ಕಾಟಕರಾಶಿ—

ಹಲವು ಭಾಗಗಳಲ್ಲಿ ಈ ವಾರವು ನಿಮಗೆ ಶ್ರೇಯಸ್ಕರವಾಗಿಲ್ಲವು. ಮಾತ್ರವಲ್ಲ ಗುರ್ವನುಗ್ರಹವೂ ಇಲ್ಲದಿರುವುದರಿಂದ ಆಸ್ತಿಕ ಭಾಗದಲ್ಲಿ ಅನಾದರವು ಹೆಚ್ಚುವದು, ಈ ಸಂಬಂಧವಾಗಿ ಸಜ್ಜನರ ಕೂಡೆ ಜಗಳವುಂಟಾಗುವುದು. ಇಲ್ಲಸಲ್ಲದ ಕಲಹಗಳು ಒಂದೊಂದಾಗಿ ಬರುವವು. ವಿರೋಧಿಗಳ ವಿಘ್ನದಿಂದಾಗಿ ನಿಮ್ಮ ಕಾರ್ಯವೊಂದೂ ಸಾಗುವಂತಿಲ್ಲ. ಆರೋಗ್ಯವು ವಿಶೇಷವಾಗಿ ಕೆಟ್ಟು ತನ್ಮೂಲಕ ಹೆಚ್ಚಿನ ಧನವ್ಯಯವಾಗುವುದು. ಪ್ರವಾಸದ ಸಂಬಂಧ ಹೆಚ್ಚಾಗಿ ಕಷ್ಟನಷ್ಟಗಳಿಗೆ ಗುರಿಯಾಗುವಿರಿ. ಖರ್ಚಿನಮಿಟ್ಟಿಗೆ ಉತ್ಪತ್ತಿ ಇರುವುದರಿಂದ ಹೆಚ್ಚಿನ ಆರ್ಥಿಕ ಅಡಚಣೆಗಳಿಗೆ ಸಿಲುಕಲಾರಿರಿ. ಸ್ತ್ರೀಮೂಲಕವಾಗಿ ಧನಸಿಗುವ ಸಂಭವವಿದೆ. ತಾ. 1, 2, 5, 6, ಈ ದಿನಗಳಲ್ಲಿ ಪ್ರಿಯಜನರಲ್ಲಿ ಕಲಹವುಂಟಾಗಿ ಮಾನಚ್ಯುತಿಯ ಪ್ರಸಂಗಬರಬಹುದು.

ಸಿಂಹರಾಶಿ—

ಬಾಯಿ ಇದ್ದರೆ ಮಗ ಬದುಕ್ಯಾನು ಎಂಬ ನಾಣ್ಣುಡಿಯಂತೆ ಈ ವಾರದಲ್ಲಿ ನೀವು ನಿಮ್ಮ ವಾಚಾಲತನದಿಂದಲೇ ಕಾರ್ಯವನ್ನು ಸಾಧಿಸಿ ವಿಜಯಿಗಳಾಗುವಿರಿ. ಕುಮಾರರಿಂದ ಧನಸಿಗುವದು. ಮಾತಿಗೆ ತಕ್ಕಂತೆ ಸೂಕ್ಷ್ಮಬುದ್ಧಿಯೂ ಇರುವುದರಿಂದ ಜನರ ಮನ್ನಣೆಗೆ ಪಾತ್ರರಾಗುವಿರಿ. ಕುಟುಂಬ ಕಲಹದ ನಿಮಿತ್ತ ಪತ್ನೀಪುತ್ರರಿಗೂ ನಿಮಗೂ ಜಗಳವಾಗಲಿರುವುದು, ಸ್ತ್ರೀಜನತೆಯಿಂದಲೇ ನಿಮಗೆ ಕೆಲವು ಭಾಗಗಳಲ್ಲಿ ಕಷ್ಟನಷ್ಟಗಳು ಸಂಭವಿಸಲಿವೆ. ಶತ್ರುಭಯವೂ ರೋಗಭಯವೂ ವಿಶೇಷವಾಗಿ ನಿಮ್ಮನ್ನು ಪೀಡಿಸುವವು. ಪ್ರಿಯಜನರ ವಿಯೋಗದಿಂದಾಗಿ ಬಹಳ ದೈನ್ಯಾವಸ್ಥೆಯನ್ನು ಹೊಂದುವಿರಿ. ತಾ. 30 ಮತ್ತು 3-4 ಈ ದಿನಗಳಲ್ಲಿ ಕಾರ್ಯಗಳಿಗೆ ತೊಡಕು ತೊಂದರೆಗಳೂ ದೇಹಾಲಸ್ಯವೂ ಧನವ್ಯಯವೂ ಹೆಚ್ಚುವವು.

ಕನ್ಯಾರಾಶಿ—

'ಪ್ರಯೋಜನಮನುದ್ದಿಶ್ಯ ನ ಮಂದೋಽಪಿ ಪ್ರವರ್ತತೇ' ಎಂಬ ನೀತಿಗನುಸಾರವಾಗಿ ಅತ್ಯಂತ ಜಡಭರತನಂತೆ ಸದಾ ಉದಾಸೀನನಾಗಿರತಕ್ಕವನೂ ಕೂಡ ಪ್ರತಿಯೊಂದು ಕಾರ್ಯವನ್ನೂ ಏನಾದರೊಂದು ಪ್ರಯೋಜನಾಪೇಕ್ಷೆಯಿಲ್ಲದೆ ಮಾಡುವುದಿಲ್ಲವು. ಹೀಗಿರುವಲ್ಲಿ ನೀವು ಮಹದಪೇಕ್ಷೆಯುಳ್ಳವರಾಗಿ ಅನೇಕ ಕಾರ್ಯಗಳನ್ನು ಮಾಡುವಿರಿ, ಏನಾದರೇನು! ನಿಮ್ಮ ಅದೃಷ್ಟವು ಸಂಪೂರ್ಣ ಕೆಟ್ಟಿರುವುದರಿಂದ ನಿಮ್ಮ ಇಚ್ಛೆಗೆ ವಿರೋಧವಾಗಿಯೇ ಸಕಲ ಕಾರ್ಯಗಳೂ ಕೊನೆಮುಟ್ಟುವವು. ಆರ್ಥಿಕ ಮುಗ್ಗಟ್ಟಿಗೆ ಸಿಲುಕಿ ಬಹಳ ಪೇಚಾಡುವಿರಿ. ಅಲ್ಪಜನರ ಹಂಚಿಕೆಗೆ ಬಲಿಯಾದ ನೀವು ಮನೋವ್ಯಥೆಯುಳ್ಳವರಾಗಿ ಆರೋಗ್ಯವನ್ನು ಕಳಕೊಳ್ಳುವಿರಿ. ತಾ. 1, 2 ಮತ್ತು 5, 6 ಈ ದಿನಗಳು ಅತ್ಯಂತ ಚಿಂತಾಜನಕಗಳಾಗಿರುವವು.

ತುಲಾರಾಶಿ—

'ನೀಚೈರ್ಗಚ್ಛತ್ಯುಪರಿ ಚ ದಶಾ ಚಕ್ರನೇಮಿಕ್ರಮೇಣ' ಎಂದಂತೆ ಮನುಷ್ಯನ ಭಾಗ್ಯವು ಮುಂದಕ್ಕೆ ಹೋಗತಕ್ಕ ರಥದ ಚಕ್ರದಂತೆ ಮೇಲಕ್ಕೂ ಕೆಳಕ್ಕೂ ಹೋಗುತ್ತಲಿರುವುದು. ತತ್ಕಾಲದಲ್ಲಿ ಸಕಲ ಶೀಘ್ರೋಗ್ರಹರು ನಿಮ್ಮ ಮನದಭಿಲಾಷೆಯನ್ನು ಪೂರೈಸಲು ಶಕ್ತರಾಗಿ ಸುಸ್ಥಾನದಲ್ಲಿ ನಿಂತಿರುವುದರಿಂದ ನಿಮ್ಮ ಭಾಗ್ಯಚಕ್ರವು ಮೇಲಕ್ಕೇರಬಹುದು. ಅದರ ಕಾರಣ ನಿಮಗೆ 'ನ ಭೂತೋ ನ ಭವಿಷ್ಯತಿ' ಎಂಬ ರೀತಿಯಲ್ಲಿ ಈ ವಾರವು ಬಂದಿರುವುದು. ಇಂತಹ ಸುಸಂದರ್ಭವನ್ನು ನೀವು ಸದುಪಯೋಗಮಾಡಿಕೊಂಡರೆ ಯಾ ಸತ್ಕಾರ್ಯಕ್ಕಾಗಿ ವಿನಿಯೋಗಿಸಿದರೆ ಅದು ಮಹಾ ಫಲಕಾರಿಯಾಗುವುದರಲ್ಲಿ ಸಂದೇಹವಿಲ್ಲ. ತಾ. 30, 1, 2, ಮತ್ತು 5, 6 ಈ ದಿನಗಳು ಸರ್ವಾರ್ಥಕ್ಕೂ ಉತ್ಕೃಷ್ಟಗಳಾಗಿರುವವು.

ವೃಶ್ಚಿಕರಾಶಿ—

'ದೈವಂ ಫಲತಿ ಸರ್ವತ್ರ ನ ವಿದ್ಯಾ ನ ಚ ಪೌರುಷಂ' ಮನುಷ್ಯನಿಗೆ ಅಭ್ಯಾಸಬಲದಿಂದ ಸಂಗ್ರಹಿಸಿದ ವಿದ್ಯೆಯಾಗಲಿ, ಆತನ ಪೌರುಷವಾಗಲಿ ಪ್ರಯೋಜನಕ್ಕೆ ಬರಲಾರವು. ಮುಖ್ಯವಾದ ಅದೃಷ್ಟದ ಸಹಾಯವಿದ್ದರೇನೇ ಅವುಗಳಿಗೆ ತಕ್ಕ ಬೆಲೆಬಂದೀತು. ಪ್ರಕೃತ ನೀವು ಸಾಹಸಿಕರೂ ಒಳ್ಳೇ ಚತುರರೂ ಕೂಡ ಆಗಿದ್ದರೂ ನಿಮ್ಮ ದೈವವು ನಿಮಗೆ ಸಂಪೂರ್ಣ ಪ್ರತಿಕೂಲಕಾರಿಯಾಗಿರುವುದರಿಂದ ನೀವೀ ವಾರದಲ್ಲಿ ಅನರ್ಥಶತಗಳಿಗೆ ಗುರಿಯಾಗುವಿರಿ. ಗೃಹದಲ್ಲಿ ಪುತ್ರರೂ ಕಳತ್ರರೂ ನಿಮಗೆ ಪ್ರತಿಯೊಂದು ಭಾಗದಲ್ಲೂ ಸಂಪೂರ್ಣ ವಿರೋಧವಾಗಿರುವರು ಮಾತ್ರವಲ್ಲ ಭೃತ್ಯರೂ ಕೂಡ. ಬಂಧುಜನರೂ ಬಹು ವಿಧದಲ್ಲಿ ನಿಮ್ಮ ದುಃಖವನ್ನು ಹೆಚ್ಚಿಸಲಿರುವರು. ನಿಮ್ಮ ಶರೀರವು ಅನಾರೋಗ್ಯಕ್ಕೆ ತವರುಮನೆಯಂತಿರುವದು. ಧನವ್ಯಯಕ್ಕೆ ಮಿತಿಯಿಲ್ಲವು. ತಾ 30, 5, 6 ಈ ದಿನಗಳು ಬಹಳಕೆಟ್ಟಿರುವವು.

ಧನುರಾಶಿ—

ಈ ವಾರವು ನಿಮಗೆ ಹೆಚ್ಚಿನ ಭಾಗಗಳಲ್ಲಿ ಅನಿಷ್ಟಕಾರಿಯಾಗಿರುವುದು. ಶತ್ರುಗಳ ಹೆಚ್ಚಳದಿಂದಲೂ ಸ್ವಂತ ಅವಿವೇಕದಿಂದಲೂ ಅನೇಕ ಅನರ್ಥಗಳು ಸಮುದ್ರತರಂಗಗಳಂತೆ ಒಂದರ ಒಂದೊಂದು ಬರುತ್ತಲಿರುವವು. ಶರೀರದಲ್ಲಿ ಕಜ್ಜಿ ಹುಣ್ಣುಗಳು ಹೆಚ್ಚುವವು, ಅಂಗಾಂಗಗಳಲ್ಲಿ ನೋವುಗಳುಂಟಾಗುವವು. ಮಿತ್ರರೂ ಕಳತ್ರವೂ ಇವರಿಂದ ವಿಯೋಗ ಹೊಂದಿ ಸದಾ ದುಃಖಾಬ್ಧಿಯಲ್ಲಿ ಮುಳುಗಿರುವಿರಿ. ಆದರೂ ಬಂಧುಜನರು ನಿಮ್ಮನ್ನು ಕೈಬಿಡರು, ವ್ಯಾಪಾರ ಭಾಗದಲ್ಲಿ ಸಾಕಷ್ಟು ತೃಪ್ತಿಕರವಾಗುವ ರೀತಿಯಲ್ಲಿ ದುಡಿಯುವಿರಿ. "ವಿಪದಿ ಧೈರ್ಯಂ" ಎಂಬ ನ್ಯಾಯದಂತೆ ಕಷ್ಟಕಾಲದಲ್ಲಿ ಧೈರ್ಯದಿಂದ ಕಾರ್ಯ ಸಾಗಿಸಿದರೆ ಹಾನಿಯಾಗದು. ದೈವದೇವರು ಗುರುಹಿರಿಯರಲ್ಲಿ ವಿಧೇಯರಾಗಿ ವರ್ತಿಸಿರಿ. ತಾ 30ರಿಂದ 2ರವರೆಗೆ ದೇಹಾಲಸ್ಯ ಚಿಂತೆಗಳು ಹೆಚ್ಚಿರುವವು.

ಮಕರರಾಶಿ—

ತಾತ್ಕಾಲಿಕ ಗ್ರಹದ ಪರಿಸ್ಥಿತಿಯು ನಿಮ್ಮ ಭಾಗಕ್ಕೆ ಸಾಕಷ್ಟು ಫಲಕಾರಿಯಾಗಿರುವುದು. ಆಲಸ್ಯದಿಂದ ದಿನಕಳೆಯುವ ಸಮಯ ಹಿಂದುಳಿಯಿತು. ಸತ್ಕಾರ್ಯಪ್ರವೃತ್ತರಾಗಿ ಇಚ್ಛೆಯನ್ನು ಪೂರ್ತಿಗೈಯಿರಿ. ವಿದ್ಯಾರ್ಥಿಗಳಿಗೆ ಉತ್ತಮಸಮಯವು. ಕೋರ್ಟುವಗೈರೆಗಳಲ್ಲಿನ ಖಟ್ಲೆಗಳು ಉತ್ತಮರೀತಿಯಲ್ಲಿ ಪರ್ಯವಸಾನ ಹೊಂದುವವು. ಶತ್ರುಗಳು ನಿಮ್ಮ ಮುಂದೆ ತಲೆಯೆತ್ತರು. ಸಾಂಪತ್ತಿಕ ಪರಿಸ್ಥಿತಿಯು ಬಹಳ ಉತ್ತಮತರಗತಿಯಲ್ಲಿರುವುದು. ವೈಶ್ಯಜನರೂ ಡಾಕ್ಟರರೂ ತಮ್ಮ ವೃತ್ತಿಯಲ್ಲಿ ಉತ್ತಮಫಲವನ್ನು ಪಡೆಯುವರು. ಆದರೂ ಉತ್ಸಾಹೀತರ ಜನರಿಗೆ ಕೆಲವು ಭಾಗಗಳಲ್ಲಿ ವಿಶೇಷ ಹಾನಿಯುದ್ಭ ಕೃಷಿಕರಿಗೂ ಕೂಡ ಸಾಂಪತ್ತಿಕ ಭಾಗದಲ್ಲೂ ಆರೋಗ್ಯವಿಷಯದಲ್ಲೂ ಚೆನ್ನಾಗಿರದು. ತಾ. 30, 5, 6, ಈ ದಿನಗಳು ಅತ್ಯುತ್ತಮವಿರುವವು.

ಕುಂಭರಾಶಿ—

ಸಪ್ತಮದಲ್ಲಿ ನಿಮಗೆ ಗ್ರಹರು ಮಿಶ್ರರೂಪದಲ್ಲಿ ನಿಂದಿರುವರು ಆದಕಾರಣ ಕೆಲವು ಕಾರ್ಯಗಳು ನಿಮ್ಮ ಅಭೀಷ್ಟದಂತೆ ಪೂರ್ತಿಗೊಂಡರೂ ಇನ್ನು ಕೆಲವು ವಿಪರೀತವಾಗಲಿರುವವು. ಸಾರ್ವಜನಿಕ ಕಾರ್ಯಗಳಲ್ಲೂ ಸಮಾಜದ ಕಾರ್ಯಗಳಲ್ಲೂ ಮುಂದಾಳುಗಳಾದ ತರುಣ ಉತ್ಸಾಹೀ ಜನರು ತಮ್ಮ ಕಾರ್ಯದಲ್ಲಿ ಕೃತಕೃತ್ಯರಾಗಿ ಜನರ ಮನ್ನಣೆಗೆ ಪಾತ್ರರಾಗುವರು, ಸಾಂಸಾರಿಕ ಸಂಪತ್ತುಗಳು ಸಮೃದ್ಧಗಳಾಗಿರುವವು, ಖರ್ಚಿಗೆ ತಕ್ಕಷ್ಟು ಉತ್ಪತ್ತಿಯೂ ಆಗಲಿರುವುದು, ಆದರೂ ಅನಾರೋಗ್ಯ ಪೀಡಿತರಾದ ನಿಮಗೆ ಸ್ಮರಣೆಯ ಶಕ್ತಿ ಮತ್ತು ಬುದ್ಧಿ ಇವುಗಳ ದೌರ್ಬಲ್ಯದಿಂದಾಗಿ ಕಲಹಕ್ಕೆ ಕಾರಣವಾಗುವದು. ದುಡಿದ ಹಣದಲ್ಲಿ ಹೆಚ್ಚಿನ ಹಣವು ವ್ಯರ್ಥ ವ್ಯಯವಾಗುವದು. ತಾ. 30, 1, 2, ದಿನಗಳು ಚೆನ್ನಾಗಿವೆ.

ಮೀನರಾಶಿ—

ಮನುಷ್ಯನ ಗೌರವದ ಅಳಿವೂ ಉಳಿವೂ ಮುಖ್ಯವಾಗಿ ಒಂದು ನಾಲಗೆಯನ್ನು ಹೊಂದಿಕೊಂಡಿರುವುದು. ಈಗಿನ ಪರಿಸ್ಥಿತಿಯಲ್ಲಿ ನಿಮ್ಮ ಅವಸ್ಥೆಯು ಬಹಳ ಬಿಕ್ಕಟ್ಟಿನದ್ದಾಗಿರುತ್ತದೆ. ಮಾತುಮಾತಿಗೆ ಕಲಹ, ತಿರಸ್ಕಾರ ಧನವ್ಯಯ ಇವುಗಳಿಂದ ದಿನವೆಂಬುದು ವರ್ಷವಾಗಿ ಪರಿಣಮಿಸುವದು. ಪ್ರಕೃತಿಯ ಅನಾರೋಗ್ಯದಿಂದ ಹೆಚ್ಚಿನ ಧನವ್ಯಯವಾಗುವುದು, ದುರ್ಗಾಯಾಸವು ಅಧಿಕವಾಗುವದು. ತಾತ್ಕಾಲಿಕವಾಗಿ ಸ್ವಂತ ಖರ್ಚಿಗೆ ತಕ್ಕ ಉತ್ಪತ್ತಿಯಾಗದು. ದೇಹದಲ್ಲಿ ಶಕ್ತಿಗುಂದಿ ಸದಾ ಆಯಾಸವು ತೋರಿಬರುವದು. ತಾ. 1ರಿಂದ 4ರವರೆಗಿನ ದಿನಗಳು ಸ್ವಲ್ಪ ಮಟ್ಟಿಗೆ ಚೆನ್ನಾಗಿರುವುದರಿಂದ ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಸಂಭವಿಸವು.

Commonwealth Assurance Co., Ltd., Poona.

ಬೋನಸ್ಸು ದರವು 20% ಹೆಚ್ಚಿದೆ

30—4—38ರ

ಮೂರನೇ ವ್ಯಾಲ್ಯುಯೇಷನ್ ಫಲಿತಾಂಶ

ಜೀವಾವಧಿ	ತ್ರೈವಾರ್ಷಿಕ	ಎಂಡೋಮೆಂಟ್
ರೂ. 54—0—0	ಬೋನಸ್ಸು ಸಾವಿರಕ್ಕೆ	ರೂ 45—0—0

ಕಾಮನ್‌ವೆಲ್ತ್

ಏಜನ್ಸಿ ಮತ್ತು ಪಾಲಿಸಿ ವಿವರಗಳಿಗೆ ಇಂದೇ ಬರೆಯಿರಿ.

ಕಾಮನ್‌ವೆಲ್ತ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ.

ಗವಾಂಕರ್ ಅಂಡ್ ಸನ್ಸ್,

ಚೀಫ್ ಏಜಂಟ್ಸ್: ಆನಂದರಾವ್ ಸರ್ಕಲ್, ಬೆಂಗಳೂರು.

ಕರಾಚಿಯಲ್ಲಿ-ಓಂ ಮಂಡಳಿಯ ಮೇಲೆ ೧೪೪ನೇ ಸೆಕ್ಷನ್

ಓಂ ಮಂಡಳಿಯಲ್ಲಿರುವ ಗಂಡಸರನ್ನು ಅಲ್ಲಿಂದ ಪ್ರತ್ಯೇಕಿಸಿ ಅಲ್ಲಿ ಗಂಡಸರಿಗೆ ಪ್ರವೇಶಗೊಡದಂತೆ ವ್ಯವಸ್ಥೆಮಾಡಬೇಕೆಂದು ಅದರ ವ್ಯವಸ್ಥಾಪಕರಾದ ದಾದಾಲೇಖರಾಜರಿಗೆ ಸರಕಾರವು ತಿಳಿಸಿತು. ಅದಕ್ಕವರು ಒಪ್ಪದಿದ್ದ ಕಾರಣ ಅವರು ಆ ಮಂಡಳಿಯಿರುವ ಭವನಕ್ಕೆ ಹೋಗಕೂಡದೆಂದು ಅದರ ವಠಾರವನ್ನು ಪ್ರವೇಶಿಸಬಾರದೆಂದೂ ಅದರ ಸ್ತ್ರೀ ಸದಸ್ಯರನ್ನು ಅವರು ಬೇರೆಲ್ಲಿಯೂ ಬರಮಾಡಿಕೊಳ್ಳಕೂಡದೆಂದೂ ಇಂಡಿಯನ್ ಪಿನಲ್ ಕೋಡಿನ ೧೪೪ನೇ ಸೆಕ್ಷನ್ ಮೇರೆಗೆ ಸರಕಾರವು ಹುಕುಂ ಮಾಡಿದೆ. ಅಂತೆಯೇ ಓಂ ಮಂಡಳಿಯ ಅಧ್ಯಕ್ಷಿಣಿಯಾದ ಓಂ ರಾಧೆಗೆ ಆ ಸಂಸ್ಥೆಯೊಳಗೆ ಗಂಡಸರನ್ನಾರನ್ನೂ ಕರೆಯಿಸಿಕೊಳ್ಳಕೂಡದೆಂದು ಅದೇ ಸೆಕ್ಷನ್ ಜ್ಯಾರಿಮಾಡಲಾಗಿದೆ.



ಸರಿಯಾದ ಸಮಯವನ್ನು ಸೂಚಿಸತಕ್ಕ ಅತ್ಯಾಧುನಿಕ ಲಿವರ್ ರಿಸ್ಟ್‌ವಾಚಿಗೆ ಉರುಟು ಯಾ ಚೌಕ ಆಕಾರದಲ್ಲಿದ್ದುದಕ್ಕೆ ರೂ. 1-15-0 ಮಾತ್ರ. 4 ವರ್ಷಗಳ ಗ್ಯಾರಂಟಿ. ಉತ್ತಮ ಜಾತಿಗೆ ರೂ. 3-8-0, ಅತ್ಯುತ್ತಮದಕ್ಕೆ ರೂ. 3-0-0, ಚಿನ್ನದ ಕವಚದಕ್ಕೆ ರೂ. 3-8-0, ಕ್ರೋಮಿಯಮಿಗೆ ರೂ. 4-8-0, ರೋಲ್ಡ್‌ಗೋಲ್ಡಿಗೆ ರೂ. 6-8-0, ಚಿತ್ರದಲ್ಲಿ ತೋರುವಂತಹದಕ್ಕೆ ರೂ. 8-8-0, ಅಂಚೆ 0-10-0 ಪ್ರತ್ಯೇಕ.

Empress Trading Co.,
***P.O. Box No. 6744,* Calcutta(G)**

THE

Canara Banking Corporation, Udipi, Ltd.

(Incorporated in British India.)

ESTD. 1906

THREE YEARS' CASH CERTIFICATES

bearing interest at 4% p. a. in denominations of Rs 50/-, 100/-, 500/-, 1,000/- & 5000/- are now issued at all our Branches.

For particulars call at or write to any of our nearest Branches.

ಉಡುಪಿ, ಗುರುವಾರ, ತಾ. ೩೦-೩-೩೯

ಪಂತರ ಠರಾವಿನ ಸಿಕ್ಕು

ಪಂತರ ಠರಾವಿನಿಂದ ತ್ರಿಪುರಿಕಾಂಗ್ರೆಸ್ ಅಧಿವೇಶನಕ್ಕೆ ಕಾಂಗ್ರೆಸ್ ಇತಿಹಾಸದಲ್ಲಿ ವೈಶಿಷ್ಟ್ಯ ಬಂದಿದೆ. ಅದು ಹಾಕಿಟ್ಟಿರುವ ಸಿಕ್ಕಿನ ಗಂಟು ಹೇಗೆ ಬಿಡಿಸಲ್ಪಡುವುದೆಂಬುದರ ಭವಿಷ್ಯ ಹೇಳಲು ಬರುವುದಿಲ್ಲವಾದರೂ ಬೇರೆಬೇರೆ ದೃಷ್ಟಿಕೋನದಿಂದ ಅದನ್ನು ನೋಡಿದರೆ ಆ ಗ್ರಂಥಿಯ ವೈಚಿತ್ರ್ಯವು ತೋರದಿರಲಾರದು. ಮೊದಲನೆಯದಾಗಿ, ಅಖಿಲ ಭಾರತ ಕಾಂಗ್ರೆಸ್ ಸದಸ್ಯರು ತಮ್ಮ ತಮ್ಮ ಪ್ರಾಂತಿಕ ವಿಭಾಗಾನುಸಾರವಾಗಿ ಪ್ರತಿನಿಧಿಗಳನ್ನು ಚುನಾಯಿಸಿದರು. ಆ ಪ್ರತಿನಿಧಿಗಳು ಕಾಂಗ್ರೆಸ ಅಧ್ಯಕ್ಷರನ್ನು ಆರಿಸಿದರೆಂದಮೇಲೆ ಅಖಿಲ ಭಾರತ ಕಾಂಗ್ರೆಸ್ಸೇ ಅಧ್ಯಕ್ಷರನ್ನು ಚುನಾಯಿಸಿತೆಂದಾಯಿತು. ಕಾಂಗ್ರೆಸ್ ಸಂಘಟನೆಯ ನಿಯಮಾಳಿಗನುಸಾರವಾಗಿ ವರ್ಕಿಂಗ್ ಕಮಿಟಿಯನ್ನು ನಿರ್ಮಿಸಿಕೊಳ್ಳಲಿಕ್ಕೆ ಅಂತಹ ಅಧ್ಯಕ್ಷರಿಗೆ ಹಕ್ಕಿದೆ. ಅಧ್ಯಕ್ಷರ ಆ ಅಧಿಕಾರಕ್ಕೆ ರೂಢಿಯೂ ತನ್ನ ಮೊಹರು ಒತ್ತಿದೆ. ಆದರೆ ಪಂತರ ಠರಾವಿಂದ ಆ ಅಧಿಕಾರವು ಬಾಧಿತವಾಯಿತು. ಇದರ ಮರ್ಮವೇನು?

ಆ ಅಧಿಕಾರವು ಅಬಾಧಿತವಾಗಿದ್ದರೆ ಅದನ್ನು ದುರುಪಯೋಗಗೊಳಿಸಲಾಪ ಅಧ್ಯಕ್ಷರನ್ನು ತಮ್ಮ ಪ್ರತಿನಿಧಿಗಳು ಆರಿಸಿರುವರೆಂದೂ ಅದುಕಾರಣ ಆ ಅಧಿಕಾರವನ್ನು ಒಂದು ಮಿತಿಯೊಳಗೆ ತಂದಿಟ್ಟಾದರೂ ತಮ್ಮ ಪ್ರತಿನಿಧಿಗಳಿಂದಾದ ಪ್ರಮಾದವನ್ನು ತಿದ್ದಿಕೊಳ್ಳೋಣವೆಂಬ ಹವಣಿಕೆಯ ಲಕ್ಷಣವು ಆ ಠರಾವಿನಲ್ಲಿ ಒಡೆದು ತೋರುವುದಿಲ್ಲವೇ? ಒಂದು ರೀತಿಯಲ್ಲಿ ಯೋಚಿಸಿದರೆ ಅದು ತಮ್ಮ ಪ್ರತಿನಿಧಿಗಳ ಮೇಲೆಯೇ ತಂದ ಅವಿಶ್ವಾಸ ಠರಾವೆಂದರೂ ಸಲ್ಲುವದು. ಎಂದಮೇಲೆ ತಾವು ವಿಚಾರಗೆಟ್ಟು ಪ್ರತಿನಿಧಿಗಳನ್ನು ಚುನಾಯಿಸಿದೆವೆಂದೂ ಅದಕ್ಕಾಗಿ ಪ್ರಾಯಶ್ಚಿತ್ತಮಾಡಿಕೊಂಡೆವೆಂದೂ ತಮ್ಮ ಅವಿವೇಕವನ್ನು ಪ್ರದರ್ಶಿಸಿದಂತಾಯಿತು. ಹೀಗೆ ಅಪರೋಕ್ಷವಾಗಿ ತಮ್ಮ ಪ್ರತಿನಿಧಿಗಳ ಮೇಲೂ ಅವರು ಚುನಾಯಿಸಿದ ಅಧ್ಯಕ್ಷರಮೇಲೂ ಅವಿಶ್ವಾಸಸೂಚಕ ಠಾಯಿಯು—ಅದಿಲ್ಲವೆಂದು ನಾಲಗೆಯಿಂದ ಯಾರು ಎಷ್ಟೇ ಹೇಳಲಿ—ಕೃತಿಯಿಂದ ತೋರಿಸಿದಂತಾಗಿದೆ. ಎರಡನೆಯದಾಗಿ, ಕಾಂಗ್ರೆಸ್ ಸಂಘಟನೆಯ ನಿಯಮಾವಳಿಗಳು ಇದ್ದ ಹಾಗೇ ಇರುತ್ತ, ಅವುಗಳಲ್ಲಿ ಯಾವುದನ್ನೂ ಮಹಾ ಅಧಿವೇಶನದಲ್ಲಿ ಬದಲಾವಣೆಮಾಡದೆ, ಅವುಗಳಿಗನುಸಾರವಾಗಿ ವರ್ಕಿಂಗ್ ಕಮಿಟಿಯ ನಿರ್ಮಾಣದ ಸಂಪೂರ್ಣ ಅಧಿಕಾರವು ಅಧ್ಯಕ್ಷರಿಗಿರುತ್ತ, ಅದಕ್ಕೆ ಕತ್ತರಿಪ್ರಯೋಗ ಮಾಡಿದುದನ್ನು ಕಂಡರೆ ನೀತಿಯೊಂದುಕಡೆ ಕೃತಿ ಮತ್ತೊಂದು ಕಡೆ ಎಂದು ತೋರುವುದು. ಪಂತರ ಠರಾವಿನ ಅಂತಿಮ ಫಲವು ಒಳ್ಳೆಯದಿರಬಹುದು. ಫಲಸಿದ್ಧಿಯಿಂದ ಸಾಧನವು ಸಾಧುವೆಂದೆಣಿಸಲ್ಪಡಬಹುದು. ಆದರೆ ನಿಯಮಪಾಲನೆಯ ಶಿಸ್ತು ಎಂಬುದೊಂದುಂಟಲ್ಲ? ಅದೆಲ್ಲಿಗೆ ಹೋಯಿತು? ಆಯಾ ಪರಿಸ್ಥಿತಿ ಸನ್ನಿವೇಶಗಳಲ್ಲಿ ಬಹುಪಕ್ಷಕ್ಕೆ ಏನೇನು ತೋರುವುದೋ, ಹಾಗೆಹಾಗೆ ಮಾಡಿಕೊಳ್ಳಬಹುದೆಂಬ ಒಂದು ಹೊಸ ನಿಯಮಕ್ಕೆ ಪಂತರ ಠರಾವು ದಾರಿ ಮಾಡಿಕೊಟ್ಟಂತಾಗಲಿಲ್ಲವೆ? ಎಂದಮೇಲೆ ಸ್ಥಳೀಯ ಚಿಕ್ಕಪುಟ್ಟ ಕಾಂಗ್ರೆಸ್ ಸಂಸ್ಥೆಗಳಿಂದ ತೊಡಗಿ ಚುನಾವಣೆಯ ಸಾರಣಿಗೆಯಲ್ಲಿ ಸೋಸಿಸೋಸಿ ಪ್ರತಿನಿಧಿಗಳನ್ನು ಆರಿಸಿ ಅವರ ಮೂಲಕ ಅಧ್ಯಕ್ಷರನ್ನು ಆರಿಸುವುದಾಗಲೀ ಕಾಂಗ್ರೆಸ್ಸಿಗೊಂದು ನಿಯಮಾವಳಿಯನ್ನಿಟ್ಟುಕೊಳ್ಳುವುದಾಗಲೀ ಅವಶ್ಯವೆನಿಸುವುದೇ? ಮಹಾ ಅಧಿವೇಶನದಲ್ಲೇ ಅಧ್ಯಕ್ಷರನ್ನು ಚುನಾಯಿಸಿದರಾಯಿತು. ಒಂದು ವರ್ಷಕ್ಕೆ ಬೇಕಾದ ಕಟ್ಟುಕಟ್ಟಳೆಗಳನ್ನು ಮಾಡಿ ಹಾಕಿದರಾಯಿತು—ಎಂಬ ನಿರ್ಧಾರಕ್ಕೆ ಬಂದಂತಾಗುವುದಲ್ಲ? ಅದುದರಿಂದಲೇ ನಿಯಮಪಾಲನೆಯ ಶಿಸ್ತು ಬೇಕೆಂಬವರು ಪಂತರ ಠರಾವು ಕ್ರಮಬಾಹಿರವಾದುದೆಂದೂ ಘೋಷರು ಅದಕ್ಕೆ ತಲೆವಾಗಬಾರದೆಂದೂ ಹೇಳಲು ಕಾರಣ.

ಯಾವುದೋ ಒಂದು ರೀತಿಯಲ್ಲಿ ಬಿಕ್ಕಟ್ಟನ್ನುಂಟುಮಾಡುವ ಮನಸ್ತಾಪವನ್ನು ನಿವಾರಿಸುವ ಸದುದ್ದೇಶದಿಂದಲೇ ಪಂತರ ಠರಾವು ಗೆದ್ದು ಬಂದಿತಾದರೂ ಆ ಬಿಕ್ಕಟ್ಟು ಇಂದಿಗೂ ಹಾಗೆಯೇ ಇದೆ ಎಂಬುದು ಮೊನ್ನೆ ಘೋಷರು ಕೊಟ್ಟ ಹೇಳಿಕೆಯಿಂದ (ಬೇರೆ ಕಡೆಯಲ್ಲಿ ಪ್ರಕಟಿಸಲಾಗಿದೆ) ಸ್ಪಷ್ಟವಾಗುತ್ತದೆ. ಹಾದಿ ಬೇರಾಗುವಲ್ಲಿ ಬಂದುನಿಂತಿದ್ದೇವೆಂದು ಹೇಳಿದವರನ್ನು ಬೇರಾಗದಂತೆ ಪಂತರ ಠರಾವು ಮಾಡಿತೆಂದು ಅಂದು ತೋರಿಬಂದರೂ ಇಂದು ಮತ್ತೊಂದು ಪಕ್ಷವು ಹಾದಿ ಬೇರಾಗುವಲ್ಲಿಗೆ ಒದಗಿರುವುದೋ ಎಂಬ ಸಂಶಯವು ಘೋಷರ ಹೇಳಿಕೆಯಿಂದುಂಟಾಗುತ್ತದೆ. ಅಂತೂ ಯಾವುದಾದರೊಂದು ಪಕ್ಷದ ಹಾದಿಬೇರಾಗುವ ಪ್ರಶ್ನೆ ಅಲ್ಲೇ ಇದೆ. ಮಾತ್ರವಲ್ಲ ಠರಾವಿನ ಒಕ್ಕಣೆಯು ಸ್ಪಷ್ಟವಾಗದೆ ಹೋಯಿತಲ್ಲಾ ಎಂಬ ವಿಷಾದವೂ ಈಗಾಗಲೇ ಕೆಲವು ಎಡೆಗಳಲ್ಲಿ ತೋರಿಬರಬಹುದು. ಏಕೆಂದರೆ ಪಂತರ ಠರಾವಿನ ಒಕ್ಕಣೆಯ ಅರ್ಥದ ಮೇರೆಗೆ ಗಾಂಧೀಜಿಗಳಿಗೆ ವರ್ಕಿಂಗ್ ಕಮಿಟಿಯಲ್ಲಿ ಇಂತಿಂತಹ ಸದಸ್ಯರೇ ಇರಬೇಕೆಂದು ಹೆಸರುಕೊಟ್ಟು ಸೂಚಿಸುವ ಅಧಿಕಾರಬರಲಿಲ್ಲವೆಂದು ಗಾಂಧೀಜಿಯವರೇ ಮೊನ್ನೆ ಹೇಳಿದ್ದಾರಂತೆ. ಎಂದಮೇಲೆ ಕಮಿಟಿಯಲ್ಲಿಯ ವ್ಯಕ್ತಿಗಳ ಪ್ರಶ್ನೆ ಹೋಯಿತು. ಪಕ್ಷದ ಮಾತು ಉಳಿಯಿತು. ಅಖಂಡ ಏಕಪಕ್ಷವೇ ಆಗಬೇಕೆಂದು ಗಾಂಧೀಜಿಯವರು ಹೇಳಿದರೆ—ಹೇಳುವ ಸಂಭವವೇ ಹೆಚ್ಚು—ನಮ್ಮ ದಾರಿಬೇರಾಗುವ ಕಾಲ ಬಂತೆಂದು ಸುಭಾಸರು ಹೇಳಿದ್ದಾರೆ. ಅಖಂಡ ಏಕಪಕ್ಷದ ಸದಸ್ಯರಿಂದಲೇ ಕಮಿಟಿಯು ತುಂಬಬೇಕೆಂದಾದರೆ ಆ ಪಕ್ಷವು ಗಾಂಧೀ ಅನುಯಾಯಿಗಳದ್ದೆಂಬುದು ಸುಸ್ಪಷ್ಟ. ಅಂತಹ ಸದಸ್ಯರು ಕಮಿಟಿಯಲ್ಲಿ ಕೂತುಕೊಂಡು ಮಾಡತಕ್ಕುದೇನೂ ಇಲ್ಲ. ಒಂದು ಕಲ್ಲಿನ ಹೆರಳನ್ನು ಆಚೆಯಿಂದತ್ತ ಈಚೆಗಿಡಬೇಕಾದರೆ ಅವರಿಗೆ ಗಾಂಧೀಜಿಗಳನ್ನು ಕೇಳಿಕೊಳ್ಳಬೇಕು; ಅವರ ಅಪ್ಪಣೆ ಹೊಂದಬೇಕು. ಇಂತಹ ನಾಟಕದ ಮಂಡಳಿಯನ್ನಿಟ್ಟುಕೊಳ್ಳುವ ಬದಲಾಗಿ ಗಾಂಧೀಜಿಗಳನ್ನೇ ಸರ್ವತಂತ್ರ ಸ್ವತಂತ್ರನಾದ ಏಕಮಾತ್ರ ನಾಯಕ(ಡಿಕ್ಟೇಟರ್)ನೆಂದೂ ಅವರು ತನಗೆ ಸತ್ಪ್ರೇರಣೆಯಾದಂತೆ ಕೊಡುವ ಆಜ್ಞೆಗಳನ್ನು ಅಖಿಲಭಾರತದ ಸರ್ವ ಕಾಂಗ್ರೆಸ್ ಕೆಲಸಗಾರರೂ ಸಂಸ್ಥೆಗಳೂ ಕಾಂಗ್ರೆಸ್ ಮಂತ್ರಿಗಳೂ ಶಿರಸಾವಹಿಸಿ ನಿರ್ವಹಿಸಬೇಕೆಂದೂ ತ್ರಿಪುರಿಯಲ್ಲಿ ನಿಶ್ಚೈಸಿಬಿಟ್ಟಿದ್ದರೆ ಎಷ್ಟೋ ಬಿಕ್ಕಟ್ಟಿನ ಪ್ರಸಂಗಗಳು ಬರುವುದೂ ಹೋರಾಟ ಕಚ್ಚಾಟಗಳು ಆಗುವುದೂ ಎಲ್ಲ ತಪ್ಪಿ ಕಾಂಗ್ರೆಸ್ ಪಾಳೆಯದೊಳಗೆ ಪಕ್ಷವಿಪಕ್ಷಗಳ ಘರ್ಷಣೆಗಳುಂಟಾಗದೆ ಒಂದುತನಕ್ಕೆ ಕುಂದುಬಾರದೆ ಕಾಂಗ್ರೆಸ್ ರಥವು ಗುರಿಮುಟ್ಟಲು ರಭಸದಿಂದ ಮುಂಮುನ್ನರಿಯುತ್ತಿತ್ತು. ಅಖಿಲಭಾರತದ ಪರಿಪೂರ್ಣ ವಿಶ್ವಾಸಾರ್ಹನೂ ಪೂಜ್ಯನೂ ಹೃತ್ಪೂರ್ವಕ ಹಿತಚಿಂತಕನೂ ಆಗಿರುವ ಏಕಮಾತ್ರ ವ್ಯಕ್ತಿಯೆಂದರೆ ಗಾಂಧೀಜಿ. ಅಂಥವರನ್ನು ಡಿಕ್ಟೇಟರನ್ನಾಗಿಮಾಡಿಕೊಳ್ಳುವುದೇ ಪಂತರ ಠರಾವಿನ ಸಿಕ್ಕು ಬಿಡಿಸುವ ಸುಲಭೋಪಾಯ. ಅಂತಹ ಡಿಕ್ಟೇಟರಿಕೆಯ ಒಲವು ಭಾರತದ ಹೃದಯದಲ್ಲಿದ್ದು ಅದನ್ನು ಬಚ್ಚಿಟ್ಟುಕೊಂಡು ಜನತಾಪ್ರಾತಿನಿಧ್ಯದ ಮಹಾಸಂಸ್ಥೆಯನ್ನು ನಡೆಯಿಸುವುದೆಂದರೆ ಪರಸ್ಪರ ವಿರುದ್ಧ ಉರುಳುವ ಚಕ್ರಗಳುಳ್ಳ ತೇರನ್ನು ನಡೆಯಿಸಲು ಪ್ರಯತ್ನಿಸಿದಂತೆಯೇ. ಕಾಂಗ್ರೆಸ್ಸಿಗೆ ಅಧಿನಾಯಕನನ್ನು ಆರಿಸುವುದರಲ್ಲಿ ಕಾಂಗ್ರೆಸ್ಸಿನ ಹೃದಯವು ಒಬ್ಬನನ್ನೂ, ನಿಯಮಗಳು ಮತ್ತೊಬ್ಬನನ್ನೂ ತೋರಿಸಲು ಅವಕಾಶದೊರಕಿದರೆ ಅಂತಹರಿಬ್ಬರು ಎಷ್ಟು ಪರಸ್ಪರ ತ್ಯಾಗಪ್ರತಿತ್ಯಾಗ (give and take policy) ಧೋರಣೆಯನ್ನು ಕಾಂಗ್ರೆಸ್ಸಿನ ಕಾರ್ಯನಿರ್ವಾಹದಲ್ಲಿ ತೋರಿಸಲು ಪ್ರಯತ್ನಿಸಿದರೂ ಘರ್ಷಣೆಗಳು ಬರುವುದು ನಿಶ್ಚಯ. ಸಿಕ್ಕುಗಳು ಬಿಡಿಸಲಾಗದಷ್ಟು ಒಳಸಿಕ್ಕುಗಳ ಕಂತೆಯಾಗುವುದು ಸಹಜ. ಒಬ್ಬನು ಅಲಂಕಾರದ ರಾಷ್ಟ್ರಪತಿಯಾಗಿಯೂ ಮತ್ತೊಬ್ಬನು ಅಪರೋಕ್ಷ ಸರ್ವತಂತ್ರ ಸ್ವತಂತ್ರ ರಾಷ್ಟ್ರಪತಿಯೂ ಆಗುವ ಹವ್ಯಾಸವು ತಪ್ಪಲಿಕ್ಕಿಲ್ಲ. ಆದುದರಿಂದ ಕಾಂಗ್ರೆಸ್ಸು ತನ್ನ ಸಂಘಟನೆಯ ನಿಯಮಾನುಸಾರ ನಾಯಕನನ್ನು ಚುನಾಯಿಸುವ ನಾಟಕವಾಡದೆ ಹೃದಯದ ಪ್ರೇರಣೆಯಂತೆ ಏಕೈಕ ನೇತಾರನನ್ನು ಮುಂದುಮಾಡಿಕೊಂಡು ಹಿಂಬಾಲಿಸುವುದು ದೇಶದ ಹಿತದೃಷ್ಟಿಯಲ್ಲಿ ಕ್ಷೇಮಕರ. ಆದುದರಿಂದ ಇಂದಿನ ಪರಿಸ್ಥಿತಿಯಲ್ಲಿ ಇಂಡಿಯಕ್ಕೆ ಬೇಕಾದುದು ಒಬ್ಬ ಡಿಕ್ಟೇಟರನೇ. ಅಖಿಲಭಾರತವು ಹೃದಯದ ಪ್ರಬಲ ಬಹುಮತದಿಂದ ಚುನಾಯಿಸುವ ಡಿಕ್ಟೇಟರರು ಬೇಕು. ಮೆಚ್ಚಿನ ಡಿಕ್ಟೇಟರರು ಬೇಕು. ವಿಶ್ವಾಸದ ಡಿಕ್ಟೇಟರರು ಬೇಕು. ಬಹುಪಕ್ಷದ ಪೂಜೆಯನ್ನು ಕೈಗೊಂಬ ಡಿಕ್ಟೇಟರರು ಬೇಕು. ಅಂಥವರು ಇಂದು ಭಾರತದಲ್ಲಿರುವುದು ಒಬ್ಬರೇ ಒಬ್ಬರು. ಅವರೇ ಮಹಾತ್ಮಾಗಾಂಧೀ. 'ಕಾಂಗ್ರೆಸ್ಸು ಇಂದು ಕೆಸರುಮಣ್ಣಲ್ಲಿ ಹೂತುಹೋಗಿದೆ ಅಲ್ಲಿಂದ ಅದನ್ನು ಎತ್ತಿ ಉದ್ಧರಿಸಲಾಪ ಏಕಮಾತ್ರ ವ್ಯಕ್ತಿಯೆಂದರೆ ಮಹಾತ್ಮಾ ಗಾಂಧೀಜೀ' ಎಂದು ಸುಭಾಸಚಂದ್ರ ಘೋಷರೇ ಪಂತರ ಠರಾವಿನ ಸಿಕ್ಕಿನ ವಿಷಯವಾಗಿ ಕೊಟ್ಟ ಹೇಳಿಕೆಯಲ್ಲಿ ಸ್ಪಷ್ಟಗೊಳಿಸಿರುವರು. ಮುಂದೆಯೂ ಪಂತರ ಠರಾವಿನಂತಹ ಸಿಕ್ಕು ಬಾರದಂತೆ ನೋಡಿಕೊಳ್ಳಲು ಡಿಕ್ಟೇಟರ್ ತತ್ವವೇ ಕಾಂಗ್ರೆಸ್ಸಿಗೆ ಅಧಿಕತರ ಭೂಷಣ.

NOTIFICATION

A competitive examination for the award of the Victoria Jubilee scholarships of the value of Rs, 15/-per mensem tenable for a period of five years to students studying any one of the following subjects in a Government institution in India one awardable to a candidate of the Muslim community and the other to a candidate of the non-Brahmin Hindu community, will be held in the Government college, Mangalore on Monday, the 26th June 1939 at 10 a, m.

1. Engineering-Civil, Municipal, Electrical, Mechanical, Marine or Sanitary,
2. Forestry,
3. Agricultur,
4. Mining and Metallurgy.

2. The scholarship shall be awarded to students who have passed at least the Public Examination held by the S. S. L. C. Board Madras, and who are between the ages of 16 and 21. Provided, however that if a graduate of any recognised university applies for any of the scholarships it shall be sufficient if he shall not have completed the age of 24 years. The candidates shall produce satisfactory evidence of good character, physical fitness and age.

3. Applications for the examination in the prescribed form will be received in the District Court, South Kanara, Mangalore, till the 15th June 1939 after which date none will be received,

4. Forms of applications and copies of the rules regulating the award of the scholarships can be had from the office of the District Judge Mangalore, on working days between 11 a. m and 5 p m. on payment of one anna and two annas respectively.

(S. d.)

District Court, S. K., Mangalore, 8th March 1939. P. Rajagopalachari *District Judge & president V. J. S fund*

ಮುಸಲೋನಿಯ ಮೃದು ಧೋರಣೆ

ಗಾಂಧೀಜಿಗಳ ಮತ

ಸತ್ಯಾಗ್ರಹದ ವ್ಯಾಖ್ಯಾನ.
ಸತ್ಯಾಗ್ರಹಿಯಾಗಲು ಅರ್ಹತೆ ಯಾವುದು?

೧. ಮೊದಲಾಗಿ ಸತ್ಯಾಗ್ರಹಿಯಲ್ಲಿ ನಿಶ್ಚಯವಾದ ಶ್ರದ್ಧೆಯಿರಬೇಕು. ದೇವರೇ ಆತನ ಆಧಾರವೆಂಬ ದೃಢನಂಬುಗೆ ಆವಶ್ಯ.

೨. ತನ್ನ ಮತವು ಸತ್ಯ ಮತ್ತು ಅಹಿಂಸೆಯೆಂಬುದನ್ನು ಮನಗಂಡಿರತಕ್ಕದ್ದು. ತಾನು ಹೊಂದುತ್ತಿರುವ ಯಾತನೆಯ ಮೂಲಕ ತನ್ನ ಸತ್ಯಪ್ರೇಮಗಳನ್ನು ಪ್ರದರ್ಶಿಸಿ ಮಾನವ ಹೃದಯದಲ್ಲಿ ಸಹಜವಾಗಿರುವ ಕಾರುಣ್ಯ ಭಾವವನ್ನು ಉದ್ರೇಕಿಸಿ ಹೃದಯ ಪರಿವರ್ತನೆಯನ್ನುಂಟುಮಾಡಿಯೇನೆಂಬ ವಿಶ್ವಾಸ ಬೇಕು!

೩. ತನ್ನ ಜೀವನವು ಶುದ್ಧವಾಗಿದ್ದು ತನ್ನ ಧ್ಯೇಯಸಾಧನೆಗಾಗಿ ಸರ್ವಸ್ವವನ್ನೂ ಪ್ರಾಣವನ್ನೂ ಅರ್ಪಿಸಲು ಸಿದ್ಧನಿರಬೇಕು.

೪. ಆವನು ತಾನಾಗಿ ನೂಲುವವನೂ ಖಾದೀಧಾರಿಯೂ ಆಗಿರಬೇಕು. ಇದು ಇಂಡಿಯದ ಪಟ್ಟಿಗೆ ಆವಶ್ಯ.

೫ ತನ್ನ ಮನಸ್ಸು ಸದಾ ನಿರ್ಮಲವೂ ಮೌಢ್ಯರಹಿತವೂ ಆಗಿರಬೇಕಾದ ಕಾರಣ ಆತನು ಮದ್ಯಪಾನಾದಿ ವ್ಯಸನಿಯಾಗಿರಬಾರದು.

೬. ಆಯಾ ಸಂದರ್ಭಾನುಸಾರವಾಗಿ ಪ್ರಯೋಗದಲ್ಲಿ ಇಳಿಸಲ್ಪಡುವ ಶಿಸ್ತಿನ ನಿಯಮವನ್ನು ಮನಸಾ ಪಾಲಿಸಿ ನಿರ್ವಹಿಸುವ ನಿರ್ಧಾರವಿರಬೇಕು.

೭ ತನ್ನ ಆತ್ಮಾಭಿಮಾನವನ್ನು ನೋಯಿಸುವ ಉದ್ದೇಶದಿಂದ ಕೊಡಲ್ಪಡದ ಬೇರೆ ಯಾವ ತರದ ಸೆರೆಮನೆಗಳ ಕಾನೂನುಗಳಿಗೂ ತಲೆಬಾಗಬೇಕು.

ಅನ್ಯಾಯ ಮಾಡಿದವನನ್ನು ತೊಂದರೆಗೊಳಿಸುವುದು ಸತ್ಯಾಗ್ರಹದ ಉದ್ದೇಶವಲ್ಲ, ಅವನನ್ನು ಹೆದರಿಸುವುದಕ್ಕಾಗಿಯುಲ್ಲ; ಅವನಲ್ಲಿ ಹೃದಯ ಪರಿವರ್ತನೆಯುಂಟುಮಾಡುವುದಕ್ಕಾಗಿಯೇ, ಅನ್ಯಾಯ ಮಾಡಿದವನನ್ನು ತನ್ನ ಸತ್ಯಾಗ್ರಹದ ಒತ್ತಾಯದಿಂದ ಬಗ್ಗಿಸುವುದು ಧ್ಯೇಯವಲ್ಲ. ಆತನ ಹೃದಯವನ್ನು ಮೃದುಗೊಳಿಸಿ ಒಲಿಸಿಕೊಳ್ಳುವುದೇ ಗುರಿ. ಹಿಂಸಾತ್ಮಕ ದಬ್ಬಾಳಿಕೆಯ ಧೋರಣೆಯೇ ಪ್ರಬಲವಾಗಿ ತುಂಬಿರುವ ವಾತಾವರಣದಲ್ಲಿ ಅಹಿಂಸಾತ್ಮಕ ಸತ್ಯಾಗ್ರಹವು ಸವಿನಯ ಶಾಸನ ಭಂಗದ ರೂಪವನ್ನು ತಾಳಬೇಕೆಂದಿಲ್ಲ. ಸವಿನಯ ಶಾಸನ ಭಂಗವನ್ನು ಕೈಗೊಳ್ಳುವಾಗ ಅದರ ಇತಿಮಿತಿಯನ್ನು ಜಾಗರೂಕತೆಯಿಂದ ನಿರೂಪಿಸಿಕೊಳ್ಳಬೇಕು. ಸತ್ಯಾಗ್ರಹ ಸಮರದಲ್ಲಿ ಸತ್ಯಾಗ್ರಹಿಗಳ ಸಂಖ್ಯೆಯು ಪ್ರಧಾನವಲ್ಲ. ಸತ್ಯಾಗ್ರಹದ ರೀತಿ ಮತ್ತು ಗುಣವೇ ಮುಖ್ಯ. ಅದೂ ಅಹಿಂಸೆಯು ಶಕ್ತಿಯು ಪ್ರಕೋಪಗೊಂಡಿರುವ ವಾತಾವರಣದಲ್ಲಿ ಸತ್ಯಾಗ್ರಹದ ಗುಣಗಣನೆಯೇ ಮುಖ್ಯವಲ್ಲದೆ ಸಂಖ್ಯಾಗಣನೆಯಲ್ಲ.

ಚೀನಾ-ಜಪಾನ್ ಯುದ್ಧ

ಕಿಯಾಂಗ್‌ಸೀ ಪ್ರಾಂತದ ಪ್ರಧಾನ **ಪಟ್ಟಣವಾದ ನಾಂಚಾಂಗ್‌ನ್ನೂ ಪರಿಪೂರ್ಣ ವಶಪಡಿಸಿಕೊಂಡರು.**

ಚೀನಕ್ಕೆ ಯುದ್ಧಸಾಮಗ್ರಿ

ಚೀನಕ್ಕೆ ಫಿರಂಗಿ, ಮೆಶೀನ್‌ಗನ್ ತುಪಾಕಿ, ಕೋವಿ ಗುಂಡುಮದ್ದುಗಳೆಂದು ನಾಲ್ಕುಸಾವಿರ ಟನ್ನು ಯುದ್ಧಸಾಮಗ್ರಿಗಳನ್ನು 'ಸೈಂಟ್ ಫ್ರಾನಿಸ್ಸ್' ಎಂಬ ಬ್ರಿಟಿಷ್ ಸ್ಟೀಮರು ಸಾಗಿಸಿಕೊಂಡು ಬಂದು ರಂಗೂನಿನಲ್ಲಿ ಇಳಿಸಿವೆ ಮಳೆಗಾಲವು ಪ್ರಾರಂಭಿಸುವ ಮೊದಲಾಗಿ ಅವನ್ನೂ ಇನ್ನು ಬರಲಿಕ್ಕಿರುವುದನ್ನೂ ರಂಗೂನಿನಿಂದ ರೈಲುಬಂಡಿಯ ಮೂಲಕ ಮಾಂಡಲೆಗೆ ಸಾಗಿಸಿ ಅಲ್ಲಿಂದ ಶೀಘ್ರವಾಗಿ ಚಾಪಿಯೋಕ್ಕೆ ಒಯ್ಯುವುದಕ್ಕೆ ಮಾಂಡಲೆಯಲ್ಲಿ ಲೋರಿಗಳು ಕಾದುಬಿದ್ದಿವೆ.

ಫ್ರಾಂಕೋನಿಗೆ ಮೇಡ್ರಿಡ್‌ನ ಉತ್ತರ

ಶರಣಾಗತರಾಗುವುದಿಲ್ಲ. ಕೊನೆಯತನಕ ಕಾದಾಡಿಯೇ ಬಿಡುತ್ತೇವೆಂದು ಮೆಡ್ರಿಡ್ ಸರಕಾರವು ನಿರ್ಧಾರಮಾಡಿ ಫ್ರಾಂಕೋನಿಗೆ ತಿಳಿಸಿದೆ 'ಸೋತು ಹಣ್ಣಾದ ಮೇಲೂ ಸುಮ್ಮಗೆ ರಕ್ತಪಾತಕ್ಕೆ ಅಪ್ಪದಗೊಡುವ ಹುಚ್ಚುತನ ಬಿಡಿ!' ಎಂದು ಫ್ರಾಂಕೋ ತಿರುಗಿ ಸಾರಿದ್ದಾನೆ. ಮುಂದು ವರಿಯುವ ಸಿದ್ಧತೆಯಾಗಿದೆ.

ಮುಸಲೋನಿಯ ಮೃದು ಧೋರಣೆ

ಹಿಟ್ಲರನು ಜಕೋಸ್ಲೊವೇಕಿಯವನ್ನು ಜರ್ಮನ್ ಸಾಮ್ರಾಜ್ಯದಲ್ಲಿ ಸಮಾವೇಶ ಮಾಡಿಕೊಂಡ ಕಳೆದ ವಾರವೆಲ್ಲ ಇತರ ಪ್ರಬಲ ರಾಷ್ಟ್ರಗಳು ವಿಶೇಷತಃ ಬ್ರಿಟನ್ ಫ್ರಾನ್ಸುಗಳು ಬಾಯಿ ಮತ್ತು ಕಾಗದ ಪತ್ರಗಳ ಪ್ರತಾಪ ಆವೇಶವನ್ನು ತೋರಿ ಯಾವುದನ್ನೂ ಕಾರ್ಯದಲ್ಲಿ ಇಳಿಸಲಾರದೆ ಈಗ ಶಾಂತವಾಗಿವೆ. ಇವರು ಮಾತಿನ ಮಲ್ಲರು-ಹಿಟ್ಲರ್ ಮುಸೋಲಿನಿಗಳು ಕಾರ್ಯಜಾಣರು. ಅವರು ತಮಗೇನು ಬೇಕೋ ಅದನ್ನು ಸಾಧಿಸುತ್ತ ನೆರವೇರಿಸುತ್ತ ಹೋಗುವರು. ಇವರು ಬಾಯಿಗಾರಿಕೆ ತೋರುತ್ತ ಹಾರುತ್ತ ಶಾಂತರಾಗಿ ಕುಳಿತುಕೊಳ್ಳುವರು. ಈ ಗುಟ್ಟು ಅವರಿಗೆ ಗೊತ್ತು. ತಮ್ಮ ಕಾರ್ಯಗಳನ್ನು ಸಾಧಿಸಿಕೊಂಡು ಅವರೇನಾದರೂ ನಾಲಗೆಯ ತುದಿಯಿಂದ ಸ್ನೇಹಾಚಾರದ ಸೋಗಿನ ಮಾತಾಡಿದರೆ ಇವರ. ಸಂತುಷ್ಟಿಗೊಂಡು ಇಷ್ಟಾದರೂ 'ಮಿತ್ರಗಾದುದು ನಮ್ಮ ಭಾಗ್ಯ!' ಎಂದು ತಮ್ಮನ್ನು ತಾವೇ ಅಭಿನಂದಿಸಿಕೊಳ್ಳುತ್ತಾರೆ. ಫ್ಯಾಸಿಸ್ಟ್ ಪಕ್ಷಸಂಸ್ಥಾಪನೆಯ ಇಪ್ಪತ್ತನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಮುಸಲೋನಿಯು ಆಡಿದ ಮಾತಿಗೆ ಬ್ರಿಟನ್-ಫ್ರಾನ್ಸುಗಳು ಹಾಗೆ ಹೇಳುತ್ತಿವೆ. ಆದರೆ ಮುಸಲೋನಿಯು ಮಿತ್ರಗಾದುದು ಇವರ ಬೆದರಿಕೆಯಿಂದಲ್ಲ. ಹಿಟ್ಲರನ ಹೆದರಿಕೆಯಿಂದ. ಅವನ ನೆರಗುಹಿಡಿದರೆ ತನಗೆ ಮಹತ್ತಾದ ಲಾಭವಿದ್ದೀತೆಂದು ಮುಸಲೋನಿಯು ಬಗೆದಿದ್ದ. ಆದರೆ ಈ ತನಕ ಲಾಭವೆಲ್ಲ ಹಿಟ್ಲರನಿಗೆ. ನಷ್ಟವೆಲ್ಲ ಮುಸಲೋನಿಗೆ ಎಂಬ ಹಾಗಾಗಿದೆ ಅವರ ಒಕ್ಕಟ್ಟಿನ ಒಪ್ಪಂದದ ಪರಿಣಾಮ. ಹಿಟ್ಲರನು ಪಚ್ಚಮಾಡದೆ ಗುಂಡಿನ ಸದ್ದೇಳಿಸದೆ ಸೈನಿಕರನ್ನು ಬಲಿಗೊಡದೆ ರಕ್ತದ ಕಾಲುವೆಯನ್ನು ಹಾಯದೆ ರಾಜ್ಯವಿಸ್ತಾರಮಾಡಿಕೊಂಡ. ಅವನ ಜತೆಗಾರನಾದ ಮುಸಲೋನಿಯು ಧನಜನ ನಷ್ಟಮಾಡಿಕೊಂಡೂ ಎಬಿಸೀನಿಯವನ್ನು ನುಂಗಲಾರದ ತುತ್ತಾಗಿ ಬಾಯಿಯಲ್ಲಿಟ್ಟುಕೊಂಡು ಪೇಚಾಡುತ್ತಾನೆ. ಸ್ಪೈಯಿನಿನಲ್ಲಿ ಕೈಯಿಕ್ಕಿ ಕಾಸಿನ ಲಾಭ

ಮುಸಲೋನಿ

ಹೊಂದಲಿಲ್ಲ. ಆದರ ವಿಜಯ ಖ್ಯಾತಿಯೂ ಹೆಚ್ಚಿನ ಪಟ್ಟಿಗೆ ಹಿಟ್ಲರನ ಪಾಲಿಗೆ ಹೋಯಿತು ಅಂತೂ ಹಿಟ್ಲರನು ತನ್ನ ಪಶ್ಚಿಮ ಗಡಿಯ ವೈರಿಗಳನ್ನು ತಡೆಗಟ್ಟಲು ಬಲಮುರಿಯಲು ಮುಸಲೋನಿಯನ್ನು ಬೆನ್ನಿನಲ್ಲಿ ಹಾಕಿಕೊಂಡು ಮಧ್ಯ ಮತ್ತು ಪೂರ್ವ ಯುರೋಪಿನಲ್ಲಿ ತನ್ನ ಬೇಳೆಬೇಯಿಸಿಕೊಳ್ಳುತ್ತಿದ್ದಾನೆಂದೂ ಅದರಲ್ಲೊಂದು ತುತ್ತೂ ತನಗೆ ಸಿಗಲಾರದಲ್ಲದೆ ಕ್ರಮೇಣ ಇಟಲಿಗೆ ಅದರಿಂದ ಬಾಧಕತಟ್ಟಬಹುದೆಂದೂ ಮುಸಲೋನಿಗೆ ಈಗ ತಿಳಿಯಹತ್ತಿದೆ. ಆದುದರಿಂದ ಅವನು ಮಿತ್ರಗಾಗಿದ್ದರೂ ಹಿಟ್ಲರನ ಸಖ್ಯದ ಪ್ರಯೋಜನವನ್ನು ಹೊಂದಬೇಕೆಂಬ ಹಂಚಿಕೆಯಿಂದ ತೋರಿಕೆಗೆ ಬಿಗುವಿನಲ್ಲಿ ಔದಾರ್ಯ ಪ್ರದರ್ಶಿಸಿದಂತೆ ಮಾತಾಡಿದ್ದಾನೆ. ತನಗೇನಾದರೂ ತುಸು ಲಾಭ ದೊರೆತರೆ ತಾನು ಸುಮ್ಮಗಿರುವೆನೆಂಬ ಆಶೆ ತೋರಿಸುವ ನಾಟಕವನ್ನು ಬ್ರಿಟನ್-ಫ್ರಾನ್ಸ್‌ಗಳಿಗೆ ತೋರುತ್ತಿದ್ದಾನೆ. ಹಿಟ್ಲರನು ಈ ರಾಷ್ಟ್ರಗಳ ಬೆನ್ನುತಟ್ಟುತ್ತ ಬಂದ ಹಾದಿಯೂ ಅದೇ. ಅದನ್ನೇ ಇಂದು ಮುಸಲೋನಿಯೂ ಹಿಡಿದಿದ್ದಾನೆ, ಹಾಗಾಗದಿದ್ದರೆ ತನ್ನ ಹಿಟ್ಲರ್ ಸಖ್ಯವು ಅಭೇದ್ಯವೆಂದು ಸಾರುತ್ತಿದ್ದಾನೆ ಆದುದರಿಂದ ತನಗೆ ನೀಸ್, ಸೆವೋಯಿ, ಕೊರ್ಸಿಕಾ ಇವು ಸಿಕ್ಕಬೇಕೆಂಬ ಮಾತುಬಿಟ್ಟು ತನ್ನ ಮೆಡಿಟರೇನಿಯನ್ ಸಮುದ್ರದ ಸಹಜ ಹಕ್ಕಿನ ಭದ್ರತೆಯ ಆಶ್ವಾಸನೆಯ ಚಿನ್ಹೆಯಾಗಿ ಟೂನಿಸ್, ಜಿಬುಟ್ಟಿ, ಸೂಯೋಜದ ವಿಷಯ ತನ್ನ ಕೇಳಿಕೆಗಳು ಮಾನ್ಯವಾದರೆ ತಾನು ಸಂತುಷ್ಟನೆನ್ನುತ್ತಾನೆ. ಹಿಟ್ಲರನನ್ನು ಕನಸಿನಲ್ಲಿಯೂ ಕಂಡು ಗಡಗಡ ನಡುಗುವ ಬ್ರಿಟನ್-ಫ್ರಾನ್ಸುಗಳಿಗೆ ಆವನ ಪ್ರಬಲ ಸಖನಾದ ಈ ಮುಸಲೋನೀ ಮಾರಿಯ ಬಾಯಿಗೆ ಈ ಸಣ್ಣ ತುತ್ತನ್ನಾದರೂ ಹಾಕಿ ತೃಪ್ತಿಗೊಳಿಸೋಣ, ಇಷ್ಟು ಮಿತ್ರಗಾದುದು ನಮ್ಮ ಭಾಗ್ಯ ಎಂಬ ತೋರುವಂತೆ ಹಂಚಿಕೆ ಹೂಡಿದ್ದಾನೆ. ಆದರೆ ಹೇಗಾದರೂ ಮಾಡಿ ಈ ಎರಡು ಡಿಕ್ಟೇಟರರನ್ನು ಸುಪ್ರಸನ್ನರಾಗುವಂತೆ ಮಾಡಿ ಶಾಂತಿಯಿಂದಿರೋಣವೆಂಬ ಧೋರಣೆಯಿಂದ ದೂರದೃಷ್ಟಿಯನ್ನು ಕಳಕೊಂಡ ಬ್ರಿಟನ್-ಫ್ರಾನ್ಸ್‌ಗಳಿಗೆ ಆವರದು ತಾತ್ಕಾಲಿಕ ಕೇಳಿಕೆಗಳೇ. ಅದು ದೊರೆತ ಮರುದಿನವೇ ಇನ್ನೊಂದು ಮತ್ತೊಂದು ಹೊಸ ರಾಗ ಹೊರಡುವುದೆಂದೂ ತಿಳಿಯುವುದೇ ಇಲ್ಲ. 'ಹೇಗೂ ಮಿತ್ರಗಾದರು.' ಇದೊಂದಿಷ್ಟೇ ರಿಯಾಯಿತಿ ನಾವು ತೋರಿಸಿದರ ತೀರಿತು. ಇನ್ನಿಲ್ಲ, ಮತ್ತಿಲ್ಲ ಅವರ ಕಾಟ. ಆದುದರಿಂದ ಆಷ್ಟು ಎಂದು ಬಿಡೋಣ ಎಂಬ ಭ್ರಮೆಯಿಂದ ಈಗ ಮಿತ್ರಗಾದ ಮುಸಲೋನಿಯನ್ನು ಮೆಚ್ಚಿಸುವ ಧೋರಣೆಯಲ್ಲಿವೆ ಬ್ರಿಟಿಷ್-ಫ್ರಾನ್ಸುಗಳು.

ಎಸ್. ಎಸ್. ಎಲ್. ಸಿ. ಪರೀಕ್ಷೆಯ ಪ್ರಶ್ನೆಪತ್ರಗಳು

ಇಂಗ್ಲಿಷ್ ಭಾಷಾ ಪ್ರಶ್ನಪತ್ರವು ಹಿಂದಿನ ವರುಷಗಳ ಹಾದಿಯನ್ನು ಹಿಡಿಯದೆ ಅನಿರೀಕ್ಷಿತವಾಗಿ ಹೊಸ ರೀತಿಯನ್ನು ತಾಳಿದುದರಿಂದ ವಿದ್ಯಾರ್ಥಿಗಳಿಗೆ ಕಂಗಾಲನ್ನುಂಟುಮಾಡಿದೆಯೆಂದೂ ಅಂತೆಯೇ ಭೂಗೋಳದ ಪ್ರಶ್ನೆಪತ್ರವೂ ಅನಿರೀಕ್ಷಿತ ರೀತಿಯದಿದ್ದು ಹೊತ್ತಿಗೆ ಮುಗಿಸಲಾರದಷ್ಟು ಉದ್ದವಾಗಿತ್ತೆಂದೂ ಫಿಜಿಕ್ಸ್‌ಪತ್ರವು ನಿಶ್ಚಿತ ವಿಷಯದ ಮೇರೆ ಮೀರಿ ಬಿಗುವಾಗಿತ್ತೆಂದೂ ಪತ್ರಿಕೆಗಳಲ್ಲಿ ತುಂಬ ಆಕ್ಷೇಪಣೆಯ ಟೀಕೆಗಳು ಬರುತ್ತಿವೆ.

ಕಲ್ಕತ್ತದಲ್ಲಿ ೧೫೦೦೦ಮಂದಿಯ ಮಹಾಸಭೆ

ಹಲವು ಕಾಂಗ್ರೆಸ್ಸ್ ಎಮ್. ಎಲ್. ಎ. ಗಳ ಭಾಷಣ

ಪಂಡಿತಪಂತರ ಠರಾವಿನ ಖಂಡನೆ

ಬಂಗಾಳದ ಮನೋವೃತ್ತಿಯು ಎಷ್ಟು ಪ್ರಕ್ಷುಬ್ಧವಾಗಿದೆಯೆಂಬುದಕ್ಕೆ ಈ ಮಹಾಸಭೆಯೇ ಒಂದು ನಿದರ್ಶನ—ರಾಷ್ಟ್ರಪತಿಗಳೇ ಶಾಂತ ಧೋರಣೆಯನ್ನು ತಾಳಿರುವಾಗ ನಾವು ಉಗ್ರ ಭಾಷಣಗಳಿಗೂ ಟೀಕೆಗಳಿಗೂ ಇಳಿಯುವುದು ಸಮಂಜಸವಲ್ಲ. ಆದರೆ ನಮ್ಮ ಹೃದಯವನ್ನು ಬಿಚ್ಚಿಹೇಳತಕ್ಕುದನ್ನು ಹೇಳಲೇಬೇಕು. ಇಂದಿನ ವರೆಗೆ ಕಾಂಗ್ರೆಸ್ಸಿನಲ್ಲಿ ನಡೆದುಬಂದ ಸಂಪ್ರದಾಯಕ್ಕೂ ಕಾಂಗ್ರೆಸ್ಸ್ ಸಂಘಟನೆಯ ನಿಯಮಗಳಿಗೂ ವಿರೋಧವಾದ ಠರಾವು ಗೋವಿಂದವಲ್ಲಭ ಪಂತರದು. ಆ ಠರಾವನ್ನು ಅಂಗೀಕಾರಮಾಡಿದುದರಿಂದ ಕಾಂಗ್ರೆಸಿನಲ್ಲಿ ಐಕ್ಯತೆಯೂ ಸಾಮರಸ್ಯವೂ ಉಂಟಾಗುವ ಬದಲಾಗಿ ಅನೈಕ್ಯತೆಯನ್ನೂ ವಿಷಮ ವಾತಾವರಣವನ್ನೂ ಉದ್ವಿಗ್ನಗೊಳಿಸಿದೆ. ತ್ರಿಪುರಿಯ ಈ ನಿರ್ಣಯದ ಕುರಿತು ಬಂಗಾಳದಲ್ಲೆಲ್ಲ ವಿಚಾರಮಾಡಲು ಎಪ್ರಿಲ್ ೩೦ರನ್ನು 'ಅಖಿಲ ಬಂಗಾಳದಿನ' ಎಂದು ಆಚರಿಸಿ ಸಕಲ ಕಡೆಗಳಲ್ಲಿಯೂ ಭಾಷಣಗಳ ಮೂಲಕ ತ್ರಿಪುರಿಯ ನಿರ್ಣಯದಿಂದಾಗುವ ಗಂಡಾಂತರವನ್ನು ಮುಂದಿಗೆ ಮನಗಾಣಿಸಬೇಕು ಎಂಬ ಅಭಿಪ್ರಾಯದ ಭಾಷಣಗಳೂ ಠರಾವುಗಳೂ ಆದವು

ಪ್ರಾಂತಿಕ ಸರಕಾರದ ಅಧಿಕಾರ ಕ್ಷೇತ್ರ

ಚೀನಾದ ಚಿನ್ನ ಅಮೇರಿಕಕ್ಕೆ

ಮನಿಲಾದ ಚೀನಾ ಸರಕಾರದ ವಶದಲ್ಲಿದ್ದ ಇಪ್ಪತ್ತು ಮಿಲ್ಲಿಯ ಚೀನಾ ಡೊಲ್ಲರು ಮೌಲ್ಯದ ಚಿನ್ನವನ್ನು ಭದ್ರತೆಯ ಬಗ್ಗೆ ಅಮೇರಿಕಾದ ಯುನೈಟೆಡ್ ಸ್ಟೇಟ್ಸಿಗೆ 'ಪ್ರೆಸಿಡೆಂಟ್ ಗಾರ್‌ಫೀಲ್ಡ್' ಎಂಬ ಸ್ಟೀಮರಿನಿಂದ ಯುರೋಪ್ ಕರಾವಳಿ ಮಾರ್ಗವಾಗಿ ಮೊನ್ನೆ ಕಳುಹಲಾಯಿತು.

ಬೆಜವಾಡದಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷಾ ವಿದ್ಯಾರ್ಥಿಗಳ ಅಸಭ್ಯವರ್ತನ.

ಬೆಜವಾಡ ಮುನ್ಸಿಪಲ್ ಹೈಸ್ಕೂಲಿನಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆ ನಡೆಯುತ್ತಿದ್ದಾಗ ಸಂದರ್ಭೋಚಿತವಾದ ಶಿಸ್ತನ್ನು ಕಾಪಾಡಿಕೊಂಡು ಬರುವ ಕರ್ತವ್ಯದಿಂದ ಅಲ್ಲಿದ್ದ ಪರೀಕ್ಷಾ ಸುಪರಿಂಟೆಂಡೆಂಟರು ಕೆಲವು ಹುಡುಗರ ಮೇಲೆ ತುಸು ಬಿಗುವಾಗಿ ವರ್ತಿಸಬೇಕಾಯಿತು. ಪರೀಕ್ಷೆ ಮುಗಿದ ಮೇಲೆ ಉತ್ತರ ಪುಸ್ತಕಗಳನ್ನು ಕಟ್ಟಿ ಮೊಹರು ಮಾಡುತ್ತ ಅಧಿಕಾರಿಗಳು ಮತ್ತೊಂದು ಕೋಣೆಯಲ್ಲಿದ್ದಾಗ ಪರೀಕ್ಷಾ ಹಾಲಿನಲ್ಲಿ ಅವರು ಬಿಟ್ಟುಹೋಗಿದ್ದ ಅಂಗಿ ರುಮಾಲುಗಳಿಗೆ ಬೆಂಕಿಕೊಡುವಷ್ಟು ಅಸಭ್ಯ ಪೋಲಿತನವನ್ನು ವಿದ್ಯಾರ್ಥಿಗಳು ತೋರಿಸಿದುದು ಶೋಚನೀಯ.

ಹಿಂದೀ ಜಮೀನ್ದಾರರ ಜರ್ಮನ್ ಪತ್ನಿಯ ದಾವೆ.

ಜಮೀನ್ದಾರರು ೧೯೦೦೦೦ ರೂಪಾಯಿ ತನಗ ತೆರಬೇಕೆಂದು ಸಾಧನೆ–

ಸಂಯುಕ್ತ ಪ್ರಾಂತದ ಹತ್ರಾಸ ಎಂಬದೊಂದು ಜಿಲ್ಲೆ. ಅಲ್ಲಿಯ ಜಮೀನ್ದಾರ ರಾಜಾ ಪ್ರೇಮಸಿಂಗರಿಗೆ ಜರ್ಮನ್ ತರುಣಿಯೊಬ್ಬಳಲ್ಲಿ ಪ್ರೇಮಬಿತ್ತು. ಮದುವೆಯಾಯಿತು. ಒಂದು ವರುಷ ಸುಖಸಂತೋಷದಲ್ಲಿದ್ದು ತವರೂರಾದ ಜರ್ಮನಿಗೆ ತೆರಳಿದಳು. ವರುಷ ಕಳೆದು ಹಿಂತಿರುಗಿ ಬಂದಾಗ ಅವಳಿಗೆ ಗಂಡನ ನಡತೆ ಸರಿಬೀಳಲಿಲ್ಲ. ಮಾತ್ರವಲ್ಲ ಪೀಡಿಸತೊಡಗಿದನಂತೆ. ಆದುದರಿಂದ ಆಕೆ ಈಗ ಇವನಿಂದ ಜೀವನಾಂಶಕ್ಕೆ ತಿಂಗಳೊಂದರ ರೂ. ೧೫೦೦ ರಂತೆ ಕೊಡಿಸಬೇಕೆಂದೂ ತನ್ನ ಚಿನ್ನಾಭರಣಗಳು ಆತನೇ ಇಟ್ಟುಕೊಂಡಿರುವುದರ ಪ್ರತಿಫಲವಾಗಿಯೂ ಸಹ ಒಟ್ಟು ದೊಡ್ಡ ಮೊಬಲಗಿಗೆ ದಾವೆ ಹಾಕಿದ್ದಾಳೆ.

ಪ್ರಾಂತಿಕ ಸರಕಾರದ ಅಧಿಕಾರಕ್ಷೇತ್ರ

ಹೊಸರಾಜ್ಯಭಾರ ಪದ್ಧತಿಯ ಮೇರೆಗೆ ಪ್ರಜೆಗಳಿಗೆ ದೊರೆತ ಪ್ರಾಂತಿಕ ಸ್ವಾಯತ್ತತೆಯು ಬ್ರಿಟಿಷ್ ಪ್ರಭುತ್ವದ ರಕ್ಷಣಾ ಶಿರತ್ತುಗಳ ಇತಿಮಿತಿಯ ಬಿಗಿತದಿಂದ ನಿಷ್ಪ್ರಯೋಜಕವೆಂಬ ನಿರಾಶೆಯನ್ನು ಮೊದಮೊದಲು ಉಂಟುಮಾಡಿದ್ದರೂ ಹಲವು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಗಳು ಅದನ್ನು ಪ್ರಯೋಗದಲ್ಲಿ ತರಲು ತೋರಿದ ನಿರ್ಭೀತ ಚಾತುರ್ಯಗಳಿಂದಲೂ ಜನತೆಯು ಅವರಿಗಿತ್ತಿರುವ ಪ್ರಬಲ ಬೆಂಬಲದಿಂದಲೂ ಅದೀಗ ನಿರೀಕ್ಷಣೆಗೆ ಮೀರಿ ಯಶಸ್ವಿಯಾಗಿದೆಯೆನ್ನಬಹುದು. ಹೀಗಾಗಲು



ಮದರಾಸಿನ ಪ್ರಧಾನಮಂತ್ರಿ

ಸಿ. ರಾಜಗೋಪಾಲಾಚಾರ್ಯ

ಕಾಂಗ್ರೆಸ್ಸು ಅಧಿಕಾರಸ್ವೀಕರಿಸುವ ಮುನ್ನ ಬ್ರಿಟಿಷ್ ಸರಕಾರವು ತಾನು ಪ್ರಾಂತಿಕ ವಿಷಯದ ರಾಜ್ಯಭಾರದ ಅನುದಿನದ ವ್ಯವಹಾರದಲ್ಲಿ ತೊಡರು ತೊಂದರೆಗಳನ್ನೊಡ್ಡುವುದಿಲ್ಲವೆಂಬ ಆಶ್ವಾಸನೆಯನ್ನು ಕೊಟ್ಟು ನಡೆಯಿಸುತ್ತ ಬಂದಿರುವುದೂ ಒಂದು ಕಾರಣವಾಗಿದೆ. ಆಯಾ ಪ್ರಾಂತ್ಯಕ್ಕೇ ಸಂಬಂಧಪಟ್ಟ ವಿಷಯಗಳಲ್ಲೆಲ್ಲ ಪ್ರಾಂತಿಕ ಸರಕಾರಗಳ ನಿರ್ಧಾರವನ್ನೇ ಬ್ರಿಟಿಷ್ ಪ್ರಭುತ್ವವು ಮನ್ನಿಸುತ್ತೆಂದು ಇಷ್ಟರಿಂದಲೇ ಹೇಳಲಾಗುವುದಿಲ್ಲ. ಪ್ರಾಮುಖ್ಯ ವಿಷಯಗಳು ಬಂದಾಗ ಪ್ರಭುತ್ವ ತನ್ನಿಷ್ಟದ ಮೇರೆಗೇ ನಡೆಯುವುದಲ್ಲದೆ ಪ್ರಜಾ ಪ್ರಾತಿನಿಧ್ಯದ ನಿರ್ಧಾರವೆನಿಸುವ ಪ್ರಾಂತಿಕ ಸರಕಾರಗಳ ಗೊತ್ತುವಳಿಗಳನ್ನು ಕಿತ್ತು ಬಿಸುಡುತ್ತದೆಂಬುದು ಕಳೆದ ವಾರ ಮದ್ರಾಸು ಎಸೆಂಬ್ಲಿಯಲ್ಲಿ ಪ್ರಧಾನಮಂತ್ರಿಗಳು ಹೇಳಿದ ಅನುಭವದ ಮಾತುಗಳಿಂದ ವ್ಯಕ್ತವಾಗುತ್ತದೆ. ಮದ್ರಾಸು ಪ್ರಾಂತವೊಂದಕ್ಕೆ ಸಂಬಂಧಪಟ್ಟುದು ಆಂಧ್ರಪ್ರಾಂತವಿಭಜನೆಯ ಪ್ರಶ್ನೆ. ಅದರಿಂದ ಬೇರೆ ಯಾವ ಪ್ರಾಂತಕ್ಕೂ ತೊಡಕು ತೊಂದರೆಗಳಿಲ್ಲ. ಬ್ರಿಟಿಷ್ ಪ್ರಭುತ್ವದ ಅಧಿಕಾರವನ್ನು ಅಪಹರಿಸುವ ಧೋರಣೆ ಅದರಲ್ಲಿಲ್ಲ. ಮೇಲಾಗಿ ಮದ್ರಾಸು ಪ್ರಾಂತದ ಪ್ರಜಾವಾಣಿಯಾದ ಉಭಯ ನ್ಯಾಯಶಾಸನ ಸಭೆಗಳಲ್ಲಿ ಆ ಪ್ರಾಂತ ಪ್ರತ್ಯೇಕೀಕರಣದ ನಿರ್ಧಾರವು ಮಾನ್ಯವಾಗಿ ಮದ್ರಾಸುಸರಕಾರದ ಅನುಮೋದನವೂ ದೊರೆತಿದ್ದರೂ ಇಂಡಿಯಾಸೆಕ್ರೆಟರಿಗಳು ಅದನ್ನು ತಿರಸ್ಕರಿಸಿದರು. ತಿರುಗಿ ಪುನರಾಲೋಚನೆಗಾಗಿ ಕಳುಹಿಸಲ್ಪಟ್ಟರೂ ಅದು ಸಫಲವಾಗಲಿಲ್ಲ. ಎರಡನೆಯದಾಗಿ ಮದ್ರಾಸು ಹೈಕೋರ್ಟಿನ ಜಡ್ಜರುಗಳನ್ನು ನೇಮಕ ಮಾಡುವ ಸಂದರ್ಭಗಳಲ್ಲಿ ಪ್ರಾಂತಿಕ ಸರಕಾರದ ಅಭಿಪ್ರಾಯಸೂಚನಸಲಹೆಗಳನ್ನು ಕೇಳಲೇ ಇಲ್ಲ. ಮೂರನೆಯದಾಗಿ ಪ್ರಾಂತಿಕ ಸರಕಾರದ ಭಂಡಾರದಿಂದಲೇ ತಲಬು ಸಲಬೇಕಾಗಿದ್ದ ಅವರೆ ಸಾಮ್ರಾಟ್ ಸರಕಾರದಿಂದ ನೇಮಕಗೊಂಡಿದ ಉಚ್ಚ ಅಧಿಕಾರಿಗಳ ಸಂಬಳದಲ್ಲಿ ತಾತ್ಕಾಲಿಕವಾಗಿ ಯಾವದರೂ ಕಡಿತ ಹಾಕಬೇಕೆಂಬ ಪ್ರಾಂತಿಕ ಸರಕಾರದ ಸೂಚನೆಯು ಮಾನ್ಯವಾಗಿಲ್ಲ. ಇವೆಲ್ಲವೂ ಪ್ರಾಂತಿಕ ಸ್ವಾಯತ್ತತೆಯ ಮೂಲಭೂತ ಹಕ್ಕುಗಳಾಗಿ ಅದರ ಅಧೀನದಲ್ಲಿರಗೊಡಿಸುವುದು ಪ್ರಾಂತ್ಯದೇಳಿಗೆಯ ದೃಷ್ಟಿಯಿಂದಲೂ ನಿಜವಾದ ಸ್ವಾಯತ್ತೆಯ ತತ್ವದೃಷ್ಟಿಯಿಂದಲೂ ಸಮಂಜಸವಾಗಿದ್ದರೂ ಬ್ರಿಟಿಷ್ ಸಮ್ರಾಟ್ ಸರಕಾರದ ಒಲವು ಅನುಕೂಲವಾಗಿರದೆ ಪ್ರತಿಬಂಧಕವಾಗಿಯೇ ಉಳಿದಿರುವುದೆಂಬುದು ವ್ಯಕ್ತವಾಗುತ್ತದೆ. ಎಂದ ಮೇಲೆ ಪ್ರಾಂತಿಕ ಸರಕಾರದ ಸಹಜವಾದ ಅಧಿಕಾರಕ್ಷೇತ್ರದಲ್ಲಿ ಅನವಶ್ಯಕವಾಗಿ ಅತಿಕ್ರಮಿಸಿ ಅದನ್ನು ಸಂಕುಚಿತಗೊಳಿಸುವ ಮನೋವೃತ್ತಿಯು ಸಪ್ಪುಮಾಡದಿದ್ದರೂ ಇದ್ದೇ ಇದೆ ಎಂಬುದು ನಿಸ್ಸಂದೇಹ.

ರಾಜಕೋಟೆಯ ಪ್ರಶ್ನೆ ಶೀಘ್ರದಲ್ಲಿ ತೀರ್ಮಾನವಾಗಲಿದೆ

ಸರ್ದಾರ್ ವಲ್ಲಭಭಾಯಿ ಪಟೇಲರೂ ದರ್ಬಾರ್ ವೀರವಲ್ಲರೂ ಜಸ್ಟೀಸ್ ಸರ್ ಮೋರಿಸ್ ಗ್ವಾಯರರ ಕರೆಯ ಮೇರೆಗೆ ಅವರನ್ನು ಸಂದರ್ಶಿಸಿದರು. ರಾಜಕೋಟೆಯ

ಸರ್. ಮೋರಿಸ್ ಗ್ವಾಯರರು

ಪ್ರಶ್ನೆಯ ತೀರ್ಮಾನದ ಕುರಿತು ತನಗೆ ಬೇಕಾಗಿರುವ ಕೆಲವು ಪೂರ್ವಸಿದ್ಧತೆಯ ಕುರಿತು ಅವರೊಡನೆ ಚರ್ಚೆ ನಡೆಯಿತು. ಪಟೇಲರ ಕಡೆಯಿಂದಲೂ ಥಾಕೂರರ ಕಡೆಯಿಂದಲೂ ಹೇಳಿಕೆಗಳು ಈ ಮೊದಲೇ ದಾಖಲಾಗಿವೆ. ಥಾಕೂರರ ಪರವಾಗಿ ವೀರವಲ್ಲರು ಕೊಟ್ಟಿರುವ ವಿವರಗಳ ಕುರಿತು ಪಟೇಲರು ಇನ್ನೆರಡು ದಿನಗಳೊಳಗೆ ಪ್ರತ್ಯುತ್ತರ ಕಳುಹಿಸಬೇಕೆಂದು ಜಸ್ಟೀಸರು ಹೇಳಿದರು. ಇನ್ನು ಉಭಯಪಕ್ಷದವರ ಹಾಜರಿಯ ಅವಶ್ಯವಿದ್ದರೆ ತಿಳಿಸುತ್ತೇನೆಂದೂ ಈ ವಾರದ ಅಂತ್ಯದೊಳಗೆ ತನ್ನ ತೀರ್ಪನ್ನು ಕೊಡುವೆನೆಂದೂ ತಿಳಿಸಿರುತ್ತಾರೆ.

ನಿರೀಕ್ಷಿಸಿರಿ! ನಿರೀಕ್ಷಿಸಿರಿ!

ಉಪಾಧ್ಯಾಯರೂ ವಿದ್ಯಾರ್ಥಿಗಳೂ ಇದೇ ಬರುವ ಸೆಖೆಕಾಲದ ರಜೆಯನ್ನು ಸದ್ವಿನಿಯೋಗಿಸಿ ಹೇಗೆ ರೂ. 5 ರಿಂದ ರೂ. ೫೦ರ ತನಕ ಸಂಪಾದಿಸಬಹುದು.

ಎಂಬುದನ್ನು ತಿಳಿಯಲು

ಮುಂದಿನ ಸಂಚಿಕೆಗಳನ್ನು ನೋಡಿರಿ.

ಮಂಗಳೂರು ಬಾತ್ಮಿದಾರರಿಂದ

ಮಂಗಳೂರು, ತಾ. 28–3–39

ವಿದ್ಯಾಂಗದ ಡೈರೆಕ್ಟರರು—ಮದ್ರಾಸ್ ಸರಕಾರದ ವಿದ್ಯಾಂಗದ ಡೈರೆಕ್ಟರಾದ ಮಿ| ಸ್ಟ್ಯಾಥೇಮ್ ಸಾಹೇಬರು ತಾ. ೨೭ರಲ್ಲಿ ತಮ್ಮ ಜಿಲ್ಲಾ ಪ್ರವಾಸವನ್ನು ಮುಗಿಸಿ ಮಂಗಳೂರಿಗೆ ಚಿತ್ತೈಸಿದರು. ದ. ಕನ್ನಡ ಜಿಲ್ಲಾ ಟೀಚರ್ಸ ಗಿಲ್ಡಿನ ಅಧಿಕಾರಿಗಳಾದ ಶ್ರೀ. ಉಡುಪಿ ಗೋವಿಂದರಾಯರೂ, ಶ್ರೀ. ಯಂ. ಎಸ್. ಏಕಾಂಬರ ರಾಯರೂ ಅವರನ್ನು ಸಂದರ್ಶಿಸಿ ಉಪಾಧ್ಯಾಯರಿಗೆ ಸಂಬಂಧಿಸಿದ ಹಲವು ಸಂಗತಿಗಳನ್ನು ಚರ್ಚಿಸಿದರು.

ಬಸ್ ಕೆಲಸಗಾರರ ಮುಷ್ಕರ ನಿಂತಿತು—ಮಾನ್ಯ ಮಂತ್ರಿಗಳಾದ ಶ್ರೀ ವಿ. ಗಿರಿಯವರ ಮತ್ತು ಘನ ಹೊಂದಿದ ಮದ್ರಾಸ್ ಸರಕಾರದವರ ಮಧ್ಯಸ್ಥಿಕೆಯಿಂದ ಪ್ರಕೃತ ಮೋಟರ್ ಕೆಲಸಗಾರರ ಮುಷ್ಕರವು ನಿಲ್ಲಿಸಲ್ಪಟ್ಟಿದೆ. ಕೆಲಸಗಾರರಿಗೂ, ಮಾಲಕರಿಗೂ ಸಮಾಧಾನಕರವಾಗಿರುವ ಶರತ್ತುಗಳಿವೆ. ಅವನ್ನು ಬೇರೆ ಕಡೆ ಕೊಡಲಾಗಿದೆ.

ವೆಬ್‌ಸ್ಟರ್ ಮಾರ್ಕೆಟಿನ ಪರವಾಗಿ ಶಿಷ್ಟ ಮಂಡಲ—ನಮ್ಮ ಜಿಲ್ಲಾ ಕಲೆಕ್ಟರ್ ದೊರೆಗಳು, ರೆವಿನ್ಯೂ ಡಿವಿಜನ್ ಆಫೀಸರರು ಮತ್ತು ಮ್ಯುನಿಸಿಪಲ್ ಕಮಿಶನರನ್ನು ಕೂಡಿಕೊಂಡು ಕಳೆದ ತಾ| ೨೦ರಲ್ಲಿ ವೆಬ್‌ಸ್ಟರ್ ಮಾರ್ಕೆಟನ್ನೂ ಅನಂತರ ಫೆಲಿಕ್ಸ್ ಪೈ ಬಜಾರನ್ನೂ ಸಂದರ್ಶಿಸಿದರೆಂದು ಗೊತ್ತಾಗಿದೆ. ಅನಂತರ ಶ್ರೀಗಳಾದ ತಲಚೇರಿಕರ ರಂಗರಾವ್; ಬೋಳಾರ ಭೋಜರಾವ್ ಮತ್ತು ರಾಘವೇಂದ್ರ ಪೈಗಳೇ ನಾಯಕರಾದ ಒಂದು ಶಿಷ್ಟಮಂಡಲಿಯವರಿಗೆ ಭೇಟಿಕೊಟ್ಟು ಅವರ ಅಭಿಪ್ರಾಯಗಳನ್ನು ಕೇಳಿ ತಿಳಿದುಕೊಂಡರು.

ಪ್ರಕಟಣೆ.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

S. I. A. 202/1938 (S. C. 50/36)

ಮಂಜಯ್ಯ ಅದ್ಯಂತಾಯ–ಅರ್ಜಿದಾರ, (ವಾದಿ.)

ಮತ್ತು

ದೊಡ್ಡ ಸೆಟ್ಟಿ ಸಹಾ–ಎದ್ರಿರು. (ಪ್ರತಿವಾದಿರು.)

2ನೇ ಎದ್ರಿ ಮುದ್ದಣ್ಣ ಸೆಟ್ಟಿ, ನಾಗಯ್ಯ ಸೆಟ್ರ ಅಳಿಯ, ಹಾಲಿ ಮೈಸೂರು ಜಿಲ್ಲಾ ಕೊಪ್ಪ ತಾಲೂಕು ಸಿದ್ಧರ್ಬಾಂಕ್ ಎಸ್ಟೇಟಿನಲ್ಲಿರುವವ, ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಅರ್ಜಿದಾರನು ಈ ಕೋರ್ಟ S.C.50/1936 ನೇ ಡಿಕ್ರಿಯನ್ನು Madras Act 4 of 1938 ರ sec 19ರ ಪ್ರಕಾರ ದುರುಸ್ತಿ ಪಡಿಸಬೇಕಾಗಿ ಕೊಟ್ಟ ಅರ್ಜಿಯು ತಾ. 17-4-1939ಕ್ಕೆ ಇಟ್ಟಿರುತ್ತದೆ. ಈ ಕುರಿತು ನಿಮಗೇನಾದರೂ ಆಕ್ಷೇಪಗಳಿದ್ದರೆ ಸದ್ರಿ ಕೋರ್ಟ ಮುಂದೆ ತಾ. 17–4–1939ನೇ ಹಗಲು 10 ಘಂಟೆಗೆ ಹಾಜರಾಗಿ ಆಕ್ಷೇಪಗಳನ್ನು ಹೇಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜ್ರಿಯಿಂದ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

ಕೋರ್ಟ ಹುಕುಂ ಪ್ರಕಾರ.

K. Mahabala Hegde.

ಅರ್ಜಿದಾರನ ವಕೀಲ್,

ಕಾರ್ಕಳ, ತಾ. 27-3-1939.

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಮೈಸೂರು ಮಾರ್ಚ್ ೨೦

ಹೆಂಗಸಿನ ಸಾಹಸ—ಹಾಸನದ ಅರಸೀಕೆರೆಯಲ್ಲಿ ವಾಸವಾಗಿರುವ ಶ್ರೀಮತಿ ರೇಣುಕಮ್ಮನೆಂಬುವವರು ತಮ್ಮ ಪತಿಯೊಡನೆ ೫ ದಿನಗಳಲ್ಲಿ 200 ಮೈಲಿಗಳನ್ನು ಬೈಸಿಕಲ್ ಸವಾರಿ ಮಾಡಿ ಚಂದ್ರದ್ರೋಣ ಪರ್ವತವನ್ನು ಸುತ್ತಿ ಬಂದರೆಂದು, ಸ್ತ್ರೀ ಸಾಹಸ ಕೇಳಲು ಸಂತೋಷವಾಗುತ್ತೆ.

ಜಟ್ಕಾ ಗಾಡಿಗಳಿಗೆ ಗಂಟೆ— ಜಟ್ಕಾ ಹೊಡೆಯುವವರು ಹೇ, ಹೇ, ಎಂಬುದಾಗಿ ಕೂಗುತ್ತಾರೆ. ಇದರ ಬದಲು ಒಂದು ಗಂಟೆಯನ್ನಿಟ್ಟು ಗಾಡಿಗಳನ್ನು ಹೊಡೆಯಬೇಕು ಎಂಬ ನಿರ್ಣಯವನ್ನು ಬೆಂಗಳೂರು ಪೌರಸಭೆಯ ಉಪಾಧ್ಯಕ್ಷೆಯಾದ ಶ್ರೀಮತಿ ಆರ್. ಕಲ್ಯಾಣಮ್ಮನವರು ಮೊನ್ನೆ ನಡೆದ ಸಭೆಯಲ್ಲಿ ತರಲು ಅದು ಸರ್ವಾನುಮತದಿಂದ ಪಾಸಾಯಿತು. ಉತ್ತರ ಇಂಡಿಯಾದಲ್ಲಿ ಗಾಡಿ ಹೊಡೆಯುವವರು ಜನಗಳ ಗುಂಪಿನಲ್ಲಿ ಹೋಗುವಾಗ ಮಹಾರಾಜ, ಮಹಾರಾಜ ಎಂದು ಗೌರವಯುತವಾಗಿ ಕೂಗುತ್ತಾರೆ. ಸ್ವಲ್ಪ ಗೌರವವುಳ್ಳವರು ಸಿಕ್ಕಿದರೆ ಮಹಾತ್ಮಾಜಿ, ಮಹಾತ್ಮಾಜಿ ಎಂದು ಕೂಗುತ್ತಾರೆ. ನಮ್ಮ ಮೈಸೂರು ಬೆಂಗಳೂರು ನಗರಗಳಲ್ಲಿ ಗಾಡಿ ಹೊಡೆವವರು ಹೇ, ಹೇ, ಲಕ್, ಲಕ್, ಎಂದು ಒಂದು ವಿಧವಾದ ಹೇಸಿಗೆಯಿಂದ ಕರೆಯುತ್ತಾರೆ. ಇದನ್ನು ತಪ್ಪಿಸಿ ಗಂಟೆಗಳನ್ನಿಡುವಂತೆ ಮಾಡಿದ್ದು ಅಭಿನಂದನಾರ್ಹವಾದುದು.

ಸಭೆ ನಡೆಸಕೂಡದು—ಮೈಸೂರು ನಗರದ ಕೆಲವು ಸಾರ್ವಜನಿಕ ಭಾಗಗಳಲ್ಲಿ ಸಭೆ ನಡೆಸಕೂಡದೆಂದು ಹಿಂದಿದ್ದ ಸರಕಾರದ ಆಜ್ಞೆಯನ್ನು ಮಾರ್ಚ್ ೨೬ರಿಂದ ಮತ್ತೆ ಆರು ತಿಂಗಳು ಕಾಲ ಮುಂದುವರಿಸಲಾಗಿದೆಯೆಂದು ಡಿ. ಎಂ. ಆಜ್ಞೆಯೊಂದು ತಿಳಿಸುತ್ತದೆ.

ವಾರ್ಷಿಕೋತ್ಸವಗಳು— ಮೈಸೂರು ಲೇಡಿಸ್ ಕ್ಲಬ್ಬಿನ ವಾರ್ಷಿಕೋತ್ಸವವು, ಶ್ರೀಮನ್ಮಹಾರಾಣಿಯವರ ಘನ ಅಧ್ಯಕ್ಷತೆಯಲ್ಲಿ ನಡೆದು ಕ್ಲಬ್ಬಿನ ವಾರ್ಷಿಕೋತ್ಸವಕ್ಕೆ ನಡೆಸಿದ ಆಟಪಾಠಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚಿದ ಮೇಲೆ, ಅಧ್ಯಕ್ಷರು ಸಮಯೋಚಿತ ವಿಚಾರಪೂರ್ಣ ಭಾಷಣ ಮಾಡಿದ ಮೇಲೆ ಮುಂದಿನ ಸಾಲಿಗೆ ಅಧ್ಯಕ್ಷೆ, ಉಪಾಧ್ಯಕ್ಷೆ ಮತ್ತು ಗೌ। ಕಾರ್ಯದರ್ಶಿಗಳನ್ನು ಚುನಾಯಿಸಿದ ಮೇಲೆ ಶ್ರೀಮನ್ಮಹಾರಾಜರ ಪ್ರಾರ್ಥನೆಯೊಡನೆ ಸಭೆಯು ಚದರಿತು. ಇತ್ತಲಾಗಿ ೨೨ನೇ ತಾ. ದಿನ ಸಂಜೆ ಶಿಶುವಿಹಾರದ ವಾರ್ಷಿಕೋತ್ಸವವು ಶ್ರೀ ರಾಜಕುಮಾರಿ ಲೀಲಾವತಿಯರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನೆರವೇರಿತು.

ಹರಿಜನರಿಗೆ ಪ್ರವೇಶ—ಬೇಲೂರು ಮತ್ತು ಶ್ರವಣಬೆಳಗೊಳದಲ್ಲಿರುವ ಗೋಮಟೇಶ್ವರ ದೇವಸ್ಥಾನದೊಳಗೆ ಇತರ ಹಿಂದುಳಿದ ಪಂಗಡದವರು ಎಲ್ಲಿಯ ವರೆಗೆ ಪ್ರವೇಶಿಸಬಹುದೋ, ಅಲ್ಲಿಯ ವರೆಗೆ ಹರಿಜನರೂ ಬರಬಹುದೆಂದು ಸರಕಾರದ ಆಜ್ಞೆಯೊಂದು ತಿಳಿಸುತ್ತದೆ. ಇದಕ್ಕೆ ಸರಕಾರದವರನ್ನು ವಂದಿಸಲಾಗಿದೆ.

ವಾರ್ಧಾ ಶಿಕ್ಷಣ ಸಮಿತಿಯ ವರದಿ-ತಗಡೂರಿನಲ್ಲಿ ಸ್ಥಾಪಿಸಲಾಗಿರುವ 'ವಾರ್ಧಾ ಶಿಕ್ಷಣ ಪದ್ಧತಿ ಶಾಲೆ'ಯ ಜನವರಿ ಮತ್ತು ಫೆಬ್ರವರಿಯ ತಿಂಗಳ ವರದಿಯನ್ನು ನೋಡಲಾಗಿ ಅನೇಕ ವಿಷಯಗಳು ತಿಳಿದು ಬಂದವು. ಇವುಗಳಲ್ಲಿ ಅತಿ ಮುಖ್ಯವಾದುದೇನೆಂದರೆ 'ಕಳೆದ ಎರಡು ತಿಂಗಳಲ್ಲಿ ಚರಕದಿಂದ ಎಷ್ಟು ಗಜ ಬಟ್ಟೆ ಆಯಿತು, ಎಷ್ಟು ತೊಲ ನೂಲು ಬಂದಿತು, ಶಾಲೆಯಲ್ಲಿ ಹುಡುಗರ ಓದುವಿಕೆ, ಅಕ್ಷರಾಭ್ಯಾಸ ಡ್ರಿಲ್ ಮಾಡುವುದು ಬೇರೆ ತರಹ ಕಾರ್ಯಕ್ಕಾಗಿ (ಆ ಶಿಕ್ಷಣಕ್ಕೆ ಕೆಲಸ ಮಾಡುತ್ತಿದ್ದ) ಶ್ರೀಯುತ ತಗಡೂರು ರಾಮಚಂದ್ರರಾಯರು ಗ್ರಾಮವನ್ನೂ ಬಿಟ್ಟಿದ್ದು ಬ್ರಹ್ಮಚಾರಿ ಉಪಾಧ್ಯಾಯರುಗಳಿಗೆ ಗುಡಿಸಲು ಕಟ್ಟಿದ್ದು, ವಿದ್ಯಾರ್ಥಿಗಳು ತರಕಾರಿ ತೋಟವನ್ನು ಚೆನ್ನಾಗಿಟ್ಟಿರುವುದು, ಸರ್ಕಾರಿ ಶಾಲೆಗಳಂತೆ ಬೇಸಗೆಯಲ್ಲಿ ಶಾಲೆಯನ್ನು ಮುಚ್ಚುವುದು" ಇವೇ ಮುಂತಾದ ಇತರ ಮುಖ್ಯ ವಿಷಯಗಳು ಅದರಲ್ಲಿವೆ. ಮೇಲ್ಕಂಡ ಶಾಲೆಯ ಸಮಿತಿಯ ಕಾರ್ಯನಿರ್ವಾಹಕ ಸಮಿತಿಯ ಸಭೆಯೊಂದು ನಡೆದು, ಆ ಶಾಲೆಗೆ ಸಹಾಯಕರಾಗಿದ್ದು ಗತಿಸಿಹೋದ ಶ್ರೀ ಬಾಷ್ಯ ಭೀಮರಾವ್, ಮತ್ತು ಕನ್ನಡದ ಸೇವಕರಾಗಿದ್ದು ಮರಣಹೊಂದಿದ ಶ್ರೀ. ಪ್ರೊ. ಟಿ. ಯಸ್. ವೆಂಕಣ್ಣಯ್ಯನವರ ಆತ್ಮಕ್ಕೆ ಭಗವಂತನು ಶಾಂತಿಯೀಯಬೇಕೆಂದು ಪ್ರಾರ್ಥನೆ ಮಾಡಲಾಯಿತು.

(ಮೇಲ್ಕಂಡ ವರದಿಯಲ್ಲಿ ಇನ್ನೂ ಅನೇಕ ವಿಷಯಗಳುಂಟು, ಆದರೆ ಸ್ಥಳ ಸಂಕೋಚದಿಂದ ಅತಿ ಮುಖ್ಯವಾದುವನ್ನು ಬರೆಯಲಾಗಿದೆ.)

ಬೇಪೂರು ಬಿಲ್ಡಿಂಗ್— ರಾಜಧಾನಿಯ ದೊಡ್ಡ ಪೇಟೆಯ, ಹೆಮಿಲ್ಟನ್ ಕಟ್ಟಡದ ಬಳಿ ಕಟ್ಟುವ ಜನರಲ್ ಪೋಸ್ಟ್ ಮತ್ತು ಟೆಲಿಗ್ರಾಫ್ ಕಛೇರಿಗೆ, ಇಂಡಿಯ ಪೋಸ್ಟ್ ಮತ್ತು ಟೆಲಿಗ್ರಾಫ್ ಜನರಲ್ ಅಧಿಕಾರಿ ಶ್ರೀ. ಗುರುನಾಥ ವೆಂಕಟೇಶ ಬೇಪೂರರ ಹೆಸರನ್ನಿಡಲಾಗುತ್ತದೆಂದು ವರ್ತಮಾನ.

ಹವಾಗುಣ—ರಾಜಧಾನಿಯಲ್ಲಿ ಬಿಸಿಲು ಜಾಸ್ತಿ, ಮಳೆಯಿಲ್ಲ, ಧಗೆಯಂತೂ ಹೆಚ್ಚುತ್ತಿದೆ.

ಕರ್ನಾಟಕದ ಏಕೀಕರಣ—ಮೇಲ್ಕಂಡ ಮೈಸೂರು ಸಂಘದ ಅಧ್ಯಕ್ಷರಾದ ಶ್ರೀ. ಬೆನಗಲ ರಾಮರಾಯರು ಇನ್ನೂ ಇತರರೊಡನೆ ದಿವಾನರನ್ನು ಭೇಟಿ ಮಾಡಿ ಕರ್ನಾಟಕ ಏಕೀಕರಣದ ವಿಷಯವಾಗಿ ಚರ್ಚಿಸಿದರೆಂದು ಗೊತ್ತಾಗಿದೆ.

ಗಾಂಧಿ ಟೊಪ್ಪಿ ಹಾಕಕೂಡದು—ಲಾಯರುಗಳು ಕೋರ್ಟಿಗೆ ಬರುವ ವೇಳೆಯಲ್ಲಿ, ತಲೆಗೆ ಪೇಟವನ್ನಾಗಲೀ, ಅಥವ ಬರಿಯ ತಲೆಯಲ್ಲಾಗಲಿ (ನೋಡಿನೊಡನೆ) ಅಥವಾ ಹ್ಯಾಟನ್ನಾಗಲಿ ಧರಿಸುವುದನ್ನು ನೋಡಲಾಗಿದೆ. ಆದರೆ ಇತ್ತೀಚೆಗೆ, ಮೈಸೂರಿನಲ್ಲಿ ಕಾಂಗ್ರೆಸ್‌ನ ಮನೋಭಾವ ಬಂದ ಮೇಲೆ, ಗಾಂಧಿ ಟೋಪಿಗಳನ್ನೇ ಧರಿಸಿ ಬರುತ್ತಾರೆ, ಕಪ್ಪು ಲಾಂಗ್ ಕೋಟು, ಗಾಂಧಿ ಟೊಪ್ಪಿ ಇವೆರಡನ್ನೂ ಹಾಕಿಕೊಳ್ಳುವುದನ್ನು ನೋಡಬಹುದು. ನಂಜಗೂಡು ಲಾಯರೊಬ್ಬರು, ಗಾಂಧಿ ಟೊಪ್ಪಿ ಧರಿಸಿ ನ್ಯಾಯಸ್ಥಾನಕ್ಕೆ ಬರಲು, ನ್ಯಾಯಾಧೀಶರು ಆಕ್ಷೇಪಿಸಿದರೆಂದು ಗೊತ್ತಾಗಿದೆ. ಇದುವರೆಗೆ ಈ ತರಹ ಆಕ್ಷೇಪಣೆಗಳು ಎಲ್ಲೂ ನಡೆದಿರಲಿಲ್ಲವೆಂದೂ, ಇನ್ನು ಮುಂದೆ ಹೈಕೋರ್ಟು ನವರು ಇದರ ವಿಚಾರವಾಗಿ ನಿರ್ದಿಷ್ಟವಾದ ಅಭಿಪ್ರಾಯ ತಿಳಿಸಿ ಒಪ್ಪಿಗೆ ಕೊಟ್ಟರೆ ಇನ್ನು ಮುಂದೆ ಗಾಂಧಿ ಟೋಪಿಯನ್ನೇ ಧರಿಸಬಹುದು ಎಂದು ಕೆಲವು ಲಾಯರುಗಳು ಅಭಿಪ್ರಾಯಪಡುತ್ತಾರೆಂದು ಮೇಲ್ಕಂಡ ಸುದ್ದಿಯು ಸ್ಥಳೀಯ ಪತ್ರಿಕೆ ಪ್ರತಿನಿಧಿಗಳೊಬ್ಬರಿಂದ ತಿಳಿದುಬಂತು.

ಕಾಂಗ್ರೆಸ್ ಅಧ್ಯಕ್ಷರು— ವಿದುರಾಶ್ವತ್ಥ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಬೆಂಗಳೂರಿನ ಶ್ರೀ. ಕೆ. ಟಿ. ಭಾಷ್ಯಂ, ಕೋಲಾರದ ಶ್ರೀ. ಕೆ. ಚೆಂಗಲರಾಯ ರೆಡ್ಡಿ, ತುಮಕೂರಿನ ಶ್ರೀ. ಟಿ. ಸುಬ್ರಹ್ಮಣ್ಯಂ, ದೊಡ್ಡ ಬಳ್ಳಾಪುರದ ಶ್ರೀ. ಟಿ. ಸಿದ್ಧಲಿಂಗಯ್ಯ ಮತ್ತು ಮೈಸೂರಿನ ಶ್ರೀ. ಹೆಚ್. ಸಿ. ದಾಸಪ್ಪನವರ ಹೆಸರುಗಳನ್ನೂ ಸೂಚಿಸಲಾಗಿದೆ. ಆದರೆ ಇತ್ತೀಚೆಗೆ ವಿಚಾರ ಮಾಡಿದ್ದಲ್ಲಿ ಮೈಸೂರಿನ ಶ್ರೀ. ಹೆಚ್. ಸಿ. ದಾಸಪ್ಪನವರಿಗೆ ಬಹುಮತ ದೊರೆಯುವುದರಿಂದ ಬಹುಶಃ ಅವರೇ ವಿದುರಾಶ್ವತ್ಥ ಕಾಂಗ್ರೆಸ್ ಅಧ್ಯಕ್ಷರಾಗಿ ಸರ್ವಾನುಮತದಿಂದ ಚುನಾಯಿತರಾಗಬಹುದೆಂದು ಶ್ರೀ. ಟಿ. ಸಿದ್ಧಲಿಂಗಯ್ಯನವರು ಒಂದು ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ಅಧಿಕಾರಯುತವಾಗಿ ಯಾವುದೂ ಪ್ರಕಟವಾಗಿಲ್ಲ. ಏಪ್ರಿಲ್ ತಾ. ೨ನೇ ದಿನ ಬ್ಯಾಲೆಟ್ ಮೂಲಕ ಚುನಾವಣೆ ನಡೆದು ಫಲಿತಾಂಶ ತಿಳಿಸಲಾಗುತ್ತೆ.

ಪ್ರಕಟನೆ

ಕೆಲವು ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು, ಔಷಧ ಭಂಡಾರ, ಮತ್ತು ಇತರ ಕೆಲವು ವ್ಯಾಪಾರಿ ಸಂಸ್ಥೆಗಳ ಅಪೇಕ್ಷಾನುಸಾರವಾಗಿ ನಾವು ಜಾಹೀರಾತು ಏಜನ್ಸಿ ಶಾಖೆ(Advertising Agency Department) ಯನ್ನು ಪ್ರಾರಂಭಿಸಿರುತ್ತೇವೆ. ಕರ್ನಾಟಕದ ಯಾ ಹಿಂದುಸ್ಥಾನದ ಯಾವುದಾದರೂ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳಲ್ಲಿ ಜಾಹೀರಾತು ಕೊಡಲಿಚ್ಛಿಸುವವರು ನಮಗೆ ಬರೆಯಬಹುದು. ಆಯಾಯ ಪತ್ರಿಕೆಯ ದರಗಳನ್ನು ಬರಕೊಂಡಲ್ಲಿ ತಿಳಿಸಲಾಗುವುದು.

MANAGER,

Advertising Agency Department,

Navabharat Book Depot,

UDIPI, S. INDIA.

ಉಡುಪಿ

ಸಹಾಯ—ಸಂಸ್ಕೃತ ಕಾಲೇಜಿನ ಒಡೆಯರೂ ಚೆಕ್ಕರರಾಗಿರುವ ಶೀರೂರು ಮಠದ ಶ್ರೀಲಕ್ಷ್ಮೀಂದ್ರತೀರ್ಥ ಶ್ರೀಪಾದಂಗಳವರು ಕಳೆದ ಗುರುವಾರ ತಮ್ಮ ಕೂಡೆ ಸುಧಾ ಪಾಠಪ್ರವಚನಾದಿಗಳನ್ನು ಮಾಡಿದ ವಿದ್ಯಾರ್ಥಿಗಳಿಗೆ ಯೋಗ್ಯ ಸಂಭಾವನೆಗಳನ್ನಿತ್ತು ಮಂಗಳೋತ್ಸವವನ್ನು ಅತಿ ವಿಜೃಂಭಣೆಯಿಂದ ನಡಿಸಿದರು. ತಾವು ವರ್ಷಂಪ್ರತಿ ಕೊಡುತ್ತಲಿರುವ ಸಹಾಯವಲ್ಲದೆ ವಿಶೇಷತಃ 601/- ರೂಪಾಯಿಗಳನ್ನು ಸಹಾಯಧನವಾಗಿ ಸದ್ರಿ ಕಾಲೇಜಿಗೆ ಕೊಟ್ಟಿದ್ದು ಅಭಿನಂದನೀಯವು.

ಪ್ರದರ್ಶನ—ಸ್ಥಳೀಯ ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿಗಳೂ ಉಡುಪಿ ಜುವೈನೆಯ ಮಿನ ಸದಸ್ಯರೂ ಒಟ್ಟುಗೂಡಿ ಕಳೆದ ಗುರುವಾರ ವ್ಯಾಯಾಮ ಪ್ರದರ್ಶನವೊಂದನ್ನು ಜರಗಿಸಿದರು. ಕೆಲ ಪ್ರದರ್ಶನಗಳು ಅತ್ಯುತ್ಕೃಷ್ಟವಾಗಿದ್ದುವು. ಈ ಪ್ರದರ್ಶನದ ವ್ಯವಸ್ಥೆಗಾಗಿ ಹೈಸ್ಕೂಲಿನ ಅಧಿಕಾರಿಗಳನ್ನು ಮುಖ್ಯತಃ ಡ್ರಿಲ್ ಮಾಸ್ತರರಾದ ಶ್ರೀ. ಬಿ. ಎಂ. ಬಾಳಿಗರನ್ನು ಅಭಿನಂದಿಸಬೇಕಾಗಿದೆ.

ಮಂಗಳೋತ್ಸವ—ಶ್ರೀ. ಹಂದೆ ಶ್ರೀಪಾದರಾಯರಿಂದ ಶ್ರೀಕೃಷ್ಣಸನ್ನಿಧಿಯಲ್ಲಿ ಒಂದು ತಿಂಗಳಿಂದ ನಡೆದು ಬಂದ ಸಂಪೂರ್ಣ ರಾಮಾಯಣ ಹರಿಕಥಾ ಕಾಲಕ್ಷೇಪಕ್ಕೆ ತಾ. 29ನೇ ಬುಧವಾರ ಶ್ರೀ ರಾಮನವಮಿ ದಿನ ಮಂಗಲೋತ್ಸವವು ಪರ್ಯಾಯ ಶ್ರೀ. ಫಲಿಮಾರು ಶ್ರೀ. ರಘುಮಾನ್ಯ ತೀರ್ಥರ ನೇತೃತ್ವದಲ್ಲಿ ಜಯಶೀಲವಾಗಿ ನಡೆಯಿತು. ಈ ಸಂದರ್ಭದಲ್ಲಿ ಶ್ರೀ. ಕೆ. ಲಕ್ಷ್ಮಣ ಬಲ್ಲಾಳರು ಶ್ರೀಪಾದರುಗಳಿಂದ ಸನ್ಮಾನಿಸಲ್ಪಟ್ಟರು.

ಕೊರಂಡಿ ಸೊತ್ತಿನ ಜಪ್ತಿ— ಕೊರಂಡಿ ಶಾಂತಿನಿಕೇತನ ಸೊತ್ತಿಗೆ ಸಂಬಂಧವಾದ ಬೀರು ಪುಸ್ತಕಗಳು, ಟಿಕೇಟುಗಳು, ಹಿಂದಿನ ಮುಂದಿನ ಪ್ರೈಜ್ ಲಿಸ್ಟುಗಳು ಮತ್ತು ರೂ. 2447-13-5 ಇಷ್ಟು ಪೋಲೀಸರ ಸ್ವಾಧೀನವಾಗಿವೆಯೆಂದೂ ಆ ವಿಷಯದಲ್ಲಿ ಮುಂದಣ ವ್ಯವಸ್ಥೆಯು ಸರ್ಕಲ್ ಇನ್ಸ್‌ಪೆಕ್ಟರ ಶ್ರೀ. ಎನ್. ಸುಬ್ರಾಯರವರ ನೇತೃತ್ವದಲ್ಲಿ ನಡೆಯುತ್ತಲಿರುವುದೆಂದೂ ತಿಳಿದು ಬರುತ್ತದೆ.

ಬ್ರಹ್ಮಾವರದಲ್ಲಿ ಹೈದರಾಬಾದಿನ ಹಿಂದುಗಳಿಗೆ ಸಹಾನುಭೂತಿ— ಕಳೆದ ತಾ. 20ರಲ್ಲು ಬ್ರಹ್ಮಾವರ ಸ್ವರಾಜ್ಯ ಮೈದಾನದಲ್ಲಿ ಹಿಂದೂಗಳ ಮಹಾಸಭೆಯೊಂದು ಸುಕುಕೇರಿ ಶ್ರೀ. ಪದ್ಮನಾಭ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಹಿಂದೂ ಮಹಾಸಭೆಯ ಗೌ। ಕಾರ್ಯದರ್ಶಿಗಳಾದ ಶ್ರೀ. ಶೇಷಪ್ಪಯ್ಯನವರು ಹೈದರಾಬಾದಿನಲ್ಲಿಯ ಹಿಂದುಗಳ ದುರವಸ್ಥೆಯನ್ನು ಮನಕರಗುವಂತೆ ತಿಳಿಸಿ ಹಿಂದುಗಳು ಸಂಘಟಿತರಾಗಿ ತಮ್ಮ ಹಕ್ಕುಬಾಧ್ಯತೆಗಳಿಗಾಗಿ ಹೋರಾಡಬೇಕೆಂದೂ ಮುಂತಾಗಿ ಮಾತನಾಡಿದರು. ಇತರರ ಭಾಷಣಗಳಾದ ಬಳಿಕ ಈ ಕೆಳಗಣ ಗೊತ್ತುವಳಿಗಳು ಪಾಸಾದವು.

(1) ಹೈದರಾಬಾದು ಹಿಂದುಗಳ ವಿಚಾರದಲ್ಲಿ ನಿಜಾಮ ಸರಕಾರದ ಧೋರಣೆಯನ್ನು ಈ ಸಭೆಯು ಖಂಡಿಸುತ್ತದೆ. (2) ಹಿಂದೂ ಸಮಾಜದ ಏಳಿಗೆಗಾಗಿ ದುಡಿಯುತ್ತಿರುವ ಹಿಂದೂ ಮಹಾಸಭೆ ಮತ್ತು ಆರ್ಯ ಸಮಾಜಕ್ಕೂ ಈ ಸಭೆಯು ಸಂಪೂರ್ಣ ಬೆಂಬಲವನ್ನು ಕೊಡುವುದಲ್ಲದೆ ಈ ಸಂಸ್ಥೆಗಳ ಮಹತ್ಕಾರ್ಯಕ್ಕಾಗಿ ಆಪ್ತರನ್ನು ಹೃತ್ಪೂರ್ವಕ ವಂದಿಸುತ್ತದೆ. ಶ್ರೀ. ಬಿ. ಪಿ. ಮಾಧವರಾಯರ ಧನ್ಯವಾದ ಸಮರ್ಪಣೆಯಿಂದ ಸಭೆಯು ಮುಕ್ತಾಯವಾಯಿತು.

ಮಟ್ಟು—ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯ ಏಳನೆಯ ತಿಂಗಳ ಹಬ್ಬವು ತಾ. 28-3-39ರಲ್ಲಿ ಶ್ರೀ. ಬಾಲಕೃಷ್ಣ ಶೆಟ್ಟಿ ಬಿ. ಎ., ಎಲ್. ಎಲ್. ಬಿ. ಇವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು—ಈ ಸಂದರ್ಭದಲ್ಲಿ ಇನಾಮುಗಳನ್ನು ಹಂಚುವ ಖರ್ಚನ್ನು ಕೋಟೆ ಶ್ರೀ. ಕೃಷ್ಣನವರು ವಹಿಸಿಕೊಂಡದ್ದು ಅಭಿನಂದನೀಯ.

ಮಂಗಳೂರು

ಸಿ. ಪಿ. ಸಿ. ಕಂಪೆನಿಯ ಜನರಲ್ ಮೆನೇಜರ ಮತ್ತು ದಕ್ಷಿಣ ಕನ್ನಡ ಮೋಟರ್ ಕೆಲಸಗಾರರ ಸಂಘದವರ ಒಪ್ಪಂದ—ಸಿ. ಪಿ. ಸಿ. ಕಂಪೆನಿಯ ಜನರಲ್ ಮೆನೇಜರ ಮತ್ತು ದಕ್ಷಿಣ ಕನ್ನಡ ಮೋಟರ್ ಕೆಲಸಗಾರರ ಸಂಘದವರೊಳಗೆ ಈ ಕೆಳಗಿನ ತೀರ್ಮಾನವು ಮಾಡಲಾಗಿದೆ. ೧ ಕಂಪೆನಿಯ ಕೆಲಸಗಾರರೆಲ್ಲರೂ ಯೂನಿಯನ್ನಿನ ಸದಸ್ಯರಾಗಬಹುದು. ಆದರೆ ಜನರಲ್ ಮೆನೇಜರರ ಆಫೀಸಿನ ಸೆಕ್ರೆಟರಿಯವರು, ಎಕೌಂಟೆಂಟರು ಮತ್ತು ಇಬ್ಬರು ಸ್ಟೆನೋಗ್ರಾಫರರು ಯೂನಿಯನ್ನಿನ ಕಾರ್ಯಕಾರೀ ಮಂಡಲಿಯ ಸದಸ್ಯರಾಗಕೂಡದು. ೨. ಈಗ ಮಾಡಿರುವ ಸಸ್ಪೆನ್ಶನ್ ಮತ್ತು ವರ್ಗಾವರ್ಗಿ ಹುಕುಂಗಳು ರದ್ದು ಮಾಡಲಾಗುವವು. ಕೆಲಸದಿಂದ ಸಸ್ಪೆಂಡ್ ಮಾಡಿದ್ದವರಿಗೆ ಅವರು ಹೊರಗಿದ್ದ ಸಮಯ ಸಂಬಳವನ್ನು ಪೂರ್ತಿಯಾಗಲೀ, ಅದರ ಒಂದಂಶವಾಗಲೀ ಕೊಡುವ ಪ್ರಶ್ನೆಯನ್ನು ಜನರಲ್ ಮೆನೇಜರರಾದ ಶ್ರೀ. ಕುದ್ಪಾರ ಸ್ವೀಚ್ಚೆಗೆ ಬಿಟ್ಟಿರುವರು. ೩. ಕೆಲಸದಿಂದ ಡಿಸ್ಮಿಸ್ ಆದ ಆನಂದ್ ಅಮ್ಮಣ್ಣ ಮತ್ತು ಬಿ. ರಾಮಶೆಟ್ಟಿಯವರ ವಿಷಯ ಜಿಲ್ಲಾ ಮ್ಯಾಜಿಸ್ಟ್ರೇಟರು ಪರೀಕ್ಷಿಸುವರು. ಅವರ ತೀರ್ಮಾನವನ್ನು ಇತ್ತಂಡವೂ ಒಪ್ಪುವುದು. ೪. ಯೂನಿಯನ್ನಿನ ಕನಿಷ್ಠ ಕೇಳಿಕೆಗಳನ್ನು ಎಲ್ಲಾ ಬಸ್ಸು ಕಂಪೆನಿಗಳಿಗೂ ಕಳುಹಿಸತಕ್ಕದ್ದು. ಯೂನಿಯನಿನವರು ಈ ವಿಷಯ ತೀರ್ಮಾನಕ್ಕೆ ಬರಲಾಗದಿದ್ದರೆ, ಸರಕಾರದ ಮಜೂರ ಇಲಾಖೆಯು ಈ ಪ್ರಶ್ನೆಯನ್ನು ಪರೀಕ್ಷಿಸುವುದು. ೫. ಯೂನಿಯನ್ನು ಕೊಟ್ಟ ಮುಷ್ಕರ ನೋಟೀಸು ರದ್ದಾಗುವುದು.

ಡಾ. ಕೆ. ಕೆ. ಹೆಗ್ಡೇರು—ಇದೇ ತಾ.27ರಲ್ಲು ಸಂಜೆ ಗವರ್ನಮೆಂಟು ಕಾಲೇಜಿನ ಸಮೀಪದಲ್ಲಿಯ ಕಟ್ಟಡದಲ್ಲಿ ಡಾ. ಕೆ. ಕೆ. ಹೆಗ್ಡೆಯವರ ಹೊಸ ಡಿಸ್ಪೆನ್ಸರಿಯೊಂದು ತೆರೆಯಲಾಯಿತು. ಊರ ಪ್ರಮುಖರನೇಕರು ಈ ಸಮಾರಂಭದಲ್ಲಿ ಹಾಜರಿದ್ದರು. ಸನ್ಮಾನ್ಯ ಅತಿಥಿಗಳಿಗೆ ಟೀಪಾರ್ಟಿ ಸತ್ಕಾರವಿತ್ತು. ಶ್ರೀ. ಹೆಗ್ಡೆಯವರು ಈಗತಾನೇ ಎಮ್. ಬಿ. ಬಿ. ಎಸ್. ತೇರ್ಗಡೆಹೊಂದಿದ ಉತ್ಸಾಹಿ ತರುಣರು. ಇವರಿಗೆ ಜನಪ್ರೋತ್ಸಾಹವು ದೊರೆತು ಜನಸೇವೆ ಕಂಗಿ ಕೀರ್ತಿಗಳಿಸಲೆಂದು ಹಾರೈಕೆ.

ಶ್ರೀಮಾನ್ ಬ್ರಹ್ಮದತ್ತರಿಗೆ ಮಾನಪತ್ರ—ದಿ. ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್ ಅಜ್ಮೀರ್ ಈ ಜೀವವಿಮಾ ಸಂಸ್ಥೆಯ ಕೇಂದ್ರ ಆಫೀಸಿನ ಶಿಬಂಧಿ ಮತ್ತು ಏಜಂಟರು ಕೂಡಿ ಇದೇ ತಾ. ೧೭ರಲ್ಲು ಅಜ್ಮೀರಿನ ಕಛೇರಿರೊಳಗಿನಲ್ಲಿರುವ ಜನರಲ್ ಮೆನೇಜರರಾಗಿ ಕಾಯಂ ಮಾಡಲ್ಪಟ್ಟ ಶ್ರೀಮಾನ್ ಬ್ರಹ್ಮದತ್ತ ಬಿ. ಎಸ್. ಸಿ., ಎಲ್. ಎಲ್. ಬಿ., ಎಫ್. ಎಸ್. ಎಸ್. (ಲಂಡನ್) ಇವರಿಗೆ ಮಾನಪತ್ರ ಸಮರ್ಪಿಸಿದರು. ಸೊಸೈಟಿಯ ಚೀಫ್ ಸೂಪರಿಂಟೆಂಡೆಂಟರಾದ ಶ್ರೀ. ರಾಮಕಿಶೋರರು ಮಾನಪತ್ರವನ್ನೋದಿದರು. ಏಜನ್ಸಿ ಸುಪರಿಂಟೆಂಡೆಂಟರಾದ ಶ್ರೀ. ಎಸ್. ಮಾಧವರಾಯರು ಏಜಂಟರ ಪರವಾಗಿ ಸಪ್ರೇಮಭಾವದ ಮಾತುಗಳನ್ನಾಡಿದ ಬಳಿಕ ಶ್ರೀಮಾನ್ ಬ್ರಹ್ಮದತ್ತರು ಸಂದರ್ಭೋಚಿತಮಾತುಗಳನ್ನಾಡಿದ ಬಳಿಕ ನೆರೆದವರೆಲ್ಲರಿಗೂ ಉಪಾಹಾರ ಸತ್ಕಾರವಾಯಿತು. ಬ್ರಾಂಚ್ ಸೆಕ್ರೆಟರಿ ಶ್ರೀ ಮೋಹನಲಾಲರು ನೆರೆದವರೆಲ್ಲರಿಗೆ ಧನ್ಯವಾದಗಳನ್ನರ್ಪಿಸಿದ ನಂತರ ಸಮಾರಂಭವು ಮುಕ್ತಾಯವಾಯಿತು.

ಕಾಬಾರ್ (KARBAR)

(ಲೇಖಕರು: ಶ್ರೀ. ಬಿ. ಶಿವಪ್ಪಯ ಶೆಟ್ರು ಬಿ. ಎ. ಎಲ್. ಟಿ)

Life is an art and it must be lived as such. Only a very few people are capable of this. It is these that have a definite aim in life and are guided by definite principles. They make life whereas some others merely live the life and pass away without noise. There is a certain set of people half educated that [illegible]

೧

[ಶೆಟ್ರ ಮನೆಗೆ ತಬುರ ಬಂದಾಗ]

ಶೆಟ್ರು—ಏನಾ? ಕೋಟೆಮನೆಯವರಿಗೆ ಹೇಳಿದೆಯಾ?

ತಬುರ—ಹೌದು ಬುದ್ಧೀ—

ಶೆಟ್ರು—ಏನು ಹೇಳಿದೆ?

ತಬುರ—ಅವರ ವಕ್ಲು ಬಾಬ ತಮ್ಮಲ್ಲಿ ೞರು ತಕ್ಕೊಂಡು ಬಂದಿದ್ದ. ಅವನು

ಗುಪರು. ಈ ಸುದ್ದಿ ಮೊದಲೇ ತಿಳಿದು ಅಲ್ಲಿ ಅವರೂ ಜನಕೂಡಿಸಿದ್ದರು. ಉಭಯ ಪಕ್ಷಕ್ಕೂ ಕೈಕೈಯಾಗಿ ಕೋಟೆಯ ಕಡೆಯಲ್ಲಿ ಒಂದು ಹೆಣವು ಬಿದ್ದು ದೊಡ್ಡ ಕ್ರಿಮಿನಲ್ ಕೇಸ್ ನಡಿಯುವುದು–ಶೆಟ್ರಿಗೆ ಶಿಕ್ಷೆಯಾಗುವುದು–ಅಫೀಲ್‌ನಲ್ಲಿ ಬಿಟ್ಟು ಹೋಗುವುದು.]

0 0 0 0

ಶೆಟ್ರ ಅಕ್ಕ ಲಿಂಗುಶೆಡ್ತೇರು (ತಮ್ಮದಿಗ)—ಅಯ್ಯೊ! ಹೀಗೆ ಆಸ್ತಿಗೆ ಸಾಯುತ್ತಾಬಂತಲ್ಲಾ–ಒಟ್ಟಿಗೆ ಈ ಕಾರುನಲ್ಲಿ ಕುಟುಂಬವೇ ಮುಳುಗುವ ಹಾಗಾಯಿತಲ್ಲಾ!—

ಶೆಟ್ರು—ಚಿಂತೆಯಿಲ್ಲ ಅಕ್ಕಾ—ಮದ್ರಾಸ್ ಹೈಕೋರ್ಟಿನ ವರೆಗೆ ನನ್ನ ಕಾಬಾರ್ ಮುಟ್ಟಿತು ಇಲ್ಲಾ? ಅಲ್ಲಿ ದಿಗ್ವಿಜಯ ಮಾಡಿ ಹೂಮಾಲೆ ಹಾಕ್ಕೊಂಡು ಮನೆ ಪ್ರವೇಶಮಾಡಿದ್ನೋ ಇಲ್ವೋ? ಹಿಂದೆ ಮನೆತನದಲ್ಲಿ ಇಷ್ಟು ಪ್ರತಾಪತೋರಿದ ಗಂಡು ಯಾರಾದ್ರೂ ಇದ್ದಾರಾ? ಹೇಳು. ಇನ್ನು ಆಸ್ತಿ ಪಾಸ್ತಿ ಸಂಗ್ತಿ–ಬಿಡು–ಯಾರ್‍ಯಾರಿಗೆ ಏನೇನು ಆಗಬೇಕೋ—ಇದೆಲ್ಲಾ ಹಣೆಬರಹ–ನಳನಿಗೆ, ರಾಮನಿಗೆ, ಹರಿಶ್ಚಂದ್ರನಿಗೆ, ಪಾಂಡವರಿಗೆ ಬಿಟ್ಟಿತ್ತಾ ಅದು?—ಇನ್ನು ಈ ಆಸ್ತಿಯನ್ನು ಇಟ್ಟುಕೊಂಡು ಕಡೆಕೂಡಿ ಮುಂದೆ ಹೋಹಾಗಿಲ್ಲ–ಕುಟ್ಟಿ ಮಾರಿದ್ರೆ ಏನಾದ್ರೂ ಉಳಿದೀತು.

0 0 0 0

(ಪೇಟೆಯಲ್ಲಿ ಕೆಲವರುಷದ ನಂತ್ರ ಅಂಗಡಿಯಲ್ಲಿ ಶೆಟ್ಟರ ಅಳಿಯ ರಂಗ ಮತ್ತು ಬಡ ತಮ್ಮ ಮಾವ ಶೆಟ್ಟರ ಮಾಜಿ ದರ್ಬಾರಿನ ವಿಷಯ)

ರಂಗ—ಸ್ವಾಮಿ, ಸಾಹುಕಾರರೇ—ನಮ್ಮ ಮಾವನ ಕಾಬಾರ್ ಅಂದರೆ ಹಾಸ್ತಿತ್ ಮೊದಲ!—ತಾಲೂಕಿಗೆ ಹೋದ ಕುಚೇ! ಒಂದು ವರ್ಷ ಪರಿಯಾಯ ಇಪ್ಪತ್ತೈದು ಸಾವಿರ ಹೊರೆ ಕಟ್ಟಿಂಬ್ರು. ಮಠದವ್ರು ಅವರನ್ನ ಆನೆ ಮ್ಯಂಡ್ ಬಿರ್ದಾವಳಿ ಮೆರವಣೀಗೇಲಿ ಕರ್ಕೊಂಡುಹೋಗಿದ್ರಂತೆ. ಹೆಡಿಗೇಲೇ ಸಂಕಜ್ಜಾಯದ ಕಟ್ಟುಗಳು ಬಂದಿದ್ವಂತೆ! ಜನಗಳ ಮರಿಗೆ ತುಂಬಾ ಪಂಚಕಜ್ಜಾಯ!

ಸಾಹುಕಾರ—ಅದು ನಿನ್ನೇದ್ದು ಇವಗೇನು ಪ್ರಯೋಜನ–ಅವರು ಇತಿಹಾಸದಲ್ಲಿ ಬಿದ್ದಿದ್ದಾರೋ?–ಆ ಕಾಬಾರನ್ನು ಯಾವ ಬೇಂಕಿನಲ್ಲಿ ಇಟ್ಟಿದ್ದಾರೇ–ಅವರಲ್ಲಿ ಮಗೇನಾದರೂ ಕ್ರೆಡಿಟ್ ಉಂಟಾ? ಸುಮ್ಮನೆ ನೀವು ಈ ಒಣ ಹರಟೆ ಹೊಡೆದರೆ ನಿಮ್ಮ ಹೊಟ್ಟೆ ತುಂಬಾದೀತೇ? ಹೋದ ಆಸ್ತಿ ಪಾಸ್ತಿ ಹಿಂದೆ ಸಿಕ್ಕೀತೇ? ಅಲ್ಲದ ಸುದ ಕಾಬಾರ್‌ನೂಡಿ ಮನೆ ತೆಗೆದುಕೊಂಡ ನಿಮ್ಮ ಹಿರಿಯರ ಸ್ತೋತ್ರ ಬಿಡಿ. ಏನಾದರೂ ಒಂದು ಉದ್ಯೋಗ ಹಿಡಿ. ಏನೋ ಮಹತ್ಕಾರ್ಯಮಾಡಿ ಆದರ್ಶ ಪುರುಷರಾಗಿದ್ದಾರೋ ಏನೋ ಎಂಬ ಹಾಗೆ ಒಂದು ದೊಡ್ಡ ಗೋರಿ ಕಟ್ಟಿದ್ದೀರಲ್ಲಾ ಅವರನ್ನು ಸುಟ್ಟಲ್ಲಿ! ಅಲ್ಲಿಗೆ ಯಾರಾದರೂ ಯಾತ್ರಿಕರು ಬರುತ್ತಾರಾ? ಯಾವ ಕಾಬಾರಿಗೆ ಹೊಗಳಬೇಕು ಯಾವುದಕ್ಕೆ ತೆಗಳಬೇಕು ಎಂಬ ಸಾರಾಸಾರ ವಿಚಾರವೇ ಇಲ್ಲವಲ್ಲ ನಮ್ಮ ಜನರಲ್ಲಿ! ಇವೇ ವೈಭವವಲ್ಲದ ಗತವೈಭವದ ಸ್ಮರಣೆಯಿಂದ–ಮಿಥ್ಯಾಭಿಮಾನದ ಮಿಥ್ಯಾಭಿಪ್ರಾಯದ ಹಾದಿ ಹಿಡಿಯುವುದರಿಂದಲೇ ನಮ್ಮ ಅವ

Supplement to this issue of Navayuga dated 30-3-39

ಅಂತರಂಗದ ಆರನೆಯ ಯುಗಾದಿ ವಿಶೇಷ ಸ್ಪರ್ಧೆ

ನಾಲ್ಕಾಣೆಗಳಿಗೆ 125/ ರೂಪಾಯಿಗಳನ್ನು ಪಡೆಯಿರಿ.

ಪ್ರಥಮ ಬಹುಮಾನ ರೂ. ೧೦೦ [ನಗದು]

ದ್ವಿತೀಯ ಬಹುಮಾನ ರೂ. ೨೫ (ಪುಸ್ತಕಗಳು)

∴ ಈ ಸ್ಪರ್ಧೆಯ ಉತ್ತರವು ಅಂತರಂಗದ ಪ್ರಧಾನ ಸಂಪಾದಕರ ಬಳಿ ಮೊಹರು ಮಾಡಿಡಲಾಗಿದೆ.

∴ ಅದಕ್ಕೆ ಸಂಪೂರ್ಣ ಸರಿಹೋಲುವ ಉತ್ತರಕ್ಕೆ ಪ್ರಥಮ ಬಹುಮಾನವೂ, ಒಂದು ತಪ್ಪಿರುವವುಗಳಿಗೆ ಎರಡನೇ ಬಹುಮಾನವೂ ಕೊಡಲ್ಪಡುವುದು.

ಬಹುಮಾನ ಪುಸ್ತಕಗಳ ಪಟ್ಟಿಯನ್ನು ಉತ್ತರ ಪ್ರಕಟಿಸುವ ಸಂಚಿಕೆಯಲ್ಲಿಯೇ ಕೊಡಲಾಗುವುದು. ಅದರಲ್ಲಿ ಆರಿಸಿ ಯಾವುದನ್ನಾದರೂ ಪಡಕೊಳ್ಳಬಹುದು.

∴ ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾದಲ್ಲಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಸರಿಸಮಾನವಾಗಿ ಹಂಚಲ್ಪಡುವುವು.

∴ ಬಹುಮಾನವನ್ನು ಹಂಚುವ ವಿಚಾರದಲ್ಲಿ ಸ್ಪರ್ಧೆಯ ಮೆನೇಜರರ ನಿರ್ಣಯೇ ಕೊನೆಯದು. ಈ ವಿಚಾರದಲ್ಲಿ ಯಾವ ಪತ್ರವ್ಯವಹಾರಗಳಿಗೂ ಅವಕಾಶವಿಲ್ಲ.

∴ **ಪ್ರತಿ ಉತ್ತರಕ್ಕೂ ಪ್ರವೇಶಧನ ನಾಲ್ಕಾಣೆ.**

∴ **ಒಬ್ಬನು ಎಷ್ಟೂ ಉತ್ತರಗಳನ್ನು ಕಳುಹಿಸ ಬಹುದು. ಒಂದು ರೂಪಾಯಿಗೆ ಐದು ಉತ್ತರಗಳನ್ನು ಕಳುಹಿಸಬಹುದಾಗಿದೆ.**

ಗೆಳೆಯರ ತಂಡದ ಸದಸ್ಯರು ಒಂದು ರೂಪಾಯಿಗೆ ಎಂಟುಉತ್ತರಗಳನ್ನು ಕಳುಹಿಸಬಹುದು.

∴ ಪ್ರವೇಶ ಧನವನ್ನು ಪೋಸ್ಟಲ್ ಸ್ಟ್ಯಾಂಪು ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿ ಆರ್ಡರ್ ಮೂಲಕ ರವಾನಿಸಬಹುದು.

∴ ಉತ್ತರವನ್ನು ಬರೆಯುವವರು ಮೇ ೭ರೊಳಗೆ ಬರೆದು ಕಳುಹಿಸಬೇಕು (ಅಂದರೆ ಸಪ್ತ ತಲಪಬೇಕು) ನಂತರ ಈ ಸ್ಪರ್ಧೆಗಾಗಿ ಕಳುಹಿಸುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ.

∴ ಸರಿಯಾದ ಉತ್ತರವನ್ನು ಮೇ ೧೫ರ "ಅಂತರಂಗ"ದಲ್ಲಿ ಪ್ರಕಟಿಸಲಾಗುತ್ತದೆ.

∴ ಸ್ಪರ್ಧೆಯ ವಿಷಯದಲ್ಲಿ ಅನಾವಶ್ಯಕ ಪತ್ರವ್ಯವಹಾರವನ್ನು ಮಾಡಲಾಗುವುದಿಲ್ಲ.

∴ ಈ ಸ್ಪರ್ಧೆಗೆ ಕೂಪನುಗಳ ನಿರ್ಬಂಧವಿಲ್ಲ. ಸರಿಯಾಗಿ ಖಾಲಿ ಕಾಗದದಲ್ಲಿ ಬರೆದು ತಮ್ಮ ಹೆಸರು ವಿಳಾಸವನ್ನು ಸ್ಪಷ್ಟವಾಗಿ ಬರೆದು ಕಳುಹಿಸಬಹುದು.

ಉತ್ತರ ಕೊಡುವವರು ತಮ್ಮ ಪೂರ್ಣ ವಿಳಾಸವನ್ನು ಬರೆಯತಕ್ಕದ್ದು.

ಮೆನೇಜರ್. ಅಂತರಂಗ ಸ್ಪರ್ಧೆ. ಉಡುಪಿ.

ಲ್ಲಿತ್ತು? ಇದೇ ಮಾತು ಹೇಳು. ನೀನು ಹೆದರಬೇಡ. ನನ್ನಲ್ಲಿ ಬಂದ ದೂರನ್ನು ಅವ ನಿಂಪಡಿಸಿಕೊಡಬೇಕು–ಆಕ್ಷೇಪ ಏನಾದ್ರೂ ಇದ್ದರೆ ಇಲ್ಲಿ ಬಂದು ಹೇಳಿಕೊಳ್ಳಬೇಕು–ತಪ್ಪಿದರೆ ತೊಂದ್ರೆಯಾದೀತು–ಅಂತ ನಾನು ಮತ್ತೊಮ್ಮೆ ಎಚ್ಚರಕೊಟ್ಟೇಂತ ಹೇಳು.

[ತಬುರನು ಧೈರ್ಯದಿಂದ ಹೊರಟು ಹೋಗಿ, ಹೇಳಿ, ಪೆಟ್ಟುತಿಂದುಕೊಂಡು ಹಿಂತಿರುಗಿ ಬಂದು]

SEASON DEPOSITS ARE ACCEPTED

at 3½ per cent per annum.

Further particulars on application to any of

our thirty-five Offices.

ಮೈಸೂರು ಪತ್ರ

(ನವಯುಗದ ವಾತ್ತಾ೯ದಾರರಿಂದ)

ಮೈಸೂರು ಮಾರ್ಚಿ ೨೬.

ಹೆಂಗಸಿನ ಸಾಹಸ—ಹಾಸನದ ಆನೆಕೆರೆಯಲ್ಲಿ ವಾಸವಾಗಿರುವ ಶ್ರೀಮತಿ ರೇಣುಕಮ್ಮನೆಂಬುವವರು ತಮ್ಮ ಪತಿಯೊಡನೆ ೫ ದಿನಗಳಲ್ಲಿ 200 ಮೈಲಿಗಳನ್ನು ಬೈಸಿಕಲ್ ಸವಾರಿ ಮಾಡಿ ಬ್ರಹ್ಮೇಣ ಪರ್ವತವನ್ನು ಸುತ್ತಿ ಬಂದರೆಂದು ಸಾಹಸ ತಿಳಿಸಲು ಸಂತೋಷವಾಗುತ್ತೆ.

ಜಟ್ಕಾ ಗಾಡಿಗಳಿಗೆ ಗಂಟೆ—ಹೊಡೆಯುವವರು ಹೇ, ಹೇ, ಎಂಬುದಾಗಿ ...ತ್ತಾರೆ, ಇದರ ಬದಲು ಒಂದು ಗಂಟೆಯ... ಗಾಡಿಗಳನ್ನು ಹೊಡೆಯಬೇಕು ಎಂಬ ಸಲ...ವನ್ನು ಬೆಂಗಳೂರು ಪೌರಸಭೆಯ ಉಪಾ...ಯಾದ ಶ್ರೀಮತಿ ಆರ್. ಕಲ್ಯಾಣಮ್ಮನವರು ... ನಡೆದ ಸಭೆಯಲ್ಲಿ ತರಲು ಅದು ಸರ್ವಾನುಮತ...ವಾಯಿತು. ಉತ್ತರ ಇಂಡಿಯಾದಲ್ಲಿ ಗಾಡಿ ...ಡೆಯುವವರು ಜನಗಳ ಗುಂಪಿನಲ್ಲಿ ಹೋಗ... ಮಹಾರಾಜ್, ಮಹಾರಾಜ ಎಂದು ಗೌರವಯು...ಗಿ ಕೂಗುತ್ತಾರೆ, ಸ್ವಲ್ಪ ಗೌರವವುಳ್ಳವರು ಸ... ಮಹಾತ್ಮಾಜಿ, ಮಹಾತ್ಮಾಜಿ ಎಂದು ಕೂಗು... ನಮ್ಮ ಮೈಸೂರು ಬೆಂಗಳೂರು ನಗರಗಳಲ್ಲಿ ಹೊಡೆವವರು ಹೇ, ಹೇ, ಲಕ್, ಲಕ್, ಎಂದ...ವು ವಿಧವಾದ ಹೇಸಿಗೆಯಿಂದ ಕರೆಯುತ್ತಾರೆ, ...ನ್ನು ತಪ್ಪಿಸಿ ಗಂಟೆಗಳನ್ನಿದುವಂತೆ ಮಾಡಿದ್ದು ನಂದನಾರ್ಹವಾದುದು.

ಸಭೆ ನಡೆಸಕೂಡದು—ಮೈಸೂ...ಗರದ ಕೆಲವು ಸಾರ್ವಜನಿಕ ಭಾಗಗಳಲ್ಲಿ ಸಭೆ ಕೂಡದೆಂದು ಹಿಂದಿದ್ದ ಸರಕಾರದ ಆಜ್ಞೆ ... ಮಾರ್ಚಿ ೨೬ರಿಂದ ಮತ್ತೆ ಆರು ತಿಂಗಳು ಮುಂದುವರಿಸಲಾಗಿದೆಯೆಂದು ಡಿ. ಮ್ಯ ಆಜ್ಞೆ...ಯು ತಿಳಿಸುತ್ತದೆ.

ವಾರ್ಷಿಕೋತ್ಸವಗಳು— ಮೈ... ಲೇಡಿಸ್ ಕ್ಲಬ್ಬಿನ ವಾರ್ಷಿಕೋತ್ಸವವು, ಶ್ರೀ ...ಹಾರಾಣಿಯವರ ಘನ ಅಧ್ಯಕ್ಷತೆಯಲ್ಲಿ ನಡೆದ ...ಬ್ಬಿನ ವಾರ್ಷಿಕೋತ್ಸವಕ್ಕೆ ನಡೆಸಿದ ಆಟಪಾ...ಲ್ಲಿ ಗೆದ್ದವರಿಗೆ ಬಹುಮಾನ ಹಂಚಿದ ಮೇಲೆ, ...ಕ್ಷರು ಸಮಯೋಚಿತ ವಿಚಾರಪೂರ್ಣವಾದ ಭಾಷಣ...ಡಿದ ಮೇಲೆ ಮುಂದಿನ ಸಾಲಿಗೆ ಅಧ್ಯಕ್ಷೆ ಉ...ಧ್ಯಕ್ಷೆ ಮತ್ತು ಗೌ| ಕಾರ್ಯದರ್ಶಿಗಳನ್ನು ... ಯಿಸಿದ ಮೇಲೆ ಶ್ರೀಮನ್ಮಹಾರಾಜರ ಪ್ರಾರ್ಥನೆ...ಡನೆ ಸಭೆಯು ಚದರಿತು. ಇತ್ತಲಾಗಿ ...ಬಿ ಸಂಜೆ ಶಿಶುವಿಹಾರದ ವಾರ್ಷಿಕೋತ್ಸವವು ರಾಜಕುಮಾರಿ ಲೀಲಾವತಿಯವರ ಅಧ್ಯಕ್ಷತೆಯ...ಲು ವಿಜೃಂಭಣೆಯಿಂದ ನೆರವೇರಿತು.

ಹರಿಜನರಿಗೆ ಪ್ರವೇಶ—ಬೇಲೂರ...ತ್ತು ಶ್ರವಣಬೆಳಗೊಳದಲ್ಲಿರುವ ಗೋಮಟೇಶ್ವ...ರಸ್ಥಾನವೊಳಗೆ ಇತರ ಹಿಂದುಳಿದ ವರ್ಗದ... ಎಲ್ಲಿಯ ವರೆಗೆ ಪ್ರವೇಶಿಸಬಹುದೋ, ಅಲ್ಲಿಯ...ಗೆ ಹರಿಜನರೂ ಬರಬಹುದೆಂದು ಸರಕಾರದ...ಯೊಂದು ತಿಳಿಸುತ್ತದೆ. ಇದಕ್ಕೆ ಸರಕಾರದ... ವಂದಿಸಲಾಗಿದೆ.

ವಾರ್ಧಾ ಶಿಕ್ಷಣ ಸಮಿತಿಯ ವ...ತಗಡೂರಿನಲ್ಲಿ ಸ್ಥಾಪಿಸಲಾಗಿರುವ 'ವಾರ್ಧಾ ಪದ್ಧತಿ ಶಾಲೆ'ಯ ಜನವರಿ ಮತ್ತು ಫೆಬ್ರವರಿ...ಗಳ ವರದಿಯನ್ನು ನೋಡಲಾಗಿ ಅನೇಕ ...ಳು ತಿಳಿದು ಬಂದವು. ಇವುಗಳಲ್ಲಿ ಅತಿ ಮು...ದುದೇನೆಂದರೆ 'ಕಳೆದ ಎರಡು ತಿಂಗಳಲ್ಲಿ ...ದ ಎಷ್ಟು ಗಜ ಮತ್ತು ನೂಲು ಬಾಧಿ... ಶಾಲೆಯಲ್ಲಿ ಹುಡುಗರ ಓದುವಿಕೆ, ಅಕ್ಷರಾಭ್ಯಾಸ ಡ್ರಿಲ್ ಮಾಡುವುದು ಬೇರೆ ತರಹೆ ಕಾರ್ಯಕ್ಕಾಗಿ (ಆ ಶಿಕ್ಷಣಕ್ಕೆ ಕೆಲಸ ಮಾಡುತ್ತಿದ್ದ) ಶ್ರೀಯುತ ತಗಡೂರು ರಾಮಚಂದ್ರರಾಯರು ಗ್ರಾಮವನ್ನೂ ಬಿಟ್ಟದ್ದು ಬ್ರಹ್ಮಚಾರಿ ಉಪಾಧ್ಯಾಯರುಗಳಿಗೆ ... ಕಟ್ಟಿದ್ದು, ಮಕ್ಕಳುಗಳು ತರಕಾರಿ ತೋಟವನ್ನು ಚೆನ್ನಾಗಿಟ್ಟಿರುವುದು, ಸರ್ಕಾರಿ ಶಾಲೆಗಳಂತೆ ಬೇಸಿಗೆಯಲ್ಲಿ ಶಾಲೆಯನ್ನು ಮುಚ್ಚುವುದು'' ಇವೇ ಮುಂತಾದ ಇತರ ಮುಖ್ಯ ವಿಷಯಗಳು ಆದರವಾಗಿವೆ. ಮೇಲ್ಕಂಡ ಶಾಲೆಯ ಸಮಿತಿಯ ಕಾರ್ಯನಿರ್ವಾಹಕ ಸಮಿತಿಯ ಸಭೆಯೊಂದು ನಡೆದು, ಆ ಶಾಲೆಗೆ ಸಹಾಯಕರಾಗಿದ್ದು ಗತಿಸಿಹೋದ ಶ್ರೀ ಬಾಳ್ಕೆ ಭೀಮರಾವ್, ಮತ್ತು ಕನ್ನಡದ ಸೇವಕರಾಗಿದ್ದು ಮಳಾ...

...ಯ ಮತ್ತು ಮೈಸೂರಿನ ಶ್ರೀ. ಹೆಚ್ ಸಿ. ದಾಸಪ್ಪನವರ ಹೆಸರುಗಳನ್ನೂ ಸೂಚಿಸಲಾಗಿದೆ. ಇವರೆ ಇತ್ತೀಚಿಗೆ ವಿಚಾರ ಮಾಡಿದ್ದಲ್ಲಿ ಮೈಸೂರಿನ ಶ್ರೀ. ಹೆಚ್. ಸಿ. ದಾಸಪ್ಪನವರಿಗೆ ಬಹುಮತ ದೊರಕುವುದರಿಂದ ಬಹುಶಃ ಅವರೇ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಸರ್ವಾನುಮತದಿಂದ ಚುನಾಯಿತರಾಗ ಬಹುದೆಂದು ಶ್ರೀ. ಟಿ. ಸಿದ್ಧಲಿಂಗಯ್ಯನವರು ಒಂದು ಹೇಳಿಕೆಯಲ್ಲಿ ತಿಳಿಸುತ್ತಾರೆ. ಅಧಿಕಾರಯುತವಾಗಿ ಯಾವುದೂ ಪ್ರಕಟವಾಗಿಲ್ಲ. ಎಪ್ರಿಲ್ ೫. ೨ನೇ ದಿನ ಬ್ಯಾಲಟ್ ಮೂಲಕ ಚುನಾವಣೆ ನಡೆದು ಫಲಿತಾಂಶ ತಿಳಿಸಲಾಗುತ್ತೆ.

ಪ್ರಕಟನೆ

ಕೆಲವು ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು, ಔಷಧ ಭಂಡಾರ, ಮತ್ತು ಇತರ ಕೆಲವು ವ್ಯಾಪಾರಿ ಸಂಸ್ಥೆಗಳ ಅಪೇಕ್ಷಾನುಸಾರವಾಗಿ ನಾವು ಜಾಹೀರಾತು ಏಜನ್ಸಿ ಶಾಖೆ(Advertising Agency Department) ಯನ್ನು ಪ್ರಾರಂಭಿಸಿರುತ್ತೇವೆ. ಕರ್ನಾಟಕದ ಯಾ ಹಿಂದುಸ್ಥಾನದ ಯಾವುದಾದರೂ ದಿನಪತ್ರಿಕೆ ವಾರಪತ್ರಿಕೆ ಮಾಸಪತ್ರಿ...

ಅಂತರಂಗದ
ಆರನೆಯ ಯುಗಾದಿ ವಿಶೇಷ ಸ್ಪರ್ಧೆ

ಪ್ರಥಮ ಬಹುಮಾನ	ದ್ವಿತೀಯ ಬಹುಮಾನ
ರೂಪಾಯಿ 100 (ನಗದಿ)	25 ರೂಪಾಯಿ (ಪುಸ್ತಕಗಳು)

ಅದೊಂದು ವಿಶೇಷತರದ ಪರಿಸ್ಥಿತಿಯಲ್ಲಿ ಹಿಂದೂಸ್ಥಾನಕ್ಕೆ ಭಾರತೀಯರಲ್ಲಿ ಒಬ್ಬರನ್ನು ಸರ್ವಾಧಿಕಾರಿಯನ್ನಾಗಿ ನೇಮಿಸಬೇಕೆಂದು ಬ್ರಿಟಿಷ್ ಪಾರ್ಲಿಮೆಂಟಿನವರು ನಿರ್ಣಯಿಸಿ; ಯಾರನ್ನು ನೇಮಿಸಬೇಕೆಂದು ತಿಳಿಯುವುದಕ್ಕಾಗಿ, ಪಾರ್ಲಿಮೆಂಟಿನವರು ಮಹಾತ್ಮಾ ಗಾಂಧಿಯವರ ಹತ್ತಿರ ಬಂದು, "ಭಾರತೀಯರಲ್ಲಿ ಮೂರು ಜನರನ್ನು ಸರ್ವಾಧಿಕಾರಿ ಸ್ಥಾನಕ್ಕೆ ಶಿಫಾರಸು ಮಾಡಬೇಕು. ಅವರಲ್ಲಿ ಯಾರಾದರೊಬ್ಬರನ್ನು ನಾವು ಆ ಸ್ಥಾನಕ್ಕೆ ನೇಮಿಸುತ್ತೇವೆ" ಎಂದು ಕೇಳಿದರೆ ಈ ಕೆಳಗಿನ ಹನ್ನೆರಡು ಜನರಲ್ಲಿ ಯಾವ ಮೂರು ಜನರನ್ನು ಮಹಾತ್ಮರು ಶಿಫಾರಸು ಮಾಡಬಹುದು ಎಂಬುದನ್ನು ತಿಳಿಸಿರಿ.

೧ ಸುಭಾಷ ಚಂದ್ರ ಬೋಸ್	೭ ಸರ್ದಾರ್ ವಲ್ಲಭಭಾಯಿ ಪಟೇಲ್
೨ ಬಾಬು ರಾಜೇಂದ್ರ ಪ್ರಸಾದ	೮ ಪಟ್ಟಾಭಿಸೀತಾರಾಮಯ್ಯ
೩ ಪಂಡಿತ ಜವಾಹರಲಾಲ ನೆಹರು	೯ ಮೌಲಾನಾ ಅಬುಲ್ ಕಲಂ ಆಜಾದ್
೪ ಸಿ. ರಾಜಗೋಪಾಲಾಚಾರ್ಯ	೧೦ ಎಸ್. ಶ್ರೀನಿವಾಸ ಅಯ್ಯಂಗಾರ್
೫ ಖಾನ್ ಅಬ್ದುಲ್ ಗಫಾರ್ ಖಾನ್	೧೧ ವಿ. ಶ್ರೀನಿವಾಸ ಶಾಸ್ತ್ರಿ
೬ ಸರೋಜಿನಿ ನಾಯಡು	೧೨ ತೇಜಬಹಾದುರ್ ಸಪ್ರು

ಈ ರೀತಿಯಲ್ಲಿ ಜವಾಬು ಕಳುಹಿಸಬೇಕು.

ಹೆಸರು........................

ವಿಳಾಸ........................

...ಪದ್ಮನಾಭ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಹಿಂದೂ ಮಹಾಸಭೆಯ ಗೌ| ಕಾರ್ಯದರ್ಶಿಗಳಾದ ಶ್ರೀ. ಶೇಷಪ್ಪಯ್ಯನವರು ಹೈದರಾಬಾದಿನಲ್ಲಿಯ ಹಿಂದುಗಳ ದುರವಸ್ಥೆಯನ್ನು ಮನಕರಗುವಂತೆ ತಿಳಿಸಿ ಹಿಂದುಗಳು ಸಂಘಟಿತರಾಗಿ ತಮ್ಮ ಹಕ್ಕುಬಾಧ್ಯತೆಗಳಿಗಾಗಿ ಹೋರಾಡಬೇಕೆಂದೂ ಮುಂತಾಗಿ ಮಾತನಾಡಿದರು. ಇತರರ ಭಾಷಣಗಳಾದ ಬಳಿಕ ಈ ಕೆಳಗಿನ ಠರಾವುಗಳು ಪಾಸಾದವು.

(1) ಹೈದರಾಬಾದು ಹಿಂದುಗಳ ವಿಚಾರದಲ್ಲಿ ನಿಜಾಮ ಸರಕಾರದ ಧೋರಣೆಯನ್ನು ಈ ಸಭೆಯು ಖಂಡಿಸುತ್ತದೆ. (2) ಹಿಂದೂ ಸಮಾಜದ ಏಳಿಗೆಗಾಗಿ ದುಡಿಯುತ್ತಿರುವ ಹಿಂದೂ ಮಹಾಸಭೆ ಮತ್ತು ಆರ್ಯ ಸಮಾಜಕ್ಕೆ ಈ ಸಭೆಯು ಸಂಪೂರ್ಣ ಬೆಂ...

ಮಂಗಳೂರು

ಸಿ. ಪಿ. ಸಿ. ಕಂಪೆನಿಯ ಜನರಲ್ ಮೆನೇಜರ ಮತ್ತು ದಕ್ಷಿಣ ಕನ್ನಡ ಮೋಟರ್ ಕೆಲಸಗಾರರ ಸಂಘದವರ ಒಪ್ಪಂದ—ಸಿ. ಪಿ. ಸಿ. ಕಂಪೆನಿಯ ಜನರಲ್ ಮೆನೇಜರ ಮತ್ತು ದಕ್ಷಿಣ ಕನ್ನಡ ಮೋಟರ್ ಕೆಲ...

...ಬಲವನ್ನು ಕೊಡುವುದಲ್ಲದೆ ಈ ಸಂಸ್ಥೆಗಳ ಮಹತ್ಕಾರ್ಯಕ್ಕಾಗಿ ಅವುಗಳನ್ನು ಹೃತ್ಪೂರ್ವಕ ವಂದಿಸುತ್ತದೆ. ಶ್ರೀ. ಬಿ. ವಿ. ಮಾಧವರಾಯರ ಧನ್ಯವಾದ ಸಮರ್ಪಣೆಯಿಂದ ಸಭೆಯು ಮುಕ್ತಾಯವಾಯಿತು.

ಪುಟ್ಟೂ—ಇಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲೆಯ ಏಳನೆಯ ತಿಂಗಳ ಹಬ್ಬವು ತಾ. 28-3-39ರಲ್ಲಿ ಶ್ರೀ. ಬಾಲಕೃಷ್ಣ ಸಟ್ಟಿ ಬಿ. ಎ., ಎಲ್. ಎಲ್. ಬಿ. ಇವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು—ಈ ಸಂದರ್ಭದಲ್ಲಿ ಇನಾಮುಗಳನ್ನು ಹಂಚುವ ಖರ್ಚನ್ನು ಕೊಟ್ಟ ಶ್ರೀ. ಕೃಷ್ಣನವರು ವಹಿಸಿಕೊಂಡದ್ದು ಅಭಿನಂದನೀಯ.

ಕಾಬಾರ್ (KARBAR)

(ಲೇಖಕರು: ಶ್ರೀ. ಬಿ. ಶಿವಪ್ಪಯ್ಯ ಶೆಟ್ರು ಬಿ. ಎ. ಎಲ್, ಬಿ)

Life is an art and it must be lived as such. Only a very few people are capable of this. It is these that have a definite aim in life and are guided by definite principles. They make life whereas some others merely live the life and pass away without noise. There is a certain set of people half educated that have got a wrong idea of greatness. They do not live for any principle. They want to be spectacular and sensational-they are aggressive-they are always stubborn and implacable-they require always a sense of victory-they do not feel *themselves* except in opposition-they require a roll of the drums to call their powers into full play. 'They are fond of happenings which freeze the blood or set the nerves on edge. They want a world full of bustle and turmoil, full of hectic pleasure and unmanning sin'. Their 'ism' is no good for themselves or for the world. In the long run it recoils on them and destroys them completely. They are fond of beating and burning. 'They live far worse than animals. They are strangey ignorant of History and Biography. History proves to us that every nation which lives for *animal power* and *animal pleasures* comes to ruin; and biography proves to us that every man and every woman who attempts to live like an animal at last becomes in old age, hard bitter and full of miseries. This testimony of experience is universal. It is the literature of every land, of every age in the past.' Do we not see with our eyes so many bullies-their so-called glory a d their tragedy? They beat and are beaten, they burn and are burnt, they murder and are murdered-thus proving Newton's law-every action has a reaction equal and opposite-the greater the action, the greater the reaction. This our people miscall 'Karbar' especially in villages and admire it most without knowing where it leads. Let them study the march of man from the age of Barbarism to the League of nations. **'Man is only happy and at peace to the end of his days when he lives, not as a dull animal always thinking of the flesh, but as an enquiring, adventuring, and loyal spirit, always growing in knowledge and love.'** So in the short span of life that is allotted to us let us do all the good that is in our power. Evil may be sweet in the beginning, but surely bitter at the end. Wherever there is wine, woman and dice the bad man follows; but wherever there is knowledge, virtue and beauty the good man finds a home. The bad man dies but the good man lives in history.

೧

[ಶೆಟ್ರ ಮನೆಗೆ ತಬುರ ಬಂದಾಗ]

ಶೆಟ್ರು—ಏನಾ? ಕೋಟೆಮನೆಯವರಿಗೆ ಹೇಳಿದೆಯಾ?

ತಬುರ—ಹೌದು ಬುದ್ಧೀ—

ಶೆಟ್ರು—ಏನು ಹೇಳಿದೆ?

ತಬುರ—ಅವರ ಪಕ್ಲ ಬಾಬ ತಮ್ಮಲ್ಲಿ ದೂರು ತಕ್ಕೊಂಡು ಬಂದಿದ್ದ. ಅವನು ಎಷ್ಟೋ ವರುಷಗಳಿಂದ ಗೇಣಿ ಕೊಡುತ್ತ ಬಂದಿದ್ದರೂ ರಶೀದಿ ಕೊಡದೆ ಅವರು ಅವನನ್ನು ಭಂಗಪಡಿಸುವುದು ಸಮವಲ್ಲಾಂತ ತಮ್ಮ ಅಪ್ಪಣೆ ಆಗಿದೆ—ಕೂಡ್ಲೆ ರಶೀದಿ ಕೊಡದಿದ್ದರೆ ತೊಂದ್ರೆ ಬಂದೀತು—ನಮ್ಮ ಧನೀರು ಬಿಡಲಿಕ್ಕಿಲ್ಲಾಂತ ಹೇಳಿದೆ.

ಶೆಟ್ರು—ಅವಕ್ಕೆ ಏನು ಹೇಳಿದ್ರು?

ತಬುರ—ಬುದ್ಧೀ! ಅವರು ಬಹಳ ಉಡಾಫೆ ಮಾತಾಡಿಬಿಟ್ಟರು—ನನಗೆ ಎಲ್ಲಿಯಾದರೂ ಪೆಟ್ಟು-ಗಿಟ್ಟು ಬೀಳುತ್ತೋ ಎಂದು ಹೆದ್ರಿ ಕಂಗಾಲ್! 'ಹೋಗಾ, ನಿನ್ನ ಶೆಟ್ರನ್ನು ಯಾರು ಕೇಳುತ್ತಾನೆ? ನಮ್ಮ ಒಕ್ಲಿಗೂ ನನಗೂ ನ್ಯಾಯ ಮಾಡ್ಲಿಕ್ಕೆ ನಿನ್ನ ಕಾಟ್ಶೆಟ್ಟಿ ಬರೋದು ಬೇಡಾ. ಹೆದರಿಸುತ್ತಾನಾ ನನಗೆ ನಿನ್ನ ಶೆಟ್ಟಿ? ನಾನು ಕೈಗೆ ಬಳೆ ತೊಟ್ಟಿಲ್ಲಾ. ಇವನಂತಾ ಶೆಟ್ಟೀನ್ನ ಕುಟ್ಟಿ ಪುಡಿ ಹಾರಿಸಿಬಿಡುವೆ—ನಿನ್ನ ಒಡವನ ಮೇಲೆ ರಿಯಾಇಯಿಟ್ಟು ನಿನ್ನನ್ನ ಇವತ್ತಿಗೆ ಮಾಫ ಮಾಡಿದ್ದೇನೆ. ಇನ್ನು ಮಾತ್ರ ಇಂಥಾ ಬಿಟ್ಟಿ ಹಿಡ್ಕೊಂಡು ಇಲ್ಲಿ ಕಾಲಿಟ್ಟೇಂದ್ರೆ ನಿನ್ನನ್ನೆಲ್ಲ ಕುಟ್ಟಿ ಪುಡಿ ಮಾಡಿಸಿಯೇನು! ನಮ್ಮ ಜನದ ಒಂದು ರೆಟ್ಟೆಗೆ ಬರಲಾರೆ. ಬಂದವ ಅವರನ್ನ ನೋಡಿಬಿಡೂಂತ—ದೂಮ, ಕೋಟಿ, ತ್ಯಾಂಪ,' ಅಂದ್ರು—ನನಗೆ ಎದೆ ಡಬ್ಬ್‌ ಡಬ್ಬ್‌ ಆಗಿ, ಅಲ್ಲಿಂದ ಇಲ್ಲಿ ತನಕ ಓಡಿಯೇ ಬಂದೆ! ಈಗಲೂ ಬಡ ಬಡ........

ಶೆಟ್ರು—ಏನು! ಕೋಟೆ ನಾಯಿ ಹಾಗೆ ಬಗುಳಿತಾ? ನಿನ್ನ ಎದುರಿಗೆ ನನ್ನನ್ನು ಬೈದು ಭಂಗಿಸಿ ತಾತ್ಸಾರಮಾಡಿದ್ನಾ? ನನ್ನ ಕಾಬಾರಿನ ಪ್ರತಾಪ ಅವನಿಗೆ ತಿಳಿಸಬೇಕಿತ್ತು. ನೀನು ಹಂಬೇಡಿ! ಹೆದರಿಬಿಟ್ಟೆ! ಅವನ ಜನ ನಿನ್ನ ಮೈ ಮುಟ್ಟಬೇಕಿತ್ತು! ಅವನನ್ನ ಎಲುಬು ಕುಟ್ಟಿಕುಟ್ಟಿ ಪುಡಿಪುಡಿಮಾಡಿಸಿ ಅದೇ ಆ ಹಾಳು ಕೋಟೆ ಕಂದಕದಲ್ಲಿ ಮೂರಾಳು ಹೊಂಡತೋಡಿ ಇಳಿಸಿಬಿಡ್ತಿದ್ದೆ! ಹೆದರಬೇಡ. ಮತ್ತೊಮ್ಮೆ ಹೋಗಿ ನನ್ನ ಪ್ರತಾಪ ಚೆನ್ನಾಗಿ ತಿಳಿಸಿ ಬಾ—ನುಸಿ ಕೊಲ್ಲಲಿಕ್ಕೆ ಹೆದರುವ ಅವನಿಗೆ ಈ ನನ್ನ ಮೀಸೆಯ ಒಂದು ರೋಮದ ಪೌರುಷ ಬರಲಿಕ್ಕಿಲ್ಲ. ನಾನು ತಿಂದ ಕೋಳಿಯ ಗರಿಯಿಂದ ಇವನಂಥಾ ಐವತ್ತು ಕೋಟೆ ದೂಮರನ್ನು ಸುಟ್ಟು ಭಸ್ಮ ಮಾಡ್ಯೇನು! ನಾನು ಕುಡಿದ ಕುಪ್ಪಿಗಳಿಂದ ಅವನ ಮಾಡಿಗೆ ಗಾಜಿನ ಹಂಚು ಮುಚ್ಚಬಹುದು. ಅಷ್ಟು ಬಾಟ್ಲಿ ಒಡೆದ ನನ್ನ ರೌಸು ನೀರು ಸೋಸಿ ಕುಡಿಯುವ ಅವನಲ್ಲಿತ್ತಾ? ಇದೇ ಮಾತು ಹೇಳು. ನೀನು ಹೆದರಬೇಡ. ನನ್ನಲ್ಲಿ ಬಂದ ದೂರನ್ನು ಅಂವ ಸರಿಪಡಿಸಿಕೊಡಬೇಕು—ಆಕ್ಷೇಪ ಏನಾದ್ರೂ ಇದ್ದರೆ ಇಲ್ಲಿ ಬಂದು ಹೇಳಿಕೊಳ್ಳಬೇಕು—ತಪ್ಪಿದರೆ ತೊಂದ್ರೆಯಾದೀತು—ಅಂತ ನಾನು ಮತ್ತೊಮ್ಮೆ ಎಚ್ಚರಕೊಟ್ಟೇಂತ ಹೇಳು.

[ತಬುರನು ಧೈರ್ಯದಿಂದ ಹೊರಟು ಹೋಗಿ, ಹೇಳಿ, ಪೆಟ್ಟುತಿಂದುಕೊಂಡು ಹಿಂತಿರಿಗಿ ಬಂದು]

ತಬುರ—ಓ ಒಡೆಯಾ,-ನಂಗೆ ದವುಡೆಗೆ ಏಟುಕೊಟ್ಟರು-ಮೆಟ್ಟಿನಿಂದಲ್ ಕೊಟ್ಟರು.

ಶೆಟ್ರು—ಹ್ಞಾಂ ಹ್ಞಾಂ! ಅವನ ರಕ್ತ ಕುಡಿಯುತ್ತೇನೆ-ಅವನ ಮನೆಯನ್ನು ಗುಂಡಾಂತರಮಾಡುತ್ತೇನೆ-ನನ್ನ ಆಳಿಗೆ ಹೊಡೆಸುವುದೆಂದರೇನು? ನನಗೆ ಹೊಡೆದ ಹಾಗೆ! ಹೋಗು, ದೋಗ್ರು, ಬೊಗ್ರು, ನಕ್ರು, ಕಿಟ್ಟು, ಪುಟ್ಟು, ಕಾಡ್ಯ, ಚಂದು, ತೋಮರ, ಬೂದ, ಸೋಮ, ಅಂಗರ, ತನಿಯ, ತುಕ್ರ ಇವರನ್ನೆಲ್ಲಾ ಪಡೆ ಕೂಡಿಕೊಂಡು ಬರಲಿಕ್ಕೆ ಹೇಳು-ದೊಣ್ಣೆ, ಕತ್ತಿ ಹಿಡಕೊಂಡೇ ಬರ್ಲಿ! ನನಗೆ ೩೦೦೦ಮುಡಿ ಅಕ್ಕಿ ೩೬೦ ಒಕ್ಕಲುಗಳೂ ಉಂಟು ಯೆಂಬುದನ್ನು ಅಂವ ಮರೆತಂತಿದೆ. ಒಂದು ಸಲ ನನ್ನ ಒಕ್ಕಲುಗಳ ಪ್ರತಾಪ ಅವನಿಗೆ ತೋರಿಸಿಬಿಡಬೇಕು. ಮತ್ತದನ್ನು ಅಂವ ಜಲ್ಮಜಲ್ಮಕ್ಕೂ ಮರೆಯಬಾರದು. ಹಾಗೆ ಮಾಡಿಬಿಡ್ತೇನೆ-ಹೋಗು-ಎಲ್ಲರೂ ಇಲ್ಲಿ ಬಂದು ಕೂಡ್ಬೇಕಂತೇಂತ ಒಕ್ಕಲುಗಳಿಗೆಲ್ಲ ಹೇಳಿ ಬಾ.

[ಎಲ್ಲರೂ ಕೂಡಿ ಕೋಟೆ ಮನೆಗೆ ಹೋಗುವರು. ಈ ಸುದ್ದಿ ಮೊದಲೇ ತಿಳಿದು ಅಲ್ಲಿ ಅವರೂ ಜನಕೂಡಿಸಿದ್ದರು. ಉಭಯ ಪಕ್ಷಕ್ಕೂ ಕೈಹೊಯ್ಯಾಗಿ ಕೋಟೆಯ ಕಡೆಯಲ್ಲಿ ಒಂದು ಹೆಣವೂ ಬಿದ್ದು ದೊಡ್ಡ ಕ್ರಿಮಿನಲ್ ಕೇಸ್ ನಡಿಯುವುದು—ಶೆಟ್ರಿಗೆ ಶಿಕ್ಷೆಯಾಗುವುದು—ಅಪೀಲ್‌ನಲ್ಲಿ ಬಿಟ್ಟು ಹೋಗುವುದು.]

0 0 0 0

ಶೆಟ್ರ ಅಕ್ಕ ಲಿಂಗುಶೆಡ್ತೀರು (ತಮ್ಮನೊಂದಿಗೆ)—ಅಯ್ಯೋ! ಹೀಗೆ ಆಸ್ತಿಗೆ ಸಾಲ ಏರುತ್ತಾಬಂತಲ್ಲಾ-ಒಟ್ಟಿಗೆ ಈ ಕಾರುಬಾರಿನಲ್ಲಿ ಕುಟುಂಬವೇ ಮುಳುಗುವ ಹಾಗಾಯಿತಲ್ಲಾ!—

ಶೆಟ್ರು—ಚಿಂತೆಯಿಲ್ಲ ಅಕ್ಕಾ—ಮದ್ರಾಸು ಹೈಕೋರ್ಟಿನ ವರೆಗೆ ನನ್ನ ಕಾಬಾರು ಮುಟ್ಟಿತಾ ಇಲ್ಲಾ? ಅಲ್ಲಿ ದಿಗ್ವಿಜಯ ಹೊಂದಿ ಹೂಮಾಲೆ ಹಾಕ್ಕೊಂಡು ಮನೆ ಪ್ರವೇಶಮಾಡಿದ್ನೋ ಇಲ್ವೋ? ಹಿಂದೆ ಈ ಮನೆತನದಲ್ಲಿ ಇಷ್ಟು ಪ್ರತಾಪತೋರಿ ಮೆರೆದ ಗಂಡು ಯಾರಾದ್ರೂ ಇದ್ದಾರಾ? ತೋರಿಸು. ಇನ್ನು ಆಸ್ತಿ ಪಾಸ್ತಿ ಸಂಸ್ಥಿ—ಅದು ಬಿಡು—ಯಾರ್‍ಯಾರಿಗೆ ಏನೇನು ಆಗಿದೆ—ಅಗ್ನಿ—ಇದೆಲ್ಲಾ ಹಣೆಬರಹಾ—ನಳನಿಗೆ, ರಾಮನಿಗೆ, ಹರಿಶ್ಚಂದ್ರನಿಗೆ, ಪಾಂಡವರಿಗೆ ಬಿಟ್ಟಿತ್ತಾ ಅದು?—ಇನ್ನು ಈ ಆಸ್ತಿಯನ್ನು ಇಟ್ಟುಕೊಂಡು ಕಡೆಕೊಡಿ ಮುಟ್ಟಿಸೋದಾಗಿಲ್ಲ—ಕುಟ್ಟಿ ಮಾರಿದ್ರೆ ಏನಾದರೂ ಉಳಿದೀತು.

0 0 0 0

(ಪೇಟೆಯಲ್ಲಿ ಕೆಲವರುಷದ ನಂತ್ರ ಅಂಗಡಿಯಲ್ಲಿ ಶೆಟ್ಟರ ಆಳಿಯ ರಂಗ ಮತ್ತು ಕುಂಡ ತಮ್ಮ ಮಾವ ಶೆಟ್ಟರ ಮಾಜಿ ಕಾಬಾರಿನ ವಿಷಯ)

ರಂಗ—ಸಪ್ತೆನು, ಸಾಹುಕಾರರೇ—ನಮ್ಮ ಮಾವನ ಕಾಬಾರ್ ಅಂದರೆ ಹಾಗಿದ್ದಿತ್ ಮೊದಲು!—ತಾಲೂಕಿಗೆ ಹೋದರೆ ಕುಚೇ! ಒಂದು ವರ್ಷ ಪರಿಯಾಯಕ್ಕೆ ಇಪ್ಪತ್ತೈದು ಸಾವಿರ ಹೊರೆ ಕಟ್ಟಿದ್ರಂಬ್ರು. ಮಠದವ್ರು ಅವರನ್ನ ಆನೆ ಬ್ಯಾಂಡ್ ಬಿರ್ದಾವಳಿ ಮೆರವಣೀಗೇಲಿ ಕರ್‍ಕೊಂಡುಹೋಗಿದ್ರಂತೆ. ಹಡಿಗೇಲೇ ಪಂಚಕಜ್ಜಾಯದ ಕಟ್ಟುಗಳು ಬಂದಿದ್ವಂತೆ! ಕೋಣಗಳ ಮರಿಗೆ ತುಂಬಾ ಪಂಚಕಜ್ಜಾಯ!

ಸಾಹುಕಾರ—ಅದು ನಿನ್ನೇದ್ದು ಇವತ್ತಿಗೇನು ಪ್ರಯೋಜನ-ಅವರು ಇತಿಹಾಸದಲ್ಲಿ ಬದ್ದಿದ್ದಾರೆಯೋ?—ಆ ಕಾಬಾರನ್ನು ಯಾವ ಬೇಂಕಿನಲ್ಲಿ ಇಟ್ಟಿದ್ದಾರೆ=ಅವರಲ್ಲಿ ನಿಮಗೇನಾದರೂ ಕ್ರೆಡಿಟ್ ಉಂಟಾ? ಸುಮ್ಮನೆ ನೀವು ಈ ಒಣ ಹರಟೆ ಹೊಡೆದರೆ ನಿಮ್ಮ ಹೊಟ್ಟೆ ತುಂಬಾದೀತೇ? ಹೋದ ಆಸ್ತಿ ಪಾಸ್ತಿ ಹಿಂದೆ ಸಿಕ್ಕೀತೇ? ಅಲ್ಲದ ಸಲ್ಲದ ಕಾಬಾರ್‌ಮಾಡಿ ಮನೆ ತೆಗೆದುಕೊಂಡ ನಿಮ್ಮ ಹಿರಿಯರ ಸ್ತೋತ್ರ ಬಿಡಿರಿ. ಏನಾದರೂ ಒಂದು ಉದ್ಯೋಗ ಹಿಡಿರಿ. ಏನೋ ಮಹತ್ಕಾರ್ಯಮಾಡಿ ಆದರ್ಶ ಪುರುಷರಾಗಿದ್ದಾರೋ ಏನೋ ಎಂಬ ಹಾಗೆ ಒಂದು ದೊಡ್ಡ ಗೋರಿ ಕಟ್ಟಿದ್ದೀರಲ್ಲಾ ಅವರನ್ನು ಸುಟ್ಟಲ್ಲಿ! ಅಲ್ಲಿಗೆ ಯಾರಾದರೂ ಯಾತ್ರಿಕರು ಬರುತ್ತಾರಾ? ಯಾವ ಕಾಬಾರಿಗೆ ಹೊಗಳಬೇಕು ಯಾವುದಕ್ಕೆ ತೆಗಳಬೇಕು ಎಂಬ ಸಾರಾಸಾರ ವಿಚಾರವೇ ಇಲ್ಲವಲ್ಲ ನಮ್ಮ ಜನರಲ್ಲಿ! ಇದೇ ವೈಭವವಲ್ಲದ ಗತವೈಭವದ ಸ್ಮರಣೆಯಿಂದ—ಮಿಥ್ಯಾಭಿಮಾನದ ಮಿಥ್ಯಾಭಿಪ್ರಾಯದ ಹಾದಿ ಹಿಡಿಯುವುದರಿಂದಲೇ ನಮ್ಮ ಅವ

THE

Canara Industrial & Banking Syndicate Ltd.,

(INCORPORATED IN BRITISH INDIA
LIABILITY OF SHAREHOLDERS LIMITED.)

ESTD. 1925

Head Office:- **UDIPI, (S. India.)**

SEASON DEPOSITS ARE ACCEPTED at 3½ per cent per annum.

Further particulars on application to any of our thirty-five Offices.

To Insure is
The Husband's duty. The wife's right and the child's claim Hence seek for a policy of
THE ASIAN ASSURANCE CO., LTD,
The safest and one of the largest Indian Concerns,
Head Office:—
Asian Buildings
Ballard Estate,
Bombay.
Branch Office:—
Hampankatta,
Mangalore.

ದಿ ಏಶಿಯನ್ ಎಶ್ಯೂರೆನ್ಸ್
ಕಂಪೆನಿ ಲಿಮಿಟೆಡ್.
ಲಾಭದಾಯಕವಾದ ಮತ್ತು ಸುಭದ್ರತೆಯ ನಿಧಿಯನ್ನೊಳಗೊಂಡ ಈ ಕಂಪೆನಿಯಲ್ಲಿ ನಿಮ್ಮ ವಿಮಾ ಇಳಿಸಿರಿ.
ಏಜಂಟರು ಪ್ರಾಮುಖ್ಯಪಟ್ಟಣಗಳಲ್ಲೆಲ್ಲಾ ಬೇಕಾಗಿದ್ದಾರೆ
ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
J. A. PUTRAN,
Branch Manager,
Mangalore.

ಷ್ಟೆ ಹೀಗೆ ಬಂದಿದೆ! ಅದನ್ನು ಬಿಡಿರಿ. ಏನಾದರೂ ಕಾಸಿಗೆ ಪ್ರಯೋಜನವಾಗುವ ಹಾದಿ ಹಿಡಿರಿ!

೨

[ಚನ್ನಪ್ಪನು ಸಣ್ಣ ಪ್ರಾಯದವನು-ಹೆಂಡತಿಯ ಕಡೆಯಿಂದಲೂ, ತಂದೆಯಿಂದಲೂ, ತಾಯಿಯ ಮನೆಯಿಂದಲೂ ವಿಶೇಷ ಆಸ್ತಿ ಪಾಸ್ತಿಗಳನ್ನು ಪಡೆದು ತನ್ನ ಜನಬಲ ಧನಬಲದಿಂದ ಕೊಳ್ಯ ಗ್ರಾಮವನ್ನು ತನ್ನ ಅಂಕೆಯೊಳಗಿಟ್ಟುಕೊಂಡಿರುವನು-ಪಕೀರನು ಇವನ ಬಲಗೈ ಬಂಟ]

ಚನ್ನಪ್ಪ—ಪಕೀರಾ, ನೋಡು-ದೊಡ್ಡದೊಂದು ಕೋಳಿ ಅಂಕವನ್ನೂ, ಸೋಡ್ತಿಯನ್ನೂ ಏರ್ಪಡಿಸಬೇಕು-ಹತ್ತು ಗ್ರಾಮದವರಿಗೂ ಕಾಗ್ದ ಕಳುಹಿಸು-ಈ ತಿಂಗಳಲ್ಲಿ ಇಪ್ಪತ್ತು ಹೋಗುವಾಗ ಶುರುವಾಗಬೇಕು-ಆ ಮದಗ ಮತ್ತು ತೋಮರ ಎಲ್ಲಿ ಹೋದರು? ಮೊದಲು ಅವರನ್ನು ಬರಮಾಡು.

ಪಕೀರ—ಅಯ್ಯಾ, ಪುಟ್ಟಿ ಹೆಬ್ಬಾಗಿಲಲ್ಲಿ ಬಂದು ಅಳುತ್ತಾ ಕೂತುಕೊಂಡಿದ್ದಾಳೆ.

ಚನ್ನಪ್ಪ—ಪುಟ್ಟಿ! ಯಾವ ಪುಟ್ಟಿ? ಮದಗದಬೆಟ್ಟಿನ ಪುಟ್ಟಿಯಾ? ಏನಾಯಿತಂತೆ ಅವಳಿಗೆ? ಇಲ್ಲಿ ಕರೆ.

(ಪುಟ್ಟಿ ಕಣ್ಣೀರು ಸುರಿಸುತ್ತಾ ಒಳ ಚಾವಡಿಗೆ ಬರುವಳು)....ಏನು ಪುಟ್ಟೀ? ಏನಾಯ್ತು ನಿನಗೆ?

ಪುಟ್ಟಿ—ಒಡೆಯಾ, ಅಂವ, ಅಂವ, ..

ಚನ್ನಪ್ಪ—ಅಂವ, ಅಂವ, ಅಂದರೆ ಯಾರು? ದೂಮನಾ? ನಿನ್ನನ್ನು ಇಟ್ಟುಕೊಂಡವನಾ? ಏನು ಮಾಡಿದ?

ಪುಟ್ಟಿ—ನಂಗೆ ಹಿಡಿಕುಂಟೆಯಿಂದ ನಿನ್ನೆ ರಾತ್ರಿ ಕಂಡಾಬಟ್ಟೆ ಹೊಡ್ದ—

ಚನ್ನಪ್ಪ—ಹಿಡಿಕುಂಟೆಯಿಂದ! ನಿನಗೆ! ಅಷ್ಟು ಜೋರಾದ್ನಾ? ಅವನ್ನ ನಾನು ಗ್ರಾಮ ಚಾವಡಿಗೆ ಬರಲಿಕ್ಕೆ ಹೇಳಿದೆ ಎಂದು ಹೇಳು.

ಪುಟ್ಟಿ—ನಾನು ಹೇಳಿದರೆ ಬರಲಿಕ್ಕಿಲ್ಲ ಒಡೆಯಾ.

ಚನ್ನಪ್ಪ—ರಾಮೊ, ಓ ರಾಮೊ, ಇಲ್ಲಿ ಬಾ—ದೂಮನಿಗೆ ಗ್ರಾಮ ಚಾವಡಿಗೆ ಅಪ್ಪಣೆಯಾಗಿದೆ ಅಂತ ಹೇಳು.

(ಗ್ರಾಮ ಚಾವಡಿಯಲ್ಲಿ)

ಚನ್ನಪ್ಪ—ಹೌದಾ, ದೂಮಾ, ನೀನು ಇವಳಿಗೆ ಹಿಡಿಕುಂಟೆಯಲ್ಲಿ ಹೊಡ್ದಿಯಾ?

ದೂಮ—ಅದು ನಮ್ಮನಮ್ಮೊಳಗಿನ ಸಂಗ್ತಿ ನಿಮಗ್ಯಾಕೆ ಬುದ್ಧಿ? ಸೊಕ್ಕಿದವಳಿಗೆ ಕೊಳಿಕ್ಕಿದಂವ ತಕ್ಕ ಶಿಕ್ಷೆಕೊಡದೆ ಬಿಟ್ಟಾನಾ?

ಚನ್ನಪ್ಪ—ಏನಾ! ತಲೆಮೇಲಿನ ಮಾತು ಮಾತಾಡುತ್ತಿಯಾ? ಬಹಳ ಕೊಳಿಕ್ಕಿದ್ದಿಯಾ ಅವಳಿಗೆ? ಅಥವಾ ಅವಳ ಕೂಳಿಂದ ನೀನು ಬಾಳ್ತಿದ್ದಿಯಾ? ಏನೋ ಮನೆಲ್ಲೊಂದು ಗಟ್ಟಿ ಜನ ಇದ್ಲೀಂತ ನಿನ್ನನ್ನ ಅವಳಿಟ್ಟುಕೊಂಡಿದ್ರೆ ನೀನವಳನ್ನ ಮೆಟ್ಟಿಕ್ಕೆ ತೊಡಗಿದಿಯಾ?-ಪುಟ್ಟೀ, ಇಲ್ಲಿ ಬಾ-ಹಿಡಿಕುಂಟೆ ತಾ-ಇವನಿಗೆ ಮಾಡು ಪೂಜೆ-

(ಜನ ತುಂಬಿದ್ದ ಚಾವಡಿಯಂಗಳದಲ್ಲಿ ಚನ್ನಪ್ಪನ ಧೈರ್ಯದಿಂದ ದೂಮನಿಗೆ ಪುಟ್ಟಿ ಹಿಡಿಕುಂಟೆಯ ಪೂಜೆ ಮಾಡುವಳು. ದೂಮನು ಅವಮಾನಿತನಾಗಿ ಸಿಟ್ಟಿನಿಂದ ಉರಿಯುತ್ತ ಹೊರಟುಹೋಗುವನು-ಹೋಗುತ್ತ ದೈವದ ಕಟ್ಟೆ ಹತ್ತಿ-'ಓ ಜುಮಾದಿಯೇ—ನನಗೆ ಅನ್ಯಾಯಮಾಡಿದವರನ್ನು ಒಂದಲ್ಲದಿದ್ದರೊಂದು ದಿನ ನಿನಗೆ ಹಾರ ಕಡಿಯುತ್ತೇನೆ! ನನ್ನ ಈ ಶಪಥಕ್ಕೆ ನೀನೇ ಸಾಕ್ಷಿ!' ಎಂದು ಭಯಂಕರ ಪ್ರತಿಜ್ಞೆ ಕೊಟ್ಟು ಪುಟ್ಟಿಯನ್ನು ಬಿಟ್ಟು ತೊಲಗುವನು.)

0 0 0 0

ಚನ್ನಪ್ಪ (ರಾತ್ರೆ ಮುಂಜಾವ ಅನುಲಿನ ಲೋಲಿನಲ್ಲಿ)— ಪಕೀರಾ, ನಾವು ಈಗ ಬೇಟೆಗೆ ಹೋಗಬೇಕು. ಹೆಣ್ಣಿನ ಬೇಟೆಗೆ ತಿಳೀತಾ?

ಪಕೀರ—ಆಯಿತು ಬುದ್ಧಿ, ಅದಕ್ಕೆ ಅಲ್ಲಾನ್ನುವವರು ಯಾರು? ಯಾವ ಕಡೆಗೆ ಹೋಗೋಣ?

ಚನ್ನಪ್ಪ—ತೋಮಿಯ ಮನೆಯ ಅತ್ತಕಡೆ

ಪಕೀರ—ಅವಳ ಗಂಡ ಮೊನ್ನೆ ಗಟ್ಟದಿಂದ ಬಂದಿದ್ದಾನೆ ಬುದ್ಧೀ, ಮನೆಯಲ್ಲೇ ಇರಲಿಕ್ಕೆ ಸಾಕು. ನಾವು ಅಲ್ಲಿಗೆ ಹೋಗುವುದು ಸಮವಲ್ಲ ಬುದ್ಧೀ.

ಚನ್ನಪ್ಪ—ಏನಾ, ಅಂವ ನಮ್ಮ ಒಕ್ಕಲು ಅಲ್ಲವಾ, ನಾವು ಹೇಳಿದ ಹಾಗೆ ಕೇಳಬೇಕಲ್ಲವಾ ಅಂವ. ನಾಯಿಯ ಹಾಗೆ ಕೇಳಬೇಕು. ಇಲ್ಲದಿದ್ದರೆ ಅಂವ ಮತ್ತೊಮ್ಮೆ ಗಟ್ಟ ಹತ್ತುವಾಗ ಅಲ್ಲೇ ಕುಟ್ಟಿ ಕಣಿಯಲ್ಲಿ ಹೊರಳಿಸಿ ಬಿಡುವ ವಿಲೆವಾರಿ ಮಾಡ್ಯೇನು! ನಾವು ಹೋಗೋದ್ಯಾಕೆ? ಇಲ್ಲಿಗೇ ಬರ್ಲೀ ಅವಳು! ದನಿಯರು ಹೇಳಿದ್ದಾರೆ ಅಂತ ಹೇಳು. ಕಳುಹಿಸಲಿಕ್ಕೆ ಹೇಳು.

ಪಕೀರ—ಅಮ್ಮನವರು ನನಗೆ ಬಯ್ಯುತ್ತಾರೆ ಬುದ್ಧೀ. ಅಯ್ಯನೋರನ್ನು ಎಲ್ಲೆಲ್ಲಿ ಕರಕೊಂಡು ಹೋಗಿ ಯಾರ್‍ಯಾರನ್ನು ತಂದುಕೊಟ್ಟು ಹಾಳು ಮಾಡುತ್ತೀಯಂತಿತ್ತಿ.

ಚನ್ನಪ್ಪ—ಯಾರ ಅಪ್ನ?

ಪಕೀರ—ತಮ್ಮ ಕೈ ಹಿಡ್ದೋರು ಬುದ್ಧೀ.

ಚನ್ನಪ್ಪ—ಅವಳಿಗೆ ಸುಮ್ಮನೆ ಕೂತುಕೊಳ್ಳಲಿಕ್ಕೆ ಹೇಳು, ಚಲೋ ಜಾವ್, ರಾಮುವನ್ನೂ ಸಂಗಡ ಕರಕೊಂಡು ಹೋಗು.

(ರಾಮು ಮತ್ತು ಪಕೀರ ದಾರಿಯಲ್ಲಿ)

ಪಕೀರ—ಹೌದಾ ರಾಮೂ, ನಮ್ಮ ಅಯ್ಯನವರ ಸಂಗ್ತಿ ಏನಾ? ಮನೆಮನೆಗೆ ಹೊಕ್ಕು ಪಾಪದ ಬಡಹೆಣ್ಣುಗಳನ್ನು ಜುಲುಂ ಮಾಡಿ ಹಾಳು ಮಾಡುವುದು, ಇದು ಧರ್ಮವೇ? ಕೊಟ್ಟಿಗೆ ಕೊಟ್ಟಿಗೆ ನುಗ್ಗುವ ಸಾನದ ಬಸವನ ಹಾಂಗಾಯಿತಲ್ಲಾ? ಅಯ್ಯೋ ಈ ಹಾಳು ಹೊಟ್ಟೆಗಾಗಿ ಇಂಥವರ ಚಾಕರಿ ಮಾಡಬೇಕಾಯಿತಲ್ಲ ದೇವಾ! ನಮಗೆ ಯಾವ ನರಕ ತಯಾರು ಮಾಡುತ್ತಿ.

ರಾಮು—ನಡಿಯೋ ನಮಗೆಲ್ಲಾ ಇದು ಯಾಕೆ. ಧನೀಂದ್ರೆ ದೇವ್ರೂಂತ ಹೇಳಿದ ಕೆಲಸ ಮಾಡುವುದು, ನಮ್ಮ ದಿನ ದೂಡೋದು-ಅದಕ್ಕಿಂತ ಹೆಚ್ಚಿನ ವಿಚಾರ ನಮಗ್ಯಾಕೆ?

(ತೋಮಿಯ ಮನೆ)

ತೋಮಿಯ ಗಂಡ ಬೊಬ್ಬು—ಏನು ಬಂದ್ರಿ?

ರಾಮು—ಏನಿಲ್ಲ ಧನೀರು ಹೇಳಿದ್ರು-ತೋಮಿ ಬಂದು ಹೋಗ್ಲೀಂತ!

ಬೊಬ್ಬು—ಧನೀರು! ಈಗ ಕತ್ತಲಾದ ಹೊತ್ತಿಗೆ ಎಂಥಾ ಕೆಲಸ? ನಾಳೆ ಬೆಳಗ್ಯೆ ನಾನ್ ಮತ್ ಅವಳ್ ಬತ್ತ್.

ರಾಮು— ಈಗಲೇ ಬರಹೇಳಿದ್ರು

ಬೊಬ್ಬು—ಇಲ್ಲೆ, ಸಾಧ್ಯಎಲ್ಲೆ.

ರಾಮು—ಸಾಧ್ಯವಿಲ್ಲವಾದರೆ ಎಳದು ತರಲಿಕ್ಕೆ ಹೇಳಿರುವರು.

ಬೊಬ್ಬು—ಎಳಿಯುವುದುಎಂಥಾದ್ದು-ಎಳಕೊಂಡು ಹೋಗಲಿಕ್ಕೆ ಅದೇನು ನಾಯಿ ಮರಿಯಾ?

ರಾಮು—ಕಾನೂನು ಮಾತಾಡಿ ಫಲವಿಲ್ಲ. ಧನೀರ ಅಪ್ಪಣೆ ಪ್ರಕಾರ ಬರಲೇಬೇಕು. ಪಕೀರ ಬಾರಾ, ಇವಳನ್ನು ಎಳಕೊಂಡು ಹೋಗೋಣ.

(ಪಕೀರನು ದೂರದಲ್ಲಿ ನಿಲ್ಲುವನು, ರಾಮು ಎಳಿಯಲಿಕ್ಕೆ ಹೋಗಿ ದವಡೆ ಮೇಲೆ ಬಲವಾಗಿ ಏಟು ತಿನ್ನಲು ಪಕೀರನು ಓಡಿ ಬಿಡುವನು.)

0 0 0 0

(ಚನ್ನಪ್ಪನ ಮನೆಯಲ್ಲಿ)

ರಾಮು—ಅಯ್ಯೋ, ಬುದ್ಧಿ ಓ ಬುದ್ಧೀ.

ಚನ್ನಪ್ಪ—ಏನಾ, ಬರಲಿಲ್ಲವಾ ಅವಳು?

ರಾಮು—ಪೆಟ್ಟು ಬುದ್ಧೀ, ಏಟು ಬುದ್ಧೀ!

ಚನ್ನಪ್ಪ—ಯಾರಿಗೆ ಪೆಟ್ಟು? ಯಾರು ಕೊಟ್ಟದ್ದು.

ರಾಮು—ನನಗೀ ಬುದ್ಧೀ, ಅವಳ ಗಂಡಾ.

ಚನ್ನಪ್ಪ—ಪಕೀರ ಎಲ್ಲಿ?

ರಾಮು—ಓಡಿಬಿಟ್ಟ ಬುದ್ಧೀ, ನಾನೊಬ್ಬನೇ ಏಟು ತಿಂದದ್ದು ಬುದ್ಧೀ.

ಚನ್ನಪ್ಪ—ಯಾರಲ್ಲಿ-ಪಂಜಾ, ಪದ್ಮಾ, ಕೆಂಚಾ, ಮಂಜಾ, ತ್ಯಾಂಪಾ, ನೀವೆಲ್ಲ ಹೋಗಿ ಅವನ ಸೊಂಟ ಮುರಿದುಹಾಕಿ ಬನ್ನಿ!

0 0 0 0

(ಅಜಿಲರು ದೊಡ್ಡ ಮನೆತನದವರು, ವಿಶೇಷ ಬುಂದುಗಾರಿಕೆ ದುರ್ವ್ಯಸನದವರು, ಆದಕಾರಣ ತಾಯಿ ಮತ್ತು ಮಾವನ ಮೇಲೆ ದ್ವೇಷವಿದ್ದು ಚನ್ನಪ್ಪನ ಆಶ್ರಯವನ್ನು ಹೊಂದಿರುವರು.)

ಚನ್ನಪ್ಪ—ಅಜಿಲರೇ, ಇದಕ್ಕೆ ಬೇರೆ ಯಾವ ಉಪಾಯವೂ ಇಲ್ಲ ಇವರನ್ನು 'ಚಾಂಪ್' ಮಾಡಿ ಬಿಡುವುದು ಒಳ್ಳೇದು. ಆ ಮೇಲೆ ನಿಮಗೆ ತೊಂದರೆಯಿಲ್ಲ

ಅಜಿಲರು—ನಮ್ಮ ಪ್ರಾಣಕ್ಕೆ ಬಂದರೆ?

ಚನ್ನಪ್ಪ—ನಿಮಗೆ ಇದರ ಸೂಕ್ಷ್ಮಗೊತ್ತಿಲ್ಲ-ನಾವು ಎಲ್ಲಾ ವಿಲೆವಾರಿ ಮಾಡಿಟ್ಟು ಮದ್ರಾಸಿಗೆ ಹೋಗಿಬಿಡುವ-ನಾವು ಅಲ್ಲಿರುವಾಗ ಇಲ್ಲಿ ಕೊಲೆಯಾಗಬೇಕು. ನಮ್ಮ ಮೇಲೆ ಕೇಸು ಬರೋದಿಲ್ಲ.

0 0 0 0

(ಪೋಲೀಸ್ ಸಬ್ ಇನ್ಸಪೆಕ್ಟರ್ ಆ ರೇಂಜಿನ ಅಬ್‌ಕಾರಿ ಸಬ್ ಇನ್ಸಪೆಕ್ಟರ ಹತ್ತಿರ)

ಪೋಲಿಸ್ ಸಬ್‌ಇನ್ಸಪೆಕ್ಟರ್—ಈ ಊರ ಈ ಚನ್ನಪ್ಪನಿರುವ ವರೆಗೆ ಒಂದು 'ಎವಿಡೆನ್ಸ್' ಸಿಕ್ಕುತ್ತದಾ? 'ಡಿಟೆಕ್ಷನ್' ಸಾಧ್ಯವಿಲ್ಲ-ಅವ ಮದ್ರಾಸಿನಲ್ಲಿ ಕೂತಿದ್ದಾನೆ! ಇಲ್ಲಿ ಕೊಲೆಮಾಡಿಸಿದ್ದಾನೆ! ಹೀಗೆ ಕೊಲೆಮಾಡಿಸಿದ್ದು ಎಷ್ಟು ಆಯಿತು, ಅವನು-ನನಗೆ ಮೇಲಾಫೀಸರಿಂದ ರಿಮಾರ್ಕ-'ನಿನ್ನ ಕೆಲಸ ತೆಗೆಯುತ್ತೇವೆ. ನಿನಗೆ 'ಡಿಟೆಕ್ಷನ್' ಮಾಡಲಿಕ್ಕೆಗೊತ್ತಿಲ್ಲ' ಎಂದು ಜನರು ಚನ್ನಪ್ಪ ಅಂದರೆ ಹೆದರುತ್ತಾರೆ.-ಒಬ್ಬ 'ಎವಿಡೆನ್ಸ್' ಕೊಡುವುದಿಲ್ಲ-ಏನು ಸಾಯುವುದು ನಾನು! ಆದರೆ ಇವ ಮಾಡಿದ್ದೆಲ್ಲ ಒಂದು ದಿನ ಒಟ್ಟು ಕೂಡಿ ಇವನ ತಲೆ ಮೇಲೆ ಇಳಿಯದೆ ಇದ್ದೀತಾ?

0 0 0 0

(ಆರುತಿಂಗಳ ಮೇಲೊಂದು ದಿನ ಪೇಟೆಯ ಸಂತೆಕಟ್ಟೆಯಲ್ಲಿ ಜನರು ಅಲ್ಲಲ್ಲಿ ನಿಂತು ಮಾತಾಡುತ್ತಿರುವರು.)

ಅಲ್ಲಿಗೆ ಬಂದು ಸೇರಿದವನೊಬ್ಬ—ಪೋಲೀಸ್ ಸುಪ್ರೇಂಟರ ಕಾರೂ ಕೊಳ್ಯಕ್ಕೆ ಹೋಯಿತು: ಏನೋ ದೊಡ್ಡ ಕೇಸ್ ನಡೆದಿರಬೇಕು! ಚನ್ನಪ್ಪಂದು ಏನೋ ಕಾರ್ಬಾರ್:

ಅಲ್ಲಿದ್ದವನೊಬ್ಬ—ಕಾರ್ಬಾರೆಲ್ಲ ಮುಗೀತು! ಹಾಗೆಂತ-ವರ್ತಮಾನ ನೋಡಲಿಕ್ಕೆಂತ ಪೇಟೆ ಜನಾ ಓಡಿದ್ದಕ್ಕೆ ಲೆಕ್ಕ ಉಂಟಾ? ಬಾಡಿಗೆ ಮೋಟಾರ್‌ನವರಿಗೆ, ಸ್ಯಾಕಲ್ ಬಾಡಿಗೆಯವರಿಗೆ ಕಾಲ ಈವತ್ತು!

ಬಂದವ—ಸಂಗ್ತಿ ಏನಂತೆ!

ಮತ್ತೊಬ್ಬ— ಹೇಳಿದೆನಲ್ಲ ಕಾರ್ಬಾರೆಲ್ಲ ಮುಗಿತೂಂತ! ಈ ಕ್ರಿಮಿನಾಲ್ ಕೇಸಿನ ವಿಷಯ ಬಾಯಿ ಎತ್ತೋದು ಕಷ್ಟ. ನಮಗೆ ಬೇಡಾದ ಪಂಚಾಯಿತಿಕೆ!

ಬಂದವ—ಈಗ ನೀನು ಹೇಳಿದೇಂತ ನಾನು ಊರು ಊರಿಗೆ ಸಾರ್ತೇನೆಂತ ತಿಳಿದೆಯಾ? ಊರು ಸುದ್ದಿ ಏನೂಂತ ಹೇಳಲಿಕ್ಕೆ ಯಾಕೆ ಇಷ್ಟು ಗಾಬರಿ ನಿನಗೆ?

ಮತ್ತೊಬ್ಬ—ಚನ್ನಪ್ಪ ನಿನ್ನೆ ರಾತ್ರೆ ಅಲ್ಲೆಲ್ಲೋ ದೊಡ್ಡ ಜಾತ್ರೆಯಲ್ಲಿ ದೇವರನ್ನು ಹೊರಡಿಸಿ ಜರೂರು ಕೆಲಸವುಂಟೂಂತ ಹಿಂತಿರಿಗಿ ಬರುತ್ತಿದ್ದ. ಅವನ

ಪುಟ ೨೦ಕ್ಕೆ

ಇಂದಿನ ನರೇಂದ್ರರು ಮುಂದೇನಾಗುವರು?

ನಿರಂಕುಶತೆ ಮತ್ತು ದಬ್ಬಾಳಿಕೆಗಳಿಂದ ಪ್ರಜೆಗಳಿಗೆ ಮುಕ್ತಿ.

(ಲೇಖಕರು—ಪ್ರೊಫೆಸರ್ ಕೆ. ಕೆ. ಭಟ್ಟಾಚಾರ್ಯ, ಬಾರ್ ಆಟ್-ಲಾ, L. L.M. ಲಂಡನ್)

ಕೆಲವು ದಿನಗಳ ಹಿಂದೆ ಲುಧಿಯಾನದಲ್ಲಿ ಬಹಳ ಗಡಿಬಿಡಿ! ಬ್ರಿಟಿಷ್ ಭಾರತದ ಮತ್ತು ದೇಶಿ ಸಂಸ್ಥಾನಗಳ ಸ್ತ್ರೀಪುರುಷ ಪ್ರತಿನಿಧಿಗಳು ಇಂದು ದೇಶೀ ರಾಜ್ಯಗಳ ಮುಂದಿರುವ ದೊಡ್ಡ ಸಮಸ್ಯೆಯನ್ನು ಬಗೆಹರಿಸಲು ಅಲ್ಲಿ ನೆರೆದಿದ್ದರು.

ಇಂದಿನ ಸ್ಥಿತಿ

ದೇಶೀ ರಾಜ್ಯಗಳ ಪ್ರಜೆಗಳು ಭಯಂಕರ ದಬ್ಬಾಳಿಕೆಯ ಚಕ್ರದಲ್ಲಿ ಸಿಕ್ಕಿ ನರಳುತ್ತಿರುವರೆಂಬುದರಲ್ಲಿ ಏನೇನೂ ಸಂದೇಹವಿಲ್ಲ. ಕೆಲವು ಸಂಸ್ಥಾನಗಳಲ್ಲಂತೂ ನಾಗರಿಕ ಸ್ವಾತಂತ್ರ್ಯವಾಗಲಿ ನ್ಯಾಯವಾಗಲಿ ಇಲ್ಲವೇ ಇಲ್ಲ. ಅಲ್ಲಿ ರಾಜ, ಮಂತ್ರಿ ಪೋಲೀಸು, ಮತ್ತು ಪ್ರಧಾನ ನ್ಯಾಯಾಧೀಶರು ಇವರೇ ಮುಖ್ಯರು. ಬ್ರಿಟಿಷ್ ರೆಸಿಡೆಂಟ್ ಮತ್ತು ಇಂಡಿಯಾ ಸರಕಾರದವರ "ಜೋಹುಕುಂ" ವಾಲಾಗಳಾಗಿರುವ ವರೆಗೂ, ಅವರು ತಮ್ಮ ಪ್ರಜೆಗಳನ್ನೂ ಮನಬಂದಂತೆ ಪೀಡಿಸಬಹುದು.

ಈಗ ಜನರ ಬೇಡಿಕೆಗಳು ಬಲವಾಗಲಾರಂಭಿಸಿವೆ. ಇನ್ನೂ ಹೆಚ್ಚು ಕಾಲ ಅವುಗಳನ್ನು ಉದಾಸೀನಮಾಡಲಾಗದು. ಒರಿಸ್ಸ, ರಾಜಕೋಟೆ ಮೊದಲಾದ ರಾಜ್ಯಗಳಲ್ಲಿ ಭಯಂಕರ ದಬ್ಬಾಳಿಕೆಯು ನಡೆಯುತ್ತಿದೆ. ಎಲ್ಲೋ ಒಂದೆರಡು ರಾಜ್ಯಗಳಲ್ಲಿ ಪ್ರಜೆಗಳು ಸುಧಾರಿತರಾಗಿರುವ ಕಡೆಯಲ್ಲಿ ಮಾತ್ರ ಪ್ರಕಾಶದ ಕಿರಣಗಳು ಕಂಡುಬರುತ್ತಿವೆ ಈ ರಾಜ್ಯಗಳ ನರೇಶರು ಆಗಿಂದಾಗ್ಯೆ ಸುಧಾರಣೆಗಳನ್ನೂ ಕೊಡುತ್ತಾ ಬಂದಿರುವರು. ಆದರೆ ನನ್ನ ಅಭಿಪ್ರಾಯದಲ್ಲಿ ಅವರಿಗೆ ಸಂಪೂರ್ಣ ಜವಾಬ್ದಾರಿ ಸರಕಾರವನ್ನೂ ಕೊಡಬೇಕಾಗಿದೆ.

ತಮ್ಮ ಪ್ರಜೆಗಳಿಗೆ ಹೆಚ್ಚಿಗೆ ಅಧಿಕಾರಗಳನ್ನೂ ಕೊಡಲೇ ಕೂಡದೆಂದು ಯಾರಾದರೂ ರಾಜರು ನಿಶ್ಚಯಿಸಿರುವುದಾದರೆ ಅವರು ಇನ್ನೂ ಬಹಳ ಹಿಂದಿನ ಮನೋಭಾವನೆಯುಳ್ಳವರೆಂದೇ ಹೇಳಬಹುದು. ರಾಷ್ಟ್ರೀಯ ಭಾವನೆ ಮತ್ತು ಪ್ರಜೆಗಳ ಬೇಡಿಕೆಗಳು ಇವುಗಳ ಪ್ರವಾಹವು ದಮನದಿಂದ ಎಂದಿಗೂ ಶಾಂತವಾಗುವುದಿಲ್ಲ. ಬ್ರಿಟಿಷ್ ಭಾರತದಲ್ಲಾದುದೇನು? ಪ್ರಜೆಗಳ ಬೇಡಿಕೆಯು ಎಲ್ಲಿಯ ವರೆಗೆ ದಮನ ಮಾಡಲ್ಪಟ್ಟಿತು? ಎಷ್ಟು ತುಳಿದರೂ ಕಾಂಗ್ರೆಸ್ಸು ದಿನದಿನಕ್ಕೆ ಶಕ್ತಿಶಾಲಿಯಾಗುತ್ತಲೇ ಬರುತ್ತಿದೆ. ಇದರ ಪರಿಣಾಮವಾಗಿಯೇ ಇಂದು ಭಾರತದ 9 ಪ್ರಾಂತ್ಯಗಳಲ್ಲಿ ಕಾಂಗ್ರೆಸ್ಸು ಪ್ರಭುತ್ವ ನಡೆಸುತ್ತಿದೆ. ಅನೇಕ ತೊಂದರೆಗಳಿದ್ದರೂ ದೇಶಿ ಪ್ರಜೆಗಳು ಅಹಿಂಸೆಯ ಮಾರ್ಗವನ್ನೇ ಅನುಸರಿಸುತ್ತಿರುವರು. ಲಾಠೀ ಪೆಟ್ಟುಗಳು ಗುಂಡಿನ ಹೊಡೆತಗಳಿಂದ ಅವರ ಉತ್ಸಾಹವು ಸ್ವಲ್ಪವೂ ಕಡಿಮೆಯಾಗಿಲ್ಲ. ಅಕಸ್ಮಾತ್ ಒಬ್ಬ ಯುರೋಪಿಯನನ ಕೊಲೆಯೇನಾದರೂ ಆದರೆ ಇಡೀ ದೇಶವೇ ಅದಕ್ಕಾಗಿ ಪಶ್ಚಾತ್ತಾಪ ಪಡುವುದು.

ವಿಂಟರ್ ಟನ್ನರ ಹೇಳಿಕೆ

ಅನಂತರ ಜವಾಬ್ದಾರಿ ಸರಕಾರದ ವಿಚಾರದ ಅಲ್ಪ ಸ್ವಲ್ಪ ಸಂಶಯವೂ ದೂರವಾಗಬೇಕು. ರಾಜರು ಮುಂದೆ ಬರುವುದಾದರೆ ಯಾರ ಆಕ್ಷೇಪಣೆಯೂ ಇಲ್ಲವೆಂದು ಅವರು ಹೇಳಿಬಿಟ್ಟಿರುವರು ಆದುದರಿಂದ ಸರ್. ಸಿ. ಪಿ ರಾಮಸ್ವಾಮಿ ಅಯ್ಯರವರ ಸಿದ್ಧಾಂತವು ನಿರಾಧಾರವಾಯಿತು. ದೇಶಿ ರಾಜ್ಯಗಳಲ್ಲಿ ಉಂಟಾಗಿರುವ ಅಶಾಂತಿ ದಬ್ಬಾಳಿಕೆ ಮತ್ತು ನಾಗರಿಕ ಹಕ್ಕುಗಳ ಅಪಹರಣ ಇವುಗಳಿಗೆಲ್ಲ ಕಾರಣರಾರು? ಬ್ರಿಟಿಷರ ಕೈವಾಡವಲ್ಲವೆ?

ಆಂಗ್ಲರ ಈ ನೀತಿಯು ಸರಿಯಾದುದಲ್ಲ. ಬಟ್ಲರ್ ಕಮಿಟಿಯವರಂತೂ ಈ ರೀತಿ ಮಧ್ಯೆ ಕೈಹಾಕುವುದು ಸರಿಯೆಂದೇ ಹೇಳಿರುವರು ಇದು ತೀರ ಅಸಂಬದ್ಧವಾದ ನೀತಿಯೆಂಬುದರಲ್ಲಿ ಏನೂ ಸಂಶಯವಿಲ್ಲ. ಮಣಿಪುರದ ಪ್ರಸಿದ್ಧ ಮೊಕದ್ದಮೆಯ ಪ್ರಕಟಣೆಯಲ್ಲಿ ಹೇಳಿರುವಂತೆ ದೇಶಿ ಪ್ರಜೆಗಳಿಗೆ 1. ತಮ್ಮ ರಾಜರು, 2 ಬ್ರಿಟಿಷ್ ಸರಕಾರವೆಂದೆರಡು ವಿಚಾರಗಳಿವೆ, ರಾಜರಿಗೂ ಅವರಿಗೂ ಮತಭೇದವುಂಟಾದಲ್ಲಿ ಬ್ರಿಟಿಷರ ಮೊರೆಹೋಗಬೇಕಾಗುತ್ತದೆ. ಆದರೆ ಬ್ರಿಟಿಷ್ ಸರಕಾರವೇ ದೇಶೀ ಪ್ರಜೆಗಳಿಂದ ರಾಜಭಕ್ತಿಯ ಕಾಣಿಕೆಯನ್ನು ಅಪೇಕ್ಷಿಸುವುದರಿಂದ ಅದು ಅಲ್ಲಿನ ಪ್ರಜೆಗಳ ಹಿತರಕ್ಷಣೆ ಮಾಡುವುದು ಅದರ ಕರ್ತವ್ಯವಾಗಲಿಲ್ಲವೇ?

ಜವಾಬ್ದಾರಿ ಸರಕಾರ

ದೇಶೀ ರಾಜರು ರೆಸಿಡೆಂಟರೆದುರಿಗೆ ಗಡಗಡನೆ ನಡುಗುವರು. ಅನೇಕ ವರ್ಷಗಳ ವರೆಗೆ ರಾಜ್ಯದ ಉಚ್ಚ ಪದವಿಯಲ್ಲಿದ್ದ ಒಬ್ಬ ಅಧಿಕಾರಿಗಳು ಈ ರೀತಿ ಹೇಳಿದ್ದರು "ರೆಸಿಡೆಂಟರ ಒಂದು ಸಣ್ಣ ಮಾತು ಸಹ ದೇಶಿರಾಜರುಗಳ ಮೇಲೆ ಭಯಂಕರ ಘಾತವನ್ನುಂಟು ಮಾಡುವುದು." ನೋಡಿದಿರಾ! ರಾಜರ ಅವಸ್ಥೆಯನ್ನು! ಅಲ್ಲಿನ ಪ್ರಜೆಗಳು ತಮ್ಮ ರಾಜನನ್ನು ಸಿಂಹಾಸನದಿಂದಿಳಿಸಬೇಕೆಂದು ಬಯಸುವುದಿಲ್ಲ ರಾಜರೇ ತಮ್ಮ ಮೇಲೆ ಆಡಳಿತ ನಡೆಸಬೇಕೆಂದೇ ಅವರ ಬಯಕೆ. ಜನರ ಪ್ರೇಮ ಮತ್ತು ಶುಭೇಚ್ಛೆಯೇ ಅವರ ಏಕಛತ್ರಾಧಿಪತ್ಯದ ನಿರೋಧದ ರಕ್ಷಣೆಯೆಂದು ಲಾರ್ಡ್ ರೀಡಿಂಗರು 1926ನೇ ಮಾರ್ಚ್ 27ರಲ್ಲಿ ಹೈದರಾಬಾದಿನ ನಿಜಾಮರಿಗೆ ಬರದಿದ್ದರು.

ಆದುದರಿಂದ ಇಂತಹ ಪರಿಸ್ಥಿತಿಯಲ್ಲಿ ನರೇಶರು ತಮ್ಮ ಕರ್ತವ್ಯವನ್ನೂ ತಾವು ತಿಳಿದುಕೊಳ್ಳುವುದು ಒಳ್ಳೆಯದು. ಹಾಗೆ ಮಾಡದಿದ್ದರೆ ತಾವು ನಾಶಹೊಂದುವುದಲ್ಲದೆ ತಮ್ಮ ಪ್ರಜೆಗಳಿಗೂ ತೊಂದರೆಯನ್ನುಂಟುಮಾಡುವರು, ಸಕಾಲದಲ್ಲಿ ಪ್ರಜೆಗಳ ಬೇಡಿಕೆಗಳನ್ನೂ ಪೂರ್ತಿಮಾಡುವುದರಿಂದ ಸಂತೋಷ ಮತ್ತು ಶಾಂತಿಪೂರ್ವಕ ವಾತಾವರಣವುಂಟಾಗುವುದು, ಇಲ್ಲದೆ ಹಟಮಾಡಿದರೆ ಸರ್ವನಾಶವೇ ಸಿದ್ಧ.

ನರೇಶರ ಕಾನೂನಿನ ಸ್ಥಿತಿ

ಈ ರಾಜರ ಅಸ್ತಿತ್ವವು ಬ್ರಿಟಿಷರನ್ನವಲಂಬಿಸಿದೆ. ಬಟ್ಲರ್ ಸಮಿತಿಯವರ ರಿಪೋರ್ಟಿನಲ್ಲಿ ಹೇಳಿರುವ "ಏಕಚ್ಛತ್ರತೆ"ಗೆ ಅನುಸಾರವಾಗಿ ಅವರ ಸಿದ್ಧಾಂತದ ಸಹಾಯದಿಂದಲೇ; ಬ್ರಿಟಿಷರು ಏನನ್ನು ಬೇಕಾದರೂ ಮಾಡಬಲ್ಲರು. ಆದರೂ ಇದು ಕಾನೂನಿಗೆ ವಿರೋಧವಾಗುವುದಿಲ್ಲವಂತೆ. ಇದರಿಂದ ಜವಾಬ್ದಾರಿ ಸರಕಾರವನ್ನು ಕೊಡುವುದರಿಂದ ರಾಜರು ತಮ್ಮ ಜಾಗವನ್ನು ತಾವು ಭದ್ರಪಡಿಸಿಕೊಂಡಂತಾಗುತ್ತದೆ. ಇಲ್ಲವಾದರೆ ಅವರ ರಾಜತ್ವವು ಬಲವಂತದಿಂದ ಕಸಿದುಕೊಳ್ಳಲ್ಪಡುವುದು. ದೇಶೀ ರಾಜರು ಸ್ವಲ್ಪವೇ ಆಗಲಿ ಯೋಚಿಸಿದರೂ, ಇನ್ನೂ ದಬ್ಬಾಳಿಕೆಯಿಂದ ಆಡಳಿತ ನಡೆಸುವುದು ಅಸಾಧ್ಯವೆಂದು ತೋರದಿರದು. ಅದಕ್ಕೆ ಬದಲಾಗಿ ಪ್ರೇಮವೆಂಬ ಶಸ್ತ್ರದಿಂದ ಆಳಿದರೆ ಪ್ರಜೆಗಳು ಶ್ರೇಷ್ಠ ಸ್ನೇಹಿತರಾಗುವರು, ಅಷ್ಟೇ ಅಲ್ಲ ಸಂಪೂರ್ಣ ರಾಜಭಕ್ತಿಯುಳ್ಳರಾದ ಸೇವಕರೂ ಆಗುವರು ರಾಜರೂ ಸಹ ಅವರನ್ನೂ ಈ ಭಾವನೆಯಿಂದಲೇ ನೋಡುವುದು ಉಭಯರಿಗೂ ಕ್ಷೇಮ.

ಸ್ಥಾಪನೆ. **ಕ್ರೌನ ರಬ್ಬರ್ ಸ್ಟಾಂಪ್ ಕಂಪೆನಿ**, 1926

18 ಬಲ್ಮಠ ರಸ್ತೆ, ಮಂಗಳೂರು,

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು ಪೇಟಿಗಳ ಬೀಜ, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿ ಕೊಡಲಾಗುವುದು.



CROWN RUBBER STAMP CO,
Balmat Road, MANGALORE.
Included by the Mysore Govt Stores, Purchase Committee in the list of approved Firms

Established] [1906

THE

UNITED INDIA

LIFE ASSURANCE Co., LTD.
HEAD OFFICE—**MADRAS.**
Trustee—The Official Trustee to the Government of Madras.

Policies in force exceed **SIX** Crores.
Annual income exceeds - Rs. **30** lakhs.
Total assets exceeds - Rs. **110** lakhs.
Total claims paid exceed Rs **40** lakhs

The oldest & largest life assurance company of South India accepted by the Government as satisfactory for the purpose of exemption from the operation of the Provident Fund Rules to Teachers in aided Schools & for the purpose of utilisation of P. F. Contributions for payment of premiums on the lives of Government Local Board & Municipal servants.
For further particulars please apply to—

THE BRANCH MANAGER,
THE UNITED LIFE ASSURANCE COMPANY, LTD,
FELIX PAI BAZAR, MANGALORE, S. K

K. R. Hebbar, B A, ORGANISER, **UDIPI, S. K.** *OR* **K. Keshava Shenoy,** M.A., ORGANISER, Pentlanpet, **MANGALORE.**

ನವಯುಗ ಸ್ಪರ್ಧೆ ೧.

ರೂಪಾಯಿ ೫೫ ಬಹುಮಾನ.

1	2	3	4 ತ
		ರ	
	ದೇ		
ಗ		ಶ್ರೀ	ರಿ

I ಇನಾಂ ರೂ. 10/- II ರೂ. 5ರ ಇನಾಂ ೨. III ರೂ. 1ರ ಇನಾಂ ೫. ಒಟ್ಟು ರೂ. 25/- ರ 8 ಇನಾಮುಗಳು.

ಸೂಚನೆಗಳು:—

ಎಡದಿಂದ ಬಲಕ್ಕೆ.—(1) ಶ್ರೀಕೃಷ್ಣನು ಇದನ್ನು ಕದ್ದು ಕದ್ದು ತಿನ್ನುತಿದ್ದ.

ಮೇಲಿಂದ ಕೆಳಕ್ಕೆ.—(1) ಇದು ಕರ್ನಾಟಕದಲ್ಲೆಲ್ಲಾ ಪ್ರಚಾರದಲ್ಲಿರುವ ವಾರಪತ್ರಿಕೆಯಾಗಿದೆ. (2) ಕಂಸನಿಂದ ಬಂಧಿಸಲ್ಪಟ್ಟು ಜೊತೆಯೊಡನೆ ಜೈಲಲ್ಲಿದ್ದಳು. ( ) ತಾವರೆಯಂತೆ ಕಣ್ಣಿರುವ ಹೆಂಗಸರಿಗೆ ಹೀಗೆನ್ನುತ್ತಾರೆ. (4) ಇದು ಬೇಕಾದರೆ ಮಾರ್ಕೆಟಿಗೆ ಹೋಗಬೇಕು.

ನಿಯಮಗಳು:— (೧) ಉತ್ತರದೊಂದಿಗೆ 0-2-0 ಟಪ್ಪಾಲು ಚೀಟನ್ನು ಕಳಿಸಬೇಕು. (೨) 0-3-0ಗೆ ೬ ಉತ್ತರದಂತೆ ಕಳಿಸಬಹುದು. (೩) ಇನಾಮುಗಳನ್ನು ಸರಿಯಾಗಿ ಬಿಡಿಸಿದವರೊಳಗೆ ಚೀಟಿ ಹಾಕಿ ಕೊಡಲಾಗುವುದು. (೪) ಇನಾಮುಗಳನ್ನು ಪುಸ್ತಕರೂಪದಲ್ಲಿ ಕೊಡಲಾಗುವುದು.

ಉತ್ತರವನ್ನು ತಾ. 15-4-39ರ ತನಕ ಸ್ವೀಕರಿಸಿ ತಾ. 20-4-39ಕ್ಕೆ ಪ್ರಕಟಿಸಲಾಗುವುದು.

ನವಯುಗ ಸ್ಪರ್ಧೆ,
ನವಯುಗ ಆಫೀಸು, ಉಡುಪಿ.

ಜನರು
ಯಥಾರ್ಥವಾಗಿಯೂ
ಒಪ್ಪಿಕೊಳ್ಳುತ್ತಾರೆ:—
ಸ್ವಸ್ತಿಕ
ಪರ್ಫ್ಯೂಮ್ ಕೆಸ್ಟರಾಯಿಲ್
ಗುಣದಲ್ಲೂ ಪರಿಮಳ
ದಲ್ಲೂ ಸ್ವದೇಶ ಅಥವಾ
ವಿದೇಶದ ಯಾವ
ಕೂದಲೆಣ್ಣೆಯನ್ನಾ
ದರೂ ಸೋಲಿಸುವ
ಅತ್ಯುತ್ತಮವಾದ ಹೇರ್
ಆಯಿಲ್ ಎಂದು-
ಎಲ್ಲೆಲ್ಲೂ ವಿಕ್ರಯಿಸಲ್ಪಡುತ್ತದೆ.
83

ಪ್ರಕಟಣೆ   ದಕ್ಷಿಣ ಕನ್ನಡ ಜಿಲ್ಲಾ

ಒಕ್ಕಲಿಗರ ಸಹಕಾರ ಸಮಿತಿ

ತ್ರೈವಾರ್ಷಿಕ ಸ್ವಾವಲಂಬಿ ಪ್ರಾವಿಡೆಂಟ್ ಯೋಜನೆ.

ಉತ್ಸಾಹೀ ತರುಣ ಶ್ರೀ. ಬಿ. ಟಿ. ರೈಗಳ ಗ್ರಾಮಸೇವೆ.

8ನೇ ವಾರ್ಷಿಕ ವರದಿಯಲ್ಲಿ ಠೇವಣಾತಿ ಮತ್ತು ಸಾಲದ ಧೋರಣೆಯಲ್ಲಿ ಒಂದು ಪ್ರಾಮುಖ್ಯ ವ್ಯತ್ಯಾಸವು ಮಾಡಲ್ಪಟ್ಟಿದೆ. ಏನಂದರೆ ಸಮಿತಿಯ ಸದಸ್ಯತನದ ಪ್ರಥಮ ಶರ್ತವೇ ಸಾಪ್ತಾಹಿಕ ಉಳಿತಾಯ. ಅದಕ್ಕನುಸಾರವಾಗಿ ೧೯೩೭ನೇ ಇಸವಿ ಅಂತ್ಯದ ತನಕ ಸಮಿತಿಗೆ ಸದಸ್ಯನಾಗುವ ಕುಟುಂಬದ ಒಬ್ಬ ಯಜಮಾನನು ತನ್ನಲ್ಲಿ ಪ್ರತಿದಿವಸ ಖರ್ಚಾಗುವ ಒಂದು ಸೇರು ಅಕ್ಕಿಯಿಂದ ೧/೭ನೇ ಸೇರು ಅಕ್ಕಿಯನ್ನು ಪ್ರತಿದಿನವೂ ಉಳಿಸಿಕೊಂಡು ಅವನ ಸಮಗ್ರ ಕುಟುಂಬದ ಪರವಾಗಿ ೩೬ ಸಾಪ್ತಾಹಿಕ ಉಳಿತಾಯದ ಠೇವಣಾತಿಯನ್ನು ಸಮಿತಿಯಲ್ಲಿ ಸಂಗ್ರಹಿಸಿ ಉಳಿಸಬರತಕ್ಕದ್ದು. ಮತ್ತು ಇಂಥಾ ಠೇವಣಾತಿ ಅಕ್ಕಿಯನ್ನು ವರುಷಾಂತ್ಯದಲ್ಲಿ ಅಂದರೆ ಮಳೆಗಾಲದ ಪ್ರಾರಂಭದಲ್ಲಿ ವ್ಯವಸಾಯಗಾರರು ತಮ್ಮ ಪ್ರಥಮದ ಕಾರ್ತಿ ಬೆಳೆಯ ವ್ಯವಸಾಯದ ಖರ್ಚಿಗೆ ಅಥವಾ ಮಳೆಗಾಲದ ತಮ್ಮ ಕಷ್ಟ ಜೀವನದ ಉಪಯೋಗಕ್ಕೋಸ್ಕರ ಸಮಿತಿಯಿಂದ ವಾಪಾಸು ಪಡಕೊಳ್ಳುತ್ತಿದ್ದುದಲ್ಲದೆ, ಅವರು ತಮ್ಮ ಸಾಗುವಳಿ ವ ಮಳೆಗಾಲದ ಜೀವನದ ಖರ್ಚಿಗೆ ಜಾಸ್ತಿ ಬೇಕಾಗುವ ಅಕ್ಕಿಯನ್ನು ಕೂಡಾ ಸಮಿತಿಯಿಂದಲೇ ೭ ಸೇರು ಅಕ್ಕಿ ಹೋಲಿಯ ಬಡ್ಡಿಯಂತೆ ಯಾವ ತರದ ಜವಾಬ್ದಾರಿಯೂ ಇಲ್ಲವೆ ಪಡೆಯುತ್ತಿದ್ದರು. ಈ ಕ್ರಮದಿಂದ ಸಮಿತಿಗೆ ಸೇರಿರುವ ಸದಸ್ಯರು ೩೬ ಹಪ್ತೆಯ ಸಾಪ್ತಾಹಿಕ ಠೇವಣಾತಿಯ ಉಪಯೋಗದಿಂದ ತಮ್ಮ ಮಳೆಗಾಲದ ಜೀವನಕ್ಕೆ, ಯಾ ಶ್ರೀಮಂತರಿಂದ ಸಾಲ ಪಡೆಯದಂತೆ ಹೆಚ್ಚಿನ ಸಹಾಯವಾಗುತ್ತಿತ್ತು. ಆದರೂ ಲಾಭವನ್ನು ಮಾತ್ರ ಉಳಿಸಿಕೊಳ್ಳಲು ಅಸಮರ್ಥರಾದರು. ಹೇಗೆಂದರೆ ಕಳೆದ ೭ ವರ್ಷಗಳ ಕಾರ್ಯಕ್ರಮದ ಅನುಭವದಿಂದ ಸದಸ್ಯರು ಪ್ರತಿವರ್ಷವೂ ಒಂದರಿಂದ ೭ ಮುಡಿ ಅಕ್ಕಿ ವರೆಗೆ ಈ ತರದ ಸಾಪ್ತಾಹಿಕ ಠೇವಣಾತಿಗಳನ್ನು ಆಯಾ ಏಳು ವರ್ಷಗಳಿಂದಲೂ ಸಮಿತಿಯಲ್ಲಿ ಸಂಗ್ರಹಿಸಿ ಉಪಯೋಗಿಸಿ ಬಂದರೂ, ತಾವು ಸಮಿತಿಯಿಂದ ಪ್ರತಿವರ್ಷ ಪಡೆಯುವ ಸಾಲದ ಸಂಖ್ಯೆಯು ಮಾತ್ರ ಯಥಾಪ್ರಕಾರವೇ ಕಂಡುಬಂತು. ಇದಕ್ಕೆ ಮುಖ್ಯ ಕಾರಣ, ಸಮಿತಿಯ ಸದಸ್ಯರಿಗೆ ವರುಷಾವಧಿ ಉಳಿಸಿಕೊಡುವ ಲಾಭದ ಅಂಶವ ಠೇವಣಾತಿ ಅಕ್ಕಿಯನ್ನು ಸದಸ್ಯರಲ್ಲೇ ನಿಲ್ಲಲಿಕ್ಕೆ ಬಿಟ್ಟದ್ದು.

ಇನ್ನೊಂದು ಕಾರಣ:—ಸಮಿತಿಯ ಆರ್ಥಿಕ ಸ್ಥಿತಿಯು ಬಹಳ ಅಲ್ಪವಾಗಿರುವುದರಿಂದಲೂ, ವರ್ಷಂಪ್ರತಿ ವ್ಯವಸಾಯಗಾರರ ಸದಸ್ಯತನವು ಹೆಚ್ಚುತ್ತಾ ಬರುವುದರಿಂದಲೂ ಇವರಿಗೆ ಬೇಕಾಗುವ ಸಾಲದ ಅಕ್ಕಿಯನ್ನು ಒದಗಿಸಿಕೊಡುವರೆ ಸಮಿತಿಯು ಹಲವು ತರದ ತೊಂದರೆಗಳಿಗೆ ಒಳಗಾಗುವುದಲ್ಲದೆ ಇತರರ ಆಶ್ರಯಕ್ಕೆ ಅಧೀನವಾಗಬೇಕಾಗುತ್ತದೆ. ಈ ತೊಂದರೆಗಳನ್ನು ಪರಿಹರಿಸುವುದಕ್ಕಾಗಿ ಕಳೆದ ೧೯೩೭-೧೯೩೮ನೇ ಇಸವಿಗಳಲ್ಲಿ ಮೂರುವರ್ಷದ 'ಸ್ವಾವಲಂಬಿ ಪ್ರಾವಿಡೆಂಟ'ಎಂಬ ನೂತನ ಯೋಜನೆಯನ್ನು ಜ್ಯಾರಿಗೆ ತರಬೇಕಾಯ್ತು. ಈ ಯೋಜನೆಗೆ ಅನುಸಾರವಾಗಿ ೧೯೩೭–೧೯೩೮ನೇ ಇಸವಿ ಅಂತ್ಯದ ವರೆಗೆ ಸದಸ್ಯರು ಸಮಿತಿಯಲ್ಲಿ ಸಂಗ್ರಹಿಸಿ ವಾಪಾಸು ಪಡೆಯುತ್ತಿದ್ದ ಅಕ್ಕಿಯನ್ನು ಇನ್ನು ಮುಂದೆ ಸದಸ್ಯರಿಗೆ ವಾಪಾಸು ಕೊಡದೆ ಸದ್ರಿ ಅಕ್ಕಿಗೆ ವರುಷಾವಧಿ ಮುಡಿ ೧ರ ೩||ಸೇರು ಅಕ್ಕಿ ಹೋಲಿವ ಬಡ್ಡಿಗೆ ಆಯಾಯ ಸದಸ್ಯರ ಹೆಸರಿಗೆ ಕಾಯಂ ಠೇವಣಾತಿಯಾಗಿ ಇಡಲ್ಪಡತಕ್ಕದ್ದು. ಮತ್ತು ಅವರ ವ್ಯವಸಾಯದ ಖರ್ಚಿಗೆ ವ ಮಳೆಗಾಲದ ಜೀವನಕ್ಕೆ ಬೇಕಾಗುವ ಅಕ್ಕಿಯನ್ನು ಇತರರಿಂದ ಪಡೆಯದೆ ಸಮಿತಿಯಿಂದಲೇ ಪಡೆಯತಕ್ಕದ್ದು. ಈ ರೀತಿ ಸಮಿತಿಯಿಂದ ಪಡೆಯಲಾಗುವ ಸಾಲದ ಅಕ್ಕಿಯನ್ನು ಎರಡು ವಿಧಾನದ ಬಡ್ಡಿಯಿಂದ ಪ್ರಥಮ ಬೆಳೆ ಕಟಾವಿನ ನಂತರ ಎರಡು ಅಥವಾ ಅಗತ್ಯ ಕಂಡರೆ ೩ ಕಂತುಗಳಿಂದಲೂ ಮರುಪಾವತಿ ಮಾಡತಕ್ಕದ್ದೇ ಸಾಲದ ಪ್ರಾಮುಖ್ಯ ಶರ್ತವಾಗಿಯದೆ.

ಈ ಸಾಲಕ್ಕೆ ಎರಡು ವಿಧದ ಬಡ್ಡಿಗಳಿವೆ. ಒಂದನೇಯದ್ದು—ಸದಸ್ಯನ ನಿರಖುಠೇವಣಾತಿಯನ್ನು ಸಮಿತಿಯ ಸಾಲಕ್ಕೆ ವರ್ಷ ೧ರ ೩|| ಸೇರು ಅಕ್ಕಿಯನ್ನು ಬಡ್ಡಿರೂಪದಲ್ಲಿ ಕೊಡಬೇಕಾಗುತ್ತದೆ. ಎರಡನೇದ್ದು ಸದಸ್ಯನ ನಿರಖು ಠೇವಣಾತಿಗಿಂತ ಹೆಚ್ಚಾಗುವ ಸಮಿತಿಯ ಸಾಲಕ್ಕೆ ವರ್ಷಕ್ಕೆ ಮುಡಿ ೧ರ ೭ಸೇರು ಅಕ್ಕಿಯ ಬಡ್ಡಿಯನ್ನು ಕೊಡಬೇಕಾಗುತ್ತದೆ. ಆದರೆ ಸದಸ್ಯನ ನಿರಖು ಠೇವಣಾತಿಯಷ್ಟೇ ಸಾಲದ ಅಕ್ಕಿಗೂ ಕಾಯಂ ನಿರಖು ಠೇವಣಾತಿ ಅಕ್ಕಿಗೂ ಒಂದೇ ತರದ ಬಡ್ಡಿಯು ನಡಿಯುವುದರಿಂದ ಸದಸ್ಯನು ತಗೆದುಕೊಳ್ಳುವ ಸಾಲದ ಪ್ಯೆಕಿ ಆತನ ಕಾಯಂ ಠೇವಣಾತಿಯಷ್ಟೇ ಸಮಿತಿಯ ಸಾಲದ ಅಕ್ಕಿಗೆ ಬಡ್ಡಿಯೇ ಇಲ್ಲದಂತಾಗುತ್ತದೆ. ಆದರೆ ಕಾಯಂ ಠೇವಣಾತಿಗಿಂತ ಹೆಚ್ಚು ಸಮಿತಿಯಿಂದ ಪಡೆಯುವ ಸಾಲದ ಅಕ್ಕಿಗೆ ಮಾತ್ರ ಸದಸ್ಯನು ಮುಡಿ ೧ರ ೭ ಸೇರಿನಂತೆ ಬಡ್ಡಿಯನ್ನು ಸಮಿತಿಗೆ ಕೊಡಬೇಕಾಗುತ್ತದೆ. ಈ ಕ್ರಮವನ್ನು ವಿಶದವಾಗಿ ತಿಳಿಯಬೇಕಾದರೆ ಒಂದು ಉದಾಹರಣೆಯು ಅಗತ್ಯವಿರುತ್ತದೆ.

ಒಬ್ಬ ಸದಸ್ಯನ ಮನೆಯಲ್ಲಿ ದಿನವಹಿ ನಾಲ್ಕು ಸೇರು ಅಕ್ಕಿ ಖರ್ಚಾಗುತ್ತಿದ್ದಲ್ಲಿ ಇದರಿಂದ ಸಮಿತಿಯ ಕ್ರಮದಂತೆ ಒಂದು ಸೇರು ಅಕ್ಕಿಯ ೭ನೇ ಒಂದಂಶ ಅಂದರೆ ಒಂದು ಸೇರು ಅಕ್ಕಿಗೆ ೬ ಕುಡ್ತೆಯಲ್ಲಿ ಒಂದು ಕುಡ್ತೆಯಂತೆ ನಾಲ್ಕು ಸೇರು ಅಕ್ಕಿಯಿಂದ ಈ ರೀತಿಯ ನಾಲ್ಕು ಕುಡ್ತೆ ಅಕ್ಕಿಯನ್ನು ಪ್ರತಿದಿವಸವೂ ತೆಗೆದಿಟ್ಟರೆ ಹಪ್ತೆಗೆ ೨೮ ಕುಡ್ತೆ ಅಕ್ಕಿ, ಅಥವಾ ನಾಲ್ಕುಸೇರು ನಾಲ್ಕು ಕುಡ್ತೆ ಸಾಪ್ತಾಹಿಕ ಕಾಯಂ ಠೇವಣಾತಿಯಾಗುತ್ತದೆ. ಈ ಪ್ರಕಾರ ಸದಸ್ಯನು ಎಡೆಬಿಡದೆ ೩೬ ವಾರಗಳ ವರೆಗೆ ಪ್ರತೀವಾರ ನಾಲ್ಕುಸೇರು ನಾಲ್ಕುಕುಡ್ತೆ ಅಕ್ಕಿಯ ಸಾಪ್ತಾಹಿಕ ಕಾಯಂ ಠೇವಣಾತಿಯನ್ನು ಸಮಿತಿಯಲ್ಲಿ ಸಂಗ್ರಹ ಮಾಡುವ ಅಕ್ಕಿಯು ವರ್ಷಾಂತ್ಯಕ್ಕೆ ಒಟ್ಟು ನಾಲ್ಕು ಮುಡಿ ಅಕ್ಕಿಯಾಗುತ್ತದೆ. ಇದನ್ನು ಸಂಬಂಧಪಟ್ಟ ಸದಸ್ಯರ ಕಾಯಂ ಠೇವಣಾತಿಯ ಲೆಕ್ಕಕ್ಕೆ ಸೇರಿಸಲ್ಪಡುವುದಲ್ಲದೆ ಇದಕ್ಕೆ ವರ್ಷ ೧ಕ್ಕೆ ಮುಡಿ ೧ರ ೩||ಸೇರು ಅಕ್ಕಿ ಬಡ್ಡಿಯನ್ನೂ ಕೊಡೋಣಾಗುತ್ತದೆ. ಈ ಸಾಪ್ತಾಹಿಕ ಕಾಯಂ ಠೇವಣಾತಿಯು ಪ್ರಥಮ ಕಂತು, ಸಪ್ಟಂಬರ ತಿಂಗಳ ಆಖೈರಿಗೆ ಅಥವಾ ಒಕ್ಟೋಬರ ತಿಂಗಳ ಆದಿಗೆ ಪ್ರಾರಂಭವಾಗುವುದರಿಂದ ಕೊಡುವಂಥಾ ಸಾಪ್ತಾಹಿಕ ಕಾಯಂ ಠೇವಣಾತಿಯ ಅವಧಿಯು ಏನೇನೂ ಕಷ್ಟತರದ್ದಲ್ಲ. ಯಾಕೆಂದರೆ ಪ್ರತಿವರ್ಷ ಒಕ್ಟೋಬರ ತಿಂಗಳ ಪ್ರಾರಂಭದಲ್ಲಿ ಬೇಸಾಯಗಾರನು ತನ್ನ ಬೆಳೆಯನ್ನು ಕೊಯ್ಯುವುದರಿಂದ ಈ ಸಾಪ್ತಾಹಿಕ ಠೇವಣಾತಿಯನ್ನು ಪ್ರಾರಂಭಿಸಿ ೩೬ ವಾರಗಳ ತನಕ ನಡೆಸಿ ಕೊಂಡುಹೋಗಲು ವ್ಯವಸಾಯಗಾರರಿಗೂ ಕೂಲಿಯವರಿಗೂ ಸಾಧ್ಯವಾಗುತ್ತದೆ. ಮತ್ತು ಇವರಿಂದ ಒಂದು ಕುಟುಂಬವು ಹೆಚ್ಚು ಇದ್ದಾಗ್ಯೂ ಹೆಚ್ಚು ಖರ್ಚುಮಾಡದೆ ಇಲ್ಲದಿರುವಾಗ ಬಳಲದೆ ಇರುವಂಥಾ ಒಂದು ಸಂಬಳದಾರಿಯನ್ನು ಕಂಡುಹಿಡಿದಂತಾಗುವುದು.

ಈಗ ಒಂದು ರಹಿತ ಕುಟುಂಬಕ್ಕೆ ಮಳೆಗಾಲದ ತನ್ನ ಜೀವನ ಮತ್ತು ವ್ಯವಸಾಯದ ಖರ್ಚಿಗೆ ಉದಾಹರಣೆಯ ಮೇಲೆ ಹನ್ನೆರಡು ಮುಡಿ ಅಕ್ಕಿ ಬೇಕಾಗುವುದೆಂದು ತಿಳಿಯುವ. ಹೀಗಿರುವಾಗ ಒಬ್ಬ ಸದಸ್ಯನು ೧೯೩೮ನೇ ಇಸವಿಯಲ್ಲಿ ಸಾಪ್ತಾಹಿಕ ಕಾಯಂ ಠೇವಣಾತಿಯ ಮೂಲಕ ೩೬ ಹಪ್ತೆಗೆ ನಾಲ್ಕು ಮುಡಿ ಅಕ್ಕಿಯನ್ನು ಸಮಿತಿಯಲ್ಲಿ ಜಮೆಯಿಟ್ಟಿರುವರು. ಅವೇ ವರ್ಷಾಂತ್ಯಕ್ಕೆ ಸಮಿತಿಯಿಂದ ತನ್ನ ಸಾಗುವಳಿ ವ ಜೀವನದ ಬಗ್ಗೆ ಅಕ್ಕಿ ಮುಡಿ ಹನ್ನೆರಡನ್ನು ಸಾಲವಾಗಿ ಪಡೆದ. ಅಂಥಾ ಸಾಲವನ್ನು ೧೯೩೯ನೇ ಇಸವಿ ಏಪ್ರಿಲ ೩೦ ರ ಒಳಗೆ ಎರಡು ಕಂತಿನಲ್ಲಿ ಪಾವತಿಸುವಂತೆ ಆತನ ಕಾಯಂ ಡಿಪೋಜಿಟು ಅಕ್ಕಿಯಷ್ಟು ಅಂದರೆ ಸಾಲದ ಅಕ್ಕಿ ಪ್ಯೆಕಿ ೪ ಮುಡಿ ಅಕ್ಕಿಗೆ ಮುಡಿ ೧ರ ೩|| ಸೇರಿನಂತೆ ಅಕ್ಕಿ ಕಳಸಿಗೆ ಒಂದು ಮತ್ತು ಕಾಯಂ ಠೇವಣಾತಿ ಅಕ್ಕಿಗಿಂತ ಜಾಸ್ತಿ ಸಾಲಪಡೆದಿರುವ ಅಕ್ಕಿ ಮುಡಿ ೮ಕ್ಕೆ ಮುಡಿ ೧ರ ೭ ಸೇರು ಅಕ್ಕಿ ಹೋಲಿವ ಬಡ್ಡಿಯಂತೆ ಅಕ್ಕಿಮುಡಿ ೧ ಕಳಸಿಗೆ ಒಂದನ್ನು ಸಮಿತಿಗೆ ಮರುಪಾವತಿಯಾಗಿ ಅಸ್ಲು ಬಡ್ಡಿಯಿಂದ ಅಕ್ಕಿ ಮುಡಿ ೧೩ ಕಳಸಿಗೆಗಳನ್ನು ಕೊಡಬೇಕಾಗುತ್ತದೆ. ಆದರೆ ಸದಸ್ಯನ ನಿರಖು ಠೇವಣಾತಿ ಅಕ್ಕಿಮುಡಿ ನಾಲ್ಕಕ್ಕೆ ಸಮಿತಿಯಿಂದ ಹೋಲಿವ ಬಡ್ಡಿಬಾಬ್ತು ಸಲಬೇಕಾದ ಅಕ್ಕಿ ಕಳಸಿಗೆ ಒಂದನ್ನು ಸದಸ್ಯನು ತನ್ನ ಸಾಲದ ಬಡ್ಡಿಗೆ ವಜಾಕೊಟ್ಟರೆ ಆತನಿಗೆ ಪ್ರಥಮ ವರ್ಷದಲ್ಲಿ ಸಮಿತಿಗೆ ಕೊಡಬೇಕಾದ್ದು ಅಕ್ಕಿ ಮುಡಿ ೧೩, ಕಳಸಿಗೆ ಒಂದು ಮಾತ್ರ. ಈ ಸಂದರ್ಭದಲ್ಲಿ ಚೆನ್ನಾಗಿ ನೆನಪಿಸಲ್ಲಿಡಬೇಕಾದ ವಿಚಾರವೇನೆಂದರೆ ಸದಸ್ಯನು ಕಡಿಮೆ ಬಡ್ಡಿಯಲ್ಲಿ ಸಾಲವನ್ನು ಪಡೆದುದಲ್ಲದೆ ಆತನ ಲೆಕ್ಕಕ್ಕೆ ಸಮಿತಿಯಲ್ಲಿ ನಾಲ್ಕುಮುಡಿ ಅಕ್ಕಿ ಕಾಯಂ ನಿರಖು ಠೇವಣಾತಿಯಲ್ಲಿ ಉಳಿಯಲಾಯ್ತು.

ಇದೇ ಸದಸ್ಯನ ಎರಡನೇ ವರ್ಷದ ಸದಸ್ಯತನದಲ್ಲಿ (ಅಂದರೆ ೧೯೩೯ನೇ ಇಸವಿಯ ಅಂತ್ಯಕ್ಕೆ) ಅವನು ೩೬ ಸಾಪ್ತಾಹಿಕ ಡಿಪೋಜಿಟುಗಳನ್ನು ಕೆಟ್ಟು ಅವನ ಒಟ್ಟು ಅವನ ನಿರಖು ಠೇವಣಾತಿ ೮ ಮುಡಿಯಾಗುತ್ತದೆ. ಮೊದಲೇ ಹೇಳಿರುವಂತೆ ೨ನೇ ವರ್ಷದ ಮಳೆಗಾಲದಲ್ಲಿ ಕೂಡಾ ಅವನಿಗೆ ಹನ್ನೆರಡು ಮುಡಿ ಅಕ್ಕಿ ಸಾಲವನ್ನೇ ಸಮಿತಿಯಿಂದ ಪಡೆಯಬೇಕಾಗುತ್ತದೆ. ಹೀಗೆ ೧೯೪೦ನೇ ಇಸವಿಯ ಅಂತ್ಯಕ್ಕೆ ಈ ೧೨ ಮುಡಿ ಸಾಲದ ಅಕ್ಕಿ ಪ್ಯೆಕಿ ಆತನ ಕಾಯಂ ಡಿಪೋಜಿಟಾಗಿರುವ ೮ ಮುಡಿಯಷ್ಟು ಸಾಲದ ಅಕ್ಕಿಗೆ ಬಡ್ಡಿಯನ್ನೇ ಕೊಡಬೇಕಾಗಿಲ್ಲ. ಆದ್ದರಿಂದ ಆತನು ತನ್ನ ಸಾಲವನ್ನು ಸಮಿತಿಗೆ ಮರುಪಾವತಿಮಾಡುವಾಗ ೧೨ ಮುಡಿ ಅಕ್ಕಿ ಪ್ಯೆಕಿ ನಾಲ್ಕುಮುಡಿ ಅಕ್ಕಿಗೆ ವರ್ಷ ೧ರ ೭ಸೇರಿನಂತೆ ಹೋಲಿವ ಬಡ್ಡಿ ಮೇರೆಗೆ ಅಕ್ಕಿ ಕಳಸಿಗೆಯನ್ನು ಕೊಟ್ಟರೆ ತೀರಿತು. ಅಥವಾ ಅವನು ೩ನೇ ವರ್ಷದಲ್ಲಿ ತನ್ನ ಸಾಲದ ಬಗ್ಗೆ ಸಮಿತಿಗೆ ಮರುಪಾವತಿಯಾಗಿ ೧೨ ಮುಡಿ ೨ ಕಳಸಿಗೆ ಅಕ್ಕಿಯನ್ನು ಕೊಡಬೇಕಾಗುತ್ತದೆ.

ಇದೇ ರೀತಿಯಲ್ಲಿ ಮೂರನೇ ವರ್ಷದಲ್ಲಿ ಸಮಿತಿಗೆ ಪಾವತಿಸುವ ಆ ಸದಸ್ಯನ ನಿರಖು ಠೇವಣಾತಿಯು ೧೨ ಮುಡಿಗೇರುತ್ತದೆ. ಮಾತ್ರವಲ್ಲ ಅವನ ೩ನೇ ವರ್ಷದ ಸಾಲವು ನಿರಖು ಠೇವಣಾತಿಯಷ್ಟೇ ಆಗುತ್ತದೆ. ವಸ್ತುಸ್ಥಿತಿಯು ಹೀಗಿರುವಾಗ ಒಬ್ಬ ಸದಸ್ಯನು ಎಡೆಬಿಡದೆ ೩ ವರ್ಷಗಳ ತನಕ ಸಮಿತಿಯ ಸದಸ್ಯನಾದರೆ ೩ನೇ ವರ್ಷದಲ್ಲೇ ಅವನಿಗೆ ಬೇಕಾಗುವ ಅಕ್ಕಿಯನ್ನು ನಿಬಡ್ಡಿಯಿಂದ ಠೇವಣಾತಿಯಷ್ಟು ಸಾಲತೆಗೆದುಕೊಳ್ಳುವ ಹಕ್ಕಿರುವುದಲ್ಲದೆ ಅತನೇ ಸಾಲಕೊಡುವವನೂ ಸಾಲಪಡೆಯುವವನೂ ಆಗುತ್ತಾನೆ. ಮತ್ತು ಈ ಹೊಸ ಯೋಜನೆಗನುಸಾರವಾಗಿ ರೈತರು ಒತ್ತಾಯಪೂರ್ವಕವಾಗಿ ತಮ್ಮ ನಿತ್ಯಜೀವನದಿಂದ ಕೆಲವೊಂದಂಶವನ್ನು ಉಳಿಸಿಕೊಳ್ಳಬೇಕಾಗುತ್ತದೆ. ಇದರಿಂದಾಗಿ ಹಳ್ಳಿಯ ವ್ಯವಸಾಯಗಾರರು ಪ್ರಥಮ ಬೆಳೆಯ ಕಟಾವಿನನಂತರ ಹೊಲದಪೈರು ತಮ್ಮ ಮನೆಯಲ್ಲಿ ತುಂಬಿರುವಾಗ ಅವರು ಸಿಕ್ಕಾಬಟ್ಟೆ ಖರ್ಚುಮಾಡುವ ಹವ್ಯಾಸಕ್ಕೆ ಬಲಿಬೀಳದಂತಾಗಿ ಮಳೆಗಾಲದಲ್ಲಿ ಆಹಾರವಿಲ್ಲದೆ ಎರಡುಮೂರು ದಿವಸಗಳತನಕವೂ ಊಟವಿಲ್ಲದೆ ಸಂಕಷ್ಟಪಡುವಬದಲು ಉಣ್ಣಲಿಕ್ಕೆ ಬೇಕಾಗುವದನ್ನು ಉಳಿಸಿಕೊಳ್ಳಲಿಕ್ಕೆ ಸಾಧ್ಯವಾಗುವುದು.

WANTED.

Applications are invited from Graduates or Intermediates for an accountant's post as a Head clerk. The application which should reach Box No. 12 C/O Navayuga Office, Udipi, on or before 15 th April 1939 should contain the Name, Age, Qualifications, permanent residence; and previous experience. The Vacancy is permanent one

ಸ್ಪೈನಿನಲ್ಲಿ ಫ್ರಾಂಕೋನಿಗೆ ಪೂರ್ಣಾಹುತಿ ಮೆಡ್ರಿಡ್

ಸ್ಪೈನಿನಲ್ಲಿ ಫ್ರಾಂಕೋನಿಗೆ ವಶವಾಗದೆ ಇರುವ ಮೇಡ್ರಿಡ್ ನಗರಕ್ಕೆ ಆತನು ಎಪ್ಪತ್ತೆರಡುತಾಸಿನ ಅವಧಿಕೊಟ್ಟಿದ್ದಾನೆ. ಸ್ಪೈನಿನ ಹಳೆಯ ಸರಕಾರದ ಒಂದು ಕೇಂದ್ರ ಅದು. ಆ ನಗರವನ್ನೂ ಹಳೆಯ ಸರಕಾರದ ವಶದಲ್ಲಿರುವ ಸಕಲ ಯುದ್ಧೋಪಕರಣಗಳನ್ನೂ ಮೂರು ದಿವಸಗಳೊಳಗೆ ಯಾವುದೊಂದು ಶರ್ತವಿಲ್ಲದೆ ತನಗೊಪ್ಪಿಸಿಕೊಟ್ಟು ಶರಣಾಗತರಾಗಬೇಕು. ತಪ್ಪಿದರೆ ಮೆಡ್ರಿಡ್ ನಗರವನ್ನು ಧೂಳಿಮುಕ್ಕಿಸುತ್ತೇನೆ—ಎಂದು ಮೆಡ್ರಿಡ್‌ನಲ್ಲಿ ಹಿಂದಿನ ಸರಕಾರದ ಹೆಸರಿಂದಿರುವ ಅಧಿಕಾರಿಗಳಿಗೆ ಕಟ್ಟಪ್ಪಣೆಕೊಟ್ಟಿದ್ದಾನೆ. ಅವರು ಅದಕ್ಕೆ ತಲೆಬಾಗುವ ಸಿದ್ಧತೆಯಲ್ಲಿದ್ದಾರೆ.

ಹಂಗೇರಿಯಾ ಸ್ಲೋವೇಕಿಯಾ ಗಡಿಕಲಹ

ಇತ್ತೀಚೆಗೆ ಹಿಟ್ಲರನು, ಸ್ಲೋವೇಕಿಯಾವನ್ನು ಜರ್ಮನಿಯೊಳಗೆ ತುರುಕಿಸಿಕೊಂಡು ಜೆಕೋಸ್ಲೋವೇಕಿಯಾ ಎಂಬ ಸ್ವತಂತ್ರ ರಾಷ್ಟ್ರವಿಲ್ಲವಂತೆ ಮಾಡಿದನಷ್ಟೆ. ಆದರೆ ತೋರಿಕೆಗೆ ಆ ಸ್ಲೋವೇಕಿಯಾಗೆ ಜರ್ಮನಿಯ ಆಶ್ರಯದಲ್ಲ ಸ್ವಾಯತ್ತತೆಯು ಸೋಗಿರುವ ರಾಜ್ಯಭಾರಕ್ರಮವನ್ನು ಬಿಟ್ಟಿದ್ದಾನೆ. ಈ ಸ್ಲೋವೇಕಿಯಕ್ಕೂ ಹಂಗೇರಿಯಕ್ಕೂ ಗಡಿಯ ವಿವಾದ ಬಂದು ಉಭಯ ಪಕ್ಷದ ಸೈನ್ಯಕ್ಕೂ ಕಾಳಗ ನಡೆಯಿತು ಆದರೆ ಈ ಗಡಿ ನಿಶ್ಚಯದ ವಿಷಯದಲ್ಲಿ ಒಂದು ಸಮಿತಿಯು ಏರ್ಪಾಡಾಗಿ ತನ್ನೊಲಕ ಇತ್ಯರ್ಥವಾಗುವ ತನಕ ಕಾಳಗ ಬೇಡವೆಂದು ಈಗ ನಿರ್ಧಾರವಾಗಿದೆ. ತನ್ಮಧ್ಯೆ ಉಭಯ ಪಕ್ಷದ ಸೈನಿಕರೂ ಗಡಿಯಲ್ಲಿದ್ದಾರೆ, ಅಲ್ಲಲ್ಲಿ ಗಡಿ ಭದ್ರತೆ ಮಾಡುತ್ತಿದ್ದಾರೆ. ಚಿಕ್ಕ ಪುಟ್ಟ ಕಲಹಗಳು ಸಾಗುತ್ತಿವೆ.

ಪೋಲೇಂಡಿನ ಸರ್ವ ಸಿದ್ಧತೆ

ಜರ್ಮನಿಯು ಪೋಲೆಂಡಿನ ಒಂದು ಬದಿಯಲ್ಲಿಯ ಮೆಮೆಲ್‌ನ್ನೂ ಮತ್ತೊಂದು ಬದಿಯಲ್ಲಿಯ ಜೆಕೋಸ್ಲೋವೇಕಿಯವನ್ನೂ ತನ್ನೊಳಗೆ ಸೇರಿಸಿಕೊಂಡುದರ ಗುಟ್ಟು ಪೋಲೆಂಡಿಗ್ಗೆ ತಿಳಿದಿದೆ. ಅದು ಹೇಳುತದ್ದೆ-'ನಮ್ಮ ಎದುರಾಳಿಯು ಎಷ್ಟು ಬಲಶಾಲಿಯೇ ಇರಲಿ, ನಾವು ರಣರಂಗಕ್ಕಿಳಿಯಲು ಸಿದ್ಧರಿದ್ದೇವೆ. ಪೋಲಿಶ್ ಜನಾಂಗಕ್ಕೆ ಸ್ವಯಂನಿಷ್ಕೃಷ್ಟತೆ ಎದೆನಡುಕವಿಲ್ಲ. ನಾವು ಯುದ್ಧೋಪಕರಣಗಳಲ್ಲಾಗಲೀ, ಯುದ್ಧ ವಿದ್ಯೆಯಲ್ಲಾಗಲೀ, ಯುದ್ಧೋತ್ಸಾಹದಲ್ಲಾಗಲೀ ನಮ್ಮ ವಿಜಯವನ್ನು ನಾವು ಸಾಧಿಸಿಕೊಳ್ಳಲಾರದಷ್ಟು ಹಿಂದುಬಿದ್ದಿಲ್ಲ. ನಮ್ಮ ಕೋವಿಗಳ ಮೊನೆಯಲ್ಲ ವಿಜಯವು ಸ್ಥಿರವಾಗಿ ನಿಂತಿದೆ. ಇದನ್ನು ಎಲ್ಲರೂ ತಿಳಿದಿರಲಿ ಎಂದು ಪೋಲಿಶ್ ಸರಕಾರದ ಯುದ್ಧಾಂಗದ ಪತ್ರಿಕೆಯು ಸಾರುತ್ತಿದೆ.

ಲಾಹೋರಿನಲ್ಲಿ ಕಿಸಾನ (ರೈತ) ರ ಸತ್ಯಾಗ್ರಹ

ಲಾಹೋರು ಜಿಲ್ಲೆಯಲ್ಲಿ ನೆಲಕಂದಾಯವನ್ನು ಏರಿಸಿದುದನ್ನು ಪ್ರತಿಭಟಿಸುವುದಕ್ಕಾಗಿ ತಂಡತಂಡವಾಗಿ ಕಿಸಾನ್(ರೈತ) ಸತ್ಯಾಗ್ರಹಿಗಳು ಲಾಹೋರಿಗೆ ಬರುತ್ತಿದ್ದಾರೆ. ಅವರನ್ನು ಹಿಂಬಾಲಿಸಿಕೊಂಡು ದೊಡ್ಡ ಜನಸ್ತೋಮ ಬರುತ್ತದೆ. ಕಳೆದ ಶುಕ್ರವಾರದಿಂದ ತೊಡಗಿದ ಈ ಸತ್ಯಾಗ್ರಹಸಮರದ ಮುಂದಾಳುಗಳಲ್ಲಿ ಸಾಧಾರಣ ದಿನಕ್ಕೆ ಇಪ್ಪತ್ತರಂತೆ ದಸ್ತಗಿರಿಮಾಡಲ್ಪಡುತ್ತಾರೆ. 'ಮೊದಲನೆಯ ತಂಡದ ಹದಿನೈದುಮಂದಿಗೆ ಎರಡುವಾರಗಳ ಸಶ್ರಮಶಿಕ್ಷೆ ಕೊಡಲಾಗಿದೆ.

ವಾರ್ತಾ ವಿಚಾರ

ಕುಂಭಕೋಣದಲ್ಲಿ ಪಾಲಿಟಿಕ್ಸ್ ಸ್ಕೂಲ್ (ರಾಜಕೀಯ ಶಿಕ್ಷಣಶಾಲೆ)

ರಾಜಕೀಯ ಶಿಕ್ಷಣಶಾಲೆ ಎಂಬದೊಂದನ್ನು ಹೊಸದಾಗಿ ಕುಂಭಕೋಣದಲ್ಲಿ ತೆರೆಯಲಾಗಿದೆ, ಅದರ ವ್ಯವಸ್ಥಾಪಕರು ಅಲ್ಲಿಯ 'ಪಂತುಲು ಅಯ್ಯರ್ ವಾಚನಾಮಂದಿರ'ದವರು. ಇದರ ಉದ್ದೇಶವು ಕಾಂಗ್ರೆಸ್ ಪ್ರಚಾರಕಾರ್ಯಕಾರಿಗಳಿಗೆ ಸರಿಯಾದ ತರಬೇತಿಯನ್ನು ಕೊಡುವುದು. ಕಾಂಗ್ರೆಸ್ ಕೆಲಸಗಾರರ ಬಾಯಿಂದ ತಪ್ಪು ಮಾತುಗಳು ಬಿದ್ದು ಅದರಿಂದ ಜನತೆಯಲ್ಲಿ ಅಸಾಧ್ಯ ಆಶಾಕಾಂಕ್ಷೆಗಳು ಹುಟ್ಟಿ ಕೊನೆಗೆ ನಿರಾಶೆಯು ಅಸಂತೃಪ್ತಿಯುಂಟಾಗದಂತೆಯೂ ಮಂತ್ರಿಗಳ ಕಾರ್ಯನಿರ್ವಾಹದಲ್ಲಿ ಅದರಿಂದ ತೊಡಕುತೊಂದರೆಗಳು ಬಾರದಂತೆಯೂ ಮಾಡುವದೇ ಆ ಶಾಲೆಯ ಉದ್ದೇಶ. ಆ ಶಾಲೆಯ ಪ್ರಥಮ ರಾಜಕೀಯ ಉಪನ್ಯಾಸವು ಸಾಮಾನ್ಯ ವಿಕ್ರಯಕರಂಗೆ (ಸೇಲ್ಸ್‌ಟೇಕ್ಸ್) ಇದರ ಕುರಿತಾಗಿದ್ದು ಗವರ್ನಮೆಂಟ್ ಕಾಲೇಜಿನ ಶ್ರೀ. ರಾಮ ಅಯ್ಯರವರಿಂದ ನಡೆಯಿತು.

ಪಂಜಾಬ್ ಎಸೆಂಬ್ಲಿಯಲ್ಲಿ ಗದ್ದಲ

ವಿದ್ಯಾಂಗದ ಮಂತ್ರಿಗಳ ಕ್ಷಮಾಯಾಚನೆ

ಪಂಜಾಬ್ ಎಸೆಂಬ್ಲಿಯಲ್ಲಿ ವಿದ್ಯೆ ಮತ್ತು ಆರೋಗ್ಯ ಖಾತೆಯ ಮಂತ್ರಿಗಳಾದ ಮಿಯಾನ್ ಅಬ್ದುಲ್ ಹಾಯರವರು ವಿರೋಧ ಪಕ್ಷದ ಸದಸ್ಯರ ಟೀಕೆಗಳಿಗೆ ಉತ್ತರಗೊಡುತ್ತ ಅವರನ್ನುದ್ದೇಶಿಸಿ ಆಡಿದ ಮಾತುಗಳು ಸಭ್ಯತೆಗೆ ವಿರೋಧವೆಂದು "ಮುಚ್ಚು ಬಾಯಿ—Shutup—ಮುಚ್ಚು ಬಾಯಿ!' ಎಂಬ ಗದ್ದಲವೆದ್ದಿತು. ಕೊನೆಗೆ ಮಂತ್ರಿಗಳು ಕ್ಷಮಾಯಾಚನೆ ಬೇಡಿದ ನಂತರ ಗದ್ದಲ ಶಾಂತವಾಯಿತು. ಆದರೆ ಮತ್ತೊಂದು ಗದ್ದಲ ತೊಡಗಿತು 'ಮುಚ್ಚು ಬಾಯಿ!' ಎಂದುದು ಸಭ್ಯತೆಯೇ ಎಂಬ ಕೋಲಾಹಲ ಅದು. ಆ ವಿಷಯವನ್ನು ಮತ್ತೊಂದು ದಿನ ಇತ್ಯರ್ಥಿಸೋಣವೆಂದು 'ಸ್ಪೀಕರರು'—ಸಭಾಧ್ಯಕ್ಷಾಧಿಕಾರಿಗಳು—ಹೇಳಿ ಸಮಾಧಾನಗೊಳಿಸಿ ಅಂದಿನ ಸಭಾಕಾರ್ಯದಲ್ಲಿ ಎಲ್ಲರೂ ಉಪಕ್ರಮಿಸುವಂತೆ ಮಾಡಿದರು.

ಕೊಬ್ಬರಿ ಮತ್ತು ತೆಂಗಿನೆಣ್ಣೆಗಳ ದರ ಏಕೆ ತಗ್ಗುತ್ತದೆ?

ಸಿಲೋನ್ ತನ್ನ ಉತ್ಪತ್ತಿಯನ್ನು ಅಗ್ಗದಲ್ಲಿ ನಮ್ಮೂರೊಳಗೆ ನುಗ್ಗಿಸುವುದರಿಂದ ತಿರುವಾಂಕೂರಿನ ತೆಂಗು ತೋಟಗಾರರ ಸಂಘದ ಅಧ್ಯಕ್ಷರಾದ ಶ್ರೀ. ಚೆಂಗನಾಚೇರಿ ಕೆ. ಪರಮೇಶ್ವರ ಪಿಳ್ಳೆಯವರು ಇದನ್ನು ತಡೆಗಟ್ಟಿಸುವುದಕ್ಕಾಗಿ ಇಂಡಿಯಾ ಸರಕಾರದ ಸಹಾಯವನ್ನು ಹೊಂದುವರೆ ಡಿಲ್ಲಿಯ ವರೆಗೂ ಹೋಗಿ ಕೇಂದ್ರ ಎಸೆಂಬ್ಲಿ ಮೆಂಬರರನ್ನು ಹಿಡಿದು ವಿಶೇಷ ಪ್ರಯತ್ನ ನಡೆಯಿಸಿರುವರಷ್ಟೆ. ಅದರಿಂದಾಗಿ ಮೊನ್ನೆ ಎಸೆಂಬ್ಲಿಯಲ್ಲಿ ಸರಕಾರವು ತೆಂಗಿನ ತೋಟಗಾರರನ್ನು ರಕ್ಷಿಸುವ ಪ್ರಯತ್ನಮಾಡುವುದಿಲ್ಲವೆಂಬ ದೂರಿನ ಚರ್ಚೆ ನಡೆಯಿತು. ಆಗ ಸರಕಾರದ ಕಡೆಯಿಂದ ಕಾಮರ್ಸ್ ಮೆಂಬರರು ಪರಿಸ್ಥಿತಿಯ ಕಾಠಿಣ್ಯವನ್ನೊಪ್ಪಿಕೊಂಡು ಆ ವಿಷಯದಲ್ಲಿ ಸರಕಾರವು ವಿಶೇಷ ಲಕ್ಷ್ಯವೀಯುವುದರಲ್ಲಿದೆಯೆಂದರು. ಕ್ಷಿಪ್ರದಲ್ಲೇ ಪ್ರತಿಬಂಧಕವನ್ನೊಡ್ಡಬೇಕೆಂಬುದನ್ನು ತಿರುಗಿ ಸರಕಾರದ ಅವಗಾಹನೆಗೆ ಪಿಳ್ಳೆಯವರು ತರುತ್ತ ಅವರು ಕೊಟ್ಟಿರುವ ಅಂಕೆ ಸಂಖ್ಯೆಗಳಿಂದ ಕೊಬ್ಬರಿಯ ದರ ತಗ್ಗಿದ ಕಾರಣ ವ್ಯಕ್ತವಾಗುತ್ತದೆ. ೧೯೩೮ನೆಯ ಜನವರಿ ಫೆಬ್ರವರಿ ತಿಂಗಳುಗಳಲ್ಲಿ ಸಿಲೋನಿನಿಂದ ಇಂಡಿಯಾಕ್ಕೆ ಬಂದ ಕೊಬ್ಬರಿ ಮತ್ತು ಎಣ್ಣೆ ೩೯೫೪೯ ಹಂಡ್ರಡ್-ವೇಟ್ ಮತ್ತು ೧೭೪೫೫ ಹಂಡ್ರಡ್ ವೇಟ್. ಆದರೆ ಅದೇ ಅವಧಿಯಲ್ಲಿ ಈ ವರುಷ ಬಂದು ೧೦೭೬೩೬ ಮತ್ತು ೩೯೭೬೪ ಎಂದರೆ ಶೇಕಡಾ ೧೭೦ ಮತ್ತು ೧೪೩ರಷ್ಟು ಹೆಚ್ಚು ಒಳನುಗ್ಗಿತೆಂದಾಯಿತು. ದರ ತಗ್ಗದಿದ್ದೀತೇ?

ಸ್ಪೈನಿನ ಜನರಲ್ ಫ್ರಾಂಕೋ.

ಮುಸ್ಲಿಮ್ ಲೀಗಿಗೂ ಫೆಡರೇಶನ್ ಬೇಡವಾಗಿದೆ.

ಮೀರತ್ತಿನಲ್ಲಿ ನಡೆದ ಲೀಗಿನ ಪರಿಷತ್ತಿನಲ್ಲಿ ಅದರ ಅಧ್ಯಕ್ಷರಾಗಿದ್ದ ನವಾಬ್ ಜಾದಾ ಆಲಿಖಾನರು ತನ್ನ ಭಾಷಣದಲ್ಲಿ—ಪ್ರಾಂತಿಕ ಸ್ವಾಯತ್ತತೆಯಲ್ಲಿ ಮುಸ್ಲಿಮರಿಗೆ ದೊರೆತ ಹಕ್ಕು ಸ್ವಾತಂತ್ರ್ಯಗಳು ಸಾಲದು. ಮುಂದೆ ಬರಲಾಗುವದೆಂಬ ಫೆಡರಲ್ ಯೋಜನೆಯೂ ಮುಸ್ಲಿಮ್ ಜನಾಂಗಾಧಿಕಾರವನ್ನು ಮನ್ನಿಸುವಂತಿಲ್ಲ. ನಮ್ಮದು ಜಾತಿಯ ಪಂಗಡವಲ್ಲ. ಮುಸ್ಲಿಮ್ ಜನಾಂಗ ನಮ್ಮದು. ನಮಗೆ ಜನಾಂಗದ ಹಕ್ಕು ಸ್ವಾತಂತ್ರ್ಯಗಳು ಬೇಕಾಗಿವೆ ಇಂಡಿಯವನ್ನು ಈ ದೃಷ್ಟಿಯಿಂದ ವಿಭಾಗಿಸಬೇಕಾಗಿದೆ. ಫೆಡರೇಶನಿನಲ್ಲಿ ಇವಕ್ಕೆ ಆಸ್ಪದವಿಲ್ಲ. ಆದುದರಿಂದ ಅದು ನಮಗೆ ಬೇಕಾಗಿಲ್ಲ—ಎಂದು ಲೀಗಿನ ಅಭಿಪ್ರಾಯವನ್ನು ವ್ಯಕ್ತಗೊಳಿಸಿರುವರು.

ಬೇಡಿದರೂ ಚಿಂತೆಯಿಲ್ಲ ಶೇಂದಿಯ ಮದ್ದು ಬೇಡ

ಬೊಂಬಾಯಿಯಲ್ಲಿ ನಿಶಾನಿಷೇಧ ಪ್ರಚಾರ ಕಾರ್ಯಕ್ರಮವನ್ನು ಪ್ರಾರಂಭಿಸುವ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳಾದ ಬಿ. ಜಿ. ಖೇರ್‌ರವರು ಭಾಷಣಗೊಡುತ್ತ ಸರಕಾರವು ಶೇಂದಿಯ ದುಡ್ಡಿನ ಮೇಲೆ ಆಧರಿಸಿರುವುದಕ್ಕಿಂತ ಭಿಕ್ಷೆಬೇಡುತ್ತ ಹೋಗುವುದು ಲೇಸು ಎಂದರು.

ಇಂಡೋ—ಬ್ರಿಟಿಷ್ ವಾಣಿಜ್ಯ ಕರಾರುನಾಮೆ

ಇಂಡಿಯಕ್ಕೂ ಇಂಗ್ಲಾಂಡಿಗೂ ವ್ಯಾಪಾರ ವ್ಯವಹಾರದ ಸಂಬಂಧವಾಗಿ ನಡೆಯುತ್ತಿರುವ ಒಪ್ಪಂದದ ಚರ್ಚೆಯು ನಡೆಯುತ್ತಿದೆ ಅದರ ಶರತ್ತುಗಳನ್ನೂ ಒಕ್ಕಣೆಗಳನ್ನೂ ನೋಡಿದರೆ ಅದು ಹಿಂದಿನ ಒಟ್ಟಾವಾ ಒಪ್ಪಂದಕ್ಕಿಂತ ಉತ್ತಮತರವಾಗಿಲ್ಲವೆಂದೂ ಅದರಿಂದ ಇಂಡಿಯದ ವ್ಯಾಪಾರ ಅಭ್ಯುದಯಕ್ಕೆ ನೆರವಾಗಿ ನಿಲ್ಲಲಾರದೆಂದೂ ಸರ್. ಎಚ್. ಎಸ್. ಪೌಲ್, ಬಂಗಾಳ ನ್ಯಾಶನಲ್ ವಾಣಿಜ್ಯಸಂಘದ ಅಧ್ಯಕ್ಷ, ಇವರು ಸಂಘದ ವಾರ್ಷಿಕ ಮಹಾಸಭೆಯಲ್ಲಿ ಅಭಿಪ್ರಾಯಪಿತ್ತರು.

ಹಿಂದೀಯರಿಗಿಂತ ಯೆಹೂದಿಗಳೇ ಸುದೈವಿಗಳು

'ವಿದೇಶಗಳಲ್ಲಿ ಹಿಂದೀಯರ ಪರಿಸ್ಥಿತಿಯನ್ನೂ ಯೆಹೂದಿಗಳದನ್ನೂ ಹೋಲಿಸಿ ನೋಡಿದರೆ ಹಿಂದೀಯರದಕ್ಕಿಂತ ಉತ್ತಮಪರಿಸ್ಥಿತಿ ಯೆಹೂದಿಯರದೆಂದು ಹೇಳಬಹುದು? ಈ ವರದಿಯು ಎಲ್ಲಿಂದ ಬಂದುದು ಗೊತ್ತೇ? ಆಫ್ರಿಕದ ಕೆನಿಯಾ ಪ್ರಾಂತದಲ್ಲಿ ಯುರೋಪಿಯಾನರಿಗೆಂದು ಆಸ್ತಿಭೂಮಿಗಳನ್ನು ಮೀಸಲಾಗಿರಿಸುವ ಧೋರಣೆಯ ವಿಚಾರವಾಗಿ ಸರ್. ಪುರುಷೋತ್ತಮದಾಸ್ ಠಾಕೂರ್ ದಾಸರ ನೇತೃತ್ವದಿಂದ ಅಲ್ಲಿಯ ಪರಿಸ್ಥಿತಿಯನ್ನು ಪರಿಶೀಲಿಸಿ ಇಂಡಿಯಾ ಸರಕಾರಕ್ಕೆ ಬರೆದುಕೊಂಡ ಬಿನ್ನವತ್ತಳೆಯಲ್ಲಿಯ ಸ್ಪಷ್ಟೋಕ್ತಿ.

ಬ್ರಿಟಿಷರು ಗಾಳಿಗೋಪುರ ಕಟ್ಟುತ್ತಿರುವರೇ?

ಜರ್ಮನಿಯ ಆಕ್ರಮಣಶೀಲವನ್ನು ತಿದ್ದುವುದಕ್ಕೆ ಸಕಲ ರಾಷ್ಟ್ರಗಳನ್ನೊಂದು ಹಾಕಿ ಕರಾರುನಾಮೆ ಒಪ್ಪಂದಗಳನ್ನು ಮಾಡೋಣವೆಂದು ಬ್ರಿಟಿಷ್ ಮುತ್ಸದ್ದಿಗಳು ಹಗಲು ರಾತ್ರೆ ತಲೆಬಿಸಿಮಾಡಿಕೊಂಡು ಇತರ ರಾಷ್ಟ್ರಗಳೊಂದಿಗೆ ಪತ್ರವ್ಯವಹಾರದ ರಾಶಿಹಾಕಿದ್ದೇ ಅಲ್ಲದೆ ಕಾರ್ಯತಃ ಆಗುವ ಸಂಭವ ತೋರುವುದಿಲ್ಲ. ರಶ್ಯಕ್ಕೆ ಬ್ರಿಟಿಷ್ ಫ್ರೆಂಚರ ನಿರ್ಧಾರಗಳು ಗಾಳಿಗಿಟ್ಟ ದೀಪವೆಂತೆಂದು ಭಾವನೆ. ಪೋಲಾಂಡಿನ ಅಭಿಪ್ರಾಯವೇ ಬೇರೆ ಒಪ್ಪಂದಕ್ಕೆ ಕಟ್ಟುಬಿದ್ದ ಮೇಲೆ ಬ್ರಿಟನ್ ರಷ್ಯಾಗಳು ಎತ್ತ ಎಳೆದರೂ ಹೋಗಬೇಕಾಗುವ ಅಧಿಕಪ್ರಸಂಗ ತನಗೆ ಬೇಡವೆಂದೂ ತನ್ನ ಮಟ್ಟಿಗೆ ತನ್ನನ್ನು ತಾನೇ ಕಾದುಕೊಳ್ಳುತ್ತ ಇತರ ವಿಷಯಗಳಲ್ಲಿ ತಟಸ್ಥವಾಗಿರುವ ಧೋರಣೆಯೇ ಲೇಸೆಂದು ಅದಕ್ಕೆ ತೋರಿದೆ. ಹೀಗಾಗಿ ಸಂಕಟ ಬಂದಾಗ ವೆಂಕಟರಮಣಾ ಎಂಬ ಬ್ರಿಟಿಷ್ ಧೋರಣೆ ಯಾರಿಗೂ ಉತ್ಸಾಹಜನಕವಾಗಿಲ್ಲ.

ಎಲ್ಲಾ ತರದ ಆಯುರ್ವೇದ ಔಷಧಗಳು ಬೇಕಾದರೆ ನವಭಾರತ ಪುಸ್ತಕ ಭಂಡಾರ ಇವರಲ್ಲಿ ದೊರೆಯುತ್ತವೆ.

ದಕ್ಷಿಣ ಕನ್ನಡ

ಕಾಸರಗೋಡ—ಈ ತಾಲೂಕಿನ ಬೋರ್ಡು ಶಾಲಾ ಅಧ್ಯಾಪಕ ಅಧ್ಯಾಪಕಿಯರ ಸಮ್ಮೇಳನವು ಎಪ್ರಿಲ್ ತಿಂಗಳ ತಾ. 2ಕ್ಕೆ ಅಪರಾಹ್ಣ 3ಘಂಟೆಗೆ ಸ್ಥಳೀಯ ಬಿ. ಇ. ಎಮ್. ಸೆಕೆಂಡರಿ ಶಾಲೆಯಲ್ಲಿ ದ. ಕ. ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ಶ್ರೀ. ಕೆ. ವಿಠ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗುವುದರಿಂದ ಈ ಸಮಾರಂಭಕ್ಕೆ ಕಾಸರಗೋಡು ತಾಲೂಕಿಗೆ ಸೇರಿದ ಎಲ್ಲಾ ಬೋರ್ಡು ಶಾಲೆಗಳ ಉಪಾಧ್ಯಾಯ ಉಪಾಧ್ಯಾಯಿನಿಯರು ಚಿತ್ತೈಸಿ ಸಹಕರಿಸಬೇಕೆಂದು ಕಾರ್ಯದರ್ಶಿಗಳಾದ ಶ್ರೀ. ಬಿ. ರಾಮ ರಾವ್‌ರವರು ಅಪೇಕ್ಷಿಸುತ್ತಾರೆ.

ಮೂಲ್ಕಿ—ಸ್ಥಳೀಕ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಸಭೆಯು ತಾ. 18-3-39ರಲ್ಲಿ ಬಿ. ಇ. ಯಂ. ಅನಾಥ ಹುಡುಗಿಯರ ಶಾಲೆಯಲ್ಲಿ ಪಾಸ್ಟರ್ ರೆವೆರೆಂಡ್ ಜೆ. ಡಬ್ಲ್ಯು ಆಂಡ್ರ್ಯೂಸರ ಅಧ್ಯಕ್ಷತೆಯಲ್ಲಿ ಜರಗಿತು. ಮುಂದಿನ ಸಭೆಯು ಬರುವ ತಾ. 15-4-39ಕ್ಕೆ ಕವತಾರು ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಕೂಡಲಿರುವುದು.

ಸ್ಥಳೀಕ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಕಾಲಾವಧಿಜಾತ್ರೆಯು ಈ ವರ್ಷ ಈ ಕೆಳಗಿನಂತೆ ಜರಗಲಿರುವುದು. ಭಕ್ತಾದಿಗಳು ಬಂದು ಶ್ರೀ ಸನ್ನಿಧಿಯ ಪ್ರಸಾದವನ್ನು ಸ್ವೀಕರಿಸಿ ಶ್ರೀ ದೇವಿಯ ಕೃಪಾಪಾತ್ರರಾಗಬೇಕಾಗಿ ವಿನಂತಿಯಿದೆ. ತಾ. 3-4-39 ಧ್ವಜಾರೋಹಣ, ತಾ. 4-4-39 ಅಯನೋತ್ಸವ, ತಾ. 5-4-39 ಪೇಟೆ ಸವಾರಿ, ತಾ. 6-4-39 ಕೆರೆಪ್ಪಲಸವಾರಿ, ತಾ. 7-4-39 ಬಾಕಿಮಾರು ದೀಪ, ತಾ. 8-4-39 ಕೆರೆ ದೀಪ, ತಾ. 9-4-39 ರಥಾರೋಹಣ (ಹಗಲುತೇರು) ತಾ. 10-4-39 ರಥೋತ್ಸವ ಮತ್ತು ಅವಭೃತ (ರಾತ್ರಿ)

ಕಾರ್ಕಳ—ಆರ್ಯಸಮಾಜವು ಮತ್ತು ಹಿಂದೂ ಮಹಾಸಭೆಯವರು ನಿಜಾಮ ಹೈದರಾಬಾದಿನಲ್ಲಿ ಧಾರ್ಮಿಕ ಹಕ್ಕು ಬಾಧ್ಯತೆಗಳ ರಕ್ಷಣೆಯ ಬಗ್ಗೆ ಆರಂಭಿಸಿರುವ ಸತ್ಯಾಗ್ರಹ ಆಂದೋಲನಕ್ಕೆ ಸಾರ್ವಜನಿಕ ಸಹಾನುಭೂತಿಯು ವ್ಯಕ್ತವಾಗುವಂತೆ ಪ್ರಚಾರವಮಾಡುವುದಕ್ಕೋಸ್ಕರ ಇದೇ ತಾ. 22-3-39ನೇ ದಿನವನ್ನು ಅಖಿಲಭಾರತ ಹೈದರಾಬಾದ ದಿನವೆಂದು ಆಚರಿಸಬೇಕಾಗಿ ಶೋಲಾಪುರ ಸತ್ಯಾಗ್ರಹ ಸಮಿತಿಯ ವಿಜ್ಞಪ್ತಿಯಾದ ಮೇರೆಗೆ ಅಂದು ಇಲ್ಲಿ ಬೆಳಗ್ಗೆ ಹಿಂದೂ ಧರ್ಮಾಭಿಮಾನಿಗಳ ಪ್ರಭಾತ ಫೇರಿ ಮತ್ತು ಸತ್ಸಂಗ ಕಾಲಕ್ಷೇಪ, ಸಾಯಂಕಾಲ ಬೋರ್ಡು ಮೈನ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಕೆ. ಕೆ. ಪಿ. ರಾಮಪ್ರಭುವಾರರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯಾಗಿ ಅದರಲ್ಲಿ ಶ್ರೀಗಳಾದ ಕೇಶವರಾಮಚಂದ್ರ ಶೆಣೈ, ಮಂಜುನಾಥ ಶೆಣೈ ಮೊದಲಾದವರು ಭಾಷಣಗಳನ್ನು ಕೊಟ್ಟು ಸತ್ಯಾಗ್ರಹದ ಧ್ಯೇಯೋದ್ದೇಶ ಮತ್ತು ಕಾರ್ಯಕ್ರಮಗಳನ್ನು ವಿವರಿಸಿ, ಅದಕ್ಕೆ ಮಹಾಜನರ ಸಹಾಯ ಪ್ರೋತ್ಸಾಹಗಳನ್ನು ಕೋರಿದರು. ಅನಂತರ ನಿಜಾಮ ಹೈದರಾಬಾದ್ ಸರಕಾರದ ಜಾತಿ ಸಂಬಂಧವಾದ ಪಕ್ಷಪಾತ ಪೂರ್ಣ ಆಡಳಿತ ನೀತಿಯನ್ನು ಖಂಡಿಸಿ ಕಠಿಣ ದಬ್ಬಾಳಿಕೆಗೆ ಗುರಿಯಾದ ಹೈದರಾಬಾದ ಹಿಂದುಗಳ ಮತ್ತು ಸತ್ಯಾಗ್ರಹಿಗಳೊಡನೆ ಸಹಾನುಭೂತಿಯನ್ನು ತೋರಿಸುವ, ಸತ್ಯಾಗ್ರಹ ಪ್ರಚಾರಮಾಡುವ ಆರ್ಯಸಮಾಜದ ಕೆಲವು ಪತ್ರಪತ್ರಿಕೆಗಳ ಮೇಲೆ ನಿರ್ಬಂಧವನ್ನು ಹಾಕಿದ ಬೊಂಬಾಯಿ ಹಾಗೂ ಮದ್ರಾಸು ಸರಕಾರದ ವರ್ತನವನ್ನು ನಿಷೇಧಿಸುವ, ಮತ್ತು ಕರ್ನಾಟಕ ಪತ್ರಿಕೆಗಳು ಸತ್ಯಾಗ್ರಹ ಸಮಾಚಾರಗಳನ್ನು ಪ್ರಕಟಿಸಿ ಜನರಲ್ಲಿ ಜಾಗೃತಿಯನ್ನುಂಟುಮಾಡಬೇಕೆಂದು ಪತ್ರಿಕಾಕರ್ತರನ್ನು ಕೇಳಿಕೊಳ್ಳುವ ಠರಾವುಗಳು ಸರ್ವ ಸಮ್ಮತಿಯಿಂದ ಮಂಜೂರಾದುವು. ಸತ್ಯಾಗ್ರಹ ಆಂದೋಲನಕ್ಕೆ ಹಣ ಸಂಗ್ರಹಮಾಡಲು ಶ್ರೀಗಳಾದ ಕೇಶವ ಶೆಣೈ, ವೆಂಕಟೇಶ ಪ್ರಭು ಮತ್ತು ಡಿ. ವಿ. ಭಟ್ಟರ ಒಂದು ಸಮಿತಿಯ ರಚನೆಯಾಯಿತು. ಈ ವರೆಗೆ ಸುಮಾರು 200ರೂಪಾಯಿಗಳ ಹಣ ಸಂಗ್ರಹವಾಗಿರುವದು. ಶ್ರೀಗಳಾದ ಕೇಶವ ರಾಮಚಂದ್ರ ಶೆಣೈ 100ರೂಪಾಯಿ ಮಾಧವ ರಾಮಚಂದ್ರ ಶೆಣೈ 30ರೂಪಾಯಿ, ದಾಮೋದರ ಭಂಡಾರಿ 12ರೂಪಾಯಿ ಮತ್ತು ಕೆ. ವೆಂಕಟೇಶ ಪ್ರಭುಗಳವರು 10 ರೂಪಾಯಿಗಳನ್ನು ಕೊಟ್ಟಿರುತ್ತಾರೆ.

— ಕಟಪಾಡಿ ಶ್ರೀನಿವಾಸ ಶೆಣೈ

ದ. ಕ. ಜಿಲ್ಲಾಬೋರ್ಡು ಹಂಗಾಮಿ ಉಪಾಧ್ಯಾಯರಿಗೆ ಹೊಸ ಸ್ಕೇಲು—ನಮ್ಮ ಜಿಲ್ಲಾಬೋರ್ಡು ಹಂಗಾಮಿ ಉಪಾಧ್ಯಾಯ ವರ್ಗಕ್ಕೆ ಹೊಸ ಸ್ಕೇಲನ್ನು ಜಾರಿಗೆ ತರುವುದರಿಂದ ನಮ್ಮ ಸಂಸಾರವನ್ನು ನಡಿಸಲು ಸಾಕಷ್ಟು ಸಂಬಳವು ಸಿಕ್ಕದೆ ಬಹಳ ವ್ಯಥೆಗೆ ಈಡಾಗಿ ನಮ್ಮ ಉದ್ಯೋಗವನ್ನು ಯೋಗ್ಯ ರೀತಿಯಲ್ಲಿ ನಡಿಸಲು ಕಷ್ಟವೆಂದು ಹೇಳಬೇಕಾಗುತ್ತದೆ. ನಮಗೆ ಕೆಲಸಕ್ಕೆ ಹಾಜರಾಗುವಾಗ ಹಳೆ ಸ್ಕೇಲಿನ ಪ್ರಕಾರ ಸಂಬಳವನ್ನು ಕೊಟ್ಟು ಇನ್ನು ಮುಂದೆ ಹೊಸಸ್ಕೇಲನ್ನು ಜಾರಿಗೆ ತಂದರೆ ನಾವು ನಷ್ಟಕ್ಕೆ ಗುರಿಯಾಗುತ್ತೇವೆ. ಆದುದರಿಂದ ಈ ತರದ ಹೊಸಸ್ಕೇಲನ್ನು ಕೆಲವೇ ಮಂದಿಯಾದ ನಮಗೆ ಜಾರಿಗೆ ತಾರದೆ ಉಪಾಧ್ಯಾಯವೃಂದಕ್ಕೆ ಎಲ್ಲರಿಗೂ ಸಂಸತಾನವಾದ ಸಂಬಳದ ಹಕ್ಕು ಮಾನ್ಯತೆಯನ್ನು ಅವರವರ ಯೋಗ್ಯತೆಗಳಿಗನುಸಾರವಾಗಿ ಕೊಟ್ಟು, ನಮ್ಮ ಹಿತವನ್ನು ಸಾಧಿಸುವ ಪ್ರಯತ್ನವನ್ನು ಮಾನ್ಯ ಜಿಲ್ಲಾಬೋರ್ಡು ಪ್ರೆಸಿಡೆಂಟರೂ, ಮೆಂಬರರೂ ಮಾಡಬೇಕಾಗಿ ಹೊಸಸ್ಕೇಲು ಜಾರಿಯಿಂದ ನೊಂದ ಉಪಾಧ್ಯಾಯ ವೃಂದದ ಪರವಾಗಿ ನಾನು ಅವರೊಡನೆ ವಿನಂತಿಸುತ್ತೇನೆ. ಈ ವಿಷಯದಲ್ಲಿ ಜನಪ್ರಿಯರಾದ ಮಾನ್ಯ ಜಿಲ್ಲಾಬೋರ್ಡು ಪ್ರೆಸಿಡೆಂಟರು ನಮ್ಮ ಕಷ್ಟ ನಿವಾರಣೆಯನ್ನು ಮಾಡುವ ಕುರಿತು ತನ್ನ ಕೈಲಾದ ಪ್ರಯತ್ನವನ್ನು ಮಾಡುತ್ತೇನೆಂಬದಾಗಿ ತಾ. 19-3-39ರಲ್ಲಿ ಪುತ್ತೂರಿನಲ್ಲಿ ಜರಗಿದ ಉಪಾಧ್ಯಾಯರ ಸಭೆಯಲ್ಲಿ ಹೇಳಿರುವರು. ಅದಲ್ಲದೆ ವಿದ್ಯಾಖಾತೆಯ ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಬರುವ ತಿಂಗಳಲ್ಲಿ ಬಂದಾಗ ಜಿಲ್ಲಾ ಬೋರ್ಡು ಉಪಾಧ್ಯಾಯ ಸಂಘದವರು ಕೆಲವೇ ಪ್ರಾಮುಖ್ಯ ವಿಷಯಗಳನ್ನೊಳಗೊಂಡ ಒಂದು ಮೆಮೋರಿಯಲನ್ನು ಒಪ್ಪಿಸಬೇಕೆಂದೂ ಅವುಗಳಲ್ಲಿ ಒಂದು ಈ ಹೊಸಸ್ಕೇಲಿನ ವಿಷಯವಾಗಬೇಕೆಂದೂ ಮೊನ್ನೆ ಪುತ್ತೂರಿನಲ್ಲಿ ಜರಗಿದ ಸಭೆಯಲ್ಲಿ ಅಭಿಪ್ರಾಯಪಟ್ಟಿರುವರು. ಅದ್ದರಿಂದ ಹೊಸ ಸ್ಕೇಲಿನ ವಿಷಯ ಮೆಮೋರಿಯಲಿನಲ್ಲಿ ಸೇರಿಸುವ ಹಾಗೆ ಪ್ರಯತ್ನ ಮಾಡಬೇಕಾಗಿಯೂ ಸೌಕರ್ಯ ಒದಗಿದಾಗ ಮಾನ್ಯ ಜಿಲ್ಲಾ ಬೋರ್ಡು ಪ್ರೆಸಿಡೆಂಟರೊಡನೆಯೂ ಮೆಂಬರರೊಡನೆಯೂ ಸಾಮುದಾಯಿಕ ದೃಷ್ಟಿಯಿಂದ ನಮ್ಮ ಕಷ್ಟಗಳನ್ನು ಸಂಪೂರ್ಣತಿಳಿಸಿ ಅದನ್ನು ಹೋಗಲಾಡಿಸುವರೆ ಪ್ರಯತ್ನ ಮಾಡುವಂತೆ ಬೇರೆ ಬೇರೆ ತಾಲೂಕುಗಳಲ್ಲಿ ಕೆಲಸಮಾಡುತ್ತಿರುವ ಹಂಗಾಮಿ ಉಪಾಧ್ಯಾಯರು ಸದಾ ಪ್ರಯತ್ನ ಮಾಡಬೇಕಾಗಿಯೂ ನಾನು ಅವರೊಡನೆ ಕೇಳಿಕೊಳ್ಳುತ್ತೇನೆ. ಈ ವಿಷಯದಲ್ಲಿ ಹೊಸಸ್ಕೇಲು ಅನ್ವಯಿಸದ ನಮ್ಮ ಉದ್ಯೋಗ ಬಂಧುಗಳೂ ಸಂಪೂರ್ಣವಾಗಿ ನಮ್ಮ ಈಗಿನ ಕಷ್ಟಗಳನ್ನು ಮನಗಂಡು ನಮ್ಮೊಡನೆ ಸಹಕರಿಸಬೇಕಾಗಿ ನನ್ನ ವಿನಂತಿ.

ಎ. ಎಚ್. ಶೆಟ್ಟಿ
ಅಧ್ಯಾಪಕ

ಪುಟ ೧೬ರಿಂದ

ಪಡೆಯೆಲ್ಲ ಜಾತ್ರೆ ನೋಡ್ತಾ ಉಳಿದಿತ್ತಂತೆ. ಅವನ ಬಲಗೈ ಎಡಗೈ ಬಂಟರು ಮಾತ್ರ ಅವನೊಟ್ಟಿಗೆ ಜಟ್ಕಂದ ಕೈಲಿಗೆ ಇಳಿಯುವಲ್ಲಿ ಓಣಿಯ ಅಗಳಿನ ಹಿಂದೆ ಯಾರೋ ಎಷ್ಟು ಜನವೋ ಯಾರಿಗೆ ಗೊತ್ತು! ಒಮ್ಮೆಗೆ ಇವರ ಮೇಲೆ ಹಾರಿ ಬಿದ್ದು ಮೂವರನ್ನೂ ಬಾಕಿದಿಂದು ಸವರಿ ಹಾಕಿದ ಹಾಗೆ ತುಂಡು ತುಂಡು ಮಾಡಿ ಹಾಕಿ ಪರಾರಿಯಂತೆ!

ಬಂದವ—ದೊಡ್ಡ ಕಾರ್ಬಾರಿ ಮನುಷ್ಯ! ಹೀಗೆ ಮುಗೀತಾ ಅವನ ಅವಸ್ಥೆ!

ಮತ್ತೊಬ್ಬ—ಏನು ಕಾರ್ಬಾರು? ಆ ಕಾರ್ಬಾರಿಂದ ಯಾರಾದ್ರೂ ಬಡವರು ನಾಲ್ಕು ಮಂದಿ ಉದ್ಧಾರಾದ್ರುಂಟೂ? ಲೋಕೋಪಕಾರದ ದಾನಧರ್ಮ ಏನಾದರೂ ನಡೆದಿತ್ತಾ? ಇಂದು ಊರು ನರುಗುತ್ತಾ ಅವನಿಗಾಗಿ? ಸಭೆಗಿಭೆ ಹರತಾಳ ಏನಾದರೂ ಉಂಟೂ? ಸ್ಮಾರಕದ ವ್ಯವಸ್ಥೆ ಮಾಡೋಣಂತಾರಾ? ಅಥ್ವಾ ಊರಿನ ಮಾನ ಹೋಯ್ತು ಅಂತಾರಾ? ಊರು ಉರಿಸೋದಕ್ಕೆ ಕಾರ್ಬಾರಂತಿಯಾ?

ಬರುವ ಲೇಖನ:—
ಮಯೂರಟಿಗೆ ಸ್ವಲ್ಪ ಕಡಿಮೆಯಲ್ಲಾ!

ಅಂತರಂಗದ ಯುಗಾದಿ ಸಂಚಿಕೆಯನ್ನು ಓದಲು ಮರೆಯಬೇಡಿರಿ

AUGUSTINE & CO.,
Stockits:—
Well Known ceylon, Nilgri, Darjeeling & Assam Tea & Coffee.
All sorts of Hotel & family Tea Mixures as well as Coffee can be had at moderate rates.
ಮುಂಬಾಯಿಯಲ್ಲಿ ನಮ್ಮ ಗಿರಾಕಿಗಳು ಹಲವು ವರ್ಷಗಳಿಂದ ನಮ್ಮ ಚಾ ಕಾಫಿಯನ್ನು ಉಪಯೋಗಿಸಿ ಸಂತುಷ್ಟರಾಗಿದ್ದಾರೆ.
ಹೋಟೆಲುಗಳಿಗೆ ಬೇಕಾಗುವ ಟೀ ಮಿಕ್ಸರ್, ವ ಕಾಫಿ ಹುಡಿ, ಮನೆಗಳಿಗೆ ಬೇಕಾಗುವ ಚಾ-ಕಾಫಿ, ನಮ್ಮಲ್ಲಿ ಸದಾ ಮಿತ ಹಿತದರಕ್ಕೆ ದೊರೆಯುತ್ತದೆ. ಪ್ರಾಮಾಣಿಕತೆಯೇ ನಮ್ಮ ಆದರ್ಶ. ಗಿರಾಕಿಗಳ ಸೌಕರ್ಯವೇ ನಮ್ಮ ಧ್ಯೇಯ. ಪರೀಕ್ಷಿಸಿರಿ! ಖಾತ್ರಿ ಮಾಡಿಕೊಳ್ಳಿರಿ
ವಿಳಾಸ: **ಆಗೆಸ್ಟಿನ್ ಎಂಡ್ ಕೋ,** ಮೌಂಟುರೋಡು, ಮಜಗಾಂ, ಮುಂಬಯಿ.
Mount Road, Mazagaon, BOMBAY.

THE
PREMIER BANK OF INDIA, LIMITED.
Head Office: MADRAS.
Branches:
MADURA & NELLORE.
CHAIRMAN
Dr. U.L.Narayana Rao.
'Bhujanga Nivas' Madras.
FIXED DEPOSITS
are now received at the following Rates:
For 5Months at 3½% P. A.
12Months at 4½% P. A.
24Months at 5% P. A.
(Interest Paid Half-yearly.)
S. V. Rau D. Com.,
Managing Director

ಧಾತುಪುಷ್ಟಿ ಲೇಹ ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ
ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತಿ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ. 2—8—0.
ಮೇಹ ಕುಠಾರ—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರಮಾಡುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು ಮೂತ್ರದಲ್ಲಿ ಧಾತು ಹೋಗುವುದು ಸೊಂಟನೋವು ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಅಲ್ಲದೆ ಇಪ್ಪತ್ತು ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ. ಡಬ್ಬಿ 1ರ ರೂ. 2-8-0.
ಕಸ್ತೂರಿ ಮಿಶ್ರಣ ದಶಮೂಲ— ಪ್ರಸವಾನಂತರ ಬಾಣಂತಿಯರಿಗೆ ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ
ಬಾಟ್ಲಿ 1ರ ರೂ. 1—8—0
ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.
ಔಷಧಿಸಿಕ್ಕುವ ಸ್ಥಳ— ನವಭಾರತ ಬುಕ್ ಡಿಪೋ, ಉಡುಪಿ. ಶ್ರೀ ಕೃಷ್ಣಶರ್ಮನ್, ಕುಂದಾಪುರ. ವಿಟ್ಠಲ ನಾರಾಯಣ ಶೆಣೈ ಟ್ರಮುಟರ್ ವಿನಸ್ ಮಜಗಾಂ ಮುಂಬಯಿ.

ಪ್ರಕಟಣೆ.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

(O. S. $\frac{684}{1928}$) R. E O $\frac{170}{1939}$
R. E. A. No. $\frac{173}{1939}$

ವಿ. ನರಸಿಂಹ ಭಟ್—ವಾದಿಯ ಮೊಕ್ತೆಸರುದಾರ—**ಅರ್ಜಿದಾರ.**

ಮತ್ತು

1. ಸೀತಾರಾಮ ಮೊಗೆರಾಯ, ನಾರಾಯಣ ಮೊಗೆರಾಯರ ಮಗ. — **ಪ್ರತಿವಾದಿರು.**
2. ರಾಘವ ಮೊಗೆರಾಯ, 1ನೆಯವನ ಖಾಸಾ ತಮ್ಮ, ಹಾಲಿ ಮೈಸೂರು ಒಟ್ಟಿ ಉಡ್ಪಿ ಆನಂದಭವನ ಬಸ್ ಸ್ಟೇಂಡ್ ಮೈಸೂರು ಎಂಬಲ್ಲಿರುತ್ತಾರೆ. — **ಎದುರು.**

ಇವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ:-

ಸದ್ರಿ O. S 684/28ನೇ ಡಿಕ್ರಿ ಸವಾಧಾನಕ್ಕೆ ಅಜಿದಾರನು ನಡಿಸಿದ R. E. P. 958/37ನೇ ಅಮ್ಲುಜ್ಯಾರಿಯಲ್ಲಿ ಜಪ್ತಿ ಆದ ಸ್ಥಿರಾಸ್ತಿಯನ್ನು ಈಗ ಈ ಅಮ್ಲುಜ್ಯಾರಿಯಲ್ಲಿ ಏಲಂಗೆ ಅಪೇಕ್ಷಿಸಿ ಅರ್ಜಿದಾರನು ಹಾಪ್ತ ಮಾಡಿದ ಏಲಂ ಇಸ್ತಿಹಾರು ಮಂಜೂರು ಮಾಡಬೇಕಾಗಿ ದಾಖಲ್ಲು ಮಾಡಿದ ಸದ್ರಿ ಅಮ್ಲುಜ್ಯಾರಿಯೂ ಮತ್ತು ಸ್ಥಿರಾಸ್ತಿಗಳು ನಿಲಾಂ ಸಮಯ ಅರ್ಜಿದಾರಗೆ ಯಾ ಅವನ ಕಡೆ ವಕೀಲರಿಗೆ ಬಿಡ್ ಮಾಡ್ಲರೆ ಪರ್ಮಿಶನ್ ಕೊಡಬೇಕಾಗಿಯೂ ಹಾಗೆ ಒಂದು ವೇಳೆ ಬಿಡ್ ಮಾಡಿ ದರ್ಖಾಸ್ತಿಗೆ ನಿಂತರೆ ದರ್ಖಾಸ್ತಿನ ಐವಜು ಡಿಕ್ರಿ ಐವಜನಲ್ಲಿ ಮುಜ್ರೆ ಮಾಡಿಕೊಳ್ಳುವ ರಶೀದಿ ಮಂಜೂರು ಮಾಡಬೇಕಾಗಿಯೂ ಸಹ ದಾಖಲ್ಲು ಮಾಡಿದ ಸದ್ರಿ R.E.A. 173/39ನೇ ಬಿಡ್ ಅರ್ಜಿಯೂ ಸಹ ತಾ. 12-4-1939ಕ್ಕೆ ತನಿಕೆಗೆ ಇದ್ದೋಣಾಗಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ತಾ. 12-4-1939ನೇ ದಿವಸ ಬೆಳಗ್ಗೆ 10ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ಅರ್ಜಿಗಳನ್ನು ಏಕ ಪಕ್ಷದಲ್ಲಿ ತೀರ್ಮಾನಿಸಲ್ಪಡುತ್ತಾರೆಂಬ ಸದ್ರಿ ಕೋರ್ಟ ಹುಕುಂ ಪ್ರಕಾರ ಈ ಮೂಲಕ ತಿಳಿಸಿಯದೆ.

H. K. Gopalakrishna Rao, B. A. B. L.
Vakil for Petitioner.
ಕಾರ್ಕಳ ತಾ. 22-3-1939.

ಹರಿಹರ—ಇಲ್ಲಿನ ಪ್ರೈಮರಿ ಸ್ಕೂಲಿನ ಮಾಸ್ತರರಾದ ಶ್ರೀ ಸುಬ್ಬಾ ಶಾಸ್ತ್ರಿಗಳು 15ನೇ ತಾರೀಕಿಗೆ ನಿಧನರಾದುದನ್ನು ತಿಳಿಸಲು ತುಂಬಾ ವಿಷಾದವಾಗುತ್ತದೆ. ಇವರು ಅನೇಕ ಬಡವರಿಗೆ ಆಶ್ರಯದಾತರಾಗಿದ್ದರು. ಇತರರ ತೊಂದರೆಗಳನ್ನು ಕಂಡು ಮರುಗುವ ಸ್ವಭಾವದವರಾಗಿದ್ದರು. ಕೇವಲ 41ನೆ ವಯಸ್ಸಿನಲ್ಲಿ ವಿಧಿವಶರಾದರು. ಭಗವಂತನು ಮೃತರ ಆತ್ಮಕ್ಕೆ ಶಾಶ್ವತ ಶಾಂತಿಯನ್ನೀಯಲಿ.

ಬೊಂಬಾಯಿ

(ಸ್ವಂತ ಬಾತ್ಮೀದಾರರಿಂದ)

ತಾ. 24—3—'39.

ಅಂತರರಾಷ್ಟ್ರೀಯ ಸಾಮ್ಯವಾದದ—ಒಂಸ್ಥೆಯ ವಾರ್ಷಿಕೋತ್ಸವವು ಕಳೆದ ಸೋಮವಾರ ಮುಂಬಯಿ ನಗರದಲ್ಲಿ ವಿಜೃಂಭಣೆಯಿಂದ ಜರಗಿತು. ಹಲವು ಕಡೆಗಳಲ್ಲಿ ಪ್ರಚಂಡ ಸಭೆಗಳು ನಡೆದು ಸಾಮ್ಯವಾದೀ ಸಂಘದ ಮೇಲೆ ಹೊರಿಸಿರುವ 'ಬ್ಯಾನ್' ತೆಗೆದುಹಾಕಬೇಕೆಂಬ ಠರಾವುಗಳನ್ನು ಪಾಸುಮಾಡಿತು. ಮುದ್ರಾಸ್ ಸರಕಾರದ ವಿದ್ಯಾಖಾತೆಯ ಮಂತ್ರಿಗಳಾದ ಶ್ರೀ. ಸಿ. ಜೆ. ವಾರ್ಕಿಯವರು, ಒಂದೆಡೆ ಭಾಷಣಕೊಡುತ್ತಿರುವಾಗ ಸಾಮ್ಯವಾದಿಗಳ ಮೇಲೆ "ದಂಡು"ತೆಗೆದುಕೊಂಡು ಹೋಗಲು ಸಿದ್ಧನಿದ್ದೇನೆ"ಎಂದು ಹೇಳಿದ್ದು ಮಾತ್ರವಲ್ಲದೆ ಜನರಲ್ ಫ್ರ್ಯಾಂಕೋನ ವಿಜಯದ ಕುರಿತು ತಮ್ಮ ಆತ್ಮಸಂತೋಷವನ್ನು ಪ್ರದರ್ಶಿಸಿದಂತೆ, ಇಲ್ಲಿ ಶ್ರೀ. ಮುನ್ಶಿಯವರು, ತನ್ನಿಂದ ಸಾಧ್ಯವಾದಷ್ಟು ಬೈಬರೆಗಳನ್ನು ಸಾಮ್ಯವಾದಿಗಳ ಮೇಲೆ ಹೊರಿಸಿದ್ದು ಮಾತ್ರವಲ್ಲದೆ, ಈ ಸಂಘವನ್ನೇ ಬುಡಸಹಿತ ನಿರ್ಮೂಲಮಾಡಲು ಪ್ರಯತ್ನಿಸುತ್ತಿರುವಾಗ, ಸಾಮ್ಯವಾದಿಗಳು ಎಷ್ಟು ಭೋರ್ಗರೆದರೋ, ಅದು ಹೊಳೆಗೆ ಮೇಲೆ ಹೊಯ್ದ ಹಾಲಿನಂತಲ್ಲದೆ ಮತ್ತೇನು?

ಮದ್ಯಪಾನ ನಿಷೇಧದ ಚಳವಳಿಯು ಬಹಳ ಭರದಿಂದ ಸಾಗುತ್ತಿದ್ದೆ; ಮಂತ್ರಿಗಳು ಅಲ್ಲಲ್ಲಿ ನೆರೆದು ಇದನ್ನು ಸಾಂಗಗೊಳಿಸುವರೆ ಉಪಾಯಗಳಿಗಾಗಿ ತಲೆಕೆರೆದುಮಾಡಿಕೊಳ್ಳುತ್ತಿರುವರು. ನಾಲ್ಕು ಕಡೆಗಳಿಂದಲೂ ಇದಕ್ಕೆ ವಿರೋಧಗಳು ತುಂಬಿಬರುತ್ತಿವೆ. ವಿಶೇಷ ದಿವಸಗಳಲ್ಲಿ ನಾವೂ ಗಂಗಸರ ಉಪಯೋಗಿಸುವಂತೆ ಬಿಡಬೇಕು. ಇದು ನಮ್ಮ ಪುರಾತನದಿಂದ ಇಳಿದು ಬಂದ ರೂಢಿ ಎಂದು ಪಾರ್ಸಿಗಳು ಬೊಬ್ಬಿಡುತ್ತಿರುವರು. ಒಂದು ಸಮಯದಲ್ಲಿ ಮದ್ರಾಸಿನ ಮುಖ್ಯಮಂತ್ರಿಯಾಗಿದ್ದ ಶ್ರೀ. ರಾಜಾಜಿಯವರು, "ನಮ್ಮ ಪ್ರಾಂತವು ಮದ್ಯಪಾನ ನಿಷೇಧ ಕಾರ್ಯದಲ್ಲಿ ಮುಂದರಿಯುತ್ತಿರಲು ಮುಂಬಯಿ ಸರಕಾರವಿನ್ನೂ ಮುಗ್ಗರಿಸುತ್ತಿದೆ. "ಫಾಲ್‌ಕನ್‌ಬೀರಿನ" ದೊಡ್ಡ ದೊಡ್ಡ ಬಾಟ್ಲಿಗಳೇ ಮುಂಬಯಿ ನಗರದ ರಸ್ತೆಗಳಲ್ಲಿ ಚಲಿಸುತ್ತಿರುವುದನ್ನು ನೋಡಿ ನನ್ನ ಹೊಟ್ಟೆ ಉರಿಯುತ್ತಿದೆ. ನಮ್ಮ ಪ್ರಾಂತದ ಪತ್ರಿಕೆಗಳಲ್ಲಿ ಇಂಥ ಜಾಹಿರಾತು ಕೂಡ ಇಲ್ಲ" ಎಂದು ಆತ್ಮಪ್ರಶಂಸೆ ಮಾಡಿಕೊಳ್ಳುತ್ತಿರಲು ಶ್ರೀ. ಖೇರರವರು "ಮದ್ರಾಸ್ ಪೊಲಿಸಾದರೆ, ಮುಂಬಯಿಯು ಅಪ" ಎಂಬ ಗಂಭೀರದ ನುಡಿಯನ್ನು ನುಡಿದಿರುವರು. ಆದರೆ ಇಂದು ಒಂದೇ ಸಲ ಪ್ರಾಂತದಲ್ಲೆಲ್ಲಾ ಮದ್ಯಪಾನ ನಿಷೇಧವನ್ನು ಜಾರಿಗೆ ತರಲು ನಿಶ್ಚೈಸಿರುವುದರಿಂದ ಆವಿಯು ಮೊಳದ ರೂಪವನ್ನು ತಾಳಿರುವುದನ್ನು ಕಂಡು, ಪಾಪ! ಮಾನ್ಯ ಮಂತ್ರಿಗಳ ರುಧಿರಾಭಿಸ್ರವಣವು ಇಮ್ಮಡಿಸಿದೆ!

ಮುಂಬಯಿ ಸರಕಾರವು ಕೆಲವು ವೃತ್ತಪತ್ರಿಕೆಗಳ ಮೇಲೆ ನಡಿಸಿದ ಕಾರ್ಯಗಳಿಗೆ ವಿರುದ್ಧವಾಗಿ ಪೂನದ ಬಿ. ಬಿ ಸಕೇ ಎಂಬವರು ಕೌನ್ಸಿಲ್ ಗೃಹದ ಮುಂಗಡೆ 8 ದಿನದ ಉಪವಾಸವ್ರತವನ್ನು ಕೈಗೊಂಡಿರುವರು. ಶ್ರೀ. ಮುನ್ಶಿಯವರು ಇದನ್ನು ತಿಳಿದು ಸಕೆಯವರನ್ನು ಸಂದರ್ಶಿಸಿ, ತನ್ನ ಮನೆಗೆ ಬರುವಂತೆ ಒತ್ತಾಯಪಡಿಸಿದರು. ಈಗ ಶ್ರೀ. ಸಕೆಯವರು ಶ್ರೀ. ಮುನ್ಶಿಯವರ, "Guest house"ನಲ್ಲಿ ಇರುವರು. ಇಲ್ಲಿಯೂ ಉಪವಾಸವಂತೆ! ಪಾಪ! ರಾಜಸತ್ಕಾರ ದೊರೆತರೂ ಭೋಗಿಸುವ ಅದೃಷ್ಟವಿಲ್ಲ.

ಬಂಟರ ಯಾನೆ ನಾಡವರ ಸಂಘ, ಮುಂಬಯಿ—ಈ ಸಂಘದ ವಾರ್ಷಿಕ ಸಭೆಯು ತಾ. 19-3-39ರಲ್ಲು ನೇಶನಲ್ ಮೆಡಿಕಲ್ ಕೋಲೇಜಿನ ಭವ್ಯ ಸಭಾಮಂದಿರದಲ್ಲಿ ಶ್ರೀ. ಕಾಂಗಾಳ ಮಹಾಬಲ ಸೆಟ್ರು ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಸಂಘದ ಸದಸ್ಯರಲ್ಲದೆ ಬೇರೆ ಹಲವು ಅಭ್ಯಾಗತರೂ ಚಿತ್ತೈಸಿದ್ದರು. ಸಭಾಕಾರ್ಯವು ಭಂತೆ ವರದಿವಾಚನದ ಮಂಜೂರಾತಿಯಾದ ನಂತರ ಪ್ರಾಮುಖ್ಯವಿಷಯವಾದ "ಸಂಘದ ಧನವಿನಿಯೋಗದ ಭದ್ರತೆಯ ಕುರಿತು ತೀವ್ರ ಚರ್ಚೆ ನಡೆದು ಕೊನೆಗೆ ಬಹುಮತದ ನಿರ್ಣಯದಂತೆ ಈ ಧನವನ್ನು ಸರಕಾರಿ ಸಾಲಪತ್ರದ ಭದ್ರತೆಯ ಮೇಲೆ(Goverment bonds) ವಿನಿಯೋಗಿಸುವುದೆಂದು ನಿರ್ಧರಿಸಲಾಯಿತು. ಅನಂತರ ಸಭೆಗೆ ಚಿತ್ತೈಸಿದ ಡಾಕ್ಟರ್ ಎಸ್. ರಾಮಣ್ಣ ಶೆಟ್ರು ಸಂಘದ ಏಳಿಗೆಯನ್ನು ಹಾರೈಸಿ ಬೋಧಪ್ರದ ಭಾಷಣವಿತ್ತರು. 'ನವಯುಗ'ದ ಉಪಸಂಪಾದಕ ಶ್ರೀ. ಎನ್. ರಾಮಶೆಟ್ರು ತಮ್ಮ ಸುದೀರ್ಘ ಭಾಷಣದಲ್ಲಿ ಸಂಘಶಕ್ತಿಯ ಮಹತ್ವಕ, ಸಂಘದ ಏಳಿಗೆಯ ತೊಡಕುಗಳು ಸಂಘದ ಅಭ್ಯುದಯದ ಕಾರ್ಯಭಾಗದಲ್ಲಿ ಹೋಟೇಲು ಮಾಲಿಕರ ಮತ್ತು ಶಿಕ್ಷಿತ ತರುಣರ ಐಕ್ಯತೆಯ ಪ್ರಾಮುಖ್ಯತೆ ಇವೇ ಮೊದಲಾದ ವಿಷಯಗಳನ್ನು ಮನಗಾಣಿಸಿ ಮುಂದೆ ಸಂಘವು ಹೇಗೆ ಉನ್ನತಿಯನ್ನು ಸಾಧಿಸಬಹುದೆಂಬುದನ್ನೇ ವಿವರಿಸಿದರು. ಮತ್ತು 'ನವಯುಗ'ದ ಪತ್ರಿಕೆಯ ಇಂದಿನ ಸ್ಥಾನವನ್ನು ವಿವರಿಸಿ ಮುಂದಣ ಕಾರ್ಯಭಾಗದಲ್ಲಿ ಜನತೆಯ ಸಹಕಾರವನ್ನು ಹಾರೈಸಿದರು. ಸಭಿಕರಲ್ಲಿ ಕೆಲವರು ಸಂಘದ ಏಳಿಗೆಯ ಕುರಿತಾಗಿ ಭಾಷಣವಿತ್ತ ನಂತರ ಅಧ್ಯಕ್ಷರು ವ್ಯಯಾಮಶಾಲೆಯಲ್ಲಿ ಸ್ವಲ್ಪ ನುರಿತವರಾದ ಶ್ರೀ. ಬಾಬುಶೆಟ್ರಿಗೆ ಸಂಘದ ಪರವಾಗಿ ಪದಕವನ್ನರ್ಪಿಸಿ ತಮ್ಮ ಸಂದರ್ಭೋಚಿತ ಭಾಷಣದಲ್ಲಿ ಮುಂಬಯಿಯ ಜಾತಿಬಾಂಧವರ ಸಹಾನುಭೂತಿಯನ್ನು ಕೋರಿದರು. ಅಲ್ಲದೆ ಅತಿಥಿಗಳಾಗಿ ಬಂದಿದ್ದ ಮಹಾಶಯರಿಗೆ ಸಂಘದ ಕೃತಜ್ಞತೆಯನ್ನರ್ಪಿಸಿ ಪುಷ್ಪಹಾರ ಸಮರ್ಪಿಸಿದರು. ಕೊನೆಯದಾಗಿ ಧನ್ಯವಾದ,ಲಘೂಪಹಾರದೊಂದಿಗೆ ಸಭಾಂತ್ಯವಾಯಿತು.

ಯಸ್. ಸಂಜೀವ ಶೆಟ್ಟಿ
ಗೌ. ಜತೆಕಾರ್ಯದರ್ಶಿ

ದಿ. ಕರ್ನಾಟಕ ಫ್ರೀ ನೈಟ್ ಸ್ಕೂಲ್ ಮುಂಬಾಯಿ—ಈ ಶಾಲೆಯ ತರ್ಕ ಸಭೆಯು ತಾ. 19-3-39 ರಲ್ಲು ಮುಂಬಾಯಿಗೆ ಬಂದಿದ್ದ ನವಯುಗದ ಉಪಸಂಪಾದಕರಾದ ಶ್ರೀ ಎನ್. ರಾಮಶೆಟ್ರು ಅಧ್ಯಕ್ಷತೆಯಲ್ಲಿ ಜರಗಿತು. ದೇಶೋದ್ಧಾರದಲ್ಲಿ ಕಾಂಗ್ರೆಸಿನ ಕಾರ್ಯಭಾಗ ಎಂಬುದು ಇಂದಿನ ವಿಷಯವಾಗಿತ್ತು. ಸಭಿಕರಲ್ಲಿ ಕೆಲವರು ಕಾಂಗ್ರೆಸಿನ ಉಚ್ಚ ಉದ್ದೇಶಗಳನ್ನು ವಿವರಿಸಿ ಕಾಂಗ್ರೆಸಿನ ಮಹತ್ವಿಕೆಯನ್ನು ಮನಗಾಣಿಸಿದರು. ಮತ್ತು ಕೆಲವರು ಕಾಂಗ್ರೆಸಿನ ಇಂದಿನ ವಿಷಮ ಪರಿಸ್ಥಿತಿಯ ಕುರಿತಾಗಿ ಟೀಕಿಸಿದರು. ಕೊನೆಗೆ ಅಧ್ಯಕ್ಷರು ತಮ್ಮ ಅನುಭವಪೂರಿತ ಭಾಷಣದಲ್ಲಿ ಕಾಂಗ್ರೆಸಿನ ಅರ್ಧ ಶತಮಾನಕ್ಕಿಂತಲೂ ಮಿಕ್ಕಿದ ಕಾರ್ಯಭಾಗವನ್ನು ವಿವರಿಸಿ, ರಾಷ್ಟ್ರಸ್ವಾತಂತ್ರ್ಯದಲ್ಲಿ ಮುಂದಾದ ದೇಶದ ಏಕಮಾತ್ರ ಮಹಾ ಸಂಸ್ಥೆ ಕಾಂಗ್ರೆಸು ಎಂಬುದನ್ನು ಮನಗಾಣಿಸಿ ಇಂದಿನ ಕಾಂಗ್ರೆಸು ಪ್ರಾಂತಿಕ ಅಧಿಕಾರದ ಕುರಿತಾಗಿ ಪ್ರಸ್ತಾಪಿಸಿ ಮುಂದೆ ಪೂರ್ಣ ಸ್ವರಾಜ್ಯದ ಕಡೆಗೆ ಹೇಗೆ ಕಾಂಗ್ರೆಸು ಮುಂದರಿಯುತ್ತಿದೆಯೆಂಬುದನ್ನು ವಿಶದಗೊಳಿಸಿದರು. ಕೊನೆಗೆ ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಕರ್ನಾಟಕದಲ್ಲೆಲ್ಲಾ ವಿಶಾಲವಾಗಿ ಪ್ರಚಾರದಲ್ಲಿರುವ ಅತಿ ಅಗ್ಗ ಬೆಲೆಯ

ತುಳುನಾಡ್

ತಿಲಕ ಪಂಚಾಂಗ

(ಬೆಲೆ ಒಂದಾಣೆ)

ನವಭಾರತ ಬುಕ್ ಡಿಪೊ ಉಡುಪಿ.

ಜನಪದ ಸಾಹಿತ್ಯ

ಆರ್ತಾಲಾಪ

ಎನಗ್ಯಾರು ಗತಿ ಇಲ್ಲ ಮನೆ ಮಾರು ಎನಗಿಲ್ಲ
ಧನಕನಕ ಮೊದಲಿಲ್ಲ ಜನಬಲವಿಲ್ಲ
ಎನ್ನ ಮಾತೆಯು ಒಲ್ಲಳೆನ್ನ ಪಿತನೊಲ್ಲನಿಲ್ಲ
ಎನಗೆ ಹಿರಿ ಕಿರಿಯರಿಗೆ ನಾನೂ ಬೇಕಿಲ್ಲಾ ‖ ಎನ ‖

ಒಂದು ದಿನವು ನಾನಾನಂದಗೊಂಡುದು ಇಲ್ಲ
ಕುಂದಿದೆ ಮನದೊಳು ನೊಂದೇ ದೇವಾ
ಸಂದು ಹೋಯಿತು ಕಾಲ ಎಂದೆನ್ನ ಸಲಹುವೆ
ಬಂದು ಮೊರೆಯ ಕೇಳು ವಂದಿಸುವೇ ‖ ಎನ ‖

ಬಡವನಾದೆನು ಎನ್ನ ನೋಡುವರ್‍ಯಾರಿಲ್ಲ
ಕಡುಬಾಲಮಿತ್ರರು ಬೇರೇ ಇಲ್ಲಾ
ಬೇಡಲೂ ಹಿಡಿ ಕಾಸು ನೀಡುವವರೇ ಇಲ್ಲ
ನೋಡೀ ದಿಬ್ಬರಿಪುದ ನಾವೆನ್ನನೂ ‖ ಎನ ‖

ಕಾಸೂ ಕೈಲಿರೆ ಜಗದೀಶಾ, ಸಾತ್ವಿಕ, ತಿಲಕ,
ಹನುಮಂತ ಪತಿ, ಎನ್ನ ಕೆಸಗೂಪರೂ
ವಸುನಾಶ ಹೊಂದೆ ಈಕ್ಷಿಸರು ದಾಹಿಸರೆನ್ನ
ಕಾಸೂ ಬೆಲೆಗೆ ನಂಬರ್ ಬಿಸುಡುವರೂ ‖ ಎನ ‖

ಮನೆ ನಾಯಿಗಳಿಗನ್ನ ತಿನ್ನಿಪ ಧನಿಕರ
ಮನೆಯೊಳನ್ನವ ಕೇಳೆ ಮುನಿಸಿನಿಂದಾ
ಅನುನಯವಿಲ್ಲವು ಇನಿತು ಕಷ್ಟವ ಪಟ್ಟೆ
ಜನಕನಂದಲು ಕಡೆಯ ವನಜಾಕ್ಷನೇ ‖ ಎನ ‖

ಹರಕು ಬಟ್ಟೆಯ ಕಂಡು ಮರುಳನೆಂದಳವರು
ದಾರಿಯಲಿಯೆ ಕಂಡು ಮರುಳನೆಂಬರ್
ಅರಿತನ್ನ ಕಂಡರು ಮರುಮಾತಾನಾಡರು
ಗಿರುಕನೆಂದನ್ನನು ತಿರುಗಿ ನೋಡರ್ ‖ ಎನ ‖

ವಿಧಿಲಿಖಿತವೆ ದೇವ ಒದೆಯಲು ಬರುವರು
ಹೊಡೆಯಲುಹಲರಿಲ್ಲ ಬೀದಿಯಲಿದೇ
ಸದರ ವಿಲ್ಲವು ಶೋಕಾಂಬುಧಿಯು ಬಳಸುತಿದೆ
ಎದೆಯೊಡೆಯುತಿದೆ ಕ್ರೋಧಿಪೆಯೂ ‖ ಎನ ‖

ಅತ್ತ ಹೋದರು ಇಲ್ಲ ಇತ್ತ ಬಂದರು ಇಲ್ಲ
ಎತ್ತ ಹೋದರು ಮಧುರೋಕ್ತಿ ಇಲ್ಲ
ಭಕ್ತ ವೆಂಕಟಬಾಲ ಶಕ್ತ ಉಡುಪಿ ಕೃಷ್ಣ
ಮುಕ್ತಿನೀಡುತಲೆನ್ನೊಳ್ ಮಾತಾಡು ಬಾ ‖ ಎನ ‖

— ವಿ ಆರ್. ಉದ್ಯಾವರ,
ಸೆಂಟ್ರಲ್ ಸ್ಟುಡಿಯೊ, ಕೊಯಂಬತ್ತೂರು

ಸ್ತ್ರೀಪುರುಷರೆಲ್ಲರಿಗೂ ಓದಲು ಯೋಗ್ಯವಾದ ವಾರಪತ್ರಿಕೆ

ನವಯುಗ

ಬಿಳಿತೊನ್ನು ಮತ್ತು ಪಾಂಡುರೋಗಕ್ಕೆ ದಿವ್ಯೌಷಧಿ

ಈ ಔಷಧಿಯನ್ನು ಬಿಳಿತೊನ್ನು ಮತ್ತು ರೋಗಗಳಿಗೆ ಉಪಯೋಗಿಸಿದ್ದ ಹಕೀಮ್, ಡಾಕ್ಟರರೇ ಮೊದಲಾದವರಿಂದ ಅಸಾಧ್ಯವೆಂದಾದವುಗಳು ಸಹ ಗುಣಹೊಂದುತ್ತವೆ. ಈ ಔಷಧವು ಅಪ್ರಯೋಜಕವೆಂದು ರುಜುಪಡಿಸಿದ್ದಲ್ಲಿ 500 ರೂಪಾಯಿ ಬಹುಮಾನ ಕೊಡಲಾಗುವುದು.

ಸಂತತಿ ಬಂಧಕಕ್ಕೆ ಇದು ಅತ್ಯಾವಶ್ಯಕವಾದುದು. ಈ ಔಷಧಿ ಉಪಯೋಗಿಸುವುದನ್ನು ನಿಲ್ಲಿಸಿ ಬಿಟ್ಟರೆ ಮಕ್ಕಳಾಗುತ್ತವೆ. ಪ್ರತಿ ತಿಂಗಳಲ್ಲೂ ಎರಡು ಮೂರು ದಿವಸ ಈ ಔಷಧಿಯನ್ನು ಉಪಯೋಗಿಸತಕ್ಕದ್ದು. ಒಂದು ವರುಷಕ್ಕೆ ಬೇಕಾಗುವ ಔಷಧಕ್ಕೆ ರೂಪಾಯಿ ಎರಡು. ಜೀವಮಾನದಲ್ಲೇ ಮಕ್ಕಳು ಹುಟ್ಟಲಾರದಂತೆ ಮಾಡುವ ಇನ್ನೊಂದು ಔಷಧಕ್ಕೆ ಬೆಲೆ ರೂಪಾಯಿ ಎರಡು. ಈ ಔಷಧವು ದೇಹಾರೋಗ್ಯಕ್ಕೆ ಹಾನಿಕರವಲ್ಲ. ಮೋಸಗೊಳಿಸುವ ಔಷಧವೆಂದು ಖಾತ್ರಿಪಡಿಸುವವರಿಗೆ ರೂಪಾಯಿ 100 ಬಹುಮಾನ.

ಸ್ತಂಭಕ ವಟಿ—ಈ ಮಾತ್ರೆಯೊಂದನ್ನು ರಾತ್ರಿ ಸೇವಿಸಿದ್ದಲ್ಲಿ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು ಮಾತ್ರವಲ್ಲದೆ ಎರಡು ತಾಸುಗಳ ತನಕ ಇಂದ್ರಿಯಸ್ಖಲನವಾಗಲಾರದು. 15 ಮಾತ್ರೆಗಳಿಗೆ ಒಂದು ರೂಪಾಯಿ.

ಈ ಕೆಳಗಣ ವಿಳಾಸಕ್ಕೆ ಬರೆಯಿರಿ:—

Vaidraj Akhilkishore Ram
No. 552 **P. O. Katrisarai**, (GAYA)

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯವೆಂಬಂತೆ ಸಾಮಾನುಗಳು ಸಿಲುಗಟ್ಟಲೆ ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿವೆ. ಇವರಲ್ಲಿ ಎಲ್ಲಾ ದೇಶದ ವೇಶ್ಯಾಕನ್ಯಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು

ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿರಿ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಎಂಡ್ ಕಂಪೆನಿ,**
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co., *Nambulier Street*, G. T. MADRAS.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಪಾಚಕಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಮ ಡಬ್ಬಿಗೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತು ಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ರಂಭಜವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಶೀಸೆ 1ಕ್ಕೆ ರೂ. 5--0--0.

'**ಕಾಮಶಾಸ್ತ್ರ**' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ಬಳ.
ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಪ್ರಕೃತದ ರಾಜಕೀಯ ಪರಿಸ್ಥಿತಿ

ಪ್ರಬಲ ಪ್ರತಿಪಕ್ಷದ ಆವಶ್ಯಕತೆ

(ಲೇಖಕರು:—ದಿವಾನ್‌ಬಹದೂರ್ ಬಿ. ವ. ಹಾಬಲ ಹೆಗ್ಡೆಯವರು)

ಸಾರ್ವಜನಿಕ ಸಂಬಂಧವಾದ ವಿಶೇಷವಾಗಿ ದಕ್ಷಿಣಕನ್ನಡಜಿಲ್ಲೆಗೆ ಸಂಬಂಧಿಸುವ ವಿಷಯಗಳ ಕುರಿತು ಈಗಣ ಸರಕಾರದ ರೀತಿನೀತಿ ಮತ್ತು ಮಂತ್ರಿಗಳ ಹೇಳಿಕೆಗಳ ಕುರಿತು ನನ್ನ ಅಭಿಪ್ರಾಯವನ್ನು ನಾನು ಜನತೆಯ ಮುಂದೆ ಸಂಕ್ಷೇಪವಾಗಿ ಇರಿಸಲೆಳಸುತ್ತೇನೆ. ಕಾಂಗ್ರೆಸ್ ಚಳವಳಿ ಅಥವಾ ಅದರ ತತ್ವವನ್ನು ಟೀಕಿಸುವದೇನೂ ನನ್ನ ಉದ್ದೇಶವಲ್ಲ. ಕಾಂಗ್ರೆಸು ಮಹತ್ತಾದ ಸಂಸ್ಥೆಯಿದ್ದು ದೇಶದ ಹೆಚ್ಚಿನ ಪ್ರಾಂತಗಳಲ್ಲಿ ಅಧಿಕಾರಕ್ಕೆ ಬಂದಿರುವದೆಂಬುದನ್ನು ನಾನು ಬಲ್ಲೆ. ಇದೀಗ ಪಾರ್ಟಿ ಸರಕಾರದ ದಿನ. ಪ್ರಾಂತದ ಸರಿಯಾದ ಆಡಳಿತಕ್ಕಾಗಿ ಪ್ರಬಲಪಕ್ಷ ಪ್ರತಿಪಕ್ಷಗಳು ಇರತಕ್ಕದ್ದು. ಆರಂಭದಲ್ಲಿ ಕೆಲಸಮಯ ಅನಿಶ್ಚಿತ ಪರಿಸ್ಥಿತಿಯುಂಟಾಗಿ ತಿಕ್ಕಾಟವುಂಟಾದರೂ ಕಟ್ಟಕಡೆಗೆ ಕಾಂಗ್ರೆಸಿನವರು ಮಂತ್ರಿಪದವಿ ಸ್ವೀಕರಿಸಲೊಪ್ಪಿದುದು ವಿವೇಕಪರ ಧೋರಣೆಯಾಗಿದೆ. ರಾಜಕೀಯ ಘಟನೆಯನ್ನು ಮುರಿದು ಹಾಕುವೆವೆಂಬ ಬಡಿವಾರವು ಈಗ ನಿರ್ನಾಮವಾಗಿದೆ; ಅಥವಾ ಬಲ್ಲವರಿಗೆ ನೀಮಾವಶೇಷವಾಗುತ್ತಿದೆ ಇಂದೀಗ ಕಾಂಗ್ರೆಸ್ ಮಂತ್ರಿಗಳು, ಬಹಳವಾಗಿ ದ್ವೇಷಿಸಲ್ಪಟ್ಟ ಬ್ರಿಟಿಷರ ಮೆಚ್ಚಿಗೆ ಪಡೆಯುವಂತೆ ಆಡಳಿತ ನಡಿಸುವದರಲ್ಲಿ ಒಬ್ಬರೊಬ್ಬರನ್ನೊಬ್ಬರು ಪೇಲಾಟ ನಡಿಸುತ್ತಿರುವಂತಿರುವದು ಅತ್ಯಂತ ಸಮಾಧಾನಕರವಿದೆ. ಈ ಸಂದರ್ಭದಲ್ಲಿ ಫೆಡರೇಶನಿನ ಕುರಿತು ನಾನು ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಈ ಸುರಿಶೀಗ ದೇಶದಲ್ಲೆಲ್ಲಾ ದೊಡ್ಡ ವಾದ ಮತ್ತು ಚಳವಳವೆದ್ದಿವೆ. ಆದರೆ ಇತ್ತಲಾಗಿ ವೈಸರಾಯರು ಮತ್ತು ಪಾರ್ಲಿಮೆಂಟಿನಲ್ಲಿ ಇಂಡಿಯಾ ಸೆಕ್ರೆಟರಿಗಳು ಮಾಡಿರುವ ಹೇಳಿಕೆಗಳಿಂದ ಕಾಂಗ್ರೆಸಿನವರು ಮತ್ತು ಇತರ ಪಕ್ಷೀಯರು ಅದನ್ನೆಷ್ಟು ವಿರೋಧಿಸಿದರೂ ಕೆಲವೊಂದು ಬದಲಾವಣೆಗಳಿಂದ ಫೆಡರೇಶನು ಜ್ಯಾರಿಗೆ ಬರುವುದಂತೂ ನಿಶ್ಚಯವೆಂಬಂತೆ ತೋರುತ್ತದೆ. ವೈಸರಾಯರ ಹೇಳಿಕೆಗಳು ಮಹತ್ವದ್ದೂ ನಿಶ್ಚಿತವಾದವೂ ಆಗಿವೆ. ಫೆಡರೇಶನು ಜ್ಯಾರಿಗೆ ಬರಬೇಕಾದ ಪಕ್ಷದಲ್ಲಿ ಅಗತ್ಯವುಳ್ಳ ದೇಶೀಯ ರಾಜರುಗಳು ಅದಕ್ಕೊಪ್ಪಬೇಕೆಂಬುದೇನೋ ನಿಜ ಆದರೆ ವಿವ್ಯವಾನಗಳನ್ನು ನೋಡಿದರೆ ಅಗತ್ಯವಿರುವಷ್ಟು ಸಂಖ್ಯೆಯ ದೇಶೀಯ ಸಂಸ್ಥಾನಗಳು ಫೆಡರೇಶನಿಗೆ ಸೇರಲೊಪ್ಪುವ ಸಂಭವ ತೋರುತ್ತದೆ. ನಿಷ್ಪಕ್ಷಪಾತಿಗಳಾದ ಹೊರಗಣವರಿಗೆ ಕಾಂಗ್ರೆಸಿನ ಧೋರಣೆಯು ಏಜಾತೀಯವಾದುದೆಂದು ತೋರುತ್ತದೆ. ಪ್ರಾಂತಗಳ ಮಟ್ಟಿಗೆ ಹೊಸ ರಾಜಕೀಯ ಘಟನೆಯನ್ನೊಪ್ಪಿ ಆಡಳಿತ ನಡಿಸಿ, ಅದೇ ಘಟನೆಯ ಇನ್ನೊಂದಂಶವಾದ ಫೆಡರೇಶನನ್ನು ವಿರೋಧಿಸುವುದು ಸಮಂಜಸವೆನಿಸುವುದಿಲ್ಲ. ಒಂದೋ ಕಾಂಗ್ರೆಸಿನವರು ಪ್ರಾಂತಗಳಲ್ಲಿಯೂ ಹೊಸ ರಾಜಕೀಯ ಘಟನೆಯನ್ನು ಮುರಿದು ಹಾಕಬೇಕು. ಇಲ್ಲವಾದರೆ ಪ್ರಾಂತಗಳಲ್ಲಿಯೂ ಕೇಂದ್ರದಲ್ಲಿಯೂ ಅದನ್ನು ಕಾರ್ಯಕ್ಕೆ ಹಚ್ಚಬೇಕು. ಈಗಣ ಪರಿಸ್ಥಿತಿಯಲ್ಲಿ ದೇಶದ ಹಿತದೃಷ್ಟಿಯಿಂದ ದೇಶೀಯ ಸಂಸ್ಥಾನಗಳೂ ಇತರ ಹಿಂದುಸ್ಥಾನವೂ ಒಂದು ಗೂಡುವುದು ಅತ್ಯಾವಶ್ಯಕವಿದೆ. ಫೆಡರೇಶನು ಸ್ಥಾಪಿಸಲ್ಪಡದೆ, ಬೇರೆ ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಹಾನಿಕರ ಮತ್ತು ನಿರಂಕುಶಪರ ಕಾನೂನುಗಳನ್ನು ಜ್ಯಾರಿಗೆ ತರುವ ಪ್ರವೃತ್ತಿಯನ್ನು ತಡೆಗಟ್ಟಿ ಏಕಪ್ರಕಾರವಾದ ಆಡಳಿತವನ್ನುಂಟುಮಾಡಲು ಸಾಧ್ಯವಾಗಲಾರದು. ಆದುದರಿಂದ ಒಂದ ಕ್ಕೊಂದು ರೂಪದಲ್ಲಿ ಫೆಡರೇಶನು 1940 ರೊಳಗೆ ಸ್ಥಾಪಿತವಾಗಬಹುದೆಂದು ಬಲವಾಗಿ ನಂಬಬಹುದಾಗಿದೆ.

ಈಗ ನಾನು ಮದ್ರಾಸ್ ಸರಕಾರವು ಮಾಡಿರುವ ಕಾರ್ಯಗಳನ್ನು ವಿವರವಾಗಿ ಪರಿಶೀಲಿಸುತ್ತೇನೆ. 1937ನೇ ಇಸ್ವಿ ಫೆಬ್ರುವರಿ ತಿಂಗಳಲ್ಲಿ ಎಸೆಂಬ್ಲಿ ಮತ್ತು ಕೌನ್ಸಿಲು ಚುನಾವಣೆ ನಡೆದಾಗ ಕಾಂಗ್ರೆಸಿನವರು ಮತ್ತು ಕಾಂಗ್ರೆಸ್ ಪಕ್ಷದ ಪ್ರತಿನಿಧಿಗಳು ಕೊಟ್ಟ ಮಾತುಗಳನ್ನು ಜನರು ಮರೆಯುವ ಹಾಗಿಲ್ಲ. ಅವರು ಮಾಡಿರುವ ಅತಿ ಪ್ರಾಮುಖ್ಯವಾದ ವಾಗ್ದಾನಗಳೆಂದರೆ, ಭೂಕಂದಾಯ ರಿಯಾಯಿತಿ, ರೈತರ ಕಷ್ಟ ನಿವಾರಣೆ, ಫಾರೆಸ್ಟ್ ಸಂಕಷ್ಟಪರಿಹಾರ, ಬಡಬಗ್ಗರಿಗೆ ಸಹಾಯ, ನಿರುದ್ಯೋಗ ನಿವಾರಣೆ, ಮಜೂರರಿಗೆ ಹೆಚ್ಚಿನ ಸಂಬಳ ಪ್ರಾಥಮಿಕ ಅಧ್ಯಾಪಕರಿಗೆ ಸಂಬಳ ಹೆಚ್ಚಳವೇ ಮೊದಲಾದುವುಗಳು. ಹರಿಜನರ ದೇವಸ್ಥಾನ ಪ್ರವೇಶ, ಖಡ್ಡಾಯವಾಗಿ ಹಿಂದಿ ಶಿಕ್ಷಣವು ಈ ವಾಗ್ದಾನಗಳಲ್ಲಿ ಸೇರಿರಲಿಲ್ಲ. ಮೇಲಿನ ವಾಗ್ದಾನಗಳ ಕುರಿತು ನಾನು ಸ್ವಲ್ಪ ವಿವರವಾಗಿ ವಿಮರ್ಶಿಸುತ್ತೇನೆ.

ಭೂಕಂದಾಯ ರಿಯಾಯಿತಿಯ ಪ್ರಶ್ನೆ

ಕಳೆದ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಉಮೇದ್ವಾರಿಗಳು ಮತ್ತು ಅವರ ಪರವಾದ ಕೆಲಸಗಾರರು ಭೂಕಂದಾಯವು ಕಡಿಮೆಯೆಂದರೆ ಸೇಕಡ 33 1/3ರಷ್ಟು ಇಳಿಸಲಾಗುವುದೆಂದು ಸಾರಿರುವರು. ಜನರು ಇದನ್ನು ನಂಬಿ ಆ ಕಾರಣದಿಂದಲೇ ಹೆಚ್ಚಿನವರು ತಮ್ಮ ಮತಗಳನ್ನು ಅರಸಿನ ಪೆಟ್ಟಿಗೆಗೆ ಹಾಕಿರುವರು. ಆದರೆ ಈಗಣ ಸ್ಥಿತಿಯಾದರೂ ಏನು? ಸ್ವಲ್ಪ ಕಾಲ ಅಧಿಕಾರಕ್ಕೆ ಬಂದ ಇಂಟರಿಮ್ ಮಂತ್ರಿಗಳು ಒಪ್ಪಿರುವ ಅತ್ಯಂತ ಮಿತವಾದ ಶಿಫಾರಸುಗಳನ್ನೊಳಗೊಂಡಿರುವ ಮಾರ್ಶ್ ಬೇಂಕ್ ಕಮಿಟಿಯ ವರದಿಯು ಕೂಡಾ ಜ್ಯಾರಿಗೆ ತರಲ್ಪಟ್ಟಿರುವುದಿಲ್ಲ. ಸರ್ವಸಾಮಾನ್ಯ ಸಾಂಪತ್ತಿಕ ದುಃಸ್ಥಿತಿಯಿಂದಾಗಿ ದವಸಧಾನ್ಯಗಳ ಬೆಲೆಯು ಬಹಳವಾಗಿ ಬಿದ್ದುಹೋಗಿ ಈಗಣ ಭೂಕಂದಾಯವು ರೈತರಿಗೆ ಹೊರಲಸಾಧ್ಯವಾದ ಭಾರವಾಗಿದೆ. ಮಾರ್ಶ ಬೇಂಕ್ ಕಮಿಟಿಯಲ್ಲಿ, ಪ್ರಧಾನಮಂತ್ರಿಗಳ ಮಿತ್ರರು ಮತ್ತು ವಿಶ್ವಾಸಪಾತ್ರರಾದ 4ನುಂದಿ ಅನುಭವಶಾಲಿ ಐ. ಸಿ. ಎಸ್. ಅಧಿಕಾರಿಗಳು ಮತ್ತು ಕೆಮಂದಿ ಅನಧಿಕಾರಿ ಸದಸ್ಯರಿದ್ದರು. ಅನಧಿಕಾರಿ ಮೆಂಬರರಲ್ಲಿ ನಾನೊಬ್ಬನಿದ್ದೆ. ಭೂಕಂದಾಯ ವಿಷಯದಲ್ಲಿ ಪರಿಪಕ್ವ ಅನುಭವಶಾಲಿಯಾಗಿರುವ ಸರ. ನೋರ್ಮನ್ ಮಾರ್ಶ ಬೇಂಕರು ಈ ಕಮಿಟಿಯ ಅಧ್ಯಕ್ಷರಿದ್ದರು. ಪ್ರಕೃತದ ಪರಿಸ್ಥಿತಿಯನ್ನು ಈ ಕಮಿಟಿಯವರು ಚಿನ್ನಾಗಿ ಪರ್ಯಾಲೋಚಿಸಿ, ಅತಿ ಜರೂರಾಗಿ ಮಾಡಬೇಕಾದ ಸಹಾಯಗಳನ್ನೊಳಗೊಂಡ ವರದಿಯನ್ನು ಸರಕಾರಕ್ಕೊಪ್ಪಿಸಿದರು. ಈ ವರದಿಯಲ್ಲಿ ಸೂಚಿತವಾದ ಒಂದು ದೊಡ್ಡ ಸಹಾಯವೆಂದರೆ, ರಿಸೆಟ್ಲ್‌ಮೆಂಟಾದ ಎಲ್ಲಾ ಜಿಲ್ಲೆಗಳಲ್ಲಿ ಏರಿಸಲ್ಪಟ್ಟಿರುವ ತೀರ್ವೆದರವನ್ನು ರದ್ದುಪಡಿಸಿದುದು. ಈಪ್ರಕಾರ ದಕ್ಷಿಣಕನ್ನಡಜಿಲ್ಲೆಯಲ್ಲಿ 1902ರಲ್ಲಿ ಆದ ಸೆಟ್ಲ್‌ಮೆಂಟಿನ ತೀರ್ಮಾನದಂತೆಯೇ ತೀರ್ವೆಯನ್ನು ವಸೂಲುಮಾಡತಕ್ಕದ್ದು. ಮತ್ತು 1934ರ ರಿಸೆಟ್ಲ್‌ಮೆಂಟಿನ ಮೇರೆಗೆ ಏರಿಸಲ್ಪಟ್ಟಿರುವ ಸೇಕಡ 12ರಷ್ಟರ ತೀರ್ವೆಯು ರದ್ದಾಗತಕ್ಕದ್ದು. ದಕ್ಷಿಣ ಕನ್ನಡಜಿಲ್ಲೆ ಸಮೇತವಾಗಿ ಇಡೀ ಪ್ರಾಂತದ ಸುಮಾರು 15 ಜಿಲ್ಲೆಗಳಲ್ಲಿ ರಿಸೆಟ್ಲ್‌ಮೆಂಟಿನಿಂದಾಗಿ ಏರಿಸಲ್ಪಟ್ಟಿರುವ ತೀರ್ವೆಯನ್ನು ಕಡಿಮೆಮಾಡಲು ಮಾರ್ಶ್ ಬೇಂಕ್ ಕಮಿಟಿಯವರು ರೂ 54ಲಕ್ಷವನ್ನು ಪ್ರತ್ಯೇಕಿಸಿಟ್ಟಿದ್ದರು. ಈ ಸೂಚನೆಗಳನ್ನು ಇಂಟರಿಮ್ ಮಂತ್ರಿಮಂಡಲಿಯವರು ಸ್ವೀಕರಿಸಿ ಜ್ಯಾರಿಗೆ ತರುವಷ್ಟರಲ್ಲಿ ಕಾಂಗ್ರೆಸಿನವರು ಅಧಿಕಾರ ಸ್ವೀಕರಿಸಿದರು. ಆರಂಭದಲ್ಲಿ ಕಾಂಗ್ರೆಸ್ ಮಂತ್ರಿಗಳು ಕೂಡಾ ಮಾರ್ಶ್ ಬೇಂಕ್ ಕಮಿಟಿಯ ವರದಿಯ ಸೂಚನೆಗಳನ್ನು ಜ್ಯಾರಿಗೆ ತರಲಾಗುವುದೆಂದು ಹೇಳುತ್ತಿದ್ದರೂ ಕಡೆಗೆ ಆ ಕುರಿತು ಮೌನಧಾರಣೆಮಾಡಿರುವರು. ಸದ್ರಿ ವರದಿಯನ್ನವರು ಸ್ವೀಕರಿಸಿರುವರೋ ಇಲ್ಲವೆ ನಿರಾಕರಿಸಿರುವರೋ ಎಂಬುದೇ ಸ್ಪಷ್ಟವಾಗಿ ತಿಳಿದಿರುವುದಿಲ್ಲ. ಪ್ರಜಾಜವಾಬ್ದಾರಿ ಮತ್ತು ಜನಪ್ರಿಯವೆನಿಸುವ ಸರಕಾರವು ಇಂತಹ ಧೋರಣೆವಹಿಸಿರುವುದು ವಿಚಿತ್ರವಾಗಿದೆ. ಕಳೆದ ಫಸ್ಲಿಯಲ್ಲಿ ಭೂಕಂದಾಯವು ಸ್ವಲ್ಪಮಟ್ಟಿಗೆ ಕಡಿಮೆ ಮಾಡಲ್ಪಟ್ಟಿರುವುದೆಂಬುದೇನೋ ನಿಜ. ಆದರೆ ಅದು ಕಳೆದ ಸೆಟ್ಲ್‌ಮೆಂಟಿನಲ್ಲಿ ಸೇಕಡ 12½ಯಷ್ಟು ತೀರ್ವೆ ಏರಿದುದಕ್ಕಿಂತಲೂ ಬಹಳ ಕಡಿಮೆಯಾಗಿದೆ.

(ಮುಂದುವರಿಯುವುದು.)

WANTED—District Organisers and Taluka Superintendents in Districts of Belgaum, Bijapur, Dharwar, Canara and Coorg on salary and commission basis. Special facilities for the initial business of Rs. 10,000/-. Only influential gentlemen who can guarantee Rs. 50,000/- and Rs 25,000/- per year need apply,
Messrs.
PADUBIDRI BROS., BOMBAY 8

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧ.
ಡಾ. ಜಸಾನಿಯವರ
ಜಗತ್ಪ್ರಸಿದ್ಧ
"ಗೊನೊಕಿಲರ್" (ರಿಜಿಸ್ಟರ್ಡ್)
ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋರಿಯ, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪದಕದಲ್ಲಿರುವ ಹುಂಜದ ಚಿತ್ರದ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲರ್' ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer Dr. D. N. JASANI, Vitalbhai Patel Road, BOMBAY 4.

ಫೇನ್ಸಿ ಲಿವರ್ ರಿಸ್ಟ್‌ವಾಚ್
ರೂ. 2—4—0.

ಸಣ್ಣ ಸುಂದರ, ಆಕಾರ ಗಟ್ಟಿಮುಟ್ಟಾದ ಮೆಶಿನಿ ಸರಿಯಾದ ಸಮಯ ತೋರಿಸುವಂಥಾದ್ದು 5 ವರ್ಷದ ಗ್ಯಾರಂಟಿಯುಳ್ಳ ಕೃತಿಯ, ದೀರ್ಘಚತುಷ್ಕೋಣಾಕೃತಿಯ ಇಲ್ಲವೆ ಚೌಕಾಕೃತಿಯ ವಾಚಿಗೆ ರೂ. 2-4-0 ಉತ್ತಮ ತರದ್ದಕ್ಕೆ 2-10-0, ಅತ್ಯುತ್ತಮವಾದುದಕ್ಕೆ 3-4-0, ಸುವರ್ಣದಕ್ಕೆ ರೂ. 3-8-0 ಅತ್ಯುತ್ತಮವಾದುದಕ್ಕೆ ರೂ. 4-8-0, ಚಿತ್ರದಲ್ಲಿ ತೋರುವ ಲೀವರ್ ರಿಸ್ಟ್‌ವಾಚಿಗೆ ರೂ. 6-0-0, ಜುವೆಲಿರುವ ರೋಲ್ಡ್‌ಗೋಲ್ಡಿಗೆ ರೂ. 8-0-0, ಸರ್ವೋತ್ತಮವಾದುದಕ್ಕೆ ರೂ. 10-0-0 ವಿ. ಪಿ. ಪ್ರತ್ಯೇಕ.
ಎಚ್. ಡಾವಿದ್ ಅಂಡ್ ಕೊ.
ಪೋ. ಬಾಕ್ಸ್ 11424 ಕಲ್ಕತ್ತ.
H. David & Co.
Post Box No. 11424. Calcutta

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್

ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು

ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ

ಮೈಸೂರು ಸ್ಟೇಟಿನ ಏಜಂಟರು:– ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ನೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ನೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja,	**ಯಂ. ಆರ್. ಪೂಂಜ,**
President & Manager.	ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! **DAIMONDS!**

K R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇವರ ಶಾಪೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,

ಗವರ್ನ್‌ಮೆಂಟ್ ಕೊಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ

ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,

Hampankatte, **MANGALORE**

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ. ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1ಕ್ಕೆ 12 ಆಣೆ, ಟ ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,

ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ.**

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಡುನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ ಬಹಿಷ್ಠೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತುಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತವೆ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು "ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ ಅಗತ್ಯವಾಗಿ ಇರಲೇಬೇಕಾದ್ದು.

ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,

ಬ್ರಾಂಚ್—ಮಂಗಳೂರು.

NAVABHARAT BOOK DEPOT

BOOK-SELLERS & PUBLISHERS

Church Road-Udipi.

ನಮ್ಮಲ್ಲಿ

ಎಲ್ಲಾತರದ ಶಾಲಾಪುಸ್ತಕಗಳೂ

ಲೈಬ್ರೆರಿಗೆ ಬೇಕಾದ ಪುಸ್ತಕಗಳೂ

ದೊರೆಯುತ್ತವೆ.

ಕೆಟಲಾಗಿಗೂ

ಇತರ ಮಾಹಿತಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ

ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು

ಚರ್ಚರೋಡ್ • • • ಉಡುಪಿ

INLAND RS. 3—4—0
FOREIGN RS. 4-12—0

ABSOLUTELY FREE!

Bring this coupon and you will get your own Photo absolutely free of charge

☞ The rate for the enlargement of the same Rupee one only (size 6"×8")

Send your old photo and you will get enlargement 6'×8' for Rs 2—8—0. ony and big size 16'×20' for Rs. 5 only.
Our time every day 9 a. m. to 7 p. m. Sunday 9 a. m. to 4p. m.

K. J. PATHAK

276 Surya Mahal Girgaum Road, BOMBAY, 4. | Royal Art Studio 183 Hornby Road, BOMBAY, 1.

ಕೇವಲ ಧರ್ಮಾರ್ಥ!

ಈ ಜಾಹೀರಾತಿನ ಕೂಪನನ್ನು ತರುವವರಿಗೆ ಅವರ ಫೋಟೋವನ್ನು ಧರ್ಮಾರ್ಥವಾಗಿ ತೆಗೆದುಕೊಡಲಾಗುವುದು

ತ್ವರೆ ಮಾಡಿರಿ! ಬೊಂಬಾಯಿ ಪಟ್ಟಣಿಗರೆ ತ್ವರೆ ಮಾಡಿರಿ!!

● ಈ ನಮ್ಮ ಫೋಟೋವನ್ನು ಎನ್‌ಲಾರ್ಜ್ ಮೆಂಟಿಗೆ ಬರೀ ರೂ. 1/. ಮಾತ್ರ. (ಸೈಜ್ 6"×8")

ಹೊರಗಿನವರು ಈ ಕೂಪನಿನೊಂದಿಗೆ ತಮ್ಮ ಫೋಟೋ ಕಳುಹಿಸಿದರೆ ಅದನ್ನು 6'×8' ಸೈಜಿನಲ್ಲಿ ರೂ. 2-8-0ಕ್ಕೆ ಎನ್‌ಲಾರ್ಜ ಮಾಡಿಕೊಡಲಾಗುವುದು. 16×'20'ರ ದೊಡ್ಡ ಸೈಜಿಗೆ ರೂ. 5 ಮಾತ್ರ. ನಮ್ಮ ಆಫೀಸು ಸಮಯ ಬೆಳಿಗ್ಗೆ 9ರಿಂದ ಸಂಜೆ 7, ಆದಿತ್ಯವಾರ ಬೆಳಿಗ್ಗೆ 9ರಿಂದ ಸಂಜೆ 4 ಗಂಟೆ ತನಕ

ಕೆ. ಜೆ. ಪಠಕ್

276, ಸೂರ್ಯಮಹಾಲ್ ಗಿರ್ಗಾಮ್ ರೋಡು ಬೊಂಬಾಯಿ 4 | ರೋಯಲ್ ಆರ್ಟ್ ಸ್ಟುಡಿಯೋ, 183 ಹೋರ್ನ್ಬಿ ರೋಡು, ಬೊಂಬಾಯಿ 1

ಕೇಶವರ್ಧಕ ⁘ ನೇತ್ರಾರೋಗ್ಯರಕ್ಷಕ ⁘ ಸುಖದಾಯಕ

ಆಮಲಕೀ ತೈಲ
AMALAKI HAIR OIL

(Regd Trade Mark)

ವಿದ್ಯಾರ್ಥಿಗಳಿಗೂ, ಸಕಲ ಸ್ತ್ರೀ ಪುರುಷರಿಗೂ ನಿತ್ಯ ಕೇಶ ಪ್ರಸಾದನಾರ್ಥ ಪುಷ್ಪಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲವಿದು. ಮೆದುಳಿನ ಸ್ವಾಸ್ಥ್ಯಕ್ಕೂ ನೇತ್ರಾರೋಗ್ಯ ರಕ್ಷಣೆಗೂ ಕೇಶಕಲಾಪದ ಬೆಳವಣಿಗೆಗೂ ಸೌಂದರ್ಯವರ್ಧನೆಗೂ ಅತ್ಯಂತ ಸಹಾಯಕವಾಗಿದೆ. ಇದನ್ನು ನಿತ್ಯವೂ ಉಪಯೋಗಿಸುತ್ತ ಬಂದರೆ ಶರೀರ ಹಾಗೂ ಮೂಸಿಕ ಶ್ರಮವುಳ್ಳ ಪುರುಷರಿಗೂ, ಪ್ರಸವಾನಂತರದಲ್ಲಿ ಸ್ತ್ರೀಯರಿಗೂ ಸಾಮಾನ್ಯವಾಗಿ ಕೇಶಮೂಲಗಳು ನಿಶಕ್ತವೊಂದಿ ಕೂದಲು ಉದುರುವಿಕೆ ಅಕಾಲದಲ್ಲಿ ನರೆಯುವಿಕೆ ಇವೇ ಮೊದಲಾದ ದೋಷಗಳು, ದೂರವಾಗಿ ಕೇಶಮೂಲಗಳು ದೃಢವಾಗುವುದರಿಂದ ಅಷ್ಟಕಪ್ಪು ಕೂದಲುಗಳು ನಿಬಿಡವಾಗಿ ಬೆಳೆಯುವದಲ್ಲದೆ ನೋಡಲೇ ನಲಿಕಕೂದಲು ಸಹ ಕಪ್ಪಾಗಿ ಮುಖಶ್ರೀಯು ಲಾವಣ್ಯ ಪೂರ್ಣವಾಗುವದು. ತಲೆ ನೋವು, ಸೂರ್ಯಾವರ್ತ ಅಥವಾ ಅರೆತಲೆನೋವು, ನೇತ್ರಜ್ವಾಲೆ, ಮೆದುಳಿನ ಉಷ್ಣತೆ ತಲೆತಿರುಕು, ದುಃಸ್ವಪ್ನ ಪೂರ್ಣವಾದ ನಿದ್ರಾಭಂಗ, ಮೊದಲಾದ ಪಿತ್ತಜನಿತರೋಗಗಳೂ ನಿವೃತ್ತವಾಗಿ ಸುಖವಾದ ನಿದ್ರೆಯು ಹತ್ತುವದು. [illegible] ಸ್ಮೃತಿ, ಮೇಧಾ ಉತ್ಸಾಹ ವಿಚಾರಶಕ್ತಿ ಮೊದಲಾದ ಮಾನಸಿಕ ಶಕ್ತಿಗಳು ವಿಕಾಸಹೊಂದಿ ಚಿರಾರೋಗ್ಯ ಲಾಭವಾಗುವದು.

4 ಔನ್ಸಿನ ಸೀಸೆ ಒಂದರ 0—11—0. 2 ಔನ್ಸಿನ ಸೀಸೆ ಒಂದರ 0—6—0.

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ.

100 ಮಾತ್ರೆಗಳಿಗೆ ರೂ. 1-5-0, 500ಕ್ಕೆ ರೂ. 5.

ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತು ಔಷಧಿಗೂ ಬರೆಯಿರಿ:

ಸ್ವದೇಶೀ ಔಷಧಿ ಭಂಡಾರ, (ರಜಿಸ್ಟರ್ಡ್) ಕುಂಜಾಲ್,

ಬ್ರಹ್ಮಾವರ ಪೋಸ್ಟ್, ದ. ಭಾರತ

ಸಪ್ಲೈ ಏಜನ್ಸಿ ಲಿಮಿಟೆಡ್‌ನಲ್ಲೂ ನವಭಾರತ ಬುಕ್ ಡಿಪೋದಲ್ಲೂ ನಮ್ಮ ಔಷಧಗಳು ಸಿಗುತ್ತವೆ

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ. ೧—೮—೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Supply Agency Limited.
(BANKERS)

ESTD] **UDIPI** [1933

Authorised Capital Rs 1,00,000
Subscribed & Paid up Rs. 30,760

RATE OF INTEREST FOR FIXED DEPOSITS.

3 to 6 Months 4% p. a.
7 to 11 „ 5% „
12 to 18 „ 6% „

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

General Supplies Limited.
UDIPI

PROPRIETORS:

Sri Bharata Vastu Mandira,
Thulunad Stationery Mart.
Manipal Power Press.
Thulunad Press,
Antaranga

THE BEST MEDIUM FOR ADVERTISEMENT
Yugadi Special of Antaranga
to be published on **16—4—1939**
pages exceed 100
copies exceed 10,000
single copy 0 2 0

ತುಳುನಾಡ್ ತಿಲಕ ಪಂಚಾಂಗ

ಬೆಲೆ ೦—೧—೦

ಮಾರಾಟಕ್ಕೆ ತಯಾರಾಗಿದೆ.

ವ್ಯಾಪಾರಿಗಳಿಗೆ ಧಾರಾಳ ಕಮಿಶನ್.

ಬೇಕಾದವರು ತರಿಸಿಕೊಳ್ಳಬಹುದು.

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.



ಭಾರತದಲ್ಲಿ ಕಾಂಗ್ರೆಸ್ ಮಂತ್ರಿ ಮಂಡಲ.

ಎರಡನೇ ಮೈಸೂರು ಕಾಂಗ್ರೆಸ್ ಅಧಿವೇಶನ ಸ್ವಾಗತ ಕಮಿಟಿಯವರ ಆಶ್ರಯದಲ್ಲಿ

ವಿ ದು ರಾ ಶ್ವ ತ್ಥ

ಖಾದಿ, ಸ್ವದೇಶಿ ಮತ್ತು ಗ್ರಾಮ ಕೈಗಾರಿಕೆಗಳ ಪ್ರದರ್ಶನ

ಎಪ್ರಿಲ್ 12ನೇ ತಾರೀಖಿನಿಂದ 19ನೇ ತಾರೀಖಿನ ವರೆಗೆ

ವಿದುರಾಶ್ವತ್ಥ ಮಹಾಕ್ಷೇತ್ರದಲ್ಲಿ

ನಡೆಸಲಾಗುತ್ತದೆ.

ಪ್ರದರ್ಶನದ ಕೈಪಿಡಿಯೊಂದನ್ನು ಇದರೊಡನೆ ಪ್ರಕಟಿಸಲಾಗುವುದು.

ಸ್ಥಳ (ಸ್ಟಾಲು) ಮತ್ತು ಜಾಹೀರಾತುಗಳಿಗೆ ಬರೆಯಿರಿ.

ಬಿ. ಎನ್. ಎಸ್. ರಾಜನ್	ಅ	ಕಾರ್ಯದರ್ಶಿ
ಅಂಡ್ ಬ್ರದರ್,		ಎಕ್ಸಿಬಿಷನ್ ಕಮಿಟಿ
ಟ್ರೇಡ್‌ಮಾರ್ಕ್ ಮತ್ತು ಪಬ್ಲಿಶರ್	ಥ	ಇಂಡಿಯನ್ ಪ್ರೆಸ್, ಬಳೆಪೇಟೆ
ಮಲ್ಲೇಶ್ವರ ಪೋಸ್ಟ್,		
(ಬೆಂಗಳೂರು ಸಿಟಿ.)	ವಾ	ಬೆಂಗಳೂರುಸಿಟಿ.

Commonwealth Assurance Co., Ltd., Poona.

ಬೋನಸ್ಸು ದರವು 20% ಹೆಚ್ಚಿದೆ

30—4—38ರ

ಮೂರನೇ ವ್ಯಾಲ್ಯುಯೇಷನ್ ಫಲಿತಾಂಶ

ಜೀವಾವಧಿ	ತ್ರೈವಾರ್ಷಿಕ	ಎಂಡೋಮೆಂಟ್
ರೂ 54—0 0	ಬೋನಸ್ಸು ಸಾವಿರಕ್ಕೆ	ರೂ 45—0—0

ಕಾಮನ್‌ವೆಲ್ತ್

ಏಜನ್ಸಿ ಮತ್ತು ಪಾಲಿಸಿ ವಿವರಗಳಿಗೆ ಇಂದೇ ಬರೆಯಿರಿ.

ಕಾಮನ್‌ವೆಲ್ತ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ.

ಗವಾಂಕರ್ ಅಂಡ್ ಸನ್ಸ್,

ಚೀಫ್ ಏಜಂಟ್ಸ್: ಆನಂದರಾವ್ ಸರ್ಕಲ್, ಬೆಂಗಳೂರು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮಿ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಮೃದ್ವೀಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣೆಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE

PANGAL NAYAK BANK

Estd.] LIMITED. [1920.

ದಿ ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್.

Paid up Capital Rs. 1,82,100/-. Reserves Rs. 2,02 800/-

PRINCIPAL OFFICE: COURT ROAD, UDIPI.

OTHER OFFICES:

UDIPI MANGALORE, KATAPADI, & KANHANGAD.

Season Deposits so as to bear interest at 4per cent per annum till the end of June 1939 are accepted.

Cumulative Deposits are also received on the usual terms.

Banking business of every description is transacted. Further particulars may be had on application.

ದಿ ವಿಜಯ ಬೇಂಕ್, ಲಿಮಿಟೆಡ್, ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವಹಿವಾಟುಗಳು ಇಲ್ಲಿ ನಡಿಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವತಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3 ತಿಂಗಳಿಗೆ	....	3½%
6 „	....	4%
1 ವರ್ಷಕ್ಕೆ	....	4½%
2 „	....	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ.

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತದೆ.

Transport & Car Owners



ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES - - - - - MANGALORE.

AUGUSTINE & CO.

Stockits:—

Well Known ceylon, Nilgri, Darjeeling & Assam Tea & Coffee.

All sorts of Hotel & family Tea Mixures as well as Coffee can be had at moderate rates.

ಮುಂಬಾಯಿಯಲ್ಲಿ ನಮ್ಮ ಗಿರಾಕಿಗಳು ಹಲವು ವರ್ಷಗಳಿಂದ ನಮ್ಮ ಚಾ ಕಾಫಿಯನ್ನು ಉಪಯೋಗಿಸಿ ಸಂತುಷ್ಟರಾಗಿದ್ದಾರೆ.

ಹೋಟೆಲುಗಳಿಗೆ ಬೇಕಾಗುವ ಟೀ ಮಿಕ್ಸರ್, ವ ಕಾಫಿ ಹುಡಿ, ಮನೆಗಳಿಗೆ ಬೇಕಾಗುವ ಚಾ-ಕಾಫಿ, ನಮ್ಮಲ್ಲಿ ಸದಾ ಮಿತ ಕ್ರಯಕ್ಕೆ ದೊರೆಯುತ್ತದೆ. ಪ್ರಾಮಾಣಿಕತೆಯೇ ನಮ್ಮ ಆದರ್ಶ. ಗಿರಾಕಿಗಳ ಸೌಕರ್ಯವೇ ನಮ್ಮ ಧ್ಯೇಯ. ಪರೀಕ್ಷಿಸಿರಿ! ಖಾತ್ರಿ ಮಾಡಿಕೊಳ್ಳಿರಿ.

ವಿಳಾಸ: ಆಗಸ್ಟಿನ್ ಎಂಡ್ ಕೋ., ಮೌಂಟುರೋಡು, ಮಜಗಾಂ, ಮುಂಬಯಿ.

MOUNT ROAD, MAZAGAON, BOMBAY.

ESTD. 1921
FOUNDER
Sri. A B. SHETTY, M.L.A.
Parliamentary Secretary, Govt of Madras
ಸಂಸ್ಥಾಪಕರು:
ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೬-೪-೧೯೩೯ | Vol. XVIII
ಸಂಚಿಕೆ ೩೧ | Udipi, Thursday 6—4—1939 | No. 31

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ. ೩—೪—೦
೬ ತಿಂಗಳಿಗೆ ರೂ. ೧—೧೨—೦.
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಮಾಚಾರಸಂಗ್ರಹ

ಶ್ರೀ. ಸಿ. ಜೆ. ವರ್ಕಿ, ಎಂ.ಎಲ್.ಎ., ವಿದ್ಯಾಂಗದ ಮಂತ್ರಿಗಳು. ಇವರು ಸದ್ಯವೇ ತನ್ನ ಸ್ವಂತ ಊರಾದ ಮಂಗಳೂರಿಗೆ ಬರಲಿರುವರು.

ಎಬಿಸೀನಿಯದಿಂದ ಇಟಲಿಗೆ ಸುಖವಿಲ್ಲ

ಇಟಲಿಯು ಎಬಿಸೀನಿಯವನ್ನು ವಶಪಡಿಸಿಕೊಂಡು ವರುಷಗಳು ಕಳೆದರೂ ಅದನ್ನು ಬಗ್ಗಿಸಿ ದಕ್ಕಿಸಿಕೊಳ್ಳಲಿಕ್ಕೆ ಆಗದೆ ಸಂಕಟಪಡುತ್ತಿದೆ. ಎಬಿಸೀನಿಯದಲ್ಲಿ ದೇಶಾಭಿಮಾನ ಸ್ವಾತಂತ್ರ್ಯಪ್ರೇಮ ಇವುಗಳ ಕಿಡಿಯಿನ್ನೂ ಆರಿಲ್ಲ. ಅವು ಆಗಾಗ ಬುಗಿಲೆಂದು ಇಟೇಲಿಯಾನ ಸೈನ್ಯದಮೇಲೆ ಉರಿದುಬಿಡುತ್ತವೆ. ಹರಾರ್ ಪ್ರಾಂತದ ಆಸಾಟಾಘರಿ ಎಂಬ ಪಟ್ಟಣವನ್ನೇ ಇಟೇಲಿಯಾನರಿಂದ ಬಿಡಿಸಿ ಸ್ವಾಧೀನಪಡಿಸಿಕೊಂಡು ತಿಂಗಳೊಂದಾಗುತ್ತಾ ಬಂದರೂ ಇಟೇಲಿಯಾನ ಸೈನಿಕರಿಗೆ ಅದನ್ನು ತಿರುಗಿ ವಶಪಡಿಸಿಕೊಳ್ಳಲಿಕ್ಕಾಗಿಲ್ಲ. ಹೀಗೆ ಎಬಿಸೀನಿಯರು ಅಲ್ಲಲ್ಲಿ ಇಟೇಲಿಯಾನರ ಅಳ್ಳೆಯ ಮುಳ್ಳಾಗಿ ಪೀಡಿಸುತ್ತಿದ್ದಾರೆ.

ಕೋಲಾಪುರದಲ್ಲಿ ೨೦೦ ಮನೆಗಳ ಜಪ್ತಿ

ಕೋಲಾಪುರ ಸಂಸ್ಥಾನದ ದರ್ಬಾರು ಪ್ರಜಾಪರಿಷತ್ತು ಶಾಸನವಿರೋಧ ಸಂಸ್ಥೆಯೆಂದು ತೀರ್ಮಾನಿಸಿದುದರ ಪರಿಣಾಮವಾಗಿ ಸಂಸ್ಥಾನದ ಪೋಲೀಸಿನವರು ೨೦೦ ಮನೆಗಳನ್ನು ಜಪ್ತಿಮಾಡಿರುವರು.

ಪ್ರಗತಿಪರ ಔಂಧ್‌ಸಂಸ್ಥಾನ

ಇಲ್ಲಿ ಗ್ರಾಮ ವಿಶ್ವವಿದ್ಯಾಲಯ ಸಂಸ್ಥಾಪನೆಯ ಯೋಜನೆಯೊಂದು ಪ್ರಯೋಗದಲ್ಲಿ ಬರುತ್ತಿದೆ. ಗ್ರಾಮ ಕೈಗಾರಿಕೆಗಳು ಗ್ರಾಮ ಸ್ವಾಸ್ಥ್ಯ ಜಾನುವಾರು ರಕ್ಷಣೆ, ಕೆತ್ತನೆ ಮುಂತಾದ ಮಂಗೆಲಸ, ಮುದ್ರಣ ಇತ್ಯಾದಿ ಗ್ರಾಮೋಪಯುಕ್ತವಾದ ೧೫ ಬಗೆಯ ಕೈಗಾರಿಕೆ ಕಸಬುಗಳನ್ನು ಈ ವಿಶ್ವ ವಿದ್ಯಾಲಯದಲ್ಲಿ ಕಲಿಸಲಾಗುವುದು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದವರನ್ನು ಇದರಲ್ಲಿ ಸೇರಿಸಿಕೊಂಡು ಯಾವುದಾದರೊಂದು ವೃತ್ತಿ ಶಿಕ್ಷಣವನ್ನು ಕಲಿಸಿ ಕೊಡುವುದೇ ಈ ಸಂಸ್ಥಾಪನೆಯ ಸ್ತುತ್ಯ ಧ್ಯೇಯ.

ಇಂಡಿಯದಲ್ಲಿ ವಿದೇಶೀಯರ ವಸಾಹತಿಗೆ ಸರಕಾರದ ವಿರೋಧ

ಸಂಬಂಧಪಟ್ಟ ವಿದೇಶೀ ಸರಕಾರಗಳೊಡನೆ ಶಾಂತಸರ ಸಂಧಾನ ನಡೆಯಿಸಿ ಇಂಡಿಯದಲ್ಲಿ ನೆಲೆಯಾಗಲು ಬಯಸುವ ವಿದೇಶೀಯರಿಗೆ ಅಸ್ಪದಗೊಡಬೇಕೆಂಬ ಘೋರಣೆಯ ಮಸೂದೆಯನ್ನು ಕೇಂದ್ರ ನ್ಯಾಯ ವಿಧಾಯಕ ಸಭೆಯಲ್ಲಿ ಮಂಡಿಸಲು ಕಾಂಗ್ರೆಸ್ಸು ಸದಸ್ಯರು ಸಮ್ಮತಿ ಕೇಳಿದಾಗ ವೈಸರಾಯರು ಒಪ್ಪಲಿಲ್ಲ.

ಬೊಂಬಾಯಿಯಲ್ಲಿ ಪಾರ್ಸೀ ಜನರ ಸಭೆಯಲ್ಲಿ ಸತ್ಯಾಗ್ರಹದ ಬೆದರಿಕೆ-ನಿಶಾನಿಷೇಧಾಜ್ಞೆಯನ್ನು ವಿರೋಧಿಸುವುದಕ್ಕಾಗಿ

ಬೊಂಬಾಯಿ ಸರಕಾರವು ನಿಶ್ಚೈಸಿರುವಂತೆ ಬರುವ ಆಗೋಸ್ತು ತಾ 1ರಿಂದ ಬೊಂಬಾಯಿ ನಗರದಲ್ಲಿ ನಿಶಾನಿಷೇಧಾಜ್ಞೆಯನ್ನು ಪ್ರಯೋಗದಲ್ಲಿ ತಂದರೆ ತಾವು ಸತ್ಯಾಗ್ರಹವನ್ನು ಕೈಕೊಳ್ಳುವೆವೆಂದು ಪಾರ್ಸಿಗಳ ಮಹಾ ಸಭೆಯೊಂದು ಕವಾಸ್ಜಿ ಜಹಂಗೀರ್ ಹಾಲಿನಲ್ಲಿ ಜರಗಿ ಪಾರ್ಸಿ ಮುಂದಾಳುಗಳ ನೇಕಾರ ಭಾಷಣಗಳಾದುವು. ಅಂತಹ ಆಜ್ಞೆಯು ಪಾರ್ಸೀಜನರ ಆರ್ಥಿಕ ಪರಿಸ್ಥಿತಿ, ಮತ್ತು ಮತ ಸಂಪ್ರದಾಯಗಳಿಗೆ ವಿರೋಧವಿರುವುದರಿಂದ ಅದನ್ನು ಸರಕಾರವು ಪ್ರಯೋಗದಲ್ಲಿ ತರಬಾರದೆಂದು ಮುಂತಾದ ನಿರ್ಣಯಗಳಾದುವು.

ಹಿಂದೂ-ಮುಸ್ಲಿಮರೊಳಗೆ ಐಕ್ಯವಿರಬೇಕು.

ಪ್ರಾಂತಿಕ ಅಹ್ರಾರ್ ಟಾಬ್ಲಿಗ್ ಪರಿಷತ್ತಿನ ನಿರ್ಧಾರ.

ಈ ಪರಿಷತ್ತಿನ ಬಹಿರಂಗ ಅಧಿವೇಶನದಲ್ಲಿ ಅದರ ಅಧ್ಯಕ್ಷರಾದ ಸಯ್ಯದ್ ಅತಾಉಲ್ಲಾ ಷಾ ಭುಕಾರೀ ಇವರು ಭಾಷಣಕೊಡುತ್ತ ಇಸ್ಲಾಂ ಗಂಡಾಂತರದಲ್ಲದೆ ಎಂದು ಕೂಗಿ ಹಿಂದೂ-ಮುಸ್ಲೀಮರೊಳಗೆ ಜಗಳ ಗಂಟಿಕ್ಕುವುದು ಸರಿಯಲ್ಲ. ಎರಡು ಪಕ್ಷಗಳೂ ಒಂದಾಗಿ ಬ್ರಿಟಿಷ್ ಪ್ರಭುತ್ವವನ್ನು ಎದುರಿಸಬೇಕಾಗಿದೆ. ಸ್ವಾತಂತ್ರ್ಯವು ದೊರಕಿದ ನಂತರ ಬಹು ಸಂಖ್ಯಾಕರಾದ ಹಿಂದೂಗಳು ಮುಸ್ಲೀಮರನ್ನು ಕೀಳು ಬೀಳುಸುವರೆಂಬ ಮಾತಿನಲ್ಲಿ ಹುರುಳಿಲ್ಲ. ಎಲ್ಲರೂ ಒಂದಾಗಿ ಮುಂದಾಗೋಣ ಎಂದು ಉಪದೇಶಿಸಿದರು.

ಮರಣ ತೆರಿಗೆ ಹೊರಿಸುವ ಯೋಚನೆ ಬಿದ್ದು ಹೋಯಿತು.

ಇಂಡಿಯಾ ಸರಕಾರವು ಮರಣ ತೆರಿಗೆಯನ್ನು ಹೊರಿಸುವ ಸೂಚನೆಯನ್ನು ಮಾಡಿತ್ತು. ಕೇಂದ್ರ ನ್ಯಾಯವಿಧಾಯಕ ಸಭೆಯಲ್ಲಿ ಶ್ರೀ. ಸತ್ಯಮೂರ್ತಿಗಳು ಆ ಸೂಚನೆಯು ಮುಂದೆ ಬರಲಿಕ್ಕಿದೆಯೋ ಎಂದು ಕೇಳಿದಾಗ ಪ್ರಾಂತಿಕ ಸರಕಾರಗಳೆಲ್ಲ ಒಂದೊಂದು ರೀತಿಯಲ್ಲಿ ಆ ವಿಷಯ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುವುದರಿಂದ ಅದನ್ನು ಮುಂದೆ ತರುವ ಯೋಚನೆಯಿಲ್ಲವೆಂದು ಫೈನಾನ್ಸ್ ಮೆಂಬರ್ ಸರ್ ಜೇಮ್ಸ್ ಗ್ರಿಗ್ಗರು ಹೇಳಿದರು.

ಕೇಂದ್ರ ನ್ಯಾಯವಿಧಾಯಕ ಸಭೆಯು ತಿರಸ್ಕರಿಸಿದುದನ್ನು ಕೌನ್ಸಿಲ್ ಆಫ್ ಸ್ಟೇಟ್ (ಇಂಡಿಯಾ ಸರಕಾರ) ಪುರಸ್ಕರಿಸಿತು

ಇಂಡೋ-ಬ್ರಿಟಿಷ್ ಟ್ರೇಡ್ ಎಗ್ರೀಮೆಂಟ್ ಎಂಬ ಇಂಡಿಯ ಮತ್ತು ಇಂಗ್ಲಂಡಿನೊಳಗೆ ವ್ಯಾಪಾರ ಒಪ್ಪಂದದ ಶರತ್ತುಗಳನ್ನು ಕೇಂದ್ರ ನ್ಯಾಯವಿಧಾಯಕ ಸಭೆಯು ಕೂಲಂಕಷವಾಗಿ ಚರ್ಚಿಸಿ ಅದು ಬ್ರಿಟಿಷ್ ವ್ಯಾಪಾರಕ್ಕೆ ಸಾಧಕವೂ ಇಂಡಿಯದಕ್ಕೆ ಬಾಧಕವೂ ಆಗಿದೆಯೆಂದು ಆ ಒಪ್ಪಂದವನ್ನು ತಿರಸ್ಕರಿಸಿತು. ಅದೇ ಪ್ರಶ್ನೆಯು ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಬಂದಾಗ ಕಾಂಗ್ರೆಸ್ ಪಕ್ಷದವರು ಪ್ರಬಲವಾಗಿ ವಿರೋಧಿಸಿದರೂ ಬಹುಮತದಿಂದ ಅಂಗೀಕಾರವೇ ಆಯಿತು.

ಮೈಸೂರಿಗೆ ಜವಾಬ್ದಾರಿ ಸರಕಾರ ಅಂತಿಮ ಧ್ಯೇಯ

ಮೈಸೂರು ರಾಜ್ಯ ಪದ್ಧತಿ ಸುಧಾರಣಾ ಮಂಡಳಿಯು ಶ್ರೀ. ಕೆ. ಆರ್. ಶ್ರೀನಿವಾಸ ಅಯ್ಯಂಗಾರ್‌ರ ಅಧ್ಯಕ್ಷತೆಯಲ್ಲಿ ಕೂಡಿಬಂದು ರಾಜ್ಯಭಾರ ಸುಧಾರಣೆಯ ಕುರಿತು ದೀರ್ಘ ಚರ್ಚೆಗಳಾಗಿ ಸುಧಾರಣೆಗಳ ಗುರಿಯು ಪ್ರಜಾಪ್ರಭುತ್ವ ರಾಜ್ಯಭಾರದ ಕಡೆಗೆ ಇರತಕ್ಕುದೆಂದೂ ಆದರೆ ಮೈಸೂರು ಮಹಾರಾಜರ ಭೌಮತ್ವ ಮತ್ತು ವಿಶೇಷಾಧಿಕಾರಗಳಿಗೆ ಬಾಧಕವಾಗದಂತಹ ಶರತ್ತುಗಳಿಂದ ಸಮಾವೇಶವಾಗಿರತಕ್ಕುದೆಂದೂ ನಿರ್ಧಾರವಾಗಿ ಈ ದೃಷ್ಟಿಯಿಂದ ಸುಧಾರಣೆಯ ಸಲಹೆ ಸೂಚನೆಗಳನ್ನು ಕೊಡುವ ಕಾರ್ಯವನ್ನು ತಾ. ೧೨ರ ಸಭೆಯಲ್ಲಿ ಉಪಕ್ರಮಿಸುವುದೆಂದೂ ನಿಶ್ಚಿತವಾಗಿ ಸಭಾ ಮುಕ್ತಾಯವಾಯಿತು.

ದೇಶೀ ಸಕ್ಕರೆ ಕಾಗದಗಳ ಕೈಗಾರಿಕೆಗಳಿಗೆ ಇಂಡಿಯಾ ಸರಕಾರದ ರಕ್ಷಣೆಯ ಧೋರಣೆ.

ಬರುವ ಎಪ್ರಿಲ್‌ನಿಂದ ಎರಡು ವರುಷಗಳ ವರೆಗೆ ಸಕ್ಕರೆ ಮತ್ತು ಕಾಗದಗಳ ಕೈಗಾರಿಕೆಗಳ ಪ್ರೋತ್ಸಾಹಕ್ಕಾಗಿ ರಕ್ಷಣೆಯ ತೆರಿಗೆಯನ್ನು ಊರ್ಜಿತ ಇಡುವುದಲ್ಲದೆ ಸಕ್ಕರೆಯ ಮಟ್ಟಿಗೆ ಮಣಕ್ಕೆ ಮತ್ತೂ ಎರಡಾಣೆ ಹಿಗ್ಗಿಸುವ ನಿರ್ಧಾರವನ್ನು ಇಂಡಿಯಾ ಸರಕಾರವು ಪ್ರಕಟಿಸಿಯದೆ.

ಪದ್ಮಸೇ ಯುರೋಪಿನ ಪ್ರವಾಸವನ್ನು ಕೈಕೊಳ್ಳಲಿರುವ ಶ್ರೀಮತಿ ಕಮಲಾದೇವಿಯವರು

ಆಶ್ರಯ ಪ್ರಾರ್ಥಿಗಳಿಗೆ ಬ್ರಿಟನ್ ನಾಸ್ತಿ ಎಂದಿತು.

ಜೆಕೋಸ್ಲೋವೇಕಿಯದಿಂದ ಹೊರಟು ಡೇನಿಶ್ ವಿಮಾನ ಸರ್ವೀಸಿನ ಮೂಲಕ ಲಂಡನಿನಲ್ಲಿ ಬಂದಿಳಿದ ಯೆಹೂದಿಗಳಿಗೆ ಬ್ರಿಟನ್ನಿನಲ್ಲಿ ಉಳಕೊಳ್ಳಲಿಕ್ಕೇ ಅನುಮತಿ ದೊರಕಲಿಲ್ಲ. ಅವರನ್ನು ತಿರುಗಿ ವಿಮಾನದಲ್ಲಿ ಏರಿಸಿ ಹೊರಕ್ಕೇ ಕಳುಹಿಸಿ ಬಿಡಬೇಕೆಂದು ಸರಕಾರದ ಅಪ್ಪಣೆ.

ಕಾರ್ಡಿನ ಬೆಲೆಯು ಅರ್ಧಾಣೆಯಾಗಬಹುದೇ?

ಕಾರ್ಡಿನ ಬೆಲೆಯು ಅರ್ಧಾಣೆ, ರಿಪ್ಲೈ ಕಾರ್ಡುಗಳ ಬೆಲೆಯನ್ನು ೧ ಆಣೆ ಮಾಡಬೇಕೆಂದು ಡಿಲ್ಲಿ ಅಸೆಂಬ್ಲಿಯ ಪ್ರೊ. ರಂಗರವರು ಸೂಚನೆಯೊಂದನ್ನು ತಂದಿದ್ದರು. ಇದಕ್ಕೆ ಅಂಚೆಖಾತೆಯ ಡಾಯರೆಕ್ಟರ ಜನರಲ್‌ರಾದ ಬೇರೂರವರು ವಿರೋಧಿಸಿ ಇದರಿಂದ ಸರಕಾರಕ್ಕೆ ೫೯ ಲಕ್ಷ ರೂ. ನಷ್ಟವಾಗುವದೆಂಬೂ ಈ ಕೊರತೆಯನ್ನು ಭಾಯಿಗೊಡಿಸಿಕೊಳ್ಳಬೇಕಾದರೆ ಇತರ ಸವಲತ್ತುಗಳನ್ನು ಕಡಿಮೆ ಮಾಡಬೇಕಾಗುವುದೆಂದೂ ಹೇಳಿದರು. ಅಂಚೆಖಾತೆಯ ಉಪಯೋಗವನ್ನು ತೀರ ಬಡವರೂ ಕೂಡ ಮಾಡಿಕೊಳ್ಳಬೇಕಾದರೆ ಕಾರ್ಡಿನ ಬೆಲೆಯನ್ನು ಅರ್ಧಾಣೆ ಮಾಡುವದು ವಿಹಿತವಾಗಿದೆ. ಬೆಲೆಯು ಹೆಚ್ಚಾದಂತೆ ಉಪಯೋಗ ಮಾಡುವವರ ಸಂಖ್ಯೆಯೂ ಪ್ರಮಾಣವೂ ಕಡಿಮೆಯಾಗುತ್ತದೆ. ಬೆಲೆಯು ಇಳಿದರೆ ಉಪಯೋಗಿಸುವವರ ಸಂಖ್ಯೆಯೂ ಪ್ರಮಾಣವೂ ಬೆಳೆಯುವದರಿಂದ ಸರಕಾರವು ನಿರೀಕ್ಷಿಸಿದಷ್ಟು ಕೊರತೆಯು ಬರಲಿಕ್ಕಿಲ್ಲೆಂದು ಭಾವಿಸಬಹುದಾಗಿದೆ. ರಿಪ್ಲೈ ಇಳಿಸಿದರೆ ೫೯

ಕ್ಷರೂ. ಹಾನಿಯಾಗುವದೆಂದರೆ ಕಾರ್ಡುಗಳ ಖರ್ಚು ೩೭ ಕೋಟಿ ೭೦ ಲಕ್ಷವಿದ್ದ ಹಾಗಾಯಿತು. ಹಿಂದುಸ್ಥಾನದ ಜನ ಸಂಖ್ಯೆಯಲ್ಲಿ ಸರಾಸರಿ ಒಂದು ವ್ಯಕ್ತಿಗೊಂದು ಕಾರ್ಡು ಬಿದ್ದಂತಾಯಿತು ಒಬ್ಬನು ೩ ಕಾರ್ಡನ್ನು ಉಪಯೋಗಿಸಿದರೆ ಸರಕಾರದ ಹಾನಿಯು ತುಂಬಿ ಬರಲಿಕ್ಕಿಲ್ಲವೇ? ದರವು ಇಳಿದರೆ ಒಬ್ಬನು ೩ ಕಾರ್ಡುಗಳನ್ನು ಉಪಯೋಗಿಸುವ ಸಂಭವವಿಲ್ಲವೇ? ಇದನ್ನೆಲ್ಲ ವಿಚಾರಮಾಡಿ ಸರಕಾರದವರು ಕಾರ್ಡಿನ ಬೆಲೆಯನ್ನು ಅರ್ಧಾಣೆ ಮಾಡುವದು ಯೋಗ್ಯವಾಗಿದೆ. ಹಿಂದಕ್ಕೊಮ್ಮೆ ಈ ಕುರಿತು ನಿರ್ಣಯವಾಗಿತ್ತು. ಈಗ ಪ್ರೊ. ರಂಗ ಇವರ ಸೂಚನೆಯು ಪುನಃ ಏನಾಯಿತು. ಸರಕಾರವು ಈ ಕಡೆ ಗಮನವಿಡುವುದೇ?

ಇಟಲಿಯ ಬಯಕೆಗೆ ಫ್ರಾನ್ಸಿನ ನಿರಾಕರಣೆ

ಬಗ್ಗಿದರೂ ಬಗ್ಗಲಿಲ್ಲವೆಂದು ತೋರಿಸುವ ಘೋಷಣೆಯಿಂದ ಮುಸಲೋನಿಯು ಹಿಟ್ಲರನ ಪಕ್ಷದಲ್ಲಿದ್ದು ತಾನು ಫ್ರಾನ್ಸಿನ ಗೆಳೆಯನಾಗುವ ಸೂಚನೆಯೊಂದನ್ನು ಕೊಟ್ಟಿದ್ದ. ಆ ಸೂಚನೆಯೆಂದರೆ ಫ್ರಾನ್ಸು ಇಟೇಲಿಗೆ ಟ್ಯುನಿಸ್, ಜಿಬೂಟಿ, ಸುಯೇಜ್ ಇವುಗಳನ್ನು ಕೊಡಬೇಕೆಂಬುದು. ೧೯೩೫ರ ಫ್ರಾನ್ಸು–ಇಟೇಲಿ ಒಪ್ಪಂದದ ನಂತರ ತನ್ನ ರಾಜ್ಯವಿಸ್ತಾರ ಕಾರಣದಿಂದ ಇವುಗಳು ತನ್ನ ಕನಿಷ್ಠ ಅವಶ್ಯಕತೆಗಳಾದುದರಿಂದ ಇಷ್ಟಾದರೂ ದೊರಕಿದರೆ ತನ್ನೊಳಗಿನ ಶಾಂತಿಗೆ ಭಂಗ ಬಾರದೆಂದು ಅವನ ಹೇಳಿಕೆ. ಆದರೆ ಈ ಬಯಕೆಯನ್ನು ಸಲ್ಲಿಸಲಾರೆವೆಂದು ಫ್ರಾನ್ಸಿನ ಸ್ಪಷ್ಟವಾದ ಪ್ರತ್ಯುತ್ತರ. ಇಟಲಿಗೆ ರಾಜ್ಯವಿಸ್ತಾರವಾದಂತೆಲ್ಲ ಹೊಸಹೊಸ ಆವಶ್ಯಕತೆಗಳು ತಲೆದೋರುತ್ತವೆಂದು ತಾವು ಎಲ್ಲಿಯ ತನಕ ಅವನ್ನೆಲ್ಲ ಪೂರೈಸುತ್ತ ಬರಲಾದೀತು? ಒಂದು ಒಪ್ಪಂದಮಾಡಿ ಅದು ಪ್ರಯೋಗದಲ್ಲಿ ಬರುವಷ್ಟರಲ್ಲೇ ಅದನ್ನು ಮುರಿದು ಬೇರೆ ಒಪ್ಪಂದ ಆಗಬೇಕೆನ್ನುವ ಇಟಲಿಗೆ ನಾವು ಮಣಿಯಲಾರೆವೆಂದು ಫ್ರಾನ್ಸು ಖಂಡಿತವಾಗಿ ಹೇಳಿಬಿಟ್ಟಿತು. ಆದಕ್ಕೆ ಮುಸಲೋನಿಯು ಕೋಪಗೊಂಡು— "ನಾವು ಬಾಗಿಲು ತೆರೆದುಕೊಟ್ಟರೂ ಫ್ರಾನ್ಸು ಮುಚ್ಚುತ್ತಿದೆ. ಮುಚ್ಚಲಿ! ಆದರೆ ನಮಗೇನೂ ಅವಸರವಿಲ್ಲ. ನಾವಿನ್ನೂ ಕಾಯುತ್ತೇವೆ. ಆದರೆ ಈ ಭೂಮಧ್ಯ ಸಾಗರದ ವಿಷಯದಲ್ಲಿ ನಾವು ಬಂಧಿಗಳಂತೆ ಇರಲಾರೆವೆಂಬುದು ನಿಶ್ಚಯ" ಎಂದಿದ್ದಾನೆ.

ಅಮರಜ್ಯೋತಿಯಲ್ಲಿ ಶಾಂತಾ ಆಪ್ಟೆ ನಂದಿನಿ

ಪೋಲಾಂಡಿನ ದೃಢ ನಿರ್ಧಾರ

ಮೆಮೆಲ್ ಪ್ರಾಂತವನ್ನು ಜರ್ಮನಿಯು ಸೇರಿಸಿಕೊಂಡ ನಂತರ ಈಗ ಅದರ ದೃಷ್ಟಿಯು ಪೋಲಾಂಡಿನವಶವಿರುವ ಡೇಂಜಿಂಗ್‌ನ ಕಡೆಗೆ ತಿರುಗಿದೆ. ಅದರ ಅಧಿಕಾರದ ವಿಷಯವಾಗಿಯೂ ಪೋಲಿಷ್ ಕೊರಿಡೋರ್ ಮೂಲಕ ಜರ್ಮನಿಗೆ ಹಾದಿ ಕೊಡುವ ಕುರಿತೂ ಮಧ್ಯಸ್ಥಿಕೆಯಾಗಬೇಕೆನ್ನುತ್ತಿದೆ ಜರ್ಮನಿ. ಆದರೆ ಜರ್ಮನಿಯ ಭಯಪ್ರದರ್ಶನದ ಕೇಳಿಕೆಗಳಿಗೆ ತಾನು ತಲೆಬಾಗಲಿಕ್ಕಿಲ್ಲವೆಂದು ಪೋಲಾಂಡ್ ಹೇಳಿದೆ.

ಜರೂಸಲೇಮಿನಲ್ಲಿ ಮಿಲಿಟರಿ ಕಾಚರ್ಯರು

ಆರಬ್ಬರ ತಂಟೆಯನ್ನಡಗಿಸಲು ಸೈನ್ಯದ ಪಡೆಯು ಕೆಲಸ ತೊಡಗಬೇಕಾಯಿತು. ಹಲವು ಕಡೆಗಳಲ್ಲಿ ಹರಡಿ ಅನೇಕ ಆರಬ್ಬರನ್ನು ದಸ್ತಗಿರಿಮಾಡಿದೆ.

ಜೆಕ್ಕೊಸ್ಲೊವಾಕಿಯದ ಗಡಿಜಿಲ್ಲೆಗಳಲ್ಲಿ ಜರ್ಮನಿಯ ಪ್ರಚಾರ

ಜೆಕ್ಕೊಸ್ಲೊವಾಕಿಯಕ್ಕೆ ಸೇರಿದ ಗಡಿಜಿಲ್ಲೆಗಳಲ್ಲಿರುವ ಜರ್ಮನರನ್ನು ಸೆಳೆದುಕೊಳ್ಳಲಿಕ್ಕೆ ಜರ್ಮನಿಯ ಗಡಿಯೊಳಗಿಂದ ರೇಡಿಯೊ ಮೂಲಕ ಪ್ರಚಾರ ನಡೆಯತೊಡಗಿತು. ಈ ವಿಷಯ ಆಕ್ಷೇಪಣೆ ಎತ್ತಿದಾಗ ಅದೇನೋ ಪ್ರಮಾದವಶವಾಯ್ತೆಂದು ಜರ್ಮನಿಯ ಹೇಳಿಕೆ

ಚೀನಿಯರ ಸೈನ್ಯವು ಹಿಮ್ಮೆಟ್ಟುತ್ತಿದೆ

ನಾನ್ಚಾಂಗ್ ಮತ್ತು ವುನಿಂಗ್ ಇವು ಜಪಾನೀಯರ ಕೈವಶವಾದ ಮೇಲೆ ಕಿಯಾಂಗ್ಸಿಯಲ್ಲಿರುವ ಚೀನೀಯರ ಸೈನ್ಯವು ಅಲ್ಲಿಂದ ಬೇಗ ಬೇಗ ಹಿಮ್ಮೆಟ್ಟುತ್ತಿದೆ.

ಸ್ಪೈನಿನ ಯುದ್ಧ ಪರ್ಯವಸಾನ

ಫ್ರಾಂಕೋನಿಗೆ ಸ್ಪೈನು ಸಂಪೂರ್ಣ ವಶವಾದಂತೆಯೇ. ಈ ವರೆಗೆ ಆತನ ವಶವಾಗದಿದ್ದ ಮೇಡ್ರಿಡ್, ವೆಲೆನ್ಸಿಯಾ ಮುಂತಾದ ಹತ್ತು ಪ್ರಾಮುಖ್ಯ ನಗರ ಪಟ್ಟಣಗಳೆಲ್ಲ ಯುದ್ಧಗೊಡದೆಯೇ ಫ್ರಾಂಕೋನಿಗೆ ಶರಣಾಗತವಾದುವು. ಮುಸಲೋನಿಯು ಫ್ರಾಂಕೋನಿಗೆ ವಿಜಯಾಭಿನಂದನೆಯನ್ನು ಕಳುಹಿಸಿದ್ದಾನೆ.

ಹಂಗೇರಿ-ಸ್ಲೊವೇಕಿಯಾ ಗಡಿನಿರ್ಣಯದ ಪಂಚಾಯಿತಿ

ಸುಮಾರು ಹದಿನೈದು ಮೈಲುಗಳ ಅಗಲದಷ್ಟಕ್ಕೆ ಹಂಗೇರಿಯು ತನ್ನ ಗಡಿಯನ್ನು ಸ್ಲೊವೇಕಿಯದೊಳಕ್ಕೆ ಮಾರಿಸಲು ಅದು ಒಪ್ಪುತ್ತದೆ. ಆದರೆ ಹಂಗೇರಿಯಕ್ಕೆ ಅದರ ದುಬಾರೆ ಬೇಕಾಗಿದೆ. ನಿರ್ಣಯದ ಚರ್ಚೆ ನಡೆಯುತ್ತಿರುವಾಗಲೇ ಗಡಿಗಳಲ್ಲಿ ಚಿಕ್ಕಪುಟ್ಟ ಕಲಹಗಳಾಗುತ್ತಿವೆ

ಜರ್ಮನ್ ಪೋಲಂಡುಗಳು ಕಂದಕ ತೆಗೆಯುತ್ತಿವೆ.

ಪೋಲಾಂಡಿನ ಬದಿಯುದ್ದಕ್ಕೂ ಜರ್ಮನಿಯು ತನ್ನ ಅಧೀನದಲ್ಲಿರುವ ಭಾಗದಲ್ಲಿಯೂ ಪೋಲಾಂಡ್ ತನ್ನ ಭಾಗದಲ್ಲಿಯೂ ಗಡಿನಾಡುಗಳಲ್ಲೆಲ್ಲ ಕಂದಕ ತೋಡುತ್ತಿವೆ.

ಬ್ರಿಟನ್ನಿನಲ್ಲಿ ಬೋಂಬುಗಳ ಸಿಡಿತ

ಲಂಡನ್, ಬರ್ಮಿಂಗ್‌ಹಾಮ್, ಲಿವರ್‌ಪೂಲ್ ಮುಂತಾದ ದೊಡ್ಡದೊಡ್ಡ ನಗರಗಳಲ್ಲಿ ಬಾಂಬುಗಳು ಇಡಲ್ಪಟ್ಟು ಸಿಡಿಯುತ್ತಿವೆ. ಅವೆಲ್ಲ ಐರ್ಲಂಡಿನ ಭಯೋತ್ಪಾದಕ ತಂಡದವರ ಚಳವಳವೆಂದು ಗೊತ್ತಾಗಿದೆ. ಆದರೆ ಅಪರಾಧಿಗಳು ಸಿಗುವುದಿಲ್ಲ.

WANTED a partner for a profitable business. Concern For further particulars apply to X C/o **Navayuga**.

ನೋಟೀಸು.

ಉಡುಪಿ ಡಿ. ಮು ಕೋರ್ಟಿನಲ್ಲಿ

ಕ್ರಮ ನಂಬ್ರ 191/1938

ಉಡುಪಿ ಶ್ರೀ ಶೀರೂರು ಮಠದ ಶ್ರೀವಿಠಲದೇವರ ಭಂಡಾರದ ಅಧಿಪತಿಗಳು ಶ್ರೀ ಲಕ್ಷ್ಮೀಂದ್ರತೀರ್ಥ ಸ್ವಾಮಿಯು,

ವಾದಿಯು

ಮತ್ತು

ಮುಂಡಾನಾಥ ಶ್ಯಾನುಭಾಗ ಕೇಶವ 23 ಜನರು

ಪ್ರತಿವಾದಿಯು

ಇವರೊಳಗೆ

5ನೇ ಪ್ರತಿವಾದಿ ಭೋಜರಾಜಯ್ಯ ಗುಮ್ಮಣ್ಣಯ್ಯನವರ ಅಳಿಯ ಉಡುಪಿ ತಾಲೂಕು ಎಲ್ಲೂರು ಮಾಗಣೆ ನಂದಿಕೂರುಗ್ರಾಮ ಇವರಿಗೆ—

ವಾದಿಯಿಗೆ ದಾವಾ ಆಸ್ತಿಗಳ ಬಾಬತು ಬಹಾ ಮೂಲಗೇಣಿ ಬಾಕಿ ಬಡ್ಡಿ ಹುಟ್ಟುವಳಿ ಮತ್ತು ದಾವಾ ಆಸ್ತಿಗಳ ಸ್ವಾಧೀನತೆ ಬಗ್ಗೆ ಈಹಾ ವಾದಿಯು ಹಾಕಿರುವ ಮೇಲಿನದಾವೆಯು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 20-4-'39ಕ್ಕೆ 5ನೇ ಪ್ರತಿವಾದಿಗೆ ನೋಟೀಸು ಬಗ್ಗೆ ಇಟ್ಟಿರುತ್ತದೆ. ಆ ದಿವಸ ಬೆಳಿಗ್ಗೆ ಹತ್ತು ಘಂಟೆಗೆ ಸದ್ರಿಕೋರ್ಟಿನ ಮುಂದೆ 5ನೇ ಪ್ರತಿವಾದಿಯು ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗಲಿಕ್ಕೆ ತಪ್ಪಿದರೆ ಅವರ ಗೈರುಹಾಜರಿಯಲ್ಲಿ ಸದರಿ ದಾವೆಯು ತೀರ್ಮಾನವಾಡಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

K. L. Narayana Rao, B.A. B.L.

Counsel for Plaintiff.

ಉಡುಪಿ, ತಾ. 4-4-1939.

THE BOMBAY LIFE ASSURANCE CO., LTD.,

ತಿಂಗಳಿಗೆ ನೀವೆಷ್ಟು ಸಂಪಾದಿಸುತ್ತೀರೆಂಬುದು ದೊಡ್ಡ ವಿಷಯವಲ್ಲ. ಎಷ್ಟು ಉಳಿಸುತ್ತೀರೆಂಬುದೇ ಪ್ರಾಮುಖ್ಯ ಪ್ರಶ್ನೆ. ಏಕೆಂದರೆ ನಿಮ್ಮ ಸಂಪಾದನೆಯು ಕಡಿಮೆಯಾದಾಗ ಅಥವಾ ನಿಂತುಹೋದಾಗ ನಿಮ್ಮ ಮತ್ತು ನಿಮ್ಮ ಸಂಸಾರದ ಕನಿಷ್ಠ ಸುಖ ಸೌಕರ್ಯಗಳು ಯಥಾಪ್ರಕಾರ ಒದಗಿಸಿಕೊಡಬಲ್ಲುದು ಆ ಉಳಿತಾಯವೇ.

ಅಂತಹ ನಿಮ್ಮ ಉಳಿತಾಯವು ಬೆಳೆದು ಬಲವಾದ ಭಂಡವಾಳವಾಗಿ ಬರುವಂತೆ ನಿಕ್ಷೇಪಿಸಲಿಕ್ಕೆ ಅತ್ಯುತ್ತಮ ಸ್ಥಾನವೆಂದರೆ

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಏಕೆಂದರೆ ಅದು ಉತ್ಕೃಷ್ಟ ಭದ್ರತೆಯುಳ್ಳ ಉಪಯುಕ್ತ ಸಂಸ್ಥೆ.

ಪ್ರಾಮಾಣಿಕತೆ, ಉತ್ಸಾಹ ಪ್ರತಿಷ್ಠೆಗಳುಳ್ಳವರಿಗೆ ಸಮಾಜ ಸೇವೆ ಮಾಡಲಿಕ್ಕೂ ಯೋಗ್ಯವಾದ ನಿಶ್ಚಿತ ಪ್ರತಿಫಲವನ್ನು ಹೊಂದಲಿಕ್ಕೂ ಒಳ್ಳೆಯ ಅವಕಾಶವಿದೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,

ಮದ್ರಾಸ್ ಬ್ರಾಂಚ್ ಸೆಕ್ರಿಟರಿಗಳು.

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ದಿ ಬೊಂಬಾಯಿ ಲೈಫ್ ಬಿಲ್ಡಿಂಗ್ಸ್, ಗಾಂಧೀನಗರ, **ಉಡುಪಿ.**

ಎಂಬ ಮೇಲಿನ ವಿಳಾಸಕ್ಕಾಗಲೀ ಕೆಳಗೆ ಕಾಣಿಸಿದ ನಮ್ಮ ಇತರ ಯಾವ ಕಾರ್ಯಾಲಯಕ್ಕಾಗಲೀ ಅರ್ಜಿ ಬರೆದುಕೊಳ್ಳಿ.

ಪೋಸ್ಟ್ ಬಾಕ್ಸ್ ನಂ. 337 ಮೌಂಟ್ ರೋಡ್, **ಮದರಾಸು.**	ವಿಶ್ವೇಶ್ವರಪುರ ಸರ್ಕಲ್ **ಬೆಂಗಳೂರು ಸಿಟಿ.**	ಕಾರ್ ಸ್ಟ್ರೀಟ್ **ಮಂಗಳೂರು.**	ಪುತಿಯಾರ **ಕಲ್ಲಿಕೋಟೆ.**

ಸೆಂಟ್ರಲ್ ಸ್ಟೇಶನ್ ರೋಡ್, **ಟ್ರಿವೇಂಡ್ರಮ್.**	ಚಾರ್ನಿರೋಡ್ ಗಿರ್ಗಾಮ್, **ಬೊಂಬಾಯಿ ನಂ. 4.**	ಒಟ್ಟಪಾಲಮ್ **ದ. ಮಲಬಾರ್.**

ನೋಡಿದರೆ ಯೂರೋಪಿನ ಭಾಗ್ಯವಿಧಾತರು!

ಆದರೆ ಅವರಿಗಿರುವ ಪ್ರಾಣಭಯ ಬಹಳ!

ಹಿಟ್ಲರ್, ಮುಸಲೋನಿ ಮತ್ತು ಸ್ಟಾಲಿನ್ ಇವರು ತಮ್ಮ ಪ್ರಾಣರಕ್ಷಣೆಯನ್ನು ಹೇಗೆ ಮಾಡಿಕೊಳ್ಳುವರು?

ಮುಸಲೋನಿ.

ಇಂದು ಇಟಲಿ, ಜರ್ಮನಿ, ರಷ್ಯ ಮತ್ತು ಟರ್ಕಿ ಈ ನಾಲ್ಕು ದೇಶಗಳು ನಾಲ್ಕು ಮಹಾರಾಷ್ಟ್ರಗಳಾಗಿ ಪರಿಗಣಿಸಲ್ಪಟ್ಟಿವೆ. ಗತ ಮಹಾಯುದ್ಧದಿಂದೀಚೆಗೆ ಈ ರಾಷ್ಟ್ರಗಳು ತಮ್ಮ ಆಂತಶ್ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಾ ಬಂದುವು. ಮೊದಲಿನ ಎರಡು ದೇಶಗಳಂತೂ ವಿಶ್ವಶಾಂತಿಗೆ ದೊಡ್ಡದೊಂದು ಅಡ್ಡಿಯಾಗಿ ಪರಿಣಮಿಸಿವೆ. ಇಟಲಿಯಲ್ಲಿ ಮುಸಲೋನಿಯ ಸಾಮಂತಶಾಹಿ, ಜರ್ಮನಿಯಲ್ಲಿ ಹಿಟ್ಲರನ ನಾದಿರ್‌ಶಾಹಿ, ರಷ್ಯದಲ್ಲಿ ಸ್ಟಾಲಿನ್ನನ ಅನಿಯಂತ್ರ ಶಕ್ತಿ ಇವು ತಮ್ಮ ಧ್ವಜವನ್ನು ಎತ್ತಿ ನಿಂತಿರುವವು. ಅತಾತುರ್ಕರಿದ್ದಿದ್ದರೆ ಅವರೂ ಒಬ್ಬ ಡಿಕ್ಟೇಟರರೇ ಆಗುತ್ತಿದ್ದರು.

ಈ ಡಿಕ್ಟೇಟರುಗಳ ಜೀವನ ರಕ್ಷಣೆಯ ರೀತಿನೀತಿಗಳು ಈ ಲೇಖನದಲ್ಲಿ ವಿವರಿಸಲ್ಪಡುವವು.

ರಾಜನಾದವನಿಗೆ ಸದಾ ಚಿಂತೆ ಎಂಬ ಒಂದು ಇಂಗ್ಲಿಷ್ ಗಾದೆ ಇದೆ. ಅದೇ ರೀತಿ ಈ ನಾಲ್ವರಿಗೂ ಗುಪ್ತ ಹತ್ಯಾಕಾರಿಗಳ ಭಯವಿದೆ. ಯಾವಾಗ ಯಾರು ತಮ್ಮ ತಲೆಯನ್ನು ಕತ್ತರಿಸಿ ಬಿಸಾಡುವರೋ ಎಂಬ ಚಿಂತೆಯು ಅವರಿಗಿದೆ. ಸ್ಟಾಲಿನ್ನನಿಗೆ ಇರುವ ಪ್ರಾಣಭಯಕ್ಕೂ, ಹಿಟ್ಲರ್ ಮುಸಲೋನಿಗಳಿಗಿರುವ ಭಯಕ್ಕೂ ಅಂತರವಿದೆ. ತನ್ನ ಅಧಿಕಾರವನ್ನು ಭದ್ರಗೊಳಿಸಲು ಪ್ರಾರಂಭದಲ್ಲಿ ಸ್ಟಾಲಿನ್ನನು ಶಕ್ತಿಯ ಬಲಪ್ರಯೋಗವನ್ನೇ ಮಾಡುತ್ತಿದ್ದನು. ಇವನ ಶತ್ರುಗಳಾರೆನ್ನುವಿರಿ? ಇವನು ಪ್ರಚಾರ ಮಾಡುತ್ತಿರುವ ಸುಧಾರಣೆಗಳನ್ನು ನೋಡಿ ಹೆದರುವವರೇ ಇವರ ಶತ್ರುಗಳು.

ಹಿಟ್ಲರ್

ಇವರ ಪೈಕಿ ಹಿಟ್ಲರನಿಗಿರುವಷ್ಟು ಮರಣ ಭಯವು ಯಾರಿಗೂ ಇಲ್ಲ. ಇದಕ್ಕಾಗಿಯೇ ಜರ್ಮನಿಯ ಗುಪ್ತ ಪೋಲೀಸರೂ ಅವನ ಅಂಗರಕ್ಷಕರೂ ಯಾವಾಗಲೂ ಅವನ ಪ್ರಾಣಸಂರಕ್ಷಣೆಯಲ್ಲಿ ಮಗ್ನರಾಗಿರುತ್ತಾರೆ.

ಎಲ್ಲಾ ಡಿಕ್ಟೇಟರರೂ ಸಾಧಾರಣವಾಗಿ ಸಭೆಗಳಿಗೆ ಬರುವರು. ಆದರೆ ಹಿಟ್ಲರನು ಯಾವಾಗಲೂ ಮೋಟಾರಿನಲ್ಲೇ ಹೊರಡುವುದು. ಅವನು ಮಾತನಾಡುವುದೂ ಸಹ ಮೋಟಾರಿನಲ್ಲಿ ನಿಂತುಕೊಂಡೇ. ಅವನ ಮೋಟಾರು ಬಹಳ ಬಲವಾದ "ಮರ್ಸಿಡಸ್" ಗಾಡಿ. ಅವನು ಹೊರಡುವಾಗ, ಡ್ರೈವರನ ಮುಂಭಾಗದಲ್ಲಿ ಕುಳಿತುಕೊಳ್ಳುವನು. ಅವನ ಡ್ರೈವರನ ಹೆಸರು ಶೇಕ್ ಎಂದು. ನೋಡಿದರೆ ಹಿಟ್ಲರನಿಗೂ ಅವನಿಗೂ ಹೆಚ್ಚು ವ್ಯತ್ಯಾಸವೇ ಕಾಣುವುದಿಲ್ಲ. ಇಬ್ಬರ ಮುಖಗಳ ಹೋಲಿಕೆಯೂ ಒಂದೇ. ಹಿಂಭಾಗದಲ್ಲಿ ಐದು ಸೀಟುಗಳಿರುತ್ತವೆ. ಅದರಲ್ಲಿ ಐದು ಮಂದಿ ಸಶಸ್ತ್ರ ಅಂಗರಕ್ಷಕರಿರುವರು. ಅವರ ಮೊಣಕಾಲಿನ ಬಳಿ, ಜಗತ್ತಿನಲ್ಲೆಲ್ಲಾ ಸರ್ವೋತ್ಕೃಷ್ಟವೆಂದೆಣಿಸಲ್ಪಟ್ಟ ಬಂದೂಕುಗಳಿರುತ್ತವೆ. ಸೊಂಟದಲ್ಲಿ ಒಂದು ಗುಂಡಿಯನ್ನು ಅದುಮುವುದರಿಂದ ತಮ್ಮಷ್ಟಕ್ಕೆ ತಾವೇ ಹಾರುವ ಗುಂಡುಗಳಿರುವವು. ಇಂತಹುದೇ ಒಂದು ಪಿಸ್ತೂಲು ಶೇಕನ ಬಳಿ ಸಹ ಇದೆ. ಇವನ ಭಾಷಣವಾಗುವ ಸಭೆಯಲ್ಲಾಗಲೀ, ಇವನಿಗೆ ಸ್ವಾಗತಬಯಸುವ ಸ್ಥಳದಲ್ಲಾಗಲೀ, ಮೊದಲನೇ ಪಂಕ್ತಿಯಲ್ಲಿಯೇ ಸಾಧಾರಣ ಉಡುಪನ್ನು ಧರಿಸಿರುವ ಗುಪ್ತ ಪೋಲೀಸಿನವರು ನಿಂತಿರುವರು. ಕೊಲೆಪಾತಕರು ನುಗ್ಗಿ ಬಂದರೂ ಎರಡು ಪಂಗ್ತಿಗಳಷ್ಟು ಮುಂದೆ ಬರಬಹುದು. ಅಷ್ಟರಲ್ಲೇ ಡ್ರೈವರ್ ಶೇಕನ ಅಥವಾ ಗುಪ್ತ ಪೋಲೀಸರ ಗುಂಡಿಗೆ ತುತ್ತಾಗುವರು.

ಜರ್ಮನಿಯ ಪ್ರಧಾನ ಕಛೇರಿ ಛಾನ್ಸಲರಿಯು (ಇಲ್ಲೇ ಹಿಟ್ಲರನ ಆಫೀಸಿರುವುದು) ಯಾವಾಗಲೂ ಸೈನ್ಯದಿಂದ ಸುತ್ತುವರಿಯಲ್ಪಟ್ಟಿರುತ್ತದೆ. ಹಿಟ್ಲರನ ಅಂಗರಕ್ಷಕರಲ್ಲಿ 300 ಜನ ಕರೀ ಅಂಗಿಯವರಿರುವರು. ಹಿಟ್ಲರನು ಕಛೇರಿಗೆ ಪ್ರವೇಶಿಸುವುದೇ ತಡ, ಕೂಡಲೇ ಇವರ ಪೈಕಿ ಪ್ರತಿಯೊಂದು ಬಾಗಿಲಿನಲ್ಲಿಯೂ ಇಬ್ಬಿಬ್ಬರು ನಿಲ್ಲುವರು.

ಹೊರಗಡೆ ಎಲ್ಲಿಯಾದರೂ ಪ್ರವಾಸ ಹೊರಡಬೇಕಾದಲ್ಲಿ, ಅವನೊಡನೆ ಒಂದು ಸ್ಪೆಷಲ್ ರೈಲಿನಲ್ಲಿ ಗುಪ್ತಪೋಲೀಸರೂ ಅಂಗರಕ್ಷಕರೂ ಹೊರಡುವರು. ಹೆಚ್ಚು ಪ್ರವಾಸವು ವಿಮಾನದಲ್ಲೇ ನಡೆಯುವುದು. ಏಕೆಂದರೆ ಈ ಯಾತ್ರೆಯೇ ಎಲ್ಲಕ್ಕಿಂತ ಹೆಚ್ಚು ಸುರಕ್ಷಿತವಾದುದೆಂದು ಸಿದ್ಧವಾಗಿದೆ. ಭಾರತದಲ್ಲಿ ಸಹ ಲಾರ್ಡ್ ವಿಲಿಂಗ್ಡನರು ಇದೇ ಉದ್ದೇಶದಿಂದಲೇ ವಿಮಾನದಲ್ಲೇ ತಿರುಗುತ್ತಿದ್ದುದು.

ಸ್ಟಾಲಿನ್

ಸಮಾಜವಾದದ ವಿರೋಧಿಗಳೆಲ್ಲರೂ ಯಾವಾಗಲೂ ಸ್ಟಾಲಿನ್ನನ ಪ್ರಾಣಕ್ಕೆ ಹೊಂಚುಹಾಕುತ್ತಿರುವರು. ಆದರೆ ರಷ್ಯದ ಈ ಡಿಕ್ಟೇಟರನ ಬಳಿ ಸುಳಿಯುವುದು ಸುಲಭವಾದ ಕೆಲಸವೇನೂ ಅಲ್ಲ. ಇದುವರೆಗೆ ಅವನ ನಿಜವಾದ ವಾಸಸ್ಥಾನವೇ ಯಾರಿಗೂ ತಿಳಿಯದು. ಹಿಂದಿನ ಜನರ ಪ್ರಾಸಾದವಾದ "ಕ್ರೆಂಲಿನ್"ನ ಯಾವುದೋ ಒಂದು ಭಾಗದಲ್ಲಿರುವವನೆಂದಿಷ್ಟು ಮಾತ್ರ ಗೊತ್ತು. ಸ್ಟಾಲಿನ್ನನು ಯಾವಾಗ ಎಲ್ಲಿಗೆ ಹೋಗುವನೆಂಬ ಸುದ್ದಿಯು ಯಾರಿಗೂ ತಿಳಿಯಲವಕಾಶವಿಲ್ಲ. ಅವನ ಎಲ್ಲ ಪ್ರವಾಸಗಳೂ ಗುಟ್ಟಿನಲ್ಲೇ ಆಗುವುವು. ಅವನ ಪ್ರಯಾಣದ ಕಾರ್ಯಕ್ರಮವನ್ನು ಯಾವ ಪತ್ರಿಕೆಯೂ ಪ್ರಕಟಿಸಕೂಡದು. ಆದರೆ ಅವನು ಯಾತ್ರೆಯನ್ನು ಮುಗಿಸಿಕೊಂಡು ಮೋಸ್ಕೋಗೆ ಹಿಂತಿರುಗಿದ ಸುದ್ದಿ ಮಾತ್ರ ಪ್ರಕಟವಾಗುವುದು. ಸ್ಟಾಲಿನ್ನಿನನ ಅಂಗರಕ್ಷಕರು ಅವನ ನಿವಾಸಸ್ಥಾನವನ್ನು ಬಹಳ ಎಚ್ಚರಿಕೆಯಿಂದ ಕಾಯುವರು. ಅದು ಎತ್ತರವಾದ ಗೋಡೆಗಳ ಮೇಲೆ ಅದರ ಪ್ರತಿಯೊಂದು ಬಾಗಿಲಿನಲ್ಲಿ ಸಶಸ್ತ್ರ ಚೌಕೀದಾರರ ಪಾದಧ್ವನಿಯು ಯಾವಾಗಲೂ ಕೇಳಿಬರುತ್ತಿರುತ್ತದೆ. ಈ "ಕ್ರೆಂಲಿನ್" ಭವನದೊಳಗೆ ಹೋಗಲು ಅಪ್ಪಣೆಪಡೆಯುವುದು ಅತ್ಯಂತ ಕಠಿಣವಾದ ಕೆಲಸ. ವಿದೇಶೀಯರು ಅನೇಕ ವಾರಗಳ ಮೊದಲೇ ತಮ್ಮ ಹೆಸರನ್ನು ತಿಳಿಸಿರಬೇಕು. ಸ್ವಯಂ ಸ್ಟಾಲಿನ್ನನೇ ತಮ್ಮ ಪರಿಚಯಪತ್ರವನ್ನೂ ತೋರಿಸಬೇಕಂತೆ! ಮಾಸ್ಕೋವಿನ ಪ್ರಸಿದ್ಧ 'ರೆಡ್ ಸ್ಕ್ವೈರ್' ಬಳಿ ಏನಾದರೂ ಸಾರ್ವಜನಿಕ ಸಭೆನಡೆದು, ಸ್ಟಾಲಿನ್ನನು ಭಾಷಣಮಾಡಲು ಹೋದರೆ, ಲೆನಿನ್ನನ ಗೋರಿಯ ಹಿಂಭಾಗದ ಬಾಗಿಲಿನಿಂದ "ಕ್ರೆಮ್ಲಿನ್"ನ ಹೊರಗಡೆ ಬರುವುದು ಕಂಡುಬರುವುದು.

ಮುಸಲೋನಿ

ಎಲ್ಲ ಡಿಕ್ಟೇಟರರ ಪೈಕಿ ಇವನೊಬ್ಬ ಮಹಾ ಧೈರ್ಯಗಾರ, ಒರಟು ಇಟಲಿಯ ಗುಪ್ತಪೋಲೀಸರೂ ಮತ್ತು ಇವನ ಇತರ ಸಹಕಾರಿಗಳೂ, ಇವನ ಪ್ರಾಣರಕ್ಷಣೆಯನ್ನು ಮಾಡುವರು. ಆದರೂ ಇವನು ಈ ವಿಚಾರದಲ್ಲಿ ನಿಶ್ಚಿಂತೆಯಿಂದಿರುವನೆನ್ನಬಹುದು.

ಅನೇಕ ವೇಳೆ ಕೆಲವು ಕೊಲೆಪಾತಕರು ಅವನನ್ನು ಕೊಲ್ಲಲು ಯತ್ನಿಸಿರುವರು.

ಹಿಟ್ಲರ್.

ಸುದೈವದಿಂದ ಉಳಿದುಕೊಂಡನು. ಅಂದಿನಿಂದ ಅವನು ಮೊದಲಿನಂತೆ ಅಂಗರಕ್ಷಕರನ್ನು ಉಪೇಕ್ಷೆಮಾಡುತ್ತಿಲ್ಲ.

ಅವನ ಅಂಗರಕ್ಷಕರಲ್ಲಿ 300 ಮಂದಿ ಚುನಾಯಿತರಾದ ದಕ್ಷ ಸೈನಿಕರಿರುವರು. ಇವರು ಅವನ ನಿವಾಸಸ್ಥಾನವಾದ "ವಿಲ್ಲಾ ಟಾರ್ಲೋನಿಯಾ" ಮತ್ತು ಅವನ ಕಛೇರಿಯಾದ "ಪೆಲಜ್ಜೊ ವೆನೇಜಿಯಾ"ಗಳ ಪಹರೆಮಾಡುವರು. ಅವನ ಹೆಸರಿಗೆ ಬರುವ ಪ್ರತಿ ಕಾಗದ ಮತ್ತು ಪಾರ್ಸೆಲ್‌ಗಳನ್ನೂ ಅಂಗರಕ್ಷಕ ಮುಖಂಡನು ನೋಡಿ ನಂತರ ವಾಪಸುಮಾಡುತ್ತಾನೆ.

ಆದರೂ ಇವನು ಬಹಳ ಸ್ವತಂತ್ರಪ್ರಿಯನು. ಈ ವಿಶೇಷ ರೀತಿಯ ಏರ್ಪಾಡುಗಳು ಅವನಿಗೆ ಇಷ್ಟವಿಲ್ಲ. ಅನೇಕ ವೇಳೆ ತಾನೊಬ್ಬನೇ ತನ್ನ ಅಂಗರಕ್ಷಕರಿಗೆ ತಿಳಿಯದಂತೆ ಮೋಟಾರಿನಲ್ಲಿ ರೋಂ ನಗರದ ಬೀದಿಗಳಲ್ಲಿ ಕೆಲವು ವೇಳೆ ದೂರದ ಹಳ್ಳಿಗಳಲ್ಲಿ ಸಹ, ರೈತರ ಮಧ್ಯೆ ಹಾಡುತ್ತಾ, ಕುಣಿಯುತ್ತಾ ಇರುವುದನ್ನೂ ನೋಡಬಹುದು.

ಪ್ರಪಂಚದ ಮಹಾ ಶಕ್ತಿಶಾಲಿ ರಾಷ್ಟ್ರಗಳ ಸೂತ್ರವನ್ನು ಹಿಡಿದು, ಕೋಟಿಗಟ್ಟಳೆ ಪ್ರಾಣಗಳನ್ನೂ ತಮ್ಮ ಮುಷ್ಟಿಯಲ್ಲಿಟ್ಟುಕೊಂಡಿದ್ದರೂ ಕೂಡ, ಎಷ್ಟು ಅಸಹಾಯರಿದ್ದಾರೆ ನೋಡಿ. ಈ ಡಿಕ್ಟೇಟರುಗಳು ಎಲ್ಲರೂ ಕೇವಲ ಅಯುಃಭಗಳ ರಕ್ಷಣೆಯನ್ನು ಶರಣುಹೋಗಿರುವರು!!

ಲಂಕೇಶ್ಯಾರಿನವರಿಗೆ ನಿದ್ರೆಯೇ ಇಲ್ಲವಂತೆ!

ಅವರಿಗೆ ಬಂದಿರುವ ಚಿಂತೆಯೇನು?

ಯಾವುದೇ ದೇಶದ ಉನ್ನತಿಯು ಅಲ್ಲಿನ ವಾಣಿಜ್ಯ ಮತ್ತು ವ್ಯವಸಾಯವನ್ನು ಅವಲಂಬಿಸಿರುತ್ತದೆ. ಇತಿಹಾಸವನ್ನು ನೋಡುವುದರಿಂದ ಇದು ವ್ಯಕ್ತವಾಗುತ್ತದೆ. ಜಗತ್ತಿನಲ್ಲಿ ಇದುವರೆಗೆ ಆಗಿಹೋಗಿರುವ ಮಹಾಯುದ್ಧಗಳ ಕಾರಣವು ವಾಣಿಜ್ಯ ಮತ್ತು ವ್ಯವಸಾಯಗಳ ಸ್ವಾರ್ಥವೇ. ಅಬಿಸೀನಿಯವು ಸ್ವಾಹಾ ಆದುದೂ ಇದರಿಂದಲೇ. ಜರ್ಮನಿಯು ಆಸ್ಟ್ರಿಯ ಮತ್ತು ಜೆಕೋಸ್ಲೋವೇಕಿಯವನ್ನು ನುಂಗಿ ನೀರು ಕುಡಿದುದೂ ಈ ಕಾರಣದಿಂದಲೇ. ಜಪಾನು ಚೀಣವನ್ನೂ ಆಕ್ರಮಿಸುತ್ತಿರುವುದರ ಕಾರಣವೂ ಸಹ ಬೇರೆ ಇಲ್ಲವೆಂದು ಪುನಃ ಹೇಳಬೇಕೇ?

ಇಂಗ್ಲಿಷರು ಭಾರತಕ್ಕೆ ವ್ಯಾಪಾರಕ್ಕಾಗಿಯೇ ಬಂದರೆಂಬುದನ್ನು ತಿಳಿಯದವರಾರು? ಅವರು ಈ ವ್ಯಾಪಾರದ ಮೂಲಕವೇ ನಮ್ಮ ದೇಶವನ್ನು ಆಕ್ರಮಿಸಿದರೆಂಬುದನ್ನೂ ಹೇಳುವ ಕಾರಣವೇ ಇಲ್ಲ. ಇಂದಿಗೂ ಸಹ ಅವರ ಅಸ್ತಿತ್ವವು ವ್ಯಾಪಾರವನ್ನು ಅವಲಂಬಿಸಿಯೇ ಇದೆ. ತಮ್ಮ ಶಾಸನಸತ್ತೆಯನ್ನು ಶಾಶ್ವತಗೊಳಿಸುವುದಕ್ಕಿಂತಲೂ, ಅವರ ವ್ಯಾಪಾರದ ರಕ್ಷಣೆಯೇ ಅವರಿಗೆ ಮುಖ್ಯವಾಗಿದೆ. ಇದಕ್ಕಾಗಿಯೇ ಭಾರತೀಯ ವ್ಯಾಪಾರದ ಹತ್ಯೆಗೆ ಕಾರಣವಾದ ಒಟಾವಾ ಒಪ್ಪಂದವನ್ನೂ ಮಾಡಿದುದು. ಸಮಸ್ತ ದೇಶಗಳೂ ಪರಸ್ಪರದಿಂದ ಈ ಒಪ್ಪಂದವನ್ನು ಧರಿಸಿದರೂ, ಏನೂ ಗುಣವಾಗಲಿಲ್ಲ.

ಅಸೆಂಬ್ಲಿಯ ಈ ಅಧಿವೇಶನದಲ್ಲಿ ಒಂದು ಪ್ರಶ್ನೆಗೆ ಉತ್ತರಕೊಡುತ್ತ ಸರಕಾರದವರು ಈ ರೀತಿ ಹೇಳಿದರು. "ಒಟಾವಾ ಒಪ್ಪಂದವನ್ನೂ ಸಮಾಪ್ತಿ ಮಾಡಿ, ಭಾರತಕ್ಕೂ ಬ್ರಿಟನ್ನಿಗೂ ಮಧ್ಯೆ ವ್ಯಾಪಾರದ ಹೊಸ ಒಪ್ಪಂದವನ್ನು ಮಾಡುವ ಯೋಚನೆ ಇದೆ." ಇದನ್ನು ಕೇಳಿದಂದಿನಿಂದ ಲಂಕೇಶಯರಿನ ವ್ಯಾಪಾರಿಗಳಿಗೆ ನಿದ್ದೆಯೇ ಹತ್ತುತ್ತಿಲ್ಲ. ಲಂಕೇಶಯರಿನ ಬಟ್ಟೆಗಳ ಮೇಲೆ ಶೇ. 17ರಬದಲಾಗಿ 12½ ಮಾತ್ರ ಸುಂಕ ಹಾಕಬೇಕೆಂಬ ಆಂದೋಲನವು ಪ್ರಾರಂಭವಾಗಿದೆ. ಅದಕ್ಕೆ ಕೊಡುವ ಕಾರಣವಿದು. ಭಾರತದ ಗಿರಣಿ ವ್ಯವಸಾಯವು ಉನ್ನತಿಗೆ ಬರುವ ಮೊದಲು, ಅದಕ್ಕೆ ಸಂರಕ್ಷಣೆಯು ಆಗತ್ಯವಾಗಿತ್ತು. ಈಗಾದರೋ ಆ ವ್ಯವಸಾಯವು ಬಹಳ ಸಾಕಷ್ಟು ಉನ್ನತಿ ಹೊಂದಿದೆಯಂತೆ ಆದುದರಿಂದ ರಕ್ಷಣೆಯು ಆಗತ್ಯವಿಲ್ಲವಂತೆ!

ಲಂಕೇಶಯರಿನ ವಸ್ತುಗಳು ಕಮ್ಮಿ ಬೆಲೆಯಲ್ಲಿ ಈ ದೇಶದಲ್ಲಿ ಮಾರಾಟವಾಗಬೇಕು. ಇದರಿಂದ ಭಾರತ ಸರಕಾರವು ಆದರ ಮೇಲಿನ ಕರವನ್ನಿಳಿಸಬೇಕು. ನೋಡಿದಿರಾ ಕಾರಣವನ್ನು!

ಭಾರತದಲ್ಲಿಂದು ಭೀಕರ ಬಡತನ ಮತ್ತು ನಿರುದ್ಯೋಗಗಳು ತಾಂಡವನೃತ್ಯ ನಡೆಸಿವೆ. ಇದನ್ನು ನೋಡಿದ ಯಾವ ಮಾನವನ ಎದೆಯಾದರೂ ಕರಗದಿರದು. ಸ್ವದೇಶೀ ಚಳವಳಿಯ ಪರಿಣಾಮವಾಗಿ, ಇಲ್ಲಿನ ಗಿರಣಿಮಾಲಿಕರ ಉತ್ಪತ್ತಿಯು ಹೆಚ್ಚಿತು, ಅವರ ಖಜಾನೆಗಳು ಹಣದಿಂದ ತುಂಬಿದುವು. ಆದರೇನು? ಕೂಲಿಗಾರರ ಸ್ಥಿತಿಯು ಮಾತ್ರ ಸ್ವಲ್ಪವೂ ಸುಧಾರಿಸಿಲ್ಲ. ಗಿರಣಿಮಾಲಕರಂತೂ ತಮ್ಮ ಮಾಲಿಗೆ ಗಿರಾಕಿಯೇ ಇಲ್ಲವೆಂದು ಅಳುತ್ತಿದ್ದಾರೆ. ಹೀಗಿರುವಾಗ ಲಂಕೇಶಯರಿನ ಮಾಲಿನ ಮೇಲಿನ ಸುಂಕವನ್ನಿಳಿಸಿಬಿಟ್ಟರೆ, ಇಲ್ಲಿನ ಕೂಲಿಗಾರರ ಸ್ಥಿತಿಯು ಇನ್ನೂ ಶೋಚನೀಯವಾಗುವುದರಲ್ಲಿ ಸಂಶಯವೇ ಇಲ್ಲ.

ಬ್ರಿಟನ್ನಿನ ಕ್ಷೇಮಚಿಂತನೆಯ ದೃಷ್ಟಿಯಿಂದಲೇ ಭಾರತ ಸರಕಾರವು ಲಂಕೇಶಯರಿನ ವ್ಯಾಪಾರದ ರಕ್ಷಣೆಯನ್ನು ಭಾರತದಲ್ಲಿ ಮಾಡುತ್ತಿರುವುದು. ಲಂಕೇಶಯರ್ ಮತ್ತು ಜಪಾನ್ ವಸ್ತ್ರಗಳ ಮೇಲೆ ಶೇ. 30ರಷ್ಟು ಸುಂಕವನ್ನು ಹಾಕಲಾಗಿತ್ತು. ಆದರೆ ಲಂಕಾಷಯರಿನ ಹಿತಕ್ಕಾಗಿ 17ಕ್ಕೆ ಇಳಿಸಿದರು. ಈಗ ಇದನ್ನೂ ಕಡಿಮೆ ಮಾಡಬೇಕಂತೆ! ಈರೀತಿ ಏನಾದರೂ ಮಾಡಿದರೆ ನಮ್ಮ ಬಟ್ಟೆಯ ವ್ಯವಸಾಯಕ್ಕೆ ಧಕ್ಕೆ ತಗಲಿದಂತೆಯೇ ಸರಿ.

ಭಾರತ ಸರ್ಕಾರದವರು ಆಗಾಗ್ಯೆ ಪ್ರಕಟವಾಗುವ ಪ್ರಸಿದ್ಧ ಪತ್ರಿಕೆಗಳಲ್ಲಂತೂ, ಭಾರತದಲ್ಲಿ ಸರಕಾರದ ಕೃಪೆಯಿಂದ ಇಲ್ಲಿನ ನಿವಾಸಿಗಳು ದಿನದಿನಕ್ಕೂ ಅಭಿವೃದ್ಧಿ ಹೊಂದುತ್ತಿರುವರೆಂದೇ ಹೊಗಳಿಕೊಳ್ಳುತ್ತಿರುವರು. 1937ನೇ ಅಕ್ಟೋಬರಿನ ಲೆಕ್ಕದಂತೆ ಪೇಯಪದಾರ್ಥಗಳ ಬೆಲೆಯು 1938ರಲ್ಲಿ ರೂ. 38 ಲಕ್ಷಗಳಷ್ಟು ಹೆಚ್ಚಿದೆ. ಈ ವೃದ್ಧಿಯ ಕಾರಣ ನಮ್ಮಲ್ಲಿ ಗೋಧಿ ಮತ್ತು ಅಕ್ಕಿಯ ಉತ್ಪನ್ನವು ಕಡಿಮೆಯಾಗಿರುವುದೇ. ಕಚ್ಚಾಮಾಲುಗಳ ಬೆಲೆಯು 7 ಲಕ್ಷಗಳಷ್ಟು ಕಡಿಮೆಯಾಗಿ ಹೋಗಿದೆ. ಇದರ ಕಾರಣ ಸೀಮೆ ಎಣ್ಣೆ ಮತ್ತು ರೇಷ್ಮೆಯ ಹುಟ್ಟುವಳಿ ಬಿದ್ದುಹೋಗಿರುವುದೇ. ತಯಾರಾದ ವಸ್ತುಗಳ ಬೆಲೆಯು 179 ಲಕ್ಷ ರೂ. ಕಡಿಮೆಯಾಗಿದೆ. ಜೀವಿತ ಪಶುಗಳ ಬೆಲೆಯು 5 ಲಕ್ಷ ರೂ. ಕಡಿಮೆ ಬಿದ್ದಿದೆ. ಒಂದು ಕಡೆ ಒಟಾವಾಸಂಧಿಯನ್ನು ಸಮಾಪ್ತಿಮಾಡಿ ಹೊಸ ಒಪ್ಪಂದವನ್ನು ಮಾಡಿಕೊಳ್ಳುವ ಚರ್ಚೆ; ಮತ್ತೊಂದೆಡೆ ಈ ಪಟ್ಟಿಯನ್ನು ತೋರಿಸುತ್ತಾ ವ್ಯಾಪಾರವು ವೃದ್ಧಿಯನ್ನೈದುತ್ತಿದೆಯೆಂದು ಹೇಳುವುದು. ಈ ದ್ವಿವರ್ಣದ ಚಿತ್ರದ ಅರ್ಥವು ಸುಲಭವಾಗಿ ಆಗುವಂತಿಲ್ಲ.

ಲಂಕೇಶಯರ್ ಮತ್ತು ದಂಡಿಯಾ ಜೂಟ್ ವ್ಯವಸಾಯಗಾರರು ಭಾರತದಿಂದ ಸಾಕಷ್ಟು ಪ್ರಯೋಜನವನ್ನಾಗಲೇ ಹೊಂದಿರುವರು. ಆದರೆ ಕಾಲವು ಬದಲಾಯಿಸಿದೆ. ದೇಶದಲ್ಲಿ ರಾಷ್ಟ್ರೀಯ ಜಾಗೃತಿಯು ತಲೆದೋರಿದೆ. ಇದುವರೆಗೆ ಎಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳೇರ್ಪಟ್ಟಿಲ್ಲವೋ, (ಪಂಜಾಬ್ ಮತ್ತು ಬಂಗಾಳದ ಹೊರತು) ಅಲ್ಲಿ ಸಹ ಕಾಂಗ್ರೆಸ್ಸಿನ ಚರಣಚಿಹ್ನೆಯಲ್ಲಿ ನಡೆಯುವ ಪ್ರಯತ್ನ ನಡೆದಿದೆ. ಇಂತಹ ಎಚ್ಚೆತ್ತ ಕಾಲದಲ್ಲಿ ಸಹ ಲಂಕೇಶರಿನವರು ಭಾರತದ ಹಿತವನ್ನು ಉಪೇಕ್ಷಿಸಿ ಬೇರೆ ಒಪ್ಪಂದವನ್ನು ಮಾಡಿಕೊಂಡರೆ ಅದು ಹಿತಕರವಲ್ಲ. ತಮ್ಮ ಹಿತಗಳನ್ನು ಬಲಿಕೊಡುವ ಯಾವ ವಿಷಯದಲ್ಲಿಯೂ ಭಾರತವು ಭಾಗವಹಿಸಲು ಸಿದ್ಧವಾಗಿಲ್ಲ.

THE

CANARA MUTUAL

ASSURANCE CO., LTD.

The Company is Mutual] UDIPI, S. INDIA. [There are no Shareholders.

ANNOUNCEMENT

The Registered Office of the Company will be shifted from Kalsank, Udipi, to the Company's own premises situated at the Corner of Church Road and Court Road, Udipi, on Friday the 14th April 1939.

UDIPI,
1st April 1939

T. R. A. PAI,
MANAGER.

ಪ್ರಕೃತದ ರಾಜಕೀಯ ಪರಿಸ್ಥಿತಿ

ಪ್ರಬಲ ಪ್ರತಿಪಕ್ಷದ ಆವಶ್ಯಕತೆ

ರೈತರಿಗೆ ದರ್ಖಾಸ್ತಿನಿಂದಾದ ಹಾನಿ.

(ಲೇಖಕರು—ದಿವಾನ್ ಬಹದೂರ್ ಬಿ. ಮಹಾಬಲ ಹೆಗ್ಡೆಯವರು)

(ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು)

1902ರ ಸೆಟ್ಲ್ಮೆಂಟಿನ ಮೊದಲು ದಕ್ಷಿಣಕನ್ನಡದಲ್ಲಿ ರೈತರು ಬಂಜರು ಸ್ಥಳಗಳನ್ನು ಗೋಚರಾವು, ಕಟ್ಟಿಗೆ, ಸೊಪ್ಪುಸದೆ ಮೊದಲಾದ ಸಾಗುವಳಿಯ ಆವಶ್ಯಕತೆಗಳಿಗಾಗಿ ಕಂದಾಯವಿಲ್ಲದೆ ಅನುಭೋಗಿಸಿಕೊಂಡು ಬರುತ್ತಿದ್ದರು. ಈ ಬಂಜರು ಸ್ಥಳಗಳಿಂದ ದೊರೆಯುವ ಸಹಾಯದ ಹೊರತು ಜಿಲ್ಲೆಯಲ್ಲಿ ಸಾಗುವಳಿಯು ಸಂಪೂರ್ಣವಾಗಿ ಅಸಾಧ್ಯವಿರುತ್ತದೆ. ಕಳೆದ ಸೆಟ್ಲ್ಮೆಂಟಿನ ಮೊದಲು, ನಂಜಕ್ಕೆ ತಾಗಿ ಪುಂಜ, ಗೋಚರಾವು ಮತ್ತು ಕಾಡು ಸಮೇತವಾದ ವರ್ಗದ ಮೇಲೆಯೇ ತೀರ್ವೆಯು ಹೊರಿಸಲ್ಪಡುತ್ತಿತ್ತೆಂದು ನಾನು ತಿಳಿಯುತ್ತೇನೆ. ಆದರೆ ಕಳೆದ ಸೆಟ್ಲ್ಮೆಂಟಿನ ನಂತರ ಜಿಲ್ಲೆಯ ಬಂಜರುಸ್ಥಳಗಳು ಎಕ್ರೆಗೆ 8 ಆಣೆಯಿಂದ ರೂ. 2ರ ವರೆಗೆ ತೀರ್ವೆ ಹೊರಿಸಲ್ಪಡುವ ದರ್ಖಾಸ್ತಾಗಿ ಮಾರ್ಪಡಿಸಲ್ಪಟ್ಟುದು ದೊಡ್ಡ ದುರ್ದೈವವಾಗಿದೆ. ಅನಂತರ ಜಿಲ್ಲೆಯ ಬೇಸಾಯಗಾರರಿಗೆ ದೊಡ್ಡ ಅನಾಹುತಸ್ವರೂಪವಾದ ಸಂಗತಿಗಳು ನಡೆದುವು. ಬಂಜರುಸ್ಥಳಗಳು ತೀರ್ವೆಗೆ ದರ್ಖಾಸ್ತಾಗಿ ಕೊಡಲ್ಪಡುವವೆಂದು ತಿಳಿದೊಡನೆಯೇ ಕೃಷಿಕರಲ್ಲದ ಹೊರಗಣವರೂ ಸದ್ರಿ ಸ್ಥಳಗಳನ್ನು ಮೇಲಾಟದಿಂದ ಪಡೆಯತೊಡಗಿದರು. ಇದರ ಪರಿಣಾಮವಾಗಿ ಬೇಸಾಯಕ್ಕೆ ಸಹಾಯಕವಾದ ಬಂಜರುಸ್ಥಳಗಳನ್ನು ರೈತರು ಕಳಕೊಳ್ಳುವಂತಾಯಿತು. ಇದು ಹೊರತು ಈ ಸ್ಥಳಗಳು ಹೊರಗಣವರ ಕೈವಶವಾಗದಂತೆ ಬೇಸಾಯಗಾರರು ದರ್ಖಾಸ್ತಿಗೆ ಅದನ್ನು ಪಡೆದುಕೊಳ್ಳಬೇಕಾಯಿತು. ಇದರಿಂದಾಗಿ ರೈತರ ಮೇಲೆ ದುಬಾರಿ ತೀರ್ವೆ ಹೊರಿಸಲ್ಪಟ್ಟಂತಾಯಿತು. ಅವರು ಯಥಾಪ್ರಕಾರ ತಮ್ಮ ನಂಜ ಮತ್ತು ಬಾಗಾಯತುಗಳಿಗೆ ತೀರ್ವೆ ತೆರಬೇಕು. ಇದು ಹೊರತು ಯಾವ ಉತ್ಪತ್ತಿಯೂ ದೊರೆಯದ ಬಂಜರುಸ್ಥಳಕ್ಕೂ ಪುನಃ ಕಂದಾಯವನ್ನು ತೆರಬೇಕಾಯಿತು. 1902ರ ವರೆಗೆ ಸರಕಾರಕ್ಕೆ ಬಂಜರುಸ್ಥಳಗಳಿಂದ ಯಾವ ಕಂದಾಯವೂ ದೊರೆತಿರಲಿಲ್ಲವೆಂಬುದರಿಂದ ಯಾರಾದರೂ ಈಗ ಆಶ್ಚರ್ಯಪಡಬೇಕು. ಈಗ ಕೇವಲ ಬಂಜರು ಸ್ಥಳಗಳಿಂದ ದೊರೆಯುವ ಕಂದಾಯವೇ ರೂ. 3½ಯಿಂದ 4 ಲಕ್ಷದ ವರೆಗಾಗಿದೆ. 1902ರ ಸೆಟ್ಲ್ಮೆಂಟ್ ಸ್ಕೀಮಿನ ಕುರಿತು ಸರಕಾರವು ಹೊರಡಿಸಿದ್ದ ಹುಕುಮಿನ ಪ್ರಕಾರವೇ ಜಿಲ್ಲೆಯ ಸುಮಾರು 970000 ಎಕ್ರೆ ಬಂಜರು ಸ್ಥಳದಲ್ಲಿ ಹೆಚ್ಚಿನೆಯಾಗಿ ಪಶ್ಚಿಮ ಘಟ್ಟಗಳ ತಪ್ಪಲಿನ ಸುಮಾರು 250000 ಎಕ್ರೆ ಸ್ಥಳವು ರಿಸರ್ವ್ ಮಾಡಲ್ಪಟ್ಟಿವೆ. ಉಳಿದ ಸ್ಥಳವು ರೈತರಿಗೆ ಕಟ್ಟಿಗೆ, ಗೋಚರಾವು ಮತ್ತು ಗೊಬ್ಬರಕ್ಕಾಗಿ ಸೊಪ್ಪು ಪಡೆಯುವುಪಯೋಗಕ್ಕಾಗಿ ಇರಿಸಲ್ಪಟ್ಟದೆಯೆಂಬುದು ಸ್ಪಷ್ಟವಾಗುತ್ತದೆ. ಸರಕಾರವೇ ಹೀಗೆ ಹೇಳಿರುತ್ತಾ, ಈ ಬಂಜರು ಸ್ಥಳಗಳಿಂದ ಅಪ್ರತ್ಯಕ್ಷವಾಗಿ ಕಂದಾಯವನ್ನು ಪಡೆದು ರೈತರನ್ನು ಪೀಡಿಸಿದುದು ಅನ್ಯಾಯವಾಗಿದ್ದಿತು, ನನ್ನ ಸೂಚನೆಯ ಮೇರೆಗೆ ಮಾರ್ಶ್‌ಬೇಂಕ್ ಕಮಿಟಿಯವರು ಈ ಪ್ರಶ್ನೆಯನ್ನು ಪರಿಶೀಲಿಸಿ, ನೆರೆಯ ಜಿಲ್ಲೆಯಾದ ಮಲಬಾರಿನಂತೆಯೇ ದಕ್ಷಿಣಕನ್ನಡದಲ್ಲಿಯೂ ಸಾಗುವಳಿಯಾಗದ ಬಂಜರು ಸ್ಥಳಗಳು ತೀರ್ವೆಯಿಂದ ವಿಮುಕ್ತವಾಗಿರಬೇಕೆಂಬ ನಿರ್ಧಾರಕ್ಕೆ ಬಂದರು. ಈ ಪ್ರಕಾರ ದಕ್ಷಿಣಕನ್ನಡದ ದರ್ಖಾಸ್ತಿನ ಮೇಲಿನ ತೀರ್ವೆಯನ್ನು ತೆಗೆದುಹಾಕಲು ಗೋಷ್ವಾರೆ ಅಂದಾಜಿನಿಂದ ರೂ. 1½ಲಕ್ಷವನ್ನು ಪ್ರತ್ಯೇಕಿಸಿಡಲಾಯಿತು. ಯಾವ ತರದ ಉತ್ಪತ್ತಿಯೂ ಇಲ್ಲದ ಬಂಡೆಕಲ್ಲು ಮತ್ತು ಗುಡ್ಡ ಕಾಡು ಪ್ರದೇಶದ ಮೇಲೆ ತೀರ್ವೆ ಹೊರಿಸುವ ಕ್ರಮವು ಇಡೀ ಪ್ರಾಂತದಲ್ಲಿ ಇನ್ನಾವ ಭಾಗದಲ್ಲಿಯೂ ಇರಲಾರದೆಂದು ನಾನು ಧೈರ್ಯದಿಂದ ಹೇಳಬಲ್ಲೆ. ಮಲಬಾರು ಮತ್ತು ದಕ್ಷಿಣಕನ್ನಡದ ಭೂಗೋಲಿಕ ಸ್ಥಿತಿಯು ಒಂದೇ ರೀತಿಯಾಗಿದೆ. ಆದರೆ ಮಲಬಾರಿನಲ್ಲಿ ಪುಂಜ ಸ್ಥಳಗಳ ಮೇಲೆ ತೆಂಗೆ ಹೊರಿಸಲ್ಪಡುವುದಿಲ್ಲ. ಆದುದರಿಂದ ಮಾರ್ಶ್‌ಬೇಂಕ್ ಕಮಿಟಿಯವರು ದಕ್ಷಿಣಕನ್ನಡವನ್ನು ಮಲಬಾರಿನ ಸಾಲಿಗೇನೇ ತರುವುದಕ್ಕಾಗಿ, ಸಾಗುವಳಿಯಾಗದ ಪುಂಜಸ್ಥಳಗಳು ಪಟ್ಟಿಯೊಳಗೆ ಸೇರಿದ್ದರೂ ಅವುಗಳ ಮೇಲೆ ತೀರ್ವೆ ಹೊರಿಸಬಾರದೆಂದು ತೀರ್ಮಾನಿಸಿ ಈಗ ಹೊರಿಸಲ್ಪಟ್ಟಿರುವ ತೀರ್ವೆಯನ್ನು ತೆಗೆದುಹಾಕಲು ಮೇಲೆ ಸೂಚಿಸಿದಂತೆ ರೂ. 1½ಲಕ್ಷ ಮಂಜೂರು ಮಾಡಿದರು. ಕಾಂಗ್ರೆಸ್ ಸರಕಾರವು, ಸಾಗುವಳಿಯಾಗದ ಪುಂಜಸ್ಥಳಗಳ ಮೇಲಿನ ತೀರ್ವೆಯನ್ನು ತೆಗೆದುಹಾಕಿ ದಕ್ಷಿಣಕನ್ನಡದ ರೈತರನ್ನು ದುಬಾರಿ ತೀರ್ವೆಯ ಪೀಡೆಯಿಂದ ವಿಮುಕ್ತಗೊಳಿಸುವುದೆಂದು ನಾವು ಆತ್ಯಾತುರತೆಯಿಂದ ನಿರೀಕ್ಷಿಸಿಕೊಂಡಿದ್ದೆವು. ಆದರೆ, ಇಷ್ಟರವರೆಗೆ ಈ ಕುರಿತು ಏನೂ ಮಾಡಿದುದು ತೋರಿಬರುವುದಿಲ್ಲ.

ಫೋರೆಸ್ಟ್ ಸಂಕಷ್ಟಗಳು

ರಿಸರ್ವ್ ಕಾಡುಗಳ ಸಂಬಂಧವಾದ ಸಂಕಷ್ಟಗಳು ಈ ಜಿಲ್ಲೆಗೆ ಮಾತ್ರ ಸಂಬಂಧಿಸುವ ವಿಶಿಷ್ಟ ರೀತಿಯವುಗಳಿವೆಯೆಂಬುದು ಸುವಿದಿತ ವಿಷಯ. ಮೇಲೆ ಹೇಳಿದಂತೆ ರೈತರು ಬೇಸಾಯಕ್ಕಾಗಿ ಬಂಜರು ಸ್ಥಳ ಮತ್ತು ಕಾಡುಗಳ ಮೇಲೆ ಅವಲಂಬಿಸಿಕೊಂಡಿರುತ್ತಾರೆ. ಕಳೆದ 35 ವರ್ಷಗಳಲ್ಲಿ ಸರಕಾರವು ರೈತರ ಆವಶ್ಯಕತೆಗಳ ಕುರಿತು ಸ್ವಲ್ಪವೂ ಸಹಾನುಭೂತಿಯಿಲ್ಲದೆ ಇಚ್ಛಾನುಸಾರವಾಗಿ ರೈತರ ಕಾಡುಗಳು ಹಲವನ್ನು ರಿಸರ್ವ್ ಮಾಡಿರುವುದು. ರೈತರ ಮತ್ತು ಬೇಸಾಯಗಾರರ ಭೂಮಿಯ ಬಳಿಯ ಈ ಕಾಡುಗಳನ್ನು ರಿಸರ್ವ್ ಮಾಡಿ ಸರಕಾರವು, ಬೇಸಾಯದ ಆವಶ್ಯಕತೆಯನ್ನು ನಿರ್ದಯವಾಗಿ ನಿರಾಕರಿಸಿರುವುದಲ್ಲದೆ ಜನರು ಪ್ರತಿದಿನವೆಂಬಂತೆ ಕ್ರಿಮಿನಲ್ ಖಟ್ಲೆಗೊಳಗಾಗುವಂತೆ ಮಾಡಿರುವುದು. ಇದು ಹೊರತು ಗೋಚರಾವು ಫೀಸು ಮತ್ತು ಮಾಪಸೂಲಿನ ಪೀಡೆ ಬೇರೆ ಇದೆ. ಈ ಸಂದರ್ಭದಲ್ಲಿ 1934ರಲ್ಲಿ ಜಿಲ್ಲೆಯಲ್ಲಿ ರಿಸೆಟ್ಲ್ಮೆಂಟ್ ನಡಿಸಿದ ಸೆಟ್ಲ್ಮೆಂಟ್ ಆಫೀಸರರ ಹೇಳಿಕೆಯನ್ನು ಲಕ್ಷ್ಯಕ್ಕೆ ತರುವುದೊಳ್ಳೇದು. ಅವರು ತನ್ನ ಸ್ಕೀಮ್ ರಿಪೋರ್ಟಿನ 29ನೇ ಪುಟದಲ್ಲಿ ಹೀಗೆ ಹೇಳಿರುವರು. "ಕಳೆದ ಸೆಟ್ಲ್ಮೆಂಟಿನಿಂದಾರಭ್ಯ ಕಾಡುಗಳು ತೀವ್ರಗತಿಯಿಂದ ಹೆಚ್ಚೆಚ್ಚಾಗಿ ರಿಸರ್ವ್ ಮಾಡಲ್ಪಟ್ಟಿವೆ. ರೈತರಿಗೆ ಇದರಿಂದ ಕೆಲವು ಅನಾನುಕೂಲ ತಗಲಿರುವಂತಿದೆ. ಮೊದಲು ದರ್ಖಾಸ್ತಾದ ಕಾಡುಗಳಿಂದ ರೈತರು ತಮಗೆ ಬೇಕಾದ ಸೊಪ್ಪುಸದೆ ತಂದು ಗೊಬ್ಬರಮಾಡುತ್ತಿದ್ದರು. ಆದರೆ ರಿಸರ್ವ್ ಕಾಡುಗಳಲ್ಲಿ ಕೆಲವು ಶರ್ತಗಳಿಂದ ಮಾತ್ರ ಅವರು ಹಾಗೆ ಮಾಡಬಹುದಾಗಿದೆ. ಈ ರಿಸರ್ವ್ ಕಾಡುಪ್ರದೇಶದಿಂದ ಸ್ವಲ್ಪದೂರ ಭೂಮಿ ಇರುವ ರೈತರು, ಯಾವ ತಡೆ ಅಥವಾ ತೊಂದರೆ ಇಲ್ಲದೆ ತಮ್ಮ ಪುರಾತನ ಹಕ್ಕುಗಳನ್ನು ಅನುಭವಿಸುತ್ತಿದ್ದಾರೆ. ಫೋರೆಸ್ಟ್ ಸಂಬಂಧವಾದ ರೈತರ ಸಂಕಷ್ಟಗಳನ್ನು ಪದೇ ಪದೇ ಸರಕಾರದ ಗಮನಕ್ಕೆ ತಂದು ಎಷ್ಟೊಂದು ಒತ್ತಾಯಪಡಿಸಿದರೂ ನಿಷ್ಫಲವಾಗಿದೆ. ಫೋರೆಸ್ಟ್ ಡಿಪಾರ್ಟ್‌ಮೆಂಟಿನ ಹೊರತು ಇತರ ಹೊರಗಣ ಯಾವ ಜವಾಬ್ದಾರಿ ಅಧಿಕಾರಿಯಾದರೂ ಈ ಕುರಿತು ಎಂದೂ ವಿಚಾರಿಸಿದುದಿಲ್ಲ. ಕಾಂಗ್ರೆಸಿನವರು ಕಳೆದ ಚುನಾವಣೆಯಲ್ಲಿ ಈ ರಿಯಾಯಿತಿಗಳ ಕುರಿತು ಮಾತುಕೊಟ್ಟಿರುವುದರಿಂದ ಈಗಿನ ಸರಕಾರವು ಫೋರೆಸ್ಟ್ ಸಂಕಷ್ಟಗಳ ಕುರಿತು ಹೆಚ್ಚಿನ ಸಹಾಯಮಾಡಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಈಗ ರೆವಿನ್ಯೂ ಮತ್ತು ಫೋರೆಸ್ಟ್ ಖಾತೆಯ ಮಂತ್ರಿಗಳು ದಕ್ಷಿಣಕನ್ನಡದೊಡನೆ ಅಸಹಕಾರಮಾಡಿದಂತಿರುವುದು ಆಶ್ಚರ್ಯಕರವಿದೆ. ಅವರು ಇತರ ಎಲ್ಲಾ ಜಿಲ್ಲೆಗಳಲ್ಲಿಯೂ ಒಂದಕ್ಕಿಂತ ಹೆಚ್ಚು ಸಲ ಸಂಚರಿಸುವರಾದರೂ ನಮ್ಮ ಬಡಜಿಲ್ಲೆಯನ್ನು ಕಡೆಗಣಿಸಿ ಬಿಟ್ಟಿರುತ್ತಾರೆ. ಇಷ್ಟಗೆ ಬಂದೊಡನೆಯೇ ಈ ಜಿಲ್ಲೆಗನೇ ಸಂಬಂಧಿಸುವ ಅತಿ ಜರೂರಿನ ಸಮಸ್ಯೆಗಳನ್ನವರು ಇದಿರಿಸಬೇಕಾಗುವುದೆಂದು ಮಂತ್ರಿಗಳು ನೆನಸಿರಬಹುದು. ದಕ್ಷಿಣಕನ್ನಡವನ್ನವರು ಗಣಿಸಬೇಕಾದ ಆವಶ್ಯಕತೆಯಾದರೂ ಏನು? ವಿಹಾರ, ಮತ್ತು ಮನೋಹರ ದೃಶ್ಯಗಳ ನೋಟಕ್ಕಾಗಿರುವ ಸ್ಥಳಮಾತ್ರ ದಕ್ಷಿಣ

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906
CANARA BANK LIMITED

For

KARNATAKA PROVINCE

COPIES CAN BE HAD *From* ALL IMP BOOK SHOPS

READ
Whither Karnataka OR
ಕರ್ನಾಟಕ ದಿಗ್ದರ್ಶನ
by
P. CHANDRASAEKAR AEGDE, B.A., B.L.

Copies can be obtained also on receipt of Postal Stamp of the value of One Rupee.
Addressed to—**NAVABHARATBOOK DEPOT, UDIPI, S.K.**

ದೂರೀಕರಿಸಿರಿ—ದೃಷ್ಟಿ ಚಕ್ರ—ನೆರತಕೂದಲು—ವೃದ್ಧಾಪ್ಯ ತಯಾರು ಎರಡು ತಿಂಗಳತನಕವೂ, ವೃದ್ಧರು ನಾಲ್ಕು ತಿಂಗಳವರೆಗೂ ಬೂಟಿಟಾನಿಕ್‌ನ್ನು ಉಪಯೋಗಿಸಿದಲ್ಲಿ ದೃಷ್ಟಿಮಾಂದ್ಯವು ತೊಲಗಿ ನರೆತ ಕೂದಲು ಕಪ್ಪಗಾಗಿ ದೇಹದ ನಿತ್ರಾಣವು ತೊಲಗಿ ತಾರುಣ್ಯದ ಫಳಕೊಬಾರದೆ ಹೋದಲ್ಲಿ ಇಮ್ಮಡಿ ಕ್ರಯ ವಾಪಾಸು ಕೊಡುವ ಶರ್ತವಿದೆ. ಟಾನಿಕಿನ ಕ್ರಯವು ಈ ತೆರನಾಗಿದೆ. ಒಂದು ತಿಂಗಳಿನ ಟಾನಿಕಿಗೆ ರೂ 3-8-0; 2 ತಿಂಗಳವರೆಕ್ಕೆ ರೂ. 6-0-0; ನಾಲ್ಕು ತಿಂಗಳವರೆಕ್ಕೆ ರೂ. 10 ಪತ್ರವ್ಯವಹಾರ ಇಂಗ್ಲಿಷಿನಲ್ಲೇ. **Jari Booti Dawakhana,** P. O. Behar Nursery (Darbhanga)

ಗತ ವೀರ್ಯವನ್ನು ಪುನಃ ಹೊಂದಿರಿ.

ಡಾ| ಬಿಸನ್‌ರವರ "ಸೆಲ್ಫ್ ಪ್ರೊಟೆಕ್ಟರ್" ಸ್ತ್ರೀಪುರುಷರಿಬ್ಬರಿಗೂ ಉತ್ತಮೋತ್ತಮವಾದ ನರಶಕ್ತಿವರ್ಧಕ ಪಾನಕವೆಂದು ಜಗತ್ಪ್ರಸಿದ್ಧವಾಗಿದೆ. ಅದು ಸಾಕ್ಷಾತ್ತಾಗಿ ಬೆನ್ನುಹುರಿ ಹಾಗೂ ಜನನೇಂದ್ರಿಯಗಳಿಗೆ ಸಂಬಂಧಪಟ್ಟ ನರಗಳನ್ನು ಉಜ್ಜೀವಿಸುವುದು. ಆದ್ದರಿಂದ ಅಂಥ ವ್ಯಾಧಿಗಳಿಂದ ನರಳುವವರಿಗಿದು ಅಮೂಲ್ಯವಾದದ್ದು. ನೀವು ಯೌವನದ ಅಪವ್ಯಯ್ಯ, ಅತ್ಯಾಚರಣೆ, ಮುಷ್ಟಿ ಮೈಥುನ, ಅಕಾಲಿಕ ವೃದ್ಧಾಪ್ಯ, ಸ್ವಪ್ನೇಂದ್ರಿಯ, ಅಸ್ವಾಭಾವಿಕ ಸ್ರಾವ, ಅತಿ ಮೂತ್ರ, ಕ್ಷೀಣಧಾತು, ಧಾರಣಶಕ್ತಿಯಿಲ್ಲದಿರುವಿಕೆ, ಕಾಮತೃಪ್ತಿಯ ವಿಫಲತೆ, ಸ್ಪೆರ್ಮಟೋರಿಯ, ನಿರುತ್ಸಾಹ ಮತ್ತು ನರದೌರ್ಬಲ್ಯ ಇವುಗಳಿಂದ ನೀವು ನರಳುತ್ತಿದ್ದರೆ ಡಾ| ಬಿಸನ್‌ರವರ "ಸೆಲ್ಫ್ ಪ್ರೊಟೆಕ್ಟರ್" ಉಪಯೋಗಿಸಿರಿ. ಅದನ್ನು ಬಳಸಿದ ಮೊದಲಿನ ದಿನದಿಂದ ಗುಣತೋರಿಬರುವುದು. ಇಂದೇ ಒಂದು ಸೀಸೆ ಕೊಳ್ಳಿರಿ.

ಬೆಲೆ ೧ ಸೀಸೆ ರೂ. 4—0—0

ಅಮೆರಿಕನ್ ಮೆಡಿಕೊ ಅಂಡ್ ಜಿ. ಸಿ. ಅಸೋಸಿಯೇಷನ್, (D 23) ಫೋರ್ಟ್ ಬೊಂಬಾಯಿ.

SELF-PROTECTOR
FOR
VIGOUR & VITALITY

ನೋಟೀಸು

The Vijaya Bank, Ltd., Coondapoor
ದಿ ವಿಜಯ ಬೇಂಕ್ ಲಿಮಿಟೆಡ್, ಕುಂದಾಪುರ

ಈ ಮೂಲಕ ಸರ್ವ ಜನಂಗೆ ತಿಳಿಯಪಡಿಸುವುದೇನೆಂದರೆ:—ಈ ಕೆಳಗೆ ಹೆಸರು ಬರೆಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡೆದ ಮೊಬಲಗನ್ನಾಗಲೀ ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇದ್ದುದರಿಂದಲೂ, ಸದ್ರಿ ಲೋನನ್ನು ಇನ್ನು ಹೆಚ್ಚಿಗೆ ಸಮಯ ಬಾಕಿ ಇಟ್ಟಲ್ಲಿ ಬೇಂಕಿಗೆ ನಷ್ಟವಾಗಬಹುದಾಗಿ ಕಂಡು ಬರುವುದರಿಂದಲೂ ಸದರಿ ಲೋನಿನ ಆಸಾಮಿಯು ನಮಗೆ ಬರ ಎಲ್ಲಾ ಅಸಲು ಬಡ್ಡಿ ಹಣಗಳನ್ನು ಕೊಟ್ಟು ತಾ. 16—4—39ನೇ ಶನಿವಾರ ಮಧ್ಯಾಹ್ನ 1 ಘಂಟೆಯ ಒಳಗೆ ಬಿಡಿಸಿಕೊಂಡುಹೋಗದೆ ಇದ್ದಲ್ಲಿ ತಾ. 17—4—39ನೇ ಸೋಮವಾರ ಮಧ್ಯಾಹ್ನ ಘಂಟೆ ೩ಕ್ಕೆ ಸದರಿ ನಗಗಳನ್ನು ಬಹಿರಂಗವಾಗಿ ಏಲಂ ಮಾಡಿ ಹುಟ್ಟಿಬಂದ ಹಣಗಳಲ್ಲಿ ನಮಗೆ ಬರ ಅಸಲು ಬಡ್ಡಿ ಮತ್ತು ಎಲ್ಲಾ ಖರ್ಚು ವಗೈರೆ ಕಳೆದು ಹೆಚ್ಚಿಗೆ ಹಣ ಉಳಿದರೆ ಸದರಿಯವರ ಅಮಾನತು ಲೆಕ್ಕಕ್ಕೆ ನಿಬದ್ಧಿಯಿಂದ ಜಮಾ ಮಾಡಲ್ಪಡುವುದು. ಏಲಮಿನಿಂದ ಹುಟ್ಟಿ ಬಂದ ಹಣ ಬೇಂಕಿಗೆ ಬರತಕ್ಕ ಹಣಕ್ಕೆ ಕಮ್ಮಿಬಿದ್ದಲ್ಲಿ ಸದರಿ ಆಸಾಮಿಯ ಮೇಲೆ ಹೆಚ್ಚಿಗೆ ಬರತಕ್ಕ ಹಣಗಳಿಗೆ ದಾವಾದಾಖಲು ಮಾಡಲಾಗುವುದು. ಏಲಂ ಅದೇ ದಿವಸ ಆಗದೆ ಇದ್ದಲ್ಲಿ ಬೇಂಕಿಗೆ ಯುಕ್ತ ಕಂಡ ದಿವಸಕ್ಕೆ ಮುಂದುವರಿಸಲ್ಪಡುವುದು, ತಿಳಿದಿರುವುದು.

ಲೋನು ನಂಬ್ರ		ಹೆಸರು ಮತ್ತು ವಿಳಾಸ	ಅಸಲು ರೂಪಾಯಿ	ಇಟ್ಟ ತಾರೀಖು
1.	73/36	ಮಂಜಯ್ಯ ಸೆಟ್ಟಿ, ನಂದ್ಯಪ್ಪ ಸೆಟ್ರ ಮೊಮ್ಮಗ ಗುಲ್ವಾಡಿಮನೆ, ಅನಗಳ್ಳಿಗ್ರಾಮ, ಪೋಸ್ಟ್ ಕುಂದಾಪುರ	65—0—0	26—6—'37
2.	167/36	ಸೇಸಸೆಟ್ಟಿ ಮಾದಯ್ಯ ಸೆಟ್ಟಿ ಮೊಮ್ಮಗ, ದೊಡ್ಡಹಕ್ಲುಮನೆ, ಅಂದಾರುಗ್ರಾಮ ಪೋಸ್ಟ್ ಶಂಕ್ರನಾರಾಯಣ.	70—0—0	12—8—'37
3.	228/36	ಮಂಜಯ್ಯ ಸೆಟ್ಟಿ, ನಂದ್ಯಪ್ಪ ಸೆಟ್ರ ಮೊಮ್ಮಗ ಗುಲ್ವಾಡಿಮನೆ ಅನಗಳ್ಳಿಗ್ರಾಮ ಪೋಸ್ಟ್ ಕುಂದಾಪುರ.	130—0—0	9—9—'37
4.	97/37	ಪಾಂಡುರಂಗ ಸೇಟ್, ಆನಂದ ಸೇಟ್ರ ಮಗ, ಚಿನ್ನದ ವ್ಯಾಪಾರಿ ಉಪ್ಪುಂದ ಗ್ರಾಮ, ಪೋಸ್ಟ್ ಅಂಬಾಗಿಲು.	14—0—0	25—11—'37
5.	126/37	ಟಿ ಸಂಜೀವ ಸೆಟ್ಟಿ, C/o ಟಿ. ವಿಟ್ಠಲ ಸೆಟ್ಟಿ, ಹಂಗಳ್ಳಿಗ್ರಾಮ, ಪೋಸ್ಟ್ ಶಂಕ್ರನಾರಾಯಣ	22—0—0	14—12—'37
6.	253/37	ಪಿ. ಕೃಷ್ಣಯ್ಯ ಸೆಟ್ಟಿ, ನಾಗಯ್ಯ ಸೆಟ್ರ ಅಳಿಯ, ಉಡುಪಿ ತಾಲೂಕಿನ ಹಾಲಾಡಿಯಲ್ಲಿ ವಾಸವಾಗಿರುವವ, ಪೋಸ್ಟ್ ಶಂಕ್ರನಾರಾಯಣ	35—0—0	14—3—38
7.	329/37	ಕೆ. ನಾರಪ್ಪ ಸೆಟ್ಟಿ, ಕೃಷ್ಣಪ್ಪ ಸೆಟ್ರ ಅಳಿಯ ಹೋಟೆಲ್ ಕೀಪರ್, ಕುಂದಾಪುರ.	30—0—0	22—4—'38
8.	361/37	ಎ. ಕೃಷ್ಣಪ್ಪ ಸೆಟ್ಟಿ, ನಂದ್ಯಪ್ಪ ಸೆಟ್ರ ಅಳಿಯ, ಅನಗಳ್ಳಿ ಗ್ರಾಮ, ಪೋಸ್ಟ್ ಕುಂದಾಪುರ.	36—0—0	10—5—'38

Office of the Bank,
Coondapoor.
Dated 31—3—39.

K. Sanjiva Hegde,
Agent.

ಸ್ಥಾಪನೆ: **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ**, 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೀಲ್ ಜೋಡರ್ ಪೇಪರ್‌ಗಳ ಟೊಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

CROWN RUBBER STAMP CO.,
Balmat Road, MANGALORE.
Included by the Mysore Govt. Stores, Purchase Committee in the list of approved Firms

ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲುಗಳ ರದ್ದತಿ.

ತಾಲೂಕು ಎಡ್ವೈಸರಿ ಕಮಿಟಿಗಳ ನಿರ್ಮಾಣ! ಜೂನ್ ತಾ. 1ರಿಂದ.

ಮದ್ರಾಸ್ ಸರಕಾರದ ತಾ. 20-3-39ನೇ ಹುಕುಮಿಗನುಗುಣವಾಗಿ ಮದ್ರಾಸ್ ಪ್ರಾಥಮಿಕ ವಿದ್ಯಾಭ್ಯಾಸದ ಆಕ್ಟಿಗನುಸಾರವಾಗಿ ಜನ್ಮ ತಾಳಿರುವ ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲುಗಳು ಬರುವ ಜೂನ್ ತಾ. 1ರಿಂದ ಮಾಯವಾಗುವವು. ಅವುಗಳ ಸ್ಥಾನವನ್ನು ತಾಲೂಕು ಎಡ್ವೈಸರಿ ಕಮಿಟಿಗಳು ಆಕ್ರಮಿಸುವುವು. ಕೌನ್ಸಿಲುಗಳು ನಿರ್ಮಾಣ ಹೊಂದಿದಂದಿನಿಂದ ಪ್ರಾಥಮಿಕ ಶಾಲೆಗಳಿಗೆ ಅಂಗೀಕಾರವನ್ನೀಯುವುದು ಮತ್ತು ಗ್ರಾಂಟು ಕೊಡುವುದು, ವಿದ್ಯಾ ಇಲಾಖಾ ಆಫೀಸರರ ಕೃಪಾಕಟಾಕ್ಷಕ್ಕೆ ಪಾತ್ರವಾಗುವುದು. ಪ್ರತಿ ತಾಲೂಕಿನಲ್ಲೂ ಪ್ರಾಥಮಿಕ ವಿದ್ಯಾ ಪ್ರಸಾರವು ಸರಾಗವಾಗಿ ನಡೆಯುವಂತೆ ಸ್ಥಳೀಕಾನುಭವವುಳ್ಳ ಸುಪ್ರತಿಷ್ಠಿತ ಸದಸ್ಯರ ಕಮಿಟಿಯನ್ನು ಸ್ಥಾಪಿಸುವುದು ಅತ್ಯಾವಶ್ಯಕವೆಂದು ಸರಕಾರದ ನಿರ್ಧಾರ. ಸರಕಾರಿ ಇತರ ಇಲಾಖಾ ಆಫೀಸರರ ಸಹಕಾರವೂ ತಾಲೂಕು ಕಮಿಟಿಗಳಿಗಿದ್ದು ವಿದ್ಯಾಪ್ರಸಾರವು ಹೆಚ್ಚು ಹುರುಪಿನಿಂದ ಮುಂದೊತ್ತಬಹುದೆಂದು ಮಾನ್ಯ ಸರಕಾರದ ಹಿರಿದಾಸೆ. ಮದ್ರಾಸು ಹೊರತು ಸಂಸ್ಥಾನದ ಇತರ ಜಿಲ್ಲೆಗಳಲ್ಲೆಲ್ಲಾ ತಾಲೂಕು ಕಮಿಟಿಗಳು ಜೂನ್ 1ರಿಂದ ಕಾರ್ಯರಂಗಕ್ಕಿಳಿಯುವವು.

ತಾಲೂಕು ಕಮಿಟಿಗಳ ರಚನೆ

(ಅ) ಎಕ್ಸ್ ಒಫೀಶಿಯೋ ಮೆಂಬರರು (1) ತಾಲೂಕಿನಲ್ಲಿರುವ ಮದ್ರಾಸ್ ಎಸೆಂಬ್ಲಿ ವ ಕೌನ್ಸಿಲಿನ ಸದಸ್ಯರು (2) ತಾಲೂಕಿನಲ್ಲಿರುವ ಡಿಸ್ಟ್ರಿಕ್ಟ್ ಬೋರ್ಡ್ ಪ್ರಸಿಡೆಂಟರು ಅಥವಾ ವೈಸ್ ಪ್ರೆಸಿಡೆಂಟರು (3) ತಾಲೂಕಿನಲ್ಲಿರುವ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರರು (ಸೀನಿಯರ್ ಸ್ಕೇಲ್) (4) ತಾಲೂಕು ವ್ಯವಹಾರ ಕ್ಷೇತ್ರಕ್ಕೊಳಪಟ್ಟ ಶಾಲಾ ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ (5) ತಾಲೂಕಿನ ತಹಶಿಲ್ದಾರರು.

(ಬ) ಜಿಲ್ಲಾ ಕಲೆಕ್ಟರರಿಂದ ನೇಮಿಸಲ್ಪಡುವವರು: (1) ಸಹಕಾರಿ ಇಲಾಖೆಯ ಮತ್ತು ಎಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನ ಒಬ್ಬ ಯಾ ಇಬ್ಬರು ಆಫೀಸರರು. (2) ಜಿಲ್ಲಾ ಬೋರ್ಡ್ ಪ್ರಸಿಡೆಂಟರಾಗಲಿ ವೈಸ್ ಪ್ರೆಸಿಡೆಂಟರಾಗಲೀ ತಾಲೂಕಿನಲ್ಲಿಲ್ಲವಾದರೆ ಆ ಸ್ಥಾನದಲ್ಲಿ ಜಿಲ್ಲಾ ಬೋರ್ಡ್ ಸದಸ್ಯರೊಬ್ಬರು. (3) ತಾಲೂಕಿನಲ್ಲಿದ್ದು ವಿದ್ಯಾ ಪ್ರಚಾರದಲ್ಲಿ ನೈಪುಣ್ಯ ಕೆಲಸ ಮಾಡತಕ್ಕ ಐವರು. ಈ ಪೈಕಿ ಒಬ್ಬಳು ಸ್ತ್ರೀಮಣಿಯೂ ಇಬ್ಬರು ಗ್ರ್ಯಾಜ್ಯುವೇಟರಾಗಲೀ ಎಫ್. ಎ. ಪಾಸಾದವರಾಗಲೀ, ಆಗಿರತಕ್ಕದ್ದು. ನೊಮಿನೇಟೆಡ್ ಸದಸ್ಯರೆಲ್ಲರೂ ಗೌರವಾರ್ಥ ಕೆಲಸಮಾಡತಕ್ಕದ್ದು. ಅವರಿಗೆ ಭತ್ತೆಯಾಗಲೀ ಇನ್ನಾವ ತರದ ಎಲೋವನ್ಸುಗಳಾಗಲೀ ದೊರೆಯಲಾರವು.

ಕಮಿಟಿಯ ಪ್ರಸಿಡೆಂಟರನ್ನು ಜಿಲ್ಲಾ ಕಲೆಕ್ಟರರೇ ನೇಮಿಸತಕ್ಕದ್ದು. ಕಮಿಟಿಯಲ್ಲಿರುವ ವಿದ್ಯಾ ಇಲಾಖೆಯ ಡಿಪ್ಯುಟಿ ಇನ್ಸ್‌ಪೆಕ್ಟರರು ಕಾರ್ಯದರ್ಶಿತ್ವವನ್ನು ವಹಿಸತಕ್ಕದ್ದು.

ಕಮಿಟಿ ಮೆಂಬರರ ಕರ್ತವ್ಯಗಳು.

(1) ತಾಲೂಕಿನಲ್ಲಿರುವ ಶಾಲೆಗಳಲ್ಲಿಯ ಕುಂದುಕೊರತೆಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರುವುದು. (2) ಹೊಸ ಶಾಲೆಗಳ ತೆರೆಯೋಣ, ಚಾಲ್ತಿಯಲ್ಲಿರುವುದಕ್ಕಿಂತ ಹೆಚ್ಚಿನ ತರಗತಿಗಳನ್ನು ತೆರೆಯುವುದು, ಅಂಗೀಕಾರ ಕೊಡೋಣ ಈ ವಿಷಯಗಳನ್ನೆತ್ತಿ ಶಿಫಾರಸು ಮಾಡುವುದು. ಪ್ರೈವೇಟ್ ಮೆನೇಜ್‌ಮೆಂಟಿನ ತಾಬೆಯಲ್ಲಿರುವ ಶಾಲೆಗಳ ಗ್ರಾಂಟಿನ ವಿಚಾರದ ಕುರಿತು ಶಿಫಾರಸು ಮಾಡುವುದು. (3) ಶಾಲೆಗಳಲ್ಲಿಯ ಮಕ್ಕಳ ಸಂಖ್ಯೆಯನ್ನೇರಿಸುವರೆ ಯಾ ವಿದ್ಯಾಭ್ಯಾಸದ ಶಾಲಾ ಜೀವನದ ಅವಧಿಯನ್ನು ಜಾಸ್ತಿ ಮಾಡುವರೆ ಯಾ ಯುಕ್ತ ಕಂಡಲ್ಲಿ ತಕ್ಕ ನಿಗಾ ತೆಗೆದುಕೊಳ್ಳುವುದು. ಹಿಂದುಳಿದ ಜಾತಿಯ ಮಕ್ಕಳ ಮತ್ತು ಬಾಲಿಕೆಯರ ವಿದ್ಯಾಭ್ಯಾಸದ ಪ್ರಸಾರವನ್ನು ಮುಂದೊತ್ತುವುದು. (4) ಬಡಬಗ್ಗರ ಮಕ್ಕಳಿಗೆ ಧರ್ಮಾರ್ಥ ಊಟ; ಶಾಲಾ ಪುಸ್ತಕ ಸ್ಲೇಟು ವಗೈರೆಗಳನ್ನು ಮುಫತ್ತಾಗಿ ಕೊಡಿಸುವುದು. ಈ ಬಗ್ಗೆ ಹಣ ಸಂಗ್ರಹಿಸುವುದು, ಶಾಲಾ ಕಟ್ಟಡಗಳು ಬಾಡಿಗೆಯಿಲ್ಲದೇನೇ ಪುಕ್ಕಟೆ ದೊರೆಯುವಂತೆ ಯತ್ನಿಸುವುದು. (5) ಗ್ರಾಮಗ್ರಾಮಗಳಲ್ಲಿ ವಿದ್ಯಾಪ್ರಚಾರ ಕಾರ್ಯವನ್ನು ಕೈಗೊಳ್ಳುವುದು.

ಪುಟ ೭ರಿಂದ

ಕನ್ನಡ ಈ ಜಿಲ್ಲೆಯ ಪ್ರತಿನಿಧಿಗಳು ಬಹಳ ಕಡಿಮೆಮಂದಿ. ಇತರ ಜಿಲ್ಲೆಗಳ ಅತಿ ಹೆಚ್ಚುಮಂದಿ ಮೆಂಬರರು ಮಂತ್ರಿಗಳಿಗೆ ಸಂಪೂರ್ಣ ಬೆಂಬಲವೀಯುವಾಗ ದಕ್ಷಿಣ ಕನ್ನಡ ಜಿಲ್ಲೆಯನ್ನು ಯಾವ ತೊಂದರೆಯೂ ಇಲ್ಲದೆ ಕಡೆಗಣಿಸಿ ಬಿಡಬಹುದು. ಇಂಟರಿಮ್ ಮಂತ್ರಿಮಂಡಲವು ಸ್ವಲ್ಪ ಹೆಚ್ಚು ಸಮಯ ಅಧಿಕಾರದಲ್ಲಿದ್ದಿದ್ದರೆ ಮೇಲೆ ನಮೂದಿಸಲ್ಪಟ್ಟಿರುವ ಸಹಾಯಗಳು ನಿಶ್ಚಯವಾಗಿಯೂ ಕೊಡಲ್ಪಡುತ್ತಿದ್ದುವು. ಮಂತ್ರಿಗಳಾಗಿ ನೇಮಿಸಲ್ಪಟ್ಟ ಕೂಡಲೆ ಅವರು ತಮ್ಮ ಕಾರ್ಯಕ್ರಮ ಮತ್ತು ಧೋರಣೆಯನ್ನು ಪ್ರಕಟಿಸಿದಾಗ ಕಾಂಗ್ರೆಸಿನವರು ಅಧಿಕಾರಕ್ಕೆ ಬರುವರೆಂದವರು ನಿರೀಕ್ಷಿಸಿದ್ದಿಲ್ಲ. ಮತ್ತು ಅವರೇ ಆಡಳಿತ ನಡಿಸುವಂತಾಗುತ್ತಿದ್ದರೆ ತಾವು ಕೊಟ್ಟ ಮಾತುಗಳನ್ನೆಲ್ಲಾ ಆಚರಣೆಯಲ್ಲಿ ಪರಿಪಾಲಿಸುತ್ತಿದ್ದರು.

(ಮುಂದುವರಿಯುವುದು.)

ಒಂದೇ ತಿಂಗಳಲ್ಲಿ
ಇಂಗ್ಲಿಷ್

ವಿರಾಮಕಾಲದಲ್ಲಿ ಸುಲಭವಾಗಿ ನೂತನ ಕ್ರಮಗಳಿಂದ ಬೋಧಕರ ಸಹಾಯವಿಲ್ಲದೆ ಸ್ವತಃ ಇಂಗ್ಲಿಷ್ ಕಲಿಯುವುದಕ್ಕೆ ಅನುಕೂಲವಾದ ಉತ್ತಮ ಪುಸ್ತಕ

ಕ್ರಯ 0—8—0.
ಟಪ್ಪಾಲುದ್ವಾರ 0—10—0.
ನವಭಾರತ ಬುಕ್ ಡಿಪೋ, ಉಡುಪಿ.

THE
Canara Banking Corporation, Udipi, Ltd.
(Incorporated in British India.)
ESTD. 1906

THREE YEARS' CASH CERTIFICATES
bearing interest at 4% p. a. in denominations of Rs 50/-, 100/-, 500/-, 1,000/- & 5000/- are now issued at all our Branches.

For particulars call at or write to any of our nearest Branches.

ನವಯುಗ
ಉಡುಪಿ, ಗುರುವಾರ, ತಾ. ೬-೪-೩೯

ಯುರೋಪಿನ ಇಂದಿನ ಪರಿಸ್ಥಿತಿ.

ಜಗತ್ತಿನ ಯಾವ ರಾಷ್ಟ್ರವೇ ಆಗಲಿ, ಅಲ್ಲಿ ಏನೇ ನಡೆಯುತ್ತಿರಲಿ, ಅದರ ದೃಷ್ಟಿಯು ಇಂದು ಜರ್ಮನಿಯ ಕಡೆಗೆ ತಿರುಗಿದೆ. ಆ ದೃಷ್ಟಿಯಲ್ಲಿ ಕಳವಳವು ಕಾಣುತ್ತಿದೆ. ಏಕೆಂದರೆ ಜರ್ಮನಿಯಿಂದಾಗಿ ಮಧ್ಯ ಯುರೋಪಿನಲ್ಲಿ ಮಹಾಯುದ್ಧವು ಪ್ರಾರಂಭವಾಗಬಹುದು. ಆ ಯುದ್ಧಾಗ್ನಿಯು ಎಷ್ಟರ ವರೆಗೆ ಹಬ್ಬುತ್ತ ಹೋಗುವುದೋ ಹೇಳಲು ಬರುವುದಿಲ್ಲ. ಅದೊಮ್ಮೆ ಎದ್ದಿತೆಂದರೆ ಅದು ಹರಡದಿರುವ ಮೂಲೆಯಲ್ಲಿಯೂ ಅದರ ಸೆಕೆ ತಟ್ಟುವುದು ನಿಶ್ಚಯ. ಆದುದರಿಂದ ಸಮಸ್ತ ರಾಷ್ಟ್ರಗಳೂ ಹೆಚ್ಚು ಕಡಿಮೆ ಕಂಗಾಲಾಗಿವೆ. ಅವುಗಳಲ್ಲಿ ಜರ್ಮನಿಯ ಸುತ್ತುಮುತ್ತಲಿನ ಚಿಕ್ಕ ದೊಡ್ಡ ಜನಾಂಗಗಳೆಲ್ಲ ವಿಶೇಷ ಗಾಬರಿಗೊಂಡಿವೆ. ಪ್ರತಿಯೊಂದೂ ತನ್ನ ಸೇನಾಸಂಖ್ಯೆಯನ್ನು ಏರಿಸುತ್ತಿದೆ. ಯುದ್ಧ ಸಾಮಗ್ರಿಗಳನ್ನು ಕೂಡಹಾಕುತ್ತಿದೆ. ಗಡಿನಾಡುಗಳನ್ನು ಕೋಟೆಕೊತ್ತಳ ಕಂದಕಗಳಿಂದ ಭದ್ರಗೊಳಿಸುತ್ತಿದೆ. ಆ ಎಲ್ಲ ಜನಾಂಗಗಳ ಎದೆಯನ್ನು ನಡುಗಿಸುತ್ತಿರುವ ವ್ಯಕ್ತಿಯೇ ಹಿಟ್ಲರನು. ಅವನ ಕಾರ್ಯಕ್ರಮದ ಗುಟ್ಟು ಯಾರಿಗೂ ಗೊತ್ತಾಗುವುದಿಲ್ಲ. ಇತರ ಜನಾಂಗಗಳ ಗುಪ್ತಚಾರರೂ ರಾಯಭಾರಿಗಳೂ ಜರ್ಮನಿಯಲ್ಲಿದ್ದರು. ಆದರೆ ಅವರಿಗೆಲ್ಲ ಪಡು ತೋರಿಸಿ ಮೂಡು ಹಾರಿಬಿಡುತ್ತಾನೆ. ತೆಂಕು ತೋರಿಸಿ ಬಡಗು ಕಾಲಿಟ್ಟುಬಿಡುತ್ತಾನೆ. ಹಾಗೆ ಆತನು ಅನಿರೀಕ್ಷಿತನಾಗಿ ಅತಿಕ್ರಮಣ ಮಾಡಿದುದನ್ನು ಕಂಡು ಇತರ ರಾಷ್ಟ್ರಗಳು ಎಚ್ಚೆತ್ತು ಕೋಲಾಹಲವೆಬ್ಬಿಸಿದಾಗ ತನ್ನ ಕೃತಿಗೆ ಏನಾದರೊಂದು ಥಳಕಿನ ನೀತಿಯ ಬಣ್ಣ ಕೊಟ್ಟು ಅದೇ ತನ್ನ ಕೊನೆಯ ಹೆಜ್ಜೆಯೆನ್ನುತ್ತ ಜೋಗುಳ ಹಾಡಿಬಿಡುತ್ತಾನೆ. ಬೆಚ್ಚಿಬಿದ್ದ ಮಕ್ಕಳು ಶಾಂತವಾಗುವಂತೆ ಆ ರಾಗದ ಇಂಪಿಗೆ ಈ ರಾಷ್ಟ್ರಗಳೆಲ್ಲ ತಿರುಗಿ ಗಾಢನಿದ್ರೆಹೋಗುತ್ತವೆ. ಆದರೆ ಇತ್ತೀಚಿಗೆ ಮೇಲಿಂದ ಮೇಲೆ ಗಡಕ್ಕನೆ ನಿದ್ರೆಯಿಂದೆಚ್ಚರಗೊಳ್ಳುವ ಸಂದರ್ಭಗಳು ಬಂದುದರಿಂದ ಮುಂದಿನ್ನು ನಿದ್ರೆ ಹೋದರೆ ಸರ್ವನಾಶವಾದೀತೆಂದೂ ಸದಾ ಜಾಗ್ರತರಾಗಿರುವುದೇ ಲೇಸೆಂದೂ ಈಗ ಅವುಗಳಿಗೆಲ್ಲ ಹೊಳೆಯತೊಡಗಿದೆ. ಕಳೆದ ಸಪ್ಟಂಬರದಲ್ಲಿ ಸುಡೇಟನನ್ನು ವಶಪಡಿಸಿಕೊಳ್ಳುವಾಗ ಅದೇ ತನ್ನ ಕೊನೆಯ ರಾಜ್ಯವಿಸ್ತಾರವೆನ್ನುತ್ತಿದ್ದಾಗಲೇ ಆತನ ಮಹತ್ವಾಕಾಂಕ್ಷೆಯ ಒಳಸಂಚು ಹೇಗೋ ರಟ್ಟಾಗಿತ್ತು. ಅವನ ಕಾರ್ಯಕ್ರಮದ ಹೊತ್ತುಹೊತ್ತಿನ ಸಚಿತ್ರ ವಿವರಣೆಯ ಪತ್ರವು ಬ್ರಿಟನ್ನಿನ ಪ್ರಧಾನಮಂತ್ರಿಗಳು ಜರ್ಮನಿಗೆ ಆಗ ಹೊರಡುವ ದಿನವೇ ಅವರ ಕೈಗೆ ಸಿಕ್ಕಿತ್ತು. ಆದರೆ ಅವರು ಅದನ್ನು ನಂಬಲಿಲ್ಲ. ನಂಬಲು ತಕ್ಕಷ್ಟು ಆಧಾರವಿದ್ದಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಅದನ್ನು ಬಹಿರಂಗಪಡಿಸಿದರೆ ಅನವಶ್ಯವಾಗಿ ಮಹಾಕ್ಷೋಭೆಯನ್ನೆಬ್ಬಿಸಿದಂತಾಗುವುದೆಂದು ಬಗೆದು ಒಳಗಿಟ್ಟುಬಿಟ್ಟರು. ಅನಂತರ ಹಿಟ್ಲರನು ಈವರೆಗೆ ನಡೆಯಿಸಿದ ಕಾರ್ಯಕ್ರಮಗಳನ್ನು ಪರಿಶೀಲಿಸಿದಾಗ ಆ ಪತ್ರವು ಆತನ ಮಹತ್ವಾಕಾಂಕ್ಷೆಯ ಯಥಾವತ್ತಾದ ಸ್ಥೂಲರೇಖಾಚಿತ್ರವೆಂಬುದು ಅವರಿಗೀಗ ಮನವರಿಕೆಯಾಗಿದೆ. ಆ ಪತ್ರದಲ್ಲಿ ಜರ್ಮನಿಯು ಯಾವ ಯಾವ ಸಮಯದಲ್ಲಿ ವಿಸ್ತಾರವಾಗಿ ಮಹಾ ಸಾಮ್ರಾಜ್ಯವಾಗಬೇಕೆಂಬುದನ್ನು ಸಚಿತ್ರವಾಗಿ ತೋರಿಸಿದೆ—೧೯೩೮ರ ವಸಂತಕಾಲ ಆಸ್ಟ್ರಿಯ; ಶರತ್ಕಾಲ ಜೆಕೋಸ್ಲೊವೇಕಿಯ. ೧೯೩೯ ವಸಂತಕಾಲ ಹಂಗೇರಿ; ಶರತ್ಕಾಲ ಪೋಲೆಂಡ್. ೧೯೪೦ ವಸಂತಕಾಲ ಯುಗೋಸ್ಲೇವಿಯಾ; ಶರತ್ಕಾಲ ರುಮೇನಿಯಾ, ಬಲ್ಗೇರಿಯಾ. ೧೯೪೧ ವಸಂತಕಾಲ ಫ್ರಾನ್ಸ್, ಸ್ವಿಜರ್‌ಲೆಂಡ್, ಲಕ್ಸೆಂಬರ್ಗ್, ಹೊಲ್ಲಾಂಡ್, ಬೆಲ್ಜಿಯಮ್, ಡೆನ್ಮಾರ್ಕ್; ಶರತ್ಕಾಲ ಸೋವಿಯಟ್, ಯುಕ್ರೇಯಿನ್. ೧೯೪೮ರ ಒಳಗೆ ಏಷ್ಯಾದ ಟರ್ಕಿ ಮತ್ತು ಯುರೋಪ್ ಖಂಡದಲ್ಲಿ ಸ್ಪೇಯಿನಿನ ಹೆಚ್ಚಿನ ಭಾಗ, ಫ್ರಾನ್ಸಿನ ದಕ್ಷಿಣಭಾಗ, ಗ್ರೀಸ್ ಮತ್ತು ಏಸ್ಕ್ಯಾನ್ಡಿನೇವಿಯಾದ ಒಂದಂಶ ಇವಿಷ್ಟೂ ಇಟಲಿಗೂ ಮತ್ತು ಉಳಿದುದೆಲ್ಲ ಜರ್ಮನಿಗೂ ಅಧೀನವಾಗುವಂತೆ ಮಾಡಿಕೊಳ್ಳಬೇಕೆಂಬ ದಿಗ್ದರ್ಶನವು ಅದರಲ್ಲಿದೆ. ನಡೆದಿರುವ ವಿದ್ಯಮಾನಗಳನ್ನು ಕಂಡರೆ ಈ ಮಹಾ ಯೋಜನೆಯ ಪತ್ರವು ಯಾರೋ ಒಬ್ಬನ ಹುಚ್ಚುಕನಸೆಂದು ಹೇಳಲು ಬರುವುದಿಲ್ಲ. ಸತ್ಯದ ಛಾಯೆ ಈ ಮೊದಲೇ ತೋರಿಬಂದಿದೆ. ಯುರೋಪಿನ ಇತರ ರಾಷ್ಟ್ರಗಳು ಪರಸ್ಪರ ಅವಿಶ್ವಾಸ ಭಿನ್ನಾಭಿಪ್ರಾಯಗಳಿಂದ ಒಂದುಗೂಡದೆ ಇದ್ದರೆ, ಒಂದುಗೂಡಿ ಹಿಟ್ಲರ್ ಮುಸಲೋನಿಗಳಂತೆಯೇ ಸರ್ವ ಸಮರಸನ್ನಾಹಗಳನ್ನು ಅನುಗೊಳಿಸಿ ಗರ್ಜಿಸದಿದ್ದರೆ ಪ್ರಬಲ ರಾಷ್ಟ್ರಗಳೆನಿಸಿಕೊಂಡಿರುವ ಬ್ರಿಟನ್ ಫ್ರಾನ್ಸುಗಳಿಗಾಗಲೀ ಇತರ ಚಿಕ್ಕ ಜನಾಂಗಗಳಿಗಾಗಲಿ ಸ್ವಾತಂತ್ರ್ಯವು ದಕ್ಕಲಾರದೆಂಬುದು ನಿಶ್ಚಯ. ಆದರೆ ಬ್ರಿಟನ್ ಫ್ರಾನ್ಸುಗಳೆರಡು ಮಾತ್ರ ಎಲ್ಲರನ್ನೂ ಕೂಗಿ ಕರೆಯುತ್ತವಲ್ಲದೆ ಆ ಕೂಗಿಗೆ ತಕ್ಕ ಮಾರ್ನುಡಿಯು ಬೇರೆ ರಾಷ್ಟ್ರಗಳಿಂದ ಬಂದಂತೆ ತೋರುವುದಿಲ್ಲ. ಕೆಲವಕ್ಕೆ ಇವರಲ್ಲಿ ನಂಬಿಗೆಯಿಲ್ಲ. ಕೆಲವಕ್ಕೆ ಮೊದಲು ತಮ್ಮನ್ನು ಇವರು ಉಪೇಕ್ಷಿಸಿದ್ದರೆಂದು ವೈಮನಸ್ಸು! ಇನ್ನು ಕೆಲವಕ್ಕೆ ತಾವು ಈ ಒಪ್ಪಂದದ ಸಿಕ್ಕಿನಲ್ಲಿ ಸೇರಿಕೊಂಡರೆ ಹಿಟ್ಲರನು ತಮಗೆ ದೂರವಾದ ಯಾವ ಮೂಲೆಯಲ್ಲಿ ಅತಿಕ್ರಮಿಸಿದರೂ ತಾವು ಅವನ ಮೇಲೆ ಬೀಳಬೇಕಾಗಿರುವುದರಿಂದ ಅನಾವಶ್ಯಕವಾಗಿ ದೂರದ ಮಾರಿಯನ್ನು ಮನೆಬಾಗಿಲಿಗೇಕೆ ಕರೆದುಕೊಳ್ಳಬೇಕೆಂದೂ ತಮ್ಮ ಮೇಲೆಯೇ ಬಿದ್ದಾಗ ಪ್ರಾಣದ ಹಂಗು ತೊರೆದು ಕಾದಾಡಲು ಸನ್ನದ್ಧರಾಗಿದ್ದು ಬಿಡೋಣ ಎಂಬೂ ಯೋಚನೆ. ಇತರ ರಾಷ್ಟ್ರಗಳ ಈ ಮನೋವೃತ್ತಿಯನ್ನು ಹಿಟ್ಲರನು ಚೆನ್ನಾಗಿ ತಿಳಿದುಕೊಂಡೇ ಯಾರ ಲಕ್ಷ್ಯವೂ ಇಲ್ಲದೆ ಮದೋನ್ಮತ್ತನಾಗಿ ಗರ್ಜಿಸುತ್ತಿದ್ದಾನೆ. ಇಂದು ಯುರೋಪಿನ ಪರಿಸ್ಥಿತಿ ಹೀಗಿದೆ. ನಾಳೆ ಅಲ್ಲೇನಾದೀತು ಅಲ್ಲಾಗುವ ಅನಾಹುತದಿಂದ ಬೇರೆ ಎಲ್ಲಿ ಯಾವ ರೀತಿಯ ಪರಿಣಾಮವುಂಟಾದೀತೆಂಬುದನ್ನು ಭವಿಷ್ಯ ಹೇಳಲು ಯಾರಿಗೂ ಸಾಧ್ಯವಿಲ್ಲ.

ಹಿಟ್ಲರನ ನೀತಿ

ಹೊಸದೊಂದು ಮಹಾಯುದ್ಧನಾವೆಯನ್ನು ವಿಲ್‌ಹೆಲ್ಮ್ಸ್ ಹೇವನ್ ಬಂದರದಲ್ಲಿ ಕಡಲಿಗಿಳಿಸುವ ಸಮಾರಂಭದಂದು ಹಿಟ್ಲರನು ಸುಮಾರು 1 ತಾಸು ಭಾಷಣಮಾಡಿದ. ಆ ಮಾತು ಜಗತ್ತಿನ ಮೂಲೆಮೂಲೆಗೂ ಮುಟ್ಟಿದೆ. ಆತನೆಂದುದನ್ನು ಸಂಗ್ರಹವಾಗಿ ಹೇಳುವುದಾದರೆ—'ಹೊರಗಿನ ಲೋಕದಲ್ಲಿ ಬಹುಶಃ ನಮ್ಮನ್ನು ಪ್ರೀತಿಸುವವರಿಲ್ಲ. ಆದರೆ ಅಲ್ಲಿ ನಮಗೆ ಗೌರವ ಇದೆ. ಯಾವ ರಾಷ್ಟ್ರವೇ ಆಗಲಿ ತನ್ನ ಶಕ್ತಿಯನ್ನು ನಮ್ಮದರೊಂದಿಗೆ ಅಳೆಯಬೇಕೆಂದು ಮುಂದಾದರೆ ನಾವು ಅದಕ್ಕೆ ಸದಾ ಸಿದ್ಧರೇ. ಮುನ್ನೂರು ವರುಷಗಳಿಂದ ಬ್ರಿಟನರು ನೀತಿಭ್ರಷ್ಟಜನಾಂಗವಾಗಿ ವರ್ತಿಸಿ ಈಗ ಮುದಿಕಾಲದಲ್ಲಿ ನೀತಿಬೋಧಕರಾಗಿದ್ದಾರೆ. ಜರ್ಮನಿಯ ರಾಜ್ಯದೊಳಗಿನ ಪ್ರತಿಯೊಂದು ಸಮಸ್ಯೆಯೂ ತನ್ನ ಮೂಲಕ ನಿಷ್ಕರ್ಷೆಯಾಗಬೇಕೆಂದು ಬ್ರಿಟನ್ ಹೇಳುವುದಾದರೆ ಜರ್ಮನಿಯೂ ಅದರ ಸಮಸ್ಯೆಗಳ ಕುರಿತು ಹಾಗೇ ಪ್ರತ್ಯುತ್ತರ ಕೊಟ್ಟೀತು. ಪೆಲೆಸ್ತಾಯಿನಿನಲ್ಲಿ ಬ್ರಿಟನರು ಬೇಕುಬೇಕಾದಂತೆ ಮಾಡುತ್ತಿದ್ದಾರೆ. ನಾವೇನಾದರೂ ಅಲ್ಲಿ ಪ್ರವೇಶಿಸಿರುವೆವೇ? ನಮಗೇನಾದರೂ ಅಲ್ಲಿ ಬೇಕಾಗಿದೆಯೇ? ಎಂದಮೇಲೆ ಅವರು ನಮ್ಮ ಅಂತರಿಕ ರಾಜ್ಯಕಾರಣದೊಳಗೇಕೆ ಪ್ರವೇಶಿಸುವುದು? ಪೆಲೆಸ್ತಾಯಿನಿನವರು ತಮ್ಮ ನಾಡಿನ ಸ್ವಾತಂತ್ರ್ಯಕ್ಕಾಗಿ ಹೆಣಗಾಡುತ್ತಿರುವಾಗ ಅವರ ಮೇಲೆ ತುಪಾಕಿ ಹಾರಿಸುವ ಅಧಿಕಾರ ಬ್ರಿಟನಿಗೆ ಎಲ್ಲಿಂದ ಬಂತು? ಮಧ್ಯಯುರೋಪದಲ್ಲಿ ನಾವೇನಾದರೂ ಸಾವಿರಗಟ್ಟಲೆಯಲ್ಲಿ ನರಬಲಿ ಕೊಡಲಿಲ್ಲ. ನಾವೇನು ಮಾಡಿದ್ದಿದ್ದರೂ ಅದು ಶಾಂತಮಾರ್ಗದಲ್ಲೇ. ನಮ್ಮ ಸಮರಸನ್ನಾಹಾತುರತೆಗೆ ಕಾರಣ ಇತರ ರಾಷ್ಟ್ರಗಳ ಸ್ಪರ್ಧೆಯೇ. ಅದರಿಂದಾಗಿ ನಾವು ಮುಂದುವರಿಯಬೇಕಾಗಿದೆ. ಈ ಓಟದಲ್ಲಿ ಇತರರಿಗಿಂತ ನಾವು ಮುಂದಾಗಿಯೇ ಇರುವುದು ನಿಶ್ಚಯ. ನಮ್ಮ ಮತ್ತು ಇಟೆಲಿಯ ಸಖ್ಯವು ಎಂತಹ ಕಾಲದಲ್ಲಿಯೂ ಎಂತಹ ಸನ್ನಿವೇಶದಲ್ಲಿಯೂ ಅಸ್ಥಿರವಾಗಲಾರದು. ಸ್ಪೇಯಿನು ಬೋಲ್ಶೆವಿಕ್ (ಸಮತಾವಾದ) ತತ್ವವನ್ನು ಮುಂದಿಕ್ಕಿ ವಿಜಯಿಯಾಗಿದೆ. ಅಲ್ಲಿ ನಮ್ಮ ಜರ್ಮನ್ ತರುಣರು ತೋರಿದ ಕರ್ತವ್ಯದಕ್ಷತೆಯು ನನಗೆ ಹೆಮ್ಮೆಯ ಸಂಗತಿಯಾಗಿದೆ. ಮಹಾಯುದ್ಧದ ಮೊದಲು ಜರ್ಮನಿಯು ತಾನೂ ಈ ಪ್ರಪಂಚದಲ್ಲಿ ಬದುಕಬೇಕೆಂದು ಪ್ರಯತ್ನಿಸುತ್ತಿತ್ತು. ಆ ಕಾರ್ಯಕ್ರಮವನ್ನು ಅದು ಅಹಿಂಸಾತ್ಮಕ ಶಾಂತಮಾರ್ಗದಲ್ಲಿ ಪ್ರಯೋಗಿಸುತ್ತಿದ್ದರೂ ಇತರ ರಾಷ್ಟ್ರಗಳು ಅದನ್ನು ದ್ವೇಷಿಸಿ, ಪೀಡಿಸಿ, ಕೊನೆಗೆ ಯುದ್ಧವನ್ನು ಘೋಷಿಸಿದುವು. ಆದರೂ ಜರ್ಮನಿಯನ್ನು ಯಾರಿಂದಲೂ ಗೆಲ್ಲಲಿಕ್ಕೆ ಸಾಧ್ಯವಾಗುತ್ತಿದ್ದಿಲ್ಲ. ಕಪಟೋಪಾಯದಿಂದ ಗೆದ್ದರು. ದಂಡಪ್ರಯೋಗವನ್ನೆಸಗದೆ, ವಸಾಹತುಗಳನ್ನು ಬಿಟ್ಟುಕೊಡದೆ, ಯುದ್ಧಸಾಹಿತ್ಯಗಳನ್ನು ಕುಂದಿಸದೆ ಜರ್ಮನಿಯೊಡನೆ ಸಂಧಾನವಿಲ್ಲೆಂದೂ ಜರ್ಮನಿಯು ಅವಕ್ಕೆಲ್ಲ ಮೊದಲಾಗಿ ಮೇಲ್ಪಂಕ್ತಿಯನ್ನು ಹಾಕಿಕೊಟ್ಟರೆ ಇತರರು ಅದನ್ನು ಅನುಸರಿಸುವರೆಂದೂ ಆ ಮೇಲೆ ಸರ್ವಸಮಸ್ಯೆಗಳ ನ್ಯಾಯವಾದ ಇತ್ಯರ್ಥವಾಗುವುದೆಂದೂ ಮುಂತಾಗಿ ಪ್ರೆಸಿಡೆಂಟ್ ವಿಲ್ಸನರ ೧೪ ವಾಗ್ದಾನಗಳನ್ನು ನಂಬಿ ನಾವು ಮೋಸಹೋದೆವು. ಆ ರಾಷ್ಟ್ರಗಳೆಲ್ಲ ವಚನಭ್ರಷ್ಟರಾದವು. ನಮಗೆ ಅನ್ಯಾಯವಮಾಡಿದುವು. ನಮ್ಮನ್ನು ಸುಲಿಗೆಮಾಡಿದುವು. ಈಗ ನಮಗೆ ಯಾರ ಹಂಗೂ ಬೇಡ. ಯಾರ ಭಿಕ್ಷೆಯೂ ಬೇಡ. ಯಾರ ನೀತಿಬೋಧೆಯೂ ಬೇಡ. ಆದರೆ ನಾವು ಶಾಂತಿಪ್ರಿಯರು. ನಮ್ಮ ದೇಶದ ಆರ್ಥಿಕೋನ್ನತಿಗಾಗಿ ಹೋರಾಡುತ್ತೇವೆ. ಯಾರೇನುಬೇಕಾದರೂ ಹೇಳಿಕೊಳ್ಳಲಿ. ಅದರ ಗೊಡವೆ ನಮಗೆ ಬೇಡವಾಗಿದೆ—ಎಂದು ಹಿಟ್ಲರನು ತನ್ನ ನೀತಿಯನ್ನು ಸಮರ್ಥಿಸಿದ.

ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಲ್ಲಿ

ರಜಾಕಾಲದ ಸದ್ವಿನಿಯೋಗ!

ರೂ. 100ರಷ್ಟು ಸಂಪಾದಿಸುವ ಸುಸಂದರ್ಭ!

ಭಾಷಾಸೇವೆ ಮಾಡಬೇಕೆಂದು ಹಂಬಲಿಸುವ ಹಲವು ಉಪಾಧ್ಯಾಯರೂ ವಿದ್ಯಾರ್ಥಿಗಳೂ ನಮ್ಮಲ್ಲಿರುವರು. ಪತ್ರಿಕೆಗಳನ್ನು ಪ್ರೋತ್ಸಾಹಿಸುವುದೂ ಒಂದು ವಿಧದ ಭಾಷಾಸೇವೆಯು. ಉಪಾಧ್ಯಾಯರೂ ವಿದ್ಯಾರ್ಥಿಗಳೂ ಪತ್ರಿಕೆಗಳನ್ನು ಹೇಗೆ ಪ್ರೋತ್ಸಾಹಿಸುವುದೆಂದು ಯಾರಾದರೂ ಕೇಳಬಹುದು. ಎಷ್ಟೋ ಉಪಾಧ್ಯಾಯರು ಸ್ವತಃ ಆಗಲಿ, ಶಾಲೆಯ ಮುಖಾಂತರವಾಗಲೀ, ವಿದ್ಯಾರ್ಥಿಗಳು ತಮ್ಮ ಸಂಘಗಳ ಮೂಲಕವಾಗಲೀ ಪತ್ರಿಕೆಗಳನ್ನು ತರಿಸಿಕೊಂಡು ಪ್ರೋತ್ಸಾಹಿಸುತ್ತಲೇ ಇದ್ದಾರೆ. ಅವರು ಇನ್ನೂ ಮನಸ್ಸು ಮಾಡಿದರೆ ಇನ್ನೂ ಹೆಚ್ಚಾಗಿ ಪ್ರೋತ್ಸಾಹಿಸಲು ಅವಕಾಶವುಂಟು. ಅದಕ್ಕಾಗಿ ಇವರು ರಜಾಕಾಲದಲ್ಲಿ ಸ್ವಲ್ಪ ಪ್ರಯತ್ನಿಸಬೇಕಾಗುವುದು. ಆ ಪ್ರಯತ್ನದಿಂದ ಪತ್ರಿಕೆಗಳಿಗೆ ಪ್ರೋತ್ಸಾಹವಾಗುವುದು ಮಾತ್ರವಲ್ಲದೆ ತಮಗೂ ಸ್ವಲ್ಪ

ರಾಜಕೋಟದ ಕಲಹದ ಕುರಿತು ತೀರ್ಮಾನ

ಸುಭಾಷ್‌ಚಂದ್ರಭೋಸರ ಹೇಳಿಕೆ.

ಅರ್ಥವಿಲ್ಲದ ಬಹಿಷ್ಕಾರ.

ಜಮ್‌ಶೆಡ್‌ಪುರದ ಮಜೂರರು ಟಾಟಾರವರ ಶತಸಾಂವತ್ಸರಿಕೋತ್ಸವಕ್ಕೆ ಬಾಯ್ಕಾಟ್ (ಬಹಿಷ್ಕಾರ) ಹಾಕಿರುವುದನ್ನು ಕೇಳಿ ಭೋಸರವರು ಅವರ ವರ್ತನೆಯನ್ನು ಖಂಡಿಸಿರುವರು. ಇಂಡಿಯವು ಅಭಿಮಾನದಿಂದ ತನ್ನವನೆಂದು ಹೇಳಬಹುದಾದ ಇಂಡಿಯದ ಮಹಾ ಕಾರ್ಖಾನೆಗಳಿಗೆ ಮೊತ್ತಮೊದಲ ಮುಂದಾಳುವೆನಿಸಿದ್ದ ಟಾಟಾರವರ ನೆನಹಿಗೆ ಗೌರವವನ್ನು ಅರ್ಪಿಸುವುದು ಮಜೂರರ ಕರ್ತವ್ಯವಾಗಿತ್ತು. ಮಜೂರರಿಗೆ ಭಂಡವಾಳಗಾರರೊಂದಿಗೆ ಹೋರಾಡುವ ಪ್ರಸಂಗ ಬಂದರೂ ಆ ಕಾದಾಟಗಳು ನಿಷ್ಕಳಂಕವಾಗಿರಬೇಕು. ಉದಾತ್ತವಾಗಿರಬೇಕು. ಈ ತತ್ವವನ್ನು ಮರೆತು ಮನಬಂದಂತೆ ಧನಿಗಳನ್ನು ಬಗ್ಗಿಸಲು ಹವಣಿಸುವುದರಲ್ಲಿ ಹುರುಳಿಲ್ಲ, ನ್ಯಾಯವೂ ಇಲ್ಲ. ಎಂದು ಭೋಸರು ಮಜೂರರ ಬಹಿಷ್ಕಾರ ಚಳವಳಿಯನ್ನು ಉಗ್ರವಾಗಿ ಟೀಕಿಸಿರುವರು.

ಎಸೆಂಬ್ಲಿಯಲ್ಲಿ ಮೆಂಬರರ ಬರಗಾಲ.

ಸಂಯುಕ್ತ ಪ್ರಾಂತದ ನ್ಯಾಯವಿಧಾಯಕ ಸಭೆಯು ತನ್ನ ಕಾರ್ಯ ನಿರ್ವಹಿಸಲಿಕ್ಕೆ ನಿಯಮ ಪ್ರಕಾರ ಅವಶ್ಯವಿರುವ ಕನಿಷ್ಠ ಸಂಖ್ಯೆಯ ಸದಸ್ಯರೂ ಬಾರದೆ ಕಳೆದ ವಾರದಲ್ಲೊಂದು ದಿನ ಮೂರು ಮೂರು ಬಾರಿ ಕಾದು ಕಾದು ಏನೂ ಮಾಡದೆ ದಿನ ದೂಡಬೇಕಾಗಿ ಬಂತು. ಬಹುಶಃ ಮೆಂಬರರಾಗಿ ಚುನಾಯಿಸಲ್ಪಡುವುದರಲ್ಲೇ ಅವರಲ್ಲಿದ್ದ ಅಲ್ಪ ಸ್ವಲ್ಪ ಉತ್ಸಾಹವೆಲ್ಲ ವೆಚ್ಚವಾಗಿತ್ತೋ ಏನೋ? ಈಗ ತುಸ ವಿಶ್ರಾಂತಿ ಹೊಂದುತ್ತಿರಬೇಕು.

ಪ್ರತಿಫಲವು ಸಿಗುವಂತಾಗುವುದು ನಾವು ಸೂಚಿಸುವ ಕೆಲಸವಿಷ್ಟೆ.—

(೧) 'ನವಯುಗ'ಕ್ಕೆ ೫ ಜನ ಚಂದಾದಾರರನ್ನು ಮಾಡಿಕೊಟ್ಟರೆ ಒಂದು ವರ್ಷದ ನವಯುಗವನ್ನು ಧರ್ಮಾರ್ಥ ಕೊಡುವೆವು. ಅಥವಾ ರೂ. 3-4-0ನ್ನು ನಗದಿಯಾಗಿ ಕೊಡುವೆವು. (೨) ೧೦ ಜನ ಚಂದಾದಾರರನ್ನು ಮಾಡಿಕೊಟ್ಟರೆ 2½ ವರ್ಷ 'ನವಯುಗ'ವನ್ನು ಕೊಡುವೆವು. ಯಾ ರೂ. 8ನ್ನು ನಗದಿಯಾಗಿ ಕೊಡುವೆವು. (೩) ೨೫ ಜನರನ್ನು ಮಾಡಿಕೊಟ್ಟರೆ ರೂ. 20ನ್ನು ನಗದಿಯಾಗಿ ಕೊಡುವೆವಲ್ಲದೆ ಒಂದು ವರ್ಷದ ನವಯುಗ ಧರ್ಮಾರ್ಥ ಕೊಡುವೆವು. (೪) ೫೦ ಜನರನ್ನು ಮಾಡಿಕೊಟ್ಟರೆ ರೂ. 45ನ್ನು ಕೊಡುವೆವಲ್ಲದೆ ೨ ವರ್ಷ ನವಯುಗ ಧರ್ಮಾರ್ಥ ಕೊಡುವೆವು. (೫) ೧೦೦ ಜನ ಮಾಡಿಕೊಡುವವರಿಗೆ ರೂ. 100ನ್ನು ಕೊಡುವೆವಲ್ಲದೆ ೫ ವರ್ಷ ತನಕ ನವಯುಗವನ್ನು ಧರ್ಮಾರ್ಥ ಕೊಡುವೆವು. ಉಪಾಧ್ಯಾಯರೂ ವಿದ್ಯಾರ್ಥಿಗಳೂ ಇತ್ತ ಗಮನವಿತ್ತು ನವಯುಗವನ್ನು ಪ್ರೋತ್ಸಾಹಿಸುವುದರೊಂದಿಗೆ ತಾವೂ ಪ್ರತಿಫಲ ಪಡೆಯುವರೆಂದು ನಿರೀಕ್ಷಿಸಲಾಗಿದೆ. ಚಂದಾದಾರರ ಹಣವು ಮಾತ್ರ ಮುಂಗಡವಾಗಿ ಬರಬೇಕಾಗಿದೆ. ಬರೇ ಹೆಸರು ಸಂಗ್ರಹಿಸಿ ಕಳಿಸಿದರೆ ಸಾಲದು. ಬೇರೇನಾದರೂ ಮಾಹಿತಿ ಬೇಕಾಗಿದ್ದರೆ ಬರೆಯುವುದು.

ಮೆನೇಜರ್.

ಫ್ರಾಂಕೋನಿಗೆ ಅಮೇರಿಕದ ಅಂಗೀಕಾರ: ಪೋಪರ ಆಶೀರ್ವಾದ.

ಜನರಲ್ ಫ್ರಾಂಕೋನನ್ನು ಸ್ಪೈನಿನ ನ್ಯಾಯಬದ್ಧವಾದ ಅಧಿಕಾರಿಯೆಂದು ಯುನೈಟೆಡ್ ಸ್ಟೇಟ್ಸ್ ಅಂಗೀಕಾರ ಮಾಡಿತು. ಪೋಪರು ಫ್ರಾಂಕೋನಿಗೆ ಅಭಿನಂದನೆಯ ಸಂದೇಶವನ್ನು ತಂತಿಯ ಮೂಲಕ ಕಳುಹಿಸಿದ್ದಾರೆ. ತಮ್ಮ ಕಾಂಕ್ಷೆಯಂತೆ ಸ್ಪೈನಿನಲ್ಲಿ ಕೆಥೋಲಿಕ್ ವಿಜಯವಾದುದಕ್ಕಾಗಿ ದೇವರಿಗೆ ಧನ್ಯವಾದವನ್ನರ್ಪಿಸಿರುತ್ತೇನೆಂದು ಅದರಲ್ಲಿ ಹೇಳಿರುವರು.

ರಾಜಕೋಟೆ ಕಲಹದ ಕುರಿತು ಚೀಫ್ ಜಸ್ಟೀಸರ ತೀರ್ಮಾನ

ಸರ್ದಾರ್ ಪಟೇಲರ ಶಿಫಾರಸು ಅಬಾಧಿತವಾದುದು.

ರಾಜಕೋಟೆ ಸಮಸ್ಯೆಯ ಕುರಿತು ಮಹಾತ್ಮಾ ಗಾಂಧಿಯವರು ಕೈಕೊಂಡ ಚರಿತ್ರಾರ್ಹ ಉಪವಾಸದಿಂದಾಗಿ ವೈಸರಾಯರದರಲ್ಲಿ ಕೈಯಿಕ್ಕಿ ಸುಧಾರಣಾ ಕಮಿಟಿಯ ಮೆಂಬರರ ನೇಮಕದ ಕುರಿತೆದ್ದ ವಿವಾದವನ್ನು ತೀರ್ಮಾನಿಸಲು ಚೀಫ್ ಜಸ್ಟೀಸರಿಗೆ ಅಧಿಕಾರವೀಯಲಾಗಿತ್ತಷ್ಟೆ. ಇದೇ ತಾ. 3ರಲ್ಲಿ ಚೀಫ್ ಜಸ್ಟೀಸ್ ಸರ್. ಮಾರಿಸ್ ಗ್ವಾಯರರು ಆ ಕುರಿತು ಕೊಟ್ಟ ಎವಾರ್ಡ ಈ ಕೆಳಗಿನಂತಿದೆ—

ಥಾಕೋರ್ ಸಾಹೇಬರ ಜಾಹೀರುನಾಮೆ ಮತ್ತು ಆ ಸಂಬಂಧದ ಶಬ್ದರಿಕಾರ್ಡುಗಳಲ್ಲಿ ಸಣ್ಣ ಪುಟ್ಟ ಅರ್ಥ ವ್ಯತ್ಯಾಸಗಳೇನೋ ಇರಬಹುದು. ಆದರೆ ಸರದಾರ ಪಟೇಲರು ಶಿಫಾರಸು ಮಾಡಿದ ಮೆಂಬರರನ್ನೇ ಕಮಿಟಿಗೆ ನೇಮಿಸಿಕೊಳ್ಳತಕ್ಕದ್ದೆಂಬುದರಲ್ಲಿ ಯಾವ ಅನುಮಾನವೂ ಉಳಿಯುವುದಿಲ್ಲ. ಪಟೇಲಸೂಚಿತ ಮೆಂಬರರನ್ನು ಅಲ್ಲಗಳೆಯುವ ಅಧಿಕಾರವನ್ನು ಥಾಕೋರ್ ಸಾಹೇಬರು ಕಾದಿಟ್ಟುಕೊಂಡುದಿಲ್ಲ. ಸರದಾರ್ ಶಿಫಾರಸಿನ ಕುರಿತು ರಾಜಾ ಥಾಕೋರ್ ಸಾಹೇಬರು ಕಾರಣ ಕೊಟ್ಟು ಟೀಕಿಸುವ ಅಧಿಕಾರವುಳ್ಳವರಿರುವರು. ಆದರೆ ಹಾಗೆ ಸೂಚಿಸಲ್ಪಟ್ಟ ಮೆಂಬರರು ಸಂಸ್ಥಾನದ ಪ್ರಜೆಗಳು ಯಾ ನೌಕರರಲ್ಲವೆಂಬ ಕಾರಣ ವಿನಹ ಇತರ ಯಾವ ಕಾರಣಗಳಿಂದಾದರೂ ಸರದಾರ್ ಪಟೇಲರ ತೀರ್ಮಾನವೇ ಕೊನೆಯದಾಗಿರತಕ್ಕದ್ದು.

ಕಮಿಟಿಯ ಮೆಂಬರರು ಹತ್ತು ಮಂದಿ ಮಾತ್ರವಿರಬೇಕು. ಅಧ್ಯಕ್ಷತನಕ್ಕೆ ಅವರೊಳಗೊಬ್ಬನನ್ನಾರಿಸಬೇಕಲ್ಲದೆ ಹೊರಗಿನವರನ್ನು ನೇಮಿಸಕೂಡದು. ಈ ರೀತಿ ರಚಿಸಲ್ಪಟ್ಟ ಕಮಿಟಿಯನ್ನು ಥಾಕೂರ್ ಸಾಹೇಬರೇ ಕಾರ್ಯಕ್ಕಿಳಿಸಬೇಕು. ಸಾಹೇಬರು ತನ್ನ ಪರವಾಗಿ ಮೆಂಬರರನ್ನು ಸೇರಿಸಿಕೊಳ್ಳುವ ಅಧಿಕಾರ ಹಾಗೂ ಶಿಫಾರಸು ಹೊಂದಿದ ಮೆಂಬರರನ್ನು ಸೇರಿಸಿಕೊಳ್ಳುವ ಹಕ್ಕುಗಳೊಳಗೆ ವ್ಯತ್ಯಾಸವಿರಲಾರದು.

ರಾಜಾ ಥಾಕೋರ್ ಸಾಹೇಬರ ಹೇಳಿಕೆಯ ಕುರಿತು ವಚನದ್ರೋಹವೇನಾದರೂ ನಡೆದಿರುವದೋ ಎಂಬುದನ್ನು ಸೂಚಿಸುವ ಕರ್ತವ್ಯವು ತನ್ನದಲ್ಲವೆಂದು ಚೀಫ್ ಜಸ್ಟೀಸರು ಸೂಚಿಸಿರುವರು.

ಸರ್. ಮಾರಿಸ್ ಗ್ವಾಯರರು ಭಿನ್ನಾಭಿಪ್ರಾಯಗಳು ಎಷ್ಟೇ ಬಲವಾಗಿದ್ದರೂ ಅವು ಗೌರವಪೂರ್ವಕವಾಗಿದ್ದು, ಕಮಿಟಿಯು ಆರೋಪ ಪ್ರತ್ಯಾರೋಪಗಳ ಉದ್ರೇಕವಿಲ್ಲದ ವಾತಾವರಣದಲ್ಲಿ ಕಾರ್ಯಕೈಗೊಂಡರೆ ರಾಜಕೋಟೆಯ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬಹುದೆಂದು ಆಶಿಸಿರುವರು. ವ್ಯಕ್ತಿಗಳ ಅಥವಾ ಪಕ್ಷಗಳ ಪ್ರತಿಷ್ಠೆಯು ಮಹತ್ವದ್ದಿರಬಹುದಾದರೂ ರಾಜಕೋಟೆಯ ಸಾರ್ವಜನಿಕರ ಹಿತರಕ್ಷಣೆಯು ಅದಕ್ಕಿಂತ ಕಡಿಮೆ ಪ್ರಾಮುಖ್ಯತೆಯುಳ್ಳದ್ದಲ್ಲವೆಂದು ಚೀಫ್ ಜಸ್ಟೀಸರ ಸೂಚನೆ, ಈ ತೀರ್ಮಾನವು ಪ್ರಜಾಪಕ್ಷದವರ ಸುಸ್ಪಷ್ಟ ವಿಜಯವಾಗಿದೆ.

ಸರ್. ಗ್ರಿಗ್ಗರ ಕ್ಷಮಾಯಾಚನೆ.

ತಾ. ೨೯ರಲ್ಲಿ ಕೇಂದ್ರ ಅಸೆಂಬ್ಲಿ ಸಭೆಯಲ್ಲಿ ಕೋಲಾಹಲ ತಮಾಷೆಯೊಂದು ನಡೆಯಿತು. ಚರ್ಚೆ ಗಲಾಟೆಗಳಾಗಿ ಕೊನೆಗೆ ಎಲ್ಲವೂ ಚೆನ್ನಾಗಿ ಕೊನೆಗೊಂಡವು. ಅದರ ಸಾರಾಂಶವಿಷ್ಟೆ:—

ರೈಲ್ವೆ ಆಯವ್ಯಯದ ಕುರಿತಾದ ಕೊನೆಯ ಬೇಡಿಕೆಯು ಚರ್ಚೆಗೆ ಬಂದಾಗ ಸಭಾಧ್ಯಕ್ಷರು ಈ ನಿರ್ಣಯದ ಕುರಿತು ಸಭೆಯ ಅಭಿಮತವೇನೆಂದು ನಿಶ್ಚಯಿಸಲು 'ಡಿವಿಜನ್' ನಡೆಸ ವ್ಯವಸ್ಥೆ ಮಾಡಿದರು. ಆಗ ಫಿನಾನ್ಸ್ ಮೆಂಬರರಾದ ಜೇಮ್ಸ್

ಸರ್. ಗ್ರಿಗ್ಗರು

ಗ್ರಿಗ್ಗರು ಶ್ರೀ. ಸತ್ಯಮೂರ್ತಿಗಳೊಡನೆ ಕೋಪಗೊಂಡು ಏನೋ ಹೇಳಿದರು. ಇದೇನೆಂದು ಗ್ಯಾಲರಿಯ ಸಭಿಕರಿಗೆ ಗೊತ್ತಾಗಲಿಲ್ಲ. ಶ್ರೀ. ಎಂ ಎಸ್. ಅಣೆಯವರು ಸಭೆಯಲ್ಲಿ ಮಾತನಾಡುತ್ತ ಸರ್ ಗ್ರಿಗ್ಗರು ಆಕ್ಷೇಪಣೆಯ ನಿಂದಾಮಾತನ್ನು ನುಡಿದರೆಂದರು. ಆಗ ಸತ್ಯಮೂರ್ತಿಗಳು ಕಾಂಗ್ರೆಸ್ ಪಕ್ಷಕ್ಕೆ ಅಸೆಂಬ್ಲಿಯಲ್ಲಿ ನಿರ್ಣಯಗಳ ಚರ್ಚೆಯಲ್ಲೂ ನಿರ್ಧಾರದಲ್ಲೂ ಮೂರು ಬಾರಿಯೂ ಜಯ ದೊರೆತುದು ಸರ್. ಗ್ರಿಗ್ಗರ ತಾಳ್ಮೆಗೆಡಿಸಿದೆ. ಇವರ ಕೋಪದ ವರ್ತನೆಯು ಅಹಿತವಾಗಿದೆ ಎಂದರು. ಗ್ರಿಗ್ಗರು ಕ್ಷಮಾಪಣೆ ಬೇಡಬೇಕೆಂದು ಸೂಚನೆಗಳು ಬಂದವು. ಅವರ ವರ್ತನೆಗಳು ಟೀಕೆಗಳಾದುವು. ಮುಸ್ಲಿಮ್ ಲೀಗ್ ಮೆಂಬರರೂ ಗ್ರಿಗ್ಗರಿಗೆ ವಿರೋಧವಾದರು. ಆಗ ಉಪಾಯವಿಲ್ಲದೆ ಗ್ರಿಗ್ಗರು ಸತ್ಯಮೂರ್ತಿಗಳ ಸಮೀಪಕ್ಕೆ ತೆರಳಿ ಸ್ಪಷ್ಟವಾಗಿ ಮಾತನಾಡಿ ಕ್ಷಮೆ ಯಾಚಿಸಿದರು. ಆಗ ಮೆಂಬರರು ವೈಯಕ್ತಿಕ ಕ್ಷಮಾಪಣೆ ಸಾಲದೆಂದೂ ಬಹಿರಂಗವಾಗಿ ಕ್ಷಮೆ ಯಾಚಿಸಬೇಕೆಂದೂ ಹೇಳಿದರು. ಕೊನೆಗೆ ಮುಖಂಡರಿಗೆ ಈ ಕೋಲಾಹಲದ ತಮಾಷೆ ಸಾಕೆನಿಸಿತು, ಸಮಾಧಾನವಾಯಿತು, ಗ್ರಿಗ್ಗರು ಇನ್ನೊಮ್ಮೆ ಕ್ಷಮೆ ಬೇಡಿದರು. ಗ್ರಿಗ್ಗರಿಗೂ ಮುಖಂಡರಿಗೂ ಮಾತುಕತೆಯಾಗಿ ಶಾಂತಿಯಾಯಿತು. ಗ್ರಿಗ್ಗರು ಸತ್ಯಮೂರ್ತಿಯವರಿಗೆ ಹಸ್ತಲಾಘವವಿತ್ತು ಶಾಂತಿಸಮಾಧಾನವನ್ನೂ ಕ್ಷಮೆಯನ್ನೂ ತೋರಿದರು.

ಹಾಫಿಯಾದಲ್ಲಿ ಕಮಿಶನರನ್ನು ಕೊಲ್ಲಲು ಪ್ರಯತ್ನ.

ಇಬ್ಬರು ಅರಬ್ಬರು ಹಾಫಿಯಾದ ಅಸಿಸ್ಟಂಟ್ ಕಮಿಶನರನ್ನು ಕೊಲ್ಲಲು ಪ್ರಯತ್ನಿಸಿದರು. ಕಮಿಶನರು ತನ್ನ ಮನೆಯಿಂದ ಹೊರಟಾಗ ಆರು ಗುಂಡು ಹೊಡೆದರು. ಅವುಗಳಲ್ಲಿ ನಾಲ್ಕು ಕಮಿಶನರ ಮೋಟರ್ ಕಾರಿಗೆ ತಗಲಿತು. ಒಂದು ಅವರ ಟೊಪ್ಪಿಗೆಯನ್ನು ಮಾತ್ರ ಹಾರಿಸಿತು, ಮತ್ತೊಂದು ಗುರಿ ತಪ್ಪಿದುದರಿಂದ ಆ ಕಮಿಶನರ್ ಎಸ್. ಡಿ. ಕೋರ್ಸೆಲ್ಡರು ಬದುಕಿಕೊಂಡರು.

ಮುಸಲೋನಿಗೆ ಜಾಗಬೇಕು. ಯಾರಾದರೂ ಕೊಡಿ.

'ನಮಗೆ ತಕ್ಕಷ್ಟು ಜಾಗವಿಲ್ಲ. ಆದುದರಿಂದ ನಮಗೆ ಯಾರಾದರೂ ಜಾಗಕೊಡಬೇಕು. ಕೊಡದಿದ್ದರೆ ನಾವು ಎಳೆದುಕೊಳ್ಳುತ್ತೇವೆ. ಈ ಪ್ರಯತ್ನದಲ್ಲಿ ನಾವು ಕಾಗದ ಕಾಯಿಗಳಿಗೆ ಮನ್ನಣೆ ಕೊಡಲಾರೆವು ಅಂತಹ ಒಪ್ಪಂದ ಕರಾರು ಮುಂತಾದವುಗಳಿಂದ ನಾವು ಪ್ರತಿಬಂಧಿಸಲ್ಪಡತಕ್ಕವರು ಅಲ್ಲ. ಏಕೆಂದರೆ ಎಲ್ಲದಕ್ಕಿಂತಲೂ ಮೇಲಾದುದು ನಮ್ಮ ಶಕ್ತಿ ಮತ್ತು ನಿರ್ಧಾರ—ಎಂದು ಮುಸಲೋನಿಯು ಇಟೇಲಿಯನರಿಗೆ ಪ್ರೇರಿಸುತ್ತಾನೆ.

ನಿನ್ನೆಯ ಒಪ್ಪಂದ ನಿನ್ನೆಗೇ.

ಒಪ್ಪಂದಕ್ಕೆ ಸಹಿಹಾಕಿದ ಶಾಯಿ ಆರುವಷ್ಟರಲ್ಲಿ ಅದರಲ್ಲಿ ಉಲ್ಲೇಖಿತವಾದ ವಾಗ್ದಾನ ಭರವಸೆಗಳೂ ಹಾರಿಹೋಗುತ್ತವೆ. ಹಿಟ್ಲರನ ನಂಬಿಗೆ ಹಾಗೆಂದು ತೋರುತ್ತೆ. ಮೆಮೆಲ್ ಪ್ರಾಂತವನ್ನು ಕಳೆದ ವಾರ ಜರ್ಮನಿಗೆ ಸೇರಿಸಿಕೊಂಡಾಗ ಅದನ್ನು ಬಿಟ್ಟುಕೊಟ್ಟ ಲಿಥುವೇನಿಯ ಸರಕಾರಕ್ಕೂ ಹಿಟ್ಲರನಿಗೂ 'ಲಿಥುವೇನಿಯಾ-ಜರ್ಮನ್ ಟ್ರೀಟಿ' ಎಂಬ ಒಂದು ಒಪ್ಪಂದವಾಗಿತ್ತು. ಅದರ ಶರತುಗಳಿಗೆ ವಿರೋಧವಾಗಿ ಎಷ್ಟೋ ಲಿಥುವೇನಿಯರನ್ನು ಈಗಾಗಲೇ ಹಿಟ್ಲರ್ ಸರಕಾರವು ಸೆರೆಮನೆಯೊಳಗೆ ತುರುಕಿಯಾಯಿತು. ಅವರ ಆರ್ಥಿಕ ವ್ಯವಹಾರಗಳಲ್ಲಿ ಪೀಡೆ ಪ್ರತಿಬಂಧಕಗಳ ಪ್ರಯೋಗವಾಗುತ್ತಿದೆ. ಒಪ್ಪಂದವಾಗಿ ಒಂದು ವಾರವೂ ಆಗಿಲ್ಲ. ಹೀಗೂ ಮಾಡಬಹುದೇ ಎಂದು ಬರ್ಲಿನದಲ್ಲಿರುವ ಲಿಥುವೇನಿಯಾ ರಾಯಭಾರಿಯು ಜರ್ಮನ್ ಸರಕಾರವನ್ನು ಪ್ರಶ್ನಿಸಿದ್ದಾನೆ. ಉತ್ತರವಿನ್ನೂ ಬಂದಿಲ್ಲ.

ಪೆಲೆಸ್ತಾಯಿನಿಯಲ್ಲಿ ಅರಬ್ಬರ ಮೇಲೆ ಬಿಗಿ ಲಗಾಮ್

ಕಳೆದ ವಾರದಲ್ಲೆಲ್ಲ ಬ್ರಿಟಿಷ್ ಮಿಲಿಟರಿಯು ಮನೆಮನೆಗಳನ್ನು ಜಪ್ತಿಮಾಡು

ಸ್ವತಂತ್ರಭಾರತ ಒಂದೇ ಸಹಾಯಮಾಡಬಲ್ಲುದು

ತ್ತಲಿತ್ತು. ಶಾಸನ ವಿರುದ್ಧವಾಗಿ ಕೋವಿ ರಿವಾಲ್ವರ್ ಬಾಂಬು, ಹಿಡಿಸುವದ್ದು ಮುಂತಾದುವನ್ನು ಸಂಗ್ರಹಿಸಿಟ್ಟುಕೊಂಡಿರುವವರನ್ನು ಹಿಡಿದು ಸೆರೆಮನೆಗೊಯ್ಯಲಾಗಿದೆ. ಅಲ್ಲಲ್ಲಿ ದಿನವೂ ದೊರಕುವ ಕಾಗದಪತ್ರಗಳಿಂದ ಈ ಭಯೋತ್ಪಾದಕ ಅರಬ್ಬ್ ತಂಡದ ಗುಟ್ಟುಗಳು ರಟ್ಟಾಗುತ್ತಿವೆ. ಅದರ ಮೂಲಕ ಅವರ ಕೂಟಗಳನ್ನು ಒಡೆಯಲು ಸೈನಿಕರಿಗೆ ಸುಲಭವಾಗಿದೆ.

ನೀರಿನ ಮೇಲೂ ಮತ್ತು ನೆಲದ ಮೇಲೂ ಓಡುತ್ತಿರುವ ಮೋಟಾರು ಕಾರು!

ಈ ವರ್ಷ ಬರ್ಲಿನ್ ನಗರದಲ್ಲಿ ಅಂತರ್ ರಾಷ್ಟ್ರೀಯ ಓಡಾಡುವ ಯಂತ್ರಗಳ ಪ್ರದರ್ಶನವು ಜರಗಿತು. ಈ ಸಂದರ್ಭದಲ್ಲಿ ಒಂದು ನೂತನ ಯಂತ್ರವು ಅನೇಕರನ್ನು ಆಕರ್ಷಿಸಿತು. ಈ ಯಂತ್ರವು ಒಂದು 'ಕಾರಿ'ನಂತಿದೆ. ಈ ಮೋಟಾರ್ ಕಾರು (ಟ್ರಿಪಲ್ ಅಂಫಿಬಿಯನ್ ಕಾರ್) ನೆಲದ ಮೇಲೆ ಗಂಟೆಗೆ ೭೫ ಮೈಲಿ ವೇಗದಲ್ಲಿ ಓಡುತ್ತದೆ. ನೀರಿನ ಮೇಲೆ ಗಂಟೆಗೆ ೧೧ ಮೈಲಿ ಓಡುವುದು. ಸರೋವರವೊಂದರಲ್ಲಿ ಅದು ಓಡಿದ ಮೇಲೆ ತಕ್ಷಣವೇ ಮರಳಿನ ಮೈದಾನದ ಮೇಲೂ ನೇರವಾಗಿ ಓಡಿತು!

೪೦ ಮಂದಿ ರಾಜಕೀಯ ಕೈದಿಗಳ ಉಪವಾಸ

ಢೆಂಕನಾಲ್ ಕಾರಾಗೃಹದಲ್ಲಿ ೪೦ ಜನ ರಾಜಕೀಯ ಕೈದಿಗಳು ತಮಗೆ ಯೋಗ್ಯವಾದ ಆಹಾರವನ್ನು ಕೊಡುವುದಿಲ್ಲವೆಂಬುದರಿಂದ ಉಪವಾಸ ಮುಷ್ಕರವನ್ನು ನಡೆಸುತ್ತಿದ್ದಾರೆಂದು ತಿಳಿದುಬರುತ್ತದೆ.

ಸ್ವತಂತ್ರ ಭಾರತವೊಂದೇ ಸಹಾಯಮಾಡಬಲ್ಲುದು!
ಅಂತರ್ರಾಷ್ಟ್ರೀಯ ಬಿಕ್ಕಟ್ಟಿನ ಕುರಿತು ಪಂಡಿತ ನೆಹರುಗಳ ವೀರೋದ್ಗಾರ! ದರೋಡೆಗಾರರ ಧಾಳಿ.

ಪಂಡಿತ ಜವಾಹಿರಲಾಲರು ಸದ್ಯದ ಅಂತರ್ರಾಷ್ಟ್ರೀಯ ವಾತಾವರಣದ ಕಾರ್ಮುಗಿಲ ಕುರಿತು ನೇಶನಲ ಹೆರಾಲ್ಡ್ ಪತ್ರಿಕೆಯ ಲೇಖನವೊಂದರಲ್ಲಿ ಹೀಗೆಂದು ಉಲ್ಲೇಖಿಸಿರುವರು. ನಮ್ಮ ಸ್ವಂತ ಸಮಸ್ಯೆಗಳೇ ತಲೆಕೆಡಿಸುವಷ್ಟಿವೆ. ಆದರೂ ಈ ಕಾಲದ ಸಮಸ್ಯೆಗಳ ಸಮಸ್ಯೆಯೆಂದರೆ ಜಗತ್ತಿನಲ್ಲಿ ದರೋಡೆಗಾರ ತಂಡದ ಪ್ರಾಬಲ್ಯ ಮತ್ತು ವಿಜಯ. ಯುರೋಪು ಹಾಗೂ ಇತರ ಕಡೆಗಳಲ್ಲಿ ಕ್ಷಣಕ್ಷಣಕ್ಕೂ ಕಗ್ಗತ್ತಲೆ ಕವಿಯುತ್ತಾ ಬಂದು ಬೆಳಕು ಮಾಯವಾಗಿದೆ. ಈ ಕಗ್ಗತ್ತಲೆ ಸ್ವಾತಂತ್ರ್ಯದ ಕೊಲೆಯಾಗಿ ಪಶುಭಕ್ಷ್ಯಿಯ ತಾಂಡವ ನಡೆದಿದೆ. ಹಲವು ಶೋಚನೀಯ ಘಟನೆಗಳನ್ನು ಎದೆ ಬಿರಿಯುವಂತಹ ಭೀಕರ ಘಟನೆಗಳನ್ನು ದಿನದಿನಕ್ಕೆ ನೋಡುವಂತಾಗಿದೆ. ದೇಶದ ನಂತರ ದೇಶವೆಂಬಂತೆ ಒಂದೊಂದೇ ಸ್ವತಂತ್ರ ರಾಷ್ಟ್ರಗಳು ಬಲಿಬೀಳುತ್ತಾ ಹೋಗುತ್ತಿವೆ. ಮೂಕ ಮಿಲಿಯಗಳು ಬಂಡಾಯಗಾರರ ವಶ ಬಿದ್ದು ಒದ್ದಾಡುವುದನ್ನು ನಾವಿಂದು ಕಾಣುತ್ತಿದ್ದೇವೆ.

'ಭ್ರಾತೃಭಾವ ಭಗಿನೀಭಾವ' ಎಂಬ ಶಬ್ದಗಳು ಒಣ ಹರಟೆಗಳು ಎನ್ನುತ್ತಾನೆ ಮುಸಲಿನಿ. ಖಡ್ಗವೊಂದಕ್ಕೆ ಮಾತ್ರ ಬೆಲೆಕೊಡಬಲ್ಲನಾತ. ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಂಸ್ಕೃತಿ ಮತ್ತು ನಾಗರಿಕತೆಯ ತಲೆ ಕಡಿಯುವ ಆಯುಧವನ್ನು ಮಾತ್ರ ಗಣಿಸಬಲ್ಲನಾತ. ರಿಪಬ್ಲಿಕನ್ ಸ್ಪೈನಿನ ಚಿರಸ್ಮರಣೀಯ ಪರಾಕ್ರಮದ ನೆನಹೊಂದಲ್ಲದೆ ಮತ್ತಾವುದೂ ಇಂದು ಉಳಿದಿಲ್ಲ. ಝೆಕೋಸ್ಲೋವೇಕಿಯಾವು ಯುರೋಪಿನ ನಕಾಶೆಯೊಳಗೆ ಸೇರಿ ಹೋಯಿತು. ಬ್ರಿಟನ್ ಮತ್ತು ಫ್ರಾನ್ಸುಗಳು ಬಿಜ್ಜೆಬಿಟ್ಟು ಅದನ್ನು ಹಿಟ್ಲರನ ಬಲೆಯೊಳಗೊಡ್ಡಿದವು. ಈ ಡಿಕ್ಟೇಟರನು ಮುಂದಕ್ಕೇನು ಹೇಳುವನೋ, ಏನು ಮಾಡುವನೋ ಎಂದು ನಾವು ದಿನದಿನಕ್ಕೂ ಕಿವಿಯರಳಿಸುವಂತಾಗಿದೆ; ಕತ್ತು ನೀತುವಂತಾಗಿದೆ. ಈ ಎಲ್ಲಾ ವಿದ್ಯಮಾನಗಳ ಪರಿಣಾಮವು ಭಾರತದ ಮೇಲೆ ಹೇಗಾಗಬಹುದು? ಫ್ಯಾಸಿಸಮ್ ಅಥವಾ ನಾಜಿಸಮ್ ಲೋಕವನ್ನು ಗೆದ್ದ ಮೇಲೆ ಭಾರತದ ಸ್ವಾತಂತ್ರ್ಯವು ಕೆಲವೇ ದಿನಗಳ ಮಾತಾಗಿ ಉಳಿಯಬಹುದು. ಲೋಕದ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವನ್ನು ಹೊಂದಿಕೊಂಡಿದೆ ನಮ್ಮ ಅದೃಷ್ಟ ಕೂಡ. ಸ್ವಾತಂತ್ರ್ಯ ಪ್ರಿಯ ಜನಾಂಗಗಳ ಒಕ್ಕಟ್ಟಿನಿಂದಲೇ ಗಂಡಾಂತರವು ತೊಲಗಬೇಕು. ಭಾರತವು ಆ ಒಗ್ಗಟ್ಟಿಗಾಗಿ ಇದೆ. ಅವರೆ ನಾವು ಯುರೋಪಿನ ಇಂದಿನ ಪರಿಸ್ಥಿತಿಗೆ ಹಿಟ್ಲರ್ ಮುಸಲನಿಗಳೇ ಕಾರಣರೆಂದು ಭಾವಿಸಬಾರದು. ಹಿಂದಿನ ಚರಿತ್ರೆಗಳನ್ನು ನೋಡಿದರೆ ಫ್ರೆಂಚ್ ಸರಕಾರದಿಂದ ಸಮರ್ಥಿಸಲ್ಪಟ್ಟ ಬ್ರಿಟಿಷ್ ಧೋರಣೆಯೇ ಇದಕ್ಕೆ ಕಾರಣವೆಂದು ತಿಳಿಯುವದು.

ಯುದ್ಧಾವಕಾಶದಲ್ಲಿ ಭಾರತ

ಯುದ್ಧಕಾಲದಲ್ಲಿಯೂ ಶಾಂತಿಕಾಲದಲ್ಲಿಯೂ ಮಿ. ಚೇಂಬರ್ಲೀನರ ಬೆನ್ನನ್ನು ಹಿಂದೂಸ್ಥಾನವೆಂದಿಗೂ ಹಿಡಿಯಲಾರದೆಂಬುದು ನಿಶ್ಚಯ. ತನ್ನ ಸ್ವಂತ ಜನರಿಗೆ ಪ್ರಜಾಪ್ರಭುತ್ವವಿಲ್ಲದೆ ಅನ್ಯ ಪ್ರಜಾ ಪ್ರಭುತ್ವಗಳ ಸಹಕಾರಕ್ಕೆ ಭಾರತವು ಹೋಗಲಾರದು. ಸ್ವಾತಂತ್ರ್ಯ ಮತ್ತು ಸ್ವಸಿದ್ಧ ಹಕ್ಕುಗಳು ನಮಗೆ ದೊರೆತಾಗಲೇ ನಾವು ಬ್ರಿಟಿಷರ ಯಥಾರ್ಥತೆಯ ಪರಿಚಯ ಮಾಡಿಕೊಳ್ಳಲು ಶಕ್ತರಾಗುವೆವು. ಈ ಪರಿಸ್ಥಿತಿ ಬಂದಾಗ ಮಾತ್ರವೇ ಪರಸ್ಪರ ಸಹಕಾರದಿಂದ ಎಲ್ಲರ ವಿರೋಧಿಗಳನ್ನು ಇದಿರಿಸುವ ಯೋಜನೆಮಾಡಲವಕಾಶ ದೊರೆಯುವದು.

ಶರಚ್ಚಂದ್ರ ಭೋಸರು ಕಾಂಗ್ರೆಸ್ಸಿನಿಂದ ದೂರಾಗುವರೇ?

ಶ್ರೀ. ಶರಚ್ಚಂದ್ರ ಭೋಸರು ಬಂಗಾಳ ಎಸೆಂಬ್ಲಿಯ ವಿರೋಧ ಪಾರ್ಟಿಯ ಮುಂದಾಳುತ್ವವನ್ನು ತ್ಯಜಿಸುವರೆಂದೂ ಅಂತೆಯೇ ಕಾಂಗ್ರೆಸ್ ಚಳುವಳಿಯನ್ನು ಪರಿತ್ಯಜಿಸುವರೆಂದೂ ಸ್ಟಾರ್ ಆಫ್ ಇಂಡಿಯಾ ಪತ್ರಿಕೆಯ ಬಾತ್ಮಿಯೊಂದರಿಂದ ತಿಳಿದುಬರುತ್ತದೆ. ತ್ರಿಪುರಿಯಿಂದ ಹಿಂದಿರುಗಿದ ಮೇಲೆ ಶ್ರೀಯುತರು ಎರಡು ದಿನ ಮಾತ್ರ ಎಸೆಂಬ್ಲಿ ಸಭೆಗೆ ಹೋಗಿದ್ದರು. ಮಿಕ್ಕ ದಿವಸಗಳಲ್ಲೆಲ್ಲಾ ಹೈಕೋರ್ಟಿನಲ್ಲಿ ತಮ್ಮ ವಕೀಲವೃತ್ತಿಗೆ ಹೋಗಿದ್ದರು.

ಶ್ರೀ ಶರಚ್ಚಂದ್ರ ಭೋಸರು.

ಭಾರತದಲ್ಲಿ ಯುದ್ಧಸಿದ್ಧತೆಗಳೆ?
ಕೇಂದ್ರ ಅಸೆಂಬ್ಲಿಯಲ್ಲಿ ಚರ್ಚೆ

“ಇಂಡಿಯಾ ಸರ್ಕಾರದವರು ಯುದ್ಧಸಿದ್ಧತೆಗಳಿಗಾಗಿ ವಿಶೇಷ ಏರ್ಪಾಡುಗಳನ್ನೇನಾದರೂ ಮಾಡಿಕೊಳ್ಳುತ್ತಲಿದ್ದಾರೆಯೇ? ಈ ಬಗ್ಗೆ ರಹಸ್ಯವಲ್ಲದ ವಿಷಯಗಳೇನು?” ಎಂದು ಶ್ರೀ ಸತ್ಯಮೂರ್ತಿಯವರು ಕೇಂದ್ರ ಅಸೆಂಬ್ಲಿಯಲ್ಲಿ ಚರ್ಚೆಮಾಡಿದರು. ಚರ್ಚೆಯನ್ನು ಮುಂದರಿಸುತ್ತಾ “ಇಂಡಿಯಾದಲ್ಲಿ ಮಿಲಿಟರಿ ಇಲಾಖೆಯವರು ಮುಂದಿನ ಯುದ್ಧದ ಬಗ್ಗೆ ಮಾಡಿಕೊಳ್ಳುತ್ತಿರುವ ಸಿದ್ಧತೆಗಳಿಗೆ ಗ್ರೇಟ್‌ಬ್ರಿಟನಿನ ಯುದ್ಧದ ಅಧಿಕಾರಿಗಳು ಸಲಹೆಗಳನ್ನು ಕೊಟ್ಟಿದ್ದಾರೆಯೇ? ಯುದ್ಧ ನಡೆದರೆ ಇಂಡಿಯಾವನ್ನು ಅಪಾಯಗಳಿಂದ ರಕ್ಷಿಸಲು ತಕ್ಕ ಏರ್ಪಾಡುಗಳನ್ನು ಮಾಡಲು ಗ್ರೇಟ್ ಬ್ರಿಟನ್ನು ಯಾವ ಸಲಹೆಗಳನ್ನು ಕೊಟ್ಟಿದೆ?” ಎಂದು ಶ್ರೀ ಸತ್ಯಮೂರ್ತಿಯವರು ಪ್ರಶ್ನೆ ಮಾಡಿದರು. ಇದಕ್ಕೆ ಮಿ|| ಒಗಿಲ್ವಿಯವರು ಉತ್ತರಕೊಡುತ್ತಾ “ಯುದ್ಧಸಿದ್ಧತೆಗಾಗಿ ಕೆಲವು ಏರ್ಪಾಡುಗಳನ್ನು ಸಾರ್ವಭೌಮ ಸರಕಾರದ ಒಪ್ಪಿಗೆಯಿಂದ ಸಲಹೆ ಪ್ರಕಾರ ಮಾಡಲಾಗುತ್ತಿದೆ. ಸದ್ಯದಲ್ಲಿ ಯುದ್ಧ ನಡೆಯುವದೆಂಬ ಭೀತಿಯಿಂದ ಸಿದ್ಧತೆಗಳನ್ನು ಮಾಡುತ್ತಲಿಲ್ಲ. ಇಂಡಿಯದ ಗಡಿನಾಡುಗಳಲ್ಲಿ ಯುದ್ಧಗಳು ಸದ್ಯದಲ್ಲಿ ನಡೆಯುವುದೆಂಬ ಕಾರಣದಿಂದ ಏರ್ಪಾಡುಗಳನ್ನು ವ್ಯವಸ್ಥೆಗೊಳಿಸುತ್ತಲಿಲ್ಲ. ಆದರೆ ಇಂಡಿಯಾದ ರಕ್ಷಣೆ ವಿಚಾರದಲ್ಲಿ ವಿದೇಶಗಳ ಧಾಳಿಗಳನ್ನು ತಪ್ಪಿಸಲು ಬೇಕಾದ ಏರ್ಪಾಡುಗಳನ್ನು ಮಾಡುವುದಕ್ಕೆ ಇಂಡಿಯಾ ಸರಕಾರದ ಸಲಹೆಗಳನ್ನು ತೆಗೆದುಕೊಳ್ಳಲಾಗಿದೆ” ಎಂದರು.

ಕಿನ್ನಿಗೋಳಿ—ಇಲ್ಲಿಯ ಪಂಚಾಯತ್ ಬೋರ್ಡಿನವರು ಕಳೆದ ಮೂರು ವರ್ಷದಿಂದ ಪೇಟೆ ಮತ್ತು ಸುತ್ತುಮುತ್ತಲಿನ ಗ್ರಾಮಾಭಿವೃದ್ಧಿಗೆ ಅನುಕೂಲವಾದ ಅನೇಕ ಕಾರ್ಯಗಳನ್ನು ಕೈಗೊಂಡದ್ದನ್ನು ನೋಡಿ ಸಂತೋಷಪಡಬೇಕು. ಆದರೆ ಇತ್ತೀಚೆಗಾದ ಚುನಾವಣೆಯ ನಂತರ ಯಾವ ಕೆಲಸಗಳೂ ಮುಂದೊತ್ತಿದಂತೆ ತೋರುವುದಿಲ್ಲ. ಜನಹಿತ ಕೆಲಸಗಳು ಹೇಗಿದ್ದರೂ ಕಟೀಲು ಪಂಚಾಯತ್ ಬೋರ್ಡನ್ನು ಪ್ರಯತ್ನದಿಂದ ಇಲ್ಲಿಯ ಬೋರ್ಡಿಗೆ ಸೇರಿಸುವ ಆಲೋಚನೆ ನಡೆದಿದೆಯಾಗಿ ತಿಳಿದುಬರುತ್ತದೆ.

ಉಡುಪಿ

ಕೊರಾಡಿ ಸೊತ್ತಿಯ ಜಪ್ತಿ— ಈ ಹೆಸರಿಂದ ಕಳೆದ ಸಂಚಿಕೆಯಲ್ಲಿ ಬಾತ್ಮಿಯೊಂದು ಪ್ರಕಟವಾಗಿತ್ತಷ್ಟೆ! ಆದರೆ ಆ ಬಾತ್ಮಿಯು ನಿರಾಧಾರವಾದುದೆಂದೂ, ಸೊತ್ತಿಯು ಮೊದಲೇ ನಿರ್ಧರಿಸಲ್ಪಟ್ಟಿರುವುದೆಂದೂ ಸೊತ್ತು ಜಪ್ತಿ ನಡೆದಿಲ್ಲವೆಂದೂ ಮಾರ್ಚಿ ತಾ. 13ರಲ್ಲಿ ಉಡುಪಿ ಸರ್ಕಲ್ ಪೋಲೀಸ್ ಇನ್ಸ್‌ಪೆಕ್ಟರವರು ಇಬ್ಬರು ಪೋಲೀಸಿನವರೊಂದಿಗೆ ಶಾಂತಿನಿಕೇತನ ಹಾ. ಎ. ಶಾಲೆಯ ಮೆನೇಜರರ ಮನೆಗೆ ಅಕಸ್ಮಾತ್ತಾಗಿ ಬಂದು ಅಧಿಕೃತ ಮನುಷ್ಯರು ಯಾರೂ ಇಲ್ಲದಾಗ ರಾತ್ರಿ 10ಘಂಟೆಯವರೆಗೆ ಹುಡುಕಿ ಮೆನೇಜರರ ಮನೆಯಲ್ಲಿರುವ ಕೆಲವು ರಿಕಾರ್ಡು, ಪ ಲೆಕ್ಕ ಪತ್ರಗಳನ್ನು ಸುಮಾರು ಹತ್ತು ಸಾವಿರ ರೂಪಾಯಿ ಬೆಲೆಬಾಳುವ ಚಿನ್ನದ ನಗನಾಣ್ಯ, ಕರೆನ್ಸಿ ನೋಟುಗಳು ಇನ್ನೂರುರೂಪಾಯಿಗಳನ್ನು ಗಂಟುಕಟ್ಟಿಕೊಂಡು ಹೋಗಿರುತ್ತಾರೆಂದೂ ಶಾಂತಿನಿಕೇತನ ಶಾಲೆಯು ಜನೋಪಕಾರಿಯಾಗಿ ಎಲ್ಲಾ ಕಡೆಗಳಿಂದಲೂ ವಿದ್ಯಾರ್ಥಿಗಳನ್ನು ಪಡೆದು ಉತ್ತಮವಾಗಿ ನಡೆಯುತ್ತಿದೆಯೆಂದೂ ಕಳೆದ ಬಾರಿಯ ಪುಷ್ಪಸುದ್ದಿಯಿಂದ ಅಪಾರ್ಥಕ್ಕೆ ಎಡೆಯಾಯಿತೆಂದು ಬಗೆದು ಸತ್ಯಸಂಗತಿಯನ್ನು ಸಾರ್ವಜನಿಕರ ಮುಂದಿಡಲಾಗಿದೆ ಎಂದೂ ಸಂಬಂಧಪಟ್ಟವರು ತಿಳಿಸುತ್ತಿರೆಂದು ಶ್ರೀ. ಕೆ. ವಿ. ಕಲ್ಕೂರ, ಮೆನೇಜರ್, ಶಾಂತಿನಿಕೇತನ, ಕೊರಾಡಿ ಇವರು ತಿಳಿಸುತ್ತಾರೆ.

ಸಂ. ಸ.

ಮುನಿಸಿಪಲ್ ಸಭೆ—ಉಡುಪಿ ಮುನಿಸಿಪಲ್ ಕೌನ್ಸಿಲಿನ ಸಾಮಾನ್ಯ ಸಭೆಯೊಂದು ಚೆಯರ್‌ಮೆನ್ ವೈಸ್‌ಚೆಯರ್‌ಮೆನರ ಗೈರಹಾಜರಿಯಲ್ಲಿ ಶ್ರೀ. ಎಲ್. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ತಾ. 31-3-39ರಲ್ಲಿ ಜರಗಿತು. ಕೊಳಗರ ಕೊಪ್ಪದಲ್ಲೊಂದು ಕಲ್ವರ್ಟ ಕಟ್ಟಿಸಬೇಕೆಂದಾಯಿತು. ಬಸ್ಸ್‌ಸ್ಟೇಂಡ್ ನಿರ್ಮಾಣದ ಯೋಜನೆಯ ಕುರಿತು ರಿಪ್ರೋರ್ಟುಮಾಡುವರೆ ಕಮಿಟಿಯೊಂದರ ನೇಮಕವಾಯಿತು. ಶ್ರೀ. ಅದ್ಮಾರ್ ಮಠದ ವೆಂಕಟಾಚಾರ್ಯರು ತಮ್ಮ ಮೇರೆಯಲ್ಲಾದ ಜಪ್ತಿಯ ಕುರಿತು ಮಾಡಿದ ಅರ್ಜಿಯ ಕುರಿತು ಬಹಳ ಚರ್ಚೆ ನಡೆಯಿತು. ಮುನಿಸಿಪಲ್ ಆಫೀಸಿನ ಸರ್ಟಿಫಿಕೇಟ್ ನಕಲುಗಳನ್ನು ಮೂರುವರ್ಷಗಳೊಳಗಿನವು ಆದರೆ ಧರ್ಮಾರ್ಥ ಕೊಡತಕ್ಕದು. ನಾಲ್ಕನೆ ವರುಷಕ್ಕೆ ಸಂಬಂಧಿಸಿದುದಾದರೆ ನಾಲ್ಕಾಣೆಯಂತೆಯೂ ತದನಂತರ ಪ್ರತಿಯೊಂದು ವರ್ಷಕ್ಕೆ ಎರಡಾಣೆಯಂತೆಯೂ ಹುಡುಕೋಣ ಫೀಸನ್ನು ವಸೂಲುಮಾಡಬೇಕೆಂದು ಬಹುಮತದ ನಿರ್ಣಯವಾಯಿತು.

ಉಡುಪಿ ಮುನ್ಸಿಫ್ ಕೋರ್ಟು— ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟು ರದ್ದಾಗುವುದೆಂದು ವದಂತಿಯಿದ್ದಾಗ್ಯೂ ಕೋರ್ಟು ಉಳಿಸಲಾಗುವುದೆಂದು ವಿಶ್ವಸನೀಯ ಸುದ್ದಿ.

ಕೆನರಾ ಮ್ಯೂಚುವಲ್ ಇನ್ಶೂರೆನ್ಸ್ ಕಂಪೆನಿ— ಇದರ ಆಫೀಸು ಕಲ್ಸಂಕದಿಂದ ತಾ. 14-4-39ರಿಂದ ಚರ್ಚ್‌ರೋಡಿನ ಹೊಸೆಯಲ್ಲಿರುವ (ಬೊಂಬೆ ಲ್ಯಾಫ್ ಇನ್ಶೂರೆನ್ಸ್ ಕಂಪೆನಿಯ ಹಳೆ ಆಫೀಸು) ಕಟ್ಟಡಕ್ಕೆ ಒಯ್ಯಲ್ಪಡುವುದು. ಈ ಕಂಪೆನಿಯ ವಿಶೇಷ ಮಹಾಸಭೆಯೊಂದು ಈ ಹೊಸ ಆಫೀಸಿನಲ್ಲಿ ತಾ. 23-4-39ನೇ ಆದಿತ್ಯವಾರ ಪೂರ್ವಾಹ್ನ 10ತಾಸಿಗೆ ಜರಗಲಿರುವದು.

ಕಟೀಲು—ತಮ್ಮ ಪೇಟೆಯೂ ಗ್ರಾಮಗಳನ್ನು ಸಂಧಾನಿಸುವುದಕ್ಕೆ ಸ್ಥಳೀಕ ಮಹನೀಯರು ಪಂಚಾಯತ್ ಬೋರ್ಡುಗಳನ್ನೋ, ಕೋರ್ಟುಗಳನ್ನೋ ಯಾ ಇನ್ನಿತರ ಗ್ರಾಮಾಭಿವೃದ್ಧಿಗೆ ಬೇಕಾಗುವ ಸಂಸ್ಥೆಗಳನ್ನೋ ಸ್ಥಾಪಿಸುತ್ತಾರೆ. ಆದರೆ ಪ್ರಯತ್ನವಿಲ್ಲದೇನೇ ಇಲ್ಲಿ ಸ್ಥಾಪಿತವಾದ ಪಂಚಾಯತು ಬೋರ್ಡಿನ ಅವಸ್ಥೆಯೇನು? ಇನ್ನು ಮುಂದೆಯಾದರೂ ಇಂಥಾ ಸಾರ್ವಜನಿಕ ಸಂಸ್ಥೆಗೆ ಸೇರಿ ಅದನ್ನು ನಾಶಪಡಿಸುವ ಬದಲಾಗಿ ಸುಮ್ಮನಿರುವುದು ಉತ್ತಮವಲ್ಲವೇ?

To Insure is
The Husband's duty. The wife's right and the child's Claim Hence seek for a policy of
THE ASIAN ASSURANCE CO, LTD
The safest and one of the largest Indian Concerns.
Head Office:- **Asian Buildings Ballard Estate, Bombay.**
Branch Office: - **Hampankatta, Mangalore.**



ದಿ ಏಶಿಯನ್ ಎಶ್ಯೂರೆನ್ಸ್
ಕಂಪೆನಿ ಲಿಮಿಟೆಡ್.
ಲಾಭದಾಯಕವಾದ ಮತ್ತು ಸುಭದ್ರತೆಯ ನಿಧಿಯನ್ನೊಳಗೊಂಡ ಈ ಕಂಪೆನಿಯಲ್ಲಿ ನಿಮ್ಮ ವಿಮಾ ಇಳಿಸಿರಿ.
ಏಜಂಟರು ಪ್ರಾಮುಖ್ಯಪಟ್ಟಣಗಳಲ್ಲಿ ಬೇಕಾಗಿದ್ದಾರೆ.
ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
J. A. PUTRAN,
Branch Manager,
Mangalore.

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಮೈಸೂರು ಎಪ್ರಿಲ್ ೨.

ರಾಜವಿವಾಹ—ಶ್ರೀಮದ್ಯುವರಾಜರ ಇಬ್ಬರು ಹೆಣ್ಣು ಮಕ್ಕಳಿಗೆ ಶೀಘ್ರದಲ್ಲೇ ವಿವಾಹವಾಗುವುದೆಂದೂ, ಇದಕ್ಕೆ ಈಗಾಗಲೇ ತಕ್ಕ ಏರ್ಪಾಡುಗಳು ನಡೆಯುತ್ತಾ ಇವೆಯೆಂದೂ ನಂಬಲರ್ಹವಾದ ಕಡೆಗಳಲ್ಲಿ ಹೇಳಲಾಗಿದೆ.

ಇಂಡೋ ಬ್ರಿಟಿಷ್ ಒಪ್ಪಂದ—ಇಂಡಿಯಾ ಸರಕಾರದವರು ಒಪ್ಪಿರುವ ವ್ಯಾಪಾರ ಒಪ್ಪಂದಕ್ಕೆ ಬೆಂಗಳೂರು ವಾಣಿಜ್ಯ ಸಂಸ್ಥೆಯವರು ತಮ್ಮ ಅಸಮ್ಮತವನ್ನು ಸೂಚಿಸಿ ಒಂದು ತಂತಿಯನ್ನು ಕಳುಹಿಸಿದ್ದಾರೆ.

ಸತ್ಯಾಗ್ರಹ ನಿಂತಿತು— ರಾಜಧಾನಿಯಲ್ಲಿ ನಡೆಯುತ್ತಿದ್ದ ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹವು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆಯೆಂದು ತಿಳಿಸಲು ಸಂತೋಷವಾಗುತ್ತೆ. ಇದರ ಮುಂದಿನ ಕಾರ್ಯಕ್ರಮಗಳನ್ನು ವಿದುರಾಶ್ವತ್ಥದಲ್ಲಿ ನಡೆಯುವ ಕಾಂಗ್ರೆಸ್‌ನಲ್ಲಿ ತೀರ್ಮಾನಿಸಲಾಗುತ್ತದೆ. ಈ ಪತ್ರ ಬರೆಯುವ ದಿನದ ವರೆಗೂ ಸತ್ಯಾಗ್ರಹ ನಡೆದು, ಸತ್ಯಾಗ್ರಹಿಗಳ ದಸ್ತಗಿರಿಯಾಗಿ ನ್ಯಾಯಸ್ಥಾನದಲ್ಲಿ ವಿಚಾರಣೆ ನಡೆದು ಶಿಕ್ಷೆಯಾಗುತ್ತಿತ್ತು.

ಶ್ರೀ. ತಗಡೂರರ ಮೇಲೆ ಬಂದಿರುವ ನಿಶ್ ಚಾರ್ಜ್ ಜಾಮೀನು ನೊಕದ್ದಮೆಯು, ಇಲ್ಲಿಯ ಮಿ॥ ರಾಬ ಜೋಸೆಫ್ ಸಿಂಗ್‌ರ ಮುಂದೆ ವಿಚಾರಣೆ ನಡೆಯುತ್ತಾ ಇದೆ. ಶ್ರೀ. ಎಂ. ಎನ್. ಜೋಯಿಸರನ್ನು ಶಿವಮೊಗ್ಗ ಜೈಲಿಗೂ ಶ್ರೀ. ಉಪಾಧ್ಯ ಮತ್ತು ಶ್ರೀ. ಸೂರ್ಯನಾರಾಯಣ ರಾಯರನ್ನು ಬೆಂಗಳೂರು ಸೆಂಟ್ರಲ್ ಜೈಲಿಗೂ ವರ್ಗ ಮಾಡಲಾಯಿತು. ಶ್ರೀ. ವೀರಕೇಸರಿಯವರು ಸತ್ಯಾಗ್ರಹದ ವಿಚಾರವಾಗಿ ಕೆಲವರೊಂದಿಗೆ ಮಾತುಕತೆ ನಡೆಸಿ ಅದು ಸರಿಯಲ್ಲವೆಂದಿದ್ದರು. ಇವರಿಗೆ ಉತ್ತರ ಮತ್ತು ಮರುತ್ತರ ಬಂದಿವೆ. ಶ್ರೀ. ವೀರಕೇಸರಿಯವರಿಗೆ ಹರಟೆಮಲ್ಲರೆನ್ನುವವರು ಸ್ವಲ್ಪ ಬುದ್ಧಿ ಹೇಳಿದ್ದರು. ಅಂತೂ ಈ ಸತ್ಯಾಗ್ರಹದ ವಿಚಾರವಾಗಿ ಒಂದು ದೊಡ್ಡ ಹೇಳಿಕೆ ಹೊರಬಿದ್ದು ಇದನ್ನು ನಿಲ್ಲಿಸಲಾಗಿದೆ.

ಹೊಸ ಮೆಟರ್ನಿಟಿಹೋಂ— ರಾಜಧಾನಿಯಲ್ಲಿ ಒಂದು ಹಳೆಯ ಕಟ್ಟಡದಲ್ಲಿದ್ದ ವಾಣೀ ವಿಲಾಸ ಮೆಟರ್ನಿಟಿ ಹೋಮನ್ನು ಇರ್ವಿನ್ ರಸ್ತೆಯಲ್ಲಿ ಕಟ್ಟಿರುವ, ಆಧುನಿಕ ರೀತಿಯಲ್ಲಿರುವ ಹೊಸಕಟ್ಟಡವಾದ ಚಲುವಾಂಬಮ್ಮಣ್ಣಿ ಮೆಟರ್ನಿಟಿ ಹೋಮಿಗೆವರ್ಗ ಮಾಡಲಾಗಿದೆ.

ಹೈಕೋರ್ಟ್ ಜಡ್ಜಿಗಳು—ಇಂದಿನ ಹೈಕೋರ್ಟಿನ ಚೀಫ್ ಜಡ್ಜಿಗಳಾಗಿರುವ ಮಿ॥ ರೈಲಿಯವರು ಬೇಸಿಗೆ ರಜ ಕಳೆದ ಮೇಲೆ ನಾಲ್ಕು ತಿಂಗಳು ರಜ ಪಡೆದು, ಇಂಗ್ಲಾಂಡಿಗೆ ಹೋಗುವುದರಿಂದ ಆ ಕಾಲದಲ್ಲಿ ಮಿ॥ ಅಬ್ದುಲ್ ಘನಿಯವರು ಆಕ್ಟಿಂಗ್ ಚೀಫ್ ಜಸ್ಟೀಸ್ ರಾಗಿ ಕೆಲಸಮಾಡುವರು.

ಹೆರಿಗೆ ಗೃಹ—ಶ್ರೀ. ರಾಮನಾರಾಯಣ ನಾಯಕ್ ಮತ್ತು ಸೇಟ್ ಭಗವಾನ್ ದಾಸರು ಉದಾರ ಮನಸ್ಸಿನಿಂದ ಕಟ್ಟಿಸಿಕೊಟ್ಟಿರುವ ಮೆಟರ್ನಿಟಿ ಹೋಂ ಮತ್ತು ಲೇಡಿವಿಲ್ಲಿಂಗ್ಡನ್ ಕ್ಷಯರೋಗ ಚಿಕಿತ್ಸಾಲಯವನ್ನು ದ್ವಿತೀಯ ಸಚಿವರಾದ ಶ್ರೀ. ಕೆ. ವಿ. ಅನಂತ ರಾಮನ್ ರವರು ಆರಂಭೋತ್ಸವ ನಡೆಸಿ ಸಮಯೋಚಿತ ಭಾಷಣ ಮಾಡಿದರು.

ಶ್ರೀ ಗುರುಸ್ವಾಮಿಯವರು— ಅಖಿಲ ಭಾರತ ರೈಲ್ವೆ ಕೆಲಸಗಾರರ ಸಂಘದ ಕಾರ್ಯದರ್ಶಿಗಳಾದ ಇವರು ಈ ದಿನ ಇಲ್ಲಿಗೆ ಬಂದರು. ಸಂಜೆ ಸುಬ್ರಾಯನ ಕೆರೆಯ ಮೈದಾನದಲ್ಲಿ ಬಹಿರಂಗ ಸಭೆಯೊಂದರಲ್ಲಿ ಮಾತನಾಡಿ ಕೂಲಿಗಾರರ ಕಷ್ಟನಷ್ಟಗಳನ್ನು ವಿವರಿಸಿದರು. ಬೆಂಗಳೂರಿನಲ್ಲಿ ಇವರು ದಿವಾನರನ್ನು ಭೇಟಿ ಮಾಡಿದ್ದರೆಂದು ತಿಳಿದು ಬಂದಿದೆ.

ಕಾಂಗ್ರೆಸ್ ಅಧ್ಯಕ್ಷರು—ನವಯುಗದಲ್ಲಿ ಹಿಂದೆಯೇ ತಿಳಿಸಲಾಗಿದ್ದಂತೆ ವಿದುರಾಶ್ವತ್ಥ ಕಾಂಗ್ರೆಸ್ಸಿಗೆ ಮೈಸೂರಿನ ಶ್ರೀ. ಹೆಚ್. ಸಿ. ದಾಸಪ್ಪನವರೇ ಅಧ್ಯಕ್ಷರಾಗಿ ಚುನಾಯಿತರಾದರು.

ಜವಾಬ್ದಾರಿ ಸರಕಾರ—ರಾಜಕೀಯ ಸುಧಾರಣಾ ಸಮಿತಿಯ ಸಭೆ ನಡೆದು ಮೈಸೂರು ಜನರಿಗೆ ಆದಷ್ಟು ಬೇಗ ಜವಾಬ್ದಾರಿ ಸರಕಾರ ಸ್ಥಾಪಿಸಲು ಸಹಾಯ ಮಾಡಬೇಕೆಂದೂ ಫೆಡರೇಶನಿಗೆ ಒಂದು ವೇಳೆ ಮೈಸೂರು ಸಂಸ್ಥಾನವು ಸೇರಿದರೆ ಪ್ರತಿನಿಧಿಗಳನ್ನು ಹೇಗೆ ಚುನಾಯಿಸಿ ಕಳುಹಿಸಬೇಕೆಂಬುದನ್ನೂ ವಿಮರ್ಶಿಸಲಾಯಿತೆಂದು ಗೊತ್ತಾಗಿದೆ. ಪುನಃ ಈ ತಿಂಗಳು ಹನ್ನೆರಡನೇ ತಾರೀಖು ತನ್ನ ಕೊನೆಯ ಸಿಟ್ಟಿಂಗ್ ಸೇರಿದಾಗ ಎಲ್ಲವನ್ನೂ ಇತ್ಯರ್ಥ ಮಾಡಲಾಗುತ್ತೆ.

ಸೆನೇಟು ಸಭೆ—ಮೈಸೂರು ವಿಶ್ವವಿದ್ಯಾನಿಲಯದ ಸೆನೇಟ್ ಸಭೆಯು, ಅದರ ಅಧ್ಯಕ್ಷರಾದ ಶ್ರೀ. ಎನ್. ಎಸ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ನಡೆಯಿತು. ಕಳೆದ ಮತ್ತು ಮುಂದಿನ ಸಾಲಿನ ಆಯವ್ಯಯವನ್ನು ಅಂಗೀಕರಿಸಲಾಯಿತು. ಮೊದಲು ಕೆಲವು ವಿಷಯಗಳ ಮೇಲೆ ಚರ್ಚೆನಡೆದು ತರುವಾಯ ಶ್ರೀ. ಬ್ರಹ್ಮಚಾರಿ ರಾಮಚಂದ್ರರು ಇಂಟರ್ ಮೀಡಿಯಟ್ ತರಗತಿಯಲ್ಲಿ ಓದುವವರಿಗೆ ಪತ್ರಿಕೋದ್ಯೋಗ ಶಿಕ್ಷಣಕೊಡಬೇಕು ಎಂಬ ನಿರ್ಣಯವನ್ನು ಸೂಚಿಸಿದರು. (ಇದು ನವಯುಗದಲ್ಲಿ ಹಿಂದೆಯೇ ಬಂದಿದೆ) ಇದನ್ನು ಶ್ರೀ ಭೂಪಾಳಂರು ಅನುಮೋದಿಸಿದರು. ಶ್ರೀ. ಡಿ. ವಿ. ಗುಂಡಪ್ಪನವರೂ, ಯುನ್. ವೆಂಕಟೇಶಯ್ಯನವರೂ, ಪ್ರೊ. ವಾಡಿಯವರೂ ಇದರ ಮೇಲೆ ಮಾತನಾಡಿದ ಮೇಲೆ ಶ್ರೀ. ಬ್ರಹ್ಮಚಾರಿ ರಾಮಚಂದ್ರರು ಪುನಃ ಮಾತನಾಡಿದರು. ಇದರ ನಿರ್ಣಯವನ್ನು ಓಟಿಗೆ ಹಾಕಲು ಅದಕ್ಕೆ ಬಹುಮತ ದೊರೆಯಲಿಲ್ಲ. ವಿಶ್ವವಿದ್ಯಾನಿಲಯದ ಯುವಕರಿಗೆ ವ್ಯಾಯಾಮ ಮತ್ತು ಸಂಗೀತ ಶಿಕ್ಷಣ ಕೊಡಬೇಕೆಂಬ ಬಂದಿದ್ದ ನಿರ್ಣಯವು ಪಾಸಾಯಿತು. ಇನ್ನಿತರ ವಿಚಾರವಾಗಿ ಚರ್ಚೆ ನಡೆದು, ಸಭೆಯು ಮುಗಿಯಿತು. (ಸ್ಥಳಸಂಕೋಚದಿಂದ ಮುಖ್ಯಾಂಶವನ್ನು ವರದಿಮಾಡಲಾಗಿದೆ.)

ಹೊಸ ನಾಣ್ಯ—ಇಂದಿನ ಬ್ರಿಟಿಷ್ ಸಾರ್ವಭೌಮಚಕ್ರವರ್ತಿಗಳತಲೆಯಿರುವ ಹೊಸ ನಾಣ್ಯವನ್ನು ಇಂಡಿಯಾ ಸರಕಾರದವರು ಅಚ್ಚುಹಾಕಿರುವರಷ್ಟೆ. ಇದರ ಮೂರು ಕಾಸು ಬಿಲ್ಲೆಗಳು ಚಲಾವಣೆಗೆ ಬಂದಿವೆ. ಇವು ಬ್ರಿಟಿಷ್ ಪೆನ್ನಿಯಂತಿವೆ. ಹಿಂದಿದ್ದ ಮೂರು ಕಾಸು ಬಿಲ್ಲೆಯ ಮೇಲಿದ್ದ ಚಕ್ರವರ್ತಿಗಳು ಕಿರೀಟ ಮತ್ತು ಕೋಟನ್ನು ತಮ್ಮ ಪದಕಗಳೊಡನೆ ಹಾಕಿಕೊಂಡಿರುವರು. ಈ ಹೊಸ ನಾಣ್ಯಕ್ಕೆ ಇದಿಲ್ಲ. ಬರಿ ತಲೆ ಮತ್ತು ಒಂದು ಕಿರೀಟವುಂಟು. ಇದು ನೋಡುವುದಕ್ಕೆ ಬಹಳ ಚಲುವುಂಟು.

ವಿದುರಾಶ್ವತ್ಥ ಕಾಂಗ್ರೆಸ್—ಮೈಸೂರು ಕಾಂಗ್ರೆಸ್ಸಿನ ಎರಡನೆಯ ಅಧಿವೇಶನವು ವಿದುರಾಶ್ವತ್ಥದಲ್ಲಿ ಜರಗಲು ಕೇವಲ ಎರಡು ವಾರಗಳು ಹಿಂದುಳಿಯಿತು. ಈಗಾಗಲೇ ಇದಕ್ಕೆ ತಕ್ಕ ಎಲ್ಲಾ ಸಿದ್ಧತೆಗಳು ನಡೆದಿವೆ. ಬಹಳ ಜನರು ಬರುವ ನಿರೀಕ್ಷಣೆಯಿದೆ. ಇದೇ ೧೫ನೇ ತಾ. ಸ್ವದೇಶೀ ವಸ್ತು ಮತ್ತು ಕೈಗಾರಿಕೆ ಪ್ರದರ್ಶನ ನಡೆಯುತ್ತದೆ. ಇದರ ಆರಂಭೋತ್ಸವವನ್ನು ಶ್ರೀ. ಪಟ್ಟಾಭಿ ಸೀತಾರಾಮಯ್ಯನವರು ನೆರವೇರಿಸುವರು. ಇಷ್ಟಲ್ಲದೆ ಅಖಿಲ ಕರ್ನಾಟಕ ಸಮಾಜವಾದಿಗಳ ಸಮ್ಮೇಳನ ನಡೆಯುತ್ತದೆ. ಇದರ ಅಧ್ಯಕ್ಷತೆಯನ್ನು ಸುಪ್ರಸಿದ್ಧ ಕಾಂಗ್ರೆಸ್ ಸೋಷಲಿಸ್ಟರಾದ ಶ್ರೀ. ಆಚಾರ್ಯ ನರೇಂದ್ರ ದೇವರು ವಹಿಸುವರು. ಇತ್ತೀಚೆಗೆ ವಿಚಾರ ಮಾಡಲಾಗಿ, ರೈಲು ಮತ್ತು ಅಂಚೆ ಇಲಾಖೆಯವರು ಸಹಕಾರ ನೀಡಲು ತಿರಸ್ಕರಿಸಿದರೆಂದು ವರ್ತಮಾನ. ಈ ಅಧಿವೇಶನವು ಯಶಸ್ವಿಯಾಗಿ ನಡೆಯುವಂತೆ ಎಲ್ಲಾ ಏರ್ಪಾಡುಗಳು ಭರದಿಂದ ಸಾಗುತ್ತಿವೆ.

ಮಿಸ್. ಸುಂದರಿ ಅಯ್ಯಂಗಾರ್—ಇವರನ್ನು ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಇಂಗ್ಲಿಷಿನ ಅಸಿಸ್ಟೆಂಟ್ ಪ್ರೊ॥ರಾಗಿ ನೇಮಕ ಮಾಡಲಾಗಿದೆ. ಇವರು ಅಚ್ಚ ಕನ್ನಡಿಗರಾದ ಮೈಸೂರು ಸೀಮೆಯವರು. ಎಂ. ಎ. ಪರೀಕ್ಷೆಯಲ್ಲಿ ಮೊದಲನೆ ತರಗತಿಯಲ್ಲಿ ತೇರ್ಗಡೆಹೊಂದಿ ಇಂಗ್ಲಾಂಡಿನಲ್ಲಿ ವಿದ್ಯಾಭ್ಯಾಸಮಾಡಿ ಬಂದಿದ್ದಾರೆ. ಇವರು ಮದ್ರಾಸಿನ ಹಿಂದೂ ಪತ್ರಿಕಾ ಕಚೇರಿಯಲ್ಲಿದ್ದರು. ಮತ್ತು ಅದೇ ಪತ್ರಿಕೆಯಲ್ಲಿ ಸ್ತ್ರೀಯರ ಪುಟದಲ್ಲಿ ಅನೇಕ ಲೇಖನಗಳನ್ನು ಬರೆಯುತ್ತಿದ್ದುದು ಅನೇಕರಿಗೆ ಗೊತ್ತಿರಬಹುದು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

ಕಾಂಗ್ರೆಸ್ ಭವನ

ಧಾರವಾಡ, ೩೧—೩—೩೯.

ಕಾಂಗ್ರೆಸ್ ಸದಸ್ಯತ್ವ

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಈ ಸಲ ಇದೇ ಡಿಶಂಬರ ತಿಂಗಳಲ್ಲಿ ಸೇರಲಿರುವದು. ಕಾರಣ ಪ್ರಾಥಮಿಕ ಸದಸ್ಯರನ್ನು ಮಾಡುವ ಅವಧಿಯು ಪ್ರತಿ ವರುಷಕ್ಕಿಂತ ಕಡಿಮೆ ಇರುವದು. ಆದುದರಿಂದ ಸದಸ್ಯರನ್ನು ಮಾಡುವ ಕಾರ್ಯವನ್ನು ಬೇಗನೇ ಪ್ರಾರಂಭಿಸಿ ನಿರ್ದಿಷ್ಟ ಅವಧಿಯಲ್ಲಿಯೇ ಪೂರ್ಣಗೊಳಿಸಬೇಕು. ಅಲ್ಲದೇ ಈ ಸಂಬಂಧ ನಮ್ಮಕಡೆಗೆ ಅನೇಕ ಸಲಹೆ ಸೂಚನೆಗಳು ಬಂದಿದ್ದು ಅವುಗಳಲ್ಲಿ ಅವಶ್ಯವಿದ್ದವುಗಳನ್ನು ಮುಂದಿನ ಪ್ರಕಟಣೆಯಲ್ಲಿ ಕೊಡುವೆವು. ಸದಸ್ಯತ್ವದ ಅರ್ಜಿಫಾರ್ಮುಗಳಲ್ಲಿ ಬದಲಾವಣೆಗಳೇನಾದರೂ ಇರುವವೋ ಹೇಗೆಂಬ ಬಗ್ಗೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಗೆ ಬರೆದಿದ್ದೇವೆ. ಈಗ ಪುಸ್ತಕಗಳು ಮುದ್ರಣಕ್ಕೆ ಕೊಡಲಾಗಿದೆ. ಎಪ್ರಿಲ್ ೧೫ (೧೫-೪-೩೯)ನೇ ತಾರೀಕಿಗೆ ನಮ್ಮಲ್ಲಿ ಪುಸ್ತಕಗಳು ಸಿದ್ಧವಾಗುವವು. ಒಂದು ಪುಸ್ತಕದಲ್ಲಿ ೫೦ ಫಾರ್ಮುಗಳಿರುವವು ಒಂದು ಪುಸ್ತಕದ ಬೆಲೆ ೦-೨-೦ (ಎರಡಾಣೆ) ಇಡಲಾಗಿದೆ. (ಹೋದ ವರುಷ ಇದರ ಕ್ರಯ ೦-೧-೦ ಇಟ್ಟದ್ದರಿಂದ ಮುದ್ರಣದ ಅರ್ಧವೆಚ್ಚವನ್ನು ಪ್ರಾಂತೀಯ ಸಮಿತಿಯು ಹೊರಬೇಕಾಯಿತು.)

ಈ ವರೆಗೆ ಹೋದವರುಷದ ಸದಸ್ಯ ಪುಸ್ತಕಗಳನ್ನು ನಮ್ಮ ಕಚೇರಿಗೆ ಸಂಪೂರ್ಣವಾಗಿ ಕಳಿಸಿಕೊಡದೇ ಇದ್ದ ಜಿಲ್ಲಾ ಕಮಿಟಿಗಳಿಗೆ ಈ ಮೂಲಕ ಇನ್ನೊಂದು ಸಲ ತಿಳಿಸಲಾಗಿದೆ. ಎಲ್ಲಾ ಹಳೇ ಪುಸ್ತಕಗಳು ಪ್ರಾ. ಕಚೇರಿಗೆ ಬರಲೇಬೇಕು. ಹಳೆ ಪುಸ್ತಕದಲ್ಲಿ ಯಾರೂ ಸದಸ್ಯರನ್ನು ಮಾಡಕೂಡದು. ಈಗ ನಾವು ಅಚ್ಚುಹಾಕಿಸುವ ಪುಸ್ತಕದ ಪ್ರತಿಯೊಂದು ಫಾರ್ಮಿನ ಮೇಲೆ "೧೯೩೯"ಎಂದು ಮುದ್ರಿಸಲಾಗಿದೆ.

ನಾವು ಪುಸ್ತಕಗಳನ್ನು ಜಿಲ್ಲಾ ಕಮಿಟಿಗಳಿಗೆ ಮಾತ್ರ ಕೊಡುತ್ತೇವೆ ಕಾರಣ ಜಿಲ್ಲಾ ಕಮಿಟಿಯವರು ಮುಂಗಡ ಹಣ ಕಳಿಸಿ ಪುಸ್ತಕಗಳಿಗೆ ಆರ್ಡರ್ ಕೊಡಬೇಕು.

ರಾಷ್ಟ್ರೀಯ ಸಪ್ತಾಹವನ್ನು ಆಚರಿಸಿರಿ.

೨೦ವರ್ಷಗಳ ಹಿಂದೆ ಪಂಜಾಬ ಪ್ರಾಂತದಲ್ಲಿಯ ಅಮೃತಸರ ಪಟ್ಟಣದ ಜಾಲಿಯನ್‌ವಾಲಾಬಾಗದಲ್ಲಿ ಜನರಲ್ ಡಾಯರನು ಶಾಂತಿಯುಕ್ತರಾದ ರಾಷ್ಟ್ರವೀರರ ಮೇಲೆಮಾಡಿದ ಅತ್ಯಾಚಾರದಿಂದ ಹುತಾತ್ಮರಾದ ದೇಶಬಾಂಧವರ ಸ್ಮರಣೆಯನ್ನು ನಾವು. ಪ್ರತಿವರುಷ ಮಾಡುತ್ತ ಬಂದಿರುವೆವು ಈ ವರುಷವಾದರೂ ಎಲ್ಲ ಹಳ್ಳಿ ಪಟ್ಟಣಗಳಲ್ಲಿ ಈ ಸಪ್ತಾಹವು ತಾ. ೬-೪-೩೯ರಿಂದ೧೩-೪-೩೯ರ ವರೆಗೆ ಯಶಸ್ವಿಯಾಗುವಂತೆ ನಾವೆಲ್ಲರೂ ಪ್ರಯತ್ನ ಮಾಡಬೇಕು.

ಈ ಸಪ್ತಾಹದಲ್ಲಿ ತ್ಯಾಗವೀರರ ಸ್ಮರಣೆ ಮಾಡಿ ಅವರ ಚರಿತ್ರೆಯನ್ನು ಓದುವುದು ಕೇಳುವುದಲ್ಲದೇ ಆಯಾ ಸ್ಥಳಗಳಲ್ಲಿ ಅನುಕೂಲವಾಗುವಂತೆ ಕಾರ್ಯಕ್ರಮಗಳನ್ನು ಮಾಡಿಕೊಳ್ಳಬೇಕು.

ಸಪ್ತಾಹವು ಮುಗಿದ ಮೇಲೆ ಜಿಲ್ಲಾ ಕಮಿಟಿಯು ತನ್ನ ಜಿಲ್ಲೆಯ ಈ ಸಂಬಂಧದ ವರದಿಯನ್ನು ನಮ್ಮ ಕಚೇರಿಗೆ ಕಳಿಸಿಕೊಡಬೇಕು.

ನಾ. ಸು ಹರ್ಡೀಕರ,
ಗೌ. ಕಾರ್ಯದರ್ಶಿ

ಹೆಬ್ರಿ—ಶ್ರೀ. ಮಂದರಾಧರ ಬಲ್ಲಾಳರು ಟ್ರೋಪಿಕಲ್ ಇನ್ಶೂರೆನ್ಸ್ ಕಂಪೆನಿಯ ಏಜನ್ಸಿಯನ್ನು ಹೊಸದಾಗಿ ವಹಿಸಿಕೊಂಡು ಉತ್ಸಾಹದಿಂದ ಕೆಲಸಮಾಡುತ್ತಿದ್ದಾರೆ. ಇವರಿಗೆ ಜನಪ್ರೋತ್ಸಾಹ ದೊರೆಯುವುದೆಂದು ನಿರೀಕ್ಷಿಸಲಾಗಿದೆ.

ನವೀನ ಪುಸ್ತಕಗಳು

೧. **ಕರಿನೀರು**—ರಮ್ಯ ಭೀಷಣ ಕಾದಂಬರಿ ೯೦೦ ಪುಟ ನುಣುಪು ಕಾಗದ ಬೆಲೆ ೨ರೂಪಾಯಿ.
೨. **ಹನ್ನೆ**—ಐತಿಹಾಸಿಕ ನಾಟಕ. ಪುಟ ೮೦ ನುಣುಪು ಕಾಗದ, ಬೆಲೆ ೬ ಆಣೆ
೩. **ಬಲಿದಾನ**—ಬುದ್ಧಕಾಲೀನ ಐತಿಹಾಸಿಕ ಕಾದಂಬರಿ ೭೧೬ ಪುಟ ಬೆಲೆ ರೂ. ೧-೪-೦.
೪. **ಎಚ್ಚಮ್ಮನಾಯಕ**—ವಿಜಯನಗರಕ್ಕೆ ಸಂಬಂಧಿಸಿದ ಆಖ್ಯಾನಕವು ೧೦೮ ಪುಟ ಬೆಲೆ ೮ ಆಣೆ.
೫. **ಅಮಾತ್ಯನಂದಿನಿ**—ಚಂದ್ರಹಾಸನ ಕಾಲದ ಪೌರಾಣಿಕ ಕಾದಂಬರಿ ೩೦೦ ಪುಟ ಬೆಲೆ ರೂ. ೧-೮-೦

ವಿಳಾಸ:—ಶ್ರೀ. ಶೇಷಾಚಲ ಪ್ರೆಸ್, ಪೋ. ಆನಂದವನ (ಹಾವೇರಿ) ಧಾರವಾಡ.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ತಾ. 2-4-39.

ದ. ಕ. ಟೀಚರ್ಸ್ ಗಿಲ್ಡಿನ ವಾರ್ಷಿಕ ಸಭೆ—ನಿನ್ನೆಯ ದಿನ ಸಾಯಂಕಾಲ ಡಿ.ಸಿ.ಯಂ. ಶಾಲಾ ಭವನದಲ್ಲಿ ದ. ಕ. ಜಿಲ್ಲಾ ಟೀಚರ್ಸ್ ಗಿಲ್ಡಿನ ಜನರಲ್ ಮೀಟಿಂಗು ಗಿಲ್ಡಿನ ಅಧ್ಯಕ್ಷರಾದ ಶ್ರೀ. ಯಂ. ಎಸ್ ಏಕಾಂಬರರಾಯರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀ. ಯಸ್. ಮುಕುಂದರಾಯರು ಸಭೆಯು ಮುಂದಿರಿಸಿದ ಗತವರ್ಷದ ವರದಿಯು ಮಾನ್ಯವಾಯಿತು. ಗಿಲ್ಡಿನ ಘಟನೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಅಂಗೀಕರಿಸಿದರು. ಹೊಸವರ್ಷದ ಆಡಳಿತ ಮಂಡಳಿಗೆ ಶ್ರೀಗಳಾದ ಕೆ. ಎನ್. ವಿ. ಶೆಣೈ (ಹೆಡ್ಮಾಸ್ತರ್ ಬೋ. ಹೈಸ್ಕೂಲ್, ಕಾರ್ಕಳ) ಗಳವರು ಅಧ್ಯಕ್ಷರಾಗಿಯೂ; ಉಡುಪಿ ಗೋವಿಂದ ರಾವ್ ಮತ್ತು ಯಂ. ಎಸ್. ಏಕಾಂಬರರಾವ್ ಇವರುಗಳು ಉಪಾಧ್ಯಕ್ಷರುಗಳಾಗಿಯೂ, ಯು. ಶ್ರೀನಿವಾಸ ಕಿಣಿಯವರು ಕಾರ್ಯದರ್ಶಿ ಮತ್ತು ಖಜಾನ್ಜಿಗಳಾಗಿಯೂ; ಬಿ. ತ್ರ್ಯಂಬಕರಾಯ ಶೆಟ್ಟಿ ಮತ್ತು ವೆಂಕಟರಮಣ ಭಟ್ ಇವರುಗಳು ಸೆಕ್ಷನಲ್ ಕಾರ್ಯದರ್ಶಿಗಳಾಗಿಯೂ; ಪ್ರೊ. ಎನ್. ರಾಮಚಂದ್ರ ಐಯರ್‌ರವರು ಎಸ್. ಐ. ಟಿ. ಯು. ಸಭೆಯ ಕಾರ್ಯಕಾರಿ ಮಂಡಳಿಯ ಸಭೆಗೆ ಸದಸ್ಯರಾಗಿಯೂ ಆರಿಸಲ್ಪಟ್ಟರು.

ವೆಬ್‌ಸ್ಟರ್ ಮಾರ್ಕೇಟಿನಲ್ಲಿ ತರಕಾರಿ ಮಾರಕೂಡದೇ?—ಮ್ಯುನಿಸಿಪಾಲಿಟಿಯವರು ನಿನ್ನೆಯಿಂದ ವೆಬ್‌ಸ್ಟರ್ ಮಾರ್ಕೇಟಿನಲ್ಲಿ ತರಕಾರಿ ಮಾರುವುದನ್ನು ನಿಲ್ಲಿಸಬೇಕೆಂದು ತರಕಾರಿ ವ್ಯಾಪಾರಿಗಳಿಗೆ ನೋಟೀಸು ಕೊಟ್ಟಿದ್ದರಾದರೂ ವ್ಯಾಪಾರಿಗಳು ಅದನ್ನು ಅಲಕ್ಷಿಸಿ ವ್ಯಾಪಾರಕ್ಕೆ ಮಾರ್ಕೇಟಿಗೆ ಬಂದಿದ್ದರು. ನಿನ್ನೆ ಅಪರಾಹ್ನ ಸುಮಾರು 3ಘಂಟೆ ಸಮಯದಲ್ಲಿ ಮಿ| ಫೆಲಿಕ್ಸ್ ಆಲ್ಬುಕರ್ಕರು ಬಂದು ವೆಬ್‌ಸ್ಟರ್ ಮಾರ್ಕೇಟಿನಲ್ಲಿ ತರಕಾರಿ ಮಾರುವುದನ್ನು ನಿಲ್ಲಿಸದಿದ್ದರೆ ಅವರ ಸಾಮಾನುಗಳನ್ನು ಮಾರ್ಕೇಟಿನಿಂದ ಹೊರಕ್ಕೆಸೆಯುವುದಾಗಿ ಹೇಳಿದರಂತೆ. ಈ ವಿಷಯದಲ್ಲಿ ಗಾಬರಿಗೊಂಡ ಶ್ರೀ. ಮರ್ಸಿಯಾ ಬ್ಯಾ ಮತ್ತು ಸುಮಾರು 22ಮಂದಿ ಸಹಿಹಾಕಿ ತಮಗೆ ರಕ್ಷಣೆಕೊಡಬೇಕೆಂದು ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್ ಇವರಿಗೆ ಅರ್ಜಿ ಮಾಡಿದರು. ನಿನ್ನೆ ಸಾಯಂಕಾಲ ಮಾರ್ಕೇಟಿನ ಸಮೀಪ ಪೋಲೀಸರಿದ್ದರು.

ಕಲೆಕ್ಟರ್ ದೊರೆಗಳು ತೀರ್ಮಾನಿಸುವರೇ?—ಮದ್ರಾಸ್ ಸರಕಾರದವರು ವೆಬ್‌ಸ್ಟರ್ ಮಾರ್ಕೇಟಿನ ವಿಚಾರವನ್ನು ವ್ಯವಸ್ಥೆಗೊಳಿಸಬೇಕೆಂದು ಜಿಲ್ಲಾ ಕಲೆಕ್ಟರ್ ದೊರೆಗಳಿಗೆ ಅಪ್ಪಣೆಕೊಟ್ಟಿರುವುದಾಗಿ ವದಂತಿಯಿದೆ.

ಮಹಾಜನರ ಸಭೆ—ನಿನ್ನೆಯ ದಿನ ಸಾಯಂಕಾಲ ಮೈದಾನದಲ್ಲಿ, ಶ್ರೀ. ಕೆ. ಸರ್ವೋತ್ತಮ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಪುರಜನರ ಸಭೆನಡೆದು ವೆಬ್‌ಸ್ಟರ್ ಮಾರ್ಕೇಟಿನ ವಿಷಯದಲ್ಲಿ ಭಾಷಣಗಳಾದವು. ಶ್ರೀಗಳಾದ ಯಂ ಉಮೇಶರಾವ್, ಕೆ. ಕೆ. ಶೆಟ್ಟಿ ಮತ್ತು ರಂಗರಾವ್ ತಲಚೇರಿಕರರೇ ಮೊದಲಾದವರು ಭಾಷಣಮಾಡಿದರು.

ಹೊಸ ಹಿಂದೀ ಕ್ಲಾಸುಗಳು—ನಿನ್ನೆಯ ದಿವಸ ಸಾಯಂಕಾಲ ಸ್ಥಳೀಯ ದೀನಬಂಧು ಅನಾಥ ಆಶ್ರಮದಲ್ಲಿ ಹಿಂದೀ ವರ್ಗಗಳು ತೆರೆಯಲ್ಪಟ್ಟವು. 9ಮಂದಿ ವಿದ್ಯಾರ್ಥಿಗಳು ಸೇರಿದ್ದಾರೆ. ಇವರಲ್ಲಿ ಹೆಚ್ಚಿನವರು ಕ್ರಿಸ್ತರು. ಶಾಲಾ ಮಕ್ಕಳಿಗೆ ಉಪಯೋಗವಾಗುವಂತೆ ಶನಿವಾರ, ಆದಿತ್ಯವಾರಗಳಲ್ಲಿ ಹಗಲು ಹೊತ್ತಿನಲ್ಲಿ ಹಿಂದೀ ಶಿಕ್ಷಣವನ್ನು ಕೊಡುವ ಏರ್ಪಾಡೂ ಮಾಡಲಾಗುವುದೆಂದು ಸಂಚಾಲಕರು ತಿಳಿಸುತ್ತಾರೆ.

ಜಿಲ್ಲಾ ಪಂಚಾಯತ ಆಫೀಸರರ ನೋಟೀಸು—ಮುಂಬಾಜೆ ಪಂಚಾಯತಿನವರು (ಪುತ್ತೂರು ತಾಲೂಕು) ಕೆಳಗೆ ಕಾಣಿಸಿದಂತೆ ಮನೆ ತೆರಿಗೆ ವಸೂಲು ಮಾಡುವುದೆಂಬ ಸರಕಾರದ ಆಜ್ಞೆ ಬಂದಿರುವುದರಿಂದ ಹುಟ್ಟು ಕಡಿಮೆ ಬರುವ ಜಿಲ್ಲೆಯ ಇತರ ಪಂಚಾಯತುಗಳು ಕೂಡ ಅಂತೆಯೇ ತೆರಿಗೆ ಹಾಕಬಹುದೆಂದು ದ. ಕ. ಜಿಲ್ಲಾ ಪಂಚಾಯತ ಆಫೀಸರರಾದ ಶ್ರೀ. ಕೆ. ಸುಬ್ಬುವೆಲರು ತಿಳಿಸುತ್ತಾರೆ. ಮೊದಲನೆಯದು ಮನೆಗೆ ಹಾಕಿದ ಭಂಡವಾಳ, ಮತ್ತು ಅದಕ್ಕೆ ತಕ್ಕದಾಗಿ ಎರಡನೆಯದಾಗಿ ಅರ್ಧವಾರ್ಷಿಕ ತೆರಿಗೆಕೊಡಲಾಗಿದೆ, ಮನೆಗೆ ಹಾಕಿದ ಭಂಡವಾಳ ರೂ. 50ರಿಂದ 100ರ ಒಳಗಾದರೆ ೦-೨-೦; 101ರಿಂದ 200ರ ಒಳಗಾದರೆ ೦-೪-೦; 201ರಿಂದ 300ಕ್ಕೆ ೦-೬-೦; 301ರಿಂದ 400ಕ್ಕೆ ೦-೮-೦; 401ರಿಂದ 500ಕ್ಕೆ ೦-೧೦-೦; 501ರಿಂದ 600ಕ್ಕೆ 0-12-0; 601ರಿಂದ 700ಕ್ಕೆ 0-14-0; 701ರಿಂದ 800ಕ್ಕೆ ರೂ. 1-0-0; 801ರಿಂದ 900ಕ್ಕೆ ರೂ. 1-2-0; 901ರಿಂದ 1000ಕ್ಕೆ ರೂ. 1-4-0; ಸಾವಿರಕ್ಕೆ ಮಿಕ್ಕಿ ಭಂಡವಾಳ ಹಾಕಿದ ಮನೆಗಳ ಮೇಲೆ ಮುಂದಿನ ಪ್ರತಿ ನೂರು ರೂಪಾಯಿಗೆ ಎರಡಾಣೆಯಂತೆ ತೆರಿಗೆ.

New Kanara Swadeshi Laundry,
GAMDEVI, BOMBAY.
A reliable house for dry cleaning deing all sorts of rich garments.
ದಿ ನ್ಯೂ ಕೆನರಾ ಸ್ವದೇಶಿ ಲಾಂಡ್ರಿ,
ಗಾಮದೇವಿ — ಮುಂಬಾಯಿ.
ಉತ್ತಮ ತರದ ಮಡಿ, ಉತ್ಕೃಷ್ಟ ರೀತಿಯ ರಂಗು—
ಇವುಗಳಿಗೆ ಪ್ರಸಿದ್ಧವಾದ ನಿಲಯ.
ವಿ. ಸೂ.—ಪರವೂರುಗಳಿಂದ ಉತ್ತಮ ಜರತಾರಿ ಸೀರೆ, ವಸ್ತ್ರ ಉಡುಗೆ ತೊಡುಗೆಗಳ ರಂಗು ಹಾಕುವ, ಡ್ರೈಕ್ಲೀನಿಂಗ್ ವಗೈರೆ ಕಾರ್ಯವನ್ನು ಟಪ್ಪಾಲು ದ್ವಾರಾ ಸ್ವೀಕರಿಸಿ, ಸಕಾಲದಲ್ಲಿ ತಯಾರಿಸಿ ತಲುಪಿಸುವೆವು.
ಎನ್. ಆರ್. ಶೆಟ್ಟಿ, ಪ್ರೊಪ್ರೈಟರ್. G. V. Mahale, Manager.

Established] [1906
THE
UNITED INDIA
LIFE ASSURANCE Co., LTD.
HEAD OFFICE—MADRAS.
Trustee—The Official Trustee to the Government of Madras.
Policies in force exceed **SIX** Crores.
Annual income exceeds - Rs. **30** lakhs.
Total assets exceeds - Rs. **110** lakhs.
Total claims paid exceed Rs. **40** lakhs.
The oldest & largest life assurance company of South India accepted by the Government as satisfactory for the purpose of exemption from the operation of the Provident Fund Rules to Teachers in aided Schools & for the purpose of utilisation of P. F. Contributions for payment of premiums on the lives of Government Local Board & Municipal servants.
For further particulars please apply to:—
THE BRANCH MANAGER,
THE UNITED LIFE ASSURANCE COMPANY, LTD.,
FELIX PAI BAZAR, MANGALORE, S. K.
K. R. Hebbar, B.A., ORGANISER, UDIPI, S. K. *OR* **K. Keshava Shenoy**, M.A., ORGANISER, Pentlannpet, MANGALORE.

ಶಿಕ್ಷಕ ಪರಿಷತ್ತು

ಮಂಗಳೂರು ತಾಲೂಕು ಡಿ. ಬೋರ್ಡು ಮತ್ತು ಪಂಚಾಯತ ಬೋರ್ಡು ಶಾಲಾ ಅಧ್ಯಾಪಕ ಅಧ್ಯಾಪಕಿಯರ ಮಹಾ ಸಭೆಯೊಂದು ಇದೇ ತಿಂಗಳ ತಾ. 10ನೇ ಸೋಮವಾರ ಅಪರಾಹ್ನ ಗಂಟೆ 2ಕ್ಕೆ ಕಿನ್ನಿಕಂಬಳ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜಿಲ್ಲಾ ಬೋರ್ಡು ಸನ್ಮಾನ್ಯ ಅಧ್ಯಕ್ಷರ ಅಪೇಕ್ಷೆಯಂತೆ ಜರಗಲಿದೆ. ಈ ಸಭೆಗೆ ತಪ್ಪದೆ ಎಲ್ಲಾ ಪ್ರತಿನಿಧಿಗಳೆಲ್ಲಾ ಹಾಜರಾಗಿ ಸಂದರ್ಭದ ಸದುಪಯೋಗವನ್ನು ಮಾಡಿಕೊಳ್ಳಬೇಕು ಪ್ರಾರ್ಥಕ.

ರಬ್ಬರ್ ಮೊಹರುಗಳು
ಬೇಕಾದ ನಮೂನೆ
ಯಲ್ಲಿ ಸುಲಭ ದರದಲ್ಲಿ
ಸಕಾಲದಲ್ಲಿ ತಯಾರಿಸಿ
ಕೊಡಲ್ಪಡುತ್ತವೆ.
ನವಭಾರತ ಬುಕ್ ಡಿಪೊ, ಉಡುಪಿ.

ನವಯುಗ ಸ್ಪರ್ಧೆ ೧.

ರೂಪಾಯಿ ೨೫ ಬಹುಮಾನ.

1	2	3	4
			ತ
		ರ	
	ದೇ		
ಗ		ಕ್ಷಿ	೦

I ಇನಾಂ ರೂ. 10/- II ರೂ. 5ರ ಇನಾಂ ೨. III ರೂ. 1ರ ಇನಾಂ ೫. ಒಟ್ಟು ರೂ. 25/- ರ 8 ಇನಾಮುಗಳು.

ಸೂಚನೆಗಳು:—

ಎಡದಿಂದ ಬಲಕ್ಕೆ:—(1) ಶ್ರೀಕೃಷ್ಣನು ಇದನ್ನು ಕದ್ದು ಕದ್ದು ತಿನ್ನುತ್ತಿದ್ದ.

ಮೇಲಿಂದ ಕೆಳಕ್ಕೆ.—(1) ಇದು ಕರ್ನಾಟಕದಲ್ಲಿ ಬಹಳ ಪ್ರಚಾರದಲ್ಲಿರುವ ವಾರಪತ್ರಿಕೆಯಾಗಿದೆ. (2) ಕಂಸನಿಂದ ಬಂಧಿಸಲ್ಪಟ್ಟು ಇಂತಹ ಬೊಡನೆ ಜೈಲಲ್ಲಿದ್ದ ವ. ( ) ಕಾಪರೆಯಂತೆ ಕಣ್ಣಿರುವ ಹಂಗಸರಿಗೆ ಹೀಗೆನ್ನುತ್ತಾರೆ. (4) ಇದು ಬೇಕಾದರೆ ಮಾರ್ಕೆಟಿಗೆ ಹೋಗಬೇಕು.

ನಿಯಮಗಳು:— (೧) ಉತ್ತರದೊಂದಿಗೆ 0-2-0 ಟಪ್ಪಾಲು ಚೀಟನ್ನು ಕಳಿಸಬೇಕು. (೨) 0-8-0ಗೆ 5 ಉತ್ತರದಂತೆ ಕಳಿಸಬಹುದು. (೩) ಇನಾಮುಗಳನ್ನು ಸರಿಯಾಗಿ ಬಿಡಿಸಿದವರೊಳಗೆ ಚೀಟಿ ಹಾಕಿ ಕೊಡಲಾಗುವುದು. (೪) ಇನಾಮುಗಳನ್ನು ಪುಸ್ತಕರೂಪದಲ್ಲಿ ಕೊಡಲಾಗುವುದು.

ಉತ್ತರವನ್ನು ತಾ. 15-4-39ರ ತನಕ ಸ್ವೀಕರಿಸಿ ತಾ. 20-4-39ಕ್ಕೆ ಪ್ರಕಟಿಸಲಾಗುವುದು.

ನವಯುಗ ಸ್ಪರ್ಧೆ,
ನವಯುಗ ಆಫೀಸು, ಉಡುಪಿ.

ಹೈದರಾಬಾದಿನಲ್ಲಿ ಹಿಂದೂಗಳ ಪರಿಸ್ಥಿತಿ

೧ ಹೊಸ ಮಂದಿರಗಳನ್ನು ಕಟ್ಟಿಸಲಿಕ್ಕೂ, ಹಳೆಯ ಮಂದಿರಗಳನ್ನು ದುರಸ್ತಿಗೊಳಿಸಲಿಕ್ಕೂ ಹುಕುಂ ಇಲ್ಲ. ಬೇಡಿದರೂ ಆಜ್ಞೆಯು ಸಿಕ್ಕುವುದಿಲ್ಲ. ೨ ಧರ್ಮಮಂದಿರಗಳಲ್ಲಿ ಆಜ್ಞೆಯ ವಿನಹ ಉಪದೇಶ, ಕಥೆ ವ್ಯಾಖ್ಯಾನಮಾಡಲಿಕ್ಕಿಲ್ಲ. ೩ ಆರ್ಯಸಮಾಜಿಕರು ತಮ್ಮ ಮಂದಿರಗಳಲ್ಲಿ "ಓಂ" ಧ್ವಜವನ್ನೇರಿಸಲಿಕ್ಕಿಲ್ಲ ಮತ್ತು ಮೆರವಣಿಗೆ ತೆಗೆದುಕೊಂಡು ಹೋಗಲಿಕ್ಕಿಲ್ಲ. ೪ ಅವರವರ ಮನೆಗಳಲ್ಲಿಯೂ ಹವನ ಕುಂಡ ಸ್ಥಾಪನೆಮಾಡಲಿಕ್ಕಿಲ್ಲ. ೫ ಹಿಂದೂ ಕೈದಿಗಳಿಗೆ ಕಠಿಣ ಸಜೆಕೊಟ್ಟು ಜೈಲಿನಲ್ಲಿ ಅವರನ್ನು ಮುಸಲ್ಮಾನರನ್ನಾಗಿ ಮಾಡುತ್ತಾರೆ. ಈ ಮಾತನ್ನು ಸ್ವಯಂ ನಿಜಾಮ್ ಸರಕಾರವು ಒಪ್ಪಿ, ಕೇವಲ ೪ ಕೈದಿಗಳು ಮಾತ್ರ ಜೈಲುಖಾನೆಯಲ್ಲಿ ಮುಸಲ್ಮಾನರಾಗಿ ಮಾಡಲ್ಪಟ್ಟಿದ್ದಾರೆಂದು ಜಾಹೀರು ಪಡಿಸಿಯದೆ. ೬ ನೂರಾರು ಆರ್ಯಸಮಾಜಿಕರನ್ನು ಸುಳ್ಳು ಮೊಕದ್ದಮೆಯಲ್ಲಿ ದಗೆಗೊಳಿಸಿ ಜೈಲಿನಲ್ಲಿ ಹಾಕಿದ್ದಾರೆ. ೭ ಅನೇಕ ಆರ್ಯಸಮಾಜಿಕರಿಗೆ ೧೦-೧೦ ಅಲ್ಲದೆ ೨೦-೨೦ ವರ್ಷ ಕಠಿಣ ಶಿಕ್ಷೆ ವಿಧಿಸಿದ್ದಾರೆ. ೮ ಗುಲ್ಬರ್ಗಾ ಆರ್ಯಸಮಾಜದ ಮಂತ್ರಿ ಶ್ರೀ-ಲಾಲ್ಸಿಂಹರಿಗೆ ೧೦ವರ್ಷದ ಶಿಕ್ಷೆವಿಧಿಸಿದ ತರುವಾಯ ಅಪೀಲಿನಲ್ಲಿ ಫಾಸಿಯ ಶಿಕ್ಷೆಯು ವಿಧಿಸಲ್ಪಟ್ಟಿತು! (ನಿಜಾಮ ಸರಕಾರದ ನ್ಯಾಯ ಹೇಗಿದೆ?) ೯ ಹೈದರಾಬಾದ್ ಆರ್ಯಸಮಾಜದ ಪ್ರಗತಿಯ ಪ್ರಾಣರೂಪೀ ಶ್ರೀಶ್ಯಾಮ-ಲಾಲ್ ವಕೀಲರನ್ನು ಸುಳ್ಳು ಅಪರಾಧದ ಮೇಲೆ ಹಿಡಿದು ಜೈಲಲ್ಲಿ ಹಾಕಿ ಹೊಡೆದು ಉಪವಾಸಹಾಕಿ ಕೊಂದರು. ೧೦ ಉಪದೇಶಕರಿಗೆ ನಿಜಾಮ ರಾಜ್ಯಕ್ಕೆ ಪ್ರವೇಶವಿಲ್ಲದಂತೆ ಮಾಡಿದ್ದಲ್ಲದೆ ಸ್ವವಹರಣೆಯಿಲ್ಲದೆ ಪಂಡಿತ ನರೇಂದ್ರರವರಿಗೆ ಕಾಲಪಾಣಿಯ ಶಿಕ್ಷೆವಿಧಿಸಿದ್ದಾರೆ. ೧೧ ಸ್ಟೇಟಿನಲ್ಲಿ ಹಿಂದೂ ಆರ್ಯರು ಯಾವುದೋ ಪತ್ರಿಕೆಯನ್ನಾದರೂ ಹೊರಡಿಸಲಿಕ್ಕಿಲ್ಲ. ಈ ರೀತಿ, ಹೈದರಾಬಾದಿನಲ್ಲಿ ಬರೆಯುವ ಸ್ವಾತಂತ್ರ್ಯವಾಗಲೀ ಹಿಂದುಗಳಿಗಿಲ್ಲ. ೧೨ ಹೈದರಾಬಾದಿನಲ್ಲಿ ನೂರಕ್ಕೆ 85%ರಂತೆ ಇರುವ ಹಿಂದೂ ಆರ್ಯರೆಲ್ಲ ಧರ್ಮಪ್ರಚಾರದ ಕಾರ್ಯವು ಕ್ರೂರತೆಯಿಂದ ನಿಲ್ಲಿಸಲ್ಪಟ್ಟಿದೆ. ಇದನ್ನು ಈಗ ಸ್ಮರಿಸಲಾಗುವುದಿಲ್ಲ. ಐದಾರುಮಂದಿ ಉತ್ಸಾಹಿ ಕಾರ್ಯಕರ್ತರನ್ನು ಧರ್ಮಾಂಧ ಮುಸಲ್ಮಾನರು ಹತ್ಯಮಾಡಿದ್ದರು. ಕೊಲೆಗಡುಕರು ದಂಡಿಸಲ್ಪಡಲಿಲ್ಲ ೧೩ ಹಿಂದೂ ಸ್ತ್ರೀಯರು ಬಲಾತ್ಕಾರದಿಂದ ಮಾನಹಾನಿಮಾಡಲ್ಪಡುತ್ತಾರೆ. ೧೪ ಬಹು ಸಂಖ್ಯಾಕರಾದ ಹಿಂದುಗಳಿಗೆ ಕನ್ನಡ, ತೆಲುಗು, ಮರಾಠಿ, ಶಾಲೆಗಳನ್ನು ತೆರೆಯುವ ಹಕ್ಕಿಲ್ಲ. ಬಲಾತ್ಕಾರದಿಂದ ಉರ್ದುವನ್ನೇ ಉಪಾಯವಿಲ್ಲದೆ ಕಲಿಯಬೇಕಾಗುತ್ತದೆ. ಅಲ್ಲದೆ ವ್ಯಾಯಾಮ ಶಾಲೆಗಳನ್ನು ಹಿಂದುಗಳಿಗೆ ತೆರೆಯಲು ಆಜ್ಞೆಕೊಡುವುದಿಲ್ಲ. ೧೫ ಸರಕಾರಿ ನೌಕರರೂ, ಶಾಲಾಧಿಕಾರಿಗಳೂ, ಖಾಕ್ಸಾರ್ ಪಾರ್ಟಿಯವರೂ ಹಿಂದುಗಳನ್ನು ಮುಸಲ್ಮಾನರನ್ನಾಗಿ ಮತ ಪರಿವರ್ತನೆ ಮಾಡುತ್ತಾರೆ. ೧೬ ಶಾಲಾ ವಿದ್ಯಾರ್ಥಿಗಳಿಗೆ ಶಾಲಾ ಫೀ ಮಾಫಿಮಾಡಿ ಪುಸಲಾಯಿಸಿ ಮುಸಲ್ಮಾನರನ್ನಾಗಿ ಮಾಡುತ್ತಾರೆ.

—ಘೋಷಿ: ಆರ್ಯಸಮಾಜ.

ಈ ವಾರದ ಫಲಿತಾಂಶವೇನು?

(ತಾ. 6—4—39ರಿಂದ 13—4—39ರ ವರೆಗಿನ ರಾಶಿಫಲ)

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ. ಸಂ. ನ.]

ಮೇಷರಾಶಿ—

"ಬಗ್ಗಿದವನಿಗೆ ಒಂದು ಗುದ್ದು ಹೆಚ್ಚು" ಎಂಬ ನಾಣ್ಣುಡಿಯಂತೆ ಈ ಕಲಿಕಾಲದಲ್ಲಿ ಗುರುಹಿರಿಯರಿಗೂ ದೈವಸೇವಕರುಗಳಿಗೂ ವಿಶೇಷವಾಗಿ ಸಹಿಸದಷ್ಟು ವಿಪತ್ತುಗಳು ಬಂದೊದಗುವವು. ಈಗಿನಂತೂ ನಿಮ್ಮ ಭವಿಷ್ಯವು ಬಹಳ ಹೀನ ಸ್ಥಿತಿಯನ್ನು ಹೊಂದಿರುವುದು. ಖರ್ಚಿನ ಭಾಗಗಳು ಮೇಲಿಂದ ಮೇಲೆ ಹೆಚ್ಚುತ್ತಿರುವವು. ಖರ್ಚಿನ ಕಾಲಂದವೂ ಕೂಡ ಉತ್ಪತ್ತಿಯಿಲ್ಲವು. ದೇವಾಲಸ್ಯವು ಹೆಚ್ಚುವದು. ಶತ್ರುಕೃತ ಪ್ರತಿಕ್ರಿಯೆಗಳಿಂದ ನಿಮ್ಮ ಕಾರ್ಯಗಳು ಕೊನೆಗೊಳ್ಳವು. ಹಣದ ಅಭಾವದಿಂದಲೂ ಪ್ರವಾಸ ನಿಮಿತ್ತ ಸಂಭವಿಸತಕ್ಕ ಕಷ್ಟನಷ್ಟಗಳಿಂದಲೂ ಅನಾರೋಗ್ಯದಿಂದಲೂ ಶೋಕಾಗ್ನಿಯಲ್ಲಿ ತಪ್ತರಾಗುವಿರಿ. "ಸ್ನಿಗ್ಧಜನಸಂವಿಭಕ್ತಂ ಹಿ ದುಃಖಂ ಸಹ್ಯವೇದನಂ ಭವತಿ" ಎಂಬಂತೆ ನಿಮ್ಮ ಮಿತ್ರರಲ್ಲಿ ನಿಮ್ಮ ದುಃಖವನ್ನು ಹಂಚಿ ತದ್ವೇದನೆಯನ್ನು ಸಹಿಸಿಕೊಳ್ಳುವಿರಿ. ತಾ. 6-12-13 ಈ ದಿನಗಳು ಹೆಚ್ಚಿನ ಹಾನಿಕರಗಳಾಗಿವೆ.

ವೃಷಭರಾಶಿ—

ಸಕಲ ಭಾಗಗಳಲ್ಲೂ ನೀವು ಸುಧಾರಿಸುವಿರಿ. ನಿಮ್ಮ ಅದೃಷ್ಟವು ಉತ್ತಮಸ್ಥಿತಿಯಲ್ಲಿರುವುದು. ನಿಮ್ಮ ಆಕಾಂಕ್ಷೆಯನ್ನು ಕೊನೆಗೊಳಿಸುವ ಶಕ್ತಿ ಅದಕ್ಕಿರುವುದು. ಆದಕಾರಣ "ಸಂಪದಾ ಸುಸ್ಥಿರಂ ಮನ್ಯೋ ಭವತಿ ಸ್ವಲ್ಪಯಾಪಿ ಯಃ। ಕೃತಕೃತ್ಯೋ ವಿಧಿರ್ಮನ್ಯೇ ನ ವರ್ಧಯತಿ ತಸ್ಯ ತಾಂ॥" ಇಚ್ಛೆಯನ್ನು ಕೊನೆಗೊಳಿಸುವ ಶಕ್ತಿಯುಳ್ಳ ಅದೃಷ್ಟವು ಅಲ್ಪಸಂತೋಷಿಗಳಿಗೆ ಅಷ್ಟರಲ್ಲೇ ನಿವೃತ್ತವಾಗುವದು. ಮಹತ್ಫಲಾಪೇಕ್ಷಿಗಳಿಗೆ ಅವರ ಇಚ್ಛೆಯನ್ನು ಪೂರೈಸುವದು. ಅಂತೂ ಅವಕ್ಕೆ ಇಚ್ಛೆಯನ್ನು ಪೂರೈಸಲೇಬೇಕಾಗಿದೆ. ಆದ್ದರಿಂದ ನೀವು ಬೃಹತ್ಫಲಾಪೇಕ್ಷೆಯಿಂದ ಮಹತ್ಕಾರ್ಯವನ್ನು ಆರಂಭಿಸಿದರೂ ಅದು ಸುಗಮವಾಗಿ ಕೊನೆಗೊಳ್ಳುವುದು. ರಾಜಕೀಯ ಕ್ಷೇತ್ರದಲ್ಲೂ ಇತರ ವ್ಯವಹಾರ ಭಾಗದಲ್ಲೂ ವಿಜಯಿಗಳಾಗಿ ಸಮಾಜದಲ್ಲಿ ಗಣನೀಯ ಸ್ಥಾನವನ್ನು ಹೊಂದುವಿರಿ. ಮಧುವಿಗಂಧಗಳಿಂದ ಯುಕ್ತವಾದ ಪುಷ್ಪವನ್ನು ಭ್ರಮರಗಳು ಸೇರುವಂತೆ ಬಂಧುಮಿತ್ರರು ತಾವಾಗಿ ಬಂದು ನಿಮ್ಮನ್ನು ಸೇರುವರು. ವಾರಾಂತ್ಯದ ನಾಲ್ಕು ದಿನಗಳಲ್ಲಿ ಮಾತುಮಾತಿನಿಂದಾಗಿ ಕಲಹ ಅಕಸ್ಮಾತ್ ಶರೀರಕ್ಕೆ ಪೆಟ್ಟು ತಗಲಬಹುದು.

ಮಿಥುನರಾಶಿ—

ಈ ವಾರದಲ್ಲಿ ನಿಮ್ಮ ಮುಂಚಿನ ಪರಿಸ್ಥಿತಿಗೂ ಈಗಿನದಕ್ಕೂ ವಿಶೇಷ ಅಭ್ಯಂತರವು ಕಂಡುಬರುವುದು. ನಿಮ್ಮ ಮತ್ತು ಪತ್ನೀಪುತ್ರರ ದೇಹಸ್ಥಿತಿಯೂ ಕೆಡಲಿರುವುದು. ಆದಾಯವು ಕಡಿಮೆಯಾದರೂ ಖರ್ಚಿನ ಭಾಗವು ಹೆಚ್ಚುತ್ತಲೇ ಹೋಗುವುದು. ಕೂಲಿಗಾರರಿಗೂ ಕೃಷಿಕರಿಗೂ ಉತ್ಪತ್ತಿಯು ಬಹಳ ಕಡಿಮೆಯಾಗುವುದು. ಆದರೂ ಕೋರ್ಟು ವ್ಯವಹಾರಗಳಲ್ಲಿಯೂ ವಿದ್ಯೋಪಜೀವಿಗಳಿಗೂ ವ್ಯಾಪಾರೀವರ್ಗದವರಿಗೂ ಈ ವಾರವು ಅಷ್ಟೊಂದು ಕೆಡುಕಾಗಲಾರದು. ಶತ್ರುಭಯದಿಂದಲೂ ಗೃಹಸುಖದಿಂದಲೂ ಮನಸ್ಸಿಗೆ ಸ್ವಲ್ಪ ಮಟ್ಟಿನ ನೆಮ್ಮದಿಯುಂಟಾಗುವುದು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ಈ ಕಾಲವು ಉತ್ತಮವಾಗಿಯೇ ಇರುವುದು. ಅಂತೂ ಇನ್ನಾನಿಗಳು ಸಮಸಮಾನವಾಗಿಯೇ ಸಂಭವಿಸುವವು. ತಾ. 7ರಿಂದ 11ರ ವರೆಗಿನ ದಿನಗಳು ಉತ್ತಮವಿರುವುದರಿಂದ ಮಹನಾಧಿಗಳಲ್ಲಿನ ಯಾನ, ಸ್ತ್ರೀಸಹಿತ ದ್ರವ್ಯಲಾಭ, ಸುಖಗಳು ದೊರೆಯಲಿವೆ.

ಕರ್ಕಾಟಕರಾಶಿ—

ಈ ಕಾಲವು ಹೆಚ್ಚಿನಂಶ ಉತ್ತಮ ಪರಿಸ್ಥಿತಿಗೆ ಬಂದಿರುವುದು. ಮನುಷ್ಯನಿಗೆ ಕಾಲವು ಅನುಕೂಲವಾಗಿದ್ದರೆ ಸರ್ವವೂ ತಾನಾಗಿಯೇ ಅನುಕೂಲವಾಗುವವು. ಇದೀಗಲೇ ನಿಮ್ಮ ಭಾಗ್ಯಪತಿಯು ಸ್ವಸ್ಥಾನವನ್ನು ಸೇರಿರುವನು. ಆದಕಾರಣ ನಿಮ್ಮ ಅಡಚಣೆಗಳೆಲ್ಲಾ ನಿವೃತ್ತಿಯಾಗಿ ಆರ್ಥಿಕಭಾಗವು ಸುಧಾರಿಸುವುದು. ಕೈಯಲ್ಲಿ ಯಾವಾಗಲೂ ನಾಲ್ಕು ಕಾಸು ಇದ್ದೇ ಇರುವುದು. ಹೆಚ್ಚಿನ ಕಾರ್ಯಗಳು ನಿಮ್ಮಿಷ್ಟದಂತೆಯೇ ಕೈಗೂಡುವವು. ವಿರೋಧಿಗಳೂ ಕೂಡ ತಮ್ಮ ಮನಸ್ತಾಪವನ್ನು ಬಿಟ್ಟು ನಿಮ್ಮೊಡನೆ ಸಹಕರಿಸಲಿರುವರು. ಆದರೂ ನಿಮಗೆ ಧರ್ಮದಲ್ಲಿ ತಾತ್ಸಾರಬುದ್ಧಿಯೂ ಅಸೂಯೆಯೂ ಸದ್ಯ ಹೆಚ್ಚಿರುವುದರಿಂದ ಮುಂಭಾಗದಲ್ಲಿ ನಿಮ್ಮ ಮಿತ್ರರೆಂದೆನಿಸಿದ್ದವರೂ ಕೂಡ ಹಿಂದಿನಿಂದ ನಿಮಗೆ ಕೇಡು ಬಗೆಯುವರು. ಅಕಸ್ಮಾತ್ ಕಲಹ ಸಂಭವಿಸಿ ಕೋರ್ಟಿನ ಬಾಗಿಲಿಗೆ ಹೋಗುವ ಪ್ರಸಕ್ತಿಯೂ ಬರಬಹುದು. ತಾ. 6ರಿಂದ 9ರವರೆಗೂ ದಿನಗಳು ಕೆಟ್ಟಿರುವುದರಿಂದ ಮಿತ್ರರಲ್ಲಿ ಅವಿಶ್ವಾಸ ಪ್ರವಾಸ ಕಾರ್ಯವಿಘ್ನ ಇತ್ಯಾದಿಗಳಿಂದ ಶೋಕ ಸಂಭವಿಸಲಿದೆ.

ಸಿಂಹರಾಶಿ—

ಸದ್ಯದ ಗ್ರಹಸ್ಥಿತಿಯಲ್ಲಿ ನಿಮಗೆ ಬಂಧುಬಾಂಧವರು ಮಿತ್ರವರ್ಗದವರೆಲ್ಲರೂ ಪ್ರತಿಕೂಲರೇ ಆಗಿರುವುದರಿಂದ ನಿಮ್ಮ ಅದೃಷ್ಟವು ಬಹಳ ಹೀನವಾಗಿರುವುದು. ಆದ್ದರಿಂದಲೇ "ದೈವೇ ವಿಮುಖತಾಂ ಯಾತೇ ನ ಕೋಽಪ್ಯಸ್ತಿ ಸಹಾಯಕೃತ್" ಎಂಬಂತೆ ಅದೃಷ್ಟಹೀನನಾದವನಿಗೆ ತಂದೆತಾಯಿಗಳಾಗಲೀ ಸಹೋದರರಾಗಲೀ ಮಿತ್ರಬಂಧುಗಳಾಗಲೀ ನೆರವಾಗರು. ಶತ್ರುಪೀಡೆಯು ಅಧಿಕವಾಗುವುದು. ಶರೀರ ಪ್ರಕೃತಿಯೂ ಸರಿಯಿರದು. ಕುಟುಂಬದಲ್ಲಿ ಸದಾ ಜಗಳಗಳಾಗುತ್ತಲೇ ಇರುವವು. ಹೆಚ್ಚೇಕೆ ದಂಪತಿಗಳಲ್ಲೂ ತಂದೆಮಕ್ಕಳಲ್ಲೂ ಕಲಹವಾಗುವದು. ಸ್ತ್ರೀಪುತ್ರರಿಂದ ವಿಯೋಗವುಂಟಾಗುವುದು. ಅಕಸ್ಮಾತ್ ಪ್ರವಾಸದ ಸಂದರ್ಭವೊದಗಿ ಕಷ್ಟನಷ್ಟಗಳಿಗೆ ಗುರಿಯಾಗಬೇಕಾಗುವುದು. ಆದಾಯವನ್ನತಿಕ್ರಮಿಸಿ ಖರ್ಚುಗಳು ಸಂಭವಿಸುವುದರಿಂದ ಹಣದ ಬಿಕ್ಕಟ್ಟಿನಲ್ಲಿ ಬಹಳ ಪೇಚಾಡುವಿರಿ. ತಾ. 6, 12, 13, ಈ ದಿನಗಳ ಮಟ್ಟಿಗೆ ಕಾರ್ಯಗಳಲ್ಲಿ ಜಯ ಹಿತವಾದ ವಿಚಾರ ಆಗುವದು.

ಕನ್ಯಾರಾಶಿ—

ಪ್ರಕೃತ ನಿಮಗೆ "ಆಪತ್ತಿನೊಳಗೊಂದು ಸಂಪತ್ತು"ಎಂಬ ರೀತಿಯಲ್ಲಿ ಬೃಹಸ್ಪತ್ಯಾಚಾರ್ಯರೊಬ್ಬರ ಪೂರ್ಣ ದೃಷ್ಟಿ ನಿಮ್ಮ ಮೇಲಿರುವುದು. ಈ ಕಾರಣದಿಂದಾಗಿಯೇ ನಿಮಗೆ ಸಮಾಜದಲ್ಲಿ ಮಾನಮರ್ಯಾದೆಗಳೂ ಕೆಲಮಟ್ಟಿನ ಖರ್ಚಿಗೆ ಬೇಕಾದ ಹಣವೂ ಸಿಗುವುದು. ಆದರೂ ಪ್ರತಿದಿನವೂ ನಿಮ್ಮ ಮನಸ್ಸಿನ ನೆಮ್ಮದಿಗೆ ಭಂಗತರುವ ಒಂದಲ್ಲೊಂದು ಗಂಡಾಂತರಗಳು ತಪ್ಪುವಂತಿಲ್ಲವು. ದುರ್ಜನರ ಸಹವಾಸದಿಂದ ನಿಮ್ಮ ಹೆಸರಿಗೆ ಕಳಂಕಬರುವುದಲ್ಲದೆ ವಿಶೇಷ ಧನವ್ಯಯವಾಗುವುದು. ಸಂಸಾರ ತಾಪತ್ರಯಗಳು ಹೆಚ್ಚುವವು. ಉಷ್ಣಸಂಬಂಧವಾದ ರೋಗವು ಶರೀರದಲ್ಲಿ ಕಾಣಿಸಿಕೊಳ್ಳುವುದು. ಶತ್ರುಗಳ ಬಾಧೆಯಿಂದ ಹಲವು ಕಾರ್ಯಗಳಲ್ಲಿ ನಿಮಗೆ ಪರಾಜಯವಾಗುವುದು. ಮಿತಭಾಷಿಯಾಗಿದ್ದರೂ ಕಲಹ ತಪ್ಪದು. ಪ್ರವಾಸದ ಮಟ್ಟಿಗೆ ಈ ವಾರವು ಯೋಗ್ಯವಾಗಿಲ್ಲವು. ತಾ. 7, 8, 9, ಈ ದಿನಗಳನ್ನು ಬಿಟ್ಟು ಇತರ ದಿನಗಳಲ್ಲಿ ಧನಮಾನಗಳಿಗೆ ಹಾನಿಯೂ, ಜನರಲ್ಲಿ ವಿರೋಧವೂ ಕಾರ್ಯಹಾನಿಯುಂಟಾಗಿ ಶೋಕವೂ ಹೆಚ್ಚುವವು.

ತುಲಾರಾಶಿ—

ವೈದ್ಯರು ಯಾವ ರೋಗಕ್ಕೂ ತಕ್ಕ ಚಿಕಿತ್ಸೆ ಮಾಡಿ ಅದನ್ನು ನಿವಾರಿಸಬಲ್ಲರಾದರೂ ಕೂಡ ಮನೋರೋಗ ನಿವಾರಣೆಗೆ ಬೇಕಾದ ಔಷಧವಾಗಲೀ ಚಿಕಿತ್ಸೆಯಾಗಲೀ ಅವರಲ್ಲಿಲ್ಲವು. ಈ ವಾರದಲ್ಲಿ ನಿಮ್ಮ ಆರೋಗ್ಯವು ಸಂಪೂರ್ಣ ಚೆನ್ನಾಗಿದ್ದರೂ ಮನೋರೋಗವೊಂದು ಮಾತ್ರ ನಿಮ್ಮನ್ನು ಬಿಟ್ಟಿಲ್ಲವು. ಇದೊಂದನ್ನು ಬಿಟ್ಟು ನಿಮಗೆ ಇನ್ನಾವ ಭಾಗದಲ್ಲೂ ಕೊರತೆಯಿಲ್ಲವು. ಬಂಧುಗಳೂ ಮಿತ್ರರೂ ಕುಟುಂಬದವರೂ ಕೂಡ ನಿಮಗೆ ಸರ್ವಾತ್ಮನಾ ಅನುಕೂಲರಾಗಿರುವುದರಿಂದ ಎಂಥಹ ಬಲಶಾಲಿಯಾದ ಶತ್ರುವನ್ನೂ ಕೂಡ ಕಾಲಡಿಯ ಕಸಕ್ಕಿಂತ ಕೀಳಾಗಿ ಕಾಣುವಿರಿ. ನಿರುದ್ಯೋಗದಿಂದ ಅಲೆದಾಡುತ್ತಿದ್ದವರೂ ಕೂಡ ಸದುದ್ಯೋಗದಲ್ಲಿ ಕಾಲಕಳೆವರು. ಉಪಾಧ್ಯಾಯರಿಗೂ ವಿದ್ಯಾಭಿಲಾಷಿಗಳಿಗೂ ಕೂಡ ಈ ಸಮಯವು ಚೆನ್ನಾಗಿರುವುದು. ಗೃಹೋಪಕರಣಗಳು ಪೂರ್ಣವಾಗಿರುವುದರಿಂದ ತದ್ವಿಷಯಕವಾದ ಯಾವ ಚಿಂತೆಯೂ ನಿಮಗಿರದು. ಆರಂಭಿಸಿದ ಪ್ರತಿಯೊಂದು ಕಾರ್ಯದಲ್ಲೂ ಆದಾಯವು ಚೆನ್ನಾಗಿರುವುದರಿಂದ ಸಂಪದ್ಭಾಗ್ಯವು ಉತ್ತಮರೀತಿಯಲ್ಲಿರುವುದು. ತಾ. 6, 10, 11, ಈ ದಿನಗಳು ಅತ್ಯುತ್ತಮಗಳಾಗಿವೆ.

ವೃಶ್ಚಿಕರಾಶಿ—

ಹೆಚ್ಚಿನ ಗ್ರಹರು ನಿಮಗೆ ಪ್ರತಿಕೂಲರಾಗಿದ್ದರೂ ಕೂಡ ಸುರಾಸುರಗುರುಗಳು ಪ್ರಸನ್ನರಾಗಿರುವುದರಿಂದ ಗೃಹಕೃತ್ಯ ವಿಚಾರದಲ್ಲಿ ನಿಶ್ಚಿಂತರಾಗಿರುವಿರಿ. ಮಿತ್ರಜನರ ಸಮಾಗಮವಾಗುವುದು. ಪ್ರಯತ್ನಕ್ಕೆ ತಕ್ಕ ಫಲದೊರೆಯುವುದು. ಪ್ರಕೃತ ನೀವು ರಾಜಕೀಯ ಭಾಗದಲ್ಲಿ ಪ್ರವೇಶಿಸಬೇಡಿರಿ. ಕೋರ್ಟು ಕಾರ್ಯಗಳಲ್ಲೂ ಪ್ರವೃತ್ತರಾಗದಿರಿ. ಫಲಿತಾಂಶವು ಒಳ್ಳೆಯದಾಗದು. ಗಂಡಹೆಂಡಿರ ಕಲಹವು ದಿನನಿತ್ಯವೂ ಎಂಬಂತಿರುವುದು. ಮನಸ್ಸು ಸದಾ ಭಯದಿಂದ ವಿಹ್ವಲವಾಗಿರುವುದು. ಮಾತ್ರವಲ್ಲ ಪಿತ್ಥದೋಷದಿಂದಲೂ ಪ್ರಕೃತಿಯ ಚೈತನ್ಯದಿಂದಲೂ ಆರೋಗ್ಯ ಕೆಡುವುದು. ಸೇವಕಜನರೊಡನೆ ಕಲಹವಾಗುವುದು. ವ್ಯಾಪಾರಿಗಳಿಗೂ ಧರ್ಮಕರ್ಮತತ್ಪರರಾಗಿರತಕ್ಕ ಸನಾತನಿಗಳಿಗೂ ಹೆಚ್ಚಿನ ಅನಿಷ್ಟವು ಸಂಭವಿಸದು. ತಾ. 6 ಮತ್ತು 10, 11 ಈ ದಿನಗಳಲ್ಲಿ ಧನವು ಅತಿಯಾಗಿ ಖರ್ಚಾಗುವುದು. ರೋಗವೃದ್ಧಿ, ಕಾರ್ಯಹಾನಿ, ಮಾನಹಾನಿಯ ಸಂಭವವೂ ಇದೆ.

ಧನೂರಾಶಿ—

ಯಾವ ಕಾರ್ಯಕ್ಕಾದರೂ ಮುಂದಾಳಾಗಿ ಹೋಗುವದು ಬಹಳ ಹಾನಿಯು. ಯಾಕೆಂದರೆ 'ನ ಗಣಸ್ಯಾಗ್ರತೋ ಗಚ್ಛೇತ್ಸಿದ್ಧೇ ಕಾರ್ಯೇ ಸಮಂ ಫಲಂ। ಯದಿ ಕಾರ್ಯವಿಪತ್ತಿಃ ಸ್ಯಾತ್ ಮುಖರಸ್ತತ್ರ ಹನ್ಯತೇ ॥' ಸಂಘದ ವ ಸಮಾಜದ ಮುಂದಾಳಾಗಿ ಕೆಲಸಮಾಡಿದಲ್ಲಿ ಆ ಕಾರ್ಯವು ಯಶಸ್ವಿಯಾದರೆ ಅದರ ಫಲವು ಹಿಂಬಾಲಿಸಿಬಂದವರೆಲ್ಲರಿಗೂ ಸಮಾನವಾಗಿ ಸಿಗುವುದು. ಒಂದು ವೇಳೆ ಅದು ವಿಪರೀತವಾದರೆ ಮುಂದಾಳಾಗಿ ಹೋದವನು ಕಷ್ಟನಷ್ಟಾದಿಗಳಿಂದ ಸರ್ವಭ್ರಷ್ಟನಾಗುವನು. ಇತರರು ಆ ಫಲಕ್ಕೆ ಹೊಣೆಯಾಗಲಾರರು. ಪ್ರಕೃತ ನೀವು ಕೂಡ ಯಾವ ಕಾರ್ಯಕ್ಕೂ ಮುಂದಾಗಿ ಹೋಗುವುದು ಶ್ರೇಯಸ್ಕರವಾಗಿಲ್ಲವು. ನಿಮ್ಮ ಕಾರ್ಯಗಳನ್ನು ಮಿತ್ರರು ಯಾ ಬಂಧುಗಳೆಂದು ತಿಳಿದು ಅವರ ಮೇಲೆ ಸಂಪೂರ್ಣ ಬಿಡುವುದೂ ಉಚಿತವಲ್ಲ; ಇದರಿಂದ ಕೇಡು ಮುಂದೆ ಬಂದೇಬರುವುದು. ಸದ್ಯದಲ್ಲಿ ನಿಮ್ಮಲ್ಲಿ ಸಾಕಷ್ಟು ಶಕ್ತಿಯಿಲ್ಲದಿದ್ದ ಪ್ರಯುಕ್ತ ಉದಾಸೀನರಾಗಿರುವುದೇ ಒಳ್ಳೆಯದು. ವೈದ್ಯರುಗಳಿಗೆ ಸ್ವವೃತ್ತಿಯಲ್ಲಿ ಅಪಕೀರ್ತಿ ಸಂಭವಿಸಲಿದೆ. ಆಯಕ್ಕಿಂತ ವ್ಯಯವು ಎಲ್ಲಾ ಭಾಗಗಳಲ್ಲೂ ಅತಿಕ್ರಮಿಸಲಿರುವುದರಿಂದ ಖರ್ಚಿನ ಭಾಗದಲ್ಲಿ ಸೂಕ್ಷ್ಮದೃಷ್ಟಿಯಿಡಿರಿ. ತಾ. 7, 8, 9, ಮತ್ತು 12, 13 ಈ ದಿನಗಳು ವಿಶೇಷ ಹಾನಿಕಾರಕಗಳಾಗಿವೆ.

ಮಕರರಾಶಿ—

ಆಹಾರದೋಷದಿಂದಾಗಿ ಆರೋಗ್ಯವು ಕೆಡಲಿದೆ. ಮತ್ತು ಸೂಕ್ಷ್ಮವಿಚಾರವು ನಿಮ್ಮಲ್ಲಿ ಕಡಿಮೆಯಾದುದರಿಂದ ವ್ಯರ್ಥ ಕಲಹಗಳಿಗೂ ಅಧಿಕಾರೀ ಜನರ ಪ್ರಕೋಪಕ್ಕೂ ಪಾತ್ರರಾಗುವಿರಿ. ಆದರೂ ನಿಮ್ಮ ತತ್ಕಾಲೀನ ಉದ್ಯೋಗದಲ್ಲಿ ಒಳ್ಳೆಯ ಫಲದೊರೆಯುವದು. ಪರಿಭೃತ್ಯಾದಿ ಸಕಲ ಗೃಹ ಉಪಕರಣಗಳೂ ತೃಪ್ತವಾಗಿರುವವು. ಶತ್ರುಜನರು ನಿಮ್ಮ ದೃಷ್ಟಿಗೆ ಅಗೋಚರರಾಗಿಯೇ ಇರುವರು. ದಿನಕೂಲಿಯವರಿಗೂ ವ್ಯಾಪಾರಿಗಳಿಗೂ ವೈದ್ಯರುಗಳಿಗೂ ಶ್ರಮಕ್ಕಿಂತಲೂ ಅಧಿಕವಾಗಿ ಫಲವು ಸಿಗುವುದು. ಹೆಚ್ಚೇಕೆ ಸಾಂಪತ್ತಿಕ ಪರಿಸ್ಥಿತಿಯು ಪೂರ್ಣ ಸುಧಾರಿಸಿರುವುದು. ಹಲವಾರು ಮನೋರಥಗಳು ಕೈಗೂಡಲಿರುವವು. ಆದಕಾರಣದಿಂದಲೇ ಈ ವಾರವನ್ನು ಸಂತೋಷದಿಂದ ಕಳೆಯುವಿರಿ. ತಾ. 6ರಿಂದ 9ರ ವರೆಗೂ ಮತ್ತು 12, 13 ಈ ದಿನಗಳು ಹೆಚ್ಚಿನ ಭಾಗಗಳಲ್ಲಿ ಅನುಕೂಲಗಳಾಗಿ ಪರಿಣಮಿಸಲಿರುವವು.

ಕುಂಭರಾಶಿ—

ಸುದೀರ್ಘ ವಿಚಾರದಿಂದ ಸಮಯಕಳೆಯುವ ದಿನಗಳು ಕಳೆದವು. ಇಂದೀಗ ನಿಮ್ಮ ಭಾಗ್ಯದೇವತೆಯು ನಿಮ್ಮ ಸ್ವಾಗತಕ್ಕೆ ಲಕ್ಷ್ಯವಿಟ್ಟಿರುವಳು. "ಉದ್ಯೋಗಂ ಪುರುಷಲಕ್ಷಣಂ" ಎಂಬಂತೆ ತನ್ನ ಕೆಲಸವನ್ನು ಮಾಡುವದು ಅವನವನ ಕರ್ತವ್ಯ. ಈ ಕಾಲದಲ್ಲಿ ನೀವು ಯಾವ ಉದ್ಯೋಗವನ್ನು ಮಾಡಿದರೂ ಅದು ಒಳ್ಳೆಯ ಫಲಕಾರಿಯಾಗಿಯೇ ಆಗುವದು. ಆದರೆ ನಿಮಗೆ ಧೈರ್ಯವು ಬಹಳ ಕಡಿಮೆಯಾಗಿರುವುದು. ಆದ್ದರಿಂದ ನೀವು ಯೋಗ್ಯ ಮಿತ್ರರ ಬೆಂಬಲವನ್ನು ಪಡೆದು ಕಾರ್ಯಪ್ರವೃತ್ತರಾಗಿರಿ. ನಿಮ್ಮ ಕಾರ್ಯಗಳು ಸುಗಮವಾಗಿ ಕೊನೆಗೊಳ್ಳುವವಲ್ಲದೆ ಜಯವೂ ಕೀರ್ತಿಯೂ ಲಾಭವೂ ಸಿಗುವದು. ಜನರ ಪ್ರಶಂಸೆಗೆ ಪಾತ್ರರಾಗುವಿರಿ. ಆರೋಗ್ಯದ ಮಟ್ಟಿಗೆ ಅಷ್ಟೊಂದು ಚೆನ್ನಾಗಿ ತೋರುವುದಿಲ್ಲವು. ಮನೋವ್ಯಥೆಗಳೆಲ್ಲವೂ ನಿರಾಶವಾಗುವವು. ಆರ್ಥಿಕ ಮುಗ್ಗಟ್ಟಿನಿಂದ ಮುಕ್ತರಾಗುವಿರಲ್ಲದೆ ಹಿಂದಿನ ಸಾಲವನ್ನೂ ತೀರಿಸುವಿರಿ. ತಾ. 7ರಿಂದ 11ರವರೆಗಿನ ದಿನಗಳಲ್ಲಿ ಇಷ್ಟಸಿದ್ಧಿ, ಮಿತ್ರಭಾಗ್ಯ, ಹೆಚ್ಚಿನ ಸುಖಗಳು ದೊರೆಯುವವು.

ಮೀನರಾಶಿ—

ಮನುಷ್ಯನಿಗೆ ಒಂದೊಂದು ಚಿಂತೆಗಳೇ ಅವನ ಚಿತ್ತಭಂಗಕ್ಕೆ ಸಮರ್ಥಗಳಾಗಿರುವಾಗ ನಿಮಗೆ ನಾನಾ ಚಿಂತೆಗಳು ಏಕಕಾಲದಲ್ಲೇ ಸಂಭವಿಸಿರುವವು. ಒಂದು ಕಡೆಯಲ್ಲಿ ಸಂಸಾರದ ಚಿಂತೆ. ಇನ್ನೊಂದೆಡೆ ಶಾರೀರವಿಷಯಕ ಚಿಂತೆ. ಮತ್ತೊಂದೆಡೆ ಹಣದ ಚಿಂತೆ. ಮಗುದೊಂದೆಡೆಯಲ್ಲಿ ವಿಪಕ್ಷೀಯರ ಉಪಟಳದಿಂದ ಹಾನಿಯಾಗತಕ್ಕ ಕಾರ್ಯನಿರ್ವಹಣದ ಚಿಂತೆ. ಅಂತೂ ಚಿಂತಾಸಮುದ್ರದಲ್ಲಿ ಈಜಾಡುವ ನಿಮಗೆ ಬಾಹ್ಯ ಪ್ರಪಂಚವೇ ಶೂನ್ಯವಾಗಿ ತೋರಬಹುದು. ಮಾತ್ರವಲ್ಲ ಬುದ್ಧಿಗೂ ಮಾಂದ್ಯ ಬರುವುದು. ಎಲ್ಲರೂ ತಿರಸ್ಕಾರಪೂರ್ವಕದೃಷ್ಟಿಯಿಂದಲೇ ನೋಡುವರು. ಪುತ್ರಮಿತ್ರರಿಂದ ವಿಯುಕ್ತರಾಗಿ ಏಕಾಗಿಯಾಗಿ ಕಾಲಕಳೆಯಬೇಕಾಗುವಿರಿ. ಬಪ್ಪದು ತಪ್ಪದು. ಆದಕಾರಣ ಬಂದದ್ದನ್ನು ಅನುಭವಿಸಿಯೇ ತೀರಬೇಕು. "ಜೀವನ್ನರೋ ಭದ್ರಶತಾನಿ ಪಶ್ಯೇತ್" ಎಂಬಂತೆ ಸದ್ಯ ಕಷ್ಟವನ್ನು ಸಹಿಸಿಯಾದರೂ ಕಾಲವನ್ನು ಕಳೆದರೆ ಮುಂದಾದರೂ ಒಳ್ಳೇ ದಿನಗಳನ್ನು ನೋಡಬಹುದು. ಅದೃಷ್ಟವು ಸದಾ ಒಂದೇ ತೆರನಾಗಿರುವುದಿಲ್ಲವು. ವಾರಾದಿಯ ನಾಲ್ಕು ದಿನಗಳು **ಬಹಳ ಹಾನಿಕರಗಳಾಗಿ ಪರಿಣಮಿಸಲಿಕ್ಕಿವೆ.**

ಧಾತುಪುಷ್ಟಿ ಲೇಹ ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ. 2—8—0.

ಮೇಹ ಕುಠಾರ— ಶ್ವೇತ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರಮಾರ್ಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು ಮೂತ್ರದಲ್ಲಿ ಧಾತು ಹೋಗುವುದು ಸೊಂಟನೋವು ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಅಲ್ಲದೆ ಇಪ್ಪತ್ತು ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ. ಡಬ್ಬಿ 1ರ ರೂ. 2-8-0.

ಕಸ್ತೂರಿ ಮಿಶ್ರಣ ದಶಮೂಲ— ಪ್ರಸವಾನಂತರ ಬಾಣಂತಿಯರಿಗೆ ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ 1ರ ರೂ. 1—8—0

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಔಷಧಿಸಿಕ್ಕುವ ಸ್ಥಳ— ನವಭಾರತ ಬುಕ್ ಡಿಪೋ, ಉಡುಪಿ. ಶ್ರೀ ಕೃಷ್ಣ ಶರ್ಮರು, ಕುಂದಾಪುರ. ವಿಟ್ಠಲ ನಾರಾಯಣ ಶೆಣೈ ಟ್ರೇಡರ್ ಪಿನಸ್ ಮಹಗಾಂ ಮುಂಬಯಿ.

ಪತ್ರ ವ್ಯವಹಾರ

(ಬಾತ್ಮೀದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.) [ಸಂ. ನ]

ವರಂಗ ಗ್ರಾಮನಿವಾಸಿಕರ ದುರವಸ್ಥೆ

ಮಾನ್ಯ ಜಿಲ್ಲಾ ಬೋರ್ಡು ಮತ್ತು ವರಂಗಗ್ರಾಮ ಪಂಚಾಯಿತಿ ಬೋರ್ಡಿನವರ ಅವಗಾಹನೆ ಬಗ್ಗೆ—

ಸನ್ಮಾನ್ಯರೇ, ಘನಹೊಂದಿದ ಕಾಂಗ್ರೆಸ್ ಸರಕಾರವು ಬಡಜನತೆಯ ಸೌಕರ್ಯಕ್ಕಾಗಿ ಕುಡಿಯಲು ಒಂದಿಷ್ಟು ನಿರ್ಮಲ ನೀರನ್ನಾದರೂ ಒದಗಿಸಬೇಕೆಂಬ ಸದಭಿಪ್ರಾಯದಿಂದ ಬಾವಿಗಳ ಬಗ್ಗೆ ಹೆಚ್ಚಿಗೆ ನಿಗಾ ಕೊಡುತ್ತಿದೆ ಎಂಬುದನ್ನು ಕೇಳಿರುವೆನು, ಆದರೆ ನಮ್ಮ ದುರ್ದೈವ ಎಂದರೋ ಎಂಬಂತೆ ನಾಲ್ಕು ವರ್ಷಗಳಿಂದ ಪೇಟೆಯವರು ನೀರಿಗಾಗಿ ಪಡುತ್ತಿರುವ ಪಾಡು ಹೇಳತೀರದು. ಕಾರಣ ಇಲ್ಲಿಯ ಖಾಯಂ ನಿವಾಸಿಗಳಿಗೂ ಪ್ರಯಾಣಿಕರಿಗೂ ಇನ್ನು ಈ ದಾರಿಯಾಗಿ ತಿರುಗತಕ್ಕ ಗಾಡಿಯವರಿಗೂ ಜಿಲ್ಲಾ ಬೋರ್ಡಿನಿಂದ ಈ ಮೊದಲು ತೋಡಿಸಲ್ಪಟ್ಟ ಒಂದೇ ಒಂದಾದ ಬಾವಿಯು 1936ನೇ ಇಸವಿಯಲ್ಲಿ ಜರಿದು ಬಿದ್ದುಹೋಯ್ತು. ಪೇಟೆಯ ಎಲ್ಲಾ ಜನರೂ ಫೇಬ್ರವರಿ ಆದಿಯಿಂದ ಇದೇ ಬಾವಿಯ ಆಶ್ರಯಪಡೆಯಬೇಕಾಗುತ್ತದೆ, ಆದರೆ ಬಾವಿ ಬಿದ್ದುಹೋದ ಲಾಗಾಯ್ತು ಈ ತಿಂಗಳಿಂದಲೇ ನೀರಿಗಾಗಿ ½ ಮೈಲು ದೂರಹೋಗಬೇಕಾಗುವದು. ಈ ಎಲ್ಲಾ ಸಂಕಷ್ಟಗಳನ್ನು ಬಾವಿ ಹಾಳಾದಂದಿನಿಂದ ಮಾನ್ಯ ಕಲೆಕ್ಟರ್ ದೊರೆಗಳವರ ಮತ್ತು ಜಿಲ್ಲಾ ಬೋರ್ಡಿನವರ ಸನ್ನಿಧಿಯಲ್ಲಿ ಹಲವು ಬಾರಿ ಬಿನ್ನವಿಸಿಕೊಂಡರೂ ಯಾವ ರೀತಿಯ ಆಶಾಜನಕ ಉತ್ತರವೂ ನಮಗೆ ದೊರೆಯದೆ ಹೋಯ್ತು. ಇದು ಸಂಬಂಧಪಟ್ಟವರ ಅಸಡ್ಡೆಯೋ, ಬೇರಾವ ಕಾರಣವೋ ನಮಗರಿಯದು. ಗ್ರಾಮ ಪಂಚಾಯ್ತಿ ಬೋರ್ಡಿಗೆ ಕೇಳುವಾಗ ಸಾಕಷ್ಟು ಹಣವೂ ಇಲ್ಲ. ಬಾವಿಯಿರುವ ಸ್ಥಳವನ್ನು ಬಿಟ್ಟುಕೊಡಲು ಕೇಳಿದಲ್ಲಿ ಒಪ್ಪಿಗೆಯೂ ದೊರೆಯಲಿಲ್ಲವೆಂಬ ನೆಪ ಬರುತ್ತಿದೆ. ಬಾವಿ ದುರಸ್ತಿ ಪಡಿಸುವ ಬಗ್ಗೆ ಪಂಚಾಯತಿಬೋರ್ಡಿಗೆ ಸ್ಥಳವೇಕೋ ತಿಳಿಯದು. ಹೇಗೂ ಇರಲಿ. ಜನತಾಸೇವೆಗಾಗಿಯೇ ಜಿಲ್ಲಾ ಬೋರ್ಡನ್ನು ಪ್ರವೇಶಿಸಿದ ಕಾಂಗ್ರೆಸ್ ಪಾರ್ಟಿಯು ಕೂಡಾ ಈ ಕಡೆಗೆ ದಯಾಪೂರಿತ ದೃಷ್ಟಿಯನ್ನು ಬೀರದಿರುವುದನ್ನು ಕಾಣುವಾಗ ತುಂಬಾ ಆಶ್ಚರ್ಯವೆನಿಸುತ್ತದೆ. ಇನ್ನಾದರೂ ಸಂಬಂಧಪಟ್ಟವರು ಈ ಕಡೆಗೆ ನಿಗಾಕೊಟ್ಟು ಬಡಜನರು ಕೆಸರು ನೀರು ಕುಡಿದು ಅನಾರೋಗ್ಯಕ್ಕೆ ತುತ್ತಾಗುವ ದುಸ್ಸಂಧಿಯು ತಪ್ಪುವಂತೆ ಬಾವಿಯನ್ನು ಈ ವರ್ಷವೇ ದುರಸ್ತಿಪಡಿಸಿ ನಮ್ಮನ್ನು ಉದ್ಧರಿಸುವರೆಂಬ ಕೃತಜ್ಞಪೂರ್ವಕ ಆಶೆಯಿಂದಿರುವೆನು.

ಇತಿ
ಸಂಕಷ್ಟಪಡುತ್ತಿರುವ
ಪೇಟೆನಿವಾಸಿಕನೊಬ್ಬ

ಅಯ್ಯಾ,

ನನ್ನ ಒಂದು ಅರಿಕೆ ಮಾಡಲಿಕ್ಕೆ ನಿಮ್ಮ ಅನುಕೂಲ್ಯವಾದ ಪತ್ರದಲ್ಲಿ ನನಗೆ ಸ್ವಲ್ಪ ಸ್ಥಳ ಕೊಡುವಿರಾ? ಪುತ್ತೂರು ತಾಲೂಕಿನ ಕೆಲವು ಪಾದ್ರಿಗಳು ಬ್ಯಾರಿಸ್ಟರ ಇಬ್ಬರು ಹುಡುಗರನ್ನು ಕೊಂಡುಹೋಗಿದ್ದಾರಂತೆ, ಕನ್ನಡ ಪತ್ರಗಳಲ್ಲಿ ಓದಿ ನನಗೆ ತುಂಬಾ ಆಶ್ಚರ್ಯವಾಯಿತು. ನನಗೆ ಈ ಸಂಗತಿ ಪೂರ್ಣ ಗೊತ್ತಿಲ್ಲ. ಪುತ್ತೂರು ಮಾನ್ಯ ವಕೀಲರು ಪೂರ್ಣ ತನಿಖೆಮಾಡದೆ ಪಾದ್ರಿಗಳನ್ನು ದೂರುವದು ಕೇವಲ ಅನ್ಯಾಯವೆಂದು ನನಗೆ ತೋರುತ್ತದೆ. ನನಗೆ ಗೊತ್ತು ಇಷ್ಟು ಹುಟ್ಟಿಗೆ ಪಾದ್ರಿಗಳು ನಿರಪರಾಧಿಯವರು. ಈಗಲಾದರೂ ವಕೀಲರು ತನಿಖೆ ಮಾಡಿ ಸಂಬಂಧಪಟ್ಟವರನ್ನು ಸಮಾಧಾನಪಡಿಸುವರೋ?

Rev. A. I. Castelino

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಪ್ರೆಸಿಡೆಂಟರವರ ಅವಗಾಹನೆಗೆ

ಅಯ್ಯಾ ನವಯುಗ ಸಂಪಾದಕರೇ,

ನಿಮ್ಮ ಅನುಕೂಲ್ಯವಾದ ಪತ್ರಿಕೆಯಲ್ಲಿ ಸಾವಿರಾರು ಬಡಜನರ ಪ್ರಯೋಜನಾರ್ಥವಾಗಿ ಈ ಕೆಳಗಿನ ಸಂಗತಿಯನ್ನು ಪ್ರಕಟಿಸುವಿರಾಗಿ ನಂಬುತ್ತೇವೆ.

ಕೊಲ್ಲೂರು ಘಟ್ಟದ ಕೆಳಗೆ ಬೈಂದೂರ್. ನೆರೆಹೊರೆಯ ಸಾವಿರಾರು ಗ್ರಾಮಗಳ ಜನರು ವೈಸೂರು ಪ್ರಾಂತ್ಯದ ವ್ಯಾಪಾರಿ ಪಟ್ಟಣಗಳ ವ್ಯಾಪಾರಕ್ಕೋಸ್ಕರ ಮತ್ತು ಘಟ್ಟಕ್ಕೆ ಹೋಗುವಬಡತನಸಂಬ್ಯಾಕ ಕೂಲಿಯಾಳುಗಳ ಪ್ರಯೋಜನಕ್ಕೂ, ನಡು ಸ್ಥಳವಾದ, ಅರಣ್ಯ ಮಧ್ಯದಲ್ಲಿರುವ ನಾಗೋಡಿ ಎಂಬ ಸ್ಥಳದಲ್ಲಿ ತಂಗಿಕೊಳ್ಳುವುದಕ್ಕಾಗಿ, ಶ್ರೀ, ಶ್ರೀಧರ ಸುಬ್ರಾಯ ಕಾಮತರು ಕಳೆದ ವರ್ಷ ಸುಮಾರು ಸಾವಿರ ರೂಪಾಯಿ ವೆಚ್ಚಮಾಡಿ ತನ್ನ ಅಂಗಡಿಗೆ ತಾಗಿ ಕೆಟ್ಟೋಣವನ್ನು ಕಟ್ಟಿಸಿದ್ದರು. ಯಾರೋ ದ್ವೇಷದಿಂದ ಅವರ ಮೇಲೆ ಅರ್ಜಿ ಮಾಡಿದುದರ ಪರಿಣಾಮವಾಗಿ ಸದರಿ ಕಟ್ಟೋಣವನ್ನು ಡಿಸ್ಟ್ರಿಕ್ಟ್ ಬೋರ್ಡು ಸ್ಥಳದಲ್ಲಿ ಕಟ್ಟಿದರೆಂಬ ಕಾರಣವನ್ನಿಟ್ಟುಕೊಂಡು ಅದನ್ನು ತೆಗೆಯುವರೆ ಪ್ರೆಸಿಡೆಂಟರು ಹುಕುಂಕೊಟ್ಟಿರುವರಾಗಿ ಕೇಳಿ ತುಂಬಾ ವಿಷಾದವಾಗುತ್ತದೆ. ಹೀಗೆ ಪ್ರೆಸಿಡೆಂಟರು ಹುಕುಂಕೊಟ್ಟಿರುವುದಾದರೆ, ಅದು ಸಾವಿರಾರು ಜನರು ತಂಗುವ ಸ್ಥಳವನ್ನು ನಾಶಪಡಿಸಿದಂತೆಯೇ ಸರಿ! ಈ ತೊಂದರೆಗಳೆಷ್ಟೆಂದು ಇಲ್ಲಿ ವಿವರಿಸಲು ಅಸಾಧ್ಯವೇ ಸರಿ. ಪ್ರೆಸಿಡೆಂಟರು ಸ್ವತಃ ಇಲ್ಲಿ ಉಳಿದರೆ ಜನರು ಈ ಕಟ್ಟೋಣದಿಂದ ಪಡೆಯುವ ಪ್ರಯೋಜನವನ್ನು ಮನಗಾಣುವರು. ಈ ಎಲ್ಲಾ ಕಾರಣಗಳಿಂದ ಈಗಿನ ಜನೋಪಕಾರಿ ಕಾಂಗ್ರೆಸ್ ಅಧಿಕಾರಿ ಬೋರ್ಡು, ತಮ್ಮ ಹುಕುಮನ್ನು ರದ್ದುಗೊಳಿಸಿ, ಬಡ ಪ್ರಯಾಣಿಕರಿಗೆ, ಗಾಡಿಯವರಿಗೆ ವಗೈರೆ ಎಲ್ಲಾ ಜನರಿಗೂ ಸಹಾಯಮಾಡಬೇಕಾಗಿ ಪ್ರಾರ್ಥಿಸುತ್ತೇವೆ. ಇದನ್ನು ಪ್ರಕಟಿಸುವ ನವಯುಗಕ್ಕೂ ತುಂಬಾ ಆಭಾರಿಯಾಗಿದ್ದೇವೆ. ಈ ಬಗ್ಗೆ ಪ್ರತ್ಯೇಕವಾಗಿ ನಮ್ಮೆಲ್ಲರ ಮನವಿಯು ಪ್ರೆಸಿಡೆಂಟರಿಗೂ ರವಾನಿಸಿಯದೆ. ಈ ವಿಷಯದಲ್ಲಿ ಈಗನು ಪ್ರೆಸಿಡೆಂಟರಿಗೂ ಇತರ ಮೆಂಬರರಿಗೂ ಸಂಬಂಧಪಟ್ಟ ಅಧಿಕಾರಿಗಳಿಗೂ ಸದ್ಬುದ್ಧಿ ಕೊಟ್ಟು ಕಟ್ಟೋಣವನ್ನು ಇರಿಸಲೆಂದು ಪ್ರಾರ್ಥಿಸುತ್ತೇವೆ.

ಬೈಂದೂರು ನೆರೆಹೊರೆಯ ಎಲ್ಲಾ ಗ್ರಾಮಗಳ ನಿವಾಸಿಕರು.

ಶಾಂತಿ ರೇಫಲ್, ಕೂರಾಡಿ

ಕೂರಾಡಿ ಶಾಂತಿನಿಕೇತನ ಶಾಲೆಯ ಸಹಾಯಾರ್ಥವಾಗಿ ಏರ್ಪಟ್ಟ ಶಾಂತಿ ರೇಫಲಿನ ಕುರಿತು ಈಗೀಗ ನಾನಾ ಸುದ್ದಿಗಳು ಹಬ್ಬುತ್ತಿವೆ. ಕಳೆದ ಇದೇ ಪತ್ರಿಕೆಯ ಸಂಚಿಕೆಯಲ್ಲಿಯೂ ಇತರ ವಾರಪತ್ರಿಕೆಗಳಲ್ಲೂ ಸೋಡ್ತಿ ಜಪ್ತಿಯಾಗಿದೆಯೆಂದೂ ಪ್ರಕಟವಾಗಿರುತ್ತದೆ. ಹೀಗಾಗಿದ್ದರೆ ಇದು ಶಾಲೆಯ ಪ್ರಚಾರಕ್ಕೂ ಕೀರ್ತಿಗೂ ಕಳಂಕವನ್ನುಂಟುಮಾಡುವದಾಗಿದೆ. ಆದುದರಿಂದ ಶಾಂತಿ ರೇಫಲ್ ಮತ್ತು ಶಾಲೆಯ ಕುರಿತು ನಿಜವಾದ ಸಂಗತಿಗಳನ್ನು ಪ್ರಕಟಿಸಿ ಜನರಲ್ಲಿ ವಿಶ್ವಾಸವನ್ನುಂಟುಮಾಡುವುದು ಸಂಬಂಧಪಟ್ಟವರ ಕರ್ತವ್ಯವಾಗಿರುತ್ತದೆ. ಮುಖ್ಯವಾಗಿ ಇವರು ಶಾಂತಿ ರೇಫಲ್‌ನಲ್ಲಿ ಈ ವರೆಗೆ ನಡೆದ ಸೋಡ್ತಿ ಎತ್ತುವಿಕೆಯಲ್ಲಿ I, II, ಮತ್ತು IIIನೇ ಪ್ರೈಜುಗಳು ಯಾರುಯಾರಿಗೆ ಬಂದಿವೆ ಎಂಬುದನ್ನು ವಿವರವಾಗಿ ತಿಳಿಸುವುದು ಸಮಂಜಸವಾಗಿದೆ ಮತ್ತು ಸಾರ್ವಜನಿಕರಿಗಾಗಿ ಈ ವರೆಗೆ ಜಮಾ ಬಂದ ಹಣ ಮತ್ತು ಖರ್ಚಿನ ವಿವರವನ್ನು ಪ್ರಕಟಿಸುವುದು ಸಂದರ್ಭೋಚಿತವಾಗಿದೆ. ಇಲ್ಲದಿದ್ದರೆ ಜನರಲ್ಲಿ ನಾನಾತರದ ಊಹಾಪೋಹಗಳಿಗೆ ಇನ್ನಷ್ಟು ಆಸ್ಪದವಾಗಿ ಶಾಲಾಭಿವೃದ್ಧಿಗೆ ತೊಡಕಾಗುವುದೆಂದು ಭಾವಿಸುತ್ತೇನೆ.

(ಈ ರೇಫ್ಲಿನ ಕುರಿತು ಇನ್ನೂ ಕೆಲವು ಬಾತ್ಮಿಗಳು ಬಂದಿವೆ. ಸ್ಥಳಸಂಕೋಚದಿಂದ ಮುದ್ರಿಸಲಾಗಲಿಲ್ಲ. ಸಂ. ನ.)

ಒಬ್ಬ ಹಿತಕಾಂಕ್ಷಿ.

ಬಾರಕೂರು—ತಾ. 28-3-39ರಲ್ಲು ಸ್ಥಳೀಯ ರಥೋತ್ಸವದ ಶುಭಮುಹೂರ್ತದಲ್ಲಿ ಶ್ರೀ. ಬಿ. ಗೋವಿಂದ ಬೇಂಡ್ ಮಾಸ್ಟರಿಗೂ ಶ್ರೀ. ಬಿ. ಲೀನ ಸೇರಿಗಾರರಿಗೂ ಸುವರ್ಣಪದಕವನ್ನು ಊರಿನವರ ಪರವಾಗಿ ಶ್ರೀ ಮಾನ್ಯ ಪುತ್ತು ಶೆಣೆಯವರ ಹಸ್ತದಿಂದ ನಾಗರೀಕಜನರ ಸಮಕ್ಷಮ ಕೊಡಲಾಯಿತು. ಶ್ರೀ, ಬಿ. ಹರಿಶ್ಚಂದ್ರ ಮಲ್ಯರು ಪದಕಗಳನ್ನು ಕೊಡುವ ಮೊದಲು 10ನಿಮಿಷಗಳ ತನಕ ಪದಕಕೊಡುವ ಉದ್ದೇಶ ಮೊದಲಾದುವುಗಳನ್ನು ಕುರಿತು ಭಾಷಣವಿತ್ತರು.

ಕಾಸರಗೋಡು—ತಾ. ೨೯-೩-೩೯ರಲ್ಲಿ ಶ್ರೀ ರಾಮಭಜನಾ ಮಂದಿರದ ಶ್ರೀರಾಮಜಯಂತಿ ಸಮಾರಂಭವು ಶ್ರೀರಾಮನಾಮ ಸಂಕೀರ್ತನ, ಶ್ರೀರಾಮ ಜನ್ಮ ಕಥಾಶ್ರವಣ, ಸಂಗೀತ, ಪೂಜಾದಿ ಸತ್ಕರ್ಮಗಳಿಂದ ತೊಡಗಿ ಅನ್ನೆಂಬಳ ಶ್ರೀನಿವಾಸ ಪೈಗಳವರ ಅಧ್ಯಕ್ಷತೆಯಲ್ಲಿ ಭಜನೆ, ಶ್ರೀ ರಾಮ ಮಹಿಮಾದಿ ವಿಶೇಷ ಭಾಷಣಗಳಿಂದ ಮಂಗಳವಾಯಿತು. ಶ್ರೀಗಳಾದ ಕೆ. ಎಂ. ಶಂಕರ ಭಟ್ಟರು, ಕೆ. ರಾಮರಾವ್ ವಿದ್ವಾನ್ ಸುರತ್ಕಲ್ ಸುಬ್ಬರಾಯರು, ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರು ಮತ್ತು ಬಿ. ಆರ್. ಶೆಣೈ ಅವರುಗಳು ಸಂದರ್ಭೋಚಿತ ಭಾಷಣಮಾಡಿದರು. ಅಧ್ಯಕ್ಷರ ಭಾಷಣ, ಅಭಿವಂದನೆಯೊಂದಿಗೆ ಸಭಾಂತ್ಯವಾಯಿತು.

ಘರಂಗಿಪೇಟೆ—ಶ್ರೀ. ರಾಮಾ ಹಾ. ಎ. ಶಾಲೆಯ ೩೩ನೇ ವಾರ್ಷಿಕೋತ್ಸವವು ತಾ. 29-3-39ರಲ್ಲು ಶ್ರೀ. ನಯಂಪಳ್ಳಿ, ರಾಮರಾವ್ ಬಿ. ಎ. ಬಿ. ಎಲ್. ರವರ ಅಧ್ಯಕ್ಷತೆಯಲ್ಲಿ ಜರಗಿತು. ಕೊಂಚಾಡಿ ನಾರಾಯಣ ಶೆಣೈಯವರಿಂದ ಶಿಲಾಭಿನಂದನ ಸಂದೇಶ ಮತ್ತು ಶಾಲಾ ರಿಪೋರ್ಟಿನ ವಾಚನ ನಡೆದ ತರುವಾಯ ಶ್ರೀಮತಿ ಎನ್. ರಾಮರಾಯರಿಂದ ವಿದ್ಯಾರ್ಥಿಗಳಿಗೆ ಪಾರಿತೋಷಕಗಳು ಹಂಚಲಾದುವು. 'ಲಾಖ್ ಕಾ ರೋಡ್' ಎಂಬ ಹಿಂದೀ ನಾಟಕದ ಒಂದು ದೃಶ್ಯ, ಹುಡುಗಿಯರ ಲೇಜಿಮ್ ಮತ್ತು ಯಕ್ಷಗಾನಗಳು ನಡೆದ ಬಳಿಕ ಶ್ರೀ ಪಾತೂರು ಕೇಶವ ಭಟ್ರೂ ದೆಮ್ಮಲೆಯ ರಾಮಣ್ಣ ಶೆಟ್ರೂ ಶ್ರೀ. ಕೆ. ರಾಮಚಂದ್ರ ಪೈಗಳ ಭಾಷಣ ಮಾಡಿದರು. ಅಧ್ಯಕ್ಷರು ಶಾಲೆಗಳ ಯೋಗ್ಯತೆ ಸಹ ಶಿಕ್ಷಣದ ಪ್ರಯೋಜನ ಇತ್ಯಾದಿಗಳನ್ನು ಕುರಿತು ಸುರಸಭಾಷಣಮಾಡಿದರು. ಅವರ ಇಂಗ್ಲಿಷ್ ಭಾಷಣವನ್ನು ಡಾ। S. S. ರಾಯರು ಕನ್ನಡದಲ್ಲಿ ಭಾಷಾಂತರಿಸಿದರು. ಶಾಲಾ ಹೆಡ್‌ಮಾಸ್ತರ ಶ್ರೀ. ಎ ರಾಮಚಂದ್ರ ಹೆಗ್ಡೆಯವರು ಧನ್ಯವಾದಗಳನ್ನಿತ್ತ ತರುವಾಯ ಇಂಗ್ಲೀಷು ನಾಟಕ, ಕೋಲಾಟ, ಶ್ರೀ ಎ ರಾಘವೇಂದ್ರ ಹೆಗ್ಡೆಯವರು ಬರೆದ ಸತೀ ಭಾರತಿ ಎಂಬ ಕನ್ನಡ ನಾಟಕವನ್ನು ಬಾಲಕ ಬಾಲಕಿಯರು ಆಡಿ ತೋರಿಸಿದರು. ಹಿಂದೂ ಮುಸಲ್ಮಾನ ಐಕ್ಯತೆಯ ವಿಷಯ ಕೆಲವು ಮಾತುಗಳನ್ನು ಡಾ। ಎಫ್. ಎಚ್. ಒಡೆಯರ್‌ರವರು ಆಡಿದ ತರುವಾಯ ರಾಷ್ಟ್ರಗೀತದೊಂದಿಗೆ ಶಿಲಾನ್ಯರ್ಥಂತಿಯು ಕೊನೆಗೊಂಡಿತು.

THE
PREMIER BANK
OF INDIA, LIMITED
Head Office: MADRAS.
Branches:
MADURA & NELLORE.
CHAIRMAN
Dr. U. L. Narayana Rao.
'Bhujanga Nivas' Madras.
FIXED DEPOSITS
are now received at the following Rates:
For 6 Months at 3½% P. A.
12 Months at 4½% P. A.
24 Months at 5% P. A.
(Interest Paid Half-yearly.)
S. V. Rau D. Com.,
Managing Director.

WANTED.

Applications are invited from Graduates or Intermediates for an accountant's post as a Head clerk. The application which should reach Box No. 12 C/O Navayuga Office, Udipi, on or before 15 th April 1939 should contain the Name, Age, Qualifications, permanent residence; and previous experience. The Vacancy is permanent one

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋರಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪.

Sole Manufacturer DR. D. N. JASANI, Vitalbhai Patel Road, BOMBAY 4.

The Tropical Insurance

CO., LTD., DELHI.

ದಿ ಟ್ರೊಪಿಕಲ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಡೆಲ್ಲಿ.

ಅಧ್ಯಕ್ಷರು:— ಶ್ರೀ. ಸುಭಾಸಚಂದ್ರ ಬೋಸರು.
(ರಾಷ್ಟ್ರಪತಿಗಳು)

ಸಂಸ್ಥಾಪಕ ಡೈರೆಕ್ಟರರು:

ಪಂಡಿತ ಮೋತಿಲಾಲ ನೆಹರು. ಡಾಕ್ಟರ್ ಎಂ. ಎ. ಅನ್ಸಾರಿ.
ಶ್ರೀ ಎಸ್. ಶ್ರೀನಿವಾಸ ಐಯ್ಯಂಗಾರ್. ಹಕೀಮ್ ಅಜ್ಮಲ್ ಖಾನ್.

ಪ್ರಗತಿಗಾಮಿಯಾದ ಈ ದೇಶೀ ವಿಮಾಕಂಪೆನಿಯು ಐವರು ರಾಷ್ಟ್ರಪತಿಗಳಿಂದ ಸ್ಥಾಪನೆ ಹೊಂದಿ ನಡೆಸಲ್ಪಟ್ಟದ್ದು.

ಪ್ರಾತಿನಿಧ್ಯಕ್ಕಾಗಿ ಸಂಬಳ ಯಾ ಕಮಿಶನಿನ ಮೇಲೆ ಅರ್ಜಿಗಳು ಸ್ವೀಕರಿಸಲ್ಪಡುತ್ತವೆ.

ಕೆ. ಎಸ್. ರಾಮಮೂರ್ತಿ, ಎಂ. ಎ.
ಬ್ರಾಂಚ್ ಸೆಕ್ರೆಟರಿ,
160, ಮೌಂಟ್ ರೋಡು, ಮದ್ರಾಸ್.

ಅಥವಾ

ಎಂ. ಸುಂದರ ರಾಮ ಶೆಟ್ಟಿ,
ಬ್ರಾಂಚ್ ಮೆನೇಜರ್,
ಹಂಪನಕಟ್ಟೆ, ಮಂಗಳೂರು.

ಬೊಂಬಾಯಿ

(ಸ್ವಂತ ಬಾತ್ಮಿದಾರರಿಂದ)

31–3–1939.

ಮೇಯರರಾರು?— "ಎಲ್ಲಾ ಬಿಟ್ಟ ಬಂಗಿ ನೆಟ್ಟ" ಎಂಬ ಗಾದೆಯಂತಾಯಿತು ನಮ್ಮ ಮುಂಬಯಿ ಕೋಂಗ್ರೆಸ್ ನಗರ ಸಭಾ ಪಾರ್ಟಿಯ ಅವಸ್ಥೆ! ಹಾಗೂ ಹೀಗೂ ನಗರ ಸಭಾ ಚುನಾವಣೆಯಲ್ಲಿ ಕೋಂಗ್ರೆಸ್ ಪಕ್ಷವು ಬಹುಮತವನ್ನು ಪಡೆಯಿತು. ಈ ವಿಜಯವನ್ನು ಸದುಪಯೋಗಮಾಡಿಕೊಳ್ಳುವ ಅದೃಷ್ಟವು ಮುಂಬಯಿ ಕೋಂಗ್ರೆಸ್ ಮುಂದಾಳುಗಳಿಗಿದೆಯೋ? ಮೇಯರ ಚುನಾವಣೆಯ ಪ್ರಶ್ನೆ ಬಂದೊಡನೆ, ತಮ್ಮ ಅಂತಃಕಲಹವನ್ನು ಹೆಚ್ಚಿಸಿಕೊಂಡು, ವ್ಯಕ್ತಿದ್ವೇಷವೇ ತಮ್ಮ ಪರಮ ಧ್ಯೇಯವೆಂದು ತಿಳಿದು, ಕೋಂಗ್ರೆಸ್ ಪಕ್ಷದಲ್ಲಿ ಮೇಯರ ಹುದ್ದೆಯನ್ನು ಸ್ವೀಕರಿಸಲು ಸಮರ್ಥರಾದ ಇಬ್ಬರು ಪಾರ್ಸಿ ಸದಸ್ಯರು (ಶ್ರೀಗಳಾದ ಕೆ. ಎಫ್. ನರಿಮನ್, ಇವರು ಒಮ್ಮೆ ಮೇಯರಾಗಿದ್ದರು. ಮತ್ತು ಮಸಾನಿ (ಸಮತಾವಾದಿ)) ಇದ್ದಾಗ್ಲೂ ಕೂಡ, ಈ ಗೋಚರವೇ ಇಲ್ಲದವರಂತೆ, ಕೋಂಗ್ರೆಸೇತರ ಪಕ್ಷದವರಾದ ಶ್ರೀ. ಬಿ. ಎಸ್. ಕರಂಜಿಯರವರನ್ನು ಮೇಯರಾಗಿ ಮಾಡಲು ನಿಶ್ಚೈಸಿರುವರು. ಶ್ರೀ. ಕೆ. ಎಫ್. ನರಿಮನರಂಥ, ಜನಪ್ರಿಯರೂ ಮತ್ತು ಕೋಂಗ್ರೆಸ್ ಮುಂದಾಳೂ ಇರುವಾಗ, ಇತರರನ್ನು ಮೇಯರಾಗಿಮಾಡುವ ಅಗತ್ಯವೇನಿತ್ತು! ಮಹಾತ್ಮರೇ ವ್ಯಕ್ತಿದ್ವೇಷಗಳನ್ನೆಲ್ಲ ತ್ಯಜಿಸಬೇಕೆಂದು ಸಾರಿ ಸಾರಿ ಹೇಳುತ್ತಿರುವಾಗ, ನಮ್ಮ ಮುಂಬಯಿ ಕೋಂಗ್ರೆಸ್ ಮುಂದಾಳುಗಳಲ್ಲಿ ಇದು ಇನ್ನೂ ಉಳಿದಿರುವುದು ವ್ಯಸನಕರವು! ಸರ್ವ ಭಾರತ ಕೋಂಗ್ರೆಸ್ ಕಮಿಟಿಯು ಈ ಮುಂದಾಳುಗಳ ಅಸಭ್ಯತನದ ಕುರಿತು ತಕ್ಕ ಪ್ರಾಯಶ್ಚಿತ್ತವನ್ನು ಮಾಡಲಾರದೇ?

ಬಿದ್ದು ಹೋದವು— ಕೆಲವು ಪತ್ರಿಕೆಗಳ ಮೇಲೆ ಹೊರಿಸಿರುವ ಸೆಕ್ಯುರಿಟಿಗಳನ್ನು ಹಿಂದೆಕೊಡಬೇಕೆಂಬ ಹಲವು ಠರಾವುಗಳು ಮುಂಬಯಿ ಅಸೆಂಬ್ಲಿಯಲ್ಲಿ ಬಿದ್ದುಹೋದವು! "ಹಿಂದೂ-ಮುಸ್ಲಿಂ" ಒಗ್ಗಟ್ಟಿಗಾಗಿ ಈ ಪತ್ರಿಕೆಗಳನ್ನು ನಾವು ಬಂಧಿಸಿರುವೆವು" ಎಂದು ನಮ್ಮ ಮುನ್ಶಿ ಸಾಹೇಬರ ಟೀಕೆ!

ಸಂಪು— ಡನ್ ಅಲ್ಯುಮಿನಿಯಂ ಫೇಕ್ಟರಿಯ ಕೆಲಸಗಾರರು 8ದಿವಸದಿಂದ ಸಂಪುಹೂಡಿರುವರು; ಸಂಬಳ ಕಡಿಮೆಮಾಡಿದರೆಂದೂ, ಸರಿಯಾಗಿ ರಜೆಕೊಡುವುದಿಲ್ಲವೆಂದೂ, ಆಗಾಗ ಕೆಲಸದಿಂದ ತೆಗೆದುಹಾಕುವರೆಂದೂ, ಆದ್ದರಿಂದ ನಮಗೆ ಸ್ವಾತಂತ್ರ್ಯವಿಲ್ಲೆಂದು ಇವರ ಆರೋಪಣೆ!

ಮದ್ಯಪಾನ ನಿಷೇಧ ವಾರ— ಮದ್ಯಪಾನ ನಿಷೇಧ ವಾರವು ಕಳೆದ ಶನಿವಾರ ಪ್ರಾರಂಭವಾಗಿದೆ. ಆದಿವಸ ಚೌಪಾಟಿಯಲ್ಲಿ ಪ್ರಚಂಡ ಸಭೆ ನೆರೆದುಶ್ರೀ. ಬಿ. ಜಿ. ಖೇರರವರು, ಮದ್ಯಪಾನ ನಿಷೇಧದ ಕುರಿತು ಪ್ರಚಂಡ ಭಾಷಣಮಾಡಿದರು. ಈಗ ಪ್ರತಿ ದಿನವೂ ಹಲವಾರು ಕಡೆಗಳಲ್ಲಿ ಸಭೆಗಳೋ, ಭಾಷಣಗಳೋ ಜರಗುತ್ತಲೇ ಇವೆ. ರಸ್ತೆ ರಸ್ತೆಗಳಲ್ಲಿ ಮೆರವಣಿಗೆಗಳೂ, ಮೋಟರುಗಳಲ್ಲಿ "ದೊಡ್ಡ ಶಬ್ದ"ದಿಂದ ಗಾಯನಗಳೂ ನಡೆಯುತ್ತಿವೆ. ಮುಂಬಯಿ ಕಾಮಗಾರರ ಸಹಾಯವನ್ನು ಪಡೆಯಬೇಕೆಂಬ ಅಭಿಪ್ರಾಯದಿಂದ ಕಳೆದ ಬುಧವಾರ ಕಾಮಗಾರ ಮೈದಾನದಲ್ಲಿ ಬಹು ದೊಡ್ಡ ಸಭೆ ಜರಗಿ ಶ್ರೀ. ಖೇರರವರು, ಮುಂಬಯಿ ಸರಕಾರವು ಸಂಪೂರ್ಣ ಮದ್ಯಪಾನ ನಿಷೇಧಕಾರ್ಯವನ್ನು ಕೈಗೊಂಡಿದೆಯೆಂದೂ, ಇದು ವಿಜಯ ಹೊಂದಬೇಕಾದರೆ, ಕಾಮಗಾರರ ಸಹಾಯವು ಅಗತ್ಯವೆಂದೂ, ಆದ್ದರಿಂದ ಕಾಮಗಾರರು ಸಂಪೂರ್ಣ ಬೆಂಬಲವೀಯಬೇಕೆಂದೂ ಕೇಳಿಕೊಂಡರು. ಕಾಮಗಾರರ ಪರವಾಗಿ ಶ್ರೀ. ಡಾಂಗೆಯವರು ಭಾಷಣ ಮಾಡುತ್ತಾ, ಇಂದು ಕೆಂಪು ಧ್ವಜ ಮತ್ತು ಕೋಂಗ್ರೆಸ್ ಧ್ವಜಗಳು ಅಣ್ಣತಮ್ಮಂದಿರಂತೆ ಒಂದೆಡೆಯಲ್ಲಿ ಹಾರುತ್ತಿರುವುದನ್ನು ನೋಡುವಾಗ ಆನಂದವಾಗುತ್ತಿದೆಂದೂ ಕೋಂಗ್ರೆಸು ಕೈಗೊಂಡ ಈ ಪವಿತ್ರ ಕಾರ್ಯದಲ್ಲಿ ಕಾಮಗಾರರ ಸಂಪೂರ್ಣ ಸಹಾನುಭೂತಿಯಿದೆಯೆಂದೂ ಭರವಸೆಕೊಟ್ಟರು.

ಮಳೆ— ಬುಧವಾರ ಮುಂಜಾನೆ, ಮಳೆಯಿಂದಾಗಿ, ಮುಂಬಯಿ ನಗರವೆಲ್ಲಾ ಒದ್ದೆಯಾಗಿತ್ತು. ಮದ್ಯಪಾನ ನಿಷೇಧದಿಂದ ಅನರ್ಥಗಳು ಒದಗುವ ಸಂಭವ ಬರುತ್ತಿರಲು, ಮೇಘದೂತನು ಬಂದು "ಹೆದರುವ ಅಗತ್ಯವಿಲ್ಲ ತಾನಿದ್ದೇನೆಂದು" ಭರವಸೆಯಿತ್ತಂತೆ ಕಂಡುಬರುತ್ತದೆ.

ಮುಂಬಯಿಯಲ್ಲಿ ಡಾಕ್ಟರ್ ಸಿಟ್ಟೆ ವಿಶ್ವನಾಥ ಅಡ್ಯಂತಾಯರ ಮೆಡಿಕೊ ಸರ್ಜಿಕಲ್ ಹೋಲಿನ ಆರಂಭೋತ್ಸವ— ದಕ್ಷಿಣಕನ್ನಡ ಜಿಲ್ಲೆಯ ಬಂಟರ ಪ್ರಸಿದ್ಧ ಮನೆತನಕ್ಕೆ ಸೇರಿದವರೂ ಮಂಗಳೂರು ಬಂಟರ ವಿದ್ಯಾರ್ಥಿಭವನದ ಹಳೆ ನಿವಾಸಿಗಳೂ ಆಗಿರುವ ಡಾಕ್ಟರ್ ಸಿಟ್ಟೆ ವಿಶ್ವನಾಥ ಅಡ್ಯಂತಾಯ, ಎಲ್. ಎಂ. ಪಿ. ಇವರು ಮುಂಬಾಯಿಯ ನಾಮದೇವಯಲ್ಲಿ ತೆರೆದಿರುವ ಮೆಡಿಕೊ ಸರ್ಜಿಕಲ್ ಹೋಲಿನ ಆರಂಭೋತ್ಸವವು ತಾ. 29-3-39 ರಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಡಾ. ವೆಂಕಟಸ್ವಾಮಿ, ಡಾ. ಎಮ್. ಬಿ. ನಾರಾಯಣ ರಾವ್ ಡಾ. ಎಂ. ಆರ್. ಶೆಟ್ಟಿ ಮೊದಲಾದ ಹಲವು ಆಪ್ತ-ನಿವಾಸಿಗಳು ಬಿತ್ತಿ ಶುಭವನ್ನು ಕೋರಿದರಲ್ಲದೆ ಮದ್ರಾಸ್ ಮಂಗಳೂರು ಮೊದಲಾದ ಕಡೆಗಳಿಂದ ಹಲವರು ತಮ್ಮ ಶುಭಚಿಂತನೆಯನ್ನು ತಂತಿಮೂಲಕ ತಿಳಿಸಿದ್ದರು. ಡಾ. ಅಡ್ಯಂತಾಯರು ತಮ್ಮ ಈ ನವೀನ ಉದ್ಯೋಗದಲ್ಲಿ ಜನಪ್ರೀತರಾಗಿ ಜಯಶೀಲರಾಗಲೆಂದು ಹಾರೈಕೆ.

ದೇವಾಡಿಗರ ಸುಧಾರಕ ಸಂಘವೂ ಬಿ. ಎ. ನಾಟಕವೂ— ಮಾರ್ಚ ತಿಂಗಳ ತಾ. 3ರಲ್ಲು ದೇವಾಡಿಗ ಸುಧಾರಕ ಸಂಘದವರು ಮುಂಬಾಯಿ ಬಾಂಗವಾಡಿ ಥಿಯೇಟರಿನಲ್ಲಿ ಆಡಿತೋರಿಸಿದ ಬಿ.ಎ. ನಾಟಕವು ಪ್ರೇಕ್ಷಣೀಯವಾಗಿತ್ತು. ಅಭಿನಯ ಕುಶಲತೆಯು ನಟರಲ್ಲಿ ಚೆನ್ನಾಗಿತ್ತು. ಶ್ರೀ. ಕೆ. ಶ್ರೀನಿವಾಸ ದೇವಾಡಿಗರ ಚಂದ್ರಕಾಂತ ಶ್ರೀ. ಮುದ್ದುಶೆಟ್ಟಿರ ಶಂಕರ ಪಾತ್ರಗಳ ಪ್ರಣಯ ರೀತಿಯು ಉತ್ತಮವಿತ್ತು. ಸುಶೀಲೆಯ ಪಾತ್ರ ವಹಿಸಿದ ನಾರಾಯಣ ಎ. ಕರ್ಕೇರ ಇವರ ಗಾಯನವೂ ವಿವೇಕಾನಂದ ಪಾತ್ರವನ್ನು ವಹಿಸಿದ ಭುಜಂಗ ಶೆಟ್ಟರ ವಾಕ್ಸರಣಿಯೂ ಎತ್ತಿ ಹೇಳುವಂತಿತ್ತು. ಇನ್ನು ಬಸವಂತನ ಪಾರ್ಟನ್ನು ವಹಿಸಿಕೊಂಡ ವಿ. ಎ. ದೇವಾಡಿಗರು ಉತ್ತಮ ತರದ ಕೊಮೆಡಿಯನ್ ಆಗುವುದರಲ್ಲಿ ಸಂದೇಹವೇ ಇರದು. ಸಂಕಪ್ಪ ಶೆಟ್ಟಿ ಚಿತ್ರರಂಜನನ ಪಾತ್ರವು ಯೋಗ್ಯವಿತ್ತು. ಒಟ್ಟಾರೆ ನಾಟಕವನ್ನು ಯೋಗ್ಯ ರೀತಿಯಿಂದ ಆಡಿತೋರಿಸಿದರೆಂದು ಹೇಳಬಹುದು.

ಮುಂಬಯಿ ಕನ್ನಡಿಗರಲ್ಲಿ ವಿನಂತಿ— ಮುಂಬಯಿ ನಗರ ಮತ್ತು ನೆರೆಕರೆಯ ಪ್ರದೇಶಗಳಲ್ಲಿರುವ ಜನರ ಅವಿದ್ಯತೆಯನ್ನು ಹೋಗಲಾಡಿಸಿ ಅಕ್ಷರಾಭ್ಯಾಸದ ಅಭಿರುಚಿಯು ಜನರಲ್ಲಿ ಮೊಳೆಕೆಗೊಳ್ಳುವಂತೆ ಮಾಡುವುದಕ್ಕಾಗಿ ಮುಂಬಯಿ ಸರಕಾರವು ಪ್ರೌಢ ವಿದ್ಯಾಭ್ಯಾಸ ಕಮಿಟಿ ಎಂಬುದನ್ನು ಸ್ಥಾಪಿಸಿದೆ. ಈ ಕಮಿಟಿಯು ಸಾಮಾಜಿಕ ಸೇವಾ ಸಂಘದ (Social servici legue) ಜೊತೆಯಲ್ಲಿ ಬರುವ ಮೇ ತಿಂಗಳಲ್ಲಿ ವಿದ್ಯಾಪ್ರಚಾರ ಕಮಿಟಿ(Bombay literacy campaign committee) ಯನ್ನು ಸ್ಥಾಪಿಸಿದೆ, ಮುಂಬಯಿ ನಗರದಲ್ಲಿರುವ ಪ್ರತಿಯೊಂದು ಭಾಷೆಯಲ್ಲಿಯೂ, ಯಾವ ಭೇದಭಾವವಿಲ್ಲದೆ ಈ ಪ್ರಚಾರವು ಭರದಿಂದ ಸಾಗಲಿದೆ. ಶ್ರೀ. ಬಿ. ಜಿ. ಖೇರ್ (ಮುಂಬಯಿ ಸರಕಾರದ ಮುಖ್ಯಮಂತ್ರಿ) ಇವರು ಈ ಕಮಿಟಿಯ ಅಧ್ಯಕ್ಷರಾಗಿರುವರು. ಮೊದಲನೆಯದಾಗಿ ಈ ಪ್ರಚಾರವು ಮೇ ಒಂದು ತಿಂಗಳಲ್ಲಿ ಮಾತ್ರ ಮಾಡಲ್ಪಟ್ಟು ಅನಂತರ ಇದರಿಂದ ಜನತೆಯಲ್ಲಿ ಉತ್ಸಾಹಬೆಳೆದು ಅವರಿಂದ ಸಾಕಷ್ಟು ಪ್ರೋತ್ಸಾಹ ದೊರೆತಲ್ಲಿ ಇದು ವರ್ಷಗಳ ತನಕ ಮುಂದರಿಸಲ್ಪಡುವುದು. ಈ ವಿದ್ಯಾಭ್ಯಾಸವು ಬಾಲಕರಿಗೆ ಕೊಡಲ್ಪಡದೆ ಪ್ರೌಢರಿಗೆ ಅಂದರೆ 20–25 ಪ್ರಾಯ ಮೀರಿದವರಿಗೆ ಮಾತ್ರ ಕೊಡಲ್ಪಡುವುದು. ಇವರಿಗೆ ಬೇಕಾದ, ಪುಸ್ತಕ, ಸ್ಲೇಟು, ಕಡ್ಡಿ ಪಟಗಳು ಇವು ಸರ್ವ ಸಲಕರಣೆಗಳೂ ಧರ್ಮಾರ್ಥವಾಗಿ ಒದಗಿಸಿಕೊಡಲ್ಪಡುವುವು. ತಮ್ಮ ದಿನಕೆಲಸದ ನಂತರ ರಾತ್ರಿಯಲ್ಲಿ 1–1 30ಗಂಟೆ ಕ್ಲಾಸಿಗೆ ಬಂದು ಅತ್ಯಂತ ಸರಳರೀತಿಯಲ್ಲಿ ಕಲಿಸುವ ಅಕ್ಷರಾಭ್ಯಾಸವನ್ನು ಕಲಿತರೆ ಸರಿ, ಆದ್ದರಿಂದ ಕನ್ನಡಿಗರೇ ಮುಂಬಯಿ ನಗರದಲ್ಲಿ ಸಾವಿರಾರು ಅವಿದ್ಯಾವಂತ ಕನ್ನಡಬಂಧುಗಳು ವಿದ್ಯೆಯ ಗಂಧವಿಲ್ಲದೆ ಮೂಲೆಸೇರುವರು. ಇವರಿಗೆ ಈ ಸುಸಮಯದೊಳಗೆ ಸುಲಭರೀತಿಯಲ್ಲಿ ಯಾವ ಖರ್ಚು ಪ್ರಯಾಸವೂ ಇಲ್ಲದೆ ವಿದ್ಯಾದಾನವೂ ದೊರೆವ ಸುಯೋಗವೀಗ ಬಂದೊದಗಿದೆ. ಈ ಸುಸಂದರ್ಭವನ್ನು ವ್ಯರ್ಥಗೊಳಿಸದೆ ಇದನ್ನು ಸದುಪಯೋಗಮಾಡಿಕೊಂಡು ನಮ್ಮ ಬಂಧುಗಳನ್ನೂ ವಿದ್ಯಾವಂತರನ್ನಾಗಿಮಾಡಬೇಕು ಹೇಗೆ? ಈ 1 ಕಮಿಟಿಯ ಸದಸ್ಯನಾಗಿ ವಿದ್ಯಾಪ್ರಚಾರ ಕೆಲಸವನ್ನು ಕೈಕೊಳ್ಳುವುದು. 2 ಉಪಾಧ್ಯಾಯನಾಗುವುದು. 3 ಹಣ ಒಟ್ಟುಕೂಡಿಸಿಕೊಡುವುದು.

ನೋಟೀಸು

ಪುತ್ತೂರು ತಾಲೂಕು ಬಂದಾರ ಗ್ರಾಮದ ಮೇಗಿನ ಬಾಲಂಪಾಡಿ ಗುಮ್ಮ ಗೌಡನ ಮಗ ವೀರಪ್ಪ ಗೌಡನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದ್ರೆ—

ನನ್ನ ತಂದೆ ಗುಮ್ಮ ಗೌಡರು ವೃದ್ಧಾಪ್ಯದವರಾಗಿದ್ದು ಇತ್ತೀಚೆಗೆ ಸಂಭವಿಸಿದ ಕಠಿಣ ಕಾಹಿಲೆಯಲ್ಲಿ ಸ್ಮೃತಿಸಹಾ ಇಲ್ಲದವರಾಗಿರುವ ಸಮಯ ಅಂದ್ರೆ ಇದೇ ಕಳೆದ ತಾ. 9-1-39ರಲ್ಲು ಸದ್ರಿ ಬಂದಾರ ಗ್ರಾಮದ ಪಾಲ್ತಿಮಾರ ವೆಂಕಟ್ರಮಣ ಪಡ್ಡಿಲ್ಲಾಯರ ಮಗ ಚಿಲ್ಲರೆ ಪಂಡಿತ ವ ಜ್ಯೋತಿಷ್ಯಗಾರರು ಆದ ಸುಬ್ರಾಯ ಪಡ್ಡಿಲ್ಲಾಯ 1 ಮತ್ತು ಅವರ ಅಳಿಯ ಕಲ್ಲಟೆ ಸುಬ್ರಾಯ 1ಕೂಡಾ 2ಜನರು ನನ್ನ ಗೈರುಹಾಜರಿಯಲ್ಲಿರೋಗಿಗೆನೋಡುವ ನೆವನದಿಂದ ನನ್ನ ಮನೆಗೆ ಬಂದು ಸ್ಮೃತಿಯಿಲ್ಲದ ನನ್ನ ತಂದೆಯ ಹಸ್ತಪರೀಕ್ಷೆ ಆಯುಷ್ಯರೇಖೆ ಅಗ್ರೆರ ನಿರ್ಣಯಿಸುವಂತೆನಟಿಸಿ ಎಡದಹೆಬ್ಬೆಟ್ಟಿನ ಮುದ್ರೆಯನ್ನು ಖಾಲಿ ಕಾಗದದಲ್ಲಿ ತೆಗೆದು ಕೊಂಡು ಹೋದರಂತೆ, ಅನಂತರ ಮನೆಗೆ ಬಂದ ನನಗೆತಿಳಿದುಬಂದದ್ದರಿಂದ ಕಠಿಣಕಾಹಿಲೆಯಲ್ಲಿದ್ದ ನನ್ನ ತಂದೆಯು ತಾ 11–1–39ರಲ್ಲು ಮೃತಪಟ್ಟ ತರುವಾಯ ನಾನು ತಾ. 15-1–39ರಲ್ಲು ಮೇಲಿನ ಎಲ್ಲಾ ವಿಷಯಗಳ ಕಾಣಿಸಿತ್ತೀದಕ್ಷಿಣ ಕನ್ನಡಾಜಿಲ್ಲಾ ಕಲೆಕ್ಟರ್ ದೊರೆಗಳವರ ಬಳಿಗೂ ಶ್ರೀ. ಪುತ್ತೂರಿನ ಸಬ್ ಮೆಜಿಸ್ಟ್ರೇಟರವರ ಬಳಿಗೂ ಸಹಅಲಾಹಿದ ಅರ್ಜಿಗಳನ್ನು ಬರಕೊಂಡಿರುತ್ತೇನೆ. ಆದ್ರಿಂದ ಸದರಿ ಸುಬ್ರಾಯ ಪಡ್ಡಿಲ್ಲಾಯ ವಗೈರೆರು ಮೋಸಕ್ಕೋಸ್ಕರದಲ್ಲಿ ಕೊಂಡುಹೋದ ಸದರಿ ಎಡಹೆಬ್ಬೆಟ್ಟಿನ ಆಧಾರದಲ್ಲಿ ಅವರಿಂದ ನನಗೆ ಬರತಕ್ಕ ಸ್ಥಿರಾಸ್ತಿ ಈದಿನ ಹಣ ದಕ್ಕಿಸಿಕೊಳ್ಳುವರೆ ಅವರು ಏನೊಂದು ತರದ ಬನಾವಣೆ ರಿಕಾರ್ಡ್ ಮಾಡಿದ್ದಲ್ಲಿಯೂ ಅಥವಾ ಬೇರೆಯಾದಾದರೂ ಬನಾವಣೆ ರಿಕಾರ್ಡು ಸೃಷ್ಟಿಸಿಪಡಿಸಿದ್ದಲ್ಲಿ ಕೂಡಾ ಅವುಗಳೇನೊಂದು ನನಗೆ ಬಗ್ಗಾಗತಕ್ಕದ್ದು ಅಲ್ಲ ವ ಸಿಂದು ಆಗತಕ್ಕದ್ದು ಅಲ್ಲ ಎಂಬದಾಗ್ಗಿ ಈ ಮೂಲಕ ಎಲ್ಲಾ ಜನರ ತಿಳುವಳಿಕೆಗೆ ಪ್ರಕಟಪಡಿಸಿದ್ದೇನೆ.

ಈ ಗುರುತು ವ ಎಡಗೈ ಹೆಬ್ಬೆಟ್ಟಿನ ಮುದ್ರೆ ಸಹಾ ವೀರಗೌಡನ ರುಜು,

ಬೊಳ್ಳಾಂ ಬಂದಾರು, ತಾ. 18–3–39.

Degrees: Books: Medicines.

Free H. L. M. S., H. M. B., H. M. D. etc Free Homeo-Ayur-Unani-Naturo degres, by post also—Practitioners also get scons Homeo Materiamedica, Rs. 5. Homeo-Practice book Rs. 4. Insanity Cure Pills Rs. 10. Enclose 2 annas stamps:—

Principal, Indian Homeopathic Institute and Society (Govt. Regd.)
P. O. MAHUVA, (Kathiawar Dt. India).

ಕರ್ನಾಟಕದಲ್ಲೆಲ್ಲಾ ವಿಶಾಲವಾಗಿ ಪ್ರಚಾರವಲ್ಲಿರುವ ಅತಿ ಅಗ್ಗ ಬೆಲೆಯ

ತುಳುನಾಡ್

ತ್ರಿಲಕ ಪಂಚಾಂಗ

(ಬೆಲೆ ಒಂದಾಣೆ)

ನವಭಾರತ ಬುಕ್ ಡಿಪೊ ಉಡುಪಿ.

ಮುಂಬಯಿಯಲ್ಲಿರುವ ಕನ್ನಡಿಗರು ಕಗ್ಗತ್ತಲೆಯಲ್ಲಿ ಕುರುಡರಾಗಿರುವ ನಮ್ಮ ಬಂಧುಗಳಿಗೆ ಅಕ್ಷರದಾನಮಾಡಿ ನಮ್ಮಂತೆಯೇ ಅವರೂ ಪ್ರಾಪಂಚಿಕ ಸುಖದಲ್ಲಿ ಭಾಗಿಗಳಾಗುವಂತೆ ಮಾಡುವರೆಂದು ನನ್ನ ಭಾವನೆ. ಹೆಚ್ಚಿನ ವಿವರಗಳಿಗೆ ಬೆಳಗ್ಗೆ 11ಗಂಟೆಯಿಂದ ರಾತ್ರಿ 10ಘಂಟೆಯ ತನಕ ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿ, ಪ್ರಾರ್ಥನಾ ಸಮಾಜ ಮುಂಬಯಿ 4 ಇಲ್ಲಿಗೆ ಬಂದು ನನ್ನೊಡನೆ ವಿಚಾರಿಸಬಹುದು,

ಯನ್. ಕೆ. ಉಪಾಧ್ಯಾಯ.

ತಾ. 28–3–39 ಮುಂಬಯಿ.

೧

ಮಿತ್ರ—ಏನು ಸ್ವಾಮಿ, ತಾವೇ ಸಾಮಾನು ತಕ್ಕೊಂಡು ಹೋಗುವುದೇ? ತಮ್ಮಲ್ಲಿ ಕೆಲಸಕ್ಕೆ ಜನವಿಲ್ಲವಾ? ನೀವು ಇಷ್ಟು ದೊಡ್ಡ ಹುದ್ದೇದಾರರಾಗಿ ಸಾಮಾನನ್ನು ನಿಮ್ಮ ಕೈಯಿಂದಲೇ ತಕ್ಕೊಂಡು ಹೋಗುವುದು 'ಭರಂ' ಗೆ ಸ್ವಲ್ಪ ಕಮ್ಮಿ ಅಲ್ವಾ?

ಹುದ್ದೇದಾರರು—ಸ್ವಾಮಿ, ನಾನು 'ಭರಂ'ನ್ನು ತೆಗೆದು ಕಿಸೆಯ ಒಳಗೆ ಹಾಕಿಬಿಟ್ಟಿದ್ದೇನೆ-ಅದನ್ನು ವಿಶೇಷವಾಗಿ ಹೊತ್ತುಕೊಂಡರೆ ತೊಂದ್ರೆ ಆಗುತ್ತದೆ. ಅನೇಕರು ನಮಗಿಂತಲೂ ದೊಡ್ಡ ದೊಡ್ಡ ಮನುಷ್ಯರು 'ಭರಂ'ನ್ನು ಹೊತ್ತು ಹೊತ್ತು ತಮ್ಮ ಕೈಕಾಲುಗಳನ್ನು ಮುರಿದುಕೊಂಡದ್ದಲ್ಲದೆ ಇತರರ ಟೊಂಕಗಳ ಮೇಲನ್ನೂ ಇಳಿಸಿ ತಾವೂ ಅವರೂ ಮೂಲೆಯಲ್ಲಿ ಬಿದ್ದು ಬಿಟ್ಟಿದ್ದಾರೆ. ನಾವು ಮರ್ಯಾದೆಯ ಹೆಸರಲ್ಲಿ ಅದಕ್ಕೆ ಅಲ್ಲದ ಸಲ್ಲದ ಪೂಜೆ ಕೊಟ್ಟು ಬಿಟ್ಟರೆ, ಅದು ನಮ್ಮನ್ನು ಅಲಕ್ಷ್ಯಮಾಡಿಬಿಟ್ಟೀತು.

ಮಿತ್ರ—ತಾವು ಎಷ್ಟು ಹೇಳಿದರೂ ಇದೆಲ್ಲಾ ತಮ್ಮಂಥವರಿಗೆ ಮರ್ಯಾದೆಗೆ ಸ್ವಲ್ಪ ಕಮ್ಮಿ ಅಲ್ವಾ?

ಹುದ್ದೇದಾರರು—ಸ್ವಾಮಿ, ಆ ಮರ್ಯಾದೆಯೆಂಬದ್ದು, ಅದು ಎಲ್ಲಿ ಇರುವುದು, ನಮ್ಮ ಧನಬಲವನ್ನು ಪ್ರದರ್ಶಿಸುವುದರಲ್ಲಿಯೇ? ಅಥವಾ ನಮ್ಮಲ್ಲಿ ಇಷ್ಟು ಜನ ಸೇವಕರು ಇದ್ದಾರೆಂದು ತೋರಿಸುವುದರಲ್ಲಿಯೇ—ಇದೆಲ್ಲಾ ಮರ್ಯಾದೆಯೇ?

ಮಿತ್ರ—ಆದರೆ ನಿಮಗೆ ಬೇಡವಾದರೂ ಲೋಕದ ಕಣ್ಣು ಕಟ್ಟಿಗೆ ಬೇಕಲ್ಲವಾ? ನಮ್ಮನ್ನು ನಾವು 'ಪಬ್ಲಿಕ್'ನಲ್ಲಿ ಬಹಳ ಸಸಾರವಾಡಿಕೊಳ್ಳಬಾರದು.

ಹುದ್ದೇದಾರರು—ಆದಕಾರಣ ನೀವು ಹೇಳುವುದೇನು? ಗಜರಥತುರಗಪರಿವಾರ ಸಮೇತನಾಗಿ ಸಾಮಾನು ಗೀಮಾನು ತೆಕ್ಕೊಂಡು ಹೋಗಬೇಕೆನ್ನುವುದಾ? ನಾವು ನಮ್ಮ ಸ್ವಹಸ್ತದಿಂದ ಕೊಂಡುಹೋದರೆ ಸಾಮಾನು ಬರುವುದಿಲ್ಲ ಅಂತ ಹೇಳುತ್ತದಾ? ಅಥವಾ ಹುದ್ದೇದಾರರು ಹೀಗೆ ಮಾಡಬಾರ್ದೆಂತ ಸರಕಾರದವರ 'ರೂಲ್ಸ್ ಗೀಲ್ಸ್' ಉಂಟಾ?

ಮಿತ್ರ—ಆದರೆ ಲೋಕ ಇದು ಸಮವಂತ ಹೇಳಲಿಕ್ಕಿಲ್ಲ—ಆಯಾಯ ಜನರು ಆವರವರ ಯೋಗ್ಯತೆಗೆ ತಕ್ಕಂತೆ ವರ್ತಿಸಬೇಕು-ಇದೇ ಲೋಕ—

ಹುದ್ದೇದಾರರು—ಸ್ವಾಮಿ, ನಾವು ಈಗಲಾದರೂ ಈ ಶ್ರೀ ಐದ್ವಾಂಥೀಯರ್ ಬಿಡಲೇ ಬೇಕು—ಮರ್ಯಾದೆಯೆಂಬುದು ಹೊರಗೆ ಇಲ್ಲ-ಅದು ನಮ್ಮ ಶೀಲದಲ್ಲಿದೆ-ನಮ್ಮ ವ್ಯವಹಾರ ಧರ್ಮದಲ್ಲಿದೆ. ತಕ್ಕೊಂಡದನ್ನು ತಕ್ಕ ಕಾಲದಲ್ಲಿ ಕೊಡುವುದರಲ್ಲಿ ಬೇರೊಬ್ಬರಿಗೆ ಮೋಸ ಮಾಡದೆ ಇರುವುದರಲ್ಲಿ ಮನುಷ್ಯನು ತನ್ನ ಮಾನಮರ್ಯಾದೆ ಗೌರವ ಗಾಂಭೀರ್ಯ ಇವನ್ನೆಲ್ಲ ತೋರಿಸಬೇಕು.

ಮಿತ್ರ—ಆದರೆ ನಿಮ್ಮಂಥವರು ಹೀಗೆ ಮಾಡಿದರೆ ಕೃಪಣರೆಂದಾಗುತ್ತೀರಿ.

ಹುದ್ದೇದಾರರು—ಹಾಗೆ ನೀವು ಹೇಳಿದರೂ ಚಿಂತೆಯಿಲ್ಲ-ಬಹಳ ಸಂತೋಷವೇ. ನಾನು ಕೃಪಣನಾದರೂ ಚಿಂತೆಯಿಲ್ಲ—ಲೋಕವಂಚಕನೆನಿಸಿಕೊಂಡು ಸಾಯುವುದು ಬೇಡ-ತನ್ನ ಶಕ್ತಿಗಿಂತ ಕಮ್ಮಿ ತೋರಿಸಿಕೊಳ್ಳುವುದು ಒಂದು ದೊಡ್ಡ ತ್ಯಾಗ-ತನ್ನ ಶಕ್ತಿಗಿಂತ ಹೆಚ್ಚೆಂದು ತೋರಿಸಿ, ಕೆಲಸಮಯ ಲೋಕವನ್ನು ವಂಚಿಸಿ ವಿಲಾಸಜೀವನವನ್ನು ಹೂಡಿ ಕೂಡಲೇ 'ಔಟು' (out) ಆಗಿ ಕಡೆಗೆ ಕಸಕ್ಕಿಂತ ಕೀಳಾಗಿ ಬಾಳುವುದು ಲೇಸೇ?

ಮಿತ್ರ—ಅಲ್ಲ ಸ್ವಾಮಿ, ಹದದಲ್ಲಿರಬೇಕು

ಹುದ್ದೇದಾರರು—ನೀವು ನನಗೆ ತಿಂಗಳಿಗೆ ಸಿಕ್ಕುವ ಮುನ್ನೂರು ರೂಪಾಯಿಯನ್ನೇ ನೋಡುತ್ತೀರಿ—ನನ್ನ ಖರ್ಚು ಎಷ್ಟು ಉಂಟೆಂದು ನನಗೇನೇ ಗೊತ್ತಿಲ್ಲವ-ಅದನ್ನು ಅಡಗಿಸಿ, ಲೋಕಕ್ಕೆ ವಂಚಿಸಿ, ಎರಡು ದಿನ ದರ್ಬಾರು ಮಾಡಿದರೇನು ಪ್ರಯೋಜನ? ಈಗ ಇವತ್ತು ನಾನು ಹುದ್ದೇದಾರನೆಂದು ನೀವು ಕಡಕೊಡುವಿರಿ, ಬೇಂಕು ಕೊಟ್ಟೀತು, ಅಲ್ಲ ಮತ್ತೊಬ್ಬನೂ ಕೊಟ್ಟಾನು ಮತ್ತೆ ನಾಳೆ ಅದನ್ನು ತೆರೆದು ಕೊಡುವುದಾರು? ಬೇಡ ಕೊಟ್ಟದ್ದನ್ನು ತೀರಿಸಲಾರದೆ ಬಿದ್ದಿರುವ ವ್ಯಕ್ತಿಯನ್ನು ಗಲೀ ಬೇಂಕನ್ನಾಗಲೀ ತೋರಿಸಲಾಪಿರಾ?

ಮರ್ಯಾದೆಗೆ ಸ್ವಲ್ಪ ಕಮ್ಮಿ ಅಲ್ವಾ

(INFRA DIG.)

ಲೇಖಕರು: ಶ್ರೀ. ಬಿ. ಕುಮಾರಾಯ ಶೆಟ್ಟಿ ಬಿ. ಎ., ಎಲ್. ಟಿ., ಉಡುಪಿ.

Some people think that it is better to be dignified and dishonest than to be undignified and honest. They are obsessed with this 'infra dig' complex. This false value born of false dignity stands as much in the way of progress as in the way of honesty. True dignity must have a solid economic foundation. Hence false dignity has a false economic foundation. This depends on legerdemain—bluff and bluster. People very often forget that this game will be played out sooner or later. It may succeed for a time, but not for all times. Why resort to this and try to dazzle the public for a time and then fail and lead a miserable life? Let us not talk of false dignity. Let us not 'strain at a gnat and swallow a camel.' For every abnormal pleasure we have to pay very dearly. We run after extravagance and exhaust our resources and are dogged by process-servers or escape from it by duping the public of its due. Is this life? We think of office in terms of high and low and abstain from doing anything and earning anything and resort to borrowing, often, without any idea of repaying—a course of refined begging—and thus waste our life. Is this not mere existence? Man must have the courage to show only what he is and to do anything honest. That is dignity. 'True dignity lies not in what one has but in what one is.'

೨

ಹೆಂಡ್ತಿ—ನೋಡಿ, ನನಗೆ ನಾಳೆ ಅಕ್ಕನ ಮಗಳ ಮದುವೆಗೆ ಹೋಗಲಿಕ್ಕೆ-ಒಂದು ಹೊಸ ನಮೂನೆ ಸೀರೆ-'ಲೇಟೆಸ್ಟ್ ಫೆಶ್ಯನ್' (latest fashion)—ಮತ್ತು ಉಡುಗೊರೆಗೆ ಒಂದು ಪವನ್—ಯಾ ಒಂದು ಬೆಳ್ಳಿ ತಟ್ಟೆ ತಕ್ಕೊಂಡು ಬನ್ನಿ.

ಗಂಡ—ಹೋದ ವರುಷ ತಕ್ಕೊಂಡ ಸೀರೆ ಏನಾಯಿತು? ಅದು ಸಾಕು—ಉಡುಗೊರೆಯಿಂದು ಪವನು ಯಾಕೆ? ಏನೂ ಬೇಡ. ಒಂದು ರೂಪಾಯಿ ಹುಡುಗಿಯ ಕೈಯಲ್ಲಿ ಕೊಡು.—ಸಾಕು.

ಹೆಂಡ್ತಿ—ಇಶ್ಶಿಯಪ್ಪ, ನೀವು ಎಂಥಾದ್ದು ಹೇಳುವುದು? ಹುಡುಗಾಟಿಕೆ! ಅಲ್ಲಿಗೆ ಬಂದವರೆಲ್ಲ ಒಂದೊಂದು ಪವನ್ ಹುಡುಗನಿಗೂ ಹುಡುಗಿಗೂ ಕೊಡುವಾಗ ನಾವು ಹೀಗೆ ಮಾಡಿದರೆ ಮರ್ಯಾದೆಗೆ ಸ್ವಲ್ಪ ಕಮ್ಮಿ ಅಲ್ವಾ? ಗುತ್ತಿನ ಹುಡುಗ—ಬಿ. ಯಲ್. ಬಿ. ಕಲಿತದ್ದು. ಬೇರೆ ಗುತ್ತಿನವರು ಪವನ್ ಪವನ್ ಇಡುವಾಗ ನಾವು ಹೀಗೆ ಮಾಡಿ ನಮ್ಮ ಮಾನ ತೆಕ್ಕೊಂಬುದಾ?

ಗಂಡ—ಏನು ಹೇಳ್ತೀಯೇ? ನಿನಗೆ ತಲೆ ಇಲ್ಲ. ಆ ಗುತ್ತು! ಆ ಗುತ್ತಿನಲ್ಲಿ ಈಗ ಇರುವುದು ಗುತ್ತಿ-ಅವು ಬೇಂಕಿನಲ್ಲಿ-ಅಲ್ಲಿ-ಇಲ್ಲಿ ಸಾಲಮಾಡಿ 'ಜಗ್' ಮಾಡುತ್ತ-ಅವುಕ್ಕೆ ತಲೆ ಇತ್ತಾ? ಇವತ್ತಿನ ಮರ್ಯಾದೆಗಾಗಿ ನಾಳೆ ಮನೆ ಕಳಕೊಳ್ತವೆ.

ಹೆಂಡ್ತಿ ..ಹಾಗೆಂದ್ರೆ; ಹೋಗುವುದು ಬೇಡಂಬ್ದು ನೀವು! ನಾವು ಹೋಗದಿದ್ದರೆ ನಮ್ಮ ಮಕ್ಕಳಿಗೆ ಶುಭಶೋಭನ ಆಗುವಾಗ ಅವರೆಲ್ಲಾ ಬರುವುದು ಬೇಡ್ವಾ? ಎಂಥಾದ್ದ್ ನಿಮ್ದ್?

ಗಂಡ—ಹೋಗ ಬೇಕಪ್ಪಾ-ಹೋಗ ಬೇಕ್-ಹೋಗ್—

ಹೆಂಡ್ತಿ—ನೀವು ಬರುವುದಿಲ್ವಾ?

ಗಂಡ—ನಾನು ಬತ್ತೆ—

ಹೆಂಡ್ತಿ—ಹಾಗಾದರೆ?-ಅವರ ಎದುರಿಗೆ ಸಭೆಯಲ್ಲಿ ನಾವು ಖಾಲಿ ಕೂಲಿ ಜನದ ಹಾಂಗೆ ಮಾಡುವುದಾ?

ಗಂಡ—ಇಲ್ಲ-ಒಂದು ಹೊಸ ನಮೂನೆಯ 'ಗರಂ' ಮಜಿ ತೋರಿಸುವಾ. ನೋಡು, ಕಳೆದ ವರುಷ ತಕ್ಕೊಂಡ ನಾಲ್ಕು ರೂಪಾಯಿಯ ಗಾಂಧೀ ಸೀರೆ ಇತ್ತಲ್ವಾ? ಅದನ್ನು ಮಡಿಮಾಡಿಸ್-ನಿಂಗೆ ಎಂಥಾದ್ದ್ ಗೊತ್ತಿತ್ತ್-ಆ ಪಳುಗಳಿಗೆಲ್ಲಾ ಬುದ್ಧಿಯಿಲ್ಲ. ಇವತ್ತು ತಲೆ ಇಲ್ಲದ ಜರಿ ಸೀರೆ ಉಟ್ಟು-ಪವನ್ ಪವನ್ ಕೈಯಲ್ಲಿ ಕೊಟ್ಟು-ಯೊಂಡಕ್ಕೆ ಬೀಳ್ತವ! ನಾವು ಹಾಗಲ್ಲ-ನೋಡು, ಗಾಂಧೀಯರ ಸೀರೆಗೆ ಇದ್ದ ಮರ್ಯಾದೆ ಆ ಜರಿ ಸೀರೆಗಿತ್ತಾ?-ಒಂದು ರೂಪಾಯಿ ಕೊಡು ಉಡುಗೊರೆ-ಸಾಕ್-ಇದೆಲ್ಲಾ ಆ ಕುಂಬು ತಲೆಯವಕ್ಕೆ ಬುದ್ಧಿ ಕಲಿಸುವುದಕ್ಕೆ-ನೋಡು.—ನನ್ನ ವ್ಯಾಖ್ಯಾನ ಏನು ಶ್ರೀಮಂತರು ಒಂದು ಕಾಲದಲ್ಲಿ-ತಲೆಯಿಲ್ಲದ ಸಲ್ಲದ ದರ್ಬಾರ್ ಖರ್ಬಾರ್ ಎಂತ ಮಾಡಿ ಈಗ ಚಪ್ಪೆ ನೆಲದಲ್ಲಿ ಕೂತಿದ್ದಾರೆ ಈಗ ನಮ್ದ್ ಗುತ್ತ್ ಗುತ್ತೆ ಅಲ್ವಾ? ಈಗ ನೋಡು ಗುತ್ತಿಯೋ-ನಮಗೆ ... ಬುದ್ಧಿ ಬಂತ್-ಅವುಕ್ಕೆಲ್ಲಾ-ಸ್ವಲ್ಪ ಇದ್ದವಾಗಲೇ ಬುದ್ಧಿ ಕಲಿಸುವಾ ಅಂತ ನನ್ನ ಯೋಚನೆ. ಆದರೆ ಈಗ ಸ್ವಲ್ಪ ಪಟಾ...

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯವೆಂಬಂತೆ ಸಾಮಾನುಗಳು ಬೇಲುಗಟ್ಟಿ ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗದುಕೊಳ್ಳುವುದು ಅತಿ ಲಾಭಕರವಾಗಿದೆ.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿ ಪಡಿಸುವುದು. ದೇಹಕಷ್ಟ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಮ ಡಬ್ಬಿಗೆ ೧—೦—೦

ವಾಜೀಕರಣ ತೈಲ

ವೀರ್ಯನಷ್ಟ ಪಕ್ವವಾಗುವುದಕ್ಕೆ, ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಸೀಸೆ 1ಕ್ಕೆ ರೂ. 5—0—0.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೭೪.
ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಮದನರತಿಕಾಮಶಾಸ್ತ್ರವೆಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೋಜ್ಞ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿರಿ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಎಂಡ್ ಕಂಪೆನಿ,**
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co., *Nambulier Street*, G. T. MADRAS.

ಲ್ ಇರುವಾಗ ಕೇಳುವುದಿಲ್ಲ ಅವು-ಅದು ನಮ್ಮ ಜಾತಿ ಗುಣ-ಮತ್ತು ಎಲ್ಲಾ ಹೋದ ಮೇಲೆ ಹಲ್ಲುಬಿಡುತ್ತಾವು-ಮರ್ಯಾದೆಗೆ ಏನು ಕಮ್ಮಿ ಇಲ್ಲೆ!—

೩

ಚಂದಯ್ಯ—ಹೌದಾ, ಸೂರ್ಯಣ್ಣಾ—ನಿಮಗೆ ವಿಷಾದ ಇತ್ತಾ? ಅದು ನಮ್ಮ ಮನೆತನದ ಮರ್ಯಾದೆ ಅಲ್ವಾ? ಆ ತೆಂಗಿನ ಕಾಯಿಯನ್ನು ಕೆಳಮನೆಯವರು ತೆಗೆದುಕೊಳ್ಳೋದಂದ್ರೇನು? ದೇವಸ್ಥಾನದ ಮೊದಲ ಮರ್ಯಾದೆ ನಮಗಲ್ವಾ?

ಸೂರ್ಯಣ್ಣ—ನಾನಿದ್ದಿಲ್ಲ. ಏನೋ ಆಗಿ ಹೋಯ್ತು! ಬರುವ ವರುಷ ನೋಡುವ. ಅವನು ನನ್ನೆದುರು ಮರ್ಯಾದೆಗೆ ಕೈಯೊಡ್ಡಿ ನೋಡ್ಲಿ!-ಮಾತ್ರವಂತಿಯಾ? ಈ ವರುಷ ತಕ್ಕೊಂಡದ್ದಕ್ಕೆ ಅಪರಾಧಕಾಣಿಕೆ ಸದೆ ಬಿಟ್ಟೇನಾ?

○ ○ ○ ○

(ಮರುವರುಷ ದೇವಸ್ಥಾನದ ಉತ್ಸವದ ಸಮಯದಲ್ಲಿ)

ಕೆಳಮನೆಯವರು—ಅದು ನಮ್ಮ ಮರ್ಯಾದೆ—

ಮೇಲ್ಮನೆಯವರು—ಅದು ನಮ್ಮದು—

[ದರ್ಶನದ ಪಾತ್ರಿಯು ಕೆಳಮನೆಯವರಿಗೆ ಮರ್ಯಾದೆಯನ್ನು ಕೊಡುವನು-ದೊಡ್ಡ ದೊಂಬಿ ನಡಿಯುವುದು-ಆ ಮೇಲೆ ಕ್ರಿಮಿನಲ್ ವ್ಯವಹರಣೆ ನಡೆಯುತ್ತೆ]

ಊರವರಲ್ಲಿ ಒಬ್ಬ—ಏನು ಹುಚ್ಚು ಒಂದು ತೆಂಗಿನಕಾಯಿ—ನಾಲ್ಕೆಸಳು ಸಿಂಗಾರಕ್ಕಾಗಿ ಒಂದೊಂದು ಕಡೆಯಿಂದ ನಾಲ್ಕು ಸಾವಿರ ರೂಪಾಯಿ ಇಷ್ಟರವರೆಗೆ ಪುಡಿಯಾದೀತು—ಇನ್ನು ಎಷ್ಟು ಆಗಲಿಕ್ಕೆ ಉಂಟೋ? ಹುಚ್ಚಲ್ಲವಾ!

ಮತ್ತೊಬ್ಬ—ಹಾಗೆ ಸುಮ್ಮನೆ ಒಂದು ತೆಂಗಿನಕಾಯಿಯೆಂದು ಬಿಟ್ಟುಬಿಟ್ಟರೆ ಮನೆತನದ ಮರ್ಯಾದೆಗೆ ಸ್ವಲ್ಪ ಕಮ್ಮಿ ಅಲ್ವಾ? ತೆಂಗಿನಕಾಯಿ ಅಂತ ಅಲ್ಲ-ಆ ತೆಂಗಿನಕಾಯಿಯಲ್ಲಿ ಮನೆಯ ಪೌರುಷ ಉಂಟು—

ಇನ್ನೊಬ್ಬ—ನಿನ್ನ ತಲೆ ಉಂಟು-ಇನ್ನು ಪೂರ ಅಂತ್ಯ ಆಗುವಾಗ-ಮನೆಯೂ ಇಲ್ಲ-ಕಾಯಿಯೂ ಇಲ್ಲ-ಬಾಯಿಗೆ ಕೂಳೂ ಇಲ್ಲ.

೪

[ನಮ್ಮ ರಂಗನಾಥನು ಯಮ್. ಎ. ಪಾಸಾಗಿರುವನು-ಶ್ರೀಮಂತರ ಮಗ-ಸಾಧಾರಣ ಕೆಲಸಕ್ಕೆ ಸೇರಿದರೆ ಮರ್ಯಾದೆಗೆ ಕಡಿಮೆಯೆಂದು ನಿರುದ್ಯೋಗಿಯಾಗಿ ಅಲೆಯುತ್ತಿರುವನು. ಅವನ ಗೆಳೆಯ ಬಿ. ಎ. ಪಾಸಾದವನು-15ರೂಪಾಯಿ ಕೆಲಸಕ್ಕೆ ಸೇರಿರುವನು.]

ಗೆಳೆಯ—ರಂಗನಾಥ, ನಿನಗೆ ಕೂಳಿಗೆ ಕಡಿಮೆಯಿಲ್ಲಂತ ತೋರುತ್ತದೆ-ಸಮಯ ಹ್ಯಾಗೆ ಸಾಗುತ್ತದಾ?

ರಂಗನಾಥ—ಸಮಯ ತನ್ನಷ್ಟಕ್ಕೆ ಸಾಗುತ್ತದೆ—ನಮ್ಮ ಹತ್ತಿರ ಅದು ಕೇಳುತ್ತದಾ?

ಗೆಳೆಯ—ಏನಾದರೂ ಒಂದು ಮಾಸ್ತರಿಕೆಗೋ, ಅಥವಾ ಗುಮಾಸ್ತಿಕೆಗೋ ಸೇರಬಾರದೋ?

ರಂಗನಾಥ—It is 'infra dig.' ಮರ್ಯಾದೆಗೆ ಸ್ವಲ್ಪ ಕಮ್ಮಿಯಲ್ವಾ? No status please!

ಗೆಳೆಯ—ಮರ್ಯಾದೆ ಕಡಿಮೆಯಾಗಲಿಕ್ಕೆ ಅದರಲ್ಲಿ ಏನು ಕದಿಯಲಿಕ್ಕೆ ಉಂಟಾ? ಮಂಡೆ ಒಡೆಯಲಿಕ್ಕೆ ಉಂಟಾ?



ರಂಗನಾಥ—'ಪಬ್ಲಿಕ್'- ಟೀಪಾರ್ಟಿಗೆ ಆಮಂತ್ರಣ ಕೊಡೋದಿಲ್ವಾ ನೋಡು.

ಗೆಳೆಯ—ಆಮಂತ್ರಣ ಬಂತೂಂದ್ರೆ ನಿನ್ನ ಮನೆಖರ್ಚು ಹೋಗುತ್ತದೇನು?

ರಂಗನಾಥ—ನನಗೆ ಮನೆಯಲ್ಲಿ ಕೇಳಲು ಉಂಟು—

ಗೆಳೆಯ—ನೀನು ದೊಡ್ಡ ಹುಚ್ಚ—ನಿನ್ನ ತಂದೆಯವರು ಮೊನ್ನೆ ಸಿಕ್ಕಿದವರು ಬೊಬ್ಬೆ ಹೊಡಿಯುತ್ತಾರೆ-ಆಸ್ತಿಯ ಮೇಲೆ ಸಾಲಮಾಡಿ ಮಾಡಿ ಸಾಕಾಯಿತಂತೆ—ನಿನಗೆ ನಾಚಿಕೆಯಾಗುವುದಿಲ್ಲವೇ? you are not worth your salt-ಏನಾದರೂ ಮಾಡು—ಭೂಮಿಗೆ ಭಾರವಾಗಿರುವುದಕ್ಕಿಂತ ಬೀದಿಗುಡಿಸಿ ಸ್ವಲ್ಪ ಸಂಪಾದನೆ ಮಾಡುವುದು ಲೇಸು—

ರಂಗನಾಥ—ಏ ಹುಚ್ಚಾ -ನನ್ನ ತಂದೆ ಒಂದುವೇಳೆ ಕಷ್ಟದಲ್ಲಿದ್ದರೇನಾಯಿತು?—ನಾನು ಕೆಲಸಕ್ಕೆ ಸೇರದಿರುವುದರಿಂದ-ಏನೋ-ದೊಡ್ಡ ಕೆಲಸ ಇನ್ನು ಮುಂದಕ್ಕೆ ಸಿಕ್ಕಬಹುದೆಂದು ಮಣಕಟ್ಟೆಯಲ್ಲಿ ವರದಕ್ಷಿಣೆಕೊಡುವ ಮಾವಂದಿರು ಬರ್ತಾರೆ ನೋಡು! ನನಗೆ ತೊಂದರೆಯಾಗಲಿಕ್ಕಿಲ್ಲಾ.

ಗೆಳೆಯ—ಏ ಹುಚ್ಚಾ! ಅಂತಾ ಮಾವಂದಿರಿಗೆಲ್ಲಾ ಬುದ್ಧಿ ಬಂದದೆ ಈಗ—You are in fools' paradise—ನೋಡು ನಮ್ಮ ಆಫೀಸಿನಲ್ಲಿ ಒಂದು 'ಎಟೆಂಡರ್' ಕೆಲಸ ಉಂಟು-ಹತ್ತು ರೂಪಾಯಿ ಸಂಬಳ-ಬೇಗ ಅರ್ಜಿಹಾಕು-24 ಅರ್ಜಿ ಮುಂಚೆಯೇ ಉಂಟು-

ರಂಗನಾಥ—ಮರ್ಯಾದೆಗೆ ಕಮ್ಮಿ ಅಲ್ವಾ?

ಗೆಳೆಯ—ಕಳ್ಳ, ನನ್ನ ಅಣ್ಣನ ಹತ್ತಿರ ಹದಿನೈದು ರೂಪಾಯಿ ತಕ್ಕೊಂಡು 'ಟೋಕರ್' ಇಟ್ಟೆ-ಅದು ಮರ್ಯಾದೆಗೆ ಕಮ್ಮಿ ಅಲ್ವಾ? ಬೀದಿ ಬಸವನ ಹಾಗೆ ತಿರುಗುತ್ತಾ ಯಾರ್‍ಯಾರಿಗೆ 'ಟೋಕರ್' ಇಡಬಹುದು-ಅದೆಲ್ಲಾ ಮರ್ಯಾದೆಗೆ ಕಮ್ಮಿ ಆಗುದಿಲ್ಲವಾ?—You strain at a goat and swallow a camel-ಪ್ರಾಮಾಣಿಕತೆಯಿಂದ ಹತ್ತು ರೂಪಾಯಿ ಸಂಪಾದನೆ ಮಾಡು ಅಂದರೆ "ಮರ್ಯಾದೆಗೆ ಕಮ್ಮಿ ಅಲ್ವಾ?" ಅಂತೀಯಾ? ಇದನ್ನೇ ಹೇಳುತ್ತಾ ಕೂತುಕೊಳ್ಳು-ಸಿಕ್ಕಸಿಕ್ಕವರೊಡನೆ ಹತ್ತಿಪ್ಪತ್ತೊಂತ್ಲೇ ಸಾಲಮಾಡುತ್ತಾ ಹೋಗು! ಒಂದು ದಿನ ನಡು ಬೀದಿಯಲ್ಲೇ ನಿನ್ನ ಕೈಹಿಡ್ದು ನಿಲ್ಲಿಸುತ್ತಾರೆ-ನೋಡು! ಆಗ಼್ 'ಇದು ನನ್ನ ಮರ್ಯಾದೆಗೆ ಸ್ವಲ್ಪ ಕಮ್ಮಿ ಅಲ್ವಾ?' ಅಂತ ರಾಗ ಎಳೆದ್ರೆ ಬಿಡ್ತಾರೇನೋ ನಿನ್ನನ್ನ!

○ ○ ○ ○

ಬರುವ ಲೇಖನ—"ಸ್ವಾರ್ಥಿ ಯಾರು?"

WANTED

a fair andeducatedyoundbride ot age not exceeding 20 years of bunt community to marry a young man of the same community in good position in Bombay. Apply to Box No. 15. C/o **Navayuga.**

Advertiser in Navayuga please note

We request our advertisers to kindly send their advertisement matter or change in the same as to reach us a week before. Copies of Advertisement should be written legibly or typed to avoid errors in printing.

Advt. Manager.

ಎಲ್ಲಾ ತರದ
ಆಯುರ್ವೇದ ಔಷಧಗಳು
ಬೇಕಾದರೆ
ನವಭಾರತ ಪುಸ್ತಕ ಭಂಡಾರ
ಇವರಲ್ಲಿ ದೊರೆಯುತ್ತವೆ.

NOTICE

In the Court of the District Munsiff of Udipi

O. S. No. 870/1932
R. I. A. No. 978/1938

Between

P. Cherdappa Nayak son of Annappa Nayak, residing at Katapadi in Yenagudde village, Udipi Taluk .... } Petitioner

Versus

Vaikunta Kamath son of Jolpadi Laxman Kamath now residing at Bombay } Respondent

The above application by the petitioner under Sec. 19 of the Madras Agriculturists Relief Act for amendment of the decree in O. S. No. 870/1932 on the file of this Court by scaling down the degree debt in accordance with the provisions of the said Act, stands posted to 13-4-1939. If the respondent has any objection there to he may in person or by a pleader appear before this Court that day failing which the said application will be heard and decided exparte.

Udipi 29-3-39 } *By order* **K. J. BALLAL** Vakil for petitioner

ನವಯುಗಕ್ಕೆ ಏಜಂಟರಿಲ್ಲದಲ್ಲಿ ಏಜಂಟರು ಬೇಕಾಗಿದ್ದಾರೆ.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪ್ರೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪ್ರೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪ್ರೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು, ಕ್ರಯ ಬಾಟ್ಲಿ 1 ಕ್ಕೆ ರೂ 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು:— ಶ್ರೀ. ಕೆ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ವರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ನೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ನೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! ವಜ್ರಗಳು BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ಯಾತ (First quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇವರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,
ಗವರ್ನಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] # ಕೆನರಾ ಛಾಪಖಾನೆ [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಸೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.
ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,
Kanara Printing Works,
Hampankatte, MANGALORE

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವವು ಇದು ಮಧುರವಾಗಿದೆ. ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1 ಕ್ಕೆ 12 ಆಣೆ, ಟ ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:— ನವಭಾರತ ಬುಕ್‌ಡಿಪ್ರೋ, ಉಡುಪಿ.

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ

ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ಸಮನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ

ಬಹಿಷ್ಟೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತು ಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು
"ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ
ಅಗತ್ಯವಾಗಿ ಇರಲೇಬೇಕಾದ್ದು.
ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,
ಬ್ರಾಂಚ್—ಮಂಗಳೂರು.

NAVABHARAT BOOK DEPOT

Book Sellers & Publishers & Advertising Agents
Church Road-Udipi.

ನಮ್ಮಲ್ಲಿ
ಎಲ್ಲಾತರದ ಶಾಲಾಪುಸ್ತಕಗಳೂ
ಲೈಬ್ರೆರಿಗೆ ಬೇಕಾದ ಪುಸ್ತಕಗಳೂ
ದೊರೆಯುತ್ತವೆ.
ಕೆಟಲಾಗಿಗೂ
ಇತರ ಮಾಹಿತಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ
ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು
ಚರ್ಚ್‌ರೋಡ್ ಉಡುಪಿ

ABSOLUTELY FREE!

Bring this coupon and you will get your own Photo absolutely free of charge

☞ The rate for the enlargement of the same Rupee one only (size 6"×8").

Send your old photo and you will get enlargement 6'×8' for Rs 2—8—0. ony and big size 16'×20' for Rs. 5 only.
Our time every day 9 a. m. to 7 p. m. Sunday 9 a. m. to 4p. m.

K. J. PATHAK

276 Surya Mahal Girgaum Road, BOMBAY, 4.	Royal Art Studio 183 Hornby Road, BOMBAY, 1.

ಕೇವಲ ಧರ್ಮಾರ್ಥ!

ಈ ಜಾಹೀರಾತಿನ ಕೂಪನನ್ನು ತರುವವರಿಗೆ ಅವರ ಫೋಟೋವನ್ನು ಧರ್ಮಾರ್ಥವಾಗಿ ತೆಗೆದುಕೊಡಲಾಗುವುದು.

ತ್ವರೆ ಮಾಡಿರಿ! **ಬೊಂಬಾಯಿ ಪಟ್ಟಣಿಗರೆ ತ್ವರೆ ಮಾಡಿರಿ!!**

● ಈ ನಮ್ಮ ಫೋಟೋವನ್ನು ಎನ್‌ಲಾರ್ಜ್ ಮೆಂಟಿಗೆ ಬರೇ ರೂ. 1/. ಮಾತ್ರ. (ಸೈಜ್ 6"×8").

ಹೊರಗಿನವರು ಈ ಕೂಪನಿನೊಂದಿಗೆ ತಮ್ಮ ಫೋಟೋಕಳುಹಿಸಿದರೆ ಅದನ್ನು 6'×8' ಸೈಜಿನಲ್ಲಿ ರೂ. 2-8-0ಕ್ಕೆ ಎನ್‌ಲಾರ್ಜ್‌ಮಾಡಿಕೊಡಲಾಗುವುದು. 16×'20'ರ ದೊಡ್ಡ ಸೈಜಿಗೆ ರೂ. 5 ಮಾತ್ರ. ನಮ್ಮ ಆಫೀಸು ಸಮಯ ಬೆಳಿಗ್ಗೆ 9ರಿಂದ ಸಂಜೆ 7, ಆದಿತ್ಯವಾರ ಬೆಳಿಗ್ಗೆ 9ರಿಂದ ಸಂಜೆ 4 ಗಂಟೆ ತನಕ
ಕೆ. ಜೆ. ಪಥಕ್

276, ಸೂರ್ಯಮಹಾಲ್ ಗಿರ್ಗಾಮ್ ರೋಡು ಬೊಂಬಾಯಿ 4	ರೋಯಲ್ ಆರ್ಟ್‌ಸ್ಟುಡಿಯೋ, 183 ಹೋರ್ನ್‌ಬಿ ರೋಡು, ಬೊಂಬಾಯಿ 1

ಕೇಶವರ್ಧಕ ⁘ ನೇತ್ರಾರೋಗ್ಯರಕ್ಷಕ ⁘ ಸುಖದಾಯಕ

(Regd TradeMark)

ಆಮಲಕೀ ತೈಲ
AMALAKI HAIR OIL

ವಿದ್ಯಾರ್ಥಿಗಳಿಗೂ, ಸಕಲ ಸ್ತ್ರೀ ಪುರುಷರಿಗೂ ನಿತ್ಯ ಕೇಶ ಪ್ರಸಾಧನಾರ್ಥ ಪುಷ್ಪಗಂಧ ಮೋದಿತ ಉತ್ಕೃಷ್ಟ ಕೇಶವರ್ಧಕ ತೈಲವಿದು. ಮೆದುಳಿನ ಸ್ವಾಸ್ಥ್ಯಕ್ಕೂ ನೇತ್ರಾರೋಗ್ಯ ರಕ್ಷಣೆಗೂ ಕೇಶಕಲಾಪದ ಬೆಳವಣಿಗೆಗೂ ಸೌಂದರ್ಯ ವರ್ಧನೆಗೂ ಅತ್ಯಂತ ಸಹಾಯಕವಾಗಿದೆ. ಇದನ್ನು ನಿತ್ಯವೂ ಉಪಯೋಗಿಸುತ್ತಿದ್ದರೆ ಶಾರೀರ ಹಾಗೂ ಮಾನಸಿಕ ಶ್ರಮದಿಂದ ಪುರುಷರಿಗೂ, ಪ್ರಸವಾನಂತರದಲ್ಲಿ ಸ್ತ್ರೀಯರಿಗೂ ಸಾಮಾನ್ಯವಾಗಿ ಕೇಶಮೂಲಗಳು ನಿಸತ್ವಹೊಂದಿ ಕೂದಲುಗಳು ಉದುರುವಿಕೆ ಅಕಾಲದಲ್ಲಿ ನರೆಯುಂಟಾಗುವಿಕೆ ಇವೇ ಮೊದಲಾದ ದೋಷಗಳು, ದೂರವಾಗಿ ಕೇಶಮೂಲಗಳು ದೃಢವಾಗುವುದರಿಂದ ಅಚ್ಚಕಪ್ಪಾದ ಕೂದಲುಗಳು ನಿಬಿಡವಾಗಿ ಬೆಳೆಯುವುದಲ್ಲದೆ ಮೊದಲೇ ನರೆತ ಕೂದಲು ಸಹ ಕಪ್ಪಾಗಿ ಮುಖಶ್ರೀಯು ಲಾವಣ್ಯ ಪೂರ್ಣವಾಗುವದು. ತಲೆ ನೋವು, ಸೂರ್ಯಾವರ್ತ ಅಥವಾ ಅರೆತಲೆನೋವು, ನೇತ್ರಬ್ಯಾಲಿ, ಮೆದುಳಿನ ಉಷ್ಣತೆ ತಲೆತಿರುಕು, ದುಃಸ್ವಪ್ನ ಪೂರ್ಣವಾದ ನಿದ್ರಾಭಂಗ, ಮೊದಲಾದ ಪಿತ್ತಜನಿತರೋಗಗಳೂ ಸರ್ವತ್ರವಾಗಿ ಸುಖವಾದ ನಿದ್ರೆಯು ಹತ್ತುವದು. ಇಂತಹ ಸುಖನಿದ್ರೆಯಿಂದ ಸ್ಮೃತಿ, ಮೇಧಾ ಉತ್ಸಾಹ ವಿಚಾರಶಕ್ತಿ ಮೊದಲಾದ ಮಾನಸಿಕ ಶಕ್ತಿಗಳು ವಿಕಾಸಹೊಂದಿ ಆರೋಗ್ಯ ಲಾಭವಾಗುವದು.
4 ಔನ್ಸಿನ ಸೀಸೆ ಒಂದರ 0—11—0. 2 ಔನ್ಸಿನ ಸೀಸೆ ಒಂದರ 0—6—0.

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ.
100ಮಾತ್ರೆಗಳಿಗೆ ರೂ. 1-5-0, 500ಕ್ಕೆ ರೂ. 5.
ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ

ಸ್ವದೇಶೀ ಔಷಧಿ ಭಂಡಾರ, (ರಜಿಸ್ಟರ್ಡ್) ಕುಂಜಾಲ್,
ಬ್ರಹ್ಮಾವರ ಪೋಸ್ಟ್, ದ. ಭಾರತ

ಸಪ್ಲೈ ಏಜನ್ಸಿ ಲಿಮಿಟೆಡ್‌ನಲ್ಲೂ ನವಭಾರತ ಬುಕ್ ಡಿಪೋದಲ್ಲೂ ನಮ್ಮ ಔಷಧಗಳು ಸಿಗುತ್ತವೆ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. [illegible]	೧೦೦ ಮಾತ್ರೆಗಳಿಗೆ ರೂ. [illegible]

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಸೀರೆಗಳು

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Supply Agency Limited.

(BANKERS)

ESTD] **UDIPI** [1933

---o---

Authorised Capital Rs. 1,00,000
Subscribed & Paid up Rs. 30,760

RATE OF INTEREST FOR FIXED DEPOSITS.

3 to 6 Months	4%	p. a.
7 to 11 "	5%	"
12 to 18 "	6%	"

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

General Supplies Limited.

UDIPI

PROPRIETORS:

Sri Bharata Vastu Mandira,
Thulunad Stationery Mart.
Manipal Power Press,
Thulunad Press,
Antaranga

THE BEST MEDIUM FOR ADVERTISEMENT

Yugadi Special of Antaranga

to be published on **16—4—1939**

pages exceed	100
copies exceed	10,000
single copy	0 2 0

ತುಳುನಾಡ್ ತಿಲಕ ಪಂಚಾಂಗ

ಬೆಲೆ ೦—೧—೦

ಮಾರಾಟಕ್ಕೆ ತಯಾರಾಗಿದೆ.

ವ್ಯಾಪಾರಿಗಳಿಗೆ ಧಾರಾಳ ಕಮಿಶನ್.

ಬೇಕಾದವರು ತರಿಸಿಕೊಳ್ಳಬಹುದು.

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

Registered No. M. 3618

NAVAYUGA

ನವಯುಗ

13--4--1939

ಮುಟ್ಟಿದರೆ ಮುಗುಳು ! ಬಿಚ್ಚಿದರೆ ಅರಳು !!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವದು

ಮುಗುಳು

ಬರೆದವರು:—ಕೆ. ಹೊನ್ನಯ್ಯ ಶೆಟ್ಟಿ.

(ಶ್ರೀ ಕಡೇಕಾರು ರಾಜಗೋಪಾಲಕೃಷ್ಣರಾಯರ ಮುದ್ದಾದ ಮುನ್ನುಡಿಯೊಡನೆ)

ಮದ್ರಾಸ್ ಟೆಕ್ಸ್ಟ್ ಬುಕ್ ಕಮಿಟಿಯಿಂದ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದಿದೆ.

ವಿದ್ಯಾರ್ಥಿಗಳಿದನ್ನು ನಲಿನಲಿದು ಓದುವರು;
ಓದಿ ಓದಿ ನಲಿವರು.

(ಸಚಿತ್ರ)

(ಸಚಿತ್ರ)

ಆದುದರಿಂದಲೇ ಉಪಾಧ್ಯಾಯರು ತಮ್ಮ ಶಾಲೆಯಲ್ಲಿ

ಮುಗುಳನ್ನೇ ಉಪಯೋಗಿಸುತ್ತಾರೆ.

ಬೆಲೆ ೦--೨--೬ ಮಾತ್ರ.

ವಿಕ್ರಯಾಧಿಕಾರಿಗಳು:—

ನವಭಾರತ ಪುಸ್ತಕ ಭಂಡಾರ, ಉಡುಪಿ.



ಎರಡನೇ ಮೈಸೂರು ಕಾಂಗ್ರೆಸ್ ಅಧಿವೇಶನ ಸ್ವಾಗತ ಕಮಿಟಿಯವರ ಆಶ್ರಯದಲ್ಲಿ

ವಿದುರಾಶ್ವತ್ಥ

ಖಾದಿ, ಸ್ವದೇಶಿ ಮತ್ತು ಗ್ರಾಮ ಕೈಗಾರಿಕೆಗಳ ಪ್ರದರ್ಶನ

ಎಪ್ರಿಲ್ 12ನೇ ತಾರೀಖಿನಿಂದ 19ನೇ ತಾರೀಖಿನ ವರೆಗೆ

ವಿದುರಾಶ್ವತ್ಥ ಮಹಾಕ್ಷೇತ್ರದಲ್ಲಿ

ನಡೆಸಲಾಗುತ್ತದೆ

ಪ್ರದರ್ಶನದ ಕೈಪಿಡಿಯೊಂದನ್ನು ಇವರೊಡನೆ ಪ್ರಕಟಿಸಲಾಗುವುದು.

ಸ್ಥಳ (ಸ್ಟಾಲು) ಮತ್ತು ಜಾಹೀರಾತುಗಳಿಗೆ ಬರೆಯಿರಿ.

ಬಿ. ಎನ್. ಎಸ್ ರಾಜನ್ ಅಂಡ್ ಬ್ರದರ್, ಟ್ರೇಡ್‌ಮಾರ್ಕ್ಸ ಮತ್ತು ಪಬ್ಲಿಶರ್ ಮಲ್ಲೇಶ್ವರ ಪೋಸ್ಟ್, (ಬೆಂಗಳೂರು ಸಿಟಿ.)

ಅಥವಾ

ಕಾರ್ಯದರ್ಶಿ ಎಕ್ಸಿಬೀಷನ್ ಕಮಿಟಿ ಇಂಡಿಯನ್ ಪ್ರೆಸ್, ಬಳೆಪೇಟೆ ಬೆಂಗಳೂರು ಸಿಟಿ

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶ ಮಾಡಿಕೊಳ್ಳುವುದು ಹೇಗೆ? ಓದಿನೋಡಿರಿ. ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸ್ಸು ಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—T. V. ದೇವಕರ್ ಎಂಡ್ ಕಂಪೆನಿ, ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co. *Nambulier Street*, G. T. MADRAS.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮಿ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಪ್ರಧ್ವಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅನ್ಯೃತ ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE

PANGAL NAYAK BANK LIMITED.

Estd.] [1920.

ದಿ ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್.

Paid up Capital Rs. 1,82,100/-. Reserves Rs. 2,02 800/-

PRINCIPAL OFFICE: COURT ROAD, UDIPI.

OTHER OFFICES:

UDIPI MANGALORE, KATAPADI, & KANHANGAD.

Season Deposits so as to bear interest at 4per cent per annum till the end of June 1939 are accepted.

Cumulative Deposits are also received on the usual terms.

Banking business of every description is transacted. Further particulars may be had on application.

ದಿ ವಿಜಯ ಬೇಂಕ್, ಲಿಮಿಟೆಡ್, ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವ್ಯವಹಾರಗಳು ಇಲ್ಲಿ ನಡಿಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಠಾಯಂ ಠೇವಣಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3 ತಿಂಗಳಿಗೆ	....	3½%
6 ,,	....	4%
1 ವರ್ಷಕ್ಕೆ	....	4½%
2 ,,	....	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತದೆ.

Transport & Car Owners

ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES ----- MANGALORE

AUGUSTINE & CO.

Stockits:—

Wellknown ceylon, Nilgri, Darjeeling & Assam Tea & Coffee All sorts of Hotel & family Tea Mixures as weil as Coffee can be had at moderate rates.

ಮುಂಬಾಯಿಯಲ್ಲಿ ನಮ್ಮ ಗಿರಾಕಿಗಳು ಹಲವು ವರ್ಷಗಳಿಂದ ನಮ್ಮ ಚಾ ಕಾಫಿಯನ್ನು ಉಪಯೋಗಿಸಿ ಸಂತೃಪ್ತರಾಗಿದ್ದಾರೆ.

ಹೋಟೆಲುಗಳಿಗೆ ಬೇಕಾಗುವ ಟೀ ಮಿಕ್ಸರ್ ವ ಕಾಫಿ ಹುಡಿ, ಮನೆಗಳಿಗೆ ಬೇಕಾಗುವ ಚಾ-ಕಾಫಿ, ನಮ್ಮಲ್ಲಿ ಸದಾ ಹಿತ ಹಿತದರಕ್ಕೆ ದೊರೆಯುತ್ತದೆ. ಪ್ರಾಮಾಣಿಕತೆಯೇ ನಮ್ಮ ಆದರ್ಶ. ಗಿರಾಕಿಗಳ ಸೌಕರ್ಯವೇ ನಮ್ಮ ಧ್ಯೇಯ.

ಪರೀಕ್ಷಿಸಿರಿ! ಖಾತ್ರಿ ಮಾಡಿಕೊಳ್ಳಿರಿ.

ವಿಳಾಸ: ಆಗಸ್ಟಿನ್ ಎಂಡ್ ಕೋ, ಮೌಂಟ್‌ರೋಡು, ಮಜಗಾಂ, ಮುಂಬಯಿ.

MOUNT ROAD, MAZAGAON, BOMBAY.

ESTD. 1921
FOUNDER
Sri. A. B. SHETTY, M.L.A.
Parliamentary Secretary, Govt. of Madras
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಸಂಚಿಕೆ ೩೨ | ಉಡುಪಿ, ಗುರುವಾರ ೧೩-೪-೧೯೩೯ | Udipi, Thursday 13—4—1939 | Vol. XVIII | No. 32

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ. ೩—೪—೦
೬ ತಿಂಗಳಿಗೆ ರೂ. ೧—೧೪—೦.
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ರಾಜಕೋಟೆ ವಿಜಯದ ಕುರಿತು ಅಮೇರಿಕನ್ ಪತ್ರಿಕೆಯ ಪ್ರಶಂಸೆ

ರಾಜಕೋಟೆಯ ವಿವಾದದ ಮೇಲೆ ಫೆಡರಲ್ ಕೋರ್ಟಿನ ಮುಖ್ಯ ನ್ಯಾಯಾಧೀಶರ ತೀರ್ಮಾನವು ಹೊರಬಿದ್ದೊಡನೆ ಮಹಾತ್ಮರು ಕೈಕೊಂಡ ಉಪವಾಸವ್ರತದಲ್ಲೆಂತಹ ನ್ಯಾಯವಿತ್ತೆಂಬುದು ಸುಸ್ಪಷ್ಟವಾಗಿದೆ. ಗಾಂಧಿಯವರು ಮಾಡಿದುದನ್ನು ನೋಡಿದುದನ್ನೆಲ್ಲಾ ವಕ್ರದೃಷ್ಟಿಯಿಂದ ಕಾಣುತ್ತಿದ್ದ ಕಟುವಿಮರ್ಶಕರು ಕೂಡ ಈ ಕುರಿತು ಮೌನತಾಳಿದ್ದಾರೆ. ಮಹಾತ್ಮರ ಉಪವಾಸದಲ್ಲೆಂತಹ ಶಕ್ತಿಯಿತ್ತು, ನ್ಯಾಯಾಧೀಶರ ತೀರ್ಪಿನಿಂದ ಅದರ ನ್ಯಾಯವೆಷ್ಟು ಒಡೆದು ತೋರಿತೆಂಬುದಕ್ಕೆ ಅಮೇರಿಕೆಯ ಪತ್ರಿಕೆಗಳ ಅಭಿಪ್ರಾಯಗಳನ್ನು ಕಂಡರೆ ಸಾಕು. "ಮಹಾತ್ಮಾಗಾಂಧಿಯವರ ಆನಂದದಾಯಕ ವಿಜಯ" ಎಂಬ ಶಿರೋನಾಮೆಯ ಕೆಳಗೆ 'ಟೈಮ್ಸ್' ಪತ್ರಿಕೆಯು ಹೀಗೆ ಬರೆಯುತ್ತದೆ.

ಸಂತ ಗಾಂಧಿಯವರ ಉಪವಾಸ ಯಾತನೆಯು ಖಡ್ಗಕ್ಕಿಂತ ಬಲಶಾಲಿಯೆಂಬುದನ್ನು ನಡೆದ ಸಂಗತಿಗಳು ತೋರಿಸಿಕೊಟ್ಟವು. ಮೂಲನಿವಾಸಿಗಳಾದ ಬಂದೂಕುಧಾರಿಗಳಾರೂ, ಗಾಂಧಿಯವರ ಉಪವಾಸವು ಸಂಪಾದಿಸಿಕೊಂಡ ರಿಯಾಯಿತಿಯ ಒಂದಂಶವನ್ನಾದರೂ ಬ್ರಿಟಿಷರಿಂದ ಪಡಕೊಂಡುದಿಲ್ಲ. ಆದರೆ ಈ ಸಲದ ಉಪವಾಸವು ಹಿಂದಿನ ಉಪವಾಸಗಳಿಗಿಂತ ಭಯಂಕರವಾದುದಿತ್ತು. ಸಂತ ಗಾಂಧಿಯವರ ರಕ್ತದ ಒತ್ತಾಟವು ಹಿಂದಿಗಿಂತ ಬಹಳ ಜೋರಿನಲ್ಲಿದ್ದು, ಅವರೀ ಸಲ ಬಹುಬೇಗನೇ ಸಾಯುತ್ತಿದ್ದರು.

ಮತ್ತೊಂದು ವಿಷಯದಲ್ಲಿಯೂ ಈ ಉಪವಾಸವು ಭಿನ್ನವಾದುದು. ಗಾಂಧಿಯವರೀಗ ಕಾಂಗ್ರೆಸಿನೊಳಗಣ ಮೂಲಸ್ತಂಭವಾಗಿಲ್ಲವಾದ್ದರಿಂದ, ಅವರು ತನಗೆ ಹೊಸ ಪ್ರತಿಷ್ಠೆಯನ್ನು ದೊರಕಿಸಿಕೊಳ್ಳಲು ಹಾಗೂ ತನ್ನ ಶಕ್ತಿಯನ್ನು ಪರೀಕ್ಷೆಗೆ ಹಚ್ಚಲು ಹೊರಡಬೇಕಾಯಿತು. ಆದ್ದರಿಂದ ಅವರು ರಾಜಕೋಟೆಯ ಪ್ರಶ್ನೆಯನ್ನೆತ್ತಿ ಹಿಡಿದು, 282 ಚದರ ಮೈಲುಗಳ ಸಣ್ಣದೊಂದು ಸಂಸ್ಥಾನದ 75540 ಜನರನ್ನು ಇತರ ಸಂಸ್ಥಾನಾಧಿಪರಂತೆಯೇ ತನ್ನ ವಜ್ರಮುಷ್ಟಿಯಿಂದ ಝಡಿದಾಳುತ್ತಿರುವ ರಾಜಕೋಟೆದ ರಾಜರನ್ನು ಇದಿರಿಸಿದರು.

ಬ್ರಿಟಿಷರ ಮುಂದಿದ್ದ ಮುಳ್ಳಿನ ಹಾದಿ

ರಾಜಕೋಟೆಯ 29 ವರ್ಷ ಪ್ರಾಯದ ರಾಜರು ಮಹಾತ್ಮರ ಮರಣಕ್ಕಾಗಿ ತಾನು ಜವಾಬ್ದಾರನಾಗಲು ಎಂದಿಗೂ ತಯಾರಿರಲಿಲ್ಲ. ಬ್ರಿಟಿಷ್ ಸರಕಾರದ ಮುಂದಿದ್ದ ಸಮಸ್ಯೆಯಾದರೂ ಅದಕ್ಕಿಂತ ಸುಲಭದ್ದಾಗಿರಲಿಲ್ಲ. ಕಾಂಗ್ರೆಸ್ ಸರಕಾರಗಳು

• ಸಮಾಚಾರಸಂಗ್ರಹ •

ನ್ಯೂ ಡಿಲ್ಲಿಗೆ ತಂತಿಬಿಟ್ಟು ಗಾಂಧಿಯವರು ಮರಣಹೊಂದಿದರೆ ಬ್ರಿಟನ್ ಅದರ ಉತ್ತರವಾದಿಯಾಗಲಿರುವದೆಂದು ತಿಳಿಸಿದರು. ಇಂಗ್ಲಾಂಡು ತನ್ನ ಕೈಯಲ್ಲಿ ಗಾಂಧಿಯವರು ಪ್ರಾಣಬಿಡುವದನ್ನು ಅಪೇಕ್ಷಿಸುವಂತಿಲ್ಲ. ಆದರೆ ಈ ಕಾರಣದಿಂದ, ಥಾಕೋರ್ ಸಾಹೇಬರನ್ನು ಸಂಸ್ಥಾನದ ಸುಧಾರಣೆಗಾಗಿ ಒತ್ತಾಯಪಡಿಸಿದಲ್ಲಿ ಕೆಲಸ ಕೆಡುತ್ತಿತ್ತು. ಕಾಂಗ್ರೆಸ್ ಧುರೀಣರು ಹಾಗೆಯೇ ಇತರ ರಾಜರ ಮೇಲೆ ಚಳವಳ ಹೂಡಿ ಹಲವು ಮಹಾರಾಜರುಗಳು ಭಾರತ ರಾಷ್ಟ್ರೀಯ ಚಳವಳಕ್ಕೆ ಬಲಿಯಾಗುವಂತಹ ಪರಿಸ್ಥಿತಿಯನ್ನು ತಂದೊಡ್ಡುತಿದ್ದರು.

ಬೊಂಬಾಯಿಯ 'ಸ್ಟೋಕ್ ಎಕ್ಸ್‌ಚೇಂಜ್' ಬಂದುಮಾಡಲ್ಪಟ್ಟುದರ ಮೇಲಿಂದ ತಮ್ಮ ಪ್ರೀತಿಯ ಮಹಾತ್ಮನ ಮರಣವೆಂದರೆ ಭಾರತೀಯರೆಷ್ಟು ಗಾಬರಿಬೀಳುತ್ತಾರೆಂಬುದನ್ನು ಅರಿಯಬಹುದು.

ಮಾನವನ ಮೇಲೆ ಯಂತ್ರದ ಧಾಳಿ
ಲೇಡಿ ಲಿನ್ಲಿತ್‌ಗೋರವರ ಅಭಿಪ್ರಾಯ

ಡಿಲ್ಲಿಯ ವಸ್ತ್ರ ಮತ್ತು ಇತರ ಮಿಲ್ಲುಗಳ ಸುವರ್ಣೋತ್ಸವದಲ್ಲಿ ಬಹುಮಾನ ವಿತರಣಾ ಕಾರ್ಯವನ್ನು ನೆರವೇರಿಸುತ್ತಾ ಲೇಡಿ ಲಿನ್ಲಿತ್‌ಗೋರವರು ಯಂತ್ರಯುಗದಲ್ಲಿ ಮಾನವತ್ವಕ್ಕೊದಗಿರುವ ಧಕ್ಕೆಯ ಕುರಿತು ಹೀಗೆಂದರು. "ಯಾಂತ್ರಿಕ ವಿಭಾಗದಲ್ಲಿ ತೀವ್ರ ಅಭಿವೃದ್ಧಿಯಾಗುತ್ತಾ ಬಂದಿದೆ. ನಿಜ. ಆದರೆ ನಾವು ಈ ಚಿತ್ರದ ಮತ್ತೊಂದು ಬದಿಯನ್ನೂ ನೋಡಬೇಕು. ಯಂತ್ರವು ಏಕಬುದ್ಧಿಯುಳ್ಳ ಪ್ರತ್ಯೇಕನಾಗಿ ದುಡಿಸಲಾಶಕ್ತವಲ್ಲದೆಂಬುದರಲ್ಲಿ ಸಂದೇಹವಿಲ್ಲ. ಸ್ತ್ರೀಪುರುಷ ಸಮಾಜವನ್ನು ಆಕರ್ಷಿಸಿ, ಅವರ ಒಳ್ಳಿತು ಯಾ ಕೆಟ್ಟುವದನ್ನು ಸಾಧಿಸಬಲ್ಲ ಧುರೀಣನೂ ಆ ಯಂತ್ರದಂತಿದ್ದಾನೆ. ಆದರೆ ಇಂದಿನ ವಿಕೇಭರಿದ ದಿನಗಳಲ್ಲಿ ಮಗುವು ತನ್ನ ಬೆಳವಣಿಗೆಯ ಹಕ್ಕನ್ನು ಕಳೆದುಕೊಳ್ಳುತ್ತದೆ. ಇದೇ ರೀತಿಯು ಮುಂದುವರಿದಲ್ಲಿ ಮಾನವತ್ವದ ಎಲ್ಲಾ ಲಕ್ಷಣಗಳೂ ಸಂಪೂರ್ಣನಾಶವಾಗಿ ಮಾನವತ್ವವು ಗತವೈಭವವೆನ್ನಿಸಬಹುದು.

ರಾಷ್ಟ್ರಪತಿ ಭೋಸರ ಹೇಳಿಕೆ

ತ್ರಿಪುರಿ ಕಾಂಗ್ರೆಸ್ ಮಹಾಧಿವೇಶನದಲ್ಲಿ ಮಂಜೂರಾದ ಪಂಡಿತಪಂತರ ಠರಾವಿನ ಕುರಿತು ತಾನನುಸರಿಸಲಿರುವ ಧೋರಣೆಯನ್ನು ಸುಭಾಸಚಂದ್ರಭೋಸರು ತನ್ನದೊಂದು ಹೇಳಿಕೆಯಲ್ಲಿ ಸೂಚಿಸಿದ್ದರು. ಆ ಕುರಿತು ಹಲವು ತಪ್ಪಭಿಪ್ರಾಯಗಳು

ಹುಟ್ಟಿದುದರಿಂದ ಸಂಶಯನಿವೃತ್ತಿಗಾಗಿ ಶ್ರೀ ಭೋಸರು ಇದೇ ಎಪ್ರಿಲ್ ತಾ. ೬ರಲ್ಲಿ ಈ ಕೆಳಗಣ ಹೇಳಿಕೆಯೊಂದನ್ನಿತ್ತಿರುವರು. ಅನುಮಾನ ಇಲ್ಲವೇ ತಪ್ಪಭಿಪ್ರಾಯಗಳು ಹರಡಿರುವ ವಾತಾವರಣದಲ್ಲಿ ಏನೇನೋ ಕಲ್ಪನೆಗಳನ್ನು ಮಾಡಿಕೊಳ್ಳುವದು, ಇತರ ಸಾಮಾನ್ಯ ಸಂದರ್ಭಗಳಿಗಿಂತ ಬಹು ಸುಲಭ. ಇಂತಹ ಪರಿಸ್ಥಿತಿಯೋ ನಾನು ಮಾರ್ಚ್ ತಾ. ೨೬ರಲ್ಲಿ ಕೊಟ್ಟ ಹೇಳಿಕೆಯ ಮೇಲೋ, ಅದರ ಒಂದು ಭಾಗದ ಮೇಲೋ ಬಂದಿದೆ. ಆ ಹೇಳಿಕೆಯಲ್ಲಿ ನಾನು ಹೇಳಿದುದಿಷ್ಟೆ– ಪಂಡಿತ ಪಂತರ ಠರಾವಿನ ಕೊನೆಯ ಭಾಗವು ಘಟನಾವಿರುದ್ಧ ಮತ್ತು ಕ್ರಮವಿರುದ್ಧವಾದುದು. ನಾನು ಹೀಗೆ ಹೇಳಿದೆನೆಂಬುದರಿಂದ ಹಲವು ಮಿತ್ರರು ಆ ಠರಾವು ಘಟನಾವಿರುದ್ಧ ಮಾತ್ರವಲ್ಲ– ನಾನದನ್ನು ಅನುಸರಿಸಲು ಒಪ್ಪಲಿಲ್ಲವೆಂಬ ಅಭಿಪ್ರಾಯಪಡಿದುದನ್ನೆಂದು ಭಾವಿಸಿಕೊಂಡಿರುವೆ. ಪಂತರ ಠರಾವು ಬಹಳ ತಪ್ಪಾಗಿ ಕೈಸೇರಿತ್ತಾದರೂ ಕ್ರಮವಿರುದ್ಧವೆಂಬುದರಿಂದ ನಾನದನ್ನು ತಡೆಯದೆ ಮುಂದೆ ಬಿಟ್ಟಿದ್ದೆನೆಂಬುದನ್ನು ಇವರು ಮರೆತಂತಿವೆ. "ರಾಷ್ಟ್ರೀಯ ಬೇಡಿಕೆ"ಯ ಸೂಚನೆಯ ಮೇಲೆ ಶ್ರೀ ಶರಚ್ಚಂದ್ರಭೋಸರು ತಂದ ಉಪಸೂಚನೆಯನ್ನು ಮೌಲಾನಾ ಆಜಾದರು ಕ್ರಮಬಾಹಿರವೆಂದು ತೀರ್ಮಾನಿಸಿದಂತೆ ನಾನೀ ಠರಾವನ್ನು ಅಲ್ಲಗಳೆಯಲಿಲ್ಲ. ಪಂತರ ಠರಾವಿನ ಕೊನೆಯ ಭಾಗವು ನೀತಿಬಾಹಿರವಿದ್ದರೂ ನಾನದನ್ನು ಇದ್ದಕ್ಕಿದ್ದಂತೆ ಒದರಲು ಬಿಟ್ಟು ಓಟಿಗೆ ಹಾಕಿದ್ದೇನೆಂಬುದೂ ಮಿಕ್ಕವರಿಗೆ ಬಹುಶಃ ಮರೆತುಹೋಗಿದೆ. ನಾನು ನನ್ನ ಮೊದಲಿನ ನಿರ್ಧಾರವನ್ನು ಬದಲುಮಾಡುವಂತಿಲ್ಲ. ಸತ್ಯಸ್ಥಿತಿಯೆಂದರೆ ಮಾರ್ಚ್ ತಾ. ೨೬ರ ಹೇಳಿಕೆಯಲ್ಲಿ ನಾನೆಂದುದಿಷ್ಟೆ–"ತ್ರಿಪುರಿನಿರ್ಣಯದಂತೆ ಹೊಸ ವರ್ಕಿಂಗ್ ಕಮಿಟಿಯ ರಚ

THE

Canara Industrial & Banking Syndicate Ltd.,

(INCORPORATED IN BRITISH INDIA
LIABILITY OF SHAREHOLDERS LIMITED.)

ESTD. 1925

Head Office:- **UDIPI, (S. India.)**

SEASON DEPOSITS ARE ACCEPTED
at 3½ per cent per annum

Further particulars on application to any of
our thirty-five Offices.

ನೆಗೆ ಮಹಾತ್ಮಾಗಾಂಧಿಯವರ ಅಭಿಪ್ರಾಯವನ್ನು ಪಡೆಯಬೇಕಾಗಿರುವ ಕಾರಣ ಈ ವರೆಗೂ ಕಮಿಟಿಯನ್ನು ನೇಮಿಸಲು ನಾನು ಸಮರ್ಥನಾಗಿಲ್ಲ"

ಮೆಂಬರರ ದೊಡ್ಡ ತಂಡವೊಂದು ಪಂತರ ಠರಾವಿಗನುಕೂಲವಿರುವಾಗ, ಸರಿಯಾದ ಘಟನಾತ್ಮಕ ಕಾರಣಗಳಿದ್ದರೂ ಕೂಡ ಅವನ್ನು ಕ್ರಮಬಾಹಿರವೆಂದು ತೀರ್ಮಾನಿಸಲಾರದವನ್ನು ನಾನು ಪ್ರಜಾಪ್ರಭುತ್ವವಾದೀ ಸ್ವಭಾವವನ್ನಿದ್ದೇನೆ. ಇಂತಹ ಸಂದರ್ಭಗಳಲ್ಲಿ, ಅದರ ಸಲ್ಯ ಯಾ ವಿರುದ್ಧ ಮತವಿತ್ತು ತೀರ್ಮಾನಿಸುವ ಹೊಣೆಗಾರಿಕೆಯನ್ನು ಸಭೆಗೇನೇ ಬಿಡುವದು ನನ್ನ ರೀತಿಯಾಗಿದೆ ನಾನು ಪತ್ರದಲ್ಲಿ ಕೊರತೆಯಿದ್ದರೂ ಅವನ್ನು ತಿರಸ್ಕರಿಸದೆ ಉಮೇದ್ವಾರಿಯನ್ನು ಚುನಾಯಿಸುವ ಯಾ, ಚುನಾಯಿಸದಿರುವ ಹೊಣೆಯನ್ನು ಮತದಾರರಿಗೆ ಬಿಟ್ಟುಕೊಡುವ ರಿಟರ್ನಿಂಗ್ ಆಫೀಸರನಂತೆ ವರ್ತಿಸಿದೆ.

ನನ್ನ ಸ್ವಂತ ಅಭಿಪ್ರಾಯವೇನೇ ಇರಲಿ, ಪಂಡಿತ ಪಂತರ ಠರಾವಿನನ್ವಯ ವರ್ತಿಸಲು ನಾನು ಬದ್ಧನಾಗಿಲ್ಲವೆಂದು ಅಖಿಲ ಭಾರತ ಕಾಂಗ್ರೆಸ್ ಮೆಂಬರರು ಮತ್ತು ಕಾಂಗ್ರೆಸ್ ಡೆಲಿಗೇಟರು ಆತುರಗೊಳ್ಳುವ ಅಗತ್ಯವೇನೂ ಇಲ್ಲ ಯಾವುದಾದರೊಂದು ಕಾರಣದಿಂದಾಗಿ ನಾನದನ್ನು ಅನುಸರಿಸಲಾರದೆ ಹೋದರೆ, ಘಟನೆಗನುಸಾರವಾಗಿ ನನ್ನ ಸ್ವಂತ ಹಾದಿಯನ್ನೇ ನಾನು ಹಿಡಿಯಲಿರುವೆನು. ಈ ಸಂದರ್ಭದಲ್ಲಿ ಆ ಠರಾವಿನ ಕುರಿತು ಮಹಾತ್ಮಾಜೀಯವರ ಅಭಿಪ್ರಾಯಗಳೇನಿರುವವೋ ಅವು ನನ್ನ ಭಾವೀ ಕರ್ತವ್ಯದಲ್ಲಿ ಬಹಳ ಸಹಕಾರಿಯಾಗಲಿವೆ ಯೆಂದು ಹೇಳಬೇಕಾಗಿದೆ.

ಬಂಗಾಳೀ ಕಾಂಗ್ರೆಸಿಗರಿಗೆ ಸುಭಾಷರ ಬುದ್ಧಿವಾದ

ಪ್ರಾಂತಿಕ ಪ್ರಶ್ನೆಯೇ ಇಲ್ಲ

"ಇದು ಕಾಂಗ್ರೆಸಿನೊಳಗಿದ್ದಿರುವ ತಿಕ್ಕಾಟವು ಅಖಿಲ ಭಾರತದ ಪ್ರಶ್ನೆಯಾಗಿದೆ. ಆದರಿಂದ ಪ್ರಾಂತಿಕ ಭಾವನೆಗಳನ್ನು ಈ ಸಂದರ್ಭದಲ್ಲಿ ಕೆರಳಿಸುವದು ಸಲ್ಲದು" ಎನ್ನುತ್ತಾ ಸುಭಾಸ್ ಭೋಸರು ಬಂಗಾಳದ ಕೆಲವರ ವರ್ತನೆಗಾಗಿ ವಿಷಾದ ಸೂಚಿಸಿರುವರು. "ಕೇಂದ್ರ ಎಸೆಂಬ್ಲಿ ಮೆಂಬರರ ಡೆಪ್ಯುಟೇಶನೊಂದು ಮಹಾತ್ಮಾ ಗಾಂಧಿಯವರೆಡೆಗೆ ಹೋದಾಗ ಕೆಲವು ಮೆಂಬರರು ಅದರಲ್ಲಿ ಭಾಗವಹಿಸಲಿಲ್ಲವೆಂದು ಪತ್ರಿಕೆಗಳಲ್ಲಿ ಓದಿದ ನನಗೆ ಆಶ್ಚರ್ಯವಾಯಿತು. ವರದಿಗಾರರ ಅಭಿಪ್ರಾಯದಂತೆ ಗೈರುಹಾಜರಾದ ಮೆಂಬರರಲ್ಲಿ ಕೆಲವರು ಬಂಗಾಳದವರು. ನಮ್ಮ ಎಮ್. ಎಲ್. ಎ. ಗಳ ಇಂತಹ ವರ್ತನೆಯ ಅರ್ಥವೇ ನನಗಾಗುವದಿಲ್ಲ. ನಾನದನ್ನು ದೊಡ್ಡ ಅನ್ಯಾಯವೆಂದು ಭಾವಿಸುತ್ತೇನೆ. ಮಹಾತ್ಮಾಗಾಂಧಿಯವರ ಮೇಲೆ ಈ ಮೆಂಬರರಿಗೆ ಯಾವುದಾದರೊಂದು ವಿಧದ ಅಸಂತೃಪ್ತಿಯಿದ್ದಲ್ಲಿಯೂ, ಇಂತಹ ಅಸಂಭಾವಿತತನವು ಕೇವಲ ನೀತಿಬಾಹಿರವಾದುದು.

ಈಗ ಈ ಎಸೆಂಬ್ಲಿ ಮೆಂಬರರಿಗೆ ಮಹಾತ್ಮಾ ಗಾಂಧಿಯವರ ಮೇಲೆ ಏನಂತಹ ವಿರೋಧವೆಂಬುದನ್ನೂ ನೋಡೋಣ. ತ್ರಿಪುರಿಯ ಘಟನೆಯಿಂದ ಇವರ ಮನಸ್ಸು ನೊಂದಿರುವದಾದರೆ, ಮಹಾತ್ಮರು ತ್ರಿಪುರಿಗೆ ಬಂದಿಲ್ಲವೆಂಬುದನ್ನು ಎಲ್ಲರೂ ತಿಳಿದಿರುವಾಗ ಆವಶ್ಯಕವಾಗಿ ಗಾಂಧಿಯವರ ಮೇಲೆ ಅತೃಪ್ತಿ ತಾಳುವದು ಈ ಮೆಂಬರರಿಗೆ ಯೋಗ್ಯವಾದುದಲ್ಲ. ಈ ಘಟನೆಯಿಂದಾಗಿ, ತ್ರಿಪುರಿಯ ವಿದ್ಯಮಾನಗಳಿಂದ ಕೆಲವರಲ್ಲುಂಟಾಗಿರುವ ಸಂಶಯ ಸ್ವಭಾವದ ಕುರಿತು ನನ್ನಲ್ಲೊಂದು ಪ್ರಶ್ನೆಯೆದ್ದಿದೆ. ಈ ಸಂದರ್ಭದಲ್ಲಿ ಪ್ರಾಂತಿಕ ಪ್ರಶ್ನೆಯನ್ನೆತ್ತಬಾರದೆಂದು ನಾನು ನನ್ನ ಮಿತ್ರರನ್ನು ಎಚ್ಚರಿಸುತ್ತೇನೆ ಕಾಂಗ್ರೆಸಿನೊಳಗಣ ತಿಕ್ಕಾಟವು ಅಖಿಲ ಭಾರತ ಪ್ರಶ್ನೆಯಾಗಿದೆ. ಅದು ಕೆಲವು ಧ್ಯೇಯ ಸಾಧನೆಗಳಿಂದ ಹುಟ್ಟಿತೇ ಹೊರತು ಪ್ರಾಂತಿಕ ಪ್ರವೃತ್ತಿಯಿಂದಲ್ಲ. ಕಳೆದ ಅಧ್ಯಕ್ಷ ಚುನಾವಣೆಯಲ್ಲಿ ನಾವು ಇತರ ಪ್ರಾಂತ್ಯಗಳಿಂದ ಗಣನೀಯ ಬೆಂಬಲವನ್ನು ಪಡೆದಿದ್ದೆವೆಂಬುದನ್ನೂ, ಅವರ ಬೆಂಬಲವಿಲ್ಲದೆ ನಾವದರಲ್ಲಿ ಜಯಿಸುತ್ತಿರಲಿಲ್ಲವೆಂಬುದನ್ನೂ ನಮ್ಮ ಮಿತ್ರರು ಮರೆಯದಿರಲಿ. ಅಮೇಲೆ ತ್ರಿಪುರಿಯಲ್ಲಿ ಕೂಡ, ಕೆಲವು ಮಿತ್ರರು ನ್ಯೂನತೆ ಅಥವಾ ತಟಸ್ಥ ಭಾವವನ್ನು ತೋರಿಸಿದರೂ, ನಮ್ಮ ಬೆಂಬಲಿಗರ ತಂಡವು ಭದ್ರವಾಗಿ ಮತವಿತ್ತಿದೆ. ಈ ಎಲ್ಲಾ ಸಂಗತಿಗಳು ನಾವು ಪರಿಸ್ಥಿತಿಯನ್ನು ಯಥಾರ್ಥತೆಯಿಂದ ಕಾಣಲು ಸಹಾಯಕಾರಿಗಳಾಗಿವೆ. ನನ್ನೊಡನೆ ಸಹಕರಿಸಿ ಹಿಂದೆ ಮತವಿತ್ತವರೆಲ್ಲಾ ಮುಂದಕ್ಕೂ ಹಾಗೆಯೇ ಮಾಡುವರೆಂದೂ, ದಿನ ಹೋದಂತೆ ನಮ್ಮ ಸಂಖ್ಯೆಯು ಬೆಳೆಯುತ್ತಾ ಬರುವದೆಂದೂ ನಾನು ನಿಸ್ಸಂದೇಹವಾಗಿ ನಂಬಿದ್ದೇನೆ.

ದನವು ಹುಡುಗಿಯ ಪ್ರಾಣ ಉಳಿಸಿತು

ತೆಹ್ರಿಗಾರ್ವಾಲ್ ಸಂಸ್ಥಾನದ ಹಳ್ಳಿಯೊಂದರಲ್ಲಿ ದನವು ಹುಡುಗಿಯನ್ನು ಕಾಪಾಡಿದ ಸ್ವಾರಸ್ಯದ ಕತೆಯೊಂದು ಕೇಳಬರುತ್ತಿದೆ. ಸುಮಾರು 15 ಮಂದಿ ದರೋಡೆಗಾರರು ಮುಸುಕು ಹಾಕಿಕೊಂಡು ಆಯುಧಧಾರಿಗಳಾಗಿ ರಾತ್ರಿಹೊತ್ತಿನಲ್ಲಿ ಹಳ್ಳಿಯ ಮನೆಯೊಂದನ್ನು ಬಾಗಿಲೊಡೆದು ನುಗ್ಗಿ ಮನೆ ಹುಡುಗಿಯನ್ನಪಹರಿಸಲು ಹುಡುಕಾಡಿದರು. ಮನೆ ಹಟ್ಟಿಕೊಟ್ಟಿಗೆ ದುಳ್ಗೆಲ್ಲಾ, ಮೂಲೆಮೂಲೆ ಬೆಳಕು ಹಾಯಿಸಿ ಹುಡುಕಿದರೂ ಹುಡುಗಿಯ ಪತ್ತೆಯಿಲ್ಲ. ತಂದೆತಾಯಿಗಳನ್ನು ಗದರಿಸಿ ನೋಡಿ ಭಗ್ನಮನೋರಥರಾಗಿ ಬಂದ ಹಾಗೆ ಹಿಂಪಹೋದರು.

ದರೋಡೆಗಾರರ ಆಗಮನವನ್ನು ಕಂಡೊಡನೆ ಭೀತಿಗೊಂಡ ಹುಡುಗಿಯು ದನಗಳ ಹಟ್ಟಿಗೆ ಹೋಗಿ ಒಂದು ದನದ ಹಿಂಬದಿಯಲ್ಲಿ ಅಡಗಿ ಕುಳಿತುಕೊಂಡಿತು. ದರೋಡೆಯವರು ಮನೆಯೆಲ್ಲಾ ಹುಡುಕುತ್ತಾ ಹಟ್ಟಿಗೆ ಬಂದಾಗ ಎಲ್ಲ ದನಗಳೆಲ್ಲಾ ಬೆದರಿ ಎದ್ದು ನಿಂತವು. ಹುಡುಗಿ ಮರೆ ಹೊಕ್ಕಿದ್ದ ದನವೊಂದು ಮಾತ್ರ ಏಳದೆ ಹುಡುಗಿಗೆ ಮರೆಯಾಗಿಯೇ ಇದ್ದುದರಿಂದ ದರೋಡೆಗಾರರು ಯಾವ ಚಿಹ್ನೆಯನ್ನೂ ಕಾಣದೆ ಹಿಂದಿರುಗಿದರು.

ಹುಡುಗನೊಬ್ಬನ ಅದ್ಭುತ ಜ್ಞಾಪಕ ಶಕ್ತಿ

ರಂಗಪುರದ ಸಮೀಪದಲ್ಲಿ ಪೀರಪ್ಸಾರಿ ಎಂಬ ಒಂದು ಹಳ್ಳಿ, ಆ ಹಳ್ಳಿಯ ಮುಸ್ಲೀಮು ಮಹನೀಯರೊಬ್ಬರು ಒಬ್ಬ ಅನಾಥ ಹುಡುಗನನ್ನು ತಂದು ಸಾಕುತ್ತಿದ್ದರು. ಹುಡುಗನಿಗೆ ಕೇವಲ 7 ವರ್ಷ ವಯಸ್ಸು. ಅಯ್ದುರ್ ರಹೀಮ್ ಎಂದು ಹೆಸರು. ಈ ಹುಡುಗನ ಜ್ಞಾಪಕಶಕ್ತಿಯನ್ನು ಕಂಡವರೆಲ್ಲಾ ಬೆರಗಾಗಿ ಹೋಗಿದ್ದಾರೆ ಅವನು ಒಂದೇ ದಿನದಲ್ಲಿ ಬಂಗಾಳೀ ಪ್ರಥಮ ಪುಸ್ತಕವನ್ನು ಬಾಯಿಪಾಠ ಮಾಡಿಕೊಂಡಿದ್ದನಂತೆ ಮತ್ತು ಬಿ. ಎ. ತರಗತಿಯ ಇಂಗ್ಲಿಷು ಮತ್ತು ಇತರ ಪಠ್ಯಪುಸ್ತಕಗಳನ್ನು ಓದಬಲ್ಲನು. ಒಮ್ಮೆ ಓದಿದನೆಂದರಾಯಿತು, ಆ ಪುಸ್ತಕದ ಯಾವದೇ ಪುಟವನ್ನು ಯಾವ ಕಾಲದಲ್ಲಾದರೂ ಜ್ಞಾಪಕ ಬಲದಿಂದ ಬಾಯಿಪಾಠ ಹೇಳಬಲ್ಲನು.

ಗಡಿನಾಡು ಎಸೆಂಬ್ಲಿಯಲ್ಲಿ 'ವಾಕ್ ಔಟು'

ವಾಯವ್ಯ ಗಡಿನಾಡಿನ ಎಸೆಂಬ್ಲಿಯ ಬಜೆಟ್ ಅಧಿವೇಶನದಲ್ಲಿ ಪ್ರಾಂತಿಕ ಪೆಟ್ರೋಲ್ ಟೇಕ್ಸ್ ಬಿಲ್ಲಿನ ಮೇಲೆ ಮುಸ್ಲಿಂ ಲೀಗಿನ ಕಡೆಯ ಮೆಂಬರರೊಬ್ಬರು ಉಪಸೂಚನೆಯೊಂದನ್ನು ತಂದರು. ಅದು ಬಿದ್ದುಹೋದುದರಿಂದ ಹನ್ನೆರಡು ಮಂದಿ ಮೆಂಬರರು ಹೊರನಡೆದರು.

ವರದಕ್ಷಿಣೆಗೆ ಕಾನೂನು

ಸಿಂಧ ಪ್ರಾಂತಿಕ ಎಸೆಂಬ್ಲಿಯಲ್ಲಿ ಡಾ|| ವಾಧ್ವಾನಿಯವರು ವರದಕ್ಷಿಣಾ ವಿರೋಧ ಮಸೂದೆಯನ್ನು ತಂದಿದ್ದರು. ಆ ಮಸೂದೆಯೊಂದು ಸಿಲೆಕ್ಟ್ ಕಮಿಟಿಗೊಪ್ಪಿಸಲ್ಪಟ್ಟಿತ್ತು. ಕಮಿಟಿಯವರು ವಿಚಾರಿಸಿ ಹುಡುಗಿಯ ಕಡೆಯಿಂದ ಕೊಡುವ ಬಹುಮಾನಗಳು ಹಣಕೂಡಿ ರೂ ೫೦೦ ಕ್ಕೆ ಮಿಕ್ಕಬಾರದೆಂದು ಕಾನೂನಾಗಬೇಕೆಂದು ಒಮ್ಮತದಿಂದ ಶಿಫಾರಸುಮಾಡಿರುವರು.

ಬರೋಡಾ ಸರಕಾರದ ನ್ಯಾಯಬುದ್ಧಿ

ಸರದಾರ್ ಪಟೇಲರು ಬರೋಡಕ್ಕೆ ಹೋಗಿದ್ದಾಗ ಅಲ್ಲಿ ಜನರು ಗೊಂದಲವೆಬ್ಬಿಸಿದ್ದರು. ಆ ಕುರಿತು ವಿಚಾರಣೆ ನಡೆಸಲು ಬರೋಡಾ ಸರಕಾರದವರು ಬೊಂಬಾಯಿ ಹೈಕೋರ್ಟಿನ ಮಾಜಿ ಜಡ್ಜರಾದ ಸರ್. ಗೋವಿಂದ ಮಡಗಾಂವಕರರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿರುವರು.

ಬೊಂಬಾಯಿಯಲ್ಲಿ ಪಾನನಿರೋಧ ಪಂಚಿಕೆ

ಬರುವ ವರ್ಷ ಇಡೀ ಬೊಂಬಾಯಿ ಪ್ರಾಂತ್ಯದಲ್ಲಿ ಪಾನನಿರೋಧ ಕಾನೂನನ್ನು ಜಾರಿಗೆ ತರುವ ಆಲೋಚನೆಯಲ್ಲಿ ಪ್ರಾಂತಿಕ ಸರಕಾರವಿದೆ. ಅದಕ್ಕಾಗಿ ಪೋಲೀಸು ಮತ್ತು ಅಬ್ಕಾರಿ ಇಲಾಖೆಗಳನ್ನು ಒಂದುಗೂಡಿಸುವುದರಲ್ಲಿದ್ದಾರೆ. ಎರಡೂ ಇಲಾಖೆಗಳ ಆಫೀಸರರ ಸಭೆಯೊಂದು ಮಾನ್ಯ ಕೆ. ಎಮ್. ಮುನ್ಶಿಯವರ ಅಧ್ಯಕ್ಷತೆಯಲ್ಲಿ ನೆರೆದು ಆ ಕುರಿತು ಆಲೋಚಿಸಿತು.

THE BOMBAY LIFE ASSURANCE CO., LTD.,

ತಿಂಗಳಿಗೆ ನೀವೆಷ್ಟು ಸಂಪಾದಿಸುತ್ತೀರೆಂಬುದು ದೊಡ್ಡ ವಿಷಯವಲ್ಲ. ಎಷ್ಟು ಉಳಿಸುತ್ತೀರೆಂಬುದೇ ಪ್ರಾಮುಖ್ಯ ಪ್ರಶ್ನೆ. ಏಕೆಂದರೆ ನಿಮ್ಮ ಸಂಪಾದನೆಯು ಕಡಿಮೆಯಾದಾಗ ಅಥವಾ ನಿಂತುಹೋದಾಗ ನಿಮ್ಮ ಮತ್ತು ನಿಮ್ಮ ಸಂಸಾರದ ಕನಿಷ್ಠ ಸುಖ ಸೌಕರ್ಯಗಳು ಯಥಾಪ್ರಕಾರ ಒದಗಿಸಿಕೊಡಬಲ್ಲುದು ಆ ಉಳಿತಾಯವೇ.

ಅಂತಹ ನಿಮ್ಮ ಉಳಿತಾಯವು ಬೆಳೆದು ಬಲವಾದ ಭಂಡವಾಳವಾಗಿ ಬರುವಂತೆ ನಿಕ್ಷೇಪಿಸಲಿಕ್ಕೆ ಅತ್ಯುತ್ತಮ ಸ್ಥಾನವೆಂದರೆ

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಏಕೆಂದರೆ ಅದು ಉತ್ಕೃಷ್ಟ ಭದ್ರತೆಯುಳ್ಳ ಉಪಯುಕ್ತ ಸಂಸ್ಥೆ.

ಪ್ರಾಮಾಣಿಕತೆ, ಉತ್ಸಾಹ ಪ್ರತಿಷ್ಠೆಗಳುಳ್ಳವರಿಗೆ ಸಮಾಜ ಸೇವೆ ಮಾಡಲಿಕ್ಕೂ ಯೋಗ್ಯವಾದ ನಿಶ್ಚಿತ ಪ್ರತಿಫಲವನ್ನು ಹೊಂದಲಿಕ್ಕೂ ಒಳ್ಳೆಯ ಅವಕಾಶವಿದೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,

ಮದ್ರಾಸ್ ಬ್ರಾಂಚ್ ಸೆಕ್ರೆಟರಿಗಳು.

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ದಿ ಬೊಂಬಾಯಿ ಲೈಫ್ ಬಿಲ್ಡಿಂಗ್ಸ್, ಗಾಂಧೀನಗರ, ಉಡುಪಿ.

ಎಂಬ ಮೇಲಿನ ವಿಳಾಸಕ್ಕಾಗಲೀ ಕೆಳಗೆ ಕಾಣಿಸಿದ ನಮ್ಮ ಇತರ ಯಾವ ಕಾರ್ಯಾಲಯಕ್ಕಾಗಲೀ ಅರ್ಜಿ ಬರೆದುಕೊಳ್ಳಿ.

ಪೋಸ್ಟ್ ಬಾಕ್ಸ್ ನಂ. 337 ಮೌಂಟ್ ರೋಡ್, ಮದರಾಸು.	ವಿಶ್ವೇಶ್ವರಪುರ ಸರ್ಕಲ್ ಬೆಂಗಳೂರು ಸಿಟಿ.	ಕಾರ್ ಸ್ಟ್ರೀಟ್ ಮಂಗಳೂರು.	ಪುತಿಯಾರ ಕಲ್ಲಿಕೋಟೆ.
ಸೆಂಟ್ರಲ್ ಸ್ಟೇಶನ್ ರೋಡ್, ಟ್ರಿವೇಂಡ್ರಮ್.	ಚಾರ್ನಿರೋಡ್ ಗಿರ್ಗಾಮ್, ಬೊಂಬಾಯಿ ನಂ. 4.	ಒಟ್ಟಪಾಲಮ್ ದ. ಮಲಬಾರ್.	

ನವಯುಗದ ವಿಚಾರ ಸಂಕ್ರಾಂತಿ

ಧಾರ್ಮಿಕ ಜಡಮನೋವೃತ್ತಿ ಮತ್ತು ಅದನ್ನವಲಂಬಿಸಿಕೊಂಡ ಅಂಧಸಂಪ್ರದಾಯಗಳ ಮೂಢದಾಸ್ಯವೇ ನಮ್ಮ ಇಂದಿನ ದುರ್ಗತಿಗೆ ಕಾರಣ.

●

(ಲೇಖಕ:—ಭೋಜರಾಜ ಹೆಗ್ಡೆ, ಕಡಂಬಾರು.)

●

ಹೊಸಕಾಲದ ಹೊಂಬೆಳಗು ಹರಿದು ನವೀನ ವಿಚಾರೋದಯದ ಸುಪ್ರಭಾತವನುವಾಗಿರುವಾಗ ಮಾನವನು ಜಾಗ್ರತಗೊಂಡು ಹಳೆಯ ಪದ್ಧತಿಗಳ ಅಂಧಶ್ರದ್ಧೆಯ ಕಂಬಳಿಯ ಮುಸುಕನ್ನು ಕಳಚಿ ಮೇಲೆದ್ದು, ಹಿಂದಿನ ಆಚಾರವಿಚಾರಗಳ ಸಂಕುಚಿತ ಆವರಣದಿಂದ ಹೊರಬಂದು ನವಯುಗದ ವಿಶಾಲ ಬಯಲಿನ ಬೆಳ್ದಿಂಗಳಲ್ಲಿ ವಿಹರಿಸುವುದು ಕಾಲೋಚಿತ ಧರ್ಮವಾಗಿದೆಯಷ್ಟೆ! ಕಾಲಧರ್ಮವನ್ನುಳಿದು ಬೇರೆ ಧರ್ಮವಿಲ್ಲ! ಅಂತೆಯೇ ಇಂದು ನಮ್ಮ ಧಾರ್ಮಿಕ ಸಾಮಾಜಿಕ ಸ್ಥಿತಿಗತಿಗಳಲ್ಲಿ ಕೂಡ ಕಾಲಮಹಿಮೆಯಿಂದಲೂ ಇತರ ಜನಾಂಗಗಳ ಸಂಯೋಗ ಸಂಸರ್ಗದಿಂದಲೂ ಅಪೂರ್ವ ಬದಲಾವಣೆಗಳುಂಟಾಗುತ್ತಿವೆ; ಹಿಂದಿನ ಸಂಕುಚಿತ ಮನೋಭಾವನೆಗಳು ಮಾಯವಾಗಿ ವಿಶ್ವಾನುರಾಗದ ವ್ಯಾಪಕ ಭಾವನೆಯಲ್ಲಿ ಲೀನವಾಗುತ್ತಿವೆ. "ವಸುಧೈವ ಕುಟುಂಬಕಂ" ಎಂಬುದೇ ಇಂದು ಕಾಲದೇವಿಯ ಕರೆಯಾಗಿ, ಮಾನವಹೃದಯಗಳನ್ನೆಲ್ಲಾ ಒಂದುಗೂಡಿಸಿ ವಿಶ್ವೈಕಬಂಧುತ್ವದ ಸ್ವರ್ಣಸೂತ್ರದಲ್ಲಿ ಬಂಧಿಸುವ ಧರ್ಮವೊಂದರ ಉದಾತ್ತ ಆದರ್ಶವು ಜನತೆಯ ಹೃದಯದಲ್ಲಿ ರೂಪಿತವಾಗುತ್ತಿದೆ. ಧರ್ಮವೆಂಬುದು ನಿಜಪ್ರಪಂಚದಿಂದ ವಿಮುಖವಾಗಿರುವ ಬರಿಯ ಆದರ್ಶಮಾತ್ರವಲ್ಲ; ಅದು ಕಾಲಾನುವರ್ತಿಯಾಗಿ ಬೆಳಗಿ ಬಾಳಿ ನಮ್ಮ ವ್ಯಾವಹಾರಿಕ ಜೀವನದ ಅನುದಿನದ ಸಮಸ್ಯೆಗಳನ್ನು ಸಮರ್ಪಕವಾಗಿ ಬಿಡಿಸಿ ಕೊನೆಗಾಣಿಸಲು ಸಮರ್ಥವೂ ಸಹಕಾರಿಯೂ ಆಗಬೇಕಲ್ಲದೆ ಜೀವನದ ಹೊಸ ಹೊಸ ಸ್ಥಿತಿಗತಿಗಳೊಡನೆ ತನ್ನ ಆದರ್ಶಗಳನ್ನೂ ಹೊಂದಿಸಿಕೊಂಡು ಹೊಸ ಹೊಸ ಭಾವಗಳಲ್ಲಿ ವಿಕಾಸಗೊಳ್ಳಬೇಕು. ಹಾಗಾದರೆ ತಾನೇ ಅದು ಅಳಿಯದೆ ಉಳಿದು ನಿತ್ಯನೂತನವಾಗಿ ಪ್ರಕಾಶಿಸುವುದು!

ಮಾನವೇತಿಹಾಸದಲ್ಲಿ ಹೊಸ ಪ್ರಕರಣವೊಂದಕ್ಕಾರಂಭವಾಗಿದೆ! ಹಳೆಯ ಮನ್ವಂತರವು ಎಂದೋ ಸಂದುಹೋಗಿ ಇಂದೀಗ ಬಂದೊದಗಿರುವುದೇ ವಿಜ್ಞಾನ—ವಿಚಾರಗಳ ಪ್ರಚಾರ ಪ್ರಾಬಲ್ಯದ ನವಯುಗವು! ಭೌತಿಕ ವಿಜ್ಞಾನಶಾಸ್ತ್ರದ ನೂತನಾವಿಷ್ಕರಣಗಳಿಂದಾಗಿ ಪ್ರಪಂಚವು ದಿನೇ ದಿನೇ ಮುಂದಡಿಯಿಡುತ್ತಿದೆ; ಯಂತ್ರೋಪಕರಣಗಳ ಸೌಕರ್ಯದಿಂದ ಪ್ರಪಂಚದ ಉದ್ದಗಲವು ಕಡಿಮೆಯಾಗಿ ದೇಶದೇಶಗಳಲ್ಲಿರುವ ಭಿನ್ನತೆ ಅಂತರಗಳು ಮಾಯವಾಗಿ ಜಗತ್ತಿನ ಸಕಲ ಭಾಗಗಳೂ ನೆರೆಹೊರೆಗಳಂತೆ ಪರಸ್ಪರ ಸಾಮೀಪ್ಯವನ್ನೇ ಹೊಂದುತ್ತಿವೆ. ಇಂದಿನ ವೈಜ್ಞಾನಿಕ ಪರೀಕ್ಷಣ ಪರಿಶೋಧನೆಗಳ ಸರ್ಚ್‌ಲೈಟನ್ನು ಹಾಕಿ ಕಾರ್ಯಪ್ರಪಂಚದಲ್ಲಿ ಸ್ಥೂಲಮಾನದಿಂದ ಅಭಿವ್ಯಕ್ತವಾಗುತ್ತಿರುವ ಸಕಲ ವಸ್ತು ವ್ಯಾಪಾರಗಳ ಮೂಲಕಾರಣಗಳನ್ನು ಮಾನವನು ಕಂಡುಹಿಡಿದಿದ್ದಾನೆ, ಯುಗಯುಗಗಳಿಂದ ಕತ್ತಲೆಯ ಆಳದಲ್ಲಿ ಕಟ್ಟುಬಿದ್ದಿರುವ ಗುಟ್ಟುಗಳಿಂದು ಬಟ್ಟಬಯಲಾಗುತ್ತಿವೆ. ಪ್ರಕೃತಿಯ ಕಡೆಗಿರುವ ನಮ್ಮ ಅಜ್ಞಾನದ ತೆರೆಪರೆಯನ್ನು ಹರಿಯಲು ವಿಜ್ಞಾನವು ಅಂಜನವನ್ನೇ ಹಾಕಿ ವಿಚಾರದೃಷ್ಟಿಯನ್ನು ವಿಶಾಲವಾಗಿ ತೆರೆಯಿಸಿದೆ; ಅದರ ವಿಷಯವಾಗಿ ನಮ್ಮಲ್ಲಿ ಬಲವಾಗಿ ನೆಲೆಗೊಂಡಿರುವ ತಪ್ಪು ತಿಳುವಳಿಕೆಗಳನ್ನೂ ಭ್ರಾಮಕ ಭಾವನೆಗಳನ್ನೂ ಅಳಿಸಿ ಹೊಸ ಬೆಳಕನ್ನು ಬೀರಿದೆ! ಇದರಿಂದಾಗಿ ನಮ್ಮಲ್ಲಿ ಬೇರೂರಿಕೊಂಡಿರುವ ಹಿಂದಿನ ಮೂಢ ನಂಬಿಕೆಗಳೆಲ್ಲಾ ಮಾಯವಾಗಿ ವಿಚಾರದಿಗಂತವು ವಿಸ್ತೃತಗೊಳ್ಳುತ್ತಿದೆ. ಸ್ವಾಭಾವಿಕವಾಗಿ ಮಾನವನ ಜೀವನದುಸಿರಾಗಿರುವ ಸ್ವಾತಂತ್ರ್ಯಾಪೇಕ್ಷೆಯು ಈ ನವೀನ ವಿಚಾರೋದಯದಿಂದ ಇನ್ನಷ್ಟು ಕೆರಳಿ ಆತನ ಆಚಾರವಿಚಾರಗಳಲ್ಲದು ಒಡಮೂಡುತ್ತಿರುವಾಗ ಹಿಂದಿನಿಂದಲೂ ಪರಂಪರೆಯಾಗಿ ಬಂದಿರುವ ಹಳೆಯ ನಿರ್ಬಂಧಗಳ ಬಿಗಿಕಟ್ಟುಗಳು ಸಡಲಿ ಪುರಾತನ ಮತಧರ್ಮಾಚಾರಗಳ ಆಕಾಶಗೋಪುರವು ಕುಸಿದು ಬೀಳಹತ್ತಿದೆ. ಒಟ್ಟಿನಲ್ಲಿ ಧಾರ್ಮಿಕ, ಸಾಮಾಜಿಕ, ನೈತಿಕವೇ ಮೊದಲಾದ ಪ್ರಪಂಚದ ಪ್ರತಿಯೊಂದು ವ್ಯವಹಾರ ಭೂಮಿಕೆಗಳಲ್ಲಿಯೂ ಅಭೂತಪೂರ್ವವಾದುದೊಂದು ಕ್ರಾಂತಿಯು ತಲೆದೋರಿ ವಿಚಿತ್ರ ಮಾರ್ಪಾಟುಗಳನ್ನು ತಂದೊಡ್ಡುತ್ತಿದೆ. ಅಂದಮೇಲೆ ವೈದ್ಯುತಿಕ ವೇಗದಿಂದ ಮುಂದೆ ಮುಂದೆ ಧಾವಿಸುತ್ತಿರುವ ಈ ಕಾಲಗತಿಯನ್ನರಿತು ಅದರೊಡನೆ ಹೆಜ್ಜೆಯಿಟ್ಟು ನಡೆದರೇನೇ ಮಾನವ ಸಮಾಜದ ಪ್ರಗತಿಯಿದೆ. ಏಕೆಂದರೆ,—ಇಂದಿನ ನಾವು ಹಿಂದಿನವರಲ್ಲ; ನಿನ್ನೆಯ ಪರಿಸ್ಥಿತಿಯು ಇಂದಿಗಿರಲಾರದು; ಇಂದಿನ ವಾತಾವರಣವು ನಾಳೆಗುಳಿಯಲಾರದು. ಪ್ರಪಂಚವು ದಿನದಿನವೆಂಬಂತೆ ನವೀಕರಣವನ್ನು ಹೊಂದುತ್ತಿರುವಂತೆಯೇ ನಾವೂ ಅದರೊಡನೆ ಹೊಸಬರಾಗುತ್ತಿದ್ದೇವೆ. ಹಾಗಾಗದೆ ಗತ್ಯಂತರವಿಲ್ಲ. ಇಂದು ಹಿಂದುಳಿದವರು ಮುಂದೆಯೂ ಹಿಂದುಳಿಯಲೇಬೇಕಾದೀತು! ಕಾಲಪುರುಷನಿಗೆ ಕರುಣೆಯೆಂಬುದಿಲ್ಲ; ದೇಶಜನಾಂಗಗಳ ಭೇದಾಭೇದ ದೃಷ್ಟಿಯಿಲ್ಲ, ತನ್ನ ಹಾದಿಗೆ ಅಡ್ಡಬಂದುದೆಲ್ಲವನ್ನೂ ಒಸ್ದು ತುಳಿದು ಮುನ್ನುಗ್ಗುವುದೇ ಕಾಲದ ಸ್ವಭಾವವು. ಹೀಗೆ ಸ್ವಯಂ ಪರಿವರ್ತನಶೀಲವಾದ ಪ್ರಕೃತಿಯು ಕಾಲಗತಿಯೊಡನೆ ಶೀಘ್ರ ವ್ಯತ್ಯಾಸಗಳನ್ನು ಹೊಂದುತ್ತಿರುವಾಗ ಪರಿವರ್ತಿತ ಪರಿಸ್ಥಿತಿಯೊಂದಿಗೆ ನಮ್ಮ ಜೀವನವನ್ನೂ ಸಮಾಯೋಗಗೊಳಿಸಿ (to adapt ourselves) ಮುಂದಿನ ಅಭಿವೃದ್ಧಿ ವಿಕಾಸಗಳನ್ನು ಸಾಧಿಸಿಕೊಳ್ಳುವುದೇ ಮಾನವನ ಬುದ್ಧಿವಿವೇಕಗಳ ಲಕ್ಷಣವಲ್ಲವೆ? ಸೃಷ್ಟಿನಿಯಮವಾದ ಪ್ರಗತಿಯು ಪ್ರತಿರೋಧದಿಂದ ಪರಿಣಾಮವು ಹಿತಕಾರಿಯಾಗಲಾರದು. ಮಂದಗತಿಯಿಂದ ಹರಿಯುವ ಹೊನಲಿಗೆ ಕೆಲವೊಂದು ವೇಳೆ ಕಟ್ಟುತಡೆಗಳನ್ನು ಹಾಕಿ ನಿಲ್ಲಿಸಬಹುದು; ಆದರೆ ಗಿರಿಶಿಖರದಲ್ಲಿ ಹುಟ್ಟಿಬಂದು ಪ್ರಪಾತ ಪ್ರಪಾತಗಳಲ್ಲಿ ಧುಮ್ಮಿಕ್ಕಿ ಉನ್ಮತ್ತ ರಭಸದಿಂದ ಭೋರ್ಗರೆದು ಹರಿಯುವ ಮಹಾಪ್ರವಾಹದ ಸ್ವಚ್ಛಂದ ಗತಿಯನ್ನು ನಿರೋಧಿಸಲು ಎಂತಹ ಮಹತ್ವದ ತಡೆಗಟ್ಟುಗಳಿಂದಾದರೂ ಸಾಧ್ಯವಿದೆಯೇ? ಅದೊಂದು ನಿರ್ದಿಷ್ಟ ಗುರಿಯನ್ನು ತಲುಪುವನಕ ಮುಂದುಮುಂದಕ್ಕೆ ಹರಿಯುವುದೇ ಅದರ ನಿಯಮವಾದುದರಿಂದ ಆ ಸಹಜ ಪ್ರವೃತ್ತಿಗೆ ಅಡ್ಡಬಾರದೆ ಒಂದು ದಾರಿಯನ್ನು ಬಿಟ್ಟುಕೊಡುವುದೇ ಶ್ರೇಯಸ್ಕರವು. ಅಂತೆಯೇ ಇಂದು ಪ್ರಪಂಚದ ನಾಲ್ಕು ದಿಕ್ಕುಗಳಿಂದಲೂ ಭರದಿಂದ ಮುನ್ನುಗ್ಗುತ್ತಿರುವ ನೂತನ ವಿಚಾರವಾಹಿನಿಯು ಪ್ರಾಚೀನ ಕಟ್ಟುಕಟ್ಟಳೆ, ನಿಯಮ ನಿರ್ಬಂಧಗಳ ತಡೆಯೊಡೆದು ಹಳೆಯ ಕೊಳೆ ಹೊಲಸುಗಳನ್ನೆಲ್ಲಾ ಕೊಚ್ಚಿ, ಕಳೆಯನ್ನು ಕಿತ್ತು (Weeding) ಸಮಾಜದ ನವರಚನೆಯ ಹೊಸ ಬೆಳೆಗೆ ಕ್ಷೇತ್ರವನ್ನು ಹಸನುಗೊಳಿಸುತ್ತಲಿದೆ.

ಹಿಂದೂಸಮಾಜವು ಎತ್ತ ಸಾಗಿದೆ?

ಹೀಗೆ ಸಕಲ ಜಗತ್ತಿನಲ್ಲಿಯೇ ಹಳೆಯ ಪದ್ಧತಿ ರೂಢಿಗಳ ಮೇಲೆ ಎದ್ದಿರುವ ಈ ಸರ್ವಸಾಮಾನ್ಯ ಪ್ರತಿಕ್ರಿಯೆಯು (General reaction) ನಮ್ಮ ಹಿಂದೂ ಸಮಾಜದ ಮೇಲೆ ಯಾವ ಪರಿಣಾಮವನ್ನಾದರೂ ಉಂಟುಮಾಡಿದೆಯೇ? ಈ ವಿಚಾರದ ಗಾಳಿಯು ನಮ್ಮನ್ನಿನ್ನೂ ತಟ್ಟದೆ ರೂ ಸೋಂಕಿದೆಯೇ? ಅಥವಾ ನಮ್ಮ ಹಿಂದಿನ ಧರ್ಮದೇವರುಗಳೆಂದು, ಹಳೆಯ ಮತಾಚಾರಗಳೆಂದು, ಸಂಪ್ರದಾಯ ರೂಢಿಗಳೆಂದು, ಪುರಾಣ ಶಾಸ್ತ್ರಗಳೆಂದು, ಆ ಹಳೆಯ ಪಲ್ಲವಿಯ ಒಡಕು ಸ್ವರವನ್ನೇ ಹುಟ್ಟಿಸುತ್ತ ಅಚೇತನಾವಸ್ಥೆಯಲ್ಲಿಯೇ ಬಿದ್ದುಕೊಂಡು ಹೊರಳಿ ನರಳುತ್ತಿರುವೆವೇ? ನಮ್ಮನ್ನು ಹಿಡಿದಿರುವ ಆ ಭೂತಕಾಲದ ಭೂತವನ್ನುಚ್ಚಾಟಿಸಿ, ರೂಢಿಯ ಜಾಡ್ಯವನ್ನು ಝಾಡಿಸಿರುವೆವೇ? ಅಥವಾ ಇತರ ಜನಾಂಗಗಳಂತೆ ಉದ್ಯೋಗದ ಛಲಬದ್ಧ ಸಾಹಸದಿಂದ ಎದ್ದು ಕೂತು ತಲೆಯೆತ್ತುವ ಪ್ರಯತ್ನವನ್ನು ಮಾಡದೆ, ಬಿದ್ದವರು ಬಿದ್ದಲ್ಲಿಯೇ ಸದ್ದಿಲ್ಲದೆ ನಿದ್ದೆಗೈಯುತ್ತಿರುವೆವೇ? ಈ ಪ್ರಶ್ನೆಗಳಿಗುತ್ತರವೇನು? ಇಲ್ಲವೆನ್ನಲಾಗುವುದಿಲ್ಲ—ಹೌದೆನ್ನಲೂ ಬರುವುದಿಲ್ಲ. ಹೌದು,—ನಮ್ಮ ಭಾರತ ವರ್ಷವೂ ಇಂದು ಮಹತ್ತರವಾದೊಂದು ಸ್ಥಿತ್ಯಂತರದ ಹೊಸ್ತಿಲಲ್ಲಿ ಪದಾರ್ಪಣ ಮಾಡಿರುವುದೇನೋ ನಿಜ. ಆದರೆ ಅದೊಂದು ತರದ ಭಯಮಿಶ್ರಿತವಾದ ಅನಿರ್ಧಾರತೆಯು ನಮ್ಮಲ್ಲಿ ಹೆಚ್ಚಿನವರನ್ನು ಇನ್ನೂ ಬಿಟ್ಟಿಲ್ಲ. ಇತ್ತ ಪೂರ್ವ ಪರಂಪರೆಯಿಂದ ಇಳಿದು ಬಂದು ನಮ್ಮ ಸಮಾಜಕ್ಕೆ ಬಲವಾಗಿ ಅಂಟಿಕೊಂಡಿರುವ ಪುರಾತನ ಮತ ಸಂಪ್ರದಾಯಗಳನ್ನೂ, ಪ್ರಾಚೀನ ಪದ್ಧತಿಗಳನ್ನೂ ಒಂದೇ ಸವನೆ ತೊರೆದುಬಿಡುವ ಮನೋದಾರ್ಢ್ಯತೆಯಿಲ್ಲ ಇದ್ದರೂ ಅದನ್ನು ಆಚರಣೆಯ ಕ್ಷೇತ್ರದಲ್ಲಿಳಿಸಿ ಅಂಥ ಸಮಾಜವನ್ನೆದುರಿಸುವ ನೈತಿಕ ಧೈರ್ಯವಿಲ್ಲ. ಅತ್ತ ಕಾಲದ ಪ್ರಬಲವಾದ ಒತ್ತಾಟವನ್ನು ಕಡೆಗಣಿಸುವುದೂ ಸಾಧ್ಯವಾಗಲಾರದು. ಆದುದರಿಂದ—ಗತಕಾಲಕ್ಕೇ ಕೈಮುಗಿಯುವುದೇ ಅಥವಾ ಬರುವ ಕಾಲಕ್ಕೆ ತಲೆಬಾಗಿಸುವುದೇ? ಪೂರ್ವಿಕರು ಎಳೆದಿಟ್ಟ ಗೆರೆಯಲ್ಲಿಯೇ ನಮ್ಮ ಕೈಕಾಲುಗಳನ್ನು ಮುಗ್ಗಿಸಿಕೊಂಡು ನಡೆಯುವುದೇ ಯಾ ಆತ್ಮಾವಲಂಬಿಗಳಾಗಿ ಸ್ವತಂತ್ರತೆಯ ಹಾದಿಯನ್ನು ತುಳಿಯುವುದೇ? ಉದ್ದವೇಕೆ?—ಅತ್ತ ನಮ್ಮಲ್ಲಿ ಆಳವಾಗಿ ಬೇರೂರಿಬಿಟ್ಟು ಬೆಳೆದಿರುವ ಹಳೆಯ ಧರ್ಮಾಚಾರಗಳೆಂಬ ವಿಶಾಲ ವೃಕ್ಷದ ನೆರಳ ಮರೆಯನ್ನು ಸೇರುವುದೇ, ಇತ್ತ ಅವುಗಳ ಬುಡಕ್ಕೇ ಕೊಡಲಿಯಿಟ್ಟು, ಭವಿಷತ್ಕಾಲದ ಭವ್ಯ ಸ್ವಪ್ನವನ್ನು ಕಂಡು ಸಮಾಜದ ನವನಿರ್ಮಾಣಕ್ಕೆ ಭದ್ರತಳಹದಿಯನ್ನೇ ಹಾಕಿಕೊಟ್ಟಿರುವ ಆಧುನಿಕ ಪ್ರಪಂಚದ ಆದರ್ಶಮೂರ್ತಿಗಳಾದ ಕಾರ್ಲ್‌ಮಾರ್ಕ್ಸ್ (Karl marx) ಮೊದಲಾದವರಿಗೆ ಮರೆಹೋಗುವುದೇ? ಎಂಬೀ ಪರಸ್ಪರ ವಿರೋಧ ವಿಚಾರಗಳ ದ್ವಂದ್ವ ಯುದ್ಧವು ನಮ್ಮಲ್ಲಿನ್ನೂ ಮುಗಿದಿಲ್ಲವೆನ್ನಬಹುದು. ಇವುಗಳಲ್ಲಿ ಯಾವುದು ಆದರ್ಶಪಥವೆಂಬುದನ್ನು ಕಾಲನೇ ನಿರ್ಣೈಸುವನು.

SAVING MONEY AND TIME

Thousands of prudent and thriving businessmen prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906
CANARA BANK
LIMITED

ಆದರೆ ನಮ್ಮ ನಂಬಿಕೆಗೆ ನಾವು ಯಾವುದಾದರೊಂದು ನಿಶ್ಚಿತ ಸಂಕಲ್ಪಕ್ಕೆ ಬರುವ ಮೊದಲು ಪುಣ್ಯ ಕಾಲವು ಮೀರಿಹೋಗಿ ಇತರ ಜನಾಂಗದವರು ನಮ್ಮನ್ನು ಹಿಂದೆ ಬಿಟ್ಟು ಎಷ್ಟೋ ದೂರ ಮುಂದೆ ಸಾಗಿರುವರು.

ಇರಲಿ; ನಮ್ಮನ್ನಿಂತಹ ಶೋಚನೀಯ ದುರವಸ್ಥೆಗೆ ತಂದಿರಿಸಿದ ಮೂಲಕಾರಣಗಳ್ಯಾವುವು? ಅವುಗಳನ್ನು ಹೆಚ್ಚು ದೂರ ಹುಡುಕಬೇಕಾಗಿಲ್ಲ. **ಧಾರ್ಮಿಕ ಜಡ ಮನೋವೃತ್ತಿ ಮತ್ತು ಅವನ್ನವಲಂಬಿಸಿಕೊಂಡ ಅಂಧ ಸಂಪ್ರದಾಯಗಳ ಮೂಕ ದಾಸ್ಯವೇ** ನಮ್ಮ ಇಂದಿನ ದುರ್ಗತಿಗೆ ಕಾರಣ. ಹೀಗಿರುವಾಗ ಅನಾದಿ ಕಾಲದಿಂದಲೂ ನಮ್ಮನ್ನು ಬಿಡದೆ ಬೆನ್ನು ಬಿದ್ದಿರುವ ಈ ಧರ್ಮದೇವರುಗಳ ಮೂಲವನ್ನಿಲ್ಲಿ ಶೋಧಿಸುವುದು ಸಂದರ್ಭೋಚಿತವಾಗಿದೆ. ಆನೊಂದು ಕಾಲಪರಿಸ್ಥಿತಿಯಲ್ಲಿ ಮಾನವನು ಅನಾಗರಿಕನಾಗಿದ್ದು ಬರ್ಬರೋಚಿತವಾದ ವನ್ಯ ಜೀವನ ಕ್ರಮವನ್ನು ನಡಿಸಿಕೊಂಡುಬರುತ್ತಿದ್ದಾಗ ಕ್ರಮೇಣ ಅವನಿಗೆ ತನ್ನ ನೆರೆಹೊರೆಯವರೊಡನೆ ಕಲೆತು ಬೆರೆತು ಸಾಂಘಿಕ ಜೀವನವನ್ನು ನಡಿಸುವ ಸಹಜಾಕಾಂಕ್ಷೆಯು ತಲೆದೋರಿತು. ಹೀಗೆ ಹಲವು ವ್ಯಕ್ತಿಗಳು ಕೂಡಿ ಸಮಾಜವಾಯ್ತು. ಈ ಸಮಾಜದ ಸ್ವಾಸ್ಥ್ಯ ಸಂರಕ್ಷಣೆಗಾಗಿಯೂ ಸಂಘವ್ಯಕ್ತಿಗಳ ಹಿತಸಾಧನೆಗಾಗಿಯೂ ಸಕಲರಿಗೂ ಅನ್ವಯಿಸುವಂತಹ ಕೆಲವೊಂದು ಕಟ್ಟುಪಾಡುಗಳೂ ನಿಯಮ ನಿರ್ಬಂಧಗಳೂ ಅವಶ್ಯಕವೆನಿಸಿತು. ಈ ನಿಯಮವೇ ಕಟ್ಟಕಡೆಗೆ ಧರ್ಮದ ವ್ಯಾಖ್ಯೆಯನ್ನು ತಾಳಿರಬಹುದು. ಆದರೆ ಇಂದಿನ ವ್ಯವಸ್ಥಿತ ಸರಕಾರಗಳ ಸುಧಾರಿತ ಪದ್ಧತಿಯು ಆಗ ಬೆಳೆದುಬಂದಿರಲಿಲ್ಲವಾದುದರಿಂದ ಮಾನವನ ಸ್ವಾಭಾವಿಕ ಸ್ವಾರ್ಥಾಭಿಲಾಷೆಯಿಂದಾಗಿ ಹೆಚ್ಚು ಬಲಶಾಲಿಗಳಾದವರಿಂದ ಬಲಹೀನರಿಗೆ ಹಾನಿ ಕೇಡುಗಳುಂಟಾಗಿ ಸಮಾಜದಲ್ಲಿ ಒಂದು ತರದ ಅಸಮಾನತೆಯೂ ಅವ್ಯವಸ್ಥೆಯೂ ಉಂಟಾಗುವ ಸಂಭವವಿತ್ತು. ಇದನ್ನು ತಡೆಗಟ್ಟಲು ಈ ಸಾರ್ವತ್ರಿಕ ನಿಯಮದಿಂದಲೂ ಅಸಾಧ್ಯವೆನಿಸಿದುದರಿಂದ ಈ "ದೇವರು" ಎಂಬ ಬೆದರಿಸುವ ಗುಮ್ಮನಿಗೆ ಮರೆಹೋಗಬೇಕಾಯ್ತು. ಮಾತ್ರವಲ್ಲದೆ ಇಹ-ಪರ, ಪಾಪ-ಪುಣ್ಯ, ಸ್ವರ್ಗ-ನರಕಗಳ ಭೀತಿಯು ಮಾನವನೆದೆಯಲ್ಲಿ ಬಿತ್ತಲ್ಪಟ್ಟಿತು. ಹೀಗೆ ಮಾನವನ ಸ್ವಾರ್ಥಾಭಿಲಾಷೆಯು ಸ್ವೇಚ್ಛಾಚಾರದಲ್ಲಿ ಹರಿದಾಡದಂತೆ ಈ "ಧರ್ಮ"ವೆಂಬ ಬೇಲಿಯ ರಚನೆಯಾಯ್ತು. ಆದರೆ ಕ್ರಮೇಣ ಇದರ ಪರಿಣಾಮವೇನಾಯ್ತೆಂದರೆ ಈ ಬೇಲಿಯೇ ಹೊಲವನ್ನು ಮೇಯತೊಡಗಿತು. ಕೇವಲ ಮಾನವ ಸೃಷ್ಟಿಯಾದ ಈ "ಧರ್ಮದೇವರುಗಳು" ಫ್ರಾಂಕಿನ್‌ಸ್ಟೈನನ ಭೂತದಂತೆ ಭಯಂಕರ ರೂಪವನ್ನು ತಾಳಿ ಅವರ ನಿರ್ಮಾಣಕನನ್ನೇ ನುಂಗಿ ನೀರ್ಗುಡಿಯಲು ಬಾಯ್ದೆರೆದುಕೊಂಡು ಬಂದಿತು; ಸಂಪೂರ್ಣ ಅವನ ಹತೋಟಿಯನ್ನು ಮೀರಿ ಅವನ ಮೇಲೆಯೇ ಅಧಿಕಾರವನ್ನು ಚಲಾಯಿಸಲು ತೊಡಗಿತು.

(ಮುಂದರಿಯುವುದು)

ಸಾದರ ಸ್ವೀಕಾರ

ಹುಬ್ಬಳ್ಳಿ ಗಜೆಟ್— ಡಾ. ನಾ. ಸು. ಹರ್ಡೀಕರರ ಸಂಪಾದಕತ್ವದಲ್ಲಿ ಹುಬ್ಬಳ್ಳಿಯಿಂದ ೧ ಮತ್ತು ೧೬ನೆಯ ತಾರೀಖಿಗೆ ಹೊರಡುವ ಪಾಕ್ಷಿಕ ವರ್ತಮಾನಪತ್ರಿಕೆ. ಇದರ ೧, ೨, ೩, ೪ನೇ ಸಂಚಿಕೆಗಳು ನಮ್ಮ ಹಸ್ತಗತವಾಗಿವೆ. ಬಿಡಿ ಪ್ರತಿಗೆ 0–0–6ಪೈ. ಡಾ. ಹರ್ಡೀಕರರು ಹುಬ್ಬಳ್ಳಿ ಮ್ಯುನಿಸಿಪಾಲಿಟಿಯ ರಕ್ಷತಿಯ ಕಾರ್ಯದಲ್ಲಿ ಅಗ್ರಭಾಗವಹಿಸಿದವರು. ಅವರೀಗ ಅಲ್ಲಿಯ ನಗರದ ಚಳವಳಿಯ ವಾಹಕವಾಗಿ ಈ ಗಜೆಟನ್ನು ಹೊರಡಿಸಿದ್ದಾರೆ. ಮ್ಯುನಿಸಿಪಾಲಿಟಿಗೆ ಸಂಬಂಧಿಸಿದ ಲೇಖನಗಳೇ ಇದರಲ್ಲಿ ಹೆಚ್ಚು ಬರುತ್ತಿವೆ.

ವಾಗ್ಭೂಷಣ—ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ೪೬ ವರ್ಷಕಾಲ ನಡೆದು ಎಳೆಂಟು ವರ್ಷಗಳಿಂದ ನಿಂತುಹೋದ ಈ ಮಾಸಪತ್ರಿಕೆಯು ಪುನಃ ಶ್ರೀ. ಬೇಂದ್ರೆ, ದ. ರಾ. ಎಂ. ಎ. ಯವರ ಸಂಪಾದಕತ್ವದಲ್ಲಿ ಶ್ರೀ. ಗೋವಿಂದ ಬೆಟಗೇರಿ ಕೃಷ್ಣಶರ್ಮ, ಬಿ.ಟಿ. ಬಿಂದುಮಾಧವ ಸಹಸಂಪಾದಕತ್ವದಲ್ಲಿ ಪ್ರಾರಂಭವಾಗಿ ಈ ಯುಗಾದಿ ದಿನ ಹೊಸ ಆಕಾರ ಪ್ರಕಾರದಲ್ಲಿ ಪ್ರಕಟವಾಗಿದೆ. ತನ್ನ ಹಿರಿದಾದ ಹೆಸರನ್ನೇ ಹಿರಿದಾಗಿ ಉಪಯೋಗಿಸುವ ನಿಶ್ಚಯದಿಂದ ಇದು ಕನ್ನಡಕ್ಕೆ ಹೊಸದೊಂದು ಹೆಚ್ಚಿನ ಆಕರ್ಷಣೆಯ ಭೂಷಣವೇ ಆಗಿದೆ. ಇದನ್ನು ಕನ್ನಡಿಗರೆಲ್ಲರು ಆದರದಿಂದ ಪ್ರೋತ್ಸಾಹಿಸುವರೆಂದು ನಂಬಿದ್ದೇವೆ. ವಾರ್ಷಿಕ ವರ್ಗಣಿ ರೂ. ೧ ಮಾತ್ರ. ಬಿಡಿ ಪ್ರತಿ ೦–೨–೦.

ಶಾಂತಿನಿಕೇತನ ಗೈಡ್, ಕೊರಾಡಿ—ಕೊರಾಡ ಶಿ. ಲೆವೆ. ಅನುಭವವನ್ನಿಡುವ ಹೊಸ ಸಮಾಧಾನ "ಅನುಭವದಾಯಿನಿ". ಇದರಲ್ಲಿ ಶಾಲೆಯ ಸಂಕ್ಷಿಪ್ತ ಚರಿತ್ರೆ, ಶಾಲೆಯ ವ್ಯವಸ್ಥೆ ಮತ್ತು ಚಟುವಟಿಕೆಗಳು, ಕಲಾಭವನ ಕೋಷ್ಟಕಗಳು ಇತ್ಯಾದಿ ಇವೆ. ಹಲವು ಚಿತ್ರಗಳೂ ಇವೆ. ಯಾತ್ರಿಕರಿಗೆ ತುಂಬಾ ಅನುಭವವನ್ನು ಕೊಡುವುದರಲ್ಲಿ ಸಂಶಯವಿಲ್ಲ. ಈ ವರೆಗೆ ಯಾವ ಶಾಲೆಯವರೂ ಕೈಕೊಳ್ಳದ ಸಾಹಸದು, ಶ್ಲಾಘನೀಯ.

ಹಳ್ಳಿಯ ಆಳು—ಇದರ ೧, ೨ ಮತ್ತು ೩ನೆಯ ಸಂಯುಕ್ತ ಸಂಚಿಕೆಯು ಯುಗಾದಿ ಸಂಚಿಕೆಯಾಗಿ ಹೊರಟಿದೆ. ಸಂಪಾದಕರು ಶ್ರೀ. ಎಸ್. ವಿ. ಅಷ್ಟಗಿ ಬಿ. ಎ. ಎಲ್ ಎಲ್. ಬಿ. ಬೆಳಗಾಂವಿ ಮತ್ತು ಶ್ರೀ ಡಿ. ಎನ್. ಪರಮಾಜ ಎಂ. ಎ. ಎಲ್. ಬಿ. ಬೆಳಗಾಂವಿ.

ಇದರಲ್ಲಿ ಗ್ರಾಮಾಭಿವೃದ್ಧಿಯ ಕುರಿತು ಉಪಯುಕ್ತ ಲೇಖನಗಳಿದ್ದು ವಾಚನೀಯವಾಗಿದೆ. ಪ್ರತಿಯೊಬ್ಬ ಹಳ್ಳಿಗನೂ ಒಕ್ಕಲಿಗನೂ ಅವಶ್ಯ ಓದಲೇಬೇಕಾದುದು.

ಸಚಿತ್ರ ಭಾರತ ಯಾತ್ರೆ—ಶ್ರೀ. ಡಿ. ಕೆ. ಭಾರದ್ವಾಜರಿಂದ ಬರೆಯಲ್ಪಟ್ಟ ಮದ್ರಾಸಿನ ಭಾರತ ಯಾತ್ರಿಕ ಸಂಘದಿಂದ ಪ್ರಕಟಿಸಲ್ಪಟ್ಟ ಉತ್ತರಭಾರತ ಯಾತ್ರೆಯ ವಿವರವನ್ನೊಳಗೊಂಡ ಇನ್ನೂರು ಪುಟಗಳ ಸಚಿತ್ರ ಪುಸ್ತಕ.

ಇದರಲ್ಲಿ ದೇಶಾಟನೆಯ ಉದ್ದೇಶ ಯಾತ್ರಾ ಸೌಕರ್ಯ, ಖಂಡಾಪುರಯಾತ್ರೆ ಇತಿಹಾಸ ಪ್ರಸಿದ್ಧ ನಗರಗಳು, ಇತರ ಉತ್ತರಭಾರತ ಯಾತ್ರಾಸ್ಥಳಗಳ ವಿವರಣೆಗಳು ಸಚಿತ್ರವಾಗಿ ವರ್ಣಿಸಲ್ಪಟ್ಟಿವೆ. ಯಾತ್ರಾರ್ಥಿಗಳಾಗಿ ಹೋಗುವವರು ಈ ಪುಸ್ತಕವೊಂದನ್ನು ಓದಿಕೊಂಡರೆ ಯಾತ್ರೆಯು ಸುಲಭಸಾಧ್ಯವಾಗುವುದು. ಹೋಗಲಿಕ್ಕಾಗದವರು ಓದಿದರೆ ಕುಳಿತಲ್ಲೇ ಉತ್ತರ ಭಾರತದ ಯಾತ್ರೆ ಮಾಡಿದಂತಾಗುವುದು. ಅದುದರಿಂದ ಪ್ರತಿಯೊಬ್ಬರೂ ಇದನ್ನೋದುವುದು ಅತ್ಯಾವಶ್ಯಕ. ಶ್ರೀ. ಭಾರದ್ವಾಜರೇ ಇದರ ಲೇಖಕರೆಂದಮೇಲೆ ಪುಸ್ತಕದ ಹೊಗಳಿಕೆಯನ್ನು ಪ್ರತ್ಯೇಕ ಮಾಡಬೇಕಾಗಿಲ್ಲ.

ಕರ್ನಾಟಕ ದಿಗ್ದರ್ಶನ-(Whither Karnatak) ಶ್ರೀ. ಪಿ. ಚಂದ್ರಶೇಖರ ಹಗ್ಡೆ ಬಿ. ಎ., ಬಿ. ಎಲ್ ಇವರಿಂದ ಬರೆಯಲ್ಪಟ್ಟ ಕರ್ನಾಟಕ ಏಕೀಕರಣ ಮತ್ತು ಪ್ರಾಂತೀಕರಣದ ವಿಷಯವಾಗಿ ಪುಸ್ತಕ. ಇದರಲ್ಲಿ ಕರ್ನಾಟಕದ ಹಿನ್ನೋಟ ಮುನ್ನೋಟಗಳಿದ್ದು ಪ್ರತಿಕನ್ನಡಿಗನೂ ಓದತಕ್ಕದಾಗಿದೆ. ಬೆಲೆ ೧೪ ಆಣೆ (ವಿಮರ್ಶೆಯ ಪ್ರವೇಶಕ್ಕೆ).

ಓರಿಯಂಟಲ್

ಗವರ್ನಮೆಂಟ್ ಸೆಕ್ಯುರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನಕಾರ್ಯಾಲಯ—ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನು ಹೊಂದಿಕೊಂಡಿರುವವರಿಗೆ ದುಡ್ಡಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು **ಆರ್ಥಿಕ ಸ್ವಾತಂತ್ರ್ಯವು** ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲಪ್ತ ಅವಧಿಗಳ ಚಿಕ್ಕ ಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ **ಜೀವವಿಮೆ ಮಾಡುವುದೇ.**

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯಂಟಲ್" ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ **ಆರ್ಥಿಕ ಸ್ವಾತಂತ್ರ್ಯದ ತಳಹದಿ** ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?

ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,	ಅ	ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸು,	ಥ	ಓರಿಯಂಟಲ್ ಲೈಫ್ ಆಫೀಸು,
ಮೈನ್‌ರೋಡ್, ಮಡಿಕೇರಿ, (ಕೊಡಗು.)	ವಾ	ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.

ORIENTAL Govt. Security Life Assurance Co., Ltd.

ಅಲ್ಬೇನಿಯದ ಮೇಲೆ ಇಟಲಿಯ ಆಕಸ್ಮಿಕ ಧಾಳಿ!

ಫ್ಯಾಸಿಸ್ಟ್ ಭೂತಕ್ಕೆ ಮತ್ತೊಂದು ಬಲಿ!

ದೊಡ್ಡ ದೊಡ್ಡ ಪಟ್ಟಣಗಳು ಧೂಳಿಪಟವಾದುವು! ** ರಾಜರಾಣಿಯರು ರಾಜಧಾನಿ ಬಿಟ್ಟರು!

ಅಲ್ಬೇನಿಯಾದೇಶದ ಮೇಲೆ ಇದೇ ತಾ. 7ರಲ್ಲಿ ಇಟಲಿಯ ಆಕ್ರಮಣವಾರಂಭವಾಯಿತು. ನೆಲ, ಜಲ ಮತ್ತು ಆಕಾಶಮಾರ್ಗವಾಗಿ ಒಂದೇ ಸವನೆ ಇಟಾಲಿಯಾನರು ಅಲ್ಬೇನಿಯದ ಗಡಿಯೊಳಗೆ ನುಗ್ಗಿ ಭೀಕರ ಧಾಳಿಯನ್ನಾರಂಭಿಸಿದ್ದಾರೆ ಒಂದೊಂದೇ ಬಂದರುಗಳು ಇಟಲಿಯ ವಶವಾಗುತ್ತಾ ಬರುತ್ತಿವೆ. ಅಲ್ಬೇನಿಯಾ ಸೈನಿಕರು ವಿರೋಧಿಗಳನ್ನು ತಡೆಗಟ್ಟಿ ವೀರಾವೇಶದಿಂದ ಹೋರಾಡಿದರೂ ಫಲ ದೊರೆಯದೆ ಹಿಮ್ಮೆಟ್ಟುತ್ತಿದ್ದಾರೆ ಇನ್ನು ಕೆಲವೇ ದಿನಗಳೊಳಗೆ ಅಲ್ಬೇನಿಯವಿಡೀ ಮುಸಲನಿಯ ವಶದೊಳಗಾಗುವ ಅಪಾಯವಿದೆ.

ಯುದ್ಧದ ಕಾರಣ

ಮಹಾಯುದ್ಧದ ನಂತರ ಇಟಾಲಿ ಅಲ್ಬೇನಿಯಗಳೊಳಗೆ 'ಇಟಾಲೋ ಅಲ್ಬೇನಿಯನ್ ಸಂರಕ್ಷಣಾ ಕರಾರು" ಎಂಬ ಒಪ್ಪಂದವೊಂದು ನಡೆದಿತ್ತು. ಆ ಕರಾರಿನನ್ವಯ ಇಟಲಿಯು ಅಲ್ಬೇನಿಯದ ಸಂರಕ್ಷಕರಾಜ್ಯವೆಂದು ಪರಿಗಣಿಸಲ್ಪಟ್ಟಿತ್ತು. ಆ ಕರಾರನ್ನು ಪುನರಾವರ್ತಿಸಿ ಅಲ್ಬೇನಿಯದಲ್ಲಿ ಇಟಾಲಿಯ ಸೈನ್ಯಗಳನ್ನು ನಿಲ್ಲಿಸುವ ಅಥವಾ ತಾತ್ಕಾಲಿಕ ಪ್ರಸಂಗಗಳಿಗಾಗಿ ಸೈನ್ಯಚಲನೆಯನ್ನು ಮಾಡುವ ಮತ್ತು ಅಲ್ಬೇನಿಯದಲ್ಲಿ ಇಟಲಿಯ ಹಕ್ಕು ಬಾಧ್ಯತೆಗಳನ್ನು ಹೆಚ್ಚಿಸುವ ಹಾಗಾಗಬೇಕೆಂದು ಮುಸಲನಿ ಅಪೇಕ್ಷಿಸಿದಂತೆ ಅಲ್ಬೇನಿಯದ ಮುಖ್ಯ ಪಟ್ಟಣವಾದ ಟಿರಾನಾದಲ್ಲಿ ಮಾತುಕತೆ ನಡೆಯಿತು. ಈ ಸೂಚನೆಗಳನ್ನು ಅಲ್ಬೇನಿಯವು ಅಂಗೀಕರಿಸಲಿಲ್ಲವೆಂದು ತಿಳಿದುಬರುತ್ತದೆ ಒಡನೆಯೇ ಇಟಲಿಯು ಅಲ್ಬೇನಿಯಾದೇಶದ ಮೇಲೆ ದೌಡಿಟ್ಟಿತು.

ಅಲ್ಬೇನಿಯದ ರಣಘೋಷ!

ಇಟಲಿಯು ಯುದ್ಧ ಹೂಡುವುದೆಂಬುದನ್ನು ಊಹಿಸಿಯೇ ಅಲ್ಬೇನಿಯಾ ಜನರು ಇಟಲಿಯ ವಿರುದ್ಧ ಪ್ರದರ್ಶನಗಳನ್ನಾರಂಭಿಸಿದರು. ಪಾರ್ಲಿಮೆಂಟು ಸಭೆ ಸೇರಿ ಇಟಲಿಯ ಸೂಚನೆಗಳು ಅಂಗೀಕಾರಾರ್ಹವಲ್ಲವೆಂದು ತೀರ್ಮಾನಿಸಿತು. ಮೊದಲಾಗಿ ಇಟಲಿಯ 39 ಯುದ್ಧ ವಿಮಾನಗಳು ಟಿರಾನಾದಲ್ಲಿ ಹಾರಾಡಿದಾಗ ಜನರು ಉದ್ವೇಗಗೊಂಡು ಪಾರ್ಲಿಮೆಂಟ್ ಭವನದೆದಿರು, ಅರಮನೆಯೆದಿರು ಬಹು ಸಂಖ್ಯೆಯಿಂದ ನೆರೆದು ರಣಘೋಷವೆಬ್ಬಿಸುತ್ತಾ 'ಇಟಲಿ ಸೈನ್ಯವು ನಮ್ಮ ಹೆಣಗಳನ್ನು ತುಳಿದುಕೊಂಡು ಬಂದು ಭೂಮಿಯನ್ನು ಹಿಡಿಯಲಿ' ಎಂದು ಘೋಷಿಸಿದರು. ಅಲ್ಬೇನಿಯದ ರಾಜಾಜೋಗರವರೂ, ತನ್ನ ಜನರು ಅಗತ್ಯಬಿದ್ದಲ್ಲಿ ದೇಶದ ರಕ್ಷಣೆಗಾಗಿ ಕೊನೆವರೆಗೂ ಹೋರಾಡುವರೆಂಬ ಅಭಿಪ್ರಾಯ ಸೂಚಿಸಿರುವರು.

ಬಂದರಗಳು ಬಲಿಯಾದುವು!

ತಾ. 7ರಲ್ಲಿ ಇಟಲಿಯ ಸುಮಾರು 35 ಸಾವಿರ ಸೈನಿಕರುಳ್ಳ ಪ್ರಚಂಡ ಸೇನೆಯು ಅಲ್ಬೇನಿಯಾವನ್ನು ಸಮುದ್ರಬದಿಯಿಂದ ಆಕ್ರಮಿಸಹತ್ತಿತು. 400 ಯುದ್ಧವಿಮಾನಗಳು ಆಕಾಶಮಾರ್ಗವಾಗಿಯೂ 170 ಯುದ್ಧ ಹಡಗುಗಳು ಸಮುದ್ರದಿಂದಲೂ ಬೋಂಬುಗಳನ್ನು ಸುರಿಸಹತ್ತಿದುವು. ಕೇವಲ ಹನ್ನೆರಡುಸಾವಿರದ ಸೈನ್ಯಬಲವುಳ್ಳ ಅಲ್ಬೇನಿಯಾವು ಪ್ರತಿಯೊಂದು ಪಟ್ಟಣದಲ್ಲಿಯೂ ಇಟಲಿಯನ್ನಿದಿರಿಸಿತು. ಆದರೆ ಕೈಸಾಗದೆ, ತಾ. 7ರಲ್ಲಿ ಅಪರಾಹ್ನ ಘಂಟೆ 1-30ರೊಳಗೆ ಶಿನೇಜನ್ನಿ, ಡುರಾಜೋ ವೇಲೋನಾ, ಮತ್ತು ಸ್ಯಾರಂಟಾ ಬಂದರುಗಳು ಇಟಲಿ ಸೈನ್ಯದ ವಶವಾದುವು. ಇಟಲಿ ವಿಮಾನಗಳು ಅಲ್ಬೇನಿಯಾದ ಪಟ್ಟಣಗಳ ಮೇಲೆ ಹಾರಾಡಿ 'ಅನ್ಯಾಯವಾದ ಮಿಲಿಟರಿ ಆಡಳಿತೆಯ ಕೈಕೆಳಗೆ ಇಟಾಲಿಯನ್ನಿದಿರಿಸಲು ನಿಲ್ಲಬೇಡಿರಿ; ವ್ಯವಸ್ಥೆ, ನ್ಯಾಯ ಮತ್ತು ಶಾಂತಿಗಾಗಿ ಇರುವ ಇಟಲಿಯ ಚಕ್ರವರ್ತಿ ಸಾರ್ವಭೌಮರ ಉದಾರಾಶ್ರಯಕ್ಕೆ ಬನ್ನಿರಿ' ಎಂದು ಜನರನ್ನು ಬೋಧಿಸುವ ಕರಪತ್ರಗಳನ್ನು ಚೆಲ್ಲುತ್ತಿವೆ. ರಾಜಾಜೋಗರು ಹೊಸ ಕರಾರಿಗೆ ಒಪ್ಪದಿದ್ದುದು ಮಾತ್ರವಲ್ಲ, ಒಪ್ಪಂದದ ಮಾತುಕತೆಗಳು ನಡೆಯುತ್ತಿರುವಾಗಲೇ, ಇಟಲಿಯ ವಿರುದ್ಧ ಶಸ್ತ್ರಧಾರಿಗಳ ಪ್ರದರ್ಶನ ನಡೆದಿತ್ತೆಂದೂ, ಅಲ್ಬೇನಿಯದಲ್ಲಿದ್ದ ಇಟಲಿಯವರು ಪ್ರಾಣಾಪಾಯಕ್ಕೊಳಗಾಗಿದ್ದರೆಂದೂ, ಆದರಿಂದ ತಾನು ಯುದ್ಧ ಮಾಡಿದುದು ನ್ಯಾಯವೇ ಆಗಿದೆಯೆಂದೂ ಇಟಲಿಯ ಹೇಳಿಕೆ. ಪ್ರಥಮ ಯುದ್ಧದಲ್ಲಿ ಅಲ್ಬೇನಿಯಾ ಸೈನ್ಯವು ವಿಮಾನಧಾಳಿಯನ್ನು ಕೂಡಾ ಪಡಕೊಂಡು ವಲೋನಾ ಮತ್ತು ಡುರಾಜೋಗಳಲ್ಲಿ ಬಲವಾಗಿ ವಿರೋಧಿಸಿತಾದರೂ ಮುಖ್ಯ ಬಂದರುಗಳನ್ನು ಇಟಲಿಯವರು ಬಹು ಸುಲಭದಲ್ಲಿ ವಶಪಡಿಸಿಕೊಳ್ಳಲು ಶಕ್ತರಾದರು. ಡುರಾಜೋ ಗಿಯೊವಾನ್ನಿ, ಮೆಡುವಾ ಬಂದರುಗಳು ಬೋಂಬಿನ ಹೊಡೆತ ಪರಿಪೂರ್ಣವಾಗಿ ನೆಲಸಮವಾಗಿವೆ.

ಯುಗೋಸ್ಲೋವಿಯಾಕ್ಕೆ

'ಮೊಡರ್ನ್‌ಯುತ್' ಅಥವಾ ಗೀತಾಸಾರಂ ಚಿತ್ರದಲ್ಲಿ ಭಿಕ್ಷ್ನವತಿ.

ಇಟಲಿಯ ಅಭಯ

ಯುಗೋಸ್ಲೋವಿಯಾವು ಅಲ್ಬೇನಿಯದ ನೆರೆಯ ಹಾಗೂ ಸಂಬಂಧವುಳ್ಳ ರಾಷ್ಟ್ರ. ಅಲ್ಬೇನಿಯಾ ಸರಕಾರವು ಈ ರಾಷ್ಟ್ರದ ಸಹಾಯವನ್ನು ಯೋಚಿಸಿತೆಂದೂ, ತನಗೂ ಅಲ್ಬೇನಿಯಕ್ಕೂ ಪರಸ್ಪರ ಸಹಾಯಮಾಡುವ ಕರಾರೇನೂ ಇಲ್ಲವೆಂದೂ ಹೇಳಿ ಯುಗೋಸ್ಲೋವಿಯಾವು ಸಹಾಯ ನಿರಾಕರಿಸಿತೆಂದೂ ತಿಳಿದುಬರುತ್ತದೆ. ಯುಗೋಸ್ಲೋವಿಯಾ ಇಟಲಿಗಳೊಳಗೆ ಆ ಕುರಿತು ಮಾತುಕತೆಗಳು ನಡೆಯುತ್ತಾ ಇವೆ. ಯುಗೋಸ್ಲೋವಿಯಾದ ಹಿತಸಂಬಂಧಗಳಿಗಾವ ಧಕ್ಕೆಯನ್ನೂ ಕೊಡಲಾರೆನೆಂದು ಇಟಲಿ ಸರಕಾರವು ಆಶ್ವಾಸನೆಯಿತ್ತಿದೆ.

ಈ ನಡುವೆ ಇಟಲಿ-ಅಲ್ಬೇನಿಯಾಗಳೊಳಗೆ ರಾಜಿಪ್ರಸ್ತಾಪವು ನಡೆದು ಪರಸ್ಪರರು ಶರ್ತಗಳನ್ನು ಬದಲಾಯಿಸಿಕೊಂಡು ನೋಡಿದರೂ ಯಾವ ತೀರ್ಮಾನವೂ ಆಗಲಿಲ್ಲವೆಂದು ತಿಳಿದುಬರುತ್ತದೆ.

ರಾಜಧಾನಿಯಿಂದ ರಾಜರ ಪಲಾಯನ

ತನ್ನ ರಾಜಧಾನಿಯಾದ ಟಿರಾನಾವನ್ನು ಬಿಟ್ಟು ರಾಜಾಜೋಗರು ಎಲ್ಲಿಗೋ ಪಲಾಯನಮಾಡಿದ್ದಾರೆ ಅಲ್ಬೇನಿಯಾ ಸರಕಾರವೂ ಎಲ್ಬಿಸ್ಸನೀ ಪಟ್ಟಣಕ್ಕೆ ತನ್ನ ಆಫೀಸನ್ನೊಯ್ದಿದೆ. ರಾಜಗೆರಾಲ್ಡೈನ್‌ರವರು ಜೀವರಕ್ಷಣೆಗಾಗಿ ತನ್ನ ಮಗುವಿನೊಂದಿಗೆ ಗ್ರೀಸ್ ದೇಶದ ಫ್ಲೋರಿನಾ ಎಂಬಲ್ಲಿಗೋಡಿದ್ದಾರೆ. ರಾಜರ ಇಬ್ಬರು ತಂಗಿಯರು ಸಾಲೋನಿಕಾ ಪಟ್ಟಣಕ್ಕೆ ಬಂದಿರುವರು.

ಮುಸಲಿಗೆ ಹಿಟ್ಲರನ ಬೆಂಬಲ

ಮುಸಲನಿಯು ಅಲ್ಬೇನಿಯದ ಮೇಲೆ ಬೀಳುವ ಮೊದಲು ಹಿಟ್ಲರನೊಡನೆ ಟೆಲಿಫೋನಿನ ಮೂಲಕ ಸುದೀರ್ಘ ಸಂಭಾಷಣೆ ನಡೆಸಿದ್ದನೆಂದೂ, ಅಲ್ಬೇನಿಯಾದ ಆಕ್ರಮಣಕ್ಕೆ ಹಿಟ್ಲರನು ಪರಿಪೂರ್ಣ ಸಮ್ಮತಿಯನ್ನಿತ್ತಿರುವನೆಂದೂ ತಿಳಿದುಬರುತ್ತವೆ. ಜರ್ಮನ್ ಪತ್ರಿಕೆಗಳು ಮುಸಲನಿಯ ವರ್ತನೆಯು ನ್ಯಾಯವಾದುದೆಂದು ಉದ್ಘೋಷಿಸುತ್ತಿವೆ. ಪಾಶ್ಚಾತ್ಯ ಪ್ರಜಾಪ್ರಭುತ್ವವಾದೀ ರಾಷ್ಟ್ರಗಳು ತಮಗೆ ಸಂಬಂಧವಿಲ್ಲದ ಈ ಪ್ರಶ್ನೆಯನ್ನು ಹಚ್ಚಿಕೊಳ್ಳುವದರಲ್ಲಿ ಅರ್ಥವಿಲ್ಲವೆಂದೂ, ಜರ್ಮನಿಯ ಸಹಿತ ನ್ಯಾಯಮಾರ್ಗ ಹಾಗೂ ಅಭೇದ್ಯವರ್ತನೆಯಲ್ಲಿ ಕೈಹಾಕಲು ಅವುಗಳಿಗಧಿಕಾರವಿಲ್ಲವೆಂದೂ ಜರ್ಮನರ ಅಭಿಮತ.

ಇತರ ರಾಷ್ಟ್ರಗಳಲ್ಲಿ

ಬ್ರಿಟನರು ಈ ಯುದ್ಧದಿಂದ ವಿಶೇಷ ಗಾಬರಿಗೊಂಡಂತಿಲ್ಲ. ಯಾವುದಕ್ಕೂ ಪರಿಸ್ಥಿತಿಯು ಸ್ಪಷ್ಟ ತಿಳಿಯುವವರೆಗೆ ತಾಳತಕ್ಕದ್ದೆಂದು ಅವರಭಿಪ್ರಾಯ. ವಿದೇಶ ಮಂತ್ರಿ ಲೋರ್ಡ್ ಹೆಲಿಫೇಕ್ಸರೂ, ಕೆಬಿನೇಟ್ ಸದಸ್ಯರೂ ಸಂಗತಿಗಳ ಪರಾಮರ್ಶೆಯಲ್ಲಿ ನಿರತರಾಗಿರುವರು. ಅಲ್ಬೇನಿಯಾದ ಸ್ವಾತಂತ್ರ್ಯ, ಹಕ್ಕು ಬಾಧ್ಯತೆಗಳ ಅಪಹಾರವು ತನ್ನ ಉದ್ದೇಶವಲ್ಲವೆಂದೂ, ತಾನು ಸೂಚಿಸಿರುವ ಶರ್ತಗಳಿಗಿಂತ ಹೆಚ್ಚಿನದನ್ನೂ ತಾನಪೇಕ್ಷಿಸುವದಿಲ್ಲವೆಂದು ಇಟಲಿಯು ಬ್ರಿಟಿಷ್ ಸರಕಾರಕ್ಕೆ ತಿಳಿಸಿರುವದಂತೆ. ಫ್ರಾನ್ಸು ಆತುರಗೊಂಡಿದೆ. ಆದರೆ ಆ ಕುರಿತು ದುಡುಕುವದು ಸರಿಯಲ್ಲವೆಂಬ ಅಭಿಪ್ರಾಯದಿಂದಿದೆ. ಬ್ರಿಟನು ಮತ್ತು ಫ್ರಾನ್ಸು, ಇಟಲಿಯು ಅಲ್ಬೇನಿಯದ ರಕ್ಷಣಾಕರ್ತನೆಂಬುವದನ್ನು ಒಪ್ಪಿಕೊಂಡಿವೆ. ಇಟಲಿಯ ಸದ್ಯದ ವರ್ತನೆಯು ನಂಬಿಕೆದ್ರೋಹವಾಗಿದ್ದರೂ, ಮಿತಿಮೀರದಿದ್ದರೆ ಇತರರು ಉದ್ವೇಗಗೊಳ್ಳುವ

ಆಗತ್ಯವಿಲ್ಲವೆಂದು ಫ್ರೆಂಚರ ಅಭಿಪ್ರಾಯ. ಆದರೆ ಏಕಾಧಿಕಾರಿಗಳಾದ ಹಿಟ್ಲರ್ ಮುಸಲಿನಿಗಳು ಭೂಮಧ್ಯಸಮುದ್ರದ ಪೂರ್ವಭಾಗಗಳನ್ನಾಕ್ರಮಿಸಲು ಹೂಡಿರುವ ಪ್ರಥಮ ಹಂಚಿಕೆಯಿದಾಗಿದ್ದಲ್ಲಿ ಅಪಾಯವಿದೆಯೆಂದೂ, ಬ್ರಿಟಿಷ್-ಫ್ರೆಂಚರ ಮೈತ್ರಿಯ ಬೆಲೆಯನ್ನು ಹಿಟ್ಲರ್ ಮುಸಲಿನಿಗಳು ಅರಿತಿರುವರೋ ಅಥವಾ ತಮ್ಮ ಉದ್ದೇಶಸಾಧನೆಗಾಗಿ ಮುಂದೊತ್ತಲಿರುವರೋ ಎಂಬುದನ್ನು ಕಾದು ನೋಡಬೇಕೆಂತೆ ಅಮೇರಿಕವು ಅಲ್ಬೇನಿಯಾ ಘಟನೆಯಿಂದ ಕೆರಳಿಹೋಗಿದೆ. ಅಲ್ಬೇನಿಯಾದ ಆಕ್ರಮಿಸಲ್ಪಟ್ಟ ಸ್ಥಳದ ಮೇಲಿನ ಇಟಲಿಯ ಅಧಿಕಾರವನ್ನದು ಒಪ್ಪಿಕೊಳ್ಳುವಂತಿಲ್ಲ. ಕಲಹಗಾರರ ವಿರುದ್ಧ ರಾಷ್ಟ್ರಗಳ ಒಕ್ಕಟ್ಟನ್ನು ಸಾಧಿಸಬೇಕೆಂದು ಬ್ರಿಟನು ಮಾಡಿರುವ ಪ್ರಯತ್ನದಲ್ಲಿ ಇನ್ನು ಎಷ್ಟೋ ಕಾರ್ಯಗಳು ಆಗಬೇಕಾಗಿವೆಯೆಂದು ಅಮೇರಿಕದ ಅಭಿಪ್ರಾಯ.

The Tropical Insurance

CO., LTD., DELHI.

Chairman: Sjt. SUBASH CHANDRA BOSE.
(Congress President)

Founder Directors:
PANDIT MOTILAL NEHRU
DR. M. A. ANSARI
SJT. S. SRINIVASA IYENGAR
HAKIM AJMAL KHAN

This leading National Company founded and managed by five Congress Presidents invites applications for representation on salary and commission.

APPLY TO:

K. S. RAMAMURTHI, M.A.,
Branch Secretary,
160, Mount Road,
Madras

OR

M. SUNDER RAM SHETTY
Branch Manager,
Hampankatta,
Mangalore.

ಸುಭಾಸ ಬೋಸರಿಗೆ ತಾಗಿರುವುದೇನು-

ಅನಾರೋಗ್ಯದ ಕಾಟವೊ? ⁂ ವಿರೋಧಿಗಳ ಮಾಟವೊ?

ಯಾರಾದರೂ ಕಾಹಿಲೆಬಿದ್ದೊಡನೆ, ಅದಕ್ಕೆ ಮಾಟ, ಮಂತ್ರ, ತಂತ್ರ, ಬಲಿ, ಬಲ್ಮೆಗಳ ಸಂಬಂಧವನ್ನು ಕಲ್ಪಿಸಿಕೊಳ್ಳುವುದು ಅಜ್ಞಾನೀ ಹಳ್ಳಿಗರ ಸಂಪ್ರದಾಯ. ಮನುಷ್ಯನ ದೇಹಾರೋಗ್ಯಕ್ಕೂ, ಮಾಟ ಮಂತ್ರಗಳಿಗೂ ಹೊಂದಿಕೆ ಹೇಗೆಂಬುದು ವಿಚಾರಿಗಳಿಗರ್ಥವಾಗದ ವಿಷಯ. ಆದರೆ ಭಾರತದಲ್ಲಿ ಈ ಅಂಧಾನುಕರಣೆಯ ಪ್ರಾಬಲ್ಯವೆಷ್ಟೆಂಬುದಕ್ಕೆ ಸುಭಾಸರ ಅನಾರೋಗ್ಯದ ಕುರಿತೆದ್ದಿರುವ ಊಹಾಪೋಹೆಗಳೇ ನಿದರ್ಶನ. ರಾಷ್ಟ್ರಪತಿ ಭೋಸರ ಸುದೀರ್ಘ ಕಾಹಿಲೆಯ ಕಾರಣಗಳನ್ನು ತೋರಿಸಿ ಹಲವರ ಹಲವಾಭಿಪ್ರಾಯಗಳನ್ನೊಳಗೊಂಡ ಹಲವು ಪತ್ರಗಳು ಮತ್ತು ತಂತಿಗಳು ಸುಭಾಸರಿಗೆ ಬಂದಿದ್ದುವಂತೆ. ಅವುಗಳನ್ನೆಲ್ಲಾ ವಿಮರ್ಶಿಸುತ್ತಾ ಶ್ರೀ. ಭೋಸರು 'ಮೋಡರ್ನ್ ರಿವ್ಯೂ' ಪತ್ರಿಕೆಯಲ್ಲಿ ಸ್ವಾರಸ್ಯವಾದ ಲೇಖನವೊಂದನ್ನು ಬರೆದಿದ್ದಾರೆ.

ಭೋಸರಿಗೆ ಬಂದ ಕೆಲವು ತಂತಿಗಳಲ್ಲಿ ಅವರಿಗೆ ವಿಷಹಾಕಲ್ಪಟ್ಟದೆಯೆಂಬ ಸೂಚನೆಯಿತ್ತಂತೆ. ಅದನ್ನೋದಿದ ಭೋಸರ ಡಾಕ್ಟರರು ಪ್ರಥಮತಃ ವಿನೋದಗೊಂಡರು. ಆಮೇಲೆ ಲಕ್ಷ್ಯಪೂರ್ವಕವಾಗಿ ಭೋಸರ ದೇಹವನ್ನು ಪರೀಕ್ಷಿಸಿ ಅಂತಹದೇನೂ ನಡೆದಿಲ್ಲವೆಂಬುದರಿಂದ ಆ ಗೊಡವೆಯನ್ನೇ ಬಿಟ್ಟರು.

ಮಾಟಮಾಡಿದ್ದಾರಂತೆ

ಮತ್ತೂ ವಿನೋದದ ವಿಷಯವೆಂದರೆ ಶ್ರೀ. ಭೋಸರಿಗೆ ಯಾರೋ ಮರಣ ಕ್ರಿಯಾ (ಮಾಟ) ಮಾಡಿದ್ದಾರೆಂದು ಕೆಲವು ಪಂಡಿತರು ಶೋಧನೆಯಿಂದ ಕಂಡುಹಿಡಿದುದು. ಕಲ್ಕತ್ತಾ ಯುನಿವರ್ಸಿಟಿಯ ಪ್ರೊಫೆಸರರೊಬ್ಬರು ಕೆಲವು ಪಂಡಿತರೊಡನೆ ಸುಭಾಷರನ್ನು ಕಾಣಲು ಬಂದರು. "ಈ ಪ್ರೊಫೆಸರರು ಸಂಸ್ಕೃತದಲ್ಲಿ ಅದ್ವಿತೀಯ ವಿದ್ವಾಂಸರು; ಆದರ್ಶ ಗುಣನಡತೆಯವರು. ನಮ್ಮ ಕುಟುಂಬದವರಿಗೆಲ್ಲಾ ಇವರ ಮೇಲೆ ಅತ್ಯಂತ ಗೌರವ" ಎಂದು ಭೋಸರನ್ನುತ್ತಾರೆ. ಇಂತಹ ಪಂಡಿತರು ಭೋಸರನ್ನು ಕಂಡು ಹೇಳಿದುದೇನು ಗೊತ್ತೆ?— "ಸಾಮಾನ್ಯವಾಗಿ ಇಂತಹ ವಿಲಕ್ಷಣ ಹಾಗೂ ಸುದೀರ್ಘ ಕಾಹಿಲೆಯುಂಟಾಗುವುದಿಲ್ಲ ದೇಶದ ಯಾವುದಾದರೊಂದು ಕಡೆಯಲ್ಲಿ ಯಾರೋ ದುರ್ಜನರು ಭೋಸರ ಮರಣಕ್ಕಾಗಿ ಮಾಟಮಾಡಿದ್ದಾರೆ." ಈ ಮರಣಕ್ರಿಯಾ ಅಥವಾ ಮಾಟದ ವಿವರವು ತಂತ್ರ ಶಾಸ್ತ್ರದಲ್ಲಿ ಉಲ್ಲೇಖಿಸಲ್ಪಟ್ಟಿರುವದಂತೆ 'ಮಾಟವೇನೋ ಮಾಡಲ್ಪಟ್ಟಿದೆ. ಆದರೆ ಸುಭಾಸರ ಸಾಮರ್ಥ್ಯದ ದೆಸೆಯಿಂದ ಅವರ ಆರೋಗ್ಯ ಮಾತ್ರ ಕೆಟ್ಟಿತಲ್ಲದೆ ಪ್ರಾಣಾಪಾಯವಾಗುವ ಗಂಡಾಂತರವಿಲ್ಲ' ಎಂದು ಪ್ರೊಫೆಸರರ ಅಭಿಪ್ರಾಯ. ಅವರು ಸುಭಾಸರು ಮಾಡಬೇಕಾದ ಶಮನದ ರೀತಿ ನೀತಿಗಳನ್ನೂ ತಿಳಿಸಿ ಹೋದರಂತೆ.

ಸುಭಾಸರಿಗೂ ಅನುಮಾನ ಮೂಡಿತೆ?

"ಈ ಎಲ್ಲಾ ಮಾತುಗಳನ್ನು ನಾನು ಸಂಪೂರ್ಣವಾಗಿ ದಕ್ಕಿಸಿಕೊಳ್ಳಲಿಲ್ಲ. ಆದರೆ ಅವು ನನ್ನ ಭಾವನೆಗಳ ಬಣ್ಣವನ್ನೂ ತಾಗಿಸದೆ ಹೋಗಲಿಲ್ಲ. ನನ್ನ ಮೆದುಳಿನೊಂದು ಮೂಲೆಯಲ್ಲಿ ಈ ಕುರಿತು ಒಂದು ಪ್ರಶ್ನಾರ್ಥಕ ಚಿಹ್ನೆಯು ನಿಂತುಬಿಟ್ಟಿತು. ಬೇರಾವನಾದರೂ ಈ ಮಾತುಗಳನ್ನಾಡಿದರೆ ಅವನು ಅರೆಮರುಳನೋ ವಾದಿ ತಿರಸ್ಕರಿಸಲ್ಪಡುತ್ತಿದ್ದನು ಆದರೆ, ಸ್ವಚ್ಛ ಸ್ವಭಾವ, ನಿಷ್ಕಲ್ಮಷ ವರ್ತನೆ, ಅಸಾಧಾರಣ ಪಾಂಡಿತ್ಯವಿದ್ದು, ರಾಜಕೀಯದ ಗಂಧಗಾಳಿಯಿಲ್ಲದ ಈ ಮಹನೀಯರ ಮಾತುಗಳು ಮತ್ತೇನಲ್ಲದಿದ್ದರೂ ಕಿವಿಗೊಟ್ಟು ಕೇಳತಕ್ಕಂಥವುಗಳಿವೆ" ಎನ್ನುತ್ತಾರೆ ಭೋಸರು.

ತ್ರಿಪುರಿ ಕಾಂಗ್ರೆಸಿಗೆ ಹೋಗುವ ಕೆಲವು ದಿನಗಳಿಗೆ ಮೊದಲು ಸುಭಾಸರ ಕೆಲವು ಮಿತ್ರರು ಅನಾರೋಗ್ಯ ನಿವಾರಣೆಗಾಗಿ ತಾಯಿತಗಳನ್ನು ಧರಿಸಬೇಕೆಂದು ಅವರನ್ನು ಒತ್ತಾಯಪಡಿಸಿದರಂತೆ. "ಪ್ರಥಮತಃ ನನ್ನ ಸುಧಾರಿತ ಮನೋವೃತ್ತಿಯು ಇದಕ್ಕೆ ವಿರುದ್ಧ ಬಂಡಾಯವೆದ್ದಿತಾದರೂ ಕೊನೆಗೆ ನಾನು ಕೆಲವು ಉಂಗುರಗಳನ್ನು ನಾಲ್ಕು ತಾಯಿತಗಳನ್ನು ಧರಿಸಿಕೊಂಡೆ. ಅದನ್ನೊಂದು ರಹಸ್ಯವಾಗಿ ಸ್ವೀಕರಿಸಿದ ನನ್ನ ಕೆಲವು ಮಿತ್ರರಿಂದ ಮಾತ್ರವೇ ಅವುಗಳನ್ನು ಪಡೆಕೊಂಡೆ. ಕೊಡಲು ತಯಾರಿದ್ದವರಿಂದೆಲ್ಲಾ ತಾಯಿತಗಳನ್ನು ಪಡೆಕೊಳ್ಳುತ್ತಿದ್ದರೆ ನಾನು ತಾಯಿತಗಳ ಪ್ರದರ್ಶನಾಮಂದಿರವಾಗಿ ಮಾರ್ಪಾಟು ಹೊಂದುತ್ತಿದ್ದೆನೇನೋ" ಎಂದು ರಾಷ್ಟ್ರಪತಿಗಳು ವಿನೋದವಾಡುತ್ತಾರೆ.

"ನನಗೆ ತ್ರಿಪುರಿಯಲ್ಲಿ ಹುಶಾರಿರಬೇಕೆಂದು ಎಷ್ಟೊಂದು ಆತುರವಿದ್ದಿತೆಂದರೆ, ತಾಯಿತಗಳಿಂದ ಶೇಕಡಾ ಐದಷ್ಟಾದರೂ ಗುಣ ಸಿಕ್ಕಬಹುದಾದರೆ ನಾನೇಕದನ್ನು ಕಳಕೊಳ್ಳಬೇಕು? ಎಂದು ಆ ಕಾಲದಲ್ಲಿ ನನಗೆ ತೋರಿತು. ಆದರೆ ತ್ರಿಪುರಿ ಅಧಿವೇಶನವು ಮುಗಿದ ಮೇಲೆ ನಾನವುಗಳನ್ನು ತೆಗಿಸಿಬಿಟ್ಟೆ" ಎಂದು ಬಾಬು ಸುಭಾಸಚಂದ್ರರು ಬರೆಯುತ್ತಾರೆ.

ಇನ್ನು ಯಾರಾದರೊಬ್ಬನ ಕಂಠ, ಭುಜ ಕರಗಳಲ್ಲಿ ಮಂತ್ರದ ತಾಯಿತಗಳನ್ನೋ ಉಂಗುರಗಳನ್ನೋ ಕಂಡಾಗ ಅಣಕಿಸುವ ಗೊಂದಲಕ್ಕೆ ಹೋಗಬೇಡಿ. 'ಅಂತಹ ರಾಷ್ಟ್ರಪತಿ ಭೋಸರು ಕಟ್ಟಿಕೊಂಡಿದ್ದರು. ನಾನೇಕೆ ಕಟ್ಟಿಕೊಳ್ಳಬಾರದು?'—ಎಂದು ಅವನು ಉತ್ತರಕೊಟ್ಟಾನು.

ತುಸು ವಿನೋದ.

ಮಾಸ್ಟರ್—ಸ್ಕೌಟುಗಳ ಕರ್ತವ್ಯವೇನು?
ಸ್ಕೌಟು—ಇನ್ಸ್‌ಪೆಕ್ಟರರು ಬರುವಾಗ್ಯೆ ಸ್ಕೌಟು ಡ್ರೆಸ್ ಹಾಕಿ ಇರೋದು.

o o o o o

ಗಂಡ—ಅನ್ನ ಬೇಯಿಸಿ ಆಯ್ತೋ?
ಹೆಂಡತಿ—ಅನ್ನ ಬೇಯಿಸಲಿಲ್ಲ. ಅಕ್ಕಿ ಬೇಯಿಸಿ ಅನ್ನ ಮಾಡಿದ್ದೇನೆ.



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತವೆಂಬಂತೆ ಸಾಮಾನುಗಳು ಬೇಲುಗಟ್ಟಲೆ ಬರುತ್ತಿವೆ, ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

ಸ್ಥಾಪನೆ: **ಕ್ರೌನ ರಬ್ಬರ ಸ್ಟಾಂಪ ಕಂಪೆನಿ** 1926
18 ಬಲ್ಮಠ ರಸ್ತೆ, ಮಂಗಳೂರು,
ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಪೇಡಿಗಳ ಚೀಟು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವುದು.



CROWN RUBBER STAMP CO,
Balmat Road, MANGALORE.
Included by the Mysore Govt. Stores, Purchase Committee in the list of approved Firms

ದೂರೀಕರಿಸಿರಿ—ದೃಷ್ಟಿಚಕ್ರ—ನರೆತಕೂದಲು – ವೃದ್ಧಾಪ್ಯ ತರುಣರು ಎರಡು ತಿಂಗಳತನಕವೂ, ವೃದ್ಧರು ನಾಲ್ಕು ತಿಂಗಳವರೆಗೂ ಬೂಟಿಟಾನಿಕನ್ನು ಉಪಯೋಗಿಸಿದಲ್ಲಿ ದೃಷ್ಟಿಮಾಂದ್ಯವು ತೊಲಗಿ ನರೆತ ಕೂದಲು ಕಪ್ಪಾಗಿ ದೇಹದ ನಿತ್ರಾಣವು ತೊಲಗಿ ತಾರುಣ್ಯದ ಥಳಕುಬಾರದೆ ಹೋದಲ್ಲಿ ಇಮ್ಮಡಿ ಕ್ರಯ ವಾಪಾಸು ಕೊಡುವ ಶರ್ತವಿದೆ. ಟಾನಿಕಿನ ಕ್ರಯವು ಈ ತೆರನಾಗಿದೆ, ಒಂದು ತಿಂಗಳಿನ ಟಾನಿಕಿಗೆ ರೂ 3-8-0; 2 ತಿಂಗಳಿನದಕ್ಕೆ ರೂ. 6-0-0; ನಾಲ್ಕು ತಿಂಗಳಿನದಕ್ಕೆ ರೂ. 10 ಪತ್ರವ್ಯವಹಾರ ಇಂಗ್ಲೀಷಿನಲ್ಲೇ.
Jari Booti Dawakhana,
P. O. Behar Nursery (Darbhanga)

THE
Canara Banking Corporation, Udipi, Ltd.
(Incorporated in British India.)
ESTD. 1906
—o—
THREE YEARS' CASH CERTIFICATES

ಫ್ರಾನ್ಸುಗಳ ಮತ. ಇಟಲಿಯಿಗ ಕರಾರಿನನ್ವಯ ಶಾಂತಿಪಾಲನೆಯನ್ನಷ್ಟೇ ಮಾಡಿರುವದೆ? ಆದು ಒಪ್ಪಂದವನ್ನೂ, ರಾಷ್ಟ್ರವನ್ನೂ ಒಟ್ಟೊಟ್ಟಿಗೆ ಸ್ವಾಹಾ ಮಾಡಿರುವದು! ಬ್ರಿಟನ್ ಫ್ರಾನ್ಸುಗಳು ಇಂದಿಷ್ಟ ಹೇಡಿತನಬಿಟ್ಟು ಫಾಸಿಸ್ಟ್ ನಾಜೀ ಆಕ್ರಮಣಗಳನ್ನು ಧೈರ್ಯವಾಗಿ ತಡೆಗಟ್ಟದಿದ್ದಲ್ಲಿ

ಉಪಾಧ್ಯಾಯರಾಗಲೀ ವಿದ್ಯಾರ್ಥಿಗಳಾಗಲೀ ರಜಾಕಾಲವನ್ನು ಸದ್ವಿನಿಯೋಗಿಸಿ ರೂ. 25ರಿಂದ 100ರ ತನಕ ಯಾ ಆದಕ್ಕಿಂತ ಹೆಚ್ಚು ಹೇಗೆ ಸಂಪಾದಿಸಬಹುದು ಎಂಬ ವಿವರವನ್ನು ತಿಳಿಯುವುದಕ್ಕೆ ಒಂದಾಣೆ ಸ್ಟಾಂಪಿನೊಂದಿಗೆ ಬರೆಯಿರಿ.

ಮೆನೇಜರ್, ನವಯುಗ.

Suppliment to Navayuga dated 13th April 1939.

ಅಂತರಂಗದ ಆರನೆಯ ಯುಗಾದಿ ವಿಶೇಷ ಸ್ಪರ್ಧೆ

ನಾಲ್ಕಾಣೆಗಳಿಗೆ **125/** ರೂಪಾಯಿಗಳನ್ನು ಪಡೆಯಿರಿ.

ಪ್ರಥಮ ಬಹುಮಾನ ರೂ. ೧೦೦ [ನಗದು]

ದ್ವಿತೀಯ ಬಹುಮಾನ ರೂ. ೨೫ (ಪುಸ್ತಕಗಳು)

∴ ಈ ಸ್ಪರ್ಧೆಯ ಉತ್ತರವು ಅಂತರಂಗದ ಪ್ರಧಾನ ಸಂಪಾದಕರ ಬಳಿ ಮೊಹರು ಮಾಡಿಡಲಾಗಿದೆ.

∴ ಅದಕ್ಕೆ ಸಂಪೂರ್ಣ ಸರಿಹೋಲುವ ಉತ್ತರಕ್ಕೆ ಪ್ರಥಮ ಬಹುಮಾನವೂ, ಒಂದು ತಪ್ಪಿರುವವುಗಳಿಗೆ ಎರಡನೇ ಬಹುಮಾನವೂ ಕೊಡಲ್ಪಡುವುದು.

ಬಹುಮಾನ ಪುಸ್ತಕಗಳ ಪಟ್ಟಿಯನ್ನು ಉತ್ತರ ಪ್ರಕಟಿಸುವ ಸಂಚಿಕೆಯಲ್ಲಿಯೇ ಕೊಡಲಾಗುವುದು. ಅದರಲ್ಲಿ ಆರಿಸಿ ಯಾವುದನ್ನಾದರೂ ಪಡಕೊಳ್ಳಬಹುದು.

∴ ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾದಲ್ಲಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಸರಿಸಮಾನವಾಗಿ ಹಂಚಲ್ಪಡುವುವು.

∴ ಬಹುಮಾನವನ್ನು ಹಂಚುವ ವಿಚಾರದಲ್ಲಿ ಸ್ಪರ್ಧೆಯ ಮೆನೇಜರರ ನಿರ್ಣಯವೇ ಕೊನೆಯದು. ಈ ವಿಚಾರದಲ್ಲಿ ಯಾವ ಪತ್ರವ್ಯವಹಾರಗಳಿಗೂ ಅವಕಾಶವಿಲ್ಲ.

∴ **ಪ್ರತಿ ಉತ್ತರಕ್ಕೂ ಪ್ರವೇಶಧನ ನಾಲ್ಕಾಣೆ.**

∴ **ಒಬ್ಬನು ಎಷ್ಟೂ ಉತ್ತರಗಳನ್ನು ಕಳುಹಿಸ ಬಹುದು. ಒಂದು ರೂಪಾಯಿಗೆ ಐದು ಉತ್ತರಗಳನ್ನು ಕಳುಹಿಸಬಹುದಾಗಿದೆ.**

ಗೆಳೆಯರ ತಂಡದ ಸದಸ್ಯರು ಒಂದು ರೂಪಾಯಿಗೆ ಎಂಟು ಉತ್ತರಗಳನ್ನು ಕಳುಹಿಸಬಹುದು.

∴ ಪ್ರವೇಶ ಧನವನ್ನು ಪೋಸ್ಟೆಲ್ ಸ್ಟಾಂಪು ಇಂಡಿಯನ್ ಪೋಸ್ಟೆಲ್ ಆರ್ಡರ್ ಅಥವಾ ಮನಿ ಆರ್ಡರ್ ಮೂಲಕ ರವಾನಿಸಬಹುದು.

∴ ಉತ್ತರವನ್ನು ಬರೆಯುವವರು ಮೇ ೭ರೊಳಗೆ ಬರೆದು ಕಳುಹಿಸಬೇಕು. (ಅಂದರೆ ನಮಗೆ ತಲುಪಬೇಕು.) ನಂತರ ಈ ಸ್ಪರ್ಧೆಗಾಗಿ ಕಳುಹಿಸುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ.

∴ ಸರಿಯಾದ ಉತ್ತರವನ್ನು ಮೇ ೧೫ರ "ಅಂತರಂಗ"ದಲ್ಲಿ ಪ್ರಕಟಿಸಲಾಗುತ್ತದೆ.

∴ ಸ್ಪರ್ಧೆಯ ವಿಷಯದಲ್ಲಿ ಅನಾವಶ್ಯಕ ಪತ್ರವ್ಯವಹಾರವನ್ನು ಮಾಡಲಾಗುವುದಿಲ್ಲ.

∴ **ಈ ಸ್ಪರ್ಧೆಗೆ ಕೂಪನುಗಳ ನಿರ್ಬಂಧವಿಲ್ಲ. ಸರಿಯಾಗಿ ಖಾಲಿ ಕಾಗದದಲ್ಲಿ ಬರೆದು ತಮ್ಮ ಹೆಸರು ವಿಳಾಸವನ್ನು ಸ್ಪಷ್ಟವಾಗಿ ಬರೆದು ಕಳುಹಿಸಬಹುದು.**

ಉತ್ತರ ಕೊಡುವವರು ತಮ್ಮ ಪೂರ್ಣ ವಿಳಾಸವನ್ನು ಬರೆಯತಕ್ಕದ್ದು.

ಮೆನೇಜರ್, ಅಂತರಂಗ ಸ್ಪರ್ಧೆ, ಉಡುಪಿ.

...ಸ್ಲಿಂ ಭಾರತ ಎಂದು ವಿಭಾಗಿಸ...ವು ಹಾದಿಗಳಿವೆ. ಅವುಗಳಲ್ಲಿ ಉ...ದವನ್ನು ನಾವು ಮುಂದಕ್ಕೆ ಪುನ...ವೆವು, ಎಂದರು! ಹಿಂದೂ ಮುಸ್ಲೀ...ದವೆಷ್ಟು ಕೃತಕವಾದುದೆಂಬುದ...ತ್ತಂಡದ ಹಲವು ಸ್ವಚ್ಛಮತಿಗಳು ಪ್ರತ್ಯಕ್ಷ ವರ್ತನೆಯಿಂದ ತೋರಿ... ಅಲ್ಲಲ್ಲಿ ಭಾವೋದ್ರೇಕಕಾರೀ ಘ...ಂಟಾಗುವುದೂ, ಅಜ್ಞಾನಿಗಳದ...ಳಿಕವಾಗಿ ಬಲಿಬೀಳುವದೂ ಅಷ್ಟ...ಮಾತಲ್ಲ. ಇವುಗಳ ಪರಿಣಾಮ...ಗಳಗಳಾಗುವವರಲ್ಲಿಯೂ ವಿಶೇಷ...ವರೆ ಇವೆಲ್ಲಾ ತಪ್ಪುಗ್ರಹಿಕೆಯಿಂ... ಗಂಡಾಂತರಗಳೆಂಬುದು ಯಾರಿ...ಅರ್ಥವಾಗುವ ವಿಷಯ. ಮಿ. ಭಾರತವನ್ನೇ ಹಿಂದೂಭಾರತ–...ಭಾರತವೆಂದೂ ವಿಂಗಡಿಸುವ ...ಕೈಯಿಕ್ಕಿರುವದು ಕೇವಲ ಹಾಸ್ಯಾ...ವಾದುದು. ರಾಜಕೀಯದಲ್ಲಿ ಮು... ವ್ಯತ್ಯಾಸವೆಂಬುದೇ ಕೃತಕವಾಗಿ... ಭಾರತವನ್ನೇ 'ಹಿಂದೂ ಮುಸ್ಲೀ...ಮಾಡುವನೆನ್ನುವ ಮಿ. ಜಿನ್ನರ ಮ...ಕ್ಕೇನೆನ್ನಬೇಕು?

ಉಡುಪಿ

...ಪಿ ಟೌನ್ ಕಾಂಗ್ರೆಸ್ ಕಮಿಟಿ ...ವಣೆಯ ರದ್ದತಿ–ಹೊಸ ಕಮಿಟಿ

...ನೆ— ತಾ. 5-3-39ರಲ್ಲಿ ನಡೆದ ಉಡುಪಿ ...ಂಗ್ರೆಸ್ ಕಮಿಟಿಯ ಕಾರ್ಯನಿರ್ವಾಹಕ ...ಚುನಾವಣೆಯು ಅನಧಿಕೃತವಾದುದೆಂ...ದ ಅದನ್ನು ರದ್ದುಪಡಿಸಲಾಗಿದೆಯೆಂದೂ ...ವಣೆಯು ತಾ. 23-4-39ನೇ ಸಂಜೆ ... ಮೋಡರ್ನ್ ಹಾಯರ್ ಎಲಿಮೆಂಟರಿ ...ನಡೆಯಲಿರುವುದೆಂದೂ ರಿಟರ್ನಿಂಗ್ ಆಫೀ...ಶ್ರೀ. ಪಾಂಗಾಳ ಲಕ್ಷ್ಮೀನಾರಾಯಣ ನಾ...ತಿಳಿಸುತ್ತಾರೆ.

...ಗೆ ನೀರಿಲ್ಲ— ಮುನ್ಸಿಪಾಲಿಟಿಯವರು ...ಲವು ರಸ್ತೆಗಳಿಗೆ ಸರಿಯಾಗಿ ನೀರು ಹಾಕು...ದೂ ಧೂಳಿನ ಕಾಟವು ಅತ್ಯಧಿಕವಾಗಿದೆ...ಯೆಂದೂ ಈ ಕುರಿತು ಸಂಬಂಧಪಟ್ಟವರೇನೂ ...ಷ್ಟಿನ ಲಕ್ಷ್ಯವಿಡುವಂತೆ ತೋರುವುದಿಲ್ಲೆಂದೂ ನಮ್ಮ...ವಾಗಿ ಆಕ್ಷೇಪಿಸುವ ಪತ್ರಿಯೊಂದು ನಮ್ಮ ಬಳಿಗೆ ಬಂದಿದೆ. ಈ ಕುರಿತು ಸಂಬಂಧಪಟ್ಟವರು ಗಮನ...ವರಾಗಿ ನಂಬುತ್ತೇವೆ. (ಸಂ ನ)

ಉದ್ಯಾವರ— ಇಲ್ಲಿಯ ಗೋಪಾಲಕೃಷ್ಣ...ಮಾರು 3 ವರ್ಷಗಳಿಂದ ಡಾಕ್ಟರರಾಗಿದ್ದ ಶ್ರೀ. ಕೆ. ಎ. ಕೆ. ಉಪಾಧ್ಯಾಯ, L. A. M. S. & D. I. M. S. ಇವರು ತನ್ನ ಸ್ವಂತ ಊರಾದ ಕಾರ್ಕಳದಲ್ಲಿ ಶೋಪ್ ತೆರೆಯಲಿರುವುದರಿಂದ ಇಲ್ಲಿಂದ ಅಗಲಿ ಹೋಗುವಾಗ ಸ್ಥಳೀಯ ಮಹನೀಯರು ತಾ. 9-4-39ರಲ್ಲಿ ಪಂಚಾಯತ ಬೋರ್ಡು ಆಫೀಸಿನಲ್ಲಿ ವಿದಾಯ ಸತ್ಕಾರವನ್ನಿತ್ತು ಸನ್ಮಾನಿಸಿದರು. ಡಾ| ಉಪಾಧ್ಯಾಯರು ಜನಪ್ರಿಯರಾಗಿಯೂ ಜಾತಿಭೇದವಿಲ್ಲದವರಾಗಿಯೂ ಸರಳ ಸ್ವಭಾವದವರಾಗಿಯೂ ಇದ್ದರು.

ರಾಷ್ಟ್ರ ರಾಷ್ಟ್ರಗಳೊಳಗಿನ ಒಪ್ಪಂದಗಳನ್ನು ಕಂಡರೆ ಯಾವ ಕಾರಣಕ್ಕಾದರೂ ಅನ್ಯರ ಸ್ವಾತಂತ್ರ್ಯಾಪಹರಣಮಾಡುವ ಅಧಿಕಾರವು ಯಾವೊಂದು ರಾಷ್ಟ್ರಕ್ಕೂ ದೊರೆತಿಲ್ಲ. 'ಬಲಶಾಲಿಯೇ ಬಾಳಬೇಕು' ಎಂಬುದು ಅನಾಗರಿಕರ ನೀತಿ. ಎಷ್ಟೇ ಮಹತ್ತಾದ ಶಕ್ತಿಯಾದರೂ, ಕುಲನಾಶೀತವಾದುದಲ್ಲ; ಪ್ರತಿಯೊಬ್ಬ ಮನುಷ್ಯನೂ, ಪ್ರತಿಯೊಂದು ರಾಷ್ಟ್ರವೂ ತನ್ನ ಬಾಳುವ...

...ರೆ ಈ ನರಗ ಸರ್ವಾಧಿಕಾರಿಗಳು ಪರರಾಷ್ಟ್ರಗಳನ್ನು ಕೀರಿಸಿದ ಮೇಲಾದರೂ ಕ್ರೋಧ ಪ್ರದರ್ಶಿಸುತ್ತಿದ್ದ ಆಂಗ್ಲೋಫ್ರೆಂಚರು ಆ ಸಂದರ್ಭದಲ್ಲಿ ಕೊನೆಗೂ ಶಾಂತರಾಗಿಯೇ ಇದ್ದರು. ಅಲ್ಬೇನಿಯಾದಲ್ಲಿ ಒಂದು ಸ್ಥಾನ ಹಾಗೂ ಅದರ ಸ್ವಾತಂತ್ರ್ಯ ರಕ್ಷಣೆಯ ಜವಾಬ್ದಾರಿಯನ್ನು 1921ರ ಕರಾರಿನಂತೆ ಇಟೆಲಿಗೆ ಕೊಟ್ಟಿರುವುದರಿಂದ ಆ ಕುರಿತು ತಾವು ಕೈಹಾಕುವಂತಿಲ್ಲವೆಂದು ಇಂಗ್ಲೆಂಡು...

...ಯವಿದೆ.

ಜಿನ್ನಾ ಸಾಹೇಬರ ಸ್ವಾರ್ಥ

ಮಿ. ಜಿನ್ನಾರವರ ಮುಂದಾಳುತ್ವದಲ್ಲಿ ಮುಸ್ಲಿಂ ಲೀಗಿನವರು ದೇಶದ್ರೋಹಕರಾದಿಯಾವುದೆಂಬುದನ್ನು ಅರಸಿಯರಸಿ ಹಿಡಿಯುತ್ತಿರುವರೋ ಎಂಬಂತೆ ಕಾಣುತ್ತದೆ. ನವ ಡಿಲ್ಲಿಯಲ್ಲಿ ಸೇರಿದ ಲೀಗ್ ಕೌನ್ಸಿಲಿನ ಸಭೆಯಲ್ಲಿ ಮಾತಾಡುತ್ತಾ ಮಿ. ಜಿನ್ನರು 'ಹಿಂದುಸ್ಥಾನವನ್ನು ಹಿಂದೂಭಾ...

ಅಗತ್ಯವಿಲ್ಲವೆಂದು ಫ್ರೆಂಚರ ಅಭಿಪ್ರಾಯ. ಆದರೆ ಏಕಕರಧಿಕಾರಿಗಳಾದ ಹಿಟ್ಲರ್ ಮುಸಲಿನಿಗಳು ಭೂಮಧ್ಯಸಮುದ್ರದ ಪೂರ್ವಭಾಗಗಳನ್ನಾಕ್ರಮಿಸಲು ಹೂಡಿರುವ ಪ್ರಥಮ ಹಂಚಿಕೆಯಿದಾಗಿದ್ದಲ್ಲಿ ಅಪಾಯವಿದೆಯೆಂದೂ, ಬ್ರಿಟಿಷ್-ಫ್ರೆಂಚರ ಮೈತ್ರಿಯ ಬೆಲೆಯನ್ನು ಹಿಟ್ಲರ್ ಮುಸಲಿನಿಗಳು ಅರಿತಿರುವರೋ ಅಥವಾ ತಮ್ಮ ಉದ್ದೇಶಸಾಧನೆಗಾಗಿ ಮುಂದೊತ್ತಲಿರುವರೋ ಎಂಬುವನ್ನು ಕಾದು ನೋಡತೆ ಅಮೇರಿಕವು ಅಲ್ಬೇನಿಯಾಯಿಂದ ಕೆರಳಿಹೋಗಿದೆ. ಅಲ್ಬೇನಿ ಆಕ್ರಮಿಸಲ್ಪಟ್ಟ ಸ್ಥಳದ ಮೇಲಿನ ಲಿಯ ಅಧಿಕಾರವನ್ನದು ಒಪ್ಪಿಕೊ ತಿಲ್ಲ. ಕಲಹಗಾರರ ವಿರುದ್ಧ ರಾ ಒಕ್ಕಟ್ಟನ್ನು ಸಾಧಿಸಬೇಕೆಂದು ಬ್ರಿ ಮಾಡಿರುವ ಪ್ರಯತ್ನದಲ್ಲಿ ಇನ್ನು ಎ ಕಾರ್ಯಗಳು ಆಗಬೇಕಾಗಿವೆಯೆಂ ಮೇರಿಕದ ಅಭಿಪ್ರಾಯ.

ಸುಭಾಸ ಬೋಸ

ಅನಾರೋಗ್ಯದ ಕಾಟಪ್ರ

ಯಾರಾದರೂ ಕಾಹಿಲೆಬಿದ್ದೊ ಅದಕ್ಕೆ ಮಾಟ, ಮಂತ್ರ, ತಂತ್ರ, ಬಲ್ಕೆಗಳ ಸಂಬಂಧವನ್ನು ಕಲ್ಪಿಸಿಕೊ ವುದು ಅಜ್ಞಾನೀ ಹಳ್ಳಿಗರ ಸಂಪ್ರದಾ ಮನುಷ್ಯನ ದೇಹಾರೋಗ್ಯಕ್ಕೂ, ಮ ಮಂತ್ರಗಳಿಗೂ ಹೊಂದಿಕೆ ಹೇಗೆಂಬ ವಿಚಾರಿಗಳಿಗರ್ಥವಾಗದ ವಿಷಯ. ಆ ಭಾರತದಲ್ಲಿ ಈ ಅಂಧಾನುಕರಣೆಯ ಬಲ್ಯವೆಷ್ಟೆಂಬುದಕ್ಕೆ ಸುಭಾಸರ ಅನಾರೋಗ್ಯದ ಕುರಿತೆದ್ದಿರುವ ಊಹಾಪೋಹಗ ನಿದರ್ಶನ. ರಾಷ್ಟ್ರಪತಿ ಭೋಸರ ಸು ರ್ಘ ಕಾಹಿಲೆಯ ಕಾರಣಗಳನ್ನು ತೋ ಹಲವರ ಹಲವಾಭಿಪ್ರಾಯಗಳನ್ನೊಗೊಂಡ ಹಲವು ಪತ್ರಗಳು ಮತ್ತು ತಂ ಗಳು ಸುಭಾಸರಿಗೆ ಬಂದಿದ್ದುವಂತೆ. ಅ ಗಳನ್ನೆಲ್ಲಾ ವಿಮರ್ಶಿಸುತ್ತಾ ಶ್ರೀ. ಭೋ ರು 'ಮೋಡರ್ನ್ ರಿವ್ಯೂ' ಪತ್ರಿಕೆಯ ಸ್ವಾರಸ್ಯವಾದ ಲೇಖನವೊಂದನ್ನು ಬ ದಿದ್ದಾರೆ.

ಭೋಸರಿಗೆ ಬಂದ ಕೆಲವು ತಂತಿಗಳ ಅವರಿಗೆ ವಿಷಹಾಕಲ್ಪಟ್ಟಿದೆಯೆಂಬ ಸೂ ನೆಯಿತ್ತಂತೆ. ಅದನ್ನೋದಿದ ಭೋಸ ಡಾಕ್ಟರರು ಪ್ರಥಮತಃ ವಿನೋದಗೊಂ ರು. ಆಮೇಲೆ ಲಕ್ಷ್ಯಪೂರ್ವಕವಾಗಿ ಭೋ ಸರ ದೇಹವನ್ನು ಪರೀಕ್ಷಿಸಿ ಅಂತಹದೇನೂ ನಡೆದಿಲ್ಲವೆಂಬುದರಿಂದ ಆ ಗೊಡವೆಯನ್ನೇ ಬಿಟ್ಟರು.

ಮಾಟಮಾಡಿದ್ದಾರಂತೆ

ಮತ್ತೂ ವಿನೋದದ ವಿಷಯವೆಂದರೆ ಶ್ರೀ. ಭೋಸರಿಗೆ ಯಾರೋ ಮರಣ ಕ್ರಿಯಾ (ಮಾಟ) ಮಾಡಿದ್ದಾರೆಂದು ಕೆಲವು ಪಂಡಿತರು ಶೋಧನೆಯಿಂದ ಕಂಡುಹಿಡಿದುದು. ಕಲ್ಕತ್ತಾ ಯುನಿವರ್ಸಿಟಿಯ ಪ್ರೊಫೆಸರರೊಬ್ಬರು ಕೆಲವು ಪಂಡಿತರೊಡನೆ ಸುಭಾಸರನ್ನು ಕಾಣಲು ಬಂದರು. "ಈ ಪ್ರೊಫೆಸರರು ಸಂಸ್ಕೃತದಲ್ಲಿ ಅದ್ವಿತೀಯ ವಿದ್ವಾಂಸರು; ಆದರ್ಶ ಗುಣನಡತೆಯವರು. ನಮ್ಮ ಕುಟುಂಬದವರಿಗೆಲ್ಲಾ ಇವರ ಮೇಲೆ ಅತ್ಯಂತ ಗೌರವ" ಎಂದು ಭೋಸ

The Tropical Insurance

CO., LTD., DELHI.

Chairman: Sjt. SUBASH CHANDRA BOSE.
(*Congress President*)

ಅಂತರಂಗದ
ಆರನೆಯ ಯುಗಾದಿ ವಿಶೇಷ ಸ್ಪರ್ಧೆ

ಪ್ರಥಮ ಬಹುಮಾನ ರೂಪಾಯಿ **100** (ನಗದಿ)	●	ದ್ವಿತೀಯ ಬಹುಮಾನ 25 ರೂಪಾಯಿ (ಪುಸ್ತಕಗಳು)

ಅದೊಂದು ವಿಶೇಷತರದ ಪರಿಸ್ಥಿತಿಯಲ್ಲಿ, ಹಿಂದೂಸ್ಥಾನಕ್ಕೆ ಭಾರತೀಯರಲ್ಲಿ ಒಬ್ಬರನ್ನು ಸರ್ವಾಧಿಕಾರಿಯನ್ನಾಗಿ ನೇಮಿಸಬೇಕೆಂದು ಬ್ರಿಟಿಷ್ ಪಾರ್ಲಿಮೆಂಟಿನವರು ನಿರ್ಣಯಿಸಿ; ಯಾರನ್ನು ನೇಮಿಸಬೇಕೆಂದು ತಿಳಿಯುವುದಕ್ಕಾಗಿ, ಪಾರ್ಲಿಮೆಂಟಿನವರು ಮಹಾತ್ಮಾ ಗಾಂಧಿಯವರ ಹತ್ತಿರ ಬಂದು, "ಭಾರತೀಯರಲ್ಲಿ ಮೂರು ಜನರನ್ನು ಸರ್ವಾಧಿಕಾರಿ ಸ್ಥಾನಕ್ಕೆ ಶಿಫಾರಸು ಮಾಡಬೇಕು. ಅವರಲ್ಲಿ ಯಾರಾದರೊಬ್ಬರನ್ನು ನಾವು ಆ ಸ್ಥಾನಕ್ಕೆ ನೇಮಿಸುತ್ತೇವೆ" ಎಂದು ಹೇಳಿದರೆ ಈ ಕೆಳಗಿನ ಹನ್ನೆರಡು ಜನರಲ್ಲಿ ಯಾವ ಮೂರು ಜನರನ್ನು ಮಹಾತ್ಮರು ಶಿಫಾರಸು ಮಾಡಬಹುದು ಎಂಬುದನ್ನು ತಿಳಿಸಿರಿ.

೧ ಸುಭಾಷ ಚಂದ್ರ ಬೋಸ್
೨ ಬಾಬು ರಾಜೇಂದ್ರ ಪ್ರಸಾದ
೩ ಪಂಡಿತ ಜವಾಹರಲಾಲ ನೆಹರು
೪ ಸಿ. ರಾಜಗೋಪಾಲಾಚಾರ್ಯ
೫ ಖಾನ್ ಅಬ್ದುಲ್ ಗಫಾರ್ ಖಾನ್
೬ ಸರೋಜಿನಿ ನಾಯಡು
೭ ಸರ್ದಾರ್ ವಲ್ಲಭಭಾಯಿ ಪಟೇಲ್
೮ ಪಟ್ಟಾಭಿಸೀತಾರಾಮಯ್ಯ
೯ ಮೌಲಾನಾ ಅಬುಲ್ ಕಲಂ ಅಜಾದ್
೧೦ ಎಸ್. ಶ್ರೀನಿವಾಸ ಅಯ್ಯಂಗಾರ್
೧೧ ವಿ. ಶ್ರೀನಿವಾಸ ಶಾಸ್ತ್ರಿ
೧೨ ತೇಜಬಹಾದುರ್ ಸಪ್ರು

ಈ ರೀತಿಯಲ್ಲಿ ಬರೆದು ಕಳುಹಿಸಬೇಕು.

ಹೆಸರು ....
ವಿಳಾಸ ....

ಯುಗಾದಿಯ ಸಂತೋಷವನ್ನು ಸವಿಯಬೇಕಾದರೆ
ಅಂತರಂಗದ ಯುಗಾದಿ ವಿಶೇಷ ಸಂಚಿಕೆಯನ್ನೋದಿರಿ
ಬೆಲೆ ೨ ಆಣೆ

ಮಣಿಪಾಲ ಪವರ್ ಪ್ರೆಸ್, ಉಡುಪಿ.

ಸ್ಥಾಪನೆ:

ರಬ್ಬರ್ ಸ್ಟಾಂಪುಗಳು, **CROWN RUBBER STAMP CO,**
Balmat Road, MANGALORE.
Included by the Mysore Govt. Stores, Purchase Committee in the list of approved Firms

ದೂರೀಕರಿಸಿರಿ—ದೃಷ್ಟಿ ಚಕ್ರ—ನರೆತ ಕೂದಲು - ವೃದ್ಧಾಪ್ಯ ತಯಾರು ಎರಡು ತಿಂಗಳತನಕವೂ, ವೃದ್ಧರು ನಾಲ್ಕು ತಿಂಗಳವರೆಗೂ ಬೂಟಿಟಾನಿಕನ್ನು ಉಪಯೋಗಿಸಿದಲ್ಲಿ ದೃಷ್ಟಿಮಾಂದ್ಯವು ತೊಲಗಿ ನರೆತ ಕೂದಲು ಕಪ್ಪಾಗಿ ದೇಹದ ನಿತ್ರಾಣವು ತೊಲಗಿ ತಾರುಣ್ಯದ ಫಲಕಾರಿಯಾಗದೆ ಹೋದಲ್ಲಿ ಇಮ್ಮಡಿ ಕ್ರಯ ವಾಪಾಸು ಕೊಡುವ ಶರ್ತವಿದೆ. ಟಾನಿಕಿನ ಕ್ರಯವು ಈ ತೆರನಾಗಿದೆ, ಒಂದು ತಿಂಗಳಿನ ಟಾನಿಕಗೆ ರೂ 3-8-0; 2 ತಿಂಗಳಿನದಕ್ಕೆ ರೂ. 6-0-0; ನಾಲ್ಕು ತಿಂಗಳಿನದಕ್ಕೆ ರೂ. 10 ಪತ್ರವ್ಯವಹಾರ ಇಂಗ್ಲೀಷಿನಲ್ಲೇ. **Jari Booti Dawakhana,**
P. O. Behar Nursery (Darbhanga)

ತುಸು ವಿನೋದ.

ಮಾಸ್ತರ್—ಸ್ಕೌಟುಗಳ ಕರ್ತವ್ಯವೇನು
ಸ್ಕೌಟು—ಇನ್ಸ್‌ಪೆಕ್ಟರರು ಬರುವಾಗ ಸ್ಕೌಟು ಡ್ರೆಸ್ ಹಾಕಿ ಇರೋದು.

೦ ೦ ೦ ೦ ೦

ಗಂಡ—ಅನ್ನ ಬೇಯಿಸಿ ಆಯ್ತೋ?
ಹೆಂಡತಿ—ಅನ್ನ ಬೇಯಿಸಲಿಲ್ಲ. ಅಕ್ಕಿ ಬೆಯಿಸಿ ಅನ್ನ ಮಾಡಿದ್ದೇನೆ.

THE

Canara Banking Corporation, Udipi, Ltd.

(Incorporated in British India.)

ESTD. 1906

THREE YEARS' CASH CERTIFICATES

bearing interest at 4% p. a. in denominations of Rs 50/-, 100/-, 500/-, 1,000/- & 5000/- are now issued at all our Branches.

For particulars call at or write to any of our nearest Branches.

ಉಡುಪಿ, ಗುರುವಾರ, ತಾ. ೧೩-೪-೩೯

ಅಲ್ಬೇನಿಯದ ಪತನ

ಇದೇ ತಾ. 7ರಲ್ಲಿ ಸ್ವತಂತ್ರರಾಷ್ಟ್ರವಾಗಿದ್ದ ಅಲ್ಬೇನಿಯವು ತಾ. 9ರಲ್ಲೇ ಫ್ಯಾಸಿಸ್ಟ್ ಇಟಲಿ ಸಾಮ್ರಾಜ್ಯದ ಆಧೀನ ರಾಜ್ಯವಾಗಿ ಹೋಯಿತು. ಕುಂಟು ನೆವಗಳನ್ನೊಡ್ಡಿ ಎರಡೇ ದಿನಗಳೊಳಗೆ ಮುಸಲನಿಯು ಅದನ್ನು ಸದೆಬಡಿದುಬಿಟ್ಟ. ಈ ಕಾಲದಲ್ಲಿ ಯುರೋಪಿನ ಸಣ್ಣ ರಾಷ್ಟ್ರಗಳ ಸ್ವಾತಂತ್ರ್ಯವು ಒಂದೆರಡು ದಿನಗಳ ಮಾತೆಂಬುದಕ್ಕೆ ಇದಕ್ಕಿಂತ ಉತ್ತಮ ನಿದರ್ಶನ ಬೇರೆ ದೊರೆಯಲಾರದು. 'ಬಲವುಳ್ಳವರು ಮಾತ್ರ ಬದುಕಬೇಕು'–ಎಂಬುದು ಹಿಟ್ಲರ್ ಮುಸಲನಿಗಳ ವೇದಾಂತ. ಚಿಕ್ಕ ರಾಷ್ಟ್ರಗಳನ್ನು ನುಂಗುವಾಗ ಅವರೊಡ್ಡುವ ಕಾರಣಗಳಾವುವಿದ್ದರೂ, ಮೇಲಿನ ವೇದಾಂತವೊಂದೇ ಮೂಲಕಾರಣವೆನ್ನುವುದರಲ್ಲಿ ಅನುಮಾನವಿಲ್ಲ.

ಪರಿಸ್ಥಿತಿಯು ಹೀಗೆಯೇ ಮುಂದುವರಿವರೆ–ಮುಂದುವರಿಯುತ್ತಿದೆ–ಲೋಕ ಕ್ಷೇಮದ ನೆಲೆಯನ್ನು ಕಾಣುವುದೆಲ್ಲಿ? ಎಂಬ ಪ್ರಶ್ನೆ ಸ್ವಾಭಾವಿಕವಾಗಿ ಹುಟ್ಟುತ್ತದೆ. ಇಂದಿನ ಸ್ಥಿತಿಗತಿಗಳ ಮೇಲಿಂದ ಇಷ್ಟನ್ನು ಖಂಡಿತವಾಗಿ ಹೇಳಬಹುದು. ಫಾಸಿಸ್ಟ್ ಪ್ರಭಾವ ಮತ್ತು ಶಕ್ತಿಯು ದಿನದಿಂದ ದಿನಕ್ಕೆ ಬೆಳೆಯುತ್ತಾ ಬರುತ್ತಿರುವಾಗ, ಬಲಹೀನ ರಾಷ್ಟ್ರಗಳು ತಮ್ಮ ಆಯುಷ್ಯದ ದಿನ–ತಿಂಗಳುಗಳನ್ನು ಗುಣಿಸುತ್ತಾ ಕುಳಿತುಕೊಳ್ಳುವದೊಂದೇ ಕ್ಷೇಮದಾಯಕವಾದುದು. ಇಂತಹ ಅನ್ಯಾಯಕ್ಕಾವ ಶಮನವೂ ಇಲ್ಲವೆ? ಸ್ವಾತಂತ್ರ್ಯವೊಂದೇ ರಾಷ್ಟ್ರಗಳ ಜೀವ; ಶಾಂತಿಗಾಗಿ ರಚಿಸಲ್ಪಟ್ಟ ರಾಷ್ಟ್ರ ರಾಷ್ಟ್ರಗಳೊಳಗಿನ ಒಪ್ಪಂದಗಳನ್ನು ಕಂಡರೆ ಯಾವ ಕಾರಣಕ್ಕಾದರೂ ಅನ್ಯರ ಸ್ವಾತಂತ್ರ್ಯಾಪಹರಣಮಾಡುವ ಅಧಿಕಾರವು ಯಾವೊಂದು ರಾಷ್ಟ್ರಕ್ಕೂ ದೊರೆತಿಲ್ಲ. 'ಬಲಶಾಲಿಯೇ ಬಾಳಬೇಕು' ಎಂಬುದು ಅನಾಗರಿಕರ ನೀತಿ. ಎಷ್ಟೇ ಮಹತ್ತಾದ ಶಕ್ತಿಯಾದರೂ, ತುಲನಾತೀತವಾದುದುಲ್ಲ; ಪ್ರತಿಯೊಬ್ಬ ಮನುಷ್ಯನೂ, ಪ್ರತಿಯೊಂದು ರಾಷ್ಟ್ರವೂ ತನ್ನ ಬಾಳುವ ಹಕ್ಕನ್ನು ತನಗಿಂತ ಬಲಶಾಲಿಗೆ ಬಿಟ್ಟುಕೊಡುತ್ತಾ ಬಂದಲ್ಲಿ ಕೊನೆಗುಳಿಯುವ ಜನರಾಗಲೀ ದೇಶವಾಗಲೀ ಎಷ್ಟು? ಬಾಳುವ ಅನುಕೂಲತೆಗಳನ್ನೊದಗಿಸಿಕೊಳ್ಳಬಲ್ಲ ಪ್ರತಿಯೊಬ್ಬರಿಗೂ ಬಾಳುವ ಹಕ್ಕಿದೆ; ಆ ಹಕ್ಕನ್ನು ಅದಕ್ಕೆ ಸರಿಸಿಗಿಲಾದ ಕಾರಣಗಳಿಗಾಗಿ ವಿನಾ ತಮ್ಮ ಸ್ವಾರ್ಥಕ್ಕಾಗಿ ಅಪಹರಿಸುವ ಹಕ್ಕು ಅನ್ಯರಿಗಿಲ್ಲ. ಅನ್ಯರು ಅಪಹರಿಸಬಲ್ಲರೆಂಬ ಒಂದೇ ಕಾರಣದಿಂದ ಮಾನವನಿಗೆ ಅಥವಾ ರಾಷ್ಟ್ರಕ್ಕೆ ಬಾಳುವ ಹಕ್ಕು ಇಲ್ಲವೆಂದಾಗದು.

ಈ ಸಂದರ್ಭದ ಬ್ರಿಟಿಷ್ ಮತ್ತು ಫ್ರಾನ್ಸುಗಳ ಧೋರಣೆಯು ತೀರಾ ಖಂಡನಾರ್ಹವಿದೆ; ಲಜ್ಜಾವಹವಿದೆ. ಮ್ಯೂನಿಚ್ ಒಪ್ಪಂದವನ್ನು ಧಿಕ್ಕರಿಸಿ ಹಿಟ್ಲರನು ಝೆಕೊಸ್ಲೊವೇಕಿಯಾವನ್ನು ನುಂಗಿದಾಗ ಮಿ. ಚೇಂಬರ್ಲೇನರ ಭರವಸೆಯ ಆಕಾಶದ ಅರಮನೆಯೂ ಕುಸಿದುಬಿತ್ತು; ಶಾಂತಿಸ್ಥಾಪನೆಯ ಕೈಕಾಲುಗಳೂ ಬಿದ್ದುವು. ಅವರು ಉಪಾಯವಿಲ್ಲದೆ ಉರಿದು ಬೀಳಬೇಕಾಯಿತು. ಇಂದು ಮುಸಲನಿ ಅಲ್ಬೇನಿಯಾವನ್ನು ನುಂಗಿದ್ದಾನೆ. ಆ ಪ್ರಶ್ನೆಯಿಂದ ತಪ್ಪಿಸಿಕೊಳ್ಳಲು ಆಂಗ್ಲೋ ಫ್ರೆಂಚರಿಗೆ ಹಾದಿಯಿತ್ತು. ಆದರಿಂದ ಅವೆರಡು ರಾಷ್ಟ್ರಗಳೂ ತಪ್ಪಿಸಿಕೊಂಡಿವೆ. 'ಹೊಡಿಬಡಿ' ಎನ್ನುವ ಹಿಟ್ಲರ್ ಮುಸಲನಿಗಳೂ 'ಹಾದಿಬಿಡಿ' ಎನ್ನುವ ಚೇಂಬರ್ಲೇನ್ ದಲಾದಿಯಾರರೂ ಇರುವ ವರೆಗೆ ದುರ್ಬಲ ರಾಷ್ಟ್ರಗಳ ಅವಸ್ಥೆ ಅಲ್ಬೇನಿಯದಂತಾಗದೆ ಮತ್ತೆ ಹೇಗಾಗಬೇಕು?

ಇಟಲಿಯಂತಹ ಸತ್ರಾಣಿ ರಾಷ್ಟ್ರವು ಕೆರಳಿದಾಗ, ನ್ಯಾಯವೊಂದಲ್ಲದೆ ಮತ್ತಾವ ರಕ್ಷಣೆಯೂ ಇಲ್ಲದ ದುರ್ಬಲ ರಾಷ್ಟ್ರವು ಅಲ್ಬೇನಿಯಾ. ಕೇವಲ ಒಂದು ಮಿಲಿಯ ಜನರಿರುವ ಬಹುಭಾಗವು ಪರ್ವತಮಯವಾಗಿದ್ದು ಹನ್ನೆರಡುಸಾವಿರದ ಸೈನ್ಯ ಬಲವಿರುವ ಪುಟ್ಟ ರಾಜ್ಯಕ್ಕೆ ಇಟಲಿಯ ಧಾಳಿಗಾರರು ನಿಲ್ಲುವ ಪರಾಕ್ರಮವೆಲ್ಲಿಂದ? ಈ ಆಪತ್ತಿನ ನಿವಾರಣೆಗೆ ಇತರ ರಾಷ್ಟ್ರಗಳು ಕೈಯಿಕ್ಕಿದಲ್ಲಿ ಮಾತ್ರ ಸಾಧ್ಯವಿತ್ತು. ಆದರೆ ಈ ವರೆಗೆ ಸರ್ವಾಧಿಕಾರಿಗಳು ಪರರಾಷ್ಟ್ರಗಳನ್ನು ತೀರಿಸಿದ ನೋಲಾದರೂ ಕ್ರೋಧ ಪ್ರದರ್ಶಿಸುತ್ತಿದ್ದ ಆಂಗ್ಲೋಫ್ರೆಂಚರು ಈ ಸಂದರ್ಭದಲ್ಲಿ ಕೊನೆಗೂ ಶಾಂತರಾಗಿಯೇ ಇದ್ದಾರೆ. ಅಲ್ಬೇನಿಯಾದಲ್ಲಿ ಒಂದು ಸ್ಥಾನ ಹಾಗೂ ಅದರ ಸ್ವಾತಂತ್ರ್ಯ ರಕ್ಷಣೆಯ ಜವಾಬ್ದಾರಿಯನ್ನು 1921ರ ಕರಾರಿನಂತೆ ಇಟಲಿಗೆ ಕೊಟ್ಟಿರುವುದರಿಂದ ಆ ಕುರಿತು ತಾವು ಕೈಹಾಕುವಂತಿಲ್ಲವೆಂದು ಇಂಗ್ಲೆಂಡು ಫ್ರಾನ್ಸುಗಳ ಮತ. ಇಟಲಿಯಾಗ ಕರಾರಿನನ್ವಯ ಶಾಂತಿಪಾಲನೆಯನ್ನಷ್ಟೇ ಮಾಡಿರುವದೆ? ಅದು ಒಪ್ಪಂದವನ್ನೂ ರಾಷ್ಟ್ರವನ್ನೂ ಒಟ್ಟೊಟ್ಟಿಗೆ ಸ್ವಾಹಾ ಮಾಡಿರುವದು! ಬ್ರಿಟನ್ ಫ್ರಾನ್ಸುಗಳು ಇಂದಿನ ಹೇಡಿತನಬಿಟ್ಟು ಫಾಸಿಸ್ಟ್ ನಾಜೀ ಆಕ್ರಮಣಗಳನ್ನು ಧೈರ್ಯವಾಗಿ ತಡೆಗಟ್ಟದಿದ್ದಲ್ಲಿ ಲೋಕಶಾಂತಿಯು ಕೊನೆಯುವರೆಗೂ ಬಯಲಭ್ರಾಂತಿಯಾಗಿ ಉಳಿಯಬಹುದು.

ರಾಮದುರ್ಗದ ದಂಗೆ

ರಾಮದುರ್ಗ ಸಂಸ್ಥಾನದ ಭೀಕರ ದಂಗೆಯು ಪ್ರಜಾಪ್ರಮುಖರ ಜವಾಬ್ದಾರಿಯೆಂತಹದಿರಬೇಕೆಂಬುದಕ್ಕೊಂದು ದೃಷ್ಟಾಂತವನ್ನೊದಗಿಸುತ್ತದೆ. ಜನಜಂಗುಳಿಯನ್ನು ಕೆರಳಿಸುವದು ಬಹು ಸುಲಭ. ಆದರೆ ಕೇವಲ ಉದ್ರೇಕವು ಯಾವ ಕಾರ್ಯಕ್ಕೂ ಬೀಳದು. ಜವಾಬ್ದಾರೀ ಮುಂದಾಳುಗಳು ಜನರನ್ನು ಜಾಗ್ರತಿಗೊಳಿಸಬೇಕು. ವಿನಃ ಉದ್ರೇಕಗೊಳಿಸಬಾರದು. ಕೆಲವು ಜೈಲು ವಾರ್ಡರರ ಮರಣಕ್ಕೂ, ಎರಡೆರಡು ಸಲ ಗೋಳೀಬಾರಿಗೂ ಕಾರಣವಾದ ರಾಮದುರ್ಗ ಸಂಸ್ಥಾನದ ದಂಗೆಯು ತೀರಾ ಶೋಚನೀಯವಿದೆ. 'ಸರಿಯಾದ ವ್ಯವಸ್ಥೆಯಿಲ್ಲದೆ ಸಂಸ್ಥಾನಗಳಲ್ಲಿ ಚಳವಳ ಹೂಡಬಾರದು.' ಎಂದು ಮಹಾತ್ಮಾ ಗಾಂಧಿಯವರು ಸ್ಥಾನಿಕ ರಾಜ್ಯಗಳ ಆಂದೋಲನಗಳನ್ನು ನಿಲ್ಲಿಸುವ ಬೋಧನೆಯಿತ್ತಿರುವದು ಅತ್ಯಂತ ಸಮಂಜಸವಾದುದು. ಚಳವಳವೆಂದರೆ ರೋಷಾವೇಶ ಪ್ರದರ್ಶನವೊಂದೇ ಅಲ್ಲ; ಸರ್ವರ ಹಿತದ ಮಹತ್ಕಾರ್ಯ ಸಾಧನೆ. ಆದರಲ್ಲೂ ಅಧಿಕಾರಿಗಳನ್ನೆದುರಿಸುವಾಗ ಜಾಗ್ರತಿ, ಸ್ಥೈರ್ಯ, ತಾಳ್ಮೆಯು ಮಿಕ್ಕ ಗುಣಗಳಿಗಿಂತಲೂ ಅಧಿಕ ಪರಿಮಾಣದಲ್ಲಿ ಬೇಕು. ರಾಮದುರ್ಗ ಅಧಿಕಾರಿಗಳು ಶಾಂತಿ ಪಾಲನೆಗಾಗಿ ಅನುಸರಿಸಬೇಕಾಗಿದ್ದ ನ್ಯಾಯವಾದ ಹಾದಿ ಬೇರೆ ಇದ್ದಿರಬಹುದು. ಆದರೆ ದಂಗೆಯೆದ್ದ ಜನರ ಸ್ವಘಾತುಕ ವರ್ತನೆಯು ತೀರಾ ಖಂಡನೀಯವಿದೆ.

> **ನಮ್ಮ ಉಪ ಸಂಪಾದಕರ ಸಂಚಾರ**
>
> ನಮ್ಮ ಉಪಸಂಪಾದಕರಾದ ಶ್ರೀ ಎನ್. ಎಸ್. ಶೆಟ್ಟರು ಈ ವಾರದಲ್ಲಿ ಬೊಂಬಾಯಿಂದ ಪ್ರವಾಸಕ್ಕಾಗಿ ಮದ್ರಾಸಿಗೆ ಬಂದಿರುವರು. ಅಲ್ಲಿ ಅನೇಕ ಮದ್ರಾಸ್ ಕನ್ನಡಿಗರನ್ನು ನೋಡಲಿರುವರು. ಎಲ್ಲರೂ ಅವರಿಗೆ ಸಹಕಾರವನ್ನೂ ಪ್ರೋತ್ಸಾಹವನ್ನೂ ಕೊಡಬೇಕಾಗಿ ಈ ಮೂಲಕ ಅಪೇಕ್ಷಿಸೋಣಾಗುತ್ತದೆ. ಈ ವರೆಗೆ 'ನವಯುಗ'ಕ್ಕೆ ಚಂದಾದಾರರಾಗದವರು ಚಂದಾದಾರರಾಗಿ ಸೇರಿಯೂ ಜಾಹಿರಾತುದಾರರು ಜಾಹಿರಾತುಗಳನ್ನೂ ಕೊಟ್ಟೂ ಪ್ರೋತ್ಸಾಹಿಸಬೇಕಾಗಿ ವಿನಂತಿ. **ಮೆನೇಜರ್**

ಜಿನ್ನಾ ಸಾಹೇಬರ ಸ್ವಾರ್ಥ

ಮಿ. ಜಿನ್ನಾರವರ ಮುಂದಾಳುತ್ವದಲ್ಲಿ ಮುಸ್ಲಿಂ ಲೀಗಿನವರು ದೇಶದ್ರೋಹಕರ ಹಾದಿಯಾವುದೆಂಬುದನ್ನು ಅರಸಿಯರಸಿ ಹಿಡಿಯುತ್ತಿರುವರೋ ಎಂಬಂತೆ ಕಾಣುತ್ತದೆ. ನವ ದಿಲ್ಲಿಯಲ್ಲಿ ಸೇರಿದ ಲೀಗ್ ಕೌನ್ಸಿಲಿನ ಸಭೆಯಲ್ಲಿ ಮಾತಾಡುತ್ತಾ ಮಿ. ಜಿನ್ನರು 'ಹಿಂದುಸ್ಥಾನವನ್ನು ಹಿಂದೂಭಾರತ, ಮುಸ್ಲಿಂ ಭಾರತ ಎಂದು ವಿಭಾಗಿಸಲು ಹಲವು ಹಾದಿಗಳಿವೆ. ಅವುಗಳಲ್ಲಿ ಉಚಿತವಾದುದನ್ನು ನಾವು ಮುಂದಕ್ಕನುಸರಿಸಲಿರುವೆವು, ಎಂದರು! ಹಿಂದೂ ಮುಸ್ಲೀಮ್ ಭೇದವೆಷ್ಟು ಕೃತಕವಾದುದೆಂಬುದನ್ನು ಇತ್ತಂಡದ ಹಲವು ಸ್ವಚ್ಛಮತಿಗಳು ತಮ್ಮ ಪ್ರತ್ಯಕ್ಷ ವರ್ತನೆಯಿಂದ ತೋರಿಸಿದ್ದಾರೆ. ಅಲ್ಲಲ್ಲಿ ಭಾವೋದ್ರೇಕಕಾರೀ ಘಟನೆಗಳುಂಟಾಗುವುದೂ, ಅಜ್ಞಾನಿಗಳದಕ್ಕೆ ಸುಲಭವಾಗಿ ಬಲಬೀಳುವದೂ ಆಶ್ಚರ್ಯದ ಮಾತಲ್ಲ. ಇವುಗಳ ಪರಿಣಾಮವಾಗಿ ಜಗಳಗಳಾಗುವದರಲ್ಲಿಯೂ ವಿಶೇಷವಿಲ್ಲ. ಆದರೆ ಇವೆಲ್ಲಾ ತಪ್ಪುಗ್ರಹಿಕೆಯಿಂದೇಳುವ ಗಂಡಾಂತರಗಳೆಂಬುದು ಯಾರಿಗಾದರೂ ಅರ್ಥವಾಗುವ ವಿಷಯ. ಮಿ. ಜಿನ್ನರು ಭಾರತವನ್ನೇ ಹಿಂದೂಭಾರತ–ಮುಸ್ಲಿಮ ಭಾರತವೆಂದು ವಿಂಗಡಿಸುವ ಕೆಲಸಕ್ಕೆ ಕೈಯಿಕ್ಕಿರುವದು ತೀರಾ ಹಾಸ್ಯಾಸ್ಪದ ವಾದುದು. ರಾಜನೀತಿಯಲ್ಲಿ ಮುಸ್ಲೀಮ್ ವ್ಯತ್ಯಾಸವೆಂಬುದೇ ಕೃತಕವಾಗಿರುವಾಗ ಭಾರತವನ್ನೇ 'ಹಿಂದೂ ಮುಸ್ಲೀಮ್' ಮಾಡುವೆನೆನ್ನುವ ಮಿ. ಜಿನ್ನರ ಮೂರ್ಖಾಟಕ್ಕೇನೆನ್ನಬೇಕು?

> ಉಪಾಧ್ಯಾಯರಾಗಲೀ ವಿದ್ಯಾರ್ಥಿಗಳಾಗಲೀ ರಜಾಕಾಲವನ್ನು ಸದ್ವಿನಿಯೋಗಿಸಿ ರೂ. 25ರಿಂದ 100ರ ತನಕ ಯಾ ಅದಕ್ಕಿಂತ ಹೆಚ್ಚು ಹೇಗೆ ಸಂಪಾದಿಸಬಹುದು ಎಂಬ ವಿವರವನ್ನು ತಿಳಿಯುವುದಕ್ಕೆ ಒಂದಾಣೆ ಸ್ಟಾಂಪಿನೊಂದಿಗೆ ಬರೆಯಿರಿ.
>
> **ಮೆನೇಜರ್, ನವಯುಗ.**

ಉಡುಪಿ

ಉಡುಪಿ ಟೌನ್ ಕಾಂಗ್ರೆಸ್ ಕಮಿಟಿ ಚುನಾವಣೆಯ ರದ್ದತಿ–ಹೊಸ ಕಮಿಟಿಯ ರಚನೆ— ತಾ. 5-3-39ರಲ್ಲಿ ನಡೆದ ಉಡುಪಿ ಟೌನ್ ಕಾಂಗ್ರೆಸ್ ಕಮಿಟಿಯ ಕಾರ್ಯನಿರ್ವಾಹಕ ಮಂಡಳಿಯ ಚುನಾವಣೆಯು ಅನಧಿಕೃತವಾದುದೆಂದೂ ಅದ್ದರಿಂದ ಅದನ್ನು ರದ್ದು ಪಡಿಸಲಾಗಿದೆಯೆಂದೂ ಹೊಸ ಚುನಾವಣೆಯು ತಾ. 23-4-39ನೇ ಸಂಜೆ 4 ಗಂಟೆಗೆ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಲಿದೆ ಎಂದೂ ರಿಟರ್ನಿಂಗ್ ಆಫೀಸರರಾದ ಶ್ರೀ. ಬಾಂಗಾಳ ಲಕ್ಷ್ಮೀನಾರಾಯಣ ನಾಯಕರು ತಿಳಿಸುತ್ತಾರೆ.

ರಸ್ತೆಗೆ ನೀರಿಲ್ಲ— ಪಟ್ಟಣಾಡಳಿತದ ಟೌನಿನ ಕೆಲವು ರಸ್ತೆಗಳಿಗೆ ಸರಿಯಾಗಿ ನೀರು ಹಾಕುವುದಿಲ್ಲವೆಂದೂ ದೂಳಿನ ಕಾಟವು ಅತ್ಯಧಿಕವಾಗಿದೆಯೆಂದೂ ಈ ಕುರಿತು ಸಂಬಂಧಪಟ್ಟವರೇನೂ ಚಿಂತಿಸಲಕ್ಷ್ಯವಿಡುವಂತೆ ತೋರುವುದಿಲ್ಲೆಂದೂ ಮುಂತಾಗಿ ಆಕ್ಷೇಪಿಸುವ ಬಾತ್ಮಿಯೊಂದು ನಮ್ಮ ಬಳಿಗೆ ಬಂದಿದೆ. ಈ ಕುರಿತು ಸಂಬಂಧಪಟ್ಟವರು ಗಮನಿಸುವರಾಗಿ ನಂಬುತ್ತೇವೆ. (ಸಂ. ನ.)

ಉಪಾಕೃತರೆ— ಇಲ್ಲಿಯ ಗೋಪಾಲಾಶ್ರಮದಲ್ಲಿ ಸುಮಾರು 3 ವರ್ಷಗಳಿಂದ ಡಾಕ್ಟರರಾಗಿದ್ದ ಶ್ರೀ. ಕೆ. ವಿ. ಕೆ. ಉಪಾಧ್ಯಾಯ, L. A. M. S. & D. I. M. S. ಇವರು ಕನ್ನ ಸ್ವಂತ ಊರಾದ ಕಾರ್ಕಳದಲ್ಲಿ ನೋಪ್ ತೆರೆಯಲಿರುವುದರಿಂದ ಇಲ್ಲಿಂದ ಅಗಲಿ ಹೋಗುವಾಗ ಸ್ಥಳೀಯ ಮಹನೀಯರು ತಾ. 9-4-39ರಲ್ಲಿ ಪಂಚಾಯತ ಬೋರ್ಡ ಆಫೀಸಿನಲ್ಲಿ ವಿದಾಯ ಸತ್ಕಾರವನ್ನಿತ್ತು ಸನ್ಮಾನಿಸಿದರು. ಡಾ| ಉಪಾಧ್ಯಾಯರು ಜನಪ್ರೀತರಾಗಿಯೂ ಜಾತಿಭೇದವಿಲ್ಲದವರಾಗಿಯೂ ಸರಳ ಸ್ವಭಾವದವರಾಗಿಯೂ ಇದ್ದರು.

ರಾಜಕೋಟೆಯ ಉಪವಾಸದ ಸಮಸ್ಯೆ ಆರೋಪ

ರಾಮದುರ್ಗದ ಮಾರಾಮಾರಿ! — ಜೈಲು ಗೇಟಿಗೆ ಬೆಂಕಿಕೊಟ್ಟರು! — ಅಲ್ಬೇನಿಯಾ

ಆಂಧ್ರ ಮೆಡಿಕಲ್ ಡಿಗ್ರಿಯ ಮಂಜೂರಾತಿ

ವಿಝಾಗಪಟ್ಟಣದಲ್ಲಿರುವ ಆಂಧ್ರ ವಿಶ್ವವಿದ್ಯಾಲಯದ ಎಮ್. ಬಿ. ಬಿ ಎಸ್. ಡಿಗ್ರಿಗಳನ್ನು ಎರಡು ವರುಷಗಳ ವರೆಗೆ ಮಂಜೂರುಮಾಡುವ ನಿರ್ಣಯವು ಅಖಿಲಭಾರತದ ಮೆಡಿಕಲ್ ಕೌನ್ಸಿಲಿನವರಿಂದಾಗಿದೆ. ಇನ್ನೂ ಸಮಾಧಾನಕರ ರೀತಿಯಲ್ಲಿ ಕಲಿಸುವಿಕೆಯು ನಡೆಯಬೇಕೆಂದು ಕೌನ್ಸಿಲಿನವರು ಸೂಚಿಸಿರುವರು. ಎರಡು ವರುಷಗಳ ನಂತರ ಆ ಕುರಿತು ವಿಚಾರಣೆ ನಡಿಸಿ, ಆಂಧ್ರ ಮೆಡಿಕಲ್ ಡಿಗ್ರಿಯನ್ನು ಶಾಶ್ವತವಾಗಿ ಒಪ್ಪಬಹುದೋ ಎಂಬುದನ್ನು ಆಮೇಲೆ ನಿರ್ಧರಿಸಲಿರುವರು. ಕಲ್ಕತ್ತಾ ಡಿಗ್ರಿಗಳಿಗೂ ಒಪ್ಪಿಗೆಕೊಡಬೇಕೆಂದು ಅಲ್ಲಿಯ ವಿಶ್ವವಿದ್ಯಾಲಯದವರಿಂದ ಬಂದಿದ್ದ ಬಿನ್ನಹದ ಕುರಿತು ತೀರ್ಮಾನವನ್ನು ಕೌನ್ಸಿಲಿನ ಮುಂದಿನ ಸಭೆಗೆ ಮುಂದರಿಸಿಟ್ಟಿರುವರು. ಕೌನ್ಸಿಲು ಅಧ್ಯಕ್ಷರು ಆದಷ್ಟು ಬೇಗನೆ ಕಲ್ಕತ್ತಾ ಯುನಿವರ್ಸಿಟಿಯನ್ನು ಸಂದರ್ಶಿಸಿ ವಿಚಾರಿಸಬೇಕೆಂದು ನಿರ್ಣಯವಾಗಿದೆ.

ರಾಜಕೋಟೆಯ ಸಮಸ್ಯೆ

ವೈಸರಾಯರೊಡನೆ ಮಾತುಕತೆ ಮುಗಿಸಿ ಡಿಲ್ಲಿಯಿಂದ ಹೊರಟ ಮಹಾತ್ಮಾ ಗಾಂಧಿಯವರು ತಾ. ೯ರಲ್ಲಿ ರಾಜಕೋಟೆಗೆ ಮರಳಿದ್ದಾರೆ. ದರ್ಶನಕ್ಕಾಗಿ ಹಾತೊರೆಯುವ ಸಾವಿರಗಟ್ಲೆ ಜನರ ಗೊಂದಲವನ್ನು ತಪ್ಪಿಸುವುದಕ್ಕಾಗಿ ರಾಜಕೋಟೆ ಸ್ಟೇಶನಿನಿಂದ ಒಂದು ಮೈಲು ದೂರದಲ್ಲಿಯೇ ರೈಲಿನಿಂದಿಳಿದು ಹೋಗಬೇಕಾಯಿತು. ಸರದಾರ್ ಪಟೇಲರು ಪುತ್ರಿ ಮಣಿಬೆನ್ ಪಟೇಲರೊಂದಿಗೆ ಸ್ಪೆಶ್ಯಲ್ ವಿಮಾನದಲ್ಲಿ ರಾಜಕೋಟೆಗೆ ಬಂದಿಳಿದು ಕೂಡಲೆ ಗಾಂಧಿಯವರೊಡನೆ ಮಾತಾಡಲು ಅವರಿಳಿದಿರುವ 'ಆನಂದ ಕುಂಜ್' ಭವನಕ್ಕೆ ತೆರಳಿದರು. ಭಾರತದ ಪಶ್ಚಿಮಗಡೆಯ ಸಂಸ್ಥಾನಗಳ ರೆಸಿಡೆಂಟರಾದ ಮಿ. ಗಿಬ್ಬನರೂ ರಾಜಕೋಟೆಗೆ ಬಂದಿದ್ದಾರೆ ದರ್ಬಾರ್ ವೀರವಲ್ಲರು ಅವರೊಡನೆ ಮಾತಾಡಿರುವರಲ್ಲದೆ ಮುಸ್ಲೀಮರೊಡನೆಯೂ ಸಂಭಾಷಣೆ ನಡಿಸಿರುವರು. ಈ ಸಂಭಾಷಣೆಯ ವಿಷಯಗಳು ಗುಪ್ತವಾಗಿರಿಸಲ್ಪಟ್ಟವೆ. ಸರದಾರ ಪಟೇಲರು ಮಹಾತ್ಮಾ ಗಾಂಧಿಯವರೊಡನೆ ಮಾತಾಡಿ ಸುಧಾರಣಾ ಸಮಿತಿಯ ಏಳು ಮಂದಿ ಮೆಂಬರರ ಹೆಸರನ್ನು ಸೂಚಿಸಿ ಪತ್ರವೊಂದನ್ನು ರಾಜಾ ಥಾಕೋರ್ ಸಾಹೇಬರಿಗೆ ಬರೆಯಲಿರುವರೆಂದು ತಿಳಿದುಬರುತ್ತದೆ. ಉಳಿದ ಮೂವರನ್ನು ಸ್ವತಃ ಥಾಕೋರ್ ಸಾಹೇಬರೇ ನೇಮಿಸಲಿಕ್ಕಿರುವರಲ್ಲದೆ ಈ ಹತ್ತು ಮಂದಿಗಳ ಪೈಕಿ ಒಬ್ಬನನ್ನು ಅಧ್ಯಕ್ಷನನ್ನಾಗಿ ರಾಜರು ಆರಿಸಬೇಕಾಗಿದೆ.

ಮುಸ್ಲೀಮರ ಕ್ರೋಧ

ಗೃಹಮಂತ್ರಿ ಮಾನ್ಯ ಕ್ವಾಜಾ ನಜಿಮುದ್ದೀನರ ಅಧ್ಯಕ್ಷತೆಯಲ್ಲಿ ಸೇರಿದ ಬಂಗಾಳ ಪ್ರಾಂತಿಕ ಮುಸ್ಲಿಮ್ ಲೀಗಿನ ಪರಿಷತ್ತಿನಲ್ಲಿ ಯುರೋಪುಖಂಡದ ಒಂದೇ ಒಂದು ಮುಸ್ಲೀಮು ರಾಜ್ಯವಾಗಿದ್ದ ಅಲ್ಬೇನಿಯಾವನ್ನು ನುಂಗಿದ ಮುಸಲನಿಯ ವರ್ತನೆಯನ್ನು ಖಂಡಿಸಿ ಠರಾವಾಗಿದೆ.

ವಾರ್ಧಾಯೋಜನೆಯ ಖಂಡನೆ

ಅಖಿಲಭಾರತ ಮುಸ್ಲೀಮು ಲೀಗಿನವರಿಂದ ವಾರ್ಧಾಯೋಜನೆಯ ಪರಾಮರ್ಶೆಗಾಗಿ ಪಿರ್ಪುರ ರಾಜರ ಅಧ್ಯಕ್ಷತೆಯಲ್ಲಿ ನೇಮಕ ಹೊಂದಿದ ಕಮಿಟಿಯು ವಾರ್ಧಾಯೋಜನೆಯನ್ನು ತೀವ್ರವಾಗಿ ಖಂಡಿಸಿ ವರದಿಯೊಪ್ಪಿಸಿದೆ. ಈ ಯೋಜನೆಯು ವಿದ್ಯಾಭ್ಯಾಸದ ರೀತಿನೀತಿಗಳನ್ನೊಳಗೊಂಡಿಲ್ಲವೆಂದೂ, ಭಾರತದ ಎಲ್ಲಾ ಧರ್ಮಗಳಿಗೂ ಪ್ರಾಮುಖ್ಯತೆಯೀಯಲ್ಪಟ್ಟದೆ ಎಂದು ಸೂಚಿಸಲ್ಪಟ್ಟಿದ್ದರೂ, ಅದರಲ್ಲಿ ಗಾಂಧೀ ಧರ್ಮಕ್ಕೆ ಮಾತ್ರ ಪ್ರಾಮುಖ್ಯತೆ ಕೊಡಲ್ಪಟ್ಟಿದೆಯೆಂದೂ ವರದಿಯಲ್ಲಿದೆ.

ಜಮೀನುದಾರರ ಪರಿಷತ್ತು

ಅಖಿಲಭಾರತ ಜಮೀನುದಾರರ ಪರಿಷತ್ತು ಲಕ್ನೋವಿನಲ್ಲಿ ದರ್ಭಾಂಗದ ರಾಜರ ಅಧ್ಯಕ್ಷತೆಯಲ್ಲಿ ನೆರೆಯಿತು. ಧಾನ್ಯಗಳಿಗೆ ಮಾರ್ಕೆಟು ತಯಾರಿ, ಅದಕ್ಕಾಗಿ ಹೊಸ ಏಜನ್ಸಿ ರಚನೆ ಮತ್ತು ಗೇಣಿ ವಸೂಲಿಯ ಸುಲಭೋಪಾಯಗಳ ಕುರಿತು ನಿರ್ಧಾರಗಳಾದವು.

ಹೈದರಾಬಾದು ಸತ್ಯಾಗ್ರಹ.

ಸತ್ಯಾಗ್ರಹ ಹೂಡಲು ಹೊರಟ ಹಿಂದೂ ಮಹಾಸಭೆಯ 58 ಸತ್ಯಾಗ್ರಹಿಗಳನ್ನೂ 9 ಮಂದಿ ಆರ್ಯ ಸಾಮಾಜಿಕ ಸತ್ಯಾಗ್ರಹಿಗಳನ್ನೂ ದಸ್ತಗಿರಿ ಮಾಡಲಾಗಿದೆ. 62 ಜನರಿಗೆ ಬೇರೆ ಬೇರೆ ರೀತಿಯ ಶಿಕ್ಷೆ ವಿಧಿಸಲ್ಪಟ್ಟಿತು.

ರಾಮದುರ್ಗದ ಮಾರಾಮಾರಿ! ಜೈಲುಗೇಟಿಗೆ ಬೆಂಕಿಕೊಟ್ಟರು! ಹದಿಮೂರು ಜನ ಮೃತಪಟ್ಟರು.

ಇದೇ ತಾ. 7ರಲ್ಲಿ ರಾಮದುರ್ಗದ ಜನರು ದಂಗೆಯೆದ್ದು ಜೈಲು ಗೇಟಿಗೆ ಬೆಂಕಿಕೊಟ್ಟು ಕೈದಿಗಳನ್ನು ಬಿಡಿಸಿ ಎಂಟುಮಂದಿ ಜೈಲು ಕಾವಲುಗಾರರನ್ನು ಕೊಂದು ಜೈಲರರಿಬ್ಬರನ್ನು ತೀವ್ರ ಜಖಂ ಗೊಳಿಸಿದ ಭೀಕರ ವಾರ್ತೆ ಕೇಳಿಬರುತ್ತಿದೆ. ಪೋಲೀಸರ ಗೋಳಿಬಾರಿನಿಂದಾಗಿ ಐದು ಮಂದಿ ಮೃತಪಟ್ಟಿರುವರು. ಬೆಳ್ಗಾಂ ಮತ್ತು ಪೂನಾದಿಂದ ಸೇನೆ ಬಂದು ಗಲಭೆಯನ್ನು ನಿಲ್ಲಿಸಿದೆ.

ದಂಗೆಯ ಕಾರಣ.

ಕೆಲವು ದಿನಗಳಿಗೆ ಹಿಂದೆ ರಾಮದುರ್ಗದ ದರ್ಬಾರಿನವರು ಪಟ್ಟಣದ ನಡುವಿನಲ್ಲಿದ್ದ ರಾಷ್ಟ್ರೀಯ ಧ್ವಜವಚೌಕವನ್ನು ತೆಗೆಯಬೇಕೆಂಬ ಹುಕುಮುಕೊಟ್ಟಿದ್ದರು. ವಾಹನ ಸಂಚಾರಕ್ಕೆ ತಡೆಯಾಗುವದೆಂಬುದೇ ಇದಕ್ಕೆ ಕಾರಣ. ಜನರೀ ಹುಕುಮನ್ನು ಉಲ್ಲಂಘಿಸಿ ಪ್ರದರ್ಶನ ನಡೆಸಿದ್ದಲ್ಲದೆ ಪೋಲೀಸರ ಮೇಲೆ ಕಲ್ಲುಗಳನ್ನೆಸೆದರಂತೆ. ಇದರಿಂದ ತೀವ್ರ ಜಖಂ ಹೊಂದಿದ ಸಂಸ್ಥಾನದ ಪೇದೆಯೊಬ್ಬನು ಮರುದಿನ ಮೃತಿಹೊಂದಿದನು. ಒಡನೆ ದರ್ಬಾರಿನವರು ರಾಮದುರ್ಗ ಪ್ರಜಾಸಂಘವನ್ನು ಕಾಯಿದೇ ವಿರುದ್ಧವೆಂದು ತೀರ್ಮಾನಿಸಿ ಅದರ ಅಧ್ಯಕ್ಷ ಕಾರ್ಯದರ್ಶಿ ಮತ್ತು ಬೇರಿಬ್ಬರನ್ನು ದಸ್ತಗಿರಿ ಮಾಡಿ ಜೈಲಿಗೆ ಕೊಂಡೊಯ್ದರು. ಈ ವಾರ್ತೆ ಹಬ್ಬಿದೊಡನೆ ರಾಮದುರ್ಗ ಪಟ್ಟಣದ ಜನರೆಲ್ಲಾ ಉದ್ವೇಗಗೊಂಡು ಹಿಂಡುಗಟ್ಟಿ ಜೈಲುಗೇಟಿನ ಮುಂದೆ ನೆರೆಯಲಾರಂಭಿಸಿದರು. ದಿವಾನರೂ ಮೆಜಿಸ್ಟ್ರೇಟರೂ ಪಟ್ಟಣವನ್ನು ಶಾಂತಸ್ಥಿತಿಯಲ್ಲಿಡಲು ಮಾಡಿದ ಪ್ರಯತ್ನಗಳು ಫಲಿಸಲಿಲ್ಲ ಜನರು ದೊಡ್ಡ ದೊಡ್ಡ ಕಲ್ಲುಗಳನ್ನೂ ಮರದ ತುಂಡುಗಳನ್ನೂ ರಾಶಿ ಹಾಕಿ ಜೈಲು ರಸ್ತೆಯನ್ನು ತಡೆಗಟ್ಟಿದರೆಂದು ಕೆಲವರು ಕೆರೋಸಿನ್ ಎಣ್ಣೆಯ ಡಬ್ಬಿಗಳೊಡನೆ ಬಂದಿದ್ದರೆಂದೂ ವಾರ್ತೆಯಿದೆ. ಹಲವರ ಕೈಯಲ್ಲಿ ಲಾಠಿಗಳಿದ್ದುವಂತೆ. ಜೈಲಿನ ಕಡೆಗೆ ಗುಂಪು ನುಗ್ಗಿದಾಗ ಪೋಲೀಸರು ಗೋಳಿಬಾರು ಮಾಡಿ ಇಬ್ಬರು ಸತ್ತುಬಿದ್ದರು. ತಾಳ್ಮೆಗೆಟ್ಟ ಜನಸಂದೋಹವು ಮುಂದೆ ನುಗ್ಗಿ ಜೈಲುಗೇಟಿಗೆ ಬೆಂಕಿಕೊಟ್ಟು ಸುಟ್ಟುಬಿಟ್ಟಿತು. ಆಮೇಲೆ ಜನರು ಜೈಲಿನೊಳಗೂ ನುಗ್ಗಿ ರಾಜಕೀಯ ಕೈದಿಗಳನ್ನೂ 'ಇತರ' ಕೈದಿಗಳನ್ನೂ ಬಿಡಿಸಿದರು. ಅವರಲ್ಲೊಬ್ಬನು ಫಾಶಿ ಶಿಕ್ಷೆಗೆ ಗುರಿಯಾದವನಿದ್ದ. ಜೈಲು ಸುಪರಿಂಟೆಂಡೆಂಟರು ಧಾಳಿಯಿಂದ ಅಕಸ್ಮಾತ್ ಪಾರಾದರು. ಜೈಲರರು ತೀವ್ರ ಜಖಂಗೊಂಡರು. ಎಂಟು ಮಂದಿ ಜೈಲು ಕಾವಲಿನವರು ಸಾಯುವ ತನಕ ಹೊಡೆಯಲ್ಪಟ್ಟರು. ಈ ನಡುವೆ ಪುನಃ ಪೋಲೀಸರ ಗೋಳಿಬಾರು ನಡೆದು ಮೂರು ಮಂದಿ ಮರಣ ಹೊಂದಿದರು.

ಈಗ ಬೆಳ್ಗಾಮ್ ಮತ್ತು ಪೂನದಿಂದ ಸೈನಿಕ ದಳಗಳು ಬಂದು ಪರಿಸ್ಥಿತಿಯು ಹತೋಟಿಯಲ್ಲಿರುವುದಾದರೂ ಪಟ್ಟಣಿಗರು ಭಯಭರಿತರಾಗಿದ್ದಾರೆ.

ರಾಜಕೋಟೆ ತೀರ್ಮಾನದ ಮೇಲೆ ಮಿ. ಜಿನ್ನರ ಟೀಕೆ.

ಅಖಿಲ ಭಾರತ ಮುಸ್ಲಿಂ ಲೀಗಿನ ಕೌನ್ಸಿಲ್ ಸಭೆಯು ಹೊಸ ಡಿಲ್ಲಿಯಲ್ಲಿ ಮಿ. ಜಿನ್ನಾ ಸಾಹೇಬರ ಅಧ್ಯಕ್ಷತೆಯಲ್ಲಿ ಸೇರಿ, ರಾಜಕೋಟೆಯಲ್ಲಿ ಗಾಂಧಿಯವರು ಕೈಕೊಂಡಿದ್ದ ಉಪವಾಸವನ್ನು ಖಂಡಿಸಿ, ಥಾಕೋರ್ ಸಾಹೇಬರಿಂದ ಸಮಿತಿ ಸದಸ್ಯತನಕ್ಕೆ ನೇಮಿಸಲ್ಪಟ್ಟ ಇಬ್ಬರು ಮುಸ್ಲಿಮು ಸದಸ್ಯರನ್ನು ಸರದಾರ ಪಟೇಲರು ಆರಿಸದಿದ್ದಲ್ಲಿ ಆಕ್ಷೇಪಿಸಬೇಕೆಂದು ವೈಸರಾಯರನ್ನೂ ಥಾಕೋರ್ ಸಾಹೇಬರನ್ನೂ ಕೇಳಿಕೊಳ್ಳುವ ಠರಾವು ಮಾಡಿತು. ತಪ್ಪಿದಲ್ಲಿ ರಾಜಕೋಟೆಯ ಮುಸ್ಲೀಮರು ತಮ್ಮ ಸರ್ವಶಕ್ತಿಯಿಂದ ಇದಿರಿಸಬೇಕೆಂದು ಅವರನ್ನು ಉತ್ತೇಜಿಸುವ ಸೂಚನೆಯೂ ಆಗಿದೆ

ರಾಜಕೋಟೆಯ ಉಪವಾಸವು ಜನಾಂಗದ ಜಯ

ಮ. ಗಾಂಧಿಗಳ ಹೇಳಿಕೆ.

"ರಾಜಕೋಟೆ ಪ್ರಕರಣದ ಕುರಿತು ಅನುಕೂಲಾಗ್ರ ಅನುಭವವುಳ್ಳವನು ಮೇಲೆ ಆರೋಪಿಸಿದ ಆರೋಪಗಳಿಗೆ ಹೆಚ್ಚಿನ ಮಹತ್ವಕೊಡಬಾರದು. ಕಾರಣ ನ್ಯಾಯನೀತಿಗನುಸಾರವಾಗಿಯೇ ನಾನು ವರ್ತಿಸಿರುವೆನು. ಹಿಂದೂಸ್ಥಾನದ ಭೂಪಟದಲ್ಲಿ ರಾಜಕೋಟೆಯು ಗಣನೀಯವಲ್ಲದ ಚುಕ್ಕೆಯಂತಿದ್ದರೂ ಅಲ್ಲಿ ನಡೆದ ಕಲಹವು ಮಾತ್ರ ಇಡೀ ಭೂಲೋಕಕ್ಕೇನೇ ಸಂಬಂಧಿಸಿದುದಾಗಿದೆ. ನ್ಯಾಯ ನೀತಿಗೆ ವಿರುದ್ಧವಾದ ದೇವರು ಮೆಚ್ಚದ ದುಷ್ಕಾರ್ಯ–ದುರ್ಲಕ್ಷಣಗಳ ಚಿಗುರನ್ನು ಚಿವುಟಿ ಅವು ಅಲ್ಲಿಂದಲ್ಲಿಂದಲೇ ಮಾಯವಾಗಬೇಕೆಂಬ ಸದುದ್ದೇಶದಿಂದಲೇ ನಾನು ರಾಜಕೋಟೆಗೆ ಅಷ್ಟು ಮಹತ್ವ ಕೊಡಲು ಕಾರಣ. ರಾಜಕೋಟೆಯ ವಿಜಯವು ಅಖಿಲ ಹಿಂದೂಸ್ಥಾನಕ್ಕೇನೇ ಸಂಬಂಧಿಸಿದುದಾಗಿದೆ. ಯುದ್ಧಕ್ಕೆ ತಯಾರಿಮಾಡುವುದು ಮತ್ತು ಯುದ್ಧ ಆರಂಭವಾದುದು ಇವೆರಡಕ್ಕೂ ತುಂಬಾ ಅಭ್ಯಂತರವಿದೆ. ತ್ರಿಪುರಿ ಕಾಂಗ್ರೆಸ್ ಅಧಿವೇಶನವು ಯುದ್ಧಕ್ಕೆ ತಯಾರಿ ಮಾಡುವುದು ಆದರೆ ರಾಜಕೋಟೆಯಲ್ಲಿ ಕಾರ್ಯತಃ ಲಡಾಯಿ ಆರಂಭವಾಗಿರುವುದು

ಅಹಿಂಸಾವಾದಿಗಳಿಗೆ ಸತ್ಯಾಗ್ರಹವೊಂದೇ ಬಲವಾದ ಆಯುಧ ಈ ಆಯುಧದ ರಕ್ಷಾಕವಚವೆಂದರೆ ಉಪವಾಸವ್ರತವು. ಸನ್ನೀ ವ್ರತದ ಕುರಿತು ಟೀಕಿಸುವವರಿಗೆ ಒಂದೇ ಮಾತಿನಿಂದ ಹೇಳುವದಾದರೆ ಉಪವಾಸವ್ರತವೊಂದಲ್ಲದಿದ್ದರೆ ರಾಜಕೋಟೆಯಲ್ಲಿ ರಕ್ತಪಾತವಾಗುತ್ತಿತ್ತು. ವೈಸರಾಯರ ಭೇಟಿಗೆ ಹೋಗುವುದರಲ್ಲಿ ನಾಚಿಗೆಗೇಡೇನೂ ಇರುವುದಿಲ್ಲ. ನಾನು ಕೇವಲ ಅರ್ಜಿದಾರನಾಗಿ ಹೋದುದೂ ಅಲ್ಲ; ವೈಸರಾಯರ ಕೃಪೆಗೆ ಪಾತ್ರನಾಗಬೇಕೆಂಬ ಉದ್ದೇಶವೂ ನನ್ನಲ್ಲಿ ಇದ್ದಿಲ್ಲ. ನಾನು ಉಪವಾಸವ್ರತಕೈಗೊಂಡ ವೇಳೆ ಹಿಂದೀ ಜನತೆಯ ಮನೋಭಾವನೆಯ ಪರಿಣಾಮವನ್ನು ಅರಿತುದರಿಂದಲೇ ವೈಸರಾಯರು ತನ್ನನ್ನು ...

ದೊರೆತಾಗಲೇ ... ನಲ್ಲಿ ಸತ್ಪರಿಣಾ... ಕರವಾದ ರಾ... ವುದು ಸತ್ಯಾ... ಲ್ಲೊಂದಾಗಿವೆ ... ಕಾಲದಲ್ಲಿಯು ... ಒದಗಿತ್ತು.

ಕೊನೆಯ... ಒರು ಸದಾ... ದ ದ್ವಯಾರ್ಥ... ಒಂದಭಿಪ್ರಾಯ ... ಕೊಂಡಾಗ ... ಇನ್ನೊಂದು ... ಸರಾಮಿಯರು ... ಸರ ತೀರ್ಮಾನ... ದೆಂದರು. ... ಯಾ ಆಕ್ಷೇಪ... ಕೋಟೆಯ ...

ರಾಜಕೋ... ಮಹಾ...

ರಾಜಕೋ... ಮಂಡಲವೊಂ... ಮೋಸರ ... ಯವರನ್ನು ... ಮಾತುಕತೆಗ... ಕಮಿಟಿಯಲ್ಲಿ ... ಸಾಕಷ್ಟು ... ಲದ ಪ್ರಧಾ... ವೆಂದೂ ...

ಶ್ರೀಮತಿ ... ಯ...

ಶ್ರೀಮತಿ ... ವರಿಗೆ ಮ... ಹತ್ತಿದೆಯಾದ... ರಣವಿಲ್ಲ.

ಅಲ್ಬೇನಿಯ ... ಇಟಲಿಯ...

ಅಲ್ಬೇನಿಯಾ... ರದಿಂದ ಮುಂ... ಪಟ್ಟಣವಾದ ... ಯಾಸವಿಲ್ಲದ ... ರಾಜರು ಮತ್ತು ... ವಲೇ ಪಲಾಯ... ಲ್ಲಿ ಅಲ್ಲಲ್ಲಿ ...

ಅಂತರಂಗ ಯುಗಾದಿ ವಿ...
ಬೆಲೆ ೦ ೨ ೦]
ಕರ್ನಾಟಕದ ಎಲ್ಲಾ ನ್ಯೂಸ್...

…ಗೆ ಸಮರ್ಪಕ ಉತ್ತರ — ಜರ್ಮನಿಯ ಕ್ರೋಧ.

…ನಿಯು ಇಟಲಿಯ ವಶವಾಯಿತು — ಬಗ್ದಾದಿನಲಿ ಬ್ರಿಟಿಷ್ ರಾಯಭಾರಿಯ ಕೊಲೆ!

…, ಸಂದರ್ಭ …ಧಿಯ ಮನಸ್ಸಿ …ಟುಮಾಡಿ ಘನ …ಟಿಗೆ ನೆರವಾಗು …ದ ಅಂಗಗಳ … ಇರ್ವಿನ್‌ರ …ಪ ಪ್ರಸಂಗ

…ರ್ ಸಾಹೇ …ಗೆ ಒರೆದ ಪತ್ರ …ರ್ ಪಟೇಲರು …ವನ್ನು ಕಟ್ಟಿ … ಸಾಹೇಬರು …ಕೊಂಡರು. ಪ್ರೈ … ಜಸ್ಟೀ …ತ್ರ ಕೊಡುವು … ಓಫ್ ಇಂಡಿ …ದ ಫೆಡರಲ್ …ಸ್ಥೆ.

ಕೊನೆಗೆ ಪಟ್ಟಣವು ಫ್ಯಾಸಿಸ್ಟ್ ಸೈನಿಕರ ವಶವಾಯಿತು. ಹಲವು ನಾಗರಿಕರ ಮತ್ತು ಶಸ್ತ್ರಧಾರಿಗಳ ದಸ್ತಗಿರಿಯಾಗಿದೆ. ಕೆಲವು ಸೈನಿಕರು ಟಿರಾನಕ್ಕೆ ಬಂದು ಶಸ್ತ್ರ ಕೆಳಗಿಟ್ಟು ಇಟಲಿ ಸೈನಿಕರ ಶರಣುಹೊಕ್ಕಿರುವರು.

ಪ್ರಾಂತಿಕ ಸರಕಾರದ ಸ್ಥಾಪನೆ

'ಫಾಸಿಸ್ಟ್ ಇಟಲಿ ಸಾಮ್ರಾಜ್ಯದ ಅಂಗವಾಗಿ ನ್ಯಾಯಬದ್ಧವಾಗಿ ದೃಢತೆಯಿಂದ ರಾಜ್ಯಭಾರ ಮಾಡಬಲ್ಲ ಜವಾಬ್ದಾರೀ ಪ್ರಭೃತಿಗಳನ್ನೊಳಗೊಂಡ ಆಲ್ಬೇನಿಯಾ ಪ್ರಾಂತಿಕ ಸರಕಾರವು ಸ್ಥಾಪಿಸಲ್ಪಡುವವೆಂದು ಇಟಲಿಯು ಸಾರಿದೆ. ರಾಜಜೋಗರು ಸಂಧಾನದ ಮಾತುಕತೆಗೆ ತೊಡಗಿದುದು ಕೇವಲ ಕಣ್ಣು ಕಟ್ಟಿಗಾಗಿ; ಇಟಲಿಯ ಧಾಳಿಗೆ ವಿಳಂಬವನ್ನೊಡ್ಡಿ ಹಾದಿಯಲ್ಲಿದ್ದ ಸ್ಕಿಯಾ ಸೇತುವೆಯನ್ನು ಕಡಿದುಹಾಕುವದಕ್ಕಾಗಿ—ಎಂದು ಇಟಲಿಯವರ ಅಭಿಪ್ರಾ…

ಟಿರಾನಕ್ಕೆ ಮುಸಲೋನಿ

…ಷ ಸಂಚಿಕೆಯನ್ನು ಓದಿರಿ.

[PRICE 0 2 0

…ಜಂಟರಲ್ಲಿ ದೊರೆಯುತ್ತದೆ ∙:∙

…ಸ್ಲೀಮರು …ಕಂಡರು

…ಸ್ಲೀಮರ ಶಿಷ್ಯ …ಉಸ್ಮಾನ್ ಮ… ಮಹಾತ್ಮಾಜೀ …ಶಾಸಿನ ತನಕ … ಸಾಧಾರಣಾ …ಪ್ರಾತಿನಿಧ್ಯವು …ತಿಪ್ಪನಂಡ …ಪದ ಅಂಗ …ದೆ.

…ರಿಬಾಯಿ …ಗ್ರ …ಯು ಗಾಂಧಿಯು …ರವು ಪೀಡಿಸ …ಯಾಗಲು ಕಾ…

…ಧಾನಿಯು …ಯಿತು

…ರಿ ಸೈನಿಕರು ಭ… …ರಲ್ಲಿ ಮುಖ್ಯ …ಹೆಚ್ಚಿನ ಪ್ರ… …ಡಿಸಿಕೊಂಡರು. …ರಕಾರವು ಮೊ… …ರಾಜಧಾನಿಯ ಕಡೆಗೆಳದ್ದರೂ…

…ಯು, ಆಲ್ಬೇನಿಯಾನರು ಹೋದಕ್ಕೆಲ್ಲಾ ತಮ್ಮನ್ನು ಉತ್ಸಾಹದಿಂದ ಸ್ವಾಗತಿಸುತ್ತಿರುವರೆಂದು ಇಟಲಿ ಸೈನಿಕರು ಪ್ರಕಟಿಸಿರುವರು.

ಯುಗೋಸ್ಲೋವಿಯಾಕ್ಕೆ ಭರವಸೆ

ಇಟಲಿಯು ಸಮಾಧಾನಗೊಂಡೊಡನೆ ಆಲ್ಬೇನಿಯದಲ್ಲಿ ಶಾಂತಿಸ್ಥಾಪಿಸಲ್ಪಡುವದೆಂದೂ, ಯುಗೋಸ್ಲೋವಿಯದ ಹಿತಕ್ಕೆ ಎಳ್ಳಷ್ಟೂ ಬಾಧೆಪಟ್ಟದಂತೆ ನೋಡಲಾಗುವುದೆಂದೂ ಭರವಸೆ ದೊರೆತಿದೆ.

ರಾಜ ರಾಣಿಯರು ಗ್ರೀಸಿಗೋಡಿದರು

ರಾಜಾಜೋಗರು ಗ್ರೀಸಿನ ಗಡಿ ಸೇರಿ ಸಾಲೋನಿಕಾ ಎಂಬಲ್ಲಿಗೆ ಹೋಗಿರುವ ರಾಣಿಯನ್ನು ಸೇರಿರುವರು. ರಾಣಿಯರು ಆಲ್ಬೇನಿಯಾದಿಂದ ಪಲಾಯನವಾಡುವಾಗ ಹೆತ್ತು ಮೂರೇ ದಿನವಾಗಿತ್ತಂತೆ. "ಅಂತಹ ಸಶಸ್ತ್ರಸತ್ರಾಣೀ ರಾಷ್ಟ್ರದಿದಿರಲ್ಲಿ ಆಲ್ಬೇನಿಯವೇನು ತಾನೇ ಮಾಡಬಲ್ಲುದು? ನನ್ನ ದುರ್ದೈವೀ ರಾಷ್ಟ್ರಕ್ಕೊದಗಿದ ಇಂದಿನ ಪರಿಸ್ಥಿತಿಯಿಂದ ಬ್ರಿಟಿಷ್ ಸಾರ್ವಜನಿಕರ ಮನನೊಂದಿರಬಹುದೆಂದು ನಾನು ಆಶಿಸುತ್ತೇನೆ" ಎಂದು ರಾಣಿಯವರಭಿಪ್ರಾಯ ಸೂಚಿಸಿರುವರು.

ರೋಮಿನ ಪತ್ರಿಕೆಗಳು ವಿದೇಶೀ ಪತ್ರಿಕೆಗಳ ಘೋರಣೆಯನ್ನು ತೀವ್ರವಾಗಿ ಖಂಡಿಸುತ್ತಿವೆ. ಮುಸಲನಿಯ ಅಳಿಯ ಕೌಂಟ್ ಸಿಯಾನೋ ವಿಮಾನ ಮೂಲಕ ಟಿರಾನಕ್ಕೆ ಬಂದಿದ್ದಾನೆ. ತಾ. ೯ಕ್ಕೆ ಸ್ವತಃ ಮುಸಲನಿಯು ಟಿರಾನಕ್ಕೆ ಆಗಮಿಸುವನೆಂದು ಪ್ರಕಟವಾಗಿದೆ.

ಬ್ರಿಟಿಷ್ ಮಂತ್ರಿಮಂಡಲದ ಸಭೆ

ಮಿ. ಚೇಂಬರ್ಲೇನರು ಈಸ್ಟರ್ ರಜೆಯಲ್ಲಿ ಸ್ಕೋಟ್ಲೆಂಡಿನಲ್ಲಿರುವಂತೆಯೇ ಬ್ರಿಟಿಷ್ ಕೆಬಿನೆಟ್ ಸಭೆಯು ಸರ್. ಜೋನ್ ಸೈಮನರ ಅಧ್ಯಕ್ಷತೆಯಲ್ಲಿ ಸೇರಿ ಆಲ್ಬೇನಿಯಾ ಸಮಸ್ಯೆಯನ್ನು ಚರ್ಚಿಸಲಾಯಿತು ಇಟಲಿಯ ವಿರುದ್ಧಾಚರಣೆ ಅಥವಾ ನಿಷೇಧ ಸೂಚನೆಯ ಅಗತ್ಯವಿಲ್ಲವೆಂಬ ತೀರ್ಮಾನವಾಯಿತೆಂದು ತಿಳಿದುಬರುತ್ತದೆ.

ಬ್ರಿಟಿಷ್ ಪತ್ರಿಕೆಗಳು: 'ಇದು ಇಟಲಿಯ ಮೇಲಿನ ವಿಶ್ವಾಸಕ್ಕೊಂದು ಕೊರತೆ' ಎಂಬ ಅಭಿಪ್ರಾಯ ಸೂಚಿಸಿವೆ. 'ಬ್ರಿಟಿಷರ ಕೆನ್ನೆಗೇರಿಸಿದ ಪೆಟ್ಟಿದು!' 'ಮುಂಬರುವ ಮಹಾಯುದ್ಧದ ಪೂರ್ವ ತಯಾರಿ' ಎಂದು ಫ್ರೆಂಚ್ ಪತ್ರಿಕೆಗಳ ಅಭಿಪ್ರಾಯ.

ರಷ್ಯದ ಅಭಿಪ್ರಾಯ

ರಷ್ಯಾ ಸರಕಾರದ ಪತ್ರಿಕೆಯಾದ "ಇಸ್‌ವೆಸ್ಟಿಯಾ"ವು ಹೀಗೆನ್ನುತ್ತದೆ—

'ಬ್ರಿಟಿಷ್ ಚಟುವಟಿಕೆಗಳಿಂದ ಕಣ್ಣು ತೆರೆದ ರೋಮ್ ಬರ್ಲಿನ್ ಸಂಬಂಧಿಕರು ಅಂತರ್‌ರಾಷ್ಟ್ರೀಯ ಭದ್ರತೆಯ ಕಾರ್ಯದಲ್ಲಿ ಯುಗೋಸ್ಲೋವಿಯಾವು ಭಾಗ ವಹಿಸದಂತೆ ಮಾಡಲು ಆತುರಗೊಂಡಿದ್ದಾರೆ. ಒಂದೊಂದೇ ಕಡೆಯ ಅನ್ಯಾಯ ನಿವಾರಣೆಗೆ ಕೈಹಾಕುವದಾದರೆ ಅದೇ ಸಮಯದಲ್ಲಿ ಇನ್ನೊಂದೆಡೆಯಲ್ಲಿ ಆಕ್ರಮಣ ನಡೆಯುವಂತಾಗುವದು. ಸರ್ವತ್ರ ಶಾಂತಿಸ್ಥಾಪನೆಯ ಉದ್ದೇಶವಿಟ್ಟುಕೊಂಡು ಬಲವಾದ ಒಕ್ಕಟ್ಟಿನಿಂದ ಎಲ್ಲೆಡೆಗಳಲ್ಲಿಯೂ ಇದಿರಿಸಿದಲ್ಲಿ ಮಾತ್ರ ಆಕ್ರಮಣಗಾರರನ್ನು ತಡೆಗಟ್ಟಬಹುದು. ಇತರ ಕಾರ್ಯಗಳೆಲ್ಲಾ ತಾತ್ಕಾಲಿಕ ಶಮನದಂತಾಗಿ ಅವುಗಳಿಂದ ಎಲ್ಲಾ ರಾಷ್ಟ್ರಗಳಿಗೂ ಭದ್ರತೆ ದೊರೆಯುವಂತಿಲ್ಲ"

ಬಗ್ದಾದಿನಲ್ಲಿ ಬ್ರಿಟಿಷ್ ರಾಯಭಾರಿಯ ಕೊಲೆ!

ಬಗ್ದಾದಿನಲ್ಲಿ ಬ್ರಿಟಿಷರ ಪ್ರತಿನಿಧಿಯಾಗಿದ್ದ ಮಿ. ಮೋಂಕ್ ಮೂಸೋರವರನ್ನು ಗುಂಡಿಟ್ಟು ಕೊಲ್ಲಲಾಗಿದೆ. ಬೇರೊಂದು ವಾರ್ತೆಯಂತೆ ಮೋಂಕ್ ಸಾಹೇಬರು ತಮ್ಮ ಆಫೀಸಿನ ಮೆಟ್ಟಲಿನಲ್ಲಿದ್ದಾಗ ಉದ್ರೇಕಗೊಂಡ ಜನಸಂದಣಿಯು ಕಲ್ಲು ಹೊಡೆದು ಕೊಂದಿತೆಂದು ತಿಳಿದು ಬರುತ್ತದೆ. ಕೊಲೆಯ ಕಾರಣವಿದು. ರಾಜಾ ಗಾಝಿಯವರು ಇಂಗ್ಲಿಷರಿಂದ ಕೊಲೆ ಮಾಡಲ್ಪಟ್ಟರೆಂದು ಪ್ರಚಾರ ಮಾಡಿ ದೊಡ್ಡ ಜನಸಂದಣಿಯು ಬ್ರಿಟಿಷ್ ರಾಯಭಾರೀ ಆಫೀಸಿನ ಬಳಿಯಲ್ಲಿ ಪ್ರದರ್ಶನ ನಡೆಯುತ್ತಿತ್ತು. ಅವರನ್ನು ಸಮಜಾಯಿಸಲು ಪ್ರಯತ್ನಿಸಿದ ಮಿ. ಮೋಂಕ್ ಸಾಹೇಬರನ್ನು ಜನರು ಕೊಲೆಮಾಡಿಬಿಟ್ಟರು. ನಾಲ್ಕು ಜನರ ದಸ್ತಗಿರಿಯಾಗಿದೆ. ಇರಾಕಿನ ಮುಖ್ಯ ಮಂತ್ರಿಗಳು ಈ ಕೊಲೆಗಾಗಿ ಸರಕಾರದ ತೀವ್ರ ಪಶ್ಚಾತ್ತಾಪವನ್ನು ಬ್ರಿಟಿಷರಿಗೆ ಸೂಚಿಸಿದ್ದಾರೆ. ಮೃತರಾಜಾ ಗಾಝಿಯವರ ಮೂರು ವರುಷದ ಕುಮಾರನಿಗೆ ಪಟ್ಟಗಟ್ಟಿ, ರಾಜರ ಮಾವನನ್ನು ರೀಜೆಂಟರಾಗಿ ನೇಮಿಸಲಾಗಿದೆ.

ಇಂಗ್ಲಾಂಡು ಪೋಲೆಂಡುಗಳೊಳಗೆ ಒಪ್ಪಂದ

ಜೆಕೋಸ್ಲೋವೇಕಿಯಾವನ್ನು ನುಂಗಿದ ಹಿಟ್ಲರನ ಕಣ್ಣು ಪೋಲೆಂಡಿನ ಮೇಲೆ ಬಿದ್ದಿದೆ ಎಂದಾದೊಡನೆ ಇಂಗ್ಲಿಷ್ ಫ್ರೆಂಚರು ಅವರ ಸಹಾಯಕ್ಕೊದಗುವ ಸಿದ್ಧತೆ ತೋರಿಸಿದ್ದರಷ್ಟೆ. ಆ ಕುರಿತು ಮುಖ್ಯ ಮಂತ್ರಿ ಚೇಂಬರ್ಲೇನರೂ ಪಾರ್ಲಿಮೆಂಟಿನಲ್ಲಿ ಸ್ಪಷ್ಟವಾಕ್ಯಗಳನ್ನಾಡಿದ್ದರು. ಪೋಲೆಂಡಿನ ಪ್ರತಿನಿಧಿ ಮಿ. ಬೆಕ್ ಸಾಹೇಬರು ಲಂಡನಿಗೆ ಬಂದಿದ್ದು ಆಂಗ್ಲೋ–ಪೋಲೆಂಡ್ ಒಪ್ಪಂದದ ಮಾತುಕತೆ ನಡೆಸಿರುವರು. ಪೋಲೆಂಡಿನ ಮೇಲೆ ಯಾರಾದರೂ ಬಿದ್ದಲ್ಲಿ ಇಂಗ್ಲಾಂಡು ಕೂಡಲೇ ಅದರ ಸಹಾಯಕ್ಕೆ ಹೋಗುವ ಮತ್ತು ಅಂತಹ ಸಹಾಯವನ್ನೇ ಪೋಲಂಡು ಇಂಗ್ಲಾಂಡಿಗೀಯುವ ತಾತ್ಕಾಲಿಕ ಒಪ್ಪಂದವಾಗಿರುವದೆಂದೂ ಶಾಶ್ವತ ಕರಾರನ್ನು ಮಾಡಲು ಕೆಲಸಗಳಾಗುತ್ತಿವೆಯೆಂದೂ ಮಿ. ಚೇಂಬರ್ಲೇನರು ಕಾಮನ್ಸ್ ಸಭೆಯಲ್ಲಿ ಹೇಳಿರುವರು.

ಜರ್ಮನಿಯ ಕ್ರೋಧ

ಬ್ರಿಟಿಷರ ಈ ವರ್ತನೆಯಿಂದ ಜರ್ಮನರು ಉರಿದೆದ್ದಿರುವರು. ಅಲ್ಲಿಯ ಪತ್ರಿಕೆಗಳು ಬ್ರಿಟಿಷ್ ಧೋರಣೆಯನ್ನು ಕಟುವಾಗಿ ಟೀಕಿಸುತ್ತಿರುವವು. ಈ ಒಣಜಂಭವು ನಮ್ಮ ಮೇಲಾವ ಪರಿಣಾಮವನ್ನೂ ಉಂಟುಮಾಡಿಲ್ಲ. 'ಬೊಗಳುವ ನಾಯಿ ಕಚ್ಚದು' ಎಂಬ ಗಾದೆಯು ಸುಳ್ಳಲ್ಲ! ಎಂದು ಜರ್ಮನಿಯ ಗೋರಿಂಗನು ಸ್ಪಷ್ಟವಾಗಿ ಬ್ರಿಟಿಷರನ್ನು ಅಣಕಿಸಿ ಮಾತಾಡಿದ್ದಾನೆ.

ಪೋಲೆಂಡಿಗೆ ಜರ್ಮನಿಯ ಶರ್ತಗಳು

ಜರ್ಮನಿಯು ಮೂರು ಶರ್ತಗಳನ್ನು ಪೋಲೆಂಡಿನ ಮುಂದಿಟ್ಟಿದೆ. ಮೊದಲನೆಯದಾಗಿ ಬರ್ಲಿನಿಗೊಪ್ಪಿಗೆಯಾಗುವ ರೀತಿಯಲ್ಲಿ ಡಾನ್ಜಿಗ್ ಸಮಸ್ಯೆಯನ್ನು ಬಿಡಿಸಬೇಕು. ಎರಡನೆಯದಾಗಿ ಜರ್ಮನಿಯ ಅಂಕೆಯೊಳಗಿರುವ ಜರ್ಮನಿ ಮತ್ತು ಪೂರ್ವ ಪ್ರಶ್ಯಾಗಳೊಳಗಿನ ವ್ಯವಹಾರಗಳಿಗೆ ಪೂರ್ವಾನುಕೂಲತೆಗಳನ್ನೊದಗಿಸಿ ಕೊಡಬೇಕು. ಮೂರನೆಯದಾಗಿ ಪೋಲೆಂಡಿನಲ್ಲಿಯ ಅಲ್ಪ ಸಂಖ್ಯಾತ ಜರ್ಮನರ ಹಿತಸಂಬಂಧಗಳನ್ನು ಕಾನೂನು ಮೂಲಕ ರಕ್ಷಿಸಬೇಕು. ಈ ಮೂರು ಶರ್ತಗಳಂತೆ ವರ್ತಿಸಿದಲ್ಲಿ ಜರ್ಮನಿ ಪೋಲೆಂಡುಗಳೊಳಗಿನ ಸಂಬಂಧವು ಅಬಾಧಿತವಾದುವೆಂದು ಜರ್ಮನ್ ಸರಕಾರದ ಅಭಿಪ್ರಾಯ. ಜರ್ಮನಿಯಲ್ಲೀಗ ಯುದ್ಧಸನ್ನಾಹ ಚಿನ್ಹೆಯೇನೂ ಕಾಣುವುದಿಲ್ಲ. ಹಿಟ್ಲರನೇ ಆದಿಯಾಗಿ ಎಲ್ಲಾ ಮೇಲಧಿಕಾರಿಗಳೂ … ಸ್ಟರ್ … ರಜೆಯಲ್ಲಿದ್ದಾರೆ. ಜರ್ಮನಿಯು ಒಪ್ಪಂದದ ಕುರಿತು ಕೂಡಲೇ ಕಾರ್ಯ ಕೈಗೊಂಡು ಬ್ರಿಟನ್ ಪೋಲೆಂಡುಗಳ ಒಪ್ಪಂದವು ಪೂರ್ತಿಗೊಳ್ಳುವ ಮೊದಲೇ ನಿರ್ಧಾರವನ್ನು ಹೊಂದಬೇಕೆಂದು ಆತುರಗೊಂಡಿದೆ. ಪೋಲೆಂಡಿನ ಗಡಿಯಲ್ಲಿ ಜರ್ಮನಿ ಸೈನ್ಯಗಳ ಚಲನ–ವಲನವೇನೂ ನಡೆದಿಲ್ಲವೆಂದು ಜರ್ಮನ್ ಸರಕಾರವು ಪ್ರಕಟಿಸಿದೆ.

ಜನರಲ್ ಫ್ರಾಂಕೋ ಸೇರಿದ

ರಷ್ಯದ ವಿರುದ್ಧವಾಗಿ ಇಟಲಿ, ಜರ್ಮನಿ, ಜಪಾನುಗಳು ಮಾಡಿಕೊಂಡ 'ಆಂಟಿ-ಕೋಮಿಂಟರ್ನ್ ಪೇಕ್ಟ್' ಎಂಬ ಒಪ್ಪಂದಕ್ಕೆ ಜನರಲ್ ಫ್ರಾಂಕನೂ ಸೇರಿ… ಹಾಕಿದ್ದಾನೆ.

ಅಮೇರಿಕದ ಪ್ರೆಸಿಡೆಂಟರಿಗೆ ವಿಶೇಷಾಧಿಕಾರ.

ಅಮೇರಿಕದ ಬಾಹಿಷ್ಕೃತ ಧೋರಣೆ ಸೂಚಕ ಕಾನೂನಿನಲ್ಲಿ ಯುರೋಪಿನ ಯುದ್ಧಾವಸರದಲ್ಲಿ ಅಗತ್ಯವುಳ್ಳ ಕಾರ್ಯಗಳನ್ನು ಕೈಗೊಳ್ಳುವರೆ ಅಧ್ಯಕ್ಷರಿಗಧಿಕಾರವೀಯುವ ತಿದ್ದುಪಡಿಯಾಗಿದೆ.

ಫ್ರಾನ್ಸಿನ ಅಧ್ಯಕ್ಷ ಚುನಾವಣೆ

ಇತ್ತೀಚೆಗೆ ನಡೆದ ಫ್ರಾನ್ಸಿನ ಅಧ್ಯಕ್ಷ ಚುನಾವಣೆಯಲ್ಲಿ ತೀವ್ರ ಸ್ಪರ್ಧೆಯಿದ್ದಿತು. ಆದರೆ ಹಿಂದಿನ ಅಧ್ಯಕ್ಷರಾದ ಎಮ್. ಲೆಬರ್ನರು ಪ್ರಬಲ ಬಹುಮತದೊಡನೆ ಆರಿಸಿಬಂದರು.

To Insure is
The Husband's duty. The wife's right and the child's Claim Hence seekfor a policy of
THE ASIAN ASSURANCE CO., LTD.
The safest and one of the largest Indian Concerns,
Head Office:- Asian Buildings Ballard Estate, Bombay.
Branch Office: - Hampankatta, Mangalore.
ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.
ಲಾಭದಾಯಕವಾದ ಮತ್ತು ಸುಭದ್ರತೆಯ ಸಿಧಿಯನ್ನೊಳಗೊಂಡ ಈ ಕಂಪೆನಿಯಲ್ಲಿ ನಿಮ್ಮ ವಿಮಾ ಇಳಿಸಿರಿ.
ಏಜಂಟರು ಪ್ರಾಮುಖ್ಯ ಪಟ್ಟಣಗಳಲ್ಲೆಲ್ಲಾ ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
J. A. PUTRAN, Branch Manager, Mangalore.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ತಾ. 9-4-1939.

ಪುರಜನರ ಸಭೆ—ವೆಬ್‌ಸ್ಟರ್ ಮಾರ್ಕೆಟಿನಿಂದ ತರಕಾರಿ ವಿಭಾಗಗಳನ್ನು ಪ್ರಕೃತ ಅಲ್ಲಿಂದ ತೆಗೆಯ ತಕ್ಕ ಅಗತ್ಯವಿಲ್ಲವೆಂದು ಸರಕಾರದವರು ಅಭಿಪ್ರಾಯಪಟ್ಟದ್ದಕ್ಕಾಗಿಯೂ ಅದೇ ರೀತಿ ಕಲೆಕ್ಟರ್ ದೊರೆಗಳು ಅಭಿಪ್ರಾಯಪಟ್ಟು ನಗರಸಭೆಗೆ ತಿಳಿಸಿದುದಕ್ಕಾಗಿಯೂ ಅವರುಗಳನ್ನು ಅಭಿನಂದಿಸುವುದಕ್ಕೂ ಮತ್ತು ಮೂರು ದಿನಗಳ ವರೆಗೆ ಸತ್ಯಾಗ್ರಹವನ್ನು ಯಶಸ್ವಿಗೊಳಿಸಿದುದಕ್ಕಾಗಿ ವ್ಯಾಪಾರಿಗಳನ್ನು ಅಭಿನಂದಿಸುವುದಕ್ಕಾಗಿಯೂ ಮಂಗಳೂರು ಪುರಜನರ ಸಭೆಯು ಮೈದಾನದಲ್ಲಿ ಶ್ರೀ. ಯಂ. ಉಮೇಶರಾಯರ ಅಧ್ಯಕ್ಷತೆಯಲ್ಲಿ ಸೇರಿತು, ಅಧ್ಯಕ್ಷರು ವ್ಯಾಪಾರಿಗಳು ಅದರಲ್ಲಿಯೂ ಸ್ತ್ರೀಯರು ಸತ್ಯಾಗ್ರಹವನ್ನು ಆಚರಿಸಿದ ರೀತಿಯು ಅತ್ಯಂತ ವಿಶೇಷತರವೆಂದು ಹೇಳಿ ಇಂತಹ ಸ್ತ್ರೀಯರು ಪ್ರತಿಸ್ಪರ್ಧಿಯಲ್ಲಿ ಇಷ್ಟು ಶ್ರೀಮಂತರುಮಂದಿ ಇದ್ದರೆ ಸ್ವರಾಜ್ಯ ಪಡೆಯುವುದಕ್ಕೆ ಸ್ವಲ್ಪವೂ ಪ್ರಯಾಸವಿಲ್ಲವೆಂದರು, ಅನಂತರ ಶ್ರೀ. ರಂಗನಾಥ್ ತಲಚೇರಿಕರರು ಸರಕಾರದವರನ್ನೂ, ಕಲೆಕ್ಟರ್ ದೊರೆಗಳನ್ನೂ, ವ್ಯಾಪಾರಿಗಳನ್ನೂ ಅಭಿನಂದಿಸುವ ಸಲುವಾಗಿ ಪ್ರತ್ಯೇಕಪ್ರತ್ಯೇಕವಾಗಿ ಠರಾವುಗಳನ್ನು ತಂದರು ಅವು ಮಾನ್ಯವಾದುವು. ಈ ಸಭೆಯಲ್ಲಿ ಶ್ರೀ. ಕೆ. ಕೃಷ್ಣರಾಯರೂ ಭಾಷಣ ಮಾಡಿದರು,

ಮ್ಯುನಿಸಿಪಾಲಿಟಿಯ ವಿಶೇಷ ಸಭೆ—ವೆಬ್‌ಸ್ಟರ ಮಾರ್ಕೆಟಿನಿಂದ ತರಕಾರಿ ವಿಭಾಗವನ್ನು ಸದ್ಯಕ್ಕೆ ಅಲ್ಲಿಂದ ತೆಗೆಯುವುದು ಅನಗತ್ಯವೆಂದು ಅಭಿಪ್ರಾಯಪಟ್ಟು ಕಲೆಕ್ಟರ್ ದೊರೆಗಳು ನಗರ ಸಭೆಯವರಿಗೆ ಬರೆದ ಲೇಖನವನ್ನು ಪರಿಶೀಲಿಸುವುದಕ್ಕೆ ಮಂಗಳೂರು ನಗರ ಸಭೆಯ ವಿಶೇಷ ಸಭೆಯು ಕಳೆದ ತಾ. 7ರಲ್ಲಿ ಶ್ರೀ. ಬಿ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ. ಯಂ. ಮಾಧವರಾಯರು ಆವೇಶಪೂರ್ವಕ ಭಾಷಣ ಮಾಡಿದರು, ಕಲೆಕ್ಟರರು ನಗರ ಸಭಾಧ್ಯಕ್ಷರ ಅಭಿಪ್ರಾಯ ಕೇಳದೆ ಈ ರೀತಿ ಪತ್ರ ಬರೆದುದು ಸರಿಯಲ್ಲವೆಂದರು. ಮತ್ತು ಸರಕಾರಕ್ಕೆ ಮೆಮೋರಿಯಲನ್ನು ಕಳುಹಿಸಿದವನ್ನು ಬಲವಾಗಿ ಟೀಕಿಸಿ ತರಕಾರಿ ವಿಭಾಗವನ್ನು ವೆಬ್‌ಸ್ಟರ್ ಮಾರ್ಕೆಟಿನಿಂದ ತೆಗೆಸಬೇಕೆಂದೂ, ಅದಕ್ಕೋಸ್ಕರ ತಾವು ಒಬ್ಬರೇ ಹೋರಾಡಲು ಸಿದ್ಧರೆಂದೂ ಹೇಳಿದರು. ಶ್ರೀ. ಯಂ ಆರ್. ಭಟ್ಟರು ವಿರೋಧಾಭಿಪ್ರಾಯಕ್ಕೆ ಸಹ ಗಮನಕೊಡಬೇಕಾದುದು ಕರ್ತವ್ಯವೆಂದರು. ಆದರೆ ಶ್ರೀ ಮಾಧವರಾಯರಿಗೆ ಇದು ಸರಿಯಾಗಿ ತೋರಲಿಲ್ಲ. ಅನಂತರ ಡಾ. ಗಿರಿಧರರಾಯರು ಒಂದು ಠರಾವು ತಂದು ಮ್ಯುನಿಸಿಪಲ್ ಕಮಿಷನರು ವೆಬ್‌ಸ್ಟರ್ ಮಾರ್ಕೆಟಿನ ವಿಚಾರವಾಗಿ ಎಲ್ಲ ಸಂಗತಿಗಳನ್ನು ಬರೆದು ವರದಿ ತಯಾರಿಸಿ ಪತ್ರಿಕೆಗಳಲ್ಲಿ ಪ್ರಕಟಿಸಬೇಕೆಂದು ಠರಾವು ತಂದರು. ಇದಕ್ಕೆ ಉಪಸೂಚನೆಗಳು ತರಲ್ಪಟ್ಟರೂ ಅವು ಮಾನ್ಯವಾಗದೆ ಠರಾವೇ ಮಂಜೂರಾಯಿತು.

ರಾಷ್ಟ್ರೀಯ ಸಪ್ತಾಹ—ತಾ. 6ನೇ ದಿನ ಟೌನ್ ಕಾಂಗ್ರೆಸ್ ಕಮಿಟಿಯವರ ನೇತೃತ್ವದಲ್ಲಿ ಶ್ರೀ. ಬಿ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಶ್ರೀಗಳಾದ ಹೆಬ್ಬಾರರೂ, ಯಂ ಮಾಧವರಾಯರೂ ರಾಷ್ಟ್ರೀಯ ವಾರದ ಮಹತ್ವದ ವಿಚಾರವಾಗಿ ಭಾಷಣ ಮಾಡಿದರು, ಅಧ್ಯಕ್ಷರು ಕಾಂಗ್ರೆಸ್ ಸದಸ್ಯರಲ್ಲಿ ಒಕ್ಕಟ್ಟಿರಬೇಕೆಂಬುದನ್ನೂ ವ್ಯಕ್ತಿಕ ಭೇದಭಾವ ಇರಕೂಡದೆಂಬುದನ್ನೂ ವಿವರಿಸಿದರು.

ದ. ಕನ್ನಡ ವಿದ್ಯಾರ್ಥಿಗಳ ಜಿಲ್ಲಾ ಪರಿಷತ್ತು—ಇದೇ ಎಪ್ರಿಲ್ ತಾ. 13ಮತ್ತು 14ರಲ್ಲಿ ಸೈ. ಎ. ಕಾಲೇಜಿನ ಏಕಾಡೆಮಿಹಾಲಿನಲ್ಲಿ ಜರಗಿಸಲ್ಪಡುವುದು. ಮುಂಬಯಿಯ ಪ್ರಸಿದ್ಧ ಧುರೀಣರಾದ ಶ್ರೀ. ಜೋಕಿಂ ಆಳ್ವರು ಅಧ್ಯಕ್ಷತೆ ವಹಿಸುವರು. ಶ್ರೀಮಾನ್ ಕೆ. ಆರ್ ಕಾರಂತರು ಪರಿಷತ್ತನ್ನು ಉದ್ಘಾಟನೆಮಾಡುವರು. ಜಿಲ್ಲೆಯ ವಿದ್ಯಾರ್ಥಿಗಳು ಸಹಕರಿಸಬೇಕಾಗಿ ವಿದ್ಯಾರ್ಥಿಗಳ ಸಂಘದವರು ಮತ್ತು ಪರಿಷತ್ತನ್ನು ಜರಗಿಸುವ ಸ್ವಾಗತಸಮಿತಿಯವರು ಪ್ರಾರ್ಥಿಸುತ್ತಾರೆ.

ಜಿಲ್ಲಾ ವೈದ್ಯಸಮ್ಮೇಳನ— ಜಿಲ್ಲಾ ವೈದ್ಯಸಮ್ಮೇಳನವು ಇದೇ ತಿಂಗಳ ತಾ. 21 ಮತ್ತು 22ರಲ್ಲಿ ಜರಗಿಸಲ್ಪಡುವುದು. ಸಮ್ಮೇಳನದ ಅಧ್ಯಕ್ಷರಾಗಿ ಆ. ಭೂ. ಯಂ. ಪಿ. ಶಾಸ್ತ್ರಿಗಳು ಆರಿಸಲ್ಪಟ್ಟಿರುವನು. ಪ್ರದರ್ಶನವನ್ನು ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಯಂ. ಎಲ್. ಸಿ. ಯವರು ತೆರೆಯುವರು. ಸಮ್ಮೇಳನವನ್ನು ಡಾ. ಲಕ್ಷ್ಮೀಪತಿ (ಮದ್ರಾಸ್) ಯವರು ತೆರೆಯುವರು.

ಜಿಲ್ಲೆಯಲ್ಲಿ ಕಾಂಗ್ರೆಸ್ ಕೆಲಸ-ಈ ವಿಷಯವಾಗಿ ಕ್ಯಾಥಲಿಕ್ ಕಾಂಗ್ರೆಸ್ ಸದಸ್ಯರ ಸಂಘದ ಆಶ್ರಯದಲ್ಲಿ ತಾ. 7ರಲ್ಲಿ ಜರಗಿದ ಸಭೆಯಲ್ಲಿ ಶ್ರೀ. ಕೆ. ಆರ್. ಆಚಾರ್, ಇವರು ಭಾಷಣಮಾಡಿದರು, ಶ್ರೀ. ಕೆ. ಕೆ. ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ಭಾಷಣಕರ್ತರು ತಮ್ಮ ಭಾಷಣದಲ್ಲಿ ಜಿಲ್ಲೆಯಲ್ಲಿ ಈಗ ನಡೆಯುತ್ತಿರುವ ಕಾಂಗ್ರೆಸ್ ಕೆಲಸದ ವಿಷಯವಾಗಿ ಹೇಳಿದರು. ಜನರಲ್ಲಿ ಪರಸ್ಪರ ಮಿತ್ರತ್ವವು ಕಡಿಮೆಯಾಗುತ್ತಿರುವುದು ಕಂಡುಬರುತ್ತದೆಂದೂ, ಕಾಂಗ್ರೆಸಿನ ಅಧಿಕಾರಸ್ಥಾನಗಳ ಮೇಲೆ ದೃಷ್ಟಿಯಿಟ್ಟುಕೊಂಡು ಸದಸ್ಯರನ್ನು ದಾಖಲುಮಾಡಲಾಗುತ್ತದೆಯೆಂದೂ ಕಾಂಗ್ರೆಸ್ ಚುನಾವಣೆಗಳಲ್ಲಿ ಸಹ ನ್ಯಾಯವಾದ ರೀತಿಯಲ್ಲಿ ಚುನಾವಣೆ ನಡೆಯದಿದ್ದುದು ಶೋಚನೀಯವೆಂದೂ ಹೇಳಿ ಕಾಂಗ್ರೆಸ್ ಸಂಸ್ಥೆಯಲ್ಲಿ ಕೆಲಸಮಾಡುವವರೂ, ಕಾಂಗ್ರೆಸ್ ಅಭಿಮಾನಿಗಳೂ ಎಲ್ಲರೂ ಒಟ್ಟಿಗೆ ಸೇರಿ ಕಾಂಗ್ರೆಸ್ಸನ್ನು ಶುದ್ಧಗೊಳಿಸಿ ಅದರ ಕೆಲಸವು ಸರಿಯಾದ ಮತ್ತು ನ್ಯಾಯವಾದ ರೀತಿಯಲ್ಲಿ ನಡೆಯುವಂತೆ ಪ್ರಯತ್ನಿಸಬೇಕೆಂದರು, ಅಧ್ಯಕ್ಷರ ಸಮಯೋಚಿತ ಭಾಷಣದೊಂದಿಗೆ ಸಭಾಂತ್ಯವಾಯಿತು.

"ಕಾಂಗ್ರೆಸ್ಸೂ ಮಜೂರರೂ"— ಕಳೆದ ತಾ 8ರಲ್ಲಿ ಶ್ರೀ. ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಶ್ರೀಮಾನ್ ಕೆ. ಕೆ. ಶೆಟ್ಟಿಯವರು ಮೇಲಿನ ವಿಷಯವಾಗಿ ಮಾತಾಡುತ್ತಾ ಕಾಂಗ್ರೆಸ್ ಹೇಗೆ ಬಡಜನರ ಕೂಲಿಗಾರರ ಮತ್ತು ಕೃಷಿಕರ ಸಂಸ್ಥೆಯಾಗಿದೆಯೆಂಬುದನ್ನು ತಿಳಿಸಿ ಮಜೂರರೂ ಕೃಷಿಕರೂ ಹೆಚ್ಚು ಸಂಖ್ಯೆಯಲ್ಲಿ ಕಾಂಗ್ರೆಸ್ಸನ್ನು ಸೇರಿಕೊಂಡು ಮುಂದೆ ಸರಕಾರಗಳನ್ನು ನಡೆಸುವ ಶಕ್ತಿಯನ್ನು ಪಡೆಯಬೇಕಾಗಿದೆಯೆಂದರು.

ಭಜನೆ ಮಂಡಳಿಯ ವಾರ್ಷಿಕೋತ್ಸವ—ಸ್ಥಳೀಯ ನೀರೇಶ್ವಾಲ್ಯ ಆರ್ಯಭಜನೆ ಮಂಡಳಿಯ 16ನೇ ವಾರ್ಷಿಕೋತ್ಸವವು ಇದೇ ತಾ. 16ರಲ್ಲಿ ಡಾ. ವಿಟ್ಠಲಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

"ಭಕ್ತಿಮಾರ್ಗ"—ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಈ ದಿನ ಪೂರ್ವಾಹ್ನ 9-30ಕ್ಕೆ ಭಕ್ತಿಮಾರ್ಗದ ಮೇಲೆ ಶ್ರೀ ಕೆ. ಕೃಷ್ಣರಾಯರ ಭಾಷಣವು ನಡೆಯಿತು.

ನಮ್ಮ ಚಂದಾದಾರರಲ್ಲಿ ವಿನಂತಿ.

ವಿಳಾಸದಲ್ಲಿ ಏನಾದರೂ ಹೆಚ್ಚು ಕಡಿಮೆಯೆಂದು ತೋರಿಬಂದಲ್ಲಿ ವ ತಾತ್ಕಾಲಿಕ ಮಾರ್ಪಡದ ವಿಳಾಸವನ್ನು ಬದಲಾಯಿಸಿ ಬೊದಲಾ ಖಾಯಂ ವಿಳಾಸಕ್ಕೆ ಕಳುಹಿಸಬೇಕಾದಲ್ಲಿ ನಮಗೆ ಆ ಬಗ್ಗೆ ಬರೆದು ತಿಳಿಸಬೇಕಾಗಿಯೂ ಹಾಗೆ ತಿಳಿಸುವಾಗ ಚಂದಾ ನಂಬ್ರವನ್ನು ಬರೆಯಬೇಕಾಗಿಯೂ ವಿನಂತಿ

ಮೆನೇಜರ್.

ಶ್ರೀ ಹನುಮಾನ್ ವ್ಯಾಯಾಮ ಪ್ರಸಾರಕ ಮಂಡಲಿ, ಅಮರಾವತಿ—ಮೇಲಿನ ನಾಮಧೇಯದಿಂದ ಜನ್ಮತಾಳಿ ಕಳೆದ ಹದಿಮೂರು ವರುಷಗಳಿಂದ ಪ್ರಶಂಸನೀಯ ರೀತಿಯಲ್ಲಿ ಹಿಂದೀಜನಾಂಗದ ದೇಹದಾರ್ಢ್ಯಕ್ಕೆ ತಕ್ಕ ಸಲಹೆ ಕುಶಲಯುವಕರಿಗೆ ತರಬೇತುಗಳನ್ನಿತ್ತುದುದು ಸರಿಯಷ್ಟೆ. ಬೇಸಿಗೆ ವರುಷದ ಟ್ರೈನಿಂಗ್ ಕ್ಲಾಸುಗಳು ಮೇ ತಿಂಗಳನೇ ತಾರೀಕಿಗೆ ಆರಂಭವಾಗಿ ೩೧ನೇ ತಾರೀಕಿಗೆ ಕೊನೆಗೊಳ್ಳುವುದು. ಸೇರಲಪೇಕ್ಷಿಸುವವರು ಸಂಬಳ ಕೊಡಬೇಕಾಗಿಲ್ಲ. ಊಟದ ಸಲುವಾಗಿ ರೂಪಾಯಿ 15 ಕೊಡಬೇಕಾಗುವುದು. ಪ್ರವೇಶ ಅರ್ಜಿಗಳು ಈ ತಿಂಗಳ ೨೫ರೊಳಗಾಗಿ ಮಂಡಲಿಯ ಆಫೀಸಿಗೆ ತಲ್ಪತಕ್ಕದು. ಹೆಚ್ಚಿನ ಮಾಹಿತಿಯನ್ನು 'ಕಾರ್ಯದರ್ಶಿ ಶ್ರೀ ಹನುಮಾನ್ ವ್ಯಾಯಾಮ ಪ್ರಸಾರಕ ಮಂಡಲಿ ಅಮರಾವತಿ' ಇವರಿಂದ ಪಡೆಯಬಹುದು. ಉತ್ಸಾಹೀ ತರುಣರು ಈ ಸುಸಂಧಿಯನ್ನು ಕಳಕೊಳ್ಳಬಾರದಷ್ಟೆ!

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ—ಕಮಿಟಿಯ ಕಾರ್ಯನಿರ್ವಾಹಕ ಮಂಡಳದ ಸಭೆಯು ತಾ. 1 ಮತ್ತು 2ರಲ್ಲಿ ಶಿರ್ಶಿಯಲ್ಲಿ ಜರಗಿತು, ಗತಸಭೆಯ ವರದಿ ಸ್ವೀಕಾರ, ಇಬ್ಬರು ಸದಸ್ಯರ ರಾಜಿನಾಮೆಯ ಸ್ವೀಕಾರ, ಗೋಕಾಕ ಕೂಲಿಗಾರರ ವಿಷಮ ಪರಿಸ್ಥಿತಿಗಾಗಿ ಸಂತಾಪ ಸೂಚನೆ, ಮತ್ತು ಆ ಕುರಿತು ಸರಕಾರದ ಸಹಕಾರ ಕೇಳಿಕೆ, ಸಿವಿಕ್ ಮತ್ತು ಪಾರ್ಲಿಮೆಂಟರಿ ಬೋರ್ಡು ನಿಯಮಾವಳಿಗಳ ಅಂಗೀಕಾರ, ಮೈಸೂರು ಕಾಂಗ್ರೆಸಿಗೆ ರೂ. 1000ದ ದೇಣಿಗೆ ಮಂಜೂರಾತಿ, ಹೋದ ವರುಷದ ಸದಸ್ಯತನದ ಪುಸ್ತಕಗಳನ್ನು ಈ ವರೆಗೂ ಕೊಡದ ಜಿಲ್ಲಾ ಸಮಿತಿಗಳ ವಿಚಾರ ಶ್ರೀ. ಕೆ. ಆರ್. ಕಾರಂತರ ಠರಾವು ಮೊದಲಾದ ವಿಷಯಗಳು ಚರ್ಚಿಸಲ್ಪಟ್ಟವು.

ಪತ್ರವ್ಯವಹಾರ

(ಬಾತ್ಮೀದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.) [ಸಂ. ನ]

ಕೊರಾಡಿ ಸೋಟ್ಟಿಯ ಜಪ್ತಿಯಲ್ಲ! ಶಾಲಾ ಮೆನೇಜರರ ಮನೆಯ ಜಪ್ತಿ(?)

ಮಾರ್ಚಿ 31ನೇ ನವಯುಗದಲ್ಲಿ ಪ್ರಕಟವಾದ ಕೊರಾಡಿ ಸೋಟ್ಟಿಯ ಜಪ್ತಿ ಎಂಬ ಬಾತ್ಮಿಯು ನಿರಾಧಾರವಾದುದೆಂದೂ ಸೋಟ್ಟಿ ಜಪ್ತಿ ನಡೆದಿಲ್ಲವೆಂದೂ ಕೊರಾಡಿ ಶಾಲಾ ಮೆನೇಜರರ ಮನೆಯ ಜಪ್ತಿಯಾದುದೆಂದೂ ಶ್ರೀ. ಕೆ. ವಿ. ಕಲ್ಕೂರರು ಕಳೆದ ವಾರಿಯ ಸಂಚಿಕೆಯಲ್ಲಿ ಬರೆದಿರುತ್ತಾರಷ್ಟೆ! ಸೋಟ್ಟಿಯು ಮೊದಲೇ ನಿಲ್ಲಿಸಲ್ಪಟ್ಟಿರುವುದಂತೆ! ಆದರೂ ಮೆನೇಜರರ ಮನೆಯ ಜಪ್ತಿಯಂತೆ! ಇದೇಕೆ? ಸೋಟ್ಟಿಗೂ ಮೆನೇಜರರಿಗೂ ಏನಾದರೂ ಸಂಬಂಧವಿದೆಯೇ? ಮೆನೇಜರರ ಮನೆಯನ್ನು ಪೋಲೀಸರವರು ನುಗ್ಗಲು ಕಾರಣವೇನು? ಜಪ್ತಿ ನಡೆಸಿದುದೇಕೆ? ಮೆನೇಜರರು, ಮನೆಯಲ್ಲಿದ್ದ ಲೆಕ್ಕಪತ್ರಗಳನ್ನು ಕೊಂಡುಹೋದರೆನ್ನುತ್ತಾರೆ. ಅವು ಯಾವ ಲೆಕ್ಕಪತ್ರಗಳು? ಮನೆವಾರ್ತೆಯವುಗಳೇ? ಶಾಲೆಗೆ ಸಂಬಂಧಿಸಿದವುಗಳೇ? ಸೋಟ್ಟಿಗೆ ಸಂಬಂಧಿಸಿದವುಗಳೇ? ಸೋಟ್ಟಿಗೂ ಶ್ರೀ. ಕಲ್ಕೂರರಿಗೂ ಸಂಬಂಧವಿಲ್ಲವಾದರೆ ಪೋಲೀಸರವರು ಹಾಗೆ ಜಪ್ತಿ ಮಾಡಿದುದು ಸಹಜವಾಗಿಯೆ ಅಪಾರ್ಥಕ್ಕೆ ಎಡೆಯನ್ನುಂಟುಮಾಡುವುದಿಲ್ಲವೇ? ಈ ಕುರಿತು ಶಾಲಾ ಮೆನೇಜರರು ಸರಿಯಾದ ಹೇಳಿಕೆಯನ್ನು ಜನತೆಯ ಮುಂದಿಡುವರಾಗಿ ಭಾವಿಸುತ್ತೇನೆ,

ವಾಚಕರಲ್ಲೊಬ್ಬ.

— ಕೂದಲು ಗಂಗುತ್ಯಜಿಸಿರಿ —

ಈ ತೈಲದ ಲೇಪನಮಾತ್ರದಿಂದಲೇ ಕೂದಲು ಬಿಳಿದಾಗುವುದು ನಿಲ್ಲುವುದು, ನೆರೆತಕೂದಲು ಪೂರ್ಣ ಕಪ್ಪಾಗಿ ಬಿಳಿರಂಗು ನಾಶಹೊಂದುವುದು. ಸಾವಿರಾರು ಸರ್ಟಿಫಿಕೇಟುಗಳು ನಮಗೆ ದೊರೆತಿರುವುದೇ ನಮ್ಮ ತೈಲದಯೋಗ್ಯತೆಯನ್ನು ಬೀರುವುವು. ಅಪ್ರಯೋಜನಕಾರಿಯೆಂದು ರುಜುಪಡಿಸಬಲ್ಲವರಿಗೆ ಕೊಟ್ಟಹಣವಾಪಸು ಕೊಡುವರಿದ್ದೇವೆ. ಅಲ್ಪಸ್ವಲ್ಪ ನೆರೆತ ಕೂದಲುಗಳಿಗೆ ಬೇಕಾಗುವ ತೈಲಕ್ಕೆ ರೂ. 4, ಕಾಲುಪಾಲಿಗೂ ಮಿಕ್ಕಿರುವುದಾದರೆ ರೂ. 7ರಷ್ಟು ಬೆಲೆಯ ತೈಲವು ಬೇಕಾಗುವುದು,

ಪತ್ರವ್ಯವಹಾರ ಇಂಗ್ಲಿಷಿನಲ್ಲೇ,

Hazara & Co.,
P. O.Behar Nersery Darbhnaga-

Commonwealth Assurance Co., Ltd., Poona.

ಬೋನಸ್ಸು ದರವು 20% ಹೆಚ್ಚಿದೆ

30—4—38ರ

ಮೂರನೇ ವ್ಯಾಲ್ಯುಯೇಷನ್ ಫಲಿತಾಂಶ

ಜೀವಾವಧಿ	ತ್ರೈವಾರ್ಷಿಕ	ಎಂಡೋಮೆಂಟ್
ರೂ. 54—0—0	ಬೋನಸ್ಸು ಸಾವಿರಕ್ಕೆ	ರೂ 45—0—0

ಕಾಮನ್‌ವೆಲ್ತ್

ಏಜನ್ಸಿ ಮತ್ತು ಪಾಲಿಸಿ ವಿವರಗಳಿಗೆ ಇಂದೇ ಬರೆಯಿರಿ.

ಕಾಮನ್‌ವೆಲ್ತ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ.

ಗವಾಂಕರ್ ಅಂಡ್ ಸನ್ಸ್,

ಚೀಫ್ ಏಜಂಟ್ಸ್: ಆನಂದರಾವ್ ಸರ್ಕಲ್, ಬೆಂಗಳೂರು.

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಮೈಸೂರು ಎಪ್ರಿಲ್ ೯.

ಮಹಾಮಸ್ತಕಾಭಿಷೇಕ—ಶ್ರವಣಬೆಳಗೊಳದಲ್ಲಿರುವ ಶ್ರೀ ಗೋಮಟೇಶ್ವರ ಸ್ವಾಮಿಯ ಮಹಾಮಸ್ತಕಾಭಿಷೇಕವು 1940ನೇ ಇಸ್ವಿ ಫೆಬ್ರವರಿ 18ನೇ ತಾ. ನಡೆಯುತ್ತೆ. ಇದು 15 ವರ್ಷಕ್ಕೊಂದು ಬಾರಿ ನಡೆಯುತದ್ತೆ. 1925ರಲ್ಲಿ ಈ ಮಹೋತ್ಸವವು ನೆರವೇರಿದ್ದಿತು. ಸರಕಾರದವರು ಇದನ್ನು ನಡೆಸಲು ಎರಡು ಕಮಿಟಿಗಳನ್ನು ನೇಮಿಸಿದ್ದಾರೆ. ಬಹಳ ಜನ ಯಾತ್ರಾರ್ಥಿಗಳು ಬರುವ ಸಂಭವವಿದೆ.

ಕ್ರೋಸ್‌ವರ್ಡ್ ಮೊಕದ್ದಮೆ—ಶ್ರೀಯುತರುಗಳಾದ ಕೃಷ್ಣಪ್ಪ, ಕೃಷ್ಣರಾವ್ ಮತ್ತು ಶ್ಯಾಮಣ್ಣನೆಂಬುವವರು, ಮುಂಬೈನ ಇಲಸ್ಟ್ರೇಟೆಡ್ ವೀಕ್ಲಿಯವರು ನಡೆಸುವ ಕ್ರೋಸ್‌ವರ್ಡ್ ಸ್ಪರ್ಧೆಗೆ ಮೂರು ವರುಷಗಳ ಕೆಳಗೆ ಒಂದು ಎಂಟ್ರಿ ಕಳುಹಿಸಿದ್ದರು. ಈ ಎಂಟ್ರಿಗೆ ಸುಮಾರು 17000 ರೂಪಾಯಿಗಳು ಮೊದಲನೆ ಬಹುಮಾನ ಬರಲು, ಶ್ರೀ. ಕೃಷ್ಣಪ್ಪನವರು ತಮ್ಮ ಹೆಸರಿನಲ್ಲಿದೆಯೆಂದು ಹೇಳಿ, ಎಲ್ಲಾ ಹಣವನ್ನು ತೆಗೆದುಕೊಂಡು ಶ್ರೀ. ಕೃಷ್ಣರಾವ್ ಮತ್ತು ಶ್ರೀ. ಶ್ಯಾಮಣ್ಣನವರಿಗೆ ದಗಾಮಾಡಿದರು. ಇದರ ಮೇಲೆ ಶ್ರೀ ಕೃಷ್ಣಪ್ಪನವರ ಮೇಲೆ, ಇವರಿಬ್ಬರು ಮೈಸೂರು ಡಿ ಮತ್ತು ಸಿ ಜಡ್ಜರ ಮುಂದೆ ಮೊಕದ್ದಮೆ ಹೂಡಲು ನ್ಯಾಯಮೂರ್ತಿಗಳು ವಿಚಾರಣೆ ನಡಿಸಿ, ತೀರ್ಪಿತ್ತು "ಇದು ಬರಿ ಬಾಯಿಮಾತಿನಿಂದ ನಡೆದಿದೆಯೆಂದು ತಿಳಿದು ಮೊಕದ್ದಮೆಯನು ವಜಾಮಾಡಿದರು. ಆದರೆ ಶ್ರೀ. ಕೃಷ್ಣರಾವ ಮತ್ತು ಶ್ರೀ ಶ್ಯಾಮಣ್ಣನವರು ಹೈಕೋರ್ಟಿನಲ್ಲಿ ಅಪೀಲುಹೋಗಲು ಚೀಫ್ ಜಸ್ಟಿಸ್ ಮಿ! ಕೈಲಿಯವರು ವಿಚಾರಮಾಡಿ' ಶ್ರೀ! ಕೃಷ್ಣಪ್ಪನವರು ತಮ್ಮಲ್ಲಿರುವ ಮತ್ತು ತಮಗೆ ಬಂದಿರುವ ಹಣವನ್ನು ಇವರಿಬ್ಬರಿಗೂ ಸಮನಾಗಿ ಹಂಚಬೇಕಲ್ಲದೆ, ಕೋರ್ಟು ಖರ್ಚನ್ನು ಸಹ ಕೊಡಬೇಕೆಂದು ತೀರ್ಪಿತ್ತಿದ್ದಾಗ. ಶ್ರೀ! ಕೃಷ್ಣಪ್ಪನವರ ಬಳಿಯಲ್ಲಿ ಈ ಹಣದ ಹತ್ತುಸಾವಿರ ರೂಪಾಯಿಗಳು ಬೇಂಕಿನಲ್ಲಿರುವುದರಿಂದಅದರ ಮೂರು ವರ್ಷದ ಶೇಕಡ 3ರ ಬಡ್ಡಿಯ ಪ್ರಕಾರ ಬರುವ ಹಣವನ್ನು ಇಬ್ಬರಿಗೂ ಹಂಚಬೇಕೆಂದು ತಿಳಿಸಿ ತೀರ್ಪಿತ್ತಿದ್ದಾರೆ. ಈ ಮೊಕದ್ದಮೆಯು ಇಲ್ಲಿ ಬಹಳ ಕೋಲಾಹಲಕರವಾಗಿದ್ದಿತು.

ಪ್ರೊಫೆಸರ ಮೇಲೆ ಮೊಖದ್ದಮೆ—"25 ವರ್ಷಗಳ ಕೆಳಗೆ ಮದುವೆಯಾಗಿ, ಮಕ್ಕಳಾಗಿ, ಮನೆಕಟ್ಟಿ, ಈಗ ನನ್ನನ್ನು ಬೇರೆಮಾಡಿ ಬೇರೆ ಮದುವೆ ಮಾಡಿಕೊಂಡು, ನನ್ನ ಒಡವೆಗಳನ್ನು ತೆಗದುಕೊಂಡಿದ್ದಾರೆ, ನಾನು ಬೇರೆ ಜೀವನಮಾಡಬೇಕು. ಆದುದರಿಂದ ತಿಂಗಳಿಗೆ 75 ರೂಪಾಯಿ ಜೀವನಾಂಶ ಕೊಡಿಸಿ" ಎಂಬುದಾಗಿ ಸ್ಥಳೀಯ ಸಬ್‌ಡಿವಿಜನಲ್ ಜಡ್ಜರ ಮುಂದೆ ಶ್ರೀಮತಿ ಪುಟ್ಟಮ್ಮನೆಂಬವರು ತಮ್ಮ ಗಂಡಂದಿರಾದ ಶ್ರೀ ಲಕ್ಷ್ಮೀನರಸಿಂಹಶಾಸ್ತ್ರಿಗಳ ಮೇಲೆ ಒಂದು ದಾವೆ (ಮುಕದ್ದಮೆ) ಹೂಡಿದ್ದಾರೆ. ಶ್ರೀಯುತರು ಇಲ್ಲಿಯ ಮಹಾರಾಜಾ ಕೋಲೇಜಿನಲ್ಲಿ ಸಂಸ್ಕೃತ ಉಪ ಅಧ್ಯಾಪಕರಾಗಿದ್ದಾರೆ. ಪ್ರತಿವಾದಿಗಳು, ವಾದಿಗಳು ತಮಗೆ ತೊಂದರೆಕೊಟ್ಟದ್ದರಿಂದ ಮತ್ತು ಕೊಡುತ್ತಿರುವುದರಿಂದ ಬೇರೆ ಮದುವೆಯಾಗಿರುವುದುಂಟೆಂದೂ, ಬೇಕಾದರೆ ತಿಂಗಳಿಗೆ 15 ರೂ. ಜೀವನಾಂಶ ಕೊಡುವುದಾಗಿಯೂ ತಿಳಿಸಿದ್ದಾರೆ.

ವಾದವಿವಾದಗಳು ನಡೆದು ಮೊಕದ್ದಮೆಯು ಮುಂದುವರಿಯಿತು.

ವಿದ್ಯಾವಂತರಾದವರೇ ಈ ರೀತಿ ಮಾಡಿದಲ್ಲಿ ಇತರರಾದವರು ಹೇಗೆ ಮಾಡುವುದರಲ್ಲಿ ಅತಿಶಯೋಕ್ತಿ ಏನಿಲ್ಲ.

ವನಿತಾಸದನ—ಮಲ್ಲೇಶ್ವರದ ಸದನದ ವಾರ್ಷಿಕೋತ್ಸವವು ಇದೇ ತಿಂಗಳು ಕೊನೆಯ ವಾರದಲ್ಲಿ ಜರಗಲಿದೆ. ಆ ಸಮಯದಲ್ಲಿ ಒಂದು ವಸ್ತುಪ್ರದರ್ಶನ ನಡೆಯುವುದು. ಈ ಪ್ರದರ್ಶನಕ್ಕೆ ಬರುವ, ಚೆನ್ನಾಗಿರುವ ಮತ್ತು ಕುಶಲ ಕೆಲಸಗಳಿಂದ ಕೂಡಿರುವ ವಸ್ತುಗಳಿಗೆ ಬಹುಮಾನ ಕೊಡಲಾಗುತ್ತೆ. ಇದಲ್ಲದೆ ವಸ್ತುಪ್ರದರ್ಶನ ಕಾಲದಲ್ಲಿ ಅಡಿಗೆಯ ಸ್ಪರ್ಧೆ, ವೀಣೆ, ಶೃಂಗಾರ, ಭಾವಗೀತವನ್ನೋದುವುದು, ರಂಗವಲ್ಲಿಯನ್ನಿಡುವುದು ಹೊಲಿಗೆಯ ಮತ್ತು ಕಂಠಪಾಠ ಸ್ಪರ್ಧೆಗಳು ನಡೆಯುವುದು. ಚಿಕ್ಕ ಮಕ್ಕಳುಗಳಿಗೆ ಆಟವು ನಡೆಯುತ್ತೆ. ಇದಕ್ಕೆ ಸರ್ವರೂ ಪ್ರೋತ್ಸಾಹಿಸಬೇಕೆಂದು ಗೌ॥ ಕಾರ್ಯದರ್ಶಿಗಳು ಬರೆಯುತ್ತಾರೆ.

ರಾಜದ್ರೋಹ ಆಪಾದನೆಗೆ ದಸ್ತಗಿರಿ—ಸುಪ್ರಸಿದ್ಧ ಕಾಂಗ್ರೆಸ್ ಮುಂದಾಳುಗಳಾದ, ಶಿವಮೊಗ್ಗೆಯ ಶ್ರೀ ಹೆಚ್. ಸಿದ್ದಯ್ಯನವರನ್ನು ರಾಜದ್ರೋಹದ ಆಪಾದನೆಯ ಮೇಲೆ ಪೋಲೀಸರು ದಸ್ತಗಿರಿಮಾಡಿದ್ದಾರೆಂದೂ, ಶೀಘ್ರದಲ್ಲೇ ಇವರನ್ನು ನ್ಯಾಯಸ್ಥಾನದಲ್ಲಿ ವಿಚಾರಣೆಗೆ ನಿಲ್ಲಿಸಲಾಗುತ್ತೆಂದೂ, ಇಲ್ಲಿಗೆ ಸುದ್ದಿ ಬಂದಿದೆ. ಇವರ ದಸ್ತಗಿರಿ ಪ್ರಯುಕ್ತ ಶಿವಮೊಗ್ಗೆಯಲ್ಲಿ ಸಂಪೂರ್ಣ ಹರತಾಳವಾಯಿತು. ಕಾ॥ ಪ್ರೆ॥ ಶ್ರೀ. ಟಿ. ಸಿದ್ಧಲಿಂಗಯ್ಯನವರು ಒಂದು ಹೇಳಿಕೆಯನ್ನಿತ್ತು ಈ ದಸ್ತಗಿರಿಯು ಬಹಳ ವಿಷಾದಕರವಾದ್ದೆಂದೂ, ಎಲ್ಲರೂ ಒಟ್ಟಾಗಿ ಹೋರಾಡಬೇಕೆಂದಿದ್ದಾರೆ. ಈ ದಸ್ತಗಿರಿಯಿಂದ ಇಲ್ಲಿ ಬಹಳ ತಳಮಳವುಂಟಾಗಿದೆ, ಎದುರಾಳಕ್ಕೂ ಕಾಂಗ್ರೆಸ್ ಹತ್ತಿರ ಬಂತು. ಆ ಹೊತ್ತಿಗೆ ಬಹಳ ಗಲಾಟೆ ನಡೆದು ಮುಖಂಡರ ದಸ್ತಗಿರಿಯಾಗಬಹುದೆಂದು ಊಹಿಸಲಾಗಿದೆ. ಕಳೆದ ವರುಷ ಇದೇ ರೀತಿಯಲ್ಲಿ ನಡೆದು, ಶಿವಪುರ ಕಾಂಗ್ರೆಸ್ಸಿನಲ್ಲಿ ಅನೇಕರ ದಸ್ತಗಿರಿಯಾಗಿ, ಬಹಳ ಗಲಾಟೆ ಇಟ್ಟುಕೊಂಡಿತ್ತು.

ಮದ್ರಾಸಿನ ಮುಖ್ಯ ಮಂತ್ರಿಗಳು—ಮದ್ರಾಸಿನ ಮುಖ್ಯಮಂತ್ರಿಗಳಾದ ಶ್ರೀ! ಸಿ॥ ರಾಜಗೋಪಾಲಾಚಾರಿಯವರು ನಿನ್ನೆ ಬೆಂಗಳೂರಿಗೆಬಂದು ಕುಮಾರಪಾರ್ಕಿನಲ್ಲಿ ಬಿಡಾರಮಾಡಿದ್ದಾರೆ. 3–4 ದಿನಗಳರಬಹುದು.

ಸಾಬೂನು ಉದ್ಯೋಗಿಗಳ ಸಮ್ಮೇಳನ—ಅ॥ ಭಾ॥ ಸಾ॥ ತಯಾರಿಸುವವರ 6ನೇ ವಾರ್ಷಿಕ ಸಮ್ಮೇಳನವು ಬೆಂಗಳೂರಿನಲ್ಲಿ ಮೈಸೂರು ವಾಣಿಜ್ಯಭವನದಲ್ಲಿ ನೆರವೇರಿತು. ಇದರ ಆರಂಭೋತ್ಸವವನ್ನು ಮೈಸೂರು ಸರಕಾರದ ಪ್ರಥಮ ಸಚಿವರಾದ ರಾಜಮಂತ್ರ ಪ್ರವೀಣ ಶ್ರೀ. ಎಂ. ಮಾಧವರಾಯರು ನೆರವೇರಿಸಿದರು. ಭಾರತದಲ್ಲಿ ಎಷ್ಟು ಸಾಬೂನು ತಯಾರುವಾಗುವ ಕಾರ್ಖಾನೆಯುದೆಯೋ, ಅದರ ಪ್ರತಿನಿಧಿಗಳೆಲ್ಲರೂ ಆಗಮಿಸಿದ್ದರು. ಈ ಉತ್ಸವ

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿಗೆ ೧—೦—೦

ನಾಜೀಕರಣ ತೈಲ

ವೀರ್ಯವು ನಷ್ಟವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ನಿರ್ವಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿ ಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಸೀಸೆ 1ಕ್ಕೆ ರೂ. 5—0—0.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಬರೆಯಿರಿ.

ಆತಂಕನಿಗ್ರಹ ಫಾರ್ಮಸಿ, ೭೪,

ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಬೊಂಬಾಯಿ

(ಸ್ವಂತ ಬಾತ್ಮೀದಾರರಿಂದ)

7-4-1939.

ಪ್ರಾರಂಭೋತ್ಸವ—ಮುಂಬಯಿ ಸರಕಾರದವರಿಂದ ಸ್ಥಾಪಿಸಲ್ಪಟ್ಟ ವಿದ್ಯಾಪ್ರಚಾರ ಸಮಿತಿಯ ಪ್ರಾರಂಭೋತ್ಸವವು ಮಾನ್ಯ ಗವರ್ನರರ ಅಧ್ಯಕ್ಷತೆಯಲ್ಲಿ ಮಂಗಳವಾರ 6 ಘಂಟೆಗೆ ಸ. ಜೆ. ಹೋಲಿನಲ್ಲಿ ವಿಜೃಂಭಣೆಯಿಂದ ಜರಗಿತು. ಗವರ್ನರರು ತಮ್ಮ ಭಾಷಣದಲ್ಲಿ ವಿದ್ಯಾಪ್ರಚಾರದಲ್ಲಿ ಯಾವ ಮತಭೇದವೂ ಇಲ್ಲ, ಜಾತಿ ಭೇದವೂ ಇಲ್ಲ, ಮುಂಬಯಿ ನಗರದಲ್ಲಿ ಈಗ ಜ್ಯಾರಿಯಲ್ಲಿರುವ ಪ್ರಜಾಪ್ರತಿನಿಧಿ ಸರಕಾರವು ವಿಜಯಹೊಂದಬೇಕಾದರೆ ಮತ್ತು ಈಚೆಗೆ ಜರಗಿದ ನಗರಸಭೆಯ ಚುನಾವಣೆಯಲ್ಲಿ ಭಾಗವಹಿಸಿದ್ದಕ್ಕಿಂತಲೂ ಇನ್ನು ಹೆಚ್ಚು ಜನರು ಇಂಥ ಸಾರ್ವಜನಿಕ ಕಾರ್ಯಗಳಲ್ಲಿ ಪಾಲುಗಾರರಾಗಬೇಕಾದರೆ ಜನತೆಯ ಕಣ್ಣುಕಟ್ಟಿದಂತಿರುವ ಈ ಅವಿದ್ಯತೆಯನ್ನು ತ್ವರಿತದಲ್ಲೇ ಹೋಗಲಾಡಿಸಬೇಕಾಗಿದೆ. ಆದ್ದರಿಂದ ಸರ್ವರೂ ಇದಕ್ಕೆ ಸಹಾನುಭೂತಿಯನ್ನು ತೋರಿಸಬೇಕೆಂದರು. ಅನಂತರ ಮುಖ್ಯಮಂತ್ರಿಯವರಾದ ಶ್ರೀ. ಬಿ. ಜಿ. ಖೇರರವರು ತಿಳುವಳಿಕೆಯಿಲ್ಲದಿರುವಿಕೆಯೇ ಹಲವು ಕೆಡುಕುಗಳ ಮೂಲಕಾರಣ, ಇದರಿಂದಾಗಿ ನಮ್ಮ ದೇಶಕ್ಕೆ ತುಂಬ ಹಾನಿ ತಗಲಿದೆ. ಒಂದು ಜನಾಂಗವು ಅಭಿವೃದ್ಧಿಗೊಳ್ಳಬೇಕಾದರೆ ಅದರ ಆರ್ಥಿಕ ಸ್ಥಿತಿಯು ಸುಧಾರಿಸಲ್ಪಡಬೇಕು. ಅವಿದ್ಯತೆಯ ಮೋಡವು ಭಾರತವನ್ನೆಲ್ಲಾ ಮುಚ್ಚಿಕೊಂಡಿರುವುದರಿಂದ ಈ ಯಾವ ಸುಧಾರಣೆಗೂ ಸಾಧ್ಯವಿಲ್ಲ. ಆದ್ದರಿಂದ ಈ ಕಾಳಭೂತವನ್ನು ದೂರೀಕರಿಸಲು ಮುಂಬಯಿ ನಗರದ ಪ್ರತಿಯೊಬ್ಬ ನಾಗರಿಕನೂ ತನ್ನ ತನುಮನಧನಗಳ ಮೂಲಕ ಸಹಕರಿಸುವನೆಂದು ನನ್ನ ಕೋರಿಕೆ ಎಂದರು. ಅನಂತರ ಜಮ್ನಾದಾಸ್ ಮೆಹತಾ ಮೊದಲಾದವರೆಲ್ಲ ಭಾಷಣ ಮಾಡಿದರು.

ರಾಷ್ಟ್ರೀಯ ದಿನಾಚರಣೆ—ರಾಷ್ಟ್ರಪತಿಗಳ ಹೇಳಿಕೆಯ ಮೇರೆಗೆ ರಾಷ್ಟ್ರೀಯ ವಾರ ದಿನಾಚರಣೆಯು ಗುರುವಾರ ದಿವಸ ಪ್ರಾರಂಭವಾಯಿತು. ಪ್ರಭಾತ ಫೇರಿ ಧ್ವಜವಂದನೆಗಳು ಮುಂಜಾನೆ ಕಾಂಗ್ರೆಸ್ ಹೌಸಿನಲ್ಲಿ ಜರಗಿದವು. ಸಂಜೆಗೆ ಚೌಪಾಟಿಯಲ್ಲಿ ಪ್ರಚಂಡ ಸಭೆಜರಗಿತು. ಶ್ರೀ. ತ್ರಿಕಂಜಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಇವರು 'ರಾಷ್ಟ್ರೀಯ ವಾರ'ದ ಆವಶ್ಯಕತೆಯನ್ನು ಜನರಿಗೆ ವಿವರಿಸಿ ಖಾದಿಗೆ ಸಹಾಯಮಾಡಬೇಕೆಂದು ಕೇಳಿಕೊಂಡರು.

ಬೆಂಕಿಬಿತ್ತು—ಮೊನ್ನೆ ಅಬ್ದುಲ್ ರಹಿಮಾನ್ ಸ್ಟ್ರೀಟಿನಲ್ಲಿ ಒಂದು ಸಿಡಿಮದ್ದಿನ ಅಂಗಡಿಗೆ ಬೆಂಕಿಬಿದ್ದು ಒಂದುಲಕ್ಷ ರೂಪಾಯಿ ನಷ್ಟವಾಗಿದೆ. ಬೆಂಕಿ ನೊಂದಿಸುವ 6-7 ಗಾಡಿಗಳು ಬಂದಾಗ್ಯೂ ಕೂಡ ಬೇಗನೆ ಬೆಂಕಿ ನೊಂದಿಸಲಾಗಲಿಲ್ಲ. ಸಿದಿ

ಕ್ಕಾಗಿ ಕಟ್ಟಡವನ್ನು ಬಹಳ ಚನ್ನಾಗಿ ಅಲಂಕರಿಸಿದ್ದರು. ಮೈಸೂರು ಸರಕಾರ ಸಾಬೂನು ಕಾರ್ಖಾನೆಯ ಸೂಪರಿಂಟೆಂಡೆಂಟರಾದ ಶ್ರೀ! ಕೃಷ್ಣರಾಯರೂ ಮತ್ತು ಅದಕ್ಕೆ ಸಂಬಂಧಪಟ್ಟ ಶ್ರೀ! ಎಸ್. ಜಿ. ಶಾಸ್ತ್ರಿಗಳೂ ಪ್ರತಿನಿಧಿಗಳಿಗೆ ಸ್ವಾಗತವಿತ್ತರು. ತರುವಾಯ ಸಭೆಯು ನಡೆದು ಆರಂಭೋತ್ಸವವನ್ನು ನೆರವೇರಿಸಿದ ಮಹನೀಯರಿಂದ ವಿಚಾರವಿಸ್ತೃತ ಭಾಷಣ ನಡೆದ ಮೇಲೆ ಸಭೆಯು ಜಯಜಯಕಾರದೊಡನೆ ಮುಕ್ತಾಯಗೊಂಡಿತು.

ಸಿದ್ಧ ಸುದ್ದಿ—ಅಖಿಲಭಾರತ ರೈಲ್ವೇ ಭವನ ಕೆಲಸಗಾರರ ಸಂಘದ ಕಾರ್ಯದರ್ಶಿಗಳಾದ ಮತ್ತು ಸುಪ್ರಸಿದ್ಧ ಲೇಬರ್ ಮುಖಂಡರಾದ ಶ್ರೀಯುತ ಗುರುಸ್ವಾಮಿಯವರು ರಾಜಧಾನಿಗೆ ಬಂದು ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡಿದರೆಂದು, 6ನೇ ತಾ. "ನವಯುಗ"ದಲ್ಲಿ ವರದಿ ಬಂದಿದೆ. ಈ ವರದಿಯು ನಿಜವಿಲ್ಲ. ಶ್ರೀಯುತರು ಆ ದಿನ ಮೈಸೂರಿಗೆ ಬರಲೂ ಇಲ್ಲ, ಸಭೆಯಲ್ಲಿ ಭಾಷಣ ಮಾಡಲೂ ಇಲ್ಲ. ತಪ್ಪಾಗಿ ಪ್ರಕಟವಾದ ಸುದ್ದಿಗೆ ವಿಷಾದಿಸಲಾಗಿದೆ. ಆದರೆ ಶ್ರೀಯುತ ಗುರುಸ್ವಾಮಿಯವರು ನಿನ್ನೆ (8-4-39)ದಿನ ಮೈಸೂರಿಗೆ ಅರಸೀಕೆರೆ ಮೂಲಕ ಬಂದು ಸಭೆಯೊಂದರಲ್ಲಿ ಭಾಷಣಮಾಡಿದರು.

VIJAYALAKSHMI GENERAL ASSURANCE CO., LTD.

ವಿಜಯ ಲಕ್ಷ್ಮಿ

ಜನರಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಪ್ರಧಾನ ಕಛೇರಿ.

ಮದರಾಸು

ವೈಶಿಷ್ಟ್ಯಗಳು

1 ವಿಜಯಲಕ್ಷ್ಮಿಗೆ ಕ್ಷೇತ್ರ ಪಾಲು ಭಂಡವಾಳವು ಧಾರಾಳವಿದೆ.

2 ಗವರ್ನಮೆಂಟ್ ಸೆಕ್ಯೂರಿಟಿಯ ಮೇಲೆ ನಿಯಮಿತ ಹಣವನ್ನು ಠೇವಣಾತಿಯಾಗಿರಿಸಿದೆ.

3 ವಿಜಯಲಕ್ಷ್ಮಿಯ ಲೈಫ್ ಫಂಡ್ ವಿಪುಲವಿದೆ.

4 ಲೈಫ್ ಫಂಡಿನ ಹಣವೆಲ್ಲ ಗವರ್ನಮೆಂಟ್ ಸೆಕ್ಯೂರಿಟಿಗಳ ಮೇಲೆಯೇ ವಿನಿಯೋಗಿಸಲ್ಪಟ್ಟಿದೆ.

5 ಈ ಕಂಪೆನಿಯು ಪ್ರತಿಯೋರ್ವನಿಗೂ ಸುಲಭವಾಗಿ ನಿಲುಕುವಂತಹದಾಗಿದೆ.

6 ಕಂಪೆನಿಯ ಡೈರೆಕ್ಟರರ ಪೈಕಿ ಶೇಕಡಾ 25ರಷ್ಟು ಪೋಲಿಸಿದಾರರ ಪ್ರತಿನಿಧಿಗಳೇ

7 ಕ್ಲೈಮುಗಳು ಅತ್ಯಲ್ಪಸಮಯದಲ್ಲೇ ಕೊಡಲ್ಪಡುತ್ತವೆ.

8 ಜನಜನಿತವಾದ ರೀತಿನೀತಿಗಳಲ್ಲೇ ಪೊಲಿಸಿಗಳನ್ನು ಕೊಡಲಾಗುವುದು.

9 ಪೊಲಿಸಿದಾರರಿಗೆ ಉದಾರ ಶರ್ತಗಳು.

10 ಲೇಪ್ಸ್ ಪೊಲಿಸಿಗಳನ್ನು ಊರ್ಜಿತಕ್ಕೆ ತರುವರೆ ಅತ್ಯಪೂರ್ವ ರಿಯಾಯತಿಗಳು.

11 ವರ್ಷಾವಧಿ ಪ್ರೀಮಿಯಮ್ ಕೊಡುವವರಿಗೆ ಸೇಕಡಾ 2ರಂತೆ ರಿಯಾಯತಿ ಇದೆ.

12 ಪ್ರೀಮಿಯಮ್ ಕಂತುಗಳನ್ನು ಸಲಾಯಿಸುವ ಬಗ್ಗೆ ಸೇವಿಂಗ್ಸ್ ಲೆಖ್ಖ ತೆರೆಯಲ್ಪಡುವುದು.

13 ಅತ್ಯಧಿಕ ಬೋನಸ್ ಕೊಡುವ ಸಂಸ್ಥೆಯಿದು.

14 ಕನ್‌ಸಲ್ಟಿಂಗ್ ಎಕ್ಚ್ಯುವರಿಯ ಮಾತುಗಳಿಂದ ಹೇಳುವುದಾದರೆ ಭದ್ರತೆಯ ಅಡಿಗಲ್ಲಿನಲ್ಲಿ ಸಮರ್ಥ ಡೈರೆಕ್ಟರರಿಂದ ನಡಿಸಲ್ಪಡುವಂಥಾ ವಿಮಾಸಂಸ್ಥೆಯಿದಾಗಿದೆ.

ಹೆಚ್ಚಿನ ಮಾಹಿತಿಗೆ ದಯವಿಟ್ಟು ಬರೆಯಿರಿ—

P. Anthaya Hegde,
District Organiser,
Parkala Post, Udipi, S. K.
or
The Manager,
Head Office:- **Madras.**

ಮದ್ದಿನ ಸ್ಫೋಟದಿಂದಾಗಿ ಹಲವು ಜನರಿಗೆ ಏಟಾಗಿದೆ, ಮಾತ್ರವಲ್ಲ, ಆಸುಪಾಸಿನ ಹಲವು ಅಂಗಡಿಗಳೂ ಅಗ್ನಿಗೆ ಆಹುತಿಯಾಗಿವೆ.

ದಿ ಯಂಗ್ ಮೆನ್ಸ್ ಬೋವಿ ಎಸೋಸಿಯೇಶನ್ ಮುಂಬಯಿ—ಈ ಸಂಘದ ಸದಸ್ಯರಲ್ಲೊಬ್ಬರಾದ ಶ್ರೀ. ಯಂ. ಕೆ. ಉಚ್ಚಿಲ್‌ನವರು ಕೆಲವು ಸಮಯಗಳಿಂದ ಅಸ್ವಸ್ಥರಾಗಿದ್ದು ತಾ. 5-4-39ರಲ್ಲಿ ಸ್ವದೇಶದಲ್ಲಿ ದೈವಾಧೀನರಾದ ವಾರ್ತೆಯನ್ನು ಕೇಳಿ ಈ ಸಂಘವು ತುಂಬಾ ವಿಷಾದಪಡುತ್ತದೆ. ಅವರು ಕಳೆದೆರಡು ವರ್ಷಗಳ ಅವಧಿಯಲ್ಲಿ ನಮ್ಮ ಸಂಘಕ್ಕೆ ಮಾಡಿದ ನಿಸ್ವಾರ್ಥ ಸೇವೆಯ ಬಗ್ಗೆ ಸಭೆಯು ಚಿರಋಣಿಯಾಗಿದೆ. ಇಷ್ಟು ಮಾತ್ರವಲ್ಲದೆ ಈ ಅಕಾಲ ಮರಣದಿಂದಾಗಿ ಅವರ ಕುಟುಂಬಿಕರಿಗಾದ ಅಪಾರ ದುಃಖದಲ್ಲಿ ಈ ಸಭೆಯು ಸಹ ಭಾಗಿಯಾಗಿರುತ್ತದೆ. ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೊಡಲಿ.

೧೯೩೭ನೇ ಫೆಬ್ರವರಿಯಲ್ಲಿ ಜರಗಿದ

ಹಿಂದೀಪರೀಕ್ಷೆಯ ಫಲಿತಾಂಶ

ಕರ್ನಾಟಕ ಪ್ರಾಂತ್ಯ

ಪ್ರಾಥಮಿಕ—ಫಸ್ಟ್‌ಕ್ಲಾಸ್.

209, 217, 221, 229, 230, 237, 251, 253, to 256, 298, 326, 330, 343, 351, 357, 366, 375, 377, 389, 398, 408, 417, 434, 487, 489, 491, 512, 538, 541, 543, 549, 554, 556, 575, 577, 581 to 583, 585, 587, 589, 591 to 595, 609, 613, 620, 647, 662, 727, 728, 733, 751, 758 764, 773, 776, 781, 782, 787, 796, 798, 808, 810, 811, 818, 829 to 831, 834, 868, 869, 892, 900, 918, 919, 925, 927, 929, 941, 943, 944, 953, 968, 970, 987, 1044, 1077, 1080, 1081, 1088, 1090, 1098, 1099, 1107, 1110, 1114, 1134, 1136, 1138, 1160, 1170, 1187, 1195, 1199, 1201, 1202, 1207, 1220, 1229, 1231, 1234, 1243, 1254, 1257, 1262, 1264, 1274 to 1276, 1278, 1280, 1281, 1284, 1286, 1295, 1299, 1301, 1303 1314, 1318, 1320, 1329, 1335 to 1337, 1339, 1348, 1349, 1356, 1357, 1359, 1362, 1363, 1370, 1371, 1385 to 1390, 1392, 1404, 1409, 1423 to 1425, 1428, 1431, 1455, 1457, 1483, 1504, 1506, 1507, 1513, 1514, 1528, 1529.

ಸೆಕೆಂಡ್‌ಕ್ಲಾಸ್.

206, 208, 210 to 213, 215, 218 to 220, 222 to 226, 228, 231 to 236, 238, 239, 242, 252, 257, 261 to 264, 269, 272 to 283, 285 to 288, 290 to 296, 299, 301, 302, 305, 309, 311, 314 to 318, 320, 324, 325, 329, 331 to 342, 345 to 350, 352, 354, 355, 358 to 360, 363 to 365, 367 to 373, 376, 378, 381, 383, 385, 388, 390 to 394, 397, 399, 400, 402, 403, 406, 411, 414, 415, 418, 422, 428, 429, 431, 432, 435 to 437, 439 to 442, 444, 445, 452 to 454, 456 to 464, 466 to 469, 471 to 478, 480 to 483, 488, 490, 492 to 495, 497 to 503, 505 to 507, 510, 514, 515, 520, 523, 528 to 532, 534, 537, 539, 540, 546, 551, 555, 557, 559 to 565, 571, 574, 576, 578, 584, 586, 588, 590, 596 to 599, 601, 602, 605, 606, 609 to 612, 614 to 617, 619 621 to 623, 626, 627, 629 to 643, 645, 646, 655, 656, 658, 665, 666, 673 to 676, 678 to 681, 683, 684, 687 to 689, 691 to 694, 696 to 700, 704, 705, 707, 711, 713, 716 to 721, 724, 726, 729 to 732, 734, 737, 742, 745 to 748, 752 to 756, 759, 761 to 763, 766, 767, 770, 774, 775, 777 to 780, 783 to 786, 788 to 791, 793, 795, 797, 800 to 802, 805 to 807, 809, 812 to 815, 817, 819 to 822, 824 to 828, 836, 845, 847 to 849, 851, 853, 856 to 864, 866, 867, 870 to 875, 877 to 879, 883 885 to 891, 894 to 899, 901, 909 to 912, 915, 917, 920, 921, 923, 924, 926, 931, 933 to 938, 940, 945, 947 to 949, 951, 954, 955 957 to 959, 961 to 967. 969, 971 to 975, 977, 978, 981, 982, 985, 988 to 990, 993 to 995, 1007, 1009, 1015, 1017, 1022, 1023, 1025 to 1029, 1031, 1035, 1036, 1038 to 1041, 1043, 1047, 1048, 1053 to 1061, 1064 to 1066, 1075, 1076, 1078, 1079, 1082 to 1087, 1089, 1091 to 1094, 1096, 1101, 1103, 1106, 1108, 1109, 1111, 1112, 1115, 1116, 1118 to 1120, 1123 to 1125, 1129, 1131 to 1133, 1135, 1137, 1139, 1141, 1143 to 1150, 1152 to 1154, 1156, 1157, 1161, 1164, 1166, 1168, 1172, 1174, 1176, 1177, 1180, 1181, 1184 to 1186, 1188, 1197, 1198, 1200, 1203 to 1206, 1210, 1213, 1215, 1216, 1218, 1219, 1221 to 1226, 1228, 1230, 1232, 1235 to 1237, 1240, 1241, 1244, to 1246, 1249, 1252, 1253, 1256, 1258 to 1261, 1267, 1269, 1270, 1273, 1283, 1285, 1287 to 1294, 1296 to 1298, 1300, 1302, 1304 to 1307, 1310, 1311, 1313, 1315, 1317, 1319, 1321 to 1324, 1331 to 1334, 1338, 1340, 1345 to 1347, 1354, 1358, 1360, 1364 to 1369, 1375 to 1379, 1381 to 1384, 1393, 1394 1396, 1401 to 1403, 1405 to 1408, 1410 to 1413, 1415, 1416, 1418, 1419, 1421, 1422, 1426, 1427, 1429, 1430, 1432 to 1435, 1439 to 1442, 1445, 1451, 1453, 1454, 1458, 1459, 1462, 1463, 1466 to 1469, 1471, 1473, 1476, 1477, 1480 to 1482, 1484, 1486 to 1491, 1493, 1496, 1501 to 1503, 1505, 1516 to 1518, 1522 to 1527, 1530, 1532, 1534 to 1538.

ಮಾಧ್ಯಮಿಕ—ಫಸ್ಟ್‌ಕ್ಲಾಸ್.

172, 179, 201, 209, 220, 230, 247, 269, 274, 293, 311, 313, 315, 318, 320, 331, 365, 366, 390, 409, 446, 484, 488, 535, 536, 558, 559, 567, 574, 582, 605, 723, 730, 731, 733, 739, 752, 795.

ಸೆಕೆಂಡ್‌ಕ್ಲಾಸ್.

157, 159, 162, 164, 166, 168, 169, 174 to 176, 180, 181, 184, 186, 189, 190. 192, 195, 197 to 200, 202, 204 to 208, 212 to 214, 216, 221 to 223, 225, 226, 229, 231 238 to 240, 243 to 246, 248 to 252 253, 254, 256, 257, 259 to 261, 263, 265 to 267, 271, 272, 275, 275, 277 to 283, 288 to 292, 295 to 297, 300, 301, 304, 307, 312, 314, 316, 317, 319, 321 to 325, 327, 328, 330, 332, 335, 336, 340 to 344, 346, 347, 350, 353, 354, 361, 364, 367, 369 to 375, 377 to 389, 391 to 394, 396, 399, 401, 403 to 408, 410 to 412, 414 to 420, 422, 423, 425, 427 to 433, 435 to 437, 439 to 445, 447 to 455, 457 to 455, 465 to 467, 469 to 471, 474, 476 to 480, 482, 483, 485 to 487, 490 to 500, 502 to 507 512 to 517, 521, 524, 526 to 532 534, 537 to 541, 544 to 546, 548, 549 552, 555, 557, 561, 562, 565, 568 to 571, 576, 578 to 581, 583 to 591. 597 to 599, 601 to 604, 606, 609, 610, 612, 613, 615 to 627, 629, 630, 632, 633, 635 to 639, 641 to 654, 656 to 658, 663, 665, 667 to 673, 676, 677, 679, 681 to 686, 688 to 691, 695, 596, 698 to 702, 704, 705, 711, 715 to 720, 722, 724 to 729, 732, 734 to 738, 741 to 744, 746, 749 to 751, 753 to 755, 758 to 160, 762 to 767, 769, 771, 774, 776, 777, 780 to 782, 784 to 786, 788, 789, 791 to 794 796, 797, 799 to 803, 805 to 811 and 2845 and 2851.

ರಾಷ್ಟ್ರ ಭಾಷಾ—ಫಸ್ಟ್ ಕ್ಲಾಸ್

147

ಸೆಕೆಂಡ್‌ಕ್ಲಾಸ್

58 to 63, 65 to 69, 71 to 74, 76 to 78, 80 to 82, 85, 86, 88, 90, 91, 93 to 95, 97 to 105, 107, 108, 112 to 115, 117, 120, 121, 126 to 129, 131, 139 to 146, 148 to 150, 156, 158, 159, 161, 162, 166, 167, 169, 170, 172. 174, 175, 177, 179, 181, 183 to 187, 189 to 191, 193, 195, 201 to 203, 206, 208, 214 to 216, 221 to 223. 226, 228, 229, 232, to 234, 239, 243, 245, 246, 252, 253, 255 to 258, 260 261, 265 to 267, 269, 271, 272, 275 to 278 and 280.

New Kanara Swadeshi Laundry.

GAMDEVI, BOMBAY.

A reliable house for dry cleaning deing all sorts of rich garments.

ದಿ ನ್ಯೂ ಕೆನರಾ ಸ್ವದೇಶಿ ಲಾಂಡ್ರಿ,

ಗಾಮದೇವಿ — ಮುಂಬಾಯಿ.

ಉತ್ತಮ ತರದ ಮಡಿ, ಉತ್ಕೃಷ್ಟ ರೀತಿಯ ರಂಗು —
ಇವುಗಳಿಗೆ ಪ್ರಸಿದ್ಧವಾದ ನಿಲಯ.

ಪಿ. ಎಸ್.—ಪರವೂರುಗಳಿಂದ ಉತ್ತಮ ಜರತಾರಿ ಸೀರೆ, ವಸ್ತ್ರ ಉಡುಗೆ ತೊಡುಗೆಗಳ ರಂಗು ಹಾಕುವ, ಡ್ರೈಕ್ಲೀನಿಂಗ್ ವಗೈರೆ ಕಾರ್ಯವನ್ನು ಟಪ್ಪಾಲು ದ್ವಾರಾ ಸ್ವೀಕರಿಸಿ, ಸಕಾಲದಲ್ಲಿ ತಯಾರಿಸಿ ತಲುಪಿಸುವೆವು.

ಎಸ್. ಆರ್. ಶೆಟ್ಟಿ, ಪ್ರೊಪ್ರೈಟರ್. **G. V. Mahale.** Manager.

Established] [1906

THE

UNITED INDIA

LIFE ASSURANCE Co., LTD.

HEAD OFFICE—MADRAS.

Trustee:—**The Official Trustee to the Government of Madras.**

Policies in force exceed **SIX** Crores.
Annual income exceeds - Rs. **30** lakhs.
Total assets exceeds - Rs. **110** lakhs.
Total claims paid exceed Rs. **40** lakhs.

The oldest & largest life assurance company of South India accepted by the Government as satisfactory for the purpose of exemption from the operation of the Provident Fund Rules to Teachers in aided Schools & for the purpose of utilisation of P. F. Contributions for payment of premiums on the lives of Government Local Board & Municipal servants.

For further particulars please apply to:—

THE BRANCH MANAGER,
THE UNITED LIFE ASSURANCE COMPANY, LTD.,
FELIX PAI BAZAR, **MANGALORE, S. K.**

K. R. Hebbar, B.A., ORGANISER, **UDIPI, S. K.** *OR* **K. Keshava Shenoy,** M.A., ORGANISER, **Pentlanpet, MANGALORE.**

WANTED

a fair and educated young bride of age not exceeding 20 years of bunt community to marry a young man of the same community in good position in Bombay. Apply to Box No. 15. C/o **Navayuga.**

ಕರ್ನಾಟಕದಲ್ಲೆಲ್ಲಾ ವಿಶಾಲವಾಗಿ ಪ್ರಚಾರದಲ್ಲಿರುವ ಅತಿ ಅಗ್ಗ ಬೆಲೆಯ

ತುಳುನಾಡ್

ತಿಲಕ ಪಂಚಾಂಗ

(ಬೆಲೆ ಒಂದಾಣೆ)

ನವಭಾರತ ಬುಕ್ ಡಿಪೊ ಉಡುಪಿ.

ಮೈಸೂರಿನಲ್ಲಿ ಮುಸಲ್ಮಾನರ ವಿದ್ಯಾಭ್ಯಾಸ.

ಮೈಸೂರಿನ ಸೆಂಟ್ರಲ್ ಮುಹಮಡನ್ ಅಸೋಸಿಯೇಷನಿನವರು ಕಳೆದ ಮೂವತ್ತು ವರ್ಷಗಳಿಂದಲೂ ತಾವು ನೆರವೇರಿಸಿರುವ ಕೆಲಸ ಕಾರ್ಯಗಳನ್ನು ಒಂದು ಪುಸ್ತಕದ ರೂಪದಲ್ಲಿ ಪ್ರಕಟಿಸಿರುತ್ತಾರೆ. ತಮ್ಮ ಮೇಲ್ಮೆಗಾಗಿ ನಿರಂತರವೂ ದುಡಿಯುತ್ತಿರುವ ಒಂದು ಕೋಮಿನವರಿಗೆ ಸರ್ಕಾರದವರ ಸಹಾನುಭೂತಿ, ಮತ್ತು ಬೆಂಬಲಗಳೂ ದೊರಕಿದಲ್ಲಿ ಆ ಕೋಮು ಎಷ್ಟರಮಟ್ಟಿಗೆ ಮುಂದುವರಿಯಬಹುದೆಂಬುದನ್ನು ಮೇಲೆ ತಿಳಿಸಿದ ಸಂಘದವರ ಕಾರ್ಯಕಲಾಪಗಳಿಂದ ತಿಳಿದುಕೊಳ್ಳಬಹುದು. ಮುಸಲ್ಮಾನ ಬಾಲಕ ಬಾಲಕಿಯರಿಗಾಗಿಯೇ ಪ್ರತ್ಯೇಕವಾಗಿ ಏರ್ಪಡಿಸಿದ ಶಾಲೆಗಳ ಸಂಖ್ಯೆಯು ಕಳೆದ ವರ್ಷ 897 ರಿಂದ 905ಕ್ಕೇರಿತು. ಆ ಶಾಲೆಗಳಲ್ಲಿ ಓದುವವರ ಸಂಖ್ಯೆಯು 38,087ರಿಂದ, 38,882ಕ್ಕೇರಿತು. ಇದೂ ಅಲ್ಲದೆ, ಸುಮಾರು 7,285ಮಂದಿ ಮುಸಲ್ಮಾನ್ ವಿದ್ಯಾರ್ಥಿಗಳು ಸಾರ್ವಜನಿಕ ಶಾಲೆಗಳಲ್ಲಿ ವ್ಯಾಸಂಗಮಾಡುತ್ತಿದ್ದರು. ಸಂಸ್ಥಾನದ ಮುಸಲ್ಮಾನರ ಜನಸಂಖ್ಯೆಯು ಸೇಕಡ 15ರಷ್ಟು ಮಂದಿ ಶಾಲೆಗಳಿಗೆ ಹೋಗುವ ವಯಸ್ಸಿನವರಾಗಿರುತ್ತಾರೆ. ಇವರ ಪೈಕಿ ಸೇಕಡಾ 83 04ರಷ್ಟು ಮಂದಿ ಶಾಲೆಗಳಲ್ಲಿ ವ್ಯಾಸಂಗಮಾಡುತ್ತಿದ್ದಾರೆ.

ಸರ್ಕಾರದವರ ಸಹಾಯದಿಂದ ಮಾತ್ರವೇ, ಮುಸಲ್ಮಾನರು ಇಷ್ಟುಮಟ್ಟಿಗೆ ವಿದ್ಯಾಭ್ಯಾಸದಲ್ಲಿ ಮುಂದುವರಿದಿರುತ್ತಾರೆಂದು ಭಾವಿಸುವಹಾಗಿಲ್ಲ. ತಮ್ಮ ಅಭಿವೃದ್ಧಿಗಾಗಿ ಮುಸಲ್ಮಾನರೂ ಸಹ ವಿಶೇಷವಾಗಿ ದುಡಿಯುತ್ತಿದ್ದಾರೆ. 1930ನೇ ಇಸವಿಯಲ್ಲಿ ಸೆಂಟ್ರಲ್ ಮುಹಮಡನ್ ಅಸೋಸಿಯೇಷನಿನವರ ಆದಾಯವು 1,468ರೂಪಾಯಿಗಳಿದ್ದುದು 1937ರಲ್ಲಿ 18,546ರೂಪಾಯಿಗಳಾಗಿದ್ದಿತು. ಈ ಹಣವನ್ನು ಸ್ವಲ್ಪವೂ ಪೋಲುಮಾಡದೆ ಅದರ ಪ್ರಯೋಜನವನ್ನು ಸಂಸ್ಥಾನದ ಮುಸಲ್ಮಾನರಿಗೆ ಸಂಪೂರ್ಣವಾಗಿ ಒದಗಿಸಿಕೊಡಲು ನವಾಬ್ ಗುಲಾಂ ಮಹಮ್ಮದ್ ಸಾಹೇಬ್ ಕಲಾಮಿಯವರೂ, ಖಾನ್ ಬಹದ್ದೂರ್ ಮಹಮ್ಮದ್ ಅಬ್ಬಾಸ್‌ಖಾನ್ ಸಾಹೇಬರವರೂ, ಅವಿಶ್ರಾಂತರಾಗಿ ದುಡಿಯುತ್ತಿದ್ದಾರೆ.

ಮುಸಲ್ಮಾನರು ಹಿಂದುಳಿದ ಪಂಗಡದವರೇ? ಹಾಗಿದ್ದರೆ ತಮ್ಮ ತಮ್ಮ ಆಕಾಂಕ್ಷೆಗಳ ಸಾಧನೆಗಾಗಿ ಶ್ರಮಿಸುವುದರಲ್ಲಿ ಅವರು ಯಾವ ವಿಧದಲ್ಲಿಯೂ ಇತರರಿಗೆ ಹಿಂದೆ ಬಿದ್ದಿರುವುದಿಲ್ಲ. ಅಸೋಸಿಯೇಷನಿನವರು ಮೊದಲು ಸಣ್ಣ ಕಟ್ಟಡದಲ್ಲಿ ತಮ್ಮ ಕೆಲಸ ಕಾರ್ಯಗಳನ್ನು ಪ್ರಾರಂಭಿಸಿದ್ದರು. ಈಗ ಅವರ ಸ್ವಂತ ಕಟ್ಟಡದ ಬೆಲೆ 72,677ರೂಪಾಯಿಗಳಾಗುತ್ತದೆ. ಅವರ ಆಡಳಿತಕ್ಕೊಳಪಟ್ಟ ವಿದ್ಯಾರ್ಥಿಭವನ, ಮತ್ತು ಇತರ ಜವಾನುಗಳ ಬೆಲೆಯು 10,000ರೂಪಾಯಿಗಳಾಗಬಹುದು.

1907ನೇ ಇಸವಿಯಲ್ಲಿಯೇ ಅಸೋಸಿಯೇಷನಿನವರು ಒಂದು ಧರ್ಮವಾಚನಾಲಯವನ್ನೂ ಮತ್ತು ಪುಸ್ತಕಭಂಡಾರವನ್ನೂ ತೆರೆದರು. ಈ ಸಂಸ್ಥೆಯು ಬೆಂಗಳೂರು ನಗರದಲ್ಲೆಲ್ಲಾ ಅತ್ಯಂತ ಉತ್ತಮವಾದುದಾಗಿದೆ. ಇದು ಮಧ್ಯ ರಾಷ್ಟ್ರದಲ್ಲಿದ್ದು ಎಲ್ಲರೂ ಬಂದು ಓದಲು ಸಮೀಪವಾಗಿದೆ. ಕಟ್ಟಡವೂ ಸಹ ಗಾಳಿ ಬೆಳಕುಗಳಿಂದ ಕೂಡಿ ಬಹಳ ಚೆನ್ನಾಗಿದೆ. ಇಲ್ಲಿಗೆ ದಿನವೊಂದಕ್ಕೆ ಸರಾಸರಿ 200ಮಂದಿ ಬಂದು ವೃತ್ತಪತ್ರಿಕೆಗಳನ್ನೂ ಓದುತ್ತಿದ್ದಾರೆ. ಈ ಸಂಸ್ಥೆಯ ವೆಚ್ಚಕ್ಕಾಗಿ ತಿಂಗಳಿಗೆ 100 ರೂಪಾಯಿಗಳು ಬೇಕಾಗುತ್ತವೆ. ಸರ್ಕಾರದವರು 25ರೂಪಾಯಿಗಳನ್ನೂ, ಬೆಂಗಳೂರು ನಗರಸಭೆಯವರು 25ರೂಪಾಯಿಗಳನ್ನೂ ಈ ಸಂಸ್ಥೆಗೆ ಪ್ರತಿ ತಿಂಗಳಿನಲ್ಲಿಯೂ ಕೊಡುತ್ತಿದ್ದಾರೆ.

ಮುಸಲ್ಮಾನ್ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡಲು 15,000 ರೂಪಾಯಿಗಳನ್ನು ವೆಚ್ಚಮಾಡುತ್ತಾರೆ. ಮುಸಲ್ಮಾನ್ ವಿದ್ಯಾರ್ಥಿಗಳಿಗೆ ಶಾಲಾ ವೇತನಗಳನ್ನು ಕೊಡುವುದಕ್ಕಾಗಿ ಮುಸಲ್ಮಾನ್ ಮಹಾಜನರು 20,000ರೂಪಾಯಿಗಳ ಮೂಲಧನವನ್ನು ಸರ್ಕಾರದಲ್ಲಿಡಬೇಕೆಂದೂ, ಆ ಹಣದ ಮೇಲಣ ಬಡ್ಡಿಯು ಎಷ್ಟಾಗುವುದೋ ಅಷ್ಟನ್ನು ಸರ್ಕಾರದವರು ಕೊಡಬೇಕೆಂದೂ, ಬಡ್ಡಿಯ ರೂಪದಲ್ಲಿ ಬಂದ ಒಟ್ಟು ಹಣವನ್ನು ವಿದ್ಯಾರ್ಥಿವೇತನಗಳನ್ನು ಕೊಡುವುದಕ್ಕುಪಯೋಗಿಸಬೇಕೆಂದೂ ಸರ್ಕಾರದವರು ಒಂದು ಸ್ಕೀಮನ್ನು ತಯಾರುಮಾಡಿ ಮಂಜೂರುಮಾಡಿರುತ್ತಾರೆ. ಈ ಹಣವನ್ನು ಹೈಸ್ಕೂಲುಗಳಲ್ಲಿ ಓದುವ ಅರ್ಹರಾದ ಮುಸಲ್ಮಾನ್ ವಿದ್ಯಾರ್ಥಿಗಳಿಗೆ ಶಾಲಾ ವೇತನಗಳನ್ನು ಕೊಡಲು ಪೂರ್ತಿಯಾಗಿ ವಿನಿಯೋಗಿಸಬೇಕೆಂದು ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರನ್ನು ಕೋರಲಾಗಿದೆ.

ಸ್ಥಳದಿಂದ ಸ್ಥಳಕ್ಕೆ ಸಂಚರಿಸುವ ಆಸ್ಪತ್ರೆ.

ಕಡೂರು ಡಿಸ್ಟ್ರಿಕ್ಟಿನ ಪ್ರತಿಯೊಂದು ಹಳ್ಳಿಗೂ ವೈದ್ಯ ಸಹಾಯವನ್ನೊದಗಿಸುವ ಕಾರ್ಯಕ್ರಮವೊಂದು ಏರ್ಪಾಟಾಗಿದೆ. ಇದಕ್ಕಾಗಿ ರಬ್ಬರ್ ಟೈರು ಹಾಕಿದ, ನಾಲ್ಕು ಚಕ್ರಗಳ ಎತ್ತಿನ ಗಾಡಿಯೊಂದರಲ್ಲಿ ಔಷಧಗಳನ್ನಿಟ್ಟು ಅದನ್ನು ಹಳ್ಳಿಯಿಂದ ಹಳ್ಳಿಗೆ ಸಾಗಿಸಿ ಜನರಿಗೆ ವೈದ್ಯಸಹಾಯವನ್ನೊದಗಿಸುವ ವಿಷಯವನ್ನು ಸರ್ಕಾರದವರು ಪರ್ಯಾಲೋಚಿಸುತ್ತಿದ್ದಾರೆ. ಸ್ಥಳದಿಂದ ಸ್ಥಳಕ್ಕೆ ಸಂಚರಿಸುವ ಈ ಆಸ್ಪತ್ರೆ ಜತೆಯಲ್ಲಿ ಒಬ್ಬ ನರ್ಸ್ ಆಗಲೀ ಅಥವಾ ಅನುಭವಸ್ಥಳಾದ ಒಬ್ಬ ಸೂಲಗಿತ್ತಿಯಾಗಲೀ ಇರುತ್ತಾಳೆ. ಸುತ್ತಲೂ 5ಮೈಲಿ ವ್ಯಾಸದಲ್ಲಿರುವ ಹಳ್ಳಿಗಳಲ್ಲೆಲ್ಲಾ ಈ ಆಸ್ಪತ್ರೆಯು ಸಂಚರಿಸುವಂತೆ ಏರ್ಪಡಿಸಲಾಗುವುದು. ಹತ್ತು ಮೈಲಿಗಳ ಅಂತರದಲ್ಲಿರುವ ಒಂದು ಸ್ಥಳದಲ್ಲಿ ಬಿಡದಿಮಾಡಿ ಪ್ರತಿಯೊಂದು ಹಳ್ಳಿಗೂ ವಾರಕ್ಕೆರಡು ಬಾರಿಯಾದರೂ ಬಂದು ರೋಗಿಗಳಿಗೆ ತಕ್ಕ ಚಿಕಿತ್ಸೆಯನ್ನು ನಡೆಯಿಸಲನುಕೂಲಿಸುವಂತೆ ಏರ್ಪಡಿಸಬೇಕೆಂಬುದೇ ಸರ್ಕಾರದವರ ಉದ್ದೇಶವಾಗಿದೆ. ಯಾರಿಗಾದರೂ ರೋಗವು ವಿಷಮಿಸಿದ್ದ ಸಂದರ್ಭದಲ್ಲಿ ಅಂಥವರನ್ನು ಅತ್ಯಂತ ಹತ್ತಿರದಲ್ಲಿಯೇ ಇರುವ ಆಸ್ಪತ್ರೆಗೆ ಸಾಗಿಸಲನುಕೂಲಿಸುವಂತೆ, ಒಂದು ಆಂಬ್ಯುಲೆನ್ಸ್ ಗಾಡಿಯನ್ನು ಸಹ ಇದಕ್ಕೆ ಸೇರಿಸಲಾಗುವುದು. ಈ ತರದ ಆಸ್ಪತ್ರೆಗಳನ್ನೇರ್ಪಡಿಸುವುದರ ಸಂಬಂಧದಲ್ಲಿ ಬೇಕಾದ ವಿವರಗಳನ್ನೆಲ್ಲವನ್ನೂ ಕೂಲಂಕಷವಾಗಿ ಪರಿಶೀಲಿಸಲಾಗುತ್ತಿದೆ. ಕೂಡಲೆ ಇಂಥ ಒಂದು ಆಸ್ಪತ್ರೆಯನ್ನು ಏರ್ಪಡಿಸಬೇಕೆಂದು ಉದ್ದೇಶಿಸಲಾಗಿದೆ.

ಸೂಲಗಿತ್ತಿಗೆ ಬದಲಾಗಿ ಪಬ್ಲಿಕ್ ಹೆಲ್ತ್ ನರ್ಸ್ ಈ ಆಸ್ಪತ್ರೆಯ ಜತೆಗೆ ಇರುವಂತೆ ಏರ್ಪಡಿಸುವುದರಲ್ಲಿ ಒಂದು ಉದ್ದೇಶವಿದೆ. ಗರ್ಭಿಣಿಯರು ಮತ್ತು ಬಾಣಂತಿಯರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವ ವಿಷಯದಲ್ಲಿ ತಕ್ಕ ಸಲಹೆಗಳನ್ನು ಕೊಡುವುದೂ ಅಲ್ಲದೆ, ಗ್ರಾಮವನ್ನು ಚೊಕ್ಕಟವಾಗಿಟ್ಟುಕೊಳ್ಳುವುದು, ಮಕ್ಕಳನ್ನು ಆಗಿಂದಾಗ್ಗೆ ವೈದ್ಯರಿಂದ ಪರೀಕ್ಷೆಮಾಡಿಸುವುದು, ಜನರಿಗೆ ಕ್ವಿನೈನನ್ನು ಹಂಚುವುದು ಇವೇ ಮೊದಲಾದ ಉಪಯುಕ್ತವಾದ ಕೆಲಸಗಳ ವಿಚಾರದಲ್ಲಿ ಹೆಚ್ಚಿನ ಪ್ರಚಾರ ಕಾರ್ಯವನ್ನು ನಡೆಯಿಸಲು ಅನುಕೂಲವಾಗುತ್ತದೆ.

ಗಾಂಧಿ ಜೋಯಿಸರ ಭವಿಷ್ಯ ಫಲ.

ನಿಮ್ಮ ಜನನ ತಾರೀಕು ಸಮಯ ಅಥವಾ ಪತ್ರ ಬರೆಯುವ ಘಳಿಗೆ ಮತ್ತು ಅಂದಾಜು ವಯಸ್ಸನ್ನು ತಿಳಿಸಿರಿ. ನಿಮ್ಮ ಕುಟುಂಬ, ವ್ಯಕ್ತಿ

ಆರೋಗ್ಯ, ಸಂಪತ್ತು, ಆದಾಯ ವೆಚ್ಚಗಳು, ಅನಿರೀಕ್ಷಿತ ದೆಸೆಗಳು ಮತ್ತು ದುರದೃಷ್ಟಗಳು, ಪ್ರೇಮ, ಅದೃಷ್ಟದ ಬಣ್ಣ, ಸೌಭಾಗ್ಯ ದೊರೆಯುವ ದಿನಗಳು ಮತ್ತು ಸಂಖ್ಯೆ, ಇನ್ನಿತರ ಪ್ರಾಮುಖ್ಯ ವಿಷಯಗಳು ನಿಮ್ಮ ಬಾಗಿಲಿಗೆ ಕಳುಹಲ್ಪಡುವುವು. ಪ್ರತಿತಿಂಗಳ ಭವಿಷ್ಯವನ್ನೊಳಗೊಂಡ ಒಂದು ವರುಷದ ಭವಿಷ್ಯಫಲಕ್ಕೆ ರೂಪಾಯಿ 3. ಪ್ರತಿತಿಂಗಳ ಆಗುಹೋಗುಗಳ ಸಮೇತ ಐದು ವರುಷದ ಫಲಕ್ಕೆ ರೂಪಾಯಿ 12-8-0. ಸಾಹುಕಾರರಿಗೂ ಉದ್ಯೋಗಸ್ಥರಿಗೂ ಪ್ರತಿವಾರದ ಭವಿಷ್ಯವನ್ನು ಸೂಚಿಸುವ ಒಂದು ವರುಷದ ಫಲಕ್ಕೆ ರೂಪಾಯಿ 10. ಭವಿಷ್ಯದ ಕುರಿತು ಕೇಳಲ್ಪಡುವ ಐದು ಪ್ರಶ್ನೆಗಳಿಗೆ ಸರಿಯಾದ ಉತ್ತರವು ಒಂದು ರೂಪಾಯಿ ಹಾಕಿ ಕೊಟ್ಟಲ್ಲಿ ತಿಳಿಸಲಾಗುವುದು (ವಿ. ಪಿ ಖರ್ಚು ಪ್ರತ್ಯೇಕ)

ಭವಿಷ್ಯ ಫಲದ ಕುರಿತು 'ಸ್ವದೇಶ ಮಿತ್ರನ್' ಮದ್ರಾಸಿನ ದಿನ ಪತ್ರಿಕೆಯು ಈ ರೀತಿ ಬರೆಯುತ್ತದೆ. 'ಶ್ರೀ. ವಿ. ಕೆ. ಶಠಗೋಪಾಚಾರಿಯವರ ಭವಿಷ್ಯವಾಣಿಗಳ ಕುರಿತು ಮಹಾಜನರಿಗೆ ಪರಿಚಯ ಮಾಡಿಕೊಡುವ ಅಗತ್ಯವಿಲ್ಲ. ಮಹಾತ್ಮಾಜಿಯವರ ಬಂಧವಿಮೋಚನೆ, ಅಮೇರಿಕಾ ಸಂಯುಕ್ತ ಪ್ರಸಿಡೆಂಟ್ ರೂಸ್‌ವೆಲ್ಟರ ಚುನಾವಣೆಯ ಜಯಶೀಲತೆ ಮೊದಲಾದವು ಶ್ರೀ. ಆಚಾರಿಯವರು ಹೇಳಿದಂತೆ ಫಲಿಸಿವೆ. ಗಾಂಧಿ ಜೋಯಿಸರ ಭವಿಷ್ಯಫಲವು ಬ್ರಹ್ಮಾಂಡದಲ್ಲೆಲ್ಲಾ ಪ್ರಬಲ ಯೋಗ್ಯತೆಯುಳ್ಳದ್ದು, ಪತ್ರವ್ಯವಹಾರ ಇಂಗ್ಲೀಷಿನಲ್ಲಿ.

ವಿಳಾಸ:- **V. K Satagopachariar**
Hanuman Jotisha Ashram
TIRUTTANI, S. India.

Advertiser in Navayuga please note

We request our advertisers to kindly send their advertisement matter or change in the same as to reach us a week before. Copies of Advertisement should be written legibly or typed to avoid errors in printing.

Advt Manager.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಕಡಲೆಯಲ್ಲಿರುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದಲೂ ಫಲಕಾರಿಯಾಗದೆ ಇನ್‌ಜಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕಡೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೩೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

Sole Manufacturer DR. D. N. JASANI, Vitalbhai Patel Road. BOMBAY 4.

ಈ ವಾರದ ಫಲಿತಾಂಶವೇನು?

(ತಾ. 13—4—39ರಿಂದ 20—4—39ರ ವರೆಗಿನ ರಾಶಿಫಲ)

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ. ಸಂ ನ.]

ಮೇಷರಾಶಿ—

'ಊರು ಬಿಟ್ಟರೂ ಗ್ರಹಚಾರ ಬಿಡದು' ಎಂಬೀ ರೀತಿಯಲ್ಲಿ ನಿಮ್ಮ ಅವಸ್ಥೆ ಬಂದೊದಗಿರುವುದು. ವಿನಾಕಾರಣದಿಂದಾಗಿ ಊರುಬಿಟ್ಟು ಪ್ರವಾಸಮಾಡ ಬೇಕಾಗುವುದು. ಇದರಿಂದ ಹೆಚ್ಚಾದ ದುಃಖನಷ್ಟಗಳಿಗೆ ಗುರಿಯಾಗುವಿರಿ. ರೋಗಪೀಡೆಯಿಂದ ದೇಹದಲ್ಲಿ ನಿಶ್ಶಕ್ತಿಯು ಹೆಚ್ಚುವುದು. ಶತ್ರುಗಳ ಪೀಡೆಯಿಲ್ಲದಿದ್ದರೂ ಕೂಡ ಸ್ವೀಯ ಕಾರ್ಯಗಳಲ್ಲಿ ಅಪಜಯವೇ ಪ್ರಾಪ್ತವಾಗುವುದು. ಸುತ್ತುಮುತ್ತಲಿಂದಲೂ ಖರ್ಚುಗಳೂ ಅನರ್ಥಗಳೂ ಮೆಟ್ಟುತ್ತಾ ಬರುವವು. ಈ ಎಲ್ಲಾ ವ್ಯಸನಗಳಿಂದ ಪೀಡಿತರಾದ ನಿಮಗೆ ದಿನಗಳೆಯುವುದು ಬಹಳ ಕಷ್ಟಕ್ಕೆ ಬರುವುದು. ಆದರೂ ನಿಮ್ಮ ಮಿತ್ರವರ್ಗವು ಬಹಳ ಉತ್ತಮವಿರುವುದರಿಂದ ಅವರು ಕೈಲಾದ ಸಹಾಯವನ್ನು ಮಾಡಲು ಸದಾ ಸಿದ್ಧರಿರುವರು. ವಾರಾದಿಯ ನಾಲ್ಕು ದಿನಗಳಲ್ಲಿ ವಿಶೇಷ ಹಾನಿಗಳೊದಗದಿದ್ದರೂ ಮುಂದಿನ ದಿನಗಳು ಬಹಳ ಅನಿಷ್ಟಕಾರಿಗಳಾಗಿವೆ.

ವೃಷಭರಾಶಿ—

"ನಂಬಿ ಕೆಟ್ಟವರಿಲ್ಲ, ಶ್ರೀಹರಿ ನಿನ್ನ ನಂಬದೆ ಕೆಡುವರಲ್ಲ" ಎಂಬ ಹರಿದಾಸರ ಉಕ್ತಿಯು ಅಕ್ಷರಶಃ ನಿಜವಾದುದು ಮತ್ತು ಮಾನ್ಯವಾದುದು. ಇದಕ್ಕೆ ದೃಷ್ಟಾಂತವಾಗಿ ಈ ರಾಶಿಯಲ್ಲಿ ಜನಿಸಿದ ದೈವಭಕ್ತನಾಗಿ ಸದಾಚಾರಸಂಪನ್ನನಾಗಿರತಕ್ಕವನಿಗೂ ತದ್ವಿರುದ್ಧ ವರ್ತನವುಳ್ಳವನಿಗೂ ಈ ವಾರದಲ್ಲಿ ಸಂಭವಿಸುವ ಇಷ್ಟಾನಿಷ್ಟಗಳನ್ನೇ ಪರಿಶೀಲಿಸಿರಿ. ಆಗ ನಿಮಗೆ ಮನದಟ್ಟಾಗುವದು, ಈ ವಾರವು ನಿಮಗೆ ಬಹ್ವಂಶ ಉತ್ತಮವಾಗಿಯೇ ಇರುವುದು. ಪಶುಭೃತ್ಯಾದಿ ಗೃಹಪರಿವಾರಗಳೂ ಬಂಧು–ಮಿತ್ರರೂ ಕೂಡ ಸಂಪೂರ್ಣ ಅನುಕೂಲರಾಗಿರುವುದರಿಂದ ನಿಮ್ಮ ಮನೋರಥಗಳೊಂದೂ ನಿಷ್ಫಲಗಳಾಗಲಾರವು. ಆರೋಗ್ಯವೂ ಸಂಪದ್ಭಾಗವೂ ಸುಧಾರಿಸುವುದು. ಪರಸ್ತ್ರೀಧನವೂ ಸಿಗುವ ಸಂಭವವಿರುವುದು. ವಿಪಕ್ಷೀಯರಿಂದಾಗಿ ಕೆಲವಂಶ ಧನವ್ಯಯವೂ ಕಲಹವೂ ಆಗಲಿದೆ. ಸುಖದಿಂದಿರಲು ಎಂದೂ ಬಿಡಲಾರರು. ತಾ. 14 ಮತ್ತು 19-20 ಈ ದಿನಗಳಲ್ಲಿ ಜಾಗ್ರತೆ ತಪ್ಪಿರಬೇಡಿ; ಅನಿಷ್ಟಗಳೊದಗಲು ಸಾಕಷ್ಟು ಕಾರಣಗಳಿವೆ.

ಮಿಥುನರಾಶಿ—

ನಿಮ್ಮ ಭಾಗಕ್ಕೆ ಈವಾರವು ಉತ್ತಮವೂ ಆಗದು ಕನಿಷ್ಟವೂ ಆಗದು. ಅಂತೂ ಮಧ್ಯಮರೀತಿಯಲ್ಲಿರುವುದು. ನೀವು ಕೈಗೊಂಡ ರಾಜಕೀಯ ಕಾರ್ಯದಲ್ಲಾಗಲಿ ಇತರ ವ್ಯವಹಾರಭಾಗದಲ್ಲಾಗಲೀ ನಿಮಗೆ ಫಲವು ಉತ್ತಮರೀತಿಯಲ್ಲೇ ಲಭಿಸುವುದು. ಧನಮಾನಗಳು ತೃಪ್ತಿಕರವಾದ ರೀತಿಯಲ್ಲಿ ದೊರೆಯುವವು. ಧರ್ಮಕರ್ಮಗಳಲ್ಲಿನ ನಿಮ್ಮ ಆಸಕ್ತಿಯು ಕಾರ್ಯರೂಪದಲ್ಲಿ ತೋರಿಬರುವುದು. ಆದರೂ ನಿಮ್ಮ ಮನಸ್ಸು ಸದಾ ಅಸ್ಥಿರವಾಗಿರುವುದರಿಂದ ನಿಮ್ಮನ್ನು ದುರ್ಮಾರ್ಗಕ್ಕೆಳೆಯಲು ಯತ್ನಿಸುವುದು. ಆದ್ದರಿಂದ ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳುವುದು ನಿಮ್ಮ ಆದ್ಯಕರ್ತವ್ಯ. ಸ್ವಲ್ಪಮಟ್ಟಿಗೆ ಆರೋಗ್ಯವೂ ಕೆಡಲಿರುವುದು. ಮತ್ತು 'ಗಂಡ ಹೆಂಡಿರ ಕಲಹ ಉಂಡು ಮಲಗುವ ತನಕ' ಎಂಬ ಗಾದೆಯು ಈ ವಾರದಲ್ಲಿ ನಿಮಗೆ ಸರಿಯಾಗಿ ಅನ್ವಯಿಸುವುದು. ಕಷ್ಟಾರ್ಜಿತವಾದ ಧನವು ಕೆಲವಂಶ ವ್ಯರ್ಥವಾಗುವುದು. ತಾ 17ರಿಂದ ವಾರಾಂತ್ಯದ ವರೆಗಿನ ದಿನಗಳು ಉತ್ತಮವಿರುವುದರಿಂದ ಮಿತ್ರಸಮಾಗಮ; ಇಷ್ಟಸಿದ್ಧಿಗಳುಂಟಾಗುವವು.

ಕರ್ಕಾಟಕರಾಶಿ—

ಪ್ರಕೃತದಲ್ಲಿ ನೀವು ಧರ್ಮಬಾಹಿರರಾಗಿದ್ದರೂ ಕೂಡ ಕಾಲವು ನಿಮಗೆ ಅನುಕೂಲವಾಗಿರುವುದರಿಂದ ನಿಮ್ಮ ಮನೋರಥಗಳು ಸಫಲಗಳಾಗುವವು. ನಿಮ್ಮ ಚಾತುರ್ಯದಿಂದಾಗಿ ಕೋರ್ಟು ವಗೈರೆಗಳಲ್ಲಿ ನಿಮ್ಮ ಕಾರ್ಯಗಳನ್ನು ನಿಮಗನುಕೂಲವಾಗುವಂತೆಯೇ ಕೊನೆಗೊಳ್ಳುವಂತೆ ಮಾಡಲು ಸಮರ್ಥರಿರುವಿರಿ. ಹಿಡಿದ ಕಾರ್ಯವನ್ನು ಕೊನೆಗೋಳಿಸದೆ ಎಂದೂ ಬಿಡಲಾರಿರಿ. ಶತ್ರುಭಯದಿಂದ ನಿವೃತ್ತರಾಗಿರುವಿರಿ. ಕೌಟುಂಬಿಕ ಕಲಹವು ಕೊನೆಗೊಳ್ಳುವುದರಿಂದ ಮನಸ್ಸಿಗೆ ನೆಮ್ಮದಿಸಿಗುವದು. ಧನಧಾನ್ಯ ವಸನಾದಿಗಳು ಬೇಕಷ್ಟು ಲಭಿಸುವವು. ವಿದ್ಯಾರ್ಥಿಗಳ ಭಾಗಕ್ಕೆ ಈ ವಾರವು ಉತ್ತಮವಾಗಿಲ್ಲವು. ಗೃಹಸುಖವು ತೃಪ್ತಿಕರವಾಗಿರುವುದು. ತಾ. 13-14 ಮತ್ತು 19-20 ಈ ದಿನಗಳು ಉತ್ತಮವಾಗಿರುವುದರಿಂದ ಮೃಷ್ಟಾನ್ನ ಭೋಜನ ಮಹಾಸುಖ ಸ್ತ್ರೀ ಮೂಲಕ ಧನಲಾಭವೂ ಆಗಲಿದೆ.

ಸಿಂಹರಾಶಿ—

ವಿದ್ಯಾರ್ಥಿಗಳಿಗೂ ವಿದ್ಯೋಪಜೀವಿಗಳ ಪಟ್ಟಿಗೂ ಈ ವಾರವು ಕೆಲವಂಶ ಉತ್ತಮವಾಗಿರುವುದಲ್ಲದೆ ಇತರ್ರಾರಿಗೂ ಚೆನ್ನಾಗಿಲ್ಲವು. ಆರೋಗ್ಯವು ಪೂರ್ಣವಾಗಿ ಕೆಟ್ಟು, ತನ್ನಿಮಿತ್ತವಾಗಿ ಬಹಳ ಧನವ್ಯಯವಾಗುವುದು; ಹಣದ ಸಲುವಾಗಿ ಜನರೊಡನೆ ಕಲಹವಾಗುವದು. ಶತ್ರುಜನರ ಕಪಟೋಪಾಯಗಳಿಂದ ನಿಮ್ಮ ಕಾರ್ಯಗಳೆಲ್ಲವೂ ವಿಫಲಗಳಾಗುವವು. ಪುತ್ರರಿಂದ ಶೋಕವು ಉಂಟಾಗುವುದು; ಸ್ತ್ರೀವರ್ಗದವರಿಂದ ಹೆಚ್ಚಾದ ಅನಿಷ್ಟ ಅಪಾಯಗಳು ಸಂಭವಿಸಲಿರುವವು. ಪತ್ನೀಪುತ್ರರ ವಿರಹದಿಂದಾಗಿ ಹೆಚ್ಚಿನ ದುಃಖಭಾಗಿಗಳಾಗುವಿರಿ. ಅಕಸ್ಮಾತ್ತಾಗಿ ಪ್ರವಾಸಮಾಡಬೇಕಾಗಿ ಬಂದು ಮಾರ್ಗಾಯಾಸಕ್ಕೊಳಗಾಗುವಿರಿ. ಇದೇ ಮೊದಲಾದ ಅನಪೇಕ್ಷಿತಕಾರ್ಯಗಳಿಂದ ವ್ಯಸನಾಕ್ರಾಂತರಾಗಿರತಕ್ಕ ನಿಮ್ಮ ವದನದಲ್ಲಿ ಎಳ್ಳಷ್ಟೂ ಗೆಲುವಿಲ್ಲದಾಗುವುದು. ತಾ. 17ರಿಂದ 20ರ ವರೆಗಿನ ದಿನಗಳಲ್ಲಿ ರಾಜಭಯರೋಗಾದ್ಯನಿಷ್ಟಗಳು ವೃದ್ಧಿ ಹೊಂದಲಿವೆ.

ಕನ್ಯಾರಾಶಿ—

ಜನ್ಮಪತಿಯಾದ ಬುಧನು ನೀಚನಾಗಿ ಪಾಪಗ್ರಹರೊಂದಿಗೆ ಕೂಡಿಕೊಂಡಿರುವುದರಿಂದ ನಿಮಗೂ ನಿಮ್ಮ ಕೈಹಿಡಿದಾಕೆಗೂ ಕೂಡ ಶರೀರಪೀಡೆಯು ಹೆಚ್ಚಾಗುವದು. ಸಂಸರ್ಗದೋಷದಿಂದಾಗಿ ಕೆಲವು ಅನಿರೀಕ್ಷಿತಗಳಾದ ಅನಿಷ್ಟಗಳು ಥಟ್ಟನೆ ಬಂದೊದಗುವವು. ವ್ಯವಹಾರದಲ್ಲಿ ಸಾಮಾನ್ಯವಾಗಿ ಹೆಚ್ಚಿನವರಲ್ಲಿ ಕಲಹವಾಗುವದು. ಮಾತ್ರವಲ್ಲ ನಿಮ್ಮಾಕೆಯೂ ಕೂಡ ನಿಮ್ಮ ಇಷ್ಟಕ್ಕೆ ವಿರೋಧವಾಗಿ ವರ್ತಿಸುವಳು. ಶತ್ರುಜನರ ವೃದ್ಧಿಯ ಕಾಲವಾದುದರಿಂದ ನಿಮ್ಮ ಪ್ರತಿಯೊಂದು ಕಾರ್ಯಕ್ಕೂ ವಿಘ್ನಗಳು ತಪ್ಪುವಂತಿಲ್ಲವು. ಆದರೂ ಗುರ್ವನುಗ್ರಹವು ಪೂರ್ಣವಾಗಿರುವುದರಿಂದ ಹಿಂದಿನಿಂದ ಜನರು ನಿಮ್ಮನ್ನು ತಿರಸ್ಕರಿಸಿದರೂ ಇದಿರಿನಿಂದ ಬಹಳವಾಗಿ ಗೌರವಿಸುವರು. ಭೋಗ್ಯವಸ್ತುಗಳು ಅನಾಯಾಸವಾಗಿ ದೊರೆಯುವವು; ವಾಕ್ಚಾತುರ್ಯದಿಂದ ಜನರನ್ನು ನಿಮ್ಮವರನ್ನಾಗಿ ಮಾಡಿಕೊಳ್ಳಲು ಸಮರ್ಥರಿರುವಿರಿ. ತಾ. 15ರಿಂದ 18ರ ವರೆಗಿನ ದಿನಗಳು ತಕ್ಕಮಟ್ಟಿಗೆ ಚೆನ್ನಾಗಿರುವುದರಿಂದ ಧನಲಾಭ, ಆರೋಗ್ಯ ಸುಖಾದಿಗಳು ಲಭಿಸುವವು.

ತುಲಾರಾಶಿ—

ಇತ್ತೀಚೆಗೆ ನಿಮ್ಮ ಭಾಗ್ಯವು ಕ್ಷೀಣದೆಸೆಯನ್ನೈದುತ್ತಿರುವುದು. ಆದಕಾರಣದಿಂದ ಉದರರೋಗ, ಮಾರ್ಗಾಕ್ರಮಣ ಧನವ್ಯಯಗಳು ಸಂಭವಿಸಿ ನಿಮ್ಮನ್ನು ಮನೋವ್ಯಥೆಗೀಡುಮಾಡುತ್ತಿರುವವು. ಆದರೂ ನೀವು ಉಪಾಯದಿಂದಲೇ ನಿಮ್ಮ ಕಾರ್ಯವನ್ನು ಸಾಧಿಸಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಈ ವಾರವು ಹೆಚ್ಚಿನ ಉತ್ತಮ ಫಲದಾಯಕವಾಗಿಯೇ ಇರುವುದು. ಕುಮಾರರಿಂದಲೂ ಕಾಸುಬಿಟ್ಟೆದ ಕೃಪಣರಿಂದಲೂ ಧನಸಂಗ್ರಹಿಸುವಿರಿ. ಉದ್ಯೋಗಾಪೇಕ್ಷಿಗಳು ಇಷ್ಟಾರ್ಥವನ್ನು ಹೊಂದುವರು. ನೌಕರರಿಗೂ ಉಪಾಧ್ಯಾಯರಿಗೂ ಬಡತಿಯಾಗುವ ಸಂಭವವಿದೆ. ಶತ್ರುಗಳನ್ನು ಕೂಡ ಮಿತ್ರರನ್ನಾಗಿ ಪರಿವರ್ತಿಸಿಕೊಳ್ಳುವಿರಿ. ಬಂಧುಮಿತ್ರರ ಸಹಕಾರವು ಚೆನ್ನಾಗಿರುವುದರಿಂದಲೂ ಉತ್ತಮ ರೀತಿಯಲ್ಲಿ ಧನಪ್ರಾಪ್ತಿಯಾಗುವುದರಿಂದಲೂ ನೀವು ಸುಖದಿಂದಲೇ ದಿನಗಳೆಯುವಿರಿ. ಗೃಹಕೃತ್ಯದಲ್ಲಿ ಸುಖವು ತೃಪ್ತಿಕರವಾಗಿರುವುದು. ತಾ. 13ರಿಂದ 16ರ ವರೆಗೆ ಮಿತ್ರರಲ್ಲಿ ಮನಸ್ತಾಪ ಪ್ರಯಾಣ, ಉದರರೋಗ ಕಾರ್ಯಹಾನಿ ಇತ್ಯಾದ್ಯನಿಷ್ಟಗಳು ಸಂಭವಿಸಲಿರುವವು.

ವೃಶ್ಚಿಕರಾಶಿ—

ಈ ವಾರವು ನಿಮಗೆ ಸಾಮಾನ್ಯ ಉತ್ತಮರೀತಿಯಲ್ಲೇ ಇರುವುದೆಂಬುದೂ ತಪ್ಪಾಗದು. ಆರೋಗ್ಯ ಲಾಭದಿಂದಲೂ ಶತ್ರುಗಳ ಕ್ಷಯದಿಂದಲೂ ಮನಸ್ಸಿಗೆ ನೆಮ್ಮದಿಯುಂಟಾಗುವುದು. ವ್ಯಾಪಾರೀ ಜನರಿಗೂ ವೈದ್ಯವೃತ್ತಿಯವರಿಗೂ ಸ್ವಸ್ವಧರ್ಮಾಚಾರಾಸಕ್ತರಾದ ನೈಷ್ಠಿಕಜನರಿಗೂ ಸ್ವೋದ್ಯೋಗದಲ್ಲಿ ಧನವೂ ಕೀರ್ತಿಯೂ ಲಭಿಸುವುದು. ಸನ್ಮಿತ್ರರು ಹೆಚ್ಚುವರು. ಇಷ್ಟೆಲ್ಲಾ ಸೌಭಾಗ್ಯಗಳಿದ್ದರೂ ನಿಮಗೆ ಮನೆಯಲ್ಲಿ ತುಂಬಾ ದುಃಖವೆಂದೇ ಹೇಳಬೇಕು. ಪತ್ನೀಪುತ್ರರಿಗೂ ನಿಮಗೂ ನಿತ್ಯ ಕಲಹ ತಪ್ಪದು. ಸೇವಕನು ನಿಮಗೆ ಇದಿರಾಗುವನು. ಅಂತೂ ಗೃಹಕೃತ್ಯದಲ್ಲಿ ಚಿಂತೆಯು ಹೆಚ್ಚುತ್ತಲೇ ಇರುವುದು. ರಾಜಕೀಯ ಸಂಬಂಧಗಳಾದ ಯಾವ ಕಾರ್ಯಕ್ಕೂ ಸದ್ಯ ನೀವು ಪ್ರವರ್ತಿಸಿದಲ್ಲಿ ಅನಿಷ್ಟ ತಪ್ಪದು. ತಾ. 16ರಿಂದ 19ರ ವರೆಗಿನ ದಿನಗಳು ನಿಮ್ಮ ಭಾಗಕ್ಕೆ ಅನಿಷ್ಟಕಾರಿಗಳಾಗಿರುವವು.

ಧನುರಾಶಿ—

ಕಡಿವಾಣ ತಪ್ಪಿದ ಕುದುರೆಗಳು ವಾಹನವನ್ನು ನಿಕ್ಕಾಬಿಟ್ಟೆ ಎಳೆದುಕೊಂಡು ಹೋಗುವಂತೆ ನಿಮ್ಮ ಮನಸ್ಸು ಮತ್ತು ಇಂದ್ರಿಯಗಳು ನಿಮ್ಮನ್ನು ದುರ್ಮಾರ್ಗಕ್ಕೆಳೆಯುತ್ತಿರುವವು. ಈ ಕಾಲದಲ್ಲಿ ಬುದ್ಧಿರೂಪನಾದ ಸಾರಥಿಯು ಯೋಗ್ಯನಿದ್ದರೆ ದೇಹಾತ್ಮರೂಪಿಗಳಾದ ರಥರಥಿಕರನ್ನು ಆಪತ್ತಿನಿಂದ ಪಾರುಗಾಣಿಸುವನು. ಸದ್ಯ ನಿಮಗೆ ಮಿತ್ರರೂ ಕಡಿಮೆಯಾಗಿರುವರು; ಶತ್ರುಗಳು ಹೆಚ್ಚಿರುವರು. ಕೈಯಲ್ಲಿ ಕಾಸೂ ಇಲ್ಲವು, ಇಂತಹ ಆಪತ್ಕಾಲದಲ್ಲೇ ನಿಮ್ಮ ಬಂಧುಗಳು ನಿಮಗೆ ವಿಶ್ವಾಸಘಾತುಕತನವನ್ನು ಮಾಡಲಿರುವರು. ಆದಕಾರಣ ನೀವು ಪ್ರತಿಯೊಂದು ಭಾಗದಲ್ಲೂ ಚೆನ್ನಾಗಿ ವಿಚಾರಮಾಡಿ ಮುಂದಡಿಯಿಡಿರಿ. ಹಾಗೆ ಮಾಡಿದಲ್ಲಿ ಮಾತ್ರ ನೀವು ಹಿಡಿದ ಕಾರ್ಯದಲ್ಲಿ ತಕ್ಕ ಫಲವೂ ಯಶಸ್ಸೂ ದೊರೆಯುವುದು. ಖರ್ಚಿನ ಭಾಗಗಳನೇಕವಿದ್ದರೂ ಹಣದ ಬಿಕ್ಕಟ್ಟಿಗೆ ಸಿಲುಕಲಾರಿರಿ. ತಾ 15-16 ಈ ದಿನಗಳು ಹೊರತು ಇತರ ಎಲ್ಲಾ ದಿನಗಳು ವಿಶೇಷ ಹಾನಿಕರಗಳಾಗಿವೆ.

ಮಕರರಾಶಿ—

ಈಗೀಗ ನಿಮ್ಮ ಭವಿಷ್ಯವು ಬಹಳವಾಗಿ ಕೆಡುತ್ತಾ ಬಂದಿರುವುದು. ಎಷ್ಟೇ ಹಿತಮಿತವಾಗಿ ಆಹಾರವನ್ನು ಸೇವಿಸುತ್ತಿದ್ದರೂ ಆರೋಗ್ಯವು ಉಳಿಯಲಾರದು. ಪಿತ್ಥವು ಅಧಿಕವಾಗುವುದು. ಅಂಗಾಂಗಗಳಲ್ಲಿ ನೋವು, ಕಣ್ಣುನೋವು ಮುಂತಾದವುಗಳು ಬರುವವು. ಸ್ತ್ರೀಯರ ಕೂಡೆ ಕಲಹದಿಂದಾಗಿ ಮಾನಹಾನಿಯು ಸಂಭವ ಬಂದೀತು. ಶತ್ರುಗಳ ಪೀಡೆಯಿಲ್ಲದಿದ್ದರೂ ಇಷ್ಟಾರ್ಥಗಳಿಗೆ ದೈವಾಯತ್ತವಾದ ವಿಘ್ನಗಳು ಬರಲಿವೆ. ಸ್ವೀಕೃತಕಾರ್ಯಗಳಲ್ಲಿ ಧನಲಾಭವು ತೃಪ್ತಿಕರವಾಗಿರುವುದು. ಗೃಹಪರಿವಾರಗಳಲ್ಲಿ ನ್ಯೂನತೆಯಿರದು, ಮಿತ್ರಬಂಧುಗಳು ಸದಾ ನಿಮ್ಮ ಶ್ರೇಯಃಕಾಂಕ್ಷಿಗಳಾಗಿಯೇ ಇರುವರು; ಶತ್ರುಜನರು ನಿಮಗೆ ತಲೆಬಾಗಿ ನಡೆಯುವರು; ಆದಕಾರಣದಿಂದಲೇ ಆರೋಗ್ಯಹೀನರಾಗಿದ್ದರೂ ಕೂಡ ಲೆಕ್ಕಿಸದೆ ದಿನಗಳನ್ನು ಸಂತೋಷದಿಂದ ಕಳೆಯುವಿರಿ. ತಾ. 13-14 ಮತ್ತು 17-18 ಈ ದಿನಗಳಲ್ಲಿ ಮೃಷ್ಟಾನ್ನಭೋಜನ, ಕಾರ್ಯಜಯ, ಧನಲಾಭವಾಗುವವು.

ಕುಂಭರಾಶಿ—

ದೈವಬಲವು ನಿಮ್ಮಲ್ಲಿ ಪರಿಪೂರ್ಣವಾಗಿರುವುದರಿಂದ ಸದ್ಯದಲ್ಲಿ ನೀವೇ ಧನ್ಯರೆನ್ನಬೇಕು. ಯಾಕೆಂದರೆ "ಅನುಕೂಲೇ ಸತಿ ಧಾತರಿ ಭವತ್ಯನಿಷ್ಟಾದಪೀಷ್ಟಮವಿಲಂಬಂ। ಪೀತ್ವಾ ವಿಷಮಪಿ ಶಂಭುರ್ಮೃತ್ಯುಂಜಯತಾಮವಾಪ ತತ್ಕಾಲಂ ॥" ಅದೃಷ್ಟವು ಚೆನ್ನಾಗಿದ್ದರೆ ಅನಿಷ್ಟವೂ ಕೂಡ ಇಷ್ಟವಾಗಿಯೇ ಪರಿಣಮಿಸುವುದು. ಹೇಗೆಂದರೆ ಹಿಂದೆ ಸಮುದ್ರಮಥನಕಾಲದಲ್ಲಿ ಹುಟ್ಟಿ ಹಾಲಾಹಲವೆಂಬ ವಿಷವನ್ನು ಪಾನಮಾಡಿದ ಶಂಭುವು ಮೃತ್ಯುಂಜಯನೆಂಬ ಬಿರುದನ್ನು ಧರಿಸನು (ವಿಷಪಾನದಿಂದ ಮೃತಿಯನ್ನು ಹೊಂದಬೇಕಿತ್ತು, ಆದರೂ ದೈವಬಲದಿಂದ ಮೃತ್ಯುಂಜಯನಾದನು.) ಅಂತೆಯೇ ನಿಮ್ಮ ಅದೃಷ್ಟಬಲದಿಂದ ನಿಮಗಸಾಧ್ಯವಾದುದಾವುದೂ ಇರಲಾರದು. ಪ್ರತಿಯೊಂದು ಕಾರ್ಯದಲ್ಲೂ ಹೆಸರಿಗೆ ತಕ್ಕುದಾಗಿ ನಿಮ್ಮ ಪ್ರಯತ್ನ. ಮಿತ್ತೆಲ್ಲವೂ ಅದೃಷ್ಟಬಲದಿಂದಲೇ ನೆರವೇರುವುದು. ಆದಕಾರಣ ಈ ವಾರದಲ್ಲಿ ನಿಮಗಾವ ಭಾಗದಲ್ಲೂ ಚಿಂತೆಯಿಲ್ಲವೆಂದರೆ ಅತಿಶಯೋಕ್ತಿಯಾಗದು. ತಾ. 15-16-19-20ರ ದಿನಗಳು ಅತ್ಯುತ್ತಮಗಳಾಗಿವೆ.

ಮೀನರಾಶಿ—

ಹೆಚ್ಚಿನ ಆಪತ್ಕಾಲದಲ್ಲಿ ನರನು ಪ್ರಜ್ಞಾಹೀನನಾಗುವನು. ಅಂತೆಯೇ ನಿಮಗೂ ಕೂಡ ತದ್ರೀತಿಯಲ್ಲಿ ಸಂಭವಿಸದಿರದು. ಏನೆಂದರೆ, ಅನಾರೋಗ್ಯ ಅಧಿಕ ವ್ಯಯ, ಅಸ್ಥಿರಮನಸ್ಕ ಇವುಗಳಿಂದ ನಿಮ್ಮ ಬ್ಲಿಪತಕ್ಕೆ ಬುದ್ಧಿಶಕ್ತಿಗೆ ಹ್ರಾಸಬಂದಿರುವುದು. ಈ ಕಾರಣದಿಂದ ಜನರ ಯೋಗ್ಯಾಯೋಗ್ಯತೆಯನ್ನರಿಯದೆ ವ್ಯವಹಾರಮಾಡುವುದರಿಂದ ಜನತೆಯಲ್ಲಿ ತಿರಸ್ಕಾರ ಅವಹೇಳನಗಳಿಗೆ ಗುರಿಯಾಗುವಿರಿ. ಹೆಚ್ಚಿನವರಲ್ಲಿ ಕಲಹವೂ ಪ್ರಾಪ್ತವಾಗುವದು. ಅನಿರ್ವಾಚ್ಯವಾದೊಂದು ಭಯವು ನಿಮ್ಮ ಹೃದಯದಲ್ಲಿ ಅಂಟಿಕೊಂಡಿರುವುದು. ಧನವ್ಯಯ ಸ್ಥಾನನಾಶ ಸ್ವಜನವಿಯೋಗ ದೇಶಾಟನ ಇವುಗಳಿಂದ ನಿಮಗೆ ಎಳ್ಳಷ್ಟು ಸುಖವಿಲ್ಲ, ಶಾಂತಿಯಿಲ್ಲ. ಸದಾ ವಿಚಾರ ವಿಪ್ಲವಗಳಿಂದ ರಾತ್ರಿ ನಿದ್ರೆ ಸಹಾ ಹತ್ತದು. ಇದ್ದುದರಲ್ಲಿ ಸ್ವಲ್ಪಮಟ್ಟಿಗೆ ಉತ್ತಮದ ದಿನಗಳೆಂದರೆ ತಾ. 13-14 ಮತ್ತು 17-18.

ಧಾತುಪುಷ್ಟಿ ಲೇಹ ಸುವರ್ಣ, ಸಾಲಾಮಿಶ್ರಿ, ಕಲ್ಕದ ಮಿಶ್ರ

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ. 2—8—0.

ಮೇಹ ಕುಠಾರ— ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ರೋಗದಿರುವಿಕೆ, ಮೂತ್ರಮಾರ್ಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು ಮೂತ್ರದಲ್ಲಿ ಧಾತು ಹೋಗುವುದು ಸೊಂಟನೋವು ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವದು, ಅಲ್ಲದೆ ಇಪ್ಪತ್ತು ನಮೂನೆಯ ಮೇಹ ರೋಗಗಳಿಗೆ ದಿವ್ಯಔಷಧ. ಡಬ್ಬಿ 1ರ ರೂ. 2-8-0.

ಕಸ್ತೂರಿ ಮಿಶ್ರಣ ದಶಮೂಲ— ಪ್ರಸವಾನಂತರ ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ 1ರ ರೂ. 1—8—0

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ನವಭಾರತ ಬುಕ್ ಡಿಪ್ಪೋ, ಉಡುಪಿ. ಶ್ರೀ ಕೃಷ್ಣ ಫಾರ್ಮಸಿ, ಕುಂದಾಪುರ. ವಿಟ್ಠಲ ನಾರಾಯಣಶೆಣೈ, ಟ್ರೇಡ್ ಟರ್ ಮಿನಸ್ ಮಾಜಗಾಂ ಮುಂಬಯಿ.

Degrees: Books: Medicines.

Free H. L. M. S., H. M. B., H. M. D. etc Free Homeo-Ayur-Unani-Naturo degrees. by post also—Practitioners also get same. Homeo Materiamedica, Rs. 5. Homeo-Practice book Rs. 4. Insanity Cure Pills Rs. 10. Enclose 2 annas stamps:—

Principal, Indian Homeopathic Institute and Society (Govt. Regd.)

P. O. MAHUVA, (Kathiawar Dt. India)

ಸ್ವಾರ್ಥಿ ಯಾರು?

(WHO IS A SELFISH MAN ?)

(ಲೇಖಕರು: ಶ್ರೀ. ಬಿ. ಶಾಮ್ರಾಯ ಶೆಟ್ರು ಬಿ. ಎ. ಎಲ್. ಬಿ)

Look at the two words I and We. I is so selfish; we, so sweet—I, so egoistic we, so altruistic—I, so narrow and presumptive; we, so broad and poetic. More or less in every family the quarrel goes on between the junior I and the jaroborce we. I wants to predominate everywhere—even in the middle of the sentence it is written capital. When it accompanies other letters to form a word, it wants a dot a turban- a crown. So meglomaniac is that I. Hence the cross of Christ which is so symbolic and significant says—'kill that I'(+) When the cross says, 'kill it' the Crescent says, 'bend it' and the Charka says, 'bend it further'. Still in some families the I asserts itself and strongly too and refuses to merge in the we. So long as the I does not see itself in the we the world will be ailing and humanity will be unhappy. The ego in the man is hard to be killed—the selfish man is a danger to society. The very fact that the man is born in the midst of a family and is supported by it till he supports himself shows that his first duty is towards his mother and her family. But it is a sad irony, nay, a paradox that the debt of the mother is forgotten and duty towards her children fades away and 'I' rests contented with a dot signifying only the burden of the wife; but at times the selfishness goes to such an extreme that the man forsakes his family and wife and lives apart and aloof with a bottle and some other woman. Nothing can beat this selfishness—this beastliness. Many times relations may be powerless against such people; for they may be armed with money and mercenaries; but when the cup of iniquity is full, life claims her toll. Life comes down upon such people with thunder and lightning. The selfish man who is full of ego is so animal-like and so complacent for the time being that he does not think that his vice and folly will prove a boomerang in a short time. Let every man live a correct life first in his own interst as well as in that of others. He can say that others cannot question his private life. **Can he say the same of life?** O selfish man, if you don't change your life, surely life will change you and then it will be hell for you. So now only scan yourself and adjust yourself. Don't wait.

೧

ಮಾಧವ—ಬಾಗಿಲು ತೆಗೆ, (ಡುಂ, ಡುಂ, ಡುಂ, ಡೂಮ್) ಏ, ಏ ಬಾಗಿಲು ತೆಗೇಂದೆ—ಕಿವಿಕೇಳುವುದಿಲ್ಲವಾ?—ಏನು ಸತ್ತುಹೋಗಿದ್ದೀಯಾ? ಬಾಗಿಲುತೆಗೇಂದ್ರೆ!

ರಮಾ—ಸತ್ತುಹೋದವರು ಬಾಗಿಲು ತೆಗೆಯುವುದು ಹ್ಯಾಗೆ? ಸತ್ತುಹೋಗಿದ್ದರೇ ಒಳ್ಳೇಯದಿತ್ತು. ಈ ನರಕ ತಪ್ಪುತ್ತಿತ್ತು; ಮಕ್ಕಳಿಗೆ ಎರಡಕ್ಕೂ ಜ್ವರಬರುತ್ತದೆ-ಯಾರ ಹತ್ತಿರ ಹೇಳಲಿ ಈ ಕಷ್ಟವನ್ನು—ಸಂಸಾರದ ಯೋಚನೆಯುಂಟಾ ನಿಮಗೆ? ಮಧ್ಯರಾತ್ರಿಗೆ ಬಂದು ಬಾಗಿಲು ತೆಗೆ ಎಂದು ಕೂಗಿದರೆ ಯಜಮಾನನೆಂದಾಗುತ್ತಾ? ಮೃಗಗಳಲ್ಲಿಯೂ ಕೂಡ ಈ ತರದ ಸ್ವಾರ್ಥ ಇರಲಿಕ್ಕಿಲ್ಲ-ಅವುಗಳಿಗಿದ್ದಷ್ಟು ಮಕ್ಕಳು ಮರಿಗಳ ಮೇಲೆ ಪ್ರೇಮ ನಿಮಗಿಲ್ಲದೆ ಹೋಯಿತಲ್ಲ! ಮನೆಯಲ್ಲಿದ್ದದನ್ನೆಲ್ಲಾ ಗುಡಿಸಿ ತೆಕ್ಕೊಂಡು ಹೋಗಿ ಆ ವಳಿಗೆ ಕೊಟ್ಟು ಪಶುಸುಖ ಪಡೆಯುವ ನಿಮಗೆ ಯಾರಾದರೂ ಸಂಸಾರಿ ಎಂಬಾರಾ?

ಮಾಧವ—ಮುಚ್ಚು ಬಾಯಿ-ಪವಡೆಗೆ ಕೊಡುತ್ತೇನೆ ನೋಡು-

ರಮಾ—ಇಲ್ಲ-ಮುಚ್ಚುವುದಿಲ್ಲ- ಯಾಕೆ ಮುಚ್ಚುವುದು?—ಯಾಕೇ ಅಂದೆ? ನಾನೇನೂ ಅನ್ಯಾಯಮಾಡಲಿಲ್ಲ-ಇನ್ನು ಬಾಯಿಗೇಯಿ ಮುಚ್ಚುವುದು ಅಲ್ಲ-ಈ ಮಕ್ಕಳನ್ನು ನಿಮ್ಮ ಎದೆ ಮೇಲೆಹಾಕಿ ಎಲ್ಲಿಯಾದರೂ ಹೊಳೆಗೆ ಹಾರುವುದು ಖಂಡಿತ-ಇರಲಿಕ್ಕೆ ಸಾಧ್ಯವಿಲ್ಲ-ಸಾಧ್ಯವಿಲ್ಲಾ ಅಂದೆ—

ಮಾಧವ—ಸ್ವಲ್ಪ ಮೆಲ್ಲಗೆ ಮಾತಾಡು ಇಷ್ಟುದೊಡ್ಡ ಬಾಯಿ ಮಾಡಿದರೆ ನೆರೆಕರೆಯವರು ಓಡಿಬರಲಿಕ್ಕೆ ಸಾಕು—

ರಮಾ—ಬರಲಿ, ಬರಬೇಕು—ಓಡಿ ಬರಬೇಕು—ನಿಮ್ಮ ಅವತಾರ ನೋಡಲಿ ಅವರೆಲ್ಲ. ನಿಮ್ಮಹಾಗಿಯೇ ಮಾಡ್ತಾರಾ ಅವರು? ನನ್ನ ಮಕ್ಕಳ ಆಭರಣ ನನ್ನ ಆಭರಣ ಎಲ್ಲಾ ತಕ್ಕೊಂಡು ಹೋಗಿ ಅವಳ ಎದೆಮೇಲೆ ಹಾಕಿದಿರಲ್ಲವಾ! ನಿಮ್ಮಷ್ಟು ಸ್ವಾರ್ಥಿ ಇನ್ನು ಜಗತ್ತಿನಲ್ಲಿ ಇದ್ದಾರಾ! ನಿಮ್ಮ ಹೆಂಡ್ತಿಮಕ್ಕಳನ್ನು ಕೊಂದು ನೀವು ಸುಖಪಡಬೇಕಾ? ಏ ಸ್ವಾರ್ಥಿ! ನಿಮ್ಮ ಅಂತವರು ಇರುವವರೆಗೆ ಲೋಕಕ್ಕೆ ಸುಖ ಉಂಟಾ? ಬೇರೆಯವರ ಸುಖ ದುಃಖವೇ ನಿಮಗೆ ಇಲ್ಲವಲ್ಲಾ—ರಾಮಾ!—ರಾಮಾ!

ಮಾಧವ-ಮುಚ್ಚು ಬಾಯಿ! ಮುಚ್ಚು! ಮುಚ್ಚು! [ಎಂದು ಮಾಧವನು ಮಧ್ಯರಾತ್ರಿ ತನಕ ಗಂಡನ ಆಗಮನವನ್ನು ಕಾದು ಉಪವಾಸವಿದ್ದ ರಮೆಗೆ ಬೆತ್ತದಿಂದ ಚೆನ್ನಾಗಿ ಹೊಡೆಯುವನು—ನೆರಮನೆಯ ದಿನಕರನು ಓಡಿಬರುವನು]

ದಿನಕರನು—ಮಾಧವರಾಯರೇ, ಏನು ಕೊಲ್ತೀರಾ ಆ ಹೆಂಗಸನ್ನು? ಸ್ತ್ರೀ ಹಿಂಸೆ! ನಿಮ್ಮಂಥಾ ಬಲ್ಲವರೂ ಹೀಗೆ ಮಾಡಿದರೆ!

ಮಾಧವ—ನೋಡಿ, ಈ ಪಿಶಾಚಿಯು ನನಗೆ ಎದುರು ನಿಲ್ಲಬಹುದೇ? ನಾನು ಏನು ಮಾಡಿದರೂ ಇವಳು ಸಹಿಸಿಕೊಳ್ಳಬೇಕಲ್ಲವೇ? ನಾನೇನೋ ಹೋಗೆ ಎಲ್ಲಿಲ್ಲೋ ಹೋಗ್ತೇನಂತೆ! ಇವಳಿಗೇನು ಅದರಿಂದ? ನಾನು ಕುಡುಕನಂತೆ-ಕುಡಿಕತನದಿಂದ ಕೆಲಸ ಕಳದು ಕೊಂಡೆನಂತೆ—ಹಾಗೆ ಹೀಗೆ ಯಾವಾಗ ಮನೆಯೊಳಗೆ ಕಾಲಿಟ್ಟರೂ ಇವಳ ರಗಳೆ ಉಂಟೇ ಉಂಟು. ಕೇಳಿ ಕೇಳಿ ಸಾಕಾಯಿತ! ಹೀಗೆ ಮಾಡುವವನು ನಾನೊಬ್ಬನೇ ಅಲ್ಲ. ಊರಲ್ಲಿ ನನಗಿಂತ ಎಷ್ಟೋ ಯೋಗ್ಯರು ಹೀಗೆಲ್ಲ ಮಾಡುತ್ತಾರೆ. ಅವರ ಹೆಂಡ್ತೀರು ಪಿಟ್ಟೆಂತ ಮಾತಾಡ್ತಾರೆ? ಇವಳ ತಂದೆಗೇ ಎರಡು ಉಪಪತ್ನಿಗಳು ಇರಲಿಲ್ಲವಾ—ಇವಳ ಅಣ್ಣನಿಗೆ ಇಲ್ಲವಾ-ಅವರ ಹೆಂಡಂದಿರು ಎಲ್ಲಾ ಹೀಗೇ ಮಾಡುತ್ತಾರಾ?

ದಿನಕರ—ನೋಡಿ, ನೀವಿಬ್ಬರೂ ಈಗ ಮಾತಾಡಬೇಡಿ, (ರಮೆಗ) ನೀವು ಸುಮ್ಮನಿರಿ—ನಾಳೆ ನಾನು ಅವರಿಗೆ ಎಲ್ಲ ಸಮಾಧಾನ ಹೇಳುತ್ತೇನೆ.

[ಮರುದಿವಸ]

ದಿನಕರ—ನೋಡಿ, ಮಾಧವರಾಯರೆ, ನಾವು ಕುಟುಂಬ ಇದ್ದವರು ಹೀಗೆ ಮಾಡಬಾರದು. ಇದು ಬಹಳ ಸ್ವಾರ್ಥ—ನಮ್ಮ ಮಟ್ಟಿಗೆ ನಾವು ಸುಖಪಟ್ಟು ನಮ್ಮ ಹೆಂಡ್ತಿ ಮಕ್ಕಳನ್ನು ದುಃಖಕ್ಕೆ ಈಡುಮಾಡಬಾರದು—ನಾವು ಸಂಸಾರವನ್ನು ಬಿಟ್ಟು ಬೇರೆ ಸುಖ ಪಡಬಾರದು. ನಮ್ಮ ಹೆಂಡ್ತಿ ಮಕ್ಕಳ ಒಟ್ಟಿಗೇ ಸುಖಪಡಬೇಕು. ನಮ್ಮಲ್ಲಿ ಸ್ವಲ್ಪ ಆತ್ಮಸಂಯಮ ಇರಬೇಕು. ನಾವು ಕುಟುಂಬಕ್ಕಾಗಿ ತ್ಯಾಗಮಾಡಬೇಕು.

ಮಾಧವ—ಇದು ನಮಗೊತ್ತಿಲ್ಲವಾ? ಎಚ್ಚರಿಕೆ ಇದ್ದವರಿಗೆ ನೀವು ಎಚ್ಚರಿಸುವುದು ಎಂಥಾದ್ದಯ್ಯಾ-ಬುದ್ಧಿ ಹೇಳುವ ಒಂದು ಕಸುಬು ನೀವು ಬಿಟ್ಟುಬಿಡಿ.

ದಿನಕರ—ನಾವು ಈಗ ನಿಮಗೆ ಬುದ್ಧಿ ಹೇಳುವುದನ್ನು ಬಿಟ್ಟುಬಿಡಬಹುದು-ಆದರೆ ಕೊನೆಗೆ ಪ್ರಕೃತಿಯೇ ಬುದ್ಧಿ ಹೇಳಲಿಕ್ಕೆ ತೊಡಗುತ್ತೆ. ಆಗ ಕಠಿಣವಾದೀತು. ಗುಣಬಾರದೆ ಹೋದೀತು.

ಮಾಧವ—ಅಷ್ಟು ಎಚ್ಚರ ತಪ್ಪಿ ಹೋದೀತಾ ನನಗೆ? ಅವನ್ನೆಲ್ಲ ಹಡದಲ್ಲಿಟ್ಟುಕೊಂಡು ಮಾನಗೆಡದೆ ಸುಖಪಡೆಯಬೇಕು. ಎಲ್ಲದರಲ್ಲಿಯೂ ಜಾಗ್ರತೆಯಿರಬೇಕು.

ದಿನಕರ—ಹೀಗೇ ಬಾಯಿಯಲ್ಲಿ ಜಾಗ್ರತೆ ಜಾಗ್ರತೆ ಎಂತ ಹೇಳುತ್ತ ಕಡೆಗೆ ಜಾರಿ ಜೀವಕಳಕೊಂಡವರಿದ್ದಾರೆ.

೦ ೦ ೦ ೦

'ಸಮಾಜದರ್ಪಣ' ಎಂಬ ಪತ್ರಿಕೆಯಲ್ಲಿ "ಅವಿವೇಕ ಬಾಳಿನ ದುರಂತ ಪರಿಣಾಮ" ಎಂಬ ಶಿರೋನಾಮೆಯ ಕೆಳಗೆ—"ನಿರ್ಜನ ಪ್ರದೇಶದಲ್ಲಿ ನೇಣುಹಾಕಿಕೊಂಡು ಪ್ರಾಣಹತ್ಯೆ ಜೀವ ಕಳೆದುಕೊಂಡವನ ಹರಕಂಗಿಯ ಜೇಬಿನಲ್ಲಿ ದೊರಕಿದ ಕಾಗದದಲ್ಲಿ ಹೀಗಿತ್ತು-'ದುರ್ವ್ಯಸನದ ಸ್ವಾರ್ಥ ಸುಖಕ್ಕೆ ಮನಸೋತು ಸಂಸಾರವನ್ನು ದುಃಖ ಶರಧಿಯಲ್ಲಿ ಮುಳುಗಿಸಿದೆ. ಇದ್ದ ಉದ್ಯೋಗವನ್ನು ಕಳಕೊಂಡೆ; ಏನಾದರೊಂದು ಕೆಲಸಕ್ಕಾಗಿ ಊರೂರು ಅಲೆದೆ; ಆದರೆ ಎಲ್ಲ ನಿಷ್ಫಲ. ನಾನು ಹಿಡಿದ ಹಾದಿಗೆ ಕೊನೆ ಆತ್ಮ ಹತ್ಯೆ! ಅದನ್ನು ಮುಟ್ಟಿದ್ದೇನೆ— ಮಾಧವರಾವ್"

೨

[ಐಕ್ಲೊಟ್ಟು ತಬುರ ಶೆಟ್ರು ಕುಟುಂಬದ ಯಜಮಾನ-ಕೊಡಲೊಟ್ಟು ಕಾಂತು ಶೆಟ್ರು ಅವರ ಅಪ್ಪ ಮಿತ್ರ]

ಕಾಂತು ಶೆಟ್ರು—ತಬುರ ಶೆಟ್ರೇ, ನಿಮ್ಮ ಕುಟುಂಬದವರು ನಿಮ್ಮನ್ನು ಬಹಳ ದೂರುತ್ತಾರೆ. ಎಷ್ಟೋ ವರುಷಗಳಿಂದ ನೀವು ಯಜಮಾನಿಕೆಯನ್ನು ನೋಡುತ್ತಿದ್ದರೂ ಕುಟುಂಬದ ದೃಷ್ಟಿಯಿಂದಯಾವದೊಂದು ಒಳ್ಳೆಯ ಕೆಲಸವನ್ನೂ ಮಾಡಲಿಲ್ಲವಂತೆ, ಹೆಂಡತಿಗೇನೇ ಆಸ್ತಿ ಗೀಸ್ತಿ ಮಾಡಿದ್ದೀರಿ, ಮಾಡುತ್ತಾ ಇದ್ದೀರಿ!

ತಬುರ ಶೆಟ್ರು—ಅದು ಹೌದು ಅನ್ನು ಮ-ಏನಾಯಿತ? ಎಲ್ಲರೂ ಮಾಡುವುದು ಹಾಗೆಯೇ ಅಲ್ಲವಾ-ನೀವು ಸಹಾ ಹಾಗೆಯೇ- ಮತ್ತೆ ನಾವೆಲ್ಲ ಮದುವೆಮಾಡಿಕೊಂಡದ್ದು ಯಾಕೆ? ನಮ್ಮ ಮಕ್ಕಳು ಎಲ್ಲಿ ಹೋಗುವುದು? ನಾನೇನು ಸೂಳೆಗೀಳೆಗೆ ಕೊಡಲಿಲ್ಲ-ನನ್ನ ಹೆಂಡ್ತಿ ಮಕ್ಕಳಿಗೆ ಕೊಟ್ಟಿದ್ದೇನೆ-ಕೊಡುತ್ತಾ ಇದ್ದೇನೆ-ಇದು ನ್ಯಾಯವಲ್ಲವೆ? ಯಾರಾದರೂ ಅನ್ಯಾಯ ವೆಂತ ಹೇಳಲಿ-ಎಷ್ಟೋ ಕಡೆಯಲ್ಲಿ ಯಜಮಾನರು ತೀರ್ವೆ ಸಹಾ ಕೊಡದೆ ಆಸ್ತಿಗಳು ಏಲಂ ಆಗಿ ಹೋಗುತ್ತವೆ. ನಾನು ತೀರ್ವೆ ಸರಿಯಾಗಿ ಕೊಡುತ್ತಾ ಬಂದು ಕುಟುಂಬದ ಆಸ್ತಿಯನ್ನು ಉಳಿಸುತ್ತಾ ಬಂದಿದ್ದೇನೆ. ಹೆಂಡತಿಗೆ ಮನೆಯ ಆಸ್ತಿಯನ್ನು ಕೊಟ್ಟಿದ್ದೇನಾ?

ಕಾಂತು ಶೆಟ್ರು—ಅದನ್ನು ನಾವು ಕೊಡುವುದು ಹ್ಯಾಗೆ? ಅಳಿಸಂತಾನವಲ್ಲವಾ? ಸಾಧ್ಯವಿದ್ದರೆ ಕೆಲವರು ಅದನ್ನೂ ಕೊಟ್ಟು ಬಿಡುತ್ತಿದ್ದರು.

ತಬುರ ಶೆಟ್ರು- ಮನಸ್ಸಿದ್ದರೆ ಹಾದಿ ಉಂಟು. ತೀರ್ವೆಕೊಡದೆ ಏಲಂ ಮಾಡಿಸಿ ಪಡಿಸಿಕೊಂಡರಾಯಿತು. ಕಾನೂನಿಗೆ ಅಡ್ಡ ಕಾನೂನು ಕೋರ್ಜಿಗಟ್ಟಳೆ ನಮ್ಮ ಕೈಯಲ್ಲಿ ಉಂಟು!

ಕಾಂತುಶೆಟ್ರು—ಹಾಗೆಲ್ಲ ಪಾಪಿಷ್ಠದವರ ಹೆಸರಲ್ಲಿ ಏಲಂ ಖಾಯಂ ಮಾಡ್ಸಿಕೊಂಡರೆ ಕುಟುಂಬದ ಕಣ್ಣಿಗೆ ಕುಕ್ಕುತ್ತದೆ. ಮಾರದವರ ಮೇಲೆ ಈ ಕಾಲದಲ್ಲಿ

ಗತ ವೀರ್ಯವನ್ನು ಪುನಃ ಹೊಂದಿರಿ.



ಡಾ| ಬಿಸನ್‌ರವರ "ಸೆಲ್ಫ್ ಪ್ರೊಟೆಕ್ಟರ್" ಸ್ತ್ರೀಪುರುಷರಿಬ್ಬರಿಗೂ ಉತ್ತಮೋತ್ತಮವಾದ ನರಶಕ್ತಿವರ್ಧಕ ಪಾನಕವೆಂದು ಜಗತ್ಪ್ರಸಿದ್ಧವಾಗಿದೆ. ಇದು ಸಾಕ್ಷಾತ್ತಾಗಿ ಬೆನ್ನ ಹುರಿ ಹಾಗೂ ಜನನೇಂದ್ರಿಯಗಳಿಗೆ ಸಂಬಂಧಪಟ್ಟ ನರಗಳನ್ನು ಉಜ್ಜೀವಿಸುವುದು. ಆದ್ದರಿಂದ ಅಂಥ ವ್ಯಾಧಿಗಳಿಂದ ನರಳುವವರಿಗಿದು ಅಮೂಲ್ಯವೆನಿಸ್ಸು. ನೀವು ಯೌವನದ ಅಪವ್ಯಯ, ಅತ್ಯಾಚರಣೆ, ಮುಷ್ಟಿ ಮೈಥುನ, ಅಕಾಲಿಕ ವೃದ್ಧಾಪ್ಯ, ಸ್ವಪ್ನೇಂದ್ರಿಯ, ಅಸ್ವಾಭಾವಿಕ ಸ್ರಾವ, ಅತಿ ಮೂತ್ರ, ಕ್ಷೀಣಧಾತು, ಧಾರಣಶಕ್ತಿಯಿಲ್ಲದಿರುವಿಕೆ, ಕಾಮತೃಪ್ತಿಯ ವಿಫಲತೆ, ಸ್ಮರಣಶಕ್ತಿ ಹೋರಿಯು, ನಿರುತ್ಸಾಹ ಮತ್ತು ನರದೌರ್ಬಲ್ಯ ಇವುಗಳಿಂದ ನೀವು ನರಳುತ್ತಿದ್ದರೆ ಡಾ| ಬಿಸನ್‌ರವರ "ಸೆಲ್ಫ್ ಪ್ರೊಟೆಕ್ಟರ್" ಉಪಯೋಗಿಸಿರಿ. ಅದನ್ನು ಬಳಸಿದ ಮೊದಲಿನ ದಿನದಿಂದ ಗುಣತೋರಿಬರುವುದು. ಇಂದೇ ಒಂದು ಸೀಸೆ ಕೊಳ್ಳಿರಿ.

ಬೆಲೆ ೧ ಸೀಸೆ ರೂ. 4—0—0

ಅಮೆರಿಕನ್ ಮೆಡಿಸಿನ್ ಅಂಡ್ ಜಿ ಸಿ. ಅಸೋಸಿಯೇಷನ್, (D.23) ಪೋ ಟ್ F ಮುಂಬಾಯಿ.

SELF-PROTECTOR FOR VIGOUR & VITALITY

ಜನರು
ಯಥಾರ್ಥವಾಗಿಯೂ
ಒಪ್ಪಿಕೊಳ್ಳುತ್ತಾರೆ:—
ಸ್ವಸ್ತಿಕ
ಪರ್ಫ್ಯೂಮ್ಡ್ ಕೆಸ್ಟರಾಯಿಲ್
ಗುಣದಲ್ಲೂ ಪರಿಮಳ
ದಲ್ಲೂ ಸ್ವದೇಶ ಅಥವಾ
ವಿದೇಶದ ಯಾವ
ಕೂದಲೆಣ್ಣೆಯನ್ನಾ
ದರೂ ಸೋಲಿಸುವ
ಅತ್ಯುತ್ತಮವಾದ ಹೇರ್
ಆಯಿಲ್ ಎಂದು-
ಎಲ್ಲೆಲ್ಲೂ ವಿಕ್ರಯಿಸಲ್ಪಡುತ್ತದೆ.
83

ವಿಶ್ವಾಸವಿಲ್ಲ ಅದು ಅಲ್ಲದೆ ಏಲಂ ಆಗದೆ ಆಸ್ತಿ ಇದ್ದರೆ ಅದರ ಉತ್ಪತ್ತಿಯಿಂದ ಹೆಂಡ್ತಿ ಮಕ್ಕಳಿಗೆ ಕೊಡುತ್ತಾ ಇರಬಹುದಲ್ಲವಾ?

ತಬುರಶೆಟ್ರು—ಅಲ್ಲ ನೀವು ಈಗ ಏನು ಹೇಳುವುದು? ಹೆಂಡ್ತಿ ಮಕ್ಕಳಿಗೆ ಏನೂ ಕೊಡಬಾರದೆಂಬುದಾ?

ಕಾಂತಶೆಟ್ರು—ಹಾಗಲ್ಲ-ಕೊಡಬೇಕು ಕುಟುಂಬಕ್ಕೂ ಅದೇ ದಾಮಾಶಾಯದಲ್ಲಿ ಸೇರಿಸಬೇಕು.

ತಬುರಶೆಟ್ರು—ಒಂದು ವೇಳೆ ಮಾಡದಿದ್ದರೆ ಏನಾಯಿತು? ಕುಟುಂಬದವರಿಗೆ ತೃಪ್ತಿಪಡಿಸಬೇಕೆಂದಿದ್ದರೆ ನಮ್ಮದೊಂದು ಹೆಣ್ಣು ಕುಟುಂಬದ ಅಳಿಯನಿಗೆ ಕೊಟ್ಟರಾಯಿತು. ಹೆಣ್ಣಿಗೆ ವರದಕ್ಷಿಣೆಯಾಗಿ ಹಿಂದೇ ಹೋಗೋದಿಲ್ಲವಾ?

ಕಾಂತಶೆಟ್ರು—ಇದು ತೀರಾ ಸ್ವಾರ್ಥ

ತಬುರ ಶೆಟ್ರು—ಅದು ಹ್ಯಾಗೆ?

ಕಾಂತಶೆಟ್ರು—ಅದು ಹ್ಯಾಗಂದರೆ ಕುಟುಂಬವನ್ನು ಕೆಡಿಸಿ ಮಾಡಿದ ಪಾಪಕ್ಕೆ ಒಬ್ಬ ಅಳಿಯನಿಗೆ ಮಗಳನ್ನೂ ತುಂಬ ವರದಕ್ಷಿಣೆಯನ್ನೂ ಕೊಟ್ಟರೆ ಇಡೀ ಕುಟುಂಬಕ್ಕೆ ಸಮಾಧಾನವಾಯಿತಾ? ಇದೆಂಥಾ ಪ್ರಾಯಶ್ಚಿತ್ತ? ಎಂಥಾ ನ್ಯಾಯ! ಕಪಿಲೆಯನ್ನು ಕೊಂದು ಕಾಗೆಗೆ ದಾನ ಮಾಡಿದ ಹಾಗಾಯಿತು.

ತಬುರ ಶೆಟ್ರು—ನೀವು ಹೇಳುವಹಾಗೆ ಮಾಡುವವರು ಯಾರಿದ್ದಾರೆ ಈಗ?

ಕಾಂತಶೆಟ್ರು—ಯಾಕೆ? ಆಗಲೊಟ್ಟು ಪೆಗ್ಗು ಶೆಟ್ರು ಇಲ್ಲವಾ?—ಹೆಂಡ್ತಿಗೂ ಕೊಟ್ಟಿದ್ದಾರೆ—ಕುಟುಂಬಕ್ಕೂ ಮಾಡಿಟ್ಟಿದ್ದಾರೆ. ಅವರ ಕುಟುಂಬ ಅವರು ಗಂಡ ಹೆಂಡಿರನ್ನು ಹೊಗಳುವುದು ಅಂದರೇನ!—ಇಬ್ಬರೂ ಚಿನ್ನ—ಚಿನ್ನಾ ಅನ್ನುತ್ತಾರೆ—ಕುಟುಂಬ ಅಂದರೆ ಹಾರ್ಮೋನಿಯಮ್ ಪೆಟ್ಟಿಗೆ ಹಾಗೆ ಉಂಟು—ಪೆಗ್ಗು ಶೆಟ್ರು ಅವರ ಹೆಂಡ್ತಿ ಭಾಗು ಶೆಡ್ತೀರೂ ಹ್ಯಾಗೆ ಬಾರಿಸುತ್ತಾರೆ ಅದನ್ನು!—ಅಳಿಯ ಸಂತಾನದ ಹಾರ್ಮೋನಿಯಮ್‌ನ ಪದ ಕೇಳಬೇಕಾದರೆ ಅಲ್ಲಿ ಹೋಗಬೇಕು—ಏನು ಸುಖವಾಗುತ್ತದೆ—ಆದರ್ಶ ಯಜಮಾನಯ್ಯಾ ಪೆಗ್ಗು ಶೆಟ್ರು! ಊರು, ಒಕ್ಲು ಎಲ್ಲಾ ಅವರನ್ನು ಸ್ತೋತ್ರಮಾಡುತ್ತಾರೆ. ಆದರೆ ಅಂಥಹರಿರುವುದೇ ಕೆಲವೇ ಕೆಲವು. ಅಳಿಯಕಟ್ಟಿನ ಗುಣವನ್ನು ಹೊಗಳಬೇಕಾದರೆ. ಎಲ್ಲರೂ ಅಂಥಾ ಯಜಮಾನಿಕೆ ಮಾಡಬೇಕಯ್ಯಾ.

ತಬುರಶೆಟ್ರು—ಅದು ಇರಲಿ—ನಮ್ಮ ಕುಟುಂಬದವರು ಯಾರು ನಿಮ್ಮೊಡನೆ ದೂರು ಹೇಳಿದ್ದು?

ಕಾಂತು ಶೆಟ್ರು—ನಿಮ್ಮ ಸಹೋದರಿ-ಕುಂಗು ಶೆಡ್ತೀರು—ಅವರ ಮಕ್ಕಳು ರಾಮಣ್ಣ ಮತ್ತು ದೋಗ್ರ ಮುಂತಾದವರು-ವಿಶೇಷ ದೂರುತ್ತಾರೇನ್ರೀ—ನೋಡಿ, ತಬುರ ಶೆಟ್ರೇ—ಈ ದೂರು ಒಳ್ಳೇದಲ್ಲ—ನಿಮಗೆ ಒಳ್ಳೇದಾಗಿ ಪರಿಣಾಮಿಸಲಿಕ್ಕಿಲ್ಲ—ನಾನು ನಿಮ್ಮ ಹಿತಚಿಂತಕನಾಗಿ ಹೇಳುವುದು—ನೀವು ಇಷ್ಟು ಸ್ವಾರ್ಥಮಾಡಬಾರದು—ಇದು ಬಹಳ ವಿಪರೀತವಾಯಿತು—ಬೇಜಾರಮಾಡಬೇಡಿ—

ತಬುರ ಶೆಟ್ರು—ಅಲ್ಲ ಬೇಜಾರಮಾಡಿ ಏನು ಮಾಡುವುದು! ಹೇಳಿ ಆಯಿತಲ್ಲವಾ ನೀವು—ಆಗಲಿ—ಬಂದದ್ದು ತಾಳುವುದು.

೦ ೦ ೦ ೦

ಕಾಲವು ಹೋಗುತ್ತಾ ಮಾರ್ಪಾಟುಗಳಾಗುವುವು—ತಬುರಶೆಟ್ರ ಹೆಂಡ್ತಿ ಸತ್ತಳು—ಮಕ್ಕಳು ದುರ್ಮಾರ್ಗಿಗಳಾದರು—ಅಳಿಯಂದಿರು ಇವರಿಗೆ ವಿಶೇಷ ಎದುರು ನಿಂತು ಗೇಣಿ ವಸೂಲಿಗೆ ಅವಕಾಶಕೊಡದೆ ಮಾವನನ್ನು ಉಪದ್ರಕೊಟ್ಟು ಹೊರಗೆ ತಳ್ಳಿದರು. ಹೆಂಡ್ತಿಗೆ ಕೊಟ್ಟಿದ್ದ ಆಸ್ತಿಯನ್ನು ತಂದೆಯ ಗೋಷ್ಠಿಯಿಲ್ಲದೆ ಮಕ್ಕಳೇ ಲಡಾಯಿಮಾಡಿಕೊಂಡು ತಿಂದುಹಾಕಿದರು. ತಬುರಶೆಟ್ಟರಿಗೆ ಕೊನೆಗಾಲಕ್ಕೆ ಬುದ್ಧಿ ಬಂತು. ತಕ್ಕ ಪ್ರಾಯಶ್ಚಿತ್ತವೂ ಆಯಿತು. ನಿರ್ಗತಿಕನಾಗಿ ಮುಕಿಗೆಟ್ಟು ಬೀದಿಯಲಿಯುತ್ತ ಮೋಟರ್‌ಕಾರಿನಡಿಗೆ ಬಿದ್ದು ಪ್ರಾಣ ಕಳಕೊಂಡ ಆ ದುರಂತ ಪರಿಣಾಮವನ್ನು ಕಂಡು ಮಂದಿಯು—"ಸ್ವಾರ್ಥವು ಪರಪೀಡೆಯಿಂದ ಮನೆಕಟ್ಟಿತು, ಆಸ್ತಿಮಾಡಿತು, ಕಾರ್ಬಾರು ನಡೆಯಿಸಿತು. ಕೊನೆಗೆ ಹೀರಿದ ನೆತ್ತರನ್ನು ಬೀದಿಯ ದೂಳಲ್ಲಿ ಕಾರಿತು! ಪಾಪದ ಕೊಡ ತುಂಬಿದಾಗ ಹೊತ್ತವನನ್ನು ಹಾದಿಯಲ್ಲಿ ಕೆಡಹದೆ ಇದ್ದೀತೇ! ಕಪ್ಪೆಗಾದರೂ ಸಾಯಲಿಕ್ಕೆ ಹಳ್ಳ ಉಂಟು, ಕಾಗೆಗಾದರೂ ಗೂಡು ಉಂಟು—ಹುಲಿಗಾದರೂ ಗವಿಯುಂಟು—ಆದರೆ ಸ್ವಾರ್ಥಿಗೆ ಏನೂ ಇಲ್ಲ. ಅಯ್ಯೋ, ನಾಲ್ಕು ದಿನದ ಬಾಳ್ವೆಗಾಗಿ ಸ್ವಾರ್ಥವೇಕೆ? ಪರಪೀಡೆಯೇಕೆ? ಮದ ಮೋಹವೇಕೆ? ಕೊನೆಗೆ ಈ ರೀತಿ ನಾಯಿಯಂತೆ ಸಾಯುವುದೇಕೆ?"—ಎನ್ನುತ್ತ ಸಾಗಿತು.

ಬರುವ ಲೇಖನ:—

"ಅಜ್ಜಯ್ಯನ ಪ್ರಲಾಪ"

ಭರತ ಖಂಡದ ಚಲನಚಿತ್ರದ ಕೈಗಾರಿಕೆ.

ಸ್ಥಳೀಕ ರಾಮಕೃಷ್ಣ ಥಿಯೇಟರಿನ ಸದ್ಯವೇ ಬರಲಿರುವ ತಾರನಹಾರ್ ಚಿತ್ರದಲ್ಲಿ.

ನಮ್ಮ ಭರತಖಂಡದಲ್ಲಿ ಚಲನಚಿತ್ರವನ್ನು ತಯಾರಿಸುವುದು ಹುಟ್ಟಿ ಸುಮಾರು 25ವರ್ಷಗಳು ಮಾತ್ರವೇ ಆಗಿರುವುದಾಗಿದೆ. ಆದರೂ ಎಲ್ಲಾ ಕೈಗಾರಿಕೆಗಳಲ್ಲಿಯೂ ಈ ಕೈಗಾರಿಕೆಯು ಎಂಟನೆಯ ಸ್ಥಾನವನ್ನು ಪಡೆದಿರುವುದು. ಈ ಕೈಗಾರಿಕೆಗೆ ಈಗ್ಗೆ ಸುಮಾರು 17ಕೋಟಿಗಳ ಭಂಡವಾಳವು ಹಾಕಲಾಗಿದೆ. 40ಸಾವಿರ ಮಂದಿ ಈ ಕೈಗಾರಿಕೆಯಿಂದ ಜೀವನಮಾಡುತ್ತಿರುವರು. ಸುಮಾರು 75 ಫಿಲಂ ಉತ್ಪತ್ತಿಯ ಸಂಸ್ಥೆಗಳಿರುವುವು. ಒಂದೊಂದು ಫಿಲಂ ತಯಾರಿಸಲು ಸುಮಾರು ಒಂದು ಲಕ್ಷ ರೂಪಾಯಿಗಿಂತ ಹೆಚ್ಚಿಗೆ ಹಣ ಖರ್ಚಾಗುತ್ತಲಿರುವುದು. ಸಾಲಿಯಾನು ಸ್ವಲ್ಪ ಹೆಚ್ಚುಕಡಿಮೆಯಾಗಿ 200ಚಿತ್ರಗಳು ತಯಾರಿಸಲ್ಪಡುತ್ತಿರುವುವು. ಬೊಂಬಾಯಿ, ಪೂನಾ, ಕೊಲ್ಹಾಪುರ, ಕಲಕತ್ತಾ, ಮದರಾಸು, ಕೊಯಮುತ್ತೂರು, ವಿಶಾಖಪಟ್ಣ ಮೊದಲಾದ ಪ್ರದೇಶಗಳಲ್ಲಿ ಸಿನೇಮಾ ಸ್ಟುಡಿಯೋಗಳಿರುವುವು.

೦ ೦ ೦ ೦

ಇಂಡಿಯಾ ದೇಶದಲ್ಲಿ ಈಗ 996ಸಿನೇಮಾ ಪ್ರದರ್ಶಕ ಮಂದಿರಗಳಿರುವುವು. ಇವುಗಳಲ್ಲಿ 532 ಸಿನೇಮಾಮಂದಿರಗಳು ಕೇವಲವಾಗಿ ಭಾರತೀಯ ಚಿತ್ರಗಳನ್ನು ಪ್ರದರ್ಶಿಸುತ್ತಿರುವುವು. 266 ಪ್ರದರ್ಶಕ ಮಂದಿರಗಳು ಭಾರತೀಯ ಚಿತ್ರಗಳನ್ನೂ ವಿದೇಶೀಯ ಚಿತ್ರಗಳನ್ನೂ ಪ್ರದರ್ಶಿಸುತ್ತಿರುವುವು. 198 ಮಂದಿರಗಳು ಬರಿಯ ವಿದೇಶದ ಚಿತ್ರಗಳನ್ನೇ ತೋರಿಸುತ್ತಿರುವುವು.

1921ನೆಯ ಇಸ್ವಿಯಿಂದ ಲೆಖ್ಖಮಾಡಿದಲ್ಲಿ ಈ ಉದ್ಯಮದಿಂದ ಕೇಂದ್ರ ಸರ್ಕಾರಕ್ಕೆ1,25,00,000ರೂಪಾಯಿಗಳ ಆದಾಯವು ದೊರೆತಂತೆ ತಿಳಿಯುತ್ತದೆ. ಪಟಗಳಾಗಿ ತಯಾರಾಗಿ ಬಂದ ಬರಿಯ ಫಿಲಂಗಳೂ, ಪಟಗಳು ತೆಗೆಯಲ್ಪಡದೆ ಬರಿಯ ಫಿಲಂಗಳೂ ಇಂಡಿಯಾ ದೇಶಕ್ಕೆ ಇಳಿಯುತ್ತಲೇ ರಪ್ತು ಸುಂಕವೆಂಬ ಹೆಸರಿನಿಂದ ಸ್ವಲ್ಪ ತೆರಿಗೆಯನ್ನು ಸಲ್ಲಿಸಿಯೇ ಬರಬೇಕಾಗಿದೆ. ಈ ರೀತಿಯಾಗಿ ಬರುವ ಆದಾಯವೇ ಮೇಲೆ ತಿಳಿಸಿರುವ ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಸೇರುತ್ತಿರುವುದು. ಈ ಕೈಗಾರಿಕೆಯಿಂದ ರೈಲ್ವೆಯವರಿಗೆ 15 ಲಕ್ಷ ರೂಪಾಯಿಗಳವರೆವಿಗೂ ವರಮಾನವುಂಟಾಗುತ್ತಿರುವುದು.

ಕೊಪ್ಪದ ರಾಮಸ್ವಾಮಿ ಅಯ್ಯಂಗಾರ್.

THE
PREMIER BANK
OF INDIA, LIMITED.
Head Office: MADRAS.
Branches:
MADURA & NELLORE.
CHAIRMAN
Dr. U. L. Narayana Rao.
'Bhujanga Nivas' Madras.
FIXED DEPOSITS
are now received at the following Rates:
For 6 Months at 3½% P. A.
12 Months at 4½% P. A.
24 Months at 5% P. A.
(Interest Paid Half-yearly.)
S. V. Rau D. Com.,
Managing Director

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಚಾಣಂತಿ ಜ್ವರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು:— ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿನ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,
ಗವರ್ನಮೆಂಟ್ ಕೋಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.
ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,
Kanara Printing Works,
Hampankatte, **MANGALORE**.

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ. ಅಳಿಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1ಕ್ಕೆ 12 ಆಣೆ, ಟ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ.**

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಮನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ. ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ ಬಹಿಷ್ಠೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತು ಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು
"ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ
ಅಗತ್ಯವಾಗಿ ಇರಲೇಬೇಕಾದ್ದು.
ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,
ಬ್ರಾಂಚ್—ಮಂಗಳೂರು.

NAVABHARAT BOOK DEPOT

Book Sellers, Publishers & Advertising Agents
Church Road-Udipi.

ನಮ್ಮಲ್ಲಿ
ಎಲ್ಲಾತರದ ಶಾಲಾಪುಸ್ತಕಗಳೂ
ಲೈಬ್ರೆರಿಗೆ ಬೇಕಾದ ಪುಸ್ತಕಗಳೂ
ದೊರೆಯುತ್ತವೆ.

ಕೆಟಲಾಗಿಗೂ
ಇತರ ಮಾಹಿತಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ
ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು
ಚರ್ಚರೋಡ್ ಉಡುಪಿ

ABSOLUTELY FREE!

Bring this coupon and you will get your own Photo absolutely free of charge.

☞ The rate for the enlargement of the same Rupee one only (size 6"×8").

Send your old photo and you will get enlargement 6'×8' for Rs 2—8—0. ony and big size 16'×20' for Rs. 5 only.
Our time every day 9 a. m. to 7 p. m. Sunday 9 a. m. to 4p. m.

K. H. PATHAK

276 Surya Mahal Girgaum Road, BOMBAY, 4. | Royal Art Studio 183 Hornby Road BOMBAY, 1.

ಕೇವಲ ಧರ್ಮಾರ್ಥ!

ಈ ಜಾಹೀರಾತಿನ ಕೂಪನನ್ನು ತರುವವರಿಗೆ ಅವರ ಫೋಟೋವನ್ನು ಧರ್ಮಾರ್ಥವಾಗಿ ತೆಗೆದುಕೊಡಲಾಗುವುದು.

ತ್ವರೆ ಮಾಡಿರಿ! ಬೊಂಬಾಯಿ ಪಟ್ಟಣಗರೆ ತ್ವರೆ ಮಾಡಿರಿ!!

● ಈ ನಮ್ಮ ಫೋಟೋವನ್ನು ಎನ್‌ಲಾರ್ಜ್‌ಮೆಂಟಿಗೆ ಬರೇ ರೂ. 1/. ಮಾತ್ರ. (ಸೈಜ್ 6"×8").

ಹೊರಗಿನವರು ಈ ಕೂಪನಿನೊಂದಿಗೆ ತಮ್ಮ ಫೋಟೋಕಳುಹಿಸಿದರೆ ಅದನ್ನು 6'×8' ಸೈಜಿನಲ್ಲಿ ರೂ. 2-8-0ಕ್ಕೆ ಎನ್‌ಲಾರ್ಜ ಮಾಡಿಕೊಡಲಾಗುವುದು. 16×'20'ರ ದೊಡ್ಡ ಸೈಜಿಗೆ ರೂ. 5 ಮಾತ್ರ. ನಮ್ಮ ಆಫೀಸು ಸಮಯ ಬೆಳಿಗ್ಗೆ 9ರಿಂದ ಸಂಜೆ 7, ಆದಿತ್ಯವಾರ ಬೆಳಿಗ್ಗೆ 9ರಿಂದ ಸಂಜೆ4 ಗಂಟೆ ತನಕ

ಕೆ. ಎಚ್. ಪಟ್ಠಕ್

276, ಸೂರ್ಯಮಹಾಲ್ ಗಿರ್ಗಾಮ್‌ರೋಡು ಬೊಂಬಾಯಿ 4 | ರೋಯಲ್ ಆರ್ಟ್‌ಸ್ಟುಡಿಯೋ, 183 ಹೋರ್ನ್ಬಿರೋಡು, ಬೊಂಬಾಯಿ 1

ಕೇಶವರ್ಧಕ ∷ ನೇತ್ರಾರೋಗ್ಯರಕ್ಷಕ ∷ ಸುಖದಾಯಕ

(Regd Trade Mark)

ಆಮಲಕೀ ತೈಲ
AMALAKI HAIR OIL

ವಿದ್ಯಾರ್ಥಿಗಳಿಗೂ, ಸಕಲ ಸ್ತ್ರೀ ಪುರುಷರಿಗೂ ನಿತ್ಯ ಕೇಶ ಪ್ರಸಾಧನಾರ್ಥ ಪುಷ್ಪಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲವಿದು. ಮೆದುಳಿನ ಸ್ವಾಸ್ಥ್ಯಕ್ಕೂ ನೇತ್ರಾರೋಗ್ಯ ರಕ್ಷಣೆಗೂ, ಕೇಶಕಲಾಪದ ಬೆಳವಣಿಗೆಗೂ ಸೌಂದರ್ಯವರ್ಧನೆಗೂ ಅತ್ಯಂತ ಸಹಾಯಕವಾಗಿದೆ. ಇದನ್ನು ನಿತ್ಯವೂ ಉಪಯೋಗಿಸುತ್ತಿದ್ದರೆ ಶಾರೀರ ಹಾಗೂ ಮಾನಸಿಕ ಶ್ರಮದಿಂದ ಪುರುಷರಿಗೂ, ಪ್ರಸವಾನಂತರದಲ್ಲಿ ಸ್ತ್ರೀಯರಿಗೂ ಸಾಮಾನ್ಯವಾಗಿ ಕೇಶಮೂಲಗಳು ನಿಸತ್ವಹೊಂದಿ ಕೂದಲುಗಳ ಉದುರುವಿಕೆ ಅಕಾಲದಲ್ಲಿ ನರೆಯುಂಟಾಗುವಿಕೆ ಇವೇ ಮೊದಲಾದದೋಷಗಳು, ದೂರವಾಗಿ ಕೇಶಮೂಲಗಳು ದೃಢವಾಗುವುದರಿಂದ ಅಚ್ಚಕಪ್ಪಾದ ಕೂದಲುಗಳು ನಿಬಿಡವಾಗಿ ಬೆಳೆಯುವದಲ್ಲದೆ ಮೊದಲೇ ನರೆತಕೂದಲು ಸಹ ಕಪ್ಪಾಗಿ ಮುಖಶ್ರೀಯು ಲಾವಣ್ಯ ಪೂರ್ಣವಾಗುವದು. ತಲೆ ನೋವು, ಸೂರ್ಯಾವರ್ತ ಅಥವಾ ಅರೆತಲೆನೋವು, ನೇತ್ರಜ್ವಾಲೆ, ಮೆದುಳಿನ ಉಷ್ಣತೆ ತಲೆತಿರುಕು, ದುಃಸ್ವಪ್ನ ಪೂರ್ಣವಾದ ನಿದ್ರಾಭಂಗ, ಮೊದಲಾದ ಪಿತ್ತಜನಿತರೋಗಗಳೂ ನಿವೃತ್ತವಾಗಿ ಸುಖಸಾಧ ನಿದ್ರೆಯು ಹತ್ತುವುದು. ಇಂತಹ ಸುಖನಿದ್ರೆಯಿಂದ ಸ್ಮೃತಿ, ಮೇಧಾ ಉತ್ಸಾಹ ವಿಚಾರಶಕ್ತಿ ಮೊದಲಾದ ಮಾನಸಿಕ ಶಕ್ತಿಗಳು ವಿಕಾಸಹೊಂದಿ ಚಿರಾರೋಗ್ಯ ಲಾಭವಾಗುವದು.

4 ಔನ್ಸಿನ ಸೀಸೆ ಒಂದರ 0—11—0. 2 ಔನ್ಸಿನ ಸೀಸೆ ಒಂದರ 0—6—0.

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ.

100ಮಾತ್ರೆಗಳಿಗೆ ರೂ. 1-5-0, 500ಕ್ಕೆ ರೂ. 5.

ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ

ಸ್ವದೇಶೀ ಔಷಧಿ ಭಂಡಾರ, (ರಿಜಿಸ್ಟರ್ಡ್) ಕುಂಜಾಲ್,

ಬ್ರಹ್ಮಾವರ ಪೋಸ್ಟ್, ದ. ಭಾರತ

ಸಪ್ಲೈ ಏಜನ್ಸಿ ಲಿಮಿಟೆಡ್‌ನಲ್ಲೂ ನವಭಾರತ ಬು಼ಕ್ ಡಿಪೋದಲ್ಲೂ ನಮ್ಮ ಔಷಧಗಳು ಸಿಗುತ್ತವೆ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಫಿಲ್ಸ್	ಭೈರವ ಮಾತ್ರೆಗಳು
ಕೋಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೪—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧ ಶಾವ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಸಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Supply Agency Limited.
(BANKERS)

ESTD] **UDIPI** [1933

Authorised Capital Rs. 1,00,000
Subscribed & Paid up Rs. 30,760

RATE OF INTEREST FOR FIXED DEPOSITS.

3 to 6 Months 4% p. a.
7 to 11 „ 5% „
12 to 18 „ 6% „

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	3	0	0
ಚಂದ್ರಗುಪ್ತ ಚಕ್ರವರ್ತಿ	1	0	0
Goutama Budda	0	8	0
ಭಗವದ್ಗೀತಾ	0	2	0
ಮಧುವನ	1	8	0
ಒಂದೇ ತಿಂಗಳಲ್ಲಿ ಇಂಗ್ಲಿಷ್	0	8	0
ಎರಡೇ ವಾರಗಳಲ್ಲಿ ಒಡುಬರಹ	0	1	0
ಗೀತೆಯ ಕೈಗನ್ನಡಿ	0	4	0
ಭಗವದ್ಗೀತೆ	0	2	0
ತುಳು ವ್ಯಾಕರಣ	0	8	0
ಸಾಮುದ್ರಿಕ ಶಾಸ್ತ್ರ	0	8	0
ಮಿತ್ಯನಾರಾಯಣ ಕತೆ	0	8	0
ಪುರಂದರದಾಸರ ಪದಗಳು ಭಾಗ ೧	0	4	0
„ ಭಾಗ ೨	0	4	0
„ ಭಾಗ ೩	0	4	0
ತುಳುನಾಡ್ ತಿಲಕ ಪಂಚಾಂಗ	0	1	0
ವೈಜಯಂತೀ ಪಂಚಾಂಗ	0	2	6
ಕುಕ್ಕುಟ ಪಂಚಾಂಗ	0	1	0

ಇತ್ಯಾದಿ ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors:*—**GENERAL SUPPLIES Ltd., Udipi**)

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

Registered No. M. 5618

NAVAYUGA

ನವಯುಗ

20-4-1939

ಊಟಿಯ ಸಮಯ

ಮೋಡರ್ನ್ ಹಿಂದೂ ಹೊಟೇಲು, ಊಟಿ

[ಉತ್ತಮ ತರದ ಶಾಖಾಹಾರಿ ಹಿಂದೂ ಹೊಟೇಲು]

ಪ್ರವಾಸಕಾಲವು ಆಗಲೇ ಪ್ರಾರಂಭಿಸಿದೆ.

ಬೇಗನೆ ನಿಮ್ಮ ಸ್ಥಳಗಳನ್ನು ಪಡಕೊಳ್ಳಿರಿ, ಮತ್ತೆ ನಿರಾಶರಾಗಬೇಡಿರಿ

ಕುಟುಂಬಿಗಳಿಗೆ ಪ್ರತ್ಯೇಕ ಸೌಕರ್ಯಗಳು.

ಭೋಜನ, ಉಳಿದುಕೊಳ್ಳುವ ಸ್ಥಳ--ದರಗಳು_ಒಬ್ಬರಿಗೆ ದಿನ ೧ಕ್ಕೆ ರೂ. ೩. ೪ ಮತ್ತು ೫.

ವಿಶೇಷ ಮಾಹಿತಿಗಳಿಗೆ:—ಮೋಡರ್ನ್ ಹಿಂದೂ ಹೊಟೇಲು, ಊಟಿ
ಮೋಡರ್ನ್ ಹಿಂದೂ ಹೊಟೇಲು, ಮೈಸೂರು
ಮೋಡರ್ನ್ ಕೇಫ್, ಎಸ್ಪ್ಲನೇಡ್, ಮದ್ರಾಸು
ಮದ್ರಾಸು ಎಕ್ವೇರಿಯಮ್ ರೆಸ್ಟೋರೆಂಟ್, ಮದ್ರಾಸು
ಮೋಡರ್ನ್ ಕೆಫ್ No 4 ತಂಬುಚೆಟ್ಟಿ ಸ್ಟ್ರೀಟ್, ಮದ್ರಾಸು

ನಿವಾಸಿಕರ ಅಪೇಕ್ಷೆಗಳಿಗನುಸರಿಸಿ ಟೇಕ್ಸಿ, ಟೆಲಿಫೋನ್, ಟೆನ್ನಿಸ್ ಇವುಗಳ ಅನುಕೂಲತೆಗಳಿವೆ.

ಕೆ. ಸೀತಾರಾಮರಾವ್,
ವ್ಯಾಲಿಕರು

ಟಿ. ಸೂ. ಟೀಪಾರ್ಟಿ, ಗಾರ್ಡನ್‌ಪಾರ್ಟಿ ಮತ್ತು ಭೋಜನ ಸಮಾರಂಭಗಳಿಗೆ ಬಹು ಪ್ರಖ್ಯಾತಿ ಹೊಂದಿದ ಮೋಡರ್ನ್ ಕೇಫ್, ಮದ್ರಾಸು, ಇಲ್ಲಿ ಸರ್ವಾನುಕೂಲತೆಗಳಿವೆ





ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯವೆಂಬಂತೆ ಸಾಮಾನುಗಳು ಬೇಲುಗಟ್ಟಿ ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

ದೂರೀಕರಿಸಿರಿ—ದೃಷ್ಟಿ ಚಕ್ರ—ನೆರಕಕೂದಲು - ವೃದ್ಧಾಪ್ಯ ತರುಣರು

ಎರಡು ತಿಂಗಳವರೆಗೂ, ವೃದ್ಧರು ನಾಲ್ಕು ತಿಂಗಳವರೆಗೂ ಟಾನಿಕನ್ನು ಉಪಯೋಗಿಸಿದಲ್ಲಿ ದೃಷ್ಟಿ ಮಾಂದ್ಯವು ತೊಲಗಿ ನರೆತ ಕೂದಲು ಕಪ್ಪಗಾಗಿ ದೇಹದ ನಿತ್ರಾಣವು ತೊಲಗಿ ತಾರುಣ್ಯದ ಥಳಕುಬಾರದೆ ಹೋದಲ್ಲಿ ಇಮ್ಮಡಿ ಕ್ರಯ ವಾಪಾಸು ಕೊಡುವ ಶರ್ತವಿದೆ, ಟಾನಿಕಿನ ಕ್ರಯವು ಈ ತೆರನಾಗಿದೆ. ಒಂದು ತಿಂಗಳಿನ ಟಾನಿಕಿಗೆ ರೂ 3-8-0; 2 ತಿಂಗಳಿನದಕ್ಕೆ ರೂ. 6-0-0; ನಾಲ್ಕು ತಿಂಗಳಿನದಕ್ಕೆ ರೂ. 10 ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Jari Booti Dawakhana,
P. O. Behar Nursery (Darbhanga)

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು

ದಿಗಂಬರವಾಗಿರುವ ಸ್ಥಿತಿಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗೆ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿರಿ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಎಂಡ್ ಕಂಪೆನಿ,**
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co., *Nambulier Street*, G. T. MADRAS.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಆರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಮೃದ್ವಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ಶರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘ್ನಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೈಷ್ಟಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಆವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE
PANGAL NAYAK BANK
Estd.] LIMITED. [1920.

ದಿ ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್.

Paid up Capital Rs. 1,82,100/-. Reserves Rs. 2,02 800/-
PRINCIPAL OFFICE: COURT ROAD, UDIPI.
OTHER OFFICES:
UDIPI MANGALORE, KATAPADI, & KANHANGAD.

Season Deposits so as to bear interest at 4per cent per annum till the end of June 1939 are accepted.

Cumulative Deposits are also received on the usual terms.

Banking business of every description is transacted. Further particulars may be had on application.

ದಿ ವಿಜಯ ಬೇಂಕ್, ಲಿಮಿಟೆಡ್, ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವಹಿವಾಟುಗಳು ಇಲ್ಲಿ ನಡಿಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3 ತಿಂಗಳಿಗೆ	....	3½%
6 ,,	....	4%
1 ವರ್ಷಕ್ಕೆ	....	4½%
2 ,,	....	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತದೆ.

Transport & Car Owners

ARE SPECIALLY INVITED TO VISIT
OUR SHOW ROOM
for economical transport maintenance.
CANARA AUTOMOBILES - - - - - MANGALORE.

AUGUSTINE & CO.

Stockits:—

Weliknown ceylon, Nilgri, Darjeeling & Assam Tea & Coffee All sorts of Hotel & family Tea Mixures as well as Coffee can be had at moderate rates.

ಮುಂಬಾಯಿಯಲ್ಲಿ ನಮ್ಮ ಗಿರಾಕಿಗಳು ಹಲವು ವರ್ಷಗಳಿಂದ ನಮ್ಮ ಚಾ ಕಾಫಿಯನ್ನು ಉಪಯೋಗಿಸಿ ಸಂತುಷ್ಟರಾಗಿದ್ದಾರೆ.

ಹೋಟೆಲುಗಳಿಗೆ ಬೇಕಾಗುವ ಟೀ ಮಿಕ್ಸರ್ ವ ಕಾಫಿ ಹುಡಿ, ಮನೆಗಳಿಗೆ ಬೇಕಾಗುವ ಚಾ-ಕಾಫಿ, ನಮ್ಮಲ್ಲಿ ಸದಾ ಮಿತ ಹಿತದರಕ್ಕೆ ದೊರೆಯುತ್ತದೆ. ಪ್ರಾಮಾಣಿಕತೆಯೇ ನಮ್ಮ ಆದರ್ಶ. ಗಿರಾಕಿಗಳ ಸೌಕರ್ಯವೇ ನಮ್ಮ ಧ್ಯೇಯ.

ಪರೀಕ್ಷಿಸಿರಿ! ಖಾತ್ರಿ ಮಾಡಿಕೊಳ್ಳಿರಿ.

ವಿಳಾಸ: ಆಗಸ್ಟಿನ್ ಎಂಡ್ ಕೋ, ಮೌಂಟುರೋಡು, ಮಜಗಾಂ, ಮುಂಬಯಿ.

MOUNT ROAD, MAZAGAON, BOMBAY.

ಮುಂದಿಟ್ಟು ಆಂದೋಲನವನ್ನೆಬ್ಬಿಸುತ್ತಿರುವರು. ಅಮೇರಿಕದಲ್ಲಿ ಯಹೂದ್ಯರ ವಿರೋಧವಾಗಿ ಪ್ರಚಾರವಾಗಲೆಂದು ನಾಜಿಗಳು ಬಹಳ ಪ್ರಯತ್ನಮಾಡುತ್ತಿರುವರು. ಈ ವಿಚಾರದಲ್ಲಿ ಅಲ್ಲಿನವರಲ್ಲಿ ಭಿನ್ನಾಭಿಪ್ರಾಯವು ಸಹಜವಾಗಿ ಉಂಟಾಗುವುದು. 1933ರಿಂದ ಇದುವರೆಗೆ ಅಲ್ಲಿ ನಾಜಿಯವರು ಸಾವಿರಾರು ಹಸ್ತ ಪತ್ರಿಕೆಗಳನ್ನು ಅಶಿಕ್ಷಿತ ರೈತರ ಮತ್ತು ಕೂಲಿಗಾರರ, ಬಡವರ ಸಮುದಾಯದಲ್ಲಿ ಹಂಚಿ ದೇಶದಲ್ಲಿ ಯಹೂದ್ಯರದೇ ಪ್ರಭುತ್ವವಿದೆ ಎಂದು ಪ್ರಚಾರಮಾಡುತ್ತಾ ಬಂದಿರುವರು. ನಾಜಿಯವರ ಪ್ರಚಾರದ ಮುಖ್ಯ ಆಧಾರವು ಇದೇ ಎಂದು ಪ್ರಚಾರ ಶಾಖೆಯ ಕಾಲಿನ್ ರೋಜ್ ಎಂಬವನು ಒಪ್ಪಿಕೊಂಡಿರುವನು. ಅಮೇರಿಕದಲ್ಲಿರುವ ಜರ್ಮನ್ ರಕ್ತದವರನ್ನು ಸಂಘಟಿಸಿ, ವಿದ್ರೋಹವನ್ನು ಪ್ರಚಾರಮಾಡುವುದಾದರೆ, ಅಲ್ಲಿ ನಾಜಿಗಳ ವಿಜಯವಾಗುವುದೆಂದು ಹಿಟ್ಲರನಿಗೆ ಹೇಳಿರುವರು.

ಅಮೇರಿಕದಲ್ಲಿ ಜರ್ಮನ್ ಅಧಿಕಾರವು ನ್ಯಾಯಬದ್ಧವೆಂಬುದನ್ನು ತೋರಿಸಲು ಅವರು ಮುಖ್ಯವಾದ ದೃಷ್ಟಾಂತಗಳನ್ನು ಮುಂದಿಡುತ್ತಿರುವರು. ಇತಿಹಾಸ ದೃಷ್ಟಿಯಿಂದ ಮೊಟ್ಟಮೊದಲು ಪ್ಯಾಸ್ಟೋರಿಯಸ್ಸನು ಅಮೇರಿಕದಲ್ಲಿ "ಜರ್ಮನ್ ಟೌನ್" ಮತ್ತು "ಪೆನ್ಸಿಲ್ವೇನಿಯಾ"ವನ್ನು ಸ್ಥಾಪಿಸಿದನೆಂದು ಹೇಳುತ್ತಾರೆ. 1507ರಲ್ಲಿ ಮಾರ್ಟಿನ್ ವಾಲ್ಡ್ ಸೀಮುಲ್ಲರನು ಇದರ ನಾಮಕರಣವನ್ನೂ ಮಾಡಿದನು. ಕೊಲಂಬಸ್ಸಿಗೆ ಸಹಾಯಮಾಡಿದವನು ಜರ್ಮನಿಯ ಐದನೆಯ ಚಾರ್ಲ್ಸ್ ಅಂತೆ. ಅಷ್ಟೇ ಅಲ್ಲ, ಮಾರ್ಟಿನ್ ಲೂಥರನು ಸಹ ಜರ್ಮನಿಯವನೆಂದೇ ಸಿದ್ಧಿಮಾಡುವವರೆಗೂ ಹೋಗಿರುವವರು ಕೆಲವರು ವಿದ್ವಾಂಸರು. ಉತ್ತರ ಅಮೇರಿಕವು ಸಂಪೂರ್ಣ ಜರ್ಮನರದು. ಅಮೇರಿಕದ ಗೃಹಯುದ್ಧದಲ್ಲಿ ಜರ್ಮನಿಯವರು ಬಹಳವಾಗಿ ಸೇವೆಮಾಡಿರುವರು.

ಆಂಗ್ಲರು ಉತ್ತರ ಅಮೇರಿಕದಿಂದ ಜರ್ಮನರನ್ನು ಓಡಿಸಿ, ಅಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿದರು. ಒಂದಲ್ಲ ಒಂದು ದಿನ ಜರ್ಮನರು ಅಮೇರಿಕವನ್ನು ಸ್ವಾಧೀನಪಡಿಸಿಕೊಳ್ಳುವೆವೆಂದು ಸಂತೋಷದಿಂದಲೇ ಇರುವರು. ಪ್ರೊಫೆಸರ್ ಕಾರ್ಲ್ ಹಾಶೋಫೆರ್‌ರು ಹೇಳುವಂತೆ ಅಮೇರಿಕದಲ್ಲಿರುವ ಜರ್ಮನರ ಸಂಖ್ಯೆಯು 30 ಕೋಟಿಯಂತೆ. ಆದರೆ ಜರ್ಮನಿಯ ಪತ್ರ ಪುಸ್ತಕಗಳಲ್ಲಿ ಅವರ ಸಂಖ್ಯೆಯು 40-42 ಕೋಟಿ ಎಂದಿದೆ. ಆದರೆ ವಸ್ತುಸ್ಥಿತಿಯು ಈ ರೀತಿ ಇದೆ.—1790ರಲ್ಲಿ ಜರ್ಮನಿಯ ಸಂಖ್ಯೆಯು ಒಟ್ಟು ಜನಸಂಖ್ಯೆಯಲ್ಲಿ ಸೇ| 8 ಇತ್ತು. ಇದುವರೆಗೆ ಸೇಕಡ 10 ಆಗಿರಬಹುದು. ಜಾರ್ಜ್ ಟೇಲ್ಸ್ ಎಂಬವರಂತೂ ಅಮೇರಿಕದ ಸಾಂಸ್ಕೃತಿಕ, ಔದ್ಯೋಗಿಕ ಸಾಮಾಜಿಕ ಮತ್ತು ವೈಜ್ಞಾನಿಕ ಉನ್ನತಿಯ ಕಾರಣವು ಜರ್ಮನರ ಶುದ್ಧ ರಕ್ತವೇ ಎಂದು ಸಾರಿದ್ದಾರೆ.

ಅಮೇರಿಕದ ಜನರು ಶಾಂತಿಪ್ರಿಯರು. ಆದರೆ ನಾಜೀ ಪ್ರಚಾರವು ಅವರ ಶಾಂತಿಗೆ ಧಕ್ಕೆ ತಗಲುವಂತೆ ಮಾಡಿದೆ. ಅಲ್ಲಿನ ಜನಸಂಖ್ಯೆ 3 ಕೋಟಿ. ಇದರಲ್ಲಿ ಜರ್ಮನರ ಸಂಖ್ಯೆ 25,000 ಇರಬಹುದು. ಇಷ್ಟು ಅಲ್ಪ ಸಂಖ್ಯೆಯವರಿದ್ದೂ ಬ್ರೆಜಿಲಿನಲ್ಲಿ ದಂಗೆ ಎಬ್ಬಿಸಿದರು. ಈ ವಿದ್ರೋಹಿಗಳ ಮುಖಂಡರು ಇಬ್ಬರೂ ಜರ್ಮನರೇ. ಅವರಲ್ಲಿ ಬರ್ಲಿನ್ನಿನ ಆದೇಶವಿದ್ದುದು ಕಂಡುಬಂತು. ನಾಜಿಗಳ ಕೇಂದ್ರ ಕಾರ್ಯಾಲಯದಿಂದ ಕ್ರಮವಾದ ಸಹಾಯವು ದೊರೆಯುತ್ತಿದೆ ಎಂಬುದು ಈ ಪತ್ರಗಳಿಂದ ತಿಳಿಯುವುದು.

ನಾಜಿಗಳು ಇಷ್ಟರಿಂದಲೇ ತೃಪ್ತರಾಗುವಂತಿಲ್ಲ. ಜಪಾನ್ ಮತ್ತು ಅಮೇರಿಕಗಳು ಕಾದಾಡಲೆಂದು ಅವರ ಹಾರೈಕೆ. ಈ ಕಾರಣದಿಂದಲೇ ಜರ್ಮನಿಯ ಸಲಹೆಯನ್ನನುಸರಿಸಿ, ಜಪಾನಿನವರು ಅಮೇರಿಕದ "ಪನಾಪ"ವೆಂಬ ಹಡಗನ್ನೂ ನಾಶಮಾಡಿದರು. ಇವರಿಬ್ಬರೂ ಯುದ್ಧಮಾಡಿದರೆ, ಜರ್ಮನಿಯು ಯುರೋಪಿನಲ್ಲಿ ಬಹಳ ಬಲವಾಗುವುದು. ಸ್ಪೇನಿನ ಪ್ರಜಾತಂತ್ರಾತ್ಮಕ ರಾಜ್ಯಭಾರದ ಅಂತ್ಯವಾಯಿತು. ಬ್ರಿಟನ್ ಮತ್ತು ಫ್ರಾನ್ಸುಗಳಿಗೆ ಯುದ್ಧದ ಭಯವಿದೆ ಎಂಬುದನ್ನೂ ಹಿಟ್ಲರನು ಬಲ್ಲನು. ಇದರಿಂದಲೇ ಅವನು ಬಹಳ ಜಾಗರೂಕತೆಯಿಂದ ನಾಜೀ ಪ್ರಭುತ್ವವನ್ನು ಕ್ರಮವಾಗಿ ಸ್ಥಾಪಿಸುತ್ತಿರುವನು. ಈ ವರ್ಷದಲ್ಲಿ ಜಪಾನ್ ಅಮೇರಿಕದ ಯುದ್ಧಪ್ರಾರಂಭವಾದರೆ, ಜರ್ಮನಿಯು ಕ್ರಮೇಣ ದಕ್ಷಿಣ ಅಮೇರಿಕದಲ್ಲಿ ತನ್ನ ಅಧಿಕಾರವನ್ನು ಪ್ರಾಪ್ತಿಮಾಡಿಕೊಂಡರೆ, ಯುರೋಪಿನಲ್ಲಿ ಫ್ಯಾಸಿಜಂನ ವಿಜಯವು ನಿಶ್ಚಿತವಾಗುವುದು.

ಆದರೆ ಸ್ಪೇನಿನ ಪತನವಾದ ಮೇಲೆ, ಪರಿಸ್ಥಿತಿಯೇ ಬದಲಾಯಿಸಿದೆ. ಫ್ರಾನ್ಸು ಸಮಯಬಿದ್ದರೆ ಬ್ರಿಟನ್ನಿಗೆ ಸರ್ವ ಸಹಾಯವನ್ನೂ ನೀಡಲು ಸಿದ್ಧವಾಗಿದೆಯೆಂದು ಅಲ್ಲಿನ ವಿದೇಶಿ ಸಚಿವರು ಹೇಳಿರುವರು. ಇದನ್ನು ಆಧಾರವಾಗಿಟ್ಟುಕೊಂಡು ಪಾರ್ಲಿಮೆಂಟಿನಲ್ಲಿ ಪ್ರಶ್ನಿಸಲು, ಬ್ರಿಟಿಷ್ ಮಹಾ ಪ್ರಧಾನರು, ಹರ್ಷಧ್ವನಿಗಳ ಮಧ್ಯೆ ತಾವು ಸಹ ಫ್ರಾನ್ಸಿಗೆ ಸಹಾಯಮಾಡುವುದಾಗಿ ತಿಳಿಸಿದರು. ಪ್ರೆಸಿಡೆಂಟ್ ರೂಜ್‌ವೆಲ್ಟರೂ ಸಹ ಯುರೋಪಿನಲ್ಲಿ ಫ್ಯಾಸಿಜಂನ್ನು ನಿರೋಧಿಸಲು ಯತ್ನಿಸುವುದಾಗಿ ಹೇಳಿರುವರು. ಪ್ರಪಂಚದ ಮೂರು ಮುಖ್ಯ ಪ್ರಜಾತಂತ್ರವಾದೀ ರಾಷ್ಟ್ರಗಳು ಫ್ಯಾಸಿಜಂನ್ನು ನಿರೋಧಿಸಲು ಸಿದ್ಧವಾಗಿವೆ. ಇಂತಹ ಸ್ಥಿತಿಯಲ್ಲಿ ಜರ್ಮನಿಯು ಅಮೇರಿಕವನ್ನು ಸ್ವಾಧೀನಪಡಿಸಿಕೊಳ್ಳುವುದು ಅಸಂಭವ. ಏನೇ ಆಗಲಿ, ಜರ್ಮನಿಯು ಆ ವಿಚಾರದಲ್ಲಿ ಮಾಡುತ್ತಿರುವ ಪ್ರಯತ್ನವು ಪ್ರಶಂಸನೀಯವೂ, ಆಶ್ಚರ್ಯಜನಕವೂ ಮತ್ತು ಭಯಂಕರವೂ ಆಗಿದೆ ಎನ್ನಲಡ್ಡಿಯಿಲ್ಲ.

ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಜರ್ಮನಿಯವರು ಹರಡಿಹೋಗಿರುವರೆಂಬ ವಿಚಾರವನ್ನು ಜರ್ಮನಿಯು ಎಲ್ಲ ಮಕ್ಕಳಿಗೂ ಕಲಿಸಿರುವರು. ಅವರೆಲ್ಲರೂ ಎಂದು ಒಂದಾಗುವರೋ, ಅಂದೇ ವಿಶ್ವವ್ಯಾಪೀ ನಾಜೀ ಭ್ರಾತೃತ್ವವು ಜನ್ಮತಾಳುವುದು. ಅಲ್ಲಿನ ವಿದ್ವಾಂಸರೂ ಈ ನಾಜೀ ಪ್ರಚಾರದಲ್ಲಿ ಮಗ್ನರಾಗಿರುವರು.

ದಿನದಿನವೂ ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಿರುವ ಫ್ಯಾಸಿಜಂನ ಶಕ್ತಿಯು ಕಡಿಮೆಯಾಗಿ ಪ್ರಜಾತಂತ್ರಾತ್ಮಕ ರಾಜ್ಯಭಾರವು ಪ್ರಚಾರವಾಗಲೆಂದೇ ಹಾರೈಸೋಣವೇ?

THE
CANARA MUTUAL
ASSURANCE CO., LTD.

Head Office:— UDIPI, S INDIA.

Outstanding Valuation Results

High Praises from the Press and the discriminating public

The Oldest Insurance Journal writes:

"........... The result of the valuation is unique in every respect and the annals of Indian Life Assurance do not furnish a single example of greater efficiency and economy. The CANARA MUTUAL belongs to a small distant town in Southern India and is therefore devoid of the magic touch of the Bombay millionaire or the Calcutta Lawyer. Still, however, the Company has grown to be a prodigy amongst the infant life offices of this country, the kind of which has not been seen in Bombay, Lahore or Calcutta."

........*The Indian Insurance Journal*, Calcutta
MARCH, 1939.

THE
Canara Banking Corporation, Udipi, Ltd.
(Incorporated in British India.)
ESTD. 1906

THREE YEARS' CASH CERTIFICATES
bearing interest at 4% p. a. in denominations of Rs 50/-, 100/-, 500/-, 1,000/- & 5000/- are now issued at all our Branches.

For particulars call at or write to any of our nearest Branches.

ನವಯುಗ

ಉಡುಪಿ, ಗುರುವಾರ, ತಾ. ೨೦-೪-೩೯

ಅಂತರಾಷ್ಟ್ರೀಯ ಕ್ಷೋಭೆ

ಲೋಕದ ರಾಷ್ಟ್ರಗಳೊಳಗಿನ ಸಂಬಂಧವು ಪೂರ್ತಿ ಕೆಟ್ಟುಹೋಗಿ, ಅವೆಲ್ಲಿ ಮಹಾ ಧಕ್ಕೆಬಡಿದುಕೊಳ್ಳುವವೋ ಎಂದು ನಿರೀಕ್ಷಿಸುತ್ತಿರುವಾಗ, ಒಂದು ಆಶ್ಚರ್ಯವೆಂಬಂತೆ ಪ್ರೆಸಿಡೆಂಟ್ ರೂಸ್‌ವೆಲ್ಟರ ಶಾಂತಿಯಾಚನಾ ಸಂದೇಶವು ಸರ್ವಾಧಿಕಾರಿಗಳಿಗೆ ಹೋಗಿರುವದು. ಯಾವದೇ ಸ್ವತಂತ್ರ ರಾಷ್ಟ್ರದ ಮೇಲೆ ಇನ್ನು ಹತ್ತು ವರ್ಷಗಳ ವರೆಗಾದರೂ ಬೀಳಲಾರೆವು—ಎಂದು ಆಶ್ವಾಸನೆ ಕೊಡುವಿರಾ? ಎಂದು ಅವರು ಹಿಟ್ಲರ್ ಮುಸಲನಿಗಳನ್ನು ಕೇಳಿಕೊಂಡರು. ರೂಸ್‌ವೆಲ್ಟರ ಸಂದೇಶದ ಕುರಿತು ಊಹಾಪೋಹಗಳಾಗುತ್ತಿವೆ. ಇನ್ನೊಂದು ಧಾಳಿಯ ಸಿದ್ಧತೆ ನಡೆದಿರಬೇಕು. ಅದು ಅಂತರ್‍ರಾಷ್ಟ್ರೀಯ ವಿಪತ್ತನ್ನು ತಂದೊಡ್ಡಬಹುದು. ಅದನ್ನು ಗಮನಿಸಿ ಅಧ್ಯಕ್ಷ ರೂಸ್‌ವೆಲ್ಟರು, ಲೋಕಕಂಟಕತ್ವದ ಹೊಣೆಗಾರಿಕೆಯನ್ನು ಹಿಟ್ಲರ್ ಮುಸಲನಿಗಳ ಮೇಲೆಯೇ ಎಲ್ಲರರಿಯುವಂತೆ ಹೊರಿಸೋಣ ಎಂದು ಈ ರೀತಿ ವಿನಂತಿಮಾಡಿಕೊಂಡುದಾಗಿದೆ-ಹೀಗೆಲ್ಲಾ ಊಹೆಗಳೆದ್ದಿವೆ. ಇತ್ತ ಅಮೆರಿಕವೇ ಆದಿಯಾಗಿ ಎಲ್ಲಾ ರಾಷ್ಟ್ರಗಳಲ್ಲಿಯೂ ಅಪೂರ್ವ ಸೈನಿಕ ಚಲನೆಗಳಾಗುತ್ತಿರುವದು ಕಂಡುಬರುತ್ತದೆ.

ಅಂತೂ, ದೀರ್ಘ ಕಾಲದಿಂದ ನಡೆಯುತ್ತಿದ್ದ ಅಂತರ್‍ರಾಷ್ಟ್ರೀಯ ಮಂಥನದ ಫಲವು ಅಮೃತವೋ, ವಿಷವೋ ಶಾಂತಿಯೋ ಯುದ್ಧವೋ ಎಂಬುದನ್ನು ಕಾಣುವ ಕಾಲವು ಸಮೀಪಿಸುತ್ತಿದೆ. ಕಳೆದ ಮಹಾಯುದ್ಧವು ಬಹುಸಂಖ್ಯೆಯ ರಾಷ್ಟ್ರಗಳ ಯುದ್ಧತೃಷೆಯನ್ನು ತಣಿಸಿದ್ದಿತು; ಆ ಯುದ್ಧಾವಸಾನದಲ್ಲಿ ರೂಪುಗೊಂಡ ಕರಾರು ಶರ್ತುಗಳು, ಸೋತವರು-ಗೆದ್ದವರು ಎಂಬ ಭೇದವನ್ನಾಧರಿಸಿ ರಚಿಸಲ್ಪಟ್ಟಿದ್ದರೂ, ಭವಿಷ್ಯದಲ್ಲಿ ಯುದ್ಧವಿಲ್ಲವೆಂದಾಗಬೇಕೆಂಬ ಬಯಕೆಯು ಅವುಗಳಲ್ಲಿ ಸಂಪೂರ್ಣವಾಗಿ ಬಿಂಬಿಸಿತ್ತು. ಕಾಲ ಹೋದಂತೆ ಹಿಟ್ಲರ್ ಮುಸಲನಿಗಳು ಆ ಒಪ್ಪಂದಗಳನ್ನು ಸ್ವೇಚ್ಛೆಯಿಂದ ಕಡೆಗಣಿಸುತ್ತಾ ಬಂದರು; ಈ ಅಪರಾಧಕ್ಕೆ ಶಿಕ್ಷೆಯೂ ನಮೂದಿಸಲ್ಪಟ್ಟಿತ್ತು-ಆದರೆ ಅದನ್ನು ವಿಧಿಸುವವರಿಲ್ಲವೆ ಹೋದರು. ಆ ಹೊಣೆ ಹೊತ್ತಿದ್ದವರು ಲೋಕಶಾಂತಿಯ ನೆವಹೇಳಿ ಈವರೆಗೂ ತಪ್ಪಿಸಿಕೊಳ್ಳುತ್ತಾ ಬಂದರು. ಆದರೆ ಲೋಕಕ್ಕಾದರೂ ಒಂದು ಪರಿಮಿತಿಯಿದೆ. ಓಡಿಯೋಡಿ ತಪ್ಪಿಸಿಕೊಳ್ಳುವವರನ್ನು ಒಂದು ದಿನ ಪ್ರಪಂಚದ ಗಡಿಯೇ ತಡೆದಿಡುತ್ತದೆ. ಇಂತಹ ಪರಿಸ್ಥಿತಿಯೇ ಇಂದು ಇಂಗ್ಲೆಂಡು ಫ್ರಾನ್ಸುಗಳನ್ನು ತಮ್ಮ ಕಾಲ್ದೆಗೆವಾಟದಲ್ಲಿ ತಡೆದಿಟ್ಟಿತೆನ್ನಬಹುದು. 'ಇನ್ನೊಂದು ಹೆಜ್ಜೆ ಮುಂದಿಡಬೇಡಿರಿ-ಜಾಗ್ರತೆ!' ಎಂದು ಇಟಲಿ ಜರ್ಮನಿಗಳೆದಿರು ಅವೀಗ ಕೆರಳಿ ನಿಂತಿವೆ. ಇದೇ ಸುಸಂದರ್ಭವೆಂದು ಅಮೇರಿಕಾಧ್ಯಕ್ಷರ ಶಾಂತಿಸಂದೇಶವೂ ಹೊರಟಿದೆ.

ಮುಂದೇನು? ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಹಿಟ್ಲರ್ ಮುಸಲನಿಗಳ ಹಾದಿಯಲ್ಲಿ ಅಡ್ಡ ಗೋಡೆಯೊಂದು ಎದ್ದು ನಿಂತಿತೆನ್ನಬಹುದು. ಈ ವರೆಗಿನ ವೇಗದಲ್ಲಿ ಧಾವಿಸಿದರೆ ಅಪಘಾತವಂತೂ ನಿಶ್ಚಯ. ಅವರೀ ಅಪಾಯವನ್ನು ತಂದುಕೊಳ್ಳುವರೆ? ಅಥವಾ ರೂಸ್‌ವೆಲ್ಟರ ಸೂಚನೆಯಂತೆ ಹತ್ತು ವರ್ಷಗಳ ಗ್ಯಾರಂಟಿಯನ್ನು ಕೊಟ್ಟು ಲೋಕಶಾಂತಿಗೆ ನೆರವಾಗುವರೆ? ಲೋಕದ ಭವಿಷ್ಯವು ಹಿಟ್ಲರ್ ಮುಸಲನಿಗಳು ಇವುಗಳಲ್ಲಾವುದನ್ನು ಆರಿಸುವರೋ, ಅದನ್ನು ಹೊಂದಿಕೊಂಡಿದೆ.

ಹಾಗೂ ಇನ್ನು ಕೆಲವೇ ದಿನಗಳೊಳಗೆ, ಹಾದಿ ನೆಲೆ ಯಾವುದೆಂಬುದನ್ನು ಪ್ರಪಂಚವು ಸ್ಪಷ್ಟವಾಗಿ ಕಾಣುವಂತಾಗಬಹುದು. ಈ ವರೆಗೂ ಉಯ್ಯಾಲೆಯಾಡುತ್ತಿದ್ದ ಮಿ. ಚೇಂಬರ್ಲನರು ಈಗ ರಷ್ಯದ ಕಡೆಗೂ ಒಪ್ಪಂದದ ಕೈಯೊಡ್ಡಿದ್ದಾರೆ. ತನ್ನಷ್ಟಕ್ಕೆ ತಾನಿರಬಹುದಾದ ಅಮೇರಿಕವು ಸ್ವತಃ ಕಾರ್ಯಕ್ಕೆ ಕೈಯಿಕ್ಕಿದೆ—ಇವು ಅಸಾಮಾನ್ಯ ವಿದ್ಯಮಾನಗಳು. ತಮ್ಮ ಅಮಾನುಷೀ ವರ್ತನೆಯಿಂದಾಗಿ ಈ ಅಸಾಧಾರಣ ಘಟನೆಗಳಾಗಿವೆ ದೊರೆಯಿತೆಂಬುದನ್ನು ತಿಳಿದು ಇಟಲಿ-ಜರ್ಮನಿಗಳು ಸಂದರ್ಭಕ್ಕನುಗುಣವಾದ ಚಾತುರ್ಯವನ್ನು ತೋರಿದಲ್ಲಿ ಅವುಗಳಿಗೂ ಕ್ಷೇಮ; ಲೋಕಕ್ಕೂ ಸುಖ. ಆದರೆ ದರ್ಪ, ದಬ್ಬಾಳಿಕೆಗಳೇ ಸರ್ವಸ್ವವೆಂದು ಬಗೆದಿರುವ ಹಿಟ್ಲರ್‌ಮುಸಲನಿಗಳು ಅಪಾಯದ ದೂರ ನೋಟದಿಂದಲೇ ಪಾಠ ಕಲಿತುಕೊಂಡಾರೆ? ಸಂದೇಹವಿದೆ.

ಆಶ್ರಿತ ರಾಜರೇನು ಮಾಡುವರು?

ಭಾರತದ ಇಂದಿನ ಪ್ರಾಮುಖ್ಯ ಸಮಸ್ಯೆಯೆಂದರೆ ಆಶ್ರಿತ ರಾಜ್ಯದೊಳಗಿನ ವ್ಯವಸ್ಥೆ. ಮಹಾತ್ಮಾ ಗಾಂಧಿಯವರು ಸ್ವತಃ ಸಂಸ್ಥಾನಗಳ ಚಳವಳ ಧುರೀಣತೆ ವಹಿಸಿರುವದರಿಂದ ಆಂದೋಲನದ ಕಳೆಯೇರಿದೆ. ವೈಸರಾಯರು ಆಶ್ರಿತರಾಜರು ಕಾಲಕ್ಕೆ ತಕ್ಕಂತೆ ವರ್ತಿಸಬೇಕೆಂದು ಅಪ್ರತ್ಯಕ್ಷವಾಗಿಯಾದರೂ ಯುಕ್ತಿಯುಕ್ತವಾಗಿ ಕೇಳಿಕೊಂಡಿದ್ದಾರೆ. ತಮ್ಮ ರಾಜ್ಯಗಳೊಳಗಿನ ವ್ಯವಸ್ಥೆಯನ್ನು ರಾಜರುಗಳು ಕಾಲಕ್ಕನುಗುಣವಾಗಿ ಸುಧಾರಿಸುವರಾದರೆ, ಅದರಲ್ಲಿ ತಮ್ಮದೇನೂ ಆಕ್ಷೇಪವಿಲ್ಲವೆಂದು ಪಾರ್ಲಿಮೆಂಟಿನಲ್ಲಿ ಇಂಡಿಯಾ ಸೆಕ್ರೆಟರಿಗಳು ಹೇಳಿರುವರು. ಪ್ರಜಾ ಜವಾಬ್ದಾರಿಯ ಮಾತು ಬಂದಾಗಲೆಲ್ಲ ತಾವು ಸಾಮ್ರಾಜ್ಯ ಸರಕಾರದೊಡನಿರುವ ಕಟ್ಟುಗಳಿಗೆ ಬದ್ಧರೆಂದು ಹೇಳಿ ಆಕ್ಷೇಪಿಸುತ್ತಿದ್ದ ಆಶ್ರಿತ ರಾಜರುಗಳ ಬಾಯನ್ನೇ ಬ್ರಿಟಿಷ್ ಅಧಿಕಾರಿಗಳು ಈ ರೀತಿ ಮುಚ್ಚಿಸಿರುವರು. ಆಶ್ರಿತರಾಜರುಗಳು ಮುಂದೇನು ಮಾಡಲಿರುವರು ಎಂಬ ಪ್ರಶ್ನೆ, ಬ್ರಿಟಿಷರು ಫೆಡರೇಶನನ್ನು ಸ್ಥಾಪಿಸುವ ಭರದಲ್ಲಿ, ತಮ್ಮ ಹಿತಕ್ಕೆ ಧಕ್ಕೆಯುಂಟಾಗದ ರೀತಿ ತುಂಬರಸರ ಕಿರೀಟಗಳು ಪ್ರಭೆ ಕಂದಿಯಾದರೂ ಸಂಸ್ಥಾನಗಳಲ್ಲಿ ಶಾಂತಿಯುಂಟಾಗಲೆಂದು ಹಾರೈಸುವ ಸ್ವಕರ್ತವ್ಯ ನಿಪುಣರು. ಆಶ್ರಿತರಾಜರು ಮಾತ್ರ ಅಷ್ಟೇ ಸುಲಭವಾಗಿ ತಮ್ಮ ಸ್ವಾರ್ಥವನ್ನು ಬಿಟ್ಟುಕೊಡಲಾರರು. ಇದಕ್ಕೂ ಪರಿಹಾರೋಪಾಯವು ಬಹುತೇಕವಾಗಿ ಎಲ್ಲಾ ಸಂಸ್ಥಾನಗಳಲ್ಲಿ ಕೈಕೊಳ್ಳಲ್ಪಡುವ ಲಕ್ಷಣಗಳು ಕಂಡುಬರುತ್ತಿವೆ. ವೈಸರಾಯರ ಸೂಚನೆಗಳನ್ನು ಪರ್ಯಾಲೋಚಿಸುವರೆ ರಾಜರುಗಳಿಗೆ ಪರಿಶುದ್ಧ ವಾತಾವರಣವನ್ನೊದಗಿಸಿಕೊಡಬೇಕೆಂದು ಗಾಂಧಿಯವರು ಚಳವಳವನ್ನೇನೊ ತತ್ಕಾಲಕ್ಕೆ ನಿಲ್ಲಿಸಿರುವರು. ಈ ವಿರಾಮವು ರಾಜರ ಅನುಕೂಲತೆಗೂ ಹೌದು; ಪ್ರಜೆಗಳ ಕರ್ತವ್ಯದಲ್ಲಿ ಘನತೆಯನ್ನು ಸೇರಿಸುವದಕ್ಕೂ ನಿಜ. ಗಾಂಧೀಜೀಯವರು ರಾಜರುಗಳಿಗೆ ಸಮಯಕೊಟ್ಟು ಕೆಲಸಮಾಡಿಸಲಾಗುವದೋ ನೋಡುವರು; ಅದಾಗದೆ ಹೋದಲ್ಲಿ ರಾಜರು ಕರ್ತವ್ಯಪಾಲಿಸಲೇಬೇಕಾಗಿ ಬರುವ ಕಾಲವನ್ನೂ ತಂದೊಡ್ಡುವರು. ಅಂತೂ ಆಶ್ರಿತ ರಾಜರುಗಳಂದ ಪ್ರಜೆಗಳಾದ ಋಣವು ಸಂದಾಯವಾಗಬೇಕೋ ಆ ಸಂದಾಯದ ಕಾಲವು ಬಂದೇ ತೀರುವದು. ಇದನ್ನು ಖಂಡಿತವೆಂದಿಟ್ಟುಕೊಂಡು ಸಂಸ್ಥಾನಿಕರು ತಾವಾಗಿ ಪ್ರಜಾ ಜವಾಬ್ದಾರಿ ಸರಕಾರಗಳನ್ನು ಸ್ಥಾಪಿಸಿ, ತಮ್ಮ ಕರ್ತವ್ಯ ಪಾಲನೆಯ ಹಕ್ಕನ್ನು ಪರಿಸ್ಥಿತಿಯು ಕಸಗೊಂಡು ಆದಾಗಿ ಮಾಡಿತೆಂಬ ಅಪವಾದ ತಪ್ಪದಂತೆ, ತಾವಾಗಿ ನ್ಯಾಯ ಕಾಪಾಡಿ ಕೀರ್ತಿಭಾಜನರಾಗುವದು ಉತ್ತಮ.

ನಮ್ಮ ಹೊಸ ಪ್ರತಿನಿಧಿಗಳು

ಮಂಗಳೂರು ಮಿಶ್ಯನ್ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ. ವಿ. ಗಣಪತಿ ಶಾಸ್ತ್ರಿಗಳು ನವಯುಗದ ಪ್ರತಿನಿಧಿಗಳಾಗಿ ಅಧಿಕಾರ ಪಡೆದಿರುತ್ತಾರೆ. ಚಂದಾದಾರರನ್ನು ಸೇರಿಸುವುದು, ಜಾಹೀರಾತುಗಳನ್ನು ಸಂಗ್ರಹಿಸುವುದು, ಏಜಂಟರನ್ನು ನೇಮಿಸುವುದು, ಇವಕ್ಕೆ ಸಂಬಂಧಿಸಿದ ಹಣವನ್ನು ವಸೂಲು ಪಡೆಯುವುದು ಈ ಕೆಲಸಗಳಿಗೆ ಅವರು ಅಧಿಕೃತರಿದ್ದಾರೆ. ಇದೇ ತಾ. ೨೦ ರಿಂದ ಅವರು ಸಮಗ್ರ ಕರ್ನಾಟಕದಲ್ಲಿ ಸಂಚಾರಮಾಡಲಿರುವರು. ಕನ್ನಡಿಗರೆಲ್ಲರೂ ಅವರಿಗೆ ಉದಾರ ಸಹಕಾರವನ್ನೀಯಬೇಕಾಗಿ ವಿನಂತಿಸೋಣಾಗುತ್ತದೆ.

20-4-39

ಮೆನೇಜರ್
ನವಯುಗ

ರಾಜಕೋಟೆಯ ಸುಧಾರಣಾ ಸಮಿತಿ

ಅಲ್ಪಸಂಖ್ಯಾಕ ಸಮಾಜಗಳನ್ನು ಎತ್ತಿಕಟ್ಟಿ ದರ್ಬಾರ್ ವೀರವಲ್ಲರೇ ಮೊದಲಾದವರು ಸುಧಾರಣಾ ಸಮಿತಿಯ ರಚನೆಯಲ್ಲಿ ಎಡರುಗಳನ್ನು ತಂದೊಡ್ಡಿದರೂ ಮ. ಗಾಂಧಿಯವರು ಅವುಗಳನ್ನೆಲ್ಲಾ ಜಯಶೀಲವಾಗಿ ಕಡೆಹಾಯ್ದು ಸರಕಾರದ ಪರವಾಗಿ ಏಳು ಮಂದಿ ಮೆಂಬರರ ಹೆಸರನ್ನೂ ಸೂಚಿಸಿರುವರು. ಈ ಸಂದರ್ಭದಲ್ಲಿ ಕೆಲವು ಸಮಾಜಗಳವರು ತೋರಿದ ಜಾತ್ಯಂಧತೆ ಶೋಚನೀಯವಿದೆ. ಗಾಂಧಿಯವರಂದಿರುವಂತೆ ಯಾವುದಾದರೊಂದು ಜಾತಿಯವನು, ಆ ಜಾತಿಯ ಹಿತಸಾಧನೆಗೂ ಸಾಕಾಗದಷ್ಟು ಕಡಿಮೆ ಶಕ್ತಿ, ಅಲ್ಪಜ್ಞಾನದಿಂದಿರಬಹುದು. ಅಂಥವರಿಂದ ಸಮಾಜಕ್ಕೆ ಕೆಡುಕೇ ಹೊರತು ಹಿತವಿಲ್ಲ. ಕೇವಲ ಭಾವನಾಮಯ ಜಾತಿತ್ವಕ್ಕಾಗಿ ಎಲ್ಲರ ಹಿತವನ್ನು ಬಲಿಕೊಡದೆ ದೇಶಭಕ್ತಿಪ್ರೇರಿತರಾದವರನ್ನೇ ಮೆಂಬರರನ್ನಾಗಿ ನೇಮಿಸಿ ಗಾಂಧಿಜಿಯವರು ನ್ಯಾಯಪಾಲಿಸಿರುವರು. ರಾಜಕೋಟೆಯ ಸುಧಾರಣಾ ಸಮಿತಿಯು ಜಯಶೀಲವಾಗಿ ಕಾರ್ಯ ನಿರ್ವಹಿಸಿ ಪ್ರಜಾಪ್ರಭುತ್ವಸ್ಥಾಪನೆಯಲ್ಲಿ ಮಿಕ್ಕ ಸಂಸ್ಥಾನಗಳಿಗೆ ಮಾದರಿಯಾಗುವದೆಂದು ಹಾರೈಸುತ್ತೇವೆ.

ಶೋಚನೀಯ ನಿಧನ.

ಮಿಸೆಸ್ ಬಿ. ಟಿ. ಜಿ. ಕೃಷ್ಣ

ಕರ್ನಾಟಕದ ಮಹಿಳಾವರ್ಗದಲ್ಲಿ ಪ್ರಸಿದ್ಧ ಕತೆಗಾರ್ತಿಯಾದ ಶ್ರೀಮತಿ ಗೌರಮ್ಮ, ವಿ.ಟಿ.ಕೊಡಪ್ಪ ಕೊಡಗು (ಮಿಸೆಸ್ ಬಿ. ಟಿ. ಜಿ. ಕೃಷ್ಣ) ಅವರು ತಾ 14-4-39ರಲ್ಲಿ ತಮ್ಮ ಊರಿನಲ್ಲಿ ಮನೆ ಸಮೀಪದ ಹೊಳೆಯಲ್ಲಿ ಈಜುತ್ತಿದ್ದಾಗ ಅಕಸ್ಮಾತ್ತಾಗಿ ಮುಳುಗಿ ಮೃತಪಟ್ಟರೆಂದು ತಿಳಿದು ವಿಷಾದಿಸುತ್ತೇವೆ. ಇವರು ಕೇವಲ 27 ವರುಷ ಪ್ರಾಯದ ತರುಣಿ. ಇಷ್ಟು ಚಿಕ್ಕ ವಯಸ್ಸಿನಲ್ಲೇ ಕನ್ನಡ ಸಾಹಿತ್ಯದ ಸೇವೆಯಲ್ಲಿ ಉತ್ಸಾಹದಿಂದ ನಿರತರಾಗಿ ಹೃದಯಂಗಮವಾದ ಅನೇಕ ಚಿಕ್ಕ ಕತೆಗಳನ್ನು ಬರೆದು ಅಖಿಲ ಕರ್ನಾಟಕದಲ್ಲಿ ಪ್ರಸಿದ್ಧರಾಗಿದ್ದಾರೆ. ಭಗವಂತನು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ನವಯುಗ ಸ್ಪರ್ಧೆ ೧

ಈ ವಾರ ಪ್ರಕಟವಾಗಬೇಕಾಗಿದ್ದ ಇದರ ಉತ್ತರವು ಸ್ಥಳಾಭಾವದಿಂದ ಬರುವವಾರ ಪ್ರಕಟಿಸಲ್ಪಡುವುದು.

ಸಂ. ನ.

ರಾಜಕೋಟೆ ಸುಧಾರಣಾ ಸಮಿತಿ
ಮಂಗಳೂರಲ್ಲಿ ವಿದ್ಯಾರ್ಥಿಗಳ ಜಿಲ್ಲಾ ಪರಿಷತ್ತು.
ಇಂಡಿಯಾ ಆಕ್ಟಿಗೆ ತಿದ್ದುಪಡಿ ಬಂದರೆ ಬಿಕ್ಕಟ್ಟುಂಟಾಗಬಹುದು.

ರಾಜಕೋಟೆ ಸುಧಾರಣಾ ಸಮಿತಿ
ಮಹಾತ್ಮಾ ಗಾಂಧಿಯವರ ಹೇಳಿಕೆ

ಮುಸ್ಲಿಮರೇ ಮೊದಲಾದ ಅಲ್ಪಸಂಖ್ಯಾಕರೊಡನೆ ಮಾಡಲು ಪ್ರಯತ್ನಿಸಿದ ಒಪ್ಪಂದವು ನಿಷ್ಫಲವಾದ ಮೇಲೆ ಮ. ಗಾಂಧಿಯವರು ಪ್ರಜಾಪರಿಷತ್ತಿನ ಏಳು ಮಂದಿ ಪ್ರತಿನಿಧಿಗಳ ಹೆಸರನ್ನು ಸೂಚಿಸಿ ಥಾಕೋರ್ ಸಾಹೇಬರಿಗೆ ಪತ್ರ ಬರೆದಿರುವರು. ಆ ಕುರಿತು ತನ್ನದೊಂದು ಹೇಳಿಕೆಯಲ್ಲಿ ಗಾಂಧಿಯವರು ಹೀಗೆಂದಿರುವರು 'ಪಟೇಲರ ಪರವಾಗಿ ಸಮಿತಿ ಮೆಂಬರರ ಹೆಸರನ್ನು ಸೂಚಿಸಲು ನನಗೆ ಇಷ್ಟು ಬಂದು ವಿಳಂಬವಾಯಿತು. ಕಾರಣ ಥಾಕೋರ್ ಸಾಹೇಬರು ಮೊದಲೇ ಸೂಚಿಸಿದ್ದ ನಾಲ್ಕು ಮಂದಿಯ ಹೆಸರುಗಳನ್ನೂ ಸೇರಿಸಿಕೊಳ್ಳಬೇಕೆಂದು ನನಗೂ ಸರ್ದಾರರಿಗೂ ಆತುರವಿತ್ತು. ಗ್ವಾಲಿಯರ್ ಎವಾರ್ಡಿನಂತೆ ಥಾಕೋರ್ ಸಾಹೇಬ ಸೂಚಿತ ಹೆಸರುಗಳೆಲ್ಲಾ ರದ್ದಾಗುವವು. ಆದರೆ ಪಟೇಲರೊಡನೆ ಸಹಕರಿಸಿ ನಡೆದು ಆ ಹೆಸರುಗಳುಳಿಯುವಂತೆ ಮಾಡಲು ರಾಜರಿಗೆ ಸಾಧ್ಯವಿತ್ತು. ನಾನು ರಾಜಕೋಟೆಕ್ಕೆ ಬಂದವನೇ ಆ ಕುರಿತು ರಾಜರಿಗೆ ಬರೆಕೊಂಡಿದ್ದೆ. ರಾಜರದಕ್ಕೊಪ್ಪದಿದ್ದುದು ವ್ಯಸನಕರ. ಅದು ಯಾವ ಕಾರಣದಿಂದ ತಿರಸ್ಕರಿಸಲ್ಪಟ್ಟಿತೆಂಬುದು ರಾಜರೇ ಪ್ರಕಟಿಸಿರುವ ಅವರ ಉತ್ತರದಿಂದ ಸಾರ್ವಜನಿಕರಿಗೆ ತಿಳಿದೇ ಇದೆ. ಎವಾರ್ಡಿನಂತೆ ಸಮಿತಿ ಮೆಂಬರರ ಸಂಖ್ಯೆಯನ್ನು ಹೆಚ್ಚಿಸುವ ಯಾ ಕಡಿಮೆಮಾಡುವ ಅಧಿಕಾರವು ರಾಜರಿಗಿಲ್ಲ.

ಹಂಚಿಕೆ ನಿಷ್ಫಲವಾಯಿತು

ಕೊನೆಯ ಪಕ್ಷ ಇಬ್ಬರು ಮುಸ್ಲೀಮ್ ಮತ್ತು ಒಬ್ಬ ಭಯಾತ್ ಪ್ರತಿನಿಧಿಗಳನ್ನು ಆ ಏಳರೊಳಗೆ ಸೇರಿಸಿಕೊಳ್ಳುವ ಯೋಚನೆಯನ್ನು ಬಿಡಬೇಕಾಯಿತು. ಸರದಾರ್ ಪಟೇಲರ ಇತರ ಮೆಂಬರರೊಡನೆ ಒಂದಾಗಿ ನಡೆಯುವ ಶರ್ತ ವಿನಾ ಅವರನ್ನು ಸೇರಿಸಿಕೊಳ್ಳಲು ಸಾಧ್ಯವಿರಲಿಲ್ಲ. ಈ ಶರ್ತವು ಪೂರೈಸದೆ ಅವರನ್ನೊಪ್ಪಿಕೊಂಡಿದ್ದಲ್ಲಿ ಯಾವ ಉದ್ದೇಶದಿಂದ ಪರಿಷತ್ತಿನ ಏಳು ಮಂದಿ ಪ್ರತಿನಿಧಿಗಳಾಗಿ ಇಷ್ಟೆಲ್ಲಾ ಕೆಲಸವಾಗಿತ್ತೋ ಆ ಉದ್ದೇಶವೇ ಹಾಳಾಗಿ ಹೋಗಿತ್ತು. ನಾನೂ ಸರ್ದಾರರೂ ಈ ಕುರಿತು ಮಾನವ ಸಾಧ್ಯ ಪ್ರಯತ್ನವನ್ನೆಲ್ಲಾ ಮಾಡಿ ಸಫಲವಾಗದೆ ಹೋದುದರಿಂದ, ಥಾಕೋರ್ ಸಾಹೇಬರ ಆ ನಾಲ್ಕು ಹೆಸರುಗಳನ್ನೂ ಈಗ ರದ್ದು ಮಾಡಿದ್ದೇವೆಂದು ಸಾರ್ವಜನಿಕರು ತಿಳಿಯಬೇಕಾಗಿದೆ. ಇದರಿಂದ ಆ ನಾಲ್ಕು ಜನರ ಪರವಾದ ಹಿತಸಂಬಂಧಗಳನ್ನಾಗಲೀ ಅಂತಹ ಬೇರೆ ವಿಷಯಗಳನ್ನಾಗಲೀ ಸಮಿತಿಯು ಗಮನಕ್ಕೆ ತರಲಾರದೆಂದು ಯಾರೂ ಭಾವಿಸಬಾರದು" ಎನ್ನುತ್ತಾ ಗಾಂಧಿಯವರು ಪ್ರತಿಯೊಂದು ಭಾವನಾಮಯ ಪ್ರತ್ಯೇಕತೆಗಾಗಿ ಪ್ರತ್ಯೇಕ ಪ್ರಾತಿನಿಧ್ಯವುಳ್ಳ ಯಾವ ಸಮಿತಿಯೂ ಲೋಕದಲ್ಲಿಲ್ಲವೆಂದೂ, ಎಲ್ಲಾ ರೀತಿನೀತಿಗಳ ಪ್ರತಿನಿಧಿಯಾಗಿ ಪ್ರತಿಯೊಬ್ಬ ಸದಸ್ಯನೂ ವರ್ತಿಸುವವೇ ಪ್ರಜಾಪ್ರಭುತ್ವದ ತತ್ವವೆಂದೂ ತಿಳಿಸಿರುವರು.

ಮೆಂಬರರು ಎಲ್ಲರ ಹಿತಸಾಧಿಸುವರು

ಸರ್ದಾರ್ ಪಟೇಲರಿಂದ ಸೂಚಿಸಲ್ಪಟ್ಟ ಏಳು ಮಂದಿಯೂ ಒಮ್ಮನಸ್ಸಿನಿಂದ ರಾಜಕೋಟೆಯ ಜನರ ಎಲ್ಲಾ ವಿಭಾಗಗಳ ಹಿತರಕ್ಷಣೆಗಾಗಿ ಒಗ್ಗಟ್ಟಿನಿಂದ ವರ್ತಿಸುವ ಪ್ರತಿಜ್ಞೆಗೊಳಪಟ್ಟಿರುವರೆಂದು, ಗಾಂಧಿಯವರು ಹೇಳಿ ಭಯಾತರಿಗೆ ಕೊಟ್ಟ ಆಶ್ವಾಸನೆಗನುಗುಣವಾಗಿಯೇ ತಾನು ನಡಕೊಂಡಿರುವೆನೆಂದು ಸಕಾರಣವಾಗಿ ವಿವರಿಸಿ, ತಾನು ಆದಿಯಿಂದಲೂ ಹರಿಜನರ ಹಿತಚಿಂತಕನೆಂದು ತಿಳಿಸಿ ಸರದಾರ ಪಟೇಲರಿಂದ ಸೂಚಿಸಲ್ಪಟ್ಟ ಮೆಂಬರರು ಸರ್ವರ ಹಿತವನ್ನೂ ಸಾಧಿಸುವರೆಂಬ ಆಶ್ವಾಸನೆಯಿತ್ತಿರುವರು.

ಇಂಡಿಯಾ ಆಕ್ಟಿಗೆ ತಿದ್ದುಪಡಿ ಬಂದರೆ ಬಿಕ್ಕಟ್ಟುಂಟಾಗಬಹುದು

ಅಲ್ಲಹಾಬಾದಿನ ಸಾರ್ವಜನಿಕ ಸಭೆಯೊಂದರಲ್ಲಿ ಪಂಡಿತ ಜವಾಹಿರಲಾಲರು, ಯುದ್ಧಕಾಲದಲ್ಲಿ ಸಹಾಯವಾಗುವಂತೆ ಕೇಂದ್ರ ಸರಕಾರಕ್ಕೆ ಹೆಚ್ಚಿನ ಅಧಿಕಾರ ನೀಯುವ ತಿದ್ದುಪಡಿ ಸೂಚನೆ ಬರಲಿರುವದೆಂದೂ ಆ ಸಮಯದಲ್ಲಿ ಅದರ ವಿರೋಧವಾಗಿ ಪ್ರಾಂತ್ಯಗಳಲ್ಲಿ ಬಿಕ್ಕಟ್ಟನ್ನು ನಿರ್ಮಿಸಬೇಕಾಗುವದೆಂದೂ ಭಾಷಣವಿತ್ತರು.

ಕೊಲ್ಲಾಪುರ ಸಂಸ್ಥಾನದ ಪ್ರಜಾಪರಿಷತ್ತು

ಇದೇ ತಾ. 15ರಲ್ಲಿ ಡಾ! ಪಟ್ಟಾಭಿಯವರ ಅಧ್ಯಕ್ಷತೆಯಲ್ಲಿ ಕಪ್ಪಾಡ್ ಎಂಬಲ್ಲಿ ನಡೆಯುತ್ತಿದೆ. 'ವೈಸರಾಯರ ಹಿತವಾದಕ್ಕೆ ಗಮನನೀಯಲು ಆಶ್ರಿತರಾಜರಿಗೆ ಹುಸು ಬಿಡುವನ್ನು ಕೊಡಬೇಕು; ಪೂರ್ಣ ಜವಾಬ್ದಾರೀ ರಾಜ್ಯಭಾರವೇ ಆಶ್ರಿತ ರಾಜ್ಯಗಳಿಗೆ ಬೇಕು' ಎಂದು ಅಧ್ಯಕ್ಷರು ಭಾಷಣವಿತ್ತರು.

ಮೈಸೂರು ಕಾಂಗ್ರೆಸ್ ಸಮ್ಮೇಲನ

ಮೈಸೂರು ಕಾಂಗ್ರೆಸ್ಸಿನ ದ್ವಿತೀಯ ಸಮ್ಮೇಲನವು ವಿದುರಾಶ್ವತ್ಥದಲ್ಲಿ ತಾ 15ರಲ್ಲಿ ಪ್ರಾರಂಭವಾಗಿದೆ. ಶ್ರೀ ಎಚ್. ಸಿಂದಾಸಪ್ಪನವರು ಅಧ್ಯಕ್ಷರು ಅವರು ತನ್ನ ಅಧ್ಯಕ್ಷ ಭಾಷಣದಲ್ಲಿ ಮೈಸೂರು ಸರಕಾರವನ್ನು ಟೀಕಿಸಿ ಮೈಸೂರು ಸಂಸ್ಥಾನವು ಜವಾಬ್ದಾರೀ ರಾಜ್ಯಭಾರ ವಹಿಸಲು ಯೋಗ್ಯತೆಯುಳ್ಳದ್ದಾಗಿದೆ ಎಂದರು.

ಮದ್ರಾಸಿನ ಕರಾವಳಿಯಲ್ಲಿ ಬಿರುಗಾಳಿ ಮಳೆ

ಮದ್ರಾಸಿನ ನಾಗಪಟ್ಟಣಮ್, ಮನ್ನಾರಗುಡಿ, ಚಿದಂಬರಮ್ ಮೊದಲಾದ ಪಟ್ಟಣಗಳಲ್ಲಿ ತಾ. 13.14ರಲ್ಲಿ ಭೀಕರ ಬಿರುಗಾಳಿ ಬಂದು ಅತಿರೇಕ ಮಳೆ ಸುರಿದಿದೆ. ಮನ್ನಾರಗುಡಿಯಲ್ಲಿ ಎರಡು ದಿನಗಳಲ್ಲಿ 12¼ ಇಂಚು ಮಳೆ ಬಿದ್ದಿದೆ. ದನಕರು ಮತ್ತು ಸೊತ್ತುಗಳಿಗೆ ಹೆಚ್ಚಿನ ನಷ್ಟವಾಗಿರುವದಂತೆ. ತಂಜಾವೂರು ಮತ್ತು ದಕ್ಷಿಣ ಆರ್ಕಾಟು ಜಿಲ್ಲೆಗಳಲ್ಲಿಯೂ ವಿಪರೀತ ಮಳೆಯಾಗಿದೆ.

ಕೇಂದ್ರ ಎಸೆಂಬ್ಲಿಯಲ್ಲಿ 'ಟೇರಿಫ್ ಬಿಲ್ಲಿ'ನ ನಿರಾಕರಣೆ

ಇಂಡೋ-ಬ್ರಿಟಿಷ್ ವ್ಯಾಪಾರೀ ಒಪ್ಪಂದಕ್ಕನುಸಾರವಾದ 'ಟೇರಿಫ್ ಬಿಲ್ಲು' ವೈಸರಾಯರ ಶಿಫಾರಸಿನೊಡನೆ ಮಂಜೂರಾತಿಗಾಗಿ ಕೇಂದ್ರ ಎಸೆಂಬ್ಲಿಯ ಮುಂದೆ ಬಂದಾಗ ಕಾಂಗ್ರೆಸ್ ಪಕ್ಷವದನ್ನು ತೀವ್ರವಾಗಿ ವಿರೋಧಿಸಿತು. ಶ್ರೀ. ಭುಲಾಭಾಯಿ ದೇಸಾಯಿಯವರು ಆ ಸಂದರ್ಭದಲ್ಲಿ "ನೀವು ಅನುಕೂಲ ಪರಿಸ್ಥಿತಿ ನೋಡಿ ಈ ದೇಶದೊಳಗೆ ಸಾಮಾನುಗಳನ್ನು ಹೊಗಿಸಬಲ್ಲಿರಿ; ಆದರೆ ಅದರ ಮಾರಾಟ ನಡೆಸುವ ಕೆಲಸವು ಅನ್ಯಥಾ ಹೊಂದಿಕೊಂಡುಂಟು." ಎಂದು ಎಚ್ಚರಿಸಿದರು. ವೋಟಿಗೆ ಹಾಕಲ್ಪಟ್ಟಾಗ 37 ಅನುಕೂಲ 50 ಪ್ರತಿಕೂಲಮತ ದೊರೆತು ಮಸೂದೆ ಬಿದ್ದುಹೋಯಿತು. ಮುಸ್ಲಿಂ ಲೀಗಿನವರು ತಟಸ್ಥರಾಗಿದ್ದರು.

ಕಲ್ಕತ್ತಾದಲ್ಲಿ ಎ. ಐ. ಸಿ. ಸಿ. ಸಭೆ

ಕಲ್ಕತ್ತಾದಲ್ಲಿ ಸೇರಲಿರುವ ಅಖಿಲ ಭಾರತ ಕಾಂಗ್ರೆಸ್ ಸಭೆಯಲ್ಲಿ ಪ್ರೇಕ್ಷಕರಿಗೆ ಪ್ರವೇಶವಿತ್ತಲ್ಲಿ ಗಲಭೆಯೇಳಬಹುದೆಂದೂ, ಸದ್ಯಸ್ಥಿತಿಯಲ್ಲಿ ಕಲ್ಕತ್ತದಲ್ಲಿ ಸಭೆ ಕರೆದಿರುವದು ಅಪಾಯಕರವೆಂದೂ, ಕೆಲವರು ಸೂಚಿಸಿರುವುದನ್ನು ಖಂಡಿಸಿ ರಾಷ್ಟ್ರಪತಿ ಭೋಸರು, ಬಂಗಾಳವು ಅತಿಥಿಗಳನ್ನೆಲ್ಲಾ ಗೌರವಪೂರ್ವಕವಾಗಿ ಸ್ವಾಗತೀಕರಿಸುವದೆಂಬ ಹೇಳಿಕೆಯನ್ನಿತ್ತಿರುವರು. ಪ್ರಮುಖ ಧುರೀಣರನ್ನು ನಾಗರಿಕರು ವಿಜೃಂಭಣೆಯಿಂದ ಸ್ವಾಗತೀಕರಿಸಬೇಕೆಂದು ಪ್ರಾಂತಿಕ ಕಮಿಟಿಯ ಕಾರ್ಯದರ್ಶಿಗಳು ವಿನಂತಿಸಿಕೊಂಡಿರುವರು. ಪ್ರೇಕ್ಷಕರಿಗೆ ರೂ. ೫ರಿಂದ 100ರ ವರೆಗಿನ ಟಿಕೇಟುಗಳನ್ನಿಡುವ ನಿರ್ಧಾರವಾಗಿದೆ.

ತೆಂಕಾಸಿಯಲ್ಲಿ ಬೋಂಬು

ತೆಂಕಾಸಿಯ ಊರೊಂದರಲ್ಲಿ ತಾ. 14ನೇ ರಾತ್ರಿ ಸ್ಥಳೀಕ ಡಾಕ್ಟರರು ಮತ್ತು ಶಿರಸ್ತೇದಾರರು ಮಾರ್ಗದ ಬದಿಯಲ್ಲಿ ಮಾತನಾಡುತ್ತಾ ನಿಂತಾಗ ಪಕ್ಕದಲ್ಲೇ ಬೋಂಬೊಂದು ಬಿದ್ದು ಸಿಡಿಯಿತು. ಬೋಂಬಿಟ್ಟವನು ಬಹು ಚಮತ್ಕಾರದಿಂದ ಪರಾರಿಯಾಗಿದ್ದಾನೆ. ಡಿಪ್ಯುಟಿ ಸುಪರಿಂಟೆಂಡೆಂಟರು ಶೋಧನೆಯಲ್ಲಿದ್ದಾರೆ.

ಮಂಗಳೂರಲ್ಲಿ ವಿದ್ಯಾರ್ಥಿಗಳ ಜಿಲ್ಲಾ ಪರಿಷತ್ತು

ಕಳೆದ ತಾ. ೧೪ನೇ ಸಾಯಂ. ೬ ಘಂಟೆಗೆ ದ. ಕ. ವಿದ್ಯಾರ್ಥಿಗಳ ಜಿಲ್ಲಾ ಪರಿಷತ್ತು ಗಣಪತಿ ಹೈಸ್ಕೂಲಿನಲ್ಲಿ ಜರಗಿತು. ನಮ್ಮ ಜಿಲ್ಲೆಯವರಾದ ಮತ್ತು ಪ್ರಕೃತ ಮುಂಬಯಿಯಲ್ಲಿ ಅಡ್ವೋಕೇಟರಾದ ಮಿ. ಜೋಕಿಂ ಆಳ್ವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ! ಕೆ. ಕೆ. ಪೂವಯ್ಯನವರು ಅಧ್ಯಕ್ಷರನ್ನೂ ಅವರ ಪತ್ನಿಯವರನ್ನೂ ಮತ್ತು ಪ್ರತಿನಿಧಿಗಳನ್ನೂ ಸ್ವಾಗತೀಕರಿಸಿ ಭಾಷಣಮಾಡಿದರು. ವಿದ್ಯಾರ್ಥಿಗಳ ಫೆಡರೇಶನಿನ ಅಧ್ಯಕ್ಷರ ಗೈರು ಹಾಜರಿಯಲ್ಲಿ ಶ್ರೀ! ಕೆ. ಆರ್. ಕಾರಂತರು ಕೆಲಮಾತುಗಳನ್ನಾಡಿದರು. ಅದಾದ ಮೇಲೆ ಶ್ರೀಮತಿ ವಯಲೆಟ್ ಆಳ್ವರು ಪರಿಷತ್ತನ್ನು ಉದ್ಘಾಟನೆ ಮಾಡುತ್ತಾ ವಿದ್ಯಾರ್ಥಿಗಳು ಬರೇ ಓದು ಬರಹ ಕಲಿತ ಉದ್ಯೋಗ ಹುಡುಕುವರಾಗಬಾರದೆಂದೂ, ತಮ್ಮ ಸುತ್ತಲೂ ನಡೆಯುವ ಘಟನೆಗಳ ವಿಷಯದಲ್ಲಿಯೂ ಆಸಕ್ತಿ ತೋರಿಸಬೇಕೆಂದೂ, ಯುವಕರು ದೇಶದಲ್ಲಿ ನವಚೇತನವನ್ನುಂಟು ಮಾಡಬೇಕೆಂದೂ ಹೇಳಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಸ್ವಾಗತ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ. ಎ. ಎಸ್. ರಾಯರು ರಾಷ್ಟ್ರಪತಿ ಸುಭಾಷಬೋಸ್, ಶ್ರೀ! ಗಳಾದ ಎಸ್. ಶ್ರೀನಿವಾಸ ಅಯ್ಯಂಗಾರ್; ಮಾನ್ಯ ಬಿ. ಜಿ. ಖೇರ್; ನರೀಮಾನ್, ಡಾ. ಕೆ. ವಿಟ್ಠಲ ಶೆಟ್ಟಿಯವರೇ ಮೊದಲಾದವರು ಕಳುಹಿಸಿದ್ದ ಸಂದೇಶಗಳನ್ನೋದಿದರು. ಅನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳ ಸಂಘಗಳು ಅಗತ್ಯ, ಆದರೆ ಆ ಸಂಘಗಳಲ್ಲಿ ಜಾತೀಯತೆಯ ಕಳಂಕ ಬರಕೂಡದು. ವಿದ್ಯಾರ್ಥಿಗಳಿಗೆ ಯಾವ ಸಂಗತಿಯನ್ನು ಚರ್ಚಿಸುವುದಕ್ಕೂ ಹಕ್ಕಿರಬೇಕು. ವಿದ್ಯಾರ್ಥಿಗಳಿಗೆ ತಮಗೆ ಸಂಬಂಧಪಟ್ಟ ವಿಷಯಗಳಲ್ಲಿ ಅನುಭವ ಕೊಡುವ ಪಠ್ಯಬೇಕು. ಉದ್ಯೋಗವನ್ನು ಮಾತ್ರವೇ ಹಮ್ಮ ಗುರಿಯೆಂದಿರಬಾರದು. ವಿದ್ಯಾರ್ಥಿಗಳು ಮುಷ್ಕರವನ್ನು ಹೂಡಬಾರದು, ಮುಷ್ಕರವು ಕೊನೆಯ ಆಯುಧವಾಗಿರಬೇಕು. ವಿದ್ಯಾಪ್ರಸಾರದಲ್ಲಿ ವಿದ್ಯಾರ್ಥಿಗಳು ಕೆಲಸ ಮಾಡಬೇಕು. ಹಿಂದುಸ್ಥಾನಿಯನ್ನು ಕಲಿಯಬೇಕು. ಶಿಸ್ತಿನಿಂದ ನಡೆಯಲನುಕೂಲವಾಗುವಂತೆ ವಿದ್ಯಾರ್ಥಿಗಳೇ ದಳವನ್ನು ಏರ್ಪಡಿಸಬೇಕು, ವಿದ್ಯಾರ್ಥಿಗಳೇ ತಮ್ಮ ಹಾಸ್ಟೆಲುಗಳನ್ನು ನಡಿಸುವಂತಾಗಬೇಕು." ಎಂದರು.

ಆಮೇಲೆ ವಿಷಯ ನಿಯಾಮಕ ಮಂಡಲಿಯ ಸಭೆ, ಸಂಗೀತ ಸ್ಪರ್ಧೆಗಳು ನಡೆದುವು. ಮರುದಿನ ಕೆಲವು ಮುಖ್ಯ ಠರಾವುಗಳು ಮಂಜೂರಾಗಿ ಅಧ್ಯಕ್ಷರ ಉಪಸಂಹಾರ ಭಾಷಣದೊಂದಿಗೆ ಪರಿಷತ್ತು ಯಶಸ್ವಿಯಾಗಿ ಕೊನೆಗೊಂಡಿತು.

ನಮ್ಮ ಉಪಸಂಪಾದಕರ ಸಂಚಾರ

ನಮ್ಮ ಉಪಸಂಪಾದಕರಾದ ಶ್ರೀ ಎನ್. ಎಸ್. ಶೆಟ್ಟರು ಕಳೆದ ವಾರದಲ್ಲಿ ಬೊಂಬಾಯಿಯಿಂದ ಪುನಃ ಮದ್ರಾಸಿಗೆ ಬಂದಿರುವರು. ಅಲ್ಲಿ ಅನೇಕ ಮದ್ರಾಸ್ ಕನ್ನಡಿಗರನ್ನು ನೋಡಲಿರುವರು. ಎಲ್ಲರೂ ಅವರಿಗೆ ಸಹಕಾರವನ್ನೂ ಪ್ರೋತ್ಸಾಹನವನ್ನೂ ಕೊಡಬೇಕಾಗಿ ಈ ಮೂಲಕ ಅಪೇಕ್ಷಿಸಲಾಗುತ್ತದೆ. ಈ ವರೆಗೆ 'ನವಯುಗ'ಕ್ಕೆ ಚಂದಾದಾರರಾಗದವರು ಚಂದಾದಾರರಾಗಿ ಸೇರಿಯೂ ಜಾಹೀರಾತುದಾರರು ಜಾಹಿರಾತುಗಳನ್ನೂ ಕೊಟ್ಟೂ ಪ್ರೋತ್ಸಾಹಿಸಬೇಕಾಗಿ ವಿನಂತಿ. **ಮೆನೇಜರ್**

ಯುರೋಪು ರಾಜಕೀಯವಾತಾವರಣದ ಅಲ್ಲೋಲಕಲ್ಲೋಲ

— ಶಾಂತಿ ಅಥವಾ ಯುದ್ಧವು ಸಮೀಪಿಸುತ್ತಿರುವ ಸುಸ್ಪಷ್ಟ ಕುರುಹುಗಳು! —

ಹಿಟ್ಲರ್ ಮುಸಲಿನಿಗಳಿಗೆ ಅಧ್ಯಕ್ಷ ರೂಸ್‌ವೆಲ್ಟರ

ಶಾಂತಿಯಾಚನಾ ಸಂದೇಶ

ಪ್ರೆಸಿಡೆಂಟ್ ರೂಸ್‌ವೆಲ್ಟರ ಸಂದೇಶ

ಅಮೇರಿಕದ ಅಧ್ಯಕ್ಷ ಮಿ. ರೂಸ್‌ವೆಲ್ಟರು ಹಿಟ್ಲರ್ ಮುಸಲಿನಿಗಳನ್ನು ಖಾಸಗಿಯಾಗಿ ತಂತೀಮೂಲಕ ವಿನಂತಿಸಿಕೊಂಡು, "ನಿಮ್ಮ ಸೈನ್ಯಗಳು ಯಾವುದಾದರೊಂದು ಸ್ವತಂತ್ರ ರಾಷ್ಟ್ರದ ಸ್ಥಳವನ್ನಾಕ್ರಮಿಸುವದಿಲ್ಲವೆಂಬ ಆಶ್ವಾಸನೆಯಿಯಲು ಇಷ್ಟಪಡುವಿರೋ?" ಎಂದು ಕೇಳಿರುವರು. "ಅಂಥಾ ಆಶ್ವಾಸನೆಯು ತಾತ್ಕಾಲಿಕವಾಗಿದ್ದರೆ ಸಾಲದು. ಶಾಂತವಾಗಿ ಕಾರ್ಯ ಸಾಗಿಸಲನುಕೂಲವಾಗುವಂತೆ ಕೊನೆಯ ಪಕ್ಷ ಹತ್ತು ವರುಷಗಳ ಗ್ಯಾರಂಟಿಯನ್ನಾದರೂ ನೀವು ಕೊಡಬೇಕು. ನೀವು ಈ ಆಶ್ವಾಸನೆಯನ್ನು ಕೊಟ್ಟರೆ ನಾನು ಮಿಕ್ಕ ರಾಷ್ಟ್ರಗಳನ್ನೂ ಇದೇ ರೀತಿ ಕೇಳಿಕೊಳ್ಳಲನುಕೂಲವಾಗುವದು" ಎಂದು ಅಧ್ಯಕ್ಷರು ತನ್ನ ಟೆಲಿಗ್ರಾಮಿನಲ್ಲಿ ತಿಳಿಸಿರುವರು. ಅಮೇರಿಕವು ಇಂದಿನ ವಿವಾದಗಳಲ್ಲಿ ಕೂಡಲೇ ಭಾಗವಹಿಸುವ ಅಗತ್ಯವಿಲ್ಲವಾದರೂ ತಾನು ಕೇವಲ ಸ್ನೇಹಭಾವದಿಂದ ಲೋಕಶಾಂತಿಗಾಗಿ ಕೈಯಿಕ್ಕಿರುವೆನೆಂದೂ ಅಮೇರಿಕವು ಸ್ವಾರ್ಥ, ದೌರ್ಬಲ್ಯ ಯಾ ಹೆದರಿಕೆಯಿಂದ ಹೀಗೆ ಮಾತೊಡ್ಡದೆ ತನ್ನ ಶಕ್ತಿಯ ಬಲದಿಂದ ನ್ಯಾಯಕ್ಕಾಗಿ ಮಾತ್ರ ಮಾಡಿಸುತ್ತಿರುವದೆಂದೂ ಸೂಚಿಸಿ, ಈಗ ನಡೆಯುತ್ತಿರುವ ದೇಶಗಳ ಆಕ್ರಮಣಗಳನ್ನು ನಮೂದಿಸಿ ಈ ಪರಿಸ್ಥಿತಿಯು ನಿವಾರಣೆಗೆ ಯೋಗ್ಯಕಾರ್ಯ ಕೈಕೊಳ್ಳದಿದ್ದಲ್ಲಿ ಲೋಕದ ಅವನತಿ ನಿಶ್ಚಯವೆಂದೂ ಸ್ಪಷ್ಟಗೊಳಿಸಿರುವರು.

ಪರಸ್ಪರ ಚರ್ಚಿಸಿ ತೀರ್ಮಾನಿಸೋಣ

ಶಾಂತಿಯ ಆಶ್ವಾಸನೆ ದೊರಿಯದೆ ಒಂದು ಪಕ್ಷದವರನ್ನು ಶಸ್ತ್ರಸನ್ಯಾಸಕ್ಕೆ ಒತ್ತಾಯಮಾಡಿ ಫಲವಿಲ್ಲ. ಕೋರ್ಟು ವ್ಯವಹಾರಗಳಂತೆ ಅಂತರ್ರಾಷ್ಟ್ರೀಯ ಸಮಸ್ಯೆಗಳನ್ನೂ, ಪರಿಷನ್ಮಂದಿಗಳಲ್ಲಿ ಪರಸ್ಪರ ಕಲಿತು, ವಿಶ್ವಾಸಪೂರ್ವಕ ಚರ್ಚಿಸಿ ತೀರ್ಮಾನಹೊಂದದಿಲು ಸಾಧ್ಯನಿದೆ ಕಳೆದ ಕೆಲವು ವಾರಗಳಲ್ಲಿ ಬಿಕ್ಕಟ್ಟಿದ್ದಿತ್ತು. ಸದ್ಯಕ್ಕೆ ಸೈನ್ಯದ ಧಾಳಿಯೆಲ್ಲಿಯೂ ಇಲ್ಲವಾದ್ದರಿಂದ ಈ ಮುಹೂರ್ತದಲ್ಲಿಯೇ ನಾನೀ ಸಂದೇಶವನ್ನು ಕಳುಹಬೇಕಾಯಿತು-ಎಂದು ಅಧ್ಯಕ್ಷ ರೂಸ್‌ವೆಲ್ಟರು ತಿಳಿಸಿರುವರು.

ಇಂಗ್ಲೆಂಡು ಫ್ರಾನ್ಸುಗಳ ಪೂರ್ಣ ಸಮ್ಮತಿ

ಮಿ. ರೂಸ್‌ವೆಲ್ಟರ ಸಂದೇಶದಿಂದ ಇಂಗ್ಲೆಂಡು ಫ್ರಾನ್ಸುಗಳು ತೃಪ್ತಿಗೊಂಡಿವೆ, ಅವರ ಸೂಚನೆಗೆ ತಮ್ಮ ಪರಿಪೂರ್ಣ ಸಮ್ಮತಿಯನ್ನು ಸೂಚಿಸಿವೆ. ಸಂದರ್ಭಯೋಗ್ಯ, ನ್ಯಾಯಪೂರ್ಣ ಮತ್ತು ಸತ್ಪರಿಣಾಮಕಾರೀ ಸಂದೇಶವೆಂದು ಎರಡೂ ರಾಷ್ಟ್ರಗಳ ಮುಖಂಡರು ಅಮೇರಿಕಾಧ್ಯಕ್ಷರನ್ನು ಶ್ಲಾಘಿಸುತ್ತಿದ್ದಾರೆ. ಈ ಸೂಚನೆಯಿಂದ ಹಿಟ್ಲರ್ ಮುಸಲಿನಿಗಳ ಮೇಲಾವ ಪರಿಣಾಮವಾದರೂ, ರೂಸ್‌ವೆಲ್ಟರ ಘನತೆಯೇರುವದೆಂದೂ, ಅಮೇರಿಕದ ಜನತೆಯು ಅವರ ಧೋರಣೆಗೆ ಅಧಿಕಾಧಿಕ ಬೆಂಬಲವೀಯುವಂತಾಗುವದೆಂದೂ ನಂಬಲಾಗಿದೆ.

ಹಿಟ್ಲರ್ ಮುಸಲಿನಿಗಳು ಆಲೋಚಿಸುತ್ತಲಿದ್ದಾರೆ

ಹಿಟ್ಲರನು ಈ ಸಂದೇಶವನ್ನು ಆಳವಾಗಿ ವಿಮರ್ಶಿಸುತಿದ್ದಾನೆ. ಉತ್ತರ ಕೊಡುವ ಮೊದಲು ಮುಸಲಿನಿಯೊಡನೆ ಆಲೋಚಿಸಿಕೊಳ್ಳಲಿರುವನೆಂದು ಗೊತ್ತಾಗಿದೆ. ಜರ್ಮನ್ ಪತ್ರಿಕೆಗಳೆಲ್ಲಾ 'ರೂಸ್‌ವೆಲ್ಟ್ ವಿಲ್ಸನನಂತೆ ನಟಿಸುತ್ತಿದ್ದಾನೆ" "ಅಮೇರಿಕದ ಅಧ್ಯಕ್ಷರ ಕೀರ್ತಿ ಸಾಧನೋಪಾಯ" ಇತ್ಯಾದಿ ಹೆಸರಿಟ್ಟು ಈ ಸಂದೇಶವನ್ನಾ ಕಠಿಣವಾಗಿ ಟೀಕಿಸುತ್ತಿವೆ. ರೋಮಿನಲ್ಲಿ ರೂಸ್‌ವೆಲ್ಟರ ಸೂಚನೆಯು ಸ್ವಾಗತೀಕರಿಸಲ್ಪಟ್ಟಿತಾದರೂ ಫ್ರಾನ್ಸು ಇಟೆಲಿಯ ಬೇಡಿಕೆಯನ್ನು ಮನ್ನಿಸಿದರೆ ಮಾತ್ರ ಶಾಂತಿ ಸಾಧ್ಯವೆಂಬ ಅಭಿಪ್ರಾಯ ಸೂಚಿಸಲ್ಪಟ್ಟಿದೆ. ಮುಸಲಿನಿಯು ತನ್ನಲ್ಲಿಗೆ ಬಂದಿರುವ ಜರ್ಮನಿಯ ಫೀಲ್ಡ್ ಮಾರ್ಶಲ್ ಗೋರಿಂಗನೊಡನೆ ರೂಸ್‌ವೆಲ್ಟರ ಸಂದೇಶದ ಕುರಿತು ಸವಿವರವಾಗಿ ಚರ್ಚಿಸನಡೆಸಿದ್ದಾನೆ.

ರಾಷ್ಟ್ರಗಳಲ್ಲೆಲ್ಲಾ ಸೈನ್ಯಗಳ ಚಲನವಲನ

ಯುರೋಪಿನ ಸಣ್ಣದೊಡ್ಡ ರಾಷ್ಟ್ರಗಳಲ್ಲೆಲ್ಲಾ ಅಭೂತಪೂರ್ವ ಸೈನಿಕ ಚಲನವಲನಗಳಾಗುತ್ತಿವೆ. ಗಿಬ್ರಾಲ್ಟರ್, ನೈರೋಬಿ, ಹೋಂಗ್‌ಕೋಂಗ್ ಮೊದಲಾದ ಬ್ರಿಟಿಷ್ ಸಾಮ್ರಾಜ್ಯದ ಯುದ್ಧ ನಿಲ್ದಾಣಗಳಲ್ಲಿ ಸೈನ್ಯಗಳು ಸಜ್ಜಾಗಿ ನಿಲ್ಲಿಸಲ್ಪಟ್ಟಿವೆ. ಅಮೇರಿಕದ ಯುದ್ಧನಾವೆಗಳು 'ಪೆಸಿಫಿಕ್' ಕರಾವಳಿಗೆ ಹಿಂತಿರುಗಬೇಕೆಂಬ ಆಜ್ಞೆ ಹೊರಟಿದೆ. ಗ್ರೀಸ್ ಡಚ್, ಎಸ್ಟೋನಿಯಾ ಟರ್ಕಿ, ಮೊದಲಾದ ರಾಷ್ಟ್ರಗಳಲ್ಲಿಯೂ ಸೈನಿಕ ಸಂಚಲನೆಗಳು ಕಂಡು ಬರುತ್ತಿವೆ. ಇನ್ನೊಂದು ಆಕ್ರಮಣದ ಸಿದ್ಧತೆಗಳಾಗಿವೆಯೆಂದೂ ಅಧ್ಯಕ್ಷ ರೂಸ್‌ವೆಲ್ಟರ ಸಂದೇಶವು ಆ ಕಾರಣದಿಂದಲೇ ಹೊರಟಿತೆಂದೂ ಊಹನೆಗಳಿದ್ದಿವೆ.

ಇಂಗ್ಲೆಂಡು-ರಶ್ಯಾ ಒಪ್ಪಂದದ ಮಾತುಕತೆ

ಮೋಸ್ಕೋದಲ್ಲಿದ್ದ ಇಂಗ್ಲೆಂಡ್ ರಾಯಭಾರಿಯು ಲಂಡನಿನಿಂದ ಸೂಚನೆ ಬಂದಂತೆ ರಶ್ಯದ ವಿದೇಶಾಂಗ ಮಂತ್ರಿ ಲಿಟ್ವಿನೋಫರೊಡನೆ ಒಪ್ಪಂದದ ಮಾತುಕತೆಗೆ ತೊಡಗಿದ್ದಾನೆ. ಪೋಲೆಂಡಿಗೆ ಕೊಟ್ಟ ಗ್ಯಾರಂಟಿಯಿಂದ ರಶ್ಯದ ಗಡಿಗೂ ಭದ್ರತೆ ದೊರೆತಂತಾಯಿತೆಂದೂ, ಈಗ ರಶ್ಯದ ನೆರೆಯ ಎರಡು ರಾಷ್ಟ್ರಗಳ ಆಕ್ರಮಣ ನಡೆದರೆ ರಶ್ಯವಾವ ರೀತಿ ಸಹಾಯಮಾಡುವದೆಂಬುದನ್ನು ತಿಳಿಯಬೇಕಾಗಿರುವದೆಂದೂ ಚರ್ಚೆಗಳು ಸಮಿತಿಯೊಳಗೆ ನಡೆಯುತ್ತಿವೆಯೆಂದೂ ವಾರ್ತೆ. ಇದೇ ರೀತಿಯಲ್ಲಿ ಟರ್ಕಿಯೊಡನೆಯೂ ಒಪ್ಪಂದದ ವ್ಯವಹಾರ ನಡೆಯುತ್ತಿದೆ.

'ಅಲ್ಬೇನಿಯವೀಗ ರೋಮನ್ ರಾಷ್ಟ್ರ'

ಇಟಲಿಯ ವಿದೇಶಾಂಗ ಮಂತ್ರಿ ಕೌಂಟ್ ಸಿಯಾನೋ ರೋಮಿನ ಫೆಸಿಸ್ಟ್ ಚೇಂಬರಿನಲ್ಲಿ ಭಾಷಣವೀಯುತ್ತಾ ಅಲ್ಬೇನಿಯವೀಗ ರೋಮನ್ ರಾಜ್ಯವೆಂದೂ, ಇಟಲಿ ಅಲ್ಬೇನಿಯದ ಸಂಬಂಧವನ್ನು ಕಡಿಯುವ ಪ್ರಯತ್ನವೇನಾದರೂ ನಡೆದಲ್ಲಿ ಎರಡೂ ರಾಷ್ಟ್ರಗಳದನ್ನಿದಿರಿಸುವುದು ನಿಶ್ಚಯವೆಂದೂ ತಿಳಿಸಿದ್ದಾನೆ.

ಇಟಲಿ ಜರ್ಮನಿಗಳೊಡನೆ ಜಾಪಾನು

ಜಾಪಾನು ಮಂತ್ರಿಮಂಡಲದ ಸಭೆ ಸೇರಿ, ಬ್ರಿಟಿಷ್ ಮತ್ತು ಇತರ ಚೀನೀ ಸಹಾಯಕ ರಾಷ್ಟ್ರಗಳನ್ನು ಯುಕ್ತಿಯುಕ್ತವಾಗಿ ತಡೆದಿಡಬೇಕೆಂದು ನಿರ್ಧರಿಸಿದೆ. ಬಾಲ್ಕನ್ ಪ್ರವೇಶ ಮತ್ತು ಪೂರ್ವಯುರೋಪಿನಲ್ಲಿ ಹೊಸ ವ್ಯವಸ್ಥೆಯನ್ನುಂಟುಮಾಡಲು ಪ್ರಯತ್ನಿಸುವ ಇಟಲಿ ಜರ್ಮನಗಳಿಗೆ ಸಂಪೂರ್ಣ ಸಹಾನುಭೂತಿಯನ್ನು ತೋರಿಸುವ ನಿರ್ಣಯವಾಗಿದೆ.

ಪೂರ್ವ ಏಸ್ಯಾದಲ್ಲಿ ಹೊಸ ವ್ಯವಸ್ಥೆ ಬೇಕು.

ಜಪಾನರು ವಶಪಡಿಸಿಕೊಂಡ ಸ್ಥಳಗಳಲ್ಲಿ ದೀರ್ಘಕಾಲದ ವರೆಗೆ ಸೈನ್ಯಗಳನ್ನು ನಿಲ್ಲಿಸಿ ವ್ಯವಸ್ಥಾಪೂರ್ಣ ಸರಕಾರವನ್ನು ಸ್ಥಾಪಿಸುವವೆಂದು ಜಾಪಾನಿನ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ "ಪೂರ್ವ ಏಸ್ಯಾದಲ್ಲಿ ಸುವ್ಯವಸ್ಥೆಯಿರಬೇಕಾದರೆ ಜಪಾನು ತಕ್ಕಷ್ಟು ಬಲಶಾಲಿಯಿರಬೇಕು. ಇಲ್ಲವಾದರೆ ಪರದೇಶಗಳ ಅನಗತ್ಯ ಉಪಟಳಗಳನ್ನು ತಡೆಯಲು ಸಾಧ್ಯವಿಲ್ಲ" ಎಂದು ಜಪಾನ್ ಮಂತ್ರಿಗಳ ಹೇಳಿಕೆ.

ನಮ್ಮ ಚಂದಾದಾರರಲ್ಲಿ ವಿನಂತಿ

ವಿಳಾಸದಲ್ಲಿ ಏನಾದರೂ ಹೆಚ್ಚು ಕಡಿಮೆಯೆಂದು ತೋರಿಬಂದಲ್ಲಿ ವ ತಾತ್ಕಾಲಿಕ ಮಾರ್ಪಡವ ವಿಳಾಸವನ್ನು ಬದಲಾಯಿಸಿ ಮೊದಲಿನ ಕಾಯಂ ವಿಳಾಸಕ್ಕೆ ಕಳುಹಬೇಕಾದಲ್ಲಿ ನಮಗೆ ಆ ಬಗ್ಗೆ ಬರೆದು ತಿಳಿಸಬೇಕಾಗಿಯೂ ಹಾಗೆ ತಿಳಿಸುವಾಗ ಚಂದಾನಂಬ್ರವನ್ನು ಬರೆಯಬೇಕಾಗಿಯೂ ವಿನಂತಿ.

ಮೆನೇಜರ್.

ಬೊಂಬಾಯಿ

(ಸ್ವಂತ ಬಾತ್ಮೀದಾರರಿಂದ)

41-4-1939

3000 ಸಮುದ್ರಜನರ(Seamen) ಮೆರವಣಿಗೆ—ಮುಂಬಯಿ ಪೋರ್ಟನಲ್ಲಿ ಸಮುದ್ರಜನರ ನಿರುದ್ಯೋಗತನವು ಮಿತಿಮೀರುತ್ತಿದೆಂದೂ ನೇಮಿಸುವ ಅಫೀಸರನಿಗೆ ಲಂಚಕೊಡದೆ ಯಾರಿಗೂ ಕೆಲಸದೊರೆಯುವುದಿಲ್ಲವೆಂದೂ, ಜನರನ್ನು ನೇಮಿಸಲು ಒಂದು ಕ್ರಮವಿರಬೇಕೆಂದೂ, ಎಂಬ ಹಲವಾರು ಆರೋಪಣೆಗಳಿಂದ ಕೂಡಿಕೊಂಡು 3000 ಸಮುದ್ರಜನರು ಬಹು ದೊಡ್ಡ ಮೆರವಣಿಗೆಯನ್ನು ಬುಧವಾರ ದಿವಸ ಸೆಕ್ರೆಟೆರಿಯಟಿಗೆ ತೆಗೆದುಕೊಂಡು ಹೋದರು. ಚರ್ಚ ಗೇಟಿನ ಹತ್ತಿರ ಸಭೆಯಾಗಿಸ್ಸಿ, ಶಾಂತರೀತಿಯು ಮತ್ತು ಸರಕಾರಾಧಿಗಳಿಂದ ಸಮುದ್ರಜನರ ಮೆರವಣಿಗೆ ಹೋಗುತ್ತಿರಲು ಇವರನ್ನು ದಿಗಿಲುಗೊಳಿಸಿ, ಜನತೆಯಲ್ಲಿ ತಪ್ಪಭಿಪ್ರಾಯವನ್ನುಂಟುಮಾಡಬೇಕೆಂಬ ಧ್ಯೇಯದಿಂದ, ಮುಂಬಯಿ ಸರಕಾರವು, ಲಾಠಿ ಮತ್ತು ಕೋವಿಯಿಂದ ಕೂಡಿದ 300 ಪೋಲೀಸರನ್ನು ಮತ್ತು ಪ್ರತಿಯೊಂದು ಜಾತಿ(?)ಯ ಪೋಲೀಸ ಅಫೀಸರರನ್ನು ಮೆರವಣಿಗೆಯ ಇಬ್ಬಾಗಗಳಲ್ಲೂ ಹೋಗುವಂತೆ ಮಾಡಿದ ಸರಕಾರದ ಈ ಅನಾವಶ್ಯಕ ಕಾರ್ಯವನ್ನು ಖಂಡಿಸಿ ಠರಾವೊಂದನ್ನು ಪಾಸುಮಾಡಿತು. ಗೃಹಮಂತ್ರಿ (Home minister)ಗಳ "ಕಾರುಬಾರು" ಗಳನ್ನು ನೋಡುವಾಗ ಇವರು ತಾನು ಕೋಂಗ್ರೆಸಿನ ಸದಸ್ಯನೆಂಬುದನ್ನು ಮರೆತುಬಿಟ್ಟರೋ ಎಂದು ಸಂಶಯ ಬರುತ್ತಿದೆ!

ರಾಷ್ಟ್ರೀಯ ಸರ್ಕಾರ ವಿನಾ ಚರಣೆಯ—ಇಲ್ಲಿ ವಿಪ್ಲಂಭಣೆಯಿಂದ ಜರಗಿತು. ಬ ಪ್ರಮಾಂ ದಾಣ ನಲ್ಲಿ ಜರಗಿದ ಮಹಾಸಭೆಯಲ್ಲಿ ಆನರೇಬಲ್ ಎಲ್. ಎಂ. ಪಾಟೀಲರವರು ತಮ್ಮ ಭಾಷಣದ ಮಧ್ಯೆ ಹೀಗೆಂದರು. 1919ರಿಂದ ಯಾರೆಲ್ಲ ನವಗೆ ಹಾಸ್ಯಮಾಡುತ್ತಿದ್ದರೋ, ಕಳೆದ ಚುನಾವಣೆಯ ನಂತರ ಇವರ ನಾಲಗೆಯನ್ನು ಸಂಪೂರ್ಣವಾಗಿ ಎಳೆದು ಹಿಡಿದಂತಾಯಿತು ಯಾಕೆಂದರೆ ಜನತೆಯು ಸಂಪೂರ್ಣವಾಗಿ ಕೋಂಗ್ರೆಸನ್ನು ಭರವಸೆಗೊಂಡಿವೆಂಬುದು ಖಚಿತವಾಯಿತು. 1919 ಮತ್ತು 1930 ಚಳವಳದಿಂದಾಗಿ ಜನತೆಯಲ್ಲಿ ಹೆಚ್ಚಿನ ಹುರುಪು ಕಂಡಿದೆ. ಆದರೆ ನಾವಿನ್ನೂ ಸಂಪೂರ್ಣ ಜಯಹೊಂದಲಿಲ್ಲ. ಈಗ ನಾವು ಆಚರಿಸುತ್ತಿರುವ ರಾಷ್ಟ್ರೀಯ ವಾರದ ಧ್ಯೇಯವೇನೆಂದರೆ ಪ್ರತಿಯೊಂದು ಜಾತಿಯ ಜನರನ್ನೂ ಒಂದೇ ಸ್ಥಾನದಡಿಯಲ್ಲಿ ಬಂದು ಸೇರುವಂತೆ ಮಾಡಿ ಸ್ವಾತಂತ್ರ್ಯ ಮಹಾಯುದ್ಧದಲ್ಲಿ ಒಗ್ಗಟ್ಟಿನಿಂದ ಹೋರಾಡುವಂತೆ ಮಾಡುವುದು.

ಸಾಕ್ಷರತಾ ಪ್ರಚಾರ—ಸಂಪೂರ್ಣವೈ ಭರದಿಂದ ನಡೆಯುತ್ತಿದೆ. ಕನ್ನಡ ಪ್ರಚಾರವನು ಸಾಂಗರೀತಿಯಲ್ಲಿ ಸಾಗಿಸಲೋಸ್ಕರ ಸಾಕ್ಷರತಾ ಪ್ರಚಾರಕಮಿಟಿಯು ಕನ್ನಡಶಾಖೆಯೊಂದನ್ನು ತೆರದಿದೆ. ಶ್ರೀ. ಆರ್. ಎ. ಜಹಗೀರ್‌ದಾರ್ ಪ್ಲೀಡರ್, ಮುಂಬಯಿ ಸರಕಾರ ಇವರು ಈ ಕಮಿಟಿಯ ಚೆಯರ್‌ಮೇನರಾಗಿಯೂ ಶ್ರೀಗಳಾದ ಎನ್. ಕೆ. ಉಪಾಧ್ಯಾಯ ಮತ್ತು ವೆಂಕಟರಾವ್ ಸ್ವಕೀಕ ಇವರು ಜೊತೆ ಕಾರ್ಯದರ್ಶಿಗಳಾಗಿಯೂ ನೇಮಿಸಲ್ಪಟ್ಟಿರುವರು. ಕನ್ನಡ ಪ್ರಚಾರವನ್ನು ಯೋಗ್ಯ ರೀತಿಯಲ್ಲಿ ಮಾಡಬೇಕೆಂಬುದೇ ಇದರ ಧ್ಯೇಯ!

To Insure is
The Husband's duty. The wife's right and the child's Claim Hence seekfor a policy of

THE ASAIN ASSURANCE CO., LTD.

The safest and one of the largest Indian Concerns,
Head Office:– **Asian Buildings Ballard Estate, Bombay.**
Branch Office: – **Hampankatta, Mangalore.**

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಲಾಭದಾಯಕವಾದ ಮತ್ತು ಸುಭದ್ರತೆಯ ನಿಧಿಯನ್ನೊಳಗೊಂಡ ಈ ಕಂಪೆನಿಯಲ್ಲಿ ನಿಮ್ಮ ವಿಮಾ ಇಳಿಸಿರಿ.
ಏಜಂಟರು ಪ್ರಾಮುಖ್ಯ ಪಟ್ಟಣಗಳಲ್ಲೆಲ್ಲಾ ಬೇಕಾಗಿದ್ದಾರೆ. ಹೆಚ್ಚಿನ ವಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

J. A. PUTRAN, Branch Manager, Mangalore.

ಮಂಗಳೂರು

(ನಮ್ಮ ಸ್ವಂತ ವಾರ್ತಾದಾರರಿಂದ)
ಮಂಗಳೂರು ತಾ. 16-4-1939.

ರಾಷ್ಟ್ರೀಯ ವಾರದ ಸಭೆಗಳು

ತ್ರಿಪುರಿ ಕಾಂಗ್ರೆಸ್ ದಿನಾಚರಣೆ— ಕಳೆದ ತಾ. 11ರಲ್ಲಿ ಭಾರತ ರಾಷ್ಟ್ರಸೇವಾಸಂಘದ ಮತ್ತು ರ್ಯಾಡಿಕಲ್ ಕಾಂಗ್ರೆಸ್ ಸದಸ್ಯರ ಸಂಘದ ಆಶ್ರಯದಲ್ಲಿ ತ್ರಿಪುರಿ ಕಾಂಗ್ರೆಸ್ ದಿನಾಚರಣೆಯು ನಡೆಯಿತು. ತ್ರಿಪುರಿ ರಾಷ್ಟ್ರಾಧಿವೇಶನಕ್ಕೆ ಚಿತ್ತೈಸಿದ್ದ ವೇ. ಛ. ಶ್ರೀ ನಾರಾಯಣ ಶೆಟ್ಟಿಯವರು ತ್ರಿಪುರಿಯಲ್ಲಿ ತಾವು ನೋಡಿದ ಮತ್ತು ಹೊಂದಿದ ಅನುಭವವನ್ನು ಸವಿಸ್ತಾರವಾಗಿ ವಿವರಿಸಿದರು.

"ಕಾಂಗ್ರೆಸೂ ಕರ್ನಾಟಕ ಏಕೀಕರಣವೂ"— ಕಳೆದ ತಾ. 11ನೇ ಮಂಗಳವಾರ ಸಾಯಂಕಾಲ ಮಾನ್ಯ ಡಾ| ವಿಠ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಶ್ರೀ. ಕೆ. ಕೃಷ್ಣರಾಯರು ಮೇಲಿನ ವಿಷಯವಾಗಿ ಭಾಷಣವಿತ್ತರು. ಕಳೆದ ಮೂವತ್ತು ವರುಷಗಳಿಂದ ನಡೆಯುತ್ತಿರುವ ಚಳವಳಿ, ಕಾಂಗ್ರೆಸ್ ಸಂಸ್ಥೆಯವರು ಈ ಪ್ರಶ್ನೆಗೆ ಕೊಟ್ಟಿರುವ ಬೆಂಬಲ; ಇತ್ತೀಚೆಗೆ ಮದ್ರಾಸ್ ಮತ್ತು ಮುಂಬಯಿ ಪ್ರಾಂತಿಕ ಸರಕಾರಗಳು ಕರ್ನಾಟಕ ಪ್ರಾಂತರಚನೆಯ ವಿಷಯದಲ್ಲಿ ತೋರಿಸಿರುವ ಸಹಾನುಭೂತಿ ಇತ್ಯಾದಿಗಳನ್ನು ವಿವರಿಸಿದರು. ಮತ್ತು ಧಾರವಾಡದ ಮತ್ತು ಮುಂಬಯಿ ಪ್ರಾಂತದ ಕನ್ನಡಿಗರು ನಮ್ಮ ಜಿಲ್ಲೆಗೆ ತಿರಸ್ಕಾರ ತೋರಿಸುವರೆಂಬ ಕಾರಣದಿಂದ ಏಕೀಕರಣವನ್ನು ವಿರೋಧಿಸುವವರಿಗೆ ಉತ್ತರವೀಯುತ್ತಾ ನಮ್ಮ ಜಿಲ್ಲೆಯವರು ವಿದ್ಯೆ ಬುದ್ಧಿಯಲ್ಲಿ ಮುಂಬಯಿ ಪ್ರಾಂತದ ಕನ್ನಡಿಗರಿಗೆ ಹಿಂದಿಲ್ಲವೆಂದೂ ನಮ್ಮವರು ಸ್ವಶಕ್ತಿಯಿಂದಲೇ ತಮಗೆ ಬರಬೇಕಾದ ಹಕ್ಕುಗಳನ್ನು ಸಂಪಾದಿಸಲು ಶಕ್ತರೆಂದೂ ಹೇಳಿದರು. ಶ್ರೀ| ಶೆಟ್ಟಿ, ಶ್ರೀ| ಕೆ. ಆರ್. ಆಚಾರ್, ಶ್ರೀ| ಕಲಬೇರಿಕರ್ ಸಂದರ್ಭೋಚಿತವಾಗಿ ಮಾತಾಡಿದರು.

ಜಲಿಯನ್ವಾಲಾಭಾಗ್ ದಿನಾಚರಣೆ– ರಾಷ್ಟ್ರೀಯವಾರದ ಕಡೆಯ ದಿನವಾದ ಜಲಿಯನ್ವಾಲಾಭಾಗ್ ದಿನಾಚರಣೆಯು ರ್ಯಾಡಿಕಲ್ ಕಾಂಗ್ರೆಸ್ ಸದಸ್ಯರ ಸಂಘದ ಆಶ್ರಯದಲ್ಲಿ ಶ್ರೀ| ಎಸ್. ಎ. ಸಾಲ್ಡಾನರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ| ಕೆ. ಕೃಷ್ಣರಾಯರು, ಶೆಟ್ಟಿ, ಕೆ. ಆರ್. ಆಚಾರ್, ಕೆ. ಕೆ. ಶೆಟ್ಟಿ ಮೊದಲಾದವರು ಭಾಷಣ ಮಾಡಿದರು.

ಹೆಡ್ಮಾಸ್ತರರುಗಳ ಪರಿಷತ್ತು—ಕಳೆದ ತಾ. 12ರಲ್ಲಿ ಗವರ್ನಮೆಂಟ್ ಕಾಲೇಜಿನಲ್ಲಿ ಮೇಲಿನ ಪರಿಷತ್ತು ನಡೆಯಿತು. ದೇಶಭಾಷೆಯಲ್ಲಿ ಪಾಠಗಳನ್ನು ಕಲಿಸಿದರೆ ಅನೇಕರಿಗೆ ತಿಳಿಯುವುದಿಲ್ಲವಾದ್ದರಿಂದ ತಮ್ಮ ಶಾಲೆಗಳಲ್ಲಿ ಇಂಗ್ಲಿಷಿನಲ್ಲಿ ಕಲಿಸಲು ಅವಕಾಶ ಕೊಡಬೇಕೆಂದು ಕೆಲವು ಕೆಥೋಲಿಕ್ ಶಾಲೆಗಳ ಹೆಡ್ಮಾಸ್ತರರು ವಿದ್ಯಾಮಂತ್ರಿಗಳನ್ನು ಕೇಳಿಕೊಂಡರು. ಮಾನ್ಯ ಮಾರ್ಕಿಯವರು ಅಂತಹ ಶಾಲೆಗಳನ್ನು ವಿನಾಯಿತಿಮಾಡಿ ಅವುಗಳಿಗೆ ಇಂಗ್ಲಿಸಿನ ಆಂಗ್ಲಭಾಷೆಯಲ್ಲಿ ಕಲಿಸಲು ಅವಕಾಶಕೊಡಬಹುದೆಂದರು. ಮತ್ತು ಸದ್ಯದಲ್ಲಿಯೇ ತಾವು ಕೇಳಿದ ಚರ್ಚೆಗಳಿಗನುಸಾರವಾಗಿ ಒಂದು ಸರಕಾರಿ ಪ್ರಕಟಣೆಯನ್ನು ಕಳುಹಿಸುವುದಾಗಿ ಹೇಳಿದರು.

ಕಾನ್ವೆಂಟ್ ಕಾಲೇಜಿನಲ್ಲಿ ಪಾರಿತೋಷಕ ವಿತರಣೆ—ಮಾನ್ಯ ವಿದ್ಯಾಮಂತ್ರಿಗಳು ಸೈ. ಆಗ್ನೇಸ್ ಕಾಲೇಜಿನ ಇನಾಮು ಹಂಚೋಣದ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದ್ದರು. ಈ ಸಮಾರಂಭವು ಕಳೆದ ತಾ. 12ರಲ್ಲಿ ಸೇರಿತು. ಸ್ವಾಗತ, ವರದಿ ವಾಚನ, ಇನಾಮು ಹಂಚೋಣ, ನಾಟಕನೃತ್ಯ, ಸಂಗೀತ ಇತ್ಯಾದಿಗಳಾದ ಮೇಲೆ ಮಾನ್ಯ ಮಂತ್ರಿಗಳು ಕ್ರಿಸ್ತಕನ್ಯಾ ಸ್ತ್ರೀಯರು ಸ್ತ್ರೀ ವಿದ್ಯಾಭ್ಯಾಸಕ್ಕಾಗಿ ಮಾಡುತ್ತಿರುವ ಪ್ರಯತ್ನವನ್ನು ಪ್ರಶಂಸಿಸಿ ಮಾತಾಡಿದರು. ಕಳೆದ ವರ್ಷದಲ್ಲಿ ಅದೇ ಕಾಲೇಜಿನಲ್ಲಿ ಗಣಿತಶಾಸ್ತ್ರದ ಪ್ರೊಫೆಸರರಾಗಿದ್ದವರನ್ನು ಅಧ್ಯಕ್ಷ ಭಾಷಣದಲ್ಲಿ ಮಾನ್ಯಮಂತ್ರಿಗಳು ಬಲವಾಗಿ ಟೀಕಿಸಿದುದು ಸರಿಯಾಗಿ ತೋರಲಿಲ್ಲ. ಹೆಚ್ಚು ಮಂದಿ ವಿದ್ಯಾರ್ಥಿನಿಯರು ತೇರ್ಗಡೆ ಹೊಂದದುದಕ್ಕಾಗಿ ಈ ಟೀಕೆ.

ಟೌನ್ ಕಾಂಗ್ರೆಸ್ ಸಮಿತಿ— ಕಳೆದ ತಾ. 9ರಲ್ಲಿ ಟೌನ್ ಕಾಂಗ್ರೆಸ್ ಸಮಿತಿಯ ಮೀಟಿಂಗಿನಲ್ಲಿ ಮಾನ್ಯ ಮಾರ್ಕಿಯವರು ಜನರಲ್ ಫ್ರೀಂ ಕೋರನವರನ್ನು ಸಮರ್ಥಿಸಿ ಮಾಡಿದ ಭಾಷಣಕ್ಕಾಗಿ ಅವರನ್ನು ಟೀಕಿಸಿ ಠರಾವಾಯಿತು.

ಪಡುಬಿದ್ರಿ—ಪಂಚಾಯತ್ ಬೋರ್ಡ್ ಆಫೀಸಿನಲ್ಲಿ ತಾ. 15-4-39ರಲ್ಲಿ ಶ್ರೀ| ಬಿ. ಸುಬ್ಬಣ್ಣ ಶೆಟ್ಟಿ, ಡಿ. ಬೋ. ಮೆಂಬರ್ ಇವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ವಾಚನಾಲಯವೊಂದನ್ನು ತೆರೆಯಲಾಗಿದೆ. ಇದು ಆಸು–ಪಾಸಿನ ಹಳ್ಳಿಗಳ ಜನರ ಉಪಯೋಗಕ್ಕೂ ಸಹಕಾರಿಯಾಗಿದೆ.

ಕಿನ್ನಿಗೋಳಿ—ಶ್ರೀ| ಕೆಮ್ಮಾಲು ವೆಂಕಟ್ರಾಯರೆಂಬ ಬ್ರಾಹ್ಮಣ ತರುಣರೊಬ್ಬರು ತನ್ನ ಸ್ವಂತ ಗದ್ದೆಯನ್ನು ತಾನೆ ಉತ್ತರೆಂಬ ಕಾರಣದಿಂದ ಅವರಿಗೆ ಬಹಿಷ್ಕಾರ ಕೊಡುವ ಚಳವಳ ನಡೆದರೂ ತಾ. 13-4-39ರಲ್ಲಿ ನೆರೆದ ಸಭೆಯಲ್ಲಿ ಅವರು ಮಾಡಿದ್ದು ಸರಿಯೆಂದು ತೀರ್ಮಾನವಾಗಿ ಕಟೀಲು ದೇವಸ್ಥಾನದಲ್ಲಿ ಸಹಪಂಕ್ತಿ ಭೋಜನ ನಡೆಯಿತು.

ಕಾಳಿಕಾಡಿ—ಪೊಂಟ್ರಿ ಹಾ. ಎ. ಶಾಲೆಯ ವಿದ್ಯಾರ್ಥಿ ಸಂಘದ 23ನೇ ವರುಷದ ವರ್ಧಂತಿಯು ತಾ. 12-4-39ರಲ್ಲಿ ಡಾಕ್ಟರ್ ಎಸ್. ಚಂಪನವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಯಥಾಸಾಂಗವಾಗಿ ಜರಗಿತು.

ಸುಬ್ರಹ್ಮಣ್ಯ— ಶ್ರೀ ಸುಬ್ರಹ್ಮಣ್ಯ ಮಠದಲ್ಲಿ ವರ್ಷಂಪ್ರತಿ ಜರಗುವ ನರಸಿಂಹ ಜಯಂತಿ ಮಹೋತ್ಸವವು ಮೇ ತಾ. 2-3 ಮತ್ತು 4 ಈ 3 ದಿನ ಜರಗುವುದು.

ಬಾರಕೂರು—ತಾ. 16-4-1939ರಲ್ಲಿ 'ಜಯಕರ್ನಾಟಕ ಯುವಕಸಂಘ'ವೆಂಬ ಉತ್ಸಾಹೀಯುವಕರ ಸಂಘವೊಂದು ಸ್ಥಾಪನೆಯಾಗಿರುವುದು ರಾತ್ರಿ 8-30ಕ್ಕೆ ಜರಗಲಿದೆಂದು ಮೊಕ್ತೇಸರ್ ಗೋಪಾಲೋಪಾಧ್ಯಾಯರು ತಿಳಿಸುತ್ತಾರೆ.

ಹುಲಿಗಳ ಕಾಟ— ಕುಂದಾಪುರ ತಾಲೂಕು ನೋಳಹಳ್ಳಿ ಗ್ರಾಮದ ಆಸು–ಪಾಸು ಗ್ರಾಮ (ಜಪ್ತಿ ಮತ್ತು ಹಾರ್ದಳ್ಳಿ ಮಂಡಲಿ)ಗಳಲ್ಲಿ ಸುಮಾರು ಒಂದು ತಿಂಗಳ ಈಚೆಗೆ ಸಾಧಾರಣ 16 ಜನರಿಗೆ ಹುಲಿಕಚ್ಚಿ ಗಾಯಗಳಾಗಿವೆ. ಈ ಪೈಕಿ ಇಬ್ಬರು ಸತ್ತುಹೋಗಿರುವರು. ಕಳೆದ ತಾ. 13-4-'39 ರಾತ್ರಿ ನೋಳಹಳ್ಳಿ ಗ್ರಾಮದ ಬೆಳಗೋಡು ಉಮೂರು ಅಡಿ ಮಂಜಮ್ಮಸೆಡ್ತಿ ಮಗಳು ಬಚ್ಚಿಸೆಡ್ತಿ (18) ಗರ್ಭಿಣಿಗೆ ಕಚ್ಚಿ ಹೆಚ್ಚಿನ ಕಷ್ಟಕ್ಕೀಡಾದುದಲ್ಲದೆ ಅದೇ ದಿನ ರಾತ್ರಿ ಸದ್ರಿ ಗ್ರಾಮದ ಎವಿನಡಿ ಕೊರಗ ಸೆಟ್ಟಿ ಎಂಬವನಿಗೆ ಸಹ ಕಚ್ಚಿ ಬಹಳ ಕಷ್ಟಕ್ಕೀಡಾಗುತ್ತಾನೆ. ಸದ್ರಿ ಗ್ರಾಮದಲ್ಲಿ ಒಂದು ವರುಷದ ಹಿಂದೆ ಈ ತರನಾಗಿದ್ದಾಗ ಮಾನ್ಯ ಸಬ್ ಕಲೆಕ್ಟರ್ ಮಗ್ರೀಸರು ಶಿಬಿರ ಮಾಡಿಸಿ 2 ಭರ್ತಿ ಹುಲಿಗಳನ್ನು ಕೊಂದಿರುವರು. (ಲಕ್ಷ್ಮಯ್ಯ ಮತ್ತು ಕೂಸಬಚ್ಚ) ಈಗ ಬಡಹಳ್ಳಿಗರನ್ನು ಈ ಕಾಟದಿಂದ ತಪ್ಪಿಸುವವರಿಲ್ಲವೇ ಎಂದು ಯಾರನ್ನು ಕೇಳಬೇಕೋ ತಿಳಿಯದಾಗಿದೆ ಎಂತ ಬಾತ್ಮಿ.

ಅಜೆಕಾರು—ಸ್ಥಳೀಯ ಬೋರ್ಡ ಶಾಲಾ ವರ್ಧಂತ್ಯುತ್ಸವವು ತಾ. 15-4-39ರಲ್ಲಿ ಶ್ರೀ| ಕೆ. ಪದ್ಮನಾಭ ಕಾಮತ್, ಎಮ್. ಎ, ಬಿ. ಎಲ್. ರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಿತು.

ಹೈದರಾಬಾದ್ ಹಿಂದುಗಳ ಪರಿಸ್ಥಿತಿ

ಈ ಕುರಿತು ತಾ. 12-4-39ರಲ್ಲಿ ಶ್ರೀ. ರಾಮಕೃಷ್ಣಯ್ಯರವರ ಅಧ್ಯಕ್ಷತೆಯಲ್ಲಿ ರಥಬೀದಿಯಲ್ಲಿ ಸಭೆಜರಗಿ ಶ್ರೀಗಳಾದ ಧರ್ಮದೇವ ವಿದ್ಯಾವಾಚಸ್ಪತಿ, ಕಟೀಲಾರ್ ಶ್ರೀನಿವಾಸರಾವ್, ಮಂಜುನಾಥ ಶೆಣೈ, ಕೇಶವ ರಾಮಚಂದ್ರ ಶೆಣೈ ಮೊದಲಾದವರು ಉಜ್ವಲ ಭಾಷಣಮಾಡಿದರು. ಹಿಂದೂಜನಾಂಗದ ಬಿಕ್ಕಟ್ಟು, ಹಿಂದೂ ಮುಸ್ಲಿಮ ಐಕ್ಯತೆಗೆ ಅವಶ್ಯವಾದ ನ್ಯಾಯ ಮತ್ತು ಸತ್ಯದ ಪ್ರಭಾವ, ಹಿಂದುಗಳಲ್ಲಿ ಆಗಬೇಕಾದ ಜಾಗ್ರತಿ ಮೊದಲಾದುವನ್ನು ಭಾಷಣಕರ್ತರು ವಿವರಿಸಿದರು. ಅನಂತರ ಹೈದರಾಬಾದಿನಲ್ಲಿ ಹಿಂದು ಮತ್ತು ಆರ್ಯರ ಮೇಲೆ ಹಾಕಿರುವ ಪ್ರತಿಬಂಧ ಮತ್ತು ಅತ್ಯಾಚಾರಗಳನ್ನು ಖಂಡಿಸುವ ಸತ್ಯಾಗ್ರಹಿಗಳು ಧರ್ಮರಕ್ಷಣೆ ಬಗ್ಗೆ ಅವರು ಸಹಿಸುತ್ತಿರುವ ಕಷ್ಟಕ್ಕಾಗಿ ಅವರನ್ನು ಅಭಿನಂದಿಸುವ ಮೊದಲಾದ ಠರಾವುಗಳಾದುವು.

Commonwealth Assurance Co., Ltd., Poona.

ಬೋನಸ್ಸು ದರವು 20% ಹೆಚ್ಚಿದೆ

30—4—38ರ

ಮೂರನೇ ವ್ಯಾಲ್ಯುಯೇಷನ್ ಫಲಿತಾಂಶ

ಜೀವಾವಧಿ	ತ್ರೈವಾರ್ಷಿಕ	ಎಂಡೋಮೆಂಟ್
ರೂ. 54—0—0	ಬೋನಸ್ಸು ಸಾವಿರಕ್ಕೆ	ರೂ 45—0—0

ಕಾಮನ್‌ವೆಲ್ತ್

ಏಜನ್ಸಿ ಮತ್ತು ಪಾಲಿಸಿ ವಿವರಗಳಿಗೆ ಇಂದೇ ಬರೆಯಿರಿ.

ಕಾಮನ್‌ವೆಲ್ತ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ.

ಗವಾಂಕರ್ ಅಂಡ್ ಸನ್ಸ್,

ಚೀಫ್ ಏಜಂಟ್ಸ್: **ಆನಂದರಾವ್ ಸರ್ಕಲ್, ಬೆಂಗಳೂರು.**

ಉಡುಪಿ

ಗಾಂಧಿ ಮೈದಾನದಲ್ಲಿ ಮಿಸ್ಟರ್ ಮತ್ತು ಮಿಸೆಸ್ ಜೋಕಿಂ ಆಳ್ವರ ಭಾಷಣ

ತಾ. 17-4-39ನೇ ಸೋಮವಾರ ಸಂಜೆ ಗಾಂಧಿ ಮೈದಾನದಲ್ಲಿ ಮಹಾಜನ ಸಭೆಯೊಂದು ಶ್ರೀ. ನರಸಿಂಹ ವಿಠಲಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಬೊಂಬಾಯಿ ಎಡ್ವೋಕೇಟರಾದ ಶ್ರೀಮತಿ ಆಳ್ವರೂ ಮಿಸ್ಟರ್ ಆಳ್ವರೂ ಸದ್ಯದ ರಾಜಕೀಯ ಪರಿಸ್ಥಿತಿಯ ಕುರಿತು ಭಾಷಣವಿತ್ತರು. ಸಾರಾಂಶ ಈ ತೆರನಾಗಿದೆ. "ಕನ್ನಡ ಜಿಲ್ಲೆಯು ಮುಂದುವರಿದ ಜಿಲ್ಲೆಯು. ಇಲ್ಲಿಯ ತರುಣರನೇಕರು ಐ. ಸಿ. ಎಸ್. ಪಾಸಾಗಿರುವರು. ಮರೆಮಾಡುತ್ತಲಿರುವರು. ಆದರೆ ಈಗ್ಗೆ ಮಾತ್ರ ರಾಜಕೀಯ ಧುರೀಣರಾಗಲು ಅನೇಕ ತರುಣರು ಬಯಸುತ್ತಾರೆ. ಇವರಿಂದಲೇ ಹಿಂದೂಸ್ಥಾನದ ಹಿರಿದಾದ ಆಸೆಯು ಪೂರ್ತಿಹೊಂದತಕ್ಕದ್ದಿದೆ. ಸಂಗ್ರಾಮವು ಸಮೀಪಿಸುತ್ತಲಿರುವುದು. ನಾವೆಲ್ಲರೂ ತಯಾರಾಗಿರಬೇಕು. ವಿಘ್ನಗಳು ಬರಬಹುದು. ಆದರೆ ಇವುಗಳಿಂದಲೇ ನಮಗೆ ಜಯ ದೊರೆಯುವುದು. ಬ್ರಿಟಿಷರು ನಮ್ಮ ಸ್ನೇಹಿತರು, ಸಂಗಾತಿಗಳಾಗಿದ್ದರೂ ಇಂದಿನ ಯುದ್ಧದಲ್ಲಿರಲು ಆಕ್ಷೇಪವಿಲ್ಲ. ರಾಷ್ಟ್ರೀಯ ನಿರಾಶೆಯು ತ್ಯಾಗ, ಧೈರ್ಯ, ಸಾಹಸಗಳ ಚಿಹ್ನೆ. ನಾವದನ್ನು ಕಾಪಾಡತಕ್ಕದ್ದು. ಸ್ವರಾಜ್ಯಸಾಧನೆಯಲ್ಲಿ ತಾಳತಮ್ಯವಿರಕೂಡದು. ಅಂತ್ಯಜರಿಗೂ ಸರಿಸಮಾನವಾದ ಹಕ್ಕು ದೊರೆಯುವಂತಾಗಬೇಕು. ಇಲ್ಲವಾದರೆ ಸ್ವರಾಜ್ಯವೆಂಬುದು ಗಾಳಿಗೋಪುರವೇ ಸರಿ. ಸಮಾಜಸುಧಾರಣೆಯಾಗಬೇಕು. ಹೆಂಗಸರು ಮೂಢಭಾವನೆಯನ್ನು ದೂರೀಕರಿಸಿ ಗಂಡಸರೊಂದಿಗೆ ಸರಿಸಮಾನವಾದ ರಾಷ್ಟ್ರಕಾರ್ಯದಲ್ಲಿ ಆಸಕ್ತರಾಗಬೇಕು. ಹಿಂದೂ ಕ್ರೈಸ್ತರೆಲ್ಲರೂ ಭ್ರಾತೃಭಾವದಿಂದ ಮುಂದರಿಯಬೇಕು. ದ್ವೇಷಬುದ್ಧಿಗೆ ಎಡೆಗೊಡಬಾರದು. ಸದ್ಯವೇ ಮಹಾಯುದ್ಧವು ಸಂಭವಿಸಬಹುದು. ಆಗ ತಾನೆ ನಾವು ನಮ್ಮ ಹಕ್ಕುಬಾಧ್ಯತೆಗಳಿಗಾಗಿ ಹೆಣಗಾಡಬೇಕು. ಸುಮ್ಮನೆ ಕುಳಿತುಕೊಳ್ಳುವುದಲ್ಲ. ಆದುದರಿಂದ ಈಗಲೇ ನಾವು ಸಿದ್ಧರಾಗಿರಬೇಕು. ನಾವು ಹಿಂದೀಯರು ಎಂಬುದನ್ನು ಮರೆಯಬಾರದು. ವಿದೇಶೀ ವ್ಯಾಪಾರ, ವಿದೇಶೀ ವಸ್ತುಗಳಿಗೆ ಪ್ರೋತ್ಸಾಹಕೊಡಕೂಡದು. ಆದಷ್ಟು ಬೇಗನೆ ದೇಶೀಯ ವ್ಯಾಪಾರಕ್ಕೂ ದೇಶೀಯ ವಸ್ತುಗಳಿಗೂ ಬೆಂಬಲವಿತ್ತು ದೇಶಾಭಿಮಾನವನ್ನು ಪ್ರದರ್ಶಿಸತಕ್ಕದ್ದು." ಅಧ್ಯಕ್ಷರ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಉಡುಪಿ ಮುನ್ಸಿಪಲ್ ಜಿಮ್ಖಾನಾ ಕಮಿಟಿಯ ಆಶ್ರಯದಲ್ಲಿ ನಡೆದ ಷಟ್ಲ್ ಬಿಂಟನ್ ಫ್ಯಾನಲ್ಸಿನಲ್ಲಿ ಶ್ರೀ. ಆರ್. ಜಿ. ಹೊಸಕೆರೆಟ್ಟಿ ಕುಂದಾಪುರ ಇವರ ಟೀಮಿನವರು ಸ್ಥಳೀಯ ಬೋರ್ಡ್ ಹೈಸ್ಕೂಲ್ ಟೀಮಿನವರನ್ನು ಸೋಲಿಸಿದರು.

ಮಹಾಸಭೆ—ಉಡುಪಿ ತಾಲೋಕು ಕಾಂಗ್ರೆಸ್ ಕಮಿಟಿಯ ಮಹಾಸಭೆಯು ಇದೇ ತಿಂಗಳ ತಾ. 30ನೇ ಆದಿತ್ಯವಾರ ಮಧ್ಯಾಹ್ನ ಘಂಟೆ 3ಕ್ಕೆ ಜರಗುವದುಂಟೂ ಅದರ ಕಾರ್ಯಕ್ರಮದ ಸೂಚಿಯನ್ನು ಎಲ್ಲಾ ಸದಸ್ಯರಿಗೂ ಟಪ್ಪಾಲುದ್ವಾರಾ ಕಳುಹಿಸಲಾಗಿದೆಯೆಂದೂ ಅಧ್ಯಕ್ಷರು ತಿಳಿಸುತ್ತಾರೆ.

ಉಡುಪಿ ಟೌನ್ ಕಾಂಗ್ರೆಸ್ ಕಮಿಟಿಯ ಆಫೀಸ್ ಬೇರರ್ಸರ ಚುನಾವಣೆ ನಡಿಸಲು ಶ್ರೀ. ಪಾಂಗಾಳ ಮಂಜುನಾಥ ನಾಯ್ಕರಿಗೆ ಅಧಿಕಾರಕೊಡಲಾಗಿದೆಯೆಂದು ರಿಟರ್ನಿಂಗ್ ಆಫೀಸರರಾದ ಶ್ರೀ. ಕೆ. ಲಕ್ಷ್ಮೀನಾರಾಯಣ ನಾಯ್ಕರು ತಿಳಿಸುತ್ತಾರೆ.

ಇಂದ್ರಾಣೀ ದೇವಾಲಯದಲ್ಲಿ—ನೂತನ ರಥಸಮರ್ಪಣೋತ್ಸವವು ತಾ. 22-4-1939ನೇ

(ಇನ್ನೇ ಕಲಮಿನ ಬುಡ ನೋಡಿರಿ.)

ನವಯುಗದ ವಿಚಾರಸಂಕ್ರಾಂತಿ

ಲೇಖಕರು:—
ಶ್ರೀ. ಕೆ. ಭೋಜರಾಜ ಹೆಗ್ಡೆ, ಕಣಂಜಾರು.

ಹಿಂದಿನ ಧರ್ಮಶಾಸ್ತ್ರಗಳನ್ನು ವರ್ಜಿಸಿ ಇಂದಿನ ವಾತಾವರಣಕ್ಕೊಪ್ಪುವ ಇನ್ನೊಂದನ್ನು ಸ್ವೀಕರಿಸುವುದು ಜೀವಿಸಿರುವುದರ ಲಕ್ಷಣವಾಗಿದೆ. ಧಾರ್ಮಿಕ ಜಡಮನೋವೃತ್ತಿಯೇ ನಮ್ಮಿಂದಿನ ದುರ್ಗತಿಗೆ ಕಾರಣವಾಗಿದೆ.

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ನಮ್ಮ ಭಾರತವರ್ಷದ ಧಾರ್ಮಿಕಸ್ಥಿತಿಯನ್ನು ಸ್ವಲ್ಪ ಪರಿಶೀಲಿಸೋಣ. ಪ್ರಾಚೀನ ವೇದೋಪನಿಷತ್ತುಗಳಿಂದ ಹಿಡಿದು ಹಲವು ಮುಖಗಳಲ್ಲಿ ಬೆಳೆಯುತ್ತಾ ಈಗ ಬೃಹದಾಕಾರವನ್ನು ತಾಳಿರುವ ನಮ್ಮ ಧರ್ಮವು ಬೇರೆಲ್ಲಿಯೂ ಇಲ್ಲದಂತಹ ಕಠಿಣ ಶಾಸನ ನಿರ್ಬಂಧಗಳನ್ನು ನಮ್ಮ ಮೇಲೆ ಹೊರಿಸಿ ಅದರ ಭಾರದಿಂದ ನಾವೆಂದೂ ತಲೆಯೆತ್ತದಂತಾಗಿದೆ. ನಮ್ಮಲ್ಲಿ ಅಂದಿನಿಂದಲೂ ಧರ್ಮೋಪದೇಶಕರಿಗೇನೂ ಕಡಿಮೆಯಿಲ್ಲ. ನಮ್ಮ ಭಾರತವರ್ಷವು ನೀತಿಬೋಧಕರ, ಶಾಸ್ತ್ರೋಪದೇಶಕರ, ಮಠಾಚಾರ್ಯರುಗಳ ಮತ್ತು ಸಾಧು ಸಂತರುಗಳ ಸಂತೆಯಾಗಿದೆಯೆನ್ನಬಹುದು. ಇವರನ್ನೆಲ್ಲಾ ಹಳಿಯುವುದಾಗಲೀ ಅಲ್ಲಗಳೆಯುವುದಾಗಲೀ ಪ್ರಸ್ತುತ ಲೇಖನದ ಉದ್ದೇಶವಲ್ಲ. ಇವರೆಲ್ಲರೂ ವೈಯಕ್ತಿಕವಾಗಿ ಮಹಾತ್ಮರೇ ಆಗಿದ್ದಿರಬಹುದಲ್ಲದೆ ಅವರಂದು ಇಟ್ಟುಕೊಂಡಿದ್ದ ಉದಾತ್ತ ಧ್ಯೇಯಾದರ್ಶಗಳ ಔಚಿತ್ಯ ಯಥಾರ್ಥತೆಗಳು ಪ್ರಶ್ನಿಸಲ್ಪಡತಕ್ಕದಲ್ಲವಾಗಿರಬಹುದು. ಆದರೆ ಇವರು ಬೋಧಿಸಿದ ಆ ಧರ್ಮವು ಇಂದಿನ ಜನಜೀವನದ ಸ್ಫೂರ್ತಿಜ್ಯೋತಿಯಿಂದ ಬೆಳಗುತ್ತಿದೆಯೇ? ಇಂದಿನ ವಿಶಾಲವಿಶ್ವದ ವ್ಯಾಪಕಭಾವನೆಯನ್ನದು ಪುರೋಧಿಸುವುದೇ? ಇರಲಿ, ಇವರ ಬೋಧನೆಗಳ ಅಪ್ರತ್ಯಕ್ಷ ಪರಿಣಾಮವು ಮಾನವ ಸಮಾಜದಲ್ಲಿ ಯಾವ ರೀತಿಯಲ್ಲಾಯಿತೆಂದರೆ ಜನಸಾಮಾನ್ಯರಲ್ಲಿರುವ ಆತ್ಮಶ್ರದ್ಧೆಯು ಮಾಯವಾಗಿ, ಸ್ವಾವಲಂಬನ ಶಕ್ತಿಯು ಕುಗ್ಗಿಹೋಗಿ ತಮ್ಮ ಉದ್ಧಾರಕ್ಕಾಗಿ ಇತರರ ಕಡೆಗೆ ಕತ್ತುನೀಡಿ ಕಾದುಕೂತುಕೊಳ್ಳುವ ನೈತಿಕ ಪರಾವಲಂಬನೆಯುಂಟಾಯಿತು. ಅವರು ಹೇಳಿಕೊಟ್ಟ ಧಾರ್ಮಿಕತತ್ವಗಳನ್ನೂ ಸಾಂಪ್ರದಾಯಿಕ ವಿಧಿಗಳ ಯುಕ್ತಾಯುಕ್ತತೆಯನ್ನೂ ತಮ್ಮ ಸ್ವಂತ ವಿಚಾರದ ಒರೆಗಲ್ಲಿಗೆ ಹಚ್ಚಿ ಆಯಾಯ ಕಾಲಪರಿಸ್ಥಿತಿಗಳಿಗನುಸಾರವಾಗಿ ಮಾರ್ಪಡಿಸಿಕೊಂಡು, ತಮ್ಮ ತಮ್ಮ ಅವಸರಾವಶ್ಯಕತೆಗಳಿಗೆ ಹೊಂದಿಸಿಕೊಳ್ಳುವ ವಿಮರ್ಶಕಬುದ್ಧಿಯು ಹೊರಟುಹೋಗಿ, ಅವುಗಳ ನಿಯಮಗಳನ್ನು ಯಂತ್ರವತ್ತಾಗಿ ಪಾಲಿಸಿಕೊಂಡು ಬರುವ ರೂಢಿಬದ್ಧವಿಚಾರವಿಹೀನತೆಯು ಬೇರೂರಿಕೊಂಡಿತು. ಮೇಲೆ ಹೇಳಿದ ಆ ಮಹಾನುಭಾವರುಗಳು ಉಪದೇಶಿಸಿದುದಾದರೂ ಏನು? ನಿತ್ಯಜೀವನದ ವ್ಯವಹಾರ್ಯ ತತ್ವಗಳೇನಾದರೂ ಅವುಗಳಲ್ಲಿವೆಯೇ? ಮಾನವನ ಸ್ವಾತಂತ್ರ್ಯ ಮತ್ತು ಸುಖಾಪೇಕ್ಷೆಯ ಹಸಿವೆಗೆ ಐಹಿಕಜೀವನದ ಸುಖಸೌಲಭ್ಯಗಳಿಗೆ ಬೇಕಾದ ಸುಲಭತತ್ವಗಳನ್ನು ಬೋಧಿಸುವ ಬದಲು ಪಾರಲೌಕಿಕವಾದ ಪಾರಮಾರ್ಥಿಕತತ್ವಗಳೆಂಬ ಅರಗಿಸಲಾರದ ಕಬ್ಬಿಣದ ಕಡಲೆಗಳನ್ನು ನೀಡಿದವರವರು! ಈ ವಾಸ್ತವಿಕ ಜಗತ್ತಿನ ಕಡೆಗೆ ಕುರುಡುಗಣ್ಣಿನಿಂದ ನೋಡಿ ಶೂನ್ಯದ ಮೋಕ್ಷಸಾಮ್ರಾಜ್ಯವೊಂದರ ಸುಖವನ್ನಪೇಕ್ಷಿಸುವುದೇ ಆದರ್ಶವೆಂದು ಸಾರಿದರು. ಕಾಣದ ಸ್ವರ್ಗಕ್ಕೆ ತೋರದ ದಾರಿಯನ್ನರಸುವ ಬರಿಯ ಮರುಳಾಟಕೆಗೆ ಕುರಿಮಂದೆಯಂತಿರುವ ಅರಿಯದ ಜನರನ್ನು ಹುರಿದುಂಬಿಸಿದರು! "ಕಾಣುವ ಈ ಜಗತ್ತೆಲ್ಲಾ ಬರಿಯ ಮಾಯೆ, ತೋರಿಯಡಗುವ ನೀರಗುಳ್ಳೆಯಂತೆ ಕ್ಷಣಿಕವಾದುದು" ಎಂದೆಲ್ಲಾ ಮಾಯಾವಾದ, ನಶ್ವರವಾದ, ದೈವವಾದ, ಅದೃಷ್ಟವಾದಗಳಲ್ಲಿ ಮೂಢನಂಬಿಕೆಯನ್ನು ಜನರಲ್ಲಿ ಹಬ್ಬಿಸಿದರು. ಜೀವನವಿಕಾಸಕ್ಕೆ ಸಾಧಕವಾದ ಮಹತ್ವಾಕಾಂಕ್ಷೆಯನ್ನು ಕುಂದಿಸಿ ವೈರಾಗ್ಯದ ಜಡಮನೋವೃತ್ತಿಯನ್ನು ತುಂಬಿದರು; ಕರ್ಮಕಾಂಡದ "ಪ್ರವೃತ್ತಿಮಾರ್ಗ"ವನ್ನು ತೊರೆಯಿಸಿ 'ನಿವೃತ್ತಿಮಾರ್ಗದ' ನಿಷ್ಕ್ರಿಯಾತ್ಮಕವಾದ ಔದಾಸೀನ್ಯ ಆಲಸ್ಯಗಳೇ ಜೀವನದ ಧ್ಯೇಯವಾಗಿರಬೇಕೆಂದು ಬೋಧಿಸಿದರು. ಆತ್ಮಪೌರುಷವನ್ನು ಪ್ರೋತ್ಸಾಹಿಸುವ ಬದಲು ದೈವವಾದದ ಪೇಡಿತನವನ್ನು ಹಬ್ಬಿಸಿದರು. ಆ ಮೇಲೆ ಬಂದ ಮಠಾಚಾರ್ಯರುಗಳು ಸಾಧಿಸಿದ ಮಹತ್ಕಾರ್ಯವಾದರೂ ಮತ್ತೆ ಅದೇನಿದೆ? ಇವರು ಕೂಡ ಸಾಮಾನ್ಯ ಜನತೆಯ ಜೀವನವ್ಯವಹಾರದ ಮಟ್ಟಕ್ಕಿಳಿದು ಬಂದು ತಮ್ಮ ಹೃದಯ ಗವಾಕ್ಷಗಳನ್ನು ಅವರ ಮುಂದೆ ತೆರೆದಿಡುವ ಬದಲು ಗುರುಸ್ಥಾನದ ಉನ್ನತಪೀಠದಲ್ಲಿದ್ದುಕೊಂಡೇ ತಮ್ಮ ಘನತತ್ವಗಳನ್ನು ಸಾರಿದರು. ದ್ವೈತಾದ್ವೈತವೆಂದೆಲ್ಲಾ ತಮ್ಮದೊಂದೊಂದು ಮತಗಳನ್ನು ಸ್ಥಾಪಿಸಿ ಅವುಗಳ ಪ್ರಚಾರಕ್ಕಾಗಿ ಇಂದಿನ ಮಠದೇವಾಲಯಗಳೆಂಬ ಧಾರ್ಮಿಕಸಂಸ್ಥೆಗಳನ್ನು ಸ್ಥಾಪಿಸಿದರು. ನಿಜವಾಗಿ ಸಮಾಜದ ಸಂಘಟನೆಯನ್ನು ಸಾಧಿಸಬೇಕಾಗಿದ್ದ ಈ ಸಂಸ್ಥೆಗಳಿಂದ ಅನೇಕ ದುರ್ಘಟನೆಗಳೇ ಹೆಚ್ಚಾಗ ತೊಡಗಿದವು.

ಸಾರಾಂಶದಲ್ಲಿ ಹೇಳುವುದಾದರೆ "ಧರ್ಮವೆಂಬುದು ಜನತೆಯನ್ನು ದೀರ್ಘವಿಸ್ಮೃತಿಯಲ್ಲಿ ಕೆಡಹಿ ಎಂದೂ ಜಾಗೃತಿ ಚೇತರಿಕೆಗಳನ್ನು ಹೊಂದದಂತೆ ಪ್ರಯೋಗಿಸಿದ 'ಅಫೀಮು" ಆಯ್ತು. Religion is opium of the people-Karl Marx) ಧಾರ್ಮಿಕ ಸಂಸ್ಥೆಗಳೆಂಬವುಗಳು ಭಟ್ಟಪೂಜಾರಿಗಳ ಆಚಾರ್ಯ ಪುರೋಹಿತರುಗಳ ತಕ್ಕ ವಂಚನೆಗಳ ವ್ಯವಸ್ಥಿತ ರೂಪ (Organized hypocrisy) ವಾಯ್ತು. ಆರಾಧನೆ, ಉಪಾಸನೆ, ಪೂಜೆ-ಪುರಸ್ಕಾರಾದಿ ಬಾಹ್ಯಪ್ರಕ್ರಿಯೆಗಳೆಲ್ಲಾ ಒಳಗಿನ ಕಾಪಟ್ಯ ಕೌಟಿಲ್ಯಗಳನ್ನು ಮರೆಯಿಸುವಂತಹ ಬರಿಯ ಡಾಂಭಿಕ ಪ್ರದರ್ಶನಗಳಾದುವು. ಧಾರ್ಮಿಕ ಪ್ರವೃತ್ತಿಯೆಂಬುದು ಅನೊಂದು ತರದ ವ್ಯಾಪಾರವೃತ್ತಿಯಾಗಿ (Commercialized religion) ಕೆಲವು ಮಂದಿಯ ಉಪಜೀವನಕ್ಕೊಂದು ಉಪಕರಣವಾಯಿತು. ಅವರ ಸ್ವಾರ್ಥಸಾಧನೆಗೊಂದು ಸುಲಭ ಸಾಧನವಾಯಿತು ದೇವರಲ್ಲಿ ನಾವು ನಿರಂತರ ಇಡುತ್ತಿರಬೇಕಾದ ಭಕ್ತಿಯೇ ಭೀತಿಯ ಪರ್ಯಾಯನಾಮವಾಗಿ ನಮ್ಮವರ ಅಜ್ಞಾನದ ಆರಂಭವಾಯಿತು. ಜನರ ಈ ಅಜ್ಞತೆ (ignorance)ಯನ್ನು ದುರುಪಯೋಗಪಡಿಸಿಕೊಂಡು ನಮ್ಮ ಇಂದಿನ ಧಾರ್ಮಿಕಕ್ಷೇತ್ರದಲ್ಲಿ ಹಿಟ್ಲರ್ ಮುಸಲೋನಿಗಳಂತೆ ಸರ್ವಾಧಿಕಾರಿಗಳಾಗಿ ಮೆರೆಯುವ ಧರ್ಮಾಧಿಕಾರಿಗಳು ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡು ಜನಸಮುದಾಯದ ವೈಯಕ್ತಿಕ ಸ್ವಾತಂತ್ರ್ಯದ ಮೇಲೆ ತಮ್ಮ ಧಾರ್ಮಿಕ ನಿರ್ಬಂಧಗಳನ್ನು ಹೇರತೊಡಗಿದರು. ಈ ರೀತಿಯಲ್ಲಿ ಧರ್ಮವೆಂಬುದು ಸಮಾಜವ್ಯವಸ್ಥೆಯಲ್ಲಿ ಬಂದಣಿಗೆಯೋಪಾದಿಯಲ್ಲಿ ಹಬ್ಬಿ ತಬ್ಬಿಕೊಂಡಿತು.

ಅದಿರಲಿ;—ಇನ್ನು ಕಾಲವು ತನ್ನ ಕೆಲಸವನ್ನೇನಾದರೂ ಮಾಡಿರುವುದೋ ನೋಡೋಣ, ಈಗಂತೂ ನಾವು ವೇದೋಪನಿಷತ್ತುಗಳ, ಶಾಸ್ತ್ರ-ಪುರಾಣಗಳ ಯುಗದಿಂದ ಬಹುದೂರ ಮುಂದೆ ಬಂದಿರುವೆವು. ಇಂದಿನ ಜಗತ್ತು ಹಿಂದಿನ ಪ್ರಪಂಚಕ್ಕಿಂತ ಎಷ್ಟೋ ಮುಂದುವರಿದು ಗುರುತು ಸಿಗದಷ್ಟು ರೂಪಪರಿವರ್ತನೆಯನ್ನು ಹೊಂದಿದೆ. ಇಂದೀಗ ಜೀವನದ ಪ್ರತಿಯೊಂದು ಸಂಗತಿಗಳನ್ನೂ ವೈಜ್ಞಾನಿಕ ದೃಷ್ಟಿಯಿಂದ ಪರಿಶೀಲಿಸಿ ನೋಡುವ ಸ್ವತಂತ್ರವಿವೇಚನಾಶಕ್ತಿಯು ಬೆಳೆಯತೊಡಗಿದೆ. 'ಸ್ವಾತಂತ್ರ್ಯ ವಿಮೋಚನೆ'ಯೆಂಬುದೇ ಇಂದು ಸಕಲರ ನರನಾಡಿಗಳಲ್ಲಿಯೂ ಮಿಡಿಯುತ್ತಿರುವ ಗಾನವಾಗಿದೆ. ಇಂದಿನ ವಿಚಾರಕ್ರಾಂತಿಯು ಹಳೆಯ ವೇದಧರ್ಮಗಳು ಮಾನವ ಸಮಾಜದ ಮೇಲೆ ಹೊರಿಸಿರುವ ಕಠಿಣ ಶಾಸನ ನಿರ್ಬಂಧಗಳನ್ನು ಕಿತ್ತೊಗೆದು ಆತನು ಒಮ್ಮೆ ಕಳೆದುಕೊಂಡಿರುವ ಆತ್ಮಸ್ವಾತಂತ್ರ್ಯವನ್ನು ಪುನಃ ದೊರಕಿಸಿಕೊಟ್ಟಿದೆಯೆನ್ನಬಹುದು ಹೀಗೆ ಆಧುನಿಕ ಪ್ರಪಂಚದ ಪ್ರತಿಯೆಡೆಗಳಲ್ಲಿಯೂ ಪ್ರಚಂಡವಾದ ಆಂದೋಲನಗಳನ್ನೆಬ್ಬಿಸಿದ ಈ ಸ್ವಾತಂತ್ರ್ಯದಾಹದ ಝಂಝಾವಾತವು ನಮ್ಮತ್ತ ಕಡೆಗೂ ಬೀಸಿ ಭಾರತೀಯ ಸಮಾಜಸಾಗರದಲ್ಲೊಂದು ಅಪೂರ್ವವಾದ ಪ್ರಕ್ಷೋಭೆಯನ್ನುಂಟುಮಾಡಿ ವಿಚಾರದ ತೆರೆಗಳನ್ನೆಬ್ಬಿಸಿದೆ; ಶತಮಾನ ಶತಮಾನಗಳ ನಿಶ್ಚಲತೆಯನ್ನು ಕದಲಿಸಿ ಚಲಿಸುವಂತೆ ಮಾಡಿದೆ

ಆದರೆ ಇಂದು ನಮ್ಮನ್ನೆದುರಿಸಿರುವ ಕೆಲವು ಪ್ರಬಲವಾದ ಆತಂಕ ಪ್ರತಿಬಂಧಗಳನ್ನು ಗಮನಿಸುವುದೂ ಅವಶ್ಯಕವಾಗಿದೆ. ಸಮಾಜದಲ್ಲಿ ಮಹತ್ತರವಾದೊಂದು ಪರಿವರ್ತನೆಯ ಸಂದರ್ಭದಲ್ಲಿ ಪ್ರಾಚೀನ ಮತ ಸಂಪ್ರದಾಯವಾದಿಗಳಿಗೂ ಸುಧಾರಕ ಪಂಗಡಗಳಿಗೂ ಧಕ್ಕೆಯುಂಟಾಗುವುದು ಅನಿವಾರ್ಯವಾದರೂ ಅದನ್ನು ಲಕ್ಷಿಸದಿರುವುದು ಹಿತವಲ್ಲ. ಒಂದು ಕಡೆಯಲ್ಲಿ ಸುಧಾರಕ ಮನೋವೃತ್ತಿಯ ತರುಣ ಜನಾಂಗವು ನವಜಾಗೃತಿಯನ್ನು ಹೊಂದಿ ಹಳೆಯ ನಿರ್ಬಂಧಗಳ ಬಂಧನವನ್ನು ಹರಿದೊಗೆದು ಸ್ವತಂತ್ರವಾಗಿ ಜೀವನ ವಿಕಾಸವನ್ನು ಸಾಧಿಸಲು ಯತ್ನಿಸುತ್ತಿರುವಾಗ ಇನ್ನೊಂದೆಡೆಯಲ್ಲಿ ಸನಾತನಿಗಳೆಂದೆನಿಸುವ ಪ್ರಾಚೀನತಾವಾದಿಗಳು "ಮಂಗಮುಷ್ಟಿ"ಯಂತೆ ಹಿಡಿದುದನ್ನು ಬಿಡಲೊಲ್ಲದೆ ಹಳೆಯ ಪದ್ಧತಿ ಆಚಾರ-ವಿಚಾರಗಳಿಗೇ ಅಂಟಿಕೊಂಡು ಸುಧಾರಕ ಹಾದಿಯಲ್ಲಿ ಕಂಟಕಪ್ರಾಯರಾಗುತ್ತಿರುವರು. ಹಿಂದಿನ ಶಾಸ್ತ್ರಪುರಾಣಗಳೇ ಇವರ ಸರ್ವಸ್ವ! ಇವುಗಳ ಸಂಕುಚಿತ ಪರಿಧಿಯಿಂದ ಹೊರಗೆ ಬೇರೆ ಲೋಕವಿಲ್ಲ ಇವರಿಗೆ! ಇತ್ತ ನೋಡುವವರಾಗಿಲ್ಲ-ನೋಡಿದರೂ ಒಪ್ಪಲಾರರು. ಇವರ ಅಂದಿನ ಆದರ್ಶಗಳಿಗೂ ಇಂದಿನ ವಸ್ತುಸ್ಥಿತಿಗೂ ಯಾವ ಬಾದರಾಯಣ ಸಂಬಂಧವೂ ಇಲ್ಲದಿದ್ದರೂ ಕಲಿಯುಗವನ್ನು ಕಲಿಯುಗವಾಗಿ ಮಾರ್ಪಡಿಸಬೇಕೆಂಬ ಹಟ ಇವರದು! ಹಿಂದಿನ ಮನು ಪರಾಶರರನ್ನು ಬಿಟ್ಟರೆ ಇವರಿಗೆ ಬೇರೆ ದೇವರೇ ಗತಿ ಇಂದಿನ ವಿದ್ಯಾವಂತರೂ, ಸುಸಂಸ್ಕೃತರೂ ಎಂದೆನಿಸುವ ಸುಧಾರಕರೊಂದೆಡೆಯಲ್ಲಿ ಹಿಂದಿನ ಧರ್ಮದೇವರುಗಳ ಮೇಲೆ ಧಾಳಿಗೊಂಡು, ಪ್ರಾಚೀನ ಪದ್ಧತಿ ರೂಢಿಗಳ ಮೇಲೆ ದಂ

ಧಾತುಪುಷ್ಟಿ ಲೇಹ ಸುವರ್ಣ, ಸಾಲಾಮಿಶ್ರಿ, ಕಲ್ಪದ ಮಿಶ್ರ

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಚಳಿಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ 2-8-0.

ಮೇಹ ಕುಠಾರ— ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಮಾಡುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು ಮೂತ್ರದಲ್ಲಿ ಧಾತು ಹೋಗುವುದು ಸೊಂಟನೋವು ಮೂತ್ರ, ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಅಲ್ಲದೆ ಇಪ್ಪತ್ತು ನಮೂನೆಯ ಮೇಹ ರೋಗಗಳಿಗೆ ದಿವ್ಯಔಷಧ, ಡಬ್ಬಿ 1ರ ರೂ. 2-8-0.

ಕಸ್ತೂರಿ ಮಿಶ್ರಣ ದಶಮೂಲ— ಪ್ರಸವಾನಂತರ ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ 1ರ ರೂ. 1—8—0

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ನವಭಾರತ ಬುಕ್ ಡಿಪ್ಪೋ, ಉಡುಪಿ.ಶ್ರೀ ಕೃಷ್ಣ ಫಾರ್ಮಸಿ, ಕುಂದಾಪುರ.ವಿಟ್ಠಲ ನಾರಾಯಣಶೆಣೈ,ಟ್ರೇಮ್ ಟರ್ಮಿನಸ್ ಮಾಜಗಾಂ ಮುಂಬಯಿ.

ಗೆಯೆದ್ದು ಹಳೆಯ ಕಾಲಾಂತರವು ಸ್ವತಂತ್ರ ವಿಚಾರದ ತಳಹದಿಯಿಲ್ಲದೆ ಕಟ್ಟಿಕೊಂಡು ಬಂದಿರುವ ಧಾರ್ಮಿಕ ಸಂಪ್ರದಾಯಗಳನ್ನೆಲ್ಲಾ ನಿರ್ಮೂಲನಗೊಳಿಸಿ, "ಒಂದು ಶತಮಾನವನ್ನು ಒಂದೇ ದಿನ ಜೈಸುವ" ಎಂದು ತನ್ನ ಕ್ರಾಂತಿಕಂಠಾರವನ್ನೆತ್ತಿ ಹಾಹಾರುತ್ತಿರುವಾಗ ಈ ಶ್ರದ್ಧಾಳು ಸನಾತನಿಗಳು ಬೆಚ್ಚಿಬಿದ್ದು "ಅಯ್ಯೋ ಕಲಿಗಾಲ! ದೈವದ್ರೋಹ! ಧರ್ಮಗ್ಲಾನಿ!—ಎಲ್ಲವೂ ಭ್ರಷ್ಟವಾಗುತ್ತಿದೆಯಲ್ಲಾ! ಅಬ್ರಹ್ಮಣ್ಯಂ!" ಎಂದು ಅರಣ್ಯರೋದನವನ್ನು ಮಾಡುತ್ತಿರುವರು.

ಸನಾತನಿಗಳೇ, ಬೆಚ್ಚಬೇಡಿರಿ! ಬೆದರಬೇಡಿರಿ! ಧರ್ಮಶಾಸ್ತ್ರಗಳಾಗಲಿ ಸಂಪ್ರದಾಯಗಳಾಗಲೀ ಎಲ್ಲಿಯೂ ಹೋಗುವುದಿಲ್ಲ. ಒಂದು ಹೋದರೆ ಅದರ ಸ್ಥಾನವನ್ನು ಇನ್ನೊಂದು ಆಕ್ರಮಿಸಿಯೇ ಬಿಡುವುದು. ಹೊಸತೆಂಬುದು ಹಳದರ ರೂಪಾಂತರ ಮಾತ್ರವಷ್ಟೆ! ಆಯಾಯ ಕಾಲಕ್ಕೆ ಬೇಕಾದ ಸೂತ್ರ ವಿಧಿಗಳು ಆಯಾಯ ಕಾಲದಲ್ಲಿಯೇ ಹುಟ್ಟಿಬರಬೇಕು. ಒಂದು ಸಾಂಪ್ರದಾಯಿಕ ಪದ್ಧತಿಯ ನಿಯಮವು ಎಷ್ಟೊಂದು ಪ್ರಾಚೀನವಾದದ್ದಿರಲಿ, ಸಮಾಜದಲ್ಲಿ ಎಷ್ಟು ಬಲವಾಗಿ ನೆಲೆಗೊಂಡದ್ದಿರಲಿ, ಕಾಲಾಘಾತದಿಂದ ಅದರ ಮೂಲಭೂತ ತತ್ವಗಳು ಶಿಥಿಲವಾದಾಗ, ಅದರ ಸತ್ವವು ಕುಂದಿ ಶುಷ್ಕವಾದಾಗ, ಅಂತಹ ನಿಯಮಗಳನ್ನು ಅನುಸರಿಸುವುದಕ್ಕಿಂತಲೂ ಅತಿಕ್ರಮಿಸುವುದರಿಂದಲೇ ಅವುಗಳಿಗೆ ಹೆಚ್ಚಿನ ಮರ್ಯಾದೆಯನ್ನು ಸಲ್ಲಿಸಿದಂತಾಗುತ್ತದೆ; ಅಲ್ಲದೆ ಅದು ನಮ್ಮ ಆತ್ಮಗೌರವಕ್ಕೂ ಮೇಲು! ಯಾಕೆಂದರೆ ಯಾವೊಂದು ನಿಯಮವಾಗಲೀ ಪದ್ಧತಿಯಾಗಲೀ ಶಾಶ್ವತವಾಗಿರದೆ ಆಯಾಯ ಕಾಲಪರಿಸ್ಥಿತಿಗನುಸಾರವಾಗಿ ರೂಪಾಂತರವನ್ನು ಹೊಂದುತ್ತ, ಸಮಾಜದ ಸಂಸ್ಕಾರ ವಿಕಾಸಗಳ ಪ್ರತಿಯೊಂದು ಅವಸ್ಥೆಗೂ ಪ್ರಾತಿನಿಧಿಕವಾಗಿರುವಂತೆ ಏರ್ಪಡಿಸಲಾಗುವ ತಾತ್ಕಾಲಿಕ ವ್ಯವಸ್ಥೆ ಮಾತ್ರವಲ್ಲವೆ ಅವುಗಳು ಸಾರ್ವಕಾಲಿಕವಾಗಿ ಅನ್ವಯಿಸಿಕೊಂಡು ಬರಬೇಕೆಂಬ ಉದ್ದೇಶವು ಅವುಗಳ ಮೂಲಕರ್ತೃಗಳಿಗೂ ಇದ್ದಿರಲಾರದು. ಆದುದರಿಂದ, ಸಂಪ್ರದಾಯವಾದಿಗಳೇ, ನೀವು ಅಂದಿನಿಂದಲೂ ಹೊತ್ತುಕೊಂಡು ಬಂದಿರುವ ಧರ್ಮ—ಶಾಸ್ತ್ರ, ರೂಢಿ ಪದ್ಧತಿಗಳ ಮೂಟೆಯನ್ನು ಸ್ವಲ್ಪ ಕೆಳಗಿಳಿಸಿ ಅದರ ಭಾರದಿಂದ ನಿಮ್ಮ ಕುಗ್ಗಿದ ಕೊರಳನ್ನೂ, ಬಾಗಿದ ಬೆನ್ನನ್ನೂ ನೆಟ್ಟಗೆಮಾಡಿ, ಹಾಯಾಗಿ ಉಸಿರ್ದೆಗೆದು ಬಹು ದಿನಗಳ ಆಯಾಸವನ್ನೊಮ್ಮೆ ಪರಿಹರಿಸಿಕೊಳ್ಳಿರಿ. "ಧಾರಣಾದ್ಧರ್ಮಮಿತ್ಯಾಹುಃ" ಎಂಬಂತೆ ಯಾವುದು ನಿಮ್ಮ ಧಾರಣೆಗೆ ಯೋಗ್ಯವಾಗಿರುವುದೋ ಅದನ್ನೇ ಸ್ವೀಕರಿಸಿರಿ. ಹಳೆಯ ಧರ್ಮಶಾಸ್ತ್ರಗಳ ರಸಪಾಕವಿಂದು ಹಳಸಿಹೋಗಿ ಕೊಳೆತು ನಾರುತ್ತಿದೆ; ಅದನ್ನು ಸ್ವೀಕರಿಸಿದರೆ ಸಮಾಜ ದೇಹದ ಆರೋಗ್ಯಕ್ಕೆ ಹಾನಿಯಿದೆ. ಅದಕ್ಕೆ ಬೇಕಾದರೆ ನೀವೆಷ್ಟು ಒಗ್ಗರಣೆಹಾಕಿದರೂ ಇಂದಿನ ಅಭಿರುಚಿಗೆ ಒಗ್ಗದದು! ಆದುದರಿಂದ ಅದನ್ನು ವರ್ಜಿಸಿ ಇಂದಿನ ವಾತಾವರಣಕ್ಕೊಪ್ಪುವ ಇನ್ನೊಂದನ್ನು ಸ್ವೀಕರಿಸಿರಿ. ಶಾಸ್ತ್ರಧರ್ಮಗಳೇನೂ ಗ್ರಂಥಸ್ಥವಲ್ಲ. ಮಾನವನ ಅಂತಃಕರಣವೇ ಅದರ ಭದ್ರಪೀಠ! ಅದನ್ನು ಅರಳಿಸಿರಿ! ಶ್ರದ್ಧಾಳುಗಳೇ, ಇತರರಲ್ಲಿ ನೀವಿಡುವ ಶ್ರದ್ಧೆಯನ್ನು ನಿಮ್ಮ ಸ್ವಂತ ಬುದ್ಧಿಯಲ್ಲಿಡಿರಿ! "ಉದ್ಧರೇದಾತ್ಮನಾತ್ಮಾನಂ" ಎಂಬ ಗೀತಾವಚನವಂತೆ ನಿಮ್ಮ ಉನ್ನತಿಗಾಗಿ ಇತರರನ್ನು ಆಶ್ರಯಿಸದೆ ನಿಮಗೆ ನೀವೇ ಸಾಧಿಸಿಕೊಳ್ಳಿರಿ.

ಆದರೆ ಇಲ್ಲೊಂದು ವಿಚಾರವನ್ನು ಗಮನಿಸುವುದು ಅವಶ್ಯಕವಾಗಿದೆ. ನಮ್ಮಲ್ಲಿ ಸುಧಾರಣಾಪ್ರಿಯರೆನಿಸಿರುವ ಅನೇಕರು "ಪರಿವರ್ತನೆ" "ನವೀನತೆ"ಗಳಲ್ಲಿರುವ ಅತಿಮೋಹದಿಂದಾಗಿ ಹದಮೀರಿಹೋಗಿದ್ದಾರೆ. (Suffering from an over-doze of reformism) ಇವರ ನೂತನ ವಿಚಾರಗಳೆಲ್ಲಾ ಸ್ವಯಂ ಸಂಸ್ಕಾರದ ಫಲವಾಗಿರದೆ ಪರದೇಶಗಳಿಂದ ಹೊಸತಾಗಿ ಆಮದಾಗಿ ಬಂದವುಗಳು. ಸುಧಾರಕರೇ, ಸ್ವತಂತ್ರ ವಿಚಾರವೇದಿಕೆಯಲ್ಲಿ ನಮ್ಮ ದೇಶದ ಜೀವಜೀವಾಳವಾದ ಸಂಸ್ಕೃತಿಯನ್ನು ಬಲಿಗೊಡುವುದಲ್ಲ; ಅದನ್ನಲ್ಲಿ ಪ್ರತಿಷ್ಠಿಸಿ ಹೊಸ ಜೀವದಿಂದ ತುಂಬಬೇಕು. ನಮ್ಮ ದೇಶದ ಸ್ಥಿತಿಗತಿಯನ್ನು ನೋಡಿ, ಪರಿಸ್ಥಿತಿಯನ್ನು ತಾಳ್ಮೆಯಿಂದಲೂ, ನಿರಾಗ್ರಹ ಬುದ್ಧಿಯಿಂದಲೂ ಪರಿಶೀಲಿಸಿ ಸಮಾಜದ ಪದ್ಧತಿಗಳಲ್ಲಿರುವ ನಿಜವಾದ ಕುಂದು-ಕೊರತೆ, ಲೋಪ ನ್ಯೂನತೆಗಳನ್ನು ಚಿಕಿತ್ಸಕ ದೃಷ್ಟಿಯಿಂದ ಕಂಡುಹಿಡಿದು, ನಮ್ಮ ಹಿಂದಿನ ಆಚಾರ ವಿಚಾರಗಳಲ್ಲಿ ಬೆರೆತುಕೊಂಡಿರುವ ಜಳ್ಳನ್ನು ಸ್ವತಂತ್ರ ವಿಚಾರದ ಗಾಳಿಯನ್ನು ತೂರಿ, ಕಾಳನ್ನು ಒಂದೆಡೆ ಸಂಗ್ರಹಿಸಿ, ಸಮಾಜ ದೇಹದ ಮುಂದಿನ ಪರಿಪುಷ್ಟಿ ಪೋಷಣೆಗೆ ಬೇಕಾದ ಸಾಧನ ಸಾಮಗ್ರಿಗಳನ್ನೊದಗಿಸಿಕೊಡುವುದೇ ನಿಜವಾದ ಸುಧಾರಣೆಯಲ್ಲದೆ ಕೇವಲ ಪರಕೀಯರ ಅಂಧಾನುಕರಣೆಯು ಸುಧಾರಣೆಯೆನ್ನಿಸಲಾರದು. ನಮ್ಮ ನಡೆ ನುಡಿ ವಿಚಾರಗಳಲ್ಲಿ ಸ್ವಾತಂತ್ರ್ಯ ಬೇಕೆಂಬುದು ನಿಜ. ಆದರೆ ಆ ಸ್ವಾತಂತ್ರ್ಯವೆಂಬುದು ಸ್ವಚ್ಛಂದತೆಯಾಗಬಾರದು. (Liberty is not license) ನಮ್ಮ ಧಾರ್ಮಿಕ ಸಾಮಾಜಿಕ ಜೀವನವು ಚಲಿಸದೆ ನಿಂತಲ್ಲಿಯೇ ನಿಂತು ಹೊಲಸಿನಿಂದ ನಾರುವ ಕುಂಟೆಯ ನೀರೂ ಆಗಬಾರದು; ಅಥವಾ ಯಾವೊಂದು ನಿಶ್ಚಿತ ಗೊತ್ತು ಗುರಿಯಿಲ್ಲದೆ ಸಿಕ್ಕಾಬಟ್ಟೆ ಹರಿದು ಹಾವಳಿಮಾಡುವ ಹುಚ್ಚುಹೊಳೆಯೂ ಆಗಬಾರದು. ಅದು ವಿಸ್ತರಭಸದಿಂದಲೂ, ವೈವಿಧ್ಯ ವೈಚಿತ್ರ್ಯಗಳಿಂದಲೂ ರಾಮಣೀಯಕವಾಗಿ ಹರಿಯುವ ತೊರೆಯ ಮೃದು ಮಂದಗತಿಯಂತಿರಬೇಕು. ಹಳೆಯ ಧರ್ಮವು ಇಂದಿನ ಕಾಲಪರಿಸ್ಥಿತಿ ಮತ್ತು ಜನಜೀವನಕ್ಕೆ ಒಪ್ಪದಿದ್ದರೆ ಅದು ಅಳಿಸಲೇಬೇಕು, ನಿಜ. ಆದರೆ ಧರ್ಮವೇ ಇಲ್ಲದಂತಾಗಬಾರದು. ಮಾನವನ ಸಮಾಜದ ಸಕಲ ವ್ಯವಹಾರಗಳಿಗೂ ನಿಯಮಿತ ರೂಪವೊಂದನ್ನು ಕೊಡಲು ಆತನ ಸ್ವೇಚ್ಛಾಚಾರಗಳಿಗೊಂದು ಗಡಿಯನ್ನೇ ಹಾಕಿಕೊಡಲು ಧರ್ಮವು ಬೇಕು. ಆದರೆ ಅದೊಂದು ನಿರ್ಬಂಧವಾಗಿರಬೇಕೆಂಬುದನ್ನು ಇಂದಿನ ಜನತೆಯು ಒಪ್ಪಲಾರದು. ಅಂದರೆ,—ಧರ್ಮವೆಂಬುದು, ವಿಚಾರವಾಜಿಯು ಸ್ವತಂತ್ರತೆಯ ಹಾದಿಯಲ್ಲಿ ಪ್ರಗತಿ ವಿಕಾಸಗಳ ಕಡೆಗೆ ಮುನ್ನುಗ್ಗದಂತೆ ಜಗ್ಗಿ ಹಿಂದೆಳೆಯುವ ಮೂಗುನೇಣಾಗಿರದೆ ಅದಕ್ಕೆ ನೈಜವೂ ಸರಳವೂ ಆದೊಂದು ಕರ್ಮಮಾರ್ಗವನ್ನು-ಒಂದು ಆದರ್ಶಪಥವನ್ನು ನಿರ್ದೇಶಿಸುವ ಕೈಗಂಬವಾಗಿರಬೇಕು.-ಧರ್ಮವು ಜೀವನದ ವಿಜ್ಞಾನವಾಗಿರಬೇಕು.

ಗಾಂಧಿ ಜೋಯಿಸರ ಭವಿಷ್ಯ ಫಲ.

ನಿಮ್ಮ ಜನನ ತಾರೀಕು ಸಮಯ ಅಥವಾ ಪತ್ರ ಬರೆಯುವ ಘಳಿಗೆ ಮತ್ತು ಅಂದಾಜು ವಯಸ್ಸನ್ನು ತಿಳಿಸಿರಿ. ನಿಮ್ಮ ಕುಟುಂಬ, ವೃತ್ತಿ

ಆರೋಗ್ಯ, ಸಂಪತ್ತು, ಆದಾಯ ವೆಚ್ಚಗಳು, ಅನಿರೀಕ್ಷಿತ ದೆಸೆಗಳು ಮತ್ತು ದುರದೃಷ್ಟಗಳು, ಪ್ರೇಮ, ಅದೃಷ್ಟದ ಲಕ್ಷ್ಮ, ಸೌಭಾಗ್ಯ ದೊರೆಯುವ ದಿನಗಳು ಮತ್ತು ಸಂಖ್ಯೆ, ಇನ್ನಿತರ ಪ್ರಾಮುಖ್ಯ ವಿಷಯಗಳು ನಿಮ್ಮ ಬಾಗಿಲಿಗೆ ಕಳುಹಲ್ಪಡುವವು. ಪ್ರತಿತಿಂಗಳ ಭವಿಷ್ಯವನ್ನೊಳಗೊಂಡ ಒಂದು ವರುಷದ ಭವಿಷ್ಯಫಲಕ್ಕೆ ರೂಪಾಯಿ 3. ಪ್ರತಿತಿಂಗಳ ಆಗುಹೋಗುಗಳ ಸಮೇತ ಐದು ವರುಷದ ಫಲಕ್ಕೆ ರೂಪಾಯಿ 12-8-0. ಸಾಹುಕಾರರಿಗೂ ಉದ್ಯೋಗಸ್ಥರಿಗೂ ಪ್ರತಿವಾರದ ಭಾಗ್ಯವನ್ನು ಸೂಚಿಸುವ ಒಂದು ವರುಷದ ಫಲಕ್ಕೆ ರೂಪಾಯಿ 10. ಭವಿಷ್ಯದ ಕುರಿತು ಕೇಳಲಾಗುವ ಐದು ಪ್ರಶ್ನೆಗಳಿಗೆ ಸರಿಯಾದ ಉತ್ತರವು ಒಂದು ರೂಪಾಯಿ ಕಾಣಿಕೆ ಕೊಟ್ಟಲ್ಲಿ ತಿಳಿಸಲಾಗುವುದು (ವಿ. ಪಿ ಖರ್ಚು ಐದಾಣೆ ಪ್ರತ್ಯೇಕ.)

ಭವಿಷ್ಯ ಫಲದ ಕುರಿತು 'ಸ್ವದೇಶ ಮಿತ್ರನ್' ಮದ್ರಾಸಿನ ದಿನ ಪತ್ರಿಕೆಯು ಈ ರೀತಿ ಬರೆಯುತ್ತದೆ. 'ಶ್ರೀ. ವಿ. ಕೆ. ಶಠಗೋಪಾಚಾರಿಯವರ ಭವಿಷ್ಯವಾಣಿಗಳ ಕುರಿತು ಮಹಾಜನರಿಗೆ ಪರಿಚಯ ಮಾಡಿಕೊಡುವ ಆಗತ್ಯವಿಲ್ಲ. ಮಹಾತ್ಮಾಜಿಯವರ ಬಂಧವಿಮೋಚನೆ, ಅಮೇರಿಕಾ ಸಂಯುಕ್ತ ಪ್ರೆಸಿಡೆಂಟ್ ರೂಸ್‌ವೆಲ್ಟರ ಚುನಾವಣೆಯ ಜಯಶೀಲತೆ ಮೊದಲಾದುವು ಶ್ರೀ. ಆಚಾರಿಯವರು ಹೇಳಿದಂತೆ ಫಲಿಸಿದುವೇ. ಗಾಂಧಿ ಜೋಯಿಸರ ಭವಿಷ್ಯಫಲವು ಬ್ರಹ್ಮಾಂಡದಲ್ಲಿಲ್ಲ, ಹಬ್ಬಲು ಯೋಗ್ಯದರ್ಶನ. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

ವಿಳಾಸ:-**V. K. Satagopachariar**
Hanuman Jothisha Ashram
TIRUTTANI. S. India.

— ಕೂದಲು ರಂಗುತ್ಯಜಿಸಿರಿ —

ಈ ತೈಲದ ಲೇಪನಮಾತ್ರದಿಂದಲೇ ಕೂದಲು ಬೆಳ್ಳಗಾಗುವುದು ನಿಲ್ಲುವುದು, ನೆರತಕೂದಲು ಪೂರ್ಣವಾಗಿ ಕಪ್ಪಾಗಿ ಬೆಳರಂಗು ನಾಶಹೊಂದುವುದು. ಸಾವಿರಾರು ಸರ್ಟಿಫಿಕೇಟುಗಳು ನಮಗೆ ದೊರೆತಿರುವುದೇ ನಮ್ಮ ತೈಲದಯೋಗ್ಯತೆಯನ್ನು ತೋರುವವು. ಅಪ್ರಯೋಜನಕಾರಿಯೆಂದು ಸಾಬೀತುಪಡಿಸಬಲ್ಲವರಿಗೆ ಕೊಟ್ಟಹಣವಾಪಸು ಕೊಡುವರಿದ್ದೇವೆ. ಅಲ್ಪಸ್ವಲ್ಪ ನೆರೆತ ಕೂದಲುಗಳಿಗೆ ಬೇಕಾಗುವ ತೈಲಕ್ಕೆ ರೂ. 4. ಅಲ್ಲಪಾಲಿಗೂ ಮಿಕ್ಕಿರುವುದಾದರೆ ರೂ. 7ರಷ್ಟು ಬೆಲೆಯ ತೈಲವು ಬೇಕಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲೇ.
Hazara & Co.,
P. O. Behar Nersery Darbhnaga.

Degrees: Books: Medicines.

Free H. L. M. S., H. M. B., H. M. D. etc Free Homeo-Ayur-Unani-Naturo degres, by post also—Practitioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10. Enclose 2 annas stamps:—

Principal, Indian Homeopathic Institute and Society (Govt. Regd.)
P O. MAHUVA, (Kathiawar Dt. India.)

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)



ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್ ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇಂಜಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer DR. D. N. JASANI, Vitalbhai Patel Road, BOMBAY 4.

ಭಾಗವತ ಶಿರೋಮಣಿಗಳಾದ ಶ್ರೀ. ಗೋವಿಂದದಾಸರು

ನಮ್ಮ ಜಿಲ್ಲೆಯಲ್ಲಿ ಆಗಿಹೋದ ಪರಮ ಭಾಗವತ ಶಿರೋಮಣಿಗಳಲ್ಲಿ, ಈ ಮಹಾನುಭಾವರು ಅಗ್ರಗಣ್ಯರು. ಇವರ ಈಚಿಗಿನ ನಿಧನದ ವೃತ್ತಾಂತವು, ನಮ್ಮ ಜಿಲ್ಲೆಯ ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು.

೧೮೫೫ನೇ ಇಸ್ವಿ ಆನಂದ ಸಂವತ್ಸರದ, ಮಾರ್ಗಶೀರ್ಷ ಶುದ್ಧ ನವಮಿ ದಿವಸ, ಇವರ ಜನನವು, ಮಂಗಳೂರು ತಾಲೂಕಿನ ಉಕ್ಕತ್ತೂರು ಗ್ರಾಮದಲ್ಲಾಯಿತು. ಇವರ ತಂದೆ ಪಟೇಲ ಶ್ರೀ| ಅನಂತಯ್ಯನವರು; ತಾಯಿಯ ಹೆಸರು, ಶ್ರೀ| ಭಾಗೀರಥಿಯಮ್ಮನವರು.

ಬಾಲ್ಯದಿಂದಲೂ, ಇವರು, ಇವರ ಅಣ್ಣಂದಿರಾದ ಶ್ರೀ| ರಾಮಕೃಷ್ಣದಾಸರ ಪೋಷಣೆ ಮತ್ತು ಸಾಹಚರ್ಯದಲ್ಲಿದ್ದು, ತಕ್ಕ ವಿದ್ಯೆಯನ್ನೂ, ಪುರಂದರದಾಸರು, ವಾದಿರಾಜರೇ ಮೊದಲಾದ ಕರ್ಣಾಟಕ ಭಕ್ತದಾಸವರ್ಯರುಗಳ ದೇವರ ನಾಮಗಳನ್ನೂ ಅಭ್ಯಸಿಸುತ್ತ, ೧೨ ವರ್ಷಗಳ ಕಾಲ ವಾರಣಾಸಿಯಲ್ಲಿ ವಿದ್ಯಾಭ್ಯಾಸ ನಡೆಸಿ, ಅನಂತರ ಉಡುಪಿ ಶ್ರೀಕೃಷ್ಣಾಪುರ ಮಠದ ಶ್ರೀ ವಿದ್ಯಾಧೀಶ ತೀರ್ಥರ ಕಲಕಾಲದ ಸೇವೆಯಿಂದ ಕೃತಾರ್ಥರಾಗಿ, ಮುಂದೆ ರಾಮಕೃಷ್ಣದಾಸರ ಆಜ್ಞೆಯಿಂದ ವಿವಾಹವಾದರು. ಬಳಿಕ, ಶ್ರೀ ಶೀರೂರು ಮಠದ ಆಗಿನ ಶ್ರೀ ಲಕ್ಷ್ಮೀವಲ್ಲಭ ತೀರ್ಥರ ಕೃಪಾಪಾತ್ರರೂ ವಿಶ್ವಾಸಕ್ಕೂ ಪಾತ್ರರಾಗಿ, ತಮ್ಮ ಭಕ್ತಿರಸಪೂರ್ಣವಾದ ದೇವರ ನಾಮಗಳ ಸೇವೆಯಿಂದ, ನಿರಂತರವೂ ಭಗವತ್ಸೇವೆಯನ್ನು ಮಾಡುತ್ತ, ಸರ್ವರಿಂದಲೂ ಮಾನಮರ್ಯಾದೆಗಳನ್ನು ಸಂಪಾದಿಸಿ ಮುಂದೆ ಶ್ರೀ. ಪೇಜಾವರ ಶ್ರೀಗಳವರೊಡನೆ, ಬದರಿ, ಹೃಷೀಕೇಶ ಮೊದಲಾದ ಭಾರತ ವರ್ಷದ ಹಲವು ಪುಣ್ಯಕ್ಷೇತ್ರಗಳಲ್ಲಿ ಸಂಚರಿಸಿ, ಅನಂತರ ಉಡುಪಿಯಲ್ಲಿ ಶ್ರೀಕೃಷ್ಣಪರಮಾತ್ಮನ ಸೇವೆಯನ್ನು ಸಾಂಗವಾಗಿ ಹಲವು ವರ್ಷಗಳ ಕಾಲ ನೆರವೇರಿಸಿ, ತಮ್ಮ ವೃದ್ಧಾಪ್ಯದ ಕೊನೆಯ ಇಪ್ಪತ್ತು ವರ್ಷಗಳನ್ನು, ಕುತ್ಯತ್ತೂರಿನ ಸ್ವಗೃಹದಲ್ಲಿ, ದೇವತಾಸೇವೆ, ಅತಿಥಿಸತ್ಕಾರ, ಪರಮಾತ್ಮನ ಪ್ರೀತ್ಯರ್ಥವಾದ ಹಲವು ಪುಣ್ಯಕಾರ್ಯಗಳೇ ಮೊದಲಾದ ಸತ್ಕಾರ್ಯಗಳಿಂದ ಕಳೆದು, ಇತ್ತೀಚೆಗೆ ಪರಮಾತ್ಮನ ಪಾದಸನ್ನಿಧಿಯನ್ನು ಸೇರಿದರು.

ಈ ಮಹನೀಯರು, ಸಾಮಾನ್ಯ ಕುಟುಂಬದಲ್ಲಿ ಹುಟ್ಟಿದವರಾದರೂ, ಇವರಿಗೆ ದೇವತಾ ಸೇವೆಯಲ್ಲಿದ್ದ ಭಕ್ತಿಯು ಅಪಾರವಾಗಿತ್ತು. ಇದನ್ನು ಕಂಡೇ, ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀವಲ್ಲಭ ತೀರ್ಥರು ಇವರಿಗೆ 'ದಾಸ'ರೆಂಬ ಅನ್ವರ್ಥ ನಾಮವನ್ನು ದಯಪಾಲಿಸಿದುದು. ಮಾತ್ರವಲ್ಲ; ಇವರ ಭಗವತ್ಸೇವೆಯು, ಪರಮಾತ್ಮನಿಗೆ ಕೂಡ, ಮೆಚ್ಚಿಕೆಯಾದುದರಿಂದಲೋ ಎಂಬಂತೆ, ಅದರ ಪರಿಣಾಮವಾಗಿ, ಅವರ ಪುತ್ರರಾದರೂ, ಇಂದು, ಉಚ್ಛ್ರಾಯ ಸ್ಥಿತಿಗೆ ಬಹುಮಟ್ಟಿಗೆ ಏರಿರುವರೆಂದು ಹೇಳಿದರೆ ತಪ್ಪೇನೂ ಇರಲಾರದೆನ್ನೋಣ.

ಶ್ರೀ| ಗೋವಿಂದದಾಸರು ಮತ್ತು ಅವರ ಸಹಧರ್ಮಿಣಿಯವರು.

ದಾಸರು, ಕೊನೆತನಕವೂ ಭಗವಂತನ ನಿಜ ನಾದ ದಾಸರಾಗಿಯೇ ಇದ್ದರು. ಅವರ ಮಕ್ಕಳುಗಳು, ವ್ಯವಹಾರ ವಿಚಕ್ಷಣರಾಗಿ, ಯಥೇಷ್ಟವಾದ, ಧನವನ್ನು ಸಂಪಾದಿಸಿ, ತಮ್ಮ ತಂದೆಯನ್ನು ಆ ಧನದ ಮೂಲಕ, ಸುಖಪಡಿಸಬೇಕೆಂಬ ಆಶೆಯುಳ್ಳವರಾಗಿದ್ದರೂ, ದಾಸರು, ಅವೆಲ್ಲವನ್ನೂ ಕಡೆಗಣಿಸಿ, ಪಾರಮಾರ್ಥಿಕ ಮುಕ್ತಿ ಸಾಧನೆಯೇ ತನ್ನ ಮುಖ್ಯ ಕರ್ತವ್ಯವೆಂದರಿತು, ಆ ಕರ್ತವ್ಯಕ್ಕೆ ಕೊಂಚವೂ ಲೋಪ ಬಾರದಂತೆ, ವಿರಕ್ತರಾಗಿಯೇ, ದೇವತಾರಾಧನೆಯಲ್ಲಿಯೇ ತಮ್ಮ ಜೀವಮಾನವೆಲ್ಲವನ್ನೂ ಕಳೆದರು. ಪ್ರಪಂಚದ ಸಕಲ ಸಂಪತ್ತುಗಳು, ಲಭಿಸಿದ್ದರೂ, ಅದೇನೆಂದೂ ಕಣ್ಣೆತ್ತಿಯೂ ನೋಡದೆ ಇವರಂತೆ, ಸದ್ಭಕ್ತರಾಗಿ, ವಿರಕ್ತರಾಗಿ ಬಾಳಿ, ಆದರ್ಶಪ್ರಾಯರಾಗಿ ಕೀರ್ತಿಶರೀರಿಗಳಾಗಿ ಬದುಕಿದ ಮಹನೀಯರುಗಳು ವಿರಳ. ಇಂತಹ ಪುಣ್ಯಜೀವಿಗಳನ್ನು ಇಂದಿನ ಯುಗಗಳಲ್ಲಿ ಕೂಡ ನೋಡುವುದು ಬಹಳ ದುರ್ಲಭ.

ಇವರ ದ್ವಿತೀಯ ಪುತ್ರರಾದ ಶ್ರೀ. ಹಯಗ್ರೀವಾಚಾರ್ಯರು, ಸಂಸ್ಕೃತದಲ್ಲಿ ಒಳ್ಳೆಯ ವಿದ್ವಾಂಸರಾಗಿರುವರಲ್ಲದೆ, ಕೊನೆತನಕವೂ ಶ್ರೀ. ದಾಸರ ಸೇವೆಯಲ್ಲಿಯೇ ಮಗ್ನರಾಗಿದ್ದರು. ಇವರ ಉಳಿದ ಪುತ್ರರುಗಳಾದ ಶ್ರೀಗಳವರಾದ ಕೆ. ಸೀತಾರಾಮ ರಾವ್, ಗುರುರಾಜಾಚಾರ್, ಗೋಪಾಲಾಚಾರ್, ಅನಂತಾಚಾರ್, ಲಕ್ಷ್ಮೀನಾರಾಯಣ ರಾವ್ ಇವರೆಲ್ಲರೂ ಮೈಸೂರು, ನೀಲಗಿರಿ, ಮದ್ರಾಸ್, ಕೊಯಂಬುತ್ತೂರು ಮೊದಲಾದ ಕಡೆಗಳಲ್ಲಿ ಶ್ರೀ. ದಾಸರ ಅನುಗ್ರಹದಿಂದ, ಧನಾರ್ಜನೆಯೊಂದಿಗೆ ಕೀರ್ತಿಸಂಪಾದನೆಯನ್ನೂ ಮಾಡುತ್ತಿರುವರು. ಭಗವಂತನು ಶ್ರೀ. ದಾಸರಿಗೆ ಸಾಯುಜ್ಯವನ್ನು ಕರುಣಿಸಿ, ಅವರ ಪುತ್ರಾದಿಗಳಿಗೆ ಇನ್ನಷ್ಟು ಶ್ರೇಯಸ್ಸು ದೊರೆಯುವಂತೆಯೂ ಅನುಗ್ರಹಿಸಲಿ!

ನವಯುಗಕ್ಕೆ
ಇಂದೇ ಚಂದಾದಾರರಾಗಿರಿ.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ರಾಕ್ಷಸಿ ಗುಣವುಂಟಾಗುವಂತೆ ಮಾಡುತ್ತವೆ. ದುಷ್ಟರಕ್ತವನ್ನು ಶುದ್ಧಿ ಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿ ಪಡಿಸುವುವು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತವೆ. ಕ್ರಮು ಡಬ್ಬಿ ೧ಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗಗಳಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತು ಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಶೀಸೆ 1ಕ್ಕೆ ರೂ. 5—0—0.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ಓಳ.
ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

Established] [1906

THE
UNITED INDIA
LIFE ASSURANCE Co., LTD.
HEAD OFFICE—MADRAS.

Trustee—The Official Trustee to the Government of Madras.

Policies in force exceed **SIX** Crores.
Annual income exceeds - Rs. **30** lakhs.
Total assets exceeds - Rs. **110** lakhs.
Total claims paid exceed Rs. **40** lakhs.

The oldest & largest life assurance company of South India accepted by the Government as satisfactory for the purpose of exemption from the operation of the Provident Fund Rules to Teachers in aided Schools & for the purpose of utilisation of P. F. Contributions for payment of premiums on the lives of Government Local Board & Municipal servants.

For further particulars please apply to:—

THE BRANCH MANAGER,
THE UNITED LIFE ASSURANCE COMPANY, LTD.,
FELIX PAI BAZAR, **MANGALORE, S. K.**

K. R. Hebbar, B.A., ORGANISER, **UDIPI, S. K.** OR **K. Keshava Shenoy**, M.A., ORGANISER, **Pentlaunpet, MANGALORE.**

ಪ್ರಭಾತ ವಾರ ಪತ್ರಿಕೆ.

32 ಪುಟಗಳು! **32 ಪುಟಗಳು!!**

ಈ 32 ಪುಟತುಂಬ ಪ್ರತಿವಾರ ವಿನೋದ ಕತೆಗಳು! "ಹರಟೆಗಳು"-"ಅನುದಿನದ ಕತೆಗಳು" ಎಂಬ ಪ್ರತ್ಯೇಕ ಏಳು ಕತೆಗಳು—ರವಿವಾರದಲ್ಲಿ ನೀವು ಓದಲು ಆನಂದಪಡುವಂತಹ ಪ್ರಪಂಚದ ಸುದ್ದಿಗಳು—ರಾಜಕೀಯ ವಿಷಯಗಳು—ಬಿಗಟುಗಳು—ಮೈಸೂರು ನೋವಳುವ ಕಡೆಗಳ ಬಾತ್ಮೀದಾರರ ಪತ್ರಗಳು—ವಾರದ ಭವಿಷ್ಯ—ದೇಶೀ ಸಂಸ್ಥಾನಗಳ ವಿವರ—ಚಿತ್ರಗಳು—ಇತ್ಯಾದಿ.

ವರ್ಷದಲ್ಲಿ ಒಟ್ಟು ಎಂಟಾಣೆ (೮ಆಣೆ) ಬೆಲೆಯ ಎರಡು ವಿಶೇಷ ಸಂಚಿಕೆಗಳು ಚಂದಾದಾರರಿಗೆ ಮುಫತ್ತು!

ಪ್ರತಿ ಸಾಮಾನ್ಯ ಸಂಚಿಕೆಗಳು **32** ಪುಟಕ್ಕಿಂತ ಕಡಿಮೆಯಿಲ್ಲ.

ವಾರ್ಷಿಕ ಚಂದಾ—ಸ್ಥಳೀಯರಿಗೆ ರೂ. 3—4—0
" " ಅಂಚೆವೆಚ್ಚ ಸೇರಿ ರೂ. 3—0—0

ಬಿಡಿ ಸಂಚಿಕೆ ಒಂದಾಣೆ.

(ಮಾದರಿ ಸಂಚಿಕೆ ಬೇಕಾದವರು ಬರೆದುಕೊಳ್ಳಬಹುದು.)

ಮೆನೇಜರ್:— ಪ್ರಭಾತ-ರಥಬೀದಿ-ಮಂಗಳೂರು.

ವಾರಭವಿಷ್ಯ

ಮುಂದಾಗುವುದನ್ನು ಇಂದೇ ತಿಳಿಯಿರಿ.

(ತಾ 20-4-39ರಿಂದ ತಾ. 27-4-39ರ ವರೆಗೆ)

[ಜ್ಯೋತಿಷವು ಅಪ್ರತ್ಯಕ್ಷವಾದುದಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಿಸ್ತು. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ. ಸಂ ನ.]

ಮೇಷರಾಶಿ—

ಈ ವಾರಾಂತ್ಯದಲ್ಲಿ ಎರಡೂವರೆ ವರ್ಷಗಳಿಂದಲೂ ನಿಮ್ಮನ್ನು ಪೀಡಿಸುತ್ತಿರುವ ಏಳೂವರೆ ಶನಿಯು ನಿಮ್ಮ ಜನ್ಮರಾಶಿಗೆ ಕಾಲಿಡುವನು. ಸ್ವಯಂ ಆತನು ಏಳೂವರೆ ಶನಿಯು. ಮುಂಬರುವುದು ನಿಮ್ಮ ಜನ್ಮರಾಶಿಯಾದ ಆತನ ನೀಚಸ್ಥಾನವಾದ ಮೇಷರಾಶಿಗೆ ಅಂದ ಮೇಲೆ ಕೇಳಬೇಕೇ, ಮೊದಲೇ ಕುರೂಪಾನಿಂದ ವಕ್ರವಾದ ಮಂಗನಿಗೆ ಮತ್ತು ಅದರ ಮೇಲೆ ಚೇಳು ಕಡಿದಂತಾಯಿತು. ಇದರಿಂದ ನಿಮ್ಮ ಶರೀರದಲ್ಲಿ ನಾನಾತರ ಪೀಡೆಗಳು ಈಗಾಗಲೇ ತಲೆದೋರಲಾರಂಭವಾಗುವವು. ಇನ್ನುಳಿದ ಗ್ರಹರಲ್ಲಿ ಹೆಚ್ಚಿನವರು ಆತನಂತೆಯೇ ಅನಿಷ್ಟಕಾರಿಗಳಾಗಿರುವುದರಿಂದ ಕೈಗೊಂಡ ಕಾರ್ಯಗಳು ನಿರ್ವಿಘ್ನದಿಂದ ಕೊನೆಗಾಣುವದೆಂದರೆ ಬಹಳ ಕಷ್ಟವೇ ಸರಿ. ಪ್ರಯೋಜನದ ನಿಮಿತ್ತ ಹೆಚ್ಚಿನ ಕಷ್ಟನಷ್ಟಗಳಿಗೆ ಗುರಿಯಾಗುವಿರಿ. ದಿನ ಹೋದಂತೆ ನಿರಾಶಿಜನಕಗಳಾದ ಏದ್ಯಮಾನಗಳೇ ಹೆಚ್ಚುವವು. ಉಚ್ಚಗತರಾದ ಶುಕ್ರಾಚಾರ್ಯರಿಂದಾಗಿ ತಾ. 20, 21, 24, 25ಈ ದಿನಗಳಲ್ಲಿ ಹಣದ ಭಾಗದಲ್ಲೂ ಭೋಗ್ಯವಸ್ತುಗಳಲ್ಲೂ ಸಾಕಷ್ಟು ತೃಪ್ತಿಯಿರುವುದು.

ವೃಷಭರಾಶಿ—

ಸೌಮ್ಯ ಗ್ರಹರೆಲ್ಲರೂ ಶನೈಶ್ಚರನೂ ಕೂಡ ಆಯಸ್ಥಾನದಲ್ಲಿರುವುದರಿಂದ ನಿಮ್ಮ ಭಾಗಕ್ಕೆ ಈ ವಾರವು ಹೆಚ್ಚಿನಂಶ ಉತ್ತಮವಾಗಿಯೇ ಇರುವುದು. ಪ್ರತಿಯೊಂದು ಕಾರ್ಯಗಳಲ್ಲೂ ವಿಜಯಿಗಳಾಗುವಿರಿ. ಪರಿಶ್ರಮಕ್ಕಿಂತಲೂ ಫಲಪ್ರಾಪ್ತಿಯು ಅಧಿಕವಾಗಿರುವುದು. ಬಂಧುಮಿತ್ರರ ವೃಂದವು ವೃದ್ಧಿಗೊಳ್ಳುವುದು, ಮಾತ್ರವಲ್ಲ ಮಿತ್ರವರ್ಗದಿಂದ ಹೆಚ್ಚಿನ ಉಪಕಾರಗಳೂ ಧನಲಾಭವೂ ಆಗುವುದು. ಆರೋಗ್ಯವು ಉತ್ತಮವಾಗಿ ನಿಲ್ಲುವುದು. ಪರು ಪತ್ನೀ ಪುತ್ರಾದಿ ಗೃಹಪರಿವಾರಗಳು ತೃಪ್ತಿಕರವಿರುವುದರಿಂದ ಸಾಂಸಾರಿಕ ತಾಪತ್ರಯದಿಂದ ನಿವೃತ್ತರಾಗಿ ಗೃಹಸುಖವನ್ನನುಭವಿಸುವಿರಿ. ಆದರೂ ಶತ್ರುಜನರು ನಿಮ್ಮನ್ನು ಪದೇ ಪದೇ ಕೆಣಕುತ್ತಿರುವರು. ವಾಹನಾದಿಗಳಲ್ಲಿನ ಯಾನವನ್ನೂ ವೃಕ್ಷಾರೋಹಣಾದಿ ಕಾರ್ಯಗಳನ್ನೂ ಸದ್ಯಕ್ಕೆ ಕೈಕೊಳ್ಳಬೇಡಿರಿ. ಅನಿರೀಕ್ಷಿತವಾಗಿ ಹಾನಿ ಸಂಭವಿಸೀತು. ದುರ್ಜನರ ಭಾಗಕ್ಕೆ ತಾ. 20, 21 ಮತ್ತು 24, 25 ಈ ದಿನಗಳಲ್ಲಿ ಅತಿರೇಕ ವ್ಯಯ ಮಾನಹಾನಿ ವಿಘ್ನಗಳು ಸಂಭವಿಸುವವು.

ಮಿಥುನರಾಶಿ—

ಪ್ರತಿಯೋರ್ವ ನರನೂ ಕೂಡ ತನ್ನ ತನ್ನ ಮನಸ್ಸಿಗೆ ಹಿತಕರವಾಗುವ ಕಾರ್ಯವನ್ನೇ ಮಾಡುತ್ತಾನಲ್ಲದೆ ಅದನ್ನತಿಕ್ರಮಿಸುವುದಿಲ್ಲವು. ಸದ್ಯದ ಪರಿಸ್ಥಿತಿಯಲ್ಲಿ ನಿಮ್ಮ ಮನಸ್ಸು ಅಷ್ಟೊಂದು ಪರಿಶುದ್ಧವಾಗಿಲ್ಲವು. ಆದಕಾರಣ ದುರ್ಮನಸ್ಸಿಗನುಸಾರವಾಗಿಯೇ ಕಾರ್ಯಗಳು ಜರಗುತ್ತವೆ. ನಿಮ್ಮ ಮನಸ್ಸಿನ ಪರಿಣಾಮವು ಮಾತಿನಲ್ಲಿ ಸುವ್ಯಕ್ತವಾಗುತ್ತದೆ. ಆದ್ದರಿಂದಲೇ ಮಾತುಮಾತಿಗೂ ನಿಮಗೆ ಜಗಳವಾಗುವುದು. ಇದು ಇತರರ ವಿಷಯವಾಯಿತು. ನಿಮ್ಮಾಕೆಗಂತೂ ನಿಮ್ಮ ನಡತೆಯು ಎಳ್ಳಷ್ಟೂ ಸಮಾಧಾನವಾಗುವುದಿಲ್ಲವು. ಅತಏವ ದಿನನಿತ್ಯವೂ ನಿಮ್ಮಲ್ಲಿ ಕಲಹ ತಪ್ಪದಿರಲು ಕಾರಣ. ಆರೋಗ್ಯವೂ ಕೂಡ ಉತ್ತಮ ಪರಿಸ್ಥಿತಿಯಲ್ಲಿರಲಾರದು. ಆದರೂ ದೈವಬಲಯುಕ್ತರಾದ ನಿಮಗೆ ಕೋರ್ಟು ವಗೈರೆಗಳಲ್ಲಿನ ಕಾರ್ಯಗಳಲ್ಲಿ ಜಯವೂ ಮಾನವೂ ದೊರೆಯುವುದು. ನೌಕರಿ ವಗೈರೆ ಕಾರ್ಯಗಳಲ್ಲಿ ಪರಿಸ್ಥಿತಿಯು ಉತ್ತಮವಾಗಿಯೇ ಇರುವುದು. ತಾ. 22, 23 ಮತ್ತು 26, 27ಈ ದಿನಗಳ ಮಟ್ಟಿಗೆ ಆಹಾರ ವ್ಯವಹಾರಗಳಲ್ಲೂ ಖರ್ಚಿನ ಭಾಗದಲ್ಲೂ ನೀತಿ ತಪ್ಪದಿರಿ.

ಕರ್ಕಾಟಕರಾಶಿ—

"ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಎಂದು ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನೆಂದಂತೆ ಎಷ್ಟೇ ಕಷ್ಟಬಂದರೂ ಸ್ವಧರ್ಮಾತಿಕ್ರಮಣವು ಸರ್ವಥಾ ಯೋಗ್ಯವಲ್ಲವು. ಧರ್ಮಬಾಹಿರರಿಗೆ ಸಮಸ್ತ ಲೋಕವೂ ಕೂಡ ವಿಪರೀತವಾಗಿ ನಿಲ್ಲುವುದು. ಆದಕಾರಣ ನೀವು ಅಧರ್ಮದಲ್ಲಿ ಪ್ರವರ್ತಿಸತಕ್ಕ ಚಂಚಲವಾದ ನಿಮ್ಮ ಮನಸ್ಸನ್ನು ಸರಿದಾರಿಗೆ ತರಲು ಪ್ರಯತ್ನ ಮಾಡಿರಿ. ಇದರಿಂದ ನಿಮಗೆ ಮುಂದೆ ಕಲ್ಯಾಣವಿರುವುದು. ಬುದ್ಧಿಯಲ್ಲಿ ನೀವೇನೂ ಕಡಿಮೆಯಾಗಿಲ್ಲವು. ನಿಮ್ಮ ಈ ಕೌಶಲದಿಂದಲೇ ವಿಪಕ್ಷೀಯರನ್ನೂ ಕೂಡ ನಿಮ್ಮವರನ್ನಾಗಿ ಮಾಡಿಕೊಂಡು ಸ್ವಕಾರ್ಯಗಳನ್ನು ಕೊನೆಗೊಳಿಸುವಿರಿ. ಪ್ರಯತ್ನಕ್ಕೆ ತಕ್ಕ ಫಲವು ಸಿಕ್ಕಿಯೇ ಸಿಕ್ಕುವುದು. ನಿಮ್ಮ ಸಾಂಪತ್ತಿಕ ಪರಿಸ್ಥಿತಿಯು ಬಹಳ ಉತ್ತಮ ರೀತಿಗೆ ಬರುವುದು. ವೈದ್ಯರಿಗೂ ವಣಿಗ್ವರರಿಗೂ ಸ್ವೋದ್ಯೋಗದಲ್ಲಿ ತೃಪ್ತಿಕರವಾಗುವ ರೀತಿಯಲ್ಲಿ ಫಲವು ಸಿಗುವುದು. ತಾ. 20ರಿಂದ 23ರವರೆಗಿನ ದಿನಗಳು ಸಮಾಕೂಲವಾಗಿರುತ್ತವೆ.

ಸಿಂಹರಾಶಿ...

"ಸ್ತ್ರೀರೂಪಂ ಮೋಹಕಂ ಪುಂಸೋ ಯೌವನ ಏವ ಭವೇತ್ ಕ್ಷಣಂ। ಕನಕಂ ಸ್ತ್ರೀಬಾಲವೃದ್ಧ ಷಂಢಾನಾಮಪಿ ಸರ್ವದಾ॥" ಲೋಕದಲ್ಲಿ ಹೊನ್ನು ಹೆಣ್ಣು ಈ ಎರಡು ಮೋಹಕ ವಸ್ತುಗಳು. ಅವುಗಳಲ್ಲಿ ಹೆಣ್ಣು ಕೇವಲ ತರುಣರನ್ನು ಕ್ಷಣಕಾಲ ಮಾತ್ರ ಮೋಹಿಸಬಲ್ಲದು. ಹೊನ್ನಾದರೋ ಸ್ತ್ರೀಬಾಲವೃದ್ಧನಪುಂಸಕಾದಿ ಸಕಲರನ್ನೂ ಸರ್ವಕಾಲದಲ್ಲೂ ಮೋಹಿಸುವುದು. ಆದ್ದರಿಂದಲೇ "ಹಣ ಕಂಡರೆ ಹೆಣ ಬಾಯಿಬಿಡುವದು" ಎಂದು ನಮ್ಮ ಪೂರ್ವಜರು ಹೇಳಿರುವರು. ಆದರೆ ಈ ಧನದಿಂದಾಗಿ ಸದಾ ಕಷ್ಟಗಳು ತಪ್ಪುವಂತಿಲ್ಲವು. ಕೆಲವೇಳೆ ಅನಿರೀಕ್ಷಿತವಾಗಿ ಪ್ರಾಣಾಪಾಯವೂ ಕೂಡ ಸಂಭವಿಸುತ್ತದೆಂಬುದನ್ನು ಯಾರೂ ಪರಿಗಣಿಸುವುದಿಲ್ಲವು. ಈ ವಾರದಲ್ಲಿ ನಿಮಗೆ ಈ ಧನನಿಮಿತ್ತವಾಗಿಯೇ ಅನೇಕ ರಲ್ಲಿ ಕಲಹಗಳು ಸಂಭವಿಸುವವು. ಬಹು ವಿಧದಿಂದ ಧನವ್ಯಯವಾಗುವುದು, ಶತ್ರುಪೀಡೆ ಧನಹಾನಿ ಶರೀರಾಲಸ್ಯಗಳಿಂದ ಸದಾ ವ್ಯಸನಿಗಳಾಗುವಿರಿ. ಆದರೆ ಸದುದ್ಯೋಗಿಗಳಿಗೂ ಕ್ರಯವಿಕ್ರಯ ಕುಶಲರಿಗೂ ವ್ಯಯಕ್ಕಿಂತ ಆಯವೇ ಅಧಿಕವಿರುವುದು. ವಿದ್ಯಾರ್ಥಿಗಳಿಗೂ ಕೂಡ ಈ ವಾರವು ಉತ್ತಮವಾಗಿಯೇ ಇರುವುದು. ತಾ. 20, 21, 26, 27 ಈ ದಿನಗಳು ಉತ್ತಮವಿಲ್ಲವು.

ಕನ್ಯಾರಾಶಿ—

ನರನು ಎಂತಹ ಪಂಡಿತನಿರಲಿ ಯಾ ಗುಣವಂತನಿರಲಿ ದೈವವು ಆತನಿಗೆ ಪ್ರತಿಕೂಲವಾಗಿದ್ದರೆ ಆತನ ಪಾಂಡಿತ್ಯಕ್ಕೂ ಗುಣಗಳಿಗೂ ಎಳ್ಳಷ್ಟೂ ಬೆಲೆಬರುವಂತಿಲ್ಲವು. ಪ್ರಕೃತದಲ್ಲಿ ನಿಮಗೀತೆರನಾದ ಅವಸ್ಥೆಯು ಬಂದಿರುವುದು. ವಿದ್ಯಾವಂತರಾಗಿದ್ದು ನಿರುದ್ಯೋಗ ಸಮಸ್ಯೆಯಲ್ಲಿ ಬಳಲಿ ತೊಳಲುವಿರಿ. ಸಾಂಸಾರಿಕರಿಗಂತೂ ಜೀವನವೇ ಸಾಕುಸಾಕೆಂಬಲ್ಲಿಯವರೆಗೆ ತೋರೀತು. ಸುಮಂಗಲಿಗಳಲ್ಲಿ ಸಮಭಾಗಿಗಳಾದ ಅರ್ಧಾಂಗಿಯೂ ಕೂಡ ಎಲ್ಲಾ ಭಾಗಗಳಲ್ಲೂ ಪ್ರತಿಕೂಲಳಾಗಿ ವರ್ತಿಸುವಳು. ಹೆಚ್ಚಾಗಿ ಸ್ತ್ರೀಜನತೆಯಿಂದಲೇ ಅನಿಷ್ಟಗಳು ಸಂಭವಿಸಲಿವೆ. ಪ್ರವಾಸಕ್ಕೆ ಈ ವಾರವು ಯಾವ ರೀತಿಯಲ್ಲೂ ಉತ್ತಮವಿಲ್ಲವು. ಉಮಾರ್ಗಿಗಳಾದ ಮಿತ್ರರಿಂದ ನಷ್ಟಕಷ್ಟಗಳಿಗೆಗುರಿಯಾಗುವಿರಿ. ಪ್ರಕೃತಿಯೂ ಕೂಡ ಉತ್ತಮವಿರದು. ಆದರೂ ವಾರಾಂತ್ಯದ ನಾಲ್ಕು ದಿನಗಳಲ್ಲಿ ಗುರ್ವನುಗ್ರಹದಿಂದಾಗಿ ಇಷ್ಟಸಿದ್ಧಿ ಧನಲಾಭ ಸಂತೋಷ ಇತ್ಯಾದಿಗಳು ಉಂಟಾಗಲಿರುವವು.

ತುಲಾರಾಶಿ—

ಪ್ರಕೃತದಲ್ಲಿ ನಿಮಗೀ ವಾರವು ಸಾಮಾನ್ಯ ಉತ್ತಮಸ್ಥಿತಿಯಲ್ಲೇ ಇರುವುದೆಂಬುದಾಗಿ ಹೇಳಬಹುದು. ಕೈಗೊಂಡ ಕಾರ್ಯಗಳಲ್ಲಿ ಯಾ ಉದ್ಯೋಗದಲ್ಲಿ ಪ್ರತಿಫಲವು ಉತ್ತಮರೀತಿಯಲ್ಲೇ ಇರುವುದು. ಉದ್ಯೋಗಾರ್ಥವಾಗಿ ಸ್ಥಾನವನ್ನಪೇಕ್ಷಿಸುವವರ ಮನೋರಥವು ಈಡೇರುವುದು. ಖನಿಜಪದಾರ್ಥಗಳ ಮೂಲಕವಾಗಿ ಜೀವನವನ್ನು ನಡೆಸುವವರಿಗೂ ನೌಕರಿ ಕೆಲಸದವರಿಗೂ ಸೇವಕ ಜನರಿಗೂ ಕೂಡ ಸ್ವವೃತ್ತಿಯಲ್ಲಿ ಇಚ್ಛಾಧಿಕವಾಗಿ ಫಲಪ್ರಾಪ್ತಿಯಿರುವುದು. ವ್ಯಾಪಾರೀ ಜನರಿಗೆ ಇದಿರಂಗಡಿಯವರಿಂದ ಹೆಚ್ಚಿನ ನಷ್ಟವಾಗುವುದು. ರಾಜಕೀಯ ಭಾಗದಲ್ಲೂ ಅನಾರೋಗ್ಯದ ಸಲುವಾಗಿಯೂ ಧನವ್ಯಯವಾಗುವುದು. ಇದೊಂದು ಕಾರಣದಿಂದಾಗಿ ಮನಸ್ಸು ಸದಾ ಚಿಂತಾಮಗ್ನವಾಗಿರುವುದು. ತಾ. 22ರಿಂದ 25ರ ವರೆಗಿನ ದಿನಗಳು ಕೆಲವಟ್ಟಿಗೆ ಕೆಟ್ಟಿರುವುದರಿಂದ ಆಯಾಸ ಉದರರೋಗಾದ್ಯನಿಷ್ಟಗಳು ಕಂಡುಬರುವವು.

ವೃಶ್ಚಿಕರಾಶಿ—

ಒಳ್ಳೆಯ ಪ್ರಾಮಾಣಿಕತೆಯಿಂದ ಕೆಲಸಮಾಡತಕ್ಕವರೂ ಕೂಡ ಈ ವಾರದಲ್ಲಿ ತಮ್ಮ ಮೇಲಧಿಕಾರಿಗಳ ಪ್ರಕೋಪಕ್ಕೆ ಗುರಿಯಾಗುವರು. ಸೇವಕ ಜನರೊಡನೆಯೂ ಪುತ್ರಾದಿಗಳಲ್ಲೂ ಕೂಡ ಕಲಹವು ಆಗಾಗ ತಲೆದೋರುವುದು. ಆದರೂ ಗೃಹಸ್ಥಿತಿಯು ಉತ್ತಮರೀತಿಯಲ್ಲಿರುವುದರಿಂದ ವಿಪಕ್ಷೀಯರನ್ನು ನಿರ್ಮೂಲಿಸಿ ಮನದಿಚ್ಛೆಯನ್ನು ಪೂರ್ತಿಗೊಳಿಸುವಿರಿ. ಆರೋಗ್ಯವೂ ಕೂಡ ಚೆನ್ನಾಗಿರುವುದು. ಗೃಹಕೃತ್ಯಕ್ಕೆ ಬೇಕಾದ ವಸ್ತುಗಳು ಪೂರ್ಣತೆಯನ್ನು ಹೊಂದಿರುವುದರಿಂದ ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾಗುವಿರಿ. ಬಂಧುಮಿತ್ರರೂ ಗೃಹಜನರೂ ನಿಮಗೆ ಅನುಕೂಲರಾಗಿಯೇ ವರ್ತಿಸುವರು. ಕೋರ್ಟುಕಛೇರಿಗಳಲ್ಲಿನ ಖಟ್ಲೆಗಳಲ್ಲಿ ವಿಜಯಿಗಳಾಗುವಿರಲ್ಲದೆ ವ್ಯಾಪಾರವ್ಯವಹಾರಗಳಲ್ಲೂ ಉತ್ತಮವಾದ ಫಲವು ಲಭಿಸುವುದರಿಂದ ಸಾಂಪತ್ತಿಕ ಭಾಗವು ಉತ್ತಮಸ್ಥಿತಿಯನ್ನೈದುವದು. ವಾರದಿಯ 4 ದಿನಗಳು ಅತ್ಯುತ್ತಮಗಳಾಗಿವೆ.

ಧನೂರಾಶಿ—

"ಆರ್ಜವಂ ಹಿ ಕುಟಿಲೇಷು ನ ನೀತಿಃ" ವಕ್ರಮಾರ್ಗಿಗಳಲ್ಲಿ ನ್ಯಾಯರೀತಿಯಿಂದ ವರ್ತಿಸುವುದು ನೀತಿಯಲ್ಲವು ಎಂಬ ನ್ಯಾಯದಂತೆ ಯಾವಾಗಲೂ ಜನರನ್ನು ನೋಡಿ ನೀತಿಪ್ರಯೋಗಿಸಬೇಕಾಗುವದು. ಸಜ್ಜನರಲ್ಲಿ ನ್ಯಾಯಮಾರ್ಗವನ್ನೂ ಕುಜನರಲ್ಲಿ ಕೌಟಿಲ್ಯವನ್ನೂ ತೋರಿಸಿದರೇನೇ ಈ ಕಾಲದಲ್ಲಿ ಜೀವಿಸಬಹುದು. ಸದ್ಯದಲ್ಲಿ ನೀವಾದರೋ ಸರ್ವತ್ರ ಒಂದೇ ನ್ಯಾಯಮಾರ್ಗವನ್ನನುಸರಿಸುವುದರಿಂದ ಕುಹಕಿಗಳ ಕಪಟ ಬಲೆಗೆ ಸಿಲುಕಿ ಪಶ್ಚಾತ್ತಾಪಪಡುವಿರಿ. ಕೇವಲ ಬಂಧುಮಿತ್ರರೆಂಬೊಂದೇ ಕಾರಣದಿಂದ ಜನರ ಗುಣವನ್ನು ವಿಮರ್ಶಿಸದೇನೇ ನೀವು ಉಪಕಾರಮಾಡಿ ಅದಕ್ಕೆ ಬಹುಮಾನರೂಪವಾಗಿ ಅಪವಾದದ ಮಾತುಗಳನ್ನು ಪಡೆಯುವಿರಿ. ನಿರೋಧಿಗಳಿಂದ ಯಾವಾಗ ಏನು ಆಪತ್ತು ಸಂಭವಿಸೀತೆಂದೂ ಹೇಳಲು ಸಾಧ್ಯವಿಲ್ಲ. ಆದರೆ ನೀವು ದೈವಭಕ್ತರಿರುವುದರಿಂದ ಕೆಲಸಕ್ಕೆ ತಕ್ಕ ಫಲವನ್ನು ಹೊಂದಿಯೇ ತೀರುವಿರಿ. ಶರೀರಸುಖಕ್ಕೂ ಗೃಹಸೌಖ್ಯಕ್ಕೂ ಕೊರತೆಯುಂಟಾಗದು. ತಾ. 22ರಿಂದ 25ರವರೆಗಿನ ದಿನಗಳಲ್ಲಿ ಇಷ್ಟಕಾರ್ಯಗಳೇ ಅಧಿಕವಾಗುವವು.

ಮಕರರಾಶಿ—

ದಿನಗಳು ಕಳೆಯುತ್ತಾ ಹೋದಂತೆ ನಿಮ್ಮ ಅನಿಷ್ಟವು ಹೀನವಾಗುತ್ತಾ ಬರುತ್ತಿದೆ. "ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ" ಎಂದಂತೆ ಒಳ್ಳೆಯದಾಗಲಿ ಕೆಟ್ಟದಾಗಲಿ ಕೃತಕರ್ಮದ ಫಲವನ್ನು ಅನುಭವಿಸಿಯೇ ತೀರಿಸಬೇಕಷ್ಟೆ. ಈ ವಾರದಲ್ಲಿ ನಿಮಗೆ ಪ್ರಾಣಕ್ಕಿಂತಲೂ ಅವಹೆಚ್ಚಾದ ಮಾನಕ್ಕೆ ಹಾನಿಯುಂಟಾಗುವ ಸಂಭವವಿದೆ. ಭೋಗ್ಯವಸ್ತುಗಳನೇಕವಿದ್ದರೂ ನಿಮ್ಮ ಸಮಯಕ್ಕೆ ಒದಗವು. ಚಿಂತಾಧಿಕ್ಯದಿಂದ ನಾನಾ ವ್ಯಾಧಿಗಳು ತಲೆದೋರುವವು. ಕ್ಲೇಶವು ಅಧಿಕವಾಗುವದು. ಆದರೂ ನೀವು ನಿಮ್ಮ ಶಕ್ತಿಯನ್ನತಿಕ್ರಮಿಸಿಯೇ ದುಡಿಯುವಿರಿ. ನಿಮ್ಮ ಧನಭಾಗದಲ್ಲಿ ವೈರಿಜನರ ದೃಷ್ಟಿಯು ವಿಶೇಷವಾಗಿರುವುದು. ನಿಮ್ಮ ಭಾಗಕ್ಕೆ ಇವರು ತೀರಾ ಸಾಮಾನ್ಯ ಜನರಂತಾಗಿರುವರು. ವಾರಾದಿಯ ನಾಲ್ಕು ದಿನಗಳಲ್ಲಿ ಅನಾರೋಗ್ಯ ವಿಘ್ನ ಶೋಕಗಳು ಅಧಿಕವಾಗಿದ್ದರೂ ಮುಂದಿನ ದಿನಗಳು ಸುಖದಾಯಕವಾಗಿರುವವು.

ಕುಂಭರಾಶಿ—

"ಕ್ಷಣಶಃ ಕಣಶಶ್ಚೈವ ವಿದ್ಯಾಮರ್ಥಂಚ ಸಾಧಯೇತ್" ವಿದ್ಯಾಭಿಲಾಷಿಯು ಕ್ಷಣ ಕಾಲ ಬಿಡದೆ ಸಾಧಿಸಬೇಕು. ಧನಾಭಿಲಾಷಿಯು ಒಂದು ಪೈಯಿಂದೂ ಕೂಡ ಕಡೆಗಣಿಸದೆ ಸಂಗ್ರಹಿಸಬೇಕು. ಹೀಗೆ ಸಂಗ್ರಹಿಸಿದರೇನೇ ಪಂಡಿತನೂ ಧನಿಕನೂ ಆಗುವನು. ಪ್ರಕೃತದಲ್ಲಿ ನಿಮ್ಮ ದೈವವು ನಿಮಗೆ ವಿಶೇಷ ಸಹಕಾರಿಯಾಗಿರುವುದರಿಂದ ವಿದ್ಯಾರ್ಥಿಗಳಿಗೂ ಕಾರ್ಯಸಫಲೇಚ್ಛುಗಳಿಗೂ ಈ ವಾರವು ಅತ್ಯಂತ ಹಿತಾವಹವಾಗಿರುವುದು ಅವರ, ಸಾಧಿಸಿದರೆ ತಮ್ಮ ಗುರಿಯನ್ನು ಮುಟ್ಟುವುದರಲ್ಲಿ ಸಂದೇಹವಿಲ್ಲವು. ಸಾರ್ವಜನಿಕ ಕಾರ್ಯದಲ್ಲಿ ಜಯಶ್ರೀಯನ್ನು ಪಡೆದು ಜನತೆಯಿಂದ ಮಾನಾರ್ಹರಾಗುವಿರಿ. ಸಾಂಸಾರಿಕರಿಗೆ ಆವ ಭಾಗದಲ್ಲೂ ಕೊರತೆ ಕಾಣದು. ಅತಏವ ನಿಶ್ಚಿಂತರಾದ ರಾಜನಂತೆ ದಿನಗಳೆಯುವಿರಿ. ತಾ. 22, 23, 24, 25 ಈ ದಿನಗಳಲ್ಲಿ ಸ್ವಲ್ಪ ಅನಿಷ್ಟಕಾರಿಗಳಾಗಿರುವುದರಿಂದ ದೇಹಾಲಸ್ಯ ಧನವ್ಯಯಗಳು ಸ್ವಲ್ಪ ಮಟ್ಟಿಗೆ ಉಂಟಾದಾವು.

ಮೀನರಾಶಿ—

ಬಂದದ್ದೆಲ್ಲಾ ಬರಲಿ, ಗೋವಿಂದನ ದಯವೊಂದಿರಲಿ, ಎಂಬ ದಾಸರ ಕೀರ್ತನೆಯೇ ನಿಮಗೆ ಯೋಗ್ಯವಾದುದೆನ್ನಬೇಕಾಗಿದೆ. ಯಾಕೆಂದರೆ ಸದ್ಯದ ಗ್ರಹಸ್ಥಿತಿಯಲ್ಲಿ ಶುಕ್ರನೊಬ್ಬನ ಹೊರತಾಗಿ ಮಿಕ್ಕವರೆಲ್ಲರೂ ಅನಿಷ್ಟ ಸ್ಥಾನವನ್ನೇ ಆಗಿರುವರು. ಸಂಘಶಕ್ತಿಯೇ ಪ್ರಬಲವಾಗಿರುವುದರಿಂದ ನಿಮಗೆ ಹಲವಾರು ಅನಿಷ್ಟಗಳು ಬರಲಿವೆ. ಈ ಪ್ರಕರಣದಲ್ಲಿ ದೈವಾನುಗ್ರಹವೇ ನಿಮ್ಮನ್ನು ಕಾಯಬೇಕಲ್ಲದೆ ಗ್ರಹರಾಗಲೀ ಇತರರಾಗಲಿ ಮುನ್ನದೆ ಪರಾರರು. ಹಣದ ಅಡಚಣೆಯು ನಿಮ್ಮಲ್ಲಿ ಹುಟ್ಟಿಹೋದಂತಿದೆ. ಹಿಡಿದಲ್ಲಿ ನಷ್ಟ ಮುಟ್ಟಿದಲ್ಲಿ ಕಷ್ಟ ಸಂಬಂಧಕ ಪರಿಸ್ಥಿತಿಯೊದಗಿರುವುದು. ಆರೋಗ್ಯವೂ ಪೂರ್ತಿ ಚೆನ್ನಾಗಿರದು. ಈ ರೀತಿಯ ಸಂದರ್ಭವೊದಗಿದಾಗ ಬಂಧು ಮಿತ್ರರೂ ಕುಟುಂಬಿಕರೂ ನಿಮ್ಮ ಸಮಿಪಕ್ಕೆ ಬರಲಾರರು. ಅಂತೂ ಬಹಳ ಕಷ್ಟದಿಂದ ದಿನ ಕಳೆಯಬೇಕಾಗುವದು. ಇಡೀ ವಾರದಲ್ಲಿ ತಾ. 22, 23 ಈ ದಿನಗಳು ಸ್ವಲ್ಪ ಮಟ್ಟಿಗೆ ಉತ್ತಮವಿರುವವು.

New Kanara Swadeshi Laundry,
GAMDEVI, BOMBAY.
A reliable house for dry cleaning doing all sorts of rich garments.

ದಿ ನ್ಯೂ ಕೆನರಾ ಸ್ವದೇಶಿ ಲಾಂಡ್ರಿ,
ಗಾಮುದೇವಿ — ಮುಂಬಾಯಿ.

ಉತ್ತಮ ತರದ ಮಡಿ, ಉತ್ಕೃಷ್ಟ ರೀತಿಯ ರಂಗು —
ಇವುಗಳಿಗೆ ಪ್ರಸಿದ್ಧವಾದ ನಿಲಯ.

ವಿ. ಸೂ.—ಪರವೂರುಗಳಿಂದ ಉತ್ತಮ ಜರತಾರಿ ಸೀರೆ, ವಸ್ತ್ರ ಉಡುಗೆ ತೊಡಿಗೆಗಳ ರಂಗು ಕಾಕುವ, ಡ್ರೈಕ್ಲೀನಿಂಗ್ ವಗೈರೆ ಕಾರ್ಯವನ್ನು ಟಪ್ಪಾಲು ದ್ವಾರಾ ಸ್ವೀಕರಿಸಿ, ಸಕಾಲದಲ್ಲಿ ತಯಾರಿಸಿ ತಲುಪಿಸುತ್ತೇವೆ.

ಎಮ್. ಆರ್. ಶೆಟ್ಟಿ, ಪ್ರೊಪ್ರೈಟರ್. G. V. Mahale, Manager.

ಅಜ್ಜಯ್ಯನ ಪ್ರಲಾಪ

GRANDFATHER'S LAMENTATION

(ಲೇಖಕರು: ಶ್ರೀ. ಬಿ. ಶಾಮ್ರಾಯ ಶೆಟ್ಟಿ, ಬಿ. ಎ. ಎಲ್. ಟಿ.)

This old man who is more than four score years old is a link between the past and the present. He has lived to see three generations He is the living chronicle of his family. He has seen much; he has heard more. He is trained in the hard school of life. He has seen people 'who fought without minding the blows–who gave without counting'–who enjoyed without foresight and draws conclusions and applies it to similar cases and finds that like circumstances give birth to like results. He sings the praise of disciplined life and bemoans the lot of hectic life. He has no belief in flashy life. Having seen the various vicissitudes of life, and being himself wedded to simple life he loves plain life and plainly sets forth the evil results of a dissolute life. Rich with the experience–the practical experience of eighty cycles and more, life speaks to him eloquently. He understands the language of life. He never sympathises with the gayest pleasures of the happy-go-lucky type of people. No doubt he has lived to see the wonders of the twentieth century. The dreams of the nineteenth century are realities for him. He now lives to see the science and speed of this age–the aeroplanes are flying over him–the radio is singing before him. He loves to see and hear all these but warns his grand children that life does not mean only these. He speaks with authority because he can compare the present century with the past and draw conclusions based on comparative statistics. He has the history of many houses–how they rose and how they fell–and philosophises over these. According to him a house or an individual that loses its or his soul and runs after the tinsels of the present day life will be on the rocks. He has observed facts of life and systematises them. So he poses as the master of the secret of life and bemoans bitterly the lot of the present day uneconomic men when they pursue the shadow of life losing its substance.' Life is to be wooed by work. 'He who works gets the benefit and not he who sees it done.' So work, work, and work and conquer life.

●

ಅಜ್ಜಯ್ಯ—ಎಲ್ಲಿ, ಎಲ್ಲಿಗಿದು ಹೊರಟದ್ದು?–ಶೃಂಗಾರ ರಾವಣನ ಹಾಗೆ ಮಾಡಿಕೊಂಡು–ಇದೇ ಆಯಿತು ನಮ್ಮ ಮಕ್ಕಳಿಗೆಲ್ಲಾ–ಕಾಗೆ ಕೂಗಿದ ಮೇಲೆ ಏಳುವುದು–ಕನ್ನಡಿ ಹಿಡಿಯುವುದು–ಮುಖದ ಚಂದ ನೋಡುವುದು–ತನ್ನನ್ನು ತಾನು ಮೆಚ್ಚಿಕೊಂಬುದು–ಬಾಚಣಿಗೆ ಹಿಡಿಯುವುದು ತಲೆಯನ್ನು ಬಾಚುವುದು–ಇಮಿಟೇಶನ್ ಶಾಲು ಮೈಮೇಲೆ ಹಾಕಿಕೊಂಬುದು–ಆ ಮೇಲೆ ಬಲಗೈಯಲ್ಲಿ ಒಂದು ಸಿಗರೇಟು, ಚೀಲದಲ್ಲಿ ಬೆಂಕಿಪೆಟ್ಟಿಗೆ—ಬಾಯಿಯಲ್ಲಿ ಹೊಗೆ–ಎಡಗೈಯೊಂದು ಯಾವಾಗಲೂ ಕ್ರಾಪಿನ ಮೇಲೆ–ಏನು ಚೋದ್ಯ–ಆ ಮೇಲೆ ಅರ್ಧ ಇಂಗ್ಲೀಷ್–ಟೈಂ, ಟೈಂ ಟೈಂ, ಟೈಂ ಎಂಬುದು–

ಮೊಮ್ಮಗ—ಎಂಥಾದ್ದು ಅಜ್ಜ, ನಿಮಗೇನು ಗೊತ್ತಿದೆ–ನಿಮ್ಮದೆಲ್ಲಾ ಅಂದಿನ ಹಳೆ ಸಂಪ್ರದಾಯ–ಇಂದಿನ ನವನಾಗರೀಕತೆಯ ಸೊಬಗಿನ ವಿಷಯ ನಿಮಗೇನು ಗೊತ್ತು? ನಿಮ್ಮದು ನಿಸ್ಸಾರವಾದ ಜೀವನ, ನಮ್ಮದು ಸ್ವಾರಸ್ಯದ ಜೀವನ–ಈ ಹಳ್ಳಿಯಲ್ಲಿಯೇ ಕುಳಿತು ಕೊಳೆಯುವುದಕ್ಕಿಂತ ಸ್ವಲ್ಪ ಪೇಟೆಗೇಟೆ ಕಡೆಗೆ ಹೋಗಿ ನಾಗರೀಕನಾಗುವುದು ಒಳ್ಳೆಯದಲ್ಲವೇ?

ಅಜ್ಜಯ್ಯ—ಈ ನಾಗರೀಕತೆಯಿಂದಲೆ ಮನೆ ಕರಗುತ್ತಾ ಬರುತ್ತೆ, ನೀನು ಪೇಟೆಯಲ್ಲಿ ಹೋಗಿ ಎಷ್ಟು ವರ್ಷ ಇಂಗ್ಲೀಷ್ ಕಲ್ತೆ? ಎಷ್ಟು ಸಮಯ ಹಾಳುಮಾಡಿದೆ? ಎಷ್ಟು ಸಂಪತ್ತು ತಗ್ದೆ? ಈಗ 'ಲಾಟ'ಹೊಡ್ದು ಮನೆಯಲ್ಲಿಯೇ ಬಂದು ಕೂತುಕೊಂಡಿದ್ದೆಯಲ್ಲ? ಇಷ್ಟು ಹಣ ಖರ್ಚು ಮಾಡಿದರ ಬಡ್ಡಿ ಯಾದರೂ ಸಿಕ್ಕುತ್ತದಾ? ಮನೆಯಲ್ಲಿ ಕೆಲಸಮಾಡಲಿಕ್ಕೆ ನಿನಗೆ ಬಗ್ಗುವುದಿಲ್ಲ–ಕೆಲಸವೆಲ್ಲಾ ಬೇರೆ ಜನರಿಂದ ಆಗಬೇಕು–ಗಂಡು ಮಕ್ಕಳ ಪಾಡು ಹೀಗೆ ಇನ್ನು ಹೆಮ್ಮಕ್ಕಳ ಅವಸ್ಥೆಯಾ! ನೋಡು ನಿನ್ನ ತಂಗಿ–ಸರಸಿಗೆ ಬಾವಿಯಿಂದ ಒಂದು ಚೆಂಬು ನೀರು ತೆಗೆಯಬೇಕಾದರೆ ಒಂದು ಕೆಲಸದ ಜನಬೇಕು—ತಾಯಿಯ ಕೊಂಡಾಟ! ಒಲೆಯ ಹತ್ತರ ಹೋದರೆ ಹೊಗೆತಾಗಿ ಮೋರೆ ಕಂದೀತು! ಮಸಾಲೆ ಅರೆದರೆ ಕೈ ಉರಿ ಎದ್ದೀತು! ಚಿನ್ನದ ಬಳೆ ತೊಟ್ಟ ಕೈ ಮಣ್ಣಿನ ಪಾತ್ರೆ ಹಿಡಿಯೋದಾ? ಮಲಗಿದ ಚಾಪೆ ಮಡಚಿದರೆ ಬಡತನ ಅಲ್ದಾ? ಉಂಡ ಬಟ್ಲು ತೊಳೆದರೆ 'ಭರಂ'ಮಿಗೆ ಕಮ್ಮಿ ಅಲ್ದಾ?" ಅಂತಾಳೆ.

ಮೊಮ್ಮಗ—ಹಾಗೆಲ್ಲಾ ಮಾಡೋದು ನಮಗೆ ಮನೆತನದವರಿಗೆ ನಿಜವಾಗಿಯೂ ಠೀವಿಗೆ ಕಮ್ಮಿಯಲ್ಲವಾ?

ಅಜ್ಜಯ್ಯ—ಈ ಹದಮೀರಿದ ಠೀವಿಯಿಂದ ಮನೆ ಹಾಳಾಯಿತಲ್ಲಾ! ಮನೆ ಹಾಳಾದ ಮೇಲೆ ಮನೆತನ ಎಲ್ಲಿ?–ಏ ಹುಚ್ಚು ಮಕ್ಕಳೇ–ನಿಮಗೆ ತಲೆ ಎಲ್ಲಿ ಉಂಟು ಅಲ್ಲಾ ಇಡೀ ದಿವಸ ನಿನಗೆ ಈ ಕ್ರಾಪೇ ಆದರೆ– ನಿನ್ನ ತಂಗಿಗೆ ಗರಾ ಗರಾ ಅಂತ ಹಾರ್ಮೋನಿಯಮೇ ಆದರೆ ಮನೆಯಲ್ಲಿ ಕೆಲಸಕ್ಕೆ ಐನೂರು ಜನರಾದರೆ–ಮನೆಸಾಗುವುದು ಹ್ಯಾಗೆ?–ಮನೆತನದ ಜೀವಾಳ ಇದಾ?

ಮೊಮ್ಮಗ—ಎಂಥಾದ್ದು ಹೇಳುವುದು ಅಜ್ಜಯ್ಯಾ–ನಾನು ಪೇಟೆಗೆ ಹೋಗಿ 'ಜಗ್ಗ್' ಮಾಡದಿದ್ದರೆ– ಇಂಥಾ ಮನೆಯವನೆಂತ ಹೇಳದಿದ್ದರೆ–ಇದನ್ನು ಸಿನೇಮಾ ಹೋಲಿನಲ್ಲಿ, ಬಸ್ಸ್ ಆಫೀಸಿನಲ್ಲಿ, ಬಾರ್ಬರ್ ಸೆಲೂನಿನಲ್ಲಿ–ಕೋರ್ಟು ಕಚೇರಿಗಳಲ್ಲಿ ವಕೀಲರ ಆಫೀಸಿನಲ್ಲಿ, ಕಾಫಿ ಹೋಟೇಲುಗಳಲ್ಲಿ, ಕಟ್ಲರಿ ಶೋಪಿನಲ್ಲಿ, ಓಣಿ ಕೇರಿಗಳಲ್ಲೆಲ್ಲ ನಮ್ಮ ದೊಡ್ಡ ಮನೆದ್ದು ಪ್ರತಾಪ, ತೇಜಸ್ಸು, ಓಜಸ್ಸು, ವರ್ಚಸ್ಸು, ದೊಡ್ಡಸ್ಥಿಕೆ ಎಲ್ಲಾ ಪ್ರದರ್ಶಿಸದಿದ್ದರೆ ನಮ್ಮ ಸರಸಿಗೆ ನಾಳೆ ಡಿಗ್ರಿಯ ಗಂಡ ಬರುತ್ತಾನಾ? ಇದಕ್ಕೋಸ್ಕರ ಅವಳು ಸಹಾ ಹಾರ್ಮೋನಿ ಗೀರ್ಮೋನಿ ಮುಂತಾಗಿ ಆಧುನಿಕ ಫೆಶ್ಯನುಗಳನ್ನು ಕಲಿಯಬೇಕಲ್ಲದೆ ಮನೆಯ ಆಳುಗಳು ಮಾಡುವ ಚಿಲ್ಲರೆ ಕೆಲಸಗಳನ್ನು ಕಲಿತರೆ ನಾಳೆ ಅವಳಿಗ ದೊಡ್ಡ ನೆಂಟಸ್ಥಿಕೆಗೆ ಒಂದು ಯೋಗ್ಯತೆ ಹ್ಯಾಗ ಬಂದೀತು?–ಎಂಥಾದ್ದು ಹೇಳುವುದು ಅಜ್ಜ–ನೀವು ಹಳೆಯ ದೃಷ್ಟಿಯಿಂದಲೇ ನೋಡಿದರೆ ಪ್ರಯೋಜನವೆತ್ತಾ?

ಅಜ್ಜಯ್ಯ—ಮಗಾ, ನಾನು ಹಳೆಯ ದೃಷ್ಟಿಯಿಂದಲೇ ನೋಡುವುದಲ್ಲ.

ಮೊಮ್ಮಗ—ಮತ್ತೆ ಎಂಥಾದ್ದು ಅಜ್ಜ?

ಅಜ್ಜಯ್ಯ—ನನಗೆ ಸ್ವಲ್ಪ ಪೂರ್ಣ ಮಾತಾಡಲಿಕ್ಕೆ ಅವಕಾಶಕೊಡು–ಅದೇ ನಿಮ್ಮದೆಲ್ಲಾ ಈಗಿನ ಮಕ್ಕಳದ್ದು–ಅವಸರ ಜಾಸ್ತಿ–ಪೂರ್ಣ ಕೇಳಲಿಕ್ಕೆ ತಾಳ್ಮೆಯಿಲ್ಲ–ಗಡಿಬಿಡಿ–ಗಡಿಬಿಡಿ–ಗಡಿಬಿಡಿ.

ಮೊಮ್ಮಗ—ನಮಗೆ ಅವಸರ ಜಾಸ್ತಿ–ನಿಮಗೆ ಮುದುಕರಿಗೆ ಸಿಟ್ಟು ಜಾಸ್ತಿ–ಆಗಲಿ ಮಾತಾಡಿ–ಪೂರ್ಣಮಾತಾಡಿ–ಅಷ್ಟರ ತನಕ ನಾನು ಬಾಯಿ ಮುಚ್ಚಿಕೊಳ್ಳುತ್ತೇನೆ

ಅಜ್ಜಯ್ಯ—ಈಗ ನನಗೆ ಪ್ರಾಯ ಹೆಚ್ಚಾ–ನನಗಾ?

ಮೊಮ್ಮಗ—ಅಜ್ಜಯ್ಯಾ, ನಮ್ಮಿಬ್ಬರಿಗಿಂತಲೂ ಅಜ್ಜರಕಾಡಿನ ಪಾದೆಗೆ ಪ್ರಾಯ ಹೆಚ್ಚು. ಅದರ ಮೇಲೆ ಎಷ್ಟೋ ಜನರು ಬುದ್ಧಿವಂತರು ಹೋಗಿ ಕೂತುಕೊಂಡು ಮಾತಾಡುತ್ತಾರೆ—ರೇಡಿಯೋ— ಕೂಗುತ್ತದೆ—ಆದರೆ ಪಾದೆ ಪಾದೆಯೇ —ಒಂದು ಶ್ರೀ—ಎಂಬ ಅಕ್ಷರ ಕಲಿಯಲಿಲ್ಲ ಅದು ಅಜ್ಜ —

ಅಜ್ಜಯ್ಯ–ಏನು—ಇದು ಒಂದು ಸಾದೃಶ್ಯವಾ—ಏನು, ನೀನು ಅರ್ಧ ಇಂಗ್ಲೀಷ್ ಕಲ್ತು ಬಿಂಗಿರಿಯಾಗಿದ್ದಿಯಾ? ನನ್ನನ್ನು ಅಜ್ಜರಕಾಡಿನ ಪಾದೆಗೆ ಸರಿ ಹೋಲಿಸುತ್ತೀಯಾ? ನಾವು ಮನೆ ಹಾಳುಮಾಡಿ, ನಿಮಗೆ ಇಂಗ್ಲಿಷ್ ಕಲಿಸಿದ ಫಲ—ಈ ಅರ್ಧ ಇಂಗ್ಲೀಷ್ ಮನೆಗೆ ಕೇಡು. ನೀನು ಎರಡಕ್ಷರ ಇಂಗ್ಲೀಷ್ ಕಲಿತ ಕೂಡಲೇ ದೊಡ್ಡ ಮಹಾ ಪುರುಷನಾಗಿಬಿಟ್ಟೆಯಾ? ನೀನು ಮಾಡಿದ್ದೆಂತಾದ್ದು ಇಷ್ಟರವರೆಗೆ? ಊಟಮಾಡಿದ್ದು, ಕಾಫಿ ಕುಡಿದದ್ದು, ಸಿಗರೇಟು ಸೇದಿದ್ದು, ಸುಂದರರಾವಣನ ಹಾಗೆ ಮೆರೆದದ್ದು! ಅಷ್ಟೇ ಅಲ್ಲನಾ–ಆ ಪೇಟೆಯ ಅಂಗಡಿಯಲ್ಲಿರುವ ಬೊಂಬೆಯನ್ನಾದರೂ ಎರಡು ಪೈ ಕೊಟ್ಟು ಯಾರಾದರೂ ತೆಕ್ಕೊಂಡುಹೋದಾರು—ನಿನ್ನನ್ನು ಅಡವು ಇಡುತ್ತೇನೆಂದರೆ ಒಂದು ಪೈ ಕೊಡುವವರು ಯಾರಾದರೂ ಇದ್ದಾರಾ? ಇವ ಇಂಗ್ಲೀಷ್ ಓದಿದ ಅಂತೆ–ರೇಡಿಯೋ–ಕೇಳಿದಂತೆ, ತಂಗಿಗೆ ಡಿಗ್ರಿಗಂಡ ಬರಬೇಕಂತೆ—ಅದಕ್ಕಾಗಿ ಮನೆತನದ ಓಜಸ್ಸನ್ನು ಪ್ರದರ್ಶಿಸಲಿಕ್ಕೆ ಇವ ಪೇಟೆಯಲ್ಲಿ ತಿರುಗುವುದಂತೆ—ಹಳ್ಳಟ್ಟು! ನಾಟಕ!

ಮೊಮ್ಮಗ—ನೀವು ಏನು ಹೇಳುವುದು? ನಾನು ಪೇಟೆಯ ಶಾಲೆಗೆ ಹೋಗಲಿಲ್ಲವಾ?

ಅಜ್ಜಯ್ಯ—ನೋಡು ಮಗಾ, ನೀನು ಕಲಿತ ಶಾಲೆ ಸಣ್ಣದು–ಅದರಲ್ಲಿಯೂ ಪೂರ್ಣ ನೀನು ಕಲಿಯಲಿಲ್ಲ–ಅದರಲ್ಲಿ ಕಲ್ತದ್ದು ಪುಸ್ತಕದಲ್ಲಿದ್ದ ಬದನೆಕಾಯಿ–ನೋಡು ನಾನು ಲೋಕವೆಂಬ ದೊಡ್ಡ ಶಾಲೆಯಲ್ಲಿ ಕಲ್ತಿದ್ದೇನೆ–ಎಷ್ಟೋ ವರ್ಷಗಳಿಂದ ಕಲಿತು, ಸುರಿತು, ಡಿಗ್ರಿ ಪಡಕೊಂಡಿದ್ದೇನೆ. ಮಗಾ–ಮುಮ್ಮಗೆ ಅಲ್ಲ–ಈ ಡಿಗ್ರಿಯಷ್ಟು ಒಳ್ಳೇ ಡಿಗ್ರಿ ಬೇರೆಯಿಲ್ಲ–ಎಷ್ಟೋ ಸಂಸಾರದ ನಾಟಕಗಳನ್ನು ನೋಡಿದ್ದೇನೆ–ನೋಡುತ್ತಾ ಇದ್ದೇನೆ–ನಾನೇನು ಈ ಇಂದಿನ ನವ ನಾಗರೀಕತೆಯನ್ನು ದೂರುವುದಿಲ್ಲ–ಜೀವನ ಎಂದರೆ ಇಷ್ಟೆ ಅಲ್ಲ–ಬಹಳ ವಿಶಾಲವುಂಟು ಮಗಾ–ಈ ಬೆಡಗಿನಲ್ಲಿ ಅಲ್ಲ–ಬೆಡಗಿನ, ಥಳಕಿನ ರುಚಿಯಲ್ಲಿ ಅಲ್ಲ–ನೋಡು ನೀನು ಇಂದಿನ ದೃಷ್ಟಿಯಲ್ಲಿ ಮಾತ್ರ ಜೀವನವನ್ನು ನೋಡುತ್ತಿ–ನಾನು ಎರಡು ದೃಷ್ಟಿಯಿಂದಲೂ ಅಂದರೆ–ಅಂದಿನ ಇಂದಿನ ಎರಡು ದೃಷ್ಟಿಯಿಂದಲೂ ನೋಡಿ ತಾರತಮ್ಯವನ್ನು ಕಂಡುಹಿಡಿಯುತ್ತೇನೆ–ನನ್ನಷ್ಟು ಲೋಕದ ಅನು

ಸ್ಥಾಪನೆ: ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡುಗಳೂ, ಪೇದೆಗಳ ಚೀಟು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವುದು.



CROWN RUBBER STAMP CO.,
Balmat Road, MANGALORE.
Included by the Mysore Govt. Stores. Purchase Committee in the list of approved Firms

ಗತ ವೀರ್ಯವನ್ನು ಪುನಃ ಹೊಂದಿರಿ.

ಡಾ। ಬಿಸನ್‌ರವರ "ಸೆಲ್ಫ್ ಪ್ರೊಟೆಕ್ಟರ್" ಸ್ತ್ರೀಪುರುಷರಿಬ್ಬರಿಗೂ ಉತ್ತಮೋತ್ತಮವಾದ ನರಶಕ್ತಿವರ್ಧಕ ಪಾನಕವೆಂದು ಜಗತ್ಪ್ರಸಿದ್ಧವಾಗಿದೆ. ಇದು ಸಾಕ್ಷಾತ್ತಾಗಿ ಬೆನ್ನುಹುರಿ ಹಾಗೂ ಜನನೇಂದ್ರಿಯಗಳಿಗೆ ಸಂಬಂಧಪಟ್ಟ ನರಗಳನ್ನು ಉಜ್ಜೀವಿಸುವುದು. ಆದ್ದರಿಂದ ಅಂಥ ವ್ಯಾಧಿಗಳಿಂದ ನರಳುವವರಿಗಿದ್ದು ಅಮೂಲ್ಯವಾದದ್ದು. ನೀವು ಯೌವನದ ಅಪವ್ಯಯ, ಅತ್ಯಾಚರಣೆ, ಮುಷ್ಟಿ ಮೈಥುನ, ಅಕಾಲಿಕ ವೃದ್ಧಾಪ್ಯ, ಸ್ವಪ್ನೇಂದ್ರಿಯ, ಅಸ್ವಾಭಾವಿಕ ಸ್ರಾವ, ಅತಿ ಮೂತ್ರ, ಕ್ಷೀಣಧಾತು, ಧಾರಣಾಶಕ್ತಿಯಿಲ್ಲದಿರುವಿಕೆ, ಕಾಮತೃಪ್ತಿಯ ವಿಫಲತೆ, ಸ್ಪೆರ್ಮಟೋರಿಯ, ನಿರುತ್ಸಾಹ ಮತ್ತು ನರದೌರ್ಬಲ್ಯ ಇವುಗಳಿಂದ ನೀವು ನರಳುತ್ತಿದ್ದರೆ ಡಾ। ಬಿಸನ್‌ರವರ "ಸೆಲ್ಫ್ ಪ್ರೊಟೆಕ್ಟರ್" ಉಪಯೋಗಿಸಿರಿ. ಅದನ್ನು ಬಳಸಿದ ಮೊದಲಿನ ದಿನದಿಂದ ಗುಣತೋರಿಬರುವುದು. ಇಂದೇ ಒಂದು ಸೀಸೆ ಕೊಳ್ಳಿರಿ.

ಬೆಲೆ ೧ ಸೀಸೆ ರೂ. 4—0—0

ಅಮೆರಿಕನ್ ಮೆಡಿಕೊ ಅಂಡ್ ಜಿ. ಸಿ. ಅಸೋಸಿಯೇಷನ್, (D.23) ಫೋರ್ಟ್ ಬೊಂಬಾಯಿ.

SELF-PROTECTOR FOR VIGOUR & VITALITY

ಭವ ನಿನಗಿತ್ತಾ? ಅನುಭವದ ಶಾಲೆಯಲ್ಲಿ ಪೆಟ್ಟು ತಿಂದವನಲ್ಲವ ಮಗಾ—ನಾನು. ನಾನು ಹೇಳುವುದನ್ನು ಸಾವಧಾನದಲ್ಲಿ ಕೇಳು ಮಗಾ.

ಮಮ್ಮಗ—ಆಯಿತು ಅಜ್ಜಯ್ಯ ಹೇಳಿ.

ಅಜ್ಜಯ್ಯ—ಅಯ್ಯೋ-ಮಗಾ, ಈ ಕಾಲವೇ! ಅಂದು ಇಂದುಗಳೆರಡನ್ನೂ ನೋಡಿ ಹೇಳುವದಾದರೆ ಈಗಿನ ಕಾಲದ ಅವಸ್ಥೆಯನ್ನು ನೋಡುವಾಗ ಕೇಳುವಾಗ ನನಗೆ ರೋಮಾಂಚನವಾಗುತ್ತದೆ. ಮಗಾ,-ನಿನ್ನಂಥಾ ಮಕ್ಕಳು ಅರ್ಧ ಇಂಗ್ಲೀಷ್ ಕಲಿತು ನಿರುದ್ಯೋಗಿಗಳಾಗಿ ಮನೆ ಹಾಳಾಗುತ್ತಾ ಬಂತು-ಮನೆಯಿಂದ ಪೇಟೆಗೆ ಹೋಗಿ ಎರಡುಪೈ ಖರ್ಚುಮಾಡಿಯೇ ಬರುವದಲ್ಲದೆ, ಮನಗೊಂದು ಪೈ ದುಡಿದು ತರುವುದುಂಟೇ? ಅಯ್ಯೋ ಅವಸ್ಥೆಯೇ-ಕಾಫಿ ಬೇಡಾ ಬೀಡಿ ಎಂದು ಸಿಗರೇಟು ಶಾಪ್, ಕ್ರೋಫ್ ರಾಫ್! ಎಂದು-ವ್ಯಭಿಚಾರ, ಜುಗಾರಿ, ಕುಡಿತ ಎಂದು ಗಂಡು ಮಕ್ಕಳಿಂದ ಮನೆಹಾಳು-ಹೆಣ್ಣು ಮಕ್ಕಳಿಗೆ ಥಳಕಿನ ಜಂಬಿಗೆ ಸಿಲ್ಕಿನ ಶೀರೆ, ಡಿಗ್ರಿಯ ಗಂಡ ಎಂತ ಮನೆ ಹಾಳು-ಹಾಲು ಕೊಡದ ಡಿಗ್ರಿ ದನಗಳು ಯಾಕೆ ಮಗಾ? ಮನೆಕೆಲಸ ಮಾಡುವುದು 'ಬರಂ'ಗೆ ಕಡಿಮೆಯೆಂದು ಮನೆಯೆಲ್ಲಾ ಕೆಲಸದವರ ಕೈಯಲ್ಲಿ ಸಿಕ್ಕಿ ಹಾಳು-ನಮ್ಮ ಹುಡುಗಿಯರು ಕೆಲಸಮಾಡದ ಕಾರಣದಿಂದ ವ್ಯಾಯಾಮವಿಲ್ಲದೆ ಅವರ ದೇಹಸ್ಥಿತಿ ಹಾಳಾಗಿ ಹೆರಲಿಕ್ಕೆ ಆಸ್ಪತ್ರೆಯೇ ಗತಿಯಾಗಿದೆ ಮಗಾ! ಒಂದು ಹೆಂಗೆಗೆ ಇನ್ನೂರು ಮುನ್ನೂರು ರೂಪಾಯಿ ಖರ್ಚು ಮಗಾ!-ಒಬ್ಬರು ಮಾಡುತ್ತಾರೆಂದು ಮತ್ತೊಬ್ಬರು ಮಾಡುವುದು! ಕೆಲಸಮಾಡಲಿಕ್ಕೆ ಯಾರಿಗೂ ಖುಶಿಯಿಲ್ಲಾ ಮಗಾ!-ರಾಮಾ! ಕೆಲಸದ ಜನರನ್ನು ತಂದುಕೊಳ್ಳುವುದರಲ್ಲಿ ಸ್ಪರ್ಧೆ ಮಾಡಿ ಮಾಡಿ ಕಂಡಾಬಟ್ಟೆ ಸಂಬಳ ಏರಿಸಿ ಕೊನೆಗೆ ಆ ಕೆಲಸದವರ ಅಡಿಯಾಳು ನಾವಾಗುವುದೇನು ಮಗಾ! ಮನೆಯಲ್ಲ ಶಿಸ್ತುವುಂಟಾ ಮಗಾ!—ಒಬ್ಬನು ಹೇಳಿದ್ದು ಒಬ್ಬ ಕೇಳಲಿಕ್ಕೆ ಉಂಟಾ! ದೈವ ದೇವರ ಹೆದರಿಕೆಯುಂಟಾ-ಹರಿಕಥೆ ಕೇಳಲಿಕ್ಕುಂಟಾ! ತಾಳಮದ್ದಳೆ ಕಲಿಯಲಿಕ್ಕುಂಟಾ! ಭಾರತ ರಾಮಾಯಣ ಓದುವುದುಂಟಾ!, ಇವುಗಳನ್ನೆಲ್ಲಾ ತಳ್ಳಿ, ಇವುಗಳ ಸ್ಥಳದಲ್ಲಿ ಹಾರ್ಮೋಣಿ, ಫೋನೊಗ್ರಾಫ್, ರೇಡಿಯೋ ಇವೆಲ್ಲಾ ಬಂದುಕೂತಿವೆಯಲ್ಲಾ? ನಮ್ಮ ಮಕ್ಕಳು ಕಾಫಿ, ಚಾ, ಕುಡಿದು ಬೀಡಿ ಸಿಗರೇಟು ಸೇದಿ, ಕಾಯಕಷ್ಟ ಮಾಡದೆ ಮುವತ್ತು ವರ್ಷದೊಳಗೆ ಮುಪ್ಪಾಗುತ್ತಾರಲ್ಲ! ಹೆಣ್ಣು ಮಕ್ಕಳು ಡಿಗ್ರಿಯ ಗಂಡನನ್ನು ಕಾಯುವುದರಿಂದಲೂ ಗಂಡು ಮಕ್ಕಳು ನಾಲ್ವತ್ತು ಐವತ್ತು ವರ್ಷದ ವರೆಗೂ ಹೆಣ್ಣಿನ ಮುಖಾಂತರ ದೊಡ್ಡ ಕೇವು ಸಿಕ್ಕಬೇಕೆಂದು ಬೇಟೆಹಾಕುತ್ತ ಇರುವುದರಿಂದಲೂ ಒಂದು ಮದುವೆಮಾಡುವ ಕಷ್ಟವೇ-ಏನು ವರದಕ್ಷಿಣೆ! ಅಂತೂ ಮದುವೆ ಆಗುವ ಶರ್ಮಕ್ಕೆ ಕೆಲವರು ಕಂಡಾಬಟ್ಟೆ ವರದಕ್ಷಿಣೆ ಹೇಳಿ ಮದುವೆ ಚಪ್ಪರದಲ್ಲಿ ಕೂಡಲಿಕ್ಕೆ ಯತ್ನವಿಲ್ಲದಿದ್ದಾಗ—ಎಲ್ಲೆಲ್ಲಿಂದಲೋ ಎರವಾಗಿ ತಂದು ಹೆಣ್ಣಿನ ಮೈಮೇಲೆ ಹಾಕಿದ ಆಭರಣ ಗಂಡನ ಮನೆಯಿಂದ ಪ್ರಥಮಸರ್ತಿ ಹಿಂದೆಬರುವಾಗಲೇ ಇಲ್ಲವಲ್ಲಾ! ಈ ಕಾರಣದಿಂದ ನಂಬಿಕೆಯೇ ಕೆಟ್ಟುಹೋಗಿದೆ-ಮಗಾ-ಕೆಲವು ಕಡೆಗಳಲ್ಲಿ ವರದಕ್ಷಿಣೆಯನ್ನು ಮುದಾಂಗಿ ಕೇಳುತ್ತಾರೆ. ಒಬ್ಬ ಇಬ್ಲೀಸ್ ಗಂಡ ಸಿಕ್ಕುತ್ತಾನೆಂದು ಸಂದರ್ಭಯಿದ್ದರೆ ತಮ್ಮ ಮನೆಯನ್ನು ಮಾರಿಯಾದರೂ ವರದಕ್ಷಿಣೆ ಸುರಿಯುತ್ತಾರಲ್ಲ! ಒಂದು ಹುಡುಗಿಯು ಸುಖದಲ್ಲಿರಲಿಕ್ಕೆ ಸಾಕೆಂಬ ಕನಸಿಗೆ ಮನಸೋತು ಮನೆಯಲ್ಲಿ ಉಳಿದವರು ನನ್ನ ಅಂಥ ಹಳೆ ಮುದುಕರು ಎಲ್ಲಿ ಹೋಗುವುದು ಮಗಾ!-ನೋಡು ಮಗಾ-ಆಡಿಕೆ ಮನೆ ಅಷ್ಟು ದೊಡ್ಡ ಮನೆಯಲ್ಲವಾ-ಈ ವೇಷದಿಂದ-ಈಗ ಅಲ್ಲಿ ಮಾಡಿನಲ್ಲಿ ಹಂಚು ಉಂಟಾ? ಹಾಗೆಯೇ ತೋಟದ ಮನೆ ನೋಡು ಮಗ-ಕರಗಿಯೇ ಹೋಯಿತಲ್ಲಾ! ಬೆಟ್ಟಿನ ಮನೆ ನೋಡು ಮಗಾ—ನಾನು ಸಣ್ಣದಿರುವಾಗ ಏನು ವೈಭವದಲ್ಲಿ ಇತ್ತು-ಈಗ ಹಾಳು ಹಂಪೆಯೇ ಅಲ್ಲವಾ! ಬೈಲುಮನೆ ನೋಡು ಮಗಾ-ಬಾಡಿಯೇ ಹೋಗಿದೆ! ತೊಡಮ ಮನೆ ಗಂಜಿಗೇ ಕಡಿಮೆ ಎಂದಾಗಿದೆಯಲ್ಲ! ಈಗಿನ ಅವಿವೇಕ ಜೀವನದಿಂದಲೇ ಎಲ್ಲಾ ಹಾಳಾಯಿತಲ್ಲಾ! ಅಯ್ಯೋ ಜನಗಳಿಗೆ ಯಾಕೆ ಬುದ್ಧಿಯಿಲ್ಲ ಹೇಳು:-

ಮಮ್ಮಗ—ಅಜ್ಜಯ್ಯ, ಹೀಗೆ ನೀವು ಮರುಗಿದರೆ ಆಯಿತಾ-ಇದಕ್ಕೆಲ್ಲಾ ಏನು ಮಾಡಬೇಕು ಹೇಳಿ?-

ಅಜ್ಜಯ್ಯ—ಮಗಾ, ನಾನು ಇಂದೋ ನಾಳೆಯೋ ಸಾಯುವವ-ನೀವು ಒಳ್ಳೇದಾಗಿ ಇರಿ ಮಗ..ಈ ಥಳಕು ಬಿಡಿ-ಇದಕ್ಕೆ ಅಲ್ಪ ಆಯುಷ್ಯ-ನಮ್ಮಗೆ ಪೈಯ್ಯಾ ಪ್ರಯೋಜನವಿಲ್ಲದೆ ಪೇಟೆಯಲ್ಲಿ ಅಲೆಯಬೇಡಿ-ಪೇಟೆಗೆ ಹೋಗಿ ಮನೆಯನ್ನು ಮಾರಬೇಡಿ-ಹಾಲಿಲ್ಲದ ಇಂಗ್ಲೀಷ್ ಹುಡುಗನಿಗೆ ಹೆಣ್ಣು ಕೊಡುವ ಘೋರಣೆ ಬಿಡಿ ಅವನಿಗೆ ಸಂಪಾದನೆ ಇಲ್ಲದಿದ್ದರೆ ಹೆಣಹೊರಲಿಕ್ಕೂ ಪ್ರಯೋಜನವಿಲ್ಲ ವ್ಯಾವಹಾರಿಕ ದೃಷ್ಟಿಯಿಂದ ನೆಂಟಸ್ತಿಕೆ ಮಾಡಿ-ಗೇಯುವವನಿಗೆ ಹೆಣ್ಣು ಕೊಡಿ-ನೀನು ಈ ಬೆಡಗನ್ನು ಬಿಡು. ಇವತ್ತು ನೀನು ಅದನ್ನು ಬಿಡದಿದ್ದರೆ ನಾಳೆ ನಿನ್ನ ಹಣದ ಪೆಟ್ಟಿಗೆ ಖಾಲಿಯಾದಾಗ ಅದೇ ನಿನ್ನನ್ನು ಬಿಡುತ್ತದೆ-ಆಗ ಹಣವೂ ಇಲ್ಲ ಬೆಡಗೂ ಇಲ್ಲ. ಆದಕಾರಣ ಇವತ್ತು ಪೇಟೆಗೆ ಹೋಗಬೇಡ-ನೀನು ಹೋಗದೆ ಇದ್ದದ್ದರಿಂದ ಪೇಟೆ ಹಾಳಾಗಲಿಕ್ಕಿಲ್ಲ-ನಿಲ್ಲು ಹಾರೆ ಕೆಗೆ-ಆ ತೆಂಗಿನ ಮರದ ಸುತ್ತ ಕಟ್ಟೆಕಟ್ಟು. ಸರಸಿಯನ್ನು ಕರೆ-ಅವಳು ಅದಕ್ಕೆ ನೀರು ಹಾಕಲಿ. ಮನೆ ಉಳಿಯುತ್ತದೆ

ಮಮ್ಮಗ—ಅಜ್ಜಾ, ನನಗೆ ಸ್ವಲ್ಪ ಚಳಿಜ್ವರ ಹಿಡಿಯಲಿಕ್ಕೆ ಸುರುವಾಯಿತು. ಸಾಧಾರಣ ಹೊಕ್ಕಿತು-ಅದು ಹೌದು—ಆಲೋಚನೆ ಮಾಡುತ್ತೇನೆ—ಮುಂದೆ ಹೋಗಿ ಹಿಂದೆ ಬರುವುದು ಸ್ವಲ್ಪ ಕಷ್ಟ ಅಲ್ಲವಾ ಅಜ್ಜ.

ಅಜ್ಜಯ್ಯ—ಬರದಿದ್ದರೆ ಮನೆ ಖಾನೇಶುಮಾರಿಗೆ ದಾಖಲು ಆಗುತ್ತದಲ್ಲ ಮಗಾ! ಮಗಾ, ಕೆಲಸವೇ ಜೀವನದ ಜೀವಾಳ-ಕೆಲಸಮಾಡುವವನಿಗೆ ಜೀವನವು ಹದರುವುದು-ಅವನೇ ಶೂರ.

ಂ ಂ ಂ

ಬರುವ ಲೇಖನ:—

"ಶಾಂತಿಯ ಮದುವೆ"

ರೂಪಾಯಿ 26,000

ಎಲ್ಲಾ ಸರಿಯಾದ 13 ಉತ್ತರಗಳಿಗೆ ಹಂಚಲ್ಪಡುವುದು.

ಉತ್ತರವನ್ನು ಮುಂಬಾಯಿಯ ಪ್ರಸಿದ್ಧ ಬ್ಯಾಂಕಿನಲ್ಲಿ ಭದ್ರವಾಗಿರಿಸಲಾಗಿದೆ. ಕನಿಷ್ಟ ರೂ 2000 ಇದಕ್ಕೆ ಸರಿಯಾದ ಪ್ರತಿ ಉತ್ತರಕ್ಕೆ ಕೊಡಲಾಗುವುದು.

ಹೆಚ್ಚು ಉತ್ತರ ಕಳುಹಿಸುವವರಿಗೆ ರೂ. 150 ಮತ್ತು ನಮ್ಮ ಉತ್ತರಕ್ಕೆ ಹೋಲಿಕೆಯುಳ್ಳ ಉತ್ತರಗಳಿಗೆ ರೂ 25ರ 50 ಸಾದರಣೀಯ ಬಹುಮಾನಗಳನ್ನು ಕೊಡಲಾಗುವುದು.

ಕೆಳಗೆ ಕೊಟ್ಟ ಚೌಕದಲ್ಲಿಯ ಸಾಲುಗಳನ್ನು ಅಡ್ಡಕ್ಕೂ ನೀಟಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸದಲ್ಲಿ ಜುಮಲಾ 34 ಬರುವಂತೆ 1 ರಿಂದ 16ರವರೆಗಿನ ಸಂಖ್ಯೆಗಳನ್ನು ಸೇರಿಸತಕ್ಕದ್ದು. ಕಳುಹಿಸುವ ಕೊನೆಯ ದಿನ 24-4-'39. ಫಲಿತಾಂಶವು 1-5-39ರಲ್ಲು ಪ್ರಕಟಣೆ ಹೊಂದುವುದು. ಪ್ರವೇಶ ಧನ ಒಂದು ಉತ್ತರಕ್ಕೆ ರೂ 1/- ಮೂರಕ್ಕೆ ರೂ. 2/- 8ಉತ್ತರಗಳ ಪ್ರತಿಯೊಂದು ಸಟ್ಟಿಗೆ ರೂ. 5/-ರಂತೆ.

ಶರ್ತಗಳು:—ಮೇಲೆ ಕಾಣಿಸಿದಂತೆ ಯುಕ್ತ ಮೌಲ್ಯದೊಂದಿಗೆ ಸಾಮಾನ್ಯ ಕಾಗದದ ಮೇಲೆ ಸ್ಪಷ್ಟವಾಗಿ ಬರೆದು ಬೇಕಾದಷ್ಟು ಉತ್ತರಗಳನ್ನು ಕಳುಹಿಸಬಹುದು. ಹಣವು ಮನಿಯಾರ್ಡರು ಯಾ ಪೋಸ್ಟಲ್ ಆರ್ಡರು ದ್ವಾರಾ ರವಾನಿಸತಕ್ಕದ್ದು. ಜಮೆಯಾದ ಹಣದ ದಾಮಾಶೆಯದಲ್ಲಿ ಬಹುಮಾನಗಳು ಕೊಡಲಾಗುವುವು ಆದರೆ ಕನಿಷ್ಟ ಬಹುಮಾನ ರೂ. 2000ಕ್ಕೆ ಗ್ಯಾರಂಟಿಯಿದೆ. ಫಲಿತಾಂಶ ತಿಳಿಯಲು ಅನುಕೂಲವಾಗುವಂತೆ ಉತ್ತರ ಸಹಿತವಾದ, ಸ್ಟ್ಯಾಂಪು ಅಂಟಿಸಿದ ಕವರನ್ನು, ಕಳುಹಿಸುವ ಉತ್ತರದೊಂದಿಗೆ ಲಗ್ತೀಕರಿಸಬೇಕು. ವ್ಯವಸ್ಥಾಪಕರ ತೀರ್ಮಾನವೇ ಕೊನೆಯ ತೀರ್ಮಾನವು, ಕಾಯಿದೇಶೀರ ಲಗಾವಾಗಿತಕ್ಕದ್ದು ಆಗಿದೆ.

ಮೇಲಣ ಇನಾಮುಗಳಲ್ಲದೆ ಕನಿಷ್ಟಪಕ್ಷ ಮೂರು ಉತ್ತರಗಳನ್ನು ಕಳುಹಿಸುವವರಿಗೆ ಕೆಮಿಕಲ್ ಗೋಲ್ಡ್ ಉಂಗುರ ಉಚಿತ. ಕೈಬೆರಳ ಸುತ್ತಳತೆ ಕಳುಹಿಸತಕ್ಕದ್ದು. 8 ಯಾ ಹೆಚ್ಚಿಗೆ ಉತ್ತರ ಕಳುಹಿಸುವವರಿಗೆ ಒಂದು ಸೀಸೆ ವೈಗ್ರನ್ ಟೋನಿಕ್ ಸಹ ಕೊಡಲಾಗುವುದು.

ನಿಮ್ಮ ಉತ್ತರಗಳನ್ನೂ ಹಣವನ್ನೂ ಕೆಳಗಣ ವಿಳಾಸಕ್ಕೆ ಕಳುಹಿಸಿರಿ.

ಮೊದಲಣ ಸ್ಪರ್ಧೆಯಲ್ಲಿ ಭದ್ರಗೊಳಿಸಿದ ಉತ್ತರದ ಜುಮ್ಲಾ 30.

೧ನೇ ಸಾಲು	0,	11,	6,	4
೨ನೇ ಸಾಲು	7,	5,	10,	8
೩ನೇ ಸಾಲು	12,	14,	1,	3
೪ನೇ ಸಾಲು	3,	0,	13,	15

ಮೆನೇಜರ್,
ಪ್ರೆಸಿಡೆನ್ಸಿ ಕಮ್ಮರ್ಶಿಯಲ್
ಸಿಂಡಿಕೇಟ್ ಮಾಂಬಾದೇವಿ
ಬೊಂಬಾಯಿ 2

The Manager,
Presidency Commercial
Syndicate Mumbadevi,
BOMBAY 2

ಮೈಸೂರು ಪತ್ರ

(ನವಯುಗದ ವಾರ್ತಾದಾರರಿಂದ)

ಮೈಸೂರು ಎಪ್ರಿಲ್ ೧೭.

ವಿದುರಾಶ್ವತ್ಥದಲ್ಲಿ ಮೈಸೂರು ಕಾಂಗ್ರೆಸ್ ಅಧಿವೇಶನ.

ಖಾದಿ ಮತ್ತು ಕೈಗಾರಿಕೆ ವಸ್ತು ಪ್ರದರ್ಶನ.

ಡಾ. ಪಟ್ಟಾಭಿಯವರಿಂದ ಆರಂಭೋತ್ಸವ—ಮೈಸೂರು ಕಾಂಗ್ರೆಸ್‌ನ ದ್ವಿತೀಯ ರಾಷ್ಟ್ರಕೂಟದ ಅಂಗವಾಗಿ, ಖಾದಿ ಮತ್ತು ಗ್ರಾಮಕೈಗಾರಿಕೆಯ ವಸ್ತುಪ್ರದರ್ಶನವೊಂದು ತೆರೆಯಲಾಗಿದೆ. ಇದರ ಆರಂಭೋತ್ಸವವು ಕಾಂಗ್ರೆಸ್‌ನ ಮುಂದಾಳುಗಳೂ ಸುಪ್ರಸಿದ್ಧ ಆಂಧ್ರಪ್ರಮುಖರೂ ಆದ ಡಾ. ಪಟ್ಟಾಭಿ ಸೀತಾರಾಮಯ್ಯನವರಿಂದ ಈ. 12ನೇ ಘಂಟೆ ನೆರವೇರಿತು.

ಆರಂಭೋತ್ಸವ—ಡಾ. ಪಟ್ಟಾಭಿ ಸೀತಾರಾಮಯ್ಯನವರು ಜಯಜಯಕಾರದ ಮಧ್ಯದಲ್ಲಿದ್ದು, ವಸ್ತುಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸಿ ಈ ರೀತಿ ಭಾಷಣಮಾಡಿದರು. ಈ ಕಾರ್ಯವನ್ನು ನೆರವೇರಿಸಲು ನನ್ನನ್ನು ಕರೆದುದಕ್ಕಾಗಿ ವಂದನೆಗಳು, ಭಾರತವು ಇತಿಹಾಸ ಕಾಲದಿಂದಲೂ, ಕೈಗಾರಿಕೆ ಮತ್ತು ಕೈಕೆಲಸಗಳ ಕುಶಲತೆಯನ್ನು ಪ್ರಚುರಪಡಿಸುತ್ತಿದೆ. ಆದರೆ ಇತ್ತೀಚೆಗೆ ಯಂತ್ರಗಳು ಅಭಿವೃದ್ಧಿ ಸ್ಥಿತಿಗೆ ಬಂದು, ಇವೆಲ್ಲವನ್ನೂ ನಶಿಸಿ ಹೋಗುವಂತೆ ಮಾಡುತ್ತಿವೆ. ಇಡೀ ಭರತಖಂಡವು ಕೋಟ್ಯಂತರ ಬಡಹಳ್ಳಿಯವರಿಂದಲೇ ತುಂಬಿರುವುದರಿಂದ, ಬಡ ರೈತರನ್ನು ಮುಂದೆ ತರಲು ಯುಕ್ತವಾದ ಕೈಗಾರಿಕೆಗೆ ಹೆಚ್ಚು ಪ್ರೋತ್ಸಾಹವೀಯಬೇಕೆಂದೂ ಮೈಸೂರಿನ ಪ್ರಶಂಸೆಯನ್ನು ಮಾಡಿ ವಸ್ತುಪ್ರದರ್ಶನದ ಆರಂಭೋತ್ಸವವನ್ನುನೆರವೇರಿಸಿದರು.

ಅಧ್ಯಕ್ಷ ಮೆರವಣಿಗೆ— ವಿದುರಾಶ್ವತ್ಥ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ. ಹೆಚ್. ಸಿ. ದಾಸಪ್ಪನವರನ್ನು ಒಂದು ಶ್ವೇತಾಶ್ವದ ಮೇಲೆ ಕುಳ್ಳಿರಿಸಿ, ವಿದುರ ನಗರದಲ್ಲಿ ಮೆರವಣಿಗೆ ನಡೆಸಲಾಯಿತು. ಶ್ರೀ. ದಾಸಪ್ಪನವರು, ವಿದುರ ನಗರದಲ್ಲಿರುವ, ವಿದುರನಾರಾಯಣ ಸ್ವಾಮಿ ದೇವಸ್ಥಾನದ ಮುಂದೆ, ಶ್ವೇತಾಶ್ವದ ಮೇಲೆ ಕೂಡಲು, ಅವರ ಕೈಗೆ ಒಂದು ಹೂವಿನ ಗೊಂಚಲನ್ನೂ ಅವರ ಕೊರಳಿಗೆ ಒಂದು ಹೂವಿನ ಮಾಲೆಯನ್ನೂ ಹಾಕಿದ ತರುವಾಯ ಮಲ್ಲಿಗೆ ಹೂವಿನ ಮಳೆಯೊಡನೆ ಯಲ್ಲಿ ಎರಚಲಾಯಿತು. ಮೆರವಣಿಗೆಯು ನಡೆಯುತ್ತಿರುವಾಗ ಸಾಧಾರಣ ಮಳೆ, ಆದರೆ ಜನಗಳು ಇದಕ್ಕೆ ಹೆದರದೆ ತಂಡತಂಡವಾಗಿ ನಿಂತು ಅಧ್ಯಕ್ಷರ ದರ್ಶನಪಡೆದರು. ಶ್ರೀ. ದಾಸಪ್ಪನವರು ಶ್ವೇತಾಶ್ವದ ಮೇಲೆ ಕೂತು ಬೀದಿಗಳಲ್ಲಿ ಮೆರವಣಿಗೆಯಲ್ಲಿ ಬರುತ್ತಿದ್ದುದನ್ನು "ಒಂದು ಬಾರಿ ಪಂಡಿತ ಜವಾಹರಲಾಲರು, ಲಕ್ನೋದಿಯಾನದಲ್ಲಿ, ಸ್ಟೇಟ ಪೀಪಲ್ ಕಾನ್‌ಫರೆನ್ಸ್‌ಗೆ ಹೋಗಿದ್ದಾಗ, ಅವರನ್ನು ಶ್ವೇತಾಶ್ವದ ಮೇಲೆ ಕುಳ್ಳಿರಿಸಿ ಮೆರವಣಿಗೆಯಲ್ಲಿ ಬರುತ್ತಿದ್ದುದನ್ನು" ಹೋಲಿಸಿದರೆ ಅತಿಶಯೋಕ್ತಿಯಾಗಲಾರದು, ಅಧ್ಯಕ್ಷ ಮೆರವಣಿಗೆಯು ಬಹಳ ಸೊಗಸಾಗಿತ್ತು.

ಧ್ವಜಾರೋಹಣ— ಈ ದಿನ ಬೆಳಿಗ್ಗೆ ಎದ್ದು ನೋಡಿದ್ದಲ್ಲಿ ವಿದುರನಗರವು ಭರ್ತಿಯಾಗಿತ್ತು. ಸ್ವಲ್ಪ ಮಳೆ, ಸಹಸ್ರಾರು ಜನಗಳು, ದೊಡ್ಡ ಮೈದಾನದಲ್ಲಿ ಸೇರಿದ್ದರು, ಇವರುಗಳ ಮುಂದೆ ಧ್ವಜಾರೋಹಣ ನಡೆಯಿತು. ಧ್ವಜಾರೋಹಣ ಕಾಲದಲ್ಲಿ ನಿಶ್ಶಬ್ದವಾಗಿತ್ತು. ಅತಿ ದೊಡ್ಡದಾದ ಒಂದು ಧ್ವಜಸ್ತಂಭಕ್ಕೆ ಎರಡು ಗಾಲಿಗಳನ್ನು ಇಟ್ಟಿದ್ದರು ಈ ಗಾಲಿಗಳಿಗೆ ಮೈಸೂರು ಗಂಡ ಭೇರುಂಡ ಧ್ವಜ ಮತ್ತು ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ತ್ರಿವರ್ಣ ಧ್ವಜಕಟ್ಟಿದ್ದರು, 'ವಂದೇ ಮಾತರಂ' ನಡೆದ ಮೇಲೆ, ಒಂದು ಸಾವಿರ ಜನಗಳ ಮುಂದೆ ಶ್ರೀ ತಿಮ್ಮರೆಡ್ಡಿಯವರು, ಮೈಸೂರು ಧ್ವಜವನ್ನು, ಶ್ರೀ. ದಾಸಪ್ಪನವರು ಕಾಂಗ್ರೆಸ್ ತ್ರಿವರ್ಣಧ್ವಜವನ್ನೂ ಹಾರಿಸಿದರು, ಸಮಯೋಚಿತ ಭಾಷಣ ನಡೆದವೇಳೆ ಸಭೆಯು ಚದರಿತು.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಿನ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್

ಮುಲಾಮು ಈ ಕೆಳಗಿನಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು

ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ;**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:** – ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು:– ಶ್ರೀ. ಬಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪುಂಜ,

President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,

ಗವರ್ನ್‌ಮೆಂಟ್ ಕೊಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] # ಕೆನರಾ ಛಾಪಖಾನೆ [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ

ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,

Hampankatte, **MANGALORE**

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ. ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1ಕ್ಕೆ

12 ಆಣೆ, ಟಿ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,

ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ.**

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಡುನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ. ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ **1—8—0**

ಜೀವನಿ ಬಹಿಷ್ಟೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತು ಸಂಬಂಧವಾದ ಎಲ್ಲಾ ರೋಗಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ, ಬೆಲೆ **1—0—0.**

ನಮ್ಮ ರಿಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು

"ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ

ಅಗತ್ಯವಾಗಿ ಇರಲೇಬೇಕಾದ್ದು.

ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,

ಬ್ರಾಂಚ್—ಮಂಗಳೂರು.

NAVABHARAT BOOK DEPOT

Book Sellers, Publishers & Advertising Agents

Church Road-Udipi.

ನಮ್ಮಲ್ಲಿ

ಎಲ್ಲಾ ತರದ ಶಾಲಾಪುಸ್ತಕಗಳೂ

ಲೈಬ್ರರಿಗೆ ಬೇಕಾದ ಪುಸ್ತಕಗಳೂ

ದೊರೆಯುತ್ತವೆ.

ಕೆಟಲಾಗಿಗೂ

ಇತರ ಮಾಹಿತಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ

ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು

ಚರ್ಚ್‌ರೋಡ್ : : : ಉಡುಪಿ

ABSOLUTELY FREE!

Bring this coupon and you will get your own Photo absolutely free of charge

☞ The rate for the enlargement of the same Rupee one only (size 6"×8")

Send your old photo and you will get enlargement 6'×8' for Rs 2- 8-0. ony and big size 16'×20' for Rs. 5 only.
Our time every day 9 a. m. to 7 p. m. Sunday 9 a. m. to 4p. m.

K. H. PATHAK

276 Surya Mahal Girgaum Road, BOMBAY, 4. | Royal Art Studio 183 Hornby Road BOMBAY, 1.

ಕೇವಲ ಧರ್ಮಾರ್ಥ!

ಈ ಜಾಹೀರಾತಿನ ಕೂಪನನ್ನು ತರುವವರಿಗೆ ಅವರ ಫೊಟೋವನ್ನು ಧರ್ಮಾರ್ಥವಾಗಿ ತೆಗೆದುಕೊಡಲಾಗುವುದು.

ತ್ವರೆ ಮಾಡಿರಿ ! ಬೊಂಬಾಯಿ ಪಟ್ಟಣಿಗರೆ ತ್ವರೆ ಮಾಡಿರಿ !!

● ಈ ನಮ್ಮ ಫೊಟೋವನ್ನು ಎನ್‌ಲಾರ್ಜ್‌ಮೆಂಟಿಗೆ ಬರೇ ರೂ. 1/. ಮಾತ್ರ. (ಸೈಜ್ 6"×8")

ಹೊರಗಿನವರು ಈ ಕೂಪನಿನೊಂದಿಗೆ ತಮ್ಮ ಫೊಟೋಕಳುಹಿಸಿದರೆ ಅದನ್ನು 6'×8' ಸೈಜಿನಲ್ಲಿ ರೂ. 2-8-0ಕ್ಕೆ ಎನ್‌ಲಾರ್ಜ ಮಾಡಿಕೊಡಲಾಗುವುದು. 16×'20'ರ ದೊಡ್ಡ ಸೈಜಿಗೆ ರೂ. 5 ಮಾತ್ರ. ನಮ್ಮ ಆಫೀಸು ಸಮಯ ಬೆಳಿಗ್ಗೆ 9ರಿಂದ ಸಂಜೆ 7, ಆದಿತ್ಯವಾರ ಬೆಳಿಗ್ಗೆ 9ರಿಂದ ಸಂಜೆ 4 ಗಂಟೆ ತನಕ

ಕೆ. ಎಚ್. ಪಥಕ್

276, ಸೂರ್ಯಮಹಾಲ್ ಗಿರ್‍ಗಾಮ್‌ರೋಡು ಬೊಂಬಾಯಿ 4 | ರೋಯಲ್ ಆರ್ಟ್‌ಸ್ಟುಡಿಯೋ, 183 ಹೋರ್‍ನ್‌ಬೈರೋಡು, ಬೊಂಬಾಯಿ 1

ಕೇಶವರ್ಧಕ ⁘ ನೇತ್ರಾರೋಗ್ಯರಕ್ಷಕ ⁘ ಸುಖದಾಯಕ

ಆಮಲಕೀ ತೈಲ
AMALAKI HAIR OIL

(Regd Trade Mark)

ವಿದ್ಯಾರ್ಥಿಗಳಿಗೂ, ಸಕಲ ಸ್ತ್ರೀ ಪುರುಷರಿಗೂ ನಿತ್ಯ ಕೇಶ ಪ್ರಸಾಧನಾರ್ಥ ಪುಷ್ಪಗಂಧಮೋದಿತ ಉತ್ಕೃಷ್ಟ ಕೇಶವರ್ಧಕ ತೈಲವಿದು. ಮೆದುಳಿನ ಸ್ವಸ್ಥತೆಗೂ ನೇತ್ರಾರೋಗ್ಯ ರಕ್ಷಣೆಗೂ ಕೇಶಕಲಾಪದ ಬೆಳವಣಿಗೆಗೂ ಸೌಂದರ್ಯವರ್ಧನೆಗೂ ಅತ್ಯಂತ ಸಹಾಯಕವಾಗಿದೆ. ಇದನ್ನು ನಿತ್ಯವೂ ಉಪಯೋಗಿಸುತ್ತಿದ್ದರೆ ಶರೀರ ಹಾಗೂ ಮಾನಸಿಕ ಶ್ರಮೆಯಿಂದ ಪುರುಷರಿಗೂ, ಪ್ರಸವಾನಂತರದಲ್ಲಿ ಸ್ತ್ರೀಯರಿಗೂ ಸಾಮಾನ್ಯವಾಗಿ ಕೇಶಮೂಲಗಳು ನಿಸತ್ವಹೊಂದಿ ಕೂದಲುಗಳ ಉದುರುವಿಕೆ ಅಕಾಲದಲ್ಲಿ ನರೆಯುಂಟಾಗುವಿಕೆ ಇವೇ ಮೊದಲಾದದೋಷಗಳು, ದೂರವಾಗಿ ಕೇಶಮೂಲಗಳು ದೃಢವಾಗುವುದರಿಂದ ಅಚ್ಚಕಪ್ಪಾದ ಕೂದಲುಗಳು ಸಬಿಡವಾಗಿ ಬೆಳೆಯುವದಲ್ಲದೆ ಮೊದಲೇ ನರೆತಕೂದಲು ಸಹ ಕಪ್ಪಾಗಿ ಮುಖಶ್ರೀಯು ಲಾವಣ್ಯಪೂರ್ಣವಾಗುವದು. ತಲೆ ನೋವು, ಸೂರ್ಯಾವರ್ತ ಅಥವಾ ಅರೆತಲೆನೋವು, ನೇತ್ರಜ್ವಾಲೆ, ಮೆದುಳಿನ ಉಷ್ಣತೆ ಕಲೆತಿರುಕು, ದುಃಸ್ವಪ್ನ ಪೂರ್ಣವಾದ ನಿದ್ರಾಭಂಗ, ಮೊದಲಾದ ಪಿತ್ತಜನಿತರೋಗದೋಷಗಳು ನಿವೃತ್ತವಾಗಿ ಸುಖವಾದ ನಿದ್ರೆಯು ಬತ್ತುವುದು. ಇಂತಹ ಸುಖನಿದ್ರೆಯಿಂದ ಸ್ಮೃತಿ, ಮೇಧಾ ಉತ್ಸಾಹ ವಿಚಾರಶಕ್ತಿ ಮೊದಲಾದ ಮಾನಸಿಕ ಶಕ್ತಿಗಳು ವಿಕಾಸಹೊಂದಿ ಬುದ್ಧ್ಯಾರೋಗ್ಯ ಲಾಭವಾಗುವದು.

4 ಔನ್ಸಿನ ಸೀಸೆ ಒಂದರ 0—11—0. 2 ಔನ್ಸಿನ ಸೀಸೆ ಒಂದರ 0—6—0.

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ.
100ಮಾತ್ರೆಗಳಿಗೆ ರೂ. 1-5-0, 500ಕ್ಕೆ ರೂ. 5.
ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ

ಸ್ವದೇಶೀ ಔಷಧಿ ಭಂಡಾರ, (ರಿಜಿಸ್ಟರ್ಡ್) ಕುಂಜಾಲ್,
ಬ್ರಹ್ಮಾವರ ಪೋಸ್ಟ್, ದ. ಭಾರತ

ಸಪ್ಲೈ ಏಜನ್ಸಿ ಲಿಮಿಟೆಡ್‌ನಲ್ಲೂ ನವಭಾರತ ಬು.ಕ್ ಡಿಪೋದಲ್ಲೂ ನಮ್ಮ ಔಷಧಗಳು ಸಿಗುತ್ತವೆ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಫಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Supply Agency Limited.
(BANKERS)

ESTD] **UDIPI** [1933

Authorised Capital Rs. 1,00,000
Subscribed & Paid up Rs. 30,760

RATE OF INTEREST FOR FIXED DEPOSITS.

3 to 6	Months	4% p. a.
7 to 11	"	5% "
12 to 18	"	6% "

SPECIAL RATE FOR LONG TERM DEPOSITS ON APPLICATION.

Current Accounts are accepted at 3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	3	0	0
ಚಂದ್ರಗುಪ್ತ ಚಕ್ರವರ್ತಿ	1	0	0
Goutama Budda	0	8	0
भगवद्गीता	0	2	0
ಮಧುವನ	1	8	0
ಒಂದೇ ತಿಂಗಳಲ್ಲಿ ಇಂಗ್ಲಿಷ್	0	8	0
ಎರಡೇ ವಾರಗಳಲ್ಲಿ ಓದುಬರಹ	0	1	0
ಗೀತೆಯ ಕೈಗನ್ನಡಿ	0	4	0
ಭಗವದ್ಗೀತೆ	[illegible]	2	0
ತುಳು ವ್ಯಾಕರಣ	0	8	0
ಸಾಮುದ್ರಿಕ ಶಾಸ್ತ್ರ	0	8	0
ಮಿತ್ಯನಾರಾಯಣ ಕತೆ	0	8	0
ಪುರಂದರದಾಸರ ಪದಗಳು ಭಾಗ ೧	0	4	0
" ಭಾಗ ೨	0	4	0
" ಭಾಗ ೩	0	4	0
ತುಳುನಾಡ್ ತಿಲಕ ಪಂಚಾಂಗ	0	1	0
ವೈಜಯಂತೀ ಪಂಚಾಂಗ	0	2	6
ಕುಕ್ಕುಟ ಪಂಚಾಂಗ	0	1	0

ಇತ್ಯಾದಿ. ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors:*—**GENERAL SUPPLIES Ltd., Udipi**)

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

Registered No. M. 3618

NAVAYUGA

ನವಯುಗ

ತಿಂಗಳಕಾಣಿಕೆ—೮ 27–4–1939

ಊಟಿಯ ಸಮಯ

Modern Hindu Hotel, Ooty.

ಮೋಡರ್ನ್ ಹಿಂದೂ ಹೋಟೇಲು, ಊಟಿ

[ಉತ್ತಮ ತರದ ಶಾಖಾಹಾರಿ ಹಿಂದೂ ಹೋಟೇಲು]

ಪ್ರವಾಸಕಾಲವು ಆಗಲೇ ಪ್ರಾರಂಭಿಸಿದೆ.

ಬೇಗನೆ ನಿಮ್ಮ ಸ್ಥಳಗಳನ್ನು ಪಡಕೊಳ್ಳಿರಿ, ಮತ್ತೆ ನಿರಾಶರಾಗಬೇಡಿರಿ

ಕುಟುಂಬಿಗಳಿಗೆ ಪ್ರತ್ಯೇಕ ಸೌಕರ್ಯಗಳು.

ಭೋಜನ, ಉಳಿದುಕೊಳ್ಳಲು ಸ್ಥಳ—ದರಗಳು–ಒಬ್ಬರಿಗೆ ದಿನ ೧ಕ್ಕೆ ರೂ. ೩, ೪ ಮತ್ತು ೫.

ವಿಶೇಷ ಮಾಹಿತಿಗಳಿಗೆ:—**ಮೋಡರ್ನ್ ಹಿಂದೂ ಹೋಟೇಲು, ಊಟಿ**
ಮೋಡರ್ನ್ ಹಿಂದೂ ಹೋಟೇಲು, ಮೈಸೂರು
ಮೋಡರ್ನ್ ಕೇಫ್, ಎಸ್ಪ್ಲನೇಡ್, ಮದ್ರಾಸು
ಮದ್ರಾಸು ಎಕ್ವೇರಿಯಮ್ ರೆಸ್ಟೋರೆಂಟ್, ಮದ್ರಾಸು
ಮೊಡರ್ನ್ ಕೆಫ್ No 4 ತಂಬುಚೆಟ್ಟಿ ಸ್ಟ್ರೀಟ್, ಮದ್ರಾಸು

ನಿವಾಸಿಕರ ಅಪೇಕ್ಷೆಗಳಿಗನುಸರಿಸಿ ಟೇಕ್ಸಿ, ಟೆಲಿಫೋನ್, ಟೆನ್ನಿಸ್ ಇವುಗಳ ಅನುಕೂಲತೆಗಳಿವೆ.

ಕೆ. ಸೀತಾರಾಮರಾವ್,
ಮಾಲೀಕರು

ವಿ. ಸೂ. ಟೀಪಾರ್ಟಿ, ಗಾರ್ಡನ್‌ಪಾರ್ಟಿ ಮತ್ತು ಭೋಜನ ಸಮಾರಂಭಗಳಿಗೆ ಬಹು ಪ್ರಖ್ಯಾತಿ ಹೊಂದಿದ ಮೋಡರ್ನ್ ಕೇಫ್, ಮದ್ರಾಸು, ಇಲ್ಲಿ ಸರ್ವಾನುಕೂಲತೆಗಳಿವೆ.





ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ನಾರಾಯಣಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯ ವೆಂಬಂತೆ ಸಾಮಾನುಗಳ ಬೆಲೆ ಗಟ್ಟಿ ಬರುತ್ತಿವೆ. ಇದರಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗದುಕೊಳ್ಳುವುದು ಅತೀ ಲಾಭಕರವಾಗಿದೆ.

ಮದನರತಿಕಾಮಶಾಸ್ತ್ರವೆಂಬಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು, ಸ್ತ್ರೀ-ಪುರುಷರ ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಯ-ಪ್ರೇಮ-ಮತ್ತು-ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅದಗಿವೆ. ಸ್ತ್ರೀಯರನ್ನು ವಶ ಮಾಡಿಕೊಳ್ಳುವುದು ಹೇಗೆ? ಓದಿನೋಡಿರಿ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸ್ಸು ಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಎಂಡ್ ಕಂಪೆನಿ,**
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co., *Nambulier Street*, G. T. MADRAS.

ದೂರೀಕರಿಸಿರಿ—ದೃಷ್ಟಿ ಚಕ್ರ—ನೆರತಕೂದಲು – ವೃದ್ಧಾಪ್ಯ ತರುಣರು

ಎರಡು ತಿಂಗಳತನಕವೂ, ವೃದ್ಧರು ನಾಲ್ಕು ತಿಂಗಳವರೆಗೂ ಬೂಟಿಟಾನಿಕನ್ನು ಉಪಯೋಗಿಸಿದಲ್ಲಿ ದೃಷ್ಟಿ ಮಾಂದ್ಯವು ತೊಲಗಿ ನರೆತ ಕೂದಲು ಕಪ್ಪಾಗಿ ದೇಹದ ನಿತ್ರಾಣವು ತೊಲಗಿ ತಾರುಣ್ಯದ ಥಳಕುಬಾರದೆ ಹೋದಲ್ಲಿ ಇಮ್ಮಡಿ ಕ್ರಯ ವಾಪಾಸು ಕೊಡುವ ಶರ್ತವಿದೆ. ಟಾನಿಕಿನ ಕ್ರಯವು ಈ ತೆರನಾಗಿದೆ: ಒಂದು ತಿಂಗಳಿನ ಟಾನಿಕಗೆ ರೂ. 3-8-0; 2 ತಿಂಗಳಿನದಕ್ಕೆ ರೂ. 6-0-0; ನಾಲ್ಕು ತಿಂಗಳಿನದಕ್ಕೆ ರೂ. 10 ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Jari Booti Dawakhana,
P. O. Behar Nursery (Darbharga)

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರಿಯ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅನ್ಯಾತ ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

THE

PANGAL NAYAK BANK

Estd.] LIMITED. [1920.

ದಿ ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್.

Paid up Capital Rs. 1,82,100/-. Reserves Rs. 2,02,300/-

PRINCIPAL OFFICE: COURT ROAD, UDIPI.

OTHER OFFICES:

UDIPI MANGALORE, KATAPADI, & KANHANGAD.

Season Deposits so as to bear interest at 4 per cent per annum till the end of June 1939 are accepted.

Cumulative Deposits are also received on the usual terms.

Banking business of every description is transacted. Further particulars may be had on application.

ದಿ ವಿಜಯ ಬೇಂಕ್, ಲಿಮಿಟೆಡ್, ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವಹಿವಾಟುಗಳು ಇಲ್ಲಿ ನಡಿಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3 ತಿಂಗಳಿಗೆ	....	3½%
6 ,,	....	4%
1 ವರ್ಷಕ್ಕೆ	....	4½%
2 ,,	....	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತಿದೆ.

Transport & Car Owners

ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES — MANGALORE.

AUGUSTINE & CO.

Stockits:—

Wellknown ceylon, Nilgri, Darjeeling & Assam Tea & Coffee All sorts of Hotel & family Tea Mixures as well as Coffee can be had at moderate rates.

ಮುಂಬಾಯಿಯಲ್ಲಿ ನಮ್ಮ ಗಿರಾಕಿಗಳು ಹಲವು ವರ್ಷಗಳಿಂದ ನಮ್ಮ ಚಾ ಕಾಫಿಯನ್ನು ಉಪಯೋಗಿಸಿ ಸಂತುಷ್ಟರಾಗಿದ್ದಾರೆ.

ಹೋಟೆಲುಗಳಿಗೆ ಬೇಕಾಗುವ ಟೀ ಮಿಕ್ಸರ್ ವ ಕಾಫಿ ಹುಡಿ, ಮನೆಗಳಿಗೆ ಬೇಕಾಗುವ ಚಾ-ಕಾಫಿ, ನಮ್ಮಲ್ಲಿ ಸದಾ ಮಿತ ಹಿತದರಕ್ಕೆ ದೊರೆಯುತ್ತದೆ. ಪ್ರಾಮಾಣಿಕತೆಯೇ ನಮ್ಮ ಆದರ್ಶ. ಗಿರಾಕಿಗಳ ಸೌಕರ್ಯವೇ ನಮ್ಮ ಧ್ಯೇಯ.

ಪರೀಕ್ಷಿಸಿರಿ! ಖಾತ್ರಿ ಮಾಡಿಕೊಳ್ಳಿರಿ.

ವಿಳಾಸ: ಆಗಸ್ಟಿನ್ ಎಂಡ್ ಕೋ, ಮೌಂಟುರೋಡು, ಮಜಗಾಂ, ಮುಂಬಯಿ.

MOUNT ROAD, MAZAGAON, BOMBAY.

ESTD. 1921
FOUNDER
Sri. A. B. SHETTY, M.L.A.
Parliamentary Secretary, Govt of Madras,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೨೭-೪-೧೯೩೯ | Vol. XVIII
ಸಂಚಿಕೆ ೩೪ | Udipi, Thursday 27—4—1939 | No. 34

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ. ೩—೪—೦
೬ ತಿಂಗಳಿಗೆ ರೂ. ೧—೧೨—೦.
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ಉಪಸಂಪಾದಕ:
ಕೆ. ಎಚ್. ಶೆಟ್ಟಿ.

ಸಮಾಚಾರಸಮಾವಲೋಕನ

ರಾಜಕೋಟೆಯ ದ್ವಾರವೆಲ್ಲಿ?

ರಾಜಕೋಟೆಯೊಳ ನುಗ್ಗಿದ ಮಹಾತ್ಮಾ ಗಾಂಧಿಯವರಿಗೆ ಹೊರಡಲು ದ್ವಾರ ಸಿಗದಂತಿದೆ. ಗ್ವಾಯರ್ ಎವಾರ್ಡ್ ಹೊರ ಬಿತ್ತು. ಕೂಡಲೇ ಮುಸ್ಲೀಮರ ಮತ್ತು ಹರಿಜನರ ಬಯಕೆಯೂ ಹೊರಬಿತ್ತು. ತಮಗೆ ಸುಧಾರಣಾ ಸಮಿತಿಯಲ್ಲಿ ಸ್ಥಾನ ದೊರೆಯದಿದ್ದರೆ ಸತ್ಯಾಗ್ರಹ ಹೂಡುವೆವೆಂಬ ವರೆಗೂ ಅವರು ಮುಂದುವರಿದು ಬಂದರು. ಎಲ್ಲಕ್ಕೂ ಉತ್ತರಕೊಟ್ಟು ಗಾಂಧಿಯವರು ಏಳು ಮಂದಿಯ ಹೆಸರನ್ನು ಸೂಚಿಸಿದರು. "ಇವರ ಪೈಕಿ ಆರು ಮಂದಿ ರಾಜಕೋಟೆಯ ಪ್ರಜೆಗಳೆಂಬುದಕ್ಕೆ ಆಧಾರವಿಲ್ಲ." ಎಂದೀಗ ರಾಜಾ ಥಾಕೋರ್ ಸಾಹೇಬರ ಉತ್ತರಬಂದಿದೆ.

ರಾಜಕೋಟೆಯಲ್ಲಿ ಪ್ರಜೆಯೆನ್ನಿಸಿಕೊಳ್ಳಲು ಎಷ್ಟು ಕಾಲ ತಪಸ್ಸು ಮಾಡಬೇಕೋ ನಮಗರಿತಿಲ್ಲ. ಕೆಲವೆಡೆಗಳಲ್ಲಿ ಆರು ತಿಂಗಳುಗಳ ತನಕ ಎಡೆಬಿಡದೆ ವಾಸಿಸಿದರೆ ಅವನನ್ನಲ್ಲಿಯ ಪ್ರಜೆಯೆಂದು ಗಣಿಸುವ ಕಾನೂನಿದೆ. ರಾಜಕೋಟೆಯ ಸಮಸ್ಯೆಯು ಹೀಗೆಯೇ ಉದ್ದಕ್ಕೆ ಬೆಳೆದರೆ ಮ. ಗಾಂಧಿಯವರಿಗೇನೇ ರಾಜಕೋಟೆಯಲ್ಲಿ ಹಕ್ಕುಬರಬಹುದೇ ಎಂಬ ಸಂದೇಹ!

ರಾಜಭಕ್ತಿಯಿಲ್ಲದವರು ಪ್ರಜೆಗಳಲ್ಲ!

ಆದರೆ ರಾಜಕೋಟೆದ ಕಾರ್ಬಾರಿನ ಕಾನೂನೇ ಬೇರೆ ಎಂಬಂತೆ ಕಾಣುತ್ತದೆ. ರಾಜಭಕ್ತಿಯಿಲ್ಲದವರನ್ನು ಪ್ರಜೆಗಳೆಂದು ಸ್ವತಃ ರಾಜರೇ ಒಪ್ಪಿಕೊಳ್ಳುವದು ಸಹ ನಾತೀತವಾದುದು! ಅಲ್ಲಿಯ ಪ್ರಜಾಪರಿಷತ್ತಿನವರ ಹೇಳಿಕೆಯಂತೆ, ಪ್ರಶ್ನಿಸಲ್ಪಟ್ಟ ಆರು ಮಂದಿಯಲ್ಲಿ ಮೂವರು ರಾಜಕೋಟೆಯಲ್ಲೇ ಹುಟ್ಟಿದವರು, ಮಿಕ್ಕ ಇಬ್ಬರು ಮೂವತ್ತು ವರ್ಷಗಳಿಂದ ರಾಜಕೋಟೆಯಲ್ಲಿದ್ದವರು, ಉಳಿದ ಒಬ್ಬರಿಗೆ ರಾಜಕೋಟೆಯಲ್ಲಿ ಆಸ್ತಿಪಾಸ್ತಿಯಿದ್ದು ಅವರಲ್ಲೇ ವಾಸಿಸುತ್ತಿರುವರು. ಇಂಥವರಿಗೆ 'ರಾಜಕೋಟೆಯ ಪ್ರಜೆಗಳಲ್ಲ' ಎಂದು ರಾಜರ ನಿರಾಕರಣೆ ಬಂದಿದೆ.

'ಏನಿದ್ದರೇನಯ್ಯ ಭಕುತಿಯಿಲ್ಲದ ಮೇಲೆ?' ಎಂದು ದಾಸರು ಹಾಡಿದ್ದಾರೆ. ಥಾಕೋರ್ ಸಾಹೇಬರು ಹಾಡುತ್ತಿರುವದು ಬೇರೆಯೇ ರಾಗವಾದರೂ ಅರ್ಥ ಅದೇ.

ರಾಜಕೋಟೆಯ ಹೋದರರ ಹೊಸ ಉದ್ಯೋಗ

ಮುಸಲ್ಮಾನರ ಮತ್ತು ಭಯಂಕರ ಒತ್ತಾಯಕ್ಕೆ ಮಾನ್ಯತೆ ದೊರಕಲಿಲ್ಲವೆಂದಾದೊಡನೆ ಅವರೆಲ್ಲಾ ರೇಗಿ, ಕಪ್ಪುಪತಾಕೆ, ಕರಿಹಲಗೆಗಳೊಡನೆ ಮೆರವಣಿಗೆಯಿಂದ ಗಾಂಧಿಯವರಿದ್ದಲ್ಲಿ ಬಂದು ವಿರೋಧಪ್ರದರ್ಶನ ನಡೆಸಿದ್ದರು. ಅವರ ಮುಂದಾಳುಗಳಾಗಿ ರಾಜಕೋಟೆಯ ಹಲವು ಆಫೀಸರರುಗಳೂ ಬಂದಿದ್ದರಂತೆ. ಸಮಾಧಾನದ ವಿಷಯವೆಂದರೆ ಥಾಕೋರ್ ಸಾಹೇಬರ ತಮ್ಮನೂ ಸಿಂಹಾಸನದ ಭಾವೀ ಹಕ್ಕುದಾರನೂ ಆದ ಶ್ರೀ ಪ್ರದ್ಯುಮ್ನಸಿಹ್ಮಜೀಯವರೂ ಈ ಪ್ರದರ್ಶನದ ಧುರೀಣತ್ವವಹಿಸಿ ಮುಂದೆ ಬಂದುದು!

ಸಮಾಧಾನವಿಷ್ಯಕ್ಕೆ: ಎಂತಹ ಗೊಂದಲವೆದ್ದರೂ ಸುಧಾರಣಾ ಸಮಿತಿಯಾಗುತ್ತದೆ; ಸುಧಾರಣೆ ಜಾರಿಗೆ ಬರುತ್ತದೆ; ಜತೆಯಲ್ಲಿ ರಾಜರ ಹೆಚ್ಚಿನ ಅಧಿಕಾರವೂ ಜಾರುತ್ತದೆ. ರಾಜದಂಡ ಹಿಡಿದು ಮನಸೇಚ್ಛೆ ದಂಡಿಸುವ ಅಧಿಕಾರವಂತೂ ನಿಸ್ಸಂಶಯವಾಗಿ ಜಾರುತ್ತದೆ. ಹೀಗೆ ಅಣ್ಣನ ಕಾಲದಲ್ಲೇ ಇದ್ದುದೆಲ್ಲಾ ಹೋಗುತ್ತದೆಂದಾದ ಮೇಲೆ ತಮ್ಮನು ಈಗಲೆ ಹೊಸ ಉದ್ಯೋಗಕ್ಕೆ ಕೈಯಿಕ್ಕುವದು ಕಾಲಧರ್ಮವಲ್ಲವೆ?

ಸರ್ ಹೆನ್ರಿ ಗಿಡ್ನಿಯವರು ಪುನಃ ಹುಟ್ಟಿದರೆ!

ಲಾಹೋರಿನಲ್ಲಿ ಆಂಗ್ಲೋ-ಇಂಡಿಯನ್ ಸಂಘದಲ್ಲಿ ಭಾಷಣಮಾಡುತ್ತಾ ಸರ್ ಹೆನ್ರಿ ಗಿಡ್ನಿಯವರೆಂದರು—'ಹಿಂದೀ ಸಹೋದರರನ್ನು ಸಮಾನತೆಯಿಂದ ಕಾಣಿರಿ. ನಿಮ್ಮಿಂದ ಅವರು, ಅವರಿಂದ ನೀವು ಕಲಿಯತಕ್ಕದ್ದೆಷ್ಟೋ ಇದೆ. ನನಗೆ ಇನ್ನೊಂದು ಜನ್ಮ ದೊರೆತರೆ ನಾನದನ್ನು ಆಂಗ್ಲೋ-ಇಂಡಿಯನ್ ಸಮಾಜದ ಸೇವೆಗಾಗಿ ಹಾಳು ಮಾಡಲಾರೆ. ಆಗ ನಾನು ಎಲ್ಲಾ ಸಮಾಜಗಳ ತರುಣರಿರುವ ಯುವಕ ಪಡೆಗಳನ್ನು ಸ್ಥಾಪಿಸಿ ಚಳವಳ ಹೂಡಿಯೇನು'

ಸರ್ ಗಿಡ್ನಿಯವರಿಗೀಗ ಪ್ರಾಯ ತುಂಬುತ್ತಾ ಬಂತು; ಈ ಪ್ರಾಯದಲ್ಲಿ ಮಾತ್ರ ಈ ಬುದ್ಧಿ ಬಂತು! ಈಗ ಅವರು ಅಂತಹ ಚಳವಳ ಹೂಡಿದಲ್ಲಿ ಅದು 'ಯುವಕರ ಚಳವಳ' ಎನ್ನಿಸಲಾರದೆಂಬುದೇನೋ ನಿಜ; ಆದರೆ ಆಂಗ್ಲೋ-ಇಂಡಿಯನರಲ್ಲಿ ಇದು ಹೊಸತಾದುದರಿಂದ ಚಳವಳಕ್ಕೆ ಯುವಕತನ ಬರುವುದರಲ್ಲಿ ಸಂದೇಹವಿಲ್ಲ. ಆದರೆ ಗಿಡ್ನಿಯವರು ಯಾವುದಕ್ಕೂ ಇನ್ನೊಂದು ಜನ್ಮದಲ್ಲಿ ಬಂದುಕೊಳ್ಳುತ್ತೇನೆ' ಎನುತಿದ್ದಾರೆ. ಆ ವರೆಗೂ ಇಂದಿನ ಪರಿಸ್ಥಿತಿಯು ಅವರನ್ನು ಕಾದು ನಿಂತ ಬಿಡಬೇಕೆ?

ನೆಹರು-ಭೋಸ್ ಮಾತುಕತೆ

ಪಂಡಿತ ನೆಹರುಗಳು, ಚಿಕಿತ್ಸೆಗಾಗಿ ಕಲ್ಕತ್ತೆ ಬಿಟ್ಟು ಜಾಮಡೋಬ ಎಂಬಲ್ಲಿಗೆ ಹೋಗಿದ್ದ ಬಾಬು ಸುಭಾಷ್ಚಂದ್ರ ಭೋಸರಲ್ಲಿಗೆ ಹೋಗಿ ಸುದೀರ್ಘ ಸಂಭಾಷಣೆ ನಡೆಸಿದರು. ಕಾಂಗ್ರೆಸಿನೊಳಗಣ ಬಿಕ್ಕಟ್ಟನ್ನು ಪರಿಹರಿಸುವುದಕ್ಕಾಗಿ ಗಾಂಧೀ-ಭೋಸ್ ಭೇಟಿಯನ್ನೇರ್ಪಡಿಸುವ ಹಂಚಿಕೆ ಪಂಡಿತರದು. 'ಸುಭಾಷರ ಬಂಗಲೆಗೆ ಬಂದು ಚಹಾ ಕುಡಿದವರು ಮೂರುವರೆ ಘಂಟೆ ವರೆಗೆ ತರ್ಕಿಸಿದರು ಅನಂತರ ಊಟವಾದೊಡನೆ ಪುನಃ ಒಂದು ಘಂಟೆ ಸಂಭಾಷಿಸಿದರು' ಎಂದು ವಾರ್ತೆಬಂದಿದೆ.

ಚಹಾ ಆದೊಡನೆ ನಡೆದ ಸಂಭಾಷಣೆಯಲ್ಲಿ ಈ ವರೆಗಣ ವಿದ್ಯಮಾನಗಳ ವಿಮರ್ಶೆಯಿದ್ದಿರಬಹುದು; ಊಟದ ನಂತರ ನಡೆದುದರಲ್ಲಿ ಮುಂದಿನ ಬಗೆ ಹೇಗೆ ಎಂಬುದನ್ನು ತರ್ಕಿಸಿರಬಹುದು. ಭೂತಕಾಲದ ಪರಾಮರ್ಶೆ ಅಷ್ಟು ಸವಿವರವಾಗಿ ನಡೆದುದರಿಂದ ಭವಿಷ್ಯತ್ಕಾಲದ ನಿರ್ಧಾರವು ಸುಗಮವಾಯಿತೆಂದು ಬಿಂಗಡಿಸಿ ತಿಳಿದು ನಾವು ಅಷ್ಟರಿಂದಲೇ ಸಮಾಧಾನ ತಂದುಕೊಳ್ಳುವದು ವಾಸಿ!

ಬರ್ಮಾ ಪೋಲೀಸರಿಗೆ ಹೊಸ ತರಬೇತಿ

ಬರ್ಮಾದಲ್ಲಿ ಕೆಲಕಾಲದಿಂದ ಆಗಾಗ ದಂಗೆ ನಡೆಯುತ್ತಿದ್ದು ಹಿಂದೀಯರ ಸೊತ್ತು ಮತ್ತು ಪ್ರಾಣಹಾನಿಯೆಷ್ಟೋ ಆಗಿದೆ. ಅಲ್ಲೀಗ ಹಿಂದೀಯರ ವಿರುದ್ಧ ಭಾವನೆಯು ಪ್ರಬಲವಾಗುತ್ತಾ ಬರುತ್ತಿದೆ. ಆದರ ಕಾರಣದ ಹಂಚಿಕೆಗಳನ್ನು ಕಂಡು ಹಿಡಿಯಲು ಸಮಿತಿಯೊಂದರ ನೇಮಕವಾಗಿತ್ತು. ಈ ಸಮಿತಿಯವರು ಎಲ್ಲವನ್ನೂ ವಿಚಾರಿಸಿ ಒಪ್ಪಿಸಿರುವ ವರದಿಯಲ್ಲಿ ಮಾಡಿರುವ ಪ್ರಾಮುಖ್ಯ ಸೂಚನೆಯಿದು. 'ದಂಗೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಶಾಂತಿಭದ್ರತೆಗಳನ್ನೊದಗಿಸಲನುಕೂಲವಾಗುವಂತೆ ಪೋಲೀಸರ ಟ್ರೈನಿಂಗಿನಲ್ಲಿ ಅಗತ್ಯವುಳ್ಳ ಸುಧಾರಣೆಮಾಡಬೇಕು. ಬರ್ಮಾ ಜನರ ದಂಗೆಯು ಸುಧಾರಿತವಾದುದೆಂಬುದಕ್ಕೆ ಇದೊಂದು ನಿದರ್ಶನ. ಪೋಲೀಸರು ಈ ವರೆಗೆ ಪಡೆದಿದ್ದ ಹಳೇ ರೀತಿಯ ತರಬೇತಿ ಫಲಿಸದೆ ಅವರಿಗೆ ನೂತನ ರೀತಿಯ ತರಬೇತಿಯಾಗಬೇಕೆಂದಾಯಿತು! ಅಂತು ದಂಗೆಯೆಬ್ಬಿಸುವ ಜನರಲ್ಲಿ ತಪ್ಪಿತಸ್ಥರೂ ಇರಬಹುದೆಂಬುದನ್ನು ವರದಿಯು ಸೂಚಿಸಿ, ಅವರನ್ನು ತರಬೇತುಮಾಡುವ ಸೂಚನೆಯನ್ನೇನೂ ಕೊಡುವದಿಲ್ಲ. ದಂಗೆಯೆದ್ದ ಮೇಲೆ ಪೋಲೀಸರು ಹೇಗೆಯೇ ಮಾಡಬೇಕೆಂಬುದನ್ನು ಕಲಿಸಲು ಹೊರಟಿದೆ ಈ ತರಬೇತಿಯ ತಾತ್ಪರ್ಯವಿಷ್ಟೆ. ದಂಗೆಯೇಳುತ್ತಿರುವದೊಂದು ಬರ್ಮಾದ ವಾಡಿಕೆಯಾಗಿದೆ; ಮುಂದಕ್ಕಾಗುವ ದಂಗೆಗಳಲ್ಲಿ ಪೋಲೀಸರು ಹೊಸ ರೀತಿಯಿಂದ ವರ್ತಿಸುವರು!

ಖಡ್ಗದ ನೆರಳು ಕ್ಷೇಮಕಾರಿಯೆ?

ಕಳೆದ ವಾರ ಹಿಟ್ಲರನ ಜನ್ಮದಿನೋತ್ಸವವು ಮಹಾ ವಿಜೃಂಭಣೆಯಿಂದ ಬರ್ಲಿನಿನಲ್ಲಿ ಆಚರಿಸಲ್ಪಟ್ಟಿತು. ಆ ಸಂದರ್ಭದಲ್ಲಿ ಪ್ರಚಾರಮಂತ್ರಿ ಡಾ| ಗೋಬೆಲ್ಸನ ಬ್ರಾಡ್

WANTED IMMEDIATELY
IN SOUTH KANARA DISTRICT.

Rs. 100/- a month even more is earned by influential and enterprising agents of our Company. Their advantages are (1) Direct Head Office connection; (2) Our agency terms provide liberal remuneration, hereditary right for renewal commission, permanent connection and good future prospects; (3) We have Divisional Inspectors who will help our agents to do well and earn handsomely and (4) Motor car facility is made available when there are good business prospects.

For particulars please apply to:—

Mr. P. Anthaya Hegde, *District Organiser,*
PARKALA P. O, UDIPI.
OR
THE MANAGER,
VIJAYALAKSHMI
GENERAL ASSURANCE CO., LTD.,
HEAD OFFICE:- 4/105, Armenian St. MADRAS.

ಕಾಸ್ಟ್ ಭಾಷಣದಲ್ಲಿ 'ಜರ್ಮನಿಯು ಖಡ್ಗದ ನೆರಳಿನಡಿಯಲ್ಲಿ ನಿಂತಿದೆ' 'ಹಿಟ್ಲರನು ಮಧ್ಯಯುರೋಪಿನ ಶಾಂತಿಸ್ಥಾಪಕ' 'ಸರ್ವಶಕ್ತನೇ ಪರಮಾತ್ಮನು ಇನ್ನೂ ಕೆಲವು ದಶವರ್ಷಗಳ ವರೆಗೆ ಘುಹ್ರರನಿಗೆ ಆರೋಗ್ಯ ಮತ್ತು ಬಲವನ್ನು ದಯಪಾಲಿಸಿದಲ್ಲಿ ಜರ್ಮನ್ ರಾಷ್ಟ್ರಕ್ಕೆ ತನ್ನ ಭವಿಷ್ಯದ ಗೊಡವೆಯೇ ಇರದು' ಎಂದೆಲ್ಲಾ ವೀರವಾಕ್ಯಗಳನ್ನಾಡಿದ.

ಜರ್ಮನಿಯಿಗಾಗ ಖಡ್ಗದ ನೆರಳಿನಲ್ಲಿರುವದೆಂಬ ಮಾತು ಸತ್ಯ; ಖಡ್ಗದ ನೆರಳು ಬಿದ್ದಿದ್ದೆ, ಬೆನ್ನಲ್ಲಿಯೇ ಖಡ್ಗವೂ ಬೀಳಲಿದೆ ಎಂಬ ಮುಂಜಾಗ್ರತೆಯು ಡಾ| ಗೋಬೆಲ್ಲರಂಥವರು ವಹಿಸುವದು ಉತ್ತಮ!

ಮನಸ್ಸಿಲ್ಲದ ಮನಸ್ಸು!

ಬ್ರಿಟಿಷ್ ಸರಕಾರವು ರಷ್ಯದೊಡನೀಗ ಒಪ್ಪಂದವಮಾಡಿಕೊಳ್ಳುವ ಹಂಚಿಕೆಗಿಳದಿದೆ. ಆ ಎರಡು ರಾಷ್ಟ್ರಗಳೊಳಗೆ ಸುದೀರ್ಘ ಮಾತುಕತೆ ನಡೆಯುತ್ತಿದೆ. ಜರ್ಮನಿಯು ಇದರಿಂದ ಅತಿರೇಕ ಕೆರಳಹೋಗಿದೆ. ಪೋಲೆಂಡ್, ರುಮೇನಿಯಾ ಮೊದಲಾದ ರಾಷ್ಟ್ರಗಳ ಮನವೊಲಿಸಿ ತನ್ನ ಕಡೆಗೆ ಸೆಳೆದುಕೊಳ್ಳಬೇಕೆಂದು ಜರ್ಮನಿಯ ಸಾಧನೆ. ರಶ್ಯವಿದ್ದಲ್ಲಿ ತಾನಿಲ್ಲನೆಂಬಷ್ಟು ವೈರ ಹಿಟ್ಲರನಿಗೆ ರಶ್ಯದ ಮೇಲೆ. ಆದ್ದರಿಂದ ಮ್ಯುನಿಚ್ ಒಪ್ಪಂದದ ಪರಿಷತ್ತಿಗೆ ರಶ್ಯಕ್ಕೆ ಪ್ರವೇಶವಿರಲಿಲ್ಲ. ಚೇಂಬರ್ಲಿನರದನ್ನು ತನ್ನ ಕಾರ್ಯಸಾಧನೆಗಾಗಿ ಮರೆತಿದ್ದರು. ಈಗ ರಶ್ಯದ ಸಹಾಯವಿಲ್ಲದೆ ಫೇಸಿಸ್ಟ್ ರಾಷ್ಟ್ರಗಳನ್ನು ವಿರೋಧಿಸಿ ನಿಲ್ಲುವದು ಅಪಾಯಕರ ಎಂದು ಬ್ರಿಟಿಷರಿಗೆ ತಿಳಿದುಹೋಗಿದೆ. ಆದ್ದರಿಂದ ರಶ್ಯದ ಸಹಕಾರಪಡೆಯಲು ಶತಪ್ರಯತ್ನ ನಡೆಯುತ್ತಿದೆ.

ಮಿ. ಚೇಂಬರ್ಲಿನರು, ರಶ್ಯ ತನಗೆ ಬೇಕಾದಾಗ ಕರೆದು, ಬೇಡವಾದಾಗ ದೂರ ನಿಲ್ಲಿಸಬಲ್ಲರು. ತಾನು ಕಾದಿಟ್ಟ ರಿಜರ್ವ್ ಸೈನ್ಯದಂತೆ! ಆದರೆ ರಶ್ಯಕ್ಕೆ ಅನುಮಾನವಿದ್ದೇ ಇರಬಹುದು. ಮಗು ಪುಂಡಾಟ ನಡೆಸಿದನೆಂದು ಕೃತಕ ಕೋಪದಿಂದ ತಾಯಿ ಮಗುವನ್ನೊಮ್ಮೆ ದೂಡಿ ಬಿಡುವದುಂಟು; ಮಾತ್ರವಲ್ಲ, ಹತ್ತಿರವಿದ್ದ ಅನ್ಯರ ಮಗುವನ್ನೆತ್ತಿಕೊಂಡು 'ಅವ ಬೇಡ; ನೀನೇ ನನ್ನ ಮಗು!' ಎನ್ನುವದುಂಟು. ಮಿ. ಚೇಂಬರ್ಲಿನರು ತನ್ನ ಮೇಲೆ ತೋರಿಸುತ್ತಿರುವ ಮಮತೆಯು ಆ ಜಾತಿಯದಾಗಿರಬಹುದೇ ಎಂದು ರಷ್ಯದ ಪ್ರಭೃತಿಗಳು ಯೋಚಿಸುತಿದ್ದಾರೆ.

ಯುಗೋಸ್ಲೋವಿಯಾಕ್ಕೆ ನೊಗವೆ?

ತತ್ಕಾಲಕ್ಕೆ ಮುಸಲನಿಯ ದೃಷ್ಟಿ ಯುಗೋಸ್ಲಾವಿಯಾ ರಾಷ್ಟ್ರದ ಮೇಲೆ ಬಿದ್ದಿರುವದಂತೆ. ಇಟಲಿಯು 'ಏಕ್ಸಿಸ್'ನೊಳಗೆ ಸೇರಿಕೊಳ್ಳುವಂತೆ ಆ ಸಣ್ಣ ರಾಷ್ಟ್ರವನ್ನು ಒತ್ತಾಯಪಡಿಸುತ್ತಿರುವುದೆಂದೂ, ಅದಕ್ಕಾಗಿ ಇಟಲಿ ಮತ್ತು ಯುಗೋಸ್ಲೋವಿಯಾಗಳ ವಿದೇಶಾಂಗ ಮಂತ್ರಿಗಳು ಈ ವಾರಾಂತ್ಯದಲ್ಲಿ ವೇನಿಸಿನಲ್ಲಿ ಮಾತನಾಡಲಿರುವರೆಂದೂ ಸುದ್ದಿಯಿದೆ. ಇದರಿಂದ ಇಂಗ್ಲೆಂಡು ದಿಗಿಲುಬಿದ್ದು ಸಂಗತಿಗಳನ್ನು ಸೂಕ್ಷ್ಮದೃಷ್ಟಿಯಿಂದ ನೋಡುತ್ತದೆ. ಟರ್ಕಿಯ ಮೇಲಿದರಿಂದ ಹೆಚ್ಚಿನ ಪರಿಣಾಮವಾಗಲಿಕ್ಕಿರುವುದರಿಂದ ಅದು ಬಹು ಜೋರಿನಿಂದ ತನ್ನ ರಕ್ಷಣಾ ಹಂಚಿಕೆಗಳನ್ನು ಕೈಗೊಂಡಿದೆ. ಚೇಂಬರ್ಲಿನರೀಗ 'ಸೆಟ್ಟಿ ಶೃಂಗಾರ'ಕ್ಕೆ ತೊಡಗಿದ್ದಾರೆ. ಎಲ್ಲವನ್ನು ಅಣಿಮಾಡಿಕೊಂಡು ಒಬ್ಬೊಬ್ಬರನ್ನೇ ಮಾತನಾಡಿಸಿಕೊಂಡು ನಿಧಾನವಾಗಿ ತಯಾರಾಗುತ್ತಿದ್ದಾರೆ. ಅವರ ಶೃಂಗಾರ ಮುಗಿಯುವುದರೊಳಗೆ 'ಇನ್ನೊಂದು ಪಟ್ಟಣ ಸೂರೆ'ಯಾಗುವದೋ ಎಂಬ ಅನುಮಾನವಿದೆ!

ಬಂಗಾಳ ಮಂತ್ರಿಮಂಡಲದಲ್ಲಿ ಗಡಿಬಿಡಿ!

ಬಂಗಾಳ ಸರಕಾರವು 'ಕಲ್ಕತ್ತಾ ಮುನಿಸಿಪಲ್ ಎಮೆಂಡ್‌ಮೆಂಟ್ ಬಿಲ್' ಎಂಬ ಮಸೂದೆಯೊಂದನ್ನು ತರಲಿಕ್ಕಿರುವದು. ಕಲ್ಕತ್ತಾ ಮುನಿಸಿಪಾಲಿಟಿಯ ರಚನೆಯಲ್ಲಿ ಪ್ರಾಮುಖ್ಯ ತಿದ್ದುಪಡಿಗಳನ್ನು ಮಾಡುವದೇ ಮಸೂದೆಯ ಉದ್ದೇಶ. ಆ ಕುರಿತು ಹಲವು ಸೂಚನೆಗಳು ಬಂದಿರುವವೆಂದೂ ಎಲ್ಲಕ್ಕೂ ಹಿಂದೂ ಮೆಂಬರರು ವಿರೋಧವಿರುವರೆಂದೂ ತಿಳಿಯಬರುತ್ತದೆ. ಸರಕಾರದ ಗಮನದಲ್ಲಿರುವ ತಿದ್ದುಪಡಿಯೆಂದರೆ ಮುನಿಸಿಪಾಲಿಟಿಯೊಳಗೆ ಏಳು ಸ್ಥಾನಗಳನ್ನು ಹರಿಜನರಿಗೆ ಕಾದಿಡುವದೆಂಬುದು. ಹೀಗಾದರೆ ಕಲ್ಕತ್ತಾ ಮುನಿಸಿಪಾಲಿಟಿಯಲ್ಲಿ ಇತರ ಹಿಂದೂ ಮೆಂಬರರ ಪಕ್ಷವು ಅಲ್ಪಸಂಖ್ಯಾಕವಾಗುವುದು. ಈ ತಿದ್ದುಪಡಿಯನ್ನು ವಿರೋಧಿಸಿ ಬಂಗಾಳ ಮಂತ್ರಿಮಂಡಲದ ಹಿಂದೂ ಮಂತ್ರಿಗಳು ರಾಜಿನಾಮೆ ಕೊಡಲಿರುವರೆಂಬ ಬಲವಾದ ವಾರ್ತೆಯಿದೆ. ಅವರಲ್ಲಿ ಹಣಕಾಸಿನ ಮಂತ್ರಿಗಳಾದ ಶ್ರೀ. ನಳಿನೀರಂಜನ ಸರ್ಕಾರರೊಬ್ಬರು. ಮಂತ್ರಿಗಳ ಸಭೆಯೂ ಮಂತ್ರಿಪಕ್ಷೀಯರ ಸಭೆಯೂ ಸೇರಿ ಈ ಕುರಿತು ತೀವ್ರವಾಗಿ ಚರ್ಚೆನಡೆಯುತ್ತಿದೆ.

ಮುಖ್ಯ ಮಂತ್ರಿ ಫಜ್ಲುಲ್ ಹಕ್ಕರು ತನ್ನ ಹಿಂದಿನ ಭಾಷಣವೊಂದರಲ್ಲಿ "ಒಬ್ಬ ಮುಸ್ಲೀಮ್ ಹುಡುಗನು ಹಿಂದೆ ಹಿಂದು ಸ್ಥಾನವನ್ನು ಜಯಿಸಿದ್ದ; ನಾವೀಗ ಏಳು ಕೋಟೆಯಿದ್ದೂ ಜಯಿಸಲಾರೆವೆ?" ಎಂದು ಹೂಂಕರಿಸಿದ್ದರು. ಮಿ. ಹಕ್ಕರ ವಿಜಯಯಾತ್ರೆಯ ಮೊದಲನೇ ಹೆಜ್ಜೆಯೇ ಇದಾಗಿರಬಹುದು. ಒಬ್ಬ ಫಜಲುಲ್ ಹಕ್ಕರು ಕಲ್ಕತ್ತದ ಹಿಂದೂಗಳ ಬಹು ಸಂಖ್ಯೆಯನ್ನೇ ಅಲ್ಪ ಸಂಖ್ಯೆಯಾಗಿ ಮಾರ್ಪಡಿಸಿ ಜಯಿಸುವ ಈ ಮಾದರಿಯಿಂದ ಮಿಕ್ಕವರೂ ಪಾಠ ಕಲಿಯಲಿ!

ನವಯುಗದಲ್ಲೇ
ಜಾಹಿರಾತು ಕೊಡಿರಿ.

ಗಾಂಧಿ ಜೋಯಿಸರ ಭವಿಷ್ಯ ಫಲ.

ನಿಮ್ಮ ಜನನ ತಾರೀಕು ಸಮಯ ಅಥವಾ ಪತ್ರ ಬರೆಯುವ ಘಳಿಗೆ ಮತ್ತು ಅಂದಾಜು ವಯಸ್ಸನ್ನು ತಿಳಿಸಿರಿ. ನಿಮ್ಮ ಕುಟುಂಬ, ವ್ಯಕ್ತಿ ಆರೋಗ್ಯ, ಸಂಪತ್ತು, ಆದಾಯ

ವೆಚ್ಚಗಳು, ಅನಿರೀಕ್ಷಿತ ದೆಸೆಗಳು ಮತ್ತು ದುರ್ದೃಷ್ಟಗಳು, ಪ್ರೇಮ, ಅದೃಷ್ಟದ ಲಾಭ, ಸೋದ್ರಿಗಳು ದೊರೆಯುವ ದಿನಗಳು ಮತ್ತು ಸಂತತಿ ಇನ್ನಿತರ ಪ್ರಾಮುಖ್ಯ ವಿಷಯಗಳು ನಿಮ್ಮ ಪ್ರಾಗಿಲಿಗೆ ಕಳುಹಲ್ಪಡುವವು. ಪ್ರತಿತಿಂಗಳ ಭವಿಷ್ಯವನ್ನೊಳಗೊಂಡ ಒಂದು ವರುಷದ ಭವಿಷ್ಯಫಲಕ್ಕೆ ರೂಪಾಯಿ 3. ಪ್ರತಿತಿಂಗಳ ಆಗುಹೋಗುಗಳ ಸವಿಸ್ತರ ಐದು ವರುಷದ ಫಲಕ್ಕೆ ರೂಪಾಯಿ 12-8-0. ಸಾಹುಕಾರರಿಗೂ ಉದ್ಯೋಗಸ್ಥರಿಗೂ ಪ್ರತಿವಾರದ ಭವಿಷ್ಯವನ್ನು ಸೂಚಿಸುವ ಒಂದು ವರುಷದ ಫಲಕ್ಕೆ ರೂಪಾಯಿ 10. ಭವಿಷ್ಯದ ಕುರಿತು ಕೇಳಲಾಗುವ ಐದು ಪ್ರಶ್ನೆಗಳಿಗೆ ಸರಿಯಾದ ಉತ್ತರವು ಒಂದು ರೂಪಾಯಿ ಕಾಣಿಕೆ ಕೊಟ್ಟಲ್ಲಿ ತಿಳಿಸಲಾಗುವದು (ವಿ. ಪಿ. ಖರ್ಚು ಪಡೆಯಿಸಿ ಪ್ರತ್ಯೇಕ)

ಭವಿಷ್ಯ ಫಲದ ಕುರಿತು 'ಸ್ವದೇಶ ಮಿತ್ರನ್' ಮದ್ರಾಸಿನ ದಿನ ಪತ್ರಿಕೆಯು ಈ ರೀತಿ ಬರೆಯುತ್ತದೆ. 'ಶ್ರೀ. ವಿ. ಕೆ. ಶತಗೋಪಾಚಾರಿಯವರ ಭವಿಷ್ಯವಾಣಿಗಳ ಕುರಿತು ಮಹಾಜನರಿಗೆ ಪರಿಚಯ ಮಾಡಿಕೊಡುವ ಅಗತ್ಯವಿಲ್ಲ. ಮಹಾತ್ಮಾಜಿಯವರ ಬಂಧನಿಮೋಚನೆ, ಅಮೇರಿಕಾ ಹಿಂದಿನ ಪ್ರೆಸಿಡೆಂಟ್ ರೂಸ್‌ವೆಲ್ಟರ ಚುನಾವಣೆಯ ಜಯಶೀಲತೆ ಮೊದಲಾದವು ಶ್ರೀ. ಆಚಾರಿಯವರು ಹೇಳಿದಂತೆ ಫಲಿಸಿದುವು. ಗಾಂಧಿ ಜೋಯಿಸರ ಭವಿಷ್ಯಫಲವು ಬ್ರಹ್ಮಾಂಡದಲ್ಲೆಲ್ಲಾ ಹಬ್ಬಲಿ. ಯೋಗ್ಯನಿದರ್ಶನ, ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

ವಿಳಾಸ:-**V. K. Satagopachariar**
Hanuman Jothisha Ashram.
TIRUTTTANI. S. India.

ಕೂದಲು ರಂಗುತ್ಯಜಿಸಿರಿ

ಈ ತೈಲದ ಲೇಪನಮಾತ್ರದಿಂದಲೇ ಕೂದಲು ಬಿಳಿದಾಗುವುದು ನಿಲ್ಲುವದು. ನೆರೆತಕೂದಲು ಶೀಘ್ರವಾಗಿ ಬಣ್ಣವನ್ನು ಹೊಂದುವುದು. ಸಾವಿರಾರು ಸರ್ಟಿಫಿಕೇಟುಗಳು ನಮಗೆ ದೊರೆತಿರುವುದು ನಮ್ಮ ತೈಲದಯೋಗ್ಯತೆಯನ್ನು ಬೀರುತ್ತವೆ. ಅನುಪಯೋಗಕಾರಿಯೆಂದು ರುಜುಪಡಿಸಬಲ್ಲವರಿಗೆ ಕೊಟ್ಟಹಣವಾಪಸು ಕೊಡುವಶರ್ತವಿದೆ. ಅಲ್ಪಸ್ವಲ್ಪ ನೆರೆತ ಕೂದಲುಗಳಿಗೆ ಬೇಕಾಗುವ ತೈಲಕ್ಕೆ ರೂ. 4 ಕಾಲ ನಾಲಿಗೂ ಮಿಕ್ಕಿರುವದಾದರೆ ರೂ. 7ರಷ್ಟು ಬೆಲೆಯ ತೈಲವು ಬೇಕಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲೇ,
Hazara & Co.,
P. O. Behar Nersery Darbhnaga.

THE BOMBAY LIFE ASSURANCE CO., LTD.,

(Ested. 1908)

THE OFFICE WHICH HAS PROVED ITS POPULARITY BY ITS PROGRESS

RECORD OF NEW BUSINESS.

Proposed.	Year.	Completed.
1,25,50,250	1934	1,04,33,750
1,50,48,915	1935	1,23,28,665
1,68,88,200	1936	1,36,01,500
1,72,579,75	1937	1,40,08,725
1,76,83,250	1938	1,44,91,000

1939 VALUATION YEAR.
Please take up a Policy Now and participate in Bonus.
To Insure or to Represent it pays you to consult us:-

MESSRS. KOCHIKAR BROTHERS, LTD.,

MADRAS BRANCH SECRETARIES,
The Bombay Life Building,
Sir Lalubhai Samaldas Road, Gandhi Nagar, UDIPI.

Or any of our Offices at:—

Car Street, MANGALORE.	Puthiyara, CALICUT.	Post Box No. 337, Mount Road, MADRAS.	Visweshwarapuram Circle, BANGALORE CITY.
Charni Road, Girgaum, BOMBAY No. 4	Central Station Road, TRIVANDRUM.	Ottapalam, S. MALABAR.	

THE
PREMIER BANK
OF INDIA, LIMITED.
Head Office: MADRAS.
Branches:
MADURA & NELLORE.
CHAIRMAN
Dr. U. L. Narayana Rao.
'Bhujanga Nivas' Madras.
FIXED DEPOSITS
are now received at the following
Rates:
For 6 Months at 3½% P. A.
12 Months at 4½% P. A.
24 Months at 5% P. A.
(Interest Paid Half-yearly.)
S. V. Rau D. Com.,
Managing Director.

ಜಗತ್ತಿನ ಇಂದಿನ ಸಾಂಕ್ರಾಮಿಕ ರೋಗವಂತೆ
ಇಂದಿನ ಪತ್ರಿಕಾಸುದ್ದಿಗಾರರು

ಪತ್ರಿಕಾ ಪ್ರತಿನಿಧಿಗಳ ಗುರುತರ ಜವಾಬ್ದಾರಿ
ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಅನುಭವಗಳು.

ನಾನು ರಾಜಕೀಯಕ್ಕೆ ಪ್ರವೇಶಿಸುವುದಕ್ಕೆ ಮೊದಲೂ ಸಹ ಪತ್ರಿಕೆಗಳಲ್ಲಿ ಬರುತ್ತಿದ್ದ "ಇಂಟರ್ ವ್ಯೂ"ಗಳನ್ನು ನೋಡುತ್ತಿದ್ದೆನು. ಅದರಲ್ಲಿ ಬರುವ ಪ್ರತಿಶಬ್ದವೂ ಸತ್ಯವೆಂದೇ ತಿಳಿಯುತ್ತಿದ್ದೆನು. ಅದು ರಾಜಕೀಯ ಮುಖಂಡರ ಬಾಯಿಂದ ಬಂದಿರಲಿ, ಕೊನೆಗೆ ಸಿನೆಮಾ ನಟಿಯ ಮುಖದಿಂದ ಹೊರಬಿದ್ದಿರಲಿ. ಪತ್ರಿಕಾ ಕರ್ತರ ಜೀವನವೇ ಸರ್ವ ಶ್ರೇಷ್ಠವೆಂದು ನಾನು ಭಾವಿಸಿದ್ದೆನು. ಏಕೆಂದರೆ ಅವನ ಲೇಖನಿಯು ಸರ್ವವ್ಯಾಪಕವಾಗಿದ್ದು ಮಹಾಪುರುಷರ ವರೆಗೂ ತನ್ನ ಪ್ರಭಾವವನ್ನು ಬೀರುತ್ತದೆ. ಇರಲಿ. ಇದು ಹಿಂದಿನ ಮಾತು.

ಈಗ ರಾಜಕೀಯಕ್ಕೆ ಇಳಿದಿರುವೆನು. ಆದುದರಿಂದ ಪತ್ರಿಕಾ ಕರ್ತರ ತೀಕ್ಷ್ಣ ಟೀಕೆಗೆ ಗುರಿಯಾಗುವವರ ಪೈಕಿ ನಾನೂ ಒಬ್ಬಳಾಗಿದ್ದೇನೆ. ನನಗಾಗಿರುವ ಅನುಭವಗಳನ್ನು ಇಲ್ಲಿ ವಿವರಿಸುವೆನು.

ನನ್ನ ಅಭಿಪ್ರಾಯದಲ್ಲಿ ಇಂದು ಜಗತ್ತಿನಲ್ಲಿ ಎರಡು ವಿಧವಾದ ರೋಗಗಳಿವೆ. ಒಂದು ಟೆಲಿಫೋನ್ ಮತ್ತೊಂದು ಪತ್ರಿಕೆಯವರು. ನಿಮ್ಮ ತಲೆಕೆಟ್ಟಿದ್ದರೆ, ಟೆಲಿಫೋನಿನ ಸಂಬಂಧವನ್ನೂ ಬೇಕಾದರೆ ತಪ್ಪಿಸಿಕೊಳ್ಳಬಹುದು. ಆದರೆ ಪತ್ರಿಕೆಯವರಿಂದ ನಿಮಗೆ ಎಂದಿಗೂ ಬಿಡುಗಡೆಯಿಲ್ಲ. ಅವರು ಸರ್ವವ್ಯಾಪಿಗಳು, ಅವರನ್ನು ತಡೆಯುವುದು ಸಾಧ್ಯವೇ ಇಲ್ಲ, ಯಾರಿಗಾದರೂ ನೀವು ನಿರಾಶೆಯಾಗಿದ್ದರೆ ಅವರು ನಿಮಗೆ ಆಸೆಯನ್ನುಂಟುಮಾಡುವರು. ಉತ್ಸಾಹರಹಿತರಾಗಿದ್ದರೆ ಉತ್ತೇಜಿತರನ್ನಾಗಿ ಮಾಡುವರು.

ಇದೇ ಅವರ ಕಲೆಯೋ?

"ಅಧಿಕಾರ ಸ್ವೀಕಾರಕ್ಕೆ ವಿರೋಧವಾಗಿದ್ದ ನೀವು ಹೇಗೆ ಮಂತ್ರಿಗಳಾದಿರಿ?" ಈ ಪ್ರಶ್ನೆಗೆ ನನ್ನ ಉತ್ತರವನ್ನು ತಿಳಿದುಕೊಳ್ಳದೇನೇ ಮಾರನೇ ದಿನವೇ "ಶ್ರೀಮತಿ ಪಂಡಿತರು ಮಂತ್ರಿಪದವಿಯನ್ನೂ ಬಲವಂತದಿಂದ ಸ್ವೀಕರಿಸಿದರು" ಎಂದು ಪ್ರಕಟಿಸಿಯೇಬಿಟ್ಟರು.

ಒಂದು ಸಭೆ. ಅದರಲ್ಲಿ ನನ್ನ ಭಾಷಣವಾಗುವುದಿತ್ತು. ಸರಿ, ಬಂದರು ಈ ಗೆಳೆಯರು. "ಎಲ್ಲಿ ನಿಮ್ಮ ಭಾಷಣದ ಪ್ರತಿಗಳನ್ನು ಕೊಡಿರಿ" ಎಂದರು. "ನನ್ನಲ್ಲಿ ಪೂರ್ವಪ್ರತಿ ಇಲ್ಲ" ಎಂದೆನು. ನನ್ನ ಭಾಷಣವನ್ನು ಕೇಳಿ ಅದರಂತೆ ಬರೆಯುವರೆಂದು ನಿರೀಕ್ಷಿಸಿದ್ದೆನು. ಅವರೂ ಸಹ ಆ ರೀತಿ ಭರವಸೆಕೊಟ್ಟರು. ಶಾಂತಚಿತ್ತಳಾಗಿ ಮನೆಗೆ ಹೋದೆನು. ಯಾವುದು ಅತ್ಯಂತ ಅಗತ್ಯವಾದ ವಿಚಾರವೋ ಅದನ್ನು ಈ ಯುವಕರು ತೇಲಿಸಿ ಬಿಡುವರು. ಯಾವುದು ಮಹತ್ವದ್ದಲ್ಲವೆಂದು ನಾನು ಎಣಿಸಿದ್ದೆನೋ ಅವನ್ನು ಇವರು ವಿಪರೀತ ಮಾಡಿಬಿಡುವರು. ಎಷ್ಟು ಪತ್ರಿಕೆಗಳನ್ನು ನೋಡಿದರೂ ನಾನು ಹೇಳದೇ ಇದ್ದ ವಿಷಯಗಳೇ ಎಷ್ಟೋ ತುಂಬಿರುತ್ತವೆ.

ಕೆಲವು ದಿನಗಳ ಹಿಂದೆ ನಾವು ಕೆಲವು ಯುವತಿಯರೊಡನೆ ಮಾತನಾಡುತ್ತಾ 'ನೀವು ಸ್ತ್ರೀಯರ ಕರ್ತವ್ಯದ ವಿಚಾರದಲ್ಲಿ ಇತರರು ಹೇಳುವ ಅಂಧವಿಶ್ವಾಸದ ಮಾತಿಗೆ ಮರುಳಾಗದಿರಿ. ಅನುಭವಿಗಳ ಆಧುನಿಕ ವಿಚಾರವನ್ನೂ ತಿಳಿದವರ ಮಾತನ್ನೇ ಕೇಳಿರಿ' ಎಂದು ಹೇಳಿದ್ದೆನು. ಆದರೆ ಮಾರನೆ ದಿನ ಪತ್ರಿಕೆಯಲ್ಲಿ ಈ ರೀತಿ ಓದಿದೆನು. "ದಾಂಪತ್ಯವಿಚ್ಛೇದನ ವಿಚಾರದಲ್ಲಿ ಶ್ರೀಮತಿ ಪಂಡಿತರು ಈ ರೀತಿ ಹೇಳಿದರು. ನೀವು ಸ್ತ್ರೀಯರಲ್ಲ, ಸ್ತ್ರೀತ್ವವನ್ನು ತ್ಯಜಿಸಿ, ಪುರುಷರಾಗಿರಿ". ಸರಿ, ನನ್ನ ಬಳಿಗೆ ಕಾಗದ ಪತ್ರಗಳು ಒಂದೇ ಸಮನೆ ಬರಲಾರಂಭಿಸಿದವು. ಪುಣ್ಯಾತ್ಮರು ಆ ಪತ್ರಿಕಾ ಮಹಾಶಯರು ನನ್ನ ಭಾಷಣವನ್ನೇ ಪ್ರಕಟಿಸದಿದ್ದರೆ ನನಗೆ ಬಹಳ ಉಪಕಾರಮಾಡಿದಂತಾಗುತಿತ್ತು."

ಸ್ತ್ರೀ ಪತ್ರಕಾರರೋ?

ಮೊನ್ನೆ ಮಾಡಿದ ಯುರೋಪು ಪ್ರವಾಸದಲ್ಲಿ ಪತ್ರಿಕೆಯವರೊಡನೆ ಭೇಟಿಮಾಡಿದಾಗ, ನನಗೆ ಇನ್ನೂ ಹೆಚ್ಚಿನ ಕೆಟ್ಟ ಅನುಭವವೇ ಉಂಟಾಯಿತು. ರಾತ್ರಿ ಹಡಗಿನಿಂದ ಕ್ರಾಯಿಡನಲ್ಲಿ ಇಳಿಯುತ್ತಿದ್ದಹಾಗೇ ತತ್ತ, ಬಂದು ಸುತ್ತುಗಟ್ಟಿದರು. "ಕ್ಯಾಮರಾ ಮೆನ್"ಗಳ ಪತ್ರಿಕೆಯವರುಹೇಗೋ ಮಾಡಿ ಬೇರೆ ಕಾಲವನ್ನು ಇಂಟರ್ ವ್ಯೂಗೆಂದು ನಿಶ್ಚಯಮಾಡಿಕೊಂಡೆನು ಸ್ತ್ರೀಪತ್ರಕಾರರು ಭೆಟ್ಟಿಯಾದುದು ಇದೇ ಮೊದಲು. ನನ್ನ ಅನುಭವದಲ್ಲಿ. ಗಂಡಸರಿಗಿಂತಲೂ ಸ್ತ್ರೀಪತ್ರಕಾರರೇ ಹೆಚ್ಚು ಭಯಂಕರ.

ಒಬ್ಬ ಯುವತಿಯು ಪತ್ರಿಕಾ ಪ್ರತಿನಿಧಿಯು ಸುಂದರವಾದ ಉಡುಪನ್ನು ಧರಿಸಿಕೊಂಡು ನನ್ನ ಕೋಣೆಗೆ ಬಂದಳು. "ಏನು ಶ್ರೀಮತಿಯವರೇ, ಆರೋಗ್ಯವಷ್ಟೆ? ತಮ್ಮನ್ನು ನೋಡಿ ಬಹಳ ಆನಂದವಾಯಿತು. ಭಾರತದ ಸ್ತ್ರೀಯರ ವಿಚಾರದಲ್ಲಿ ಏನನ್ನಾದರೂ ಹೇಳಬಯಸುವಿರಾ?" ಎಂದಳು. ಏನೇನು ಮಾತುಕತೆಗಳು ನಡೆದುವು, ಹೊರಡುವ ಸಮಯದಲ್ಲಿ ಆಕೆಯು ವಿಶಾವಿಕೆ" "ಶಾರೀರಿಕ ಶಿಕ್ಷಣದ ವಿಷಯದಲ್ಲಿ ತಮ್ಮ ಅಭಿಪ್ರಾಯವೇನು?" ಎಂದಳು. ನಾನು "ಹೌದು ಇದರಲ್ಲಿ ನನಗೆ ವಿಶ್ವಾಸವಿದೆ–ಭಾರತದ ಪದ್ಧತಿಗನುಸಾರವಾಗಿ"ಎಂದೆನು ಮಾರನೇದಿನ ನೋಡಿದರೆ ಲಂಡನಿನ ದೈನಿಕವೊಂದರಲ್ಲಿ"ಸ್ತ್ರೀಮಂತ್ರಿಯು ತಲೆಕೆಳಗ ಮಾಡಿ ನಿಂತು ವ್ಯಾಯಾಮವನ್ನು ತೋರಿಸುವರಿದ್ದಾರೆ" ಎಂದು ಪ್ರಕಟವಾಗಿತ್ತು! ನೋಡಿದಿರಾ!

ಇನ್ನೊಬ್ಬ ನವಯುವತಿಯು ನನ್ನನ್ನು ನೋಡಬಂದಳು. ಆಕೆಯು ಇನ್ನೂ ಅನುಭವಸ್ಥಳಲ್ಲ, ಧೈರ್ಯವಿಲ್ಲ ಆದರೂ ಎದೆಯನ್ನು ನೀವಿಕೊಳ್ಳುತ್ತಾ ಕೇಳಿಯೆಬಿಟ್ಟಳು. ಏನೆಂದರೆ "ಏನು ನೀವು ನಿಮ್ಮ ಪತಿಯೊಡನೆ ಜೈಲಿನಲ್ಲಿದ್ದಿರೋ?" ಅದಕ್ಕೆ ನಾನು "ಜೈಲಿಗೆ ಹೋಗುವುದಕ್ಕೆ 10 ವರ್ಷ ಮೊದಲೆ ನನಗೆ ಮದುವೆಯಾಯಿತು." ಎಂದೆನು. ಸುಮ್ಮನಾಗಬೇಕೋ ಬೇಡವೋ? ಇಲ್ಲ. "ಅದಿರಲಿ, ನೀವು ಸತಿಪತಿಗಳು ಜೈಲಿನಲ್ಲಿ ಒಟ್ಟುಗೂಡಿದ್ದಿರೋ ಇಲ್ಲವೋ?—ದಯವಿಟ್ಟು ಬೇಸರಪಟ್ಟುಕೊಳ್ಳಬೇಡಿ" ಎಂದು ಪುನಃ ಪ್ರಶ್ನೆಮಾಡಬೇಕೇ?

ಮತ್ತೊಬ್ಬಳು ಬಂದು "ನಿಮಗೆ ಸರಕಾರಿ ಕೆಲಸಮಾಡಿ ದಣಿಯುವುದಿಲ್ಲವೇ? ಇದಕ್ಕಿಂತ ಮನೆಕೆಲಸವೇ ಹೆಚ್ಚು ಸುಲಭವಲ್ಲವೇ?" ಎಂದು ಕೇಳಿದಳು. ಅದಕ್ಕೆ ನಾನು 'ನನಗೆ ಮನೆಕೆಲಸವೆಷ್ಟು ಸುಲಭವೋ, ಸರಕಾರೀ ಕೆಲಸವೂ ಅಷ್ಟೇ ಸುಲಭ' ಎಂದೆನು ಮರುದಿನ ವರ್ತಮಾನದಲ್ಲಿ ಏನಿತ್ತೆನ್ನುವಿರಿ? "ಸ್ತ್ರೀಮಂತ್ರಿಯೊಬ್ಬರು ಮನೆಯಲ್ಲಿ ತನ್ನ ಗಂಡನ ಜೋಡನ್ನು ಸ್ವಚ್ಛಮಾಡುವರು" ಎಂದಿತ್ತು.

ಪುರುಷಪತ್ರಿಕಾಪ್ರತಿನಿಧಿಗಳು

ಇವರೂ ಸಹ ಭಾರತೀಯ ಸ್ತ್ರೀಯರ ವಿಚಾರದಲ್ಲಿ ಉತ್ಸುಕರಾಗಿರುವರು. ಅವರು ನನ್ನನ್ನು ಕೇಳುವ ಪ್ರಶ್ನೆಗಳು ನನಗೆ ಆಶ್ಚರ್ಯವನ್ನುಂಟುಮಾಡುತ್ತಿದ್ದವು. ದೇವರೇ ಇವರ ತಲೆಯಲ್ಲಿ ಏನಿದೆಯಪ್ಪ ಎನ್ನುತಿದ್ದೆನು. ಅವರು ನನ್ನನ್ನು ವಿವಿಧದೃಷ್ಟಿಗಳಿಂದ ನೋಡಿ, ನನ್ನ ವಸ್ತ್ರಗಳ ವಿಚಾರದಲ್ಲಿ ಸಹ ಉತ್ಸುಕರಾಗಿರುವರು. ಸಾಮ್ಯವಾದಿ ಎಂದು ತಿಳಿದರೆ ನನ್ನ ಉಡುಪನ್ನು ಸಾಮಾನ್ಯರೀತಿಯಲ್ಲಿ ವರ್ಣಿಸುವರು. ಆ ಪ್ರತಿನಿಧಿ ಏನಾದರೂ ಪ್ರಸಿದ್ಧ ಪತ್ರಿಕೆಯೊಂದರ ಪರವಾಗಿ ಬಂದಿದ್ದರೆ, ನನ್ನ ಉಡುಪನ್ನು ಬಹಳವಾಗಿ ವರ್ಣಿಸಿಬಿಡುತ್ತಿದ್ದನು. ನನ್ನ ಹಣೆಯ ಮೇಲಿನ ಚಿಹ್ನೆಯೂ, ಕೈಕಾಲುಗಳ ಉಗುರುಗಳೂ ಕೆಂಪು ಬಣ್ಣದವಾಗಿ ಬಿಡುತ್ತಿದ್ದುವು–ವರ್ಣನೆಯಲ್ಲಿ. ಬ್ರಿಟಿಷ್ ಜನರು ಅವರಿಗೆ ರುಚಿಯಿಲ್ಲದೆ ಈ ವಿಚಾರಗಳನ್ನು ಏಕೆ ತಿಳಿಯಬೇಕೆನ್ನುವರೋ ಕಾಣೆ.

ಇನ್ನೂ ನನ್ನ ಸಹೋದರರೊಡನೆ ಆದ 'ಇಂಟರ್ ವ್ಯೂ' ವಿಚಾರ. ಇವುಗಳು ನಡೆಯುವಾಗ ಸಹ ನಾನು ಇರುತ್ತಿದ್ದೆನು. ಅವರೊಡನೆ ಸ್ಪಷ್ಟವಾದ, ಸ್ವಚ್ಛವಾದ, ಬುದ್ಧಿವಂತಿಗೆಯ ಪ್ರಶ್ನೆಗಳನ್ನು ಹಾಕುತ್ತಿದ್ದರು. ನಾನೂ ಅವರಂತೆ ಸಾರ್ವಜನಿಕ ಕಾರ್ಯಗಳಲ್ಲಿಯೇ ಇರುತಿದ್ದರೂ, ನನ್ನ ಮನೆಗೆಲಸ, ಉಡುಪು ಇತ್ಯಾದಿಗಳ ವಿಚಾರದಲ್ಲೇ ಇವರಿಗೆ ಆಸಕ್ತಿ.

ಪ್ರಪಂಚವು ಕ್ರಮೇಣ ಪರಿವರ್ತನೆ ಹೊಂದುತ್ತಿದೆ. ಮನುಷ್ಯನು ಅದಕ್ಕಿಂತ ನಿಧಾನವಾಗಿ ಬದಲಾಯಿಸುವನು. ಸ್ತ್ರೀಯು ಪುರುಷರ ಸಮಾನಳೆಂದೇ ಭಾವಿಸಲ್ಪಡುವಳು. ಆದರೆ ಈ ಸಮತೆಯನ್ನು ಒಪ್ಪಿರುವವರೂ ಸಹ, ಆಕೆಯನ್ನು ಪುರುಷರಿಂದ ಕೀಳೆಂದು ತಿಳಿಯುವುದು ಆಶ್ಚರ್ಯವು. ಇದರಿಂದ ಅವರ ಉನ್ನತಿಯೇನೂ ನಿಲ್ಲುವಂತಿಲ್ಲ. ಸ್ತ್ರೀಯರ ಉನ್ನತಿಗೆ ಪುರುಷರ ಕೃಪೆಯು ಬೇಕಿಲ್ಲ. ಆದರೆ, ಸ್ತ್ರೀಯರ ಉನ್ನತಿಯಿಂದಲೇ ಜಗತ್ತಿನ ಉನ್ನತಿಯೂ ಆಗುವುದೆಂದು ಎಲ್ಲರೂ ಒಪ್ಪಿಕೊಂಡಿರುವ ಸಿದ್ಧಾಂತ.

THE

Canara Industrial & Banking Syndicate Ltd.,

(INCORPORATED IN BRITISH INDIA
LIABILITY OF SHAREHOLDERS LIMITED.)

ESTD. 1925

Head Office:- UDIPI, (S. India.)

SEASON DEPOSITS ARE ACCEPTED
at 3½ per cent per annum

Further particulars on application
to any of
our thirty-five Offices.

ವಿಜಯಲಕ್ಷ್ಮಿ ಜನರಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಮದ್ರಾಸು

ಪ್ರಪಂಚವೆಲ್ಲಾ ಆರ್ಥಿಕಮುಗ್ಗಟ್ಟಿಗೆ ಒಳಗಾಗಿದ್ದ ಕಾಲದಲ್ಲಿ ಈ ವಿಮಾಸಂಸ್ಥೆಯು ಆರಂಭಿಸಲ್ಪಟ್ಟದ್ದರೂ, ಸಾಹಸಪರ ಕಾರ್ಯಭಾರವನ್ನು ನಡೆಯಿಸಿ ಪ್ರಾಮಾಣಿಕ ಧೋರಣೆ ಮತ್ತು ನಿತವ್ಯಯದ ಆಡಳಿತದಿಂದಾಗಿ ವಿಮಾಕ್ಷೇತ್ರದಲ್ಲಿ ಪ್ರಖ್ಯಾತರೂ, ಸುಶಿಕ್ಷಿತರೂ, ಪರಿಪಕ್ವ ಅನುಭವಿಗಳೂ ಆದ ಸಮರ್ಥರುಗಳಿಂದ ವ್ಯವಹಾರವನ್ನು ನಡಿಸಿ ಯಶಸ್ಸು ಹೊಂದಿರುವುದು ಹೆಮ್ಮೆಯ ವಿಷಯವಾಗಿದೆ.

ಈ ಕಂಪೆನಿಯು 1933ನೇ ಜನವರಿಯಲ್ಲಿ ತನ್ನ ಕಾರ್ಯಕಲಾಪವನ್ನು ನಡೆಯಿಸುವುದಕ್ಕೆ ಆರಂಭಿಸಿದ್ದು ಅತ್ಯಲ್ಪ ಅವಧಿಯಲ್ಲಿಯೇ ಹೆಚ್ಚಿನ ವಹಿವಾಟು ನಡಿಸಿ ಭಾರತದ ಪ್ರಗತಿಪರ ವಿಮಾಸಂಸ್ಥೆಗಳಲ್ಲಿ ಇದೂ ಕೂಡಾ ಒಂದೆನಿಸಿದೆ. ಇದರ ಆಡಳಿತವು ಬಹಳ ಜಾಗರೂಕತೆಯಿಂದ ನಿರ್ವಹಿಸಲ್ಪಡುತ್ತಿದೆ. ಇದರ ಸಾಂಪತ್ತಿಕಸ್ಥಿತಿಯು ನಿರಾಕ್ಷೇಪಕರವಾಗಿದೆ. ಅಲ್ಲದೆ ಪೋಲಿಸಿದಾರರಿಗೆ ಸುಭದ್ರತೆಯನ್ನು ಒದಗಿಸಿಕೊಡುತ್ತಿದೆ. ಲೈಫ್ ಇನ್ಶ್ಯೂರೆನ್ಸ್ ಕಂಪೆನಿಯು (New Act) ಪ್ರಕಾರ ಗವರ್ನ್ಮೆಂಟಿನಲ್ಲಿ ಇಡಬೇಕಾದ ಭದ್ರತೆಯು ತೃಪ್ತಿಕರವಾಗಿಯೇ ಇದೆ. ಮಿತವ್ಯಯ ಮತ್ತು ಭದ್ರತೆಯ ತಳಹದಿಯಿಂದ ಮುಂದುವರಿಯುತ್ತಿದೆ.

ಪೋಲಿಸಿಯ ನಿಯಮ ಮತ್ತು ನಿರ್ಬಂಧಗಳು ಪೋಲಿಸಿದಾರರಿಗೆ ಹೆಚ್ಚು ಸೌಕರ್ಯಗಳನ್ನು ಒದಗಿಸುವ ರೀತಿಯಲ್ಲಿ ರಚಿಸಲ್ಪಟ್ಟಿವೆ. ಇದರಿಂದ ಪ್ರತಿಯೊಬ್ಬನೂ ತನ್ನ ಅನುಕೂಲ್ಯದಂತೆ ಹಲವು ತರದಲ್ಲಿ ವಿಮೆಯಿಳಿಸಿ ಪ್ರಯೋಜನ ಹೊಂದಬಹುದು. ಸ್ಪೆಶಲ್ ಹೋಲ್ ಲೈಫ್, ಸಣ್ಣಮಕ್ಕಳ ವಿದ್ಯಾಭ್ಯಾಸದ ವಿಮೆ, ಕಾಲೇಜು ಮತ್ತು ಅನ್ಯದೇಶಗಳಲ್ಲಿ ವಿದ್ಯಾಭ್ಯಾಸಮಾಡುವವರಿಗೆ ವೇತನ ದೊರಕಿಸಿಕೊಡುವುದಕ್ಕಾಗಿ ರಚಿಸಿರುವ, ನೂತನವಾದ(Educetion Annuity Policy) ಎಂಬ ವಿಮೆ, (Children defferved Age Endowment) ವಿಮೆ, ಕುಟುಂಬದ ಪೆನ್ಶನ್ ವಿಮೆ ಮತ್ತು ಅತ್ಯಂತ ಫಲಕಾರಿಯಾದ ಪ್ರತಿ ಸಾವಿರದ ಪೋಲಿಸಿ ನೋಟೆ ರೂ. 25 ಮತ್ತು ರೂ. 50 ಬೋನಸ್ಸು ದೊರೆಯುವ (Granted Policy) ಎಂಬ ವಿಮೆ ಇನ್ನೂ ಅನೇಕ ತರದ ಕೋಷ್ಟಕಗಳನ್ನು ಮಿತವಾದ ಕಂತುಗಳಿಂದ ರಚಿಸಿರುವುದಲ್ಲದೆ ಉದಾರವಾದ ತ್ಯಾಗ ಮೌಲ್ಯ, ಪೋಲಿಸಿದಾರರಿಗೇನೇ ಸಾಲುಕೊಡೋಣ, ವಿಮಾಪತ್ರಗಳು ರದ್ದಾಗದೆ ಊರ್ಜಿತವಿಡೋಣ, ಡೈರೆಕ್ಟರ್ ಮಂಡಳಿಯಲ್ಲಿ ಶೇಕಡಾ 25ರಂತೆ ವಿಮಾಪತ್ರದಾರರಿಗೆ ಪ್ರಾತಿನಿಧ್ಯವಿರೋಣ, ವಾರಿಸದಾರರ ಹಣ ಪಾವತಿ ಮಾಡುವುದರಲ್ಲಿ ಗಣ್ಯಸ್ಥಾನ ಪಡೆಯೋಣ ಮುಂತಾದ ಸಕಲವಿಧವಾದ ಸೌಲಭ್ಯಗಳು ಈ ಕಂಪೆನಿಯಲ್ಲಿ ಅಡಕವಾಗಿವೆ

ಕಂಪೆನಿಯ ಆಡಳಿತ ನಿರ್ವಾಹಕರಾದ ಶ್ರೀ|ಇ.ಎಂ. ಕೃಷ್ಣ ಅಯ್ಯರ್ ಮತ್ತು ಶ್ರೀ. ವಿ. ವಿ ಪ್ರಸನ್ನಯ್ಯ, ಎಂ. ಎಲ್. ಸಿ. ಯವರ ದಕ್ಷತೆ ಮತ್ತು ವಿಚಕ್ಷಣತೆಯಿಂದ, ಅತ್ಯಲ್ಪ ಅವಧಿಯಲ್ಲಿ ಸಂಸ್ಥೆಯು ಇಷ್ಟೊಂದು ಉನ್ನತಸ್ಥಿತಿಗೆ ಬಂದಿರುವುದು ಅಭಿನಂದನೀಯವಿದೆ.

ಮಹಾಜನರ ಮತ್ತು ಪುರ ಪ್ರಮುಖರ ಸದಾಭಿಪ್ರಾಯಗಳು, ಪ್ರಶಂಸೆಗಳು ಮತ್ತು ಕಂಪೆನಿಯ ಸುಪ್ರಸಿದ್ಧರಾದ ಏಕ್ಚುವರಿ ಶ್ರೀ| ಜ. ಎಸ್. ಮರಾಟೆ. M. A. I. A. (London) ಇವರ ವೆಲ್ಯೂಏಶನ ಅಭಿಪ್ರಾಯ ಮತ್ತು 1938ನೇಜನರಲ್ ಮಿಟಿಂಗಿನ ಅಧ್ಯಕ್ಷಭಾಷಣ ಮುಂತಾದುವು ಕಂಪೆನಿಯ ಮುಂದಿನ ಭದ್ರತೆಯ ಹೆಗ್ಗುರುತಾಗಿವೆ. ಇಂಥಾ ಉತ್ತಮ ಸಂಸ್ಥೆಯ ಒರ್ಗನೈಜರಾಗಿ ನಮ್ಮ ಈ ಕನ್ನಡ ಜಿಲ್ಲೆಯಲ್ಲಿ ವಿಜಯಲಕ್ಷ್ಮಿಯನ್ನು ಪ್ರಚಾರಕ್ಕೆ ತಂದು ಅಲ್ಪಸಮಯದಲ್ಲಿಯೇ ಜನತೆಯಲ್ಲಿ ಇದರ ಪ್ರಭಾವ ಬೀರುವಂತೆ ಮಾಡಿದ ಶ್ರೀ| ಪಿ. ಅಂತಯ್ಯ ಹೆಗ್ಡೆಯವರ ಸಾಹಸವು ಹೊಗಳತಕ್ಕದ್ದಿದೆ, ಶ್ರೀ| ಹೆಗ್ಡೆಯವರು ಜನಪ್ರಿಯರಾಗಿ ಕಂಪೆನಿಯ, ಪುರೋಭಿವೃದ್ಧಿಯನ್ನೇ ಬಯಸಿ ದುಡಿಯುತ್ತಿರುವರು. ಕನ್ನಡಿಗರು ತನುಮನಧನಗಳಿಂದ ಇವರಿಗೆ ಪ್ರೋತ್ಸಾಹವನ್ನು ಕೊಡಬೇಂದೂ ಈ ವಿಮಾ ಸಂಸ್ಥೆಯ ಕ್ಷೇತ್ರವು ಕನ್ನಡನಾಡಿನಲ್ಲೆಲ್ಲಾ ವಿಸ್ತರಿಸಲೆಂದೂ ಹಾರೈಸುತ್ತೇವೆ.

ನವಯುಗ ಸ್ಪರ್ಧೆ ೨.

—— ರೂ. 25 ಇನಾಮು ——

I ಇನಾಮು ರೂ 10/- II ರೂ. 5ರ 2 ಇನಾಂ. III ರೂ 1ರ 5 ಇನಾಂ.

ಒಟ್ಟು ರೂ. 25ರ 8 ಇನಾಮುಗಳು.

1		2	■	3		
	■	4			■	
5	6		■	7	8	9
■		■	■	■		■
10		11	■	12		13
	■	14			■	
15			■	16		

ಸೂಚನೆಗಳು.

ಎಡದಿಂದ ಬಲಕ್ಕೆ—1. ಪಾಂಡವರಲ್ಲೊಬ್ಬ. 3. ಋಷಿ, 4. ಇದನ್ನು ಮಾರಿಗೆ ಕಡಿಯುತ್ತಾರೆ. 5. ಈ ಹೂವಿನ ಹೆಸರನ್ನು ಹೆಂಗಸರಿಗೂ ಇಡುತ್ತಾರೆ, 7. ಬೇತ, 10. ಹಿಂದುಗಳ ಪವಿತ್ರ ಗ್ರಂಥಗಳಲ್ಲೊಂದು, 12. ಯಜ್ಞ, 14. ರಕ್ತ, 15. ಹೀಗಾಗಲು ನಾವೆಲ್ಲರೂ ಪ್ರಯತ್ನಿಸಬೇಕು, 16. ಸ್ತ್ರೀಯರು ಹೀಗಿರಬೇಕು.

ಮೇಲಿಂದ ಕೆಳಕ್ಕೆ—1. ಈ ಪ್ರಸಂಗವು ಇರಕೂಡದು, 2. ಎಡದಿಂದ ಬಲದ 1ನೆಯವನ ತಮ್ಮ, 3. ಒಬ್ಬ ರಾಕ್ಷಸ, 6. ಒಂದು ಮಾಸ, 8. ಈ ಹೂವಿನ ಹೆಸರನ್ನು ಗಂಡಸರಿಗೂ ಇಡುತ್ತಾರೆ, 10. ಪಕ್ಷಿಗಳಲ್ಲೊಂದು, 11. ಯುವಕ, 12. ಬಡವರು ಇಂಥ ಬಟ್ಟೆಯನ್ನು ಉಪಯೋಗಿಸುತ್ತಾರೆ, 13. ಹೊಸಳು.

ಕೆಳಗಿಂದ ಮೇಲಕ್ಕೆ—9. ಬಿಸಿಹಾಲನ್ನು...... ಕುಡಿಯುತ್ತಾರೆ.

ನಿಯಮಗಳು— 1. ಉತ್ತರದೊಂದಿಗೆ 0-2-0 ಟಪ್ಪಾಲುಚೀಟನ್ನು ಕಳುಹಿಸಬೇಕು. 2. 0-8-0ಗೆ 5 ಉತ್ತರದಂತೆ ಕಳುಹಿಸಬಹುದು. 3. ಇನಾಂಗಳನ್ನು ಸರಿಯಾಗಿ ಬಿಡಿಸಿದವರೊಳಗೆ ಸೋಡ್ತಿ ಹಾಕಿ ಕೊಡಲಾಗುವುದು. 4. ಇನಾಮುಗಳೆಲ್ಲಾ ಪುಸ್ತಕರೂಪದಲ್ಲೇ ಕೊಡಲ್ಪಡುವವು.

ಉತ್ತರವನ್ನು ತಾ. 15-5-39ರತನಕ ಸ್ವೀಕರಿಸಿ 18-5-39ಕ್ಕೆ ಪ್ರಕಟಿಸಲಾಗುವುದು.

ನವಯುಗ ಸ್ಪರ್ಧೆ,
ನವಯುಗ ಆಫೀಸು ಉಡುಪಿ.

ಓರಿಯಂಟಲ್

ಗವರ್ನಮೆಂಟ್ ಸೆಕ್ಯುರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನಕಾರ್ಯಾಲಯ—ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನುಹೊಂದಿಕೊಂಡಿರುವವರಿಗೆ ದುಡ್ಡಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲಪ್ತ ಅವಧಿಗಳ ಚಿಕ್ಕಪಾವತಿಗಳಿಂದ ನಿಶ್ಚಯನಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ **ಜೀವವಿಮೆ ಮಾಡುವುದೇ.**

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ"ಓರಿಯಂಟಲ್" ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ **ಆರ್ಥಿಕ ಸ್ವಾತಂತ್ರ್ಯದ ತಳಹದಿ** ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?
ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,	ಅ	ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲ್ಯಾಫ್ ಆಫೀಸು,	ಥ	**ಓರಿಯಂಟಲ್ ಲ್ಯಾಫ್ ಆಫೀಸು,**
ಮ್ಯೆನ್‌ರೋಡ್, ಮಡಿಕೇರಿ, (ಕೊಡಗು.)	ವಾ	ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ORIENTAL Govt. Security Life Assurance Co,. Ltd.

ವಿಶ್ವ ವಿನಾಶೀ ವಿಪ್ಲವ

ಯುರೋಪಿನ ಸಾರ್ವಜನಿಕರೇನನ್ನುವರು?

ಮಾನವತೆಗೆ ಧಕ್ಕೆ ತಗಲಿದೆ!

ಕಳೆದ ಸೆಪ್ಟಂಬರಿನಲ್ಲಿ ನಡೆದ ಘಟನೆಗಳಿಂದ ಈ ಲೇಖನವನ್ನು ಪ್ರಾರಂಭಿಸುವುದಾದರೆ, ವಾಚಕರು ನನ್ನನ್ನು ಆಕ್ಷೇಪಿಸುವುದಿಲ್ಲವೆಂದು ಭಾವಿಸುತ್ತೇನೆ. 1938ನೇ ಸೆಪ್ಟಂಬರಿನಿಂದ ಹಿಡಿದು ಇದುವರೆಗೂ ಸಂಭವಿಸಿರುವ ಘಟನೆಗಳನ್ನು ನೋಡಿ ಬ್ರಿಟಿಷ್ ಪ್ರಧಾನರಾದ ಚೇಂಬರ್ಲೇನರನ್ನು ಅಭಿನಂದಿಸುತ್ತಿದ್ದವರಿಗೆ ಸ್ವಲ್ಪ ಕಣ್ಣು ತೆರೆಯುವಂತಾಗಿರಲೇ ಬೇಕು. ಅಲ್ಲದೆ ಈ ಲೇಖನವು ಅಚ್ಚಾಗಿ ವಾಚಕರ ಕೈಗೆ ಸೇರುವುದರೊಳಗೆ ಮತ್ತಾವ ರಾಜಕೀಯ ಗಂಡಾಂತರಗಳಾಗಿರುವುದೋ ಏನೋ ಬಲ್ಲವರಾರು?

ಪಶ್ಚಿಮದೇಶದಲ್ಲಿ ಜನಗಳು ಇದರ ವಿಚಾರದಲ್ಲಿ ಯಾವ ಅಭಿಪ್ರಾಯವನ್ನಿಟ್ಟುಕೊಂಡಿರುವರು? ತಾತ್ಕಾಲಿಕ ಶಾಂತಿಯಿಂದ ಬೀಸುವ ದೊಣ್ಣೆಗೆ ತಪ್ಪಿಸಿಕೊಂಡರೆ ಸಾವಿರವರ್ಷ ಎಂಬಂತೆ–ಅವರಿಗೆ ತೃಪ್ತಿಯಾಗುವುದೇ? ಶಾಂತಿಯು ಸಮಾಪದಲ್ಲಿ ದೊರೆಯುವುದೆಂದು ಅವರು ನಿಶ್ಚಿಂತೆಯಿಂದಿರುವರೇ?

(ಲೇಖಕರು: ದೀನಬಂಧು ಸಿ. ಎಫ್. ಆಂಡ್ರ್ಯೂಸರು.)

ಭಯಂಕರ ವ್ಯಕ್ತಿ — ಹಿಟ್ಲರ್

ಎಲ್ಲ ಭಯದ ಮೂಲಕಾರಣ ಹಿಟ್ಲರ್. ಯಾರನ್ನು ಜಗತ್ತು ಒಬ್ಬ ಯಶಸ್ವಿ ವ್ಯಕ್ತಿ ಎಂದು ಹೊಗಳುತ್ತಿದೆಯೋ ಅಂತಹ ರಾಜಕೀಯ ಜೂಜುಗಾರನಾದ ಈ ಹಿಟ್ಲರನ ಬಳಿ ಅವನ ಯಶಸ್ವಿ (?) ಕಾರ್ಯಗಳ ದೊಡ್ಡದೊಂದು ರಿಕಾರ್ಡೇ ಇದೆ.

ಮ್ಯೂನಿಚ್‌ನಲ್ಲಿ ನಡೆದ ಘಟನೆಗಳನ್ನೂ ಅವನ ಲೆಫ್ಟಿನೆಂಟರಾದ ಗೋಬೆಲ್ಸ್ ಮತ್ತು ಗೋರಿಂಗರು ಎಷ್ಟು ವಿಚಿತ್ರ ರೀತಿಯಿಂದ ಪ್ರಕಟಿಸಿದರು! ಅವರು ಪಾಶವಿಕ ಮದೋನ್ಮತ್ತರಾಗಿ "ಮನುಷ್ಯನ ಶಕ್ತಿಯ ನಿರ್ಣಯವು ಅವನ ಬಲದ ಪರೀಕ್ಷೆಯಿಂದಲೇ ಆಗಬೇಕು." ಎಂದು ಘಂಟಾಘೋಷವಾಗಿ ಹೇಳಿದ್ದರು. ಇದರಿಂದ ಅವರು ಸಾಧ್ಯವಾದಂತೆಲ್ಲ ತಮ್ಮ ಶಕ್ತಿಯನ್ನು ಸಂಪೂರ್ಣವಾಗಿ ವಿನಿಯೋಗಿಸಲು ಸಿದ್ಧರಾಗಿರುವರೆಂದು ಗೊತ್ತಾಗುವುದು.

ಇಂತಹ ಪರಿಸ್ಥಿತಿಯಲ್ಲಿ ಅವರು ವಾಯಿದೆಮಾಡುವುದು, ನಂತರ ಅದನ್ನೂ ಮುರಿಯುವುದು, ಇದಕ್ಕೆ ಬ್ರಿಟನ್ ಮತ್ತು ಫ್ರಾನ್ಸುಗಳು ಈ ಕೆಳಗೆ ಕಂಡ ಒಪ್ಪಂದವನ್ನು ಮಾಡಿಕೊಳ್ಳುತ್ತಿರುವುದು ಏನೂ ದೊಡ್ಡ ವಿಷಯವಲ್ಲ. ಏನೆಂದರೆ ಜರ್ಮನಿಗೆ ಯುದ್ಧಮಾಡಬೇಕೆಂಬ ಅಭಿಪ್ರಾಯವಿಲ್ಲ. ಅದು ಇನ್ನು ಮುಂದೆ ಹೊಸ ಭಾಗಗಳಿಗೆ ಆಶಿಸುವುದಿಲ್ಲ.

ಲೋಕಾರ್ನೋ ಮತ್ತು ಕೆಲೋಗ್ ಪ್ಯಾಕ್ಟ್‌ನಂತಹ ಮುಖ್ಯವಾದ ಒಪ್ಪಂದಗಳನ್ನೇ–ಈ ಒಪ್ಪಂದಗಳಿಗೆ ಜರ್ಮನಿಯು ಸಂಪೂರ್ಣ ಒಪ್ಪಿಗೆಯನ್ನು ಕೊಟ್ಟಿತ್ತು–ಹರಿದು ಚೂರು ಮಾಡಿದ ಮೇಲೆ ಹೊಸ ಒಪ್ಪಂದಗಳನ್ನೇ ಪಾಲಿಸುವ ಭರವಸೆಯಾದರೂ ಹೇಗೆ?

ಇತರರೇನೆನ್ನುವರು?

ನಾನು ಈ ಲೇಖನದಲ್ಲಿ ಈ ವಿಚಾರವಾಗಿ ಏನನ್ನೂ ಹೇಳಬಯಸುವುದಿಲ್ಲ. ಏಕೆಂದರೆ ನಾನು ಈಗಾಗಲೇ ಬಹಳವಾಗಿ ಹೇಳಿರುವೆನಾದುದರಿಂದ, ಈ ವಿಚಾರದಲ್ಲಿ ಇತರರ ಅಭಿಪ್ರಾಯಗಳನ್ನು (ನನ್ನ ಬಳಿ ಇತರರು ಕಳಿಸಿರುವುದು.) ಮಾತ್ರವಾಚಕರ ಮುಂದಿಡುವೆನು. ಅವರು "38ನೇ ಸೆಪ್ಟಂಬರಿನ ಘಟನೆಗಳ ನಂತರ" ಎಂಬ ಹೆಸರಿನಿಂದ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು.

ಇಲ್ಲಿ ಒಂದು ಪತ್ರವನ್ನು ಕೊಡುವೆನು—

ಮಿತ್ರರೇ, ಅತ್ಯಂತ ದುರ್ದೈವೀ ಘಟನೆಗಳು ದೂರವಾದ ನಂತರ ಸಮಾಧಾನದಿಂದಿದ್ದೇವೆ. ಬಲಪ್ರಯೋಗದ ಮುಂದೆ ಚೇಂಬರ್ಲೇನರು ಮೂಕರಾದೆವೆಂದು ತಾವೇ ಒಪ್ಪಿಕೊಂಡರು. ಅವರು ಮಾಡಿದ್ದು ನ್ಯಾಯವೇ ಇಲ್ಲವೇ ಎಂಬುದು ಬೇರೆ ಪ್ರಶ್ನೆ. ಆದರೆ ಒಂದು ಅಂಶವಂತೂ ಇದರಿಂದ ಸ್ಪಷ್ಟವಾಯಿತು. ಏನಂದರೆ ಹೆದರಿಸುವನು ಹೆದರುವವನ ಮೌನದಿಂದ ತಣ್ಣಗಾಗುವುದಿಲ್ಲ. ಬದಲಾಗಿ ಅವನ ಹೆಮ್ಮೆ ಶಕ್ತಿಯೂ ಹೆಚ್ಚಾಗುವುವು. ಪ್ರಜಾತಂತ್ರ ಸ್ವಾತಂತ್ರ್ಯ, ಮತ್ತು ಧರ್ಮ ಇವು ಹುಲ್ಲಿಗಿಂತ ಕೀಳಾದುವು"

ಸತ್ಯಕ್ಕಿಂತಲೂ ಶಾಂತಿ ಹೆಚ್ಚೇ?

ಇನ್ನೊಂದು ಪತ್ರ ಈ ರೀತಿ ಇದೆ– "ಮ್ಯೂನಿಚ್‌ನಲ್ಲಿ ಸಾರ್ವಜನಿಕಾಭಿಪ್ರಾಯಕ್ಕೆ ಧಕ್ಕೆ ತಗುಲಿತು. ಪಶುಬಲವು ವಿಜಯಿಯಾಯಿತು. ನಾವು ಸತ್ಯಕ್ಕಿಂತಲೂ ಶಾಂತಿಗೆ ಹೆಚ್ಚು ಬೆಲೆಯನ್ನೂ ಕೊಟ್ಟದ್ದು ಮಹಾಪರಾಧವಾಡಿದಂತಾಯಿತು. ಶಾಂತಿಯೇ ನಮ್ಮ ದೇವರಾಯಿತು. ಅದರ ಮುಂದೆ ಎಲ್ಲವೂ ಗುಲಾಮರಂತೆಯೇ. ಸರ್. ನಾರ್ಮನ್ ಏಂಜೆಲ್, ಲಾರ್ಡ್ ಸೆಸಿಲ್ ನಂತರ ಶಾಂತಿಪ್ರಿಯ ವ್ಯಕ್ತಿಗಳು ಸಹ ಒಪ್ಪಂದವನ್ನು ವಿರೋಧಿಸಿರುವರು."

ಪ್ರಜಾತಂತ್ರಕ್ಕೆ ಧಕ್ಕೆ

ಲಂಡನ್ನಿನ ಪೂರ್ವಭಾಗದ ಮಿತ್ರರೊಬ್ಬರು ಈ ರೀತಿ ಬರೆಯುತ್ತಾರೆ. ಯಾವಾಗಲಾದರೂ ಪ್ರಜಾತಂತ್ರಕ್ಕೆ ಧಕ್ಕೆ ತಗಲಿದರೆ, (ಜೆಕೋಸ್ಲೋವೇಕಿಯಾ ಮತ್ತು ಸ್ಪೈನಿನಲ್ಲಿ ಆದಂತೆ) ಎಂದಾದರೆ ಸತ್ಯ ಮತ್ತು ನ್ಯಾಯದ ಕೊಲೆಯಾದರೆ (ಅಬಿಸೀನಿಯಾ, ಚೀಣದಲ್ಲಾದಂತೆ) ಅಂತಹ ಸಮಯದಲ್ಲಿ ಈ ದೇಶಕ್ಕೆ (ಇಂಗ್ಲೆಂಡ್) ನೈತಿಕ ಬಲವೇ ಸಹಾಯವಾಗಿರುವುದು. ಈಗ ನಾವು ನಮ್ಮ ರೀತಿನೀತಿಗಳನ್ನು ಬದಲಾಯಿಸಿಕೊಳ್ಳಬೇಕು. ಕಳೆದುಹೋದುದಕ್ಕೆ ಪಶ್ಚಾತ್ತಾಪಮಾಡಿಕೊಳ್ಳಬೇಕು. ಯಾವುವರಿಂದ ಯಾವ ರೀತಿಯನ್ನನುಸರಿಸುವುದರಿಂದ, ದೇಶದಲ್ಲಿ ಶಾಶ್ವತ ಶಾಂತಿ ಸ್ಥಾಪನೆಯಾಗುವುದೋ ಅಂತಹುದನ್ನು ಅನುಗ್ರಹಿಸೆಂದು ಭಗವಂತನಲ್ಲಿ ಪ್ರಾರ್ಥಿಸಬೇಕು. ಅಂದರೆ ನಾವು ನಮ್ಮ ದೇಶದಲ್ಲಿ ವರೊಡನೆ ನ್ಯಾಯರೀತಿಯಿಂದ ವರ್ತಿಸಿ ಸಾಂಘಿಕ ಘರ್ಷಣೆಗೆ ಅವಕಾಶವಿಲ್ಲದಂತೆ ಮಾಡಬೇಕು.

ಮುಂದೇನಾಗುವುದು?

ಪಾರ್ಲಿಮೆಂಟ್ ಸದಸ್ಯ ಮಿ. R J. ರಸಲ್‌ರು ಈ ರೀತಿ ಬರೆದಿದ್ದಾರೆ. "ಇನ್ನು ಮುಂದೆ? ತೊಂದರೆಗಳ ಕಾರಣ ಮತ್ತು ನಿವಾರಣೋಪಾಯಗಳನ್ನು ತಿಳಿಯಲು ಸಮಯ ದೊರೆತಿದೆ, ಯಾವ ರೀತಿ ಒಂದು ಹೊರೆಯ ಕೆಳಗೆ ಸಿಕ್ಕಿಬಿದ್ದಿರುವೆವೋ, ಅದರಿಂದ ತಪ್ಪಿಸಿಕೊಳ್ಳಲು ಯತ್ನಿಸುವಂತೆ ನಾವು ಯತ್ನಿಸಬೇಕು.

ಎಷ್ಟೋ ಸಂದರ್ಭಗಳಲ್ಲಿ ನಾವು ಅನ್ಯಾಯದಿಂದ ವರ್ತಿಸಿರುವೆವು. ಹಿಂದೆ ಮಾಡಿದ ಅನ್ಯಾಯಗಳನ್ನು ಪುನಃ ಮಾಡಿದ್ದೇವೆ. ಶರೀರವೇ ಆತ್ಮದ ಮೇಲೆ ಆಕ್ರಮಣ ಮಾಡಿದಂತೆ ನಾವು ಸಹ ನಮ್ಮ ನೈತಿಕ ಸತ್ವವನ್ನು ಕಳೆದುಕೊಂಡಿರುವೆವು, ಆತ್ಮದ ಗೋರಿಯಾಗಿ ಹೋಗಿದೆ.

1914ರಲ್ಲಿ ಯಾರು ನಮ್ಮ ಹೃದಯಕ್ಕೆ ನೋವನ್ನುಂಟುಮಾಡಿದ್ದಾರೋ ಅವರ ವಿಷಯದಲ್ಲಿ ನಮ್ಮ ಅಸಮಾಧಾನವನ್ನು ವ್ಯಕ್ತಪಡಿಸಬೇಕು. ನಾನು ಸಾಯುವವರೆಗೂ ಈ ಭಾವನೆಯು ನನ್ನಿಂದ ದೂರವಾಗುವಂತಿಲ್ಲ ಆದರೆ ಈ ಅಸಮಾಧಾನತೆಯಿಂದ ಗಾಯವು ಗುಣವಾಗುವುದೇ ಇಲ್ಲ. ನಾನು ಶಾಂತಿ ಮತ್ತು ಪ್ರಗತಿಯ ಪೂಜಾರಿ. ಅದಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧನಿದ್ದೇನೆ. ನಮ್ಮ ಜನಾಂಗವು ಸುಖಲೋಲುಪತೆಯಲ್ಲಿ ಮಗ್ನವಾಗಿದೆ. ಇದರಿಂದ ಹೊರಗೆ ಬಂದು ಜನಾಂಗದ ಜೀವನದಲ್ಲಿ ಮುಂದೆ ಮುಂದೆ ಹೆಜ್ಜೆ ಇಡಬೇಕು. ನಮ್ಮ ವೈಜ್ಞಾನಿಕ ಅಭಿವೃದ್ಧಿಯಿಂದ ನಮ್ಮ ಆತ್ಮಬಲವು ನಾಶವಾಗಿದೆ.

ಸತ್ಯವ್ರತೀ— ಚೇಂಬರ್ಲೇನರು

ಮೇಲಿನ ಪತ್ರಗಳಿಂದ ಹೃದಯಪರಿಶುದ್ಧತೆ, ಸ್ವಾರ್ಥಪ್ರಿಯತೆಗಳು ಹೊರಬೀಳುವವು ತಮ್ಮಲ್ಲಿ ಹೊಸ ಶಕ್ತಿಯನ್ನು ಸಂಚಯಮಾಡಿಕೊಳ್ಳಲು, ಆತ್ಮಬಲವನ್ನು ನಂಬಬೇಕೆಂಬ ಅಭಿಪ್ರಾಯವುಂಟಾಗಿದೆ. ಆದರೆ ಕೆಳಗಿರುವ ಪತ್ರವನ್ನು ನೋಡಿ– ಚೇಂಬರ್ಲೇನರು ಹಿಟ್ಲರನ ನಿವಾಸಸ್ಥಾನಕ್ಕೆ ಹೋಗಿ, ಅವನನ್ನು ಭೇಟಿಮಾಡಿದಾಗ ಎಲ್ಲಿ ಸುಡೆಟನರು ವಾಸವಾಗಿರುವರೋ, ಅದನ್ನು ತನಗೆ ಬಿಟ್ಟುಕೊಡಬೇಕೆಂದು ಹಿಟ್ಲರನು ತನ್ನ ಬೇಡಿಕೆಯನ್ನು ಮುಂದಿಟ್ಟನು. ಇಂಗ್ಲೆಂಡ್ ಮತ್ತು ಫ್ರಾನ್ಸುಗಳು ತೀವ್ರವಾಗಿ ವಿರೋಧಿಸಲು, ಜೆಕೋಸ್ಲೋವೇಕಿಯವನ್ನು ಬಲಿಕೊಡಲು ಸಿದ್ಧರಾದರು. ಶಾಂತಿಯ ಹೆಸರಿನಲ್ಲಿ ಅವನು ಹೊಸ ಹೊಸ ಬೇಡಿಕೆಗಳನ್ನು ಮುಂದಿಟ್ಟನು.

ಹಿಟ್ಲರನ ಬೆದರಿಕೆಗಳು

ಹಿಟ್ಲರನು ಸ್ಪಷ್ಟವಾಗಿ ಈ ರೀತಿ ಹೇಳಿರುವನು–"ಬರ್ಚ್ಟೆಸ್‌ಗ್ಯಾಡನ್ ಮತ್ತು ಗೋಡೆಸ್‌ಬರ್ಗ್ ಇವುಗಳ ಶರತ್ತುಗಳ ವ್ಯವಸ್ಥೆಗಾಗಿ, ಜಗತ್ತನ್ನು ಯುದ್ಧದಲ್ಲಿ ಮುಳುಗಿಸಬಲ್ಲೆನು. ಇದರಲ್ಲಿ ಕನಿಷ್ಟಪಕ್ಷ ಒಂದು ಮಿಲಿಯ ಜರ್ಮನ್ ಗಂಡಸರು ಹೆಂಗಸರು

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906
CANARA BANK
LIMITED

ಮಕ್ಕಳು, ಮತ್ತು ಸುಡೆಟನ್ ಲ್ಯಾಂಡಿನವರೂ ಧ್ವಂಸವಾಗುವರು. ಅಂತಹ ಭಯಂಕರ ಯುದ್ಧವಾಗುವುದು."

ಚೇಂಬರ್ಲೇನರ ನಿರ್ದಿಷ್ಟ ಅಭಿಪ್ರಾಯದಲ್ಲಿ ಹಿಟ್ಲರನು ಒಬ್ಬ ಸೈನಿಕನು 4ವರ್ಷಗಳ ಕಾಲ ಯುದ್ಧಮಾಡಿ ಅನುಭವಪಡೆದಿರುವನು. ಮಾನವ ಜೀವನದ ವಿಚಾರದಲ್ಲಿ ಇಷ್ಟು ತುಚ್ಛವಾದ ಭಾವನೆಗಳುಳ್ಳವನು ಬೇರೆ ಯಾರಾದರೂ ಇರುವನೆ?

ಚೇಂಬರ್ಲೇನರ ಉತ್ತರ

"ಹಿಟ್ಲರನಲ್ಲಿ ನಂಬಿಕೆ ಇಡಿ. ಆದರೆ ಆ ನಂಬಿಕೆಯು ನಿಮ್ಮ ರಿವಾಲ್ವರನಿಂದ ಹೊರಗೆ ಹೋಗದಿರಲಿ." ಚೇಂಬರ್ಲೇನರ ಈ ಉತ್ತರದಲ್ಲಿ ನಾವು ಯಾವ ಅಭಿಪ್ರಾಯವನ್ನಿಡಬೇಕೋ ತಿಳಿಯದು.

ನಾನು ಅನೇಕ ಸಾರಿ ಜರ್ಮನಿಗೆ ಹೋಗಿರುವೆನು. ನನ್ನ ಅನುಭವದಲ್ಲಿ ನಮ್ಮವರಿಗಿಂತಲೂ ಅವರಿಗೆ ಯುದ್ಧದ ಭೀತಿಯು ಬಹಳವಿದೆ. ನನಗೆ ತಿಳಿಯುವುದೇನೆಂದರೆ, ಪ್ರಪಂಚವೇ ಒಂದು ಹುಚ್ಚರ ಬೀಡಾಗಿದೆ, ಕಳೆದ ವಾರ ಡಾ. ಡೀನ್‌ರವರು ರೋಗದಿಂದ ಗುಣವಾಗಿ ಈ ರೀತಿ ಹೇಳಿರುವರು. "ಇಂತಹ ದುಷ್ಟ ಕಾಲದಲ್ಲಿ ನನ್ನ ಆಯುಸ್ಸು ಹೆಚ್ಚಿದ್ದಕ್ಕೆ ನನಗೆ ಖೇದವಾಗುತ್ತದೆ." ಇಂತಹ ವಿಚಾರಶೀಲ ವ್ಯಕ್ತಿಯ ಈ ಮಾತುಗಳಿಂದ ಯಾರೂ ಆಶ್ಚರ್ಯಪಡಬೇಕಾದ್ದಿಲ್ಲ.

ಜರ್ಮನ್ ಮನೋವೃತ್ತಿ

ಮೇಲಿನ ಪತ್ರಗಳಿಂದ ಜರ್ಮನಿಯು ಯುದ್ಧಕ್ಕೆ ಹೆದರುವುದೆಂದು ವ್ಯಕ್ತವಾಗುವುದು. ನಾವು ಯಾವಾಗಲೂ ಒಂದು ಮಾತನ್ನು ನೆನಸಿನಲ್ಲಿಡಬೇಕು. ಏನಂದರೆ— ಒಂದು ಕಡೆ ಜರ್ಮನ್ ಜನಾಂಗ ಮತ್ತು ಸೈನ್ಯದಲ್ಲಿ ಅದ್ಭುತ ಶಿಸ್ತಿದೆ. ಇನ್ನೊಂದು ಕಡೆ ಅಲ್ಲಿ ಜಗತ್ತಿನಲ್ಲೆಲ್ಲಾ ವಿಖ್ಯಾತರಾದ ವಿಚಾರಶೀಲರಾದ ವ್ಯಕ್ತಿಗಳಿರುವರು. ಇವರು ಇಂದಲ್ಲ ನಾಳೆಯಾದರೂ ದಂಗೆ ಎದ್ದೇ ಏಳುವರು. ನಾನು ಜರ್ಮನ್ ಸಾಹಿತ್ಯವನ್ನು ಅಭ್ಯಾಸಮಾಡಿರುವುದಷ್ಟೇ ಅಲ್ಲದೆ, ನನ್ನ ಬಾಲ್ಯದಲ್ಲಿ ಅಲ್ಲಿ ಬಹಳ ದಿನಗಳನ್ನು ಕಳೆದಿರುವೆನು. ಜರ್ಮನಿಯ ಬುದ್ಧಿ ಕುಶಲತೆಯನ್ನು ನಾನು ಬಹಳವಾಗಿ ಪ್ರಶಂಸಿಸಿರುವೆನು. ಈಗಲೂ ಪ್ರಶಂಸಿಸುವೆನು. ಇಂತಹ ಉಚ್ಚಕೋಟಿ ಮಾನಸಿಕ ಶಕ್ತಿಯುಳ್ಳ ಯಹೂದ್ಯರ ದ್ವೇಷವೆಂಬ ಆಹಾರವನ್ನು ತಿಂದು ಪೋಷಿತವಾಗುತ್ತಿರುವುದು ಮಾತ್ರ ನನಗೆ ಬಹಳ ಅಸಹ್ಯವಾಗಿ ತೋರುವುದು. ಈ ಆಹಾರವು ಪಶುಗಳ ದರ್ಜೆಗಿಂತಲೂ ಕೀಳು ಮಟ್ಟದ್ದು.

ಬ್ರಿಟಿಷರ ವಿದೇಶ ನೀತಿ.

ಆಕ್ಸ್‌ಫರ್ಡ್ ವಿಶ್ವ ವಿದ್ಯಾಲಯದ ಕೆಲಸಗಾರರಾದ ಮಿ. ಎ. ಎಲ್. ರೂಸ್‌ರವರು "ಮ್ಯಾಂಚೆಸ್ಟರ್ ಗಾರ್ಡಿಯನ್"ಗೆ ಒಂದು ಪತ್ರ ಬರೆದಿರುವರು. ಇದರ ಶೈಲಿಯು ಬಹಳ ಕಟುವಾಗಿಯೇ ಇದೆ. ಅವರು ಹೇಳುವುದೇನಂದರೆ "ಇಂಗ್ಲೆಂಡಿನಲ್ಲಿ ಮೊದಲನೆ ಚಾರ್ಲ್ಸ್‌ಕಾಲದಿಂದ ಇದುವರೆಗೆ ಈಗಿನ ಪ್ರಧಾನರಂತಹ ಮತ್ತು ಈಗಿನ ವಿದೇಶೀ ಸಚಿವರಂತಹ ಅಯೋಗ್ಯರು ಎಂದಿಗೂ ಅಧಿಕಾರದಲ್ಲಿರಲಿಲ್ಲ. ಇಬ್ಬರು ಮಂತ್ರಿಗಳಿಂದ ಸರ್ ಜಾನ್ ಸ್ಟೈಮನ್ ಮತ್ತು ಸರ್. ಸ್ಯಾಮ್ಯುಯಲ್ ಹೋರ್-ವಿದೇಶೀ ಮಂತ್ರಿತ್ವವನ್ನು ಕಸಿದುಕೊಂಡಿರುವುದು ಅತ್ಯಂತ ವಿಚಿತ್ರ ವಿಚಾರ. ಆದರೂ ಅವರ ಕೈವಾಡವು ವಿದೇಶೀ ರೀತಿಯಲ್ಲಿ ಇದ್ದೇ ಇದೆ. 1931ರಿಂದ ಇವರ ನೀತಿಯಿಂದ ನಮಗೆ ನಷ್ಟವಾಗಿರುವಾಗ ನಾವು ಇವರನ್ನು ನಂಬುವುದು ಮೂರ್ಖತನ.

ಕನ್‌ಸರ್ವೆಟಿ ಪಕ್ಷದ ನಾಯಕತ್ವ

ಮಿ. ರೂಸ್‌ರು ಈ ರೀತಿ ಬರೆಯುತ್ತಾರೆ. ಮಿ. ಏಡನ್ ಮತ್ತು ಲಾರ್ಡ್ ಕ್ರೇನ್ ಬೋರ್ನ್‌ರಲ್ಲದೆ ಲಾರ್ಡ್ ಸಾಲ್ಸ್‌ಬರಿ, ಲಾರ್ಡ್ ಹ್ಯೂ, ಸೆಸಿಲ್ ಮತ್ತು ವೈಕಾಂಟ್ ಇವರು ಈ ಪಕ್ಷದ ಸಮರ್ಥಕರು ಇವರಲ್ಲದೆ ಮಿಡಫ್ ಕೂಪರ್, ಮಿ. ಚರ್ಚಿಲ್ ಇವರೂ ಸಹ ಇದರಲ್ಲಿರುವರು.

ಆರ್ಥಿಕನೀತಿ

ಮಿ. ಜಾರ್ಜ್‌ಲ್ಯಾನ್ಸಬರಿಯವರೂ ಮತ್ತು ಯುದ್ಧ ವಿರೋಧಿಗಳಾದವರೂ ಚೇಂಬರ್ಲೇನರ ಈ ರೀತಿಯನ್ನು ಹೊಗಳುತ್ತಿರುವರು. ಕಾರಣ ಅವರು ಭಾರಿ ಯುದ್ಧವೊಂದನ್ನು ನಿಲ್ಲಿಸಿದರೆಂದು ಆರ್ಥಿಕರೀತಿನೀತಿಯಲ್ಲಿಯೂ ಅವರಿಗೆ ಸ್ವಾತಂತ್ರ್ಯವನ್ನು ಕೊಟ್ಟು ವಾನ್‌ಜೀಲೆಂಡರ ರಿಪೋರ್ಟಿನ ಕಡೆ ಸೂಚಿಸುತ್ತಿರುವರು (ಇದು ಯೂರೋಪಿನ ವಿವಿಧ ಜನಾಂಗಗಳ ಸಲಹೆಯಂತೆ ತಯಾರಾದುದು) ಆದರೆ ಈಗ ಕಸದಬುಟ್ಟಿಗೆ ಬಿಸಾಡಲ್ಪಟ್ಟಿದೆ. ಆ ರಿಪೋರ್ಟಿನಲ್ಲಿ "ನಾವು ಈಗ ಅನುಸರಿಸುತ್ತಿರುವ ಆರ್ಥಿಕನೀತಿಯು ಸಫಲವಾಯಿತೆಂದರೆ ಜಗತ್ತಿನಲ್ಲಿ ಹೊಸದೊಂದು ಶಾಂತ ವಾತಾವರಣವೇ ಉಂಟಾಗುವುದು. ವಿಫಲವಾದಲ್ಲಿ ಜಗತ್ತಿಗೆ ಭಾರಿ ಆರ್ಥಿಕಸಂಕಟ ಬರುವುದು." ಎಂದು ನಮೂದಿಸಿದೆ.

ಶಸ್ತ್ರ ಸಂಗ್ರಹ

ಈ ಸಾರ್ವತ್ರಿಕ ಶಸ್ತ್ರಸಂಗ್ರಹ ಮತ್ತು ಗಡಿಬಿಡಿಯಿಂದ ಯಾವ ಹೊತ್ತಿನಲ್ಲಾದರೂ, ಕಾಲವು ವಿಷಮಿಸಬಹುದು. ಮತ್ತು 1929ರಿಂದ 1934ರ ವರೆಗಿದ್ದಂತೆ ವ್ಯಾಪಾರವು ಪುನಃ ಬಿದ್ದುಹೋಗಬಹುದು, ಆದರೆ ಯೂರೋಪಿನ ಯಾವ ಜನಾಂಗವೇ ಆಗಲಿ, ಮೇಲ್ಕಂಡ ರಿಪೋರ್ಟಿನ ವಿಚಾರದಲ್ಲಿಯಾಗಲಿ ಅಥವಾ ಜಗತ್ತಿನ ವರ್ತಮಾನಪರಿಸ್ಥಿತಿಯ ವಿಚಾರದಲ್ಲಾಗಲೀ ಸಾಕಷ್ಟು ವಿಮರ್ಶೆಯನ್ನು ಮಾಡಿಲ್ಲವೆಂದು ಹೇಳಬಹುದು.

ಹುಚ್ಚು ಜನಾಂಗಗಳು

ಇಂದು ಪಶ್ಚಿಮದ ರಾಷ್ಟ್ರಗಳು ಅನುಸರಿಸುತ್ತಿರುವ ರೀತಿಯನ್ನು ನೋಡಿದರೆ ಇವೆಲ್ಲಕ್ಕೂ ಹುಚ್ಚು ಹಿಡಿದಿರುವುದೆಂದು ತೋರುವುದು. ಈ ವಿಮಾನಗಳ ತಯಾರಿಯ ವಿಚಾರದಲ್ಲಿ ಲಾರ್ಡ್ ಬಾಲ್ಡವಿನ್ನರು ಇದನ್ನು ಒಪ್ಪಿರುವರು. ಆದಷ್ಟು ಬೇಗ ಜನರನ್ನು ಧ್ವಂಸಮಾಡಬಹುದಾದ ಆಯುಧಗಳನ್ನು ತಯಾರುಮಾಡಬೇಕೆಂಬುದೇ ಎಲ್ಲರಿಗೂ ಇರುವ ಚಿಂತೆ. ವಿಮಾನವನ್ನು ಸಿದ್ಧಗೊಳಿಸುವವರು ಅನಾಥರು, ಮುದುಕರು, ಮಕ್ಕಳು, ಹೆಂಗಸರು ಇವರನ್ನು ತೀವ್ರಗಮನದಿಂದ ನಾಶಗೊಳಿಸುವಂತಹ ವಿಮಾನಗಳ ತಯಾರಿಕೆಯಲ್ಲಿ ಮಗ್ನರಾಗಿರುವರು. ಕಣ್ಣುಮುಚ್ಚಿ ಬಿಡುವುದರೊಳಗೆ ಪಟ್ಟಣಕ್ಕೆ ಪಟ್ಟಣವೇ ಬೆಂದು ಬೂದಿಯಾಗಿ ಹೋಗಬೇಕು. ಇದಕ್ಕಿಂತಲೂ ಹೆಚ್ಚಿನ ಪಾಶವಿಕ ವರ್ತನೆಯು ದೊರೆಯುವುದೇ? ಇದಕ್ಕಿಂತ ಹೆಚ್ಚಿನ ನೈತಿಕ ಪತನವುಂಟೆ?

ಆದರೂ ಹುಚ್ಚರಂತೆ, ಉನ್ಮತ್ತರಂತೆ ಯೂರೋಪಿನ ಪ್ರಭುತ್ವಗಳು ಶಸ್ತ್ರಸಂಗ್ರಹಕಾರ್ಯದಲ್ಲಿ ಬಹಳವಾಗಿ ತೊಡಗಿರುವವು!

Established] [1906
THE
UNITED INDIA
LIFE ASSURANCE Co., LTD.
HEAD OFFICE—MADRAS.
Trustee:—The Official Trustee to the Government of Madras.

Policies in force exceed SIX Crores.
Annual income exceeds – Rs. 30 lakhs.
Total assets exceeds – Rs. 110 lakhs.
Total claims paid exceed Rs. 40 lakhs.

The oldest & largest life assurance company of South India accepted by the Government as satisfactory for the purpose of exemption from the operation of the Provident Fund Rules to Teachers in aided Schools & for the purpose of utilisation of P. F. Contributions for payment of premiums on the lives of Government Local Board & Municipal servants.
For further particulars please apply to:—
THE BRANCH MANAGER,
THE UNITED LIFE ASSURANCE COMPANY, LTD.,
FELIX PAI BAZAR, MANGALORE, S. K.
K. R. Hebbar, B.A., ORGANISER, UDIPI, S. K. *OR* K. Keshava Shenoy, M.A., ORGANISER, Pentlannpet, MANGALORE.

ಜನರು
ಯಥಾರ್ಥವಾಗಿಯೂ
ಒಪ್ಪಿಕೊಳ್ಳುತ್ತಾರೆ:—
ಸ್ವಸ್ತಿಕ
ಪರ್ಫ್ಯೂಮ್ಡ್ ಕೆಸ್ಟರಾಯಿಲ್
ಗುಣದಲ್ಲೂ ಪರಿಮಳದಲ್ಲೂ ಸ್ವದೇಶ ಅಥವಾ ವಿದೇಶದ ಯಾವ ಕೂದಲೆಣ್ಣೆಯನ್ನಾದರೂ ಸೋಲಿಸುವ ಅತ್ಯುತ್ತಮವಾದ ಹೇರ್ ಆಯಿಲ್ ಎಂದು-
ಎಲ್ಲೆಲ್ಲೂ ವಿಕ್ರಯಿಸಲ್ಪಡುತ್ತದೆ.
83

ಫೋನ್ ನಂ. 792 ॥ವಂದೇ ಮಾತರಂ॥ ಬಿಡಿ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಗುರುವಾರ ೬-೭-೫೦ [ಸಂಚಿಕೆ ೩೩

ಉ. ಕೊರಿಯದ ರಾಜಧಾನಿ ಮೇಲೆ ಅಮೆರಿಕನ್ನರ ಧಾಳಿ

ದಕ್ಷಿಣ ಕೊರಿಯಾ ಒಳಾಡಳಿತ ಮಂತ್ರಿಯು ಕೈ ಸೆರೆ

ದಕ್ಷಿಣ ಕೊರಿಯಾದ ಪ್ರಮುಖ ರೇವು ಪಟ್ಟಣವಾದ ಇಂಚ್ಯಾನನ್ನು ಉತ್ತರ ಕೊರಿಯನ್ನರು ಹಿಡಿದರು. ಮತ್ತು ಓಡಿ ಹೋಗುತ್ತಿರುವ ದಕ್ಷಿಣ ಸೈನ್ಯಗಳನ್ನು ಉತ್ತರದವರು ಅಟ್ಟಿಸಿಕೊಂಡು ಹೋಗುತ್ತಿದ್ದಾರೆ. ದಕ್ಷಿಣ ಕೊರಿಯಾ ಒಳಾಡಳಿತ ಮಂತ್ರಿಯಾದ ಕಿಂಪ್ಯೂ ಬಕ್ ರವರನ್ನು ಕೈಸೆರೆ ಹಿಡಿಯಲಾಗಿದೆ. ನಾರ್ವೆಯು ತನ್ನ ವ್ಯಾಪಾರಿ ಹಡಗುಗಳನ್ನು ದಕ್ಷಿಣ ಕೊರಿಯಾಕ್ಕೆ ಸಹಾಯಾರ್ಥವಾಗಿ ಕೊಡುವುದೆಂದು ತಿಳಿದುಬಂದಿದೆ. ಸದ್ಯದಲ್ಲೇ ಜನರಲ್ ಮೆಕಾರ್ಥರರನ್ನು ಪ್ರಪಂಚ ಸಂಸ್ಥೆಯ ಕೊರಿಯಾ ಕಮ್ಯಾಂಡರನ್ನಾಗಿ ನೇಮಿಸಲಾಗುವುದೆಂದು ವರದಿಯಾಗಿದೆ.

ಮಕ್ಕಳೊಡನೆ ಭಾವಿಗೆ ಬಿದ್ದು ಆತ್ಮಹತ್ಯೆ

ತುಮಕೂರಿನ ಗುಬ್ಬಿ, ಹೊಸಳ್ಳಿಗ್ರಾಮದಲ್ಲಿ ಮಧ್ಯ ವಯಸ್ಸಿನ ಹಿಂದೂ ಮಹಿಳೆಯೊಬ್ಬಳು ತನ್ನ ನಾಲ್ಕು ಮಕ್ಕಳನ್ನು ಭಾವಿಗೆ ನೂಕಿ ತಾನೂ ಬಿದ್ದು ಮರಣ ಹೊಂದಿದಳೆಂದು ವರದಿಯಾಗಿದೆ ನೆರೆಹೊರೆಯವರ ಪ್ರಯತ್ನದಿಂದ ಮೂರು ಮಕ್ಕಳು ಮಾತ್ರ ಬದುಕಿದವು.

ರುಮೇನಿಯದಲ್ಲಿ ಗೂಢಚಾರರಿಗೆ ಫಾಸಿ ಶಿಕ್ಷೆ

ರುಮೇನಿಯದಲ್ಲಿ ಗೂಢಚಾರ ಕೃತ್ಯ ನಡೆಸಿದ್ದಕ್ಕಾಗಿ ಇಬ್ಬರನ್ನು ಮರಣ ದಂಡನೆಗ ಗುರಿಪಡಿಸಲಾಗಿದೆ. ಒಬ್ಬ ಮಹಿಳೆಯೂ ಸೇರಿ ಐದು ಮಂದಿಗೆ ೭ ರಿಂದ ೨೫ ವರ್ಷ ಶಿಕ್ಷೆಯನ್ನು ವಿಧಿಸಲಾಗಿರುವುದಲ್ಲದೆ ಅವರ ಆಸ್ತಿ ಪಾಸ್ತಿಗಳನ್ನೂ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಕೊರಿಯಾ ಬಗ್ಗೆ ಮಧ್ಯಸ್ತಿಕೆಗೆ ಅಮೆರಿಕಾ ಸಿದ್ಧವಿಲ್ಲ

ಕೊರಿಯ ಯುದ್ಧ ಮುಕ್ತಾಯದ ಬಗ್ಗೆ ಭಾರತವು ನಡೆಸಬೇಕೆಂದಿರುವ ಮಧ್ಯಸ್ತಿಕೆ ವಿಷಯದ ಸುದ್ದಿಯು ಅಮೆರಿಕ ಸರ್ಕಾರಕ್ಕೆ ಮುಟ್ಟಿಲ್ಲವೆಂದೂ, ರಷ್ಯದೊಡನೆ ಈ ಬಗ್ಗೆ ಮಧ್ಯಸ್ತಿಕೆ ಮಾತುಕತೆಯನ್ನು ನಡೆಸುವ ಯುಕ್ತತೆಯು ಕಾಣಬರುತ್ತಿಲ್ಲವೆಂದೂ ಅಮೆರಿಕದ ವಿದೇಶಾಂಗ ಇಲಾಖಾ ಅಧಿಕಾರಿಯೊಬ್ಬರು ತಿಳಿಸಿರುತ್ತಾರೆ

ಕೊರಿಯಾ ಪತನವಾದರೆ ೩ನೇ ಮಹಾ ಯುದ್ಧವೇ ?

ಯುದ್ಧದಲ್ಲಿ ದಕ್ಷಿಣ ಕೊರಿಯವು ಸೋತು ಕಮ್ಯೂನಿಸ್ಟರ ವಶವಾದರೆ ಜಗತ್ತನ್ನು ಮೂರನೆ ಮಹಾ ಯುದ್ಧಕ್ಕೆ ತಳ್ಳಬೇಕಾಗುವುದೆಂದು ಬ್ರಿಟನ್ನಿನ ಮಾಜಿ ಮುಖ್ಯ ಮಂತ್ರಿ ಚರ್ಚಿಲ್ಲರು ಹೇಳಿದ್ದಾರೆ.

ಮೈಸೂರು ಬೆಂಗಳೂರು ರೇಷನ್ ಅಧಿಕಾರಿಗಳು

ಬೆಂಗಳೂರು ಮತ್ತು ಮೈಸೂರು ರೇಷನಿಂಗ್ ಅಧಿಕಾರಿಗಳು ನೇರವಾಗಿ ಆಹಾರ ಸರಬರಾಜಿನ ಡೈರೆಕ್ಟರಿಗೆ ಜವಾಬ್ದಾರರೆಂದೂ, ಇತರ ಪ್ರದೇಶಗಳಲ್ಲಿರುವ ಅಧಿಕಾರಿಗಳು ಆಯಾ ಜಿಲ್ಲಾಧಿಕಾರಿಗಳ ಮೇಲ್ವಿಚಾರಣೆಗೆ ಕೆಲಸಮಾಡಬೇಕೆಂದೂ ಸೂಚಿಸುವ ಆಜ್ಞೆಯನ್ನು ಸರ್ಕಾರದವರು ಮಾಡಿರುತ್ತಾರೆ.

ಸಂಸ್ಥಾನದ ಆಹಾರ ಬೆಳೆಗಾಗಿ ಕೇಂದ್ರದ ಗ್ರಾಂಟು, ಸಾಲ

ಸ್ವಂ. ಸು. ಪ್ರೋ] ಬೆಂಗಳೂರು ೬

೧೯೫೦-೫೧ನೇ ಸಾಲಿನಲ್ಲಿ ಆಹಾರ ಧಾನ್ಯದ ಬೆಳೆ ಹೆಚ್ಚಿಸುವ ಸಂಬಂಧವಾಗಿ ಸಂಸ್ಥಾನ ಸರ್ಕಾರದವರು ಕೇಂದ್ರದವರನ್ನು ಗ್ರಾಂಟು ಮತ್ತು ಸಾಲಕ್ಕಾಗಿ ಕೇಳಿದ ಬಗ್ಗೆ ಅದನ್ನು ಕೊಡಲು ಕೇಂದ್ರ ಸರ್ಕಾರದವರು ಒಪ್ಪಿರುವುದಾಗಿಯೂ, ಸಂಸ್ಥಾನ ಸರ್ಕಾರದವರು ೪೯ನೇ ಸಾಲಿನಲ್ಲಿ ಆಹಾರ ಬೆಳೆಯ ಯೋಜನೆಯಂತಹ ಕಾರ್ಯಕ್ರಮವನ್ನೇ ಇಟ್ಟುಕೊಳ್ಳಬೇಕೆಂದೂ ಸೂಚಿಸಿರುವುದಾಗಿಯೂ ತಿಳಿದುಬಂದಿದೆ

ಜನಗಣತಿಯಲ್ಲಿ ಸಹಕರಿಸದಿದ್ದರೆ ದಂಡ

ಬರುವ ಮಾರ್ಚಿ ೧ನೇ ತಾರೀಖು ದೇಶದಲ್ಲಾಗುವ ಜನಸಂಖ್ಯೆ ಲೆಕ್ಕದ ಸಂದರ್ಭದಲ್ಲಿ ನಾಗರೀಕ ಪ್ರಜೆಗಳಿಗೆ ಹಾಕಲಾಗುವ ಪ್ರಶ್ನೆಗಳಿಗೆ ಸಮಂಜಸವಾದ ಮತ್ತು ಸತ್ಯಾಂಶಗಳಿಂದ ಕೂಡಿದ ಉತ್ತರಗಳನ್ನು ಕೊಡದೆ ಇದ್ದವರಿಗೆ ೧೦೦೦ ರೂ. ಜುಲ್ಮಾನೆ ವಿಧಿಸಲಾಗುವುದೆಂದು ಸರ್ಕಾರಿ ಪ್ರಕಟಣೆಯು ತಿಳಿಸಿರುತ್ತದೆ.

ಟ್ರಾಲಿ ಬಸ್ ಯೋಜನೆ ವಜಾ

ಬೆಂಗಳೂರು ನಗರದಲ್ಲಿ ಟ್ರಾಲಿ ಬಸ್ಸನ್ನು ಏರ್ಪಡಿಸುವ ವಿಷಯದ ಬಗ್ಗೆ ಸರ್ಕಾರದವರು ತಯಾರಿಸುತ್ತಿದ್ದ ಯೋಜನೆಯನ್ನು ವಜಾ ಮಾಡಲಾಗಿದೆ. ಈ ಬಗ್ಗೆ ಏರ್ಪಟ್ಟಿದ್ದ ಸಿಬ್ಬಂದಿಯನ್ನು ಇಲಾಖೆಗೆ ವರ್ಗಾಯಿಸಲಾಗಿದೆ.

○ ಹೆಚ್. ಸಿ ದಾಸಪ್ಪನವರು ದೆಹಲಿಗೆ ಇಂದು ವಿಮಾನದಲ್ಲಿ ತೆರಳಿದರು.

○ ವಿಶ್ವವಿದ್ಯಾಲಯದವರು, ವಿದ್ಯಾರ್ಥಿಗಳಿಗೆ ಕೋರ್ಸುಗಳ ಜೋಡಣೆ ಬಗ್ಗೆ ೧೧ ಜನ ಸಮಿತಿಯನ್ನು ರಚಿಸಿದ್ದಾರೆ.

ರೈತರಿಗೆ ಗೊಬ್ಬರಕ್ಕೆ ಸರ್ಕಾರಿ ಸಾಲ

ಭತ್ತವನ್ನು ಬೆಳೆಯುವ ಸಲುವಾಗಿ ರೈತರು ಗೊಬ್ಬರವನ್ನು ಉಪಯೋಗಿಸಲು ಅವರಿಗೆ ಎಕರೆಗೆ ೨೫ರಿಂದ ೧೦೦ರೂಗಳ ವರಿಗೆ ಗೊಬ್ಬರದ ಸಾಲವನ್ನು ಕೊಡುವುದಾಗಿ ಸರ್ಕಾರದವರು ತೀರ್ಮಾನಿಸಿದ್ದಾರೆ. ತಾಲ್ಲೂಕಿನ ಅಮಲ್ದಾರರುಗಳ ಹತ್ತಿರ ಈ ಬಗ್ಗೆ ಅರ್ಜಿಗಳನ್ನು ಹಾಕಿಕೊಳ್ಳಬಹುದಾಗಿದೆ. ಈ ಸಾಲವನ್ನು ಭತ್ತದ ರೂಪದಲ್ಲಿ ವಾಪಸು ಕೊಡಬೇಕಾಗಿದೆ, ತಪ್ಪಿದರೆ ಪ್ರತಿ ೨೫ ರೂ. ಸಾಲಕ್ಕೆ ೫ ರೂ. ದಂಡವನ್ನು ಕೊಡಬೇಕಾಗುತ್ತದೆ.

ನಿಜಾಮರೂ ಸಹ ಅಪರಾಧಿಯಾಗಬೇಕೆಂದು ರಜ್ವಿ

ಮೀರ್ ಲಾಯಕ್ ಅಲಿ ಮಂತ್ರಿಮಂಡಲದ ಮೇಲೆ ಹೂಡಲಾಗಿರುವ ಮೊಕದ್ದಮೆಯಲ್ಲಿ ಆಪಾದಿತನಾದ ಖಾಸಿಂ ರಜ್ವಿಯು ಈ ಮೊಕದ್ದಮೆಯಲ್ಲಿ ನಿಜಾಮರನ್ನೂ ಸಹ ಒಬ್ಬ ಅಪರಾಧಿಯೆಂದು ಪರಿಗಣಿಸಬೇಕೆಂದು ಪ್ರಾರ್ಥಿಸಿದನು. ನ್ಯಾಯಾಸ್ಥಾನದವರು ರಜ್ವಿಯ ಸೂಚನೆಯನ್ನು ತಿರಸ್ಕರಿಸಿದರು.

ಕೇಂದ್ರದ ಉಪಮಂತ್ರಿಗಳಿಗೆ ೨೦೦೦ ರೂ. ವೇತನ

ಕೇಂದ್ರ ಸರ್ಕಾರದ ಡೆಪ್ಯುಟಿ ಮಂತ್ರಿಗಳ ನೇಮಕ ಮತ್ತು ಅವರ ಸಂಬಳದ ಬಗ್ಗೆ ರಾಷ್ಟ್ರಾಧ್ಯಕ್ಷರು ವಿಶೇಷ ಆಜ್ಞೆಯನ್ನು ಹೊರಡಿಸಿ, ಅವರಿಗೆ ೨೦೦೦ ರೂ.ಗಳ ವೇತನವನ್ನು ಕೊಡಲಾಗುವುದೆಂದು ಅಪ್ಪಣೆ ಮಾಡಿದ್ದಾರೆ. ಈ ಆಜ್ಞೆಯು ಕಳೆದ ಮೇ ತಿಂಗಳು ೫ ರಿಂದ ಜಾರಿಗೆ ಬಂದಿರುವುದಾಗಿ ತಿಳಿಸಲಾಗಿದೆ

ಕರಾಚಿ ನಿರಾಶ್ರಿತರಿಂದ ಮನೆಗಳ ಆಕ್ರಮಣ

ಪಾಕಿಸ್ತಾನದ ರೈಲ್ವೆ ಇಲಾಖೆಯವರು ತಮ್ಮ ನೌಕರರುಗಳಿಗಾಗಿ ಕಟ್ಟಿಸಿದ್ದ ೨೦೦ ಮನೆಗಳನ್ನು ನಿರಾಶ್ರಿತರು ಆಕ್ರಮಿಸಿರುವುದಾಗಿ ಕರಾಚಿಯಿಂದ ಸುದ್ದಿ ಬಂದಿದೆ.

ಕನ್ನಂಬಾಡಿ ನೀರಿನ ಮಟ್ಟ

ಕೃಷ್ಣರಾಜ ಸಾಗರದಲ್ಲಿ ಈ ದಿನ ನೀರು ೬೦-೭೫ ಅಡಿಯ ಮಟ್ಟದಲ್ಲಿದೆ. ಕಳೆದ ಭಾನುವಾರದಿಂದ ವಿಶ್ವೇಶ್ವರಯ್ಯ ನಾಲೆಯಿಂದ ನೀರನ್ನು ಬಿಡಲಾಗುತ್ತಿದೆ.

ಸರ್ಕಾರಿ ಕೆಳ ದರ್ಜೆ ನೌಕರಿಗೆ ಹಾಕುವ ಅರ್ಜಿಗಳಿಗೆ ಫೀಜು

ಸಂಸ್ಥಾನ ಸರ್ಕಾರದ ಕೆಳ ದರ್ಜೆ ನೌಕರಿ ಮತ್ತು ಪಾರಿಭಾಷಿಕವಲ್ಲದ ಇತರ ನಾನ್ ಗೆಜೆಟೆಡ್ ಹುದ್ದೆಗಳಿಗೆ ದಾಖಲಾಗುವ ಮತ್ತು ಒಂದು ಹುದ್ದೆಯಿಂದ ಮತ್ತೊಂದು ಹುದ್ದೆಗೆ ಬದಲಾಯಿಸಿಕೊಳ್ಳಲು ಬರುವ ಅರ್ಜಿಗಳ ಮೇಲೆ ಇನ್ನು ಮುಂದೆ ಶುಲ್ಕವನ್ನು ವಿಧಿಸಲಾಗುವುದೆಂದು ಸರ್ಕಾರಿ ಪ್ರಕಟಣೆಯೊಂದು ತಿಳಿಸುತ್ತದೆ. ಅಲ್ಲದೆ ಈ ಬಗ್ಗೆ ಉಮೇದುವಾರರನ್ನಾಗಿ ಆರಿಸಿಕೊಳ್ಳುವುದಕ್ಕಾಗಿ ಸ್ಪರ್ಧಾ ಪರೀಕ್ಷೆ ನಡೆಸುವ ಯೋಜನೆಯೂ ಸರ್ಕಾರಕ್ಕಿದೆಯೆಂದು ಹೇಳಲಾಗಿದೆ.

ಅಮೆರಿಕದ ಸೈನ್ಯದ ಭಾಗ ಚದುರಿಸಲ್ಪಟ್ಟಿತು

ಉತ್ತರ ಕೊರಿಯದ ಸೈನಿಕರು ಭಾರಿ ಟ್ಯಾಂಕುಗಳನ್ನು ಹೂಡಿ, ಸುವಾನ್ ರಣರಂಗದ ಪೂರ್ವ ಭಾಗದಲ್ಲಿ ರಕ್ಷಣೆಗಾಗಿ ನಿಂತಿದ್ದ ಅಮೆರಿಕದ ಸೈನ್ಯ ವಿಭಾಗವನ್ನು ಇತರ ಸೈನ್ಯಗಳಿಂದ ಚದುರಿಸಿದ್ದಾರೆ. ದ. ಕೊರಿಯದ ಮುಖ್ಯ ರೇವಾದ ಇಂಚೋನ್ ಎಂಬುದನ್ನು ಹಿಡಿಯಲಾಗಿದೆ. ರಕ್ಷಣೆಯ ಸೈನ್ಯಗಳು ಅಲ್ಲಿದ್ದ ಬೆಟ್ಟ ಪ್ರದೇಶದ ಆಶ್ರಯ ಹೊಂದಿವೆ. ಯೂರೋಪಿಗೆ ಒದಗಿಸಲಾಗುತ್ತಿದ್ದ ಶಸ್ತ್ರಾಸ್ತ್ರಗಳನ್ನು ಈಗ ಅಮೆರಿಕವು ಕೊರಿಯಾಕ್ಕೆ ಕಳುಹಿಸುವುದಾಗಿದೆ. ಉತ್ತರ ಕೊರಿಯದ ರಾಜಧಾನಿ ಪ್ಯೊಂಗ್ಯಾಯಾಂಗ್ ಮೇಲೆ ಅಮೆರಿಕದ ವಿಮಾನಗಳು ಭೀಕರ ಧಾಳಿ ನಡೆಸಿವೆ. ೮ ಉ. ಕೊರಿಯ ವಿಮಾನಗಳ ನಷ್ಟವಾಗಿದೆ. ಈಜಿಪ್ಟ್ ಕೊರಿಯ ಯುದ್ಧದ ಬಗ್ಗೆ ಹೊಂದಿರುವ ನೀತಿಯನ್ನು ಬದಲಿಸಬೇಕೆಂದು ಅಮೆರಿಕವು ಕೇಳಿದೆ ಸಿರಿಯವು ಈ ಯುದ್ಧದಲ್ಲಿ ತಾಟಸ್ಥ್ಯ ವಹಿಸುವುದು.

ನಾಯಿ ಓಡಿಸ ಹೋದ ಬಾಲಕ ಗುಂಡಿಗೆ ಬಲಿ

ಮದ್ರಾಸಿನ ಪೈಲಟ್ ಇಲಾಖೆ ಮುಖ್ಯಾಧಿಕಾರಿ ಲೆ॥ ಕ॥ ಗಿಲ್ ರವರ ೧೯ ವರ್ಷದ ಮಗ ಮಹೇಂದ್ರನು ತಮ್ಮ ಮನೆಯ ತೋಟದಲ್ಲಿ ಬಂದೂಕ ಹಿಡಿದು ನಾಯನ್ನು ಓಡಿಸಿಕೊಂಡು ಹೋಗುತ್ತಿದ್ದಾಗ ಆಕಸ್ಮಾತ್ ಬಂದೂಕವು ಹಾರಿ ಗುಂಡು ಅವನ ಹೊಟ್ಟೆಯಲ್ಲಿ ಹೊಕ್ಕಿತು. ಆಸ್ಪತ್ರೆಗೆ ಕೂಡಲೆ ಸೇರಿಸಿದಾದಾಗ್ಯೂ ಹುಡುಗನು ಬದುಕಲಿಲ್ಲ.

ಕೊರಿಯಾ ಬಗ್ಗೆ ಭಾರತದ ಮಧ್ಯಸ್ತಿಕೆಯಿಲ್ಲ

ಕೊರಿಯ ಯುದ್ಧದ ಬಗ್ಗೆ ಭಾರತವು ಮಧ್ಯಸ್ತಿಕೆ ವಹಿಸುವುದಾಗಿ ಸೂಚಿಸಿರುವುದು ನಿಜವಲ್ಲವೆಂದು ಭದ್ರತಾ ಸಮಿತಿಯ ಭಾರತದ ಪ್ರತಿನಿಧಿ ಸರ್ ಬಿ ಎನ್. ರಾಯರವರು ತಿಳಿಸಿದ್ದಾರೆ.

ದಕ್ಷಿಣ ಮಲಕ್ಕಾ ದ್ವೀಪದಲ್ಲಿ ಯುದ್ಧ ಸ್ಥಿತಿ

ಅಂಬಾಯ್ನ ಸುತ್ತಲೂ ಇರುವ ದಕ್ಷಿಣ ಮಲಕ್ಕಾ ದ್ವೀಪಗಳಲ್ಲಿ ಯುದ್ಧ ಪರಿಸ್ಥಿತಿಯುಂಟಾಗಿದೆಯೆಂದು ಇಂಡೋನೇಷ್ಯ ಸರ್ಕಾರದವರು ಘೋಷಿಸಿರುವರು.

ಪೂರ್ವ ಬಂಗಾಳದಿಂದ ಪುನಃ ಹಿಂದುಗಳ ಯಾತ್ರೆ

ಪೂರ್ವ ಬಂಗಾಳದಿಂದ ಹಿಂದುಗಳು ಪುನಃ ಭಾರತಕ್ಕೆ ಬರುವುದು ಕೆಲವು ದಿನಗಳಿಂದ ಹೆಚ್ಚಾಗುತ್ತಿರುವುದಾಗಿ ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಡಾ॥ ಬಿ. ಸಿ. ರಾಯ್‌ರವರು ಹೇಳಿದ್ದಾರೆ. ಇದರಿಂದ ಪಶ್ಚಿಮ ಬಂಗಾಳ ಸರ್ಕಾರಕ್ಕೆ ಆತಂಕವಾಗಿದೆಯೆಂದು ಹೇಳಲಾಗಿದೆ

ವಿಶ್ವ ಸಂಸ್ಥೆಯ ಅಧಿವೇಶನಕ್ಕೆ ರಷ್ಯದ ಬಹಿಷ್ಕಾರ

ವಿಶ್ವಸಂಸ್ಥೆಯ ಸಾಧಾರಣ ಸಭೆಯಲ್ಲಿ ಭಾಗವಹಿಸುವುದಿಲ್ಲವಾಗಿ ರಷ್ಯವು ಆ ಸಂಸ್ಥೆಯ ಕಾರ್ಯದರ್ಶಿಗೆ ತಿಳಿಸಿದೆ

ವನಮಹೋತ್ಸವ

ರಾಜಧಾನಿಯ ಕೃಷ್ಣರಾಜ ಮೊಹಲ್ಲಾದಲ್ಲಿರುವ ಪೌರಸಭೆಯ ಕರ್ಣಾಟಕ ಆಸ್ಪತ್ರೆ (ಮುನಿಸಿಪಲ್ ಆಯುರ್ವೇದ ಆಸ್ಪತ್ರೆ)ಯ ಪ್ರಾಕಾರದಲ್ಲಿ ನಾಳೆ ಬೆಳಿಗ್ಗೆ ೯ ಗಂಟೆಗೆ ವನ ಮಹೋತ್ಸವವನ್ನು ಪೌರಸಭಾಧ್ಯಕ್ಷರಾದ ಶ್ರೀ ಪಿ. ಎಸ್. ಲಿಂಗಣ್ಣನವರು ನೆರವೇರಿಸುವರು.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ತಾ. 23-4-1939

ಭಜನೆ ಮಂಡಳಿಯ ವಾರ್ಷಿಕೋತ್ಸವ— [illegible] ತಾ. 16ರಲ್ಲಿ ನಡೆಯಿತು. ಶ್ರೀ [illegible] ಶ್ರೀ. ಬಿ. [illegible] ಮೊದಲಾದವರು ಭಾಷಣಮಾಡಿದರು.

ನಗರ ಸಭೆ— ಕಳೆದ ತಾ. 19ನೇ ಸಂಜೆ ಶ್ರೀ. ಬಿ. ಬಿ. [illegible] ಅಧ್ಯಕ್ಷತೆಯಲ್ಲಿ ಸೇರಿದ ನಗರಸಭೆಯಲ್ಲಿ [illegible]

ಆಗಮನ— [illegible] ವೈದ್ಯ ಸಮ್ಮೇಳನದ ಉದ್ಘಾಟನೆ ಮಾಡುವುದಕ್ಕಾಗಿ [illegible] ಡಾ. ಎ. [illegible] ತಾ. 21ರಲ್ಲಿ ಮಂಗಳೂರಿಗೆ ಬಂದರು. [illegible] ತಾ. 22ರಲ್ಲಿ [illegible]

[illegible] ವೈದ್ಯ ಸಮ್ಮೇಳನ— ತಾ. 21ನೇ [illegible] ವೈದ್ಯ ಸಮ್ಮೇಳನದ [illegible] ಉದ್ಘಾಟನೆ ಮಾಡಿದರು.

[illegible] ತಾ. 22ರಲ್ಲಿ [illegible]

Commonwealth Assurance Co., Ltd., Poona.

ಬೋನಸ್ಸು ದರವು 20% ಹೆಚ್ಚಿದೆ

30—4—38ರ

ಮೂರನೇ ವ್ಯಾಲ್ಯುಯೇಷನ್ ಫಲಿತಾಂಶ

ಜೀವಾವಧಿ	ತ್ರೈವಾರ್ಷಿಕ	ಎಂಡೋಮೆಂಟ್
ರೂ. 54—0—0	ಬೋನಸ್ಸು ಸಾವಿರಕ್ಕೆ	ರೂ 45—0—0

ಕಾಮನ್ ವೆಲ್ತ್

ಏಜನ್ಸಿ ಮತ್ತು ಪಾಲಿಸಿ ವಿವರಗಳಿಗೆ ಇಂದೇ ಬರೆಯಿರಿ.

ಕಾಮನ್‌ವೆಲ್ತ್ ಆಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ.

ಗವಾಂಕರ್ ಅಂಡ್ ಸನ್ಸ್,

ಚೀಫ್ ಏಜಂಟ್ಸ್: **ಆನಂದರಾವ್ ಸರ್ಕಲ್, ಬೆಂಗಳೂರು.**

ಬೊಂಬಾಯಿ

ಸಾಕ್ಷರತಾ ಪ್ರಚಾರ—ಸಾಕ್ಷರತಾ ಪ್ರಚಾರ ಸಮಿತಿ ಕನ್ನಡ ಶಾಖೆ ಮತ್ತು ಕರ್ನಾಟಕ ವಿದ್ಯಾರ್ಥಿ ಸಂಘ ಇವರ ಸಂಬಂಧ ಬಹು ದೊಡ್ಡ ಸಭೆಯೊಂದು ಕಳೆದ ರವಿವಾರ ರಾತ್ರಿ 8 ಘಂಟೆಗೆ ಗೋವಾ ಸ್ಟ್ರೀಟಿನಲ್ಲಿ ನಡೆಯಿತು. ಶ್ರೀ. ರಂಗಾಚಾರ್ಯ ಅ[illegible] ಮುಂಬಯಿ ಸರಕಾರದ ಸ್ಪೀಕರ್ ಇವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು, ದಿನಕರ್ ದೇಸಾಯಿ, ಕಾಮತ್, ಹಿಂಡೆ, ಶೆಟ್ಟಿ ಮೊದಲಾದವರ ಭಾಷಣಗಳಾದ ನಂತರ ಅಧ್ಯಕ್ಷರು ತಮ್ಮ ಗಂಭೀರ ಭಾಷಣದ ಮಧ್ಯೆ ಕನ್ನಡಿಗರಿಗೆ ದೊರಕಿದ ಈ ಸುಸಂದರ್ಭವನ್ನು ವ್ಯರ್ಥಗೊಳಿಸದೆ ಇದರ ಸದುಪಯೋಗ ಮಾಡಿಕೊಂಡು 100ರಲ್ಲಿ 100ಮಾಲು ಕನ್ನಡಿಗರು ವಿದ್ಯಾಭ್ಯಾಸಪೂರ್ಣರಾಗುವಂತೆ ಪ್ರಯತ್ನಿಸಬೇಕೆಂದು ಕೇಳಿಕೊಂಡರು. ಶ್ರೀ. ಸಾಲಿಯಾನ್‌ರವರ ವಂದನಾರ್ಪಣೆಯೊಡನೆ ಸಭಾಂತ್ಯವಾಯಿತು.

ಗುರುವಾರ ದಿವಸ ಜರಗಿದ ಸಭೆಯಲ್ಲಿ ಶ್ರೀ. ಬ್ರೈ[illegible]ರು ಸಾಕ್ಷರತೆಯ ಕುರಿತು ಹೀಗೆಂದರು. ಭಾರತವು ಇಷ್ಟು ಹೀನ ಸ್ಥಿತಿಯಲ್ಲಿರಲು ಕಾರಣವೇನೆಂದರೆ, ಹೆಚ್ಚಿನ ಜನರು ಅವಿದ್ಯಾವಂತರಾಗಿರುವುದೇ. ಪಶ್ಚಿಮದೇಶಗಳಲ್ಲಿ ಜನರೆಲ್ಲ ಮುಂದರಿಯುತ್ತಿರಲು, ಭಾರತದಲ್ಲಿ 100ರಲ್ಲಿ 8ಮಂದಿಗೂ ಸರಿಯಾಗಿ ಓದಲು ಬರೆಯಲು ಬರುವುದಿಲ್ಲ. ಆಂಗ್ಲ ಸರಕಾರವು ತನ್ನ 100ವರ್ಷದ ಆಡಳಿತದಲ್ಲಿಯೂ ಈ ಅವಿದ್ಯತೆಯನ್ನು ಹೋಗಲಾಡಿಸಲು ಪ್ರಯತ್ನಿಸಿಲ್ಲ.

ಹೋಟೆಲ್ ಕೆಲಸಗಾರರ ಮೆರವಣಿಗೆ

ಸುಮಾರು 2000 ಹೋಟೆಲ್ ಕೆಲಸಗಾರರು ತಮ್ಮ ಸಂಕಷ್ಟಗಳನ್ನು ಸರಕಾರಕ್ಕೆ ತಿಳಿಸಬೇಕೆಂದು ಬುಧವಾರ ದಿವಸ ಬಹು ದೊಡ್ಡ ಮೆರವಣಿಗೆ ಮಾಡಿಕೊಂಡು ಅಸೆಂಬ್ಲಿ ಗೃಹಕ್ಕೆ ಹೋದರು. ಇವರು ಎಲ್ಫಿನ್‌ಸ್ಟನ್ ಸರ್ಕಲಿನ ಹೋಗುವಾಗ ಪೋಲೀಸರು ಇವರನ್ನು ತಡೆದು ಮುಂದೆಹೋಗಲು ಬಿಡದಿರಲು, ಇವರು ತಮ್ಮ ಪ್ರತಿನಿಧಿಗಳನ್ನು ಅಸೆಂಬ್ಲಿಗೆ ಕಳುಹಿಸಿದರು, ಇವರು ಶ್ರೀ. ನಂದರವರನ್ನು ಅಲ್ಲಿ ನೋಡಿದ ನಂತರ ಶ್ರೀ. ನಂದರವರು ಈ ವಿಷಯಗಳನ್ನು ಮುಖ್ಯ ಮಂತ್ರಿಯವರಿಗೆ ತಿಳಿಸುತ್ತೇನೆಂದು ಹೇಳಲು ಇವರು ತಮ್ಮ ಮುಂಚಿನ ಸ್ಥಳಕ್ಕೆ ಬಂದು ಸಭೆಮಾಡಿದರು. ಶ್ರೀಗಳಾದ ನಿಂಬಕರ, ಎನ್. ಎಲ್. ಉಪಾಧ್ಯಾಯ ಮತ್ತು ಮಿಂಕರ್ ಮೊದಲಾದವರೆಲ್ಲ ಶ್ರೀ. ನಂದರೊಡನೆ ನಡೆದ ಮಾತುಕತೆಗಳನ್ನು ವಿವರಿಸಿದರು.

ಉಡುಪಿ

ವಿವಾಹ ಸಮಾರಂಭ—ಪ್ರಸಿದ್ಧ ಗೌಡ ಸಾರಸ್ವತ ಮನೆತನದವರೂ ಹನುಮಾನ್ ಟ್ರಾನ್ಸ್‌ಪೋರ್ಟ್ ಮೋಟರ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರೂ ಪ್ರಸಿದ್ಧ ಸಾಹುಕಾರರೂ ಆದ ಶ್ರೀ. ಪಾಂಗಾಳ ಉಪೇಂದ್ರ ಶ್ರೀನಿವಾಸನಾಯ್ಕರ ತಂಗಿ (ದಿವಂಗತ ಪಾಂಗಾಳ ಶ್ರೀನಿವಾಸ ನಾಯ್ಕರ ಪುತ್ರಿ) ಸೌ. ಸುನಂದಾಬಾಯಿಯನ್ನು ಪುತ್ತೂರು ವಕೀಲ್ ಶ್ರೀ. ಬಿ. ಅಚ್ಯುತ ಬಾಳಿಗರ ಮಗ ಶ್ರೀ. ನಾರಾಯಣ ಬಾಳಿಗರು ತಾ. 22-4-39ರಲ್ಲಿ ಶ್ರೀ. ಉಪೇಂದ್ರನಾಯ್ಕರ ಅಜ್ಜರಕಾಡು ಬಿಡಾರದಲ್ಲಿ ವಿವಾಹವಾದರು. ಈ ಸಂದರ್ಭದಲ್ಲಿ ತಾ. 23-4-39ನೇ ಸಂಜೆ ಸಾವಿರಾರು ಜನರಿಗೆ ಟೀಪಾರ್ಟಿ ಸತ್ಕಾರವನ್ನಿತ್ತರು.

ವಸಂತ ಸಾಹಿತ್ಯೋತ್ಸವ— ಬೆಂಗಳೂರು ಕರ್ನಾಟಕ ಸಾಹಿತ್ಯ ಪರಿಷತ್ತಿನವರು ನಡೆಸುವ ವಸಂತ ಸಾಹಿತ್ಯೋತ್ಸವವು ಮೇತಿಂಗಳ 3ನೇ ವಾರದಲ್ಲಿ ಇಲ್ಲಿ ಜರಗಲಾಗುವುದೆಂದು ತಿಳಿಯುತ್ತದೆ.

ಬೇಲೂರು ಕೇಶವ ದಾಸರ ಆಗಮನ

ಶ್ರೀ. ಬೇಲೂರು ಕೇಶವ ದಾಸರು ಉಡುಪಿಗೆ ದಯಮಾಡಿಸಿ ಶ್ರೀಕೃಷ್ಣಮಠದಲ್ಲಿಯೂ ಶ್ರೀ. ಪೇಜಾವರ ಮಠದಲ್ಲೂ ಹರಿಕಥಾ ಕಾಲಕ್ಷೇಪವನ್ನು ಬಹು ಸ್ವಾರಸ್ಯವಾಗಿ ಮಾಡಿದರು.

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಮೈಸೂರು ಏಪ್ರಿಲ್ ೨೩

ಬೇಸಿಗೆಯ ಶಿಕ್ಷಣ—ಮೈಸೂರು ಸಂಸ್ಥಾನದ ಎಲ್ಲಾ ಹೈಸ್ಕೂಲುಗಳಿಂದ ಆರಿಸಿದ ಕೆಲವು ಉಪಾಧ್ಯಾಯರುಗಳಿಗೆ ಬೇಸಗೆಯ ರಜಾದಿನಗಳಲ್ಲಿ ಇಂಗ್ಲಿಷ್, ಕನ್ನಡ ಚರಿತ್ರೆ ಮತ್ತು ಇತರ ವಿಷಯಗಳ ಮೇಲೆ ಪಾಠಗಳನ್ನು ಹೇಳಿಕೊಡುವ ಏರ್ಪಾಡನ್ನು ಮೈಸೂರು ವಿಶ್ವವಿದ್ಯಾನಿಲಯದವರು ಕೈಕೊಂಡಿದ್ದಾರೆ. ಈ ಕಾರ್ಯವು ಮೈಸೂರು ಬೆಂಗಳೂರುಗಳಲ್ಲಿ ನಡೆಯುತ್ತದೆ. ಇದರ ಸಲುವಾಗಿ ರಾಜಧಾನಿಗೆ ವಿವಿಧ ಊರುಗಳಿಂದ ಒಂದುನೂರು ಉಪಾಧ್ಯಾಯರುಗಳು ಬಂದಿದ್ದಾರೆ.

ಸಾಕ್ಷರತಾ ಪ್ರಚಾರ — ತುಮಕೂರು ಜಿ॥ ವಿದ್ಯಾರ್ಥಿಸಂಘದ ಆಶ್ರಯದಲ್ಲಿ ಸಾಕ್ಷರತಾ ಪ್ರಚಾರಕಾರ್ಯವು, ಬಸವಾಪುರ ಎಂಬ ಗ್ರಾಮದಲ್ಲಿ ಮೈಸೂರು ಸಂಸ್ಥಾನದ ವಿದ್ಯಾರ್ಥಿಸಂಘದ ಅಧ್ಯಕ್ಷರಾದ ಶ್ರೀ. ಕೆ. ಜಯಸಿಂಹ ರಾಯರಿಂದ ನೆರವೇರಿಸಲಾಯಿತೆಂದು ತಿಳಿದುಬಂದಿದೆ. ಇನ್ನು ಮುಂದೆ ದೇಶದಲ್ಲಿ ಎಲ್ಲ ಜನರನ್ನು ಅಕ್ಷರಸ್ಥರನ್ನಾಗಿ ಮಾಡಲು ಇದೇ ಪ್ರಯೋಗವೆನ್ನಬಹುದು.

ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿ—ಮೈಸೂರು ಕಾಂಗ್ರೆಸಿನ ಪುನರ್ರಚಿತ (ವರ್ಕಿಂಗ್ ಸಮಿತಿಯ) ಸದಸ್ಯರಿವರುಗಳು—ಶ್ರೀ. ಯಸ್. ಚೆನ್ನಯ್ಯ (ಮೈಸೂರು ನಗರ) ಶ್ರೀ. ಯಸ್. ರಂಗರಾಮಯ್ಯ (ಮೈಸೂರು ಜಿಲ್ಲೆ) ಶ್ರೀ. ವಿ. ವೆಂಕಟಪ್ಪ (ಬೆಂಗಳೂರು ಜಿಲ್ಲೆ), ಶ್ರೀ. ಟಿ. ಸುಬ್ರಮ್ಮಣ್ಯಂ (ತುಮಕೂರು ಜಿಲ್ಲೆ) ಶ್ರೀ. ಹೆಚ್. ವಿ. ರಂಗಸ್ವಾಮಿ (ಹಾಸನ ಜಿಲ್ಲೆ) ಶ್ರೀ. ಗೋವಿಂದರೆಡ್ಡಿ (ಚಿತ್ರದುರ್ಗದ ಜಿಲ್ಲೆ) ಮತ್ತು ಶ್ರೀ. ಕೆ. ಟಿ. ಸತ್ಯನಾರಾಯಣ ಶೆಟ್ಟಿ (ಕಡೂರು ಜಿಲ್ಲೆ)

ಇವರುಗಳು ಚುನಾವಣೆಯಲ್ಲಿ ಗೆದ್ದವರೆಂದೂ, ಶಿವಮೊಗ್ಗ ಜಿಲ್ಲೆಯ ಮತ್ತು ಬೆಂಗಳೂರು ನಗರದ ಪ್ರತಿನಿಧಿಗಳು ಇನ್ನೂ ಚುನಾಯಿತರಾಗಿಲ್ಲವೆಂದೂ ಅಧ್ಯಕ್ಷರು ತಮ್ಮ ನಾಮನೇಶನ್‌ನನ್ನು ಸದ್ಯದಲ್ಲೇ ಕಳುಹಿಸುವರೆಂದು ಗೊತ್ತಾಗಿದೆ.

ಜಿಲ್ಲಾ ಸಮ್ಮೇಳನ—ದ್ವಿತೀಯ ಸಚಿವರಾದ ಶ್ರೀ. ಕೆ. ವಿ. ಅನಂತರಾಮನ್‌ರವರ ಅಧ್ಯಕ್ಷತೆಯಲ್ಲಿ, ನಿನ್ನೆಯ ದಿನ ಮೈಸೂರು ಜಿಲ್ಲಾ ಸಮ್ಮೇಳನವು ರಂಗಾಚಾರ್ಲು ಸ್ಮಾರಕ ಭವನದಲ್ಲಿ ನಡೆಯಿತು. ಜಿಲ್ಲೆಗೆ ಸಂಬಂಧಪಟ್ಟ ಮುಖ್ಯ ವಿಷಯಗಳನ್ನು ಚರ್ಚಿಸಲಾಯಿತು.

ವಸಂತ ಸಾಹಿತ್ಯೋತ್ಸವ— ಬೆಂಗಳೂರು ಕರ್ನಾಟಕ ಸಾಹಿತ್ಯ ಪರಿಷತ್ತಿನವರು ನಡೆಸುವ ಕನ್ನಡ ವಸಂತ ಸಾಹಿತ್ಯೋತ್ಸವವನ್ನು ಈ ಬಾರಿ ಐದುಕಡೆಗಳಲ್ಲಿ ನಡೆಸುವಂತೆ ಏರ್ಪಾಡುಮಾಡಲಾಗಿದೆ. ಬೆಂಗಳೂರಿನಲ್ಲಿ ನಡೆಯುವ ಈ ಉತ್ಸವದ ಆರಂಭೋತ್ಸವವು ಶ್ರೀ. ಪ್ರಿನ್ಸ್ ಜಯ ಚಾಮರಾಜ ಒಡೆಯರ್‌ರವರಿಂದ ನಡೆಸಲಾಗುವುದೆಂದು ತಿಳಿದುಬಂದಿದೆ.

ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.

(ಬ್ಯಾಂಕರ್ಸ್)

ಡೈರೆಕ್ಟರರು:—
1 ಶ್ರೀ ಮಹಾಲ ನರಸಿಂಹಾಚಾರ್, (ಚೆಯರ್‌ಮೆನ್)
2 ಡಾ. ಟಿ. ಮಾಧವ ಪೈ, ಎಂ. ಬಿ. ಎಂಡ್ ಬಿ. ಎಸ್.
3 ಡಾ. ಕೆ. ಎಲ್. ಐತಾಳ, ಎಂ. ಬಿ. ಎಂಡ್. ಬಿ. ಎಸ್.
4 ಶ್ರೀ ಬಿ. ಕೃಷ್ಣಯ್ಯ ಹೆಗ್ಡೆ
5 ಶ್ರೀ ಎ. ಬಿ. ಕೃಷ್ಣರಾಜ
6 ಶ್ರೀ ಎಸ್. ಯು. ಪಣಿಯಾಡಿ (ಮೆನೇಜಿಂಗ್ ಡೈರೆಕ್ಟರ್)

ಈ ಕೆಳಗಿನ ಯಾವುದಾದರೊಂದು ಸ್ಕೀಮಿಗೆ ಸೇರಿರಿ.

1 ಇಂಪೀರಿಯಲ್ ಕ್ಯಾಶ್ ಸರ್ಟಿಫಿಕೇಟು
2 ಸೇವಾ ಎಸ್ ಯು ಸ್ಕೀಮ್ ಡಿಪಾಜಿಟ್
3 ದೀನಬಂಧು ನಿಧಿ
4 ಇಂಡಸ್ಟ್ರಿಯಲ್ ಡಿಪಾಜಿಟ್
5 ಅಂತರಂಗ ಡಿಪಾಜಿಟ್

ವಿವರಗಳಿಗೆ ಮೆನೇಜಿಂಗ್ ಡೈರೆಕ್ಟರರಿಗೆ ಬರೆಯಿರಿ.

ಜನರಲ್ ಸಪ್ಲೈಸ್ ಲಿಮಿಟೆಡ್.

ಪ್ರಿಂಟರ್ಸ್, ಪಬ್ಲಿಷರ್ಸ್, ಜನರಲ್ ಮರ್ಚೆಂಟ್ಸ್ ಇತ್ಯಾದಿ.

ಉಡುಪಿ.

ಡೈರೆಕ್ಟರರು:—
1. ಡಾ॥ ಕೆ. ಎಲ್. ಐತಾಳ, ಎಂ. ಬಿ. ಎಂಡ್ ಬಿ. ಎಸ್. (ಚೆಯರ್‌ಮೆನ್)
2. ಶ್ರೀ ಆರ್. ಎಸ್. ಶೆಣೈ
3. „ ಕೆ. ಹೊನ್ನಯ್ಯ ಶೆಟ್ಟಿ
4. „ ಎಸ್. ಗುರುರಾಜ ಉಡುಪ
5. „ ಯಸ್ ಯು. ಪಣಿಯಾಡಿ, (ಮೆನೇಜಿಂಗ್ ಡೈರೆಕ್ಟರ್)

ಈ ಕೆಳಗಿನ ಸಂಸ್ಥೆಗಳಲ್ಲಿ ಎಲ್ಲಾ ತರದ ಮುದ್ರಣ, ಚಿಲ್ಲರೆ ಮತ್ತು ರಖಂ ಕ್ರಯ ವಿಕ್ರಯ ಎಲ್ಲಾ ವಿಧದ ಏಜನ್ಸಿ ವ್ಯಾಪಾರಾದಿಗಳನ್ನು ಕೈಕೊಳ್ಳಲಾಗುವುದು.

ತುಳುನಾಡ್ ಪ್ರೆಸ್, ಮಣಿಪಾಲ ಪವರ್ ಪ್ರೆಸ್, ಶ್ರೀ. ಭಾರತವಸ್ತು ಮಂದಿರ, ತುಳುನಾಡ್ ಸ್ಟೇಶನರಿ ಮಾರ್ಟ್.

ವಿಶೇಷ ಮಾಹಿತಿಗೆ ಮೆನೇಜಿಂಗ್ ಡೈರೆಕ್ಟರರಿಗೆ ಬರೆಯಿರಿ.

The Tropical Insurance
CO., LTD., DELHI.

Chairman: Sjt. SUBASH CHANDRA BOSE.
(Congress President)

Founder Directors: PANDIT MOTILAL NEHRU, DR. M. A. ANSARI, SJT. S. SRINIVASA IYENGAR, HAKIM AJMAL KHAN

This leading National Company founded and managed by five Congress Presidents invites applications for representation on salary and commission.

APPLY TO:

K. S. RAMAMURTHI, M.A., *Branch Secretary*, 160, Mount Road, **Madras**

OR

M. SUNDER RAM SHETTY *Branch Manager*, Hampankatta, **Mangalore.**

ಸ್ವದೇಶ ವಿಚಾರ

ರಾಜಕೋಟೆಯಲ್ಲಿ ಗಾಂಧಿಗಳು
ಮುಸ್ಲೀಮ್ ಭಯಟರ ಮುತ್ತಿಗೆ

ಸುಧಾರಣಾ ಸಮಿತಿಗೆ ತನ್ನ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಲಿಲ್ಲವೆಂದು ಮುಸಲ್ಮಾನರೂ ಭಯಾಟರೂ ಗಾಂಧಿಯವರ ಮೇಲೆ ಕ್ರೋಧಗೊಂಡು ಕಳೆದ ತಾ, 16ರಲ್ಲಿ ಗಾಂಧಿಯವರ ಪ್ರಾರ್ಥನೆಯ ವೇಳೆ ಗುಂಪುಕೂಡಿ ವಿರುದ್ಧಪ್ರದರ್ಶನ ನಡೆಸಿದರು. ಪ್ರಾರ್ಥನೆ ಮುಗಿಸಿ ಗಾಂಧಿಯವರು ಒಬ್ಬಂಟಿಗನಾಗಿ ವಿರೋಧಿಗಳ ಗುಂಪಿನೊಳಗೆ ಹೋದರು. ಅವರೆಲ್ಲಾ ಕರಿ ಪತಾಕೆ, ವಿರುದ್ಧ ಘೋಷಗಳೊಡನೆ ಗಾಂಧಿಯವರನ್ನು ಮುತ್ತಿಗೆ ಹಾಕಿದಾಗಲೂ ಗಾಂಧಿಯವರು ತುಸುಹೊತ್ತು ಅವರ ನಡುವೆ ನಿಂತು ಆಮೇಲೆ ಕಾರ್ಯಕ್ರಮದ ಮೊದಲೇ ಕಾದಿದ್ದ ಕಾರು ಹತ್ತಿ ನಸುನಗುತ್ತಾ ಹೊರಟುಹೋದರು. 'ನನ್ನ ಪ್ರಾಣಪ್ರಿಯವಾದ ಪ್ರಾರ್ಥನೆಯ ಹೊತ್ತಿನಲ್ಲಿಯೇ ಈರೀತಿ ಗಲಭೆಯೆಬ್ಬಿಸಿದುದು ಸರಿಯಲ್ಲ. ಅವರ ವಿರೋಧ ಪ್ರದರ್ಶನಕ್ಕೆ ಬೇರೆ ಹಾದಿಗಳಿದ್ದುವು' ಎಂದು ಗಾಂಧಿಯವರ ಹೇಳಿಕೆ.

ಕೊಡಕುನಿವಾರಣೆಯ ಯತ್ನ

ಭಯಟರಿಗೆ ಗಾಂಧಿಯವರು ಮೊದಲು ಕೊಟ್ಟಿದ್ದ ಆಶ್ವಾಸನೆಯ ಕುರಿತು ಗಾಂಧಿಯವರಿಗೂ ಭಯಟರ ಪ್ರತಿನಿಧಿಗಳಿಗೂ ಪತ್ರವ್ಯವಹಾರ ನಡೆದು ಈ ವಿವಾದವನ್ನು ನೊದಲನೆಯವರ ಮಧ್ಯಸ್ಥಿಕೆಗೆ ಬಿಡಲು ತಾನು ಸಿದ್ಧನಿರುವದಾಗಿ ಗಾಂಧಿಯವರು ತಿಳಿಸಿರುವರು. ಡಾ| ಅಂಬೇಡ್ಕರರು ಗಾಂಧಿಯವರೊಡನೆ ಸಂಭಾಷಿಸಿರುವರು. ಪೂನಾಪೇಕ್ಟಿನ ವಿರುದ್ಧವಾಗಿ ವರ್ತಿಸಿದರೆಂದು ಗಾಂಧಿಯವರ ಮೇಲೆ ಅವರ ಟೀಕೆ. ಮುಸ್ಲೀಮರೂ ತಮಗೆ ಅನ್ಯಾಯವಾಯಿತೆಂದು ಚಳವಳಿಸುತ್ತಿರುವರು.

ಮಹಾತ್ಮರ ಕಂತೋಕ್ತ ಸೂಚನೆ

ಈ ನಡುವೆ ಗಾಂಧಿಯವರು ಸೂಚಿಸಿದ ಏಳು ಹೆಸರುಗಳಲ್ಲಿ ಆರು ಮಂದಿಯ ನೇಮಕವನ್ನು ಆಕ್ಷೇಪಿಸಿ ರಾಜರ ಪತ್ರ ಬಂದಿದೆ. ಗಾಂಧಿಜೀಯವರು ಈ ಕುರಿತು ರೆಸಿಡೆಂಟ್ ಮಿ. ಗಿಬ್ಸನರೊಡನೆ ಮಾತಾಡಿರುವರಲ್ಲದೆ ಪತ್ರವ್ಯವಹಾರ ನಡೆಸುತ್ತಿರುವರು. ರಾಜರ ಆಕ್ಷೇಪಕ್ಕೆ ಉತ್ತರವಾಗಿ ಮಹಾತ್ಮಾ ಗಾಂಧಿಯವರು 'ರಾಜರು ತನ್ನ ಸ್ವಂತ ಕಮಿಟಿಯನ್ನೂ ಪ್ರಜಾಪರಿಷತ್ತು ತನ್ನ ಕಮಿಟಿಯನ್ನೂ ನೇಮಿಸಿ ವರದಿ ತಯಾರಿಸಲಿ; ಕೊನೆಗೆ ರಾಜರ ಸಮಿತಿಯ ವರದಿಯಲ್ಲಿ ತಿದ್ದುಪಡಿಮಾಡುವ ಅಧಿಕಾರವನ್ನು ಪರಿಷತ್ತು ಇಟ್ಟುಕೊಳ್ಳುವದು-ಅಥವಾ ಪರಿಷತ್ತಿನ ಸಮಿತಿಯೇ ತನ್ನ ವರದಿಯನ್ನೊಪ್ಪಿಸುವದು' ಎಂದಿರುವರು. ರಾಜರು ಗಾಂಧೀಸೂಚಿತ ಹೆಸರುಗಳನ್ನು ಕೊನೆಗೂ ಒಪ್ಪದಿದ್ದಲ್ಲಿ ಪ್ರಜಾಪರಿಷತ್ತಿನವರ ಸಮಿತಿಯು ತಾನಾಗಿ ಕಾರ್ಯಾರಂಭ ಮಾಡಲಿರುವದೆಂದು ತಿಳಿದುಬರುತ್ತದೆ.

ತಾಲ್ಚೇರ್ ಒಪ್ಪಂದ

ಒರಿಸ್ಸಾ ಸಂಸ್ಥಾನಗಳ ರಾಜಕೀಯ ಏಜಂಟರೊಳಗೂ ಅಲ್ಲಿಯ ಪ್ರಜಾಪ್ರಮುಖರಾದ ಶ್ರೀ| ಹರೆಕೃಷ್ಣ ಮೆಹತಾಬರೊಳಗೂ ತಾಲ್ಚೇರ್ ಸಂಸ್ಥಾನದ ಪ್ರಜೆಗಳ ಸಂಕಷ್ಟನಿವಾರಣೆಗಾಗಿ ಮಾರ್ಚ 21ರಲ್ಲಿ ಒಂದು ಒಪ್ಪಂದವು ನಡೆದಿತ್ತು. ಈಗ ಆ ಒಪ್ಪಂದದಂತೆ ಸರಕಾರವು ನಡೆಯುದಿರುವದನ್ನು ಖಂಡಿಸಿ ಮ. ಗಾಂಧಿಯವರು "ತಮ್ಮ ವಾಗ್ದಾನದಂತೆ ತಾವು ನಡೆಯಲು ವಿಳಂಬಮಾಡುವದು ಅಪಾಯಕರ ಮಾತ್ರವಲ್ಲ, ತಕ್ಷೀರೂ ಆಗುವದು" ಎಂದು ಹರಿಜನದಲ್ಲಿ ಬರೆದಿದ್ದಾರೆ.

ಎಪ್ರಿಲ್ 27ಕ್ಕೆ ಗಾಂಧಿ-ಬೋಸ್ ಸಮ್ಮಿಳನ

ಪಂಡಿತ ನೆಹರುಗಳ ಮಧ್ಯಸ್ಥಿಕೆಯಿಂದಾಗಿ ಗಾಂಧೀ-ಬೋಸ್ ಸಂಭಾಷಣೆಯು ಎಪ್ರಿಲ್ 27ಕ್ಕೆ ಕಲ್ಕತ್ತದಲ್ಲಿ ನಡೆಯುವ ಏರ್ಪಾಡಾಗಿದೆ. ಮಹಾತ್ಮಾ ಗಾಂಧಿಯವರು ತಾ. 24ಕ್ಕೆ ರಾಜಕೋಟೆಯಿಂದ ಹೊರಟು ತಾ, 27ಕ್ಕೆ ಕಲ್ಕತ್ತವನ್ನು ಸೇರಿ ಆ ದಿನವೇ ವರ್ಕಿಂಗ್ ಕಮಿಟಿಯ ರಚನೆಯ ಕುರಿತು ಬೋಸರೊಡನೆ ಸಂಭಾಷಿಸಲಿರುವರು. 28ಕ್ಕೆ ವರ್ಕಿಂಗ್ ಕಮಿಟಿಯ ಆ ಮೇಲೆ ಎ. ಐ. ಸಿ. ಸಿ.ಯ ಸಭೆಗಳು ಕಲ್ಕತ್ತದಲ್ಲಿ ಸೇರಲಿರುವವು. ಆರೋಗ್ಯ ಸಂಪಾದನೆಗಾಗಿ ಜಾಮದೋಬಾ ಎಂಬಲ್ಲಿಗೆ ಹೋಗಿದ್ದ ಬೋಸರು ತಾ, 21ರಲ್ಲಿ ಕಲ್ಕತ್ತಿಗೆ ಮರಳಿ ಸುಮಾರು 20 ಸಾವಿರ ಜನರಿಂದ ಸಂಭ್ರಮದ ಸ್ವಾಗತ ಪಡೆದರು.

ಬಂಗಾಳ ಮಂತ್ರಿಮಂಡಲ

ಕಲ್ಕತ್ತಾ ಮುನಿಸಿಪಲ್ ಬಿಲ್ಲಿನ ಸಂಬಂಧವಾಗಿ ಬಂಗಾಳ ಮಂತ್ರಿಮಂಡಲದಲ್ಲಿ ಒಬ್ಬರಿಬ್ಬರು ಹಿಂದೂಮಂತ್ರಿಗಳು ರಾಜಿನಾಮೆಕೊಡುವರೆಂಬ ಸುದ್ದಿ ಹಬ್ಬಿತ್ತು. ಈಗ ಆ ಮಸೂದೆಯನ್ನು ಮುಂದರಿಸಿಟ್ಟಿರುವರು. ಆ ನಡುವೆ ಇತ್ತಂಡಕ್ಕೂ ಒಪ್ಪಿಗೆಯಾಗುವ ರೀತಿಯಲ್ಲಿ ತಿದ್ದುಪಡಿಮಾಡುವ ಆಲೋಚನೆ ನಡೆಯುತ್ತಿದೆ.

ಮೂಜದಿಯಾ ರೈಲ್ವೇ ಅಪಘಾತ

ಈ ಅಪಘಾತದ ಕುರಿತು ಕೂಲಂಕಷ ವಿಚಾರಣೆ ನಡೆಸಬೇಕೆಂಬ ಸೂಚನೆ ಬಂಗಾಳ ಎಸೆಂಬ್ಲಿಯ ಮುಂದೆ ಬಂದಿದೆ. ಆ ಅಪಘಾತದಲ್ಲಿ ಮರಣಹೊಂದಿದ ಶ್ರೀ ಮನೋರಂಜನ ಬೆನರ್ಜಿ ಮತ್ತು ಶ್ರೀ ಬಿರೇಂದ್ರನಾಥ ಮಜುಮ್‌ದಾರ್ (ಇಬ್ಬರೂ ಕಾಂಗ್ರೆಸ್ ಎಂ. ಎ. ಎ ಗಳು) ಇವರ ಸಂಬಂಧಿಕರೊಡನೆ ರಾಷ್ಟ್ರಪತಿ ಬೋಸರು ಸಹಸಂತಾಪ ಸೂಚಿಸಿರುವರು.

ಹೈದರಾಬಾದು ಸತ್ಯಾಗ್ರಹದ ಕುರಿತು ಕಾಂಗ್ರೆಸಿನ ಅಭಿಮತ

ಪಂಡಿತ್ ಜವಾಹಿರಲಾಲರು ಹೈದರಾಬಾದು ಸತ್ಯಾಗ್ರಹದ ಕುರಿತು ಕಾಂಗ್ರೆಸ್ ಧೋರಣೆಯನ್ನು ದಯಾನಂದ ಮಿಶ್ರನಿನ ಶ್ರೀ ದೇವಚಂದ್‌ರವರಿಗೆ ಬರೆದೊಂದು ಪತ್ರದಲ್ಲಿ ವಿಶದೀಕರಿಸಿದ್ದಾರೆ. ಉದಿಯಾನಾ ಪರಿಷತ್ತಿನಲ್ಲಿ ಆರ್ಯಸಮಾಜಿಕರು ಪ್ರಾರಂಭಿಸಿದ ಹೈದರಾಬಾದು ಸತ್ಯಾಗ್ರಹವನ್ನು ಖಂಡಿಸಲಿಲ್ಲ; ಅದನ್ನು ಜಾತೀಯತಾ ಚಳವಳವೆಂದು ಎಣಿಸಿದ್ದೂ ಇಲ್ಲ. ಸತ್ಯಸ್ಥಿತಿಯೆಂದರೆ ಹೈದರಾಬಾದಿನಲ್ಲಿ ಆರ್ಯಸಮಾಜಿಕರಿಗೆ ಹಲವು ಸಂಕಷ್ಟಗಳಿವೆಯೆಂದೂ ಅವುಗಳ ನಿವಾರಣೆಗಾಗಿ ಅವರು ಹೋರಾಡಿದರೆ ಅದರಲ್ಲಿ ಜಾತೀಯತೆಯೇನೂ ಇಲ್ಲವೆಂದೂ ಅಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿತ್ತು. ಆದರೆ ಈ ರೀತಿಯ ಸತ್ಯಾಗ್ರಹದಿಂದ ಹೈದರಾಬಾದು ಸರಕಾರವು ರಾಷ್ಟ್ರೀಯ ಚಳವಳವನ್ನೇ ಜಾತೀಯ ಚಳವಳವೆಂದು ಆರೋಪಿಸುವರೆ ಕಾರಣ ದೊರಕುವದರಿಂದ ಅದು ಅಕಾಲಿತವಾದುದೆಂದಿಷ್ಟೇ ಅಲ್ಲಿ ಸೂಚನೆಯಾದುದು. ಕಾಂಗ್ರೆಸು ಪ್ರತ್ಯಕ್ಷವಾಗಿಯಾಗಲೀ, ಅಪ್ರತ್ಯಕ್ಷವಾಗಿಯಾಗಲೀ ಹೈದರಾಬಾದು ಸರಕಾರವನ್ನು ಸಮರ್ಥಿಸುವದೆಂಬ ಪ್ರಶ್ನೆಯೇ ಇಲ್ಲ" ಎಂದು ಪಂಡಿತ ನೆಹರುಗಳ ಹೇಳಿಕೆ.

ಲಾಹೋರು ಕೃಷಿಕ ಸತ್ಯಾಗ್ರಹ

ಲಾಹೋರು ಕೃಷಿಕರು ಸುಮಾರು ಐದು ವಾರಗಳಿಂದ ಎಸೆಂಬ್ಲಿ ಭವನದೆದುರು ತಮ್ಮ ಸಂಕಷ್ಟನಿವಾರಣೆಗಾಗಿ ಸತ್ಯಾಗ್ರಹವಾಚರಿಸುತ್ತಿದ್ದಾರೆ. ಕಳೆದ ತಾ. 20ರಲ್ಲಿ ಎಸೆಂಬ್ಲಿ ಸಭೆ ನಡೆಯುತ್ತಿದ್ದಾಗ ಸತ್ಯಾಗ್ರಹಿಗಳ ದಳವೊಂದು ಬಂದು ತಮ್ಮ ಘೋಷಣೆಗಳನ್ನೆಬ್ಬಿಸಿತು. ಒಳಗಿದ್ದ ಮೆಂಬರರು ಕೆಲವರು ಹೊರಗೋಡಿದರು. ಪೋಲೀಸರವರನ್ನು ದಸ್ತಗಿರಿಮಾಡಿದ್ದಾರೆ. ಆ ಮೇಲೆ ತಮ್ಮ ಕೂಸುಗಳೊಂದಿಗೆ ಬಂದು ಸತ್ಯಾಗ್ರಹ ನಡೆಸಿದ 12ಮಂದಿ ಸ್ತ್ರೀಯರ ದಸ್ತಗಿರಿಯೂ ನಡೆದು ಅವರಿಗೆಲ್ಲಾ ಶಿಕ್ಷೆ ವಿಧಿಸಲ್ಪಟ್ಟಿದೆ.

ಬೊಂಬಾಯಿ ಸರಕಾರದ ಧೋರಣೆ

ಹೈದರಾಬಾದು ಸತ್ಯಾಗ್ರಹದ ಸಂಬಂಧದಲ್ಲಿ ಜಾತೀಯ ಕಲಹಗಳನ್ನುದ್ರೇಕಿಸುವ ಅಥವಾ ಹಿಂಸಾತ್ಮಕ ಪ್ರೇರಣೆಯನ್ನುಂಟುಮಾಡುವ ಬೊಂಬಾಯಿ ಪ್ರಾಂತ್ಯದ ಪತ್ರಿಕೆಗಳಿಗೆ ಸರಕಾರವು ತಡೆಹಾಕುವದೆಂದೂ ಹೈದರಾಬಾದಿನ ಮಂತ್ರಿ ಮಿ. ಅಕ್ಬರ್ ಹೈದರಿಯವರಿಗೆ, ಬೊಂಬಾಯಿಸರಕಾರವನ್ನು ಟೀಕಿಸಲಿರುವಷ್ಟೇ ಅಧಿಕಾರವನ್ನು ನಿಜಾಮಸರಕಾರದ ಟೀಕೆಯ ಮಟ್ಟಿಗೂ ಪತ್ರಿಕೆಗಳಿಗೆ ಕೊಟ್ಟಿರುವೆನೆಂದೂ ತಾನು ತಿಳಿಸಿರುವೆನಾಗಿಯೂ ನಾಮದಾರ ಕೆ. ಎಮ್. ಮುನ್ಶಿಯವರು ಬೊಂಬಾಯಿ ಎಸೆಂಬ್ಲಿಯಲ್ಲಿ ತಿಳಿಸಿರುವರು.

ರಬ್ಬರ್ ಮೊಹರುಗಳು ಬೇಕಾದ ನಮೂನೆಯಲ್ಲಿ ಸುಲಭ ದರದಲ್ಲಿ ಸಕಾಲದಲ್ಲಿ ತಯಾರಿಸಿ ಕೊಡಲ್ಪಡುತ್ತವೆ.

ವಿವರಗಳಿಗೆ ಬರೆಯಿರಿ ಯಾ ಸ್ವತಃ ಬಂದು ವಿಚಾರಿಸಿರಿ.

ನವಭಾರತ ಬುಕ್ ಡಿಪ್ಪೊ, ಉಡುಪಿ.

Degrees: Books: Medicines.

Free H. L. M. S., H. M. B., H. M. D. etc Free Homeo-Ayur-Unani-Naturo degrees by post also—Practitioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10. Enclose 2 annas stamps:—

Principal, Indian Homeopathic Institute and Society (Govt. Regd.)
P. O. MAHUVA, (Kathiawar Dt. India)

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ತಾ. 23-4-1939.

ಭಜನೆ ಮಂಡಳಿಯ ವಾರ್ಷಿಕೋತ್ಸವ—ಸ್ಥಳೀಯ ಸೀರೇಶ್ವರ್ಯ ಆಯ್ಯ ಭಜನಾ ಮಂಡಳಿಯ ವಾರ್ಷಿಕೋತ್ಸವವು ಜ. ಬೋ. ಅಧ್ಯಕ್ಷರಾದ ಡಾ. ಕೆ. ವಿಟ್ಠಲಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಕಳೆದ ತಾ. 16ರಲ್ಲಿ ಜರಗಿತು. ಶ್ರೀ ಮ. ಗೋವಿಂದರಾವ್ ಶ್ರೀ. ಬಿ. ಮೋಹನಪ್ಪಶೆಟ್ಟಿಗಳಾಯರೇ ಮೊದಲಾದವರು ಭಾಷಣಮಾಡಿದರು.

ನಗರ ಸಭೆ— ಕಳೆದ ತಾ 19ನೇ ಸಂಜೆ ಶ್ರೀ. ಬಿ ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ಸೇರಿದ ನಗರಸಭೆಯಲ್ಲಿ ವೆಬ್‌ಸ್ಟರ್ ಮಾರ್ಕೇಟಿನಿಂದ ತರಕಾರಿ ವಿಭಾಗವನ್ನು ಬೇರೆ ಖಾಸಗಿ ಮಾರ್ಕೇಟಿಗೆ ಒಯ್ಯಬೇಕೆಂದು ನಗರಸಭೆಯವರು ಮಾಡಿದ ನಿರ್ಧಾರದ ಮೇಲೆ ಕಲೆಕ್ಟರರು ಪ್ರಕೃತ ಹಾಗೆ ಒಯ್ಯುವುದು ಅನವಶ್ಯವೆಂದು ಸೂಚಿಸಿ ಕಳುಹಿಸಿದ ಪತ್ರದ ವಿಚಾರವಾಗಿ ಆಲೋಚಿಸಿ ಕಲೆಕ್ಟರರ ಪತ್ರದ ಪ್ರಕಾರ ನಡೆಯಲು ಸಭೆಯು ಸಮ್ಮತಿಸುವುದಿಲ್ಲವೆಂದು ತೀರ್ಮಾನವಾಯಿತು.

ಆಗಮನ—ದೇಶೀಯ ವೈದ್ಯಸಮ್ಮೇಳನದ ಉದ್ಘಾಟನೆ ಮಾಡುವುದಕ್ಕಾಗಿ ಮದ್ರಾಸಿನ ಪ್ರಸಿದ್ಧ ವೈದ್ಯರಾದ ಡಾ. ಎ. ಲಕ್ಷ್ಮೀಪತಿಯವರು ಕಳೆದ ತಾ. 21ರಲ್ಲಿ ಮಂಗಳೂರಿಗೆ ಬಂದರು. ಅವರನ್ನು ಸತ್ಕರಿಸಲು ಜಿಲ್ಲಾ ಎಲ್. ಐ. ಯಂ. ಎಸೋಸಿಯೇಶನಿನವರು ಏರ್ಪಾಡುಮಾಡಿದ್ದರು. ವೈದ್ಯಸಮ್ಮೇಳನದ ಅಧಿಕಾರಿಗಳು ಡಾ ಲಕ್ಷ್ಮೀಪತಿಯವರನ್ನು ಸಮ್ಮೇಳನಕ್ಕೇನೇ ಕರೆದುಕೊಂಡು ಹೋದ್ದರಿಂದ ಸತ್ಕಾರವು ಪ್ರಧಾನ ಅತಿಥಿಗಳಿಲ್ಲದೆ ನಡೆಯಬೇಕಾಯಿತು. ಆದರೂ ತಾ. 22ರಲ್ಲಿ ಡಾ. ಲಕ್ಷ್ಮೀಪತಿಯವರು ಎಲ್. ಐ. ಯಂ. ಸಂಘಕ್ಕೆ ಬಂದು ಸುಮಾರು ಒಂದು ತಾಸು ಭಾಷಣಮಾಡಿ, ಸಭೆಯಲ್ಲಿ ಕೇಳಿದ ಹಲವು ಪ್ರಾಮುಖ್ಯ ವಿಷಯಗಳಿಗೆ ಉತ್ತರವಿತ್ತರು.

ದೇಶೀಯ ವೈದ್ಯ ಸಮ್ಮೇಳನ—ತಾ. 21ನೇ ಬೆಳಿಗ್ಗೆ ವೈದ್ಯ ಸಮ್ಮೇಳನದ ಅಂಗವಾಗಿ ಸಿದ್ಧಪಡಿಸಿದ್ದ ಪ್ರದರ್ಶನವನ್ನು ಜಿಲ್ಲಾ ಜಡ್ಜರಾದ ಶ್ರೀ. ಪಿ. ರಾಜಗೋಪಾಲಾಚಾರ್ಯರು ಉದ್ಘಾಟನೆ ಮಾಡಿದರು.

ಅಂದೇ ಸಾಯಂಕಾಲ ಡಾ| ಎ ಲಕ್ಷ್ಮೀಪತಿಯವರು ವೈದ್ಯ ಸಮ್ಮೇಳನದ ಉದ್ಘಾಟನೆಯನ್ನು ನಡೆಸುತ್ತ ಹಲವು ಸೂಚನೆಗಳನ್ನಿತ್ತರು. ಅನಂತರ ಡಾ| ಯಂ. ಆರ್. ಭಟ್ ಇವರ ಸ್ವಾಗತ ಭಾಷಣವಾಗಿ ಅನಂತರ ಆಯುರ್ವೇದ ಭೂಷಣ ಡಾ. ಯ.ಂ. ವಿ. ಶಾಸ್ತ್ರಿಗಳು ಅಧ್ಯಕ್ಷ ಭಾಷಣಮಾಡಿದರು. ಡಾ. ಶಾಸ್ತ್ರಿಗಳ ಭಾಷಣವು ಬಹಳ ಅರ್ಥಗರ್ಭಿತವಾಗಿದ್ದು ವೈದ್ಯವೃತ್ತಿಯನ್ನನುಸರಿಸುವವರಿಗೆ ಹಲವು ಮುಖ್ಯ ಸಲಹೆಗಳನ್ನೊಳಗೊಂಡಿದ್ದಿತು. ತಾ. 22ರಲ್ಲಿ ಪರಿಷತ್ತು ಪುನಃ ಸೇರಿ ಹಲವು ಮಹತ್ವದ ಠರಾವುಗಳನ್ನು ಮಾನ್ಯಮಾಡಿತು. ಅಂತೂ ವೈದ್ಯರ ಪ್ರಥಮ ಸಮ್ಮೇಳನವು ಯಶಸ್ವಿಯಾಗಿ ಜರಗಿತು.

Commonwealth Assurance Co., Ltd., Poona.

ಬೋನಸ್ಸು ದರವು 20% ಹೆಚ್ಚಿದೆ

30—4—38ರ

ಮೂರನೇ ವ್ಯಾಲ್ಯುಯೇಷನ್ ಫಲಿತಾಂಶ

ಜೀವನಾವಧಿ	ತ್ರೈವಾರ್ಷಿಕ	ಎಂಡೋಮೆಂಟ್
ರೂ. 54—0—0	ಬೋನಸ್ಸು ಸಾವಿರಕ್ಕೆ	ರೂ 45—0—0

ಕಾಮನ್‌ವೆಲ್ತ್

ಏಜನ್ಸಿ ಮತ್ತು ಪಾಲಿಸಿ ವಿವರಗಳಿಗೆ ಇಂದೇ ಬರೆಯಿರಿ.

ಕಾಮನ್‌ವೆಲ್ತ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ.

ಗವಾಂಕರ್ ಅಂಡ್ ಸನ್ಸ್,

ಚೀಫ್ ಏಜಂಟ್ಸ್: **ಆನಂದರಾವ್ ಸರ್ಕಲ್, ಬೆಂಗಳೂರು.**

ಬೊಂಬಾಯಿ

ಸಾಕ್ಷರತಾ ಪ್ರಚಾರ—ಸಾಕ್ಷರತಾ ಪ್ರಚಾರ ಸಮಿತಿ ಕನ್ನಡ ಶಾಖೆ ಮತ್ತು ಕೆನರಾ ವಿದ್ಯಾರ್ಥಿ ಸಂಘ ಇವರ ಪರವಾಗಿ ಬಹು ದೊಡ್ಡ ಸಭೆಯೊಂದು ಕಳೆದ ಶನಿವಾರ ರಾತ್ರಿ 8ಘಂಟೆಗೆ ಗೋಗಾ ಸ್ಟ್ರೀಟಿನಲ್ಲಿ ಜರಗಿತು. ಶ್ರೀ. ರಂಗಾಚಾರ್ಯ ಜಹಗೀರದಾರ ಮುಂಬಯಿ ಸರಕಾರದ ಪ್ಲೀಡರ್ ಇವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ದಿನ ಕರ್ ದೇಸಾಯಿ, ಕುಸತಳ್, ಪಿಂತೋ, ಶೆಟ್ಟಿ ಮೊದಲಾದವರ ಭಾಷಣಗಳಾದ ನಂತರ ಅಧ್ಯಕ್ಷರು ತಮ್ಮ ಗಂಭೀರ ಭಾಷಣದ ಮಧ್ಯೆ ಕನ್ನಡಿಗರಿಗೆ ದೊರಕಿದ ಈ ಸುಸಂದರ್ಭವನ್ನು ವ್ಯರ್ಥಗೊಳಿಸದೆ ಇದರ ಸದುಪಯೋಗ ಮಾಡಿಕೊಂಡು 100ರಲ್ಲಿ 100ಪಾಲು ಕನ್ನಡಿಗರು ವಿದ್ಯಾಭ್ಯಾಸವುಳ್ಳವರಾಗುವಂತೆ ಪ್ರಯತ್ನಿಸಬೇಕೆಂದು ಕೇಳಿಕೊಂಡರು. ಶ್ರೀ ಸಾಲಿಯನ್‌ರವರ ವಂದನಾರ್ಪಣೆಯೊಡನೆ ಸಭಾಂತ್ಯವಾಯಿತು.

ಗುರುವಾರ ದಿವಸ ಜರಗಿದ ಸಭೆಯಲ್ಲಿ ಶ್ರೀ. ಜ್ಯೋಲ್ಲಿಯವರು ಸಾಕ್ಷರತೆಯ ಕುರಿತು ಹೀಗೆಂದರು. ಭಾರತವು ಇಷ್ಟು ಹೀನ ಸ್ಥಿತಿಯಲ್ಲಿರಲು ಕಾರಣವೇನೆಂದರೆ. ಹೆಚ್ಚಿನ ಜನರು ಅವಿದ್ಯಾವಂತರಾಗಿರುವುದೇ. ಪಶ್ಚಿಮದೇಶಗಳಲ್ಲಿ ಜನರೆಲ್ಲ ಮುಂದರಿಯುತ್ತಿರಲು, ಭಾರತದಲ್ಲಿ 100ರಲ್ಲಿ 8ಮಂದಿಗೂ ಸರಿಯಾಗಿ ಓದಲು ಬರೆಯಲು ಬರುವುದಿಲ್ಲ. ಆಂಗ್ಲಸರಕಾರವು ತನ್ನ 100ವರ್ಷದ ಆಡಳಿತದಲ್ಲಿಯೂ ಈ ಅವಿದ್ಯತೆಯನ್ನು ಹೋಗಲಾಡಿಸಲು ಪ್ರಯತ್ನಿಸಲ್ಲ.

ಹೋಟೆಲ್ ಕೆಲಸಗಾರರ ಮೆರವಣಿಗೆ

ಸಾಧಾರಣ 2000 ಹೋಟೆಲ್ ಕೆಲಸಗಾರರು ತಮ್ಮ ಸಂಕಷ್ಟಗಳನ್ನು ಸರಕಾರಕ್ಕೆ ತಿಳಿಸಬೇಕೆಂದು ಬುಧವಾರ ದಿವಸ ಬಹು ದೊಡ್ಡ ಮೆರವಣಿಗೆ ಮಾಡಿಕೊಂಡು ಅಸೆಂಬ್ಲಿ ಗೃಹಕ್ಕೆ ಹೋದರು. ಇವರು ಎಲ್‌ಫಿನ್‌ಸ್ಟನ್ ಸರ್ಕಲಿಗೆ ಹೋಗುವಾಗ ಪೋಲೀಸರು ಇವರನ್ನು ತಡೆದು ಮುಂದೆಹೋಗಲು ಬಿಡದಿರಲು, ಇವರು ತಮ್ಮ ಪ್ರತಿನಿಧಿಗಳನ್ನು ಅಸೆಂಬ್ಲಿಗೆ ಕಳುಹಿಸಿದರು. ಇವರು ಶ್ರೀ. ನಂದರವರನ್ನು ಅಲ್ಲಿ ನೋಡಿದ ನಂತರ ಶ್ರೀ. ನಂದರವರು ಈ ವಿಷಯಗಳನ್ನು ಮುಖ್ಯ ಮಂತ್ರಿಯವರಿಗೆ ತಿಳಿಸುತ್ತೇನೆಂದು ಹೇಳಲು ಇವರು ತಮ್ಮ ಮುಂಚಿನ ಸ್ಥಳಕ್ಕೆ ಬಂದು ಸಭೆಮಾಡಿದರು. ಶ್ರೀಗಳಾದ ನಿಂಬಕರ, ಎಸ್. ಎಲ್. ಉಪಾಧ್ಯಾಯ ಮಿರಜಕರ್ ಮೊದಲಾದವರೆಲ್ಲ ಶ್ರೀ. ನಂದರೊಡನೆ ನಡೆದ ಮಾತುಕತೆಗಳನ್ನು ವಿವರಿಸಿದರು.

ಉಡುಪಿ

ವಿವಾಹ ಸಮಾರಂಭ—ಪ್ರಸಿದ್ಧ ಗೌಡ ಸಾರಸ್ವತ ಮನೆತನದವರೂ ಹನುಮಾನ್ ಟ್ರಾನ್ಸ್‌ಪೋರ್ಟ್ ಮೋಟರ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರೂ ಪ್ರಸಿದ್ಧ ಸಾಹುಕಾರರೂ ಆದ ಶ್ರೀ. ಪಾಂಗಾಳ ಉಪೇಂದ್ರ ಶ್ರೀನಿವಾಸನಾಯ್ಕರ ತಂಗಿ (ದಿವಂಗತ ಪಾಂಗಾಳ ಶ್ರೀನಿವಾಸ ನಾಯ್ಕರ ಪುತ್ರಿ) ಸೌ. ಸುನಂದಾಬಾಯಿಯನ್ನು ಪುತ್ತೂರು ವಕೀಲ್ ಶ್ರೀ. ಬಿ. ಅಚ್ಯುತ ಬಾಳಿಗರ ಮಗ ಶ್ರೀ. ನಾರಾಯಣ ಬಾಳಿಗರು ತಾ. 22-4-39ರಲ್ಲಿ ಶ್ರೀ. ಉಪೇಂದ್ರನಾಯ್ಕರ ಅಜ್ಜರಕಾಡು ಬಿಡಾರದಲ್ಲಿ ವಿವಾಹವಾದರು. ಈ ಸಂದರ್ಭದಲ್ಲಿ ತಾ. 23-4-39ನೇ ಸಂಜೆ ಸಾವಿರಾರು ಜನರಿಗೆ ಟೀಪಾರ್ಟಿ ಸತ್ಕಾರವನ್ನಿತ್ತರು.

ವಸಂತ ಸಾಹಿತ್ಯೋತ್ಸವ— ಬೆಂಗಳೂರು ಕರ್ನಾಟಕ ಸಾಹಿತ್ಯಪರಿಷತ್ತಿನವರು ನಡೆಸುವ ವಸಂತ ಸಾಹಿತ್ಯೋತ್ಸವವು ಮೇತಿಂಗಳ 3ನೇ ವಾರದಲ್ಲಿ ಇಲ್ಲಿ ಜರಗಲಾಗುವುದೆಂದು ತಿಳಿಯುತ್ತೇವೆ.

ಬೇಲೂರು ಕೇಶವ ದಾಸರ ಆಗಮನ

ಶ್ರೀ. ಬೇಲೂರು ಕೇಶವ ದಾಸರು ಉಡುಪಿಗೆ ದಯಮಾಡಿಸಿ ಶ್ರೀಕೃಷ್ಣ ಮಠದಲ್ಲಿಯೂ ಶ್ರೀ. ಪೇಜಾವರ ಮಠದಲ್ಲೂ ಹರಿಕಥಾ ಕಾಲಕ್ಷೇಪವನ್ನು ಬಹು ಸ್ವಾರಸ್ಯವಾಗಿ ಮಾಡಿದರು.

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಮೈಸೂರು ಏಪ್ರಿಲ್ ೨೩.

ಬೇಸಿಗೆಯ ಶಿಕ್ಷಣ—ಮೈಸೂರು ಸಂಸ್ಥಾನದ ಎಲ್ಲಾ ಹೈಸ್ಕೂಲುಗಳಿಂದ ಆರಿಸಿದ ಕೆಲವು ಉಪಾಧ್ಯಾಯರುಗಳಿಗೆ ಬೇಸಿಗೆಯ ರಜಾದಿನಗಳಲ್ಲಿ ಇಂಗ್ಲಿಷ್, ಕನ್ನಡ ಚರಿತ್ರೆ ಮತ್ತು ಇತರ ವಿಷಯಗಳ ಮೇಲೆ ಪಾಠಗಳನ್ನು ಹೇಳಿಕೊಡುವ ಏರ್ಪಾಡನ್ನು ಮೈಸೂರು ವಿಶ್ವವಿದ್ಯಾನಿಲಯದವರು ಕೈಕೊಂಡಿದ್ದಾರೆ. ಈ ಕಾರ್ಯಕ್ರಮ ಮೈಸೂರು ಬೆಂಗಳೂರುಗಳಲ್ಲಿ ನಡೆಯುತ್ತದೆ. ಇದರ ಸಲುವಾಗಿ ರಾಜಧಾನಿಗೆ ವಿವಿಧ ಊರುಗಳಿಂದ ಒಂದುನೂರು ಉಪಾಧ್ಯಾಯರುಗಳು ಬಂದಿದ್ದಾರೆ.

ಸಾಕ್ಷರತಾ ಪ್ರಚಾರ — ತುಮಕೂರು ಜಿ| ವಿದ್ಯಾರ್ಥಿಸಂಘದ ಆಶ್ರಯದಲ್ಲಿ ಸಾಕ್ಷರತಾ ಪ್ರಚಾರಕಾರ್ಯವು, ಬಡವಾಡಿ ಎಂಬ ಗ್ರಾಮದಲ್ಲಿ ಮೈಸೂರು ಸಂಸ್ಥಾನದ ವಿದ್ಯಾರ್ಥಿಸಂಘದ ಅಧ್ಯಕ್ಷರಾದ ಶ್ರೀ. ಕೆ. ಜಯಸಿಂಹ ರಾಯರಿಂದ ನೆರವೇರಿಸಲಾಯಿತೆಂದು ತಿಳಿದುಬಂದಿದೆ. ಇನ್ನು ಮುಂದೆ ದೇಶದಲ್ಲಿ ಎಲ್ಲ ಜನರನ್ನು ಅಕ್ಷರಸ್ಥರನ್ನಾಗಿ ಮಾಡಲು ಇದೇ ಪ್ರಯೋಗವನ್ನಬಹುದು.

ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿ—ಮೈಸೂರು ಕಾಂಗ್ರೆಸಿನ ಪುನರ್ರಚಿತ (ವರ್ಕಿಂಗ್ ಸಮಿತಿಯ) ಸದಸ್ಯರಿವರುಗಳು—ಶ್ರೀ. ಯಸ್. ಚೆನ್ನಯ್ಯ (ಮೈಸೂರು ನಗರ) ಶ್ರೀ. ಯಸ್. ರಂಗರಾಮಯ್ಯ (ಮೈಸೂರು ಜಿಲ್ಲೆ.) ಶ್ರೀ. ವಿ. ವೆಂಕಟಪ್ಪ (ಬೆಂಗಳೂರು ಜಿಲ್ಲೆ), ಶ್ರೀ. ಟಿ. ಸುಬ್ರಹ್ಮಣ್ಯಂ (ತುಮಕೂರು ಜಿಲ್ಲೆ) ಶ್ರೀ. ಹೆಚ್. ವಿ. ರಂಗಸ್ವಾಮಿ (ಹಾಸನ ಜಿಲ್ಲೆ.) ಶ್ರೀ. ಗೋವಿಂದರೆಡ್ಡಿ (ಚಿತ್ರದುರ್ಗದ ಜಿಲ್ಲೆ.) ಮತ್ತು ಶ್ರೀ. ಕೆ. ಟಿ. ಸತ್ಯನಾರಾಯಣ ಶೆಟ್ಟಿ (ಕಡೂರು ಜಿಲ್ಲೆ.)

ಇವರುಗಳು ಚುನಾವಣೆಯಲ್ಲಿ ಗೆದ್ದವರೆಂದೂ, ಶಿವಮೊಗ್ಗ ಜಿಲ್ಲೆಯ ಮತ್ತು ಬೆಂಗಳೂರು ನಗರದ ಪ್ರತಿನಿಧಿಗಳು ಇನ್ನೂ ಚುನಾಯಿತರಾಗಿಲ್ಲವೆಂದೂ ಅಧ್ಯಕ್ಷರು ತಮ್ಮ ನಾಮಿನೇಷನ್‌ನನ್ನು ಸದ್ಯದಲ್ಲೇ ಕಳುಹಿಸುವರೆಂದು ಗೊತ್ತಾಗಿದೆ.

ಜಿಲ್ಲಾ ಸಮ್ಮೇಳನ—ದ್ವಿತೀಯ ಸಚಿವರಾದ ಶ್ರೀ. ಕೆ. ವಿ. ಅನಂತರಾಮನ್‌ರವರ ಅಧ್ಯಕ್ಷತೆಯಲ್ಲಿ, ನೆನ್ನೆಯ ದಿನ ಮೈಸೂರು ಜಿಲ್ಲಾ ಸಮ್ಮೇಳನವು ರಂಗಾಚಾರ್ಲು ಸ್ಮಾರಕ ಭವನದಲ್ಲಿ ನಡೆಯಿತು. ಜಿಲ್ಲೆಗೆ ಸಂಬಂಧಪಟ್ಟ ಮುಖ್ಯ ವಿಷಯಗಳನ್ನು ಚರ್ಚಿಸಲಾಯಿತು.

ವಸಂತ ಸಾಹಿತ್ಯೋತ್ಸವ— ಬೆಂಗಳೂರು ಕರ್ನಾಟಕ ಸಾಹಿತ್ಯಪರಿಷತ್ತಿನವರು ನಡೆಸುವ ಕನ್ನಡ ವಸಂತ ಸಾಹಿತ್ಯೋತ್ಸವವನ್ನು ಈ ಬಾರಿ ವಿಮುಕಡೆಗಳಲ್ಲಿ ನಡೆಸುವಂತೆ ಏರ್ಪಾಡುಮಾಡಲಾಗಿದೆ. ಬೆಂಗಳೂರಿನಲ್ಲಿ ನಡೆಯುವ ಈ ಉತ್ಸವದ ಆರಂಭೋತ್ಸವವು ಶ್ರೀ. ಪ್ರಿನ್ಸ್ ಜಯ ಚಾಮರಾಜ ಒಡೆಯರ್‌ರವರಿಂದ ನಡೆಸಲಾಗುವುದೆಂದು ತಿಳಿದು ಬಂದಿದೆ.

ಸಪ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.

(ಬ್ಯಾಂಕರ್ಸ್)

ಡೈರೆಕ್ಟರರು:— 1 ಶ್ರೀ| ಮಿಯಾರ ನರಸಿಂಹಾಚಾರ್, (ಚೆಯರ್‌ಮೆನ್)

„ 2 ಡಾ. ಟಿ. ಮಾಧವ ಪೈ, ಎಂ. ಬಿ. ಎಂಡ್ ಬಿ. ಎಸ್.

„ 3 ಡಾ. ಕೆ. ಎಲ್. ವಿಠಾಳ್, ಎಂ. ಬಿ. ಎಂಡ್ ಬಿ. ಎಸ್.

„ 4 ಶ್ರೀ| ಬಿ. ಕೃಷ್ಣಯ್ಯ ಹೆಗ್ಡೆ

„ 5 ಶ್ರೀ| ಎ. ಬಿ. ಕೃಷ್ಣರಾಜ

„ 6 ಶ್ರೀ| ಎಸ್. ಯು. ಪಣಿಯಾಡಿ (ಮೆನೇಜಿಂಗ್ ಡೈರೆಕ್ಟರ್)

ಈ ಕೆಳಗಿನ ಯಾವುದಾದರೊಂದು ಸ್ಕೀಮಿಗೆ ಸೇರಿರಿ.

1. **ಇಂಡಸ್ಟ್ರಿಯಲ್ ಕ್ಯಾಶ್ ಸರ್ಟಿಫಿಕೇಟು**
2. **ಸೇವ್ ಎಸ್ ಯು ಸ್ಲೀಪ್ ಡಿಪಾಜಿಟು**
3. **ದೀನಬಂಧು ನಿಧಿ**
4. **ಇಂಡಸ್ಟ್ರಿಯಲ್ ಡಿಪಾಜಿಟ್**
5. **ಅಂತರಂಗ ಡಿಪಾಜಿಟ್**

ವಿವರಗಳಿಗೆ ಮೆನೇಜಿಂಗ್ ಡೈರೆಕ್ಟರರಿಗೆ ಬರೆಯಿರಿ.

ಜನರಲ್ ಸಪ್ಲೈಸ್ ಲಿಮಿಟೆಡ್.

ಪ್ರಿಂಟರ್ಸ್, ಪಬ್ಲಿಷರ್ಸ್, ಜನರಲ್ ಮರ್ಚಂಟ್ಸ್ ಇತ್ಯಾದಿ.

ಉಡುಪಿ.

ಡೈರೆಕ್ಟರರು:—

1. ಡಾ| ಕೆ. ಎಲ್. ವಿಠಾಳ್, ಎಂ. ಬಿ. ಎಂಡ್ ಬಿ. ಎಸ್. (ಚೆಯರ್‌ಮೆನ್)
2. ಶ್ರೀ| ಆರ್. ಎಸ್. ಶೆಣೈ
3. „ ಕೆ. ಹೊನ್ನಯ್ಯ ಶೆಟ್ಟಿ
4. „ ಎಸ್. ಗುರುರಾಜ ಉಡುಪ
5. „ ಯಸ್ ಯು. ಪಣಿಯಾಡಿ, (ಮೆನೇಜಿಂಗ್ ಡೈರೆಕ್ಟರ್)

ಈ ಕೆಳಗಿನ ಸಂಸ್ಥೆಗಳಲ್ಲಿ ಎಲ್ಲಾತರದ ಮುದ್ರಣ, ಚಿಲ್ಲರೆ ಮತ್ತು ರಖಂ ಕ್ರಯ ವಿಕ್ರಯ ಎಲ್ಲಾ ವಿಧದ ಏಜನ್ಸಿವ್ಯಾಪಾರಾದಿಗಳನ್ನು ಕೈಕೊಳ್ಳಲಾಗುವುದು.

ತುಳುನಾಡ್ ಪ್ರೆಸ್, ಮಣಿಪಾಲ ಪವರ್ ಪ್ರೆಸ್, ಶ್ರೀ. ಭಾರತಮಾತೃ ಮಂದಿರ, ತುಳುನಾಡ್ ಸ್ಟೇಶನರಿ ಮಾರ್ಟ್.

ವಿಶೇಷ ಮಾಹಿತಿಗೆ ಮೆನೇಜಿಂಗ್ ಡೈರೆಕ್ಟರರಿಗೆ ಬರೆಯಿರಿ.

The Tropical Insurance
CO., LTD., DELHI.

Chairman: **Sjt. SUBASH CHANDRA BOSE.**
(Congress President)

Founder Directors:
PANDIT MOTILAL NEHRU
DR. M. A. ANSARI
SJT. S. SRINIVASA IYENGAR
HAKIM AJMAL KHAN

This leading National Company founded and managed by five Congress Presidents invites applications for representation on salary and commission.

APPLY TO:

K. S. RAMAMURTHI, M.A.,
Branch Secretary,
160, Mount Road,
Madras

OR

M. SUNDER RAM SHETTY
Branch Manager,
Hampankatta,
Mangalore.

ಸ್ವದೇಶ ವಿಚಾರ

ರಾಜಕೋಟೆಯಲ್ಲಿ ಗಾಂಧಿಗಳು ಮುಸ್ಲೀಮ್ ಭಯಟರ ಮುತ್ತಿಗೆ

ಸುಧಾರಣಾ ಸಮಿತಿಗೆ ತಮ್ಮ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಲಿಲ್ಲವೆಂದು ಮುಸಲ್ಮಾನರೂ ಭಯಟರೂ ಗಾಂಧಿಯವರ ಮೇಲೆ ಕ್ರೋಧಗೊಂಡು ಕಳೆದ ತಾ. 16ರಲ್ಲಿ ಗಾಂಧಿಯವರ ಪ್ರಾರ್ಥನೆಯ ವೇಳೆ ಗುಂಪುಕೂಡಿ ವಿರುದ್ಧಪ್ರದರ್ಶನ ನಡೆಸಿದರು. ಪ್ರಾರ್ಥನೆ ಮುಗಿಸಿ ಗಾಂಧಿಯವರು ಒಬ್ಬಂಟಿಗನಾಗಿ ವಿರೋಧಿಗಳ ಗುಂಪಿನೊಳಗೆ ಹೋದರು. ಅವರೆಲ್ಲಾ ಕರಿಪತಾಕೆ, ವಿರುದ್ಧ ಘೋಷಗಳೊಡನೆ ಗಾಂಧಿಯವರನ್ನು ಮುತ್ತಿಗೆ ಹಾಕಿದರಾದರೂ ಗಾಂಧಿಯವರು ತುಸುಹೊತ್ತು ಅವರ ನಡುವೆ ನಿಂತು ಆಮೇಲೆ ಕಾರ್ಯಕ್ರಮದ ಮೊದಲೇ ಕಾದಿದ್ದ ಕಾರು ಹತ್ತಿ ನಸುನಗುತ್ತಾ ಹೊರಟುಹೋದರು. 'ನನ್ನ ಪ್ರಾಣಪ್ರಿಯವಾದ ಪ್ರಾರ್ಥನೆಯ ಹೊತ್ತಿನಲ್ಲಿಯೇ ಈರೀತಿ ಗಲಭೆಯೆಬ್ಬಿಸಿದುದು ನೀತಿಯಲ್ಲ. ಅವರ ವಿರೋಧ ಪ್ರದರ್ಶನಕ್ಕೆ ಬೇರೆ ಹಾದಿಗಳಿದ್ದುವು' ಎಂದು ಗಾಂಧಿಯವರ ಹೇಳಿಕೆ.

ತೊಡಕುನಿವಾರಣೆಯ ಯತ್ನ

ಭಯಟರಿಗೆ ಗಾಂಧಿಯವರು ಮೊದಲು ಕೊಟ್ಟಿದ್ದ ಆಶ್ವಾಸನೆಯ ಕುರಿತು ಗಾಂಧಿಯವರಿಗೂ ಭಯಟರ ಪ್ರತಿನಿಧಿಗಳಿಗೂ ಪತ್ರವ್ಯವಹಾರ ನಡೆದು ಈ ವಿವಾದವನ್ನು ಮೊದಲನೆಯವರ ಮಧ್ಯಸ್ಥಿಕೆಗೆ ಬಿಡಲು ತಾನು ಸಿದ್ಧನಿರುವದಾಗಿ ಗಾಂಧಿಯವರು ತಿಳಿಸಿರುವರು. ಡಾ| ಅಂಬೇಡ್ಕರರು ಗಾಂಧಿಯವರೊಡನೆ ಸಂಭಾಷಿಸಿರುವರು. ಪೂನಾಪೇಕ್ಟಿನ ವಿರುದ್ಧವಾಗಿ ವರ್ತಿಸಿದರೆಂದು ಗಾಂಧಿಯವರ ಮೇಲೆ ಅವರ ಟೀಕೆ. ಮುಸ್ಲೀಮರೂ ತಮಗೆ ಅನ್ಯಾಯವಾಯಿತೆಂದು ಚಳವಳಿಸುತ್ತಿರುವರು.

ಮಹಾತ್ಮರ ಕೆಂಪೋಕ್ತ ಸೂಚನೆ

ಈ ನಡುವೆ ಗಾಂಧಿಯವರು ಸೂಚಿಸಿದ ಸಳು ಹೆಸರುಗಳಲ್ಲಿ ಆರು ಮಂದಿಯ ನೇಮಕವನ್ನು ಆಕ್ಷೇಪಿಸಿ ರಾಜರ ಪತ್ರ ಬಂದಿದೆ. ಗಾಂಧಿಜೀಯವರು ಈ ಕುರಿತು ರೆಸಿಡೆಂಟ್ ಮಿ. ಗಿಬ್ಸನರೊಡನೆ ಸಮಾತಾಡಿರುವರಲ್ಲದೆ ಪತ್ರವ್ಯವಹಾರ ನಡೆಸುತ್ತಿರುವರು. ರಾಜರ ಆಕ್ಷೇಪಕ್ಕೆ ಉತ್ತರವಾಗಿ ಮಹಾತ್ಮಾ ಗಾಂಧಿಯವರು 'ರಾಜರು ತನ್ನ ಸ್ವಂತ ಕಮಿಟಿಯನ್ನೂ ಪ್ರಜಾಪರಿಷತ್ತು ತನ್ನ ಕಮಿಟಿಯನ್ನೂ ನೇಮಿಸಿ ವರದಿ ತಯಾರಿಸಲಿ; ಕೊನೆಗೆ ರಾಜರ ಸಮಿತಿಯ ವರದಿಯಲ್ಲಿ ತಿದ್ದುಪಡಿಮಾಡುವ ಅಧಿಕಾರವನ್ನು ಪರಿಷತ್ತು ಇಟ್ಟುಕೊಳ್ಳುವದು-ಅಥವಾ ಪರಿಷತ್ತಿನ ಸಮಿತಿಯೇ ತನ್ನ ವರದಿಯನ್ನೊಪ್ಪಿಸುವದು' ಎಂದಿರುವರು. ರಾಜರು ಗಾಂಧೀಸೂಚಿತ ಹೆಸರುಗಳನ್ನು ಕೊನೆಗೂ ಒಪ್ಪದಿದ್ದಲ್ಲಿ ಪ್ರಜಾಪರಿಷತ್ತಿನವರ ಸಮಿತಿಯು ತಾನಾಗಿ ಕಾರ್ಯಾರಂಭ ಮಾಡಲಿರುವದೆಂದು ತಿಳಿದುಬರುತ್ತದೆ.

ತಾಲ್ಚಾರ್ ಒಪ್ಪಂದ

ಒರಿಸ್ಸಾ ಸಂಸ್ಥಾನಗಳ ರಾಜಕೀಯ ಏಜಂಟರೊಳಗೂ ಅಲ್ಲಿಯ ಪ್ರಜಾಪ್ರಮುಖರಾದ ಶ್ರೀ| ಹರಿಕೃಷ್ಣ ಮೆಹತಾಬರೊಳಗೂ ತಾಲ್ಚಾರ್ ಸಂಸ್ಥಾನದ ಪ್ರಜೆಗಳ ಸಂಕಷ್ಟನಿವಾರಣೆಗಾಗಿ ಮಾರ್ಚ 21ರಲ್ಲಿ ಒಂದು ಒಪ್ಪಂದವು ನಡೆದಿತ್ತು. ಈಗ ಆ ಒಪ್ಪಂದದಂತೆ ಸರಕಾರವು ನಡೆಯುದಿರುವದನ್ನು ಖಂಡಿಸಿ ಮ. ಗಾಂಧಿಯವರು "ತಮ್ಮ ವಾಗ್ದಾನದಂತೆ ತಾವು ನಡೆಯಲು ವಿಳಂಬಮಾಡುವದು ಅಪಾಯಕರ ಮಾತ್ರವಲ್ಲ, ತಕ್ಷೀರೂ ಆಗುವದು" ಎಂದು ಹರಿಜನದಲ್ಲಿ ಬರೆದಿದ್ದಾರೆ.

ಏಪ್ರಿಲ್ 27ಕ್ಕೆ ಗಾಂಧಿ-ಬೋಸ್ ಸಮ್ಮಿಳನ

ಪಂಡಿತ ನೆಹರುಗಳ ಮಧ್ಯಸ್ಥಿಕೆಯಿಂದಾಗಿ ಗಾಂಧೀ--ಬೋಸ್ ಸಂಭಾಷಣೆಯು ಏಪ್ರಿಲ್ 27ಕ್ಕೆ ಕಲ್ಕತ್ತದಲ್ಲಿ ನಡೆಯುವ ಏರ್ಪಾಡಾಗಿದೆ. ಮಹಾತ್ಮಾ ಗಾಂಧಿಯವರು ತಾ. 24ಕ್ಕೆ ರಾಜಕೋಟೆಯಿಂದ ಹೊರಟು ತಾ, 27ಕ್ಕೆ ಕಲ್ಕತ್ತವನ್ನು ಸೇರಿ ಆ ದಿನವೇ ವರ್ಕಿಂಗ್ ಕಮಿಟಿಯ ರಚನೆಯ ಕುರಿತು ಬೋಸರೊಡನೆ ಸಂಭಾಷಿಸಲಿರುವರು. 28ಕ್ಕೆ ವರ್ಕಿಂಗ್ ಕಮಿಟಿಯು ಆ ಮೇಲೆ ಅ. ಇ. ಕಾ. ಕಮಿಟಿಯ ಸಭೆಗಳು ಕಲ್ಕತ್ತದಲ್ಲಿ ಸೇರಲಿರುವವು. ಆರೋಗ್ಯ ಸಂಪಾದನೆಗಾಗಿ ಜಾಮದೋಬಾ(ಜಾಂಬಿಲ್ಲ?)ಗೆ ಹೋಗಿದ್ದ ಬೋಸರು ತಾ, 21ರಲ್ಲಿ ಕಲ್ಕತ್ತೆಗೆ ಮರಳಿ ಸುಮಾರು 20 ಸಾವಿರ ಜನರಿಂದ ಸಂಭ್ರಮದ ಸ್ವಾಗತ ಪಡೆದರು.

ಬಂಗಾಳ ಮಂತ್ರಿಮಂಡಲ

ಕಲ್ಕತ್ತಾ ಮುನಿಸಿಪಲ್ ಬಿಲ್ಲಿನ ಸಂಬಂಧವಾಗಿ ಬಂಗಾಳ ಮಂತ್ರಿಮಂಡಲದಲ್ಲಿ ಒಡಕೆದ್ದು ಹಿಂದೂಮಂತ್ರಿಗಳು ರಾಜಿನಾಮೆಕೊಡುವರೆಂಬ ಸುದ್ದಿ ಹಬ್ಬಿತ್ತು. ಈಗ ಆ ಮಸೂದೆಯನ್ನು ಮುಂದರಿಸಿಟ್ಟಿರುವರು. ಆ ನಡುವೆ ಇತ್ತಂಡಕ್ಕೂ ಒಪ್ಪಿಗೆಯಾಗುವ ರೀತಿಯಲ್ಲಿ ತಿದ್ದುಪಡಿಮಾಡುವ ಆಲೋಚನೆ ನಡೆಯುತ್ತಿದೆ.

ಮೊಜದಿಯಾ ಕೈಲ್ಸೇ ಅವಘಡ

ಈ ಅವಘಡದ ಕುರಿತು ಕೂಲಂಕಷ ವಿಚಾರಣೆ ನಡೆಸಬೇಕೆಂಬ ಸೂಚನೆ ಬಂಗಾಳ ಎಸೆಂಬ್ಲಿಯ ಮುಂದೆ ಬಂದಿದೆ. ಆ ವಘಡದಲ್ಲಿ ಮರಣಹೊಂದಿದ ಶ್ರೀ ಮನೋರಂಜನ ಬೆನರ್ಜಿ ಮತ್ತು ಶ್ರೀ ಬಿರೇಂದ್ರನಾಥ ಮಜುಮ್‌ದಾರ್ (ಇಬ್ಬರೂ ಕಾಂಗ್ರೆಸ್ ಎಂ. ಎ. ಎ ಗಳು) ಇವರ ಸಂಬಂಧಿಕರೊಡನೆ ರಾಷ್ಟ್ರಪತಿ ಬೋಸರು ಸಹಸಂತಾಪ ಸೂಚಿಸಿರುವರು.

ಹೈದರಾಬಾದು ಸತ್ಯಾಗ್ರಹದ ಕುರಿತು ಕಾಂಗ್ರೆಸಿನ ಅಭಿಮತ

ಪಂಡಿತ್ ಜವಾಹಿರಲಾಲರು ಹೈದರಾಬಾದು ಸತ್ಯಾಗ್ರಹದ ಕುರಿತು ಕಾಂಗ್ರೆಸ್ ಧೋರಣೆಯನ್ನು ದಯಾನಂದ ಮಿಶ್ನಿನ ಶ್ರೀ ದೇವಚಂದ್‌ರವರಿಗೆ ಬರೆದೊಂದು ಪತ್ರದಲ್ಲಿ ವಿಶದೀಕರಿಸಿದ್ದಾರೆ. ಲುಧಿಯಾನಾ ಪರಿಷತ್ತಿನಲ್ಲಿ ಆರ್ಯಸಮಾಜಿಕರು ಪ್ರಾರಂಭಿಸಿದ ಹೈದರಾಬಾದು ಸತ್ಯಾಗ್ರಹವನ್ನು ಖಂಡಿಸಲಿಲ್ಲ, ಅದನ್ನು ಜಾತೀಯ ತಾ ಚಳವಳಿವೆಂದು ಎಣಿಸಿದ್ದೂ ಇಲ್ಲ. ಸತ್ಯಸ್ಥಿತಿಯೆಂದರೆ ಹೈದರಾಬಾದಿನಲ್ಲಿ ಆರ್ಯಸಮಾಜಿಕರಿಗೆ ಹಲವು ಸಂಕಷ್ಟಗಳಿವೆಯೆಂದೂ ಅವುಗಳ ನಿವಾರಣೆಗಾಗಿ ಅವರು ಹೋರಾಡಿದರೆ ಅದರಲ್ಲಿ ಜಾತೀಯತೆಯೇನೂ ಇಲ್ಲವೆಂದೂ ಅಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿತ್ತು. ಆದರೆ ಈ ರೀತಿಯ ಸತ್ಯಾಗ್ರಹದಿಂದ ಹೈದರಾಬಾದು ಸರಕಾರವು ರಾಷ್ಟ್ರೀಯ ಚಳವಳವನ್ನೇ ಜಾತೀಯ ಚಳವಳವೆಂದು ಆರೋಪಿಸುವದಕ್ಕೆ ಕಾರಣ ದೊರಕುವದರಿಂದ ಅದು ಅಕಾಲಿತವಾದುದೆಂದಿಷ್ಟೇ ಅಲ್ಲಿ ಸೂಚನೆಯಾದುದು. ಕಾಂಗ್ರೆಸು ಪ್ರತ್ಯಕ್ಷವಾಗಿಯಾಗಲೀ, ಅಪ್ರತ್ಯಕ್ಷವಾಗಿಯಾಗಲೀ ಹೈದರಾಬಾದು ಸರಕಾರವನ್ನು ಸಮರ್ಥಿಸುವದೆಂಬ ಪ್ರಶ್ನೆಯೇ ಇಲ್ಲ" ಎಂದು ಪಂಡಿತ ನೆಹರುಗಳ ಹೇಳಿಕೆ.

ಲಾಹೋರು ಕೃಷಿಕ ಸತ್ಯಾಗ್ರಹ

ಲಾಹೋರುಕೃಷಿಕರು ಸುಮಾರು ಐದು ವಾರಗಳಿಂದ ಎಸೆಂಬ್ಲಿ ಭವನದೆದಿರು ತಮ್ಮ ಸಂಕಷ್ಟನಿವಾರಣೆಗಾಗಿ ಸತ್ಯಾಗ್ರಹವಾಚರಿಸುತಿದ್ದಾರೆ ಕಳೆದ ತಾ. 20ರಲ್ಲಿ ಎಸೆಂಬ್ಲಿ ಸಭೆ ನಡೆಯುತಿದ್ದಾಗ ಸತ್ಯಾಗ್ರಹಿಗಳದಳವೊಂದು ಬಂದು ತಮ್ಮ ಘೋಷಣೆಗಳನ್ನೆಬ್ಬಿಸಿತು. ಒಳಗಿದ್ದ ಮೆಂಬರರು ಕೆಲವರು ಹೊರಗೋಡಿದರು. ಪೋಲೀಸರವರನ್ನು ದಸ್ತಗಿರಿಮಾಡಿದ್ದಾರೆ. ಆ ಮೇಲೆ ತಮ್ಮ ಕೂಸುಗಳೊಂದಿಗೆ ಬಂದು ಸತ್ಯಾಗ್ರಹ ನಡೆಸಿದ 12ಮಂದಿ ಸ್ತ್ರೀಯರ ದಸ್ತಗಿರಿಯೂ ನಡೆದು ಅವರಿಗೆಲ್ಲಾ ಶಿಕ್ಷೆ ವಿಧಿಸಲ್ಪಟ್ಟದೆ,

ಬೊಂಬಾಯಿ ಸರಕಾರದ ಧೋರಣೆ

ಹೈದರಾಬಾದು ಸತ್ಯಾಗ್ರಹದ ಸಂಬಂಧದಲ್ಲಿ ಜಾತೀಯ ಕಲಹಗಳನ್ನುದ್ರೇಕಿಸುವ ಅಥವಾ ಹಿಂಸಾತ್ಮಕ ಪ್ರೇರಣೆಯನ್ನುಂಟುಮಾಡುವ ಬೊಂಬಾಯಿ ಪ್ರಾಂತ್ಯದ ಪತ್ರಿಕೆಗಳಿಗೆ ಸರಕಾರವು ತಡೆಹಾಕುವದೆಂದೂ ಹೈದರಾಬಾದಿನ ಮಂತ್ರಿ ಮಿ. ಅಕ್ಬರ್ ಹೈದರಿಯವರಿಗೆ, ಬೊಂಬಾಯಿಸರಕಾರವನ್ನು ಟೀಕಿಸಲಿರುವಷ್ಟೇ ಅಧಿಕಾರವನ್ನು ನಿಜಾಮಸರಕಾರದ ಟೀಕೆಯ ಮಟ್ಟಿಗೂ ಪತ್ರಿಕೆಗಳಿಗೆ ಕೊಟ್ಟಿರುವೆನೆಂದೂ ತಾನು ತಿಳಿಸಿರುವೆನಾಗಿಯೂ ನಾಮದಾರ ಕೆ. ಎಮ್. ಮುನ್ಷಿಯವರು ಬೊಂಬಾಯಿ ಎಸೆಂಬ್ಲಿಯಲ್ಲಿ ತಿಳಿಸಿರುವರು.

ರಬ್ಬರ್ ಮೊಹರುಗಳು ಬೇಕಾದ ನಮೂನೆಯಲ್ಲಿ ಸುಲಭ ದರದಲ್ಲಿ ಸಕಾಲದಲ್ಲಿ ತಯಾರಿಸಿ ಕೊಡಲ್ಪಡುತ್ತವೆ.

ವಿವರಗಳಿಗೆ ಬರೆಯಿರಿ ಯಾ ಸ್ವತಃ ಬಂದು ವಿಚಾರಿಸಿರಿ.

ನವಭಾರತ ಬುಕ್ ಡಿಪ್ಪೊ, ಉಡುಪಿ.

Degrees: Books: Medicines.

Free H. L. M. S., H. M. B., H. M. D. etc Free Homeo-Ayur-Unani-Naturo degrees, by post also—Practitioners also get scons Homeo Materiamedica, Rs. 5. Homeo-Practice book Rs. 4. Insanity Cure Pills Rs. 10. Enclose 2 annas stamps:—

Principal, Indian Homeopathic Institute and Society (Govt. Regd.)
P. O. MAHUVA, (Kathiawar Dt. India)



To Insure is
The Husband's duty. The wife's right and the child's Claim Hence seekfor a policy of
THE ASAIN SASURANCE CO., LTD.
The safest and one of the largest Indian Concerns,
Head Office:– Asian Buildings Ballard Estate, Bombay.
Branch Office: – Hampankatta, Mangalore.
ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.
ಲಾಭದಾಯಕವಾದ ಮತ್ತು ಸುಭದ್ರತೆಯ ನಿಧಿಯನ್ನೊಳಗೊಂಡ ಈ ಕಂಪೆನಿಯಲ್ಲಿ ನಿಮ್ಮ ವಿಮಾ ಇಳಿಸಿರಿ.
ಏಜಂಟರು ಪ್ರಾಮುಖ್ಯ ಪಟ್ಟಣಗಳಲ್ಲೆಲ್ಲಾ ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
J. A. PUTRAN, Branch Manager, Mangalore.

ವಿದೇಶ ವಿಚಾರ

ಅಧ್ಯಕ್ಷ ರೂಸ್‌ವೆಲ್ಟರಿಗೆ ಮುಸಲನಿಯ ಉತ್ತರ

೧೯೪೨ರಲ್ಲಿ ನಡೆಯಲಿರುವ 'ರೋಮ್ ಸ್ವಾತಂತ್ರ್ಯ ಪ್ರದರ್ಶನ'ದ ಕಾರ್ಯಕಾರೀ ಮಂಡಲಿಯ ಸಭೆಯಲ್ಲಿ ಭಾಷಣಮಾಡುವಾಗ ಡಿಕ್ಟೇಟರ್ ಮುಸಲನಿಯು ಪ್ರೆಸಿಡೆಂಟ್ ರೂಸ್‌ವೆಲ್ಟರ ಸೂಚನೆಗಳಿಗೆ ಉತ್ತರವಿತ್ತಿದ್ದಾನೆ. 'ಏಕ್ಸಿಸ' ರಾಷ್ಟ್ರಗಳನ್ನು ಯುದ್ಧೋನ್ಮತ್ತರಾಷ್ಟ್ರಗಳ ಸ್ಥಾನದಲ್ಲಿರಿಸುವುದು ಅನ್ಯಾಯ. ಹತ್ತುವರುಷಗಳ ಗ್ಯಾರಂಟೀ ಕೇಳುವದು ಅಷ್ಟೇ ಹಾಸ್ಯಾಸ್ಪದ. ಪರಿಷತ್ತನ್ನು ಕರೆದಲ್ಲಿ ಅಮೇರಿಕವು ಪದ್ಧತಿಯಂತೆ ಪ್ರೇಕ್ಷಕರ ಸ್ಥಾನದಲ್ಲೇ ಇರಬಹುದು; ಆ ಪರಿಷತ್ತಿನಲ್ಲಿ ಪಕ್ಷಪಾತವುಳ್ಳವರ ಸಂಖ್ಯೆಯೇ ಹೆಚ್ಚಾಗಿ ನ್ಯಾಯ ದೊರೆಯಲಾರದೆಂದು ಹಿಂದಿನ ಅನುಭವದಿಂದಲೇ ನಮಗೆ ಗೊತ್ತು ಎಂದು ಹೇಳಿ ಮುಸಲನಿಯು ತಾವು ರೂಸ್‌ವೆಲ್ಟರಿಗೆ ಉತ್ತರ ಕೊಡಲಿ, ಕೊಡದಿರಲಿ, ಜರ್ಮನಿ ಇಟಲಿ ಸಂಬಂಧವು ಕೇವಲ ಶಾಂತಿ ಮತ್ತು ನ್ಯಾಯಪಾಲನೆಯ ಪ್ರೇರಣೆಯಿಂದಾಯಿತೆಂದೂ, ಅವು ಯುದ್ಧಾಪೇಕ್ಷೆಯಿಂದಿರುವವೆನ್ನುವದು ಶುದ್ಧ ಅನ್ಯಾಯವೆಂದೂ ಹೇಳಿದ್ದಾನೆ. ಯುರೋಪಿನ ಸ್ಥಿತಿಗತಿಗಳ ಅಜ್ಞಾನದಲ್ಲಿರುವ ಕೆಲವರು ಏನೇನೋ ಗಾಳಿಗೋಪುರಗಳನ್ನು ಕಟ್ಟುತಿರುವರಾದರೂ, ತಮ್ಮ ಜನ ಮತ್ತು ಸಂಗತಿಗಳ ಸಂರಕ್ಷಣೆಯ ಕರ್ತವ್ಯ ಪ್ರೊಂಟೇ ತಪ್ಪದೆಂದೂ, ತಾನಿರುವದು 'ನ್ಯಾಯಭರಿತ ಶಾಂತಿ'ಗಾಗಿ ಎಂದೂ ಹೇಳಿದ್ದಾನೆ.

ಬ್ರಿಟಿಷರ ರಕ್ಷಣಾ ಹಂಚಿಕೆಗಳು

ಬ್ರಿಟಿಷ್ ಸರಕಾರವು ಯುದ್ಧಕಾಲದ ರಕ್ಷಣೋಪಾಯಗಳನ್ನು ಭರದಿಂದ ಸಾಗಿಸುತ್ತಿದೆ. ಯುದ್ಧಸಾಧನಗಳ ಹಾಗೂ ಇತರ ಹಂಚಿಕೆಗಳಿಗಾಗಿ ಪ್ರತ್ಯೇಕ ಮಂತ್ರಿಯೊಬ್ಬನನ್ನು ನೇಮಿಸುವ ನಿರ್ಧಾರವಾಗಿ ಡಾ| ಬರ್ಗಿನ್‌ರವರು ಈ ಸಪ್ಲೈ ಮಂತ್ರಿ ಸ್ಥಾನಕ್ಕೆ ನೇಮಕ ಹೊಂದಿರುವರು.

ವಿಮಾನಧಾಳಿಯ ನಿವಾರಣೋಪಾಯಗಳ ಶೋಧನೆಗಾಗಿ ರಚಿಸಲ್ಪಟ್ಟ ಸಮಿತಿಯು ತನ್ನ ವರದಿಯಲ್ಲಿ ಧಾಳಿಯ ಕಾಲದ ರಕ್ಷಣೋಪಾಯಕ್ಕಾಗಿ ದೊಡ್ಡ ಸಾಮೂಹಿಕ 'ಶೆಲ್ಟರ'ನ್ನು ಕಟ್ಟುವದಕ್ಕಿಂತಲೂ ಸಣ್ಣ ಸಣ್ಣ ರಕ್ಷಣಾಲಯಗಳನ್ನು ರಚಿಸುವದುತ್ತಮವೆಂದು ಸೂಚಿಸಿರುವದು.

ರಶ್ಯಾ–ಇಂಗ್ಲೆಂಡ್ ಒಪ್ಪಂದದ ಸಾಧ್ಯಾಸಾಧ್ಯತೆ

ರಸ್ಯಾ ಇಂಗ್ಲೆಂಡುಗಳೊಳಗಣ ಒಪ್ಪಂದವೀಗ ಕೈಗೂಡುವ ಲಕ್ಷಣಗಳು ಕಂಡು ಬರುತ್ತಿವೆ. ಕಳೆದ ವಾರದ ವರೆಗೆ ರಷ್ಯವು ಇಂಗ್ಲೆಂಡಿನ ಆಶ್ವಾಸನೆ, ಗ್ಯಾರಂಟಿಗಳಲ್ಲಿ ಭರವಸೆಯಿಡದೆ, ತನಗೆ ಸಂಬಂಧಿಸದ ಯಾವ ಯುದ್ಧದಲ್ಲಿಯೂ ಭಾಗವಹಿಸುವಂತಿಲ್ಲವೆಂಬ ಧೋರಣೆಯಿಂದಿದ್ದಿತಂತೆ ಆದರೆ ಈಗ ಆ ಧೋರಣೆಯಲ್ಲಿ ಮಾರ್ಪಾಡಾಗಿ ಆಕ್ಷೇಪ ವಿನಾ ಯಾವ ಸಂದರ್ಭದಲ್ಲಾದರೂ ಫೇಸಿಸ್ಟ ರಾಷ್ಟ್ರಗಳನ್ನು ವಿರೋಧಿಸುವ ಸಿದ್ಧತೆಯನ್ನದು ಸೂಚಿಸಿರುವದು. ಅದಕ್ಕಾಗಿ ಕೆಲವು ಸ್ಪಷ್ಟ ಸೂಚನೆಗಳನ್ನದು ಕೊಟ್ಟಿರುವದು. ಬ್ರಿಟಿಷ್ ಮಂತ್ರಿಮಂಡಲವಲ್ಲಿ ಅವುಗಳ ಪರಾಮರ್ಶೆಯಾಗಲಿದೆ. ಇದರಿಂದ ಬರ್ಲಿನಿನಲ್ಲಿ ತಳಮಳವೆದ್ದಿದೆ. ಹಿಟ್ಲರನು ಶಾಂತಿಯ ಭರವಸೆ ಕೊಟ್ಟಲ್ಲಿ ಈ ಒಪ್ಪಂದವಿಡೀ ಕುಸಿದು ಬೀಳಬಹುದೆಂದೂ, ಆದಕ್ಕಾಗಿ ಒಪ್ಪಂದದ ನಿರ್ಣಯವಾದರೂ, ರೀಚ್‌ಸ್ಟಾಗ್ ಭಾಷಣವಾಗುವ ವರೆಗೆ ಅದನ್ನು ಪ್ರಕಟಿಸುವಂತಿಲ್ಲವೆಂದೂ ತಿಳಿಯಬರುತ್ತದೆ.

ಹಿಟ್ಲರನ ಹಂಚಿಕೆ

ಈ ನಡುವೆ ಇಟಲಿ ಜರ್ಮನಿಗಳೂ ಸಣ್ಣ ರಾಷ್ಟ್ರಗಳ ಸಹಕಾರಕ್ಕಾಗಿ ಪ್ರಯತ್ನಿಸುತ್ತಿವೆ. ಅವುಗಳೊಡನೆ ನೀವು ಜರ್ಮನಿಯು ಆಕ್ರಮಣಮಾಡುವುದೆಂದು ಆಲೋಚನೆ ಮಾಡಿರುವಿರಾ? ಎಂದು ಪ್ರಶ್ನಿಸಲಾಗಿದೆ. ಈ ಪ್ರಶ್ನೆಗೆ ಅವು ಅಸ್ಪಷ್ಟ ಉತ್ತರಗಳನ್ನು ಕೊಡಬಹುದೆಂದೂ ಆ ಉತ್ತರಗಳನ್ನು ಉದಾಹರಿಸಿ ಹಿಟ್ಲರನು ಭಾಷಣಮಾಡಲಿರುವನೆಂಬೂ ತಿಳಿದುಬರುತ್ತದೆ.

ಬಲ್ಗೇರಿಯದ ಬೇಡಿಕೆ

ಫಾಸಿಸ್ಟ ಸರಕಾರಗಳ ಪ್ರೇರಣೆಯಿಂದ ಬಲ್ಗೇರಿಯಾ ರಾಜ್ಯವು ಪೋಲೆಂಡ್, ರುಮೇನಿಯಾ, ಗ್ರೀಸಗಳೊಡನೆ ತನ್ನ ಸ್ಥಳಗಳನ್ನು ಬಿಟ್ಟುಕೊಡಬೇಕೆಂದು ಕೇಳಿರುವದು. ಬಾಲ್ಕಾನ್ ಪ್ರದೇಶದಲ್ಲಿ ಗೊಂದಲವೆಬ್ಬಿಸಲು ಇಟಲಿ ಜರ್ಮನಿಗಳು ಬಲ್ಗೇರಿಯವನ್ನು ಉಪಯೋಗಿಸುತ್ತಿರುವಂತೆ ಕಾಣುತ್ತಿದೆ. ತಮ್ಮ ಸಾಲಿನಲ್ಲಿ ಬಲ್ಗೇರಿಯವನ್ನು ಸೇರಿಸಿಕೊಳ್ಳಬೇಕೆಂದು ಶಾಂತಿಸಾಧಕ ರಾಷ್ಟ್ರಗಳು ಮಾಡುತ್ತಿರುವ ಯತ್ನವು ಕೈಗೂಡುವಂತಿಲ್ಲ. ತನ್ನ ಬೇಡಿಕೆಯು ಮಾನ್ಯಮಾಡಲ್ಪಡದಿದ್ದಲ್ಲಿ ತಾನು ತಟಸ್ಥನಾಗಿರುವೆನೆಂದು ಬಲ್ಗೇರಿಯದ ಹೇಳಿಕೆ.

ಡಾ। ಗೋಬೆಲ್ಸನ ಧಿಕ್ಕಾರ

"ಠಕ್ಕತನ ಮತ್ತು ತಿಳಿಗೇಡಿತನ"ವೆಂದು ಜರ್ಮನಿಯ ಪ್ರಚಾರ ಮಂತ್ರಿ ಡಾ। ಗೋಬೆಲ್ಸನು ಬ್ರಿಟಿಷ್ ವಿದೇಶಮಂತ್ರಿ ಲೋರ್ಡ್ ಹೆಲಿಫೇಕ್ಸರು ಪಾರ್ಲಿಮೆಂಟಿನ ಲ್ಲಿತ್ತ ಭಾಷಣವನ್ನು ಸಂಬೋಧಿಸಿದ್ದಾನೆ. ವಿಮರ್ಶಾತ್ಮಕ ಬುದ್ಧಿಯುಳ್ಳವನು ಬ್ರಿಟಿಷರ ಧೋರಣೆಯನ್ನು ತಿಳಿಯುವುದಕ್ಕೂ ನಂಬುವುದಕ್ಕೂ ಅತ್ಯಂತ ಕಷ್ಟವಾಗಿದೆ ಎಂದು ಹೇಳಿ, ಇದು ಬ್ರಿಟಿಷರ ಯುದ್ಧಪಕ್ಷೀಯರ ರಾಜಕೀಯ ಕುತರ್ಕವೆಂದು ಲೋರ್ಡ್‌ಹೆಲಿಫೇಕ್ಸರ ಭಾಷಣವನ್ನು ಖಂಡಿಸಿದ್ದಾನೆ.

ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳು.

ನಮ್ಮ ಉಪಸಂಪಾದಕರಾದ ಶ್ರೀ। ಎನ್. ಎಸ್. ಶೆಟ್ಟಿ 'ನವಯುಗ'ದ ಕಾರ್ಯ ನಿಮಿತ್ತ ಮುಂಬಾಯಿ, ಪುಣೆ, ಧಾರವಾಡ ಮೊದಲಾದ ಕೇಂದ್ರಗಳಲ್ಲಿ ಪ್ರಯಾಣ ಬೆಳೆಸಿದ್ದರು. ಈ ಸಂದರ್ಭದಲ್ಲಿ ಹಲವು ಮಹನೀಯರು ಹಾಗೂ ಹಲವು ಸಂಸ್ಥೆಗಳು ನವಯುಗದ ಕಾರ್ಯಭಾಗದಲ್ಲಿ ನಾವು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಾಗಿ, ಪ್ರೇಮಾಭಿಮಾನದಿಂದ ನೆರವಾಗಿರುವರು. ನಾವೀ ಸಂದರ್ಭದಲ್ಲಿ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಇವರೆಲ್ಲರಿಗೂ ಅರ್ಪಿಸದಿರಲಾರೆವು.

ಮುಂಬಾಯಿ ಕರ್ನಾಟಕ ನ್ಯಾಟ್ ಸ್ಕೂಲಿನ ಅಧ್ಯಕ್ಷ, ಕಾರ್ಯದರ್ಶಿ, ಹಾಗೂ ಅಧ್ಯಾಪಕ ಮಂಡಳಿಗೂ, ಕರ್ನಾಟಕ ಯಂಗ್ ಸ್ಟೂಡೆಂಟ್ಸ್ ಫೂಟ್‌ಬಾಲರ್ಸ್– ಈ ಸಂಸ್ಥೆಯ ಕಾರ್ಯಕಾರಿ ಮಂಡಲಕ್ಕೂ ಬಂಟರ ಯಾನೆ ನಾಡವರ ಸಂಘದ ಆಡಳಿತ ಮಂಡಳಿ ಸದಸ್ಯವರ್ಗಕ್ಕೂ, ಮೊಗವೀರ ಫ್ರೀ ನ್ಯಾಟ್‌ಸ್ಕೂಲಿನ ವ್ಯವಸ್ಥಾಪಕಮಂಡಳಿಗೂ, ಹಾಗೆಯೇ ಮುದ್ದಣ್ಣ ವಾಚನಾಲಯ, ಕರ್ನಾಟಕ ಸಂಗೀತಸಭಾ ಕರ್ನಾಟಕ ಸಂಘ ಮೊದಲಾದ ಸಂಸ್ಥೆಗಳಿಗೂ ನಾವು ಕೃತಜ್ಞರಿರುವೆವು. ಮೇಲಾಗಿ ಮುಂಬಾಯಿಯ ಹಲವು ಹೊಟೆಲು ಮಾಲಿಕರು ತಾವು ಚಂದಾದಾರರಾಗಿ ಸೇರಿ ಮತ್ತು ಚಂದಾದಾರರನ್ನು ಒದಗಿಸಿಕೊಟ್ಟು, ನಮಗೆ ಹಲವು ರೀತಿಯಲ್ಲಿ ಪ್ರೇಮಗೌರವದಿಂದ ನೆರವಾಗಿರುವರು. ಇವರಿಗೆ ನಾವು ತುಂಬಾ ಆಭಾರಿಗಳಿರುವೆವು. ಶ್ರೀಯುತರುಗಳಾದ ಕೆ. ವಿ. ಹೆಗ್ಡೆ, ಎಮ್. ಎನ್. ಹೆಗ್ಡೆ, ಪಾಂಗಾಳ ಮಹಾಬಲಶೆಟ್ಟಿ, ಯು ಕೆ. ರಂಗ, ಕೆ. ಎಲ್. ಉಪಾಧ್ಯಾಯ, ವಿ. ಆರ್. ಪ್ರಭು, ಡಾ| ವೆಂಕಟಪ್ಪಯ ಶೆಟ್ಟಿ, ಡಾ| ಕಾಂಚನ್, ಡಾ| ಅಧ್ಯಂತಾಯ, ಡಾ| ಯು. ಎಸ್. ರಾವ್, ಎಂ. ನಾರಾಯಣ ರಾವ್, ಬಿ. ಮಾಮನರಾವ್, ಬಿ. ಜಿ. ಶೆಟ್ಟಿ, ಎಮ್. ಎಸ್. ಶೆಟ್ಟಿ, ಎಸ್. ಸಂಜೀವಶೆಟ್ಟಿ, ಬಿ. ಎನ್. ಶೆಟ್ಟಿ, ಸಿ. ಎಸ್. ಹೆಗ್ಡೆ, ಎಮ್. ಎಸ್. ಭಂಡಾರಿ, ಎಚ್. ರಮೇಶ, ಕೆ. ಎ. ಹೆಬ್ಬಾರ್ ಮೊದಲಾದ ಮಹನೀಯರಿಗೆ ನಮ್ಮ ಹೃತ್ಪೂರ್ವಕವಾದ ವಂದನೆಗಳು. ಹಾಗೂ ನಮಗೆ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ರೀತಿಯಲ್ಲಿ ಹಲವು ತೆರನಾಗಿ ನೆರವಾದ ನಮ್ಮೆಲ್ಲಾ ಬಂಧುಮಿತ್ರರಿಗೂ, ಚಂದಾದಾರರಿಗೂ, ಜಾಹೀರಾತುದಾರರಿಗೂ ತಿರುಗೊಮ್ಮೆ ನಾವೀ ಸಂದರ್ಭ ನಮ್ಮ ಕೃತಜ್ಞತೆಯನ್ನರ್ಪಿಸುವೆವು.

ಪುಣೆಯಲ್ಲಿ— ನವಯುಗದ ಮೇಲ್ಮೆಯನ್ನು ಬಯಸಿ, ಅತ್ಯಾದರದಿಂದ ಹಲವು ಚಂದಾದಾರರನ್ನು ಒದಗಿಸಿಕೊಟ್ಟ ಶ್ರೀಯುತರುಗಳಾದ ಎ. ಎಸ್. ಆಳ್ವ, ಎಚ್. ವಾಸುದೇವ್, ಕೊಸಪ್ಪ ಮೊದಲಾದವರಿಗೆ ನಮ್ಮ ವಂದನೆಗಳು.

ಧಾರವಾಡದಲ್ಲಿ—ಅಖಿಲ ಕನ್ನಡನಾಡಿನ ಪ್ರಸಿದ್ಧ ಬರೆಹಗಾರರೂ, ತಾತ್ವಿಕರೂ ಆದ ಶ್ರೀ. ದ. ರಾ. ಬೇಂದ್ರೆ, ಎಂ. ಎ.— ಇವರು ಆ ಸಂದರ್ಭದಲ್ಲಿ ನಮಗೆ ಹಲವು ಅಮೂಲ್ಯ ಸಲಹೆಯನ್ನಿತ್ತು, ಹಲವು ಮಹನೀಯರ ಪರಿಚಯವನ್ನು ದೊರಕಿಸಿಕೊಟ್ಟು, ನಮ್ಮನ್ನು ತುಂಬಾ ಪ್ರೋತ್ಸಾಹಿಸಿರುವರು. ಇವರಿಗೆ ನಮ್ಮ ಧನ್ಯವಾದಗಳು ಜಯಕರ್ನಾಟಕದ ಸಂಪಾದಕ ಶ್ರೀ| ಬೆಳಗಾಮಿ ರಾಮಚಂದ್ರರಾಯರು, ಬಿ. ಎ. ಇವರಿಗೂ' ಶಕ್ತಿ ರಾಮರಾವ್, ಡಾ ಮಾಳವಾಡ, ಶ್ರೀಮತಿ ಭಾಗೀರಥಿಬಾಯಿ, ಕುಮಾರಿ ಪದ್ಮಾವತಿ ಶೆಟ್ಟಿ ಬಿ. ಎ. ಎಲ್‌ಟಿ. ಶ್ರೀಯುತರುಗಳಾದ ಜಠಾರ, ಬಿ.ಎ ಎಲ್, ಎಲ್, ಬಿ, ಜಯಂತಿಯ ಸಂಪಾದಕರಾದ ಶ್ರೀ। ಪಾಟೀಲ ಮತ್ತು ಬೆಟಗೇರಿ ಮೊದಲಾದ ಮಹನೀಯರಿಗೆ ನಮ್ಮ ವಂದನೆಗಳು ಸಲ್ಲತಕ್ಕದ್ದಿವೆ. ಮನೋಹರಗ್ರಂಥ ಭಂಡಾರ, ಮನೋಹರಗ್ರಂಥಮಾಲೆ, ಕರ್ನಾಟಕಇತಿಹಾಸಿಕಸಂಶೋಧನಮಂಡಲ ವನಿತಾಸೇವಾಸದನ—ಇವೇ ಮೊದಲಾದ ಸಂಘಗಳ ವ್ಯವಸ್ಥಾಪಕರಿಗೂ ನಾವು ತುಂಬಾ ಆಭಾರಿಗಳಾಗಿದ್ದೇವೆ. (ಸಂ. ನ.)

ವಿದುರಾಶ್ವತ್ಥ ಕಾಂಗ್ರೆಸ್

ಶ್ರೀಮತಿ ಕಮಲಾದೇವಿಯವರ ಮೇಲೆ ಪ್ರತಿಬಂಧಕಾಜ್ಞೆ.

ಆದರೆ

ಶ್ರೀಮತಿಯವರು ಧ್ವಜಾರೋಹಣಮಾಡಿ ಉಜ್ವಲ ಭಾಷಣಮಾಡಿದರು.

●

ಕಾಂಗ್ರೆಸ್ ಮುಂದಾಳುಗಳೂ ಸುಪ್ರಸಿದ್ಧ ಸೋಶಿಯಲಿಷ್ಟರೂ ಆದ ಶ್ರೀಮತಿ ಕಮಲಾದೇವಿಯವರು; 'ಏಪ್ರಿಲ್ ೧೫ನೇ ತಾರೀಕಿನಲ್ಲಿ ವಿದುರಾಶ್ವತ್ಥ ಕಾಂಗ್ರೆಸ್ಸಿಗೆ ಕೇವಲ ಓರ್ವ ಪ್ರೇಕ್ಷಕರಂತೆ ಬರಲು, ಕೋಲಾರ ಜಿಲ್ಲಾ ಮ್ಯಾ' ಶ್ರೀ. ಜಿ. ಸುಂದರರಾಯರು, "ಪ್ರಕೃತದಲ್ಲಿ ಯಾವ ಭಾಷಣವೂ ಮಾಡಕೂಡದು, ವಿದುರಾಶ್ವತ್ಥದಲ್ಲಿ ಅಖಿಲ ಕರ್ನಾಟಕ ಸಮತಾವಾದಿ ಸಮ್ಮೇಳನ ನಡೆಯುವುದೆಂದು ಪತ್ರಿಕೆಗಳ ಮುಖೇನ ತಿಳಿದುಬಂದಿದೆ ಅದರಲ್ಲಿ ತಾವು ಭಾಗವಹಿಸಬಾರದಲ್ಲದೆ ಇತರ ಸ್ಥಳಗಳಲ್ಲಿ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡಕೂಡ"ದೆಂಬ ಅರ್ಥ ಬರುವ ಒಂದು ನ್ಯಾಯಪತ್ರವನ್ನು ಶ್ರೀಮತಿಯವರ ಮೇಲೆ ಜಾರಿಮಾಡಲಾಯಿತು ಶ್ರೀಮತಿಯವರು ಇದನ್ನು ಹಸನ್ಮುಖಿಗಳಂತೆ ಸ್ವೀಕರಿಸಿ— "ಮಾದರಿ ಸಂಸ್ಥಾನವಾದ ಮೈಸೂರಿಗಿದು ಸಲ್ಲತಕ್ಕುದಲ್ಲ. ನಾನು ಈ ಅಧಿವೇಶನಕ್ಕೆ ಓರ್ವ ಪ್ರೇಕ್ಷಕಳಾಗಿ ಬಂದಿದ್ದೇನೆ. ಪ್ರಕೃತದಲ್ಲಿ ಪ್ರತ್ಯಕ್ಷ ವಿರೋಧ ಚಳುವಳಿ ಹೂಡಬೇಡಿರೆಂದೂ, ಸಂಸ್ಥಾನಾಧೀಶರರು ಕಾಲವುಹಿಮೆ ಅರಿತು ಕೆಲಸಮಾಡಬೇಕೆಂದೂ ಮಹಾತ್ಮಾ ಗಾಂಧಿಯವರು ಹೇಳಿರುವ ಹಿತವಚನವನ್ನು ಮೈಸೂರು ಸರಕಾರದವರು ಉಪೇಕ್ಷಿಸಿರುವುದು ತೀರಾ ಶೋಚನೀಯವಾದುದು" ಎಂಬುದಾಗಿ ಒಂದು ಹೇಳಿಕೆಯನ್ನು ಪತ್ರಿಕಾಪ್ರತಿನಿಧಿಗಳ ಭೇಟಿಯಲ್ಲಿ ತಿಳಿಸಿದರು.

ಧ್ವಜಾರೋಹಣ

ಏ. ತಾ. ೧೭ನೇ ಬೆಳಗ್ಗೆ ವಿಪರೀತ ಜನಸಂದಣಿಯಲ್ಲಿ ಪ್ರಾತಃಕಾಲ ಧ್ವಜಾರೋಹಣ ನಡೆಯಿತು, ಶ್ರೀ. ಕೆ. ಟಿ. ಸತ್ಯನಾರಾಯಣಶೆಟ್ಟರು ಮೈಸೂರುಧ್ವಜವನ್ನೂ ಶ್ರೀಮತಿ ಕಮಲಾದೇವಿಯವರು ಕಾಂಗ್ರೆಸ ತ್ರಿವರ್ಣಧ್ವಜವನ್ನೂ ಹಾರಿಸಿ ಮೈಸೂರು ಪ್ರಜೆಗಳು ಕಾಂಗ್ರೆಸ್‌ಧ್ವಜದಡಿಯಲ್ಲಿಯೇ ಹೋರಾಡಲು ಯತ್ನಿಸಬೇಕೆಂದು ತಮ್ಮ ಉಜ್ವಲ ಭಾಷಣದಲ್ಲಿ ತಿಳಿಸಿದರು.

ವಿಷಯನಿಯಾಮಕ ಸಭೆ

ಏ ತಾ. ೧೬ನೆ ಮಧ್ಯಾಹ್ನ ಮೈಸೂರು ಕಾಂಗ್ರೆಸ್ ವಿದುರಾಶ್ವತ್ಥದ ಅಧಿವೇಶನದ ವಿಷಯನಿಯಾಮಕಸಭೆಯು ಶ್ರೀ. ಹೆಚ್. ಸಿ ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಸರಕಾರದ ದಬ್ಬಾಳಿಕೆ ಖಂಡಿಸುವ ಮತ್ತು ಪ್ರಜೆಗಳ ಹಿತ ರಕ್ಷಿಸಿ ಜವಾಬ್ದಾರಿಸರ್ಕಾರ ಕೊಟ್ಟ ಔಂಧ ಸಂಸ್ಥಾನಾಧೀಶ್ವರರನ್ನು ಅಭಿನಂದಿಸುವ ಮತ್ತು ಎ. ಐ. ಸಿ. ಸಿ. ನಿರ್ಣಯದ ಪ್ರಕಾರ ರಾಜಿನಾಮೆ ಕೊಡದವರ ಮೇಲೆ ಕ್ರಮ ಜರಗಿಸುವ ಮುಂತಾದ ನಿರ್ಣಯಗಳು ಪಾಸಾದವು.

ತಾ. ೧೬ರಲ್ಲಿ ಕಮಿಟಿಸಭೆ ಜರಗಿ, ಮ. ಗಾಂಧಿಗಳ ನಾಯಕತ್ವಬೇಕೆನ್ನುವ, ಹೆಮಿಲ್ಟಿನ್ ಬಿಲ್ಡಿಂಗ್. ಸತ್ಯಾಗ್ರಹದಲ್ಲಿ ಭಾಗವಹಿಸಿದವರನ್ನು ಅಭಿನಂದಿಸುವ ಇತ್ಯಾದಿ ಠರಾವುಗಳಾದುವು.

ಏ. ತಾ. ೧೭ನೇ ಬೆಳಗ್ಗೆ ಧ್ವಜಾರೋಹಣ ಸಂಭ್ರಮ ನಡೆದು ಶ್ರೀ ಕೊಳ್ಳೂರು ಸುಬ್ಬರಾಯರು ಕಾಂಗ್ರೆಸ್ ಧ್ವಜವನ್ನೂ ಶ್ರೀಮತಿ ಅನ್ನಪೂರ್ಣ ತಿಮ್ಮಾ ರೆಡ್ಡಿಯವರು ಮೈಸೂರು ಧ್ವಜವನ್ನೂ ಹಾರಿಸಿ, ಉಜ್ವಲ ಭಾಷಣಮಾಡಿದರು.

ಶ್ರೀ. ಹೆಚ್. ಸಿ, ದಾಸಪ್ಪನವರ ಅಧ್ಯಕ್ಷತೆಯಲ್ಲಿ ವಿಷಯ ನಿಯಾಮಕ ಸಭೆ ಸೇರಲು ಶ್ರೀ. ಹೆಚ್. ಕೆ. ವೀರಣ್ಣ ಗೌಡರು "ಜಾರಿಗೆ ಬರಲಿರುವ ಫೆಡರೇಶನಿಗೆ, ದೇಶೀಯ ಸಂಸ್ಥಾನಗಳು ಸೇರುವುದಕ್ಕೆ ಅಲ್ಲಿಯ ಪ್ರಜೆಗಳಿಗೆ, ಸಂಪೂರ್ಣ ಜವಾಬ್ದಾರಿ ಸರ್ಕಾರಬಂದು ಅಲ್ಲಿಯ ಜನಗಳಿಂದ ಚುನಾಯಿತ ಪ್ರತಿನಿಧಿಗಳು, ಫೆಡರಲ್ ಅಸೆಂಬ್ಲಿಗೆ ಕಳುಹಿಸಲು ಅಧಿಕಾರ ಬರುವವರೆಗೂ, ಈ ಸಂಸ್ಥಾನವು ಫೆಡರೇಶನಿಗೆ ಸೇರುವುದನ್ನು ಕಾಂಗ್ರೆಸ್ ವಿರೋಧಿಸುತ್ತದೆ. ಎಂಬರ್ಥ ಬರುವ ಒಂದು ನಿರ್ಣಯ ಸೂಚಿಸಿದರು. ಶ್ರೀ ಗುರುವಾ ರೆಡ್ಡಿಯವರು ಇದನ್ನು ಅನುಮೋದಿಸಿದರು, ಕೊನೆಗೆ ನಿರ್ಣಯವು ಅಂಗೀಕೃತವಾಯಿತು.

ಕರ್ನಾಟಕವು ಒಡೆದು ಛಿಪ್ರಛಿಪ್ರವಾಗಿರುವುದರಿಂದ ಅವೆಲ್ಲವೂ ಒಟ್ಟುಗೂಡಿ, ಒಂದು ಪ್ರತ್ಯೇಕ ಕರ್ನಾಟಕ ಪ್ರಾಂತವಾಗಬೇಕು, ಅದಕ್ಕೆ ಸ್ವತಂತ್ರ ಕರ್ನಾಟಕವಲ್ಲಿ ಮೈಸೂರು ಸೇರಿಕೊಂಡು ಶ್ರೀಮನ್ ಮಹಾರಾಜರವರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಯಾಗಬೇಕು ಎಂಬುದಾಗಿ ಮೈಸೂರಿನ ಶ್ರೀ ಬಿ ಮರಿಯಪ್ಪನವರು ಒಂದು ನಿರ್ಣಯ ಸೂಚಿಸಲು ಆದರೆ ಅದಕ್ಕೆ ಸಂಬಂಧಪಟ್ಟ ವರ್ಕಿಂಗ್ ಕಮಿಟಿಯವರು ಪರಿಶೀಲಿಸುವರೆಂದು ಭರವಸೆಯಿತ್ತರು; ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು.

ಮುಕ್ತಾಯ

ವಿದುರಾಶ್ವತ್ಥ ಕಾಂಗ್ರೆಸ್‌ನ ಅಧಿವೇಶನವು ಈ ದಿನಕ್ಕೆ ಮುಕ್ತಾಯವಾಯಿತು ಮೂರನೆಯ ಮತ್ತು ಕೊನೆಯ ದಿನ ಬಹಿರಂಗ ಅಧಿವೇಶನವು ಶ್ರೀ. ಹೆಚ್ ಸಿ, ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಅನೇಕ ಮುಖ್ಯ ವಿಷಯಗಳನ್ನು ಪಾಸುಮಾಡಿದ ಮೇಲೆ, ಅಧ್ಯಕ್ಷರು ಮುಕ್ತಾಯ ಭಾಷಣಮಾಡಿದರು. ಅವರು ಅವರ ಭಾಷಣದಲ್ಲಿ "ಸಂಸ್ಥಾನದ ಎಲ್ಲ ಜನರೂ ಕಾಂಗ್ರೆಸ್‌ಗೆ ಸೇರಿ, ಕಾಂಗ್ರೆಸ್ ಧ್ವಜದಡಿಯಲ್ಲಿ ಹೋರಾಡಿ ಜವಾಬ್ದಾರಿ ಸರ್ಕಾರಕ್ಕೆ ಪ್ರಯತ್ನಿಸಬೇಕೆಂದು ಫೆಡರೇಶನ್‌ಗೆ ಎಲ್ಲರೂ ವಿರೋಧಿಸಬೇಕೆಂದು ತಿಳಿಸಿ ಅಧಿವೇಶನವನ್ನು ಮುಕ್ತಾಯಗೊಳಿಸಿದರು.

ಮುಂದಿನ ಅಧಿವೇಶನವು ಶಿವಮೊಗ್ಗ ಜಿಲ್ಲೆಯಲ್ಲಿ ಸೇರುವುದು.

ಮಹಿಳೆಯರ ಸಭೆ

ವಿದುರಾಶ್ವತ್ಥ ಕೂಟವು ನಡೆದಾಗ ಶ್ರೀಮತಿ ಯಶೋಧರಮ್ಮ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಮಹಿಳೆಯರ ಸಭೆಯೊಂದು ಜರಗಿ 'ಸ್ತ್ರೀ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ ನಿರ್ಣಯ ಪಾಸಾದ ನಂತರ ಸಭೆಯು ಮುಕ್ತಾಯವಾಯಿತು ಮಿಸೆಸ್ ದಾಸಪ್ಪನವರು ಉಜ್ವಲ ಭಾಷಣಮಾಡಿದರು.

ಸಮತಾವಾದಿಗಳ ಸಮ್ಮೇಳನ
ಶ್ರೀಮತಿ ಕಮಲಾದೇವಿಯವರು ಭಾಷಣಮಾಡಿಯೇ ಬಿಟ್ಟರು

ಹಾಸನದ ಶ್ರೀ ಬೋರಣ್ಣ ಗೌಡರ ಅಧ್ಯಕ್ಷತೆಯಲ್ಲಿ ಮೈಸೂರು ಕಾಂಗ್ರೆಸ್ ಸಮತಾವಾದಿಗಳ ಸಮ್ಮೇಳನವು ವಿಷಯನಿಯಾಮಕ ಸಭಾಂಗಣದಲ್ಲಿ ತಾ. 16ನೇ ಮಧ್ಯಾಹ್ನ ನಡೆಯಿತು.

ಮೊಟ್ಟಮೊದಲು ಶ್ರೀ ಗಂಗಾರೆಡ್ಡಿಯವರು ಸ್ವಾರಸ್ಯವಾದ ಬಡರೈತರ ಹಿತಕೋರುವ ಗೀತೆಹಾಡಿದ ಮೇಲೆ ಶ್ರೀ ಯಸ್. ರಾಮಸ್ವಾಮಿಯವರು ಭಾಷಣಮಾಡಿ, ಬಡವರಿಗೆ ಆಗುತ್ತಿರುವ ಕಷ್ಟಗಳನ್ನೂ ಇತರ ಮುಖ್ಯ ಸಂಗತಿಗಳನ್ನೂ ತಿಳಿಸಿದ ಮೇಲೆ ಜಾರಿಮಾಡಿರುವ ನೋಟೀಸ್ ವಿಷಯವಾಗಿ ಸಭೆಗೆ ತಿಳಿಸಿ ಭಾಷಣ ಮುಕ್ತಾಯಮಾಡಿದರು.

ತರುವಾಯ ಶ್ರೀಮತಿಯವರ ಮೇಲೆ ಪ್ರತಿಬಂಧಕಾಜ್ಞೆ ಇದ್ದರೂ, ಈ ಸಮ್ಮೇಳನದಲ್ಲಿ ಕರತಾಡನಗಳ ಮಧ್ಯೇ ಎದ್ದು ಉಜ್ವಲ ಭಾಷಣಮಾಡಿ ಸಮತಾವಾದದ ತತ್ವವನ್ನು ವಿವರಿಸಿದರು. ಶ್ರೀ. ಕೆ. ಟಿ. ಭಾಷ್ಯಂ ಮತ್ತು ಶ್ರೀ ಪಾರ್ಥಸಾರಥಿಯ ಪಂಡಿತರ ಭಾಷಣವಾದ ಮೇಲೆ, ಸಮ್ಮೇಳನ ಯಶಸ್ವಿಯಾಗಿ ನಡೆಯಲೆಂದು ಹಾರೈಸಿ ಬಂದ ಪತ್ರಗಳನ್ನು ಓದಲಾಯಿತು. ಸಭೆಯಲ್ಲಿ ಕೆಲವು ಮುಖ್ಯ ಠರಾವುಗಳು ಪಾಸಾದ ಮೇಲೆ ಶ್ರೀ ಎನ್. ಡಿ. ಶಂಕರರವರು ವಂದನೆಗಳನ್ನರ್ಪಿಸಲು "ವಂದೇ ಮಾತರಂ" ಗೀತೆಯಾದ ಮೇಲೆ, ಸಭೆಯು ಜಯಜಯಕಾರದೊಡನೆ ಮುಕ್ತಾಯವಾಯಿತು.

ನಮ್ಮ ಹೊಸ ಪ್ರತಿನಿಧಿಗಳು

ಮಂಗಳೂರು ಮಿಷನ್ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ. ವಿ. ಗಣಪತಿ ಶಾಸ್ತ್ರಿಗಳು ನವಯುಗದ ಪ್ರತಿನಿಧಿಗಳಾಗಿ ಅಧಿಕಾರ ಪಡೆದಿರುತ್ತಾರೆ ಚಂದಾದಾರರನ್ನು ಸೇರಿಸುವುದು, ಜಾಹೀರಾತುಗಳನ್ನು ಸಂಗ್ರಹಿಸುವುದು, ಏಜಂಟರನ್ನು ನೇಮಿಸುವುದು, ಇವಕ್ಕೆ ಸಂಬಂಧಿಸಿದ ಹಣವನ್ನು ವಸೂಲು ಪಡೆಯುವುದು ಈ ಕೆಲಸಗಳಿಗೆ ಅವರು ಅಧಿಕೃತರಿದ್ದಾರೆ ಇದೇ ತಾ 3೧ ರಿಂದ ಅವರು ಸಮಗ್ರ ಕರ್ನಾಟಕದಲ್ಲಿ ಸಂಚಾರಮಾಡಲಿರುವರು. ಕನ್ನಡಿಗರೆಲ್ಲರೂ ಅವರಿಗೆ ಉದಾರ ಸಹಕಾರವನ್ನೀಯಬೇಕಾಗಿ ವಿನಂತಿಸಲಾಗುತ್ತದೆ.

30–4–39 ಮೆನೇಜರ್
ನವಯುಗ

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಜಿಸ್ಟರ್ಡ್)

GONO ORIGINAL KILLER

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಟಿಕಿ ೫೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪದಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

Sole Manufacturer DR. D. N. JASANI, Vitalbhai Patel Road, BOMBAY 4

ವಾರಭವಿಷ್ಯ

ಮುಂದಾಗುವುದನ್ನು ಇಂದೇ ತಿಳಿಯಿರಿ.

(ತಾ 4-4-39ರಿಂದ ತಾ. 11-5-39ರ ವರೆಗೆ)

[ಜ್ಯೋತಿಷವು ಅವ್ಯಕ್ತವಾದವಲ್ಲ, ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಿನ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ. ಸಂ. ನ.]

ಮೇಷರಾಶಿ—

ಶರೀರದಲ್ಲಿ ದಿನೇ ದಿನೇ ಆಯಾಸವೂ ಅನಾರೋಗ್ಯವೂ ಹೆಚ್ಚುತ್ತಿರುವುದು. ಆದಕಾರಣದಿಂದಲೇ ಸ್ವಕಾರ್ಯದಲ್ಲಿ ಆಲಸ್ಯವು ಹೆಚ್ಚಾಗಿ ಜಡರಂತೆ ವರ್ತಿಸುವಿರಿ. ಶತ್ರುಜನರು ಸದಾ ಪ್ರತಿಕ್ರಿಯೆಯನ್ನು ಮಾಡಲು ಹಾತೊರೆಯುತ್ತಿರುವರು. ಅನೇಕ ಕಾರ್ಯಗಳಲ್ಲಿ ನಿಮಗೆ ಪರಾಜಯವೂ ವ್ಯರ್ಥ ವಿತ್ತನಾಶವೂ ಆಗುವುದು. ಒಂದಲ್ಲೊಂದು ಚಿಂತೆಯು ನಿಮ್ಮನ್ನು ಯಾವಾಗಲೂ ಬಿಡದು. ಅಕಸ್ಮಾತ್ ಪ್ರವಾಸ ಕಾರ್ಯಗಳು ಬರಗಿ ಬಹಳ ಕಷ್ಟ-ನಷ್ಟಗಳಿಗೆ ಗುರಿಯಾಗುವಿರಿ. ನೌಕರಿ ಭಾಗದಲ್ಲೂ ವಿದ್ಯಾವಿಷಯದಲ್ಲೂ ಹೆಚ್ಚಿನ ನಿರಾಶಾಜನಕ ಪರಿಸ್ಥಿತಿಗಳೇ ಕಂಡುಬರುತ್ತವೆ. ವಿಶೇಷವಾಗಿ ಹಣದ ಅಡಚಣೆಯಿಂದ ಪೀಡಿತರಾಗಿದ್ದರೂ ಚಿಲ್ಲರೆ ಖರ್ಚುಗಳಿಗೆ ಸಾಕಷ್ಟು ಧನಸಿಗುವುದು. ತಾ 1ರಿಂದ ವಾರಾಂತ್ಯದ ವರೆಗಿನ ದಿನಗಳು ಸಾಮಾನ್ಯ ಉತ್ತಮಗಳಾಗಿರುವವು.

ವೃಷಭರಾಶಿ—

"ಸ್ವಭಾವೋ ದುರತಿಕ್ರಮಃ" ಎಂಬ ನ್ಯಾಯದಿಂದಲೋ ಎಂಬಂತೆ ಸದಸದ್ಗ್ರಹರು ಇಷ್ಟಾನಿಷ್ಟ ಸ್ಥಾನಗತರಾಗಿರುವ ಕಾರಣ ನಿಮ್ಮ ಭಾಗಕ್ಕೆ ಈ ವಾರವು ಸಾಕಷ್ಟು ಉತ್ತಮವಾಗಿರುವುದೆಂದೇ ಹೇಳಬೇಕು. ಸತ್ಸಂಗತಿ ಸನ್ಮಾರ್ಗಾವಲಂಬಿಗಳಿಗೆ ವ್ಯಾಪಾರದಲ್ಲಿಯೂ ಉದ್ಯೋಗದಲ್ಲಿಯೂ ಉತ್ತಮ ಫಲವೇ ಲಭಿಸುವುದು. ಮಿತ್ರಜನರ ಸಹಾಯದಿಂದಲೂ ಧನಜನಬಲದಿಂದಲೂ ಯುಕ್ತರಾದ ನಿಮ್ಮ ಕಾರ್ಯಗಳು ಹೆಚ್ಚಿನಂಶ ಅನ್ಯಥಾ ಆಗಲಾರವು. ಆರೋಗ್ಯವೂ ಸಾಕಷ್ಟು ಉತ್ತಮ ರೀತಿಯಲ್ಲೇ ಇರುವುದು. ಆದರೂ ಅಷ್ಟಮದ ಮಂಗಳನಿಂದಲೂ ಏಳೂವರೆ ಶನಿಯಿಂದಲೂ ನಿಮಗೆ ಧನನಾಶಕಾರಿಗಳಾದ ಕಾರ್ಯಗಳು ಅನೇಕ ಗಂಟುಬೀಳುವವು. ಕಾಯಕಷ್ಟದಿಂದ ಜೀವಿಸತಕ್ಕವರಿಗೆ ಮೇಲಿಂದ ಮೇಲೆ ಶೋಕದಾಯಕಗಳಾದ ವಿಪತ್ತುಗಳೇ ಬಂದೊದಗುವವು. ಆದರೂ ತಾ. 27 ಮತ್ತು 2-3-4 ಈ ದಿನಗಳು ಧನಲಾಭ, ಶತ್ರುನಾಶ ಮತ್ತು ಸುಖದಾಯಕಗಳಾಗಿರುವವು.

ಮಿಥುನರಾಶಿ—

ನರರ ಮಾನಾಪಮಾನಗಳಿಗೂ, ಸ್ಥಾನಪ್ರಾಪ್ತಿ ಪದಚ್ಯುತಿಗಳ ಆವರವರ ನಾಲಗೆಯೇ ಮುಖ್ಯ ಕಾರಣವಾಗಿರುತ್ತದೆ. ಮಿತ್ರರು ಶತ್ರುಗಳಾಗುವದೂ ಶತ್ರುಗಳು ಮಿತ್ರರಾಗುವುದೂ ಇದರಿಂದಲೇ. ಆದಕಾರಣ ನಾಲಿಗೆಯ ಕರ್ಯದಲ್ಲಿ ನೀವು ವಿಶೇಷ ಜಾಗರೂಕರಾಗಿರಬೇಕು. ಯಾಕೆಂದರೆ ಪ್ರಕೃತದಲ್ಲಿ ನಿಮಗೆ ಸ್ವಲ್ಪ ಮುಂಗೋಪವು ಹೆಚ್ಚಾಗಿ ತೋರಿಬರುತ್ತಿದೆ. ಇದರಿಂದ ಫಕ್ಕನೆ ವಿಚಾರಮಾಡದೆ ಸಿಟ್ಟಿಗೆ ಮನಗೊಟ್ಟು ಅವಾಚ್ಯಗಳಾದ ಶಬ್ದಗಳನ್ನಾಡಿ ವ್ಯಥಾ ಕಲಹಕಾರಿಗಳಾಗಲಿರುವಿರಿ. ಇತರ ವಿಷಯದಂತಿರಲಿ, ನಿಮ್ಮ ಮನೆಯವರೊಡನೆಯೂ ಕಲಹವಾಗಲಿರುವುದು. ಆದರೂ ನಿಮ್ಮ ಲಾಭದಲ್ಲಿ ರವಿಯು ಉಚ್ಚನಾಗಿರುವುದರಿಂದ ಕೋರ್ಟು ವಗೈರೆ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ಮಾತ್ರವಲ್ಲ ಜನತೆಯಲ್ಲಿ ಸ್ಥಾನಮಾನಾದಿಗಳನ್ನು ಪಡೆಯುವಿರಿ. ಆರೋಗ್ಯವೂ ಆರ್ಥಿಕಭಾಗವೂ ಸಾಕಷ್ಟು ಉತ್ತಮ ರೀತಿಯಲ್ಲಿರುವುದು. ತಾ. 28-29 ಈ ದಿನಗಳು ಸಕಲ ವಿಷಯಗಳಿಗೂ ಅತ್ಯನುಕೂಲಗಳಾಗಿವೆ.

ಕರ್ಕಟಿಕರಾಶಿ—

ಸುಸ್ಥಾನಗತರಾದ ಗ್ರಹರ ಬಲವತ್ತರವಾಗಿರುವುದರಿಂದ ಈ ವಾರವು ನಿಮಗೆ ಹೆಚ್ಚಿನ ಅನುಕೂಲಕಾರಿಯಾಗಿರುವುದೆಂದು ಹೇಳಬೇಕಾಗಿದೆ. ಧನಪತಿಯು ಉಚ್ಚನಾಗಿರುವುದರಿಂದಲೂ ಭಾಗ್ಯಪತಿಯು ಸ್ವಸ್ಥಾನಗತನಾಗಿರುವುದರಿಂದಲೂ ಸುಖಲಾಭಾಧಿಪತಿಯು ಉಚ್ಚನಾಗಿ ಭಾಗ್ಯಗತನಿರುವುದರಿಂದಲೂ ನಿಮ್ಮ ಸಾಂಪತ್ತಿಕಭಾಗವು ಅತ್ಯುತ್ತಮವಾಗಿರುವುದು. ವಿರೋಧಿಗಳೊಳಗಿನ ಮನಸ್ತಾಪವು ನಿವಾರಿತವಾಗುವುದರಿಂದ ನಿಮ್ಮ ಕಾರ್ಯಗಳು ನಿರ್ವಿಘ್ನದಿಂದ ಕೊನೆಗೊಳ್ಳುವವು. ಒಳ್ಳೇ ವಾಚಾಲರಾದ ನಿಮ್ಮ ಮಿತ್ರವೃಂದವೂ ವೃದ್ಧಿಗೊಳ್ಳುವುದು. ಗೃಹಪರಿವಾರವು ಸಂಪೂರ್ಣವಾಗಿರುವುದು. ಧರ್ಮಕಾರ್ಯಗಳಿಗೂ ಗೃಹಸುಖಕ್ಕೂ ಏನೂ ಕೊರತೆಯುಂಟಾಗದು. ವಿದ್ಯಾಭಿಲಾಷಿಗಳಿಗೆ ಅಧ್ಯಯನಕ್ಕೆ ಅನೇಕ ತೊಂದರುಗಳು ಬರುವವು. ಮನೋದೌರ್ಬಲ್ಯದಿಂದಾಗಿ ಕೆಲವೊಮ್ಮೆ ಅತಿಸ್ಯಯವಾಗಲಿರುವುದು. ತಾ. 28-29 ಮತ್ತು 2-3-4 ಈ ದಿನಗಳು ಉತ್ತಮವಾಗಿಲ್ಲವು.

ಸಿಂಹರಾಶಿ—

ನಾಸ್ತಿಕಬುದ್ಧಿಯೂ ಅಸೂಯೆಯೂ ನಿಮ್ಮಲ್ಲಿ ಹೆಚ್ಚುತ್ತಿರುವುದರಿಂದ ಪ್ರಕೃತದಲ್ಲಿ ನಿಮಗೆ ಗುರ್ವನುಗ್ರಹವಿಲ್ಲೆಂದು ಸ್ಪಷ್ಟವಾಗಿ ಹೇಳಬಹುದಾಗಿದೆ. ಆದಕಾರಣದಿಂದಲೇ ಪ್ರತಿಯೊಂದು ಭಾಗದಲ್ಲೂ ನಷ್ಟವೂ ಪ್ರವಾಸದಲ್ಲಿ ಕಷ್ಟವೂ ದೇಹದಲ್ಲಿ ಅನಾರೋಗ್ಯವೂ ಹೆಚ್ಚುತ್ತಿರುವುವು. ಲೇವಾದೇವಿ ಸಂಬಂಧವಾಗಿ ಕೆಲವವೇಳ್ಯ ಕೋರ್ಟುಗಳಿಗೆ ಹೋಗುವ ಪ್ರಸಂಗವಿದೆ. ಆರ್ಥಿಕಮುಗ್ಗಟ್ಟಿನಿಂದಲೂ ಪುತ್ರಕೃತ ಶೋಕದಿಂದಲೂ ಅತ್ಯಂತ ವ್ಯಸನಾಕ್ರಾಂತರಾಗುವಿರಿ. ವೈದ್ಯಹಕೀಮರಿಗೂ ಕೃಷ್ಯುಪಜೀವಿಗಳಿಗೂ ಆಚಾರನಿಷ್ಠರಾದ ಸನಾತನೀ ಜನರಿಗೂ ಸದಾ ಆಪತ್ತುಗಳು ತಪ್ಪುವಂತಿಲ್ಲವು. ವಿದ್ಯಾರ್ಥಿಗಳಿಗೆ ಈ ಕಾಲವು ಚೆನ್ನಾಗಿಯೇ ಇರುವುದು. ವೈಶ್ಯವೃತ್ತಿಯವರು ಸ್ವೋದ್ಯೋಗದಲ್ಲಿ ಯಶಸ್ಸನ್ನೂ ಧನವನ್ನೂ ಗಳಿಸುವರು. ಸ್ತ್ರೀಯರಿಂದಾಗಿ ಧನಸಿಗುವ ಸಂಭವವಿರುವುದು. ತಾ. 27-30-1 ಈ ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಿವೆ.

ಕನ್ಯಾರಾಶಿ—

ಲೋಕವೇ ನಿಮಗೆ ಪ್ರತಿಕೂಲವಾಗಿದ್ದರೂ ದೈವಾನುಗ್ರಹವು ನಿಮಗಿರುವುದರಿಂದ ಪರಿಸ್ಥಿತಿಯು ನಿರಾಶಾಜನಕವಾಗಲಾರದು. ಕೈಯಲ್ಲಿ ಕಾಸಿಲ್ಲದಿದ್ದರೂ ಊಟೋಪಚಾರಗಳಿಗೂ ಭೋಗ್ಯವಸ್ತುಗಳಿಗೂ ಏನೂ ಕೊರತೆಯುಂಟಾಗದು. ಶರೀರ ಪ್ರಕೃತಿಯು ಈ ವಾರದಲ್ಲಿ ನೆಟ್ಟಗಿರಲಾರದು. ಸ್ತ್ರೀ ವರ್ಗವೇ ನಿಮಗೆ ಪ್ರತಿಕೂಲವಾಗಿ ನಿಂತಿರುವುದು. ವಿಶೇಷತಃ ಸ್ವಸ್ತ್ರೀಯರು ನಿತ್ಯ ಕಲಹಕಾರಿಯಾಗುವರು. ಜ್ವರ ಉದರರೋಗಗಳಿಂದ ಸದಾ ಪೀಡಿಸಲ್ಪಡುವಿರಿ. ಅಲ್ಲದೆ ಸಂಸಾರದಿಂದ ವಿಯೋಗವನ್ನೂ ಕೂಡ ಹೊಂದುವಿರಿ. ಶತ್ರುಜನರ ಕುಹಕೋಪಾಯಗಳಿಗೆ ಬಲಿಯಾಗಿ ಹಿಡಿದ ಕಾರ್ಯದಲ್ಲಿ ಜಯಸಿಗುವಂತಿಲ್ಲವು. ಮಿತ್ರರಂತೆ ನಟಿಸತಕ್ಕ ದುರ್ಜನರಿಂದ ಕಷ್ಟ-ನಷ್ಟಗಳನ್ನು ಹೊಂದುವಿರಲ್ಲದೆ ಮಾನಚ್ಯುತಿಯ ಪ್ರಸಂಗವೂ ಕೂಡ ಬರಲಿದೆ. ತಾ. 28-29 ಮತ್ತು 2-3-4 ಈ ದಿನಗಳು ಧನಮಾನಹಾನಿಕಾರಕಗಳೂ ವಿಘ್ನಕಾರಿಗಳೂ ಆಗಿರುವವು.

ತುಲಾರಾಶಿ—

ಕಾಲಚಕ್ರವು ಉರುಳಿದಂತೆ ನಿಮ್ಮನ್ನು ಹೀನದೆಸೆಗೆ ಸೆಳೆಯುತ್ತಿದೆ. ಆದುದರಿಂದಲೇ ನಿಮಗೆ ನಿಂತಲ್ಲಿ ನಿಲ್ಲಲು ಅವಕಾಶ ಸಿಗುವದಿಲ್ಲವು. ಪ್ರಕೃತ ವಿದ್ಯಮಾನಗಳಿಂದ ಹೆಚ್ಚಿನ ಕಾಲವನ್ನು ಪ್ರಯಾಣದಲ್ಲೇ ಕಳೆಯುತ್ತಿರುವಿರಿ. ಶತ್ರುಜನರು ದಿನೇ ದಿನೇ ವೃದ್ಧಿಹೊಂದುತ್ತಲಿರುವುದರಿಂದ ನೀವು ಆರಂಭಿಸಿದ ಕಾರ್ಯಗಳು ವ್ಯಥಾ ಪರಿಶ್ರಮಕಾರಿಗಳಾಗುವವೇ ಹೊರತು ಫಲದಾಯಕವಾಗುವುದಿಲ್ಲವು. ಉಷ್ಣಸಂಬಂಧವಾದ ರೋಗವಿಶೇಷಗಳಿಂದ ಹೆಚ್ಚಾಗಿ ಪೀಡಿತರಾಗುವಿರಿ. ಮನೋವ್ಯಥೆಯು ನಿದ್ರಾಹಾರಗಳನ್ನು ಅಪಹರಿಸುವುದು. ಆದರೂ ಪುತ್ರರಿಂದ ನಿಮಗೆ ಸ್ವಲ್ಪ ಸಂತೃಪ್ತಿಯಿದೆ. ನೀಚಜನರ ಮುಖದಿಂದ ಧನವನ್ನು ಸಂಪಾದಿಸುವಿರಿ. ವಿದ್ಯಾಭಿಲಾಷಿಗಳಿಗೆ ಕಾಲವು ಅನುಕೂಲವಾಗಿರುವದು. ತಾ. 30 ಮತ್ತು 1 ಈ ದಿನಗಳು ವಿಶೇಷ ಹಾನಿಕರಗಳಾಗಿವೆ.

ವೃಶ್ಚಿಕರಾಶಿ—

ಕಗ್ಗತ್ತಲೆಯ ಕಾರಿರುಳಲ್ಲಿ ದಿಕ್ಕುತೋಚದೆ ದೆಸೆದೆಸೆಗೆ ಅಲೆದಾಡುತ್ತಿದ್ದ ನಿಮ್ಮ ಜೀವನರಂಗದಲ್ಲಿ ಇದೀಗಲೇ ಭಾಗ್ಯರವಿಯು ಉದಯಾಚಲವನ್ನೇರುತ್ತಿರುವನು. ಈ ನಿಮಿತ್ತದಿಂದಲೇ ನಿಮ್ಮ ವಿರೋಧಿಗಳೂ ಕೂಡ ತಾವಾಗಿ ನಿಮ್ಮ ಸ್ನೇಹವನ್ನು ಬಯಸುತ್ತಿರುವರು. ಈ ಸಮಯದಲ್ಲಿ ಮನೋ ವ್ಯಾಧಿಗಳು ಒಂದೊಂದಾಗಿ ಮಾಯವಾಗುತ್ತಲಿರುವವು. ವ್ಯಾಪಾರದಲ್ಲಿ ಅಭಿವೃದ್ಧಿಯ ಚಿಹ್ನಗಳು ಕಂಡುಬರುತ್ತವೆ. ಬಂಧುಮಿತ್ರರು ಪರಿಜನರು ಸರ್ವಾನುಕೂಲರಾಗಿರುವರು. ಗೃಹಸುಖವು ಪೂರ್ಣ ತೃಪ್ತಿಕರವಿದ್ದರೂ ಮಧ್ಯೆ ಮಧ್ಯೆ ಚಿಕ್ಕಚಿಕ್ಕ ಕಲಹವು ಕುಟುಂಬದಲ್ಲಿ ತೋರಬಹುದು. ತ್ರಿದೋಷಗಳು ವೃದ್ಧಿಹೊಂದಿ ವಿಶೇಷತಃ ಪಿತ್ತವು ಅಧಿಕವಾಗಿ ಆರೋಗ್ಯವನ್ನಪಹರಿಸುವುದು ಮಾತ್ರವಲ್ಲ ಆ ಬಗ್ಗೆ ಧನವನ್ನೂ ವ್ಯಯಿಸುವಿರಿ. ತಾ. 28ರಿಂದ 1ರವರೆಗಿನ ದಿನಗಳು ಇಷ್ಟಸಿದ್ಧಿ ನಾನಾವಿಧ ಲಾಭ ಸುಖಸಂತೋಷದಾಯಕಗಳಾಗಿರುವವು.

ಧನುರಾಶಿ—

ಈ ವಾರದಲ್ಲಿ ಸೇವಕಜನರಿಂದಲೂ ಪುತ್ರಜನರಿಂದಲೂ ಕೂಡ ವಿಯೋಗ ಕಲಹಗಳು ಸಂಭವಿಸಲಿವೆ. ಶತ್ರುಭಯವು ನಿಮ್ಮನ್ನು ಹೆಚ್ಚಾಗಿ ಪೀಡಿಸುತ್ತಲಿರುವುದು. ಆರೋಗ್ಯವೂ ಕೂಡ ನೆಟ್ಟಗಿಲ್ಲದಿರುವುದರಿಂದ ಶರೀರದಲ್ಲಿ ಉತ್ಸಾಹಶಕ್ತಿಯು ಕುಂದಿರುವುದು. ಕೆಲವೊಮ್ಮೆ ಸ್ವಕಾರ್ಯನಿರ್ವಹಣಕ್ಕಾಗಿ ಎಂತಹ ಪ್ರವೃತ್ತಿಯನ್ನೂ ಕೂಡ ತಳೆಯುವಿರಿ. ಅಕಸ್ಮಾತ್ ಅಪಘಡಗಳು ಸಂಭವಿಸಲಿವೆ. ಉತ್ಪತ್ತಿಯು ಸಾಕಷ್ಟು ಇದ್ದರೂ ವಿಪರೀತ ಖರ್ಚುಗಳು ಸಂಭವಿಸುವುದರಿಂದ ಆರ್ಥಿಕ ಮುಗ್ಗಟ್ಟಿನಿಂದ ವಿಶೇಷ ಬಾಧಿತರಾಗುವಿರಿ. ವಿದ್ಯಾರ್ಥಿಗಳಿಗೂ ವ್ಯಾಪಾರಿಗಳಿಗೂ ಹೆಚ್ಚಿನ ಕೆಡುಕಿಲ್ಲವು. ನಿಮ್ಮವರೇ ನಿಮಗೆ ಅನಿಷ್ಟಮಾಡಲು ಹಿಂಜರಿಯರು. ಹಾಗೆ ಬಂದಿದೆ ಈ ಕಾಲ. ತಾ. 1ರಿಂದ 4ರವರೆಗಿನ ದಿನಗಳಲ್ಲಿ ಮಿತ್ರಜನರ ಸಹಾಯ ಸಹಕಾರಗಳಿಂದಾಗಿ ಧನಪ್ರಾಪ್ತಿಯೂ, ಇಷ್ಟಸಿದ್ಧಿಯಿಂದ ಕಿಂಚಿತ್ಸುಖವೂ ದೊರೆಯಲಿರುವುದು.

ಮಕರರಾಶಿ—

"ಬುದ್ಧಿಃ ಕರ್ಮಾನುಸಾರಿಣೀ" ಎಂಬ ಶಾಸ್ತ್ರೋಕ್ತಿಯಂತೆ ಜನ್ಮಾಂತರೀಯವಾದ ಕರ್ಮವಿಶೇಷದ ಫಲರೂಪವಾಗಿ ಮನುಷ್ಯನ ಬುದ್ಧಿಯು ಪರಿಣಾಮವನ್ನು ಹೊಂದುತ್ತಿರುವುದು. ಇದೀಗಲೇ ನಿಮ್ಮ ಬುದ್ಧಿವಿಚಾರಗಳಲ್ಲಿ ವಿಶೇಷ ವ್ಯತ್ಯಾಸಗಳು ಆರಂಭವಾಗಿವೆ. ಅಲ್ಪಜನರ ಗುಣಗಳೇ ಹೆಚ್ಚುತ್ತಿವೆ. ಇದರಿಂದ ನಿಮ್ಮ ಪೂರ್ವಸಂಚಿತ ಕೀರ್ತಿಗಳಿಗೆ ಅಪಮಾನ ದೊರೆಯಲಿದೆ. ಶತ್ರುಜನರಿಂದ ರಾಜದ್ವಾರದಲ್ಲಿ ಮಾನಹಾನಿಯಾಗುವ ಚಿಹ್ನೆಗಳಿವೆ. ನೀವು ಮಾಡತಕ್ಕ ಕಾರ್ಯಗಳೇ ನಿಮ್ಮಲ್ಲಿರತಕ್ಕ ದುರ್ಗುಣಗಳನ್ನು ಬೆಳಕಿಗೆ ತರುತ್ತವೆ. ವ್ಯವಹಾರಭಾಗದಲ್ಲಿ ಅಕಸ್ಮಾತ್ ಸ್ತ್ರೀಯರಿಂದ ಕಲಹವಾಗುವುದು. ಶುಕ್ರೋತ್ತರ ಸಕಲಗ್ರಹರೂ ನಿಮ್ಮ ಮೇಲೆ ಮುನಿದಿರುವರೆಂದರೆ ಯಥಾರ್ಥ ವಾಗ ಏನು ಸಂಭವಿಸಿತೆಂದೂ ಹೇಳಬರುವಂತಿಲ್ಲ. ಅಷ್ಟು ಅದೃಷ್ಟವು ಕೆಟ್ಟಿದೆ. ತಾ. 28ರಿಂದ 1ರತನಕ ವಿಶೇಷ ಜಾಗರೂಕರಾಗಿರಿ.

ಕುಂಭರಾಶಿ—

ಸದ್ಯದ ಪರಿಸ್ಥಿತಿಯಲ್ಲಿ ನೀವೇ ರಾಜರೆಂದರೆ ಅತಿಶಯೋಕ್ತಿಯಾಗದು. ನಿಮ್ಮ ಭಾಗ್ಯವು ಉತ್ತಮಶ್ರೇಣಿಯ ಪರಾಕಾಷ್ಠತೆಯನ್ನು ಹೊಂದಿರುವುದು, ಇಂತಹ ಕಾಲದಲ್ಲಿ ನೀವು ಬೇಕಾದರೆ ಬೇಕೆಂದೇ ಮಹಾಪರಾಧವನ್ನು ಮಾಡಿದರೂ ಜನರದನ್ನು ನ್ಯಾಯವೆಂದೇ ತೀರ್ಮಾನಿಸುವರು. ಅಂತೂ ಅಲ್ಲಿಯ ವರೆಗೆ ನಿಮ್ಮ ಅದೃಷ್ಟ ಮುಂದರಿದಿದೆ. ಈ ಕಾಲದಲ್ಲಿ ಉದಾಸೀನರಾಗಿಟ್ಟು ಪ್ಪೆಗಳ್ಳರಂತೆ ಕಾಲಹರಣಮಾಡುವುದು ಮುಂದಿನ ಕಲ್ಯಾಣಾಪೇಕ್ಷಿಗಳ ಕರ್ತವ್ಯವಲ್ಲ. ಆದಕಾರಣ ಚಿಕ್ಕವಿಮಾನವನ್ನು ಹಾಕಿ ದೊಡ್ಡ ವಿಮಾನವನ್ನು ಹಿಡಿಯುವಂತೆ ಕಿಂಚಿತ್ಪರಿಶ್ರಮ ವಹಿಸಿ ಮಹತ್ಫಲವನ್ನೇಕೆ ಹೊಂದಬಾರದು? ನಿಮ್ಮಲ್ಲಿಗೆ ಭಾಗ್ಯಲಕ್ಷ್ಮಿಯೂ ತಾನಾಗಿ ಬರುತ್ತಿರುವಲ್ಲಿ ನೀವೇಕೆ ಸ್ವಾಗತೀಕರಿಸಬಾರದು? ಆದಕಾರಣ "ಉದ್ಯೋಗಂ ಪುರುಷಲಕ್ಷಣಂ" ಎಂಬ ನೀತಿವಚನವನ್ನು ಸಾಂಗಗೊಳಿಸಿ ಬೇಕಾದ ಧನಜನವನ್ನು ಸಂಗ್ರಹಿಸಿರಿ. ತಾ. 27, 3, 4, ಈ ದಿನಗಳು ಉತ್ತಮವಿವೆ.

ಮೀನರಾಶಿ—

ಆರೋಗ್ಯಭಾಗ್ಯವೊಂದು ನಿಮ್ಮ ಮಟ್ಟಿಗೆ ಚೆನ್ನಾಗಿರುವುದು ಹೊರತು ಇತರ ಎಲ್ಲಾ ವಿಷಯಗಳಲ್ಲೂ ನೀವು ಭಾಗ್ಯಹೀನರಾಗಿರುವಿರಿ. ಬುದ್ಧಿಯ ಹ್ರಾಸದಿಂದಾಗಿ ಮನಸ್ಸಿನ ಸ್ಥೈರ್ಯವು ಕುಂದಿರುವುದು. ಸದಾ ಭಯಪೀಡಿತರಾಗಿರುವುದರಿಂದ ಆವ ಕೆಲಸವನ್ನೂ ಮಾಡಲು ಹಿಂಜರಿಯುವಿರಿ. ಇದರಿಂದ ಜನಾಪವಾದಗಳಿಗೆ ಸಿಲುಕುವುದಲ್ಲದೆ ನೀವೇ ಆಮೇಲೆ ಪಶ್ಚಾತ್ತಾಪಪಡುವಿರಿ. ಆದಕಾರಣ ಪ್ರಯತ್ನಮಾಡಬೇಕು, ಫಲಸಿಗುವುದೂ ಬಿಡುವುದೂ ದೈವೇಚ್ಛೆ. 'ಯತ್ನೇ ಕೃತೇ ಯದಿ ನ ಸಿದ್ಧ್ಯತಿ ಕೋತ್ರ ದೋಷಃ' ಎಂಬಂತೆ ಕೆಲಸಮಾಡಿ ಫಲಸಿಗದಿದ್ದರೆ ಅದರಲ್ಲಿ ನಿಮ್ಮ ತಪ್ಪೇನೂ ಇಲ್ಲವು. ಇಂದಲ್ಲ ನಾಳೆ ಆ ಉದ್ಯಮದ ಫಲವು ನಿಮಗೆ ದಾದರೂ ಸಿಗದಿರಲಾರದು. ಆರ್ಥಿಕ ಅಡಚಣೆಯು ಪ್ರಕೃತ ವಿಶೇಷವಾಗುವುದೇ ಹೊರತು ಕಡಿಮೆಯಾಗುವಂತಿಲ್ಲವು. ವಾರದ ಆದ್ಯಂತ ಭಾಗಗಳು ವಿಶೇಷ ಹಾನಿಕಾರಕಗಳಾಗಿವೆ.

New Kanara Swadeshi Laundry

GAMDEVI, BOMBAY.

A reliable house for dry cleaping deing all sorts of rich garments.

ದಿ ನ್ಯೂ ಕೆನರಾ ಸ್ವದೇಶಿ ಲಾಂಡ್ರಿ,

ಗಾಮದೇವಿ — ಮುಂಬಾಯಿ.

ಉತ್ತಮ ತರದ ಮಡಿ, ಉತ್ಕೃಷ್ಟ ರೀತಿಯ ರಂಗು — ಇವುಗಳಿಗೆ ಪ್ರಸಿದ್ಧವಾದ ನಿಲಯ.

ವಿ. ಸೂ.—ಪರವೂರುಗಳಿಂದ ಉತ್ತಮ ಜರತಾರಿ ಸೀರೆ, ವಸ್ತ್ರ ಉಡುಗೆ ತೊಡಿಗೆಗಳ ರಂಗು ಹಾಕುವ, ಡ್ರೈಕ್ಲೀನಿಂಗ್ ವಗೈರೆ ಕಾರ್ಯವನ್ನು ಟಪಾಲು ದ್ವಾರಾ ಸ್ವೀಕರಿಸಿ, ಸಕಾಲದಲ್ಲಿ ತಯಾರಿಸಿ ತಲುಪಿಸುವೆವು.

ಎಸ್. ಆರ್. ಶೆಟ್ಟಿ, ಪ್ರೊಪ್ರೈಟರ್. G. V. Mahale. Manager.

ನವಯುಗಕ್ಕೆ ಇಂದೇ ಚಂದಾದಾರರಾಗಿರಿ.

ವಿಚಿತ್ರ ವಾರ್ತೆಗಳು

ಮದುವೆಯಾದುದನ್ನು ಮರೆತಿದ್ದ

ಸಿಡ್ನೆಯ ಕೋರ್ಟಿನಲ್ಲೊಂದು ಮೊಕದ್ದಮೆ. ಥೋಮಸ್‌ವಾಡೆಲ್ ಮೋಟಾರ್ ಇಂಜನು ಕೆಲಸಗಾರ. ಅವನು ತನ್ನ ಹೆಂಡತಿಯ ಪೋಷಣೆಗೇನೂ ಕೊಡಲಿಲ್ಲ ಎಂದು ದಾವೆಯಾಗಿ ಹನ್ನೆರಡು ತಿಂಗಳ ಶಿಕ್ಷೆಗೊಳಗಾದ. ವಾಡೆಲನು ಜೈಲಿನಲ್ಲಿದ್ದಂತೆ, ಅವನ ಜನ್ಮದಿನದ ಅಭಿನಂದನೆಯು ರೇಡಿಯೋ ಮೂಲಕ ಆತನ ಎರಡನೇ ಪತ್ನಿಯಿಂದ ಬಂತು. ಅವನಿಗಿನ್ನೊಬ್ಬಳು ಹೆಂಡತಿಯಿದ್ದಾಳೆಂದು ಮೊದಲಿನ ಪತ್ನಿಗೆ ತಿಳಿದುದು ಆಗಲೇ. ಥೋಮಸ್ ವಾಡೆಲನ ಮೇಲೆ ಏಕ ಕಾಲದಲ್ಲಿ ದ್ವಿಪತ್ನಿಯರನ್ನು ಇಟ್ಟುಕೊಂಡುದಕ್ಕಾಗಿ ಮೊಕದ್ದಮೆ ನಡೆಯಿತು. ಕೋರ್ಟಿನ ವಾಗ್ಮೂಲದಲ್ಲಿ ಆವ ಹೇಳಿದ "ನಾನು ಪುನಃ ಮದುವೆಯಾಗುವಾಗ ಎರಡನೇ ಹೆಂಡತಿಗೆ ಮೊದಲಿನ ವಿವಾಹದ ಸುದ್ದಿ ತಿಳಿಸಿರಲಿಲ್ಲ; ಅನಗದು ಮರೆತೇ ಹೋಗಿತ್ತು!"

ಕತ್ತಿ ಬಿದ್ದಲ್ಲಿ ಮುತ್ತು ದೊರೆವುದೆ?

ಮೆಕ್ಸಿಕೋದ ವಾರ್ತೆಯಿದು. ಮೇರಿಯಾ ಎಂಬವಳು ಕತ್ತೆಯೊಂದನ್ನೇರಿಕೊಂಡು ಬೇರೊಂದೆಡೆಗೆ ಹೊರಟಿದ್ದಳು, ಹಾದಿಯಲ್ಲಿ ಒಂದು ಪ್ರವಾಹವನ್ನು ದಾಟುವಾಗ ಕತ್ತೆ ಜಾರಿಬಿತ್ತು; ಒಟ್ಟಿಗೆ ಮೇರಿಯೂ ಬಿದ್ದಳು. ಎದ್ದು ನೋಡುವಾಗ ಅವಳ ಕೈಗೆಲ್ಲಾ ಭಂಗಾರದ ತುಣುಕುಗಳು ಹತ್ತಿಕೊಂಡಿದ್ದುವು. ಈ ವಾರ್ತೆ ಹಬ್ಬಿದೊಡನೆ ಸುಮಾರು ಐದು ಸಾವಿರ ಜನರು ಬಂದು ನೋಡಿ ಅಲ್ಲಿಯೇ ಠೇರೆ ಹೊಡೆದಿದ್ದಾರೆ.

ಯು.ಎಸ್. ಮೇಯೋಳ ರಾಜ್ಯದಲ್ಲಿ ಬತ್ತಲೆ ವಿವಾಹ

ಅಮೇರಿಕದ ಡೆನ್ವಾರ್ ಎಂಬಲ್ಲಿಗೆ ಸಮೀಪದಲ್ಲಿ ಬತ್ತಲೆ ವಿವಾಹವೊಂದು ಮೊದಲನೇ ಬಾರಿ ನಡೆಯಲಿಕ್ಕಿದೆ. ಈ ಬತ್ತಲೆ ವಿವಾಹಕ್ಕೆ ಸಮ್ಮತಿಯಿರಬೇಕೆಂದು ವಿವಾಹದ ಪುರೋಹಿತರಾದ ರೆವರೆಂಡ್ ಫೆರೀ ಎಂಬವರು ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದುಕೊಂಡರು. "ಸ್ತ್ರೀ ಪುರುಷರು ಹುಟ್ಟುವಾಗ ಇದ್ದ ರೀತಿಯಲ್ಲಿಯೇ ಮದುವೆಯಾಗಬಾರದೆಂದು ಯಾವ ಕಾನೂನೂ ಆತಂಕಿಸುವುದಿಲ್ಲ" ಎಂದು ಅವರಿಗೆ ಉತ್ತರಬಂತು. ಗುರುಗಳು ಬಹು ಹರ್ಷಿತರಾಗಿ "ಈ ವಧೂವರರು ಈ ವರೆಗೆ ಮಾಡಿರುವ ಪಾಪಗಳನ್ನು ನಿವಾರಿಸಿಕೊಂಡು ಪವಿತ್ರರಾಗಲು ಈ ರೀತಿಯ ಸಮಾರಂಭವೊಂದೇ ಹಾದಿ!" ಅಂದಿದ್ದಾರೆ. ವಧೂವರರಿಬ್ಬರೂ ಪೂರ್ಣ ಬತ್ತಲೆಯಾಗಿ ಡೆನ್ವಾರಿನ ಸಮೀಪದ ಪರ್ವತ ಶಿಖರವೊಂದರಲ್ಲಿ ವಿವಾಹವಾಗಲಿರುವರು.

ಹೊಗೆಬತ್ತಿ ಸೇದುವ ಮಗು

ಯುರೋಪಿನ ಹೊಗೆಬತ್ತಿ ಸೇದುವವರಲ್ಲಿ ಅತಿ ಕಡಿಮೆ ಪ್ರಾಯದವನೆಂದರೆ ಜಗೋಸ್ಲೇವಿಯದ ಹದಿನೆಂಟು ತಿಂಗಳು ಪ್ರಾಯದ ಒಂದು ಮಗು. ಮಗುವಿನ ಹೆಸರು ಡ್ಯೋಕಿಟ್ಸಾ ಕಾಸ್ಟ್ರೋಟೋವಿಚ್! ನೆರೆಕರೆಯ ಊರವರು ಹಿಂಡು ಹಿಂಡಾಗಿ ಬಂದು ಮಗು ಹೊಗೆಬಿಡುವ ಅಂದವನ್ನು ನೋಡಿಹೋಗುತ್ತಿದ್ದಾರೆ.

ನಿದ್ದೆಗಣ್ಣಲ್ಲಿಯೇ ೨೦ ಮೈಲು ಪ್ರಯಾಣ

ಆಸ್ಟ್ರೇಲಿಯಾದ ಹಳ್ಳಿಯೊಂದರಲ್ಲಿ ಹದಿಮೂರು ವರುಷ ಪ್ರಾಯದ ಮೇರಿ ಹೇಸ್ಸನ್ ಎಂಬ ಬಾಲೆಯು ನಿದ್ದೆಯಲ್ಲಿದ್ದಂತೆಯೇ ಇಪ್ಪತ್ತು ಮೈಲು ನಡೆದು ಹೋಗಿದ್ದಳು. ರಾತ್ರಿ ಮಗಳನ್ನು ಕಾಣದೆ ತಾಯ್ತಂದೆ ಬೆಳಗ್ಗಿನ ವರೆಗೂ ಹುಡುಕಿ ೨೦ ಮೈಲು ದೂರದಲ್ಲಿ ಕಣ್ಣು ಮುಚ್ಚಿಕೊಂಡೇ ನಡೆಯುತ್ತಿರುವ ಹುಡುಗಿಯನ್ನು ಕಂಡರು. ಅವಳನ್ನೆಚ್ಚರಿಸಿದಾಗ ತಾನು ಈ ಹೊಸ ಊರಿಗೆ ಹೇಗೆ ಬಂದೆನೆಂದು ಹುಡುಗಿ ಆಶ್ಚರ್ಯಗೊಂಡಳು.

ನವಯುಗ ಸ್ಪರ್ಧೆ ೧೮ರ ಉತ್ತರ.

ನ	ವ	ನೀ	ತ
ವ	ಸು	ರ	ರ
ಯು	ದೇ	ಜಾ	ಕಾ
ಗ	ವ	ಷ್ಟಿ	ರಿ

ಸರಿಯಾಗಿ ಬಿಡಿಸಿದವರು—

(೧) ವಾಸ್ತೇವ ಆಚಾರ್ಯ, ಬೈಲಹೊಂಗಲ, (2) ಬಿ. ರಾಮರಾವ್, ಕೊಡಕೂರು, (3) ಕೆ. ಪಿ. ಸುಬ್ರಾಯ, ಮಡಿಕೇರಿ, (4) ಲೂಸಿ ಮಾಟಿಸ್, ಶಂಕರನಾರಾಯಣ, (5) ಯು. ಸೀತಾರಾಮಾಚಾರ್ಯ ಅಂಡ್ ಬ್ರದರ್ಸ್, ನವಲೂರು, (6) ವಿದವೇಶ್ವರ ಶೆಟ್ಟಿ, ಬೊಂಬಾಯಿ, (7) ರಾಮ ಡಿ. ಕರ್ಕೇರ ಬೊಂಬಾಯಿ, (8) ಎಂ. ಟಿ. ಶೆಕ್ಕೇರ, ಸುರತ್ಕಲ್, (9) ಕ. ಪಾ. ಯಡ್ವಾಮಿ, ಹುಬ್ಬಳ್ಳಿ, (10) ಗೋಪಾಲ ಬಿ. ಸುವರ್ಣ, ಬೊಂಬಾಯಿ (11) ಮೂಲ್ಕಿ ಕೃಷ್ಣ ಸಿ. ಅಮಿನ್, ಬೊಂಬಾಯಿ, (12) ಎಂ. ರಾಮಕೃಷ್ಣಯ್ಯ, ಕೊರಂಗ್ರಪಾಡಿ, (13) ಕೆ. ಶಿವಣ್ಣ ಶೆಟ್ಟಿ, ಬೊಂಬಾಯಿ, (14) ಎಂ. ಕಮಲಾಬಾಯಿ, ಪುತ್ತೂರು, (15) ಎಚ್. ಕೃಷ್ಣಯ್ಯ, ಧರ್ಮಸ್ಥಳ, (16) ಪಿ. ಸುಲೋಚನಾ ಬಾಯಿ, ಕುಂದಾಪುರ. (17) ಎಂ. ಪಿಮ್ಮಭಟ್, ಪೈವಳಿಕೆ, (18) ಬಿ. ಕೇಶವ ಪೈ, ಹಿರಿಯಡ್ಕ, (19) ಕೆ. ವಾಸುದೇವ ಹಂದೆ, ಕೋಟ, (20) ಕೋನ್ನಿ ನಂದಪ್ಪ ಹೆಗ್ಡೆ, ಸಿಟ್ಯೂರು, (21) ಸಿ. ಎನ್. ಭೀಮರಾವ್, ಉಡುಪಿ. (22) ಕೆ. ಎಂ. ಶೆಟ್ಟಿ, ಬೊಂಬಾಯಿ, (23) ಪ್ರ. ಕಾರ್ಯದರ್ಶಿ ತರುಣರ ಸಂಘ, ಬಿಜಾಪುರ, (24) ಕಿಟ್ಟಣ್ಣ ರೈ, ಬೆಳ್ಳಾರೆ, (25) ಕಂಜಪರ್ಣೆ ಸಾವಿತ್ರಿಯಮ್ಮ, ಬೆಳ್ಳಾರೆ, (26) N. K. Upadhya, Bombay, (27) Gopal Rama ware, Bombay, (28) Raghav Balkrishna Rumde, Bombay, (29) Bhargav Appa Patil, Bombay, (30) ಜಿ. ಎ. ಕೋಟಿಯಾನ್, ಮುಂಬಾಯಿ, (31) ಯು. ಸುಂದರ ಶೆಟ್ಟಿ, ಮುಂಬಾಯಿ. (32) U. Sunder Shetty, Bombay, (33) ಪಿ. ರಮಾಬಾಯಿ, ಅಯ್ಯಳ, (34) ಎ. ರತ್ನಾ ಬಾಯಿ, ಕುಲ್ಶೇಕರ್, ಮಂಗಳೂರು, (35) ಪಿ. ಕಂಕರರಾವ್, ಪಡುಬಿದ್ರಿ, (36) ಪಿ ವೇಣುದಾಸ ಕಿಣಿ, ಮಂಗಳೂರು. (37) ಎಸ್. ಪೀರಪ್ಪಶೆಟ್ಟಿ, ಬೈಲೂರು, (38) ರಾಮ ಟಿ. ಅಮಿನ್, ಬೊಂಬಾಯಿ, (39) ಕೆ. ನಾರಾಯಣ ಶೆಟ್ಟಿ, ಕೊರಂಗ್ರಪಾಡಿ, (40) ಜಿ. ಜಿ. ಪ್ರಭು, ಬೊಂಬಾಯಿ, (41) ಎಸ್. ವಾಸುದೇವರಾಯ ಬಳ್ಳಾಲ್, ಅಂಬ್ಲಪಾಡಿ, (42) ಎಂ. ಎಂ. ಮುನಷ್, ಬೊಂಬಾಯಿ, (43) ಕೆ. ರಾಜಕ್ಕ ಹೆಗ್ಡೆ, ಬೊಂಬಾಯಿ, (44) ಬಿ. ಎ. ಕುಲಕರ್ಣಿ, ಶಿರಸಂಗಿ, (45) ಬಿ. ಆರ್. ರಾವ್ ಬೊಂಬಾಯಿ, (46) ಕೆ. ಕಾಳಪ್ಪಶೆಟ್ಟಿ, ಬೊಂಬಾಯಿ, (47) ಎಸ್. ಶೀನಪ್ಪ, ಬೊಂಬಾಯಿ, (48) ಬಿ ಗೋಪಾಲರಾವ್, ಮದ್ರಾಸ್, (49) ಕೆ. ಸಿ. ಶೆಟ್ಟಿ ಕಾರ್ಕಳ. (50) ಬಿ ರಮಣಿಬಾಯಿ, ಬಾರ್ಕೂರು.

ಇವರೊಳಗೆ ಚೀಟು ಹಾಕಲಾಗಿ I ಇನಾಮು 10ನೇ ನಂಬ್ರದ ಗೋಪಾಲ ಬಿ. ಸುವರ್ಣರಿಗೂ, IIನೇ ಇನಾಮು ೩ ನಂಬ್ರ 16ನೇ ಪಿ. ಸುಲೋಚನಾಬಾಯಿ ಮತ್ತು ನಂಬ್ರ 36ನೇ ಪಿ. ವೇಣುದಾಸ ಕಿಣಿಯವರಿಗೂ, IIIನೇ ಇನಾಮು ೫ ನಂಬ್ರ 9, 28, 32, 35, ಮತ್ತು 48ನೆಯವರಿಗೂ ದೊರಕಿವೆ. ಎಲ್ಲರಿಗೂ ಇನಾಮುಗಳನ್ನು ಪುಸ್ತಕರೂಪದಲ್ಲಿ ಕಳಿಸಲಾಗುವುದು.

—ವ್ಯವಸ್ಥಾಪಕ.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಯಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತವೆ. ಶುಷ್ಕರಕ್ತವನ್ನು ಬುದ್ಧಿ ಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತವೆ. ಕ್ರಿಮು ಡಬ್ಬಿ ೧ಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಸೀಸೆ 1ಕ್ಕೆ ರೂ. 5—0—0.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೬೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಧಾತುಪುಷ್ಟಿ ಲೇಹ ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ,ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಿದ್ದು ಹೋಗುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ 2—8—0.

ಮೇಹ ಕುಠಾರ— ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರಮಾಡುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು ಮೂತ್ರದಲ್ಲಿ ಧಾತು ಹೋಗುವುದು ಸೊಂಟನೋವು ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಅಲ್ಲದೆ ಇಪ್ಪತ್ತು ನಮೂನೆಯ ಮೇಹ ರೋಗಗಳಿಗೆ ದಿವ್ಯಔಷಧ. ಡಬ್ಬಿ 1ರ ರೂ. 2-8-0.

ಕಸ್ತೂರಿ ಮಿಶ್ರಣ ದಶಮೂಲ— ಪ್ರಸವಾನಂತರ ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ 1ರ ರೂ. 1—8—0

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:- ನವಭಾರತ ಬುಕ್ ಡಿಪ್ಪೋ, ಉಡುಪಿ.ಶ್ರೀ ಕೃಷ್ಣ ಫಾರ್ಮಸಿ, ಕುಂದಾಪುರ.ವಿಟ್ಠಲ ನಾರಾಯಣಶೆಣೈ,ಟ್ರೇಮ್‌ಟರ್ಮಿನಸ್ ಮಜಗಾಂವ ಮುಂಬಯಿ.

ಗತ ವೀರ್ಯವನ್ನು ಪುನಃ ಹೊಂದಿರಿ.

ಡಾ| ಬೀನ್ಸ್‌ರವರ "ಸೆಲ್ಫ್ ಪ್ರೊಟೆಕ್ಟರ್" ಸ್ತ್ರೀಪುರುಷರಿಬ್ಬರಿಗೂ ಅತ್ಯುತ್ತಮೋತ್ತಮವಾದ ನರಶಕ್ತಿವರ್ಧಕ ಶಾಸಕವೆಂದು ಜಗತ್ಪ್ರಸಿದ್ಧವಾಗಿವೆ. ಇದು ಸಾಕ್ಷಾತ್ತಾಗಿ ಬೆನ್ನಹುರಿ ಹಾಗೂ ಜನನೇಂದ್ರಿಯಗಳಿಗೆ ಸಂಬಂಧಪಟ್ಟ ನರಗಳನ್ನು ಉಜ್ಜೀವಿಸುವುದು. ಆದ್ದರಿಂದ ಅಂಥ ವ್ಯಾಧಿಗಳಿಂದ ನರಳುವವರಿಗಿದು ಅಮೂಲ್ಯವಾದದ್ದು. ನೀವು ಯೌವನದ ಅಪವ್ಯಯ, ಅತ್ಯಾಚರಣೆ, ಮುಷ್ಟಿ ಮೈಥುನ, ಅಕಾಲಿಕ ವೃದ್ಧಾಪ್ಯ, ಸ್ವಪ್ನೇಂದ್ರಿಯ, ಅಸ್ವಾಭಾವಿಕ ಸ್ರಾವ, ಅತಿ ಮೂತ್ರ, ಕ್ಷೀಣಧಾತು, ಧಾರಣಾಶಕ್ತಿಯಿಲ್ಲದಿರುವಿಕೆ, ಕಾಮತೃಪ್ತಿಯ ವಿಫಲತೆ, ಸ್ಪರ್ಮಟೋರಿಯ, ನಿರುತ್ಸಾಹ ಮತ್ತು ನರದೌರ್ಬಲ್ಯ ಇವುಗಳಿಂದ ನೀವು ನರಳುತ್ತಿದ್ದರೆ ಡಾ| ಬೀನ್ಸ್‌ರವರ "ಸೆಲ್ಫ್ ಪ್ರೊಟೆಕ್ಟರ್" ಉಪಯೋಗಿಸಿರಿ. ಇದನ್ನು ಬಳಸಿದ ಮೊದಲಿನ ದಿನದಿಂದ ಗುಣತೋರಿಬರುವ್ವನು ಇಂದೇ ಒಂದು ಸೀಸೆ ಕೊಳ್ಳಿರಿ.

ಬೆಲೆ ೧ ಸೀಸೆ ರೂ. 4—0—0

ಅಮೆರಿಕನ್ ಮೆಡಿಕೊ ಅಂಡ್ ಜೆ. ಪಿ. ಅಸೋಸಿಯೇಷನ್, (D.23) ಪೋರ್ಟ್ ಬೊಂಬಾಯಿ.

SELF-PROTECTOR FOR VIGOUR & VITALITY

ಹಿಟ್ಲರನು ಅನ್ಯರ ಮಟ್ಟಿಗೆ ತೀರಾ ಮುಂಗೋಪಿ; ಆದರೆ ತನಗೆ ತಾನೇ ಭಾರೀ ಮುಂಜಾಗ್ರತೆಯವ!

ಎಲ್ಲಾ ಯುರೋಪಿಯನ್ ಬ್ಯಾಂಕುಗಳಲ್ಲಿ ಹಣವಿಟ್ಟಿದ್ದಾನೆ.

ಹಿಟ್ಲರನು ಅಧಿಕಾರಕ್ಕೆ ಬರುವ ಮೊದಲು ಒಮ್ಮೆ ಎಷಟ್ಟಿಕೊಂಡು ಹೇಗಂದಿದ್ದ "ಇಡೀ ಪ್ರಪಂಚದಲ್ಲಿ ಬೇಂಕು ಲೆಕ್ಕಾಚಾರವಿಲ್ಲದ ಒಬ್ಬ ಗೃಹಸ್ಥನಿರುವನಾದರೆ ಅದು ನಾನು!" ಅವರ ಈ ದಿನ ಯೂರೋಪಿನ 15 ಮುಖ್ಯ ಪಟ್ಟಣಗಳ ಬೇಂಕುಗಳಲ್ಲಿ ಅವನು ಹಣ ಜಮೆಯಿಟ್ಟಿದ್ದಾನೆ. ಅವನ ನಿಧಿಯ ಬಹುಭಾಗವು, 'ಮೈನ್‌ಕೇಂಫ್' ಎಂಬ ಅವನ ಆತ್ಮಕಥೆಯ ಮಾರಾಟದಿಂದ ದೊರೆತುದು. ಹಿಟ್ಲರನ ಸ್ವಂತ ಚರಿತ್ರೆ ಮತ್ತು ಧ್ಯೇಯಗಳನ್ನೊಳಗೊಂಡ ಈ 'ಮೈನ್‌ಕೇಂಫ್' ಪುಸ್ತಕವು ಲೋಕದಲ್ಲಿ ಅತಿ ಹೆಚ್ಚಿನ ಪ್ರಚಾರವಿರುವ ಪುಸ್ತಕಗಳಲ್ಲೊಂದಾಗಿದೆ. ಆ ಮೂಲಕ ಹಿಟ್ಲರನಿಗಾಗುವ ವಾರ್ಷಿಕ ಆದಾಯವು 170,000 ಪೌಂಡುಗಳಂತೆ. ಈ ಹಣವನ್ನು ಹಿಟ್ಲರನು ತನ್ನ ಖಾಸಗೀ ಏಜೆಂಟನಾದ ಮೇಕ್ಸ್ ಅಮನ್ನ್ ಎಂಬವನ ಮೂಲಕ ಒಳವ್ಯವಸ್ಥೆಯಿಂದಲೇ ಪರದೇಶಗಳ ಬೇಂಕುಗಳಲ್ಲಿ ಇಡಿಸಿದ್ದಾನೆ, ಈ ಕಾರ್ಯವು 1921ನೇ ಇಸವಿಯಿಂದ ನಡೆಯುತ್ತಾ ಬಂದಿದೆ.

ತನ್ನ ಕಾನೂನು ತನಗೆ ಬಗಾವಿಲ್ಲ!

ಜರ್ಮನಿಯ ಯಾವನಾದರೊಬ್ಬನು ಅಥವಾ ವ್ಯಾಪಾರೀ ಸಂಸ್ಥೆಯು, ಅಲ್ಲಿಯ "ರೀಚ್ಸ್ ಬೇಂಕಿನ" ಅನುಮತಿ ಪಡೆಯದೆ ಜರ್ಮನಿಯ ಹೊರಗೆ ಬೇಂಕು ಲೇವದೇವಿ ಮಾಡಕೂಡದೆಂದು ಕಠಿಣ ಕಾನೂನಿದೆ. ಹಾಗೆ ಇಡುವ ಹಣದ ಸವಿವರ ವರದಿಯನ್ನು ರೀಚ್ಸ್‌ಬೇಂಕಿಗೆ ಇಳಿಬಿಡದೆ ಒಪ್ಪಿಸುತ್ತಿರಬೇಕೆಂಬ ನಿಯಮವೂ ಉಂಟು. ಈ ಕಾಯಿದೆಗಳನ್ನು ಮೀರುವವರಿಗೆ ಕಠೋರ ಶಿಕ್ಷೆಗಳು ಪ್ರತ್ಯೇಕವಿವೆ. 'ಜರ್ಮನ್ ಅಮೇರಿಕನ್ ಸ್ಟೀಮರ್‌ಶಿಪ್ ಕಂಪೆನಿ' ಎಂಬ ಹಡಗು ಕಂಪೆನಿಯೊಂದರ ಅಧ್ಯಕ್ಷರಾದ ಅರ್ನೋಲ್ಡ್ ಬರ್ನ್‌ಸ್ಟೀನ್ ಎಂಬವನು ಈ ಕಾನೂನಿಗನುಸಾರವಾಗಿ ನಡೆದುಕೊಳ್ಳಲಿಲ್ಲವೆಂದು ಕಳೆದ ವರುಷದಲ್ಲಿ ಹತ್ತುವರುಷಗಳ ಶಿಕ್ಷೆಗೊಳಗಾಗಿದ್ದರು. ಆದರೆ ಹಿಟ್ಲರನ ಲೆಕ್ಕಾಚಾರಕ್ಕೆ ಈ ನಿರ್ಬಂಧವಿಲ್ಲ. ಅವನ ನಿಧಿಯು ರೀಚ್ಸ್ ಬೇಂಕಿನಲ್ಲಿ ರಜಿಸ್ಟರ್ ಮಾಡಲ್ಪಟ್ಟುದೂ ಇಲ್ಲ. ಜರ್ಮನಿಯ ಯಾವ ಅಧಿಕಾರಿಗೂ ಅದರ ಸಂಪೂರ್ಣ ಗುಟ್ಟು ಗೊತ್ತಿರುವದು ಕೂಡಾ ಇಲ್ಲ.

ಅದೇಕೆ ಹಾಗೆ?

ಇದಕ್ಕೇನು ಕಾರಣ? ಕಾರಣ ಮತ್ತಾವುದೂ ಅಲ್ಲ. ಒಂದಲ್ಲೊಂದು ದಿನ ತಾವು ಜಾರಿಬೀಳಲಿಕ್ಕಿರುವೆವೆಂಬ ಭಯ ಪ್ರತಿಯೊಬ್ಬ ಸರ್ವಾಧಿಕಾರಿಗೂ ಇದೆ. ಹಿಟ್ಲರನಂತೆಯೇ ಇತರ ಸರ್ವಾಧಿಕಾರಿಗಳೂ ಮುಂಜಾಗ್ರತೆ ತೆಗೆದುಕೊಂಡೇ ಇರುವರೆಂಬುದರ ಕುರಿತು ಅನುಮಾನಬೇಡ. ನಾಜಿಗಳಲ್ಲಿ ಒಂದು ನಂಬಿಕೆಯಿದೆ–ತಮ್ಮ ರಾಜ್ಯಭಾರವು ಕಡಿಮೆಯೆಂದರೆ ಇನ್ನು ಸಾವಿರ ವರ್ಷಗಳ ವರೆಗಾದರೂ ಬಾಳಲಿಕ್ಕುಂಟು ಎಂದು. ಒಂದೊಮ್ಮೆಗೆ ನಾಜೀ ರಾಜ್ಯಭಾರಕ್ಕೇನಾದರೂ ಅಪಮೃತ್ಯು ಒದಗಿತೆಂದು ಭಾವಿಸೋಣ. ಹಿಟ್ಲರನು ಹೈಲ್‌ಸಿಲಾಸಿ, ರಾಜಾಜೋಗ, ಡಾ| ಬೆನೆಟರಂತೆ ಉಟ್ಟ ಉಡಿಗೆಯಲ್ಲಿ ಜರ್ಮನಿ ಬಿಟ್ಟು ಪಲಾಯನಮಾಡಬೇಕಾಗಿ ಬಂದರೆ? ಆಗ ಹೋದಲ್ಲಿ ಹಣದ ಕೊರತೆಯಾಗಬಾರದು, ಎಂಬುದಕ್ಕಾಗಿಯೇ ಈ ಮುಂಜಾಗ್ರತೆ.

ಹಣದ ಮಟ್ಟಿಗೆ ಮುಸಲನಿಯನ್ನು ನಂಬಲಾರ!

'ನಾವಿಬ್ಬರೂ ಸಮರಥಿಕರು!' ಎಂದು ಹಿಟ್ಲರ್ ಮುಸಲನಿಗಳು ಪರಸ್ಪರರನ್ನು ಸಂಬೋಧಿಸಿಕೊಳ್ಳುವದೇನೋ ನಿಜ. ಆದರೆ ಈ ಬಾಂಧವ್ಯವು ಅನ್ಯರ ತಲೆಯೊಡೆಯುವುದಕ್ಕಾಗಿ ಮಾತ್ರ. ಯುರೋಪಿನ ಇತರ ಎಲ್ಲಾ ಕಡೆಗಳಲ್ಲಿ ಬೇಂಕು ಲೇವದೇವಿಯಿರುವ ಹಿಟ್ಲರನು ಇಟಲಿಯಲ್ಲಿ ಒಂದೇ ಒಂದು ಚಿಕ್ಕಾಸು ಇಟ್ಟಿಲ್ಲ! ತಾನು ಪಲಾಯನಮಾಡುವ ಕಾಲಬಂದಲ್ಲಿ ಇಟಲಿಯ ಆಶ್ರಯ ಪಡೆಯುವದು ಅಸಾಧ್ಯವೆಂದು ಹಿಟ್ಲರನಿಗೆ ಮತ್ತು ಅವನ ಪಕ್ಕಾ ವ್ಯಾಪಾರಿಬುದ್ಧಿಯ ಏಜಂಟನಾದ ಹೆರ್ ಮೇಕ್ಸ್ ಏಮನ್ನನಿಗೆ ಸ್ಪಷ್ಟವಾಗಿ ಗೊತ್ತು. 'ನಾವೆಂತಹ ಸಂದರ್ಭದಲ್ಲಿಯೂ ಒಬ್ಬರನ್ನೊಬ್ಬರು ಬಿಟ್ಟುಹಾಕಲಾರೆವು' ಎಂದು ಹಿಟ್ಲರ್ ಮುಸಲನಿಗಳನ್ನುವದು ಲೋಕದವರ ಮುಖ ನೋಡಿದಾಗ ಮಾತ್ರ; ತಾವೇ ಒಬ್ಬರನ್ನೊಬ್ಬರು ನೋಡುವಾಗ ಆ ದೃಷ್ಟಿಯಲ್ಲೆಂತಹ ಅನುಮಾನವಿದೆಯೆಂಬುದಕ್ಕೆ ಇದೊಂದು ದೃಷ್ಟಾಂತ ಸಾಲದೆ?

ಸ್ಥಾಪನೆ: ... ರಬ್ಬರ್ ಸ್ಟಾಂಪ್ ಕಂಪೆನಿ 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತು ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ ಬೋರ್ಡ್, ನೇಮ್‌ಪ್ಲೇಟ್, ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿ ಕೊಡಲಾಗುತ್ತದೆ.



CROWN RUBBER STAMP CO.,
Balmat Road, MANGALORE.
Included by the Mysore Govt. Stores, Purchase Committee in the list of approved Firms

The Canara Industrial & Banking Syndicate, Ltd., Kanhangad.

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಕಾಂಞಂಗಾಡು.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಜನರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡೆದ ಮೊಬಲಗುಗಳನ್ನಾಗಲಿ ಅವುಗಳ ಮೇಲಿನ ಬಡ್ಡಿಯನ್ನಾಗಲಿ ವಾಯಿದೆಗೆ ಕೊಡದೆ ಇರುವುದರಿಂದಲೂ, ಅವರಿಗೆ ಬಿಟ್ಟ ರಿಜಿಸ್ಟ್ರೀ ನೋಟೀಸುಗಳಲ್ಲಿ ಕೆಲವು ಜ್ಯಾರಿಯಾಗಿಯೂ, ಕೆಲವು ಜ್ಯಾರಿಯಾಗದೆ, "ಊರಲ್ಲಿ ಇಲ್ಲ" ವ್ಯಾತಪಟ್ಟರುತ್ತಾರೆ ಎಂಬೀ ಕಾರಣಗಳಿಂದ ಬಂದಿರುವುದರಿಂದಲೂ, ಸದರಿ ಸಾಲಗಾರರು ಬೇಂಕಿಗೆ ಸಲ್ಲತಕ್ಕ ಅಸಲು ಬಡ್ಡಿ, ನೋಟೀಸು ಖರ್ಚು ಇತ್ಯಾದಿ ಐವೇಜುಗಳನ್ನು ಇದೇ ಬರುವ 1939ನೇ ಇಸವಿ ಮೇ ತಿಂಗಳ ತಾ.4ನೇ ಬೃಹಸ್ಪತಿವಾರದೊಳಗೆ ಸಲಾಯಿಸಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದಿದ್ದರೆ ಅದೇ ದಿವಸ (4th May 1939) ಯಾ ಅದರನಂತರ ಬೇಂಕಿಗೆ ಯುಕ್ತತೋರುವ ಬೇರೆ ತಾರೀಖಿನಲ್ಲಿ ಪುನಃ ನೋಟೀಸುಕೊಡದೆ, ಮಧ್ಯಾಹ್ನ 2ಘಂಟೆಗೆ ನಮ್ಮ ಕಾಂಞಂಗಾಡು ಆಫೀಸಿನಲ್ಲಿ ಬಹಿರಂಗವಾಗಿ ಏಲಂಮಾಡಲಾಗುವುದು. ತಿಳಿದಿರಲಿ ಏಲಂ ಕಾಯಂ ಮಾಡುವ ಹಕ್ಕು ಬೇಂಕಿನ ಮೇಲೆ ಹೊಂದಿಕೊಂಡಿರುವುದು.

ಲೋನು ನಂಬ್ರ ಮತ್ತು ತಾರೀಕು	ಹೆಸರು ಮತ್ತು ವಿಳಾಸ	ಮೊಬಲಗು ರೂ. ಆ. ಪೈ
1573/37 5-6-37	ಅಂದು ಕುಂಞ, ಕಡವತ್ತು ಮಮ್ಮದೆಯ ಮಗ, ಅಜಾನೂರು ಗ್ರಾಮ ಮಾಣಿಕ್ಕೋತ್ತು. ಕಾಂಞಂಗಾಡು ಪೋಸ್ಟ್ ದ. ಕ.	15-0-0
1829/37 5-7-37	ಸುಬ್ರಹ್ಮಣ್ಯ ಪಂಡಾರಿತ್ತಾಯರ್ ವಿಷ್ಣು ಪಂಡಾರಿತ್ತಾಯರ ಮಗ, ಪುಲ್ಲೂರು ಗ್ರಾಮ. ಕಾಂಞಂಗಾಡು ಪೋಸ್ಟ್ ದ. ಕ.	50-0-0
2193/37 2-8-37	ಕುಂಞಂಬು ಚೆಮ್ಮಣಕುಂಡಿಲ್ ಮಮ್ಮುಂಞಯ ಮಗ, ಚಿತ್ತಾರಿ ಗ್ರಾಮ, ಚೆಮ್ಮಣಕುಂಡಿಲ್, ಕಾಞಂಗಾಡು ಪೋಸ್ಟ್ ದ. ಕ.	8-0-0
2856/37 12-10-37	ಕೀಯೋತ್ತು ಮೊಯಿದಿನ್ ಕುಂಞ, ಅಬ್ದುಲ್ ಖಾದ್ರಿಯ ಅಳಿಯ, ಪಳ್ಳಿಕ್ಕರೆ ಗ್ರಾಮ, ಪೂಚಕ್ಕಾಟ್ ಬೇಕಲ, ಪೋಸ್ಟ್ ದ. ಕ.	15-0-0
547/38 5-4-38	ಎಮ್. ಕುಂಞರಾಮು, ಪೂಚಕ್ಕಾಟ್ ಮಮ್ಮುವಿನ ಮಗ, ಕೀಕಾನ ಗ್ರಾಮ, ಪೂಚಕ್ಕಾಟ್ ಬೇಕಲ ಪೋಸ್ಟ್ ದ. ಕ.	7-0-0
599/38 19-4-38	ಕೊಟ್ಟನ್ ತೀಯನ್ ಕಣ್ಣನವರ ಅಳಿಯ ಪೇಳೂರು ಗ್ರಾಮ, ಕಾನದರು ಕಾಂಞಂಗಾಡು ಪೋಸ್ಟ್ ದ. ಕ.	5-0-0
730/38 7-5-38	ಕೆಟಕ್ಕೆಸ ಕೃಷ್ಣನ್ ನಾಯರ್ ಪರಿಂಗಾನ್ ಕುಂಞಂಬು ನಾಯರ ಮಗ, ಚಾವತ್ತೂರು ಗ್ರಾಮ. ನೀಲೇಶ್ವರ ಪೋಸ್ಟ್ ದ. ಕ.	7-0-0
748/38 9-5-38	ಮಮ್ಮದ್ ಹಾಜಿ, ಮೂಸಾ ಬ್ಯಾರಿಗಳ ಮಗ, ಪಳ್ಳಿಕ್ಕರೆ ಗ್ರಾಮ, ಕೋಟಿಕುಲಂ, ಬೇಕಲ ಪೋಸ್ಟ್ ದ. ಕ.	19-0-0
785/38 14-5-38	ನಾರಾಯಣನ್ ಕೋರನ್ ರಾಮನ ಅಳಿಯ ಮಡಿಕ್ಕೈ ಒಂದನೇ ಗ್ರಾಮ ತಾಂಡಲ, ಕಾಂಞಂಗಾಡು ಪೋಸ್ಟ್ ದ. ಕ.	5-0-0
898/38 30-5-38	ವಿ. ಒಸೆ, ಕೆಳಯತ್ತು ಅಮ್ಮಾನತ್ತಿಯ ಅಳಿಯ, ಬಲ್ಲಾ ಗ್ರಾಮ, ಕಡಪ್ಪುರಂ, ಕಾಂಞಂಗಾಡು ಪೋಸ್ಟ್, ದ. ಕ.	20-0-0
1409/38 28-7-38	ಸಿ. ಕೆ. ಚಂದನ್ ನಂಬಿಯಾರ್, ಟೀಚರ್ ಕೊಡಕ್ಕಾಟ್ ಬೋರ್ಡ್ ಶಾಲೆ, ಪಿಲಿಕ್ಕೋಡ್ ಪೋಸ್ಟ್ ದ. ಕ.	545-0-0

Kanhangad
18-4-1939

K. Ganesha Baliga
Accountant

ಬಲು ಸುಲಭ ದರದಲ್ಲಿ

- ಉತ್ಕೃಷ್ಟ ಊಟ ಉಪಹಾರಾದಿಗಳಿಗಾಗಿ ಇತ್ತ ಗಮನಿಸಿರಿ!
- ನಾವು ನಮ್ಮನ್ನೇ ವಿಶೇಷವಾಗಿ ಪ್ರಶಂಸಿಸಿ ಕೊಳ್ಳಬಾರದಷ್ಟೆ!

ಲಕ್ಷ್ಮೀ ನಿವಾಸ ಹಿಂದೂ ಹೋಟೇಲು

(ಸ್ಥಾಪನೆ 1926)

ವಿಠಲ್ ಭಾಯಿ ಪಟೇಲ್ ರೋಡ್, ಗಿರ್ಗಾಂ, ಮುಂಬಯಿ.

Lakshmi Nivas Hindu Hotel

VITTALBHAI PATHEL ROAD,
GIRGAUM — — BOMBAY.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯು ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು, ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು:— ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K R. K. SHET

Opposite Govt. College, Hampankatte, MANGALORE

SHOW-ROOM & WORK-SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,
ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪಿತ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.
ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,
Kanara Printing Works,
Hampankatte, **MANGALORE**

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ. ಅಳಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1ಕ್ಕೆ 12 ಆಣೆ, ಟಿ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟ್‌ರು:- **ನವಭಾರತ ಬುಕ್‌ಡಿಪೋ, ಉಡುಪಿ.**

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಡುನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ ಬಹಿಷ್ಠೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತುಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು
"ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ
ಅಗತ್ಯವಾಗಿ ಇರಲೇಬೇಕಾದ್ದು.
ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,
ಬ್ರಾಂಚ್—ಮಂಗಳೂರು.

NAVABHARAT BOOK DEPOT

Book Sellers, Publishers & Advertising Agents
Church Road-Udipi.

ನಮ್ಮಲ್ಲಿ
ಎಲ್ಲಾ ತರದ ಶಾಲಾಪುಸ್ತಕಗಳೂ,
ಲೈಬ್ರರಿಗೆ ಬೇಕಾದ ಪುಸ್ತಕಗಳೂ
ದೊರೆಯುತ್ತವೆ.

ಕೆಟಲಾಗಿಗೂ
ಇತರ ಮಾಹಿತಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ
ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು
ಚರ್ಚ್‌ರೋಡ್ ⁝ ⁝ ⁝ ಉಡುಪಿ

ABSOLUTELY FREE!

Bring this coupon and you will get your own Photo absolutely free of charge.

☞ The rate for the enlargement of the same Rupee one only (size 6"×8").

Send your old photo and you will get enlargement 6'×8' for Rs. 2—8—0. ony and big size 16'×20' for Rs. 5 only.
Our time every day 9 a. m. to 7 p. m. Sunday 9 a. m. to 4p. m.

K. H. PATHAK

276 Surya Mahal Girgaum Road, BOMBAY, 4. | Royal Art Studio 183 Hornby Road BOMBAY, 1.

ಕೇವಲ ಧರ್ಮಾರ್ಥ!

ಈ ಜಾಹೀರಾತಿನ ಕೂಪನನ್ನು ತರುವವರಿಗೆ ಅವರ ಫೋಟೋವನ್ನು ಧರ್ಮಾರ್ಥವಾಗಿ ತೆಗೆದುಕೊಡಲಾಗುವುದು.

ತ್ವರೆ ಮಾಡಿರಿ! ಬೊಂಬಾಯಿ ಪಟ್ಟಣಿಗರೆ ತ್ವರೆ ಮಾಡಿರಿ!!

● ಈ ನಮ್ಮ ಫೋಟೋವನ್ನು ಎನ್‌ಲಾರ್ಜ್‌ಮೆಂಟಿಗೆ ಬರೀ ರೂ. 1/. ಮಾತ್ರ. (ಸೈಜ್ 6"×8")

ಹೊರಗಿನವರು ಈ ಕೂಪನನೊಂದಿಗೆ ತಮ್ಮ ಫೋಟೋಕಳುಹಿಸಿದರೆ ಅವನ್ನು 6'×8' ಸೈಜಿನಲ್ಲಿ ರೂ. 2-8-0ಕ್ಕೆ ಎನ್‌ಲಾರ್ಜಮಾಡಿಕೊಡಲಾಗುವುದು. 16×'20'ರ ದೊಡ್ಡ ಸೈಜಿಗೆ ರೂ. 5 ಮಾತ್ರ. ನಮ್ಮ ಆಫೀಸು ಸಮಯ ಬೆಳಗ್ಗೆ 9ರಿಂದ ಸಂಜೆ 7, ಆದಿತ್ಯವಾರ ಬೆಳಗ್ಗೆ 9ರಿಂದ ಸಂಜೆ 4 ಗಂಟೆ ತನಕ

ಕೆ. ಎಚ್. ಪಥಕ್

276, ಸೂರ್ಯಮಹಾಲ್ ಗಿರ್ಗಾವ್‌ರೋಡು, ಬೊಂಬಾಯಿ 4 | ರೋಯಲ್ ಆರ್ಟ್‌ಸ್ಟುಡಿಯೋ, 183 ಹೋರ್ನ್ಬಿರೋಡು, ಬೊಂಬಾಯಿ 1

ಕೇಶವರ್ಧಕ ⁘ ನೇತ್ರಾರೋಗ್ಯರಕ್ಷಕ ⁘ ಸುಖದಾಯಕ

ಆಮಲಕೀ ತೈಲ
AMALAKI HAIR OIL

(Regd Trade Mark)

ವಿದ್ಯಾರ್ಥಿಗಳಿಗೂ, ಸಕಲ ಸ್ತ್ರೀ ಪುರುಷರಿಗೂ ನಿತ್ಯ ಕೇಶ ಪ್ರಸಾಧನಾರ್ಥ ಪುಷ್ಪಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲವಿದು. ಮೆದುಳಿನ ಸ್ವಾಸ್ಥ್ಯಕ್ಕೂ, ನೇತ್ರಾರೋಗ್ಯ ರಕ್ಷಣೆಗೂ ಕೇಶಕಲಾಪದ ಬೆಳವಣಿಗೆಗೂ ಸೌಂದರ್ಯವರ್ಧನೆಗೂ ಅತ್ಯಂತ ಸಹಾಯಕವಾಗಿದೆ. ಇದನ್ನು ನಿತ್ಯವೂ ಉಪಯೋಗಿಸುತ್ತಿದ್ದರೆ ಶರೀರ ಹಾಗೂ ಮಾನಸಿಕ ಶ್ರಮದಿಂದ ಪುರುಷರಿಗೂ, ಪ್ರಸವಾನಂತರದಲ್ಲಿ ಸ್ತ್ರೀಯರಿಗೂ ಸಾಮಾನ್ಯವಾಗಿ ಕೇಶಮೂಲಗಳು ನಿಸತ್ವಹೊಂದಿ ಕೂದಲುಗಳು ಉದುರುವಿಕೆ ಅಕಾಲದಲ್ಲಿ ನರೆಯುಂಟಾಗುವಿಕೆ ಇವೇ ಮೊದಲಾದದೋಷಗಳು, ದೂರವಾಗಿ ಕೇಶಮೂಲಗಳು ದೃಢವಾಗುವುದರಿಂದ ಅಚ್ಚಕಪ್ಪಾದ ಕೂದಲುಗಳು ನಿಬಿಡವಾಗಿ ಬೆಳೆಯುವದಲ್ಲದೆ ಮೊದಲೇ ನರೆತಕೂದಲು ಸಹ ಕಪ್ಪಾಗಿ ಮುಖಶ್ರೀಯು ಲಾವಣ್ಯ ಪೂರ್ಣವಾಗುವದು. ತಲೆ ನೋವು, ಸೂರ್ಯಾವರ್ತ ಅಥವಾ ಅರೆತಲೆನೋವು, ನೇತ್ರಜ್ವಾಲೆ, ಮೆದುಳಿನ ಉಷ್ಣತೆ ತಲೆತಿರುಕು, ದುಃಸ್ವಪ್ನ ಪೂರ್ಣವಾದ ನಿದ್ರಾಭಂಗ, ಮೊದಲಾದ ಪಿತ್ತಜನಿತಶಿರೋರೋಗಗಳು ನಿವೃತ್ತವಾಗಿ ಸುಖಕರ ನಿದ್ರೆಯು ಹತ್ತುವುದು. ಇಂತಹ ಸುಖನಿದ್ರೆಯಿಂದ ಸ್ಮೃತಿ, ಮೇಧಾ ಉತ್ಸಾಹ,ವಿಚಾರಶಕ್ತಿ ಮೊದಲಾದ ಮಾನಸಿಕ ಶಕ್ತಿಗಳು ವಿಕಾಸಹೊಂದಿ ಚಿರಾರೋಗ್ಯ ಲಾಭವಾಗುವದು.

4 ಔನ್ಸಿನ ಸೀಸೆ ಒಂದರ 0—11—0. 2 ಔನ್ಸಿನ ಸೀಸೆ ಒಂದರ 0—6—0.

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ.

100ಮಾತ್ರೆಗಳಿಗೆ ರೂ. 1-5-0, 500ಕ್ಕೆ ರೂ. 5.

ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ

ಸ್ವದೇಶೀ ಔಷಧಿ ಭಂಡಾರ, (ರಿಜಿಸ್ಟರ್ಡ್) **ಕುಂಜಾಲ್,**

ಬ್ರಹ್ಮಾವರ ಪೋಸ್ಟ್, ದ. ಭಾರತ

ಸಪ್ಲೈ ಏಜನ್ಸಿ ಲಿಮಿಟೆಡ್‌ನಲ್ಲೂ ನವಭಾರತ ಬುಕ್ ಡಿಪೋದಲ್ಲೂ ನಮ್ಮ ಔಷಧಗಳು ಸಿಗುತ್ತವೆ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಫಿಲ್ಸ್
ಕೋಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಸಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

NOTICE

In the High Court of Judicature AT MADRAS.

Ordinary Original Civil Jurisdiction

O. P. No. 104 of 1939.

In the matter of the Indian Companies Act VII of 1913.

and

In the matter of the Supply Agency Ltd., UDIPI.

The Supply Agency Limited by its Managing Director S. U. Paniadi } *Petitioner.*

The above petition praying for the confirmation of the alterations in the Memorandum of Association of the above Company as passed by its special resolution dated 26th March 1939 is posted to 4th May 1939 for hearing.

ADVOCATES ASSOCIATION, *HIGH COURT BUILDINGS,* **MADRAS** 15—4—1939

K. Srinivasa Rao,
Advocate for Petitioner.

ನೋಟೀಸು

ಹೈಕೋರ್ಟ್ ಆಫ್ ಜುಡಿಕೇಚರ್, ಮದ್ರಾಸು

O. P. ನಂಬ್ರ 104/1939

1913ನೇ ಇಂಡಿಯನ್ ಕಂಪೆನಿ ಆಕ್ಟ್ VIIರ ಮೇರೆಗೆ

ಮತ್ತು

ಉಡುಪಿ ಸಪ್ಲೈ ಏಜನ್ಸಿ ಲಿಮಿಟೆಡಿನ ವಿಚಾರದಲ್ಲಿ

ಎಸ್. ಯು. ಪಣಿಯಾಡಿ, ಮೆನೇಜಿಂಗ್ ಡೈರೆಕ್ಟರ್, ಸಪ್ಲೈ ಏಜನ್ಸಿ ಲಿಮಿಟೆಡ್—**ಅರ್ಜಿದಾರ.**

ಮೇಲೆ ನಮೂದಿಸಿದ ಕಂಪೆನಿಯ ತಾ. 26—3—1939 ರಲ್ಲಿ ಜರಗಿದ ಸಭೆಯಲ್ಲಾದ ಸ್ಪೆಶಲ್ ನಿರ್ಣಯದ ಮೇರೆಗೆ ಮೆಮರಂಡಮ್ ಆಫ್ ಎಸೋಸಿಯೇಶನಿನಲ್ಲಿ ಮಾಡಿದ ತಿದ್ದುಪಡಿಗಳನ್ನು ಕಾಯಂಗೊಳಿಸಬೇಕೆಂದು ಮಾಡಿದ ಮೇಲ್ಕಂಡ ಅರ್ಜಿಯು ವಿಚಾರಣೆ ಬಗ್ಗೆ ತಾ. 4-5-39ಕ್ಕೆ ಇಡಲ್ಪಟ್ಟಿರುತ್ತದೆಂದು ಈ ಮೂಲಕ ತಿಳಿಸಲಾಗುತ್ತದೆ.

ಎಡ್ವಕೇಟ್ಸ್ ಎಸೋಸಿಯೇಶನ್, ಹೈಕೋರ್ಟ್ ಬಿಲ್ಡಿಂಗ್ಸ್, ಮದ್ರಾಸ್ 15—4—39

ಕೆ. ಶ್ರೀನಿವಾಸ ರಾವ್,
ಅರ್ಜಿದಾರನ ಕಡೆ ಎಡ್ವಕೇಟ್

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

Registered No. M. 3618

NAVAYUGA

ನವಯುಗ

4-5-1939

ರಾಧಾ ಕೃಷ್ಣ

ಕರ್ನಾಟಕದ ಪ್ರಸಿದ್ಧ ನಾಟ್ಯವಿಶಾರದರಾದ ಶ್ರೀ ಕುಲಕರ್ಣಿ ಶ್ರೀನಿವಾಸ, ಬಿ.ಎ. ಮತ್ತು ಶ್ರೀಮತಿ ರೋಹಿಣೀ ದೇವಿಯರು ತಾ. 26-4-39ರಲ್ಲಿ ಮಂಗಳೂರಲ್ಲಿ ಗುಬ್ಬಿ ಥಿಯೇಟರಿನಲ್ಲಿ ಸುಮನೋಹರ ನೃತ್ಯಗಳನ್ನು ಪ್ರದರ್ಶಿಸಿದರು. ಇವರ ನೃತ್ಯವು ಭಾವನಾಪೂರ್ಣವಿದೆ. ಮೇಲಿನಚಿತ್ರದಲ್ಲಿ ಶ್ರೀನಿವಾಸರು ಕೃಷ್ಣನಾಗಿಯೂ ರೋಹಿಣೀದೇವಿಯರು ರಾಧೆಯಾಗಿಯೂ ಅಭಿನಯಿಸಿದ್ದಾರೆ. ಶ್ರೀಯುತರು ಕನ್ನಡ ತಾಂಡವಮಂಡಲವೊಂದನ್ನು ಸ್ಥಾಪಿಸಿ ಬಗೆಬಗೆಯ ಭಾರತನಾಟ್ಯಗಳ ಉತ್ಕೃಷ್ಟತೆಯನ್ನು ಕನ್ನಡಿಗರಿಗೆ ತೋರಿಸುತ್ತಿರುವ ಸಾಹಸವು ಅಭಿನಂದನೀಯವಿದೆ. ಇವರ ಯತ್ನವು ಸಂಪೂರ್ಣ ಸಫಲವಾಗಲೆಂದುಹಾರೈಕೆ.

ಸದ್ಯವೇ ಇವರ ನೃತ್ಯ ಪ್ರದರ್ಶನವೊಂದು ಉಡುಪಿ ರಾಮಕೃಷ್ಣ ಥಿಯೇಟರಿನಲ್ಲಿ ನಡೆಯಲಿರುವುದು.

ಮೈಸೂರಿನಲ್ಲಿ ಶ್ರೇಷ್ಠ ವರ್ಗದ ಬ್ರಾಹ್ಮಣರ ಉಪಹಾರ ವಸತಿ ಗೃಹಗಳು.

ಗಾರ್ಡನ್ ಹೋಟೇಲು

ಫೋನ್ ನಂಬ್ರ 406

ಅಧುನಿಕ ಸೌಕರ್ಯಗಳಿಂದ ಕೂಡಿದ ವಿಶಾಲವಾದ ಸಿಂಗ್ಲ್ ಡಬ್ಬಲ್ ಕೋಣೆಗಳು ಕುಟುಂಬ ಪರಿವಾರ ಸಮೇತರಾಗಿ ಬರುವವರಿಗೆ ಉಳಕೊಳ್ಳುವರೆ ಅತಿ ಯೋಗ್ಯ ಸ್ಥಳ.

ಸಮಯೋಚಿತ ವಾಸಿಕರ ಅಭಿರುಚಿಗೆ ಯೋಗ್ಯವಾದ ಉತ್ತಮ ಊಟ ಉಪಹಾರಗಳು, ಮಿತ ದರ, ಅಧಿಕ ಸೌಕರ್ಯ, ಅರಮನೆ, ಬಜಾರ್, ಸ್ಟೇಶನ್ ಮುಂತಾದ ಮುಖ್ಯ ಸ್ಥಳಗಳಿಗೆ ಅತಿ ಸಮೀಪದಲ್ಲಿರುವ ವಿಶಾಲವಾದ ಕಂಪೌಂಡಿನಲ್ಲಿರುವ "ಯಳಂದೂರ್ ಹೌಸ್" ನಲ್ಲಿ ಅತಿ ಚತುರ ಮಾಲಿಕರಿಂದ ನಡೆಸಿಕೊಂಡು ಬರುವ

ಗಾರ್ಡನ್ ಹೋಟೇಲ್, ಹಳೆ ಪೋಸ್ಟ್ ಆಫೀಸ್ ರೋಡ್, ಮೈಸೂರು.

ಉಡುಪಿ ಆನಂದ ಭವನ

ಫೋನ್ ನಂಬ್ರ 347

ಇದೇ ಮ್ಯಾಲಿಕರಿಂದ ಅರಮನೆ ಎದುರು ನವನಾಗರಿಕೆಗೆ ತಕ್ಕಂತೆ ನಡೆಯಿಸಿಕೊಂಡು ಬರುವ ನವೀನ ಉಪಹಾರ ಗೃಹ. ಬೇಸಿಗೆಗೆ ತಕ್ಕ ರುಚಿಕರವಾದ ಶೀತ ಪಾನೀಯಗಳು ಸದಾ ಇವೆ. ಪಟ್ಟಣದ ಕೇಂದ್ರಸ್ಥಾನದಲ್ಲಿದ್ದು ಬಹು ಉನ್ನತ ಸ್ಥಿತಿಯಿಂದ ನಡೆಯಿಸಿಕೊಂಡು ಬಂದು ಜನಪ್ರೀತಿಗೊಳಗಾಗಿದೆ



ಮೈಸೂರಿಗೆ ಬಂದಲ್ಲಿ ಇದನ್ನು ಸಂದರ್ಶಿಸಲು ಮರೆಯದಿರಿ.

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು.

ಕೃಷ್ಣರಾಜಸಾಗರ್ ರೆಸ್ಟೋರೆಂಟ್, ಕನ್ನಂಬಾಡಿ, ಮೈಸೂರು.

ಮದ್ರಾಸಿಗೆ ಬಂದಲ್ಲಿ—

ಪ್ರೊಪ್ರೈಟರ್—ಕೆ. ಗುರುರಾಜಾಚಾರ್.

ಮೈಸೂರು ಕೇಫ್—ರೆಸ್ಟೋರೆಂಟ್ ಮತ್ತು ಬೋರ್ಡಿಂಗ್, ಲಾಡ್ಜಿಂಗ್ ಸಂದರ್ಶಿಸಲು ತಪ್ಪದಿರಿ

—— ಬಲು ಸುಲಭ ದರದಲ್ಲಿ ——

● ಉತ್ಕೃಷ್ಟ ಊಟ ಉಪಹಾರಾದಿಗಳಿಗಾಗಿ ಇತ್ತ ಗಮನಿಸಿರಿ!
● ನಾವು ನಮ್ಮನ್ನೇ ವಿಶೇಷವಾಗಿ ಪ್ರಶಂಸಿಸಿ ಕೊಳ್ಳಬಾರದಷ್ಟೆ!

ಲಕ್ಷ್ಮೀ ನಿವಾಸ
ಹಿಂದೂ ಹೋಟೇಲು

(ಸ್ಥಾಪನೆ 1926)

ವಿಠಲ್ ಭಾಯಿ ಪಟೇಲ್ ರೋಡ್, ಗಿರ್ಗಾಂ, ಮುಂಬಯಿ.

Lakshmi Nivas Hindu Hotel

VITTALBHAI PATHEL ROAD,
GIRGAUM — — BOMBAY.

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—T. V. ದೇವಕರ್ ಎಂಡ್ ಕಂಪೆನಿ,
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co., *Nambulier Street*, G. T. MADRAS.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು

ಅಸನ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಮೃದ್ವೀಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕಟಪಾಡಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

ESTD. 1921
FOUNDER
Sri. A. B. SHETTY, M.L.A.
Parliamentary Secretary, Govt of Madras
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೪-೫-೧೯೩೯ | Vol. XVIII
ಸಂಚಿಕೆ ೩೫ | Udipi, Thursday 4—5—1939 | No. 35

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ. ೩—೪—೦
೬ ತಿಂಗಳಿಗೆ ರೂ. ೧—೧೨—೦.
ಚಂದಾ ಹಣವನ್ನು ಮುಂಗಡ ಕೊಡತಕ್ಕದ್ದು.
ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸನ್ಮಾನ್ಯ ಝೆಟ್ಲೆಂಡರ ಸಮರವಾಣಿ!

ಇಂಡಿಯಾ ಏಕ್ಟಿನಲ್ಲಿ ತಿದ್ದುಪಡಿಯ ಸೂಚನೆ ಬಂದಿದೆ. ಯುದ್ಧಕಾಲದಲ್ಲಿ ಪ್ರಾಂತ್ಯಗಳ ಕೆಲವು ಅಧಿಕಾರಗಳನ್ನು ವೈಸರಾಯರು ಕೇಂದ್ರ ಸರಕಾರಕ್ಕೆ ಕೊಟ್ಟು ಯುದ್ಧದ ಆವಶ್ಯಕತೆಗಳನ್ನು ನಿರಾತಂಕವಾಗಿ ಪೂರೈಸಿಕೊಳ್ಳುವದೇ ಈ ತಿದ್ದುಪಡಿಯ ಉದ್ದೇಶ. ಪಾರ್ಲಿಮೆಂಟ್ ಸಭೆಯಲ್ಲಿ ಈ ತಿದ್ದುಪಡಿ ಮಸೂದೆಯು ಎರಡನೆ ವಾಚನದ ವೇಳೆ ಭಾರತದ ಸೆಕ್ರೆಟರಿ ಲೋರ್ಡ್ ಝೆಟ್ಲೆಂಡ್ ಸಾಹೇಬರು ಬಹಳ ಗಂಭೀರತೆಯಿಂದ ಹೀಗೆಂದರು "ಇತರ ಸಂದರ್ಭಗಳಲ್ಲಾದರೆ ಪ್ರಾಂತ್ಯಗಳ ಅಧಿಕಾರಗಳನ್ನು ಹಿಂದೆ ಪಡೆಕೊಳ್ಳಬೇಕೆನ್ನುವ ಮನಸ್ಸಿನವರಲ್ಲಿ ನಾನು ತೀರಾ ಕೊನೆಯವನೇ ಸರಿ! ಆದರೆ ಯುದ್ಧದ ಹೊತ್ತಿನಲ್ಲಿ ಎಲ್ಲರ ಹಾದಿಯೂ ಒಂದೇ ಆಗಿರಬೇಕೆಂಬ ಉದ್ದೇಶದಿಂದ ಈ ಬದಲಾವಣೆಯನ್ನು ಅಗತ್ಯವಾಗಿ ಮಾಡಬೇಕಾಯಿತು. ಕೇವಲ ಯುದ್ಧಕ್ಕೆ ಸಂಬಂಧಿಸಿದ ವಿಷಯವಿದು!" ಒಂದು ಕೈಯಿಂದ ಕೊಟ್ಟ ಪ್ರಾಂತಿಕ ಹಕ್ಕುಗಳನ್ನು ಇನ್ನೊಂದು ಕೈಯಿಂದ ಹಿಂದೆ ಬಲಮಾಡಿಕೊಳ್ಳುವ ಈ ತಿದ್ದುಪಡಿಯ ಮೇಲೆ ಸ್ನೇಹವಿಡುವವರು ಲೋರ್ಡ್ ಝೆಟ್ಲೆಂಡರನ್ನು ಟೀಕಿಸದಿರಲಾಗದು. ಹಿಟ್ಲರನಲ್ಲಿ ನೋಡಿಯಿಡಬೇಕು! ಅವ ಬ್ರಿಟಿಷರ ಅಧಿಕಾರದ ಮೇಲೆ ಕೈಮಾಡಿಸದಿದ್ದರೆ ಬ್ರಿಟಿಷರು ನಮ್ಮ ಪ್ರಾಂತಿಕ ಅಧಿಕಾರದ ಸ್ಪರ್ಶಕ್ಕೂ ಬರಲಾರರು.

ಶಾಪ ಸಮಾನವಾದ ಮಾತು

ರಾಜಕೋಟೆಯ ಸುಧಾರಣಾ ಸಮಿತಿಯ ರಚನೆಗಾಗಿ ಮಾನವ ಸಾಧ್ಯವಾದ ಯತ್ನವನ್ನೆಲ್ಲಾ ಮಾಡಿ ಮುಗಿಸಿ, ದರ್ಬಾರಿನವರಿಂದ ಅವೆಲ್ಲಾ ಗಾಳಿಗೆ ತೂರಲ್ಪಟ್ಟುದನ್ನು ಕಂಡು ಮಹಾತ್ಮಾ ಗಾಂಧಿಯವರು ದರ್ಬಾರ್ ವೀರವಲ್ಲರನ್ನು ಆಮಂತ್ರಿಸಿದರು. ಅವರೊಡನೆ ಕುಶಲ ಸಂಭಾಷಣೆ ನಡಿಸಿದರು. ಸಂಭಾಷಣೆ ಮುಗಿಸಿ ಹೊರಬಂದ ವೀರವಲ್ಲರೇ ನಗು ಮುಖದಿಂದ "ನಾನು ಮಹಾತ್ಮಾ ಗಾಂಧಿಯವರೊಡನೆ ಆನಂದದಾಯಕವಾದ ಸಂಭಾಷಣೆ ನಡಿಸಿದೆ!" ಎಂದಿದ್ದರು. ಮಾತುಕತೆ ಮುಗಿದು ವೀರವಲ್ಲರನ್ನು ಬೀಳ್ಕೊಳ್ಳುವಾಗ ರಾಜಕೋಟೆಯ ಪ್ರಕರಣದ ಬಗೆಗೆ ಗಾಂಧಿಯವರೆಂದರು. "ನಾನು ಸೋತುಹೋದೆ; ನೀವು ಗೆಲ್ಲುವುದಾದರೆ ಗೆಲ್ಲಬಹುದು!" ರಾಜಕೋಟೆ ಸಮಸ್ಯೆಯ ಕುರಿತು ಸ್ವಾರಕ್ಕೆ ಕೈತೊಳೆದುಕೊಂಡು ಕಲ್ಕತ್ತೆಗಾಗಿ ರೈಲು ಹತ್ತುವಾಗ ಗಾಂಧಿಯವರುದ್ಗರಿಸಿದ ಮಾತಿದು.

ಸಮಾಚಾರ ಸಮಾಲೋಕನ

ಅಧ್ಯಕ್ಷ ಚುನಾವಣೆಯಲ್ಲಿ ಶ್ರೀ. ಬೋಸರು ಗೆದ್ದೊಡನೆ "ಸೋಲಿದು ನನ್ನದು!" ಎಂದು ಗಾಂಧಿಯವರೆಂದುದೇ ತಡ; ಮೇಲಿಂದ ಮೇಲೆ ಸೋಲನ್ನನುಭವಿಸಿ ಸುಭಾಸರು ಕೊನೆಗೆ ಅಧ್ಯಕ್ಷಪದಕ್ಕೇನೇ ರಾಜಿನಾಮೆ ಕೊಡಬೇಕಾಯಿತು. ಆ ಮಾತಿಗೆ ಈ ಅರ್ಥವೆಂಬುದನ್ನು ವೀರವಲ್ಲರು ಮರೆಯದಿರಲಿ!

ಬ್ರಿಟಿಷ್ ಪತ್ರಿಕೆಯ ಅಮಲು

ಲಂಡನಿನ "ಗ್ರೇಟ್‌ಬ್ರಿಟನ್ ಎಂಡ್ ಈಸ್ಟ್" ಎಂಬ ಪತ್ರಿಕೆಯು ಹಿಂದುಸ್ಥಾನದ ವೈಸರಾಯರಿಗೊಂದು ಸೂಚನೆ ಕೊಟ್ಟು ಎಚ್ಚರಿಸಿದೆ. ಕಾಂಗ್ರೆಸ್ ಮಂತ್ರಿಗಳು ಮದ್ಯಪಾನನಿಷೇಧವನ್ನು ಜಾರಿಗೆ ತರುವ ಗೊಂದಲದಲ್ಲಿದ್ದಾರೆ. ಆದರೆ ಅದರಿಂದಾಗುವ ನಷ್ಟವನ್ನು ಭರ್ತಿ ಮಾಡುವ ಯೋಜನೆಯಲ್ಲಿಯೂ ಇಲ್ಲ, ಅದು ಸಾಧ್ಯವೂ ಇಲ್ಲ. ಬೊಂಬಾಯಿ ಸರಕಾರದ ನಿರ್ಧಾರದಿಂದಾಗಿ ಆ ಪ್ರಾಂತ್ಯದ ನಷ್ಟವು 4 ಕೋಟಿಗೂ ಮಿಕ್ಕಬಹುದು. ಹೀಗೆಯೇ ಕಾಂಗ್ರೆಸ್ ಪ್ರಾಂತಗಳಲ್ಲಿ ಪಾನನಿಷೇಧಕ ಕಾನೂನಿನಿಂದಲ್ಲಿ ದೇಶದ ಆರ್ಥಿಕ ವ್ಯವಹಾರಕ್ಕೆ ಅಡಚಣೆಯೊದಗುವದು ಖಂಡಿತ. ಆದ್ದರಿಂದ ವೈಸರಾಯರು ಈ ಕೃತ್ಯವನ್ನು ಆಕ್ಷೇಪಿಸಬೇಕೆಂದು ಆ ಪತ್ರಿಕೆಯ ಸೂಚನೆ.

ಪಾನನಿಷೇಧಕ ಕಾನೂನನ್ನು ಜ್ಯಾರಿಗೆ ತರುವಲ್ಲೆಲ್ಲಾ ಬ್ರಿಟಿಷರಿಗೆ ಬೇಕಾಗುವ ಪಾಲೀಯುಗಳನ್ನು ಅವರಿಗೆ ಮಾರಬಹುದೆಂಬ ನಿಯಮವನ್ನು ಕಾಂಗ್ರೆಸ್ ಮಂತ್ರಿಗಳು ತಪ್ಪದೆ ಸೇರಿಸುತ್ತಿದ್ದಾರೆ. ಅದ್ದರಿಂದಲೇ ಮಿಕ್ಕವರ ಅಮಲಿಳಿದರೂ ಬ್ರಿಟಿಷ್ ಪತ್ರಿಕೆಗಳಿಗೆ ಅಮಲೇರುವದು ನಿಂತಿಲ್ಲವೇನೋ!

ಸರದಾರರಿಲ್ಲದ ಸಭೆ

ಈ ಬಾರಿಯ ಕಲ್ಕತ್ತೆಯ ಅಖಿಲ ಭಾರತ ರಾಷ್ಟ್ರಸಭಾ ಸಮಿತಿಯ ಸಭೆಗೆ ಸರದಾರ್ ಪಟೇಲರು ಹೋಗದೆ ಉದ್ದೇಶಪೂರ್ವಕವಾಗಿ ದೂರನಿಂತಿದ್ದಾರೆ. ಮಹಾತ್ಮರ ಸೂಚನೆಯೇ ಇದಕ್ಕೆ ಕಾರಣ. ಇತ್ತೀಚಿಗೆ ಸರದಾರ ಪಟೇಲರಲ್ಲಿಯೂ ಹೆರ್ ಹಿಟ್ಲರನಲ್ಲಿಯೂ ಇರುವ ಭೇದವನ್ನೇ ಅರಿಯಲಾರದಷ್ಟು ಸೂಕ್ಷ್ಮಮತಿಗಳ ಸಂಖ್ಯೆ ಭಾರತದಲ್ಲಿ ಹೆಚ್ಚುತ್ತಾ ಬಂದಿದೆ. ಪಟೇಲರೇನೇ ಮಾಡಲಿ, ಡಿಕ್ಟೇಟರರಂತೆ ವರ್ತಿಸುತ್ತಾರೆ ಎಂಬ ಬಿರುದು ತಪ್ಪಲಿಕ್ಕಿಲ್ಲ. ಅದಕ್ಕೆ ವಿರೋಧವಿದ್ದೇ ಇದೆ. ಈ ಕಾರಣದಿಂದಾಗಿ ಕಾಂಗ್ರೆಸ್ ಸಭೆಗಳಲ್ಲಿ ಪ್ರಮುಖ್ಯಾಂಶಗಳು ಕಡೆಗಣಿಸಲ್ಪಟ್ಟು ಕ್ಷೋಭೆಯೇಳುತ್ತದೆ. ಆ ಗೊಂದಲ ನಿವಾರಣೆಗಾಗಿ ಸರದಾರರು ಕಲ್ಕತ್ತಾ ಸಭೆಗೆ ಹೋಗದಿರುವುದು ವಾಸಿ ಎಂದು ಗಾಂಧಿಯವರ ಅಭಿಪ್ರಾಯ. ದೂರುವ ಮಹಾನುಭಾವರು ಪಟೇಲರ ಈ ಕೃತ್ಯಕ್ಕಾಗಿಯೂ ದೂರದಿರುವರೆ? ಕಲ್ಕತ್ತಾ ಸಭೆಯಲ್ಲಿ ವಿಪರೀತ ಕೆಲಸವಿತ್ತು, ಬೇರೆ ಯಾರು ಮಾಡುವರೆಂದು ಪಟೇಲರು ಇನ್ನಿಚ್ಛೆಯಂತೆ ತಾನಿರುವ ಸರ್ವಾಧಿಕಾರಿಯೆಂತೆ ಭಾರದೆ ಕುಳಿತುಕೊಂಡುದರಿನ್ನು? ಎಂದವರು ಪ್ರಶ್ನಿಸದಿರುವರೇ?

ಬ್ರಿಟಿಷ್ ಬಡ್ಜೆಟ್ಟಿನ ನ್ಯಾಯಶೀಲತೆ

ಬ್ರಿಟಿಷರ ಅರ್ಥಮಂತ್ರಿಯು ಪಟ್ಟದ ನ್ಯಾಯಸರ್. ಜೋನ್ ಸೈಮನರು ಪಾರ್ಲಿಮೆಂಟಿನ ಸಭೆಗಳ ಮುಂದಿಟ್ಟು ಮಂಜೂರುಮಾಡಿಸಿಕೊಂಡರು. ಯುದ್ಧಸಾಧನಗಳ ಖರ್ಚಿಗಾಗಿ ವಾರ್ಷಿಕ ವ್ಯಯವು ವಿಪರೀತವಾಗಿರುವುದರಿಂದ ಕೆಲವು ಹೊಸ ತೆರಿಗೆಗಳನ್ನು ವಿಧಿಸುವ ಸೂಚನೆಗಳಿವೆ. ಅವುಗಳಲ್ಲಿ ಕೆಲವು ಧನಿಕರ ಮೇಲೆ ಇನ್ನು ಕೆಲವು ಮೋಟಾರ್‌ಕಾರ್ ಮತ್ತು ಹೊಗೆಸೊಪ್ಪು ಇಂತಹ ಸಾಮಗ್ರಿಗಳ ಮೇಲೆ ಬೀಳುವ ಸುಂಕಗಳು. ಬಜೆಟ್ಟನ್ನು ಆಮೂಲಾಗ್ರವಾಗಿ ಪರಿಶೀಲಿಸಿದರೆ ಧನಿಕರ ಮೇಲೆ ಬಹುಮಿತವಾದ ತೆರಿಗೆಯೇ ಬೀಳುತ್ತದೆ. ಸಾಮಾನ್ಯರ ಮೇಲಿನ ಹೊರೆಯನ್ನು ತಗ್ಗಿಸಿ, ಧನಿಕರ ಮೇಲೆ ಇನ್ನಷ್ಟು ಹೇರಿಸುವದು ನ್ಯಾಯವೆಂದು ವಿರುದ್ಧಪಕ್ಷೀಯರು ಪಾರ್ಲಿಮೆಂಟಿನಲ್ಲಿ ವಾದಿಸಿದರೂ ಫಲವೊದೆಯಲಿಲ್ಲ. ಧನಿಕ-ದರಿದ್ರರೊಳಗಣ ಭೇದವೇನೆಂದು ಬ್ರಿಟಿಷ್‌ಸರಕಾರಕ್ಕೆ ತಿಳಿದಿರುವಷ್ಟು ಅನ್ಯರಿಗರಿತಿರಲಾರದು. ಇದ್ದವರು ಇದ್ದಂತೆ ಇರಬೇಕೆಂಬುದಕ್ಕಾಗಿಯೇ ಇನ್ನೊಂದು ಯುದ್ಧದಲ್ಲಿ ಬ್ರಿಟಿಷರು ಭಾಗವಹಿಸಲಿರುವರು. ಆ ಯುದ್ಧಕ್ಕೆ ಹಣಸಂಗ್ರಹಿಸುವಾಗ ಮಾತ್ರ ಧನಿಕರ ಮೇಲೆ ಸುಂಕ ಹೊರಿಸಿ ಧನಿಕರನ್ನು ದರಿದ್ರರನ್ನಾಗಿ ಮಾಡುವ ಅನ್ಯಾಯವನ್ನು ಅವರು ಮಾಡಲೊಪ್ಪಿಯಾರೆ? ಬ್ರಿಟಿಷರ ಧೋರಣೆಯು ಆದಿಯಿಂದ ಅಂತ್ಯದ ವರೆಗೂ ಒಂದೇ ರೀತಿಯೆಂಬುದನ್ನು ಈ ದೃಷ್ಟಾಂತದಿಂದಾದರೂ ಲೋಕವು ತಿಳಿಯಲಿ!

ಸೇನಾಪತಿಗಳ ಸಾರ್ವತ್ರಿಕ ಯುದ್ಧ!

ಸೇನಾಪತಿ ಬಾಪಟರು ಹೈದರಾಬಾದು ಸತ್ಯಾಗ್ರಹವನ್ನು ಅಖಿಲಭಾರತದವರು ಕೂತಲ್ಲಿಯೇ ನಡಿಸುವ ಹೊಸ ಉಪಾಯವನ್ನು ಸೂಚಿಸಿ ಹೇಳಿಕೆ ಹೊರಡಿಸಿದ್ದಾರೆ. ಹೈದರಾಬಾದಿಗೆ ಬಂದು ಅಲ್ಲಿಯ ಆರ್ಯರಿಗೆ ಪ್ರತ್ಯಕ್ಷವಾಗಿ ಬೆಂಬಲಕ್ಕೆ ನಿಲ್ಲಲು ಅಸಾಧ್ಯರಾದವರು ತಮ್ಮ ಪ್ರಾಂತ್ಯಗಳಲ್ಲಿಯೇ 'ಹೈದರಾಬಾದಿನವರಿಗಾಗಿ ಸತ್ಯಾಗ್ರಹ' ಎಂಬ ಹೆಸರಿನಿಂದ ಸತ್ಯಾಗ್ರಹ ಮಾಡಬೇಕೆಂದು ಅವರ ಸೂಚನೆ. ಇದು ಹೈದರಾಬಾದು ಸತ್ಯಾಗ್ರಹದ ಪ್ರದರ್ಶಕ ಸತ್ಯಾಗ್ರಹವಾಗಿ ಒಪ್ಪಿಯ. ಪರಿಣಾಮವನ್ನುಂಟುಮಾಡಬಹುದು. ಯಾವುದಾದರೊಂದು ಪ್ರಾಂತ್ಯದ ಸತ್ಯಾಗ್ರಹಿಗಳಲ್ಲಿ ಅ

WANTED IMMEDIATELY
IN SOUTH KANARA DISTRICT.

Rs. 100/- a month even more is earned by influencial and enterprising agents of our Company. Their advantages are (1) Direct Head Office connection; (2) Our agency terms provide liberal remuneration, hereditary right for renewal commission, permanent connection and good future prospects; (3) We have Divisional Inspectors who will help our agents to do well and earn handsomely and (4) Motor car facility is made available when there are good business prospects.

For particulars please apply to:—

Mr. P. Anthaya Hegde, *District Organiser*,
PARKALA P. O, UDIPI.
OR
THE MANAGER,
VIJAYALAKSHMI
GENERAL ASSURANCE CO., LTD.,
HEAD OFFICE:- 4/105, Armenian St. MADRAS

ರೆವಾಸಿ ಜನರು ಹೈದರಾಬಾದಿಗೆ ಬಂದು, ಮಿಕ್ಕ ಅರೆವಾಸಿಯುಷ್ಟು ಇದ್ದಲ್ಲೇ ನಿಂತು ಸತ್ಯಾಗ್ರಹ ನಡಿಸಬೇಕು ಎಂದು ಸೇನಾಪತಿಗಳ ಬಿನ್ನಹ. ಅಸ್ಯಪ್ರಾಂತ್ಯಗಳಲ್ಲಿ ನಡೆಯುವ ಆರ್ಯರ ಸತ್ಯಾಗ್ರಹವನ್ನು ತಮ್ಮೊಡನೆ ಬರವಮಾಡಿಕೊಳ್ಳಲು ಜಿನ್ನಾ ಪಕ್ಷೀಯ ಮುಸಲ್ಮಾನರು ಕಟಿಬಿಗಿದು ಸಿದ್ಧರಿರುವಾಗ, ಅದು "ಹೈದರಾಬಾದು ಸತ್ಯಾಗ್ರಹ"ವೆನಿಸಲಾರದು. ಮದ್ರಾಸಿನಿಂದ ಲಂಡನಿನ ಪ್ರದರ್ಶನಾಯಕ್ಕೆ ಹೋದ ಸೈಲ್ ಪ್ರತಿಮೆಯೊಡನೆ ಪುರವಣಿಯಾಗಿ ಮಿ. ಜಿನ್ನಾರನ್ನು ಕಳುಹಿಸಲು ಸೇನಾಪತಿ ಬಾಪಟರಿಂದಾಗುತ್ತಿದ್ದರೆ, ಆ ಮೇಲೆ ಹೈದರಾಬಾದಿನ ಪುರವಣಿ ಸತ್ಯಾಗ್ರಹಿಗಳನ್ನು ಹೊರಡಿಸುವುದು ಸುಲಭವಿತ್ತು!

ಹಿಂದೀರಾಜರ ಹೊಸಮಿತ್ರ

ಜರ್ಮನಿಯ ರೀಚ್‌ಸ್ಟಾಗಿನ ಮಾಜಿ ಅಧ್ಯಕ್ಷರಾದ ಡಾ। ಸ್ಕ್ಯಾಟ್‌ರವರು ಹಿಂದುಸ್ಥಾನದಲ್ಲಿ ಸಂಚರಿಸುತ್ತಿದ್ದಾರೆ. 'ನಾನು ಕಾರ್ಯದ ಮೇಲೆ ಬಂದಿಲ್ಲಪ್ಪಾ! ರಜೆಯ ದಿನಗಳನ್ನು ಸುಖವಾಗಿ ಕಳೆಯೋಣವೆಂದು ತಿರುಗಾಡಿಕೊಂಡು ಬಂದೆ' ಎನ್ನುತ್ತಿದ್ದಾರೆ. ಆವರೆ ಇದೇ ರೀತಿ ತಿರುಗಾಡಿಕೊಂಡು ಬರಲು ಕೆಲವು ವಿಶಾರದರನ್ನು ಜರ್ಮನಿಯ ಪ್ರಚಾರಮಂತ್ರಿ ಡಾ। ಗೋಬೆಲ್ಸನು ಹಿಂದೂಸ್ಥಾನಕ್ಕೆ ಕಳುಹಿಕೊಡಬೇಕೆಂದು ನಿರ್ಧರಿಸಿದ್ದಾನೆ. ಈ ವಿಶಾರದರುಗಳು ಹಿಂದೀ ರಾಜರನ್ನು ಕಂಡು, ಅವರ ಗತ ವೈಭವ ಮತ್ತು ಶುದ್ಧ ಆರ್ಯ ಸಂಸ್ಕೃತಿಯ ರಕ್ಷಣೆಗೆ ಹಿಟ್ಲರನ ನಾಜೀ ಪದ್ಧತಿಯೇ ಪರಮಯೋಗ್ಯವೆಂದು ಮಂದಟ್ಟುಮಾಡಿ ಆ ಮಿತ್ರ ರಾಜರುಗಳನ್ನು ತಮ್ಮ ಬಲೆಯಲ್ಲಿ ಕೆಡಹಿಕೊಳ್ಳುವರು. ಈ ನಡುವೆ ಕಲ್ಕತ್ತದಲ್ಲಿ ಡಾ। ಕ್ಲಾಸ್ ಹಯುಮ್ಸ್ ಎಂಬವನ ಧುರೀಣತ್ವದಲ್ಲಿ ನಾಜೀದಳವೊಂದು ಸ್ಥಾಪಿಸಲ್ಪಟ್ಟು ಬಲವಾದ ಪ್ರಚಾರ ಕಾರ್ಯವನ್ನು ಕೈಗೊಂಡಿದೆ. ವಿದೇಶೀಯರು ಭಾರತಕ್ಕೆ ತಿರುಗಾಡಿಕೊಂಡು ಬರುತ್ತಾರೆಂದೊಡನೆ, ಅದರಲ್ಲೂ ಮೊದಲಾಗಿ ರಾಜರುಗಳನ್ನೇ ಕಂಡು ಮಾತನಾಡುತ್ತಾರೆಂದೊಡನೆ 180 ವರ್ಷಗಳ ಹಿಂದಿನ ಚರಿತ್ರೆಯ ನೆನಪಾಗಿ ಭಾರತೀಯರು ಬೆಚ್ಚಿಬೀಳುವಂತಾಗಿದೆ. ಆ ಕಾಲದಲ್ಲಿ ಬಂದಿದ್ದ ಬ್ರಿಟಿಷರು ತಿರುಗಾಡಿಕೊಂಡೇ ಬಂದಿದ್ದು ಹಿಂದೀರಾಜರುಗಳೊಡನೆ ಮಾತನಾಡುವದನ್ನೇ ಪ್ರಥಮತಃ ಕೈಗೊಂಡಿದ್ದರು! ಇನ್ನು ಜರ್ಮನಿಯ ಸರ್ತಿಯೊ?

ಲಾಹೋರಿನೊಳಸಂಚಿನ ತ್ರಿಮೂರ್ತಿಗಳ ಅನಾರೋಗ್ಯ

ಲಾಹೋರು ಒಳಸಂಚಿನ ಮೊಕದ್ದಮೆಯಲ್ಲಿ ಶಿಕ್ಷೆಗೊಳಗಾಗಿದ್ದ ಮೂವರು ರಾಜಕೀಯ ಕೈದಿಗಳ ಆರೋಗ್ಯವು ತೀರಾ ಕೆಟ್ಟುಹೋಗಿ ಆತುರಕ್ಕೆಡೆಯಾಗಿರುವದು. ಅವರ ಸಹವ್ಯವಸಾಯಿಯೂ ಭಗತ್ ಸಿಂಗರೊಡನೆ ಎಸೆಂಬ್ಲಿ ಬಾಂಬುಕೇಸಿಗೊಳಗಾದವರೂ ಆದ ಬಟುಕೇಶ್ವರದತ್ತರು ಪಂಜಾಬು ಮಂತ್ರಿಗಳೊಡನೆ ತನ್ನ ಅನುಯಾಯಿಗಳ ಬಿಡುಗಡೆಗಾಗಿ ಬಿನ್ನವಿಸಿಕೊಂಡಿದ್ದಾರೆ "ಈ ಮೂವರೂ ಸಂಯುಕ್ತ ಪ್ರಾಂತದವರು. ಸಂಯುಕ್ತ ಸರಕಾರವು ಅವರ ಬಿಡುಗಡೆಯ ಶಿಫಾರಸುಮಾಡಿದೆ. ಪಂಜಾಬು ಮಂತ್ರಿವರ್ಯ ಸರ್. ಸಿಕಂದರರು ಅಪೇಕ್ಷಿಸುವದಾದರೆ ಅವರಿಗೆ ಪಂಜಾಬನ್ನು ಪ್ರವೇಶಿಸದಿರಲು ಒಪ್ಪಿಗೆಯಿದೆ. ಅದ್ದರಿಂದ ಸರ್. ಸಿಕಂದರ್ ಹಯತ್‌ಖಾನರು ಈ ವಿಷಯವನ್ನು ಪ್ರತಿಷ್ಠೆಯ ದೃಷ್ಟಿಯಿಂದ ಪರಿಶೀಲಿಸದೆ ಮಾನವತ್ವಕ್ಕೆ ಮನ್ನಣೆಕೊಟ್ಟು ರೋಗಪೀಡಿತರಾದ ಮೂವರನ್ನೂ ಬಿಟ್ಟುಬಿಡುವ ಧೈರ್ಯವಹಿಸಬೇಕೆಂದು ಶ್ರೀ ಬಿ. ಕೆ. ದತ್ತರನ್ನುತ್ತಾರೆ.

ಆರೋಗ್ಯ ಹಾಳಾದವರನ್ನು ಬಿಡಲೇಬೇಕೆಂಬ ನಿಯಮವೇನು? ಸರ್. ಸಿಕಂದರ್ ಮಂತ್ರಿಮಂಡಲ, ಮಿ. ಫಾಜಲುಲ್ ಹಕ್ ಮಂತ್ರಿಮಂಡಲ ಇವುಗಳ ಆರೋಗ್ಯವೂ ನೆಟ್ಟಗಿಲ್ಲ. ಹಾಗೆಂದು ದೊರೆತ ಕೆಲಸಬಿಟ್ಟು ದೂರ ಸರಿಯಲಿಕ್ಕಾಗುತ್ತದೆಯೆ?

ಬ್ರಿಟಿಷರ ಖಡ್ಡಾಯ ಸೈನಿಕಶಿಕ್ಷಣ

ಬ್ರಿಟಿಷ್ ಮುಖ್ಯ ಮಂತ್ರಿ ಮಿ. ಚೇಂಬರ್ಲೆನರು ಇಂಗ್ಲಾಂಡಿನಲ್ಲಿ ಯುದ್ಧ ಶಿಕ್ಷಣವನ್ನು ಜ್ಯಾರಿಗೆ ತರುವ ನಿರ್ಧಾರ ಮಾಡಿದ್ದಾರೆ. ಹದಿನೆಂಟರಿಂದ ಇಪ್ಪತ್ತರೊಳಗಿನ ಯುವಕರಿಗೆ ಖಡ್ಡಾಯವಾಗಿ ಸೈನಿಕ ಶಿಕ್ಷಣವೀಯಲಾಗುವದು. ಮಿ. ಚೇಂಬರ್ಲೆನ್ ಮಂತ್ರಿಮಂಡಲದ ಈ ನಿರ್ಣಯವು ಕಾಮನ್ಸ್ ಸಭೆಯ ಮಂಜೂರಾತಿಯನ್ನು ಪಡೆಯಿತು. ಇಂತಹ ಅತ್ಯಮುಖ್ಯ ಪ್ರಶ್ನೆಯ ಕುರಿತು ಬೇರೆ ಪಕ್ಷಗಳ ಅನುಮತಿ ಪಡೆಯದೆ ಸರಕಾರವು ತಾನಾಗಿ ನಿರ್ಧಾರಕ್ಕೆ ಬಂದುದನ್ನು ವಿರುದ್ಧ ಪಕ್ಷೀಯರು ಆಕ್ಷೇಪಿಸಿದರು. "ಸರಿಸ್ಥಿತಿಯು ಹಾಗಿತ್ತು. ಅಸಡ್ಡೆಯಿಂದಲ್ಲ. ವಾತಾವರಣ ಒತ್ತಾಟದ ದೆಸೆಯಿಂದ ಅಷ್ಟು ಅವಸರ ಪಡಬೇಕಾಯಿತು" ಎಂದು ಚೇಂಬರ್ಲೆನ್ ಸಾಹೇಬರು ಸಮಾಧಾನ ಹೇಳಿದರು.

ಚೇಂಬರ್ಲೆನರ ಪ್ರಾಯವು ಎಪ್ಪತ್ತರ ಗಡಿ ದಾಟಿದೆ ಈ ವರೆಗಿನದೆಲ್ಲವೂ ಹಿಟ್ಲರ್ ಮುಸಲಿನಿಗಳವರೊಡನೆ ಸರಸವಾಡುವದರಲ್ಲಿಯೇ ಕಳೆಯಿತು; ಇನ್ನುಳಿದುದನ್ನು ಪಾರ್ಲಿಮೆಂಟಿನ ವಿವಿಧ ಪಕ್ಷಗಳೊಡನೆ ಸಂಭಾಷಿಸುವುದರಲ್ಲಿ ಕಳೆದರೆ ಅವರು ಕೆಲವು ಹುಡುಗರನ್ನಾದರೂ ಸೈನಿಕರನ್ನಾಗಿ ಮಾರ್ಪಡಿಸುವ ಕಾಲವು ಉಳಿಯಬೇಕಲ್ಲ? ಚೇಂಬರ್ಲೆನರಿಗೆ ಸ್ಫೂರ್ತಿಯೇ ಬರುವುದಿಲ್ಲ ಎಂದು ಟೀಕಿಸುತ್ತಿದ್ದವರು ಈ ಆಕಸ್ಮಿಕ ಸ್ಫೂರ್ತಿಯನ್ನು ಕಂಡಮೇಲಾದರೂ ತಮ್ಮ ತಪ್ಪನ್ನು ತಿದ್ದಿಕೊಳ್ಳಲಿ!

ಜಪಾನರ ಶಾಂತಿಸಾಧನೆಯ ಬಗೆ!

ಜಪಾನೀಯರೂ ಅಂತರ್ರಾಷ್ಟ್ರೀಯ ಪರಿಶುದ್ಧತೆಯನ್ನೇ ಅಪೇಕ್ಷಿಸುತ್ತಿದ್ದಾರೆ. ಅಲ್ಲಿಯ ವಿದೇಶಿ ಮಂತ್ರಿ ಮಿ. ಅರೀಟಾರವರು ಇಂಗ್ಲೆಂಡು ಮತ್ತು ಅಮೇರಿಕಾಗಳಿಗೆ ಒಂದು ವಿನಂತಿಯನ್ನು ಕಳುಹಿಸಿ ಶಾಂಘಾಯಿಯಲ್ಲಿ ಅಂತರ್ರಾಷ್ಟ್ರೀಯ ಒಪ್ಪಂದದ ಕುರಿತು ತಾನು ಅನುಸರಿಸುವ ನ್ಯಾಯವಾದ ಮತ್ತು ಯಥಾರ್ಥವಾದ ಧೋರಣೆಯನ್ನು ಮನ್ನಿಸಿ ಸಹಕರಿಸಬೇಕೆಂದು ಕೇಳಿಕೊಳ್ಳಲಿದ್ದಾರೆ. ಇದರ ಗೂಢಾರ್ಥವೆಂದರೆ ಇಂಗ್ಲೆಂಡು ಅಮೇರಿಕಗಳು ಜಪಾನಿನ ಚೀನದ ಧೋರಣೆಯ ಕುರಿತು ದುಡುಕುತನ ತೋರಿಸಿದರೆ ಅಲ್ಲಿಯ ಅಂತರ್ರಾಷ್ಟ್ರೀಯ ಒಪ್ಪಂದವು ಹಾಳಾದೀತು ಎಂಬುದೇ! ಇತ್ತ ಎಪ್ರಿಲ್ ತಾ. 3ರಲ್ಲಿ ಚೀನದ ಕರಾವಳಿಯಲ್ಲಿ ಸೆರೆಹಿಡಿದಿದ್ದ 'ಸಾಗ್ರೆಸ' ಎಂಬ ಬ್ರಿಟಿಷ್ ಹಡಗವೊಂದನ್ನು ಜಪಾನಿಯರಿನ್ನೂ ಬಿಟ್ಟುಕೊಟ್ಟಿಲ್ಲ.

ಬ್ರಿಟಿಷರೂ ಆ ಗೊಂದಲವನ್ನು ತಲೆಗೆ ಹಚ್ಚಿಕೊಂಡಿಲ್ಲ. 'ನೆರೆಕರೆಯವರನ್ನು ಪ್ರೀತಿಸು ಎಂಬ ಮಹಾತ್ಮಾ ಯೇಸುಕ್ರಿಸ್ತನ ಆಜ್ಞೆಯನ್ನು ಬ್ರಿಟಿಷರಷ್ಟು ಸೊಗಸಾಗಿ ಪರಿಪಾಲಿಸುವ ಅನ್ಯರಿಲ್ಲ. ತಮ್ಮ ಸೊತ್ತನ್ನು ಅನ್ಯರು ಮುಟ್ಟಿದೊಡನೆ ರೇಗಬೇಕುವ ಸಂಕುಚಿತಬುದ್ಧಿಯು ಬ್ರಿಟಿಷರಲ್ಲಿರುತ್ತಿದ್ದರೆ ಲೋಕಶಾಂತಿಯ ಪುರೋಹಿತರಾಗಿ ನಿಲ್ಲುವ ಯೋಗ್ಯತೆ ಮಿ. ಚೇಂಬರ್ಲೆನರಿಗೆ ಬರುತ್ತಿತ್ತೆ?

ಸರಕಾರಿ ಡಾಕ್ಟರರು ಖಾಸಗಿ ಸಂಪಾದನೆ ಮಾಡಕೂಡದು

ಮದ್ರಾಸ್ ಸರಕಾರದ ಹುಕುಂ

ಮದ್ರಾಸ್ ಸರಕಾರದವರು ಹೊರಡಿಸಿದ ಹೇಳಿಕೆಯೊಂದರಲ್ಲಿ 1940ನೇ ಇಸವಿ ಜನವರಿ ತಾ. 1ರಿಂದ ಯಾವ ಸರಕಾರಿ ಡಾಕ್ಟರನೂ ಖಾಸಗಿ ಸಂಪಾದನೆಮಾಡಕೂಡದೆಂದು ನಿಷೇಧಿಸಲಾಗಿದೆ. ಖಾಸಗಿ ಡಾಕ್ಟರನು ಸಹಾಯವನ್ನಪೇಕ್ಷಿಸಿದಲ್ಲಿ ಹೋಗಬಹುದು. ಆದರೆ ಅದರಿಂದ ದೊರೆತ ಹಣವನ್ನು ಸರಕಾರದ ವಶಕ್ಕೊಪ್ಪಿಸಬೇಕು.

ಲಕ್ನೋವಿನಲ್ಲಿ ಅಧಿಕ ಪೋಲೀಸರ ನೇಮಕ

ಮುಸಲ್ಮಾನರೊಳಗಿನ ದ್ವಿಪಕ್ಷಗಳಾದ ಶಿಯಾ ಸುನ್ನಿಗಳೊಳಗೆ ಕಾದಾಟವಾರಂಭವಾಗಿ ಅದು ಈಗಲೂ ಮುಂದುವರಿಯುತ್ತಿದೆ. ಸಂಯುಕ್ತ ಸಂಸ್ಥಾನದ ಸರಕಾರವು ಒಂದು ವರ್ಷದ ವರೆಗೆ ಹೊಸ ಪೋಲೀಸರನ್ನಿಡುವ ಠರಾವನ್ನು ಎಸೆಂಬ್ಲಿಯಲ್ಲಿ ಪಾಸುಮಾಡಿಸಿಕೊಂಡಿತು. ಇದಕ್ಕೆ ಒಂದು ಲಕ್ಷ ರೂಪಾಯಿ ಕೆಚ್ಚಿಗೆ ಖರ್ಚಾಗಲಿರುವದು. ಆ ಖರ್ಚನ್ನು ಆಯಾಯ ಸ್ಥಳದ ಶಿಯಾ ಸುನ್ನಿಯರು ಕೊಡಬೇಕೆಂದಾಗಿದೆ.

Degrees: Books: Medicines.

Free H. L. M. S., H. M. B., H. M. D. etc Free Homeo-Ayur-Unani-Naturo degree, by post also—Practitioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10. Enclose 2 annas stamps:—

Principal, Indian Homeopathic Institute and Society (Govt. Regd.)
P. O. MAHUVA, (Kathiawar Dt. India)

THE
PREMIER BANK OF INDIA, LIMITED.
Head Office: MADRAS.
Branches:
MADURA & NELLORE.
CHAIRMAN
Dr. U. L. Narayana Rao.
'Bhujanga Nivas' Madras.
FIXED DEPOSITS
are now received at the following Rates:
For 6 Months at 3½% P. A.
12 Months at 4½% P. A.
24 Months at 5% P. A.
(Interest Paid Half-yearly.)
S. V. Rau D. Com.,
Managing Director

THE BOMBAY LIFE ASSURANCE CO., LTD.,

(Ested. 1908)

THE OFFICE WHICH HAS PROVED ITS POPULARITY BY ITS PROGRESS
RECORD OF NEW BUSINESS.

Proposed.	Year.	Completed.
1,25,50,250	1934	1,04,33,750
1,50,48,915	1935	1,23,28,665
1,68,88,200	1936	1,36,01,500
1,72,579,75	1937	1,40,08,725
1,76,83,256	1938	1,44,91,000

1939 VALUATION YEAR.
Please take up a Policy Now and participate in Bonus.
To Insure or to Represent it pays you to consult us:-

MESSRS. KOCHIKAR BROTHERS, LTD.,
MADRAS BRANCH SECRETARIES,
The Bombay Life Building,
Sir Lalubhai Samaldas Road, Gandhi Nagar, UDIPI.

Or any of our Offices at:—

Car Street, MANGALORE.	Puthiyara, CALICUT.	Post Box No. 337, Mount Road, MADRAS.	Visweshwarapuram Circle, BANGALORE CITY.
Charni Road, Girgaum, BOMBAY No. 4	Central Station Road, TRIVANDRUM.	Ottapalam, S. MALABAR.	

ನಾರದ ಕತೆ

ಭೀಕರ ದೃಶ್ಯ

(ಇದನ್ನು ಯಾರನ್ನೂ ಉದ್ದೇಶಿಸಿ ಬರೆದಿಲ್ಲ. ಸುರಾಪಾನದಿಂದಾಗುವ ಅನರ್ಥಪರಂಪರೆಯ ಚಿತ್ರವನ್ನು ತೋರಿಸುವುದೇ ಇದರ ಉದ್ದೇಶ.)

(ಕತೆಗಾರರು:—ಯು. ಕೆ. ರಂಗ, ಬೊಂಬಾಯಿ.)

ಸಾಧಾರಣ ಮೂರು ಘಂಟೆ ಹೊಡೆದಿರಬಹುದು. ಭಗವಾನ್ ಭಾಸ್ಕರನು ತನ್ನ ತೀಕ್ಷ್ಣವಾದ ಕಿರಣಗಳನ್ನು ಸುತ್ತಲೂ ಪಸರಿಸುತ್ತಿದ್ದನು. ಎಲ್ಲರೂ ತಮ್ಮ ತಮ್ಮ ನಿಯಮಕ್ಕನುಸಾರವಾಗಿ ಮಧ್ಯಾಹ್ನದ ಭೋಜನಾದಿ ಫಲಾಹಾರಗಳನ್ನು ಮುಗಿಸಿ ಸರಸಸಲ್ಲಾಪಗಳಲ್ಲಿ ಮಗ್ನರಾಗಿದ್ದರು. ಆದರೆ ಇದೊಂದು ಮನೆಯಲ್ಲಿ ಮನಸ್ಸಿಗೆ ಶಾಂತಿ ಇಲ್ಲ, ಸುಖವಿಲ್ಲ. ಕೇತುಗ್ರಸ್ತ ಚಂದ್ರನಂತೆ ಖಿನ್ನಮನಸ್ಕಳಾದ ಯುವತಿಯೋರ್ವಳು ಒಂದು ಮೂಲೆಯಲ್ಲಿ ಕುಳಿತುಕೊಂಡು ಯೋಚನಾಪರವಶಳಾಗಿರುವಳು. "ಆಹಾ! ನನ್ನ ವಿಧಿಯೇ! ಭಗವಾನ್, ಬ್ರಹ್ಮ!! ನೀನು ಕೂಡಾ ನನ್ನ ಕಡೆಗೆ ಮುನಿದೆಯಾ! ನಿನ್ನ ವಿಶಾಲವಾದ ಪ್ರಕೃತಿಯಲ್ಲಿ ಮಾನವ ಸ್ತ್ರೀವರ್ಗಗಳಲ್ಲಿ ನಾನು ಒಬ್ಬಳು ಮಾತ್ರ ಬೇರೆಯೇ? ನನಗೀ ತೆರದ ರೂಪಯೌವನಗಳನ್ನು ನೀನು ಯಾಕೆ ಕರುಣಿಸಿದೆ ಹಾ! ಹಾ! ಹೆಣ್ಣು ಹುಡುಗಿಯರ ಜನ್ಮ ಎಷ್ಟು ನಿಂದಾಸ್ಪದವಾದುದು. ಮೂಗುದಾರ ಹಾಕಿ ಕಟ್ಟಿದ ಪಶುವಿನಂತೆ ನಿರ್ಮಿಸಿದೆಯಲ್ಲಾ? ದೇವಾ! ನೀನು ಎಷ್ಟು ಪಕ್ಷಪಾತಿಯು. ನಾನು ಯಾವಾಗ ನನ್ನ ತಾಯಿಯ ಬಸುರಿನಿಂದ ಹೊರಗೆ ಬಂದಿದ್ದೆನೋ ಅಂದಿನಿಂದ ಇಂದಿನ ವರೆಗೆ ಒಂದು ದಿವಸದ ಸುಖವನ್ನು ಉಂಡವಳಲ್ಲ; ಪರಮಾತ್ಮಾ! ದಯಾರಸಮೂರ್ತಿಯೇ, ನಿನಗೂ ಈ ಬಡಪಳಾದ ನನ್ನ ಮೇಲೆ ದಯೆ ಬಾರದೆ ಹೋಯ್ತೇ! ಅಮ್ಮಾ, ಜಗಜ್ಜನನೀ, ಲೋಕಪಾವನೆ, ನೀನು ಕೂಡಾ ನನ್ನ ಕಡೆಗೆ ಮುನಿದೆಯಾ? ನೀನು ನನ್ನಂತೆಯೇ ಸ್ತ್ರೀಜನ್ಮಧಾರಿಯಲ್ಲವೇ? ಒಮ್ಮೆಗೆ ನನ್ನೀ ಪ್ರಾಣವಲ್ಲಭನ ಮನೋರೋಗವನ್ನು ನಿವಾರಿಸದಿರಲಾಪೆಯಾ? ಭಗವಾನ್ ನಿನ್ನ ಸೃಷ್ಟಿ ಕ್ರಮದಲ್ಲಿ ಪುರುಷರು ವ್ಯಕ್ತಿಸ್ವರೂಪರಾಗಿಯೂ, ಸ್ತ್ರೀಯರು ಶಕ್ತಿಸ್ವರೂಪರಾಗಿಯೂ ತೋರುವರಲ್ಲವೇ? ಆ ವ್ಯಕ್ತಿಗೆ ಶಕ್ತಿಯ ಸಹಕಾರವಿದ್ದರೆ ಮಾತ್ರ ಪುರುಷನಲ್ಲಿ ವ್ಯಕ್ತಿತ್ವದ ನಿಜವಾದ ಕಾಂತಿಯು ಉತ್ಪನ್ನವಾಗಿ ಅದೇ ಧರ್ಮದ ಪ್ರತಿಚ್ಛಾಯೆ ಎಣಿಸಿ ಬೆಳಗುವುದಲ್ಲವೇ? ಇಂತಹ ಪ್ರಕಾಶಮಯ ಪಾತ್ರಗಳಿಂದಲೇ ಜಗತ್ತಿನ ಉತ್ಪತ್ತಿಸ್ಥಿತಿಗಳು ಸರಿಯಾದ ಕ್ರಮದಲ್ಲಿ ನಡೆಯಬೇಕಲ್ಲವೇ? ಈ ರೀತಿಯಿಂದಲೇ ಶಕ್ತಿಸ್ವರೂಪರಾದ ಸ್ತ್ರೀಯರು ವ್ಯಕ್ತಿಸ್ವರೂಪರಾದ ಪುರುಷರ ಆಶ್ರಯದಲ್ಲಿ ಇರಬೇಕಷ್ಟೆ? ಸಂದರ್ಭೋಚಿತವಾಗಿ ಪರಸ್ಪರ ಸಹಾಯ ಪ್ರೋತ್ಸಾಹಗಳಿಂದ ಪುರುಷ ವರ್ಗದಲ್ಲಿ ಧರ್ಮಶ್ರದ್ಧೆ, ದೇಶಸೇವೆ, ದೇಶಪ್ರೇಮ, ಗುರುಭಕ್ತಿ, ಮಾತೃಸೇವೆ ಇವೇ ಮೊದಲಾದ ಕರ್ತವ್ಯಜ್ಞಾನವನ್ನು ಸ್ಥಿರಪಡಿಸುವುದು ಪುರುಷರ ಕರ್ತವ್ಯವಾಗಲ್ಲವೆ ಸ್ತ್ರೀಯರು ಪ್ರತ್ಯೇಕವಾಗಿದ್ದು ಕೇವಲ ಸ್ವಾರ್ಥಪರತೆಯೊಂದರಿಂದಲೇ ತಮ್ಮ ಜೀವನವನ್ನು ಕೊನೆಗಾಣಿಸಬೇಕೆಂದರೆ ಭಗವನ್ನಿಯಮಕ್ಕೆ ವಿರೋಧಿಗಳಾಗಿ ಪರಿಣಮಿಸುವವರಲ್ಲವೇ? ಆಹಾ! ದೇವಾ ......" ಎನ್ನುವಷ್ಟರಲ್ಲಿ ನಿತ್ಯ ಕ್ರಮದಂತೆ ಸುರಲೋಲುಪ್ತನಾದ ಜಯಂತನು ಪ್ರವೇಶಿಸಿ 'ವನಜಾ! ಏನು ಬಹಳ ಯೋಚನಾಪರಳಾಗಿರುವೆ? ಮನಸ್ಸಿಗೆ ಶಾಂತಿ ಇಲ್ಲವೆ ಅಥವಾ ಅತ್ತೆಮ್ಮನವರು ಗದರಿಸಿದರೆ?

ವನಜಾ—ಪ್ರಾಣಪ್ರಿಯಾ! ಏನೆಂದು ಹೇಳಲಿ? ನನ್ನ ದುರದೃಷ್ಟ! ಯಾರನ್ನು ದೂರಿಯೂ ಫಲವಿಲ್ಲ.

ಜಯಂತ—ಏನು, ನಾನು ಕೇಳಿದ ಪ್ರಶ್ನೆಗೆ ಉತ್ತರಕೊಡದೆ ನಿನ್ನದ್ದನ್ನೇ ಆಡುತ್ತಿರುವೆ, ಹುಂ........

ವನಜಾ—(ಮೌನದಿಂದಿರುವಳು)

ಜಯಂತ—ಹೌದೇನೆ, ನಿನ್ನ ವ್ಯಸನಗಿಸನವೆಲ್ಲ ಅಲ್ಲಿ ಇರಲಿ. ಇಗೋ ನೋಡು ನನ್ನ ಕೈಯಲ್ಲಿ ಇಂದು ಒಂದು ಚಿಕ್ಕಾಸು ಕೂಡಾ ಇಲ್ಲ. ನನಗೆ ಹಣದ ಆಗತ್ಯವಿರುವುದು. ಬೇಗನೆ ಏನಾದರೂ ಕೊಡಬೇಕು. ಕಡೇ ಬಾರಿ ಪ್ರಮಾಣ ಮಾಡುತ್ತೇನೆ.

ವನಜಾ....ಪ್ರಾಣಕಾಂತಾ, ಇದು ಏನು ಪ್ರಮಾದ. ನಾನು ಕೊಡಬೇಕೊ? ಎಲ್ಲಿಂದ ಕೊಡಲಿ? ಇದ್ದುದನ್ನೆಲ್ಲಾ ದೋಚಿಕೊಂಡು ಹೋಗಿರುವಿರಿ. ಪ್ರಮಾಣ ಮಾಡುತ್ತೇನೆ ಎನ್ನುವಿರಲ್ಲ, ಹಾ ಪ್ರಿಯಾ? ನಿಮ್ಮ ಅವಸ್ಥೆಯೇ?

ಜಯಂತ—ಪ್ರಮಾದವಲ್ಲದೆ ಮತ್ತೇನು. ನಿನ್ನಲ್ಲಿ ಏನೂ ಇಲ್ಲವೆ? ಚಿಂತಿಲ್ಲ ಈಗ ನಿನ್ನ ಕೈಯಲ್ಲಿ ಇದ್ದುದನ್ನು ಕೊಡು ಅದೇ ನನಗೆ ಸಾಕು.

ವನಜಾ—ಅಯ್ಯೋ ವಿಧಿಯೇ! ಇದುದನ್ನು ಕೊಡಬೇಕೋ ಪ್ರಿಯಾ? ಇದಾವುದು! ಅದನ್ನಾದರೂ ಹೇಳಬಾರದೆ?

ವಾಚಕ ಮಹಾಶಯರೇ, ವನಜ ಜಯಂತರ ಪರಿಚಯವನ್ನು ಕೊಂಚ ಮಾಡ್ಬೇಗ ಮಾಡುವಾ! ಕಡೂರಿನ ಗಣೇಶ ಚಂದ್ರನು ಸಾಧಾರಣ ದೊಡ್ಡ ಮನೆತನದವನು ಅವನ ಒಬ್ಬನೇ ಸುಪುತ್ರನಾದ ಜಯಂತನು ವಿಶ್ವ ವಿದ್ಯಾಲಯದಲ್ಲಿ ತೇರ್ಗಡೆ ಹೊಂದಿರುವನು. ಸಂಸಾರವನ್ನು ನಡಿಸಬೇಕೆಂಬ ಕುತೂಹಲದಿಂದ ಎಲ್ಲಿ ಕೆಲಸ ಹುಡುಕಿದರೂ ಕೆಲಸವು ಸಿಕ್ಕದೆ ಹಾಗೂ ಹೀಗೂ ಸುತ್ತಾಡಿ ಕಡೆಗೆ 50ರೂ. ವೇತನದ ಒಂದು ಕ್ಲಾರ್ಕ ಕೆಲಸವು ಸಿಕ್ಕಿತು. ಆಷ್ಟರಲ್ಲಿ ಸಕಲೇಶಪುರದ ರಾಮಕೃಷ್ಣರಾಯರ ಮಗಳು ವನಜೆಯು 8ನೇ ತರಗತಿಯಲ್ಲಿ ಓದಿದವಳು—ರೂಪಯೌವನಸಂಪನ್ನೆ, ಗುಣವತಿ, ಸುಗುಣೆ, ಸುಶೀಲೆಯಾದೀಸಾಧ್ವೀಮಣಿಯನ್ನು ಜಯಂತನಿಗೆ ಅಗ್ನಿಸಾಕ್ಷಿಯಾಗಿ ಲಗ್ನ ಮಾಡಿದರು. ಕಾಲಕ್ರಮೇಣ ಒಂದು ವರ್ಷವು ಆನಂದಮಯವಾಗಿ ಮೀರಿ ಹೋಯಿತು. "ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ" ಎಂಬುದು ಸುಳ್ಳಲ್ಲ. ಗಣೇಶಚಂದ್ರನು ನಿಮೋನಿಯಾದಿಂದ ಪರಲೋಕವಾಸಿಯಾದನು. ಆಗ ಸ್ವಾಭಾವಿಕವಾಗಿಯೇ ಸಂಸಾರದ ಹೊಣೆಗಾರಿಕೆಯನ್ನು ಜಯಂತನು ಹೊರಬೇಕಾಯಿತು. ಆದರೂ ಮನುಷ್ಯನ ಅಧೋಗತಿಗೆ ಯಾವುದಾದರೂ ಒಂದು ಕಾರಣವು ಇದ್ದೇ ಇರುವುದು. ಕಂದಾಯ ತೀರಿಹೋಗಿ ತಿಂಗಳೆರಡಾಗಲಿಲ್ಲ; ಜಯಂತನಿಗೂ ಕಾಯಿಲೆ ಬಂದೊದಗಿತು. ಅಂದು ದಿನದಿಂದ ದಿನಕ್ಕೆ ಕಠಿಣವಾಗುತ್ತಾ ಬಂತು. ವಾಡಿಕೆಯಂತೆ

THE

PANGAL NAYAK BANK

Estd.] LIMITED. [1920.

ದಿ ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್.

Paid up Capital Rs. 1,82,100/-. Reserves Rs. 2,02,800/-

PRINCIPAL OFFICE: COURT ROAD, UDIPI.

OTHER OFFICES:

UDIPI MANGALORE, KATAPADI, & KANHANGAD.

Season Deposits so as to bear interest at 4per cent per annum till the end of June 1939 are accepted.

Cumulative Deposits are also received on the usual terms.

Banking business of every description is transacted. Further particulars may be had on application.

ದಿ ವಿಜಯ ಬೇಂಕ್, ಲಿಮಿಟೆಡ್, ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವಹಿವಾಟುಗಳು ಇಲ್ಲಿ ನಡಿಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3 ತಿಂಗಳಿಗೆ	....	3½%
6 „	....	4%
1 ವರ್ಷಕ್ಕೆ	....	4½%
2 „	....	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. ೫/-ರ ವರೆಗಿನ ಸಾಲ ಕೊಡಲ್ಪಡುತ್ತವೆ

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತದೆ.

Transport & Car Owners



ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES - - - - - MANGALORE.

AUGUSTINE & CO.

Stockits:—

Wellknown ceylon, Nilgri, Darjeeling & Assam Tea & Coffee All sorts of Hotel & family Tea Mixtures as well as Coffee can be had at moderate rates.

ಮುಂಬಾಯಿಯಲ್ಲಿ ನಮ್ಮ ಗಿರಾಕಿಗಳು ಹಲವು ವರ್ಷಗಳಿಂದ ನಮ್ಮ ಚಾ ಕಾಫಿಯ ಸ್ವಾದವನ್ನು ಉಪಯೋಗಿಸಿ ಸಂತುಷ್ಟರಾಗಿದ್ದಾರೆ.

ಹೋಟೆಲುಗಳಿಗೆ ಬೇಕಾಗುವ ಟೀ ಮಿಕ್ಸ್ಚರ್ ವ ಕಾಫಿ ಹುಡಿ, ಮನೆಗಳಿಗೆ ಬೇಕಾಗುವ ಚಾ-ಕಾಫಿ, ನಮ್ಮಲ್ಲಿ ಸದಾ ಮಿತ ಕ್ರಯದರಕ್ಕೆ ದೊರೆಯುತ್ತವೆ. ಪ್ರಾಮಾಣಿಕತೆಯೇ ನಮ್ಮ ಆದರ್ಶ. ಗಿರಾಕಿಗಳ ಸೌಕರ್ಯವೇ ನಮ್ಮ ಧ್ಯೇಯ.

ಪರೀಕ್ಷಿಸಿರಿ! ಖಾತ್ರಿ ಮಾಡಿಕೊಳ್ಳಿರಿ.

ವಿಳಾಸ: ಅಗಸ್ಟಿನ್ ಎಂಡ್ ಕೋ., ಮೌಂಟುರೋಡು, ಮಜಗಾಂ, ಮುಂಬಯಿ.

MOUNT ROAD, MAZAGAON, BOMBAY.

ಹಲವು ಜನರ ಸುಖ ಸಂಪಾದಿಸಲೂ ಆಯ್ತು. ಒಂದು ಕಡೆಯಲ್ಲಿ ತಾಯಿಯ ದುಃಖ, ಇನ್ನೊಂದೆಡೆಯಲ್ಲಿ ಸುಹೃದಿಯ ಆರ್ತನಾದ. ಏನುಮಾಡೋಣ. ವಿಧಿಲಿಖಿತವನ್ನು ಮೀರಲು ಯಾರಿಂದಲೂ ಸಾಧ್ಯವೇ ಇಲ್ಲ. ಅಂತೂ ಇಂತೂ ಆಯುರ್ವೇದ ವಿಶಾರದರಾದ ಶಕೇಶರಾಯರಿಂದ ಮದ್ದು ಮಾಡಲಾಯಿತು. ಅವರು ಮಾದಕ ದ್ರವ್ಯ ಮಿಶ್ರಿತದ ಪ್ರಯೋಗವನ್ನು ಮಾಡಿದರು ಕಾಲಕ್ರಮೇಣ ವನಜೆಯ ಭಾಗ್ಯೋದಯವು ಮಾಡಿತೆನ್ನಬಹುದು. ಜಯಂತನು ದಿನದಿಂದ ದಿನಕ್ಕೆ ರೋಗವಿಮುಕ್ತನಾಗುತ್ತಾ ಬಂದನು. ಆದರೇನು? ಇತ್ತ ಕಡೆಯಿಂದ ನೌಕರಿಯೂ ಇಲ್ಲ. ಅತ್ತ ಕಡೆಯಿಂದ ಕೈಯಲ್ಲಿದ್ದ ಕಾಸೂ ಹೋಯಿತು. ಮದ್ದಿಗೆಂದು ಮಾಡಿದ ಪ್ರಯೋಗವು ಈಗ ಪ್ರಾಣಾಂತಿಕಕ್ಕೂ ಬಂದುಬಿಟ್ಟಿತು. ಜಯಂತನಿಂದ ಆ ದುಷ್ಟ ಚಟವನ್ನು ಬಿಡಲು ಸಾಧ್ಯವಾಗಲಿಲ್ಲ. ಇದ್ದ ಆಸ್ತಿಪಾಸ್ತಿಗಳೆಲ್ಲವೂ ಸಾಲಿಗರ ಪಾಲಾಯ್ತು. ಈಗ ಮನೆಯಲ್ಲಿ ಜಯಂತ, ವನಜಾ, ತಾಯಿ ಕನಕಮ್ಮ ಈ ಮೂವರು ಮಾತ್ರ. ಜೀವನವು ಬಹು ಕಷ್ಟತರವಾಯ್ತು. ಹೆಂಡತಿಯ ಕೈಯಲ್ಲಿದ್ದ ಒಡವೆ ವಸ್ತುಗಳೆಲ್ಲಾ ಮಾರಿ ತಿಂದಾಯಿತು. ಪ್ರಿಯ ವಾಚಕವೃಂದಾ ಇದರ ಸಾರಾಂಶವೇನೆಂದರೆ ಮನುಷ್ಯನಿಗೆ ಸಂಭವಿಸಿರುವ ಅವಸ್ಥೆಗಳು ಬಹಳ ಘೋರವಾಗಿರುತ್ತವೆ. ಅದರ ಸಂಪರ್ಕದಿಂದ ಅವನು ಸರ್ವನಾಶನಾಗಿಯೂ ಹೋಗಬಹುದು. ಯಾ ನೀತಿ ಭ್ರಷ್ಟವಂತನಾಗಿಯೂ ಹೋಗಬಹುದು ಐಶ್ವರ್ಯ ಕೀರ್ತಿ ಮನ್ನಣೆ ಪೂಜೆಪುರಸ್ಕಾರಗಳನ್ನು ಹೊಂದಲೂ ಬಹುದು. ಪ್ರತಿಯೊಂದು ಗುಣಾವಗುಣಗಳು ಪ್ರತಿಯೊಂದು ವ್ಯಕ್ತಿಯನ್ನು ಹೊಂದಿಕೊಂಡು ನಡೆಯುತ್ತವೆ. ಆದರಂತೆಯೇ ಜಯಂತನನ್ನು ಸಾಲಗಾರರು ಬಂದು ಎಳೆವಾಗ ಹೆಂಡತಿ ಮಂಗಲ ಸೂತ್ರದ ನೆನಪಾಯಿತು.

ಜಯಂತ—ಹೇಳಬೇಕೋ? ನಿನಗೆ ತಿಳಿಯುವುದಿಲ್ಲವೆ? ಅದೋ ನಿನ್ನ ಕುತ್ತಿಗೆಲ್ಲಿ ಮಿಣುಗುತ್ತಿರುವ......

ವನಜಾ— ಓಹೋ! ಪ್ರಿಯಾ, ಕಂಠಿಹಾರವೇ? ಅದೇ ನೀವು ಯಾಚಿಸಿದ ವಸ್ತುವೇ! ಮನೋವಲ್ಲಭ, ನಿಮ್ಮ ಈ ಮಾತಿಗೆ ನಾನು ಏನೆಂದು ಉತ್ತರಕೊಡಲಿ. ಆ ವಿಷಯದಲ್ಲಿ ನನ್ನನ್ನು ಕ್ಷಮಿಸಿರಿ.

ಜಯಂತ—ಅದೆಲ್ಲಾ ಇರಲಿ. ಈಗ ಕೊಡುತ್ತಿಯೋ ಇಲ್ಲವೋ ಬೇಗನೆ ಹೇಳು. ಒಣರಗಳೆಯನ್ನೆಲ್ಲಾ ನನ್ನಲ್ಲಿ ಆಡಬೇಡ. ಅದೆಲ್ಲಾ ನನಗೆ ಗೊತ್ತು, ಹೆಂಗುಸರ ಚಪಲ ವಿದ್ಯೆ (ಥಟ್ಟನೆ ತಿರುಗಿ ನೋಡಿ) ಅದೋ ನೋಡು. ಅಲ್ಲಿ ಸುರೇಂದ್ರರಾಯರು ಬರುತ್ತಿರುವರು. ಬೇಗನೆಕೊಡು ಅವರಿಗೆ ನಾನು ಹೇಗೆ ಮೋರೆ ತೋರಿಸಲಿ. ಕೊಡುವ ವಾಯಿದೆ ತಪ್ಪಿ ದಿನ ಮೂರು ಕಳೆಯಿತು. ಇವತ್ತು ಖಂಡಿತಕೊಡುತ್ತೇನೆಂದು ಮಾತುಕೊಟ್ಟಿರುವೆನು.

ಸುರೇಂದ್ರ—(ಪ್ರವೇಶಿಸಿ,) ಏನು ಜಯಂತ ಮಹಾರಾಯರು, ತಮ್ಮ ವಾಯಿದೆ ಇನ್ನೂ ದಾಟಲಿಲ್ಲವೆಂದು ಕಾಣುತ್ತದೆ. ಹೇಳಿಕೆಯ ಮಾತು ಇಲ್ಲ. 12 ಘಂಟೆಗೆ ಕೊಡುತ್ತೇನೆಂದು ಹೇಳಿದಿರಿ. 12 ಇನ್ನೂ ಆಗಲಿಲ್ಲವೇ?

ಜಯಂತ—ಸ್ವಾಮಿ ಸುರೇಂದ್ರರೇ, ಸ್ವಲ್ಪ ತಾಳಿ, ಈಗ ನೀವು ದಯವಿಟ್ಟು ಹೋಗಿರಿ. ನಾನು ಸಂಜೆ 6½ ಸರಿಯಾಗಿ ನಿಮ್ಮ ನಿಯಮಿತ ಸ್ಥಳಕ್ಕೆ ಬರುವೆನು.

ಸುರೇಂದ್ರ—ಆಡಿದ ಮಾತಿಗೆ ತಪ್ಪಬಾರದು. ಈಗ ನಾನು ಹೋಗುತ್ತೇನೆ ನಮ್ಮ ಮರ್ಯಾದೆಹೋಗುವ ಕಾಲ ಬಂದಿದೆ ನೆನಪಿನಲ್ಲಿಟ್ಟುಕೊಳ್ಳಿ. ಪುನಃ ನಾನು ಬರುವುದಿಲ್ಲ. (ಹೋಗುವನು)

ಜಯಂತ—ಅಬ್ಬಬ್ಬ ಸ್ವಲ್ಪ ಬದುಕಿದೆ. (ಹೆಂಡತಿಯ ಕಡೆ ತಿರುಗಿ,) ಏನು ಹೇಳು, ಕಣ್ಣಾರೆ ಕಂಡ ಮೇಲೆ ಹೆಚ್ಚಿಗೆ ಹೇಳುವ ಅಗತ್ಯವಿಲ್ಲ. ಈಗ ನಾನು ಅವರಿಗೆ ಏನು ಹೇಳಬೇಕು. ಬೇಗಹೇಳು ಕೊಡುತ್ತೀಯೋ ಇಲ್ಲವೋ? ಹೇಳು ವನಜಾ ಏನು ಹೇಳು ಬೇಗಹೇಳು........ವನಜಾ ಕೊಡುವುದಿಲ್ಲವೇ?

ಓದುಗ ಮಹಾಶಯರೇ! ಸೂರ್ಯನಾರಾಯಣನು ಪಶ್ಚಿಮಾಂಬುಧಿಯಲ್ಲಿ ಅಸ್ತಮಯನಾಗುತ್ತಾ ಬರುತ್ತಿದ್ದನು. ಈ ಮನೆಯಲ್ಲಿ ಮಾತ್ರ ಭೀಕರದೃಶ್ಯದ ಕುರುಹು ಕಾಣುತ್ತಿತ್ತು.

ವನಜಾ—ಅಹಾ! ಮನೋವಲ್ಲಭಾ!! ಪತಿವ್ರತಾಸಾಧ್ವೀಮಣಿಗಳು ಸಾವಿಗೆ ಎಂದಾದರೂ ಹೆದರುವುದುಂಟೆ, ನೀವೇ ಅಲ್ಲವೆ ನನಗೀ ತೆರದ ಭಾಗ್ಯವನ್ನು ಲಭಿಸಿಕೊಟ್ಟದು. ಯಾವ ಸ್ತ್ರೀಗಾದರೂ ಪತಿಯ ಕಾಲಡೆಸೆಯಲ್ಲಿ ಪ್ರಾಣ ತೊರೆಯುವ ಭಾಗ್ಯವು ಲಭಿಸುವುದೇ? ಪುನರಪಿ ಜನನಂ ಪುನರಪಿ ಮರಣಂ, ಪುನರಪಿ ಜನನೀ ಜಠರೇ ಶಯನಂ॥ ಎಂಬ ನಿಯಮದಂತೆ ಮಾನವನು ಹುಟ್ಟುವುದೇ ಕೊನೆಗೆ ಜೀವನವನ್ನು ಅರ್ಪಿಸುವುದಕ್ಕೆ. ಪ್ರಾಣೇಶ್ವರಾ? ನಾನು ಇಷ್ಟು ಸಮಯ ನಿಮ್ಮೊಡನೆ ಇದ್ದುದೇ ನನ್ನ ಪರಮ ಸೌಭಾಗ್ಯವೆನ್ನಬೇಕು. ನಿಮ್ಮ ಮಾನವನ್ನು ರಕ್ಷಿಸಲು ನಾನು ಸಮರ್ಥೆಯಾಗಿರುವುದೇ ನನ್ನ ಭಾಗ್ಯ ನಿಮ್ಮ ಕೈಹಿಡಿದ್ದೇನೆಂಬ ಸಂತೋಷವು ನನ್ನನ್ನು ಮೃತ್ಯು ಮುಖಕ್ಕೆ ಎಳೆಯುತ್ತದೆ. ನೀವು ಇನ್ನಾದರೂ ದುಃಖಿಸಬೇಡಿರೆಂದೇ ನನ್ನ ಪ್ರಾರ್ಥನೆ. ಅತ್ತೆಮ್ಮನವರನ್ನು ಒಳ್ಳೇ ಪ್ರೀತಿಯಿಂದ ನೋಡಿಕೊಂಡು ನಮ್ಮ ಕುಲಕ್ಕೆ ಪರಮೇಶ್ವರನು ಚಿರಾಯುರಾರೋಗ್ಯವನ್ನೂ ಕಲ್ಯಾಣವನ್ನೂ ದಯಪಾಲಿಸಲೆಂದು ನನ್ನ ವಿನಂತಿ. ಇದೇನ ನಗೆ ನಿಮ್ಮ ಕೊನೆಯ ದರ್ಶನ. ದೇವಾದಿದೇವಾ? ನಿನಗೆ ನನ್ನ ಅನೇಕ ವಂದನೆಗಳು. ಪತಿದೇವಾ? ನಾನು ನಿಮ್ಮೊಡನೆ ಇಷ್ಟರ ತನಕ ಇದ್ದು ಮಾಡಿದ ತಪ್ಪುಗಳನ್ನು ಕ್ಷಮಿಸಿರಿ. ಇನ್ನಾದರೂ ನಿಮ್ಮ ಕೆಟ್ಟ ಆ ಮದ್ಯ ರಾಕ್ಷಸನ ಸ್ನೇಹವನ್ನು ಬಿಟ್ಟು ಸರ್ವೇಶ್ವರನ ಅನುಗ್ರಹಕ್ಕೆ ಪಾತ್ರರಾಗಿ ನಿಮ್ಮ ಇಹ ಜೀವನವನ್ನು ಸಮಾಪ್ತಿಗೊಳಿಸಿ ಪರಮಾರ್ಥದ ಕಡೆಗೆ ಗಮನವಿಡಿರಿ........ಇ....ನ್ನು....ಸಾ....ಧ್ಯ....ವಿ....ಲ್ಲ. ಹೃದಯೇಶ್ವರಾ? ಹೋ....ಗು....ವೆ....ನು. ಅಸಂಖ್ಯಾತ ವಂದನೆಗಳು. ಕಾ....ಲಿ....ಗೆ...ಬಿ....ದ್ದೆ....ನು....ಕ್ಷ....ಮಿ....ಸ....ರಿ....ಕ್ಷ....ಮಿ....ಸಿ....ರಿ ಸಾಧ್ವೀಮಣಿಯ ಪ್ರಾಣಪಕ್ಷಿಯು ಅನಂತ ಆಕಾಶದಲ್ಲಿ ಲೀನವಾಯಿತು.

ನವಯುಗದಲ್ಲೇ
ಜಾಹಿರಾತು ಕೊಡಿರಿ.

THE
CANARA MUTUAL
ASSURANCE CO., LTD.

Head Office:— UDIPI, S INDIA.

Outstanding Valuation Results

High Praises from the Press and the discriminating public

The Oldest Insurance Journal writes:

"........... The result of the valuation is unique in every respect and the annals of Indian Life Assurance do not furnish a single example of greater efficiency and economy. The CANARA MUTUAL belongs to a small distant town in Southern India and is therefore devoid of the magic touch of the Bombay millionaire or the Calcutta Lawyer. Still, however, the Company has grown to be a prodigy amongst the infant life offices of this country, the kind of which has not been seen in Bombay, Lahore or Calcutta."

........*The Indian Insurance Journal*, Calcutta
MARCH, 1939.

ರಾಜಕೋಟೆ ಠಾಕೋರ್ ಸಾಹೇಬರು ನಾಮಮಾತ್ರ ರಾಜರು!

ಆಟವೆಲ್ಲಾ ದರ್ಬಾರ್ ವೀರವಲ್ಲರದು!

ಮಹಾತ್ಮಾಗಾಂಧಿಯವರು ತನ್ನ ಭಕ್ತಿ ಪ್ರದರ್ಶನಕ್ಕೆ ರಾಜಕೋಟೆಯಂತಹ ಸಣ್ಣ ಸಂಸ್ಥಾನವೊಂದನ್ನು ಆರಿಸಿದುದಕ್ಕೆ ಪ್ರಬಲವಾದ ಕಾರಣಗಳಿದ್ದುವು. ಗಾಂಧೀ ಕುಟುಂಬಕ್ಕೂ ರಾಜಕೋಟೆಯ ಸಂಸ್ಥಾನಕ್ಕೂ ಹಲವು ತಲೆಗಳ ಸಂಬಂಧವಿತ್ತು. ಗಾಂಧಿಯವರ ತಂದೆ ರಾಜಕೋಟೆ ದರ್ಬಾರಿನ ದಿವಾನರಾಗಿದ್ದರು. ಈಗಿನ ರಾಜರ ತಂದೆಯವರಿಗೆ ಗಾಂಧಿಯವರ ಮೇಲೆ ಗುರುಭಾವನೆಯಿದ್ದಿತಲ್ಲದೆ ಒಂದು ಸಾರ್ವಜನಿಕ ಸಭೆಯಲ್ಲಿ ಬಾಯಿಬಿಟ್ಟು 'ಅವರು ನನ್ನ ಗುರು' ಎಂದು ಮಹಾತ್ಮರನ್ನವರು ಸಂಬೋಧಿಸಿದ್ದುಂಟು. ಆ ರಾಜರು ಬದುಕಿದ್ದಲ್ಲಿ ರಾಜಕೋಟೆಯ ಪರಿಸ್ಥಿತಿಯು ಮಹಾತ್ಮರು ಗೆರೆಯೆಳೆದಂತೆ ರೂಪುಗೊಳ್ಳುತ್ತಿದ್ದಿತೆಂಬುದರಲ್ಲಿ ಅನುಮಾನವಿಲ್ಲ.

ಜವಾಬ್ದಾರಿಯರಿಯದ ರಾಜ

ಆದರೆ ಈಗಿನ ರಾಜರು ಕೇವಲ ತರುಣರು; 22ವರ್ಷ ಪ್ರಾಯದವರು. ರಾಜಕಾರಣದ ಗಂಧಗಾಳಿಯನ್ನರಿತವರಲ್ಲ. ತನ್ನ ಭವಿಷ್ಯದ ಉತ್ಪಾತಗಳಾವುದರ ಅರಿವೂ ಇಲ್ಲದೆ ನಿಶ್ಚಿಂತೆಯಿಂದ ಮಂತ್ರಿ ವೀರವಲ್ಲರ ಕೈಯಲ್ಲಿ ಆಡುತ್ತಿರುವ ಡೋಲಾಯಮಾನ ಮನೋವೃತ್ತಿಯವರು. ಬೆನ್ನೆಲುಬಿಲ್ಲದವರಿಗೆ ಆಧಾರವೊಂದು ಬೇಕಷ್ಟೆ. ಅಂತೆಯೇ ಅವರಿಗೆ ದೊರೆತ ವೀರವಲ್ಲರ ಪ್ರಭಾವದಿಂದ ಇಂದಿನ ಅಪವಾದಗಳನ್ನು ಅರಸರು ಹೊರಬೇಕಾಗಿ ಬಂದಿದೆ. ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದವರು ರಾಜರ ಮೇಲೆ ದೌರ್ಬಲ್ಯದ ಆರೋಪವೊಂದನ್ನಲ್ಲದೆ ಬೇರಾವ ದೋಷಾರೋಪಣೆಯನ್ನೂ ಮಾಡಲಾರರು. ರಾಜರ ಈ ದುರ್ಬಲತೆಯ ದೆಸೆಯಿಂದಲೇ ವೈಸರಾಯರು ರಾಜಕೋಟೆಯ ಒಳ ಆಡಳಿತದ ಕುರಿತು ಒಂದೆರಡು ಬಾರಿ ಕೈಹಾಕಬೇಕಾಗಿ ಬಂದಿತ್ತು. ಗಾಂಧಿಯವರು ಉಪವಾಸ ಕುಳಿತೊಡನೆ ಆಳ್ವಿಕೆಗೆ ತೀರಾ ಅಸಮರ್ಥರಾದ ರಾಜರ ಕಿರೀಟವನ್ನು ವೈಸರಾಯರು ಕಳಚಿಡಿಸುವದು ವಾಸಿ ಎಂದು ಕೆಲವು ಪತ್ರಿಕೆಗಳು ಸೂಚಿಸಿದ್ದವು.

ಕುಯುಕ್ತಿ ಪ್ರವೀಣರಾದ ವೀರವಲ್ಲರು

ರಾಜಾ ಸಾಹೇಬರ ಸೂತ್ರಧಾರಿ ದರ್ಬಾರ್ ವೀರವಲ್ಲರು ಸಾಮಾನ್ಯ ಮನುಷ್ಯರಲ್ಲ. ಅವರಷ್ಟು ರಾಜಕಾರಣ ಪ್ರವೀಣತೆ, ಅದರಲ್ಲೂ ಹಾದಿಗಳ ತಾರತಮ್ಯನೋಡದೆ ಕಾರ್ಯಕ್ಕಾಗಿ ಯಾವ ಪಥವನ್ನಾದರೂ ಅನುಸರಿಸಬಲ್ಲ ಸಿದ್ಧತೆ ಇರುವ ಮಂತ್ರಿಗಳು ಹಿಂದುಸ್ಥಾನದಲ್ಲಿ ಬಹಳ ಮಂದಿ ಇರಲಾರರು. ಪ್ರಜಾಪರಿಷತ್ತಿನವರು ಸತ್ಯಾಗ್ರಹ ಹೂಡುವ ಕಾಲದಲ್ಲಿ ವೈಸರಾಯರು ವೀರವಲ್ಲರ ಮಂತ್ರಿಪದವನ್ನು ರದ್ದುಪಡಿಸಿ ಒಬ್ಬ ಯುರೋಪಿಯಾನರನ್ನು ಆ ಸ್ಥಾನಕ್ಕೆ ನೇಮಿಸಿದ್ದರು. ಆದರೆ ವೀರವಲ್ಲರು ನಾನಾ ಹಂಚಿಕೆಗಳನ್ನು ಹೂಡಿ ಠಾಕೋರ್ ಸಾಹೇಬರು ಇಂಗ್ಲಿಷ್ ದಿವಾನರ ಸೂಚನೆಗಳನ್ನೆಲ್ಲಾ ತಿರಸ್ಕರಿಸುವಂತೆ ಮಾಡಿ ಅವರನ್ನು ಪೇಚಾಟಕ್ಕೆ ಗುರಿಮಾಡಿದ್ದರು. ಒಮ್ಮೆ ವೀರವಲರು ಸಂಸ್ಥಾನವನ್ನೂ ಬಿಡತಕ್ಕದೆಂಬ ಆಜ್ಞೆ ಕೂಡ ಕೇಂದ್ರ ಸರಕಾರದಿಂದ ಬಂದಿತ್ತು. ಆದಕ್ಕೂ ರಾಜರನ್ನು ಇದಿರು ಹಿಡಿದು ಕೊನೆಗೆ ಯುರೋಪಿಯನ್ ದಿವಾನರು ರಾಜಿನಾಮೆ ಕೊಡುವಂತೆ ಮಾಡಿ ತಾನೇ ಮಂತ್ರಿಪದಕ್ಕೆ ಬಂದರು. ಸರದಾರ್ ಪಟೇಲರ ನಾಯಕತ್ವದಲ್ಲಿ ಸತ್ಯಾಗ್ರಹವು ಜಯಶೀಲವಾಗಿ ನಡೆದುದನ್ನು ಕಂಡು ಉಪಾಯಗಾಣದೆ ಸುಧಾರಣಾ ಸಮಿತಿಯ ಆಶ್ವಾಸನೆಯನ್ನು ರಾಜರಿಂದ ಕೊಡಿಸಿದರು; ಸತ್ಯಾಗ್ರಹವನ್ನು ನಿಲ್ಲಿಸಿದೊಡನೆ ಆ ಆಶ್ವಾಸನೆಗೆ ಬೇರೆ ಅರ್ಥವನ್ನು ಕಲ್ಪಿಸಿ ಹೇಳಿದರು. ಕೊನೆಗೆ ಗಾಂಧಿಯವರು ಉಪವಾಸ ಕುಳಿತು ಅದನ್ನು ಸ್ಪಷ್ಟಪಡಿಸಿಕೊಂಡರಾದರೂ ವೀರವಲ್ಲರ ಕುಯುಕ್ತಿಯ ದೆಸೆಯಿಂದಾಗಿ ಯಾವುದೂ ಈ ತನಕ ಕೊನೆಗೊಂಡದೆ 'ನಾನು ಸೋತೆ' ಎನ್ನುತ್ತಾ ಗಾಂಧಿಯವರು ಕಲ್ಕತ್ತೆಗೆ ಹೊರಡುವಂತಾಯಿತು.

ಹಂಚಿಕೆ ಫಲಿಸಿದುದು ಹೇಗೆ

ವೀರವಲ್ಲರ ಹಂಚಿಕೆ ಈ ರೀತಿ ತತ್ಕಾಲಕ್ಕಾದರೂ ಫಲಿಸಿದುದನ್ನು ಕಾಣುವಾಗ ಅವರ ಚಾಣಾಕ್ಯತಂತ್ರ ಎಷ್ಟು ಅಭೇದ್ಯವಾದುದೆಂಬುದನ್ನು ಅರಿಯಬಹುದು. ರಾಜಕೋಟೆಯ ಮಂತ್ರಿ ಹಿಡಿದ ಪಥವನ್ನು ರಾಜಕೀಯ ನೀತಿವಂತನಾರೂ ಹಿಡಿಯುವಂತಿಲ್ಲ. ಇಂದಿನ ರಾಜಕಾರಣದಲ್ಲಿ ಚಾಣಾಕ್ಯನಕಾಲದ ತಂತ್ರಕ್ಕೆ ಜಯವಿಲ್ಲ; ಒಮ್ಮೆ ದೊರೆತರೂ ಅದು ಮುಂದಕ್ಕೆ ಮಹಾ ಗಂಡಾಂತರವನ್ನು ತಂದೊಡ್ಡುವ ಸದ್ಯದ ಸುಖವಲ್ಲದೆ ಬೇರೇನೂ ಅಲ್ಲ. ವೀರವಲ್ಲರು ದೂರದೃಷ್ಟಿಯವರೇನೋ ನಿಜ; ಆದರೆ ಅವರಿಗೆ ತನ್ನ ಹಾದಿಯನ್ನು ಮಾತ್ರ ಬಹು ಬಹುದೂರದ ವರೆಗೆ ಸರಿಪಡಿಸಿಟ್ಟುಕೊಳ್ಳಲು ಗೊತ್ತು. ಹಾಗೆ ಸರಿಪಡಿಸುವಾಗ ತನ್ನ ಹಾದಿಯಡ್ಡೈಸಿ ನಿಂತ ಕಲ್ಪವೃಕ್ಷವನ್ನಾದರೂ ಬುಡಕತ್ತರಿಸಲು ಹಿಂದುಮುಂದು ನೋಡುವವರಲ್ಲ. ಮಹಾತ್ಮಾಗಾಂಧಿಯವರೊಡನೆ ಅವರು ಹಿಡಿದ ಆಟವೆಂದರೆ ಅಷ್ಟೇ ನಷ್ಟದಾಯಕವಾದುದು. ರಾಜಕೋಟೆಯ ತೀರ್ಮಾನವನ್ನು ಒಂದೆಡೆಯಲ್ಲಿ ಮುಸ್ಲೀಮ್ ಮತ್ತು ಭಯಾತರನ್ನು ಇದಿರೊಡ್ಡಿ ಕೆಡಿಸಿದರು; ಇನ್ನೊಂದೆಡೆಯಿಂದ ಗಾಂಧಿಯವರು ಸೂಚಿಸಿದ ಹೆಸರುಗಳನ್ನು ಧಿಕ್ಕರಿಸಿ ತೊಂದರೆಯೊಡ್ಡಿದರು. ಸದ್ಯಕ್ಕೆ ಬಿಕ್ಕಟ್ಟು ಹಾಗೆಯೇ ಉಳಿಯುವಂತಾಯಿತು.

ಪರಿಣಾಮವೇನಾಗಬಹುದು

ಆದರೆ ಇದರ ಪರಿಣಾಮವು ಕ್ಷೇಮದಾಯಕವಾಗುವಂತಿಲ್ಲ. ವೀರವಲ್ಲರ ಬೆನ್ನನ್ನಾದರಿಸಲು ಹೋಗಿ ರಾಜರು ಸಿಂಹಾಸನದಿಂದ ಮುಗ್ಗರಿಸುವ ಕಾಲವು ಹತ್ತಿರದ ಭವಿಷ್ಯದ ಗರ್ಭದಲ್ಲಿದೆ. ಗ್ವೈಯರ್ ಎವಾರ್ಡಿನಂತೆ ಸ್ಪಷ್ಟವಾದ ತೀರ್ಮಾನವೊಂದು ಎಲ್ಲರ ಸಮ್ಮುಖದಲ್ಲಿದೆ. ಪ್ರಜೆಗಳ ಬೇಡಿಕೆಗೆ ನ್ಯಾಯದ ಬೆಂಬಲವೊಂದೇ ಅಲ್ಲ; ಪ್ರಚಲಿತ ಕಾನೂನಿನ ಬೆಂಬಲವೂ ಆ ಮೂಲಕ ದೊರೆತಿದೆ. ಆದ್ದರಿಂದ ಇನ್ನೊಮ್ಮೆ ಚಳವಳಿ ಆರಂಭವಾದರೆ ಅದು ತನ್ನ ಗುರಿಯನ್ನು ಮುಟ್ಟಿಯೇ ತೀರುವದು. ಎರಡನೆಯದಾಗಿ ವೈಸರಾಯರು ಅಸ್ಪಷ್ಟವಾಗಿ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಪರಿಸ್ಥಿತಿಯು ವಿಷಮವಾದಲ್ಲಿ ಕೇಂದ್ರ ಸರಕಾರವು ತಪ್ಪದೆ ಕೈಹಾಕುವದು. ಇವೆರಡರಲ್ಲಿ ಯಾವದು ಸಂಭವಿಸಿದರೂ ಅದು ರಾಜಕೋಟೆ ದರ್ಬಾರಿನ ಅಪಜಯವಾಗಿ ಪರಿಣಮಿಸುವದೆಂಬುದರಲ್ಲಿ ಅನುಮಾನವಿಲ್ಲ.

ವೀರವಲ್ಲರಲ್ಲಿ ಆ ಜಾಣ್ಮೆಯಿಲ್ಲ

ದರ್ಬಾರ್ ವೀರವಲ್ಲರು ತನ್ನೆಡೆಗೆ ಬಂದವನಿಗೆ ಅಡ್ಡಗಾಲಿಡುವದರಲ್ಲಿ ಸಮರ್ಥರಿದ್ದಂತೆ ಪ್ರಜಾಜನರ ಸಾಮುದಾಯಿಕ ಭಕ್ತಿಯನ್ನು ತಡೆಗಟ್ಟುವಷ್ಟರ ಸಮರ್ಥರಿಲ್ಲ. ರಾಜಕೋಟೆಯಂತಹ ಪುಟ್ಟ ಸಂಸ್ಥಾನಕ್ಕೆ ಆ ಶಕ್ತಿಯೆಂದಿಗೂ ಇರಲಾರದು. ಮೇಲಾಗಿ ಕುಯುಕ್ತಿವಂತರು ಎಂದಿಗೂ ಸಾರ್ವಜನಿಕರ ವಿಶ್ವಾಸಕ್ಕೆ ಪಾತ್ರರಲ್ಲ; ದರ್ಬಾರ್ ವೀರವಲ್ಲರೂ ಇದಕ್ಕಪವಾದವಾಗಿಲ್ಲ. ಅವರು ಕುಹಕಿ ಶಿರೋಮಣಿಯಾಗಿರುವಂತೆಯೇ ಅವಿಶ್ವಾಸೀ ಶಿಖಾಮಣಿಯೂ ಇದ್ದಾರೆ. ಸಾರ್ವಜನಿಕ ಚಳವಳದಲ್ಲಿ ಸೇರುವವರೂ ಜಯಶೀಲವಾಗಿ ಇದಿರಿಸುವವರೂ ವಿಶ್ವಾಸಿಗಳೇ ಇರಬೇಕಾಗುತ್ತದೆ. ಆ ಗುಣವು ಸರ್ವಥಾ ನಾಸ್ತಿಯಾಗಿರುವ ವೀರವಲ್ಲರ ಅಪಾಯದ ಕಾಲವು ಆಗಬರಲಿಕ್ಕಿದೆ. ವೀರವಲ್ಲರ ಕೈಗೊಂಬೆಯಾಗಿರುವ ರಾಜರ ದೌರ್ಬಲ್ಯಕ್ಕೆ ತಕ್ಕ ಪುರಸ್ಕಾರವು ಆಗ ದೊರಯಲಿದೆ.

ವೀರವಲ್ಲರ ವ್ಯಕ್ತಿತ್ವ

ರಾಜಕೀಯದಲ್ಲಿ ವೀರವಲ್ಲರಂತಹ ದುರ್ವರ್ತನೆಯವರಾದರೂ ಖಾಸಗಿಯಾಗಿ ಅವರಂತಹ ಉಪಕಾರಿ ವ್ಯಕ್ತಿಯಲ್ಲ ಬಹುತೇಕವಾಗಿ, ರಾಜರ ತರುಣ ಹೃದಯವನ್ನಾಕರ್ಷಿಸಲು ಅವರ ವ್ಯಕ್ತಿಗಾಂಭೀರ್ಯವೇ ಕಾರಣ ತನ್ನ ಪ್ರತಿಷ್ಠೆ ಮತ್ತು ರಾಜರ ಹಕ್ಕು ಬಾಧ್ಯತೆ ಹೊರತು ಬೇರಾವ ಸ್ವಾರ್ಥವೂ ಈ ಕುಕರ್ಮಗಳಲ್ಲಿ ಅವರಿಗಿಲ್ಲ. ವ್ಯಕ್ತಿಶಃ ಗಾಂಧಿಯವರನ್ನು ಅವರು ಗೌರವಿಸುತ್ತಾರೆ. ಹಿಂದೊಮ್ಮೆ ರವೀಂದ್ರನಾಥ ಠಾಗೋರರ ಶಾಂತಿನಿಕೇತನಕ್ಕಾಗಿ ಅವರು ಹೇರಳ ನಿಧಿಗೂಡಿಸಿ ಕಳುಹಿಸಿ ಕೊಟ್ಟಿದ್ದರು. ಅಂತಹ ಇತರ ಎಷ್ಟೋ ಸಾರ್ವಜನಿಕ ಹಿತಕಾರೀ ಕಾರ್ಯಗಳನ್ನವರು ಮಾಡಿದ್ದರು. ಆದರೂ ಕಾರ್ಯಸಾಧನೆಯ ಭಲಹೊರತು ನ್ಯಾಯಪಾಲನೆಯ ದೃಷ್ಟಿಯಿಲ್ಲದ ಮನುಷ್ಯ. ನ್ಯಾಯದ ಕಡೆಯಲ್ಲಿ ನಿಂತರೆ ನ್ಯಾಯವನ್ನು, ಅನ್ಯಾಯದ ದಿಕ್ಕು ಹಿಡಿದರೆ ಅನ್ಯಾಯವನ್ನು ಸಾಧಿಸಿ, ರಚಿಸಿ, ಮುಂದೊಡ್ಡುವ ಯಂತ್ರ! ಮಾನವತ್ವದ ಕುರುಹುಗಳಿರುವದು ಅನುಸರಿಸುವ ಪಥವನ್ನು ಹೊಂದಿಕೊಂಡಾದರೆ, ವೀರವಲ್ಲರ ಪಥವು ಮಾನವರದಲ್ಲ!

SAVING MONEY AND TIME

Thousands of prudent and thriving business-men prefer this ank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906
CANARA BANK
LIMITED

NOTICE

In the court of the District Munsif of Puttur

R. E. P. ೩೩/೧೯೩೯

Petitioner—The Shamarao Vittal Cooperative Bank Ltd. Mangalore

Respondents—Kapnadak Balmukund Rao and three others

To
Kapnadak Balmukund Rao
C/o Kapnadak Shantharama Rao
Ground Floor
೩೬ Sonavala Buildings
Tardee Bombay No. 7

Please take notice that the above execution filed by the petitioner praying for the attachment and sale of your immovable properties stands posted to 26-6-1939 for notice to you, and if you fail to appear either in person or through a pleader at 11 A.M. on that day and file your objections, if any, you will be placed ex-parte and the petition proceeded with.

Puttur
1-5-1939
S. Ananda Rao,

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಮೈಸೂರು ಮೇ, ೧

ಬೆಂಗಳೂರು ದಂಡಿನ ವಿಷಯ.

ಬೆಂಗಳೂರು ದಂಡನ್ನು ಮೈಸೂರು ಅಧಿಕಾರಕ್ಕೊಳಪಡಿಸುವ ವಿಷಯವಾಗಿ ಬ್ರಿಟಿಷ್ ರೆಸಿಡೆಂಟರು ಸಂಸ್ಥಾನದ ಮುಖ್ಯಾಧಿಕಾರಿಗಳೊಡನೆ ಚರ್ಚಿಸಿ ಮೈಸೂರಿನವರಿಗೆ ಕೆಲವು ಸಲಹೆಗಳನ್ನಿತ್ತಿದ್ದಾರೆಂದು ರೆಸಿಡೆಂಟರ ಕಾರ್ಯದರ್ಶಿಗಳು ಹೊರಡಿಸಿರುವ ಒಂದು ಪ್ರಕಟಣೆಯಿಂದ ಗೊತ್ತಾಗುತ್ತದೆ. ಇಷ್ಟಲ್ಲದೆ ಕೆಲವು ದಿನಗಳ ಕೆಳಗೆ ರೆಸಿಡೆಂಟರೂ, ದಿವಾನರೂ, ಪ್ರಥಮ ಮತ್ತು ದ್ವಿತೀಯ ಸಚಿವರುಗಳು ರಾಜಧಾನಿಯಲ್ಲಿ ಸಭೆಸೇರಿ, ಸಂಸ್ಥಾನಕ್ಕೆ ಹಸ್ತಾಂತರಿಸಬೇಕಾಗಿರುವ ದಂಡಿನ ಬಹುಭಾಗವನ್ನು ಹಿಂದಕ್ಕೆ ಪಡೆದರೆ ಅದ ಯಾವ ರೀತಿಯಲ್ಲಿ ಅದನ್ನು ವಿಂಗಡಿಸಬೇಕೆಂಬುದನ್ನು ಚರ್ಚಿಸಿದರೆಂದು ಹೇಳಲಾಗಿದೆ. ರಾಜಧಾನಿಯಲ್ಲಿ ನಡೆದ ಈ ಸಭೆಯಿಂದ ಎಲ್ಲರಿಗೂ ಆಶ್ಚರ್ಯವುಂಟಾಗಿದೆ.

ಕನ್ಯಾಪಹಾರ—ಬೆಂಗಳೂರು ಮಲ್ಲೇಶ್ವರದಲ್ಲಿ ವಾಸವಾಗಿರುವ ಶ್ರೀ॥ ರಾಘವೇಂದ್ರರಾಯರ ಮಗಳು ಇಂದಿರಮ್ಮನೆಂಬ ಹದಿನೈದು ವರ್ಷವೆಂದು ಹೇಳಲಾಗಿರುವ ಈ ಕನ್ಯೆಯನ್ನು ಅಲ್ಲೇ ವಾಸವಾಗಿರುವ ಶ್ರೀ. ಗೋಪಾಲರಾವ್ ಎಂಬ ತರುಣನು ಅಪಹರಿಸಿಕೊಂಡು ತುಮಕೂರಿಗೆ ಹೋದನೆಂದು ಹೇಳಲಾಗಿತ್ತು. ಇದಾದ ವೇಳೆ ಶ್ರೀ॥ ರಾಘವೇಂದ್ರರಾಯರು ಪೋಲೀಸರಿಗೆ ದೂರು ಹೇಳಲು, ತಕ್ಕ ಏರ್ಪಾಡುಗಳೊಡನೆ ಪೋಲೀಸರು ತುಮಕೂರಿಗೆ ತೆರಳಿ, ಅಲ್ಲಿ ಇವರೀರ್ವರನ್ನೂ ದಸ್ತಗಿರಿ ಮಾಡಿಟ್ಟಿದ್ದಾರೆಂದೂ ಇವರನ್ನು ಸದ್ಯದಲ್ಲೇ ನಗರ ನ್ಯಾಯಾಧೀಶರ ಮುಂದೆ ವಿಚಾರಣೆಗೆ ನಿಲ್ಲಿಸಲಾಗುವುದೆಂದೂ ಹೇಳಲಾಗಿದೆ.

ಪಂಡಿತ ನೆಹ್ರೂರವರ ಪತ್ರ—"ಮೈ. ಕಾಂ. ಸದಸ್ಯರುಗಳು, ಇಂ. ನ್ಯಾ. ಕಾಂ. ನ ಸದಸ್ಯರಾಗಿರಬೇಕೆಂಬ ನೀತಿಯನ್ನು ವರ್ಜಮಾಡಿ, ಮೈ. ಕಾಂ. ನ್ನು ಬಲಪಡಿಸಿಕೊಳ್ಳುವುದು ಉತ್ತಮವು" ವೆಂದು ಚಿತ್ರದುರ್ಗದ ಶ್ರೀ. ಎಸ್. ವಾಸುದೇವರಾಯರು, ಪಂ॥ ಜವಾಹರಲಾಲ ನೆಹ್ರೂರವರಿಗೆ ಒಂದು ಪತ್ರ ಬರೆದು ಅದರಲ್ಲಿ ತಿಳಿಸಿದ್ದರು. ಪಂಡಿತರು ಇದಕ್ಕೆ ಉತ್ತರಕೊಡುತ್ತ, ಮೈ. ಕಾಂ, ನವರು ಇಂ. ನ್ಯಾ. ಕಾಂ. ನ ಅಂಗವಾಗಿಯೇ ಕೆಲಸ ಮಾಡಬೇಕೆಂದೂ ಸಂಸ್ಥಾನಗಳಲ್ಲಿ ನ್ಯಾಷನಲ್ ಕಾಂಗ್ರೆಸು ಇನ್ನೂ ಹೆಚ್ಚು ಆಸಕ್ತಿ ವಹಿಸುವುದು ಸ್ಪಷ್ಟವಾಗಿದೆ ಎಂದೂ ತಿಳಿಸಿದ್ದಾರೆ. ಈ ವಿಷಯವನ್ನು ಶೀಘ್ರದಲ್ಲೇ ನಡೆಯಲಿರುವ ಮೈ. ಕಾಂ. ನ. ಸಭೆಯಲ್ಲಿ ಚರ್ಚಿಸುತ್ತಾರೆಂದು ತಿಳಿದುಬಂದಿದೆ.

ವನಿತಾಸದನ

ಸ್ತ್ರೀಯರ ಏಳಿಗೆಗಾಗಿ ದುಡಿಯುತ್ತಿರುವ ರಾಜಧಾನಿಯಲ್ಲಿರುವ ವನಿತಾಸದನದ ದ್ವಿತೀಯ ವಾರ್ಷಿಕೋತ್ಸವವು ೨೮ನೇ ತಾ. ಶುಕ್ರವಾರದಿಂದ ಪ್ರಾರಂಭವಾಗಿದೆ. ಇದರ ಸಂಬಂಧವಾಗಿ ಗೃಹಕಾರ್ಯ, ಕಲಾಪ್ರದರ್ಶನವೊಂದನ್ನು ಶಾರದಾವಿಲಾಸ ಹೈಸ್ಕೂಲ್ ಕಟ್ಟಡದಲ್ಲಿ ಏರ್ಪಡಿಸಲಾಗಿದೆ. ಇದರ ಪ್ರಾರಂಭೋತ್ಸವವನ್ನು ಮೈಸೂರು ಸಿಟಿ ಮುನಿಸಿಪಲ್ ಅಧ್ಯಕ್ಷರಾದ ಶ್ರೀ. ಎಂ. ಎ. ಶ್ರೀನಿವಾಸನ್‌ರವರು ನೆರವೇರಿಸಿದರು. ೨೯ನೇ ಶನಿವಾರ ದಿನ "ಮಹಿಳೆಯರ ದಿನ"ವಾದ್ದರಿಂದ ಸ್ತ್ರೀಯರ ಟ್ರೈನಿಂಗ್ ಕಾಲೇಜಿನ ಮುಖ್ಯೋಪಾಧ್ಯಾಯಿನಿಯಾದ ಶ್ರೀಮತಿ ಬಿ. ಇಂದಿರಮ್ಮನವರು ಅಧ್ಯಕ್ಷತೆ ವಹಿಸಿದ್ದರು. ೩೦ನೇ ಭಾನುವಾರ "ಹಿಂದೀ ದಿನ"ವಾದ್ದರಿಂದ ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರ ಸಭೆಯ ಉಪಾಧ್ಯಕ್ಷರಾದ ಶ್ರೀಮತಿ ಉಮಾಬಾಯಿ ಕುಂದಾಪುರದವರು ಅಗ್ರಸ್ಥಾನವನ್ನಲಂಕರಿಸಬೇಕಾಗಿತ್ತು. ಆದರೆ ಶ್ರೀಮತಿಯವರು ಕಾರಣಾಂತರದಿಂದ ಬರಲಿಲ್ಲವಾಗಿ, ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಈ ಪತ್ರವನ್ನು ಬರೆಯುವ ದಿನ "ಕನ್ನಡದ ದಿನ"ವಾದ್ದರಿಂದ ಕನ್ನಡದ ಆಚಾರ್ಯಪುರುಷರಾದ ಶ್ರೀ. ಬಿ. ಎಂ. ಶ್ರೀ. ಕಂಠಯ್ಯನವರು ಅಧ್ಯಕ್ಷತೆವಹಿಸಿದ್ದರು. ನಾಳೆ (೨-೫-೩೯)ಯ ದಿನ ಐದನೆ ಮತ್ತು ಕೊನೆಯ ದಿನ, ಆ ದಿನ ಮೈಸೂರು ಜಿಲ್ಲಾಧಿಕಾರಿಗಳಾದ ಮಿ॥ ಎಂ. ಜಿ ಮೇತ್ರಿಯವರು ಅಧ್ಯಕ್ಷಸ್ಥಾನವನ್ನು ವಹಿಸಿ, ಬಹುಮಾನ ವಿನಿಯೋಗಮಾಡುವರೆಂದೂ ಪ್ರೋಗ್ರಾಂ ಪ್ರಕಟವಾಯಿತು.

ವಸ್ತುಪ್ರದರ್ಶನ ಮತ್ತು ಗೃಹಕೃತ್ಯಕ್ಕೆ ಸೇರಿದ ನೋಟವನ್ನು, ರಾಜಧಾನಿಯವರೆಲ್ಲರೂ ನೋಡುವಂತೆ ಕಲ್ಪಿಸಿಕೊಟ್ಟ ಆ ಸದನದ ಅಧ್ಯಕ್ಷರಾದ ಮಿಸೆಸ್ ಬಿ. ಭಾಗಮ್ಮ ತಮ್ಮಯ್ಯ, ಮಿಸೆಸ್. ಕೆ. ಆರ್. ವೆಂಕಟಮ್ಮ, ಶ್ರೀಮತಿ ಎ. ಭಾಗೀರಥಮ್ಮ ಮತ್ತು ಮಿಸೆಸ್. ಸುಶೀಲಾಬಾಯಿ ಎಸ್. ನಾಗೇಶರಾವ್‌ರವರುಗಳಿಗೆ ಈ ಮೂಲಕ ವಂದನೆಗಳನ್ನರ್ಪಿಸಲಾಗಿದೆ.

New Kanara Swadeshi Laundry
GAMDEVI, BOMBAY.
A reliable house for dry cleaning deing all sorts of rich garments.

ದಿ ನ್ಯೂ ಕೆನರಾ ಸ್ವದೇಶಿ ಲಾಂಡ್ರಿ,
ಗಾಮದೇವಿ — ಮುಂಬಾಯಿ.
ಉತ್ತಮ ತರದ ಮಡಿ, ಉತ್ಕೃಷ್ಟ ರೀತಿಯ ರಂಗು—
ಇವುಗಳಿಗೆ ಪ್ರಸಿದ್ಧವಾದ ನಿಲಯ.

ವಿ. ಸೂ.—ಪರವೂರುಗಳಿಂದ ಉತ್ತಮ ಜರತಾರಿ ಸೀರೆ, ವಸ್ತ್ರ ಉಡುಗೆ ತೊಡಿಗೆಗಳ ರಂಗು ಹಾಕುವ, ಡ್ರೈಕ್ಲೀನಿಂಗ್ ವಗೈರೆ ಕಾರ್ಯವನ್ನು ಟಪ್ಪಾಲು ದ್ವಾರಾ ಸ್ವೀಕರಿಸಿ ಸಕಾಲದಲ್ಲಿ ತಯಾರಿಸಿ ತಲುಪಿಸುವೆವು.

ಎಮ್. ಆರ್. ಶೆಟ್ಟಿ, ಪ್ರೊಪ್ರೈಟರ್. G. V. Mahale. Manager.

ಮೇಘಮಾಲೆ

ನೀಲಗಗನ ಮೇಘಮಾಲೆ
ಚಲಿಸುತಿರುವುದು
ಹಸರು ಹೊಲದ ಮೇಲೆ ಹಾಯ್ದು
ಸಾಗುತಿರುವುದು
ತೆಂಕಲಿನ ಗಾಳಿ ಗೆಲುವ
ಬೀರುತಿರುವುದು
ಶಾಂತಿಸಮರ ಸಾರವನ್ನು
ತೋರುತಿರುವುದು

೨

ನೀಲಗಗನ ಮೇಘಮಾಲೆ
ಚಲಿಸುತಿರುವುದು
ಹೊಲದ ಮೇಲೆ ತ್ವರಿತದಿಂದ
ತೂರುತಿರುವುದು
ಪಡುವ ಕೆಂಪು ಕಾಂತಿಯನ್ನು
ಬೆಳಗುತಿರುವುದು
ನಿಸರ್ಗನಿಯಮ ನೇಮದಿಂದ
ನಲಿದಾಡುತಿರುವುದು

೩

ನೀಲಗಗನ ಮೇಘಮಾಲೆ
ಚಲಿಸುತಿರುವುದು
ಹಸುರುಹೊಲದ ಮಧುರವನ್ನು
ಹೀರಿ ಸೂಸುತಿರುವುದು
ನಿಶೆಯ ಛಾಯೆ ಸೆನಗುಭುವಿಯ
ಸೀರುತಿರುವುದು
ನೀಲಗಗನ ತಾರಚುಕ್ಕಿ
ಮಿನುಗುತಿರುವುದು

ಹೆಚ್. ಆರ್. ದಾಸ್,
ಬೆಂಗಳೂರು.

ಉಡುಪಿ

ಮುನಿಸಿಪಲ್ ಸಭೆ—ಸ್ಥಳೀಯ ಮುನಿಸಿಪಲ್ ಸಭೆಯು ತಾ. 29-4-39ನೇ ಶನಿವಾರ ಸಂಜೆ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಮುನಿಸಿಪಲ್ ಚೆಯರ್ಮೇನರು ಸರಕಾರೀ ವಕೀಲರೆಂದು (ಸದ್ರಿಯವರ ನೋಟಿಫಿಕೇಶನಾಗಿರುವುದರಿಂದ ಸರಕಾರಿ ಹುಕುಮಿನಂತೆ ಶ್ರೀಯುತರು ರಾಜೀನಾಮೆಕೊಡಬೇಕೆಂದು ಶ್ರೀ. ಎ. ಮಂಜುನಾಥರಾಯರು ಪಾಯಿಂಟ್ ಒಫ್ ಆರ್ಡರನ್ನು ಸೂಚಿಸಿ ರೂಲಿಂಗ್ ಕೇಳಿದರು. ಚೆಯರ್ಮೇನರು ಯಾವ್ದರೆ ನಿರಾಕರಿಸಿದರು. ರೇಡಿಯೋ ಕಟ್ಟಡದ ಖರ್ಚಿನಲ್ಲಿ ರೂಪಾಯಿ 1000/- ಕೊಡುವನಾಗಿ ಸೂಚಿಸಿದ ವ್ಯಾಪಾರಿಸ್ಥ ಶ್ರೀ. ಯು. ಎಲ್. ನಾರಾಯಣರಾಯರ ಪತ್ರ ಓದಲ್ಪಟ್ಟಿತು. ರೇಡಿಯೋ ಕಟ್ಟಡವನ್ನು ಭುಜಂಗಾಲಯವೆಂದೂ ಸಮೀಪದಲ್ಲಿರುವ ಪಾರ್ಕನ್ನು ಭುಜಂಗಪಾರ್ಕ್ ಎಂದೂ ಕರೆಯಬೇಕಾಗಿ ಪತ್ರದಲ್ಲಿ ಶರ್ತವಿತ್ತು. ಈ ವಿಷಯದಲ್ಲಿ ತುಂಬಾ ಚರ್ಚೆಯಾಗಿ ಕೊನೆಗೆ ಬಹುಮತದಿಂದ ಪಾಸಾಯಿತು. ಪ್ರೊಫೆಶನ್ ಟೇಕ್ಸ್ ರಿವಿಜನಿನ ಬಗ್ಗೆ ಒಬ್ಬ ಆಫೀಸರರ ಒಬ್ಬ ಗುಮಾಸ್ತರ ಮತ್ತು ಒಬ್ಬ ಜವಾನನ ಸ್ಯಾಂಕ್ಷನ್ ಮಾಡಲಾಯಿತು.

ವಸಂತೋತ್ಸವ—ಶ್ರೀಕೃಷ್ಣ ಮಠದಲ್ಲಿ ಪರ್ಯಾಯ ಶ್ರೀ ಫಲಿಮಾರು ಶ್ರೀಗಳವರಿಂದ ವಸಂತೋತ್ಸವವು ಬಹು ಯಶಸ್ವಿಯಾಗಿ ತಾ. 1-5-39 ರಲ್ಲಿ ಆಚರಿಸಲ್ಪಟ್ಟಿತು.

ಹರಿಕೀರ್ತನೆ—ಶ್ರೀಮದನಂತೇಶ್ವರ ದೇವಸ್ಥಾನದ ಒಳಾಂಗಣದಲ್ಲಿ ಕಳೆದ ಆದಿತ್ಯವಾರದಿಂದ ಮಂಗಳವಾರದ ವರೆಗೆ ಶ್ರೀ ಬೇಲೂರು ಕೇಶವದಾಸರು ಪಂಡಿತ ಪಾಮರರಿಗೆ ರಂಜನೆಯಾಗುವಂತೆ ಉಜ್ವಲ ಹರಿಕಥಾ ಕಾಲಕ್ಷೇಪಮಾಡಿದರು.

ಕಣಂಜಾರು—ಕೆಲಸಮಯದ ಹಿಂದೆ ಸ್ಥಾಪಿತವಾದ ಉರ್ದು ಎಲಿಮೆಂಟರಿ ಶಾಲೆಯು ಮಂಜೂರುಪಡೆದಿದ್ದು ಸುತ್ತಮುತ್ತಲಿನ 5-6 ಗ್ರಾಮಗಳ ಕೇಂದ್ರದಲ್ಲಿದೆ. ಶಾಲೆಯ ಉಕ್ಸ್ಪೆಕ್ಟರರಾದ ರೆ. ಫಾದರ್ ಎಲ್ಲಿಯಂ ಲೂಯಿಸರ ಪರಿಶ್ರಮವು ಅಭಿನಂದನಾರ್ಹವಿದೆ.

ಕಟಪಾಡಿ—ಕಳೆದ ತಾ. 26ರಲ್ಲು ಸಾಧಾರಣ ಹತ್ತೂವರೆ ಗಂಟೆಗೆ ಕಟಪಾಡಿ ಸಮೀಪದ ಹೊಳೆಯಲ್ಲಿ ಈಜಾಡಹೋದ ನಾಲ್ವರು ತರುಣರಲ್ಲಿ ಕೊಗ್ಗಣ್ಣ ನಾಯ್ಕನೆಂಬವರು ಆಕಸ್ಮಾತ್ತಾಗಿ ನೀರಲ್ಲಿ ಮುಳುಗಿ ತೀರಿಹೋದರೆಂಬ ವಿಷಾದಕರ ವಾರ್ತೆ ಬಂದಿರುತ್ತದೆ.

ಬ್ರಹ್ಮಾವರ—ಇಲ್ಲಿ ೧॥ ಮೈಲು ವಿಸ್ತೀರ್ಣದೊಳಗೆ 13 ಶಾಲೆಗಳಿದ್ದರೂ ಇತ್ತೀಚೆಗೆ ರೋಮನ್ ಕೆಥೋಲಿಕರು ಹೊಸದಾಗಿ ತೆರೆದ ಹುಡುಗಿಯರ ಶಾಲೆಯ ಅಂಗೀಕಾರವನ್ನು ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲಿನವರು ರದ್ದು ಪಡಿಸಿದ್ದರು. ತಿರುಗಿ ಅಂಗೀಕಾರಕ್ಕಾಗಿ ಡೈರೆಕ್ಟರರ ಸೂಚನೆ ಮೇರೆಗೆ ಪುನರಾಲೋಚನೆ ಬಗ್ಗೆ ಕೌನ್ಸಿಲಿಗೆ ಇದೇ ತಾ 20-4-39 ರಲ್ಲಿ ಬಂದಲ್ಲಿ ಶಾಲೆಗೆ ಇರುವ ಆಕ್ಷೇಪಣೆಯ ಅರ್ಜಿಗಳನ್ನು ಡಿಪಾರ್ಟ್‌ಮೆಂಟಿನವರು ಬರೆದ ರಿಮಾರ್ಕುಗಳನ್ನು ಚೆನ್ನಾಗಿ ಪರಿಶೀಲಿಸಿ ಅಂಗೀಕಾರದ ಅರ್ಜಿಯನ್ನು ತಳ್ಳಿಹಾಕಿ ಹಳ್ಳಿಯ ಇತರ ಶಾಲೆಗಳ ಏಳ್ಗೆಯನ್ನೂ ಗ್ರಾಮದ ಐಕ್ಯಮತ್ಯವನ್ನೂ ಉಳಿಸಿದರು. ಇದಕ್ಕಾಗಿ ಕೌನ್ಸಿಲಿಗೆ ಆಭಾರವನ್ನು ಬ್ರಹ್ಮಾವರ ಕೇಂದ್ರ ಕಾಂಗ್ರೆಸ್ ಕಮಿಟಿಯವರು ತಿಳಿಸುತ್ತಾರೆ.

ಬಾರಕೂರು—ತಾ 29-4-39ರಲ್ಲಿ ಸ್ಥಳೀಯ "ಜಯಕರ್ನಾಟಕ ಕ್ಲಬ್ಬಿ"ನ ಆಶ್ರಯದಿಂದ ಶ್ರೀ. ಕೋಟಿಕೇರಿ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ, ಮೂಲ್ಕಿಯ ಶ್ರೀ. ಎಸ್. ಎನ್. ಹರಿದಾಸ್ ಇವರು "ಭದ್ರಾಚಲ ರಾಮದಾಸ" ಎಂಬ ಹರಿಕಥೆಯನ್ನು ಬಹಳ ಉತ್ತಮವಾಗಿ ನಡೆಸಿದರು.

ಪ್ರೇಮ ಪ್ರಕಟನಾಲಯದ
ಎಲ್ಲಾ ಪುಸ್ತಕಗಳು ಬಂದಿವೆ.
ನವಭಾರತ ಬುಕ್‌ಡಿಪೊ, ಉಡುಪಿ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೊನೊಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟು ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು. ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ ರೋಡ್, ಮುಂಬಯಿ ೪

Sole Manufacturer DR. D. N. JASANI, Vitalbhai Patel Road, BOMBAY 4.

THE
Canara Banking Corporation, Udipi, Ltd.
(Incorporated in British India.)
ESTD. 1906

THREE YEARS' CASH CERTIFICATES
bearing interest at 4% p. a. in denominations of Rs 50/-, 100/-, 500/-, 1,000/- & 5000/- are now issued at all our Branches.

For particulars call at or write to any of our nearest Branches.

ನವಯುಗ

ಉಡುಪಿ, ಗುರುವಾರ, ತಾ. ೨-೩-೩೯

ಕಲ್ಕತ್ತಾ ತೀರ್ಮಾನದ ಪರಿಣಾಮವೇನು?

ಕಳೆದ ತಾ. ೨೯ರಲ್ಲಿ ಕಲ್ಕತ್ತೆಯಲ್ಲಿ ಸೇರಿದ ಅಖಿಲಭಾರತ ರಾಷ್ಟ್ರಸಮಿತಿಯಲ್ಲಿ ಶ್ರೀ. ಸುಭಾಷಚಂದ್ರಭೋಸರು ಅಧ್ಯಕ್ಷಪದಕ್ಕೆ ತನ್ನ ರಾಜೀನಾಮೆಯನ್ನೊಪ್ಪಿಸಿದರು. ಪಂಡಿತ ನೆಹರುಗಳೇ ಮೊದಲಾದವರ ಸಂಧಾನಸೂಚನೆಗಳು ಹಿಂದೆಗೆಯಲ್ಪಟ್ಟು ಬಾಬುರಾಜೇಂದ್ರ ಪ್ರಸಾದರು ಒಮ್ಮತದಿಂದ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಪಂಡಿತ ಜವಾಹರಲಾಲರ ಹೊರತು ಹಳೇ ವರ್ಕಿಂಗ್ ಕಮಿಟಿಯ ಮೆಂಬರರೇ ಇರುವ ವರ್ಕಿಂಗ್ ಕಮಿಟಿಯ ರಚನೆಯಾಗಿರುವುದು. ಬಂಗಾಳದಿಂದ ಭೋಸ ಸಹೋದರರ ಬದಲಿಗೆ ಗಾಂಧೀ ಪಕ್ಷೀಯ ಮೆಂಬರರನ್ನೇ ಕಾರ್ಯಕಾರೀ ಸಮಿತಿಗೆ ಸೇರಿಸಿಕೊಳ್ಳಲಾಗಿದೆ. ಅಂತು ತ್ರಿಪುರಿ ಅಧ್ಯಕ್ಷಚುನಾವಣೆಯಿಂದ ಆರಂಭವಾಗಿ ಈ ತನಕವೂ ಸುರುಳಿಗಟ್ಟುತ್ತಾ ಬಂದಿದ್ದ ಕಾಂಗ್ರೆಸ್ ಸಮಸ್ಯೆಯೊಂದು ಈ ರೀತಿ ತೀರ್ಮಾನಹೊಂದುವಂತಾಯಿತು. ಈ ವಿವಾದದ ವಿಶ್ವವ್ಯಾಪೀ ರೂಪಕ್ಕೆ ಬೆದರಿ ಹೋಗಿದ್ದ ನಾವು ಆದರ ಇತ್ಯರ್ಥಕ್ಕಾಗಿ ಆನಂದಿಸುವಾಗ, ಆ ಕುರಿತು ಪರ್ಯಾಲೋಚಿಸದಿರಲಾಗುವುದಿಲ್ಲ. ಮೊದಲನೆಯದಾಗಿ ಕಾಂಗ್ರೆಸ್ ಪ್ರತಿನಿಧಿಗಳ ಮತದಿಂದಲೇ ಅಧ್ಯಕ್ಷತನಕ್ಕೇರಿದ್ದ ಸುಭಾಷರು ಸ್ವೇಚ್ಛೆಯಿಂದ ರಾಜಿನಾಮೆಕೊಡುವಂತಾದುದು ನಿಜವಾಗಿಯೂ ಶೋಚನೀಯ. ಈ ದುಃಖಕರ ಘಟನೆಯ ಕಾರಣಗಳ ಪ್ರಾಮುಖ್ಯತೆ ಕೂಡ ಸಾಲದೆಂದು ನಮ್ಮ ಅಭಿಪ್ರಾಯ. ಆದರೆ ಕಲ್ಕತ್ತದಲ್ಲಿ ಕೇಂದ್ರೀಕೃತವಾದ ಕಾಂಗ್ರೆಸ್ ಶಕ್ತಿಯೆಲ್ಲಾ ಈ ರಾಜಿನಾಮೆಯ ಕಡೆಗೇನೇ ಒತ್ತಲ್ಪಟ್ಟಿತು; ಸುಭಾಷರದಕ್ಕೆ ನಿರ್ವಾಹವಿಲ್ಲದೆ ಒಳಗಾಗಬೇಕಾಯಿತು, ನಿಯಮಬಾಹಿರವಾದುದೇನೂ ನಡೆಯಲಿಲ್ಲವಾದರೂ, ಒಕ್ಕಟ್ಟಿನ ಮಹದಗತ್ಯವಿರುವ ಇಂದಿನ ಪರಿಸ್ಥಿತಿಗೆ ತಕ್ಕಂತೆ ಆಗಬೇಕಾದುದು ಆಗಲಿಲ್ಲವೆಂಬುದು ವ್ಯಸನಕರ.

ತ್ರಿಪುರಿ ನಿರ್ಣಯದಂತೆ, ಗಾಂಧಿಯವರ ಅಭಿಪ್ರಾಯಕ್ಕನುಸಾರವಾಗಿ ವರ್ಕಿಂಗ್ ಕಮಿಟಿಯನ್ನು ರಚಿಸುವ ಕಾರ್ಯವು ಕಾಂಗ್ರೆಸ್ ಅಧ್ಯಕ್ಷರದಿತ್ತು. ಆದರೆ ತಮ್ಮೊಳಗಿನ ಭಿನ್ನಾಭಿಪ್ರಾಯವನ್ನು ಲಕ್ಷ್ಯಿಸಿ ಗಾಂಧೀಜೀಯವರು ಮೆಂಬರರ ಹೆಸರನ್ನು ಸೂಚಿಸಲು ಒಪ್ಪಲಾರದೆ ಹೋದರು. ಗಾಂಧೀ- ಭೋಸರನ್ನು ಬೇರ್ಪಡಿಸಿದ ವಿಷಯಗಳು ಎರಡೇ. ವರ್ಕಿಂಗ್ ಕಮಿಟಿಯಲ್ಲಿ ಬಲಪಕ್ಷೀಯರೇ ಇರಬೇಕೆಂದು ಗಾಂಧಿಯವರ ಮತ; ರಾಜಿನಾಮೆಯಿತ್ತಿದ್ದ ಹನ್ನೆರಡು ಮೆಂಬರರು ಅಗತ್ಯವಿರಬೇಕಾದರೂ ಇಬ್ಬರಿಗಿಂತ ಹೆಚ್ಚಿಗೆ ಎಡಪಕ್ಷೀಯ ಮೆಂಬರನ್ನು ಸೇರಿಸಿಕೊಳ್ಳಬಾರದೆಂದು ... ಎಡಪಂಥದವರನ್ನೂ ಸೇರಿಸಿಕೊಳ್ಳಬೇಕೆಂದು ಭೋಸರ ಬಯಕೆ. ಇದು ಮೊದಲನೆಯ ವಿಷಯ. ಎರಡನೆಯದಾಗಿ ವರ್ಕಿಂಗ್ ಕಮಿಟಿಯು ಮಹಾತ್ಮರ ಹೊಣೆಗಾರಿಕೆಯ ಮೇಲೆ ರಚಿಸಲ್ಪಟ್ಟಿತೆಂದು ಜಾಹೀರು ಮಾಡತಕ್ಕದ್ದೆಂದು ಭೋಸರೂ, ಅದು ಅಧ್ಯಕ್ಷರ ಅಭಿಪ್ರಾಯಕ್ಕನುಸರಿಸಿ ರೂಪುಗೊಂಡಿತೆಂದಾಗಬೇಕೆಂದು ಮಹಾತ್ಮರೂ ಹಟತೊಟ್ಟರು. ಈ ವಾದದ ತಾತ್ಪರ್ಯವಿಷ್ಟೇ. ವರ್ಕಿಂಗ್ ಕಮಿಟಿಯ ಅನುಪ್ರಾಯದೊಡನೆ ತನ್ನ ಸ್ವತಂತ್ರಾಭಿಪ್ರಾಯವನ್ನು ಹೊಂದಿಸಿಕೊಂಡು ನಡೆಯಲು ಅಧ್ಯಕ್ಷರು ಬದ್ಧರೆಂಬುದನ್ನು ಖಚಿತಪಡಿಸುವ ಅಗತ್ಯ ಮಹಾತ್ಮಾ ಗಾಂಧಿಯವರಿಗಿತ್ತು; ತನ್ನಲ್ಲಿ ಭಿನ್ನಾಭಿಪ್ರಾಯವಿದ್ದರೂ ಕಾಂಗ್ರೆಸ್ ನಿರ್ಣಯದಂತೆ ಗಾಂಧಿಯವರ ತೀರ್ಮಾನಕ್ಕೊಳಗಾಗಿ ವರ್ತಿಸಬೇಕಾಯಿತೆಂಬುದನ್ನು ತೋರಿಸುವ ಛಲವು ಭೋಸರದಾಗಿತ್ತು. ಒಂದೇ ಮಾತಿನಲ್ಲಿ ಹೇಳುವುದಾದರೆ ಗಾಂಧಿಯವರು ಭೋಸರನ್ನು ಮತಾಂತರಗೊಳಿಸಲಿಚ್ಛಿಸುವಾಗ ಎರಡನೆಯವರು ತನ್ನ ಪಂಥವನ್ನೇ ತಾನು ಸಮರ್ಥಿಸಿಕೊಂಡರೆನ್ನಬಹುದು. ಆದರೆ ಇದು ಎರಡನೆಯ ವಿಷಯ. ವರ್ಕಿಂಗ್ ಕಮಿಟಿಯ ಮೆಂಬರರ ನೇಮಕದ ಕುರಿತಿದ್ದ ಆದಿಯ ಭಿನ್ನಾಭಿಪ್ರಾಯವನ್ನೇ ಒಂದುಗೂಡಿಸಲಾಗಲಿಲ್ಲ. ಗಾಂಧೀ ಭೋಸರೊಳಗಿನ ಸಂಭಾವಣೆಯು ಅಪಜಯ ಹೊಂದಿದುದು ಈ ದೆಸೆಯಿಂದ. ಆದರೆ ಎ. ಐ. ಸಿ. ಸಿ. ಯ ಮುಂದೆ ಪಂಡಿತ ನೆಹರುಗಳು, ಭೋಸರು ರಾಜಿನಾಮೆಯನ್ನು ಹಿಂತೆಗೆದುಕೊಂಡು ಎರಡು ಸ್ಥಾನಗಳಿಗೆ ತನ್ನಿಚ್ಛೆಯಂತೆ ಎಡಪಕ್ಷೀಯರನ್ನು ನೇಮಿಸಬಹುದೆಂದು ಸೂಚನೆ ತಂದಾಗ ಭೋಸರು ಎರಡನೇ ಕಾರಣದಿಂದಾಗಿ ಅದಕ್ಕೊಪ್ಪಿಗೆ ಕೊಡದೆ ಹೋದರು. ಈ ಸೂಚನೆಯ ಕುರಿತಾದರೂ ಗಾಂಧೀ ಪಕ್ಷೀಯರ ಅಭಿಪ್ರಾಯವೇನೆಂಬುದನ್ನು ತಿಳಿಯಲು ಅಲ್ಲಿ ಅವಕಾಶವಿರಲಿಲ್ಲ. ಹೀಗೆ ಎರಡು ವಿಷಯಗಳು ಎಳೆದಾಟವನ್ನು ಹುಟ್ಟಿಸಿದವು. ಎರಡರ ಕುರಿತಿದ್ದ ವಿರುದ್ಧಾಭಿಪ್ರಾಯಗಳು ಕೊನೆಯವರೆಗೂ ಹಾಗೆಯೇ ಉಳಿದು ಅಧ್ಯಕ್ಷರು ರಾಜಿನಾಮೆ ಕೊಡುವಂತಾಯಿತು.

ದೇಶಹಿತದ ದೃಷ್ಟಿಯಿಂದ ಹಾಗೂ ಕಾಂಗ್ರೆಸಿನ ಸದ್ಯದ ಪರಿಸ್ಥಿತಿಯಲ್ಲಿ ಈ ಎರಡು ಪ್ರಶ್ನೆಗಳಿಗೆ ಇಷ್ಟೊಂದು ಪ್ರಾಮುಖ್ಯತೆಯಿದೆಯೇ? ಪಂಡಿತ ಜವಾಹರಲಾಲರು ಅಧ್ಯಕ್ಷರಾದೊಡನೆ ವರ್ಕಿಂಗ್ ಕಮಿಟಿಯ ಮೂರು ಸ್ಥಾನಗಳನ್ನು ಸಮತಾವಾದಿ ಮೆಂಬರರಿಗೆ ಕೊಟ್ಟಿದ್ದರು; ಮರುವರ್ಷ ಸಮತಾವಾದಿಗಳೇ ಕಾರ್ಯಕಾರಿ ಸಮಿತಿಯಲ್ಲಿರಲು ಒಪ್ಪಲಿಲ್ಲ. ಹೀಗಿರುವಾಗ ಎರಡುಮೂರು ಸ್ಥಾನಗಳನ್ನು ಎಡಬಲಪಕ್ಷೀಯರಿಗೀಯುವದರಿಂದ ಕಾಂಗ್ರೆಸಿಗಾವ ಹಾನಿಯೊದಗುತ್ತಿತ್ತೋ ಅದು ನಮ್ಮ ಊಹೆಗೆ ಸಿಲುಕದ ವಿಷಯ. ಬದಲಾಗಿ ಅಂತಹ ಮಿಲನದಿಂದ ದೇಶದ ಭಿನ್ನಾಭಿಪ್ರಾಯಗಳ ಪ್ರತಿನಿಧಿತ್ವವನ್ನು ಹೊಂದಿ, ಕಾಂಗ್ರೆಸು ಇನ್ನಷ್ಟು ಬಲಹೊಂದುತ್ತಿತ್ತೆಂದು ನಮ್ಮ ಅಭಿಪ್ರಾಯ. ಕಾಂಗ್ರೆಸಿನೊಳಗೆ ಎಡಬಲಪಕ್ಷವೆಂಬ ಬೊಬ್ಬೆಯೆದ್ದುದಕ್ಕಾಗಿ ಬಲಪಕ್ಷೀಯ ಧುರೀಣರಷ್ಟು ಜಿಗುಪ್ಸೆಯನ್ನು ಪ್ರದರ್ಶಿಸಿದವರು ಬೇರಾರೂ ಇಲ್ಲ. ಇಂದು ಆ ಭೇದಭಾವವನ್ನು ಕಾರ್ಯತಃ ಸಾಧಿಸಿತೋರಿಸಿದುದರಲ್ಲಿ ಹೆಚ್ಚಿನ ಜವಾಬ್ದಾರಿಯೂ ಅವರದೇ. ಇದಕ್ಕಾಗಿ ನಾವು ವಿಷಾದಿಸುತ್ತೇವೆ.

ಎರಡನೆಯ ವಿಷಯವಾದ ಹೊಣೆಗಾರಿಕೆಯ ಚೌಡಾಟವು ಗಾಂಧೀ–ಭೋಸರೊಳಗೆ ನಡೆದುದು ಆಶ್ಚರ್ಯಕರವಿದ್ದು, ಹಾಗೂ ಶೋಚನೀಯವಿದೆ. ಮುಂದಕ್ಕೊದಗಬಹುದಾದ ಘರ್ಷಣೆಯ ಕುರಿತು ತೆಗೆದುಕೊಂಡ ಮುಂಜಾಗ್ರತೆಯಿದು ಎಂಬುದನ್ನು ತಿಳಿಯಲು ಕಷ್ಟವಿಲ್ಲ; ಆದರೆ ಈ ಅಪನಂಬಿಕೆಯನ್ನು ಪರಿಹರಿಸಿಕೊಳ್ಳಲಾಗಲಿಲ್ಲವೆಂಬುದು ನಿರಾಶಾಜನಕ ಸಂಗತಿ. ಪಂಡಿತ ನೆಹರುಗಳ ಸೂಚನೆಗೆ ಇದೊಂದೇ ತಡೆಯಾಗಿ ನಿಂತಿತು. ಶ್ರೀ. ಸು. ಭಾಸಭೋಸರು ಈ ಸೂಚನೆಯನ್ನು ವಿರೋಧಿಸಿ, ಕಾಂಗ್ರೆಸ್ ಕಾರ್ಯಪಥವಲ್ಲಾದರೂ ತನ್ನ ಮಟ್ಟಿಗೆ ತನ್ನ ಪಂಥವು ಪಡೆಯಾಗಬಲ್ಲುದೆಂಬುದನ್ನು ಪ್ರದರ್ಶಿಸಿದುದು ವಿಹಿತವಲ್ಲ.

ಅಂತು ಎರಡು ಪಕ್ಷಗಳೊಳಗೆ ಒಕ್ಕಟ್ಟನ್ನುಂಟುಮಾಡುವುದರಲ್ಲಿ ಕಲ್ಕತ್ತದ ಸಭೆಯು ಜಯಶೀಲವಾಗಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಒಮ್ಮತವು ಅಸಾಧ್ಯವಾದಾಗ ಬಹುಮತದ ಅಭಿಪ್ರಾಯವೇ ಮಾನ್ಯವಾಗತಕ್ಕದ್ದು. ಆ ರೀತಿಯಿಂದ ದೇಶಕ್ಕೊಂದು ಹಾದಿಯನ್ನು ಕಾಂಗ್ರೆಸು ತೋರಿಸಿಕೊಟ್ಟಿದೆ. ಪಂಡಿತ ಜವಾಹರಲಾಲರಂತೆ, ಬಲಗೊಳ್ಳುತ್ತಾ ಬರುತ್ತಿರುವ ರಾಷ್ಟ್ರಸಭೆಯಲ್ಲಿ ಭಿನ್ನಾಭಿಪ್ರಾಯಗಳಿದ್ದು ತಿಕ್ಕಾಟದಲ್ಲಿ ಪರಿಣಮಿಸುವದು ಆಶ್ಚರ್ಯವಲ್ಲ. ಅವೆಲ್ಲಾ ಹಾರಿಹೋಗುವ ತೂತಕುಗಳಲ್ಲದೆ ಕಾಂಗ್ರೆಸಿನ ಧ್ಯೇಯಸಾಧನೆಗಳನ್ನು ಹಾರಿಸಿಕೊಂಡು ಹೋಗುವಂಥವುಗಳಲ್ಲ. ದೇಶದ ಧುರೀಣತ್ವವಿಂದು ಈ ವರಿಗಣ ಮುಖಂಡರ ಕೈಯಲ್ಲಿಯೇ ಇದೆ. ದೇಶಹಿತದ ಭದ್ರತೆಯೆಲ್ಲಾಗಲೀ ಕಾರ್ಯತತ್ಪರತೆಯಲ್ಲಾಗಲೀ ಅನುಮಾನಕ್ಕವಕಾಶವಿಲ್ಲ. ದೇಶದ ನವಜೀವನವನ್ನು ಗಮನಿಸಿ, ಸಾಮ್ರಾಜ್ಯಶಾಹೀ ವಿರೋಧಿಶಕ್ತಿಗಳೆಲ್ಲವನ್ನೂ ಜತೆಗೂಡಿಸಿಕೊಂಡು ದೇಶವನ್ನು ಪೂರ್ಣಸ್ವಾತಂತ್ರ್ಯದ ಗುರಿಯಕಡೆಗೆ ಇಂದಿನ ಕಾಂಗ್ರೆಸ್ ಅಧಿಕಾರಿಗಳು ಜಯಶೀಲವಾಗಿ ಮುನ್ನಡೆಸುವರೆಂದು ನಮ್ಮ ಭರವಸೆ.

ಇಂಡಿಯಾ ಕಾನೂನಿಗೊಂದು ತಿದ್ದುಪಡಿ

ಭಾರತ ಸಚಿವರಾದ ಲೋರ್ಡ್ ಜೆಟ್ಲೆಂಡರು ಸುಧಾರಣಾ ಕಾನೂನಿನ ೨ನೇ ಪ್ರಕರಣಕ್ಕೆ ತಂದ ತಿದ್ದುಪಡಿ ಸೂಚನೆಯು ಪಾರ್ಲಿಮೆಂಟಿನ ಮುಂದಿರುವದು. ಈ ತಿದ್ದುಪಡಿಯಂತೆ ಪ್ರಾಂತಿಕ ಸರಕಾರಗಳಿಗೆ ದೊರೆತ ಅಧಿಕಾರಕ್ಕೂ ಯುದ್ಧಕಾಲದಲ್ಲಿ ಲೋಪಬಟ್ಟಲಿದೆ. ಪ್ರಾಂತಿಕ ಅಧಿಕಾರಿಗಳಿಗೆ ಕೊಡಲ್ಪಟ್ಟ ಅಧಿಕಾರವನ್ನು ಅಪಹರಿಸಿ ವೈಸರಾಯರ ಕಾರ್ಯಕಾರೀ ಸಮಿತಿಗಳನ್ನೀಯುವುದೇ ಈ ತಿದ್ದುಪಡಿಯ ತಿರುಳು. ಈ ಅಪಹಾರವು ಯುದ್ಧಕಾಲದಲ್ಲಿ ಮಾತ್ರ ನಡೆಯುವುದು. ದೇಶದಲ್ಲಿ ಏಕಾಗ್ರತೆಯನ್ನು ಉಂಟುಮಾಡುವ ಯುದ್ಧಾನುಕೂಲತೆಗಾಗಿಯಲ್ಲವೆ ಇತರ ಸಂದರ್ಭವಲ್ಲಾದರೆ ಹಾನಿಪಕ್ಕೆಂದಿಗೂ ಸಮ್ಮತಿಸುವವನಲ್ಲವೆಂದು ಲೋರ್ಡ್ ಜೆಟ್ಲೆಂಡರ ಉಪಚಾರೋಕ್ತಿ. ಅಂತಹ ಅಗತ್ಯ ಸಂದರ್ಭಗಳಲ್ಲಿ ತಕ್ಕ ಕಾರ್ಯ ಕೈಕೊಳ್ಳುವ ಅಧಿಕಾರವು ಇಂಡಿಯಾ ಆಕ್ಟಿನ ಫೆಡರಲ್ ವಿಭಾಗದ ೧೦೨ನೇ ಪ್ರಕರಣದಲ್ಲಿ ಮೊದಲೇ ಸೂಚಿಸಲ್ಪಟ್ಟಿದೆ. ಆ ಸೂಚನೆಯಂತೆ ಆ ಅಧಿಕಾರವು ಜನರಿಂದ ಚುನಾವಣೆ ಹೊಂದಿದವರಿಗೆ ದೊರೆಯತಕ್ಕದಲ್ಲದೆ ಜನರಿಗೆ ಜವಾಬ್ದಾರಿಯಿಲ್ಲದ ಎಗ್ಸಿಕ್ಯೂಟಿವ್ ಸಮಿತಿಗಲ್ಲ. ಆದರೆ ಇಂದಿನ ತಿದ್ದುಪಡಿಯಿಂದ ಸರ್ವಾಧಿಕಾರವು ಪ್ರಕೃತ ತೀರಾ ಬೇಜವಾಬ್ದಾರಿಯುಳ್ಳದ್ದೂ, ಫೆಡರೇಶನ್ ಬಂದ ಮೇಲೆ ಸ್ವಲ್ಪಮಾತ್ರ ಜನರಿಗೆ ಜವಾಬ್ದಾರಿಯುಳ್ಳದ್ದೂ ಆದ ಕೇಂದ್ರ ಕಾರ್ಯಕಾರೀ ಸಮಿತಿಗೆ ಹೋಗುತ್ತದೆ. ಇದರಿಂದ ಯುದ್ಧಕಾಲದಲ್ಲಿ ಹಿಂದೀಯರ ಅಭಿಪ್ರಾಯಕ್ಕಾವ ಸ್ಥಾನವೂ ದೊರೆತಂತಾಗುವುದು. ಆದ್ದರಿಂದಲೇ ಕಾಂಗ್ರೆಸ್ ಪ್ರಾಂತ್ಯಗಳೆಲ್ಲಾ ಈ ತಿದ್ದುಪಡಿಯನ್ನು ಖಂಡಿಸಿವೆ. ಭಾರತಕ್ಕೆ ದೊರೆತ ಪ್ರಾಂತಿಕ ಸ್ವಾತಂತ್ರ್ಯದಲ್ಲಿ ಹೆಸರಿಗೆ ಮಾತ್ರವಿರುವ ಅಲ್ಪಸ್ವಲ್ಪ ಅಧಿಕಾರವೂ ಕಾಲಬಂದಾಗ ಬ್ರಿಟಿಷರ ಕೈಸೇರಬೇಕೆಂಬುದೇ ಇದರ ಅರ್ಥ!

ಭಾವೀ ಯುದ್ಧವೂ ಭಾರತವೂ

ಸಾಮ್ರಾಜ್ಯದ ರಕ್ಷಣೆಗಾಗಿ ಬ್ರಿಟಿಷರು ಹೂಡಬಹುದಾದ ಯಾವ ಯುದ್ಧದಲ್ಲಿಯೂ ಭಾರತವು ಭಾಗವಹಿಸುವಂತಿಲ್ಲನೆಂದು ಕಾಂಗ್ರೆಸಿನ ಸುಸ್ಪಷ್ಟ ನಿರ್ಧಾರವಿದೆ. ಸಾಮ್ರಾಜ್ಯಕ್ಕಾಗಿ ಹೊರತು ಬ್ರಿಟನು ಯುದ್ಧಹೂಡುವಂತಿಲ್ಲ; ಆ ಯುದ್ಧದಲ್ಲಿ ಭಾರತದ ಬೆಂಬಲದೊರೆಯದೆ ಗತ್ಯಂತರವಿಲ್ಲವೆಂಬುದೂ ಅಷ್ಟೇ ಸ್ಪಷ್ಟವಾಗಿ ತಿಳಿಯತಕ್ಕ ಸಂಗತಿ. ಹೀಗೆ ಬ್ರಿಟನು ಭಾರತಗಳೊಳಗೆ ಪರಿಣಾಮಕಾರೀ ತಿಕ್ಕಾಟವೇಳುವ ಸಂದರ್ಭವೆಂದರೆ ಯುದ್ಧಾರಂಭದ ಕಾಲ. ಆದ್ದರಿಂದ ಬ್ರಿಟಿಷ್ ಸರಕಾರವು ಇಂಡಿಯಾ ಆಕ್ಟಿನ ತಿದ್ದುಪಡಿಯನ್ನು

(೧೦ನೇ ಪುಟ ನೋಡಿರಿ.)

ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಶ್ರೀ ಸುಭಾಸ ಭೋಸರ ರಾಜಿನಾಮೆ!

ರಾಜೇಂದ್ರ ಪ್ರಸಾದರು ರಾಷ್ಟ್ರಪತಿಯಾದರು

ಕಲ್ಕತ್ತದಲ್ಲಿ ರಾಷ್ಟ್ರಸಭಾ ಸಮಿತಿಯು ಸಭೆ

ಮೊದಲೇ ನಿರ್ಣಯಿಸಲ್ಪಟ್ಟಂತೆ ಎ. ಐ. ಸಿ. ಸಿ. ಯು ಸಭೆಯು ಕಲ್ಕತ್ತದಲ್ಲಿ ಎಪ್ರಿಲ್ ತಾ. 28ಕ್ಕೆ ಸೇರಿತು. ತಿಕ್ಕಾಟದ ವಿಷಯವಾಗಿದ್ದ ವರ್ಕಿಂಗ್ ಕಮಿಟಿ ರಚನೆಯೇ ಆ ಸಭೆಯು ಪ್ರಾಮುಖ್ಯ ವಿಷಯವಾಗಿತ್ತು. ಈ ಕುರಿತು ಗಾಂಧೀ ಭೋಸರೊಳಗೆ ಸುದೀರ್ಘ ಸಂಭಾಷಣೆ, ಮತ್ತು ಇತ್ತಂಡದ ಧುರೀಣರೊಳಗೆ ಮಾತುಕತೆ ನಡೆದರೂ ನಿಷ್ಫಲವಾಗಿ ಶ್ರೀ ಭೋಸರು ತನ್ನ ರಾಜೀನಾಮೆಯನ್ನಿತ್ತರು. ಬಾಬು ರಾಜೇಂದ್ರ ಪ್ರಸಾದರು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರ ಸರ್ವಸಮ್ಮತಿಯಿಂದ ಚುನಾಯಿಸಲ್ಪಟ್ಟರು.

ಗಾಂಧಿಯವರ ಆಗಮನ

ಮಹಾತ್ಮಾ ಗಾಂಧಿಯವರು ರಾಜಕೋಟೆಯಿಂದ ತಾ. 27ರಲ್ಲಿ ಕಲ್ಕತ್ತೆಗೆ ಆಗಮಿಸಿದರು. ಹೌರಾ ರೈಲ್ವೇ ಸ್ಟೇಶನಿನಿಂದ ಐದು ಮೈಲು ದೂರದ ಸ್ಟೇಶನೊಂದರಲ್ಲಿ ಅವರಿಳಿಯುವ ಏರ್ಪಾಡು ನಡೆದಿತ್ತಾದರೂ, ಜನಸಂದಣಿಯ ಗೊಂದಲವನ್ನು ತಪ್ಪಿಸುವದಕ್ಕಾಗಿ ಅವರು ಕೊನೆಗೆ ಹೌರಾಸ್ಟೇಶನಿನಲ್ಲಿ ಇಳಿಯಬೇಕಾಯಿತು. ರಾಷ್ಟ್ರಪತಿ ಭೋಸರವರನ್ನು ಇದಿರ್ಗೊಳ್ಳಲು ಹೋಗಿದ್ದರು. ಅಲ್ಲಿಯೂ ಸಾವಿರಗಟ್ಟಳೆ ಜನರು ನೆರೆದು, ಮಹಾತ್ಮರು ರೈಲಿನಿಂದ ಇಳಿಪೊಡನೆಯೇ ದರ್ಶನಾಪೇಕ್ಷೆಯಿಂದ ನುಗ್ಗಿನುಸಿಯುವ ಜನರ ಗೊಂದಲವನ್ನು ತಡೆಗಟ್ಟಲು ಸ್ವಯಂ ಸೇವಕರಿಂದಾಗಲಿಲ್ಲ. ಶ್ರೀ ಭೋಸರು ಸ್ವತಃ ಜನರ ನಡುವೆ ನುಗ್ಗಿ ಸ್ವಯಂ ಸೇವಕರಿಗೆ ನೆರವಾದರು. ಗಾಂಧಿಯವರಲ್ಲಿಂದ ಸೋದೇಪುರ ಎಂಬಲ್ಲಿಗೊಯ್ಯಲ್ಪಟ್ಟು ಅಲ್ಲಿ ಶ್ರೀ ಭೋಸರೊಡನೆ ಸಂಧಾನದ ಮಾತುಕತೆಗಾರಂಭವಾಯಿತು. ಆ ದಿನ ಎರಡುಬಾರಿ ಸಂಭಾಷಣೆ ನಡೆದು ಮರುದಿನಕ್ಕೆ ಮುಂದರಿಸಲಾಯಿತು. ಪಂಡಿತ ನೆಹರುಗಳೂ ಸ್ಟೇಶನಿನಲ್ಲಿ ಸಂಭ್ರಮದಿಂದ ಸ್ವಾಗತೀಕರಿಸಲ್ಪಟ್ಟು, ಗಾಂಧೀ ಭೋಸ್ ಸಂಭಾಷಣೆಯಲ್ಲಿ ಭಾಗವಹಿಸಿದರು.

ಸಂಧಾನದ ಸಾರ್ವತ್ರಿಕ ಸಂಭಾಷಣೆ

ಸರ್ವ ಸಮ್ಮತಿಯ ತೀರ್ಮಾನವನ್ನು ಹೊಂದುವುದಕ್ಕಾಗಿ ಗಾಂಧೀ ಭೋಸರೊಳಗಲ್ಲದೆ, ಶ್ರೀಗಳಾದ ರಾಜೇಂದ್ರಪ್ರಸಾದ್, ಭುಲಾಭಾಯಿ, ದೇಸಾಯಿ, ನೆಹರು, ಅಬುಲ್ ಕಲಮ್, ಜೈಪ್ರಕಾಶ ನಾರಾಯಣ್, ಮೊದಲಾದವರೆಲ್ಲಾ ಭಾಗವಹಿಸಿ ಮಾತುಕತೆ ನಡೆಯಿತು. ವರ್ಕಿಂಗ್ ಕಮಿಟಿಯ ಮೆಂಬರರನ್ನು ನೇಮಕದ ಕುರಿತು ತನಗೂ ಸುಭಾಷರಿಗೂ ತೀವ್ರ ಮತಭೇದವಿರುವದರಿಂದ ಸುಭಾಷರು ತನ್ನಿಚ್ಛೆಯಂತೆ ಮೆಂಬರರನ್ನು ನೇಮಿಸಿಕೊಳ್ಳಬೇಕೆಂದೂ ತಾನು ಬಲಪಕ್ಷೀಯರ ಬೆಂಬಲವನ್ನು ಸಾಧ್ಯವಿದ್ದಷ್ಟು ದೊರಕಿಸಿಕೊಡುವೆನೆಂದೂ ಗಾಂಧಿಯವರು ಸೂಚಿಸಿದರು. ತನ್ನಿಚ್ಛೆಯಂತೆ ವರ್ಕಿಂಗ್ ಕಮಿಟಿಯಲ್ಲಿ ಏಕಮತವಿರುವಂತೆ ಬಲಪಕ್ಷೀಯ ಧುರೀಣರು ಮಾತ್ರವಿರಬೇಕೆಂದು ಗಾಂಧಿಯವರ ಅಪೇಕ್ಷೆ. ಇದಕ್ಕೆ ಪ್ರತಿಯಾಗಿ ಭಿನ್ನಾಭಿಪ್ರಾಯವುಳ್ಳವರೂ ಇದ್ದು ಎರಡಕ್ಕಿಂತ ಹೆಚ್ಚಿಗೆ ಸ್ಥಾನಗಳನ್ನು ಎಡಪಕ್ಷೀಯರಿಗೆ ಕೊಡಬೇಕೆಂದು ಸುಭಾಷರು ವಾದಿಸಿದರು. ಭೋಸರು ತನ್ನ ಧೋರಣೆಯನ್ನು ಮಾರ್ಪಡಿಸಿ, ಬಲಪಕ್ಷೀಯರೊಡನೆ ಏಕಾಭಿಪ್ರಾಯದಿಂದ ವರ್ತಿಸಬೇಕೆಂದು ಗಾಂಧಿಯವರು ಹೇಳಲು, ತನಗೇನನ್ನೂ ಹೇಳಲು ಬರುವದಿಲ್ಲವೆಂದೂ ಆದರೆ ಆ ಕುರಿತು ಒತ್ತಾಯಮಾಡಲಾರೆನಾದುದರಿಂದ ಭೋಸರು ಸ್ವತಂತ್ರವಾಗಿ ವರ್ತಿಸಬಹುದೆಂದೂ ಗಾಂಧಿಯವರಂದರು. ತಾನು ಬೇರೇನೂ ಹೇಳಲಾರೆನಾದುದರಿಂದ, ರಾಜೇಂದ್ರಪ್ರಸಾದ್, ಆಜಾದರೇ ಮೊದಲಾದವರೊಡನೆ ಮಾತಾಡಿ ನೋಡಿರೆಂದು ಗಾಂಧಿಯವರು ಸೂಚಿಸಿದಂತೆ ಅವರೊಳಗೆ ದೀರ್ಘ ಸಂಭಾಷಣೆ ನಡೆಯಿತು. ಹಳೇ ವರ್ಕಿಂಗ್ ಕಮಿಟಿಯ ಮೆಂಬರರನ್ನು ನೇಮಿಸಿ, ಎಡಪಕ್ಷೀಯರಿಗೆ ಸ್ಥಾನವೀಯಬಾರದೆಂದೂ, ಭೋಸರ ಧೋರಣೆಯು ಪಟ್ಟಿಗೆ ಅವರೊಡನೆ ಕೆಲಕಾಲ ಕೆಲಸಮಾಡಿ ತಿಳಿಯಬಹುದೆಂದೂ, ರಾಜೇಂದ್ರಪ್ರಸಾದರೇ ಮೊದಲಾದವರ ಅಭಿಪ್ರಾಯವಿತ್ತು. ಆದರೆ ಇಬ್ಬರು ಮೆಂಬರರನ್ನಾದರೂ ಎಡಪಕ್ಷದಿಂದ ಆರಿಸಬೇಕೆಂದು ಸುಭಾಷರು ಸೂಚಿಸಿದುದರಿಂದ ಒಪ್ಪಂದವು ಜಯಶೀಲವಾಗಲಿಲ್ಲ. ಪಂಡಿತ ನೆಹರುಗಳು, ಜೈಪ್ರಕಾಶ ನಾರಾಯಣ ಮೊದಲಾದವರು ಇತ್ತಂಡವನ್ನು ಒಂದುಗೂಡಿಸಲು ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ.

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆ

ಭೋಸರ ರಾಜೀನಾಮೆ

ತಾ. 29ನೇ ಅಪರಾಹ್ನ ಅಖಿಲಭಾರತ ರಾಷ್ಟ್ರಸಭಾ ಸಮಿತಿಯ ಸಭೆಯು ಅದಕ್ಕಾಗಿ ರಚಿಸಲ್ಪಟ್ಟ ಭವ್ಯ ಪೆಂಡಾಲಿನಲ್ಲ ಸೇರಿತು ಸುಭಾಸ್ ಭೋಸರು ಸಭಾರಂಭದಲ್ಲಿಯೇ ತನ್ನ ರಾಜಿನಾಮೆಯನ್ನೊಪ್ಪಿಸಿ, ತ್ರಿಪುರಿ ಕಾಂಗ್ರೆಸ್ ನಿರ್ಣಯದಂತೆ ತಾನು ಮಹಾತ್ಮರ ಅಭಿಪ್ರಾಯ ಕೇಳಿದರೂ ಅವರು ನಿರಾಕರಿಸಿದರೆಂದು ತಿಳಿಸಿ ಮಹಾತ್ಮರ ಪತ್ರವನ್ನೋದಿದರು. ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು ಒಂದುಗೂಡಿಸಲಾಗದುದರಿಂದ ತನಗೆ ಸಹಕರಿಸಲು ಸಾಧ್ಯವಾಗಲಿಲ್ಲವೆಂದು ಆ ಪತ್ರದಲ್ಲಿತ್ತು. ತನ್ನ ರಾಜಿನಾಮೆಯಿಂದ ಕಾಂಗ್ರೆಸ್ ಕಾರ್ಯವು ಸುಗಮವಾಗುವುದೆಂದೂ ತಾನು ಕಾಂಗ್ರೆಸಿನ ಸದಾ ಸೈನಿಕನಾಗಿ ಕೆಲಸಮಾಡಲಿರುವೆನೆಂದೂ ಭೋಸರ ಹೇಳಿಕೆ. ಪಂಡಿತ ನೆಹರುಗಳು ಭೋಸರು ತನ್ನ ರಾಜೀನಾಮೆಯನ್ನು ಹಿಂದೆಗೆದುಕೊಂಡು ವರ್ಕಿಂಗ್ ಕಮಿಟಿಯ ಹಳೇ ಮೆಂಬರರನ್ನೂ ತನ್ನಿಚ್ಛೆಯಂತೆ ಬೇರಿಬ್ಬರನ್ನೂ ಸೇರಿಸಿಕೊಳ್ಳಬೇಕೆಂಬ ಸೂಚನೆ ತಂದು, ಸದ್ಯದ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಒಕ್ಕಟ್ಟಿರಬೇಕಾದ ಆವಶ್ಯಕತೆಯನ್ನು ತಿಳಿಸಿ, ನಡು ಪ್ರವಾಹದಲ್ಲಿ ಅಶ್ವವನ್ನು ಬದಲಾಯಿಸುವದು ಅಪಾಯಕರವೆಂದು ಹೇಳಿ ಉದಾತ್ತ ಭಾಷಣವಿತ್ತರು. ಶ್ರೀಮತಿ ಸರೋಜಿನಿ, ಶ್ರೀ ಜೈಪ್ರಕಾಶರೇ ಮೊದಲಾದವರದನ್ನು ಅನುಮೋದಿಸಿದರು.

ಶ್ರೀ ಭೋಸರ ಅನಂಗೀಕಾರ

ತಾ. 30ರಲ್ಲಿ ಪುನಃ ಸಭೆ ಸೇರಿದಾಗ ತನ್ನ ಸೂಚನೆಯ ಕುರಿತು ನೆಹರುಗಳು ಭೋಸರ ಅಭಿಪ್ರಾಯ ಕೇಳಿದಾಗ ತನಗೆ ಸ್ವತಂತ್ರವರ್ತನೆಗವಕಾಶದೊರೆಯದೆ ರಾಜೀನಾಮೆಯನ್ನು ಹಿಂದೆಗೆಯಲು ಸಾಧ್ಯವಿಲ್ಲನೆಂದವರು ಉತ್ತರವಿತ್ತುದರಿಂದ ಪಂಡಿತರು ತನ್ನ ಸೂಚನೆಯನ್ನು ಹಿಂದೆಗೆದುಕೊಂಡರು. ಸಭೆಯ ನಡುವೆ ಆಗಾಗ ಗೊಂದಲವೆಬ್ಬಿಸುತ್ತಿದ್ದುದರಿಂದ ಅಧ್ಯಕ್ಷರವರನ್ನು ಬಾರಿಬಾರಿಗೂ ಎಚ್ಚರಿಸಬೇಕಾಯಿತು. ಭೋಸರ ರಾಜೀನಾಮೆಯ ಬಳಿಕ ಸಭೆಯು ಶ್ರೀಮತಿ ಸರೋಜಿನಿ ನಾಯ್ಡುರವರ ಅಧ್ಯಕ್ಷತೆಯಲ್ಲಿ ನಡೆಯಿತು. ವರ್ಕಿಂಗ್ ಕಮಿಟಿಯನ್ನು ಎ. ಐ. ಸಿ. ಸಿ. ಯವರು ಚುನಾಯಿಸಬೇಕೆಂದು ಶ್ರೀ. ಸನ್ಯಾಲರು ತಂದ ಸೂಚನೆಯು ಮಂಜೂರಾಗಲಿಲ್ಲ. ರಾಜೀನಾಮೆಯನ್ನು ಹಿಂದೆಗೆದುಕೊಳ್ಳಬೇಕೆಂದು ಬಂದ ಮತ್ತೊಂದು ಸೂಚನೆಯೂ ವಾಪಾಸು ತೆಗೆಯಲ್ಪಟ್ಟಿತು. ಆ ವೇಳೆ ಹೊಸ ಅಧ್ಯಕ್ಷರ ಚುನಾವಣೆಯ ಪ್ರಶ್ನೆ ಬಂದಾಗ ಶ್ರೀ ನರಿಮೆನರು ಅದು ಡೆಲಿಗೇಟರ ಕರ್ತವ್ಯವಲ್ಲದೆ ಎ. ಐ. ಸಿ. ಸಿ ಸಭೆಯ ಅಧಿಕಾರವಲ್ಲವೆಂಬ ಆಕ್ಷೇಪವೆತ್ತಿದರು. ಅಧ್ಯಕ್ಷೆಯರದನ್ನು ನಿಯಮಬಾಹಿರವೆಂದು ತೀರ್ಮಾನಿಸಿದ ಮೇಲೆ ಬಾಬುರಾಜೇಂದ್ರ ಪ್ರಸಾದರ ಹೆಸರು ಆ ಸ್ಥಾನಕ್ಕೆ ಸೂಚಿಸಲ್ಪಟ್ಟು ಸರ್ವಾನುಮತಿಯಿಂದ ಮಂಜೂರಾಯಿತು. ಈ ಸಂದರ್ಭದಲ್ಲಿ ಕೆಲವರು 'ಶೇಮ್ ಶೇಮ್' (ನಾಚಿಕೆ/



ಅಧ್ಯಕ್ಷ ರೂಸ್‌ವೆಲ್ಟರಿಗೆ ಸರ್ವಾಧಿಕಾರಿ ಹಿಟ್ಲರನ ಖಂಡತುಂಡ ಉತ್ತರ.

ಎಂಬ ಬೊಬ್ಬೆಯೆಬ್ಬಿಸಿದರು. ಸಭಾಮಧ್ಯದಲ್ಲಿ ನಡುನಡುವೆ ಅಧ್ಯಕ್ಷೆ ಶ್ರೀಮತಿ ನಾಯ್ಡುರವರು ಸಭಿಕರನ್ನು ಹಲವು ಸಲ ಎಚ್ಚರಿಸಬೇಕಾಗಿ ಬಂತಲ್ಲದೆ ಪ್ರೇಕ್ಷಕರೂ ಗಲಭೆಯೆಬ್ಬಿಸಿದುದಕ್ಕೆ ಅವರನ್ನು ಹೊರಗೆ ಕಳುಹಿಸುವ ಅವಕಾಶಬರಬಹುದೆಂದು ಕಠಿಣವಾಗಿ ಎಚ್ಚರಿಸಬೇಕಾಯಿತು. ತಾ. 29ರ ಸಭೆ ಮುಗಿದು ಧುರೀಣರು ಹೊರಗೆ ಹೋಗುವಾಗ ಕೂಡಿದ್ದ ಜನಸಂದಣಿಯು ನಿಷೇಧ ಸೂಚಕ ಧ್ವನಿಯೆಬ್ಬಿಸುತ್ತಿತ್ತು. ಪಂಡಿತ ಪಂತರನ್ನೂ ಆಚಾರ್ಯ ಕೃಪಲಾನಿಯವರನ್ನೂ ಬೆಂಬತ್ತಿ ಹೋಗಿ ದೊಡ್ಡ ಬೊಬ್ಬೆಯೆಬ್ಬಿಸಿ ಅವರಿಬ್ಬರೂ ಸ್ವಯಂ ಸೇವಕರ ರಕ್ಷಣೆಯಿಂದ ಹೋಗಬೇಕಾಯಿತು. ಈ ಕೃತ್ಯವನ್ನು ಸುಭಾಸರು ಖಂಡಿಸಿರುವರು.

ಅಧ್ಯಕ್ಷ ರೂಸ್‌ವೆಲ್ಟರಿಗೆ ಸರ್ವಾಧಿಕಾರಿ ಹಿಟ್ಲರನ ಖಂಡ ತುಂಡ ಉತ್ತರ.

ಜರ್ಮನಿಯ ರೀಚ್‌ಸ್ಟಾಗಿನಲ್ಲಿ ಕಳೆದ ತಾ. 28ರಲ್ಲಿ ಹಿಟ್ಲರನ ಭಾಷಣವಾಯಿತು ಅದರಲ್ಲಿ ಅಧ್ಯಕ್ಷ ರೂಸ್‌ವೆಲ್ಟರ ಬಿನ್ನಹದ ಪ್ರತಿಯೊಂದು ವಿಭಾಗದ ಟೀಕೆಯಿತ್ತು. 'ತಾನು ಅಧಿಕಾರಕ್ಕೆ ಬಂದಂದಿನಿಂದ ನಾವೆಗಳನ್ನು ಮಿತವಾಗಿಡಲು ಬ್ರಿಟಿಷರೊಡನೆ ಸಂಧಾನಕ್ಕೆ ತೊಡಗಿದ್ದೆನೆಂದೂ, ಆದರೆ ಬ್ರಿಟಿಷರು ಜರ್ಮನಿಗೆ ವಿರುದ್ಧವಾಗಿ ವರ್ತಿಸುತ್ತಾ ಬಂದಿರುವರೆಂದೂ, ಆದ್ದರಿಂದ ಇನ್ನು ಮುಂದೆ ಆ ಕುರಿತು ಸಂಧಾನವಿಲ್ಲವೆಂದೂ ಹಿಟ್ಲರನೆಂದನು. ರೂಸ್‌ವೆಲ್ಟರು ಕೇಳಿದ ಶಾಂತಿ ಅಭಯಕ್ಕೆ ಸಂಬಂಧಪಟ್ಟ ರಾಷ್ಟ್ರಗಳು ಹಾಗೆ ಅಪೇಕ್ಷಿಸಿ ತಕ್ಕ ರಿಯಾಯಿತಿಗಳೊಂದಿಗೆ ಬಂದು ತನ್ನನ್ನು ಕೇಳಿಕೊಂಡಲ್ಲಿ ತಾನದಕ್ಕೆ ಸಿದ್ಧನಿರುವೆನೆಂದು ಹಿಟ್ಲರನ ವಾಣಿ. ಇತರರು ಬಲಪ್ರಯೋಗದಿಂದ ನಾಶಮಾಡಿರುವ ಮಾನವೀಯ ಸಲಕರಣೆಗಳ ಪುನರುದ್ಧಾರವೊಂದೇ ತನ್ನ ಧ್ಯೇಯ. ಆದ್ದರಿಂದ 20 ವರುಷಗಳ ಹಿಂದೆ ಕಳಕೊಂಡಿದ್ದ ಜರ್ಮನಿಯ ಹಕ್ಕನ್ನು ಪುನಃ ಸಂಪಾದಿಸಲು ಕಟಿಬದ್ಧನಾಗಿದ್ದೇನೆ ಹೊರತು ಅನ್ಯರ ಹಕ್ಕನ್ನಪಹರಿಸಲು ಹೊರಟಿಲ್ಲ. ಜರ್ಮನಿಯೊಡನಿಂದು ತನ್ನದಲ್ಲದ ವಸಾಹತುಗಳಿಲ್ಲ. ಹಿಂದೆ ಜರ್ಮನಿಯವುಗಳಾಗಿರದ ಅವರೊಡನೆ ಜೋಡಿಸಲ್ಪಟ್ಟಿರದ ಆದರ ಸಾಮ್ರಾಜ್ಯದಲ್ಲಿ ದೀರ್ಘಕಾಲದಿಂದ ಅಡಕವಾಗಿರದ ವಸಾಹತುಗಳನ್ನು ಜರ್ಮನಿಯು ಇಟ್ಟುಕೊಂಡಿಲ್ಲವೆಂದು ಹಿಟ್ಲರನ ಖಂಡಿತೋಕ್ತಿ.

ರೀಚ್ ರಾಜ್ಯ(ಜರ್ಮನಿ)ವು ಅಮೇರಿಕಕ್ಕಿಂತ ಎಷ್ಟೋ ಪುರಾತನದ್ದೆಂದೂ, ಅದು ಸೋಲುವದಕ್ಕಿಂತ ಮೊದಲು ಇದಕ್ಕಿಂತಲೂ ವಿಶಾಲವಿತ್ತೆಂದೂ ಹೇಳಿ, ಪರಿಷತ್ತುಗಳು ನಿಷ್ಫಲವೆಂದು ಕಂಠೋಕ್ತವಾಗಿ ಹೇಳಿ, ಬ್ರಿಟಿಷ್ ಸಾಮ್ರಾಜ್ಯವು ಮಾನವಕುಲಕ್ಕೆ ಭೂಷಣಪ್ರಾಯವಾದುದೆಂಬ ಅಭಿಪ್ರಾಯವು ಸದಾ ಕಾಲ ನನ್ನಲ್ಲಿತ್ತು. ನನ್ನ ರಾಜಕೀಯ ಜೀವನದಲ್ಲೆಲ್ಲಾ ನಾನು ಬ್ರಿಟಿಷರೊಡನೆ ಸ್ನೇಹವನ್ನು ಅಪೇಕ್ಷಿಸಿದ್ದೆ. ಆದರೆ ಬ್ರಿಟಿಷರು ತೀರಾ ಅವಿಶ್ವಾಸವನ್ನು ತೋರಿಸುತ್ತಾ ಬಂದಿರುವರೆಂದು ಹೇಳಿ, ಜರ್ಮನಿಯು ಬಲಹೀನವಾಗಿರುವ ವೇಳೆ ಬ್ರಿಟಿಷರು ಸಾಮ್ರಾಜ್ಯವನ್ನು ಕಟ್ಟಿದ್ದರೆಂದೂ, ಈಗ ಜರ್ಮನಿಯು ಬಲಶಾಲಿಯಾಗಿರುವದಲ್ಲದೆ ತಾನು ಬ್ರಿಟಿಷ್ ಸಾಮ್ರಾಜ್ಯಕ್ಕಿಂತ ಕಡಿಮೆಯಲ್ಲವೆಂದು ತಿಳಿದಿರುವದೆಂದೂ ಹೇಳಿದನು.

ಇಂಗ್ಲೆಂಡಿನಲ್ಲಿ ಖಡ್ಡಾಯವಾಗಿ ಸೈನಿಕ ತಯಾರಿ.

ಬ್ರಿಟಿಷ ಮಂತ್ರಿಮಂಡಲವು ಒತ್ತಾಯವಾಗಿ ಸೈನ್ಯಕ್ಕೆ ಸೇರಿಸಿಕೊಳ್ಳುವ ಕಾನೂನನ್ನು ಜಾರಿಗೆ ತಂದಿರುವದು. ಆ ಕುರಿತಾದ ಮಸೂದೆಯನ್ನು ಪಾರ್ಲಿಮೆಂಟು ಸಭೆಗಳ ಮುಂದೆ ತಂದು ಪರಿಸ್ಥಿತಿಯು ಅತ್ಯಂತ ಹೆ ವಿಷಮತರವಿದೆ! ಎಂದು ಮಿ. ಚೇಂಬರ್ಲೇನರಾಡಿದರು.

ಪೋಲಂಡಿನ ಮೇಲೆ ಧಾಳಿಯೇ?

ಡಾನ್ಜಿಂಗ್ ಪ್ರದೇಶವನ್ನು ಬಿಟ್ಟುಕೊಡಬೇಕೆಂದೂ ಹಾಗೆಯೇ ಆ ಭಾಗಕ್ಕೆ ಮೋಟಾರು ರಸ್ತೆಯೊಂದು ಪೋಲೆಂಡಿನೊಳಗೆ ದೊರೆಯಬೇಕೆಂದೂ ಹಿಟ್ಲರನು ಕೊಟ್ಟಿದ್ದ ಸೂಚನೆಯನ್ನು ಪೋಲಂಡು ಎಷ್ಟಕ್ಕೂ ಒಪ್ಪುವಂತಿಲ್ಲವೆಂದು ತಿಳಿದುಬಂದಿದೆ. ಪೋಲಂಡನ್ನು ಹೆದರಿಸಿ ಕಾರ್ಯಸಾಧಿಸುವ ಹಿಟ್ಲರನ ಹಂಚಿಕೆಯು ಪೂರ್ಣ ಅಪಜಯ ಹೊಂದಿದಂತೆಯೇ ಸರಿ. ಆ ಕುರಿತು ಪೋಲೆಂಡ್ ಸರಕಾರವು ಸದ್ಯದಲ್ಲಿಯೇ ಸ್ಪಷ್ಟ ಉತ್ತರವನ್ನು ಕೊಡಲಿರುವದು.

ಹಿಟ್ಲರ್ ಭಾಷಣದಿಂದ ಅತೃಪ್ತಿ

ಹಿಟ್ಲರನು ರೂಸ್‌ವೆಲ್ಟರಿಗೆ ಕೊಟ್ಟ ಉತ್ತರದಿಂದ ಬಿಕ್ಕಟ್ಟಿನ ಪರಿಸ್ಥಿತಿಯು ಸುಧಾರಿಸಲ್ಪಡಲಿಲ್ಲವೆಂದೂ, ಶಾಂತಿಸಾಧನೆಯ ಮಾರ್ಗವನ್ನು ಹಿಟ್ಲರನು ಕಳಕೊಂಡನೆಂದೂ ಹೆಚ್ಚಿನ ರಾಷ್ಟ್ರಗಳ ಮುತ್ಸದ್ದಿಗಳು ಅಭಿಪ್ರಾಯಪಟ್ಟಿದ್ದಾರೆ.

ಸ್ಪೈನಿನ ಗಡಿ ಮುಚ್ಚಿದರು.

ಸ್ಪೈನಿನ ಅಧಿಕಾರಿಗಳು ಲೆಬರ್‌ದಸ ಎಂಬಲ್ಲಿಯ ಫ್ರಾನ್ಸು ಮತ್ತು ಸ್ಪೈನಿನ ಗಡಿ ಪ್ರದೇಶವನ್ನು ಸಂಪೂರ್ಣವಾಗಿ ಮುಚ್ಚಿಸಿದ್ದಾರೆ. ಈ ವರ್ತನೆಯ ಕಾರಣವನ್ನು ಕೂಡ ವಿವರಿಸಿಲ್ಲ.

ಅವಿಶ್ರಾಂತ ಹಾರಾಟ

ರಶ್ಯದ ವೈಮಾನಿಕ ಕೊಕ್ಕಿನಾಕಿ ಎಂಬವನ, 23ಘಂಟೆ 40ಮಿನಿಟಿನ ವರೆಗೆ ವಿರಾಮ ನಡಿಸಿ ಕೊನೆಗೆ ವಿಮಾನ ಹಾಳಾಗಿ ಸ್ಕ್ರೋ ಪ್ರಿನ್ಸ್‌ಸ್ಟಿಕ್ ಎಂಬಲ್ಲಿ ಇಳಿಯಬೇಕಾಯಿತು.

ಐರ್ಲೇಂಡಿನ ಅಸಮ್ಮತಿ

ಬ್ರಿಟನು ಖಡ್ಡಾಯ ಸೈನ್ಯ ಸಂಗ್ರಹಕ್ಕೆ ತೊಡಗಿರುವದರಿಂದ ಡಿ. ವೆಲರಾರವರು ಆತಂಗೊಂಡಿದ್ದಾರೆ ಈ ಕಾನೂನು ದಕ್ಷಿಣ ಐರ್ಲೇಂಡಿಗೂ ಇಂಗ್ಲೆಂಡಿನಲ್ಲಿರುವ ಐರಿಷ್ ಜನರಿಗೂ ಸಂಬಂಧಿಸುವದೋ ಎಂಬುದನ್ನು ತಿಳಿಯಲು, ಅವರು ನಿಶ್ಚಿತವಾಗಿದ್ದ ಅಮೇರಿಕಾ ಪ್ರಯಾಣವನ್ನು ರದ್ದುಪಡಿಸಿದರು. ಇಂತಹ ಸಂದರ್ಭಗಳಲ್ಲಿ ಯಾವ ವಿಧದ ಘರ್ಷಣೆಯೂ ಐರ್ಲೇಂಡಿನೊಡನೆ ಉಂಟಾಗದಂತೆ ನೋಡುವ ತನ್ನ ಧೋರಣೆಯನ್ನು ತಿಳಿಸಿ ದಕ್ಷಿಣ ಐರ್ಲೇಂಡಿನಲ್ಲಿ ಈ ಕಾನೂನನ್ನು ಜಾರಿಗೆ ತರುವದಿಲ್ಲವೆಂದು ಬ್ರಿಟನು ಅಭಯಕೊಟ್ಟಿದೆ, ಇಂಗ್ಲೆಂಡಿನಲ್ಲಿದ್ದವರನ್ನು ಮಾತ್ರ ಸೇರಿಸಿಕೊಳ್ಳಲಾಗುವದಂತೆ.

ವೋನ್ ಬ್ರೌಚಿಟ್ಸ್ಚರ ಪಯಣ

ಜರ್ಮನಿಯ ವಿ. ಲಿಟರಿ ಸ್ಟಾಫ್ ಅಧಿಕಾರಿಗಳಾದ ವೋನ್ ಬ್ರೌಚಿಟ್ಸ್ಚರು ರೋಮಿಗೆ ಪಯಣಬೆಳೆಸಿದ್ದಾರೆ. ಅಲ್ಲಿ ಹಲವು ದಿನ ನಿಂತು ಇಟಲಿಯ ಅಧಿಕಾರಿಗಳೊಡನೆ ಯುದ್ಧ ವಿಷಯಗಳನ್ನು ಚರ್ಚಿಸಲಿರುವರು ಅಲ್ಲಿಂದ ಲಿಬ್ಯಕ್ಕೂ ಹೋಗುವರಂತೆ. ಇಟಲಿ ಜರ್ಮನಿಗಳು ಪ್ರಾಮುಖ್ಯತೆಯಿತ್ತಿರುವ ಉತ್ತರ ಆಫ್ರಿಕಾ ಇಟಲಿಯನ್ ಕೊಲನಿಗಳ ವಿಷಯ ವ್ಯವಸ್ಥೆ ಕೈಗೊಳ್ಳುವದೇ ಈ ಪಯಣದ ಧ್ಯೇಯವೆಂದು ವಾರ್ತೆಯಿದೆ. ಈ ಜರ್ಮನ್ ಅಧಿಕಾರಿಯು ಯುದ್ಧ ಇಂಜಿನಿಯರ್‌ವಿದ್ಯೆಯಲ್ಲಿ ತಜ್ಞರಿದ್ದು ಇಜಿಪ್ಟ್ ಮತ್ತು ಟ್ಯೂನಿಸ್‌ಗಳಲ್ಲಿ ಯುದ್ಧಕಾಲದ ರೀತಿಯನ್ನು ಕಲ್ಪಿಸಬಂದವರೆಂದು ಇಂಗ್ಲೆಂಡಿನಲ್ಲಿ ವಾರ್ತೆ ಹಬ್ಬಿದೆ.

ಸ್ಥಾಪನೆ: ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ, 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಪೇಟಿಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.



CROWN RUBBER STAMP CO.,
Balmat Road, MANGALORE.
Included by the Mysore Govt. Stores, Purchase Committee in the list of approved firms

ಕೇವಲ ಧರ್ಮಾರ್ಥ!

ಈ ಜಾಹೀರಾತಿನ ಕೂಪನನ್ನು ತರುವವರಿಗೆ ಅವರ ಫೊಟೋವನ್ನು ಧರ್ಮಾರ್ಥವಾಗಿ ತೆಗೆದುಕೊಡಲಾಗುವುದು

ತ್ವರೆ ಮಾಡಿರಿ! ಬೊಂಬಾಯಿ ಪಟ್ಟಣಿಗರೆ ತ್ವರೆ ಮಾಡಿರಿ!!

● ಈ ನಮ್ಮ ಫೊಟೋವನ್ನು ಎನ್‌ಲಾರ್ಜ್‌ಮೆಂಟಿಗೆ ಒಲೀ ರೂ. 1/. ಮಾತ್ರ. (ಸೈಜ್ 6"×8").

ಹೊರಗಿನವರು ಈ ಕೂಪನಿನೊಂದಿಗೆ ತಮ್ಮ ಫೊಟೋ ಕಳುಹಿಸಿದರೆ ಅದನ್ನು 6'×8' ಸೈಜಿನಲ್ಲಿ ರೂ. 2-8-0ಕ್ಕೆ ಎನ್‌ಲಾರ್ಜ ಮಾಡಿಕೊಡಲಾಗುವದು. 16×'20'ರ ದೊಡ್ಡ ಸೈಜಿಗೆ ರೂ. 5 ಮಾತ್ರ. ನಮ್ಮ ಆಫೀಸು ಸಮಯ ಬೆಳಿಗ್ಗೆ 9ರಿಂದ ಸಂಜೆ 7. ಆದಿತ್ಯವಾರ ಬೆಳಿಗ್ಗೆಯಿಂದ ಸಂಜೆ 4 ಗಂಟೆ ವರೆಗೆ

ಕೆ. ಎಚ್. ಪಠಕ್

276, ಸೂರ್ಯಮಹಾಲ್	ರೋಯಲ್ ಆರ್ಟ್‌ಸ್ಟುಡಿಯೋ,
ಗಿರ್ಗಾಮ್‌ರೋಡು, ಬೊಂಬಾಯಿ 14	183 ಹೋನ್ಬಿರೋಡು, ಬೊಂಬಾಯಿ 14

Established] THE [1906

UNITED INDIA

LIFE ASSURANCE Co., LTD.

HEAD OFFICE—MADRAS.

Trustee:—The Official Trustee to the Government of Madras.

Policies in force exceed **SIX** Crores.
Annual income exceeds – Rs. **30** lakhs.
Total assets exceeds – Rs. **110** lakhs.
Total claims paid exceed Rs. **40** lakhs

The oldest & largest life assurance company of South India accepted by the Government as satisfactory for the purpose of exemption from the operation of the Provident Fund Rules to Teachers in aided Schools & for the purpose of utilisation of P. F. Contributions for payment of premiums on the lives of Government Local Board & Municipal servants.

For further particulars please apply to:—

THE BRANCH MANAGER,

THE UNITED LIFE ASSURANCE COMPANY, LTD.,
FELIX PAI BAZAR, MANGALORE, S. K.

K. K. Hebbar, B.A., ORGANISER, UDIPI, S. K. *OR* **K. Keshava Shenoy**, M.A., ORGANISER, Pentlannpet, MANGALORE.

ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಶ್ರೀ ಸುಭಾಸ ಭೋಸರ ರಾಜಿನಾಮೆ!

ರಾಜೇಂದ್ರ ಪ್ರಸಾದರು ರಾಷ್ಟ್ರಪತಿಯಾದರು

ಕಲ್ಕತ್ತದಲ್ಲಿ ರಾಷ್ಟ್ರಸಭಾ ಸಮಿತಿಯ ಸಭೆ

ಮೊದಲೇ ನಿರ್ಣಯಿಸಲ್ಪಟ್ಟಂತೆ ಎ. ಐ. ಸಿ. ಸಿ. ಯ ಸಭೆಯು ಕಲ್ಕತ್ತದಲ್ಲಿ ಎಪ್ರಿಲ್ ತಾ. 28ಕ್ಕೆ ಸೇರಿತು. ತಿಕ್ಕಾಟದ ವಿಷಯವಾಗಿದ್ದ ವರ್ಕಿಂಗ್ ಕಮಿಟಿ ರಚನೆಯೇ ಆ ಸಭೆಯ ಪ್ರಮುಖ್ಯ ವಿಷಯವಾಗಿತ್ತು. ಈ ಕುರಿತು ಗಾಂಧೀ ಭೋಸರೊಳಗೆ ಸುದೀರ್ಘ ಸಂಭಾಷಣೆ ಮತ್ತು ಇತ್ತಂಡದ ಧುರೀಣರೊಳಗೆ ಮಾತುಕತೆ ನಡೆದರೂ ನಿಷ್ಫಲವಾಗಿ ಶ್ರೀ ಭೋಸರು ತನ್ನ ರಾಜೀನಾಮೆಯನ್ನಿತ್ತರು; ಬಾಬು ರಾಜೇಂದ್ರ ಪ್ರಸಾದರು ಅಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರ ಸರ್ವಸಮ್ಮತಿಯಿಂದ ಚುನಾಯಿಸಲ್ಪಟ್ಟರು.

ಗಾಂಧಿಯವರ ಆಗಮನ

ಮಹಾತ್ಮಾ ಗಾಂಧಿಯವರು ರಾಜಕೋಟೆಯಿಂದ ತಾ. 27ರಲ್ಲಿ ಕಲ್ಕತ್ತೆಗೆ ಆಗಮಿಸಿದರು. ಹೌರಾ ರೈಲ್ವೇ ಸ್ಟೇಶನಿನಿಂದ ಐದ್ಮೈಲು ದೂರದ ಸ್ಟೇಶನೊಂದರಲ್ಲಿ ಅವರಿಳಿಯುವ ಏರ್ಪಾಡು ನಡೆದಿತ್ತಾದರೂ, ಜನಸಂದಣಿಯ ಗೊಂದಲವನ್ನು ತಪ್ಪಿಸುವದಕ್ಕಾಗಿ ಅವರು ಕೊನೆಗೆ ಹೌರಾಸ್ಟೇಶನಿನಲ್ಲಿ ಇಳಿಯಬೇಕಾಯಿತು. ರಾಷ್ಟ್ರಪತಿ ಭೋಸರವರನ್ನು ಇದಿರ್ಗೊಳ್ಳಲು ಹೋಗಿದ್ದರು. ಅಲ್ಲಿಯೂ ಸಾವಿರಗಟ್ಟಳೆ ಜನರು ನೆರೆದು, ಮಹಾತ್ಮರು ರೈಲಿನಿಂದ ಇಳಿಮೊಡನೆಯೇ ದರ್ಶನಾಪೇಕ್ಷೆಯಿಂದ ನುಗ್ಗುನುಸಿಯುವ ಜನರ ಗೊಂದಲವನ್ನು ತಡೆಗಟ್ಟಲು ಸ್ವಯಂ ಸೇವಕರಿಂದಾಗಲಿಲ್ಲ. ಶ್ರೀ ಭೋಸರು ಸ್ವತಃ ಜನರ ನಡುವೆ ನುಗ್ಗಿ ಸ್ವಯಂ ಸೇವಕರಿಗೆ ನೆರವಾದರು. ಗಾಂಧಿಯವರಲ್ಲಿಂದ ಸೋದೇಪುರ ಎಂಬಲ್ಲಿಗೊಯ್ಯಲ್ಪಟ್ಟು ಅಲ್ಲಿ ಶ್ರೀ ಭೋಸರೊಡನೆ ಸಂಧಾನದ ಮಾತುಕತೆಗಾರಂಭವಾಯಿತು. ಆ ದಿನ ಎರಡುಬಾರಿ ಸಂಭಾಷಣೆ ನಡೆದು ಮರುದಿನಕ್ಕೆ ಮುಂದರಿಸಲಾಯಿತು. ಪಂಡಿತ ನೆಹರುಗಳೂ ಸ್ಟೇಶನಿನಲ್ಲಿ ಸಂಭ್ರಮದಿಂದ ಸ್ವಾಗತೀಕರಿಸಲ್ಪಟ್ಟು ಗಾಂಧೀ ಭೋಸ್ ಸಂಭಾಷಣೆಯಲ್ಲಿ ಭಾಗವಹಿಸಿದರು.

ಸಂಧಾನದ ಸಾರ್ವತ್ರಿಕ ಸಂಭಾಷಣೆ

ಸರ್ವ ಸಮ್ಮತಿಯ ತೀರ್ಮಾನವನ್ನು ಹೊಂದುವುದಕ್ಕಾಗಿ ಗಾಂಧೀ ಭೋಸರೊಳಗಲ್ಲದೆ, ಶ್ರೀಗಳಾದ ರಾಜೇಂದ್ರಪ್ರಸಾದ್, ಭೂಲಾಭಾಯಿ, ದೇಸಾಯಿ, ನೆಹರು, ಅಬುಲ್ ಕಲಮ್, ಜೈಪ್ರಕಾಶ ನಾರಾಯಣ್, ಮೊದಲಾದವರೆಲ್ಲಾ ಭಾಗವಹಿಸಿ ಮಾತುಕತೆ ನಡೆಯಿತು. ವರ್ಕಿಂಗ್ ಕಮಿಟಿಯ ಮೆಂಬರರನ್ನು ನೇಮಕದ ಕುರಿತು ತನಗೂ ಸುಭಾಸರಿಗೂ ತೀವ್ರ ಮತಭೇದವಿರುವದರಿಂದ ಸುಭಾಸರು ತನ್ನಿಚ್ಛೆಯಂತೆ ಮೆಂಬರರನ್ನು ನೇಮಿಸಿಕೊಳ್ಳಬೇಕೆಂದೂ ತಾನು ಬಲಪಕ್ಷೀಯರ ಬೆಂಬಲವನ್ನು ಸಾಧ್ಯವಿದ್ದಷ್ಟು ದೊರಕಿಸಿಕೊಡುವೆನೆಂದೂ ಗಾಂಧಿಯವರು ಸೂಚಿಸಿದರು. ತನ್ನಿಚ್ಛೆಯಂತೆ ವರ್ಕಿಂಗ್ ಕಮಿಟಿಯಲ್ಲಿ ಒಮ್ಮತವಿರುವಂತೆ ಬಲಪಕ್ಷೀಯ ಧುರೀಣರು ಮಾತ್ರವಿರಬೇಕೆಂದು ಗಾಂಧಿಯವರ ಅಪೇಕ್ಷೆ. ಇದಕ್ಕೆ ಪ್ರತಿಯಾಗಿ ಭಿನ್ನಾಭಿಪ್ರಾಯವುಳ್ಳವರೂ ಇದ್ದು ಎರಡಕ್ಕಿಂತ ಹೆಚ್ಚಿಗೆ ಸ್ಥಾನಗಳನ್ನು ಎಡಪಕ್ಷೀಯರಿಗೆ ಕೊಡಬೇಕೆಂದು ಸುಭಾಸರು ವಾದಿಸಿದರು. ಭೋಸರು ತನ್ನ ಧೋರಣೆಯನ್ನು ಮಾರ್ಪಡಿಸಿ, ಬಲಪಕ್ಷೀಯರೊಡನೆ ಏಕಾಭಿಪ್ರಾಯದಿಂದ ವರ್ತಿಸದೆ ತನಗೇನನ್ನೂ ಹೇಳಲು ಬರುವದಿಲ್ಲವೆಂದೂ ಆದರೆ ಆ ಕುರಿತು ಒತ್ತಾಯಮಾಡಲಾರೆನಾದುದರಿಂದ ಭೋಸರು ಸ್ವತಂತ್ರವಾಗಿ ವರ್ತಿಸಬಹುದೆಂದೂ ಗಾಂಧಿಯವರಂದರು. ತಾನು ಬೇರೇನೂ ಹೇಳಲಾರೆನಾದುದರಿಂದ, ರಾಜೇಂದ್ರಪ್ರಸಾದ್, ಆಜಾದರೇ ಮೊದಲಾದವರೊಡನೆ ಮಾತಾಡಿ ನೋಡಿರೆಂದು ಗಾಂಧಿಯವರು ಸೂಚಿಸಿದಂತೆ ಅವರೊಳಗೆ ದೀರ್ಘ ಸಂಭಾಷಣೆ ನಡೆಯಿತು. ಹಳೇ ವರ್ಕಿಂಗ್ ಕಮಿಟಿಯ ಮೆಂಬರರನ್ನು ನೇಮಿಸಿ, ಎಡಪಕ್ಷೀಯರಿಗೆ ಸ್ಥಾನವೀಯಬಾರದೆಂದೂ, ಭೋಸರ ಧೋರಣೆಯ ಮಟ್ಟಿಗೆ ಅವರೊಡನೆ ಕೆಲ ಕಾಲ ಕೆಲಸಮಾಡಿ ತಿಳಿಯಬಹುದೆಂದೂ, ರಾಜೇಂದ್ರಪ್ರಸಾದರೇ ಮೊದಲಾದವರ ಅಭಿಪ್ರಾಯವಿತ್ತು. ಆದರೆ ಇಬ್ಬರು ಮೆಂಬರರನ್ನಾದರೂ ಎಡಪಕ್ಷದಿಂದ ಆರಿಸಬೇಕೆಂದು ಸುಭಾಸರು ಸೂಚಿಸಿದುದರಿಂದ ಒಪ್ಪಂದವು ಜಯಶೀಲವಾಗಲಿಲ್ಲ. ಪಂಡಿತ ನೆಹರುಗಳು, ಜೈಪ್ರಕಾಶ ನಾರಾಯಣ ಮೊದಲಾದವರು ಇತ್ತಂಡವನ್ನು ಒಂದುಗೂಡಿಸಲು ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ.

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆ

ಭೋಸರ ರಾಜೀನಾಮೆ

ತಾ. 29ನೇ ಅಪರಾಹ್ನ ಅಖಿಲಭಾರತ ರಾಷ್ಟ್ರಸಭಾ ಸಮಿತಿಯ ಸಭೆಯು ಅದಕ್ಕಾಗಿ ರಚಿಸಲ್ಪಟ್ಟ ಭವ್ಯ ಪೆಂಡಾಲಿನಲ್ಲಿ ಸೇರಿತು ಸುಭಾಸ್ ಭೋಸರು ಸಭಾರಂಭದಲ್ಲಿಯೇ ತನ್ನ ರಾಜಿನಾಮೆಯನ್ನೊಪ್ಪಿಸಿ, ತ್ರಿಪುರಿ ಕಾಂಗ್ರೆಸ್ ನಿರ್ಣಯದಂತೆ ತಾನು ಮಹಾತ್ಮರ ಅಭಿಪ್ರಾಯ ಕೇಳಿದರೂ ಅವರು ನಿರಾಕರಿಸಿದರೆಂದು ತಿಳಿಸಿ ಮಹಾತ್ಮರ ಪತ್ರವನ್ನೋದಿದರು. ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು ಒಂದುಗೂಡಿಸಲಾಗದುದರಿಂದ ತನಗೆ ಸಹಕರಿಸಲು ಸಾಧ್ಯವಾಗಲಿಲ್ಲವೆಂದು ಆ ಪತ್ರದಲ್ಲಿತ್ತು. ತನ್ನ ರಾಜಿನಾಮೆಯಿಂದ ಕಾಂಗ್ರೆಸ್ ಕಾರ್ಯವು ಸುಗಮವಾಗುವುದೆಂದೂ ತಾನು ಕಾಂಗ್ರೆಸಿನ ಸದಾ ಸೈನಿಕನಾಗಿ ಕೆಲಸಮಾಡಲಿರುವೆನೆಂದೂ ಭೋಸರ ಹೇಳಿಕೆ. ಪಂಡಿತ ನೆಹರುಗಳು ಭೋಸರು ತನ್ನ ರಾಜೀನಾಮೆಯನ್ನು ಹಿಂದೆಗೆದುಕೊಂಡು ವರ್ಕಿಂಗ್ ಕಮಿಟಿಯ ಹಳೇ ಮೆಂಬರರನ್ನೂ ತನ್ನಿಚ್ಛೆಯಂತೆ ಬೇರಿಬ್ಬರನ್ನೂ ಸೇರಿಸಿಕೊಳ್ಳಬೇಕೆಂಬ ಸೂಚನೆ ತಂದು, ಸದ್ಯದ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಒಕ್ಕಟ್ಟಿರಬೇಕಾದ ಆವಶ್ಯಕತೆಯನ್ನು ತಿಳಿಸಿ, ನಡು ಪ್ರವಾಹದಲ್ಲಿ ಅಶ್ವವನ್ನು ಬದಲಾಯಿಸುವದು ಅಪಾಯಕರವೆಂದು ಹೇಳಿ ಉದಾತ್ತ ಭಾಷಣವಿತ್ತರು ಶ್ರೀಮತಿ ಸರೋಜಿನಿ, ಶ್ರೀ ಜೈಪ್ರಕಾಶರೇ ಮೊದಲಾದವರದನ್ನು ಅನುಮೋದಿಸಿದರು.

ಶ್ರೀ ಭೋಸರ ಅನಂಗೀಕಾರ

ತಾ. 30ರಲ್ಲಿ ಪುನಃ ಸಭೆ ಸೇರಿದಾಗ ತನ್ನ ಸೂಚನೆಯ ಕುರಿತು ನೆಹರುಗಳು ಭೋಸರ ಅಭಿಪ್ರಾಯ ಕೇಳಿದಾಗ ತನಗೆ ಸ್ವತಂತ್ರವರ್ತನೆಗವಕಾಶದೊರೆಯದೆ ರಾಜೀನಾಮೆಯನ್ನು ಹಿಂದೆಗೆಯಲು ಸಾಧ್ಯವಿಲ್ಲನೆಂದವರು ಉತ್ತರವಿತ್ತುದರಿಂದ ಪಂಡಿತರು ತನ್ನ ಸೂಚನೆಯನ್ನು ಹಿಂದೆಗೆದುಕೊಂಡರು. ಸಭೆಯ ನಡುವೆ ಆಗಾಗ ಗೊಂದಲವೆಬ್ಬಿಸುತ್ತಿದ್ದುದರಿಂದ ಅಧ್ಯಕ್ಷರವರನ್ನು ಬಾರಿಬಾರಿಗೂ ಎಚ್ಚರಿಸಬೇಕಾಯಿತು. ಭೋಸರ ರಾಜೀನಾಮೆಯ ಬಳಿಕ ಸಭೆಯು ಶ್ರೀಮತಿ ಸರೋಜಿನಿ ನಾಯ್ಡುರವರ ಅಧ್ಯಕ್ಷತೆಯಲ್ಲಿ ನಡೆಯಿತು. ವರ್ಕಿಂಗ್ ಕಮಿಟಿಯನ್ನು ಎ. ಐ. ಸಿ. ಸಿ. ಯವರು ಚುನಾಯಿಸಬೇಕೆಂದು ಶ್ರೀ. ಸನ್ಯಾಲರು ತಂದ ಸೂಚನೆಯು ಮಂಜೂರಾಗಲಿಲ್ಲ. ರಾಜೀನಾಮೆಯನ್ನು ಹಿಂದೆಗೆದುಕೊಳ್ಳಬೇಕೆಂದು ಬಂದ ಮತ್ತೊಂದು ಸೂಚನೆಯೂ ವಾಪಾಸು ತೆಗೆಯಲ್ಪಟ್ಟಿತು. ಆ ವೇಳೆ ಹೊಸ ಅಧ್ಯಕ್ಷರ ಚುನಾವಣೆಯ ಪ್ರಶ್ನೆ ಬಂದಾಗ ಶ್ರೀ ನರಿಮನರು ಅದು ಡೆಲಿಗೇಟರ ಕರ್ತವ್ಯವಲ್ಲದೆ ಎ. ಐ. ಸಿ. ಸಿ ಸಭೆಯ ಅಧಿಕಾರವಲ್ಲವೆಂಬ ಆಕ್ಷೇಪವೆತ್ತಿದರು. ಅಧ್ಯಕ್ಷೆಯರದನ್ನು ನಿಯಮಬಾಹಿರವೆಂದು ತೀರ್ಮಾನಿಸಿದ ಮೇಲೆ ಬಾಬು ರಾಜೇಂದ್ರ ಪ್ರಸಾದರ ಹೆಸರು ಆ ಸ್ಥಾನಕ್ಕೆ ಸೂಚಿಸಲ್ಪಟ್ಟು ಸರ್ವಾನುಮತಿಯಿಂದ ಮಂಜೂರಾಯಿತು. ಈ ಸಂದರ್ಭದಲ್ಲಿ ಕೆಲವರು 'ಶೇಮ್ ಶೇಮ್' (ನಾಚಿಕೆ/



ಸ್ವಸ್ತಿಕ "ಕಾಂತಿ"
ಟೊಯ್ಲೆಟ್ ಸೋಪ್

ಪ್ರತಿಯೊಬ್ಬರ ಅಚ್ಚುಮೆಚ್ಚಿನದಾಗಿದೆ.

ಹೀಗಿರುವಾಗ ನೀವೂ
ಇದನ್ನೇ ಏಕೆ
ಉಪಯೋಗಿಸಬಾರದು
?

ಅತಿ ಕಡಿಮೆ ಕ್ರಯಕ್ಕೆ
ಅತ್ಯುತ್ತಮ ಟ್ಯೊಲೆಟ್
ಸೋಪೆಂದರೆ
ಇದೊಂದೇ.

ಎಲ್ಲೆಲ್ಲೂ ಮಾರಲ್ಪಡುತ್ತದೆ.

82

ಅಧ್ಯಕ್ಷ ರೂಸ್‌ವೆಲ್ಟರಿಗೆ ಸರ್ವಾಧಿಕಾರಿ ಹಿಟ್ಲರನ ಖಂಡತುಂಡ ಉತ್ತರ.

ಎಂಬ ಬೊಬ್ಬೆಯೆಬ್ಬಿಸಿದರು. ಸಭಾಮಧ್ಯದಲ್ಲಿ ನಡುನಡುವೆ ಅಧ್ಯಕ್ಷೆ, ಶ್ರೀಮತಿ ನಾಯ್ಡುರವರು ಸಭಿಕರನ್ನು ಹಲವು ಸಲ ಎಚ್ಚರಿಸಬೇಕಾಗಿ ಬಂತಲ್ಲದೆ ಪ್ರೇಕ್ಷಕರೂ ಗಲಭೆಯೆಬ್ಬಿಸಿದುದಕ್ಕೆ ಅವರನ್ನು ಹೊರಗೆ ಕಳುಹಿಸುವ ಅವಕಾಶಬರಬಹುದೆಂದು ಕಠಿಣವಾಗಿ ಎಚ್ಚರಿಸಬೇಕಾಯಿತು. ತಾ. 29ರ ಸಭೆ ಮುಗಿದು ಧುರೀಣರು ಹೊರಗೆ ಹೋಗುವಾಗ ಕೂಡಿದ್ದ ಜನಸಂದಣಿಯು ನಿಷೇಧ ಸೂಚಕ ಧ್ವನಿಯೆಬ್ಬಿಸುತ್ತಿತ್ತು. ಪಂಡಿತ ಪಂತರನ್ನೂ ಆಚಾರ್ಯ ಕೃಪಲಾನಿಯವರನ್ನೂ ಬೆಂಬತ್ತಿ ಹೋಗಿ ದೊಡ್ಡ ಬೊಬ್ಬೆಯೆಬ್ಬಿಸಿ ಅವರಿಬ್ಬರೂ ಸ್ವಯಂ ಸೇವಕರ ರಕ್ಷಣೆಯಿಂದ ಹೋಗಬೇಕಾಯಿತು. ಈ ಕೃತ್ಯವನ್ನು ಸುಭಾಷರು ಖಂಡಿಸಿರುವರು.

ಅಧ್ಯಕ್ಷ ರೂಸ್‌ವೆಲ್ಟರಿಗೆ ಸರ್ವಾಧಿಕಾರಿ ಹಿಟ್ಲರನ ಖಂಡ ತುಂಡ ಉತ್ತರ.

ಜರ್ಮನಿಯ ರೀಚ್‌ಸ್ಟಾಗಿನಲ್ಲಿ ಕಳೆದ ತಾ. 28ರಲ್ಲಿ ಹಿಟ್ಲರನ ಭಾಷಣವಾಯಿತು ಅದರಲ್ಲಿ ಅಧ್ಯಕ್ಷ ರೂಸ್‌ವೆಲ್ಟರ ಬಿನ್ನಹದ ಪ್ರತಿಯೊಂದು ವಿಭಾಗದ ಟೀಕೆಯಿತ್ತು. ತಾನು ಅಧಿಕಾರಕ್ಕೆ ಬಂದಂದಿನಿಂದ ನಾವೆಗಳನ್ನು ಮಿತವಾಗಿಡಲು ಬ್ರಿಟಿಷರೊಡನೆ ಸಂಧಾನಕ್ಕೆ ತೊಡಗಿದ್ದೆನೆಂದೂ, ಆದರೆ ಬ್ರಿಟಿಷರು ಜರ್ಮನಿಗೆ ವಿರುದ್ಧವಾಗಿ ವರ್ತಿಸುತ್ತಾ ಬಂದಿರುವರೆಂದೂ, ಆದ್ದರಿಂದ ಅದನ್ನು ಮುಂದೆ ಆ ಕುರಿತು ಸಂಧಾನವಿಲ್ಲವೆಂದೂ ಹಿಟ್ಲರನೆಂದನು. ರೂಸ್‌ವೆಲ್ಟರು ಕೇಳಿದ ಶಾಂತಿ ಅಭಯಕ್ಕೆ ಸಂಬಂಧಪಟ್ಟ ರಾಷ್ಟ್ರಗಳು ಹಾಗೆ ಅಪೇಕ್ಷಿಸಿ ತಕ್ಕ ರಿಯಾಯತಿಗಳೊಂದಿಗೆ ಬಂದು ತನ್ನನ್ನು ಕೇಳಿದಲ್ಲಿ ತಾನದಕ್ಕೆ ಸಿದ್ಧನಿರುವೆನೆಂದು ಹಿಟ್ಲರನ ವಾಣಿ. ಇತರರು ಬಲಪ್ರಯೋಗದಿಂದ ನಾಶಮಾಡಿರುವ ಮಾನವೀಯ ಸಲಕರಣೆಗಳ ಪುನರುದ್ಧಾರವೊಂದೇ ತನ್ನ ಧ್ಯೇಯ. ಆದ್ದರಿಂದ 20 ವರುಷಗಳ ಹಿಂದೆ ಕಳಕೊಂಡಿದ್ದ ಜರ್ಮನಿಯ ಹಕ್ಕನ್ನು ಪುನಃ ಸಂಪಾದಿಸಲು ಕಟಿಬದ್ಧನಾಗಿದ್ದೇನೆ ಹೊರತು ಅನ್ಯರ ಹಕ್ಕನ್ನಪಹರಿಸಲು ಹೊರಟಿಲ್ಲ. ಜರ್ಮನಿಯೊಡನಿಂದು ತನ್ನದಲ್ಲದ ವಸಾಹತುಗಳಿಲ್ಲ. ಹಿಂದೆ ಜರ್ಮನಿಯವುಗಳಾಗಿರದ ಅದರೊಡನೆ ಜೋಡಿಸಲ್ಪಟ್ಟಿರದ ಅದರ ಸಾಮ್ರಾಜ್ಯದಲ್ಲಿ ದೀರ್ಘಕಾಲದಿಂದ ಅಡಕವಾಗಿರದ ವಸಾಹತುಗಳನ್ನು ಜರ್ಮನಿಯು ಇಟ್ಟುಕೊಂಡಿಲ್ಲವೆಂದು ಹಿಟ್ಲರನ ಖಂಡಿತೋಕ್ತಿ.

ರೀಚ್ ರಾಜ್ಯ(ಜರ್ಮನಿ)ವು ಅಮೇರಿಕಕ್ಕಿಂತ ಎಷ್ಟೋ ಪುರಾತನದ್ದೆಂದೂ, ಅದು ಸೋಲುವದಕ್ಕಿಂತ ಮೊದಲು ಇದಕ್ಕಿಂತಲೂ ವಿಶಾಲವಿತ್ತೆಂದೂ ಹೇಳಿ, ಪರಿಷತ್ತುಗಳು ನಿಷ್ಫಲವೆಂದು ಕಂಠೋಕ್ತವಾಗಿ ಹೇಳಿ, ಬ್ರಿಟಿಷ್ ಸಾಮ್ರಾಜ್ಯವು ಮಾನವ ಕುಲಕ್ಕೆ ಭೂಷಣಪ್ರಾಯವಾದುದೆಂಬ ಅಭಿಪ್ರಾಯವು ಸದಾ ಕಾಲ ನನ್ನಲ್ಲಿತ್ತು. ನನ್ನ ರಾಜಕೀಯ ಜೀವನದಲ್ಲೆಲ್ಲಾ ನಾನು ಬ್ರಿಟಿಷರೊಡನೆ ಸ್ನೇಹವನ್ನು ಅಪೇಕ್ಷಿಸಿದ್ದೆ. ಆದರೆ ಬ್ರಿಟಿಷರು ತೀರಾ ಅವಿಶ್ವಾಸವನ್ನು ತೋರಿಸುತ್ತಾ ಬಂದಿರುವರೆಂದು ಹೇಳಿ, ಜರ್ಮನಿಯು ಬಲಹೀನವಾಗಿರುವ ವೇಳೆ ಬ್ರಿಟಿಷರು ಸಾಮ್ರಾಜ್ಯವನ್ನು ಕಟ್ಟಿದ್ದರೆಂದೂ, ಈಗ ಜರ್ಮನಿಯು ಬಲಶಾಲಿಯಾಗಿರುವದಲ್ಲದೆ ತಾನು ಬ್ರಿಟಿಷ್ ಸಾಮ್ರಾಜ್ಯಕ್ಕಿಂತ ಕಡಿಮೆಯಲ್ಲವೆಂದು ತಿಳಿದಿರುವೆನೆಂದೂ ಹೇಳಿದನು.

ಇಂಗ್ಲೆಂಡಿನಲ್ಲಿ ಖಡ್ಡಾಯವಾಗಿ ಸೈನಿಕ ತಯಾರಿ.

ಬ್ರಿಟಿಷ ಮಂತ್ರಿಮಂಡಲವು ಒತ್ತಾಯವಾಗಿ ಸೈನ್ಯಕ್ಕೆ ಸೇರಿಸಿಕೊಳ್ಳುವ ಕಾನೂನನ್ನು ಜಾರಿಗೆ ತಂದಿರುವದು. ಆ ಕುರಿತಾದ ಮಸೂದೆಯನ್ನು ಪಾರ್ಲಿಮೆಂಟು ಸಭೆಗಳ ಮುಂದೆ ತಂದು ಪರಿಸ್ಥಿತಿಯು ಅಂತಹ ವಿಷಮತರವಿದೆ! ಎಂದು ಮಿ. ಚೇಂಬರ್ಲಿನರಾಡಿದರು.

ಪೋಲಂಡಿನ ಮೇಲೆ ಧಾಳಿಯೋ

ಡಾನ್ಜಿಂಗ್ ಪ್ರದೇಶವನ್ನು ಬಿಟ್ಟುಕೊಡಬೇಕೆಂದೂ ಹಾಗೆಯೇ ಆ ಭಾಗಕ್ಕೆ ಮೋಟಾರು ರಸ್ತೆಯೊಂದು ಪೋಲೆಂಡಿನೊಳಗೆ ದೊರೆಯಬೇಕೆಂದೂ ಹಿಟ್ಲರನು ಕೊಟ್ಟಿದ್ದ ಸೂಚನೆಯನ್ನು ಪೋಲಂಡು ಎಷ್ಟಕ್ಕೂ ಒಪ್ಪಲಾರದೆಂದು ತಿಳಿದು ಬಂದಿದೆ. ಪೋಲಂಡನ್ನು ಹೆದರಿಸಿ ಕಾರ್ಯಸಾಧಿಸುವ ಹಿಟ್ಲರನ ಹಂಚಿಕೆಯು ಪೂರ್ಣ ಅಪಜಯ ಹೊಂದಿದಂತೆಯೇ ಸರಿ. ಆ ಕುರಿತು ಪೋಲೆಂಡ್ ಸರಕಾರವು ಸದ್ಯದಲ್ಲಿಯೇ ಸ್ಪಷ್ಟ ಉತ್ತರವನ್ನು ಕೊಡಲಿದೆ.

ಹಿಟ್ಲರ್ ಭಾಷಣದಿಂದ ಅತೃಪ್ತಿ

ಹಿಟ್ಲರನು ರೂಸ್‌ವೆಲ್ಟರಿಗೆ ಕೊಟ್ಟ ಉತ್ತರದಿಂದ ಶಿಕ್ಕಾಟದ ಪರಿಸ್ಥಿತಿಯು ಸುಧಾರಿಸಲ್ಪಡಲಿಲ್ಲವೆಂದೂ, ಶಾಂತಿಸಾಧನೆಯ ಮಾರ್ಗವನ್ನು ಹಿಟ್ಲರನು ತಳಕೊಂಡನೆಂದೂ ಹೆಚ್ಚಿನ ರಾಷ್ಟ್ರಗಳ ಮುತ್ಸದ್ದಿಗಳಭಿಪ್ರಾಯಪಟ್ಟಿದ್ದಾರೆ.

ಸ್ಪೈನಿನ ಗಡಿ ಮುಚ್ಚಿದರು.

ಸ್ಪೈನಿನ ಅಧಿಕಾರಿಗಳು ಲೆಬೆರ್‌ದಸ ಎಂಬಲ್ಲಿಯ ಫ್ರಾನ್ಸು ಮತ್ತು ಸ್ಪೈನಿನ ಗಡಿ ಪ್ರದೇಶವನ್ನು ಸಂಪೂರ್ಣವಾಗಿ ಮುಚ್ಚಿಸಿದ್ದಾರೆ. ಈ ವರ್ತನೆಯ ಕಾರಣವನ್ನು ಕೂಡ ವಿವರಿಸಿಲ್ಲ.

ಅವಿಶ್ರಾಂತ ಹಾರಾಟ

ರಷ್ಯದ ವೈಮಾನಿಕ ಕೊಕ್ಕಿನಾಕಿ ಎಂಬವನು 23ಘಂಟೆ 40ಮಿನಿಟಿನ ವರೆಗೆ ವಿಮಾನ ನಡಿಸಿ ಕೊನೆಗೆ ವಿಮಾನ ಹಾಳಾಗಿ ನ್ಯೂ ಬ್ರಿನ್‌ಸ್ವಿಕ್ ಎಂಬಲ್ಲಿ ಇಳಿಯಬೇಕಾಯಿತು.

ಐರ್ಲೇಂಡಿನ ಅಸಮ್ಮತಿ

ಬ್ರಿಟನು ಖಡ್ಡಾಯ ಸೈನ್ಯ ಸಂಗ್ರಹಕ್ಕೆ ತೊಡಗಿದುದರಿಂದ ಡಿ. ವೆಲರಾರವರು ಆತುರಗೊಂಡಿದ್ದಾರೆ ಈ ಕಾನೂನು ದಕ್ಷಿಣ ಆಯರ್ಲೇಂಡಿಗೂ ಇಂಗ್ಲೆಂಡಿನಲ್ಲಿರುವ ಐರಿಷ್ ಜನರಿಗೂ ಸಂಬಂಧಿಸುವದೋ ಎಂಬುದನ್ನು ತಿಳಿಯಲು, ಅವರು ನಿಶ್ಚಿತವಾಗಿದ್ದ ಅಮೇರಿಕಾ ಪ್ರಯಾಣವನ್ನು ರದ್ದು ಪಡಿಸಿದರು. ಇಂತಹ ಸಂದರ್ಭಗಳಲ್ಲಿ ಯಾವ ವಿಧದ ಘರ್ಷಣೆಯೂ ಆಯರ್ಲೇಂಡಿನೊಡನೆ ಉಂಟಾಗದಂತೆ ನೋಡುವ ತನ್ನ ಧೋರಣೆಯನ್ನು ತಿಳಿಸಿ ದಕ್ಷಿಣ ಆಯರ್ಲೇಂಡಿನಲ್ಲಿ ಈ ಕಾನೂನನ್ನು ಜಾರಿಗೆ ತರುವದಿಲ್ಲವೆಂದು ಬ್ರಿಟನು ಅಭಯಕೊಟ್ಟಿದೆ, ಇಂಗ್ಲೆಂಡಿನಲ್ಲಿದ್ದವರನ್ನು ಮಾತ್ರ ಸೇರಿಸಿಕೊಳ್ಳಲಾಗುವದಂತೆ.

ವೋನ್ ಬ್ರೂಚಿಟ್ಸ್‌ಚರ ಪಯಣ

ಜರ್ಮನಿಯ ವಿ. ಲಿಟರಿ ಸ್ಟಾಫ್ ಅಧಿಕಾರಗಳಾದ ವೋನ್ ಬ್ರೂಚಿಟ್ಸ್‌ಚರು ರೋಮಿಗೆ ಪಯಣಬೆಳೆಸಿದ್ದಾರೆ. ಅಲ್ಲಿ ಹಲವು ದಿನ ನಿಂತು ಇಟಲಿಯ ಅಧಿಕಾರಿಗಳೊಡನೆ ಯುದ್ಧ ವಿಷಯಗಳನ್ನು ಚರ್ಚಿಸಲಿರುವರು ಅಲ್ಲಿಂದ ಲಿಬ್ಯಕ್ಕೂ ಹೋಗುವರಂತೆ. ಇಟಲಿ ಜರ್ಮನಿಗಳು ಪ್ರಾಮುಖ್ಯತೆಯಿತ್ತಿರುವ ಉತ್ತರ ಆಫ್ರಿಕಾ ಇಟಲಿಯನ್ ಕೊಲನಿಗಳ ವಿಷಯ ವ್ಯವಸ್ಥೆ ಕೈಗೊಳ್ಳುವದೇ ಈ ಪಯಣದ ಧ್ಯೇಯವೆಂದು ವಾರ್ತೆಯಿದೆ. ಈ ಜರ್ಮನ್ ಅಧಿಕಾರಿಯು ಯುದ್ಧ ಇಂಜಿನಿಯರ್ ವಿದ್ಯೆಯಲ್ಲಿ ತಜ್ಞರಿದ್ದು ಇಜಿಪ್ಟು ಮತ್ತು ಟ್ಯೂನಿಸ್‌ಗಳಲ್ಲಿ ಯುದ್ಧ ಕಾಲದ ರೀತಿಯನ್ನು ಕಲ್ಪಿಸಬಂದವರೆಂದು ಇಂಗ್ಲೆಂಡಿನಲ್ಲಿ ವಾರ್ತೆ ಹಬ್ಬಿದೆ.

ಸ್ಥಾಪನೆ: ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ, 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಭೇದಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿ ಕೊಡೋಣಾಗುವುದು.

CROWN RUBBER STAMP CO.,
Balmat Road, MANGALORE.
Included by the Mysore Govt. Stores, Purchase Committee in the list of approved firms

ಕೇವಲ ಧರ್ಮಾರ್ಥ!

ಈ ಜಾಹೀರಾತಿನ ಕೂಪನನ್ನು ತರುವವರಿಗೆ ಅವರ ಫೋಟೋವನ್ನು ಧರ್ಮಾರ್ಥವಾಗಿ ತೆಗೆದುಕೊಡಲಾಗುವುದು

ತ್ವರೆ ಮಾಡಿರಿ! ಬೊಂಬಾಯಿ ಪಟ್ಟಣಿಗರೆ ತ್ವರೆ ಮಾಡಿರಿ!!

● ಈ ನಮ್ಮ ಫೋಟೋವನ್ನು ಎನ್‌ಲಾರ್ಜ್‌ಮೆಂಟಿಗೆ ಬರೇ ರೂ. 1/- ಮಾತ್ರ. (ಸೈಜ್ 6"×8").

ಹೊರಗಿನವರು ಈ ಕೂಪನನೊಂದಿಗೆ ತಮ್ಮ ಫೋಟೋ ಕಳುಹಿಸಿದರೆ ಅವನ್ನು 6'×8' ಸೈಜಿನಲ್ಲಿ ರೂ. 2-8-0ಕ್ಕೆ ಎನ್‌ಲಾರ್ಜ ಮಾಡಿಕೊಡಲಾಗುವುದು. 16×20'ರ ದೊಡ್ಡ ಸೈಜಿಗೆ ರೂ. 5 ಮಾತ್ರ. ನಮ್ಮ ಆಫೀಸು ಸಮಯ ಬೆಳಿಗ್ಗೆ 9ರಿಂದ ಸಂಜೆ 7, ಆದಿತ್ಯವಾರ ಬೆಳಿಗ್ಗೆ 9ರಿಂದ ಸಂಜೆ 4 ಗಂಟೆ ತನಕ

ಕೆ. ಎಚ್. ಸಫರ್

276, ಸೂರ್ಯಮಹಾಲ್	ರೋಯಲ್ ಆರ್ಟ್ ಸ್ಟುಡಿಯೋ,
ಗಿರ್ಗಾಮ್‌ರೋಡು, ಬೊಂಬಾಯಿ 14	183 ಹೋರ್ನ್ಬಿರೋಡು, ಬೊಂಬಾಯಿ 14

Established] THE [1906

UNITED INDIA

LIFE ASSURANCE CO., LTD.
HEAD OFFICE—MADRAS.
Trustee:—The Official Trustee to the Government of Madras.

Policies in force exceed **SIX** Crores.
Annual income exceeds - Rs. **30** lakhs.
Total assets exceeds - Rs. **110** lakhs.
Total claims paid exceed Rs. **40** lakhs

The oldest & largest life assurance company of South India accepted by the Government as satisfactory for the purpose of exemption from the operation of the Provident Fund Rules to Teachers in aided Schools & for the purpose of utilisation of P. F. Contributions for payment of premiums on the lives of Government Local Board & Municipal servants.

For further particulars please apply to:—

THE BRANCH MANAGER,
THE UNITED LIFE ASSURANCE COMPANY, LTD.,
FELIX PAI BAZAR, MANGALORE, S. K

K. R. Hebbar, B.A., ORGANISER, UDIPI, S. K. *OR* **K. Keshava Shenoy**, M.A., ORGANISER, Pentlaunpet, MANGALORE.

ಶ್ರೀ. ಕುಲಕರ್ಣಿ ಶ್ರೀನಿವಾಸ ಬಿ.ಎ. ಇವರ ತಾಂಡವ ನೃತ್ಯ.

(೯ನೇ ಪುಟದಿಂದ ಮುಂದರಿಸಿದ್ದು)

ಮುಂಚಾಗ್ರತೆ ವಹಿಸಿ ಕೈಕೊಂಡಿದೆ. ಇದು ಹಿಂದೂದೇಶದ ಮುಂದಿರುವ ಮಹತ್ವದ ಪ್ರಶ್ನೆ. ಈ ಪ್ರಶ್ನೆಯಿಂದಾಗಿ ರಾಷ್ಟ್ರದಲ್ಲಿ ಬಿಕ್ಕಟ್ಟುಂಟಾಗಬಹುದೆಂದು ಪಂಡಿತ ಜವಾಹಿರಲಾಲರು ಎಚ್ಚರಿಕೆಯಿತ್ತಿರುವರು. ಇನ್ನೊಂದು ಮಹಾಯುದ್ಧವಾರಂಭವಾಗಿ ಬ್ರಿಟಿಷರದರಲ್ಲಿ ಭಾಗವಹಿಸುವಂತಾದರೆ, ಭಾರತವು ತನ್ನ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಲು ಮಾಡಬೇಕಾದ ಪ್ರಯತ್ನಗಳು ಬಿಗುವೇರದಿರದು ಆ ಕಾಲದಲ್ಲಿ ಹಿಂದೀಯರು ಕೈಬಾಯಿ ಬಂಧಿಸಲ್ಪಟ್ಟು ತಮ್ಮ ಬೆನ್ನು ಹಿಡಿಯಬೇಕಾಗುವ ಹಾದಿಯೊಂದನ್ನು ಮಾತ್ರ ತೆರೆದಿಡುವ ಸಲುವಾಗಿ ಬ್ರಿಟಿಷ್ ಸರಕಾರವು ಕೈಕೊಳ್ಳುವ ಇಂತಹ ಹಂಚಿಕೆಗಳನ್ನು ಸಕಾಲದಲ್ಲಿ ಭಾರತೀಯರು ಇದಿರಿಸಬೇಕಾಗಿದೆ. ಕಾಂಗ್ರೆಸು ಕೌನ್ಸಿಲು ಕಾರ್ಯಕ್ರಮದ ಶುಷ್ಕವಿಧಾನಗಳೇ ಸರ್ವಸ್ವವೆನ್ನದೆ ತನ್ನ ಹೋರಾಟದ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಹೋರಾಡುವ ಮನೋವೃತ್ತಿಯನ್ನು ಬಲಪಡಿಸಿಕೊಳ್ಳಲು ಇದೀಗ ಸುಮುಹೂರ್ತವೆನ್ನಬಹುದು.

ಆಭಾರಮನ್ನಣೆ.

ನಮ್ಮ ಉಪಸಂಪಾದಕರಾದ ಶ್ರೀ ಎಸ್. ಎಸ್. ಶೆಟ್ಟರು ನವಯುಗದ ಕಾರ್ಯನಿಮಿತ್ತ ಸಂಚಾರದಲ್ಲಿರುವರಷ್ಟೆ. ಎಲ್ಲೆಲ್ಲಿಯೂ ಎಲ್ಲರೂ ಸಹಕಾರ ಸಹಾನುಭೂತಿಯನ್ನಿತ್ತಿರುವರು. ಮದ್ರಾಸಿನಲ್ಲಿ ಕೆಲಮಹನೀಯರು ನಮಗೆ ಹಲವು ಚಂದಾದಾರರನ್ನು ಒದಗಿಸಿಕೊಟ್ಟರು. ಕೆಲವರು ತಾವಾಗಿ ಜಾಹೀರಾತು ಕೊಟ್ಟುದಲ್ಲದೆ, ತಮ್ಮ ಪರಿಚಿತರಿಂದಲೂ ತಕ್ಕ ಪ್ರೋತ್ಸಾಹ ದೊರಕಿಸಿಕೊಟ್ಟರು. ಇವರೆಲ್ಲರಿಗೂ ನಾವು ಚಿರಕೃತಜ್ಞರಿರುವೆವು. ನವಯುಗ ಸಂಸ್ಥಾಪಕರಾದ ಶ್ರೀಮಾನ್ ಎ. ಬಿ. ಶೆಟ್ಟಿ, ಎಮ್. ಎಲ್. ಎ., ಪಾರ್ಲಿಮೆಂಟರಿ ಸೆಕ್ರೆಟರಿ, ಇವರು ನಮಗೆ ಯುಕ್ತ ಸಲಹೆ ಸೂಚನೆಯನ್ನಿತ್ತು ನಮ್ಮನ್ನು ಮುನ್ನಡೆಸಲು ಪ್ರೋತ್ಸಾಹವನ್ನಿತ್ತಿರುವುದಕ್ಕಾಗಿ ನಾವೀ ಬಾರಿ ತಿರುಗೊಮ್ಮೆ ನಮ್ಮ ಕೃತಜ್ಞತಾಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುವೆವು; ಅಲ್ಲದೆ, ಇಲ್ಲಿಯ ಹಲ ಬಂಟ ಮಹಾಶಯರೂ, ವಿದ್ಯಾರ್ಥಿಗಳೂ ನಮಗೆ ನೆರವಾಗಿರುವರು. ಇವರಿಗೂ ನಮ್ಮ ಕೃತಜ್ಞತೆಯು ಸಲ್ಲತಕ್ಕದಿದೆ. ಓನರೇಬಲ್ ಡಾ. ಯು. ರಾಮರಾವ್, ಡಾ. ಶ್ರೀನಿವಾಸರಾವ್, ಡಾ. ಕೃಷ್ಣರಾವ್, ಡಾ. ವೆಂಕಟ್ರಾವ್ ಮೊದಲಾದ ಮಹಾಶಯರಿಗೂ, ಮೋಡರ್ನ್ ಕೆಫೆಯ ಮಾಲಿಕರಾದ ಕೆ. ಸೀತಾರಾಮ ರಾಯರೇ ಮೊದಲಾದವರಿಗೂ ನಾವು ಕೃತಜ್ಞತಾಪೂರ್ವಕ ಧನ್ಯವಾದವನ್ನರ್ಪಿಸುವೆವು ಮಾತ್ರವಲ್ಲದೆ ಮದ್ರಾಸಿನ ರಾಮಕೃಷ್ಣ ಮಠದ ಸ್ವಾಮಿಯವರಿಂದ ಕತ್ಯಾ ನಮ್ಮ ಪ್ರಣಾಮಗಳು. ಸಂಡೆ ಟೈಮ್ಸ್, ಹಿಂದೂ ಮೊದಲಾದ ಪತ್ರಿಕಾ ಮಂಡಳಿಯವರಿಗೂ ನಮ್ಮ ಕೃತಜ್ಞತೆ ಸಲ್ಲತಕ್ಕದಿದೆ. ಅಲ್ಲದೆ ಮೈಸೂರು ಕೆಫೆಯ ಮಾಲಿಕ ಶ್ರೀಮಾನ್ ಕೆ. ಗುರುರಾಜಾಚಾರ್ಯರು ನಮ್ಮನ್ನು ಹಲವು ರೀತಿಯಲ್ಲಿ ಪ್ರೋತ್ಸಾಹಿಸಿ ನೆರವಾಗಿರುವರು. ಅವರಿಗೂ ನಾವು ಚಿರಕೃತಜ್ಞರಿರುವೆವು. ನಮ್ಮ ಚಂದಾದಾರರಿಗೂ ಜಾಹೀರಾತುದಾರರಿಗೂ ತಿರುಗೊಮ್ಮೆ ವಂದಿಸುವೆವು.

ಸಮಾಜಸುಧಾರಣಾ ಪರಿಷತ್ತು

ಇದೇ ಮೇ ತಿಂಗಳ ತಾ. 22ನೇ ಸೋಮವಾರ ಪೂರ್ವಾಹ್ನ ಘಂಟೆ 10-30ಕ್ಕೆ ಮಂಗಳೂರಲ್ಲಿರುವ ಬಂಟರ ಯೂನಿಯನ್ನಿನ ಸಂಘದ ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ 'ಅಳಿಯಸಂತಾನ ಸಮಾಜ ಸುಧಾರಣಾ ಪರಿಷತ್ತು' ಎಂಬ ಸಭೆಯೊಂದನ್ನು ಜರಗಿಸಬೇಕೆಂದು ನಿರ್ಧರಿಸಲಾಯಿತು.

ಜಿಲ್ಲಾ ಬೋರ್ಡು ಕಂಟ್ರಾಕ್ಟರರ ಪರಿಷತ್ತು

ಜಿಲ್ಲಾ ಬೋರ್ಡು ಕಂಟ್ರಾಕ್ಟರರನ್ನೆಲ್ಲಾ ಒಮ್ಮೆ ಕಂಡು ಮಾತಾಡಬೇಕೆಂದು ಜಿಲ್ಲಾ ಬೋರ್ಡು ಪ್ರೆಸಿಡೆಂಟರು ಅಪೇಕ್ಷೆ ಪಟ್ಟಿರುವುದರಿಂದ ಮತ್ತು ಜಿಲ್ಲಾ ಬೋರ್ಡಿನ ಕಂಟ್ರಾಕ್ಟರು ತಮ್ಮ ಸಂಘವೊಂದನ್ನು ಸ್ಥಾಪಿಸಿ ಸಂಘಟಿತರಾಗುವುದು ಅವಶ್ಯವಾದುದರಿಂದ ಜಿಲ್ಲಾ ಬೋರ್ಡು ಕಂಟ್ರಾಕ್ಟರರ ಪರಿಷತ್ತೊಂದು ಇದೇ ತಾ. 14ನೇ ಆದಿತ್ಯವಾರ ಅಪರಾಹ್ನ ಘಂಟೆ 3ಕ್ಕೆ ಉಡುಪಿಯ ಬೋರ್ಡು ಹೈಸ್ಕೂಲಿನಲ್ಲಿ ನಡೆಸಲ್ಪಡುವುದು. ಜಿಲ್ಲಾ ಬೋರ್ಡಿನ ಕಂಟ್ರಾಕ್ಟರರು ಗಳೆಲ್ಲಾ ಈ ಪರಿಷತ್ತಿಗೆ ಬಂದು ಪ್ರೋತ್ಸಾಹಿಸಬೇಕಾಗಿ ವಿನಂತಿ. ಕಂಟ್ರಾಕ್ಟರರ ಸಂಘಸ್ಥಾಪನೆಯ ಕುರಿತು ಸೂಚನೆಗಳನ್ನು ಈ ಕೆಳಗೆ ಸಹಿಹಾಕಿದವರಲ್ಲಿ ಮೊದಲಿನವರ ವಿಳಾಸಕ್ಕೆ ಕಳುಹಿಸಬಹುದು.

ಬಿ. ಎಮ್. ರಘುನಾಥ ಶೆಟ್ಟಿ,
ಕಂಟ್ರಾಕ್ಟರ್, ಬ್ರಹ್ಮಾವರ.

ಆರ್. ಎಮ್. ಅಂದ್ರಾದೆ,
ಕಂಟ್ರಾಕ್ಟರ್, ಉಡುಪಿ.

ಇರ್ವಾಡಿ ವಿಠಲ ಶೆಟ್ಟಿ,
ಕಂಟ್ರಾಕ್ಟರ್, ಬ್ರಹ್ಮಾವರ.

ಬಿ. ಶಿವರಾಮ ಶೆಟ್ಟಿ,
ಕಂಟ್ರಾಕ್ಟರ್, ಬಸ್ರೂರು.

ಕೇಶವರ್ಧಕ :: ನೇತ್ರಾರೋಗ್ಯರಕ್ಷಕ :: ಸುಖದಾಯಕ

ಆಮಲಕೀ ತೈಲ
AMALAKI HAIR OIL

Regd Trade Mark)

ವಿದ್ಯಾರ್ಥಿಗಳಿಗೂ, ಸಕಲ ಸ್ತ್ರೀ ಪುರುಷರಿಗೂ ನಿತ್ಯ ಉಪಯೋಗಕ್ಕೆ ಯೋಗ್ಯವಾದ ಸುಗಂಧ ಪುಷ್ಪಗಂಧ ಮಿಶ್ರಿತ ಉತ್ಕೃಷ್ಟ ಕೇಶವರ್ಧಕ ತೈಲವಿದು. ... ನೇತ್ರರೋಗ ... ಕೇಶಕ್ಕೂ ... ಸಹಾಯಕವಾಗಿದೆ. ಇದನ್ನು ನಿತ್ಯವೂ ಉಪಯೋಗಿಸುತ್ತಿದ್ದರೆ ... ಪುರುಷರಿಗೂ, ... ಸ್ತ್ರೀಯರಿಗೂ ... ಕೇಶಮೂಲಗಳು ... ಮೊದಲಾದ ದೋಷಗಳು ... ಕೇಶಮೂಲಗಳು ದೃಢವಾಗುವುದರಿಂದ ... ಕಪ್ಪಾಗಿ ... ನೇತ್ರಜ್ವಾಲೆ, ... ನಿದ್ರಾಭಂಗ, ಮೊದಲಾದ ಪಿತ್ತ ಜನಿತರೋಗ ... ಸ್ಮೃತಿ, ಮೇಧಾ ... ಮಾನಸಿಕ ಶಕ್ತಿಗಳು ... ಲಭಿಸುವವು.
4 ಔನ್ಸಿನ ಸೀಸೆ ಒಂದರ 0—11—0. 2 ಔನ್ಸಿನ ಸೀಸೆ ಒಂದರ 0—6—0.

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ.
ಡಜನಿಗೆ 0-4-0 100ಮಾತ್ರೆಗಳಿಗೆ ರೂ. 1-5-0, 500ಕ್ಕೆ ರೂ. ೬.
5 ಆಣೆ ಸ್ಟಾಂಪು ಕಳಿಸಿದ್ದಲ್ಲಿ 1 ಡಜನ ಮಾತ್ರೆ ಕಳಿಸಲಾಗುವುದು.
ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ

ಸ್ವದೇಶೀ ಔಷಧಿ ಭಂಡಾರ, (ರಿಜಿಸ್ಟರ್ಡ್) ಕುಂಜಾಲ್,
ಬ್ರಹ್ಮಾವರ ಪೋಸ್ಟು, ದ. ಭಾರತ

ಉಡುಪಿ ಕೃಷ್ಣ ... ನವಭಾರತ ಬುಕ್ ಡಿಪೋದಲ್ಲೂ ನಮ್ಮ ಔಷಧಗಳು ಸಿಗುತ್ತವೆ

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಕಾಣಿಯೂರು ಮಠದ ಕಟ್ಟೆಪ್ರಾಂಗಣ, ಉಡುಪಿ
ಬ್ರಾಂಚ್:—ಹಂಪನಕಟ್ಟೆಯ ಬಳಿ, ಮಂಗಳೂರು.
ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು,
ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ
ಅನುಕೂಲ ಹಾಗೂ ಕೇಂದ್ರಸ್ಥಳ.
ಪ್ರೊಪ್ರೈಟರ್:— ಎಚ್. ಗೋಪಾಳ ನಾಯಕ್.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕಾಲರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.
ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ ಫಿಜಿಸಿಯನ್.

ಧಾತುಪುಷ್ಟಿ ಲೇಹ ಸುವರ್ಣ, ಸಾಲಾಮಿಶ್ರಿ, ಕಲ್ಲಿದ ಮಿಶ್ರ

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ,ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ. 2—8—0.

ಮೇಹ ಕುಠಾರ— ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರಮಾಡುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು ಮೂತ್ರದಲ್ಲಿ ಧಾತು ಹೋಗುವುದು ಸೊಂಟನೋವು ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಅಲ್ಲದೆ ಇಪ್ಪತ್ತು ನಮೂನೆಯ ಮೇಹ ರೋಗಗಳಿಗೆ ದಿವ್ಯಔಷಧ. ಡಬ್ಬಿ ೧ರ ರೂ. 2-8-0.

ಕಸ್ತೂರಿ ಮಿಶ್ರಣ ದಶಮೂಲ— ಪ್ರಸವಾನಂತರ ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ ೧ರ ರೂ. 1—8—0

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:–ನವಭಾರತ ಬುಕ್ ಡಿಪೋ, ಉಡುಪಿ.ಶ್ರೀ ಕೃಷ್ಣ ಫಾರ್ಮಸಿ, ಕುಂದಾಪುರ.ವಿಟ್ಠಲ ನಾರಾಯಣಶೆಟ್ಟಿ,ಟ್ರೇಮ್ ಟರ್ಮಿನಸ್ ಮಜಗಾಂ ಮುಂಬಯಿ

Commonwealth Assurance Co., Ltd., Poona.

ಬೋನಸ್ಸು ದರವು 20% ಹೆಚ್ಚಿದೆ

30—4—38ರ

ಮೂರನೇ ವ್ಯಾಲ್ಯುಯೇಷನ್ ಫಲಿತಾಂಶ

ಜೀವಾವಧಿ	ತ್ರೈವಾರ್ಷಿಕ	ಎಂಡೋಮೆಂಟ್
ರೂ. 54—0—0	ಬೋನಸ್ಸು ಸಾವಿರಕ್ಕೆ	ರೂ 45—0—0

ಕಾಮನ್ ವೆಲ್ತ್

ಏಜನ್ಸಿ ಮತ್ತು ಪಾಲಿಸಿ ವಿವರಗಳಿಗೆ ಇಂದೇ ಬರೆಯಿರಿ.

ಕಾಮನ್‌ವೆಲ್ತ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ.

ಗವಾಂಕರ್ ಅಂಡ್ ಸನ್ಸ್,

ಚೀಫ್ ಏಜಂಟ್ಸ್: ಆನಂದರಾವ್ ಸರ್ಕಲ್, ಬೆಂಗಳೂರು.

ನವೀನ ಪುಸ್ತಕಗಳು

೧. **ಕರಿನೀರು**—ರಮ್ಯ ಭೀಷಣ ಕಾದಂಬರಿ ೪೦೦ ಪುಟ ನುಣುಪು ಕಾಗದ ಬೆಲೆ ಎರೂಪ್ಯ.
೨. **ಹನ್ನೆ**—ಐತಿಹಾಸಿಕ ನಾಟಕ, ಪುಟ ೮೦ ನುಣುಪು ಕಾಗದ, ಬೆಲೆ ೬ ಆಣೆ
೩. **ಬಲಿದಾನ**—ಬುದ್ಧ ಕಾಲೀನ ಐತಿಹಾಸಿಕ ಕಾದಂಬರಿ ೨೧೬ ಪುಟ ಬೆಲೆ ರೂ. ೧-೪-೦.
೪. **ಎಚ್ಚಮ್ಮನಾಯಕ**—ವಿಜಯನಗರಕ್ಕೆ ಸಂಬಂಧಿಸಿದ ಕಥಾನಕವು ೧೮೮ ಪುಟ ಬೆಲೆ ೮ ಆಣೆ.
೫. **ಆನಾಥನಂದಿನಿ**—ಚಂದ್ರಹಾಸನ ಕಾಲದ ಪೌರಾಣಿಕ ಕಾದಂಬರಿ ೩೦೦ ಪುಟ ಬೆಲೆ ರೂ. ೧-೮-೦

ವಿಳಾಸ:—ಶ್ರೀ ಶೇಷಾಚಲ ಪ್ರೆಸ್, ಪೊ. ಆನಂದವನ (ಹಾವೇರಿ) ಧಾರವಾಡ.

ದಕ್ಷಿಣ ಕನ್ನಡ

ಸುರತ್ಕಲ್—ಇಲ್ಲಿಯ ಇಶ್ವ ವಿದ್ಯಾದಾಯಿನೀ ಶಾಲೆಯ 22ನೇ ವರ್ಷ ವರ್ಧಂತ್ಯುತ್ಸವವು ತಾ. 23-4-'39ರಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳಾದ ಜನಾಬ್ ಗುಲಾಂ ದಸ್ತಗಿರಿ ಸಾಹೇಬ ಬಹದ್ದೂರ್ ಎಂ. ಎ. ಎಲ್. ಟಿ. ಇವರ ಮಾನ್ಯ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶಾಲಾ ಹಳೇ ವಿದ್ಯಾರ್ಥಿ ಶ್ರೀ ಸಿ. ರಾಮಮೂರ್ತಿ ಬಿ. ಎ. ಇವರ ಅಭಿನಂದನವಾದ ಬಳಿಕ ಚಿಕ್ಕ ಹುಡುಗಿಯರ ನೃತ್ಯ, ಅಭಿನಯಗೀತಗಳು, ನಾಟಕ, ಪ್ರಹಸನಗಳು, ಲೇಜಿಮ್ ಆಟ, ಮೂಕಚಿತ್ರಾಭಿನಯ ಮುಂತಾದ ವಿವಿಧ ವಿನೋದಾವಳಿಗಳು ಅತ್ಯಂತ ಮನೋರಂಜಕವಾಗಿ ನಡೆದುವು. ಶ್ರೀ ವಿದ್ವಾನ್ ಯು. ರಾಮರಾಯರು ಶಾಲಾಧ್ಯಕ್ಷರಾಗಲಿಂದು ಕೊಟ್ಟರು. ಸಭಾಧ್ಯಕ್ಷರು ಶಾಲೆಯ ಉತ್ತಮಸ್ಥಿತಿಯನ್ನೂ, ಪ್ರಕೃತ ವಿದ್ಯಾಭ್ಯಾಸ ಕ್ರಮದಲ್ಲಾಗಲಿರುವ ಸುಧಾರಣೆಗಳನ್ನೂ ಪ್ರಸ್ತಾಪಿಸಿ ಶಾಲೆಯ ಉತ್ತರೋತ್ತರ ಅಭಿವೃದ್ಧಿಯನ್ನು ಬಯಸಿದರು. ರಾತ್ರಿ ಘಂಟೆ 10ಕ್ಕೆ ಶಾಲಾ ಹಳೇ ವಿದ್ಯಾರ್ಥಿಸಂಘದವರು "ರಾಜ್ಯದ್ರೋಹ" ಎಂಬ ಐತಿಹಾಸಿಕ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು.

ದಿ ಯಂಗ್ ಮೆನ್ಸ್ ಬೋವಿ ಯು ಸೋಸಿಯೇಶನ್, ಮುಂಬಾಯಿ— ಈ ಮೇಲಿನ ಸಭೆಯವರು ರಾತ್ರಿ ಶಾಲೆಗೆ ಹೋಗಿ ಕಲಿಯಲು ಸಾಧ್ಯವಿಲ್ಲದ ಸ್ವಜಾತಿ ಯುವಕರಿಗೆ ವಿದ್ಯೆ ಕಲಿಸುವ ಏರ್ಪಾಡು ಮಾಡಿರುವರು. ಪ್ರಥಮ ಮತ್ತು ನಾಲ್ಕನೇ ಕ್ಲಾಸನ್ನು ಏರ್ಪಡಿಸಿ ಇಂಗ್ಲಿಷ್, ಕನ್ನಡ ಮತ್ತು ಲೆಖ್ಖವನ್ನು ಕಲಿಸಲಿರುವರು. ಇದೇ ತಾ 30-4-39ರಲ್ಲಿ ಇದರ ಪ್ರಾರಂಭೋತ್ಸವವು ಶ್ರೀಯುತ ಎಂ. ಉಚ್ಚಿಲ್‌ರವರ ಅಧ್ಯಕ್ಷತೆಯಿಂದ ಜರಗಿ ತಾ. 1-5-39ರಿಂದ ರಾತ್ರಿ ಘಂಟೆ 7ರಿಂದ 9ರ ವರೆಗೆ ಸಭೆಯ ಕೋಣೆಯು ಕಲಿಸಲು ಪ್ರಾರಂಭವಾಗಿರುವದು. ಈ ಎರಡು ಕ್ಲಾಸುಗಳಲ್ಲಿ ಸೇರಿ ಕಲಿಯಬೇಕೆಂಬ ಮುಂಬಾಯಿಯ ಸ್ವಜಾತಿ ಯುವಕರು ಈ ಅಪೂರ್ವಸಂದರ್ಭವನ್ನು ಕಳಕೊಳ್ಳದೆ ವಿದ್ಯೆಯನ್ನು ಪಡೆಯಬೇಕಾಗಿ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಯಿ—ಈ ಮೇಲ್ಕೋರಿದ ಮಂಡಳಿಯ 36ನೇ ವಾರ್ಷಿಕ ಮಹಾ ಸಭೆಯನ್ನು ಇದೇ ಮೇ ತಿಂಗಳ ತಾರೀಕ 14ನೇ ಆದಿತ್ಯವಾರ ಅಪರಾಹ್ನ ಘಂಟೆ 2ಕ್ಕೆ (S. T.) ನಂ. 33ನೇ ನಾನಾಬಾಯಿ ಲೇನ್‌ನಲ್ಲಿರುವ ಮಂಡಳಿಯ ಹೋಲಿನಲ್ಲಿ ಮಂಡಳಿಯ ಅಧ್ಯಕ್ಷರಾದ ಶ್ರೀಯುತ ಚಂದರ್ ಪಿ. ಕರ್ಕೇರರ ಅಧ್ಯಕ್ಷತೆಯಲ್ಲಿ ಜರಗಿಸಲು ನಿಶ್ಚಯಿಸಿರುವದರಿಂದ ಮೆಂಬರರೆಲ್ಲರೂ ಕ್ಲಪ್ತ ಸಮಯದಲ್ಲಿ ಹಾಜರಾಗಿ ಸಭಾ ಕಾರ್ಯವನ್ನು ಸಾಂಗಗೊಳಿಸಬೇಕಾಗಿ ಪತ್ರಕಾರ್ಯದರ್ಶಿಗಳು ಕೋರುತ್ತಾರೆ.

ಪೆಟ್ರೋಲ್ ಮಾರಾಟಕ್ಕೆ ಕರ

ಈ ಸಂಬಂಧದ ಮುಸೂದೆಯೊಂದು ಸಂಯುಕ್ತ ಪ್ರಾಂತ್ಯದ ಎಸೆಂಬ್ಲಿಯ ಮುಂದೆ ಬಂದಿದೆ.



To Insure is

The Husband's duty. The wife's right and the child's Claim Hence seekfor a policy of

THE ASAIN ASSURANCE CO., LTD.

The safest and one of the largest Indian Concerns.

Head Office:- Asian Buildings Ballard Estate, Bombay.

Branch Office: - Hampankatta, Mangalore.

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಲಾಭದಾಯಕವಾದ ಮತ್ತು ಸುಭದ್ರತೆಯ ನಿಧಿಯನ್ನೊಳಗೊಂಡ ಈ ಕಂಪೆನಿಯಲ್ಲಿ ನಿಮ್ಮ ವಿಮಾ ಇಳಿಸಿರಿ.

ಏಜಂಟರು ಪ್ರಾಮುಖ್ಯ ಪಟ್ಟಣಗಳಲ್ಲೆಲ್ಲಾ ಬೇಕಾಗಿದ್ದಾರೆ. ಹೆಚ್ಚಿನ ವಿವರಕ್ಕಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

J. A. PUTRAN, Branch Manager, Mangalore.

ThE CANARA INDUSTRIAL & BANKING SYNDICATE LTD, KANHANGAD.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಕಾಂಞಂಗಾಡು.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಲ್ಲಿ ಅಡವಿಟ್ಟ ಚಿನ್ನದ ನಗಗಳನ್ನು ಬೇಂಕಿನ ನಿಯಮಗಳಿಗೆ ಅನುಸಾರವಾಗಿ ಏಲಂ ಮಾಡಬೇಕಾಗಿ ಕಾಸರಗೋಡು ಡಿ. ಮು. ಕೋರ್ಟು R. E. P. ನಂಬ್ರ 689/38ನೇ ಅಮಲ್‌ಜ್ಯಾರಿಯಲ್ಲಿ ತಾ. 19-4-1939ರಲ್ಲಿ ಆದ ಹುಕುಂ ಪ್ರಕಾರ ಇದೇ ತಾರೀಕು 8ನೇ ಸೋಮವಾರ (8th May 1939) ದಿವಸ ಮಧ್ಯಾಹ್ನ ಘಂಟೆ 2ಕ್ಕೆ ಸದ್ರಿ ನಮ್ಮ ಕಾಂಞಂಗಾಡು ಆಫೀಸಿನಲ್ಲಿ ಬೇಂಕಿನ ನಿಯಮಗಳಿಗನುಸಾರವಾಗಿ ಬಹಿರಂಗವಾಗಿ ಏಲಂ ಮಾಡಲಾಗುವದು. ಏಲಂ ಮುಂದರಿಸುವ ಯಾ ಕಾಯಂ ಮಾಡುವ ಹಕ್ಕು ಬೇಂಕಿನ ಮೇಲೆ ಹೊಂದಿಕೊಂಡಿರುವುದು.

ಲೋನು ನಂಬ್ರ ಮತ್ತು ತಾರೀಕು	ಹೆಸರು ಮತ್ತು ವಿಳಾಸ	ಮೊಬಲಗು ರೂಪಾಯಿ
197/38 29-1-38	ಬಿ. ರಾಘವೇಂದ್ರ ರಾವ ಪ್ರಭು, ಆಜಾನೂರು ಗ್ರಾಮ ವ್ಯಾಪಾರಿ ಬೆಳ್ಳಿಕ್ಕೋತು, ಕಾಂಞಂಗಾಡು, ದ. ಕ.	140—0—0
589/38 12-4-38	ಡಿ. ಡಿ. ಡಿ. ಡಿ.	47—0—0

ಆಫೀಸು ಕಾಂಞಂಗಾಡು 1-5-1939

K. Ganesha Baliga
Accountant

ಶೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಗಡಿನಲ್ಲಿ ಸಮಾನಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಸಮಾಚಾರ ಸಂಗ್ರಹ

ಅಸ್ಸಾಮಿನಲ್ಲಿ ಅಫೀಮು ನಿಷೇಧ

ಆಸ್ಸಾಮು ಸರಕಾರವು ಅಫೀಮು ನಿಷೇಧವನ್ನು ಅಮಲಿನಲ್ಲಿ ತಂದಿರುವದು. ಇದರಿಂದಾಗಿ ಕಳೆದ ತಾ. 21ರಿಂದ 28ರ ವರೆಗೆ 3000ಮಂದಿ ಅಫೀಮು ಭಕ್ಷಕರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕಾಗಿ ಬಂದಿರುವರೆಂದು ತಿಳಿದುಬರುತ್ತದೆ.

ಗಾಂಧಿ ಭಾವಚಿತ್ರಕ್ಕೆ ವಿರೋಧ

ಸೇಲಮ್ ಮುನಿಸಿಪಲ್ ಕೌನ್ಸಿಲಿನಲ್ಲಿ ಗಾಂಧೀ ಭಾವಚಿತ್ರಗಳನ್ನು ಮುಸಲ್ಮಾನ್ ಶಾಲೆಗಳಲ್ಲಿಡಬಾರದೆಂದು ಸೂಚನೆ ಬಂದು ಆ ಕುರಿತು ತೀವ್ರ ಚರ್ಚೆ ನಡೆಯಿತು. ಕೊನೆಗೆ ಬಿರುಸು ಮಾತುಗಳಿಂದ ಜಗಳವಾಗಿ ಕಾಂಗ್ರೆಸ್ ಪಕ್ಷದ 10ಮಂದಿ ಮೆಂಬರರು ಸಭೆಬಿಟ್ಟು ಹೊರ ನಡೆದರು.

ಗೇಂಗ್‌ಪುರದಲ್ಲಿ ಗೋಳೀಬಾರ್

ಗೇಂಗ್‌ಪುರ ಸಂಸ್ಥಾನದಲ್ಲಿ ಪೋಲೀಸರು ಮತ್ತು ಸೈನಿಕರು ಜನರ ಹಿಂಡಿನಮೇಲೆ ಗೋಳಿಬಾರು ಮಾಡಿದರು. ಪರಿಣಾಮವಾಗಿ 20 ಜನರು ಮರಣ ಹೊಂದಿದರಲ್ಲದೆ 40ಜನರು ಅಪಾಯಕರ ಪರಿಸ್ಥಿತಿಯಲ್ಲಿದ್ದಾರೆ. ಪೋಲಿಸರು ಮಾಡಿದ ದಸ್ತಗಿರಿಯೊಂದರಿಂದಾಗಿ ಈ ಗಲಭೆಯೆದ್ದಿತೆಂದು ವಾರ್ತೆ.

ಓಯಾ ಸುನ್ನಿ ತಿಕ್ಕಾಟ

ಸಂಯುಕ್ತ ಸರಕಾರವು ಕೂಡಲೇ ಕಾರ್ಯಕ್ಕೆ ಕೊಟ್ಟದಿದ್ದಲ್ಲಿ ಶಿಯಾ ಹೆಂಗಸರು ಪರ್ದೆಯನ್ನು ಬಿಟ್ಟು ರಸ್ತೆಗಿಳಿದು ಸರಕಾರದ ವರ್ತನೆಯನ್ನು ನಿಷೇಧಿಸಲು ಸಿದ್ಧರಿರುವರೆಂದೂ, ತನ್ನ ಸೂಚನೆ ಮೇರೆಗೆ ಉಲೇಮಗಳು ಪತ್ರಗಳನ್ನು ಹೊರಡಿಸಿ ಅದನ್ನು ಈ ಪರಿಗೆ ತಡೆಗಟ್ಟಿರುವರೆಂದೂ ಸರಕಾರದ ವರ್ತನೆಯು ಸುನ್ನೀ ಸಂಘದವರಿಗೆ ಅನುಕೂಲವಾಗಿರುವದೆಂದೂ ಶಿಯಾ ಧುರೀಣರಾದ ಸರ್. ಸುಲ್ತಾನ್ ಅಹಮ್ಮದರು ಆನುತಿದ್ದಾರೆ. ಈ ಹೋರಾಟವಾರಂಭವಾದಂದಿನಿಂದ 5000 ಶಿಯಾಗಳು ದಸ್ತಗಿರಿಗೊಳಗಾಗಿರುವರು.

ಬನ್ನುವಿನಲ್ಲಿ ಉಪದ್ರಕಾರರು

ಪೇಶಾವರದ ಬನ್ನು ಎಂಬಲ್ಲಿ ಈಗಲೂ ದರೋಡೆಗಾರರು ಆಡಗಿ ಕೊಂಡಿದ್ದು ಹಾದಿ ಹೋಕರಿಗೆ ಉಪದ್ರಕೊಡುತ್ತಿದ್ದಾರೆ. ತಾ 27ರಲ್ಲಿ ಆ ಮಾರ್ಗವಾಗಿ ಹೋಗುತ್ತಿದ್ದ ಲಾರಿಯೊಂದರ ಮೇಲೆ ಪರ್ವತಭಾಗದಿಂದ ಗುಂಡೆಸೆಯಲ್ಪಟ್ಟಿತು.

ಗಾಂಧಿಸೇವಾ ಸಂಘದ ಸಭೆ

ಚಂಪಾರಣ್ಯ ಜಿಲ್ಲೆಯ ಹಳ್ಳಿಯೊಂದರಲ್ಲಿ ಇನ್ನು ಕೆಲವು ದಿನಗಳೊಳಗೆ ಕೂಡಲಿರುವದು. ಸಿದ್ಧತೆ ನಡೆಯುತ್ತಿದೆ. ಮಹಾತ್ಮಾ ಗಾಂಧಿಯವರಿಗೆ ಹಿಂದಿನ ಮುಖಿಗಳ ಪರ್ಣಕುಟೀರದ ಮಾದರಿಯ ಪರ್ಣ ಕುಟೀರವನ್ನು ರಚಿಸಲಾಗಿದೆ.

ರಾಮದುರ್ಗ ಪ್ರಕರಣದ ಕುರಿತು

ಮಹಾತ್ಮಾ ಗಾಂಧಿಯವರ ವೇದನಾಪೂರ್ಣ ಹೇಳಿಕೆ.

ರಾಮದುರ್ಗದಲ್ಲಿ ಕೆಲವು ಕಾಂಗ್ರೆಸ್ ಕೆಲಸಗಾರರನ್ನು ದಸ್ತಗಿರಿಮಾಡಿದರೆಂದು ಜನರು ರೊಚ್ಚಿಗೆದ್ದು ಜೈಲುಗೇಟಿಗೆ ಬೆಂಕಿಕೊಟ್ಟು ಕಾವಲಿನವರನ್ನು ಕೊಂದು ಪೋಲೀಸರ ಗೋಳಿಬಾರಿಗೊಳಗಾಗಿದ್ದರಷ್ಟೆ. ಈ ಶೋಚನೀಯ ಘಟನೆಯ ಕುರಿತು ತಾರೀಕು ೨೯—೪—೩೯ರ 'ಹರಿಜನ'ದಲ್ಲಿ ಗಾಂಧಿಯವರೊಂದು ಲೇಖನ ಬರೆದು, ಕಾಂಗ್ರೆಸ್ ಕೆಲಸಗಾರರಿಗೆ, ಅದರಲ್ಲೂ ಪ್ರತ್ಯೇಕವಾಗಿ ಕರ್ನಾಟಕದ ಕಾಂಗ್ರೆಸ್‌ವಾಲರಿಗೆ ಹಿತೋಪದೇಶವಿತ್ತಿದ್ದಾರೆ. ಆ ಲೇಖನದ ಸಾರಾಂಶವನ್ನಿಲ್ಲಿ ಕೊಡಲಾಗಿದೆ.

ನಾನು ರಾಮದುರ್ಗದ ಪ್ರಕರಣದ ಕುರಿತು ಈ ವರೆಗೆ ಒಂದೇ ಒಂದು ಶಬ್ದವನ್ನು ನುಡಿಯಲಿಲ್ಲ. ತನ್ನಿಂದ ವೃತ್ತಾಂತವನ್ನು ತಿಳಿಯದೆ ನಾನಾಗಿ ಯಾವ ಅಭಿಪ್ರಾಯವನ್ನೂ ಕಟ್ಟಿಕೊಳ್ಳಕೂಡದೆಂದು. ಡಾ|| ಹರ್ಡೀಕರರಿಂದ ನನಗೆ ತಂತಿ ಬಂದಿತ್ತು. ಮತ್ತು ರಾಜಕೋಟೆಯಿಂದಾಗಿ ಇತರ ಕೆಲಸಗಳಿಗೆ ತಲೆಹಾಕಲು ಕ್ಷಣವೂ ಬಿಡುವು ನನಗೆ ದೊರೆಯದಾಯಿತು. ನಾನು ಈಗ ತಾನೇ ರೈಲಿನಲ್ಲಿರುವಾಗ ಶ್ರೀಗಳಾದ ದಿವಾಕರ್, ಕೌಜಲಗಿ ಮತ್ತು ಡಾ|| ಹರ್ಡೀಕರರಿಂದ ತಯಾರಿಸಲ್ಪಟ್ಟ ವರದಿಯ ನಕಲನ್ನು, ಶ್ರೀ|| ದಿವಾಕರರ ಸುದೀರ್ಘ ಟಿಪ್ಪಣಿಯನ್ನೂ ಪರಿಶೀಲಿಸಿದ್ದೇನೆ. ಈ ವಿಷ್ಯವಾನದ ಮೇಲಿನ ಶ್ರೀ|| ಗಂಗಾಧರ ರಾಯರ ಸೂಚನೆಗಳನ್ನೂ ಪರಾಮರ್ಶಿಸಿದ್ದೇನೆ. ರಾಮದುರ್ಗದ ಪ್ರಜಾಸಂಘದ ಅಧ್ಯಕ್ಷ ಶ್ರೀ|| ಮುನವಳ್ಳಿ ಮತ್ತು ಶ್ರೀ|| ನಾಗಡಿಯವರು ನನ್ನನ್ನು ಕಂಡು ಸಂಭಾಷಿಸಿದ್ದಾರೆ. ಶ್ರೀಗಳಾದ ದಿವಾಕರ್ ಕೌಜಲಗಿ, ಹರ್ಡೀಕರರ ವರದಿಯು ನಿರ್ವಿಕಾರತೆಯಿಂದ ಕೂಡಿದ್ದು, ಒಳಗೊಂಡ ವಿಷಯಗಳ ಮಟ್ಟಿಗೆ ಸಮಾಧಾನಕರವಿದೆ. ಅದರ ಕೊನೆಯ ಭಾಗವು ಹೀಗಿದೆ—

'ಅಧಿಕಾರಿಗಳು ಅಂತಹ ದೊಡ್ಡ ಸನ್ನಿವೇಶದಲ್ಲಿ ಯುಕ್ತಿಯುಕ್ತವಾಗಿ ವರ್ತಿಸದೆ ಪೋಲೀಸರನ್ನು ತಮ್ಮಿಚ್ಛೆಯಂತೆ ವರ್ತಿಸಲು ಬಿಟ್ಟರೆಂದು ನಮ್ಮ ಅಭಿಪ್ರಾಯ. ಅವರು ಸ್ವಲ್ಪ ತಾಳ್ಮೆಯಿಂದ ವರ್ತಿಸಿ, ಹಿಂದೆ ಹಲವು ಬಾರಿ ಮಾಡಿದಂತೆ ಪ್ರಜಾಸಂಘದ ಕೆಲಸಗಾರರಲ್ಲಿ ನಂಬಿಕೆಯಿಟ್ಟು ವರ್ತಿಸುತ್ತಿದ್ದರೆ ಪರಿಸ್ಥಿತಿಯನ್ನು ಹತೋಟಿಗೆ ತರಲು ಸಾಧ್ಯವಿತ್ತೆಂದು ನಮ್ಮ ನಂಬಿಕೆ. ಆಗಿನ ವಾತಾವರಣವು ಪ್ರಕ್ಷುಬ್ಧವಿದ್ದರೂ ಆ ಜನಸಮೂಹದ ಮೇಲೆ ಪಶುಬಲವನ್ನು ಪ್ರಯೋಗಿಸುವದು ಭಯಂಕರವಿತ್ತೆಂದು ನಾವು ನಂಬಲಾರೆವು. ಅದು ಜನರು ಮತಿಮರೆತು ಉದ್ರೇಕಗೊಳ್ಳುವಂತೆ ಮಾಡುತ್ತದೆ. ಅವರು ಗಾಳಿವರ್ತಮಾನಗಳನ್ನು ನಂಬಿ ಒಮ್ಮೆಯೇ ಸ್ಥಿತಿಮಿತಿಗಳನ್ನು ಮರೆತಂತೆ ಕಾಣುತ್ತದೆ.

ಆದರೆ ಎಂತಹ ಕ್ಷುಬ್ಧ ವಾತಾವರಣವೇ ಇರಲಿ, ಅಲ್ಲಿ ಆಚರಿಸಲ್ಪಡುವ ಯಾವುದೇ ಹಿಂಸೆಯನ್ನು ಸಮರ್ಥಿಸುವುದರಲ್ಲಿ ಎಳ್ಳಷ್ಟು ನ್ಯಾಯವಿಲ್ಲ. ಎಷ್ಟೆಷ್ಟು ಬಲವಾಗಿ ಉದ್ರೇಕಜನ್ಯ ಪರಿಸ್ಥಿತಿಯುಂಟಾಗುವದೋ ಅಷ್ಟಷ್ಟು ಬಲವಾಗಿ ಅಹಿಂಸಾತ್ಮಕ ಹುರುಪಿನ ಪ್ರದರ್ಶನಕ್ಕೆ ಸಂದರ್ಭ ಮತ್ತು ಆವಶ್ಯಕತೆ ದೊರೆಯುತ್ತದೆ. ಇದು ನಮ್ಮ ನಿಶ್ಚಿತಾಭಿಪ್ರಾಯ. ಎಂತಹ ಸಂದರ್ಭದಲ್ಲಾದರೂ, ಆಗಕಿಕ್ಕ ಕಿಂಚಿತ್ ಹಿಂಸೆಯನ್ನು ಕೂಡ ನಾವು ಸಮರ್ಥಿಸಲಾರೆವು. ಜನತೆಯ ತಲೆಯಲ್ಲಿ ಆದರ್ಶವಾಗಿದ್ದ ಅಹಿಂಸಾತ್ಮಕ ಶಕ್ತಿಯನ್ನು ಹತೋಟಿಯಲ್ಲಿಡುವ ಶಕ್ತಿಯು ಪ್ರಜಾಸಂಘಕ್ಕಿರಲಿಲ್ಲವೆಂಬುದನ್ನು ಸಂಗತಿಗಳು ಸ್ಪಷ್ಟವಾಗಿ ತೋರಿಸುತ್ತಿವೆ. ಅದು ಬಹಳ ದುಃಖಕರವಾದ ಸಂಗತಿ. ಮತ್ತು ಈ ಶೋಚನೀಯ ವಿದ್ಯಮಾನವು ಸಂಸ್ಥಾನಗಳೊಳಗಿನ ಪ್ರತಿಯೊಂದು ಪ್ರಜಾಚಳವಳಿಯನ್ನು ಕಠೋರವಾಗಿ ವಿರೋಧಿಸುವಂತೆ ಮಾಡುವದೆಂಬುದು ನಿಶ್ಚಯ. ಇದು ಕ್ಷೇತ್ರದಲ್ಲಿರುವ ಪ್ರತಿಯೊಬ್ಬ ಕೆಲಸಗಾರನಿಗೂ ದೊರೆತ ಸ್ಪಷ್ಟ ಎಚ್ಚರಿಕೆಯಾಗಿದೆ. ಜನರು ಅಹಿಂಸೆಯಲ್ಲಿ ಸರಿಯಾದ ತರಬೇತಿ ಹೊಂದಿ ಶಿಸ್ತನ್ನು ಸಂಪೂರ್ಣವಾಗಿ ಕಲಿಯುವರೆಂದು ಖಂಡಿತವಾಗದೆ ಯಾವುದಾದರೊಂದು ದೊಡ್ಡ ಸಾರ್ವಜನಿಕ ಚಳವಳವನ್ನಾರಂಭಿಸುವದು ಮೂರ್ಖತನದ್ದಾಗುವದೆಂಬುದನ್ನು ಪ್ರತಿಯೊಬ್ಬನೂ ತಿಳಿದಿರತಕ್ಕದ್ದು.

ಹಿಂಸೆ ಮತ್ತು ಅಸತ್ಯವೆಂಬ ಅವಳಿಜವಳಿಗಳು

ನನ್ನ ಮುಂದಿರುವ ಸಾಕ್ಷ್ಯಗಳಿಂದ, ಸನ್ನಿವೇಶವು ಹೇಗಿದ್ದರೂ ಜನರೆಬ್ಬಿಸಿದ ಗೊಂದಲವು ಉದ್ರೇಕ, ಕ್ರೂರತನ ಹಾಗೂ ಪೂರ್ವಸಿದ್ಧತೆಯಿಂದ ಕೂಡಿತ್ತೆಂಬ ನಿರ್ಧಾರಕ್ಕೆ ನಾನು ಬಂದಿದ್ದೇನೆ. ಎರಡು ಸಾವಿರಕ್ಕೆ ಮಿಕ್ಕಿದ ಹಳ್ಳಿಗರು ಪ್ರತೀಕಾರೋನ್ಮತ್ತತೆಯಿಂದ ಗುಂಪುಗೂಡಿದ್ದರು. ಧಸ್ತರನ್ನು ಮತ್ತು ಇತರ ಕೈದಿಗಳನ್ನು ಬಿಡುಗಡೆಮಾಡಿಸುವದೇ ಅವರ ಉದ್ದೇಶವಾಗಿತ್ತು. ಜನರು ದೊಂಬಿಯೆಬ್ಬಿಸಿದರೆ ಆ ಅಪವಾದದಿಂದ ಕಾಂಗ್ರೆಸಿನವರು ತಪ್ಪಿಸಿಕೊಳ್ಳಲಾರರು. ಹಳ್ಳಿಗರಿಗೆ ತಪ್ಪುರೀತಿಯ ಉಪದೇಶವು ಕೊಡಲ್ಪಟ್ಟಿತ್ತು. ಒಂದನೆಯದು ತಾವ್‌ಪುರವು ಒಂದನೆಯದಾಗಿ, ರಾಮದುರ್ಗವು ಎರಡನೆಯದಾಗಿ ಬೆಚ್ಚಿಬೀಳಿಸತಕ್ಕಂಥವುಗಳು. ರಾಮದುರ್ಗದ ರಾಜಾಸಾಹೇಬರು ಕಾಂಗ್ರೆಸಿನ ಮಿತ್ರರೆಂಬ ಸತ್ಯಸ್ಥಿತಿಯನ್ನು ಯಾರೂ ಅಲ್ಲಗಳೆಯಲ್ಲಿ. ಅಂಥವರನ್ನು ಯೋಗ್ಯ ರೀತಿಯಿಂದ ಕಾಣುವ ಅಗತ್ಯವಿದೆ. ಪರಿಸ್ಥಿತಿಯು ಉದ್ರೇಕವಾಗಿತ್ತು ಇಲ್ಲ ಎಂಬುದರ ಕುರಿತು ಬಂದಿರುವ ಸಾಕ್ಷ್ಯಗಳ ಕಡೆಗೆ ನಾನೀಗ ಗಮನಕೊಟ್ಟಿಲ್ಲ. ಆದರೆ ಎಂತಹ ಪರಿಸ್ಥಿತಿಯುಳ್ಳದ್ದಾದರೂ ಸಾರ್ವಜನಿಕ ಹಿಂಸೆಗೆ ಉದ್ರೇಕಜನ್ಯಸ್ಥಿತಿಯನ್ನು ಹೊಣೆಯನ್ನಾಗಿ ಮಾಡಿ ವಾದಿಸುವುದು ಎಂದಿಗೂ ಕಾಂಗ್ರೆಸಿನ ಧೋರಣೆಯಲ್ಲ. ಕಾಂಗ್ರೆಸಿನ ಈ ಮೂಲಭೂತ ಧ್ಯೇಯದಲ್ಲಿ ಚಪಲತನ ತೋರಿದೆವಾದರೆ ನಾವು ಸರ್ವಸ್ವವನ್ನೂ ಕಳಕೊಳ್ಳಲಿರುವೆವು. ನಾನು ರಾಮದುರ್ಗದ ಪ್ರಕರಣದ ಮೊದಲೇ ನನ್ನ ಶ್ವಾಸೋಚ್ಛ್ವಾಸದ ಗಾಳಿಯಲ್ಲೇ ನನಗೆ ಹಿಂಸೆಯ ವಾಸನೆ ಬರುತ್ತಿದೆ ಎಂದು ಹೇಳಿದ್ದೆನು. ನಾನು ತೀರಾ ಅಲ್ಪ ಪರಿಮಾಣದ ಹಿಂಸೆ ಅಥವಾ ಅಸತ್ಯಗಳ ಕುರಿತು ಬಹಳ ಸೂಕ್ಷ್ಮಬುದ್ಧಿಯುಳ್ಳವನಿದ್ದೇನೆ. ಅವೆರಡೂ ಅವಳಿಜವಳಿಗಳು.

ಕಾಂಗ್ರೆಸ್ ಕಮಿಟಿಗಳ ಮೊದಲ ಕಾರ್ಯ

ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳೂ, ವರ್ಕಿಂಗ್ ಕಮಿಟಿಗಳೂ ಸ್ಥಾಪನೆಗೊಂಡೊಡನೆ, ಮನಸ್ಸಿನಲ್ಲಿ ಶಬ್ದಗಳಲ್ಲಿ ಮತ್ತು ಕೆಲಸಗಳಲ್ಲಿ ಹಿಂಸೆಯುತಕವಾಗಿರುವ ಎಲ್ಲವನ್ನೂ ದಮನಿಸಲು ಬಲವಾದ ಕಾರ್ಯಗಳನ್ನು ಕೈಕೊಳ್ಳಬೇಕೆಂದು ನಾನು ಸ್ಪಷ್ಟವಾಗಿ ತಿಳಿಸಲಿಚ್ಛಿಸುತ್ತೇನೆ. ನಾನು ವರ್ತಮಾನ ಪತ್ರಗಳನ್ನು ಓದಿದ ಮಟ್ಟಿಗೆ ಅವುಗಳಲ್ಲಿ ಹಲವು ಬಾರಿ ಸತ್ಯ ಮತ್ತು ಅಹಿಂಸೆಯ ಕೊರತೆಯನ್ನು ಕಂಡಿದ್ದೇನೆ. ಈ ಪರಿಸ್ಥಿತಿಗಾವ ಪರಿಹಾರವೆಂದು ನನಗೆ ತೋಚುವುದಿಲ್ಲ. ಕಾಂಗ್ರೆಸ್ ಜನರಿಂದ ನಡೆಸಲ್ಪಡುವ ಪತ್ರಿಕೆಗಳು ನೈತಿಕ ಹತೋಟಿಗೆ ಒಳಗಾಗಬೇಕು. ಅಂತೂ ಹಳ್ಳಿಗಳಲ್ಲಿ ಕೆಲಸಮಾಡುವ ಕಾಂಗ್ರೆಸ್ ಕೆಲಸಗಾರರಿಂದ ದೊಡ್ಡ ತಪ್ಪು ನಡೆದಿದೆಯೆಂದು ನಾನು ತಿಳಿಯುತ್ತೇನೆ. ಅವರನ್ನು ಶಿಸ್ತಿನೊಳಗೆ ತರುವದು ಕಷ್ಟದಾಯಕವೆನಿಸಲಾರದು.

ಈ ವಿದ್ಯಮಾನದ ವಿಚಾರಣೆಗಾಗಿ ನಿಷ್ಪಕ್ಷಪಾತ ವಿಚಾರಣೆಯೊಂದು ನಡೆಯಬೇಕೆಂದು ನನ್ನ ಸೂಚನೆ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಆ ಕಾರ್ಯವನ್ನೊಬ್ಬ ಹೈಕೋರ್ಟ್ ಜಡ್ಜರಿಗೊಪ್ಪಿಸಬೇಕು. ರಾಜಾಸಾಹೇಬರು ಸಹಾಯ ಮಾಡಿದಲ್ಲಿ ಈ ಕಾರ್ಯವು ಸುಲಭವಾಗುವದು. ಅವರು ಸಹಕರಿಸದಿದ್ದರೂ ಸತ್ಯಶೋಧನೆಮಾಡಲೇನೂ ಕಷ್ಟವಿಲ್ಲ.

ಮತ್ತೊಂದು ದುಷ್ಪರಿಣಾಮ

ರಾಮದುರ್ಗ ಚಳವಳಿಯಿಂದಾಗಿ ಇನ್ನೊಂದು ದುಷ್ಪರಿಣಾಮವುಂಟಾಗಿದೆ. ಅದು ಜಾತೀಯ ಗೊಂದಲದ ಕಡೆಗೆ ತಿರುಗಿದೆ. ಅಲ್ಲಿ ಬ್ರಾಹ್ಮಣ ಅಬ್ರಾಹ್ಮಣರೆಂಬ ಎರಡು ಪಕ್ಷಗಳಿವೆ. ಈ ವರೆಗಿದ್ದ ನನ್ನ ಅಭಿಪ್ರಾಯವೆಂದರೆ ಕರ್ನಾಟಕವು ಈ ವಿಷಮತೆಯಿಂದ ದೂರವಾಗಿತ್ತೆಂಬುದು. ಆದರೆ ನನ್ನೊಡನೆ ಬಂದಿರುವ ಹಲವು ಪತ್ರಿಕಾ ತುಂಡುಗಳನ್ನು ಮತ್ತು ಪತ್ರಿಕೆಗಳನ್ನು ಕಂಡಮೇಲೆ ಈ ದೋಷವು ಸಾಕಷ್ಟು ಆಳಕ್ಕಿಳಿದಿರುವದೆಂದೂ ಕೂಡಲೇ ಶಮನೋಪಾಯವನ್ನು ಕೈಕೊಳ್ಳುವ ಅಗತ್ಯವಿದೆಯೆಂದೂ ಖಚಿತವಾಯಿತು. ಈ ವಿಷಯದಲ್ಲಿ ಮಾರ್ಗದರ್ಶಿಯಾಗಬೇಕೆಂದು ನನ್ನನ್ನು ಬಿನ್ನವಿಸಿಕೊಳ್ಳಲಾಗಿದೆ. ಕೂಲಂಕಷವಾಗಿ ತಿಳಿದುಕೊಳ್ಳದೆ ನಾನೇನಾದರೊಂದು ಹಾದಿಯನ್ನು ತೋರಿಸಿಕೊಡುವದೆಂದರೆ ಅದು ಅವಿವೇಕತನವೇ ಸರಿ. ನಾನು ಒಂದು ಸೂಚನೆಯನ್ನು ಕೊಡಬಲ್ಲೆನು. ಈ ಭೇದಭಾವವು ತೊಲಗಬೇಕೆಂಬ ಅಭಿಪ್ರಾಯವುಳ್ಳ ಬ್ರಾಹ್ಮಣರು ಮತ್ತು ಅಬ್ರಾಹ್ಮಣರು ಸಾಕಷ್ಟು ಮಂದಿಯಿರುವದಾದರೆ ಅವರು ಈ ರೋಗ ಹರಡಿದೆಡೆಗಳಲ್ಲಿ ಸಂಚರಿಸಿ ಅದರ ಕಾರಣವನ್ನು ಗೊತ್ತುಹಚ್ಚಬೇಕು; ಮತ್ತು ಅದರ ಪರಿಹಾರೋಪಾಯಗಳನ್ನು ಕೈಗೊಳ್ಳಬೇಕು. ಆ ತಿಕ್ಕಾಟವು ದೇಶದಲ್ಲಿ ಪ್ರಬಲವಾಗುತ್ತಾ ಬರುತ್ತಿರುವ ಹಿಂಸೆಯ ಒಂದು ದ್ಯೋತಕವಾಗಿದೆ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯವೆಂಬಂತೆ ಸಾಮಾನುಗಳು ಬೇಲುಗಟ್ಟಿ ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

ದೂರೀಕರಿಸಿರಿ—ದೃಷ್ಟಿ ಚಕ್ರ—ನೇತ್ರಶೂದಲು—ವೃದ್ಧಾಪ್ಯ ತರುಣರು

ಎರಡು ತಿಂಗಳ ತನಕವೂ, ವೃದ್ಧರು ನಾಲ್ಕು ತಿಂಗಳವರೆಗೂ ಚೂಟಿಕಾನಿಕನ್ನು ಉಪಯೋಗಿಸಿದಲ್ಲಿ ದೃಷ್ಟಿಮಾಂದ್ಯ ತೊಲಗಿ ನರೆತ ಕೂದಲು ಕಪ್ಪಾಗಿ ಮೊದಲಿನ ನೇತ್ರತೇಜ ತೋರಿ ತಾರುಣ್ಯದ ಫಲ ಕಾಣುವದು. ಇಮ್ಮಡಿ ಕ್ರಯ ವಾಪಾಸು ಕೊಡುವ ಕರಾರಿದೆ. ಟಾನಿಕಿನ ಕ್ರಯವು ಈ ತೆರನಾಗಿದೆ. ಒಂದು ತಿಂಗಳಿನ ಟಾನಿಕಿಗೆ ರೂ 3-8-0; 2 ತಿಂಗಳಿನದಕ್ಕೆ ರೂ. 6-0-0; ನಾಲ್ಕು ತಿಂಗಳಿನದಕ್ಕೆ ರೂ. 10 ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Jari Booti Dawakhana,
P. O. Behar Nursery (Darbhanga)

The Tropical Insurance
CO., LTD., DELHI.

ದಿ ಟ್ರೊಪಿಕಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಡೆಲ್ಲಿ.

ಅಧ್ಯಕ್ಷರು:—ಶ್ರೀ. ಸುಭಾಷಚಂದ್ರ ಬೋಸರು.
(ರಾಷ್ಟ್ರಪತಿಗಳು)

ಸಂಸ್ಥಾಪಕ ಡೈರೆಕ್ಟರರು:

ಪಂಡಿತ ಮೋತಿಲಾಲ ನೆಹರು. ಡಾಕ್ಟರ್ ಎಂ. ಎ. ಅನ್ಸಾರಿ.
ಶ್ರೀ। ಎಸ್. ಶ್ರೀನಿವಾಸ ಐಯ್ಯಂಗಾರ್. ಹಕೀಮ್ ಅಜ್ಮಲ್ ಖಾನ್.

ಪ್ರಗತಿಗಾಮಿಯಾದ ಈ ದೇಶೀ ವಿಮಾಕಂಪೆನಿಯು ಐವರು ರಾಷ್ಟ್ರಪತಿಗಳಿಂದ ಸ್ಥಾಪನೆ ಹೊಂದಿ ನಡೆಸಲ್ಪಟ್ಟಿದ್ದು.

ಪ್ರಾತಿನಿಧ್ಯಕ್ಕಾಗಿ ಸಂಬಳ ಯಾ ಕಮಿಶನಿನ ಮೇಲೆ ಅರ್ಜಿಗಳು ಸ್ವೀಕರಿಸಲ್ಪಡುತ್ತವೆ.

ಕೆ. ಎಸ್. ರಾಮಮೂರ್ತಿ, ಎಂ. ಎ.
ಬ್ರಾಂಚ್ ಸೆಕ್ರೆಟರಿ,
160, ಮೌಂಟ್ ರೋಡು, ಮದ್ರಾಸ್.

ಅಥವಾ

ಎಂ. ಸುಂದರ ರಾಮ ಶೆಟ್ಟಿ,
ಬ್ರಾಂಚ್ ಮೆನೇಜರ್,
ಹಂಪನಕಟ್ಟೆ, ಮಂಗಳೂರು.

ಮುಂಬಾಯಿಯ ನಿರಕ್ಷರತಾ ನಿವಾರಣಾ ಕಾರ್ಯವೂ ದಕ್ಷಿಣ ಕನ್ನಡ ಜಿಲ್ಲೆಯ ಹೊಟೆಲು ಕೆಲಸಗಾರರೂ.

ಇದೀಗ ಮುಂಬಾಯಿಯ ನಿರಕ್ಷರತಾ ನಿವಾರಣಾ ಸಮಿತಿಯವರು, ದೇಶಸೇವಾ ಧುರೀಣರ ಸಂಘದ ಆಶ್ರಯದಲ್ಲಿ, ಸರಕಾರದ ಬೆಂಬಲದಿಂದ, ಮುಂಬಾಯಿ ಮತ್ತು ಉಪನಗರಗಳಲ್ಲಿ ನಿರಕ್ಷರತಾ ನಿವಾರಣೆಯ ಕಾರ್ಯದಲ್ಲುದ್ಯುಕ್ತರಾಗಿರುವರೆಂಬುದು ಸಾಮಾನ್ಯವಾಗಿ ತಿಳಿದ ವಿಷಯವಿದೆ. ದೇಶೋದ್ಧಾರದ ಈ ಅಮೂಲ್ಯ ಕಾರ್ಯೋದ್ದೇಶವು ಸಫಲವಾಗುವಂತೆ, ಈ ಆದರ್ಶ ಕಾರ್ಯಭಾಗದಲ್ಲಿ, ಈ ಸಮಿತಿಗೆ ತಕ್ಕ ಸಹಕಾರವಿತ್ತು, ಶ್ರದ್ಧೆಯಿಂದ ಶ್ರಮವಹಿಸಿ, ನಿರಕ್ಷರತೆಯನ್ನು ದೂರಮಾಡಿ ಜನತೆಯಲ್ಲಿ ಆವರಿಸಿರುವ ಅಜ್ಞಾನ, ಅವಿದ್ಯೆಯನ್ನು ತೊಲಗಿಸಿ, ದೇಶೋನ್ನತಿಯನ್ನು ಬಯಸುವುದು ಪ್ರತಿಯೊಬ್ಬ ಸೇವಾಭಿಮಾನಿಯ ಆದ್ಯ ಕರ್ತವ್ಯವಿದೆಯೆಂಬುದರಲ್ಲಿ ವಾದವಿಲ್ಲ.

ಮುಂಬಾಯಿಯು ವಿಶಾಲವಾದ ನಗರ; ಸರ್ವಜಾತಿ, ಸರ್ವ ರಾಷ್ಟ್ರ, ಸಂಘ ಸಂಸ್ಥೆಗಳ ಪ್ರಾತಿನಿಧ್ಯವನ್ನೊಳಗೊಂಡ ಪ್ರಧಾನ ಕೇಂದ್ರ. ಕನ್ನಡಕ್ಕೂ ಇಲ್ಲಿ ಗುಜರಾತಿ, ಮರಾಠಿ ಮೊದಲಾದ ಭಾಷೆಗಳಿರುವಷ್ಟೇ ಪ್ರಾಮುಖ್ಯತೆಯು. ಇಲ್ಲಿಯ ಕನ್ನಡಿಗರ ಜನಸಂಖ್ಯೆ, ಸಂಸ್ಕೃತಿ, ರಾಷ್ಟ್ರೀಯತೆಯ ದೃಷ್ಟಿಯಿಂದ ಆವಶ್ಯಕವಿದೆಯೆಂಬುದು ನಿಸ್ಸಂದೇಹವಾದ ವಿಚಾರ. ಕನ್ನಡನಾಡಿನ ಬೇರೆ ಬೇರೆ ಕಡೆಯ ಜನರು ಈ ನಗರದಲ್ಲಿರುವರು; ಅಲ್ಲದೆ ಕನ್ನಡಿಗರ ಹಲವಾರು ಸಂಘ ಸಂಸ್ಥೆಗಳೂ ಇವೆ. ಆದರೆ ಇಂದಿನವರೆಗೂ ಕನ್ನಡಿಗರಲ್ಲಿ ಪರಸ್ಪರ ಸಹಾನುಭೂತಿ, ಸಹಕಾರವು ಬೇಕಾಗಿರುವಷ್ಟು ನೆಲೆಗೊಂಡಿಲ್ಲ. ಮತ್ತು ಕನ್ನಡಜನತೆಯು ಇನ್ನೂ ಐಕ್ಯತೆಯಿಂದ ದುಡಿಯಲು ಕಲಿತುಕೊಂಡಿಲ್ಲವೆಂಬುದು ವಿಷಾದಕರವಿದೆ.

ಜನರಲ್ಲಿ ಪರಸ್ಪರ ಪ್ರೇಮ, ವಿಶ್ವಾಸ, ಐಕ್ಯತಾಭಾವ ಇಲ್ಲದಿರಲು, ಜನಸಾಮಾನ್ಯರಲ್ಲಿ ಆವರಿಸಿರುವ ವಿದ್ಯೆಯ ಅಭಾವವೇ ಮೂಲತಃ ಕಾರಣವು. ಆದುದರಿಂದ ರಾಷ್ಟ್ರಸಂಘಟನೆಯು, ಇಲ್ಲವೆ ಬೇರಾವ ಮಹತ್ವಿಕೆಯ ಕಾರ್ಯಕ್ಕೆ ತೊಡಗುವ ಮೊದಲು ಜನರೆಲ್ಲರೂ ಓದುಬಲ್ಲವರಾಗುವಂತೆ, ತಕ್ಕ ರೀತಿಯಲ್ಲಿ ಸಾಧಿಸುವುದು ಅತ್ಯಾವಶ್ಯಕವಿದೆ. ಜನರು ಹಲಕಾಲದ ಮೊದಲೇ ತಾನಾಗಿ ತೊಡಗಬೇಕಾಗಿದ್ದ ಕಾರ್ಯಭಾಗವನ್ನು (ಇದೀಗ ಹಲಕಾಲದ ನಂತರವಾದರೂ) ನಿರಕ್ಷರತಾ ನಿವಾರಣಾ ಸಮಿತಿಯವರು ನಿರ್ವಹಿಸಲು ನಿರತರಾಗಿರುವರು. ಈ ಸಮಿತಿಯ ಕಾರ್ಯವು ಯಶಸ್ವಿಯಾಗುವುದೆಂದರೆ, ರಾಷ್ಟ್ರದೇಳಿಗೆಯಲ್ಲಿ ಪ್ರಧಾನ ಕಾರ್ಯವು ಪೂರೈಸಿದಂತೆಯೇ ಸರಿ. ಭಾವೀ ಇತಿಹಾಸದಲ್ಲಿ ಮುಂಬಾಯಿಯ ಕಾಂಗ್ರೆಸು ಮಂತ್ರಿಮಂಡಲದ ಕಾರ್ಯವಿಚಾರದಲ್ಲಿ ಈ ನಿರಕ್ಷರತಾನಿವಾರಣಾ ಕಾರ್ಯವು ಸುವರ್ಣಾಕ್ಷರಗಳಲ್ಲಿ ಮೂಡಲಿದೆ. ಇದು ಮಹತ್ತಾದ ಕಾರ್ಯ, ವಿಶಾಲ ವ್ಯಾಪನೆಯ ನಗರದಲ್ಲಿ ಈ ಸಮಿತಿಯು, ಜನತೆಯ ಬೆಂಬಲವಿಲ್ಲದೆ ಕಾರ್ಯವನ್ನು ಸಾಧಿಸುವುದು ಸಾಧ್ಯವಲ್ಲ; ಆದುದರಿಂದ ಕನ್ನಡಿಗರೂ ಕೂಡ ಬೇರೆಯವರಂತೆ ತಮ್ಮ ಕರ್ತವ್ಯವನ್ನು ಮನಗಂಡು, ತಾವು ತಕ್ಕ ಸಿದ್ಧತೆಯನ್ನು ಮಾಡಿ ಮುಂದುವರಿಯುವುದು ಅತ್ಯಾವಶ್ಯಕ. ವಿಚಾರಮಾಡುತ್ತಾ ಕೂತುಕೊಳ್ಳುವ ದೀರ್ಘ ಸಮಯವಿರದು. ಈ ಸಂದರ್ಭದಲ್ಲಿ ನಿರಕ್ಷರತಾ ನಿವಾರಣಾ ಸಮಿತಿಯವರು ಪ್ರತಿಯೊಂದು ಮನೆಯು ಇಲ್ಲವೆ ಪ್ರತಿಯೊಂದು ವ್ಯಕ್ತಿಯ ಬಳಿಗೆ ಬಂದು ಎಚ್ಚರಿಸಲು ಸಾಧ್ಯವಾಗಲಾರದು; ಆ ಮೊದಲೇ ಸಂಬಂಧಪಟ್ಟ ಸಮೂಹದ ಜನರು, ಸಾಮಾನ್ಯವಾಗಿ ಜಾತಿಯ ಸಂಘ ಸಂಸ್ಥೆಗಳು ಕಾರ್ಯವು ಶೀಘ್ರವಾಗಿ ನೆರವೇರುವಂತೆ, ತಾವಾಗಿ ಎಚ್ಚರಗೊಳ್ಳುವುದು ಅವಶ್ಯವಿದೆ. ಆದುದರಿಂದ ಪ್ರಥಮತಃ ಮುಂಬಾಯಿಯಲ್ಲಿ ನೆಲೆಸಿರುವ ಆಯಾಯ ರಾಷ್ಟ್ರದವರು, ಆಯಾಯ ಜಿಲ್ಲೆಯವರು ಜಾಗತ್ಯವಿದ್ದಲ್ಲಿ ಆಯಾಯ ಜಾತಿಯ ಸಂಸ್ಥೆಗಳು, ತಮ್ಮ ತಮ್ಮ ಉಪಸಮಿತಿಗಳನ್ನು ರಚಿಸಿಕೊಂಡು ಈ ಕಾರ್ಯಭಾಗವನ್ನು ಇನ್ನಷ್ಟು ಶೀಘ್ರವಾಗಿಯೂ, ಯಶಸ್ವಿಯಾಗಿಯೂ ನೆರವೇರಿಸಲು ದಾರಿಮಾಡಿಕೊಳ್ಳಬಹುದಾಗಿದೆ.

ಉದಾಹರಣೆಗಾಗಿ ಇಲ್ಲಿಯ ದಕ್ಷಿಣಕನ್ನಡಿಗರ ಕುರಿತಾಗಿ ತುಸು ವಿಚಾರಿಸೋಣ. ಮುಂಬಾಯಿಯ ಮತ್ತು ಅದರ ಸರಹದ್ದು ನಗರಗಳಲ್ಲಿ ವಾಸಿಸುವ ದಕ್ಷಿಣಕನ್ನಡಜಿಲ್ಲೆಯ ಜನರನ್ನು ಎರಡು ವರ್ಗವನ್ನಾಗಿ ವಿಭಾಗಿಸಬಹುದು. ೧. ಆಫೀಸುಗಳಲ್ಲಿ ಕೆಲಸಮಾಡುವವರು. ೨. ವ್ಯಾಪಾರಿ ವರ್ಗ. ಆಫೀಸುಗಳಲ್ಲಿ ಕೆಲಸಮಾಡುವವರಲ್ಲಿ ಸಿಪಾಯಿ (ಪೇದೆ) ಮೊದಲಾದ ಕಡಿಮೆವೇತನದ ನೌಕರರನ್ನು ಬಿಟ್ಟು ಸಾಮಾನ್ಯವಾಗಿ ಎಲ್ಲರೂ ಶಿಕ್ಷಿತರೇ ಇರುವರು. ಈಗೀಗ ಕಡಿಮೆವೇತನಹೊಂದುವ ಕೆಳತರಗತಿಯ ನೌಕರರೂ ಕೂಡಾ ಹೆಚ್ಚಾಗಿ ವಿದ್ಯಾವಂತರೇ ಇರುವರು; ಯಾಕೆಂದರೆ ಈ ಆಫೀಸು ವರ್ಗದವರ ವಿದ್ಯಾಭ್ಯಾಸಕ್ಕೆ ರಾತ್ರಿಶಾಲೆಗಳ ವ್ಯವಸ್ಥೆಯಿದೆ. ಮತ್ತು ಕೆಲಸ ಮುಗಿಸಿ ಶಾಲೆಗೆ ಹೋಗಲು ಸಾಕಷ್ಟು ಅವಕಾಶವಿದೆ. ಮುಂಬಾಯಿಯಲ್ಲಿರುವ ಕರ್ನಾಟಕ ನೈಟ್‌ಸ್ಕೂಲು, ಮೊಗವೀರ ರಾತ್ರಿಶಾಲೆ, ವಿದ್ಯಾದಾಯಿನಿ ಶಾಲೆ, ಮೊದಲಾದ ಕಡೆಗಳಲ್ಲಿ ವಿದ್ಯಾಭ್ಯಾಸಹೊಂದುತ್ತಿರುವ ನೂರಾರು ವಿದ್ಯಾರ್ಥಿಗಳೇ ಉದಾಹರಣೆಯಾಗಿ ನಿಲ್ಲುವರು.

ಇದೀಗ ಎರಡನೆಯ ವ್ಯಾಪಾರಿ ವರ್ಗ. ದಕ್ಷಿಣಕನ್ನಡ ಜಿಲ್ಲೆಯವರಲ್ಲಿ ಇಲ್ಲಿ ಹೆಚ್ಚಿನವರು ಇಷ್ಟರವರೆಗೆ ಅವಲಂಬಿಸಿರುವ ವ್ಯಾಪಾರವೆಂದರೆ ವಿಶ್ರಾಂತಿ ಗೃಹ (Restauarut & Hotels) ಗಳ ವ್ಯಾಪಾರವೆನ್ನಬಹುದು. ಈ ವಿಶ್ರಾಂತಿ ಗೃಹಗಳಲ್ಲಿ ದುಡಿಯುವ ಕೆಲಸಗಾರರೇ ಮುಂಬಾಯಿಯಲ್ಲಿ ಜೀವಿಸುವ ಜಿಲ್ಲೆಯ ಜನತೆಯ ಬಹುಸಂಖ್ಯಾತರಿರುವರೆನ್ನಲಡ್ಡಿಯಿಲ್ಲ. ಗಿರಣಿಗಳಲ್ಲಿ ಅಥವಾ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರ ಕೆಲಸಕ್ಕಾದರೂ ಮಿತಿಯಿದೆ, ಅವಧಿಯಿದೆ, ಆದುದರಿಂದ ಅವರು ಒಂದು ವೇಳೆ ರಾತ್ರಿಶಾಲೆಯ ಇಲ್ಲವೆ ನಿರಕ್ಷರತಾ ನಿವಾರಣಾಕಾರ್ಯದ ಲಾಭವನ್ನು ಸುಲಭವಾಗಿ ಸಾಧಿಸಬಹುದು. ಆದರೆ ಹೋಟೆಲು ಕೆಲಸಗಾರರ ಪರಿಸ್ಥಿತಿ ಹಾಗಿಲ್ಲ. ಅವರ ಕೆಲಸವು ವಿರಾಮವಿಲ್ಲದ್ದು; (ದಿನಕ್ಕೆ ೧೬ರಿಂದ ೧೮ತಾಸುಗಳ ವರೆಗಿದ್ದು) ವಿಶ್ರಾಂತಿಗೆ ಬೇಕಾದ ಜಾಗವಿಲ್ಲ, ಉಳಕೊಳ್ಳಲು ಪ್ರತ್ಯೇಕ ಕೊಟಡಿಯಿಲ್ಲ. ಈ ಎಲ್ಲಾ ಕಷ್ಟಾಸ್ಪದವಾದ ದುರವಸ್ಥೆಯ ವಿಷಯವು ಈ ಮೊದಲೇ ಸರಕಾರದ ಗಮನಕ್ಕೆ ಬಂದಿರುವುದು; ಸಾರ್ವಜನಿಕ ದೃಷ್ಟಿಪಥದಲ್ಲಿರುವುದು. ಈ ಹೋಟೆಲು ಕೆಲಸಗಾರರಲ್ಲಿ ಅನಕ್ಷರತೆಯು ದೂರವಾಗುವಂತೆ ವ್ಯವಸ್ಥೆಮಾಡುವುದು ಬಹು ಶ್ರಮಸಾಧ್ಯವಾದ ಕೆಲಸವಿದೆ. ಮೊದಲಾಗಿ ಸಂಬಂಧಪಟ್ಟ ಹೋಟೆಲು ವ್ಯವಸ್ಥಾಪಕರು ಯಥಾರ್ಥ ವಿಚಾರವನ್ನು ಅರಿತುಕೊಳ್ಳುವಂತಾಗಬೇಕು; ಅವರು ಭಾವೀ ಜನಾಂಗದ ಏಳಿಗೆಯು ವಿದ್ಯೆಯ ಮಹತ್ವಿಕೆಯ ಮೇಲೆ ನಿಂತಿದೆಯೆಂಬುವನ್ನು ಮನಗಾಣಬೇಕು. ಅವರ ವಿಚಾರ ಪರಿವರ್ತನೆಗಾಗಿ ಅವರ ಸಹಕಾರಕ್ಕಾಗಿ ಸಾಕಷ್ಟು ಪರಿಶ್ರಮಪಡುವ ಕಾರ್ಯಭಾಗವು ಪ್ರಥಮತಃ ಆಯಾ ಸಮಾಜದ ಜಾತಿ ಸಂಘಗಳ ಸಂಘ ಸಂಸ್ಥೆಗಳಿಗೆ ಸೇವಾಸ್ಥೈರ್ಯದ ಶಿಕ್ಷಿತ ಮುಂದಾಳುಗಳಿಗೆ ಸುಲಭಸಾಧ್ಯವಾಗಬಹುದು. ಆದುದರಿಂದ ಆಯಾಯ ಸಮಾಜದ ಮುಖಂಡರು ಸಂಘಸಂಸ್ಥೆಗಳು ಈ ಉತ್ಕೃಷ್ಟ ಸಂದರ್ಭದಲ್ಲಿ ಮುಂದಾಗಿ ಐಕ್ಯತೆಯಿಂದ ಒಂದಾಗಿ ಈ ನಿರಕ್ಷರತೆಯ ಕಾರ್ಯವು ಬಹು ಸಂಖ್ಯಾಕರಾದ ಬಡ ಹೋಟೆಲು ಕೆಲಸಗಾರರಲ್ಲಿ ಪರಿಣಾಮ ಹೊಂದುವಂತೆ ತಕ್ಕ ಯೋಜನೆಯನ್ನು ಬಹು ಬೇಗನೆ ಕೈಕೊಳ್ಳುವ ಜವಾಬ್ದಾರಿಯನ್ನು ತಾವು ಹೊತ್ತಿರುವೆನೆಂಬುದನ್ನು ಮರೆಯಲಾಗದು. ಇಲ್ಲವಾದರೆ ಅವರು ಕರ್ತವ್ಯಬಾಹಿರರಾದಂತೆಯೇ ಆಗುವುದು ಮಾತ್ರವಲ್ಲ, ನಿರಕ್ಷರತಾ ನಿವಾರಣೆ ಸಮಿತಿಯ ಆಸದೃಶ, ಅಮೂಲ್ಯ ಉದ್ದೇಶವು ನಿರರ್ಥಕವಾದಂತಾಗುವುದು.

ಎನ್. ಎಸ್. ಶೆಟ್ಟಿ, ಬೆಂಗಳೂರು.

ಗಾಂಧಿ ಜೋಯಿಸರ ಭವಿಷ್ಯ ಫಲ.

ನಿಮ್ಮ ಜನನ ತಾರೀಕು ಸಮಯ ಅಥವ ಪತ್ರ ಬರೆಯುವ ಘಳಿಗೆ ಮತ್ತು ಅಂದಾಜು ವಯಸ್ಸನ್ನು ತಿಳಿಸಿರಿ, ನಿಮ್ಮ ಕುಟುಂಬ, ವೃತ್ತಿ, ಆರೋಗ್ಯ, ಸಂಪತ್ತು, ಆದಾಯ ವೆಚ್ಚಗಳು, ಅನಿರೀಕ್ಷಿತ ಬೆಸಗಳು ಮತ್ತು ದುರದೃಷ್ಟಗಳು, ಪ್ರೇಮ, ಅದೃಷ್ಟದ ಬಣ್ಣ, ಸೋದ್ದಿಗಳ ದೊರೆಯುವ ದಿನಗಳು ಮತ್ತು ಸಂಖ್ಯೆ, ಇನ್ನಿತರ ಪ್ರಾಮುಖ್ಯ ವಿಷಯಗಳು ನಿಮ್ಮ ಬಾಗಿಲಿಗೆ ಕಳುಹಲ್ಪಡುವವು. ಪ್ರತಿತಿಂಗಳ ಭವಿಷ್ಯವನ್ನೊಳಗೊಂಡ ಒಂದು ವರುಷದ ಭವಿಷ್ಯಫಲಕ್ಕೆ ರೂಪಾಯಿ 3. ಪ್ರತಿತಿಂಗಳ ಆಗುಹೋಗುಗಳ ಸಮೇತ ಐದು ವರುಷದ ಫಲಕ್ಕೆ ರೂಪಾಯಿ 12-8-0 ಸಾಹುಕಾರರಿಗೂ ಉದ್ಯೋಗಸ್ಥರಿಗೂ ವಿಸ್ತೃತವಾದ ಭವಿಷ್ಯವನ್ನು ಸೂಚಿಸುವ ಒಂದು ವರುಷದ ಫಲಕ್ಕೆ ರೂಪಾಯಿ 10. ಭವಿಷ್ಯದ ಕುರಿತು ಕೇಳಲಾಗುವ ಐದು ಪ್ರಶ್ನೆಗಳಿಗೆ ಸರಿಯಾದ ಉತ್ತರಕ್ಕೆ ಒಂದು ರೂಪಾಯಿ ಮುಂದಾಗಿ ಕೊಟ್ಟಲ್ಲಿ ತಿಳಿಸಲಾಗುವುದು (ವಿ. ಪಿ. ಖರ್ಚು ಪ್ರತ್ಯೇಕ)

ಭವಿಷ್ಯ ಫಲದ ಕುರಿತು 'ಸ್ವದೇಶ ಮಿತ್ರನ್' ಮದ್ರಾಸಿನ ದಿನ ಪತ್ರಿಕೆಯು ಈ ರೀತಿ ಬರೆಯುತ್ತದೆ. ಶ್ರೀ. ವಿ. ಕೆ. ಶಠಗೋಪಾಚಾರಿಯವರ ಭವಿಷ್ಯವಾದೋಕ್ತಿ ಕುರಿತು ವಾಚಕರಿಗೆ ಪರಿಚಯ ಮಾಡಿಕೊಡುವ ಅಗತ್ಯವಿಲ್ಲ. ವಿ ಹಾ ಜಯದ ಬಂಧವಿಮೋಚನೆ, ಅಮೇರಿಕಾ ಸಂಯುಕ್ತ ಪ್ರೆಸಿಡೆಂಟ್ ರೂಸ್‌ವೆಲ್ಟರ ಚುನಾವಣೆಯು ಜಯಶೀಲತೆ ಮೊದಲಾದವು ಶ್ರೀ. ಆಚಾರಿಯವರು ಹೇಳಿದಂತೆ ಫಲಿಸಿದವು. ಗಾಂಧಿ ಜೋಯಿಸರ ಭವಿಷ್ಯಫಲವು ಬ್ರಹ್ಮಾಂಡದಲ್ಲೆಲ್ಲಾ ಹಬ್ಬಿ, ಯೋಗ್ಯನಿರ್ಣಯ, ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

ವಿಳಾಸ:-**V. K. Satagopachariar**
Hanuman Jothisha Ashram
TIRUTTTANI, S. India.

ವಾರ ಭವಿಷ್ಯ

ಮುಂದಾಗುವುದನ್ನು ಇಂದೇ ತಿಳಿಯಿರಿ.

(ತಾ. 4-5-39ರಿಂದ ತಾ. 11-5-39ರ ವರೆಗೆ)

[ಜ್ಯೋತಿಷವು ಅಸ್ಪಷ್ಟವಾದುದಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವನದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ. ಸಂ. ನ.]

ಮೇಷರಾಶಿ—

ಮನಸ್ಸಿಗೆ ಸುಖಸ್ವಾಸ್ಥ್ಯವಿಲ್ಲ. ಮನಸ್ಸು ಪ್ರಸನ್ನವಾಗಿದ್ದರೆ ನಡೆವ ದಿನಗಳು ಕಳೆದುದು ತಿಳಿಯುವುದಿಲ್ಲವು. ಮನೋವ್ಯಾಧಿಯಿಂದ ಪೀಡಿತನಾದವನಿಗೆ ದಿನವನ್ನು ಕಳೆಯುವುದೆಂದರೆ ವರ್ಷವನ್ನು ಕಳೆದಷ್ಟು ಕಷ್ಟವಾಗುವುದು. ಪ್ರಕೃತ ಈ ವಾರದಲ್ಲಿ ನಿಮಗೆ ಆಧಿಯು (ಮನೋರೋಗವು) ಅಧಿಕಾಧಿಕವಾಗುವುದು. ಆದಕಾರಣ ಯಾರೊಡನೆ ಮಾತಾಡಿ ಬೇಡ, ಕಥೆಯೂ ಬೇಡವೆಂದು ತೋರಿಬರುವುದು. ಆಯಾಸವು ತನ್ನಷ್ಟಕ್ಕೇ ಹೆಚ್ಚುತ್ತಾ ಬರುವುದು. ಉದರರೋಗವೇ ಮೊದಲಾದುವುಗಳಿಂದ ದೇಹವು ಪೀಡಿಸಲ್ಪಡುವುದು. ಕೈಗೊಂಡ ಕಾರ್ಯದಲ್ಲಿ ಪರಾಜಯವನ್ನು ಹೊಂದುವಿರಿ. ಮಾತ್ರವಲ್ಲದೆ ವ್ಯರ್ಥಾಟನದ ಪ್ರಸಂಗವೊದಗಿ ಹೆಚ್ಚಿನ ಕಷ್ಟ-ನಷ್ಟಗಳಿಗೆ ಗುರಿಯಾಗುವಿರಿ. ಸಂಪದ್ಭಾಗಗಳೆಲ್ಲವೂ ಇಳಿತಕಾಲದಲ್ಲಿನ ನದಿಗಳ ಜಲದಂತೆ ಕ್ಷಣೇ ಕ್ಷಣೇ ಹ್ರಾಸವನ್ನೈದುವವು. ಸ್ವಜನರಿಂದ ವಿಯೋಗವುಂಟಾಗುವುದಲ್ಲದೆ ಕೆಲವೊಮ್ಮೆ ಶತ್ರುಜನರಿಗೇನೇ ಶರಣಾಗತರಾಗಬೇಕಾಗುವ ಪ್ರಸಕ್ತಿಯೂ ಕೂಡ ಬರಲಿದೆ. ನೌಕರಿ ಭಾಗದಲ್ಲಿ ದಿನೇ ದಿನೇ ನಿರಾಶೆಯು ಹೆಚ್ಚುವುದು. ಕಷ್ಟಜೀವಿಗಳಿಗಂತೂ ದಿನಹಾಜ ಮಾಡುವುದು ಬಹಳ ಕಷ್ಟಕ್ಕೆ ಬರುವುದು. ವ್ಯಾಪಾರಿಗಳ ಮತ್ತು ನೃತ್ಯಗಾಯಕರ ಭಾಗಕ್ಕೆ ಈ ವಾರವು ಸಾಕಷ್ಟು ಚೆನ್ನಾಗಿರುವುದೆಂದು ಹೇಳಬಹುದು. ತಾ. 5ರಿಂದ 8ರ ವರೆಗೆ ಹೆಚ್ಚಿನ ಜಾಗರೂಕರಾಗಿರಿ.

ವೃಷಭರಾಶಿ—

ಯಾರ ಗೊಡವೆಯೂ ಬೇಡವೆಂದು ನಿಮ್ಮಷ್ಟಕ್ಕೆ ನೀವು ಕುಳಿತರೂ ನಿಮ್ಮ ಗ್ರಹಚಾರವು ನಿಮ್ಮನ್ನು ತಾನಾಗಿ ಸೆಳೆದುಕೊಂಡು ಹೋಗುವುದು. ಎಷ್ಟಿಗಂ ಬರಿ, ನಿಮ್ಮ ಪ್ರಾಚೀನ ಮಿತ್ರರಲ್ಲಿಗೆ, ಈ ವಾರದಲ್ಲಿ ನಿಮಗೆ ಬಾಲ್ಯಮಿತ್ರರ ಭೆಟ್ಟಿಯಾಗುವುದು. ನೀವು ಸನ್ಮಾರ್ಗದಲ್ಲೇ ನಡೆಸುವುದಾದರೆ ನಿಮ್ಮ ಭಾಗಕ್ಕೆ ಈ ವಾರವು ಸಾಮಾನ್ಯ ಉತ್ತಮವಾಗಿಯೇ ಕಂಡೀತು. ಮನಸ್ಸು ಸದಾ ಪ್ರಸನ್ನವಾಗಿರುವುದು. ಆದಕಾರಣದಿಂದಲೋ ಎಂಬಂತೆ ನಿಮ್ಮ ಆರೋಗ್ಯಮಾನವೂ ಚೆನ್ನಾಗಿ ಉಳಿದಿರುವುದು. ವಿದ್ಯಾಭಿಲಾಷಿಗಳಿಗೂ ವಿದ್ಯೋಪಜೀವಿಗಳಿಗೂ ವಾಣಿಜ್ಯವೃತ್ತಿಯವರಿಗೂ ಸದಾ ಸುಖಸಂತೋಷಗಳು ಲಭಿಸುವವು. ಸೇವಾಜನರಿಗೆ ಮಾತ್ರ ಬಹಳ ಕಷ್ಟಗಳು ಸಂಭವಿಸುವವು. ಭೂಸಂಬಂಧವಾಗಿ ಕೆಲವಂಶ ಧನವ್ಯಯವಾಗುವ ಸಂಭವವಿದೆ. ಅಂತೂ ಸಾಂಪತ್ತಿಕಭಾಗವು ಉತ್ತಮವಾಗಿರುವುದೆಂದೇ ಹೇಳಬಹುದು. ವಾರಾಧಿಯ ಮೂರು ದಿನಗಳಲ್ಲಿ ಹೆಚ್ಚಿನ ಇಷ್ಟಕಾರ್ಯಗಳು ಜರಗಿದರೂ ಅನಂತರ ರಾಜಭಯ ಅನಾರೋಗ್ಯಾದ್ಯನಿಷ್ಟಗಳೇ ಹೆಚ್ಚುವ ಪರಿಸ್ಥಿತಿಯು ಕಂಡುಬರುವುದರಿಂದ ತದ್ದಿನಗಳಲ್ಲಿ ಆಹಾರವ್ಯವಹಾರಗಳಲ್ಲಿ ಮಿತಿತಪ್ಪದಿರಿ.

ಮಿಥುನರಾಶಿ—

ಇಷ್ಟಾನಿಷ್ಟಗ್ರಹರ ಬಲಸಾಮ್ಯವಿರುವುದರಿಂದ ಈ ವಾರದಲ್ಲಿ ನಿಮಗೆ ಹೆಚ್ಚಿನ ಕಷ್ಟನಷ್ಟಗಳಾಗಲಿ, ಇಷ್ಟಸಿದ್ಧಿಗಳಾಗಲಿ ಉಂಟಾಗುವವೆಂದು ಹೇಳಬರುವುದಿಲ್ಲ. ಅಂತೂ ಸಾಮಾನ್ಯತಃ ಮಿಶ್ರಫಲವೇ ಲಭಿಸುವುದು. ಸಾರ್ವಜನಿಕ ಕಾರ್ಯಗಳಲ್ಲಿ ಅಗ್ರಗಣ್ಯರಾಗಿ ಜನರ ಮೆಚ್ಚುಗೆಗೆ ಪಾತ್ರರಾಗುವಿರಿ. ರಾಜಕೀಯ ಭಾಗದಲ್ಲೂ ನಿಮಗೆ ಜಯಸಿಗಲಿದೆ. ಮತ್ತು ಪರಸ್ತ್ರೀಯರ ಮುಖದಿಂದಲಾಗಿ ಕ್ರಮೇಣ ಧನಸಿಗುವ ಚಿಹ್ನೆಗಳೂ ಕಾಣುವವು. ಕೈಗೊಂಡ ಕಾರ್ಯಗಳಲ್ಲಿ ಯಶೋಲಾಭವೂ ಧನಲಾಭವೂ ತೃಪ್ತಿಕರವಾಗಿ ಲಭಿಸುವುದು. ಆದರೂ ಪತ್ನೀಯರ ಸ್ವಭಾವದೋಷದಿಂದ ನಿಮ್ಮನ್ನು ಆಗಾಗ ಪೀಡಿಸುವರು. ಇನ್ನು ಕೆಲವರು ಬೇಕು ಬೇಕೆಂದೇ ಕದಡು ಜಗಳಾಡುವರು. ಕ್ರಯವಿಕ್ರಯ ಮಾಡುವಲ್ಲಿ ಹೆಚ್ಚಿನ ಜಾಗ್ರತೆ ವಹಿಸಿರಿ. ಅಕಸ್ಮಾತ್ ಅಪಘಾತಗಳಿಗೆ ಸಿಲುಕಿ ಕಷ್ಟಪಡಬೇಕಾಗುವುದು. ತಾ. 4 ಮತ್ತು 9-10-11 ಈ ದಿನಗಳಲ್ಲಿ ಕಾರ್ಯಸಿದ್ಧಿಯಾದರೆ ಕ್ರಿಯೆಗೆ ವಿಘ್ನಗಳೂ ಉಂಟಾಗುವವು.

ಕರ್ಕಾಟಕರಾಶಿ—

ಗ್ರಹರಾಜನೂ ಸುರಾಸುರ ಗುರುಗಳೂ ನಿಮ್ಮ ರಾಶಿಗೆ ಅನುಕೂಲರಾಗಿರುವುದರಿಂದ ನಿಮಗೆ ಹೆಚ್ಚು ಸಂದ ಈ ವಾರದಲ್ಲಿ ಉತ್ತಮಫಲವೆಂದೇ ಹೇಳಬಹುದು. ನಿಮ್ಮ ನೈಪುಣ್ಯ ಮತ್ತು ವಾಕ್ಚಾತುರ್ಯದಿಂದಾಗಿ ಸಂಕಲ್ಪಿತ ಕಾರ್ಯಗಳು ಕಾರ್ಯರೂಪದಲ್ಲಿ ಪ್ರಕಟಗೊಳ್ಳುವವು. ಗೃಹಕೃತ್ಯಕ್ಕೆ ಸಂಬಂಧಪಟ್ಟ ದವಸಧಾನ್ಯಗಳನ್ನೂ ವಸನವಸ್ತ್ರಾದಿಗಳನ್ನೂ ಸಾಕಷ್ಟು ಸಂಗ್ರಹಿಸುವಿರಿ. ಗೃಹಸುಖವು ತೃಪ್ತಿಕರವಾಗುವ ರೀತಿಯಲ್ಲಿ ದೊರೆಯುವುದು. ಆದರೂ ನಿತ್ಯವೂ ನಿಮ್ಮಲ್ಲಿ (ಗಂಡಹೆಂಡಿರಲ್ಲಿ) ಕಲಹವು ತಪ್ಪುವುದಿಲ್ಲವು. ಸಾಂಪತ್ತಿಕಭಾಗವು ಉತ್ತಮವಾಗಿದ್ದರೂ ಆರೋಗ್ಯಭಾಗ್ಯದ ಮಟ್ಟಿಗೆ ನೀವು ಭಾಗ್ಯಹೀನರೆಂದು ಹೇಳಬೇಕಾಗಿದೆ. ಕೆಲವೊಮ್ಮೆ ನಿಮ್ಮ ಮನಸ್ಸು ಕಡಿವಾಣ ತಪ್ಪಿದ ಕುದುರೆಯಂತೆ ಕಂಡಾಬಟ್ಟೆ ಹರಿಯಲಿರುವುದು. ಇದರಿಂದ ನಿಮ್ಮ ವಿದ್ಯೆಗೂ ಕೀರ್ತಿಗೂ ಕಳಂಕವುಂಟಾಗಲಿದೆ. ಆದಕಾರಣ ಅದನ್ನು ಸಾಧ್ಯವಿದ್ದ ಮಟ್ಟಿಗೆ ಹಿಡಿತದಲ್ಲಿಟ್ಟುಕೊಳ್ಳುವುದು ಜಾಣರ ಆದ್ಯಕರ್ತವ್ಯ. ತಾ. 4-5-6 ಈ ದಿನಗಳು ಉತ್ತಮವಿಲ್ಲವು.

ಸಿಂಹರಾಶಿ—

ಮನಶ್ಚಾಂಚಲ್ಯಕ್ಕಾಗಿ ಸದಾ ಏಕಾಂತವಾಸವನ್ನು ನೀವು ಬಯಸುವಿರಿ. ಕಂಡದ್ದು ಕಂಡಹಾಗೆ ಹೇಳುವುದು ನಿಮ್ಮ ಹುಟ್ಟುಗುಣವಾಗಿರುವುದು. ಮಾತ್ರವಲ್ಲ ಸ್ವಲ್ಪ ಮುಂಗೋಪವೂ ಅಹಂಭಾವವೂ ನಿಮ್ಮಲ್ಲಿರುವುದೆಂದರೆ ತಪ್ಪಾಗದು. ಆದರೆ ಈಗಿನ ಕಾಲಗತಿಯೆಂಬಂತೆ ಹೆಂಡತಿಯು ಗಂಡನ ಮಾತನ್ನೂ ಮಕ್ಕಳು ತಂದೆಯ ಮಾತನ್ನೂ ಕೇಳುವುದು ಬಹಳ ದುರ್ಲಭವಾಗಿರುವುದು. ಆದಕಾರಣ ನಿಮ್ಮ ಸಂಸಾರರಥವು ಸುಗಮವಾಗಿ ಮುಂದುವರಿಯಬೇಕಾದರೆ "ಕಾಲಕ್ಕೆ ತಕ್ಕ ಕೋಲು" ಕಟ್ಟಲೇ ಬೇಕಾಗುವುದು. ಈ ವಾರದಲ್ಲಿ ನಿಮಗೆ ಪುತ್ರಮುಖದಿಂದ ಸಾಕಷ್ಟು ಧನಲಾಭವಾಗುವುದು ಮಾತ್ರವಲ್ಲದೆ ನೀವೂ ತೃಪ್ತಿಕರವಾಗುವ ರೀತಿಯಲ್ಲಿ ಧನವನ್ನು ದುಡಿಯುವಿರಿ. ತತ್ಕಾಲದಲ್ಲಿ ಶತ್ರುಗಳ ಉಪಟಳವು ಕಡಿಮೆಯಾದುದರಿಂದ ಸ್ವೀಕೃತಕಾರ್ಯಗಳು ಕ್ರಮದಿಂದ ಕೊನೆಮುಟ್ಟುವವು. ಆದರೆ ಧರ್ಮಪಕ್ಷದ ನಿಮ್ಮ ಅನಾದರಬುದ್ಧಿಯೂ ಅಸೂಯೆಯೂ ನಿಮ್ಮ ಪ್ರಗತಿಮಾರ್ಗದಲ್ಲಿ ದೊಡ್ಡ ಕಂಟಕಪ್ರಾಯವಾಗಿ ನಿಂತಿರುವುದು. ಭೂವಾದೇವಿ ಸಂಬಂಧವಾಗಿ ಧನವ್ಯಯವೂ ಆಗಲಿದೆ. ಆರೋಗ್ಯವೂ ಕೆಲಮಟ್ಟಿಗೆ ಕೆಡುವುದು. ತೀರ್ಥಕ್ಷೇತ್ರಾದಿಗಳ ದರ್ಶನಮಾಡಿದರೂ ಮಾರ್ಗದಲ್ಲಿ ಹೆಚ್ಚಿನ ಕಷ್ಟಕ್ಕೆ ಹೊಣೆಯಾಗುವಿರಿ. ತಾ. 5ರಿಂದ 8ರ ವರೆಗಿನ ದಿನಗಳು ಉತ್ತಮವಿಲ್ಲವು.

ಕನ್ಯಾರಾಶಿ—

"ಹರೌ ರುಷ್ಟೇ ಗುರುಸ್ತ್ರಾತಾ ಗುರೌ ರುಷ್ಟೇ ನ ಕಶ್ಚನ" ಎಂಬಂತೆ ಒಂದು ವೇಳೆ ಹರಿಯೇ ಮುನಿದರೂ ಗುರ್ವನುಗ್ರಹವಿದ್ದರೆ ಆ ಆಪತ್ತಿನಿಂದ ಪಾರುಗಾಣಬಹುದು. ಗುರುವೇ ಪ್ರತಿಕೂಲವಾದಲ್ಲಿ ಅವನನ್ನು ಇದಿರಿಸಲು ಯಾರಿಂದಲೂ ಶಕ್ಯವಲ್ಲವು. ಅಂತೆಯೇ ನಿಮಗೆ ಸಕಲ ಗ್ರಹರೂ ಪ್ರತಿಕೂಲರಾಗಿದ್ದರೂ ಗುರುವು ಮಾತ್ರ ಅನುಕೂಲನಾಗಿರುವುದರಿಂದ ಹೆಚ್ಚಿನ ಗಂಡಾಂತರಗಳಿಂದ ನಿಮ್ಮನ್ನವನು ಪಾರುಗಾಣಿಸದಿರಲಾರನು. ಸದ್ಯದ ಪರಿಸ್ಥಿತಿಯಲ್ಲಿ ನಿಮ್ಮ ಸಂಸಾರದಲ್ಲಿ ಒಡಕುಗಳು ದಿನೇ ದಿನೇ ಹುಟ್ಟುತ್ತಿವೆ. ತಂದೆಗೊಂದು ಮಾರ್ಗವಾದರೆ ಮಕ್ಕಳಿಗೊಂದು ದಾರಿ, ದಂಪತಿಗೆ ಇನ್ನೊಂದು ಮಾರ್ಗವೆಂಬಂತೆ ಪರಸ್ಪರ ಭಿನ್ನಾಭಿಪ್ರಾಯಗಳೂ ಮನಸ್ತಾಪಗಳೂ ಹುಟ್ಟುತ್ತಿವೆ. ಆದ್ದರಿಂದಲೇ ಪತ್ನೀಪುತ್ರರ ವಿಯೋಗವು ಉಂಟಾಗುವುದೆನ್ನಬೇಕಾಗಿದೆ. ರಕ್ತಪೀಡೆಯೂ ಅನಾರೋಗ್ಯವೂ ಹೆಚ್ಚುವುದು. ಧನಾಗಮದ ಇಮ್ಮಡಿಯಾಗಿ ವ್ಯಯವಾಗುವುದು. ಇದರಿಂದ ಯಾವ ಕಾರ್ಯಕ್ಕೂ ನಿಮ್ಮ ಕೈಕಟ್ಟಿ ಹೋದಂತಾಗಿದೆ. ಆದರೂ ಬೃಹಸ್ಪತ್ಯಾಚಾರ್ಯರು ಸಮಯದಲ್ಲಿ ಒದಗಿ ನಿಮ್ಮ ಮರ್ಯಾದೆಯನ್ನುಳಿಸದೆ ಇರರು. ತಾ. 5-6 ಇವನ್ನು ಬಿಟ್ಟರೆ ಇತರ ಎಲ್ಲಾ ದಿನಗಳೂ ಹಾನಿಕಾರಿಗಳೇ ಆಗಿರುವವು.

ತುಲಾರಾಶಿ—

ಸ್ಥಾನಾಪನ್ನರಾದ ಉದ್ಯೋಗಿಗಳಿಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ಈ ವಾರವು ಸಾಮಾನ್ಯತಃ ಚೆನ್ನಾಗಿದೆಯೆನ್ನಬಹುದು. ಮಿಕ್ಕುಳಿದ ಜನವೃಂದಕ್ಕೆ ಈ ವಾರವು ಸರ್ವಥಾ ತ್ಯಾಜ್ಯವಾಗಿರವುದು. ಪಾಪಿ ಹೋದಲ್ಲಿ ಮೊಣಕಾಲು ಸಮುದ್ರವೆಂಬಂತೆ ಈ ದುರ್ಗ್ರಹರ ಫಲದಿಂದಾಗಿ ದುರ್ಜನರ ಸಹವಾಸಕ್ಕೆ ಒಳಬಿದ್ದು ಅಕಾರ್ಯದಲ್ಲಿ ಪ್ರವರ್ತಿಸಿ ಹೆಚ್ಚಾದ ಕಷ್ಟನಷ್ಟಗಳಿಗೂ ಅಪವಾದ ಅನಿಷ್ಟಗಳಿಗೂ ಗುರಿಯಾಗುವಿರಿ. ಜ್ವರ ಅಜೀರ್ಣ ಸಂಬಂಧದಿಂದಾಗಿ ಉದರರೋಗ ಇತ್ಯಾದಿಗಳಿಂದ ನಿತ್ಯ ಪೀಡಿಸಲ್ಪಡುವಿರಿ. ಶತ್ರುಜನರ ಪೀಡೆಯಿಂದ ಕಾರ್ಯಗಳು ಕೊನೆಗೊಂಡವೆ ವ್ಯರ್ಥ ಧನವ್ಯಯದಿಂದಲೂ ಅಪಜಯದಿಂದಲೂ ಪೀಡಿತರಾದ ನೀವು ನಿತ್ಯ ವ್ಯಸನಿಗಳಾಗುವಿರಿ. ಹೆಚ್ಚೇಕೆ ಅನಿಷ್ಟಗಳ ಸಮೂಹವೇ ನಿಮ್ಮ ಬೆನ್ನುಹಿಡಿದು ನಿಂತಿವೆಯೆಂದರೂ ತಪ್ಪಾಗದು. ಸದ್ಯದ ವಾತಾವರಣದಲ್ಲಿ ಪ್ರವಾಸವಾಡಲು ಈ ವಾರವು ಎಷ್ಟರ ಮಟ್ಟಿಗೂ ಉತ್ತಮವಾಗಿಲ್ಲವು. ತಾ. 5-6 9-10-11 ಈ ದಿನಗಳು ಅಪ್ತರಲ್ಲಿ ಮನಸ್ತಾಪ ಧನಮಾನಗಳ ಹಾನಿ ಇತ್ಯಾದಿಗಳುಂಟಾಗಲಿವೆ.

ವೃಶ್ಚಿಕರಾಶಿ—

ಪುತ್ರಕಳತ್ರರ ಮತಭೇದದಿಂದಾಗಿ ನಿಮಗೆ ಸಂಸಾರದಲ್ಲಿ ನಿತ್ಯಕಲಹವುಂಟಾಗುವುದು. ಇದು ಹೊರತು ನಿಮಗೆ ಇತರ ಸರ್ವ ಭಾಗಗಳಲ್ಲೂ ಈ ವಾರವು ಅತ್ಯುತ್ತಮವಾಗಿರುವುದು. ನಿಮ್ಮ ರಾಜಕೀಯ ಕಾರ್ಯಗಳು ಅನಾಯಾಸದಿಂದ ಅನುಕೂಲವಾಗಿ ಕೊನೆಗೊಳ್ಳುವುವು ಆರೋಗ್ಯವು ಅತ್ಯುತ್ತಮ ರೀತಿಯಲ್ಲಿರುವುದು. ಮನೋರೋಗಗಳು ಮಾಯವಾಗುವವು. ಸುತಮಿತ್ರವರ್ಗದವರಿಂದ ನಿಮ್ಮ ಕೀರ್ತಿದುಂದುಭಿಯು ಎಲ್ಲೆಡೆಗಳಲ್ಲೂ ಮೊಳಗುವುದು. ಬಂಧುಬಾಂಧವರು ಸಂಪೂರ್ಣ ಸಹಾನುಭೂತಿಯುಳ್ಳವರಾಗುವರು. ಸೇವಕರು ಸ್ವಾಮಿನಿಷ್ಠೆಯಿಂದ ತತ್ಕಾರ್ಯದಲ್ಲಿ ನಿರತರಾಗಿರುವರು. ನಿರುದ್ಯೋಗಿಗಳು ಇನ್ನು ವೃಥಾ ಸಮಯವನ್ನು ಹಾಳುಮಾಡಬೇಕಾದ ಆಗತ್ಯವಿಲ್ಲವು. ಅಪತ್ಯವರ್ಗದವರಿಂದಲೂ ಕಳ್ಳಕಾಕರಿಂದಲೂ ಕೂಡ ಧನಾಗಮವಾಗುವುದು. ಆರ್ಥಿಕ ಅಡಚಣೆಯು ಅದೆಂದೋ ಮಾಯವಾಗಿರುವುದು. ಒಟ್ಟಾರೆ ಹೇಳುವುದಾದರೆ ನಿಮ್ಮ ಭಾಗಕ್ಕೆ ಇದು ಸುವರ್ಣದಂತಹ ಸಮಯವು. ತಾ 5-6 ಮತ್ತು 9-10-11 ಈ ದಿನಗಳಲ್ಲಿ ಧನ ಸ್ತ್ರೀಸುಖ ಭೋಗ್ಯವಸ್ತುಗಳು ಇಷ್ಟಾಧಿಕವಾಗಿ ಲಭಿಸುವವು.

ಧನೂರಾಶಿ—

ಧನಧಾನ್ಯಗಳು ತುಂಬಿರುವ ತನಕ ಮಾತ್ರ ಬಂಧುಗಳು ಬಾಂಧವರು, ಆಪ್ತಮಿತ್ರನಾದರೋ ಆ ಮರಣಪರ್ಯಂತವೂ ಸಮಾನತ್ಮನಾ ನೆರವಾಗುವವರು. ಸದ್ಯದಲ್ಲಿ ನಿಮಗೆ ಮಿತ್ರವರ್ಗದ ಬಲವೊಂದು ಚೆನ್ನಾಗಿರುವುದರಿಂದ ಧನವನ ಬಲದಲ್ಲಿ ನೀವು ಮುಂದಾಗುವಿರಿ. ನಿಮ್ಮ ಭಾಗಕ್ಕೆ ಅಸಾಧ್ಯವಾದ ಕಾರ್ಯವೇ ಇಲ್ಲವೆನಬಹುದು. ಬಂಧುವರ್ಗವು ನಿಮಗೆ ಎಷ್ಟರಮಟ್ಟಿನ ಸಹಾಯಕಾರಿಯಾಗುವುದೆಂಬ ವಿಷಯವು ಈ ಕಾಲದಲ್ಲಿ ನಿಮಗೆ ತಿಳಿಯಬರುವುದು. ಸಂಬಂಧ ಭಾಗದಲ್ಲಿರುವ ನಿಮಗೆ ಬಂಧುಗಳಾಗಿದ್ದರೂ ಕಾರ್ಯಭಾಗದಲ್ಲಿ ಶತ್ರುಗಳಿಗಿಂತಲೂ ಕಡೆಯಾಗಿರುವರು. ಈ ವಿಷಯವನ್ನು ನೀವು ಮನಗಂಡ ಮೇಲೆ ನಿಮ್ಮ ಬಂಧುಗಳ ಗುಟ್ಟು ರಟ್ಟಾಗಲಿರುವುದು. ಉಷ್ಣ ಮತ್ತು ಪಿತ್ಥ ದೋಷದಿಂದಾಗಿ ದೇಹಾರೋಗ್ಯವು ಸರಿಯಿರಲಾರದು. ಪುತ್ರಭೃತ್ಯರು ನಿಮ್ಮ ವಚನವನ್ನುಲ್ಲಂಘಿಸುವರು. ತಾ. 4-7-7 ಈ ದಿನಗಳಲ್ಲಿ ಮಿತ್ರಲಾಭ ಧನಲಾಭ ಸಂತೋಷಗಳುಂಟಾದರೂ ಇತರ ದಿನಗಳಲ್ಲಿ ನಿಮ್ಮ ಶಕ್ತಿಯನ್ನತಿಕ್ರಮಿಸಿ ಖರ್ಚು ಕಾರ್ಯವಿಘ್ನಗಳೂ ಉಂಟಾಗುವವು.

ಮಕರರಾಶಿ—

"ಪ್ರಾಯೇಣ ಶ್ರೀಮತಾಂ ಲೋಕೇ ಭೋಕ್ತುಂ ಶಕ್ತಿರ್ನ ವಿದ್ಯತೇ" ಎಂದು ಪ್ರಾಜ್ಞರು ಹೇಳಿರುವರು. ಎಂದರೆ ಲೋಕದಲ್ಲಿ ಹೆಚ್ಚಾಗಿ ಶ್ರೀಮಂತರಿಗೆ ಬೇಕಾದ ವಸ್ತುಗಳಿದ್ದರೂ ಅವುಗಳನ್ನು ಉಪಭೋಗಿಸುವ ಶಕ್ತಿಯು ಅವರಲ್ಲಿಲ್ಲವು. ಅಂದರೆ ಅವರು ಪಡೆಯಲಿಲ್ಲವೆಂದರೂ ಸರಿಯೇ. ಹೆಚ್ಚಾಗಿ ಶ್ರೀಮಂತರಿಗೆ ಸರ್ವಾನುಕೂಲತೆಗಳ ಅಸ್ತಿತ್ವದಿಂದಲೇ ಸರ್ವೇಂದ್ರಿಯಗಳಿಗೂ ತೃಪ್ತಿಯಾಗುವುದು. ಅವನ್ನು ಉಪಭೋಗಿಸುವವರು ಎರವಲೆಯವರು. ಇದು ಲೋಕ ರೂಢಿಯಾಗಿರುವುದು. ನೀವು ಹಿಂದೆ ಬೇಕಾದಷ್ಟು ದುಡಿದುಡಿದಿದ್ದರೂ ಸದ್ಯದಲ್ಲಿ ನಿಮಗದನ್ನು ಭೋಗಿಸಲು ಶಕ್ತಿಯಿಲ್ಲದಂತಾಗಿರುವುದು. ಕಾರಣವಾಗಿ ಗೃಹದೂ ಕೂಡ ವಿಮುಖರಾಗಿ ನಿಂತಿರುವರು. ಪರೀಕ್ಷೆಯಲ್ಲಿ ಬೇಕಾದ ಶಕ್ತ್ಯುತ್ಸಾಹವಿಲ್ಲವು. ಮನಸ್ಸು ಅಸ್ಥಿರವಾಗಿ ಗಾಳಿಗೆ ಸಿಕ್ಕಿದ ಹತ್ತಿಯಂತೆ ಕಂಡಾಬಟ್ಟೆ ಹರಿದಾಡುತ್ತಿರುವುದು. ಶತ್ರುಭಯವು ಅಧಿಕವಾಗುತ್ತಿರುವುದು. ರಾಜಸ್ಥಾನದಲ್ಲಿ ಮಾನಹಾನಿಯು ಸಂಭವವಿದೆ. ಅಕಸ್ಮಾತ್ ದೇಹದಲ್ಲಿ ಗಾಯಾದಿಗಳುಂಟಾಗಲಿವೆ. ತಾ. ಈ 7-8 ಈ ದಿನಗಳು ಹೆಚ್ಚಿನ ಗಂಡಾಂತರಕಾರಿಗಳಾಗಿವೆ



ಎಲ್ಲಾ ಔಷಧಿ ಅಂಗಡಿಗಳಲ್ಲೂ ಸಿಗುತ್ತದೆ. ವಿವರಣಾ ಪತ್ರಿಕೆ ಉಚಿತ.
ತಯಾರಕರು:— ಆಯುರ್ವೇದಾಶ್ರಮಂ, ಪೋ. ಬಾಕ್ಸ್ ೨೦೬, ಮದ್ರಾಸ್.
ಸ್ಟಾಕಿಸ್ಟರು:— ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ನೀವು ಮಾರಿಷಸ್ಸಿನ ಸಕ್ಕರೆ ತಿಂದಿರುವಿರಲ್ಲಾ! ಅಲ್ಲಿನ ಸ್ಥಿತಿಗತಿಗಳನ್ನು ಕೇಳಿ ತಿಳಿದಿರುವಿರಾ?

(ಮಾರಿಷಸ್ಸಿಗೆ ಹೋಗಿಬಂದ ಭಾರತೀಯ ಪ್ರವಾಸಿಗಳೊಬ್ಬರಿಂದ ಸಂಗ್ರಹಿಸಲ್ಪಟ್ಟದ್ದು.)

ಭಾರತೀಯರು ವಿಶ್ವದ ಎಲ್ಲಾ ದೇಶಗಳಿಗೂ ಹೋಗಿ ನೆಲಸಿರುವರು. ಅವರಲ್ಲಿ ಸ್ವೇಚ್ಛೆಯಿಂದ ವಿದೇಶಗಳಿಗೆ ಹೋಗಿ ವ್ಯವಸಾಯ ವಾಣಿಜ್ಯದಿಂದ ಜೀವನ ಮಾಡುವವರು ಕೆಲವರು. ಆದರೆ ತಮ್ಮ ಮತ್ತು ತಮ್ಮ ಕುಟುಂಬದ ಜ್ವಾಲೆಯನ್ನು ಶಾಂತಮಾಡಲು ವಿದೇಶಕ್ಕೆ ಹೋಗಿರುವವರ ಸಂಖ್ಯೆಯೇ ಹೆಚ್ಚು. ತಮ್ಮ ದೇಶವನ್ನೂ ಪುನಃ ನೋಡಬೇಕೆಂದು ಅವರಿಗಿರುವ ವ್ಯಾಕುಲತೆಯನ್ನು ಅಲ್ಲಿಗೆ ಹೋಗಿ ಬಂದಿರುವ ಪ್ರವಾಸಿ ಭಾರತೀಯರು ಮಾತ್ರ ಬಲ್ಲರು. ಕೆನಿಯಾ, ಮಲಯಾ, ಮಾರಿಷಸ್, ಇವುಗಳಲ್ಲಿ ಬಹಳ ಮಂದಿ ಭಾರತೀಯರು ಹೋಗಿ ನೆಲಸಿರುವರು.

ಮಾರಿಷಸ್ ದ್ವೀಪವು ಹಿಂದೂ ಮಹಾಸಾಗರದ ದಡದಲ್ಲಿ ಕಲ್ಕತ್ತೆಯಿಂದ 3,300 ಮೈಲಿ ದೂರದಲ್ಲಿರುವ ಒಂದು ದ್ವೀಪ. 4 ಸಾವಿರ ವರ್ಷಗಳ ಹಿಂದೆ ಇದನ್ನು ಕಂಡು ಹಿಡಿದವನು ಒಬ್ಬ ಪೋರ್ಚುಗೀಸ್ ನಾವಿಕನು. ಅವನ ಹೆಸರು ಡೋನ್ ಪೆಟ್ರೋಮಸ್ಕರ್ ಗನಾಜ್. ಭಾರತವನ್ನು ಕಂಡುಹಿಡಿಯಲು ಪೋರ್ಚುಗೀಸರು ಹೊರಟು ಈ ಭಾಗಕ್ಕೆ ಬಂದರು. ಈ ಪೋರ್ಚುಗೀಸರನಂತರ 1697ನೇ ಇಸವಿ ವರೆಗೂ ಅಲ್ಲಿಗೆ ಇತರ ದೇಶದವರ ಪ್ರವೇಶವಾಗಲಿಲ್ಲ. ನಂತರ ಬಂದವರು ಡಚ್ಚರು. ಇವರು 1712ರ ವರೆಗೆ ಅಲ್ಲಿ ಇದ್ದನಂತರ ಗಂಟುಮೂಟೆ ಕಟ್ಟಿಕೊಂಡು ಹೊರಟರು.

ನಂತರ ಫ್ರೆಂಚರು ಅಲ್ಲಿ ತಮ್ಮ ಅಧಿಕಾರವನ್ನು ಚಲಾಯಿಸಿದರು. ನೂರು ವರ್ಷಗಳ ತರುವಾಯ 1710ರಲ್ಲಿ ಬ್ರಿಟನ್ ಮತ್ತು ಫ್ರಾನ್ಸ್‌ಗಳಿಗೆ ಅನೇಕ ಯುದ್ಧಗಳು ನಡೆದು ಬ್ರಿಟಿಷ್ಷನವರ ವಶವಾಗಿ ಇಂದಿಗೂ ಅವರ ಅಧಿಕಾರವಲ್ಲೇ ಇದೆ.

ಮಾರಿಷಸ್ ದ್ವೀಪದ ವಿಸ್ತೀರ್ಣ 705 ಚ. ಮೈಲಿಗಳು ಭೂಮಿಯು ಬಹಳ ಫಲವತ್ತಾದುದು. ಇಲ್ಲಿ ಟೀ, ಹೊಗೆಸೊಪ್ಪುಗಳು ಉತ್ತಮವಾಗಿ ಬೆಳೆದರೂ ಎಲ್ಲಕ್ಕಿಂತ ಉತ್ಕೃಷ್ಟವಾಗಿ ಆಗುವ ಬೆಳೆ ಕಬ್ಬು. ಈ ಕಬ್ಬೇ ಆ ದ್ವೀಪದ ಉನ್ನತಿಗೆ ಕಾರಣವಾಗಿರುವುದು. ಅಲ್ಲಿ ಸುಮಾರು 60 ಸಕ್ಕರೆಯ ಕಾರ್ಖಾನೆಗಳಿದ್ದಾವೆ. ಅವುಗಳಲ್ಲಿ ಆರು ಕಾರ್ಖಾನೆಗಳು ಇಂಗ್ಲಿಷರ ವಶದಲ್ಲಿಯೂ, ಕೆಲವು ಅಲ್ಲಿನ ನಿವಾಸಿಗಳ ವಶದಲ್ಲಿಯೂ ಉಳಿದುವು. ಭಾರತೀಯರ ಅಧಿಕಾರದಲ್ಲಿಯೂ ಇವೆ.

ಅಲ್ಲಿನ ಜನಸಂಖ್ಯೆ 4 ಲಕ್ಷ. ಅದರಲ್ಲಿ 3½ ಲಕ್ಷ ಭಾರತೀಯರು. ಅಲ್ಲಿರುವ ಭಾರತೀಯರಲ್ಲಿ ಬಹು ಭಾಗದವರು ಬಿಹಾರ್ ಮತ್ತು ಸಂಯುಕ್ತ ಪ್ರಾಂತದವರೇ ಇರುವರು. ಇವರು ವಿವಾಹಾದಿ ಶುಭಕಾರ್ಯಗಳಿಗೆ ಭಾರತಕ್ಕೇ ಬಂದು ಹೋಗುವರು. ಇದು ಧನಿಕರು ಮಾಡುವುದಾಯಿತು. ದರಿದ್ರರು ಹೇಗೆ ತಾನೇ ಬಂದುಹೋಗಬಲ್ಲರು. ತಾವಿರುವೆಡೆಯಲ್ಲಿಯೇ, ತಮ್ಮ ಕುಲಗೋತ್ರದವರನ್ನು ಹುಡುಕಿ ವಿವಾಹಾದಿಗಳನ್ನು ಮುಗಿಸಿಕೊಳ್ಳುವರು.

ಅಲ್ಲಿನವರಲ್ಲಿ ಬಹುಜನರು ಸನಾತನ ಧರ್ಮಾವಲಂಬಿಗಳು. ಮಾರಿಷಸ್ಸಿನಲ್ಲಿರುವ ಅನೇಕ ಹಿಂದೂ ದೇವಾಲಯಗಳೇ ಇದಕ್ಕೆ ನಿದರ್ಶನ. 32 ಮಂದಿರಗಳಿವೆ. ಪ್ರವಾಸೀ ಭಾರತೀಯರಿಂದ ಸ್ಥಾಪಿಸಲ್ಪಟ್ಟಿರುವ ಅನೇಕ ಸಂಸ್ಥೆಗಳು ಅಲ್ಲಿವೆ. ಅವುಗಳಲ್ಲಿ ಹಿಂದೂ ಮಹಾಸಭೆ, ಕ್ಷತ್ರಿಯಸಭೆ, ಬ್ರಾಹ್ಮಣಸಭೆ, ಕಾಕುಂಸಂಘಟನಾ ಸಮಾಜ, ಆರ್ಯ ಪ್ರತಿನಿಧಿಸಭೆ, ಪರೋಪಕಾರಿಣಿ ಸಭಾ ಎಂಬುವು ಮುಖ್ಯವಾದುವು. ಭಾರತೀಯರಿಂದಲೇ ನಡೆಸಲ್ಪಡುವ 40 ಶಾಲೆಗಳಿವೆ. ಇವುಗಳಲ್ಲಿ ಪ್ರಾರಂಭಿಕ ಶಿಕ್ಷಣವು ಉಚಿತ ಫ್ರೆಂಚ್ ಮತ್ತು ಇಂಗ್ಲಿಷ್ ಭಾಷೆಯೊಡನೆ ಅಲ್ಲಿನ ಶಾಲೆಗಳಲ್ಲಿ ಪ್ರತಿದಿನವೂ ಒಂದು ಘಂಟೆಯ ಕಾಲ ಹಿಂದಿಯನ್ನೂ ಕಲಿಸಲಾಗುತ್ತಿದೆ.

ಅಲ್ಲಿನ ಆಹಾರವಸ್ತುಗಳು ಹೊರಗಿನಿಂದ ಬರುವುವು. ಅಕ್ಕಿಯು ಭಾರತದಿಂದ ಬರುವುದು. ಗೋಧಿಯೂ ಸಹ ಬರುವುದಾದರೂ ಡೆನ್ಮಾರ್ಕ್ ಫ್ರಾನ್ಸ್ ಮತ್ತು ಇಟಲಿಯಿಂದ ಹೆಚ್ಚು ಬರುವುದು ಟೀಯು ಚೀನ ಮತ್ತು ಸಿಲೋನಿನಿಂದ ಬರುತ್ತದೆ. ಅಲ್ಲಿ ಮನೆಗಳನ್ನು ಕಟ್ಟಿಗೆಯಿಂದ ಕಟ್ಟುತ್ತಾರೆ ಈ ಕಟ್ಟಿಗೆಯಾದರೂ ಇಂಡಿಯಾ ಮತ್ತು ಸಿಂಗಪುರಗಳಿಂದ ಬರುತ್ತದೆ.

ಅಲ್ಲಿ ಹಿಂದುಗಳ ಸಂಖ್ಯೆಯೇ ಅಧಿಕವಾಗಿದ್ದರೂ ಅಲ್ಲಿರುವ ಹಿಂದೂ ಮುಸಲ್ಮಾನರು ಬಹಳ ಮೈತ್ರಿಯಿಂದಿರುವರು. ಕೆಲವು ಕುಶಲರಾದ ಪಾರ್ಸಿಯವರೂ ಹೋಗಿ ಸೇರಿದ್ದಾರೆ. ಇಂಗ್ಲಿಷ್ ಭಾಷೆಯನ್ನು ಕಲಿಯುವುದರಲ್ಲಿ ಅವರು ಬಹಳ ಚತುರರಂತೆ.

ಅಲ್ಲಿನ ಭಾರತೀಯರ ಮುಖ್ಯ ವೃತ್ತಿ ಸಕ್ಕರೆ ಗಿರಣಿಗಳಲ್ಲಿ ಕೂಲಿಮಾಡುವುದೇ. ರಾಯಲ್ ಕಾಲೇಜಿನಲ್ಲಿ ಓದಿದವರಿಗೆ ಸರಕಾರದ ನೌಕರಿಗಳೂ ಸಹ ದೊರೆಯುತ್ತವೆ. ಚೀನಿಯರೂ ಸಹ ಇರುವರು. ಚೀನೀಯರು ಸ್ವಭಾವದಲ್ಲಿ ಬಹಳ ಶಾಂತಿಪ್ರಿಯರು. ಸದ್ದಿಲ್ಲದೆ ತಮ್ಮ ವ್ಯವಹಾರವನ್ನು ನಡೆಸಿಕೊಂಡು ಹೋಗುವರು. ಇಷ್ಟು ವಿಭಿನ್ನ ಧರ್ಮಗಳ ಅನುಯಾಯಿಗಳಿದ್ದರೂ ಅಲ್ಲಿ ಇದುವರೆಗೆ ಧಾರ್ಮಿಕ ಸಂಘರ್ಷಣೆ ಮಾತ್ರ ನಡೆಯದಿರುವುದು ಸಂತೋಷದ ಸುದ್ದಿಯಲ್ಲವೆ? ಭಾರತದ ದುರವಸ್ಥೆಯನ್ನು ಇದರೊಡನೆ ಹೋಲಿಸಿ ನೋಡಿ.

ಅಲ್ಲಿನ ಮುಖ್ಯ ಅಧಿಕಾರಿ ಗವರ್ನರ್. ಮೊದಲು ವರ್ಷಕ್ಕೊಮ್ಮೆ ಇರುತ್ತಿದ್ದ ಈ ಅಧಿಕಾರಿಯು ಈಗ 7 ವರ್ಷಗಳ ವರೆಗಿರುವನು. 1930ರಲ್ಲಿ ಸ್ಟೇಟ್ ಸೆಕ್ರಿಟರಿಯಿಂದ ಕಾರ್ಖಾನೆಗಳ ಮೇಲೆ ಅಧಿಕ ಕಂದಾಯವನ್ನು ಹಾಕಲಾಯಿತು.

ರುಪೆಯ ಎಂಬಲ್ಲಿ ಸರಕಾರದವರು ಒಂದು ಕಾಲೇಜನ್ನಿಟ್ಟಿರುವರು. ಇಲ್ಲಿ ಯಾವ ಭೇದ ಭಾವವೂ ಇಲ್ಲದೆ ಉಚ್ಚ ಶಿಕ್ಷಣವನ್ನು ಕೊಡುವರು. ಇದೇ ರಾಯಲ್ ಕಾಲೇಜು ಭಾರತದವರಿಂದ ಶ್ರೀ ದೇವದತ್ತ ಶರ್ಮರು (ಸದ್ಯದಲ್ಲಿ ಇವರು ಭಾರತಕ್ಕೆ ಬಂದಿರುವರು) ಮಾರಿಷಸ್ ಇಂಡಿಯನ್ ಟೈಂಸ್ ಎಂಬ ವೃತ್ತಪತ್ರಿಕೆಯ ಹಿಂದೀ ವಿಭಾಗದ ಸಂಪಾದಕರಾಗಿರುವರು. ಅವರು ಹೇಳುವಂತೆ ಅಲ್ಲಿನ ಹಿಂದೂ ಮುಸಲ್ಮಾನರು ಶಾಂತಿಪೂರ್ವಕವಾಗಿರುವರಂತೆ.

ಇದು ಸಹ ಅಲ್ಲಿಗೆ ಹೋಗಿ ಬಂದ ಒಬ್ಬ ಪ್ರವಾಸೀ ಭಾರತೀಯರಿಂದಲೇ ಸಂಗ್ರಹಿಸಲ್ಪಟ್ಟುದು.

(ಹಿಂದಿಯಿಂದ)

ಪುಟ ೧೩ರಿಂದ

ಕುಂಭರಾಶಿ—

ವ್ಯಯಸ್ಥಾನದಲ್ಲಿ ಕುಜನು ಉಚ್ಚನಾಗಿ ಕುಳಿತಿರುವುದರಿಂದ ಅಕಸ್ಮಾತ್ ಅನರ್ಥಗಳೊದಗಿ ತಕ್ಷಣವಾಗಿ ಧನವನ್ನು ಹೆಚ್ಚಾಗಿ ಖರ್ಚುಮಾಡಿಸುವನು. ಸ್ತ್ರೀಯರಲ್ಲಿ ಕಲಹವನ್ನೂ ಮಾಡಿಸುವನು. ಈತನನ್ನು ಹೊರತು ಇತರ ಸಕಲ ಗ್ರಹರೂ ಉತ್ತಮ ರೀತಿಯಲ್ಲಿರುವುದರಿಂದ ನಿಮಗೇನಾದರೂ ಕಳೆದುದೇ ತಿಳಿಯದಂತಾಗುವುದು. ನೀವು ಸ್ವಭಾವತಃ ಭೀರುಗಳಾಗಿದ್ದರೂ ಧನಜನ ಬೆಂಬಲದಿಂದ ಯುಕ್ತರಾಗಿರುವ ಕಾರಣ ಎಂತಹ ಸಮರ್ಥ ಇದಿರಾಳಿಯನ್ನೂ ಗೆಲ್ಲುವಿರಿ. ಆದಾಯವು ಅತ್ಯುತ್ತಮ ರೀತಿಯಲ್ಲಿರುವುದು, ಮಿತ್ರುಗಳ ಸ್ನೇಹದಿಂದಲೂ ಒಳ್ಳೇ ಸ್ಥಾನಾಶ್ರಯದಿಂದಲೂ ಸದಾ ಸಂತೋಷಿಗಳಾಗುವಿರಿ. ಗೃಹಕೃತ್ಯವು ಪರಿಪೂರ್ಣವಾಗಿರುವುದು. ಇತರ ಯಾವ ಭಾಗದಲ್ಲೂ ನಿಮಗೆ ಚಿಂತೆಯಿರದು. ಹೆಚ್ಚೇಕೆ ಸಾಮಾನ್ಯವಾಗಿ ಹೇಳುವುದಾದರೆ ಕುಂದರನಿರಂತೆ ಪ್ರಕೃತದ ನಿಮ್ಮ ಕಾಲವನ್ನು ಕಳೆಯುವಿರಿ. ತಾ. 5ರಿಂದ 8ರ ವರೆಗೆ ಸರ್ವಾನುಕೂಲ ಯೋಗವಿರುವುದರಿಂದ ಇಷ್ಟಸಿದ್ಧಿ, ನಾನಾವಿಧ ಲಾಭಗಳಾಗುವವು. ಮಹತ್ಕಾರ್ಯಗಳನ್ನು ಈ ದಿನವಾರಂಭಿಸುವುದುಚಿತ.

ಮೀನರಾಶಿ—

ದುಃಖಸಾಗರದಲ್ಲಿ ನೆಲೆಸಿಲುಕದೆ ಬಹಳವಾಗಿ ಜೀವದ ಹಂಗು ತೊರೆದು ಹೋರಾಡುತ್ತಿದ್ದ ನಿಮಗೆ ಈಗೀಗ ಆಲಂಬನ ರೂಪವಾಗಿ ಮರದ ತುಂಡುಗಳು ಸಿಕ್ಕಿದಂತಾಗಿರುವುದು. ಆರ್ಥಿಕ ಅಡಚಣೆಯಿಂದ ಹಣ್ಣುಹಣ್ಣಾಗಿದ್ದ ನಿಮಗೆ ಈಗೀಗ ಸ್ವಲ್ಪ ಬಿಡುವು ದೊರೆತಿರುವುದು. ಸಾಮಾನ್ಯವಾಗಿ ನಿಮ್ಮ ಆಯವು ಉತ್ತಮ ರೀತಿಯನ್ನು ಹೊಂದಿದೆಯೆಂದರೂ ತಪ್ಪಾಗದು. ಜನತೆಯಲ್ಲಿ ಈಗಲೀಗ ಗೌರವ ಆದರಗಳು ದೊರೆಯುತ್ತಿವೆ. ಕಾರ್ಯದಲ್ಲಿ ಜಯವೂ ಕೀರ್ತಿಯೂ ಲಭಿಸುವದು. ಗೃಹಸೌಖ್ಯಕ್ಕೇನೂ ಕೊರತೆಯಿರದು. ಆದರೂ ನಿಮ್ಮ ಮನಸ್ಸು ಇನ್ನೂ ಚಂಚಲವಾಗಿಯೇ ಇರುವುದು. ಕೆಲವೊಮ್ಮೆ ಸಿಟ್ಟಿನ ಭರದಿಂದ ಮಾತು ಮುಂದರಿಸಿ ಕಲಹಕ್ಕೂ ತಿರಸ್ಕಾರಕ್ಕೂ ಒಳಗಾಗಲಿರುವಿರಿ. ಮನಸ್ಸಿನಲ್ಲಿ ಅದೊಂದು ಭಯವು ನೆಟ್ಟಿರುವುದು. ಅವಿವೇಕದಿಂದಾಗಿ ಸ್ವಲ್ಪಮಟ್ಟಿನ ಧನವನ್ನು ವ್ಯರ್ಥ ವ್ಯಯಿಸುವಿರಿ. ತಾ. 4-5-6 ಈ ದಿನಗಳ ಮಟ್ಟಿಗೆ ರಾಜಕೀಯ ಭಾಗದಲ್ಲೂ ಆರೋಗ್ಯ ವಿಚಾರದಲ್ಲೂ ಹೆಚ್ಚಿನ ಜಾಗ್ರತೆಗೊಳ್ಳಿರಿ.

ನವಯುಗ ಸ್ಪರ್ಧೆ ೨.

—•— ರೂ. 25 ಇನಾಮು —•—

I ಇನಾಮು ರೂ. **10/-** **II** ರೂ. **5**ರ **2** ಇನಾಂ. **III** ರೂ. **1**ರ **5** ಇನಾಂ.
ಒಟ್ಟು ರೂ. **25**ರ **8** ಇನಾಮುಗಳು.

1		2	■	3		
	■	4			■	
5	6		■	7	8	9
■		■	■	■		■
10		11	■	12		13
	■	14			■	
15			■	16		

ಸೂಚನೆಗಳು.

ಎಡದಿಂದ ಬಲಕ್ಕೆ—1. ಪಾಂಡವರಲ್ಲೊಬ್ಬ, 3. ಋಷಿ, 4. ಇದನ್ನು ನಾರಿಗೆ ಕಟ್ಟುತ್ತಾರೆ, 5. ಈ ಹೂವಿನ ಹೆಸರನ್ನು ಹೆಂಗಸರಿಗೂ ಇಡುತ್ತಾರೆ, 7. ಬೇಡ, 10 ಹಿಂದುಗಳ ಪವಿತ್ರ ಗ್ರಂಥಗಳಲ್ಲೊಂದು, 12. ಯಜ್ಞ, 14. ರಕ್ತ, 15 ಹೀಗಾಗಲು ನಾವೆಲ್ಲರೂ ಪ್ರಯತ್ನಿಸಬೇಕು, 16. ಸ್ತ್ರೀಯರು ಹೀಗಿರಬೇಕು.

ಮೇಲಿಂದ ಕೆಳಕ್ಕೆ—1. ಈ ಪ್ರಸಂಗವು ಇರಕೂಡದು, 2. ಎಡದಿಂದ ಬಲದ 1ನೆಯವನ ತಮ್ಮ, 3. ಒಬ್ಬ ರಾಕ್ಷಸಿ, 6. ಒಂದು ವಾಹ, 8. ಈ ಹೂವಿನ ಹೆಸರನ್ನು ಗಂಡಸರಿಗೂ ಇಡುತ್ತಾರೆ, 10. ಪಕ್ಷಿಗಳಲ್ಲೊಂದು, 11. ಯುವಕ, 12. ಬಡವರು ಇಂಥ ಬಟ್ಟೆಯನ್ನು ಉಪಯೋಗಿಸುತ್ತಾರೆ, 13. ಹೊಸತು.

ಕೆಳಗಿಂದ ಮೇಲಕ್ಕೆ—9. ಬಿಸಿಹಾಲನ್ನು...... ಕುಡಿಯುತ್ತಾರೆ.

ನಿಯಮಗಳು— 1. ಉತ್ತರದೊಂದಿಗೆ 0-2-0 ಟಪ್ಪಾಲುಚೀಟನ್ನು ಕಳುಹಿಸಬೇಕು. 2. 0-8-0ಗೆ 5 ಉತ್ತರದಂತೆ ಕಳುಹಿಸಬಹುದು. 3. ಇನಾಂಗಳನ್ನು ಸರಿಯಾಗಿ ಬಿಡಿಸಿದವರೊಳಗೆ ಚೀಟಿ ಹಾಕಿ ಕೊಡಲಾಗುವುದು. 4. ಇನಾಮುಗಳೆಲ್ಲಾ ಪುಸ್ತಕರೂಪದಲ್ಲೇ ಕೊಡಲ್ಪಡುವವು.

ಉತ್ತರವನ್ನು ತಾ. 15-5-39ರೊಳಗೆ ಸ್ವೀಕರಿಸಿ 18-5-39ಕ್ಕೆ ಪ್ರಕಟಿಸಲಾಗುವುದು.

ನವಯುಗ ಸ್ಪರ್ಧೆ,
ನವಯುಗ ಆಫೀಸು ಉಡುಪಿ.

— ಕೂದಲು ರಂಗುತೈಲ ಜಿಸಿರಿ —

ಈ ತೈಲದ ಲೇಪನದಿಂದ ಬಿಳಿ ಕೂದಲು ಬೆಳೆದಾಗುವುದು ನಿಲ್ಲುವುದು. ಬಿಳಿಕೂದಲು ಪೂರ್ಣ ಕಪ್ಪಾಗಿ ಬಣ್ಣರಂಗು ತಾಳುವುದು. ಸಾವಿರಾರು ಸರ್ಟಿಫಿಕೇಟುಗಳು ನಮಗೆ ದೊರೆತಿರುವುದೇ ನಮ್ಮ ತೈಲದ ಯೋಗ್ಯತೆಯನ್ನು ತೋರುವುದು. ಅಪ್ರಯೋಜನಕಾರಿ ಎಂದು ಸಾಬೀತುಪಡಿಸಬಲ್ಲವರಿಗೆ ಕೊಟ್ಟ ಹಣವನ್ನು ಕೊಡುವ ಕರಾರಿದೆ. ಅಲ್ಪಸ್ವಲ್ಪ ನೆರೆತ ಕೂದಲುಗಳಿಗೆ ಬೇಕಾಗುವ ತೈಲಕ್ಕೆ ರೂ. 4, ಕಾಲುಪಾಲಿಗೂ ಮಿಕ್ಕಿರುವುದಾದರೆ ರೂ. 7ರಷ್ಟು ಬೆಲೆಯ ತೈಲವು ಬೇಕಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ.
Hazara & Co.,
P. O. Behar Nersery Darbhanga

ಕರಾಮಾತಿ ದರ್ಪಣ

ಇದರಿಂದ ಬಿಟ್ಟ ಕರವ ಕನ್ನಡಿ. ಯಾವ ವಯಸ್ಸಿನವರೂ ಇದನ್ನು ನೋಡಬಹುದು. ಕಳೆದು ಹೋದ ಮಾಲು ಎಲ್ಲಿದೆ? ಕಾಯಿಲೆ ಗುಣವಾದೀತೆ? ಇಲ್ಲವೆ? ದುಃಖನಿವಾರಣೆ ಮಾರ್ಗ ಯಾವುದು? ಹೂಳಿಟ್ಟ ನಿಧಿ ಎಲ್ಲಿದೆ? ಕಷ್ಟದ ಕೆಲಸ ಕೈಗೂಡುವುದೆ? ಪ್ರೇಮ ಕಾರ್ಯ, ಪರೀಕ್ಷೆಗಳು, ಕೋರ್ಟು ವ್ಯವಹಾರಾದಿಗಳಲ್ಲಿ ವಿಜಯ ದೊರೆಯುವುದೇ? ಎಂಬುದನ್ನೆಲ್ಲ ಈ ಕನ್ನಡಿಯಿಂದ ತಿಳಿಯಬಹುದು. ಸ್ವರ್ಗಸ್ಥ ಮಾತಾಪಿತೃ, ಪುತ್ರಕಳತ್ರ, ಮಿತ್ರಬಾಂಧವರುಗಳೆಲ್ಲರ ಭೇಟಿಮಾಡಬಹುದು. ನೀವು ನೋಡದ, ಸ್ವಪ್ನದಲ್ಲಿಯೂ ನೋಡಲಸಾಧ್ಯವಾದವರನ್ನು ಸಹ ನೋಡಬಹುದು ಈ ಕನ್ನಡಿಯಲ್ಲಿ! ಬೆಲೆ ರೂ. ೨—೮—೦

ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಇಂಗ್ಲಿಷಿನಲ್ಲೇ ಬರೆಯಿರಿ.

ದೊರೆಯುವ ಸ್ಥಳ:—

ಅಮೇರಿಕನ್ ಮಿಸ್ಮೆರಿಸಂ ಹೌಸ್,
ಪೋಸ್ಟು ಬಾಕ್ಸ್ ನಂ. ೨೭,
(N.Y.U.) ಅಮೃತಸರ [ಇಂಡಿಯಾ]

AMERICAN MISMERISUM HOUSE,
Post Box No 27
(N.Y.U.) Amritsar
(INDIA)

ಲೂಟಿ! ಲೂಟಿ!! ಖಾಲಿ ೩ ರೂಪಾಯಿಗೆ ಹೊಸ ವರ್ಷಕ್ಕೆ

ಅಚ್ಚಾದ ಹೊಸ ನಮೂನೆ

ಒಂದು ವಾರದ ವರೆಗೆ ಮಾತ್ರ ವಿಶೇಷ ರಿಯಾಯತಿ.



ಶೀಘ್ರವೇ ವಿಕ್ರಯ ಆಗುತ್ತಿದೆ. ವಿಳಂಬ ಮಾಡಿದರೆ ಪಶ್ಚಾತ್ತಾಪ ಪಡಬೇಕಾದೀತು.

ತಾಜಾ ಅಮೇರಿಕನ್ ಅಲಾರ್ಮ್ ಪಿಸ್ತೂಲು

ಹೆಚ್ಚು ಸಂಖ್ಯೆಯಲ್ಲಿ ಕೊಂಡುಕೊಂಡರೆ ಭಾರೀ ಕಮಿಶನು ಇದೆ. ಚಿತ್ರದಲ್ಲಿರುವಂತೆ 7 ಇಂಚು ಉದ್ದ 15 ದಿನ್ನುಭಾರ, ನೋಡಿದೊಡನೆ ಮೃಗಗಳು ಭೀತರಾಗುವರು. ಕಳ್ಳಕಾಕರು, ದುಷ್ಟ ಮೃಗಗಳು ಭಯಂಕರ ಶಬ್ದ ಕೇಳಿ ಪಲಾಯನ ಮಾಡುವವು. ಕೂಡಲೇ ಕೊಂಡುಕೊಂಡು ನಿಮ್ಮ ಒಡವೆಗಳನ್ನೂ ಆತ್ಮವನ್ನೂ ರಕ್ಷಿಸಿಕೊಳ್ಳಿರಿ. ಲೈಸನ್ಸಿಲ್ಲದೆ ಪ್ರತಿಯೊಬ್ಬನೂ ಉಪಯೋಗಿಸಬಹುದು. ಇಂದರೊಂದಿಗೆ 300 ಗುಂಡುಗಳು ಉಚಿತ. 50 ಗುಂಡುಗಳನ್ನು ವೇಗದಿಂ ಹೊಡೆಯುವ ಪಿಸ್ತೂಗೆ ರೂ. 3/-, ಒಂದೇ ಸಲ 70ಗುಂಡುಹಾರುವುದಕ್ಕೆ ರೂ. 3/8 . 200 ಹಾರಿಸುವುದಕ್ಕೆ ರೂ. 4/- ಆಗಲೆ ಹೆಚ್ಚು ಬೇರೆ 1000 ಗುಂಡುಗಳಿಗೆ ರೂ. 2/-ಎಣ್ಣೆ ಡಬ್ಬಿಗೆ 0-8-0. ಪಿಸ್ತೂಲಿಡುವ ಸುಂದರ ಪೆಟ್ಟಿಗೆಗೆ ರೂ. 1-8-0. (ನಿಮ್ಮ ಮತ್ತು ನಮ್ಮ ವಿಳಾಸವನ್ನು ಸ್ಪಷ್ಟ ಬರೆಯಿರಿ)

ದೊರೆಯುವ ಸ್ಥಳ:-

ಅಮೇರಿಕನ್ ಪಿಸ್ತೂಲು ಹೌಸ್,
ಪಿ. ಬಿ. ಬಾಕ್ಸ್ ನಂ. 27
(N.Y.U.) ಅಮೃತಸರ [ಇಂಡಿಯಾ]

American Pistol Co.
P. B. No. 27 (N. Y. U.)
Amritsar (India)

೧೦ ಗಡಿಯಾರಗಳು ಬರೇ ೩॥ ರೂಪಾಯಿಗೆ



ಏಳು ಡಮ್ಮೀ ಕೈವಾಚುಗಳು, ೨ ಡಮ್ಮೀ ಕಿಸೆಗಡಿಯಾರಗಳು, ಮತ್ತು ಒಂದು ಗಟ್ಟಿಯಂತ್ರದ ಸರಿ ಸಮಯ ತೋರಿಸುವ ಜರ್ಮನಿ ಟೈಂಪೀಸ್, ೩೦ ಗಂಟೆಗೊಮ್ಮೆ ಕೀ, ೧೦ವರ್ಷದ ಗ್ಯಾರಂಟಿ ಈ ಗಡಿಯಾರವನ್ನು ವಿಲಾಯಿತಿಯಿಂದ ಹೆಚ್ಚು ಸಂಖ್ಯೆಯಲ್ಲಿ ತರಿಸಿದ್ದೇವೆ. ಈ ರಿಯಾಯತಿ ದರದಲ್ಲಿ ಕೇವಲ ೧೦,೦೦೦ ಗಡಿಯಾರಗಳನ್ನು ಮಾತ್ರವೇ ಮಾರುವುದು. ತ್ವರೆ ಮಾಡಿ! ಸಂದರ್ಭ ತಪ್ಪಿಹೋದೀತು. ಇದರೊಂದಿಗೆ ೧೪ ಕ್ಯಾರೆಟ್ ರೋಲ್ಡ್‌ಗೋಲ್ಡಿನ ಫೌಂಟನ ಪೆನು ಒಂದು, ರಿಸ್ಟ್‌ಬೆಲ್ಟ್ ಒಂದು, ಮುತ್ತಿನ ಹಾರ ಒಂದು—ಇಷ್ಟು ಉಚಿತ, ಅಂಚೆವೆಚ್ಚ ಬೇರೆ. ಅತೃಪ್ತಿಯಾದರೆ ಹಣ ಹಿಂದೆ. ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ.

ದೊರೆಯುವ ಸ್ಥಳ:—

ಜರ್ಮನ್ ವಾಚ್ ಕಂಪೆನಿ,
ಪೋಸ್ಟು ಬಾಕ್ಸ್ ನಂ ೨೭
(N.Y.U.) ಅಮೃತಸರ [ಇಂಡಿಯಾ]

German Watch Co.
P. B. No. 27 (N.Y.U.)
AMRITSAR, (India),

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ತಾ. 30–4–1939.

ಯುದ್ಧಕ್ಕೆ ವಿರೋಧ—ಕಳೆದ ತಾ. 23ನೇ ಭಾನುವಾರ ಸಾಯಂಕಾಲ ಮಂಗಳೂರು ಪುರಜನರ ಮಹಾಸಭೆಯು ಶ್ರೀ. ಎಸ್. ಎ. ಹೊಳ್ಳರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಯುದ್ಧವನ್ನು ಹಿಂದುಸ್ಥಾನ, ಕಾಂಗ್ರೆಸ್ ಏಕೆ ಯುದ್ಧಕ್ಕೆ ವಿರೋಧವಾಗಿರಬೇಕು ಎಂಬುದನ್ನು ವಿವರಿಸಿದರು. ಅನಂತರ ಶ್ರೀಗಳಾದ ವಿ. ಎನ್. ಬಿಜೂರರೂ, ಎಸ್. ಶೇಷಗಿರಿರಾಯರೂ ಮತ್ತು. ಕೆ ಕೆ. ಶೆಟ್ಟಿಯವರೂ ಪ್ರಕೃತದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ಥಿತಿಗಳನ್ನು ವಿವರಿಸಿ ಹಿಂದುಸ್ಥಾನವು ಪ್ರಭುತ್ವವಾದಿಗಳ ಹೋರಾಟದಲ್ಲಿ ಭಾಗವಹಿಸಬಾರದೆಂದು ಹೇಳಿದರು. ಯುದ್ಧವಿರೋಧಕ ಠರಾವನ್ನು ಮಂಜೂರುಮಾಡಿದ ಮೇಲೆ ಸಭಾಂತ್ಯವಾಯಿತು.

ಶಾಲಾ ವರ್ಧಂತ್ಯುತ್ಸವ—ಮಂಗಳೂರು ಆರ್ಯಸಮಾಜದವರು ನಡಸಿಕೊಂಡುಬರುತ್ತಿರುವ ಕದಿರೆ ವಿದ್ಯಾಬೋಧಿನೀ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಶ್ರೀಮಾನ್ ಕಾರ್ಕಳ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಶಾಲಾ ಹೆಡ್ಮಾಸ್ತರಾದ ಶ್ರೀ. ಆರಿಬೈಲ್ ಭೋಜರಾಯರು ಶಾಲಾವರದಿಯನ್ನೋದಲು ಶಾಲಾ ಕಾರ್ಯದರ್ಶಿಗಳಾದ ಶ್ರೀ. ಯು. ಗೋಪಾಲನಾಯಕರು ಶಾಲೆಯ ಆರ್ಥಿಕ ಪರಿಸ್ಥಿತಿಯನ್ನು ತಿಳಿಸಿದರು. ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು ಶ್ರೀ. ಕೆ. ವಿ. ಪುಟ್ಟಪ್ಪನವರಿಂದ ಬರೆಯಲ್ಪಟ್ಟಿರುವ 'ಹಲಗಾರ' ಮತ್ತು 'ಯಮನ ಸೋಲು' ಎಂಬ ಕಥೆಯನ್ನು ನಾಟಕರೂಪದಲ್ಲಿ ಬಹಳ ಚೆನ್ನಾಗಿ ಅಭಿನಯಿಸಿದರು.

ಶ್ರೀ. ಶಂಕರ ಜಯಂತಿ— ಉಳ್ಳಾಲದಲ್ಲಿರುವ ಶ್ರೀ. ಅದ್ವೈತಾಶ್ರಮದಲ್ಲಿ, ವಿದ್ವಾನ್ ಯಂ. ಶಿವಪ್ಪಯ್ಯನವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಶ್ರೀ ಶಂಕರ ಜಯಂತ್ಯುತ್ಸವವು ಯಶಸ್ವಿಯಾಗಿ ನೆರವೇರಿತು. ಶ್ರೀ ಶಂಕರ ಭಗತ್ಪಾದಾಚಾರ್ಯರ ಪವಿತ್ರ ಜೀವನ, ಅವರ ಉದಾತ್ತ ಧರ್ಮ ಬೋಧೆಗಳ ವಿಷಯವಾಗಿ ಹಲವು ಮಹನೀಯರ ಭಾಷಣಗಳು ನಡೆದುವು. ಅಧ್ಯಕ್ಷರ ಭಾಷಣ, ಪೂಜೆ ಮಂಗಳಾರತಿ, ಪ್ರಸಾದ ವಿತರಣೆಯಾದ ಮೇಲೆ ಸಮಾರಂಭವು ಮುಕ್ತಾಯಗೊಂಡಿತು.

ಶೋಚನೀಯ ನಿಧನ—ಕೊಡಿಯಾಲಗುತ್ತಿನ ಶ್ರೀಮಂತ ಬಂಟವಂಶಕ್ಕೆ ಸೇರಿದ ಮತ್ತು ಮಂಗಳೂರಲ್ಲಿ ಪ್ರಸಿದ್ಧ ಡಾಕ್ಟರರಾಗಿದ್ದುಕೊಂಡು ಅನೇಕಾನೇಕ ಬಡಜನರಿಗೆ ಸಹಾಯಮಾಡುತ್ತಿದ್ದವರೂ ದೊಡ್ಡವರು ಬಡವರು ಆದಿಯಾಗಿ ಸಕಲರ ಆದರ ಗೌರವಗಳಿಗೂ ಪಾತ್ರರಾಗಿದ್ದ ಡಾ. ಶ್ರೀ. ಕೆ. ಸಂಜೀವ ಹೆಗ್ಗಡೆಯವರು ತಾ. ೨೬ರ ದಿನ ಅಕಾಲನಿಧನವನ್ನೈದಿದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರ ಬಂಧುಬಳಗದವರ ದುಃಖದಲ್ಲಿ ನಾವು ನಮ್ಮ ಸಹಸಂತಾಪವನ್ನು ವ್ಯಕ್ತಗೊಳಿಸುತ್ತೇವೆ.

ಶ್ರೀ ಮುಖ್ಯಪ್ರಾಣ ಎಲಿಮೆಂಟರಿ ಶಾಲಾ ವರ್ಧಂತಿ—ನಿನ್ನೆಯ ದಿನ ಕೆಂಜಾರು ಶ್ರೀ ಮುಖ್ಯಪ್ರಾಣ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು ಶ್ರೀ. ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಅತ್ಯಂತ ಯಶಸ್ವಿಯಾಗಿ ಜರಗಿತು. ಈ ಸಂದರ್ಭದಲ್ಲಿ 'ಸದಾರಮಾ' ಎಂಬ ಸಂಗೀತ ನಾಟಕಾಭಿನಯವಿತ್ತು.

ಜಿಲ್ಲಾ ಬೋರ್ಡುಸಭೆ—ಇದೇ ಮೇ ತಾ. 9ನೇ ಪೂರ್ವಾಹ್ನ 10ಘಂಟೆಗೆ ದ. ಕನ್ನಡ ಜಿಲ್ಲಾ ಬೋರ್ಡು ಸಭೆಯು ಸೇರಲಿದೆ.

ಮೇ ದಿನಾಚರಣೆ—ದ. ಕ. ಜಿಲ್ಲಾ ವಿದ್ಯಾರ್ಥಿಗಳ ಫೆಡರೇಶನ್, ಮೋಟರ್ ಎಂಪ್ಲೊಯಿಸ್ ಯೂನಿಯನ್ ಮತ್ತು ಲ್ಯಾಬರಲ್ ಕಾಂಗ್ರೆಸ್ ಮೆನ್ಸ್ ಲೀಗ್ ಈ ಸಂಸ್ಥೆಗಳ ಆಶ್ರಯದಲ್ಲಿ ಮೇ ದಿನಾಚರಣೆಯು ತಾ. 1ರ ದಿನ ನಡೆಯಿತು.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿ ೧ಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧತೊಲೆ ಸೀಸೆ 1ಕ್ಕೆ ರೂ. 5—0—0

'ಕಾಮಶಾಸ್ತ್ರ' ಧನ್ವಂತರಿ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೭೪ ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

1939ನೇ ಇಸವಿ ಏಪ್ರಿಲ್ ತಿಂಗಳ ತಾ. 24ನೇ ಸೋಮವಾರ ದಿವಸದ ಮಂಗಳೂರು ಪೇಟೆಯ ದವಸ ಧಾನ್ಯಗಳ ಧಾರಣೆಗಳು.

ಜರಿಡ್ಯಾ ನಂಬ್ರ		ರಿಂದ	ವರೆಗೆ
1	ಭತ್ತ—ಅವ್ವಲ್ ತರದ ಗುಡ್ಡೆ ಮುಡಿಗೆ ...	1-11-0	——
2	,, ದುಯಂ ,, ,, ...	1- 9-0	——
3	,, ಅವ್ವಲ್ ಸುಗ್ಗಿ ,, ...	1- 8-0	——
4	,, ದುಯಂ ,, ,, ...	——	——
5	ಅಕ್ಕಿ—ಅವಲ್ ತರದ ಗುಡ್ಡೆ	4- 8-0	4-10-0
6	,, ದುಯಂ ,, ...	4- 4-0	4- 6-0
7	,, ಅವಲ್ ಸುಗ್ಗಿ ,, ...	4- 0-0	4- 3-0
8	,, ದುಯಂ ,, ...	3-15-0	4- 1-0
9	ಸುಲಿದ ತೆಂಗಿನ ಕಾಯಿ 100ಕ್ಕೆ	35- 0-0	42- 8-0
10	ಸಿಪ್ಪೆಯುದ್ದ ,, ,, ...	37- 8-0	45- 0-0
11	ಕೊಬ್ಬರಿ ಆಫೀಸು ಖಂಡಿಗೆ	46- 4-0	——
12	,, ದಿಬ ,, ...	50- 0-0	51- 4-0
13	,, ದಿಲಿ ಏಸಂಟ್	50- 0-0	——
14	ತೆಂಗಿನೆಣ್ಣೆ ಮುಡಿಗೆ	3- 3-0	3- 4-0
15	ಸಿಪ್ಪೆಯುದ್ದ ಅಡಿಕೆ1000ಕ್ಕೆ	3- 4-0	3-12-0
16	ಗೇರುಬೀಜ ಮುಡಿಗೆ	3- 0-0	3- 1-0
17	ಕಟ್ಟಿನ ಬೆಲ್ಲ ಖಂಡಿಗೆ	45- 0-0	50-0-0
18	ಒಳ್ಳೇ ಮೆಣಸು ಹಂಡ್ರೆಡ್‌ವೇಟಿಗೆ	15- 0-0	16-0-0

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರಿಗಿನ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯು ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್

ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ವ್ಯಾಪಾರದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬ ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ 1-8-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು:— ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,

ಗವರ್ನಮೆಂಟ್ ಕೊಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,

Hampankatte, **MANGALORE.**

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವದು. ಇದು ಮಧುರವಾಗಿದೆ. ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1ಕ್ಕೆ 12 ಆಣೆ, ಟ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,

ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ.**

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಮನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ ಬಹಿಷ್ಠೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತುಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು "ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ ಅಗತ್ಯವಾಗಿ ಇರಲೇಬೇಕಾದ್ದು.

ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,

ಬ್ರಾಂಚ್—ಮಂಗಳೂರು.

ನಿಮ್ಮ ಇಚ್ಛೆಯು ನೆರವೇರುವದು.

ಯಾವ ವಿಷಯದಲ್ಲಿ ನೀವು ನಿರಾಶರಾಗಿದ್ದೀರೋ ಅಂತಹ ವಿಷಯಗಳಲ್ಲಿ ನಿಮ್ಮ ಅಭೀಷ್ಟವನ್ನು ಸಾಧಿಸಲಿಕ್ಕೆ ನಮ್ಮ ವಶೀಕರಣಯಂತ್ರವನ್ನು ಕರಿಸಿಕೊಳ್ಳಿರಿ

ಈ ಯಂತ್ರವನ್ನು ನಿಮ್ಮ ಬಳಿ ಇರಿಸಿಕೊಂಡು ನಿಮಗೆ ಆಗಬೇಕಾದ ವಿಷಯವನ್ನು ಮನಸ್ಸಿನಲ್ಲಿ ಧ್ಯಾನಿಸಿದರೆ ನಿಜವಾಗಿಯೂ ನಿಮ್ಮ ಅಭಿಲಾಷೆಯು ಪೂರ್ತಿಸುವದು.

ಸೂರ್ಯನು ಪಶ್ಚಿಮದಲ್ಲಿ ಉದಯಿಸಿದರೂ ಈ ಯಂತ್ರವು ಎಂದಿಗೂ ನಿರರ್ಥಕವಾಗುವದಿಲ್ಲ. ಅತಿಪ್ರಯಾಸದಿಂದ ಈ ಯಂತ್ರವನ್ನು ತಯಾರುಮಾಡಿದೆ.

ಯಂತ್ರ 1ಕ್ಕೆ ರೂ. 2-4-0 ವಿದೇಶಕ್ಕೆ 5 ಶಿಲಿಂಗ್. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ಅಮೇರಿಕನ್ ಮೆಸ್ಮೆರಿಸಮ್ ಹೌಸ್	**American Mismerism House**
ಪೋ. ಬಾ. ನಂ. 27 (N.Y.U.)	P. B. No. 27(N. Y. U.)
ಅಮೃತಸರ (ಇಂಡಿಯಾ)	**Amritsar (India)**

Rev. Fr. P. W. Farias,

St. Paul's Church,
Bolkunje Post, S. K.
Dated 4th January 1939.

To

THE JOINT MANAGERS,
The C. P. C. Co Ltd., MANGALORE.

Sir

I thank you most sincerely for the promptness with which you arranged to take us to Mangalore and back during the grand occasion of the Diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the congress.

The glorious success of our congress is also due to your exertion in putting up the various lights some of which I hear were done voluntarily.

May the blessings of the Almighty fall on you all and may you be able to do much good to the public.

Renewing my thanks,
I remain,
Yours sincerely,
(*Sd.*) P. W. Farias.

To
THE JOINT MANAGERS,
THE COMBINED BOOKING AGENCY,
MANGALORE.

Sri Parshwanathaswamy
Panchakalyana Pooja Mahothsawam
VENOOR (S. Kanara 1939).

Dear Sirs,

Please permit us to express our thanks on behalf of the above committee for the efficient service rendered by your Combined Booking Agency staff at **Venoor** to the visitors of the Panchakalyana Pooja Mahosthamam celebrations held this year.

Our thanks are also due to Moodabidre Booking Clerk Mr. B Krishnnayya and also his other mates and Mr. Raghavendra Bhandary who was specially come down from Mangalore to see the needs of and comforts of the travelling Public.

Thanking you once again,
We remain,
Yours faithfully,
(*Sd.*) **M. Jagathpal,**
(*Sd.*) **M. Pachappa Shetty,**
VENOOR, (*Sd.* in Canarese) **Anantharaja Shetty.**
Dated 6-2-'39. (Sd.) **B Chandappa Indra,**
(*Secretary, P. M. Committee*)
Members, Panchakalayana Mahosthawam Committee.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	3	0	0
ಚಂದ್ರಗುಪ್ತ ಚಕ್ರವರ್ತಿ	1	0	0
Goutama Budda	0	8	0
भगवद्गीता	0	2	0
ಮಧುವನ	1	8	0
ಒಂದೇ ತಿಂಗಳಲ್ಲಿ ಇಂಗ್ಲಿಷ್	0	8	0
ಎರಡೇ ವಾರಗಳಲ್ಲಿ ಓದುಬರಹ	0	1	0
ಗೀತೆಯ ಕೈಗನ್ನಡಿ	0	4	0
ಭಗವದ್ಗೀತೆ	0	2	0
ತುಳು ವ್ಯಾಕರಣ	0	8	0
ಸಾಮುದ್ರಿಕ ಶಾಸ್ತ್ರ	0	8	0
ಮಿತ್ಯನಾರಾಯಣ ಕತೆ	0	8	0
ಪುರಂದರದಾಸರ ಪದಗಳು ಭಾಗ ೧	0	4	0
„ ಭಾಗ ೨	0	4	0
„ ಭಾಗ ೩	0	4	0
ತುಳುನಾಡ್ ತಿಲಕ ಪಂಚಾಂಗ	0	1	0
ವೈಜಯಂತೀ ಪಂಚಾಂಗ	0	2	6
ಕುಕ್ಕುಟ ಪಂಚಾಂಗ	0	1	0

ಇತ್ಯಾದಿ ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors*:—**GENERAL SUPPLIES Ltd., Udipi**)

Supply Agency Limited.

(BANKERS)

ESTD] **UDIPI** [1933

—o—

Authorised Capital Rs 1,00,000
Subscribed & Paid up Rs. 30,760

RATE OF INTEREST FOR FIXED DEPOSITS.

3 to 6 Months 4% p. a.
7 to 11 „ 5% „
12 to 18 „ 6% „

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

Registered No. M. 3618

NAVAYUGA

నవయుగ

11-5-1939

BE IN TIME & SAVE MONEY

12 to 33% Reduced Prices. Inexpensive & Reliable Swiss made Lever watches.
Charming Designs. Guaranteed 3 years.

STOP WATCH



Readings to 1/5 Second
195 Chromium Plain white Rs. 6/-
196 „ Silvered Radium „ 6/8
197 „ Black Radium „ 6/8

459 Nikel case Rs. 3 8 0
Radium Dial „ 3 12 0
without Second.

765 Chromium case Rs. 6 8 0
Gold Gilt Case „ 6 8 0
Radium Dial 0 8 - Extra.



937 Chromium Case Rs. 6 12 0
Gold Gilt Case „ 6 12 0
Radium Dial 0-8/- Extra.

697 Chromium Case 5 14 0
849 Gold gilt „ 5 14 0
159 Rolled Gold „ 9 8 0
Radium Dial 0-8/- Extra

254 Nickel Case Rs. 3 8 0
Radium Deal „ 3 12 0

All watches are thoroughly oiled & Tested and supplied with superior strap & Box.
Postage & Packing annas 8 Extra. All kinds of Gold & silver watches available.
Illustrated catalogue sent free.

INDO-SWISS WATCH CO.,
7, SIR P. MEHTA ROAD, FORT BOMBAY.



ಮೈಸೂರಿನಲ್ಲಿ ಶ್ರೇಷ್ಠವರ್ಗದ ಬ್ರಾಹ್ಮಣರ ಉಪಹಾರ ವಸತಿ ಗೃಹಗಳು.

ಗಾರ್ಡನ್ ಹೋಟೇಲು

ಆಧುನಿಕ ಸೌಕರ್ಯಗಳಿಂದ ಕೂಡಿದ ವಿಶಾಲವಾದ ಸಿಂಗ್ಲ್ ಡಬ್ಬಲ್ ಕೋಣೆಗಳು ಕುಟುಂಬ ಪರಿವಾರ ಸಮೇತರಾಗಿ ಬರುವವರಿಗೆ ಉಳಕೊಳ್ಳುವರೆ ಅತಿ ಯೋಗ್ಯ ಸ್ಥಳ.

ಫೋನ್ ನಂಬ್ರ 406

ನವಯೋಚಿತ ನಾಗರಿಕರ ಅಭಿರುಚಿಗೆ ಯೋಗ್ಯವಾದ ಉತ್ತಮ ಊಟ ಉಪಹಾರಗಳು, ವಿಶಾಲ ವಾದ, ಆಧುನಿಕ ಸೌಕರ್ಯ. ಅರಮನೆ, ಬಜಾರ್, ಸ್ಟೇಶನ್ ಮುಂತಾದ ಮುಖ್ಯ ಸ್ಥಳಗಳಿಗೆ ಅತಿ ಸಮೀಪ ಇರುವ ವಿಶಾಲವಾದ ಕಂಪೌಂಡಿನಲ್ಲಿರುವ "ಯಳಂದೂರ್ ಹೌಸ್" ನಲ್ಲಿ ಅತಿ ಚತುರ ಮಾಲೀಕರಿಂದ ನಡೆಸಿಕೊಂಡು ಬರುವ

ಗಾರ್ಡನ್ ಹೋಟೇಲ್, ಹಳೆ ಪೋಸ್ಟ್ ಆಫೀಸ್ ರೋಡ್, ಮೈಸೂರು.



ಉಡುಪಿ ಆನಂದ ಭವನ

ಫೋನ್ ನಂಬ್ರ 347

ಇದೇ ಮ್ಹಾಲೀಕರಿಂದ ಅರಮನೆ ಎದುರು ನವನಾಗರಿಕತೆಗೆ ತಕ್ಕಂತೆ ನಡೆಯಿಸಿಕೊಂಡು ಬರುವ ನವೀನ ಉಪಹಾರ ಗೃಹ. ಬೇಸಿಗೆಗೆ ತಕ್ಕ ರುಚಿಕರವಾದ ಶೀತ ಪಾನೀಯಗಳು ಸಹಾ ಇವೆ. ಪಟ್ಟಣದ ಕೇಂದ್ರಸ್ಥಾನದಲ್ಲಿದ್ದು ಬಹು ಉನ್ನತ ಸ್ಥಿತಿಯಿಂದ ನಡೆಯಿಸಿಕೊಂಡು ಬಂದು ಜನಪ್ರೀತಿಗೊಳಗಾಗಿದೆ.

ಮೈಸೂರಿಗೆ ಬಂದಲ್ಲಿ ಇದನ್ನು ಸಂದರ್ಶಿಸಲು ಮರೆಯದಿರಿ

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು.

ಕೃಷ್ಣರಾಜಸಾಗರ್ ರೆಸ್ಟೋರೆಂಟ್, ಕನ್ನಂಬಾಡಿ, ಮೈಸೂರು.

ಮದ್ರಾಸಿಗೆ ಬಂದಲ್ಲಿ—

ಪ್ರೊಪ್ರೈಟರ್—ಕೆ. ಗುರುರಾಜಾಚಾರ್.

ಮೈಸೂರು ಕೆಫೆ—ರೆಸ್ಟೋರೆಂಟ್ ಮತ್ತು ಬೋರ್ಡಿಂಗ್, ಲಾಡ್ಜಿಂಗ್ ಸಂದರ್ಶಿಸಲು ತಪ್ಪದಿರಿ

—— ಬಲು ಸುಲಭ ದರದಲ್ಲಿ ——

● ಉತ್ಕೃಷ್ಟ ಊಟ ಉಪಹಾರಾದಿಗಳಿಗಾಗಿ ಇತ್ತ ಗಮನಿಸಿರಿ!

● ನಾವು ನಮ್ಮನ್ನೇ ವಿಶೇಷವಾಗಿ ಪ್ರಶಂಸಿಸಿ ಕೊಳ್ಳಬಾರದಷ್ಟೆ!

ಲಕ್ಷ್ಮೀ ನಿವಾಸ

ಹಿಂದೂ ಹೋಟೇಲು

(ಸ್ಥಾಪನೆ 1926)

ವಿಠಲ್ ಭಾಯಿ ಪಟೇಲ್ ರೋಡ್, ಗಿರ್ಗಾಂ, ಮುಂಬಯಿ.

Lakshmi Nivas Hindu Hotel

VITTALBHAI PATHEL ROAD,

GIRGAUM -- — BOMBAY.

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು

ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶ ಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—T. V. ದೇವಕರ್ ಎಂಡ್ ಕಂಪೆನಿ,

ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co., *Nambulier Street*, G. T. MADRAS.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ! ಫಲ ಅಧಿಕ!!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

ESTD. 1921
FOUNDER
Sri. A. B. SHETTY, M.L.A.
Parliamentary Secretary, Govt of Madras
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೧೧-೫-೧೯೩೯ | Vol. XVIII
ಸಂಚಿಕೆ ೩೬ | Udipi, Thursday 11—5—1939 | No. 36

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ. ೩—೪—೦
೬ ತಿಂಗಳಿಗೆ ರೂ. ೧—೧೨—೦.
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಮುಸಲೋನಿಯ ಜೀವಕ್ಕೆ ಹಲವು ಬಾರಿ ಸಂಚಕಾರ ಬಂದಿದೆ!

ಸಾಧಿಸುವವರೊಮ್ಮೆ ಸಫಲಹೊಂದದಿರುವರೆ?

ಜಗತ್ತಿನ ಸರ್ವಾಧಿಕಾರಿಗಳ ಪೈಕಿ ಇಟಲಿಯ ಮುಸಲನಿಯೇ ಎದೆಗಾರನೆನ್ನಬೇಕು. ಅವನಲ್ಲಿ ಹಿಟ್ಲರನಷ್ಟು ಸಂದೇಹ ದೃಷ್ಟಿಯಿಲ್ಲ; ಸ್ಟ್ಯಾಲಿನನಷ್ಟು ಕಠಿಣತೆಯಿಲ್ಲ. ಆದರೆ ವ್ಯಕ್ತಿಶಃ ಇವರಿಬ್ಬರಿಗಿಂತಲೂ ಹೆಚ್ಚಿನ ಎದೆಗಾರಿಕೆಯಿದೆ; ಹಾಗೂ ನಾಗರಿಕತೆಯಿದೆ. ಹಿಟ್ಲರನು ತೀರಾ ಅಸಹಿಷ್ಣು. ಸಹನೆಯುಳ್ಳವರಲ್ಲಿ ಸಂದೇಹ ದೃಷ್ಟಿ ಕಡಿಮೆ. ಆದರೆ ಹಿಟ್ಲರನಲ್ಲಿ ಅದೂ ವಿಪರೀತ. ಅವನು ತನ್ನ ಸಹಾಯಕರುಗಳ ಪ್ರತಿಯೊಂದು ಕೃತ್ಯವನ್ನೂ ಅನುಮಾನದೃಷ್ಟಿಯಿಂದ ಪ್ರಥಮತಃ ಕಂಡು ಅದು ದೋಷರಹಿತವಾದುದೆಂದು ಖಚಿತವಾದ ಮೇಲೆ ಮಾತ್ರ ನಂಬುತ್ತಾನೆ. ಸ್ಟ್ಯಾಲಿನನು ಅಷ್ಟು ಚುರುಕು ಸ್ವಭಾವದವನಲ್ಲ. ಆದರೆ ಕಠೋರತೆ ಪ್ರಧಾನವಾದ್ದ ಮನುಷ್ಯ. ಅವನ ಗೋಚರಕ್ಕೆ ಬಂದ ತಪ್ಪು ಒಮ್ಮೆಯೇ ಕಠಿಣವಾಗಿ ದಂಡಿಸಲ್ಪಡುವುದಲ್ಲದೆ, ಅದಕ್ಕೊಂದು ವಿಚಾರಣೆ, ಕ್ಷಮೆಯೆಂಬುದಿಲ್ಲ. ಅದು ಸ್ಟ್ಯಾಲಿನನ ವ್ಯಕ್ತಿ ಸಂಬಂಧಪಟ್ಟದ್ದಾಗಿದ್ದರಂತೂ ಮರಣವೇ ಅದರ ತೀರ್ಮಾನ. ಹೀಗೆ ಹಿಟ್ಲರ್ ಮತ್ತು ಸ್ಟ್ಯಾಲಿನರಿಗೆ ತಮ್ಮ ಪ್ರಾಣದ ಮೇಲೆ ಭಯವಿದ್ದಷ್ಟು ಮುಸಲನಿಗಿಲ್ಲ. ಅವನೊಮ್ಮೊಮ್ಮೆ ಅಕಸ್ಮಾತ್ತಾಗಿ ಒಬ್ಬನೇ ರೋಮ್ ನಗರದ ರಸ್ತೆಗಳಲ್ಲಿ ಕಾರು ಓಡಿಸಿಕೊಂಡು ಹೋಗುವದಿದೆ. ಆ ಕಾರಿನ ವೇಗ ಜಾಸ್ತಿ ಹೊರತು ಅನ್ಯರಕ್ಷಣೋಪಾಯಗಳು ಆ ಹೊತ್ತಿನಲ್ಲಿ ಇರುವದಿಲ್ಲ; ಇದ್ದರೆ ಒಂದು ಪಿಸ್ತೂಲು ಮಾತ್ರ. ಹಿಟ್ಲರ್ ಸ್ಟ್ಯಾಲಿನರು ಸರ್ವಥಾ ಹೀಗೆ ಮಾಡುವವರಲ್ಲ.

ಹಲವು ಅಪಾಯಗಳನ್ನು ಕಂಡ ಮನುಷ್ಯ

ಮುಸಲನಿ ತನ್ನ ಜೀವಮಾನದಲ್ಲಿ ಹಲವು ಪ್ರಾಣಾಪಾಯ ಪ್ರಸಂಗಗಳಿಗೊಳಗಾಗಿದ್ದ, ಆ ಅಪಾಯಗಳಲ್ಲಿ ಎರಡು ಜಾತಿಗಳಿದ್ದುವು; ಮನುಷ್ಯನಿರ್ಮಿತವಾದವುಗಳು ಕೆಲವು. ಪ್ರಕೃತಿಜನ್ಯವಾದುವುಗಳು ಕೆಲವು. ಇವೆಲ್ಲವುಗಳಿಂದಲೂ ಅವ ಪಾರಾಗಿ ಬದುಕಿದ್ದಾನೆ.

ಅಬಿಸೀನಿಯದ ಮೇಲೆ ಬೀಳುವ ದೃಢ ನಿರ್ಧಾರವಾಡಿ ಲಕ್ಷಗಟ್ಟಲೆ ಸೈನ್ಯವನ್ನು ಗಡಿಯಲ್ಲಿ ಶೇಖರಿಸಿ ನಿಲ್ಲಿಸಿದ್ದಾನೆ. ಹ್ಯಾಲ್ ಸಿಲಾಸಿಯವರು ಭಯದಿಂದ ಯುದ್ಧಸನ್ನಾಹಕ್ಕೆ ತೊಡಗಿದ್ದಾರೆ. ಇನ್ನೇನು ಒಂದು ವಾರದೊಳಗೆ ಧಾಳಿಯಾರಂಭವಾಗುವದಿತ್ತು. ಇಂತಹ ಸಮಯದಲ್ಲಿ ತನ್ನ ಸೈನಿಕರಿಗೆ ಸ್ಫೂರ್ತಿಯನ್ನೀಯುವದಕ್ಕಾಗಿ ಮುಸಲೋನಿ ವಿಮಾನ ಹತ್ತಿ ಹೊರಟ. ಮಧ್ಯಪಥದಲ್ಲಿ ವಿಮಾನವನ್ನು ತಾನೇ ನಡೆಸುತ್ತಾ ಬರುತ್ತಿದ್ದ; ಸೈನಿಕರಿದ್ದ ಸ್ಥಳಕ್ಕೆ ಮತ್ತೂ ದೂರವಿತ್ತು. ಸಹಾರೆಂದು ಮಿಂಚೊಂದು ವಿಮಾನಕ್ಕೆ ಎರಗಿತು. ಇಂಜಿನಿಯರನಿಗೆ ಸ್ವಲ್ಪ ಪೆಟ್ಟಾದರೂ ಇಂಜಿನಿಗಾಗಲೀ ಮುಸಲನಿಗಾಗಲೀ ಏನೂ ಆಗಲಿಲ್ಲ. ಯಾವುದನ್ನೂ ಗಣಿಸದೆ ಸೈನಿಕರ ನಡುವೆ ಫಿರಂಗಿಯ ಮೇಲೆ ನಿಂತು ಎಬಿಸೀನಿಯದ ಮೇಲೆ ಬಲವಾದ ಸಿಡಿಲಿನಂತೆರಗಿ ಜಯಿಸಬೇಕೆಂದು ಸ್ಫೂರ್ತಿಯಿಂದ ಭಾಷಣವಿತ್ತು ಹಾಗೆಯೇ ವಿಮಾನ ಹತ್ತಿ ಮರಳಿದ.

ಮತ್ತೊಮ್ಮೆ ಅವನ ಕಾರು ತೀವ್ರಗತಿಯಿಂದ ಧಾವಿಸುತ್ತಿದ್ದಾಗ ಅನಪೇಕ್ಷಿತ ಕ್ಷಣಕ್ಕಾಗಿ ಹತ್ತಿರದ ಕಣಿವೆಗೆ ಬಿದ್ದುಬಿಟ್ಟಿತು. ಬಹು ತೀವ್ರವಾಗಿ ಕಾರಿನಲ್ಲಿದ್ದವರೆಲ್ಲಾ ಜಖಂ ಹೊಂದಿದರು. ಆ ಪೈಕಿ ಅತೀ ಕಡಿಮೆ ಘಾಯಹೊಂದಿದವನೆಂದರೆ ಮುಸಲೋನಿ. ಇಂತಹ ಇನ್ನೂ ಹಲವು ಸನ್ನಿವೇಶಗಳನ್ನು ಅವ ತನ್ನ ಜೀವಮಾನದಲ್ಲಿ ಕಂಡದ್ದುಂಟು.

ಪ್ರಾಣ ತೆಗೆವ ಪ್ರಯತ್ನ

ಮುಸಲನಿಯ ಪ್ರಾಣಾಪಹರಣದ ಯತ್ನವು ಅವನ ದೇಶೀಯರಿಂದಲೇ ಹಲವು ಸಲ ನಡೆದಿದೆ. ಈ ವರೆಗಿನ ಎಲ್ಲಾ ಪ್ರಯತ್ನಗಳೂ ನಿಷ್ಫಲವಾಗಿವೆ. ಕಳೆದ ಮಾರ್ಚಿ ತಿಂಗಳಲ್ಲೊಮ್ಮೆ ಅಂತಹುದೊಂದು ಯತ್ನ ನಡೆದಿತ್ತು. ಇಟಲಿ ಸರಕಾರವು ಜಗತ್ತು ಬೆಳೆಯುವ ಹೊರತು ಆ ವಾರ್ತೆಗಳನ್ನು ಪ್ರಕಟಿಸುವುದೇ ಇಲ್ಲ. ಮಾರ್ಚಿ ತಿಂಗಳಲ್ಲಿನ ಪ್ರಯತ್ನದ ಕುರಿತು ಮೂರು ದಿನಗಳವರೆಗೆ ಇಟಲಿ ಸರಕಾರವು ಸುದ್ದಿಯೆತ್ತದೆ ಬಚ್ಚಿಟ್ಟಿತು. ಆದರೆ ಈ ವಾರ್ತೆ ಲಂಡನ್ನಿನಲ್ಲಿ ಗೊತ್ತಾದ ಮೇಲೆ ಇಟಲಿ ಸರಕಾರವೂ "ಹಾಗೊಂದು ನಡೆದಿತ್ತು" ಎನ್ನಬೇಕಾಯಿತು.

1922ರಿಂದ ಈ ವರೆಗೆ ಮುಸಲನಿಯ ಪ್ರಾಣ ತೆಗೆಯಲು ಒಂಭತ್ತು ಪ್ರಯತ್ನಗಳಾಗಿವೆಯೆಂದು ಇಟಲಿ ಅಧಿಕಾರಿಗಳೇ ಒಪ್ಪುತ್ತಾರೆ; ಒಳಗಿಂದೊಳಗೆ ಇನ್ನೆಷ್ಟೋ ಘಟನೆಗಳು ನಡೆದಿರಬಹುದು. ಕಳೆದ ವರ್ಷದೊಳಗೆ ಇಟಲಿ ನಾಗರಿಕರೇ ಮುಸಲನಿಯನ್ನು ಕೊಲ್ಲಲು ಏಳು ಬಾರಿ ಹಂಚಿಕೆ ನಡೆಸಿದ್ದರಂತೆ.

ಕಳೆದ ಬೇಸಿಗೆಯಲ್ಲೊಮ್ಮೆ ಅವನ ನಿವಾಸಸ್ಥಾನವಾದ 'ವಿಲ್ಲಾ ಟೋರ್ಲೋನಿಯಾ'ದ ಮೇಲೆ ವಿಮಾನವೊಂದು ಹಾರಿಬಂದು ಬಾಂಬು ಚೆಲ್ಲಿ ಹಾಗೆಯೇ ಹಾರಿ ಹೋಗಿತ್ತು. ಈ ಘಟನೆಯ ಕುರಿತು ಇಟಲಿ ಅಧಿಕಾರಿಗಳು ಏನೇನೋ ಪ್ರೊಕ್ಳ ಪ್ರಕಟಣೆ ಕೊಟ್ಟರು. ಪ್ರಥಮತಃ ತರಬೇತಿಯ ವಿಮಾನವೊಂದು ಪರೀಕ್ಷಾರ್ಥವಾಗಿ ಹಾರಿತೆಂದರು; ಕೊನೆಗೆ ಪರೀಕ್ಷಾರ್ಥವಾಗಿಯೇ ಬಾಂಬನ್ನು ಚೆಲ್ಲಿತೆಂಬ ವರೆಗೆ ಒಪ್ಪಿದರು. ಆದರೆ ಸರ್ವಾಧಿಕಾರಿಯ ವಧೆಗಾಗಿ ನಡೆದ ಪ್ರಯತ್ನವದು, ಇಟಲಿ ಸರಕಾರದ ಮುಂಜಾಗ್ರತೆಯನ್ನೇ ಎಂಬ ಗುಟ್ಟು ಸಿಕ್ಕಬಾರದೆಂಬುದಕ್ಕಾಗಿ ಅಧಿಕಾರಿಗಳು ಸುಳ್ಳಾಡುತ್ತಿದ್ದಾರೆ ಎಂದು ಊಹಿಸಲಾಗಿದೆ.

ಸ್ನಾನ ಮಾಡುವಾಗ ಭಾಷಣ ವೇದಿಕೆಯ ಮೇಲೆ ವಿಪತ್ತು

ಮುಸಲನಿಗೆ ಈಜುವದೆಂದರೆ ಬಹಳ ಇಷ್ಟ. ತನ್ನ ಕೆರೆಯಲ್ಲಿ ಒಂದೆರಡು ತಾಸುಗಳನ್ನು ಈಜುವದರಲ್ಲಿ ಕಳೆಯದ ದಿನವಿಲ್ಲ. ಒಮ್ಮೊಮ್ಮೆ ಸಮುದ್ರಸ್ನಾನಕ್ಕೆ ಹೋಗುವದೂ ಇದೆ. ಅವ ಒಮ್ಮೆ ಸಮುದ್ರಸ್ನಾನ ಮಾಡುತ್ತಿದ್ದಾಗ ಚೆನ್ನಿ ತಯಾರಾದ್ದ ಇಬ್ಬರು ಅವನ ಮೇಲೆ ಬಿದ್ದು ಮೂಗಿನ ಮೇಲೆ ಗುದ್ದಿದರು. ಮೂಗೊಡೆದು ರಕ್ತ ಸುರಿವಾಗ ಉಜ್ಜಿಕೊಳ್ಳಲು ನೈಗುವಲಿಸವನು ಕರವಸ್ತ್ರ ತಂದುಕೊಟ್ಟ. ಮುಸಲನಿ ಈ ಘಟನೆಯ ವಾರ್ತೆಯನ್ನು ಹೊರಗೆಡಹಲಿಲ್ಲ.

ಆ ಮೇಲೆ ನಡೆದ ಸಂಗತಿಯು: ವೆನೀಸ್ಸಿಯಾ ಅರಮನೆಯ ಮೇಲಂತಸ್ತಿನ ವರಾಂಡದಲ್ಲಿ ನಿಂತುಕೊಂಡು ಮುಸಲೋನಿಯು ಭಾಷಣ ಕೊಡುವ ಏರ್ಪಾಡು ನಡೆದಿತ್ತು. ಪೋಲೀಸರು ಪದ್ಧತಿಯಂತೆ ಆ ಸುತ್ತು ಪಲಯದ ಸ್ಥಳವನ್ನೆಲ್ಲಾ ಶೋಧಿಸತೊಡಗಿದರು. ಅರಮನೆಯ ಕೆಳಗಿದ್ದ ದೀಪಸ್ತಂಭದ ಟೊಪ್ಪಿನಲ್ಲಿಯೇ ಒಂದು ಬಾಂಬು! ಭಾಷಣಕ್ಕೆ ಸ್ವಲ್ಪ ಸಮಯಕ್ಕೆ ಮೊದಲು ಮುಸಲನಿಯ ಭಾಷಣಪೀಠದ ಇದಿರು ದಿಕ್ಕಿನಲ್ಲಿದ್ದ ಕಿಟಕಿಯೊಂದರಲ್ಲಿ ಮೆಶೀನುಗನ್ನೊಂದು ಸಿದ್ಧತೆಯಿಂದ ಇರಿಸಲ್ಪಟ್ಟಿತ್ತು. ಹೀಗೆ ಮುಸಲೋನಿಯ ಪ್ರಾಣ ಹಿಂದೆಯುವ ಪ್ರಯತ್ನದಲ್ಲಿರುವವರು ಅತ್ಯದ್ಭುತ ಸಾಹಸಿಗಳೇ ಇದ್ದಾರೆ.

ಬಲವಾದ ರಕ್ಷಣೋಪಾಯ

ಇದನ್ನು ಮುಸಲೋನಿಯೂ ಸ್ಪಷ್ಟವಾಗಿ ಬಲ್ಲನು. ಅವನು ಮಿತ್ರ ಸರ್ವಾಧಿಕಾರಿಗಳಿಗಿಂತ ಹೆಚ್ಚಿನ ಆತ್ಮ ವಿಶ್ವಾಸ,

THE
Canara Industrial & Banking Syndicate, Ltd.
(INCORPORATED IN BRITISH INDIA
LIABILITY OF SHAREHOLDERS LIMITED.)
ESTD. 1925
Head Office:- UDIPI, (S. India.)
SEASON DEPOSITS ARE ACCEPTED
at 3½ per cent per annum.
Further particulars on application
to any of
our thirty-five Offices.

ಮತ್ತು ಧೈರ್ಯವಿದ್ದ ಮನುಷ್ಯನೇನೋ ನಿಜ. ಆದರೆ ಅಪಾಯದ ಅರಿವಿಲ್ಲದವನಲ್ಲ. ಆದ್ದರಿಂದ ಬಲವಾದ ರಕ್ಷಣಾ ಹಂಚಿಕೆಗಳನ್ನವನು ಕೈಗೊಂಡಿದ್ದಾನೆ. 'ಪೆಲೇಸೋ ವೇನೇಜಿಯಾ' ಎಂಬ ಮುಸಲೋನಿಯ ಆಫೀಸಿಗೆ ಯಾರಾದರೂ ಹೋಗಬೇಕಾದರೆ, ಕಡಿಮೆಯೆಂದರೆ ಹನ್ನೆರಡು ಮಂದಿ ಆಫೀಸರರಾದರೂ ಆಗಂತುಕರ ಪಾಸ್‌ಪೋರ್ಟನ್ನು ಪರೀಕ್ಷಿಸಿಕೊಳ್ಳಬೇಕು. ಕಪ್ಪು ಪೋಷಾಕಿನ ಸೋಲ್ಜರರು ಕೋವಿಧಾರಿಗಳಾಗಿ ಆಫೀಸಿನ ಮಹಾದ್ವಾರ, ಹಾದಿಗಳಲ್ಲೆಲ್ಲಾ ತುಂಬಿರುತ್ತಾರೆ.

ಮುಸಲನಿ ಎಲ್ಲಾ ಟೋರ್ಲೋನಿಯಾದಿಂದ ಪ್ರತಿದಿನ ಬೆಳಗ್ಗೆ ಕರೀಬಣ್ಣದ ಮೋಟಾರುಕಾರಿನಲ್ಲಿ ಕುಳಿತು ತನ್ನ ಆಫೀಸಿಗೆ ಹೊರಡುತ್ತಾನೆ. ಆಗ ಅವನ ಹಿಂದೆ ಮುಂದೆ ಹನ್ನೆರಡು ಮೋಟಾರು ಸೈಕಲುಗಳಲ್ಲಿ ಶಸ್ತ್ರಧಾರಿಗಳಾದ ಕರಿಯ ಪೋಷಾಕಿನ ಪೋಲೀಸರು ರಕ್ಷಣೆಗಾಗಿ ಇರುತ್ತಾರೆ. ಕಾರಿನ ಒಳಗಡೆ ತನ್ನ ಮೈಗಾವಲಿನೊಡನೆ ಮುಸಲನಿ ಕುಳಿತಿರುತ್ತಾನೆ. ಒಳಗಡೆ ಉಕ್ಕಿನ ಶರ್ಟನ್ನು ಹಾಕಿಕೊಳ್ಳದೆ ಮುಸಲನಿ ಹೊರಡುವದೇ ಇಲ್ಲ; ಅವನ ಬಳಿಯೊಂದು ರಿವಾಲ್ವರು ಸದಾಕಾಲವಿರುತ್ತದೆ.

ಇಟಲಿ ಸರ್ವಾಧಿಕಾರಿಯ ನಿವಾಸಸ್ಥಾನದ ರಸ್ತೆಗಳಲ್ಲಿ ರಾತ್ರಿಹಗಲು ಫೆಸಿಸ್ಟ್ ಸೈನಿಕರು ಗಸ್ತು ನಡೆಸುತ್ತಾ ಇರುತ್ತಾರೆ. ಹೊಸಬರಿಗೆ ಅಲ್ಲಿಯ ರಸ್ತೆಗಳಿಗೆ ಪ್ರವೇಶವಿಲ್ಲ. ಅವನ ಮನೆಯಿರುವ ರಸ್ತೆಗೆ 'ವಿಯಾ ನೋಮೆಂಟನಾ' ಎಂದು ಹೆಸರು. ಕೆಲವು ವರ್ಷಗಳಿಗೆ ಹಿಂದೆ ಈ ರಸ್ತೆಯಲ್ಲಿದ್ದ ಮನೆಯವರೊಡನೆ ಒಕ್ಕಲೋಡಿಸಿ, ಪ್ರತಿಯೊಂದು ಮನೆಯನ್ನೂ ಮುಸಲನಿಯ ಕಪ್ಪಂಗಿ ದಳದವರಿಗೆ ಕೊಡಲಾಗಿತ್ತು.

ಮುಸಲನಿಯು ತಿನ್ನುವ ಹಣ್ಣುಗಳು ಅವನ ಮೇಜಿನ ಮೇಲೆ ಹೋಗುವ ಮೊದಲು, ಪರೀಕ್ಷಿಸಲ್ಪಡುತ್ತವೆ. ಎಲ್ಲಿಯಾದರೂ ವಿಷಹಾಕಲ್ಪಟ್ಟಿರುವುದೇ ಎಂದು ಅವನ ಪ್ರತಿಯೊಂದು ಆಹಾರವನ್ನೂ ಮೊದಲಾಗಿ ಪರೀಕ್ಷಿಸಿಕೊಳ್ಳುತ್ತಾರೆ.

ಜೀವದ ಹಂಗು

ಆದರೂ ಮುಸಲೋನಿಗೆ ಪ್ರಾಣಭಯವು ತಪ್ಪಿದ್ದಲ್ಲ. ಅವನು ಹಿಟ್ಲರನಷ್ಟು ಪೂರ್ವಸಿದ್ಧತೆ, ಸಂಕೋಚವಿಲ್ಲದೆ ಎಲ್ಲಿಗಾದರೂ ಹೋಗಬಲ್ಲನು; ಇದಕ್ಕೆ ಅವನ ಹುಟ್ಟುಸ್ವಭಾವವೇ ಕಾರಣ. ಆದರೂ ತನ್ನ ಪ್ರಾಣಕ್ಕಾಗಿ ಹೊಂಚುವವರ ಕೈಗೆ ಒಂದಲ್ಲೊಂದು ದಿನ ಬಲಿಯಾಗಬೇಕಾಗುವದೆಂಬ ಭಯ ಅವನಿಗಿದ್ದೇ ಇದೆ. ತನ್ನ ವಿರೋಧಿಗಳನ್ನು, ತನಗಾಗದ ಸಂಗತಿಗಳನ್ನು ಕಸಕ್ಕಿಂತ ಕಡೆಯಾಗಿ ಗಣಿಸಿ ಹೊಂಕರಿಸಿಬಿಡುವದು ಮುಸಲನಿಯ ಸ್ವಭಾವ. ಕೆಲಕಾಲದ ಹಿಂದೆ ಅವ ಹೀಗೆಂದಿದ್ದ—"ಕೊಲೆಗಡುಕರು ಕೆಲವರು ನನ್ನನ್ನು ಕೊಲ್ಲುವ ಪ್ರಯತ್ನದಲ್ಲಿ ವ್ಯರ್ಥ ತಮ್ಮ ಸಮಯ ಹಾಳುಮಾಡುತ್ತಿದ್ದಾರೆ." ಎಷ್ಟೆಂದರೂ ಅವನಿಗೆ ಪ್ರಾಣಭಯವಿದ್ದೇ ಇದೆ. ಹನ್ನೆರಡು ಬಾರಿ ಗುರಿತಪ್ಪಿದರೂ ಹದಿಮೂರನೇ ಬಾರಿ ಗುರಿ ಮುಟ್ಟಬಾರದೆಂದಿಲ್ಲವೆಂಬುದು ಅವನಿಗರಿತಿದೆ. ಕೊನೆಯ ಬಾರಿ ನಡೆದ ಪ್ರಯತ್ನದ ಕುರಿತು ಅಧಿಕಾರಿಗಳ ಪ್ರಕಟಣೆಯಿಷ್ಟೆ—"ಅಪರಾಹ್ನ 2-30 ಗಂಟೆಗೆ ವಿಯಾನೋಮೆಂಟನಾದಲ್ಲಿ ಸಾದಾ ಪೋಷಾಕಿನಲ್ಲಿದ್ದ ಫೇಸಿಸ್ಟ್ ಸೋಲ್ಜರನೊಬ್ಬನು ತಲೆ ಹಾಳಾದವನಂತಿದ್ದ ಮನುಷ್ಯನೊಬ್ಬನನ್ನು ಕಂಡು ಹಿಡಿದ...." ಇದಕ್ಕಿಂತ ಸ್ಪಷ್ಟವಾಗಿ ಮುಸಲೋನಿ ಪ್ರಾಣಘಾತಕ ಯತ್ನಗಳ ಕುರಿತು ಇಟಲಿ ಸರಕಾರವು ಜಾಹೀರುಪಡಿಸುವ ಕ್ರಮವಿಲ್ಲ. ಆದರೆ ಒಂದಲ್ಲೊಂದು ವಿಷಘಳಿಗೆಯಲ್ಲಿ ಒಬ್ಬಾನೊಬ್ಬ ತಲೆ ಹಾಳಾದವನ ದೆಸೆಯಿಂದಾಗಿ ತನ್ನ ತಲೆ ಹೋಗಬಹುದೋ ಎಂಬ ಹೆದರಿಕೆ ಮುಸಲೋನಿಗೂ ಇದೆ; ಇಟಲಿ ಸರಕಾರಕ್ಕೂ ಇದೆ.

ಸಮಾಚಾರಸಮಾವಲೋಕನ

ಹಳೇ ಪೋಲೀಸು ಕಮಿಶನರರು ಹೊಸ ವೈಸರಾಯರಾಗುವರೆ?

ಹಿಂದುಸ್ಥಾನದ ಈಗಿನ ವೈಸರಾಯರಾದ ಲೋರ್ಡ್ ಲಿನ್ಲಿತ್‌ಗೋರವರ ಅವಧಿ ಮುಗಿದ ಮೇಲೆ ಲಂಡನಿನ ಮಾಜೀ ಪೋಲಿಸು ಕಮಿಶನರರಾದ ಲೋರ್ಡ್ ಟ್ರೆಂಚಾರ್ಡ್ ಇವರು ವೈಸರಾಯರಾಗಲಿರುವರೆಂದು ಲಂಡನಿನ ವಾರ್ತೆ.

ಇಂಡಿಯಾ ಕಾನೂನಿನ ತಿದ್ದುಪಡಿ ಮತ್ತು ಫೆಡರೇಶನು ಇವೆರಡಕ್ಕೂ ಹಿಂದುಸ್ಥಾನದ ಒಪ್ಪಿಗೆಯಿಲ್ಲ. ಅವು ಪೋಲಿಸರ ಬೆಂಬಲದಿಂದ ಮಾತ್ರವೇ ಜಾರಿಗೆ ಬರಬೇಕಾದ ಸಂದರ್ಭ ಒದಗಬಹುದು. ಆ ವಿಷಮ ಕಾಲದಲ್ಲಿ ಪೋಲಿಸು ಕಮಿಶನರರಾಗಿದ್ದವರು ವೈಸರಾಯರಾಗಿ ಬರುವದೇ ಚಂದ. ಪೋಲಿಸು ರಾಜ್ಯವನ್ನು ಪೋಲಿಸು ಕಮಿಶನರರು ಆಳುವದು ನ್ಯಾಯವಾಗದೆ?

ಅಧಿಕಾರ ತಪ್ಪಿದರೂ ಆಡಳಿತೆ ತಪ್ಪಬಾರದು

ಇದಕ್ಕೆ ಮತ್ತೊಂದು ಬಲವಾದ ಕಾರಣವೂ ಇದೆ. ಚೇಂಬರ್ಲೇನ ಮಂತ್ರಿಮಂಡಲವು ಪತನ ಹೊಂದಿ ಇಂಗ್ಲಂಡಿನಲ್ಲಿ ತೀವ್ರಗಾಮಿ ಸರಕಾರದ ಸ್ಥಾಪನೆಯಾಗುವ ದುರ್ಲಕ್ಷಣಗಳು ಕಂಡುಬರುತ್ತಿವೆ. ಆದ್ದರಿಂದ ಚೇಂಬರ್ಲೇನ್ ಸಕ್ಷೀಯರಾದ ಹಾಗೂ ಕನ್ಸರ್ವೇಟಿವ್ ಮನೋವೃತ್ತಿಯವರಾದ ಲೋರ್ಡ್ ಟ್ರೆಂಚಾರ್ಡರವರನ್ನು ಮುಂದಾಗಿ ವೈಸರಾಯಿ ಮಾಡಿಬಿಡುವದು ಕ್ಷೇಮದಾಯಕವಾದುದೆಂದು ಚೇಂಬರ್ಲೇನ್ ಸರಕಾರದ ಯೋಚನೆ.

ಎಲ್ಲಿ ತೊಂದರೆ ಬಂದರೂ ಹಿಂದುಸ್ಥಾನವೊಂದು ಬೆಂಬಲಕ್ಕಿರಲೇಬೇಕೆಂಬುದು ಬ್ರಿಟಿಷರ ಪುರಾತನವಾದ ನೀತಿ. ಆದ್ದರಿಂದ ಪಾರ್ಲಿಮೆಂಟಿನಲ್ಲಿ ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಹಿಂದುಸ್ಥಾನದ ಮಟ್ಟಿಗೆ 'ಗೋಧಿ ಮುಕ್ಕುವವನ ಬದಲಿಗೆ ರಾಗಿ ಮುಕ್ಕುವವ' ಎಂಬಂತೆಯೇ ಸರಿ. ಇದು ಅಧಿಕಾರದಲ್ಲಿರುವ ಪಕ್ಷದ ಮಾತಾಯಿತು. ಅಧಿಕಾರ ಬಿಟ್ಟುಕೊಡುವ ಪಕ್ಷದವರೂ ಹಿಂದುಸ್ಥಾನವನ್ನು ಬಿಟ್ಟುಕೊಡಲು ತಯಾರಿಲ್ಲವೆಂದರೆ?

ಮಂತ್ರಿಮಂಡಲದೊಳಗೆ ತಂತ್ರ!

ಬ್ರಿಟಿಷ್ ಮಂತ್ರಿಮಂಡಲದೊಳಗೆ ತುಸು ಎಳೆದಾಟವಿದೆಯೆಂದು ತಿಳಿದುಬರುತ್ತದೆ. ಗಾಂಧೀ ಇರ್ವಿನ್ ಒಪ್ಪಂದಕಾರರಾದ ಲೋರ್ಡ್ ಇರ್ವಿನ್ (ಈಗ ಲೋರ್ಡ್ ಹೆಲಿಫೇಕ್ಸ್)ರವರು ಈಗ ಪರದೇಶಗಳ ಮಂತ್ರಿ. ಆದರೆ ಮಿ. ಚೇಂಬರ್ಲೇನರು ಸರ್. ಜೋನ್ ಸೈಮನ್ ಮತ್ತು ಸರ್. ಸಾಮುವೇಲ್ ಹೋರರ ಮಾತಿಗೆ ಕಿವಿಗೊಟ್ಟು ಮ್ಯೂನಿಚ್ ಒಪ್ಪಂದದಂತಹ ನಿಷ್ಫಲ ಕರಾರಿಗಿಳಿದಿದ್ದರು. ಲೋರ್ಡ್ ಹೆಲಿಫೇಕ್ಸರು ಪಾರ್ಲಿಮೆಂಟಿನ ಮೆಚ್ಚುಗೆಗರ್ಹರಾದ ವಿದೇಶೀ ಮಂತ್ರಿಗಳು. ಅವರು ತನಗೆ ಮುಖ್ಯಮಂತ್ರಿಪಟ್ಟ ಬೇಡವೆನ್ನುತ್ತಾರೆ. ಆದರೆ ವಿದೇಶೀ ಮಂತ್ರಿಪದದ ಸಂಪೂರ್ಣ ಹೊಣೆಗಾರಿಕೆಯಿರಬೇಕೆಂಬ ವಾದವೆತ್ತಿದ್ದಾರೆ. ಇದು ಅಸಾಧ್ಯವಾದಲ್ಲಿ ಸರ್. ಗಳಾದ ಜೋನ್ ಸೈಮನ್ ಮತ್ತು ಹೋರ್ ಸಾಹೇಬರು ಮಂತ್ರಿಮಂಡಲದಿಂದ ಹೊರಗಿರುವಂತಾಗಲೂ ಬಹುದು. ಹೆಲಿಫೇಕ್ಸರ ಸ್ಥಾನದ ಪ್ರತಿಷ್ಠೆಯೇರಬಹುದು.

ಬ್ರಿಟಿಷರ ವಿದೇಶ ಸಂಬಂಧದ ಧೋರಣೆ ಅಸ್ಪಷ್ಟವಾಗಿದೆ ಎಂದು ದೂರುವವರು ವಿದೇಶೀ ಮಂತ್ರಿಸ್ಥಾನವೆಷ್ಟು ಅಸ್ಥಿರವಾಗಿದೆ ಎಂಬುದನ್ನೂ ಮರೆಯಬಾರದು. ಮಿ. ಇಡೆನರು ರಾಜಿನಾಮೆ ಕೊಟ್ಟರು. ಲೋರ್ಡ್ ಹೆಲಿಫೇಕ್ಸರು ಪೀಠದ ಭದ್ರತೆಯ ಕಳವಳದಲ್ಲಿದ್ದಾರೆ. ಬ್ರಿಟಿಷರ ವಿದೇಶೀ ಮಂತ್ರಿಪದವಿ ಚಂಚಲವಾಗಿದ್ದುದರಿಂದಲೇ, ಬೆನೆಷ್, ಚೇಂಗ್, ಶುಷ್ನಿಗ್ ಮೊದಲಾದವರು ಪೀಠದಿಂದುರುಳುವಂತಾಯಿತು.

(ಪುಟ ೧೭ ನೋಡಿ)

ಗಾಂಧಿ ಜೋಯಿಸರ ಭವಿಷ್ಯ ಫಲ.

ನಿಮ್ಮ ಜನನ ತಾರೀಕು ಸಮಯ ಅಥವಾ ಪತ್ರ ಬರೆಯುವ ಘಳಿಗೆ ಮತ್ತು ಅಂದಾಜು ವಯಸ್ಸನ್ನು ತಿಳಿಸಿರಿ. ನಿಮ್ಮ ಕುಟುಂಬ, ವೃತ್ತಿ ಆರೋಗ್ಯ, ಸಂಪತ್ತು, ಆದಾಯ ವೆಚ್ಚಗಳು, ಅನಿರೀಕ್ಷಿತ ದೆಸೆಗಳು ಮತ್ತು ದುರ್ದೃಷ್ಟಗಳು, ಪ್ರೇಮ, ಅದೃಷ್ಟದ ಬಣ್ಣ, ಸೋತ್ರಿಗಳು ದೊರೆಯುವ ದಿನಗಳು ಮತ್ತು ಸಂಖ್ಯೆ, ಇನ್ನಿತರ ಪ್ರಾಮುಖ್ಯ ವಿಷಯಗಳು ನಿಮ್ಮ ಬಾಗಿಲಿಗೆ ಕಳುಹಲ್ಪಡುವವು.

ಪ್ರತಿತಿಂಗಳ ಭವಿಷ್ಯವನ್ನೊಳಗೊಂಡ ಒಂದು ವರುಷದ ಭವಿಷ್ಯಫಲಕ್ಕೆ ರೂಪಾಯಿ 3. ಪ್ರತಿತಿಂಗಳ ಆಗುಹೋಗುಗಳ ಸಮೇತ ಐದು ವರುಷದ ಫಲಕ್ಕೆ ರೂಪಾಯಿ 12-8-0. ಸಾಹುಕಾರರಿಗೂ ಉದ್ಯೋಗಸ್ಥರಿಗೂ ಪ್ರತಿವಾರದ ಭವಿಷ್ಯವನ್ನು ಸೂಚಿಸುವ ಒಂದು ವರುಷದ ಫಲಕ್ಕೆ ರೂಪಾಯಿ 10. ಭವಿಷ್ಯದ ಕುರಿತು ಕೇಳಲಾಗುವ ಐದು ಪ್ರಶ್ನೆಗಳಿಗೆ ಸರಿಯಾದ ಉತ್ತರವು ಒಂದು ರೂಪಾಯಿ ಕಾಣಿಕೆ ಕೊಟ್ಟಲ್ಲಿ ತಿಳಿಸಲಾಗುವುದು. (ವಿ. ಪಿ. ಖರ್ಚು ಬೇರೆ ಪ್ರತ್ಯೇಕ)

ಭವಿಷ್ಯ ಫಲದ ಕುರಿತು 'ಸ್ವದೇಶ ಮಿತ್ರನ್' ಮದ್ರಾಸಿನ ದಿನ ಪತ್ರಿಕೆಯು ಈ ರೀತಿ ಬರೆಯುತ್ತದೆ. 'ಶ್ರೀ. ವಿ. ಕೆ. ಶಠಗೋಪಾಚಾರಿಯವರ ಭವಿಷ್ಯವಾಣಿಗಳ ಕುರಿತು ಮಹಾಜನರಿಗೆ ಪರಿಚಯ ಮಾಡಿಕೊಡುವ ಆಗತ್ಯವಿಲ್ಲ. ಮಹಾತ್ಮಾಜಿಯವರ ಬಂಧವಿಮೋಚನೆ, ಅಮೇರಿಕಾ ಸಂಘದ ಪ್ರೆಸಿಡೆಂಟ್ ರೂಸ್‌ವೆಲ್ಟರ ಚುನಾವಣೆಯ ಜಯಶೀಲತೆ ಮೊದಲಾದವು ಶ್ರೀ. ಆಚಾರಿಯವರು ಹೇಳಿದಂತೆ ಫಲಿಸಿದುದೇ ಗಾಂಧಿ ಜೋಯಿಸರ ಭವಿಷ್ಯಫಲವು ಬ್ರಹ್ಮಾಂಡದಷ್ಟೆಲ್ಲಾ ಹಬ್ಬಲು ಯೋಗ್ಯನಿದರ್ಶನ. ಪತ್ರವ್ಯವಹಾರ ಇಂಗ್ಲೀಷಿನಲ್ಲಿ.

ವಿಳಾಸ: **V. K Satagopachariar**
Hanuman Jothisha Ashram
TIRUTTANI, S. India

THE BOMBAY LIFE ASSURANCE CO., LTD.,

(Ested. 1903)

THE OFFICE WHICH HAS PROVED ITS POPULARITYY ITS PROGRESS
RECORD OF NEW BUSINES.

Proposed.	Year.	Completed.
1,25,50,250	1934	1,04,33,750
1,50,48,915	1935	1,23,28,665
1,68,88,200	1936	1,36,01,500
1,72,579,75	1937	1,40,08,725
1,76,83,250	1938	1,44,91,000

1939 VALUATION YEAR.
lease take up a Policy Now and participate in Bonus.
To Insure or to Represent it pays you to consult us:-

MSRS. KOCHIKAR BROTHRS, LTD.,

MADRAS BRANCH RETARIES,
The Bombay Life Building,
Sir Lalubhai Samaldas Road, Gandhi Nagar, UDIPI.

Or any of our Offices at:—

Car Street, MANGALORE.	Puthiyara, CALICUT.	Post Box No. 537, Mount Road, MADRAS.	Visweshwarapuram Circle, BANGALORE CITY.
Charni Road, Girgaum, BOMBAY No. 4	Central Station Road, TRIVANDRUM.	Ottapalam, S. MALABAR.	

ಈ ವಾರದ ಕತೆ

* ಸ್ವಾಮಿಯ ಆಜ್ಞೆ *

ಸ್ವಾಮಿಯು ಮಕ್ಕಳ ಭಾರವನ್ನು ಪತ್ನಿಯ ಹೆಗಲಿಗೇರಿಸಿ, 'ಮರ್ಯಾದೆಯಿಂದ ಬಾಳೆ'ಂದು ಅವಳಿಗಾಜ್ಞೆಯಿತ್ತು ಇಹಲೋಕ ತೊರೆದ. ಪತ್ನಿಯು ಭಾರ ಹೊರಲಾರದೆ, ಕಷ್ಟ ಸಹಿಸಲಾರದೆ ವಿಷತಿಂದು ಸ್ವಾಮಿಯ ಸಾನಿಧ್ಯವನ್ನೇ ಸೇರಿದಳು!

ಕತೆಗಾರ— ಬಿ. ಗೋಪಾಲರಾವ, ಬಾರಕೂರು.

ರಮೇಶನು ಬೊಂಬಾಯಿಯ ಪ್ರಸಿದ್ಧ ಕಾರಖಾನೆಯೊಂದರಲ್ಲಿ ಕಾರಕೂನನಾಗಿದ್ದನು. ತಿಂಗಳಿಗೆ 30 ರೂಪಾಯಿ ಪಗಾರ ಸಿಗುತ್ತಿತ್ತು. ಬರೇ 30 ರೂಪಾಯಿಗಳಲ್ಲಿ, ಅದೂ ಬೊಂಬಾಯಿಯಂತಹ ಶಹರಿನಲ್ಲಿ, ರಮೇಶರಾಯ ಹೆಂಡತಿಮಕ್ಕಳೊಂದಿಗೆ ಹೇಗೆ ತಾನೇ ಜೀವಿಸಬಲ್ಲನು? ಮಾತ್ರವಲ್ಲ ಗೌರವಸ್ಥ ಮನೆತನದ ರಮೇಶರಾಯನಿಂದದು ಸಾಧ್ಯವಾಗುತ್ತಲೇ ಇರಲಿಲ್ಲ. ತನ್ನ ಹಲವು ಮಿತ್ರರಿಗೆ ತನ್ನ ಕಷ್ಟಗಳನ್ನು ಕುರಿತು ನಿವೇದಿಸಿದ್ದಾಯ್ತು. ಎಲ್ಲರೂ ಮೋರೆ ತಿರುಗಿಸಿಕೊಂಡುಬಿಟ್ಟರು. 'ಕಷ್ಟ ಬಂದಾಗ ಮಿತ್ರರನ್ನೂ, ಬಂಧುಬಳಗದವರನ್ನೂ ಪರೀಕ್ಷಿಸಿ ನೋಡು' ಎಂಬಂತೆ ಸಾಕಷ್ಟು ಪ್ರಯತ್ನಿಸಿ ನೋಡಿದ. ಸಫಲವಾಗಲಿಲ್ಲ. ಆತನಿಗೆ ಸಮೀಪದ ಬಂಧುಗಳಾರೂ ಇಲ್ಲನುದರಿಂದ ಬಂಧುಗಳಿಂದ ಸಹಾಯ ದೊರಕಬಹುದೆಂಬ ಆಸೆಯನ್ನೇ ಆತ ಇಟ್ಟುಕೊಂಡಿರಲಿಲ್ಲ. ಕೊನೆಗೆ ಹಾಗೂ ಹೀಗೂ ಹಲವು ಕಡೆ ಪ್ರಯತ್ನಿಸಿ ಒಬ್ಬ ಸೇಟರಲ್ಲಿ ಲೆಖ್ಖ ಬರೆಯುವ ಕೆಲಸಕ್ಕೆ ಸೇರಿಕೊಂಡ. ಬೆಳಗ್ಯೆ 7ರಿಂದ ಸಂಜೆ 6 ತಾಸಿನ ತನಕ ಖಾರಖಾನೆಯಲ್ಲಿ ಕೆಲಸ. ಸಂಜೆ 7–30ರಿಂದ 10–30ರ ವರೆಗೆ ಸೇಟರ ಅಂಗಡಿಯಲ್ಲಿ ಲೆಖ್ಖ ಬರೆಯುವ ಕೆಲ್ಸ. ಕೆಲಸವೇನೋ ಕಷ್ಟತರದ್ದೆ. ಆದರೆ ಮಾಡುವುದಾದರೂ ಏನು? ಹಾಳಾದ ಹೊಟ್ಟೆಯೊಂದಿದೆಯಲ್ಲ? ಮತ್ತು ತಾನೊಬ್ಬನೇ ಆಗಿದ್ದರೆ ಅಷ್ಟೊಂದು ಕಷ್ಟಪಟ್ಟು ದುಡಿಯುವ ಆವಶ್ಯಕತೆಯಿರಲಿಲ್ಲ. ರಮೇಶರಾಯ, ಆತನ ಹೆಂಡತಿ ಸರಸ್ವತಿ, 6 ವರುಷದ ಮಗು ಮೋಹನ, 3 ವರುಷದ ಮಗಳು ಲಕ್ಷ್ಮೀ, ಹೀಗೆ 4 ಜನರು ಆ ದುಡಿತದಿಂದ ಜೀವಿಸಬೇಕಾಗಿದೆ.

ರಮೇಶರಾಯನು ಒಂದು ನಿಮಿಷವೂ ವಿಶ್ರಾಂತಿಯಿಲ್ಲದೆ ಸೂರ್ಯೋದಯದಿಂದ ರಾತ್ರಿ 11 ತಾಸಿನ ತನಕ ದುಡಿಯುತ್ತಿದ್ದ. ಮನೆಗೆ ಬಂದು ಊಟತೀರ್ಸಿ ಮಲಗುವಾಗ 12–12ವರೆ ತಾಸಾಗುತ್ತಿತ್ತು. ಹೀಗೆ ಆತನು ವಿಶ್ರಾಂತಿಯಿಲ್ಲದೆ ಹಗಲಿಡೀ ದುಡಿಯುತ್ತಿದ್ದ. ಕಷ್ಟ, ನಿಜವಾಗಿಯೂ ಮನುಷ್ಯಜನ್ಮವೇ ಕಷ್ಟ. ಅದರಲ್ಲಿಯೂ 'ಬಡತನ' ಇದರಷ್ಟು ಕಷ್ಟ ಬೇರಾವುದು ತಾನೇ ಇದೆ?

ೲ ೲ ೲ

ರಮೇಶನೀಗ ಹಾಸಿಗೆ ಹಿಡಿದುಬಿಟ್ಟಿದ್ದ. ಕಾರಣ ದಿನವಿಡೀ ವಿಶ್ರಾಂತಿಯಿಲ್ಲದೆ ದುಡಿದುದರ ಫಲ! ಸರಸ್ವತಿಗಾದರೋ ತನ್ನ ದುರದೃಷ್ಟವನ್ನು ನೆನೆದುಕೊಂಡು 'ಇನ್ನೂ ನಾನು ಈ ಭೂಮಿಯ ಮೇಲೆ ಏಕೆ ಜೀವಿಸಿರಬೇಕು?' ಎಂದೆನಿಸುತ್ತಿತ್ತು. ಆದರೇನು ಮಾಡಲಿ? ಖಾಯಿಲೆಯ ಪತಿಯನ್ನೂ ಚಿಕ್ಕ ಹಸುಗೂಸುಗಳೆರಡನ್ನೂ ಬಿಟ್ಟು ಅದೆಲ್ಲಿಗೆ ಹೋಗಬಲ್ಲಳಾಕೆ? ಪತಿಗೆ ಡಾಕ್ಟರರಿಂದ ಔಷಧೋಪಚಾರವನ್ನು ಮಾಡಿಸುವ ಎಂದರೆ ಕೈಯಲ್ಲೊಂದು ಚಿಕ್ಕಾಸೂ ಇಲ್ಲ. ಚಿನ್ನಾಭರಣಗಳನ್ನಾದರೂ ಅಡವಿಟ್ಟು ಪ್ರಕೃತದ ಗರ್ಜನ್ನು ಸುಧಾರಿಸುವ ಎಂದರೆ ಕಿವಿಯಲ್ಲಿ ಕೆಂಪಿನ 4–8ರೂಪಾಯಿಯ ಬೆಂಡೋಲೆಯೊಂದು, ಕೊರಳಲ್ಲಿ 20–25ರೂಪಾಯಿಯ ಬೆಲೆಬಾಳುವ ಮಂಗಲಸೂತ್ರವೊಂದು, ಸರಿ ಇಷ್ಟೇ ಆಕೆಯ ವಶವಿದ್ದ ಆಭರಣಗಳೆಂದರೆ. "ಇಡೀ ಮುಳುಗಿದ ಮೇಲೆ ಚಳಿಯೇನು?" ಎಂಬಂತೆ ಆಪತ್ಕಾಲದ ಧನವಾಗಿದ್ದ ಆ ಮಂಗಲಸೂತ್ರವನ್ನು ಹಿಂದು ಮುಂದು ನೋಡದೆ ನಂಬಿಗಸ್ಥ ಸರಾಫನೊಬ್ಬನಲ್ಲಿ ಅಡವಿಟ್ಟು 15ರೂಪಾಯಿಗಳನ್ನು ಕೊಂಡುಬಂದಳು. ಆದರೆ ಆ ಬರೇ 15 ರೂಪಾಯಿಗಳು ಅದೆಲ್ಲಿಯ ತನಕ ಬಂದಾವು? ರಾವಣನ ಹೊಟ್ಟೆಗೆ ಕಾಸಿನ ಮಜ್ಜಿಗೆ ಎಂತಾರಲ್ಲ, ಅಂತೆಯೇ ಒಂದೆರಡು ವಾರಗಳಲ್ಲಿಯೇ ಆ ಹಣವೆಲ್ಲಾ ಖರ್ಚಾಗಿ ಹೋಯ್ತು. ಪುಣ್ಯಾತ್ಮ ಆ ಡಾಕ್ಟರ ಮಹಾಶಯರು ಇವರ ಕಷ್ಟಗಳನ್ನು ನೋಡಿಯೋ ಏನೋ ಬರೇ ಔಷಧದ ಖರ್ಚು ಮಾತ್ರ ಆಕೆಯಿಂದ ತೆಗೆದುಕೊಂಡು ಚಿಕಿತ್ಸೆ ಮಾಡಿಹೋಗುತ್ತಿದ್ದರು.

ಆದರೇ? ದುರದೃಷ್ಟವಶಾತ್ ರಮೇಶರಾಯನ ಖಾಯಿಲೆಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಹೋಯ್ತು. ಸರಸ್ವತಿಗೆ ಈಗ ದಿಕ್ಕೂ ತೋಚದಾಯ್ತು. ಮುಂದೆ ಖರ್ಚಿಗೆ ಮಾರ್ಗವಾವುದು ಎಂದು. ಬೊಂಬಾಯಿಯಂತಹ ಶಹರಿನಲ್ಲಿ ಅದೂ ಅಪರಿಚಿತ ಹಾಗೂ ಅಬಲೆಯಾದ ಸರಸ್ವತಿಯಂತಹ ಹೆಣ್ಣುಮಗಳಿಗೆ ಅದಾರು ಸಹಾಯ ನೀಡಬಲ್ಲರು? ಕಷ್ಟಗಳು ಬರುವಾಗ್ಯೆ ಸಾಲು ಸಾಲಾಗಿಯೇ ಬರುತ್ತವೆ. ಪಾಪ, ಎಲ್ಲಕ್ಕಿಂತಲೂ ಮೋಹನ ಮತ್ತು ಲಕ್ಷ್ಮಿ ಇವರ ಹೊಟ್ಟೆಪಾಡಿನ ಯೋಚನೆಯೇ ಹೆಚ್ಚಾಯ್ತು ಸರಸ್ವತಿಗೆ. ಎಲ್ಲಿಯಾದರೂ ದಿನಕ್ಕೊಂದು (ಅವರಿಗೆ) ಊಟಮಾಡ್ಸಿದರೆ ಅದೇ ಅತೀ ಸಂತೋಷದ ದಿನವಾಗುತ್ತಿತ್ತು ಆಕೆಗೆ! ಅಂತೂ ಕಷ್ಟ, ಹೆಣ್ಣುಜನ್ಮವೇ ಕಷ್ಟ. ಹಾಳಾದ ಹೊಟ್ಟೆಯೊಂದಿರದಿರುತ್ತಿದ್ದರೆ......?

ೲ ೲ ೲ

"ಸರೂ—ನಾನು—ಇನ್ನು ಹೆಚ್ಚು ಸಮಯ ..ಬದುಕಲಾರೆ. ನನ್ನ....ಮೋಹನ ..ಲಕ್ಷ್ಮಿ...ಇವರನ್ನು ಸಲಹುವ...ಭಾರ ನಿನ್ನದು...ಇಗೋ ಕೊನೆಯ ಮಾತು. ...ನೀನು ಏನುಬೇಕಾದರೂ ಮಾಡಿ ಜೀವಿಸು. ಭಿಕ್ಷೆಬೇಡಿಯಾದರೂ ಜೀವಿಸು... ಆದರೆ?...ಆದರೆ?... ದೇ–ಹ–ವ–ನ್ನು ಮಾತ್ರ......ಕೆಳಯಿತೇ....ಸರೂ ನನ್ನ ಮಾನಕ್ಕೆ ಕುಂದು ತರಬೇಡ. ಇದೋ.... ಹೊರಟೆ. ನಿನ್ನನ್ನು ದಿಕ್ಕಿಲ್ಲದ ಅನಾಥಳನ್ನಾಗಿ ಮಾಡಿ ಹೋಟೆ...ಸರೂ...ಎಲ್ಲಿ? ನಿನ್ನ ಕೈಯೆಲ್ಲಿ?....ಸರೂ ನೆನಪಿಡು... "ಸ್ವಾಮಿಯ ಆಜ್ಞೆಯನ್ನು ಪಾಲಿಸು..... ಇದೋ ಹೊರಟೆ....ಸರೂ ಸ–ರೂ ಬಾಯಾರಿಕೆ ನೀರು ನೀರು ಉ ಉ ಉ ಉ ..."ರಮೇಶನ ಪ್ರಾಣಪಕ್ಷಿಯು ಇಹಲೋಕಯಾತ್ರೆಯನ್ನು ಪೂರೈಸಿಬಿಟ್ಟಿತು!

ೲ ೲ ೲ

ರಮೇಶನ ದಹನಕ್ರಿಯೆಗಳೆಲ್ಲಾ ಹೇಗೂ ಹೇಗೋ ಪೂರೈಸಿತು. ಆದರೆ ಸರಸ್ವತಿಗೆ ಮಾತ್ರ ಹಗಲಿರುಳು ಕಣ್ಣೀರಿಡುವುದೊಂದೇ ಕೆಲಸ. ರಾತ್ರೆ ಮಲಗಿದರೆ ತನ್ನ ಸ್ವಾಮಿಯ ಪ್ರಾಣೋತ್ಕ್ರಮಣ ಕಾಲದಲ್ಲಿ ಹೇಳಿದ ಆಜ್ಞೆ, ಆ ಕೊನೆಯ ಮಾತುಗಳನ್ನೂ ನೆನೆದು ನೆನೆದು ದುಃಖಬರುತ್ತಿತ್ತು ಆಕೆಗೆ. "ಮುಂದೆ ತಾನೇನು ಮಾಡಲಿ? ಈ ಹಸುಕೂಸುಗಳೆರಡರ ಗತಿಯೇನು? ಅವುಗಳ ಹೊಟ್ಟೆಗೆ ಒಂದು ಹಿಡಿ ಹಿಟ್ಟು ಹೇಗೆ ಒದಗಿಸಲಿ? ಸ್ವಾಮಿಯ ಆಜ್ಞೆಯನ್ನು ಹೇಗೆ ಪಾಲಿಸಲಿ?" ಎಂಬಿವೇ ಮೊದಲಾದುವುಗಳನ್ನು ಕುರಿತು ಆಲೋಚಿಸುತ್ತಿದ್ದಳು. ಎಷ್ಟು ಯೋಚಿಸಿದರೂ ಮುಂದಿನ ತನ್ನ ಜೀವನಮಾರ್ಗ ಹೊಳೆಯಲಿಲ್ಲ ಆಕೆಗೆ! ತೌರು ಮನೆಗೆ ಪತ್ರಬರೆದು ಅಲ್ಲಿಗಾದರೂ ಹೋಗಿ ಇರೋಣವೆಂದರೆ, ಆಕೆಯ ಅಣ್ಣ, ತಮ್ಮ, ತಾಯಿತಂದೆಗಳಾರೂ ಈಗ ಜೀವಂತವಿಲ್ಲ. ಇದ್ದ ಸೋದರ ಮಾವನಾದರೋ ದುಷ್ಟಬುದ್ಧಿಯವನು. ಸಂಪಾದಿಸಿದ ಹೆಚ್ಚಿನಂಶವನ್ನು ಸುರಾಪಾನಕ್ಕಾಗಿಯೇ ವ್ಯಯಿಸಿ ಬಿಡುತ್ತಿದ್ದ. ಆದ್ದರಿಂದ ಸಂಬಂಧಿಕರಿಂದ ಆಕೆಗೆ ಸಹಾಯದೊರಕುವ ಹಾಗಿಲ್ಲ. ಪತಿಯ ಸ್ನೇಹಿತರಾರಿಂದಲೂ ಸಹಾಯದೊರಕಲಾರದೆಂದು ಮೊದಲೇ ಅರಿತಿದ್ದಳಾಕೆ. ಆದರೆ ಎಷ್ಟಾದರೂ ಉಂಟುಮಾಡಿದ ದೇವರು ಊಟಕೊಡಲಾರನೇ ಎಂಬಂತೆ ಥಟ್ಟನೇ ಆಕೆಗೊಂದು ಯೋಚನೆ ಹೊಳೆಯಿತು. ತನ್ನ ಸ್ವಾಮಿಯಿದ್ದ ಕಾರಖಾನೆಯಲ್ಲಿ ನೇಯ್ದ ಬಟ್ಟೆಗಳಿಗೆ ಕಸೂತಿಕೆಲ್ಸಮಾಡಿಕೊಟ್ಟರೆ, ತಮ್ಮ ಜೀವನ ಹೇಗೂ ಸಾಗಬಹುದೆಂದು ಯೋಚಿಸಿ ಕಾರಖಾನೆಯ ಮಾಲಿಕರಿಗೊಂದು ಪತ್ರಬರೆದಳು. ಆಕೆಯ ಪೂರ್ವ ಜನ್ಮದ ಸುಕೃತದ ಫಲವೋ ಏನೋ, ಆತನು ಆಕೆಯ ಪತ್ರದಂತೆ ಆಕೆಗೆ ನಿತ್ಯವೂ ಒಬ್ಬ ಕಾರಕೂನನ ಮುಖಾಂತರ ನೇಯ್ದ ಬಟ್ಟೆಗಳಿಗೆ ಜರತಾರಿ ಕೆತ್ತುವಂತೆ ಹೇಳಿ ಕಳಿಸುತಿದ್ದನು.

(ಪುಟ ೮ ನೋಡಿರಿ)

SAVING MONEY AND TIME

Thousands of prudent and thriving business-men prefer this ank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906
CANARA BANK
LIMITED



To Insure is
The Husband's duty. The wife's right and the child's Claim Hence seekfor a policy of
THE ASAIN ASSURANCE CO., LTD.
The safest and one of the largest Indian Concerns,
Head Office:– **Asian Buildings Ballard Estate, Bombay.**
Branch Office: – **Hampankatta, Mangalore.**
ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.
ಲಾಭದಾಯಕವಾದ ಮತ್ತು ಸುಭದ್ರತೆಯ ಸ್ಥಿತಿಯನ್ನೊಳಗೊಂಡ ಈ ಕಂಪೆನಿಯಲ್ಲಿ ನಿಮ್ಮ ವಿಮಾ ಇಳಿಸಿರಿ.
ಏಜಂಟರು ಪ್ರಾಮುಖ್ಯ ಪಟ್ಟಣಗಳಲ್ಲೆಲ್ಲಾ ಬೇಕಾಗಿದ್ದಾರೆ. ಹೆಚ್ಚಿನ ವಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
J. A. PUTRAN, Branch Manager, Mangalore.

ಪ್ರಾಣಸಂಕಟ

ಹಾಸ್ಯಪ್ರಬಂಧ

ವಿಪತ್ತನ್ನು ನೀವು ಸಂತೆಯಲ್ಲಿ ಬೆಲೆಕೊಟ್ಟು ತರಬೇಕಾದ್ದಿಲ್ಲ. ನೀವೂ ನಾವೂ ಕಣ್ಣಿಗೆ ಕಾಣುವಂತೆ ಅದಕ್ಕಾಗಿ ಏನೂ ಕೊಡದಿದ್ದರೂ ಅದಕ್ಕಾಗಿ ತೆರುವ ದಂಡವು ಅಷ್ಟಿಷ್ಟಲ್ಲ . . . 'ಬೆಕ್ಕಿಗೆ ಆಟ ಇಲಿಗೆ ಪ್ರಾಣಸಂಕಟ'ವೆಂಬಂತೆ ಇನ್ನೊಬ್ಬರ ಕೃತಿಗಳು ನಮಗೆ ಹೇಗೆ ಪ್ರಾಣಸಂಕಟವನ್ನುಂಟುಮಾಡುತ್ತಿವೆಯೆಂಬುದನ್ನು ಈ ಹಾಸ್ಯಪ್ರಬಂಧದಲ್ಲಿ ನೋಡಿರಿ

ಲೇಖಕರು:

ಎಸ್. ಎಲ್. ಸುಬ್ರಹ್ಮಣ್ಯಂ

ವಿಪತ್ತನ್ನು ನೀವು ಸಂತೆಯಲ್ಲಿ ಬೆಲೆಕೊಟ್ಟು ತರಬೇಕಾದ್ದಿಲ್ಲ. ನೀವೂ ನಾವೂ ಕಣ್ಣಿಗೆ ಕಾಣುವಂತೆ ಅದಕ್ಕಾಗಿ ಏನು ಕೊಡದಿದ್ದರೂ, ಅದಕ್ಕಾಗಿ ತೆರುವ ದಂಡವು ಅಷ್ಟಿಷ್ಟಲ್ಲ. ಎಲ್ಲಿಯಾದರೂ ಒಂದು ವೃತ್ತಪತ್ರಿಕೆಯನ್ನು ಕೊಂಡಿರಿ ಎನ್ನಿ, ಕೂಡಲೇ ನಿಮಗೆ ಪೀಡೆ ಗಂಟುಬಿತ್ತು ಎಂದೇ ಭಾವಿಸಿ. ಬೆಳಿಗ್ಗೆ ಎದ್ದ ಕೂಡಲೇ ವರ್ತಮಾನ ಓದಲು ನೀವು ಒಂದು ಪತ್ರಿಕೆ ತರಿಸುವಿರಿ. ಪತ್ರಿಕೆಯವನು ನಿಮ್ಮ ಕಿಟಿಕಿಯಲ್ಲಿ ಪತ್ರಿಕೆ ಬಿಸಾಡಿ ಹೊರಟುಹೋಗುವನು. ಇನ್ನು ನೀವು ಅದನ್ನು ತೆಗೆಯುವುದಕ್ಕೆ ಇಲ್ಲ. ಆಗಲೇ ಸುತ್ತುಗಟ್ಟಿದರು ಅನ್ನಿ ನಿಮ್ಮನ್ನ. ಯಾರು? ನಿಮ್ಮ ಅಕ್ಕಪಕ್ಕದವರು. ಬಂದವರೇ "ಏನು ಸ್ವಾಮಿ, ಈ ದಿನದ ವಿಶೇಷ ಸಮಾಚಾರ?" ಎಂದು ಕೇಳಿ ಒಬ್ಬೊಬ್ಬರು ಒಂದೊಂದು ಪುಟವನ್ನು ತೆಗೆದುಕೊಂಡುಬಿಡುವರು. ಈಗ ನೀವೇನು ಮಾಡಬಲ್ಲಿರಿ ಹೇಳಿ? ಅವರನ್ನು ಹೊರದೂಡಬಲ್ಲಿರಾ? ಅವರೊಡನೆ ಸಂವಾದಮಾಡುವಿರೋ? ಮಾಡಬೇಕೂ ಅಂದ್ರೆ ಮಾಡಬಹುದು ಅನ್ನಿ, ಆದರೆ ಇದೆಲ್ಲ ಸಭ್ಯತೆ, ಶಿಷ್ಟಾಚಾರ "ಎಟಿಕೇಟ್"ಗೆ ವಿರುದ್ಧ ಅಷ್ಟೆ. ತಿಂಗಳಾದ ಒಡನೆ ಪತ್ರಿಕೆಯವನಿಗೆ ಚಂದಾ ಕೊಡುವವರು ನೀವು, ಲಾಭಹೊಂದುವವರು ನೆರೆಯವರು. ಇದು ಒಂದು ವಿಧದ ಪ್ರಾಣಸಂಕಟ ಹೌದೋ ಅಲ್ಲವೋ ಹೇಳಿ!

ಯಾವುದಾದರೂ ಸಭಾ, ಸಮಾಜಕ್ಕೆ, ತಿಳಿದೋ, ತಿಳಿಯದೆಯೋ ಹೋದಿರಿ ಎನ್ನಿ. ಸರಿ, ಕೂಡಲೇ ಪೀಡೆ ಬೆನ್ನು ಹತ್ತಿದಂತೆಯೇ. ಸಭೆಯ ಕಾರ್ಯದರ್ಶಿಗಳು ನಿಮ್ಮಲ್ಲಿಗೆ ಬಂದು, ಸದಸ್ಯರ ಫಾರಂ, ರಸೀದಿ ಪುಸ್ತಕ ತೋರಿಸಿ "ತಾವು ಬಹಳ ಉದಾರಿಗಳೆಂದು ಕೇಳಿ ಬಲ್ಲೆ, ತಮ್ಮಂಥವರಿಂದಲೇ ಇಂತಹ ಸಂಸ್ಥೆಗಳು ಉದ್ಧಾರ, ಕೃಪೆಮಾಡಿ ಸದಸ್ಯರಾಗಿರಿ" ಎಂದು ವಿನಯವಾಗಿ ಪ್ರಾರ್ಥಿಸಿ ನಿಮಗೆ ಸ್ವಲ್ಪವೂ ಇಷ್ಟವಿಲ್ಲದಿದ್ದರೂ–ಚಂದಾ ಬೇಡುವರು. ನಿರುಪಾಯರಾಗಿ ಒಪ್ಪಿಕೊಳ್ಳುವಿರಿ. ಅಷ್ಟೆ ಅಲ್ಲ, ಪ್ರತಿ ತಿಂಗಳೂ ಜೇಬಿನಿಂದ ಸ್ವಲ್ಪ ಹಣ ತೆರುತ್ತಲೇ ಇರಬೇಕಾಗುವುದು. ಇದು ಒಂದು ವಿಧವಾದ ಪ್ರಾಣಸಂಕಟ ಹೌದೋ ಅಲ್ಲವೋ?

ಪ್ರಾರಂಭದಲ್ಲಿ ಕೇವಲ ಪರಿಚಯವಿರಬಹುದು, ಕ್ರಮೇಣ ಮಿತ್ರತ್ವ ನಂತರ ಪ್ರಾಣ ಸ್ನೇಹಿತರು! ಒಬ್ಬರನ್ನೊಬ್ಬರು ದಿನಕ್ಕೊಮ್ಮೆಯಾದರೂ ಸಂಧಿಸಬೇಕು. ಆಧುನಿಕ ಶಿಷ್ಟಾಚಾರದಲ್ಲಿ ಮುಳುಗಿದ ನೀವು ಅವರಿಗೆ ಕಾಫಿ ಕೊಡಬೇಕು, ಕಾಫಿಗೆ ಬಂದವರು ಹೊರಡುವ ಸುದ್ದಿಯನ್ನೇ 12ಘಂಟೆವರೆಗೂ ಎತ್ತಲಿಲ್ಲ ಎಂದಿಟ್ಟುಕೊಳ್ಳಿ, ಸರಿ, ಊಟಕ್ಕೆ ಏಳಿಸದೆ ಇರುವುದಕ್ಕಾಗುತ್ತದೆಯೆ? ಅದೂ ಆಯಿತು. ನಿಮ್ಮ ಮಿತ್ರ ಮಹಾಶಯರು ಹೊರಡುವಾಗ ಯಾವುದಾದರೂ ನಿಮ್ಮ ಒಳ್ಳೆಯ ಪುಸ್ತಕವಾಗಲಿ ಅಥವಾ ನಿಮಗೆ ಪ್ರಿಯವಿರುವ ಇನ್ನೇನಾದರೂ ವಸ್ತುವನ್ನು ತೆಗೆದುಕೊಂಡೇ ಹೊರಡುವರು.–ಅದು ನಿಮಗೆ ಹಿಂದಿರುಗಿ ಬರುವ ಸಂಭವ ಮಾತ್ರ ಇಲ್ಲವೇ ಇಲ್ಲ. ಸ್ನೇಹಮಾಡಿ ಆಪತ್ತನ್ನು ಕೊಂಡಿರೋ ಇಲ್ಲವೋ?

ಇಷ್ಟು ಎಚ್ಚರಿಕೆಯಿಂದಿರುವೆನಾದರೂ, ತನ್ನ ದುರ್ದೈವ, ನನಗೆ ಡಾಕ್ಟರ ಸ್ನೇಹವಾಗಬೇಕೆ? ಡಾಕ್ಟರ ಹೆಸರು, ಗೋತ್ರ, ಒಂದೂ ತಿಳಿಯೆ. "ಡಾಕ್ಟರ್" ಇಷ್ಟು ಮಾತ್ರ ಬಲ್ಲೆ. ಅವರೊಡನೆ ಸ್ನೇಹ ಹೇಗೆ ಬೆಳೆಯಿತು? ಎಲ್ಲಿ ಬೆಳೆಯಿತು? ಅದು ಈಗ ಬೇಡ. ಒಟ್ಟಿನಲ್ಲಿ ಬಲವಾದ ದೋಸ್ತಿ ಆಗಿದೆ. ಅವರ ಯೋಗ್ಯತೆಯನ್ನು ಸಹ ನಾನು ತಿಳಿಯೆ ಆದರೆ ಅವರೇ ಒಂದು ಸಾರಿ "ನಾನು ಮೊದಲು ಅಲೋಪತಿ ಅಭ್ಯಾಸಮಾಡಿದೆ, ನಂತರ ಹೋಮಿಯೋಪತಿ ಈಗ ನೆಚರೋಪತಿ" ಎಂದು ಹೇಳಿದ್ದರು. ಕೇವಲ ನೀರು, ಮಣ್ಣುಗಳಿಂದಲೇ ಭಯಂಕರ ರೋಗವನ್ನು ಸಹ ನಿರ್ಮೂಲಮಾಡಬಲ್ಲ ಶಕ್ತಿ ಇದೆ ಎಂದು ಹೇಳುವರು. ನನಗಂತೂ ಯಾವ ರೋಗವೂ ಇಲ್ಲ, ಇವರ ಯೋಗ್ಯತೆಯ ವಿಮರ್ಶೆಮಾಡುವ ಸಮಯವೇ ಬರಲಿಲ್ಲ. ಆದರೆ ಡಾಕ್ಟರ್ ಜನರು, ರೋಗವನ್ನು ಗುಣಮಾಡಬಲ್ಲರೆಂದೂ, ರೋಗವಿಲ್ಲದವರಿಗೆ ರೋಗವನ್ನುಂಟುಮಾಡಬಲ್ಲರೆಂದೂ ಮಾತ್ರ ನನಗೆ ತಿಳಿದಿರಲಿಲ್ಲ. ಇದರಲ್ಲಿ ಅವರು ಬಹಳ ನಿಪುಣರು. ಒಂದು ದಿನ ನನ್ನ ಮಿತ್ರರಾದ ಡಾಕ್ಟರು "ಏನ್ರೀ, ಇತ್ತೀಚೆಗೆ ಏಕೋ ನಿಮ್ಮ ಆರೋಗ್ಯ ಕೆಟ್ಟಿರುವಂತೆ ತೋರುತ್ತದಲ್ಲ? ಏನು ಸಮಾಚಾರ" ಎಂದರು. 'ಏನೇನೂ ಇಲ್ಲ. ಸುಖವಾಗಿದ್ದೇನೆ ಡಾಕ್ಟರ್ ಸಾಹೇಬ್' ಎಂದೆ.

"ಹಾಗೆಂದರೇನ್ರಿ, ನಾನಂತೂ ನಂಬುವುದಿಲ್ಲ, ಮುಖ ಇಷ್ಟು ಇಳಿದ್ಹೋಗಿದೆ. ಆದರೂ ಏನೂ ಇಲ್ಲವೆ? ಏನೋ ಅಂತರ್ಗತ ದೋಷವಿರಬಹುದು!"

"ಇಲ್ಲ ಮಹಾಶಯ ನನಗೇನೂ ಇಲ್ಲ."

"ಏನೂ ಇಲ್ಲನ್ನೇ, ಎಲ್ಲಿ ಸ್ವಲ್ಪ ನಾಲಗೆ ತೋರಿಸಿ." ನಾಲಗೆ ತೋರಿಸಿದ್ದಾಯಿತು.

"ಏನೂ ಇಲ್ಲವೋ? ನೋಡಿ ಜೀರ್ಣಶಕ್ತಿಯೇ ಇಲ್ಲವಲ್ಲ, ಮಲಬದ್ಧತೆ ಇದೆಯಲ್ಲ."

"ವಾಹವಾ, ಮಲಬದ್ಧತೆ ಇಲ್ಲದಿರುವ ಭಾಗ್ಯಶಾಲಿ ಯಾರು ಡಾಕ್ಟರೇ ಈ ಊರಿನಲ್ಲಿ? ಅದಿರಲಿ, ಯುರೋಪಿನ ಯುದ್ಧದ ಸುದ್ದಿ ಏನಾಯಿತು ಹೇಳಿ."

ಡಾಕ್ಟರರಿಗೆ ನನ್ನ ಆರೋಗ್ಯದ ವಿಚಾರದಲ್ಲಿ ನನಗಿಂತ ಹೆಚ್ಚು ಆಸಕ್ತಿ ನೋಡಿ. ಈ ಜಗತ್ತಿನಿಂದ ನನ್ನನ್ನು ಬೇಗ ಕಳಿಸಲು ಅವರು ಸಿದ್ಧರಿರಲಿಲ್ಲವೆಂತ ಕಾಣುತ್ತೆ. ಅದಕ್ಕಾಗಿಯೇ ಅವರು ಈ ರೀತಿ ಹೇಳಿದರು. "ಯುರೋಪಿನ ಯುದ್ಧಕ್ಕೆ ಬೆಂಕಿ ಬೀಳಲಿ, ನಿಮ್ಮ ವಿಚಾರ ಮೊದಲು ನೋಡಿ. ಮಲಬದ್ಧತೆಯು ಸಾಮಾನ್ಯವಾದ ರೋಗವೆಂದೆಣಿಸಬೇಡಿ. ಇದು ಸರ್ವರೋಗಗಳ ಮೂಲ." ಸರಿ ಒಂದು ತಾಸು ಇದರ ಮೇಲೆ ಭಾಷಣವಾಯಿತು. ನೈಸರ್ಗಚಿಕಿತ್ಸೆಯೇ ಸರ್ವೋತ್ತಮವೆಂದು ಹೇಳಿದ್ದಾಯಿತು, ನನ್ನ ಊಟ ಉಪಚಾರ, ಉಡಿಗೆತೊಡಿಗೆ ಇವೆಲ್ಲ ಪ್ರಾಕೃತಿಕವಾಗಬೇಕೆಂಬ ಉಪದೇಶವೂ ಆಯಿತು. ವಿಟಮಿನ್‌ಗಳಿರುವ ಆಹಾರವನ್ನೇ ತೆಗೆದುಕೊಳ್ಳಬೇಕು, ಪ್ರಾತಃಕಾಲ ಸಂಚಾರಕ್ಕೆ ಹೋಗಬೇಕು. ಶೀರ್ಷಾಸನಗಳನ್ನೂ ಅಭ್ಯಾಸಮಾಡಬೇಕು. ಇವೆಲ್ಲ ಉಪದೇಶವಾಯಿತು. ಮೂರನೇ ದಿನವೇ ಪ್ರಕೃತಿ ಚಿಕಿತ್ಸೆಯ ವಿಷಯದಲ್ಲಿ ಒಂದೆರಡು ಪುಸ್ತಕಗಳನ್ನು ಕೊಟ್ಟರು ಪಥ್ಯಾಪಥ್ಯಗಳನ್ನು ಹೇಳಿ ಬಹಳ ಕಟ್ಟುನಿಟ್ಟಾಗಿರುವಂತೆ ಸೂಚನೆಯೂ ಆಯಿತು!

ಮೊದಲಂತೂ ನನಗೆ ಡಾಕ್ಟರರ ಮಾತಿನಲ್ಲಿ ಏನೂ ವಿಶ್ವಾಸವೇ ಇರಲಿಲ್ಲ. ಆದರೆ ಪುಸ್ತಕಗಳನ್ನೋದಿ ಚಿಂತೆಯಾಗಹತ್ತಿತು. ನಿಜವಾಗಿಯೂ ಏನೋ ಭಯಂಕರ ರೋಗ ಇರಬಹುದೆಂದೂ, ಮರಣದ ಹಾದಿಯನ್ನೇ ಕಾಯುತ್ತಿರುವುದೆಂದೂ ಶಂಕಿಸತೊಡಗಿದೆನು. ಅತ್ಯಂತ ಆನಂದದಿಂದಿದ್ದ ನನಗೆ ಈ ಡಾಕ್ಟರ ಸ್ನೇಹದಿಂದ ದೊಡ್ಡದೊಂದು ಚಿಂತೆಯೇ ಹತ್ತಿತು. ನನ್ನ ಪತ್ನಿಯಂತೂ ಬಹಳ ಕಂಗೆಟ್ಟಳು. ಪ್ರಾಕೃತಿಕ ಆಹಾರವನ್ನು ಒದಗಿಸುವ ಭರದಲ್ಲಿ ಆಕೆಯ ಪಾಕಶಾಸ್ತ್ರದ ಅನುಭವವು ಮಾಯವಾಯಿತು ಬೀದಿಯಲ್ಲಿ ಅತ್ತಿತ್ತ ನೋಡದೆ ಹೋಗುತ್ತಿರಬೇಕಾಯಿತು. ಘಮಘಮಿಸುವ ತುಪ್ಪದ ವಾಸನೆ ಬಂತೆಂದರೆ, ಬಾಯಿಯಲ್ಲಿ ನೀರೂರುತ್ತಿತ್ತು. ಆದರೆ ಹೋಟೇಲಿಗೆ ಹೋಗುವ ಮೊದಲು ಎನ್ನು ಪ್ಲೇಟು ಖಾಲಿಮಾಡುತ್ತಿದ್ದೆನೋ ಏನೋ-ಸಾಹಸವಿಲ್ಲ.

ಮೈದಾನದಲ್ಲಿ ಸಂಚಾರಕ್ಕೆ ಹೊರಟೆ. ನನ್ನಂತೆಯೇ ಅನೇಕರು ಬರುತ್ತಿದ್ದುದ

ಸ್ಥಾಪನೆ: **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ ಬೋರ್ಡು. ಪೇಪರುಗಳ ಬ್ಯಾಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವುದು.

CROWN RUBBER STAMP CO.,
Balmat Road, MANGALORE.

Included by the Mysore Govt. Stores, Purchase Committee in the list of approved firms

ಕೇವಲ ಧರ್ಮಾರ್ಥ!

ಈ ಜಾಹೀರಾತಿನ ಕೂಪನನ್ನು ತರುವವರಿಗೆ ಅವರ ಫೋಟೋವನ್ನು ಧರ್ಮಾರ್ಥವಾಗಿ ತೆಗೆದುಕೊಡಲಾಗುವುದು.

ತ್ವರೆ ಮಾಡಿರಿ! ಬೊಂಬಾಯಿ ಪಟ್ಟಣಿಗರೆ ತ್ವರೆ ಮಾಡಿರಿ!!

● ಈ ನಮ್ಮ ಫೋಟೋವನ್ನು ಎನ್‌ಲಾರ್ಜ್‌ಮೆಂಟಿಗೆ ಬರೇ ರೂ. 1/. ಮಾತ್ರ. (ಸೈಜ್ 6"×8").

ಹೊರಗಿನವರು ಈ ಕೂಪನಿನೊಂದಿಗೆ ತಮ್ಮ ಫೋಟೋಗಳುಕಳುಹಿಸಿದರೆ ಅವನ್ನು 6'×8' ಸೈಜಿನಲ್ಲಿ ರೂ. 2-8-0ಕ್ಕೆ ಎನ್‌ಲಾರ್ಜಮಾಡಿಕೊಡಲಾಗುವುದು. 16×'20'ರ ದೊಡ್ಡ ಸೈಜಿಗೆ ರೂ. 5ಮಾತ್ರ. ನಮ್ಮ ಆಫೀಸು ಸಮಯ ಬೆಳಿಗ್ಗೆ 9ರಿಂದ ಸಂಜೆ 7, ರವಿವಾರ ಬೆಳಿಗ್ಗೆ 9ರಿಂದ ಸಂಜೆ 1 ಗಂಟೆ ತನಕ

ಕೆ. ಎಚ್. ಪಠಕ್

276, ಸೂರ್ಯಮಹಾಲ್	ರೋಯಲ್ ಆರ್ಟ್ಸ್ ಸ್ಟುಡಿಯೋ,
ಗಿರ್ಗಾಮ್ ರೋಡು, ಬೊಂಬಾಯಿ 14	183 ಹೋರ್ನ್ಬಿ ರೋಡು, ಬೊಂಬಾಯಿ 14

Established] THE [1906

UNITED INDIA

LIFE ASSURANCE CO, LTD.

HEAD OFFICE—MADRAS.

Trustee:—The Official Trustee to the Government of Madras.

Policies in force exceed **SIX** Crores.
Annual income exceeds – Rs. **30** lakhs.
Total assets exceeds – Rs. **110** lakhs.
Total claims paid exceed Rs. **40** lakhs.

The oldest & largest life assurance company of South India accepted by the Government as satisfactory for the purpose of exemption from the operation of the Provident Fund Rules to Teachers in aided Schools & for the purpose of utilisation of P. F. Contributions for payment of premiums on the lives of Government Local Board & Municipal servants.

For further particulars please apply to:—

THE BRANCH MANAGER,

THE UNITED LIFE ASSURANCE COMPANY, LTD.,
FELIX PAI BAZAR, MANGALORE, S. K.

K. R. Hebbar, B.A., ORGANISER, UDIPI, S. K. *OR* **K. Keshava Shenoy**, M.A., ORGANISER, Pentlaunpet, MANGALORE.

ನ್ನು ನೋಡಿದೆ. ಆದರೆ ಆರೋಗ್ಯಸಾಧಾರಣೆಯ ಮಾರ್ಗವು ಅವರೆಲ್ಲರಲ್ಲಿಯೂ ಬೇರೆಯಾಗಿತ್ತು. ಯಾರೋ ಒಬ್ಬರು ಒಂದು "ಫುಟ್‌ರೂಲಿ"ನಿಂದ ಅಳೆದು, ನಂತರ ಹೆಜ್ಜೆ ಇಡುತ್ತಾ ಹೋಗುತ್ತಿದ್ದರು! ಆ ರೀತಿ ಇದ್ದಿತಂತೆ ಒಂದು ಮಾಸಪತ್ರಿಕೆಯಲ್ಲಿ! ದಂಡೆಹೊಡೆಯುವವರು ಕೆಲವರು, ಆಸನಗಳನ್ನು ಹಾಕುವವರು ಕೆಲವರು. ಒಬ್ಬ ಮಹಾಶಯರು ಬಹಳ ಮುಂದೆ ಬಂದಿದ್ದ ತಮ್ಮ ಹೊಟ್ಟೆಯನ್ನು ಕರಗಿಸಲು ಬಹಳ ವೇಗವಾಗಿ ಕುಳಿತು ಏಳುವರು. "ಎಲ್ಲಿಗಾದರೂ ಹೊರಡಬೇಕೂ ಅಂದ್ರೆ ಈ ಹಾಳು ಹೊಟ್ಟೆಯೇ ಮುಂದೆ ಬರುವುದಿಲ್ಲ. ರೈಲು, ಟ್ರಾಂನಲ್ಲಿ ಹೋಗೋಣ ಎಂದರೆ ಬಾಗಿಲನ್ನು ತಡೆದು ನನ್ನನ್ನು ಮುಂದಕ್ಕೆ ಬಿಡುವುದಿಲ್ಲ ಈ ಹಾಳು ಹೊಟ್ಟೆ. ಕೋಟು ಶರ್ಟು ತೊಟ್ಟುಕೊಂಡು ಎಷ್ಟು ಗುಂಡಿಹಾಕಿದರೂ ಇದು ಒಳಗೆ ಇಣಿಕಿ ನೋಡುವುದಿಲ್ಲ" ಎಂದು ಪಾಪ ಆ ಹೊಟ್ಟೆಗೆ ಶಾಪಹಾಕುತ್ತಿದ್ದರು.

ಈ ರೀತಿ ಅನೇಕ ದಿನಗಳಾದವು. ಸ್ವಾಸ್ಥ್ಯದಲ್ಲಿ ಯಾವ ಬದಲಾವಣೆಯೂ ಆಗಲೇ ಇಲ್ಲ. ರೋಗದ ಚಿಂತೆಯು ದಿನದಿನಕ್ಕೆ ಹೆಚ್ಚಿ ನಾನು ಕೃಶನಾಗುತ್ತ ಬಂದೆನು. ಯಾರಾದರೂ ಕಂಡರೆ "ಅಯ್ಯೋ ಇದೇನು ಇಷ್ಟು ಇಳಿದುಹೋಗಿರುವಿರಲ್ಲ" ಎಂದರೆ "ಏನೂ ಇಲ್ಲ" ಎನ್ನುವುದು ತೂಕ ಮಾಡಿಕೊಳ್ಳುವುದು. 4 ಪೌಂಡು ಕಮ್ಮಿ! ಸರಿ, ಚಿಂತೆ ಮತ್ತೆ ಹೆಚ್ಚಿತೂ ಅನ್ನಿ. ಈ ತಪಸ್ಸನ್ನಾಚರಿಸಿದ ದಿನದಿಂದ ಮನಸ್ಸಿಗೆ ಬೇಕಾದುದನ್ನೇನೂ ತಿನ್ನಲಿಲ್ಲ. ಆರೋಗ್ಯ ಸಂಬಂಧದ ಎಲ್ಲ ಪುಸ್ತಕಗಳೂ ಆದವು. ಏನೂ ಗುಣವಾಗಲಿಲ್ಲ. ನನ್ನ ಪತ್ನಿಯು ಉತ್ತಮ ಭೋಜನವನ್ನು ಸಿದ್ಧಮಾಡಿದರೂ ನಾನು ಮುಟ್ಟುತ್ತಲೇ ಇರಲಿಲ್ಲ ಬದಲಾಗಿ "ಏನು ನನ್ನನ್ನು ಕೊಲ್ಲಬೇಕೆಂದಿರುವೆಯಾ? ನೋಡು ರೊಟ್ಟಿಯಲ್ಲಿ "ಎ" ಮತ್ತು "ಬಿ" ಎರಡು ವಿಟಮಿನ್‌ಗಳೂ ಚಟ್ನಿ, ಸೊಪ್ಪನ್ನೂ ಇಷ್ಟು ಬೇಯಿಸಿರುವೆ- ವಿಟಮಿನ್ನಿನ ಹೆಸರೇ ಇಲ್ಲ ಅದರಲ್ಲಿ" ಈ ರೀತಿ ಬೈಗಳುಗಳ ಬೇರೆ.

ಒಂದು ದಿನ ಈ ದುರವಸ್ಥೆಯಲ್ಲಿ ಒಬ್ಬ ಸಾಹಿತ್ಯಕ ಮಿತ್ರನಲ್ಲಿ ಭೋಜನಕ್ಕೆ ಹೋಗಬೇಕಾಯಿತು. ಎಷ್ಟು ಬೇಡವೆಂದರೂ ಅವನು ಒಪ್ಪದಿರಲು ಪಥ್ಯವನ್ನು ನಡೆಯಿಸುವೆನೆಂದು ಹೇಳಿ ಕರೆದೊಯ್ದನು. ನಿಮಂತ್ರಿತ ವ್ಯಕ್ತಿಗಳನ್ನು ಸ್ವಾಗತಿಸುತ್ತಿದ್ದನು. ಗುರುತಿನವರು ಅನೇಕರಿದ್ದರು. ಈಶ್ವರನ ಕೃಪೆ, ಯಾರೂ ನನ್ನ ಆರೋಗ್ಯವನ್ನು ವಿಚಾರಿಸಲಿಲ್ಲ ಅನ್ನಿ. ನಾನೂ ಸಹ ನನ್ನ ನಿರ್ಬಲತೆಯನ್ನು ಪ್ರಕಟಮಾಡದೆ, ಮೃತ್ಯುವಿನಿಂದ ದೂರವಾಗಲು ಯಾಲ್ಲಿ ಹೋಗಬೇಕೆಂದು ಯಾರ ಸಲಹೆಯನ್ನೂ ಕೇಳಲಿಲ್ಲ. ನನಗೆ ಏನೇನೂ ರೋಗವಿಲ್ಲೆಂದೂ, ಅಂದಿನ ಪ್ರಸನ್ನತೆಯು ಎಂದೂ ಇರಲಿಲ್ಲವೆಂದೂ ತೋರುತ್ತಿತ್ತು. ಸ್ವಲ್ಪ ಹೊತ್ತಾದ ಮೇಲೆ, ಅವರವರ ರುಚಿಗನುಸಾರವಾಗಿ ಪೇಯಗಳನ್ನು ತರಿಸಿದರು. ನನ್ನನ್ನೂ "ನಿಮಗೇನು ಬೇಕು" ಎನಲು ನಾನು ಏನನ್ನೂ ಕುಡಿಯುವುದಿಲ್ಲವೆಂದೆ.

"ಹಾಗೆಂದರೇನ್ರಿ, ಸ್ವಲ್ಪ ವಿಸ್ಕಿ ತಗೆದುಕೊಳ್ಳಿ. ಅದು ಸರ್ವರೋಗಹಾರಿ, 1-2 ಗ್ಲಾಸನ್ನು ಕುಡಿದು ನೋಡಿ" ಎಂದರು.

ನಾನೂ ಯೋಚಿಸಿ ನೋಡಿದೆ. ಅವರೆಲ್ಲರ ಮಾತನ್ನು ನಿರಾಕರಿಸಲಾರದೆ 5-6 ಗ್ಲಾಸ್ ಮುಗಿಸಿಬಿಟ್ಟೆ. ಅದರ ರುಚಿಯು ಇನ್ನಷ್ಟು ಕುಡಿಯೋಣವೆನಿಸುತ್ತಿತ್ತು. ಆದರೆ ಕೊಡುವವರಾರು?

ಇದಾದ ನಂತರ ಸಮ್ಮೇಳನ, ಚರ್ಚೆಗಳು, ಲೇಖನಗಳ ಪಠನ ಇತ್ಯಾದಿಗಳು ನಡೆದುವು. ನಾನು ಅಮಲಿನಲ್ಲಿ ಏನನ್ನೋ ಹೇಳುತ್ತಾ ಹೋದೆ. ಎಲ್ಲರೂ ತಲೆದೂಗುವವರೇ—ಹಾಸ್ಯದಿಂದಲೋ ಏನೋ! ✱

ನಂತರ ಊಟ. ಮೊದಲನೆ ಪಂಕ್ತಿಯಲ್ಲಿ ಮೊದಲನೆ ಸೀಟ್ ನನಗೆ. ಬಡಿಸಿದ್ದನ್ನು ನೋಡಿ-ಮಾಂಸ-ಹೆದರಿದೆನು, ಇದನ್ನು ತಿಂದು ಬೇಗ ಸಾಯಬೇಕೆಂದು ನಿಮ್ಮ ಆಸೆಯೆ? ನಾನು ಈ ಅಪ್ರಾಕೃತಿಕ ಆಹಾರವನ್ನು ವಿಟಮಿನ್ ಇಲ್ಲದ ಈ ಆಹಾರವನ್ನು ತಾನು ಮುಟ್ಟುವುದಿಲ್ಲವೆಂದೆ. ಏನು ಬೇಕೆಂದು ಹೇಳಲು ಸೊಪ್ಪು, ಬೆಲ್ಲ, ರೊಟ್ಟಿ ಇತ್ಯಾದಿಗಳೇನೋ ಬೇಕು. ಅದರ ವ್ಯವಸ್ಥೆ ಇಲ್ಲದಿದ್ದರೆ ಹೋಗಲಿ ಬಿಡಿ. ಮಿಠಾಯಿ, ಹಣ್ಣು ತಿಂದು ಏಳುತ್ತೇನೆ ಎಂದೆ. ಆಗ ಮಿತ್ರರು "ನೀವೇನು ಔತಣಕ್ಕೆ ಬಂದಿರುವಿರೋ ಹುಲ್ಲು ಸೊಪ್ಪು ತಿನ್ನಲಿಕ್ಕೆ ಬಂದಿರುವಿರೋ. ಸೊಪ್ಪು ಬೇಕಾದರೆ ಮನೆಯಲ್ಲಿ ತಿನ್ನಿ. ಇಲ್ಲ ಬಡಿಸಿದ್ದನ್ನೂ ಮೊದಲು ಮುಗಿಸಿ" ಎಂದು ಬಲವಂತ ಮಾಡಿದರು. ಸರಿ ಎಲ್ಲವನ್ನೂ ಮುಗಿಸುತ್ತ ಒಂದೆ ಆದದ್ದಾಗಲಿ ನೋಡೋಣವೆಂದು.

○○ ○○ ○○

ಮೋಟಾರಿನಲ್ಲಿ ನನ್ನನ್ನೂ ಮನೆಗೆ ತಂದರು. ಹಾಸಿಗೆಯಲ್ಲಿ ಎಷ್ಟು ಹೊರಳಿದರೂ ನಿದ್ರೆಯಿಲ್ಲ. ಹೊಟ್ಟೆ ಮುರಿ, ಸೆರಡಿಕೆ. ಇದನ್ನು ನೋಡಿ ನನ್ನ ಶ್ರೀಮತಿಗೆ ಗಾಬರಿಯಾಯಿತು. ಉಪಚಾರ ಮಾಡಿ ದಣಿದಳು. ಕೊನೆಗೆ "ಆರೋಗ್ಯಸಾಧನೆಯ" ಸಲಹೆಯಂತೆ ಹೊಟ್ಟೆ ಮೇಲೆ ಮಣ್ಣಿನ ಪಟ್ಟಿ ಹಾಕಿಕೊಂಡೆ. ಸ್ವಲ್ಪ ನಿದ್ದೆ ಬಂತು. ಬದುಕಿದೆಯಾ ಬಡ ಜೀವವೇ ಅಂದೆ. ಅಂದಿನಿಂದ ಯಾರ ಮನೆಗೂ ಊಟಕ್ಕೆ ಹೋಗುವುದನ್ನು ಬಿಟ್ಟೆ. ಊಟಕ್ಕೆ ಹೇಳುವವರಿಗೆ ತಾವು ಆ ರೀತಿ ತಿನ್ನಿಸುವುದರಿಂದ ಎಷ್ಟು ಜನರ ಪ್ರಾಣವು ಸಂಕಟದಲ್ಲಿ ಸಿಕ್ಕಿ ಬೀಳುವುದೆಂದು ಗೊತ್ತು?

Degrees: Books: Medicines.

Free H. L. M. S, H. M. B, H. M. D. etc Free Homeo-Ayur-Unani-Naturo degres. by post also—Practitioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10. Enclose 2 annas stamps:—

Principal, Indian Homeopathic Institute and Society (Govt Regd.)
P O. MAHUVA, (Kathiawar Dt. India)

WANTED: 80 candidates of both sexes who after expert training as film artistes and technicians are prepared to work for the College Film Company for two years on decent salary Free hostel seat and other benefits. Illustrated Art Prospectus on 5 annas posatge Prabhat Morietone College, Bombay 11

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನಕಾರ್ಯಾಲಯ—ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನುಹೊಂದಿಕೊಂಡಿರುವವರಿಗೆ ದುಡ್ಡಿಗಾಗಿ ಪರಾವಲಂಬಿಗಳಾಗದೆ ತಕ್ಕಮ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲುಪ್ತ ಅವಧಿಗಳ ಚಿಕ್ಕಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ **ಜೀವವಿಮೆ ಮಾಡುವುದೇ.**

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯಂಟಲ್"ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ ಆರ್ಥಿಕ ಸ್ವಾತಂತ್ರ್ಯದ ತಳಹದಿ ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?
ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲ್ಯಾಫ್ ಆಫೀಸು,
ಮೈನ್‌ರೋಡ್, ಮಡಿಕೇರಿ, (ಕೊಡಗು)

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲ್ಯಾಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ORENTAL Govt. Security Life Assurance Co., Ltd.

ಸ್ವಾಮಿಯ ಆಜ್ಞೆ

(ಪುಟ ೫ರಿಂದ)

'ಪಾಪಿ ಇದ್ದಲ್ಲಿ ಮೊಣಕಾಲುದ್ದ ನೀರು' ಎಂಬಂತೆ ಸರಸ್ವತಿಗೆ ಮೇಲೆ ಹೇಳಿದ ಉದ್ಯೋಗದಿಂದ ತನ್ನೆರಡು ಮಕ್ಕಳನ್ನು ಸಂರಕ್ಷಿಸಿಕೊಂಡು ಬರುವುದು ಕಷ್ಟವಾಯಿತು. ಕಾರಣ ಆಕೆಯು ಮಾಡುವ ಕಸೂತಿ ಕೆಲಸಕ್ಕೆ ನ್ಯಾಯವಾಗಿ ದಿನಕ್ಕೆ ಒಂದೂವರೆ ರೂಪಾಯಿಯಿಂದ ಎರಡು ರೂಪಾಯಿ ತನಕ ಸಿಗಬೇಕಿತ್ತು. ಅಷ್ಟು ವರಮಾನದಿಂದ ತಾಯಿ ಮಕ್ಕಳ ಜೀವನ ಹೇಗೂ ಸಾಗಬಹುದು. ಆದರೇನು ಮಾಡಲಿ? ಆ ಪಾಪಿ, ಕಾರಖಾನೆಯ ಮಾಲಿಕರು ಆಕೆಗಾಗಿ ತನ್ನವರ ಕೊಡುತ್ತಿದ್ದ ಮಜೂರಿಯಲ್ಲಿ ಎರಡಂಶ ತಾನಿಟ್ಟುಕೊಂಡು ಒಂದಂಶ ಆಕೆಗೆ ಕೊಡುತ್ತಿದ್ದ. ಹಾಗಾಗಿ ಬರೇ ದಿನಕ್ಕೆ ೮–10 ಆಣೆಗಳಿಂದ ಅವರ ಜೀವನ ಸಾಗಬೇಕಾಯಿತು. ತಿಂಗಳಿಗೆ ಇತರರಿಗೆ ಎರಡೇ ಏಕಾದಶಿಗಳೆಂದರೆ ಇವರ ಪಾಲಿಗೆ ಮಾತ್ರ ೮-10 ಏಕಾದಶಿಗಳಾಗುತ್ತಿದ್ದುವು

೦ ೦ ೦

"ಹೆಂಗಸೊಬ್ಬಳು ಮಕ್ಕಳುಗಳೆರಡನ್ನೂ ಕಟ್ಟಿಕೊಂಡು ಆತ್ಮಹತ್ಯೆ ಮಾಡಿಕೊಂಡಳು......." 'ವಿಶ್ವಭಾರತಿ'....... ಒಂದಾಣೆ.......ಬಿಸಿಬಿಸಿ ಸುದ್ದಿ...... ಒಂದಾಣೆ......."ಸ್ವಾಮಿಯ ಆಜ್ಞೆ ಪಾಲಿಸುವುದಕ್ಕಾಗಿ ವಿಷತಿಂದು ಸತ್ತಳು.... ವಿಶ್ವಭಾರತಿ ಬೇಕೇ,......ಒಂದಾಣೆ" ಎಂದು ಕೂಗಿಕೊಳ್ಳುತ್ತಾ ಪತ್ರಿಕೆ ಮಾರುವ ಹುಡುಗನೊಬ್ಬ ನನ್ನೆದುರು ಬಂದ. ಪತ್ರಿಕೆಯನ್ನು ಕೊಂಡುಕೊಳ್ಳುವುದಕ್ಕೆ ತಾನು ಮೇಲು ತಾನು ಮೇಲೆಂದು ಜನರು ಮುಂದೆ ಮುಂದೆ ಬರುತ್ತಿದ್ದರು. ನಾನೂ ಒಂದಾಣೆ ಕೊಟ್ಟು ಒಂದು ಪತ್ರಿಕೆ ಕೊಂಡುಕೊಂಡೆ. ಅದರಲ್ಲಿ ಮೊದಲನೇಯ ಪುಟದಲ್ಲಿ ದಪ್ಪದಪ್ಪ ಅಕ್ಷರಗಳಿಂದ ಹೀಗೆ ಬರೆದಿತ್ತು–"ಬೊಂಬಾಯಿಯ... ಗಲ್ಲಿಯಲ್ಲಿ ಸರಸ್ವತಿ ಎಂಬ 22 ವರ್ಷ ವಯಸ್ಸಿನ ಹೆಂಗಸೊಬ್ಬಳು ಪತಿಯ ಕೊನೆಯ ಮಾತನ್ನು ಪಾಲಿಸುವುದಕ್ಕಾಗಿ ನಿನ್ನೆ ರಾತ್ರಿ ತನ್ನ ಮಕ್ಕಳಿಗೆ ವಿಷಕೊಟ್ಟು ತಾನೂ ವಿಷತಿಂದು ಆತ್ಮಹತ್ಯೆ ಮಾಡಿಕೊಂಡಳು. ಪೋಲಿಸರು ಹೋಗಿ ವಿಚಾರಿಸಲಾಗಿ ಈ ಕೆಳಗಿನ ಸಾರಾಂಶವುಳ್ಳ ಪತ್ರವೊಂದು ಆಕೆಯು ಕೈಯಲ್ಲಿತ್ತು. ಆ ಪತ್ರದ ಸಾರಾಂಶ ಇದು—

"ನಾನೊಬ್ಬ ಅನಾಥೆ, ನನ್ನ ಪತಿಗತಿಸಿ ಒಂದು ವರುಷ ಕಳೆಯಿತು. ನಾನು ಇಲ್ಲಿಯ ಕಾರಖಾನೆಯಲ್ಲಿ ನೆಯ್ದ ಬಟ್ಟೆಗಳಿಗೆ ಕಸೂತಿ ಕೆಲ್ಸಮಾಡಿಕೊಂಡು ಜೀವಿಸುತ್ತಿದ್ದೆ. ಅದರಿಂದ ಸಿಕ್ಕಿದ ಹಣ ನನ್ನ ಮತ್ತು ಎರಡು ಮಕ್ಕಳ ಜೀವನಕ್ಕೆ ಸಾಕಾಗದುದರಿಂದಲೂ ಜೀವನಕ್ಕೆ ಬೇರೆ ಉಪಾಯವಿಲ್ಲದುದರಿಂದಲೂ ಈ ದಿನ ನನ್ನ ಎರಡು ಮಕ್ಕಳಿಗೆ ವಿಷಕೊಟ್ಟು ನಾನೂ ವಿಷತಿಂದು ಸತ್ತಿರುವುದಾಗಿದೆ. ನನಗೆ ಹೀಗೆ ಮಾಡದೆ ನಿರ್ವಾಹವೇ ಇರಲಿಲ್ಲ. ಯಾಕೆಂದರೆ ನನ್ನ ಪತಿಯ ಆಜ್ಞೆಯೇ ಹೀಗಿದೆ. ಅಂದ ಅವರು ಸಾಯುವಾಗ 'ನೀನು ಬೇಡಿಯಾದರೂ ಜೀವಿಸು, ಆದರೆ ದೇಹವನ್ನು-ಮಾರಿ ಜೀವಿಸಬೇಡ" ಎಂದಿದ್ದಾರೆ. ಭಿಕ್ಷೆಬೇಡುವುದೆಂದರೆ ದೃಢಕಾಯಳಾದ ನನಗಾರು ಕೊಡುವರು? ಆದ್ದರಿಂದ ನನ್ನ "ಸ್ವಾಮಿಯ ಆಜ್ಞೆ"ಯನ್ನು ಪಾಲಿಸುವುದಕ್ಕಾಗಿ ಸಂತೋಷದಿಂದ ಸಾಯುತ್ತೇನೆ....

ನಿರ್ಭಾಗ್ಯ ಸರಸ್ವತಿ.

ನಾನು ಪತ್ರಿಕೆಯನ್ನು ಓದಿಕೊಂಡವ 'ಮೃತರ ಆತ್ಮಕ್ಕೆ ಶಾಂತಿಯಿರಲಿ' ಸಾಧ್ವಿಮಣಿಯೇ! ಪರಲೋಕದಲ್ಲಿ ನಿನ್ನ ಪತಿಯೊಡನೆ ಸುಖವಾಗಿರು. ಎಲೇ ಭಾರತ ರಮಣಿಯೇ, ನಿನ್ನಂಥಹ ಸಾಧ್ವಿಮಣಿಗಳಿಂದಲೇ ನಮ್ಮ ಭಾರತವು ಉದ್ಧಾರವಾಗಬೇಕು. ಜೈ ಭಾರತ ಮಾತಾಕೀ ಜೈ ಎಂದುಕೊಂಡು ಅಲ್ಲಿಯೇ ಸಮೀಪವಿದ್ದ "ತಾಜಮಹಲ್ಲಿ"ಗೆ ನುಗ್ಗಿದೆ

ನವ ದಂಪತಿಗಳು.

●

ವಧು—ಶ್ರೀ. ಸುನಂದಾಬಾಯಿ (ಶ್ರೀ. ಮಾಂಗಾಳ ಉಪೇಂದ್ರ ಶ್ರೀನಿವಾಸ ನಾಯ್ಕರ ಸಹೋದರಿ.)

ವರ—ಶ್ರೀ. ನಾರಾಯಣ ಬಾಳಿಗರು (ಶ್ರೀ. ಬಿ. ಅಚ್ಯುತ ಬಾಳಿಗ, ವಕೀಲ್, ಪುತ್ತೂರು ಇವರ ಪುತ್ರ)

(ಇವರ ವಿವಾಹ ಸಮಾರಂಭವು ತಾ. 22-4-39ರಲ್ಲಿ ಜರಗಿಸಲ್ಪಟ್ಟಿತು. ವಿವರವನ್ನು ತಾ.27-4-39ರ ಸಂಚಿಕೆಯಲ್ಲಿ ಕೊಡಲಾಗಿದೆ.)

ದಕ್ಷಿಣ ಕನ್ನಡ

ಮೊಳಹಳ್ಳಿ—ಕುಂದಾಪುರ ತಾಲೂಕಿನ ಮೊಳಹಳ್ಳಿ ಮತ್ತು ಆಸುಪಾಸಿನ ನಾಲ್ಕಾರು ಗ್ರಾಮಗಳಲ್ಲಿ ನರಭಕ್ಷಕನಾದ ಹುಲಿಯೊಂದು ಬಹಳ ತೊಂದರೆ ಕೊಡುತ್ತಿತ್ತು. ಸುಮಾರು 1½ ತಿಂಗಳಿಂದ 35 ಮಂದಿಯನ್ನು ಗಾಯಗೊಳಿಸಿತ್ತು. ಆ ಪೈಕಿ 2 ಜನರು ತೀರಿಕೊಂಡಿದ್ದರು. ತಾ 23-4-39ರಿಂದ 3 ದಿವಸಗಳ ವರೆಗೆ, ಮಾನ್ಯ ಜಿಲ್ಲಾ ಕಲೆಕ್ಟರ್ ಧೊರೆಗಳವರು ನರಭಕ್ಷಕನ ಕೊಲೆಗಾಗಿ ಹಲವು ನಿಪುಣರೊಡನೆ ಪ್ರಯತ್ನಿಸಿದರೂ ನಿಷ್ಫಲವಾಯಿತು. ತಾ. 3-5-39ರಲ್ಲಿ ರಾತ್ರಿ ಸುಮಾರು 10½ ಗಂಟೆ ಸಮಯ ಹುಲಿಯು ಬಂದು ಮನೆ ನುಗ್ಗಿದಾಗ ಜನರು ಎದ್ದು ಗಲಭೆಯೆಬ್ಬಿಸಿದರು. ಹುಲಿಯು ಓಡಿಹೋಯಿತು. ಆಗ ಶ್ರೀ. ಕೊಕ್ಕಾಡಿ ವೆಂಕಪ್ಪ ಶೆಟ್ಟಿ ಅಲ್ಲಿಗೆ ಬಂದು ಸರ್ಚ್ ಲೈಟಿನಲ್ಲಿ ಇದಿರಿದಿರು ನಿಂತು ಹುಲಿಯನ್ನು ಹೊಡೆದುಕೊಂದರು. ಜನರ ಕಷ್ಟವು ಸದ್ಯ ಮುಕ್ತಾಯವಾಯಿತು.

ಬ್ರಹ್ಮಾವರ—ಸುಮಾರು 50 ಹರಿಜನರೂ ಇತರರೂ ಕೂಡಿ ಸ್ಥಳೀಯ ಕಾಂಗ್ರೆಸ್ ಕಮಿಟಿಯವರು ಹರಿಜನರ ಏಳಿಗೆಗೆ ಆತಂಕಿಸುತ್ತಿದ್ದಾರೆ ಎಂಬುದಕ್ಕಾಗಿ ಕರಿಪತಾಕೆಯ ಮೆರವಣಿಗೆ ಮಾಡಿದರೆಂದೂ ಸಭೆಕೂಡಿ ಅವರ ವರ್ತನೆಯನ್ನು ಖಂಡಿಸುವ ಮೊದಲಾದ ಠರಾವು ಮಾಡಿದರೆಂದೂ ಈಗಿನ ಕಮಿಟಿಯನ್ನು ರದ್ದು ಮಾಡುವಂತೆ ಜಿಲ್ಲಾ ಕಮಿಟಿಗೆ ಬರೆದುಕೊಂಡಿರುವರೆಂದೂ ಹರಿಜನಸೇವಕರಾದ ಶ್ರೀ. ಬಿ. ಅಂತಯ್ಯ ಶೆಟ್ಟರು ದೀರ್ಘ ಪತ್ರಿಕೆಯೊಂದನ್ನು ಕಳುಹಿಸಿದ್ದಾರೆ.

ಬ್ರಹ್ಮಾವರ ಹರಿಜನ ಶಿಕ್ಷಣ್ಯ ಸಹಾಯಕ ಸಂಘ— ಇದರ ತಾ. 1-3-38ರಿಂದ 28-2-39ರ ವರೆಗಿನ ಪ್ರಥಮ ವಾರ್ಷಿಕ ವರದಿ ನಮ್ಮ ಕೈಸೇರಿದೆ. ಈ ಸಂಘವು ಹರಿಜನ ಶಿಕ್ಷಣ ಕಾರ್ಯಕ್ಷೇತ್ರವನ್ನು ತಿಳಿಸುವ ಅವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಯನ್ನು ಸಾಧಿಸುತ್ತಾ ಸಾರ್ವಜನಿಕ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವರಿ ಪ್ರೋತ್ಸಾಹಿಸುತ್ತದೆ. ವಿದ್ಯಾರ್ಥಿಗಳಿಗೆ ವಸ್ತ್ರ, ಪುಸ್ತಕ, ಸ್ಲೇಟು, ಊಟ, ಸಾಬೂನ್ ಮೊದಲಾದುವನ್ನು ಕೊಡುತ್ತಿದೆ. ವರದಿಯ ವರ್ಷದಲ್ಲಿ 10 ಶಾಲೆಗಳಿಗೆ 22 ವಿದ್ಯಾರ್ಥಿಗಳನ್ನು ಸೇರಿಸಿರುತ್ತದೆ. ಈ ಸಂಘಕ್ಕೆ 1/3 ಪಾಲು ಖರ್ಚನ್ನು ಜಿಲ್ಲಾ ಹರಿಜನ ಸಂಘವು ಕೊಡುತ್ತಿದೆ. ಉಳಿದುದನ್ನು ಜನತೆಯಿಂದ ಸಹಾಯವಾಗಿ ಈ ಸಂಘವು ಪಡೆಯುತ್ತದೆ. ವರದಿಯ ವರ್ಷದಲ್ಲಿ ಧರ್ಮಸಹಾಯ ರೂ. 53-5-0; ಜಿಲ್ಲಾ ಹರಿಜನ ಸಂಘದಿಂದ ರೂ. 46-15-6; ಸಾಲ 37-3-0; ಅಜ್ಞಾತ ಮಿತ್ರ ಮಾರ್ಗದ ಪುಸ್ತಕದಿಂದ ರೂ. 12-0-0. ಜುಮ್ಲಾ ಆಯ 199-7-6. ಇದರಲ್ಲಿ ವಸ್ತ್ರ 34-14-5, ಊಟ ವಗೈರೆ 115-1-4, ಸಾಲ ಸಂದಾಯ ರೂ. 16-0-0, ಸಾಬೂನ್, ಸ್ಲೇಟ್ ಪುಸ್ತಕ ವಗೈರೆ ರೂ. 28-7-2, ಜುಮ್ಲಾ ಖರ್ಚು 194-6-11, ಶಿಲ್ಕು 5-0-7 ಮಾತ್ರ ಎಂದು ತಿಳಿದುಬರುತ್ತದೆ.

ಈ ಸಂಘದ ಸ್ಥಾಪನೆ ಏಳಿಗೆಗೆ ಕಾರಣರಾದ ಶ್ರೀ. ಬಿ. ಅಂತಯ್ಯ ಶೆಟ್ರ ಸಾಹಸವು ಸ್ತುತ್ಯವಾಗಿದೆ.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಸಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಧಾತುಪುಷ್ಟಿ ಲೇಹ ಸುವರ್ಣ, ಸಾಲಾಮಿಶ್ರಿ, ಕಲ್ಕದ ಮಿಶ್ರ

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ,ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಚಳಿಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ. 2–8–0.

ಮೇಹ ಕುಠಾರ— ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರಮಾಡುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು ಮೂತ್ರದಲ್ಲಿ ಧಾತು ಹೋಗುವುದು ಸೊಂಟನೋವು ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಅಲ್ಲದೆ ಇಪ್ಪತ್ತು ನಮೂನೆಯ ಮೇಹ ರೋಗಗಳಿಗೆ ದಿವ್ಯಔಷಧ. ಡಬ್ಬಿ 1ರ ರೂ. 2-8-0.

ಕಸ್ತೂರಿ ಮಿಶ್ರಣ ದಶಮೂಲ— ಪ್ರಸವಾನಂತರ ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ 1ರ ರೂ. 1—8—0

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:–ನವಭಾರತ ಬುಕ್ ಡಿಪ್ಪೋ, ಉಡುಪಿ.ಶ್ರೀ ಕೃಷ್ಣಫಾರ್ಮಸಿ, ಕುಂದಾಪುರ.ವಿಟ್ಠಲ ನಾರಾಯಣಶೆಣೈ,ಟ್ರೇವರ್ ಟರ್ಮಿನಸ್ ಪಂಜಗಾಂ ಮುಂಬಯಿ.

Commonwealth Assurance Co., Ltd., Poona.

ಬೋನಸ್ಸು ದರವು 20% ಹೆಚ್ಚಿದೆ

30—4—38ರ

ಮೂರನೇ ವ್ಯಾಲ್ಯುಯೇಷನ್ ಫಲಿತಾಂಶ

ಜೀವಾವಧಿ	ತ್ರೈವಾರ್ಷಿಕ	ಎಂಡೋಮೆಂಟ್
ರೂ. 54—0 0	ಬೋನಸ್ಸು ಸಾವಿರಕ್ಕೆ	ರೂ 45—0—0

ಕಾಮನ್‌ವೆಲ್ತ್

ಏಜನ್ಸಿ ಮತ್ತು ಪಾಲಿಸಿ ವಿವರಗಳಿಗೆ ಇಂದೇ ಬರೆಯಿರಿ.

ಕಾಮನ್‌ವೆಲ್ತ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ.

ಗವಾಂಕರ್ ಅಂಡ್ ಸನ್ಸ್,

ಚೀಫ್ ಏಜಂಟ್ಸ್: **ಆನಂದರಾವ್ ಸರ್ಕಲ್, ಬೆಂಗಳೂರು.**



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಕಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯವೆಂಬಂತೆ ಸಾಮಾನುಗಳು ಬೇಲುಗಟ್ಟಲೆ ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

THE

Canara Banking Corporation, Udipi, Ltd.

(Incorporated in British India.)

ESTD. 1906

THREE YEARS' CASH CERTIFICATES

bearing interest at 4% p. a. in denomnations of Rs 50/-, 100/-, 500/-, 1,000/- & 5000/- are now issued at all our Branches.

For particulars call at or write to any of our nearest Branches.

ನವಯುಗ

ಉಡುಪಿ, ಗುರುವಾರ, ತಾ. ೧೧-೫-೩೯

ರಾಜಕೋಟೆಯು ಕಲಿಸಿದ ಪಾಠ

ನ್ಯಾಯವಾದ ತೀರ್ಮಾನವನ್ನು ಪಡೆದೇ ತೀರುವೆನೆಂದು ಪಣತೊಟ್ಟು, ರಾಜಕೋಟೆಯನ್ನು ಪ್ರವೇಶಿಸಿದ ಮಹಾತ್ಮಾ ಗಾಂಧಿಯವರು ದರ್ಬಾರ್ ವೀರವಲ್ಲಭರಲ್ಲಿ ತನ್ನ ಸೋಲನ್ನೊಪ್ಪಿಕೊಂಡು ಒಮ್ಮೆಗೆ ರಾಜಕೋಟೆಯನ್ನು ಬಿಟ್ಟರು. ಬೃಂದಾವನದಲ್ಲಿ ಅವರು ಹೇಳಿರುವಂತೆ ರಾಜಕೋಟೆಯನ್ನು ಮಹಾತ್ಮರು ಕೈಬಿಟ್ಟಿಲ್ಲವೆಂಬುದೂ, ಆ ಸಮಸ್ಯೆಯೊಂದು ತೀರ್ಮಾನವನ್ನು ಹೊಂದಿಯೇ ತೀರುವದೆಂಬುದೂ ಸತ್ಯವಾದ ಮಾತು. ಆದರೆ ಮಹಾತ್ಮರ ಉಪವಾಸ ಸತ್ಯಾಗ್ರಹದ ಪರಿಣಾಮವೇನಾಯಿತು? ರಾಜಕೋಟೆಯಲ್ಲಿ ಅದು ಜಯಿಸಿತೆ? ಎಂಬ ಪ್ರಶ್ನೆಯಿದೆ. ಮಹಾತ್ಮರ ಈಗಿನ ಘೋಷಣೆಯನ್ನು ನೋಡಿದರೆ, ರಾಜಕೋಟೆಯಲ್ಲಿ ಇನ್ನೊಮ್ಮೆ ಪ್ರಜಾಪರಿಷದಿನವರ ಚಳವಳವಾರಂಭಿಸಬಹುದು, ಹೊರತು ಮಹಾತ್ಮರ ಉಪವಾಸವಾರಂಭವಾಗುವಂತಿಲ್ಲ. ಹಾಗಾದಲ್ಲಿ ಮಹಾತ್ಮರು ಉಪವಾಸವಾವುದನ್ನು ಸಂಪಾದಿಸಿತು? ಒಂದನೆಯದಾಗಿ ರಾಜಾಸಾಹೇಬರು ಮಾತುಕೊಟ್ಟು ಅಮೇಲೆ ತಪ್ಪನ್ನದು ರುಜುಗೊಳಿಸಿತು, ಎರಡನೆಯದಾಗಿ ರಾಜಕೋಟೆಯ ಪ್ರಶ್ನೆಯ ಪ್ರಾಮುಖ್ಯತೆಯನ್ನು ಹೆಚ್ಚಿಸಿತು. ಇವೆರಡು ವಿಜಯಗಳೂ ಚಳವಳದ ಪೂರ್ಣ ವಿಜಯವಾಗಲಾರವು; ಹಾಗೆಯೇ ಕೇವಲ ಸತ್ಯಾಗ್ರಹದ ಪರಿಣಾಮಗಳೆನ್ನಲೂ ಬರುವುದಿಲ್ಲ. ರಾಜಾಸಾಹೇಬರ ಮಾತಿಗೆ ಸರದಾರ್ ಪಟೇಲರು ಹೇಳಿದ ಅರ್ಥವೇ ಆಗುತ್ತದೆ ಎಂದಾದುದು ವೈಸರಾಯರ ಮಧ್ಯಸ್ಥಿಕೆಯಿಂದ; ವೈಸರಾಯರನ್ನು ಮಧ್ಯಕ್ಕೆಳೆದುದು ಸತ್ಯಾಗ್ರಹಶಕ್ತಿಯೆನ್ನುವುದಕ್ಕಿಂತಲೂ ಮಹಾತ್ಮರ ಪ್ರಾಮುಖ್ಯತೆಯೆಂದರೇನೇ ನ್ಯಾಯವಾಗಬಹುದು. ಗಾಂಧಿಯವರ ಉಪವಾಸದ ಗುರಿಯು ವೈಸರಾಯರ ಕಡೆಗಿರಲಿಲ್ಲ. ಆದರೂ ವೈಸರಾಯರು ತಾನಾಗಿ ಇದಿರುಬಂದರು. ದೇಶದ ಪರಿಸ್ಥಿತಿ, ವಿವೇಕಬುದ್ಧಿ, ಸರಕಾರಕ್ಕೊಂದು ಸತ್ಕೀರ್ತಿ ಸಂಪಾದನೆ—ಈ ಕೆಲವು ಕಾರಣಗಳಿಗಾಗಿ ವೈಸರಾಯರದರಲ್ಲಿ ಕೈಹಾಕಿದರು. ಸತ್ಯಾಗ್ರಹದ ತತ್ವಗಳ ಪ್ರಭೆಯೊಂದೇ ಬಡಿದು ಆ ಬಣ್ಣ ಬಂದುದೇನೂ ಅಲ್ಲ. ಇನ್ನು ಕಾರ್ಯದ ದೃಷ್ಟಿಯಿಂದ ನೋಡಿದರೆ 'ವಿಜಯವೇನೋ ದೊಡ್ಡದು, ದೊರೆತುದೇನೂ ಇಲ್ಲ' ಎಂಬ ಗಾದೆಯಂತೆಯೇ ಸರಿ. ಘಾಕೂರ್ ಸಾಹೇಬರು ಕೊಟ್ಟ ಮಾತು ಗಾಂಧೀ ಉಪವಾಸದ ಮೊದಲಿದ್ದ ಸ್ಥಾನದಲ್ಲಿ ಇಂದಿಗೂ ಇದೆ; ಅದರ ಅರ್ಥ ದರ್ಬಾರ್ ವೀರವಲ್ಲಭರಿಗೆ ಅಂದೂ ಗೊತ್ತಿತ್ತು; ಆ ಅರ್ಥವನ್ನು ಕೆಡಿಸಿ ಬೇರೆ ಮಾಡಿ ತೋರಿಸುವ ಉದ್ದೇಶವೊಂದೇ ಅವರದು. ಈ ಉದ್ದೇಶವು ಆಗಲೂ ಫಲಿಸಿತ್ತು; ಈಗಲೂ ಫಲಿಸಿದೆ. ಮಹಾತ್ಮಾ ಗಾಂಧಿಯವರು ಪ್ರಯಾಸಪಟ್ಟು ವೀರವಲ್ಲಭರ ಒಂದು ಹಾದಿಯನ್ನು ತಪ್ಪಿಸಿದರೆ ಅವರು ಇನ್ನೊಂದು ಹಾದಿ ಹಿಡಿದು ಗಾಂಧಿಯವರನ್ನು ಗೆದ್ದಿದ್ದಾರೆ. ಕಾರ್ಯದ ಮಟ್ಟಿಗೆ ಉಪವಾಸವು ಸಂಪಾದಿಸಿದ ಆ ಲಾಭವು ದೊರೆತೂ ದೊರೆಯದಂತೆಯೇ!

ಎರಡನೆಯದಾಗಿ ಉಪವಾಸದಿಂದ ರಾಜಕೋಟೆಯ ಪ್ರಶ್ನೆಗೆ ದೊರೆತಿರುವ ಪ್ರಾಮುಖ್ಯತೆ. ಗಾಂಧಿಯವರ ಮಾತಿನಲ್ಲಿ ಹೇಳುವುದಾದರೆ ಈ ಪ್ರಶ್ನೆಯ ವಿಶ್ವರೂಪವನ್ನೇ ಚಿತ್ರಿಸಬಹುದು. ಆದರೆ ಇಲ್ಲಿಯೋ ಚಿಂತಿಸತಕ್ಕ ಒಂದು ಸಂಗತಿಯಿದೆ. ಗಾಂಧಿಯವರ ಪ್ರಾಣವೆಂದರೆ ಅಖಿಲ ಭಾರತದ ಸೊತ್ತು. ಅದನ್ನು ರಾಜಕೋಟೆಯಂತಹ ಮೂಲೆಯ ಪುಟ್ಟ ಸಂಸ್ಥಾನಕ್ಕಾಗಿ ಅಪಾಯಕ್ಕೊಳಗುಮಾಡಲು ಗಾಂಧಿಜೀಯವರು ತಯಾರಾದರು. ಕಾಂಗ್ರೆಸಿಗೆ ಇತರ ಸಂಸ್ಥಾನಗಳಿಗೆ ರಾಜಕೋಟೆಗೂ ಮಿಗಿಲಾಗಿ ಗಾಂಧಿಯವರ ಆವಶ್ಯಕತೆಯಿತ್ತು. ಆದರೂ ರಾಜಕೋಟೆಯಿದಿರಲ್ಲಿ ಅವು ಎರಡನೆಯ ಸಂಗತಿಗಳಾದುವು. ತುಲನಾತ್ಮಕ ದೃಷ್ಟಿಯಿಂದ ಕಂಡವರು ಇದನ್ನು ನ್ಯಾಯವೆನ್ನಲಾರರು. ರಾಜಕೋಟೆಯು ಅಖಿಲ ಭಾರತದ ಸಮಸ್ಯೆಯಾಗಿ ಪರಿಣಮಿಸಿದೆ. ದೇಶವು ನನ್ನ ಉಪವಾಸದಿಂದ ಲಾಭ ಹೊಂದಿದೆ ಎಂದು ಗಾಂಧಿಯವರನ್ನಬಹುದು. ರಾಷ್ಟ್ರೀಯ ಪ್ರಾಮುಖ್ಯತೆಯು ರಾಜಕೋಟೆಗೆ ದೊರೆತುದು ಹೇಗೆ? ಅದರ ಸ್ವಾಭಾವಿಕ ಸ್ಥಿತಿಗತಿಯಿಂದಲ್ಲ. ಗಾಂಧಿಯವರು ನಿರ್ಮಿಸಿದ ಪರಿಸ್ಥಿತಿಯಿಂದ. ಸರಳವಾಗಿ ಹೇಳುವದಾದರೆ ಗಾಂಧಿಯವರು ದಟ್ಟಾರಣ್ಯದ ನಡುವೆ ನಿಂತರೆ ಜನರಲ್ಲಿ ನುಗ್ಗಿ ಅದನ್ನು ಪಟ್ಟಣ ತುಲ್ಯವನ್ನಾಗಿ ಮಾಡಿಬಿಡುವರು. ಅಂತೆಯೇ ರಾಜಕೋಟೆಯಂತಹ ಅಲ್ಪ ಪ್ರಶ್ನೆಯೊಳಗೆ ಮಹಾತ್ಮರು ತಲೆ ಹೊಗಿಸಿದುದರಿಂದಲೇ ಅದು ಅಖಿಲ ಭಾರತ ಪ್ರಶ್ನೆಯಾಯಿತು. ಆದರೆ ರಾಜಕಾರಣಿಗಳು ಇದನ್ನು ಅಚಾತುರ್ಯವೆನ್ನದೆ ನಿರ್ವಾಹವಿಲ್ಲ. ಹಿಂದುಸ್ಥಾನದ ಪವಿತ್ರ ಸಾಧನೆಗಳೆಂದರೆ ಜನಜಾಗ್ರತಿ ಮತ್ತು ಹೋರಾಡುವ ಶಕ್ತಿ. ಒಂದು ದೇಶದ ಮೇಲೆ ಧಾಳಿ ನಡೆದಿದ್ದರೆ, ಪಟ್ಟಣವೊಂದನ್ನು ರಕ್ಷಿಸುವ ಸಲುವಾಗಿ, ಮಿಕ್ಕೆಡೆಯಲ್ಲಿರುವ ರಕ್ಷಣಾ ಸೈನ್ಯಗಳನ್ನೆಲ್ಲಾ ಒಂದೆಡೆಯಲ್ಲಿಯೇ ಶೇಖರಿಸಿಡುವ ಅಚಾತುರ್ಯವನ್ನು ಯಾವ ಸೈನ್ಯಾಧಿಪತಿಯೂ ಮಾಡಲಾರನು. ಹಿಂದುಸ್ಥಾನದ ಲಕ್ಷ್ಯವನ್ನೆಲ್ಲಾ ರಾಜಕೋಟೆದ ಕಡೆಗೆ ಕೇಂದ್ರೀಕರಿಸಿದ ಮಹಾತ್ಮರು ಅಂತಹ ತಪ್ಪೊಂದನ್ನು ಮಾಡಿದರೆನ್ನಬಹುದು.

ಹೀಗೆ ರಾಜಕೋಟೆಯ ಸಮಸ್ಯೆಯು ಹಲವು ಪಾಠಗಳನ್ನು ಕಲಿಸಿದೆ. ಮುಖ್ಯವಾದುದೆಂದರೆ ಖಾಸಗಿ ಸತ್ಯಾಗ್ರಹ ಅಥವಾ ಸ್ವದಮನ ಶಕ್ತಿಯಿಂದ ರಾಜಕೀಯ ಲಾಭ ದೊರೆಯಬಹುದೆಂಬ ಕುರಿತು ಎದ್ದಿರುವ ಬಲವಾದ ಸಂದೇಹ, ಲೋಕೈಕ ಸತ್ಯಾಗ್ರಹಿಯಾದ ಮಹಾತ್ಮರು ಅನ್ನ ಸತ್ಯಾಗ್ರಹದ ಪ್ರಯೋಗವನ್ನು ಮಾಡಿನೋಡಿದರು. ಹಾಗೆ ಮಾಡುವ ಮೊದಲು ರಾಜಕೋಟೆಯ ಪ್ರಜಾ ಚಳವಳವನ್ನು ನಿಲ್ಲಿಸಿ ಎಲ್ಲಾ ಹೊಣೆಯನ್ನು ತಾನೊಬ್ಬನೇ ವಹಿಸಿದ್ದರು. ಪರಿಣಾಮವಾಗಿ ಬತ್ತಿದ ದೇಹ ಭಾರವಾದ ಹೃದಯದೊಡನೆ ಹೊರಟುಹೋದರು. ಈಗ ಪ್ರಜಾ ಚಳವಳದ ಪುನರುತ್ಥಾನವಾಗುವ ಕಾಲ ಬಂದಿದೆ. ಹೀಗೆ ರಾಜಕೋಟೆಯ ಹೋರಾಟದ ಆದಿ, ಮಧ್ಯ, ಅಂತ್ಯದ ಚಿತ್ರಗಳನ್ನು ಮುಂದಿರಿಸಿಕೊಂಡಲ್ಲಿ ಮಧ್ಯದಲ್ಲಿ ತಾಗಿದ್ದ ಉಪವಾಸತಪದಲ್ಲಿ ಸ್ವಂತ ಪ್ರಭೆಯೊಂದಿತ್ತಲ್ಲದೆ ಅದಾವ ಹೊಸ ಬೆಳಕನ್ನೂ ಹರಡಲಿಲ್ಲವೆಂಬುದು ಕಂಡುಬರುವದು. ಆದಿಯ ಸಾಧನವನ್ನೇ ಕೊನೆಗೂ ಉಪಯೋಗಿಸಬೇಕಾಗಿ ಬಂದಿದೆ, ಭಾವನಾತ್ಮಕವಾದ ಹಾಗೂ ತತ್ವಮಯವಾದ ಖಾಸಗೀ ಪ್ರಯೋಗವು ರಾಜಕೀಯದಲ್ಲಿ ಫಲಿಸದು, ಎಂಬುದನ್ನಿದು ಕಲಿಸುವದಿಲ್ಲವೆ?

'ಅಳಿಯಕಟ್ಟಿನ ಸುಧಾರಣೆ

ಶ್ರೀ. ಎ. ಬಿ. ಶೆಟ್ಟಿ ಮೊದಲು ಮದ್ರಾಸು ಕೌನ್ಸಿಲಿನ ಮುಂದೆ ತಂದಿದ್ದ ಮಸೂದೆಯನ್ನು ಆಧಾರವಾಗಿಟ್ಟುಕೊಂಡು ಅವಶ್ಯವುಳ್ಳ ತಿದ್ದುಪಡಿಯೊಡನೆ ಮದ್ರಾಸ್ ಎಸೆಂಬ್ಲಿಯ ಮುಂದೆ ಮಸೂದೆಯೊಂದು ಬರುವಂತೆ ಮಾಡಲು ಕೆಲವು ಮಹನೀಯರು ಪ್ರಯತ್ನಿಸುತ್ತಿರುವರೆಂಬುದು ಆನಂದದ ವಿಷಯ. ಆ ಕುರಿತು ಪರ್ಯಾಲೋಚಿಸಲು ಇದೇ ತಾ. ೨೨ಕ್ಕೆ ಮಂಗಳೂರಿನಲ್ಲಿ 'ಅಳಿಯ ಸಂತಾನ ಸಮಾಜ ಸುಧಾರಣಾ ಪರಿಷತ್ತನ್ನು ಕರೆಯಲಾಗಿದೆ. ಇದರ ಸಿದ್ಧತೆಗಾಗಿ ಸ್ವಾಗತ ಸಮಿತಿಯ ರಚನೆಯಾಗಿರುವದಲ್ಲದೆ ಪ್ರಚಾರಕ ಕಾರ್ಯದರ್ಶಿಯರು ಜಿಲ್ಲೆಯಲ್ಲಿ ಪ್ರಚಾರ ಕಾರ್ಯಕ್ಕಿಳಿದಿರುವರೆಂದೂ ತಿಳಿದುಬರುತ್ತದೆ. ಇದರ ವಿವರವನ್ನು ಇನ್ನೊಂದೆಡೆ ಕೊಡಲಾಗಿದೆ.

ಅಳಿಯಕಟ್ಟಿನಲ್ಲಿ ಸುಧಾರಣೆ ಮಾಡುವ ಮಸೂದೆಗಳು ಹಿಂದೆ ಒಂದೆರಡು ಬಾರಿ ಬಂದಿದ್ದು ಕೆಲ ಕಾರಣಗಳಿಂದ ಫಲಿಸದೆ ಹೋಗಿದ್ದುವು. ಆ ಸಂದರ್ಭಗಳಲ್ಲಾದರೂ "ಸುಧಾರಣೆಯೇ ಬೇಕಾಗಿಲ್ಲ" ಎಂಬ ವಾದವಿರಲಿಲ್ಲ. ಸದ್ಯ ಸ್ಥಿತಿಯಲ್ಲಿ ಅಳಿಯಕಟ್ಟನ್ನು ಸುಧಾರಿಸುವ ಅವಶ್ಯವಿದೆಯೆಂಬುದನ್ನು ಯಾರೂ ಅಲ್ಲಗಳೆಯಲಾರರು, ವಾತಾವರಣವನ್ನು ಪರಿಶೀಲಿಸಿದರೆ ಹಿಂದೆ ಬಂದಿದ್ದ ತೊಡಕುಗಳಾದರೂ ಈ ಕಾಲದಲ್ಲಿ ತೋರಿ ಬರುವಂತಿಲ್ಲವೆನ್ನಬಹುದು. ಮಾತ್ರವಲ್ಲದೆ ನ್ಯಾಯಪೂರ್ಣವಾದ ಸುಧಾರಣೆಯೊಂದನ್ನು ಕಾಯಿದೆಯ ಮೂಲಕ ಜಾರಿಗೆ ತರಲು ಇದಕ್ಕಿಂತ ಉತ್ತಮವಾದ ಸಂದರ್ಭವು ಬೇರೆದೊರೆಯಲಾರದು. ಆದ್ದರಿಂದ ಈ ಸುಧಾರಣೆಗೆ ಪ್ರಯತ್ನಿಸಲು ತೊಡಗಿರುವವರ ಪ್ರಯತ್ನವು ಅಭಿನಂದನೀಯವೂ ಸಂದರ್ಭೋಚಿತವೂ ಇದೆ.

ಸುಧಾರಣಾ ಪರಿಷತ್ತಿನ ಸ್ವಾಗತಸಮಿತಿಯ ಕುರಿತು ಒಂದು ಮಾತು. ದಕ್ಷಿಣ ಕನ್ನಡದಲ್ಲಿ ಅಳಿಯ ಕಟ್ಟನ್ನಾಚರಿಸುವವರಲ್ಲಿ ನಾಡವರು, ಬಿಲ್ಲವರು, ಮೊಗವೀರರು ದೇವಡಿಗರು ಮುಖ್ಯ ಜನರು. ಆದರೆ ಸ್ವಾಗತ ಸಮಿತಿಯ ಅಧಿಕಾರಿಗಳೆಲ್ಲಾ ಬಂಟ ಸಮಾಜದ ಸೋಂಬರರೇ. ಮಿಕ್ಕ ಸಮಾಜಗಳಲ್ಲಿ ವಿದ್ಯಾವಂತರು ಇಲ್ಲನೆಂವಲ್ಲ. ಅಂಥವರನ್ನೂ ಸೇರಿಸಿಕೊಂಡು ಸುಧಾರಕರು ತಮ್ಮ ಕಾರ್ಯವನ್ನು ಸುಗಮಗೊಳಿಸಿಕೊಳ್ಳಬಾರದಿತ್ತೆ? ಸಮಾಜಗಳ ರೀತಿನೀತಿ ಕಟ್ಟುಕಟ್ಟಳೆಗಳಿಗೆ ಸಂಬಂಧಿಸುವ ಸುಧಾರಣೆಯೊಂದನ್ನು ಮಾಡುವಾಗ ಸಂಬಂಧಪಟ್ಟ ಸಮಾಜಗಳೆಲ್ಲವುಗಳ ಸಹಕಾರವಷ್ಟೇ ಅಲ್ಲ; ಪ್ರತ್ಯಕ್ಷ ಸಮ್ಮಿಲನವೂ ಅಗತ್ಯವಿದೆ. ಈ ವಿಷಯವನ್ನೂ ಗಮನಕ್ಕೆ ತಂದುಕೊಂಡು ಸುಧಾರಣಾ ಪರಿಷತ್ತಿನವರು ಯೋಗ್ಯ ಸೂಚನೆಗಳನ್ನು ಜನರ ಮುಂದಿರಿಸುವರೆಂದೂ, ಜಿಲ್ಲೆಯ ಅಳಿಯ ಸಂತಾನಕಟ್ಟಿನ ಸಮಾಜಗಳವರೆಲ್ಲಾ ಬೆಂಬಲಕ್ಕೊದಗುವರೆಂದೂ ನಾವು ಹಾರೈಸುತ್ತೇವೆ.

ಬೆಳ್ಳೂರಿನಲ್ಲಿ ಹಿಂದೂಮುಸ್ಲಿಂ ಗಲಭೆ

ಇದೇ ತಾ. ೨ನೇ ರಾತ್ರಿ ಬೆಳ್ಳೂರಿನಲ್ಲಿ ಹಿಂದೂ-ಮುಸ್ಲಿಂ ದಂಗೆಯೆದ್ದಿತು. ಪೂರ್ಣಿಮಾ ಉತ್ಸವದ ಮೆರವಣಿಗೆಗೆ ಲೈಸನ್ಸು ಕೊಡುವಾಗ ಜುಮ್ಮಾ ಮಸೀದಿಯಿದಿರು ಸಂಗೀತ ನಿಲ್ಲಿಸಬೇಕೆಂಬ ಶರ್ತ ಹಾಕಿಯೇ ಕೊಟ್ಟಿದ್ದರು. ಉತ್ಸವದವರು ಮಸೀದಿಯಿದಿರಿನಲ್ಲಿ ಸಂಗೀತದೊಡನೆ ಬಂದಾಗ ಪೋಲೀಸರವರನ್ನು ತಡೆದರು. ಆ ಸಮಯದಲ್ಲಿ ಕಲ್ಲುಗಳೆಸೆಯಲ್ಪಟ್ಟು ಪೋಲಿಸ್ ಸುಪರಿಂಟೆಂಡೆಂಟ್, ಜಿಲ್ಲಾ ಮೆಜಿಸ್ಟ್ರೇಟ್ ಮೊದಲಾದ ಅಫೀಸರರಿಗೂ ಪೆಟ್ಟಾಯಿತು. ಕೂಡಲೇ ಪೋಲೀಸರು ಲಾಠೀಚಾರ್ಜು ಮಾಡಿ ಸುಮಾರು 30 ಮಂದಿ ಜಖಂಗೊಂಡರು. ಮತ್ತು ಜನರದ ಗುಂಪಿನ ಮೇಲೆ ಹೆದರಿಸುವದಕ್ಕಾಗಿ ಪೋಲೀಸರು ಎರಡು ಮೂರು ಬಾರಿ ಗುಂಡುಹಾರಿಸಬೇಕಾಯಿತು, ಯಾರಿಗೂ ಜಖಮಾಗಿಲ್ಲ. ಹಾಗೆ ಪ್ರಾರಂಭವಾದ ದಂಗೆಯು ಪಟ್ಟಣದಲ್ಲಿ ಹಿಂದು ಮತ್ತು ಮುಸ್ಲಿಮರ ಅಂಗಡಿಗಳ ಲೂಟಿ, ಬೆಂಕಿಕೊಡುವದೇ ಮೊದಲಾದ ಅಕೃತ್ಯದಲ್ಲಿ ಪರಿಣಮಿಸಿ ಎರಡೂ ಸಮಾಜಗಳವರ ಕೆಲವು ಅಂಗಡಿಗಳು ಲೂಟಿಯಾಗಲ್ಪಟ್ಟವು. ಸುಮಾರು 20 ಮಂದಿ ಪುಂಡರು ದಸ್ತಗಿರಿ ಮಾಡಲ್ಪಟ್ಟಿರುವರಲ್ಲದೆ ಎರಡು ತಿಂಗಳ ವರೆಗೆ ಯಾವ ಮೆರವಣಿಗೆ, ಸಭೆ ಇತ್ಯಾದಿ ಮಾಡಬಾರದೆಂದು 144ನೇ ಸೆಕ್ಷನ್ ಜಾರಿಯಾಗಿದೆ.

ವೃಂದಾವನದಲ್ಲಿ ಗಾಂಧೀ ಸೇವಾ ಸಂಘದ ಸಭೆ

ಟುಟಿಕೋರಿನಲ್ಲಿಯೂ ೧೪೪ನೇ ಸೆಕ್ಷನು

ಟ್ಯುಟಿಕೋರಿನ ಸಬ್ ಡಿವಿಜನಲ್ ಆಫೀಸರರು ಒಂದು ತಿಂಗಳ ವರೆಗೆ ಮುನಿಸಿಪಾಲಿಟಿಯ ಗಡಿಯೊಳಗೆ, ಬುದ್ಧ ಧರ್ಮ ಮತ್ತು ಸಾಮಾಜಿಕ ಸಂಬಂಧವುಳ್ಳವುಗಳ ವಿನಹ ಬೇರಾವ ಸಭೆ ಮೆರವಣಿಗೆಯನ್ನೂ ಮಾಡಕೂಡದೆಂದು ೧೪೪ನೇ ಕಲಮಿನನ್ವಯ ಆಜ್ಞೆಕೊಟ್ಟಿದ್ದಾರೆ. ಸ್ಥಳೀಕ ಪಕ್ಷಗಳ ಮತ್ತು ಜಾತಿಗಳೊಳಗಿನ ಕಲಹದಿಂದಾಗಿ ಹೀಗೆ ಮಾಡಬೇಕಾಯಿತಂತೆ—ಟೌನ್ ಕಾಂಗ್ರೆಸ್ ಕಮಿಟಿಯು ಮೇಲಿನ ಈ ಹುಕುಮನ್ನು ಜ್ಯಾರಿಮಾಡಿರುವುದರಿಂದ ಪಟ್ಟಣಿಗರಲ್ಲಿ ಉದ್ವೇಗವೆದ್ದಿದೆ.

ಕಲ್ಕತ್ತ ನಗರಸಭಾ ಮಸೂದೆ

ಬಂಗಾಳ ಎಸೆಂಬ್ಲಿಯಲ್ಲಿ ಸರಕಾರವು ತಂದಿದ್ದ ಕಲ್ಕತ್ತ ಮುನ್ಸಿಪಲ್ ಮಸೂದೆಯನ್ನು ಕಾಂಗ್ರೆಸ್ ಪಕ್ಷೀಯರು ವಿರೋಧಿಸಿದರೂ ಅದು ಮಂಜೂರಾಗಿರುವದು. ಈ ಮಸೂದೆಯಂತೆ ಮಿಶ್ರಮತದಾನವಿದ್ದಲ್ಲಿ ಮುಸ್ಲೀಮರಿಗೆ ಪ್ರತ್ಯೇಕ ಮತದಾನವೂ, ಶೆಡ್ಯೂಲ್ಡ್ ಕ್ಲಾಸಿನವರಿಗೆ ಸಾರ್ವಜನಿಕ ಮತಕ್ಷೇತ್ರಗಳಲ್ಲಿ ಕಾದಿಟ್ಟ ಸ್ಥಾನಗಳೂ ದೊರೆಯುವವು.

ಮೈಸೂರಿನ ಸುಧಾರಣಾ ಸಮಿತಿ

ಮೈಸೂರು ಸಾಂಸ್ಥಾನಿಕ ಸುಧಾರಣಾ ಸಮಿತಿಯವರು ತಮ್ಮ ಕಾರ್ಯಕಲಾಪಗಳನ್ನು ಮುಗಿಸಿರುವರು. ಅವರ ವರದಿಯು ಈ ತಿಂಗಳೊಳಗೆ ಪ್ರಕಟವಾಗಲಿರುವದು. ವರದಿಯಲ್ಲಿ ಸಂಸ್ಥಾನಕ್ಕೆ ಕೊಡತಕ್ಕ ಹಲವು ಪ್ರಾಮುಖ್ಯ ಸುಧಾರಣೆಗಳ ಸೂಚನೆಯಿರುವದೆಂದೂ, ಮೈಸೂರು ಸರಕಾರವು ಅವುಗಳಲ್ಲಿ ಕೆಲವನ್ನಾದರೂ ಅಂಗೀಕರಿಸಿ ಜನತೆಯನ್ನು ತೃಪ್ತಿಪಡಿಸಲು ಪ್ರಯತ್ನಿಸಬಹುದೆಂದೂ ಊಹಿಸಲಾಗಿದೆ.

ಬೊಂಬಾಯಿಯಲ್ಲಿ ಪಾನ ನಿಷೇಧ

ಆಗೋಸ್ತು ತಾ. 1ರಿಂದ ಬೊಂಬಾಯಿ ಪಟ್ಟಣದಲ್ಲಿ ಪೂರ್ಣವಾಗಿ ಪಾನನಿಷೇಧವನ್ನು ಜಾರಿಗೆ ತರಬೇಕೆಂದು ಕಾಂಗ್ರೆಸ್ ಸರಕಾರವು ನಿರ್ಧರಿಸಿ ಅದಕ್ಕಾಗಿ ಬಲವಾದ ಕಾರ್ಯಕ್ರಮವನ್ನು ಕೈಗೊಂಡಿದೆ. 600 ಸ್ಪೆಶ್ಯಲ್ ಪೋಲೀಸರೂ 60 ಮಂದಿ ಆಫೀಸರರೂ ಇದಕ್ಕಾಗಿ ತರಬೇತಿ ಹೊಂದುತ್ತಿದ್ದಾರೆ. ಇವರಿಗೆ ಸಹಾಯವಾಗಿ 1500 ಸ್ವಯಂಸೇವಕರು ಪಾನ ನಿಷೇಧದ ಪ್ರಚಾರಕಾರ್ಯ ಕೈಕೊಳ್ಳುವರು.

ಶಿಯಾ—ಸುನ್ನೀ ಕಾಳಗ

ಲಕ್ನೌವಿನಲ್ಲಿ ಪ್ರಾರಂಭವಾಗಿದ್ದ ಶಿಯಾ–ಸುನ್ನೀ ಕಾಳಗವಿನ್ನೂ ಅಂತ್ಯಗೊಂಡಿಲ್ಲ. ಅಲ್ಲಿ 144ನೇ ಸೆಕ್ಷನು ಜಾರಿಯಲ್ಲಿದ್ದು, ಕಾನೂನುಲ್ಲಂಘಿಸಿ ಸೆರೆಗೊಳಗಾಗುವ ಶಿಯಾಗಳ ಸಂಖ್ಯೆ ಹೆಚ್ಚುತ್ತಾ ಬರುತ್ತಿದೆ. ಕಳೆದ 4ರಲ್ಲಿ 180 ಮಂದಿ ಕೈದುಮಾಡಲ್ಪಟ್ಟಿರುವರು. ಇತ್ತಂಡಗಳೊಳಗೆ ನಡೆದ ರಾಜೀ ಪಂಚಾಯಿತಿಕೆಯು ಮುರಿದುಬಿತ್ತು.

ಜಾಮ್ ಸಾಹೇಬರ ತಯಾರಿ

ನವಾನಗರದ ಜಾಮ್ ಸಾಹೇಬರು ಕಾಠಿಯಾವಾಡ್ ಪ್ರಾಂತ್ಯದ ರಾಜರುಗಳನ್ನೆಲ್ಲಾ ಒಂದುಗೂಡಿಸಿ, ಮಾಸಿಕ ಸಭೆಯ ಏರ್ಪಾಡು ಮಾಡುವ ಹಂಚಿಕೆಯಲ್ಲಿದ್ದಾರೆ. ಈ ಕುರಿತು ಪ್ರಶ್ನಿಸಲ್ಪಟ್ಟಾಗ ತಾವಾರ ವಿರೋಧವಾಗಿಯೂ ಕಾರ್ಯ ಕೈಗೊಂಡಿಲ್ಲವೆಂದೂ, ಒಮ್ಮತದ ಬಲ ಸಂಪಾದಿಸಿಕೊಳ್ಳುವುದೇ ತಮ್ಮ ಉದ್ದೇಶವೆಂದೂ ಹೇಳಿರುವರು. ರಾಜಕೋಟೆಯ ಪರಿಸ್ಥಿತಿಯು ಎಲ್ಲಾ ಸಂಸ್ಥಾನಗಳಿಗೂ ಹೊಂದಿಕೆಯಾಗದೆಂದೂ ನವಾನಗರದ ಕುರಿತು ಕೆಲವು ಚಳವಳಗಾರ ಮುಖಂಡರು ತಪ್ಪು ಅಭಿಪ್ರಾಯಗಳನ್ನು ಪ್ರಕಟಿಸಿರುವದು ಶೋಚನೀಯವೆಂದೂ, ಸತ್ಯ ಸಂಗತಿಗಳ ಪ್ರಕಾಶನಕ್ಕಾಗಿ ಕಾನ್ಫರೆಡಿಸಿರುವಂತಹ ಪ್ರಕಟನಾಶಾಖೆಯನ್ನು ಮಿಕ್ಕ ಸಂಸ್ಥಾನಾಧೀಶರೂ ಏರ್ಪಡಿಸಬೇಕೆಂದೂ ಜಾಮ್ ಸಾಹೇಬರ ಅಭಿಪ್ರಾಯ.

ಭಾರತಕ್ಕೆ ಬರ್ಮವು ಸಂದಾಯಿಸತಕ್ಕ ಸಾಲ

ಭಾರತ ಸರಕಾರಕ್ಕೆ ಬರ್ಮಾ ಸರಕಾರವು ಸುಮಾರು 50 ಕೋಟಿ ರೂಪಾಯಿಗಳಷ್ಟು ಸಾಲವನ್ನು ಪಾವತಿಮಾಡಲಿಕ್ಕಿದೆ. ಇದನ್ನು ವಾರ್ಷಿಕವಾಗಿ 2¼ ಕೋಟಿಯಂತೆ ಸಂದಾಯಮಾಡುತ್ತಾ ಬಂತಕ್ಕದೆಂದೂ ಸಾಲವು 43 ವರ್ಷಗಳಲ್ಲಿ ಪೂರ್ತಿ ಮರುಪಾವತಿಯಾಗತಕ್ಕದ್ದೆಂದೂ ಆವೆರಡು ಸರಕಾರಗಳು ತೀರ್ಮಾನಿಸಿಕೊಂಡಿವೆ.

ಸಿಲೋನಿನ ಸಿದ್ಧತೆ

ಸಾಮ್ರಾಜ್ಯ ಸರಕಾರವು ಅಪೇಕ್ಷಿಸಿದಲ್ಲಿ ಸಿಲೋನು ದ್ವೀಪದ ರಕ್ಷಣೆಗಾಗಿ ಖಡ್ಡಾಯ ಸೈನ್ಯಸಂಗ್ರಹದ ಕಾನೂನುಮಾಡುವ ಆಲೋಚನೆಯಲ್ಲಿ ಸಿಲೋನಿನ ಮಂತ್ರಿ ಬೋರ್ಡಿನವರಿದ್ದಾರೆ. ಈ ಸೂಚನೆಯನ್ನು ಮಂತ್ರಿ ಬೋರ್ಡಿನವರು ಮಂಜೂರುಮಾಡಿದರೆ ಅಮೇಲಿದು ಸಿಲೋನಿನ ಸ್ಟೇಟ್ ಕೌನ್ಸಿಲಿನ ಮುಂದೆ ಬರಲಿರುವದು.

ನಾಗಪುರ ಮಿಲ್ ಮುಷ್ಕರದ ಸಮಾಪ್ತಿ

ನಾಗಪುರ ಮಿಲ್ಲುಗಳಲ್ಲಿ ಪ್ರಾರಂಭಿಸಿದ ಮುಷ್ಕರದ ಕುರಿತು ಲೇಬರ್ ಮಂತ್ರಿ ಶ್ರೀ ಸಿ. ಜೆ. ಭರೂಕರು ನ್ಯಾಯದಾನದ ಆಶ್ವಾಸನೆಯಿತ್ತುದರಿಂದ ಮುಷ್ಕರ ಸಮಿತಿಯವರು ತಾ 4ರಿಂದ ಮುಷ್ಕರವನ್ನು ನಿಲ್ಲಿಸಿರುವರು.

ಗಾಂಧೀ ಸೇವಾಸಂಘದ ಸಭೆ

ಸತ್ಯಾಹಿಂಸೆಯ ಕುರಿತು ಗಾಂಧೀ–ರಾಜೇಂದ್ರರ ಭಾಷಣ.

ಗಾಂಧೀ ಸೇವಾಸಂಘದ ೫ನೇ ಮಹಾ ಸಭೆಯು ಇದೇ ತಾ. 3ರಲ್ಲಿ ಬೃಂದಾವನದಲ್ಲಿ ಪ್ರಾರಂಭವಾಯಿತು. ಕಲ್ಕತ್ತದಿಂದ ಆಗಮಿಸಿದ ಮಹಾತ್ಮಾ ಗಾಂಧಿಯವರ

ನ್ನು ಸಾವಿರಗಟ್ಟಲೆ ಜನರು ಯಾವ ಜಯಕಾರವೂ ಇಲ್ಲದೆ ಸ್ವಾಗತಿಸಿದರು. ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಪ್ರಥಮತಃ ಧ್ವಜಾರೋಹಣಮಾಡುತ್ತಾ, ರಾಷ್ಟ್ರಧ್ವಜಕ್ಕಾಗಿ ನಡೆದಿರುವ ತ್ಯಾಗಗಳನ್ನು ಹೇಳಿ ಅದರ ಗೌರವ ರಕ್ಷಣೆಗಾಗಿ ಸರ್ವಶಕ್ತಿಯನ್ನುಪಯೋಗಿಸಬೇಕೆಂದರು. ರಾಷ್ಟ್ರಧ್ವಜದ ವಿರೋಧಿಗಳು, ನಾನಾರೀತಿಯಿಂದ ಅದನ್ನು ಖಂಡಿಸುತ್ತಿರುವರಾದರೂ ಅದರ ಭಕ್ತರು ಸತ್ಯ ಮತ್ತು ಅಹಿಂಸೆಯನ್ನು ದೃಢತೆಯಿಂದ ಅನುಸರಿಸಬೇಕೆಂದು ವಿನಂತಿಸಿಕೊಂಡು, ಕೆಲವರು ಸತ್ಯಾಹಿಂಸೆಗಳು ಎಲ್ಲಾ ಸಂದರ್ಭಗಳಲ್ಲ ಫಲಕಾರಿಯಲ್ಲವೆನ್ನುತ್ತಿರುವರಾದರೂ ಅವು ಲೋಕವ್ಯಾಪೀ ಶಕ್ತಿಗಳಾಗಿವೆಯೆಂದರು.

ಮಹಾತ್ಮರ ಭಾಷಣ

ಪ್ರದರ್ಶನವನ್ನು ತೆರೆಯುತ್ತಾ ಮಹಾತ್ಮರು ಸ್ವದೇಶೀ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕೆಂದೂ ಖಾದಿಯುಡಬೇಕೆಂದೂ ಕೇಳಿಕೊಂಡರು. 'ಖಾದಿಯುಡದವನು ಅಥವಾ ಪ್ರೋತ್ಸಾಹಿಸದವನು ಹಿಂದುಸ್ಥಾನವನ್ನಾಳಲು ಅರ್ಹನಲ್ಲ.' ಎಂದು ಗಾಂಧೀಜಿಯವರ ಕಂಠೋಕ್ತ ಮಾತು. ಸತ್ಯ ಮತ್ತು ಅಹಿಂಸೆಯ ಕುರಿತು ಮಾತನಾಡುತ್ತಾ ರಾಜಕೋಟೆಯ ಘಟನೆಯನ್ನು ವಿವರಿಸಿ, ಅದರಿಂದ ಅಹಿಂಸೆಯು ಅನುಸರಣೀಯವೆಂಬ ಅನುಭವವು ಬಲವಾಯಿತೆಂದೂ, ತಾನು ರಾಜಕೋಟೆಯ ಸಮಸ್ಯೆಯನ್ನು ಕೈಬಿಟ್ಟಿಲ್ಲವೆಂದೂ ಹೇಳಿದುದಲ್ಲದೆ, ದೇವರಲ್ಲಿ ನಂಬಿಕೆಯಿಲ್ಲದವನಿಗೆ ಸತ್ಯಾಗ್ರಹದಲ್ಲಿ ಸ್ಥಾನವಿಲ್ಲವೆಂದರು.

ಖಾನ್ ಸಾಹೇಬ್ ಸರದಾರರ ಭಾಷಣ

ಬೃಂದಾವನದಲ್ಲಿ ಭಾಷಣವೀಯುತ್ತಾ ಖಾನ್ ಅಬ್ದುಲ್ ಗಫರ್ ಖಾನರು, ಭಾಷಣ ಠರಾವುಗಳಲ್ಲೇ ತೊಡಗಿದ್ದ ಕಾಂಗ್ರೆಸನ್ನು ಕೆಲಸದ ಕಡೆಗೆ ತಿರುಗಿಸಿದವರು ಮಹಾತ್ಮಾ ಗಾಂಧಿಯವರೆಂದೂ, ಜನರು ಅಂಧಶ್ರದ್ಧೆಯಿಂದ ಅವರನ್ನು ಪೂಜಿಸದೆ ಅವರ ತತ್ವಗಳ ಅನುಕರಣೆಗೆ ಪ್ರಯತ್ನಿಸಬೇಕೆಂದೂ ಹೇಳಿದರು.

ಸರದಾರ್ ಪಟೇಲರು ತಮ್ಮ ಭಾಷಣದಲ್ಲಿ ಮಹಾತ್ಮಾಜಿಯವರೊಬ್ಬರೇ ದೇಶದ ಮುಂದಾಳು, ಅವರಿಂದಲೇ ಪೂರ್ಣ ಸ್ವರಾಜ್ಯದ ಪ್ರಾಪ್ತಿಯೆಂದು ಹೇಳಿ, ಜಮೀನ್ದಾರೀ ಪದ್ಧತಿಯನ್ನು ನಿರ್ಮೂಲ ಮಾಡುವುದರಿಂದ ದೇಶದ ಆರ್ಥಿಕ ಸ್ಥಿತಿಯು ಸುಧಾರಿಸುವದೆಂದು ಖಚಿತವಾಗುವ ವರೆಗೆ ತಾನಾ ಚಳವಳಕ್ಕೆ ಅನುಕೂಲವಿಲ್ಲವೆಂದರು.

ಮೆಂಬರರೂ ರಾಜಕೀಯವೂ

ಗಾಂಧೀ ಸೇವಾಸಂಘದ ಧ್ಯೇಯವು ವಿಧಾಯಕ ಕಾರ್ಯವನ್ನನುಸರಿಸುವದಿರುವದರಿಂದ ಅದಕ್ಕಾಗಿ ಮೆಂಬರರು ರಾಜಕೀಯದಲ್ಲಿ ಭಾಗವಹಿಸಬಹುದೆಂದೂ, ಅದರೆ ಅಸತ್ಯ ಮತ್ತು ಅಹಿಂಸೆಯನ್ನು ತಾವಾಗಿ ಅಂಗೀಕರಿಸುವದಲ್ಲದೆ ತಮ್ಮ ಅನುಯಾಯಿಗಳೂ ಆ ಮೇರೆಯನ್ನು ಮೀರದಂತೆ ನೋಡಿಕೊಂಡು ಗಾಂಧಿಯವರು ತೋರಿಸಿರುವ ಹಾದಿಯಲ್ಲಿಯೇ ನಡೆಯತಕ್ಕದ್ದೆಂದೂ ಸಂಘದ ಮಹಾಸಭೆಯಲ್ಲಿ ನಿರ್ಧಾರವಾಗಿರುವುದು.

ಸುಭಾಸ ಭೋಸರ ಹೊಸ ಪಕ್ಷ

ತಮ್ಮನ್ನು ಅಭಿನಂದಿಸಲು ಕಲ್ಕತ್ತದಲ್ಲಿ ಸೇರಿದ ಸುಮಾರು ೨೦ ಸಾವಿರ ಜನರ ಪ್ರಚಂಡ ಸಭೆಯಲ್ಲಿ ಶ್ರೀ| ಭೋಸರು ಕಾಂಗ್ರೆಸ್ಸಿನೊಳಗೆ 'ಫೋರ್ವರ್ಡ್ ಬ್ಲೋಕ್' ಎಂಬ ಹೊಸ ಪಕ್ಷವನ್ನು ಸ್ಥಾಪಿಸುವ ಆಲೋಚನೆಯನ್ನು ತಿಳಿಸಿದರು. ಕಾಂಗ್ರೆಸ್ಸಿನ ಧ್ಯೇಯ, ಕಾರ್ಯಕ್ರಮಗಳನ್ನು ಒಪ್ಪಿಕೊಂಡು ಮಹಾತ್ಮರ ಧುರೀಣತ್ವದಲ್ಲಿ ವಿಶ್ವಾಸವನ್ನೂ ಪ್ರದರ್ಶಿಸಿ ಕಾಂಗ್ರೆಸ್ಸನ್ನು ತೀವ್ರಗಾಮಿ ಪಥದಲ್ಲಿ ಮುನ್ನಡೆಸುವುದೇ ಈ ಪಕ್ಷದ ಧ್ಯೇಯ. ದೇಶದಲ್ಲಿ ಎಡಪಕ್ಷೀಯರನ್ನು ಒಂದುಗೂಡಿಸಿ ಕೆಲಸಮಾಡುವ ಅವಶ್ಯಕತೆಯನ್ನು ಶ್ರೀ| ಭೋಸರು ವಿವರಿಸಿ ಸದ್ಯದ ಕಾಂಗ್ರೆಸ್ ಅಧಿಕಾರೀ ವರ್ಗದವರು ಸಮಯಕ್ಕೆ ಸರಿಯಾಗಿ ವರ್ತಿಸದೆ ಸಂಧಾನಾಸಕ್ತರಾಗಿ ನಡೆಸುವದರಿಂದ ಕಾಂಗ್ರೆಸ್ಸಿನೊಳಗೆ ಸದ್ಯದಲ್ಲೇ ಬಿಕ್ಕಟ್ಟುಂಟಾಗಬಹುದೆಂದೂ, ಬಿಕ್ಕಟ್ಟುಗಳನ್ನು ಅಲ್ಲಿಂದಲ್ಲಿಯೇ ಶಮನಮಾಡುವುದಕ್ಕಿಂತ ಇಂದೇ ಇದಿರಿಸಿ ನಿಲ್ಲುವದು ಯುಕ್ತವೆಂದೂ, ಮುಂದಿನ ಹೋರಾಟಕ್ಕಿದು ಅನುಕೂಲವಾಗುವದೆಂದೂ ವಿವರಿಸಿ ಭಾಷಣವಿತ್ತರು. ದೇಶದಲ್ಲೆಲ್ಲಾ ಪ್ರಚಾರಮಾಡಲು ಒಂದು ಲಕ್ಷ ರೂಪಾ

ABSOLUTELY FREE!

Bring this coupon and you will get your own Photo absolutely free of charge

☞ The rate for the enlargement of the same Rupee one only (size 6"×8").

Send your old photo and you will get enlargement 6"×8' fo) Rs. 2—8—0. ony and big size 16"×20"for Rs. 5 only.

Our time every day 9 a. m. to 7 p. m. Sunday 9 a. m. to 4p. m.

K. H. PATHAK

276 Surya Mahal Girgaum Road, BOMBAY, 4. | Royal Art Studio 183 Hornby Road, BOMBAY, 1.

ರಸ್ಯದ ವಿದೇಶ ಮಂತ್ರಿಯ ರಾಜಿನಾಮೆ

ಯಂಗಳನ್ನು ಸಂಗ್ರಹಿಸುವ ಪ್ರಯತ್ನ ನಡೆಯುತ್ತಿದೆ. ಸಭೆಯಲ್ಲಿದ್ದ ಸರದಾರ ಜವಾಹಿರ್ ಸಿಂಗರವರು ಸಿಖ್ಖರ ಪರವಾಗಿ ರೂ. 1000 ಕೊಡುವ ವಾಗ್ದಾನ ವಿತ್ತರು.

ಓಂ ಮಂಡಳಿಯ ವ್ಯವಹರಣೆ

ಸಿಂಧದ ಓಂ ಮಂಡಲಿಯ ನಾಲ್ವರು ಹುಡುಗಿಯರನ್ನು ತಂದೆ ತಾಯಿಗಳು ನಿರ್ಬಂಧದಲ್ಲಿಟ್ಟುದನ್ನು ಬಿಡಿಸಬೇಕೆಂದು ಅಧ್ಯಕ್ಷೆ ಓಂ ರಾಧೆಯು ಮೆಜಿಸ್ಟ್ರೇಟರ ತೀರ್ಪಿನವಿರುದ್ಧ ಹೈಕೋರ್ಟಿಗೆ ಅಪೀಲು ಮಾಡಿದ್ದಳು. ಹೈಕೋರ್ಟು ಅವಳ ಅಪೀಲನ್ನು ತೆಗೆದು ಹಾಕಿರುವದು. ಕರಾಚಿಯ ಮೆಜಿಸ್ಟ್ರೇಟರು ಓಂ ಮಂಡಲಿಯೊಳಗಿನ ಸ್ತ್ರೀಯರನ್ನೂ ಪುರುಷರನ್ನೂ ಪ್ರತ್ಯೇಕಿಸಿಡಬೇಕೆಂದೂ ದಾದಾ ಲೇಖರಾಜರು ಮತ್ತು ಇತರರ ಮೇಲೆ ಜಾರಿಮಾಡಿರುವ 144ನೇ ಸೆಕ್ಷನನ್ನು ಪುನಃ ಎರಡುವಾರಗಳ ವರೆಗೆ ಮುಂದರಿಸಿರುವರು.

ಆಂಗ್ಲೋ ಇಂಡಿಯಾನರಿಗೆ ಪಕ್ಷಪಾತ

ಹಿಂದುಸ್ಥಾನದ ಸರಕಾರವು, ರೈಲ್ವೇ ಅಂಚೆ ಮತ್ತು ತಂತಿ ಇಲಾಖೆ ಹಾಗೂ ಆಂಗ್ಲೋ ಇಂಡಿಯನರಿಗೆ ಸಂಬಂಧವಿರುವ ಇತರ ಇಲಾಖೆಗಳಲ್ಲಿ ಹೆಚ್ಚು ಸ್ಥಾನಗಳನ್ನು ರಿಜರ್ವ್ ಮಾಡುವ ನಿರ್ಧಾರವನ್ನು ಮಾಡಿರುವುದು. ಹೀಗೆ ಅವರಿಗೆ ಹೆಚ್ಚಿನ ಕೆಲಸಗಳನ್ನು ಕಾದಿಡುವದಲ್ಲದೆ ಅವರ ಸಂಬಳವು ಕಡಿಮೆಯೆಂದರೆ ರೂ. ೯5 ಎಂದು ಆ ಹುಕುಮಿನಲ್ಲಿದೆ. ಎಪ್ರಿಲ್ 1, 1939ರಿಂದ ಈ ಪದ್ಧತಿಯು ಜಾರಿಗೆ ಬರುವುದು.

ರಶ್ಯದ ವಿದೇಶಮಂತ್ರಿಯ ರಾಜಿನಾಮೆ

ಎಂ. ಲಿಟ್ವಿನೋಫರು ರಶ್ಯದ ವಿದೇಶಗಳ ಮಂತ್ರಿಸ್ಥಾನಕ್ಕೆ ರಾಜೀನಾಮೆಯಿತ್ತಿದ್ದಾರೆ. ಬ್ರಿಟಿಷರೊಡನೆ ನಡೆಯುತ್ತಿರುವ ಒಪ್ಪಂದದ ಮಾತುಕತೆಯು ದೀರ್ಘವಾಗಿ ಬೆಳೆದುದೇ ಇದಕ್ಕೆ ಕಾರಣವೆಂದು ತಿಳಿದು ಬರುತ್ತದೆ. ಲಿಟ್ವಿನೋಫರು ರಾಷ್ಟ್ರಕೂಟದ ರೀತಿಯಂತೆ ಆಕ್ರಮಣಗಾರರನ್ನು ತಡೆಯಬೇಕೆಂಬ ಅಭಿಪ್ರಾಯವುಳ್ಳವರಂತೆ. ಆದರೆ ರಶ್ಯದ ಅಧಿಕಾರಿಗಳಲ್ಲಿ ಕೆಲವರು ಇಂಗ್ಲಿಷ್, ಫ್ರಾನ್ಸು, ಪೋಲೆಂಡ್ ಮೊದಲಾದುವುಗಳನ್ನು ಸೇರಿಸಿ ವಿರೋಧಿ ಪಕ್ಷವಾಗಿ ಹೋರಾಡುವ ಆತುರ ಸೂಚಿಸಿದರಂತೆ. ಈ ರಾಜೀನಾಮೆಯಿಂದ ಬ್ರಿಟನ್ನರೊಡನೆ ಒಪ್ಪಂದದ ರೀತಿಯಲ್ಲೇನೂ ವ್ಯತ್ಯಾಸವಾಗುವಂತಿಲ್ಲವೆಂದು ಪ್ರಕಟವಾಗಿದೆ ಎಮ್. ಮೊಲೊಟೋವ್ ಇವರು ಈಗ ತಾತ್ಕಾಲಿಕ ವಿದೇಶ ಮಂತ್ರಿಯಾಗಿ ನೇಮಕ ಹೊಂದಿದ್ದಾರೆ

ಜರ್ಮನಿಯ ಗರ್ಜನೆ

ಬೆಕ್‌ರವರ ಭಾಷಣ ಮತ್ತು ಪೋಲೆಂಡಿನ ಮರುತ್ತರದಿಂದ ಜರ್ಮನರು ಕ್ರೋಧಗೊಂಡಿರುವರು ಇದು ಹಿಟ್ಲರರಿಗಿತ್ತ ಪರಾಜಯವೆಂದೂ, ಹಿಟ್ಲರರೀ ಅಪಜಯವನ್ನು ಎಂದಿಗೂ ಸಹಿಸುವಂತಿಲ್ಲವೆಂದೂ ಕೇಳಿಬರುತ್ತಿದೆ. ಜರ್ಮನಿ ಪತ್ರಿಕೆಗಳು ಪೋಲೆಂಡಿನ ಘೋಷಣೆಯನ್ನು ತೀವ್ರವಾಗಿ ಖಂಡಿಸುತ್ತಿವೆ. ತಾನು ಬಲಶಾಲೀ ರಾಷ್ಟ್ರವೊಂದರ ಸರಿಯಲ್ಲಿರುವೆನೆಂಬುದನ್ನು ಮರೆತು ಪೋಲೆಂಡು ಅಪಾಯಕ್ಕೊಳಗಾಗಲಿವೆ; ಬ್ರಿಟಿಷ್ ಫ್ರೆಂಚರ ಭರವಸೆಯ ಮೇಲೆ ವಿಪರೀತ ವಿಶ್ವಾಸವಿಟ್ಟು ಕೆಡುವ ಕಾಲವನ್ನು ಕರೆಯುತ್ತಿದೆ ಎಂದು ಜರ್ಮನ್ ಪತ್ರಿಕೆಗಳು ಉಚ್ಚರಿಸಲು ತೊಡಗಿವೆ.

ಗಡಿಯಲ್ಲಿ ಸೈನ್ಯಚಲನೆ

ಪೋಲೆಂಡಿನ ಗಡಿಯಲ್ಲಿ ಜರ್ಮನಿಯ ಸೈನಿಕ ಚಲನವಲನಗಳ ಸುದ್ದಿ ಬರುತ್ತಿದೆ. ಪೋಲೆಂಡಿನ ವ್ಯಾಪಾರೀ ಕೇಂದ್ರಕ್ಕೆ ಸಮೀಪವಿರುವ ಸ್ಲೊವೇಕಿಯಾದಲ್ಲಿ ಸೈನ್ಯಸಿದ್ಧತೆ ನಡೆಯುತ್ತಿರುವುದರಿಂದ ಗೊಂದಲಕ್ಕವಕಾಶವಿದೆ.

ಇಂಗ್ಲಾಂಡು ಜರ್ಮನಿ ನೌಕಾ ಒಪ್ಪಂದ

ಇಂಗ್ಲೆಂಡು ಮತ್ತು ತಮ್ಮೊಳಗಿನ ನೌಕಾ ಒಪ್ಪಂದವು ಹೋಯಿತೆಂದು ಹಿಟ್ಲರನು ಜಾಹೀರು ಮಾಡಿದ ಕುರಿತು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಪ್ರಶ್ನೆಗಳು ಕೇಳಲ್ಪಟ್ಟವು. ಪೋಲಂಡು ರುಮೇನಿಯಾಗಳಿಗೆ ಕೊಟ್ಟ ಭರವಸೆಯಿಂದ ನೌಕಾ ಒಪ್ಪಂದಕ್ಕಾವ ಭಂಗವೂ ಬರಲಿಲ್ಲವೆಂದೂ, ಜರ್ಮನಿಗೆ ಉತ್ತರಕೊಡುವ ವಿಷಯವನ್ನು ಸರಕಾರವು ಆಲೋಚಿಸುತ್ತಿರುವದೆಂದೂ ಮುಖ್ಯ ಮಂತ್ರಿಗಳು ಹೇಳಿದರು.

ಹಿಟ್ಲರನ ಹೊಸಗುಂಪು

ಬಾಲ್ಟಿಕ್ ರಾಷ್ಟ್ರಗಳನ್ನೂ ನೋರ್ವೇ, ಸ್ವೀಡನ್, ಡೆನ್‌ಮಾರ್ಕ ಮೊದಲಾದ ರಾಷ್ಟ್ರಗಳನ್ನೂ ಒಪ್ಪಂದದಲ್ಲಿ ಸೇರಿಸಿಕೊಂಡು ಉತ್ತರ ಯುರೋಪಿನಲ್ಲಿ ತಾಟಸ್ಥ್ಯ ಗುಂಪು (ನ್ಯೂಟ್ರಲಿಟಿ ಫ್ರಂಟ್) ಸ್ಥಾಪಿಸಬೇಕೆಂದು ಹಿಟ್ಲರನು ಪ್ರಯತ್ನಿಸುತ್ತಿದ್ದಾನೆ.

ಪೋಲೆಂಡಿನ ದೃಢ ನಿರ್ಧಾರ

ಹಿಟ್ಲರನಿಗೆ ಬೆಕ್‌ರವರ ಉತ್ತರ.

ಪೋಲಿಶ್ ಚೇಂಬರಿನಲ್ಲಿ ಭಾಷಣಮಾಡುತ್ತಾ ಪೋಲೆಂಡಿನ ವಿದೇಶ ಮಂತ್ರಿ ಕೊ. ಬೆಕ್ಕರು ಹಿಟ್ಲರನ ಬೇಡಿಕೆಗಳನ್ನು ಧಿಕ್ಕರಿಸಿದರು. ಡಾನ್ಜಿಂಗಿನಲ್ಲಿ ಜರ್ಮನರು ಅಧಿಕ ಸಂಖ್ಯೆಯಲ್ಲಿದ್ದರೂ ಅದು ನ್ಯಾಯವಾಗಿ ಪೋಲೆಂಡಿನ ಹಕ್ಕಿಗೊಳಪಟ್ಟದ್ದು. ಅದು ಪೋಲೆಂಡಿನ ಏಕಮಾತ್ರ ಮಹಾನದಿಯ ದಡದಲ್ಲಿದ್ದು, ಬಾಲ್ಟಿಕ್ ಪ್ರದೇಶಕ್ಕೂ ಪೋಲೆಂಡಿಗೂ ಮಧ್ಯದ ರೈಲು ಹಾದಿ ಮತ್ತು ಜಲಹಾದಿಯದರಲ್ಲಿದೆ. ಈ ಸತ್ಯವನ್ನು ಯಾವ ನೆಪವನ್ನೊಡ್ಡಿಯಾದರೂ ಅಲ್ಲಗಳೆಯಲು ಸಾಧ್ಯವಿಲ್ಲ. ಅಲ್ಲಿಯ ಜರ್ಮನರಿಗೆ ಉದ್ದೇಶಪೂರ್ವಕವಾಗಿ ಯಾವ ಅನ್ಯಾಯವನ್ನೂ ನಾವು ಮಾಡಿಲ್ಲ ಡಾನ್ಜಿಂಗಿನಲ್ಲಿ ನಮಗಿರುವ ವ್ಯಾಪಾರ ವಹಿವಾಟಿನ ಹಕ್ಕು ಮತ್ತು ಇತರ ಅಧಿಕಾರಗಳನ್ನು ನಾವೆಂದಿಗೂ ಬಿಟ್ಟುಕೊಡುವಂತಿಲ್ಲ. ಡಾನ್ಜಿಂಗಿನೊಂದು ಹಾದಿಯ ಅನುಕೂಲತೆ ಕೊಡುವ ವಿಷಯದಲ್ಲಿ ಪೋಲೆಂಡಿಗೆ ತನ್ನ ಸ್ಥಳದಲ್ಲೇ ತನ್ನ ಅಧಿಕಾರವನ್ನು ಕುಂಠಿತಗೊಳಿಸುವ ಆವಶ್ಯಕತೆಯಿಲ್ಲ. ಜರ್ಮನಿ-ಪೋಲಂಡ್ ಒಪ್ಪಂದವನ್ನು ಏಕಾಏಕಿ ಮುರಿದೊಗೆಯಲು ಹಿಟ್ಲರನಿಗೆ ಧಿಕಾರವಿಲ್ಲ. ಬ್ರಿಟಿಷ್ ಪೋಲಂಡ್ ಒಪ್ಪಂದವು ನ್ಯಾಯಪಾಲನೆಗಾಗಿಯಲ್ಲದೆ ಅನ್ಯ ಉದ್ದೇಶದಿಂದಾದುದಲ್ಲ ಹಿಟ್ಲರನು ಶಾಂತಿಯ ಅಪೇಕ್ಷೆಯನ್ನು ತೋರಿಸಿ ಶಾಂತಿದಾಯಕ ರೀತಿಯಿಂದ ನಡಕೊಂಡಲ್ಲಿ ಮಾತ್ರ ಮೇಲಿನ ವಿಷಯಗಳ ಕುರಿತು ಆಲೋಚಿಸಲು ಸಾಧ್ಯವಿದೆಯೆಂದು ಕೊಲ್ ಬೆಕ್ಕರು ಕಂಠೋಕ್ತವಾಗಿ ಹೇಳಿ ಪೋಲೆಂಡಿನವರಾದ ನಾವು ಬೆಲೆ ಕೊಟ್ಟು ಶಾಂತಿಯನ್ನು ಪಡೆಯುವದನ್ನು ಕಲಿತಿಲ್ಲವೆಂದು ಧೀರತನದಿಂದ ನುಡಿದರು ಈ ಅಭಿಪ್ರಾಯಗಳನ್ನೊಳಗೊಂಡ ಮೆಮೊರಾಂಡಮನ್ನೇ ಜರ್ಮನಿಗೊಪ್ಪಿಸಲಾಗಿದೆ.

ಪೋಲೆಂಡಿಗೆ ಇಟಲಿಯ ಎಚ್ಚರಿಕೆ.

ಬೆಕ್ಕರ ಭಾಷಣವು ಅಹಂಕಾರಪೂರ್ಣವಾದುದೆನ್ನುತ್ತಾ, ಮುಸಲಿನಿಯ ಬಾಯಿಯಂತಿರುವ ಸಿಗರ್ ಗ್ಯಾಡಾನು ಪೋಲಂಡು ಅನ್ಯರ ಪ್ರೇರಣೆಗೊಳಗಾಗದೆ ಸ್ವಂತ ಹಿತದ ದೃಷ್ಟಿಯಿಂದ ಪರಿಸ್ಥಿತಿಯನ್ನು ವಿಮರ್ಶಿಸಿ ಜರ್ಮನಿಯ ಹೇಳಿಕೆಯನ್ನು ಮನ್ನಿಸಬೇಕೆಂದು ಬರೆದಿದ್ದಾನೆ ಹಿಟ್ಲರನು ಡಾನ್ಜಿಂಗಿನ ನಾಝೀ ಧುರೀಣರೊಡನೆ ಪೋಲೆಂಡಿನ ಕುರಿತು ಆಲೋಚಿಸತೊಡಗಿದ್ದಾನೆ.

ರಿಬ್ಬನ್‌ಟ್ರಾಪ್ - ಸಿಯಾನೋ ಭೇಟಿ

ಜರ್ಮನಿಯ ವಿದೇಶೀ ಮಂತ್ರಿ ಹೆರ್. ವೋನ್‌ರಿಬ್ಬನ್ ಟ್ರೋಪನು ರೋಮಿಗಾಗಮಿಸಿ ಇಟಲಿಯ ಪರದೇಶ ಮಂತ್ರಿ ಕೌಂಟ್ ಸಿಯಾನೋ ಒಟ್ಟಿಗೆ, ಮುಂದಿನ ಧೋರಣೆಯ ಕುರಿತು ಚರ್ಚಿಸುತ್ತಿದ್ದಾನೆ. ಪೋಲೆಂಡಿನ ಕುರಿತು ನಿರ್ಧರಿಸುವುದೇ ಚರ್ಚೆಯ ಮುಖ್ಯ ವಿಷಯವಂತೆ, ಅವರೊಳಗಿನ ಮಾತುಕತೆಯಲ್ಲಿ, ಬ್ರಿಟಿಷರು ಜರ್ಮನಿಯನ್ನು ಸುತ್ತುಗಟ್ಟುವ ರಾಷ್ಟ್ರತಂಡವನ್ನು ರಚಿಸುತ್ತಿರುವದರ ಕುರಿತು ತೀರ್ಮಾನಿಸಲಿರುವುದರಿಂದ ಚರ್ಚೆಯು ಕೆಲವು ದಿನಗಳ ವರೆಗೆ ನಡೆಯಲಿರುವದು.

ಜನರಲ್ ಗ್ರೋನರರ ನಿಧನ

ಹಿಟ್ಲರರ ಮೊದಲಿನ ಆಳ್ವಿಕೆಯಲ್ಲಿ ಜರ್ಮನಿಯ ರಕ್ಷಣಾ ಮಂತ್ರಿಗಳೂ, ಕೈಸರ್ ಚಕ್ರವರ್ತಿಯನ್ನು ಸಿಂಹಾಸನ ತ್ಯಜಿಸುವಂತೆ ಎಚ್ಚರಿಸಿದವರೆಂದು ಪ್ರಸಿದ್ಧಿಪಟ್ಟವರೂ ಆದ ಜನರಲ್ ಗ್ರೋಯಿನರರು ಮೇ ೪ರಲ್ಲಿ ಮರಣ ಹೊಂದಿರುವರು.

ಚೀನಾ ಜಪಾನು ಯುದ್ಧ

ಸುಮಾರು ೩೬ ಜಪಾನಿ ವಿಮಾನಗಳು ಚುಂಗ್ ಕಿಂಗಿನ ಮೇಲೆ ಧಾಳಿಯಿಟ್ಟುದರಿಂದ ಸಾವಿರದ ವರೆಗೆ ಜನರು ಮೃತಪಟ್ಟರು. ಹತ್ತು ಸಾವಿರ ಚೀನೀ ಸೈನಿಕರೊಡನೆ ಐದು ದಿನಗಳ ವರೆಗೆ ಹೋರಾಡಿ ಟ್ಸಿಯಾನ್ ಎಂಬ ಪಟ್ಟಣವನ್ನು ಜಪಾನರು ವಶಪಡಿಸಿಕೊಂಡರು. ಸ್ವಾಟೋವಿನ ಮೇಲೆ ವಿಮಾನ ಮುತ್ತಿಗೆ ನಡೆದು ಹಲವು ನಾಗರಿಕರು ಮರಣಪಟ್ಟಿರುವರು.

ಚಕ್ರವರ್ತಿಗಳ ಕೆನಡಾ ಪ್ರಯಾಣ

ಚಕ್ರವರ್ತಿ ಆರನೇ ಜೋರ್ಜರು ರಾಣಿ ಮತ್ತು ಇತರ ಪರಿವಾರದವರೊಂದಿಗೆ 'ಎಂಪ್ರೆಸ್ ಓಫ್ ಆಷ್ಟ್ರಿಯಾ" ಎಂಬ ಹಡಗವನ್ನು ಹತ್ತಿ ಕೆನಡಾ ಸಂಚಾರಕ್ಕೆ ತಾ. 6ರಲ್ಲಿ ಹೊರಟಿರುವರು. ಅವರೊಟ್ಟಿಗೆ ರಾಜಕುಟುಂಬದ ಇತರ 30ಮಂದಿ ಇರುವರು. ಅರಸರು ಅಮೇರಿಕಕ್ಕೂ ಹೋಗುವರು.

ದಕ್ಷಿಣಾಫ್ರಿಕದ ಹಿಂದೀ ವಿರುದ್ಧ ಮಸೂದೆ

ದಕ್ಷಿಣಾಫ್ರಿಕದ ಯೂನಿಯನ್ ಎಸೆಂಬ್ಲಿಯಲ್ಲಿ ಹಿಂದೀಯರ ಮತ್ತು ಯುರೋಪಿಯಾನರ ವಾಸಸ್ಥಾನಗಳನ್ನು ವಿಭಾಗಿಸುವ ಮಸೂದೆಯೊಂದು ಬಂದಿತ್ತು. ಇದಕ್ಕೆ ಹಿಂದೀಯರು ವಿರೋಧವೊಡ್ಡಿ ಚಳವಳಿಸಿದ್ದರು. ಇಂಡಿಯಾ ಸರಕಾರವು ಆ ಕುರಿತು ಆಲೋಚಿಸಲಿಕ್ಕಿರುವುದೆಂದು ತಿಳಿಸಿರುವದರಿಂದ ಮಸೂದೆಯನ್ನು ದಕ್ಷಿಣಾಫ್ರಿಕದ ಸರಕಾರವು ಮುಂದರಿಸಿಟ್ಟಿರುವುದು.

ಬೊಂಬಾಯಿ

ಪ್ರಚಾರಕಾರ್ಯ

ಮೇ ಒಂಪನೆಯ ತಾರೀಕಿಗೆ ತೆರೆಯಲ್ಪಡಲಿರುವ ಸಾಕ್ಷರತಾ ಕ್ಲಾಸುಗಳ ಕುರಿತು ಜನರಲ್ಲಿ ಎಚ್ಚರಿಕೆಯನ್ನುಂಟುಮಾಡಲಿಕ್ಕಾಗಿ ಕಳೆದ ರವಿವಾರ ೭000 ಜನರಿಂದ ಕೂಡಿದ ಪ್ರಚಂಡ ಮೆರವಣಿಗೆಯೊಂದು, ಹತ್ತಾರು ಬೇಂಡುಗಳ ಸಮೇತ ಮುಂಬಯಿ ನಗರದ ಬೀದಿಗಳಲ್ಲೆಲ್ಲಾ ಸುತ್ತಾಡಿ ಚೌಪಾಟಿಯಲ್ಲಿ ಬಂದು ಸೇರಿತು. ಶ್ರೀ. ಮಾವಲಂಕರರವರು ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿ, ಅಕ್ಷರಾಭ್ಯಾಸದ ಆವಶ್ಯಕತೆಯನ್ನು ವಿವರಿಸಿ, ಪ್ರತಿಯೊಬ್ಬ ಪಟ್ಟಣಿಗನೂ ಸಾಕ್ಷರತೆಗೆ ಸಹಾಯಮಾಡುವುದು ತನ್ನ ಕರ್ತವ್ಯವೆಂದು ತಿಳಿದು ತನ್ನಿಂದ ಕೂಡಿದಷ್ಟು ಸಹಾಯವನ್ನೀಯಬೇಕೆಂದು ಕೇಳಿಕೊಂಡರು.

ಭಾಷಣ ~

ಫಿಲ್ಮ್ ಜರ್ನಲಿಸ್ಟ್ಸ್ ಕಾನ್ಫರೆನ್ಸಿನಲ್ಲಿ ಇದರ ಅಧ್ಯಕ್ಷರಾದ ಶ್ರೀ ಬಾಬುರಾವ ಪಟೇಲರವರು ಚಲಚಿತ್ರದ ಕುರಿತು ಭಾಷಣ ಮಾಡುತ್ತಾ "ನಮ್ಮಲ್ಲಿ ಹಣಕ್ಕೇನೂ ಕಡಿಮೆಯಿಲ್ಲ, ಆದರೆ ನಮ್ಮಲ್ಲಿ ಮಂದ ಬುದ್ಧಿಯ ಜನರೇ ಮೈಮರೆತು ಚಲಚ್ಚಿತ್ರಗಳಲ್ಲಿ ಮೆರೆಯುತ್ತಿರುವರಲ್ಲದೆ ಚುರುಕು ಬುದ್ಧಿಯವರೊಬ್ಬರೂ ಕಂಡುಬರುವುದಿಲ್ಲ. ಚಲಚ್ಚಿತ್ರ ಬರೆಹಗಾರನೆಂದರೆ ಚಿತ್ರ ಮಾರಾಟದವನಲ್ಲಿ ಚಿತ್ರ ಬರಹಗಾರ ಮತ್ತು ಚಿತ್ರ ಮಾರಾಟದವರೊಳಗಿನ ವ್ಯತ್ಯಾಸವನ್ನು ಕಂಡು ಹಿಡಿಯುವಷ್ಟು ಬುದ್ಧಿವಂತನಾಗಿ ರಬೇಕು ಚಿತ್ರ ಪ್ರದರ್ಶಕನು. ನಾವು ಟೀಕಾಕಾರರಲ್ಲದೆ ಮಾರಾಟದವರಲ್ಲ" ಎಂದು ಸ್ಫೂರ್ತಿದಾಯಕ ಮಾತುಗಳನ್ನಾಡಿದರು.

ಉಡುಪಿ

ಉಡುಪಿಯಲ್ಲಿ ವಸಂತೋತ್ಸವ— ಕನ್ನಡ ಸಾಹಿತ್ಯ ಪರಿಷತ್ತಿನವರು ವರ್ಷಂಪ್ರತಿ ನಡೆಸಿಕೊಂಡು ಬರುತ್ತಿರುವ ವಸಂತೋತ್ಸವವು ಈ ವರ್ಷ 5 ಕಡೆಗಳಲ್ಲಿ ಜರಗಿಸಲ್ಪಡುವವು. ಕೊಡಗು ಮತ್ತು ದಕ್ಷಿಣಕನ್ನಡ ಪ್ರಾಂತೀಯ ಸಮಿತಿಯ ಕಡೆಯಿಂದ ಉಡುಪಿಯಲ್ಲಿಯೂ ವಸಂತೋತ್ಸವವು ನಡೆಯುವ ವ್ಯವಸ್ಥೆಯಾಗಿದೆ. ಈಗಿನ ಪರ್ಯಾಯ ಮಠಾಧೀಶರಾದ ಶ್ರೀ ಫಲಿಮಾರು ಸ್ವಾಮಿಗಳವರು ಇದಕ್ಕೆ ತಕ್ಕ ಆಶ್ರಯವೀಯುವುದಾಗಿ ಅನುಗ್ರಹಿಸಿದ್ದರಿಂದ ಅವರ ಆಶ್ರಯದಲ್ಲಿ 'ಕಿರಿಯರ ಪ್ರಪಂಚ'ದ ನೇತೃತ್ವದಲ್ಲಿ ತಾ. 18, 19, 20 ಈ ಮೂರು ದಿನಗಳಲ್ಲಿ ವಿದ್ಯುದ್ದೀಪಗಳಿಂದಲಂಕೃತವಾದ ವಸಂತ ಮಹಲಿನಲ್ಲಿ ವಸಂತೋತ್ಸವವು ಜರಗತಕ್ಕದ್ದಾಗಿ ನಿರ್ಣಯಿಸಲಾಗಿದೆ. ಇದರ ಉದ್ಘಾಟನವನ್ನು ಮಾಡುವಂತೆ ಶ್ರೀ. ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರನ್ನು ಕೇಳಿಕೊಳ್ಳಲಾಗಿದೆ.

ಕಾರ್ಯಕ್ರಮ—ತಾ 18ನೇ ಮೇ, ಪ್ರಾತಃಕಾಲ 8 ಗಂಟೆಗೆ (1) ಉದ್ಘಾಟನೆ, ಶ್ರೀ. ಡಿ. ಮಂಜಯ್ಯ ಹೆಗ್ಗಡೆಯವರಿಂದ, ಸ್ವಾಗತ ಭಾಷಣ. ಶ್ರೀ ಶ್ರೀ. ಫಲಿಮಾರು ಸ್ವಾಮಿಗಳವರಿಂದ ಮತ್ತು ಪ್ರಾಂತಿಕ ಸಮಿತಿಯ ಪರವಾಗಿ ಶ್ರೀ. ಶಿವರಾಮ ಕಾರಂತರಿಂದ 'ಕಿರಿಯರ ಪ್ರಪಂಚದ' ಪರವಾಗಿ ಕಾರ್ಯದರ್ಶಿಗಳಿಂದ. (2) ಪರಿಷತ್ತಿನ ಅಧ್ಯಕ್ಷರ ಉತ್ತರ, ಶ್ರೀ. ಬಿ. ಎಂ. ಶ್ರೀಕಂಠಯ್ಯನವರಿಂದ. (3) ಭಾಷಣ- ವೃತ್ತಪತ್ರಿಕೆಗಳು, ಶ್ರೀ. ಕಡಂಗೋಡ್ಲು ಶಂಕರಭಟ್ಟರಿಂದ. ಸಾಯಂಕಾಲ 4-30ಕ್ಕೆ, (1) ಭಾಷಣ- 'ವೈಷ್ಣವದಾಸರು' ಶ್ರೀ. ಆರ್.ಆರ್. ದಿವಾಕರರಿಂದ. (2) ಕಾವ್ಯವಾಚನ, ಶ್ರೀ. ವಿ. ಸೀತಾರಾಮಯ್ಯ, ಎಂ. ಎ., ಅವರಿಂದ. (3) 'ಸಂಸ್ಕೃತ ಸಾಹಿತ್ಯ' ಶ್ರೀ. ಬಿ. ಎಂ. ಶ್ರೀಕಂಠಯ್ಯನವರಿಂದ. ರಾತ್ರಿ 9ಗಂಟೆಗೆ, ಸಂಗೀತ,ಮತ್ತು ಶ್ರೀ. ಶಿವರಾಮ ಕಾರಂತರೀದ 'ನಾಟಕ' ಎಂಬ ನಾಟಕ ವಾಚನ ಇತ್ಯಾದಿ ವಿನೋದಗಳು.

ತಾ. 19ನೇ ಬೆಳಗ್ಗೆ 8 ಗಂಟೆಗೆ (1) ಭಾಷಣ- ನಮ್ಮ ಫೆಡರಲ್ ಸರಕಾರದ ಮುಂದಿನ ಸಮಸ್ಯೆಗಳು, ಶ್ರೀ. ವಿ. ಸೀತಾರಾಮಯ್ಯನವರಿಂದ. (2) ಗೀತ, ಶ್ರೀ. ಆಲೂರು ವೆಂಕಟ್ರಾವ್, ಬಿ. ಎ., ಎಲ್. ಎಲ್. ಬಿ. ಯವರಿಂದ, ಸಾಯಂಕಾಲ 4-30ಕ್ಕೆ(1)ಹಳ್ಳಿಗಳ ಪುನರುದ್ಧಾರ ಭಾಷಣ, ಶ್ರೀ. ಉಳ್ಳಾಲ ಮಂಗೇಶರಾವ್, ಬಿ. ಎ., ಎಲ್. ಟಿ. ಯವರಿಂದ, (2) ಹೊಸಗನ್ನಡ ಸಾಹಿತ್ಯ-ಭಾಷಣ, ಶ್ರೀ. ದ. ರಾ. ಬೇಂದ್ರೆ, ಎಂ. ಎ., ಅವರಿಂದ, ಮಹಾಭಾರತವನ್ನು ಕನ್ನಡದಲ್ಲಿ ಚಿತ್ರಿಸಿದ ಕವಿಗಳು, ಶ್ರೀ.ಬಿ.ಎಂ. ಶ್ರೀಕಂಠಯ್ಯನವರಿಂದ. ರಾತ್ರಿ9ಕ್ಕೆ ಗಂಡಸ್ಕತ್ತಿಮತ್ತು ಗೊಂಬೆಸನ್ನಿವೇಶಗಳು ಚ್ಚಿ-ನಾಟಕಗಳು.

ತಾ. 20ನೇ ಬೆಳಗ್ಗೆ 9 ಗಂಟೆಗೆ, (1) ಯಕ್ಷಗಾನ, ಭಾಷಣ, ಶ್ರೀ. ಮುಳಿಯ ತಿಮ್ಮಪ್ಪಯ್ಯನವರಿಂದ. (2) ವೈಷ್ಣವದಾಸರು, ಭಾಷಣ, ಆರ್.ಆರ್. ದಿವಾಕರರಿಂದ. (3) ಗೀತೆ, ಭಾಷಣ ಶ್ರೀ. ಆಲೂರು ವೆಂಕಟ್ರಾಯರಿಂದ. ಸಾಯಂಕಾಲ 4-30ಕ್ಕೆ, (1) ಜನಪದಸಾಹಿತ್ಯ, ಶ್ರೀ. ದ. ರಾ. ಬೇಂದ್ರೆಯವರಿಂದ. (2)ನೃತ್ಯ, ಶ್ರೀ.ಕೆ. ಶಿವರಾಮಕಾರಂತರಿಂದ (3) ಕಲೆ ಮತ್ತು ಜೀವನ, ವಿ. ಸೀತಾರಾಮಯ್ಯನವರಿಂದ. (೪) ಉಪಸಂಹಾರ, ರಾತ್ರಿ 9 ಗಂಟೆಗೆ ಯಕ್ಷಗಾನ ಕಾಲಕ್ಷೇಪ, ಪಂಡಿತ ಸಾಬಾಜಿ ಶ್ರೀನಿವಾಸ ಆಚಾರ್ ಮೊದಲಾದವರಿಂದ.

ವಿ. ಸೂ.—ಈ ಕಾರ್ಯಕ್ರಮದಲ್ಲಿ ಅಲ್ಪಸ್ವಲ್ಪ ಬದಲಾವಣೆಗಳು ಆಗಲೂ ಬಹುದು.

ವರ್ಗಾವರ್ಗಿ—ಸ್ಥಳೀಯ ಬೋರ್ಡ ಹೈಸ್ಕೂಲಿನ ಸೈನ್ಸ್ ಟೀಚರ್ ಶ್ರೀ. ಕೆ. ಸಂಜೀವಶೆಟ್ಟಿ ಬಿ. ಎ. ಎಲ್. ಟಿ.ಯವರು ಬೈಂದೂರು ಸೆಕೆಂಡ್ರಿ ಶಾಲೆಯ ಹೆಡ್ಮಾಸ್ತರರಾಗಿಯೂ ಶ್ರೀ. H. ತ್ರ್ಯಂಬಕ ರಾಯರು ಬೈಂದೂರಿನ ಸಹಾಯಕರಾಗಿಯೂ ಶ್ರೀ. ಕೆ. ಮಂಜುನಾಥ ಮಧ್ಯಸ್ಥ ಬಿ. ಎ. ಎಲ್. ಟಿ. ಯವರು ಮುಲ್ಕಿ ಬೋರ್ಡ ಹೈಸ್ಕೂಲಿನ ಸಹಾಯಕರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಸಾಕ್ಷರತಾ ಪ್ರಚಾರ— ತಾ. 3-5-29ರಲ್ಲಿ ಗಾಂಧೀ ಮೈದಾನದಲ್ಲಿ ಶ್ರೀ. ಪಿ. ವಿ. ಉಪಾಧ್ಯಾಯ, ಬಿ. ಎ. ಎಲ್.ಎಲ್. ಬಿ.ಯವರು ಸಾಕ್ಷರತಾ ಪ್ರಚಾರದ ಕುರಿತು ಶ್ರೀ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಒಂದು ಭಾಷಣವಿತ್ತರು.

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಕಾಣಿಮಠದ ಕಟ್ಟಡ, ಉಡುಪಿ

ಬ್ರಾಂಚ್:—ಹೂವಮಾರ್ಕೆಟಿನ ಬಳಿ, ಮಂಗಳೂರು.

ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ.

ಪ್ರೊಪ್ರೈಟರ್:—ಎಚ್. ಗೋಪಾಳ ನಾಯಕ್.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲಿರಾ ಪಿಲ್ಸ್	ಭೈರವ ಮಾತ್ರೆಗಳು
ಕೊಲರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

New Kanara Swadeshi Laundry

GAMDEVI, BOMBAY.

A reliable house for dry cleaning deing all sorts of rich garments.

ದಿ ನ್ಯೂ ಕೆನರಾ ಸ್ವದೇಶಿ ಲಾಂಡ್ರಿ,

ಗಾಮದೇವಿ — ಮುಂಬಾಯಿ.

ಉತ್ತಮ ತರದ ಮಡಿ, ಉತ್ಕೃಷ್ಟ ರೀತಿಯ ರಂಗು— ಇವುಗಳಿಗೆ ಪ್ರಸಿದ್ಧವಾದ ನಿಲಯ.

ವಿ. ಸೂ.—ಪರವೂರುಗಳಿಂದ ಉತ್ತಮ ಜರತಾರಿ ಸೀರೆ, ವಸ್ತ್ರ ಉಡುಗೆ ತೊಡಿಗೆಗಳ ರಂಗು ಹಾಕುವ, ಡ್ರೈಕ್ಲೀನಿಂಗ್ ವಗೈರೆ ಕಾರ್ಯವನ್ನು ಟಪ್ಪಾಲು ದ್ವಾರಾ ಸ್ವೀಕರಿಸಿ ಸಕಾಲದಲ್ಲಿ ತಯಾರಿಸಿ ತಲುಪಿಸುವೆವು.

ಎಸ್ ಆರ್. ಶೆಟ್ಟಿ, ಪ್ರೊಪ್ರೈಟರ್. G. V. Mahale. Manager.

ಮೋಟರ್ ಅಪಘಾತ—ತಾ 8.5-'39 ರಲ್ಲಿ ಗುಂಡಿಬೈಲಿಗಿಂತ ಸ್ವಲ್ಪ ಮುಂದೆ ಮೋಟಾರು ಕಾರಿನ ಅಡಿಗೆ ಸುಮಾರು 8 ವರ್ಷ ಪ್ರಾಯದ ಒಂದು ಮಗು ಬಿದ್ದು ಮೃತವಾಗಿರುವುದೆಂದು ತಿಳಿಸಲು ವಿಷಾದವಾಗುತ್ತದೆ.

ಬಾತ್ಮಿ—ಬಸ್ಸು ಮತ್ತು ಟೇಕ್ಸಿಗಳನ್ನು ಟೌನಿನ ಒಳಗೂ ಅದೇ ಸ್ಪೀಡ್‌ನಿಂದ ಓಡಾಡಿಸಲಾಗುತ್ತಿದೆಯೆಂದೂ ಇದರಿಂದ ಜನಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದೆಯೆಂದೂ ಸ್ಪೀಡ್ ಲಿಮಿಟಿನ ಕುರಿತು ಸಂಬಂಧಪಟ್ಟವರು ಎಚ್ಚರತೆಗೆದುಕೊಳ್ಳಬೇಕೆಂದೂ ಅರ್ಥವುಳ್ಳ ಬಾತ್ಮಿಯೊಂದು ನಮ್ಮ ಬಳಿಗೆ ಬಂದಿದೆ.

ಕುಂದಾಪುರ—ಡಾಕ್ಟರ್ ವೈ. ರಾಜುಶೆಟ್ಟಿ, ಎಂ. ಬಿ. ಬಿ. ಎಸ್. (Eye Specialist) ಇವರು ಇಲ್ಲಿ ತಾ. 1ರಿಂದ ಹೊಸತಾಗಿ ಡಿಸ್ಪೆನ್ಸರಿಯೊಂದನ್ನು ತೆರೆದಿರುತ್ತಾರೆ. ಇವರು ಎಂ. ಬಿ. ಬಿ. ಎಸ್. ಪಾಸಾಗಿ ಸ್ವಲ್ಪ ಸಮಯ ಮದ್ರಾಸಿನಲ್ಲೇ ವೈದ್ಯಕೀಯ ವೃತ್ತಿ ನಡೆಸುತ್ತಿದ್ದು ಅನುಭವಶಾಲಿಗಳಾಗಿರುತ್ತಾರೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಪೋಸ್ಟ್ ಗ್ರಾಜುವೇಟ್ ತರಬೇತಿ ಪಡೆದು ಬಂದವರಿರುತ್ತಾರೆ. ಸರಳ ಮತ್ತು ಶಾಂತ ಸ್ವಭಾವದ ಈ ತರುಣ ಡಾಕ್ಟರರು ಜನಸೇವಾಸಕ್ತರಾಗಿ, ಜನಾನುರಾಗ ಪಡೆದು ತನ್ನ ಉದ್ಯೋಗದಲ್ಲಿ ಯಶಸ್ಸು ಪಡೆಯಲೆಂದು ಹಾರೈಸುತ್ತೇವೆ.

ಪ್ರಾಥಮಿಕ ವಿದ್ಯಾಭ್ಯಾಸ

ತಾಲೂಕು ಎಡ್ವೈಸರಿ ಕಮಿಟಿಗಳು

ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲಿನ ರದ್ದತಿಯಾಗಿ ಪ್ರಾಥಮಿಕ ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ ಪ್ರತಿ ತಾಲೂಕಿನಲ್ಲೂ ತಾಲೂಕಾ ಎಡ್ವೈಸರಿ ಕಮಿಟಿಗಳು ರಚನೆಯಾಗಿವೆ. ನಮ್ಮ ಜಿಲ್ಲೆಯ ಕಮಿಟಿ ಸದಸ್ಯರನ್ನು ಜಿಲ್ಲಾ ಕಲೆಕ್ಟರರು ಈ ರೀತಿಯಾಗಿ ಆರಿಸಿರುತ್ತಾರೆ.

ಮಂಗಳೂರು ತಾಲೂಕು— ಶ್ರೀಗಳಾದ ಎಂ. ಎಸ್. ಕೃಷ್ಣ (ಅಧ್ಯಕ್ಷರು) ಕೆ. ಆರ್. ಕಾರಂತ್, ಬಿ. ವೆಂಕಟರಾಯ ಬಾಳಿಗ, ಕೆ. ಈಶ್ವರ, ಜೋಸೆಫ್ ಸಾಲ್ಡಾನ, ಡಾ. ಕೆ. ವಿಟ್ಠಲ ಶೆಟ್ಟಿ, ಮಂಗಳೂರು ರೇಂಜಿನ ಡಿಪ್ಯುಟಿ ಇನ್ಸ್‌ಪೆಕ್ಟರರು, ಕೆನರಾ ಗರ್ಲ್ಸ್ ರೇಂಜಿನ ಸಬ್ ಅಸಿಸ್ಟಂಟ್ ಇನ್ಸ್‌ಪೆಕ್ಟ್ರೆಸ್, ತಹಸೀಲ್ದಾರರು, ಎಸ್. ಕೃಷ್ಣನಾಯಕ್, ಎನ್. ರಾಮರಾವ್, ರೆವರೆಂಡ್ ಕೆ. ಆರ್. ಕರುಣಾಕರ್, ಎಂ. ಮಹಮ್ಮದ್ ಸಾಹೇಬ್ ಬಹದ್ದೂರ್, ಶ್ರೀಮತಿ ಶಾಂಭವಿ ಆರ್. ಪೂಂಜ.

ಪುತ್ತೂರು ತಾಲೂಕು— ಶ್ರೀಗಳಾದ ಎಂ. ಶಿವರಾವ್ (ಅಧ್ಯಕ್ಷ) ಡಿ. ಮಂಜಯ್ಯ ಹೆಗ್ಗಡೆ, ಪುತ್ತೂರು ರೇಂಜಿನ ಡಿಪ್ಯುಟಿಇನ್ಸ್‌ಪೆಕ್ಟರರು, ಕೆನರಾ ಗರ್ಲ್ಸ್ ರೇಂಜಿನ ಸಬ್ ಅಸಿಸ್ಟಂಟ್ ಇನ್ಸ್‌ಪೆಕ್ಟ್ರೆಸ್, ತಹಸೀಲ್ದಾರ್, ಬಿ. ರಮಾನಾಥ, ಎನ್. ಕೆ. ಭಿಡೆ, ಮಿಸ್. ಎಲಿಜಬೆತ್ ಮತಾಯಿಸ್, ರಾವ್ ಸಾಹೇಬ್ ಸ್ವಾಮಿ ಲಕ್ಷ್ಮೀನಾಥ್ ಅರಸು, ಹಗಲ್ವಾಡಿ ಮೊಕದ್ದುಮು ಇಸ್ಮಾಯಿಲ್ ಸಾಹೇಬ್, ಎಂ. ಸದಾಶಿವರಾವ್.

ಕಾಸರಗೋಡು ತಾಲೂಕು— ಖಾನ್ ಬಹದ್ದೂರು ಮಹಮ್ಮದ್ ಅಬ್ದುಲ್ ಸಾಹೇಬ್ ಬಹದ್ದೂರು (ಅಧ್ಯಕ್ಷ) ಕಾಸರಗೋಡು ರೇಂಜಿನ ಡಿಪ್ಯುಟಿ ಇನ್ಸ್‌ಪೆಕ್ಟರರು, ಕೆನರಾ ರೇಂಜಿನ ಸಬ್ ಅಸಿಸ್ಟಂಟ್ ಇನ್ಸ್‌ಪೆಕ್ಟ್ರೆಸ್, ಕೆನ್ನನೂರು ರೇಂಜಿನ ಸಬ್ ಅಸಿಸ್ಟಂಟ್ ಇನ್ಸ್‌ಪೆಕ್ಟ್ರೆಸ್, ತಹಸೀಲ್ದಾರ್, ಕೆ. ಕೃಷ್ಣ ಹೆಗ್ಡೆ, ಸಿ. ಕೆ. ರಾಘವನ್ ನಂಬಿಯಾರ್, ಅಬಿಲ್ ಸಾಮುವೇಲ್ ರಾಲೆಟ್, ಬಿ. ನಾರಾಯಣ ಭಟ್, ಶ್ರೀಮತಿ ಹೇಮಲತಾ ಶೆಟ್ಟಿ, ಪಿ. ಅಹಮ್ಮದ್ ಸಾಹೇಬ್ ಬಹದ್ದೂರ್, ಕೆ. ರಾಮಕೃಷ್ಣರಾವ್.

ಉಡುಪಿ ತಾಲೂಕು—ಶ್ರೀಗಳಾದ ಕೆ. ಜಿ. ಎಲ್ಲಾರೆ (ಅಧ್ಯಕ್ಷ) ಅರೂರು ಲಕ್ಷ್ಮೀನಾರಾಯಣ ರಾವ್, ಡಿಪ್ಯುಟಿ ಇನ್ಸ್‌ಪೆಕ್ಟರ್, ಕೆನರಾ ಗರ್ಲ್ಸ್ ರೇಂಜಿನ ಸಬ್ ಅಸಿಸ್ಟಂಟ್ ಇನ್ಸ್‌ಪೆಕ್ಟ್ರೆಸ್, ತಹಸೀಲ್ದಾರ್, ಜಿ. ಸದಾಶಿವರಾವ್, ಎಂ. ವಿಟ್ಠಲ ಕಾಮತ್, ರೆ. ಫಾ. ಡಿ. ಕೊಲೋಸೊ, ಮಹಮ್ಮದ್ ಉಸ್ಮಾನ್ ಸಾಹೇಬ್, ಶ್ರೀಮತಿ ಲೀಲಾಬಾಯಿ ಕಾಮತ್.

ಕುಂದಾಪುರ ತಾಲೂಕು— ಶ್ರೀಗಳಾದ ಎಚ್. ಮಾಧವಪ್ಪಯ್ಯ (ಅಧ್ಯಕ್ಷ) ಡಿಪ್ಯುಟಿ ಇನ್ಸ್‌ಪೆಕ್ಟರ್, ಸಬ್ ಅಸಿಸ್ಟಂಟ್ ಇನ್ಸ್‌ಪೆಕ್ಟ್ರೆಸ್ ತಹಸೀಲ್ದಾರ್, M. ವಾಸುದೇವ ಮಲ್ಯ, ಕೆ. ವೆಂಕಪ್ಪ ಶೆಟ್ಟಿ, ಕೆ. ಅಬ್ದುಲ್ ಖಾದರ್ ಸಾಹೇಬ್ ಬಿ. ಶಿವರಾಮ ಶೆಟ್ಟಿ, ರೆ. ಫಾ. ಬಿ. ರೆಬೆಲ್ಲೊ, ಎಚ್. ಸುಶೀಲಾ ಬಾಯಿ ಪೈ.

ಕಾರ್ಕಳ ತಾಲೂಕು— ಎಚ್. ಎಸ್. ಹುಸೈನ್ ಸಾಹೇಬ್ (ಅಧ್ಯಕ್ಷ) ಡಿಪ್ಯುಟಿ ಇನ್ಸ್‌ಪೆಕ್ಟರ್, ಸಬ್ ಅಸಿಸ್ಟಂಟ್ ಇನ್ಸ್‌ಪೆಕ್ಟ್ರೆಸ್, ತಹಸೀಲ್ದಾರ್, ಕೆ. ಎಸ್. ರಾಮಕೃಷ್ಣ, ಎನ್. ಎಂ. ಅನ್ಯಂತಾಚಾರ್ಯ, ಕೆ. ಪಿ. ಕಾಮತ್, ಡಿ. ವೆಂಕಟೇಶ ಭಟ್, ರೆ. ಫಾ. ಎ. ಕೊಲೋಸೊ, ಎಚ್. ಎ. ಪಿ. ಜೈನ್, ಶ್ರೀಮತಿ ಎಸ್. ಭವಾನಿ ಬಾಯಿ.

ಆಯಾಯ ತಾಲೂಕಿನ ಡಿಪ್ಯುಟಿ ಇನ್ಸ್‌ಪೆಕ್ಟರರೇ ಕಮಿಟಿಯ ಕಾರ್ಯದರ್ಶಿಗಳಾಗಿರತಕ್ಕದ್ದು—

ಸ್ವೀಕಾರ ವಿಮರ್ಶೆ

ಕಥಾವಳಿ—ಉತ್ತಮ ಕಥೆಗಳ ಮಾಸಪತ್ರಿಕೆ-ಒಳಪೇಟೆ-ಬೆಂಗಳೂರು ಸಿಟಿ-ಸಂಪಾದಕರು ಮತ್ತು ಪ್ರಕಾಶಕರು-ಒಬಿಟಿ ವೆಂಕಟನಾರಾಯಣ ಗುಪ್ತ-ಬಿಡಿ ಪ್ರತಿಯೊಂದಕ್ಕೆ ಒಂದಾಣೆ, ವಾರ್ಷಿಕ ಚಂದಾ ರೂ. ೧—೦—೦.

ಕಥಾವಳಿಯ ಮೇ ತಿಂಗಳ ಸಂಚಿಕೆ ನಮ್ಮ ಕೈಸೇರಿದೆ. ಇದು ಕಾರ್ಯಕ್ಕೆ ತೊಡಗಿ ಒಂದು ವರ್ಷ ಸಮಾಪಿಸುತ್ತಿದೆ. ಇಷ್ಟೊಂದು ಸ್ವಲ್ಪ ಕಾಲದಲ್ಲೇ ಅದೊಂದು ತನ್ನ ಗುಣವಿಶೇಷತೆಯಿಂದ ಕನ್ನಡಿಗರ ಪ್ರೇಮ ಆದರಣೆಗೆ ಪಾತ್ರವಾಗಿ ಉತ್ತಮಸ್ಥಾನವನ್ನು ಹೊಂದಿರುವುದನ್ನು ನೋಡಿದರೆ, ಕಥಾವಳಿಯ ಭಾವೀಜೀವನವು ಭದ್ರವಾದ ತಳಹದಿಯ ಮೇಲೆ ನಿಂತಿದೆಯೆನ್ನಬಹುದು, ಹೊಸ ಹೊಸ ಭಾವನೆಯ ವಿಚಾರವಿಮರ್ಶಾತ್ಮಕವಾದ ಹಲವು ಕಥೆಗಳು ಸೊಗಸಾಗಿವೆ. ಶ್ರೀ. ಎಚ್. ಆರ್. ದಾಸರಾವ್ ಮೊದಲಾದ ತರುಣ ಕವಿಗಳ ಉತ್ತಮಕವಿತೆಗೆ ಆಸ್ಪದವಿತ್ತಿದೆ. ವಿಷಯಸಂಗ್ರಹ ದೃಷ್ಟಿಯಿಂದ, ಬೆಲೆ ಒಂದಾಣೆಯು ಕಡಿಮೆಯೆಂದೇ ಹೇಳಬಹುದು. ಕಥಾವಳಿಯು ಬೆಳೆಯಲಿ; ಬಾಳಲಿ.

ಮುಸ್ಲಿಮ್ ಲೀಗಿನ ಯೋಗ್ಯತೆ!

"ಮಜ್ಲಿಸ್ –ಏ– ಅಹ್ರಾರ್ ಹಿಂದ್" ಸಂಸ್ಥೆಯ ಅಧ್ಯಕ್ಷರಾದ ಮೌಲಾನಾ ಹಬಿಬುರ್ ರಹ್ಮಾನ್‌ರವರು ಮುಸ್ಲಿಂ ಲೀಗಿನ ಧುರೀಣರಿಗೆ ಇಸ್ಲಾಮಿನ ಪರವಾಗಿ ವಾದಿಸುವ ಯೋಗ್ಯತೆಯೇ ಇಲ್ಲವೆನ್ನುತ್ತಿದ್ದಾರೆ. 'ಮುಸ್ಲಿಂ ಲೀಗಿನ ಧುರೀಣರು ಎಲ್ಲಾ ಮಹಮ್ಮದೀಯರೂ ಒಕ್ಕಟ್ಟಾಗಬೇಕೆಂದು ಕರೆಯುವ ದೂರೆನ್ನು, ಹಿಂದುಸ್ಥಾನದವರನ್ನೋ—ಪ್ರಪಂಚದ ಎಲ್ಲಾ ಮುಸ್ಲೀಮರನ್ನೋ?' ಎಂದು ಮೌ. ರಹ್ಮಾನರು ಪ್ರಶ್ನಿಸಿ, ಸರ್. ಸಿಕಂದರ್ ಹಯತ್‌ಖಾನರಂಥವರೇ ಕಳೆದ ಯುದ್ಧದಲ್ಲಿ ಟರ್ಕಿಯ ವಿರುದ್ಧ ರಾಷ್ಟ್ರಗಳೊಡನೆ ಸೇರಿ ಅದರ ಅಧಃಪತನವನ್ನು ಸಾಧಿಸಿರುವಾಗ ಈಗ ತಾವು ಇಸ್ಲಾಮಿನ ಪ್ರತಿನಿಧಿಗಳೆಂದು ನಟಿಸುವದು ತೀರಾ ಹಾಸ್ಯಾಸ್ಪದವೆನ್ನುತ್ತಿದ್ದಾರೆ.

ಮೌಲಾನಾ ರಹ್ಮಾನರು ಸಂಧಿಗ್ಧಕಾಲದಲ್ಲಿ ಅವಸರಪಟ್ಟು ಮೇಲಿನಂತಾಡಿರುವರೆನ್ನಬಹುದು. ಕಳೆದ ಯುದ್ಧದ ಕಾಲದಲ್ಲಿ ಇದ್ದಂತೆ ಸರ್. ಸಿಕಂದರರು ಈ ಕಾಲದಲ್ಲಿಲ್ಲ; ಇನ್ನು ಮುಂದಿನ ಯುದ್ಧದಲ್ಲಿ ಯಾವ ರೂಪಾಂತರಹೊಂದುವರೆಂಬುದನ್ನು ನೋಡಿಕೊಳ್ಳದೆ ಅವಸರಪಡುವ ಅಗತ್ಯವೇನಿತ್ತು?

ರಾಜಕೀಯದ ಕಠಿಣ ಸಮಸ್ಯೆಗಳನ್ನು ಬಿಡಿಸಬಲ್ಲ ಲಿಟ್ವಿನೋಫ್!

ರಶಿಯಾದ ಮಂತ್ರಿಸ್ಥಾನಕ್ಕೆ ರಾಜಿಕೊಟ್ಟಿದ್ದಾನೆ.

ಸೋವಿಯಟ್ ರಷ್ಯಾ ಸರಕಾರದ ಪರದೇಶದ ಮಂತ್ರಿ ಮೇಕ್ಸಿಮ್ ಲಿಟ್ವಿನೋಫನು ಮೊನ್ನೆ ತಾನೇ ಅನಿರೀಕ್ಷಿತವಾಗಿ ತನ್ನ ಪದವಿಗೆ ರಾಜೀನಾಮೆಯಿತ್ತಿದ್ದಾನೆ. ಇಂಗ್ಲೆಂಡ್, ರಷ್ಯಗಳೊಳಗೆ ಸಂಧಾನದ ಮಾತುಕತೆ ನಡೆಯುತ್ತಿದೆ, ತೀರ್ಮಾನವಾಗಿಲ್ಲ; ಇಂಥಾ ಸಮಯದಲ್ಲಿಯೇ ರಷ್ಯದ ಮಂತ್ರಿ ರಾಜಿನಾಮೆ ಕೊಡುವದೆಂದರೇನು ಎಂದು ಲೋಕವಿಡೀ ಆಶ್ಚರ್ಯಗೊಂಡಿದೆ. ಕಾರಣವೇನೆಂಬುದು ಪ್ರಕಟವಾಗಿಲ್ಲ. ರಷ್ಯಾ ಸರಕಾರವದನ್ನು ಗುಟ್ಟಿನಲ್ಲಿರಿಸಿದೆ. "ನಮ್ಮ ವಿರೋಧೀ ತಂಡದವರಿಗೆ ಬಿದ್ದ ಮತ್ತೊಂದು ಹೊಡೆತವಿದು." ಎಂದು ಜರ್ಮನಿ ಇಟಲಿಗಳು ಸಂತೋಷಗೊಂಡಿವೆ.

ಕ್ರಾಂತಿಕಾಲದ ಸಾಹಸಿ

ಮೇಕ್ಸಿಮ್ ಲಿಟ್ವಿನೋಫರು 1875ರಲ್ಲಿ ರಷ್ಯದ ಬೀಲೋಸ್ಟೋಕ್ ಎಂಬಲ್ಲಿ ಹುಟ್ಟಿದರು. ಅವರು ಹುಟ್ಟು ಯೆಹೂದಿಯರಿದ್ದು, ವಲ್ಲಾಚ್ ಎಂಬ ಅವರ ಕುಟುಂಬವು ಪ್ರಸಿದ್ಧವಾದುದು. ಬಾಲ್ಯದಲ್ಲವರು ಒಂದು ಸೆಕೆಂಡರಿ ಶಾಲೆಯಲ್ಲಿ ವಿದ್ಯಾಭ್ಯಾಸ ಹೊಂದಿ, ಆ ಮೇಲೆ ಝಾರ್ ಚಕ್ರವರ್ತಿಯ ಸೈನ್ಯದಲ್ಲಿ ಸೇರಿಕೊಂಡರು. ಲೆನಿನ್ನರ ನೇತೃತ್ವದಲ್ಲಿ ಕ್ರಾಂತಿಯಾರಂಭವಾದಾಗ 22ವರ್ಷ ಪ್ರಾಯದ ಲಿಟ್ವಿನೋಫರು ಅದರಲ್ಲಿ ಸೇರಿಕೊಂಡು ಲೆನಿನ್ನರ ವಿಶ್ವಾಸಪಾತ್ರರಾದ ಕೆಲವೇ ಮಂದಿ ಧುರೀಣರಲ್ಲಿ ಒಬ್ಬರಾದರು. ರಷ್ಯ ಕ್ರಾಂತಿಕಾರರಿಗೆ ಬೇರೆಯೇ ಅಡ್ಡ ಹೆಸರಿಟ್ಟುಕೊಳ್ಳುವ ಚಟವೊಂದಿತ್ತು. ಅಂತೆಯೇ ಲಿಟ್ವಿನೋಫರೂ 'ನೋಮ್ ಡಿಗ್ವೆರ್ರೀ' ಎಂಬ ಸ್ವಂತ ನಾಮವನ್ನಿಟ್ಟುಕೊಂಡು ಕ್ರಾಂತಿಗಾಗಿ ಕೆಲಸಮಾಡಿದರು. ಅವರು ಗುಟ್ಟಿನಲ್ಲಿ ಮುದ್ರಣಾಲಯಗಳನ್ನು ಸ್ಥಾಪಿಸಿ, ಸರಕಾರೀ ವಿರುದ್ಧ ಪತ್ರಿಕೆಗಳನ್ನು ಹೊರಡಿಸಿದುದರ ಪರಿಣಾಮವಾಗಿ 1901ರಲ್ಲಿ ಕಾರಾಗೃಹ ಸೇರಬೇಕಾಯಿತು. ಎರಡು ವರ್ಷ ಜೈಲಿನಲ್ಲಿದ್ದು, ಅಲ್ಲಿಂದ ಪರಾರಿಯಾಗಿ ತಲೆತಪ್ಪಿಸಿಕೊಂಡು ಕೆಲಸಮಾಡಿ 1907ರಲ್ಲಿ ಪೋಲೀಸರ ಕಣ್ಣು ತಪ್ಪಿಸಿ ಇಂಗ್ಲೆಂಡಿಗೋಡಿಹೋದರು. ಅಲ್ಲಿ ಸುಮಾರು ಹತ್ತು ವರ್ಷಗಳ ವರೆಗೆ ಕ್ಲಾರ್ಕರಾಗಿದ್ದುಕೊಂಡು, ರಶ್ಯನ್ ಭಾಷೆಗಳಲ್ಲಿ ಪಾಠ ಹೇಳುವ ಅಧ್ಯಾಪಕರಾಗಿದ್ದುಕೊಂಡು ಹೇಗೂ ದಿನದೂಡಿದರು.

ಸೋವಿಯೆಟ್ ಸರಕಾರದ ಪ್ರತಿನಿಧಿ

ರಶ್ಯಾ ಕ್ರಾಂತಿಯು ಜಯಶೀಲವಾಯಿತು; ಸೋವಿಯೆಟ್ ಸರಕಾರದ ಸ್ಥಾಪನೆಯಾಯಿತು. ಹೊಸ ಸರಕಾರವು ಸ್ಥಾಪನೆಗೊಂಡ ಕೆಲವು ತಿಂಗಳುಗಳಲ್ಲಿ ಇಗ್ಲಂಡಿನಲ್ಲಿ ತನ್ನ ಪ್ರತಿನಿಧಿಯಾಗಿ ಲಿಟ್ವಿನೋಫರನ್ನು ನೇಮಿಸಿತು. ಆದರೆ ಅಲ್ಲಿ ಮೊದಲಿದ್ದ ರಶ್ಯನ್ ಪ್ರತಿನಿಧಿಗಳು ಕ್ರಾಂತಿಯನ್ನಾಗಲೀ ಲಿಟ್ವಿನೋಫರ ಪ್ರತಿನಿಧಿತ್ವವನ್ನಾಗಲೀ ಒಪ್ಪಿಕೊಳ್ಳಲಿಲ್ಲ. ಆದರ ಲಿಟ್ವಿನೋಫರು ಬೇರೆಯೇ ಆಫೀಸನ್ನು ತೆರೆದು ಹೊಸ ಸರಕಾರದ ಪರವಾಗಿ ಕೆಲಸಮಾಡಹತ್ತಿದರು. ಅವರೀ ಕೆಲಸವಾರಂಭಿಸಿದ್ದರು ಮಾತ್ರ, ಅಷ್ಟರಲ್ಲಿ ಪೆಟ್ರೋಗ್ರಾಡಿನ ಬ್ರಿಟಿಷ್ ನೌಕಾ ಅಧಿಕಾರಿಗಳ ಕೊಲೆಯಾದುದರಿಂದ ಇಂಗ್ಲೆಂಡ್ ಸರಕಾರವು ಲಿಟ್ವಿನೋಫರನ್ನು ದಸ್ತಗಿರಿಮಾಡಿ ಬ್ರಿಕ್ಸ್ಟನ್ ಸೆರೆಮನೆಯಲ್ಲಿಟ್ಟಿತು. ಇದಕ್ಕೆ ಪ್ರತಿಯಾಗಿ ರಷ್ಯದ ಬ್ರಿಟಿಷ ಏಜಂಟರನ್ನು ಸೋವಿಯೆಟ್ ಸರಕಾರವು ಕೈದುಮಾಡಿದುದರಿಂದ, ಕೊನೆಗೆ ಎರಡು ಸರಕಾರಗಳೂ ಕೈದಿಗಳನ್ನು ಪರಸ್ಪರ ಬದಲಾವಣೆಮಾಡಿಕೊಂಡು ಲಿಟ್ವಿನೋಫರು ರಷ್ಯಕ್ಕೆ ಮರಳುವಂತಾಯಿತು.

ಪರದೇಶಗಳ ಮಂತ್ರಿ

ರಷ್ಯಕ್ಕೆ ಹಿಂತಿರುಗಿದ್ದ ಲಿಟ್ವಿನೋಫರಿಗೆ ಸೋವಿಯಟಿನ ಸಹಾಯಕ ವಿದೇಶಿ ಮಂತ್ರಿಸ್ಥಾನ ದೊರೆಯಿತು. ಆಗ ವಿದೇಶಿ ಮಂತ್ರಿಯಾಗಿದ್ದ ಚಿಚೆರಿನ್‌ರವರು 1930ರಲ್ಲಿ ರಾಜಿನಾಮೆಕೊಟ್ಟರು. ಅಂದಿನಿಂದ ಇದೇ ತಾ. 3-5-39ರ ವರೆಗೂ ಲಿಟ್ವಿನೋಫರೇ ರಶ್ಯದ ವಿದೇಶಮಂತ್ರಿಯಾಗಿದ್ದುಕೊಂಡು ಅತ್ಯಂತ ಚಾಣಾಕ್ಷತೆ ಹಾಗೂ ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಾ ಬಂದಿದ್ದರು.

ಲಿಟ್ವಿನೋಫರು ರಷ್ಯದ ಶಕ್ತಿಯ ಆಧಾರದಿಂದಲ್ಲ— ಸ್ವಸಾಮರ್ಥ್ಯದಿಂದಲೇ ಹಲವು ರಾಜಕೀಯ ಲಾಭಗಳನ್ನು ತನ್ನ ಅವಧಿಯಲ್ಲಿ ರಷ್ಯಾ ಸರಕಾರಕ್ಕೊದಗಿಸಿ ಕೊಟ್ಟಿದ್ದಾರೆ. ಸೋವಿಯಟ್ ಸರಕಾರವನ್ನು ಅಮೇರಿಕವು ಒಪ್ಪಿಕೊಳ್ಳುವಂತೆ ಮಾಡಿದ ಕಾರ್ಯವೆಲ್ಲಾ ಲಿಟ್ವಿನೋಫರದು. ಅವರ ಚಾಣಾಕ್ಷತೆಯಿಂದಾಗಿ ರಷ್ಯದ ಸಾಮರ್ಥ್ಯದಷ್ಟೇ ಅವರ ವಿದೇಶ ಸಂಬಂಧ ಧೋರಣೆಯೂ ನಿಗೂಢವಾದುದೆಂದು ಇತರ ದೇಶಗಳು ಭಯಾದರದಿಂದ ಕಾಣುವಂತಾಗಿತ್ತು. 'ಜಪಾನು ಯುದ್ಧದಲ್ಲಿ ಎಲ್ಲಿ ಏನಾಗುವದೋ!' ಎಂದು ಜಪಾನರು ಎದೆಯಲ್ಲಿ ಕೈಯಿಟ್ಟುಕೊಂಡು ಜಾಗ್ರತೆಯಿಂದ ಹೋರಾಡುವಂತಾಗಿತ್ತು. ರಷ್ಯಾ ಜಪಾನ್ ಗಡಿಯ ವಿವಾದದಲ್ಲಿ ಲಿಟ್ವಿನೋಫರ ಚಾತುರ್ಯಪೂರ್ಣ ಮತ್ತು ಕಠಿಣ ಧೋರಣೆಯಿಂದಾಗಿ ಜಪಾನು ತಲೆಬಗ್ಗಿಸುವ ಸಂದರ್ಭವೊದಗಿತ್ತು. ರಷ್ಯದ ಕರಾವಳಿಯಲ್ಲಿ ಜಪಾನರ ಮೀನು ಹಿಡಿಯುವ ಹಕ್ಕನ್ನು ಉದ್ದೇಶ ಪೂರ್ವಕವಾಗಿ ತಡೆದಿಟ್ಟು ಕೊನೆಗೆ ಜಪಾನರು ಒಪ್ಪಂದಕ್ಕೆ ಬರುವಂತಾಯಿತು. ಸ್ಪೈಯಿನ್ ಸರಕಾರವು ಅಷ್ಟು ದೀರ್ಘಕಾಲ ಹೋರಾಡುವಂತಾಗಲು ರಷ್ಯದ ಯುದ್ಧ ಸಾಧನಗಳ ಬೆಂಬಲವೊಂದೇ ಆಧಾರ. ಕೊನೆಗೆ ಬ್ರಿಟನರ ತಾಟಸ್ಥ್ಯ ಧೋರಣೆಯು ತಡೆಬೀಳದಿರುತ್ತಿದ್ದರೆ ಫ್ರಾಂಕೋ ಇಷ್ಟು ಬೇಗನೇ ಅದನ್ನು ಜಯಿಸಲಾಗುತ್ತಿದ್ದಿಲ್ಲ.

ಗಣನೀಯ ವ್ಯಕ್ತಿತ್ವ

ಗಿಡ್ಡದೇಹ, ನಗುಮೊಗ, ಮೆಲ್ದನಿಯ ನಡತೆಯಿಂದ ಲಿಟ್ವಿನೋಫರು ಜಿನೇವಾದ ರಾಷ್ಟ್ರಕೂಟದ ಸಭೆಗಳಲ್ಲಿ ಎಲ್ಲರ ಗೌರವಾದರಗಳಿಗೆ ಪಾತ್ರರಾಗಿದ್ದ ವ್ಯಕ್ತಿಯಾಗಿದ್ದರು. ರಷ್ಯದ ಧೋರಣೆಯನ್ನೆತ್ತಿ

ಹಿಡಿದು ಅವರು ಮಾಡುತ್ತಿದ್ದ ಭಾಷಣಗಳು ಶಾಂತಿಪ್ರಿಯ ರಾಷ್ಟ್ರಗಳ ಆತಿಯಾದ ಮೆಚ್ಚುಗೆಗೆ ಪಾತ್ರವಾಗುತ್ತಿದ್ದವು. ಬಹು ಸಭ್ಯರೀತಿಯಲ್ಲಿ, ವಿಷಯವನ್ನು ಸೊಗಸಾಗಿ ವರ್ಣಿಸಿ, ಕೇಳುಗಾರರ ಎದೆಗುಂದಿಸುವ ಭಾಷಣವವರದು. ಎಂತಹ ಕಠಿನ ಸಮಸ್ಯೆಯನ್ನಾದರೂ ನಗ-ನಗುತ್ತಾ ಬಗೆಹರಿಸುವ ಶಕ್ತಿಯವರಲ್ಲಿತ್ತು. 1927ರ ರಾಷ್ಟ್ರಕೂಟದ ಸಭೆಯಲ್ಲಿ ದೇಶಗಳಲ್ಲಿ ಪೂರ್ಣ ನಿಶ್ಶಸ್ತ್ರ ಧೋರಣೆ ವಹಿಸುವ ಸೂಚನೆ ತಂದು, ಅದಕ್ಕೆ ಹಾದಿಯನ್ನು ತೋರಿಸಿಕೊಟ್ಟು ಲಿಟ್ವಿನೋಫರು ಎಲ್ಲಾ ರಾಷ್ಟ್ರಗಳಿಂದಲೂ 'ಸೈ ಸೈ' ಅನ್ನಿಸಿಕೊಂಡಿದ್ದರು. ಆದರೆ ಅವು ಮಿಕ್ಕವರ ಧೋರಣೆಯ ವೈಪರೀತ್ಯದಿಂದ ಕಾರ್ಯರೂಪಕ್ಕೆ ಬರಲಿಲ್ಲ.

ಮಹಾಯುದ್ಧದ ನಂತರ ಅವರು ಮಿಸ್. ಇವಿಲೋ ಎಂಬ ಇಂಗ್ಲ ತರುಣಿಯನ್ನು ವಿವಾಹ ಮಾಡಿಕೊಂಡಿದ್ದರು. ಈ ಇಂಗ್ಲಿಷ್ ಮಹಿಳೆಯು ಅತ್ಯಂತ ಸುಂದರಿ, ಲಾವಣ್ಯವತಿ; ಹಾಗೂ ವಿನೋದಗಾತಿಯಿದ್ದಾಳೆ. ತನ್ನ ಗಂಡನ ಜತೆಯಲ್ಲಿ ಹಲವು ಬಾರಿ ಜಿನೇವಾಕ್ಕೆ ಬಂದಿದ್ದ ಶ್ರೀಮತಿ ಲಿಟ್ವಿನೋಫಳು ಅಲ್ಲಿದ್ದ ಇತರ ಮಹಿಳೆಯರ ನಡುವೆ ಸುಲಭವಲ್ಲಿ ಗುರುತಿಸುವಂತಹ ಸ್ತ್ರೀಯಾಗಿದ್ದಳು. ಇತರ ಮೆಂಬರರ ಪತ್ನಿಯರ ಘನಗಂಭೀರ ವರ್ತನೆಯು ಸಹಿಸಲಾರದಂತಹದಾಗ ಲಿಟ್ವಿನೋಫರ ಸಹಧರ್ಮಿಣಿಯು ಪತ್ರಿಕಾಪ್ರತಿನಿಧಿಗಳಿಗೆ ಬೇಕಾಗುವ ವಿಷಯವನ್ನೊದಗಿಸಿಕೊಡಲು ಕುಣಿಗುವಿಕೆಯಿಂದ ತಯಾರಿರುತ್ತಿದ್ದಳು. ಇಂಗ್ಲಿಷ್ ಹುಡುಗಿಯನ್ನು ಲಿಟ್ವಿನೋಫರು ಮದುವೆಯಾಗಿರುವುದರಲ್ಲಿ ಸ್ಟಾಲಿನರಿಗೆ ಇಷ್ಟವಿಲ್ಲವೆಂದೂ ಅವರೊಳಗೆ ಭಿನ್ನಾಭಿಪ್ರಾಯಗಳಿವೆಯೆಂದೂ ಮೊದಲೊಮ್ಮೆ ವಾರ್ತೆಯಿದ್ದಿತ್ತು.

ಲಿಟ್ವಿನೋಫರ ರಾಜೀನಾಮೆಗೆ ಆಂಗ್ಲೋ ರಶ್ಯನ್ ಒಪ್ಪಂದದ ವಿಳಂಬವೇ ಕಾರಣವೆಂದು ತಿಳಿದುಬರುತ್ತದೆ. ರಷ್ಯದ ಸೈನ್ಯಾಧಿಕಾರಿಗಳ ಯುದ್ಧಾತುರದ ಬೆಸೆಯಿಂದ ಹೀಗಾಯಿತೆಂದೂ ಊಹನೆಯಿದ್ದಿದೆ.

ನವಯುಗಕ್ಕೆ ಇಂದೇ ಚಂದಾದಾರರಾಗಿರಿ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇನ್ನೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ, ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನು "ಗೊನೊಕಿಲರ್" ಹೆಸರನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ ರೋಡ್, ಮುಂಬಯಿ 4

Sole Manufacturer DR. D. N. JASANI, Vitalbhai Patel Road, BOMBAY 4.

ವಾರಭವಿಷ್ಯ

ಮುಂದಾಗುವುದನ್ನು ಇಂದೇ ತಿಳಿಯಿರಿ.

(ತಾ. **11-5-39**ರಿಂದ ತಾ. **18-5-39**ರ ವರೆಗೆ)

[ಜ್ಯೋತಿಷವು ಅವ್ಯವಸ್ಥಾಪವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಆತ್ಯುತ್ತಮ ಸಾಧಿಸುವಲ್ಲಿ ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ವಾರ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ ಸಂ ನ.]

ಮೇಷರಾಶಿ—

ಚಕ್ಷುಪಟ್ಟಿ ರೋಗಗಳು ನಿಮ್ಮ ಶರೀರವನ್ನು ಸದಾ ಬಾಧಿಸುತ್ತಿದ್ದಾದರೂ ಒಳ್ಳೆಯ ಶರೀರಕ ಬಲದಿಂದ ಯುಕ್ತರಾದ ನೀವು ಆಪ್ರಾಂತವನ್ನು ಎಣಿಸಲಾರಿರಿ. ಸದ್ಯದ ಪರಿಸ್ಥಿತಿಯಲ್ಲಿ ನೀವು 'ನಾಳೆಯ ಕಥೆ ನಾರಾಯಣ ಬಲ್ಲ' ಎಂಬಂತೆ ಮುಂದಿನ ದಿನಗಳ ವಿಚಾರ ಮಾಡದೆ ಆಯಾಯ ದಿನಗಳನ್ನು ಕಳೆಯುವುದರಲ್ಲಿ ಮಾತ್ರ ಮಗ್ನರಾಗಿರುವಿರಿ ಕಾರ್ಯಾಸಕ್ತಿಯ ನಿಮಗೆ ಅಷ್ಟರಿಂದ ಕಷ್ಟವಾಗಲಾರದಾದರೂ ಧನ ವಿಷಯದಲ್ಲಿ ನಿಮ್ಮ ಕೈ ಕಟ್ಟಿದಂತಾಗಿರುವುದು. ಪ್ರಸ್ತುತದ ಗ್ರಹಸ್ಥಿತಿಯು ಕೈಗೆ ಬಂದ ಸಿಕ್ಕಿದರೆ ನಾಲ್ಕು ಮಿರ್ಜಾ ಮಾಡಿಸುವಂಗಿರುವುದು. ಮತ್ತು ಮನೋದಾರ್ಢ್ಯವು ನಿಮ್ಮಲ್ಲಿ ಏನೂ ಇಲ್ಲದಿರುವುದರಿಂದ ನೀವು ಸ್ವತಂತ್ರರಾಗಿ ಏನೊಂದು ಕಾರ್ಯವನ್ನು ಮಾಡಲು ಶಕ್ತರಾಗಿಲ್ಲವು. ವೈದ್ಯಜನರಿಗೂ ವಿದ್ಯಾರ್ಥಿಗಳಿಗೂ ಕೂಡ ಕಾಲವು ಪ್ರತಿಕೂಲವಾಗಿರುವುದು. ತಾ. 14, 15, 16 ಈ ದಿನಗಳಲ್ಲಿ ದೇಹ ಬಲ್ಯವೂ ಧನನಷ್ಟವೂ ಅತಿಯಾಗುವ ಸಂಭವವಿದೆ.

ವೃಷಭರಾಶಿ—

ಆಷ್ಟು ಸನಾತನ ವರ್ಗದವರಿಗೂ ಸ್ವಕೃತ್ಯಗಳಿಗಳಲ್ಲಿ ನಿಪುಣರಾಗಿರತಕ್ಕವರಿಗೂ ವ್ಯಾಪಾರ ವ್ಯವಹಾರಾದಿ ವಾಣಿಜ್ಯ ವಿಭಾಗದಲ್ಲಿ ಜೀವನ ನಿರ್ವಹಿಸತಕ್ಕ ಜನಗಳಿಗೂ ಈ ವಾರವು ಸಂತೃಪ್ತಿಕರವಾಗಿಯೇ ಇರುವುದು. ನಿಮ್ಮ ಆರ್ಥಿಕ ಭಾಗವು ಅತ್ಯುತ್ತಮವಾಗಿಲ್ಲದಿದ್ದರೂ ತಪ್ಪಾಗಲಾರದು. ವಿರೋಧಿಗಳು ನಿಮಗಿಲ್ಲವಾದರೂ ಕೆಲವು ಕಾರ್ಯಗಳಲ್ಲಿ ನಿಮ್ಮ ಮನೋರಥಕ್ಕೆ ವಿಪರೀತವಾದ ಫಲಪ್ರಾಪ್ತಿಯಾಗುವುದರಿಂದ ಮನೋವೇಗವು ನಿಮ್ಮ ಬೆನ್ನು ಹಿಡಿಯುವುದು. ಆಸ್ಮಿಕವಾಗಿ ಒದಗ ಶೋಕದಾಯಕಗಳಾದ ಅನರ್ಥಗಳೂ ಆಗಾಗ್ಗೆ ಉಂಟಾಗುವವು. ಆರೋಗ್ಯದ ದೃಷ್ಟಿಗೆ ಈ ವಾರವು ಉತ್ತಮವಾಗಿಲ್ಲವು ಸನ್ಮಿತ್ರರ ಸಹಕಾರ ಮತ್ತು ಸಹಾಯಗಳಿಂದಾಗಿ ಈಗಿದ್ದ ಸ್ಥಾನಕ್ಕಿಂತಲೂ ಉನ್ನತ ಸ್ಥಿತಿಗೆ ಮುಟ್ಟುವಿರಿ. ತಾ 12ರಿಂದ 16ರ ವರೆಗಿನ ದಿನಗಳು ಹೆಚ್ಚಿನ ಭಾಗಗಳಲ್ಲಿ ಅನುಕೂಲಗಳಾಗಿವೆ.

ಮಿಥುನರಾಶಿ—

ಸಜ್ಜನರ ಭಾಗಕ್ಕೆ ಈ ವಾರವು ಸ್ವಲ್ಪ ಮಟ್ಟಿಗೆ ಉತ್ತಮವಾಗಿಯೇ ತೋರಬಹುದು. ನೀಚ ಜನರಿಂದಲೂ ಸೇವಕ ವರ್ಗದವರಿಂದಲೂ ಸಾಕಷ್ಟು ಧನಾಗಮವಾಗಬಹುದು. ನಿಮ್ಮ ಬುದ್ಧಿಬಲದಿಂದಾಗಿ ಹಲವರ ಸ್ನೇಹ ಬೆಳೆಸುವಿರಿ. ಮಾತ್ರವಲ್ಲದೆ ಅವರಿಂದ ನಿಮ್ಮ ಕಾರ್ಯಗಳನ್ನು ಮಾಡಿಸಲೂ ಶಕ್ತರಾಗುವಿರಿ. ಸಂಸಾರದಲ್ಲಿ ಹೆಚ್ಚಿನ ಸುಖ ದೊರೆಯುವುದು ಒಂದೆ ಸಂಭವಿಸಿ ಹಲವು ಮನೋವೇಗಗಳು ನಿವಾರಿಸಲ್ಪಡುವವು. ವ್ಯಯಕ್ಕಿಂತಲೂ ಅಧಿಕವಾಗಿ ಸಂಪಾದಿಸುವಿರಿ. ಕೆಲವೊಮ್ಮೆ ವಿರೋಧಿಗಳ ಉಪದ್ರವದಿಂದ ಮಾನಹಾನಿಯು ಸಂಭವಿಸುವ ಚಿಹ್ನೆಗಳಿವೆ. ಆರೋಗ್ಯವು ಸಂಪೂರ್ಣ ನೆಟ್ಟಗಿರಲಾರದು. ಅಕಸ್ಮಾತ್ ಶರೀರಕ್ಕೆ ಅಪಾಯಗಳು ಸಂಭವಿಸುವವು. ವಾರಾದಿಯ ಮೂರು ದಿನಗಳು ನಿಮಗೆ ಹೆಚ್ಚಿನಂತ ಅನುಕೂಲವಾಗಿಲ್ಲದಿದ್ದರೂ ಮುಂದಿನ ದಿನಗಳಲ್ಲಿ ಇಷ್ಟಸಿದ್ಧಿಯಿಂದಾಗಿ ಮನಶ್ಶಾಂತಿಯೂ ನಾನಾ ವಿಧದಿಂದ ಧನಲಾಭವೂ ಮಿತ್ರವರ್ಗದವರಿಂದ ಸದಾ ಸಂತೋಷವನ್ನೂ ಹೊಂದುವಿರಿ.

ಕರ್ಕಾಟಕರಾಶಿ—

ನೇತ್ರೋದರ ರೋಗ ಮೊದಲಾದವುಗಳಿಂದಾಗಿ ನಿಮಗೆ ಶರೀರದಲ್ಲಿ ಸುಖವಿಲ್ಲವು. ಗೃಹಕೃತ್ಯವಿಚಾರದಲ್ಲಿ ನಿತ್ಯ ಕಲಹವು ವೃದ್ಧಿಯಾಗಿ ಸಂಸಾರದಲ್ಲಿ ವಿರಕ್ತಿಯನ್ನು ಹೆಚ್ಚಿಸುವುದು. ಆದರೂ ಸರ್ವ ಸೌಭಾಗ್ಯಹರೂ ಶನಿಯೂ ನಿಮಗನುಕೂಲರಾಗಿರುವುದರಿಂದ ಶುಭಕಾರ್ಯಗಳು ಹೆಚ್ಚಾಗಿ ನಡೆಗುವವು. ರಾಜಕೀಯ ಭಾಗದಲ್ಲಿ ಕೀರ್ತಿ ಪದಗಳನ್ನು ಸಂಪಾದಿಸುವಿರಿ. ಸಕಲ ವಿಧದ ಸಂಪತ್ತುಗಳೂ ಉತ್ತಮ ರೀತಿಯನ್ನೀಡುವವು. ಜನರು ಸ್ಥಾನಮಾನಗಳಿಂದ ನಿಮ್ಮನ್ನು ಗೌರವಿಸುವರು. ಒಳ್ಳೇ ವಿಚಾರಶೀಲರಾದ ನಿಮಗೆ ಕಾರ್ಯದಲ್ಲಿ ಪರಾಭವವೊದಗದು. ವಿದ್ಯಾರ್ಥಿಗಳಿಗೆ ಈ ಕಾಲವು ವಿಶೇಷತಃ ಪ್ರತಿಕೂಲಕಾರಿಯಾಗಿದೆ. ವಾಣಿಜ್ಯ ವೃತ್ತಿಯವರಿಗೂ ಸ್ವಲ್ಪ ಮಟ್ಟಿಗೆ ನಷ್ಟವೇ ಅಧಿಕವಾಗುವುದು. ತಾ. 12ರಿಂದ 16ರ ವರೆಗಿನ ದಿನಗಳು ಅನಿಷ್ಟಕಾರಿಗಳಾಗಿ ಕಂಡು ಬರುವುದರಿಂದ ಅವಿಚಾರಿಗಳಾಗಿ ವರ್ತಿಸದಿರಿ.

ಸಿಂಹರಾಶಿ—

ವಾರದ ಅರ್ಧಭಾಗಕ್ಕಿಂತಲೂ ಮುಂದಿನ ದಿನಗಳೇ ಉತ್ತಮಗಳಾಗಿ ಕಂಡುಬರುತ್ತಿವೆ. ವಿಪಕ್ಷೀಯರ ಕ್ಷಯದಿಂದಲೂ ತನ್ನ ಸಂಬಂಧವಾದ ಭಯ ಕಲಹಗಳ ನಾಶದಿಂದಲೂ ಮನಸ್ಸಿಗೆ ಶಾಂತಿಯು ದೊರಕಲಿರುವುದು. ಆಂತರಿಕವಾಗಿ ನಿಮ್ಮಲ್ಲಿ ನಾಸ್ತಿಕ ಮಾರ್ಗವೇ ಹೆಚ್ಚಾಗಿರುವುದಾದರೂ ಜನಮನರಂಜನೆಗಾಗಿ ಧಾರ್ಮಿಕ ಜನರಂತೆ ವರ್ತಿಸಬಲ್ಲಿರಿ. ಸ್ವರಾಶಿಯ ಗ್ರಹನು ನಿಮಗೆ ಸದ್ಯದಲ್ಲಿ ದೊರೆಯುವ ಕಾಂಚನ ಸಾಂಪತ್ತಿಕ ಭಾಗದಲ್ಲಿ ಬಹಳ ಹೀನರಾಗಿರುವಿರಿ. ಕೈಯಲ್ಲಿ ಕಾಸಿಲ್ಲ ಮೈಯಲ್ಲಿ ಮಾಂಸವಿಲ್ಲ ಎಂಬ ಸ್ಥಿತಿಗೆ ಮುಟ್ಟಿರುವಿರಿ. ಅಕಸ್ಮಾತ್ ಪ್ರಯಾಣಗಳು ಗಂಟುಬಿದ್ದು ಎತ್ತ ಸಾಲಕ್ಕೋ ಸೋಲಕ್ಕೋ ಕಾರಣಗಳಾಗಲಿವೆ. ವಾರಾಂತ್ಯದ ನಾಲ್ಕು ದಿನಗಳಲ್ಲಿ ಇಷ್ಟಾರ್ಥಗಳು ಕೈಗೊಡಲು ಬೇಕಷ್ಟು ಸಾಧನಗಳಿದ್ದರೂ ನಿಮ್ಮ ದೌರ್ಬಲ್ಯದಿಂದ ಅವೆಲ್ಲವೂ ಕನಸಿನಂತೆ ಪರಿಣಮಿಸುವವು.

ಕನ್ಯಾರಾಶಿ—

ದಿನೇ ದಿನೇ ಆದಾಯವು ವೃದ್ಧಿಹೊಂದುತ್ತಲಿರುವುದು. ಅದಕ್ಕೆ ಸರಿಯಾಗಿ ಕ್ರಿಯೆಗಳೂ ಫಲಿಸುತ್ತವೆ. ಅರ್ಥಕ್ಕಿಂತಲೂ ಅಧಿಕವಾಗಿ ನೀವು ಸ್ವಾತಂತ್ರ್ಯವನ್ನು ಗಳಿಸುವಿರಿ. ಜನರೂ ಕೂಡ ನಿಮ್ಮನ್ನು ಗೌರವಯುಕ್ತರನ್ನಾಗಿ ತಿಳಿದಿರುವರು. ಮಾತ್ರವಲ್ಲ ಸುವಿಚಾರಿಗಳೆಂದೂ ಕರೆದು ಹೇಳುತ್ತಿರುವರು. ಉದ್ಯೋಗದಲ್ಲಿ ಉತ್ತಮ ಸ್ಥಾನವನ್ನೂ ಸಾಂಪತ್ತಿಕ ವಿಷಯದಲ್ಲಿ ಬಹಳ ಸುಧಾರಣೆಯನ್ನೂ ಕೂಡ ಹೊಂದಲಿರುವಿರಿ. ಸ್ತ್ರೀವರ್ಗವೇ ನಿಮಗೆ ಪ್ರತಿಕೂಲವಾಗಿದ್ದರೂ ಅನಾಯಾಸವಾಗಿ ಸ್ತ್ರೀಯರಿಂದ ಸ್ನೇಹವೂ ಧನವೂ ಸಿಗಲಿದೆ. ಪುತ್ರಸ್ಥಾನದಲ್ಲಿ ಕೇತು ಬಲಯುತನಾಗಿ ನೆಲೆಸಿರುವುದರಿಂದ ಪರಸ್ಪರ ಪ್ರಕ್ರಿಕೆಳತ್ತ ಕಲಹಗಳು ಹೆಚ್ಚುವವು. ಧನವಿಷಯಕವಾಗಿ ಕೋರ್ಟು ವಿಷ್ನಗಳು ಸಂಭವಿಸುವವು. ಆರೋಗ್ಯವೂ ಕೆಡುವುದು. ತಾ. 11, 17, 18, ಈ ದಿನಗಳು ಹೆಚ್ಚಿನ ಪ್ರತಿಕೂಲಕಾರಿಗಳಾಗುವವು.

ತುಲಾರಾಶಿ—

ಕಾಲವು ಅನುಕೂಲವಾಗಿದ್ದರೆ ಇಡೀ ಲೋಕವೇ ಅನುಕೂಲವಾಗುವುದು. ತತ್ಕಾಲವೇ ಪ್ರತಿಕೂಲವಾಗಿದ್ದಲ್ಲಿ ಯಾರಿಂದೇನು ಮಾಡಲು ಸಾಧ್ಯವಿದೆ. ಸದ್ಯದ ಪರಿಸ್ಥಿತಿಯಲ್ಲಿ ನಿಮಗಾವ ಗ್ರಹನ ಅನುಗ್ರಹವೂ ಇಲ್ಲದಿರುವುದರಿಂದ ಯಾವಾಗ ಯಾರಿಂದ ಏನು ವಿಪತ್ತುಗಳು ಬಂದಾವೆಂದು ಊಹಿಸಲೂ ಕಷ್ಟಸಾಧ್ಯವಾಗಿರುವುದು. ಆದಕಾರಣ ನವಗ್ರಹರ ತೃಪ್ತಿಗಾಗಿ ಜಪಹೋಮಾದಿಗಳನ್ನು ಶಕ್ತಿಯನ್ನನುಸರಿಸಿ ಮಾಡುವುದು ಕಲ್ಯಾಣಾಪೇಕ್ಷಿಗಳ ಕರ್ತವ್ಯವಾಗಿರುವುದು. ನಿಮ್ಮ ಗೃಹಕಾರ್ಯಗಳನ್ನು ಎತ್ತಿ ತೋರಿಸಲಿಕ್ಕೋ ಎಂಬಂತೆ ಕಳೆದ ವಾರದಲ್ಲಿ ನಿಮ್ಮ ನಕ್ಷತ್ರಗಳಿಗೆ ಸಂಪೂರ್ಣ ರಾಹುಗ್ರಸ್ತವಾಗಿರುವನು. ಇದರ ಫಲವು ಸುಮಾರು ಆರು ತಿಂಗಳು ಕಾಲ ನಿಮ್ಮ ಬೆನ್ನು ಬಿಡದು. ತಾ. 14ರಿಂದ 18ರ ವರೆಗಿನ ದಿನಗಳಲ್ಲಿ ಮೇಲ್ಮಂದ ಕಾರ್ಯವನ್ನು ಕೈಕೊಳ್ಳುವುದೊಳ್ಳಿತು. ಸಕಲ ವಿಚಾರಗಳಲ್ಲಿಯೂ ನಿಮ್ಮ ಭವಿಷ್ಯ ಜೀವ

ವೃಶ್ಚಿಕರಾಶಿ—

ಮಾನವು ಉಚ್ಚಶ್ರೇಣಿಯದ್ದಾಗಿರುವುದರಿಂದ ನಿಶ್ಚಿಂತರಾದ ನಿಮಗೆ ರಾತ್ರಿ ಚೆನ್ನಾಗಿ ನಿದ್ದೆ ಬೀಳುವುದು. ಆಹಾರ ವಿದ್ವೇಗಳು ಕ್ರಮದಲ್ಲಿ ನಡೆದಾಗ ಆರೋಗ್ಯವೂ ಉತ್ತಮವಾಗಿಯೇ ನಿಲ್ಲುವುದು. ನಿಮ್ಮ ಗ್ರಹಬಲವು ನಿಮ್ಮ ಶ್ರೇಯಸ್ಸನ್ನೇ ಹಾರೈಸುತ್ತಿರುವುದರಿಂದ ನಿಮಗೆ ಪರಾಭವವೆಂಬುದು ಸಲ್ಲ ಇಲ್ಲವೆಂದೇ ಹೇಳಬಹುದು. ಯಾವ ರೀತಿಯಿಂದ ನೋಡಿದರೂ ಜನರಿಂದ ಗೌರವವನ್ನು ಪಡೆಯುವಿರಿ. ಸ್ತ್ರೀಪುತ್ರಾದಿ ಸಜ್ಜನರಿಂದಲೂ ಆಪ್ತ ಪುತ್ರಕಳತ್ರರಿಂದ ಕೂಡಿದ ನಿಮಗೆ ದಿನಗಳು ಕ್ಷಣದಂತೆ ಸಾಗುವವು. ಅಷ್ಟೇಕೆ ಶತ್ರುಜನರೂ ನಿಮ್ಮನ್ನು ಮಿತ್ರರನ್ನಾಗಿ ತಿಳಿಯುವರಿಂದ ಮೇಲೆ ಇತರರ ಸಹಾಯವು ನಿಮಗೆ ಸರ್ವಕ್ಷೇತ್ರಾ ಪೂರ್ಣವಾಗಿರುವುದು. ವಾರಾಂತ್ಯದ ನಾಲ್ಕು ದಿನಗಳಲ್ಲಿ ಪ್ರಯಾಣದ ಸಲುವಾಗಿ ಧನವ್ಯಯಿಸಲಿರುವಿರಿ.

ಧನುರಾಶಿ—

ವ್ಯಾಪಾರೀ ವರ್ಗದವರಿಗೂ ಕೋರ್ಟು ವ್ಯವಹಾರದಲ್ಲಿ ನಿರತರಾಗಿರತಕ್ಕವರಿಗೂ ತಕ್ಕ ವೃತ್ತಿಗೆ ಈ ವಾರವು ಉತ್ತಮ ಫಲದಾಯಕವಾಗಿರುವುದು. ಹೊರತಾಗಿ ಇತರರಿಗೆ ಹೆಚ್ಚಿನ ಅನಿಷ್ಟದಾಯಕವಾಗಿರುವುದು. ದೇಹದಲ್ಲಿನ ಅನಾರೋಗ್ಯದಿಂದಲೂ ಸಂಸಾರದಲ್ಲಿನ ಚಿಂತೆಗಳಿಂದಲೂ ಬಂಧುವರ್ಗದವರಿಂದ ಪ್ರಾಪ್ತವಾಗುತ್ತಿರುವ ಅನಿಷ್ಟಗಳಿಂದಲೂ ಚಿಂತೆಯು ದಿನೇ ದಿನೇ ವೃದ್ಧಿಯಾಗುತ್ತಿರುವುದು. ಖಚಿತ ಭಾಗಗಳು ದ್ವಿಗುಣಿತವಾಗಿ ಪರಿಣಮಿಸಿ ಹಣದ ಅಡಚಣೆಯಿಂದ ಮಾನವನ್ನು ರಕ್ಷಿಸಿಕೊಳ್ಳುವುದು ಬಹಳ ಕಷ್ಟಕ್ಕೆ ಬರುವುದು. ನಿಷ್ಠುರವಾಕ್ಯಗಳಿಂದ ಹೆಚ್ಚಾಗಿ ಜನರೊಡನೆ ಕಲಹವಾಗುವುದು. ತಿರಸ್ಕಾರ ಅವಮಾನಗಳೇ ನಿಮಗೆ ಎಲ್ಲೆಲ್ಲೂ ಪುರಸ್ಕಾರವಾಗಿ ದೊರೆವುದೆಂದರೆ ಅತಿಶಯೋಕ್ತಿಯಾಗದು. ಸಂವತ್ಸರದ ಕೂಡ ನಿಮ್ಮನ್ನು ಗಣನೆಗೆ ತರುವುದಿಲ್ಲವು. ತಾ. 12–13 ಈ ದಿನಗಳ ಹೊರತಾಗಿ ಇತರ ದಿನಗಳು ಹೆಚ್ಚಿನ ಪ್ರತಿಕೂಲಕಾರಿಗಳೇ ಆಗಿರುವವು.

ಮಕರರಾಶಿ—

ಕೌಟುಂಬಿಕ ಕಲಹಗಳು ಶಮನವಾಗುವವು. ಸ್ವಜನರಿಂದಲೂ ಸ್ತ್ರೀಜನರಿಂದಲೂ ಧನಾಗಮವೂ ಸುಖವೂ ದೊರೆಯಲಿವೆ ಆದರೂ ಶತ್ರುಗಳ ಭೀತಿಯು ನಿಮಗೆ ಹೆಚ್ಚಾಗಿರುವುದು. ಹೆಚ್ಚಿನ ಕಾರ್ಯಗಳು ಫಲಕೊಡುವುದರ ಬದಲೇ ನಾಶಹೊಂದುವವು. ಮಿತ್ರರುಗಳ ಕಾಟದಿಂದಾಗಿ, ನಿಮ್ಮ ಮನಸ್ಸು ಸದಾ ಕಮಲದಳದಲ್ಲಿರತಕ್ಕ ಜಲಬಿಂದುವಿನಂತೆ ಅತ್ಯಂತ ತರಲವಾಗಿರುವುದು. ಆದಕಾರಣದಿಂದಲೇ ಪತ್ನೀ-ಪುತ್ರರಿಗೂ ನಿಮ್ಮಲ್ಲಿ ವಿಶ್ವಾಸವು ಕಡಿಮೆಯಾಗಿರುವುದು. ಉದ್ಯೋಗದಲ್ಲಿ ಮತ್ತು ಜವಾಬ್ದಾರೀ ಕಾರ್ಯಗಳಲ್ಲಿ ಅಧಿಕಾರಿಗಳ ಪ್ರಕೋಪಕ್ಕೆ ಗುರಿಯಾಗಿ ಮಿಕ್ಕಿದ ಬೇಕಾದನ್ನು ಧನ ಸಿಗುವುದರಿಂದ ಆರ್ಥಿಕ ಬಿಕ್ಕಟ್ಟಿಗೊಳಗಾಗಲಾರಿರಿ. ಅಂತೂ ತಾ. 11–14–15–16 ಈ ದಿನಗಳಲ್ಲಿ ಇಷ್ಟಭೋಜನ ಮತ್ತು ಮಾಗದಾಯಕ ಜಯಗಳಿಂದ ಮನಶ್ಶಾಂತಿಯಾಗಬಹುದು.

ಕುಂಭರಾಶಿ—

ಸ್ವಯಶರೀರ ಭಾಗದಲ್ಲಾಗಲೀ ಶಾರೀರಕ ವಿಷಯದಲ್ಲಾಗಲೀ, ಕೌಟುಂಬಿಕ ವಿಚಾರದಲ್ಲಾಗಲೀ ಯಾವುದೊಂದು ತರಹದ ನ್ಯೂನಾತಿರಿಕ್ತಗಳು ಕಂಡುಬಾರದಿರುವುದರಿಂದ ನಿಮಗೀ ವಾರವು ಸಾಗರದಂತೆ ಕಳೆದುಹೋಗುವುದು. ಕಷ್ಟಜೀವಿಗಳೂ ನೌಕರಿ ವರ್ಗದವರೂ ವ್ಯಾಪಾರೀ ಜನರೂ ಆನಂದದಿಂದಿರುವರು. ಜನತಾ ಸಮೂಹವೂ ಸುಖದಿಂದ ಕಾಲಯಾಪನೆ ಮಾಡುವುದು. ಆಸ್ತಿಕ ಮಹನೀಯರು ಸದಾ ಪ್ರಸನ್ನರಾಗಿಯೇ ಇರುವರು. ಉದ್ಯೋಗದಲ್ಲಿ ಮನುಷ್ಯನ ಭಾವಜನ್ಯವಾದ ದೋಷಕ್ಕೆ ಸಿಲುಕಿ ಮೇಲಧಿಕಾರಿಗಳ ಭೀತಿಗೊಳಗಾಗಲಿರುವಿರಿ. ವಾರಾಂತ್ಯದಲ್ಲಿ ಕೆಲವು ಕ್ಲೇಶದಾಯಕಗಳಾದ ಕಾರ್ಯಗಳು ಜರಗಲಿರುವವು. ಸ್ತ್ರೀಜನರಿಂದ ಕೂಡ ಕಲಹವೂ ಸಂಭವಿಸಲಿರುವುದು. ತಾ. 11 ಮತ್ತು 14–15–16 ಈ ದಿನಗಳಲ್ಲಿ ಧನಮಾನಗಳ ವಿಷಯದಲ್ಲೂ ವ್ಯವಹಾರದಲ್ಲೂ ಹೆಚ್ಚಿನ ಜಾಗರೂಕರಾಗಿರಿ.

ಮೀನರಾಶಿ—

ಜನ್ಮದ್ವಿತೀಯಗತರಾದ ಗುರುಶನಿಗಳಿಂದಾಗಿ ಧನವ್ಯಯವೂ ವ್ಯರ್ಥ ಅಲೆದಾಟದ ಪ್ರಸಂಗವೂ ಹೆಚ್ಚಾಗಿ ಸಂಭವಿಸುವುದು. ಮನಸ್ಸು ಅಸ್ಥಿರವಾಗಿ ಯಾವೊಂದು ವಿಷಯದಲ್ಲೂ ಮುಂದರಿಯದೆ ಹಿಂದೆಯೇ ನಿಲ್ಲಲಿರುವುದು. ಆದರೂ ಇತರ ಗ್ರಹರು ಅನುಕೂಲರಿರುವುದರಿಂದ ಸಂಪದ್ಭಾಗವು ಪೂರ್ಣವಾಗುವುದು ಮಿತ್ರ ಜನರ ನೆರವು ಸಕಲ ಕಾರ್ಯಕ್ಕೂ ದೊರೆಯುವುದು. ರಾಜಕೀಯ ಕಾರ್ಯಗಳಲ್ಲಿ ವಿಜಯಪ್ರಾಪ್ತಿಯಾಗುವುದು. ಸಮಾಜದಲ್ಲಿ ಗಣನೀಯ ವ್ಯಕ್ತಿಯಾಗಿ ಪರಿಣಮಿಸುವಿರಿ. ಸದಾ ಸುಖಿಗಳೇ ಆಗಿರುವಿರಿ. ಗೃಹಸುಖವೂ ವೈದ್ಯೋಗಿಕ ಭಾಗದಲ್ಲಿ ಉತ್ತಮ ಫಲವೂ ದೊರೆಯಲಿರುವುವು. ಬಂಧುಮಿತ್ರರೂ ಧನವೂ ಇವುಗಳ ಸಹಾಯದಿಂದ ಯುಕ್ತರಾದ ನಿಮಗೆ ಅಸಾಧ್ಯವೆಂಬ ಕಾರ್ಯವೇ ಇಲ್ಲದಂತಾಗುವುದು. ತಾ 13, 14, ಮತ್ತು 17, 18 ಈ ನಾಲ್ಕು ದಿನಗಳು ಅಷ್ಟೊಂದು ಶ್ರೇಯಸ್ಕರವಾಗಿಲ್ಲದಿರುವುದರಿಂದ ತಪ್ಪಿನಗಳ ಆಚಾರಗೊಳಕರಾಗದೆ ಎಚ್ಚರಿಕೆಯಿಂದ ವರ್ತಿಸಿರಿ.



ತಯಾರಿಸುವವರು—
ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೨೮೭, ಮದ್ರಾಸು
ಸ್ಟಾಕಿಸ್ಟರು—
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಹಿಂದೂ ಮುಸ್ಲಿಂ ಐಕಮತ್ಯ

ಜನಪದ ಸಾಹಿತ್ಯದಿಂದ ಸಾಧ್ಯವೆ?

ಬಿಹಾರಿನ ಶಿಕ್ಷಣಮಂತ್ರಿ

ಡಾ। ಸೈಯದ್ ಮಹಮೂದ್‌ರವರ ಯೋಜನೆ.

(ಲೇಖಕರು:—ಡಾ। ಕೆ. ಎಸ್. ರಾವ್.)

ಕಾಂಗ್ರೆಸಿನವರು ಮಂತ್ರಿಪದವಿಯನ್ನು ಸ್ವೀಕರಿಸಿದಾಗಿನಿಂದ, ದೇಶದಲ್ಲಿ ಸಾಕಷ್ಟು ಜಾಗೃತಿಯುಂಟಾಗಿದೆ. ನಿರುದ್ಯೋಗವನ್ನು ನಿವಾರಿಸುವ ಸಲುವಾಗಿ ಸಹ ಪ್ರಯತ್ನಗಳು ನಡೆಯುತ್ತಿವೆ. ಇದರ ಪರಿಣಾಮವಾಗಿಯೇ "ನ್ಯಾಷನಲ್ ಪ್ಲಾನಿಂಗ್ ಕಮಿಟಿಯು ಸ್ಥಾಪಿತವಾದುದು. ದೇಶದ ಸದ್ಯದ ಸ್ಥಿತಿಗೆ ಅನುಗುಣವಾಗಿ ಏನೇನು ಮಾಡಬಹುದೆಂಬುದನ್ನು ಈ ಕಮಿಟಿಯವರು ಯೋಚಿಸಿ ಕೆಲಸಮಾಡುತ್ತಿರುವರು. ಕಾಂಗ್ರೆಸ್ಸಿನ ಉಗ್ರಗಾಮಿಗಳು ನೂತನ ರಾಜ್ಯಾಂಗಶಾಸನವನ್ನು ವಿರೋಧಿಸಲು ತಮ್ಮ ಸರ್ವಶಕ್ತಿಯನ್ನೂ ಉಪಯೋಗಿಸಬೇಕೆಂದಿರುವರು.

ಒಂದು ಕಡೆ ಈ ರೀತಿ ಪ್ರಯತ್ನ ನಡೆದಿದೆ. ಮತ್ತೊಂದು ಕಡೆ ಭಾರತದ ಸಾಂಸ್ಕೃತಿಕ ಏಕೀಕರಣಕ್ಕಾಗಿ ಪ್ರಯತ್ನಗಳು ನಡೆಯುತ್ತಿವೆ. ಬಿಹಾರಿನ ಶಿಕ್ಷಣ ಮಂತ್ರಿಗಳಾದ ಡಾ। ಸೈಯದ್ ಮಹಮೂದರವರು ಭಾರತದ ಸಾಂಸ್ಕೃತಿಕ ಇತಿಹಾಸದ ವಿಚಾರದಲ್ಲಿ ಒಂದು ಗ್ರಂಥವನ್ನು ಬರೆಯುವ ಸಿದ್ಧತೆಗಳನ್ನು ಮಾಡಿರುವರು. ಇದರಿಂದ ವಿದ್ಯಾರ್ಥಿಗಳಿಗೆ ನಮ್ಮ ದೇಶದ ನಿಜವಾದ ಚರಿತ್ರೆಯ ಜ್ಞಾನವುಂಟಾಗುವುದು. ಭಾರತದ ಚರಿತ್ರೆಯು ಪಕ್ಷಪಾತದೃಷ್ಟಿಯಿಂದ ಬರೆಯಲ್ಪಟ್ಟಿದೆ. ಸರ್. H. M. ಇಲಿಯಟ್‌ರು ಮುಸ್ಲಿಂ ಕಾಲದ ಚರಿತ್ರೆಯಲ್ಲಿ ಬರೆದಿರುವ ಅಂಶಗಳಿಂದ ತಿಳಿಯುವುದೇನೆಂದರೆ—ಬ್ರಿಟಿಷರು 50 ವರ್ಷಗಳಲ್ಲಿ ಮಾಡಿರುವುದನ್ನು ಮುಸಲ್ಮಾನರು 500 ವರ್ಷಗಳಲ್ಲಿ ಸಹ ಮಾಡಲಾರದೆ ಹೋಗಿರುವರು. ನೋಡಿದಿರಾ, ಎಷ್ಟು ಅಸಂಬದ್ಧ ವಿಚಾರಗಳು! ಇವರಿಂದ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಸಾರ್ವಜನಿಕರಿಗೂ ನಮ್ಮ ಇತಿಹಾಸದಲ್ಲಿ ಸದಭಿಪ್ರಾಯ ಉಂಟಾಗಲು ಅವಕಾಶವೇ ಇಲ್ಲ.

ಈಗ ಭಾರತವು ಸಂಪ್ರದಾಯವನ್ನೇ ಶರಣು ಹೊಂದುತ್ತಿದೆ. ಇದರಿಂದ ಎಲ್ಲರೂ ಇದಕ್ಕೆ ಹೆಚ್ಚು ಗಮನಕೊಟ್ಟು, ಸರಿಯಾದ ಮಾರ್ಗವನ್ನೇ ತೋರಿಸಬೇಕಾಗಿದೆ. ದೇಶದಲ್ಲಿ ಈ ಸಾಂಪ್ರದಾಯಿಕ ಭಾವನೆಗಳನ್ನು ದೂರಮಾಡಬೇಕಾಗಿದೆ, ಅಷ್ಟೇ ಅಲ್ಲ, ನಮ್ಮ ಸಂಸ್ಕೃತಿಯನ್ನು ಸಹ ರಕ್ಷಿಸಿಕೊಳ್ಳಬೇಕಾಗಿದೆ.

ಡಾ। ಸೈಯದ್ ಮಹಮೂದ್‌ರವರ ಯೋಜನೆ ಏನೆಂದರೆ—ಇದಕ್ಕಾಗಿ ಒಂದು ಬ್ಯೂರೋವನ್ನು ನಿಯಮಿಸಬೇಕು. ಇದು ಭಾರತದ ಭಿನ್ನ ಭಿನ್ನ ಸ್ಥಾನಗಳಲ್ಲಿನ ಗ್ರಾಮ್ಯ ಗೀತೆಗಳನ್ನು ಸಂಗ್ರಹಿಸತಕ್ಕದ್ದು. ನಂತರ ಈ ಗೀತೆಗಳನ್ನು ಆಲೋಚನಾತ್ಮಕ ದೃಷ್ಟಿಯಿಂದ ವಿಮರ್ಶಿಸತಕ್ಕದ್ದು. ಈ ತರಹ ಸಂಗ್ರಹಿಸಲ್ಪಟ್ಟ ಗ್ರಾಮ್ಯಗೀತಗಳು ಭಾರತದ ಸಾಂಸ್ಕೃತಿಕ ಇತಿಹಾಸಕ್ಕೆ ಬಹಳ ಮಟ್ಟಿಗೆ ಸಹಾಯವಾಗುವವು. ಈಗ ನಾವು ನೋಡುವ ಚರಿತ್ರೆಗಳೆಲ್ಲ ಆತ್ಮಕಥೆಗಳಂತಿದ್ದು, ಸಾಮ್ರಾಜ್ಯಶಾಹಿಗಳ ಗುಣಗಾನವೇ ಅದರಲ್ಲಿ ತೋರಿಬರುವುದು. ನಮಗೆ ಈಗ ಇಂತಹ ಚರಿತ್ರೆಯು ಬೇಕಾಗಿಲ್ಲ. ರಾಜರಾಣಿಗಳ ವರ್ಣನೆಯ ಕಥೆಗಳು ಈಗ ನಮಗೆ ಬೇಕಾಗಿಲ್ಲ. ಜನಸಾಧಾರಣರಿಗೆ ಇದರಿಂದ ಏನೂ ಉಪಯೋಗವಿಲ್ಲ. ಹಿಂದಿನ ಕಾಲದಲ್ಲಿ ನಮ್ಮ ಸ್ಥಿತಿ ಏನಿತ್ತು ಎಂಬುವೇ ಈಗಿನ ಇತಿಹಾಸದಲ್ಲಿರಬೇಕಾದ ವರ್ಣನೆ. ಇದಕ್ಕೆ ಗ್ರಾಮ್ಯಗೀತೆಗಳಿಗಿಂತ ಹೆಚ್ಚು ಉಪಯೋಗವಾದ ಬೇರೆ ಯಾವ ವಸ್ತುವೂ ಇಲ್ಲವೆನ್ನಬಹುದು.

ಪ್ರಾಯಶಃ ಭಾರತದ ಎಲ್ಲಾ ಪ್ರಾಂತ್ಯಗಳಲ್ಲಿಯೂ ಇಲ್ಲಿನ ಭಾಷೆಗಳಲ್ಲಿ ಗ್ರಾಮ್ಯ ಗೀತೆಗಳಿವೆ, ಗಾದೆಗಳಿವೆ, ಲೋಕೋಕ್ತಿಗಳಿವೆ. ಶ್ರೀ. ನರೇಶ ಶಾಸ್ತ್ರಿಗಳು ಬರೆದಿರುವ ಪುಸ್ತಕಕ್ಕೆ ಮುನ್ನುಡಿಯನ್ನು ಬರೆಯುತ್ತ ಶ್ರೀ. ಕರಾಚ್ಯರು ಈ ರೀತಿ ಹೇಳಿರುವರು. "ಭಾರತದ ಗ್ರಾಮಗಳಲ್ಲಿ ಪ್ರಚಾರದಲ್ಲಿರುವ ಸಾಹಿತ್ಯ ಕಥೆಗಳಲ್ಲಿ ಭಾರತದ ಪ್ರಾಚೀನ ಸಂಸ್ಕೃತಿಯು ಅಡಗಿದೆ." ಡಾ। ಸೈಯದ್ ಮಹಮೂದ್‌ರವರು ಆಯಾ ಸ್ಥಾನಗಳ ಪ್ರಾಚೀನ ಪತ್ರಗಳು ಅಲ್ಲಿನ ಕಲಾತ್ಮಕ ವಸ್ತುಗಳು, ಕವಿತೆಗಳು, ಅಧ್ಯಾತ್ಮಿಕತೆ ಇವುಗಳೆಲ್ಲವೂ ಅಲ್ಲಿನ ಜನಪದ ಸಾಹಿತ್ಯದಲ್ಲಿ ದೊರೆಯುವುವೆಂದು ಹೇಳುತ್ತಾರೆ.

ಆದುದರಿಂದ ಭಾರತದ ಭಿನ್ನ ಭಿನ್ನ ಸ್ಥಾನಗಳ ಜನಪದ ಸಾಹಿತ್ಯವನ್ನು ಸಂಗ್ರಹಿಸುವುದು ಅತ್ಯಗತ್ಯ. ಇದಕ್ಕಾಗಿ ಒಂದು ಕೇಂದ್ರೀಯ ಸಮಿತಿ ಇರಬೇಕು. ಈ ಗೀತೆಗಳನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡುವುದಾದರೆ, ಭಾರತದ ಸಾಮಾಜಿಕ ಇತಿಹಾಸಕ್ಕೆ ಸಂಬಂಧಪಟ್ಟ ಅನೇಕ ವಿಚಾರಗಳು ತಿಳಿದುಬರುವವು.

ಹಿಂದಿನ ಗ್ರಾಮ್ಯಗೀತೆಗಳಲ್ಲಿ ಒಂದು ವಿಶೇಷವಿತ್ತು. ಏನೆಂದರೆ ಅವುಗಳಲ್ಲಿ ಸಂಕುಚಿತ ಭಾವನೆಗಳಿಗೆ ಎಡೆಯೇ ಇರಲಿಲ್ಲ. ಒಬ್ಬ ಹಿಂದು ಸಾಧು ಮತ್ತೊಬ್ಬ ಮುಸಲ್ಮಾನ್ ಫಕೀರ ಇಬ್ಬರೂ ಒಂದೇ ಭಾವದ ಹಾಡುಗಳನ್ನು ಹಾಡುವರು. ಮಹಾತ್ಮಾ ಕಬೀರರು ಸಹ "ಮೂರ್ತಿಪೂಜೆಯನ್ನು ಮಂದಿರದಲ್ಲಿ ಮಾಡಲಿ ಅಥವಾ ಮಸೀದಿಯಲ್ಲಿ ನಮಾಜು ಮಾಡಲಿ, ನಿಜವಾದ ಭಕ್ತಿಯೇ ಮುಖ್ಯ. ಆದುದರಿಂದ ಅಣ್ಣಂದಿರಾ! ಒಳ್ಳೆಯವರಾಗಿರಿ. ಅನಿತ್ಯವಾದ ಸಂಸಾರವನ್ನು ತ್ಯಜಿಸಿ" ಎಂದು ಹೇಳಿರುವರು. ತಮಿಳು, ತೆಲುಗು, ಕನ್ನಡ ಭಾಷೆಗಳಲ್ಲಿ ಸಹ ಹಿಂದೂ ಮುಸ್ಲಿಂ ಐಕ್ಯತೆಯನ್ನು ಸಮರ್ಥಿಸುವ ಗೀತೆಗಳಿವೆ. ಪುರಂದರದಾಸರು, ಏಕನಾಥರು, ಚೈತನ್ಯರು, ಗುರುನಾನಕರು ಕಬೀರರು ಮೊದಲಾದವರೆಲ್ಲರೂ ತಮ್ಮ ಅನುಯಾಯಿಗಳಿಗೆ ಕೊಟ್ಟಿರುವ ಉಪದೇಶವು ಒಂದೇ ಸಮನಾಗಿದೆ. ದೇಶದ ಸಾಂಸ್ಕೃತಿಕ ಇತಿಹಾಸ ರಚನೆಗೆ ಇವುಗಳಿಂದ ಬಹಳ ಪ್ರಯೋಜನವುಂಟು.

ಡಾ। ಸೈಯ್ಯದ್ ಮಹಮೂದ್‌ರವರ ಈ ಯೋಜನೆಯು ಸಫಲವಾಗಲೆಂದೇ ನಮ್ಮ ಹಾರೈಕೆ. ಸದ್ಯದ ಪರಿಸ್ಥಿತಿಯಲ್ಲಿ ಇಂತಹ ಯೋಜನೆಯ ಅಗತ್ಯವು ಬಹಳವಿದೆ. ಹಿಂದಿ, ಮರಾಠಿ, ತಮಿಳು, ತೆಲುಗು ಕನ್ನಡ ಮಲಯಾಳ ಆದಿ ಎಲ್ಲ ಪ್ರಾಂತೀಯ ಭಾಷೆಗಳ ಗ್ರಾಮ್ಯ ಗೀತೆಗಳ ಅಲ್ಲಿನ ಪ್ರಚಲಿತ ಲೋಕೋಕ್ತಿಗಳನ್ನು ಸಂಗ್ರಹ ಮಾಡುವುದು ಅತ್ಯಗತ್ಯ.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತ ನಾಶ ಶುದ್ಧಿ ಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿ ಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿ ೧ಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಸ್ಸ್ವಭಾವ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಸೀಸೆ 1ಕ್ಕೆ ರೂ. 5—0—0

'ಕಾಮಶಾಸ್ತ್ರ' ಧರ್ಮಾರ್ಥ, ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೩೮
ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

HELP HIM
to achievement!

The child is Father to the Man. Yet "promise" is never fulfilled without care for the child's future health and happiness. For parents whom sheer value is imperative a policy of the TROPICAL is the most effective future-care.

TROPICAL is helping thousands of families it will help yours' too. Write to-day!

TROPICAL
INSURANCE COMPANY LIMITED.
NEW DELHI.

ಟ್ರೋಪಿಕಲ್
ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ನ್ಯೂಡೆಲ್ಲಿ

ಪ್ರತಿನಿಧಿಗಳಾಗಬಯಸುವವರು ಬರೆಯಿರಿ.

ಕೆ. ರಾಮಮೂರ್ತಿ, ಎಂ.ಎ., ಬ್ರಾಂಚ್ ಸೆಕ್ರಿಟರಿ, 160 ಮೌಂಟ್ ರೋಡ್, ಮದ್ರಾಸು.	ಅಥವಾ	ಎಂ ಸುಂದರರಾಮ ಶೆಟ್ಟಿ, ಬ್ರಾಂಚ್ ಮೆನೇಜರ್, ಹಂಪನಕಟ್ಟೆ—ಮಂಗಳೂರು.

— ಕೂದಲು ರಂಗುತೈಲ ಜಿಸಿರಿ —

ಈ ತೈಲದ ಲೇಪನಮಾತ್ರದಿಂದಲೇ ಕೂದಲು ಬಿಳಿದಾಗುವುದು ನಿಲ್ಲುವುದು, ನಿರಂತರವಾಗಿ ಉಪಯೋಗಿಸುವುದರಿಂದ ಕೂದಲು ಕಪ್ಪಾಗಿ ಬೆಳೆದು ಸಾರವನ್ನು ಹೊಂದುವುದು. ನಾವು ದಾಖಲೆ ಸರ್ಟಿಫಿಕೇಟುಗಳು ನಮಗೆ ದೊರೆತಿರುವುದೇ ನಮ್ಮ ತೈಲದ ಯೋಗ್ಯತೆಯನ್ನು ತಿಳಿಸುವುದು. ಅಪ್ರಯೋಜನಕಾರಿಯೆಂದು ಸಾಬೀತುಪಡಿಸಬಲ್ಲವರಿಗೆ ಕೊಟ್ಟ ಹಣವಾಪಸು ಕೊಡಲಾಗುವುದು. ಅಲ್ಪಸ್ವಲ್ಪ ನರೆತ ಕೂದಲುಗಳಿಗೆ ಬೇಕಾಗುವ ತೈಲಕ್ಕೆ ರೂ. 4, ಕಾಲ ಪಾಲಿಗೂ ಮುಕ್ತಿ ಪಡೆದವರೆ ರೂ. 7ರಷ್ಟು ಬೆಲೆಯ ತೈಲವು ಬೇಕಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ,
Hazara & Co.,
P. O. Behar Nersery Darbhnaga.

THE
PREMIER BANK
OF INDIA, LIMITED.
Head Office: MADRAS.
Branches:
MADURA & NELLORE.
CHAIRMAN
Dr. U.L.Narayana Rao.
'Bhujanga Nivas' Madras.
FIXED DEPOSITS
are now received at the following
Rates:
For 6 Months at 3½% P. A.
12 Months at 4½% P. A.
24 Months at 5% P. A.
(Interest Paid Half-yearly.)
S. V. Rau D. Com.,
Managing Director

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಮೈಸೂರು ಮೇ, ೭

ಜಿಲ್ಲಾ ವಿಭಾಗ—ಮೈಸೂರು ಜಿಲ್ಲೆಯನ್ನು ಜುಲೈ ೧ನೇ ತಾ. ಯಿಂದ ಎರಡು ಭಾಗಗಳನ್ನಾಗಿ ಮಾಡಿ ಒಂದಕ್ಕೆ ಮಂಡ್ಯ ಜಿಲ್ಲೆ ಎಂದು ಕರೆಯುವರೆಂದು ಹಿಂದೆ ವರದಿ ಮಾಡಲಾಗಿದೆ. ಮಂಡ್ಯ ಜಿಲ್ಲೆಗೆ 2 ತಾಲ್ಲೂಕು ಸೇರುತ್ತವಲ್ಲದೆ, ಪ್ರತ್ಯೇಕ ಜಿಲ್ಲಾಧಿಕಾರಿಗಳು ಕೆಲವು ಮುಖ್ಯ ಇಲಾಖೆಗಳ ಮುಖ್ಯಾಧಿಕಾರಿಗಳು ಸದ್ಯಕ್ಕೆ ಇರುವರೆಂದು ಗೊತ್ತಾಗಿದೆ. ಮಂಡ್ಯದಲ್ಲಿ ಈಗಾಗಲೇ ಒಂದು ದೊಡ್ಡ ಜಿಲ್ಲಾ ಭವನವು ನಿರ್ಮಿತವಾಗುತ್ತಿದೆ. ಇದರ ಆರಂಭೋತ್ಸವವು ಶೀಘ್ರದಲ್ಲೇ ನಡೆಯುವುದು.

ಉಪ ಚುನಾವಣೆ—ರಾಜಧಾನಿಯ ಮುನಿಸಿಪಲ್ ಸದಸ್ಯತ್ವಕ್ಕೆ ಹಿಂದೆ ಕಾಂಗ್ರೆಸ್ ಸದಸ್ಯರುಗಳು ರಾಜೀನಾಮೆ ಇತ್ತಿದ್ದರು. ಈ ಸ್ಥಾನಕ್ಕೆ ಉಪ ಚುನಾವಣೆಗೆ ನಾಮಿನೇಷನ್ ಪತ್ರ ಸ್ವೀಕರಿಸಲು ಮೊನ್ನೆಯ ದಿವಸವೇ ಕೊನೆಯ ದಿನ. ಆ ದಿನ ಕೆಳಗೆ ಕಂಡವರಿಂದ ನಾಮಿನೇಷನ್ ಪತ್ರ ಬರಲು ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿತರಾದರು. ಶ್ರೀಯುತರುಗಳಾದ ಪಿ. ಲಿಂಗಪ್ಪಯ್ಯ, ಸಾಹುಕಾರ್ ದೊಡ್ಡ ಜವರಪ್ಪ, ಜಿ. ಆರ್. ಈಶ್ವರ್, ಪಿ. ಜಿ. ರಾಮಚಂದ್ರ ರಾವ್, ಎಂ. ತಿಮ್ಮಣ್ಣ, ಟಿ. ಕೃಷ್ಣರಾವ್, ಎಂ. ರಾಮಚಂದ್ರನ್ ಮತ್ತು ಎ. ಗಫಾರ್ ಡಬ್ಲ್ಯು. ಹೆಚ್. ಥಿಯೋಬಾಲ್ಡ್ ಮತ್ತು ವಿ. ಹನುಮಂತ ಶೆಟ್ಟಿ. ಶ್ರೀಯುತ ಕೆ. ಸಂಜಪ್ಪನವರು, ದೀನರಾಜ ಮೊಹಲ್ಲಾದಿಂದ ನಾಮಿನೇಷನ್ ಪತ್ರ ಬಂದಿರುವುದರಿಂದ ಪ್ರತಿಸ್ಪರ್ಧಿಯಿಲ್ಲದಿರುವುದರಿಂದ ಅವರನ್ನು ಚುನಾಯಿಸಲಾಗುತ್ತೆ. ಲಷ್ಕರ್ ಮತ್ತು ದಾವರಾಜ ಮೊಹಲ್ಲಾದಿಂದ ಇನ್ನೊಂದೊಂದು ಖಾಲಿ ಸ್ಥಾನವುಂಟು. ಅವುಗಳಿಗೆ ಪುನಃ ಉಪಚುನಾವಣೆ ನಡೆಯುತ್ತೆ.

ಹರಿಜನರಿಗೆ ಪ್ರವೇಶವಿಲ್ಲ— ಶ್ರವಣಬೆಳ್ಗೊಳದಲ್ಲಿರುವ ಗೋಮಟೇಶ್ವರ ದೇವಸ್ಥಾನದ ಒಳಗೆ ಇತರ ಹಿಂದುಗಳು ಎಲ್ಲಿವರೆಗೆ ಹೋಗಬಹುದೋ ಅಲ್ಲಿವರೆವಿಗೆ ಹರಿಜನರಿಗೆ ಪ್ರವೇಶವುಂಟೆಂದು, ಸರಕಾರದವರ ಒಂದು ಆಜ್ಞೆಯಿತ್ತು. ಇದರ ಮೇಲೆ ಶ್ರವಣಬೆಳಗೊಳದ ಮತ್ತು ಇತರ ಮುಖ್ಯ ಜೈನ ಮಹನೀಯರು ಸರಕಾರದವರೊಂದಿಗೆ ಪ್ರತಿಭಟಿಸಿ ಚರ್ಚೆನಡೆಸಿದರ ಮೇಲೆ ಸರಕಾರದವರು ಈ ಆಜ್ಞೆಯನ್ನು ರದ್ದು ಮಾಡಿರುತ್ತಾರೆಂದು ಪ್ರಕಟವಾಗಿದೆ. ಪ್ರಪಂಚವೆಲ್ಲವೂ ಮುಂದುವರಿಯುತ್ತಿರುವ ಕಾಲದಲ್ಲಿ ನಮ್ಮ ಜೈನಮಹನೀಯರು ಹೀಗೆ ಮಾಡಿದುದು, ವಿಂದನೀಯವಾದುದೇಸರಿ.

ಬಡ ರೈತರಿಗೆ ಸಹಾಯ—ಪಬ್ಲಿಕ್ ವರ್ಕ್ಸ್ ಇಲಾಖೆಯವರು ಸುಮಾರು ೧೭,೦೦೦ ಖರ್ಚುಮಾಡಿ ಮುಖ್ಯಸ್ಥಳಗಳಲ್ಲಿ ಕೆರೆಕಟ್ಟೆಗಳನ್ನು ಕಟ್ಟಿಯೂ ಅವುಗಳನ್ನು ರಿಪೇರಿಮಾಡಿಯೂ ಜಮೀನುಗಳಿಗೆ ನೀರನ್ನು ಒದಗಿಸಿ ಪೈರು ಪಚ್ಚೆಗಳಿಗೆ ಅನುಕೂಲವಮಾಡುವದಲ್ಲದೆ ಬಡ ರೈತಾಪಿಗಳಿಗೂ ಸಹಾಯ ಮಾಡಲಾಗುವುದೆಂದು ಗೊತ್ತಾಗಿದೆ. ಇದಕ್ಕೆ ಸರ್ಕಾರದವರನ್ನು ಅಭಿನಂದಿಸಲಾಗಿದೆ.

ಮೈಸೂರಿಗೆ ಬರಬೇಡಿ—ಮೈಸೂರು ರೈಲ್ವೆ ವರ್ಕ್ ಶಾಪಿನವರು ಪ್ರಾರಂಭಿಸಬೇಕೆಂದಿರುವ ರೈಲ್ವೆ ಕೆಲಸಗಾರರ ಸಂಘಕ್ಕೆ ತಾವು ಬರುವುದು ಸರಿಯಲ್ಲವೆಂದು ತೋರುತ್ತದೆ. ಎಂಬ ಅರ್ಥ ಬರುವ ಒಂದು ಪತ್ರವನ್ನು ಮೈಸೂರು ಜಿಲ್ಲಾಧಿಕಾರಿಗಳು ಅಖಿಲ ಭಾರತ ರೈಲ್ವೆ ಫೆಡರೇಶನ್ ಕಾರ್ಯದರ್ಶಿಗಳಾದ ಶ್ರೀಯುತ ಗುರು ಸ್ವಾಮಿಯವರಿಗೆ ಬರೆದಿದ್ದರೆಂದೂ, ಅದರ ಮೇಲೆ ಶ್ರೀ ಗುರುಸ್ವಾಮಿಯವರು ಉತ್ತರ ಕೊಡುತ್ತ ನಾನು ಶಾಂತಿ ಮತ್ತು ನ್ಯಾಯ ಮಾರ್ಗದಲ್ಲಿ ಆ ಸಂಘ ಸ್ಥಾಪನೆಗೆ ಪ್ರಯತ್ನಿಸುತ್ತೇನೆ ಎಂದು ತಿಳಿಸಿರುತ್ತಾರೆಂದು ನಂಬಲರ್ಹವಾದ ಕಡೆಗಳಲ್ಲಿ ಹೇಳಲಾಗಿದೆ.

ದಿ ಬಿಲ್ಲವರ ಎಸೋಸಿಯೇಶನ್ ಮುಂಬಾಯಿ

ಈ ಕೆಳಗೆ ಹೆಸರಿಸಿದ ಮಹನೀಯರನ್ನು ಈ ಮೇಲಿನ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ 1939–1940ನೇ ವರ್ಷಕ್ಕೆ ನೇಮಿಸಲಾಗಿದೆ—ಶ್ರೀಯುತರುಗಳಾದ ಟಿ. ಕೆ ಅಮೀನ್–ಅಧ್ಯಕ್ಷ, ಟಿ. ಸಿ. ಕುಕ್ಯನ್–ಉಪಾಧ್ಯಕ್ಷ, ಬಿ. ಟಿ. ಅಂಚನ್–ಮಾನಾರ್ಥ ಜನರಲ್ ಕಾರ್ಯದರ್ಶಿ, ಪಿ. ಸಂಕಪ್ಪ ಅಮೀನ್–ಉಪಕಾರ್ಯದರ್ಶಿ, ಬಾಬು ಯಸ್. ಅಮೀನ್–ಗೌರವ ಕೋಶಾಧಿಕಾರಿ, ಯಂ. ಪಿ. ಸನಿಲ್–ವಿದ್ಯಾ ಉಪಸಮಿತಿಯ ಅಧ್ಯಕ್ಷ, ಕೃಷ್ಣಪ್ಪ ಡಿ. ಮೂಲ್ಕಿ ವಿದ್ಯಾ ಉಪಸಮಿತಿಯ ಕಾರ್ಯದರ್ಶಿ, ಕೆ. ಮೋನಪ್ಪ ಕೋಟಿಯನ್–ಸರ್ವಸಾಧಾರಣ ಸಹಾಯಸಮಿತಿಯ ಅಧ್ಯಕ್ಷ, ಬಿ. ಯಸ್. ಕಿರೋಡಿಯನ್–ಸರ್ವಸಾಧಾರಣ ಸಹಾಯಸಮಿತಿಯ ಕಾರ್ಯದರ್ಶಿ.

ಮೆಂಬರರುಗಳು–ಪಿ. ಪಿ. ಕೋಲೂರು ಕಾರ್, ವೀರಪ್ಪ ಡಿ. ಸುವರ್ಣ, ಮುತ್ತಪ್ಪ ಸುವರ್ಣ, ಯಸ್. ಆರ್. ಅಮೀನ್, ಅಣ್ಣಪ್ಪ ಜಿ. ಸನಿಲ್, ಗೋವಿಂದ ಯು. ಬಾಲಿಯಾನ್, ಅಣ್ಣಪ್ಪ ಮಂಜು, ಕೆ. ವೆಂಕಪ್ಪ ಸುವರ್ಣ, ಯಂ. ಆರ್. ಚಂದರ್, ಗಂಗಯ ಸಿ ಕುಕ್ಯನ್, ಕೆ. ಸಂಜೀವ ರಾವ್, ಬೊಗ್ರದೊಡು, ಸೇಸ ಅಪ್ಪಯ್ಯ ಪಿ. ಐ. ಸಂಜೀವ. ಶ್ರೀ, ಯಲ್. ಸಿ. ಕುಕ್ಯನ್, ಮಂಜಪ್ಪ ಕುಕ್ಯನ್.

ಕರ್ಣಾಟಕ ಧರ್ಮಾರ್ಥ ರಾತ್ರಿಶಾಲೆ ಮುಂಬಾಯಿ

ಈ ಶಾಲೆಯ ವಾರ್ಷಿಕ ಸಂತೋಷ ಕೇಂದ್ರ ಮಹಾಸಭೆ (Social gathering) ತಾ. 30-4-39ರಲ್ಲಿ ಶಾಲೆಯ ಪಠಾಂಗಣದಲ್ಲಿ ಶಾಲೆಯ ಗತವರ್ಷದ ಮುಖ್ಯೋಪಾಧ್ಯಾಯರಾದ ಶ್ರೀಯುತ್. ಸಂಜೀವ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಶಿವನಾಥ್ ಎಂ ಎ., ಟಿ. ಯಂ. ಉಚ್ಚಿಲ್ ಯಸ್. ಯಸ್. ಶೆಟ್ಟಿ, ಬಿ. ಪಿ. ನಾಯಕ್ ವೈ. ಟಿ. ಬಂಗೇರ ಮೊದಲಾದವರು ಶಾಲೆಯ ಉನ್ನತಿಯನ್ನು ಬಯಸಿ ವಿದ್ಯಾರ್ಥಿಗಳು ಹೇಗೆ ವರ್ತಿಸಬೇಕೆಂಬ ಸಂಗತಿಗಳನ್ನು ವಿವರಿಸಿದರು. ಅಧ್ಯಕ್ಷರು ತಮ್ಮ ಸಂದರ್ಭೋಚಿತವಾಗಿ ಭಾಷಣವಿತ್ತರು. ಕಡೆಗೆ ಮೂರು ವಿದ್ಯಾರ್ಥಿಗಳಿಗೆ ಇನಾಮು ಹಂಚಿದ ಮೇಲೆ ಶಾಲೆಯ ಗೌ. ಕಾರ್ಯದರ್ಶಿಯವರಾದ ಶ್ರೀ. ಯಂ. ಶ್ರೀಧರ ಶೆಟ್ರು ಧನ್ಯವಾದವನ್ನರ್ಪಿಸಿದರು. ಲಘು ಫಲಹಾರದೊಂದಿಗೆ ಅಂದಿನ ಸಭೆಯು ಕೊನೆಗೊಂಡಿತು.

ಪ್ರಕಟಣೆ

ಉಡುಪಿ ತಾಲೂಕು ಪೆರ್ಣಂಕಿಲ ಗ್ರಾಮದ ಬಸಪ್ಪ ಶೇರಿಗಾರರ ಅಳಿಯ ಅಣ್ಣಪ್ಪ ಸೇರಿಗಾರನು ಈ ಮೂಲಕ ಪ್ರಕಟಿಸುವುದೇನೆಂದರೆ—

ನನಗೆ ಹೊರಗಿನಿಂದ ಬರತಕ್ಕ ಬಟವಾಡೆಗಳ ಬಗ್ಗೆ ಬೇರೆಬೇರೆ ಜನರು ನನಗೆ ಬರೆಕೊಟ್ಟ ಪ್ರಮಿಸರಿ ನೋಟುಗಳು ಹಣ್ಣ ನನ್ನ ಬಾಬ್ತು ರಿಕಾರ್ಡುಗಳು ಕೆಲವು ಪತ್ರ ಸಹಾ ಇರುವ ತಾ. 19-4-39ನೇ ರಾತ್ರಿ ನನಗೆ ಗೊತ್ತಿಲ್ಲದಿರುವ ಸಮಯ ಕಳವುಮಾಡಿಕೊಂಡು ಹೋಗಿರುವದರಿಂದ ಆ ಬಗ್ಗೆ ನಾನು ಉಡುಪಿ ಪೋಲೀಸಿನವರ ಮುಂದೆ ಅಲ್ಲಾದ ಫಿರಿಯಾದು ದಾಖಲು ಮಾಡಿ ಅದು ಈಗ ತನಿಖೆಯಲ್ಲಿ ಬಾಕಿ ಇರುತ್ತದೆ. ಆದ್ದರಿಂದ ನನಗೆ ಬರೆಕೊಟ್ಟ ಪ್ರೊ. ನೋಟುಗಳು ವ ನನ್ನ ಬಾಬ್ತು ಯಾವತ್ತಾ ರಿಕಾರ್ಡುಗಳು ಯಾರಿಗಾದರೂ ಸಿಕ್ಕಿದರೆ ಅದನ್ನು ಉಡುಪಿ ಪೋಲೀಸ್ ಸ್ಟೇಶನಿನಲ್ಲಾಗಲೀ, ನನಗಾಗಲೀ ಕೊಟ್ಟು ರಶೀದಿ ಪಡಕೊಳ್ಳಬೇಕಾಗಿ ಪ್ರಾರ್ಥಿಸುತ್ತೇನೆ. ನನಗೆ ಬರೆಕೊಟ್ಟ ನೋಟುಗಳನ್ನಾಗಲೀ, ಇತರ ರಿಕಾರ್ಡುಗಳನ್ನಾಗಲೀ ನನ್ನ ಹೆಬ್ಬೆಟ್ಟಿನ ಗುರುತು ಹಾಕಿದ ಶರದ ವಿನಹಾ ಟ್ರಾನ್ಸ್‌ಫರ್ ಪಡೆದರೆ ಅಥವಾ ಹಾಜರುಪಡಿಸಿದರೆ ಅಥವಾ ಬೇರೆ ರೀತಿಯಿಂದ ಉಪಯೋಗಿಸಿದರೆ ಅದು ಸಿಂಧುವಾಗಲಾರದೆಂತ ಈ ಮೂಲಕ ತಿಳಿಯಪಡಿಸಿರುತ್ತೇನೆ.

ಪೆರ್ಣಂಕಿಲ, ತಾ. 7-5-'39 } ||| ಈ ಮೂರು ಗೆರೆ ಅಣ್ಣಪ್ಪ ಶೇರಿಗಾರನ ರುಜು.

ಸದ್ರಿ ಅಣ್ಣಪ್ಪ ಶೇರಿಗಾರನ ಮೊಮ್ಮಗ ಅನಂತಶೇರಿಗಾರನ ಸಾಕ್ಷಿ.

ನವಯುಗ
ಸ್ಪರ್ಧೆ ೨ನ್ನು ಬಿಡಿಸಿ
ಇನಾಮು ಪಡೆಯಿರಿ.

THE
PANGAL NAYAK BANK
Estd.] LIMITED. [1920.

ದಿ ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್.

Paid up Capital Rs. 1,82,100/-. Reserves Rs. 2,02 800/-
PRINCIPAL OFFICE: COURT ROAD, UDIPI.
OTHER OFFICES:
UDIPI MANGALORE, KATAPADI, & KANHANGAD.

Season Deposits so as to bear interest at 4per cent per annum till the end of June 1939 are accepted.

Cumulative Deposits are also received on the usual terms.

Banking business of every description is transacted. Further particulars may be had on application.

ದಿ ವಿಜಯ ಬೇಂಕ್, ಲಿಮಿಟೆಡ್, ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವಹಿವಾಟುಗಳು ಇಲ್ಲಿ ನಡೆಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3 ತಿಂಗಳಿಗೆ	....	3½%
6 ,,	....	4%
1 ವರ್ಷಕ್ಕೆ	....	4½%
2 ,,	....	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. ೫/-ರ ವರೆಗಿನ ಸಾಲ ಕೊಡಲ್ಪಡುತ್ತದೆ.

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತದೆ.

Transport & Car Owners



ARE SPECIALLY INVITED TO VISIT
OUR SHOW ROOM
for economical transport maintenance.
CANARA AUTOMOBILES - - - - - - MANGALORE

AUGUSTINE & CO.

Stockits:—

Wellknown ceylon, Nilgri, Darjeeling & Assam Tea & Coffee All sorts of Hotel & family Tea Mixures as well as Coffee can be had at moderate rates.

ಮುಂಬಾಯಿಯಲ್ಲಿ ನಮ್ಮ ಗಿರಾಕಿಗಳು ಹಲವು ವರ್ಷಗಳಿಂದ ನಮ್ಮ ಚಾ ಕಾಫಿಯನ್ನು ಉಪಯೋಗಿಸಿ ಸಂತುಷ್ಟರಾಗಿದ್ದಾರೆ.

ಹೋಟೆಲುಗಳಿಗೆ ಬೇಕಾಗುವ ಟೀ ಮಿಕ್ಸರ್ ವ ಕಾಫಿ ಹುಡಿ, ಮನೆಗಳಿಗೆ ಬೇಕಾಗುವ ಚಾ-ಕಾಫಿ, ನಮ್ಮಲ್ಲಿ ಸದಾ ಮಿತ ಹಿತದರಕ್ಕೆ ದೊರೆಯುತ್ತದೆ. ಪ್ರಾಮಾಣಿಕತೆಯೇ ನಮ್ಮ ಆದರ್ಶ. ಗಿರಾಕಿಗಳ ಸೌಕರ್ಯವೇ ನಮ್ಮ ಧ್ಯೇಯ.

ಪರೀಕ್ಷಿಸಿರಿ! ಖಾತ್ರಿ ಮಾಡಿಕೊಳ್ಳಿ

ವಿಳಾಸ: ಆಗಸ್ಟಿನ್ ಎಂಡ್ ಕೋ, ಮೌಂಟರೋಡು, ಮಜಗಾಂ, ಮುಂಬಯಿ.

MOUNT ROAD, MAZAGAON, BOMBAY.

ರೂಪಾಯಿ 26,000

ಎಲ್ಲಾ ಸರಿಯಾದ 13 ಉತ್ತರಗಳಿಗೆ ಹಂಚಲ್ಪಡುವುದು.

ಉತ್ತರವನ್ನು ಮುಂಬಾಯಿಯ ಪ್ರಸಿದ್ಧ ಬ್ಯಾಂಕಿನಲ್ಲಿ ಭದ್ರವಾಗಿರಿಸಲಾಗಿದೆ. ಕನಿಷ್ಠ ರೂ. 2000 ಇದಕ್ಕೆ ಸರಿಯಾದ ಪ್ರತಿಉತ್ತರಕ್ಕೆ ಕೊಡಲಾಗುವುದು.

ಹೆಚ್ಚು ಉತ್ತರ ಕಳುಹಿಸುವವರಿಗೆ ರೂ. 150 ಮತ್ತು ನಮ್ಮ ಉತ್ತರಕ್ಕೆ ಹೋಲಿಕೆಯುಳ್ಳ ಉತ್ತರಗಳಿಗೆ ರೂ. 25ರ 50 ಸಾಧಾರಣೀಯ ಬಹುಮಾನಗಳನ್ನು ಕೊಡಲಾಗುವುದು.

ಕೆಳಗೆ ಕೊಟ್ಟ ಚೌಕದಲ್ಲಿಯು ಸಾಲುಗಳನ್ನು ಅಡ್ಡಕ್ಕೂ ನೀಟಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸಿದಲ್ಲಿ ಜುಮಲಾ 34 ಬರುವಂತೆ 1 ರಿಂದ 16ರವರೆಗಿನ ಸಂಖ್ಯೆಗಳನ್ನು ಸೇರಿಸತಕ್ಕದ್ದು. ಒಮ್ಮೆ ಉಪಯೋಗಿಸಿದ ಅಂಕೆಗಳನ್ನು ಇನ್ನೊಮ್ಮೆ ಉಪಯೋಗಿಸಬಾರದು. ಕಳುಹಿಸುವ ಕೊನೆಯ ದಿನ 16-5-39. ಫಲಿತಾಂಶವು 23-5-39ರಲ್ಲು ಪ್ರಕಟಣೆಹೊಂದುವುದು.

ಪ್ರವೇಶಧನ ಒಂದು ಉತ್ತರಕ್ಕೆ ರೂ. 1/- ಮೂರಕ್ಕೆ ರೂ. 2/- 6 ಉತ್ತರಗಳ ಪ್ರತಿಯೊಂದು ಸೆಟ್ಟಿಗೆ ರೂ. 5/-ರಂತೆ.

ಶರ್ತಗಳು—ಮೇಲೆ ಕಾಣಿಸಿದಂತೆ ಯುಕ್ತ ಮೌಲ್ಯದೊಂದಿಗೆ ಸಾಮಾನ್ಯ ಕಾಗದದ ಮೇಲೆ ಸ್ಪಷ್ಟವಾಗಿ ಬರೆದು ಬೇಕಾದಷ್ಟು ಉತ್ತರಗಳನ್ನು ಕಳುಹಿಸಬಹುದು. ಹಣವು ಮನಿಯಾರ್ಡರು ಯಾ ಪೋಸ್ಟಲ್ ಆರ್ಡರು ದ್ವಾರಾ ರವಾನಿಸತಕ್ಕದ್ದು. ಜಮೆಯಾದ ಹಣದ ಪ್ರಮಾಣದಲ್ಲಿ ಬಹುಮಾನಗಳು ಕೊಡಲಾಗುವುವು. ಆದರೆ ಕನಿಷ್ಠ ಬಹುಮಾನ ರೂ. 2000ಕ್ಕೆ ಗ್ಯಾರಂಟಿಯಿದೆ. ಫಲಿತಾಂಶ ತಿಳಿಯಲು ಅನುಕೂಲವಾಗುವಂತೆ ಉತ್ತರ ಸಹಿತವಾದ, ಸ್ಟಾಂಪು ಅಂಟಿಸಿದ ಕವರನ್ನು, ಕಳುಹಿಸುವ ಉತ್ತರದೊಂದಿಗೆ ಲಗ್ತೀಕರಿಸಬೇಕು. ವ್ಯವಸ್ಥಾಪಕರ ತೀರ್ಮಾನವೇ ಕೊನೆಯ ತೀರ್ಮಾನವು, ಕಾಯಿದೇಶೀರ ಲಗಾವಾಗತಕ್ಕದ್ದು ಆಗಿದೆ.

ಮೇಲಣ ಇನಾಮುಗಳಲ್ಲದೆ ಕನಿಷ್ಠ ಪಕ್ಷ ನೂರು ಉತ್ತರಗಳನ್ನು ಕಳುಹಿಸುವವರಿಗೆ ಕೆಮಿಕಲ್ ಗೋಲ್ಡ ಉಂಗುರ ಉಚಿತ. ಕೈಬೆರಳ ಸುತ್ತಳತೆ ಕಳುಹಿಸತಕ್ಕದ್ದು. 6ಯಾ ಹೆಚ್ಚಿಗೆ ಉತ್ತರ ಕಳುಹಿಸುವವರಿಗೆ ಒಂದು ಸೀಸೆ ವೈಗ್ರನ್ ಟೋನಿಕ್ ಸಹ ಕೊಡಲಾಗುವುದು.

ನಿಮ್ಮ ಉತ್ತರಗಳನ್ನೂ ಹಣವನ್ನೂ ಕೆಳಗಣ ವಿಳಾಸಕ್ಕೆ ಕಳುಹಿಸಿರಿ

ಈ ಮೊದಲಣ ಸ್ಪರ್ಧೆಯಲ್ಲಿ ಭದ್ರಗೊಳಿಸಿದ ಉತ್ತರದ ಜುಮ್ಲಾ 30

೧ನೇ ಸಾಲು	9, 11, 6, 4
೨ನೇ ಸಾಲು	7, 6, 10, 8
೩ನೇ ಸಾಲು	12, 14, 1, 3
೪ನೇ ಸಾಲು	2, 0, 13, 15

ಮೆನೇಜರ್,
ಪ್ರೆಸಿಡೆನ್ಸಿ ಕಮ್ಮರ್ಶಿಯಲ್ ಸಿಂಡಿಕೇಟ್, ಮುಂಬಾದೇವಿ
ಬೊಂಬಾಯಿ 2

The Manager,
Presidency Commercial Syndicate
Mumbadevi, BOMBAY 2

ಕೇಶವರ್ಧಕ ⁂ ನೇತ್ರಾರೋಗ್ಯರಕ್ಷಕ ⁂ ಸುವಾಸನಾಯುಕ್ತ

ಆಮಲಕೀ ತೈಲ
AMALAKI HAIR OIL

(Regd Trade Mark)

ವಿದ್ಯಾರ್ಥಿಗಳಿಗೂ, ಸಕಲ ಸ್ತ್ರೀ ಪುರುಷರಿಗೂ ನಿತ್ಯ ಕೇಶ ಪ್ರಸಾಧನಾರ್ಥ ಪುಷ್ಪಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲವಿದು. ಮೆದುಳಿನ ಸ್ವಸ್ಥತೆಕ್ಕೂ ನೇತ್ರಾರೋಗ್ಯ ರಕ್ಷಣೆಗೂ ಕೇಶಕಲಾಪದ ಬೆಳವಣಿಗೆಗೂ ಸೌಂದರ್ಯವರ್ಧನೆಗೂ ಅತ್ಯಂತ ಸಹಾಯಕವಾಗಿದೆ. ಇದನ್ನು ನಿತ್ಯವೂ ಉಪಯೋಗಿಸುತ್ತಿದ್ದರೆ ಶರೀರ ಹಾಗೂ ಮಾನಸಿಕ ಶ್ರಮೆಯಿಂದ ಪುರುಷರಿಗೂ, ಪ್ರಸವಾನಂತರದಲ್ಲಿ ಸ್ತ್ರೀಯರಿಗೂ ಸಾಮಾನ್ಯವಾಗಿ ಕೇಶಮೂಲಗಳು ನಿಸತ್ವಹೊಂದಿ ಕೂದಲುಗಳ ಉದುರುವಿಕೆ ಅಕಾಲದಲ್ಲಿ ನರೆಯುಂಟಾಗುವಿಕೆ ಇವೇ ಮೊದಲಾದದೋಷಗಳು, ಜರೂರವಾಗಿ ಕೇಶಮೂಲಗಳು ದೃಢವಾಗುವುದರಿಂದ ಅತ್ತ ಕಪ್ಪಾದ ಕೂದಲುಗಳು ನಿಬಿಡವಾಗಿಬೆಳೆಯುವದಲ್ಲದೆ ಮೊದಲೇ ನರೆತಕೂದಲು ಸಹ ಕಪ್ಪಾಗಿ ಮುಖಶ್ರೀಯು ಲಾವಣ್ಯಪೂರ್ಣವಾಗುವದು. ತಲೆ ನೋವು, ಸೂರ್ಯಾವರ್ತ ಅಥವಾ ಅರೆತಲೆನೋವು, ನೇತ್ರಜ್ವಾಲೆ, ಮೆದುಳಿನ ಉಷ್ಣತೆ ತಲೆತಿರುಗು, ದುಃಸ್ವಪ್ನ ಪೂರ್ಣವಾದ ನಿದ್ರಾಭಂಗ, ಮೊದಲಾದ ಪಿತ್ತಜನಿತರೋಗಗಳೂ ನಿವೃತ್ತವಾಗಿ ಸುಖವಾದ ನಿದ್ರೆಯು ಹುಟ್ಟುವುದು. ಇಂತಹ ಸುಖನಿದ್ರೆಯಿಂದ ಸ್ಮೃತಿ, ಮೇಧಾ ಉತ್ಸಾಹ,ವಿಚಾರಶಕ್ತಿ ಮೊದಲಾದ ಮಾನಸಿಕ ಶಕ್ತಿಗಳು ವಿಕಾಸಹೊಂದಿ ಆರಾರೋಗ್ಯ ಲಾಭವಾಗುವದು.

4 ಔನ್ಸಿನ ಸೀಸೆ ಒಂದರ 0—11—0. 2 ಔನ್ಸಿನ ಸೀಸೆ ಒಂದರ 0—6—0.

ಧನ್ವಂತರಿ ಗುಟಿಕಾ ಕಸ್ತೂರಿಯುಕ್ತ ವಾಯುಮಾತ್ರೆ

ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಅತ್ಯುಪಯುಕ್ತವಾಗಿದೆ.
ಡಜನಿಗೆ 0-4-0 100ಮಾತ್ರೆಗಳಿಗೆ ರೂ. 1-5-0, 500ಕ್ಕೆ ರೂ. 5.
5 ಆಣೆ ಸ್ಟಾಂಪುಕಳಿಸಿದ್ದಲ್ಲಿ 1 ಡಜನ್ ಮಾತ್ರೆ ಕಳಿಸಲಾಗುವುದು.

ಕೆಟಲಾಗಿಗೂ ಇತರ ಮಾಹಿತಿಗೂ ನಿಮಗೆ ಬೇಕಾದ ಯಾವತ್ತೂ ಔಷಧಿಗೂ ಬರೆಯಿರಿ

ಸ್ವದೇಶೀ ಔಷಧಿ ಭಂಡಾರ, (ರಜಿಸ್ಟರ್ಡ್) ಕುಂಜಾಲ್,
ಬ್ರಹ್ಮಾವರ ಪೋಸ್ಟ್, ದ. ಭಾರತ

ಉಡುಪಿ ಸಪ್ಲೈ ಏಜನ್ಸಿ ಲಿಮಿಟೆಡ್'ನಲ್ಲೂ ನವಭಾರತ ಬುಕ್ ಡಿಪೋದಲ್ಲೂ ನಮ್ಮ ಔಷಧಗಳು ಸಿಗುತ್ತವೆ

ದೂರೀಕರಿಸಿರಿ—ದೃಷ್ಟಿ ಚಕ್ರ—ನೆರತಕೂದಲು—ವೃದ್ಧಾಪ್ಯ ತರುಣರು ಎರಡು ತಿಂಗಳವರೆಗೂ, ವೃದ್ಧರು ನಾಲ್ಕು ತಿಂಗಳವರೆಗೂ ಟಾನಿಕನ್ನು ಉಪಯೋಗಿಸಿದಲ್ಲಿ ದೃಷ್ಟಿಮಾಂದ್ಯವು ತೊಲಗಿ ನರೆತ ಕೂದಲು ಕಪ್ಪಾಗಿ ದೇಹದ ನಿತ್ರಾಣವು ತೊಲಗಿ ತಾರುಣ್ಯದ ಥಳಕುಬಾರದೆ ಹೋದಲ್ಲಿ ಇಮ್ಮಡಿ ಕ್ರಯ ವಾಪಾಸು ಕೊಡುವ ಶರ್ತವಿದೆ. ಟಾನಿಕಿನ ಕ್ರಯವು ಈ ರೀತಿ ಕಡಿಮೆಯಾಗಿದೆ. ಒಂದು ತಿಂಗಳಿನ ಟಾನಿಕಿಗೆ ರೂ. 3-8-0; 2 ತಿಂಗಳಿನದಕ್ಕೆ ರೂ. 6-0-0; ನಾಲ್ಕು ತಿಂಗಳಿನದಕ್ಕೆ ರೂ. 10. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Jari Booti Dawakhana,
P. O. Behar Nursery (Darbhanga)

ಸಮಾಚಾರ ಸಮಾವಲೋಕನ

(4ನೇ ಪುಟದಿಂದ)

ಹೋರ್ ಸಾಹೇಬರೂ ಹೋರಾಡುತ್ತಿದ್ದಾರೆ

ಹಿಂದುಸ್ಥಾನದ ವೈಸರಾಯಿಯಾಗಬೇಕೆಂದು ಆಸೆ. ಸರ್. ಸಾಮುವೇಲ್ ಹೋರರಿಗೂ ಇದೆ. ಚೇಂಬರ್ಲೀನರ ನಂತರ ತಾನು ಮುಖ್ಯಮಂತ್ರಿಯಾಗುವೆನೆಂಬ ಭರವಸೆ ಕೆಲಕಾಲದ ವರೆಗೆ ಅವರಿಗಿದ್ದಿತಂತೆ. ಪರಿಸ್ಥಿತಿಯದಕ್ಕೆ ಪ್ರತಿಕೂಲವಾಗಿದೆಯೆಂದು ತಿಳಿದು ಈಗ ವೈಸರಾಯಿತನದ ಅಪೇಕ್ಷೆ ಹುಟ್ಟಿರುವದಂತೆ.

ಹೋರಾಡುವ ಮಾಜಿ ಕಮಿಶನರರು ಬರುವರೋ ಸಾವಧಾನಿ ಹೋರರೋ ಬರುವರೋ ಎಂಬುದನ್ನು ನೋಡಬೇಕಾಗಿದೆ. ಯಾರೂ ಬಾರದಂತಾಗುವ ಪರಿಸ್ಥಿತಿಗಾಗಿ ಹಿಂದುಸ್ಥಾನವು ಹೋರಾಡುತ್ತಿದೆ; ತಾನು ಮುಂದೆ ತಾನು ಮುಂದೆಂದು, ಹೊಂಟು ಬರಲು ಬಿಳಿಯರು ಹೋರಾಡುತ್ತಿದ್ದಾರೆ ಕರೆಯುವವರಿಲ್ಲದೆ ಹೋಗುವವರು ಹೆಚ್ಚುತ್ತಿರುವ ಕಾಲವಿದು!

ಇಂದಿನ ವೈಸರಾಯರ ಬುದ್ಧಿವಂತಿಕೆ!

ಇಷ್ಟೆಲ್ಲಾ ಬರಲಿರುವ ವೈಸರಾಯರ ಮಾತಾಯಿತು. ನಮ್ಮ ಇಂದಿನ ವೈಸರಾಯರಾದ ಲೋರ್ಡ್ ಲಿನ್ಲಿಥ್‌ಗೋ ಸಾಹೇಬರೇನೂ ಚಾತುರ್ಯದಲ್ಲಿ ಕಡಿಮೆಯಿಲ್ಲ ಬೊಂಬಾಯಿಯಲ್ಲಿದ್ದ ಕೆಲವು ಸೈನಿಕ ದಳಗಳನ್ನು ಮೊನ್ನೆ ತಾನೇ ಯುರೋಪಿಗೆ ಕಳುಹಿಸಿಕೊಟ್ಟರಷ್ಟೆ. ಈ ಕುರಿತು ಕೇಂದ್ರ ಎಸೆಂಬ್ಲಿಯ ಪಕ್ಷಗಳ ಧುರೀಣರ ಅಭಿಪ್ರಾಯ ಕೇಳಲು ವೈಸರಾಯರವರನ್ನು ಆಮಂತ್ರಿಸಿದ್ದರು. ಹಾಗೆ ಆಮಂತ್ರಿಸುವಾಗ ಕಾಲಾಕಾಲವನ್ನು ನೋಡಿಯೇ ಆಮಂತ್ರಿಸಿದ್ದರು. ಎಸೆಂಬ್ಲಿ ಸಭೆಯು ಮುಂದುವರಿಸಲ್ಪಟ್ಟು ಮೆಂಬರರೆಲ್ಲಾ ತಮ್ಮ ಊರಿಗೆ ಹೊರಟು ಹೋದ ಮೇಲೆ ಧುರೀಣರಿಗೆ ತಮ್ಮ ಪಕ್ಷದ ಅಭಿಪ್ರಾಯ ತಿಳಿಯಲವಕಾಶವಿಲ್ಲದ ಸಮಯ ನೋಡಿ ಅವರನ್ನು ಆಮಂತ್ರಿಸಿದರು. ಧುರೀಣರು ಹೋಗಿದ್ದರು; ಸೈನ್ಯವೂ ಹೊರಟುಹೋಗಿದೆ. ಹೋದ ಧುರೀಣರೇನು ಹೇಳಿದರೆಂಬುದೂ, ಹೋದಸೈನ್ಯವೇನು ಮಾಡುವದೆಂಬುದೂ ಗೊತ್ತಿಲ್ಲ.

ವೈಸರಾಯಿ ಪ್ರಭುಗಳು ಧುರೀಣರನ್ನಾಮಂತ್ರಿಸಿದ ರೀತಿಯನ್ನು ಆಧಾರವಾಗಿಟ್ಟುಕೊಂಡು ಹೇಳುವದಾದರೆ, ಹೋದ ಸೈನ್ಯವು ಇದಿರಾಳಿ ಸೈನ್ಯವು ಬಿಟ್ಟುಹೋದ ಸ್ಥಳವನ್ನಾಕ್ರಮಿಸದೆ ಬಿಡಲಾರದು!

ಬಂಗಾಳಿಗಳೆಲ್ಲರೂ ಹುಲಿಗಳೆ?

'ನಾವು ಹುಲಿಗಳು; ಸಿಂಹಗಳು' ಎಂದು ಬಂಗಾಳದ ಪ್ರಧಾನರಾದ ಮಾನ್ಯ ಫಜಲುಲ್ ಹಕ್ಕರೊಮ್ಮೆ ಗರ್ಜಿಸಿದುದು ಇನ್ನೂ ಮರೆತುಹೋಗಿಲ್ಲ. ಕಾಂಗ್ರೆಸಿನ ವಿರೋಧಿಗಳಾದ ಮಂತ್ರಿಗಳು ಆ ಜಾತಿಗೇನೇ ಸೇರತಕ್ಕವರೆಂಬುದರಿಂದ ಮೇಳವೂ ಆದಕ್ಕೆ ಹೊಂದುತ್ತಿತ್ತು. ಆದರೆ ಕಲ್ಕತ್ತದಲ್ಲಿ ಮೊನ್ನೆ ತಾನೇ ಅಖಿಲಭಾರತ ಕಾಂಗ್ರೆಸ್ ಸಮಿತಿಯ ಸಭೆ ಸೇರಿದಾಗ ಬಂಗಾಳದಲ್ಲಿ ಹುಲಿ ಸಿಂಹಗಳ ಸಂಖ್ಯೆ ವಿಪರೀತವಿದೆ ಎಂದು ಖಚಿತವಾಯಿತು. ರಾಷ್ಟ್ರಪತಿ ರಾಜೇಂದ್ರ ಪ್ರಸಾದ, ಪಂಡಿತ ನೆಹರು, ಆಚಾರ್ಯ ಕೃಪಾಲನಿ, ಪಂಡಿತಪಂತ, ಬಾಬಾಯಿ ದೇಸಾಯಿ, ಮೊದಲಾದವರಲ್ಲಿ, ಕೆಲವರ ಮೇಲೆ ಬಿದ್ದು ಪರಚಿ, ಕೆಲವರನ್ನು ಬೈದು ಭಂಗಿಸಿ ಬಂಗಾಳಿಗಳು ಮಿ. ಹಕ್ಕರ ಮಾತನ್ನು ಸತ್ಯಮಾಡಿ ತೋರಿಸಿದರು.

ಹೊಸ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರ ಅಂಗಿಯನ್ನೆಳೆದು ಹರಿದರು; ಅಧ್ಯಕ್ಷರ ಕಿರೀಟವು ಬಂಗಾಳಿಗಳ ಕೈಗೆ ಎಟಕದಿದ್ದರೇನಾಯಿತು? — ಅಂಗಿಯಾದರೂ ಸಿಕ್ಕಿತಲ್ಲ!

ಬಾಬು ಸುಭಾಸರ ಹೊಣೆಗಾರಿಕೆ

ಕಲ್ಕತ್ತದಲ್ಲಿ ಸಭೆ ಕರೆದಾಗಲೇ ಅಲ್ಲಿಯ ವಾತಾವರಣದ ಪರಿಚಯವಿದ್ದವರು ಶಾಂತಿಪಾಲನೆಯ ಕುರಿತು ಅನುಮಾನ ಸೂಚಿಸಿದ್ದರು. ಹಾಗೆ ಬಂಗಾಳಿಗಳ ಅದರಾತಿಥ್ಯದ ಕುರಿತು ಸಂದೇಹಪಟ್ಟವರನ್ನು ಶ್ರೀ. ಭೋಸರು ಖಂಡಿಸದೆ ಬಿಡಲಿಲ್ಲ. ಆದರೆ ಕಲ್ಕತ್ತದ ಸಭೆಯಲ್ಲಿ ಸಂದೇಹಗಾರರ ಮಾತೇ ಸತ್ಯವಾಯಿತು. ಭೋಸರ ಭರವಸೆ ಸುಳ್ಳಾಯಿತು. ಗಲಭೆಯನ್ನು ತಡೆಗಟ್ಟಲು ಶ್ರೀ ಸುಭಾಸರು ಶಕ್ತಿಮೀರಿ ಪ್ರಯತ್ನಿಸಿದರಾದರೂ ಸಾಧ್ಯವಾಗಲಿಲ್ಲ ಮಾತು ಮರೆದೇನು? ಸುಭಾಷ್ಚಂದ್ರ ಭೋಸರಲ್ಲಿ ಕಾಂಗ್ರೆಸ್ ಅಧ್ಯಕ್ಷತನದ ಹೊಣೆ ಹೊರುವೆನೆಂಬ ಶಾಂತಿ ಕಾಪಾಡುವೆನೆಂಬ ಆತ್ಮವಿಶ್ವಾಸವೂ ಇತ್ತು. ಇತರರು ಅವರನ್ನು ಸುಳ್ಳಾಗಿ ಮಾತಾಡಿಸುವಾಗ ಅವನ್ನು ತಡೆಗಟ್ಟುವ ಶಕ್ತಿಮಾತ್ರವಿರಲಿಲ್ಲ!

ಇದು ನಾಚಿಕೆಕರವಲ್ಲವೆ?

ರಾಷ್ಟ್ರಸಭೆಯ ಅಧ್ಯಕ್ಷರೂ ಸತ್ಯ ಅಹಿಂಸೆಗಳ ನಿಜವಾದ ಸಲ್ಲಕ್ಷಣಗಳುಳ್ಳವರೂ ಆದ ಬಾಬು ರಾಜೇಂದ್ರ ಪ್ರಸಾದರ ಮೇಲೂ ಬಿದ್ದು ತಾಡಿಸುವಷ್ಟು ಮದವೇರಿದರು ಬಂಗಾಳಿ ಕೇಡಿಗಳು! ಫಜಲುಲ್ ಹಕ್ ಸರಕಾರದ ಪೋಲಿಸು ಪಡೆ ಬರಬೇಕಾಯಿತು ಗಲಭೆ ತಡೆಯಲು! ಕಾಂಗ್ರೆಸ್ ಸಭೆಯಲ್ಲಿ ಅವರೆಲ್ಲಾ ಅಖಿಲ ಹಿಂದುಸ್ಥಾನದ ಧುರೀಣರು ಮಿಲನವಾಗಿದ್ದ ಕಲ್ಕತ್ತಾದಲ್ಲಿ ಶಾಂತಿಸ್ಥಾಪಿಸಲು ಪೋಲೀಸರು ಬರಬೇಕಾಯಿತೆಂಬುದು ಎಂತಹ ಲಜ್ಜಾಸ್ಪದ ವಿಷಯ! ಶ್ರೀ. ಸುಭಾಸರೂ ಬಂಗಾಳ ಕಾಂಗ್ರೆಸ್ ಕಮಿಟಿಯವರೂ ಸಾಕಷ್ಟು ವ್ಯವಸ್ಥೆಯನ್ನು ಮುಂದಾಗಿ ಕೈಗೊಳ್ಳುವದು ಅಗತ್ಯವಿರಲಿಲ್ಲವೆ? ಶಿಸ್ತಿನಿಂದ ಕಾರ್ಯನಡೆಸಲಸಾಧ್ಯವಾದ ಸ್ಥಳದಲ್ಲಿ ಸಭೆ ಕರೆಯುವ ಅಡಚಣೆಯೇನಿತ್ತು? ಸುಭಾಸರ ಆರೋಗ್ಯ ನೆಟ್ಟಗಿರಲಿಲ್ಲವೆಂಬ ಕಾರಣವೊಂದೇ ಹೊರತು ಮಿಕ್ಕ ಧುರೀಣರೂ ವೈಸನೋವು ಮಾಡಿಕೊಂಡು ಹೋಗಬೇಕೆಂಬ ಉದ್ದೇಶವಿರಲಿಕ್ಕಿಲ್ಲವಷ್ಟೆ?

ರಬ್ಬರ್ ಮೊಹರುಗಳು ಬೇಕಾದ ನಮೂನೆಯಲ್ಲಿ ಸುಲಭ ದರದಲ್ಲಿ ಸಕಾಲದಲ್ಲಿ ತಯಾರಿಸಿ ಕೊಡಲ್ಪಡುತ್ತವೆ.

ವಿವರಗಳಿಗೆ ಬರೆಯಿರಿ ಯಾ ಸ್ವತಃ ಬಂದು ವಿಚಾರಿಸಿರಿ.

ನವಭಾರತ ಬುಕ್ ಡಿಪೋ, ಉಡುಪಿ.

ಕರಾಮಾತೀ ದರ್ಪಣ

ಇದೊಂದು ಉತ್ತಮ ತರದ ಕನ್ನಡಿ. ಯಾವ ವಯಸ್ಸಿನವರೂ ಇದನ್ನು ನೋಡಬಹುದು. ಕದ್ದು ಹೋದ ಮಾಲು ಎಲ್ಲಿದೆ? ಕಾಯಿಲೆ ಗುಣವಾದೀತೆ? ಇಲ್ಲವೆ? ವಿಚಿಕಿತ್ಸೆ ಪರಿಹಾರ ಮಾರ್ಗ ಯಾವುದು? ಹೂಳಿಟ್ಟ ನಿಧಿ ಎಲ್ಲಿದೆ? ಕಷ್ಟದ ಕೆಲಸ ಕೈಗೂಡುವುದೆ? ಪ್ರೇಮ ಕಾರ್ಯ. ಪರೀಕ್ಷೆಗಳು, ಕೋರ್ಟು ವ್ಯವಹಾರಾದಿಗಳಲ್ಲಿ ವಿಜಯ ದೊರೆಯುವುದೇ? ಎಂಬುದನ್ನೆಲ್ಲ ಈ ಕನ್ನಡಿಯಿಂದ ತಿಳಿಯಬಹುದು. ಸ್ವರ್ಗಸ್ಥ ಮಾತಾಪಿತೃ, ಪುತ್ರಕಳತ್ರ, ಮಿತ್ರಬಾಂಧವರು ಗಳೆಲ್ಲರ ಭೇಟಿಮಾಡಬಹುದು. ನೀವು ನೋಡದ, ಸ್ವಪ್ನದಲ್ಲಿಯೂ ನೋಡಲಸಾಧ್ಯವಾದವರನ್ನು ಸಹ ನೋಡಬಹುದು ಈ ಕನ್ನಡಿಯಲ್ಲಿ! ಬೆಲೆ ರೂ ೨—೮—೦

ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಇಂಗ್ಲಿಷಿನಲ್ಲೇ ಬರೆಯಿರಿ.

ದೊರೆಯುವ ಸ್ಥಳ:—

ಅಮೇರಿಕನ್ ಮಿಸ್ಮೆರಿಸಂ ಹೌಸ್,
ಪೋಸ್ಟು ಬಾಕ್ಸ್ ನಂ ೨೭,
(N.Y.U.) ಅಮೃತಸರ [ಇಂಡಿಯಾ]

AMERICAN MISMERISUM HOUSE,
Post Box No 27
(N.Y.U.) Amritsar
(INDIA)

ಲೂಟಿ! ಲೂಟಿ!! ಖಾಲಿ ೩ ರೂಪಾಯಿಗೆ ಹೊಸ ವರ್ಷಕ್ಕೆ

ಅಚ್ಚಾದ ಹೊಸ ನಮೂನೆ

ಒಂದು ವರ್ಷದ ವರೆಗೆ ಮಾತ್ರ ವಿಶೇಷ ರಿಯಾಯತಿ.



ಶೀಘ್ರ ವಿಕ್ರಯ ಆಗುತ್ತಿದೆ. ವಿಳಂಬ ಮಾಡಿದರೆ ಪಶ್ಚಾತ್ತಾಪ ಪಡಬೇಕಾದೀತು.

ತಾಜಾ ಅಮೆರಿಕನ್ ಅಲಾರ್ಮ್ ಪಿಸ್ತೂಲು

ಹೆಚ್ಚು ಸಂಖ್ಯೆಯಲ್ಲಿ ಕೊಂಡುಕೊಂಡರೆ ಧಾರಾಳ ಕಮಿಷನು ಇದೆ. ಚಿತ್ರದಲ್ಲಿರುವಂತೆ 7 ಇಂಚು ಉದ್ದ 15 ಔನ್ಸುಭಾರ, ನೋಡಿದೊಡನೆ ಮನುಷ್ಯರು ಹೆದರುವರು. ಕಳ್ಳಕಾಕರು, ದುಷ್ಟ ಮೃಗಗಳು ಭಯಂಕರ ಶಬ್ದ ಕೇಳಿ ಪಲಾಯನ ಮಾಡುವವು. ಕೂಡಲೇ ಕೊಂಡುಕೊಂಡು ನಿಮ್ಮ ಹಿಡರಿಗಳನ್ನೂ ಆತ್ಮವನ್ನೂ ರಕ್ಷಿಸಿಕೊಳ್ಳಿರಿ. ಲೈಸನ್ಸಿಲ್ಲದೆ ಪ್ರತಿಯೊಬ್ಬನೂ ಉಪಯೋಗಿಸಬಹುದು. ಇದರೊಂದಿಗೆ 300 ಗುಂಡುಗಳು ಉಚಿತ. 50 ಗುಂಡುಗಳನ್ನು ಒಂದೇ ಸಲ ಹೊಡೆಯುವ ಪಿಸ್ತೂಲಿಗೆ ರೂ. 3/-, ಒಂದೇ ಸಲ 70 ಗುಂಡು ಬಿಡುವುದಕ್ಕೆ ರೂ. 3-8-. 200 ಹಾರಿಸುವುದಕ್ಕೆ ರೂ. 4/- ಅಂಚೆ ವೆಚ್ಚ ಬೇರೆ 1000 ಗುಂಡುಗಳಿಗೆ ರೂ. 2/- ಎಕ್ಸ್ಟ್ರಾ ಡಬ್ಬಿಗೆ 0-8-0. ಪಿಸ್ತೂಲಿಡುವ ಸುಂದರ ಪೆಟ್ಟಿಗೆಗೆ ರೂ. 1-8-0. (ನಿಮ್ಮ ಊರು ಮತ್ತು ನಿಮ್ಮ ವಿಳಾಸವನ್ನು ಸ್ಪಷ್ಟ ಬರೆಯಿರಿ)

ದೊರೆಯುವ ಸ್ಥಳ:-

ಅಮೆರಿಕನ್ ಪಿಸ್ತೂಲು ಹೌಸ್,
ಪಿ. ಬಿ. ಬಾಕ್ಸ್ ನಂ. 27
(N.Y.U.) ಅಮೃತಸರ [ಇಂಡಿಯಾ]

American Pistol Co.
P. B. No. 27 (N. Y. U.)
Amritsar (India)

೧೦ ಗಡಿಯಾರಗಳು ಬರೇ ೩॥ ರೂಪಾಯಿಗೆ



ಎಳು ಹೆಮ್ಮೆ ಕೈಗಡಿಯಾರಗಳು, ೨ ಹೆಮ್ಮೆ ಕಿಸೆಗಡಿಯಾರಗಳು, ಮತ್ತು ಒಂದು ಗಟ್ಟಿಯಂತ್ರದ ಸರಿ ಸಮಯ ತೋರಿಸುವ ಜರ್ಮನ ಟೈಂಪೀಸ್, ೩೦ ಗಂಟೆಗೊಮ್ಮೆ ಕೀ, ೧೦ ವರ್ಷದ ಗ್ಯಾರಂಟಿ ಈ ಗಡಿಯಾರವನ್ನು ವಿಲಾಯಿತಿಯಿಂದ ಹೆಚ್ಚು ಸಂಖ್ಯೆಯಲ್ಲಿ ತರಿಸಿದ್ದೇವೆ. ಈ ರಿಯಾಯತಿ ದರದಲ್ಲಿ ಕೇವಲ ೧೦,೦೦೦ ಗಡಿಯಾರಗಳನ್ನು ಮಾತ್ರವೇ ಮಾರುತ್ತೇವೆ. ತ್ವರೆ ಮಾಡಿರಿ! ಸಂದರ್ಭ ತಪ್ಪಿಹೋದೀತು. ಇದರೊಂದಿಗೆ ೧೪ ಕ್ಯಾರೆಟ್ ರೋಲ್ಡ್ ಗೋಲ್ಡ್ ನಿಬ್ಬಿನ ಫೌಂಟನ ಪೆನ್ನು ಒಂದು, ದೃಷ್ಟಿಚಕ್ರ ಒಂದು, ಮುತ್ತಿನ ಹಾರ ಒಂದು—ಇಷ್ಟು ಉಚಿತ, ಅಂಚೆವೆಚ್ಚ ಬೇರೆ. ಅತೃಪ್ತಿಯಾದರೆ ಹಣ ಹಿಂದೆ. ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ.

ದೊರೆಯುವ ಸ್ಥಳ:—

ಜರ್ಮನ್ ವಾಚ್ ಕಂಪೆನಿ,
ಪೋಸ್ಟು ಬಾಕ್ಸ್ ನಂ. ೨೭
(N.Y.U.) ಅಮೃತಸರ [ಇಂಡಿಯಾ]

German Watch Co.
P. B. No. 27 (N.Y.U.)
AMRITSAR, (India),

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ತಾ. 7-5-1939.

ಮಂಗಳೂರಲ್ಲಿ ತೆರಿಗೆ ತೆರುವವರ ಸಂಘ—ಮಂಗಳೂರು ಪುರಜನರ ಒಂದು ಪ್ರಚಂಡ ಸಭೆಯು ಮಂಗಳೂರು ಮೈದಾನದಲ್ಲಿ ಕಳೆದ ತಾ. 30ನೇ ಸಾಯಂಕಾಲ ಸೇರಿತು. ಶ್ರೀ ಜೆ. ಎ. ಸಾಲ್ಡಾನ ಯಂ. ಎಲ್. ಸಿ., ಇವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ನಾಗರಾಜಯ್ಯ, ಜಾರ್ಜ ಹಾರ್ಬರ್ಟ್, ಪಂಡಿತ ನಡ್ಮೋಡಿ ಅನಂತ ಉಪಾಧ್ಯಾಯ, ಗೋಪಾಲಕೃಷ್ಣರಾವ್, ಜೆ. ಎ. ಫುರ್ಟಾಡೋ ಮೊದಲಾದವರು, ನಗರದಲ್ಲಿ ತೆರಿಗೆಯನ್ನು ಹೆಚ್ಚು ಮಾಡುತ್ತಿರುವ ಧೋರಣೆಯನ್ನು ಖಂಡಿಸಿ ಜನರ ಹಿತ ಸಾಧನೆಯಾಗುವಂತೆ ಒಂದು ರೇಟ್ ಪೇಯರರ ಸಂಘವನ್ನು ಸ್ಥಾಪಿಸುವುದು ಅಗತ್ಯವೆಂಬ ಠರಾವನ್ನು ಸೂಚಿಸಿದರು. ಅನಂತರ ಈ ಸಂಘಕ್ಕೆ ಬೇಕಾದ ನಿಬಂಧನೆ ಮಾಡಲು ಹತ್ತು ಮಂದಿ ಸದಸ್ಯರಿರುವ ಒಂದು ಸಮಿತಿಯನ್ನೇರ್ಪಡಿಸಿದರು. ಬೇಗ್ನೆ ಹೆಚ್ಚಾಯಿತೆಂದೂ ಅದನ್ನು ಕಡಿಮೆ ಮಾಡಬೇಕೆಂದೂ ಕೇಳಿಕೊಳ್ಳಬೇಕೆಂದೂ ಆ ಬಗ್ಗೆ ಅಧ್ಯಕ್ಷರೂ ತಾತ್ಕಾಲಿಕ ಕಾರ್ಯದರ್ಶಿಗಳೂ ಪ್ರಯತ್ನಿಸಬೇಕೆಂದೂ ಕಮಿಶನರಿಗೆ ಬರೆದುಕೊಳ್ಳಬೇಕೆಂದೂ ನಿರ್ಧಾರವಾಯಿತು.

ಮೇ ದಿನಾಚರಣೆ—ರ್‍ಯಾಡಿಕಲ್ ಕಾಂಗ್ರೆಸ್, ಮೋಟರ್ ಎಂಪ್ಲೋಯೀಸ್ ಯೂನಿಯನ್ ಮತ್ತು ವಿದ್ಯಾರ್ಥಿಗಳ ಸಂಘ-ಇವುಗಳ ಆಶ್ರಯದಲ್ಲಿ ಮೇ ದಿನಾಚರಣೆಯು ಕಳೆದ ತಾ. 1ರಲ್ಲಿ ನಡೆಯಿತು. ಶ್ರೀ। ಎ. ಎನ್. ರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ। ಕೆ. ಕೆ. ಶೆಟ್ಟಿಯವರು ಭಾಷಣ ಮಾಡುತ್ತಾ ಅಂದಿನ ದಿನಾಚರಣೆಯ ಮಹತ್ವವನ್ನು ವಿವರಿಸಿದರು. ಮಜೂರರೆಲ್ಲರೂ ತಮ್ಮ ಸ್ವಾತಂತ್ರ್ಯಕ್ಕಾಗಿ ಹೊಸ ನಿರ್ಧಾರಗಳನ್ನು ಮಾಡುವ ದಿನವೆಂದರು. ಮತ್ತೂ ತಮ್ಮ ಭಾಷಣವನ್ನು ಮುಂದರಿಸುತ್ತಾ ಮಜೂರರೂ ಕೃಷಿಕರೂ ಒಕ್ಕಟ್ಟಾಗಿ ಮುಂದಿನ ಸರಕಾರದಲ್ಲಿ ತಮ್ಮ ನ್ಯಾಯವಾದ ಹಕ್ಕುಗಳನ್ನು ಪಡೆಯಬೇಕೆಂದರು. ಶ್ರೀ. ಕೆ. ಕೃಷ್ಣರಾಯರು ಭಾಷಣ ಮಾಡುತ್ತಾ ನಮ್ಮ ನಗರದಲ್ಲಿನ ಮಜೂರ ಸಂಘಗಳು ಇಂದು ಒಟ್ಟಾಗಿ ಮೇ ದಿನಾಚರಣೆಯನ್ನು ನಡೆಸದೆ ಹೋದುದು ಶೋಚನೀಯವೆಂದೂ ರಾಜಕೀಯ ಮುಖಂಡರು ಮಜೂರ ಸಂಘಗಳ ಮುಂದಾಳುಗಳಾಗಿ ಇರುವುದರಿಂದ ಈ ತೆರನಾದ ಪರಿಸ್ಥಿತಿಯುಂಟಾಯಿತೆಂದೂ ಮಜೂರರು ತಮ್ಮ ಸಂಘಗಳ ಹಿತದೃಷ್ಟಿಯಿಂದ ಸ್ವಾರ್ಥಸಾಧಕರನ್ನು ತಮ್ಮ ಸಂಘಗಳಿಂದ ಹೊರ ಹಾಕುವುದು ಅಗತ್ಯವೆಂದೂ ಹೇಳಿದರು. ಶ್ರೀ। ಆರ್. ಎನ್. ಭಿಡೆಯವರೂ ಅಧ್ಯಕ್ಷರೂ ಭಾಷಣ ಮಾಡಿದ ಮೇಲೆ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಕನ್ನಡದಲ್ಲಿ ಶಿಕ್ಷಣ ಕೊಡಬೇಕು—ಕಳೆದ ತಾ. 5ನೇ ಶುಕ್ರವಾರ ಶ್ರೀ. ಕೆ. ಬಿ. ಜಿನರಾಜ ಹೆಗ್ಗಡೆ ಯಂ. ಎಲ್. ಎ., ಇವರ ಅಧ್ಯಕ್ಷತೆಯಲ್ಲಿ ಥಿಯೊಸಾಫಿಕಲ್ ಹಾಲಿನಲ್ಲಿ ಮಂಗಳೂರು ಪುರಜನರ ಮಹಾಸಭೆಯೊಂದು ಸೇರಿತು. ಮಾನ್ಯ ವಾರ್ಕಿಯವರು ಮಂಗಳೂರಿನಲ್ಲಿ ಜರಗಿದ ಹೆಡ್ಮಾಸ್ಟರರ ಪರಿಷತ್ತಿನಲ್ಲಿ ಕೆಲವು ಶಾಲೆಗಳಿಗೆ ಮಾಧ್ಯಮ ವಿನಾಯಿತಿಕೊಡುವ ವಿಷಯವಾಗಿ ಅಭಿಪ್ರಾಯ ಸೂಚಿಸಿದ್ದನ್ನು ಖಂಡಿಸುವುದೇ ಸಭೆಯ ಉದ್ದೇಶ. ಸಭೆಯಲ್ಲಿ ಶ್ರೀಗಳಾದ ಯಂ. ಎನ್. ಕಾಮತ್, ಯು. ಮಂಗೇಶರಾವ್, ಕೆ. ಆರ್. ಆಚಾರ್, ಕೆ. ಕೃಷ್ಣರಾವ್, ಕಡಂಗೋಡ್ಲು ಶಂಕರ ಭಟ್ ಇವರೇ ಮೊದಲಾದವರು ಮಾತಾಡಿ ಕನ್ನಡದಲ್ಲಿಯೇ ಪಾಠಗಳನ್ನು ಕಲಿಸಬೇಕೆಂಬ ಮದ್ರಾಸ್ ಸರಕಾರದವರು ಹಿಂದೆ ಮಾಡಿದ್ದ ನಿರ್ಧಾರವನ್ನು ಈಗ ಬದಲಾಯಿಸುವುದು ಸರಿಯಲ್ಲವೆಂದೂ ಏಕಮತವಾಗಿ ಹೇಳಿದರು. ಕೊನೆಗೆ ಕನ್ನಡದಲ್ಲಿಯೇ ಕಲಿಸಬೇಕೆಂಬ ವಿಷಯದಲ್ಲಿ ಮುಖ್ಯವಾದ ನಾಲ್ಕು ಠರಾವುಗಳಾದವು. ಶ್ರೀ. ಯ. ಸಾ. ಮ್ಯಾಂಗಲೋರಿಯವರು ಧನ್ಯವಾದಗಳನ್ನು ಅರ್ಪಿಸಿದ ಅನಂತರದಲ್ಲಿ ಸಭಾಂತ್ಯವಾಯಿತು.

ಅಳಿಯಸಂತಾನ ಸಮಾಜಸುಧಾರಣಾ ಪರಿಷತ್ತು

ಅಳಿಯಕಟ್ಟಿನಲ್ಲಿ ಸುಧಾರಣೆಯು ಅತ್ಯಾವಶ್ಯಕವೆಂದು ಈಗ ಜಿಲ್ಲೆಯಲ್ಲೆಲ್ಲಾ ಬಹುತೇಕ ಏಕಕಂಠವಾದ ಅಭಿಪ್ರಾಯವುಂಟಾಗಿದೆ. ಆದುದರಿಂದ ಶ್ರೀ. ಎ. ಬಿ. ಶೆಟ್ಟರು ಈ ಮೊದಲು ಮದ್ರಾಸ್ ಕೌನ್ಸಿಲಿನ ಮುಂದೆ ತಂದಿದ್ದ ಮಸೂದೆಯನ್ನು ಆಧಾರವಾಗಿ ತೆಗೆದುಕೊಂಡು ಅದರಲ್ಲಿ ಅವಶ್ಯವಿರುವ ತಿದ್ದುಪಡಿಗಳನ್ನು ಮಾಡಿ, ಅಳಿಯಕಟ್ಟಿನ ಸುಧಾರಣಾ ಮಸೂದೆಯೊಂದು ಮದ್ರಾಸ್ ಅಸೆಂಬ್ಲಿಯ ಮುಂದೆ ಬೇಗನೆ ತರಲ್ಪಡುವಂತೆ ಬೇಕಾದ ಕೆಲಸ ಮಾಡುವುದು ಅತ್ಯಾವಶ್ಯಕವಾಗಿದೆ. ಮತ್ತು ಅಳಿಯಕಟ್ಟನ್ನಾಚರಿಸುವ ಬಂಟರಯಾನೆ ನಾಡವ, ಬಿಲ್ಲವ, ಮೊಗವೀರ, ದೇವಾಡಿಗ ಮೊದಲಾದ ಎಲ್ಲಾ ಸಮಾಜಗಳವರ ಸಂಘಟಿತರಾಗಿ ತಮ್ಮ ಉನ್ನತಿಸಾಧನೆಗಾಗಿ ಪ್ರಯತ್ನಿಸಬೇಕೆಂದು ಕೂಡಾ ಅನೇಕರು ಅಭಿಪ್ರಾಯಪಟ್ಟಿರುತ್ತಾರೆ. ಈ ಸಂಬಂಧವಾಗಿ ಇಡೀ ಜಿಲ್ಲೆಯ ಅಳಿಯಕಟ್ಟನ್ನಾಚರಿಸುವ ಸಮಾಜಗಳವರ ಪರಿಷತ್ತೊಂದನ್ನು ಕರೆಯುವ ಕುರಿತು ಆಲೋಚಿಸುವರೆ ಎಪ್ರಿಲ್ ತಾ. 30ರಲ್ಲಿ ಮಂಗಳೂರಲ್ಲಿ ಶ್ರೀ. ಬಡಿಲ ಐತಪ್ಪ ಶೆಟ್ರ ಅಧ್ಯಕ್ಷತೆಯಲ್ಲಿ ಸಭೆಯೊಂದು ಸೇರಿ, ಇದೇ ಮೇ ತಿಂಗಳ ತಾ. 22ನೇ ಸೋಮವಾರ ಪೂರ್ವಾಹ್ನ ಘಂಟೆ 10-30ಕ್ಕೆ ಮಂಗಳೂರಲ್ಲಿರುವ ಬಂಟರ ಯಾನೆ ನಾಡವರ ಸಂಘದ ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ ಚಾವಡಿಯಲ್ಲಿ 'ಅಳಿಯಸಂತಾನ ಸಮಾಜಸುಧಾರಣಾ ಪರಿಷತ್ತು' ಎಂಬ ಸಭೆಯೊಂದನ್ನು ಜರಗಿಸಬೇಕೆಂದು ನಿರ್ಧಾರವಾಯಿತು. ಈ ಪರಿಷತ್ತಿನ ಎಲ್ಲಾ ವ್ಯವಸ್ಥೆಯ ಬಗ್ಗೆ ತಾತ್ಕಾಲಿಕವಾಗಿ ಈ ಕೆಳಗಣ ಕಮಿಟಿಯೊಂದನ್ನು ಏರ್ಪಡಿಸಲಾಯಿತು. ಈ ಕಮಿಟಿಯ ಅಧ್ಯಕ್ಷರು ಶ್ರೀ। ಬಡಿಲ ಐತಪ್ಪ ಶೆಟ್ರು. ಶ್ರೀ. ಕವಿರಾಜ ಮಹಾಬಲ ಶೆಟ್ರು ಕಾರ್ಯದರ್ಶಿಯರು, ಶ್ರೀ। ಪಿ. ಎಸ್. ಹೆಗ್ಡೆಯವರು ಕೋಶಾಧಿಕಾರಿಗಳು, ಶ್ರೀಗಳಾದ ಎನ್. ಎಸ್. ಕಿಲ್ಲೆ ಮತ್ತು ಕೆ. ಕೆ. ಶೆಟ್ರು ಪ್ರಚಾರಕಾರ್ಯದರ್ಶಿಗಳು, ಶ್ರೀ. ಎನ್. ಎಸ್. ಕಿಲ್ಲೆಯವರು ಮತ್ತು ಶ್ರೀ. ಕೆ. ಕೆ. ಶೆಟ್ರು ಜಿಲ್ಲೆಯ ಮುಖ್ಯ ಮುಖ್ಯ ಸ್ಥಳಗಳನ್ನು ಸಂದರ್ಶಿಸಿ ಪರಿಷತ್ತಿನ ಕುರಿತು ಅಲ್ಲಲ್ಲಿ ಪ್ರಚಾರಮಾಡುವುದಲ್ಲದೆ ಸ್ವಾಗತಸಮಿತಿಗೆ ಸದಸ್ಯರನ್ನೂ ಕೂಡ ಸೇರಿಸಲಿರುವರು. ಶ್ರೀ. ದಿವಾನ್ ಬಹದೂರು ಬಿ. ಮಹಾಬಲ ಹೆಗ್ಡೆಯವರು ಈ ಪರಿಷತ್ತಿನ ಅಧ್ಯಕ್ಷರಾಗಲೊಪ್ಪಿರುವರು. ಪರಿಷತ್ತಿನ ದಿನ ರಾತ್ರಿ ಜಿಲ್ಲೆಯ ಪ್ರಸಿದ್ಧ ಅರ್ಥಧಾರಿಗಳನ್ನು ಆಮಂತ್ರಿಸಿ ಯಕ್ಷಗಾನ ಕಾಲಕ್ಷೇಪ ನಡಸುವ ಏರ್ಪಾಡು ನಡೆದಿರುವುದು. ಪರಿಷತ್ತಿನ ವಿವರವಾದ ಕಾರ್ಯಕ್ರಮವನ್ನು ಮುಂದೆ ಪ್ರಕಟಿಸಲಾಗುವುದು. ಅಳಿಯಕಟ್ಟನ್ನಾಚರಿಸುವ ಎಲ್ಲಾ ಸಮಾಜಗಳವರೂ ಸ್ವಾಗತಸಮಿತಿ ಸದಸ್ಯರಾಗಿ ಸೇರಿ ಪ್ರೋತ್ಸಾಹಿಸಬೇಕಾಗಿಯೂ, ಪರಿಷತ್ಕಾರ್ಯದಲ್ಲಿ ಸರ್ವರೂ ಉತ್ಸಾಹದಿಂದ ಭಾಗವಹಿಸಿ ಅದು ಜಯಶೀಲವಾಗಿ ನಡೆಯುವಂತೆ ನೆರವಾಗಬೇಕಾಗಿಯೂ ವಿನಂತಿ. ಪರಿಷತ್ತಿನ ಉದ್ದೇಶ, ವ್ಯವಸ್ಥೆ, ಕಾರ್ಯಕ್ರಮ ಮತ್ತು ಅದರ ಮುಂದಿಡುವ ಠರಾವುಗಳ ಕುರಿತು ಸೂಚನೆಗಳನ್ನು, ಶ್ರೀ. ಕವಿರಾಜ ಮಹಾಬಲ ಶೆಟ್ಟಿ, ಕಾರ್ಯದರ್ಶಿ ಸ್ವಾಗತ ಸಮಿತಿ, ಶ್ರೀ. ರಾಮಕೃಷ್ಣ ವಿದ್ಯಾರ್ಥಿಭವನ ಮಂಗಳೂರು ಈ ವಿಳಾಸಕ್ಕೆ ಇದೇ ತಾ. 20ರೊಳಗೆ ಕಳುಹಿಸಬೇಕಾಗಿ ವಿಜ್ಞಾಪನೆ. ಪರಿಷತ್ತಿನ ವೆಚ್ಚದ ಬಗ್ಗೆ ಉದಾರ ಸಹಾಯವನ್ನು ಆಭಾರಪೂರ್ವಕವಾಗಿ ಸ್ವೀಕರಿಸಲಾಗುವುದು. ಸಹಾಯ ಧನವನ್ನು ಕೂಡಾ ಕಾರ್ಯದರ್ಶಿಗಳಿಗೆ ಕಳುಹಿಸಬಹುದು.

ಬಡಿಲ ಐತಪ್ಪ ಶೆಟ್ಟಿ,
ಅಧ್ಯಕ್ಷ, ಸ್ವಾಗತ ಸಮಿತಿ.
ಮಂಗಳೂರು, ತಾ. 2-5-'39.

ಶ್ರೀ ಬಿ. ಶ್ಯಾಮರಾಯ ಶೆಟ್ಟರ
ಲೇಖನ ಮಾಲೆಯು ಬರುವ
ವಾರದಿಂದ ಪ್ರಾರಂಭವಾಗುವುದು.
ಬರುವ ಲೇಖನ:
ಶಾಂತಿಯ ಮದುವೆ
ನಿರೀಕ್ಷಿಸಿರಿ!

Rev. Fr. P. W. Farias,

St. Paul's Church,
Bolkunje Post, S. K.
Dated 4th January 1939.

To

THE JOINT MANAGERS,
The C. P. C. Co. Ltd., **MANGALORE.**

Sir

I thank you most sincerely for the promptness with which you arranged to take us to Mangalore and back during the grand occasion of the Diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholic bound to the congress.

The glorious success of our congress is also due to your exertion in putting up the various lights some of which I hear were done voluntarily.

May the blessings of the Almighty fall on you all and may you be able to do much good to the public.

Renewing my thanks,
I remain,
Yours sincerely,
(*Sd.*) P. W. Farias.

To
THE JOINT MANAGERS,
THE COMBINED BOOKING AGENCY,
MANGALORE.

Sri Parshwanathaswamy
Panchakalyana Pooja Mahothsawam
VENOOR (S. Kanara 1939).

Dear Sirs,

Please permit us to express our thanks on behalf of the above committee for the efficient service rendered by your Combined Booking Agency staff at Venoor to the visitors of the Panchakalyana Pooja Mahosthamam celebrations held this year.

Our thanks are also due to Moodabidre Booking Clerk Mr. B Krishnunayya and also his other mates and Mr. Raghavendra Bhandary who was specially come down from Mangalore to see the needs of and comforts of the travelling Public.

Thanking you once again,
We remain,
Yours faithfully,
(*Sd.*) **M. Jagathpal,**
(*Sd.*) **M Pachappa Shetty,**
VENOOR, (*Sd.* in Canarese) **Anantharaja Shetty,**
Dated 6-2-'39. (Sd.) **B Chandappa Indra,**
(*Secretary, P. M. Committee*).
Members, Panchakalayana Mahosthawam Committee.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	3	0	0
ಚಂದ್ರಗುಪ್ತ ಚಕ್ರವರ್ತಿ	1	0	0
Goutama Budda	0	8	0
भगवद्गीता	0	2	0
ಮಧುವನ	1	8	0
ಒಂದೇ ತಿಂಗಳಲ್ಲಿ ಇಂಗ್ಲಿಷ್	0	8	0
ಎರಡೇ ವಾರಗಳಲ್ಲಿ ಓದುಬರಹ	0	1	0
ಗೀತೆಯ ಕೈಗನ್ನಡಿ	0	4	0
ಭಗವದ್ಗೀತೆ	0	2	0
ತುಳು ವ್ಯಾಕರಣ	0	8	0
ಸಾಮುದ್ರಿಕ ಶಾಸ್ತ್ರ	0	8	0
ಸತ್ಯನಾರಾಯಣ ಕತೆ	0	8	0
ಪುರಂದರದಾಸರ ಪದಗಳು ಭಾಗ ೧	0	4	0
,, ಭಾಗ ೨	0	4	0
,, ಭಾಗ ೩	0	4	0
ತುಳುನಾಡ್ ತಿಲಕ ಪಂಚಾಂಗ	0	1	0
ವೈಜಯಂತೀ ಪಂಚಾಂಗ	0	2	6
ಕುಕ್ಕುಟ ಪಂಚಾಂಗ	0	1	0

ಇತ್ಯಾದಿ. ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors:*—**GENERAL SUPPLIES Ltd., Udipi**).

Supply Agency Limited.

(BANKERS.)

ESTD] **UDIPI** [1933

Authorised Capital Rs. 1,00,000
Subscribed & Paid up Rs. 30,760

RATE OF INTEREST FOR FIXED DEPOSITS.

3 to 6 Months 4% p. a.
7 to 11 ,, 5% ,,
12 to 18 ,, 6% ,,

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

ಯಲ್ಲಿ ನಿರ್ಣಯವಾಗಿದೆ. ಆದ್ದರಿಂದ ಎಲ್ಲರೂ ಆ ದಿನವನ್ನು ಆಚರಿಸಬೇಕೆಂದು ಶ್ರೀ ರಾಜೇಂದ್ರ ಬಾಬುಗಳು ಕೇಳಿಕೊಂಡಿದ್ದಾರೆ. ಬಂಗಾಳ ಪಂಜಾಬುಗಳಲ್ಲಿ ಇದರ ಪರಿಣಾಮವು ಹೇಗಾಗಬಹುದೆಂಬುದನ್ನು ನೋಡಬೇಕಾಗಿದೆ. ಈ ದಿನಾಚರಣೆಯಿಂದ ರಾಜಕೀಯ ಕೈದಿಗಳ ಬಿಡುಗಡೆಯಾಗದಿದ್ದರೂ ಆ ದಿನ ಇನ್ನಷ್ಟು ಮಂದಿಯು ದಸ್ತಗಿರಿಯಾಗುವದಕ್ಕೆಡೆಯಿಲ್ಲವಷ್ಟೆ.

ಪಾರ್ಲಿಮೆಂಟರಿ ಸಬ್ ಕಮಿಟಿಯ ಪುನರುತ್ಥಾನ

ಹಳೇ ವರ್ಕಿಂಗ್ ಕಮಿಟಿ ಮೆಂಬರರು ಪಾರ್ಲಿಮೆಂಟರಿ ಸಬ್ ಕಮಿಟಿಗೂ ರಾಜೀನಾಮೆಯಿತ್ತದ್ದರಿಂದ ಶ್ರೀ ಭೋಸರ ಚುನಾವಣೆಯ ನಂತರ ಪಾರ್ಲಿಮೆಂಟರಿ ಸಬ್ ಕಮಿಟಿಯೇ ನಾಸ್ತಿಯಾಗಿತ್ತಷ್ಟೆ. ಈಗ ಬಾಬು ರಾಜೇಂದ್ರ ಪ್ರಸಾದರು ತಾತ್ಕಾಲಿಕವಾಗಿ ಹಳೇ ಕಮಿಟಿಯನ್ನು ಪುನಃ ನೇಮಕಮಾಡಿದ್ದಾರೆ. ಹೀಗೆ ಸರದಾರ ಪಟೇಲ, ಅಬ್ದುಲ್‌ಕಲಾಮ್ ಅಜಾದ್, ಬಾಬು ರಾಜೇಂದ್ರ ಪ್ರಸಾದರಿರುವ ಮೊದಲಿನ ಸಮಿತಿಯೇ ಕಾಂಗ್ರೆಸ್ ಮಂತ್ರಿಗಳ ಕಾರ್ಯಕಲಾಪದ ಮೇಲ್ವಿಚಾರಣೆ ನೋಡುವದು. ಅಂತೂ ಈಗ ಕಾಂಗ್ರೆಸ್ಸಿನ ಪರಿಸ್ಥಿತಿ ತ್ರಿಪುರಿ ಚುನಾವಣೆಯ ಮೊದಲಿದ್ದಲ್ಲಿಗೆ ಬಂತು. ಕಾಲವು ಸರಿಯುತ್ತಿರುವದಾವದಿಕ್ಕಿಗೆ– ಮುಂದಕ್ಕೋ, ಹಿಂದಕ್ಕೋ?

ದಕ್ಷಿಣಾಫ್ರಿಕದ ಹಿಂದೀವಿರುದ್ಧ ಮಸೂದೆ

ದಕ್ಷಿಣಾಫ್ರಿಕದಲ್ಲಿ ಹಿಂದೀಯರನ್ನೂ ಯುರೋಪಿಯನರನ್ನೂ ಪ್ರತ್ಯೇಕಿಸಿ, ಅವರ ವಸತಿಸ್ಥಳಗಳನ್ನು ಏರ್ಪಡಿಸುವ ಮಸೂದೆಯೊಂದು ದಕ್ಷಿಣಾಫ್ರಿಕದ ಎಸೆಂಬ್ಲಿಯ ಮುಂದೆ ಬಂದಿದೆ. ಇದರಿಂದ ಹಿಂದೀಯರು ವಿಪರೀತ ಕಷ್ಟ–ನಷ್ಟಗಳಿಗೊಳಗಾಗಬೇಕಾಗುವುದು ಎಂತಲೇ ಅಲ್ಲಿಯ ಕಾಂಗ್ರೆಸ್ಸಿನವರು ಆ ಕುರಿತು ವಿರುದ್ಧ ಕಳವಳ ಹೂಡಿದ್ದಾರೆ. ಮಸೂದೆಯ ದ್ವಿತೀಯ ವಾಚನವು ಎಸೆಂಬ್ಲಿಯಲ್ಲಿ ನಡೆವ ಹೊತ್ತಿಗೆ ಭಾರತ ಸರಕಾರದಿಂದ ಆಲೋಚನೆಯಿದೆ ಎಂದು ವಿನಂತಿ ಬಂದುದರಿಂದ ಮುಂದುವರಿಸಲಾಗಿದೆ. ಆದರೆ ಆ ಕುರಿತು ತಾವು ಹಿಂದೀ ಸರಕಾರದೊಡನೆ ರೌಂಡ್‌ಟೇಬಲ್ ಪರಿಷತ್ತಿನ ಮೂಲಕ ಚರ್ಚಿಸಲು ತಯಾರಿಲ್ಲವೆಂದೂ, ಹಿಂದೀಯರ ಡೆಪ್ಯುಟೇಶನ್ ಬಂದರೆ ಆಲೋಚಿಸಬಹುದೆಂದೂ ದಕ್ಷಿಣಾಫ್ರಿಕದ ಒಳಮಂತ್ರಿ ಮಿ. ಸ್ಟುಟ್‌ಫೋರ್ಡರು ಅಂದಿದ್ದಾರೆ. ಅಲ್ಲಿಯ ಕಾಂಗ್ರೆಸ್ಸಿನವರು 'ಜನರಲುಗಳನ್ನು ಕೇಳಿಕೊಂಡು ರೌಂಡ್ ಟೇಬಲ್ ಪರಿಷತ್ತಾಗುವಂತೆ ಮಾಡಿ' ಎಂದು ಗಾಂಧಿಯವರಲ್ಲಿ ವಿನಂತಿ ಮಾಡಿಕೊಂಡಿದ್ದಾರೆ.

ಹಿಂದೀಯರು ಹೋದೆಡೆಗಳಲ್ಲಿ ಅವರಿಗೆ ಬಿಳಿಯರಿಂದ ದೊರಕುವ ಪುರಸ್ಕಾರವಿದು. ಅಸ್ಪೃಶ್ಯರಿಗಿಂತ ಕಡೆಯಾಗಿ ಭಾವಿಸುವದಷ್ಟೇ ಅಲ್ಲ-ಕಾರ್ಯತಃ ಅಸ್ಪೃಶ್ಯರಂತೆ ದೂರವಿಡುವ ಕಾನೂನಾಗುತ್ತಾ ಇದೆ. ಹಿಂದೀ ಸರಕಾರವು ಆ ಕುರಿತು ಪ್ರಬಲ ಪ್ರಯತ್ನವನ್ನೇನೂ ನಡೆಸುತ್ತಿರುವಂತೆ ಕಾಣುವದಿಲ್ಲ. ಒಂದು ಸೂಚನೆಯನ್ನು ಕೊಟ್ಟಿತು. ದಕ್ಷಿಣಾಫ್ರಿಕದ ಸರಕಾರವದನ್ನು ತಿರಸ್ಕರಿಸಿತು. ಬಿಳಿಯರೊಳಗಿನ ಈ ಆಟದ ರಹಸ್ಯವೇನು? ಭಾರತ ಸರಕಾರಕ್ಕೆ ತಾನು ಕೆಲಸಮಾಡಿದೆನೆಂಬುದನ್ನು ತೋರಿಸಿದರಾಯಿತು. ಬೇರೆ ಹಿಂದೀಯರಿಗಾವದಾವರೂ ಆಪತ್ತು ಬಂದರೆ ಅದಕ್ಕೇನು? ಆವರೆ ದಕ್ಷಿಣಾಫ್ರಿಕದ ಭಾರತೀಯರ ಮೊರೆ ಇಲ್ಲಿಗೆ ಕೇಳಿಬರುತ್ತಿರುವದಲ್ಲ-ನಾವವರಕ್ಕಾವ ಶಮಾನವನ್ನು ಕೈಗೊಂಡಿರುವೆವು. ಬ್ರಿಟಿಷರಿಂದ ಹಿಂದೀಯರನ್ನು ಈ ಮಸೂದೆ ದೂರವಿರಿಸುವದಕ್ಕಿಂತಲೂ ನೂರು ಪಾಲು ದೂರದಲ್ಲಿ ಪ್ರಕೃತಿಯೇ ದಕ್ಷಿಣಾಫ್ರಿಕದವರನ್ನೂ ನಮ್ಮನ್ನೂ ದೂರವಿರಿಸಿದೆ; ನಾವೇನು ಮಾಡಲಿ? ಎಂದು ಭಾರತೀಯರನ್ನಬಹುದು! ನಿಜ. ಪರರ ದಾಸರಾಗಿದ್ದವರಿಗೆ ಯಾವ ಆಧಾರ ತಪ್ಪಿಹೋದರೂ ನೆಪಗಳಿಗೆ ಬೇಕಾಗುವ ಕಾರಣಗಳು ತಪ್ಪಿಹೋಗುವದಿಲ್ಲ!

ವರ್ಕಿಂಗ್ ಕಮಿಟಿಯಲ್ಲಿ ಬದಲಾವಣೆಯೆ?

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರಾಗಿ ನೇಮಿಸಲ್ಪಟ್ಟ ಸೇಟ್ ಜಮುನಾಲಾಲ್ ಬಜಾಜ್ ಮತ್ತು ಜೈರಾಮದಾಸ್ ದೌಲತ್‌ರಾಮರು ಅನಾರೋಗ್ಯದ ನಿಮಿತ್ತ ರಾಜೀನಾಮೆ ಕೊಡಲಿರುವರಂತೆ. ಸರದಾರ ಪಟೇಲರು ಸ್ವೇಚ್ಛೆಯಿಂದ ರಾಜೀಯೀಯಲು ಬಯಸಿರುವರೆಂದೂ ಗಾಂಧಿಯವರದಕ್ಕೆ ಒಪ್ಪಿರುವರೆಂದೂ ತಿಳಿದು ಬರುತ್ತದೆ. ಖಾನ್ ಅಬ್ದುಲ್ ಗಾಫರ್ ಖಾನರು ಗಡಿನಾಡಿನ ಕಾರ್ಯದ ನಿಮಿತ್ತ ತನ್ನ ಸ್ಥಾನವನ್ನು ಬಿಡಲಿರುವರಂತೆ. ಅಂತೆಯೇ ಶ್ರೀ ಹರಿಕೃಷ್ಣ ಮೆಹತಾಬರೂ ಒರಿಸ್ಸಾ ಸಂಸ್ಥಾನಗಳ ಕಾರ್ಯದ ಸಲುವಾಗಿ ಹೊರಗೆ ಹೋಗಬಹುದು ಹೀಗಾದಲ್ಲಿ ಮೂರು ಸ್ಥಾನಗಳಿಗೆ ಪಂಡಿತ ನೆಹರು ಆಚಾರ್ಯ ನರೇಂದ್ರದೇವ್, ಜೈಪ್ರಕಾಶ ನಾರಾಯಣರನ್ನು ರಾಜೇಂದ್ರರು ಆರಿಸಬಹುದು. ಸರದಾರರು ರಾಜೀಕೊಟ್ಟರೆ ಪಾರ್ಲಿಮೆಂಟರಿ ಸಬ್ ಕಮಿಟಿಗೆ ಅವರ ಸ್ಥಾನಕ್ಕೆ ಪಂಡಿತ ನೆಹರುಗಳನ್ನು ಸೇರಿಸಿ ಕೊಳ್ಳುವ ಸಂಭವವಿದೆ. ಅಂತೂ ದೇಶದ ವಿವಿಧಾಭಿಪ್ರಾಯಗಳುಳ್ಳ ಪಕ್ಷಗಳ ಪ್ರಾತಿನಿಧ್ಯವಿರಬೇಕೆಂಬ ಆತುರ ಕಾಂಗ್ರೆಸಿನ ಮುಖಂಡರಲ್ಲಿರುವಂತಿದೆ. ವಾರ್ತೆಯಿದು ನಿಜವಾದರೆ ಸಂತೋಷದ ವಿಷಯವೇ ಸರಿ. ಆದರೆ ಕಲ್ಕತ್ತಾದಲ್ಲಿ ಹೀಗೆ ಒಂದೆರಡು ಸ್ಥಾನಗಳನ್ನಾದರೂ ಎಡ ಪಕ್ಷೀಯರಿಗೀಯಬೇಕು. ಬೇಡ ಎಂಬ ಕುರಿತಾದ ವಾದದ್ದೇ ಶ್ರೀ. ಸುಭಾಸರು ರಾಜೀ ಕೊಡುವಂತಾಗಿತ್ತು. ಈಗ ನ್ಯಾಯವೆನ್ನಿಸುವಂತಹದು ಆಗ ಅನ್ಯಾಯವೆನಿಸಿತೇಕೆ?

ಕಾಂಗ್ರೆಸ್ ವರ್ಕಿಂಗ್ ಕಮಿಟಿ

ಇದರ ಸಭೆಯ ಕಾಲವನ್ನು ಜೂನ್ ಮೂರನೇ ವಾರಕ್ಕೆ ಅಧ್ಯಕ್ಷ ರಾಜೇಂದ್ರ ಬಾಬುಗಳು ಮುಂದುವರಿಸಿರುವರು. ಸಭೆಯು ಬೊಂಬಾಯಿಯಲ್ಲಿ ಕೂಡಲಿರುವದೆಂದೂ ಎ. ಐ. ಸಿ. ಸಿ. ಯ ಸಭೆಯನ್ನೂ ಆ ಕಾಲದಲ್ಲೇ ಕರೆಯುವರೆಂದೂ ತಿಳಿದು ಬರುತ್ತದೆ. ಕಾಂಗ್ರೆಸ್ ಶುದ್ಧೀಕರಣಕ್ಕಾಗಿ ಘಟನೆಯಲ್ಲಿ ತಿದ್ದುಪಡಿ ಸೂಚಿಸಲು ನೇಮಿಸಲ್ಪಟ್ಟ ಸಮಿತಿಯು ಜೂನ್ ತಾ. 3 ರಿಂದ ಬೊಂಬಾಯಿಯಲ್ಲಿ ತನ್ನ ಕಾರ್ಯ ಕೈಕೊಳ್ಳಲಿರುವದು.

ದಕ್ಷಿಣಾಫ್ರಿಕೆ ಮಸೂದೆಯ ಖಂಡನೆ

ದಕ್ಷಿಣಾಫ್ರಿಕದ ಯೂನಿಯನ್ ಎಸೆಂಬ್ಲಿಯ ಮುಂದಿರುವ, ಹಿಂದೀ ವಿರೋಧ ಮಸೂದೆಯನ್ನು ಖಂಡಿಸುತ್ತಾ ಮಹಾತ್ಮ ಗಾಂಧಿಯವರು ಇದು ಅತ್ಯಂತ ಶೋಚನೀಯ ಘಟನೆಯೆಂದೂ, ಯೂನಿಯನ್ ಸರಕಾರವು ಏಶಿಯಾದವರ ಕುರಿತು ಗೌರವಾರ್ಹವಾದ ಸಂಬಂಧವನ್ನಿಟ್ಟುಕೊಂಡಿಲ್ಲವೆಂದೂ ಸರಕಾರದ, ಹಿಂದಿನ ಹೇಳಿಕೆಗಳು ಮತ್ತು ಕಮಿಶನಿನ ಶಿಫಾರಸುಗಳು ಈಗ ಅಲಕ್ಷಿಸಲ್ಪಟ್ಟಿವೆಯೆಂದೂ, ಇಂತಹ ಘೋಷಣೆಯಿಂದಾಗಿ ಅಲ್ಲಿ ಕಾಯಿದೇಭಂಗ ಚಳವಳ ಹೂಡುವ ಮನಸಾಗಿರುವದು ಆಶ್ಚರ್ಯಕರವಲ್ಲವೆಂದೂ ಹೇಳಿರುವರು.

ಮುಷ್ಕರಗಳ ಪರಿಣಾಮ

1938ನೆ ಡಿಸೆಂಬರ 31ಕ್ಕೆ ಅಂತ್ಯವಾಗುವ ಕಾಲುವರ್ಷದಲ್ಲಿ ಬ್ರಿಟಿಷ್ ಭಾರತದಲ್ಲಿ ಒಟ್ಟು 105 ಮುಷ್ಕರ ಯಾ ಔದ್ಯೋಗಿಕ ಕಲಹಗಳಾಗಿವೆಯೆಂದೂ ಇವುಗಳಲ್ಲಿ ಒಟ್ಟಿಗೆ 1,34,000 ಕೆಲಸಗಾರರು ಭಾಗವಹಿಸಿದ್ದರಲ್ಲದೆ 1,550,000 ದಿವಸಗಳ ಕೆಲಸಕ್ಕೆ ಸೊನ್ನೆ ಬಿದ್ದಿತೆಂದೂ ಭಾರತ ಸರಕಾರದ ಪ್ರಕಟಣೆಯೊಂದರಿಂದ ತಿಳಿದು ಬರುತ್ತದೆ.

ಗಾಂಧಿ ಜೋಯಿಸರ ಭವಿಷ್ಯ ಫಲ.

ನಿಮ್ಮ ಜನನ ತಾರೀಕು ಸಮಯ ಅಥವಾ ಪತ್ರ ಬರೆಯುವ ವೇಳೆಗೆ ಮತ್ತು ಅಂದಾಜು ವಯಸ್ಸನ್ನು ತಿಳಿಸಿರಿ. ನಿಮ್ಮ ಕುಟುಂಬ, ವೃತ್ತಿ,

ಆರೋಗ್ಯ, ಸಂಪತ್ತು, ಆದಾಯ ವೆಚ್ಚಗಳು, ಅನಿರೀಕ್ಷಿತ ವೇಳೆಗಳು ಮತ್ತು ದುರದೃಷ್ಟಗಳು, ಪ್ರೇಮ, ಅದೃಷ್ಟದ ಚಿಹ್ನೆ, ಸೋದ್ದಿಗಳು ದೊರೆಯುವ ದಿನಗಳು, ಮತ್ತು ಸಂಖ್ಯೆ, ಇನ್ನಿತರ ಪ್ರಾಮುಖ್ಯ ವಿಷಯಗಳು ನಿಮ್ಮ ಬಳಿಗೆ ಕಳುಹಲ್ಪಡುವವು. ಪ್ರತಿತಿಂಗಳ ಭವಿಷ್ಯವನ್ನೊಳಗೊಂಡ ಒಂದು ವರುಷದ ಭವಿಷ್ಯಫಲಕ್ಕೆ ರೂಪಾಯಿ 3. ಪ್ರತಿತಿಂಗಳ ಆಗುಹೋಗುಗಳ ಸಮೇತ ಐದು ವರುಷದ ಫಲಕ್ಕೆ ರೂಪಾಯಿ 12-8-0. ಸಾಹುಕಾರರಿಗೂ ಉದ್ಯೋಗಸ್ಥರಿಗೂ ಪ್ರತಿವಾರದ ಭವಿಷ್ಯವನ್ನು ಸೂಚಿಸುವ ಒಂದು ವರುಷದ ಫಲಕ್ಕೆ ರೂಪಾಯಿ 10. ಭವಿಷ್ಯದ ಕುರಿತು ಕೇಳಲಾಗುವ ಐದು ಪ್ರಶ್ನೆಗಳಿಗೆ ಸರಿಯಾದ ಉತ್ತರವು ಒಂದು ರೂಪಾಯಿ ಕಾಣಿಕೆ ಕೊಟ್ಟಲ್ಲಿ ತಿಳಿಸಲ್ಪಡುವದು. (ವಿ. ಪಿ ಖರ್ಚು ಐದಾಣೆ ಪ್ರತ್ಯೇಕ)

ಭವಿಷ್ಯ ಫಲದ ಕುರಿತು 'ಸ್ವದೇಶ ಮಿತ್ರನ್' ಮದ್ರಾಸಿನ ದಿನ ಪತ್ರಿಕೆಯು ಈ ರೀತಿ ಬರೆಯುತ್ತದೆ. 'ಶ್ರೀ. ವಿ. ಕೆ. ಶಠಗೋಪಾಚಾರಿಯವರ ಭವಿಷ್ಯವಾಣಿಗಳ ಕುರಿತು ಮಹಾಜನರಿಗೆ ಪರಿಚಯ ಮಾಡಿಕೊಡುವ ಅಗತ್ಯವಿಲ್ಲ. ಮಹಾತ್ಮಾಜಿಯವರ ಬಂಧವಿಮೋಚನೆ, ಅಮೇರಿಕಾ ದೇಶದ ಪ್ರೆಸಿಡೆಂಟ್ ರೂಸ್‌ವೆಲ್ಟರ ಚುನಾವಣೆಯ ಜಯಶೀಲತೆ ಮೊದಲಾದವು ಶ್ರೀ. ಆಚಾರಿಯವರು ಹೇಳಿದಂತೆ ಫಲಿಸಿದುವೇ. ಗಾಂಧಿ ಜೋಯಿಸರ ಭವಿಷ್ಯಫಲವು ಬ್ರಹ್ಮಾಂಡದಲ್ಲೆಲ್ಲಾ ಹಬ್ಬಲು ಯೋಗ್ಯವದರ್ಶನ, ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

ವಿಳಾಸ:-**V. K. Satagopachariar**
Hanuman Jolkisha Asram
TIRUTTANI. S. India.

THE BOMBAY LIFE ASSURANCE CO., LTD.,

(Ested. 1908)

THE OFFICE WHICH HAS PROVED ITS POPULARITYY ITS PROGRESS

RECORD OF NEW BUSINES.

Proposed.	Year.	Completed.
1,25,50,250	1934	1,04,33,750
1,50,48,915	1935	1,23,28,665
1,68,88,200	1936	1,36,01,500
1,72,579,75	1937	1,40,08,725
1,76,83,250	1938	1,44,91,000

1939 VALUATION YEAR.

lease t ake up a Policy Now and participate in Bonus.

To Insure or to Represent it pays you to consult us:-

MRS. KOCHIKAR BROTHRS, LTD.,

MADRAS BRANCH RETARIES,

The Bombay Life Building,

Sir Lalubhai Samaldas Road, Gandhi Nagar, UDIPI.

Or any of our Offices at:—

Car Street, MANGALORE.	Puthiyara, CALICUT.	Post Box No. 337, Mount Road, MADRAS.	Visweshwarapuram Circle, BANGALORE CITY.
Charni Road, Girgaum, BOMBAY No. 4	Central Station Road, TRIVANDRUM.	Ottapalam, S. MALABAR.	

ಮಾನವನಿರ್ಮಿತ ನರಕಕೂಪಗಳು

ಶ್ರೀ ಮಹದೇವ ದೇಸಾಯಿಯವರ ಹೃದಯಸ್ಪರ್ಶಿ ಹೇಳಿಕೆ

ನಾನೂ ಕ್ರಾಂತಿಕಾರನಾಗುತ್ತಿದ್ದೆ

ಐದನೇ ಜೋರ್ಜರ ಕಾಲದಲ್ಲಿ ಮೊದಲನೇ ಬಾರಿ ಲೇಬರ್ ಸರಕಾರದ ಸ್ಥಾಪನೆಯಾದಾಗ ಸಮತಾವಾದೀ ಮೆಂಬರರಾದ ವ್ಹೀಟ್ಲಿಯವರೊಬ್ಬ ಮಂತ್ರಿಯಾಗಿ ನೇಮಕ ಹೊಂದಿದ್ದರು. ಆದಕ್ಕಾಗಿ ಚಕ್ರವರ್ತಿಗಳವರನ್ನು ಆಮಂತ್ರಿಸಿ, ಸಂಭಾಷಣೆಯ ನಡುವೆ ಕೇಳಿದರಂತೆ– "ತೀವ್ರ ಕ್ರಾಂತಿಕಾರರಾಗಲು ಕಾರಣವೇನು?" ಎಂದು. ವ್ಹೀಟ್ಲಿಯವರು ತನ್ನ ಚರಿತ್ರೆಯನ್ನೆಲ್ಲಾ ಬಿಡಿಸಿ ಹೇಳಿದರು. 'ನಾನು ಹುಟ್ಟಿದ ದರಿದ್ರ, ಲಂಕೇಶಯರಿನಲ್ಲಿ ನಮ್ಮ ಬಿಡಾರ. ಹನ್ನೊಂದು ಮಂದಿಯಿದ್ದ ನಮ್ಮ ಕುಟುಂಬವು ಒಂದೇ ಒಂದು ಕೋಣೆಯಲ್ಲಿರಬೇಕಾಗಿತ್ತು. ನನಗೆ 24 ವರುಷವಾಗುವ ವರೆಗೂ ನಾನು ಆ ಮನೆಯಲ್ಲಿದ್ದೆ. ನನ್ನ ಹನ್ನೆರಡನೇ ವರ್ಷದಲ್ಲಿ ಶಾಲೆ ಬಿಡಿಸಿ ಕಲ್ಲಿದ್ದಲಿನ ಗಣಿಗೆ ಕೆಲಸಕ್ಕೆ ಕಳುಹಿದ್ದರು." ಎಂದು ವ್ಹೀಟ್ಲಿಯವರು ಹೇಳಿದಾಗ ಅರಸರು ಆಶ್ಚರ್ಯಪಟ್ಟು 'ನನ್ನ ಪ್ರಜೆಗಳು ಇಷ್ಟೊಂದು ಬಡತನದಲ್ಲಿಯೂ ಇರುವರೇ?' ಎಂದು ಉದ್ಗರಿಸಿದರಂತೆ. ವ್ಹೀಟ್ಲೀಯವರನ್ನು ಬೀಳ್ಕೊಳ್ಳುವಾಗ "ವ್ಹೀಟ್ಲಿಯವರೇ ಆ ಸ್ಥಿತಿಯಲ್ಲಿರುತ್ತಿದ್ದರೆ ನಾನು ಕೂಡ ಕ್ರಾಂತಿಕಾರನಾಗುತ್ತಿದ್ದೆ!" ಎಂದರಂತೆ ಚಕ್ರವರ್ತಿಗಳು. ಗಾಂಧಿಯವರ ಕಾರ್ಯದರ್ಶಿ ಶ್ರೀ. ಮಹದೇವ ದೇಸಾಯಿಯವರು ಹಳೇ ಡಿಲ್ಲಿಯ ಹರಿಜನ ವಸತಿಯ ಕುರಿತು ಹರಿಜನದಲ್ಲಿ ಬರೆದಿರುವ ಲೇಖನವೊಂದು ಆ ಘಟನೆಯನ್ನು ನೆನಪಿಗೆ ತರುತ್ತದೆ.

ಪ್ರತ್ಯಕ್ಷ ನರಕಕುಂಡ

ಶ್ರೀ. ದೇಸಾಯಿಗಳು ಬರೆಯುತ್ತಾರೆ– ಹಳೇ ಡಿಲ್ಲಿಯ ಹರಿಜನರ ಅಪೇಕ್ಷೆಯಂತೆ ನಾನವರ ವಸತಿಯನ್ನು ಸಂದರ್ಶಿಸಿದೆ. ನಾನದನ್ನು ಕಂಡು ಒಂದು ವಾರವಾಗುತ್ತಾ ಬಂತು; ಆದರೆ ಮಾನವನು ತನ್ನ ಸಹೋದರನಿಗೆ ಮಾಡುವ ಅನ್ಯಾಯದ ಕುರಿತು ಆಗ ನನ್ನಲ್ಲುಂಟಾಗಿದ್ದ ಕಂಪನವು ಇನ್ನೂ ಹೋಗಿಲ್ಲ. ಶ್ರೀಮತಿ ಅಮೃತ ಕೌರರೂ ನನ್ನೊಡನೆ ಅಲ್ಲಿಗೆ ಬಂದಿದ್ದರು. ಇನ್ನೂ ಸ್ವಲ್ಪ ಕಾಲ ನಾವಲ್ಲಿ ನಿಲ್ಲುತ್ತಿದ್ದರೆ ಶ್ರೀಮತಿ ಕೌರರು ಕಾಹಿಲೆ ಬೀಳುತ್ತಿದ್ದರೆಂಬುದರಲ್ಲಿ ಅನುಮಾನವಿಲ್ಲ.

ಹರಿಜನ ವಸತಿಯಿದ್ದ ಬಜಾರಿಗೆ 'ನವಾಬಜಾರ್' ಅಥವಾ 'ಶ್ರದ್ಧಾನಂದ ಬಜಾರ್' ಎಂಬ ಹೆಸರಿದೆ. ಕೊನೆಯ ಹೆಸರು ಶ್ರದ್ಧಾನಂದರ ಬಲಿದಾನದ ಸ್ಮಾರಕವಾಗಿ ಇಡಲ್ಪಟ್ಟಿತೆಂದು ನನ್ನ ಭಾವನೆ. ನಗರಪತಿಗಳು ಪಟ್ಟಣದ ನಡುವೆ ಇರುವ ಈ ನರಕವನ್ನು ಸುಧಾರಿಸದೆ ಹೋದರೆ ಸ್ವಾಮೀಜೀಯವರ ಪವಿತ್ರಸ್ಮಾರಕವಾಗಿ ಇದನ್ನಿಡಲು ಅರ್ಹರಲ್ಲ.

ನರಕವೆಂಬ ಹೆಸರು ಕೂಡ ಅಲ್ಲಿಗೆ ಸಾಲದು. ಮೂರೂ ಬದಿಯಿಂದ ಒತ್ತಲ್ಪಟ್ಟ ಮಾಡಿನೊಳಗೆ ಬಹು ಇಕ್ಕಟ್ಟಾದ ಸ್ಥಳವಿದ್ದು ಒಳಗಡೆ ಪೂರ್ಣ ಕತ್ತಲೆಯಿರುವ ಗುಡಿಸಲುಗಳು! ನನ್ನನ್ನು ಒಳಗೆ ಕೊಂಡು ಹೋದವನು ಕತ್ತಲೆಯಲ್ಲಿ ತಲೆತಾಡಿಸಬಾರದೆಂಬುದಕ್ಕಾಗಿ ಬೆಂಕಿಕಡ್ಡಿಯನ್ನು ಗೀಚಬೇಕಾಯಿತು. ಆ ಕಗ್ಗತ್ತಲೆಯ ಗವಿಯಲ್ಲಿ ಹತ್ತು ಮಂದಿ ವಾಸಿಸುತ್ತಿದ್ದರು. ಮೂವರು ಸಹೋದರರು ಮತ್ತು ಅವರ ಪತ್ನಿಯರು, ಅವರ ಇಬ್ಬರು ಮಕ್ಕಳು ಮತ್ತು ತಂದೆ ತಾಯಿಗಳು! ಅಲ್ಲಿ ಅವರು ಹೇಗೆ ಬಾಳುತ್ತಿರಬಹುದು ಎಂದು ವಿಚಾರಿಸುವಷ್ಟು ನಾನು ಎದೆಗಾರನಿರಲಿಲ್ಲ. ಆದರೆ ಅವರಲ್ಲಿ ಆರು ಮಂದಿ, ಅಥವಾ ಮೂವರಾದರೂ ದುಡಿಯುವವರಿದ್ದರೆ ಈ ರೀತಿ ಗುಹೆಯಲ್ಲಿ ಹುದುಗಿಟ್ಟಿರುವದೇಕೆ? ಎಂದು ಆಶ್ಚರ್ಯಪಟ್ಟೆ. ಆದರೆ ಅವರಲ್ಲೊಬ್ಬನು ಮಾತ್ರ ತನ್ನ ಪತ್ನಿಯೊಂದಿಗೆ ದುಡಿಯುವವನೆಂದೂ ಮಿಕ್ಕವರೆಲ್ಲಾ ನಿರುದ್ಯೋಗಿಗಳೆಂದೂ ನನಗೆ ಆಮೇಲೆ ಗೊತ್ತಾಯಿತು. ಅವರ ಸಂಬಳವೆಂದರೆ 26 ರೂಪಾಯಿ. ಹಸಿವೆಯ ಹತ್ತು ಬಾಯಿಗಳು ತುಂಬಬೇಕು ಈ 26 ರೂ. ಗಳಿಂದ!

ಈ ಸ್ಥಳದ ಬಲಬದಿಯಲ್ಲಿ ಕೆಲವೇ ಅಡಿ ದೂರದಲ್ಲಿ ಈ ಮುರ್ದ್ವೆವೀ ಜನರ ಪಾಯಿಖಾನೆಗಳಿವೆ. ಗುಡಿಸಲು ಮತ್ತು ಆ ಸ್ಥಳದ ನಡುವೆ ಒಬ್ಬನು ತಿರುಗಬಹುದಾದಷ್ಟು ಚಿಕ್ಕಚಿಟ್ಟನ ಸ್ಥಳವಿದ್ದು ದುರ್ವಾಸನೆಯ ಗಾಳಿಯು ಸಹಿಸಲಸದಳವಿದ್ದಿತು. ನಾವಲ್ಲಿ ತಿರುಗಿ ಸುಮಾರು ಇಪ್ಪತ್ತಕ್ಕೂ ಮಿಕ್ಕಿದ ಗುಹೆಗಳನ್ನು ಆದಷ್ಟು ಸ್ವಚ್ಛಗೊಳಿಸಿದೆವು. ಆದರೆ ಅದರಿಂದಾವ ಪ್ರಯೋಜನವೂ ಆಗಲಿಲ್ಲ. ಅಲ್ಲಿದ್ದ ಸ್ವಲ್ಪ ಸ್ಥಳದಲ್ಲಿ ಕಲ್ಮಷತುಂಬಿದ್ದ ಟಾಂಕಿಗಳನ್ನಿರಿಸಿದ್ದರು. ಮನುಷ್ಯಮಾತ್ರರು ಈ ಹೊಲಸುಕ್ಷೇತ್ರದಲ್ಲಿ ಉಂಡುತಿಂದು, ಉಸಿರಾಡಿ ಯಾವ ರೀತಿ ದಿನಕಳೆಯಬೇಕು!

ಉಗ್ರಕಾರ್ಯ ಕೈಗೊಳ್ಳುತಿದ್ದೆ!

ಆದರೆ ಡಿಲ್ಲಿಯ ನಾಗರಿಕರಿಗೆ, ತಮ್ಮ ಬಾಂಧವರೀ ಅವಸ್ಥೆಯಲ್ಲಿರುವುದಕ್ಕಾಗಿ ಒಂದಿಷ್ಟು ನಾಚಿಕೆಯೆನ್ನಿಸುವುದಿಲ್ಲ. ವಿಪರೀತ ಗಾಳಿಮಳೆಯ ವೇಳೆ ಈ ವಸತಿಯ ಜನರು ಪಾಯಿಖಾನೆಯೊಳಗೆ ಹೋಗಿ ನಿಂತುಕೊಳ್ಳಬೇಕಾಗುತ್ತದಂತೆ!

ನಾನು ಡಿಲ್ಲಿಯ ನಿವಾಸಿಯಾಗಿರುತ್ತಿದ್ದರೆ, ಇಂತಹ ಪರಿಸ್ಥಿತಿಗೆ ಜವಾಬ್ದಾರರಿರುವವರನ್ನು ಜಾಗ್ರತಿಗೊಳಿಸುವ ಸಲುವಾಗಿ ಕಠಿಣ ಕಾರ್ಯವನ್ನು ಕೈಗೊಳ್ಳುತಿದ್ದೆ. ಮುಷ್ಕರ ಅಥವಾ ಬೇರಾವ ವಿಧದ ಸತ್ಯಾಗ್ರಹವನ್ನು ಕೈಗೊಳ್ಳುವದು ಅತ್ಯಂತ ನ್ಯಾಯವಾದುದು. ನಾನು ಕಂಡ ವಸತಿ ಸ್ಥಳವನ್ನು ಸುಟ್ಟು ತೆಗೆಯುವದು ಅಥವಾ ಸಂಪೂರ್ಣವಾಗಿ ಭೂಗತ ಮಾಡುವದು ಎಲ್ಲಾ ರೀತಿಯಿಂದಲೂ ಯೋಗ್ಯವಾಗಿದೆ. ಡಿಲ್ಲಿಯ ನಾಗರಿಕರಾಗಲೀ, ಈ ಅಕ್ಷಮ್ಯ ಅಪರಾಧದ ಹೊಣೆಗಾರರಾದ ಇತರರಾಗಲೀ, ತಮ್ಮ ತಪ್ಪನ್ನು ಕೂಡಲೇ ತಿದ್ದಿಕೊಳ್ಳುವರೋ; ಅಥವಾ ಈ ದಲಿತ ಜನರು ಯಾವುದಾದರೊಂದು ಕ್ರಾಂತಿಯನ್ನೆಬ್ಬಿಸುವ ವರೆಗೂ ಕಾಯುವರೋ?

WANTD: 80 candidates of both sexes who after expert training as film artistes and technicians are prepared to work for the College Film Company for two years on decent salary Free hostel seat and other benefits. Illustrated Art Prospectus on 5 annas posatge. Prabhat Movietone College, Bombay 11

To Insure is
The Husband's duty. The wife's right and the child's Claim Hence seekfor a policy of
THE ASIAN ASSURANCE CO., LTD.
The safest and one of the largest Indian Concerns,
Head Office:– Asian Buildings Ballard Estate, Bombay.
Branch Office: – Hampankatta, Mangalore.
ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.
ಲಾಭದಾಯಕವಾದ ಮತ್ತು ಸುಭದ್ರತೆಯ ನಿಧಿಯನ್ನೊಳಗೊಂಡ ಈ ಕಂಪೆನಿಯಲ್ಲಿ ನಿಮ್ಮ ವಿಮಾ ಇಳಿಸಿರಿ.
ಏಜಂಟರು ಪ್ರಾಮುಖ್ಯ ಪಟ್ಟಣಗಳಲ್ಲೆಲ್ಲಾ ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
J. A. PUTRAN, Branch Manager, Mangalore.

THE
PANGAL NAYAK BANK
Estd.] LIMITED. [1920.
ದಿ ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್.
Paid up Capital Rs. 1,82,100/–. Reserves Rs. 2,02,800/–
PRINCIPAL OFFICE: COURT ROAD, UDIPI.
OTHER OFFICES:
UDIPI MANGALORE, KATAPADI, & KANHANGAD.
Season Deposits so as to bear interest at 4per cent per annum till the end of June 1939 are accepted.
Cumulative Deposits are also received on the usual terms.
Banking business of every description is transacted. Further particulars may be had on application.

ದಿ ವಿಜಯ ಬೇಂಕ್, ಲಿಮಿಟೆಡ್,
ಮಂಗಳೂರು
ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.
ಎಲ್ಲಾ ತರದ ಬೇಂಕ್ ವಹಿವಾಟುಗಳು ಇಲ್ಲಿ ನಡೆಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಾತಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3	ತಿಂಗಳಿಗೆ	....	3½%
6	,,	....	4%
1	ವರ್ಷಕ್ಕೆ	....	4½%
2	,,	....	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕನಿಷ್ಠ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ.
ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತದೆ.

ಜಿಲ್ಲಾ ಬೋರ್ಡ್ ಪ್ರೆಸಿಡೆಂಟರ ಭಾಷಣಗಳು

ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಡಾಕ್ಟರ್ ಕೆ ವಿಟ್ಟಲ ಶೆಟ್ಟರು ಕುಂದಾಪುರ ತಾಲೂಕಿನಲ್ಲಿ ಸಂಚರಿಸಿದಾಗ ಬೇರೆ ಬೇರೆ ಕಡೆಗಳಲ್ಲಿ ಕೊಟ್ಟ ಭಾಷಣಗಳ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.



ಡಾ. ಕೆ. ವಿಟ್ಠಲ ಶೆಟ್ಟರು.

ಕುಂದಾಪುರ ತಾಲೂಕು ಟೀಚರ್ಸ್ ಎಸೋಸಿಯೇಶನಿನ ನೇತೃತ್ವದಲ್ಲಿ ಜರಗಿದ ಬೋರ್ಡ್ ಶಾಲಾ ಪ್ರಾಥಮಿಕ ಶಿಕ್ಷಕರ ಪರಿಷತ್ತಿನಲ್ಲಿ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಡಾಕ್ಟರ್ ವಿಠಲ ಶೆಟ್ಟರು ಕಳದ ತಾ. ೨೯ರಲ್ಲಿ ಮಾಡಿದ ಭಾಷಣದ ಸಾರವು ಹೀಗಿದೆ: -

ಪ್ರಾಥಮಿಕ ಶಾಲಾ ಅಧ್ಯಾಪಕರ ಪರಿಷತ್ತು ಶಾಲಾ ವರ್ಧಂತಿ ಸಮಾರಂಭಗಳಲ್ಲಿ ನಾನೆಷ್ಟೋ ಸಲ ಅಗ್ರಾಸನವನ್ನು ವಹಿಸಿದುದು ಉಪಾಧ್ಯಾಯ ಉಪಾಧ್ಯಾಯಿನಿಯರ ಕಷ್ಟಸಂಕಷ್ಟಗಳನ್ನು ಕಿವಿಯಾರೆ ಕೇಳಿ ಶಕ್ಯವಿದ್ದಷ್ಟು ಅವುಗಳನ್ನು ಹೋಗಲಾಡಿಸಬೇಕೆಂಬ ದೃಷ್ಟಿಯಿಂದಲೇ. ಇದರಿಂದಾಗಿ ಪ್ರಾಥಮಿಕ ಶಿಕ್ಷಣ ಪ್ರಸಾರದ ಕೊಂದರೆ ತೊಡಕುಗಳ ಅನುಭವವು ನನಗುಂಟಾಗಿ ನನ್ನ ಅನುಭವದ ಹೆಚ್ಚಳಿಕೆಯೂ ಅಪ್ರತ್ಯಕ್ಷ ರೂಪದಲ್ಲಿ ಆದಂತಾಗುವುದು. ಉಪಾಧ್ಯಾಯರಿಗಿರುವ ಕಷ್ಟ ಪರಂಪರೆಗಳಲ್ಲಿ ಸಂಬಳ ಕಡಿತದ ಪ್ರಶ್ನೆಯು ಪ್ರಾಮುಖ್ಯವಾದುದು. ಆದರೆ ತುಲನಾತ್ಮಕದೃಷ್ಟಿಯಿಂದ ಹೇಳುವುದಾದರೆ ಹಿಂದೂಸ್ಥಾನದ ಇತರ ಪ್ರಾಂತ್ಯದಲ್ಲಿರುವುದಕ್ಕಿಂತ ನಮ್ಮ ಮದ್ರಾಸು ಪ್ರಾಂತ್ಯದ ಶಾಲಾಮಾಸ್ತರರ ಸಂಬಳವು ತೃಪ್ತಿಕರವಾದ ಉನ್ನತಾವಸ್ಥೆಯಲ್ಲಿ ಇದೆ ಎಂಬದಾಗಿ ಹೇಳಬಹುದು. ಬ್ರಿಟಿಷರ ೧೫೦ ವರುಷಗಳ ರಾಜ್ಯಭಾರದಲ್ಲಿ ಹಿಂದೂಸ್ಥಾನದಲ್ಲಿ ಸೇಕಡಾ ೮ರಷ್ಟು ಮಾತ್ರ ವಿದ್ಯಾಪ್ರಸಾರವಾಗಿರುವುದು. ೧೫ ವರುಷಗಳ ಅವಧಿಯಲ್ಲಿಯೇ ರಷ್ಯಾ ದೇಶದಲ್ಲಿ ನೇಕಡಾ ೧೦೦ರಷ್ಟು ಮಂದಿ ಓದುಬರಹ ಬಲ್ಲವರಾದರು. ಚಿಕ್ಕ ರಾಷ್ಟ್ರಗಳಂತಹ ಡೆನ್ಮಾರ್ಕ್ ಸಹ ವಿದ್ಯಾಪ್ರಚಾರದಲ್ಲಿ ತುಂಬಾ ಮುಂದರಿದಿರುವದು. ಹಿಂದೀಯರ ಪಾಡೇನು? ನಾವು ಸ್ವರಾಜ್ಯ ಸ್ವರಾಜ್ಯವೆಂಬ ಕೂಗಬ್ಬಿಸುತ್ತೇವೆ. ಆದರೆ ನಿರಕ್ಷರತೆ ಇದ್ದಂತೆಯೇ ಇದೆ. ಮುಂದಿನ ಹತ್ತು ವರುಷದೊಳಗಾಗಿಯಾದರೂ ಹಿಂದೀಯರಲ್ಲಿ ಸೇಕಡಾ ೬೦ರಷ್ಟು ಮಂದಿ ಅಕ್ಷರಜ್ಞರಾಗುವಂತೆ ಪ್ರಯತ್ನಿಸುವುದು ನಮ್ಮೆಲ್ಲರ ಪ್ರಥಮ ಕರ್ತವ್ಯ.

ತಾಲೂಕು ಬೋರ್ಡುಗಳು ಅಳಿದು ಹೋದಂದಿನಿಂದ ನಮ್ಮ ಜಿಲ್ಲಾ ಬೋರ್ಡಿನಿಂದ ಒಂದು ಲಕ್ಷಕ್ಕೂ ಮಿಕ್ಕಿದ ಹಣವನ್ನು ಜನರಲ್ ಫಂಡಿನಿಂದ ತೆಗೆದು ಪ್ರಾಥಮಿಕ ಶಿಕ್ಷಣಕ್ಕೋಸ್ಕರವೇ ವಿಶೇಷತಃ ವರ್ಗಾಯಿಸಿರುತ್ತದೆ. ಇದರಿಂದಾಗಿ ಹೊಸ ರಸ್ತೆಗಳು, ಬಾವಿ, ಆಸ್ಪತ್ರೆ ಮೊದಲಾದ ಸಾರ್ವಜನಿಕ ಕೆಲಸಗಳು ಬಾಕಿ ಬೀಳಬೇಕಾಯಿತು. ಉಪಾಧ್ಯಾಯರ ಬಡ್ತಿ ಸಂಬಳಕ್ಕೇನೇ ರೂ. ೧೬,೦೦೦ ಖರ್ಚಾಯಿತು. ರೂಪಾಯಿಯಲ್ಲಿ ಎರಡಾಣೆ ಕಡಿತಮಾಡಬೇಕೆಂಬ ವಿಷಯವು ಧಾರಾಳ ಆಲೋಚಿಸಿದ ನಂತರವೇ ಕಾರ್ಯರೂಪಕ್ಕೆ ಬಂದುದು. ಎಷ್ಟೋ ಶಾಲೆಗಳಿಗೆ ಬಾಡಿಗೆ ರೂಪದಲ್ಲಿ ಸಹ ಹಣ ಸಲ್ಲಬೇಕಾಗುವುದು ಇದರಿಂದಾಗಿ ಬೋರ್ಡಿಗೆ ಹಣದ ತಗಾದೆ ಬರುವುದು ಸ್ವಾಭಾವಿಕ. ನೀವೆಲ್ಲರೂ ಸಾಧ್ಯವಿದ್ದ ಮಟ್ಟಿಗೆ ಊರವರ ಉಪಕಾರಾಶ್ರಯವನ್ನು ಹೊಂದಿ ಶಾಲಾ ಕಟ್ಟಡವು ಧರ್ಮಾರ್ಥ ಸಿಗುವಂತೆಯೂ ಅನಿವಾರ್ಯ ಸಂದರ್ಭದಲ್ಲಿ ಪ್ರಕೃತದ ಬಾಡಿಗೆಯನ್ನು ಕಡಿಮೆಮಾಡುವಂತೆಯೂ ಪ್ರಯತ್ನಿಸುವುದು ಶ್ರೇಯಸ್ಕರ. ನ್ಯಾಯವಾದ ಕಷ್ಟಗಳನ್ನು ನನಗೆ ತಿಳಿಸಿದ್ದಲ್ಲಿ ಅವುಗಳ ಪರಿಹಾರದ ಬಗ್ಗೆ ಕೈಲಾದಷ್ಟು ಪ್ರಯತ್ನಿಸುವೆನೆಂದು ಆಶ್ವಾಸನೆಯಿತ್ತರು.

ದಿವಂಗತ ಸೂರಪ್ಪಯ್ಯ ಸ್ಮಾರಕ ವಾಚನಾಲಯದ ಆರಂಭೋತ್ಸವ

ತಾ. ೩೦-೪-೩೯ರಲ್ಲು ಡಾ. ವಿಠಲ ಶೆಟ್ಟರು ದಿವಂಗತ ಸೂರಪ್ಪಯ್ಯನವರ ಸ್ಮರಣಾರ್ಥವಾಗಿ ಕಟ್ಟಿದ ಶಂಕರನಾರಾಯಣದ ರೀಡಿಂಗ್ ರೂಮು ಮತ್ತು ಲ್ಯಾಬ್ರೆರಿಯನ್ನು ತೆರೆದರು. ಈ ಸಂದರ್ಭದಲ್ಲಿ ಭಾಷಣಮಾಡುತ್ತಾ ಹೀಗೆಂದರು. "ಯಾರ ಸ್ಮಾರಕಾರ್ಥವಾಗಿ ಇಂದು ಈ ಸಮಾರಂಭವು ನಡೆಯುತ್ತದೋ ಆ ಕೀರ್ತಿಶೇಷ ಮಹನೀಯರಾದ ಸೂರಪ್ಪಯ್ಯನವರ ಪರಿಚಯವು ನನಗೆ ೧೯೩೪ರಲ್ಲು ಕರ್ನಾಟಕ ಪರಿಷತ್ತಿನ ವೇಳೆ ಮಂಗಳೂರಲ್ಲಾಯಿತು. ನನಗೆ ಅವರ ಪರಿಚಯವು ಹೆಚ್ಚಿಲ್ಲವಾದರೂ ಅವರೊಬ್ಬ ನಮ್ಮ ಜಿಲ್ಲೆಯ ಸ್ವಾರ್ಥತ್ಯಾಗೀ ಗಣನೀಯ ವ್ಯಕ್ತಿಯೆಂಬುದನ್ನು ಮನಮುಟ್ಟಿ ಹೇಳಬಲ್ಲೆ. ದೇಶಸೇವಾ ನಿರತರಾಗಿದ್ದ ಅಂತಹ ಮಹನೀಯರ ಸ್ಮಾರಕಾರ್ಥವಾಗಿ ಇಂದು ನೀವೆಲ್ಲರೂ ಒಟ್ಟುಗೂಡಿ ರೀಡಿಂಗ್ ರೂಮು ಮತ್ತು ಲ್ಯಾಬ್ರೆರಿ ತೆರೆಯುವ ಉದಾರ ಮನಸ್ಸುಮಾಡಿದುದು ಮಹತ್ಕಾರ್ಯವೇ. ಊರವರ ಕೊಡುಗೈಯಿಂದ ಈ ಸಂಸ್ಥೆಯು ಚಿರಾಯುವಾಗಿ ಬಾಳಲಿ."

ಶಂಕರನಾರಾಯಣ ಶಾಲಾ ವರ್ಧಂತಿ

ತಾ. ೩೦-೪-೩೯ರಲ್ಲಿ ನಡೆದ ಶಂಕರನಾರಾಯಣ ಬೋರ್ಡ್ ಹಾ. ಎ. ಶಾಲೆಯ ವರ್ಧಂತಿ ಸಮಾರಂಭದಲ್ಲಿ ಸಾಧಾರಣ ೨೦೦೦ ಜನಸಮುದಾಯದ ಮುಂದೆ ಡಾಕ್ಟರ್ ವಿಠಲ ಸೆಟ್ಟರು ಮಾಡಿದ ಭಾಷಣವು ಹೀಗಿತ್ತು. "ಹಿಂದುಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣವು ಇನ್ನೂ ಹೀನಾವಸ್ಥೆಯಲ್ಲಿಯೇ ಇದೆ. ನಮ್ಮ ಜಿಲ್ಲೆಯ ದೃಷ್ಟಿಯಿಂದ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ೮೦೦ ಗ್ರಾಮಗಳಿವೆ. ೧೭೦ ಸಹಸ್ರ ಬಾಲಕರಿದ್ದಾರೆ. ಅವರ ಪೈಕಿ ಸಾಧಾರಣ ೬೮ ಸಹಸ್ರ ಬಾಲಕಿಯರು ನಿರಕ್ಷರ ಕುಕ್ಷಿಗಳಾಗಿರುವರು. ಈ ಅಂಕೆಸಂಖ್ಯೆಗಳು ನಿಮಗೆ ಆಶ್ಚರ್ಯವನ್ನುಂಟುಮಾಡಬಹುದು. ಇದೇ ರೀತಿಯಲ್ಲಿಯೇ ನಮ್ಮ ದೀನಾವಸ್ಥೆಯು ಇದ್ದರೆ ವಿದ್ಯಾಪ್ರಚಾರದಲ್ಲಿ ಸೇಕಡಾ ಒಂದರಷ್ಟು ಹೆಚ್ಚಾಗಬೇಕಾದರೆ ಇಪ್ಪತ್ತು ವರುಷಗಳು ಬೇಕಾಗುವವು.

ಶಾಲಾ ವರದಿಯಲ್ಲಿ ೧೧೦ ಹುಡುಗರೂ ೪೮ ಹುಡುಗಿಯರೂ ಇರುವರೆಂದು ತೋರುತ್ತದೆ. ಇದನ್ನು ಪರಿಶೀಲಿಸುವಾಗ ಶಂಕರನಾರಾಯಣ ಕೇಂದ್ರಕ್ಕೆ ಹಾಯರ್ ಎಲಿಮೆಂಟರಿ ಶಾಲೆಯ ಅಗತ್ಯವಿದೆಯೋ ಎಂಬ ಪ್ರಶ್ನೆ ಸ್ವಾಭಾವಿಕವಾಗಿ ತೋರಿಬರುತ್ತದೆ. ಹಾಜರಿ ಸಂಖ್ಯೆಯು ಏರುವಂತಾಗಿ ವಿದ್ಯಾರ್ಥಿಗಳು ಹೆಚ್ಚು ಸಂಖ್ಯೆಯಿಂದ ವಿದ್ಯಾಭ್ಯಾಸ ಪಡೆಯುವರೆ ಊರವರ ಸಂಪೂರ್ಣ ಸಹಾಯ-ಸಹಕಾರಗಳು ಅತಿ ಅಗತ್ಯವೆಂಬುದನ್ನು ಮಕ್ಕಳ ರಕ್ಷಕರ ಹಾಗೂ ಹೆತ್ತವರ ಗಮನಕ್ಕೆ ತರಬಿಚ್ಛಿಸುತ್ತೇನೆ. ಉಪಾಧ್ಯಾಯರ ಕುರಿತು ಇನ್ನೊಂದು ಮಾತನ್ನು ಹೇಳುವುದಾದರೆ ಬೆತ್ತದ ಬೆದರಿಕೆಯಿಂದ ಕಲಿಸುವ ಸಮಯ ಸಂದು ಹೋಯಿತು. ಪ್ರೇಮ-ಪ್ರೀತಿಯಿಂದ ಕಲಿಸುವ ಪದ್ಧತಿಯು ಅನುಸರಿಸಲ್ಪಟ್ಟರೆ ಖಂಡಿತವಾಗಿಯೂ ವಿದ್ಯಾರ್ಥಿಗಳ ಸಂಖ್ಯೆ ಏರುವುದರಲ್ಲಿ ಯಾವ ಸಂಶಯವೂ ಇಲ್ಲ.

ಕೋಟೇಶ್ವರ ಶಾಲಾ ವರ್ಧಂತಿ ಸಮಾರಂಭದಲ್ಲಿ

ಕೋಟೇಶ್ವರದಂತಹ ಪ್ರಸಿದ್ಧಿಹೊಂದಿದ ಸ್ಥಳದಲ್ಲಿರತಕ್ಕ ಶಾಲಾ ಹುಡುಗರ ಸಂಖ್ಯೆಯು ಬರೇ ೩೩೫ ಎಂಬುದು ವಿಷಾದಕರ ಸಂಗತಿ. ಫಲಿಮಾರು ಶಾಲೆಯಲ್ಲಿ ಸಾಧಾರಣ ೫೪೬ ಮತ್ತು ಪಡುಬಿದ್ರೆಯಲ್ಲಿ ಸಾಧಾರಣ ೫೧೦ ವಿದ್ಯಾರ್ಥಿಗಳು. ಹೀಗೆ ಹೆಚ್ಚಾಗಿರಲು ಅಲ್ಲಿಯ ಅಧ್ಯಾಪಕ ವೃಂದವೇ ಕಾರಣ. ಶಾಲಾಕಟ್ಟಡದ ವಿಸ್ತಾರದಲ್ಲಿ ಊರವರು ಅರ್ಧಾಂಶವನ್ನು ತೆತ್ತಲ್ಲಿ ಬೋರ್ಡಿನಿಂದ ಮಿಕ್ಕ ಹಣವು ಸಿಕ್ಕುವಂತೆ ನಾನು ಪ್ರಯತ್ನಿಸುವೆನು. ಅಂತೂ ಉಪಾಧ್ಯಾಯರೂ ಊರವರೂ ಪ್ರಯತ್ನಿಸಿ ಶಾಲೆಯ ಮಕ್ಕಳ ಸಂಖ್ಯೆಯನ್ನು ಕನಿಷ್ಠ ೬೦೦ಕ್ಕಾದರೂ ಬರುವ ವರ್ಷದಲ್ಲಿ ತಂದಿಡಬೇಕಾಗಿ ಆಗ್ರಹಪೂರ್ವಕ ವಿನಂತಿ.

ಬೈಂದೂರಲ್ಲಿ ಶಂಕುಸ್ಥಾಪನೆ.

ಡಾ। ವಿಠಲಸೆಟ್ಟರು ತಾ. ೨-೫-೩೯ರಲ್ಲು ಬೈಂದೂರು ಹೆರಿಗೆ ವಾರ್ಡಿನ ಕಟ್ಟೋಣದ ಶಂಕುಸ್ಥಾಪನೆಯನ್ನು ಶ್ರೀ. ಸಾಧು ಕೃಷ್ಣ ಶ್ಯಾನುಭೋಗರ ಅಧ್ಯಕ್ಷತೆಯಲ್ಲಿ ಚಂದಗೊಳಿಸಿದರು. ಶ್ರೀ. ಬಿ. ಸುಬ್ಬಣ್ಣ ಸೆಟ್ಟರು ಮತ್ತು ಊರವರು ಈ ಕಾರ್ಯದಲ್ಲಿ ಮುಂದರಿದ ಬಗ್ಗೆ ಅವರನ್ನು ಡಾ। ಸೆಟ್ಟರು ಅಭಿನಂದಿಸಿದರು.

ಪುನಃ ರಾಜಕೋಟೆಗೆ

ಗಾಂಧಿಯವರು ವೃಂದಾವನದಿಂದ ಕಾಶಿಗೆ ಹೋಗಿ ಅಲ್ಲಿಂದ ಬೊಂಬಾಯಿಗಾಗಿ ರಾಜಕೋಟೆಗೆ ಹೋಗಿರುವರು. ಗಾಂಧಿಜೀಯವರು ರಾಜಕೋಟೆಯಲ್ಲಿ ಎರಡು ತಿಂಗಳುಗಳ ವರೆಗೆ ನಿಲ್ಲಲಿರುವರೆಂದು ಗೊತ್ತಾಗಿದೆ.

ಬಿಸಿಲು ಉಷ್ಣಕಾಲದಲ್ಲಿ ತಣ್ಣಗಾದ ಶರಬತ್ತು ಕುಡಿದಾದರೂ ಕ್ಷಣಹೊತ್ತು ಉಷ್ಣಾದಿ ತೃಷೆಯನ್ನು ಪರಿಹರಿಸಿಕೊಳ್ಳಬಹುದು. ಮಂಜು ಯಾ ಬೀಸಣಿಗೆಗಳಿಂದ ಗಾಳಿ ತೆಗೆದುಕೊಂಡು ಕ್ಷಣಹೊತ್ತು ಮೈತಣ್ಣಗಿರಿಸಲೂ ಬಹುದು. ಪರಂತು ಉಷ್ಣತೆಯ ತಾಪದಿಂದ ಶರೀರದಲ್ಲಾಗುತ್ತಿರುವ ದುಷ್ಪರಿಣಾಮಗಳು ಮಾತ್ರ ದೂರವಾಗಲಾರವು.

ಹಾಗಾದರೆ

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಇವರ ಚಂದ್ರನಂತೆ ಶೀತಲವಾದ ಬಹುಗುಣಯುಕ್ತ

ಆಮಲಕೀ ತೈಲವನ್ನು

(Regd Trade Mark) ನಿತ್ಯವೂ ಉಪಯೋಗಿಸಿರಿ. ಇದರಲ್ಲಿ ಆಮಲಕಿಯೇ ಮೊದಲಾದ ಮಂಗಲಕಾರಕ ದ್ರವ್ಯ ಯಾ ಇನ್ನಿತರ ಸುಗಂಧಯುಕ್ತ ಮೂಲಿಕೆಗಳನ್ನೂ ಸೇರಿಸಿ ವಿಜಾತೀಯ ದ್ರವ್ಯಗಳಿಂದ ರಹಿತ ಮಾಡಲ್ಪಟ್ಟ, ಪರಿಶೋಧಿತ ತಿಲತೈಲದಿಂದಲೇ ಶಾಸ್ತ್ರೀಯ ವಿಧಿಯಂತೆ ಪ್ರಸ್ತುತವಾದ ಈ ತೈಲವನ್ನು ನಿತ್ಯವೂ ಉಪಯೋಗಿಸುತ್ತಿದ್ದರೆ ಇದರಲ್ಲಿರುವ ಅಮೋಘವಾದ ಸುಗಂಧ ಗುಣಗಳು ನಿಮ್ಮ ರೋಮರಂಧ್ರದೊಳಗೆ ಪ್ರವೇಶಿಸಿ ನಿಮ್ಮ ರಕ್ತಕ್ಕೆ ತಂಪನ್ನುಂಟುಮಾಡಿ ಚರ್ಮದಲ್ಲಾಗುತ್ತಿರುವ ದುಷ್ಪರಿಣಾಮಗಳನ್ನು ಬೇಗನೆ ಓಡಿಸುತ್ತದೆ. ಹಾಗೂ ಶರೀರದಲ್ಲಿಯ ದುರ್ಗಂಧಗಳನ್ನು ಹೋಗಲಾಡಿಸಿ ಕೇಶಮೂಲಗಳು ದೃಢವಾಗುವದಲ್ಲದೆ ಅಚ್ಚ ಕಪ್ಪಾದ ಕೂದಲುಗಳು ನಿಬಿಡವಾಗಿ ಬೆಳೆದು ಬಿಳಿ ಕೂದಲುಗಳು ಸಹ ಕಪ್ಪಾಗಿ ಮುಖಶ್ರೀಯು ಲಾವಣ್ಯಪೂರ್ಣವಾಗುವುದು. ಮತ್ತು ಸುಖವಾದ ನಿದ್ರೆ ಬರುತ್ತದೆ. ಇಂತಹ ನಿದ್ರೆಯಿಂದ ಸ್ಮೃತಿ, ಮೇಧಾ, ಉತ್ಸಾಹ, ವಿಚಾರಶಕ್ತಿ ಮೊದಲಾದ ಮಾನಸಿಕ ಶಕ್ತಿಗಳು ವಿಕಾಸ ಹೊಂದಿ ಚಿರಾರೋಗ್ಯ ಲಾಭವಾಗುವದು.

5 ತೊಲೆಯ ಸೀಸೆ 1ರ 0-6-0, 10 ತೊಲೆಯ ಸೀಸೆ 1ರ 0-11-0.

ಕಸ್ತೂರಿಯುಕ್ತ ಧನ್ವಂತರೀ ಗುಟಿಕಾ ಜಾಯಮಾತ್ರೆ.

ಬಾಲ, ವೃದ್ಧ, ಸ್ತ್ರೀ-ಪುರುಷ ಮತ್ತು ಗರ್ಭಿಣಿಯರ ಸರ್ವತರದ ಶೀತ, ಕೆಮ್ಮು, ಅಜೀರ್ಣ, ಹೊಟ್ಟೆಯುಬ್ಬರಿಕೆ, ಅತಿಸಾರ, ಇವುಗಳಲ್ಲಿ ಅಪ್ರತಿಮ ಗುಣಕಾರಿಯಾಗಿದೆ, ಬಾಲಕರ ಅಪಸ್ಮಾರ, (ಬಾಲಗ್ರಹ) ಕಫ ಇತ್ಯಾದಿಗಳಲ್ಲಿ ಸಂಗ್ರಾಹ್ಯವಾದ ದಿವ್ಯ ಔಷಧಿಯಾಗಿದೆ.

ಕ್ರಯ: 12ಕ್ಕೆ 0-4-0, 25ಕ್ಕೆ 0-7-0, 50ಕ್ಕೆ 0-13-0, 100ಕ್ಕೆ 1-5-0, 500ಕ್ಕೆ 5 0-0, 1000ಕ್ಕೆ 9-0-0.

5 ಆಣೆ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತದೆ.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್)

ಕುಂಜಾಲ್, ಪೋಸ್ಟ್ ಬ್ರಹ್ಮಾವರ.

ನಮ್ಮ ಸ್ಟಾಕಿಸ್ಟರು:—

1. Supply Agency Ltd., Udipi, S. K.
2. Nava Bharata Book Depot, Udipi, S K.
3. V. R. Prabhu, The Canara News & Books Agent, Batatawala Mansion; Lalbag, BOMBAY.

ರಶ್ಯಾದೊಡನೆ ಒಪ್ಪಂದವೆಂದರೆ ಚೇಂಬರ್ಲಿನರಿಗೆ ಕಷಾಯ ಕುಡಿದಷ್ಟು ಕಹಿ

ನಿರ್ವಾಹವಿಲ್ಲದೆ ಗುಟುಕು ಗುಟುಕನ್ನೇ ನುಂಗುತ್ತಿದ್ದಾರೆ

ಇಂಗ್ಲೆಂಡು ರಶ್ಯಾ ಒಪ್ಪಂದದ ಮಾತುಕತೆಗಾರಂಭವಾಗಿ ಎರಡು ತಿಂಗಳುಗಳು ಕಳೆದುಹೋದವು. ಈ ವರೆಗೆ ಒಪ್ಪಂದಕ್ಕೊಂದು ರೂಪು ಕೊಡಲಾಗಲಿಲ್ಲ; ಬದಲಾಗಿ 'ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯಿತು' ಎಂಬಂತೆ ಎರಡು ರಾಷ್ಟ್ರಗಳೂ ಭಿನ್ನಭಿನ್ನ ಹಾದಿಯ ಕಡೆಗೊಂದನ್ನೊಂದೆಳೆಯುತ್ತಿರುವಂತೆ ಕಾಣುತ್ತಿದೆ. ಈ ಘಟನೆಯು ರಾಷ್ಟ್ರಸ್ವಾತಂತ್ರ್ಯ ಪ್ರೇಮಿಗಳನ್ನು ಒಂದಿಷ್ಟು ಯೋಚನೆಗೀಡುಮಾಡಿದೆ. ಎರಡು ರಾಷ್ಟ್ರಗಳ ಧೋರಣೆಯೊಳಗೆ ಎಂತಹ ಅಭ್ಯಂತರವಿದೆಯೆಂಬುದನ್ನು ಊಹಿಸುವದು ಕಷ್ಟವಲ್ಲ. ಒದಗಿ ಬಂದಿರುವ ಪರಿಸ್ಥಿತಿಯೊಂದೇ ಉಭಯ ರಾಷ್ಟ್ರಗಳನ್ನು ಒಂದಿಷ್ಟು ಸಮೀಪಕ್ಕೆ ತಂದಿಟ್ಟಿತು. ಆದರೂ ಒಂದರ ವಾಸನೆಯೊಂದಕ್ಕೆ ಒಗ್ಗುವದಿಲ್ಲವಾದ್ದರಿಂದ ಭುಜಕ್ಕೆ ಭುಜಕೊಟ್ಟು ನಿಲ್ಲುವದಸಾಧ್ಯವಾಗಬಹುದೋ ಎಂಬ ಸಂಶಯವುತ್ಪನ್ನವಾಗುತ್ತಿದೆ.

ಅಸಹಾಯ ಶೂರ ರಶ್ಯಾ!

ಇದರ ಕಾರಣವು ಮೂಲದಲ್ಲಿಯೇ ಇದೆ. ರಶ್ಯಾದಲ್ಲಿ ಸೋವಿಯೆಟ್ ಸರಕಾರವು ಸ್ಥಾಪನೆಯಾದ ಕೆಲವು ವರ್ಷಗಳ ವರೆಗೆ ಯುರೋಪಿನ ರಾಷ್ಟ್ರಗಳೊಂದಾದರೂ ಅದನ್ನು ಒಪ್ಪಿಕೊಂಡಿರಲಿಲ್ಲ; ಅಬಿಸೀನಿಯದಲ್ಲಿ, ಸ್ಪೈನಿನಲ್ಲಿ, ಹಳೆಯ ನ್ಯಾಯಬದ್ಧ ಸರಕಾರಗಳು ಪೂರ್ತಿ ಜೀವಬಿಡುವ ಮೊದಲೇ, ದಂಗೆಗಾರ ಸರಕಾರಗಳಿಗೆ ಒಪ್ಪಿಗೆಕೊಟ್ಟಿದ್ದ ಯುರೋಪಿನ ರಾಷ್ಟ್ರಗಳು ಆದಿಯಲ್ಲಿ ರಶ್ಯದ ಕ್ರಾಂತಿಕಾರೀ ಸರಕಾರವನ್ನು ಒಪ್ಪದೆ ಹೋದವು. ಆದರೆ ಸೋವಿಯೆಟ್ ಸರಕಾರವು ಲೋಕವನ್ನೇ ತನ್ನ ಪದ್ಧತಿಗೆ ಮಾರ್ಪಡಿಸಬೇಕೆಂದು ಪಣತೊಟ್ಟ ತೇಜಸ್ವೀ ಸರಕಾರವು-ಅನ್ಯ ರಾಷ್ಟ್ರಗಳ ಬೆದರಿಕೆಗೆ ಸೊಪ್ಪು ಹಾಕಲಿಲ್ಲ; ರಶ್ಯವನ್ನು ನೂತನ ರೀತಿಯಲ್ಲಿ ಸುಧಾರಿಸಿ ಅಲ್ಪಾವಧಿಯಲ್ಲಿ ಲೋಕದ ಕಣ್ಣನ್ನು ತೆರೆಯಿಸಿತು. ರಶ್ಯವೊಂದು ಭೂಪಟದಲ್ಲಿರುವದೆಂಬುದನ್ನು ಮರೆತುಬಿಡಲೂ ಸಿದ್ಧವಿದ್ದ ಯುರೋಪು ರಾಷ್ಟ್ರಗಳಲ್ಲಿಯೇ ಬೋಲ್ಶೆವಿಸಮಿನ ಪ್ರಭಾವ ಹಬ್ಬುತ್ತಾ ಬಂತು. ಧನಿಕ-ದರಿದ್ರ ಭೇದದ ಹುಟ್ಟಡಗಿಸಿದ ಭೂಸ್ವರ್ಗವೆಂಬಂತಿರುವ ರಶ್ಯದ ಪದ್ಧತಿಯು ಇತರ ರಾಷ್ಟ್ರಗಳ ಜನಸಾಮಾನ್ಯರ ಮೆಚ್ಚುಗೆ ಪಡೆಯಿತು. ರಶ್ಯದ ಅಸ್ತಿತ್ವವು ಈ ರೀತಿ ರುಜುವಾಗುತ್ತಾ ಬಂದಂತೆ ಒಂದೊಂದೇ ರಾಷ್ಟ್ರಗಳು ಸೋವಿಯೆಟ್ ಸರಕಾರವನ್ನು ಅನಿವಾರ್ಯವಾಗಿ ಮಾನ್ಯಮಾಡುತ್ತಾ ಬಂದುವು. ಆದರೂ ರಶ್ಯದ ಸಮತಾವಾದಿ ಭಾವನೆ ತಮ್ಮಲ್ಲಿ ಹರಡದಂತೆ ಪ್ರತಿಯೊಂದು ರಾಷ್ಟ್ರವೂ ಕಠೋರ ಜಾಗರೂಕತೆಯನ್ನು ವಹಿಸಿತು. ಜರ್ಮನಿ, ಇಂಗ್ಲೆಂಡೆಂಬ ಭೇದವಿಲ್ಲ-ರಶ್ಯಾದ ಪದ್ಧತಿಯನ್ನು ಅವೆರಡೂ ಏಕರೀತಿಯಲ್ಲಿ ವಿರೋಧಿಸುತ್ತವೆ. ಲೋಕದಲ್ಲೀಗ ಸಮತಾವಾದೀ ಸಂಘಟಿತ ಸರಕಾರವಿರುವದೆಂದರೆ ರಶ್ಯಾದಲ್ಲಿ ಮಾತ್ರ.

ರಶ್ಯದ ಧೋರಣೆಯಲ್ಲಿ ಮಾರ್ಪಾಟು

ಆದಿಯಲ್ಲಿ ಸೋವಿಯೆಟ್ ಸರಕಾರವು ಲೋಕಕ್ರಾಂತಿಯ ಸ್ಪಷ್ಟ ಧೋರಣೆಯನ್ನಿಟ್ಟುಕೊಂಡಿತ್ತು. ಆದರೆ ಅಂತರ್ರಾಷ್ಟ್ರೀಯ ವಿಷಮ ಪರಿಸ್ಥಿತಿಯ ದೆಸೆಯಿಂದಾಗಿ ಅದೀಗ ತನ್ನ ಧೋರಣೆಯನ್ನು ತುಸು ಉಪಸಂಹರಿಸಿಕೊಂಡು ಸ್ವಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ರಾಷ್ಟ್ರೀಯತಾಭಾವವನ್ನು ಇಟ್ಟುಕೊಂಡಿದೆ. ಅಂತರ್ರಾಷ್ಟ್ರೀಯ ಕ್ರಾಂತಿಯೇ ತನ್ನ ಧ್ಯೇಯವೆಂದಿದ್ದ ಸೈನಿಕರ ಪ್ರತಿಜ್ಞಾಪತ್ರದಲ್ಲಿ ಸಹ ಈ ವರುಷ ನವೀನ ಧೋರಣೆಗೆ ತಕ್ಕಂತೆ ಬದಲಾವಣೆಯಾಗಿದೆ. ಇದು ಸರ್ವಾಧಿಕಾರೀ ಸ್ಟಾಲಿನರ ಚಾಣಾಕ್ಷತೆಯೆನ್ನಬೇಕು. ಹೀಗೆ ರಾಜ್ಯವು ಲೋಕಕ್ರಾಂತಿಯ ಬದಲಾಗಿ ರಾಜಕೀಯ ವಾದವನ್ನು ಎತ್ತಿಹಿಡಿದುದರಿಂದಲೇ ಇಂಗ್ಲೆಂಡು ಫ್ರಾನ್ಸುಗಳು ರಶ್ಯದೊಡನೆ ಸ್ನೇಹಮಾಡಿಕೊಳ್ಳಬಹುದೆಂಬ ಪಕ್ಷಕ್ಕೆ ಬಂದವು; ಅವುಗಳಿಗೊದಗಿರುವ ಗಂಡಾಂತರದಿಂದಾಗಿ ರಶ್ಯದ ಸಹಾಯ ಬೇಕೇ ಬೇಕು ಎಂಬ ಅಡಚಣೆಯೇ ಬಂದುಬಿಟ್ಟಿದೆ ಈಗ!

ಇಂಗ್ಲೆಂಡಿನ ಆಪದ್ಧರ್ಮ

ಈ ದಿನ ಚೇಂಬರ್ಲಿನರು ಭಾರಯ್ಯ! ಎಂದು ಸ್ಟಾಲಿನರ ಬೆನ್ನು ಸವರುತ್ತಿರುವದು ಆತ್ಮರಕ್ಷಣೆಗಾಗಿ ಹೊರತು ರಶ್ಯದ ರೀತಿನೀತಿಗಳಿಗೆ ಮನಸೋತಲ್ಲ. ಹಿಟ್ಲರ್ ಮುಸಲನಿಗಳು ಯುರೋಪಿನಲ್ಲೆಲ್ಲಾ ನಾಗಾಲೋಟವನ್ನಾರಂಭಿಸಿದ್ದಾರೆ; ಅವರನ್ನು ಸಮುಜಾಯಿಸಬಹುದೆಂಬ ಆಸೆ ಬರಿದಾಗಿದೆ. ಮುಂದೆ ಅವರಿಂದೊದಗಬಹುದಾದ ವಿಪತ್ತುಗಳಿಂದ ಎಲ್ಲರಿಗಿಂತ ಮಿಗಿಲಾಗಿ ಬ್ರಿಟನು ಮತ್ತು ಫ್ರಾನ್ಸಿಗೆ ಪೆಟ್ಟುಬೀಳಲಿದೆ. ಆ ಕಾರಣದಿಂದಲೇ ನಿರ್ವಾಹವಿಲ್ಲದೆ ಪೋಲಂಡು ರುಮೇನಿಯಾಗಳಿಗೆ ಚೇಂಬರ್ಲಿನ್ ದಲಾಡಿಯಾರರು ಆಶ್ವಾಸನೆ ಕೊಟ್ಟಿದ್ದಾರೆ. ಇಷ್ಟನ್ನು ತಿಳಿದೂ ಹಿಟ್ಲರನು ಡಾನ್ಸಿಂಗನ್ನು ಯಾಚಿಸಿ ಪೋಲೆಂಡಿನ ಮೇಲೆ ಬೀಳಲು ನಿಗುರಿ ನಿಂತಿದ್ದಾನೆ. ಯುದ್ಧವೇ ಗತಿ! ಈ ಬಾರಿಯ ಮಹಾಯುದ್ಧದಲ್ಲಿ ವಿಮಾನ ಬಲವೊಂದೇ ಬಲವೆನ್ನಿಸಬಹುದು. ಇಂಗ್ಲೆಂಡು ಫ್ರಾನ್ಸುಗಳ ಒಟ್ಟು ವಿಮಾನಬಲವು ೧೪ ಸಾವಿರ ಮಾತ್ರವಿರುವಾಗ ಜರ್ಮನಿ ಇಟಲಿಗಳ ಜಾಪ್ಲಾ ವಿಮಾನಪಡೆ 13 ಸಾವಿರದಿಂದ ೨೩ ಸಾವಿರದ ವರೆಗಿದೆ. ಸುಪ್ರಸಿದ್ಧ ವೈಮಾನಿಕನಾದ ಲಿಂಡ್ ಬರ್ಗನು ಇತ್ತಂಡದವರ ಬಲವನ್ನೂ ಪರೀಕ್ಷಿಸಿ, ಫೇಸಿಸ್ಟ್ ರಾಷ್ಟ್ರಗಳ ವಿಮಾನಸೈನ್ಯವನ್ನು ಪ್ರಜಾಸತ್ತಾ ಸರಕಾರಗಳ ಸೈನ್ಯವೆಂದಿಗೂ ಸರಿಗಟ್ಟಲಾರದೆಂದು ನಿಶ್ಶಂಕೆಯಿಂದ ಹೇಳಿದ್ದಾನೆ. ಅವನ ಸರ್ಟಿಫಿಕೇಟೂ ರಶ್ಯಾದ ವಿಮಾನಪಡೆಗೆ. ಹಿಟ್ಲರನಾದರೂ ರಶ್ಯದ ಅಭೇದ್ಯಶಕ್ತಿಯನ್ನರಿತೇ ಇದ್ದಾನೆ. ಓರ್ವ ಆಂಗ್ಲೇಯ ಗೃಹಸ್ಥರೊಡನೆ ರಶ್ಯದ ಸೈನ್ಯಶಕ್ತಿಯು ಅಜೇಯವಾದುದೆಂದು ಅವನು ಬಾಯಿಬಿಟ್ಟು ಒಪ್ಪಿಕೊಂಡದ್ದುಂಟು. ಅಷ್ಟೇ ಅಲ್ಲ ಅವನ ಅತ್ಯಾಶೆಯ ಪ್ರದೇಶವೆಂದರೆ ರಶ್ಯದ ಉಕ್ರೇಯಿನ್ ಪ್ರಾಂತ್ಯವಾಗಿದೆ. ರಶ್ಯದ ಕೆಂಪುಸೈನ್ಯವು ಅತಿ ಪ್ರಬಲವಿಲ್ಲದಿರುತ್ತಿದ್ದರೆ ಹಿಟ್ಲರನದನು ಎಂದೋ ನುಂಗುತ್ತಿದ್ದ.

ಹೀಗೆ ಹಿಟ್ಲರನನ್ನು ಬೆದರಿಸಬಲ್ಲ ಬಗ್ಗುಬಡೆಯಬಲ್ಲ ರಶ್ಯದ ಸಹಾಯವು ಅನಿವಾರ್ಯವಾಗಿ ಇಂಗ್ಲೆಂಡಿಗೆ ಈ ಕಾಲದಲ್ಲಿ ಬೇಕಾಗಿದೆ. ಆದರೆ ರಶ್ಯಕ್ಕೂ ಅಷ್ಟೇ ಬೇಕಾಗಿರುವದೇನು? ಅದರ ಧೋರಣೆ ಏನು?

ರಶ್ಯದ ಸ್ಪಷ್ಟಧೋರಣೆ

ಇಂಗ್ಲೆಂಡ್ ತಾನು ಮೊದಲೇ ಆಶ್ವಾಸನೆ ಕೊಟ್ಟಿದ್ದ ರಾಷ್ಟ್ರಗಳಿಗೂ ತನಗೂ ಒಟ್ಟಿಗೆ ಯುದ್ಧದ ಗಂಡಾಂತರ ಒದಗಿದಾಗ ರಶ್ಯವು ಸಹಾಯ ಮಾಡಬೇಕೆಂದು ಕೋರಿತು. ಆದರೆ ರಶ್ಯವು ಇತರ ಸಣ್ಣ ರಾಷ್ಟ್ರಗಳಿಗೂ ಅಂತಹ ರಕ್ಷಣೆಯನ್ನೇ ಕೊಟ್ಟು ಆಕ್ರಮಣಗಾರರನ್ನು ಎಲ್ಲೆಡೆಗಳಿಂದಲೂ ತಡೆಗಟ್ಟುವಂತಾಗಬೇಕೆಂದು ಅಪೇಕ್ಷೆ ಪಟ್ಟಿದೆ. ತಾನು ರಕ್ಷಿಸಬೇಕಾಗಿರುವ ಬಾಲ್ಟಿಕ್ ರಾಷ್ಟ್ರಗಳೇ ಮೊದಲಾದ ಪುಟ್ಟ ದೇಶಗಳಿಗೂ ಒಗ್ಗಟ್ಟಿನಿಂದ ಸಹಾಯವೀಯುವಂತಾಗಬೇಕೆಂದು ರಶ್ಯಾದ ಹೇಳಿಕೆ. ಹೀಗೆ ಸಾರ್ವತ್ರಿಕ ತಡೆಯನ್ನೊಡ್ಡಿದಲ್ಲಿ ಫೇಸಿಸ್ಟ್ ರಾಷ್ಟ್ರಗಳಿಂದ ತನಗಿಲ್ಲಿ ತೊಂದರೆ ಒದಗುವದೋ ಎಂದು ಇಂಗ್ಲೆಂಡು ಅಳುಕುತ್ತಿದೆ. ರಶ್ಯಾ ಇಂಗ್ಲೆಂಡ್ ಒಪ್ಪಂದದ ಚರ್ಚೆಯು ಇಷ್ಟು ದೀರ್ಘವಾಗಿ ಹನುಮಂತನ ಬಾಲವಾದುದು ಈ ಕಾರಣದಿಂದಲೇ.

ಇಂಗ್ಲೆಂಡಿನ ಹೇಡಿತನ

ಇಂಗ್ಲೆಂಡಿನಲ್ಲೀಗ ಶೇಕಡಾ ತೊಂಭತ್ತು ಮಂದಿ ರಶ್ಯದ ಸ್ನೇಹಕ್ಕಾಗಿ ಹಾತೊರೆಯುವರು. ಆದರೆ ಮಿ. ಚೇಂಬರ್ಲಿನರಿಂದು ತ್ರಿಶಂಕು ಅವತಾರ ತಳೆದಿದ್ದಾರೆ. ಜರ್ಮನಿಯೊಡನೆ ಪಂಥಗಟ್ಟುವ ಪರಿಸ್ಥಿತಿಯನ್ನು ಯಾವ ತೆರನಾದರೂ ತಪ್ಪಿಸಲಪ್ಪಾ ಎಂಬ ಹಂಬಲವೊಂದು ಕಡೆ; ಅದು ತಪ್ಪಿದಲ್ಲಿ ಅನಿವಾರ್ಯವಾದ ರಶ್ಯದ ಸಹಾಯವು ತನ್ನ ಬೆನ್ನಿಗಾನಿಸುವ ರೂಪದಲ್ಲಿ ಮಾತ್ರ ದೊರೆಯಲೆಂಬ ಆಶೆ ಇನ್ನೊಂದೆಡೆ. ಇದನ್ನು ಸೋವಿಯೆಟ್ ಸರಕಾರವು ಚೆನ್ನಾಗಿ ಬಲ್ಲದು. ಮ್ಯುನಿಚ್ ಒಪ್ಪಂದದಲ್ಲಿ, ಜರ್ಮನಿಯ ಪ್ರೀತ್ಯರ್ಥವಾಗಿ ರಶ್ಯವನ್ನು ಹೊರಗಿರಿಸಿದವರು; ಜೆಕೊಸ್ಲೋವೇಕಿಯದ ಪೂರ್ಣಾಹುತಿಯಾದ ಮೇಲೆ ತಾನು ಸೂಚಿಸಿದ ಆರು ರಾಷ್ಟ್ರಗಳ ಪರಿಷತ್ತಿನ ಸೂಚನೆಯನ್ನು ಧಿಕ್ಕರಿಸಿದವರು ಈಗ ಒಮ್ಮೆಗೇ ಗಂಡುಗಲಿಗಳಾಗಿ ಮಾರ್ಪಾಟು ಹೊಂದಲಾರರೆಂದು ರಶ್ಯಕ್ಕೆ ಗೊತ್ತು! ಆದ್ದರಿಂದ ಬ್ರಿಟನು ಅನುಕೂಲ ಶಾಸ್ತ್ರವನ್ನಾಧರಿಸಿ ಹೇಗೂ ಬಾಳಬೇಕೆಂಬ ತಮ್ಮ ಹಾದಿಗೆ ರಶ್ಯವನ್ನೆಳೆಯಲು ನೋಡುವಾಗ ಗಂಡುಗಲಿಗಳಾಗಿ ಬಾಳಿ ಧಾಳಿಗಾರರನ್ನು ಬಗ್ಗುಬಡೆಯುವ ತನ್ನ ಪಥಕ್ಕೆ ರಶ್ಯವು ಇಂಗ್ಲೆಂಡನ್ನೆಳೆಯಲು ನೋಡುತ್ತಿದೆ. ಇದರ ಪರಿಣಾಮವೇನಾಗಬಹುದೆಂಬುದು ಇನ್ನು ಕೆಲವೇ ದಿನಗಳಲ್ಲಿ ತಿಳಿದು ಬಂದೀತಲ್ಲವೇ?

ದೂರೀಕರಿಸಿರಿ—ದೃಷ್ಟಿಚಕ್ರ—ನೆರತಕೂದಲು - ವೃದ್ಧಾಪ್ಯ ತರುಣರು

ಎರಡು ತಿಂಗಳತನಕವೂ, ವೃದ್ಧರು ನಾಲ್ಕು ತಿಂಗಳವರೆಗೂ ಬೂಟಿಟಾನಿಕನ್ನು ಉಪಯೋಗಿಸಿದಲ್ಲಿ ದೃಷ್ಟಿಮಾಂದ್ಯವು ತೊಲಗಿ ನರೆತ ಕೂದಲು ಕಪ್ಪಾಗಿ ದೇಹದ ನಿತ್ರಾಣವು ತೊಲಗಿ ತಾರುಣ್ಯದ ಥಳಕುಬಾರದೆ ಹೋದಲ್ಲಿ ಇಮ್ಮಡಿ ಕ್ರಯ ವಾಪಾಸು ಕೊಡುವ ಶರ್ತವಿದೆ, ಟಾನಿಕಿನ ಕ್ರಯವು ಈ ತೆರನಾಗಿದೆ, ಒಂದು ತಿಂಗಳಿನ ಟಾನಿಕಿಗೆ ರೂ. 3-8-0; 2 ತಿಂಗಳಿನದಕ್ಕೆ ರೂ. 6-0-0; ನಾಲ್ಕು ತಿಂಗಳಿನದಕ್ಕೆ ರೂ. 10. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Jari Booti Dawakhana,
P. O. Behar Nursery (Darbhanga)

SAVING MONEY AND TIME

Thousands of prudent and thriving business-men prefer his Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE.

ESTD. 1906
CANARA BANK LIMITED

ನವಯುಗ ಸ್ಪರ್ಧೆ ೨೮ ಉತ್ತರ

ಅ	ಜ್ಞ	ನ	■	ತಾ	ಪ	ಸಿ
ಧಿ	■	ಕು	ಕ್ಷ	ಟ	■	ಣಿ
ಕ	ಮ	ಲ	■	ಕಿ	ರಾ	ತ
■	ಕ	■	■	■	ಜೀ	■
ಭಾ	ರ	ತ	■	ಹ	ವ	ನ
ವಿ	■	ರು	ದಿ	ರ	■	ವೀ
ನಿ	ಪು	ಣ	■	ಕು	ಲೀ	ನ

ಸರಿಯಾಗಿ ಬಿಡಿಸಿದವರು.

1 ವಿ.ಸ್ ಗಿರಿಜಾ ಬಾಯಿ, ಕುಲ್ಶೇಕರ್, ಮಂಗಳೂರು, 2 ಆರ್. ಎಸ್. ಭಿಡೆ, ಮಂಜೇಶ್ವರ, 3 ಎನ್. ಎ. ಪೈ, ಬೊಂಬಾಯಿ, 4 ಕವಿ ಶ್ಯಾಮಸುಂದರ, ರಾಯಚೂರು, 5 ಶ್ರೀಮತಿ ಆರ್. ಎ. ತಪ್ಪಿಸಿ, ಕುಂದಾಪುರ, 6 ಬ್ರಹ್ಮಾವರ ವೆಂಕಟರಮಣ ರಾವ್, ಬ್ರಹ್ಮಾವರ, 7 ಎಸ್. ಪರಮೇಶ್ವರ ಭಟ್, ಬೆಳ್ತಂಗಡಿ, 8 ಎಸ್. ಬಿ. ಕೋಟೆಕಾರ್, ಬೊಂಬಾಯಿ, 9 ಯಮ್. ತಿಮ್ಮಪ್ಪಶೆಟ್ಟಿ, ಬಿಳೆನ್ನೂರು, ಕಡೂರು ಜಿಲ್ಲೆ, 10 ಕೆ. ಶ್ಯಾಮ ಶೆಟ್ಟಿ, ಬೊಂಬಾಯಿ, 11 ಕೆ. ಎಲ್ ಹೆಗ್ಡೆ, ಬೊಂಬಾಯಿ, 12 ಕೆ. ವಿ. ಯಜ್ಞಸ್ವಾಮಿ ಶಾಸ್ತ್ರಿ, ಹುಬ್ಬಳ್ಳಿ, 13 ಎಂ. ಎಸ್. ಚಿನ್ನಪ್ಪ ಗೌಡ, ಸುಳ್ಯ, 14 ಕೆ. ಪಿ ಕಾಮತ್ ಮಂಗಳೂರು, 15 ಎಚ್. ಗಣಪತಿ ನಾಯಕ್, ಬಿಜಾಪುರ, 16 ಪಿ. ಯಸ್ ಶ್ಯಾನುಭಾಗ, ಶಿರೂರು, 17 ಕೆ. ನಾರಾಯಣ, ಮಂಗಳೂರು, 18 ಶ್ರೀಮತಿ ಪಾರ್ವತಿ ಎಸ್, ಹೆಗ್ಡೆ, ಕಡೆಕಾರು, 19 ಪಿ. ಶಂಕರ ರಾವ್, ಪಡುಬಿದ್ರಿ, 20 ಮಾಲ್ತಿ ದೇಶು, ಬೊಂಬಾಯಿ, 21 ಎಚ್. ಸುಬ್ರಾಯ ಪೈ, ಉಡುಪಿ. 22 H. Subraya Pai Udipi, 23 ಕೆ. ಎನ್. ಭೀಮ ರಾವ್, ಉಡುಪಿ, 24 ಎಚ್. ಭವಾನಿ ಬಾಯಿ, ಉಡುಪಿ, 25 ಕೆ. ರಮಾ ಬಾಯಿ, ಉಡುಪಿ, 26 ಎಂ. ಸುಶೀಲಾ ಆರ್. ಭಟ್, ಮಂಗಳೂರು, 27 ಎ ಮನೋರಮಾ ಬಾಯಿ, ಮಂಗಳೂರು, 28 ಕೆ. ಗಂಗಾಧರ ಹೆಗ್ಡೆ, ಅಂಕೋಲ, 29 ಟಿ. ಸುಬ್ರಹ್ಮಣ್ಯ ಭಟ್, ತೀರ್ಥಹಳ್ಳಿ, 30 ವೈ. ಗೋಪಾಲ ರಾವ್, ಪುತ್ತೂರು, 31 ಪಿ. ಗೋಪಿನಾಥ ರಾವ್, ಬೆಂಗಳೂರು, 32 ಪಿ. ವಿ. ಆಚಾರ್, ಮೈಸೂರು, 33 ಪಿ. ಸ್. ಸುಂದರಿ ಬಾಯಿ, ಕೊಡಗು, 34 ಕುಮಾರಿ ಜೀವಲಕ್ಷ್ಮಿ, ಮಂಗಳೂರು, 35 ಕೆ. ಆರ್ ಗೌಡ, ಪುತ್ತೂರು, 36 ಎಚ್. ವಾಮನ ನಾಯಕ್, ಧಾರವಾಡ, 37 ಕೆ. ಆರ್. ಭಂಡಾರಿ, ಬೊಂಬಾಯಿ, 38 ಕೆ. ದೇಜು ಅನಿವಾನ್, ಬೊಂಬಾಯಿ, 39 ಪಿ. ಲಕ್ಷ್ಮಿಬಾಯಿ, ಭಟ್ಕಳ್, 40 ಎಚ್. ದಾಮೋದರ ಬಾಳಿಗ, ಮಂಗಳೂರು, 41 ಎಸ್. ಪಾರ್ವತಿ ಬಾಯಿ, ಮೈಸೂರು, 42 ಕೆ ಚಂದ್ರ ಪೂನ, 43 ಕೆ. ಪಿ. ಬಂಗೇರ, ಬೊಂಬಾಯಿ, 44 ಬಿ. ಆರ್. ರೈ, ಮಂಜೇಶ್ವರ, 45 ಕೆ. ಸುಶೀಲಾ ಜಿ. ಶೆಟ್ಟಿ, ಬೊಂಬಾಯಿ, 46 ಕಾಪು ರಾಮ ಟಿ. ಬಂಗೇರ, ಬೊಂಬಾಯಿ. ಇವರೊಳಗೆ ಸೋಡ್ತಿ, ಹಾಕಲಾಗಿ I ಇನಾಮು ನಂಬ್ರ 14ನೆಯವರಿಗೂ IIನೇ ಇನಾಮು ಎರಡು ನಂಬ್ರ 10, 15, ನೇಯವರಿಗೂ IIIನೇ ಇನಾಮು ಐದು ನಂಬ್ರ 18, 2 , 28, 32, 37, ನೆಯವರಿಗೂ ದೊರಕಿವೆ.

ವಿ. ಸೂ:—ಇನಾಮುಗಳನ್ನೆಲ್ಲಾ ಪುಸ್ತಕರೂಪದಲ್ಲಿ (ಮೊದಲೇ ಪ್ರಕಟಿಸಿದಂತೆ) ಕೊಡಲಾಗುವುದು.

1 ಮತ್ತು 2 ನಪ್ಪಾದವರ ಹೆಸರುಗಳನ್ನು ಸ್ಥಳಾಭಾವದಿಂದ ಪ್ರಕಟಿಸಲಾಗಲಿಲ್ಲ.

—ವ್ಯವಸ್ಥಾಪಕ.

ನೋಟೀಸು

The Vijaya Bank Ltd., Kaup.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾಪು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡೆದ ಸಾಲಗಳನ್ನು ಮರುಪಾವತಿ ಮಾಡದೇ ಬಡ್ಡಿ ಸಹ ಹೆಚ್ಚು ಸಮಯ ಕೊಡದೆ ಬಾಕಿಮಾಡಿಕೊಂಡಿರುವುದರಿಂದ ಸದರಿಯವರಿಗೆ ಬೆಟ್ಟೆ ರಿಜಿಸ್ಟ್ರಿ ನೋಟೀಸುಗಳು ಜಾರಿಯಾಗದೆ ವಾಪಾಸು ಬಂದಿರುವುದರಿಂದ ಈ ಮೂಲಕ ಜಾಹೀರು ಪಡಿಸುವುದೇನೆಂದರೆ —

ಸದರಿ ನಗಗಳನ್ನು 27-5-1939ನೇ ಶನಿವಾರ ಮಧ್ಯಾಹ್ನ ಘಂಟೆ 2ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂ ಅದೇ ದಿವಸ ಸಂಪೂರ್ಣ ಆಗದೆ ಇದ್ದರೆ ಬೇಂಕಿಗೆ ಯುಕ್ತ ಕಂಡ ದಿವಸಕ್ಕೆ ಮುಂದುವರಿಸಲ್ಪಡುವುದು ತಿಳಿದಿರುವುದು.

ಸಾಲದ ನಂಬ್ರ	ಅಸಾಮಿಗಳ ಹೆಸರು		ಸಾಲದ ಮೊಬಲಗು		
621/36	ಲೋಕು ಶೆಟ್ಟಿ, ಮೈರೆ ಶೆಟ್ಟಿ ಮಗ ಬೆಳಪು ಕೆಳಮನೆ ಉಡುಪಿ ತಾಲೂಕು		23	0	0
162/37	ಪಿ. ದೇಜಪ್ಪ ಶೆಟ್ಟಿ, ಪೂವ್ಯ ದುಕ್ಕ ಶೆಟ್ಟಿ ಮಗ ಬಡಗ್ರಾಮ	,,	43	0	0
204.37	ಚಿಕ್ಕ ಮುಂಡಾಲ, ಬೆಂಕ ಮುಂಡಾಲನ ಮಗ ಪಡುಗ್ರಾಮ	,,	10	0	0
234/37	ತ್ಯಾಂಪ ಮುಂಡಾಲ, ಬಡದ ಮುಂಡಾಲನ ಮಗ ,, ಪೊಲಿಪು	,,	100	0	0
481/37	ಲಕ್ಕನ ಪೂಜಾರಿ, ಬಾಬು ಪೂಜಾರಿ ಮಗ ಪಡುಗ್ರಾಮ ಉಡುಪಿ ತಾಲೂಕು		4	0	0
219/36	ನಾರ್ಣ ಪೂಜಾರಿ, ಜೆಡಗ್ಗ ಪೂಜಾರಿ ಮಗ ಮಲ್ಲಾರು ಗ್ರಾಮ	,,	26	0	0
791/37	ನಾರ್ಣ ಪೂಜಾರಿ, ಜೊಗ್ಗ ಪೂಜಾರಿ ಮಗ ,,	,,	5	0	0
444/36	ಕಾಳ ಪೂಜಾರಿ, ಬೀಡ ಪೂಜಾರಿ ಮಗ ಪಾಂಗಾಳ ಗ್ರಾಮ	,,	3	0	0

Office of the Bank
KAUP.
15-5-1939.

K. Gopalkrishna Shetty.
Agent.

ಪ್ರಕಟಣೆ

ಉಡುಪಿ ಕೆಸಡಿನಲ್ಲಿರುವ ಆರೂರು ಬೇಂಕಿನ ಪ್ರೊಪ್ರೈಟರ್ ತಿಮ್ಮಪ್ಪ ಮರಿಯಪ್ಪನವರ ಮಗನಾದ ಶ್ರೀನಿವಾಸರಾವರವರಿಗೆ, ಉಡುಪಿ ತಾಲೂಕು ಉದ್ಯಾವರ ಗ್ರಾಮದಲ್ಲಿರುವ ಪಡುಭಾಗ ಚಿಟ್ಟಿಪಾಲ್ಯ ಸೆಟ್ಟರ ಮಗಳು ಬೊಕ್ಕಿ ಸೆಟ್ತಿಯು ಈ ಮೂಲಕ ತಿಳಿಸುವುದೇನೆಂದರೆ-

ನಾನು ತಾ. 14-12-38ರಲ್ಲಿ ಉಡುಪಿ ಸ. ರಿ. ಆ. 1ನೇ ಪುಸ್ತಕ ನಂಬ್ರ 1426/38 ನಂಬ್ರ 1424/38ನೆಗ ರಿಜಿಸ್ಟ್ರಿನಿಂದ ಉದ್ಯಾವರ ಮಾಜಿ ಪಟೇಲ್ ಎಲ್ಲಪ್ಪ ಶೆಟ್ರ ಮಕ್ಕಳು ದೊಡ್ಡಯ್ಯ ಶೆಟ್ಟಿ ಕೂಡಾ ಇವರಿಂದ ಸದರಿ ಆಸ್ತಿಯ ಮೂಲಗೇಣಿ ಹಕ್ಕನ್ನು ಪಡಕೊಂಡಿರುತ್ತೇನೆ. ಮಾತ್ರ ನಾನೂ ಸದರಿಯವರೂ ಸೇರಿ ತಾ. 16-12-38ರಲ್ಲಿ ರಿಜಿಸ್ಟ್ರಿ ನೋಟೀಸು ಮೂಲಕ ಈ ವಿಷಯವನ್ನು ನಿಮಗೆ ತಿಳಿಸಿರುತ್ತೇವೆ. ಅಲ್ಲದೆ ನಿಮಗೆ ಸಲತಕ್ಕ ಮೂಲಗೇಣಿ ಗೇಣಿಯನ್ನು ನಾನು ಅಲಾಹಿದ ಮನಿಯಾರ್ಡರು ಮಾಡುತ್ತೇನೆ. ಅದರೆ ರಿಜಿಸ್ಟ್ರಿ ನೋಟೀಸನ್ನೂ ಮನಿಯಾರ್ಡರನ್ನೂ ನೀವು ವಾಪಸು ಬಿಟ್ಟಿರುತ್ತೀರಿ. ಅದ್ದರಿಂದ ಸದರಿ ಹಣವನ್ನು ನಾನು ಉದ್ಯಾವರ ಮಾಜಿ ಪಟೇಲ ಎಲ್ಲಪ್ಪ ಶೆಟ್ರ ತಮ್ಮ ಕೊರಗ ಶೆಟ್ರ ವಶ ಅಮಾನತಾಗಿ ಇಟ್ಟಿರುತ್ತೇನೆ. ನೀವು ನನ್ನ ಬಗ್ಗೆ ಸದರಿಯವರಿಗೆ ರಶೀದಿಕೊಟ್ಟು ಸದರಿ ಹಣವನ್ನು ಪಡಕೊಳ್ಳಬೇಕಾಗಿರುತ್ತದೆ. ಈ ಎಲ್ಲ ಕಾರಣಗಳಿಗೆ ನೀವು ವಿರೋಧವಾಗಿ ನನ್ನ ಮೇಲಾಗಲೀ ನನಗೆ ಆಸ್ತಿಕೊಟ್ಟವರ ಮೇಲಾಗಲೀ ದಾವಾ ದಿಂತಾಲು ಮಾಡಿದರೆ ಅದರ ಸಕಲ ನಷ್ಟಖರ್ಚು ತೆಂಡಿಕ್ಕೆ ನೀವೇ ಬದ್ಧರಾಗುವಿರಿ. ತಿಳಿದಿರುವುದು.

ಈ ಎಡಕ್ಕೆ ಹಚ್ಚಿಟ್ಟನ ಗುರುತು ಚೆಲುವಕ್ಕ ಸೆತ್ತಿ ಮಗಳು ಬೊಕ್ಕಿ ಸೆತ್ತಿಯದು,
ಉದ್ಯಾವರ ಮೈಂದು ಸೆಟ್ರ ಅಳಿಯ ಕೊರಗ ಸೆಟ್ಟಿ ಸಾಕ್ಷಿ.

THE
PREMIER BANK
OF INDIA, LIMITED.
Head Office: MADRAS.
Branches:
MADURA & NELLORE.
CHAIRMAN
Dr. U.L.Narayana Rao.
'Bhujanga Nivas' Madras.
FIXED DEPOSITS
are now received at the following Rates:
For 6 Months at 3½% P. A.
12 Months at 4½% P. A.
24 Months at 5% P. A.
(Interest Paid Half-yearly.)
S. V. Rau D. Com.,
Managing Director

ಬರುವ ವಾರ ಪ್ರಕಟವಾಗುವ ಒಗಟನ್ನು ನಿರೀಕ್ಷಿಸಿರಿ.

ಲೇಖರಾಜರು ಬೊಂಬಾಯಿಗೆ ದಯಮಾಡಿಸುವರಂತೆ.

ಓಂ ಮಂಡಲಿಯ ಸ್ಥಾಪಕರಾದ ದಾದಾ ಲೇಖರಾಜರು ಬೊಂಬಾಯಿಯಲ್ಲೊಂದು ನಾಜೂಕಾದ ಬಂಗಲೆಯನ್ನು ಕೊಂಡುಕೊಂಡಿರುವರು. ಇನ್ನು ಸ್ವಲ್ಪ ಸಮಯದಲ್ಲಿಯೇ ತನ್ನ ಕಡೆಯ ಕೆಲವು ಮಹಿಳೆಯರೊಂದಿಗೆ ಅಲ್ಲಿಗೆ ಬಂದು ವಾಸಿಸಲಿರುವರೆಂದು ವಾರ್ತೆಯಿದೆ.

ಸಿ. ರಾಜಗೋಪಾಲಾಚಾರ್ಯರ ಕತೆಗಾರಿಕೆ.

ಮದ್ರಾಸಿನ ಸಭೆಯೊಂದರಲ್ಲಿ ಮಾತಾಡುತ್ತಾ ಮಾನ್ಯ ರಾಜಗೋಪಾಲಾಚಾರ್ಯರು ಹೀಗೆಂದರು. 'ನಾವೊಂದು ಹಗ್ಗ ಮತ್ತು ಕೊಡ ಕೊಟ್ಟು ಒಬ್ಬನನ್ನು ಬಾವಿ ನೀರೆಳೆಯೆಂದೆವು ಅವನದನ್ನು ಮಧ್ಯ ಬಾವಿಗಿಳಿಸಿ ಕೈಬಿಟ್ಟ ಇದರಿಂದಾಗಿ ನಮಗೆ ನೀರು ಮಾತ್ರವಲ್ಲ, ಕೊಡ ಮತ್ತು ಹಗ್ಗ ಕೂಡ ನಷ್ಟವಾಗುವ ಸಂಭವ ಅದ್ದರಿಂದ ಕೂಡಲೇ ಆ ಹಗ್ಗಕ್ಕೆ ಇನ್ನೊಬ್ಬ ಕೈಕೊಡಬೇಕಾಯಿತು. ಅದ್ದರಿಂದ ಇನ್ನೊಬ್ಬನನ್ನು ನೇಮಿಸಿದೆವು.' ಬಾಯಿ ಸುಭಾಸ ಬೋಸರು ರಾಜಿ ಕೊಟ್ಟ ಕೂಡಲೇ ರಾಜೇಂದ್ರರು ಅಧ್ಯಕ್ಷರಾದುದು ನಿಯಮ ಬದ್ಧವೇ ಎಂದು ಕೆಲವರು ಪ್ರಶ್ನಿಸಿದುದಕ್ಕೆ ಮಾನ್ಯ ಆಚಾರ್ಯರು ಕೊಟ್ಟ ಉತ್ತರವಿದು

ಇನ್ಕಮ್ ಟೇಕ್ಸ್

ನೋಟೀಸು

1-4-'39ರಿಂದ ಇನ್ಕಮ್ ಟೇಕ್ಸ್ ಕಾಯಿದೆಯಲ್ಲಿ ಅನೇಕ ವ್ಯತ್ಯಾಸಗಳಾಗಿವೆ. ನೀವು ಕೊಡುವ ಟೇಕ್ಸ ನಿಮ್ಮ ಉತ್ಪತ್ತಿಗೆ ಮಿಕ್ಕಿದ್ದಿದ್ದು ನಿಮಗೆ ಆ ಬಗ್ಗೆ ಅಸಮಾಧಾನವಿದ್ದರೆ ಕೆಳಗಿನ ವಿಳಾಸಕ್ಕೆ ಬರೆದು ತಕ್ಕ ಅನುಭವವನ್ನು ಪಡಕೊಂಡು ನಿಮ್ಮ ಟೇಕ್ಸನ್ನು ಕಡಿಮೆಮಾಡಿಕೊಳ್ಳಬಹುದು. ಸಂದರ್ಭನುಸಾರ ನೀವು ಟೇಕ್ಸ್ ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು.

S S. Puranik
Govt-recognised
Income-Tax Practitioner
AUDITOR
P. O. Byndoor

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯರ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯ ಹೊಸ ಹೊಸ ಸಾಮಾನುಗಳು ಬೈಲುಗಟ್ಟಿ ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ಖಂಡ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

THE
Canara Banking Corporation, Ltd.
(Incorporated in British India)
ESTD. 1906

THREE YEARS' CASH CERTIFICATES
bearing interest at 4% p. a. in denomnations of Rs 50/-, 100/-, 500/-, 1,000/- & 5000/- are now issued at all our Branches.

For particulars call at or write to any of our nearest Branches.

ನವಯುಗ

ಉಡುಪಿ, ಗುರುವಾರ, ತಾ. ೧೮-೫-೩೯

ಮದ್ರಾಸಿನ ಸೇಲ್ಸ್ ಟೇಕ್ಸ್ ಮಸೂದೆ.

ಮದ್ರಾಸ. ಸರಕಾರವು ಇತರ ಪ್ರಾಂತಿಕ ಸರಕಾರಗಳಂತೆ ಆರ್ಥಿಕ ಅಡಚಣೆಗೊಳಗಾಗಿದ್ದು ತನ್ನ ಕಾರ್ಯಕ್ರಮಗಳನ್ನು ಮುಂದೊತ್ತಲನುಕೂಲವಿಲ್ಲದೆ, ಅದಕ್ಕಾಗಿ ಹೊಸ ವಿಧಾನಗಳನ್ನು ಅನುಸರಿಸಬೇಕಾಗಿ ಬಂದಿದೆ. ಒಂದೆಡೆಯಲ್ಲಿ ಕೆಲವು ಭಾಗಗಳನ್ನು ಸ್ಪರ್ಶಿಸಲಾಗದ ಅಧಿಕಾರ, ಇನ್ನೊಂದೆಡೆ ಅಲ್ಪಸ್ವಲ್ಪ ಶಮನದಿಂದ ಪರಿಹಾರ ಹೊಂದಲಾರದ ಜನತೆಯ ಆರ್ಥಿಕ ವಿಪತ್ತು ಇವುಗಳನ್ನು ಜತೆಗೂಡಿಸಿ ಆಳುವದು ಹೇಗೆಂಬುದು ಕಾಂಗ್ರೆಸ್ ಸರಕಾರಗಳ ಮುಂದೆ ಬಂದಿರುವ ಜಟಿಲ ಸಮಸ್ಯೆ. ಮದ್ಯಪಾನ ನಿವಾರಣೆಯಂತಹ ಸುಧಾರಣೆಯನ್ನು ಕೈಕೊಳ್ಳದೆ ಕಾಂಗ್ರೆಸ್ ತತ್ವದ ದೃಷ್ಟಿಯಿಂದ ಸಾಧ್ಯವಿಲ್ಲ, ಕೈಗೊಳ್ಳಲು ಆರ್ಥಿಕ ಪರಿಸ್ಥಿತಿಯಿಂದ ಅಸಾಧ್ಯ. ಈ ಎರಡು 'ಅಸಾಧ್ಯ'ಗಳ 'ಟಗ್ ಓಫ್ ವಾರ್'ನ ನಡುವೆ ಅತ್ತ ಇತ್ತ ಸೆಳೆಯಲ್ಪಟ್ಟು ಈಗ ಮದ್ಯನಿಷೇಧದ ಕಡೆಗೆ ಸರಿಯಬೇಕಾಗಿ ಬಂದಿದೆ ಆದರೆ ಆದರಿಂದಾಗಿ ಬೀಳಲಿರುವ ನಷ್ಟವನ್ನು ಬಾಯಿಗೂಡಿಸುವ ಬಗೆ ಹೇಗೆ? ಅದೂ ಅನ್ಯಾಯದ ತೆರಿಗೆ ಹೊರಿಸಿ ನ್ಯಾಯಕಾಪಾಡುವಂತಾಗಬಾರದು, ಅತ್ತಿಂದಿತ್ತ ಚಲ್ಲಾಟ ನಡಿಸಿ ಕಾಂಗ್ರೆಸ್ ಸರಕಾರವು ಮಹಾ ಪಹಿವಾಟಿನಲ್ಲಿದೆ ಎಂದಿಷ್ಟೇ ಜನತೆಯು ಮನಗಂಡರೆ ಸಾಲದು ಕಾಂಗ್ರೆಸ್ ಸರಕಾರದ ಕೈಯಲ್ಲಿ ತಮ್ಮ ಹಿತವು ಭದ್ರವಾಗಿದೆ ಎಂದು ಜನರು ತಿಳಿಯುವಂತಾಗಬೇಕು. ಹೀಗಾಗಬೇಕಾದರೆ ನ್ಯಾಯವೆದ್ದು ಕಾಣುವ ರೀತಿಯಲ್ಲಿ ಆರ್ಥಿಕ ಬಿರುಕಿಗೆ ಪತ್ತೆ ಹಚ್ಚುವ ಚಾತುರ್ಯವನ್ನು ಸರಕಾರವು ಪ್ರಥಮತಃ ತೋರಿಸಬೇಕು.

ಮಾನ್ಯ ಸಿ. ರಾಜಗೋಪಾಲಾಚಾರ್ಯರು ತಂದು ಈಗತಾನೇ ಮದ್ರಾಸ್ ಎಸೆಂಬ್ಲಿಯ ಅನುಮತಿ ಪಡೆದಿರುವ ಸೇಲ್ಸ್ ಟೇಕ್ಸ್ ಮಸೂದೆಯು ಸರಕಾರದ ಒಂದು ಸತ್ಕಾರ್ಯವೆನ್ನಲಡ್ಡಿಯಿಲ್ಲ. ಈ ಮಸೂದೆಯಿಂದಾಗಿ ಕಡಿವೆ-ಬಿದ್ದ ಹಣವನ್ನು ಸರಕಾರವು ಸಂಪಾದಿಸುತ್ತದೆ. ನ್ಯಾಯಕ್ಕೆಲ್ಲಿಯೂ ಕೊರತೆ ತಟ್ಟದಂತೆಯೇ ಸಂಪಾದಿಸುತ್ತದೆ ಮಾರಾಟದ ಮೇಲೆ ಕರವಿಧಿಸುವ ಕಾನೂನು ಅಮೇರಿಕಾ, ಆಸ್ಟ್ರೇಲಿಯಾ, ನ್ಯೂಜಿಲೇಂಡ್, ರಷ್ಯಾ, ಜರ್ಮನಿ ಮೊದಲಾದ ರಾಷ್ಟ್ರಗಳಲ್ಲಿ ಜಾರಿಯಲ್ಲಿದೆ. ಭಾರತದಲ್ಲಿ ಈ ವರೆಗಿಂತಹ ಕಾನೂನಿರಲಿಲ್ಲವಾದುದರಿಂದ ಇದು ಹೊಸತು ಆದರಿಂದಲೇ ಒಂದು ವಿಪತ್ತು ಎಂದು ಭಾವಿಸುವವರಿರಬಹುದು. ಆದರೆ ಈ ಮಸೂದೆಯನ್ನು ನಿರ್ವಿಕಾರಬುದ್ಧಿಯಿಂದ ಪರಿಶೀಲಿಸಿದರೆ ಈಗ ಜಾರಿಯಲ್ಲಿರುವ ಎಷ್ಟೋ ತೆರಿಗೆಗಳಿಗಿಂತ ಇದು ನ್ಯಾಯವಾದುದೆನ್ನಬಹುದು. ಮದ್ರಾಸು ಪ್ರಾಂತದ ಒಟ್ಟು 44,196,000ದಲ್ಲಿ 1,305,860 ಮಂದಿ ಮಾತ್ರ ವ್ಯಾಪಾರಿಗಳು. ಈ ಸಂಖ್ಯೆಯಲ್ಲಿ ಹೊಟ್ಟೆಯ ವ್ಯಾಪಾರಕ್ಕಾಗುವಷ್ಟೆ ವ್ಯಾಪಾರ ಮಾಡುವವರೂ ಸೇರಿದ್ದಾರೆ. ಹೆಚ್ಚಿನವರು ಅವರೇ. 10 ಸಾವಿರದ ವರೆಗಿನ ವಹಿವಾಟಿರುವವರನ್ನು ಬಿಟ್ಟಲ್ಲಿ ಅದಕ್ಕೂ ಹೆಚ್ಚಿನ ವ್ಯಾಪಾರ ನಡಿಸುವವರು ಕೆಲವೇ ಸಾವಿರ ಮಂದಿ. ಈ ಕಾನೂನಿನಂತೆ ತೆರಿಗೆ ಬೀಳುವದು ಈ ಅಲ್ಪಸಂಖ್ಯಾಕರ ಮೇಲೆ ಮಾತ್ರ. ಅವರಲ್ಲಿ ಕೂಡ ತಾರತಮ್ಯ ನೋಡದೆ ಬಿಟ್ಟಿಲ್ಲ. ಹತ್ತು ಸಾವಿರಕ್ಕೆ ಮೇಲ್ಪಟ್ಟು ಇಪ್ಪತ್ತು ಸಾವಿರದ ವರೆಗಿನ ವ್ಯಾಪಾರ ನಡಿಸುವವರಿಗೆ ಬೀಳುವ ತೆರಿಗೆಯೆಂದರೆ ನಾಮಮಾತ್ರವಾದದ್ದು. ಇಪ್ಪತ್ತು ಸಾವಿರಕ್ಕೆ ಮಿಕ್ಕಿದ ವಹಿವಾಟುದಾರರಿಗೆ ರೂಪಾಯಿಗೆ ಒಂದು ಪೈಯಂತೆ, ಸುಮಾರು ಸೇಕಡಾ ಅರ್ಧದಷ್ಟು ಮಾತ್ರವೆ ಕರಬೀಳುತ್ತದೆ. ಅಂತು ಈ ಹೊಸ ಕಾನೂನು 'ವ್ಯಾಪಾರಕ್ಕಾಗಿ ಹಣ'ವೆಂದಿರುವವರನ್ನೆಲ್ಲಾ ವಿನಾಯತಿ ಪಡಿಸಿ, ಹಣಕ್ಕಾಗಿ ಹಣ ಮಾಡುವವರನ್ನಷ್ಟೇ ಹಿಡಿಯುತ್ತದೆ. ಸರಕಾರದ ಸದ್ಯದ ಸ್ಥಿತಿಯಲ್ಲಿ ಹೊಸ ತೆರಿಗೆ ಹೊರಿಸದೆ ನಿರ್ವಾಹವಿಲ್ಲ. ಹೊಸ ಕರವು ನೊದಲಾಗಿ ದೊಡ್ಡ ವ್ಯಾಪಾರಿಗಳ ಮೇಲೆ ಬೀಳದೆ ಗತ್ಯಂತರವಿಲ್ಲ.

ಮದ್ರಾಸ್ ಎಸೆಂಬ್ಲಿಯಲ್ಲಿ ಈ ಮಸೂದೆಗೆ ವಿರೋಧವಿಲ್ಲದೆ ಹೋಗಲಿಲ್ಲ ಅದನ್ನು ಪರಾಮರ್ಶಿಸಿದ ಸಿಲೆಕ್ಟ್ ಕಮಿಟಿಯಲ್ಲಿ ಕುಮಾರ ರಾಜಾ ಮುತ್ತಯ್ಯ ಚೆಟ್ಟಿಯಾರರು ಇದ್ದರಾದರೂ, ಅವರೂ ಇತರ ವಿರೋಧ ಪಕ್ಷೀಯ ಮೆಂಬರರೂ ಎಸೆಂಬ್ಲಿಯಲ್ಲಿ ಅದನ್ನು ಬಲವಾಗಿ ವಿರೋಧಿಸಿದರು ಕೊನೆಗೆ ಪ್ರತಿಪಕ್ಷೀಯರು ಸಭೆ ಬಿಟ್ಟು ನಡೆಯುವಷ್ಟೂ ಮುನಿದಿದ್ದರು ಈ ಮಸೂದೆಯ ಮೇಲೆ, ಅವರ ಒಂದು ವಾದವೆಂದರೆ ಸರಕಾರಕ್ಕೆ ಈ ವರುಷವಾಗುವ ನಷ್ಟ ೧೭ ಲಕ್ಷ ಮಾತ್ರ, ಅದು ಹೊಗೆಸೊಪ್ಪಿನ ಮೇಲೆ ವಿಧಿಸಿದ ತೆರಿಗೆಯಿಂದ ಕೂಡಿಬರಲಿದೆ-ಈ ತೆರಿಗೆಯೇಕೆ? ಎಂಬುದು. ಆದರೆ ಕಾಂಗ್ರೆಸ್ ಸರಕಾರದ ದೃಷ್ಟಿಯಲ್ಲಿ ಈಗ ಕಡಿಮೆ ಬಿದ್ದಿರುವ ಅಂಕೆಯಷ್ಟೇ ಒಂದು ಕೊರತೆಯಲ್ಲ; ಆಗದೆ ಹಿಂದೆಬಿದ್ದಿರುವ ಆಗತ್ಯವುಳ್ಳ ಕಾರ್ಯಗಳ ಅಭಾವವೂ ಮಹತ್ವದ ನಷ್ಟ—ಆ ನಷ್ಟವನ್ನು ತುಂಬಿಸಿಕೊಳ್ಳಬೇಕು, ಜನರು ಸಹಕರಿಸಿ ತೆರಿಗೆಯನ್ನು ಸರಿಯಾಗಿಕೊಟ್ಟಲ್ಲಿ ಪ್ರಾಂತ್ಯದ ಎಲ್ಲೆಡೆಗಳಲ್ಲಿಯೂ ಪಾನ ನಿಷೇಧವನ್ನು ಜಾರಿಗೆ ತರಬಹುದು ಎಂಬು ಸರಕಾರದ ಮತ.

ಕಾಂಗ್ರೆಸ್ ತತ್ವಗಳನ್ನೊಪ್ಪುವವರು ಮದ್ಯನಿಷೇಧವೇ ಮೊದಲಾದ ವಿಧಾಯಕ ಕಾರ್ಯಗಳನ್ನೊಪ್ಪಲೇಬೇಕು; ಅವುಗಳಿಂದ ಕೊರತೆಬೀಳುವ ಹಣವನ್ನು ಬೇರೆ ವಿಧದಿಂದ ತುಂಬಿಸಿಕೊಳ್ಳಬೇಕೆಂಬುದನ್ನೂ ಒಪ್ಪಲೇಬೇಕು. ಇಷ್ಟನ್ನೊಪ್ಪಿಕೊಂಡ ಮೇಲೆ ಆ ಹೊಸ ವಿಧಾನಗಳಿಂದ ಜನಸಾಮಾನ್ಯರಿಗೆ ನಷ್ಟವುಂಟಾಗದಂತೆ ನೋಡಿಕೊಂಡರಾಯಿತು. ತುಲನಾತ್ಮಕ ದೃಷ್ಟಿಯಿಂದ ಹೊಸ ಕಾನೂನಿನಲ್ಲಿ ನ್ಯಾಯವಿದೆಯೇ ಎಂಬುದನ್ನು ಕಂಡುಕೊಂಡರಾಯಿತು. ಇವೆಲ್ಲವುಗಳ ಮೇಲಿಂದ ಮದ್ರಾಸಿನ 'ಮಾರಾಟ ತೆರಿಗೆಯ ಮಸೂದೆ'ಯು ಅಗತ್ಯವಾದದ್ದು ಹಾಗೂ ನ್ಯಾಯಪೂರ್ಣವಾದದ್ದಿದೆ.

ಅಖಿಲ ಭಾರತ ಕೈದಿಗಳ ದಿನ

ಇದೇ ತಾ ೨೧ನ್ನು ಅಖಿಲಭಾರತದಲ್ಲಿ ರಾಜಕೀಯ ಕೈದಿಗಳ ದಿನವಾಗಿ ಆಚರಿಸಬೇಕೆಂದು ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ವಿನಂತಿ ಮಾಡಿಕೊಂಡಿರುವರು. ಕಾಂಗ್ರೆಸ್ ಸರಕಾರಗಳಿದ್ದೆಡೆಯಲ್ಲಿ ಬಹುತೇಕವಾಗಿ ರಾಜಕೀಯ ಕೈದಿಗಳೆಲ್ಲರೂ ಬಿಡುಗಡೆ ಹೊಂದಿದ್ದಾರೆ ಈಗ ಪಂಜಾಬು ಮತ್ತು ಬಂಗಾಳ ಸರಕಾರಗಳು ಹಲವು ಕೈದಿಗಳನ್ನು ಬಿಡಲೊಪ್ಪದೆ ಛಲತೊಟ್ಟಿವೆ ಇವರಲ್ಲಿ ಹೆಚ್ಚಿನವರು ಹಿಂಸಾತ್ಮಕ ಕಾರ್ಯಗಳಲ್ಲಿ ಕೈಹಾಕಿದ ಅಪಾದನೆಗೊಳಗಾದವರು, ಕಾನೂನಿನ ದೃಷ್ಟಿಯಲ್ಲಿ ಸರಕಾರಗಳಿಗೆ ಹಾಗೆ ಹೇಳುವ ಅಧಿಕಾರವಿದೆ. ಆದರೆ ಅವರೆಲ್ಲಾ, 'ಇಂದು ಹಿಂಸೆಯಲ್ಲಿ ವಿಶ್ವಾಸವನ್ನು ಕಳಕೊಂಡಿದ್ದೇವೆ. ಅಹಿಂಸೆಯೊಂದನ್ನೇ ಆಚರಣೆಯಲ್ಲಿ ತರಲಿದ್ದೇವೆ, ವಿಧಾಯಕ ಕಾರ್ಯದ ಹೊರತು ಅನ್ಯೋದ್ದೇಶ ನಮ್ಮಲ್ಲಿಲ್ಲ'ವೆಂದು ಮಾತು ಕೊಡಲು ಸಿದ್ಧರಿದ್ದಾರೆ. ಹೀಗೆ ಮಾನಸಾಂತರ ಹೊಂದಿದ ಹಲವರನ್ನು ಬಂಗಾಳ ಸರಕಾರದವರಿಂದ ಮಹಾತ್ಮಾ ಗಾಂಧಿಯವರು ಬಿಡುಗಡೆ ಮಾಡಿಸಿದ್ದರು ಜೈಲಿನಲ್ಲಿರುವ ಕೈದಿಗಳಿಗೂ ಹಿಂದಿನವರಿಗೂ ವ್ಯತ್ಯಾಸವೇನೂ ಇಲ್ಲ. ಆದರೆ ಬಂಗಾಳದ ಮತ್ತು ಪಂಜಾಬಿನ ಸರಕಾರಗಳು ಅವರೊಳಗೆ ಏನೋ ಭೇದವನ್ನು ಕಲ್ಪಿಸಿಕೊಂಡಂತೆ ಕಾಣುತ್ತದೆ. ಇಂದು ಹಿಂದುಸ್ಥಾನದಲ್ಲಿ ಹಿಂಸೆಯ ಲಕ್ಷಣಗಳೇ ಕಂಡುಬರುವದಿಲ್ಲ, ಸರಕಾರವು ಬೆದರಿ ಬೆಂಗಾವಲಿಟ್ಟಿದ್ದವರು ಹಲವರು ಈಗ ನಿರಾತಂಕವಾಗಿ ಸಂಚರಿಸುತ್ತಿದ್ದಾರೆ. ಆದರೆ ಅವರಿಂದಾಗಿ ಎಲ್ಲಿಯೂ ಘೋರಂಪವಾದುದಿಲ್ಲ. ಅವರನ್ನು ಕಂಡು ಕಂಪಿಸುವವರ ಹೊರತು ಮಂತ್ರಾರಿಗೂ ಏನೂ ಆಗಿಲ್ಲ. ದೇಶದಲ್ಲಿ ಹಿಂಸಾತ್ಮಕ ಯೋಧರಿಗಿದಿರಾಗಿ ಸರಕಾರವು ಸೈನ್ಯಸಿದ್ಧತೆ ಮಾಡುವ ಆಗತ್ಯವು ಕೆಲಕಾಲದಿಂದ ಎಲ್ಲಿಯೂ ಕಂಡುಬಂದಿಲ್ಲ. ಈಗ ಜೈಲಿನಲ್ಲಿರುವ ರಾಜಕೀಯ ಕೈದಿಗಳು ಅಪಾಯಕಾರಿಗಳೆಂದು ತಿಳಿಯುವದು ಅವರನ್ನು ಬಿಡಲೊಪ್ಪದ ಸರಕಾರಗಳ ಹೆದರಿಕೆಯಿಂದ ಮಾತ್ರ. ಆ ಕುರಿತು ಬಾಕಿಯಿರುವ ಕೆಲಸವಾದರೂ ಅದೊಂದೇ—ಸಂಬಂಧಪಟ್ಟ ಸರಕಾರಗಳ ಸಂಶಯ ನಿವೃತ್ತಿ ಪಡಿಸುವದು. ಇದಕ್ಕಾಗಿ ಅಖಿಲ ಭಾರತದ ಜನತೆಯು ಚಳವಳಿಸಬೇಕಾಗಿದೆ. ಕಾಂಗ್ರೆಸ್ ಅಧ್ಯಕ್ಷರ ವಿನಂತಿಯನ್ನು ಮಾನ್ಯಮಾಡಿ ಎಲ್ಲೆಡೆಗಳಲ್ಲಿ ರಾಜಕೀಯ ಕೈದಿಗಳ ದಿನವನ್ನಾಚರಿಸುವರೆಂದು ನಂಬುತ್ತೇವೆ.

ದಕ್ಷಿಣಾಫ್ರಿಕದಲ್ಲಿ ಹಿಂದೀಯರ ಮೇಲೆ ಗದೆ

ದಕ್ಷಿಣಾಫ್ರಿಕವು ಹಿಂದೀಯರ ಮಾನಹಾನಿಗೆ ಪ್ರಸಿದ್ಧಿ ಹೊಂದಿದ ಕ್ಷೇತ್ರ. ಮಹಾತ್ಮರಿಗೆ ರಾಜಕೀಯ ಪಾಠವು ಮೊಟ್ಟಮೊದಲು ದೊರೆತುದು ಅಲ್ಲಿಯೇ. ಅಂದಿನಿಂದ ಕಾಲವೆಷ್ಟೋ ಸಂದರೂ ದಕ್ಷಿಣಾಫ್ರಿಕ ಸರಕಾರದ ಧೋರಣೆಯು ವ್ಯತ್ಯಾಸವಾಗಿಲ್ಲ. ಈಗ ಅಲ್ಲಿಯ ಯೂನಿಯನ್ ಸರಕಾರವು ಹಿಂದೀ ವಿರುದ್ಧ ಮಸೂದೆಯೊಂದನ್ನು ಎಸೆಂಬ್ಲಿಯ ಮುಂದೆತಂದಿರುವನು. ಅದು ಕಾನೂನಾದಲ್ಲಿ ಹಿಂದೀಯರನ್ನು ಅಸ್ಪೃಶ್ಯರಂತೆ ಪ್ರತ್ಯೇಕಿಸಲಾಗುವದಲ್ಲದೆ, ಅವರ ವ್ಯಾಪಾರ ವಹಿವಾಟು ಸ್ವಾಸ್ಥ್ಯ ಅನುಕೂಲತೆಗಳೂ ತಪ್ಪುವವು ಈ ಕುರಿತು ಸ್ವಲ್ಪ ಪರ್ಯಾಲೋಚಿಸಬೇಕೆಂದು ಹಿಂದೀ ಸರಕಾರವು ದಕ್ಷಿಣಾಫ್ರಿಕದ ಸರಕಾರವನ್ನು ಉಪಚಾರೋಕ್ತಿಯಿಂದ ಕೇಳಿಕೊಂಡಿತು. "ಪರಿಸ್ಥಿತಿಯನ್ನು ನಡೆಯಿಸಿ ಹಿಂದೀ ಸರಕಾರದೊಡನೆ ಚರ್ಚೆಗೆ ಕುಳಿತುಕೊಳ್ಳಲು ಸಾಧ್ಯವಿಲ್ಲ. ಹಿಂದೀಯರ ಸಣ್ಣದೊಂದು ಡೆಪ್ಯುಟೇಶನ್ ಬಂದಲ್ಲಿ ಅವರು ಬೇಡುವದೇನೆಂಬುದನ್ನು ಕೇಳಲಡ್ಡಿಯಿಲ್ಲ" ಎಂದು ದಕ್ಷಿಣಾಫ್ರಿಕ ಸರಕಾರವು ತಿಳಿಸಿದೆ ಅಲ್ಲಿಯ ಹಿಂದೀಯರು ಬಿಳಿಯರ ವರ್ತನೆಯಿಂದ ಜಿಗುಪ್ಸೆಗೊಂಡು ಕಾಯಿದೇಭಂಗ ಹೂಡುವೆವೆಂಬಷ್ಟು ಮುಂದುವರಿದಿದ್ದಾರೆ. "ಸರಕಾರವು ತನ್ನ ಆಶ್ವಾಸನೆಗಳನ್ನು ಮರೆತುಬಿಟ್ಟು ಇಂತಹ ಅನ್ಯಾಯ ಮಾಡುತ್ತಾ ಹೋಗುವದು ವ್ಯಸನಕರ"ವೆಂದು ಗಾಂಧಿಯವರೆಂದಿದ್ದಾರೆ. ಹಿಂದೀಯರು ಸ್ವಾತಂತ್ರ್ಯಹೀನರಾಗಿರುವ ಪಾಪದ ಫಲವನ್ನು ಇದ್ದಲ್ಲಿ, ಹೋದಲ್ಲಿ ಅನುಭವಿಸುವ ಕಾಲವಿದು ಭಾರತದಲ್ಲಿ ಸ್ವಾತಂತ್ರ್ಯ ಸರಕಾರವಿರುತ್ತಿದ್ದರೆ ಈ ಪ್ರಶ್ನೆಯು ರಾಷ್ಟ್ರರಾಷ್ಟ್ರಗಳೊಳಗಿನ ವಾದದ ವಿಷಯವಾಗಿ ಪರಿಣಮಿಸುತ್ತಿತ್ತು. ತನ್ನವರಿಗೆ ದೊರೆತ ಪೆಟ್ಟನ್ನು, ತನ್ನಲ್ಲಿದ್ದ ಹೊಡೆತಗಾರ ವರ್ಗದವರಿಗೂ ಕೊಡುವ ಮಂಡನೀತಿಯನ್ನು ರಾಷ್ಟ್ರವು ಅನುಕರಿಸುತ್ತಿತ್ತು. ಆದರೆ ಭಾರತವಿಂದು ಆ ಸ್ಥಿತಿಯಲ್ಲಿಲ್ಲ. ಇಂತಹ ಉಪದ್ರಗಳಿಗೊಂದು ಪ್ರತೀಕಾರ-ಪರಿಣಾಮಕಾರೀ ಪ್ರತೀಕಾರ-ಎಂಬ ಆಯುಧವಿಂದು ಭಾರತದ ಕೈಯಲ್ಲಿಲ್ಲ ಸದ್ಯದ ಸರಕಾರವು ದಕ್ಷಿಣಾಫ್ರಿಕದ ಹಿಂದೀಯರ ಕುರಿತು ಸಹಾನುಭೂತಿ ಸೂಚಿಸಿರುವ ಅನ್ಯೋದ್ದೇಶೀ ಸರಕಾರ. ದಕ್ಷಿಣಾಫ್ರಿಕದ ಹಿಂದೀಯ

ಬಲಪ್ರಯೋಗಕ್ಕೆ ಮಾನ್ಯತೆ ಕೊಡಲಾರೆವು

ಬ್ರಿಟನಿಗೆ ಆಸ್ಟ್ರೇಲಿಯಾದ ಬೆಂಬಲ

ಆಸ್ಟ್ರೇಲಿಯದ ಜನಪ್ರತಿನಿಧಿ ಸಭೆಯಲ್ಲಿ ವಿದೇಶಗಳ ಮಂತ್ರಿ ಸರ್. ಹೆನ್ರಿ ಗುಲ್ಲೆಟ್‌ರವರು ಆಸ್ಟ್ರೇಲಿಯವು ಯುದ್ಧಕಾಲದಲ್ಲಿ ಏಕವ್ಯಕ್ತಿಯಿಂದ ಬ್ರಿಟಿಷರ ಬೆಂಬಲಕ್ಕೊದಗುವದೆಂದು ವ್ಯಕ್ತಪಡಿಸಿದ್ದಾರೆ. ಮಾತ್ರವಲ್ಲದೆ ಜಪಾನಿಗೆ ಬುದ್ಧಿ ಹೇಳುತ್ತಾ, ಹೊಸ ಸ್ನೇಹಿತನಿಗಿಂತ ಹಳೇ ಮಿತ್ರನೇ ವಾಸಿಯೆಂದೂ ಜಪಾನು ಬ್ರಿಟಿಷರೊಡನೆ ಇನ್ನಷ್ಟು ಹತ್ತಿರದ ಸ್ನೇಹದಿಂದಿರುವ ಅಗತ್ಯವಿದೆಯೆಂದೂ ಸೂಚಿಸಿದ್ದಾರೆ.

ಗೋರಿಂಗ್—ಫ್ರಾಂಕೋ ಭೇಟಿ

ಜರ್ಮನಿಯ ಫೀಲ್ಡ್ ಮಾರ್ಶಲ್ ಗೋರಿಂಗರು ಜನರಲ್ ಫ್ರಾಂಕೋನೊಡನೆ ಸಂಭಾಷಿಸಲು ಸ್ಪೈನಿಗೆ ಹೊರಟಿದ್ದಾರೆ. ಅವರನ್ನು ಭೇಟಿಯಾಗುವರೆ ಫ್ರಾಂಕೋ ಸಾಹೇಬನು ವೆಲೆನ್ಸಿಯಾಕ್ಕೆ ಬರಲಿರುವನು.

ಜಪಾನಿಗೆ ಬ್ರಿಟಿಷರ ನಿಷೇಧ ಸೂಚನೆ

ಚಾಂಗ್‌ಕಿಂಗಿನಲ್ಲಿ ಬಾಂಬೆಸೆದು ಬ್ರಿಟಿಷರ ಸೊತ್ತುಗಳಿಗೆ ಹಾನಿಯನ್ನುಂಟು ಮಾಡಿದ ಜಪಾನರ ವರ್ತನೆಯ ಕುರಿತು ಅಲ್ಲಿದ್ದ ರಾಯಭಾರಿಯ ಮೂಲಕ ಬ್ರಿಟನು ನಿಷೇಧ ಸೂಚಿಸಿದೆ. ಜತೆಯಲ್ಲಿ ಚುಂಗ್‌ಕಿಂಗಿನ ಮೇಲಿನ ವಿಮಾನಧಾಳಿಯು ಮಾನುಷತ್ವದ ದೃಷ್ಟಿಯಲ್ಲಿ ಅನ್ಯಾಯವಾದುದಾಗಿತ್ತೆಂಬ ಎಚ್ಚರಿಕೆಯೂ ಹೋಗಿದೆ.

ಪುಟ ೯ರಿಂದ

ರಿಗೂ ಭಾರತೀಯರಂತೆಯೇ ಸ್ವಶಕ್ತಿಯೊಂದೇ ರಕ್ಷಣೆಯಲ್ಲದೆ ಅನ್ಯಥಾ ಇಲ್ಲ.

ಉಡುಪಿಯಲ್ಲಿ ವಸಂತ ಸಾಹಿತ್ಯೋತ್ಸವ

ಇದೇ ತಾ. 18-19-20ರಲ್ಲಿ ಶ್ರೀ ಫಲಿಮಾರು ಮಠದ ಶ್ರೀಪಾದಂಗಳವರ ಉದಾರಾಶ್ರಯದಲ್ಲಿ ಕನ್ನಡ ವಸಂತೋತ್ಸವವನ್ನು ನಡೆಸುವ ಏರ್ಪಾಡಾಗಿದೆ. ಬೆಂಗಳೂರಿನ ಸಾಹಿತ್ಯ ಪರಿಷತ್ತಿನವರು ಕಳೆದ ವರುಷ ಎರಡು ಕಡೆಗಳಲ್ಲಿ ಆಚರಿಸಿದ್ದ ಈ ಉತ್ಸವವನ್ನು ಈ ವರ್ಷ ಐದು ಕಡೆಗಳಲ್ಲಿ ಆಚರಿಸಲಿದ್ದಾರೆ. ಇದು ಕನ್ನಡದ ಮುನ್ನಡೆ, ಉಡುಪಿಯ ಉತ್ಸವಕ್ಕೆ ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳು ಹಲವರು ಆಗಮಿಸಲಿರುವರು. ಉತ್ಸವದ ವ್ಯವಸ್ಥೆಯ ಭಾರವನ್ನು ಉತ್ಸಾಹದಿಂದ ವಹಿಸಿಕೊಂಡ ಶ್ರೀ ರಘುಮಾನ್ಯತೀರ್ಥ ಶ್ರೀಪಾದಂಗಳವರ ಕಾರ್ಯವು ಸ್ತುತ್ಯವಾದುದು. ಕನ್ನಡ ಸಾಹಿತ್ಯಕ್ಕೆ ಸಾಹಿತಿಗಳಿಗೆ ಬೆಂಬಲವಿದ್ದೇ ತೀರಬೇಕು. ಸಾಹಿತ್ಯ ಸೇವೆಯು ವಿಜೃಂಭಿಸಬೇಕಾದರೆ ಶ್ರೀಪಾದಂಗಳವರ ಬೆಂಬಲವೇ ಬೇಕು. ಸಾರ್ವಜನಿಕ ಕಾರ್ಯದಲ್ಲಿ ನಿತ್ಯೋತ್ಸಾಹಿಯಾಗಿರುವ ಶ್ರೀ ಫಲಿಮಾರು ಮಠೀಯ ಶ್ರೀಪಾದಂಗಳವರ ಉದಾಹರಣೆಯು ಇತರರಿಂದಲೂ ಅನುಕರಣೀಯವಿದೆ.

ಕೇಂಟೋನಿನಲ್ಲಿ ದಂಡು ಕಾನೂನು

ಕೇಂಟೋನ್ ನಗರದಲ್ಲಿ ಅನಿರೀಕ್ಷಿತವಾಗಿ ಜಪಾನಿಯರಿಂದ ಮಾರ್ಶಲ್ ಲೋ ಜ್ಯಾರಿ ಮಾಡಲ್ಪಟ್ಟಿದೆ. ಈ ಕಾನೂನಿನಂತೆ ಹಲವು ಚೀನೀಯರನ್ನು ದಸ್ತಗಿರಿಮಾಡಲಾಗಿದೆ.

ಜಪಾನರು ಮುಂದೊತ್ತುತ್ತಿದ್ದಾರೆ

ಜಪಾನರ ಕಡೆಯ ವಾರ್ತೆಯಂತೆ ಟಾಸಿಯಾ ಗುಡ್ಡ ಪ್ರದೇಶಗಳಲ್ಲಡಗಿದ್ದ ಒಂದುಲಕ್ಷ ಚೀನೀ ಸೈನ್ಯವನ್ನು ಚದರಿಸಿ, ಜಪಾನರು ಆಕಸ್ಮಿಕ ಧಾಳಿಯಿಂದ 80 ಮೈಲಷ್ಟು ಸ್ಥಳವನ್ನಾಕ್ರಮಿಸಿದರೆಂದು ತಿಳಿದುಬರುತ್ತದೆ. ಯಿಂಗ್ಯಾನ್-ಸಿಯಾಂಗ್ಯಾಂಗಿನ ಮಧ್ಯದ ರಸ್ತೆಯನ್ನು ಕಡಿದು ಹಾಕಿದುದರಿಂದ ಚೀನೀಸೈನ್ಯವು ಗಲಿಬಿಲಿಗೊಂಡು ದಿಕ್ಕಾಪಾಲಾಯಿತಂತೆ. ಜಪಾನೀ ಸೈನ್ಯವು ಸಿಯಾಂಗ್ಯಾಂಗಿನ ಕಡೆಗೆ ಮುಂದೊತ್ತುತ್ತಿದೆ.

ಇಜಿಪ್ಟಿಗೆ ಇಟಲಿಯ ಭರವಸೆ

ಇಟಲಿಯು ಲಿಬ್ಯದಲ್ಲಿ ಸೈನ್ಯ ಸಂಗ್ರಹಿಸುತ್ತಿರುವದಷ್ಟೆ. ಇದರಿಂದ ಇಜಿಪ್ಟಿಗೇನೂ ತೊಂದರೆಯಿಲ್ಲವೆಂದೂ, ಅದರೊಡನೆ ಸ್ನೇಹವೇ ತನ್ನ ಗುರಿಯೆಂದೂ ಇಟಲಿ ಸರಕಾರವು ಅಭಯಕೊಟ್ಟಿದೆ.

ಪೋಲೆಂಡು ದೃಢನಿರ್ಧಾರದಿಂದಿದೆ

ಪೋಲೆಂಡು ಕಟ್ಟಕಡೆಗೆ ಡಾನ್ಜಿಂಗನ್ನು ಜರ್ಮನಿಗೆ ಬಿಟ್ಟುಕೊಡಬಹುದೆಂಬ ಸುಳ್ಳು ಪ್ರಚಾರದಲ್ಲೇನೂ ಹುರುಳಿಲ್ಲವೆಂದೂ ಪೋಲೆಂಡು ತನ್ನ ನಿರ್ಧಾರವನ್ನು ಬಿಟ್ಟುಕೊಡುವಂತಿಲ್ಲವೆಂದೂ ಪೋಲೆಂಡಿನಿಂದ ವಾರ್ತೆ ಬರುತ್ತಿದೆ. ಡಾನ್ಜಿಂಗಿನಲ್ಲಿ ಮತದಾನದ ಪದ್ಧತಿಯನ್ನನುಸರಿಸುವ ಮೊದಲು ಬೊಹೇಮಿಯಾ ಮತ್ತು ಮೊರೇವಿಯಾದಲ್ಲಿ ಮತ ಸಂಗ್ರಹಿಸಿಕೊಳ್ಳಬೇಕೆಂದು ಪೋಲೆಂಡಿನ ಸೂಚನೆ. ತನ್ನ ಗಡಿಯೊಳಗೆ ಸುಳ್ಳುಪ್ರಚಾರ ನಡೆಸಿದುದಕ್ಕಾಗಿ 13 ಮಂದಿ ಜರ್ಮನ್ ಪುರುಷರನ್ನೂ ಇಬ್ಬರು ಮಹಿಳೆಯರನ್ನೂ ಪೋಲೆಂಡು ಸರಕಾರವು ಹೊರಗಟ್ಟಿದೆ.

ಡಾನ್ಜಿಂಗಿನಲ್ಲಿ ನಾಜೀ ಅತ್ಯಾಚಾರ

ಡಾನ್ಜಿಂಗಿನ ಪೋಲಿಷ್ ಜನರು ತಮ್ಮ ಸ್ವಾತಂತ್ರ್ಯ ಸ್ಥಾಪಕ ಪಿಲ್ಸುದ್ಸ್ಕಿಯ ಸ್ಮಾರಕ ದಿನವನ್ನಾಚರಿಸುತ್ತಿದ್ದಾಗ ನಾಜಿಗಳು ದಂಗೆಯೆದ್ದು ಪೋಲಿಷ್ ವಿಶ್ರಾಂತಿ ಗೃಹವೊಂದಕ್ಕೂ ಪತ್ರಿಕಾಲಯವೊಂದಕ್ಕೂ ನುಗ್ಗಿ ಮುರಿದು ಹಾಕಿರುವರು. ಪಿಲ್ಸುದ್ಸ್ಕಿಯ ಚಿತ್ರಕ್ಕೂ ಕತ್ತಿನೆಸೆದು ಜಖಂ ಗೊಳಿಸಿರುವರು. ಅಧ್ಯಾಪಕರೊಬ್ಬರು ಚೆನ್ನಾಗಿ ಹೊಡೆಯಲ್ಪಟ್ಟಿಲ್ಲದೆ ಪೋಲಿಷ್ ಕಸ್ಟಮ್ಸ್ ಆಫೀಸಿನ ಮೇಲೆ ಬಾಂಬೆಸೆಯಲ್ಪಟ್ಟಿರುವದು, ಗೊಂದಲವನ್ನು ತಪ್ಪಿಸುವ ಸಲುವಾಗಿ ಡಾನ್ಜಿಂಗಿನ ಸಭೆ ಮೊದಲಾದುವನ್ನು ಪೋಲಿಷ್ ಜನರು ನಿಲ್ಲಿಸಿಬಿಟ್ಟರು. ಡಾನ್ಜಿಂಗ್ ಪೋಲೀಸರು ರಕ್ಷಣೆಯಿತ್ತಲು ತಿರಸ್ಕರಿಸಿದರೆಂದು ತಿಳಿದುಬರುತ್ತದೆ.

ಫ್ರಾಂಕೋ ದರ್ಬಾರು

ಜನರಲ್ ಫ್ರಾಂಕೋ ಸಾಹೇಬನು ಮೊನ್ನೆದಿನ ಹೊರಟಿರುವ ವಿಮಾನ ನಿಲ್ದಾಣದಲ್ಲಿ ಇಟೆಲಿ, ಜರ್ಮನಿ ಮತ್ತು ಸ್ಪೈನ್ ಯುದ್ಧವಿಮಾನಗಳನ್ನು ರಾಜಠೀವಿಯಿಂದ ಸಂದರ್ಶಿಸಿ ಜರ್ಮನಿ ಮತ್ತು ಇಟಲಿ ಸೈನ್ಯಾಧಿಕಾರಿಗೆ ಬಿರುದ ಬಾವಲಿಗಳನ್ನಿತ್ತು ಸನ್ಮಾನಿಸಿರುವನು. ತನಗೆ 20 ಮಿಲಿಯನ್ ಪೌಂಡ್ ಸ್ಟರ್ಲಿಂಗ್ ಕೊಡಬೇಕೆಂದು ಫ್ರಾಂಕೋ ಸರಕಾರವು ಪ್ಯಾರಿಸಿನ ಮೂರು ಬೇಂಕುಗಳಿಂದ ಸಾಲ ಕೇಳಿರುವುದು. ಇದು ರಾಜಕೀಯಕ್ಕೆ ಸಂಬಂಧಪಟ್ಟದ್ದಾದುದರಿಂದ ಫ್ರಾನ್ಸು ಮತ್ತು ಬ್ರಿಟನುಗಳ ಅನುಮತಿ ವಿನಹಾ ಸಾಧ್ಯವಿಲ್ಲವೆಂದು ತಿಳಿಸಲಾಗಿದೆ.

ಆಂಗ್ಲೋ—ಟರ್ಕಿಶ್ ಒಪ್ಪಂದ

ಇಂಗ್ಲೆಂಡು ಮತ್ತು ಟರ್ಕಿಗಳೊಳಗೆ ಒಪ್ಪಂದದ ಮಾತುಕತೆ ಜಯಶೀಲವಾಗಿ ನಡೆಯುತ್ತಿದೆ. ಭೂಮಧ್ಯ ಸಮುದ್ರದಲ್ಲಿ ವಿರೋಧಿಗಳನ್ನು ಪರಸ್ಪರ ಸಹಕಾರದಿಂದ ಒಗ್ಗಟ್ಟಾಗಿ ವಿರೋಧಿಸುವ ನಿರ್ಧಾರವಾಗಿದೆ. ಈ ಕುರಿತು ಎರಡೂ ರಾಷ್ಟ್ರಗಳ ಹಿತಸಂಬಂಧಗಳನ್ನು ಏಕಮತದಿಂದ ರಕ್ಷಿಸುವ ದೀರ್ಘಾವಧಿಯ ಒಪ್ಪಂದವಾಗಲಿದೆ. ಈ ಘಟನೆಯು ಯಾರ ವಿರೋಧವಾಗಿಯೂ ತಯಾರಾದುದಲ್ಲವೆಂದೂ, ಪರಿಸ್ಥಿತಿಯೊದಗಿದಲ್ಲಿ ಟರ್ಕಿ ಮತ್ತು ಇಂಗ್ಲಾಂಡು ಒಟ್ಟಿನಿಂದ ಇದಿರಿಸುವ ಸ್ವಹಿತ ಸಾಧನೆ ಮಾತ್ರವೆಂದೂ ಮಿ. ಚೇಂಬರ್ಲೀನರು ಕಾಮನ್ಸ್ ಸಭೆಯಲ್ಲಿ ಹೇಳಿದರು.

'ಬಲಪ್ರಯೋಗಕ್ಕೆ ಮಾನ್ಯತೆ ಕೊಡಲಾರೆವು'

ಹಿಟ್ಲರಿಗೆ ಮಿ. ಚೇಂಬರ್ಲೀನರ ಉತ್ತರ.

ಲಂಡನಿನ ರೋಯಲ್ ಅಲ್ಬರ್ಟ್ ಹಾಲಿನಲ್ಲಿ ಇದೇ ತಾ. 11ರಲ್ಲಿ ಸೇರಿದ 8 ಸಾವಿರ ಕನ್ಸರ್ವೇಟಿವ್ ಮಹಿಳೆಯರ ಸಭೆಯಲ್ಲಿ ಕೊಟ್ಟ ಭಾಷಣದಲ್ಲಿ ಮಿ. ಚೇಂಬರ್ಲೀನರು ಹಿಟ್ಲರರಿಗೆ ಸ್ಪಷ್ಟವಾದ ಉತ್ತರವಿತ್ತಿರುವರು. ಜರ್ಮನಿಯಿಂದಲ್ಲದ ರಾಷ್ಟ್ರಗಳ ಸ್ವಾತಂತ್ರ್ಯಾಪಹರಣದ ಬೆದರಿಕೆ ಬಾರದಿದ್ದರೆ, ಜರ್ಮನಿಯ ಕುರಿತು ಯಾವ ಕಾರ್ಯಕ್ಕೈಕೊಳ್ಳುವ ಅಗತ್ಯವೂ ತಮಗಿಲ್ಲ. ಆಂಗ್ಲೋ ಜರ್ಮನ್ ನೌಕಾ ಒಪ್ಪಂದವನ್ನು ರದ್ದುಗೊಳಿಸುವ ಕಾರಣವೇ ತೋರುವದಿಲ್ಲ. ಆದು ಎರಡು ರಾಷ್ಟ್ರಗಳ ಜನತೆಯು ಪರಸ್ಪರ ಹೋರಾಡುವದಿಲ್ಲವೆಂದು ಸಂಕಲ್ಪಿಸಿರುವ ಹೆಗ್ಗುರುತು. ಸೈನಿಕ ಅಥವಾ ಆರ್ಥಿಕವಾಗಿ ಜರ್ಮನಿಯೊಡನೆ ಸ್ಪರ್ಧಿಸುವ ಅಪೇಕ್ಷೆಯು ಎಂದಿಗೂ ಬ್ರಿಟನಿಗಿಲ್ಲ. ಆದರೆ ಒಂದರ ಬಳಿಕೊಂದೆಂಬಂತೆ ರಾಷ್ಟ್ರಗಳ ಸ್ವಾತಂತ್ರ್ಯಾಪಹರಣವಾಗುವದನ್ನು ಕಂಡು ಸುಮ್ಮಗಿರಲು ಸಾಧ್ಯವಿಲ್ಲ. ಪೋಲೆಂಡಿನ ಕುರಿತು ಬ್ರಿಟಿಷ್ ಧೋರಣೆ ಸ್ಪಷ್ಟವಿದೆ. ಡಾನ್ಜಿಂಗ್ ಪ್ರಶ್ನೆಯನ್ನು ಸಮಾಧಾನದಿಂದ ತರ್ಕಿಸುವದಾದರೆ ಬ್ರಿಟನು ಯಾವಾಗಲೂ ಸಿದ್ಧ. ಆದರೆ ಆ ಕುರಿತು ಬಲಪ್ರಯೋಗದ ಬೆದರಿಕೆ ಹಾಕಿದರೆ ದೊಡ್ಡ ಚಿಕ್ಕಾಟವೇಳುವದು; ತಮ್ಮ ರಾಷ್ಟ್ರವದರಲ್ಲಿ ಸೇರಬೇಕಾಗುವದು. ತಮ್ಮ ಸ್ವಾತಂತ್ರ್ಯ ಮತ್ತು ಕೀರ್ತಿಗೆ ಬಾಧೆಕೊಡದ ಯಾವ ಒಪ್ಪಂದಕ್ಕಾದರೂ ತಾವು ಸಿದ್ಧರು. ಆದರೆ ಈ ತನಕ ಹಲವು ಬಾರಿ ಭಂಗಬಂದ ಶಾಂತಿಯನ್ನು ರಕ್ಷಿಸುವ ಯಥಾರ್ಥ ಭರವಸೆ ದೊರೆಯಬೇಕೆಂಬುದೇ ಮಿ. ಚೇಂಬರ್ಲೀನರ ಭಾಷಣದ ಸಾರ.

ಫ್ರಾನ್ಸಿನ ಸುಸ್ಪಷ್ಟ ಧೋರಣೆ

ಮುಖ್ಯಮಂತ್ರಿ ದಲಾದಿಯರರ ಭಾಷಣ

ಫ್ರೆಂಚ ಪ್ರಧಾನರಾದ ಮಿ. ದಲಾದಿಯರರು ಚೇಂಬರಿನ ಸಭೆಯಲ್ಲಿ ಭಾಷಣ ಮಾಡುತ್ತಾ ತನ್ನ ನೀತಿಯುಕ್ತ 'ವಿರೋಧದ ಬಲಕುಂದಿಸುವ ಎಲ್ಲಾ ವಿಧಾನಗಳನ್ನೂ ತಡೆಗಟ್ಟಲು ಫ್ರಾನ್ಸು ದೃಢಸಂಕಲ್ಪ ಮಾಡಿದೆ ಎಂದರು. ಆಂಗ್ಲೋ—ಫ್ರೆಂಚ್ ಮೈತ್ರಿಯು ಎಂದಿಗಿಂತಲೂ ಈಗ ಬಲವಾಗಿದೆ. ರಶ್ಯದೊಡನೆ ಸ್ನೇಹಸಂಪಾದಿಸುವ ಸರ್ವಪ್ರಯತ್ನಗಳನ್ನೂ ಮಾಡಲಾಗುವುದು. ಬ್ರಿಟನ್ ರಶ್ಯ ಮತ್ತು ಫ್ರಾನ್ಸುಗಳು ಅಕ್ರಮಣಗಾರರನ್ನು ತಡೆಗಟ್ಟಿ ಯುರೋಪಿನ ಶಾಂತಿ ಕಾಪಾಡಬೇಕೆಂಬ ಮೂಲೋದ್ದೇಶದಲ್ಲಿ ಒಮ್ಮತದಿಂದಿವೆ ಎಂದು ದಲಾದಿಯರರು ಹೇಳಿ ಫ್ರಾನ್ಸಿನ ಯುದ್ಧಸಿದ್ಧತೆಯನ್ನು ತಿಳಿಸಿ ಶಾಂತಿಘಾತುಕವಾದ

ಧಾತುಪುಷ್ಟಿ ಲೇಹ ಸುವರ್ಣ, ಸಾಲಾಮಿಶ್ರಿ, ಕಲ್ಕದ ಮಿಶ್ರ
ಇದು ಬಲಹೀನರಿಗ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ ಶರೀರದ ಉಷ್ಣತೆ,ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಜಡ್ಡುಗಟ್ಟುವದು, ಮಲಬದ್ಧತೆ, ಬಳಲಿಕೆ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವದು, ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುವದು. ಬಾಟ್ಲಿ ೧ರ ರೂ 2-8-0.
ಮೇಹ ಕುಠಾರ— ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರಮಾರ್ಗವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವದು ಮೂತ್ರದಲ್ಲಿ ಧಾತು ಹೋಗುವದು ಸೊಂಟನೋವು ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವದು, ಅಲ್ಲದೆ ಇನ್ನಿತರ ಮೂತ್ರ ರೋಗಗಳಿಗೆ ದಿವ್ಯೌಷಧ. ಡಬ್ಬಿ 1ರ ರೂ. 2-8-0.
ಕಸ್ತೂರಿ ಮಿಶ್ರಣ ದಶಮೂಲ— ಪ್ರಸವಾನಂತರ ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ 1ರ ರೂ. 1—8—0
ಕೇಟಲಾಗಿಗೆ ಬರೆಯಿರಿ:— ಯಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.
ಔಷಧಿ ಸಿಕ್ಕುವ ಸ್ಥಳ:—ನವಭಾರತ ಒ. ಕೆ. ಸ್ಟೋರ್, ಉಡುಪಿ. ಶ್ರೀ ಕೃಷ್ಣ ಫಾರ್ಮಸಿ, ಕುಂದಾಪುರ. ಪಿಟ್ಟಿ ನಾರಾಯಣಶೆಣೈ, ಪ್ರೊಪ್ರೈಟರ್ ಮಿನರ್ವ ಮೆಡಿಕಲ್ ಹಾಲ್ ಮುಂಬಯಿ.

ಪೋಲೀಸ್ ಅಧಿಕಾರಿಗಳು ಖಾದಿಧಾರಿಗಳಾಗಬೇಕು.

ಬೆದರಿಕೆ ಅಥವಾ ನಂಬಿಕೆಯ ಮಾತುಗಳಿಗೆ ಫ್ರಾನ್ಸು ಬೆಲೆಕೊಡಲಾರದು. ಬೆದರಿಕೆ ಅಥವಾ ಕಪಟತನವು ಫ್ರಾನ್ಸಿನೊಡನೆ ನಡೆಯುವಂತಿಲ್ಲವೆಂದರು.

ಉಮೋಯಿಯಮೇಲೆ ಧಾಳಿ

ಜಪಾನು ವಿಮಾನಗಳು ಎಮೋಯಿ ಪಟ್ಟಣದ ಮೇಲೆ ಧಾಳಿ ನಡೆಸಿ ಬೋಂಬಿನ ಮಳೆಗರೆದುದಲ್ಲದೆ ಮೆಶೀನ್ ಗನ್ನಿನಿಂದ ಪಟ್ಟಣದ ಕೋಟೆಯನ್ನು ಪುಡಿಗುಟ್ಟಿರುವವು. ಹಲವು ಚೀನೀಯರು ಮರಣಹೊಂದಿದರು. ಕಳೆದ ಆರು ತಿಂಗಳಲ್ಲಿ ಇಷ್ಟು ಭೀಕರವಾದ ಬೋಂಬಿನ ಹೊಡೆತ ನಡೆದುದಿಲ್ಲವಂತೆ.

ಪೋಲಿಸ್ ಅಧಿಕಾರಿಗಳು ಖಾದಿ ಧಾರಿಗಳಾಗಬೇಕು

ಮದ್ರಾಸು ಸರಕಾರಕ್ಕೆ

ಶ್ರೀ ಸತ್ಯಮೂರ್ತಿಗಳ ಆಗ್ರಹ ವಿನಂತಿ

ಕುಂಭಕೋಣಂ ಟೌನ್ ಕಾಂಗ್ರೆಸ್ ಸಭಾಧಿವೇಶನದಲ್ಲಿ ಇದೇ ತಾ. ೧೩ರಲ್ಲು ಶ್ರೀ ಸತ್ಯಮೂರ್ತಿಯವರು ಭಾಷಣಮಾಡುತ್ತಾ "ಖಾದಿ ಮತ್ತು ಗಾಂಧಿ ಟೋಪಿಗಳ ಮೇಲೆ ವಕ್ರದೃಷ್ಟಿಯನ್ನು ಬೀರುತ್ತಿದ್ದ ಪೋಲಿಸ್ ಇಲಾಖೆಯವರು ಖಾದಿ ಪೋಷಾಕನ್ನು ಧರಿಸುವಂತೆ ಮಾಡುವುದು ಮದ್ರಾಸು ಸರಕಾರದ ಅಧೀನದಲ್ಲಿದೆ ಈ ಆಕಾಂಕ್ಷೆಯು ಫಲಕಾರಿಯಾದೀತೆಂದು ನನ್ನ ಊಹೆಯಾಸ" ಎಂದರು. ಮದ್ರಾಸು ಸರಕಾರದ ಮಂತ್ರಿಮಂಡಲ ಸ್ಥಾಪನಾ ಕಾರ್ಯವು ಕಾಂಗ್ರೆಸ್ ಪಾರ್ಟಿಯವರಿಂದಲೇ ಸಾಧ್ಯವೆಂದೂ ಇತರರು ಆ ಬಗ್ಗೆ ಹಾರೈಸುತ್ತಿರುವುದು ಕೇವಲ ನಿರರ್ಥಕವೆಂದೂ ಉದ್ಗಾರವೆತ್ತಿದರು. ಸಾಧ್ಯವಿದ್ದಷ್ಟರ ಮಟ್ಟಿಗೆ ಫೆಡರೇಶನು ಎದುರಿಸಲಾಗುವುದು. ತನ್ಮಧ್ಯೆ ಕೇಂದ್ರ ನ್ಯಾಯವಿಧಾಯಕ ಸಭೆಗೆ ಕಾಂಗ್ರೆಸ್ ವಿರೋಧಿಗಳು ಪ್ರವೇಶಿಸದಂತೆ ಸಹ ನೋಡಲಾಗುವುದೆಂದರು.

ಸಾರ್ವಭೌಮರ ಪಂಕ್ತಿಯನ್ನನುಸರಿಸರಿ

ಆಶ್ರಿತ ರಾಜರಿಗೆ ಸರ್ದಾರ್ ಪಟೇಲರ ಹಿತಸೂಚನೆ

ಭಾವನಗರ ಪ್ರಜಾಪರಿಷತ್ತು ಅಧಿವೇಶನದಲ್ಲಿ ಇದೇ ತಾ. ೧೩ರಲ್ಲು ಸರ್ದಾರ್ ಪಟೇಲರು ಭಾಷಣಮಾಡುತ್ತಾ ಹೀಗೆಂದರು. "ಆಶ್ರಿತ ಸಂಸ್ಥಾನಗಳ ರಾಜ್ಯಭಾರವನ್ನು ಕೆಲವು ಶರ್ತಗಳಿಗೊಳಪಟ್ಟು ಪ್ರಜಾ ಮಂಡಲಕ್ಕೇನೇ ಬಿಟ್ಟುಕೊಡುವುದು ಒಳ್ಳಿತೆಂದೂ ರಾಜರಿಗೂ ಪ್ರಜೆಗಳಿಗೂ ಭೇದಭಾವವುಂಟಾಗದಂತೆ ವರ್ತಿಸುವರೆ ಸಾರ್ವಭೌಮರನ್ನು ಅನುಸರಿಸಬೇಕೆಂದೂ ಹೇಳಿದರು. ಅವರೆ ಆಶ್ರಿತರಾಜರುಗಳು ಪ್ರಕೃತ ಪ್ರಜೆಗಳ ಹಿತವನ್ನು ಅಲ್ಲಗಳೆಯಬಯಸುವರಾದರೂ ಒಂದಲ್ಲ ಒಂದು ದಿನ ಪ್ರಜಾ ಮಂಡಲಕ್ಕೆ ಶರಣು ಹೊಡೆಯಲೇ ಬೇಕಾಗುವುದು. ಸರ್ದಾರ ಪಟೇಲರ ಮೆರವಣಿಗೆ ಕಾಲದಲ್ಲಿ ಆಯುಧಪಾಣಿಗಳಾದ ಇಪ್ಪತ್ತು ಮಂದಿ ಅವರನ್ನು ಎದುರಿಸಿದರು. ಈ ಸಂದರ್ಭದಲ್ಲಿ ಒಬ್ಬನು ಮರಣೋನ್ಮುಖನಾದನು; ಅನೇಕರು ಗಾಯಗೊಂಡರು. ಸಾಧಾರಣ ೧೦೦ ಮಂದಿ ಕೈದುಮಾಡಲ್ಪಟ್ಟರು.

ಮೈಸೂರು ಪತ್ರಿಕಾ ಮಸೂದೆ ಮೇಲೆ ಚರ್ಚೆ

ಮೈಸೂರು ಸರ್ಕಾರದವರು ತರಲಿರುವ ನೂತನ ಪತ್ರಿಕಾ ಕಾನೂನಿನ ಮೇಲೆ ಚರ್ಚೆನಡೆಸುವ ಸಲುವಾಗಿ, ಬೆಂಗಳೂರಿನ ಪತ್ರಿಕೋದ್ಯೋಗಿ ಸಂಘದವರು ಅದರ ಸದಸ್ಯರುಗಳೆಲ್ಲರೂ ಒಂದು ಸಭೆ ಏರ್ಪಡಿಸಿದ್ದರು. ಸಂಘದ ಅಧ್ಯಕ್ಷರಾದ ಶ್ರೀ. ಸಿ. ಹಯವದನ ರಾಯರು ಅಧ್ಯಕ್ಷತೆ ವಹಿಸಿದ್ದರು. ವಿಷಯದ ಮೇಲೆ ಚರ್ಚೆ ನಡೆದು ಈಗ "ಜಾರಿಯಲ್ಲಿರುವ ೧೯೦೮ನೇ ಇಸ್ವಿ ವೃತ್ತಪತ್ರಿಕಾ ಕಾನೂನು ರದ್ದಾಗಬೇಕು. ಮತ್ತಾವ ಕಾನೂನೂ ತರಕೂಡದು. ಸರ್ಕಾರದವರು ಈಗ ತಂದಿರುವ ಕಾನೂನನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು" ಎಂಬ ನಿರ್ಣಯವನ್ನು ಮಾಡಿದ ಮೇಲೆ, ಮೆಮೋರಾಂಡಮ್ಮನ್ನು ತಯಾರಿಸಲು ಒಂದು ಸಮಿತಿಯನ್ನು ನೇಮಿಸಲಾಯಿತು. ಪತ್ರಿಕಾ ಕಾನೂನಿನ ವಿಷಯವಾಗಿ ಶ್ರೀ. ಡಿ. ವಿ. ಗುಂಡಪ್ಪನವರು ಒಂದು ನೋಟನ್ನು ಕಳುಹಿಸಿದ್ದಾರೆ.

ಪಿಕೆಟಿಂಗ್

ಮೈಸೂರು ಕಾಂಗ್ರೆಸ್ ನಿರ್ಣಯದ ಪ್ರಕಾರ ರಾಜಧಾನಿಯಲ್ಲೂ ಮತ್ತು ಮೈಸೂರು ಜಿಲ್ಲೆಯಲ್ಲೂ ಹೆಂಡದಂಗಡಿ ಮುಂದೆ ಪಿಕೆಟಿಂಗ್ ನಡೆಸಲು ತಕ್ಕ ಏರ್ಪಾಡುಗಳು ನಡೆಯುತ್ತಾ ಇವೆಯೆಂದೂ, ಇದು ಶೀಘ್ರದಲ್ಲೇ ಪ್ರಾರಂಭಿಸಲ್ಪಡುವುದೆಂದೂ ಗೊತ್ತಾಗಿದೆ.

ಬೊಂಬಾಯಿ ಪಾರ್ಸಿಗಳ ಜಾತಿಪ್ರೇಮ

ಮುಂಬಯಿ ಸರಕಾರವು ಕೈಗೊಂಡ ಮದ್ಯಪಾನ ನಿಷೇಧ ಕಾರ್ಯವು ಭರದಿಂದ ಸಾಗತೊಡಗಿದೆ ಪ್ರತಿದಿನವೆಂಬಂತೆ ಸಭೆಗಳೋ ಭಾಷಣಗಳೋ ನಡೆಯುತ್ತಿವೆ. ಇದಕ್ಕೆ ವಿರುದ್ಧವಾಗಿ ಪಾರ್ಸಿಗಳು ತಮ್ಮ ಜಾತೀಯ ಸಭೆಗಳನ್ನೂ ನಡೆಸುತ್ತಿರುವುದು ಮಾತ್ರವಲ್ಲದೆ, ಇಂಥ ಸಾರ್ವಜನಿಕ ಸಭೆಗಳಿಗೂ ಬಂದು, ಮದ್ಯಪಾನ ನಿಷೇಧದ ಕುರಿತು ತಮ್ಮ ಅಸಮ್ಮತಿಯನ್ನು ತೋರಿಸುತ್ತಿರುವರು. ಮಂಗಳವಾರ ದಿವಸ ಸಿ. ಜೆ. ಹೋಲಿನಲ್ಲಿ ನಡೆದ ಪ್ರಚಂಡಸಭೆಯಲ್ಲಿ ಶ್ರೀ. ಗಡಿಯಾಲಿಯವರು ಮದ್ಯಪಾನ ನಿಷೇಧದ ಕುರಿತು ಭಾಷಣ ಮಾಡಬೇಕೆಂದು ನಿಶ್ಚಯಿಸಿದಲು ಪಾರ್ಸಿಗಳು ಅಡ್ಡಬಂದು, ನೀವು ಪಾರ್ಸಿಯವರಾಗಿ ನಿಮ್ಮ ಜಾತಿಗೆ ವಿರುದ್ಧ ಮಾತಾಡಬಾರದೆಂದು ಸಭೆಯಲ್ಲಿ ಪುಂಡತನ ಮಾಡತೊಡಗಿದರು. ಶ್ರೀ. ಮುನ್ಷಿಯವರೂ, ಗಡಿಯಾಲಿಯವರೂ ಎಷ್ಟು ಹೇಳಿಕೊಂಡಾಗ್ಯೂ ಕೂಡ ಕೇಳಲಿಲ್ಲ. ಕೊನೆಗೆ ಪೋಲೀಸರ ದರ್ಶನವಾದ ನಂತರವೂ ಸಂಪೂರ್ಣ ಶಾಂತವಾಗದೆ ಅಂದಿನ ಸಭೆಯನ್ನು ಅಧ್ಯಕ್ಷರೇ ನಿಲ್ಲಿಸಬೇಕಾಯಿತು. ಜಾತಿಪ್ರೇಮವೆಂದರೆ ಇದಲ್ಲವೇ?

ಮದ್ರಾಸು ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ಪಾರ್ಟಿ ಸಭೆಯಲ್ಲಿ

ಶ್ರೀ. ರಾಜಗೋಪಾಲಾಚಾರ್ಯರು ಮರಳಿ ಲೀಡರರಾಗಿ ಚುನಾಯಿಸಲ್ಪಟ್ಟರು

ಮದ್ರಾಸ್ ಎಸೆಂಬ್ಲಿ ಸಭಾ ಸದನದಲ್ಲಿ ಕಾಂಗ್ರೆಸ್ ಪಾರ್ಟಿ ಸದಸ್ಯರ ವರ್ಷಾವಧಿ ಸಭೆಯು ಇದೇ ತಾ. 14ರಲ್ಲು ಜರಗಿ ಪ್ರಧಾನ ಮಂತ್ರಿಗಳಾದ ಶ್ರೀ ರಾಜಗೋಪಾಲಾಚಾರ್ಯರೇ ಹೊಸ ವರ್ಷದಲ್ಲೂ ಪಾರ್ಟಿ ಮುಖಂಡರಾಗಿ ಚುನಾಯಿಸಲ್ಪಟ್ಟರು. ಪಾರ್ಟಿ ವಿಪ್ಹ್‌ಗಳಲ್ಲಿ ಶ್ರೀ. ಕೆ. ಆರ್. ಕಾರಂತರಿಗೊಂದು ಸೀಟು ದೊರೆಯಿತು.

ಗಾಂಧಿಯವರಿಗೂ ಸಾಕ್ಷಿ ನೋಟೀಸು

ಹೈದರಾಬಾದು (ಸಿಂಧ) ಸೆಶ್ಶನ್ಸು ಜಡ್ಜರ ಕೋರ್ಟಿನಲ್ಲಿ ಹೈದರಾಬಾದು ಮುನಿಸಿಪಾಲಿಟಿಯ ಚುನಾವಣೆಯ ಸತ್ಯಾಸತ್ಯತೆ, ನಾಯ್ಯಾನ್ಯಾಯತೆಯ ತೀರ್ಮಾನದ ಸಲುವಾಗಿ ಒಂದು ದಾವೆ ದಾಖಲಾಗಿರುತ್ತದೆ. ಚುನಾವಣೆಯಲ್ಲಿ ಅಪಜಯ ಹೊಂದಿದವರೊಬ್ಬರು ಕಾಂಗ್ರೆಸ್ ಹುರಿಯಾಳಿನ ಮೇಲೆ ದಾವಾದಾಖಲು ಮಾಡಿ ಮ. ಗಾಂಧಿಯವರನ್ನು ಸಾಕ್ಷಿ ನುಡಿಯಲು ನೋಟೀಸು ಮಾಡಿಸಿರುವರು. ಮಹಾತ್ಮರ ಸಾಕ್ಷ್ಯವು ಕಮಿಶನ್ ಮೂಲಕ ಪಡೆಯಲಾಗುವುದು.

ಮದ್ಯಪಾನ ನಿಷೇಧ

ಬೊಂಬಾಯಿಯಲ್ಲಿ ಮದ್ಯಪಾನ ನಿರೋಧದ ಚಳವಳವು ಯಶಸ್ವಿಯಾಗಲು ಪ್ರೋತ್ಸಾಹರೂಪದಲ್ಲಿ ಸರಕಾರೀ ಪಾರ್ಟಿ ವ ಭೋಜನ ಸಮಾರಂಭಗಳಲ್ಲಿ ಮಾದಕ ಪಾನೀಯಗಳು ಉಪಯೋಗಿಸಲಾಗುವುದಿಲ್ಲವೆಂದು ಬೊಂಬಾಯಿ ಗವರ್ನರ್ ಪ್ರಭುಗಳು ತನ್ನ ಮಂತ್ರಿಮಂಡಲದೊಂದಿಗೆ ತಿಳಿಸಿರುತ್ತಾರಂತೆ.

ಮೈಸೂರು

ಯುವರಾಜ ಶ್ರೀಕಂಠೀರವ ನರಸಿಂಹರಾಜ ಒಡೆಯರ್ ಬಹದೂರರವರ ೫೦ನೇ ವರ್ಷ ವರ್ಧಂತಿ ಸಮಾರಂಭವು ಆಡಂಬರಾದಿಗಳಿಲ್ಲದೆ ಇದೇ ತಾ. ೧೫ರಲ್ಲು ಆಚರಿಸಲಾಯಿತು. ಜನ್ಮದಿನದ ಗೌರವಾರ್ಥವಾಗಿ ಕ್ರಮದಂತೆ ೫೦ ತೋಪುಗಳು ಹಾರಿಸಲಾದುವು. ಯುವರಾಜರು ಮಂಗಲಸ್ನಾನವನ್ನು ಮಾಡಿ ತಮ್ಮ ರಾಜವಂಶದ ಅಧಿದೇವತೆಯಾದ ಶ್ರೀಚಾಮುಂಡೇಶ್ವರಿಯನ್ನು ಯಥಾವಿಧಿ ಪ್ರಾರ್ಥಿಸಿ ಪೂಜಿಸಿದರು. ದೇವಾಲಯಗಳಲ್ಲಿ ವಿಶೇಷ ಪೂಜಾದಿಗಳು ನಡೆದುವು

ಉಡುಪಿಯಲ್ಲಿ ಸೈಕಲುಗಳ ಹಿಡಿತ

ಉಡುಪಿ ಮುನಿಸಿಪಾಲಿಟಿಯ ಅಧಿಕಾರಿಗಳು ರಸ್ತೆಗಳಲ್ಲಿ ಓಡ್ಯಾಡುತ್ತಿರುವ ಬಿಲ್ಲೆಗಳಿಲ್ಲದ ಸೈಕಲುಗಳನ್ನೆಲ್ಲಾ ತಾ. 17ರಲ್ಲಿ ಒಮ್ಮಿಂದೊಮ್ಮೆಗೇ ಹಿಡಿದಿರುವರು ಈ ವಿಷಯದಲ್ಲಿ ತೆರಿಗೆದಾರರಲ್ಲಿ ವಿಶೇಷ ಕ್ಷೋಭೆಯುಂಟಾಗಿದೆ.

The Canara Industrial & Banking Syndicate, Ltd.
KANHANGAD

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಕಾಂಞಂಗಾಡು, ದ. ಕ.

ನೋಟೀಸು

ಚಿನ್ನಾಭರಣಗಳ ಈಡಿನ ಮೇಲೆ ಸಾಲಪಡೆಕೊಂಡ ನಂತರ ಸ್ವಸ್ತ ವಾಯಿದೆಗೆ ಬಡ್ಡಿ ಕೊಡದೆ ಬಾಕಿ ಮಾಡಿರುವುದರಿಂದ ಬಡ್ಡಿಯನ್ನು ಕಟ್ಟುವರೆ ಬಿಟ್ಟ ರಿಜಿಸ್ಟ್ರ ನೋಟೀಸುಗಳಲ್ಲಿ ಕೆಲವು ಜಾರಿಯಾಗಿಯೂ ಇನ್ನು ಕೆಲವು ಜಾರಿಯಾಗದೆ ಬಂದಿರುವುದರಿಂದ ಈ ಕೆಳಗೆ ಹೆಸರು ಕಾಣಿಸಿದ ಜನರು ಅಡವಿಟ್ಟ ನಗಗಳನ್ನು ತಾ. 10-6-'39ರಲ್ಲು ಯಾ ಅದರ ಮೊದಲೇ ಬಿಡಿಸಿಕೊಂಡು ಹೋಗದೆ ಇದ್ದರೆ ಸದ್ರಿಯವರು ಅಡವಿಟ್ಟ ನಗಗಳನ್ನು ತಾ. 12-6-39ರಲ್ಲು ನಮ್ಮ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ ಘಂಟೆ 2ಕ್ಕೆ ಇನ್ನು ಪುನಃ ನೋಟೀಸು ಕೊಡದೆ ಬಹಿರಂಗವಾಗಿ ಏಲಂ ಮಾಡಲಾಗುತ್ತದೆಂಬುದನ್ನು ಈ ಮೂಲಕ ಎಲ್ಲರಿಗೂ ತಿಳಿಸಲಾಗುತ್ತದೆ. ಏಲಂ ಕಾಯಂಮಾಡುವ ಹಕ್ಕು ಬೇಂಕಿನ ಮೇಲೆ ಹೊಂದಿಕೊಂಡಿರುವುದು.

ಲೋನು ನಂಬ್ರ	ಹೆಸರು ಮತ್ತು ಎಡ್ರೆಸು	ಮೊಬಲಗು		
497/37	ಪುತಿಯ ವಳಪ್ಪಿಲ್ ಅಂಬಾಡಿಯ ಅಳಿಯ ಕಣ್ಣ ಬಲ್ಲಗ್ರಾಮ, ಕಡಪ್ಪುರ, ಕಾಂಞಂಗಾಡು ದ. ಕ,	5	0	0
1592/37	ಕದುಂಗನ್, ಕಾಂಞಾಕ್ಕಿಲ್ ಕದುಂಗನ ಮಗ, ತಂಬ ಕುದಿರ್, ಪಿಲಿಕ್ಕೋಡು, ದ. ಕ.	5	0	0
1693/37	ಅಬ್ದುಲ್ ರಹಿಮಾನ್, ಪಾಲಾಯಿ ಅಸ್ಸಿನಾರ್ ಎಂಬವನ ಅಳಿಯ ಅಜಾನೂರು ಗ್ರಾಮ ಕಿಡಪ್ಪುರ, ಕಾಂಞಂಗಾಡು ,,	6	0	0
934/38	ರಾಮಕೃಷ್ಣ, ಪುಟ್ಟಪ್ಪನ ಮಗ, ಮೋಟರ್ ಡ್ರೈವರ್ ಪಾಂಡೇಶ್ವರ, ಮಂಗಳೂರು ,,	5	0	0
991/38	ಎ ರಾಮಸ್ವಾಮಿ ಚೆಟ್ಟಿಯಾರ್, ಎಣ್ಣೆ ವ್ಯಾಪಾರಿ, ನೀಲೇಶ್ವರ, ,,	15	0	0
1018/38	ಅಬ್ದುಲ್ ರಹಿಮಾನ್ ತಾಯತ್ತ ಪೀಡಿಕಯಿಲ್ ಇಬ್ರಾಹಿನ ಅಳಿಯ, ಕಿನಾನೂರು ಗ್ರಾಮ, ಪಟ್ಲಾ, ಕಾಂಞಂಗಾಡು, ,,	6	0	0
1019/38	ಸಾಲಾಯಿ ಅಸ್ಸನ್ ಕುಂಞಾಯಿ ಅಳಿಯ ಮೊಯಿಂಞ ಕಾಂಞಂಗಾಡು ಗ್ರಾಮ ಪುಂಜಾಯಿಲ್ ಕಾಂಞಂಗಾಡು, ,,	10	0	0
1054/38	ಮಂಗನ್ ಅನ್ನೂರು ಕದುಂಗನ ಅಳಿಯ ನೀಲೇಶ್ವರಗ್ರಾಮ ಕೈವಳಿಕ್ಕಾಲ್ ನೀಲೇಶ್ವರ, ,,	15	0	0
1059/38	ಕಲಂದನ್ ತೆಕ್ಕೇಬಿಟಲ್ ಮೊಟ್ಟಿಯ ಮಗ ಬಲ್ಲಗ್ರಾಮ, ಕಡಪ್ಪುರ ಕಾಂಞಂಗಾಡು, ,,	10	0	0
1101/38	ಚಂದು ಪೀಡಿಕೆ ವಳಪ್ಪಿಲ್ ತೀಯನ್ ಕಣ್ಣನ ಅಳಿಯ ಅಜಾನೂರು ಗ್ರಾಮ, ಅಡೋಟು ಕಾಂಞಂಗಾಡು, ,,	22	0	0
1159/38	ಕುಟ್ಟಮನ್ ಕಣ್ಣಂಬಾತ ಪೊಕ್ಕನ ಅಳಿಯ ಮಡಿಕ್ಕೈ ಗ್ರಾಮ ಪೊತ್ತಂಗೈ ಕಾಂಞಂಗಾಡು, ,,	6	0	0

Office of the Bank
KANHANGAD
12-5-1939.

K. Ganesha Baliga,
Accountant.

ಉ ಡು ಪಿ

ದಿ ಬೋರ್ಡು ಕಂಟ್ರಾಕ್ಟರರ ಮಹಾಸಭೆ—ಡಿಸ್ಟ್ರಿಕ್ಟ್ ಬೋರ್ಡ ಕಂಟ್ರಾಕ್ಟರರ ಮಹಾಸಭೆಯು ತಾ 14-5-39ರಲ್ಲಿ ಸಂಜೆ ಮೋಡರ್ನ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಡಾ ವಿಠಲಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ವೈಸ ಪ್ರೆಸಿಡೆಂಟ್ ಶ್ರೀ. ಎ ಲಕ್ಷ್ಮೀನಾರಾಯಣ ರಾಯರು ಸಹ ಹಾಜರಿದ್ದರು

ಕಂಟ್ರಾಕ್ಟರರ ಪರವಾಗಿ ಶ್ರೀ. ಬಿ ಸುಬ್ಬಯ್ಯ ಹೆಗ್ಗಡೆಯವರು ಸ್ವಾಗತ ಭಾಷಣವನ್ನು ಮಾಡಿದರು, ಕಂಟ್ರಾಕ್ಟರರ ಹಾಲಹವಾಲಗಳು, ಕಷ್ಟನಷ್ಟಗಳು, ಮಾನಮರ್ಯಾದೆ ಮೊದಲಾದುವು ಭಾಷಣದಲ್ಲಿದ್ದು ಮಾತ್ರವಲ್ಲದೆ ಕಂಟ್ರಾಕ್ಟರರ ಸಂಘಸ್ಥಾಪನೆಯು ಅವಶ್ಯಕತೆಯು ಒತ್ತಿ ಹೇಳಲಾಗಿತ್ತು ಸ್ವಾಗತ ಪೈಕಿ ಶ್ರೀಗಳಾದ ಶಿವರಾಮ ಸೆಟ್ಟರು, ಪದ್ಮನಾಭನ ಮಲ್ಲಿ ಲಕ್ಷ್ಮೀನಾರಾಯಣ ಉಪಾಧ್ಯರು, ಕಾಲೋಚಿತ ಮಾತುಗಳನ್ನಾಡಿದರು ಅಧ್ಯಕ್ಷರು ತಮಗೆ ಈ ಸುಸಂಧಿಯನ್ನು ಕಲ್ಪಿಸಿಕೊಟ್ಟುದಕ್ಕಾಗಿ ಅಭಿನಂದಿಸಿ ಕಂಟ್ರಾಕ್ಟರರ ಸಂಘಸ್ಥಾಪನೆಯು ಅತಿ ಅಗತ್ಯವೆಂದೂ ತಮ್ಮಿಂದ ಶಕ್ಯವಿದ್ದಷ್ಟು ಸಹಾಯ ಮಾಡಲು ಸದಾ ಸಿದ್ಧನಾಗಿರುವೆನೆಂದೂ ಕಂಟ್ರಾಕ್ಟರರು ತಮ್ಮ ತಮ್ಮ ಕಾಮಗಾರಿ ಕೆಲಸಗಳನ್ನು ನೀತಿಯಲ್ಲಿ ಪೂರೈಸಿದರೆ ಮಾನವ ಮರ್ಯಾದೆಗಳು ತನ್ನಷ್ಟಕ್ಕೆ ಬರುವವೆಂದೂ ಹೇಳಿದರು, ತದನಂತರ ಸಂಘಸ್ಥಾಪನ ಅತಿ ಅಗತ್ಯವೆಂಬ ಮೊದಲಾದ ಠರಾವುಗಳು ಪಾಸಾದವು. ಧನ್ಯವಾದ ಸಮರ್ಪಣೆಯೊಂದಿಗೆ ಮಹಾಸಭೆ ಕೊನೆಗೊಂಡಿತು.

ಉಡುಪಿ ತಾಲೂಕು ಬೋರ್ಡ ಉಪಾಧ್ಯಾಯರ ಸಭೆ—ತಾ 2 5 39ರಲ್ಲಿ ವಿಶಿಷ್ಟ ಸಭೆಯಿಂದ ಬರುವ 20 5 39ಕ್ಕೆ ಉಡುಪಿ ತಾಲೂಕಿನ ಬೋರ್ಡ ಉಪಾಧ್ಯಾಯರ ಮಹಾಸಭೆಯೊಂದನ್ನು ಪಡುಬಿದ್ರೆ ಶ್ರೀ ಡಾ ವಿಠ್ಠಲಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿಸುವುದಾಗಿ ನಿರ್ಣಯಿಸಲಾಗಿದೆ

ತೈಲಚಿತ್ರ ಅನಾವರಣ—ದಿ. ಕೆನರಾ ಇಂಡಸ್ಟ್ರಿಯಲ್ ಎಂಡ ಬ್ಯಾಂಕಿಂಗ್ ಸಿಂಡಿಕೇಟಿನ ಡೈರೆಕ್ಟರರಾಗಿದ್ದ ದಿವಂಗತ ಶಾಗರ್ ಮಾಧವ ವೆಂಕಟೇಶ ಪೈಗಳ ತೈಲಚಿತ್ರ ಅನಾವರಣೋತ್ಸವವು ಬ್ಯಾಂಕಿನ ರಥಬೀದಿಯ ಮಂಗಳೂರು ಶಾಖಾ ಆಫೀಸಿನಲ್ಲಿ ತಾ. 20ನೇ ಸಂಜೆ 5-30ಕ್ಕೆ ಶ್ರೀ ಬಿ. ವೆಂಕಟ್ರಾಯ ಪೈಗಳ, ಬಿ. ಎ. ಬಿ ಎಲ್. ಎಂ ಎಲ್ ಎ ಅವರ ಅಧ್ಯಕ್ಷತೆಯಲ್ಲಿ ಜರಗಲಿದೆ

ಬಾರಕೂರಲ್ಲಿ ವಸಂತ ಸಾಹಿತ್ಯ ಉತ್ಸವ—ಕನ್ನಡ ಸಾಹಿತ್ಯ ಪರಿಷತ್ತಿನ ಆಶಯವನ್ನು ಮನ್ನಿಸಿ ವರೆ ಬಾರಕೂರಲ್ಲಿ ಇದೇ ತಾ. 21ನೇ ಆದಿತ್ಯವಾರ ಅಪರಾಹ್ನ 4 ಘಂಟೆಗೆ ವಸಂತ ಸಾಹಿತ್ಯ ಉತ್ಸವವು ಜರಗುವುದು. ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ದತ್ತಾತ್ರೇಯ ಬೇಂದ್ರೆಯವರು 'ಜನಜೀವನ ಸಾಹಿತ್ಯ', ಶ್ರೀ. ವಿ ಸೀತಾರಾಮಯ್ಯನವರು 'ಕಾವ್ಯಜೀವನ' ಶ್ರೀ ದಿವಾಕರ ರಂಗರಾವ ರ. 'ಜನರ ಸಾಹಿತ್ಯ' ಎಂಬೀ ವಿಷಯಗಳ ಮೇಲೆ ಈ ಉತ್ಸವದ ಕಾಲದಲ್ಲಿ ಭಾಷಣಗಳನ್ನೀಯಲಿರುವರು. ಎಲ್ಲರಿಗೂ ಸ್ವಾಗತವಿದೆ

ಬ್ರಹ್ಮಾವರ – ತಾ. 4-5 39ನೇ ಸಂಜೆಕೆ ಯಲ್ಲಿ ರೋಮನ ಕಥೋಲಿಕ ಮಾದಿಗಿಯರ ವಿಲೆಯ ಕರಿತಾದ ವಾರ್ತೆಯೊಂದು ಪ್ರಕಟವಾಗಿತ್ತಷ್ಟೆ ಅವನ್ನು ಕಾಂಗ್ರೆಸ್ ಕಮಿಟಿಯವರು ತಿಳಿಸಿದ ಪ್ರಾರಂಭದನ್ನು ಶ್ರೀ. ನಗರ್ ಶ್ರೀನಿವಾಸ ಕೃಷ್ಣಭಾಗರು ತಿಳಿಸಿರುತ್ತಾರೆಂಬದಾಗಿ ತದ್ವಿಷಯವಾದ ಚೇತಾಗಿ ಅವರು ತಿಳಿಸುತ್ತಾರೆ

ಸುವರ್ಣಪದಕ—ಇತ್ತೀಚೆ ಮಂಗಳೂರಿನಲ್ಲಿ ಜರಗಿದ ಆಯುರ್ವೇದ ಪರಿಷತ್ತಿನಲ್ಲಿ ಆಯುರ್ವೇದರತ್ನ ಆರ್ ಕಾಮತರ ಲಕ್ಷ್ಮೀಸಂಕಾಲ್ ಮಾತ್ರೆಗೆ ಫಸ್ಟ್ ಕ್ಲಾಸ್ ಸರ್ಟಿಫಿಕೇಟ ಆಫ್ ಮೆರಿಟ ವಿತ್ತ ಸುವರ್ಣಪದಕ ದೊರಕಿದೆ.

ಪುತ್ತೂರು—ಪುತ್ತೂರಿನ ಹಿರಿಯ ವರ್ಗದ ವಕೀಲರಾದ ಶ್ರೀ ದ. ಸರೈ ಬಿ ಎ, ಬಿ ಎಲ್ ಇವರ ಪುತ್ರ ಶ್ರೀ ಸಿ. ಶಿವಪ್ರಸಾದ ರೈಯವರು ಈ ಬಾರಿ ಬೊಂಬಾಯಿ ಬಿಬ್ಬರ ಯೂನಿವರ್ಸಿಟಿಯಲ್ಲಿ ವೇತನ ಹೊಂದಿ ಶಿಕ್ಷಣಕ್ಕೆ ಆರಿಸಲ್ಪಟ್ಟಿರುವರು. ಮಿಲಿಟರಿ ಅಕೌಂಟ್ಸ್ ಡಿಪಾರ್ಟಮೆಂಟಿಗೆ ಸಂಬಂಧಿಸಿದ ಈ ಹುದ್ದೆಗೆ ಹಿಂದಿನ ಪ್ರಾಂತ್ಯದಿಂದ ಬಂದ ಇಬ್ಬರು ಮಾತ್ರ ಆರಿಸಲ್ಪಟ್ಟಿರುವರು, ಶ್ರೀ. ಶಿವಪ್ರಸಾದ ರೈ ಇವರು ಈ ವರ್ಷ ಬಿ ಎ. ಆನರ್ಸ್ಸಿನಲ್ಲಿ ತೇರ್ಗಡೆ ಹೊಂದಿದ ಇವರನ್ನು ಹತ್ತೊಂಭತ್ತು ವರ್ಷ ಪ್ರಾಯ. ತುಳುವರ ಇತಿಹಾಸ ಕಲಾ ಹರಿ. ಒಂಟಿರಲ್ಲಿ ಈ ಹುದ್ದೆಗೆ ಆರಿಸಲ್ಪಟ್ಟವರಲ್ಲಿ ಇವರೇ ಪ್ರಥಮರು ಎಂಬೇರಿರುವರೆಂದು ತಿಳಿದು ಬಂದಿದೆ. ಇವರ ಶ್ರೀ. ಶಿವಪ್ರಸಾದ ರೈ ಯವರ ಭವಿ ಜೀವನವು ಇನ್ನಷ್ಟು ಶ್ರೇಯಸ್ಕರವಾಗಲೆಂದು ಹಾರೈಸುವೆವು.

ಸ್ವದೇಶ ವಿಚಾರ

ಇಂದೋರು ಸರಕಾರದ ತಡೆ

ಇಂದೋರು ಪ್ರಜಾ ಮಂಡಲದ ವತಿಯಿಂದ ಶ್ರೀ ಸುಭಾಸಬೋಸರು ತೆರೆಯುತ್ತಲಿದ್ದಂತ ನಿಶ್ಚಯವಾಗಿತ್ತು ಆದರೆ ಸಂಸ್ಥಾನದ ಅಧಿಕಾರಿಗಳು ಹೊರಗಿನವರಿಗೂ ಮಾನ್ನಾಡಬೇಕಾಗಿಲ್ಲವೆಂದು ತಿಳಿಸಿದುದರಿಂದ ಆ ಕಾರ್ಯಕ್ರಮವನ್ನು ರದ್ದುಗೊಳಿಸಲಾಗಿದೆ.

ಗಾಂಧಿ-ಭೋಸ್ ಪತ್ರವ್ಯವಹಾರ

ಕಾಂಗ್ರೆಸ್ ವರ್ಕಿಂಗ ಕಮಿಟಿಯ ಕುರಿತು ಶ್ರೀ ಸುಭಾಸಚಂದ್ರಭೋಸ್ ಮತ್ತು ಮಹಾತ್ಮಾ ಗಾಂಧಿಯವರೊಳಗೆ ನಡೆದಿದ್ದ ಸುದೀರ್ಘ ಪತ್ರವ್ಯವಹಾರವೀಗ ಪ್ರಕಟವಾಗಿದೆ ಬ್ರಿಟಿಷ್ ಸರಕಾರಕ್ಕೆ ಯುದ್ಧಾಹ್ವಾನ ಕಳಿಸಿ ಅಲ್ಟಿಮೇಟಮನ್ನು ಕೊಡುವುದು ಈಗಿನ ಪರಿಸ್ಥಿತಿಯಲ್ಲಿ ಸರಿಯಾದುದಲ್ಲವೆಂದು ಗಾಂಧಿಯವರು ತನ್ನ ದೊಂದು ಪತ್ರದಲ್ಲಿ ಸೂಚಿಸಿರುವರು

ಶ್ರೀ ಬಾರ್ಡೋಲಾಯಿಯವರ ರಾಜೀನಾಮೆಯೇ?

ಆಸ್ಸಾಮಿನ ಮುಖ್ಯ ಮಂತ್ರಿ ಶ್ರೀ. ಗೋಪೀನಾಥ ಬಾರ್ಡೋಲಾಯಿಯವರು ಕಾಂಗ್ರೆಸ್ ಪಾರ್ಟಿ ಕಾರ್ಯಕಾರಿ ಸಮಿತಿಯಲ್ಲಿ ರಾಜೀನಾಮೆಯನ್ನೊಪ್ಪಿಸಿರುವರೆಂಬ ವದಂತಿಯಿದೆ ಶ್ರೀ ಬಾರ್ಡೋಲಾಯಿಯವರು ಇದಕ್ಕೆ ತನ್ನ ಅನಾರೋಗ್ಯದ ಕಾರಣಕೊಡುತ್ತಿರುವರು ದಿಗ್ಬೋಯಿಯೆಂಬಲ್ಲಿ ಮುಷ್ಕರವಾರಂಭವಾಗಿ ಗೊಂದಲವೆದ್ದು ಎಪ್ರಿಲ ತಾ 19ರಲ್ಲಿ ಸೈನ್ಯ ಒಂದು ಗುಂಪ ಹಾರಿಸಬೇಕಾಯಿತು. ಕೆಲವು ಕಾಂಗ್ರೆಸ್ ಕೆಲಸಗಾರರು ಅಲ್ಲಿ ನಿಲ್ಲಿಸಲ್ಪಟ್ಟಿದ್ದ ಸೈನ್ಯವನ್ನು ಹಿಂದೆಗೆಯಬೇಕೆಂದು ಕೇಳಿಕೊಂಡರೆಂದೂ ಬಾರ್ಡೋಲಾಯಿಯವರದಕ್ಕೆ ಸಮ್ಮತಿಸದಿದ್ದುದರಿಂದ, ಅವರು ರಾಜೀನಾಮೆ ಕೊಡಬೇಕೆಂದು ಕೇಳಿಕೊಳ್ಳಲಾಯಿತೆಂದೂ ಅಂತಯೇ ರಾಜೀನಾಮ ಕೊಟ್ಟಿರುವರೆಂದೂ ವಾರ್ತೆಯಿದೆ. ಈ ರಾಜೀನಾಮೆಯನ್ನು ಅಮಾನತಿರಿಸಲಾಗಿದೆ

ಪಂಜಾಬು ಮಂತ್ರಿಗಳು ಕಾಂಗ್ರೆಸ್ ಮೆಂಬರರೊಡನೆ ಕ್ಷಮೆ ಕೇಳಿದರು.

ಪಂಜಾಬಿನ ಅಭಿವೃದ್ಧಿ ಖಾತೆಯ ಮಂತ್ರಿ ಸರ್. ಛೋಟುರಾಮ್‌ರವರು ಕಾಂಗ್ರಾ ಎಂಬಲ್ಲಿ ಮಿಲಿಟರಿ ಪೆನ್ಶನರರ ಮತ್ತು ಜಮೀನ್ದಾರರ ಸಭೆಯಲ್ಲಿ ಮಾತಾಡುತ್ತಾ ಕಾಂಗ್ರೆಸ್ ಎಂ. ಎಲ್. ಎ. ಆಗಿರುವ ಪಂಡಿತ ಭಗತ್‌ರಾಮರು ಸರಕಾರೀ ಪಕ್ಷವಾದ ಯೂನಿಯನಿಸ್ಟ್ ಪಾರ್ಟಿಗ ಸೇರುವನೆಂದು ಪತ್ರ ಬರೆದಿದ್ದಾರೆಂಬ ಅಪವಾದನೆ ಹೊರಿಸಿದರು. ಅಲ್ಲಿ ಹಾಜರಿದ್ದ ಪಂಡಿತ ಭಗತ್‌ರಾಮರು ಎದ್ದು ನಿಂತು ಮಂತ್ರಿಗಳನನ್ನು ರುಜುಪಡಿಬೇಕೆಂದೂ ಅದು ಶುದ್ಧ ಸುಳ್ಳಿದ್ದು ತಪ್ಪಿದಾಗ ಬಹುದೆಂದೂ ಪ್ರಶ್ನೆ ಹಾಕಿದಾಗ ಮಂತ್ರಿಗಳು ಕೈಜೋಡಿಸಿ ಕ್ಷಮಾಪಣೆ ಕೇಳಿ ತಾನು ತಪ್ಪುಭಿಪ್ರಾಯದಿಂದ ಹೀಗೆ ಹೇಳಿದರು.

ಚುಂಗ್‌ಕಿಂಗಿನ ಮಹಾ ಹೋರಾಟ

ಚುಂಗ್‌ಕಿಂಗಿನಲ್ಲಿ ಚೀನಾ ಜಪಾನೀ ಹೋರಾಟವು ಉಗ್ರವಾಗಿ ಸಾಗಿದೆ. ತಾ. 12ರಲ್ಲಿ 21 ಜಪಾನೀ ವಿಮಾನಗಳು ಭೀಕರ ಬಾಂಬುಗಳನ್ನು ಚೆಲ್ಲಿದುವು. ಆ ಹೊಡೆತದಿಂದ ಅತೀ ಆಳಕ್ಕೆ ಕಟ್ಟಲ್ಪಟ್ಟಿದ್ದ ರಕ್ಷಣಾ ನಿಲಯಗಳೂ ಕೂಡ ಭೂಕಂಪಕ್ಕೊಳಗಾದಂತೆ ಕಂಪಿಸಿದುವಂತೆ. ಚೀನೀಯರು ಮೂರು ವಿಮಾನಗಳನ್ನು ನೆಲಕ್ಕುರುಳಿಸಿರುವರು.

ಸ್ಥಾನಭ್ರಷ್ಟರಿಗೆ ನಿಲ್ದಾಣ

ಜರ್ಮನಿಯಿಂದ ಹೊರದಬ್ಬಲ್ಪಟ್ಟ ಯೆಹೂದಿಯರಿಗೆ ಸ್ಥಾನ ದೊರಕಿಸಲು ಅಮೇರಿಕಾಧ್ಯಕ್ಷರಿಂದ ರಚಿಸಲ್ಪಟ್ಟ ಕಮಿಶನಿನವರು ಬ್ರಿಟಿಷ್ ಗ್ವಿಯಾನಾವನ್ನು ಶಿಫಾರಸು ಮಾಡಿರುವರು. ಬರುವ ಬೇಸಿಗೆ ಕಾಲದೊಳಗೆ ಅಲ್ಲಿ ಏರ್ಪಾಡುಮಾಡುವ ಆಲೋಚನೆಯಲ್ಲಿ ಸರಕಾರವಿದೆ.

ಚಕ್ರವರ್ತಿಗಳ ಪ್ರಯಾಣ ವಿಳಂಬ

ಚಕ್ರವರ್ತಿಗಳು ಹೊರಟಿರುವ ಹಡಗವು ಎಡೆಬಿಡದೆ ವಿಳಂಬಕ್ಕೊಳಗಾದುದರಿಂದ ಕೆನಡಕ್ಕೆ ನಿಶ್ಚಿತ ದಿನದಲ್ಲಿ ಸೇರಲಾಗಲಿಲ್ಲ ಈ ಕುರಿತು ಸ್ಟೀಮರಿನಿಂದಲೇ ರೇಡಿಯೋ ಮೂಲಕ ಕೆನಡಾ ಸರಕಾರಕ್ಕೆ ತಿಳಿಸಿದ್ದರಿಂದ ಅಲ್ಲಿ ಹೊಸ ವ್ಯವಸ್ಥೆಗಾರಂಭವಾಗಿದೆ.

Commonwealth Assurance Co., Ltd., Poona.

ಬೋನಸ್ಸು ದರವು 20% ಹೆಚ್ಚಿದೆ

30—4—38ರ

ಮೂರನೇ ವ್ಯಾಲ್ಯುಯೇಷನ್ ಫಲಿತಾಂಶ

ಜೀವಾವಧಿ	ತ್ರೈವಾರ್ಷಿಕ	ಎಂಡೋಮೆಂಟ್
ರೂ 54—0 0	ಬೋನಸ್ಸು ಸಾವಿರಕ್ಕೆ	ರೂ 45—0—0

ಕಾ ಮ ನ್ ವೆ ಲ್ತ್

ಏಜನ್ಸಿ ಮತ್ತು ಪಾಲಿಸಿ ವಿವರಗಳಿಗೆ ಇಂದೇ ಬರೆಯಿರಿ.

ಕಾಮನ್‌ವೆಲ್ತ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ.

ಗವಾಂಕರ್ ಅಂಡ್ ಸನ್ಸ್,

ಚೀಫ್ ಏಜಂಟ್ಸ್. ಆನಂದರಾವ್ ಸರ್ಕಲ್, ಬೆಂಗಳೂರು.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ ಇಂಗ್ಲೀಷು ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕಡೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3 ವಿ. ಪಿ ಖರ್ಚು 0 8-0 ಪ್ರತ್ಯೇಕ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನು ಗೊನೊಕಿಲರ್ ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer DR. D. N. JASANI, Vitalbhai Patel Road BOMBAY 4.

ನವದಂಪತಿಗಳು.

ವಧು:—

ಕರ್ನಾಟಕದ ಪ್ರಸಿದ್ಧ ಬರಹಗಾರರೂ ಉಡುಪಿ ಬೋರ್ಡ್ ಹೈಸ್ಕೂಲಿನ ಅಧ್ಯಾಪಕರೂ ಆದ ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರ ಪುತ್ರಿ ಶ್ರೀಮತಿ ಇಂದಿರಾ ಬಾಯಿ.

ವರ:—

ಪತುತ್ತೋನ್ಸೆ ಪಂಚಾಯತ ಬೋರ್ಡಿನ ಅಧ್ಯಕ್ಷರಾದ ಶ್ರೀ. ಪಿ. ವೆಂಕಟಕೃಷ್ಣರಾಯರ ಪುತ್ರ ಶ್ರೀ. ಯುತ ರಾಮರಾವ್.

ಇವರ ವಿವಾಹ ಸಮಾರಂಭವು ತಾ. 23-4-39ರಲ್ಲಿ ಜರಗಿತು. ಈ ವಧೂವರರಿಗೆ ಶುಭವನ್ನು ಹಾರೈಸುವೆವು.

ಅಳಿಯ ಸಂತಾನ ಸುಧಾರಣಾ ಪರಿಷತ್ತು

ಇದೇ ತಾ. ೨೩ಕ್ಕೆ ಜರಗುವುದು.

ಶ್ರೀ. ಬಿ. ಸೀತಾರಾಮರಾಯರು ಪರಿಷತ್ತನ್ನು ತೆರೆಯುವರು.

ಶ್ರೀ. ಕೆ. ಬಿ. ಜಿನರಾಜ ಹೆಗ್ಡೆಯವರು ಪರಿಷತ್ತಿನ ಅಧ್ಯಕ್ಷತೆ ವಹಿಸುವರು.

ಮೊದಲೇ ಪ್ರಕಟವಾದಂತೆ ಈ ಪರಿಷತ್ತು ಮಂಗಳೂರಿನಲ್ಲಿ ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗಲಿರುವುದು. ಮದ್ರಾಸಿನ ಗವರ್ನಮೆಂಟ್ ಪ್ಲೀಡರರೂ, ಪ್ರಖ್ಯಾತ ವಕೀಲರೂ, ಅಳಿಯ ಸಂತಾನ ಮಸೂದೆಯನ್ನು ತಯಾರಿಸುವುದರಲ್ಲಿ ಪ್ರಮುಖ ಭಾಗ ವಹಿಸಿದವರೂ ಆದ ಶ್ರೀ. ಬಂಟ್ವಾಳ ಸೀತಾರಾಮರಾಯರು ಪರಿಷತ್ತನ್ನು ತೆರೆಯಲಿರುವರು. ಅವರ ಅನುಕೂಲತೆಯ ಬಗ್ಗೆ ಪರಿಷತ್ತಿನ ದಿನವನ್ನು ತಾ. ೨೩ರಂದಕ್ಕೆ ಮುಂದುವರಿಸಲಾಗಿದೆ. ಪರಿಷತ್ತಿನ ವಿಷಯನಿಯಾಮಕ ಸಭೆಯು ತಾ. ೨೨ನೇ ಸಂಜೆ ಘಂಟೆ ೫ಕ್ಕೆ ಸೇರಲಿರುವುದು.

ಹಿಂದೆ ಪ್ರಕಟವಾದಂತೆ ಕೆಲವೊಂದು ಅನಾನುಕೂಲತೆಗಳಿಂದ ದಿವಾನ್ ಬಹದೂರ್ ಬಿ. ಎಮ್. ಹೆಗ್ಡೆಯವರಿಗೆ ಅಧ್ಯಕ್ಷತನ ವಹಿಸಲಾಗುವುದಿಲ್ಲೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಬದಲಿಗೆ ಡಿಲ್ಲಿ ಎಸೆಂಬ್ಲಿಯ ಮೆಂಬರರೂ ಅಳಿಯಸಂತಾನ ಸುಧಾರಣೆಯ ಕುರಿತು ಶ್ರಮಿಸಿ ಸುಧಾರಣಾ ಮಸೂದೆಯ ಕುರಿತು ಚೆನ್ನಾಗಿ ಅನುಭವವುಳ್ಳವರೂ ಆದ ಶ್ರೀ. ಕೆ. ಬಿ. ಜಿನರಾಜ ಹೆಗ್ಡೆಯವರು ಪರಿಷತ್ತಿನ ಅಧ್ಯಕ್ಷತೆ ವಹಿಸುವರು. ಶ್ರೀಗಳಾದ ರಾವ್ ಬಹದ್ದೂರ್ ಎಸ್. ಎಸ್. ಸುವರ್ಣ ಮತ್ತು ಜಿ. ಎ. ಪುತ್ರನವರು ಸ್ವಾಗತ ಸಮಿತಿಯ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟಿರುತ್ತಾರೆ.

ಪರಿಷತ್ತಿನ ಸ್ವಾಗತ ಸಮಿತಿಗೆ ರೂ. ೫ ಮತ್ತು ೧ ಕೊಟ್ಟು ಯಾವದಾದರೊಂದು ವರ್ಗದ ಮೆಂಬರರಾಗಿ ಸೇರಬಹುದು. ಸ್ವಾಗತ ಸಮಿತಿ ಮೆಂಬರರು ವಿಷಯನಿಯಾಮಕ ಸಮಿತಿಯ ಮೆಂಬರರಾಗುವರು. ಪ್ರತಿನಿಧಿ ಹಾಸಲು ಅಣೆ ಇವರಿಗೆ ಮಾತ್ರ ಓಟುಕೊಡುವ ಹಕ್ಕಿರುವುದು. ಪ್ರತಿನಿಧಿಗಳೇ ಮೊದಲಾದವರಿಗೆಲ್ಲಾ ಉಪಹಾರ ಮತ್ತು ಭೋಜನದ ವ್ಯವಸ್ಥೆ ಮಾಡಲಾಗಿದೆ.

ತಾ. ೨೩ನೇ ರಾತ್ರಿ ೧೦ ಗಂಟೆಯ ಸಮಯಕ್ಕೆ ಶ್ರೀಗಳಾದ ಕವಿಭೂಷಣ ಕೆ. ಪಿ. ವೆಂಕಪ್ಪ ಸೆಟ್ಟಿ, ಪೊಳಲಿ ಶಂಕರನಾರಾಯಣಶಾಸ್ತ್ರಿ, ಅಕ್ಕಳ ಸುಬ್ರಾಯ ಆಚಾರಿ, ಎಸ್. ಎಸ್. ಶೆಟ್ಟಿ, ರಾಮಕೃಷ್ಣ ಶಾಸ್ತ್ರಿ, ಎಫ್. ಎಚ್. ಒಡೆಯರ್, ಮೊದಲಾದ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ ಸುಧನ್ವಕಾಳಗ ಯಕ್ಷಗಾನ ತಾಳಮದ್ದಲೆಯ ಏರ್ಪಾಡು ನಡೆದಿರುವುದು. ಶ್ರೀ. ವೆಂಕಪ್ಪ ರೈಗಳು ಭಾಗವತಿಕೆ ವಹಿಸಿರುವರು. ಅಳಿಯ ಸಂತಾನ ಸಮಾಜಕರೆಲ್ಲಾ ಈ ಪರಿಷತ್ತಿನಲ್ಲಿ ಭಾಗವಹಿಸಿ ಪರಿಷತ್ತನ್ನು ಜಯಗೊಳಿಸಬೇಕಾಗಿ ವಿನಂತಿ. ಪರಿಷತ್ತಿನ ಮುಂದೆ ತರುವ ನಿರ್ಣಯಗಳನ್ನೂ ಧನಸಹಾಯವನ್ನೂ, ಪರಿಷತ್ತಿನ ಕಾರ್ಯದರ್ಶಿ, ರಾಮಕೃಷ್ಣ ವಿದ್ಯಾರ್ಥಿಭವನ, ಮಂಗಳೂರು, ಇವರಿಗೆ ಕಳುಹಿಸಬೇಕಾಗಿ ವಿಜ್ಞಾಪನೆ.

ಬಡಿಲ ಐತಪ್ಪ ಶೆಟ್ಟಿ,
ಸ್ವಾಗತ ಸಮಿತಿ ಅಧ್ಯಕ್ಷ.

ನೋಟೀಸು.

ದಿ ಬಿಲ್ಲವರ ಎಸೋಸಿಯೇಶನ್ ಮುಂಬಾಯಿ.

ವಿದ್ಯಾರ್ಥಿವೇತನ.

ಇದು ಬಿಲ್ಲವ ಜಾತಿಯ ಬಡ ವಿದ್ಯಾರ್ಥಿಗಳಿಗೆ ಮಾತ್ರ. ಈ ಕೆಳಗಿನ ಸಂಸ್ಥೆಯಿಂದ ವೇತನವನ್ನು ಅಪೇಕ್ಷಿಸುವ ಬಿಲ್ಲವ ಬಡ ವಿದ್ಯಾರ್ಥಿಗಳು ಬರುವ ತಾರೀಕು 30-6-1939ರ ಒಳಗೆ ಈ ಕೆಳಗೆ ನಮೂದಿಸಿದ ಪ್ರಶ್ನೆಗಳ ಉತ್ತರ ಸಮೇತ ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ವೇತನವನ್ನು ಪಡೆಯಲು ಅರ್ಹರೆಂದು ಕಂಡು ಬಂದವರಿಗೆ ವೇತನವನ್ನು ಕೊಡಲಾಗುತ್ತದೆ. ಆದರೆ ಈ ವರ್ಷ ಕಾಲೇಜು ವಿದ್ಯಾಭ್ಯಾಸಕ್ಕೆ ವೇತನವನ್ನು ಕೊಡಲಾಗುವುದಿಲ್ಲ.

1. ವಿದ್ಯಾರ್ಥಿಯ ಸಂಪೂರ್ಣ ಹೆಸರು, 2. ತಂದೆ ಯಾ ರಕ್ಷಕನ ಹೆಸರು, ವಿಳಾಸ, ವೃತ್ತಿ ಮತ್ತು ವರ್ಷಾವಧಿ ಉತ್ಪತ್ತಿ. 3. ಇತರ ಸಂಬಂಧಿಕರ ಹೆಸರು ಮತ್ತು ವಿಳಾಸ, 4. ಕಲಿಯುತ್ತಕ್ಕ ದರ್ಜೆ ಮತ್ತು ಶಾಲೆಯ ಹೆಸರು, 5. ಕಳೆದ ಪರೀಕ್ಷೆಯ ಮಾರ್ಕ ಪಟ್ಟಿ, 6. ಶಾಲಾ ಸಂಬಳ, 7. ವಿದ್ಯಾರ್ಥಿಯ ಗುಣನಡತೆಯ ವಿಷಯ ಶಾಲಾ ಮುಖ್ಯೋಪಾಧ್ಯಾಯರ ಶಿಫಾರಸು ಪತ್ರ, 8. ವೇತನವನ್ನು ಪಡೆಯಲು ಅರ್ಹನೆಂಬುದರ ಕುರಿತು ಊರಿನ ಮೆಜಿಸ್ಟ್ರೇಟರ ಅಥವಾ ಪ್ರಸಿದ್ಧ ವಕೀಲರ ಒಂದು ಪತ್ರ.

To,
The Hon General Secretary,
The Billawar Association,
C/o Messrs: Daphtary, Ferreira & Diwan,
13-19 Medows street, Fort, BOMBAY.

ಮೂಲ್ಕಿ ಬಂದರದ ಸ್ಟೀಮರು ಏಜಂಟರಿಗೆ ಮುಂಬಾಯಿಯಲ್ಲಿ ಸತ್ಕಾರ—ಮೂಲ್ಕಿ ಬಂದರದ ಏಜಂಟರುಗಳಾದ ಮಹಮ್ಮದ ಸಾಹೇಬರು ಮತ್ತು ಶ್ರೀ ದೂಮ ಬಸಪ್ಪನವರು ಬಂದರದ ಮತ್ತು ಜನತೆಯ ಅಭ್ಯುದಯಕ್ಕಾಗಿ ನಿತ್ಯವೂ ಮಾಡುತ್ತಿರುವ ಸಾಹಸವು ಅವರನ್ನು ಜನಪ್ರೀತರನ್ನಾಗಿ ಮಾಡಿರುವುದಷ್ಟೆ! ಅವರಲ್ಲಿ ಮಹಮ್ಮದ ಸಾಹೇಬರು ತಾ. 30-4-39ರಲ್ಲಿ ಮುಂಬಾಯಿಯ ಶಹರಿಗೆ ಬಂದು ತಾ. 9-5-39ರಲ್ಲಿ ಮೂಲ್ಕಿಗೆ ಹಿಂತಿರುಗಿರುವರು. ಮುಂಬಾಯಿಯ ಮೂಲ್ಕಿ ಪೋರ್ಟ್ ಕಮಿಟಿಯವರು ಅವರನ್ನು ಸ್ವಾಗತೀಕರಿಸುವುದಕ್ಕಾಗಿ ತಾ. 7-5-39ರಲ್ಲಿ ಕಮಿಟಿಯ ಸಂಯುಕ್ತ ಕಾರ್ಯದರ್ಶಿಯವರಾದ ಶ್ರೀಯುತ ಎಸ್. ಪಿ. ಸನಿಲರ ಮನೆಯಲ್ಲಿ ಸತ್ಕಾರಕೂಟವನ್ನು ಏರ್ಪಡಿಸಿದ್ದರು.

ನೆರೆದವರಲ್ಲಿ ಶ್ರೀಯುತರುಗಳಾದ ಬಿ. ನಾರಾಯಣರಾಯರು (ಅಧ್ಯಕ್ಷರು), ಬಾಸಪ್ಪ ಚಂಪನವರು, ಎಸ್. ಪಿ. ಸನಿಲರು (ಸಂಯುಕ್ತ ಕಾರ್ಯದರ್ಶಿಗಳು), ಎಚ್. ಕೆ. ಎ. ಕುಂದರನ್, ಎಚ್. ನೀಲಕಾಂತ್ ಮತ್ತು ಎ. ಕೆ. ಕೋಟಿಯನರು (ಕಮಿಟಿ ಸದಸ್ಯರು) ಏಜಂಟರುಗಳು ಬಂದರದ ಶ್ರೇಯಸ್ಸಿಗಾಗಿ ಮಾಡುತ್ತಿರುವ ಕಷ್ಟ ಸಾಹಸಗಳನ್ನು ಅಲ್ಲದೆ ತ್ಯಾಗಶೀಲ ಕಾರ್ಯಗಳನ್ನು ಪ್ರಶಂಸಿಸಿ ದೀರ್ಘ ಭಾಷಣಗಳನ್ನಿತ್ತರು.

ಮಹಮ್ಮದ ಸಾಹೇಬರು ಮುಂಬಾಯಿ ಕಮಿಟಿಯ ಆದರಾತಿಥ್ಯವನ್ನು ಹೊಗಳಿ, ಆದರ ಸ್ವೀಕಾರವು ತಮ್ಮನ್ನು ಇನ್ನಷ್ಟು ಜನಸೇವೆಗೆ ಸಜ್ಜುಗೊಳಿಸಲೆಂದು ದೇವರಲ್ಲಿ ಪ್ರಾರ್ಥಿಸಿದರು. ಕೊನೆಯದಾಗಿ ಮುಂಬಾಯಿ ಕಮಿಟಿಯ ಪ್ರತಿನಿಧಿಯಾಗಿ ಕಳೆದ ತಿಂಗಳಲ್ಲಿ ಊರಿಗೆ ಹೋಗಿದ್ದ ಶ್ರೀಯುತ ಹೆಜಮಾಡಿ ಬಾಬಪ್ಪ ಚಂದನರನ್ನು ಏಜಂಟರುಗಳ ಮತ್ತು ಕಮಿಟಿಯ ಪ್ರಮುಖತ್ವದಲ್ಲಿ ಮೂಲ್ಕಿಯ ಪುರಜನರು ಸ್ವಾಗತೀಕರಿಸಿ ನಡೆಸಿದ ಸಮಾರಂಭಕ್ಕಾಗಿ ಅವರನ್ನು ಅಭಿನಂದಿಸಿ ಸಭೆಯು ಅಪರಾಹ್ನ ಒಂದು ಗಂಟೆಗೆ ಅತಿ ಉಲ್ಲಾಸದಿಂದ ಅಂತ್ಯವಾಯಿತು.

ಶ್ರೀರಾಮಾ ರೆಸ್ಟೊರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಕಾಶೀಮಠದ ಕಟ್ಟಣ, ಉಡುಪಿ

ಬ್ರಾಂಚ್:—ಹೂವಿನಮಾರ್ಕೆಟಿನ ಬಳಿ, ಮಂಗಳೂರು.

ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ.

ಪ್ರೊಪ್ರೈಟರ್:— ಎಚ್. ಗೋಪಾಳ ನಾಯಕ್.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕೋಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

New Kanara Swadeshi Laundry,
GAMDEVI, BOMBAY.
A reliable house for dry cleaning deing all sorts of rich garments.

ದಿ ನ್ಯೂ ಕೆನರಾ ಸ್ವದೇಶಿ ಲಾಂಡ್ರಿ,
ಗಾಮದೇವಿ — ಮುಂಬಾಯಿ.

ಉತ್ತಮ ತರದ ಮಡಿ, ಉತ್ಕೃಷ್ಟ ರೀತಿಯ ರಂಗು—
ಇವುಗಳಿಗೆ ಪ್ರಸಿದ್ಧವಾದ ನಿಲಯ.

ವಿ. ಸೂ.—ಪರವೂರುಗಳಿಂದ ಉತ್ತಮ ಜರತಾರಿ ಸೀರೆ, ವಸ್ತ್ರ ಮುಂತಾದ ಉಡಿಗೆಗಳ ರಂಗು ಹಾಕುವ, ಡ್ರೈಕ್ಲೀನಿಂಗ್ ವಗೈರೆ ಕಾರ್ಯವನ್ನು ಟಪ್ಪಾಲು ದ್ವಾರಾ ಸ್ವೀಕರಿಸಿ ಸಕಾಲದಲ್ಲಿ ತಯಾರಿಸಿ ತಲುಪಿಸುವೆವು.

ಎಮ್. ಆರ್. ಶೆಟ್ಟಿ, ಪ್ರೊಪ್ರೈಟರ್. **G. Y. Mahale.** Manager.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ಶುದ್ಧರಕ್ತವನ್ನು ವೃದ್ಧಿ ಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತವೆ. ಕ್ರಯ ಡಬ್ಬಿ ೧ಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡ ತೊಡಗುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತಮೈಥುನದಿಂದಲೂ ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತು ಹಾಕುವದೇ ಈ ತೈಲದ ಉತ್ಕೃಷ್ಟ ಗುಣ. ಜನನೇಂದ್ರಿಯದ ಬಿಗಿ ತಪ್ಪಿಹೋದ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದವರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧತೊಲೆ ಸೀಸೆ ೧ಕ್ಕೆ ರೂ. 5—0—0

'ಕಾಮಶಾಸ್ತ್ರ' ಪುಸ್ತಕ ಪ್ರತಿಯನ್ನು ಪ್ರೀಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೩೪ ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಶ್ರೀ ಜಯಚಾಮರಾಜ ಒಡೆಯರವರ ಭಾಷಣ

ಬೆಂಗಳೂರಲ್ಲಿ ೩೦ ೧೯೩೩ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ನಡೆದ ವಸಂತ ಸಾಹಿತ್ಯೋತ್ಸವವನ್ನು ಸಮಾರಂಭಗೊಳಿಸುವಾಗ್ಗೆ

ಮೈಸೂರು ಶ್ರೀಮದ್ಯುವರಾಜಕುಮಾರರಾದ ಶ್ರೀ ಜಯಚಾಮರಾಜ ಒಡೆಯರು

ಕೊಟ್ಟ ಭಾಷಣವನ್ನು ಈ ಕೆಳಗೆ ಕೊಡಲಾಗಿದೆ.

ಉಪಾಧ್ಯಕ್ಷರೇ, ಮಹಿಳೆಯರೇ ಮತ್ತು ಮಹಾಶಯರೇ,

ಕನ್ನಡ ಸಾಹಿತ್ಯ ಪರಿಷತ್ತಿನ ಆರನೆಯ ವಸಂತ ಸಾಹಿತ್ಯೋತ್ಸವವನ್ನು ಸಮಾರಂಭಗೊಳಿಸುವುದಕ್ಕಾಗಿ ನಾವು ಅತ್ಯಂತ ಸಂತೋಷದಿಂದ ಇಲ್ಲಿಗೆ ಬಂದಿರುವೆವು. ಇಂದಿನ ಉತ್ಸವದಲ್ಲಿ ನಿಮ್ಮೊಡನೆ ಸೇರುವ ಅವಕಾಶವನ್ನು ಕಲ್ಪಿಸಿಕೊಟ್ಟುದಕ್ಕಾಗಿ ಪರಿಷತ್ತಿನವರಿಗೆ ನಮ್ಮ ವಂದನೆಗಳು ಸಲ್ಲಬೇಕಾಗಿವೆ.

ಭಾಷಾಭಿಮಾನಿಗಳೂ ವಿದ್ವಾಂಸರೂ ಉತ್ಸಾಹಶಾಲಿಗಳೂ ಆದ ಅನೇಕ ಮಂದಿ ಮಹಾಶಯರುಗಳು ಸ್ವಾರ್ಥರಹಿತವಾದ ಸೇವೆಯನ್ನು ಸಲ್ಲಿಸಿ ಶ್ರಮಿಸಿದುದರ ಫಲವಾಗಿ ಸುಮಾರು ಕಾಲು ಶತಮಾನದ ಪರಿಮಾಣದಲ್ಲಿ ಈ ಪರಿಷತ್ತು ಕನ್ನಡ ನಾಡಿನಲ್ಲೆಲ್ಲ ಪ್ರಖ್ಯಾತವಾಗಿ ಅಖಿಲಕರ್ನಾಟಕ ಸಂಸ್ಥೆಯಾಗಿ ಬಹಳ ಉನ್ನತಸ್ಥಿತಿಗೆ ಬಂದಿದೆ. ಕನ್ನಡನಾಡಿನ ನಾನಾ ಭಾಗಗಳ ಜನರಿಗೂ ಪರಸ್ಪರ ಪ್ರೀತಿವಿಶ್ವಾಸಗಳುಂಟಾಗಿ ವೃದ್ಧಿ ಹೊಂದುತ್ತ ಬಂದಿರುವುದಕ್ಕೆ ಪರಿಷತ್ತಿನಿಂದಲೂ ಕೃಷಿ ನಡೆದಿದೆಯೆಂದರೆ ಬಹುಶಃ ಅತಿಶಯೋಕ್ತಿಯಾಗಲಾರದೆಂದು ನಾವು ಭಾವಿಸಿದ್ದೇವೆ.

ಜನಜೀವನದ ಸಮಸ್ತ ಕಾರ್ಯಕ್ಷೇತ್ರಗಳಲ್ಲಿಯೂ ಅತ್ಯಂತ ಹೆಚ್ಚಿನ ಕಾರ್ಯಸಿದ್ಧಿಯನ್ನು ಪಡೆದಿದ್ದವರು ನಮ್ಮ ಕನ್ನಡಿಗರು. ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನು ಹೇಳಿರುವಂತೆ ಕನ್ನಡನಾಡು ಕಾವೇರಿಯಿಂದ ಗೋದಾವರಿಯ ವರೆಗೆ ವ್ಯಾಪಿಸಿದ್ದುದಲ್ಲದೆ, ಕನ್ನಡಿಗರು ನಯವಿನಯಗಳಿಗೂ ವಿಮರ್ಶಾಸಾಮರ್ಥ್ಯಕ್ಕೂ ಪ್ರಖ್ಯಾತರಾಗಿದ್ದರು. ಧರ್ಮೋದ್ಧಾರಕರಾದ ಶ್ರೀ ಶಂಕರಾಚಾರ್ಯರು, ಶ್ರೀ ರಾಮಾನುಜಾಚಾರ್ಯರು, ಶ್ರೀ ಮಧ್ವಾಚಾರ್ಯರು, ಶ್ರೀ ಬಸವೇಶ್ವರರು ಕನ್ನಡ ನಾಡಿನಲ್ಲಿ ಪೀಠವನ್ನು ಸ್ಥಾಪಿಸಿದವರು, ಅಥವಾ ಇಲ್ಲಿಯೇ ಜನ್ಮವೆತ್ತಿದವರು. ದಕ್ಷಿಣ ಭಾರತದಲ್ಲೆಲ್ಲ ಇಂದಿಗೂ ಆದರಕ್ಕೆ ಪಾತ್ರವಾಗಿರುವುದು ಕನ್ನಡಿಗರಾದ ಪುರಂದರದಾಸರೇ ಮುಂತಾದ ಮಹನೀಯರ ಸಾಧನೆಯ ಸತ್ಫಲವಾದ ಸಂಗೀತವೇ. ಸೋಮನಾಥಪುರ, ಹಳೇಬೀಡು, ಬೇಲೂರು, ಶ್ರವಣಬೆಳಗೊಳ, ಕಾರ್ಕಳ, ಬಾದಾಮಿ, ಹಂಪೆ ಮುಂತಾದ ಸ್ಥಳಗಳಲ್ಲಿರುವ ಶಿಲ್ಪಕಲಾಭಂಡಾರವು ಇಂದಿಗೂ ಸಹೃದಯರ ಮನಸ್ಸನ್ನು ಸೆಳೆದು ಅಚ್ಚರಿಗೊಳಿಸುತ್ತಿದೆ. ಅಜಂತದ ಚಿತ್ರಕಲೆಯನ್ನು ನೋಡಿ ಬೆರಗಾಗದವರಾರೂ ಇಲ್ಲ. ಕನ್ನಡಿಗರ ಸಾಹಿತ್ಯಸಂಪತ್ತೂ ಶ್ಲಾಘನೆಗೆ ಅರ್ಹವಾಗಿದೆ. ಪ್ರಕೃತಿ ಸೌಂದರ್ಯದಲ್ಲಿ ಸಹ ಕನ್ನಡನಾಡು ಮೇಲ್ಮೆಯನ್ನು ಹೊಂದಿದೆ.

ಹೀಗೆ, ಒಮ್ಮೆ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕನ್ನಡನಾಡಿನಲ್ಲಿ ಮತ್ತೊಮ್ಮೆ ಅಭ್ಯುದಯ ಸಾಧನೆಯ ಅರುಣೋದಯವು ಬೆಳೆಯುತ್ತಿರುವುದನ್ನು ಕಂಡು ಹರ್ಷಿಸಬಹುದಾಗಿದೆ.

ಸಂಸ್ಕೃತಿಯ ದೃಷ್ಟಿಯಿಂದ ಕನ್ನಡಿಗರೆಲ್ಲ ಒಂದಾಗಬೇಕಾದುದು ಅತ್ಯಂತ ಆವಶ್ಯಕ. ನಾಡಿನ ಅಭ್ಯುದಯ ಸಾಧನೆಗೆ ಅದು ತೀರ ಅಗತ್ಯ. ನಾವೆಲ್ಲ ಒಬ್ಬಳೇ ಕನ್ನಡ ತಾಯಿಯ ಮಕ್ಕಳೆಂಬುದನ್ನು ಎಷ್ಟು ಬೇಗ ಮನಗಂಡು ಅದಕ್ಕನುಸಾರವಾಗಿ ವರ್ತಿಸಿದರೆ ಅಷ್ಟು ಅನುಕೂಲ.

ನಮ್ಮ ನಾಡು ಮುಂದಕ್ಕೆ ಬರಬೇಕಾದರೆ ತಾಯಿ ನುಡಿಯಾದ ಕನ್ನಡ ಭಾಷೆಯ ಬೆಳವಣಿಗೆ ಬಹು ಮುಖ್ಯವಾದ ಅಂಶವಾಗಿದೆ. ನಮ್ಮ ಜನರಲ್ಲಿ ತಿಳಿವಳಿಕೆಯು ಹೆಚ್ಚಿ ನಮ್ಮ ಸಾಹಿತ್ಯವು ಎಷ್ಟೆಷ್ಟು ಹೆಚ್ಚಾಗಿ ಅಭಿವೃದ್ಧಿ ಹೊಂದಿದರೆ ಅಷ್ಟಷ್ಟು ಬೇಗ ನಮ್ಮ ಸಂಸ್ಕೃತಿಯೂ ವೃದ್ಧಿ ಹೊಂದುತ್ತದೆ. ಜನರ ತಿಳಿವಳಿಕೆಯನ್ನು ಹೆಚ್ಚಿಸಲು ಇಂಥ ಉತ್ಸವಗಳಿಂದ ಬಹಳ ಸಹಾಯವಾಗುತ್ತದೆ. ಈ ಉತ್ಸವವನ್ನು ಬೆಂಗಳೂರು ನಗರದಲ್ಲಿ ಮಾತ್ರವೇ ಅಲ್ಲದೆ ಪರಿಷತ್ತಿನ ಪ್ರಾಂತಕ್ಕೊಂದರಂತೆ ಬೇರೆ ನಾಲ್ಕು ಸ್ಥಳಗಳಲ್ಲಿಯೂ ನಡೆಸುತ್ತಿರುವುದು ಮತ್ತಷ್ಟು ಸಂತೋಷಕರವಾದ ಅಂಶ.

ಈ ವಸಂತ ಸಾಹಿತ್ಯೋತ್ಸವದ ಅಂಗವಾಗಿ ಪುಸ್ತಕ ಪ್ರದರ್ಶನ, ಕರ್ಣಾಟಕ ಸಂಘಗಳ ಸಮ್ಮೇಳನ, ಲೇಖಕಗೋಷ್ಠಿ ಮುಂತಾದುವು ನಡೆವುದೂ ಪ್ರಯೋಜನಕರವಾಗಿದೆ. ಪರಿಷತ್ತು ಇಂಥ ಉದ್ಯಮಗಳನ್ನು ಕೈಕೊಂಡು ಭಾಷಾಸೇವೆ ಮಾಡುತ್ತಿರುವುದನ್ನು ಕಂಡು ನಮಗೆ ವಿಶೇಷ ಹರ್ಷವುಂಟಾಗಿದೆ. ಸ್ತ್ರೀಯರೂ ಕನ್ನಡ ಸೇವೆಯಲ್ಲಿ ಮುಂದುವರಿಯುತ್ತಿರುವುದು ನಮಗೆ ಸಂತೋಷಕರವಾಗಿದೆ. ಪರಿಷತ್ತಿನ ಸೇವಾವಕಾಶವನ್ನು ಇನ್ನೂ ಹೆಚ್ಚಿಸಲು ಅನುಕೂಲಿಸುವಂತೆ ಮಹಾಜನರಿಂದ ಪ್ರೋತ್ಸಾಹವೂ ಸಹಾಯವೂ ಮತ್ತಷ್ಟು ಅಧಿಕವಾಗಿ ದೊರೆಯುವುದೆಂದು ನಾವು ನಂಬಿದ್ದೇವೆ.

ಮಹಿಳೆಯರೇ ಮತ್ತು ಮಹಾಶಯರೇ, ಈ ವಸಂತಸಾಹಿತ್ಯೋತ್ಸವದ ಕಾರ್ಯಕಲಾಪಗಳು ಇನ್ನು ಆರಂಭವಾಗಬಹುದೆಂದು ಸಂತೋಷದಿಂದ ಅನುಜ್ಞೆಯನ್ನು ಕೊಟ್ಟಿರುವೆವು. ಪುಸ್ತಕ ಪ್ರದರ್ಶನವನ್ನು ತೆರೆದಿರುವೆವು. ಉತ್ಸವವು ಸಾಂಗವಾಗಿ ನೆರವೇರಿ, ಅದರಿಂದ ವಿಶೇಷ ಪ್ರಯೋಜನವಾಗಲೆಂಬುದೇ ನಮ್ಮ ಹೃತ್ಪೂರ್ವಕವಾದ ಹಾರೈಕೆಯಾಗಿದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ ಆಫೀಸು: ಉಡುಪಿ.

ಪ್ರಥಮ ಮೌಲ್ಯಮಾಪನ (Valuation) ದಲ್ಲಿಯೇ ಪಾಲಿಸಿದಾರರಿಗೆ ಲಾಭ (Bonus) ಹಂಚಿಯದೆ.

ಹೋಲ್ ಲ್ಯಾಫ್ (Whole Life) ಪಾಲಿಸಿಗಳಿಗೆ ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 15/-	ಎಂಡೊವ್‌ಮೆಂಟ್ (Endowment) ಪಾಲಿಸಿಗಳಿಗೆ ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/-

ಅಖಿಲ ಕರ್ಣಾಟಕದಲ್ಲಿ ಪಾಲಿಸಿದಾರರದೇ ಆದ ವಿಮಾಸಂಸ್ಥೆ ಇದೊಂದೇ.

ಲಾಭಾದಾಯದ ಪ್ರತಿ ಅಂಶವೂ ಪಾಲಿಸಿದಾರರಿಗೇ ಹಂಚಲ್ಪಡುತ್ತದೆ.

ಈಗಿಂದೀಗಲೇ ಈ ಕಂಪೆನಿಯಲ್ಲಿ ವಿಮೆ ಇಳಿಸಿ ವಿಮೆಯ ಸಂಪೂರ್ಣ ಪ್ರಯೋಜನವನ್ನು ಹೊಂದಿರಿ.

ಏಜಂಟರಾಗಬಯಸುವವರು ಕಂಪೆನಿಯ ಹೆಡ್ ಆಫೀಸಿಗೆ ಬರಕೊಳ್ಳುವುದು.

THE CANARA MUTUAL ASSURANCE COMPANY LTD.

ಕರಾಮಾತೀ ದರ್ಪಣ

ಇದೊಂದು ಉಚ್ಚ ತರದ ಕನ್ನಡಿ. ಯಾವ ವಯಸ್ಸಿನವರೂ ಇದನ್ನು ನೋಡಬಹುದು ಕದ್ದು ಹೋದ ಮಾಲು ಎಲ್ಲಿದೆ? ಕಾಯಿಲೆ ಗುಣವಾದೀತೆ? ಇಲ್ಲವೆ? ದರಿದ್ರ ಪರಿಹಾರ ಮಾರ್ಗ ಯಾವುದು? ಹೂಳಿಟ್ಟ ನಿಧಿ ಎಲ್ಲಿದೆ? ಇಷ್ಟದ ಕೆಲಸ ಕೈಗೂಡುವುದೆ? ಪ್ರೇಮ ಕಾರ್ಯ, ಪರೀಕ್ಷೆಗಳು, ಕೋರ್ಟು ವ್ಯವಹಾರಾದಿಗಳಲ್ಲಿ ವಿಜಯ ದೊರೆಯುವುದೇ? ಎಂಬುದನ್ನೆಲ್ಲ ಈ ಕನ್ನಡಿಯಿಂದ ತಿಳಿಯಬಹುದು ಸ್ವರ್ಗಸ್ಥ ಮಾತಾಪಿತೃ, ಪುತ್ರಕಳತ್ರ, ಮಿತ್ರಬಾಂಧವರುಗಳೆಲ್ಲರ ಭೇಟಿಮಾಡಬಹುದು. ನೀವು ನೋಡದ, ಸ್ವಪ್ನದಲ್ಲಿಯೂ ನೋಡಲಸಾಧ್ಯವಾದವರನ್ನು ಸಹ ನೋಡಬಹುದು ಈ ಕನ್ನಡಿಯಲ್ಲಿ ಬೆಲೆ ರೂ ೨—೮—೦

ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಇಂಗ್ಲಿಷಿನಲ್ಲೇ ಬರೆಯಿರಿ.

ದೊರೆಯುವ ಸ್ಥಳ:—

ಅಮೇರಿಕನ್ ಮೆಸ್ಮೆರಿಸಂ ಹೌಸ್,
ಪೋಸ್ಟ್ ಬಾಕ್ಸ್ ನಂ ೨೭,
(N Y U) ಅಮೃತಸರ [ಇಂಡಿಯಾ]

AMERICAN MISMERISUM HOUSE,
Post Box No 27
(N.Y.U.) Amritsar.
(INDIA)

ಲೂಟಿ! ಲೂಟಿ!! ಖಾಲಿ ೩ ರೂಪಾಯಿಗೆ ಹೊಸ ವರ್ಷಕ್ಕೆ

ಅಚ್ಚಾದ ಹೊಸ ನಮೂನೆ
ಒಂದು ಮಾಸದ ವರೆಗೆ ಮಾತ್ರ ವಿಕ್ರಯ ಆಗುತ್ತದೆ



ಶೀಘ್ರ ವಿಕ್ರಯ ಆಗುತ್ತಿದೆ. ವಿಳಂಬ ಮಾಡಿದರೆ ಪಶ್ಚಾತ್ತಾಪ ಪಡಬೇಕಾದೀತು.

ತಾಜಾ ಅಮೆರಿಕನ್ ಅಲಾರ್ಮು ಪಿಸ್ತೂಲು

ಹೆಚ್ಚು ಸಂಖ್ಯೆಯಲ್ಲಿ ಕೊಂಡುಕೊಂಡರೆ ಧಾರಾಳ ಕಮಿಷನು ಇದೆ ಚಿತ್ರದಲ್ಲಿರುವಂತೆ 7 ಇಂಚು ಉದ್ದ 1½ ಪೌಂಡು ಭಾರ, ನೋಡಿದೊಡನೆ ವೈರಿಗಳು ಘಾತರಾಗುವರು ಕಳ್ಳಕಾಕರು, ದುಷ್ಟ ಮೃಗಗಳು ಭಯಂಕರ ಶಬ್ದ ಕೇಳಿ ಪಲಾಯನ ಮಾಡುವವು ಕೂಡಲೇ ಕೊಂಡುಕೊಂಡು ನಿಮ್ಮ ಒಡವೆಗಳನ್ನೂ ಆತ್ಮವನ್ನೂ ರಕ್ಷಿಸಿಕೊಳ್ಳಿರಿ. ಲೈಸನ್ಸಿಲ್ಲದೆ ಪ್ರತಿಯೊಬ್ಬನೂ ಉಪಯೋಗಿಸಬಹುದು ಇದರೊಂದಿಗೆ 300 ಗುಂಡುಗಳು ಉಚಿತ 50 ಗುಂಡುಗಳನ್ನು ಏಕ ದಂ ಹೊಡೆಯುವ ಪಿಸ್ತೂಲಿಗೆ ರೂ. 3/-. ಒಂದೇ ಸಲ 70ಗುಂಡುಬಿಡುವುದಕ್ಕೆ ರೂ 3/8- 200 ಹಾರಿಸುವುದಕ್ಕೆ ರೂ 4/- ಅಂಚೆ ವೆಚ್ಚ ಬೇರೆ 1000 ಗುಂಡುಗಳಿಗೆ ರೂ 2/-ಎಣ್ಣೆ ಡಬ್ಬಿಗೆ 0-8 0 ಪಿಸ್ತೂಲಿನ ಸುಂದರ ಪೆಟ್ಟಿಗೆಗೆ ರೂ 1-8 0. (ನಿಮ್ಮ ಮತ್ತು ನಮ್ಮ ವಿಳಾಸವನ್ನು ಸ್ಪಷ್ಟ ಬರೆಯಿರಿ)

ದೊರೆಯುವ ಸ್ಥಳ:-

ಅಮೆರಿಕನ್ ಪಿಸ್ತೂಲು ಹೌಸ್.
ಪಿ. ಬಿ. ಬಾಕ್ಸ್ ನಂ 27
(N.Y.U) ಅಮೃತಸರ [ಇಂಡಿಯಾ]

American Pistol Co
P. B No 27 (N Y U)
Amritsar (India)

೧೦ ಗಡಿಯಾರಗಳು ಬರೇ ೩॥ ರೂಪಾಯಿಗೆ



ಏಳು ಪದ್ಮೀ ಕೈಯಾಟುಗಳು, ೬ ಜೇಬಿನ ಗಡಿಯಾರಗಳು, ಮತ್ತು ಒಂದು ಗಟ್ಟಿಯಂತ್ರದ ಸರಿ ಸಮಯ ತೋರಿಸುವ ಜರ್ಮನಿ ಟೈಂಪೀಸ್, ೩೦ ಗಂಟೆಗೊಮ್ಮೆ ಕೀ, ೧೦ ವರ್ಷದ ಗ್ಯಾರಂಟಿ ಈ ಗಡಿಯಾರವನ್ನು ವಿಲಾಯಿತಿಯಿಂದ ಹೆಚ್ಚು ಸಂಖ್ಯೆಯಲ್ಲಿ ತರಿಸಿದ್ದೇವೆ ಈ ರಿಯಾಯಿತಿ ದರದಲ್ಲಿ ಕೇವಲ ೧೦೦೦ ಗಡಿಯಾರಗಳನ್ನು ಮಾತ್ರವೇ ಮಾರುವುದು ತ್ವರೆ ಮಾಡಿರಿ ಸಂದರ್ಭ ತಪ್ಪಿಹೋದೀತು ಇದರೊಂದಿಗೆ ಗಿಲೆಟ್ ರೋಲ್ಡ್ ಗೋಲ್ಡ್ ಸೆಟ್ಟಿನ ಫೌಂಟನ್ ಪೆನು ಒಂದು, ದೃಷ್ಟಿಚಕ್ರ ಒಂದು, ಮುತ್ತಿನ ಹಾರ ಒಂದು—ಇಷ್ಟು ಉಚಿತ, ಅಂಚೆವೆಚ್ಚ ಬೇರೆ ಅತೃಪ್ತಿಯಾದರೆ ಹಣ ಹಿಂದೆ, ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ

ದೊರೆಯುವ ಸ್ಥಳ:—

ಜರ್ಮನ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ ೨೭
N.Y U.) ಅಮೃತಸರ [ಇಂಡಿಯಾ]

German Watch Co.
P. B No 27 (N.Y.U)
AMRITSAR, (India).

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ತಾ. 14-5-1939.

ರಾಜಕೀಯ ಕೈದಿಗಳ ದಿನಾಚರಣೆ— ಇದೇ ತಿಂಗಳ ತಾ 21ರಲ್ಲಿ ಮಂಗಳೂರಲ್ಲಿ ರಾಜಕೀಯ ಕೈದಿಗಳ ದಿನಾಚರಣೆಯು ನಡೆಯಲಿದೆ ಈ ಸಂಬಂಧವಾಗಿ ಸಭೆ ಜರಗಲಿದೆ ಅ. ಕ. ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಬರುವ ಬ್ಯಾರಿಸ್ಟರ್ ಎ. ಕೆ ಪಿಳ್ಳೆಯವರು ಅಧ್ಯಕ್ಷತೆ ವಹಿಸುವ ಆಂಥವ ಸಭೆ ದೇ. ಭ. ನಾರಾಯಣ ಶೆಟ್ಟಿಯರೂ, ಶ್ರೀ. ಕೆ ಕೆ ಶೆಟ್ಟಿಯವರೇ ಮೊದಲಾದ ಮಹನೀಯರು ಭಾಷಣವೀಯುವರು.

ಜಿಲ್ಲಾ ಬೋರ್ಡಿನ ವಿಶೇಷ ಸಭೆ— ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನವರು ಜಿಲ್ಲೆಯ ಬಸ್ಸು ಸರ್ವಿಸನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳಬೇಕೆಂಬ ಪ್ರಯತ್ನ ಆಲೋಚಿಸುವರೆ ಬೋರ್ಡಿನ ವಿಶೇಷ ಸಭೆಯೊಂದನ್ನು ಜರಗಿಸಬೇಕೆಂದು ಬೋರ್ಡಿನ ಉತ್ಸಾಹೀ ತರುಣ ಸದಸ್ಯರು ಸೂಚಿಸಿದ್ದಾರೆಂದು ತಿಳಿದುಬರುತ್ತದೆ.

ಜಿಲ್ಲಾ ನೇಕಾರಮಜೂರ ಸಂಘ— ಈ ಸಂಘದ ಪರಿಷತ್ತು ಕಳೆದ ತಾ. 7ರಲ್ಲಿ ಶ್ರೀ ಹೊಳ್ಳರ ಅಧ್ಯಕ್ಷತೆಯಲ್ಲಿ ಸೇರಿತು ನೇಕಾರ ಮಜೂರರ ಕುಲುಮಾಮಾಲಿಗಳನ್ನು ವಿಚಾರಿಸಲು ಸರಕಾರದವರು ವಿಚಾರಣೆ ನಡೆಸಬೇಕೆಂದು ಕೇಳಿಕೊಳ್ಳಲಾಯಿತು. ನೇಕಾರರ ಕನಿಷ್ಠ ಕೂಲಿಗಳು ಏನೆಂಬುದು ಸೂಚಿಸಲ್ಪಟ್ಟಿತು.

ಜಿಲ್ಲಾ ಪ್ರಥಮ ಮಜೂರ ಪರಿಷತ್ತು— ಕಳೆದ ತಾ 11ನೇ ಸಾಯಂಕಾಲ ಶ್ರೀ ಗೋವಿಂದರಾವ್ ಓಂ ಪ್ರಕಾಶ ಆಫೀಸಿನಲ್ಲಿ ಮಜೂರರ ಸಭೆ ಸೇರಿ ಜಿಲ್ಲೆಯಲ್ಲಿ ಒಂದು ಮಜೂರ ಪರಿಷತ್ತನ್ನು ಇದೇ ತಿಂಗಳ ತಾ 20 ಮತ್ತು 21ರಲ್ಲಿ ಜರಗಿಸಬೇಕೆಂದು ನಿರ್ಧರಿಸಲಾಗಿ ಸಕಲ ಸಿದ್ಧತೆಗಳನ್ನು ನಡೆಸಲು ಶ್ರೀ ಸರ್ವೋತ್ತಮ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತಸಮಿತಿಯು ಏರ್ಪಟ್ಟಿತು. ಈ ಸ್ವಾಗತ ಸಮಿತಿಯ ಕಾರ್ಯದರ್ಶಿಗಳು ಶ್ರೀ ಎಸ್. ಸರ್ವೋತ್ತಮ ಪೈಗಳು, ಶ್ರೀ. ಪಾಂಡುನಾಥ ಕಾಮತರು ಬೋಳಾರಿನವರು.

ತಾ 12ರಲ್ಲಿ ಸ್ವಾಗತ ಸಮಿತಿಯ ಆಶ್ರಯದಲ್ಲಿ ಶ್ರೀ. ಭೋಜರಾವ್, ಬೋಳಾರ ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಪರಿಷತ್ತನ್ನು ಯಶಸ್ವಿಗೊಳಿಸಲು ಸಕಲರೂ ಸಹಾಯಮಾಡಬೇಕೆಂದು ಪ್ರಾರ್ಥಿಸಲಾಯಿತು

ಮುಹಮ್ಮದ್ ಪೈಗಂಬರರ ದಿನಾಚರಣೆ— ಮುಹಮ್ಮದೀಯ ವಿದ್ಯಾರ್ಥಿಸಂಘದ ಮುಹಮ್ಮದ್ ಪೈಗಂಬರರ ದಿನಾಚರಣೆಯು ಕಳೆದ ತಾ. 7ರಲ್ಲಿ ಅದ್ದ ವೈಭವದಲ್ಲಿ ಮದ್ರಾಸಿನ ಡಾ. ಯಂ ಅಬ್ದುಲ್ ಹಕ್ ಸಾಹೇಬ್ ಬಹದ್ದೂರ್, ಯಂ ಎ, ಪಿ, ಹೆಚ್. ಡಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು.

ವರ್ಗಾವರ್ಗಿ— ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫರಾಗಿದ್ದ ಶ್ರೀ. ಎ. ಯಂ. ಎಸ್. ಬೇರ್ಟ್ ರಿಗೆ ತೆಲ್ಲಿಚೇರಿಗೆ ವರ್ಗವಾಗಿದೆ ಅವರ ಸ್ಥಾನಕ್ಕೆ ಶ್ರೀ. ಎಲ್. ಎ ವೈದ್ಯನಾಥ ಅಯ್ಯರವರು ನೇಮಕಹೊಂದಿದ್ದಾರೆ.

ಮಂಗಳೂರಲ್ಲಿ ನೂತನವಾಗಿ ಏರ್ಪಡುವ ಎಡಿಶನಲ್ ಸಬ್ ಕೋರ್ಟಿಗೆ ಶ್ರೀ ಟಿ. ವಿ ಸುಬ್ರಹ್ಮಣ್ಯ ರ ಸಬ್ ಜಡ್ಜರಾಗಿಯೂ, ಕಾರ್ಕಳದ ಹೊಸ ಎಡಿಷನಲ್ ಮುನ್ಸಿಫ್ ಕೋರ್ಟಿಗೆ ಶ್ರೀ ಯಂ. ವೆಂಕಟಪ್ಪನವರು ಮುನ್ಸಿಫರಾಗಿಯೂ ನೇಮಿಸಲ್ಪಟ್ಟಿರುವರು.

ವಿ. ಬಿ. ವಾಚನಾಲಯದ ಪ್ರಾರಂಭೋತ್ಸವ— ಶ್ರೀ ಕಾಶೀಕಾಂಬ ಪ್ರಸಾದಿತ ರಾಷ್ಟ್ರೀಯ ವಿಶ್ವಬ್ರಾಹ್ಮಣ ಸಮಾಜೋದ್ಧಾರಕ ಸಭಾ, ಮಂಗಳೂರು ಇವರ ಆಶ್ರಯದಲ್ಲಿ ಈ ದಿನ (ತಾ. 14-5-39ನೇ) ಪೂರ್ವಾಹ್ನ 10 ಘಂಟೆಗೆ ಸರಿಯಾಗಿ ವಿ. ಬಿ ವಾಚನಾಲಯದ ಆರಂಭೋತ್ಸವವು ಯಶಸ್ವಿಯಾಗಿ ಜರಗಿತು. ದೇಶಭಕ್ತ ನಾರಾಯಣ ಶೆಟ್ಟಿಯವರು ಅಧ್ಯಕ್ಷತೆ ವಹಿಸಿ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿ ವಾಚನಾಲಯಕ್ಕೆ ಶ್ರೇಯಸ್ಸನ್ನು ಬಯಸಿ ಶ್ರೀ ಗೋವಿಂದ ಯಂ ಆರ್ ಮಂಗಳೂರಿನ ಕೃಷ್ಣರಾಯರೂ ಮಾತಾಡಿದರು ಪ್ರೋಟೀ, ಫಲ ಪಾನಾದ್ಯುಪಚಾರಗಳೊಂದಿಗೆ ಸಭೆಯು ಮುಕ್ತಾಯವಾಯಿತು

ದಿ ಅತ್ತೂರು ಎಂಡ್ ಜವಾಹರ ಬೇಂಕ್— ಮಂಗಳೂರಿನಲ್ಲಿ ಈ ನೆವಲ "ಅತ್ತೂರು ವೈಕುಂಠಪ್ರಭು ಬೇಂಕ್ ಮತ್ತು ಜವಾಹರ ಬೇಂಕ್" (ರಿಜಿಸ್ಟರ್ಡ್) ಎಂಬ ಹೆಸರಿನಿಂದ ವ್ಯಾಪಾರವನ್ನು ನಡೆಸುತ್ತಿದ್ದ ಬೇಂಕುಗಳು ತಾ. 10 5 39ರಲ್ಲಿ "ದಿ ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್" ಎಂಬ ಹೆಸರಿನಿಂದ ರಿಜಿಸ್ಟರ್ಡ್ ಮಾಡಲ್ಪಟ್ಟಿದೆ, ಎಂದು ತಿಳಿಸಲು ಸಂತೋಷಪಡುತ್ತೇವೆ.

ಜನಪದ ಸಾಹಿತ್ಯ

ಇದೂ ವಿಧಿವಿಲಾಸವೇ?

ರಾಗ—ಕಾಂಬೋಧಿ ಝಂಪೆ ತಾಳ.
ದಾಟಿ—ನಾನಿನ್ನೊಳನ್ಯ ಬೇಡುವುದಿಲ್ಲ ಹರಿಯೆ
ಎಂಬಂತೆ—

ಏನೆಂತ ಪೇಳಲಿ ಮ ಬಿಳಿಯರ ಲೀಲೆ
ಮನೆಯೊಳು ಧನಿಕ ಬಾಲ
ವಿಧವೆಯರ ಕೇಳಿ
ಏನು ಅರಿಯದ ಸಣ್ಣ ಹೆಣ್ಣುಮಕ್ಕಳನೆಲ್ಲ
ಹಣ್ಣು ಮುದುಕರ ಧನಕೆ ದಾನ ಗೈದು
ಹಾಳ್ಗೆ ಮದುವೆಯನು ಗೈಯು
ವ್ಯಾಧಿಪತಿ ಬಾಲಕಿ
ಲೀಲಾವಳು ವೈಧವ್ಯ ತನಗ
ತಿಳಿಯದವೇ ॥ ಏನೆಂತ ॥
ಬೀರುತಿರ್ದಳು ಸೊಬಗ
ತೋರುತಿರ್ದಳು ಬೆಡಗ
ಮಿರುತಿರ್ದಳು ಚೆಲ ಪ್ರೌಢ ಶಿಂಗಾರವನು
ನರೆತ ಮುದುಕನ ವರಿಸಿ ಕೊರಗುವಳು
ಅವ ಸಾಯೆ
ಕೆರೆದಾಗಲವಳ ವಿಧಿ ಬರಹವ ದೇವ
॥ ಏನೆಂತ ॥
ತಲೆತೂಗದಲಿಪಿ ತಿಲಕ ಕೈಬಳೆ ಬೇಡ
ಚಲಿಪ ಗಜ್ಜೆಯು ಕಾಲ್ಗಳಿಗೆ ಬೇಡ
ಕಾಲಿಗೆ ಪ್ರೇಮದ ತಾಳ ಕರಿವಸನ ಬಿಡು
ಮಲಿಯ ಜವರಗಳ ಧರಿಸಬೇಕೆಂದು
ಹೇಳಿದರ್ ॥ ಏನೆಂತ ॥
ಅತ್ತ ಹೋಗಲು ಬೇಡ ಇತ್ತ ನೀ ಬರಬೇಡ
ಹತನಾದೆ! ಮುಂಡೆ! ಕತ್ತೆ!! ಕುಲನಾಶಿ
ಅತ್ತಿಗೆ ನಾದಿನಿಯರ ಮಾತಿಂದಿರು
ಗಳ ಇಲ್ಲದವಳೆಂದು ಧಿಕ್ಕರಿಸುವರು
॥ ಏನೆಂ ॥
ಕೊರಗಿಯೆ ಬೇಡ ಜನಗಳವನು
ನೇರದಲಿ
ನೊಂದು ತಪ್ಪಿ ನಾಳೆ ಹೊರ ಹೊರಡಬೇಡ
ಆದ ಕಾರಣ ನಾಡಿಯ ಬೇಡ ನಡಿಯದಿರೆಂದು
ನಿಂದಿಸಲು ಧೈರ್ಯವಿಲ್ಲದಂತೆ ಕಳೆಯುವರು
ಭವಿಯೊಳ್ ॥ ಏನೆಂತ ॥
ಒಡೆದ ಗಂಡನು ಇಲ್ಲ ಪಡೆದ ಮಗನೂ ಇಲ್ಲ
ನಡೆಗೆ ಬಂದರೆ ಸೇವೆ ಪಕ್ಕಿಲ್ಲ
ಹಡೆದ ತಂದೆಗೆ ಬಲ್ಲ ಒಡಹುಟ್ಟಿದವರೆಲ್ಲ
ಕಡೆಯ ಬಿಗಿಯುವರ ಕಳೆಯುತ್ತ
ಸುಡುವರ್ ॥ ಏನೆಂತ ॥
ದರಣಿಯೊಳು ನರರು ತಪ
ನಿಂದಿಯತ ಕೇಳಿ
ನರನು ನಿಧಾನದಿ, ಆಗೆ ಮದುವೆಯಾಗಲ್ಲ
ಪುರುಷ ಮರಣವ ಹೊಂದೆ ನಾರಿ
ವಿಧವೆಯಾಗಿ
ಕೊರಗಿ ದುಃಖದ ಪಡುವುದು
ಯಾವ ನ್ಯಾಯ ॥ ಏನೆಂತ ॥
ಬಾಲ ವಿಧವೆಯ ಜೀವ ಎಲ್ಲೆಲ್ಲು ನಿರ್ಜೀವ
ಲೀಲೆ ಮನುಜನದಿದು ವಿಧಿವಿಲಾಸವಲ್ಲ
ಬಾಲ ವೆಂಕಟ ವಾಲ ಶ್ರೀಲೋಲ ಕೃಷ್ಣನೇ
ಬಾಲೆಯರ ಮೊರೆ ಕೇಳಿ ಸಲಹು
ಕರುಣಾಬ್ಧಿ ॥ ಏನೆಂತ ॥

ವಿ ಆರ್. ಉದ್ಯಾವರ,
C/o ಶರ್ಮಾ ಬ್ರದರ್ಸ್, ಮದರಾಸು.

ವಾರಭವಿಷ್ಯ

ಮುಂದಾಗುವುದನ್ನು ಇಂದೇ ತಿಳಿಯಿರಿ.

(ತಾ. 18-5-39ರಿಂದ ತಾ. 25-5-39ರ ವರೆಗೆ)

[ಜ್ಯೋತಿಷವು ಅನ್ನಸ್ಥಶಾಸ್ತ್ರವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ. ಸಂ. ನ.]

ಮೇಷರಾಶಿ—

ಚಿತ್ತಚಾಂಚಲ್ಯದಿಂದ ಮಾಡಬಾರದ ಕಾರ್ಯಗಳನ್ನು ಮಾಡಿ ಅನೇಕ ಅನರ್ಥಗಳಿಗೆ ಗುರಿಯಾಗುವಿರಿ. ಆದಕಾರಣ ಮನಸ್ಸನ್ನು ಬಿಗಿಹಿಡಿದು ನಡೆಸುವುದು ನಿಮ್ಮ ಮುಖ್ಯ ಕರ್ತವ್ಯವಾಗಿದೆ. ಸ್ವಕೃತಿ ಮತ್ತು ಪ್ರಾಪಂಚಿಕ ಸುಖಗಳು ಇನಿತೂ ದೊರೆಯಲಾರವು. ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ ಕಷ್ಟಗಳು ಮೇಲಿಂದ ಮೇಲೆ ಬರುವವು. ಆಕಸ್ಮಾತ್ ಪ್ರಸಂಗಗಳು ಜರಗಿ ಹೆಚ್ಚಿನ ಮನೋವ್ಯಥೆಗೂ ಕಷ್ಟಗಳಿಗೂ ಪಾತ್ರರಾಗುವಿರಿ. ದುರ್ಮಾರ್ಗಿಗಳಿಂದ ಜನರಲ್ಲಿ ಕಲಹವನ್ನು ಬೆಳೆಸುವಿರಿ. ಆರ್ಥಿಕ ಅವನತಿಯು ವಿಶೇಷವಾಗುವುದು. ಸ್ತ್ರೀ ವಿಷಯಕವಾದ ಸುಖವೂ ಕೆಲವೊಂದು ಭೋಗ್ಯ ವಸ್ತುಗಳೂ ಸ್ವಲ್ಪಮಟ್ಟಿಗೆ ದೊರೆಯುವವು. ತಾ. 18, 21 ಮತ್ತು 22 ಈ ದಿನಗಳು ಸಾಮಾನ್ಯ ಉತ್ತಮವಾಗಿರುವುದರಿಂದ ಇಷ್ಟ ಭೋಜನ ಗೃಹಸುಖ, ಇತ್ಯಾದಿಗಳು ಏತದ್ದಿನಗಳಲ್ಲಿ ದೊರೆಯುವವು.

ವೃಷಭರಾಶಿ—

ಈ ವಾರದಲ್ಲಿ ನಿಮ್ಮ ಭವಿಷ್ಯವು ಹಿಂದಿಗಿಂತ ಹೆಚ್ಚಿನ ವ್ಯತ್ಯಾಸಗಳನ್ನು ಯಾವ ಭಾಗದಲ್ಲೂ ತೋರುವ ಚಿಹ್ನೆಗಳು ಕಂಡುಬರುತ್ತಿಲ್ಲವು. ವಾತಪಿತ್ತ ಕಫಗಳೆಂಬ ತ್ರಿದೋಷಗಳಿಂದುಂಟಾಗತಕ್ಕ ರೋಗ ವಿಶೇಷವು ನಿಮ್ಮನ್ನು ಪೀಡಿಸುವುದು. ಆದಕಾರಣದಿಂದಲೇ ದೇಹದಲ್ಲಿ ಆಯಾಸ, ಶರೀರಕಾರ್ಶ್ಯ ಇತ್ಯಾದಿಗಳು ಕಂಡುಬರುತ್ತಿವೆ. ಆದರೂ ನಿಮ್ಮ ಭಾಗ್ಯವು ಬಹುಮಟ್ಟಿಗೆ ಉತ್ತಮವಾಗಿಯೇ ಇರುವುದು. ಸ್ವೀಕೃತ ಕಾರ್ಯಗಳು ಅನಾಯಾಸದಿಂದ ಕೊನೆಗೊಳ್ಳುವವು. ಪ್ರತಿಯೊಂದು ಕಾರ್ಯದಲ್ಲೂ ಇಚ್ಛಾಧಿಕವಾಗಿ ಧನಲಾಭವಾಗುವುದು. ಇದರಲ್ಲಿ ಹೆಚ್ಚಿನಂಶವು ಆತ್ಮೀಯ ಭಾಗಕ್ಕೇನೇ ವಿನಿಯೋಗವಾಗುವುದು. ಅಂತೂ ನೀಚನಾದ ಶನಿಯು ನಿಮ್ಮನ್ನು ಸುಮ್ಮನಿರಲು ಬಿಡನು. ಸತ್ಕಾರ್ಯದಲ್ಲಿ ಧನವನ್ನು ಹೆಚ್ಚಾಗಿ ವ್ಯಯಿಸುವನು. ತಾ. 19, 20 ಮತ್ತು 23, 24 ಈ ದಿನಗಳು ಉತ್ತಮವಿವೆ.

ಮಿಥುನರಾಶಿ—

ಅಕಸ್ಮಾತ್ ಸಂಭವಿಸುವ ಪೆಟ್ಟಿನಿಂದಲಾಗಲೀ ಇನ್ನಿತರ ಯಾವ ಕಾರಣಗಳಿಂದಾಗಲೀ ದೇಹಕ್ಕೆ ಪೀಡೆಯುಂಟಾಗಲಿದೆ ಯಾ ವಾಹನಾದಿಗಳ ಸಂಚಾರದಲ್ಲೂ ಹಾನಿಯುಂಟಾಗುವುದು. ಆರೋಗ್ಯವು ಕೂಡ ಕೆಡಲಿರುವುದು. ಆದಕಾರಣ ಈ ವಿಷಯದಲ್ಲಿ ಹೆಚ್ಚಿನ ಜಾಗರೂಕರಾಗಿರಿ. ಇತರ ಸಕಲ ವಿಷಯಗಳಲ್ಲೂ ನಿಮಗೀ ವಾರವು ಹೆಚ್ಚಿನ ಶ್ರೇಯಸ್ಕರವಾಗಿದೆ. ಸಾಂಸಾರಿಕ ತಾಪತ್ರಯಗಳು ನಿರ್ನಾಮಗೊಂಡುವವು. ಯತ್ನಿಸಿದ ಕಾರ್ಯಗಳಲ್ಲವೂ ಫಲಕಾರಿಯಾಗುವವು. ಸಾಂಪತ್ತಿಕ ಭಾಗವು ಹೆಚ್ಚಿನ ಸುಧಾರಣೆ ಹೊಂದಲಿರುವುದು. ವಿದ್ಯಾರ್ಥಿಗಳಿಗೆ ಈ ವಾರವು ಉತ್ತಮವಾಗಿರುವುದು. ಧನ ಜನ ಬಲವು ಪರಿಪೂರ್ಣವಾಗಿರುವುದು. ತಾ. 19, 20 ಮತ್ತು 23, 24 ಈ ದಿನಗಳಲ್ಲಿ ಧನವ್ಯಾಸಗಳಿಗೂ ಕಾರ್ಯಗಳಿಗೂ ಶತ್ರು ಜನರಿಂದ ವಿಶೇಷ ವಿಘ್ನಗಳುಂಟಾಗಲಿವೆ.

ಕರ್ಕಾಟಕರಾಶಿ—

ರಾಜಕೀಯ ಭಾಗದಲ್ಲೂ ಕೋರ್ಟು ವಗೈರೆ ವ್ಯವಹಾರಗಳಲ್ಲೂ ಹೆಚ್ಚಿನ ಕೀರ್ತಿಯನ್ನು ಗಳಿಸಲಿರುವಿರಿ. ಬೌದ್ಧಿಕ ಸಂಬಂಧಗಳಾದ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿಯು ನಿಮಗಿರುವುದರಿಂದ ನೌಕರಿ ಭಾಗದವರು ಉತ್ತಮ ಸ್ಥಾನವನ್ನು ಪಡೆಯುವರು. ಸಮೂಹದ ಮುಂದಾಳಾಗಿ ನಿಂತು ಕಾರ್ಯಮಾಡಿ ವಿಜಯಿಗಳಾಗಲು ಸಮರ್ಥರಿರುವಿರಿ. ಆರೋಗ್ಯವು ಸಾಕಷ್ಟು ಉತ್ತಮವಾಗಿಯೇ ಇರುವುದು. ಗೃಹಕೃತ್ಯದ ಅಂಗಗಳು ಅನ್ಯೂನವಾಗಿದ್ದರೂ ಕಳತ್ರ ಕಲಹವು ದಿನ ನಿತ್ಯವೆಂಬಂತಿದೆ. ಮನಸ್ಸು ದುರ್ಮಾರ್ಗದಲ್ಲಿ ನರ್ತಿಸಲು ಮುಂದರಿವುದರಿಂದ ಕೆಲವೊಮ್ಮೆ ಕೆಟ್ಟ ಮಾತನ್ನು ಜನತೆಯಿಂದ ಕೇಳುವಿರಿ. ವಾಕ್ ಸಂಬಂಧವಾಗಿ ಅನೇಕ ಕಲಹಗಳು ಸಂಭವಿಸಲಿವೆ. ತಾ. 21, 22 ಮತ್ತು 25 ಈ ದಿನಗಳು ಅನಿಷ್ಟ ಫಲಕಾರಿಗಳಾಗಿವೆ.

ಸಿಂಹರಾಶಿ—

ಈ ವಾರವು ನಿಮಗೆ ಸುಖದುಃಖಗಳಿಂದ ಮಿಶ್ರವಾಗಿರುವುದು. ನಿಮ್ಮ ಭಾಗ್ಯಸ್ಥಾನದಲ್ಲಿ ನೀಚನಾದ ರಾಹುವಿನ ನಿವಾಸವಿದ್ದರೂ ಭಾಗ್ಯಪತಿಯಾದ ಅಂಗಾರಕನು ಉಚ್ಚನಾಗಿ ಅನುಕೂಲಸ್ಥಾನಗತನಾಗಿರುವುದರಿಂದ ನೀವೆಷ್ಟು ಹೆಚ್ಚಾಗಿ ಸಂಪಾದಿಸುವಿರೋ ಅಷ್ಟಷ್ಟು ಹೆಚ್ಚಾಗಿ ಖರ್ಚುಗಳು ಹೆಚ್ಚುವವು. ಸಂಪದ್ಭಾಗಗಳಲ್ಲಿಯೂ ಕೂಡ ವಿರೋಧಗಳು ನದಿಯು ಜಲದಂತೆ ಉಂಟಾಗುವವು. ನಿಮ್ಮ ಶತ್ರು ಜನಗಳಿನ ಕಲಹವು ನಿವೃತ್ತಿ ಹೊಂದಿ ನೀವೀರ್ವರೂ ಒಂದಾಗಿ ವರ್ತಿಸುವಿರಿ. ಪ್ರಯತ್ನಕ್ಕೆ ತಕ್ಕ ಫಲವು ಸಿಕ್ಕಿಯೇ ತೀರುವುದು. ಪರ್ಯಟನದಿಂದಾಗಿ ಪುಣ್ಯಕ್ಷೇತ್ರಗಳ ದರ್ಶನಮಾಡುವಿರಿ. ಆದರೆ ಪ್ರವಾಸದಲ್ಲಿ ಬಹಳ ಕಷ್ಟಗಳೊದಗುವವು. ಧರ್ಮಾತ್ಮರಿಂದಾಗಿ ನಿಮಗೆ ಗುರ್ವನುಗ್ರಹವು ಕಟಿಬೇಯಾಗಿರುವುದು. ತಾ. 18 ಮತ್ತು 23, 24 ಈ ದಿನಗಳು ಚೆನ್ನಾಗಿಲ್ಲವು.

ಕನ್ಯಾರಾಶಿ—

ನಿಮ್ಮ ರಾಶಿಗೆ ಮಿಶ್ರಫಲದಾತೃಗಳಾದ ಶುಭಾಶುಭಗ್ರಹರು ಸಮಾನರಾಗಿದ್ದರೂ ನೈಸರ್ಗಿಕ ಗುಣದಿಂದಲೋ ಎಂಬಂತೆ ಸದ್ಗ್ರಹರು ಪೂರ್ಣ ಅನುಕೂಲ ಸ್ಥಾನಗತರಾಗಿರುವುದರಿಂದ ಶುಭ ಫಲಗಳೇ ಹೆಚ್ಚಾಗಿ ಅನುಭವಕ್ಕೆ ಬರುವವು—ಸಾರ್ವಜನಿಕ ಕಾರ್ಯಗಳಲ್ಲಿ ಮುಂದಾಳಾಗಿ ಕೀರ್ತಿಹೊಂದುವಿರಲ್ಲದೆ ಜನರಿಂದ ಮನ್ನಣೆ ಪುರಸ್ಕಾರಗಳನ್ನು ಹೊಂದುವಿರಿ. ಸಂಪನ್ನಳಾದ ಸ್ತ್ರೀಯೊಳೊಂದಾಗಿ ಬಹಳ ಲಾಭವಿರುವುದು. ಆದರೂ ಶರೀರವು ಸದಾ ರೋಗಗ್ರಸ್ತವಾಗಿರುವುದರಿಂದ ಈ ಸುಖಗಳೆಲ್ಲವೂ ಮಂಗನ ಕೈಲಿ ಸಿಕ್ಕಿದ ಮಾಣಿಕ್ಯದಂತೆ ವ್ಯರ್ಥವಾಗುವವು. ಸಾಂಸಾರಿಕ ತಾಪತ್ರಯವೂ ಹೆಚ್ಚುವುದು. ವ್ಯವಹಾರದ ಸಂಬಂಧವಾಗಿ ರಾಜಕೀಯ ಕ್ಷೇತ್ರಕ್ಕೆ ಕಾಲಿಡಬೇಕಾದ ಪ್ರಸಂಗವೊದಗುವದು. ತಾ. 18, 19, 20 ಮತ್ತು 25 ಈ ದಿನಗಳು ಅನಿಷ್ಟಕಾರಿಗಳಾಗಿವೆ.

ತುಲಾರಾಶಿ—

ಕಾಲವು ಬಹಳ ಹೀನಸ್ಥಿತಿಗೆ ಬಂದಿರುವುದು. ಯಾವ ಕಡೆ ನೋಡಿದರೂ ಶುಭದ ಚಿಹ್ನೆಗಳೇ ಕಂಡುಬರುತ್ತಿಲ್ಲವು. ಇದಕ್ಕೆ ನಿಮ್ಮ ಸಕಲ ಗ್ರಹರ ಪ್ರತಿಕೂಲ ದೃಷ್ಟಿಯೇ ಕಾರಣವಾಗಿರುವುದು. ಆರ್ಥಿಕ ಮುಗ್ಗಟ್ಟು ಬಹಳ ಅಧಿಕವಾಗುವುದು. ಕೈಹಿಡಿದಾಕೆಯು ಪ್ರತಿಕೂಲಳಾಗಿ ವರ್ತಿಸುವಳು. ಕಾರ್ಯಾರಂಭಕ್ಕೆ ಮುಂಚಿತವಾಗಿ ವಿಘ್ನಗಳು ಉಪಸ್ಥಿತವಾಗುವವು. ವಿರೋಧಿಗಳು ಸಮಯ ಸಾಧಿಸಿ ಸೇಡನ್ನು ತೀರಿಸುವರು. ಧನಜನರಿಂದ ಮುಕ್ತರಾದ ನಿಮಗೆ ಮಿತ್ರರೂ ಸಹಾಯ ಮಾಡುವಂತಿಲ್ಲವು. ಮನೆಯ ಜನರೂ ಶತ್ರುಜನರಂತೆ ನೋಡುವರು. ಈ ಎಲ್ಲಾ ವ್ಯಸನಗಳಿಂದ ಯುಕ್ತರಾದ ನಿಮಗೆ ನಿದ್ರೆ ಸಹಾ ಬಾರದೆ ಆರೋಗ್ಯವು ಕೆಟ್ಟು ಬಹಳ ಕೃಶರಾಗಲಿರುವಿರಿ. ಅಂತೂ ನಿಮ್ಮ ಅವಸ್ಥೆಯು ಕಣ್ಣು ಕಟ್ಟಿ ಕಾಡಿಗೆ ಬಿಟ್ಟಂತಾಗಿರುವುದೆಂದರೂ ತಪ್ಪಾಗಲಾರದು. ತಾ. 19ರಿಂದ 22ರ ವರೆಗಿನ ದಿನಗಳನ್ನು ಕಳೆವುದು ಬಹಳ ಕಷ್ಟವಾದೀತು.

ವೃಶ್ಚಿಕರಾಶಿ—

ಹೆಚ್ಚಿನಂಶ ಈ ವಾರವು ನಿಮಗೆ ಉತ್ತಮ ಫಲದಾಯಕವಾಗಿರುವುದು. ಮನೋರಥಗಳು ಸಂಪೂರ್ಣ ಫಲಕಾರಿಯಾಗುವವು. ಸಕಲ ಉದ್ಯಮಗಳಲ್ಲೂ ನಿಮ್ಮ ಇಚ್ಛೆಯು ಕೈಗೂಡುವುದು. ವ್ಯಾಪಾರಭಾಗದಲ್ಲಿ ಮಾತ್ರ ನಷ್ಟವು ಅಧಿಕವಾಗಿ ಸಂಭವಿಸಲಿದೆ. ಆರ್ಥಿಕ ಭಾಗವು ಉತ್ತಮರೀತಿಯಲ್ಲಿರುವುದು. ಅತಿಥಿಗಳೆಂಬ ಗೂಬೆಗಳಿಗೆ ಸೂರ್ಯನ್ಯಾಯದಾಗಿ ವರ್ತಿಸುವಿರಿ. ಸ್ವಕೀಯ ಜನರೂ ಕುಟುಂಬವೂ ಮಿತ್ರವೃಂದವೂ ವೃದ್ಧಿಯನ್ನೈದುವುದು. ಆಲಸರಾಗಿರದೆ ಸದಾ ಉದ್ಯಮಶೀಲರಾದ ನೀವು ದಿನಗಳನ್ನು ಸುಖದಿಂದ ಕಳೆಯಿರಿ. ಆಕಸ್ಮಾತ್ ಪ್ರವಾಸಗಳು ಜರಗಲಿವೆ. ಉದರ ರೋಗವು ಆಗಾಗ್ಗೆ ಕಾಣಿಸಿಕೊಂಡೀತು. ವಿದ್ಯಾರ್ಥಿಗಳಿಗೂ ಉದ್ಯೋಗಜೀವಿಗಳಿಗೂ ಈ ವಾರವು ಅತ್ಯಂತ ಶ್ರೇಯಸ್ಕರವಾಗಿದೆ. ತಾ. 18, 19, 20 ಮತ್ತು 25 ಈ ದಿನಗಳು ಅತ್ಯುತ್ತಮಗಳಾಗಿವೆ.

ಧನೂರಾಶಿ—

ಬಂಧುಗಳಿಂದ ಪ್ರಾಪ್ತವಾಗುವ ಕ್ಲೇಶಸಮೂಹಗಳಿಂದ ಸದಾ ಚಿಂತಾಮಗ್ನರಾಗುವಿರಿ. ಈ ಅಸಹ್ಯವಾದ ವೇದನೆಯು ನಿಮ್ಮನ್ನು ಜೀವನ್ಮೃತರಂತೆ ಮಾಡುವುದು. ಗೃಹದಲ್ಲಿ ಪರಸ್ಪರ ಕಲಹಗಳು ಪ್ರತಿಕ್ಷಣವೂ ಎಂಬಂತೆ ಸಂಭವಿಸುವವು. ಪತ್ನೀ ಪುತ್ರರು ನಿಮ್ಮ ಮಾತನ್ನು ಲೆಕ್ಕಿಸದೆ ಸ್ವೇಚ್ಛಾವರ್ತಿಗಳಾಗುವರು. ಆರೋಗ್ಯದ ಮಟ್ಟಿಗೆ ಅತ್ಯಂತ ಜಾಗರೂಕರಾಗಿರತಕ್ಕದ್ದು. ಮಿತ್ರರ ಸಹಾಯವು ತುಂಬಾ ಇರುವುದರಿಂದ ನೀವು ಶತ್ರುಗಳಿಗೆ ಬೆದರಲಾರಿರಿ. ಹಿರಿದ ಬಿಕ್ಕಟ್ಟಿನಿಂದ ಜನರಿಗೆ ಮುಖ ತೋರಿಸಲು ನಾಚಿ ಸದಾ ಮರೆಯಾಗಿಯೇ ಇರುವಿರಿ. ಸಾಮಾನ್ಯ ಜನ ರೊಡನಲ್ಲದೆ ಸೇವಕ ಜನರಲ್ಲಿಯೂ ಕೂಡ ಕಲಹವಾಗುವುದು. ಹಿಡಿದ ಕಾರ್ಯಗಳನ್ನು ಮುಂದರಿಸಲು ಶಕ್ತಿ ಸಾಲದೆ ಅರ್ಧದಲ್ಲೇ ಕೈಬಿಡಬೇಕಾಗುವುದು. ತಾ. 18 ಮತ್ತು 23, 24, 25, ಈ ದಿನಗಳಲ್ಲಿ ಕಾರ್ಯಹಾನಿ, ಅನಿಷ್ಟ, ರಾಜಭಯ, ಶೋಕಗಳು ವೃದ್ಧಿಹೊಂದುವವು.

ಮಕರರಾಶಿ—

ದಿನೇ ದಿನೇ ಶತ್ರು ಜನರ ಭಯವು ಹೆಚ್ಚುತ್ತಿರುವುದು. ಯಾವಾಗ ಯಾರಿಂದ ಎಲ್ಲಿ ಏನು ಅಪಾಯ ಸಂಭವಿಸೀತೆಂದು ಹೇಳಲು ಸಾಧ್ಯವಿಲ್ಲ. ದುರ್ಮಾರ್ಗಕ್ಕೆ ಮುಂದರಿವ ಮನಸ್ಸನ್ನು ಸೆಳೆದು ಸರಿದಾರಿಗೆ ತರುವುದು ಬಹಳ ಕಷ್ಟಕ್ಕೆ ಬರುವುದು. ಆಚಾತುರ್ಯದಿಂದಾಗಿ ಜರಗತಕ್ಕ ಕಾರ್ಯಗಳಿಂದ ಸ್ಥಾನನಾಶವೂ ಕೂಡ ಆಗಬಹುದು. ಅವಯವಗಳಲ್ಲಿ ಸದಾ ನೋವು ಇದ್ದೇ ಇರುವುದು. ಶತ್ರು ಜನರ ಕುಂಚಿಕೆಯಿಂದ ದೇಹಕ್ಕೆ ಪೀಡೆಯೂ ಕೂಡ ಸಂಭವಿಸೀತು. ಬುಧ ಶುಕ್ರರ ಶುಭ ದೃಷ್ಟಿಯು ನಿಮ್ಮಲ್ಲಿರುವುದರಿಂದ ಮಿತ್ರರ ಸಹಾಯ ಬರ್ಚಿಗೆ ಸಾಕಷ್ಟು ಉತ್ಪತ್ತಿ ಗೃಹ ಮತ್ತು ಕುಟುಂಬಿಕರ ಬೆಂಬಲವು ನಿಗುವುದು. ಪ್ರವಾಸ ಶೀಲರಿಗೆ ಈ ವಾರವು ಪ್ರತಿಕೂಲವಾಗಿರುವುದು. ತಾ. 19 ರಿಂದ 22ರ ವರೆಗೆ ಸ್ವಲ್ಪ ಅನುಕೂಲ ಪರಿಸ್ಥಿತಿಯಿರುವುದರಿಂದ ವಸ್ತ್ರಾಭರಣ, ದ್ರವ್ಯ ಲಾಭಗಳು ಸಾಕಷ್ಟು ದೊರೆಯುವವು.

ಕುಂಭರಾಶಿ—

ದೈವಾನುಗ್ರಹವಿರುವವರಿಗೆ ಬೇಕಾದ ಸಕಲಸಲಕರಣೆಗಳೂ ತಾವಾಗಿಯೇ ಬಂದು ಸೇರುವವು. ಶತ್ರುಗಳೂ ಮಿತ್ರರಾಗುವರು. ವಿಷವೂ ಅಮೃತವಾದೀತು ದೈವವು ಪ್ರತಿಕೂಲರಾಗಿರತಕ್ಕವರಿಗೆ ಜನ್ಮದಾನ ರಂತಿರಲಿ ಮಿತ್ರರೂ ದೂರಸರಿವರು. ಅಷ್ಟೇಕೆ ಪತ್ನಿ ಪುತ್ರರೂ ಅವರ ಭಾಗಕ್ಕೆ ಇಲ್ಲದಂತಾಗುವರು. ಈಗಿನ ಕಾಲಸಮಯದಿಂದ ನಿಮ್ಮ ಮೇಲೆ ದೈವಕೃಪೆಯಾಗಿರುವುದರಿಂದ ಪ್ರತಿಯೊಂದು ಭಾಗದಲ್ಲೂ ಅಂಕುರವು ಮೊಳೆಯುತ್ತಿರುವುದು. ಆರಂಭಿಸಿದ ಉದ್ಯೋಗದಲ್ಲಿ ತೃಪ್ತಿಕರವಾಗುವಂತೆ ಧನ ಸಿಗುವುದು. ವ್ಯಾಪಾರಾದಿಗಳಲ್ಲಿ ಉತ್ತಮ ಫಲಪ್ರಾಪ್ತಿಯಿದೆ. ನಾಲ್ಕು ಜನರು ನಿಮ್ಮನ್ನನುಸರಿಸುವಂತೆ ವರ್ತಿಸುವಿರಿ. ವ್ಯವಹಾರದಲ್ಲಿ ಸ್ವಲ್ಪ ಜಾಗರೂಕರಾಗಿರಿ. ಸ್ತ್ರೀಯರಿಂದ ವಿರೋಧ ಸಂಭವಿಸೀತು. ಕಾರ್ಯವನ್ನು ಮುಂದರಿಸುವಾಗ ಸೂಕ್ಷ್ಮ ವಿಚಾರಮಾಡಿರಿ. ತಾ. 18, 23, 24, 25 ಈ ದಿನಗಳು ಅನುಕೂಲಗಳಾಗಿವೆ.

ಮೀನರಾಶಿ—

ಗುರ್ವನುಗ್ರಹವಾತ್ರ ನಿಮಗಿಲ್ಲವೆಂಬುದೊಂದು ದೋಷ ಹೊರತಾಗಿ ಇತರ ಯಾವ ಭಾಗದಲ್ಲೂ ನಿಮಗೆ ನ್ಯೂನತೆ ಯಾವುದೂ ಇಲ್ಲವೆಂದು ಹೇಳಬಹುದಾಗಿದೆ. ಉತ್ತರೋತ್ತರ ಶ್ರೇಯಸ್ಕರವಾದ ಕಾರ್ಯಾರಂಭಕ್ಕೆ ಈ ವಾರವು ಉತ್ತಮವಿರುವುದು. ಹಿಡಿದ ಕಾರ್ಯವೆಲ್ಲವೂ ನಿರರ್ಗಳವಾಗಿ ಕೊನೆಗೊಳ್ಳುವವು. ಎಲ್ಲಾ ಭಾಗಗಳಲ್ಲಿಯೂ ನಿಮ್ಮ ಅಭಿವೃದ್ಧಿ ಚಿಹ್ನೆಗಳೇ ಕಂಡುಬರುತ್ತಿವೆ. ಧನ ವಿಷಯದಲ್ಲಿ ಹೆಚ್ಚಿನ ಜಾಗರೂಕರಾಗಿರಿ. ಇಲ್ಲದಲ್ಲಿ ನಿಮ್ಮ ಅವಿವೇಕದಿಂದ ಇದ್ದುದು ಸಾಲದೆ ಮೋಸಕ್ಕಾಗಿ ಸಾಲಮಾಡುವ ಪ್ರಸಂಗಬಂದೀತು. ಗೃಹತಾಪತ್ರಯವು ನಿವೃತ್ತಿ ಹೊಂದುವುದು, ಬಂಧು ಮಿತ್ರರು ಇಷ್ಟ ಕಾರ್ಯದಲ್ಲಿ ತುಂಬಾ ನೆರವಾಗಿ ನಿಮ್ಮ ಪ್ರೀತಿಗೆ ಪಾತ್ರರಾಗುವರು, ಶತ್ರುಗಳು ದೂರದಿಂದಲೇ ಮಾಯವಾಗುವರು, ತಾ. 19, 20 ಮತ್ತು 25 ಈ ದಿನಗಳು ಸರ್ವೋತ್ಕೃಷ್ಟಗಳಾಗಿವೆ.



ಎಲ್ಲಾ ಔಷಧಿ ಅಂಗಡಿಗಳಲ್ಲೂ ಸಿಗುತ್ತದೆ. ವಿವರಣಾ ಪತ್ರಿಕೆ ಉಚಿತ.
ತಯಾರಕರು:—ಆಯುರ್ವೇದಾಶ್ರಮಂ, ಪೋ. ಬಾಕ್ಸ್ 482, ಮದ್ರಾಸ್.
ಸ್ಟಾಕಿಸ್ಟರು:—ಪಾಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

Degrees: Books: Medicines.

Free H. L. M. S., H. M. B., H. M. D. etc Free Homeo-Ayur-Unani-Naturo degres, by post also—Practitioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10. Enclose 2 annas stamps:—

Principal, Indian Homeopathic Institute and Society (Govt. Regd.)
P. O. MAHUVA, (Kathiawar Dt. India.)

ಶಾಂತಿಯ ಮದುವೆ
(SHANTHI'S MARRIAGE)

ಭಾಗ ೧—ವರಾನ್ವೇಷಣ.
(Part I—CHOOSING A HUSBAND)

ಲೇಖಕರ.—ಶ್ರೀ ಬಿ. ಶಾಮರಾಯ ಶೆಟ್ಟರು, ಬಿ.ಎ., ಎಲ್.ಟಿ., ಉಡುಪಿ.

The institution of marriage raises human beings far above other animals Still a certain section of men and women go without marriage for several reasons; yet they have no courage to face the facts born of such a life. We can dismiss such people as their life has not much bearing on this subject. Marriage is a great sacrament. It is the birth right of every man and woman. At a certain age and stage of a man or woman's life it is a great reflection to be recognised as unmarried. A man uncheered by the sunshine of a woman's life finds a great vacuum in his life; similarly the woman; for an unmarried woman is like a vessel without the helm. Both cannot live a complete but only a partial life. In India even in ancient times the institution of marriage was invested with great sanctity. Even death could not divide loving man and faithful wife. There are instances where women have burnt themselves on the funeral pyre of their deceased husbands thus defying death. They are halves of one whole over which death has no claim. There were love marriages. There was nothing like marriage of convenience or companionate marriage and the like. A woman then married a man-a manly man with whom she would run through the thick and thin of life; but today among certain sections of people **marriage means purchasing a meal-ticket.** There is no ideal behind it. It has degenerated to such an extent that everything is viewed commercially. Character is not the determining factor Today only money speaks everywhere. The ogre of dowry has assumed such serious proportions that for many parents their daughter's marriage when she is eligible in the matrimonial market sits like a nightmare and causes sleepless nights. It is the so-called educated people that have given an impetus to this dowry system. By the best brains a scheme of education must be evolved to educate first the so-called educated who flaunt their empty degrees and demand dreadful dowries. These so-called educated or half-educated unsympathetic fellows are the pirates and parasites of the matrimonial markets. They have 'unparadised this paradise' of matrimony which ought to bring so much happiness to the girl and her parents The educated boys remain unmarried and exploit the situation and go filibustering around satisfying their carnal desires paying court to venal beauties while the poor girls have to remain unmarried and the parents to face social odium. Who can solve this thorny problem and get relief to the girls? I would congratulate the first boy with a degree if he marries a poor girl without dowry and faces the rough and tumble of life by acting any part high or humble. We want such men today. That is sacrifice.

[ಕನಕಾಕ್ಷಿ ಹೆಗ್ಗಡ್ತೇರು ಮತ್ತು ಗೋಪಾಲ ಕೃಷ್ಣ ಶೆಟ್ರು ತಮ್ಮ ಮಗಳು ಶಾಂತಿಬಾಯಿಯ ವರಾನ್ವೇಷಣದ ವಿಷಯವಾಗಿ]

ಕನಕಾಕ್ಷಿ ಹೆಗ್ಗಡ್ತೇರು—ಏನು! ನೀವು ಯಾವ ಯೋಚನೆಯಲ್ಲಿಯೂ ಇಲ್ಲ-ಶಾಂತಿಯು ಹುಡುಗಿ ಹೋಗಿ ಹೆಂಗಸಾದಳು-ನೀವೇನೋ ಅವಳಿನ್ನೂ ಸಣ್ಣ ಮಗ್ಗುವೆಂದೇ ನೆನಸಿದ್ದೀರಿ. ತಕ್ಕದಾದ ಒಬ್ಬ ವರನನ್ನು ಹುಡುಕುವ ವಿಷಯದಲ್ಲಿ ನಿಮ್ಮ ತಲೆಯೇ ಇಲ್ಲವಲ್ಲಾ-

ಗೋಪಾಲಕೃಷ್ಣ ಶೆಟ್ರು—ನಿನಗೆ ತಲೆಯಲ್ಲಿ ಅದೇಯೋ ಇಡೀ ದಿವಸ? ಜಾಗಟೆಗೆ ಒಂದೇ ಸ್ವರ ಎಂಬ ಹಾಗೆ!

ಕನಕಾಕ್ಷಿ—ಹೌದು, ಹೌದು-ನೀವು ಹೀಗೆಯೇ ಹೇಳುತ್ತಾ ಕೂತುಕೊಳ್ಳಿ-ಕಡೆಗೆ ಎಷ್ಟು ತೊಂದ್ರೆಯಾಗುತ್ತೆ ನೋಡಿ! ಸ್ವಲ್ಪ ಸಮಯ ಹೋದಮೇಲೆ ಜನರು ಏನೇನು ಹೇಳಿಯಾರು ಗೊತ್ತೇ?

ಗೋಪಾಲಕೃಷ್ಣ—ಏನು, ಏನು ಹೇಳುತ್ತಾರೆ?

ಕನಕಾಕ್ಷಿ—ಹುಡುಗಿ ಪ್ರಾಯಕ್ಕೆ ಬಂದು ಒಂದು ವರ್ಷ ಆದರೆ ಹತ್ತುನ್ನುತ್ತಾರೆ-ಈಗಲೇ ನೆರೆಕರೆಯವರೆಲ್ಲ ಕೇಳಲಿಕ್ಕೆ ತೊಡಗಿದ್ದಾರೆ-"ನಿಮ್ಮ ಶಾಂತಿಗೆ ಈ ವರ್ಷ ಮದುವೆ ಉಂಟೊ, ಉಂಟೋ?" ಎಂದು-ಮೊನ್ನೆ ನಮ್ಮ ಅಣ್ಣನ ಹೆಂಡ್ತಿ, ಅಕ್ಕ, ಮದ್ರಾಸಿನಿಂದ ಬಂದವರು ಹೇಳುತ್ತಾರೆ-ಅವರ ಮಗಳು ಲೀಲೆಗೆ ವರಾನ್ವೇಷಣ ಆಯಿತಂತೆ-ಬರುವ ತಿಂಗಳು ನಾಲ್ಕು ಹೋಗುವಾಗ ಮದುವೆಯಂತೆ-ವಜ್ರದ ಬೆಂಡೋಲೆ-ವಜ್ರದ ಬಳೆ-ಸರ-ಪಟ್ಟಿಯಲ್ಲಾ ಮಾಡಲಿಕ್ಕೆ ಹಾಕಿದ್ದಾರೆ ಅಂತೆ-ಹುಡುಗ 'ಪನಸ್' ಬಿ. ಎ ಕಲಿಯುತ್ತಾನಂತೆ-ವರದಕ್ಷಿಣೆ ಎಂಟೂವರೆ ಸಾವಿರ ರೂಪ್ಯಾ ಅಂತೆ. ಅವರೆಲ್ಲಾ ನಮಗೆ ಹೆಂಗಸರಿಗೆ ಹೇಳಲಿಕ್ಕೆ ಬಂದಿದ್ದಾರೆ-ಹೆಂಗಸರಿಗೆ ಹೆಂಗಸರೇ ಹೇಳಬೇಕು—ಇಲ್ಲದಿದ್ದರೆ ನಾವು ಹೋಗುತ್ತೇವಾ? ಅದಿರಲಿ, ಅವರು ಕೇಳಿದರು, 'ನಿಮ್ಮ ಶಾಂತಿಯ ಗೋಜಿಯಲ್ಲಿಯೇ ನೀವು ಇಲ್ಲವಾ?-ಏನಿದು-ಅವಳಿಗೇನು ಚಿನ್ನಗಿನ್ನ ಮಾಡಿಸಿಲ್ಲವಾ?'-ಇದನ್ನು ಕೇಳಿ ನಮ್ಮ ಶಾಂತಿಯ ಮುಖ ಇಷ್ಟು ಸಣ್ಣದಾಯಿತು.

ಗೋಪಾಲಕೃಷ್ಣ—ಅದಿರಲಿ, ಅವರು ಗೊತ್ತುಮಾಡಿದ ಹುಡುಗ ಯಾರು ಅಂತೆ? ಮನೆತನ ಯಾವುದು? ಗುಣ ಹ್ಯಾಗೆ? ನೀನು ಬಹುಶಃ ಆಭರಣದ ಪಟ್ಟಿಮಾತ್ರ ಕೇಳಿದಂತೆ ಕಾಣುತ್ತದೆ-ಆದರೆ ಈ ಆಭರಣದ ಪಟ್ಟಿ ನಾಳೆ ಸಣ್ಣದಾದೀತಾ—ಹುಡುಗಿ-ಉಳಿದೀತಾ-ಮನೆಬಾಳೀತಾ-ಹುಡುಗಿಯ ಹೆತ್ತವರು ದಿವಾಳಿಯಿಂದ ದೂರವಾದಾರಾ?-ಇದನ್ನೆಲ್ಲಾ ಕೇಳಿದಿಯಾ ನೀನು? ನಿಮಗೆ ಹೆಂಗಸರಿಗೆ 'ಹುಡುಗ ದೊಡ್ಡದಾಯಿತೋ'-ಅಂತ ಬೊಬ್ಬೆ ಹೊಡಿಯಲಿಕ್ಕೆ ಮಾತ್ರ ಗೊತ್ತುಂಟು—ಮತ್ತೇನು ಗೊತ್ತಿಲ್ಲ-ಹೆಂಗಸರನ್ನು ಕರೆಯಬೇಕಾದರೆ ಹೆಂಗಸರೇ ಬರಬೇಕು-ಅದೊಂದು ಗೊತ್ತುಂಟು-ಉದ್ದ ಉದ್ದ ಆಭರಣದ ಪಟ್ಟಿ-ಜರಿ ಸೀರೆಗಳ ಪಟ್ಟಿ ಕೊಡಲಿಕ್ಕೆ ಗೊತ್ತುಂಟು ಮತ್ತೇನೂ ಗೊತ್ತಿಲ್ಲ-ನನಗೆ ಮುಂಚೆ ಆ ಹುಡುಗನ ವಿಷಯ ಹೇಳು-ನಮ್ಮ ಭಾವ ಪಣ್ಣಯ್ಯ ಹೆಗ್ಗಡೇರು-ಡಾಕ್ಟರಿಕೆ ವೃತ್ತಿಮಾಡಿ, ಕೆಂಪು ನೀರು ರೋಗಿಗಳಿಗೆ ಕೊಟ್ಟು ಬಿಳಿದು ರೂಪ್ಯಾ ಒಳಗೆ ಹಾಕಲಿಕ್ಕೇ ಕಲ್ತಿದ್ದಾ ಅಥವಾ ಹುಡುಗಿಗೆ ಒಂದು ತಕ್ಕ ವರನನ್ನೂ ಗಂಟುಹಾಕಲಿಕ್ಕೆ ಕಲ್ತಿದ್ದಾರಾ ಅಂತ ನೋಡೋಣ. ಈ ಇಂಗ್ಲೀಷ್ ಕಲ್ತವರು ಕೆಲವರು ಸುಲಭೋಪಾಯದಲ್ಲಿ ದುಡ್ಡು ಮಾಡುತ್ತಾರೆ ಖರೆ. ಆದರೆ ಸಂಸಾರದ ಸಮಸ್ಯೆಗಳನ್ನು ಬಿಡಿಸೋದರಲ್ಲಿ-ಪ್ರಪಂಚದ ಇತರ ಸಂಗ್ತಿಯಲ್ಲಿ-ಸ್ವಲ್ಪ ತಪ್ಪಿಹೋಗುತ್ತಾರೆ—ಆದಕಾರಣ ಅವರು ಗೊತ್ತುಮಾಡಿದ ಹುಡುಗ ಹ್ಯಾಗೆ? ಅಲ್ಲಾ, ಕೋಣ ಉಳಲಿಕ್ಕೆ ಬಂದೀತಾ-ಸುಮ್ನೆ ಭಾವನ ಅಕ್ಕಚ್ಚಿ-ಹಿಂಡಿ ತಿಂದು ಹಟ್ಟಿ ಗೂಟ ಚಂದಗೊಳಿಸೀತಾ?

ಕನಕಾಕ್ಷಿ—ಹುಡುಗ-ನೆಗ್ಗಿನ ಗುತ್ತು ತ್ಯಾಂಪು ಶೆಟ್ರ ಮಗ—ಭಾಸ್ಕರ, ಈಗ ಮದ್ರಾಸಿನಲ್ಲಿ 'ಪನಾಸ್' ಬಿ. ಎ. ಕಲಿಯುತ್ತಾನಂತೆ-ನಮ್ಮ ಅಕ್ಕನಿಗೆ ಆಳಿಯನ ವಿಷಯ ಹೇಳಲಿಕ್ಕೆ ಒಂದು ಬಾಯಿ ಸಾಕಾಗುವುದಿಲ್ಲ-ಊಟಕ್ಕೆ ಕೂತುಕೊಂಡಾಗ್ಲು ಅದೇ—ಬಚ್ಚಲುಕೊಟ್ಟಿಗೆಯಲ್ಲಿಯೂ ಅದೇ-ಎಲ್ಲಿ ಹೋದರೂ ಅದೇ.

ಗೋಪಾಲಕೃಷ್ಣ—'ಪನಸ್' ಬಿ. ಎ. ಯಾ 'ಪನಸಿಲ್ಲದ' ಬಿ. ಎ ಯಾ-ಇವಳೊಬ್ಬಳ್! ಅದೊಂದು 'ಪನಸ್' ಬಿ ಎ. ಅಂತ ಉಂಟೊ? 'ಪನಸಿಲ್ಲದ' ಬಿ. ಎ.ಯವರನ್ನು ನಾನು ಅನೇಕ ನೋಡುತ್ತೇನೆ-ಬಹುಶಃ ಇದೊಂದು ಗ್ರೇಡ್ ಮೇಲೆ ಅಂತ ಕಾಣುತ್ತದೆ-ಅಂದರೆ-ಅವನಿಗೆ ಮಾತ್ರವಲ್ಲ ನಾಳೆ ಹುಡುಗಿಗೂ ಬಹುಶಃ 'ಪನಸಿಲ್ಲ'-ಆದಿರಲಿ-ನೆಂಟಸ್ತಿಕೆಯ ವಿಷಯ ಮತ್ತೇನೆಲ್ಲ ಕಣಕಟ್ಟುಗಳಾಗಿವೆಯಂತೆ?

ಕನಕಾಕ್ಷಿ—ಅದೇ ಹೇಳಿದೆ ಅಲ್ಲಾ-

ಗೋಪಾಲಕೃಷ್ಣ—ಪೂರ್ಣ ಕೇಳುವ-

ಕನಕಾಕ್ಷಿ—ಹುಡುಗಿಗೆ ಮೈತುಂಬಾ ಚಿನ್ನ, ಕಿವಿತುಂಬಾ ವಜ್ರ, ಮದುಮಗನಿಗೆ ಹೆರವಾಣ ತುಂಬಾ ವರದಕ್ಷಿಣೆ, ಎಂಟೂವರೆ ಸಾವಿರ ರೂಪ್ಯಾ, ಅದೂ ಅಲ್ಲದೆ ಮುಂದೆ ಕಲಿಯುವ ಖರ್ಚು-ಗಿರ್ಚು ಎಲ್ಲಾ ಅಣ್ಣನದ್ದೆ ಅಂತೆ

ಗೋಪಾಲಕೃಷ್ಣ—ಅಯ್ಯೋ ದೇವ್ರೇ! ಮನೆ ಉಳ್ದೀತಾ!! ನಮ್ಮ ಭಾವ ಪಾಪ ಬದುಕಿಯಾರು? ಏನಾ ದೇವರೇ ಬಲ್ಲ.

ಕನಕಾಕ್ಷಿ—ಎಂಥಾದ್ದು ಹೇಳ್ತೀರಿ! ಹುಚ್ಚು, ಹುಡುಗನ ತಾಯಿ ಮನೇಲಿ ತಂದೆ ಮನ್ಯೇಲಿ ತುಂಬಾ ಉಂಟಂತೆ, ಅಲ್ಲಾ?

ಗೋಪಾಲಕೃಷ್ಣ—ಇರಬಹುದು-ಇರಲಿ,

ಕನಕಾಕ್ಷಿ—ಅದಾಯಿತಲ್ಲಾ, ಈಗ ನಮ್ಮ ಶಾಂತಿ ವಿಷಯದಲ್ಲಿ ಏನು? ಮೊನ್ನೆ ಅಕ್ಕ ಹೇಳುತ್ತಾರೆ- 'ನಿನ್ನ ಹುಡುಗಿದ್ದು ಏನು? ಮದುವೆ ಅಂದರೆ ಏನು ಅಂತ ಮಾಡಿದ್ದೀರಿ ನೀವು? ಇನ್ನು ಏಳು ಕೆರೆನೀರು ಬಚ್ಚಲಿಕ್ಕೆ ಉಂಟು. ಏನು ಕುಶಾಲಾ?" ಅನ್ನುತ್ತಾರೆ. ನಿಮ್ಮದು ಎಂಥಾದ್ದು ಸಂಗ್ತಿ; ನೀವು ಯಾವದರಲ್ಲಿಯೂ ಇಲ್ಲ.

ಗೋಪಾಲಕೃಷ್ಣ—ನಾನು ಏನು ಈಗ ಹೊಡಿಯಬೇಕು? ನಮ್ಮ ಹುಡುಗಿಗೊಂದು ಗಂಡ ಇಲ್ಲ ಅಂತ ಬ್ರಹ್ಮ ಮಾಡಿದ್ದಾನೆ? ಏನಾ ಏನಾ! ನಿನ್ನ ಡಾಕ್ಟರು ಅಣ್ಣಂದು ಆಯಿತಲ್ಲಾ- ಇನ್ನೊಬ್ಬ ಸಣ್ಣ ಅಣ್ಣ ಇದ್ದಾರಲ್ಲ? ಮನೆ ಅಣ್ಣ-ಪಟ್ಟು ಹೆಗ್ಡೇರು, ಅವರನ್ನೊಮ್ಮೆ ಕರೆಸಿ ಹೇಳು-ನಮ್ಮ ಗುಜ್ಜೆಗುತ್ತಿನಲ್ಲಿ ಬಾಬುಶೆಟ್ರ ಮಗ, ಸ್ವಲ್ಪ ಇಂಗ್ಲೀಷ್-ಗಿಂಗ್ಲೀಷ್ ಕಲಿತಿದ್ದ, ನೋಡುವುದಕ್ಕೆ ಚಂದ ಇದ್ದಾನೆ, ಸ್ಮಾಲ್ ಗಿಯಿಲ್ ಮಾಡುತ್ತಾನೆ, ಇಮಿಟೇಶನ್ ಕಲ್ಲಿನ ಹಾಗೆ ಮಿಂಚುತ್ತಾನೆ, ತಾಯಿಯ ಮನೆಯಲ್ಲಿಯೂ ತೊಂದರೆಯಿಲ್ಲ,—ನನ್ನ ಮನಸ್ಸಿಗೆ ಆ ನೆಂಟಸ್ತಿಕೆ ಆದೀತು ಅಂತ, ನಿನ್ನ ತಾಯಿ-ಗೀಯಿ ಹತ್ತರ ಕೇಳು—

೦ ೦ ೦

(ಮೂರು ದಿವಸಗಳ ಮೇಲೆ ಕನಕಾಕ್ಷಿಯು ತನ್ನ ಅಣ್ಣ ಪಟ್ಟು ಹೆಗ್ಗಡೇರ ಹತ್ತರ)

Transport & Car Owners



ARE SPECIALLY INVITED TO VISIT
OUR SHOW ROOM
for economical transport maintenance.
CANARA AUTOMOBILES - - - - - - MANGALORE.

AUGUSTINE & CO.

Stockits:—

Wellknown ceylon, Nilgri, Darjeeling & Assam Tea & Coffee All sorts of Hotel & family Tea Mixures as well as Coffee can be had at moderate rates.

ಮುಂಬಾಯಿಯಲ್ಲಿ ನಮ್ಮ ಗಿರಾಕಿಗಳು ಹಲವು ವರ್ಷಗಳಿಂದ ನಮ್ಮ ಚಾ ಕಾಫಿಯನ್ನು ಉಪಯೋಗಿಸಿ ಸಂತುಷ್ಟರಾಗಿದ್ದಾರೆ.

ಹೋಟೆಲುಗಳಿಗೆ ಬೇಕಾಗುವ ಟೀ ಮಿಕ್ಸರ್ ವ ಕಾಫಿ ಹುಡಿ, ಮನೆಗಳಿಗೆ ಬೇಕಾಗುವ ಚಾ-ಕಾಫಿ, ನಮ್ಮಲ್ಲಿ ಸದಾ ಮಿತ ಹಿತದರಕ್ಕೆ ದೊರೆಯುತ್ತದೆ. ಪ್ರಾಮಾಣಿಕತೆಯೇ ನಮ್ಮ ಆದರ್ಶ. ಗಿರಾಕಿಗಳ ಸೌಕರ್ಯವೇ ನಮ್ಮ ಧ್ಯೇಯ.

ಪರೀಕ್ಷಿಸಿರಿ! ಖಾತ್ರಿ ಮಾಡಿಕೊಳ್ಳಿರಿ.

ವಿಳಾಸ: ಆಗಸ್ಟಿನ್ ಎಂಡ್ ಕೋ, ಮಾಂಟ್‌ರೋಡು, ಮಜಗಾಂ, ಮುಂಬಯಿ.

MOUNT ROAD, MAZAGAON, BOMBAY.

ಕನಕಾಕ್ಷಿ—ಹೌದಾ, ಅಣ್ಣ-ಹುಡುಗಿ ಒಂದು ದೊಡ್ಡದಾಗುತ್ತಾ ಬಂತು, ನೀವು ಯಾರೂ ಆ ಗೊಡವೆಯಲ್ಲಿ ಇಲ್ಲ ಅಲ್ಲವಾ-ಅವರು ಹೇಳುತ್ತಾರೆ ಗುಜ್ಜೆಗುತ್ತಿನ ಬಾಬ ಶೆಟ್ರ ಮಗ ಒಬ್ಬ ಇದ್ದಾನಂತಲ್ಲ? ಏನಾದರೂ ಮಾತಾಡಿಸಬಹುದಾ? ತಂದೆ-ಗಿಂದೆ ತುಂಬಾ ಕೊಟ್ಟಿದ್ದಾರೆ ಅಂತೆ-ತಾಯಿ ಮನೆಯಲ್ಲಿಯೂ ಗಟ್ಟಿ ಇದ್ದಾರೆ ಅಂತೆ, ಅಲ್ವಾ?

ಪಟ್ಟುಹೆಗ್ಗಡೇರು—ಇನೆಲ್ಲಾ ಹೌದು ನನಗೆ ಗೊತ್ತಿದ್ದ ಸಂಗ್ತಿಯೇ, ಆದರೆ ಹುಡುಗ ಮಾತ್ರ ಗೋವೆ ಮುಕ್ಕಾಲು.

ಕನಕಾಕ್ಷಿ—ಅಂದರೆ?

ಪಟ್ಟುಹೆಗ್ಗಡೇರು—ಅಂದರೆ! ಅಂದ್ರೆ! ಗೋವೆ ಮುಕ್ಕಾಲು ಮಾತಾಡುತ್ತ್ರ-ಹುಟ್ಟಿದ್ದು ಬಾಕಿ ಮುಕ್ಕಾಲುಗಳ ಹಾಗೆ ತಾವ್ರದಿಂದಲೇ-ಆವರ ಪೇಟೆಯಲ್ಲಿ ಯಾರೂ ತೆಕ್ಕೊಳ್ಳುವ ಹಾಗೆ ಇಲ್ಲ.

ಕನಕಾಕ್ಷಿ— ಇದೆಲ್ಲಾ ಪದ ಯಾರಿಗೆ ಗೊತ್ತಾಗುತ್ತದೆ ಅಣ್ಣಾ? ಅರ್ಥ ಹೇಳಲಿಕ್ಕಾಗದ?

ಪಟ್ಟುಹೆಗ್ಗಡೇರು—ಅರ್ಥ ಬೇಕು, ಅರ್ಥ ಹೇಳಿದರೆ ನಾತ ಬಂದೀತೆಂತ ಪದ ಹೇಳದೆ. ನೋಡು, ನಮ್ಮ ಭಾವನಿಗೆ ತಲೆ ಉಂಟಾ? ಬಾಕಿಯವರಿಗೆಲ್ಲಾ ನಕಲಿ ಮಾಡುವ ಅವರು ಹುಡುಕುವುದು ಅಂಥಾದ್ದೇ. ಆ ಹುಡುಗನಿಗೆ ಇಲ್ಲದ ದುರ್ಬುದ್ಧಿ ಯಾವುದೂ ಇಲ್ಲ, ಯಾವಾಗಲೂ ಜಲ್ಲಿಮಾಡಿ ಪೇಟೆಯಲ್ಲಿರುವುದು. ಆವನು ನೋಡದ ಗಲ್ಲಿ ಉಂಟಾ? ಓಪರೇಶನ್ ಮೂರೋ ನಾಲ್ಕೋ ಸಾರಿ ಆಗಿದೆ. ಕುಡಿಯುವುದು ಜೋರು, ರಾತ್ರಿಹಗಲು ಜುಗಾರಿ, ಮತ್ತೇನು ಬೇಕು? ಒಳ್ಳೇ ಕುಳವಾರು ಸಿಕ್ಕಿತು ನಿಮಗೆ! ನಿಮಗೆ ಬೇಕಾದ್ದೇ ಇದು!!

ಕನಕಾಕ್ಷಿ—ಹಾಗಾದರೆ ನೀವು ಒಂದು ಒಳ್ಳೇ ಹುಡುಗನನ್ನು ನೋಡಿ ಅಣ್ಣಾ; ದಮ್ಮಯ್ಯ ಅಣ್ಣ, ಈ ವರುಷ ಆಗದ ಇದ್ದರೆ ಮರ್ಯಾದೆ ಉಳಿಯಲಿಕ್ಕಿಲ್ಲ.

ಪಟ್ಟುಹೆಗ್ಗಡೇರು—ಹಾಗಾದರೆ ಒಂದು ಮಾಡಿದರೆ ಏನು? ನಮ್ಮ ಚೆಟ್ಟಿನ ತುಕ್ರನ ಮಗ ಅಂಗರ ಇದ್ದಾನಲ್ಲ-ಅವನಿಗೆ ಹಜೂರಲ್ಲಿ ಒಂದು ಕೆಲಸವುಂಟು, 'ಯುಪ್ಪ' ಪಾಸಾಗಿದ್ದಾನೆ. ಈಗ ಸಂಬಳ ಮುವತ್ತು, ಹುಡುಗ ಬುದ್ಧಿವಂತ, ಗುಣವಂತ, ರೂಪವಂತ. ನೌಕರಿಯಲ್ಲಿ ಮೇಲೆ ಮೇಲೆ ಏರಿಯಾನು. ಅವನನ್ನು ಮಾತಾಡಿಸಲೇನು?

ಕನಕಾಕ್ಷಿ—ನಿಮ್ಮ ಭಾವನ ಹತ್ತರ, ನಮ್ಮ ಮಾವನ ಹತ್ತರ, ಮಾಯಿಯ ಹತ್ತರ ಕೇಳುವ—

ಪಟ್ಟುಹೆಗ್ಗಡೇರು—ಆಯಿತು ಅವರ ಹತ್ತರ ಕೇಳು; ನಾನು ಸಹ ನಮ್ಮ ತಾಯಿಯ ಹತ್ತರ ಕೇಳುತ್ತೇನೆ.

(ಮರುದಿವಸ ಕನಕಾಕ್ಷಿ ತನ್ನ ಗಂಡ, ಅತ್ತೆ ಮಾವ ಊಟಕ್ಕೆ ಕುಳಿತಿದ್ದಾಗ)

ಕನಕಾಕ್ಷಿ—ಅಣ್ಣ ಹೇಳುತ್ತಾರೆ-'ಚೆಟ್ಟಿನ ತುಕ್ರನ ಮಗ ಅಂಗರನಿಗೆ 'ಹಜಾರಿನಲ್ಲಿ' ಕೆಲಸವುಂಟು. ಈಗ ಮುವತ್ತು ರೂಪಾಯಿ ತಲಬು, ಇನ್ನು ಮುಂದಕ್ಕೆ ಮೇಲೆ ಹೋದಾನು. ಚಿನ್ನದಂಥಾ ಗುಣ, ಒಳ್ಳೇ ರೂಪವಂತ, ಎಳೇ ಪ್ರಾಯ' ಅವನಿಗೆ ನಮ್ಮ ಶಾಂತಿಯನ್ನು ಕೊಡೋಣಾಂತಾರೆ. ನೀವೇನು ಹೇಳ್ತೀರಿ?

ಮಾವ—ಏನು? ಚೆಟ್ಟಿನ ಅಂಗರನಿಗಾ? ಏನು ಸೊಕ್ಕು ನಿನ್ನ ಅಣ್ಣನದ್ದು! ಅವನ ತಂದೆ ಕಟ್ಟಿಗೆ ಮಾರಿ ಜೀವಿಸುತ್ತಾನೆ. ಅವನು ಚಾಲಗೇಣಿ ಒಕ್ಕಲು. ನನ್ನ ಮೊಮ್ಮಗಳು ಶಾಂತಿಯನ್ನು ಅಂತ ಗುಡಿಸಲಿಗೆ ಕೊಡುವುದಾ? ಊಂ-ಊಂ.

ಮಾಯಿ—ಎಂಥಾದ್ದು ಮಗ ಹೇಸಿಗೆ ಇದು! ಯಾರಾದರೂ ನಮ್ಮ ಹೊಸ ನೆಂಟರು ಯಾರೂಂತ ಕೇಳಿದರೆ ಏನೂಂತ ಹೇಳಲಿ? ಕಟ್ಟಿಗೆ ತುಕ್ರ ಅಂತ ಯಾವ ಬಾಯಿಂದ ಆಡೋದು!

ಗೋಪಾಲಕೃಷ್ಣ—ಆ ಪಟ್ಟಿಂಗ ಭಾವ ನಮ್ಮ ಹೆಬ್ಬಾಗಿಲು ಹೊಕ್ಕಲಿ ಮಾತ್ರ-ಏನು! ಆ ತುಕ್ರನ ಮಗನಿಗೆ ನನ್ನ ಮಗಳು? ಅವನಿಗೆ ನೂಸೆ ಮೇಲೆ ಅಭಿಮಾನ ಉಂಟಾ? ತೇಟ್ ದಪ್ಪ ಅಂಗ-ಛೀಮ-ಎರಡುಸೇರು ಅಕ್ಕಿದ್ದು ಹೊಡಿಯಲಿಕ್ಕಾದಾನು ಮತ್ತೆ ಏನೂ ಸಾಗುವುದಿಲ್ಲ ಅವನಿಂದ. ಅಹ್ಹಾ ಹ್ಹಾ ತಂಗಿಗೆ ಒಂದು ನೆಂಟಸ್ತಿಕೆ ತೋರಿಸಿಕೊಟ್ಟದ್ದೇ! ಅದೆಲ್ಲ ಬೇಡ, ನನಗೆ ಈವತ್ತು ಗುಜ್ಜೆಗುತ್ತಿನ ಬಾಬಶೆಟ್ರ ನಮ್ಮ ಗೋಳಿಕಟ್ಟೆಯ ಕೋಳಿಯಂಕದಲ್ಲಿ ಸಿಕ್ಕಿದರು. ಪ್ರಸ್ತಾಪ ಎತ್ತಿದ್ದ, ನಾಡದ್ದು ಅವರಲ್ಲಿ ನೆಂಟರು ಬರುವುದಂತೆ. ತಂದರೆ ಅವರ ಮಗಳು ವನಜಾಕ್ಷಿಗೆ ನೆಂಟಸ್ತಿಕೆ ಮಾತಾಡುವುದಕ್ಕೆ- ನಾನು ಮಾತಾಡುವ ಹುಡುಗನ ತಂಗಿ. ನಮ್ಮನ್ನು ಅಲ್ಲಿ ಆ ದಿವಸ ಬರಹೇಳಿರುವರು ಅಲ್ಲಿಯೇ ಮಾತಾಡುವ ಅಂತ—ನಮ್ಮ ಒಕ್ಲು ಕಬುರ ಮತ್ತು ನಾನು ಅಲ್ಲಿ ಹೋಗಿ ಬರುತ್ತೇನೆ.

ಮಾಯಿ—ಗುಜ್ಜೆಗುತ್ತಿನ ಬಾಬಶೆಟ್ರ ಮಗನಾ? ನಾನು ಕೇಳಿದ್ದೆ,—ಬಾಬಶೆಟ್ರ ಕಾಂಟ್ರಾಕ್ಟರ್, ಹೆಂಡತಿ ಮಕ್ಕಳಿಗೆ ಧಾರಾಳ ಕೊಟ್ಟಿದ್ದಾರೆ, ಹುಡುಗನ ತಾಯಿಮನೆ ಮದ್ದ್ಯಗುತ್ತು, ಭಾರೀ ದೊಡ್ಡ ಗುತ್ತು, ಹೆಸರುಹೋದ್ದು, ನಾಲ್ಕು ಮಾಗಣೆಗೂ ಆಡಿಸ್ಥಾನ, ಆದೀತು ಮಗ, ಕನಕಾಕ್ಷಿ!

ಕನಕಾಕ್ಷಿ—ನಮ್ಮ ಶಾಂತಿ ಇಂಥವರ ಕೈಗೇ ಬೀಳಬೇಕು.

ಂ ಂ ಂ ಂ

ನೆಂಟಸ್ತಿಕೆ ಮಾತಾಡಿ ಹಿಂದೆ ಬಂದ ಗೋಪಾಲಕೃಷ್ಣ ಶೆಟ್ರು-ಆಯಿತು ಎಲ್ಲಾ ವಿಲೆವಾರಿ-ನಾಡದ್ದು ಹುಡುಗಿ ನೋಡುವುದಕ್ಕೆ ಬಾಬ ಶೆಟ್ರು ಬರುತ್ತಾರಂತೆ-ವರದಕ್ಷಿಣೆ ಐದುಸಾವಿರಕ್ಕಿಂತ ಕಮ್ಮಿ ಸಾಧ್ಯವಿಲ್ಲಾಂತಾರೆ-ಎಷ್ಟು ಮಾತ್ರಕ್ಕೂ ಸಾಧ್ಯವಿಲ್ಲವಂತೆ.

ಕುಟುಂಬದವರು—ಐದುಸಾವಿರ ವರದಕ್ಷಿಣೆಯಾ? ಅದು ಸ್ವಲ್ಪ ಜಾಸ್ತಿಯಾಯಿತಲ್ಲ!

ಗೋಪಾಲಕೃಷ್ಣ ಶೆಟ್ರು—ಏನು ಮಾಡಲಿ? ನಮಗೆ ಯೋಗ್ಯರ ನೆಂಟಸ್ತಿಕೆ ಬೇಕಾದರೆ ಕೊಡಬೇಕು.

ಂ ಂ ಂ ಂ

(ಕನಕಾಕ್ಷಿಯವರು ತಬುರನಿಗೆ ಬಡಿಸುವಾಗ)

ಕನಕಾಕ್ಷಿ—ಹೌದಾ ತಬುರಾ! ಹ್ಯಾಗೆ ನಮ್ಮ ಹೊಸ ನೆಂಟರ ಸಂಗ್ತಿ?

ತಬುರ—ಏನು ಹೇಳುವುದು, ಒಡತಿ! ಆ ಮನೆ ಅಂದರೆ ಒಂದು ದೊಡ್ಡ ಕೋಟೆಯೇ-ಅರಮನೆ ಹಾಗೆ! ಅಂಗಳದಲ್ಲಿ ಅಕ್ಕಿ 'ಕೂಟಾಯಿ' ಅದಿ ಕಂಡ್ರ ಕಣ್ಣು ಹಾರ್ತದೆ!-ಎದುರು ದೊಡ್ಡ ಬಾಕ್ಯಾರು, ಕಂಬಳ ಗದ್ದೆ, ತೆಂಗಿನ ತೋಟ-ನಮ್ಮ ಸಣ್ಣ ಒಡತಿ ಆ ಮನೆಗೆ ಒಂದು ಸುತ್ತು ಬಂದು ಬಿಟ್ಟರೆ ನಾಕು—ಹಸಿವು ಬಾಯಾರಿಕೆ ಎಲ್ಲಾ ಓಡಿಹೋಗಬೇಕು- ಅಳಿಯಾಂದರೆ ಏನ- ಹೇಳಲಿ! ರೂಪು ಚಿನ್ನ—ನಾಕು ಮುತ್ತು-ಬಾಬಶೆಟ್ರ ಹೆಂಡ್ತಿ ನನಗೆ ಬಡಿಸಲಿಕ್ಕೆ ಬಂದದ್ರ-ಆ ಮೂಕುತಿಯ ಪ್ರಭೆಯಲ್ಲಿ ನಾನು ಬೆಪ್ಪಾಗಿ ಹೋದೆ-ಹೊಯ್ದು ತುಪ್ಪಾಂದರೆ ಎಷ್ಟು ಒಡತಿ! ಕೈಪುರಿಮುಳಿ ಇನ್ನೂ ಹೋಗಲಿಲ್ಲ-ನೆಂಟರ ಮನೆ ಅಂದರೆ ಹಾಗೆ ಆಗಬೇಕ್-ನನ್ನಂಥಾ ಬಡವ ಹೋದರೆ ಹೊಟ್ಟೆ ತುಂಬ ಊಟ ಸಿಕ್ಕಬೇಕ್-ಏನು ಸಂಪತ್ತು-ವೈಕುಂಠವೇ ಅಲ್ವಾ!! ನಿಮ್ಮ ಅಳಿಮ ಮತ್ತು ಮಗಳು ಶ್ರೀಮನ್ನಾರಾಯಣ ಮತ್ತು ಲಕುಮಿಯ ಹಾಗೆ-ಪೂರ್ವಜನ್ಮದ ಸುಕೃತ ಬೇಕು ತಾಯಾ! ಅಂಥಾ ಗುತ್ತಿನ ಮಾಯಿಗಾ ಬನ್ನಿಸೋಕೆ!

ಕನಕಾಕ್ಷಿ—ಆದರೆ ಹುಡುಗನ ಬುದ್ಧಿ ಮಾತ್ರ ಸ್ವಲ್ಪ ಒರಟು ಅಂತ ಸುದ್ದಿ ಉಂಟಲ್ಲ!

ತಬುರ—ಅದೊಂದು ದೊಡ್ಡ ಸಂಗ್ತಿಯೇ ಅಲ್ಲ. ಮದ್ವೆ ಆದ ಮೇಲೆ ಎಲ್ಲ ಸಮಬತ್ತ್. ಈಗೇನೋ ಹುಡುಗಾಟಿಕೆ! ಹಾಗೆ ಇರೋದು ಸಾಜಾ-ಭಾರಿ ಗುತ್ತಿನ ಮಕ್ಕಳಲ್ವಾ? ಹಾಗೆಲ್ಲ ಇಲ್ಲಾಂತಾದ್ರೆ ಏನು ಭವಂ ಉಂಟು! ಗುತ್ತಿನ ಮಕ್ಕಳಾಗಿ ಖಾಲಿ ಕೂಲಿ ಗಂಡುಗಳ ಹಾಗೆ ಚಪ್ಪೆ ಆಗಿರೋದಾ? ಆದರೆ ಕ್ರಮೇಣ ಅದೆಲ್ಲ ನಿಂತು ಹೋತ್ತ್! ನೆಂಟಸ್ತಿಕೆ ಅದೇ ಆಯಿಕ್. ನಾಡದು ಅವರು ಬರುವಾಗ 'ಜಗ' ಮಾಡಿಬಿಡಿ.

ಂ ಂ ಂ ಂ

ಬರುವ ಲೇಖನ:—ಶಾಂತಿಯ ಮದುವೆ-ಭಾಗ ೨—'ವಿವಾಹ ಸಮಾರಂಭ'

— ಕೂದಲು ರಂಗುಸ್ತ ಜಿಸಿರಿ —

ಈ ತೈಲದ ಲೇಪನಮಾತ್ರದಿಂದಲೇ ಕೂದಲು ಬಿಳಿದಾಗುವುದು ನಿಲ್ಲುವುದು, ನೆರೆತ ಕೂದಲು ಪೂರ್ಣ ಕಪ್ಪಗಾಗಿ ಬಿಳಿದಾಗು ನಾಶವೊಂದುವುದು. ಸಾವಿರಾರು ಸರ್ಟಿಫಿಕೇಟುಗಳು ನಮಗೆ ದೊರೆತಿರುವುದೇ ನಮ್ಮ ತೈಲದ ಯೋಗ್ಯತೆಯನ್ನು ಬೀರುವುದು. ಅಪ್ರಯೋಜನಕಾರಿಯೆಂದು ರುಜುಮಾಡಿಸಬಲ್ಲವರಿಗೆ ಕೊಟ್ಟ ಹಣವಾಪಸ ಕೊಡುವ ಕರಾರಿದೆ. ಅಲ್ಪಸ್ವಲ್ಪ ನೆರೆತ ಕೂದಲುಗಳಿಗೆ ಬೇಕಾಗುವ ತೈಲಕ್ಕೆ ರೂ. 4, ಕಾಲು ಪಾಲಿಗೂ ಮಿಕ್ಕಿರುವುದಾದರೆ ರೂ. 7ರಷ್ಟು ಬೆಲೆಯ ತೈಲವು ಬೇಕಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲೇ.

Hazara & Co.,

P. O. Behar Nersery Darbhnaga.

ಸ್ಥಾಪನೆ: ಕ್ರೌನ ರಬ್ಬರ ಸ್ಟಾಂಪ ಕಂಪನಿ 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಪೇಡಿಗಳ ಚೀಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

CROWN RUBBER STAMP CO.,

Balmat Road, MANGALORE.

Included by the Mysore Govt. Stores, Purchase Committee in the list of approvedfirms

ಕೇವಲ ಧರ್ಮಾರ್ಥ!

ಈ ಜಾಹೀರಾತಿನ ಕೂಪನನ್ನು ತರುವವರಿಗೆ ಅವರ ಫೋಟೋವನ್ನು ಧರ್ಮಾರ್ಥವಾಗಿ ತೆಗೆದುಕೊಡಲಾಗುವುದು

ತ್ವರೆ ಮಾಡಿರಿ! ಬೊಂಬಾಯಿ ಪಟ್ಟಣಿಗರೆ ತ್ವರೆ ಮಾಡಿರಿ!!

● ಈ ನಮ್ಮ ಫೋಟೋವನ್ನು ಎನ್‌ಲಾರ್ಜ್‌ಮೆಂಟಿಗೆ ಬರೇ ರೂ. 1/. ಮಾತ್ರ. (ಸೈಜ್ 6"×8").

ಹೊರಗಿನವರು ಈ ಕೂಪನನೊಂದಿಗೆ ತಮ್ಮ ಫೋಟೋ ಕಳುಹಿಸಿದರೆ ಅದನ್ನು 6'×8' ಸೈಜಿನಲ್ಲಿ ರೂ. 2-8-0ಕ್ಕೆ ಎನ್‌ಲಾರ್ಜ್‌ಮಾಡಿಕೊಡಲಾಗುವುದು. 16×'20'ರ ದೊಡ್ಡ ಸೈಜಿಗೆ ರೂ. 5 ಮಾತ್ರ. ನಮ್ಮ ಆಫೀಸು ಸಮಯ ಬೆಳಗ್ಗೆ 9ರಿಂದ ಸಂಜೆ 7, ಆದಿತ್ಯವಾರ ಬೆಳಗ್ಗೆ 9ರಿಂದ ಸಂಜೆ 4 ಗಂಟೆ ತನಕ

ಕೆ. ಎಚ್. ಪಥಕ್

276, ಸೂರ್ಯಮಹಾಲ್	ರೋಯಲ್ ಆರ್ಟ್ ಸ್ಟುಡಿಯೋ,
ಗಿರ್ಗಾಮ್ ರೋಡು, ಬೊಂಬಾಯಿ 14	183 ಹೋರ್ನ್ಬಿ ರೋಡು, ಬೊಂಬಾಯಿ 14

Established] [1906

THE

UNITED INDIA

LIFE ASSURANCE Co., LTD.

HEAD OFFICE—MADRAS.

Trustee—The Official Trustee to the Government of Madras.

Policies in force exceed **SIX** Crores.
Annual income exceeds – Rs. **30** lakhs.
Total assets exceeds – Rs. **110** lakhs.
Total claims paid exceed Rs. **40** lakhs.

The oldest & largest life assurance company of South India accepted by the Government as satisfactory for the purpose of exemption from the operation of the Provident Fund Rules to Teachers in aided Schools & for the purpose of utilisation of P. F. Contributions for payment of premiums on the lives of Government Local Board & Municipal servants.

For further particulars please apply to:—

THE BRANCH MANAGER,

THE UNITED LIFE ASSURANCE COMPANY, LTD.,

FELIX PAI BAZAR, MANGALORE, S. K.

K. R. Hebbar, B.A., ORGANISER, UDIPI, S. K.	*OR*	**K. Keshava Shenoy**, M.A., ORGANISER, Pentlanpet, MANGALORE.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, —— ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಚನ್ನು ಹೊರಗೆ ಹಾಕಿ ಪ್ರಸೃತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 1-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು:— ಶ್ರೀ. ಪಿ. ಮಹಾಬಲ ಪೆಜ್ತಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja,	ಯಂ. ಆರ್. ಪೂಂಜ,
President & Manager.	ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾಯಿತ (first quality, selected) ವಿಲಾಯ್ತಿ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,
ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,
Hampankatte, **MANGALORE.**

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ. ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1ಕ್ಕೆ 12 ಆಣೆ, ಟಿ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ,
ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ.**

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಡುನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ. ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ ಬಹಿಷ್ಠೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತು ಸಂಬಂಧವಾದ ಎಲ್ಲಾ ರೋಗಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು
"ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ
ಅಗತ್ಯವಾಗಿ ಇರಲೇಬೇಕಾದ್ದು.
ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,
ಬ್ರಾಂಚ್—ಮಂಗಳೂರು.

ನಿಮ್ಮ ಇಚ್ಛೆಯು ನೆರವೇರುವದು.



ಯಾವ ವಿಷಯದಲ್ಲಿ ನೀವು ನಿರಾಶರಾಗಿದ್ದೀರೋ ಅಂತಹ ವಿಷಯಗಳಲ್ಲಿ ನಿಮ್ಮ ಅಭೀಷ್ಟವನ್ನು ಸಾಧಿಸಲಿಕ್ಕೆ ನಮ್ಮ ವಶೀಕರಣಯಂತ್ರವನ್ನು ತರಿಸಿಕೊಳ್ಳಿರಿ.

ಈ ಯಂತ್ರವನ್ನು ನಿಮ್ಮ ಬಳಿ ಇರಿಸಿಕೊಂಡು ನಿಮಗೆ ಆಗಬೇಕಾದ ವಿಷಯವನ್ನು ಮನಸ್ಸಿನಲ್ಲಿ ಧ್ಯಾನಿಸಿದರೆ ನಿಜವಾಗಿಯೂ ನಿಮ್ಮ ಅಭಿಲಾಷೆಯು ಪೂರೈಸುವದು.

ಸೂರ್ಯನು ಪಶ್ಚಿಮದಲ್ಲಿ ಉದಯಿಸಿದರೂ ಈ ಯಂತ್ರವು ಎಂದಿಗೂ ನಿರರ್ಥಕವಾಗುವದಿಲ್ಲ. ಅತಿಪ್ರಯಾಸದಿಂದ ಈ ಯಂತ್ರವನ್ನು ತಯಾರುಮಾಡಿದೆ.

ಯಂತ್ರ 1ಕ್ಕೆ ರೂ. 2-4-0 ವಿದೇಶಕ್ಕೆ 5 ಶಿಲಿಂಗ್. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ಅಮೇರಿಕನ್ ಮೆಸ್ಮೆರಿಸಮ್ ಹೌಸ್	American Mismerism House
ಪೋ. ಬಾ. ನಂ. 27 (N.Y.U.)	P. B No. 27(N. Y. U.)
ಅಮೃತಸರ (ಇಂಡಿಯಾ)	Amritsar (India)

Rev. Fr. P. W. Farias,

ST. PAUL'S CHURCH,
Bolkunje Post, S. K.
Dated 4th January 1939.

To

THE JOINT MANAGERS,
The C P. C. Co. Ltd., **MANGALORE.**

SIR

I thank you most sincerely for the promptness with which you arranged to take us to Mangalore and back during the grand occasion of the Diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the congress.

The glorious success of our congress is also due to your exertion in putting up the various lights some of which I hear were done voluntarily.

May the blessings of the Almighty fall on you all and may you be able to do much good to the public.

Renewing my thanks,
I remain,
Yours sincerely,
(*Sd.*) P. W. Farias.

To
THE JOINT MANAGERS,
THE COMBINED BOOKING AGENCY,
MANGALORE.

Sri Parshwanathaswamy
Panchakalyana Pooja Mahothsawam
VENOOR (S. Kanara 1939).

Dear Sirs,

Please permit us to express our thanks on behalf of the above committee for the efficient service rendered by your Combined Booking Agency staff at Venoor to the visitors of the Panchakalyana Pooja Mahosthamam celebrations held this year.

Our thanks are also due to Moodabidre Booking Clerk Mr. B Krishnnayya and also his other mates and Mr. Raghavendra Bhandary who was specially come down from Mangalore to see the needs of and comforts of the travelling Public.

Thanking you once again,
We remain,
Yours faithfully,
(*Sd.*) **M. Jagathpal,**
(*Sd.*) **M. Pachappa Shetty,**
VENOOR, (*Sd.* in Canarese) **Anantharaja Shetty,**
Dated 6-2-'39. (Sd.) **B Chandappa Indra,**
(*Secretary, P. M. Committee*)
Members, Panchakalayana Mahosthawam Committee.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	3	0	0
ಚಂದ್ರಗುಪ್ತ ಚಕ್ರವರ್ತಿ	1	0	0
Goutama Budda	0	8	0
भगवद्गीता	0	2	0
ಮಧುವನ	1	8	0
ಒಂದೇ ತಿಂಗಳಲ್ಲಿ ಇಂಗ್ಲಿಷ್	0	8	0
ಎರಡೇ ವಾರಗಳಲ್ಲಿ ಓದುಬರಹ	0	1	0
ಗೀತೆಯ ಕೈಗನ್ನಡಿ	0	4	0
ಭಗವದ್ಗೀತೆ	0	2	0
ತುಳು ವ್ಯಾಕರಣ	0	8	0
ಸಾಮುದ್ರಿಕ ಶಾಸ್ತ್ರ	0	8	0
ಸತ್ಯನಾರಾಯಣ ಕತೆ	0	8	0
ಪುರಂದರದಾಸರ ಪದಗಳು ಭಾಗ ೧	0	4	0
„ ಭಾಗ ೨	0	4	0
„ ಭಾಗ ೩	0	4	0
ತುಳುನಾಡ್ ತಿಲಕ ಪಂಚಾಂಗ	0	1	0
ವೈಜಯಂತೀ ಪಂಚಾಂಗ	0	2	6
ಕುಕ್ಕುಟ ಪಂಚಾಂಗ	0	1	0

ಇತ್ಯಾದಿ, ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors:*—**GENERAL SUPPLIES Ltd, Udipi**).

Supply Agency Limited.

(BANKERS)

ESTD] **UDIPI** [1933

Authorised Capital Rs. 1,00,000
Subscribed & Paid up Rs. 30,760

RATE OF INTEREST FOR FIXED DEPOSITS.

3 to 6 Months 4% p. a.
7 to 11 „ 5% „
12 to 18 „ 6% „

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

Registered No. M. 3618

NAVAYUGA

ನವಯುಗ

ತಿಂಗಳ ಕಾಣಿಕೆ

25-5-1939

BE IN TIME & SAVE MONEY

12 to 33% Reduced Prices, Inexpensive & Reliable Swiss made Lever watches.
Charming Designs. Guaranteed 3 years.

STOP WATCH



Readings to 1/5 Second
195 Chromium Plain white Rs. 6/-
196 „ Silvered Radium „ 6/8
197 „ Black Radium „ 6/8

459 Nikel care Rs. 3 8 0
Radium Dial „ 3 12 0
without Second.

765 Chromium case Rs. 6 8 0
[illegible] Gilt Case „ 6 8 0
Radium Dia 10/8/- Extra.



937 Chromium Case Rs. 6 12 0
Gold Gilt Case „ 6 12 0
Radium Dial 0/8/- Extra.

697 Chromium Case 5 14 0
849 Gold gilt „ 5 14 0
159 Rolled Gold „ 9 8 0
Radium Dial 0/8/- Extra

254 Nickel [illegible] [illegible] 3 8 0
Radium Deal „ 3 12 0

All watches are thoroughly oiled & Tested and supplied with superior strap & Box.
Postage & Packing annas 8 Extra. All kinds of Gold & silver watches available.
illustrated catalogue sent free.

INDO-SWISS WATCH CO.
7, SIR P. MEHTA ROAD, FORT BOMBAY.

ಮೈಸೂರಿನಲ್ಲಿ ಶ್ರೇಷ್ಠವರ್ಗದ ಬ್ರಾಹ್ಮಣರ ಉಪಹಾರ ವಸತಿ ಗೃಹಗಳು.

ಗಾರ್ಡನ್ ಹೋಟೇಲು

ಆಧುನಿಕ ಸೌಕರ್ಯಗಳಿಂದ ಕೂಡಿದ ವಿಶಾಲವಾದ ಸಿಂಗ್ಲ್ ಡಬ್ಬಲ್ ಕೋಣೆಗಳು ಕುಟುಂಬ ಪರಿವಾರ ಸಮೇತರಾಗಿ ಬರುವವರಿಗೆ ಉಳಕೊಳ್ಳುವರಿಗೆ ಅತಿ ಯೋಗ್ಯ ಸ್ಥಳ.

ಫೋನ್ ನಂಬ್ರ 406

ಸಮಯೋಚಿತ ವಾಸಿಕರ ಅಭಿರುಚಿಗೆ ಯೋಗ್ಯವಾದ ಉತ್ತಮ ಊಟ ಉಪಹಾರಗಳು, ... ದ, ಆಧಿಕ ಸೌಕರ್ಯ ಅರಮನೆ, ಒಟ್ಟಿಲ್, ಸ್ಟೇಶನ್ ಮತ್ತು ... ಗಳಿಗೆ ಅತಿ ಸಮೀಪ ಇರುವ ವಿಶಾಲವಾದ ಕಂಪೌಂಡಿನಲ್ಲಿರುವ "ಮೈಸಂದರ್ ಹೌಸಿ" ನಲ್ಲಿ ಅತಿ ಚತುರ ಮಾಲೀಕರಿಂದ ನಡೆಸಿಕೊಂಡು ಬರುವ

ಗಾರ್ಡನ್ ಹೋಟೇಲ್, ಹಳೆ ಪೋಸ್ಟ್ ಆಫೀಸ ರೋಡ್, ಮೈಸೂರು

ಉಡುಪಿ ಆನಂದ ಭವನ

ಫೋನ್ ನಂಬ್ರ 347



ಇದೇ ಮ್ಹಾಲಿಕರಿಂದ ಅರಮನೆ ಎದುರು 'ನವನಾಗರಿಕರಿಗೆ ತಕ್ಕಂತೆ ನಡೆಯಿಸಿಕೊಂಡು ಬರುವ ನವೀನ ಉಪಹಾರ ಗೃಹ. ಬೇಸಿಗೆಗೆ ತಕ್ಕ ರುಚಿಕರವಾದ ಶೀತ ಪಾನೀಯಗಳು ಸದಾ ಇವೆ ಪಟ್ಟಣದ ಕೇಂದ್ರಸ್ಥಾನದಲ್ಲಿದ್ದು ಬಹು ಉನ್ನತ ಸ್ಥಿತಿಯಿಂದ ನಡೆಯಿಸಿಕೊಂಡು ಬಂದು ಜನಪ್ರೀತಿಗೊಳ್ಳಗಾಗಿದೆ

ಮೈಸೂರಿಗೆ ಬಂದಲ್ಲಿ ಇದನ್ನು ಸಂದರ್ಶಿಸಲು ಮರೆಯದಿರಿ

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು.

ಕೃಷ್ಣರಾಜನಾಗರ್ ರೆಸ್ಟೋರೆಂಟ್, ಕನ್ನಂಬಾಡಿ, ಮೈಸೂರು.

ಮದ್ರಾಸಿಗೆ ಬಂದಲ್ಲಿ—

ಪ್ರೊಪ್ರೈಟರ್—ಕೆ ಗುರುರಾಜಾಚಾರ್.

ಮೈಸೂರು ಕೇಫ್—ರೆಸ್ಟೋರೆಂಟ್ ಮತ್ತು ಬೋರ್ಡಿಂಗ್, ಲಾಡ್ಜಿಂಗ್ ಸಂದರ್ಶಿಸಲು ತಪ್ಪದಿರಿ

—— ಬಲು ಸುಲಭ ದರದಲ್ಲಿ ——

● ಉತ್ಕೃಷ್ಟ ಊಟ ಉಪಹಾರಾದಿಗಳಿಗಾಗಿ ಇತ್ತ ಗಮನಿಸಿರಿ!

● ನೀವು ನಮ್ಮನ್ನೇ ವಿಶೇಷವಾಗಿ ಪ್ರಶಂಸಿಸಿ ಕೊಳ್ಳಬಾರದಪ್ಪ!

ಲಕ್ಷ್ಮೀ ನಿವಾಸ
ಹಿಂದೂ ಹೋಟೇಲು

(ಸ್ಥಾಪನೆ 1926)

ವಿಠಲ್ ಭಾಯಿ ಪಟೇಲ್ ರೋಡ್, ಗಿರ್ಗಾಂ, ಮುಂಬಯಿ.

Lakshmi Nivas Hindu Hotel

VITTALBHAI PATHEL ROAD,

GIRGAUM - - BOMBAY

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ ಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳ ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸುಬಾರದು

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ—T. V. ದೇವಕರ್ ಎಂಡ್ ಕಂಪೆನಿ,

ನಂಬುಲಿಯರ್ ಬೀದಿ, ಜಿ ಟಿ ಮದರಾಸು

T V Devkar & Co, *Nambuliar Street*, G T. MADRAS.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ! ಫಲ ಅಧಿಕ!!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ಶೀತಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ರು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಷ್ಟ, ರಕ್ತದೋಷಗಳಿಗೆ	—ಕೃಷ್ಣಾರಿಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ

BHUVANENDRA PRODUCTS LIMITED, KATAPADI, S. K.

ESTD. 1921
FOUNDER
Sri. A. B. SHETTY, M.L.A.
Parliamentary Secretary, Govt of Madras.
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೨೫-೫-೧೯೩೯ | Vol. XVIII
ಸಂಚಿಕೆ ೩೮ | Udipi, Thursday 25—5—1939 | No. 38

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ. ೩—೪—೦
೬ ತಿಂಗಳಿಗೆ ರೂ. ೧—೧೨—೦.
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಮಾಚಾರ ಸಮಾವಲೋಕನ

ಪೆಲೆಸ್ತೈನಿನ ಭಾವೀ ಸ್ವರಾಜ್ಯ

ಪೆಲೆಸ್ತೈನಿನಲ್ಲಿ ದೀರ್ಘಕಾಲದಿಂದ ಅರಬ–ಯಹೂದಿ ದಂಗೆಗಳು ನಡೆಯುತ್ತಲೇ ಇವೆಯಷ್ಟೆ. ಬ್ರಿಟಿಷ್ ಸರಕಾರವು ಈವರೆಗೂ ಕಠಿಣ ದಬ್ಬಾಳಿಕೆಯಿಂದದನ್ನು ಅಡಗಿಸಬಹುದೆಂಬ ಆಸೆಯಿಟ್ಟುಕೊಂಡಿತ್ತು. ಆದರೆ ಚೇಂಬರ್ಲೇನ್ ಸರಕಾರದ ಆಸೆ ಫಲಿಸುವದೆಂದರೆ ಅಪರೂಪತಾನೆ! ಅಂತೆಯೇ ದಂಗೆಯು ದಿನದಿಂದ ದಿನಕ್ಕೆ ಬೆಳೆಯುತ್ತಾಬಂತು. ಅರಬರಿಗೆ ಹಿಟ್ಲರನಿಂದ ಶಸ್ತ್ರಾಸ್ತ್ರಗಳೂ ದೊರೆಯುತ್ತಿದ್ದವೆಂದು ವದಂತಿ. ಅಂತೂ ಅರಬರ ಬೆನ್ನು ತಟ್ಟುವದಕ್ಕೆ ಹಿಟ್ಲರನು ಅಳುಕಲಿಲ್ಲ. ನಮ್ಮ ಮನೆಯೊಳಗಿನ ಗೊಂದಲಕ್ಕೆ ಕೈ ಹಾಕಲು ಹಿಟ್ಲರನಾರು? ಎಂದು ಬ್ರಿಟಿಷ್ ಸರಕಾರವು ಕೇಳಲಿಲ್ಲ. ಈಗ ಪೆಲೆಸ್ತೈನಿಗೆ ಹತ್ತು ವರುಷಗಳ ನಂತರ ಪೂರ್ಣ ಸ್ವರಾಜ್ಯಕೊಡುವ ಶ್ವೇತಪತ್ರ ಹೊರಬಿದ್ದಿದೆ. ಅರಬರು ಹಿಟ್ಲರನ ಸಮೀಪ ವರ್ತಿಗಳಾಗಹತ್ತಿದುದರಿಂದಲೇ ಸ್ವರಾಜ್ಯದ ಸಮೀಪ ಸಾರುವಂತಾಯಿತು!

ಶರ್ತ ಸಾಮ್ರಾಜ್ಯ

ಬ್ರಿಟಿಷರು ಯಾವ ಸುಧಾರಣೆಯನ್ನು ಯಾವ ಕಡೆಗೆ ದಾನಮಾಡುವಾಗಲೂ ಕೆಲವು ಶರ್ತಗಳನ್ನಿಟ್ಟೇಬಿಡುತ್ತಾರೆ. ಒಂದು ಕಡೆಯಿಂದ ಕೈಬಿಟ್ಟ ಅಧಿಕಾರವನ್ನು ಇನ್ನೊಂದೆಡೆಯಿಂದ ಸುತ್ತಾಗಿ ಹಿಂದೆ ತರಬೇಕಾದರೆ ಆ ಶರ್ತಗಳೇ ಅವರ ಸಾಧನಗಳು. ಅದರಂತೆ ಪೆಲೆಸ್ತೈನ್ ಸ್ವರಾಜ್ಯದ ರೂಪರೇಷೆಯೂ ಇದೆ. ಪೆಲೆಸ್ತೈನಿಗೊಂದು ಸರಕಾರವು ಸ್ಥಾಪಿಸಲ್ಪಡುವದು. ಅದರಲ್ಲಿ ಯಹೂದಿಯರೂ ಅರಬರೂ ಸಹಕರಿಸಿ ನಡೆದುಕೊಳ್ಳಬೇಕು ಮತ್ತು ಇದಕ್ಕೂ ಬ್ರಿಟಿಷ್ ಸರಕಾರಕ್ಕೂ ವಿಳಂಬವಿಲ್ಲದೆ ಒಪ್ಪಂದವಾಗಬೇಕು. ಮ್ಯಾಂಡೇಟನ್ನು ಹರಿದೊಗೆಯುವದಿದ್ದರೆ ಮೊದಲು ಲೀಗ್ ಆಫ್ ನೇಶನ್ಸನ್ನು ಕೇಳಿಕೊಂಡರಾಯಿತು. ಇನ್ನು ಐದು ವರುಷಗಳ ತನಕ 75,000 ಯಹೂದಿಯರು ಪೆಲೆಸ್ತೈನಿಗೆ ಬರಬಹುದು. ಆಮೇಲೆ ವಸತಿಗಾಗಿ ಯಹೂದಿಯರಲ್ಲಿ ಬರಕೂಡದು. ಹತ್ತು ವರುಷಗಳ ತನಕ ಪೆಲೆಸ್ತೈನಿನ ಸೈನ್ಯ ಮತ್ತು ದೇಶದ ಒಳಾಡಳಿತೆಯು ಬ್ರಿಟಿಷರ ಕೈಯಲ್ಲೇ ಇರಬೇಕು. ಮೊದಲಾದ ವಿಷಯಗಳು ಶ್ವೇತಪತ್ರದಲ್ಲಿವೆ.

ಈ ವರೆಗೆ ಪೆಲೆಸ್ತೈನಿನಲ್ಲಿ ಹರಿದ ಕಣ್ಣೀರ ಕಾಲುವೆಗೊಂದು ಮಿತಿಯಿರಲಿಲ್ಲ. ಈಗ ಹೊರಡಿದ ಶ್ವೇತಪತ್ರದ ಶರ್ತಗಳೂ ಮಿಕಿತಸ್ಟಿ ಇವೆ. ಪೆಲೆಸ್ತೈನು ಇವೆರಡರಿಂದ ಯಾವ ಬಣ್ಣಕ್ಕೆ ತಿರುಗಲಿದೆಯೆಂಬುದನ್ನು ಮುಂದೆ ನೋಡಬೇಕು.

ಅವರಿಗೂ ಬೇಡ—ಇವರಿಗೂ ಬೇಡ!

ಈಗ ಈ ಆಶ್ವಾಸನೆಯ ಪರಿಣಾಮವೆಂದರೆ ಪೆಲೆಸ್ತೈನಿನಲ್ಲಿ ಗೊಂದಲದ ಬಿಗುವೇರಿದುದು. ಯಹೂದಿಯರು ಸಾವಿರ ಸಂಖ್ಯೆಯಲ್ಲಿ ನಿಷೇಧಸೂಚಕ ಮೆರವಣಿಗೆ, ಸಭೆಗಳನ್ನು ನಡೆಸುತ್ತಿರುವರಲ್ಲದೆ, ಜನರು ಸಿಟ್ಟಿಗೆದ್ದು ಡಿಸ್ತ್ರಿಕ್ಟ್ ಕಮಿಶನರರ ಆಫೀಸಿನೆದುರು ಪೋಲೀಸರಿಗೆ ಕಲ್ಲು ಗುಂಡುಗಳನ್ನೆಸೆದಿರುವರು. ಒಬ್ಬ ಪೋಲೀಸನು ಸತ್ತಿರುವನಲ್ಲದೆ ಹಲವರು ಗಾಯಗೊಳ್ಳುವಂತಾಯಿತು. ಯಹೂದಿಯರು ಸಾರ್ವತ್ರಿಕ ಮುಷ್ಕರ ಹೂಡಿರುವರು.

ಇತ್ತ ಅರಬರೂ ತೃಪ್ತಿಗೊಂಡಿಲ್ಲ ಇಜಿಪ್ಟಿನ ಸರಕಾರವು ಈ ಸುಧಾರಣೆಯನ್ನು ಅರಬರಿಗೆ ಶಿಫಾರಸು ಮಾಡಲು ತನಗೆ ಸಾಧ್ಯವಿಲ್ಲವೆಂದು ಬ್ರಿಟಿಷ್ ಸರಕಾರಕ್ಕೆ ತಿಳಿಸಿರುವದು. ಸ್ವರಾಜ್ಯದ ವಾಯಿದೆಯನ್ನು ಮೂರು ವರ್ಷಗಳಿಗಿಳಿಸಬೇಕೆಂದೂ ಸಂಪೂರ್ಣ ಸ್ವಾತಂತ್ರ್ಯದ ನಿಯಮಗಳಂತೆ ಸರಕಾರದ ಸ್ಥಾಪನೆಯಾಗಬೇಕೆಂದೂ ಸ್ವರಾಜ್ಯದಲ್ಲಿ ಶರ್ತಗಳನ್ನು ಸೇರಿಸುವ ಆಗತ್ಯವಿಲ್ಲೆಂದೂ ಅರಬರ ಹೇಳಿಕೆ.

ಎರಡು ಬೆಕ್ಕುಗಳಿಗೆ ಬೆಣ್ಣೆ ಪಾಲು ಮಾಡಿ ಕೊಡಲು ಮಂಗನು ನ್ಯಾಯಾಧೀಶನಾದ ಕತೆ ಪಾಠಪುಸ್ತಕದಲ್ಲಿದೆ. ಪಾಲುಪಡೆದ ಬೆಕ್ಕುಗಳೆರಡೂ ನಿರಾಶೆಹೊಂದಿದ್ದುವು!

ಮಹಾತ್ಮರ ಹೃದಯಪರಿವರ್ತನೆ

ರಾಜಕೋಟೆಯನ್ನು ಪುನಃ ಪ್ರವೇಶಿಸಿದ ಮಹಾತ್ಮಾ ಗಾಂಧಿಯವರು ಗ್ವಾಯರ್ ಎವಾರ್ಡಿನ ಸೂಚನೆಗಳನ್ನು ತಾನು ನಿರಾಕರಿಸುತ್ತೇನೆಂಬ ಹೇಳಿಕೆ ಕೊಟ್ಟಿದ್ದಾರೆ. ಅವರ ಹೇಳಿಕೆಯ ಸಾರಾಂಶವಿದು "ನನ್ನ ಉಪವಾಸದಲ್ಲಿ ಹಿಂಸೆಯು ಮಿಶ್ರವಾಗಿತ್ತು. ಸತ್ಯಾಗ್ರಹದ ಧರ್ಮದಂತೆ ನಾನು ಥಾಕೂರ್ ಸಾಹೇಬರ ಮನಸ್ಸನ್ನು ಪರಿವರ್ತನಗೊಳಿಸಬೇಕಿತ್ತು; ಅದೊಂದೇ ನನ್ನ ಗುರಿಯಿದ್ದು ಆ ಗುರಿಯನ್ನು ಮುಟ್ಟುವ ಸಲುವಾಗಿ ನಾನು ಪ್ರಾಣವನ್ನಾದರೂ ಕೊಡಬೇಕಿತ್ತು. ಹಾಗೆ ಮಾಡದೆ ನಾನು ವೈಸರಾಯರ ಮಧ್ಯಸ್ಥಿಕೆಯನ್ನು ತಂದೊಡ್ಡಿ ರಾಜಕೋಟೆಯ ರಾಜರನ್ನು ನಿರ್ಬಂಧಕ್ಕೊಳಪಡಿಸಿದಂತಾಯಿತು. ಸತ್ಯಾಗ್ರಹದಲ್ಲಿ ಒತ್ತಾಯವಿರಬಾರದು. ನಾನು ಥಾಕೂರ್ ಸಾಹೇಬರು ಮತ್ತು ವೀರವಲ್ಲರಲ್ಲಿ ಅವಿಶ್ವಾಸವಿಟ್ಟಿದ್ದೆ; ಅವರಿಂದ ನಾನು ವಿಶ್ವಾಸಪೂರ್ಣ ಭರವಸೆಗಳನ್ನು ಹೇಗೆ ಬಯಸಲಿ? ಈ ಕಾರಣಗಳಿಗಾಗಿ ನಾನು ಗ್ವಾಯರ್ ತೀರ್ಮಾನವನ್ನೇ ಮರೆತುಬಿಡುತ್ತೇನೆ. ಅದಕ್ಕಾಗಿ ವೈಸರಾಯಿ, ಮತ್ತು ಸರ್. ಗ್ವಾಯರರಲ್ಲಿಯೂ, ಅನ್ಯರೀತಿಯಿಂದ ಕಂಡುದಕ್ಕಾಗಿ ಥಾಕೂರ್ ಸಾಹೇಬ್ ವೀರವಲ್ಲರಲ್ಲಿಯೂ ಕ್ಷಮೆ ಕೇಳುತ್ತೇನೆ. ಇನ್ನು ರಾಜರು ಉದಾರ ಮನಸ್ಸಿನಿಂದ ತನ್ನ ಪ್ರಜೆಗಳ ಆಕಾಂಕ್ಷೆಯನ್ನು ಪೂರೈಸಿಕೊಡಬೇಕು. ಈ ಬದಲಾವಣೆಯಿಂದ ನನ್ನ ಸಹೋದ್ಯೋಗಿಗಳು ನಿರಾಶೆಹೊಂದವೆ, ಸತ್ಯಾಗ್ರಹಾಚಾರ್ಯನೆಂದು ನನ್ನನ್ನೊಪ್ಪಿಕೊಳ್ಳುವರಾದರೆ ಇದಕ್ಕೂ ಒಪ್ಪಬೇಕು.

ವೀರವಲ್ಲರ ಹೃದಯಪರಿವರ್ತನೆಯಾಗಲಿಲ್ಲ ಆದರೆ ಮಹಾತ್ಮರ ಹೃದಯಪರಿವರ್ತನೆಯಾಯಿತು. ಅನ್ನ ನೀರು ಬಿಟ್ಟು ಸಂಪಾದಿಸಿದ ಗ್ವಾಯರ್ ಎವಾರ್ಡ ತನ್ನಂತೆ ಹೊರಟು ಹೋಯಿತು. ಈಗ ರಾಜಕೋಟೆ, ರಾಜಾ ಸಾಹೇಬ್, ಪ್ರಜಾ ಮಂಡಳ, ಮ. ಗಾಂಧಿ ಇವರೆಲ್ಲಾ ಮೂರು ತಿಂಗಳ ಪೂರ್ವದಲ್ಲಿದ್ದ ನಿಜಾವತಾರವನ್ನೇ ಪುನಃ ತಾಳಿದಂತಾಯಿತು

ಕಾಲದ ವಿಚಿತ್ರ ಗತಿ

ಭಾರತ ರಾಜಕೀಯದ ಇಂದಿನ ವಿದ್ಯಮಾನಗಳು ಕಾಲಗತಿಗೇನೇ ಅಪವಾದ ತರುವಂತಿವೆ. ಕಾಲಚಕ್ರವುರುಳುವದು ಮುಂದೆಸೆಗಲ್ಲ-ಹಿಂದೆಸೆಗೆಂಬಂತೆ ಕಾಣುತ್ತಿದೆ. ಕಲ್ಕತ್ತದಲ್ಲಿ ಸೇರಿದ ಕಾಂಗ್ರೆಸ್ ಸಮಿತಿಯು ತ್ರಿಪುರಿ ಚುನಾವಣೆಯು ಮೊದಲಿದ್ದ ಕಾಲವನ್ನೇ ಪುನಃ ಕಂಡಿತು. ಎಲ್ಲವೂ ಮೊದಲಿನ ಸ್ಥಾನದಲ್ಲೇ ಸಮಾವಿಷ್ಟವಾದವು. ರಾಜಕೋಟೆಯಲ್ಲಿದ್ದ ಗೊಂದಲವೆಲ್ಲಾ ಸುಳ್ಳಾಗಿ ಈಗ ಮಹಾತ್ಮರು ಪ್ರಥಮತಃ ರಾಜಕೋಟೆಯನ್ನು ಪ್ರವೇಶಿಸುವಾಗ ಇದ್ದ ರೂಪವೇ ಗಾಂಧಿಯರಿಗೂ ರಾಜಕೋಟೆಗೂ ಪುನಃ ಬಂದಿದೆ. ಮಹಾತ್ಮರು ಪೂರ್ವ ಸಂಸ್ಕೃತಿಯ ಭಕ್ತರು; ಭಾರತದ ಗತ ವೈಭವದ ಪುನರುದ್ಧಾರಕರು ಎಂಬ ಭಾವನೆಯಷ್ಟೇ ಇತ್ತು; ಅವುಗಳ ಜತೆಗೆ ಕಳೆದುಹೋದ ಕಾಲವನ್ನು ಬರಮಾಡಿಕೊಳ್ಳಬಲ್ಲರೆಂದು ಈಗ ತಿಳಿಯಿತು.

ರಾಜಕೋಟೆಯ ಭವಿಷ್ಯವೇನು?

ಗ್ವಾಯರ್ ಎವಾರ್ಡನ್ನು ಬಿಟ್ಟುಬಿಟ್ಟುದಕ್ಕಾಗಿ ರಾಜ ಥಾಕೂರ್ ಸಾಹೇಬರು ಮಹಾತ್ಮರಿಗೆ ಮನಃಪೂರ್ವಕ ಅಭಿನಂದನೆ ಸಲ್ಲಿಸಿರುವರು. ಸರಕಾರವು ತನ್ನ ಸ್ವಂತ

HELP HIM to achievement!

The child is Father to the Man, Yet "promise" is never fulfilled without care for the child's future health and happiness. For parents whom sheer value is imperative a policy of the TROPICAL is the most effective future-care.

TROPICAL is helping thousands of families it will help yours too. Write to-day!

TROPICAL
INSURANCE COMPANY LIMITED.
NEW DELHI.

ಟ್ರೋಪಿಕಲ್
ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್,
ನ್ಯೂಡೆಲ್ಲಿ

ಪ್ರತಿನಿಧಿಗಳಾಗಬಯಸುವವರು ಬರೆಯಿರಿ.

ಎಂ. ಸುಂದರರಾಮ ಶೆಟ್ಟಿ, ಬ್ರಾಂಚ್ ಮೆನೇಜರ್, ಹಂಪನಕಟ್ಟೆ—ಮಂಗಳೂರು.
ಆಫೀಸು
ಕೆ. ರಾಮಮೂರ್ತಿ, ಎಂ.ಎ., ಬ್ರಾಂಚ್ ಸೆಕ್ರೆಟರಿ, 160 ಮೌಂಟ್‌ರೋಡ್, ಮದ್ರಾಸು.

ಸುಧಾರಣಾ ಸಮಿತಿಯನ್ನು ರಚಿಸಲಿರುವ ದು. ವಿಶೇಷ ಕಾನೂನುಗಳೆಲ್ಲಾ ಹಿಂಪೆಗೆ ಯಲ್ಪಟ್ಟಿರುವವಲ್ಲದೆ ರಾಜಕೀಯ ಕೈದಿಗಳನ್ನು ಬಿಟ್ಟು ಜುಲ್ಮಾನೆಯ ಹಣಗಳನ್ನು ಹಿಂತಿರುಗಿ ಕೊಡುವರಾಗಿ ತಿಳಿಯುತ್ತದೆ. ಮುಸ್ಲಿಮ್ ಕೌನ್ಸಿಲಿನ ಅಧ್ಯಕ್ಷರು ಗಾಂಧಿಯವರಿಗೊಂದು ಪತ್ರ ಬರೆದು ಅವರೊಳಗಿನ ವಿವಾದವನ್ನು ಚೀಫ್ ಜಸ್ಟೀಸರಿಗೊಪ್ಪಿಸಬೇಕೆಂದು ಕೇಳಿಕೊಂಡದ್ದಕ್ಕೆ ತಾನಿಂದು ಗ್ವಾಯರ್ ತೀರ್ಮಾನವನ್ನು ಬಿಟ್ಟಿರುವೆನಾದ್ದರಿಂದ ಈ ವಾದವು ಮುಂದೆ ಬರಲಾರದೆಂದೂ, ತನ್ನ ಮಾತಿನ ಸತ್ಯತೆಯ ಕುರಿತು ತನಗೇನೂ ಅನುಮಾನವಿಲ್ಲವೆಂದೂ, ಇದು ತಮ್ಮ ಮನಸ್ಸಾಕ್ಷಿಯನ್ನು ಹೊಂದಿಕೊಂಡಿರುವ ಸಂಗತಿಯಲ್ಲದೆ ಮಾರನೆಯವರು ಕೈಹಾಕುವ ವಿಷಯವಲ್ಲವೆಂದೂ ಉತ್ತರವಿತ್ತಿರುವರು.

"ದರ್ಬಾರ್ ವೀರವಲ್ಲರು ಕ್ಷಣಕ್ಕೊಂದಾವರ್ತಿ ತನ್ನ ನಿರ್ಧಾರವನ್ನು ಬದಲು ಮಾಡುವಂಥವರು" ಎಂದು ಗಾಂಧಿಯವರು ತನ್ನ ಉಪವಾಸ ಸೂಚಕ ಪತ್ರದಲ್ಲಿ ರಾಜಾ ಸಾಹೇಬರಿಗೆ ಬರೆದಿದ್ದರು. ಈ ಆರೋಪಕ್ಕೆ ದರ್ಬಾರ್ ವೀರವಲ್ಲರು ಏನೂ ಉತ್ತರ ಕೊಡಲಿಲ್ಲ. ಗಾಂಧಿಯವರ ಬರಹಕ್ಕೆ ಗಾಂಧಿಯವರ ವರ್ತನೆಯೇ ಉತ್ತರವಾಗುವಂತೆ ಮಾಡಿಬಿಟ್ಟರು ವೀರವಲ್ಲರು!

ಹೆಂಗಸಿನ ಬಟ್ಟೆಯಲ್ಲಿ ಬಂದ ಗಂಡಸು,

ಮಾರ್ಸೆಲ್ ಫೊನಲೆಯಿನ್ ಎಂಬಾತನು ಒಬ್ಬ ಕಲೆಗಾರ. ಅವನೊಮ್ಮೆ ಒಬ್ಬ ವೃತ್ತಪತ್ರಿಕೆಯವನ ಮೇಲೆ ದಾವೆಮಾಡಿದ. ನ್ಯಾಯವಿಚಾರಣೆಯ ದಿನ ಬಂತು. ನ್ಯಾಯಸ್ಥಾನದಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ಅಷ್ಟರಲ್ಲಿ ತೆಳ್ಳನೆಯ ಉದ್ದದೇಹದ ಕೈಬೆರಳು ಮೂರರಲ್ಲಿ ವಜ್ರದುಂಗುರ ಧರಿಸಿದ, ಕುತ್ತಿಗೆಯಲ್ಲಿ ಮುತ್ತಿನ ಹಾರವಿರುವ ಸ್ತ್ರೀ ಒಬ್ಬಾಕೆ ಒಳಬಂದಳು. ಅವಳೊಂದಿಗೆ ಇನ್ನೊಬ್ಬಾಕೆಯೂ ಜತೆಯಲ್ಲಿದ್ದಳು. ಫೊನಲೆಯಿನನ ಸ್ಥಾನದಲ್ಲಿ ಕೂತಾಕೆ, ತನ್ನ ಕೈಚೀಲ ಬಿಚ್ಚಿ ಮಾತಾಡಲು ಆರಂಭಿಸಿದಳು.

'ಅಮ್ಮಾ ನೀನಾರು?' ಎಂದು ನ್ಯಾಯಾಧಿಪತಿಯ ಪ್ರಶ್ನೆ. ಆಗ 'ನಾನೇ ಮಾರ್ಸೆಲ್ ಫೊನಲೆಯಿನ್' ಈಕೆ ನನ್ನ ಪತ್ನಿ ಎಂದು ಉತ್ತರ ಬಂತು. ನ್ಯಾಯಾಧಿಪತಿ ವಿಸ್ಮಿತನಾದನು. ನೆರೆದಿದ್ದ ಜನರು ಹಲ್ಲು ಬಿಟ್ಟರು. ನ್ಯಾಯಾಧಿಪತಿ ಕೋಪದಿಂದ ನೀನು ಹೆಂಗಸಿನ ಬಟ್ಟೆ ಧರಿಸಿ ಬಂದುದೇಕೆ? ಎಂದ. ಆಗ ಫೊನಲೆಯಿನ್ ಹೇಳಿದ, "ಹೆಂಗಸರು ಗಂಡಸರಂತೆ ಉಡುಗೆ ತೊಡಲು ನ್ಯಾಯ ತೊಡಕಾಗಿದೆ, ಆದರೆ ಗಂಡಸಿಗೆ ಅಂತಹ ನಿರ್ಬಂಧವೇನೂ ಇಲ್ಲವಲ್ಲಾ!" ಎಂದ. ನ್ಯಾಯಾಧಿಪತಿ ಅವನ ದಾವೆ ವಜಾಮಾಡಿದ. ಸ್ತ್ರೀವೇಷ ಅಶ್ಲೀಲವೆ, ನಿರ್ಲಜ್ಜೆಯ ಪ್ರದರ್ಶನವದೆ ಎಂದು ರಿಮಾರ್ಕು ಹೇಳಿದ.

ಸಂಗ್ರಾಮವೋ ಶಾಂತಿಯೋ

ನಾವು ಯುದ್ಧದ ಕಡೆಗೆ ಇರುವೆವೋ ಇಲ್ಲವೇ ಶಾಂತಿಮಾರ್ಗದಲ್ಲಿರುವೆವೋ ಎಂಬ ಪ್ರಶ್ನೆಗೆ ಉತ್ತರವಾಗಿ ಮುಸಲೋನಿ ಹೀಗೆಂದನು. ಯೂರೋಪಿನ ಸದ್ಯದ ಪರಿಸ್ಥಿತಿಯಿಂದ ವಿಚಾರಿಸಿದರೆ, ದೊಡ್ಡ ಯುದ್ಧಕ್ಕೆ ಬೇಕಾದ ತೀವ್ರ ಸನ್ನಾಹ ಸನ್ನಿವೇಶವಿದೆಯೆನ್ನಲು ಬಾರದು.

THE BOMBAY LIFE ASSURANCE CO., LTD.,

(Estd. 1908)

THE OFFICE WHICH HAS PROVED ITS POPULARITY BY ITS PROGRESS

RECORD OF NEW BUSINESS.

Proposed.	Year.	Completed.
1,25,50,250	1934	1,04,33,750
1,50,48,915	1935	1,23,28,665
1,68,88,200	1936	1,36,01,500
1,72,579,75	1937	1,40,08,725
1,76,83,250	1938	1,44,91,600

1939 VALUATION YEAR.

Please take up a Policy Now and participate in Bonus.

To Insure or to Represent it pays you to consult us:–

KOCHIKAR BROTHERS, LTD.,

MADRAS BRANCH SECRETARIES,

The Bombay Life Building,

Sir Lalubhai Samaldas Road, Gandhi Nagar, UDIPI.

Or any of our Offices at:—

Car Street, MANGALORE.	Puthiyara, CALICUT.	Post Box No. 337, Mount Road, MADRAS.
Visweshwarapuram Circle, BANGALORE CITY.	Charni Road, Girgaum, BOMBAY No. 4	Central Station Road, TRIVANDRUM.

ಸರ್ವಾಧಿಕಾರಿಗಳ ಮಾತಿನಲ್ಲಿ ಒಮ್ಮೊಮ್ಮೆ ಬೋಂಬಿನ ಸುರಿಮಳೆ; ಇನ್ನೊಮ್ಮೆ ತುಂತುರು ತುಂತುರು ತಂಪು ಹನಿ?

ಶಾಸ್ತ್ರಿ ಸಾಹೇಬರು ಶೇಕಡಾ 240 ರಂತೆ ಬಡ್ಡಿ ತೆರುತ್ತಿದ್ದರು.

ಹಾಲ್ ನಗರದ ದಿವಾಳಿ ಕೋರ್ಟಿನಲ್ಲಿ ರೆವರೆಂಡ್ ರಿಚ್ಚಾರ್ಡ್ ಲಿವೆಸ್ಲಿ ಎಂಬ ಮಾಜಿ ಪಾದ್ರಿಯೊಬ್ಬನು ಕೋರ್ಟಿನ ಮುಂದೆ ತನ್ನ ದುರವಸ್ಥೆಯ ಕಾರಣವನ್ನು ವಿವರಿಸುತ್ತಾ ತಾನು ಸಣ್ಣ ವಿಷಮ ಪರಿಸ್ಥಿತಿಯಿಂದಾಗಿ ಶೇಕಡಾ 40ರಿಂದ 240ರವರೆಗೆ ಬಡ್ಡಿ ತೆತ್ತುದೇ ತನ್ನ ಮುರ್ದಶೆಗೆ ಕಾರಣವೆಂದು ಹೇಳಿದನು.

ಸ್ತ್ರೀಯರೂ ಸರ್ವಾಧಿಕಾರಿಗಳೂ

ಬಲಾತ್ಕಾರ, ಪಶುಶಕ್ತಿ ಮತ್ತು ಮೋಸದಿಂದ ಆಳಲ್ಪಡುವ ಜಗತ್ತಿನಲ್ಲಿ ಸ್ತ್ರೀಯರಿಗೆ ಯಾವ ಸ್ಥಾನ ದೊರೆತೀತು? ಅವರಿಗೆ ಗರ್ಭಧಾರಣೆಯ ಮತ್ತು ಗುಲಾಮಗಿರಿಯ ಸ್ಥಾನ ಮಾತ್ರ ಸಿಕ್ಕಬಹುದು. ಮೂರು ಪ್ರಬಲ ರಾಜ್ಯಗಳು ತಮ್ಮ ರಾಜ್ಯವನ್ನು ಕೇವಲ ಪಶುಶಕ್ತಿಯ ಘಾತುಕತೆಯಿಂದ ಮಾತು ಮರ್ಯಾದೆ ಮೀರಿ ತಮ್ಮ ರಾಜ್ಯ ವಿಸ್ತಾರ ಕಾರ್ಯದಲ್ಲಿ ತೊಡಗಿವೆ. ಈ ರೀತಿಯ ತತ್ವವು ನೆಲೆಗೊಂಡಿರುವ ತನಕ ಸ್ತ್ರೀಯರಿಗೆ ಯಾವ ಸ್ವಾತಂತ್ರ್ಯದ ದಾರಿಯೂ ದೊರೆಯಲಸಾಧ್ಯವೆಂದು ಶ್ರೀಮತಿ ಕೋರ್ಬೆಟ್ಟು ಸರ್ಬೇ ಎಂಬಾಕೆ ಲಂಡನಿನ ಸ್ವಾತಂತ್ರ್ಯ ಲೀಗಿನಲ್ಲಿ ಭಾಷಣವಿತ್ತರು.

ಕಾಂಗ್ರೆಸಿನ ಹಿಂದಿರುವ ಶಕ್ತಿ

ಶಂಕರದೇವರವರ ಭಾಷಣ

ಪೂನಾದಲ್ಲಿ ವಸಂತಕಾಲದ ಭಾಷಣ ಕಾಲದಲ್ಲಿ ಶಂಕರದೇವರವರ ಭಾಷಣವಿದ್ದಿತು. 7000ಮಂದಿಗೆ ಮೇಲ್ಪಟ್ಟು ಜನರು ನೆರೆದಿದ್ದರು. ಸ್ತ್ರೀಯರು ಗುಂಪುಗೂಡಿ ನೆರೆದಿದ್ದರು. ಈ ಸಮಯ ತುಂಟರ ಸಂಗಡದ ಗಲಭೆ ಹೊರಗಿಂದ ತೋರಹತ್ತಿತು. ಅವರು ದೇವರವರ ಭಾಷಣಕ್ಕೆ ತಡೆಗಟ್ಟುವ ದುರಾಗ್ರಹದಿಂದ ಬಂದಿದ್ದರು. ಭಾಷಣಕಾಲ ಗುಲ್ಲೆಬ್ಬಿಸಿದರು. ಕಲ್ಲುಬಿಸಾಡಿದರು. ಕೊಳೆತ ಮಡ್ಡಿ ಬಿಸಾಡಲೂ ಹೇಸಲಿಲ್ಲ. ದೊಡ್ಡ ಕಲ್ಲೊಂದು ಒಬ್ಬಾಕೆಯ ಬಳಿ ಬಿತ್ತು. ಇನ್ನೊಂದು ಕಲ್ಲು ಒಬ್ಬ ಸಭಿಕನಿಗೆ ತಗಲಿ ಗಾಯವಾಗಿ ನೆತ್ತರ ಧಾರೆ ಸುರಿಯಿತು. ಆದರೂ ಸಭಿಕರು ಕ್ಷೋಭೆಗೊಳ್ಳಲಿಲ್ಲ. ದೇವರವರ ಭಾಷಣ ಮುಂದರಿಯುತ್ತಲೇ ಇತ್ತು. ಶಾಂತಿಭಂಗವಾಗಲಿಲ್ಲ.

ಅಷ್ಟರಲ್ಲಿ ಹಲವು ಯುವಕರು ಕೈಯಲ್ಲಿ ಬೆತ್ತ ಧರಿಸಿಕೊಂಡು ತಿಲಕ ಮಂದಿರದ ದ್ವಾರದಲ್ಲಿ ಗುಂಪುಗೂಡಿದರು. ದ್ವಾರವನ್ನು ಕಿತ್ತೊಗೆಯಲು ಯತ್ನಿಸಿದರು. ಒಳನುಗ್ಗಿದರು. ಕಾಂಗ್ರೆಸಿನ ವಿರುದ್ಧವಾಗಿ ದೇವರವರ ವಿರುದ್ಧವಾಗಿ ಬೊಬ್ಬೆಹಾಕಿದರು. ದೇವರವರ ಮಾತಿನ ಪ್ರವಾಹವು ಇನ್ನಷ್ಟು ಉಜ್ವಲತೆಯಿಂದ ಮುಂದೆ ಮುಂದೆ ಹರಿಯುತ್ತಿತ್ತು. ಅವರು ಹೀಗೆಂದರು. ದೇಶದ ಒಳ್ಳಿತನ್ನು ಬಯಸುವ ಸಂಸ್ಥೆಯಾವುದಾದರೂ ಇರುವುದಾದರೆ ಅದು ಕಾಂಗ್ರೆಸು. ನೆನಪಿರಲಿ. ಕಾಂಗ್ರೆಸಿನಂತಹ ಜನಬೆಂಬಲವುಳ್ಳ ಇನ್ನಾವ ಸಂಸ್ಥೆ ದೇಶದಲ್ಲಿದೆ? ದೇಶದ ಮೇಲ್ಮೆಗಾಗಿ ಅಪಾರ ತ್ಯಾಗ ಮಾಡುವ ಸಂಸ್ಥೆಯಿರುವುದೆಂದರೆ ಅದು ಕಾಂಗ್ರೆಸು. ದೇಶೋದ್ಧಾರಕ್ಕೆ ಯಶಸ್ವಿಯಾಗಿ ಹೋರಾಟನಡೆಸಬಲ್ಲ ಸಂಸ್ಥೆಯೊಂದಿರುವುದಾದರೆ ಅದು ಕಾಂಗ್ರೆಸು ಬಿಟ್ಟು ಬೇರೆಯಿಲ್ಲ. ಇದಕ್ಕೆ ಉದಾಹರಣೆ ಕಳೆದ ಚುನಾವಣೆಯಲ್ಲಿ ಕಾಂಗ್ರೆಸಿಗೆ ದೊರೆತ ಜಯವೆಂದು ಹೇಳಿದರು.

ವಸಂತಕಾಲದ ಭಾಷಣ ವ್ಯವಸ್ಥಾಪಕರು, ಸಭೆಗೆ ಒದಗಬಹುದಾದ ತೊಂದರೆಗಳನ್ನು ಮೊದಲೇ ಅರಿತಿದ್ದರು. ಪೋಲೀಸು ಸಹಾಯ ಅಪೇಕ್ಷಿಸಿದ್ದರು. ಆದರೆ ದೇವರವರು ತನ್ನ ರಕ್ಷಣೆಗೆ ಪೋಲೀಸರ ಅಗತ್ಯವಿಲ್ಲವೆಂದು ಹೇಳಿದುದರಿಂದ ಪೋಲೀಸು ಸಹಕರಿಸಲು ಮುಂದೆ ಬರಲಿಲ್ಲ. ಸ್ವಯಂಸೇವಕರ ದಳವು ಅವರನ್ನು ಸುರಕ್ಷಿತವಾಗಿ ಸಭಾಭವನದಿಂದ ಹೊರಮುಟ್ಟಿಸಿತು.

ಛಲಗಾರ

ನವೀನ ಶೋಧನೆ

ಹೇನುಗಳನ್ನು ನಾಶಮಾಡುವ "ಬಾಬಾ" ಉಪಯೋಗಿಸಿರಿ.

ಸ್ತ್ರೀ ಜಾತಿಗೆ "ಬಾಬಾ" ಎಂಬುದು ವರಪ್ರಸಾದ.

ತಲೆಯಲ್ಲಿ ಹೇನು ಆಗುವುದು ಇದರ ಸ್ಥಿತಿಯು ಹೇಸಿಯಾದ್ದರಿಂದ ಪ್ರಕೃತಿಯು ಕೆಡುತ್ತದೆ. "ಬಾಬಾ" ಈ ಎಣ್ಣೆಯನ್ನು ತಲೆಗೆ ಅಥವಾ ಕೂದಲಿಗೆ ಹಚ್ಚಿದರೆ ಖಾತ್ರಿಯಾಗಿ ಹೇನುಗಳನ್ನು ನಾಶಮಾಡಬಲ್ಲುದು. "ಬಾಬಾ" ಇದರಿಂದ ಅಪಾಯಕರವಿಲ್ಲ. "ಬಾಬಾ" ಎಲ್ಲಾ ಪಟ್ಟಣಗಳಲ್ಲಿ ಸಣ್ಣ ಸೀಲು ಬಂದು ಡಬ್ಬಿಯು ಮಾರಲು ಸಿಕ್ಕುತ್ತದೆ. ಕಿಮ್ಮತ್ತು ಡಬ್ಬಿಗಕ್ಕೆ ರೂ. 0—2—6.

ಹಿಂದುಸ್ಥಾನ ಮತ್ತು ಬರ್ಮಾದ ಸೋಲ್ ಡಿಸ್ಟ್ರಿಬ್ಯೂಟರ್ಸ್:	ಸಾಯಿ ಬ್ರದರ್ಸ್, ದೋಬಿತಲಾವ, ಎಡ್ವರ್ಡ್ ಸಿನೇಮ ಎದುರು, ಜಂಬುಳವಾಡಿ, ಕಾಳಬಾದೇವಿ ರೋಡು, ಮುಂಬಾಯಿ.

ಮಾಳವ ದೇಶದಲ್ಲಿರುವ ಮಹತ್ತರ ವಿಶೇಷಗಳು

ಆರ್ಥಿಕ ಸಂಪತ್ತು; ಆಚಾರವ್ಯವಹಾರಗಳು; ಪ್ರಜೆಗಳ ಮನೋಭಿರುಚಿಗಳು; ಪುರಾತನ ಸಂಪ್ರದಾಯದ ಅಭಿಮಾನವು.

ಮಾಳವದೇಶವು ನರ್ಮದಾನದಿಗೆ ಉತ್ತರದಿಕ್ಕಿನಲ್ಲಿಯೂ, ಗುಜರಾತಿಗೆ ಪಶ್ಚಿಮದಲ್ಲಿಯೂ ಇರುವುದು. ಆ ದೇಶದಲ್ಲಿ ಬೆಟ್ಟ ಗುಡ್ಡಗಳೂ, ನದಿಗಳೂ ವಿಶೇಷವಾಗಿರುವುದಿಲ್ಲ. ಸಮಪ್ರದೇಶವುಳ್ಳ ದೇಶವಾಗಿದೆ. ನಮ್ಮ ಮೈದಾನದ ಪ್ರದೇಶದಂತೆ ಇರುವುದೇ ಹೊರತು, ಭೂಮಿಯು ಅಷ್ಟು ಕಪ್ಪಾದುದಲ್ಲವು. ವರ್ಷ ಒಂದಕ್ಕೆ ಸುಮಾರು 40 ಅಂಗುಲಗಳಷ್ಟು ಮಳೆಯು ಬೀಳುತ್ತಿರುವುದು. ಆದುದರಿಂದ ಬೆಳೆಗಳಿಗೆ ಕೊರತೆಯಿಲ್ಲ. ಎಲ್ಲಿ ನೋಡಿದರೂ ಗೋದಿಯ ಬೆಳೆಯೇ ಕಂಡುಬರುತ್ತಿರುವುದು. ಉತ್ತಮ ತರಹೆಯ ಗೋಧುವೆಯು ಆ ದೇಶದಲ್ಲಿ ಒಂದು ರೂಪಾಯಿಗೆ ನಮ್ಮ ಅಳತೆಯ ಸೇರಿನಲ್ಲಿ 15, 16 ಸೇರನ್ನು ಕೊಡುವರು. ಗೋಧಿಯ ಹುಲ್ಲನ್ನು ತಿನ್ನುವ ಹಸುಗಳ ಬಲವೂ, ಕರಾವೂ ಸಮೃದ್ಧಿಯಾಗಿರುವುದೆಂದು ಹೇಳಬೇಕಾದ ಅಗತ್ಯವಿಲ್ಲ.

ಆ ದೇಶದಲ್ಲಿ ಎಲ್ಲಿಗೆ ಹೋದರೂ ಒಳ್ಳೆಯ ಹಾಲೂ, ಕೆನೆಯುಳ್ಳ ಮೊಸರೂ ಲಭಿಸುತ್ತಿರುವುದು. ಎಂತಹ ಕಡು ದರಿದ್ರರಾಗಲಿ ಹಾಲಿಗೆ ನೀರು ಸೇರಿಸಿ ಮಾರರು. ರೈಲ್ವೆ ಸ್ಟೇಷನ್ನುಗಳಲ್ಲಿಯೂ ಕೂಡ ಒಳ್ಳೆಯ ಹಾಲೂ, ಮೊಸರೂ ದೊರೆಯುತ್ತಿರುವುದು. ತಿಂಡಿಯಲ್ಲಿ ಸಿಹಿ ವಸ್ತುಗಳೇ ಹೆಚ್ಚು. ಕನೋಜ್ ಬ್ರಾಹ್ಮಣರೇ ಅಲ್ಲಿ ಮಿಠಾಯಿ ಅಂಗಡಿ ಇಟ್ಟಿರುವವರು. ಅವರು ಮಾಡುವಷ್ಟು ಮಿಠಾಯಿಯ ಸಾಮಾನುಗಳನ್ನು ನಮ್ಮವರು ಊಹಿಸಲೂ ಕೂಡ ಆಗಲಾರದು. ಇಲ್ಲಿಯ ತರಹೆಯಂತೆ ಕಾಫಿಹೋಟೆಲುಗಳು ಆ ದೇಶದಲ್ಲಿರುವುದಿಲ್ಲ. ಮಿಠಾಯಿ ಅಂಗಡಿಗಳಲ್ಲಿಯೇ ಅಗತ್ಯವಾದ ವಸ್ತುವನ್ನು ಕೊಂಡು ಸೇವಿಸಬಹುದು. ಕಾಫಿಯನ್ನು ಮಾರಲಾರರು. ಟೀ ಪಾನೀಯದ ಅಂಗಡಿಗಳು ಬೇರೆಯಾಗಿರುವುವು.

ಪೂರಿ, ಉರುಳುಗೆಡ್ಡೆಯ ಪಲ್ಯಗಳಿಗೆ ಇರುವ ಗಿರಾಕಿಯು ಆ ದೇಶದಲ್ಲಿ ಮತ್ತೊಂದು ತಿನ್ನುವ ಪದಾರ್ಥಕ್ಕೆ ಇರುವುದಿಲ್ಲ. 80 ತೊಲೆಗಳ ತೂಕವಿರುವ ಪೂರಿಗಳು ಆರಾಣೆಗಳಿಂದ ಹತ್ತು ಆಣೆಗಳವರೆಗೂ ಮಾರಲ್ಪಡುತ್ತಿರುವುದು. ನಮ್ಮ ಸೇರು (ತೂಕದ) ತೂಕಕ್ಕೆ ಸ್ವಲ್ಪ ಹೆಚ್ಚು ಕಡಿಮೆ ಆರು ಪೂರಿಗಳು ತೂಗುವುವು. ಅದಕ್ಕೆ ಬೇಕಾದ ಉರುಳುಗಡ್ಡೆಯ ಪಲ್ಯವನ್ನು ಉಚಿತವಾಗಿಯೇ ಕೊಡುವರು.

ಅನ್ನ ಮಾರಾಟದ ಅಂಗಡಿಗಳು ಇಲ್ಲಿನಂತೆ ವಿರಳವಾಗಿರುವುವು. ಗುಜರಾತಿಯವರೇ ಈ ಭೋಜನ ಶಾಲೆಗಳನ್ನಿಟ್ಟಿರುವರು. ಅವುಗಳಿಗೆ ಅಲ್ಲಿ 'ಬೀಸೀ' ಎಂಬ ಹೆಸರು.

ಹೋಟೇಲುಗಳಲ್ಲಿ ಒಂದು ಹೊತ್ತಿಗೆ ನಾಲ್ಕು ಆಣೆಯನ್ನು ತೆಗೆದುಕೊಳ್ಳುವರು. ಒಲೆಯ ಹತ್ತಿರವಾಗಿಯೇ ಭೋಜನಶಾಲೆ. ಹರಿಜನರೂ ಮಹಮ್ಮದೀಯರೂ ಹೊರತು ಮಿಕ್ಕುಳಿದ ಪಂಗಡದವರಾರಾದರೂ ಆ ಭೋಜನಾಲಯಗಳಲ್ಲಿ ಕುಳಿತು ಊಟಮಾಡಬಹುದು. ಸೇವಕರು ಬ್ರಾಹ್ಮಣೇತರರೇ ಸಾಧಾರಣವಾಗಿ ಗೊಲ್ಲರೂ ಬೆಸ್ತರೂ ಈ ಹೋಟೇಲಿನ ನೌಕರರಾಗಿರುವರು. ಅವರೇ ಪಾತ್ರೆಗಳನ್ನು ತೊಳೆದು ಲೋಟಾಗಳಲ್ಲಿ ಸಿಹೀನೀರನ್ನು ಹಾಕಿಡುವರು. ಊಟವಾಗುತ್ತಿರುವಾಗ ಆಗಿಂದಾಗ್ಗೆ ನೀರನ್ನು ಎಟುಕಿಸುತ್ತಿರುವರು. ಊಟವು ತಟ್ಟೆಗಳಲ್ಲಿಯೂ ಪಾತ್ರೆಗಳಲ್ಲಿಯೂ ಬಡಿಸಲ್ಪಡುವುದು. ಆದರೆ ಅವುಗಳನ್ನು ಶುದ್ಧಿಪಡಿಸುವುದರಲ್ಲಿ ಆ ದೇಶದ ಜನರನ್ನೂ ಹೇಳಿ ಇತರ ಜನರ ಪಂಗಡವನ್ನೂ ಹೇಳಬೇಕು.

ಭೋಜನ ಶಾಲೆಯಲ್ಲಿ ಎಲ್ಲರೂ ಕಲೆತು ಕುಳಿತುಕೊಳ್ಳಬಹುದು. ಆದರೆ ಒಬ್ಬೊಬ್ಬರಿಗೆ ಒಂದೊಂದು ಆವರಣವು ಏಂಗಡಿಸಲ್ಪಟ್ಟಿರುವುದು. ನಾಲ್ಕು ಅಡಿಗಳ ಉದ್ದವೂ, ಮೂರು ಅಡಿಗಳ ಅಗಲವೂ ಆ ಆವರಣವು ಇರುವುದು. ಅದರ ಸುತ್ತಲೂ ಅಂಗುಲದಷ್ಟು ಅಗಲವಿರುವ ಸಿಮೆಂಟಿನ ಕಾಲುವೆಗಳಾಗಲಿ ಅಥವಾ ಅಂಗುಲದಷ್ಟು ಎತ್ತರದ ಗಾರೆಯ ದಿಂಡಾಗಲಿ ಇರುವುದು ಇಲ್ಲದೆ, ಅವಕ್ಕೆ ಬದಲಾಗಿ ಹಸೆಯನ್ನಾದರೂ ಹಾಕಿರುವರು. ಊಟಮಾಡುವವರು ತಮ್ಮ ತಟ್ಟೆಯನ್ನೂ ಬಟ್ಟಲುಗಳನ್ನೂ ಸಿಹಿನೀರಿನ ಲೋಟಾಗಳನ್ನೂ ಆ ಆವರಣದಲ್ಲಿಯೇ ಇಟ್ಟುಕೊಳ್ಳಬೇಕೇ ಹೊರತು ಆ ಸ್ಥಳವನ್ನು ಮೀರಿ ಮತ್ತೊಂದು ಆವರಣದಲ್ಲಿ ಪ್ರವೇಶಿಸಿದರೆ ತೊಂದರೆಯುಂಟಾಗುವುದು. ಜಾತಿಕುಲ ತಾರತಮ್ಯಗಳು ಇಗ ಎದ್ದೇಳುವುವು. ಆದುದರಿಂದ ಯಾವ ಪಂಗಡದವರೂ ಕಲೆತು ಊಟ ಮಾಡುತ್ತಿದ್ದರೂ ತಮ್ಮ ಆವರಣವನ್ನು ಮೀರಿ ಇತರರ ಆವರಣದಲ್ಲಿ ಕಾಲಿಡಬಾರದು.

ಊಟದಲ್ಲಿ ಮುಖ್ಯ ಪದಾರ್ಥವು ರೊಟ್ಟಿಯೇ. ನಮ್ಮ ದೇಶದಂತೆ ರೊಟ್ಟಿಗೆ ತುಪ್ಪವನ್ನು ಸವರಿ ಅವರು ಮಾಡಲಾರರು. ಬೇದ ತರುವಾಯ ಅದಕ್ಕೆ ಸ್ವಲ್ಪವಾಗಿ ಉದ್ಧರಣೆಯಿಂದ ತುಪ್ಪವನ್ನು ಸವರುವರು. ಆ ರೊಟ್ಟಿಯು ರುಚಿಕರವಾಗಿಯೂ ಆರೋಗ್ಯಕರವಾಗಿಯೂ ಇರುವುದು. ಕಾರಣವೇನೆಂದರೆ ಅವು ಒಳ್ಳೆಯ ಗೋಧಿಯ ಹಿಟ್ಟಿನವು.

ಅವರು ನಮ್ಮವರಂತೆ ಹಿಟ್ಟನ್ನು ಆಗ ತಾನೆ ನೆನೆಯಿಸಿ ಆಗಲೇ ರೊಟ್ಟಿ ಮಾಡರು. ಕನಿಷ್ಟಪಕ್ಷ 5-6 ಗಂಟೆಗಳ ಕಾಲ ಹಿಟ್ಟನ್ನು ನೆನೆಯಿಸುವರು. ರಾತ್ರಿಯಲ್ಲಿ ಹಿಟ್ಟನ್ನು ನೆನೆಯಿಸಿ ಮುದ್ದೆಯನ್ನು ನೀರಿನಲ್ಲಿ ಮುಳುಗುವಂತಿಟ್ಟು ಬೆಳಗ್ಗೆ ಚೆನ್ನಾಗಿ ಅದನ್ನು ಹಿಸಿಕಿ ಒರಳಲ್ಲಿಟ್ಟು ಕುಟ್ಟಿ ರೊಟ್ಟಿಮಾಡುವರು. ಜಿಡ್ಡು ಅಂಟಿಸದೆ ಬರಿಯ ಕಾವಲಿಯ ಮೇಲೆಯೇ ರೊಟ್ಟಿಗಳನ್ನು ಸುಡುವರು, ಒಂದೇ ಸಲ ರೊಟ್ಟಿ ಮಾಡಿ ಇಟ್ಟುಕೊಳ್ಳರು. ಹತ್ತುಮಂದಿಗ ಒಟ್ಟಿಗೆ ಊಟಕ್ಕೆ ಕುಳಿತರೂ, ಆ ಅಡಿಗೆಯವನು ಆಗಿಂದಾಗ್ಗೆ ರೊಟ್ಟಿಗಳನ್ನು ತಟ್ಟಿ ಕಾವಲಿಯ ಮೇಲೆ ಸುಟ್ಟು, ತುಪ್ಪವನ್ನು ಸವರಿ ಒಂದೊಂದಾಗಿ ತಟ್ಟೆಯೊಳಕ್ಕೆ ಇಡುತ್ತಿರುವರು, ಇಷ್ಟು ಬೇಗ ಆತನು ಮಾಡುತ್ತಿರುವುದು ಹೊಸಬರಾದ ನಮ್ಮಂಥವರಿಗೆ ಆಶ್ಚರ್ಯಕರವಾಗಿದೆ.

ಈ ರೊಟ್ಟಿಗೆ ಅನುಪಾನವು ಸಾಧಾರಣವಾಗಿ ಬೇಯಿಸಲ್ಪಟ್ಟ ತೊಗರಿಯ ಬೇಳೆ, ಉರುಳುಗಡ್ಡೆಯ ಪಲ್ಯ, ಸ್ವಲ್ಪವಾಗಿ ಹುಳಿ ಹಾಕಿ ಬೇಯಿಸಿದ ಸೋರೆಯ ಕಾಯಿ, ಕುಂಬಳಕಾಯಿಯ ಬಜ್ಜಿ. ಅಗತ್ಯವಾದವರಿಗೆ ಉಪ್ಪು, ಮೆಣಸಿನ ಪುಡಿಯನ್ನು ಬೇರೆಯಾಗಿಡುವರು. ಉರಿಹಾಕಿದ ಹಸುರುಮೆಣಸಿನ ಕಾಯಿಗಳನ್ನೂ, ಹಪ್ಪಳಗಳನ್ನೂ ಕೂಡ ಹಾಕುವರು. ಕೊನೆಯಲ್ಲಿ ಸ್ವಲ್ಪವಾಗಿ ಅನ್ನವನ್ನೂ, ಮೊಸರನ್ನೂ ಬಡಿಸುವರು. ಆ ಅಕ್ಕಿಯು ಯಾವ ತರಹೆಯದೋ ಅನ್ನವು ಮಾತ್ರ ಏನೋ ವಾಸನೆಯಾಗಿರುವುದು ಹೊಸಬರಿಗೆ ಆ ವಾಸನೆಯು ಹಿಡಿಯದು, ಅನ್ನದ ರುಚಿಯು ಮಾತ್ರ ಚೆನ್ನಾಗಿರುವುದು.

ಟೀ ಕುಡಿಯುವುದು ಮಾತ್ರ ಬಹು ಮಂದಿಗೆ ರೂಢಿಯಾಗಿದೆ. ಆದರೆ ಅದು ತಿಳಿಯಾಗಿರುವುದು ಅಗ್ಗವಾಗಿಯೂ ಕೂಡ ದೊರೆಯುವುದು. ನಮ್ಮವರು ಕುಡಿಯುವ ಟೀಯು ಬಹು ಮಂದವಾದುದು. ಅಷ್ಟು ತಿಳಿಯಾಗಿ ನಮ್ಮವರು ಮಾಡಲಾರರು.

ನಾಗರೀಕತೆಯಲ್ಲಿ ದಕ್ಷಿಣದೇಶದಷ್ಟು ನಾಗರೀಕ ದೇಶವು ಅದು ಅಲ್ಲ. ಪೂರ್ವಾಚಾರಗಳು ಪೂರ್ಣವಾಗಿ ಆಚರಣೆಯಲ್ಲಿರುವುವು. ಸ್ತ್ರೀಯರ ಆಭರಣಗಳನ್ನು ನೋಡಿದಲ್ಲಿ ಅವರು ಇನ್ನೂ ಎರಡುನೂರು ವರ್ಷಗಳ ಸ್ಥಿತಿಯನ್ನು ಬಿಟ್ಟಿರಲಾರರೆಂದು ಗೊತ್ತಾಗುತ್ತಿರುವುದು. ಕಾಲಿನ ಬೆರಳುಗಳು ಕಾಣಲಾರದಷ್ಟು ಬೆಳ್ಳಿಯ ಕಾಲುಮಿಂಚುಗಳು, ಕಾಲುಂಗುರಗಳು, ಕಾಲಿನ ಗೊಲಸುಗಳು ಇಷ್ಟು ಅಷ್ಟು ಅಲ್ಲ, ಸುಮಾರು ಒಂದು ಧಡೆಯದಷ್ಟು ಬೆಳ್ಳಿಯು ಕಾಲಿನ ಮೇಲೆಯೇ ಇರುವುದು. ಕೈಗಳಿಗೆ ಬಂದಿಗಳು, ಬಳೆಗಳು, ಬಾಹುಸೂತ್ರಗಳು, ಪಿಕಾಡವಿಕಾರಗಳಾಗಿರುವುವು. ಕತ್ತಿನಲ್ಲಿ ಬೆಳ್ಳಿಯ ಕಂಠಾಭರಣ, ನಡುವಿಗೆ ಡಾಬೂ ಇರುವುವು. ಕಿವಿಗಳಲ್ಲಿ ಅನೇಕ ರಂಧ್ರಗಳು ಇದ್ದು ಅವುಗಳಲ್ಲೆಲ್ಲಾ ಆಭರಣಗಳು! ಮೂಗಿನಲ್ಲಿಯು 4ರಿಂದ 8 ಅಂಗುಲಗಳ ವರೆಗೂ ಉದ್ದವಾಗಿಯೂ ವಲಯಾಕಾರವಾಗಿಯೂ ಇರುವುದು ಬಾಯಿಯೂ ಗಲ್ಲವೂ ಕೂಡ ಮೂಗಿನ್ನಿಯಲ್ಲಿ ಅಡಗಿರುವವು. ಮುಂಗುರುಳಿನ ಮೇಲೆ 5 ಅಂಗುಲದ ನಿಲುವಿನಿಂದ ಸೂರ್ಯಕಾಂತವೆಂಬ ಒಂದು ವಲಯಾಕಾರದ ಬಿಲ್ಲೆಯು ಪ್ರ

THE
PANGAL NAYAK BANK
Estd.] LIMITED. [1920.
ದಿ ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್.
Paid up Capital Rs. 1,82,100/-. Reserves Rs. 2,02 800/-
PRINCIPAL OFFICE: COURT ROAD, UDIPI.
OTHER OFFICES:
UDIPI MANGALORE, KATAPADI, & KANHANGAD.

Season Deposits so as to bear interest at 4per cent per annum till the end of June 1939 are accepted.

Cumulative Deposits are also received on the usual terms.

Banking business of every description is transacted. Further particulars may be had on application.

ದಿ ವಿಜಯ ಬೇಂಕ್, ಲಿಮಿಟೆಡ್, ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವಹಿವಾಟುಗಳು ಇಲ್ಲಿ ನಡಿಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಾತಿಯು ಈ ಕೆಳಗೆ ಕಾಣಿಸುವ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3 ತಿಂಗಳಿಗೆ	....	3½%
6 „	....	4%
1 ವರ್ಷಕ್ಕೆ	....	4½%
2 „	....	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ.

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ಈ ಭವ್ಯತಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತಿದೆ

ಕಾಶಿಸುತ್ತಿರುವುದು ನೆತ್ತಿಯ ಮೇಲೆ ಚಂದ್ರಕಾಂತಗಳೂ, ಕೇತಕಿಯೇ ಮೊದಲಾದ ಬಿಲ್ಲೆಗಳೂ ಇರುವುವು. ಸಾಧಾರಣವಾಗಿ ಒಡವೆಗಳಿಲ್ಲದ ಸ್ತ್ರೀಯರು ಕಾಣಿಸಲ್ಪಡರು. ಕಸಗುಡಿಸುವ ಹೆಂಗಸರೂ ಕೂಡ ಒಡವೆಗಳನ್ನು ಧರಿಸಿಯೇ ಇರುವರು. ವೈಶ್ಯಸ್ತ್ರೀಯರು ಧರಿಸಿಕೊಂಡಿರುವ ಚಿನ್ನ ಬೆಳ್ಳಿಯ ನಗಗಳಿಗೆ ಮಿತಿಯೇ ಇರುವುದಿಲ್ಲ.

ಸ್ತ್ರೀಯರು ಒಂದೇ ವಸ್ತ್ರಧಾರಿಗಳಾಗಿರುವುದಿಲ್ಲ. ಒಂದು ಪಾಯಿಜಾಮದ ಮೇಲೆ ಸೀರೆಯನ್ನು ಉಟ್ಟಿರುವರು. ಸೀರೆಯನ್ನು ತಲೆಯ ಮೇಲಾಗಿ ಮುಸುಗಿ (ಸೆರಗು) ನಂತೆ ಧರಿಸಿರುವರು. ಆದರೆ ಘೋಷಾಸ್ತ್ರೀಯರ ಮುಸುಕಿಗೂ ಈ ಸೆರಗಿಗೂ ಬಹು ಭೇದವು ಘೋಷಾಸ್ತ್ರೀಯರ ಮುಸುಗು ಮುಖವನ್ನು ಪೂರ್ತಿಯಾಗಿ ಮುಚ್ಚಿಬಿಡುವುದು. ಆದರೆ ಇವರ ಮುಸುಗು ತಲೆಗೆ ಮಾತ್ರ ಹೊದಿಕೆಯಾಗಿರುವುದು.

ವೈಶ್ಯರು ಸುಂದರರೂಪರಾಗಿಯೂ, ಲಕ್ಷಣವುಳ್ಳವರಾಗಿಯೂ ಇರುವರು. ಅವರಲ್ಲಿ ಪಟ್ಟಣವಾಸಿಗಳು ಹೆಚ್ಚು ನಾಗರೀಕತೆಯುಳ್ಳವರಾಗಿದ್ದಾರೆ. ಇಂಗ್ಲೀಷ್ ಭಾಷೆಯು ಸಾಧಾರಣವಾಗಿ ಯಾರಿಗೂ ತಿಳಿಯದು. ಹಿಂದಿಯೇ ಸಾಮಾನ್ಯ ಭಾಷೆಯು. ಒಟ್ಟಿನಲ್ಲಿ ವಿದ್ಯಾಭ್ಯಾಸವು ಕಮ್ಮಿಯಾದುದೆಂದೇ ಹೇಳಬೇಕು. ನಿಜವಾಗಿಯೂ ನಮ್ಮ ದೇಶಕ್ಕಿಂತ ಐಶ್ವರ್ಯವುಳ್ಳ ದೇಶವಾಗಿದೆ. ಆದುದರಿಂದಲೇ ಅವರು ಭೋಗಪರಾಯಣರಾಗಿದ್ದಾರೆ. ಕಾಮನ ಹಬ್ಬವು ಅವರಿಗೆ ರಾಷ್ಟ್ರೀಯವಾದ ಹಬ್ಬವಾಗಿದೆ. ನಮ್ಮಲ್ಲಿ ಫಾಲ್ಗುಣ ಮಾಸದ ಹುಣ್ಣಿಮೆಯ ಹೊತ್ತಿಗೆ ಬಿಸಿಲು ಬಲಿತಿರುವುದು ಆದರೆ ಅಲ್ಲಿ ಆಗಾಗಲೇ ಛಳಿಯು ಬಿಟ್ಟು ಎಳೆ ಬಿಸಿಲು ಕಾಯುತ್ತಿರುವುದು. ವಸಂತೋತ್ಸವಕ್ಕೆ ಅದು ಒಳ್ಳೆಯ ಸಮಯ. ಕಾಮನಹುಣ್ಣಿಮೆಯನ್ನು ಅವರು ಒಂದು ತಿಂಗಳ ಕಾಲ ನಡೆಯಿಸುವರು. ಆ ಉತ್ಸವಗಳೂ, ಮೇಳತಾಳಗಳೂ, ಜಲಕ್ರೀಡೆಗಳೂ, ವಸಂತವನ್ನು ಚೆಲ್ಲಾಡುವುವು. ಇವುಗಳೆಲ್ಲವೂ ಪೂರ್ವಕಾಲದ ಸಂಸ್ಕೃತ ನಾಟಕಗಳಲ್ಲಿರುವ ವರ್ಣನೆಗಳನ್ನು ಜ್ಞಾಪಕಕ್ಕೆ ತರುತ್ತಿರುವವು. ಪೇಟೆಗಳು ಅಲಂಕಾರವಾಗಿಯೇ ಇರುವವು ಆದರೆ ಸಂದಿಗೊಂದಿಗಳು ಬಹು ಗಲೀಜಾಗಿರುವವು. ಮನೆಗಳಲ್ಲಿ ಗಾಳಿ, ಬೆಳಕು ಸಾಲದು. ಕುದುರೆಕಲ್ಲಿನ ಮೇಲೆ ಹಾಸಲ್ಪಟ್ಟ ದೊಡ್ಡ ಕಲ್ಲುಬಂಡೆಗಳು ಪ್ರತಿ ಮನೆಯ ಮುಂದೆಯೂ ಪಡಸಾಲೆಯಾಗಿಟ್ಟಿರುವರು. ಮಣ್ಣಿನ ಮನೆಗಳನ್ನು ಚೆನ್ನಾಗಿ ಸಾರಿಸಿ ಶುಚಿಯಾಗಿಟ್ಟುಕೊಳ್ಳುವರು. ಆದರೆ ಬಟ್ಟೆಬರೆಗಳನ್ನು ಒಗೆಯುವ ಅಭ್ಯಾಸವು ಮಾತ್ರ ಅಪರೂಪ. ದೇವಾಲಯಗಳು ಸಣ್ಣವು. ಆದರೂ ಬಹು ಶುಚಿಯಾಗಿರುವವು ಜನರೆಲ್ಲರೂ ಹೋಗಿ ದೇವರ ದರ್ಶನವನ್ನು ಪಡೆಯಬಹುದು. ದೇವಾಲಯಗಳು ಸಣ್ಣವಾದರೂ ಅವರ ಭಕ್ತಿಯು ಕಮ್ಮಿಯ ತರಹೆಯದಲ್ಲ. ಸ್ತ್ರೀಪುರುಷರು ಬಹಿರಂಗವಾಗಿ ಹೆಚ್ಚಾಗಿ ಕಲೆತು ಮಲೆತು ಇಲ್ಲದವರಾದರೂ ಮನೆಗಳಲ್ಲಿ ಬಹಳ ಆದರವುಳ್ಳವರಾಗಿಯೂ, ಸ್ವಾತಂತ್ರ್ಯದಿಂದಲೂ ನಡೆಯುತ್ತಿರುವರು; ಆದರೆ ಕೆಟ್ಟ ನಡತೆಯುಳ್ಳವರಲ್ಲ.

ಪಟ್ಟಣಗಳು ನಮ್ಮ ದೇಶದಲ್ಲಿರುವ ಪಟ್ಟಣಗಳಿಗಿಂತ ಐಶ್ವರ್ಯವಂತವಾದವುಗಳೇ ಹೊರತು, ಹಳ್ಳಿಗಳು ನಮ್ಮ ಹಳ್ಳಿಗಳಿಗಿಂತ ಬಹು ಹೀನಸ್ಥಿತಿಯಲ್ಲಿರುವವು. ಮೇಲಿನ ಅಂತಸ್ತಿನ ಜನರು ಹೆಚ್ಚು ಭಾಗ್ಯವಂತರು; ಕೆಳಗಿನ ತರಗತಿಯವರು ಮತ್ತಷ್ಟು ದಟ್ಟದರಿದ್ರರು. ಈ ವ್ಯತ್ಯಾಸವು ನಮ್ಮ ದೇಶದಲ್ಲಿರುವುದಿಲ್ಲ. ಅವರು ಭೂವ್ಯವಸಾಯವನ್ನು ನಮ್ಮ ರೈತಾಪಿಯವರಂತೆ ಕಷ್ಟಪಟ್ಟು ಶ್ರದ್ಧಾಭಕ್ತಿಗಳಿಂದ ಮಾಡಲಾರರು ತರಿಪಸಲು ಕಂಡು ಬಾರದು. ವ್ಯಾಪಾರದಲ್ಲಿ ಮೋಸ ಕಡಿಮೆ. ಸರಕಾರದ ನೌಕರಿಗಳಿಗೆ ವಿದ್ಯಾವಂತರು ನಮ್ಮವರಂತೆ ಮುಂದರಿಯುವವರಲ್ಲ. ವ್ಯಾಪಾರ ಜೀವನದಲ್ಲಿ ಹೆಚ್ಚು ವ್ಯಾಪಕಕ್ಕೆ ನೋಡುವವರು ಸಂಸ್ಕೃತ ಭಾಷೆಗೆ ಹೆಚ್ಚು ಆದರಣೆಯು ಇರುವುದು. ಒಟ್ಟಿನಲ್ಲಿ ಮಾಳವವು ಪೂರ್ವಕಾಲದ ಸಂಪ್ರದಾಯ ಕಲೆಗಳು, ನಾಗರೀಕತೆಯು ಇನ್ನೂ ಇರುವ ರಾಜ್ಯವಾಗಿರುವುದು. ಹೈಂದವನಾಗರೀಕತೆಯು ಅಚ್ಚಳಿಯದೆ ಅಲ್ಲಿ ನಿಂತಿರುವುದು.

(ಶ್ರೀ. ಸಾಧನ ಪತ್ರಿಕೆಯಿಂದ ಉದ್ಧೃತವಾದದ್ದು)

ರಾಮಸ್ವಾಮಿ ಅಯ್ಯಂಗಾರ್, ಕೊಪ್ಪ.

Degrees: Books: Medicines.

Free H. L. M. S, H. M. B, H. M. D. etc Free Homeo-Ayur-Unani-Naturo degres. by post also—Practitioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10. Enclose 2 annas stamps:—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt. India)

ಗಾಂಧಿ ಜೋಯಿಸರ ಭವಿಷ್ಯ ಫಲ.

ನಿಮ್ಮ ಜನನ ತಾರೀಕು ಸಮಯ ಅಥವಾ ಪತ್ರ ಬರೆಯುವ ವೇಳೆಗೆ ಮತ್ತು ಅಂದಾಜು ವಯಸ್ಸನ್ನು ತಿಳಿಸಿರಿ. ನಿಮ್ಮ ಕುಟುಂಬ, ವ್ಯಕ್ತಿ

ಆರೋಗ್ಯ, ಸಂಪತ್ತು, ಆದಾಯ ವೆಚ್ಚಗಳು, ಅನಿರೀಕ್ಷಿತ ದೆಸೆಗಳು ಮತ್ತು ದುರದೃಷ್ಟಗಳು, ಪ್ರೇಮ, ಅದೃಷ್ಟದ ಬಣ್ಣ, ಸೋದ್ಯೋಗಗಳು ದೊರೆಯುವ ದಿನಗಳು ಮತ್ತು ಸಂಖ್ಯೆ, ಇನ್ನಿತರ ಪ್ರಾಮುಖ್ಯ ವಿಷಯಗಳು ನಿಮ್ಮ ಬಾಗಿಲಿಗೆ ಕಳುಹಲ್ಪಡುವವು. ಪ್ರತಿತಿಂಗಳ ಭವಿಷ್ಯವನ್ನೊಳಗೊಂಡ ಒಂದು ವರುಷದ ಭವಿಷ್ಯಫಲಕ್ಕೆ ರೂಪಾಯಿ 3. ಪ್ರತಿತಿಂಗಳ ಆಗುಹೋಗುಗಳ ಸಮೇತ ಐದು ವರುಷದ ಫಲಕ್ಕೆ ರೂಪಾಯಿ 12-8-0. ಸಾಹುಕಾರರಿಗೂ ಉದ್ಯೋಗಸ್ಥರಿಗೂ ಪ್ರತಿವಾರದ ಭವಿಷ್ಯವನ್ನು ಸೂಚಿಸುವ ಒಂದು ವರುಷದ ಫಲಕ್ಕೆ ರೂಪಾಯಿ 10. ಭವಿಷ್ಯದ ಕುರಿತು ಕೇಳಲಾಗುವ ಐದು ಪ್ರಶ್ನೆಗಳಿಗೆ ಸರಿಯಾದ ಉತ್ತರವು ಒಂದು ರೂಪಾಯಿ ಕಾಣಿಕೆ ಕೊಟ್ಟಲ್ಲಿ ತಿಳಿಸಲಾಗುವುದು (ವಿ. ಪಿ ಖರ್ಚು ಐದಾಣೆ ಪ್ರತ್ಯೇಕ)

ಭವಿಷ್ಯ ಫಲದ ಕುರಿತು 'ಸ್ವದೇಶ ಮಿತ್ರನ್' ಮದ್ರಾಸಿನ ದಿನ ಪತ್ರಿಕೆಯು ಈ ರೀತಿ ಬರೆಯುತ್ತದೆ. 'ಶ್ರೀ. ವಿ. ಕೆ. ಶಠಗೋಪಾಚಾರಿಯವರ ಭವಿಷ್ಯವಾಣಿಗಳ ಕುರಿತು ಮಹಾಜನರಿಗೆ ಪರಿಚಯ ಮಾಡಿಕೊಡುವ ಅಗತ್ಯವಿಲ್ಲ. ಮಹಾತ್ಮಾಜಿಯವರ ಬಂಧವಿಮೋಚನೆ, ಅಮೇರಿಕಾ ಸಂಡದ ಪ್ರೆಸಿಡೆಂಟ್ ರೂಸ್‌ವೆಲ್ಟರ ಚುನಾವಣೆಯ ಜಯಶೀಲತೆ ಮೊದಲಾದುವು ಶ್ರೀ. ಆಚಾರಿಯವರು ಹೇಳಿದಂತೆ ಫಲಿಸಿದುವು. ಗಾಂಧಿ ಜೋಯಿಸರ ಭವಿಷ್ಯಫಲವು ಬ್ರಹ್ಮಾಂಡದಲ್ಲೆಲ್ಲಾ ಹಬ್ಬಲಿ, ಯೋಗ್ಯ ನಿದರ್ಶನ, ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

ವಿಳಾಸ:-**V. K. Satagopachariar**
Hanuman Jothisha Ashram
TIRUTTANI, S. India.

ನವಯುಗಕ್ಕೆ ಚಂದಾದಾರರಾಗಿರಿ.

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನಕಾರ್ಯಾಲಯ—ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನುಹೊಂದಿಕೊಂಡಿರುವವರಿಗೆ ಮುದ್ದಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲಪ್ತ ಅವಧಿಗಳ ಚಿಕ್ಕಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ ಜೀವವಿಮೆ ಮಾಡುವುದೇ.

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯಂಟಲ್" ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ ಆರ್ಥಿಕ ಸ್ವಾತಂತ್ರ್ಯದ ತಳಹದಿ ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?
ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,	ಅ	ಬ್ರಾಂಚ್ ಸೆಕ್ರೆಟರಿ,
ಓರಿಯೆಂಟಲ್ ಲೈಫ್ ಆಫೀಸು,	ಥ	ಓರಿಯಂಟಲ್ ಲೈಫ್ ಆಫೀಸು,
ಮೈನ್‌ರೋಡ್, ಮಡಿಕೇರಿ, (ಕೊಡಗು.)	ವಾ	ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.

ORIENTAL Govt. Security Life Assurance Co., Ltd.

ಇಂಗ್ಲೆಂಡಿನ ವಿದೇಶಾಂಗ ಮಂತ್ರಿ

ಲೋರ್ಡ್ ಹೆಲಿಫೇಕ್ಸ್

ಮಂತ್ರಿಯ ಮನಸ್ಸೂ ಮೃದು-ಪರದೇಶಿಸಂಬಂಧ ಧೋರಣವೂ ಮೃದು!

ಲೋರ್ಡ್ ಹೆಲಿಫೇಕ್ಸರು.

ಭಾರತದಲ್ಲಿ ಕಾಯಿದೆಭಂಗ ಚಳವಳವು ಸರ್ವ ವ್ಯಾಪಿಯಾಗಿತ್ತು. ದೇಶದ ಪ್ರಮುಖ ಧುರೀಣರೆಲ್ಲಾ ಜೈಲೊಳಗಿದ್ದರು. ಸಪ್ರುಜಯಕರರು ಎರವಾಡದಿಂದ ನೈನಿ ಜೈಲಿಗೆ, ನೈನಿಯಿಂದ ಎರವಾಡಕ್ಕೆ, ತುಲಸೀಕಟ್ಟೆಯ ಸುತ್ತು ತೆಗೆದಂತೆ ತೆಗೆದು, ಗಾಂಧೀ ನೆಹರುಗಳೊಡನೆ ಮಾತಾಡಿ, ಸರಕಾರ-ಕಾಂಗ್ರೆಸಿನೊಳಗೆ ರಾಜಿಮಾಡಲು ಸಾಧ್ಯವಿಲ್ಲವೆಂದು ತೀರ್ಪುಕೊಟ್ಟು ತಮ್ಮಷ್ಟಕ್ಕೆ ತಾವೆಂದು ಕುಳಿತು ಕೆಲಸಮಯ ಗತಿಸಿತ್ತು. ಒಮ್ಮೆಗೇ ಮಹಾತ್ಮಾ ಗಾಂಧಿಯವರು ಎರವಾಡದಿಂದ ಹೊರಬಂದರೆಂಬ ವಾರ್ತೆ ಹಬ್ಬಿತು. ಜತೆಯಲ್ಲಿ ಡಿಲ್ಲಿಯಿಂದ ವೈಸರಾಯರ ಆಮಂತ್ರಣವೂ ಬಂತು. ವರ್ಕಿಂಗ್ ಕಮಿಟಿ ಮೆಂಬರರೆಲ್ಲಾ ಬಿಡಲ್ಪಟ್ಟು ದೇಶವು ಸಂತೋಷದಿಂದ ಧುಮುಧುಮಿಸಿತು. ಒಂದು ಸುಮುಹೂರ್ತದಲ್ಲಿ ರಾಜೀ ತೀರ್ಮಾನಕ್ಕೆ ವೈಸರಾಯ ಮತ್ತು ಗಾಂಧಿಯವರ ಸಹಿಗಳು ಒಟ್ಟೊಟ್ಟಿಗೆ ಬಿದ್ದವು. ದೇಶದಲ್ಲಿ ಸತ್ಯಾಗ್ರಹ ಚಳವಳವು ನಿಲ್ಲಿಸಲ್ಪಟ್ಟಿತು.

ನ್ಯಾಯ ಪಕ್ಷಪಾತಿ

ಆಗ ವೈಸರಾಯರಾಗಿದ್ದವರು ಲೋರ್ಡ್ ಇರ್ವಿನರು. ಬ್ರಿಟನಿನಲ್ಲಿ ಲೇಬರ್ ಸರಕಾರದ ಆಳ್ವಿಕೆಯೋ ಏನೋ ಇತ್ತು ಆ ಕಾಲದಲ್ಲಿ. ಆದರೆ ಭಾರತಕ್ಕೆ ಗೋಧಿ ಮುಕ್ಕುವವನಾದರೇನು-ರಾಗಿ ಮುಕ್ಕುವವನಾದರೇನು? ಭಾರತವನ್ನು ಹಿಡಿದಿದ್ದ ವಜ್ರಮುಷ್ಟಿ ಮೆಕ್ಡೋನಾಲ್ಡರ ಆಳ್ವಿಕೆಯಲ್ಲಿ ಬಿರುಕುಬಿಡಲಿಲ್ಲ ಭಾರತವು ತನ್ನ ಸ್ವಾತಂತ್ರ್ಯಕ್ಕಾಗಿ ಕಾಯಿದೆಭಂಗ ಚಳವಳ ಕೈಕೊಂಡಿತು. ಸಾವಿರಗಟ್ಟಲೆ ಜೈಲು ಪಾಲಾದರು. ಲಾಠಿಗೆ ತಲೆಯೊಡ್ಡಿದರು; ತಮ್ಮ ಸರ್ವಸ್ವವನ್ನೂ ಕಳಕೊಂಡರು. ವೈಸರಾಯ್ ಲಾರ್ಡ್ ಇರ್ವಿನರು ಅಂತರಂಗದಲ್ಲಿ ಇದಕ್ಕಾಗಿ ಮರುಗಹತ್ತಿದರು. ಸತ್ಯಾಗ್ರಹ ಚಳವಳದ ನೈತಿಕ್ಯವವರು ಹೊರತು, ಸರಿಯಾಗಿ ತಾಡಿಸಿಬಿಡುವದಿಲ್ಲವೆಂದು ಚರ್ಚಿಲ್ಲರೇ ಮೊದಲಾದವರು ಲಾರ್ಡ್ ಇರ್ವಿನರನ್ನು ಖಂಡಿಸಿದ್ದರು. ಸತ್ಯವಾದರೆ ಇಂಗ್ಲಿಷ್ ಸರಕಾರಕ್ಕೆ ಇವರ ದಮನಶಕ್ತಿಯ ಮೇಲೆ ತೃಪ್ತಿ ಬರಲಿಲ್ಲ. ಅವರೂ ಲಾರ್ಡ್ ಇರ್ವಿನರಲ್ಲಿ ಉದ್ಯೋಗದೃಷ್ಟಿಗಿಂತ ದಯಾದೃಷ್ಟಿಯ ಪ್ರಭಾವವಧಿಕವಿದ್ದಂತೆ ತೋರಿತು. ಅವರು ಎಸೆಂಬ್ಲಿ ಸಭೆಗೆ ಭಾಷಣಕೊಡಲು ಹೊರಟಾಗ ಸಭಾ ಭವನದ ಹೆಬ್ಬಾಗಿಲಲ್ಲಿಯೇ 'ವೈಸರಾಯ್ ಹಿಂದೆ ಹೋಗು' ಎಂದು ಪಹರೆಮಾಡುತ್ತಿದ್ದ ಮಹಿಳೆಯರು ಕೂಗಿದರು. ಅದನ್ನು ನಗುಮೊಗದಿಂದ ಆಲಿಸಿ ಒಳಹೊಕ್ಕರು. ಅಲ್ಲಿಯ ಭಾಷಣದಲ್ಲಿ ಚಳವಳಗಾರರ ದೇಶಪ್ರೇಮವನ್ನು ಶ್ಲಾಘಿಸುವ ಮಾತುಗಳಿದ್ದವು. ಹೋರಾಟದಲ್ಲಿರುವ ವಿರೋಧಿಗಳನ್ನು ಸರಕಾರದ ಶಿಖರವಾಗಿರುವ ವೈಸರಾಯರೇ ಹೊಗಳುವದೆಂದರೆ ಸಾಮಾನ್ಯದ ಮಾತಲ್ಲ. ಆದರೆ ಪರಿಣಾಮವೂ ಮಹತ್ವಾದುದು. ಆ ಕಾಲದಲ್ಲಿ ಅತ್ತ ಇಂಗ್ಲೆಂಡಿನವರ ಇತ್ತ ಭಾರತೀಯರ ಅತೃಪ್ತಿ, ಕ್ರೋಧಕ್ಕೆ ಏಕಕಾಲದಲ್ಲಿ ಲಾರ್ಡ್ ಇರ್ವಿನರು ಗುರಿಯಾಗಿದ್ದರು. ಮಹಾತ್ಮರನ್ನವರು ಸಂಧಾನಕ್ಕೆ ಬರಮಾಡಿಕೊಂಡಾಗ "ಅರೆಬತ್ತಲೆ ಫಕೀರ ವೈಸರಾಯ್ ಭವನವನ್ನು ಪ್ರವೇಶಿಸುವದೆಂದರೇನು?" ಎಂದು ಚರ್ಚಿಲ್ಲರು ಹೇಯವಾಗಿ ಖಂಡಿಸಿದ್ದರು ಆದರೆ ವೈಸರಾಯರು ವ್ಯಕ್ತಿಶಃ ಸೌಹಾರ್ದ್ರ ಸ್ವಭಾವದ ಮನುಷ್ಯ.

ಬ್ರಿಟನಿನ ವಿದೇಶಸಂಬಂಧದ ಮಂತ್ರಿ

ಈಗ ಲೋರ್ಡ್ ಇರ್ವಿನರು ಲೋರ್ಡ್ ಹೆಲಿಫೇಕ್ಸರಾಗಿ ಬ್ರಿಟಿಷ ಸರಕಾರದ ವಿದೇಶಾಂಗ ಮಂತ್ರಿಯಾಗಿದ್ದಾರೆ. ಸಂಧಾನ ಪ್ರಿಯತೆಯಲ್ಲಿ ಇವರು ಚೇಂಬರ್ಲಿನರಿಗಿಂತ ಒಂದು ಕೂಕ ಜಾಸ್ತಿ! ಜೆಕೊಸ್ಲೊವೇಕಿಯದ ಸ.ಡೆಟನ್ ಪ್ರಾಂತ್ಯವನ್ನು ಜರ್ಮನಿಗೆ ಬಿಟ್ಟುಕೊಟ್ಟು ಬಂದವರು ಪಾರ್ಲಿಮೆಂಟ್ ಭವನದಲ್ಲಿ ವಿರೋಧೀ ಪಕ್ಷದವರಿಗೆ ಸಮಾಧಾನ ಹೇಳಿದರು. "ನಾವು ಹೀಗೆ ಮಾಡದಿರುತ್ತಿದ್ದರೆ ಹದಿನೈದೇ ದಿವಸಗಳೊಳಗೆ ಜೆಕೋಸ್ಲೊವೇಕಿಯವನ್ನು ಜರ್ಮನಿ ಪುಡಿಗುಟ್ಟುತ್ತಿತ್ತು! ಅದಕ್ಕಿಂತ ಉತ್ತಮವಾದುದಾವುದೂ ಇಂದು ಜೆಕೊಸ್ಲೊವೇಕಿಯಕ್ಕೆ ದೊರೆತಿಲ್ಲ. ಈ ಮಾತೆಂದರೆ ಬ್ರಿಟಿಷರ ಪರದೇಶೀ ಧೋರಣೆ ಹೇಗಿದೆಯೆಂಬುದನ್ನು ಕಲಿಸುವ ಕಾಬಳ್ಳಿ. ವಿದೇಶೀ ಮಂತ್ರಿ ಪದವನ್ನು ಖಂಡಿತ ಸ್ವಭಾವದ ಇಡೆನರಿಂದ ದಕ್ಕಿಸಿಕೊಳ್ಳಲಾಗಲಿಲ್ಲ; ಆದರೆ ಲೋರ್ಡ್ ಹೆಲಿಫೇಕ್ಸರು ಚೇಂಬರ್ಲಿನರ ರಾಗಕ್ಕೆ ತಕ್ಕಂತೆ ಶ್ರುತಿ ಹಿಡಿಯುತ್ತಾ ಅಲ್ಲೇ ಇದ್ದಾರೆ. ಕಾರಣವಿಷ್ಟೇ: ಬ್ರಿಟನಿನ ಪರರಾಷ್ಟ್ರ ಸಂಬಂಧ ಧೋರಣೆ ಬೆಣ್ಣೆಯಂತಹುದು; ಅದಕ್ಕೆ ಅನ್ಯರಿಂದಲೇ ಬಿಸಿ ತಾಗಬೇಕು ಹೊರತು ಮಂತ್ರಿಗಳದನ್ನು ಕರಗಿಸಹೊರಟರೆ ಅವರಿಗೆ ಇಡೆನರದೇ ಗತಿ. ಲೋರ್ಡ್ ಹೆಲಿಫೇಕ್ಸರೆಂದರೆ ಬೆಣ್ಣೆಯಂತಹ ಧೋರಣೆಗೆ ತಕ್ಕ ಹೆಣ್ಣಿನಂತಹ ಜನ! ಆದ್ದರಿಂದ ಅವರಿಗೂ ಚೇಂಬರ್ಲಿನರಿಗೂ ತಾಳಮೇಳ ಕೂಡಿಬರುತ್ತದೆ. ಆದರೆ ಲೋರ್ಡ್ ಹೆಲಿಫೇಕ್ಸರು ವಿಶೇಷ ಚತುರರಲ್ಲ. ಆದ್ದರಿಂದ ಚೇಂಬರ್ಲಿನರಿಗೆ ಆಲೋಚನೆ ಹೇಳುವವರು ಸರ್ ಸಾಮುವೇಲ್ ಹೋರ್ ಮೊದಲಾದವರು. ಜೆಕೋಸ್ಲೊವೇಕಿಯದ ಧೋರಣೆಯನ್ನು ರೂಪಿಸಿದವರೂ ಅವರೇ. ಈ ಸಲಹೆಗಾರರ ಉಪದ್ರವವೆಷ್ಟು ಹೆಚ್ಚಾಯಿತೆಂದರೆ ಶಾಂತ ಸ್ವಭಾವದ ಹೆಲಿಫೇಕ್ಸರು ಕೂಡ ಈಗ ಅದರಿಂದ ಬೇಸರಪಟ್ಟಿದ್ದಾರಂತೆ ಸರ್ ಹೋರರ ಯುಕ್ತಿ ಕುಯುಕ್ತಿಗಳು ಹೆಚ್ಚಿನವರಿಗೆ ರುಚಿಸುವುದಿಲ್ಲ; ಆದರೆ ಸರಳ ಸ್ವಭಾವದ ಹೆಲಿಫೇಕ್ಸರಿಗೆ ಮಂತ್ರಿ ಮಂಡಲದಲ್ಲಿಯೂ ಪಾರ್ಲಿಮೆಂಟಿನಲ್ಲಿಯೂ ಬೆಂಬಲವಿದೆ ಜೆಕೊಸ್ಲೊವೇಕಿಯದ ಧೋರಣೆಯಿಂದಾಗಿ ಮಿ ಚೇಂಬರ್ಲಿನ್ ಸರ್. ಸಾಮುವೇಲ್ ಹೋರ್ ಮೊದಲಾದವರ ಮೇಲೆಲ್ಲಾ ಜನತೆಗೆ ಅವಿಶ್ವಾಸಬಂದಿದೆ. ಆದರೆ ಲಾರ್ಡ್ ಹೆಲಿಫೇಕ್ಸರನ್ನು ಎಲ್ಲರೂ ಮನ್ನಿಸುತ್ತಾರೆ ಈಗ ನಿರೀಕ್ಷಿಸಲ್ಪಟ್ಟಿರುವ ಚೇಂಬರ್ಲಿನ್ ಪತನವು ಕೈಗೂಡಿದರೂ ಲಾರ್ಡ್ ಹೆಲಿಫೇಕ್ಸರು ಮಂತ್ರಿಮಂಡಲದಲ್ಲಿ ವಿರಾಜಿಸುವರೆಂಬ ಸುಸ್ಪಷ್ಟ ಚಿಹ್ನೆಗಳು ಕಂಡುಬರುತ್ತಿವೆ.

ಖಾಸಗಿ ಜೀವನ

ಇವರ ಖಾಸಗೀ ಜೀವನವು ಬಹು ಮಧುರವಾದುದು. ಇಂಗ್ಲೆಂಡಿನ ಜಮೀನ್ದಾರರಲ್ಲಿ ಹೆಲಿಫೇಕ್ಸರೊಬ್ಬರು ಯಾರ್ಕಶಯರಿನ ಗೆರೋಬಿಯಲ್ಲಿ ಅವರ ಸುಂದರ ಬಂಗಲೆ; ಅಲ್ಲಿ ಸರಳಜೀವನದ 57 ವರುಷದ ಧೊರೆ ತನ್ನ ಹೆಂಡತಿ ಮತ್ತು ನಾಲ್ವರು ಮಕ್ಕಳೊಂದಿಗೆ ಸುಖವಾಗಿ ವಿರಾಮಕಾಲವನ್ನು ತೆಗೆಯುತ್ತಿದ್ದಾನೆ. ಮಕ್ಕಳಲ್ಲಿ ಮೂರು ಗಂಡು, ಒಂದು ಹೆಣ್ಣು. ಹಿರಿಯ ಮಗ ಚಾರ್ಲ್ಸ್ ವುಡ್ಡನು ಯಾರ್ಕಿನ ಪರವಾಗಿ ಪಾರ್ಲಿಮೆಂಟ್ ಮೆಂಬರನೂ ಇದ್ದಾನೆ. ಇವನಿಗೆ ಮದುವೆಯಾಗಿ ಪದ್ಧತಿಯಂತೆ ಹೊಸ ಬಂಗ್ಲೆಯಲ್ಲಿ ನಿಲ್ಲುವರ ಸ್ಥಳ ಶೋಧ ನಡೆಯಿತು; ಒಂದೆಡೆಯು ಸರ್ವಾನುಕೂಲತೆಯನ್ನೊಳಗೊಂಡಿದ್ದರೂ ಭೂತಗಳು ಬಂದುಹೋಗುವ ಸ್ಥಳವಾಗಿತ್ತು. ಚಾರ್ಲ್ಸ್ ವುಡ್ಡನು ಹೆದರಿದ. ಆದರೆ ಹೆಲಿಫೇಕ್ಸರು ಮಗನನ್ನು ಅಲ್ಲಿಯೇ ಒತ್ತಾಯಮಾಡಿ ನಿಲ್ಲಿಸಿದರು. ಅವರ ದೈವಭಕ್ತಿಯು ಜನಜನಿತವಿದೆ. ಭೂತಗಳಿರುವ ಮನೆಯ ಮೇಲೆ ಅವರ ಒಲವು ಅಧಿಕ. ಅವು ಸ್ನೇಹಿತರಂತೆ ಮನುಷ್ಯರಿಗೆ ಉಪಕಾರವನ್ನೇ ಮಾಡುವವೆಂದು ಚೇಂಬರ್ಲಿನರ ನಂಬಿಕೆ, ತನ್ನ ತಂದೆಯು ಸಂಗ್ರಹಿಸಿದ್ದ ಭೂತಕತೆಗಳನ್ನು ಅವರು ಜೋಪಾಸನದಿಂದ ಇಟ್ಟುಕೊಂಡಿದ್ದಾರೆ. ಲಾರ್ಡ್ ಹೆಲಿಫೇಕ್ಸರಿಗೆ ಸಾರ್ವಜನಿಕ ಜೀವನದಲ್ಲಿ ಹಿಟ್ಲರ್ ಮುಸಲನಿಗಳಿರುವ ಅಸ್ಥಿರ ಬೇಟೆಯಾಡುವ ಉದ್ದೇಶವಿಲ್ಲ; ಆದರೆ ಮನೆಗೆ ಬಂದೊಡನೆ ಶಿಕಾರಿಗಾಗಿ ಕೋವಿ ಹಿಡಿಸಿಕೊಂಡು ಹೊರಡದೆ ನಿದ್ದೆ ಬಾರದು. ಬೇಟೆಯು ಅವರ ಪ್ರೀತಿಯ ವಿಷಯ. ಅವರು 'ಮಿಡ್ಲ್‌ಟನ್ ಹಂಚ್'ನ ಗೌರವ ರಕ್ಷಕರು. ಬಿಡುವಿಲ್ಲದ ದೆಸೆಯಿಂದ ಈಗೀಗ ಅದನ್ನು ಮರೆತೇ ಬಿಟ್ಟಿದ್ದಾರೆ. ಪಾರ್ಲಿಮೆಂಟಿನಲ್ಲಿ ಉತ್ತರಕೊಟ್ಟು ಇಲ್ಲವೆ ಭಾಷಣಮಾಡಿ ಅಥವಾ ನೀರಸ ಮಾತುಗಳನ್ನು ಕೇಳಿ ಸೋತ ಹೆಲಿಫೇಕ್ಸರು ಪಕ್ಕದ ಬಯಲಿಗೆ ಬಂದು ಕ್ರಿಕೆಟ್ ಆಟವನ್ನು ನೋಡುತ್ತಾ ನಿಂತುಬಿಡುವದುಂಟು. ಆಟವೆಂದರೆ ಅವರಿಗೆ ಬಲು ಇಷ್ಟ.

ಇನ್ನು ಸಣ್ಣ ಪುಟ್ಟ ವ್ಯಾಜ್ಯಗಳು ವಿವಾದಗಳು, ಅವುಗಳನ್ನು ವಿಮರ್ಶಿಸಿ ನ್ಯಾಯಾಧೀಶನಾಗಿ ತೀರ್ಪುಗಳನ್ನು ಕೊಡುವದೂ ಅವರ ಅಭಿರುಚಿಯ ಕಾರ್ಯಗಳಲ್ಲೊಂದು. ಜಮೀನ್ದಾರೀ ಗೌರವ ಮಾತ್ರ ವಿದ್ಯಾಲಯದಲ್ಲಿಯೂ ಅವರು ತನ್ನ ಆಸುಪಾಸಿನವರ ಎಷ್ಟೋ ವಿವಾದಗಳನ್ನು ಉತ್ಸಾಹದಿಂದ ತೀರ್ಮಾನಿಸಿದ್ದಿದೆ.

ಲೇಡಿ ಹ್ಯಾಲಿಫೇಕ್ಸರು ಗೌರವಾನ್ವಿತ ಮಹಿಳೆ; ಜನಮನ್ನಣೆ ಮತ್ತು ಕೀರ್ತಿ ಸಂಪಾದಿಸಿರುವ ಇಂಗ್ಲೆಂಡಿನ ಶ್ರೀಮಂತ ಸ್ತ್ರೀಯರಲ್ಲಿ ಅವರೊಬ್ಬರು. ಅವರಿಗೆ

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906
CANARA BANK LIMITED

ಇಸ್ಲಾಂ ಧರ್ಮಸ್ಥಾಪಕ ಮಹಮ್ಮದ ಪೈಗಂಬರರು

ಜಗತ್ತಿನ ಶ್ರೇಷ್ಠ ಸಮತಾವಾದಿ.

ಎಲ್ಲೂರಿನ ಅಂಜುಮಾನ್ ಕಟ್ಟಡದಲ್ಲಿ ಮಹಮ್ಮದ ಪೈಗಂಬರರ ಜನ್ಮಾಚರಣೆಯ ಉತ್ಸವ ಸಮಾರಂಭದಲ್ಲಿ ಮಹಮ್ಮದ ಪೈಗಂಬರರ ಜನ್ಮ ಮಹತ್ವಿಕೆಯನ್ನು ವರ್ಣಿಸುತ್ತಾ ಮಹಮ್ಮದ ಅಮಿನ ಸಾಹೇಬ-ಬಾರ್-ಎಟ್-ಲಾ ಇವರು ಹೀಗೆಂದರು:-

"ಇಸ್ಲಾಮಿ ಧರ್ಮಪ್ರವಾದಿ ಮಹಮ್ಮದ ಪೈಗಂಬರರು ಜಗತ್ತು ಎಂದೂ ಕಾಣದ ಮಹಾ ಸಮತಾವಾದಿಗಳು, ಅವರು ತಮ್ಮ ಅನುಯಾಯಿಗಳನ್ನು ತಮ್ಮ ಶಿಷ್ಯರೆನ್ನದೆ, ತಮ್ಮ ಸಹಪಾಠಿಗಳೆನ್ನುತಿದ್ದರು. ಅವರು ಅರಬ್ಬಿ ಧರ್ಮರಕ್ಷಕರಾಗಿ ಅಲ್ಲಿಯ ನ್ಯಾಯಾಧಿಪತಿ. ಸೇನಾಧಿಪತಿಯ ಶಕ್ತಿಯನ್ನು ಗಳಿಸಿದ ಸರ್ವಾಧಿಕಾರ ಸಂಪತ್ತಿನ ಮೇಲೆ ನಿಂತಿದ್ದರೂ, ಬಡತನವನ್ನು ಅವಲಂಬಿಸಿದ ಮಹಾತ್ಮರು. ಪ್ರತಿಯೊಬ್ಬರ ಮನಸ್ಸಾಕ್ಷಿಯನ್ನು ಅರಳಿಸುವಂತೆ ಸ್ವಾತಂತ್ರ್ಯಯುತರಾಗಿ ನಡೆಯುವಂತೆ ಸ್ವಾತಂತ್ರ್ಯ ಸಂರಕ್ಷಣೆಯಿತ್ತ ಮಹಾನುಭಾವರು. ಜನರು ತಮ್ಮ ಸ್ವೈಸರ್ಗಿಕ ಶಕ್ತಿಯನ್ನು ಹೆಚ್ಚಿಸಲು ಅವರು ನೆರವಾದರು. ಅತ್ಯಾಶೆಯನ್ನು, ಒಡುಬಡ್ಡಿಯ ಲೇವಾದೇವಿಯನ್ನು ನಿರ್ನಾಮಗೊಳಿಸಿದರು. ಸಮಾನಹಕ್ಕು ಬಾಧ್ಯತೆಗಳನ್ನು ಕೊಟ್ಟರು. ಸ್ತ್ರೀಯರಿಗೆ ಸಮಾನಸ್ಥಾನವನ್ನು ಕಲ್ಪಿಸಿಕೊಟ್ಟರು. ಜಾತಿ, ಮತ ಗೋತ್ರದ ಹೆಚ್ಚಳ ವಿನಾಶಗೊಳಿಸಿದರು. ಬಡವರ ತೆರಿಗೆಯನ್ನು ಜಾರಿಗೆ ತಂದರು. (ಶ್ರೀಮಂತರಿಂದ ಸಂಗ್ರಹಿಸಿ ಬಡವರ ಹಿತಕ್ಕಾಗಿ ಬಳಸುವುದು) ನಿರಂಕುಶ ಪ್ರಭುತ್ವವನ್ನು ಮೂಲೆಗೊತ್ತಿದರು. ವ್ಯಾಪಾರ, ವಾಣಿಜ್ಯ ಅಭಿವೃದ್ಧಿಗೆ ಪ್ರೋತ್ಸಾಹವನ್ನಿತ್ತರು. ಸ್ವರಕ್ಷಣೆ ಮತ್ತು ಬಡವರ ಪಾಲನೆಗಾಗಿ ಮಾತ್ರ ಯುದ್ಧಮಾಡಬಹುದೆಂದು ಪ್ರಕಟಿಸಿದರು. ಧಾರ್ಮಿಕ ಮತ್ತು ವ್ಯಾವಹಾರಿಕ ಶಿಕ್ಷಣದ ಮಹತ್ವಿಕೆಯನ್ನು ಮನಗಾಣಿಸಿ ಮುನ್ನಡೆಸಿದರು. ಇಂಥಾ ಪುರುಷರ ಸಂದೇಶವನ್ನು ನಾವು ಲಕ್ಷಿಸಬೇಕು.

ಪೈಗಂಬರ ಇನ್ನೊಂದು ಮಹತ್ವಿಕೆಯೆಂದರೆ ಅವರು ಬರೀ ಬಾಯಿ ಮಾತು ಆಡಿ ಸುಮ್ಮನಿರುವವರಲ್ಲ; ಕಾರ್ಯನಿರ್ವಾಹಕರು. ನುಡಿಯಂತೆ ನಡೆಯತಕ್ಕವರು. ಅವರ ಮತ್ತು ಅವರ ಹಿಂಬಾಲಕರ ನಡೆನುಡಿ, ಮಾತು ವಿಚಾರಗಳು ದಿವ್ಯಜ್ಯೋತಿಯಂತೆ ಜನತೆಯನ್ನು ಮುನ್ನಡೆಸಬಲ್ಲವುಗಳಾಗಿವೆ. ವಿಶ್ವನ್ಯಾಯವನ್ನು ಅರಿಯಲು ಮಾನವನು ಜ್ಞಾನಸಂಪನ್ನನಾಗಬೇಕೆಂದು ಅವರು ಚೆನ್ನಾಗಿ ಬೋಧಿಸುತ್ತಿದ್ದರು. ಮಾತ್ರವಲ್ಲ, ಜ್ಞಾನಾರ್ಜನೆಗಾಗಿ ಚೈನಾದವರೆಗೂ ಹೋಗಿ ಬರುವಂತೆ ತನ್ನ ಶಿಷ್ಯರನ್ನು ಪ್ರೋತ್ಸಾಹಿಸುತ್ತಿದ್ದರು. ಅವರು ತನ್ನ ಧರ್ಮವನ್ನು ತನ್ನ ಹೆಸರಿನಲ್ಲಿ ಕರೆಯದೆ, ಇಸ್ಲಾಂ ಎಂದು ಕರೆದರು. ಇಸ್ಲಾಂ ಎಂದರೆ, ವಿಶ್ವನಿಯಮವನ್ನು ಪರಿಪಾಲಿಸುವುದು, ದಿವ್ಯ ಮಾರ್ಗಕ್ಕನುಸಾರವಾಗಿ ನಡೆಯುವುದು ಎಂದರ್ಥ. ಜ್ಞಾನದ ಪ್ರಭಾವದ ಕುರಿತು ಪ್ರಸ್ತಾಪಿಸುತ್ತಾ ಅವರೊಮ್ಮೆ "ಜ್ಞಾನಿಯ ಲೇಖನಿಯ ಮಸಿಯು ವೀರನ ರಕ್ತಕ್ಕಿಂತ ಪವಿತ್ರವು' ಎಂದಿದ್ದರು. ಜ್ಞಾನವೆಂಬುದು ಮುಸ್ಲಿಮನೆನಿಸಿದವನಿಗೆ ತಪ್ಪಿ ಹೋದ ಒಂಟೆ. ಅದು ದೊರೆತಲ್ಲಿ ಹಿಡಿಯಬೇಕು." ಎಂದು ಇನ್ನೊಂದು ಬಾರಿ ಆಡಿದ್ದರು. ಅರಬ್ಬರು ಈ ಮಹಾಪುರುಷರ ಬೋಧೆಯ ಬಲದಿಂದಲೇ ಇಂಡಿಯಾ ಗ್ರೀಸ್, ಈಜಿಪ್ಟ್ ಮತ್ತು ಚೈನಾ ಮೊದಲಾದ ದೇಶಗಳ ವಿಚಾರ ತಿಳಿದುಕೊಂಡರು—ತಮ್ಮನ್ನು ಸುಧಾರಿಸಿಕೊಂಡರು ಈ ಜ್ಞಾನ ಬೆಳಕು ಬೇರೆ ಬೇರೆ ಮತ ಪಂಥಗಳಲ್ಲಿಯೂ ಪ್ರಭಾವ ಬೀರುವಂತಾಯಿತು. ಅವರು ಬೇರೆ ಬೇರೆ ದೇಶಗಳಿಂದ ವಿದ್ಯೆಯನ್ನು ಅರಿತುಕೊಂಡರು. ತಮ್ಮ ಉಪಕಾರ ಸ್ಮರಣೆಗಾಗಿ ಅವರು ಗಣಿತವನ್ನು 'ಹಿಂದ್ಸ'-ಎಂದು ಕರೆದರು. (ಇದು ತಮಗೆ ಹಿಂದುಗಳಿಂದ ದೊರೆತುದು ಎಂದು ಸೂಚಿಸುವಂತೆ) ವೈದ್ಯವಿದ್ಯೆಗೆ ಅವರು ಯುನಾನಿಯೆಂದು ಹೆಸರಿಟ್ಟರು. (ಇದನ್ನು ತಾವು ಗ್ರೀಕರಿಂದ ಅರಿತುಕೊಂಡೆವು ಎಂದು ಸೂಚಿಸುವಂತೆ) ಅರಬ್ಬರು ಸಮುದ್ರ ಸಂಚಾರ ಮಾಡಿದ್ದರು. ದೂರದೇಶಗಳಿಗೆ ಪ್ರಯಾಣ ಬೆಳೆಸಿದ್ದರು. ಅವರು ಸಮುದ್ರಯಾನದ ಕೆಲವು ಯಂತ್ರಗಳನ್ನು ನಿರ್ಮಾಣಮಾಡಿದರು. ಅರಬ್ಬರಿಂದಲೇ ಮಾರ್ಗಗಳಿಗೆ ಮೈಲುಕಲ್ಲು ಹಾಕುವ ಕ್ರಮ ಮತ್ತು ಜನಸಮೂಹಕ್ಕೆ ಸಾರ್ವಜನಿಕ ಬಾವಿ ತೋಡುವ ಏರ್ಪಾಡು ಮಾದರಿಯಾಗಿ ಬಂದಿತು. ಹೊಲಿಯುವ ಸೂಜಿ ನಿರ್ಮಿಸಿದವರೂ ಇವರೇ. ರಸಾಯನ ಶಾಸ್ತ್ರಕ್ಕೆ ತಳಹದಿ ಹಾಕಿದವರು ಅರಬ್ಬರು. ವಿಶ್ವವಿದ್ಯಾಲಯದಲ್ಲಿ ವಿವಿಧ ಜ್ಞಾನಾರ್ಜನೆಗೆ ಉತ್ಪಾದನೆ ದೊರೆಯುವ ಸಾಧನೆಯ ಏರ್ಪಾಡು ಇಲ್ಲಿಯಾಯಿತು. ಪುಸ್ತಕ ಭಂಡಾರ, ಸಾರ್ವಜನಿಕ ವಾಚನಾಲಯ ವಿಚಾರ ಇವರಿಂದ ಮುಂದೆ ಬಂತು. ತಮ್ಮ ಜ್ಞಾನವನ್ನು ಇತರರಿಗೆ ಕೊಡುವುದರಲ್ಲಿಯೂ, ಇತರರಿಂದ ತಾವು ತಿಳಿದುಕೊಳ್ಳಲಿಕ್ಕೂ ಅವರು ಬಹು ಆನಂದಗೊಳ್ಳುತ್ತಿದ್ದರು." ಎಂದರು.

ಅನಂತರ, ಸ್ತ್ರೀಯರ ಹಕ್ಕು ಮತ್ತು ಆಸ್ತಿ ವಿಚಾರದಲ್ಲಿ ಪ್ರಸ್ತಾಪಿಸುತ್ತಾ ಇಸ್ಲಾಂ ಧರ್ಮವು ಸ್ತ್ರೀಯರಿಗೆ ಸಮಾನ ಹಕ್ಕನ್ನೀಯುವುದು. ಸ್ತ್ರೀಯರು ಆಸ್ತಿಯನ್ನು ಇಟ್ಟುಕೊಳ್ಳಬಹುದು. ಸ್ತ್ರೀಯ ಅನುಮತಿ ವಿನಾ ಮದುವೆಯಾಗಬಾರದು. ಅವಳಿಗೆ ದಾಂಪತ್ಯ ವಿಚ್ಛೇದನಕ್ಕೆ ಹಕ್ಕಿದೆ, ಕ್ರಿಶ್ಚಿಯಾನರು ಈ ರೀತಿಯ ಕಾನೂನು ಮಾಡಿಕೊಂಡಿರುವರು; ಹಿಂದುಗಳೂ ಇದರ ಆವಶ್ಯಕತೆ ಅರಿತು ಅವಶ್ಯಬಿದ್ದಲ್ಲಿ ಇದರ ಬಳಕೆಯಾಗಲು ಅವಕಾಶ ದೊರೆಯುವಂತೆ ಕಾನೂನು ಬೇಕೆನ್ನುವರು. ಇದರಿಂದ ಇಸ್ಲಾಂ ಧರ್ಮದ ವಿಚಾರಗಳು ಎಷ್ಟು ವ್ಯಾಪಕದೃಷ್ಟಿಯುಳ್ಳದ್ದೆಂಬುದು ವಿದಿತವಾಗುವುದೆಂದರು."

ಕೊನೆಯಲ್ಲಿ ಅವರು ಹೀಗೆಂದರು—ಸ್ಪರ್ಧೆಯ ಬದಲಾಗಿ ಐಕ್ಯಮತವನ್ನು ಇಸ್ಲಾಂ ಧರ್ಮವು ನಿಶ್ಚಯಿಸಿರುವುದು. ಇಸ್ಲಾಂ ಶಾಂತಿಯ ಧರ್ಮ, ಬಾಂಧವ್ಯವನ್ನು ನೆಲೆಗೊಳಿಸುವ ಧರ್ಮ, ಸಹಾನುಭೂತಿ, ಸಹನೆ, ವಿಶ್ವಬಾಂಧವ್ಯ ಮತ್ತು ಮಾನವ ಸುಖಸೋಪಾನವೆನಿಸುವ ಧರ್ಮ"ವೆಂದರು.

೧ನೇ ಪುಟದಿಂದ

ಸ್ಥಳೀಯ ಮೆಜಿಸ್ಟ್ರೇಟ್ ಹುದ್ದೆಯೂ ಇದೆ.

ಬ್ರಿಟಿಷ್ ಮಂತ್ರಿಮಂಡಲದ ಸದಸ್ಯ, ಲಾರ್ಡ್ ಸಭೆಯ ಕರ್ಣಧಾರ ಭಾರತದ ವೈಸರಾಯ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಚಾನ್ಸಲರ್ ಹುದ್ದೆಯನ್ನು ಒಂದೊಂದಾಗಿ ಹತ್ತಿ ಈಗ ಲಾರ್ಡ್ ಹೆಲಿಫೇಕ್ಸರು ಬ್ರಿಟನಿನ ವಿದೇಶಮಂತ್ರಿಯಾಗಿದ್ದಾರೆ. ಎಲ್ಲರ ಮೆಚ್ಚುಗೆಯನ್ನೂ ಪಡೆಯುವ ಅಭಿರುಚಿಯಲ್ಲಿ ಚೇಂಬರ್ಲೇನರ ಸರಿಮಿಗಿಲೆನಿಸಬಲ್ಲ ಹ್ಯಾಲಿಫೇಕ್ಸರು ಸದ್ಯದ ಸಿಕ್ಕುಗಟ್ಟಿರುವ ವಾತಾವರಣಕ್ಕೆ ಹೇಗೆ ಅರ್ಹರೋ ತಿಳಿಯುವುದಿಲ್ಲ. ವ್ಯಕ್ತಿಶಃ ಅವರು ಸಜ್ಜನರು. ಜಮೀನ್ದಾರ ಗಂಭೀರ ವರ್ತನೆಯ ದೊಡ್ಡ ಪರಿಮಾಣದಲ್ಲಿರುವವರು. ಆದರೆ ಕಾರ್ಯಶೀಲತ್ವ, ದೃಢತೆ, ಮತ್ತು ಸ್ಪಷ್ಟ ಧೋರಣೆ-ಇವು ಇಂದಿಗೆ ಸಾಕಾಗುವಷ್ಟು ಲಾರ್ಡ್ ಹೆಲಿಫೇಕ್ಸರಲ್ಲಿದ್ದಂತೆ ತೋರುವದಿಲ್ಲ ಅಂತು ಬ್ರಿಟನ್ನಿನ ವಿದೇಶೀ ಧೋರಣೆಯ ಮೂರ್ತಿಮಂತ ಸ್ವರೂಪವೇ ಲಾರ್ಡ್ ಹೆಲಿಫೇಕ್ಸರಿದ್ದಾರೆ.

New Kanara Swadeshi Laundry
GAMDEVI, BOMBAY.
A reliable house for dry cleaning doing all sorts of rich garments.
ದಿ ನ್ಯೂ ಕೆನರಾ ಸ್ವದೇಶಿ ಲಾಂಡ್ರಿ,
ಗಾಮದೇವಿ — ಮುಂಬಾಯಿ.
ಉತ್ತಮ ತರದ ಮಡಿ, ಉತ್ಕೃಷ್ಟ ರೀತಿಯ ರಂಗು—
ಇವುಗಳಿಗೆ ಪ್ರಸಿದ್ಧವಾದ ನಿಲಯ.
ವಿ. ಸೂ.—ಪರವೂರುಗಳಿಂದ ಉತ್ತಮ ಜರತಾರಿ ಸೀರೆ, ವಸ್ತ್ರ ಉಡುಗೆ ತೊಡುಗೆಗಳ ರಂಗು ಹಾಕುವ, ಡ್ರೈಕ್ಲೀನಿಂಗ್ ವಗೈರೆ ಕಾರ್ಯವನ್ನು ಟಪ್ಪಾಲು ದ್ವಾರಾ ಸ್ವೀಕರಿಸಿ ಸಕಾಲದಲ್ಲಿ ತಯಾರಿಸಿ ತಲುಪಿಸುವೆವು.
ಎಸ್. ಆರ್. ಶೆಟ್ಟಿ, ಪ್ರೊಪ್ರೈಟರ್.   **G. V. Mahale.** Manager.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.
ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಶ್ರೀರಾಮಾ ರೆಸ್ಟೋರೆಂಟ್
ಬೋರ್ಡಿಂಗ್ ಮತ್ತು ಲೋಜಿಂಗ್
ಕಾಶೀಮಠದ ಕಟ್ಟೋಣ, ಉಡುಪಿ
ಬ್ರಾಂಚ್:—ಹೂವಾರ್ಕೆಟಿನ ಬಳಿ, ಮಂಗಳೂರು.
ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ.



THE ASIAN ASSURANCE CO., LTD.
Asian Buildings   Bombay.
THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,601	7,88,587	24,50,234
1935	2,52,08,418	18,39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.
Apply for agency termes etc:—
Sri. B. NARAYAN SHETTY, Organizer, Brahmavar.   Or   **Sri. J. A. PUTRAN**, Branch Manager,
" M. SHIVARAMA RAO, Organizer, Puttur.   Mangalore.

ತಬುರನು ಗುಜ್ಜೆಗುತ್ತಿನ ವರ್ಣನೆಯನ್ನು ಕನಕಾಕ್ಷಿ ಹೆಗ್ಗಡ್ತೇರಿಗೆ ಮಾಡಿಕೊಟ್ಟದ್ದು ವಾಚಕರು ಮರೆತಿಲ್ಲವಾಗಿ ಕಾಣುತ್ತದೆ. ಬಾಬಶೆಟ್ರು ಗುಜ್ಜೆಗುತ್ತಿಗೂ ಅವರ ಹೆಂಡತಿ ಕೂಸು ಶೆಡ್ತಿಯೇರ ಪಡ್ಪುಗುತ್ತಿಗೂ ಪರಸ್ಪರ ಸ್ಪರ್ಧೆ. ಅದರಲ್ಲಿಯೂ ಪಡ್ಪುಗುತ್ತು ಮೇಲೆಂದು ಮುಂಚೆಯೇ ಹೇಳಿದೆಯಲ್ಲವೆ "ನೀವಲ್ಲಿಗೆ ಕಾಲಿಟ್ಟರೆಂದರೆ ಅಲ್ಲಿಯ ಸಣ್ಣ ಪೋರರೂ ನಿಮ್ಮನ್ನು ಅಕ್ಕಿ ಮುಡಿಯಿಂದ ಅಳೆಯುತ್ತಾರೆ. ತೀರ್ವೆಯಿಂದ ಭಾರ ನೋಡುತ್ತಾರೆ. ಸಂಬಳದಿಂದ ತೋರ ಹಿಡಿಯುತ್ತಾರೆ. 'ಪವರ್'ನಿಂದ ಎತ್ತರ ನಿಶ್ಚೈಸುತ್ತಾರೆ. ಇಂತಹ ಮಾಪುದಾದರೊಂದು ಅಳತೆಯಲ್ಲಿ ನೀವು ತುಂಬಿ ಬಂದರೆ ನಿಮಗಲ್ಲಿ ಸ್ಥಾನಮಾನ ಎಲ್ಲ ಇದೆ. ಬಾರದಿದ್ದರೆ ನಿಮ್ಮನ್ನಲ್ಲಿ ಮೂಸುವವರಿಲ್ಲ. ಪಡ್ಪು ಗುತ್ತೆಂದರೆ ಏನು ಮರ್ಯಾದೆ!—ಪಡ್ಪು ಗುತ್ತಿನವರು ಮದುವೆ ಮುಂಜಿಗಳಲ್ಲಿ, ದೇವಸ್ಥಾನದಲ್ಲಿ, ದೈವದ ಕಟ್ಟೆಯಲ್ಲಿ, ಕಂಬಳ, ಕೋಳಿಯಂಕ, ಆಟದ ರಂಗಸ್ಥಳ, ಮುಂತಾದ ಮಂದಿಗೂಡುವಲ್ಲೆಲ್ಲ ಬಂದರೆಂದರೆ 'ಕಚಾರ್' ಜನರೆಲ್ಲ ನಿಶ್ಶಬ್ದರಾಗಬೇಕು. ಸರಿದೆದ್ದು ನಿಂತು ಮನ್ನಣೆಯನ್ನೂ ಸಲ್ಲಿಸಬೇಕು, ಆ ಮೇಲೆ ಅವರಿಗೆಲ್ಲ ಯಥೋಚಿತವಾದ ಅಗ್ರಸ್ಥಾನ ಅಗ್ರವೀಳ್ಯ, ಅಗ್ರಪೂಜೆ ಮುಂತಾದ ಮಾನ ಮರ್ಯಾದೆಗಳು ಸಲ್ಲಬೇಕು. ಇನ್ನೂರು ಕೋರ್ಜಿಯ ಕೆರೆಮನೆಯವರು ಸಾವಿರ ತೀರ್ವೆಯ ಹೆಬ್ಬಾಗಿಲ ಮನೆಯವರು, ನಗದಿ ಬಂಡ್ಸಾಲೆಯವರು ಇಂತಿಂಥಾ ಮಾತೋ ಬಾರು" ಪಡ್ಪು ಗುತ್ತೆಂದರೆ ಪಡುಗುತ್ತಿದ್ದರು. ಕೋಣ ಸಾಕುತ್ತಿದ್ದ ಹುಡುಗನು ಸಹಾ ಪಡ್ಪುಗುತ್ತಿನ ಕೋಣ ಒಮ್ಮೊಮ್ಮೆ ಬೇರೆಯವುಗಳನ್ನು ಹಾಯುವಾಗ "ನಾರಾಣ ಪಡ್ಪುಗುತ್ತಿನ ದೊಡ್ಡಸ್ತಿಕೆ ನಿನ್ನ ಕೊಂಬಿನಲ್ಲಿಯೂ ತೋರುತ್ತಿರುತ್ತದಲ್ಲಾ!" ಎಂದು ಬೊಬ್ಬಿಡುವನು. ಬೊಂಬಾಯಿ ಮದ್ರಾಸುಗಳಲ್ಲಿ ಚಾಕರಿಗೆ ಹೋಗಿದ್ದ ಪಡ್ಪುಗುತ್ತಿನ ಬಡ ಒಕ್ಕಲುಗಳ ಮಕ್ಕಳ್ಯಾರಾದರೂ ಆ ಪಟ್ಟಣಗಳ ವೈಭವವನ್ನು ವಿವರಿಸಿದರೆ—'ಅದೇನು ನಮ್ಮ ಪಡ್ಪು ಗುತ್ತಿನಷ್ಟು ಅಬ್ಬರವುಂಟೇ?' ಎಂದು ಅಲ್ಲಿಯ ಹೆಂಗಸರುಮಕ್ಕಳು ಕೇಳುವುದುಂಟು. ಇಂಥಾ ಗುತ್ತಿನಿಂದ ಹೆಂಡತಿಯನ್ನು ತಂದ ಬಾಬಶೆಟ್ರು ಗುಜ್ಜೆಗುತ್ತು ಎಷ್ಟು ಭರ್ಜರಿಯುಳ್ಳದೆಂದು ವಾಚಕ ಮಹಾಶಯರೇ ಊಹಿಸಿರಿ. ಹೀಗಿರುವಾಗ ಬಾಬಶೆಟ್ರು ತನ್ನ ಹೆಂಡತಿ ಬಂದ ಪಡ್ಪುಗುತ್ತಿನ ತಕ್ಕಡಿಯಲ್ಲಿ ತಾನು ಹಗುರವಾಗದ ಹಾಗೆ ಹೆಂಡ್ತಿಗೆ ಧಾರಾಳ ಆಸ್ತಿ ಕೊಟ್ಟಿದ್ದರೆಂದು ಪುನಃ ಹೇಳಬೇಕೇ? ಆದರೆ ಈಗ ಈ ಗುತ್ತುಗಳೆರಡೂ ಕಲಿಯುಗದ ಶ್ರೀಮಂತಿಕೆಯ ಬಹುಮಾನದ ಗೊಂಡೆಗಳಂತಿರುವ ಮೂರು ದುರ್ವ್ಯಸನಗಳ ಬೀಡಾಗಿಯೂ ಹೆಮ್ಮೆಯ ತನರುಮನೆಯಾಗಿಯೂ 'ಟೈಟೇನಿಕ್' ಸ್ಟೀಮರಿನ ಅಡಿಯಲ್ಲಿ ತೂತಾದ ಹಾಗೆ ಸಾಲದ ನೀರು ತುಂಬಿ ಮುಳುಗಹತ್ತಿವೆ. ನೋಡುವವರಿಗೆ ಈ ಆಪತ್ತು ಕಾಣುವುದಿಲ್ಲ—ಆದಕಾರಣ ಈ ಗುತ್ತುಗಳ ಪ್ರತಿಷ್ಠೆ ಹೊರಗೆ ಏನೂ ಕಡಿಮೆಯಾದಂತೆ ತೋರುವುದಿಲ್ಲ. ಇಂಥಾ ಎರಡು ಗುತ್ತುಗಳ ಸಂಯೋಗದಿಂದ ಉದ್ಭವಿಸಿದ ಕುಮಾರರತ್ನಕ್ಕೆ ತಮ್ಮ ಕನ್ಯಾಮಣಿ ಶಾಂತಿಯನ್ನು ಕೈಗೂಡಿಸುವ ಸುಯೋಗ ಬಂದುದಕ್ಕಾಗಿ ನಮ್ಮ ಗೆಣಸು ಗುತ್ತಿನ ಗೋಪಾಲ

ಶಾಂತಿಯ ಮದುವೆ

(SHANTHI'S MARRIAGE)

ಭಾಗ ೨—ವಿವಾಹ ಮಹೋತ್ಸವ.

(Part II—MARRIAGE CELEBRATION)

ಲೇಖಕರು:—ಶ್ರೀ ಬಿ. ಶಿವರಾಯ ಶೆಟ್ಟರು, ಬಿ.ಎ., ಎಲ್.ಟಿ., ಉಡುಪಿ.

Usually the cost of marriage is three-fold. Dowry claims a big share. Jewelry comes next. Celebration comes last and claims the most attention. The economic side of marriage need not end there. It is not only the parents on either side that spend—the girl's side most—but also the relations, friends and acquaintances from far and near. A marriage invitation is very wide and extends from Pole to Pole from East to West. A friend may come or may not come; still he resents not getting a letter when he is in Peru and the marriage takes place in China and common sense says that he can't attend as the notice is very short. There are instances when letters reach individuals even after the marriage takes place; but still the formality has to be kept up, the ceremony gone through and the postal department fed. The novel feature of the modern marriages is presentation to the bride and bridegroom and wishing success through wire and cablegram. Special shops have sprung up dealing only in fancy articles specially meant for marriage presentation. The beaux and belles and fashion leaders vie with one another in buying presents and offering them to the couple who are the cynosures of the marriage day. Oh what a sight! Coloured lights—artistic pandal erected by skilled workmen—floral decorations the best band and pipers playing, expert caterers preparing the food—toilet made men and diamond bedecked women in silken, lace and brocade sarees constitute the several ingredients which go to make up this wonderful mixture m-a-r-r-i-a-g-e. The most noticeable feature is the sight of two individuals—a man and a woman—standing on either side of the bridegroom and bride attending to the flow of wires and presents to both. How busy should the two post offices be the transmitting and receiving. The more the wires, the more the presents, the greater the influence and wider the circle of acquaintance of the parties to the marriage. Occasionally in some marriages a local star or many stars give a dance. Thus money is circulated. A full stop cannot be put here. A shallow father-in-law tom-toms he is very rich and the smug of a son-in-law goes on drawing on him. Who knows where this will stop. **Oh vanity! whither shalt thou lead humanity!** When will good sense prevail! No use learning a lesson when it is too late. In all our social activities 'We are **artisans** and not **artists** for we have no eye for the whole and we do not view the partial through the whole. Our inquiries turn rather on the outward mechanism the mere hulls and superficial accidents of the objects rather than on the object itself. For us the temple lies in the external rituals and ceremonies and not in the hearts of Believing men and women,' so also marriage lies in these vanities (not all of which have been) enumerated above and not in the hearts of the bride and bridegroom. **Marriage is the blending of the two hearts of the male and the female into one. It does not mean pomp, parade and pageant.**

ಕೃಷ್ಣ ಶೆಟ್ರು ಅವರ ಪತ್ನಿ ಕನಕಾಕ್ಷಿ ಹೆಗ್ಗಡ್ತೇರೂ ಉಸಿರುಗಟ್ಟುವಷ್ಟು ಉಬ್ಬಿಹೋದದ್ದು ಆತಿಶಯವಲ್ಲ. ಈ ನಡುವೆ ಹುಡುಗನ ತಂಗಿ ವನಜಾಕ್ಷಿಯ ಮದುವೆಯು ವರದಕ್ಷಿಣೆ ಮುಂತಾದ ಶರತ್ತುಗಳ ಬಿಗಿತದಿಂದ ಕಡಿದುಹೋಗಿದ್ದುದರಿಂದ ಈ ಲಗ್ನವು ಶಾಂತಿಯ ತಂದೆ ಗೋಪಾಲಕೃಷ್ಣ ಶೆಟ್ರರ ಗೆಣಸುಗುತ್ತಿನಲ್ಲೇ ವಿಜೃಂಭಣೆಯಿಂದ ಜರಗಿಸುವುದಾಗಿಯೂ ಅಲ್ಲಿಗೆ ಹುಡುಗನ ಕಡೆಯವರಾದ ಗುಜ್ಜೆಗುತ್ತು ಮತ್ತು ಪಡ್ಪುಗುತ್ತಿನವರು ಮಹಾ ವೈಭವದಿಂದ ದಿಬ್ಬಣಬರುವುದಾಗಿಯೂ ನಿಶ್ಚಯವಾಯಿತು.

ಮರುದಿವಸ ಕನಕಾಕ್ಷಿ ಹೆಗ್ಗಡ್ತೇರು ಗಂಡ ಗೋಪಾಲಕೃಷ್ಣ ಶೆಟ್ರೊಡನೆ—ಏನಪ್ಪಾ ಪಡ್ಪುಗುತ್ತು ಗುಜ್ಜೆಗುತ್ತಿನ ಹೆಂಗಸರು ವಜ್ರ ವೈಡೂರ್ಯದಿಂದಲೇ ತುಂಬಿ ಬರುವರು—ಎಷ್ಟು ವಿಜೃಂಭಣೆ—ಎಷ್ಟು ಆಟೋಪದಿಂದ ಬರಲಿಕ್ಕೆ ಉಂಟೂ ಏನಾ!—ನಾವು ಸಹಾ ಇದಕ್ಕೆ ತಕ್ಕ ಠೀವಿ ಮಾಡದಿದ್ದರೆ ಮರ್ಯಾದೆ ಉಳಿಯಲಿಕ್ಕಿಲ್ಲ—ಆದಕಾರಣ—

ಗೋಪಾಲಕೃಷ್ಣ ಶೆಟ್ರು—ಏನು ಆದಕಾರಣ?—

ಕನಕಾಕ್ಷಿ—ನಮ್ಮ ಹುಡುಗಿಗೆ ಚಿನ್ನಗಿನ್ನ ಬೇಡ್ವಾ?—

ಗೋಪಾಲಕೃಷ್ಣ—ನಾನು ವರದಕ್ಷಿಣೆಗೆ ಐದು ಸಾವಿರ ರೂಪಾಯಿ ಎಲ್ಲಿಂದ ಮಾಡುವುದುಯೆಂತ ಕಂಗಾಲಾಗಿದ್ದೇನೆ—ಈಗ ನಿನ್ನದೊಂದು—

ಕನಕಾಕ್ಷಿ—ಅದಾದರೂ ಆ ಸಮಯಕ್ಕೆ ಸರಿಯಾಗಿ ಬೇಂಕು ಗೀಕಿನಿಂದ ತೆಗೆಯಬಹುದಲ್ಲಾ—ಆದರೆ ಈಗ ಮೊದಲಾಗಿ ಚಿನ್ನಾಭರಣಮಾಡಿಸಬೇಕಲ್ಲಾ—

ಗೋಪಾಲಕೃಷ್ಣ—ಎಂಥಾದ! ನನ್ನ ಹತ್ತಿರ ಪೈ ಒಂದೂ ಇ—ನಿನ್ನ ಹೆಸರಲ್ಲಿ ಮಾಡಿದ ಆಸ್ತಿಯನ್ನು ಅಡವುಹಾಕಬೇಕು—

ಕನಕಾಕ್ಷಿ—ಹಾಗಾದರೆ ಹಾಗೆ—ಸುಮ್ಮಗೆ ಕೂತುಕೊಂಡರೆ ಆತ್ತಾ?

ಗೋಪಾಲಕೃಷ್ಣ—ನಿಮಗೆ ಹೆಂಗಸರಿಗೆ ಆಸ್ತಿ ಅಡವುಹಾಕುವುದು, ಮಾರುವುದು ಅಂದರೆ ಬಹಳ ಖುಷೀದು—ಇನ್ನು ಉಳಿದ ಮಕ್ಕಳಿಗೆ?—ಅದಿರಲಿ—ನೀನು ನಿನ್ನ ಅಣ್ಣನ ಹತ್ತಿರ ಹೇಳು. ಈ ಕಾಲದಲ್ಲಿ ಸ್ವಲ್ಪ ಧನ ಸಹಾಯ ಮಾಡಿಯಾರು. ಆನೂ ಇಲ್ಲದೆ ಅವರ ಮಗಳ ಮದುವೆಯಾಯಿತು. ಇನ್ನೇನೂ ಖರ್ಚಿನ ತಾಪತ್ರಯ ಅವರಿಗೆ ಇಲ್ಲ.

ಕನಕಾಕ್ಷಿ—ಬಾಕಿ ಮಕ್ಕಳ ಸಂಗ್ತಿ ಈಗ ನಮಗೆ ಆಲೋಚನೆ ಬೇಡ—ಅದು ಮುಂದಕ್ಕೆ ಹ್ಯಾಗೂ ಆತ್ತು. ಈಗ ಇವನ್ನು ನಮಾ ನೋಡುವ ನಾವು—ಮತ್ತು ಅಣ್ಣಾ ಗಿಣ್ಣಾ ಸಹಾಯ ಮಾಡುತ್ತಾರೆಂದು ನಾನು ಹೆಣ್ಣು ಹೆತ್ತದ್ದಲ್ಲ ಯಾಕೆ ಅವರ ಹತ್ತಿರ ಎಲ್ಲಾ ಬೇಡುವುದು?

ಗೋಪಾಲಕೃಷ್ಣ—ಬೇಡುವುದು ಬೇಡ. ಸ್ವಲ್ಪ ರೂಪಾಯಿ ಸಾಲ ಕೊಡಲಿ—ನೋಟು ಬರೆದು ಕೊಡುವ.

ಕನಕಾಕ್ಷಿ—ಬೇಡ—ನೀವು ಆಸ್ತಿ ಅಡವು ಯಾರಿಗಾದರೂ ಬೇಗ ಹಾಕಿ—ಇಲ್ಲದಿದ್ದರೆ ಬೇಂಕಿನಿಂದ ರೂಪಾಯಿ ತೆಗೆಯಿರಿ.

ಗೋಪಾಲಕೃಷ್ಣ—ಹಾಗಾದರೆ ಹಾಗೆ—ಹ್ಯಾಗೂ ನೀವು ಹೆಂಗಸರು ಹೇಳಿದ ಹಾಗೆ ಕೇಳದಿದ್ದರೆ ಆಗುತ್ತಾ—ಇಲ್ಲದಿದ್ದರೆ ಕಡೆಗೆ ಊಟಕ್ಕೆ 'ಸೊಣ್ಣೆ' ಅಲ್ಲೀಕ—

ಕನಕಾಕ್ಷಿ—ಅದಿರಲಿ—ಈಗ ಹುಡುಗಿಗೆ ಚಿನ್ನ ಎಲ್ಲಾ ಬೇಡ್ವಾ?—ನಮ್ಮನ್ನೂ ಅವಳನ್ನೂ ನಾವು ಪಡ್ಪುಗುತ್ತಿನವರ ಮುಂದೆ ನಗಾರವಾಡಿಕೊಳ್ಳುವುದಾ?—ನಮ್ಮ ಮರ್ಯಾದೆ ಸಂಗ್ತಿಯೇನು?—ತಪ್ಪೆ ಮಾಡಬಾರದು—ಅಣ್ಣ ಪಟ್ಟ ಹೆಗ್ಗಡೇರನ್ನು ಬರಮಾಡಿದರೆ ಕೆಲವು ರಕೋಲ್ ಅವರು ನೋಡಿಯಾರು—ನಮ್ಮ ಜಾಸ್ತರಣ್ಣನ ಮಗಳ ಮದುವೆಗಿಂತಲೂ ಅಬ್ಬರದಲ್ಲಿ ಆಗಬೇಕು—ಅವರಿಗೇ ಕಾಗ್ದ ಬರೆದರೆ ಕೆಲವು ವಸ್ತು ಒಡವೆಗಳನ್ನು ಮದ್ರಾಸಿನಿಂದಲೇ ತರಿಸಬಹುದು—'ಶೆಂಟ್ ಗಿಂಟ್' 'ಶೀರೆ ಗೀರೆ' 'ವಜ್ರ ಗಿಜ್ರ'—ಕಾಗ್ದ ಬೇಡ—ಅಕ್ಕ ನನಗೆ ಅವರ ಮಗಳ ಮದುವೆಗೆ ಹೇಳಲಿಕ್ಕೆ ಬರಲಿಲ್ಲವಾ—ನಾನು ಅವರಿಗೆ ಹೇಳಲಿಕ್ಕೆ ಹೋಗುವುದು ಬೇಡ್ವಾ? ಇಲ್ಲದಿದ್ದರೆ ಅಕ್ಕ ಬರಲಿಕ್ಕಿಲ್ಲ—ಹೋದಾಗಲೇ ತಂದುಬಿಟ್ಟರಾಯಿತಾ

ಪುಟ ೧೬ಕ್ಕೆ ಮುಂದುವರಿಸಿದೆ.

(ಪುಟ ೧೬ ರಿಂದ)

ಅವಕಾರಣದಿಂದಲೇ ಪ್ರತಿ ದಿವಸದಲ್ಲಿ ಗಮನೀಯ ಸ್ಥಾನವನ್ನು ಹೊಂದುವಿರಲ್ಲದೆ ಅವರಿಂದ ಮನ್ನಿಸಲ್ಪಡುವಿರಿ. ತಿಳಿದೇ ಮಾಡತಕ್ಕ ತಪ್ಪಿಗಿಂತಲೂ ತಿಳಿದು ಮಾಡತಕ್ಕ ತಪ್ಪು ಬಹಳ ಹೆಚ್ಚಿನದು. ಇಂಥಾ ಪ್ರಕರಣವು ನಿಮಗೆ ಸಂಭವಿಸಲಿದೆ. ಇದರಿಂದ ನಿಮ್ಮ ಮುಂದಿನ ಕಲ್ಯಾಣಕ್ಕೆ ಬಹಳ ಕೆಡುಕುಂಟಾಗುವದು ಆದಕಾರಣ ಮತಿಶೀಲರಾಗಿ ವರ್ತಿಸಿದಿರಿ. ನಿಮಗೆ ಸಕಲ ಭಾಗಗಳಲ್ಲೂ ಲಾಭವೂ ಉತ್ಪತ್ತಿಯೂ ಚೆನ್ನಾಗಿದ್ದರೂ ಧನವಿಷಯಕವಾದ ಚಿಂತೆಯು ಯಾವಾಗಲೂ ಬಿಡಲೊಲ್ಲದು. ಅಕಸ್ಮಾತ್ ವಿಚಾರಶೂನ್ಯತೆಯಿಂದಾಗಿ ಕಲಹ ಪ್ರಾಪ್ತವಾಗಲಿದೆ. ಆದಕಾರಣ ತಾ. 25-30-31-1 ಈ ದಿನಗಳಲ್ಲಿ ವಿಶೇಷ ಜಾಗ್ರತೆಯಿಂದಿರಿ.

ನವೀನ ಪುಸ್ತಕಗಳು

೧. **ಕರಿನೀರು**—ರಮ್ಯ ಭೀಷಣ ಕಾದಂಬರಿ ೪೦೦ ಪುಟ ನುಣುಪು ಕಾಗದ ಬೆಲೆ ೨ ರೂಪಾಯಿ

೨. **ಪನ್ನೆ**—ಐತಿಹಾಸಿಕ ನಾಟಕ, ಪುಟ ೮೦, ನುಣುಪು ಕಾಗದ, ಬೆಲೆ ೬ ಆಣೆ.

೩. **ಬಲಿದಾನ**—ಬುದ್ಧ ಕಾಲೀನ ಐತಿಹಾಸಿಕ ಕಾದಂಬರಿ, ೨೭೬ ಪುಟ ಬೆಲೆ ರೂ. ೧-೪-೦

೪. **ಎಚ್ಚಮ್ಮ ನಾಯಕ**—ವಿಜಯನಗರಕ್ಕೆ ಸಂಬಂಧಿಸಿದ ಕಥಾನಕವು ೧೦೮ಪುಟ ಬೆಲೆ ೫ಆಣೆ

೫. **ಅಮಾತ್ಯ ನಂದಿನಿ**—ಚಂದ್ರಹಾಸನ ಕಾಲದ ಪೌರಾಣಿಕ ಕಾದಂಬರಿ, ೩೦೦ ಪುಟ ಬೆಲೆ ರೂ. ೧-೮-೦

ವಿಳಾಸ:—ಶ್ರೀ ಶೇಷಾಚಲ ಪ್ರೆಸ್, ಪೋ. ಆನಂದವನ (ಹಾವೇರಿ) ಧಾರವಾಡ.

ಅಳಿಯಸಂತಾನ ಸಮಾಜ ಸುಧಾರಣಾ ಪರಿಷತ್ತು

ಅಳಿಯಸಂತಾನ ಸಮಾಜದ ಸುಧಾರಣಾ ಪರಿಷತ್ತು ತಾ 21 5—39ರಲ್ಲಿ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಕೇಂದ್ರ ನ್ಯಾಯವಿಧಾಯಕ ಸಭೆಯ ಸದಸ್ಯರಾದ ಶ್ರೀಮಾನ್ ಜಿನರಾಜ ಹೆಗ್ಡೆ ಬಿ ಎಸ್ ಸಿ., ಎಲ್ ಎಲ್. ಬಿ, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ನ್ಯಾಯಾಧಿಕಾರಿಗಳು, ಶ್ರೀಮಾನ್ ಎ.ಬಿ ಶೆಟ್ಟಿ ಇವರೇ ಮೊದಲಾದ ಸಮಾಜದ ಬೇರೆ ಹಲವು ಗಣನೀಯ ಮಹನೀಯರು ಉತ್ಸಾಹದಿಂದ ಭಾಗವಹಿಸಿದ್ದರು. ಅಳಿಯಕಟ್ಟನ್ನಾಚರಿಸುವ ಜಿಲ್ಲೆಯ ಬೇರೆ ಬೇರೆ ಕಡೆಗಳಿಂದ ಪ್ರತಿನಿಧಿಗಳು ಬಂದು ನೆರೆದಿದ್ದರು.

ದೇಶಭಕ್ತ ಎನ್. ಎಸ್. ಕಿಲ್ಲೆಯವರ ಸುರಸ ಸ್ವಾಗತ ಭಾಷಣ

ಶ್ರೀಮಾನ ಕಿಲ್ಲೆಯವರು ತಮ್ಮ ಸುರಸ ಸ್ವಾಗತ ಭಾಷಣದಲ್ಲಿ ಹೀಗೆಂದರು. ಮಹಾಶಯರೇ, ಇಂದೀ ಸುದಿನದಲ್ಲಿ ಅಳಿಯಸಂತಾನ ಸಮಾಜದ ಸುಧಾರಣಾ ಪರಿಷತ್ತಿನ ಕಾರ್ಯಭಾಗದಲ್ಲಿ ಮಹನೀಯರಾದ ನಿಮ್ಮೆಲ್ಲರನ್ನು ಸ್ವಾಗತೀಕರಿಸುವ ಸುಯೋಗವು ನನ್ನ ಪಾಲಿಗೆ ಬಿದ್ದಿದೆ. ಅಳಿಯಸಂತಾನ ಸಮಾಜಸುಧಾರಣೆಯ ಆವಶ್ಯಕತೆಯ ಕುರಿತು ಹೆಚ್ಚಾಗಿ ಹೇಳಬೇಕಾಗಿಲ್ಲ ಯಾಕೆಂದರೆ, ಅಳಿಯಕಟ್ಟನ್ನಾಚರಿಸುವ ಜನತೆಯು ತಮ್ಮ ಕಟ್ಟಿನಲ್ಲಿ ತಕ್ಕ ಸುಧಾರಣೆಯಾಗಬೇಕೆಂದು ಬಯಸತೊಡಗಿದುದು ಇಂದು ನಿನ್ನೆಯಲ್ಲ. ಸಮಾಜಸುಧಾರಣೆಯ ಕಾರ್ಯದ ಯೋಜನೆಯನ್ನು ಸಮಾಜದ ಹಲವು ಮುಂದಾಳುಗಳು ಹಲವು ವರ್ಷಗಳ ಮೊದಲೇ ಕೈಕೊಂಡಿದ್ದು ನಾಲ್ವತ್ತು ವರ್ಷಗಳ ಪೂರ್ವದಲ್ಲೇ ಅಳಿಯಸಂತಾನದ ಸುಧಾರಣಾ ಮಸೂದೆಯು ಜಾರಿಗೆ ತರುವಪ್ರಯತ್ನ ನಡೆದಿತ್ತು. ಇಂಥಾ ಕಟ್ಟನ್ನಾಚರಿಸುವ ಬೇರೆ ಜಿಲ್ಲೆಯ ಜನರು ಸುಧಾರಣೆಯ ಫಲವನ್ನು ಆ ಮೊದಲೇ ತಕ್ಕಮಟ್ಟಿಗೆ ಪಡೆದಿರುವರು. ಆದರೆ ದಕ್ಷಿಣಕನ್ನಡ ಜಿಲ್ಲೆಯ ಈ ಕಟ್ಟನ್ನು ಆಚರಿಸುವ ಜನರಲ್ಲಿ ಅಳಿಯಸಂತಾನದ ಸುಧಾರಣೆಯ ಕಾರ್ಯವು ಪರಿಣಾಮ ಹೊಂದುವಂತೆ ಮಾಡಿದ ಪ್ರಯತ್ನಗಳು ಇಷ್ಟರ ವರೆಗೆ ಫಲತೆ ಹೊಂದಲಿಲ್ಲವೆಂಬುದು ವಿಷಾದಕರವಿದೆ. ಇಂದೀಗ ಜನತೆಯಲ್ಲಿ ಈ ಅಳಿಯಕಟ್ಟಿನಲ್ಲಿ ತಕ್ಕ ತಿದ್ದುಪಡಿಯಾಗುವಂತೆ ಯುಕ್ತ ಕಾನೂನು ಜಾರಿಗೆ ಬರಬೇಕೆಂಬ ಭಾವನೆ ಬಲವಾಗಿರುವುದರಿಂದ, ಕಾಲವು ಪೂರ್ಣ ಪರಿಪಕ್ವವಾಗಿದ್ದು ಅನುಕೂಲವಾಗಿ ಬಂದಿದೆ. ಮದ್ರಾಸು ಪ್ರಾಂತದ ಪ್ರಧಾನರಾದ ಮಾನ್ಯ ರಾಜಗೋಪಾಲಾಚಾರ್ಯರವರು ಕಳೆದ ಬಾರಿ ಮಂಗಳೂರಿಗೆ ಬಂದಾಗ ಅಳಿಯಕಟ್ಟಿನ ಕಾರಣದಿಂದ ಈ ಕಟ್ಟನ್ನಾಚರಿಸುವವರಿಗಾಗುವ ತೊಡಕುಗಳನ್ನು ಅರಿತುಕೊಂಡು ಸುಧಾರಣಾ ಮಸೂದೆಯು ತರಲ್ಪಡುವ ಅಗತ್ಯವನ್ನು ಒಪ್ಪಿರುವರು. ಅದೊಂದು ಕಾಲದಲ್ಲಿ ಅಳಿಯಸಂತಾನದ ಕಟ್ಟಿನ ಆಚರಣೆಯಿಂದ ಹಲವು ಅನುಕೂಲತೆಗಳು ದೊರೆಯುತ್ತಿರಬಹುದು; ಆದರೆ, ಕಾಲವು ಮಾರ್ಪಟ್ಟಿದೆ; ವಿಚಾರಕ್ರಾಂತಿಯ ಈ ಯುಗದಲ್ಲಿ ಹಳೆಯದೆಲ್ಲಾ ಹೊನ್ನು ಎಂಬ ಕುರುಡು ನಂಬಿಕೆಯುಳಿಯಲಾರದು. ಕಾಲಕ್ಕೊಪ್ಪುವ ಮಾರ್ಪಾಟವಾಗದಿದ್ದರೆ ಸಮಾಜವು ಅಧೋಗತಿ ಹೊಂದುವದೆಂಬುದು ನಿಶ್ಚಯ. ಮಲಬಾರು ಮೊದಲಾದೆಡೆ ಅಳಿಯಕಟ್ಟನ್ನಾಚರಿಸುವ ಜನತೆಯಲ್ಲಿನ ಸುಧಾರಣೆಯ ಮಸೂದೆಗಳು ಜಾರಿಗೆ ಬಂದಿವೆ; ನಮ್ಮ ಜನತೆಯಲ್ಲಿ ಅಳಿಯಕಟ್ಟಿನಲ್ಲಿ ತಕ್ಕ ಸುಧಾರಣೆಯಾಗುವಂತೆ ಸಾಧಿಸಬೇಕಾಗಿರುವುದು. ಆದುದರಿಂದ ನಾವು ನಮ್ಮ ಸಮಾಜದ ಏಳಿಗೆಯನ್ನಾಗಬಯಸುವುದಾದರೆ, ಅವಶ್ಯವಾಗಿ ಪರಸ್ಪರ ಸಹಾನುಭೂತಿ ಸಹಕಾರದಿಂದ ಯುಕ್ತ ಯೋಜನೆಯನ್ನು ಶೀಘ್ರದಲ್ಲೇ ಕೈಗೊಳ್ಳಬೇಕು.

ಅಳಿಯ ಸಂತಾನ ಸಮಾಜ ಸುಧಾರಣಾ ಪವಿತ್ರ ಧ್ಯೇಯೋದ್ದೇಶದಿಂದ ನಾವಿಲ್ಲಿ ನೆರೆದಿದ್ದೇವೆ. ಈ ಅಳಿಯಕಟ್ಟು ಯಾವುದಾದರೂ ಒಂದೇ ಜಾತಿಗೆ ಅನ್ವಯಿಸತಕ್ಕದ್ದಲ್ಲ. ನಮ್ಮ ಜಿಲ್ಲೆಯ ಹಲವು ಜಾತಿಗಳು ಈ ಕಟ್ಟಿಗೆ ಸೇರಿವೆ. ನಮ್ಮ ಪರಿಷತ್ತಿನಲ್ಲಿ ಸಂಬಂಧಪಟ್ಟ ಜಾತಿಗಳ ಪ್ರತಿನಿಧಿಗಳಿರುವುದು ಸಂತೋಷಕರ ವೇಳೆಯಾಗಿ ಇಂದಿನ ಆರಂಭ ಭಾಷಣ ಮಾಡುವವರು ದೀರ್ಘ ಅನುಭವಗಳುಳ್ಳ ಮದ್ರಾಸಿನಲ್ಲಿ ವಕೀಲವೃತ್ತಿಯನ್ನವಲಂಬಿಸಿಕೊಂಡಿರುವ ಶ್ರೀ ಬಂಟ್ವಾಳ ಸೀತಾರಾಮ ರಾಯರೆಂಬುದು ಸುಯೋಗವೆನ್ನಬೇಕು. ನಮ್ಮ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿನರಾಜ ಹೆಗ್ಡೆಯವರು ಕೇಂದ್ರ ನ್ಯಾಯವಿಧಾಯಕ ಸಭೆಯ ಸದಸ್ಯರಿದ್ದು ಜನತೆಯ ಮೆಚ್ಚಿಗೆಯಾಗಿ ತೋರುವ ತರುಣ ವಕೀಲರು. ನಾನೀ ಸಂದರ್ಭದಲ್ಲಿ ನಿಮ್ಮೆಲ್ಲರನ್ನ ಆನಂದಪೂರ್ವಕವಾಗಿ ಆತ್ಮೀಯದಿಂದ ಸ್ವಾಗತೀಕರಿಸುತ್ತೇನೆ.

ಶ್ರೀ। ಬಂಟ್ವಾಳ ಸೀತಾರಾಮರಾಯರ ಅನುಭವ ಪೂರಿತ ಆರಂಭ ಭಾಷಣ

ಬಂಟ್ವಾಳ ಸೀತಾರಾಮರಾಯರು ತಮ್ಮ ಆರಂಭ ಭಾಷಣದಲ್ಲಿ ಹೀಗೆಂದರು ಮಹನೀಯರೇ ಇಂದೀ ಪರಿಷತ್ತಿನಲ್ಲಿ ಭಾಗವಹಿಸಲು ನಾನು ಸಂತೋಷಪಡುತ್ತೇನೆ. ಅಳಿಯಕಟ್ಟಿನಲ್ಲಿ ಸುಧಾರಣೆಯಾಗಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ನಾನು ಹಲವು ವರ್ಷಗಳಿಂದ ವಕೀಲ ವೃತ್ತಿಯನ್ನನುಸರಿಸಿಕೊಂಡು ಬಂದಿರುವವನಾದುದರಿಂದ, ಜಿಲ್ಲೆಯ ಹಲವು ಅಳಿಯಸಂತಾನ ಕುಟುಂಬಗಳ ವಿಚಾರ ನನಗೆ ತಿಳಿದಿದೆ. ಹಲವು ಅಳಿಯಸಂತಾನ ಕುಟುಂಬಗಳ ವಾದವಿವಾದಗಳಿಗೆ, ಅಳಿಯಕಟ್ಟಿನಲ್ಲಿರುವ ಕೆಲವು ವ್ಯವಹಾರ್ಯವಲ್ಲದ ಕಟ್ಟಳೆಗಳೇ ಕಾರಣವು. ಅಳಿಯಕಟ್ಟನ್ನಾಚರಿಸುವ ಬೇರೆ ಜಿಲ್ಲೆಯ ಜನರಲ್ಲಿ ಸುಧಾರಣೆಯ ಮಸೂದೆಯು ಕಾನೂನಾಗಿ ಮಾರ್ಪಡಲು ಅಲ್ಲಿಯ ಜನರ ವಿವಾಹ ಆಚಾರ ಪದ್ಧತಿಗಳು ಇಲ್ಲಿಯವರದ್ದಕ್ಕಿಂತ ಸ್ವಲ್ಪ ಸಡಿಲಾಗಿರುವುದೇ ಕಾರಣವೆನ್ನಬಹುದು. ಅಳಿಯಸಂತಾನದ ಆಚರಣೆಯು ಮಾನವ ಸ್ವಭಾವಕ್ಕೆ ವಿರುದ್ಧವಾದುದಿದೆ. ತಂದೆಗೆ ಮಕ್ಕಳ ಮೇಲೆ ಪ್ರೇಮವಿರುವುದು ಸಹಜ ಅಧಿಕಾರ ಬಂದಾಗ ಯಜಮಾನನೆನಿಸಿದವನು ಸಾಧ್ಯವಾದಷ್ಟು ರೀತಿಯಲ್ಲಿ ಕುಟುಂಬವನ್ನು ವಂಚಿಸಿ, ತನ್ನ ಮಕ್ಕಳ ಹಿತರಕ್ಷಣೆ ಮಾಡಬಯಸುವನು. ಇಂಥಾ ಸ್ವಾರ್ಥವಿಲ್ಲದಿರಬೇಕಾದರೆ ಮಾನವನು ದೈವಿಕಗುಣಸಂಪನ್ನನಿರಬೇಕು. ಅಂಥವರು ಇದೀಗ ಈ ಕಾಲದಲ್ಲಿ ಕಡಿಮೆಯಷ್ಟೆ. ಕಲವು ಮಟ್ಟಿಗೆ ಅಳಿಯಕಟ್ಟಿನ ಕಾರಣದಿಂದ ಕುಟುಂಬದ ಆಸ್ತಿಯು ಹಂಚಿ ಹೋಗದೆ ಉಳಿಯುವುದೆಂದರೂ ಇಂದಿನ ಕಾಲದ ಪರಿಸ್ಥಿತಿಯಲ್ಲಿ ಅಳಿಯಕಟ್ಟಿನ ಹಲವು ನಿಯಮಗಳು ಸಮಾಜದ ಏಳಿಗೆಗೆ ಕಂಟಕಪ್ರಾಯವಾದುವುಗಳಾಗಿವೆ. ಆದುದರಿಂದ ನಾವು ಬೇಗನೇ ಯುಕ್ತ ನಿಯಮಗಳ ದಾರಿಯನ್ನು ಕಂಡುಕೊಳ್ಳಬೇಕಾಗಿದೆ. ಹಲವು ಕಾಲದಿಂದ ನಡೆದುಬಂದ ಈ ಪದ್ಧತಿಯನ್ನು ಒಮ್ಮೆಯೇ ಕಿತ್ತೊಗೆಯಲು ಬರುವುದಿಲ್ಲ. ಆದರೆ ಸಾಧ್ಯವಾದ ರೀತಿಯಲ್ಲಿ ವಿಚಾರ ವಿವೇಕದಿಂದ ಹಲವು ತಿದ್ದುಪಡಿಗಳನ್ನೊಳಗೊಂಡ, ಮಸೂದೆಯನ್ನು ಕಂಡು, ಅದು ಮಂಜೂರಾಗುವಂತೆ ಸಾಧಿಸತಕ್ಕದ್ದು. ಅಳಿಯಕಟ್ಟಿನ ಹಲವು ಒಳ್ಳೆಯ ಕುಟುಂಬಗಳು ಈ ಪದ್ಧತಿಯ ಕಾರಣದಿಂದ ದುರ್ದಸೆಗೆ ಈಡಾದ ವಿಷಯವನ್ನು ಯೋಚಿಸುವಾಗ ಬಹು ದುಃಖವೆನಿಸುವುದು. ಆದುದರಿಂದ ಬಹು ಬೇಗನೇ ತಕ್ಕ ಸುಧಾರಣೆಯಾಗುವುದು ಅತ್ಯಗತ್ಯ. ಅದಕ್ಕಾಗಿ ಬಹು ಬೇಗನೇ ಅಳಿಯಸಂತಾನ ಸುಧಾರಣೆಯ ಮಸೂದೆಯೊಂದು ಬಳಕೆಗೆ ಬರುವಂತಾಗಲೆಂದು ಬಯಸುವೆನು. ನಿಮ್ಮೀ ಕಾರ್ಯ ಯಶಸ್ವಿಯಾಗಿ ಸಮಾಜದೇಳಿಗೆಯಾಗಲೆಂದು ನಾನು ಹಾರ್ದಿಕವಾಗಿ ಹಾರೈಸುವೆನು.

ಪರಿಷತ್ತಿನ ಅಧ್ಯಕ್ಷರಾದ ಜಿನರಾಜ ಹೆಗ್ಡೆಯವರ ಬೋಧಪರ ಸುದೀರ್ಘ ಭಾಷಣ

ಶ್ರೀ. ಜಿನರಾಜ ಹೆಗ್ಡೆಯವರು ತಮ್ಮ ಅರ್ಥವತ್ತಾದ ಸುದೀರ್ಘ ಭಾಷಣದಲ್ಲಿ ಅಳಿಯಕಟ್ಟಿನ ಸುಧಾರಣೆಯ ಕುರಿತು ಪ್ರಸ್ತಾಪಿಸುತ್ತಾ ಹೀಗೆಂದರು. ಅಳಿಯ ಸಂತಾನ ಪದ್ಧತಿಯ ಆಚರಣೆಯವರ ಪ್ರಥಮ ಪರಿಷತ್ತಿನ ಈ ಸಮಾರಂಭದ ಅಧ್ಯಕ್ಷಸ್ಥಾನವನ್ನು ತಾವು ಪ್ರೇಮಪೂರ್ವಕವಾಗಿ ನನಗಿತ್ತುದಕ್ಕಾಗಿ ನಾನು ಕೃತಜ್ಞನಿರುವೆನು. ನಾನೀ ಸ್ಥಾನವನ್ನು ಗೌರವಕ್ಕಾಗಿ ಸ್ವೀಕರಿಸಿದುದಲ್ಲ. ನಮ್ಮ ಸಮಾಜದ ಆರ್ಥಿಕ ಹಾಗೂ ಸಾಮಾಜಿಕ ದುಸ್ಥಿತಿಯನ್ನು ದೂರಗೊಳಿಸಿ, ನಮ್ಮನ್ನು ಸುಧಾರಿಸಿಕೊಳ್ಳಬಹುದಾದ ಈ ಪರಿಷತ್ತಿನ ಪವಿತ್ರ ಧ್ಯೇಯ ಕಾರ್ಯದಲ್ಲಿ ನನ್ನ ಕೈಲಾದ ಸೇವೆ ಸಲ್ಲಿಸಲು ನಾನು ಮುಂದಾಗುವುದು ನನ್ನ ಕರ್ತವ್ಯವೆಂದು ನಂಬಿ, ಈ ಉಚ್ಚಸ್ಥಾನವನ್ನು ಸ್ವೀಕರಿಸಿರುವುದಾಗಿದೆ. ಈ ಪವಿತ್ರ ಕಾರ್ಯವನ್ನು ಯಶಸ್ವಿಗೊಳಿಸಿ, ಸಮಾಜದ ಉನ್ನತಿಯನ್ನು ಬಯಸುವರೆ ಸಂಬಂಧಪಟ್ಟವರೆಲ್ಲ, ಸಾಧ್ಯವಾದ ರೀತಿಯಲ್ಲಿ ಉದ್ಯೋಗಿಸಲು ಮುಂದಿರಲು ಹಿಂಜರಿಯರೆಂದು ನನ್ನ ಭಾವನೆ.

ಅದೊಂದು ಕಾಲದಲ್ಲಿ ಅಳಿಯಸಂತಾನದ ನ್ಯಾಯ ರೀತಿಯು ಸಮಾಜದ ಏಳಿಗೆಗೆ ಸಾಧನವಾಗಿರಬಹುದು. ಆದರೆ ಕಾಲ ಮಾರ್ಪಟ್ಟಿದೆ. ಈ ಮಾತೃ ಸಂತತಿ ಪದ್ಧತಿಯು ಕುಲಗುಣದೋಷದಿಂದ ಕೂಡಿದೆ. ಈಗಿನ ನಾಗರೀಕತೆಯ ಪರಿಸ್ಥಿತಿಗೆ ಅದು ಸರಿಹೋಲಲಾರದು. ಇಂದಿನ ಅಳಿಯಕಟ್ಟನ್ನಾಚರಿಸುವವರಲ್ಲಿ ರೀತಿ ನೀತಿ ಮಾರಿ ಅನ್ಯಾಯವಾಗುತ್ತಿದೆ; ಸ್ತ್ರೀಯರ ಅವಸ್ಥೆಯು ಬಹು ಶೋಚನೀಯವಿದೆ. ಅಳಿಯಸಂತಾನದ ಬಾಲಿಕೆಯರು ಈಗೀಗ ಪ್ರವೀಣರಾಗಿ ಮದುವೆಯಾಗಬೇಕಾಗುತ್ತಿದೆ. ಕುಟುಂಬದಲ್ಲಿ ಕಲಹಗಳು ತಪ್ಪಿದುದಲ್ಲ. ನಮ್ಮ ವಿವಾಹ ಪದ್ಧತಿಯು ಇತರ ವಿವಾಹ ಪದ್ಧತಿಯಷ್ಟು ಪವಿತ್ರವಾಗಿರುವುದಾದರೂ, ನ್ಯಾಯಸ್ಥಾನದಲ್ಲಿ ಅದನ್ನು ಆ ರೀತಿ ಕಾಣದೆ ಬರೇ ಒಂದು ರೀತಿಯ ಉಪಪತ್ನಿ ಕ್ರಮವೆಂದೇ ಗಣಿಸಲಾಗಿದೆ ಯಜಮಾನನೆನಿಸಿದವನ ನಿರಂಕುಶ ಪ್ರಭುತ್ವ, ಕಿರಿಯರ ಜವಾಬ್ದಾರಿತ್ವ, ಇವೆಲ್ಲಾ ಇಂದಿನ ನಮ್ಮ ಸಮಾಜದ ಚಿತ್ರಗಳು.

ಮಾತೃ ಸಂತತಿ ಕ್ರಮದಲ್ಲಿ ಮಾರ್ಪಾಟು ಆಗುವುದು ಆವಶ್ಯವೆಂದು ಸಮಾಜ ಸುಧಾರಕರು ಹಲವು ವರ್ಷಗಳ ಮೊದಲೇ ಮನಗಂಡಿದ್ದು, ಸಾಕಷ್ಟು ಪ್ರಯತ್ನಗಳು ಈ ಮೊದಲೇ ನಡೆದಿರುತ್ತವೆ. ಕಾರಣಾಂ

ಪುಟ ೧೧ಕ್ಕೆ

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ ದಿನ ನಿತ್ಯವೆಂಬಂತೆ ಸಾಮಾನುಗಳು ಬೇಲುಗಟ್ಲೆ ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

THE
Canara Banking Corporation, Ltd.
(Incorporated in British India)
ESTD. 1906

THREE YEARS' CASH CERTIFICATES
bearing interest at 4% p. a. in denomnationsof
Rs 50/-, 100/-, 500/-, 1,000/- & 5000/-
are now issued at
all our Branches.

ಬಂದು ಮುಷ್ಟಿ ಜಡಿದಿರುವವರಿಗೆ ಹಸ್ತಲಾಘವದ ಉಪದೇಶ ಕೊಡಹತ್ತಿದೆ. ಪೋಲೆಂಡಿನ ವಿದೇಶಾಂಗ ಮಂತ್ರಿ, ಕರ್ನಲ್ ಬೆಕ್ಕರು ತನ್ನ ರಾಷ್ಟ್ರದ ಧೋರಣೆಯನ್ನು ಸ್ಪಷ್ಟವಾಗಿ ನಿರೂಪಿಸಿ ಖಂಡ ತುಂಡ ಮಾತುಗಳನ್ನಾಡಿದ ಹಿಂದಿನ ದಿನದ ತನ್ನ ಸಂಪಾದಕೀಯ ಲೇಖನದಲ್ಲಿ 'ಟೈಮ್ಸ್' ಪತ್ರಿಕೆಯು ಡಾನ್ಜಿಂಗ್ ಪ್ರಕರಣವನ್ನು ಯುಕ್ತಿ ಪ್ರಯುಕ್ತಿಗಳಿಂದಲೇ ತೀರ್ಮಾನಿಸಬೇಕೆಂದು ವಾದಿಸುತ್ತಾ ಹೀಗಂದಿತ್ತು. "ಯುದ್ಧವಾಗಬೇಕಾಗುವಷ್ಟು ಮಹತ್ತರಲ್ಲಿ ಕಾದಾಡುವುದು ಎಷ್ಟು ಭಯಂಕರ!" ಎಂದು ಬಾಯಿಬಿಟ್ಟು ಹೇಳಿದರು. ಈ ಮನೋವೃತ್ತಿಯು ಜೆಕೋಸ್ಲೊವೇಕಿಯದ ಪೂರ್ಣಾಹುತಿಯಾಗುವ ವರೆಗೂ ಇತ್ತೆಂಬುದರಲ್ಲಿ ಅನುಮಾನವಿಲ್ಲ, ಅದನ್ನು ರುಜುಪಡಿಸಲು ಬೇರೆ ಉದಾಹರಣೆ ಬೇಕಿಲ್ಲ. ಬ್ರಿಟಿಷ್ ಸರಕಾರವು ಉಗ್ರಧೋರಣೆ ವಹಿಸಿ ಆಕ್ರಮಣಕಾರಿಗಳ ಸ್ವಾತಂತ್ರ್ಯಪ್ರಿಯ ಅಧಿಕಾರಿಗಳೇ ಆಶ್ಚರ್ಯ ಸೂಚಿಸಿದರು. ಆದರೆ ಅಂದಿನಿಂದ ಹದಿನೈದು ದಿನಗಳೊಳಗೆ ಮಿ॥ ಚೇಂಬರ್ಲೇನರು ಲೋಕದ ಕಣ್ಣಿಗೆ ಕೊಡೆಯನ್ನಡ್ಡ ಹಿಡಿದು ಸುಡೇಟನನ್ನು ಹಿಟ್ಲರನಿಗೆ ಧಾರೆಯೆರೆದು ಕೊಟ್ಟರು. ಈಗ ಅದೇ ಟೈಮ್ಸ್ ಪತ್ರಿಕೆಯು ಸಕಾಲದಲ್ಲಿ ಮುಂದೆ ಸ್ಪಷ್ಟವಾಯಿತು. ಅದ್ದರಿಂದ ಧನುಷ್ಟೇಂಕಾರವನ್ನು ಎಬ್ಬಿಸುತ್ತಾ ಮಾತಾಡಿಸೋಣ; ಗದ್ದಲದ ನಡುವೆ ತಮ್ಮ ಸ್ವರಭಾರ ಏರುವದೋ ನೋಡೋಣ ಎಂಬ ಆಶೆಯಿಂದ ಬ್ರಿಟನು ಇಂದಿನ ಆಟಾಟೋಪವನ್ನು ಪ್ರದರ್ಶಿಸುತ್ತಿದೆ ಎಂದೂಹಿಸಿದರೆ ತಪ್ಪಾಗದು. ಅದೂ ನಿಷ್ಫಲವಾದಲ್ಲಿ ಲೋಕಶಾಂತಿಯ ಮಂತ್ರ ಜಪಿಸುತ್ತಾ ಇನ್ನೊಂದು ಹೊಸ ಹಾದಿಯ ಮೂಲಕ ಮಿ॥ ಚೇಂಬರ್ಲೇನರು ತಪ್ಪಿಸಿಕೊಳ್ಳದಿರುವರೆ? ಇಂದಿನ ಆಬ್ಬರದ ಪರಿಣಾಮವು ಪರ್ವತಪ್ರಸವದಂತಾಗದೆ ಹೋಗುವದೆ? ಭೂತಕಾಲ, ವರ್ತಮಾನಕಾಲಗಳ ಆಗುಹೋಗುಗಳ ಅವಲೋಕನದ ಮೇಲಿಂದ ಹಾಗಾಗುವ ಸಂಭವನೇ ಅಧಿಕವೆನ್ನಬೇಕಾಗುವದು.

ಸುಭಾಷರ ಹೊಸಪಕ್ಷ

—ಕಾಂಗ್ರೆಸ್ ಅಧ್ಯಕ್ಷತನಕ್ಕೆ ರಾಜಿಯಿತ್ತ ಸುಭಾಷಚಂದ್ರ ಭೋಸರು ಕಾಂಗ್ರೆಸಿನಲ್ಲಿ 'ಫೋರ್ವರ್ಡ್ ಬ್ಲೋಕ್' ಎಂಬ ಹೊಸ ಪಕ್ಷದ ಸ್ಥಾಪನೆಗೆ ತೊಡಗಿರುವರು. ಕಾಂಗ್ರೆಸಿನ ಧ್ಯೇಯ ಕಾರ್ಯಕ್ರಮವನ್ನೊಪ್ಪಿಕೊಂಡು ಮಹಾತ್ಮಾ ಗಾಂಧಿಯವರ ಧುರೀಣತ್ವದಲ್ಲಿ ಅಚಲ ವಿಶ್ವಾಸವನ್ನು ಸೂಚಿಸಿ, ಗಾಂಧೀ ಪಕ್ಷೀಯರಾದ ಧುರೀಣರ ವರ್ತನೆಯನ್ನು ನಿಷೇಧಿಸುವ ಉದ್ದೇಶದಿಂದ ನಿರ್ಮಾಣಗೊಂಡಿದೆ. ಕಾಂಗ್ರೆಸಿನೊಳಗೆ ಅಧಿಕಾರ ಹಿಡಿಯುತ್ತಿರುವ ಪಾರ್ಲಿಮೆಂಟರೀ ಮನೋವೃತ್ತಿಯ ಬದಲಿಗೆ ಹೋರಾಟದ ಭಾವನೆಯನ್ನು ಪ್ರಜ್ವಲಿಸುವದೇ ಹೊಸ ಪಕ್ಷದ ಧ್ಯೇಯ. ಈ ಧ್ಯೇಯೋದ್ದೇಶಗಳಿಗನುಗುಣವಾಗಿ ಅನುಲಕ್ಷಿಸುವಂತೆ ವರ್ತಿಸುವ ಹೊರತು ಬೇರೆ ಕಾರ್ಯಕ್ರಮಗಳು ಈ ಪಕ್ಷಕ್ಕಿಲ್ಲ. ಸ್ವತಃ ಉಗ್ರವಾದಿಗಳನ್ನು ಒಂದುಗೂಡಿಸುವ ಧೋರಣೆ ಸುಭಾಷರದು. ಸುಭಾಷರಿಟ್ಟುಕೊಂಡಿರುವ ಧ್ಯೇಯವು ದೇಶಪ್ರೇಮಿಗಳಾರೂ ತಪ್ಪೆನ್ನಲಾರರು. ಕಾಂಗ್ರೆಸಿನಲ್ಲೀಗ ಅಧಿಕಾರದ ಪ್ರತಿಕೂಲ ಮನೋವೃತ್ತಿಗಿಂತ ಅನುಕೂಲ ಮನೋವೃತ್ತಿಯೇ ಶೋಚನೀಯವೆನಿಸುವಷ್ಟು ಬೆಳೆದುಬಂದಿದೆ. ಇಂಡಿಯಾ ಆಕ್ಟಿನ ದೊರೆತಿರುವ ಅಧಿಕಾರ ಕ್ಷೇತ್ರ ಸಪ್ತ್ರನಲಯವು ಬಹಳ ಇಕ್ಕಟ್ಟಿನದು; ಕಾಂಗ್ರೆಸಿನ ಧ್ಯೇಯವಾದ ಪೂರ್ಣ ಸ್ವಾತಂತ್ರ್ಯದ ಗುರಿಯು ಬಹು ದೂರದಲ್ಲಿದೆ. ಆ ಕಾರದ ಸಂಕುಚಿತ ಕ್ಷೇತ್ರದ ಗಡಿಯೊಳಗೆ ಸುತ್ತುತ್ತಿರುವರು ತಾವಿಟ್ಟ ಗುರಿಗಳು ದೂರದ ಗುರಿಯಷ್ಟು ನಿವೃತ್ತಿವೆ-ಆಗಲಿವೆ, ಎನ್ನಬಹುದು. ಆದರೆ ಲಜ್ಜೆಯಿಲ್ಲ. ಆ ಸಂಧಿಯೊಳಗೇನೇ ಗುರಿಯ ಹಾದಿ ತಿಳಿಯಲ್ಪಡದೆ ಹಾಗೆಯೇ ಉಳಿದಿದೆ ಎಂಬುದನ್ನು ಮರೆಯಲಾಗದು. ಶ್ರೀ ಸುಭಾಷರ ಹಾದಿಯು ಹೀಗಿರುವದರಿಂದ ಖಂಡನೆಗವಕಾಶವಿದೆ. ಕಾಂಗ್ರೆಸಿನ ಗುರಿಯೂ ಅದೇ ಆಗಿದೆ. ಈಗಿನ ಧುರೀಣರು ಹಾದಿ ಮಾತ್ರ ತಪ್ಪಿದರೆಂಬುದೇ ಸುಭಾಷರ ಆರೋಪ. ಈ ಆರೋಪವನ್ನು ಸರಿಪಡಿಸಲು ಸುಭಾಷರು ಭಿನ್ನವಾದ ಹಾದಿಯೊಂದನ್ನು ಹಿಡಿಯಬೇಕೆ? ಎಂಬುದು ವಿಚಾರಿಸತಕ್ಕ ಪ್ರಶ್ನೆ. ಶ್ರೀ. ಭೋಸರು ಆ ಹೊಣೆ ಹೊರಬಲ್ಲರೇ? ಎಂಬ ಪ್ರಶ್ನೆಯೂ ಇದೆ. ಮೊದಲನೆಯದಾಗಿ ಅವರು ಗಾಂಧಿಯವರ ಧುರೀಣತ್ವವನ್ನೂ ಅವರ ಕಾರ್ಯಕ್ರಮವನ್ನೂ ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತಾರೆ. ಅವರೊಪ್ಪಿಕೊಳ್ಳದ ವಿಷಯವೆಂದರೆ ಕಾಂಗ್ರೆಸಿನ ಗತಿಯ ತೀವ್ರತೆಯೊಂದು, ವರ್ಕಿಂಗ್ ಕಮಿಟಿಯವರ ಮನೋವೃತ್ತಿಯೊಂದು. ದೇಶದ ಸದ್ಯದ ಪರಿಸ್ಥಿತಿಯಲ್ಲಿ ಶ್ರೀ ಭೋಸರಂತೆ ಉಗ್ರಧೋರಣೆಯನ್ನನುಸರಿಸುವವರ ಬಲ ಸಾಪುಟ (ಗಾಕ್ಕೆ

Insure with The New Guardian of India Life Insurance Co. Ltd.,

THE NEW GUARDIAN OF INDIA LIFE INSURANCE CO. LTD., MADRAS.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ ಲ್ಯಾಫ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್

ಮದ್ರಾಸು.

ಡ್ಯಾರೆಕ್ಟರ ಮಂಡಳಿಯ ಹೇಳಿಕೆ.

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ ಲ್ಯಾಫ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್:—ಇದು 1934 ಅಕ್ಟೋಬರದಲ್ಲಿ ಪ್ರಾರಂಭವಾಗಿ ವರ್ಷವರ್ಷೇ ಅಭಿವೃದ್ಧಿಪಥದಲ್ಲಿ ಮುನ್ನಡೆಯುತ್ತ ಬರುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿರುತ್ತದೆ. ಆಗಾಗ ಪತ್ರಿಕೆಗಳೂ ಇತರರೂ ಕಂಪೆನಿಯ ಚಟುವಟಿಕೆಗಳನ್ನು ಅನೇಕತರದಲ್ಲಿ ಹೊಗಳಿರುತ್ತಾರೆ. 1938ನೇ ವರುಷದಲ್ಲಿ ಈ ಕಂಪೆನಿಯ ಹಾಗೂ ತಿರುವಾಂಕೂರು ನೇಶನಲ್ ಮತ್ತು ಕ್ವಿಲನ್ ಬೇಂಕ್, ಲಿಮಿಟೆಡ್, ಇದರ ಸಂಬಂಧದ ವಿಷಯ ನಾನಾ ತರದ ನಿರಾಧಾರವಾದ ಸುದ್ದಿಗಳು ಎಲ್ಲಾ ಕಡೆಗಳಲ್ಲೂ ಹರಡಿ ಕಾರ್ಯಕ್ಷೇತ್ರದಲ್ಲಿ ಕೆಲಸಮಾಡಲು ಆ ವರುಷವು ಬಲುಕಷ್ಟತಮವಾಗಿ ಪರಿಣಮಿಸಿತು. ಈ ವಿಷಯ ಜನರ ಅಭಿಪ್ರಾಯವನ್ನು ಸರಿಪಡಿಸಲು ಹಾಗೂ ವಿಮೆದಾರರು ತಮಗೆ ಇರುವ ಸಾಲ, ಸರೆಂಡರ್ ಇತ್ಯಾದಿ ಸೌಲಭ್ಯಗಳ ವಿಷಯಕವಾದ ಪ್ರತಿಯೊಂದು ಅರ್ಜಿಯನ್ನು ಯುಕ್ತರೀತಿಯಲ್ಲಿ ಅಗತ್ಯವಿದ್ದಂತೆ ನಡಿಸಿಕೊಡಲಾಯಿತು. ಆದುದರಿಂದ ಪಾಲುಗಾರರು ವಿಮಾದಾರರೂ ಪರಿಸ್ಥಿತಿಯು ಈ ತೆರನಿದ್ದರೂ ಕಂಪೆನಿಯು ಬಹು ಯಶಸ್ವಿಯಾಗಿ ಒಳ್ಳೇ ಗೌರವಯುಕ್ತವಾದ ಸ್ಥಾನವನ್ನು ಪಡೆದಿದೆಯೆಂಬುದು ನಿಜವಾಗಿಯೂ ಹೆಮ್ಮೆಪಡತಕ್ಕ ವಿಷಯವಾಗಿದೆ.

ಹೊಸ ವಿಮೆ ಶೇಖರಿಸುವಿಕೆ:—ವರದಿ ವರುಷದಲ್ಲಿ ಕಂಪೆನಿಯು ಶೇಖರಿಸಿದ ಒಟ್ಟು ವಿಮಾ ಮೌಲ್ಯವು ರೂ. 32,24,975 ಆಗಿದೆ. ಇದರಲ್ಲಿ ರೂ 21,17,500 ಮೌಲ್ಯದ್ದು ಪೂರ್ಣವಾಗಿ ಪೋಲಿಸಿಗಳನ್ನು ಕೊಡಲಾಗಿದೆ. ಪ್ರಿಮಿಯಮ್ ಆಯ.—ಈ ವರುಷದಲ್ಲಿ ಜುಮ್ಲಾ ಪ್ರಿಮಿಯಮ್ ಆಯವು ರೂ 2,94,862–14–0 ಆಗಿರುತ್ತದೆ. ಕಳೆದ ವರುಷ ಇದು ರೂ 3,66,198–13–0 ಆಗಿತ್ತು.

ಜೀವ ವಿಮಾನಿಧಿ:—ಕಂಪೆನಿಯ ಜೀವ ವಿಮಾನಿಧಿಯು ವರುಷದ ಪ್ರಾರಂಭದಲ್ಲಿ ರೂ 2,00,421–1–3 ಇದ್ದುದು ವರುಷಾಂತ್ಯದಲ್ಲಿ ರೂ 2 69,309–5–6ಕ್ಕೆ ಮುಟ್ಟಿದೆ.

ಇಂಡಿಯಾ ಸರಕಾರವು ಅಧಿಕೃತಪಡಿಸಿ ಈ ವರುಷ ಪ್ರಕಟಿಸಲ್ಪಟ್ಟ ಇನ್ಸೂರೆನ್ಸ್ ಇಯರ್ ಬುಕ್ (ಬ್ಲೂ ಬುಕ್) ಎಂಬ ಪಹಿಯಲ್ಲಿ ತೋರಿಸಿದಂತೆ ಸುಮಾರು 200ಕ್ಕಿಂತ ಹೆಚ್ಚಿಗೆ ಹಿಂದೀ ವಿಮಾ ಸಂಸ್ಥೆಗಳು ಹಿಂದೂಸ್ಥಾನದಲ್ಲಿ ಜೀವವಿಮೆ ಶೇಖರಿಸಲು ಅಧಿಕೃತಪಟ್ಟಿವೆ. ಹೊಸ ವಿಮಾ ಶೇಖರಣೆ ಹಾಗೂ ಪ್ರಿಮಿಯಮ್ ಆಮದ ವಿಷಯಗಳಲ್ಲಿ ನಮ್ಮ ಕಂಪೆನಿಯು ಮೇಲೆ ಹೇಳಿದ ಕಾರಣಗಳಿಂದಾಗಿ ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಆತಂಕಗಳಿದ್ದರೂ ಅದು ಗಳಿಸಿದ

ನ್ಯೂ **ಗಾರ್ಡಿಯನ್** ಆಫ್ ಇಂಡಿಯಾ ಲ್ಯಾಫ್ ಇನ್ಸೂರೆನ್ಸ್ ಕೊ. ಲಿಮಿಟೆಡ್, ಇದರಲ್ಲೇ ವಿಮೆಮಾಡಿರಿ.

ಒಂದು

ಅಳಿಯಸಂತಾನ ಸಮಾಜ ಸುಧಾರಣಾ ಪರಿಷತ್ತು

ಅಳಿಯಸಂತಾನ ಸಮಾಜದ ಸುಧಾರಣಾ ಪರಿಷತ್ತು ತಾ 21-5-39ರಲ್ಲು ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಕೇಂದ್ರ ನ್ಯಾಯವಾಧಾಯಕ ಸಭೆಯು ಸದಸ್ಯರಾದ ಶ್ರೀಮಾನ್ ಜಿನರಾಜ ಹೆಗ್ಡೆ ಬಿ ಎಸ್ ಸಿ, ಎಲ್ ಎಲ್ ಬಿ, ಇವರ ಅಧ್ಯಕ್ಷತೆಯಲ್ಲಿ ಜರಗಿತು ಜಿಲ್ಲಾ ನ್ಯಾಯಾಧಿಕಾರಿಗಳು, ಶ್ರೀಮಾನ್ ಎ ಬಿ ಶೆಟ್ಟಿ ಇವರೇ ಮೊದಲಾದ ಜನ ಮ ಬೇರೆ ಹಲವು ಗಣನೀಯ ಸೀಯರು ಅತ್ಯಾದರದಿಂದ ಭಾಗವಹಿಸಿದ್ದರು. ಅಳಿಯಕಟ್ಟನ್ನು ಚರಿಸುವ ಯ ಬೇರೆ ಬೇರೆ ಕಡೆಗಳಿಂದ ಪ್ರತಿನಿಧಿಗಳು ಬಂದು ನೆರೆದಿದ್ದರು

ದೇಶಭಕ್ತ ಎನ್. ಎಸ್ ಕಿಲ್ಲೆಯವರ ಸುರಸ ಸ್ವಾಗತ ಭಾಷಣ

ಶ್ರೀಮಾನ ಕಿಲ್ಲೆಯವರು, ಸುರಸ ಸ್ವಾಗತ ಭಾಷಣದಲ್ಲಿ ಹೀಗೆಂದರು: ಮಹಾಶಯರೇ, ಇಂದೀ ಸಭೆಗೆ ನಿಮ್ಮೆಲ್ಲರನ್ನು ಅಳಿಯಸಂತಾನ ಸಮಾಜದ ಸುಧಾರಣಾ ಪರಿಷತ್ತಿನ ಕಾರ್ಯಭಾಗದಲ್ಲಿ ಮನಸ್ಸಿನಿಂದ ಸ್ವಾಗತೀಕರಿಸುವ ಸುಯೋಗವು ನನ್ನ ಪಾಲಿಗೆ ಬಿದ್ದುದು. ಅಳಿಯಸಂತಾನ ಸಮಾಜದ ಸುಧಾರಣೆಯು ಅವಶ್ಯಕವು ಎಂದು ಹೇಳಬೇಕಾಗಿಲ್ಲ. ಈ ಕಾಲದಲ್ಲಿ ಅಳಿಯಕಟ್ಟನ್ನಾಚರಿಸುವ ಜನತೆಯು ತಮ್ಮ ಕಟ್ಟಿನಲ್ಲಿ ತಕ್ಕ ಸುಧಾರಣೆಯಾಗಬೇಕೆಂದು ಬಯಸುವುದು ಇಂತಹ ನಿಸ್ಸಂಶಯವಾಗಿ ಸಮಾಜ ಸುಧಾರಣೆಯ ಕಾರ್ಯದ ಯೋಜನೆಯನ್ನು ಸಮಾಜದ ಹಲವು ಮುಂದಾಳುಗಳು ಹಲವು ವರ್ಷಗಳ ಮೊದಲೇ ಕೈಕೊಂಡರು, ನಾಲ್ವತ್ತು ವರ್ಷಗಳ ಪೂರ್ವದಲ್ಲಿ ಅಳಿಯಸಂತಾನದ ಸುಧಾರಣಾ ಪದೆಯು ಜಾರಿಗೆ ತರುವ ಪ್ರಯತ್ನ ನಡೆದಿತ್ತು. ಇಂತಹ ಕಟ್ಟನ್ನಾಚರಿಸುವ ಜಿಲ್ಲೆಯ ಜನರು ಸುಧಾರಣೆಯನ್ನು ಈ ಮೊದಲೇ ತೃಪ್ತಿಗೊಳಿಸಿರುವರು, ಆದರ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಈ ಕಟ್ಟನ್ನು ಆಚರಿಸುವ ಜನರಲ್ಲಿ ಅಳಿಯಸಂತಾನದ ಸುಧಾರಣೆಯು ಈ ಜಿಲ್ಲೆಯ ಪರಿಣಾಮ ಹೊಂದುವಂತೆ ಮಾಡಿದ ಯತ್ನಗಳು ಇಷ್ಟರ ವರೆಗ ಫಲಿಸಲಿಲ್ಲವೆಂಬುದು ವಿಷಾದಕರವಿದ. ಇಂಗ ಜನತೆಯಲ್ಲಿ ಈ ಅಳಿಯಕಟ್ಟಿನಲ್ಲಿ ತಿದ್ದುವಡಿಯಾಗುವಂತೆ ಯುಕ್ತ ಕಾನೂನು ಜಾರಿಗೆ ಬರಬೇಕೆಂಬ ಭಾವನೆ ಬಲವಾಗಿರುವುದರಿಂದ, ಕಾಲವು ಪೂರ್ಣ ಪಕ್ವವಾಗಿದ್ದು ಅನುಕೂಲವಾಗಿ ಬಂದಿದೆ. ಮದ್ರಾಸು ಪ್ರಾಂತದ ಪ್ರಧಾನರಾದ, ಸ್ವ ರಾಜಗೋಪಾಲಾಚಾರ್ಯರವರು ದ ಬಾರಿ ಮಂಗಳೂರಿಗೆ ಬಂದಾಗ ಅಳಿಯಕಟ್ಟಿನ ಕಾರಣದಿಂದ ಈ ಕಟ್ಟನ್ನಾಚರಿಸುವವರಿಗಾಗುವ ತೊಡಕುಗಳನ್ನು ತಿಳಿದುಕೊಂಡು ಸುಧಾರಣಾ ಶಾಸನ ಮಾಡಬೇಕಾದ ಅಗತ್ಯವನ್ನು ಒಪ್ಪಿರುವರು. ಅದೊಂದು ಕಾಲದಲ್ಲ ಅಳಿಯಸಂತಾನದ ಕಟ್ಟಿನ ಆಚರಣೆಯಿಂದ ಹಲವು ಅನುಕೂಲತೆಗಳು ದೊರೆಯುತ್ತಿರಬಹುದು, ಆದರೆ, ಕಾಲವು ಮಾರ್ಪಟ್ಟಿದೆ, ವಿಚಾರ ಕ್ರಾಂತಿಯ ಈ ಯುಗದಲ್ಲಿ ಹಳೆಯ ಜಿಲ್ಲಾ ಹೊನ್ನ ಎಂಬ ಕುರುಡುನಂಬಿಕೆಯುಳ್ಳಿಯ ಲಾರದು. ಕಾಲಕ್ಕೊಪ್ಪುವ ಮಾರ್ಪಾಟವಾಗದಿದ್ದರೆ ಸಮಾಜವು ಅದೋಗತಿ ಹೊಂದುವದೆಂಬದು ನಿಶ್ಚಯ ಮಾಡಬಾರುವೊದಲ್ಲಾದೆಡೆ ಅಳಿಯಕಟ್ಟನ್ನಾಚರಿಸು ವಜನತೆಯಲ್ಲಿ ಸುಧಾರಣಾಯಮಾಡದಗಳು [illegible]

ಅಳಿಯಕಟ್ಟಿನಲ್ಲಿ ಸುಧಾರಣೆಯಾಗಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ ನಾನು ಹಲವು ವರ್ಷಗಳಿಂದ ವಕೀಲ ವೃತ್ತಿಯನ್ನನುಸರಿಸಿಕೊಂಡು ಬಂದಿರುವವನಾದುದರಿಂದ, ಜಿಲ್ಲೆಯ ಹಲವು ಅಳಿಯ ಸಂತಾನ ಕುಟುಂಬಗಳ ವಿಚಾರ ನನಗೆ ತಿಳಿದಿದೆ. ಹಲವು ಅಳಿಯ ಸಂತಾನ ಕುಟುಂಬಗಳ [illegible]

ಸುವುದು ಇದುವರೆಗೆ ಬಹು ಬೇಗನೇ ತಕ್ಕ ಸುಧಾರಣೆಯಾಗುವುದು ಅತ್ಯಗತ್ಯ. ಅದಕ್ಕಾಗಿ ಬಹ ಬೇಗನೆ ಅಳಿಯಸಂತಾನ ಸುಧಾರಣೆಯ ಶಾಸನ ಜಾರಿಗೆ ಬರುವಂತಾಗಲೆಂದ ಬಯಸುವೆನು. ನಿಮ್ಮ ಕಾರ್ಯ ಯಶಸ್ವಿಯಾಗಿ ಸಮಾಜದವರೆಲ್ಲರಿಗೆ ಫಲಪ್ರದವಾಗಲೆಂದು ನಾನು ಹಾರ್ದಿಕ [illegible]

New Guardian the Soundest and the Best.

ಸ್ಥಾನದಿಂದ ಮುಹತ್ವಿಕೆಯು ತಾನಾಗಿಯೇ ವಿದಿತವಾಗುವುದು ಹಿಂದೂಸ್ಥಾನದಕ್ಷಿನ ಎಲ್ಲಾ ಕಂಪೆನಿಗಳಲ್ಲಿ ಇದು ಹೊಸ ವಿಮೆ ಶೇಖರಿಸುವಿಕೆಯಲ್ಲಿ ಮತ್ತು ಪ್ರೀಮಿಯಂ ಆಯದಲ್ಲಿ ಪ್ರಥಮದ ೩೦ ಕಂಪೆನಿಗಳಲ್ಲೊಂದು ಹೆಸರನ್ನೂ, ದಕ್ಷಿಣ ಹಿಂದೂಸ್ಥಾನದಲ್ಲಿ ರಿಜಿಸ್ಟರು ಆದ ಕಂಪೆನಿಗಳ ಪೈಕಿ ಪ್ರಥಮದ ೫ರಲ್ಲೊಂದು ಸ್ಥಾನವನ್ನೂ ಸಂಪಾದಿಸಿದೆ ಮೇಲೆ ಹೇಳಿದ ಅನೇಕ ಸಂಸ್ಥೆಗಳು ನಮ್ಮದಕ್ಕಿಂತ ಹಳೆಯದಾಗಿರುತ್ತವೆ.

ಕ್ಲೇಮು —ವರದಿಯ ವರುಷದಲ್ಲಿ ಕಂಪೆನಿಯು ತೆತ್ತ ಕ್ಲೇಮುಗಳು ತೃಪ್ತಿಕರವಾಗಿಯೇ ಇರುತ್ತವೆ

ಇಂಟೆರಿಮ್ ವೆಲ್ಯೂಯೇಶನ್ —ಕಂಪೆನಿಯ ಆರ್ಟಿಕಲ್ಸ್ ಆಫ್ ಎಸೋಸಿಯೇಶನಿನ ಪ್ರಕಾರ ಪ್ರಥಮದ ಪಂಚವಾರ್ಷಿಕ ಹಂಚೋಣವು ಬರುವ ವರುಷ 31-12-1939 ರಲ್ಲಿ ಇದ್ದಪ್ರಕಾರ ಆಗಬೇಕಿತ್ತು ಆದರೂ ಕಂಪೆನಿಯ ವಿಷಯ ಪಾಲುದಾರರಿಗೂ ವಿಮೆದಾರರಿಗೂ ಮತ್ತು ಇತರ ಗೆಳೆಯರಿಗೆ ಅಧಿಕೃತವಾಗಿ ತಿಳಿಯಪಡಿಸುವಾಗುವಂತೆ ತಾ 31-12-1938ಕ್ಕೆ ಇರುವ ಪ್ರಕಾರ ಇಂಟೆರಿಮ್ ವೆಲ್ಯೂಯೇಶನನ್ನು ಕಂಪೆನಿಯ ಒಳಿತಕ್ಕಾಗಿ ಮಾಡತಕ್ಕದೆಂದು ಡೈರೆಕ್ಟರರು ಅಭಿಪ್ರಾಯಪಟ್ಟರು. ಹಾಗೆಯೇ ಮೈಸೂರಿನ ಸುಪ್ರಸಿದ್ಧ ಲೆಖ್ಖಪರಿಶೋಧಕರಾದ ಪ್ರೊ। ಕೆ ಬಿ. ಮಾದವ, ಎಮ್ ಎ., ಎಸ್ ಆರ್ ಎ ಎಸ್ ಎ. ಐ ಎ, (ಲಂಡನ್) ಇವರಿಗೆ ಈ ವೆಲ್ಯೂಯೇಶನ್ ಕೆಲಸವನ್ನು ಒಪ್ಪಿಸಲಾಯಿತು ಇವರು ಸರಿಯಾಗಿ ಪರಿಶೋಧಿಸಿ ಕೊಟ್ಟ ಅವರೊಳ್ಳೆ ಅಭಿಪ್ರಾಯವನ್ನು ಇಲ್ಲಿ ಪ್ರಕಟಿಸಲಾಗಿದೆ. ಕಂಪೆನಿಯ ಸ್ಥಿತಿಯು ಒಳ್ಳೇದಾಗಿ ತೃಪ್ತಿಕರವಾಗಿದೆಯೆಂದೂ ಪೊಲಿಸಿಗಳ ಬಾಧ್ಯತೆಗಳನ್ನು ತಂಬಲು ಅಗತ್ಯವಿರುವಷ್ಟು ಹಣವು ವಿಮಾನಿಧಿಯಲ್ಲಿರುವುದೆಂದೂ ಅಲ್ಲದೆ ಈ ಮುಂಚೆ ಹೇಳಿದಂತ ಒಲು ಕಷ್ಟದ ಅವದಿಯಲ್ಲಿ ವೆಲ್ಯೂಯೇಶನ್ ಮಾಡಿದರೂ ಕೂಡ ಅಗತ್ಯವಿರುವುದಕ್ಕಿಂತ ಹೆಚ್ಚಿನ ಹಣವು ಇರುವಂತೆ ಕಂಡುಬರುವುದು. ಈ ವಿಷಯವು ನಿಜವಾಗಿಯೂ ವಿಮಾದಾರರಿಗೆ ಉತ್ತೇಜಕವಾಗಿರುವುದು. ಲೆಖ್ಖಪರಿಶೋಧಕರು ಗೊತ್ತುಪಡಿಸಿದಂತೆ ಪೊಲಿಸಿಯ ಋಣಗಳಲ್ಲಿ ಸೇಕಡಾ 75 ಸರಕಾರಿ ಭದ್ರತೆಗಳಲ್ಲಿಯೂ, ಪರೆಂಟ್ ಮೌಲ್ಯಕ್ಕಿಂತ ಕಡಮೆಯಾದ ಪೊಲಿಸಿಗಳ ಮೇಲಣ ಸಾಲಗಳಲ್ಲಿ ಸೇಕಡಾ 3½ಯೂ ಮತ್ತು ಉಳಿದ ಹಣವು ಕಂಪೆನಿಯ ಹೆಸರಲ್ಲಿ ಇತರ ಮಂಜೂರುಹೊಂದಿದ ಬೇಂಕುಗಳಲ್ಲಿ ಚಾಲ್ತಿ ಲೆಖ್ಖದಲ್ಲಿಯೂ ಮತ್ತು ಸ್ವಲ್ಪ ಐವಜು ವಿಮಾದಾರರಿಂದ ಬರಬೇಕಾದ ಪ್ರಿಮಿಯಮ್ ಕೂಡಾ ಆಗಿರುತ್ತದೆ.

ಪೊಲಿಸಿದಾರರ ಟ್ರಸ್ಟ್‌ನಿದಿ ಏರ್ಪಾಡು ಮತ್ತು ಪೊಲಿಸಿದಾರರ ಡೈರೆಕ್ಟರರನ್ನು ಚುನಾಯಿಸುವಿಕೆ.-ಪೊಲಿಸಿದಾರರ ಹಿತದ ಭದ್ರತೆಯನ್ನು ಇನ್ನಷ್ಟು ಬಲಪಡಿಸಲು, ಮತ್ತು ಆ ಭದ್ರತೆಯನ್ನು ಚಿರಕಾಲವಿರುವಂತೆ ಮಾಡಲು ಪೊಲಿಸಿದಾರರ ಪ್ರಯೋಜನಾರ್ಥ ಒಂದು ನಿಕ್ಷೇಪ ನಿಧಿಯ (ಟ್ರಸ್ಟ್‌ಫಂಡ್)ನ್ನು ಸ್ಥಾಪಿಸಲು ನಿರ್ದರಿಸಿರುವರು ಖಂಡಿತವಾಗಿಯೂ ಕನಿಷ್ಟಪಕ್ಷ ಏಕಕಂತುಗಳ ಸೇಕಡಾ 92½, ರಿನ್ಯೂವಲ್ ಪ್ರಿಮಿಯಮುಗಳ ಸೇಕಡಾ 75, ಮತ್ತು ಹೊಸ ಆದ ಪ್ರಥಮ ವರ್ಷದ ಕಂತುಗಳ ಸೇಕಡಾ 10ನ್ನೂ— ಜಮೆಯಾಗುವ ಎಲ್ಲಾ ಬಡ್ಡಿಗಳನ್ನೂ ಈ ನಿಧಿಗೆ ಕೊಡಿಸಲಾಗುವುದು. ಈ ನಿಧಿಯ ಏರ್ಪಾಡಿನಿಂದಾಗಿ ಖರ್ಚು ತುಂಬಾ ಕಡಮೆ ಮಾಡಬೇಕಾಗಿ ನಿಬಂಧಿಸಿ ಪೊಲಿಸಿದಾರರ ನಿಧಿಗಳ ಆಧಾರಂಗಳು ತನ್ನಷ್ಟಕ್ಕೆ ಇನ್ನೂ ವೃದ್ಧಿಗೊಳ್ಳುವುವು ಈ ರಕ್ಷಣೆಯ ಏರ್ಪಾಡಿನ ಪ್ರಯೋಜನಗಳನ್ನು ತಮ್ಮ ನಿಯಮಗಳಿಗನುಸಾರವಾಗಿ ಬಹಳ ಹಳೆಯದಾದುದರಲ್ಲಿ ಕೂಡ ಕೆಲವೇ ಸಂಸ್ಥೆಗಳ ಪೊಲಿಸಿದಾರರು ಅನುಭವಿಸುತ್ತಿರುವರು ಅಲ್ಲದೆ ಪೊಲಿಸಿದಾರರು ತಮ್ಮ ಪ್ರತಿನಿಧಿಯನ್ನಾಗಿ ಡೈರೆಕ್ಟರ ಮಂಡಳಿಯಲ್ಲಿ ಒಬ್ಬನನ್ನು ಆರಿಸುವ ಹಕ್ಕನ್ನು ಕೊಡಲು ಕೂಡ ಡೈರೆಕ್ಟರರು ನಿರ್ದರಿಸಿರುವರು ಈ ವಿಷಯಕವಾದ ನಿಯಮಗಳನ್ನು ಈಗ ಚರ್ಚಿಸಲ್ಪಡುತ್ತಿದ್ದು ಡೈರೆಕ್ಟರರು ಅವಶ್ಯವಿರುವ ಏರ್ಪಾಡನ್ನು ಮಾಡುವರು.

ಟ್ರಾವಂಕೂರು ನೇಶನಲ್ ಮತ್ತು ಕ್ವಿಲನ್ ಬೇಂಕ್, ಲಿಮಿಟೆಡ್, ಇದರಲ್ಲಿದ್ದ ಹಣಗಳು.—ಟ್ರಾವಂಕೂರು ನೇಶನಲ್ ಮತ್ತು ಕ್ವಿಲನ್ ಬೇಂಕ್ ಇದರಲ್ಲಿ ಕಂಪೆನಿಯ ಸ್ವಲ್ಪ ಹಣವು ಇದ್ದ ವಿಷಯ ಅನೇಕ ತರದ ಊಹಾಪೋಹಗಳು ಹರಡಿ ಕೆಲವರು ಅದನ್ನು ನಂಬಿಯೂ ಇರುವ ವಿಷಯದಲ್ಲಿ ಡೈರೆಕ್ಟರರು ಈ ಕೆಳಗಿನಂತಿರುವ ನಿಜವಾದ ಹೇಳಿಕೆಯನ್ನು ಕೊಡಲು ಬಯಸುತ್ತಾರೆ.—

ನ್ಯೂ ಗಾರ್ಡಿಯನ್ ಅತ್ಯುತ್ಕೃಷ್ಟ ಮತ್ತು ಸುಭದ್ರ.

ಎರಡು

ಹಿತ್ತಾಳಿ ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕಣ್ಣಿಗೆ ಒಳಪ್ಪು ಸಾಮಾನುಗಳೆ ದಿನ ನಿತ್ಯ ವೆಂಬಂತೆ ಸಂಪಾನಗಳು ಬೀಲ ಗಟ್ಲೆ ಬರುತ್ತಿವೆ ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗದುಕೊಳ್ಳುವುದು ಅತಿ ಲಾಭಕರವಾಗಿದ

ನಮ್ಮ ಸಮಾಜದ ಚಿತ್ರಗಳು

ಮಾತೃ ಸಂತತಿ ಕ್ರಮದಲ್ಲಿ ಮಾರ್ಪಾಟು ಆಗುವುದು ಅವಶ್ಯವೆಂದು ಸಮಾಜ ಸುಧಾರಕರು ಹಲವು ವರ್ಷಗಳ ಮೊದಲೇ ಮನಗಂಡಿದ್ದು, ಸಾಕಷ್ಟು ಪ್ರಯತ್ನಗಳು ಈ ಮೊದಲೇ ನಡೆದಿರುತ್ತವೆ. ಕಾರಣಾಂ

ಪುಟ ೧೧ಕ್ಕೆ

THE
Canara Banking Corporation, Ltd.
(Incorporated in British India)
ESTD. 1906

THREE YEARS' CASH CERTIFICATES
bearing interest at 4% p. a. in denominations of
Rs 50/-, 100/-, 500/-, 1,000/- & 5000/-
are now issued at
all our Branches.

For particulars call at or write to any of our nearest Branches.

ಉಡುಪಿ, ಗುರುವಾರ, ತಾ. ೨೫-೫-೩೯

ಪರ್ವತ ಪ್ರಸವವೆ?

ಬ್ರಿಟಿಷರು ಈಗ ಮಾಡುತ್ತಿರುವ ಯುದ್ಧ ಸನ್ನಾಹಗಳನ್ನು ಕಂಡವರು, ಮುಖ್ಯ ಮಂತ್ರಿ ಚೇಂಬರ್ಲೆನರ ಭಾಷಣಗಳನ್ನು ಕೇಳಿದವರು ಬ್ರಿಟನಿನ ದೃಢ ನಿರ್ಧಾರಕ್ಕಾಗಿ ತಲೆದೂಗಬಹುದು. ಹಿಟ್ಲರರ ಮುಂದಿನ ಬೇಟೆ ಪೋಲೆಂಡು ಎಂಬುದನ್ನರಿತೂ ಪೋಲೆಂಡಿಗೆ ಬೆಂಬಲಕ್ಕೊದಗುವ ಆಶ್ವಾಸನೆ ಕೊಟ್ಟ ಚೇಂಬರ್ಲೆನರ ಎದೆಗಾರಿಕೆಯನ್ನು ಶ್ಲಾಘಿಸಬಹುದು. ಇಂಥವರಿಗೆ ಬ್ರಿಟಿಷರು ಟರ್ಕಿಯೊಡನೆ ಮಾಡಿಕೊಂಡಿರುವ ಒಪ್ಪಂದ, ರಶ್ಯಾದೊಡನೆ ಹೂಡಿರುವ ಮಾತುಕತೆ–ಇವೆಲ್ಲಾ ಬ್ರಿಟನಿನ ನೂತನ ಧೋರಣೆಯ ಸ್ಪಷ್ಟ ಚಿಹ್ನೆಗಳಾಗಿ ತೋರದಿರವು. ಆದರೆ ನಾವಿಲ್ಲಿ ಆಳವಾಗಿ ವಿಚಾರಿಸತಕ್ಕ ಸಂಗತಿಗಳಿವೆ. ಇಂದಿನ ಸನ್ನಾಹಗಳ ಮುಂದಿನ ಉಪಯೋಗವನ್ನು ನಾವು ನಮ್ಮ ಅಭಿರುಚಿಯಂತೆ ಕಲ್ಪಿಸಿಕೊಳ್ಳದೆ ಚೇಂಬರ್ಲೆನ್ ಸರಕಾರದ ಧೋರಣೆಯ ಮೇಲಿಂದ ಗೊತ್ತುಹಚ್ಚಬೇಕಾಗಿದೆ.

ಕಳೆದ ವರುಷ ಜೆಕೊಸ್ಲೊವೇಕಿಯದ ಸುಡೆಟನ್ ಪ್ರಾಂತ್ಯವನ್ನು ಹಿಟ್ಲರನಪೇಕ್ಷಿಸಿದಾಗ ಬ್ರಿಟನಿನ ಧೋರಣೆಗೆ ಇಂದಿನ ರೂಪವೇ ಬಂದಿತು. ಫ್ರಾನ್ಸು ಮತ್ತು ಇಂಗ್ಲೆಂಡು ದೇಶಗಳು ಆ ಬಾರಿಯೂ ಯುದ್ಧಸಿದ್ಧತೆಯನ್ನು ಕೈಗೊಂಡಿದ್ದುವು. ಆದರೆ ಕೊನೆಯ ಘಳಿಗೆಯಲ್ಲಿ ಚೇಂಬರ್ಲೆನರು ಆಡಿದ ಒಂದೇ ಆಟದಿಂದ ಆ ವರೆಗಿನ ವಿದ್ಯಮಾನವು ತಲೆಮುಗುಚಿ ಬಿತ್ತು! ಚೇಂಬರ್ಲೆನರು ಯುದ್ಧದ ಅನಾಹುತವನ್ನು ಭಯಂಕರವಾಗಿ ಚಿತ್ರಿಸಿ ತೋರಿಸಿದರು. ನಮ್ಮೊಡನೆ ಸಂಬಂಧವಿಲ್ಲದ ತುಂಡು ಪ್ರಾಂತ್ಯವೊಂದರ ಜನರಿಗಾಗಿ ನಾವು ಯುದ್ಧದಲ್ಲಿ ಧುಮುಕಿ ಲೋಕವನ್ನೂ ಅದರಲ್ಲಿ ಕೆಡಹುವುದು ಎಷ್ಟು ಭಯಂಕರ! ಎಂದು ಬಾಯಿಬಿಚ್ಚಿ ಹೇಳಿದರು. ಈ ಮನೋವೃತ್ತಿಯು ಜೆಕೋಸ್ಲೊವೇಕಿಯದ ಪೂರ್ಣಾಹುತಿಯಾಗುವ ವರೆಗೂ ಇತ್ತೆಂಬುದರಲ್ಲಿ ಅನುಮಾನವಿಲ್ಲ; ಅದನ್ನು ರುಜುಪಡಿಸಲು ಬೇರೆ ಉದಾಹರಣೆ ಬೇಕಿಲ್ಲ. ಬ್ರಿಟಿಷ್ ಸರಕಾರವು ಉಗ್ರಧೋರಣೆ ವಹಿಸಿದಂತೆ ತೋರಹತ್ತಿದುದಾದರೂ ಆ ನೀತಿಯೇ. ಜೆಕೊಸ್ಲೊವೇಕಿಯವು ಆತ್ಮಸಮರ್ಪಣೆ ಮಾಡಿ ಪೋಲೆಂಡಿಗೆ ಬ್ರಿಟಿಷರಿಂದ ಭರವಸೆ ಕೊಡಿಸಿತು! ಜರ್ಮನಿಯ ಇದಿರು ಬ್ರಿಟನು ಯುದ್ಧಕ್ಕಿಳಿಯುವ ಸಂದರ್ಭ ಬರುವದಾದರೆ ಈ ಭರವಸೆಯ ರಕ್ಷಣೆಗಾಗಿಯೇ ಬರಬೇಕು. ಜೆಕೊಸ್ಲೊವೇಕಿಯಾ ಮತ್ತು ಪೋಲಂಡು–ಇವೆರಡರ ಪೈಕಿ ಮೊದಲನೆಯದರ ಬಲಿದಾನದಲ್ಲಿ ಚೇಂಬರ್ಲೆನರು ಪುರೋಹಿತತ್ವ ವಹಿಸಿದ್ದರೆ ಎರಡನೆಯದರ ಬಲಿಯನ್ನು ತಡೆಯುವೆನೆಂದು ಮುಂದೆ ಬಂದಿದ್ದಾರೆ. ಇವೆರಡು ಧೋರಣೆಗಳು ಭಿನ್ನವಾದವು; ಪರಿಣಾಮವೂ ಬೇರೆಯೇ ಆಗಲಿಕ್ಕಿದೆ–ಎಂದು ತೀರ್ಮಾನಿಸಿ ಬಿಡುವ ಮೊದಲು, ಜೆಕೊಸ್ಲೊವೇಕಿಯ ಪ್ರಕರಣದ ಅಂತ್ಯವನ್ನೂ ಪೋಲೆಂಡು ಪ್ರಕರಣದ ಆದಿಯನ್ನೂ ನಾವು ತುಲನೆ ಮಾಡಿದೆವೆಂಬುದನ್ನು ಮರೆಯಬಾರದು. ಜೆಕೊಸ್ಲೊವೇಕಿಯಾದ ಆದಿಯಲ್ಲಿದ್ದ ಬ್ರಿಟಿಷ್ ಧೋರಣೆಗೂ ಇಂದಿನ ಪೋಲೆಂಡಿನ ಕುರಿತಿರುವ ಧೋರಣೆಗೂ ವ್ಯತ್ಯಾಸವಿತ್ತೆ? ಅಂತ್ಯವೂ ಜೆಕೊಸ್ಲೊವೇಕಿಯಾ ಪ್ರಕರಣಾಂತ್ಯವನ್ನು ಹೋಲಲಾರದೆಂಬುದಕ್ಕೇನು ಭರವಸೆ?

ಈ ಸಂದೇಹಕ್ಕೆ ಸಾಕಷ್ಟು ಆಧಾರಗಳೂ ದೊರೆಯುತ್ತಿವೆ. ಲಂಡನಿನ 'ಟೈಮ್ಸ್' ಪತ್ರಿಕೆಯೆಂದರೆ ಬ್ರಿಟಿಷ್ ಸರಕಾರದ ಮುಖಪತ್ರವೆಂಬ ಅಭಿಪ್ರಾಯವು ಇಂಗ್ಲೆಂಡಿನಲ್ಲಿಯೂ ಹೊರಗಿನ ದೇಶಗಳಲ್ಲಿಯೂ ಬೇರೂರಿದೆ. ಆ ಪತ್ರಿಕೆಯೂ ಬ್ರಿಟಿಷ್ ಸರಕಾರವೂ ಇದು ಆಧಾರರಹಿತ ಭಾವನೆಯೆಂದು ಹಲವು ಬಾರಿ ಹೇಳಿರಬಹುದು. ಈ ವರೆಗಿನ ವಿದ್ಯಮಾನಗಳೆಲ್ಲಾ ಸರಕಾರ ಮತ್ತು ಆ ಪತ್ರಿಕೆಯ ಸಂಬಂಧದಲ್ಲಿ ಲೋಕವಿಟ್ಟಿದ್ದ ಭಾವನೆಯನ್ನೇ ಬಲಗೊಳಿಸಿವೆ. ಕಳೆದ ಬಾರಿಯ ಒಂದು ಉತ್ತಮ ಉದಾಹರಣೆಯನ್ನು ಯಾರೂ ಮರೆಯುವಂತಿಲ್ಲ. ಜೆಕೊಸ್ಲೊವೇಕಿಯದ ಪರವಾಗಿ ಬ್ರಿಟಿಷ್ ಸರಕಾರವಿದೆ ಎಂಬ ಪ್ರದರ್ಶನವನ್ನು ಜಯಶೀಲವಾಗಿ ಅಧಿಕಾರಿಗಳು ನಡೆಸುತ್ತಿದ್ದಾಗಲೇ ಟೈಮ್ಸ್ ಪತ್ರಿಕೆಯು ಸುಡೆಟನ್ ಪ್ರಾಂತ್ಯವನ್ನು ಹಿಟ್ಲರರಿಗೊಪ್ಪಿಸುವದೇ ನ್ಯಾಯವೆಂದು ಉದ್ಘೋಷಿಸಿತು. ಈ ಘೋಷಣೆಗಾಗಿ ಸ್ವತಃ ಬ್ರಿಟಿಷ್ ಅಧಿಕಾರಿಗಳೇ ಆಶ್ಚರ್ಯ ಸೂಚಿಸಿದರು. ಆದರೆ ಅಂದಿನಿಂದ ಹದಿನೈದು ದಿನಗಳೊಳಗೆ ಮಿ| ಚೇಂಬರ್ಲೆನರು ಲೋಕದ ಕಣ್ಣಿಗೆ ಕೊಡೆಯನ್ನಡ್ಡ ಹಿಡಿದು ಸುಡೇಟನನ್ನು ಹಿಟ್ಲರನಿಗೆ ಧಾರೆಯೆರೆದು ಕೊಟ್ಟರು. ಈಗ ಅದೇ ಟೈಮ್ಸ್ ಪತ್ರಿಕೆಯು ಸಕಾಲದಲ್ಲಿ ಮುಂದೆ ಬಂದು ಮುಷ್ಟಿ ಜಡಿದಿರುವವರಿಗೆ ಹಸ್ತಲಾಘವದ ಉಪದೇಶ ಕೊಡಹತ್ತಿದೆ. ಪೋಲೆಂಡಿನ ವಿದೇಶಾಂಗ ಮಂತ್ರಿ ಕರ್ನಲ್ ಬೆಕ್ಕರು ತನ್ನ ರಾಷ್ಟ್ರದ ಧೋರಣೆಯನ್ನು ಸ್ಪಷ್ಟವಾಗಿ ನಿರೂಪಿಸಿ ಖಂಡತುಂಡ ಮಾತುಗಳನ್ನಾಡಿದ ಹಿಂದಿನ ದಿನದ ತನ್ನ ಸಂಪಾದಕೀಯ ಲೇಖನದಲ್ಲಿ 'ಟೈಮ್ಸ್' ಪತ್ರಿಕೆಯು ಡಾಂಝಿಂಗ್ ಪ್ರಕರಣವನ್ನು ಯುಕ್ತಿ ಪ್ರಯುಕ್ತಿಗಳಿಂದಲೇ ತೀರ್ಮಾನಿಸಬೇಕೆಂದು ವಾದಿಸುತ್ತಾ ಹೀಗೆಂದಿತ್ತು. "ಯುದ್ಧವಾಗಬೇಕಾಗುವಷ್ಟು ಮಹತ್ತು ಡಾಂಝಿಂಗಿನಲ್ಲಿ ಸತ್ಯಕ್ಕೂ ಇಲ್ಲ. ಪ್ರತಿಯೊಂದು ತಿಕ್ಕಾಟವೂ ಪ್ರಪಂಚವನ್ನಾವರಿಸುವ ಗಂಡಾಂತರವನ್ನು ತಂದೊಡ್ಡತಕ್ಕದ್ದೆಂದು ತಾನು ಭಾವಿಸುವದಿಲ್ಲವಾಗಿ ಜರ್ಮನಿಯ ಚಾನ್ಸೆಲರರು ಹೇಳಿದ್ದಾರೆ. ಆದರೆ ಜರ್ಮನಿ ಮತ್ತು ಪೋಲೆಂಡುಗಳೊಳಗೆ ಯುದ್ಧವೆದ್ದಲ್ಲಿ ಈಗಿನ ಸಾರ್ವತ್ರಿಕ ತಾಕಲಾಟದ ಪರಿಸ್ಥಿತಿಯಲ್ಲಿ ಹಾಗಾಗಲಾರದೆಂಬ ಆಶೆಯೇನೂ ತೋರುವುದಿಲ್ಲ. ಇದು ಅಗತ್ಯವಾಗಿ ಚಾತುರ್ಯಪೂರ್ಣ ವ್ಯವಹಾರದಿಂದ ತೀರ್ಮಾನ ಹೊಂದತಕ್ಕ ಸಂಗತಿ" ಕರ್ನಲ್ ಬೆಕ್ಕರ ಬಾಯಿಯಿಂದ ವೀರವಾಕ್ಯಗಳು ಹೊರಡುವ ಒಂದು ದಿನಕ್ಕೆ ಮುಂಚೆ ಬೆಕ್ಕರ ಬೆಂಬಲಿಗ ಬ್ರಿಟಿಷ್ ಸರಕಾರದ ಬಾಯಿಯೆಂದು ಪರಿಗಣಿಸಲ್ಪಟ್ಟಿರುವ ಟೈಮ್ಸ್ ಪತ್ರಿಕೆ ಮಾಡಿದ ಘೋಷಣೆಯಿದು. ಇದರಿಂದಾಗಿ ಸಂಬಂಧಪಟ್ಟ ರಾಷ್ಟ್ರಗಳೆಲ್ಲಾ ಸ್ವಾಭಾವಿಕವಾಗಿ ಸಂದೇಹಗೊಂಡಿವೆ. ಬ್ರಿಟನರ ಈ ವರೆಗಿನ ವರ್ತನೆಯ ಜೀವಂತ ಕುರುಹಾಗಿ ಟೈಮ್ಸಿನ ಉದ್ಗಾರ ಹೊರಟಿರುವಾಗ ಅದರಿಂದೇಳುವ ಸಂದೇಹವನ್ನು ಬುಡಮಟ್ಟ ನಿರ್ಮೂಲಿಸಬಲ್ಲ ಹೊಸ ಬೆಳಕಾವುದೂ ಬ್ರಿಟನಿನ ಕಡೆಯಿಂದ ಬೀರುತ್ತಿಲ್ಲ. ಬದಲಾಗಿ ರಶ್ಯವು ಅಪೇಕ್ಷಿಸುವ ಬಹುವ್ಯಯ ಆಶ್ವಾಸನೆಗೆ ಕೊಡಲು ಹಿಂಜರಿಯುತ್ತಿದೆ ಇಂಗ್ಲೆಂಡು. ಯುದ್ಧವನ್ನೊಡ್ಡಿದರೆ ಸುಮ್ಮನಿರಲಾರೆವು ಎಂದು ಸಾಕಷ್ಟು ಸ್ಪಷ್ಟವಲ್ಲದ ಮಾತಿನಿಂದ ಬೆದರಿಸುವಾಗಲೇ ಸಂಧಿಗಾಗಿ ಬನ್ನಿರಿ, ತೀರ್ಮಾನಿಸೋಣ ಎಂದು ಸ್ಪಷ್ಟ ವಾಣಿಯಿಂದ ಆಕ್ರಮಣಗಾರರನ್ನು ಕರೆಯುತ್ತಿದೆ. ಹೀಗೆ ಹಳೆಯ ಕುರುಹುಗಳೆಲ್ಲಾ ಎದ್ದು ಕಾಣುತ್ತಿರುವಾಗ ಅವುಗಳ ನಡುವೆ ಧೈರ್ಯದ ಹೊಸ ಚಿಹ್ನೆಯೊಂದು ತೋರಿಬರುತ್ತಿದೆ ಎಂಬ ಒಂದೇ ಕಾರಣದಿಂದ ಬ್ರಿಟನಿಗೆ 'ಗಂಡುಗಲಿ' ಬಿರುದನ್ನು ದಯಪಾಲಿಸುವದರಲ್ಲಿ ಅರ್ಥವಿಲ್ಲ. ಹಿಟ್ಲರ್ ಮುಸಲನಿಗಳನ್ನು ಸಮಚಾಯಿಸಲು, ಸಂತೃಪ್ತಿ ನಿಂತಲ್ಲೇ ನಿಲ್ಲುವಂತೆ ಮಾಡಲು ಏನೆಲ್ಲಾ ಆಗಬೇಕೋ ಅಷ್ಟನ್ನು ಮಾಡುವುದೊಂದೇ ಬ್ರಿಟನಿನ ಧ್ಯೇಯ. ಬಾಣ ಬತ್ತಳಿಕೆಯನ್ನು ಬದಿಗಿಟ್ಟು ಸಂಧಾನದ ಶಾಂತರೂಪದಿಂದ ಹೋಗಿ ಇದಿರುಗೊಂಡು ನಿಲ್ಲಿಸಿದಲ್ಲಿ ಅವರು ಮುಂದೊತ್ತುವದನ್ನು ಬಿಡುವಂತಿಲ್ಲವೆಂದು ಜೆಕೋಸ್ಲೊವೇಕಿಯಾ ಮತ್ತು ಅಬ್ಬೇಸಿನಿಯದ ಚರಿತ್ರೆ ಕಲಿಸಿತು; ಅನಕ್ಕೂ ಹೆಚ್ಚಿನ ಕೆಲಸವಾಗಬೇಕೆಂದು ಸ್ಪಷ್ಟವಾಯಿತು. ಆದ್ದರಿಂದ ಧನುಷ್ಟೇಂಕಾರವನ್ನು ಎಬ್ಬಿಸುತ್ತಾ ಮಾತಾಡಿಸೋಣ, ಗದ್ದಲದ ನಡುವೆ ತಮ್ಮ ಸ್ವರಭಾರ ಮೇರುವದೋ ನೋಡೋಣ ಎಂಬ ಆಶೆಯಿಂದ ಬ್ರಿಟನು ಇಂದಿನ ಆಟಾಟೋಪವನ್ನು ಪ್ರದರ್ಶಿಸುತ್ತಿದೆ ಎಂದೂಹಿಸಿದರೆ ತಪ್ಪಾಗದು. ಅದೂ ನಿಷ್ಫಲವಾದಲ್ಲಿ ಲೋಕಶಾಂತಿಯ ಮಂತ್ರ ಜಪಿಸುತ್ತಾ ಇನ್ನೊಂದು ಹೊಸ ಹಾದಿಯ ಮೂಲಕ ಮಿ| ಚೇಂಬರ್ಲೇನರು ತಪ್ಪಿಸಿಕೊಳ್ಳದಿರುವರೆ? ಇಂದಿನ ಅಬ್ಬರದ ಪರಿಣಾಮವು ಪರ್ವತಪ್ರಸವದಂತಾಗದೆ ಹೋಗುವದೆ? ಭೂತಕಾಲ, ವರ್ತಮಾನಕಾಲಗಳ ಆಗುಹೋಗುಗಳ ಅವಲೋಕನದ ಮೇಲಿಂದ ಹಾಗಾಗುವ ಸಂಭವವೇ ಅಧಿಕವೆನ್ನಬೇಕಾಗುವದು.

ಸುಭಾಸರ ಹೊಸಪಕ್ಷ

ಕಾಂಗ್ರೆಸ್ ಅಧ್ಯಕ್ಷತನಕ್ಕೆ ರಾಜಿಯಿತ್ತ ಶ್ರೀ ಸುಭಾಷಚಂದ್ರ ಭೋಸರು ಕಾಂಗ್ರೆಸಿನೊಳಗೆ 'ಫಾರ್ವರ್ಡ್ ಬ್ಲೋಕ್' ಎಂಬ ಹೊಸ ಪಕ್ಷದ ಸ್ಥಾಪನೆಗೆ ತೊಡಗಿರುವರು. ಕಾಂಗ್ರೆಸಿನ ಧ್ಯೇಯ ಕಾರ್ಯಕ್ರಮಗಳನ್ನೊಪ್ಪಿಕೊಂಡು ಮಹಾತ್ಮಾ ಗಾಂಧಿಯವರ ಧುರೀಣತ್ವದಲ್ಲಿ ಅಚಲ ವಿಶ್ವಾಸವನ್ನೂ ಸೂಚಿಸಿ, ಗಾಂಧೀ ಪಕ್ಷೀಯರಾದ ಮಿಕ್ಕ ಧುರೀಣರ ವರ್ತನೆಯನ್ನು ನಿಷೇಧಿಸುವ ಉದ್ದೇಶದಿಂದ ನಿರ್ಮಾಣಗೊಂಡ ಪಕ್ಷವಿದು. ಕಾಂಗ್ರೆಸಿನೊಳಗೆ ಅಧಿಕಾರ ನಡೆಸುತ್ತಿರುವ ಪಾರ್ಲಿಮೆಂಟರೀ ಮನೋವೃತ್ತಿಯ ಬದಲಿಗೆ ಹೋರಾಟದ ಭಾವನೆಯನ್ನು ಪ್ರಜ್ವಲಿಸುವದೇ ಹೊಸ ಪಕ್ಷದ ಧ್ಯೇಯ. ಈ ಧ್ಯೇಯೋದ್ದೇಶಗಳಿಗನುಕೂಲಿಸುವಂತೆ ವರ್ತಿಸುವ ಹೊರತು ಅನ್ಯ ಕಾರ್ಯಕ್ರಮಗಳು ಈ ಪಕ್ಷಕ್ಕಿಲ್ಲ. ಪ್ರಥಮತಃ ಉಗ್ರವಾದಿಗಳನ್ನು ಒಂದುಗೂಡಿಸುವ ಧೋರಣೆ ಸುಭಾಸರದು.

ಸುಭಾಸರಿಟ್ಟುಕೊಂಡಿರುವ ಧ್ಯೇಯವನ್ನು ದೇಶಪ್ರೇಮಿಗಳಾರೂ ತಪ್ಪೆನ್ನಲಾರರು. ಕಾಂಗ್ರೆಸಿನಲ್ಲೀಗ ಅಧಿಕಾರದ ಪ್ರತಿಕೂಲ ಮನೋವೃತ್ತಿಗಿಂತ ಅನುಕೂಲ ಮನೋವೃತ್ತಿಯೇ ಶೋಚನೀಯವೆನಿಸುವಷ್ಟು ಬೆಳೆದುಬಂದಿದೆ. ಇಂಡಿಯಾ ಆಕ್ಟಿನಿಂದ ದೊರೆತಿರುವ ಅಧಿಕಾರ ಕ್ಷೇತ್ರವು ಸುತ್ತುವಲಯವು ಬಹಳ ಇಕ್ಕಟ್ಟಿನದು; ಕಾಂಗ್ರೆಸಿನ ಧ್ಯೇಯವಾದ ಪೂರ್ಣ ಸ್ವಾತಂತ್ರ್ಯದ ಗುರಿಯು ಬಹು ದೂರದಲ್ಲಿದೆ. ಅಧಿಕಾರದ ಸಂಕುಚಿತ ಕ್ಷೇತ್ರದ ಗಡಿಯೊಳಗೆ ಸುತ್ತುತ್ತಿರುವವರು ತಾವಿಟ್ಟ ಹೆಜ್ಜೆಗಳು ದೂರದ ಗುರಿಮುಟ್ಟುವಷ್ಟು ಆಗುತ್ತಿವೆ–ಆಗಲಿವೆ, ಎನ್ನಬಹುದು; ಆದರೆ ಹೆಜ್ಜೆಯೆಲ್ಲಾ ಆ ಪಂಥಿಯೊಳಗೇನೇ ಬಿದ್ದು ಗುರಿಯ ಹಾದಿ ತುಳಿಯಲ್ಪಡದೆ ಹಾಗೆಯೇ ಉಳಿದಿವೆ ಎಂಬುದನ್ನು ಮರೆಯಲಾಗದು. ಶ್ರೀ ಸುಭಾಸರ ಹಾದಿಯು ಇದಾಗಿರುವುದರಿಂದ ಖಂಡನೆಗವಕಾಶವಿಲ್ಲ. ಕಾಂಗ್ರೆಸಿನ ಗುರಿಯೂ ಅದೇ ಆಗಿದೆ. ಹಿರಿಯ ಧುರೀಣರು ಹಾದಿ ಮಾತ್ರ ತಪ್ಪಿದ್ದಾರೆಂಬುದೇ ಸುಭಾಸರ ಆರೋಪ. ಈ ತಪ್ಪನ್ನು ಸರಿಪಡಿಸಲು ಸುಭಾಸರು ಭಿನ್ನವಾದ ಹಾದಿಯೊಂದನ್ನು ಹಿಡಿಯಬೇಕೆ? ಎಂಬುದು ವಿಚಾರಿಸತಕ್ಕ ಪ್ರಶ್ನೆ. ಶ್ರೀ ಭೋಸರು ಆ ಹೊಣೆ ಹೊರಬಲ್ಲರೇ? ಎಂಬ ಪ್ರಶ್ನೆಯೂ ಇದೆ. ಮೊದಲನೆಯದಾಗಿ ಅವರು ಗಾಂಧಿಯವರ ಧುರೀಣತ್ವವನ್ನೂ ಅವರ ಕಾರ್ಯಕ್ರಮವನ್ನೂ ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತಾರೆ. ಅವರೊಪ್ಪಿಕೊಳ್ಳದ ವಿಷಯವೆಂದರೆ ಕಾಂಗ್ರೆಸಿನ ಗತಿಯ ತೀವ್ರತೆಯೊಂದು; ವರ್ಕಿಂಗ್ ಕಮಿಟಿಯವರ ಮನೋವೃತ್ತಿಯೊಂದು. ದೇಶದ ಸದ್ಯದ ಪರಿಸ್ಥಿತಿಯಲ್ಲಿ ಶ್ರೀ ಭೋಸರಂತೆ ಉಗ್ರಧೋರಣೆಯನ್ನನುಸರಿಸುವವರ ಬಲ ಸಾ

ಪುಟ ೧೧ಕ್ಕೆ

ಉಡುಪಿಯಲ್ಲಿ ಸಾಹಿತ್ಯ ವಸಂತೋತ್ಸವ

ಕನ್ನಡಕ್ಕೆ ಮಠಾಧಿಪತಿಗಳ ಪ್ರೋತ್ಸಾಹ.

ಜನರಲ್ಲಿ ಆನಂದೋತ್ಸಾಹ!

ಶ್ರೀ ಫಲಿಮಾರು ಮಠದ ಶ್ರೀರಘುಮಾನ್ಯತೀರ್ಥ ಶ್ರೀಪಾದಂಗಳವರು

ಪ್ರಾರಂಭೋತ್ಸವ

ಈ ಮಹೋತ್ಸವವು ಇದೇ ತಿಂಗಳ ತಾ ೧೮, ೧೯, ೨೦ನೇಯ ದಿವಸಗಳಲ್ಲಿ ಶ್ರೀ ಕೃಷ್ಣ ಪೂಜಾ ಪರ್ಯಾಯ ಪಟ್ಟಾರೂಢರಾದ ಶ್ರೀ ಫಲಿಮಾರು ಮಠದ ಶ್ರೀ ರಘುಮಾನ್ಯ ಶ್ರೀಪಾದಂಗಳವರ ಮಹದಾಶ್ರಯದಲ್ಲಿ ಜರಗಿತು. ಶ್ರೀಕೃಷ್ಣಮಂದಿರದ ಸುಲಂಕೃತವಾದ ವಸಂತ ಮಹಲಿನಲ್ಲಿ ಶ್ರೀ ಸ್ವಾಮಿಜಿಯವರಸನ್ನಿಧಿಯಲ್ಲಿ ಸಾಹಿತ್ಯೋತ್ಸವದ ಮೂರು ದಿನಗಳ ಕಾರ್ಯಕ್ರಮಗಳು ಸಾಂಗವಾಗಿ ಜನಮನೋರಂಜಕವಾಗಿಯೂ ಬೋಧಪ್ರದವಾಗಿಯೂ ಕರ್ನಾಟಕ ಭಾಷಾಭಿಮಾನ ಸ್ಫೂರ್ತಿಜನಕವಾಗಿಯೂ ನೆರವೇರಿದುವು. ಬೆಂಗಳೂರು, ಮಂಗಳೂರು, ಧಾರವಾಡ, ಪುತ್ತೂರು ಮುಂತಾದ ಪರಸ್ಥಳಗಳಿಂದ ಬಂದಿದ್ದ ಅತಿಥಿ ಅಭ್ಯಾಗತರುಗಳ ವಸತಿ ಭೋಜನ ಉಪಹಾರಾದಿಗಳ ವ್ಯವಸ್ಥೆಗಳನ್ನೆಲ್ಲ ಶ್ರೀ ಸ್ವಾಮಿಜಿಯವರೇ ವಿಶೇಷ ಔದಾರ್ಯದಿಂದಲೂ ಉತ್ಸಾಹದಿಂದಲೂ ಮಾಡಿಸಿದ್ದರು. ದಿ ಕೆನರಾ ಬ್ಯಾಂಕಿಂಗ್ ಎಂಡ್ ಸಿಂಡಿಕೇಟಿನ ಚೇರ್ಮ್ಯಾನರಾದ ಡಾ| ಟಿ. ಮಾಧವ ಪೈಗಳು ವಿಶಾಲವಾದ ಯೋಗ್ಯ ವಸತಿಗೃಹವನ್ನು ಕೊಟ್ಟುದಲ್ಲದೆ ಕರ್ನಾಟಕ ಪರಿಷತ್ತಿನ ಕಡೆಯಿಂದ ಬಂದಿದ್ದ ಅತಿಥಿಗಳ ಗೌರವಾರ್ಥವಾಗಿ ತಮ್ಮ ಕಾರ್ಯಾಲಯದಲ್ಲಿ ದೊಡ್ಡದೊಂದು ಉಪಹಾರಕೂಟವನ್ನು ಏರ್ಪಡಿಸಿದ್ದರು. ಹಿಂದೆ ಪ್ರಕಟವಾಗಿದ್ದ ಕಾರ್ಯಕ್ರಮ ಪತ್ರದಲ್ಲಿ ಸೂಚಿಸಿದ್ದಂತೆ ಅನಿವಾರ್ಯವಾದ ಕೆಲವು ಬದಲಾವಣೆಗಳಿಂದ ಸಾಹಿತ್ಯೋತ್ಸವವು ಈ ಕೆಳಗಿನ ಕಾರ್ಯಕಲಾಪಗಳನ್ನು ಕೈಗೊಂಡು ಯಶಸ್ವಿಯಾಗಿ ಪೂರೈಸಿತು. ತಾ. ೧೮ರ ಬೆಳಗ್ಗೆ ೮|| ಘಂಟೆಗೆ ಕರ್ನಾಟಕ ಪರಿಷತ್ತಿನ ಹಾಗೂ ಅದರ ದಕ್ಷಿಣ ಕರ್ನಾಟಕ ಪ್ರತಿನಿಧಿ ಮಂಡಲದ ಮತ್ತು ಇತರ ಕರ್ನಾಟಕ ಸಾಹಿತ್ಯಾಭಿಮಾನಿಗಳನ್ನು ಶ್ರೀ| ಸ್ವಾಮಿಜಿಯವರೂ ಸ್ವಾಗತ ಸಮಿತಿಯವರೂ ವಾದ್ಯಘೋಷದಿಂದ ಸಭಾಭವನಕ್ಕೆ ಕರೆಯಿಸಿಕೊಂಡು ಸಾಹಿತ್ಯೋತ್ಸವವು ಯಶಸ್ವಿಯಾಗಿ ನೆರವೇರಲೆಂದು ಸ್ವಾಮೀಜಿಯವರು ಆಶೀರ್ವದಿಸಿದ ಮೇಲೆ ಅವರ ಪರವಾಗಿ ಸ್ವಸ್ತಿಭಾಷಣವನ್ನು ಕ್ರಿಶ್ಚನ್ ಹೈಸ್ಕೂಲ್ ಕರ್ನಾಟಕ ಪಂಡಿತರಾದ ಶ್ರೀ. ಕೆ. ವೆಂಕಟ್ರಾಮಾಚಾರ್ಯರು ಮಾಡಲು ಸಾಹಿತ್ಯೋತ್ಸವದ ಕಾರ್ಯಾರಂಭವಾಯಿತು. ಉತ್ಸವದ ಉದ್ಘಾಟನಾ ಸಮಾರಂಭವು ಧರ್ಮಸ್ಥಳದ ಶ್ರೀ| ಮಂಜಯ್ಯ ಹೆಗ್ಗಡೆಯವರುಗಳಿಂದ ನಡೆಯಿಸಲ್ಪಡಬೇಕೆಂದು ಸಂಕಲ್ಪವಿದ್ದರೂ ಅನಿವಾರ್ಯ ಕಾರಣಗಳಿಂದಾಗಿ ಅವರಿಗೆ ಬರಲಾಗದಿದ್ದುದರಿಂದ ಡಾ. ಟಿ. ಮಾಧವ ಪೈಗಳವರಿಂದ ಆ ಕಾರ್ಯವು ನೆರವೇರಲು ದಕ್ಷಿಣ ಕರ್ನಾಟಕ ಸಾಹಿತ್ಯ ಪ್ರತಿನಿಧಿ ಮಂಡಲದ ಪರವಾಗಿ ಶ್ರೀ. ಕಾರಂತರೂ ಉಡುಪಿಯ ಕಿರಿಯರ ಪ್ರಪಂಚದ ಮತ್ತು ಸ್ವಾಗತ ಸಮಿತಿಯ ಕಡೆಯಿಂದ ಶ್ರೀ. ಕೊರಡ್ಕಲ್ಲರೂ ಅತಿಥಿ ಅಭ್ಯಾಗತರಿಗೆ ಸುಸ್ವಾಗತವನ್ನು ಬಯಸಿ ಉಪಕ್ರಮಣ ಭಾಷಣಗಳನ್ನಿತ್ತರು. ಆ ಮೇಲೆ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರುಗಳಾದ ಶ್ರೀ. ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯನವರು ಕನ್ನಡ ಭಾಷೆ ಸಾಹಿತ್ಯಕಲೆ ಸಂಸ್ಕೃತಿ ಇವುಗಳ ಮೇಲ್ಮೆಗಾಗಿ ಕರ್ನಾಟಕ ಪರಿಷತ್ತು ಮಾಡುತ್ತಿರುವ ಕಾರ್ಯಕಲಾಪಗಳನ್ನೂ ಆ ಕಾರ್ಯಸಾಧನೆಯಲ್ಲಿ ಮೈಸೂರು ಮಹಾರಾಜ ಯುವರಾಜರುಗಳೂ ಮೈಸೂರು ಸರಕಾರವು ತೋರುತ್ತಿರುವ ಸಹಾಯ ಸಹಾನುಭೂತಿಯನ್ನೂ ಕರ್ನಾಟಕದ ಬೇರೆ ಬೇರೆ ಕಡೆಗಳಿಂದ ದೊರಕುತ್ತಿರುವ ಪ್ರೋತ್ಸಾಹವನ್ನೂ ಪ್ರಸ್ತಾವಿಸುತ್ತ ಕರ್ನಾಟಕ ಪರಿಷತ್ತಿನ ಇದುವರೆಗಿನ ಸಂಕ್ಷಿಪ್ತ ಇತಿಹಾಸದ ಪರಿಚಯವನ್ನು ಸಭಿಕರಿಗೆ ಮಾಡಿಸಿಕೊಟ್ಟು ಕನ್ನಡ ನುಡಿಯ ನಲ್ಮೆಯೇ ನಾಡಿನ ಮೇಲ್ಮೆಗೂ ಸೋದರಭಾವ ಸ್ಥಾಪನೆಗೂ ಮೂಲಾಧಾರವಾಗಿರುವುದರಿಂದ ಹರಿಹಂಚಾಗಿ ಹೋಗಿರುವ ಕರ್ನಾಟಕದ ಬೇರೆ ಬೇರೆ ಭಾಗದವರೆಲ್ಲ ಕನ್ನಡ ಬಾವುಟದಡಿಯಲ್ಲಿ ಒಂದಾಗಿ ಬಂದು ಕರ್ನಾಟಕ ಸಾಹಿತ್ಯಪರಿಷತ್ತಿಗೆ ಬೆಂಬಲವಾಗಿ ನಿಂದು ಪ್ರತಿಯೊಬ್ಬ ಕನ್ನಡಿಗನೂ ಕರ್ನಾಟಕ ಪರಿಷತ್ತು ತನ್ನದೆಂಬ ಅಭಿಮಾನದಿಂದ ದುಡಿದು ಅದರ ಉತ್ಕರ್ಷೆಯನ್ನು ಸಾಧಿಸಬೇಕಾಗಿ ವಿನಂತಿಸಿಕೊಂಡರು. ಉಡುಪಿಯು ಮೊದಲಿನಿಂದಲೂ ಕನ್ನಡ ನುಡಿಯ ಸೇವೆಯಲ್ಲಿ ಎಡೆಬಿಡದೆ ದುಡಿಯುತ್ತಿದ್ದು ಇಂದಿಗೂ ಅದೊಂದು ಮುಂದಾದ ಸ್ಥಾನವನ್ನು ಹೊಂದಿರುವುದು ಅಭಿಮಾನಾಸ್ಪದವಾದ ವಿಷಯವೆಂದರು. ಅದರಲ್ಲಿಯೂ ಶ್ರೀ ರಘುಮಾನ್ಯತೀರ್ಥ ಶ್ರೀಗಳವರು ತನ್ನ ಭಾಗದ ಕರ್ತವ್ಯವು ಕೇವಲ ಸಂಪ್ರದಾಯಾನುಸಾರವಾದ ಮತೀಯ ಪಾಪ-ಧರ್ಮ-ನಿಷ್ಠೆಗಳಲ್ಲೇ ಇತಿಮಿತಿ ಎಂಬುವ ಸಂಕೋಚ ದೃಷ್ಟಿಯನ್ನಿಟ್ಟುಕೊಳ್ಳದೆ ಜನತಾಜನಾರ್ದನ ಸೇವೆಯ ಉದಾರಚಿತ್ತದಿಂದಲೂ ವ್ಯಾಪಕ ನೋಟದಿಂದಲೂ ಕಾಲಸ್ಥಿತಿಗಳ ವಿಚಾರಮಾಡಿ ಲೌಕಿಕವರ್ಗವು ಇಹವನ್ನು ಗೆದ್ದು ಪರವನ್ನು ಸಾಧಿಸಬೇಕೆಂಬ ಗುರಿಯಿಂದ ನಾಡಿನ ಮೇಲ್ಮೆಗಾಗಿ ಕೈಗೊಳ್ಳುವ ವಿಧಾಯಕ ಕಾರ್ಯಕ್ರಮಗಳಲ್ಲೊಂದಾದ ನಾಡನುಡಿಯ ಸೇವೆಗೆ ತಾನು ಬೆಂಬಲಕೊಡುವುದೂ ಕರ್ತವ್ಯವೆಂದು ಬಗೆದು ಈ ಸಾಹಿತ್ಯ ವಸಂತೋತ್ಸವಕ್ಕೆ ಸರ್ವಾಶ್ರಯವನ್ನು ಕೊಟ್ಟುದಲ್ಲದೆ ತನ್ನ ಸನ್ನಿಧಿಯಿಂದಲೂ ಅದನ್ನು ಪ್ರೋತ್ಸಾಹಿಸಬೇಕೆಂಬಷ್ಟು ಧರ್ಮದೃಷ್ಟಿ ವೈಶಾಲ್ಯವನ್ನು ತೋರಿದುದು ಅಭಿನಂದನೀಯವೂ ಗುರುಪೀಠಗಳಿಗೊಂದು ಆದರ್ಶವೂ ಆಗಿದೆಯೆಂದು ಸ್ವಾಮಿಜಿಗಳವರಿಗೆ ಕರ್ನಾಟಕ ಸಾಹಿತ್ಯ ಪರಿಷತ್ತಿನ ಪರವಾಗಿ ಸವಿನಯ ಧನ್ಯವಾದಗಳನ್ನು ಅರ್ಪಿಸಿ ಹೀಗೆಯೇ ಮುಂದೆಯೂ ಪರಿಷತ್ತಿನ ಕಡೆಗೆ ಅವರ ಅನುಗ್ರಹವಿರಲೆಂದು ಯಾಚಿಸಿ ಮಹೋತ್ಸವದ್ದ ಕಾರ್ಯಾರಂಭ ಭಾಷಣವನ್ನಿತ್ತರು.

ಶ್ರೀ ಶಂಕರ ಭಟ್ಟರ ಭಾಷಣ

ಕರಾವಾಯ ಶ್ರೀ. ಕಡಂಗೋಡ್ಲು ಶಂಕರಭಟ್ಟರು 'ವೃತ್ತಪತ್ರಿಕೆಗಳು' ಎಂಬ ವಿಷಯವನ್ನೆತ್ತಿ ಇಂದಿನ ವಿಜ್ಞಾನಯುಗದಲ್ಲಿ ವಿಶ್ವದ ವಿವಿಧ ರಾಷ್ಟ್ರಗಳ ನಡುವಿನ ದೂರವು ಲೋಪವಾಗಿ ಅನುದಿನದ ಜೀವನದಲ್ಲಿ ನಿಕಟ ಸಂಬಂಧವುಂಟಾದುದರ ಪರಿಣಾಮವಾಗಿ ಪ್ರತಿಯೊಬ್ಬನಿಗೂ ವೃತ್ತಪತ್ರಾವಲೋಕನದ ಆವಶ್ಯಕತೆ ಉಪಯುಕ್ತತೆಗಳು ಜೀವನದ ಉಪಕರಣಂತಾಗಿರುವ ವಿಚಾರ, ರಾಜಕೀಯ ಸಾಮಾಜಿಕ ಧಾರ್ಮಿಕ ಕ್ಷೇತ್ರಗಳಲ್ಲಿ ಜನವಾಣಿಯಾಗಿ ಅವು ಮಾಡುತ್ತಿರುವ ಸೇವೆ ಅವುಗಳಿಗಿರುವ ಸ್ಥಾನಮಾನ ಪ್ರತಿಷ್ಠೆಗಳು, ಪತ್ರಿಕೆಗಳು ಜನಜೀವನದ ರೀತಿನೀತಿ ಅಭಿರುಚಿಗಳನ್ನು ತಿದ್ದಿ ಉದ್ಧರಿಸುವ ದೃಷ್ಟಿಯಿಂದ ಕೈಗೊಳ್ಳಬೇಕಾದ ಧೋರಣೆ ಕರ್ತವ್ಯ ಹೊಣೆಗಾರಿಕೆ ಸ್ವತಂತ್ರ ರಾಷ್ಟ್ರಗಳಲ್ಲಿ ಪತ್ರಿಕೆಗಳು ಮಾಡುತ್ತಿರುವ ನಿರಂತರ ನಿರಾತಂಕ ಆದರ್ಶ ಸೇವೆಗೂ ಪರತಂತ್ರ ರಾಜ್ಯಗಳಲ್ಲಿ ಅವಕ್ಕಿರುವ ಎಡರು ತೊಡರು ಇತಿಮಿತಿಗಳ ದವಡೆಯೊಳಗೆ ಸಿಕ್ಕಿ ತೊಳಲುತ್ತ ಅವುಗಳಿಂದಾಗುವ ಸೇವೆಗೂ ಇರುವ ಅಭ್ಯಂತರ, ಪತ್ರಿಕೆಯು ವ್ಯಾಪಾರ ದೃಷ್ಟಿಯಿಂದ ನಡೆಯಿಸಲ್ಪಟ್ಟರೆ ಜನತೆಯ ವಿಚಾರ ಶೀಲ ಸಾಂಸ್ಕೃತಿಗಳಿಗುಂಟಾಗುವ ಹಾನಿ ಇಂದಿನ ಕನ್ನಡ ಪತ್ರಿಕೆಗಳು ಉಜ್ವಲ ರಾಷ್ಟ್ರಸೇವೆಯನ್ನು ಮಾಡಬೇಕಾದರೆ ವಾಚಕ ಲೋಕವೂ ವರ್ತಕ ವೃಂದವೂ ಸರಕಾರವೂ ರಾಜಕೀಯ ಪಕ್ಷವಿಪಕ್ಷಗಳೂ ತೋರಬೇಕಾಗಿರುವ ಸಹಕಾರ ಸಹಿಷ್ಣುತೆ ಚಿತ್ತೌದಾರ್ಯ ಇವೇ ಮುಂತಾದ ವಿಚಾರಗಳನ್ನು ಸಭಿಕರ ಮುಂದಿಟ್ಟು ಬಗೆ ಮುಟ್ಟುವಂತೆ ಈ ಸಮಸ್ಯೆಗಳನ್ನೆಲ್ಲ ಬಿಡಿಸಿ ಬೋಧನೀಯವೂ ವಿಚಾರ ದ್ಯೋತಕವೂ ಆಗುವಂತೆ ಸುರಸವಾಗಿ ಉಪನ್ಯಾಸವನ್ನಿತ್ತರು.

ಸತ್ಕಾರ

ಸಾಯಂಕಾಲ ಮೂರುಗಂಟೆಗೆ ಡಾ. ಟಿ. ಮಾಧವ ಪೈಗಳವರು ತಮ್ಮ ಕೆನರಾ ಮ್ಯೂಚುವಲ್ ಆಫೀಸಿನಲ್ಲಿ ಅತಿಥಿಗಳಿಗೆ ಟೀಪಾರ್ಟಿ ಸತ್ಕಾರವನ್ನಿತ್ತರು. ಟೀಪಾರ್ಟಿಯಾದೊಡನೆ ಡಾ|ಪೈಗಳು ಕರ್ನಾಟಕಸಂಪದಭಿವೃದ್ಧಿಯ ಕಾರ್ಯವೂ ಕರ್ನಾಟಕ ಸಾಹಿತ್ಯದ ಒಂದು ಅಂಗವೆಂದೂ ಕರ್ನಾಟಕದ ಏಕೀಕರಣಕ್ಕೆ ಕರ್ನಾಟಕ ಸಾಹಿತ್ಯ, ಕಲೆ, ಕೈಗಾರಿಕೆ, ವಾಣಿಜ್ಯ, ವ್ಯಾಪಾರ ವಹಿವಾಟುಗಳ ಬೆಳವಣಿಗೆಯಾಗಬೇಕೆಂದೂ ಕರ್ನಾಟಕದಲ್ಲೆಲ್ಲಾ ವ್ಯಾಪಿಸಿರುವ ನಮ್ಮ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಮತ್ತು ದಿ ಕೆನರಾ ಮ್ಯೂಚುವಲ್ ಎಶ್ಯೂರೆ

ಧಾತುಪುಷ್ಟಿ ಲೇಹ ಸುವರ್ಣ, ಸಾಲಾಮಿಶ್ರಿ, ಕಲ್ಕದ ಮಿಶ್ರ

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ,ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು, ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟು ಮಾಡುವುದು. ಬಾಟ್ಲಿ ೧ರ ರೂ 2-8-0.

ಮೇಹ ಕುಠಾರ— ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರಮಾಡುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು ಮೂತ್ರದಲ್ಲಿ ಧಾತು ಹೋಗುವುದು ಸೊಂಟನೋವು ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಅಲ್ಲದೆ ಇಪ್ಪತ್ತು ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ. ಡಬ್ಬಿ 1ರ ರೂ. 2-8-0.

ಕಸ್ತೂರಿ ಮಿಶ್ರಣ ದಶಮೂಲ— ಪ್ರಸವಾನಂತರ ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ! ಬಾಟ್ಲಿ 1ರ ರೂ. 1—8—0

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:-ನವಭಾರತ ಬುಕ್ ಡಿಪ್ಪೋ, ಉಡುಪಿ.ಶ್ರೀ ಕೃಷ್ಣ ಫಾರ್ಮಸಿ, ಕುಂದಾಪುರ.ವಿಟ್ಠಲ ನಾರಾಯಣ ಶೆಣೈ,ಟ್ರೇಡರ್ ಮಿನಸ್ ಮುಜಗಾಂ ಮುಂಬಯಿ.

ನ್ಸ್ ಕಂಪೆನಿಯ ಪರಿಚಯವನ್ನು ಮಾಡಿಕೊಟ್ಟು, ಶುಭಾಶೀರ್ವಾದ ಕೋರಿದರು.

ಶ್ರೀ. ಬಿ. ಯಂ. ಶ್ರೀಕಂಠಯ್ಯನವರು ಅಧ್ಯಕ್ಷತೆ ವಹಿಸುತ್ತಾ ಡಾ| ಪೈಗಳ ಕಾರ್ಯಜಾಣ್ಮೆ, ಭಾಷಾಸೇವೆ, ವ್ಯಾಪಾರ ವಾಣಿಜ್ಯಾದಿಗಳಲ್ಲಿರುವ ಚಾತುರ್ಯ ಮೊದಲಾದುವನ್ನು ವಿವರಿಸಿ, ಆಭಾರವನ್ನು ಸೂಚಿಸಿ, ಬ್ಯಾಂಕಿಗೂ, ವಿಮಾ ಸಂಸ್ಥೆಗೂ ಶುಭವನ್ನು ಹಾರೈಸಿದರು.

ಶ್ರೀ ಮುಳಿಯ ತಿಮ್ಮಪ್ಪಯ್ಯನವರ ಭಾಷಣ

ತಾ. ೧೮ರ ಸಾಯಂಕಾಲ ೪|| ಘಂಟೆಗೆ ತಿರುಗಿ ಸಭಾ ಕಾರ್ಯವು ತೊಡಗಲು ಶ್ರೀ. ಮುಳಿಯ ತಿಮ್ಮಪ್ಪಯ್ಯನವರು 'ಯಕ್ಷಗಾನ' ಕವಿಗಳಲ್ಲಿ ಪ್ರಥಮ ಶ್ರೇಣಿಯವನಾದ ಪಾರ್ತಿ ಸುಬ್ಬನ ಕವಿತಾ ಪ್ರೌಢಿಮೆಯನ್ನು ಕುರಿತು ಉಪನ್ಯಾಸವನ್ನಿತ್ತರು. ಕವಿಯು ಕುಂಬಳೆ ಗೋಪಾಲಕೃಷ್ಣ ದೇವಸ್ಥಾನದ ಸೇವಕ (ಸ್ಥಾನಿಕ) ಪಾರ್ವತಿಯ ಮಗ ಸುಬ್ಬರಾಯನೆಂಬ ಹೆಸರು ಪಾರ್ತಿ ಸುಬ್ಬನೆಂಬಾದುದು. ಆತನು ಹಲವು ಯಕ್ಷಗಾನ ಪ್ರಸಂಗಗಳನ್ನು ವಿಶೇಷತಃ ರಾಮಾಯಣದ ಸಂಪೂರ್ಣ ಕಥಾ ಭಾಗಗಳನ್ನು ಖಂಡಖಂಡವಾಗಿ ಯಕ್ಷಗಾನ ಪ್ರಸಂಗಗಳನ್ನಾಗಿ ವಿರಚಿಸಿದುದಲ್ಲದೆ ಬೈಲಾಟದ ಮೇಳಗಳಲ್ಲಿ ಭಾಗವತನಾಗಿ ಕೊನೆಗೆ ಕುಂದಾಪುರ ತಾಲೂಕಿನ ಕುಂಬಾಸಿಯ 'ಕಾರಂತರ ಮೇಳ'ದಲ್ಲಿ ಭಾಗವತನಾಗಿದ್ದನೆಂಬುದಕ್ಕೆ ಆತನ ಕವಿತೆಯೇ ಆಧಾರವಾಗಿದ್ದುದು, ಸುಬ್ಬನ ಸರಳ ಕವಿತಾ ಶೈಲಿ, ಹಳೆ ಕವಿತೆಗಳ ಕಟ್ಟುಕಟ್ಟು ಅಲಂಕಾರ ವರ್ಣನೆಗಳ ಹಾದಿಯನ್ನೂ ಮೀರಿ ಅವುಗಳಲ್ಲಿ ಸಹಜ ಸರಳ ಮೌಲಿಕ ಪ್ರಯೋಗಗಳನ್ನೂ ವಿಚಾರಗಳನ್ನೂ ತೋರಿದ ಆತನ ಅಸಾಮಾನ್ಯ ಪ್ರತಿಭೆ ಮುಂತಾದ ವಿಷಯಗಳನ್ನು ಉಪನ್ಯಾಸಕರು ವಿವರಿಸುತ್ತ ಆತನು ಬರೆದಿದ್ದ ವಾಲಿಸುಗ್ರೀವ ಕಾಳಗದಿಂದ ಪದಗಳನ್ನು ಎತ್ತಿ ಸಾರಸ್ಯವಾಗಿ ಹಾಡಿ ವಿವರಿಸಿ ಆಡಿದ ನುಡಿಯನ್ನು ಹಾಡಿನಿಂದ ಸಮರ್ಥಿಸುತ್ತ ಹೃದಯಾನಂದವಾಗುವಂತೆ ಸಾಮಾಜಿಕರು ತಲೆದೂಗುವಂತೆ ಪದ್ಯಗದ್ಯ ಸಮ್ಮಿಶ್ರಣದ ಸ್ವಾರಸ್ಯ ಭಾಷಣವನ್ನಿತ್ತರು.

ಶ್ರೀ ಬಿ. ಎಂ. ಶ್ರೀಕಂಠಯ್ಯನವರ ಭಾಷಣ

ಅಮೇಲೆ ರಾಜಸೇವಾಸಕ್ತ ಶ್ರೀ. ಬಿ. ಎಂ. ಶ್ರೀಕಂಠಯ್ಯ ಎಮ್. ಎ. ಅವರು 'ಮಹಾಭಾರತವನ್ನು ಚಿತ್ರಿಸಿದ ಕನ್ನಡ ಕವಿಗಳು' ಎಂಬ ವಿಷಯವನ್ನೆತ್ತಿಕೊಂಡು ಕನ್ನಡಕವಿಗಳ ಅಸಾಮಾನ್ಯ ಪ್ರತಿಭಾ ವಿಶೇಷವನ್ನು ಶ್ರೋತೃವರ್ಗವು ಬಗೆಗಾಣುವಂತೆ ಪಂಪನ ಭಾರತ, ರನ್ನನ ಗದಾಯುದ್ಧ, ಕುಮಾರ ವ್ಯಾಸಭಾರತ, ಜೈಮಿನಿ ಭಾರತ, ಶಬರಶಂಕರ ವಿಲಾಸ ಇವುಗಳಿಂದ ಕವಿತಾ ಪ್ರೌಢಿಮೆಯೂ ಸ್ವಾರಸ್ಯವೂ ತುಂಬಲು ಸೂಸಿ ಹರಿಯುವ ಭಾಗಗಳನ್ನು ಉದ್ಧರಿಸಿ ತೋರಿಸಿ ವಿವರಿಸಿದುದಲ್ಲದೆ ಸಾಮಾನ್ಯವಾಗಿ ಎಲ್ಲ ಪ್ರಖ್ಯಾತ ಪ್ರಾಚೀನ ಜನಾಂಗಗಳ ಇತಿಹಾಸಪೂರ್ವ ಮಹಾಕಾವ್ಯ (epics) ಗಳಲ್ಲಿರುವ ಕಥಾವಸ್ತುಗಳಲ್ಲಿರುವಂತೆಯೇ ಸ್ತ್ರೀಯ ಅಪಹಾರ ಅಥವಾ ಅಪಮಾನ ಪುರುಷನ ಪ್ರತೀಕಾರವೇ ಕೇಂದ್ರ ಕಥಾ ಭಾಗವಾಗಿರುವ ಭಾರತದ ಕಥೆಯನ್ನು ಈ ಕವಿಗಳು ತಮ್ಮ ತಮ್ಮ ಧರ್ಮ, ಅಭಿರುಚಿ, ಕಾಲ, ದೇಶ ಪರಿಸ್ಥಿತಿ ಕವಿದೃಷ್ಟಿಗಳಿಗನುಸಾರವಾಗಿ ಪರಿವರ್ತಿಸಿಕೊಂಡು ಪ್ರಧಾನ ಕಥಾ ನಾಯಕ ನಾಯಿಕೆಗಳನ್ನು ಬದಲಾಯಿಸಿಕೊಂಡು ತದನುಸಾರವಾಗಿ ಕಥಾಭಾಗದ ಇತಿಮಿತಿ ವಿಸ್ತಾರಕ್ಕೆ ಮೇರೆ ಹಾಕಿ ಚಿನ್ನವೊಂದಾದರೂ ಆಭರಣಗಳು ಬೇರೆಬೇರೆಂಬಂತೆ ಏಕ ಕಥಾವಸ್ತುವಿನಿಂದ ಈ ಪಂಚ ಮಹಾಕಾವ್ಯಗಳು ಹೇಗೆ ಉದ್ಭವಿಸಿದುವೆಂದೂ ಪ್ರತಿಯೊಂದರ ಶೈಲಿ, ರೀತಿ, ರಸ, ಕವಿತಾ ಪ್ರೌಢಿಮೆ ಇವುಗಳ ವೈಶಿಷ್ಟ್ಯಗಳೇನೆಂಬುದನ್ನೂ ಆಯಾ ಕಾವ್ಯಗಳ ಪದ್ಯಗಳನ್ನೆತ್ತಿ ಹಾಡಿ ವಿವರಿಸಿ ನೆರೆದ ಸಾಮಾಜಿಕರಲ್ಲಿ ಕನ್ನಡ ಕವಿ ಕಾವ್ಯಗಳ ವಿಷಯ ಅಭಿಮಾನ ಅಭಿರುಚಿಗಳುಂಟಾಗುವಂತೆ ಸುಲಲಿತವಾದ ಕನ್ನಡ ನುಡಿಯಿಂದ ಕನ್ನಡ ಭಾಷೆಯ ನುಣ್ಪು ಬಣ್ಪು ವೈಯ್ಯಾರಗಳೂ ತೋರುವಂತೆ ಉಪನ್ಯಾಸವನ್ನಿತ್ತರು.

ಅಂದು ರಾತ್ರೆ ೯|| ತಾಸಿಗೆ ಸಂಗೀತ ಕೂಟವೊಂದಿತ್ತು. ಶ್ರೀ ಬೆಳ್ಳೆ ಅನಂತರಾಮ ಉಪಾಧ್ಯರ ಬಾಯಿ-ಹಾಡುಗಾರಿಕೆ, ಶ್ರೀ. ಧನ್ಯರ ಮೃದಂಗವಾದನದ ಹಸ್ತಕೌಶಲ್ಯ ಪ್ರದರ್ಶನ, ಶ್ರೀ. ಕೆ. ಮಂಜುನಾಥಯ್ಯನವರ ಸಃಶ್ರಾವ್ಯ ಪಿಟೀಲುಗಾರಿಕೆ ಇವುಗಳಿಂದ ಸಭಿಕ ಮನೋರಂಜನೆಯಾದ ಬಳಿಕ ಶ್ರೀ. ಕಾರಂತರು 'ನಾಟಕ' ಎಂಬ ನಾಟಕವನ್ನು ಅಭಿನಯಯುಕ್ತವಾಗಿ ಓದಿದರು. ಅವರೇ ಬರೆದಿದ್ದ ಆ ನಾಟಕವೂ ಅವರ ಅಭಿನಯವೂ ಸಾಮಾನ್ಯವಾಗಿ ಎಲ್ಲಿಯೂ ಕಾಣಸಿಗುವ 'ಕಂಪ್ನಿ ನಾಟಕ'ಗಳ ವಿಡಂಬನಾತ್ಮಕ ಹಾಸ್ಯ ಪ್ರಧಾನವಾಗಿದ್ದವು. ಅಂತಹ ಕಂಪ್ನಿ ನಾಟಕಗಳ ಕುಂದು ಕೊರತೆ ರಸಾಭಾಸ ಕಲೆಯ ಕೊಲೆ ಇವುಗಳು ಸಾಮಾಜಿಕರಿಗೆ ಚೆನ್ನಾಗಿ ಮನ ನಾಟಿ ನೆಲೆನಿಂದು ಅಂಶಹವುಗಳನ್ನು ನೋಡುವ ಸಂದರ್ಭ ಬಂದಾಗ ಕಾರಂತರ 'ನಾಟಕ'ದ ನೆನಪು ಹಠಾತ್ತಾಗಿ ಬಂದು ತಮ್ಮ ಅಭಿರುಚಿಯನ್ನು ತಿದ್ದಿಕೊಂಡು 'ಕಂಪ್ನಿ ನಾಟಕ'ಗಳೂ ಸುಧಾರಿಸಿಕೊಳ್ಳುವಂತೆ ಟೀಕೆ ವಿಮರ್ಶೆಗಳು ಸಾಮಾನ್ಯರ ಮುಖದಿಂದಲೂ ಹೊರ ಬೀಳಲೆಂದೋ ಏನೋ ಅವರ ನಾಟಕವೂ ಅಭಿನಯವೂ 'ಕಂಪ್ನಿ ನಾಟಕ'ಗಳ ಕುಂದು ಕೊರತೆಗಳಿಗೆ ಭೂತಗನ್ನಡಿ (Magnifying glass) ಇಟ್ಟು ನೋಡಿದಂತೆಯೂ ವಿಡಂಬನದಲ್ಲಿ ಅಭಿನಯದಲ್ಲಿಯೂ ಹಾಡುಗಳಲ್ಲಿಯೂ ಒಂದು ತರದ ಏಕರೂಪತೆಯು ಭಾಸವಾಗುತ್ತಿದ್ದರೂ ಮನೋರಂಜನೆಯನ್ನು ಚೆನ್ನಾಗಿಯೇ ಮಾಡಿತು.

ಶ್ರೀ ವೆಂಕಟಕೃಷ್ಣರಾಯರ ಭಾಷಣ

ಮರುದಿನ ತಾ. ೧೯ರಂದು ಬೆಳಗ್ಗೆ ಉಡುಪಿಯ ಶ್ರೀ. ಬಿ. ವೆಂಕಟಕೃಷ್ಣರಾವ್, ಎಮ್. ಎ. ಸಂಸ್ಕೃತ ಪ್ರೊಫೆಸರ್ ಕ್ರಿಶ್ಚನ್ ಕಾಲೇಜು, ಮದ್ರಾಸು. ಇವರು 'ಸಂಸ್ಕೃತ ನಾಟಕಗಳು' ಎಂಬ ವಿಷಯವನ್ನೆತ್ತಿ ಉಪನ್ಯಾಸವನ್ನಿತ್ತರು. ಪೌರ್ವಾತ್ಯ ಸಂಸ್ಕೃತ ನಾಟಕಗಳ ವೈಶಿಷ್ಟ್ಯವನ್ನು ಭರತಮುನಿಯ ನಾಟ್ಯಶಾಸ್ತ್ರದ ಲಕ್ಷಣಗಳಿಂದ ತೊಡಗಿ ವಿಕ್ರಮೋರ್ವಶೀಯ, ಶಾಕುಂತಲಾ, ಕುಮಾರಸಂಭವ, ಮಾಲವಿಕಾಗ್ನಿಮಿತ್ರ, ಊರುಭಂಗ, ಮುಂತಾದ ಸಂಸ್ಕೃತ ನಾಟಕಗಳ ಸಂದರ್ಭೋಚಿತ ಭಾಗಗಳಿಂದ ದೃಷ್ಟಾಂತಗಳನ್ನು ಆಯ್ದುಕೊಟ್ಟು ವಿವರಿಸಿ ಕೊನೆಗೆ ಪಾಶ್ಚಾತ್ಯ ಪೌರ್ವಾತ್ಯ ನಾಟಕಗಳ ತುಲನಾತ್ಮಕ ವಿಮರ್ಶೆಯನ್ನು ಕೈಗೊಂಡು ಮೊದಲಿನದು ಹೇಗೆ ಸಹಜತೆಗೆ (realistic) ಪ್ರಾಧಾನ್ಯವನ್ನಿತ್ತಿದೆಯೆಂದೂ ಎರಡನೆಯದು ಕವಿಷಯ ರಸಸಮಾವೇಶಕ್ಕೂ ಕರ್ಮತತ್ವ ಪ್ರತಿಪಾದಕವ ತಾತ್ವಿಕ ನೀತಿಗೂ ಹೇಗೆ ಪ್ರಾಮುಖ್ಯತೆಯನ್ನಿತ್ತಿದೆಯೆಂದೂ ಈ ಎರಡು ಭಿನ್ನಭಿನ್ನ ಮಾರ್ಗಗಳನ್ನು ಹಿಡಿದು ಸಾಗಿದ ನಾಟಕಗಳಲ್ಲಿ ಕಥಾವಸ್ತುವನ್ನು ತೊಡಗಿ ಬೆಳೆಯಿಸಿ ಮುಕ್ತಾಯಗೊಳಿಸುವುದರಲ್ಲಿಯೂ ಕಥಾವ್ಯಕ್ತಿಗಳ ಗುಣವಿಶೇಷಗಳ ನಿರೂಪಣೆಯಲ್ಲಿಯೂ ಅವಶ್ಯವಾಗಿ ತೋರಬೇಕಾದ ವೈಶಿಷ್ಟ್ಯಗಳಾವುವೆಂದೂ ಸಂದರ್ಭೋಚಿತವಾಗಿ ಕೆಲವೆಡೆ ಸ್ಥೂಲವಾಗಿಯೂ ಕೆಲವೆಡೆ ಸೂಕ್ಷ್ಮವಾಗಿಯೂ ತೋರಿಸುತ್ತ ಪಾಂಡಿತ್ಯ ಪ್ರದರ್ಶಕವಾದ ಭಾಷಣವನ್ನಿತ್ತರು.

ತದನಂತರ ಕರ್ನಾಟಕ ಪರಿಷತ್ತಿನ ಕೋಶಾಧಿಕಾರಿಗಳೂ ಗ್ರಂಥಕರ್ತರೂ ಬೆಂಗಳೂರಿನ ಇಂಟರ್ಮೀಡಿಯೇಟ್ ಕಾಲೇಜಿನ ಪ್ರೊಫೆಸರರೂ ಆದ ಶ್ರೀ. ವಿ. ಸೀತಾರಾಮಯ್ಯ ('ವಿ. ಸಿ.') ಇವರು 'ಫೆಡರಲ್ ಸರಕಾರದ ಮುಂದಿನ ಸಮಸ್ಯೆಗಳು' ಎಂಬ ವಿಷಯವನ್ನೆತ್ತಿಕೊಂಡು ಉಪನ್ಯಾಸವಿತ್ತರು. ಈಗ ಹಿಂದೀಯರ ಮುಂದಿರುವ ಫೆಡರಲ್ ಸರಕಾರ ಸಮಸ್ಯೆ (ಸಂಯುಕ್ತ ರಾಜ್ಯಾಂಗ ಪದ್ಧತಿ) ಯನ್ನಷ್ಟೇ ಸಂಕೋಚದೃಷ್ಟಿಯಿಂದ ನೋಡಿ ಸಾಮಾನ್ಯವಾಗಿ ಎಲ್ಲ ಭಾಷಣಗಾರರೂ ಹಾಡುವ ಅದರ ಕುಂದುಕೊರತೆಗಳ ಸರಬತ್ತಿಯನ್ನು ಸಭಿಕರ ಮುಂದಿಡುವದನ್ನೇ 'ವಿ. ಸಿ.' ಯವರು ತನ್ನ ಉಪನ್ಯಾಸದ ಗುರಿಯಾಗಿಟ್ಟುಕೊಳ್ಳದೆ ನಿಜವಾಗಿಯೂ ಉಪಯುಕ್ತವಾದ ಸಂಯುಕ್ತ ರಾಜ್ಯಪದ್ಧತಿಯು ಹಿಂದೆ ಗ್ರೀಕ್ ರೋಮನರ ಕಾಲದಲ್ಲಿ ಹೇಗಿತ್ತೆಂದೂ ಇಂದು ಸ್ವಿಜರ್‌ಲ್ಯಾಂಡಿನಲ್ಲಿ ಅದು ಹೇಗೆ ಆದರ್ಶ ರಾಜ್ಯಪದ್ಧತಿಯಾಗಿ ಮೆರೆಯುತ್ತಿದೆಯೆಂದೂ ತುಸು ಪರಿವರ್ತನೆಯಿಂದ ಅದು ಅಮೇರಿಕದ ಯುನೈಟೆಡ್ ಸ್ಟೇಟ್ಸ್, ಕೆನಡಾ, ಮುಂತಾದ ಕೆಲವು ಪ್ರಾಂತಗಳಲ್ಲಿ ಅದು ಹೇಗೆ ಫಲಕಾರಿಯಾಗಿದೆಯೆಂದೂ ಹಾಗಾಗಲು ಅದರ ಲಕ್ಷಣ ದೇಶದ ಪರಿಸ್ಥಿತಿ ಹೇಗಿರಬೇಕೆಂಬುದನ್ನೂ ವಿಸ್ತರಿಸಿ ಮನಗಾಣಿಸಿ ಅನಂತರ ವಿವಿಧ ಮಟ್ಟಿನ ಆಳಿಕೆ ಹಕ್ಕು ಸವಲತ್ತುಗಳಿಂದ ಬ್ರಿಟಿಷ್ ಸಾಮ್ರಾಟ ಶಾಹಿಯ ಅಧೀನತೆ ಹಾಗೂ ರಕ್ಷಣೆಯ ಕಕ್ಷೆಯುಳ್ಳ ಅಡಕವಾಗಿರುವ ಹಲವು ಚಿಕ್ಕದೊಡ್ಡ ಆಶ್ರಿತ ಸಂಸ್ಥಾನಗಳೂ ನೇರಾಗಿ ಬ್ರಿಟಿಷ್ ಸರಕಾರದ ಅಧೀನದಲ್ಲಿರುವ ಪ್ರಾಂತಗಳೂ ಕೂಡಿ ದೊಡ್ಡ ಭೂಖಂಡದಂತಿರುವ ವಿಸ್ತಾರವಾಗಿ ಈ ನಮ್ಮ ದೇಶದಲ್ಲಿ ವಿವಿಧ ಮತ ನೀತಿ ಸಂಸ್ಕೃತಿಗಳ ತಿಕ್ಕಾಟ ನೆಣಗಾಟಗಳ ನಾಡಿನಲ್ಲಿ ಪ್ರಯೋಗಾರ್ಹವಾದ ಸಂಯುಕ್ತ ರಾಜ್ಯಾಂಗ ಪದ್ಧತಿಯು ಹೇಗಿರಬೇಕೆಂದೂ ಆ ದೃಷ್ಟಿಯಿಂದ ೧೯೩೫ರ ಇಂಡಿಯಾ ಆಕ್ಟಿನ ಫೆಡರೇಶನ್ ಯೋಜನೆಯು ಆದೆಷ್ಟು ನಿಷ್ಪ್ರಯೋಜನವಾಗಿದೆಯೆಂದೂ ಆಕ್ಟಿನ ಹಲವು ಭಾಗಗಳನ್ನು ವಿವರಿಸಿ ಹೇಳಿ ನಮ್ಮ ದೇಶಕ್ಕೆ ಪ್ರಯೋಜನಕಾರಿಯೂ ವ್ಯವಹಾರ್ಯವೂ ಆದ ಫೆಡರೇಶನ್ ಪದ್ಧತಿಯ ರಚನೆಯನ್ನು ಹೇಗೆ ಮಾಡಬಹುದೆಂದೂ ಅಂತಹದು ನಮಗೆ ಅವಶ್ಯವಿದೆಯೆಂದೂ ಅದಕ್ಕೆ ಇಂದು ನಮ್ಮ ಮುಂದಿರುವಂತಹದು ಬೇಡವೆಂದೂ ಸರ್ವಗ್ರಾಹ್ಯವಾಗುವಂತೆ ಸರಳ ಶೈಲಿಯಿಂದ ಉಪನ್ಯಾಸವನ್ನಿತ್ತರು.

ಶ್ರೀ ರಾಘವೇಂದ್ರರಾಯರ ಭಾಷಣ

ತಾ. ೧೯ರ ಸಾಯಂಕಾಲ ೪|| ತಾಸಿಗೆ ಪುನಃ ಸಭೆಗೂಡಲಾಗಿ ಉಡುಪಿಯ ಶ್ರೀ. ರಾಘವೇಂದ್ರ ಆಚಾರ್, ಬಿ. ಎಸ್. ಸಿ. (ಓನರ್ಸ್) ಫಿಜಿಕ್ಸ್ ಪ್ರೊಫೆಸರ್, ಮದ್ರಾಸು ಲಾಯೊಲಾ ಕಾಲೇಜು, ಇವರು ಕನ್ನಡದಲ್ಲಿ ವಿಜ್ಞಾನ ಪುಸ್ತಕಗಳ ಆವಶ್ಯಕತೆಯ ಕುರಿತು ಚಲೋ ಉಪನ್ಯಾಸವನ್ನಿತ್ತರು. ಇಂದಿನ ವಿಜ್ಞಾನಯುಗದ ಪ್ರಾದುರ್ಭಾವದಿಂದ ಮನೆಮನೆಗಳಲ್ಲಿಯೂ ಅದರ ತತ್ವಗಳ ಆವಿಷ್ಕರಣದಿಂದ ಉಂಟಾದ ವಿವಿಧ ಯಂತ್ರೋಪಕರಣಗಳೂ ಜೀವನದ ಸೌಲಭ್ಯಗಳೂ ಬಗೆಬಗೆಯ ವಸ್ತುಗಳ ನಿರ್ಮಾಣದ ಕಾರ್ಖಾನೆಗಳೂ ತೋರಿಬಂದರೂ ಇಂಗ್ಲೀಷನ್ನರಿಯದ ಕನ್ನಡಿಗನು ಅವನ್ನೆಲ್ಲ ಜಾದುವಿದ್ಯೆಯನ್ನು ನೋಡಿ ಬಾಯಿ ಕಳೆಯುವ ಹೆಡ್ಡನ ಕೀಳುಮಟ್ಟಕ್ಕೆ ಇಳಿದಿರುವುದು ಕನ್ನಡದಲ್ಲಿ ವಿಜ್ಞಾನ ಪುಸ್ತಕಗಳ ಅಭಾವದಿಂದೆಂಬುವನ್ನು ಈ ದೃಷ್ಟಿಯಿಂದ ನೋಡಿದರೆ ಕನ್ನಡನಾಡಿನ ಜ್ಞಾನಭಂಡಾರಕ್ಕೂ ಆರ್ಥಿಕೋನ್ನತಿಗೂ ಎಂತಹ ನಷ್ಟವುಂಟಾಗಿದೆಯೆಂಬುದನ್ನು ಹಲವು ದೃಷ್ಟಾಂತಗಳನ್ನು ಕೊಟ್ಟು ಮನಗಾಣಿಸಿದರು. ಕೆಲವರೆಂದುಕೊಳ್ಳುವಂತೆ ವಿಜ್ಞಾನವು ಮತಧರ್ಮಗಳ ಶತ್ರುವಲ್ಲವೆಂದೂ ವಿಶ್ವಕರ್ತನ ಅಗಾಧಮಹಿಮೆಯನ್ನು ಪ್ರತ್ಯಕ್ಷತೋರಿಸಿ ಆಸ್ತಿಕತೆಯನ್ನು ನೆಲೆಗೊಳಿಸಲಿಕ್ಕೂ ಮೂಢನಂಬಿಗೆಗಳನ್ನು ಬುಡಮಟ್ಟ ಕಿತ್ತೊಗೆದು ಜನಜೀವನವನ್ನು ವಿಚಾರಶೋಧನೆ ಪ್ರಯೋಗ ಪರಿಶೀಲನೆಗಳ ಹಾದಿಯಲ್ಲಿ ಮುಂದುವರಿಸಿ

Commonwealth Assurance Co., Ltd., Poona.

ಬೋನಸ್ಸು ದರವು 20% ಹೆಚ್ಚಿದೆ

30—4—38ರ

ಮೂರನೇ ವ್ಯಾಲ್ಯುಯೇಷನ್ ಫಲಿತಾಂಶ

ಜೀವಾವಧಿ	ತ್ರೈವಾರ್ಷಿಕ	ಎಂಡೋಮೆಂಟ್
ರೂ. 54—0—0	ಬೋನಸ್ಸು ಸಾವಿರಕ್ಕೆ	ರೂ. 45—0—0

ಕಾಮನ್‌ವೆಲ್ತ್

ಏಜನ್ಸಿ ಮತ್ತು ಪಾಲಿಸಿ ವಿವರಗಳಿಗೆ ಇಂದೇ ಬರೆಯಿರಿ.

ಕಾಮನ್‌ವೆಲ್ತ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ.

ಗವಾಂಕರ್ ಅಂಡ್ ಸನ್ಸ್,

ಚೀಫ್ ಏಜಂಟ್ಸ್: ಆನಂದರಾವ್ ಸರ್ಕಲ್, ಬೆಂಗಳೂರು.

ಕನ್ನಡನಾಡಿನ ಉತ್ಕರ್ಷೆಯನ್ನು ಸಾಧಿಸಲಿಕ್ಕೂ ಕನ್ನಡದಲ್ಲಿ ವಿಜ್ಞಾನದ ಪುಸ್ತಕಗಳು ಅವೆಷ್ಟು ಆವಶ್ಯಕವೆಂಬುದನ್ನು ಬಗೆಗಾಣಿಸಿದರು. ಇತರ ರಾಷ್ಟ್ರಗಳಲ್ಲಿ ವಿಶೇಷತಃ ಮುಂದುವರಿದ ಪಾಶ್ಚಾತ್ಯ ದೇಶಗಳಲ್ಲಿ ವಿಜ್ಞಾನದ ಕುರಿತು ಚಿಕ್ಕಮಕ್ಕಳ ಪುಸ್ತಕಾವಳಿಗಳಿಂದ ತೊಡಗಿ ಕ್ರಮಶಃ ತತ್ಪ್ರಸುಸಾರವಾಗಿ ವಿಜ್ಞಾನಿಗಳಿಗೇ ಅರ್ಥವಾಗುವಂತಹ ಉದ್ಗ್ರಂಥಗಳ ವರೆಗೂ ತರತರದ ಪುಸ್ತಕಭಂಡಾರವೇ ವಿಜ್ಞಾನದ ಶಾಖಾನುಶಾಖೆಗಳಲ್ಲಿಯೂ ನಿರ್ಮಾಣವಾಗಿರುವುದರಿಂದ ಇಂದು ಅವರು ಸಾಹಸಿಗರಾಗಿ ಪ್ರಕೃತಿಯ ರಹಸ್ಯಾನ್ವೇಷಕರಾಗಿ ಭೂವ್ಯಾಕಾಶ ಸಾಗರಗಳನ್ನೆಲ್ಲ ಗೆದ್ದು ಅವುಗಳ ಸಂಪತ್ತನ್ನೆಲ್ಲ ಸೂರೆಮಾಡಿ ಪುರುಷಪ್ರಯತ್ನವೇ ಪ್ರಯತ್ನವೆಂದು ಪುರುಷಸಿಂಹರಾಗಿ ಬಾಳುತ್ತಿರುವಾಗ ಕನ್ನಡಿಗರಿಂದು ಜಡಾತ್ಮರಾಗಿ ವಿಧಿಮೂಢರಾಗಿ ವಿಚಾರರಹಿತರಾಗಿ ಅಜ್ಞಾನದ ವಿಪತ್ಪರಂಪರೆಗೆ ಬಲಿಯಾಗಿ ಕುರಿಹಿಂಡಿನ ಹಾದಿ ಹಿಡಿದಿರುವುದಕ್ಕೆ ಮುಖ್ಯ ಕಾರಣವು ಅವರಿಗೆ ವಿಜ್ಞಾನದ ದೃಷ್ಟಿಯಿಂದ ಸಕಲವನ್ನೂ ನೋಡಲು ಕಲಿಸುವಂತಹ ವಿಜ್ಞಾನದ ಪುಸ್ತಕಗಳು ಕನ್ನಡದಲ್ಲಿ ಇಲ್ಲದಿರುವುದೇ ಎಂಬುದನ್ನೂ ಈ ನ್ಯೂನತೆಯನ್ನು ಹೋಗಲಾಡಿಸಲು ಸಾಹಿತ್ಯಪರಿಷತ್ತೂ ಸರಕಾರವೂ ವೃತ್ತಪತ್ರಿಕಾಕರ್ತರೂ ವಿಜ್ಞಾನವನ್ನರಿತ ಬರಹಗಾರರೂ ಹೇಗೆ ಪ್ರಯತ್ನಿಸಬೇಕಾಗಿದೆಯೆಂಬುದನ್ನೂ ವಿವರಿಸಿ, ವಿಜ್ಞಾನವನ್ನು ಕನ್ನಡದಲ್ಲಿ ಬೋಧಿಸಲು ಸಾಧ್ಯವಲ್ಲವೆಂಬ ಪಕ್ಷದವರ ಹೇಳಿಕೆಯು ನಿರಾಧಾರವಾದುದೆಂಬುದನ್ನು ಪ್ರತ್ಯಕ್ಷ ತೋರಿಸುವುದಕ್ಕಾಗಿ ರೇಡಿಯೋ ಟೆಲಿಫೋನ್ ವಿದ್ಯುಚ್ಛಕ್ತಿಯ ಉತ್ಪಾದನೆ ಇವುಗಳನ್ನು ವಿದ್ಯಾವಂತನಲ್ಲದ ಸಾಮಾನ್ಯ ಕನ್ನಡಿಗನೂ ತಿಳಿಯುವಂತೆ ವಿವರಿಸಿ ಹೇಳಿ ಉಪನ್ಯಾಸವನ್ನು ಮುಕ್ತಾಯಗೊಳಿಸಿದರು.

ಅನಂತರ ಶ್ರೀ. ವಿ. ಸೀತಾರಾಮಯ್ಯನವರು ಇಂದಿನ ಕವಿತೆಗಳು ಹಿಂದಿನ ಕವಿತೆಗಳಿಂದ ಹೇಗೆ ಭಿನ್ನವಾಗಿವೆಯೆಂದೂ ಹಿಂದಿನವರ ಲಾಕ್ಷಣಿಕ ನಿಯಮಗಳ ಕಟ್ಟುನಿಟ್ಟನ್ನು ಬಿಟ್ಟು ಚರ್ವಿತ ಚರ್ವಣವಾದ ಅಲಂಕಾರ ವರ್ಣನೆಗಳನ್ನು ತ್ಯಜಿಸಿ ಹೊಸ ಯುಗಕ್ಕೊಪ್ಪುವ ಹೊಸ ಭಾವನೆಗಳನ್ನು ಪ್ರದರ್ಶಿಸುವ ಹೊಸ ಹಾದಿಯಲ್ಲಿ ಅವು ಹೇಗೆ ಸಾಗುತ್ತಿವೆಯೆಂದೂ ವಿವರಿಸಿ ಕೆಲವು ಹೊಸ ಕವಿತೆಗಳನ್ನು ಓದಿ ಸಮರ್ಥಿಸಿ ತೋರಿಸಿದರು.

ಆಮೇಲೆ ಶ್ರೀ. ಕಾರಂತರು 'ನಮ್ಮ ನೃತ್ಯಗಳು' ಎಂಬ ವಿಷಯವನ್ನೆತ್ತಿ ವಿಶೇಷತಃ ದಕ್ಷಿಣ ಕರ್ನಾಟಕದ ಕುಣಿತಗಳ ಲಕ್ಷಣ ವೈವಿಧ್ಯಗಳನ್ನು ವಿವರಿಸಿ ಹೇಳಿದರು. ಭೂತದ ಕುಣಿತ, ಮಲೆಕುಡುಬರ ದೈವಾರಾಧನೆ ಕುಣಿತ, ಕೊಡಗರ ಹುತ್ತರಿ ಕುಣಿತ, ಶೌರ್ಯೋತ್ಪಾದಕವಾದ ಕಾಳಗ ಕುಣಿತ, ಸಂತೋಷ ಪ್ರದರ್ಶಕ ಕುಣಿತ, ಯಕ್ಷಗಾನ ಕುಣಿತ, ಕಥಕ್ಕಳಿ ನರ್ತನ ಇವುಗಳಲ್ಲಿ ಒಂದೊಂದನ್ನೇ ಆಯ್ದುಕೊಂಡು ಆ ನರ್ತನ ಮತ್ತು ಅದರ ಹಿಮ್ಮೇಳದ ವೈಶಿಷ್ಟ್ಯಗಳೇನೆಂಬುದನ್ನು ತಾನು ಪ್ರತ್ಯಕ್ಷ ಕಂಡು ಪರಿಶೀಲಿಸಿ ಮಾಡಿರುವ ಶೋಧನೆಗಳ ಫಲಿತಾಂಶವನ್ನು ಸ್ವಾರಸ್ಯವಾಗಿ ವಿವರಿಸಿ ಉಪನ್ಯಾಸವಿತ್ತರು.

ಅಂದಿನ ರಾತ್ರೆ ಘ. 9-30ಕ್ಕೆ "ಕಿರಿಯರ ಪ್ರಪಂಚ"ದ ಗೆಳೆಯರು ಶ್ರೀ. ಅ.ನ. ಕೃಷ್ಣರಾಯರ 'ಗುಬ್ಬಚ್ಚಿಗೂಡು' ಮತ್ತು ಶ್ರೀ. ಕೈಲಾಸಂರವರ 'ಗಂಡಸ್ಕತ್ರಿ'ಎಂಬ ಏಕಾಂಕ ನಾಟಕಗಳನ್ನು ಅಭಿನಯ ದೃಷ್ಟಿಯಿಂದ ಯಶಸ್ವಿಯಾಗಿಯೇ ನಟಿಸಿದರು. ಆದರೆ ಹಿಂದಿನ ಕವಿತೆಗಳ ಜಾಡಿನಲ್ಲೇ ಒಗ್ಗಿಹೋದ ಹಲವು ಮಂದಿಗೆ ಅಂದು ಸಾಯಂಕಾಲ ಶ್ರೀ. ವಿ. ಸಿ. ಯವರು ಓದಿದ ಇಂದಿನ ಕವಿತೆಗಳು ಹೇಗೆ ಅಷ್ಟೊಂದು ರುಚಿಯಾಗಿ ತೋರಲಿಲ್ಲವೋ ಅಂತೆಯೇ 'ನಾಟಕ ಕಂಪ್ನಿ'ಗಳ ಪೌರಾಣಿಕ ನಾಟಕಗಳ ಮಟ್ಟದಿಂದ ಮೇಲೇರದಿದ್ದ ಪ್ರೇಕ್ಷಕ ವರ್ಗದ ಸಾಮಾನ್ಯ ವೃಂದಕ್ಕೆ ಇಂತಹ ಅತ್ಯಾಧುನಿಕ ಏಕಾಂಕ ನಾಟಕಗಳು ಚೆನ್ನಾಗಿ ಸೇರದಿದ್ದರೂ ತುರುಕಿ ಸೇರಿಸಿ ಅಭಿರುಚಿಯನ್ನು ತಿದ್ದುವ ಸಾಹಸವನ್ನು ಗೆಳೆಯರು ಧೈರ್ಯದಿಂದ ಕೈಗೊಂಡುದು ಸ್ತುತ್ಯಾರ್ಹವೇ.

ದಾಸಸಾಹಿತ್ಯ

ತಾ. ೨೦ನೆಯ ದಿನ ಬೆಳಗ್ಗೆ ಶ್ರೀ. ಬೆಟ್ಗೇರಿ ಕೃಷ್ಣಶರ್ಮಾ, ಜಯಂತಿಯ ಸಂಪಾದಕ, ಇವರು "ದಾಸಸಾಹಿತ್ಯ"ದ ವಿಷಯವಾಗಿ ತಾನು ಮಾಡಿರುವ ಶೋಧನಾತ್ಮಕದೃಷ್ಟಿಯಿಂದ ತೋರಿಬಂದುದನ್ನು ಚಲೋದಾಗಿ ವಿವರಿಸುತ್ತ ಉಪನ್ಯಾಸವನ್ನಿತ್ತರು. ಜೈನರೂ ವೀರಶೈವರೂ ಕನ್ನಡದಲ್ಲಿ ತಮ್ಮತಮ್ಮ ಮತತತ್ವ ಪ್ರಚಾರವನ್ನು ಕೈಗೊಂಡುದರ ಅನುಕರಣೆಯಾಗಿ ದಾಸಕೂಟವು ನಿರ್ಮಾಣವಾದ ರೀತಿ, ಶ್ರೀ ವಾದಿರಾಜ ಸ್ವಾಮಿಯವರು ತುಳುವರಾದರೂ ಕನ್ನಡವನ್ನೇ ಮಾಧ್ಯಮವನ್ನಾಗಿ ಸ್ವೀಕರಿಸಿ ದಾಸಸಾಹಿತ್ಯವನ್ನು ವಿರಚಿಸಿದ ಅವರ ವ್ಯಾಪಕದೃಷ್ಟಿ, ರಾಮಾನುಜಾಚಾರ್ಯರ ದಾಸಕೂಟ, ಮಾಧ್ವದಾಸಕೂಟ, ಶಿವಶರಣರ ದಾಸಕೂಟ ಇವುಗಳ ವೈಶಿಷ್ಟ್ಯ, ದಾಸಕೂಟದ ದೇವಕಲ್ಪನೆಯ ವೈಶಾಲ್ಯ, ಡಾಂಭಿಕ ಆಚಾರಗಳ ಖಂಡನೆ, ಮುಕ್ತಿಗೆ ಭಕ್ತಿ ಪ್ರಾಧಾನ್ಯ, ಹುಟ್ಟಿಗಿಂತ ಶೀಲಕ್ಕೆ ಅಧಿಕ ಮಾನ್ಯತೆ, ಕನಕದಾಸರು, ಪುರಂದರದಾಸರು, ವಿಜಯದಾಸರು, ನರಸಿಂಹತೀರ್ಥರು, ಶ್ರೀಪಾದರಾಯರೇ ಮುಂತಾದ ಪ್ರಮುಖ ದಾಸಕೂಟದವರು ಆಯಾಕಾಲದ ವಿಕೃತಪರಿಸ್ಥಿತಿಯನ್ನು ತಿದ್ದಿ ಜನಜೀವನವನ್ನೂ ವಿಚಾರವನ್ನೂ ಶುದ್ಧಗೊಳಿಸಲು ಅವರ ಕೃತಿಗಳು ಸಾಧಕವಾದ ರೀತಿ—ದೇಶಕಾಲ ಪರಿಸ್ಥಿತಿಯನ್ನು ಮರೆತು ಇಂದಿನ ಜೀವನ ಸಂಗ್ರಾಮದ ತೀಕ್ಷ್ಣ ದಿನಗಳಲ್ಲಿ ಅವುಗಳ ವೈರಾಗ್ಯಪರವಾದ ಹಲವು ಪದಗಳಿಂದ ಆಗಬಹುದಾದ ಹಾನಿ, ದಾಸರ ಹೆಸರ ಕಳ್ಳಮುದ್ರೆ ಹಾಕಲ್ಪಟ್ಟು ದಾಸಸಾಹಿತ್ಯದಲ್ಲಿ ಅಸಂಗತವಾಗಿ ಬೆರಕೆಬಿದ್ದ ಅಂಶಗಳು, ಇವನ್ನೆಲ್ಲ ದೃಷ್ಟಾಂತಕೊಟ್ಟು ವಿವರಿಸಿದುದಲ್ಲದೆ ಇಂದಿನ ಪರಿಸ್ಥಿತಿಗೆ ಸರಿಹೋಗುವಂತಹ ದಾಸಸಾಹಿತ್ಯ ಭಾಗವನ್ನು ಸಂಗ್ರಹಮಾಡುವುದರಿಂದ ಉಂಟಾಗುವ ಪ್ರಯೋಜನ, ಸಂಗ್ರಹಕಾರರ ಉಪೇಕ್ಷಾಭಾವದಿಂದ ಇಂದಿನ ಸಂಗ್ರಹಗಳಲ್ಲಿ ರುವ ನ್ಯೂನತೆ ಮುಂತಾದುವುಗಳನ್ನೂ ಮುಂದಿಟ್ಟಾಗುವಂತೆ ವಿವರಿಸಿ ಸರಸವಾದ ಭಾಷಣವನ್ನಿತ್ತರು.

(ಬರುವ ಸಂಚಿಕೆಯಲ್ಲಿ ಕೊನೆಗೊಳ್ಳುವುದು.)

1913ನೇ ಇಸವಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ.

ದಿ ಏಷ್ಯಾಟಿಕ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು, ಉದಾರವಾದ ನಫೆ ಹಂಚುವಿಕೆ, ಇವುಗಳಿಂದ ಕೂಡಿ ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡಿದೆ

'ನಫೆ ಹಂಚಿದೆ' ಸಾವಿರಕ್ಕೆ ಸಾಲಿಯಾನ್ ರೂ. **25/- 15/- 10/-**

ಈ ಕಂಪೆನಿಯ ಕೆಲವು ಮುಖ್ಯ ಸೌಲಭ್ಯಗಳು

1. ಪಾಲಿಸಿಯು ತಾನಾಗಿ ಜಾರಿಯಲ್ಲಿರುವ ಕ್ರಮ. 2. ರದ್ದಾದ ಪಾಲಿಸಿಗಳನ್ನು ಸುಲಭರೀತಿಯಲ್ಲಿ ಜಾರಿಗೆ ತರುವಕ್ರಮ. 3 ಪಾಲಿಸಿದಾರರ ಅಸಮರ್ಥತೆಯ ಕಾಲದಲ್ಲಿ ರಿಯಾಯಿತಿ. 4. ಐಡಿಯಲ್ ಪ್ರೊಟೆಕ್ಷನ್ ಪಾಲಿಸಿಗಳು— ೩ ವರ್ಷಗಳ ನಂತರ ಪ್ರೀಮಿಯಂ ಕಟ್ಟದಿದ್ದರೂ ರದ್ದಾಗುವುದಿಲ್ಲ. 5. ಜಾಯಿಂಟ್ ಲೈಫ್ ಎಂಡೋಮೆಂಟ್ ಪಾಲಿಸಿಗಳು. 6. ತ್ವರಿತ ಲಾಭದ ಭರವಸೆಯುಳ್ಳ ಪಾಲಿಸಿಗಳು, ಚೆಕ್ಕುಗಳನ್ನು ಬಹುಬೇಗನೇ ತೀರ್ಮಾನಿಸಿ ಹಣವನ್ನು ಹಕ್ಕುದಾರನ ಮನೆಗೆ ಕಳುಹಿಸಕೊಡಲಾಗುವುದು.



ಮುಖ್ಯ ಕಾರ್ಯಾಲಯ:— "ಏಷ್ಯಾಟಿಕ್ ಭವನ" ಬೆಂಗಳೂರು ಸಿಟಿ.

ಕುಂದಾಪುರತಾಲೂಕಿನಏಜಂಟರು ಉತ್ಸಾಹೀ ಮತ್ತು ಪ್ರಭಾವಶಾಲಿಗಳಾದ ಶ್ರೀಯುತ ಹುಯ್ಯಾರ್ ಹಿರಿಯಣ್ಣ ಶೆಟ್ಟರು ಕುಂದಾಪುರ ತಾಲೂಕಿನ ಏಜಂಟರಾಗಿ ನೇಮಕ ಹೊಂದಿದ್ದಾರೆಂದು ಪ್ರಕಟಿಸಲು ಸಂತೋಷವಾಗುತ್ತದೆ ಮಹಾಜನರು ಇವರೊಡನೆ ಸಹಕರಿಸಿ ಪ್ರೋತ್ಸಾಹಿಸುವರೆಂದು ನಿರೀಕ್ಷಿಸಲಾಗಿದೆ.

ಇದುವರೆಗೆ ಪಾವತಿ ಮಾಡಿರುವ ಹಕ್ಕಿನ ಹಣವು ರೂ. **450,000**ಗೆ ಹೆಚ್ಚಿದೆ.

ಈ ಕಂಪೆನಿಯ ಆರ್ಥಿಕ ಭದ್ರತೆಯು ಬರೋಡ ಮಹಾರಾಜರವರ ಪರಿಗಣನೆಗೆ ಬಂದು, ಈ ಕಂಪೆನಿಯ ಪಾಲಿಸಿಯನ್ನೂ, ವಿದ್ಯಾಭ್ಯಾಸದ ಸಲುವಾಗಿ ಸರಕಾರದವರು ಆಧಾರವಾಗಿ ಇಟ್ಟುಕೊಂಡು ಸಾಲಕೊಡಬಹುದೆಂದು ಅಂಗೀಕರಿಸಿರುವರು. ಬ್ರಿಟಿಷ್ ಹಿಂದೂಸ್ಥಾನದಲ್ಲಿ ಹಲವು ಜಿಲ್ಲಾ ಬೋರ್ಡುಗಳು ಪ್ರೋವಿಡೆಂಟ್ ಫಂಡ್ ಲೆಕ್ಕದಿಂದ ಪ್ರೀಮಿಯಂ ಮೊಬಲಗನ್ನು ಕೊಡುವುದಕ್ಕೆ ಆಧಾರವಾಗಿ ಇಟ್ಟುಕೊಳ್ಳುತ್ತವೆ.

ಈ ಕಂಪೆನಿಯ ಆಫೀಸುಗಳು, ಬೊಂಬಾಯಿ, ಮದ್ರಾಸ್, ಕರಾಚಿ, ಧಾರವಾಡ, ಬೆಜವಾಡ, ಹೈದರಾಬಾದ್, ರಂಗೂನ್ ಮೊದಲಾದ ಕಡೆಗಳಲ್ಲಿಯೂ ಇರುತ್ತವೆ. ಹೆಚ್ಚಿನ ವಿವರಗಳಿಗೆ ಬರೆಯಿರಿ:— ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ

ಬಿ ಕರುಣಾಕರ ಹೆಗ್ಗಡೆ, ಆರ್ಗನೈಜರ್,	—— ಅಥವಾ ——	ಹೆಚ್. ವೆಂಕಟರಾಮಯ್ಯ
ಕೆ. ಆರ್. ಕೆ. ಶೆಟ್ ಬಿಲ್ಡಿಂಗ್	ಹುಯ್ಯಾರು ಹಿರಿಯಣ್ಣ ಶೆಟ್ಟಿ,	ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ
ಮಿಲ್ಲರ್ ಹೈಸ್ಕೂಲ್ ರೋಡ್, ಮಂಗಳೂರು.	ಏಜಂಟ್ ಕುಂದಾಪುರ ತಾಲೂಕು.	ಬೆಂಗಳೂರು ಸಿಟಿ.

The Asiatic Government Security

ASSURANCE COMPANY, LIMITED.

ಅಳಿಯಸಂತಾನ ಪರಿಷತ್ತು

ಪುಟ ೧೦ರಿಂದ

ತರದಿಂದ ದಕ್ಷಿಣಕನ್ನಡ ಜಿಲ್ಲೆಯ ಅಳಿಯಸಂತಾನವನ್ನು ಚರಿಸುವ ಜನರು ಅವುಗಳ ಪ್ರಯೋಜನಹೊಂದಲಾರದಾದರು.

ಹಾಗೂ ನಮ್ಮ ಅಳಿಯಸಂತಾನ ಪದ್ಧತಿಯಲ್ಲಿ ಸುಧಾರಣೆಯಾಗುವುದು ಅವಶ್ಯವೆಂಬ ಅಭಿಪ್ರಾಯವೀಗ ಸಂಪೂರ್ಣ ನೆಲೆನಿಂತಾಗ ಜನತೆಗೆ ಇಂದಿನ ಪರಿಸ್ಥಿತಿಯಲ್ಲಿ ತೀವ್ರ ಅಸಮಾಧಾನವಿದೆ. ಆದುದರಿಂದ [illegible]

ರರು ಜಗತ್ಯವಾಗಿ ಒಪ್ಪಿಗೆಯನ್ನೀಯಬೇಕೆಂದು ಈ ಪರಿಷತ್ತು ಬಿನ್ನಹಿಸಿಕೊಳ್ಳುತ್ತದೆ.

೪. ದಕ್ಷಿಣ ಕನ್ನಡದ ಭೂಕಂದಾಯದ ರೀತಿ ಮತ್ತು ಪ್ರಮಾಣವು ಮದ್ರಾಸು ಸಂಸ್ಥಾನದ ಇತರ ಹಲವು ಜಿಲ್ಲೆಗಳಿಗಿಂತ ಅತೀ ಹೆಚ್ಚಾಗಿದ್ದು ಅನ್ಯಾಯವೂ ಹಾನಿಕಾರಕವೂ ಆಗಿರುವುದರಿಂದ ಈ ಜಿಲ್ಲೆಯ ಭೂಕಂದಾಯ ಪದ್ಧತಿಯ ಕುರಿತು ವಿಚಾರಣೆ ನಡೆಸಿ ಸರಕಾರಕ್ಕೆ ವರದಿಯನ್ನೊಪ್ಪಿಸಲು ಸರಕಾರವು ಕೂಡಲೇ ಕಮಿಟಿಯೊಂ [illegible]

ಕಿದಿಯೂರು— ಇಲ್ಲಿಯ ಮೊಗವೀರ ತರುಣರಾದ ಸಂಕೀರ್ತನರ ನೇತೃತ್ವದಲ್ಲಿ ತಾ. 16-5-39 ರಿಂದ ಮೊದಲ್ಗೊಂಡು ತಾ. 22-5-39 ವರೆಗೆ ಶ್ರೀರಾಮ ಭಜನಾ ಸಪ್ತಾಹವು ಅತ್ಯಂತ ವಿಜೃಂಭಣೆಯಿಂದ ಜರಗಿತು. ಈ ಕಾರ್ಯವು ಸಾಂಗವಾಗಿಯೂ ಯಶಸ್ವಿಯಾಗಿಯೂ ಕೊನೆಗೊಳ್ಳುವಂತೆ ತನುಮನಧನಾದಿ ಸಕಲ ವಿಧದಿಂದಲೂ ನೆರವಾದ ಸಕಲ ಮಹಾಜನರಿಗೂ ಇತರ ಸ್ವಜಾತಿ ಬಾಂಧವರಿಗೂ ಕೂಡ ಸದರಿ ಸಂಕೀರ್ತನ ಯುವಕರು ಈ ಮೂಲಕ ತಮ್ಮ ಆಭಾರ ಮನ್ನಣೆಯನ್ನು ಸೂಚಿಸುವಲ್ಲದೆ ತಮ್ಮೆಲ್ಲರ ಅಭಿನಂದನವನ್ನು ಬಯಸುತ್ತಾಗೆ.

ಇನ್ನಂಜೆ ಶ್ರೀ ವಿಷ್ಣುಮೂರ್ತಿ ಗ್ರಾಮಾಭಿ [illegible]

ಉಡುಪಿ

ಬ್ಯಾರಿಸ್ಟರ್ ಎ. ಕೆ. ಪಿಳ್ಳೆಯವರ ಭಾಷಣ— ಸ್ಥಳೀಯ ಶ್ರೀರಾಮಕೃಷ್ಣ ಥಿಯೇಟರಿನಲ್ಲಿ ಶ್ರೀ ಪಿ. ಎ. ಪೈಗಳವರ ಅಧ್ಯಕ್ಷತೆಯಲ್ಲಿ ಬ್ಯಾರಿಸ್ಟರ್ ಎ. ಕೆ. ಪಿಳ್ಳೆಯವರು "ರಾಡಿಕಲ್ ಕಾಂಗ್ರೆಸ್ ಮೆನ್" ಎಂಬುದರ ಕುರಿತು ಭಾಷಣವಿತ್ತರು. ಭಾಷಣದಲ್ಲಿ ಕಾಂಗ್ರೆಸಿನ ಹಿಂದಿನ ಚರಿತೆಯನ್ನು ವಿವರಿಸಿ ಕಾಂಗ್ರೆಸ್ ಮುಖಂಡರು ಈಗ ತಾನೆ ಯಾವ ಸ್ಥಿತಿಯಲ್ಲಿ ಸ್ವಾತಂತ್ರ್ಯ ಸಂಪಾದನೆ ಮಾರ್ಗವನ್ನು ಅನುಸರಿಸುತ್ತಿದ್ದಾರೆ, ಇದರ ಫಲವಾಗಿ ಕಾಂಗ್ರೆಸಿನೊಳ ಹೊಸ ಪಂಗಡಗಳು ಏರ್ಪಾಡ ಹೇಗಾಯಿತು. [illegible] ವ್ಯಕ್ತಿ ರಾಡಿಕಲ್ ಕಾಂಗ್ರೆಸ್‌ಮೆನ್ ಎಂದು ಅವರ ಗುರಿಯಾವುದೂ [illegible] ಎಂಬಿತ್ಯಾದಿ [illegible]ಗಳನ್ನು ಕುರಿತು ವಿವರಿಸಿದರು. ಶ್ರೀ. ಕೆ. [illegible] ಸಟ್ಟರು ಧನ್ಯವಾದಗಳನ್ನರ್ಪಿಸಿದರು.

[illegible]ಪಿ ತಾಲೂಕು ಬೋರ್ಡು ಮಾಸ್ತರು [illegible] ಸಭೆಯು ತಾ 20-5-39ರಲ್ಲಿ ವಡ [illegible] ಹಾಲಿನಲ್ಲಿ ಡಾಕ್ಟರ್ [illegible] ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸು ಸರ[illegible] ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ ಎ[illegible] ರು ಹಾಜರಿದ್ದರು.

[illegible] ತಾಲೂಕಿನ ಮಾಸ್ತರರು ಒಟ್ಟುಗೂಡಿ [illegible] ಎಂಬುದು ಸಂತೋಷದ ವಿಷ[illegible]. ನವೀಕರಣಕೊಂಡಲು ಸಂ[illegible] ಬಾಲಕ[illegible] ಕಡೆಗೂ ಹೆಚ್ಚಿನ ಗಮನವೀಯಬೇ[illegible] ದೃಢಕಾಯರಾಗಿರುವಂತೆ ನೋಡು[illegible] ಉಪಾಧ್ಯಾಯರ ಅತ್ಯಂತ ಕರ್ತವ್ಯವೆಂದು [illegible] ಪಿ. ಸಟ್ಟರು ಹೇಳಿದರು.

[illegible] ಉಪಾಧ್ಯಾಯರ ಸಂಬಳದ ಕಡಿತದ ಆವ[illegible]ಯ ಕುರಿತು [illegible] ಸಟ್ಟರು ಉಪಾಧ್ಯಾಯರು [illegible] ಬೋರ್ಡಿನ ಆರ್ಥಿಕ ಸ್ಥಿತಿಯನ್ನು ಸೂ[illegible]ರು. ಅನಿವಾರ್ಯ ಸಂದರ್ಭದಲ್ಲಿ ಸಂಬಳದಲ್ಲಿ [illegible] ಕಾರಣಗಳನ್ನು ಕೂ[illegible] ವಿವರಿಸಿ ಅದು ನ್ಯಾಯವೆಂಬುದನ್ನು ಮ[illegible]ವಂತೆ ಹೇಳಿದರು.

[illegible] ಟ್ರಾನ್ಸ್‌ಫರ್ ಮಾಡಲಿಕ್ಕಿಗು [illegible] ಕನ್ನಡದಾದ ಮಟ್ಟಿಗೆ [illegible] ಅಭಿವೃದ್ಧಿಯು ಕಡೆಗೆ [illegible] ಭರವಸೆಯಿತ್ತ[illegible]

[illegible] ಮಾಸ್ತರುಗಳ ಸಂಘ[illegible] ನಿರ್ಣಯಗಳಾಗಿ [illegible] ಅನೇಕರು [illegible] ಕಾರಣವೇನೋ [illegible]ದು.

ಬ[illegible] ಕ್ಲಿನಿಕಿನ ಹೊಸ ಶಾಖೆ:— [illegible] (ರಾಜ್ಯ [illegible]) [illegible] ತಾರೀಕಿನಲ್ಲಿ, 84 [illegible], ಜೇಕಬ್ [illegible], ಮುಂಬಯಿ ನಂಬ್ರ [illegible] ಅಲ್ಲಿಯ ಕನ್ನಡ ದೇಶಾಭಿಮಾನ ಜನ ಕೂ[illegible] ಒಂದು ಹೊಸ ಶಾಖೆಯನ್ನು ತೆರೆದಿರು

[illegible]ರನ ಗಂಡಾಂತರ ಹೆಚ್ಚುತ್ತಿದೆ.

[illegible] ಯುದ್ಧದಲ್ಲಿ ರಾಜ್ಯವನ್ನು [illegible]ದಿದನು. ಆದರೆ ಹಿಟ್ಲರನು ತನ್ನ [illegible] ಬೆದರಿಕೆಯಿಂದಲೇ ನನ್ನ ಹೊಂ[illegible] ರಾಜ್ಯಕ್ಕಿಂತ ಹೆಚ್ಚು ಗಳಿಸಿದ. ಈಗ [illegible]ಗೆ ಅರಿವು ಬಂದಿದೆ. ತಾನಿನ್ನು ಈ ಬುದ್ಧಿವಂತಿಕೆಯಿಂದಲೇ ತನ್ನ ಶಕ್ತಿ ಪ್ರಭಾವವನ್ನು ಕಾಪಾಡಿಕೊಳ್ಳಲು ಸಾಧ್ಯವಿಲ್ಲವೆಂದು ಅವನು ಚೆನ್ನಾಗಿ ಬಲ್ಲನು. ಆದರೆ ಅವನೆಣಿಕೆಯಂತೆ ಜರ್ಮನರ ಪ್ರತಾಪವು ಜಗತ್ತಿಗೆ ಅಖಂಡ ಪಸರಿಸುವ ತನಕ, ರಸ್ಯದ ಗಡಿಯಲ್ಲಿ ತನ್ನ ಸೇನೆ ಮುಂದೆ ದಿಟ್ಟಿಸುವ ತನಕ, ಜರ್ಮನಿಯ ಆರ್ಥಿಕಶಕ್ತಿಯು ಜಗತ್ತಿನಲ್ಲಿ ಪ್ರಭಾವ ಬೀರುವ ತನಕ, ಅವನು ಸುಮ್ಮನಿರಲಾರ,

ಕ್ಲೇಮುಗಳ ಕ್ಲಪ್ತ ಪಾವತಿ ಮತ್ತು ಪೋಲಿಸಿದಾರರಿಗೂ ವಾರಸುದಾರರಿಗೂ ಮಮತೆಯ ಉಪಕಾರವು

ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ ಲೈಫ್ ಇನ್ಶ್ಯೂರೆನ್ಸ್ ಕೊ. ಲಿಮಿಟೆಡ್

ಇದರ ಜನಸೇವೆ ಮಾಡುವ ಒಂದು ಪ್ರಾಮುಖ್ಯ ಹೆಗ್ಗುರುತಾಗಿದೆ.

ಕಂಪೆನಿಯು ಈಚೆಗೆ ಕೆಲವು ವರ್ಷಗಳಲ್ಲಿ ಕೊಟ್ಟ ಜೀವ ವಿಮಾ ಪೋಲಿಸಿಗಳ ಬಾಬ್ತು ತೆತ್ತ ಕ್ಲೇಮುಗಳ ವಿವರವನ್ನು ಈ ಕೆಳಗೆ ಕೊಡಲಾಗಿದೆ:—

ವಿಸ್ತೀರ್ಣ	ಪಂಜ್ರಾ ನಂಬ್ರ	ಪೋಲಿಸಿದಾರರ ಹೆಸರು ಮತ್ತು ವಿಳಾಸ	ಪೋಲಿಸಿಯ ಬಾಬ್ತು ತೆತ್ತ ಪ್ರೀಮಿಯಮ್	ತೆತ್ತ ವಿಮಾ ಮೌಲ್ಯ
ಮದ್ರಾಸು	1	ಪಿ. ಪಂಚಪಕೇಶನ್, ಮರ್ಚೆಂಟ್, 144 ತಂಬುಚೆಟ್ಟಿ ಬೀದಿ ಮದರಾಸು	52—15—0	1,000
	2	ವಿ. ಸುಂದರಸಯ್ಯ, ಕ್ಲಾರ್ಕ್, ಕೇಶ್ ಸೆಕ್ಷನ್, ಎಕೌಂಟೆಂಟ್ ಜನರಲರ ಆಫೀಸು, 1,9 ವೆಲ್ಲಾಲಾ ರಸ್ತೆ, ವೆಪರಿ ಮದರಾಸು.	139—12—0	1,000
	3	ಟಿ. ಜಿ. ವರ್ಗೀಸ್, ಕ್ಲಾರ್ಕ್, ದಿ ಕ್ವಿಲನ್ ಬೇಂಕ್ ಲಿಮಿಟೆಡ್, ಮದ್ರಾಸು.	72— 0—0	500
ತಂಜಾವೂರು ಜಿಲ್ಲೆ	4	ವಿ. ರಾಜಗೋಪಾಲ ನ್ಯಾಡು, ಕ್ಲಾರ್ಕ್, ವಿಲೇಜ್ ಮುನ್ಸಿಫ್ ಕೋರ್ಟ್, 18 ಸದಾಚಾರಾಯ ಮೂದಾ ರಸ್ತೆ, ಕುಂಭಕೋಣಂ.	53— 0—0	500
	5	ವಿ. ಸೀತಾರಾಮ ಸಿಂಘ್, ಕ್ಲಾರ್ಕ್, ಡಿ। ಫಾರೆಸ್ಟ್ ಆಫೀಸು (ಕಿಡಿಯಮ ಕ್ಕೂರು, ಸೌತ್) C/o ಡಾ। ಸಿ. ಕೆ. ಸುಬ್ಬು ಸಿಂಘ್, ಗವರ್ನಮೆಂಟ್ ವೆಟರಿನರಿ ಸರ್ಜನ್, ತಿರುವಾರೂರು, ಎಸ್. ಐ. ರೈಲ್ವೆ.	29—10—0	625
ಚೆಂಗಲ್ಪಟ್ಟು ಜಿಲ್ಲೆ	6	ಎಂ. ವೆಂಕಟಸುಬ್ಬರೆಡ್ಡಿ, ಲೇಂಡ್‌ಲೋರ್ಡ್ ಮೆಯ್ಯೂರ್, ತಿರುವಳ್ಳೂರು.	64—12—0	1,000
ತಿರುಚಿನಾಪಳ್ಳಿ ಜಿಲ್ಲೆ	7	ಟಿ. ಪಿ. ಮುತ್ತುರತ್ನಂ, ಮಿರಾಸ್‌ದಾರ್ ಮತ್ತು ಚುರುಟು ವ್ಯಾಪಾರಿ ನಟ್ಟಿಯಾರಪಾಲಯಂ, ಪೊರಿಯೂರು ಪೋಸ್ಟು ತಿರುಚಿನಾಪಳ್ಳಿ	572— 8—0	10,000
	8	ಆರ್. ಶ್ರೀನಿವಾಸಾಚಾರಿ; ಎಂಜಿನಿಯರಿಂಗ್ ಸೆಕ್ರೆಟರಿ, ಶೇಷಶಾಯಿ ಬ್ರದರ್ಸ್, ಲಿಮಿಟೆಡ್, ಇಂಜಿನಿಯರರು, ತಿರುಚಿನಾಪಳ್ಳಿ.	37—11—0	1,000
	9	ಕೆ. ಎಸ್. ನಂಬಿಯಪ್ಪ ಚೆಟ್ಟಿಯಾರ್, ಉಪ್ಪು ವ್ಯಾಪಾರಿ, ಮಣಚನಲ್ಲೂರು ಪೋಸ್ಟು, ತಿರುಚಿನಾಪಳ್ಳಿ ಜಿಲ್ಲೆ.	196— 4—0	2,000
ಚೆಟ್ಟಿನಾಡು	10	ಎಂ. ಆರ್. ಸುಬ್ರಮಣಿಯನ್ ಚೆಟ್ಟಿಯಾರ್, ಬೇಂಕರ್, ಕರ್ರಾಕುಡಿ,	17—10—0	500
	11	ಮಿಸೆಸ್ ಲಕ್ಷ್ಮಿ ಆಚಿ C/o ಎ. ಎಸ್. ಎಸ್. ಎಸ್. ಸೋಲಯಪ್ಪ ಚೆಟ್ಟಿಯಾರ್, ಪಲ್ಲತ್ತೂರು, ರಾಮನಾಡು ಜಿಲ್ಲೆ.	313— 0—0	2,500
ಮದುರಾ ಮತ್ತು ರಾಮನಾಡು ಜಿಲ್ಲೆ	12	ಎಸ್. ಮುರುಗನಾಡರ್, ಸಬ್‌ಕಂಟ್ರಾಕ್ಟರ್, ಪಿಲ್ಲಾಯರ್ ಕೊಯಿಲ್ ರಸ್ತೆ, ಗೋರಿಪಾಲಯಂ, ಮಧುರಾ.	84— 0—0	1,000
	13	ಪಿ. ಕೆ. ಸಿ. ಅಯ್ಯಂಪೆರುಮಾಲ್‌ನಾಡರ್, ಪ್ಲೇಂಟರ್, ಪಟ್ಟಿವೀರಾಂಪಟ್ಟಿ.	85—10—0	1,000
	14	ತಿರುಮಲಿಕೊಲಂದ ಪಿಳ್ಳೆ, ಸುಂದರರಾಜಪುರಂ, ಸೇತೂರು ಪೋಸ್ಟು,	29— 0—0	500
	15	ಸಿ. ಕೆ. ಸಂಕುಂಣ್ಣಿ ಪಿಳ್ಳೆ, ಪೇದೆ, ದಿ ಕ್ವಿಲನ್ ಬೇಂಕ್, ಲಿಮಿಟೆಡ್ ರಾಜಪಾಳಯಂ.	16—13—0	250
ತಿನ್ನವೆಲ್ಲಿ ಜಿಲ್ಲೆ	16	ಮಿಸೆಸ್ ಸುಂದರಂ, C/o ಎಸ್. ಕೆ. ಕುಟ್ಟಲಿಂಗಂ ಪಿಳ್ಳೆ, ಸೆನ್ನಾ ಮರ್ಚಂಟ್, ಗ್ರೇಟ್ ಕಾಟನ್ ರೋಡ್, ಟ್ಯುಟಿಕೋರಿನ್.	120—12—0	500
ತಿರುವಾಂಕೂರು ರಾಜ್ಯ	17	ಕೆ. ಸಿ. ಶ್ರೀಧರನ್, ಮರ್ಚೆಂಟ್, ಕೃಷ್ಣಮಂದಿರಂ, ಪನಾವೂರು, ನಾಯ್ಯಾಡು	215— 0—0	2,000
	18	ಸಿ. ಇ. ವರ್ಗೀಸ್, ಕ್ಲಾರ್ಕ್, ಮಲಯಾಳ ಮನೋರಮಾ ಕೊ, ಲಿಮಿಟೆಡ್, ಕೊಟ್ಟಯಂ.	27— 0—0	500
	19	ಮಿಸೆಸ್ ಸರಾಮ ಕುರುವಿಲ್ಲ, C/o ಪಿ. ಐ. ಕುರುವಿಲ್ಲ, ನುಟ್ಟುಪಾಥ.	28— 3—0	500

ಇದು

[illegible] ನ್ಸಿಲಿನಲ್ಲಿ ಈಗ ತಾನೇ ಮಂಜೂರಾಗಿರುವ ವಿಕ್ರಯ ತೆರಿಗೆ (Sales Tax) ಮಸೂದೆಯನ್ನು ಈ ಪರಿಷತ್ತು ಪೂರ್ಣವಾಗಿ ಮನ್ನಿಸುತ್ತದೆ; ಮತ್ತು ಸದ್ರಿ ಮಸೂದೆಗೆ ಮಾನ್ಯ ಗವರ್ನರರು ಸಮ್ಮತಿಯನ್ನೀಯಬಾರದೆಂಬ ಚಳವಳವನ್ನು ನಿಷೇಧಿಸುವುದಲ್ಲದೆ, ಸದ್ರಿ ಮಸೂದೆಗೆ ಮಾನ್ಯ ಗವರ್ನ

ಕಾರ್ಕಳ— ಕಾರ್ಕಳ ಬೋರ್ಡು ಹೈಸ್ಕೂಲಿನ ಹಿಂದೀ ಅಧ್ಯಾಪಕರಾದ ಶ್ರೀ ಕಟೀಲ್ ಗಣಪತಿರಾವ್ ಶರ್ಮಾ, 'ವಿಶಾರದ' ಇವರು, ಕಳೆದ ತಿಂಗಳಲ್ಲಿ ಜರಗಿದ ಮದ್ರಾಸ್ ಯುನಿವರ್ಸಿಟಿಯ "ಹಿಂದೀ ವಿದ್ವಾನ್" ಪರೀಕ್ಷೆಯಲ್ಲಿ ಸೆಕೆಂಡ್ ಕ್ಲಾಸಿನಲ್ಲಿ ಉತ್ತೀರ್ಣರಾಗಿರುವುದು ಸಂತೋಷದ ಸುದ್ದಿಯಾಗಿದೆ,

Course of five years' Mechanics Course of the Government Trades School, Mangalore. The next session commences on the 14th June 1939. Copies of Prospectus, forms of application and other particulars may be obtained from the Superintendent. Applications which must be in the prescribed form, should be sent so as to reach him not later than 12th June 1939.

ಕನ್ನಡನಾಡಿನ ಉತ್ಕರ್ಷೆಯನ್ನು ಸಾಧಿಸಲಿಕ್ಕೂ ಕನ್ನಡದಲ್ಲಿ ವಿಜ್ಞಾನದ ಪುಸ್ತಕಗಳು ಅನೆಷ್ಟು ಆವಶ್ಯಕವೆಂಬುದನ್ನು ಬಗೆಗಾಣಿಸಿದರು. ಇತರ ರಾಷ್ಟ್ರಗಳಲ್ಲಿ ವಿಶೇಷತಃ ಮುಂದುವರಿದ ಪಾಶ್ಚಾತ್ಯ ದೇಶಗಳಲ್ಲಿ ವಿಜ್ಞಾನದ ಕುರಿತು ಚಿಕ್ಕಮಕ್ಕಳ ಪುಸ್ತಕಾವಳಿಗಳಿಂದ ತೊಡಗಿ ಶ್ರೇಣಿಸೂತ್ರಾನುಸಾರವಾಗಿ ವಿಜ್ಞಾನಿಗಳಿಗೇ ಅರ್ಥವಾಗುವಂತಹ ಉದ್ಗ್ರಂಥಗಳ ವರೆಗೂ ತರತರದ ಪುಸ್ತಕಭಂಡಾರನೇ ವಿಜ್ಞಾನದ ಶಾಖಾನುಶಾಖೆಗಳಲ್ಲಿಯೂ ನಿರ್ಮಾಣವಾಗಿರುವುದರಿಂದ ಇಂದು ಜನರು ಸಾ... ಗರಾಗಿ ಪ್ರಕೃತಿಯ ರಹಸ್ಯಾನ್ವೇಷಕ ಭೂವ್ಯಾಪಕತ ಸಾಗರಗಳನ್ನೆಲ್ಲ ... ಅವುಗಳ ಸಂಪತ್ತನ್ನೆಲ್ಲ ಸೂರೆಮಾಡಿ ... ರುಪಪ್ರಯತ್ನವೇ ಪ್ರಯತ್ನನೆಂದು ... ಷಸಿಂಹರಾಗಿ ಬಾಳುತ್ತಿರುವಾಗ ಕನ್ನ... ರಿಂದು ಜಡಾತ್ಮರಾಗಿ ವಿಧಿಪೂರ್ವ... ವಿಚಾರರಹಿತರಾಗಿ ಅಜ್ಞಾನದ ವಿಷ... ಪರೆಗೆ ಬಲಿಯಾಗಿ ಕುರಿಹಿಂಡಿನ ... ಹಿಡಿದಿರುವುದಕ್ಕೆ ಮುಖ್ಯ ಕಾರಣವು... ರಿಗೆ ವಿಜ್ಞಾನದ ದೃಷ್ಟಿಯಿಂದ ಸ... ನ್ನೂ ನೋಡಲು ಕಲಿಸುವಂತಹ ವಿ... ನದ ಪುಸ್ತಕಗಳು ಕನ್ನಡದಲ್ಲಿ ಇಲ್ಲ... ವುದೇ ಎಂಬುದನ್ನೂ ಈ ನ್ಯೂನತೆಯ... ಹೋಗಲಾಡಿಸಲು ಸಾಹಿತ್ಯಪರಿಷ... ಸರಕಾರವೂ ವೃತ್ತಪತ್ರಿಕಾಕರ್ತರೂ ... ಜ್ಞಾನವನ್ನರಿತ ಬರಹಗಾರರೂ ... ಪ್ರಯತ್ನಿಸಬೇಕಾಗಿದೆಯೆಂಬುದನ್ನೂ ... ರಿಸಿ, ವಿಜ್ಞಾನವನ್ನು ಕನ್ನಡದಲ್ಲಿ ಬ... ಸಲು ಸಾಧ್ಯವಲ್ಲವೆಂಬ ಪಕ್ಷದವರ ... ಕೆಯು ನಿರಾಧಾರವಾದುದೆಂಬುದನ್ನು...

ತ್ಯಕ್ಷ ತೋರಿಸುವುದಕ್ಕಾಗಿ ರೇಡಿಯೋ ಟೆಲಿಫೋನ್ ವಿದ್ಯುಚ್ಛಕ್ತಿಯ ಉತ್ಪಾದನೆ ಇವುಗಳನ್ನು ವಿದ್ಯಾವಂತನಲ್ಲದ ಸಾಮಾನ್ಯ ಕನ್ನಡಿಗನೂ ತಿಳಿಯುವಂತೆ ವಿವರಿಸಿ ಹೇಳಿ ಉಪನ್ಯಾಸವನ್ನು ಮುಕ್ತಾಯಗೊಳಿಸಿದರು.

ಅನಂತರ ಶ್ರೀ. ಏ. ಸೀತಾರಾಮಯ್ಯನವರು ಇಂದಿನ ಕವಿತೆಗಳು ಹಿಂದಿನ ಕವಿತೆಗಳಿಂದ ಹೇಗೆ ಭಿನ್ನವಾಗಿವೆಯೆಂದೂ ಹಿಂದಿನವರ ಲಾಕ್ಷಣಿಕ ನಿಯಮಗಳ ಕಟ್ಟುನಿಟ್ಟನ್ನು ಬಿಟ್ಟು ಚರ್ವಿತ ಚರ್ವಣವಾದ

ಅಂದಿನ ರಾತ್ರಿ ಘ. 9-30ಕ್ಕೆ "ಕಿರಿಯರ ಪ್ರಪಂಚ"ದ ಗೆಳೆಯರು ಶ್ರೀ. ಅ.ನ. ಕೃಷ್ಣರಾಯರ 'ಗುಬ್ಬಚ್ಚಿಗೂಡು' ಮತ್ತು ಶ್ರೀ. ಕೈಲಾಸಂರವರ 'ಗಂಡಸ್ಕತ್ತ್ರಿ'ಎಂಬ ಏಕಾಂಕ ನಾಟಕಗಳನ್ನು ಅಭಿನಯ ದೃಷ್ಟಿಯಿಂದ ಯಶಸ್ವಿಯಾಗಿಯೇ ನಟಿಸಿದರು. ಆದರೆ ಹಿಂದಿನ ಕವಿತೆಗಳ ಜಾಡಿನಲ್ಲೇ ಒಗ್ಗಿಹೋದ ಹಲವು ಮಂದಿಗೆ ಅಂದು ಸಾಯಂಕಾಲ ಶ್ರೀ. ವಿ. ಸಿ. ಯವರು ಓದಿದ ಇಂದಿನ ಕವಿತೆಗಳು ಹೇಗೆ ಅಷ್ಟೊಂದು ರುಚಿಯಾಗಿ ತೋರಲಿಲ್ಲವೋ ಅಂತೆಯೇ

ರಾದರೂ ಕನ್ನಡವನ್ನೇ ಮಾಧ್ಯಮವನ್ನಾಸ್ವೀಕರಿಸಿ ದಾಸಸಾಹಿತ್ಯವನ್ನು ವಿರಚಿಸಿದ ಅವರ ವ್ಯಾಪಕದೃಷ್ಟಿ, ರಾಮಾನುಜಾಚಾರ್ಯರ ದಾಸಕೂಟ, ಮಾಧ್ವದಾಸಕೂಟ, ಶಿವಶರಣರ ದಾಸಕೂಟ ಇವುಗಳ ವೈಶಿಷ್ಟ್ಯ, ದಾಸಕೂಟದ ದೇವಕಲ್ಪನೆಯ ವೈಶಾಲ್ಯ, ಡಾಂಭಿಕ ಆಚಾರಗಳ ಖಂಡನೆ, ಮುಕ್ತಿಗೆ ಭಕ್ತಿ ಪ್ರಾಧಾನ್ಯ, ಹುಟ್ಟಿಗಿಂತ ಶೀಲಕ್ಕೆ ಅಧಿಕ ಮಾನ್ಯತೆ, ಕನಕದಾಸರು, ಪುರಂದರದಾಸರು, ವಿಜಯದಾಸರು, ನರಸಿಂಹತೀರ್ಥರು, ಶ್ರೀಪಾದ

ವಿಸ್ತೀರ್ಣ	ಜಂಜ್ರಾ ನಂಬ್ರ	ಪೊಲಿಸಿದಾರರ ಹೆಸರು ಮತ್ತು ವಿಳಾಸ	ಪೊಲಿಸಿಯ ಬಾಬ್ತು ತೆತ್ತ ಪ್ರಿಮಿಯಮ್	ತೆತ್ತ ವಿಮಾ ಮೌಲ್ಯ
	20	ಪಿ. ವಿ. ಕುಮಾರನ್, ಪ್ರೊಪ್ರೈಟರ್, ರಾಜಾರಾಮ ಮೋಟರ್ ಸರ್ವಿಸ್, ಆನಂದ ವಿಲಾಸಂ, ಪಲ್ಲಿಪೊಟ್ಟಂ, ಥಾಮರಕುಲಂ, ಕ್ವಿಲನ್.	85— 0—0	1,000
	21	ಟಿ. ಸಿ. ಪೊನ್ನುಸ್ವಾಮಿ ನಾಡರ್, ಟಿಂಬರ್ ಮರ್ಚೆಂಟ್, ಕ್ವಿಲನ್.	56— 4—0	1,000
	22	ವಿ. ವೇಲಾಯುಧನ್, ಮರ್ಚೆಂಟ್, ರಾಮಮಂಗಲಂ ಹೌಸ್, ಪುಥನ್ ವಿಲ್ಲಾ, ಅಂಜಾಂಗೊ ಪೋಸ್ಟ್, ತಿರುವಾಂಕೂರು.	71—14—0	1,000
	23	ಎಸ್. ಗೋಪಾಲ ಪಿಳ್ಳೆ, ಪೇದೆ, ದಿ ಕ್ವಿಲನ್ ಬೇಂಕ್ ಲಿಮಿಟೆಡ್, ತ್ರಿವೆಂಡ್ರ	24—12—0	250
	24	ಡಾ। ಕೆ. ಅಬ್ರಹಾಂ, ರಸಿಡೆಂಟ್ ಮೆಡಿಕಲ್ ಆಫೀಸರ್, ಲೆಪರ್ ಎಸಾಯ್ಲಂ, ಕೊಲಾಚೆಲ್ ಪೋಸ್ಟ್.	151—12—0	2,000
	25	ಆರ್. ತಾಂಡವ ಅಯ್ಯರ್, ಕ್ಲಾರ್ಕ್, ಟ್ರಾವಂಕೂರ್ ನೆಶನಲ್ ಎಂಡ್ ಕ್ವಿಲನ್ ಬೇಂಕ್ ಲಿಮಿಟೆಡ್, ನಾಗರಕೋಯಿಲ್.	12—15—0	500
	26	ಪಿ. ಜೆ. ಕೋರಾ, ಎಕೌಂಟೆಂಟ್, ದಿ ಕ್ವಿಲನ್ ಬೇಂಕ್ ಲಿಮಿಟೆಡ್, ಕ್ವಿಲನ್	54—15—0	1,000
ಕೊಚ್ಚಿ	27	ಟಿ. ಎಂ. ಮಹಮದ್ ಹುಸೆನ್, ಕಾಮಾಲಿಯಾ ಸೋಪ್ ವರ್ಕ್ಸ್, ಮಟ್ಟಾಂಚೇರಿ, ಕೊಚ್ಚಿ.	57— 4—0	1,000
	28	ವಿ. ಎಂ. ಸಾಮುವೆಲ್, ಕ್ಲಾರ್ಕ್, ಟ್ರಾವಂಕೂರು ನೆಶನಲ್ ಮತ್ತು ಕ್ವಿಲನ್ ಬೇಂಕ್ ಲಿಮಿಟೆಡ್, ಕೊಚ್ಚಿ.	66— 7—0	550
	29	ಜೆಸಿ ಯಾಸೆ ಮಹಮದ್ ಯುಸೂಫ್, ಬ್ರೋಕರ್, ಮಟ್ಟಾಂಚೇರಿ, ಕೊಚ್ಚಿ	206— 0—0	1,000
	30	ಎಲ್. ಎಂ. ಜೋಸೆಫ್, ಕ್ಲಾರ್ಕ್, ಶಿಪ್ಪಿಂಗ್ ಡಿಪಾರ್ಟ್‌ಮೆಂಟ್, ಮದುರಾ ಕಂಪೆನಿ ಲಿಮಿಟೆಡ್, ಕೊಚ್ಚಿ.	113—12—0	1,000
	31	ಟಿ. ಐ. ಚಾಕೊ, ಕಂಟ್ರಾಕ್ಟರ್, ಜನರಲ್ ಆಯಿಲ್ ಕಂ. ಎರ್ನಾಕುಳಂ	354— 0—0	2,500
ಕೊಯಮುತ್ತೂರು ಮತ್ತು ನೀಲಗಿರಿ ಜಿಲ್ಲೆ	32	ಎಲ್. ನಂದಗೋಪಾಲ ಅಯ್ಯರ್, ಸೇಲ್ಸ್‌ಮೆನ್ ಅಂಡಿಗೌಂಡರ್, ಥಾಲಿಪೋಸ್ಟ್, ಉದುಮಾಲ ಪೇಟೆ	69—12—0	500
	33	ಜಿ. ರಾಮಸ್ವಾಮಿ ನಾಯ್ಡು, ಬೋರ್ಡ್ ಸ್ಕೂಲ್ ಟೀಚರ್ ಮಾದಾಪುರ, ಪೊಂಗಲೂರು ಪೋಸ್ಟ್, ಕೊಯಮುತ್ತೂರು.	33— 8—0	1,000
	34	ಎಂ. ಎಸ್. ತಿರುಮೂರ್ತಿ ಚೆಟ್ಟಿ, ಕ್ಲಾರ್ಕ್, ಮಾರಾಪಟ್ಟಾ ಸ್ಟ್ರೀಟ್, ಪೊಲ್ಲಾಚಿ.	52—12—0	1,000
	35	ಟಿ. ಆರ್. ರಾಮನಾಥ ಅಯ್ಯರ್, ಟಿಂಬರ್‌ಮರ್ಚೆಂಟ್, ವ್ಯಾ. ಎಂ. ಸಿ. ಎ. ರೋಡ್, ಕೊಯಮುತ್ತೂರು.	44—12—0	1,000
	36	ಜಿ. ನಂಜಗೌಡರ್, ಮರ್ಚೆಂಟ್, ಹೆನಥಾಲ ಹಳ್ಳಿ, ಕಟ್ಟಬೆಟ್ಟು ಪೋಸ್ಟ್ ನೀಲಗಿರಿ.	424—10—0	2,000
ದಕ್ಷಿಣ ಕನ್ನಡ ಜಿಲ್ಲೆ	37	ಡಿ. ಆರ್. ವೇಗಸ್, ಮರ್ಚೆಂಟ್, ಅಮ್ಮಾಡಿಹಳ್ಳಿ, ಪನೀರುಲಪದವು, ಬಂಟ್ವಾಳ	96—12—0	2,000
	38	ಪಿ. ಜನಾರ್ಧನಕಾಮತ್, ಮರ್ಚೆಂಟ್, ಸಾಲುಮಾರು, ಕಾರ್ಕಳ ಪೋಸ್ಟ್.	21— 0—0	500
	39	ಎ. ಗಣಪತಿ, ಫೊರೆಸ್ಟ್‌ಗಾರ್ಡ್, ಹುದುಗೂರ್, ಸೋಮವಾರಪೇಟೆ ಪೋಸ್ಟ್	24—14—0	500
ಮೈಸೂರು ಸ್ಟೇಟ್	40	ಎ. ಶಂಕರನಾರಾಯಣರಾವ್, ಬಿ. ಎ. ಬಿ. ಎಲ್. ಲಾಯರ್, ನಾರಾಯಣರಾಯರ ಅಗ್ರಹಾರ, ನಂಜನಗೂಡು, ಮೈಸೂರು ಸ್ಟೇಟ್.	573—12—0	2,000
	41	ಎಲ್. ವಿ. ಗೋವಿಂದಸ್ವಾಮಿ, ಪೇದೆ ದಿ ಕ್ವಿಲನ್ ಬೇಂಕ್ ಲಿಮಿಟೆಡ್, ಬೆಂಗಳೂರು ಸಿಟಿ.	13—13—0	250
ಬೊಂಬಾಯಿ	42	ಚಂದುಲಾಲ ಮುಲ್‌ಚಂದ ಭ್ರಾ ಪಟೇಲ್, ವ್ಯಾಪಾರಿ, ಜಾಸನ್ ಸೋರಿ, ಸೆರಾಸ್‌ಪುರ, ಅಹಮದಾಬಾದು.	258— 2—0	5,000
ಸಿಲೋನ್	43	ಎಸ್. ಪಿ. ಪಿ. ಕೃಷ್ಣಸ್ವಾಮಿ, ಮರ್ಚೆಂಟ್, 53 ಓಲ್ಡ್ ಮೂರ್ ಸ್ಟ್ರೀಟ್ ಕೊಲೊಂಬೊ.	575—12—0	3,000
	44	ಎಸ್. ಪಿ. ಎ. ಆರ್. ಸುಬ್ರಮಣಿಯನ್ ಚೆಟ್ಟಿಯಾರ್, ಬೇಂಕರ್, 400 ಟ್ರಿಂಕೊಮಲಿ ಸ್ಟ್ರೀಟ್, ಕಂಡಿ, ಸಿಲೋನ್.	376— 2—0	2,500

ಮಂಗಳೂರು ಪ್ರೆಸ್, ರಥಬೀದಿ, ಮಂಗಳೂರು.

1913ನೇ ಇಸವಿ...

ದಿ ಏ...

ಕುಂದಾಪುರತಾಲೂಕಿನವಿಜಂ...
ಉತ್ಸಾಹೀ ಮತ್ತು
ಪ್ರಭಾವಶಾಲಿಗಳಾದ ಶ್ರೀಯ...
ಹುಯ್ಯಾರ್ ಹಿರಿಯಣ್ಣ ಶೆಟ್ಟಿ...
ಕುಂದಾಪುರ ತಾಲೂಕಿನ ಏಜ...
ರಾಗಿ ನೇಮಕ ಹೊಂದಿದ್ದಾರೆ...
ಪ್ರಕಟಿಸಲು ಸಂತೋಷವಾಗು...
ಮಹಾಜನರು ಇವರೊಡನೆ ...
ಕರಿಸಿ ಪ್ರೋತ್ಸಾಹಿಸುವರೆಂ...
ನಿರೀಕ್ಷಿಸಲಾಗಿದೆ.

The Asiatic Government Security
ASSURANCE COMPANY, LIMITED.

ಅಳಿಯಸಂತಾನ ಪರಿಷತ್ತು

ಪುಟ ೧೧ರಿಂದ

ತರದಿಂದ ದಕ್ಷಿಣಕನ್ನಡ ಜಿಲ್ಲೆಯ ಅಳಿಯಸಂತಾನವನ್ನಾಚರಿಸುವ ಜನರು ಅವುಗಳ ಪ್ರಯೋಜನಹೊಂದಲಾರಲಾರದರು.

ಹಾಗೂ ನಮ್ಮ ಅಳಿಯಸಂತಾನ ಪದ್ಧತಿಯಲ್ಲಿ ಸುಧಾರಣೆಯಾಗುವುದು ಅವಶ್ಯವೆಂಬ ಅಭಿಪ್ರಾಯವೀಗ ಸಂಪೂರ್ಣ ನೆಲೆನಿಂತಾಗ ಜನತೆಗೆ ಇಂದಿನ ಪರಿಸ್ಥಿತಿಯಲ್ಲಿ ತೀವ್ರ ಅಸಮಾಧಾನವಿದೆ. ಆದುದರಿಂದ ಆರ್ಥಿಕ ಪರಿಸ್ಥಿತಿ ಸುಧಾರಿಸುವಂತೆ ಜನತೆಯ ಸ್ವಾತಂತ್ರ್ಯ ಧ್ಯೇಯವು ಸಿದ್ಧಿಸುವಂತೆ ಅಳಿಯಕಟ್ಟಿನಲ್ಲಿ ತಕ್ಕ ಮಾರ್ಪಾಟು ಅವಶ್ಯಕವಿದೆ. ಆದುದರಿಂದ ಎಲ್ಲಾ ಪಕ್ಷೀಯರೂ ಈ ವಿಷಯವನ್ನು ಮನಗಂಡು ಸುಧಾರಣೆಗೆ ಮನವಿಡಬೇಕಾಗಿ ಅಪೇಕ್ಷಿಸುವೆನು! ಎಂದರು. ಅನಂತರ ಅವರು ಭೂಮಾಲಿಕರ ಇಂದಿನ ಪರಿಸ್ಥಿತಿಯನ್ನು ವಿವರಿಸಿ, ಕಾಂಗ್ರೆಸು ಸರಕಾರದ ಧ್ಯೇಯ ದ್ಯೋತಕಗಳನ್ನು ವಿವರಿಸಿದರು. ಕೊನೆಯಲ್ಲಿ ಪರಿಷತ್ತಿನ ಯಶಸ್ಸನ್ನು ಬಯಸಿ ತನ್ನ ಕೃತಜ್ಞತೆಯನ್ನು ಸೂಚಿಸಿದರು. ಅನಂತರ ಈ ಕೆಳಗಣ ಠರಾವುಗಳು ಮಂಜೂರಾದುವು.

೧. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹುಸಂಖ್ಯಾಕರಾಗಿರುವ ಅಳಿಯ ಕಟ್ಟನ್ನಾಚರಿಸುವ ಸಮಾಜಗಳವರಲ್ಲಿ ತಮ್ಮ ಕಟ್ಟಿನ ವಿವಾಹ ಅಶನಾರ್ಥ, ರಕ್ಷಕತ್ವ, ಮರಣಶಾಸನ ರಹಿತ ಸ್ವಾರ್ಜಿತ ಆಸ್ತಿಯ ವಾರೀಸ್ದಾರಿಕೆ, ಆಸ್ತಿಯ ಆಡಳಿತೆ, ಕುಟುಂಬಗಳ ಆಸ್ತಿಗಳ ವಿಭಾಗ, ಕುಟುಂಬಗಳ ಅವಿಭಕ್ತತೆಯೇ ಮೊದಲಾದ ವಿಷಯಗಳ ಕುರಿತು ಕಾನೂನೊಂದು ಆವಶ್ಯವೆಂದು ಈ ಪರಿಷತ್ತು ಸರ್ವಾನುಮತದಿಂದ ಅಭಿಪ್ರಾಯಪಡುತ್ತದೆ. ಮೇಲಿನ ಎಲ್ಲಾ ಮತ್ತು ಇನ್ನಿತರ ವಿಷಯಗಳನ್ನೊಳಗೊಂಡ ಮಸೂದೆಯೊಂದನ್ನು ಇಂದಿನಿಂದ ಒಂದು ತಿಂಗಳೊಳಗೆ ತಯಾರಿಸಿ, ಪತ್ರಿಕೆಗಳಲ್ಲಿ ಪ್ರಕಟಿಸಿ, ಆ ಮೇಲೆ ಸದ್ರಿ ಮಸೂದೆಯಲ್ಲಿ ಅಗತ್ಯ ತೋರುವ ತಿದ್ದುಪಡಿ ಕೂಡಾ ಮಾಡಿ ಇಂದಿನಿಂದ ಮೂರು ತಿಂಗಳೊಳಗೆ ಇನ್ನೊಂದು ಪರಿಷತ್ತು ಕರೆದು ಸದ್ರಿ ಮಸೂದೆಯನ್ನು ಅದರ ಮುಂದಿಡಲು 27 ಮಂದಿ ಸದಸ್ಯರ ಕಮಿಟಿಯೊಂದನ್ನು ಈ ಪರಿಷತ್ತು ನೇಮಿಸುತ್ತದೆ. ಈ ಕಮಿಟಿಯ ಕನಿಷ್ಠ ಹಾಜರಿ 9 ಆಗಿರುತ್ತದೆ.

೨. ಅಳಿಯ ಕಟ್ಟನ್ನಾಚರಿಸುವ ಎಲ್ಲಾ ಸಮಾಜಗಳ ಸಂಘಟನೆ, ಸುಧಾರಣೆ ಮತ್ತು ಉನ್ನತಿಸಾಧನೆಗಾಗಿ ಅಳಿಯಸಂತಾನ ಸಮಾಜ ಸುಧಾರಣಾ ಸಂಘವೆಂಬ ಸಂಘವೊಂದನ್ನು ಸ್ಥಾಪಿಸಬೇಕೆಂದು ಈ ಪರಿಷತ್ತು ನಿರ್ಧರಿಸುತ್ತದೆ ಮತ್ತು ಸದ್ರಿ ಸಂಘದ ಘಟನೆ ಮತ್ತು ನಿಯಮಾವಳಿಗಳನ್ನು ತಯಾರಿಸುವರೆ ಈ ಪರಿಷತ್ತು ಏಳು ಮೆಂಬರರನ್ನೊಳಗೊಂಡ ಕಮಿಟಿಯನ್ನು ನೇಮಿಸುತ್ತದೆ.

೩. ಮದ್ರಾಸು ಎಸೆಂಬ್ಲಿ ಮತ್ತು ಕೌನ್ಸಿಲಿನಲ್ಲಿ ಈಗ ತಾನೇ ಮಂಜೂರಾಗಿರುವ ವಿಕ್ರಯ ತೆರಿಗೆ (Sales Tax) ಮಸೂದೆಯನ್ನು ಈ ಪರಿಷತ್ತು ಪೂರ್ಣವಾಗಿ ಮನ್ನಿಸುತ್ತದೆ; ಮತ್ತು ಸದ್ರಿ ಮಸೂದೆಗೆ ಮಾನ್ಯ ಗವರ್ನರರು ಸಮ್ಮತಿಯನ್ನೀಯಬಾರದೆಂಬ ಚಳವಳವನ್ನು ನಿಷೇಧಿಸುವುದಲ್ಲದೆ, ಸದ್ರಿ ಮಸೂದೆಗೆ ಮಾನ್ಯ ಗವರ್ನರರು ಅಗತ್ಯವಾಗಿ ಒಪ್ಪಿಗೆಯನ್ನೀಯಬೇಕೆಂದು ಈ ಪರಿಷತ್ತು ಬಿನ್ನವಿಸಿಕೊಳ್ಳುತ್ತದೆ.

೪. ದಕ್ಷಿಣ ಕನ್ನಡದ ಭೂಕಂದಾಯದ ರೀತಿ ಮತ್ತು ಪ್ರಮಾಣವು ಮದ್ರಾಸು ಸಂಸ್ಥಾನದ ಇತರ ಹಲವು ಜಿಲ್ಲೆಗಳಿಗಿಂತ ಅತೀ ಹೆಚ್ಚಾಗಿದ್ದು ಅನ್ಯಾಯವೂ ಹಾನಿಕಾರಕವೂ ಆಗಿರುವುದರಿಂದ ಈ ಜಿಲ್ಲೆಯ ಭೂಕಂದಾಯ ಪದ್ಧತಿಯ ಕುರಿತು ವಿಚಾರಣೆ ನಡೆಸಿ ಸರಕಾರಕ್ಕೆ ವರದಿಯನ್ನೊಪ್ಪಿಸಲು ಸರಕಾರವು ಕೂಡಲೇ ಕಮಿಟಿಯೊಂದನ್ನು ನೇಮಿಸಬೇಕಾಗಿ ಈ ಪರಿಷತ್ತು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತದೆ.

೫. ದಕ್ಷಿಣ ಕನ್ನಡ ಜಿಲ್ಲೆಯ ಕಾಡುಗಳ ಸಂಬಂಧವಾದ ಸರಕಾರದ ಧೋರಣೆಯು ಅಸಹನೀಯವಾಗುತ್ತಿದ್ದು ಅನೇಕ ವೇಳೆ ಜನಪ್ರತಿನಿಧಿಗಳು ಈ ಧೋರಣೆಯನ್ನು ಬದಲಾಯಿಸಲೆತ್ನಿಸಿದರೂ ಯಶಸ್ವಿಯಾಗದೆ, ಸರಕಾರವು ತನ್ನ ಧೋರಣೆಯನ್ನು ಒಂದಿಷ್ಟಾದರೂ ಬದಲಾಯಿಸದೆ ಜನತೆಯ ಸಂಕಷ್ಟಗಳು ದಿನೇ ದಿನೇ ತೀವ್ರವಾಗುತ್ತಿರುವುದರಿಂದ ಸದ್ರಿ ಸಂಕಷ್ಟಗಳ ನಿವಾರಣೆಯ ಕುರಿತು ಸರಕಾರವು ಕೂಡಲೇ ತಕ್ಕ ಏರ್ಪಾಡು ಮಾಡಬೇಕಾಗಿ ಈ ಪರಿಷತ್ತು ಸರಕಾರವನ್ನು ಒತ್ತಾಯಪಡಿಸುತ್ತದೆ.

೬. ಕರ್ನಾಟಕ ಪ್ರಾಂತರಚನೆಯಾಗದೆ ಕನ್ನಡಿಗರ ಯಾವ ರೀತಿಯ ಅಭಿವೃದ್ಧಿಯೂ ಅಸಾಧ್ಯವಾಗಿರುವುದರಿಂದ ಕೂಡಲೇ ಕರ್ನಾಟಕ ಪ್ರಾಂತವು ರಚಿಸಲ್ಪಡುವಂತೆ ಮದ್ರಾಸು ಸರಕಾರವು ತಕ್ಕ ಕಾರ್ಯ ಕೈಕೊಳ್ಳಬೇಕಾಗಿ ಈ ಪರಿಷತ್ತು ವಿನಂತಿ ಮಾಡಿಕೊಳ್ಳುತ್ತದೆ.

೭. ಅಳಿಯ ಸಂತಾನ ಸಮಾಜಗಳಲ್ಲಿ ರೂಢಿಯಲ್ಲಿರುವ ವರದಕ್ಷಿಣೆ ಪದ್ಧತಿಯು ಸಮಾಜದ ಆರ್ಥಿಕ ದುಸ್ಥಿತಿಗೆ ಕಾರಣವಾಗಿ ಸಮಾಜದಲ್ಲಿ ದುಷ್ಪರಿಣಾಮವನ್ನುಂಟುಮಾಡಿರುವುದರಿಂದ ಅದನ್ನು ನಿಷೇಧಿಸಲು ಕಾನೂನೊಂದನ್ನು ಮದ್ರಾಸು ಸರಕಾರವು ತರಬೇಕಾಗಿ ಈ ಪರಿಷತ್ತು ಕೇಳಿಕೊಳ್ಳುತ್ತದೆ.

ಕೊನೆಯಲ್ಲಿ ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ಈ ಪರಿಷತ್ತಿನ ಪವಿತ್ರ ಉದ್ದೇಶವು ಯಶಸ್ವಿಯಾಗುವಂತೆ ಸಂಬಂಧಪಟ್ಟವರು ಶ್ರದ್ಧೆಯಿಂದ ಸಾಧಿಸಿ ಮುನ್ನಡೆಸಲೆಂದು ಕೋರಿದರು. ಅನಂತರ ಕೆ. ಕೆ. ಶೆಟ್ಟಿರು ಧನ್ಯವಾದವನ್ನರ್ಪಿಸಿದರು.

ರಾತ್ರಿ ೧೦ ಗಂಟೆಗೆ 'ಸುಧನ್ವ ಕಾಳಗ' ವೆಂಬ ಯಕ್ಷಗಾನ ಪ್ರಸಂಗವು ಇತ್ತು. ಶ್ರೀಗಳಾದ ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳು, ಅರ್ಕುಳ ಸುಬ್ರಾಯಾಚಾರಿ, ಎನ್. ಎಸ್. ಕಿಲ್ಲೆಯವರು, ಎಲ್. ಎಚ್. ಒಡೆಯರ್, ರಾಮಕೃಷ್ಣ ಶಾಸ್ತ್ರಿಗಳೇ ಮೊದಲಾದ ಶ್ರೇಷ್ಠ ಅರ್ಥಗಾರರು ಭಾಗವಹಿಸಿದ್ದರು. ಭಾಗವತರು ಶ್ರೀ. ಪೈಂದ ಷ್ಣವರು, ಮೃದಂಗವಾದಕರು ಕದ್ರಿ ಕಿಟ್ಟಣ್ಣನವರು. ಸಭಿಕರು ತುಂಬಾ ನೆರೆದಿದ್ದರು.

ಕಾರ್ಕಳ—ಕಾರ್ಕಳ ಬೋರ್ಡ್ ಹೈಸ್ಕೂಲಿನ ಹಿಂದೀ ಅಧ್ಯಾಪಕರಾದ ಶ್ರೀ ಕಟೀಲು ಗಣಪತಿ ರಾವ್ ಶರ್ಮ, 'ವಿಶಾರದ' ಇವರು, ಕಳೆದ ತಿಂಗಳಲ್ಲಿ ಜರಗಿದ ಮದ್ರಾಸ್ ಯುನಿವರ್ಸಿಟಿಯ 'ಹಿಂದೀ ವಿದ್ವಾನ್' ಪರೀಕ್ಷೆಯಲ್ಲಿ ಸೆಕೆಂಡ್ ಕ್ಲಾಸಿನಲ್ಲಿ ಉತ್ತೀರ್ಣರಾಗಿರುವುದು ಸಂತೋಷದ ಸುದ್ದಿಯಾಗಿದೆ.

ಶಿದಿಯೂರು—ಇಲ್ಲಿಯ ಮೊಗವೀರ ತರುಣರಾದ ಸಂಕೇಶದವರ ನೇತೃತ್ವದಲ್ಲಿ ತಾ. 16-5-39 ರಿಂದ ಮೊದಲ್ಗೊಂಡು ತಾ. 22-5-39 ವರೆಗೆ ಶ್ರೀರಾಮ ಭಜನಾ ಸಪ್ತಾಹವು ಅತ್ಯಂತ ವಿಜೃಂಭಣೆಯಿಂದ ಜರಗಿತು. ಈ ಕಾರ್ಯವು ಸಾಂಗವಾಗಿಯೂ ಯಶಸ್ವಿಯಾಗಿಯೂ ಕೊನೆಗೊಳ್ಳುವಂತೆ ತನುಮನಧನಾದಿ ಸಕಲ ವಿಧದಿಂದಲೂ ನೆರವಾದ ಸಕಲ ಮಹಾಶಯರಿಗೂ ಇತರ ಸ್ವಜಾತಿ ಬಾಂಧವರಿಗೂ ಕೂಡ ಸದರಿ ಸಂಕೇಶ ಯುವಕರು ಈ ಮೂಲಕ ತಮ್ಮ ಆಭಾರ ಮನ್ನಣೆಯನ್ನು ಸೂಚಿಸುವುದಲ್ಲದೆ ತಮ್ಮೆಲ್ಲರ ಆಶೀರ್ವಚನವನ್ನು ಬಯಸುತ್ತಾರೆ.

ಇನ್ನಂಜೆ ಶ್ರೀ ವಿಷ್ಣುಮೂರ್ತಿ ಗ್ರಾಮಾಭಿವೃದ್ಧಿ ಸಂಘದವರು ಇನ್ನಂಜೆ ಹಿಂದೂ ಶಾಲೆಯ ಆಡಳಿತೆಯನ್ನು ಇತ್ತೀಚೆಗೆ ವಹಿಸಿ ಸದರಿ ಶಾಲೆಯನ್ನು ಹಾಯರ್ ಎಲಿಮೆಂಟರಿ ಶಾಲೆಯನ್ನಾಗಿ ಮಾರ್ಪಡಿಸಲು ನೂತನವಾಗಿ ಕಟ್ಟಿಸಿರುವ ವಿಶಾಲ ಶಾಲಾ ಮಂದಿರದ ಪ್ರವೇಶೋತ್ಸವವು ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ 31-5-39ನೇ ಬುಧವಾರ ಸಾಯಂ 3ರಿಂದ ಜರಗುವುದೆಂದೂ ಅದಕ್ಕೆ ಸರ್ವರಿಗೂ ಸ್ವಾಗತವಿದೆಯೆಂದೂ ಸಂಘದ ಅಧ್ಯಕ್ಷರೂ ಶಾಲಾ ಕರೆಸ್ಪೋಂಡೆಂಟರೂ ಆದ ಶ್ರೀ ಶ್ರೀನಿವಾಸ ಮುತ್ತಣ್ಣಾಯರು ಕೋರುತ್ತಾರೆ.

ಪುಟ ೧೦ ರಿಂದ

ಕಾಗದೆಂದು ಕಾಂಗ್ರೆಸಿನೊಳಗಿದ್ದ ತಿಕ್ಕಾಟದ ತೀವ್ರತೆಯಿಂದ ವಿದಿತವಾಗುತ್ತದೆ. ಸುಭಾಸರ ಮತವನ್ನು ಕಾರ್ಯರೂಪಕ್ಕೆ ಪರಿವರ್ತನಗೊಳಿಸಲು ಕಾಂಗ್ರೆಸಿನ ಹೊಣೆಹೊರುವದೊಂದೇ ಸುಲಭೋಪಾಯ. ಅಂತಹ ಸಂದರ್ಭವು ಶ್ರೀ ಬೋಸರಿಗೆ ಕಲ್ಕತ್ತದಲ್ಲಿ ಒದಗಿಬಂದಿತ್ತು. ಶ್ರೀ ಸುಭಾಸರು ಹೊಣೆ ಹೊರುವ ಅಸಾಧ್ಯವೆಂದು ಮನಗಂಡು ಅದನ್ನು ತ್ಯಜಿಸಿದ್ದರು. ಮೂರತು ಬದು ಹೊಸಪಕ್ಷ ಸ್ಥಾಪಿಸಿಂದಾಗುವ ಕಾರ್ಯವೆಂಬುದಕ್ಕಾಗಿ ಆ ಸಂದರ್ಭವನ್ನು ಬಿಟ್ಟುಕೊಟ್ಟದಲ್ಲ. ವಸ್ತುಸ್ಥಿತಿಯು ಹೀಗಿರುವಾಗ ತನ್ನ ಉಗ್ರಧೋರಣೆಯ ಕಡೆಗೆ ಕಾಂಗ್ರೆಸಿನ ಬಹು ಸಂಖ್ಯಾತರ ಮನ ಒಲಿಸಲು ಸುಭಾಸರು ಪೋಷಕವ್ಯಾಪೀ ಪ್ರಚಾರ ಕಾರ್ಯವನ್ನು ಕೈಕೊಳ್ಳಬೇಕಿತ್ತು; ಜನಸಾಮಾನ್ಯರಿಗೆ ತನ್ನ ಧೋರಣೆಯನ್ನು ಮನದಟ್ಟು ಮಾಡಿ ಅವರ ಬೆಂಬಲ ಪಡೆಯಬೇಕಿತ್ತು. ಬೋಸರ ವಿರೋಧವು ವ್ಯಾಪಕ ಬುದ್ಧಿಯಿಂದುತ್ಪನ್ನವೆಂದಾದರೆ ಅವರ ಮುಂದಿರಬೇಕಾಗಿರುವ ಕಾರ್ಯಕ್ರಮದ ರೀತಿ ಹೀಗೆ. ಆದರೆ ಅವರು ಬೇರೆಯೇ ಪಕ್ಷವನ್ನು ಸ್ಥಾಪಿಸಲು ಹೊರಟಿರುವದರಿಂದ ಪರೋಕ್ಷ ವಿರೋಧವೆಂಬ ಅಭಿಪ್ರಾಯ ಬರುವಂತಾಗಿದೆ. ಕಾಂಗ್ರೆಸಿನ ಸದ್ಯ ಸ್ಥಿತಿಯಲ್ಲಿ ಇಂತಹ ಒಡಕು ಒಳ್ಳೆಲ್ಲ. ಪ್ರತ್ಯೇಕ ಪಕ್ಷಸ್ಥಾಪನೆಯಿಂದಾಗಿ ಹಲವು ಅನುಕೂಲತೆಗಳನ್ನು ಕಳೆದುಕೊಳ್ಳಬೇಕಾಗಿಬಂದು ಇದರಿಂದ ಬೋಸರ ಕಡೆಗೆ ಆಶಾಪೂರ್ಣ ದೃಷ್ಟಿಯಿಂದ ನೋಡುತ್ತಿದ್ದವರೂ ನಿರಾಶೆಹೊಂದುವಂತಾಗಿದೆ.

The Govornmont Trades School, Mangalore.

Applications are invited for free admission to the two years 'Wood workers' Course or five years 'Mechanics' Course of the Government Trades School, Mangalore. The next session commences on the 14th June 1939. Copies of Prospectus, forms of application and other particulars may be obtained from the Superintendent. Applications which must be in the prescribed form, should be sent so as to reach him not later than 12th June 1939.

ಉಡುಪಿ

ಬ್ಯಾರಿಸ್ಟರ್ ಎ. ಕೆ. ಪಿಳ್ಳೆಯವರ ಭಾಷಣ—ಸ್ಥಳೀಯ ಶ್ರೀರಾಮ ಕೃಷ್ಣ ಥಿಯೇಟರಿನಲ್ಲಿ ಶ್ರೀ ಪಿ. ಎ. ಪೈಗಳವರ ಅಧ್ಯಕ್ಷತೆಯಲ್ಲಿ ಬ್ಯಾರಿಸ್ಟರ್ ಎ. ಕೆ. ಪಿಳ್ಳೆಯವರು 'ರಡಿಕಲ್ ಕಾಂಗ್ರೆಸ್ ಮೆನ್' ಎಂಬುದರ ಕುರಿತು ಭಾಷಣವಿತ್ತರು. ಭಾಷಣದಲ್ಲಿ ಕಾಂಗ್ರೆಸಿನ ಹಿಂದಿನ ಚರಿತ್ರೆಯನ್ನು ವಿವರಿಸಿ ಕಾಂಗ್ರೆಸ್ ಮುಖಂಡರು ಈಗ ತಾನೆ ಯಾವ ಸ್ಥಿತಿಯಲ್ಲಿ ಸ್ವಾತಂತ್ರ್ಯ ಸಂಪಾದನೆ ಮಾರ್ಗವನ್ನು ಅನುಸರಿಸುತ್ತಿದ್ದಾರೆ, ಇದರ ಫಲವಾಗಿ ಕಾಂಗ್ರೆಸಿನೊಳಗೇನೇ ಹೊಸ ಸಂಗಡಗಳ ಏರ್ಪಾಡೆ ಹೇಗಾಯಿತು, ಇವುಗಳ ಪೈಕಿ ರಡಿಕಲ್ ಕಾಂಗ್ರೆಸ್‌ಮೆನ್ ಎಂಬುದು ಅವರ ಗುರಿಯೇನಿದ್ದರೂ ಏನು ಎಂಬಿತ್ಯಾದಿ ವಿಷಯಗಳನ್ನು ಕುರಿತು ವಿವರಿಸಿದರು. ಶ್ರೀ. ಕೆ. ಸರ್ವೋತ್ತಮ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ತಾಲೂಕು ಬೋರ್ಡ್ ಶಾಲಾ ಮಾಸ್ತರುಗಳ ಮಹಾಸಭೆಯು ತಾ 20-5-39ರಲ್ಲಿ ಮಡಭಾಂಡೇಶ್ವರ ಶಾಲಾ ಹಾಲಿನಲ್ಲಿ ಡಾಕ್ಟರ್ ನಿಟಿಲ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸು ಸರಕಾರದ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ ಎ. ಬಿ. ಶೆಟ್ಟರು ಹಾಜರಿದ್ದರು.

ಉಡುಪಿ ತಾಲೂಕಿನ ಮಾಸ್ತರರು ಒಟ್ಟುಗೂಡಿ ಸಂಘ ಸ್ಥಾಪಿಸಿದರು ಎಂಬುದು ಸಂತೋಷದ ವಿಷಯ. ಹಲವಾರು ತೊಡಕುಗಳ ನಿವಾರಣೆ ಸೊಂದಲು ಸಂಘಟನೆ ಮುಖ್ಯವಾಗಿರಬೇಕಾದುದು, ಶಾಲಾ ಬಾಲಕರ ಆರೋಗ್ಯದ ಕಡೆಗೂ ಹೆಚ್ಚಿನ ಗಮನವೀಯಬೇಕು, ಮಕ್ಕಳು ದೃಢಕಾಯರಾಗಿರುವಂತೆ ನೋಡುವುದು ಉಪಾಧ್ಯಾಯರ ಅತ್ಯಂತ ಕರ್ತವ್ಯವೆಂದು ಶ್ರೀ ಎ. ಬಿ. ಶೆಟ್ಟರು ಹೇಳಿದರು.

ಶಾಲಾ ಉಪಾಧ್ಯಾಯರ ಸಂಬಳದ ಕಡಿತದ ಆವಶ್ಯಕತೆಯ ಕುರಿತು ಡಾ! ಸೆಟ್ಟರು ಉದಾಹರಿಸುತ್ತಾ, ಜಿಲ್ಲಾ ಬೋರ್ಡಿನ ಆರ್ಥಿಕ ಸ್ಥಿತಿಯನ್ನು ಸೂಚಿಸಿದರು. ಅನಿವಾರ್ಯ ಸಂದರ್ಭದಲ್ಲಿ ಸಂಬಳದಲ್ಲಿ ಕಡಿತವಾಡಬೇಕಾಯಿತೆಂದು ಸಕಾರಣಗಳನ್ನು ಕೊಟ್ಟು ವಿವರಿಸಿ ಅದ ನ್ಯಾಯವೆಂಬುದನ್ನು ಮನದಟ್ಟಾಗುವಂತೆ ಹೇಳಿದರು.

ಕಾರಣವಿಲ್ಲದೆ ಟ್ರಾನ್ಸ್‌ಫರ್ ಮಾಡಲಾಗುವುದಿಲ್ಲವೆಂದೂ ತನ್ನಿಂದಾದ ಮಟ್ಟಿಗೆ ಪ್ರಾಥಮಿಕ ವಿದ್ಯಾಭ್ಯಾಸದ ಅಭಿವೃದ್ಧಿ ಬಗ್ಗೆ ಶ್ರಮಿಸಲು ಪ್ರಯತ್ನಿಸುವೆಂಬುದಾಗಿಯೂ ಭರವಸೆಯಿತ್ತರು.

ಪ್ರಾಥಮಿಕ ಶಾಲಾ ಮಾಸ್ತರುಗಳ ಸಂಘ ಸ್ಥಾಪನೆಯೇ ಮೊದಲಾದ ನಿರ್ಣಯಗಳಾಗಿ ಮಹಾಸಭೆ ಮುಗಿಯಿತು. ಈ ಸಭೆಗೆ ಮಾಸ್ತರರಗಳ ಪೈಕಿ ಅನೇಕರು ಬಾರದಿರಲು ಕಾರಣವೇನೋ ತಿಳಿಯದು.

ಉಷಾ ಕ್ಲಿನಿಕಿನ ಹೊಸ ಶಾಖೆ:—ಡಾ ಯು. ಡಿ. ಕಾಮತ್ (ರಜಿಸ್ಟರ್ಡ್ ಪ್ರಾಕ್ಟಿಷನರ್ಸ್ ಸ್ಟೇಟ್ ಫ್ಯಾಕಲ್ಟಿ ಮುಂಬಯಿ) ಇವರು ಜೂನ 1ನೇ ತಾರೀಕಿನಲ್ಲಿ 84 ವಿನ್ಸನ್ ರೋಡ್, ಜೇಕಬ್ ಸರ್ಕಲ್, ಮುಂಬಯಿ ನಂಬ್ರ 11ರಲ್ಲಿ ಅಲ್ಲಿಯ ಕನ್ನಡ ಬಾಂಧವರ ಅನುಕೂಲತೆಗಾಗಿ ಒಂದು ಹೊಸ ದವಾಖಾನೆಯನ್ನು ತೆರೆಯಲಿರುವರು.

ಹಿಟ್ಲರನ ಗಂಡಾಂತರ ಹೆಚ್ಚುತ್ತಿದೆ.

ಕೈಸರನು ಯುದ್ಧದಲ್ಲಿ ರಾಜ್ಯನಷ್ಟ ಹೊಂದಿದನು. ಆದರೆ ಹಿಟ್ಲರನು ತನ್ನ ಗೊಡ್ಡು ಬೆದರಿಕೆಯಿಂದಲೇ ನಷ್ಟಹೊಂದಿದ ರಾಜ್ಯಕ್ಕಿಂತ ಹೆಚ್ಚು ಗಳಿಸಿದ. ಈಗ ಅವನಿಗೆ ಅರಿವು ಬಂದಿದೆ. ತಾನಿನ್ನು ಈ ತನ್ನ ಬುದ್ಧಿವಂತಿಕೆಯಿಂದಲೇ ತನ್ನ ಶಕ್ತಿಪ್ರಭಾವವನ್ನು ಕಾಪಾಡಿಕೊಳ್ಳಲು ಸಾಧ್ಯವಿಲ್ಲವೆಂದು ಅವನು ಚೆನ್ನಾಗಿ ಬಲ್ಲನು. ಆದರೆ ಅವನೆಣಿಕೆಯಂತೆ ಜರ್ಮನರ ಪ್ರತಾಪವು ಜಗತ್ತಿಗೆ ಅಖಂಡ ಸಹರಿಸುವ ತನಕ, ರಷ್ಯದ ಗಡಿಯಲ್ಲಿ ತನ್ನ ಸೇನೆ ಮುಂದೆ ದಿಟ್ಟಿಸುವ ತನಕ, ಜರ್ಮನಿಯ ಆರ್ಥಿಕಶಕ್ತಿಯು ಜಗತ್ತಿನಲ್ಲಿ ಪ್ರಭಾವ ಬೀರುವ ತನಕ, ಅವನು ಸುಮ್ಮನಿರಲಾರನು

ಇನ್ಕಮ್ ಟೇಕ್ಸ್

ನೋಟೀಸು

1-4-'39ರಿಂದ ಇನ್ಕಮ್ ಟೇಕ್ಸ್ ಕಾಯಿದೆಯಲ್ಲಿ ಅನೇಕ ವ್ಯತ್ಯಾಸಗಳಾಗಿವೆ. ನೀವು ಕೊಡುವ ಟೇಕ್ಸ್ ನಿಮ್ಮ ಉತ್ಪತ್ತಿಗೆ ಮಿಕ್ಕಿದ್ದಿದ್ದು ನಿಮಗೆ ಆ ಬಗ್ಗೆ ಅಸಮಾಧಾನವಿದ್ದರೆ ಕೆಳಗಿನ ವಿಳಾಸಕ್ಕೆ ಬರೆದು ತಕ್ಕ ಅನುಭವವನ್ನು ಪಡಕೊಂಡು ನಿಮ್ಮ ಟೇಕ್ಸನ್ನು ಕಡಿಮೆಮಾಡಿಕೊಳ್ಳಬಹುದು. ಸಂದರ್ಭಾನುಸಾರ ನೀವು ಟೇಕ್ಸ್ ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು.

S S. Puranik
Govt-recognised
Income-Tax Practiti ner
AUDITOR
P. O. Byndoor

THE
PREMIER BANK
OF INDIA, LIMITED.
Head Office: MADRAS.
Branches:
MADURA & NELLORE.
CHAIRMAN
Dr. U. L. Narayana Rao.
'Bhujanga Nivas' Madras.
FIXED DEPOSITS
are now received at the following
Rates:
For 6Months at 3½% P. A.
12Months at 4½% P. A.
24Months at 5% P. A.
(Interest Paid Half-yearly.)
S. V. Rau D Com.,
Managing Director

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತು ನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ವಿಶೇಷ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು, ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿ ಒಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತು ಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧತೊಲೆ ಸೀಸೆ 1ಕ್ಕೆ ರೂ. 5—0—0

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಬರೆಯಿರಿ.

ಆತಂಕನಿಗ್ರಹ ಫಾರ್ಮಸಿ, ೬೪
ಚಿಕ್ಕಪೇಟೆ ಚಾವಕ, ಬೆಂಗಳೂರು ಸಿಟಿ.

WANTED District and Taluka Organisers in Districts and Taluks of Karnataka on a monthly salary of Rs. 50/- and Rs. 20/-. Special facilities for initial business. Only influential and educated Organisers who can guarantee Rs. 50,000/- and Rs. 25,000/- per year need apply: Padubiuri Bros., Bombay 8.

ಬೊಂಬಾಯಿ

(ಸ್ವಂತ ಬಾತ್ಮೀದಾರರಿಂದ) 19-5-1939

ಕೋಂಗ್ರೆಸಿನಲ್ಲಿ ನೂತನ ಕಾನೂನು

ಕೋಂಗ್ರೆಸಿನಲ್ಲಿ ಇವತ್ತಿಗೆ ಸೇರಿಕೊಳ್ಳುತ್ತಿರುವ 'ಬೋಗಸ್' ಸದಸ್ಯತನಗಳನ್ನು ಸಂಪೂರ್ಣವಾಗಿ ನಿರ್ನಾಮಗೊಳಿಸಬೇಕೆಂಬ ನೆವನವನ್ನು ಹಿಡಿದುಕೊಂಡು ಮುಂಬಯಿ ಪ್ರಾಂತೀಯ ಕೋಂಗ್ರೆಸ್ ಕಮಿಟಿಯ ಹಲವು ಮಂದಿ ಸದಸ್ಯರು ಅಂದರೆ ಈಗ ಅಧಿಕಾರದಲ್ಲಿದ್ದುಕೊಂಡು ತಮ್ಮ ಏಕಸ್ವಾಧಿಪತ್ಯವನ್ನು ನಡೆಸುತ್ತಿರುವ ಶ್ರೀಗಳಾದ ಭೂಲಾಭಾಯಿ ಮತ್ತು ಕೆ. ಎಫ್. ನಿಮನ ಯವರು, ಮುಂಬಯಿ ನಗರದಲ್ಲಿಯ ಕೋಂಗ್ರೆಸ್ ಸದಸ್ಯತನವನ್ನು ತಮ್ಮ ಅಂಕೆಯೊಳಗೆ ಇಟ್ಟುಕೊಳ್ಳಬೇಕೆಂಬ ಅಭಿಪ್ರಾಯದಿಂದ ನಿನ್ನೆ ಜರಗಿದ ಬಿ. ಪಿ. ಸಿ. ಸಿಯ ಸಭೆಯಲ್ಲಿ ಹಲವು ಅನಾವಶ್ಯಕ ಠರಾವುಗಳನ್ನು ಜಾರಿಮಾಡಿದರು. ಅವು ಯಾವುವೆಂದರೆ ಕೋಂಗ್ರೆಸಿಗೆ ಸದಸ್ಯರಾಗಲಿಚ್ಛಿಸುವವರು ಮೊದಲಾಗಿ ಬಿ. ಪಿ. ಸಿ. ಸಿಗೆ ಒಂದು ಪತ್ರ ಬರೆದು ಅನಂತರ ಈ ಆಫೀಸಿಗೆ ಅಥವಾ ಇವರು ಮುಖ್ಯ ಸ್ಥಳಗಳಲ್ಲಿ ಸೇರಿಸಿದ ಆಫೀಸುಗಳಲ್ಲಿ ತಮ್ಮ ಹೆಸರನ್ನು ಕೊಡಬೇಕು. ಇದರ ಪ್ರತಿಫಲವಾಗಿ ರಶೀದಿಯನ್ನು ಕೊಡದೆ ಬಣ್ಣದ ಕಾರ್ಡೊಂದನ್ನು ಕೊಡುವರು. ಚುನಾವಣೆಯ ದಿವಸ ಈ ಕಾರ್ಡನ್ನು ತೋರಿಸಿದರೆ ಮಾತ್ರ ಓಟುಕೊಡಬಹುದು. ಈ ಕಾರ್ಡು ಬಿಸಾಡಿಹೋದಲ್ಲಿ ತಿರಿಗೊಮ್ಮೆ ಬಿ. ಪಿ. ಸಿ. ಸಿಗೆ ಬರೆದರೆ ಇವರಿಗೆ ಕುಶಿಕಂಡಲ್ಲಿ, ತಿರಿಗೊಂದು ಕಾರ್ಡನ್ನು ಸದಸ್ಯನಿಗೆ ಕೊಡಬಹುದು. ಇಲ್ಲದಿದ್ದರೆ ಇವನ ಓಟುಕೊಡುವ ಹಕ್ಕು ಹೋದಂತೆಯೇ ಸರಿ.

ಶ್ರೀಗಳಾದ ನರಿಮನ್ ಮತ್ತು ಶೆಟ್ಟಿ ಮೊದಲಾದವರೆಲ್ಲ ಡಿಸ್ಟ್ರಿಕ್ಟ್ ಆಫೀಸುಗಳಿಗೆ ಸಂಪೂರ್ಣ ಹಕ್ಕು ಕೊಡಬೇಕು ಯಾಕೆಂದರೆ ಜನತೆಯ ಸಂಪೂರ್ಣ ಪರಿಚಯವಿದ್ದವರು ಇವರೇ ಎಂದು ತಂದ ಠರಾವುಗಳೆಲ್ಲಾ ಬಿದ್ದುಹೋದವು. ಮಹಾತ್ಮಾಜಿಯವರಿಗೆ ಇವುಗಳೆಲ್ಲ ನ್ಯಾಯವಾಗಿ ಕಂಡ ಬರುವವೇ?

ಸ್ತ್ರೀಯರ ಸಾಹಸ— ಕೋಂಗ್ರೆಸ್ ರಾಜ್ಯವೆಂದು ಅಭಿಮಾನದಿಂದ ಮೆರೆಯುತ್ತಿರುವ ಮುಂಬಯಿ ನಗರದಲ್ಲಿ ಕಾಮಗಾರರು ತಮ್ಮ ಹಕ್ಕಿಗಾಗಿ ಹೋರಾಡುತ್ತಿರುವಾಗ ಪೋಲೀಸರ ಲಾಠಿ ಮಾತ್ರವಲ್ಲದೆ (Tear gas) ಕೂಡ ತಯಾರಾಗಿತ್ತು. ಮೊನ್ನೆ 11ನೆಯ ತಾರೀಕಿಗೆ ಪಯನಿಯರ್ ಮಿಲ್ಲಿನಲ್ಲಿ ಜರಗಿದ ಪ್ರಚಂಡ ಗಲಿಬಿಲಿಯಲ್ಲಿ 3,000 ಸ್ತ್ರೀಯರು

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಶೇಂದಿ ಅಂಗಡಿಗಳು ಮುಚ್ಚಲಾಗುತ್ತ— ಮೈಸೂರು, ಭದ್ರಾವತಿ, ದಾವಣಗೆರೆ ಮತ್ತು ಕೋಲಾರ ಚಿನ್ನದಗಣಿ ಪ್ರಾಂತ್ಯದಲ್ಲಿ, ಕೂಲಿಗಾರರಿಗೆ ಬಟವಾಡೆ ಕೊಡುವ ದಿನ, ಅಲ್ಲಿರುವ ಶೇಂದಿ ಅಂಗಡಿಗಳನ್ನು ಮುಚ್ಚಬೇಕೆಂದು ಸರ್ಕಾರದವರ ಅಜ್ಞೆಯಾಗಿದೆ.

ಕ್ಷೌರಿಕರ ಮುಷ್ಕರ— ಬೆಂಗಳೂರಿನಲ್ಲಿರುವ ಶೇವಿಂಗ್ ಸೆಲೂನುಗಳ ಮೇಲೆ, ವರ್ಷ ಒಂದಕ್ಕೆ ರೂ. 1 ಲೈಸೆನ್ಸ್ ಫಿ ಹಾಕಿರುವುದರಿಂದ, ಇದು ಜಾಸ್ತಿಯೆಂದು, ಅಲ್ಲಿಯ ಕ್ಷೌರಿಕರೆಲ್ಲರೂ ಮುಷ್ಕರ ಹಿಡಿದು ಒಂದು ಶೇವಿಂಗ್ ಸೆಲೂನ್ ಬಾಗಿಲನ್ನಾದರೂ ತೆರೆದಿರಲಿಲ್ಲ. ಕ್ಷೌರಿಕರೆಲ್ಲರೂ ದಿವಾನರ ಬಳಿ ಹೋಗಿ ಇದನ್ನು ತಿಳಿಸಿದರಲ್ಲದೆ, ಒಂದು ಸಭೆ ನಡೆಸಿ, ಬೆಂಗಳೂರು ಮ್ಯುನಿಸಿಪಲ್ ಅಧ್ಯಕ್ಷರಲ್ಲಿ

ಇದರಲ್ಲಿ ಪಂಚ್ಯಾಯಿತ್ರವನ್ನು ವಹಿಸ ಮುಲ್ಲ ಗೇಟಿನಲ್ಲಿ ನಿಂತು. ಪಿಕೆಟಿಂಗ್ ಮಾಡುತ್ತಿದ್ದರು. ಪೋಲೀಸ್ ಕಮಿಶನರ್ ಸುಪರಿಂಟೆಂಡೆಂಟ್ ಮತ್ತು ಇನ್ನಿತರ ನೂರಾರು ಪೋಲೀಸರು ಲಾಠಿ ಮತ್ತು 'ಗೇಸ' ಸಮೇತ ಸಹಾಯಕ್ಕೆ ಸಿದ್ಧರಾಗಿರುವಂತೆ ತಯಾರಿದ್ದರು. ಮಾತ್ರವಲ್ಲ (Black legs)ನ್ನು ಲಾರಿಗಳಲ್ಲಿ ಹಿಡಿದು ತಂದು ಮಿಲ್ಲಿನೊಳಗೆ ಕಳುಹಿಸಬೇಕೆಂದು ಶತಪ್ರಯತ್ನ ಮಾಡಿದರೂ ಜಯ ಹೊಂದಲಿಲ್ಲ. ಕೊನೆಗೆ 15 ನಿಮಿಷದೊಳಗೆ ದಾರಿಬಿಟ್ಟು ಕೊಡದಿದ್ದಲ್ಲಿ (Tear-gas)ನ್ನು ಬಿಡುತ್ತೇನೆಂದು ಹೇಳಿದರು. ಕೊನೆಗೆ ಆ (Black legs)ರೇ ತಮ್ಮ ಬಂಧುಗಳಲ್ಲಿ ದಯೆ ಹುಟ್ಟಿದವರಾಗಿ ತಾವು ಮಿಲ್ಲಿನೊಳಗೆ ಹೋಗುವುದಿಲ್ಲೆಂದು ಹೇಳಿ ಹಿಂದಿರುಗಿದರು. ಅಂತೂ ಕಾಮಗಾರರಿಗೆ ಜಯವಾಯಿತು.

ಪೋಲೀಸರು "Teargas"ನ್ನು ಬಿಡಲು ತಯಾರಾಗಿರಲು ಇದನ್ನು ನಿಲ್ಲಿಸಬೇಕೆಂದು, ಕಾಮಗಾರ ಮುಖ್ಯಸ್ಥರಾದ ಶ್ರೀ. ದಾಂಗೆಯವರು ಆನರೆಬಲ್ ಮುನ್ಶಿಯವರಿಗೆ ಟೆಲಿಫೋನು ಮಾಡಲು, ಈ ಮಹಾಶಯರು ಸುಖನಿದ್ರೆಯಲ್ಲಿರುವವರು, ಇವರನ್ನು ಎಬ್ಬಿಸಲು ಸಾಧ್ಯವಿಲ್ಲೆಂಬ ಉತ್ತರಬಂತು. ಇದೂ ಒಂದು ತಮಾಷೆ!

ತಮ್ಮ ಅಹವಾಲನ್ನು ತಿಳಿಸಲು ಅಧ್ಯಕ್ಷರು ಇದನ್ನು ಕೂಲಂಕಷವಾಗಿ ಚರ್ಚಿಸಿ ಮತ್ತು ತನಿಖೆ ನಡೆಸುವವರೆಗೆ ಕ್ಷೌರಿಕರೆಲ್ಲರೂ ಹಿಂತಿರುಗಿದರೆಂದು ಹೇಳಲಾಗಿದೆ.

ಪ್ರತಿಬಂಧಕಾಜ್ಞೆಗಳು— ಮೈಸೂರು ಮೋಟಾರು ಟ್ರಾನ್ಸ್‌ಪೋರ್ಟ್ ವರ್ಕರ್ಸಿನ ಕಾರ್ಯದರ್ಶಿ ಶ್ರೀ| ಎಸ್. ರಾಮಸ್ವಾಮಿಯವರು ಮೈಸೂರಿಗೆ ಬರ ಕೂಡದೆಂದು ಮೈ| ಜಿ| ಕಾರಿಯು ಒಂದು ಅಜ್ಞೆ ಹೊರಡಿಸಿದ್ದ ಸುದ್ದಿಯು "ನವಯುಗ"ದಲ್ಲಿ ವರದಿಯಾಗಿದೆ.

ಮೈಸೂರು ಜನಜಾಗೃತಿ ಸಂಘದಾಶ್ರಯದಲ್ಲಿ ಮೈಸೂರು ರೈಲ್ವೆ ಕೆಲಸಗಾರರ ಸಭೆಯೊಂದು ಇವತ್ತಿನ ದಿನ ಶ್ರೀರಂಗಪಟ್ಟಣದಲ್ಲಿ ಸೇರುವುದೆಂದೂ, ಮೈಸೂರಿನಿಂದ ಕೆಲಸಗಾರರೂ ಇತರರು ಬಾವುಟ ಮತ್ತು ಫಲಕಾರ್ಡಿನೊಂದಿಗೆ ಶ್ರೀರಂಗಪಟ್ಟಣಕ್ಕೆ ಬೆಳಗ್ಗೆ ಮೆರವಣಿಗೆಯಲ್ಲಿ ಹೋಗುವರೆಂದು ನೋಟೀಸು ಹಂಚಲಾಗಿತ್ತು.

ಇದರ ಮೇಲೆ ಮೈಸೂರು ಆಕ್ಟಿಂಗ್ ಜಿಲ್ಲಾಧಿಕಾರಿಗಳಾದ ಶ್ರೀ ರಣಜೋಧ್ ಸಿಂಗರು ಒಂದು ಪ್ರತಿಬಂಧಕಾಜ್ಞೆಯನ್ನು ಜಾರಿಮಾಡಿರುತ್ತಾರೆ. ಇದು ಎರಡು ತಿಂಗಳ ಕಾಲವಿರುತ್ತೆ.

ಒಂದರಲ್ಲಿ ತಿಳಿಸುವುದೇನೆಂದರೆ, ಶ್ರೀಯುತರುಗಳಾದ ರಾಮಸ್ವಾಮಿ, ಎಂ ಬಿ ಶಂಕರ್, ಸವಾಯ್ ಅಶ್ವತ್ಥ್, ಟಿ. ಸುಬ್ಬಣ್ಣ ಮತ್ತು ಎ. ಎನ್. ರಾಜಶೇಖರರುಗಳು ಕ್ರಿ| ಪ್ರೊ| ಕೊ| 144ನೇ ಸೆ| ಪ್ರಕಾರ ಈ ದಿನದಿಂದ 2 ತಿಂಗಳು ಮೈಸೂರು ಜಿಲ್ಲೆಯಲ್ಲಿ ಮಾತನಾಡಕೂಡದು.

ಮತ್ತೊಂದರಲ್ಲಿರುವುದೇನೆಂದರೆ ಪೊ| ಪೆ| 39ನೇ ಸೆ| ಪ್ರಕಾರ ಮೆರವಣಿಗೆ ಮುಂತಾದವುಗಳನ್ನು ಇಂದಿನಿಂದ 2ತಿಂಗಳು ನಡೆಸಕೂಡದೆಂದು.

ಈ ಸಮಾಚಾರವು ಇಲ್ಲಿ ಬಹಳ ಕೋಲಾಹಲಕರವಾಗಿದೆ.

ಪುಟ ೪ರಿಂದ

ಕಾಂಗ್ರೆಸು ಮತ್ತು ಆಶ್ರಿತಸಂಸ್ಥಾನಗಳು

ತ್ರಿಪುರಿ ಕಾಂಗ್ರೆಸ್ಸಿನಲ್ಲಿ ನಡೆದ ರಾಜಕೀಯ ಪರಿಷತ್ತಿನಲ್ಲಿ ಸುಭಾಷರು ಭಾಷಣವೇದಿಕೆಯನ್ನು ಹತ್ತಿದ್ದರು. ಜನಸ್ತೋಮವು 20 ಸಾವಿರಕ್ಕೆ ಮೀರಿದ್ದಿತು. ಭೋಸರು ತಮ್ಮ ಭಾಷಣದಲ್ಲಿ ಇತ್ತೀಚಿಯ ಕಾಂಗ್ರೆಸಿನ ವಿಚಾರ ಮತ್ತು ಅಭಿಪ್ರಾಯ ಭಿನ್ನತೆಯ ಕುರಿತು ಪ್ರಸ್ತಾಪಿಸುತ್ತಾ ಹೀಗೆಂದರು:- ಮಹಾಸಂಸ್ಥೆಗಳಲ್ಲಿ ಒಡಕು ತೋರುವುದು ಹೊಸತಲ್ಲ ಆದರೆ, ಇಂಥಾ ವಿಭಾಗದಿಂದ ಹಾನಿಯಾಗುವುದರ ಬದಲಾಗಿ ದೇಶದ ಹಿತಕಾರ್ಯಕ್ಕೆ ಅನುಕೂಲತೆ ಹೆಚ್ಚು. ಯಾಕೆಂದರೆ ಹೆಚ್ಚು ಮುಂಬರಿಯುವ ತೀವ್ರಗಾಮಿ ಪಂಗಡವು ಮುಂದಾಗಿ ನಿರಾತಂಕವಾಗಿ ಸಾಗಬಲ್ಲದು.

ನಾನು ಕಳೆದಬಾರಿ ಎ.ಐ ಸಿ ಸಿ. ಮೀಟಿಂಗಿನಲ್ಲಿ ತಿಳಿಸಿದಂತೆ ನಮ್ಮಲ್ಲಿ ಕಾರ್ಯತತ್ಪರತೆ ಬೇಕು. ಕ್ರಿಯಾರಹಿತವಾದ ಒಕ್ಕಟ್ಟಿಲ್ಲ ಬಲಪಂಗಡದವರು ಎಷ್ಟು ಐಕ್ಯಭಾವದಲ್ಲಿದ್ದರೆಂಬುದನ್ನು ನೀವು ಕಲ್ಕತ್ತೆಯಲ್ಲಿ ಕಂಡಿರಬಹುದು. ಇಂಥಾ ಐಕ್ಯತೆಯು ಎರಡು ಪಕ್ಷದಲ್ಲಿಯೂ ಇರಬೇಕು. ಬ್ರಿಟಿಷ್ ಸಂಸ್ಥಾನಗಳಲ್ಲಿ ಮಾತ್ರವಲ್ಲ ಆಶ್ರಿತ ಸಂಸ್ಥಾನಗಳಲ್ಲೂ ಸ್ವಯಂ ಸೇವಕರ ಸೇನಾಂಗವನ್ನು ರಚಿಸುವುದು ಮುಂದಗಾಮಿ ಪಕ್ಷದ ಆಶಯವಿದೆ. ಕಾಂಗ್ರೆಸಿನಲ್ಲಿ ಪಾರ್ಲಿಮೆಂಟರಿ ಸಬ್‌ಕಮಿಟಿಯಿರುವಷ್ಟೆ ಹಾಗೆಯೇ ಕಾಂಗ್ರೆಸಿನೊಳಗೆ ಆಶ್ರಿತ ಸಂಸ್ಥಾನಗಳ ಉಪಸಮಿತಿ (States Sub-committy) ಇರತಕ್ಕದ್ದು ಎಂದರು. ಅಲ್ಲದೆ ಹಲವು ಪ್ರಾಂತಗಳಲ್ಲಿರುವ ಕಾಂಗ್ರೆಸ್ ಮಂತ್ರಿಗಳು ತಮ್ಮ ಚುನಾವಣಾ ಪ್ರತಿಜ್ಞೆಯನ್ನು ಪಾಲಿಸಬೇಕು ಬಡ ನಿರ್ಗತಿಕರ ಏಳಿಗೆಗಾಗಿ ಹೋರಾಟ ನಡೆಸಬೇಕು ...

ಉಷ್ಣಕಾಲದಲ್ಲಿ ತಣ್ಣಗಾದ ಶರ್ಬತ್ತು ಕುಡಿದಾದರೂ ಕ್ಷಣಹೊತ್ತು ಉಷ್ಣಾದಿ ತೃಷೆಯನ್ನು ಪರಿಹರಿಸಿಕೊಳ್ಳಬಹುದು. ಪಂಖ ಯಾ ಬೀಸಣಿಗೆಗಳಿಂದ ಗಾಳಿ ತೆಗೆದುಕೊಂಡು ಕ್ಷಣಹೊತ್ತು ಮೈ ತಣ್ಣಗಿರಿಸಲೂಬಹುದು. ಪರಂತು ಉಷ್ಣತೆಯ ತಾಪದಿಂದ ಶರೀರದಲ್ಲಾಗುತ್ತಿರುವ ದುಷ್ಪರಿಣಾಮಗಳು ಮಾತ್ರ ದೂರವಾಗಲಾರವು.

ಹಾಗಾದರೆ

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಇವರ ಚಂದ್ರನಂತೆ ಶೀತಲವಾದ ಬಹುಗುಣಯುಕ್ತ

ಆಮಲಕೀ ತೈಲವನ್ನು

(Regd Trade Mark) ನಿತ್ಯವೂ ಉಪಯೋಗಿಸಿರಿ. ಇದರಲ್ಲಿ ಆಮಲಕಿಯೇ ಮೊದಲಾದ ಮಂಗಲಕಾರಕ ದ್ರವ್ಯ ಯಾ ಇನ್ನಿತರ ಸುಗಂಧಯುಕ್ತ ಮೂಲಿಕೆಗಳನ್ನು ಸೇರಿಸಿ ವಿಜಾತೀಯ ದ್ರವ್ಯಗಳಿಂದ ಏರ್ಪಡುವ ಮಂದಲ್ಪಟ್ಟ ವಿಶೋಧಿತ ತಿಲತೈಲದಿಂದಲೇ ಶಾಸ್ತ್ರೀಯ ವಿಧಿಯಂತೆ ಪ್ರಸ್ತುತವಾದ ಈ ತೈಲವನ್ನು ನಿತ್ಯವೂ ಉಪಯೋಗಿಸುತ್ತಿದ್ದರೆ ಇದರಲ್ಲಿರುವ ಅಮೋಘವಾದ ಸುಗಂಧ ಗುಣಗಳು ನಿಮ್ಮ ರೋಮರಂಧ್ರದೊಳಗೆ ಪ್ರವೇಶಿಸಿ ನಿಮ್ಮ ರಕ್ತಕ್ಕೆ ತಂಪನ್ನುಂಟುಮಾಡಿ ಚರ್ಮದಲ್ಲಾಗುತ್ತಿರುವ ದುಷ್ಪರಿಣಾಮಗಳನ್ನು ಬೇಗನೆ ಓಡಿಸುತ್ತದೆ ಹಾಗೂ ಶರೀರದಲ್ಲಿಯ ದುರ್ಗಂಧಗಳನ್ನು ಹೋಗಲಾಡಿಸಿ ಕೇಶಮೂಲಗಳು ವೃದ್ಧಿಯಾಗುವದಲ್ಲದೆ ಅಚ್ಚ ಕಪ್ಪಾದ ಕೂದಲುಗಳು ನಿಬಿಡವಾಗಿ ಬೆಳೆದು ನೆರೆತ ಕೂದಲುಗಳು ಸಹ ಕಪ್ಪಾಗಿ ಮುಖಶ್ರೀಯು ಲಾವಣ್ಯಪೂರ್ಣವಾಗುವದು. ಮತ್ತು ಸುಖವಾದ ನಿದ್ರೆ ಹತ್ತುವುದು. ಇಂತಹ ನಿದ್ರೆಯಿಂದ ಸ್ಮೃತಿ, ಮೇಧಾ, ಉತ್ಸಾಹ, ವಿಚಾರಶಕ್ತಿ ಮೊದಲಾದ ಮಾನಸಿಕ ಶಕ್ತಿಗಳು ವಿಕಾಸ ಹೊಂದಿ ಶರೀರಕ್ಕೆ ಆರೋಗ್ಯ ಲಾಭವಾಗುವದು.

5 ತೊಲೆಯ ಸೀಸೆ 1ರ 0-6-0, 10 ತೊಲೆಯ ಸೀಸೆ 1ರ 0-11-0.

ಕಸ್ತೂರಿಯುಕ್ತ ಧನ್ವಂತರೀ ಗುಟಿಕಾ ವಾಯುಮಾತ್ರೆ.

ಬಾಲ, ವೃದ್ಧ, ಸ್ತ್ರೀ-ಪುರುಷ ಯಾ ಗರ್ಭಿಣಿಯರ ಸರ್ವತರದ ಶೂಲೆ, ಕಲೆತಿರುಕು, ಅಜೀರ್ಣ, ಹೊಟ್ಟೆಯುಬ್ಬರಿಕೆ, ಅತಿಸಾರ, ಇವುಗಳಲ್ಲಿ ಅಮೃತವು ಗುಣಕಾರಿಯಾಗಿದೆ. ಬಾಲಕರ ಅಪಸ್ಮಾರ, (ಬಾಲಗ್ರಹ) ಕಫ ಇತ್ಯಾದಿಗಳಲ್ಲಿ ಸಂಗ್ರಾಹ್ಯವಾದ ದಿವ್ಯ ಔಷಧಿಯಾಗಿದೆ.

ಕ್ರಯ: 12ಕ್ಕೆ 0-4-0, 25ಕ್ಕೆ 0-7-0, 50ಕ್ಕೆ 0-13-0, 100ಕ್ಕೆ 1-5-0, 500ಕ್ಕೆ 5-0-0, 1000ಕ್ಕೆ 9-0-0.

5 ಆಣೆ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತದೆ.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್)
ಕುಂದಾಪುರ್, ಪೋಸ್ಟ್ ಬ್ರಹ್ಮಾವರ.

ನಮ್ಮ ಸ್ಟಾಕಿಸ್ಟರು:—

1. **Supply Agency Ltd.**, Udipi, S. K.
2. **Nava Bharata Book Depot. Udipi**, S K.
3. **V. R Prabhu**, The Canara News & Books Agent, Batatawala Mansion; Lalbag, BOMBAY.



ಇಲ್ಲಿಂದಲೇ 52,000ಕ್ಕೂ ಮಿಕ್ಕಿದ ಪಾಲಿಸಿದಾರರ ಸೇವೆ ಸಲ್ಲಿಸುತ್ತಲಿರುವ ಕಂಪೆನಿಯ ಪ್ರಧಾನ ಕಾರ್ಯಾಲಯ.

ಜನರಲ್
ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್

ಸ್ಥಾಪನೆ **1907**ರಲ್ಲಿ

ಪ್ರಧಾನ ಖಚೇರಿ:- ಅಜ್ಮೀರ್.

ಪ್ರಮಾಣದಲ್ಲಿ ಅನುಪಮ ಬೋನಸ್. ಜೀವಾವಧಿ **1000**ಕ್ಕೆ ವರ್ಷ ಒಂದರ **22½**.
ಎಂಡೋಮೆಂಟುಗಳ ಮೇಲೆ ರೂ. **18**ರಂತೆ.

1938

ಸರ್ವಾಭಿವೃದ್ಧಿಯ
ಮತ್ತೊಂದು ವರುಷ.
ಚಾಲ್ತಿ ವ್ಯವಹಾರವು
೩½ ಕೋಟಿಗೂ ಅಧಿಕ.

ಬೆಂಗಳೂರಲ್ಲಿರುವ ಕಂಪೆನಿಯ ಕಟ್ಟಡ

ಮೂಲಗಳು ೯೨
ಲಕ್ಷಕ್ಕೂ ಮಿಕ್ಕಿವೆ.
ಖರ್ಚಿನ ದಾಮಾಶಯ
ಸೇಕಡಾ ೨೭-೬

ಜೀವವಿಮೆಯ ಮತ್ತು ಏಜನ್ಸಿ ಶರತ್ತುಗಳಿಗೆ ದಯಮಾಡಿ ಬರೆಯಿರಿ:—

ಬ್ರಹ್ಮದತ್ತ, ಬಿ.ಎಸ್.ಸಿ.ಎಲ್.ಎಲ್.ಬಿ.ಎಫ್.ಎಸ್.ಎಸ್. (ಲಂಡನ್) ಜನರಲ್ ಮೆನೇಜರ್.



ಬೊಂಬಾಯಿಯಲ್ಲಿರುವ ಕಂಪೆನಿಯ ಅರಮನೆಸದೃಶವಾದ ಕಟ್ಟಡ.

ಅಥವಾ
ಈ ಕೆಳಗಿನ ಆಫೀಸುಗಳಿಗೆ ಬರೆದು
ಮಾಹಿತಿಗಳನ್ನು ಪಡೆಯಿರಿ —
ಔರಂಗಾಬಾದ್, ಬಳ್ಳಾರಿ, ಬೆಜವಾಡ,
ಬೆಂಗಳೂರು, ಹುಬ್ಬಳ್ಳಿ, ಮದರಾಸ್, ಮಧುರೆ,
ರಾಜಮಹೇಂದ್ರಿ, ಸೆಕುಂದರಾಬಾದ್,
ತ್ರಿಚಿನಾಪಳ್ಳಿ



ಶಿಲ್ಪಶಾಸ್ತ್ರ ಬಲ್ಲವನಿಂದ ನಿರ್ಮಿಸಲ್ಪಟ್ಟ ಕಂಪೆನಿಯ ಕಲ್ಕತ್ತದ ಕಟ್ಟಡ

THE GENERAL ASSURANCE SOCIETY, LTD.

ಇನ್ಕಮ್ ಟೇಕ್ಸ್

ನೋಟೀಸು

1-4-'39ರಿಂದ ಇನ್ಕಮ್ ಟೇಕ್ಸ್ ಕಾಯಿದೆಯಲ್ಲಿ ಅನೇಕ ವ್ಯತ್ಯಾಸಗಳಾಗಿವೆ. ನೀವು ಕೊಡುವ ಟೇಕ್ಸ್ ನಿಮ್ಮ ಉತ್ಪತ್ತಿಗೆ ಮಿಕ್ಕಿದ್ದಿದ್ದು ನಿಮಗೆ ಆ ಬಗ್ಗೆ ಅಸಮಾಧಾನವಿದ್ದರೆ ಕೆಳಗಿನ ವಿಳಾಸಕ್ಕೆ ಬರೆದು ತಕ್ಕ ಅನುಭವವನ್ನು ಪಡಕೊಂಡು ನಿಮ್ಮ ಟೇಕ್ಸನ್ನು ಕಡಿಮೆಮಾಡಿಕೊಳ್ಳಬಹುದು. ಸಂದರ್ಭಾನುಸಾರ ನೀವು ಟೇಕ್ಸ್ ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು.

S. S. Puranik

Govt-recognised Income-Tax Practitioner

AUDITOR

P. O. Byndoor

THE

PREMIER BANK OF INDIA, LIMITED.

Head Office: MADRAS.
Branches:
MADURA & NELLORE.

CHAIRMAN

Dr. U. L. Narayana Rao.
'Bhujanga Nivas' Madras.

FIXED DEPOSITS are now received at the following Rates:

For 6 Months at 3½% P. A.
12 Months at 4½% P. A.
24 Months at 5% P. A.
(Interest Paid Half-yearly.)

S. V. Rau D Com.,
Managing Director

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು, ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿಗೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧತೊಲೆ ಸೀಸೆ 1ಕ್ಕೆ ರೂ. 5—0—0

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮುಫತಾಗಿ ಕಳುಹಿಸುವೆವು. ಒಂದು ಕಾರ್ಡ್ ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

WANTED District and Taluk a Organisers in Districts and Taluks of Karnataka on a monthly salary of Rs. 50/- and Rs. 20/-. Special facilities for initial business. Only influential and educated Organisers who can guarantee Rs. 50,000/- and Rs. 25,000/- per year need apply: Padubidri Bros., Bombay 8.

ಬೊಂಬಾಯಿ

(ಸ್ವಂತ ಬಾತ್ಮೀದಾರರಿಂದ) 19-5-1939

ಕಾಂಗ್ರೆಸಿನಲ್ಲಿ ನೂತನ ಕಾನೂನು

ಕಾಂಗ್ರೆಸಿನಲ್ಲಿ ಇಮ್ಮಡಿಗೊಳ್ಳುತ್ತಿರುವ 'ಬೋಗಸ್' ಸದಸ್ಯತನಗಳನ್ನು ಸಂಪೂರ್ಣವಾಗಿ ನಿರ್ನಾಮಗೊಳಿಸಬೇಕೆಂಬ ನೆವಸವನ್ನು ಹಿಡಿದುಕೊಂಡು ಮುಂಬಯಿ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಕೆಲವು ಮಂದಿ ಸದಸ್ಯರು ಅಂದರೆ ಈಗ ಅಧಿಕಾರದಲ್ಲಿದ್ದುಕೊಂಡು ತಮ್ಮ ಚಕ್ರಾಧಿಪತ್ಯವನ್ನು ನಡೆಸುತ್ತಿರುವ ಶ್ರೀಗಳಾದ ಭೂಲಾಭಾಯಿ ಮತ್ತು ಕೆಂಪನಿಯವರು, ಮುಂಬಯಿ ನಗರದಲ್ಲಿಯ ಕಾಂಗ್ರೆಸ್ ಸದಸ್ಯತನವನ್ನು ತಮ್ಮ ಅಂಕೆಯೊಳಗೆ ಇಟ್ಟುಕೊಳ್ಳಬೇಕೆಂಬ ಅಭಿಪ್ರಾಯದಿಂದ ನಿನ್ನೆ ಜರಗಿದ ಬಿ. ಪಿ. ಸಿ. ಸಿಯ ಸಭೆಯಲ್ಲಿ ಹಲವು ಅನಾವಶ್ಯಕ ಠರಾವುಗಳನ್ನು ಜಾರಿಮಾಡಿದರು. ಅವು ಯಾವುವೆಂದರೆ ಕಾಂಗ್ರೆಸಿಗೆ ಸದಸ್ಯರಾಗಬಯಸುವವರು ಮೊದಲಾಗಿ ಬಿ. ಪಿ. ಸಿ. ಸಿಗೆ ಒಂದು ಪತ್ರ ಬರೆದು ಅನಂತರ ಈ ಆಫೀಸಿಗೆ ಅಥವಾ ಇವರು ನಿಯಮಿಸಿದ ಸ್ಥಳಗಳಲ್ಲಿ ನೇಮಿಸಿದ ಆಫೀಸುಗಳಲ್ಲಿ ತಮ್ಮ ಹೆಸರನ್ನು ಕೊಡಬೇಕು. ಇದರ ಪ್ರತಿಫಲವಾಗಿ ರಶೀದಿಯನ್ನು ಕೊಡದೆ ಬಣ್ಣದ ಕಾರ್ಡೊಂದನ್ನು ಕೊಡುವರು. ಚುನಾವಣೆಯ ದಿವಸ ಈ ಕಾರ್ಡನ್ನು ತೋರಿಸಿದರೆ ಮಾತ್ರ ಓಟುಕೊಡಬಹುದು. ಈ ಕಾರ್ಡ ಬಿಸಾಡಿಹೋದಲ್ಲಿ ತಿರಿಗೊಮ್ಮೆ ಬಿ. ಪಿ. ಸಿ. ಸಿಗೆ ಬರೆದರೆ ಇವರಿಗೆ ಉಚಿತಕಂಡಲ್ಲಿ, ತಿರಿಗೊಂದು ಕಾರ್ಡನ್ನು ಸದಸ್ಯನಿಗೆ ಕೊಡಬಹುದು. ಇಲ್ಲದಿದ್ದರೆ ಇವನ ಓಟುಕೊಡುವ ಹಕ್ಕು ಹೋದಂತೆಯೇ ಸರಿ.

ಶ್ರೀಗಳಾದ ನರಿಮನ್ ಮದನ್ ಶೆಟ್ಟಿ ಮೊದಲಾದವರೆಲ್ಲ ಡಿಸ್ಟ್ರಿಕ್ಟ್ ಆಫೀಸುಗಳಿಗೆ ಸಂಪೂರ್ಣ ಹಕ್ಕು ಕೊಡಬೇಕು ಯಾಕೆಂದರೆ ಜನತೆಯ ಸಂಪೂರ್ಣ ಪರಿಚಯವಿದ್ದವರು ಇವರೇ ಎಂದು ಹೇಳಿದ ಠರಾವುಗಳೆಲ್ಲಾ ಬಿದ್ದುಹೋದವು. ಮಹಾತ್ಮಾಜಿಯವರಿಗೆ ಇವುಗಳೆಲ್ಲ ನ್ಯಾಯವಾಗಿ ಕಂಡು ಬರುವವೇ?

ಸ್ತ್ರೀಯರ ಸಾಹಸ— ಕಾಂಗ್ರೆಸ್ ರಾಜ್ಯವೆಂದು ಅಭಿಮಾನದಿಂದ ಮೆರೆಯುತ್ತಿರುವ ಮುಂಬಯಿ ನಗರದಲ್ಲಿ ಕಾಮಗಾರರು ತಮ್ಮ ಹಕ್ಕಿಗಾಗಿ ಹೋರಾಡುತ್ತಿರುವಾಗ ಪೋಲೀಸರ ಲಾಠಿ ಮಾತ್ರವಲ್ಲದೆ (Tear gas) ಕೂಡ ತಯಾರಾಗಿತ್ತು. ಮೊನ್ನೆ 11ನೆಯ ತಾರೀಕಿಗೆ ಪಯುನಿಕ್ಸ್ ಮಿಲ್ಲಿನಲ್ಲಿ ಜರಗಿದ ಪ್ರಚಂಡ ಸಂಪಿನಲ್ಲಿ 3,000 ಸ್ತ್ರೀಯರು

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಶೇಂದಿ ಅಂಗಡಿಗಳು ಮುಚ್ಚಲಾಗುತ್ತೆ— ಮೈಸೂರು, ಭದ್ರಾವತಿ, ದಾವಣಗೆರೆ ಮತ್ತು ಕೋಲಾರ ಚಿನ್ನದಗಣಿ ಪ್ರಾಂತ್ಯದಲ್ಲಿ, ಕೂಲಿಗಾರರಿಗೆ ಬಟವಾಡೆ ಕೊಡುವ ದಿನ, ಅಲ್ಲಿರುವ ಶೇಂದಿ ಅಂಗಡಿಗಳನ್ನು ಮುಚ್ಚಬೇಕೆಂದು ಸರ್ಕಾರದವರ ಆಜ್ಞೆಯಾಗಿದೆ.

ಕ್ಷೌರಿಕರ ಮುಷ್ಕರ— ಬೆಂಗಳೂರಿನಲ್ಲಿರುವ ಶೇವಿಂಗ್ ಸೆಲೂನುಗಳ ಮೇಲೆ, ವರ್ಷ ಒಂದಕ್ಕೆ ರೂ. 1 ಲೈಸೆನ್ಸ್ ಫೀ ಹಾಕಿರುವುದರಿಂದ, ಇದು ಜಾಸ್ತಿಯೆಂದು, ಅಲ್ಲಿಯ ಕ್ಷೌರಿಕರೆಲ್ಲರೂ ಮುಷ್ಕರ ಹಿಡಿದು ಒಂದು ಶೇವಿಂಗ್ ಸೆಲೂನ್ ಬಾಗಿಲನ್ನಾದರೂ ತೆರೆದಿರಲಿಲ್ಲ. ಕ್ಷೌರಿಕರೆಲ್ಲರೂ ದಿವಾನರ ಬಳಿ ಹೋಗಿ ಇದನ್ನು ತಿಳಿಸಿದರಲ್ಲದೆ, ಒಂದು ಸಭೆ ನಡೆಸಿ, ಬೆಂಗಳೂರು ಮ್ಯುನಿಸಿಪಲ್ ಅಧ್ಯಕ್ಷರಲ್ಲಿ

ಇದರಲ್ಲಿ ಮಿಂಮಿ ಸಾತ್ರವನ್ನು ವಹಿಸಿ ಮಿಲ್ಲಿನ ಗೇಟಿನಲ್ಲಿ ನಿಂತು ಪಿಕೆಟಿಂಗ್ ಮಾಡುತ್ತಿದ್ದರು. ಪೋಲೀಸ್ ಕಮಿಶನರ್ ಸುಪರಿಂಟೆಂಡೆಂಟ್ ಮತ್ತು ಇನ್ನಿತರ ನೂರಾರು ಪೋಲೀಸರು ಲಾಠಿ ಮತ್ತು 'ಗೇಸ್' ಸಮೇತ ಸಹಾಯಕ್ಕೆ ಸಿದ್ಧರಾಗಿರುವಂತೆ ತಯಾರಿದ್ದರು. ಮಾತ್ರವಲ್ಲ (Black legs)ನ್ನು ಲಾರಿಗಳಲ್ಲಿ ಹಿಡಿದು ತಂದು ಮಿಲ್ಲಿನೊಳಗೆ ಕಳುಹಿಸಬೇಕೆಂದು ಶತಪ್ರಯತ್ನ ಮಾಡಿದರೂ ಜಯ ಹೊಂದಲಿಲ್ಲ. ಕೊನೆಗೆ 15 ನಿಮಿಷದೊಳಗೆ ದಾರಿಬಿಟ್ಟು ಕೊಡದಿದ್ದಲ್ಲಿ (Tear-gas)ನ್ನು ಬಿಡುತ್ತೇವೆಂದು ಹೇಳಿದರು. ಕೊನೆಗೆ ಈ (Black legs)ರೇ ತಮ್ಮ ಬಂಧುಗಳಲ್ಲಿ ದಯೆ ಹುಟ್ಟಿದವರಾಗಿ ತಾವು ಮಿಲ್ಲಿನೊಳಗೆ ಹೋಗುವುದಿಲ್ಲೆಂದು ಹೇಳಿ ಹಿಂದಿರುಗಿದರು. ಅಂತೂ ಕಾಮಗಾರರಿಗೆ ಜಯವಾಯಿತು.

ಪೋಲೀಸರು "Tearges"ನ್ನು ಬಿಡಲು ತಯಾರಾಗಿರಲು ಇದನ್ನು ನಿಲ್ಲಿಸಬೇಕೆಂದು, ಕಾಮಗಾರ ಮುಖ್ಯಸ್ಥರಾದ ಶ್ರೀ. ಡಾಂಗೆಯವರು ಅನರೆಬಲ್ ಮುನ್ಶಿಯವರಿಗೆ ಟೆಲಿಫೋನು ಮಾಡಲು, ಈ ಮಹಾರಾಯರು ಸುಖನಿದ್ರೆಯಲ್ಲಿರುವರು. ಇವರನ್ನು ಎಬ್ಬಿಸಲು ಸಾಧ್ಯವಿಲ್ಲೆಂಬ ಉತ್ತರಬಂತು. ಇದೂ ಒಂದು ತಮಾಷೆ!

ತಮ್ಮ ಅಹವಾಲನ್ನು ತಿಳಿಸಲು ಅಧ್ಯಕ್ಷರು ಇದನ್ನು ಕೌನ್ಸಿಲಿನ ಸಭೆಯಲ್ಲಿ ಚರ್ಚಿಸಿ ಮತ್ತು ತನಕ ವಡಿಕೆಯರೆನ್ನಲು ಕ್ಷೌರಿಕರೆಲ್ಲರೂ ಹಿಂತೆಗೆದರೆಂದು ಹೇಳಲಾಗಿದೆ.

ಪ್ರತಿಬಂಧಕಾಜ್ಞೆಗಳು— ಮೈಸೂರು ಮೋಟಾರು ಟ್ರಾನ್ಸ್‌ಪೋರ್ಟ್ ನ ಕಾರ್ಯದರ್ಶಿ ಶ್ರೀ| ಎಸ್. ರಾಮಸ್ವಾಮಿಯವರು ಮೈಸೂರಿಗೆ ಬರಕೂಡದೆಂದು ಮೈ| ಜಿ| ಕಾರಿಯು ಒಂದು ಆಜ್ಞೆ ಹೊರಡಿಸಿದ್ದ ಸುದ್ದಿಯು "ನವಯುಗ"ದಲ್ಲಿ ವರದಿಯಾಗಿದೆ.

ಮೈಸೂರು ಜನಜಾಗೃತಿ ಸಂಘದಾಶ್ರಯದಲ್ಲಿ ಮೈಸೂರು ರೈಲ್ವೆ ಕೆಲಸಗಾರ ಸಭೆಯೊಂದು ಇವತ್ತಿನ ದಿನ ಶ್ರೀರಂಗಪಟ್ಟಣದಲ್ಲಿ ಸೇರುವುದೆಂದೂ, ಮೈಸೂರಿನಿಂದ ಕೆಲಸಗಾರರೂ ಇತರರು ಬಾವುಟ ಮತ್ತು ಬೇಂಡ್ ಸೊಂದಿಗೆ ಶ್ರೀರಂಗಪಟ್ಟಣಕ್ಕೆ ಬೆಳಿಗ್ಗೆ ಮೆರವಣಿಗೆಯಲ್ಲಿ ಹೋಗುವರೆಂದು ನೋಟೀಸು ಹಂಚಲಾಗಿತ್ತು.

ಇದರ ಮೇಲೆ ಮೈಸೂರು ಆಕ್ಟಿಂಗ್ ಜಿಲ್ಲಾಧಿಕಾರಿಗಳಾದ ಶ್ರೀ ರಣಜೋಧ್ ಸಿಂಗರು ಒಂದು ಪ್ರತಿಬಂಧಕಾಜ್ಞೆಯನ್ನು ಜಾರಿಮಾಡಿರುತ್ತಾರೆ. ಇದು ಎರಡು ತಿಂಗಳ ಕಾಲವಿರುತ್ತೆ.

ಇಂದರಲ್ಲಿ ತಿಳಿಸುವುದೇನೆಂದರೆ, ಶ್ರೀಯುತರುಗಳಾದ ರಾಮಸ್ವಾಮಿ, ಎಂ. ಡಿ. ಶಂಕರ್, ಸಾಯ್ ಆಶ್ರಫ್, ಟಿ. ಸುಬ್ಬಣ್ಣ ಮತ್ತು ಎಂ. ಎನ್. ರಾಜಶೇಖರರುಗಳು ಕ್ರಿ| ಪ್ರೊ| ಕೋ| 144ನೇ ಸೆ| ಪ್ರಕಾರ ಈ ದಿನದಿಂದ 2 ತಿಂಗಳು ಮೈಸೂರು ಜಿಲ್ಲೆಯಲ್ಲಿ ಮಾತನಾಡಕೂಡದು.

ಮತ್ತೊಂದರಲ್ಲಿರುವುದೇನೆಂದರೆ ಪ್ರೊ| ಕೋ| 39ನೇ ಸೆ| ಪ್ರಕಾರ ಮೆರವಣಿಗೆ ಮುಂತಾದುವುಗಳನ್ನು ಇಂದಿನಿಂದ 2 ತಿಂಗಳು ನಡೆಸಕೂಡದೆಂದು.

ಈ ಸಮಾಚಾರವು ಇಲ್ಲಿ ಬಹಳ ಕೋಲಾಹಲಕರವಾಗಿದೆ.

ಪುಟ ೪ರಿಂದ

ಕಾಂಗ್ರೆಸು ಮತ್ತು ಆಶ್ರಿತಸಂಸ್ಥಾನಗಳು

ತ್ರಿಪುರಿಯಲ್ಲಿ ನಡೆದ ರಾಜಕೀಯ ಪರಿಷತ್ತಿನಲ್ಲಿ ಸುಭಾಸರು ಭಾಷಣವೇದಿಕೆಯನ್ನೇರಿದ್ದರು. ಜನಸ್ತೋಮವು 20 ಸಾವಿರಕ್ಕೆ ಮೀರಿದ್ದಿತು. ಭೋಸರು ತಮ್ಮ ಭಾಷಣದಲ್ಲಿ ಇತ್ತೀಚೆಯ ಕಾಂಗ್ರೆಸಿನ ವಿಚಾರ ಮತ್ತು ಅಭಿಪ್ರಾಯ ಭಿನ್ನತೆಯ ಕುರಿತು ಪ್ರಸ್ತಾಪಿಸುತ್ತಾ ಹೀಗೆಂದರು:- ಮಹಾಸಂಸ್ಥೆಗಳಲ್ಲಿ ಒಡಕು ತೋರುವುದು ಹೊಸತಲ್ಲ ಆದರೆ, ಇಂಥಾ ವಿಭಾಗದಿಂದ ಹಾನಿಯಾಗುವುದರ ಬದಲಾಗಿ ದೇಶದ ಹಿತಕಾರ್ಯಕ್ಕೆ ಅನುಕೂಲತೆ ಹೆಚ್ಚು. ಯಾಕೆಂದರೆ ಹೆಚ್ಚು ಮುಂಬರಿಯುವ ತೀವ್ರಗಾಮಿ ಪಂಗಡವು ಮುಂದಾಗಿ ನಿರಾತಂಕವಾಗಿ ಸಾಗಬಲ್ಲದು.

ನಾನು ಕಳೆದಬಾರಿ ಎ. ಐ. ಸಿ. ಸಿ. ಮೀಟಿಂಗಿನಲ್ಲಿ ತಿಳಿಸಿದಂತೆ ನಮ್ಮಲ್ಲಿ ಕಾರ್ಯತತ್ಪರತೆ ಬೇಕು. ಕ್ರಿಯಾರಹಿತವಾದ ಒಕ್ಕಟ್ಟಿನಲ್ಲಿ ಬಲಪಂಗಡದವರು ಎಷ್ಟು ಐಕ್ಯಭಾವದಲ್ಲಿದ್ದರೆಂಬುದನ್ನು ನೀವು ಕಲ್ಕತ್ತೆಯಲ್ಲಿ ಕಂಡಿರಬಹುದು. ಇಂಥಾ ಐಕ್ಯತೆಯು ಎರಡು ಪಕ್ಷದಲ್ಲಿಯೂ ಇರಬೇಕು. ಬ್ರಿಟಿಷ್ ಸಂಸ್ಥಾನಗಳಲ್ಲಿ ಮಾತ್ರವಲ್ಲ ಆಶ್ರಿತ ಸಂಸ್ಥಾನಗಳಲ್ಲೂ ಸ್ವಯಂ ಸೇವಕರ ಸೇನಾಂಗವನ್ನು ರಚಿಸುವುದು ಮುಂದಗಾಮಿ ಪಕ್ಷದ ಆಶಯವಿದೆ. ಕಾಂಗ್ರೆಸಿನಲ್ಲಿ ಪಾರ್ಲಿಮೆಂಟರಿ ಸಬ್ ಕಮಿಟಿಯಿದೆಯಷ್ಟೆ ಹಾಗೆಯೇ ಕಾಂಗ್ರೆಸಿನೊಳಗೆ ಆಶ್ರಿತ ಸಂಸ್ಥಾನಗಳ ಉಪಸಮಿತಿ (States Sub-committy) ಇರತಕ್ಕದ್ದು ಎಂದರು. ಅಲ್ಲದೆ ಹಲವು ಪ್ರಾಂತಗಳಲ್ಲಿರುವ ಕಾಂಗ್ರೆಸ್ ಮಂತ್ರಿಗಳು ತಮ್ಮ ಚುನಾವಣಾ ಪ್ರತಿಜ್ಞೆಯನ್ನು ಪರಿಪಾಲಿಸಬೇಕು ಬಡ ನಿರ್ಗತಿಕರ ಏಳಿಗೆಗಾಗಿ ಹೋರಾಟ ನಡೆಸಬೇಕು. ಎಂದು ಕೊನೆಯಲ್ಲಿ ಸೂಚಿಸಿದರು.

ಉಷ್ಣಕಾಲದಲ್ಲಿ ತಣ್ಣಗಾದ ಪರ್ಬತ್ತು ಕುಡಿದಾದರೂ ಕ್ಷಣಹೊತ್ತು ಉಷ್ಣಾದಿ ತೃಷೆಯನ್ನು ಪರಿಹರಿಸಿಕೊಳ್ಳಬಹುದು. ಪಂಖ ಯಾ ಬೀಸಣಿಗೆಗಳಿಂದ ಗಾಳಿ ತೆಗೆದುಕೊಂಡು ಕ್ಷಣಹೊತ್ತು ಮೈತಣ್ಣಗಿರಿಸಲೂಬಹುದು. ಪರಂತು ಉಷ್ಣತೆಯ ತಾಪದಿಂದ ಶರೀರದಲ್ಲಾಗುತ್ತಿರುವ ದುಷ್ಪರಿಣಾಮಗಳು ಮಾತ್ರ ದೂರವಾಗಲಾರವು.

ಹಾಗಾದರೆ

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಇವರ ಚಂದ್ರನಂತೆ ಶೀತಲವಾದ ಬಹುಗುಣಯುಕ್ತ

ಆಮಲಕೀ ತೈಲವನ್ನು

(Regd Trade Mark) ನಿತ್ಯವೂ ಉಪಯೋಗಿಸಿರಿ. ಇದರಲ್ಲಿ ಆಮಲಕಿಯೇ ಮೊದಲಾದ ಮಂಗಲಕಾರಕ ದ್ರವ್ಯ ಯಾ ಇನ್ನಿತರ ಸುಗಂಧಯುಕ್ತ ಮೂಲಿಕೆಗಳನ್ನು ಸೇರಿಸಿ ವಿಜಾತೀಯ ದ್ರವ್ಯಗಳಿಂದ ವಿರಹಿತ ಮುಂದ್ಪ್ರಿಷ್ಟ ವಿಶೋಧಿತ ತಿಲತೈಲದಿಂದಲೇ ಶಾಸ್ತ್ರೀಯ ವಿಧಿಯಂತೆ ಪ್ರಸ್ತುತವಾದ ಈ ತೈಲವನ್ನು ನಿತ್ಯವೂ ಉಪಯೋಗಿಸುತ್ತಿದ್ದರೆ ಇದರಲ್ಲಿರುವ ಅಮೋಘವಾದ ಸುಗಂಧ ಗುಣಗಳು ನಿಮ್ಮ ರೋಮರಂಧ್ರದೊಳಗೆ ಪ್ರವೇಶಿಸಿ ನಿಮ್ಮ ರಕ್ತಕ್ಕೆ ಕಂಪನ್ನುಂಟುಮಾಡಿ ಚರ್ಮದಲ್ಲಾಗುತ್ತಿರುವ ದುಷ್ಪರಿಣಾಮಗಳನ್ನು ಬೇಗನೆ ಓಡಿಸುತ್ತದೆ ಹಾಗೂ ಶರೀರದಲ್ಲಿಯ ದುರ್ಗಂಧಗಳನ್ನು ಹೋಗಲಾಡಿಸಿ ಕೇಶಮೂಲಗಳು ದೃಢವಾಗುವದಲ್ಲದೆ ಅಚ್ಚಕಪ್ಪಿನ ಕೂದಲುಗಳು ನಿಬಿಡವಾಗಿ ಬೆಳೆದು ಮೊದಲೇ ನರೆತ ಕೂದಲುಗಳು ಸಹ ಕಪ್ಪಾಗಿ ಮುಖಶ್ರೀಯು ಲಾವಣ್ಯಪೂರ್ಣವಾಗುವದು. ಮತ್ತು ಸುಖವಾದ ನಿದ್ರೆ ಹತ್ತುವದು. ಶಾಂತಕ ನಿದ್ರೆಯಿಂದ ಸ್ಮೃತಿ, ಮೇಧಾ, ಉತ್ಸಾಹ, ವಿಚಾರಶಕ್ತಿ ಮೊದಲಾದ ಮಾನಸಿಕ ಶಕ್ತಿಗಳು ವಿಕಾಸ ಹೊಂದಿ ಚಿರಾರೋಗ್ಯ ಲಾಭವಾಗುವದು.

5 ತೊಲೆಯ ಸೀಸೆ 1ರ 0-6-0, 10 ತೊಲೆಯ ಸೀಸೆ 1ರ 0-11-0.

ಕಸ್ತೂರಿಯುಕ್ತ ಧನ್ವಂತರೀ ಗುಟಿಕಾ ವಾಯುಮಾತ್ರೆ.

ಬಾಲ, ವೃದ್ಧ, ಸ್ತ್ರೀ-ಪುರುಷ ಯಾ ಗರ್ಭಿಣಿಯರ ಸರ್ವತರದ ಶೂಲೆ, ಕಟಿತಿಮಿರು, ಅಜೀರ್ಣ, ಹೊಟ್ಟೆಯುಬ್ಬರಿಕೆ, ಆತಿಸಾರ, ಇವುಗಳಲ್ಲಿ ಅತ್ಯಂತ ಗುಣಕಾರಿಯಾಗಿದೆ, ಬಾಲಕರ ಅಪಸ್ಮಾರ (ಬಾಲಗ್ರಹ) ಕಫ ಇತ್ಯಾದಿಗಳಲ್ಲಿ ಸಂಗ್ರಾಹ್ಯವಾದ ದಿವ್ಯ ಔಷಧಿಯಾಗಿದೆ.

ಕ್ರಯ: 12ಕ್ಕೆ 0-4-0, 25ಕ್ಕೆ 0-7-0, 50ಕ್ಕೆ 0-13-0, 100ಕ್ಕೆ 1-5-0, 500ಕ್ಕೆ 5-0-0, 1000ಕ್ಕೆ 9-0-0.

5 ಆಣೆ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತದೆ.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್)

ಕುಂಜಾಲ್, ಪೋಸ್ಟ್ ಬ್ರಹ್ಮಾವರ.

ನಮ್ಮ ಸ್ಟಾಕಿಸ್ಟರು:—

1. **Sepply Agency Ltd., Udipi**, S. K.
2. **Nava Bharata Book Depot, Udipi**, S. K.
3. **V. R. Prabhu**, The Canara News & Books Agent, Batatawala Mansion; Lalbag, BOMBAY.



ಇಲ್ಲಿಂವರೇ 52,000ಕ್ಕೂ ಮಿಕ್ಕಿದ ಪೊಲಿಸಿದಾರರ ಸೇವೆ ಸಲ್ಲಿಸುತ್ತಲಿರುವ ಕಂಪೆನಿಯ ಪ್ರಧಾನ ಕಾರ್ಯಾಲಯ.

ಜನರಲ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್

ಸ್ಥಾಪನೆ 1907ರಲ್ಲಿ

ಪ್ರಧಾನ ಖಚೇರಿ:- ಅಜ್ಮೀರ್.

ಪ್ರಮಾಣದಲ್ಲಿ ಅನುಪಮ ಬೋನಸು. ಜೀವಾವಧಿ 1000ಕ್ಕೆ ವರ್ಷ ಒಂದರ 22ಕ್ಕೆ. ಎಂಡೋಮೆಂಟುಗಳ ಮೇಲೆ ರೂ. 18ರಂತೆ.

1938

ಸರ್ವಾಭಿವೃದ್ಧಿಯ
ಮತ್ತೊಂದು ವರುಷ.
ಚಾಲ್ತಿ ವ್ಯವಹಾರವು
೩॥ ಕೋಟಿಗೂ ಅಧಿಕ.



ಬೆಂಗಳೂರಲ್ಲಿರುವ ಕಂಪೆನಿಯ ಕಟ್ಟಡ

ಮೂಲಗಳು ೯೨
ಲಕ್ಷಕ್ಕೂ ಮಿಕ್ಕಿವೆ.
ಖರ್ಚಿನ ಪ್ರಮಾಣವು
ಸೇಕಡಾ ೨೭.೬

ಜೀವವಿಮೆಯ ಮತ್ತು ಏಜನ್ಸಿ ಶರತ್ತುಗಳಿಗೆ ದಯಮಾಡಿ ಬರೆಯಿರಿ:—

ಬ್ರಹ್ಮದತ್ತ, ಬಿ.ಎಸ್.ಸಿ.ಎಲ್.ಎಲ್.ಬಿ.ಎಫ್.ಎಸ್.ಎಸ್. (ಲಂಡನ್) ಜನರಲ್ ಮೇನೇಜರ್.



ಬೊಂಬಾಯಿಯಲ್ಲಿರುವ ಕಂಪೆನಿಯ ಅರಮನೆಸದೃಶವಾದ ಕಟ್ಟಡ.

ಅಥವಾ

ಈ ಕೆಳಗಿನ ಆಫೀಸುಗಳಿಗೆ ಬರೆದು
ಮಾಹಿತಿಗಳನ್ನು ಪಡೆಯಿರಿ:—
ಔರಂಗಾಬಾದ್, ಬಳ್ಳಾರಿ, ಬೆಜವಾಡ,
ಬೆಂಗಳೂರು, ಹುಬ್ಬಳ್ಳಿ, ಮದರಾಸ್, ಮಧುರೆ,
ರಾಜಮಹೇಂದ್ರಿ, ಸಿಕಂದರಾಬಾದ್,
ತ್ರಿಚಿನಾಪಳ್ಳಿ.



ಶಿಲ್ಪಶಾಸ್ತ್ರ ಬಲ್ಲವನಿಂದ ನಿರ್ಮಿಸಲ್ಪಟ್ಟ ಕಂಪೆನಿಯ ಕಲ್ಕತ್ತದ ಕಟ್ಟಡ.

THE GENERAL ASSURANCE SOCIETY, LTD.

ದ. ಕ. ಜಿಲ್ಲಾ ಪ್ರಥಮ ಮಜೂರ ಪರಿಷತ್ತು

ಬ್ಯಾರಿಸ್ಟರ್ ಎ. ಕೆ. ಪಿಳ್ಳೆಯವರ ಉಜ್ವಲ ಭಾಷಣ.

(ನಮ್ಮ ವಿಶೇಷ ಪ್ರತಿನಿಧಿಗಳಿಂದ)

ಮಂಗಳೂರು, ತಾ. 21-5-39

ದ. ಕ. ಜಿಲ್ಲಾ ಪ್ರಥಮ ಮಜೂರ ಪರಿಷತ್ತು ನಿನ್ನೆಯ ದಿನ ಆರಂಭವಾಯಿತು. ಮದ್ರಾಸಿನ ಪ್ರಸಿದ್ಧ ವಕೀಲರಾದ ಬ್ಯಾರಿಸ್ಟರ್ ಎ. ಕೆ. ಪಿಳ್ಳೆಯವರು ಅಗ್ರಾಸನ ವಹಿಸಿದ್ದರು. ಅಧ್ಯಕ್ಷರು ಕಾಸರಗೋಡಿನಿಂದ ರೈಲಿನಲ್ಲಿ ಹೊರಟು ಸಾಯಂ. 6-30ಕ್ಕೆ ಮಂಗಳೂರಿಗೆ ಚಿತ್ತೈಸಿದರು. ಮಜೂರರೂ, ಅನೇಕ ಪುರಜನರೂ, ಸ್ವಾಗತ ಸಮಿತಿಯ ಸದಸ್ಯರೂ ಇವರನ್ನು ರೈಲ್ವೆ ನಿಲ್ದಾಣದಲ್ಲಿ ಇದಿರುಗೊಂಡು ಬ್ಯಾಂಡ್ ವಾದ್ಯ ಘೋಷದೊಡನೆ ಮಿಶನ್ ಹೈಸ್ಕೂಲಿನ ಸಭಾಸ್ಥಾನಕ್ಕೆ ಕರೆದುಕೊಂಡು ಹೋದರು. ಅಲ್ಲಿ ಶ್ರೀ. ಯಂ. ಉಮೇಶರಾಯರು ಕೆಂಪು ಧ್ವಜವನ್ನು ಏರಿಸಿ ಆ ಬಾವುಟದ ಮಹತ್ವವನ್ನು ವರ್ಣಿಸಿ, ಅದರಡಿಯಲ್ಲಿ ಎಲ್ಲಾ ಮಜೂರರೂ ಒಕ್ಕಟ್ಟಿನಿಂದ ತಮ್ಮ ಪುರೋಭಿವೃದ್ಧಿಗಾಗಿ ದುಡಿಯಬೇಕೆಂದು ಹೇಳಿದರು.

ಸ್ವಾಗತ ಭಾಷಣ

ಧ್ವಜವಂದನೆಯಾದ ತರುವಾಯ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ. ಕೆ. ಎಸ್. ಶೆಟ್ಟರು ಜಿಲ್ಲೆಯಿಂದ ಬಂದಿದ್ದ ಪ್ರತಿನಿಧಿಗಳನ್ನೂ, ಮಾನ್ಯ ಅಧ್ಯಕ್ಷರನ್ನೂ ಮಹಾಜನರನ್ನೂ ಸ್ವಾಗತೀಕರಿಸಿ ತಮ್ಮ ಸ್ವಾಗತ ಭಾಷಣವನ್ನಿತ್ತರು.

ಅದರ ಸಾರವು ಈ ರೀತಿಯಲ್ಲಿತ್ತು. ಮಾನ್ಯ ಅಧ್ಯಕ್ಷರೇ, ಮಜೂರ ಪ್ರತಿನಿಧಿ ಬಂಧುಗಳೇ, ಮತ್ತು ಮಿತ್ರರೇ, ನಮ್ಮ ಜಿಲ್ಲೆಯಲ್ಲಿ ಹಿಂದೆ ಅನೇಕ ಪರಿಷತ್ತುಗಳು ನಡೆದಿದ್ದುವು. ಆದರೆ ಮಜೂರ ಪರಿಷತ್ತು ನಡೆಯುವುದು ಇದೇ ಮೊದಲನೆಯಬಾರಿ. ಅನೇಕರು ಇಲ್ಲಿಗೆ ಬಂದು ಇಲ್ಲಿಯ ಸೃಷ್ಟಿ ಸೌಂದರ್ಯವನ್ನು ಹೊಗಳಿ ಹೋಗುತ್ತಾರಲ್ಲದೆ ಇಲ್ಲಿಯ ಜನರ ಸಂಕಷ್ಟಗಳನ್ನು ವಿಚಾರಿಸಿದವರಾರೂ ಇಲ್ಲ. ಈಗ ತಾವು ನಮ್ಮ ಜಿಲ್ಲೆಯ ಮಜೂರರಿಗೆ ಸರಿಯಾದ ಮಾರ್ಗವನ್ನು ತೋರಿಸಿಕೊಡುವಿರೆಂದು ನಂಬಿದ್ದೇವೆ. ಜಿಲ್ಲೆಯಲ್ಲಿ ಪ್ರಥಮತಃ ಸ್ಥಾಪಿಸಲ್ಪಟ್ಟ ಮಜೂರರ ಸಂಘವೆಂದರೆ ಹಂಚು ಕಾರ್ಖಾನೆಗಳ ಕೆಲಸಗಾರರ ಸಂಘ. ಆದರೆ ಆ ಸಂಘವು ಹುಟ್ಟಿದ ಕೂಡಲೆ ಮುಷ್ಕರವನ್ನು ಆರಂಭಿಸಿ, ಅದರಲ್ಲಿ ಅದು ಸೋತು, ಕೆಲಸಗಾರರು ಕಷ್ಟಕ್ಕೀಡಾಗಿ ಈಗ ಆ ಕೆಲಸಗಾರರು ತಮಗೆ ಯಾವ ಸಂಘವೂ ಬೇಡವೆನ್ನುತ್ತಾರೆ

ಜಿಲ್ಲೆಯಲ್ಲಿ ಸುಮಾರು 25,000 ಮಂದಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಮಜೂರರಿದ್ದಾರೆ. ಅವರಲ್ಲಿ ಸಂಘಗಳನ್ನು ಮಾಡಿಕೊಂಡಿರುವವರು ಬರೆ 2000 ಮಂದಿ. ಇವರುಗಳನ್ನು ಸಂಘಕ್ಕೆ ಸೇರುವಂತೆ ಮಾಡಿದವರು ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದವರು. ಇಲ್ಲಿ ಹೀಗಿರುವ ಕೆಲ ಸಂಘಗಳು 1936ರಲ್ಲಿ ಸ್ಥಾಪಿಸಲ್ಪಟ್ಟವುಗಳು.

ಸಂಘಗಳು ಸ್ಥಾಪಿತವಾದರೂ ಅವುಗಳು ಬಹಳ ಚೆನ್ನಾಗಿ ಕೆಲಸ ಮಾಡುವಂತೆ ತೋರುವುದಿಲ್ಲ. ಯೂನಿಯನುಗಳನ್ನು ಸ್ಥಾಪಿಸಿದವರು ಅದನ್ನು ತಮ್ಮ ರಾಜಕೀಯ ಉದ್ದೇಶಗಳನ್ನು ಮುಂದೊತ್ತಲು ಉಪಯೋಗಿಸುತ್ತಿದ್ದಾರೆ ಸ್ಥಳೀಯ ಕಾಂಗ್ರೆಸ್ ಚುನಾವಣೆಗಳಲ್ಲಿ ಇದು ಕಂಡುಬಂದಿದೆ. ಈಗ ಮಜೂರರಲ್ಲಿ ಭಿನ್ನ ಭಾವನೆಗಳು ಹೆಚ್ಚುತ್ತಿವೆ. ಮತ್ತೊಂದೆಡೆ ಸರಕಾರದ ಧೋರಣೆಯು ಏನೆಂಬುದು ತಿಳಿದಿಲ್ಲ. ಮುಖ್ಯವಾಗಿ ಕಾಂಗ್ರೆಸ್ ಸರಕಾರವು ಮಜೂರರಿಗೆ ಮಾಡಿದ ಸಹಾಯವು ಬಹಳ ಸ್ವಲ್ಪವೇ ಆಗಿದೆ. ಮಜೂರರ ಅಧಿಕಾರ, ಅವರು ಮುಂದೆ ಹೀಗೆ ನಡೆದುಕೊಳ್ಳಬೇಕು ಎಂಬಿತ್ಯಾದಿ ಎಲ್ಲಾ ವಿಚಾರಗಳಲ್ಲಿಯೂ ತಾವು ನಮಗೆ ಸೂಚಿಸಬೇಕಾಗಿ ಮಾನ್ಯ ಅಧ್ಯಕ್ಷರೇ ತಮ್ಮನ್ನು ಪ್ರಾರ್ಥಿಸುತ್ತೇನೆ” ಎಂದರು.

ಉದ್ಘಾಟನೆ

ಅನಂತರ ಶ್ರೀ. ಕೆ ಆರ್. ಆಚಾರ್ಯರು ಸಮಾರಂಭವನ್ನು ಉದ್ಘಾಟಿಸಿಮಾಡುತ್ತಾ ದ. ಕನ್ನಡ ಜಿಲ್ಲೆಯಲ್ಲಿ ಈಗಲಾದರೂ ಮಜೂರ ಪರಿಷತ್ತನ್ನು ಜರಗಿಸಲು ಯತ್ನ ನಡೆದುದು ಸಾಧುವೆಂದೂ, ನಮ್ಮ ಜಿಲ್ಲೆಯಲ್ಲಿ ಐಶ್ವರ್ಯವಂತರು ಕಡಿಮೆಯಾಗಿದ್ದು ಶ್ರಮಜೀವಿಗಳೇ ಅಧಿಕ ಸಂಖ್ಯಾಕರಾಗಿದ್ದಾರೆಂದೂ ಶ್ರಮಜೀವಿಗಳ ಸಂಕಷ್ಟವು ಮಿತಿಮೀರಿ ಹೋಗಿದೆಯೆಂದೂ, ಅದನ್ನು ನಿವಾರಿಸುವುದು ಬಹಳ ಪ್ರಾಮುಖ್ಯದ ಕೆಲಸವೆಂದೂ ಹೇಳಿದರು. ಮತ್ತು ಈ ಪರಿಷತ್ತಿನ ಸಹಾಯದಿಂದ ಮಜೂರರು ಜಾಗೃತರಾಗಿ ಅವರಿಗೆ ಸಕಲ ಸನ್ಮಂಗಳಗಳು ದೊರಕುವಂತಾಗಲೆಂದು ಹರಸಿ ಪರಿಷತ್ತನ್ನು ಉದ್ಘಾಟನೆಮಾಡಿದರು.

ಅಧ್ಯಕ್ಷರ ಭಾಷಣ

ಮಾನ್ಯ ಬ್ಯಾರಿಸ್ಟರ್ ಪಿಳ್ಳೆಯವರು ತಮ್ಮ ಭಾಷಣದಲ್ಲಿ ಮಂಗಳೂರಲ್ಲಿ ಹಂಚು ಕಾರ್ಖಾನೆಗಳು ಹಿಂದುಸ್ಥಾನದ ಕೈಗಾರಿಕೆ ಚರಿತ್ರೆಯ ಆದಿಯಿಂದಲೂ ಇದ್ದರೂ ಇಲ್ಲಿ ಮಜೂರರು ತಮ್ಮ ಪರಿಷತ್ತುಗಳನ್ನು ಜರಗಿಸದಿರುವುದು ಆಶ್ಚರ್ಯದ ಸಂಗತಿಯೆಂದರು.

ಈಗ ಕೂಲಿಗಾರರೆಲ್ಲರೂ ಒಕ್ಕಟ್ಟಾಗಿ ತಮ್ಮ ಸಂಘ ಶಕ್ತಿಯನ್ನು ಹೆಚ್ಚಿಸಿಕೊಂಡಲ್ಲಿ ಮಾತ್ರ ಅವರಿಗೆ ಜೀವನಕ್ಕೆ ಬೇಕಾದಷ್ಟಾದರೂ ದೊರೆಯುವಂತೆ ಮಾಡಿಕೊಳ್ಳಬಹುದಲ್ಲದೆ, ಇಲ್ಲವಾದರೆ ಮಾಲಿಕರು ಒಕ್ಕಟ್ಟಿನಿಂದ ಮಜೂರರನ್ನು ವಿರೋಧಿಸುವ ಈ ಕಾಲದಲ್ಲಿ ಏನುಮಾಡುವುದಕ್ಕೂ ಅಶಕ್ತರಾಗುವರೆಂದರು.

ಈ ಸಂದರ್ಭದಲ್ಲಿ ಪ್ರಜಾಪಕ್ಷದ ಕಾಂಗ್ರೆಸ್ ಸರಕಾರದವರು ಮಜೂರರಿಗೆ ಏನು ಸಹಾಯಮಾಡಿದರೆಂಬುದನ್ನು ಪರ್ಯಾಲೋಚಿಸುತ್ತಾ ಕಾಂಗ್ರೆಸಿನವರು ಮಜೂರರ ಹಿತದೃಷ್ಟಿಯಿಂದ ಮಾಡಿದ ಕೆಲಸವು ಬಹಳ ಸ್ವಲ್ಪವೇ ಆಗಿದೆಯೆಂದರು. ಮತ್ತು ಈಗಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ ಕಾಂಗ್ರೆಸಿನವರು ಮುಂದಗಾಮಿಗಳಾಗಿ ಬ್ರಿಟಿಷರ ಹೇಳಿಕೆಗಳನ್ನು ನಡೆಸುವ ಮನೋವೃತ್ತಿಗೆ ಬರುವಂತಿದೆಯೆಂದೂ ಆದ್ದರಿಂದ ಕಾಂಗ್ರೆಸಿನಲ್ಲಿ ಕ್ರಾಂತಿಮಯ ಮನೋವೃತ್ತಿ ಬರುವಂತಾಗಬೇಕೆಂದೂ, ಇದಕ್ಕೆ ಧುರೀಣತೆಯಲ್ಲಿ ಬದಲಾವಣೆಯೂ ಗುಪ್ತದು ಅಗತ್ಯವಾಗಬಹುದೆಂದೂ ಹೇಳಿದರು.

ಮತ್ತೂ ತಮ್ಮ ಭಾಷಣವನ್ನು ಮುಂದರಿಸುತ್ತಾ ದೇಶದ ಶ್ರಮಜೀವಿಗಳೆಲ್ಲರೂ ರಾಜಕೀಯ ಭಿನ್ನಾಭಿಪ್ರಾಯಗಳು ತಮ್ಮನ್ನು ವಿಭಾಗಿಸದಂತೆ ನೋಡಿಕೊಂಡು ತಮ್ಮ ಹಿತದ ಕಡೆಗೆ ದೃಷ್ಟಿಯಿಟ್ಟು ಕೆಲಸ ಮಾಡಬೇಕೆಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು (ಶ್ರೀ ಕೆ. ಕೆ. ಶೆಟ್ಟಿಯವರು ಈ ಭಾಷಣವನ್ನು ಕನ್ನಡಕ್ಕೆ ಭಾಷಾಂತರಿಸಿದರು)

ಆಮೇಲೆ ಶ್ರೀ. ಯಂ. ಉಮೇಶರಾಯರು ಕಾಂಗ್ರೆಸಿನ ಮೂಲಭೂತ ಹಕ್ಕಿನ ಠರಾವನ್ನು, ಚುನಾವಣಾ ಪತ್ರದಲ್ಲಿ ಕಾಂಗ್ರೆಸಿನವರು ಸೂಚಿಸಿದ ಪ್ರಕಾರ ಮಜೂರರ ಹಿತವನ್ನೂ ಸಾಧಿಸಲು ಸರಕಾರದವರನ್ನು ಎಚ್ಚರಿಸಬೇಕೆಂದು ಸೂಚಿಸಿ ತಂದ ಠರಾವು ಶ್ರೀ ಕೆ. ಕೆ. ಶೆಟ್ಟರಿಂದ ಅನುಮೋದಿಸಲ್ಪಟ್ಟು ಶ್ರೀ ರಮಾನಾಥ ರಾಯರಿಂದ ಪುಷ್ಟೀಕರಿಸಲ್ಪಟ್ಟು ಸರ್ವಾನುಮತಿಯಿಂದ ಮಂಜೂರಾಗಿ ಅಂದಿನ ಸಭಾ ಕಾರ್ಯವು ಸುಮಾರು 10¼ ಘಂಟೆ ರಾತ್ರಿಗೆ ಕೊನೆಗೊಂಡಿತು.

೨ನೇ ದಿನದ ಕಾರ್ಯಕ್ರಮ

ಈ ದಿನ ಮಜೂರರ ಹಿತದೃಷ್ಟಿಯಿಂದ ಮುಖ್ಯವಾದ 9 ಠರಾವುಗಳು ಮಂಜೂರಾದುವು. ಅಧ್ಯಕ್ಷರು ಹಿಂದುಸ್ಥಾನದ ರಾಜಕೀಯ ಕೈದಿಗಳ ಬಿಡುಗಡೆಯ ವಿಚಾರದಲ್ಲಿ ಒಂದು ಠರಾವನ್ನು ಪರಿಷತ್ತಿನ ಮುಂದಿರಿಸಿ ಒಂದು ಉಜ್ವಲ ಭಾಷಣ ಮಾಡಿದರು. ಅದು ಸರ್ವಾನುಮತಿಯಿಂದ ಮಂಜೂರಾಯಿತು. ಅಧ್ಯಕ್ಷರ ಉಪಸಂಹಾರ ಭಾಷಣವಾಗಿ ಸಮಾರಂಭವು ಸಾಯಂಕಾಲ 6 ಘಂಟೆಗೆ ಸಮಾಪ್ತಿಯಾಯಿತು.

WANTD: 80 candidates of both sexes who after expert training as film artistes and technicians are prepared to work for the College Film Company for two years on decent salary Free hostel seat and other benefits. Illustrated Art Prospectus on 5 annas posatge. Prabhat Movietone College, Bombay 11

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡ್, ಪೇಟೆಗಳ ಚೀಟು, ಮೊನೊಗ್ರಾಮ್ ಕೆಲಸ, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವುದು.

CROWN RUBBER STAMP CO.,
Balmat Road, MANGALORE.
Included by the Mysore Govt. Stores. Purchase Committee in the list of approveFdirms

ABSOLUTELY FREE!

Bring this coupon and you will get your own hoto absolutely free of charge

☞ The rate for the enlargement of the same Rupee one only (size 6"×8").

Send your old photo and you will get enlargement (6'×8' fo) Rs. 2—8—0. ony and big size 16'×20'for Rs. 5 only.

Our time every day 9 a. m. to 7 p. m. Sunday 9 a. m. to 4p. m.

K. H. PATHAK

276 Surya Mahal Girgaum Road BOMBAY, 4.	Royal Art Studio 183 Hornby Road, BOMBAY, 1.

Established] THE [1906

UNITED INDIA

LIFE ASSURANCE Co. LTD.
HEAD OFFICE—MADRAS.

Trustee:—The Official Trustee to the Government of Madras.

Policies in force exceed **SIX** Crores.
Annual incomeI exceeds – Rs. **30** lakhs.
Total assets exceeds – Rs. **110** lakhs.
Total claims paid exceed Rs. **40** lakhs.

The oldest & largest life assurance company of South India accepted by the Government as satisfactory for the purpose of exemption from the operation of the Provident Fund Rules to Teachers in aided Schools & for the purpose of utilisation of P. F. Contributions for payment of premiums on the lives of Government Local Board & Municipal servants.

For further particulars please apply to:—

THE BRANCH MANAGER,
THE UNITED LIFE ASSURANCE COMPANY, LTD.,
FELIX PAI BAZAR, MANGALORE, S. K.

K. R. Hebbar, B.A., ORGANISER, UDIPI, S. K. *OR* **K. Keshava Shenoy,** M.A., ORGANISER, Pentlannpet, MANGALORE.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ತಾ. 21-5-1939

ವಿ. ಬಿ. ವಾಚನಾಲಯ— ಕಳೆದ ತಾ. 14ನೇ ಭಾನುವಾರ ದಿನ ಪೂರ್ವಾಹ್ನ 10 ಘಂಟೆಗೆ ಸರಿಯಾಗಿ ಶ್ರೀ| ಶಾರದಾ ಬಿಲ್ಡಿಂಗಿನಲ್ಲಿ ವಿ. ಬಿ. ವಾಚನಾಲಯದ ಉದ್ಘಾಟನೆಯು ದೇಶಭಕ್ತ ನಾರಾಯಣ ಕಿಲ್ಲೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಮೊದಲು ಭಾವಚಿತ್ರ ತೆರೆಯಲಾಯಿತು. ಅನಂತರ ದೇವತಾಪ್ರಾರ್ಥನೆಯಾಯಿತು. ಶ್ರೀಗಳಾದ ಯಂ. ಆರ್. ಶಾಸ್ತ್ರಿ, ಕೆ. ಕೃಷ್ಣರಾವ್ ಮತ್ತು ಐ. ರಾಮರಾವ್ ಇವರುಗಳು ಚಿಕ್ಕ ಭಾಷಣಗಳನ್ನು ಮಾಡಿ ವಾಚನಾಲಯಕ್ಕೆ ಸರ್ವ ಸನ್ಮಂಗಳಗಳನ್ನು ಬಯಸಿದರು. ಅಧ್ಯಕ್ಷರು ವಿಶ್ವಬ್ರಾಹ್ಮಣ ಸಮಾಜದವರು ಸರ್ವಜನರ ಹಿತಾರ್ಥವಾಗಿ ಈ ವಾಚನಾಲಯವನ್ನು ಸ್ಥಾಪಿಸಿದ್ದರಿಂದ ಈ ಸಂಸ್ಥೆಯು ರಾಷ್ಟ್ರೀಯ ಭಾವನೆಯು ವ್ಯಕ್ತವಾಗುವುದೆಂದರು. ಅನಂತರ ವಾಚನಾಲಯಕ್ಕೆ ಸರ್ವಸನ್ಮಂಗಳವಾಗಬೇಕೆಂದು ಹರಸಿ ಉದ್ಘಾಟನೆ ಮಾಡಿದರು. ಲಘೂಪಹಾರವಾದ ಬಳಿಕ ಸಭಾಂತ್ಯವಾಯಿತು.

ಶ್ರೀ| ವೀರಣ್ಣನವರಿಗೆ ಸತ್ಕಾರ— ಕಳೆದ ತಾ. 14ನೇ ಸಾಯಂಕಾಲ ಗುಬ್ಬಿ ಚೆನ್ನಬಸವೇಶ್ವರ ನಾಟಕ ಕಂಪೆನಿಯ ಯಜಮಾನರಾದ ವಿನೋದ ರತ್ನಾಕರ ಶ್ರೀ| ಜಿ. ಎಚ್. ವೀರಣ್ಣನವರಿಗೆ ಮಂಗಳೂರಿನ ಕೆಲ ಅಭಿಮಾನಿಯರು ಒಂದು ಸತ್ಕಾರವನ್ನು ಗಣಪತಿ ಹೈಸ್ಕೂಲಿನಲ್ಲಿ ಏರ್ಪಡಿಸಿದರು. ಶ್ರೀ| ವೀರಣ್ಣನವರ ಕಲಾಕೌಶಲ್ಯವನ್ನು ಪ್ರಶಂಸಿಸಿ ಹಲವರು ಮಾತಾಡಿದರು. ಶ್ರೀ| ಉಡುಪಿ ಗೋವಿಂದರಾಯರು ಕರ್ನಾಟಕ ನಾಟಕರಂಗವನ್ನು ಸುಧಾರಿಸಲು ಶ್ರೀ| ವೀರಣ್ಣನವರು ಯತ್ನಿಸಬೇಕೆಂದರು. ಶ್ರೀ| ವೀರಣ್ಣನವರು ತಮ್ಮ ಕೈಲಾದ ಮಟ್ಟಿಗೆ ಈ ಬಾಬಿನಲ್ಲಿ ತಾವು ಶ್ರಮಿಸುವದಾಗಿ ಹೇಳಿದರು.

ಜಿಲ್ಲಾ ರೆಡ್‌ಕ್ರಾಸ್ ಸೊಸೈಟಿ— ಜಿಲ್ಲಾ ರೆಡ್‌ಕ್ರಾಸ್ ಸೊಸೈಟಿಯ ಆಶ್ರಯದಲ್ಲಿ ಡಾ| ಕೆ. ಆರ್. ಕಿಣಿಯವರು ಕೆನರಾ ಹೈಸ್ಕೂಲಿನ ಸುಬ್ಬರಾವ್ ಸ್ಮಾರಕ ಮಂದಿರದಲ್ಲಿ ಮಹಿಳೆಯರಿಗೆ ಪ್ರಥಮ ಚಿಕಿತ್ಸೆಯ ಪಾಠವನ್ನು ಪ್ರತಿ ಮಂಗಳವಾರ ಶುಕ್ರವಾರಗಳಲ್ಲಿ ಕಲಿಸುವರು. ಈ ಸಂಘಕ್ಕೆ ಜೂನ್ ತಿಂಗಳ ಅಂತ್ಯದೊಳಗಾಗಿ 100 ಮಂದಿ ಸದಸ್ಯರನ್ನು ಸೇರಿಸಬೇಕೆಂದು ನಿರ್ಧರಿಸಲಾಯಿತು.

ಆನರರಿ ಮೆಡಿಕಲ್ ಆಫೀಸರರು— ಡಾ| ಕೆ. ಕೆ. ಹೆಗ್ಗಡೆ, ಡಾ| ಪಿ. ಬಾಲಕೃಷ್ಣ ರಾವ್ ಮತ್ತು ಡಾ| ಪಿ. ಸಿ. ಕಾಮತ್ ಇವರುಗಳು ಸರಕಾರಿ ಆಸ್ಪತ್ರೆಯಲ್ಲಿ ಆನರರಿ ಮೆಡಿಕಲ್ ಆಫೀಸರರಾಗಿ ನೇಮಕಹೊಂದಿರುವರು.

ತೇರ್ಗಡೆ— ಗವರ್ನ್‌ಮೆಂಟ್ ಸ್ತ್ರೀಯರ ಟ್ರೈನಿಂಗ್ ಶಾಲೆಯ ಹಿಂದಿ ಅಧ್ಯಾಪಕಿಯರಾದ ಶ್ರೀಮತಿ ಪದ್ಮಾವತಿದೇವಿ ವಿಟ್ಠಲರಾವ್ ಇವರು ಮದ್ರಾಸು ಯುನಿವರ್ಸಿಟಿ (ಹಿಂದಿ) ವಿದ್ವಾನ್ ಮತ್ತು ಪಿ. ಓ. ಎಲ್. ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು. ನಮ್ಮ ಜಿಲ್ಲೆಯಲ್ಲಿ ಈ ಪರೀಕ್ಷೆಗಳಲ್ಲಿ ಪಾಸಾದವರಲ್ಲಿ ಇವರೇ ಮೊದಲನೆಯವರು.

ಆಕಸ್ಮಾತ್ ಮರಣ— ಈ ದಿನ ಕದ್ರಿ ಮಾರ್ಕೆಟಿನ ಸಮೀಪ ಓರ್ವ ವೃದ್ಧರು ಕೂತಲ್ಲಿಂದಲೇ ಬಿದ್ದು ತತ್‌ಕ್ಷಣ ಮೃತರಾದರು. ಹೃದಯಸ್ತಂಭನವಿರಬಹುದೆಂದು ಊಹಿಸಲಾಗಿದೆ.

ಉಡುಪಿಯಿಂದ ಕೆಲಹೆಂಗಸರು ಬಂದು ಮಲ್ಲಿಕಟ್ಟೆಯ ಹತ್ತಿರ ಬಸ್ಸಿನಿಂದಿಳಿದಾಗ, ಅವರ ಕೈತಿ ಒಂದು ಆರು ವರ್ಷ ಪ್ರಾಯದ ಮಗು ಫಕ್ಕನೆ ಮೋಟರ್ ಅಡಿಗೆ ಬಿದ್ದು ಹೋಯಿತೆಂದೂ ತಿಳಿದು ಬರುತ್ತದೆ. ಇದು ಈ ದಿನದ ಎರಡನೆ ಆಕಸ್ಮಾತ್ ಸಂಭವ.

ರಾಜಕೀಯ ಕೈದಿಗಳ ದಿನಾಚರಣೆ— ನಗರ ಸಭಾಧ್ಯಕ್ಷರಾದ ಶ್ರೀ. ಬಿ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ರಾಜಕೀಯ ಕೈದಿಗಳ ದಿನಾಚರಣೆಯು ಈ ದಿನ ಜರಗಿತು. ಶ್ರೀ ಹೊಳ್ಳರೇ ಮೊದಲಾದ ಮಹನೀಯರು ರಾಜಕೀಯ ಕೈದಿಗಳನ್ನು ಕೂಡಲೇ ಬಿಡಬೇಕೆಂದೂ, ಅವರನ್ನು ಇನ್ನು ಜೈಲಿನಲ್ಲಿರಿಸುವುದು ತಪ್ಪೆಂದೂ ಹೇಳಿದರು. ಅಧ್ಯಕ್ಷರ ಭಾಷಣವಾಗಿ ಸಭೆಯು ಮುಕ್ತಾಯವಾಯಿತು

ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಯಿ.

ಇದರ 36ನೇ ವಾರ್ಷಿಕ ಮಹಾಸಭೆಯು ತಾ. 14-5-39ರಲ್ಲು ಮಂಡಳಿಯ ರಿಜಿಸ್ಟರ್ಡ್ ಆಫೀಸಿನಲ್ಲಿ ಡಾ. ಮೋಹನ್ ಚಂದರ್, ಪಿ. ಕರ್ಕೇರರ ಅಧ್ಯಕ್ಷತೆಯಲ್ಲಿ ಜರಗಿತು. ದಿವಂಗತರಾದ ಮಂಡಳಿಯ ಆಶ್ರಯದಾತರ ಹಾಗೂ ಮೆಂಬರರ ಕುರಿತು ಸಂತಾಪ ಸೂಚಕ ಠರಾವು ಮಾಡಿ ಜಿಲ್ಲಾ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಆಯ ವ್ಯಯದ ಪಟ್ಟಿಯನ್ನೊಳಗೊಂಡ 1938ನೇ ಇಸವಿಯ ವಾರ್ಷಿಕ ವರದಿಯನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯ್ತು. 1938ನೇ ಇಸವಿಯಲ್ಲಿ ಮಂಡಳಿಯ ಆರ್ಥಿಕಸ್ಥಿತಿಯು ಅಭಿವೃದ್ಧಿಯಾಗುವಂತೆ ವಿಶೇಷವಾಗಿ ಪ್ರಯತ್ನಪಟ್ಟ ಮಹನೀಯರಿಗೆ ಪಾರಿತೋಷಕವನ್ನು ಹಂಚಲಾಯ್ತು. 1939ನೇ ಇಸವಿಯ ಬಗ್ಗೆ ಗೌರವ ಲೆಕ್ಕ ಪರಿಶೋಧಕರನ್ನು ನೇಮಕ ಮಾಡಿ ಈ ಕೆಳಗಿನ ಹೊಸ ಕಾರ್ಯನಿರ್ವಾಹಕ ಸಭೆಯನ್ನು ದೃಢೀಕರಿಸಲಾಯ್ತು. ಅಧ್ಯಕ್ಷರು ರಾ. ಯನ್. ಕೆ. ಬಂಗೇರರು, ಉಪಾಧ್ಯಕ್ಷರು ರಾ. ಡಿ. ಐ. ಕರ್ಕೇರರು, ಗೌರವ ಜತೆ ಕಾರ್ಯದರ್ಶಿಯವರು, ರಾ. ಆರ್. ಕೆ. ಕುಂದರರು ಮತ್ತು ರಾ. ಬಿ. ಶಿವಸಾಲಿಯಾನರು, ಮಾನಾರ್ಥ ಜತೆ ಕೋಶಾಧಿಕಾರಿಯರು, ರಾ. ವಿ. ಬಿ. ಕರ್ಕೇರರು ಮತ್ತು ರಾ. ಜಿ. ಸಿ. ಪುತ್ರನರು, ಮೆಂಬರರು; ರಾಗಳಾದ ಯಸ್. ಕೆ ಮೈಂದನರು ಆರ್. ಎ. ಅಮೀನರು, ಐ.ಪಿ. ಪುತ್ರನರು, ಸಿ. ಪಿ. ಕರ್ಕೇರರು, ಕೆ. ಯು. ಮೆಂಡನರು, ಯು. ರಾಮರಾಯರು, ಯಚ್. ಕೆ. ಎ. ಕುಂದರಾನರು, ಆರ್. ಜಿ. ಅಮೀನರು, ಯಸ್ ಆರ್. ಕುಂದರರು, ಯಸ್. ಪಿ. ಬಂಗೇರರು, ಯಂ ಸಿ. ಕರ್ಕೇರರು, B. A. ಕೆ. ಮಹಾಲಿಂಗ ಸುವರ್ಣರು, ನಾರಾಯಣ ಬಿ. ಬಂಗೇರರು ಮತ್ತು ಸುಬ್ರಾಯ್ ಎ. ಕೋಟೆಂಕಾರರು, ಪೂರ್ವಾಧಿಕೃತ ಮೆಂಬರರು— ರಾಗಳಾದ ಕೆ. ಬಿ. ಕರ್ಕೇರರು, ಯಚ್. ಯಸ್. ಮೆಂಡನರು ಮತ್ತು ಬಿ. ಎ. ಕರ್ಕೇರರು, ಶ್ರೀಯುತ ಯಸ್. ಕೆ. ಮೈಂದನ್ ಮತ್ತು ಶ್ರೀ. ರಾಘು ಎ. ಅಮೀನರನ್ನು ಮಂಡಳಿಯ ರಾತ್ರಿಶಾಲೆಯ ಮಾನಾರ್ಥ ಜತೆ ಸುಪರಿಂಟೆಂಡೆಂಟರನ್ನಾಗಿಯೂ, ರಾ. ವಿ. ಪಿ. ಪುತ್ರನರನ್ನು ಮಂಡಳಿಯ ವಾಚನಾಲಯದ ಮಾನಾರ್ಥ ಲೈಬ್ರೆರಿಯರನ್ನಾಗಿಯೂ ಸರ್ವಾನುಮತದಿಂದ ನೇಮಕ ಮಾಡಲಾಯ್ತು. ಮಂಡಳಿಯ ಮಂಗಳೂರು ಶಾಖೆಯ ಕಾರ್ಯಗಳನ್ನು ಸಾಗಿಸುವ ನಿಮಿತ್ತ ಈ ಕೆಳಗಿನ ಜಾತಿ ಪ್ರಮುಖರಿಂದೊಡಗೂಡಿದ ಕಮಿಟಿಯೊಂದನ್ನು ನೇಮಕ ಮಾಡಲಾಯ್ತು. ಅಧ್ಯಕ್ಷರ ರಾ. ಕೆ. ಯಂ. ಸೋಮನವರು ಗೌರವ ಕಾರ್ಯದರ್ಶಿ ಮತ್ತು ಕೋಶಾಧಿಕಾರಿಯರು ರಾ. ಯ.ಫ್. ಬಿ. ಕೋಟೆಂಕಾರರು, ಮೆಂಬರರು, ರಾಗಳಾದ ಉದಿಯಾವರ್ ಸದಿಯನವರು, ಕೈಪುಂಜಾಲು ಚೆನ್ನಪ್ಪನವರು, ಹೊಸ್ಗೆ ಬಜಾರು ಮೋಹನಪ್ಪ ತಿಂಗಳಾಯರು, ಬೊಕ್ಕಪಟ್ನ ಜಾರಪ್ಪ, ಎ. ಪುತ್ರನರು, ಗುಂಡಿ ದುಗ್ಗಪ್ಪ, ಯನ್. ಶ್ರೀಯಾನರು, ಸುರತ್ಕಲ್ ಸೋಮಪ್ಪ ಬಿ. ಕೋಟೆಂಕಾರರು ಮತ್ತು ಬೆಂಗ್ರೆ ಯು. ಕೃಷ್ಣಪ್ಪನವರು. ಮಂಡಳಿಯ ಪೂರ್ವಾಧಿಕೃತ ಮೆಂಬರಿಕೆಯಿಂದ ನಿವೃತ್ತರಾದ ರಾ. ಸುರತ್ಕಲ್ ಸೋಮಪ್ಪ, ಬಿ. ಕೋಟೆಂಕಾರ್ ಮತ್ತು ಕಾಡಿಪಟ್ನ ಚೆಂದು, ಎ. ಮೊಸ್ತರರ ಸ್ಥಾನಕ್ಕೆ ರಾ. ವಳಲ್ಕೆ ಕಾಂತಪ್ಪ ಯು. ಮೆಂಡನರನ್ನೂ ಮಾಳೂರು ಚಂದರ್, ಪಿ. ಕರ್ಕೇರರನ್ನೂ ಸರ್ವಾನುಮತದಿಂದ ನೇಮಕ ಮಾಡಲಾಯ್ತು. 1938ನೇ ಇಸವಿಯ ಕಾರ್ಯನಿರ್ವಾಹಕ ಸಭೆಯವರು ನಿರ್ವಹಿಸಿರುವ ಕಾರ್ಯಗಳನ್ನು ಪ್ರಶಂಸಿಸಿ ಸಂಸ್ಥೆಯ ಮುಂದಿನ ಅಭಿವೃದ್ಧಿಯ ಕುರಿತಾಗಿ ಹಲವು ಮೆಂಬರರು ಮಾತಾಡಿದರು. ವರದಿಯ ವರ್ಷದಲ್ಲಿ ಮಂಡಳಿಗೆ ಹಲವು ವಿಧಗಳಲ್ಲಿ ಸಹಾಯ ಮಾಡಿರುವ ಸರ್ವ ಮೆಂಬರರನ್ನು ಅಭಿನಂದಿಸಿದ ಬಳಿಕ ಮಾನ್ಯ ಅಧ್ಯಕ್ಷರಿಗೂ ಸಭಿಕ ಮಹಾಶಯರಿಗೂ ಧನ್ಯವಾದವನ್ನರ್ಪಿಸಿ ಸಭೆಯು ಮುಕ್ತಾಯವಾಯಿತು.

ಕರಾಮಾತಿ ದರ್ಪಣ

ಇದೊಂದು ಉಚ್ಚ ತರದ ಕನ್ನಡಿ. ಯಾವ ವಯಸ್ಸಿನವರೂ ಇದನ್ನು ನೋಡಬಹುದು. ಕದ್ದು ಹೋದ ಮಾಲು ಎಲ್ಲಿದೆ? ಕಾಯಿಲೆ ಗುಣವಾದೀತೆ? ಇಲ್ಲವೆ? ದುಃಖಪರಿಹಾರ ಮಾರ್ಗ ಯಾವುದು? ಹೂಳಿಟ್ಟ ನಿಧಿ ಎಲ್ಲಿದೆ? ಕನ್ನದ ಕೆಲಸ ಕೈಗೂಡುವುದೆ? ಪ್ರೇಮ ಕಾರ್ಯ, ಪರೀಕ್ಷೆಗಳು, ಕೋರ್ಟು ವ್ಯವಹಾರಾದಿಗಳಲ್ಲಿ ವಿಜಯ ದೊರೆಯುವುದೇ? ಎಂಬುದನ್ನೆಲ್ಲ ಈ ಕನ್ನಡಿಯಿಂದ ತಿಳಿಯಬಹುದು. ಸ್ವರ್ಗಸ್ಥ ಮಾತಾಪಿತೃ, ಪುತ್ರಕಳತ್ರ, ಮಿತ್ರಬಾಂಧವರುಗಳೆಲ್ಲರ ಭೇಟಿಮಾಡಬಹುದು. ನೀವು ನೋಡದ, ಸ್ವಪ್ನದಲ್ಲಿಯೂ ನೋಡಲಸಾಧ್ಯವಾದವರನ್ನು ಸಹ ನೋಡಬಹುದು ಈ ಕನ್ನಡಿಯಲ್ಲಿ! ಬೆಲೆ ರೂ ೨—೮—೦

ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಇಂಗ್ಲಿಷಿನಲ್ಲೇ ಬರೆಯಿರಿ.

ದೊರೆಯುವ ಸ್ಥಳ:—

ಅಮೇರಿಕನ್ ಮೆಸ್ಮೆರಿಸಂ ಹೌಸ್,
ಪೋಸ್ಟು ಬಾಕ್ಸ್ ನಂ ೨೭,
(N.Y U.) ಅಮೃತಸರ [ಇಂಡಿಯಾ]

AMERICAN MISMERISUM HOUSE,
Post Box No. 27
(N.Y.U.) Amritsar
(INDIA)

ಲೂಟಿ! ಲೂಟಿ!! ಖಾಲಿ ೩ ರೂಪಾಯಿಗೆ ಹೊಸ ವರ್ಷಕ್ಕೆ

ಆಚ್ಛಾದ ಹೊಸ ನಮೂನೆ
ಒಂದು ಮಾಸದ ವರೆಗೆ ಮಾತ್ರ ವಿಶೇಷ ರಿಯಾಯತಿ.



ಶೀಘ್ರ ವಿಕ್ರಯ ಆಗುತ್ತಿದೆ. ವಿಳಂಬ ಮಾಡಿದರೆ ಪಶ್ಚಾತ್ತಾಪ ಪಡಬೇಕಾದೀತು.

ತಾಜಾ ಅಮೆರಿಕನ್ ಅಲಾರ್ಮ್ ಪಿಸ್ತೂಲು

ಹೆಚ್ಚು ಸಂಖ್ಯೆಯಲ್ಲಿ ಕೊಂಡುಕೊಂಡರೆ ಧಾರಾಳ ಕಮಿಶನು ಇದೆ. ಚಿತ್ರದಲ್ಲಿರುವಂತೆ 7 ಇಂಚು ಉದ್ದ 1½ ಔನ್ಸುಭಾರ. ಸೋಡಿದೊಡನೆ ಮೃಗಗಳು ಭೀತರಾಗುವವು. ಕಳ್ಳಕಾಕರು, ದುಷ್ಟ ಮೃಗಗಳು ಭಯಂಕರ ಶಬ್ದ ಕೇಳಿ ಪಲಾಯನ ಮಾಡುವವು. ಕೂಡಲೇ ಕೊಂಡುಕೊಂಡು ನಿಮ್ಮ ಒಡವೆಗಳನ್ನೂ ಆತ್ಮವನ್ನೂ ರಕ್ಷಿಸಿಕೊಳ್ಳಿರಿ. ಲೈಸನ್ಸಿಲ್ಲದೆ ಪ್ರತಿಯೊಬ್ಬನೂ ಉಪಯೋಗಿಸಬಹುದು ಇದರೊಂದಿಗೆ 300 ಗುಂಡುಗಳು ಉಚಿತ. 50 ಗುಂಡುಗಳನ್ನು ಏಕದಂ ಹೊಡೆಯುವ ಪಿಸ್ತೂಗೆ ರೂ. 3/-, ಒಂದೇ ಸಲ 70ಗುಂಡುಬಿಡುವುದಕ್ಕೆ ರೂ. 3/8-. 200 ಹಾರಿಸುವುದಕ್ಕೆ ರೂ. 4/- ಅಂಚೆ ವೆಚ್ಚ ಬೇರೆ 1000 ಗುಂಡುಗಳಿಗೆ ರೂ. 2/-ಒಕ್ಕೆ ಡಬ್ಬಿಗೆ 0-8-0. ಪಿಸ್ತೂಲಿಡುವ ಸುಂದರ ಪೆಟ್ಟಿಗೆಗೆ ರೂ. 1-8-0. (ನಿಮ್ಮ ಮತ್ತು ನಮ್ಮ ವಿಳಾಸವನ್ನು ಸ್ಪಷ್ಟ ಬರೆಯಿರಿ)

ದೊರೆಯುವ ಸ್ಥಳ:-

ಅಮೆರಿಕನ್ ಪಿಸ್ತೂಲು ಹೌಸ್,
ಪಿ. ಬಿ. ಬಾಕ್ಸ್ ನಂ. 27
(N.Y.U.) ಅಮೃತಸರ [ಇಂಡಿಯಾ]

American Pistol Co.
P. B. No. 27 (N. Y. U.)
Amritsar (India)

೧೦ ಗಡಿಯಾರಗಳು ಬರೇ ೩|| ರೂಪಾಯಿಗೆ



ಎರಡು ರೆಮ್ಮೀ ಕೈವಾಚುಗಳು, ೨ ರೆಮ್ಮೀ ತಿಜಿಗಡಿಯಾರಗಳು, ಮತ್ತು ಒಂದು ಗಟ್ಟಿಯಂತ್ರದ ಸರಿ ಸಮಯ ತೋರಿಸುವ ಜರ್ಮನಿ ಟೈಂಪೀಸ, ೩೦ ಗಂಟೆಗೊಮ್ಮೆ ಕೀ, ೧೦ವರ್ಷದ ಗ್ಯಾರಂಟಿ ಈ ಗಡಿಯಾರವನ್ನು ವಿಲಾಯಿತಿಯಿಂದ ಹೆಚ್ಚು ಸಂಖ್ಯೆಯಲ್ಲಿ ತರಿಸಿದ್ದೇವೆ. ಈ ರಿಯಾಯತಿ ದರದಲ್ಲಿ ಕೇವಲ ೧೦,೦೦೦ ಗಡಿಯಾರಗಳನ್ನು ಮಾತ್ರವೇ ಮಾರುವೆವು. ತ್ವರೆ ಮಾಡಿರಿ! ಸುಸಂದರ್ಭ ತಪ್ಪಿಹೋದೀತು. ಇದರೊಂದಿಗೆ ೧೪ ಕ್ಯಾರೆಟ್ ರೋಲ್ಡ್‌ಗೋಲ್ಡ್ ನಿಬ್ಬಿನ ಫೌಂಟನ್ ಪೆನು ಒಂದು, ದೃಷ್ಟಿಚಕ್ರ ಒಂದು, ಮುತ್ತಿನ ಹಾರ ಒಂದು— ಇಷ್ಟು ಉಚಿತ, ಅಂಚೆವೆಚ್ಚ ಬೇರೆ. ಅತೃಪ್ತಿಯಾದರೆ ಹಣ ಹಿಂತೆ. ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ.

ದೊರೆಯುವ ಸ್ಥಳ:—

ಜರ್ಮನ್ ವಾಚ್ ಕಂಪೆನಿ,
ಪೋಸ್ಟು ಬಾಕ್ಸ್ ನಂ. ೨೭
(N.Y U.) ಅಮೃತಸರ [ಇಂಡಿಯಾ]

German Watch Co.
P. B. No. 27 (N.Y.U.)
AMRITSAR, (India).

ವಾರದ ಭವಿಷ್ಯ

ಮುಂದಾಗುವುದನ್ನು ಇಂದೇ ತಿಳಿಯಿರಿ.

(ತಾ. 25-5-39ರಿಂದ ತಾ. 1-6-39ರ ವರೆಗೆ)

[ಜ್ಯೋತಿಷವು ಅಸ್ಪಷ್ಟವಾದುದಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಿನ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ. ಸಂ ನ.]

ಮೇಷರಾಶಿ—

ದೇಹಕ್ಕೆ ಸುಖವಿಲ್ಲ, ಮನಸ್ಸಿಗೆ ಸ್ಥಿರವಿಲ್ಲ. ಈ ರೀತಿಯಲ್ಲಿರುವುದು ನಿಮ್ಮ ಪ್ರಕೃತದ ವಿಧ್ಯಮಾನವು. ಈ ತೆರನಾಗಿ ದೈಹಿಕ ಮಾನಸಿಕ ಬಲಹೀನರಾದ ನಿಮಗೆ ಆತ್ಮಶಕ್ತಿಯೂ ಬೇಕಷ್ಟಿಲ್ಲದಿರುವುದರಿಂದ ಯಾವ ಕಾರ್ಯನಿರ್ವಹಣವೂ ನಿಮ್ಮಿಂದ ಸಾಗದಾಗುವುದು. ಅಂಜುಬುರುಕತನವು ನಿಮ್ಮನ್ನು ಯಾವ ಕಾರ್ಯದಲ್ಲಿಯೂ ಮುಂದೊತ್ತಲು ಬಿಡಲೊಲ್ಲದು. ಖರ್ಚಿಗೆ ಬೇಕಾದಷ್ಟು ಸಂಪಾದನೆಯು ಇಲ್ಲದಿರುವುದರಿಂದ ಸ್ವಲ್ಪಾಂಶ ಆರ್ಥಿಕ ಮುಗ್ಗಟ್ಟಿಗೆ ಸಿಲುಕುವಿರಿ. ಒಂದೇ ಕಡೆಯಲ್ಲಿ ಹೆಚ್ಚು ಸಮಯ ನಿಲ್ಲದೆ ಆಗಾಗ ಸ್ಥಾನವನ್ನು ಬದಲಾಯಿಸುವಿರಿ. ಇದರಿಂದ ಹೆಚ್ಚಿನ ಕಷ್ಟನಷ್ಟಗಳಿಗೀಡಾಗುವಿರಿ, ಆದರೂ ತಾ. 28ರಿಂದ 31ರವರೆಗೂ ಸ್ವಲ್ಪ ಮಟ್ಟಿಗೆ ಗ್ರಹಸ್ಥಿತಿಯು ಉತ್ತಮವಿರುವುದರಿಂದ ವಾಣಿಜ್ಯ ನೌಕರಿಗಳಲ್ಲಿ ಕೆಲಮಟ್ಟಿಗೆ ಲಾಭವೂ ಮನಶ್ಶಾಂತಿಯೂ ಭೋಗ್ಯವಸ್ತುಗಳ ಲಾಭವೂ ಆರೋಗ್ಯವೂ ದೊರೆಯಲಿರುವುದು.

ವೃಷಭರಾಶಿ—

ಸುರಾಸುರ ಮಂತ್ರಿಗಳಾದ ಗುರುಶುಕ್ರರ ಅನುಗ್ರಹವು ನಿಮ್ಮ ಮೇಲಿರುವುದರಿಂದ ಇತರ ಗ್ರಹರ ಆಗ್ರಹವು ನಿಮ್ಮ ಮೇಲೆ ಏನೊಂದೂ ವಿಪರೀತ ಪರಿಣಾಮವನ್ನು ಮಾಡಲು ಸಮರ್ಥವಾಗಲೊಲ್ಲದು. ಅನುದಿನದ ಜೀವನ ನಿರ್ವಾಹವು ಸುಗಮದಿಂದ ಸಾಗುವುದು. ಇಂದಿನ ದಿನವು ಕಳೆದುದು ಕಳೆಯಿತು. ಮುಂದಿನ ದಿನ ಹೇಗೂ ಬರಲಿ ಎಂಬ ಭಾವನೆಯೇ ನಿಮ್ಮಲ್ಲಿ ಸದಾ ನೆಲಸಿರುವುದು. ಕೆಲವೊಮ್ಮೆ ದೇಹಪೀಡೆ, ನಾರ್ಗಾಶಿಕ್ರಮಣ ಇತ್ಯಾದಿಗಳು ಸಂಭವಿಸಿ ಒಮ್ಮೆಗೆ ನಿಮ್ಮನ್ನು ದಿಗ್ಭ್ರಾಂತರನ್ನಾಗಿ ಮಾಡುವವು. ದಿನಹೋದಂತೆ ಶರೀರದಲ್ಲಿ ಅಶಕ್ತಿ ಆಲಸ್ಯಗಳು ಹೆಚ್ಚುವವು. ರಾಜಕೀಯ ಮತ್ತು ಭೂಸಂಬಂಧವಾದ ಕಾರ್ಯಗಳಲ್ಲಿ ಪರಾಭವ ಸಂಭವಿಸಿದರೂ ದೈವಬಲದಿಂದ ನೀವದನ್ನು ತಡೆದುಕೊಳ್ಳುವಿರಿ. ವ್ಯಾಪಾರೀ ಜನರಿಗೂ ಗಾಯನ ನೃತ್ಯ ಕಲಾವಿಶಾರದರಿಗೂ ಮತ್ತು ವೇಶ್ಯಾಸ್ತ್ರೀಯರಿಗೂ ಕಾಲವು ಅನುಕೂಲವಾಗಿರುವುದು. ತಾ. 26ರಿಂದ 29ರವರೆಗಿನ ದಿನಗಳು ಚೆನ್ನಾಗಿಲ್ಲದಿರುವುದರಿಂದ ಕಲಹ ಶೋಕ ವಿಪತ್ತುಗಳು ಹೆಚ್ಚುವವು.

ಮಿಥುನರಾಶಿ—

"ಯತ್ತದಗ್ರೇ ವಿಷಮಿವ ಪರಿಣಾಮೇಽಮೃತೋಪಮಂ" ಎಂಬ ನೀತಿವಚನದಂತೆ ಯಾವುದು ಆರಂಭದಲ್ಲಿ ವಿಷದಂತೆ ಬಹಳ ಕಷ್ಟ ಮತ್ತು ಅಸಹ್ಯವಾಗಿ ಕಾಣುವುದೋ ಅದು ಅವಸಾನದಲ್ಲಿ ಅಮೃತತುಲ್ಯವಾಗುವುದು. ಹೀಗೆಯೇ ಲೋಕದಲ್ಲಿ ಸಜ್ಜನರಿಗೂ ಸದ್ಧರ್ಮಕ್ಕೂ ಸತ್ಕಾರ್ಯಕ್ಕೂ ಆರಂಭದಲ್ಲಿ ಅನೇಕ ತೊಡಕು ತೊಂದರೆಗಳು ಬಂದರೂ ಮುಂದೆ ಸಿಗತಕ್ಕ ಫಲವು ಅತ್ಯುತ್ತಮವಾಗಿರುವುದು. ಪ್ರಸ್ತುತ ನಿಮಗೆ ಅಸತ್ಕರ್ಮಗಳು ಸುಲಭವೂ ಸುಖಕರವೂ ಲಾಭದಾಯಕವಾಗಿಯೂ ಕಂಡುಬಂದರೂ ಅದರಿಂದ ಮುಂದೆ ಹೆಚ್ಚಿನ ಹಾನಿಗೊಳಗಾಗುವಿರಿ. ಆದಕಾರಣ ಸನ್ಮಾರ್ಗಾವಲಂಬಿಗಳಾಗಿರಿ. ಮಿತ್ರಜನರ ಸಮಾಗಮವಾಗಲಿರುವುದು, ಮತ್ತು ಅವರಿಂದ ಧನಲಾಭವೂ ಇಷ್ಟಾನ್ನಭೋಜನವೂ ಸಿಗಲಿರುವುದು. ವಿಪಕ್ಷೀಯರು ಹೆಚ್ಚಾಗಿ ಉಪದ್ರವಿಸುವುದರಿಂದ ನಿಮಗೆ ಕೆಲವು ಪ್ರಕರಣಗಳಲ್ಲಿ ಪರಾಜಯವೂ ಹೆಚ್ಚಿನಂಶ ಧನವ್ಯಯವೂ ಎಚ್ಚರತಪ್ಪಿದಲ್ಲಿ ಮಾನಹಾನಿಯ ಪ್ರಸಂಗವೂ ಒದಗಬಹುದು. ತಾ 25 ಮತ್ತು 28 ರಿಂದ 31ರವರೆಗಿನ ದಿನಗಳನ್ನು ಬಹಳ ಜಾಗರೂಕತೆಯಿಂದ ಕಳೆಯಬೇಕಾಗಿದೆ.

ಕರ್ಕಾಟಕರಾಶಿ—

ಈ ವಾರದಲ್ಲಿ ನಿಮಗೆ ಅನಿಷ್ಟ ಕರ್ಮಗಳಿಗಿಂತಲೂ ಇಷ್ಟಾರ್ಥವೇ ಹೆಚ್ಚಾಗಿ ಫಲಿಸುವ ಸಂಭವವಿದೆ. ಕೋರ್ಟುಕಛೇರಿಗಳ ಕಾರ್ಯಗಳಲ್ಲಿ ಜಯ ಮತ್ತು ಧನವಾಹನಗಳ ಲಾಭವೂ ನೌಕರಿ ಭಾಗದಲ್ಲಿ ಯೋಗ್ಯವಾದ ಫಲವೂ ಮನಸ್ಸಿಗೆ ಉಲ್ಲಾಸವೂ ದೊರೆಯಲಿದೆ. ನಿಮ್ಮ ಬುದ್ಧಿಚಾತುರ್ಯದಿಂದ ಸ್ವೀಕೃತ ಹಲವಾರು ಕಾರ್ಯಗಳನ್ನು ಬಹಳ ಸುಲಭದಿಂದ ಕೊನೆಗೊಳಿಸಿ ಜನರ ಪ್ರಶಂಸೆಗೆ ಪಾತ್ರರಾಗುವಿರಿ. ಆದರೂ ಸಾಮಾನ್ಯವಾಗಿ ಕಂಡದ್ದು ಕಂಡಂತೆ ಹೇಳುವ ಗುಣವು ನಿಮ್ಮದಾಗಿರುವುದು. ಆದ್ದರಿಂದಲೇ ನಾಲಿಗೆಯನ್ನು ಬಿಗಿಹಿಡಿದಷ್ಟು ಒಳ್ಳಿತು. ಇಲ್ಲದಲ್ಲಿ ಹಲವರೊಡನೆ ಕಲಹ ಹೆಚ್ಚೇಕೆ ನಿಮ್ಮ ಅರ್ಧಾಂಗಿಯೊಡನೆಯೂ ಕೂಡ ಜಗಳವಾಗದಿರಲಾರದು. ದುಡಿದ ಹಣದಲ್ಲಿ ಸ್ವಲ್ಪಾಂಶವು ಅಸತ್ಕ್ರಿಯೆಗಳ ಮೂಲಕ ವ್ಯಯವಾಗಲಿರುವುದು ತಾ. 25, 28, 29, ಹೊರತಾಗಿ ಇತರ ದಿನಗಳು ಅನಿಷ್ಟಕಾರಿಗಳೇ ಆಗಿರುವವು.

ಸಿಂಹರಾಶಿ—

ಕಾಲವು ಹೆಚ್ಚಿನಂಶ ಅನುಕೂಲ ಸ್ಥಿತಿಗೆ ಬಂದಿರುವುದು. ಲೋಕೋತ್ತರವಾದ ಮತ್ತು ಶ್ರೇಯಸ್ಕರಗಳಾದ ಕಾರ್ಯಗಳನ್ನು ಮಾಡಿ ಕೀರ್ತಿಶಾಲಿಗಳಾಗುವಿರಿ. "ಶ್ರೇಯಾಂಸಿ ಬಹು ವಿಘ್ನಾನಿ" ಎಂಬಂತೆ ಒಳ್ಳೇ ಕಾರ್ಯಗಳಿಗೆ ವಿಘ್ನಗಳಧಿಕವಾಗಿರುವುದು ನೈಸರ್ಗಿಕ ಗುಣವದು. ಆದರೂ ತೀವ್ರ ಸ್ವಪರಾಕ್ರಮದಿಂದ ಅವನ್ನು ಗಣ್ಯಕ್ಕೆ ತರಲಾರಿರಿ. ವೈದ್ಯಕೀಯ ವೃತ್ತಿಯುಳ್ಳವರು ಸ್ವೋದ್ಯೋಗದಲ್ಲಿ ಒಳ್ಳೆಯ ಲಾಭವನ್ನೂ ಕೀರ್ತಿಯನ್ನೂ ಗಳಿಸುವರು. ಬೇಸಾಯಗಾರರೂ ವಿದ್ಯೋಪಜೀವಿಗಳೂ ವಣಿಗ್ಜನರೂ ಶ್ರಮಕ್ಕೆ ತಕ್ಕ ಫಲವನ್ನು ಹೊಂದಿಯೇ ತೀರುವರು. ಸಾಂಸಾರಿಕ ಭಾಗವು ಉತ್ತಮರೀತಿಯದಿರುವುದು. ಗೃಹಸೌಖ್ಯಕ್ಕೆ ಹಾನಿಯಾಗದು. ಆದರೂ ಶರೀರಾಲಸ್ಯದ ನಿಮಿತ್ತ ಸ್ವಲ್ಪಾಂಶ ಧನವ್ಯಯವೂ ಪ್ರಯಾಣಸಲುವಾಗಿ ನಷ್ಟಕಷ್ಟಗಳೂ ಸಂಭವಿಸಲಿವೆ. ತಾ. 26, 27, ಮತ್ತು 30, 31, ಈ ದಿನಗಳು ಅತ್ಯುತ್ತಮಗಳಾಗಿವೆ.

ಕನ್ಯಾರಾಶಿ—

ಉತ್ತಮೋಽದು ಬಿತ್ತಮೋಽದು ನೆನ್ನೆಚ್ಛೆ, ಆಗೋದು ಹೋಗೋದು ದೈವೇಚ್ಛೆ, ಈ ರೀತಿಯ ಪರಿಸ್ಥಿತಿಯು ನಿಮಗೀಗ ಒದಗಿರುವುದು. ಯಾವ ಕಾರ್ಯದಲ್ಲೂ ಫಲಸಿಗುವುದೆಂಬ ನಿಶ್ಚಿತಾಭಿಪ್ರಾಯವು ನಿಮಗಿಲ್ಲವು. ಒಳ್ಳೆಯ ಮಾತುಕತೆಗಳಿಂದ ಜನರನ್ನು ಒಲಿಸಿ ನಿಮ್ಮ ಪ್ರೌಢಿಮೆಯನ್ನು ವ್ಯಯಿಸಿ ಕಾರ್ಯಮಾಡುವಿರಿ. ಆದರೂ ತಕ್ಕ ಫಲವು ನಿಮಗೆ ಸಿಗುವ ಸಂಭವವಿಲ್ಲವು, ಕೆಲವು ಜನರು ನಿಮ್ಮ ಇದಿರುಗೊಂದು ರೀತಿ ಹಿಂಗಡೆಯಿಂದ ಮತ್ತೊಂದು ರೀತಿಯಲ್ಲಿ ವರ್ತಿಸಿ ನಿಮ್ಮನ್ನು ಮೋಸದ ಬಲೆಯಲ್ಲಿ ಕೆಡಹಲಿರುವರು, ಜಾಗ್ರತೆ, ಆರೋಗ್ಯವೂ ಕೂಡ ನಿಮಗೆ ಚೆನ್ನಾಗಿರದು. ಭೂಧನಸಂಬಂಧವಾಗಿ ಕಲಹವೆದ್ದು ಕೋರ್ಟುವಗೈರೆಗಳಿಗೆ ತಿರುಗುವ ಪ್ರಸಂಗವೊದಗಲಿದೆ. ಸಂಸಾರದಲ್ಲಿಯೂ ನಿಮಗೆ ತೃಪ್ತಿಯಿಲ್ಲವು. ಕಷ್ಟಾರ್ಜಿತವಾದ ಹಣವು ಕೈಗೆ ದೊರಕದಂತಾಗುವುದು. ಇವೇ ಮೊದಲಾದ ವ್ಯಸನಗಳಿಂದ ಪೀಡಿತರಾದ ನಿಮ್ಮ ಮುಖವು ಸದಾ ನಿಸ್ತೇಜವಾಗಿರುವುದು. ತಾ. 25, 26, 27, ಮತ್ತು 30, 31, ಈ ದಿನಗಳು ಧನವ್ಯಯಕಾರಿಗಳಾಗಿವೆ.

ತುಲಾರಾಶಿ—

ಬುಧನೊಬ್ಬನೊಳದು ಮಿಕ್ಕೆಲ್ಲಾ ಗ್ರಹರು ಪ್ರತಿಕೂಲರಾಗಿರುವುದರಿಂದ ನಿಮ್ಮ ಸದ್ಯದ ಪರಿಸ್ಥಿತಿಯು ಸಾಮಾಜನಕವಾಗಿರುವುದೆಂದೇ ಹೇಳಬೇಕಾಗಿದೆ. ಯಾವ ಭಾಗದಲ್ಲೂ ನಿಮಗೆ ಆಶಾಜ್ಯೋತಿಯು ಕಾಣಿಸಲೊಲ್ಲದು ಒಂದರಹಿಂದೊಂದೆಂಬಂತೆ ಆಪತ್ತುಗಳು ಮೇಲೆ ಮೇಲೆ ಬರುವವು. ಮಿತ್ರಜನರೂ ಕೂಡ ಶತ್ರುಗಳಂತೆ ವರ್ತಿಸುವರು. ಸ್ತ್ರೀಯನ್ನು ನಿಮಿತ್ತೀಕರಿಸಿಕೊಂಡು ಬರತಕ್ಕ ಪೀಡೆ ಅನಿಷ್ಟಗಳು ನಿಮ್ಮ ಶೋಕಾಗ್ನಿಗೆ ತುಪ್ಪವನ್ನೆರೆದಂತಾಗುವವು. ಕೈಹಿಡಿದಾಕೆಯೂ ಕೂಡ ವಿಪರೀತವಾಗಿ ವರ್ತಿಸುವಳು, ಕಷ್ಟಕಾಲದಲ್ಲಿ ಕೆಟ್ಟಜನರ ಸಂಗವೆಂಬಂತೆ ದುರ್ಜನರ ಸಂಗಕ್ಕೆ ಬಲಿಬಿದ್ದು ಹೆಚ್ಚಿನ ಕಷ್ಟನಷ್ಟಗಳಿಗೆ ಗುರಿಯಾಗುವಿರಲ್ಲದೆ ಸಮಯಾನುಸಾರ ಮಾನಧನಕ್ಕೂ ಹಾನಿಯುಂಟಾಗುವುದು. ಮನೋವ್ಯಥೆಯು ನೆರಳಿನಂತೆ ನಿಮ್ಮನ್ನು ಹಿಂಬಾಲಿಸುವುದು, ಆಕಸ್ಮಾತ್ತಾಗಿ ಪ್ರಯಾಣವು ಗಂಟುಬಿದ್ದು ನಾನಾಪೀಡೆಗಳಿಗೊಳಗಾಗುವಿರಿ. ಆದರೂ ಹಣದ ಅಡಚಣೆಗೆ ಸಿಲುಕದಿರುವುದು ನಿಮ್ಮ ದೈವವೆನಬೇಕಾಗಿದೆ. ತಾ. 26-27 ಮತ್ತು 30-31 ಈ ದಿನಗಳು ಒಳ್ಳೆಯದು ಹಾನಿಕಾರಕಗಳಾಗಿಲ್ಲ.

ವೃಶ್ಚಿಕರಾಶಿ—

ದಿನಗಳುರುಳಿದಂತೆ ನಿಮ್ಮ ಭಾಗ್ಯಚಕ್ರವೂ ಕೂಡ ಉರುಳುತ್ತಲಿದ್ದು ಇಂದೀಗ ಸ್ವಲ್ಪಮಟ್ಟಿಗೆ ಹಿಂದಿನ ಸ್ಥಿತಿಗಿಂತ ಒಂದು ಮೆಟ್ಟಲು ಕೆಳಗಿಳಿದಿದೆಯೆನ್ನಬೇಕಾಗಿದೆ. ಈಗಲೀಗ ನಿಮಗೆ ಎರಡೆಂಟೆಣಿಸತಕ್ಕ ಜನರು ಹೆಚ್ಚುತ್ತಿರುವರು, ಒಮ್ಮೊಮ್ಮೆ ಶರೀರದಲ್ಲಿ ಉದರ ರೋಗ ಉಷ್ಣಜ್ವರ ಇತ್ಯಾದಿ ಬಾಧ್ಯಗಳು ಕಂಡುಬರುತ್ತಿರುವವು. ಶತ್ರುಜನರಿಂದ ಕಾರ್ಯಕ್ಕೆ ವಿಘ್ನ ಬರುವುದಾದರೂ ನೀವು ಧನಜನ ಬಲದಿಂದ ಅವುಗಳನ್ನು ಇದಿರಿಸಲು ಶಕ್ತರಿರುವಿರಿ. ಪುತ್ರ ಮುಖದಿಂದಲೂ ಚೋರಾದಿ ನೀಚಜನರಿಂದಲೂ ಕೂಡ ಧನಸಂಗ್ರಹಿಸುವಿರಿ. ಪಶು-ಪುತ್ರ-ಭೃತ್ಯಾದಿ ಸಕಲ ಸಂಪತ್ಸಮೃದ್ಧಿಯಿಂದ ಗೃಹವು ಪರಿಪೂರ್ಣವಾಗಿರುವುದರಿಂದ ಸಂಸಾರದ ವಿಷಯದಲ್ಲಿ ಮಗ್ನರಾಗುವಿರಿ. ವ್ಯಾಪಾರಿಗಳಿಗೂ ವಿದ್ಯಾರ್ಥಿಗಳಿಗೂ ಈ ವಾರವು ಅಹಿತವಾಗಿರುವುದು. ತಾ. 26ರಿಂದ 29ರ ವರೆಗಿನ ದಿನಗಳು ಉತ್ತಮಗಳಾಗಿವೆ.

ಧನುರಾಶಿ—

ಇಷ್ಟಾನಿಷ್ಟ ಗ್ರಹಸಾಮ್ಯವಿರುವುದರಿಂದ ನಿಮ್ಮ ತತ್ಕಾಲದ ಜೀವನಪಥದಲ್ಲಿ ಹೆಚ್ಚಿನ ಕೊರತೆಗಳಾಗಲಿ ಉಚ್ಛ್ರಾಯಸ್ಥಿತಿಯಾಗಲಿ ಕಂಡುಬರುವುದಿಲ್ಲವು. ಆದರೂ ಹಿಂದಿಗಿಂತ ಎಷ್ಟೋ ಉತ್ತಮ ಕಾಲವೆನ್ನಬಹುದು. ಹಲವಾರು ದೈಹಿಕ ಮಾನಸಿಕ ಚಿಂತೆಗಳಿಂದ ಮುಕ್ತರಾಗುವಿರಿ. ವಿರೋಧಿಗಳಿಂದಲ ಕಾನನಕ್ಕೆ ದಾವಾನಲಪ್ರಾಯರಾಗುವಿರಿ. ನೌಕರಿ ವರ್ಗದವರು ಉನ್ನತಸ್ಥಾನವನ್ನು ಹೊಂದಲಿರುವರು. ಸ್ವೀಕೃತ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ ಮಾತ್ರವಲ್ಲ ಸಂಪದ್ಭಾಗವೂ ಬಹ್ವಂಶ ಸುಧಾರಣೆ ಹೊಂದುವುದು. ಆದರೂ ರಾಜಕೀಯ ಕಾರ್ಯನಿಮಿತ್ತ ಧನವ್ಯಯವಾಗುವದಿದೆ. ಬಂಧುಬಳಗದವರ ನಿಮಿತ್ತವಾಗಿ ಕೆಲವೊಂದು ಕಷ್ಟವನ್ನನುಭವಿಸಬೇಕಾಗಿ ಬರುವುದು. ಸೇವಕಜನರಿಂದ ಕೂಡಿ ಕಲಹವಾಗುವ ಚಿಹ್ನೆಗಳೂ ಇವೆ. ಆದಕಾರಣ ತಾ. 25ರಿಂದ 29ರ ವರೆಗೆ ಸಕಲ ಕಾರ್ಯಗಳಲ್ಲಿ ಜಾಗ್ರತೆ ವಹಿಸಿದಷ್ಟು ಶ್ರೇಯಸ್ಕರ.

ಮಕರರಾಶಿ—

ಕಾಲಧರ್ಮವು ಸಂಪೂರ್ಣವಾಗಿ ನಿಮ್ಮಲ್ಲಿ ಫಲಿಸಲಿರುವುದು, ಅಷ್ಟೊಂದು ಹೀನಸ್ಥಿತಿಗೆ ಬಂದಿರುವುದು ನಿಮ್ಮ ಅದೃಷ್ಟವು, ನಡೆ ಚೆಂದ, ಇವರುಗಳಿಗೆ ಹೇಗೆ ವಿರೀತಗಳು ವೃದ್ಧಿಕ್ಷಯಗಳು ಇರುವವೋ ಅಂತೆಯೇ ಮನುಷ್ಯನಿಗೂ ಇರತಕ್ಕದ್ದು. ಲೋಕರೂಢಿಯೇ. ಕೆಲವು ವಾರಗಳ ಹಿಂದೆ ನೀವು ಪೂರ್ಣಿಮೆಯ ಚಂದ್ರನಂತಿದ್ದಿರಿ. ಇಂದೀಗ ಅಮಾವಾಸ್ಯೆಯ ಸಮಾಪಗತನಾದ ಚಂದ್ರಪ್ರಾಯರಾಗಿರುವಿರಿ. ಜನರಿಂದ ಅಪವಾದದ ಮಾತನ್ನು ಕೇಳುವಿರಿ. ಸಕಲ ಕಾರ್ಯಗಳಿಗೂ ವಿಘ್ನಗಳು ಮುಂದಾಗಿ ಬಂದು ಪ್ರಾಪ್ತವಾಗುವವು ಮನೆಯ ಜನರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಮಾರ್ಗವಾಗಿ ಪರಸ್ಪರ ಮನಸ್ತಾಪ ಕಲಹಗಳುಂಟಾಗುವವು. ಅನಾರೋಗ್ಯವೂ ಧನ, ಭಾರ್ಯಾ, ಮಿತ್ರ ಇವರುಗಳಿಂದ ವಿಯೋಗ ಇತ್ಯಾದ್ಯನಿಷ್ಟಗಳೂ ಸಂಭವಿಸುವವು, ಆರ್ಥಿಕಮುಗ್ಗಟ್ಟು ವಿಶೇಷವಾಗುವುದು. ತಾ. 30 31-1 ಈ ದಿನಗಳಲ್ಲಿ ಮಿತ್ರಜನರ ಬೆಂಬಲದಿಂದ ಕೆಲವೊಂದು ಇಷ್ಟಾರ್ಥಗಳ ಸಿದ್ಧಿಸಲಿವೆ.

ಕುಂಭರಾಶಿ—

ಕೋರ್ಟು ವಗೈರೆ ರಾಜಕೀಯ ಕಾರ್ಯಗಳಲ್ಲಿ ಸದ್ಯ ಮುಂದರಿಯದಿರಿ. ಕಾರ್ಯನಾಶ ಮಾನಹಾನಿಯೂ ಸಂಭವಿಸೀತು. ಡಾಕ್ಟರುಗಳಿಗೆ ಅಪಯಶಸ್ಸು ದೊರೆಯಲಿದೆ. ಪಿತ್ತಾಧಿಕ್ಯದಿಂದಾಗಿ ದೇಹದಲ್ಲಿ ಆಲಸ್ಯವು ತಲೆದೋರೀತು. ಇನ್ನಿತರ ಯಾವ ಭಾಗಗಳಲ್ಲೂ ನಿಮಗೆ ಹಾನಿಯಿರದು. ವಿದ್ಯೋಪಜೀವಿಗಳಿಗೂ ವ್ಯಾಪಾರೀ ಜನರಿಗೂ ಮತ್ತು ಸೇವಕಜನರಿಗೂ ಕೂಡ ಪ್ರಯತ್ನಕ್ಕಿಂತಲೂ ಅಧಿಕವಾಗಿ ಧನಸಿಗುವುದು. ಸದ್ವಿಚಾರಸಕ್ತರಾದ ಜನರಿಗೂ ಹೆಚ್ಚಿನ ಇಷ್ಟಾರ್ಥಗಳು ಕೈಗೂಡುವವು. ವಿಪಕ್ಷೀಯರು ನಿಮ್ಮ ಇದಿರು ಬಾರರು. ಸಾಂಸಾರಿಕ ತಾಪತ್ರಯಗಳು ನಿವಾರಣೆಯಾಗುವವು. ಧಾರ್ಮಿಕ ಕ್ರಿಯೆಗಳಲ್ಲಿ ಧನವ್ಯಯಿಸುವಿರಿ ಧನಾಗಮದ ಮಾರ್ಗಗಳು ಹಲವಿದ್ದು ಖರ್ಚಿನ ದಾರಿಗಳು ಅತೀವ ಕಡಿಮೆಯಿರುವುದರಿಂದ ಕೈಯಲ್ಲಿ ಯಾವಾಗಲೂ ನಾಲ್ಕುಕಾಸು ಇದ್ದೇ ಇರುವುದು, ತಾ. 25-26 27 ಮತ್ತು 1ಈ ದಿನಗಳು ಉತ್ತಮ ಫಲದಾಯಕಗಳಾಗಿವೆ,

ಮೀನರಾಶಿ—

ಇಷ್ಟಾರ್ಥಗಳು ಸುಗಮವಾಗಿ ನೆರವೇರುವುದರಿಂದ ಸದಾ ಸಂತೋಷಚಿತ್ತರಾಗುವಿರಿ. ಸದ್ಯದ ಗ್ರಹಸ್ಥಿತಿಯಲ್ಲಿ ನೀವು ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯಲಾರಿರಿ, ಅಂತೂ ಸಕಲ ಕಾರ್ಯಗಳಲ್ಲೂ ವಿಜಯಪ್ರಾಪ್ತಿಯಿದ್ದೇ ಇದೆಯೆಂದನೂ ತಪ್ಪಾಗದು.

ಚೈತನ್ಯ ಮತ್ತು
ಹೊಸ ಹುರುಪು

ಸಪೆದುಹೋದ ನರಗಳಿಗೆ ಚೈತನ್ಯಕೊಡಲು ರಕ್ತವನ್ನು ವೃದ್ಧಿಮಾಡಲು ಮತ್ತು ನಿಮಗೆ ತೇಜಸ್ಸನ್ನುಂಟುಮಾಡಲು ಪಂಡಿತ ಡಿ. ಗೋಪಾಲಾಚಾರ್ಲುರವರ ಜೀವಾಮೃತಂ ಅದ್ವಿತೀಯವಾದದ್ದಾಗಿದೆ. "ಜೀವಾಮೃತ"ವು ಆಶ್ಚರ್ಯರೀತಿಯಲ್ಲಿ ನಿಮ್ಮ ಎಲ್ಲಾ ನರಗಳಿಗೂ ಹೊಸ ಚೈತನ್ಯವನ್ನು ಕೊಟ್ಟು, ನೀವು ಸಂತೋಷವನ್ನು ಅನುಭವಿಸಲು ಸಹಕಾರಿಯಾಗಿದೆ.



ಜೀವಾಮೃತ

ತಯಾರಿಸುವವರು—
ಆಯುರ್ವೇದಾಶ್ರಮಂ, ಪೋ. ಬಾಕ್ಸ್‌ನಂ. ೨೮೭, ಮದ್ರಾಸು
ಸ್ಟಾಕಿಸ್ಟರು—
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಶಾಂತಿಯ ಮದುವೆ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಗೋಪಾಲಕೃಷ್ಣ—ಛೇ, ನಿನ್ನ ಅಕ್ಕ ಬರದಿದ್ದರೆ ಮದುವೆ ಆಗುವುದಿಲ್ಲವಾ? ಅವಳು ಇಲ್ಲಿಗೆ ಬಂದಳಂತ ನೀನು ಅಲ್ಲಿಗೆ ಹೋಗಬೇಕಾ?—ಎಷ್ಟು ಖರ್ಚಾಗುತ್ತದೆ ಗೊತ್ತೇ? ಇದೆಲ್ಲಾ ಅನಾವಶ್ಯಕವಲ್ವಾ? ಇದೊಂದು ಬಿಂಗ್ರಿ ಕಾನೂನು ಯಾರು ಮಾಡಿ ಸತ್ತರಪ್ಪಾ? ಏನೋ, ನನಗೆ ಯಾವುದೂ ತಿಳಿಯುವುದಿಲ್ಲ-ಕಣ್ಣೋ-ಕಾಲೋ-ಎಂದಾಗಿದೆ.

ಕನಕಾಕ್ಷಿ—ಹಾಗೆ ಹೇಳುತ್ತಾ ಕೂತುಕೊಂಡರೆ ಆಗುತ್ತಾ?-ನಮ್ಮ ಶಾಂತಿಯ ಮದುವೆಯೆಂದರೆ ಗುಜ್ಜೆ ಗುತ್ತು ಪಡ್ಪುಗುತ್ತಿನವರು ಹೆದರಿ ಹೋಗಬೇಕು-ನನ್ನ ಅಣ್ಣ ಡಾಕ್ಟರ ಮಗಳ ಮದ್ರಾಸ್ ಮದುವೆಗಿಂತ ಬಿಗಿಯಾಗಬೇಕು-ಮದ್ರಾಸೇ ಇಲ್ಲಿಗೆ ಬಂದಿದಾ ಎಂದು ಕಾಣಬೇಕು-ನಮ್ಮ ಶಾಂತಿಗೆ ಮದ್ರಾಸಿನಿಂದ ಜರಿಸೀರೆ ಕುಪ್ಪಸ ತರಿಸಬೇಕು-ವಜ್ರದ ಬೆಂಡೋಲೆಯಾಗಬೇಕು-ವಜ್ರದ ಬೊಟ್ಟು ಅವಶ್ಯ ಮುತ್ತಿನ ಹಾರ-ವಜ್ರದ ಹಾರ-ಕೈಗೆ ವಜ್ರದ ಬಳೆಗಳು-ಮುತ್ತಿನ ಬಳೆಗಳು-ವಜ್ರದ 'ಬ್ರೂಚ್' (Brooch), 'ಹೆಪಿನ್'(hairpin) ಗಂಡನ ಮನೆಗೆ ಹೋಗುವಾಗ ಹೊಸ ಹಾರ್ಮೋನಿ-ಬೆಳ್ಳಿ ಬಟ್ಟಲುಗಳು-ಬೆಳ್ಳಿ ತಟ್ಟೆಗಳು-ಕನ್ನಡಿ ಬಾಚಣಿಗೆ-ವಾರೆಸೀರೆ ಬಿಟ್ಟು ಬೇರೆ ನಾಲ್ಕೈದು ಸೀರೆಗಳು (ಎಲ್ಲಾ ಐವತ್ತು ರೂಪಾಯಿ ಮೇಲಿನವು) ಕುಪ್ಪಸಗಳು ನಾಲ್ಕೈದು ಜೋಡಿ-ಹೀಗೆಲ್ಲಾ ಎಷ್ಟು ಬೇಕು ನೋಡಿ!

ಗೋಪಾಲಕೃಷ್ಣ—ನೋಡಲಿಕ್ಕೆ ತೊಡಗಿದರೆ ನನಗೆ ಕಣ್ಣು ಕತ್ತಲೆ ಬರುತ್ತೆ! ರಾಮಾ, ರಾಮಾ-ನನಗೆ ಮದುವೆ ನೋಡಿಯೇ ಗೊತ್ತು-ಮಾಡಿ ಗೊತ್ತಿಲ್ಲ. ಕಷ್ಟ ಕಷ್ಟಾ! ನಿಮ್ಮ ಹೆಂಗಸರ ಕೈಯಿಂದ ತಪ್ಪುವುದು ಕಷ್ಟ-ಆಯಿತು-ಅಲ್ಲಾಂತ ಹೇಳಲಿಕ್ಕೆ ಆಗುತ್ತದಾ? ವರದಕ್ಷಿಣೆ ರೂಪಾಯಿ ನಾನು ಇಲ್ಲಿ ಮಾಡುತ್ತೆ-ಹ್ಯಾಗೂ ನೀನು ಮದ್ರಾಸಿಗೆ ಹೋಗುತ್ತೀಯಲ್ಲಾ ಅಕ್ಕನಿಗೆ ಹೇಳಲಿಕ್ಕೆ-ಅಲ್ಲಿ ಎಲ್ಲಾ ತೆಗೆದುಕೊಂಡುಬಿಡು-ಎಲ್ಲಾ ಈಗಲೇ ತೆಗೆದುಕೊಳ್ಳಬೇಕೆಂದು ಇಲ್ಲ. ಈಗ ಸದ್ಯಕ್ಕೆ ಕೆಲವು ನಿನ್ನ ಅಣ್ಣನ ಮಗಳ ಆಭರಣಗಳನ್ನೆ ಮದುಮಗಳಿಗೆ ಹಾಕುವ-ಕೆಲವು ತೆಕ್ಕೊಳ್ಳು-ಹಿಂದಿನಿಂದ ನಾನು ರೂಪಾಯಿ ಕೊಡುತ್ತೇನಾಗಿ ಬಾವನಿಗೆ ಹೇಳು-ಎಲ್ಲಾ ಒಮ್ಮೆಯೇ ಆಲೋಚನೆ ಮಾಡಿದರೆ ನನಗೆ ತಲೆ ಗರ್ರನೆ ತಿರುಗುತ್ತದೆ-ಹೌದು ನೀವು ಹೆಂಗಸರು ನಮಗೆ ಕುಣಿಯಲಿಕ್ಕೆ ಹೇಳುತ್ತೀರಿ ಖರೆ. ಆದರೆ ನಮಗೆ ಕಾಲು ಬಚ್ಚುವುದು ನಿಮಗೆ ಗೊತ್ತಾಗುತ್ತದಾ?-ನೀವು ಕುಣಿಯಿರಿ ಅನ್ನುತ್ತೀರಿ-ನೀವು ನಮಗೆ ಒಂದು ದೊಡ್ಡ ಪಾಪಿ-ಆಯಿತು ನಿನ್ನ ಅಣ್ಣನ ಹತ್ತಿರ ಎಲ್ಲಾ ವಿಲೆವಾರಿ ಮಾಡು. ನಾನು ಹಿಂದಿನಿಂದ ಎಲ್ಲಾ ಕೊಡುತ್ತೇನೆ—

ಕನಕಾಕ್ಷಿ—ಹಾಗಾದರೆ ಹಾಗೆ.

(ಪಟ್ಟು ಹೆಗ್ಗಡೇರು ಬಂದಾಗ)

ಗೋಪಾಲಕೃಷ್ಣ ಶೆಟ್ರು—ಬಾವ, ನಿಮ್ಮ ಸೊಸೆಗೆ ಮದುವೆ ಅಂತ ನಿಶ್ಚಯಿಸಿದೆಯಲ್ಲಾ-ಇಲ್ಲಿಯ ಸಕಲ ಪಾರುಪತ್ಯವನ್ನೂ ನೀವು ನೋಡಬೇಕು-ಚಪ್ಪರ, ಉಗ್ರಾಣದ ಡಿಪಾರ್ಟ್‌ಮೆಂಟ್ ನಿಮಗೆ—ಊಟದ ಡಿಪಾರ್ಟ್‌ಮೆಂಟ್ ನನ್ನ ತಮ್ಮ ಗೋವಿಂದನಿಗೆ ವಹಿಸಿಕೊಡುತ್ತೇನೆ ನಾನು ಎಲ್ಲಾದರೂ ಸ್ವಲ್ಪ ಹಣದ ವಿಲೆವಾರಿ ಮಾಡುತ್ತೇನೆ-ಮೋಟಾರ್ ಹೋಗಲಿಕ್ಕೆ ಪೆಟ್ರೋಲ್ ಆಗಬೇಕಷ್ಟೆ!

ಪಟ್ಟು ಹೆಗ್ಗಡೇರು—ಬಾವ, ಬಹು ಚಂದ-ಒಕ್ಕಲುಗಳಿಗೆಲ್ಲಾ ಹೇಳಿ ಕಳುಹಿಸಿ ಅವರನ್ನು ನನ್ನ ಸ್ವಾಧೀನ ಬಿಟ್ಟುಬಿಡಿ.

ಗೋಪಾಲಕೃಷ್ಣ—ಯಾರಲ್ಲಿ!-ಕಾಡ್ಯ, ಇಲ್ಲಿ ಬಾ-ನೋಡು, ಹೋಗಿ-ತುಲ್ಲರಾಕ್ಯರು, ಬಾಣದೊಟ್ಟು, ಗೋಳಿದಾಕ್ಯಾರ್, ದೋಲ್‌ದೊಟ್ಟು, ಗುದ್ದಲಾಕ್ಯಾರ್ ಮುಂತಾದ ಎಲ್ಲಾ ಒಕ್ಲುಗಳಿಗೆ ಯಜಮಾನ್ರ ಅಪ್ಪಣೆಯಾಗಿದೆ ಅಂತ ಹೇಳಿಬಿಡು.

ಪಟ್ಟು ಹೆಗ್ಗಡೇರು—ಬಾವನಿಗೂ ಬಾವನಿಗೂ ಜೋಡಿಯೆಂಬ ಹಾಗೆ-ನನಗೆ ಸ್ವಲ್ಪ ಚಳಿಜ್ವರ ಹಿಡಿಯಲಿಕ್ಕೆ ಶುರು ಆಗಿದೆ-ನೀವು ಮದುವೆ ಇಲ್ಲೇ ಮಾಡುವ ಗೊಂದಲ ಹೊತ್ತದ್ದು ಯಾಕೆ?-ದಿಬ್ಬಣ ತೆಕ್ಕೊಂಡು ಹೋಗಬಹುದಿತ್ತಲ್ಲಾ?

ಗೋಪಾಲಕೃಷ್ಣ—ಹೆಣ್ಣಿನ ಕಡೆಯವರು ಗಂಡಿನ ಕಡೆಯವರು ಹೇಳಿದನ್ನು ಕೇಳಬೇಕಲ್ಲಾ?

ಪಟ್ಟು ಹೆಗ್ಗಡೇರು—ಅಲ್ಲಾ-ಗುಜ್ಜೆ ಗುತ್ತು ಪಡ್ಪು ಗುತ್ತಿನವರಿಗೆ ನಾವು ಎಷ್ಟು ವಿಜೃಂಭಣೆ ತೋರಿಸಿದರೂ ಅದು ತೃಣ ಸಮಾನವಾದೀತು. ಒಳಗೆ ಟೊಳ್ಳಾದರೂ ಹೊರಗೆ ಏರುಗೇನೂ ಕಡಿಮೆಯಿಲ್ಲ ಅವಕ್ಕೆ. ನಿಮ್ಮ ಹೊಸ ನೋಟನ್ನು ನಕಲಿ ಮಾಡಿದೆಯೆಂದು ತಿಳಕೊಳ್ಳಬೇಡಿ ಬಾವ. ನಮ್ಮ ಹುಡುಗಿಯ ಮಾವು ಮನೆ ದರ್ಪ ಎಷ್ಟೆಂದರೆ ಮೊದಲೊಮ್ಮೆ ಒಬ್ಬ ಒಕ್ಲ ತುಪ್ಪದ ತಂಬಿಗೆಯನ್ನು ತೆಕ್ಕೊಂಡು ಹೋಗುವಾಗ ದಾರಿಯಲ್ಲಿ ಅದನ್ನು ದೂರ ನಲ್ಲಿಟ್ಟು ದೀರ್ಘಶಂಕೆಗೆ ಕುಳಿತನಂತೆ, ಆಗ ಒಂದು ಕೋಣ ಬಂದು ಆ ತುಪ್ಪಕ್ಕೆ ಬಾಯಿ ಹಾಕುವಾಗ, 'ನೋಡು, ಬಡು ಪಡ್ಪುಗುತ್ತಿಗೆ ಹೋಗುವ ತುಪ್ಪ. ಬಾಯಿ ಹಾಕಿದರೆ ಜಾಗ್ರತೆ'ಯೆಂದು ಕೋಣನಿಗೆ ಹೆದರಿಸುತ್ತಿದ್ದಂತೆ. ನೋಡಿ ಬಾವ, ಅಷ್ಟು ದರ್ಪ ನಿಮ್ಮ ನೆಂಟರದ್ದು-ನೋಡಿ ಬಂದರಲ್ಲಾ ನಿಮ್ಮ ಒಕ್ಲುಗಳು. ಅಪ್ಪಣೆ ಕೊಟ್ಟುಬಿಡಿ-ಇಂಥಿಂಥಾದ್ದು ಇಂಥಿಂಥವರಿಗೆ ಅಂತ ಮೇಲ್ವಿಚಾರ ನಾನು ನೋಡಿಕೊಳ್ಳುತ್ತೇನೆ

ಗೋಪಾಲಕೃಷ್ಣ ಶೆಟ್ರು—ನೋಡಿ ನಮ್ಮ ಶಾಂತಿಗೆ ಮದುವೆ ಅಂತ ನಿಶ್ಚಯಿಸಿದೆ. ಭಾರಿ ಗುತ್ತಿನ ನೆಂಟರ ದಿಬ್ಬಣ, ದೊಡ್ಡ ದೊಡ್ಡ ಮುಂಡಾಸಿನ ಮಹನೀಯರು ಬಂದು ಸಭೆ ಕೂಡುವ ಸಮಯ-ನೀವೆಲ್ಲರೂ ಕ್ರಮ ಪ್ರಕಾರ ಹೇಳಿದ ಕೆಲಸವನ್ನು ನಾಜೂಕಿನಲ್ಲಿ ಮಾಡಿ ಮರ್ಯಾದೆಯನ್ನು ಉಳಿಸಬೇಕು. (ಭಾವನ ಕಡೆಗೆ ತಿರುಗಿ) ಬಾವ, ಕಾಗ್ದಗಳನ್ನು ಪ್ರಿಂಟ್ ಮಾಡಿಸಿ-ಯಾರನ್ನೂ ಬಿಡದೆ ಎಲ್ಲರಿಗೂ ಆಮಂತ್ರಣ ಕೊಡುವ ವಿಲೆವಾರಿ ಮಾಡಿ-ಅಷ್ಟು ಪುರಗಳ ಕೊಪ್ಪರಿಗೆಗಳನ್ನು ತರಿಸಿಟ್ಟುಕೊಳ್ಳಬೇಕು. ಅಂತರ ಚಪ್ಪರ ಹಾಕಿಸಿ ಮಂಟಪ ಕಟ್ಟಿಸಬೇಕು. ಮರದ ಒಳ್ಳೇ ಕೆಲಸಗಾರರಿಗೆ ಕಂಟ್ರಾಕ್ಟ್ ಕೊಟ್ಟು ಬಿಡೋಣ ಮೈಸೂರು ಅರಮನೆಯ ಹಾಗೆ ಮಾಡಿಬಿಡ್ತಾರೆ. ಮದ್ದುಗಿದ್ದು ಸುಡಬೇಕು. ಒಕ್ಕೇ ಬೇಂಡಿನವರನ್ನು ಮೇಳದವರನ್ನು ಈಗಲೇ ಹೇಳಬೇಕು ಇನ್ನು ಇರುವುದು ನಾಲ್ಕೇ ವಾರ-ಕೆಲ್ಸ ಜಲ್ದಿಯಲ್ಲಿ ಆಗಬೇಕು. ಇಂಥಾ ಮದುವೆ ಇಷ್ಟರ ವರೆಗೆ ಆಗಲಿಲ್ಲ-ಇನ್ನು ಆಗಲಿಕ್ಕಿಲ್ಲ ಎಂದು ಊರು ಊರೇ ಕೊಂಡಾಡಬೇಕು. ಅದರ 'ಕ್ರೆಡಿಟ್' ಬಾವ ನಿಮಗೆ. ಕಟ್ಟೆ ಟೊಂಕ.

(ಗೋಪಾಲಕೃಷ್ಣ ಶೆಟ್ರ ತಮ್ಮ ಗೋವಿಂದ ಶೆಟ್ರು ವ ಮದಿವಸ ಪಟ್ಟು ಹೆಗ್ಗಡೇರ ಹತ್ತಿರ)

ಗೋವಿಂದ ಶೆಟ್ರು—ನನ್ನ ಮಾತು ಕೇಳಿ ಜೇಚಾರ ಮಾಡಬೇಡಿ. ನನ್ನ ಅಣ್ಣ ಯಜಮಾನನಿಗೆ ತನ್ನ ಮಗಳಿಗೆ ಮದುವೆ ಮಾಡುವರೆ ಕುಟುಂಬದಿಂದ ಮುಕ್ಕಿದ ಹಣ ತುಂಬಾ ಉಂಟು-ದರ್ಬಾರ್ ಮಾಡ್ತಾನೆ. ಈ ದೊಡ್ಡ ದೋಣಿಯಲ್ಲಿ ನಮ್ಮದೂ ಒಂದು ಸರಕು ಹೋಗಲಿ ಅಂತ ನನ್ನ ಯೋಚನೆ ನೋಡಿ, ಬಾವಾ ಅಳಿಸಂತಾನದ ಕುಟುಂಬದಲ್ಲಿ ನಮ್ಮ ಹಾಗೆ ಕಿರಿಮೆಂಬರರಾಗಿ ಹುಟ್ಟುವುದಕ್ಕಿಂತ ಕಾಡಿನಲ್ಲಿ ಒಂದು ಗಿಡವಾಗಿ ಹುಟ್ಟುವುದೇ ಲೇಸು. ಆ ಮರವನ್ನಾದರೂ ಯಾರಾದರೂ ಕ್ರಯಕ್ಕೆ ತಕೊಳ್ಳುತ್ತಾರೆ-ಕಾಯಿಸಿ ಮಾಡುತ್ತಾರೆ-ನಮ್ಮನ್ನು ಯಾರು ಕೇಳುತ್ತಾರೆ?

ಪಟ್ಟು ಹೆಗ್ಗಡೇರು—ಸಣ್ಣ ಬಾವ, ಎಂಥಾದ್ದು? ನಿಮ್ಮ ಮಾತಿನ ಅರ್ಥವಾಗಲಿಲ್ಲವಲ್ಲ.

ಗೋವಿಂದ ಶೆಟ್ರು—ನನಗೂ ಒಬ್ಬಳು ಮಗಳು ಇದ್ದಾಳೆ. ನನ್ನ ಯಜಮಾಂತಿ-ಈ ಶಾಂತಿಯ ಲಗ್ನ ನಿಶ್ಚಯವಾದ್ದು ನೋಡಿ ನನ್ನನ್ನು ಕೂತುಕೊಳ್ಳಲಿಕ್ಕೆ ಬಿಡುತ್ತದಿಲ್ಲ-ಇದರೊಟ್ಟಿಗೆ ನಮ್ಮದೂ ಒಂದು ಸಾಗಿಸಿಬಿಡುವ-ಅಂಥಾ ಹುಡುಗನೇ ಗಂಟುಬೀಳುವುದಿಲ್ಲ-ಮೊನ್ನೆ ನೀವು ನಿಮ್ಮ ಹೆಂಗಿಯ ಹತ್ತಿರ ಒಂದು ನೆಂಟಸ್ತಿಕೆ ಹೇಳಿದ್ದರಲ್ಲಾ? ಹಜಾರದಲ್ಲಿ ಕಲ್ಲಸದಲ್ಲಿದ್ದ ಚೆಲುವೆ-ನ ಹುಕ್ರನ ಮಗ ಅಂಗರನದ್ದು-ಅದನ್ನೇ ನಾದರೂ ಆಗಿಸಿ ಹಾಕುತ್ತೀರಾ-ಅಂಥ ಹುಡುಗನನ್ನೇ ಹಿಡಿಯಬೇಕು.

ಪಟ್ಟು ಹೆಗ್ಗಡೇರು—ಅಯ್ಯೋ ನಿಮಗೆ ಮನೆತನ ಆಗಬೇಕಲ್ಲಾ—

ಗೋವಿಂದ ಶೆಟ್ರು—ಆ ಮನೆತನಕ್ಕೆ ಬೆಂಕಿ ಬೀಳಲಿ! ನನಗೆ ಕಡವಿಗೆ ಕಾಸು ಕೊಡಲಿಕ್ಕೆ ಇಲ್ಲದ ಕಿರಿಮೆಂಬರರ ಮಕ್ಕಳಿಗೆ ಹೆಣ್ಣೊಂದು ಗಂಡು ಆದರೆ ಸೈ

ಪಟ್ಟು ಹೆಗ್ಗಡೇರು—ಆಯಿತು ನಾನು ಮಾತಾಡಿಸುತ್ತೇನೆ-ಹುಕ್ರನನ್ನೇ ಕರೆದು ಕೇಳುವ—

೦ ೦ ೦ ೦

(ಮದ್ರಾಸಿನಲ್ಲಿ ಕನಕಾಕ್ಷಿ ಹೆಗ್ಗಡ್ತೀರು ಮತ್ತು ಅವರ ಅಕ್ಕ ನೀಲು ಶೆಡ್ತೀರು)

ನೀಲು ಶೆಡ್ತೀರು—ಹಾಗಾದರೆ ಶಾಂತಿಯ ಚೀಟು ಮೇಲೆ ಬಿತ್ತು-ದೊಡ್ಡ ಮನೆ ದೊಡ್ಡ ಗುತ್ತು-ನಾನು ಕೇಳಿದಲ್ಲಿ-ಪಡ್ಪುಗುತ್ತು ಗುಜ್ಜೆ ಗುತ್ತುಗಳೆಂದರೆ-ಚಿನ್ನದ ಗಣಿಗಳು-ಕನಕಾಕ್ಷಿ, ನೀನು ಧನ್ಯೆ-ನಿನ್ನ ಮಗಳ ಪುಣ್ಯ-ಪುಣ್ಯಾಂದೆ!

(ಗೆಜ್ಜೆ ಗುತ್ತಿನಲ್ಲಿ ಮದುವೆ ಮುಂಚಿನ ದಿವಸ ವೈಭವವೇ ವೈಭವ-ತಳಿರು ತೋರಣಗಳಿಂದ ತುಂಬಿದ ಚಪ್ಪರ-ಚಪ್ಪರದ ಮೇಲೆ ಚಪ್ಪರ-ಏನು ಮಂದಿಕೆ! ಏನು ಹಣ್ಣು ಹಂಪಲುಗಳ ತೂಗಾಟ!! ಏನು ತರತರದ ದೀಪಗಳು ಕಣ್ಣನ್ನು ಕುಕ್ಕುತ್ತಿವೆ! ದಾಕ್ಟರ್ ಸಣ್ಣಯ್ಯ ಹೆಗ್ಗಡೇರು-ಹೆಂಡತಿ, ಮಕ್ಕಳು, ಹೊಸ್ತಿಲೆಯ-ತನ್ನ ಗೆಳೆಯರಾದ ಮದ್ರಾಸಿನ ದೊಡ್ಡ ದೊಡ್ಡ ಡಾಕ್ಟರುಗಳನ್ನು ಇನ್ನೂ ಇತರ ಮಹನೀಯರನ್ನು ತನ್ನ ಸಂಗಡ ಕರಕೊಂಡು ಬಂದು ಬಿಡಾರಗಳ ಮಾಡಿಬಿಟ್ಟಿದ್ದಾರೆ-ಈ ಸಕಲ ಸಾಹಿತ್ಯಗಳನ್ನು ನೋಡಿ ಮದ್ರಾಸಿನವರು ಸಹಾ ಬೆರಗಾಗಿ ಹೋಗಿದ್ದಾರೆ-ಮರುದಿವಸರಾತ್ರೆ ದಾರೆ-ಅದ್ದು ಶಿಮ್ಮನ ಮಕ್ಕಳಾದ ಶಾಂತಿ ತಂಬಿಗಳಿಬ್ಬರಿಗೆ)

ಗೋಪಾಲಕೃಷ್ಣ ಶೆಟ್ರು (ಪಟ್ಟು ಹೆಗ್ಗಡೇರನ್ನು ಕರೆದು)—ಭಾವಾ, ನಿನ್ನ ಗುದಾಣಗಳು ತಯಾರಾಗಲಿ-ನಾಳೆ ಬೆಳಗ್ಗೆ ದಿಬ್ಬಣ ಬರುತ್ತದೆ-ವೀಳ್ಯಗೀಳ್ಯ ತಯಾರಾಗಬೇಕು. ಮದ್ರಾಸಿನಿಂದ ಬಂದ ವೀಳ್ಯವನ್ನೇ ಉಪಯೋಗಿಸಿ ಗುತ್ತಿಗ

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧ.
ಡಾ. ಜಸಾನಿಯವರ
ಜಗತ್ಪ್ರಸಿದ್ಧ
"ಗೊನೊಕಿಲರ್" (ರಜಿಸ್ಟರ್ಡ್)
ಪ್ರಮೇಹ ವ್ಯಾಧಿಗೆ ಸಿದ್ಧೌಷಧ.
GONO KILLER ORIGINAL
ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದಲೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಉರಿಯುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹೋಗುವಿಕೆ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-3-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.
ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ
ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲಭಾಯಿ ಪಟೇಲ್ ರೋಡ್, ಮುಂಬಯಿ 4
Sole Manufacturer DR. D. N. JASANI, Vitalbhai Patel Road, BOMBAY 4.

ಳ ದಿಬ್ಬಣದವರಿಗೆ ಅವೇ ಕೊಟ್ಟುಬಿಡಿ-ನೋಡಿ-ಸ್ವಲ್ಪ ಕಡಿಗೆ ಡಿಪಾರ್ಟ್‌ಮೆಂಟಿನ ಕಡೆಗೂ ನೋಡಿಬಿಡಿ-ಪಾಯಸ ಸಕ್ಕರೆದ್ದೂ, ಜಾಗ್ರತೆ! ರಸವುಂಡೆ, ದೊಡ್ಡದು ಮಾಡಲಿ-ಹೋಳಿಗೆ ಬಹಳ ನಾಜೂಕು ಆಗಬೇಕು-ಭಕ್ಷ್ಯಗಳು ಎಷ್ಟು ಸಾಧ್ಯವುಂಟೋ ಅಷ್ಟು ಮಾಡಲಿ-ಹೆಚ್ಚುಕಡಿಮೆ ಆರುಸಾವಿರ ಜನರ ಸಾಹಿತ್ಯ ಆಗಬೇಕು-12ಘಂಟೆಗೆ ತಯಾರಾಗಿ ಊಟಬಡಿಸಬೇಕು-ಖಾವ-ಮತ್ತೊಂದ್ರಿ-ಬಾದಾಮ್ ಉತ್ತುತ್ತೆ, ಕಲ್ಲು ಸಕ್ಕರೆ, ಬಟಾಣಿ ಎಲ್ಲಾ ಒಟ್ಟುಮಾಡಿ ಆ ಮದುಮಗ ಮದುಮಗಳ ಹೆಸರು ಬರೆದ ತೆಳುಕಾಗದ ಚಕೋರ ಕವರ್‌ನಲ್ಲಿ ಬಂದುಮಾಡಿ ಪಾಕಿ ಸಭೆಗೆ ಹಂಚಿಬಿಡಿ.

ಕನಕಾಕ್ಷಿ ಹೆಗ್ಗಡ್ತೇರು—ಅಲ್ಲ, ಅಕ್ಕ ಹೇಳುತ್ತಾರೆ ಅವರಿಸ್ಕ್ರೀಮ್ (Ice-cream) ಮತ್ತು 'ಫ್ರೂಟ್ಸ್ಲೆಡ್' (Fruit salad) ಮಾಡುವ ಯಂತ್ರ ತಂದಿದ್ದಾರಂತೆ. ನಾವು ಮದ್ರಾಸಿಗೆ ಹೋದಾಗ ತಿಂದಿತ್ತನನ್ನ. ಇಲ್ಲಿಯವರ ನಾಲಿಗೆ ಅದನ್ನ ಕಂಡಿಲ್ಲ. ಆ 'ಐಸ್ಕ್ರೀ' ಮಾಡಿಸಿ ಪಡ್ಪು ಗುತ್ತಿನವರಿಗೆ ನಮ್ಮ ದೊಡ್ಡಸ್ತಿಕೆ ಇಲ್ಲ ತೋರಿಸಬೇಡವೆ?

೦ ೦ ೦ ೦

(ದಾರೆಯು ಧನುರ್ಲಗ್ನದಲ್ಲಿ ಆಗಬೇಕಾದ್ದು. ಕುಂಭಲಗ್ನ ಬರುವ ವರೆಗೂ ವಧೂವರರು ದಾರೆಗೆ ಕೂತುಕೊಳ್ಳಲು ಸಿದ್ಧರಾಗಲಿಲ್ಲ)

ಗೋಪಾಲಕೃಷ್ಣಶೆಟ್ರು - (ಒಳಗೆಹೋಗಿ) ಏನೇ-ಏನು ಇಷ್ಟು ತಡ? ಲಗ್ನ ಮೀರಿಹೋಯಿತು

ಕನಕಾಕ್ಷಿ ಹೆಗ್ಗಡ್ತೇರು ಮತ್ತು ನೀಲು ಹೆಗ್ಗಡ್ತೇರವರು—ಮದುಮಕ್ಕಳಿಗೆ ಡ್ರೆಸ್ ಆಗಬೇಡವೇ? ಮದ್ರಾಸ್ 'ಫ್ಯಾಶನ್' ಆಗಬೇಕಲ್ದಾ!

(ಕುಂಭಲಗ್ನದಲ್ಲಿ ದಾರೆಗೆ ಕೂತುಕೊಳ್ಳುವರು)

ಗೋಪಾಲಕೃಷ್ಣ ಶೆಟ್ರು — (ಹೆಂಡತಿಯ ಹತ್ತಿರ)—ಭಾವ ಸಣ್ಣಯ ಹೆಗ್ಗಡೇರನ್ನೂ ಅವರ ಹೆಂಡ್ತಿಯನ್ನೂ ಕರೆ- ಎರಡು ಪೆಟ್ಟಿಗೆಗಳನ್ನು ತಂದು ಇಡಿ, ಭಾವ ಮತ್ತು ನೀಲು ಆ ಟೆಲಿಗ್ರಾಮ್‌ಗಳನ್ನೆಲ್ಲಾ ಓದಿ ಹೇಳಲಿ- ಉಡುಗೊರೆ ಪಟ್ಟಿ ಮಾಡಿ ಆ ಪೆಟ್ಟಿಗೆಗಳಲ್ಲಿ ತುಂಬಿಸಲಿ—

ಸಭಿಕರು (ತಮ್ಮೊಳಗೆ)- ಪಾಪ ಅಂಗರನಿಗೂ ಶಂಬಿಗೂ ಇನಾಮುಗಳೇನೂ ಇಲ್ಲ. ಪಾಪ, ಇದೊಂದು ಸಾರೆ ಪ್ರತ್ಯೇಕ ಮಾಡಬಾರದಿತ್ತೆ? ಆ ಗುತ್ತುಗಳ ನುಗ್ಗಾಟದಲ್ಲಿ ಇವು ಪಾಪ ಜಜ್ಜಹೋಗಿ ಬಿಟ್ಟವು.

(ಸಂಜೆಯಲ್ಲಿ ಉಡುಗೊರೆ ನೋಡುವಾಗ)

ಬಾಬುಶೆಟ್ರು— ಇದೆಂಥಾದ್ದು ಕಾಗ್ದ ತುಂಡು! ಇದರಲ್ಲಿ ರೂಪಾಯಿ ಎಷ್ಟು ಇತ್ತು?

ಗೋಪಾಲಕೃಷ್ಣ ಶೆಟ್ರು— ನೋಡಿ ಲೆಕ್ಕಮಾಡಿ—

ಬಾಬುಶೆಟ್ರು— ಅದ್ದು-ತಹ-ಐದುಸಾವಿರಕ್ಕೆ. ಇದರಲ್ಲಿ ಇರುವುದು ಎರಡು, ಬಾಕಿ?

ಗೋಪಾಲಕೃಷ್ಣ ಶೆಟ್ರು— ಅದಕ್ಕೆ ಪ್ರೋನೋಟು ಉಂಟಲ್ಲಾ - ಬಾಕಿದ್ದು ಹಿಂದಿನಿಂದ ಕೊಡುತ್ತೇವೆ. ಅಲ್ಲಾ ಕೊಡದೆ ಆಗುತ್ತದೆಯೇ?

ಬಾಬುಶೆಟ್ರು—ನಿಮ್ಮ ಅಳಿಯನನ್ನೇ ಕೇಳಿ—

ಗೋಪಾಲಕೃಷ್ಣಶೆಟ್ರು— ಅಳಿಯನಿಗೆ ಸಮಾಧಾನಮಾಡಿ-ಒಂದು ವರುಷ ಪುರುಸೊತ್ತು ಕೊಡಿ.

ಮದುಮಗ (ಕುಂಜಶೆಟ್ರು)— ಅಪ್ಪಯ್ಯ! ನೀವು ಈಗ ಗೌಜಿ ಮಾಡುವುದು ಬೇಡ. ಕೊಡದೆ ಎಲ್ಲಿ ಹೋಗುತ್ತಾರೆ? ಕೊಡದೆ ಇದ್ದರೆ ನಾವು ಬಿಡುತ್ತೇವಾ?

ಬಾಬುಶೆಟ್ರು— ಆಯಿತಪ್ಪ-ನೀವು-ನೀವೆ ಮಾವ ಅಳಿಯ ನೋಡಿಕೊಳ್ಳಿ—

(ಪೆಟ್ಟಿಗೆಂದು ಕಡೆಯುಂಟು)

ಗೋವಿಂದಶೆಟ್ರು— ಹೌದೇ - ಭಾವ, ಪಟ್ಟುಹೆಗ್ಗಡೇರೆ! ನಮ್ಮದೂ ಒಂದು ಉಡುಗೊರೆದ್ದು ತೋರಿಸುವ, ತುಕ್ರಶೆಟ್ರನ್ನು ಕರೆಯಿರಿ.

(ಎಲ್ಲರೂ ಕೂಡಿ ಹುಡುಕುವರು-ತುಕ್ರಶೆಟ್ರು ಕೋಪದಿಂದ ಗಡಗಡನೆ ನಡುಗುವರು.)

ತುಕ್ರಶೆಟ್ರು—ಆಯಿತು ಇನ್ನೆಲ್ಲಾ ಅವರದ್ದೇ; ನಮಗೇನೂ ಇಲ್ಲ. ಎಲ್ಲಾ ಅಧಿಕಾರ ಅವರದ್ದೆ. ದೊಡ್ಡವರ ನೆಂಟಸ್ತಿಕೆ ಮಾಡಿದರೆ ಹೀಗೆಯೇ ನಾವು ದಾರಿಯಲ್ಲಿ-ಅಧಿಕಾರವೆಲ್ಲಾ ಒಮ್ಮೆಯೇ ಅವರಿಗೇ ಬರುತ್ತೆ; ಅಬ್ಬಬ್ಬ!!!

ಪಟ್ಟು ಹೆಗ್ಗಡೇರು— ಎಂಥಾದ್ದು-ಯಾಕೆ ಕೋಪಮಾಡುತ್ತೀರಿ- ಯಾರಿಂದ ತಪ್ಪಾಯಿತು?

(ಗೋವಿಂದ ಶೆಟ್ರು ಹೆದರಿ ಕಂಗಾಲು-ಹುಡಗಿಯ ಕಡೆಯವರು ಪಾಪ)

ತುಕ್ರಶೆಟ್ರು—ಏನಯ್ಯಾ ನಿಮ್ಮ ದೊಡ್ಡಸ್ತಿಕೆ-ದಾರೆ ಎರೆಯುವ ಮುಂಚೆ ನಮ್ಮ ಹತ್ತಿರ ಕೇಳಿಕೊಳ್ಳಲಿಕ್ಕೆ ಇಲ್ಲವೆ? ಏನು ನಾವು ಅಷ್ಟು ಸಸಾರವೆ? ಗುತ್ತುಗಿತ್ತಿಗೆ ಹೆದರುವವ ನಾನಲ್ಲ-ಅದೂ ಅಲ್ಲದೆ ಈಗ ನೀವು ಹೆಣ್ಣಿನ ಕಡೆಯವರು-ಜಾಗ್ರತೆ!

ಪಟ್ಟು ಹೆಗ್ಗಡೇರು ಮತ್ತು ಗೋವಿಂದ ಶೆಟ್ರು—ಏನೋ ಮರವೋಶಿಯಾಗಿ ಹೋಯಿತು-ಕ್ಷಮಿಸಿರಿ.

(ಉಡುಗೊರೆಯಾಗಿ ದಿಬ್ಬಣವು ಹಿಂತಿರುಗುವುದು.)

ಜನರು (ಹೋಗುತ್ತಾ)—ಏನು ಗದ್ದಲದ ಮದುವೆ ಅಪ್ಪಾ! ಕಲ್ಕತ್ತು, ಮಾನ್ಸೂಪ್ರು, ವಕೀಲ್ರು, ಆನೆ, ಬ್ಯಾಂಡ್ ಎಲ್ಲಾ ಬಂದಿದ್ದು. ಸಭೇಂದ್ರ ಇಂದ್ರ ಲೋಕದ ಒಡ್ಡೋಲಗದಂತೆ! ಕಂಡು ಕಣ್ಣು ಸಾರ್ಥಕವಾಯ್ತಪ್ಪಾ! ಉಂಡು ತಿಂದು ಪೊಟ್ಟೆ

THE
Canara Industrial & Banking Syndicate, Ltd.

(INCORPORATED IN BRITISH INDIA
LIABILITY OF SHAREHOLDERS LIMITED.)

ESTD. 1925

Head Office:- **UDIPI**, (S. India.)

SEASON DEPOSITS ARE ACCEPTED
at 3½ per cent per annum

Further particulars on application to any of

our thirty-five Offices.

ದಿ ಜನರಲ್ ಎಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್, ಅಜ್ಮೀರ್.

ಈ ಕಂಪೆನಿಯು ತಾ. 31ನೇ ದಶಂಬ್ರ38ಕ್ಕೆ ಅಂತ್ಯವಾಗುವ ಮೂವತ್ತೆರಡನೇ ವರ್ಷದ ವರದಿಯನ್ನು ನಾವು ಸ್ವೀಕರಿಸಿರುವೆವು. ಈ ವರದಿಯ ಮೇರೆಗೆ ಕಂಪೆನಿಯು ಪ್ರಗತಿಯ ಮಾರ್ಗದಲ್ಲಿ ಮುನ್ನಡೆಯುತ್ತಿರುವುದೆಂಬುದು ವಿದಿತವಾಗುವುದು ಜನರಲ್ ಎಶ್ಯೂರೆನ್ಸ್ ಸೊಸೈಟಿಯು ಹಿಂದೂದೇಶದ ಪ್ರಸಿದ್ಧ ಸಂಸ್ಥೆಯಾಗಿದ್ದು, ಉತ್ಕೃಷ್ಟ ವಹಿವಾಟಗಳಿಂದ ಜನತೆಯ ಪ್ರೇಮವಿಶ್ವಾಸಕ್ಕೆ ಪಾತ್ರವಾದ ಹಿರಿಯವರ್ಗದ ಆದರ್ಶ ಸಂಸ್ಥೆಗಳಲ್ಲೊಂದಾಗಿದೆ. ಉತ್ತಮ ಯೋಜನೆ, ಉತ್ಕೃಷ್ಟ ರೀತಿಯ ವ್ಯಾಪಾರ ವಹಿವಾಟುಗಳು, ಈ ಕಂಪೆನಿಯ ಘನತೆಯನ್ನು ಬೀರುವವು. ವಿಚಾರ ವಿಚಕ್ಷಣರಾದ ಆಡಳಿತ ಮಂಡಲದವರ ಕಾರ್ಯದಕ್ಷತೆಯು ಶ್ಲಾಘನೀಯವಾದುದಾಗಿದೆ.

ವರದಿಯ ವರ್ಷದ ವ್ಯಾಪಾರ ವಹಿವಾಟುಗಳನ್ನು ಪರಿಶೀಲಿಸಿದರೆ, ಕಂಪೆನಿಯು ಸರ್ವತೋಮುಖವಾದ ಅಭಿವೃದ್ಧಿಯ ಮಾರ್ಗದಲ್ಲಿ ಸುಸೂತ್ರವಾಗಿ ಮುನ್ನಡೆಯುತ್ತಿದೆಯೆಂಬುದು ಸ್ಪಷ್ಟವಾಗುವದು. ವರದಿಯ ವರ್ಷದ ಹೊಸ ವ್ಯವಹಾರವು ರೂ. 58,40,500 ಆಗಿದ್ದು, ಕಳದ ವರ್ಷಕ್ಕಿಂತ ರೂ. 3,10,500 ಹೆಚ್ಚಿರುವುದು. ಪ್ರೀಮಿಯಮು ಆದಾಯ 1937ರಲ್ಲಿ ರೂ. 20,33,002ಇದ್ದುದು ವರದಿಯ ವರ್ಷದಲ್ಲಿ ರೂ. 21,97,494ಕ್ಕೆ ಏರಿರುವುದೆಂಬುದು ಅಭಿನಂದನೀಯವಿದೆ. ಆರ್ಥಿಕ ಪರಿಸ್ಥಿತಿಯು ಮುಗ್ಗಟ್ಟಿನ ಕಾಲದಲ್ಲಿ, ವಿಮಾ ಕಂಪೆನಿಗಳ ಸ್ಪರ್ಧೆಯ ಓಡಾಟದ ಕಾಲದಲ್ಲಿ, ಅಜ್ಮೀರ್ ಜನರಲ ಇನ್ಶೂರೆನ್ಸ್ ಸೊಸೈಟಿಯು ಆಡಳಿತ ವೆಚ್ಚದ ಪ್ರಮಾಣವು ವರದಿಯ ವರ್ಷದಲ್ಲಿ ಬರೇ ಶೇಕಡಾ 27-6 ಆಗಿದ್ದು ಮೊದಲಿನ ವರ್ಷಕ್ಕಿಂತ ಶೇಕಡಾ 1-5 ತಗ್ಗಿರುವುದೆಂಬುದು ಆಡಳಿತ ಮಂಡಲದ ಉದ್ಯೋಗಸ್ಥರ ಕಾರ್ಯದಕ್ಷತೆಯ ಸಾಕ್ಷ್ಯವಾಗಿದೆ. ಕಂಪೆನಿಯು ತನ್ನ ಆಸ್ತಿ ಭಂಡವಾಳವನ್ನು ಸರಕಾರಿ ವ ಇನ್ನಿತರ ಸಾಕಷ್ಟು ಸುಭದ್ರವಾದ ಭದ್ರತೆಯ ಮೇಲೆ ವಿನಿಯೋಗಿಸಿರುವುದೆಂದು ಅಭಿನಂದನೀಯವಿದೆ. ಈ ಸಂಸ್ಥೆಗೆ ದೇಶದ ಕೇಂದ್ರ ನಗರಗಳಲ್ಲಿ ಕಛೇರಿಗಳಿವೆ. ಕಲ್ಕತ್ತದಲ್ಲಿ ಸದ್ಯದಲ್ಲೇ ಪ್ರಾರಂಭಿಸಲಿರುವ ಶೋಭಾಯಮಾನವಾದ ಕಟ್ಟಡವೊಂದು ರೂ. 600,000ಕ್ಕೂ ಮಿಗಿಲಾದ ವೆಚ್ಚದಿಂದ ನಿರ್ಮಾಣ ಹೊಂದಿದೆ. ಜನರಲ ಎಶ್ಯೂರೆನ್ಸ್ ಸೊಸೈಟಿಯು ಹಿಂದೂದೇಶದ ಮೇಲ್ಮೆಯನ್ನು ಸಾಧಿಸುವ ಉತ್ಕೃಷ್ಟ ಸಂಸ್ಥೆಯೆಂದು ಧಾರಾಳವಾಗಿ ಹೇಳಬಹುದು. ಇದರ ವಿಖ್ಯಾತ ಚೆಯರ್ಮನರಾದ ಮಿಥಾನಗಾಲರನ್ನು ಸಮರ್ಥ ಜನರಲ ಮೇನೇಜರಾದ ಶ್ರೀ ಬ್ರಹ್ಮದತ್ತರನ್ನೂ, ಇನ್ನಿತರ ಉದ್ಯೋಗ ಮಂಡಳಿಯನ್ನೂ ನಾವು ಅಭಿನಂದಿಸುವೆವು.

ಉಬ್ಬರಿಸ್ತು! ಬಂದ ಇನಾಮುಗಳೇನ್! ಸೋಕೋಯರ ಮೇಳವೇನ್! ಏನಾರ ಖರ್ಚಿಗೇ ಇಷ್ಟತ್ತೈದು ಸಾವ್ರ ಬೇಕಲ್ದಾ!

)( )( )( )(

ಬರುವ ಲೇಖನ:-ಶಾಂತಿಯ ಮದುವೆ-ಭಾಗ ೩-'ದಾಂಪತ್ಯ ಜೀವನ'

Transport & Car Owners



ARE SPECIALLY INVITED TO VISIT
OUR SHOW ROOM
for economical transport maintenance.
CANARA AUTOMOBILES - - - - - MANGALORE.

AUGUSTINE & CO.

Stockists:—

Wellknown ceylon, Nilgri, Darjeeling & Assam Tea & Coffee
All sorts of Hotel & family Tea Mixures as well as Coffee can be had at moderate rates.

ಮುಂಬಾಯಿಯಲ್ಲಿ ನಮ್ಮ ಗಿರಾಕಿಗಳು ಹಲವು ವರ್ಷಗಳಿಂದ ನಮ್ಮ ಚಾ ಕಾಫಿಯನ್ನು ಉಪಯೋಗಿಸಿ ಸಂತುಷ್ಟರಾಗಿದ್ದಾರೆ.

ಹೋಟೆಲುಗಳಿಗೆ ಬೇಕಾಗುವ ಟೀ ಮಿಕ್ಚರ್ ವ ಕಾಫಿ ಹುಡಿ, ಮನೆಗಳಿಗೆ ಬೇಕಾಗುವ ಚಾ-ಕಾಫಿ, ನಮ್ಮಲ್ಲಿ ಸದಾ ಮಿತ ಹಿತದರಕ್ಕೆ ದೊರೆಯುತ್ತದೆ. ಪ್ರಾಮಾಣಿಕತೆಯೇ ನಮ್ಮ ಆದರ್ಶ. ಗಿರಾಕಿಗಳ ಸೌಕರ್ಯವೇ ನಮ್ಮ ಧ್ಯೇಯ.

ಪರೀಕ್ಷಿಸಿರಿ! ಖಾತ್ರಿ ಮಾಡಿಕೊಳ್ಳಿರಿ.

ವಿಳಾಸ: ಆಗಸ್ಟಿನ್ ಎಂಡ್ ಕೋ, ಮೌಂಟುರೋಡು, ಮಜಗಾಂ, ಮುಂಬಯಿ.

MOUNT ROAD, MAZAGAON, BOMBAY.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇತ್ತರ ಪರಿಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ಪ್ರತ್ಯೇಕವಾಗಿ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಾಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು:- ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, *President & Manager,* — ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್‌ಸ್ಟ್ರಿಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗಡಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇವನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇವರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,
ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.
ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,
Kanara Printing Works,
Hampankatte, **MANGALORE**.

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ, ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ. ಆಶಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1ಕ್ಕೆ 13 ಆಣೆ, ಟ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ,
ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ.**

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಡುನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ ಬಹಿಷ್ಠೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತುಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು
"ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ
ಅಗತ್ಯವಾಗಿ ಇರಲೇಬೇಕಾದ್ದು.
ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,
ಬ್ರಾಂಚ್—ಮಂಗಳೂರು.

ನಿಮ್ಮ ಇಚ್ಛೆಯು ನೆರವೇರುವದು.



ಯಾವ ವಿಷಯದಲ್ಲಿ ನೀವು ನಿರಾಶರಾಗಿದ್ದೀರೋ ಅಂತಹ ವಿಷಯಗಳಲ್ಲಿ ನಿಮ್ಮ ಅಭೀಷ್ಟವನ್ನು ಸಾಧಿಸಲಿಕ್ಕೆ ನಮ್ಮ ವಶೀಕರಣಯಂತ್ರವನ್ನು ತರಿಸಿಕೊಳ್ಳಿರಿ

ಈ ಯಂತ್ರವನ್ನು ನಿಮ್ಮ ಬಳಿ ಇರಿಸಿಕೊಂಡು ನಿಮಗೆ ಆಗಬೇಕಾದ ವಿಷಯವನ್ನು ಮನಸ್ಸಿನಲ್ಲಿ ಧ್ಯಾನಿಸಿದರೆ ನಿಜವಾಗಿಯೂ ನಿಮ್ಮ ಅಭಿಲಾಷೆಯು ಪೂರೈಸುವದು.

ಸೂರ್ಯನು ಪಶ್ಚಿಮದಲ್ಲಿ ಉದಯಿಸಿದರೂ ಈ ಯಂತ್ರವು ಎಂದಿಗೂ ನಿರರ್ಥಕವಾಗುವದಿಲ್ಲ. ಅತಿಪ್ರಯಾಸದಿಂದ ಈ ಯಂತ್ರವನ್ನು ತಯಾರುಮಾಡಿದೆ.

ಯಂತ್ರ 1ಕ್ಕೆ ರೂ. 2-4-0 ವಿದೇಶಕ್ಕೆ 5 ಶಿಲಿಂಗ್. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ಅಮೇರಿಕನ್ ಮೆಸ್ಮೆರಿಸಮ್ ಹೌಸ್ American Mismerism House
ಪೋ. ಬಾ. ನಂ 27 (N.Y.U.) P. B. No. 27(N. Y. U.)
ಅಮೃತಸರ (ಇಂಡಿಯಾ) Amritsar (India)

Rev. Fr. P. W. Farias,

St. Paul's Church,
Bolkunje Post, S. K.
Dated 4th January 1939.

To

THE JOINT MANAGERS,
The C. P. C. Co. Ltd., MANGALORE.

Sir

I thank you most sincerely for the promptness with which you arranged to take us to Mangalore and back during the grand occasion of the Diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the congress.

The glorious success of our congress is also due to your exertion in putting up the various lights some of which I hear were done voluntarily.

May the blessings of the Almighty fall on you all and may you be able to do much good to the public.

Renewing my thanks,
I remain,
Yours sincerely,
(*Sd.*) P. W. Farias.

To
THE JOINT MANAGERS,
THE COMBINED BOOKING AGENCY,
MANGALORE.

Sri Parshwanathaswamy
Panchakalyana Pooja Mahothsawam
VENOOR (S. Kanara 1939).

Dear Sirs,

Please permit us to express our thanks on behalf of the above committee for the efficient service rendered by your Combined Booking Agency staff at Venoor to the visitors of the Panchakalyana Pooja Mahosthamam celebrations held this year

Our thanks are also due to Moodabidre Booking Clerk Mr B Krishnayya and also his other mates and Mr. Raghavendra Bhandary who was specially come down from Mangalore to see the needs of and comforts of the travelling Public.

Thanking you once again,
We remain,
Yours faithfully,
(*Sd.*) **M Jagathpal,**
(*Sd.*) **M Pachappa Shetty,**
VENOOR, (*Sd.* in Canarese) **Anantharaja Shetty,**
Dated 6-2-'39. (Sd.) **B. Chandappa Indra,**
(*Secretary, P. M. Committee*)
Members, Panchakalayana Mahosthawam Committee.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	....	....	3	0	0
ಚಂದ್ರಗುಪ್ತ ಚಕ್ರವರ್ತಿ	....	....	1	0	0
Goutama Budda	....	....	0	8	0
भगवद्गीता	....	....	0	2	0
ಮಧುವನ	....	....	1	8	0
ಒಂದೇ ತಿಂಗಳಲ್ಲಿ ಇಂಗ್ಲಿಷ್	....	....	0	8	0
ಎರಡೇ ವಾರಗಳಲ್ಲಿ ಓದುಬರಹ	....	....	0	1	0
ಗೀತೆಯ ಕೈಗನ್ನಡಿ	....	....	0	4	0
ಭಗವದ್ಗೀತೆ	....	....	0	2	0
ತುಳು ವ್ಯಾಕರಣ	....	....	0	8	0
ಸಾಮುದ್ರಿಕ ಶಾಸ್ತ್ರ	....	....	0	6	0
ಸತ್ಯನಾರಾಯಣ ಕತೆ	....	....	0	8	0
ಪುರಂದರದಾಸರ ಪದಗಳು ಭಾಗ ೧	....	....	0	4	0
" ಭಾಗ ೨	....	....	0	4	0
" ಭಾಗ ೩	....	....	0	4	0
ತುಳುನಾಡ್ ತಿಲಕ ಪಂಚಾಂಗ	....	....	0	1	0
ವೈಜಯಂತೀ ಪಂಚಾಂಗ	....	....	0	2	6
ಕುಕ್ಕುಟ ಪಂಚಾಂಗ	....	....	0	1	0

ಇತ್ಯಾದಿ. ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors:*—**GENERAL SUPPLIES Ltd., Udipi**).

Supply Agency Limited.

(BANKERS.)

ESTD] **UDIPI** [1933

Authorised Capital Rs. 1,00,000
Subscribed & Paid up Rs. 30,760

RATE OF INTEREST FOR FIXED DEPOSITS.

3 to 6 Months 4% p. a.
7 to 11 " 5% "
12 to 18 " 6% "

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

Registered No. M. 3618

NAVAYUGA

ನವಯುಗ

1-6-1939

ವಿದ್ಯಾರ್ಥಿಗಳು
ಓದಿಓದಿ ಕ್ಷೀಣಿಸಬೇಕೆ?
ಕುಣಿಕುಣಿದು ಓದಬೇಕೆ?

ಹಾಗಿದ್ದರೆ—
ಮುಚ್ಚಿದರೆ ಮುಗುಳಾಗಿರುವ
ಬಿಚ್ಚಿದರೆ ಅರಳುತ್ತಿರುವ
ಕೆ. ಹೊನ್ನಯ್ಯ ಶೆಟ್ಟರು ಬರೆದಿರುವ
ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಾಲೆಗಳ
ಉಪಯೋಗಾರ್ಥವಾಗಿ ಮಂಜೂರಾದ

	ಮು	
ಮು	ಗು	ಳು
	ಳು	

ಪದ್ಯಪುಸ್ತಕವನ್ನು ಅವರ ಕೈಗೆ ಕೊಡಿರಿ

ಮುಗುಳಿನಲ್ಲಿ ಅಭಿನಯಕ್ಕೆ,
ಕೋಲಾಟಕ್ಕೆ, ನರ್ತನಕ್ಕೆ ಅನುಕೂಲ
ವಾದ ಪದ್ಯಗಳೂ ಇವೆ.

ಬೆಲೆ ೦—೨—೬ ಮಾತ್ರ



ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ.



ಕರಾಮಾತೀ ದರ್ಪಣ

ಇದೊಂದು ಉಚ್ಚ ತರದ ಕನ್ನಡಿ. ಯಾವ ವಯಸ್ಸಿನವರೂ ಇದನ್ನು ನೋಡಬಹುದು. ಕದ್ದು ಹೋದ ಮಾಲು ಎಲ್ಲಿದೆ? ಕಾಯಿಲೆ ಗುಣವಾದೀತೆ? ಇಲ್ಲವೆ? ದುಃಖಪರಿಹಾರ ಮಾರ್ಗ ಯಾವುದು? ಹೂಳಿಟ್ಟ ನಿಧಿ ಎಲ್ಲಿದೆ? ಕಷ್ಟದ ಕೆಲಸ ಕೈಗೂಡುವುದೆ? ಪ್ರೇಮ ಕಾರ್ಯ, ಪರೀಕ್ಷೆಗಳು, ಕೋರ್ಟು ವ್ಯವಹಾರಾದಿಗಳಲ್ಲಿ ವಿಜಯ ದೊರೆಯುವುದೇ? ಎಂಬುದನ್ನೆಲ್ಲ ಈ ಕನ್ನಡಿಯಿಂದ ತಿಳಿಯಬಹುದು. ಸ್ವರ್ಗಸ್ಥ ಮಾತಾಪಿತೃ, ಪುತ್ರಕಳತ್ರ, ಮಿತ್ರಬಾಂಧವರು ಗಳೆಲ್ಲರ ಭೇಟಿಮಾಡಬಹುದು. ನೀವು ನೋಡದ, ಸ್ವಪ್ನದಲ್ಲಿಯೂ ನೋಡಲಸಾಧ್ಯವಾದವರನ್ನು ಸಹ ನೋಡಬಹುದು ಈ ಕನ್ನಡಿಯಲ್ಲಿ! ಬೆಲೆ ರೂ ೨—೮—೦

ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಇಂಗ್ಲಿಷಿನಲ್ಲೇ ಬರೆಯಿರಿ.

ದೊರೆಯುವ ಸ್ಥಳ:—

ಅಮೇರಿಕನ್ ಮೆಸ್ಮೆರಿಸಂ ಹೌಸ್,
ಪೋಸ್ಟು ಬಾಕ್ಸ್ ನಂ. ೨೭,
(N.Y U.) ಅಮೃತಸರ [ಇಂಡಿಯಾ]

AMERICAN MISMERISUM HOUSE,
Post Box No. 27
(N.Y.U.) Amritsar
(INDIA)

೧೦ ಗಡಿಯಾರಗಳು ಬರೇ ೩॥ ರೂಪಾಯಿಗೆ



ಏಳು ಡಬ್ಬೀ ಕೈವಾಚುಗಳು, ೩ ಡಬ್ಬಿ ಕಿಸೆಗಡಿಯಾರಗಳು, ಮತ್ತು ಒಂದು ಗಟ್ಟಿಯಂತ್ರದ ಸರಿ ಸಮಯ ತೋರಿಸುವ ಜರ್ಮನಿ ಟೈಮ್‌ಪೀಸ್, ೩೦ ಗಂಟೆಗೊಮ್ಮೆ ಕೀ, ೧೦ವರ್ಷದ ಗ್ಯಾರಂಟಿ ಈ ಗಡಿಯಾರವನ್ನು ವಿಲಾಯಿತಿಯಿಂದ ಹೆಚ್ಚು ಸಂಖ್ಯೆಯಲ್ಲಿ ತರಿಸಿದ್ದೇವೆ. ಈ ರಿಯಾಯಿತಿ ದರದಲ್ಲಿ ಕೇವಲ ೧೨,೦೦೦ ಗಡಿಯಾರಗಳನ್ನು ಮಾತ್ರವೇ ಮಾರುವುದು. ತ್ವರೆ ಮಾಡಿರಿ! ಸುಸಂದರ್ಭ ತಪ್ಪಿಹೋದೀತು. ಇದರೊಂದಿಗೆ ೧೪ ಕ್ಯಾರೆಟ್ ರೋಲ್ಡ್‌ಗೋಲ್ಡ್ ನಿಬ್ಬಿನ ಫೌಂಟೆನ್ ಪೆನ್ ಒಂದು, ದೃಷ್ಟಿ ಚಕ್ರ ಒಂದು, ಮುತ್ತಿನ ಹಾರ ಒಂದು—ಇಷ್ಟು ಉಚಿತ, ಅಂಚೆವೆಚ್ಚ ಬೇರೆ. ಅತೃಪ್ತಿಯಾದರೆ ಹಣ ಹಿಂದೆ. ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ.

ದೊರೆಯುವ ಸ್ಥಳ:—

ಜರ್ಮನ್ ವಾಚ್ ಕಂಪೆನಿ,
ಪೋಸ್ಟು ಬಾಕ್ಸ್ ನಂ. ೨೭
(N.Y U.) ಅಮೃತಸರ [ಇಂಡಿಯಾ].

German Watch Co.
P. B. No. 27 (N.Y.U.)
AMRITSAR, (India),

—— ಬಲು ಸುಲಭ ದರದಲ್ಲಿ ——

● ಉತ್ಕೃಷ್ಟ ಊಟ ಉಪಹಾರಾದಿಗಳಿಗಾಗಿ ಇತ್ತ ಗಮನಿಸಿರಿ!

● ನಾವು ನಮ್ಮನ್ನೇ ವಿಶೇಷವಾಗಿ ಪ್ರಶಂಸಿಸಿ ಕೊಳ್ಳಬಾರದಷ್ಟೆ!

ಲಕ್ಷ್ಮೀ ನಿವಾಸ ಹಿಂದೂ ಹೋಟೇಲು

(ಸ್ಥಾಪನೆ 1926)

ವಿಠಲ್ ಭಾಯಿ ಪಟೇಲ್ ರೋಡ್, ಗಿರ್ಗಾಂ, ಮುಂಬಯಿ.

Lakshmi Nivas Hindu Hotel

VITTALBHAI PATHEL ROAD,
GIRGAUM -- — BOMBAY.

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶ ಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—T. V. ದೇವಕರ್ ಎಂಡ್ ಕಂಪೆನಿ,
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co., *Nambulier Street*, G. T. MADRAS.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ! ಫಲ ಅಧಿಕ!!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ಶಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ವದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಕಾಶೀಮಠದ ಕಟ್ಟೋಣ, ಉಡುಪಿ

ಬ್ರಾಂಚ್:—ಹೂಮಾರ್ಕೆಟಿನ ಬಳಿ, ಮಂಗಳೂರು.

ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯವೆಂಬಂತೆ ಸಾಮಾನುಗಳು ಬೇಲುಗಟ್ಟಿ ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಬಿಲ್ಲರಿಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

ESTD 1921
FOUNDER
Sri. A. B. SHETTY, M.L.A.
Parliamentary Secretary, Govt of Madras
ಸಂಸ್ಥಾಪಕರು:
ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ ಸಂಚಿಕೆ ೩೯	ಉಡುಪಿ, ಗುರುವಾರ ೧-೬-೧೯೩೯ Udipi, Thursday 1—6—1939	Vol. XVIII No. 39

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ ೩—೪—೦
೬ ತಿಂಗಳಿಗೆ ರೂ. ೧—೧೨—೦.
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಹೊಟ್ಟೆ ತುಂಬಿ ಹೊರಟ ಮಾತು!

ಭಾರತ ಮಂತ್ರಿ ಲೋರ್ಡ್ ಜೆಟ್ಲೆಂಡರು ಲಂಡನಿನಲ್ಲಿ ಸಾಮ್ರಾಜ್ಯದಿನದ ಔತಣ ಸಮಾರಂಭದಲ್ಲಿ ಭಾಷಣಮಾಡುತ್ತಾ ತಮಗೆ ತಾವೇ ಶಹಭಾಸ್ ಕೊಟ್ಟುಕೊಂಡರು. 'ಬ್ರಿಟಿಷರ ಆಳ್ವಿಕೆಯಿಂದ ಹಿಂದುಸ್ಥಾನವು ಅಭಿವೃದ್ಧಿಯ ಹಾದಿಯಲ್ಲಿ ಮುಂದುವರಿಯುತ್ತಾ ಬಂದಿದೆ; ಬ್ರಿಟಿಷ್ ಸಾಮ್ರಾಜ್ಯದೊಳಗೆ ಮಹತ್ತು ಸ್ವರಾಜ್ಯವನ್ನು ಭಾರತಕ್ಕೆ ದಾನಮಾಡುವುದೇ ಗುರಿ' ಎನ್ನುತ್ತಾ ಜೆಟ್ಲೆಂಡ್ ಸಾಹೇಬರೆಂದರು: "ಬ್ರಿಟಿಷ್ ಸಾಮ್ರಾಜ್ಯದ ಬದಲಿಗೆ ಇತರ ಸಾಮ್ರಾಜ್ಯದ ಅಂಕೆಯೊಳಗೆ ಹಿಂದುಸ್ಥಾನವು ಸಿಲುಕುತ್ತಿದ್ದರೆ ಅದರ ಪರಿಸ್ಥಿತಿಯು ಇದಕ್ಕಿಂತ ಕೆಳತೆಯದಾಗುತ್ತಿತ್ತು."

ಜೆಟ್ಲೆಂಡ್ ಸಾಹೇಬರು ಮಾತು ಅರ್ಧದಲ್ಲೇ ಪೂರ್ಣವಿರಾಮ ಪಡೆದಿದೆ. ಹಿಂದುಸ್ಥಾನದ ಬದಲಿಗೆ ಅನ್ಯ ರಾಷ್ಟ್ರವು ಅಂತಹ ಸ್ಥಿತಿಯಲ್ಲೇ ಬ್ರಿಟಿಷ್ ಸಾಮ್ರಾಜ್ಯದೊಳಗಿರುತ್ತಿದ್ದರೆ ಆಗ ಸಾಮ್ರಾಜ್ಯದ ಪರಿಸ್ಥಿತಿ ಹೇಗೆ ನಿಲ್ಲುತ್ತಿತ್ತೆಂಬುದನ್ನೂ ಹೇಳಲಿಲ್ಲ; ಭಾರತವು ಯಾವ ಸಾಮ್ರಾಜ್ಯದೊಳಗೂ ಸೇರದೆ ಸ್ವತಂತ್ರವಾಗಿರುತ್ತಿದ್ದರೆ ಯಾವ ಮಟ್ಟಕ್ಕೆ ಬರುತ್ತಿತ್ತೆಂಬುದನ್ನೂ ತಿಳಿಸಲಿಲ್ಲ. ಕಾರಣವಿಷ್ಟೆ, ಅವರೀ ಭಾಷಣ ಮಾಡಿದುದು ಸಾಮ್ರಾಜ್ಯ ದಿನದ ಔತಣ ಸಮಾರಂಭದಲ್ಲಿ; ಊಟ ಕೊಟ್ಟವರಿಗೆ ಉಪಚಾರದ ಮಾತನ್ನಾಡುವ ಕ್ರಮ ನಮ್ಮಲ್ಲಿಯೂ ಉಂಟಲ್ಲ!

ಕಟು ವಿಮರ್ಶಕರ ಪೂರ್ಣ ಸಹಕಾರ.

ಲೋರ್ಡ್ ಝೆಟ್ಲೆಂಡರು ಮತ್ತೂ ಹೇಳಿದರು—"ಸಾಮ್ರಾಜ್ಯಶಾಹಿಯನ್ನು ಕಠಿಣವಾಗಿ ಟೀಕಿಸುತ್ತಿದ್ದ ಕಾಂಗ್ರೆಸಿನವರು ಹನ್ನೊಂದು ಪ್ರಾಂತ್ಯಗಳ ಪೈಕಿ ಎಂಟು ಪ್ರಾಂತ್ಯಗಳಲ್ಲೀಗ ಅಧಿಕಾರದಲ್ಲಿದ್ದಾರೆ, ಅವರು ಸಾಮ್ರಾಜ್ಯದ ಏಜಂಟರೊಡನೆ ಸಂಪೂರ್ಣ ಸಹಕಾರದಿಂದ ನಡೆಕೊಳ್ಳುತ್ತಿದ್ದಾರೆ; ಆ ಮೂಲಕ ನಮ್ಮ ಗುರಿಯಾದ ಬ್ರಿಟಿಷ್ ಸಾಮ್ರಾಜ್ಯದೊಳಗಿನ ಮಹತ್ತು ಸ್ವರಾಜ್ಯದ ಕಡೆಗೆ ಭಾರತವನ್ನು ಕೊಂಡೊಯ್ಯುವ ಕೆಲಸದಲ್ಲೂ ನೆರವಾಗುತ್ತಿದ್ದಾರೆ" ಹೀಗನ್ನುತ್ತಾ ಭಾರತ ಮಂತ್ರಿಗಳು ತನ್ನ ಭಾಷಣಾಂತ್ಯದಲ್ಲಿ ಹೇಳಿದರು. "ಭವಿಷ್ಯತ್ಕಾಲದಲ್ಲಿ ಇದರ ಪರಿಣಾಮವು ಹೇಗೆ ನಿಲ್ಲುವುದೆಂಬುದನ್ನು ತಿಳಿಸುವ ಕೆಲಸ ಮುಂದಿನ ಚರಿತ್ರೆಕಾರರದು ಹೊರತು ನಮ್ಮದಲ್ಲ."

ಕಾಂಗ್ರೆಸ್ ಸರಕಾರಗಳು ಬ್ರಿಟಿಷ್ ಸಾಮ್ರಾಜ್ಯದೊಡನೆ ಸಹಕರಿಸಿ ನಡೆಯುತ್ತಿವೆ ಎಂದು ಭಾರತೀಯರಾರಾದರೂ

ಸಮಾಚಾರ — ಸಮಾವಲೋಕನ —

ಹೇಳಿದರೆ ಅದು ನಮ್ಮ ಮಂತ್ರಿಗಳ ದೃಷ್ಟಿಯಲ್ಲಿ ಅಕ್ಷಮ್ಯ ಅಪರಾಧವಾಗುತ್ತದೆ 'ನಮ್ಮೊಡನೆ ಮನಃಪೂರ್ವಕವಾಗಿ ಸಹಕರಿಸುತ್ತಿದ್ದಾರೆ'—ಎಂದು ಈಗ ಲಾರ್ಡ್ ಝೆಟ್ಲೆಂಡರೇ ಅನ್ನುತ್ತಾರೆ. ಹೊಸ ರಾಜ್ಯಘಟನೆಯನ್ನು ಮುರಿಯುವ ಧ್ಯೇಯ ಇಟ್ಟುಕೊಂಡು ಹೋದ ಕಾಂಗ್ರೆಸಿನವರು ಆ ಘಟನೆಯ ಜನ್ಮದಾತರಿಂದ 'ಭಾಪು! ಭಾಪು' ಅನ್ನಿಸಿಕೊಂಡರಲ್ಲಾ! ಲೋರ್ಡ್ ಝೆಟ್ಲೆಂಡರ ಹೇಳಿಕೆ ನಮೂದಿಸಿರುವ ಮಾತು; ನವರಾಜ್ಯ ಘಟನೆಯನ್ನು ಮಂದೊಗೆಯುವೆವು-ಎಂಬ ಕಾಂಗ್ರೆಸ್ ಸರಕಾರಗಳ ಮಾತು—ಇವೆರಡರಲ್ಲಿ ಸತ್ಯವಾವುದು, ಸುಳ್ಳಾವುದು? ಅಥವಾ, ರಾಮಾಸ್ತ್ರಗಳೆಲ್ಲಾ ಕುಶಲವರಿಗೆ ಪುಷ್ಪಮಾಲೆಗಳಾಗಿ ಬಿದ್ದಂತೆ ಕಾಂಗ್ರೆಸ್ ಮಂತ್ರಿಗಳ ಹೊಡೆತಗಳೆಲ್ಲಾ ಝೆಟ್ಲೆಂಡರ ಬೆನ್ನು ಚಪ್ಪರಿಸುವಿಕೆಯಾಗಿ ಪರಿಣಮಿಸಿದುವೆ?

ರಶ್ಯಾ—ಇಂಗ್ಲೆಂಡು ಸಾಮಿಪ್ಯ

ರಶ್ಯ ಮತ್ತು ಇಂಗ್ಲೆಂಡು ಪರಸ್ಪರ ಸಮೀಪವಾದಂತೆಯೇ ಸರಿ. ಇವೆರಡು ದೇಶಗಳೊಳಗೆ ಒಪ್ಪಂದವಾಗಬೇಕೆಂಬ ಮಾತಿಗಾರಂಭವಾಗಿ ವಾರವಾರಗಳೇ ಉರುಳಿದವು. ಅವುಗಳ ಜತೆಯಲ್ಲಿ ರಶ್ಯದ ವಿದೇಶೀ ಮಂತ್ರಿ ಲಿಟ್ವಿನೋಫರು ಗದ್ದುಗೆಯಿಂದ ಉರುಳಿದರು. ಈಗ ಏನೋ ಒಂದು ಒಪ್ಪಂದಕ್ಕೆ ನಕಾಶೆಯು ರೂಪದಲ್ಲಿ ಬಿಡಿಸಲ್ಪಟ್ಟಂತೆ ತೋರುತ್ತದೆ; ಬಣ್ಣ ಬಳಿದು ಪೂರ್ತಿಗೊಳಿಸಲು ಇನ್ನೂ ಕೆಲವು ದಿನಗಳು ಬೇಕಾಗಬಹುದೆಂದು ಮಿ. ಚೇಂಬರ್ಲೇನರು ಪಾರ್ಲಿಮೆಂಟಿನಲ್ಲಿ ಹೇಳಿದರು. ಈ ಒಪ್ಪಂದವು ಒಮ್ಮೆ ಮುರಿದು ಹೋಗುವ ಸಂದರ್ಭವೇ ಅಧಿಕವಿತ್ತು. ಫ್ರಾನ್ಸು ಅವಸರದಿಂದ ಒಪ್ಪಂದದಲ್ಲಿ ಕೈ ಹಾಕಿ ಈಗ ಎರಡೂ ರಾಷ್ಟ್ರಗಳು ಒಂದುಗೂಡುವವೆಂಬಲ್ಲಿ ವರೆಗೆ ತಂದಿಟ್ಟಿತು. ಅಂತೂ ಸದ್ಯದಲ್ಲಿಯೇ ಆಂಗ್ಲ, ಫ್ರೆಂಚ್, ಸೋವಿಯೆಟ್ ತ್ರಿಮೂರ್ತಿಗಳು ಇಟಲಿ ಜರ್ಮನಿ ಅಹಿಮಹಿಗಳ ವಿರುದ್ಧ ಸೆಟೆದು ನಿಲ್ಲುವದನ್ನು ಕಾದಾಲಿರುವದೇನೋ!

ಮ್ಯೂನಿಚ್‌ನಲ್ಲಿ ಜೆಕೋಸ್ಲೋವೇಕಿಯಾವನ್ನು ಕತ್ತರಿಸಿ ಹಿಟ್ಲರನ ಬಾಯಿಗಿಡುವ ಹೊತ್ತಿಗೆ ಆಂಗ್ಲೋ ಫ್ರೆಂಚರಿಗೆ ರಶ್ಯದ ನೆನಪಾಗಲಿಲ್ಲ. ಈಗ ಹಿಟ್ಲರನ ಕತ್ತರಿಯು ತಮ್ಮ ಕಡೆಗೇ ನೀಡಿದೆ ಎಂಬುದನ್ನು ತಿಳಿದು, ಆಂಗ್ಲೋ ಫ್ರೆಂಚರ ಕರೆವ ಸ್ವರ ಬದಲಾಗಿದೆ! ಕಾಲಮಹಿಮೆ!

ಬಂಗಾಳ ಸರಕಾರದ ಬುದ್ಧಿ!

ಬಂಗಾಳದ ಹಕ್ ಸರಕಾರವು ಕಾನೂನು ರಕ್ಷಣೆಯ ಕುರಿತು ಅತಿರೇಕ ಜಾಗರೂಕತೆ ತೆಗೆದುಕೊಂಡಂತಿದೆ. ಬೊಂಬಾಯಿಯ ಲೇಬರ್ ಧುರೀಣರಾದ ಶ್ರೀ. ಬಾಟ್ಲಿವಾಲರನ್ನೂ ಬೊಂಬಾಯಿಯಲ್ಲಿ ದಸ್ತಗಿರಿ ಮಾಡಿಸಿ, ಜಾಮೀನಿನಿಂದ ಬಿಟ್ಟಿರುವದು. ಈಗ ಅಖಿಲ ಭಾರತ ಕಾಂಗ್ರೆಸ ಸಮಿತಿಯ ವಿದೇಶೀ ಖಾತೆಯ ಹಿಂದಿನ ಕಾರ್ಯದರ್ಶಿಯರಾದ ರಾಮಮನೋಹರ ಲೋಹಿಯಾರವರು ಕಲ್ಕತ್ತದ ಸಭೆಯೊಂದರಲ್ಲಿತ್ತ ಭಾಷಣವು ರಾಜದ್ರೋಹಾತ್ಮಕವಾಗಿತ್ತೆಂದು ಆರೋಪಿಸಿ ಕಲ್ಕತ್ತದ ಚೀಫ್ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರ ವಾರಂಟು ಮೇರೆಗೆ ಕೈದು ಮಾಡಲಾಗಿದೆ. ಅವರನ್ನೂ ಜಾಮೀನಿನ ಮೇಲೆ ಬಿಡಲಾಗಿದೆ

ಬಂಗಾಳ ಸರಕಾರದ ಮನೋವೃತ್ತಿ ತೀರಾ ವಿಲಕ್ಷಣವಾದುದೇ ಸರಿ. ಕಾಲವೆಷ್ಟೇ ತೀವ್ರಗತಿಯಿಂದ ಚಲಿಸಿದರೂ ಬಂಗಾಳ ಸರಕಾರವು ತನ್ನ ಹಳೆಯ ಯಂತ್ರವನ್ನೇ ಚಾಲು ಮಾಡುತ್ತಿದೆ! ಆ ಪ್ರಾಂತ್ಯದಲ್ಲಿಂದು ಹಿಂಸಾತ್ಮಕ ಚಳವಳಿಯಂತಹ ಉಗ್ರ ಹಂಚಿಕೆಗಳ ಚಿಹ್ನೆಯೂ ಇಲ್ಲ; ಆದರೆ ಆ ಕಾಲದಲ್ಲಿದ್ದ ದಬ್ಬಾಳಿಕೆಯ ನಿಜರೂಪವು ಬಣ್ಣ ಕೆಡದೆ ಹಾಗೆಯೇ ಇದೆ. ಇದು ಪುನಃ ಕ್ರಾಂತಿಯನ್ನು ಆಮಂತ್ರಿಸುವ ಲಕ್ಷಣವಲ್ಲವ?

ಮಾನ್ಯ ಹಕ್ಕರ ನೆನಪು

ಬಂಗಾಳ ಎಸೆಂಬ್ಲಿಯಲ್ಲಿ ಕಲ್ಕತ್ತಾ ಮುನಿಸಿಪಲ್ ಬಿಲ್ಲಿನ ಚರ್ಚೆಯಾಗುತ್ತಿತ್ತು. ಈ ಮಸೂದೆಯು ಸ್ವಯಂ ಪ್ರತ್ಯೇಕ ಮತದಾನದಿಂದ ಅಲ್ಪ ಸಂಖ್ಯಾತರಿಗೆ ಸುಖವಿಲ್ಲ, ಮಸೂದೆಯಲ್ಲಿ ಎಲ್ಲರಿಗೂ ಅನ್ಯಾಯ ಮಾಡುವ ಅಂಶವೇ ಹೆಚ್ಚು; ಅದಕ್ಕೆ ಬದಲಾಗಿ ಉಮೇದ್ವಾರಿಯು ಚುನಾವಣೆಯಲ್ಲಿ ಹಿಂದು ಮತ್ತು ಮುಸ್ಲೀಮ ಸಮಾಜಗಳೆರಡರ ಪೈಕಿ ಪ್ರತಿಯೊಂದರ ಸೇಕಡಾ 25ರಷ್ಟಾದರೂ ಮತಗಳನ್ನು ಪಡೆದಲ್ಲಿ ಮಾತ್ರ ಗೆದ್ದಂತಾಗುವದು ಎಂಬ ನಿಯಮವನ್ನು ಸೇರಿಸಿದರಾಯಿತು;-ಇತ್ಯಾದಿಯಾಗಿ ಕಾಂಗ್ರೆಸ್ ಮೆಂಬರರು ಬಂಗಾಳ



ಎಸೆಂಬ್ಲಿಯಲ್ಲಿ ಚರ್ಚೆಯೆಬ್ಬಿಸಿದರು. ತನ್ನ ಮೇಲೆ ಬಂದಿರುವ ಜಾತೀಯತಾ ಭಾವನೆಯ ಆರೋಪವನ್ನು ಝಾಡಿಸಿ ಕೊಳ್ಳಬೇಕಲ್ಲಾ ಎಂಬಸಕ್ಕಾಗಿ ಮುಖ್ಯ ಮಂತ್ರಿ ಫಜ್ಲುಲ್‌ಹಕ್ಕರು ತನ್ನ ಚರಿತ್ರೆ ಹೇಳಲಾರಂಭಿಸಿದರು: "ನಾನು ಸುಮಾರು 25 ವರುಷಗಳ ವರೆಗೆ ಕಾಂಗ್ರೆಸ್ಸ್‌ನೆಂಬರನಾಗಿದ್ದವ. ಕೆಲವು ವರ್ಷಗಳ ಹಿಂದೆ ಕಾಂಗ್ರೆಸಿನವರು ಕೆಲಸರು ನನ್ನ ವಿರೋಧೀ ಉಮೇದ್ವಾರಿಯ ಪರವಾಗಿ ಕೆಲಸ ಮಾಡಿದ್ದರಿಂದ ನಾನು ಕಾಂಗ್ರೆಸನ್ನು ಬಿಟ್ಟೆ. ಮಿ. ಜಿನ್ನಾ, ಮೌ. ಮಹಮ್ಮದಾಲಿ, ಮೌ. ಶೌಕತಾಲಿ ಮೊದಲಾದವರೊಂದಿಗೆ ನಾನು ಕೂಡ ಕಾಂಗ್ರೆಸು ಬಹು ಕೆಟ್ಟ ರೀತಿಯ ಜಾತೀಯತೆಯನ್ನೊಳಗೊಂಡಿರುವದರಿಂದ, ಅದನ್ನು ಬಿಡಬೇಕಾಯಿತು.

ಮಾನ್ಯ ಹಕ್ಕರು ತನ್ನ ಆತ್ಮಕಥೆಯನ್ನೇಕೆ ಬರೆಯಬಾರದು? ಜಾತೀಯ ಭಾವನೆಯಿಂದ ಕಾಂಗ್ರೆಸನ್ನು ಬಿಟ್ಟರು ಎಂದು ದೇಶತುಂಬಾ ಪ್ರಚಾರದಲ್ಲಿರುವಾಗ ಜಾತೀಯ ಭಾವನೆಯನ್ನು ತಡೆಯಲಾರದೆ ಬಿಟ್ಟರು ಎಂಬ ಸತ್ಕೀರ್ತಿಯನ್ನು ಸಂಪಾದನೆ ಮಾಡಬಹುದಲ್ಲ? ಅಂತು ಫಜುಲ್ ಹಕ್ಕರು ಇಷ್ಟನ್ನು ಒಪ್ಪಿಕೊಳ್ಳುತ್ತಾರೆ:— 'ತನ್ನಕ್ಕಿರದ ಕೆಟ್ಟ ಜಾತೀಯ ಭಾವನೆ ಕಾಂಗ್ರೆಸಿನಲ್ಲಿತ್ತು' ನಿಜ. ಬಂಗಾಳದ ಮಂತ್ರಿಗಳ ಭಾವನೆಯ ಬಣ್ಣವು ಪ್ರಾಂತ್ಯಕ್ಕೆಲ್ಲಾ ಬಳಿದಿರುವಾಗ ಆ ಕುರಿತು ಬೇರೆ ವರ್ಣನೆ ಬೇಕಿಲ್ಲ, ಅಂತಹ ಭಾವನೆ ಕಾಂಗ್ರೆಸಿನಲ್ಲಿಲ್ಲವೆಂದು ಮಾನ್ಯ ಹಕ್ಕರೇ ಒಪ್ಪಿಕೊಂಡುದರಿಂದ ಒಂದು ಕಾಂಗ್ರೆಸ್ ಸೇವೆ ಸಲ್ಲಿಸಿದ ಪುಣ್ಯವವರದು!

ದರ್ಶನ ಮತ್ತು ಘರ್ಷಣ!

ಮಹಾತ್ಮಾ ಗಾಂಧಿಯವರ ಕಾರ್ಯದರ್ಶಿ ಮಹದೇವ ದೇಸಾಯಿಯವರು ಒಂದು ಬೋಧಪ್ರದ ಲೇಖನವನ್ನು ಹರಿಜನದಲ್ಲಿ ಬರೆದಿದ್ದಾರೆ. ಅದರಲ್ಲವರು ಮಹಾತ್ಮರು ವೃಂದಾವನದಿಂದ ಕಾಶಿಗೆ ಹೋಗುವಾಗಿನ ರೈಲು ಪ್ರಯಾಣದ ವರ್ಣನೆ ಮಾಡಿ ಅಂಧಭಕ್ತಿಯ ಜನರನ್ನು ಎಚ್ಚರಿಸಿದ್ದಾರೆ. "ಜನಸಂದಣಿಯು ಪ್ರತಿಯೊಂದು ಸ್ಟೇಶನಿನಲ್ಲಿಯೂ ದೊಡ್ಡ ಗೊಂದಲವೆಬ್ಬಿಸಿ ಗಾಂಧಿಯವರ ವಿಶ್ರಾಂತಿಗವಕಾಶ ಕೊಡದಿದ್ದುದು ಮಾತ್ರವಲ್ಲ; ಪ್ರಯಾಣಿಕರ ಆಗಮನ ನಿರ್ಗಮನಕ್ಕೂ ಆತಂಕವನ್ನೊಡ್ಡಿದ್ದಿತು. ಜನರ ಗುಂಪು ಎಷ್ಟೊಂದು ವ್ಯವಸ್ಥಾರಹಿತವಾಗಿತ್ತೆಂದರೆ ಸಾವಾಗಲೀ ಪೋಲೀಸರಾಗಲೀ ಮಾತನಾಡಿದ್ದನ್ನು ಕೂಡ ಅವರು ಕೇಳುತ್ತಿರಲಿಲ್ಲ. ಇವೆಲ್ಲ ಸಂಗತಿಗಳು ಅಗೌರವವನ್ನು ತಂದೊಡ್ಡುವವಲ್ಲದೆ ಮುಂದೆ ಬರಲಿರುವ ಅಪಾಯವನ್ನೂ ಸೂಚಿಸುತ್ತವೆ. ಇಷ್ಟೆಲ್ಲಾ ಗೊಂದಲವೆಬ್ಬಿಸುತ್ತಾ ಕೂಡಿದ್ದವರಲ್ಲಿ ಸಾವಿರದ ಒಂದಂಶದವರಾದರೂ ಖಾದಿ ಹಾಕಿರಲಿಲ್ಲ. ಅದಕ್ಕೂ ಕಡಿಮೆ ಜನರು ಹರಿಜನ ಫಂಡಿಗೆ ದುಡ್ಡು ದುಗ್ಗಾಣಿ ಹಾಕಿದರು. ಗಾಂಧಿಯವರ ದರ್ಶನವೊಂದೇ ತಮ್ಮ ಜನ್ಮ ಸಾರ್ಥಕವಾಗಲು ಸಾಕೆಂಬ ಭ್ರಮೆಯವರದು. ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕಾದ ವಿಷಯವೆಂದರೆ, ಗಾಂಧಿಯವರು ನಮ್ಮಂತೆಯೇ ಮನುಷ್ಯರು, ಅವರು ಇನ್ನೂ ಕೆಲಕಾಲ ನಮ್ಮ ಸೇವೆಮಾಡಬೇಕಾದರೆ ಮಿತವಾದ ನಿದ್ರೆ ಮತ್ತು ವಿಶ್ರಾಂತಿಯವರಿಗೆ ಬೇಕೇಬೇಕು ಎಂಬುದು. ನಾವು ಸ್ವರಾಜ್ಯಕ್ಕಾಗಿ ಕಾರ್ಯತಃ ದುಡಿಯದಿದ್ದಲ್ಲಿ ಈ ವರೆಗೆ ನಾವು ದೊರಕಿಸಿಕೊಂಡ ಅಲ್ಪಸ್ವಲ್ಪವನ್ನೂ ಕಳೆದುಕೊಳ್ಳುವ ಅಪಾಯವಿದೆ" ಎಂದು ಶ್ರೀ. ದೇಸಾಯಿಯವರು ಬರೆಯುತ್ತಾರೆ.

ಬಡಹಳ್ಳಿಗನೊಬ್ಬನನ್ನು ಇದಿರು ನಿಲ್ಲಿಸಿಕೊಂಡು "ನೀನು ಸ್ವರಾಜ್ಯ ನೋಡುವೆಯೋ- ಗಾಂಧಿಯನ್ನು ನೋಡುವೆಯೋ?" ಎಂದು ಪ್ರಶ್ನಿಸಿದ್ದಕ್ಕೆ ಅವನು ಎರಡನೆಯದನ್ನು ನೋಡುವೆನೆಂದೇ ಉತ್ತರ ಕೊಟ್ಟನು! ಗಾಂಧಿಯವರ ಮಹಾತ್ಮೆಯನ್ನು ತಿಳಿದುಕೊಂಡಷ್ಟು ಸ್ವರಾಜ್ಯದ ಮಹತ್ವವನ್ನು ಜನಸಾಮಾನ್ಯರರಿತಿಲ್ಲ. ಇದು ಭಾರತದ ರಾಜಕೀಯ ಜಾಗ್ರತಿಯ ಒಂದು ಉತ್ತಮ ಉದಾಹರಣೆ!

ಆಧುನಿಕ ಕಬೀರ!

ಸಂತ ಕಬೀರದಾಸನು ಸತ್ಯರಕ್ಷಣೆಗಾಗಿ ತನ್ನ ಮಗನನ್ನೇ ತಲೆ ಕಡಿದನೆಂಬ ಕತೆಯಿದೆ. ಗಡಿನಾಡಿನ ಮುಖ್ಯ ಮಂತ್ರಿ ಡಾ। ಖಾನ್ ಸಾಹೇಬರು ಕಾಂಗ್ರೆಸ್ ಸರಕಾರದ ನ್ಯಾಯಬುದ್ಧಿಗೆ ಕಳೆಕೊಡುತ್ತಾ ತನ್ನ ಮಗನ ದಸ್ತಗಿರಿಗೇನೆ ಹುಕುಂ ಕೊಟ್ಟಿರುವರು. ಪೇಶಾವರದ ಹಳ್ಳಿಯೊಂದರಲ್ಲಿ ಧನಿ ಒಕ್ಕಲುಗಳಿಗೆ ಜಗಳ ಡಾ। ಖಾನ್ ಸಾಹೇಬರ ಪುತ್ರ ಒಕ್ಕಲಿನವನ ಪಕ್ಷ ಹಿಡಿದು ಧನಿಗಳ ಕಡೆಯಿಂದ ಬಂದ ಪೋಲೀಸರ ಕಾಯಿದೇಶೀರಕೃತ್ಯಕ್ಕೆ ಆತಂಕವನ್ನೊಡ್ಡಿದ. ಮೀಕ್ಯ ಸ್ವಯಂಸೇವಕರೊಡನೆ ಅವನ ದಸ್ತಗಿರಿಯೂ ನಡೆದಿದೆ. ಒಕ್ಕಲುಗಳ ಕಷ್ಟನಿವಾರಣೆಯಾಗದ ಈ ವಿಷಯದಲ್ಲಿ ಬೇರೆ ತೀರ್ಮಾನವಿಲ್ಲವೆಂನು ಖಾನ್ ಸಾಹೇಬರ ಮಗನ ಹೇಳಿಕೆ ಈಗ ಅವನನ್ನು ಜೈಲಿನಲ್ಲಿಡಲಾಗಿದೆ.

ತನ್ನ ಜಾತಿಯವ, ತನ್ನ ಬಣ್ಣದವ, ತನ್ನವ, ಎಂಬ ಭಾವನೆಯು ಅಧಿಕಾರಿಗಳಲ್ಲಿಯೂ ಕೂಡ ಹರಡಿರುವ ಈ ಕಾಲದಲ್ಲಿ ಡಾ। ಖಾನ್ ಸಾಹೇಬರು ಕರ್ತವ್ಯದಿದಿರಲ್ಲಿ ಮಗನ ಗೊಡವೆಯಿಲ್ಲ ಎಂಬುದನ್ನು ತೋರಿಸಿಕೊಟ್ಟು ಒಂದು ಮೇಲ್ಪಂಕ್ತಿಯನ್ನು ಹಾಕಿದ್ದಾರೆ! ತಾನು ಜಾತಿ ಜಗಳಗಳನ್ನು ಕ್ಷೇಜಿಸುವದಲ್ಲದೆ, 'ಕಾಂಗ್ರೆಸಿನಲ್ಲಿರುವ ಜಾತೀಯ ಭಾವನೆಗೊಂದು ಮಿತಿಯಿಲ್ಲ'ವೆಂದು, ಮಿ. ಫಜುಲ್ ಹಕ್ಕರು ಬಂಗಾಳಾ ಎಸೆಂಬ್ಲಿಯಲ್ಲಿ ಬಾಯಿ ಬಿಡುವಾಗಲೇ, ಖಾನ್ ಸಾಹೇಬರ ಘನವರ್ತನೆಯು ಅವರ ಕಣ್ಣಮುಂದೆ ಬಂದು ನಿಂತಿದೆ! ಆದರೆ ಸುಳ್ಳನ್ನಾಡುವವರಿಗೆ ತಡೆಯಾಗಬಲ್ಲ ಯಾವ ವಸ್ತುವೂ ಪ್ರಪಂಚದಲ್ಲಿ ನಿರ್ಮಾಣಗೊಂಡಿಲ್ಲವಲ್ಲ!

ಶಿಯಾ ಸುನ್ನೀ ಸಂಗ್ರಾಮ

ಲಕ್ನೋವಿನಲ್ಲಿ ಪ್ರಾರಂಭವಾದ ಶಿಯಾ ಸುನ್ನೀ ಕಾಳಗವು ಕೊನೆಗೊಳ್ಳುವದಿಲ್ಲವೇಕೋ ತಿಳಿಯದು. ಹಿಂದುಸ್ಥಾನದ ಪ್ರಮುಖ ಮುಸ್ಲೀಮ ಧುರೀಣರೂ ಮುಸಲ್ಮಾನ ರಾಜ ಮಹಾರಾಜರುಗಳೂ ಈ ಎರಡು ಪಂಗಡಗಳಿಗೇ ಸೇರಿದವರು. ಈಗ ಈ ಪಕ್ಷಗಳೊಳಗಿನ ಕಲಹದ ಕಾರಣವಾವರೂ ಸರ್ವರಿಗೂ ಅನ್ವಯಿಸುವಂತಹದಿದೆ. ಆದರೆ ಈ ಜಗಳದ ತೀರ್ಮಾನಕ್ಕೆ ಯಾವ ಮಹಾ ಪ್ರಮುಖನೂ ಕೈಹಾಕಿದ್ದಿಲ್ಲ. ಒದಲಾಗಿ ಅವರ ತೀರ್ಮಾನಕ್ಕೆ ಪ್ರಯತ್ನಿಸುತ್ತಿರುವ ಕಾಂಗ್ರೆಸ್ ಮಂತ್ರಿಗಳಿಗೆ ಪ್ರಾಣಾಪಾಯದ ಬೆದರಿಕೆ ಬೀರುವ ಪತ್ರಗಳು ಬರುತ್ತಿವೆ.

ಇದು ಮತ ಸಂಬಂಧದ ಪವಿತ್ರವಿಷಯ- ಶಿರಸಾವಹಿಸಿಕೊಳ್ಳುವಂತಹದಿರುವದರಿಂದ ಇತ್ತಂಡದವರೂ ಶಿರಕ್ಕೇರಿಸಿಕೊಳ್ಳುತ್ತಿದ್ದಾರೆ! ಮುಖಂಡರೀಧರ್ಮ ಕಾರ್ಯವನ್ನು ನೋಡುತ್ತಿದ್ದಾರೆ

THE
BOMBAY LIFE
ASSURANCE CO, LTD,

ಸ್ಥಾಪನೆ 1908

ದಿ ಬೊಂಬೇ ಲೈಫ್
ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಈ ಸಂಸ್ಥೆಯ ಸಾರ್ವತ್ರಿಕವಾದ ಅಭಿವೃದ್ಧಿಯೇ ಇದರ ಉನ್ನತಿಗೆ ಸಾಧನವು.
ಹಿರಿಮೆಯ ಹೊಸ ವ್ಯಾಪಾರ ಮಹಿಮಾಟುಗಳು.

ವಿಮಾ ಅರ್ಜಿಗಳ ಮೊಬಲಗು ಏರಿಕೆ.	ವರ್ಷ	ಪೂರೈಸಿದ್ದು
1,25,50,250	1934	1,04,33,750
1,50,48,915	1935	1,23,28,665
1,68,88,200	1936	1,36,01,500
1,72,579,75	1937	1,40,08,725
1,76,83,250	1938	1,44,91,000

1939 ವ್ಯಾಲ್ಯುವೇಶನ್ ವರ್ಷ.
ಈಗಾಗಲೇ ಈ ಕಂಪೆನಿಯಲ್ಲಿ ವಿಮೆಯಿಳಿಸಿರಿ, ಮುನಾಫೆಯಲ್ಲಿ (Bonus) ಭಾಗಿಗಳಾಗಿರಿ.
ವಿಮೆಮಾಡಲು ಇಲ್ಲವೆ ಪ್ರತಿನಿಧಿಯಾಗಲು ಇಚ್ಛಿಸುವವರು ನಮ್ಮೊಡನೆ ವಿಚಾರಿಸುವುದು ಲಾಭದಾಯಕವಾಗಿದೆ

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್,
ಮದ್ರಾಸ್ ಶಾಖೆಯ ಕಾರ್ಯದರ್ಶಿಗಳು.
ದಿ ಬೊಂಬೆ ಲೈಫ್ ಬಿಲ್ಡಿಂಗ್, ಸರ್ ಲಾಲುಭಾಯಿ ಸಮಲ್ದಾಸ್ ರೋಡ್, ಗಾಂಧಿನಗರ, ಉಡುಪಿ.
ಅಥವಾ ಯಾವುದಾದರೂ ಈ ಕೆಳಗಿನ ಆಫೀಸುಗಳಲ್ಲಿ ವಿಚಾರಿಸಿರಿ—

ರಥಬೀದಿ	ಪುತ್ತ್ಯಾರ,	ಪೋ. ಬಾಕ್ಸ ನಂ.337, ಮೌಂಟ್ ರೋಡ್,	ವಿಶ್ವೇಶ್ವರಪುರಂ ಸರ್ಕಲ್	ಚರ್ನಿರೋಡ್, ಗಿರ್ಗಾಂ,	ಸೆಂಟ್ರಲ್ ಸ್ಟೇಶನ್‌ರೋಡ್
ಮಂಗಳೂರು	ಕಲ್ಲಿಕೋಟೆ	ಮದರಾಸ್.	ಬೆಂಗಳೂರು ಸಿಟಿ	ಬೊಂಬಾಯಿ ನಂ. 4	ತ್ರಿವಂಡ್ರಮ್.

ಚರ್ಮವನ್ನು
ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದದು
ಮೈಸೂರು
ಸೇಂಡಲ್ ಸೋಪು
ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು
ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

ಚಿತ್ರ ಸಮಾಚಾರ್
ಅಖಿಲ ಕರ್ನಾಟಕದ ಅಚ್ಚುಮೆಚ್ಚಿನ
ಕನ್ನಡ ಚಲಚ್ಚಿತ್ರ ಮಾಸಪತ್ರಿಕೆ.
ವಾರ್ಷಿಕ ಚಂದಾ ರೂ. ೧.
ಏಜೆಂಟರಿಲ್ಲದ ಎಡೆಗಳಲ್ಲಿ ಏಜೆಂಟರು ಬೇಕು.
Best Monthly Journal for all advertise.
MANAGER.
"CHITRA SAMACHAR"
Chamarajapet, Bangalore City

ಮೈಸೂರು ಶ್ರೀಮನ್ಮಹಾರಾಜರ ವರ್ಧಂತಿ ಮಹೋತ್ಸವ

ಅತ್ಯಪೂರ್ವ ಮೆರವಣಿಗೆಯ ಮನೋಹರ ದೃಶ್ಯ

(ನವಯುಗದ ಬಾತ್ಮೀದಾರರಿಂದ)

ಮೈಸೂರು, ಮಂಗಳವಾರ, ಮೇ 30

ಮೈಸೂರು ಸಂಸ್ಥಾನದ ಚರಿತ್ರೆಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಬಹುದಾದ ದಿನವು ನಿನ್ನೆಯ ದಿನ. ಅದೇನೆಂದರೆ ನಮ್ಮನ್ನಾಳುವ ಶ್ರೀ ಶ್ರೀ ಕೃಷ್ಣರಾಜ ಒಡೆಯರವರು ತಮ್ಮ ಐವತ್ತಾರನೆಯ ವರ್ಷ ವರ್ಧಂತಿಯನ್ನು ಬಹಳ ಅತ್ಯುತ್ಸಾಹದಿಂದ ನೆರವೇರಿಸಿಕೊಂಡರು.

ಅರಮನೆಯಲ್ಲಿ

ಮಹಾಪ್ರಭುಗಳು ಮುಂಜಾನೆ ಎದ್ದು ಅಭ್ಯಂಜನಾದಿಗಳನ್ನು ತೀರಿಸಿಕೊಂಡ ಮೇಲೆ, ಸುಮಾರು ಹತ್ತು ಘಂಟೆ ಹೊತ್ತಿಗೆ ಅರಮನೆಯ ಸಜ್ಜೆಯಲ್ಲಿ ದರ್ಬಾರ ನಡೆಸಿದರು. ಇದಕ್ಕೆ ದಿವಾನರೂ ಕೌನ್ಸಿಲರುಗಳೂ ಶ್ರೀಮನ್ ಮಹಾರಾಜರ ಖಾಸ ಭಾವಮೈದುನರುಗಳೂ ಇತರ ಅಧಿಕಾರಿಗಳೇ ಮೊದಲಾದವರೂ ದಯಮಾಡಿಸಿದ್ದರು. ದರ್ಬಾರಿ ಭಕ್ಷಿಗಳು ಮಹಾ ಪ್ರಭುಗಳ ಮೊಗ್ಗಲಲ್ಲಿ ನಿಂತು ಅಲ್ಲಿ ಬಂದಿದ್ದವರನ್ನು ಒಬ್ಬೊಬ್ಬರನ್ನಾಗಿ ಮಹಾ ಪ್ರಭುಗಳಿಗೆ ಮುಜುರೆ ಮಾಡಲು ಬಿಡುತ್ತಿದ್ದರು. ಅನೇಕ ಮಹಿಳೆಯರು ಬಂದು ತಮಗೇರ್ಪಡಿಸಿದ್ದ ಆಸನದಲ್ಲಿ ಕುಳಿತಿದ್ದರು. ದರ್ಬಾರ ನಡೆಯುತ್ತಿರುವಾಗ್ಗೆ ಪರಕಾಲಿ ಮಠದ ಶ್ರೀ ಸ್ವಾಮಿಗಳು ರಾಜಮರ್ಯಾದೆಯೊಡನೆ ಅರಮನೆಗೆ ಬಂದು ಮಹಾಪ್ರಭುಗಳನ್ನು ಆಶೀರ್ವದಿಸಿ ಫಲ ಮಂತ್ರಾಕ್ಷತೆ ಪಡೆದು ಹಿಂತಿರುಗಿದರು. ಅರಮನೆಗೆ ಪರಕಾಲಿ ಮಠದ ಸ್ವಾಮಿಗಳು ಬರುವುದು ಬಹು ಹಿಂದಿನ ಕಾಲದಿಂದ ಬಂದಿರುವ ಪದ್ಧತಿ.

ಕುಶಾಲ ತೋಪುಗಳು

ಬೆಳಗ್ಗೆ ಏಳು ಘಂಟೆ ಹೊತ್ತಿಗೆ ಅರಮನೆಯ ಬತೇರಿಯಿಂದ ಐವತ್ತೇಳು ಕುಶಾಲ ತೋಪುಗಳನ್ನು ಹಾರಿಸಲಾಯಿತು.

ಮೆರವಣಿಗೆ

ಸಂಧ್ಯಾಕಾಲ ನಾಲ್ಕು ಘಂಟೆ ಹೊತ್ತಿಗೆ ಅರಮನೆಯ ಬಳಿಯಲ್ಲಿ ಮಹಾಪ್ರಭುಗಳ ಬಳಿಯಿರುವ ಸೈನ್ಯದವರೆಲ್ಲರೂ ಬಂದು ಜಮಾಯಿಸಿದರು. ಇತ್ತ ಕಡೆ ಮೆರವಣಿಗೆ ಹೋಗುವ ಸ್ಥಳಗಳಲ್ಲಿ ಪ್ರೇಕ್ಷಕರುಗಳು

ತುಂಬಿದರು. ಐದು ಘಂಟೆಗೆ ಸರಿಯಾಗಿ ಮಹಾಪ್ರಭುಗಳೂ, ಯುವರಾಜರೂ, ಪ್ರಿನ್ಸ್ ಜಯಚಾಮರಾಜ ಒಡೆಯರೂ ಅರಮನೆಯ ಹೊರಗೆ ಬಂದು ಅವರುಗಳಿಗೆ ಏರ್ಪಡಿಸಿದ್ದ ಸುಂದರ ಮೋಟಾರು ಬಂಡಿ ಹತ್ತಿದರು ಅರಮನೆಯನ್ನು ಬಿಟ್ಟೊಡನೆಯೇ, ಇದನ್ನು ಸೂಚಿಸುವ ಚಿಹ್ನೆಯಾದ ಇಪ್ಪತ್ತೊಂದು ಕುಶಾಲ ತೋಪುಗಳನ್ನೂ ಹಾರಿಸಲಾಯಿತು.

ಮೆರವಣಿಗೆಯ ಮುಂಭಾಗದಲ್ಲಿ ಒಂಟೆಗಳೂ, ಆನೆಗಳೂ, ಬ್ಯಾಂಡಿನವರೂ, ಭಲ್ಲೆಯವರೂ ಕುದುರೆಗಳೂ ಕೆಲವು ಸೈನಿಕರು ಕುದುರೆ ಮೇಲೆ ಕೂತು ಬ್ಯಾಂಡ್ ಬಾರಿಸುತ್ತಿದ್ದವರೂ, ಬಾಡಿಗಾರ್ಡಿನವರೂ ಅನೇಕ ರಾಜ ಪಿಂಡೆಯವರುಗಳೂ ಹೊರಟರು. ಇವರುಗಳ ಹಿಂದೆ ಜಿಲ್ಲಾಧಿಕಾರಿ ಮತ್ತು ಪೋಲೀಸ್ ಅಧಿಕಾರಿಗಳೂ ಇತರ ಕೆಲವರೂ ಅಶ್ವವನ್ನು ಹತ್ತಿ ಹೊರಟರು. ಇವರುಗಳ ಮಧ್ಯಭಾಗದಲ್ಲಿ ಶ್ರೀಮನ್ ಮಹಾರಾಜರೂ, ಶ್ರೀಮದ್ಯುವರಾಜರೂ, ಪ್ರಿನ್ಸ್ ಜಯಚಾಮರಾಜ ಒಡೆಯರೂ ಅಪ್ರಾಯಮಾನವಾದ ಉಡುಪನ್ನು ಧರಿಸಿ ಶ್ವೇತಾಶ್ವತದ ಮೇಲೆ ಕೂತು ಮೆರವಣಿಗೆಯಲ್ಲಿ ಹೊರಟರು, ಇವರುಗಳ ಹಿಂದೆ ಪುನಃ ಸೈನಿಕರೂ, ಆನೆ, ಒಂಟೆಗಳು ಹೊರಟವು ಮತ್ತೊಂದು ದೊಡ್ಡ ಆನೆಗಾಡಿಯಲ್ಲಿ ಅರಸುಮಕ್ಕಳುಗಳು ಕುಳಿತು ಹೊರಟರು. ಮಹಾಪ್ರಭುಗಳ ಮುಂಭಾಗದಲ್ಲಿ ಅತ್ಯುತ್ತಮ ನಾಗಸ್ವರ ಮತ್ತು ಓಲಗವನ್ನು ಬಾರಿಸುವವರೂ, ಅರಮನೆಯ ರಾಜಮಾರ್ಗದವರು ಗಂಧಕಡ್ಡಿಗಳನ್ನು ಹಿಡಿದು ಹೊರಟರು.

ಮೆರವಣಿಗೆಯು ಅರಮನೆಯನ್ನು ಬಿಟ್ಟು ಕೋಟೆಬಾಗಿಲನ್ನು ದಾಟಿ, ಆಂಜನೇಯ ದೇವಸ್ಥಾನದ ಮುಂಭಾಗದಿಂದ, ದಿವಂಗತ ಚಾಮರಾಜ ಒಡೆಯರವರ ಪ್ರತಿಮೆಯ ಎಡಭಾಗದಲ್ಲಿ ಬಂದು ವಿಲ್ಲಿಂಗ್ಡನ್ ಪೌಂಟೆನ್ ಬಲಭಾಗಕ್ಕೆ ತಿರುಗಿ ಸಯ್ಯಾಜಿರಾವ್ ರಸ್ತೆಯಲ್ಲಿ ಬಂದು ಬಲಭಾಗಕ್ಕೆ ತಿರುಗಿ ಇರ್ವಿನ್ ರಸ್ತೆಯಲ್ಲಿ ನೆಟ್ಟಗೆ ಬಂದು ದೊಡ್ಡ ಪೇಟೆಯಲ್ಲಿರುವ ಚೌಕದ ಮುಂಭಾಗದಿಂದ ನೇರವಾಗಿ ಗೌರ್ನ್ಮೆಂಟ್ ಬಂಗಲೆಯನ್ನು ಸೇರಿತು. ಮೆರವಣಿಗೆಯು ದಾರಿಯಲ್ಲಿ ಹೋಗುತ್ತಿರುವಾಗ್ಗೆ ಅನೇಕ ಪ್ರೇಕ್ಷಕರು ಮಹಾ ಪ್ರಭುಗಳಿಗೆ ನಮಸ್ಕರಿಸುತ್ತಿದ್ದರು. ಮಹಾಪ್ರಭುಗಳು ಇದಕ್ಕೆ ಮುಗುಳ್ನಗೆಯಿಂದ ನಮಸ್ಕರಿಸುತ್ತಿದ್ದರು. ಇಷ್ಟಲ್ಲದೆ ಅಲ್ಲಲ್ಲಿ ಮಹಾಪ್ರಭುಗಳಿಗೆ ಕೆಲವರು ಹಾರ ತುರಾಯಿಗಳನ್ನು ಅರ್ಪಿಸಿದರು.

ಮೆರವಣಿಗೆಯು ಸಂಧ್ಯಾಕಾಲ ಸುಮಾರು ಎಂಟು ಘಂಟೆ ಹೊತ್ತಿಗೆ ಗವರ್ನ್ಮೆಂಟ್ ಬಂಗಲೆಗೆ ತಲುಪಿದ ಮೇಲೆ, ಶ್ರೀಮನ್ ಮಹಾರಾಜರು ತಮ್ಮ ಉಡುಪುಗಳನ್ನು ಬದಲಾಯಿಸಿ ಹೊರಗೆ ಬಂದು ನಿಂತು, ಸೈನಿಕರುಗಳ ಪರೇಡ್ ನಡೆಸಿದರು. ತರುವಾಯ ಸೈನಿಕರುಗಳಿಗೂ ಇತರರಿಗೂ ಉಪಾಹಾರವಾದ ಮೇಲೆ ಮೆರವಣಿಗೆಯು ಅರಮನೆಗೆ ಹಿಂತಿರುಗಲು ಹೊರಟಿತು.

ರಾತ್ರಿ ಉತ್ಸವ

ಮೆರವಣಿಗೆಯಲ್ಲಿ ರಾತ್ರಿ ಉತ್ಸವವು ಬಹಳ ಚೆನ್ನಾಗಿತ್ತು. ಆ ದೀಪದ ಬೆಳಕಿಗೆ ಈ ಉತ್ಸವವು ಮತ್ತಷ್ಟು ಕಳೆಕಟ್ಟಿತು. ಸುಮಾರು 9 ಘಂಟೆ ಹೊತ್ತಿಗೆ ಮೆರವಣಿಗೆಯು ಗವರ್ನ್ಮೆಂಟ್ ಬಂಗಲೆಯನ್ನು ಬಿಟ್ಟು, ದೊಡ್ಡ ಪೇಟೆಯಲ್ಲಿ ಬಂದು ದೊಡ್ಡ ಗಡಿಯಾರದ ಮುಂದಿನಿಂದ ಹಾಸು, ಸ್ವಾಚು ಬಲಭಾಗದಲ್ಲಿ ತಿರುಗಿ, ದಿಡ್ಡಿ ಬಾಗಿಲಿನಿಂದ, ಅರಮನೆಯೊಳಕ್ಕೆ ಸುಮಾರು 10 ಘಂಟೆಗೆ ಸೇರಿತು.

ದೊಡ್ಡ ಪೇಟೆಯಲ್ಲಿ ಸಾಲ ಸಾಲಾಗಿ ವಿದ್ಯುತ್ ದೀಪಗಳಾಕಿದ್ದಾರೆ. ಈ ದೀಪಕ್ಕೂ ಬಾಣಬಿರುಸುಗಳಿಗೂ ಮೆರವಣಿಗೆಯು ಬಹಳ ಚಿತ್ತಾಕರ್ಷಕವಾದ ದೃಶ್ಯದಿಂದ ಕೂಡಿತ್ತು. ಉತ್ಸವವು ಬಹಳ ಯಶಸ್ವಿಯಾಗಿ, ಅತಿ ವಿಜೃಂಭಣೆಯಿಂದ ಜರಗಿತು ಸಾವಿರಾರು ಜನರು ಮೆರವಣಿಗೆ ನೋಡಿ ಆನಂದ ಪಟ್ಟರು.

'ಕೃಷ್ಣರಾಜವೊಡೆಯರ್ ಕೀಜೈ'

THE ASIAN ASSURANCE COMPANY, LTD.

ASIAN BUIEDINGS — BOVBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,601	7,88,587	24,50,234
1935	2,54,08,418	18,39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency termes etc:—
Sri. B NARAYAN SHETTY, Organizer, Brahmavar.
„ M. SHIVARAMA RAO, Organizer, Puttur.

OR

Sri. J. A. PUTRAN, Branch Manager, Mangalore.

Transport & Car Owners

ARE SPECIALLY INVITED TO VISIT

OUR SHOW ROOM

for economical transport maintenance,

CANARA AUTOMOBILES - - - - - MANGALORE

AUGUSTINE & CO.

Stockists:—

Wellknown ceylon, Nilgri, Darjeeling & Assam Tea & Coffee All sorts of Hotel & family Tea Mixures as well as Coffee can be had at moderate rates.

ಮುಂಬಾಯಿಯಲ್ಲಿ ನಮ್ಮ ಗಿರಾಕಿಗಳು ಹಲವು ವರ್ಷಗಳಿಂದ ನಮ್ಮ ಚಾ ಕಾಫಿಯನ್ನು ಉಪಯೋಗಿಸಿ ಸಂತುಷ್ಟರಾಗಿದ್ದಾರೆ.

ಹೋಟೆಲುಗಳಿಗೆ ಬೇಕಾಗುವ ಟೀ ಮಿಕ್ಸರ್ ವ ಕಾಫಿ ಹುಡಿ, ಮನೆಗಳಿಗೆ ಬೇಕಾಗುವ ಚಾ-ಕಾಫಿ, ನಮ್ಮಲ್ಲಿ ಸದಾ ಮಿತ ಹಿತದರಕ್ಕೆ ದೊರೆಯುತ್ತದೆ. ಪ್ರಾಮಾಣಿಕತೆಯೇ ನಮ್ಮ ಆದರ್ಶ. ಗಿರಾಕಿಗಳ ಸೌಕರ್ಯವೇ ನಮ್ಮ ಧ್ಯೇಯ.

ಪರೀಕ್ಷಿಸಿರಿ — ಖಾತ್ರಿ ಮಾಡಿಕೊಳ್ಳಿರಿ

ವಿಳಾಸ: ಆಗಸ್ಟಿನ್ ಎಂಡ್ ಕೋ, ಮೌಂಟುರೋಡು, ಮಜಗಾಂ, ಮುಂಬಯಿ.

MOUNT ROAD, MAZAGAON, BOMBAY.

ನೀಲಕಂಠಶೆಟ್ಟರು— ಕನಕಾಕ್ಷಿ, ನಮ್ಮ ವ್ಯಥೆ ಪರಿಹಾರವಾಯಿತೇ ಸ್ವ? ನಿನಗೂ ನನಗೂ ಎರಡು ರತ್ನಗಳು ಸಿಕ್ಕಿದವು—ನಮ್ಮವರು, ನಿನ್ನ ಅಣ್ಣ ಹೇಳುತ್ತಾರೆ—'ನಮ್ಮ ಭಾವ ಮೇಲೆ ಬಿದ್ದರೂ ಅಂತೆ'—ಹುಡುಗನ ರೂಪು ಎಂದರೆ ಚಿನ್ನ! ದಿಬ್ಬಣದಲ್ಲಿ ಬಂದ ಹೆಂಗಸರ ಐಶ್ವರ್ಯ ಮುಖದಲ್ಲಿಯೇ ಹೊಳೆಯುತ್ತಿತ್ತು! ಏನು ಠೀವಿ! ಏನು ತೇಜಸ್ಸು! ನಿಜವಾಗಿ ನಿಮ್ಮ ಶಾಂತಿಯ ಚೀಟು ಮೇಲೆ ಬಿತ್ತು. ಸುಖದ ಅರಮನೆ ಸೇರಿದ್ದವಳು

ಕನಕಾಕ್ಷಿ—ಅಕ್ಕಾ, ಅದೆಲ್ಲ ಹೌದು. ಗರಿಡಿ ಗರಿಡಿ ಎಲ್ಲಾ ಸಮ, ಬೈದೆರ್ಲ್ಲ ಮಾತ್ರ ಸ್ವಲ್ಪ ಚಸ್ಪಟ್ ಅಂತಾರೆ—ಹುಡುಗನ ಬುದ್ಧಿ ಮಾತ್ರ ಸ್ವಲ್ಪ ಹಾಗೆ ಹಾಗೆ ಅಂತಾರಲ್ಲಾ! ನೋಂದೆ ಏನಾ ಏನಾ!

ನೀಲಕಂಠಶೆಟ್ಟರು—ನಿಂಗೆ ಹುಚ್ಚು! ನಮ್ಮ ಹುಡುಗನಿಗೂ ಹಾಗೆಯೇ ಹೇಳುತ್ತಾ ಇದ್ದರು ಜನರು—ಮದುವೆ ಸಮಯದಲ್ಲಿ ಮುಂದಿ ಹಾಗೆಲ್ಲ ಹೇಳುವ ವಾಡಿಕೆ—ಬರೀ ಬುದ್ಧಿಯನ್ನು ಹಿಡಕೊಂಡು ಏನು ಮಾಡುವುದೇ? ಮಗು ಎತ್ತಿಕೊಳ್ಳುವ ಕೂಸನಿಗೆ ಒಳ್ಳೇ ಬುದ್ಧಿ ಇಲ್ವಾ? ನಿಮ್ಮ ಕೆಲ್ಸದ ಅಯಿತು ಬುದ್ಧೀಲಿ ಚಿನ್ನ ಅಲ್ವಾ? ಆದರೆ ಯಾರು ಕೇಳ್ತಾರೆ? ಏನು ಮಾನಮರ್ಯಾದೆ ಉಂಟು! ಹೌದೇ ಕನಕಾಕ್ಷಿ, ಅವು ಆ ಮಂತ್ರೊಂದು ನೆಂಟಸ್ಥಿಕೆ ಯಾರು ಗೊತ್ತುಮಾಡಿದ್ದೇ? ಆ 'ಪರ್ಕಟ್' ದಿಬ್ಬಣವೇ? ಇಸ್ಸಿ, ಶಾಂತಿ ಮದ್ವಿಯ ದೃಷ್ಟಿ ತೆಗೆಯೋವಕ್ಕೆ ಗಂಟುಹಾಕಿದ್ದಾ ಏನು! ನನಗೇನೋ ಅವನ್ನು ಕಂಡು ಶಾಂತಿ ಬಂದಹಾಗೆ ಆಯಿತು—ಅಂಥಾ ನೆಂಟಸ್ಥಿಕೆಯನ್ನೊ ಮಾಡುವುದು? ಗುಜ್ಜೆಗುತ್ತು ಪಡ್ಡು ಗುತ್ತಿನ ಹೆಂಗಸರೆಲ್ಲಾ ನಗ್ತಿದ್ದರಲ್ವೆ? ಥೂ, ಗಲೀಜು ಅದ್ರ ಮೇಲೂ ಆ ಹುಡುಗನ ತಂದೆ ಆ ಬಕೇಡಿ ಉಡುಗಿರೆ ತಕ್ಕೊಳ್ಳುವಾಗ ತೋರಿದ ಕೋಪದ ಆವೇಶ ಏನು! ಎಸ್ಟೊಂದು ತೋರದ ಮನೆತನದಂವ ಅಂತ ಅಷ್ಟು ಹಾರಿದ್ದು ಅಂವ? ಇನ್ನು ಆ ಹುಡುಗಿ, ಶಂಟಿ ಊಟಕ್ಕೆ ಎಷ್ಟ ಹೋಪುದೆ? ಆ ಹುಡುಗನಿಗಿಂತ ಇಲ್ಲಿ ಕೋಣಸಾಕುವ ಬಚ್ಚನಿಗೆ ಗಡ್ ಮಾಡಿ ಡ್ರೆಸ್ ಹಾಕಿ ಹುಡುಗೀನ್ನ ಕೊಡಬಾರದಿತ್ತಾ?

ಕನಕಾಕ್ಷಿ—ಅದು ಕೇಳ್ತೀರಾ? ನಮ್ಮ ಅಣ್ಣ ಪಟ್ಟುಹೆಗ್ಗಡೇರು ನಮ್ಮ ಶಾಂತಿಗೇ ಅವನ್ನ ಶಿಫಾರಸುಮಾಡಿದ್ದರು—ಹುಡುಗನಿಗೆ ಬಜಾರದಲ್ಲಿ ಏನೋ ಕೆಲಸ ಇತ್ತಂಟ್ರು.

ನೀಲಕಂಠಶೆಟ್ಟರು—ಹಜಾರದಲ್ಲಿ ಕೆಲ್ಸವಾ—ಬಾಜಾರದಲ್ಲ ಕೆಲ್ಸವಾ! ಆ ಮೂರು ಕಾಸಿನ ಬಿಕ್ಕಬೇಡೋರ ಕೆಲ್ಸ ಯಾಕೆ! ಅದೇನು ಸಬ್ ಜಡ್ಜ್ ಕೆಲ್ಸವಾ! ಮನೆತನದ ಹುಡುಗಾ ಅಂತ ಏನಾರ ಇತ್ತಾ? ಹುಡುಗನ ತಂದೆ ಕಟ್ಟೆಗೆ ಮಾರಿ ಜೀವಿಸುವುದಂಬ್ರು—ಅಲ್ಲಾ, ಪಟ್ಟುಹೆಗ್ಗಡೇರಿಗೂ, ಗೋವಿಂದಶೆಟ್ರಿಗೂ ಅಷ್ಟು ತಲೆಗೆ ಬರಲಿಲ್ಲವಾ? ಏನಾರ್ ಒಂದು ಮಾಡುವುದಪ್ಪಾ! ಹೌದೇ ಕನಕಾಕ್ಷಿ—ನಿನ್ನ ಅಣ್ಣ ಹೇಳುತ್ತಾರೆ ನಾಳೆ ಮದ್ರಾಸಿಗೆ ಹೊರಡಬೇಕೂಂತ. ಶಾಂತಿ, ಗಂಡನ ಮನೆಯಿಂದ ಬರುವಾಗ ಏಳೆಂಟು ದಿವಸ ಹೋದೀತಲ್ವಾ? ಹಾಗಾದರೆ ನಮ್ಮ ಚಿನ್ನಗಿನ್ನ ಹಿಂದಿನಿಂದ ಭಾಂಗಿಮಾಡಿ ಕಳುಹಿಸಿ—ನಾವು ಮುಂದೆ ಹೋಗ್ತ್—ಆಗ್ದಾ?

(ಗುಜ್ಜೆಗುತ್ತಿನ ಕಷ್ಟೆ ಗುಜ್ಜೆಗುತ್ತಿನ ವ್ಯಾನು ಭಾಗ ಪುಕ್ಕಾಟಿಂದ ಕೋರ್ಟು ಶೇಡೆಯ ಹತ್ತಿರ)

○

ಶಾಂತಿಯ ಮದುವೆ

(SHANTHI'S MARRIAGE)

ಭಾಗ ೩—'ದಾಂಪತ್ಯ ಜೀವನ'

(Part III—(MARRIED LIFE)

ಲೇಖಕರು—ಶ್ರೀ ಬಿ. ತಿಮ್ಮರಾಯ ಶೆಟ್ಟರು, ಬಿ.ಎ., ಎಲ್.ಟಿ., ಉಡುಪಿ.

●

"All that glisters is not gold—Often have you heard me told—Gilded tombs do worms infold.........," thus sang the greatest poet who has enriched English literature with his vast knowledge of men and affairs. Knowing this full well we still go wrong. We very often are carried away by the glamour of the house and take many other things for granted. **It is not the house that makes the man but, the man that makes the house.** What a fallacy to judge that every coin in the mint is of gold! Every one born in a castle need not be a man. Many times men-geniuses-are born in cottages too. Very often we see with an artisan's eye and conclude that a connection with the castle means paradise for our girls. We marry a girl to an individual and judge of him through his parents or his family glory. What a blunder! How deep is the disappointment when everything runs counter! If we have an artist's eye we can see appropriate husbands for our girls even in cottages. When right individuals are born, cottages develop into castles; but when wrong individuals are born castles shrink into cottages. So let us empasize the man in the house and not the house of the man. Our salvation lies in our girls getting responsible husbands. Husband and wife form the home and the home is the unit of the nation. The stronger the home, the greater the nation. Hitler the maker of greater Germany, sometimes ago addressing the daughters of Germany, said, "You, daughters of Germany, give up your dancing and night club attending, and find every one of you a good and able husband, come to me for a wedding present, I will bless you." Thus said the great leader of Germany—a poor man yesterday-but today one who dazzles the world. Being himself free he strongly condemns the three vices which unmans man. Many of us think that we are aristocrats and it is our privilege to indulge in it. We measure a man by wealth only; and when we hear about his vast financial resources, even though he is an epitome of all vices, we say (ಅರೆನ್ ದಾನೆ ಆರ್ ಅಂಚ ಮಲ್ಲ್ ಜೆದ ಬೊಳ ರೀರ್ ಮಲ್ಲ್ಯನ!) that he is invincible, while if we open our eyes, we see that this decade 1930-40 has witnessed a debacle of financial giants on account of their moral weaknesses. If a man has any one of the vices let him first pity himself. Our Lord Sri Krishna stands on a serpent. This is significant. Serpent is satan (representing the various vices). We hear the serpent. The serpent is in us. Our Lord treads and tramples over the serpent meaning thereby that a human being must cast out and conquer his vices and not be conquered by his vices. It is not Udipi that has made Sri Krishna great; but Krishna Udipi. We are all born in India. India has not made us great but Gandhi has made India greater. **So it is the man that makes the house great; and not the house the man.**

✿

ಏನು ಮಾರಾಯ—ನೀನು ಮೊರನೆ ಯುವ—ಮದುವೆ ಆಗ ಇಷ್ಟರ ವರೆಗೆ ಇಬ್ಬರು ಬಂದು ಆಯಿತು—ನನ್ನನ್ನು ಮದುಮಗ ಕುಂಞಪ್ಪಶೆಟ್ರು ಇಲ್ಲಿಯೇ ನಿಲ್ಲಲಿಕ್ಕೆ ಹೇಳಿದ್ದಾರೆ—ಒಳಗೆಲ್ಲಾ ನೆಂಟರಿಷ್ಟರು ಅಂತ ದೊಡ್ಡ ದೊಡ್ಡವರು ಇದ್ದಾರೆ—ನೀನು ಇಲ್ಲಿಯೇ ನಿಲ್ಲು—ನಮ್ಮ ಸಣ್ಣ ಧಣಿಯರ ಮರ್ಯಾದೆ ತೆಗೆಯಬೇಡ—ಏನಾದರೂ ಕೈಬಿಸಿ ಮಾಡುವ.

ಕೋರ್ಟುಪೇದೆ— ಸಾಧ್ಯವಿಲ್ಲ—ನೋಡಿ ಡಿಕ್ರಿದಾಪ್ರು ನನ್ನ ಒಟ್ಟಿಗೇ ಬಂದಿದ್ದಾರೆ. ಆಗೊಳ್ಳಿ, ಅಲ್ಲೇ ದೂರದಿಂದ ನೋಡ್ತಿದ್ದಾರೆ!

ಶುಕ್ರಾಚಾರಿ—ಹಾಗಾದರೆ ಯುಕ್ತವಿಲ್ಲ, ಇದು ಎಷ್ಟರ ಡಿಕ್ರಿಯಪ್ಪಾ!

ಪೇದೆ—೨೫೭ ರೂಪಾಯಿ ೭ ಆಣೆ ೨ ಪೈ.

ಶುಕ್ರಾಚಾರಿ—ಹೇಳಿಗೆ ನಮ್ಮ ರಾಯರಿಗೆ ವರದಕ್ಷಿಣೆ ಐದುಸಾವಿರ! ಸಿಕ್ಕಿದ್ದು ಎರಡೇಸಾವಿರ— ಮೂರು ಬಾಕಿ— ಇದೆಲ್ಲಾ ನನಗೆ ಯಾಕೆ? ಮದುವೆ ದಿವಸಕ್ಕೆ ಆ ಅಯಿತಾಳರ ವಾರಾಂಟ್—ಆದರೆ ನಮ್ಮ ವಕೀಲರ ಗುಮಾಸ್ತರು ಮುಂದಾಗಿ ನನಗೊಂದು ಸೂಚನೆ ಕಳುಹಿಸಿದ್ರಿಂದ ನಾಜರನ್ನ ಹಿಡ್ದು ಮದ್ವೆ ದಾಟುವ ತನಕ ಹೊರಬಾರ್ದಂತೆ ಅದಕ್ಕೆ ಯಂತ್ರಕಟ್ಟಿದೆ. ಮರ್ಯಾದೆ ಉಳಿಯಿತು ಅನ್ನುವ! ಅಲ್ಲಾ,

ನನಗೆ ತಿಂಗಳಿಗೆ ಹನ್ನೆರಡು ರೂಪಾಯಿ ಸಂಬಳದ ಶ್ಯಾನಭಾಗನಿಗೆ ಗುತ್ತಿನವರ ಸಂಗ್ತಿ ಯಾಕೆ? ಈ ನಾಡವರ ಮಕ್ಕಳಿಗೆ ಏನ್ ಶನಿ ಬುದ್ಧಿ ಹಿಡಿದಿದೋ! ತಮ್ಮನ್ ಗುತ್ತು ಗಿತ್ತ್ ಅಂಬ್'ದ್, ರಾಫ್ ಹಾರಿಸೋದು! ವಿಮಾನದ ಹಾಗೆ! ಎಲ್ಲಾ ಮರ್ತು ಬೀಳೋ ವರೆಗೆ ದಿಕ್ಕು ದೆಸೆ ಕಾಣ್ದೆ ಆಕಾಶದಲ್ಲೇ ಹಾರೋದು! ನಾಳೆ ಮನೆ ಉಳ್ದೀತಾ? ಎಂಬ ಯೋಚನೆಯೇ ಇಲ್ಲ—ಇವರ ಗುಟ್ಟು ಎಲ್ಲಾ ನನಗೆ ಗೊತ್ತು ಅಲ್ವಾ. ಗೇಣಿ ವಸೂಲಿ ಸಮ ಆಗುವುದಿಲ್ಲ—ತಂದೆ ಕೊಟ್ಟ ಆಸ್ತಿ ಮೇಲೆ ಈಗ್ಲೇ ವಿಪರೀತ ಸಾಲ—ಹಾಗೆಯೇ ತಾಯಿ ಮನೆಯ ಆಸ್ತಿಗೂ ಸಾಲ ಇತ್ತ್—ಕುಟುಂಬ ಏನೋ ಬಹಳ ದೊಡ್ಡದು—ಸಾಲಮಾಡಿದರೆ ಮಾತ್ರ ತಲೆಗೊಂದು ಮುಡಿ ಅಕ್ಕಿ ಬರಲಿಕ್ಕಿಲ್ಲ—ಅದು ಇವ್ರಕ್ಕೆ ಗೊತ್ತಿತ್ತ! ಪಡ್ಡು ಗುತ್ತು ಎಂಬ ಅಬ್ಬರ ಹೋಗಿ ಪಡ್ಪೋಶಿ ಗುತ್ತು ಆಗಲಿಕ್ಕುಂಟು—ಇತ್ತ ಬಾಗಿಂದ ತಂಪೆ ಬಾಬಶೆಟ್ರಿಗೆ ಸಿಹಿಮೂತ್ರದ ರೋಗ ಹಿಡಿದಿದೆ—ಇನ್ನು ಹೆಚ್ಚು ಸಮಯ ರಥ ನಡಿಯಲಿಕ್ಕಿಲ್ಲ. ಹೀಗೆ ಒಂದೊಂದು ಕಡೆಯಲ್ಲಿ ಒಂದೊಂದು ತರದಿಂದ ಗುತ್ತುಗಳೆರಡಕ್ಕೂ ಒದಗಿಹಿಡ್ದಿದ್ದರೂ ಆದರ ಗೋಷ್ಠಿಯೇ ನಮ್ಮ ಸಣ್ಣ ಜವ್ವನರಿಗುಂಟಾ? ಸ್ವತಃ ಸಂಪಾದನೆಮಾಡುವ ತ್ರಾಣ ಮೊಂಚೆಯೇ ಇಲ್ಲ ಗುತ್ತು ಗುತ್ತು ಅನ್ನುತ್ತ ಗುತ್ತಿನ ಮನೆಯ ಗುತ್ತಿವರೆಗೂ ಆಗಿಯುವುದೇ. ಈ ಷಿಕಲಾಟದಲ್ಲಿ ನನ್ನ ನೌಕರಿ ಎಷ್ಟರ ತನಕ ನಡಿಯುತ್ತೋ ಆ ಉಂಟುಮಾಡಿದವನೇ ಬಲ್ಲ—ಆಯಿತು, ಆಯಿತು, ನಮ್ಮ ಸಣ್ಣ ದನಿಯರನ್ನೇ ಇಲ್ಲಿಗೆ ಕಳುಹಿಸುತ್ತೇನೆ. ಒಳಗೆ ಹೋಗಬೇಡ ಮಾರಾಯ ಸ್ವಲ್ಪ ಮರ್ಯಾದೆ ಉಳಿಸು!

○ ○ ○ ○

ದಲಾಲಿ ದುನಿಯು— ಕುಂಞಪ್ಪ ಶೆಟ್ರು ಇದ್ದಾರಾ?

ಶ್ಯಾನುಭಾಗ ಶುಕ್ರಾಚಾರಿ—ನೀನು ಯಾರು? ಎಲ್ಲಿಂದ ಬಂದೆ ಮಾರಾಯ? ನಮ್ಮ ಸಣ್ಣರಾಯರು ಬೇಕಾ ನಿನಗೆ?

ದುನಿಯು— ಹೌದು, ಸ್ವಲ್ಪ ಹೊರಗೆ ಕರೆಯಿರಿ.

ಶುಕ್ರಾಚಾರಿ—ಅಯ್ಯೋ ನನ್ನ ಕರ್ಮವೇ! ಆಯಿತು—

ಕುಂಞಪ್ಪ (ಬಂದು)—ಓಹೋ ದುನಿಯ! ಏನಾ? ಏನು ಬಂದುಬಿಟ್ಟೆ?

ದುನಿಯ—ಸ್ವಲ್ಪ ಈಚೆ ಬನ್ನಿ ಬುದ್ಧೀ ಸ್ವಲ್ಪ ಅತ್ತಲಾಗೆ ಹೋಗುವ—ತಮ್ಮ ಹತ್ತರ 'ಪ್ರೈವೇಟ್' ಮಾತಾಡೋದುಂಟು!

(ಇಬ್ಬರೂ ಸ್ವಲ್ಪ ದೂರ ಹೋಗುವರು.)

(ಪ್ರಠ ಇದರಲ್ಲಿ)

New Kanara Swadeshi Laundry.
GAMDEVI, BOMBAY,
A reliable house for dry cleaning deing all sorts of rich garments.
ದಿ ನ್ಯೂ ಕೆನರಾ ಸ್ವದೇಶಿ ಲಾಂಡ್ರಿ,
ಗಾಮದೇವಿ — ಮುಂಬಾಯಿ.
ಉತ್ತಮ ತರದ ಮಡಿ, ಉತ್ಕೃಷ್ಟ ರೀತಿಯ ರಂಗು—
ಇವುಗಳಿಗೆ ಪ್ರಸಿದ್ಧವಾದ ನಿಲಯ.
ವಿ. ಸೂ.—ಜರಿವೂದುಗಳಿಂದ ಉತ್ತಮ ಜರತಾರಿ ಶೀರೆ, ವಸ್ತ್ರ ಉಡುಗೆ ತೊಡಿಗೆಗಳ ರಂಗು ಹಾಕುವ, ಡ್ರೈಕ್ಲೀನಿಂಗ್ ವಗೈರೆ ಕಾರ್ಯವನ್ನು ಹಿಪ್ಪಲು ದ್ವಾರಾ ಸ್ವೀಕರಿಸಿ ಸಕಾಲದಲ್ಲಿ ತಯಾರಿಸಿ ಕಳುಹಿಸುವವು.
ಎಮ್. ಆರ್. ಶೆಟ್ಟಿ, ಪ್ರೊಪ್ರೈಟರ್. G. Y. Mahale, Manager.

ಉಡುಪಿಯಲ್ಲಿ ಸಾಹಿತ್ಯ ವಸಂತೋತ್ಸವ

(ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು.)

ಗ್ರಾಮೋದ್ಧಾರ

ತಾ. 20ನೇ ಬೆಳಿಗ್ಗೆ ಎರಡನೆಯದಾಗಿ ಶ್ರೀ. ಕಾರಂತರು 'ಗ್ರಾಮೋದ್ಧಾರ' ಎಂಬ ವಿಷಯವನ್ನೆತ್ತಿ ಆ ಭಾಗದಲ್ಲಿ ಮುಂದುವರಿಯುವವರಿಗೆ ಗ್ರಾಮಗಳಲ್ಲಿ ತೋರಿಬರುವ ಆಲಸ್ಯ, ಅಪನಂಬಿಕೆ, ಅಜ್ಞಾನ, ವಿಧವಾದ ಇವುಗಳಿಂದ ಕಾರ್ಯಕ್ರಮಕ್ಕೆ ಬರುವ ಎಡರುತೊಡರು ಇವನ್ನು ತನ್ನ ಸ್ವಂತ ಅನುಭವದ ನಿದರ್ಶನಗಳಿಂದ ಸ್ಪಷ್ಟಗೊಳಿಸಿದುದಲ್ಲದೆ ಯಾವುದೊಂದೂ ಪ್ರಯೋಗಾರ್ಹವಾದ ವಿಧಾಯಕ ಕಾರ್ಯಕ್ರಮಗಳ ಗೊತ್ತುಗುರಿಯಿಲ್ಲದೆ ಇಂದಿನ ವೇದಿಕೆ ಭಾಷಣಕಾರರುಗಳು ಗ್ರಾಮೋದ್ಧಾರದ ವಿಷಯವಾಗಿ ಪರಸ್ಪರ ಅಸಂಗತ ಅಸಾಧ್ಯವಾದ ಸೂಚನೆ ಸಲಹೆಗಳನ್ನು ಕೊಡುವುದರಿಂದ ಉಂಟಾಗಿರುವ ಅವ್ಯವಸ್ಥೆಗಳನ್ನೂ ವಿವರಿಸಿದರು. ವಿದೇಶಗಳಲ್ಲಿ ಪ್ರತಿಯೊಂದು ಉದ್ಯಮ ಕೈಗಾರಿಕೆಗಳಲ್ಲ ಸಂಶೋಧನೆ ನಡೆಯಿಸಿದ ತಜ್ಞರ ಕೈಯಿಂದ ಯೋಜನೆಗಳನ್ನು ಮಾಡಿಸಿಕೊಂಡು ಅಲ್ಲಿಯ ಮುಖಂಡರು ಅವನ್ನು ಪ್ರಯೋಗದಲ್ಲಿ ಇಳಿಸುತ್ತಿದ್ದರೆ ಇಲ್ಲಿರುವರು ತಾವೇ ಸರ್ವಜ್ಞರೆಂಬ ಶುಷ್ಕಾಭಿಮಾನದಿಂದ ತಮಗೆ ತೋರಿದುದನ್ನು ಪರಿಶೀಲನೆಮಾಡದೆ ಪ್ರಯೋಗದ ಒರೆಗಲ್ಲಲ್ಲಿ ತೀದು ಬಣ್ಣ ನೋಡದೆ ಅವಸರ ಅವಸರದಿಂದ ಕಾರ್ಯರಂಗದಲ್ಲಿಳಿಸಿ ಕೃತಕೃತ್ಯರಾಗದುದರಿಂದ ಇಂದು ಹಳ್ಳಿಯು ಗ್ರಾಮೋದ್ಧಾರದ ಸೂಚನೆ ಸಲಹೆಗಳನ್ನು ಭಯಸಂಶಯ ದೃಷ್ಟಿಗಳಿಂದ ನೋಡಲಿಕ್ಕೆ ತೊಡಗಿದೆಯೆಂಬುದನ್ನೂ ದೃಷ್ಟಾಂತಪೂರ್ವಕ ತೋರಿಸಿದರು. ಹಳ್ಳಿಯಲ್ಲಿ ಹೊಸಹೊಸ ಕೃಷಿ ಕೈಗಾರಿಕೆಗಳು ಪ್ರಯೋಗದಲ್ಲಿ ಬರುವಂತೆ ಪ್ರೋತ್ಸಾಹಿಸಿದ ಮಾತ್ರಕ್ಕೆ ಗ್ರಾಮೋದ್ಧಾರವಾಗುವುದಿಲ್ಲವೆಂದೂ ಅವುಗಳು ಆರ್ಥಿಕ ದೃಷ್ಟಿಯಿಂದ ಲಾಭದಾಯಕವಾಗುವಂತೆ ಅವುಗಳ ವಿಕ್ರಯಕ್ಕೆ ತಕ್ಕ ಪೇಟೆಯನ್ನೂ (Market) ಪೂರೈಕೆಯ ಸೌಲಭ್ಯವನ್ನೂ ಕಲ್ಪಿಸಿಕೊಡದಿದ್ದರೆ ಅವು ಹಳ್ಳಿಯ ಬಡತನವನ್ನು ನಿವಾರಿಸಲು ಸಾಧಕವಾಗಲಾರವೆಂಬುದನ್ನೂ ಈ ಕಾರಣದಿಂದಲೇ ಉತ್ಸಾಹಪೂರ್ವಕವಾಗಿ ಹಳ್ಳಿಗಳು ಕೈಗೊಂಡ ಹಲವು ಹೊಸ ಕೃಷಿ ಕೈಗಾರಿಕೆಗಳು ಅಲ್ಪಾವಧಿಯೊಳಗೆ ನಿರುತ್ಸಾಹಜನಕಗಳಾಗಿ ಹೇಗೆ ಪರಿಣಮಿಸಿವೆಯೆಂಬುದನ್ನೂ ಆಧಾರಸಹಿತ ವಿವರಿಸಿ ಉಪನ್ಯಾಸವನ್ನಿತ್ತರು.

ಜನಪದ ಸಾಹಿತ್ಯ

ಅಂದು ಸಾಯಂಕಾಲ ಶ್ರೀ. ಬೆಟ್ಗೇರಿಯವರು 'ಜಾನಪದ' ಸಾಹಿತ್ಯವನ್ನು ಕುರಿತು ಹಲವು ಪದಗಳನ್ನು ಹಾಡಿ ಅವುಗಳ ಸ್ವಾರಸ್ಯವು ಹೃದಯಂಗಮವಾಗುವಂತೆ ಚಲೋ ಭಾಷಣವಿತ್ತರು. ಹಳೆಗನ್ನಡದ ಮಹಾ ಕಾವ್ಯಗಳು ಜನಸಾಮಾನ್ಯರ ಅನುದಿನದ ಜೀವನದ ಸುಖಕಷ್ಟ ಆಶಾಕಾಂಕ್ಷೆಗಳ ಪ್ರತಿಬಿಂಬವಾಗಿರದೆ ಪಂಡಿತರ ಸೊತ್ತಾಗಿದ್ದ ಒಡ್ಡೋಲಗ ಸಾಹಿತ್ಯವಾಗಿ ವಿರಚಿಸಲ್ಪಟ್ಟು ರಾಜ ಮೆಚ್ಚುಗೆಯನ್ನು ಪಡೆದು ಬಿರುದು ಬಾವಲಿ ಉಂಬಳಿಗಳನ್ನು ಹೊಂದುವುದರಲ್ಲಿ ಆಸ್ಥಾನ ಕವಿಗಳು ಸ್ಪರ್ಧಿಸುತ್ತಿದ್ದಾಗ ಹೇಳ ಹೆಸರಿಲ್ಲದ ಆದರೂ ಪ್ರತಿಭಾಸಂಪನ್ನ ಕವಿಗಳು ಜನಸಾಮಾನ್ಯರ ಸಂಸಾರದ ಸುಖದುಃಖ ನೆನಸು ಕನಸುಗಳನ್ನು ಬಗೆ ಮುಟ್ಟುವಂತೆ ಸುಲಲಿತವಾಗಿ ಹಾಡಿ ಬಿನದಿಸ ದುಡಿಮೆಯಲ್ಲಿಯೂ ಸುಖವಿದೆಯೆಂಬುದನ್ನು ತೋರಿ ಆ ಕವನಗಳು ಪ್ರತಿಯೊಂದು ಗುಡಿಸಲಲ್ಲಿಯೂ ಕೈವೆಗ್ಗಗಳು ದುಡಿಯುತ್ತಿದ್ದಾಗಲೂ ಬಾಯಿಂದ ಹೊರಹೊಮ್ಮುತ್ತ ಶ್ರಮೆಯ ಆಯಾಸವನ್ನು ಮರೆಸುತ್ತ ಹೇಗೆ ಸುಖ ಸಂತೃಪ್ತಿಯ ಕಿರಣವನ್ನು ಬೀರುತ್ತಿದ್ದುವೆಂಬುದನ್ನೂ ಸ್ವಾರಸ್ಯವಾಗಿ ತೋರಿಸಿಕೊಟ್ಟರು. ಇಂತಹ ಜಾನಪದ ಸಾಹಿತ್ಯಗಳು ಸಣ್ಣ ಪದ್ಯ, ಕತೆ, ಸಂಭಾಷಣೆ, ಗಾದೆ, ಲಾವಣಿ, ತ್ರಿಪದಿ, ಜೋಗುಳ ಹಾಡು, ಗೈಮೆಯ ಹಾಡು, ಮುಂತಾದ ವಿವಿಧ ರೂಪಗಳಲ್ಲಿದ್ದು ಸಹಜ ಮೌಲಿಕ ಅಲಂಕಾರ ವರ್ಣನೆಗಳಿಂದಲೂ ಶುದ್ಧ ಕನ್ನಡದ ಪಾರಿಭಾಷಿಕ ಶಬ್ದಗಳಿಂದಲೂ ಕೂಡಿದ್ದು ಇಂದಿಗೂ ಕನ್ನಡ ಶಬ್ದಭಂಡಾರದ ಬಡತನವನ್ನು ಹೋಗಲಾಡಿಸಲು ಸಾಧಕವಾಗಿಯೂ ಸಾಹಿತ್ಯ ಸಂಗ್ರಹದಲ್ಲೊಂದು ಅಮೂಲ್ಯ ಭಾಗವಾಗುವಂತೆಯೂ ಇರುವುದರಿಂದ ಇಂದಿನ ನಾಗರಿಕತೆಯ ಪ್ರವಾಹವು ಅವನ್ನೆಲ್ಲ ಕೊಚ್ಚಿಕೊಂಡುಹೋಗದ ಮುನ್ನ ಅವುಗಳ ಸಂಗ್ರಹ ಕಾರ್ಯವು ಪ್ರತಿಯೊಂದು ಕಡೆಯಲ್ಲಿಯೂ ಭರದಿಂದ ಸಾಗಬೇಕಾದುದು ಅತ್ಯಾವಶ್ಯಕವೆಂಬ ಸ್ಫೂರ್ತಿಯು ಕೇಳಿದವರಲ್ಲಿ ಉಂಟಾಗುವಂತೆ ಬೆಟ್ಗೇರಿಯವರು ಆಡಿತೋರಿಸಿ ಹಾಡಿ ಬಣ್ಣಿಸಿ ಉಪನ್ಯಾಸವಿತ್ತರು.

ಕಲೆ ಮತ್ತು ಜೀವನ

ಅನಂತರ ಶ್ರೀ. ವಿ ಸೀತಾರಾಮಯ್ಯನವರು 'ಕಲೆ ಮತ್ತು ಜೀವನ' ಎಂಬ ವಿಷಯವನ್ನೆತ್ತಿ ಕಲೆ ಮತ್ತು ಜೀವನದ ಸಮ್ಮಿಳಿತ ಸೌಭಾಗ್ಯವೇ ಮಾನವನ ಬಾಳಿನ ಉತ್ಕರ್ಷವನ್ನು ಹೇಗೆ ತೋರುತ್ತದೆಂಬುದನ್ನು ಕಲೆಯಿಲ್ಲದ ಜೀವನವು ಬರ್ಬರ ಪಶು ಜೀವನವಾಗಿ ಹೇಗೆ ಕೀಳ್ತರಗತಿಗಿಳಿಯುವುದೆಂಬುದನ್ನೂ ಸ್ವಾರಸ್ಯವಾಗಿ ವಿವರಿಸಿದರು. ಸೃಷ್ಟಿಯಲ್ಲಿಯೂ ಜೀವನದಲ್ಲಿಯೂ ಮನಸ್ಸಿಗೆ ತೋರುವ ಸೊಬಗುಗಳನ್ನೆಲ್ಲ ತನಗೆ ಸಂತುಷ್ಟಿಯಾಗುವ ತೆರದಲ್ಲಿ ಜನಕ್ಕೆ ತೋರಿಸುವ ಹಲವು ರೀತಿಗಳಲ್ಲಿ ಕಲೆಯೂ ಒಂದು ಪ್ರಾಮುಖ್ಯ ದಾರಿ, ಸಾಧಕನು ತನ್ನ ಶಕ್ತಿ ವಿಶೇಷದಿಂದಲೂ ದೃಷ್ಟಿ ಸೂಕ್ಷ್ಮತೆಯಿಂದಲೂ ಜೀವನದಲ್ಲಿ ಕಂಡ ದರ್ಶನವನ್ನು ಹೇಗೆ ಹಲವು ವಿಧಗಳಿಂದ ವ್ಯಕ್ತಗೊಳಿಸುವನೆಂದೂ ಹಾಗೆ ವ್ಯಕ್ತಗೊಳಿಸುವ ಸಾಧನೆಗಳಲ್ಲಿ ಕಲೆಯು ಹೇಗೆ ಹೃದಯಸ್ಪರ್ಶಿಯಾದ ಒಂದು ಬಗೆಯಾಗಿದೆಯೆಂದೂ ಕಲೆಯೂ ಜೀವನವೂ ಸಮರಸವಾಗಿ ಸಮಾವೇಶಗೊಳ್ಳುವ ಮಾನವನ ಜೀವನವು ಸಾರ್ಥಕವಾದುದೆಂದೂ ಚೆನ್ನಾಗಿ ವಿವರಿಸಿ ಮನಗಾಣಿಸಿದರು.

ಉಪಸಂಹಾರ

ಅಮೇಲೆ ಸಾಹಿತ್ಯ ವಸಂತೋತ್ಸವದ ಮಂಗಲಾಚರಣೆಯು ಕಾರ್ಯಕ್ರಮಗಳು ನೆರವೇರಿದುವು. ಕರ್ನಾಟಕ ಸಾಹಿತ್ಯಪರಿಷತ್ತು ತನ್ನ ಕಾರ್ಯಕಲಾಪಗಳ ಧ್ಯೇಯ ಸಾಧನೆಗಳ ಪ್ರಚಾರವು ವಿಶೇಷ ವ್ಯಾಪ್ತಿಯುಂಟಾಗುವಂತೆ ಕರ್ನಾಟಕವನ್ನು ನಾಲ್ಕು ಉಪವಿಭಾಗಗಳನ್ನಾಗಿ ಮಾಡಿ ಅವುಗಳಲ್ಲೊಂದಾದ ಕೊಡಗೂ ದಕ್ಷಿಣಕನ್ನಡವೂ ಸಮಾವೇಶವುಳ್ಳ ದಕ್ಷಿಣಕರ್ನಾಟಕ ಸಾಹಿತ್ಯಪ್ರತಿನಿಧಿ ಮಂಡಲದ ಕಾರ್ಯದರ್ಶಿಗಳಾದ ಶ್ರೀ. ಕಾರಂತರವರು ತಾವು ಕೈಕೊಂಡ ಪ್ರಚಾರಕಾರ್ಯವನ್ನು ನಿರ್ವಹಿಸುವ ವಿಚಾರದಲ್ಲಿ ಮೊತ್ತಮೊದಲಿನ ಕಾರ್ಯಕ್ರಮವಾದ ಈ ಸಾಹಿತ್ಯ ವಸಂತೋತ್ಸವವು ಉಡುಪಿಯಲ್ಲೇ ಜರಗುವಂತೆ ಶ್ರೀ ರಘುಮಾನ್ಯ ತ್ರೀರ್ಥರವರು ವಿಶೇಷ ಔದಾರ್ಯದಿಂದಲೂ ಉತ್ಸಾಹದಿಂದಲೂ ಧರ್ಮಕರ್ತವ್ಯಗಳ ದೃಷ್ಟಿ ವೈಶಾಲ್ಯದಿಂದಲೂ ಸಮಾಶ್ರಯ ಕೊಟ್ಟು ಅದರ ಮಹಾಪೋಷಕ (Patron)ರಾಗಿ ಇತರ ಮಠೀಯರಿಗೂ ಮಠದೇವಸ್ಥಾನಗಳ ಯಜಮಾನರಿಗೂ ನಾಡನುಡಿಯ ಪ್ರೋತ್ಸಾಹನೆಯ ಮೂಲಕ ಜನತಾಜನಾರ್ದನ ಸೇವೆಯನ್ನು ಮಾಡುವ ಆದರ್ಶವನ್ನು ಹಾಕಿಕೊಟ್ಟುದಕ್ಕಾಗಿ ಸ್ವಾಮಿಜಿಯವರ ಮಹದುಪಕಾರ ಸ್ಮರಣೆಯನ್ನು ಮಾಡಿ ಅವರ ಈ ಕಾರ್ಯೋತ್ಸಾಹದ ನಿರ್ವಹಣದಲ್ಲಿ ನೆರವಾಗಿ ನಿಂದ ಮಠದ ಪಾರುಪತ್ಯಗಾರರಾದ ಶ್ರೀ. ಶ್ರೀನಿವಾಸ ಪೆಜತ್ತಾಯ ಮತ್ತು ಸ್ವಾಗತ ಸಮಿತಿ ಹಾಗೂ 'ಕಿರಿಯರ ಪ್ರಪಂಚ'ದ ಉತ್ಸಾಹೀ ಕೆಲಸಗಾರರಾದ ಶ್ರೀಗಳಾದ ಕೊರಡ್ಕಲ್ ಶ್ರೀನಿವಾಸ ರಾವ್, ಬಿ ರಾಮಕೃಷ್ಣಾಚಾರ್, ಯು. ವೆಂಕಟ್ರಾವ್, ಕೆ. ಹೊನ್ನಯ್ಯ ಶೆಟ್ಟಿ, ಮುಂತಾದ ಕಾರ್ಯೋತ್ಸಾಹಿಗಳಿಗೂ ಧನ್ಯವಾದವನ್ನರ್ಪಿಸಿ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಸರ್ವರ ಸಹಕಾರ ಸಹಾನುಭೂತಿಗಳನ್ನು ಬಯಸಿ ಬೇಡಿ ದಕ್ಷಿಣ ಕರ್ನಾಟಕ ಸಾಹಿತ್ಯ ಪ್ರತಿನಿಧಿ ಮಂಡಲದ ಪರವಾಗಿ ತನ್ನ ಧನ್ಯವಾದಾರ್ಪಣ ಭಾಷಣವನ್ನು ಮುಕ್ತಾಯಗೊಳಿಸಲು ಶ್ರೀ ಕೊರಡ್ಕಲ್ ಶ್ರೀನಿವಾಸರಾಯರು ಸ್ವಾಗತ ಸಮಿತಿ ಹಾಗೂ 'ಕಿರಿಯರ ಪ್ರಪಂಚ'ದ ಪರವಾಗಿ ಅತಿಥಿ ಅಭ್ಯಾಗತರಿಗೆಲ್ಲ ಉಪಚಾರೋಕ್ತಿಗಳನ್ನು ಸಮರ್ಪಿಸುತ್ತ ಈ ಸಾಹಿತ್ಯ ವಸಂತೋತ್ಸವದ ಸಲುವಾದ ಸಮಸ್ತ ವೆಚ್ಚಗಳನ್ನೂ ಶ್ರೀ ಸ್ವಾಮಿಜಿಯವರೇ ಹೊತ್ತು ವ್ಯವಸ್ಥೆಗಳಲ್ಲಿಯೂ ಮುಂದಾಳಾಗಿ ನಿಂತು ಈ ಉತ್ಸವವು ಯಶಸ್ವಿಯಾಗಿ ನೆರವೇರುವಂತಾದುದರಿಂದ ಸ್ವಾಗತ ಸಮಿತಿಯ ಹಾಗೂ 'ಕಿರಿಯರ ಪ್ರಪಂಚ'ವವರ ಕಾರ್ಯಭಾರವು ತೀರ ಹಗುರವಾಗಿದ್ದು ಮಠದ ಕಡೆಗೆ ಕೈತೋರಿಸುವ ಬರೀ ಉಡುಪಿಯ ಉಪಚಾರೋಕ್ತಿಯೇ ಅವರೂ ಅತಿಯೋಕ್ತಿಯಾಗಲಾರದೆಂದೂ ದೂರದೂರವಾಗಿದ್ದೇ ಘಟ್ಟದ ಮೇಲಿನ ಎಲ್ಲೆಯೇ ಹಾರಾಡುತ್ತಿದ್ದ ಕರ್ನಾಟಕ ಸಾಹಿತ್ಯ ಪರಿಷತ್ತು ಇತ್ತೀಚೆಗೆ ತನ್ನ ದೃಷ್ಟಿ

THE
PANGAL NAYAK BANK
Estd.] LIMITED. [1920.
ದಿ ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್.
Paid up Capital Rs. 1,82,100/-. Reserves Rs. 2,02,800/-
PRINCIPAL OFFICE: COURT ROAD, UDIPI.
OTHER OFFICES:
UDIPI, MANGALORE, KATAPADI, & KANHANGAD.

Season Deposits so as to bear interest at 4per cent per annum till the end of June 1939 are accepted.

Cumulative Deposits are also received on the usual terms.

Banking business of every description is transacted. Further particulars may be had on application.

ದಿ ವಿಜಯ ಬೇಂಕ್, ಲಿಮಿಟೆಡ್,
ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವ್ಯವಹಾರಗಳು ಇಲ್ಲಿ ನಡೆಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಾತಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3 ತಿಂಗಳಿಗೆ	....	3½%
6 ,,	....	4%
1 ವರ್ಷಕ್ಕೆ	....	4½%
2 ,,	....	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ.

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತದೆ.

ಕೋನವನ್ನು ತಿರುಗಿಸಿ ವ್ಯಾಪಕ ಕ್ಷೇತ್ರದಲ್ಲಿ ತನ್ನ ಪರಿಚಯ ಪ್ರಭಾವಗಳನ್ನು ಮಾಡಬೇಕೆಂದು ನಿರ್ಧರಿಸಿ ಅದರ ಫಲರೂಪವಾಗಿ ಇಂದು ಉಡುಪಿಯಲ್ಲಿ ಈ ಉತ್ಸವವನ್ನು ನೆರವೇರಿಸಿದುದಕ್ಕಾಗಿ ಪರಿಷತ್ತಿನ ಉಪಕಾರ ಸ್ಮರಣೆಯನ್ನು ಮಾಡಿ ಈ ಉತ್ಸವದಲ್ಲಿ ಸಹಭಾಗಿಗಳಾಗಲು ಬೆಂಗಳೂರು ಮಂಗಳೂರು, ಧಾರವಾಡ, ಪುತ್ತೂರು ಮುಂತಾಗಿ ದೂರದಿಂದ ಬಂದ ಸಾಹಿತ್ಯಾಭಿಮಾನಿಗಳಿಗೂ ಹತ್ತಿರದಿಂದ ಬಂದವರಿಗೂ ಉತ್ಸವದ ಕಾರ್ಯಕ್ರಮದಲ್ಲಿ ನೆರವಾಗಿ ನಿಂತ ಸರ್ವ ಉತ್ಸಾಹಿಗಳಿಗೂ ಧನ್ಯವಾದಗಳನ್ನರ್ಪಿಸಿದರು.

ತರುವಾಯ ಕರ್ನಾಟಕ ಸಾಹಿತ್ಯಪರಿಷತ್ತಿನ ಪರವಾಗಿ ಶ್ರೀ ವಿ ಸೀತಾರಾಮಯ್ಯನವರು ಈ ಉತ್ಸವವು ಉಡುಪಿಯಲ್ಲಿ ಉತ್ಸಾಹಪೂರ್ವಕವಾಗಿ ನೆರವೇರಲು ನೆರವಾಗಿ ನಿಂತ ಸರ್ವರಿಗೂ ಧನ್ಯವಾದವನ್ನರ್ಪಿಸುತ್ತ ಶ್ರೀ ಸ್ವಾಮಿಜಿಯವರು ತೋರಿದ ಮಹದೌದಾರ್ಯವನ್ನು ಕೊಂಡಾಡಿದುದಲ್ಲದೆ ಪ್ರತಿಯೊಂದು ದಿನದ ಪ್ರತಿಯೊಂದು ಕಾರ್ಯಕ್ರಮ ನಿರ್ವಹಣ ಕಾಲದಲ್ಲಿಯೂ ದಯಮಾಡಿಸಿ ಬಂದು ನೋಡಿ ಕೇಳಿ ಅನುಗ್ರಹಿಸಿದುದಕ್ಕಾಗಿ ಪರಮಾನಂದವನ್ನು ವ್ಯಕ್ತಗೊಳಿಸಿದರು. ಪರಸ್ಥಳದಿಂದ ಬಂದಿದ್ದ ತಮ್ಮೆಲ್ಲರಿಗೂ ಉಡುಪಿಯಲ್ಲಿ ಕಳೆದ ದಿವಸಗಳೂ ಅವುಗಳೊಂದಿಗೆ ಶ್ರೀ ಸ್ವಾಮೀಜಿಯವರ ನೆನಹೂ ಚಿರಸ್ಥಾಯಿಯಾಗಿ ಉಳಿಯುವುವೆಂದರು. ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಸರ್ವರೂ ನೆರವಾಗಿ ನಿಂತು ನುಡಿಯ ಮೇಲ್ಮೆಯಿಂದ ಐಕ್ಯತೆಯನ್ನುಂಟುಮಾಡಿ ನಾಡಿನ ಸೌಖ್ಯವನ್ನು ಸಾಧಿಸಬೇಕಾಗಿ ಬಯಸಿ ಅಂದಿನ ರಾತ್ರಿಯ ಯಕ್ಷಗಾನ ಕೂಟದ ಒಂದು ಕಾರ್ಯಕ್ರಮವನ್ನು ಇರಗೊಳಿಸಿ ಸಾಹಿತ್ಯ ವಸಂತೋತ್ಸವದ ಮಂಗಲಾಚರಣೆಯನ್ನೆಸಗಿದರು.

ತರುವಾಯ ಶ್ರೀ ರಘುಮಾನ್ಯ ಶ್ರೀಗಳವರು ಸಾಹಿತ್ಯವಸಂತೋತ್ಸವದಲ್ಲಿ ಸಹಭಾಗಿಗಳಾಗಿ ವೇದಿಕೆಯನ್ನೇರಿದ ಪರವೂರುಗಳಿಂದ ಬಂದ ಪ್ರಸಿದ್ಧ ಸಾಹಿತಿಗಳನ್ನು ಬರಮಾಡಿಸಿಕೊಂಡು ಮಧುರ ಉಪದೇಶೋಕ್ತಿಗಳಿಂದಲೂ ಉತ್ತರೀ ಫಲಮಂತ್ರಾಕ್ಷತೆಗಳಿಂದಲೂ ಮನ್ನಿಸಿ ಆಶೀರ್ವದಿಸಿ ಬೀಳ್ಕೊಟ್ಟರು.

ಅಂದು ರಾತ್ರೆ "ಕೃಷ್ಣಸಂಧಾನ"ದಲ್ಲಿ ರಸವತ್ತಾದ ಭಾಗಗಳನ್ನು ಆಯ್ದುಕೊಂಡ ತಾಳಮದ್ದಳೆ ಕೂಟವು ಜರಗಿತು. ಹಾಡುಗಾರಿಕೆಯೂ ಮೃದಂಗವಾದನವೂ ಅರ್ಥಗಾರಿಕೆಯೂ ಸಧಾರಿತ ರೀತಿಯಲ್ಲಿದ್ದು ಒಂದಕ್ಕೊಂದು ಮೇಳವಿಸಿ ಕೂಟಕ್ಕೆ ಕಳೆಗೊಡುವಂತಿತ್ತು. ಶ್ರೀಗಳಾದ ಬಿ. ಬಣ್ಣ ಕಾಮತ, ಹಿರಿಯಣ್ಣ ಶೆಟ್ಟಿ, ಸಿ ಶೀನಶೆಟ್ಟಿ, ಕೆ. ಭೋಜಶೆಟ್ಟಿ, ಎಂ. ಸುಬ್ಬರಾವ್ ಮೊದಲಾದ ಅರ್ಥಧಾರಿಗಳು ಭಾಗವಹಿಸಿದ್ದರು. ಶ್ರೀ. ಮೂಡ್ಲಗಿರಿ ಪೈಗಳ ಮೃದಂಗವಾದನ, ಶ್ರೀ. ನಾರಾಯಣ ಹಕ್ಲೂರರ ಹಾಡುಗಾರಿಕೆ ಉತ್ತಮವಿತ್ತು. ಈ ಯಕ್ಷಗಾನದ ವ್ಯವಸ್ಥೆಗಾಗಿ ಶ್ರೀ. ಕೆ ಪಿ. ಶೀನಶೆಟ್ಟರು ಶ್ರಮವಹಿಸಿದ್ದರು.

ಕೊನೆಗೆ ಈ ಯಕ್ಷಗಾನ ಸಾಹಿತ್ಯ ಸಹೋದರರನ್ನು ಅಭಿನಂದಿಸಿ ಅವರಿಗೆ ಧನ್ಯವಾದವನ್ನರ್ಪಿಸುತ್ತ ಶ್ರೀ. ಕೊರಡ್ಕಲ್ಲರು ಯಕ್ಷಗಾನವು ಜನಸಾಮಾನ್ಯರ ಜೀವನದ ರೀತಿನೀತಿಗಳಿಗೂ ಜನಮನೋರಂಜನೆಗೂ ಏಕಮಾತ್ರ ಮಹಾ ಸಾಧನವಾಗಿದ್ದು ಅದು ಮಾಡಿರುವ ಮಹತ್ತಾದ ಸೇವೆ ಯಕ್ಷಗಾನವು ಕರ್ನಾಟಕದಲ್ಲಿ ದಕ್ಷಿಣ ಕನ್ನಡದ ವೈಶಿಷ್ಟ್ಯಗಳನ್ನು ವಿವರಿಸಿ ಇಂದು ಬಯಲಾಟಗಳೂ ಯಕ್ಷಗಾನ ಕೂಟಗಳೂ ಸುಧಾರಿಸಿಕೊಳ್ಳಬೇಕಾದ ಭಾಗಗಳನ್ನು ಸೂಚಿಸಿ ಅಂತಹ ನ್ಯೂನತೆಗಳು ಅಂದಿನ ಕೂಟದಲ್ಲಿ ತೋರಿಬಾರದೆ ಆದರ್ಶಕ್ಕೆ ಸಮೀಪವಾಗಿದ್ದುದು ಅಭಿನಂದನೀಯವೆನ್ನಲು ಅಂದಿನ ಯಕ್ಷಗಾನ ಕೂಟದ ಹಾಗೂ ಸಾಹಿತ್ಯ ವಸಂತೋತ್ಸವದ ಮಂಗಲಾಚರಣೆಯಾಯಿತು.

ಬಾರಕೂರಲ್ಲಿ ವಸಂತ ಸಾಹಿತ್ಯೋತ್ಸವ

ತಾ 21-5-39ನೆಯ ಆದಿತ್ಯವಾರ ಬಾರಕೂರಿಗೆ ವಸಂತ ಸಾಹಿತ್ಯ ಉತ್ಸವದ ಸಲುವಾಗಿ ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಕವಿಭೂಷಣ ಚಟಗೇರಿ ಕೃಷ್ಣಶರ್ಮ (ಆನಂದ ಕಂದ) ಶ್ರೀ. ವಿ. ಸೀತಾರಾಮಯ್ಯ ಎಂ. ಎ. ಮತ್ತು ಶ್ರೀ ಕೋಟ ಶಿವರಾಮ ಕಾರಂತ ಇವರು ದಯಮಾಡಿಸಿದ್ದರು. ಸಾಯಂಕಾಲ 5ಗಂಟೆಗೆ ಉತ್ಸವದ ಸಲುವಾಗಿ ಏರ್ಪಡಿಸಿದ್ದ ವಸಂತ ಮಂಟಪದಲ್ಲಿ ಸಾಹಿತ್ಯ ಉತ್ಸವವು ಪ್ರಾರಂಭವಾಯಿತು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಶ್ರೀನಿವಾಸ ಹೆಬ್ಬಾರರವರು ಸ್ವಾಗತ ಭಾಷಣವನ್ನು ಮಾಡಿದರು. ಪ್ರಾಂತೀಯ ಸಮಿತಿಯ ಪರವಾಗಿ ಶ್ರೀ. ಕಾರಂತರು ಈ ಮೊದಲು ಪ್ರಕಟಿಸಿದ ಕಾರ್ಯಕ್ರಮದಲ್ಲಿ ಬದಲಾವಣೆಮಾಡಬೇಕಾಗಿ ಬಂದ ವಿಷಯದಲ್ಲಿ ವಿಷಾದವನ್ನು ಸೂಚಿಸಿ ಸಭಿಕರಿಗೆ ಸಾಹಿತಿಗಳ ಪರಿಚಯವನ್ನು ಮಾಡಿಕೊಟ್ಟರು. ಶ್ರೀ. ಚಟಗೇರಿ ಕೃಷ್ಣಶರ್ಮ ಅವರು "ಹೊಸಗನ್ನಡ" ಕವಿತೆ, ಮತ್ತು ಅದು ಬೆಳೆದುಬಂದಿರುವ ವಿಧಾನ, ಅದರ ಜನಕರು, ಹಾಗೆ ಬದಲಾವಣೆಯಾಗುತ್ತಾ ಬರಬೇಕಾದ ಅವಶ್ಯಕತೆಯ ಮೇಲೆ ಮಾತನಾಡಿದರು. ಶ್ರೀ. ಶಿವರಾಮ ಕಾರಂತರು "ಯಕ್ಷಗಾನ"ದ ಕುರಿತು ಉಪನ್ಯಾಸವಿತ್ತರು. ಶ್ರೀ. ವಿ. ಸೀತಾರಾಮಯ್ಯನವರು "ಮತಧರ್ಮ ಸಾಹಿತ್ಯ"ವೆಂಬ ವಿಷಯದ ಕುರಿತು ಭಾಷಣವಿತ್ತರು. ಶ್ರೀ. ವಿ. ಸೀಯವರು ಕರ್ನಾಟಕ ಸಾಹಿತ್ಯ ಪರಿಷತ್ತಿನ ವಿಚಾರವನ್ನು ತಿಳಿಸಿ ಅದರ ಕಾರ್ಯಕಲಾಪಗಳನ್ನು ವಿವರಿಸಿದರು. ಸಾಹಿತ್ಯ ಪರಿಷತ್ತಿನ ಆಶಯವನ್ನು ಮುಂದುವರಿಸುವ ಸಲುವಾಗಿ ಸಹಾಯಮಾಡಿದ ಸ್ವಾಗತ ಸಮಿತಿಯವರಿಗೆ ಪರಿಷತ್ತಿನ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು. ಶ್ರೀ. ಕಾರಂತರು ಪ್ರಾಂತೀಯ ಸಮಿತಿಯ ಪರವಾಗಿ ಶ್ರೀ ಶ್ರೀನಿವಾಸ ಹೆಬ್ಬಾರರು ಸ್ವಾಗತ ಸಮಿತಿಯ ಪರವಾಗಿಯೂ ಜನರ ಪರವಾಗಿಯೂ ಧನ್ಯವಾದಗಳನ್ನು ಅರ್ಪಿಸಲು ಜಯಕಾರದೊಂದಿಗೆ ಸಭಾಂತ್ಯವಾಯಿತು.

Degrees: Books: Medicines.

Free H. L. M. S., H. M. B., H. M. D. etc Free Homeo-Ayur-Unani-Nature degres, by post also—Practitioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10. Enclose 2 annas stamps:—

Principal, Indian Homeopathic Institute and Society (Govt. Regd.)
P. O. MAHUVA, (Kathiawar Dt. India)

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ ಆಫೀಸು: ಉಡುಪಿ.

ಪ್ರಥಮ ಮೌಲ್ಯಮಾಪನ (Valuation) ದಲ್ಲಿಯೇ ಪಾಲಿಸಿದಾರರಿಗೆ ಲಾಭ (Bonus) ಹಂಚಿಯದೆ.

ಹೋಲ್ ಲೈಫ್ (Whole Life) ಪಾಲಿಸಿಗಳಿಗೆ ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 15/-	ಎಂಡವ್‌ಮೆಂಟ್ (Endowment) ಪಾಲಿಸಿಗಳಿಗೆ ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/-

ಅಖಿಲ ಕರ್ನಾಟಕದಲ್ಲಿ ಪಾಲಿಸಿದಾರರದೇ ಆದ ವಿಮಾಸಂಸ್ಥೆ ಇದೊಂದೇ.

ಲಾಭಾದಾಯದ ಪ್ರತಿ ಅಂಶವೂ ಪಾಲಿಸಿದಾರರಿಗೇ ಹಂಚಲ್ಪಡುತ್ತದೆ.

ಈಗಿಂದೀಗಲೇ ಈ ಕಂಪೆನಿಯಲ್ಲಿ ವಿಮೆ ಇಳಿಸಿ ವಿಮೆಯ ಸಂಪೂರ್ಣ ಪ್ರಯೋಜನವನ್ನು ಹೊಂದಿರಿ.

ಏಜಂಟರಾಗಬಯಸುವವರು ಕಂಪೆನಿಯ ಹೆಡ್ ಆಫೀಸಿಗೆ ಬರಕೊಳ್ಳುವುದು.

THE CANARA MUTUAL
ASSURANCE COMPANY LTD.

THE
Canara Banking Corporation, Ltd.
(Incorporated in British India.)
ESTD. 1906

THREE YEARS' CASH CERTIFICATES
bearing interest at 4% p. a. in denomnations of Rs 50/-, 100/-, 500/-, 1,000/- & 5000/- are now issued at all our Branches.

For particulars call at or write to any of our nearest Branches.

ಉಡುಪಿ, ಗುರುವಾರ, ತಾ. ೧೫-೬-೩೯

ಕಾಂಗ್ರೆಸ್ಸಿನ ಶುದ್ಧೀಕರಣ

ಕಾಂಗ್ರೆಸ್ಸಿನ ಶುದ್ಧೀಕರಣವಾಗಬೇಕೆಂಬ ಸೊಲ್ಲು ಈಗ ಸರ್ವತ್ರ ಹಾಡಲ್ಪಡುತ್ತಿದೆ. ಪದ್ಧತಿಯಂತೆ ಮಹಾತ್ಮಾಗಾಂಧಿಯವರೇ ಈ ಪ್ರಶ್ನೆಗೆ ಪ್ರಾಮುಖ್ಯತೆಯನ್ನು ತಂದೊಡ್ಡಿದ್ದಾರೆ. ತ್ರಿಪುರಿ ಕಾಂಗ್ರೆಸ್ಸಿನಲ್ಲಿ ಆ ಸಂಬಂಧದಲ್ಲಿ ಒಂದು ನಿರ್ಣಯವು ಕೂಡ ಆಗಿತ್ತು; ಕಲ್ಕತ್ತದ ಎ. ಐ. ಸಿ. ಸಿ. ಸಭೆಯಲ್ಲಿ ಅದನ್ನು ಕಾರ್ಯರಂಗಕ್ಕಿಳಿಸುವರೆ ಕಮಿಟಿಯೊಂದರ ನೇಮಕವಾಗಿ ಆ ಕಮಿಟಿಯು ಜೂನ್ ಮೊದಲನೇ ವಾರದಲ್ಲಿ ಬೊಂಬಾಯಿಯಲ್ಲಿ ಸಭೆ ಸೇರಲಾರಂಭಿಸಿ, ಜೂನ್ ಅಂತ್ಯದೊಳಗೆ ಅಲ್ಲಿಯೇ ನೆರೆಯಲಿರುವ ವರ್ಕಿಂಗ್ ಕಮಿಟಿ ಮತ್ತು ಅಖಿಲಭಾರತ ಸಮಿತಿಯ ಮುಂದೆ ತನ್ನ ವರದಿಯನ್ನೊಪ್ಪಿಸಲಿರುವದು.

ಕಾಂಗ್ರೆಸ್ಸಿನ ಸದ್ಯದ ಪರಿಸ್ಥಿತಿಗೆ ತಕ್ಕಂತೆ ಇದಕ್ಕಿಂತ ಮುಂದಾಗಿ ಕೈಕೊಳ್ಳತಕ್ಕ ಕಾರ್ಯವಿನ್ನೊಂದಿರಲಾರದು. ಹಲವು ಇಲಾಖೆಗಳಿಗೆ ಹಂಚಿ ಹಾಕಲ್ಪಡುವ ಯೋಗ್ಯತೆಯುಳ್ಳ ಬಗೆಬಗೆ ಬಣ್ಣದ ಜನರು ಇಂದು ಕಾಂಗ್ರೆಸ್ಸಿನೊಳಗೆ ಸೇರಿ ಅದನ್ನು ಬಟ್ಟೆಬಯಲಾಗಿ ಮಾರ್ಪಡಿಸಿರುವುದನ್ನು ಕಾಣುತ್ತಿದ್ದೇವೆ. ರಾಷ್ಟ್ರಸಭೆಯು ಎಲ್ಲರ ಸಹಕಾರ ಸಂಪತ್ತಿಯನ್ನೂ ಹೊಂದಿ ವಿಸ್ತೃತವಾಗುವದಾದರೆ, ಕಾಂಗ್ರೆಸ್ ವಿರೋಧಿಗಳ ವಿನಹಾ ಅನ್ಯರು ಅಸೂಯೆ ಪಡಲಾರರು. ಆದರೆ ಇಂದಿನ ಪರಿಸ್ಥಿತಿಗೆ ವಿಕಾಸವೆಂಬ ಹೆಸರಿಡಬಹುದೆ? ಕಾಂಗ್ರೆಸಿನ ಇರಸ್ತಿಕೆಯಿರುವದು ಸ್ವಾತಂತ್ರ್ಯ ಸಾಧನೆಯ ಶಕ್ತಿಯನ್ನು ಕೇಂದ್ರೀಕರಿಸಿಕೊಳ್ಳುವುದರಲ್ಲಿ, ಸಂಖ್ಯಾಬಲವು ಅದರ ಬಲವಲ್ಲ. ದೇಶದ ದಾಸ್ಯ ವಿಮೋಚನೆಗಾಗಿ ಹೋರಾಡುವ ಸಂಸ್ಥೆಯು ಹಲವರ ಹಲವು ವಿಧದ ಸಂಸ್ಥೆಯಾಗಲು ಸಾಧ್ಯವಿಲ್ಲ. ಈ ದಿನ ವಿವಿಧ ಬಯಕೆಯುಳ್ಳ ಹಲವು ತರಗತಿಯ ಜನರು ಸೇರಿ ಹೋಗಿ ಕಾಂಗ್ರೆಸ್ ಮೆಂಬರರ ಪಟ್ಟಿಯನ್ನು ಉದ್ದಕ್ಕೆ ಬೆಳೆಸಿದ್ದಾರೆ. ಅಂಥವರ ಬಯಕೆಯು ಅವ್ಯಕ್ತವಾಗಿ ಈಡೇರುವಾಗ ಕಾಂಗ್ರೆಸ್ಸಿನ ಶಕ್ತಿಭಂಡಾರವು ಅಪ್ರತ್ಯಕ್ಷವಾಗಿ ಬರಿದಾಗುತ್ತದೆ.

ಶುದ್ಧೀಕರಣಕ್ಕಾಗಿ ಕೈಹಾಕಿದವರಿಗೆ ಬೇರೆ ವಿಧದ ಕಲ್ಪನೆಗಳೂ ದೊರೆಯಬಹುದು. ಎಲ್ಲವುಗಳ ಮೂಲವನ್ನು ಶೋಧಿಸುತ್ತಾ ಹೋದಲ್ಲಿ ನಾವು ಕಾಂಗ್ರೆಸಿನ ಸದ್ಯದ ಮನೋವೃತ್ತಿಯಲ್ಲಿಗೇ ಬರಬೇಕಾಗುವದು. ಕಾಂಗ್ರೆಸಿನಲ್ಲಿಂದು ಅನಪೇಕ್ಷಿತ ಜನರು ಬಹುಸಂಖ್ಯಾಕರಾಗಿ ಸೇರಿರುವರೆನ್ನುವಾಗಲೇ, ಹಿಂದೆ ಇಂಥವರು ಸೇರಿರಲಿಲ್ಲವೆಂಬ ಅರ್ಥವಾಗುತ್ತದೆ. ಆದರೆ ಅಂದಿನ ಕಾಂಗ್ರೆಸ್ ನಿಯಮಗಳೇ ಇಂದೂ ಇವೆ. ಸೇರುವವರೆಲ್ಲಾ ಅವುಗಳಿಗನುಸಾರವಾಗಿಯೇ ಸೇರುತ್ತಾರೆ. ಹಾಗಾದರೆ ಅಂದಿನ ಮತ್ತು ಇಂದಿನ ವ್ಯತ್ಯಾಸಕ್ಕೆ ಕಾರಣವಾವುದು? ಕಾಂಗ್ರೆಸಿನ ಘೋಷಣೆಯಲ್ಲಾಗಿರುವ ವ್ಯತ್ಯಾಸವೊಂದೇ! ಕಾಂಗ್ರೆಸ್ ರಣಕಣಕ್ಕಿಳಿದಿದ್ದಾಗ ಯೋಧರು ಮಾತ್ರ ಸೇರಿದರು; ಅದು ವಿಧಾಯಕ ಕಾರ್ಯಕ್ಷೇತ್ರಕ್ಕಿಳಿದಾಗ ವಿಹಾರಾರ್ಥಿಗಳೂ ಬಂದು ಸೇರಿಕೊಂಡರು, ಕಾಂಗ್ರೆಸನ್ನು ವಿಹಾರದ ಬಯಲಾಗಿ ಮಾರ್ಪಡಿಸಿಕೊಂಡರು. ಅಂದಿನ ಬಿಗು ಮತ್ತು ಇಂದಿನ ಲಘುಸ್ಥಿತಿಗನುಸಾರವಾಗಿ, ಭರತ-ಇಳಿತ ಹೃದಯಗಳು ಸಮ್ಮಿಶ್ರವಾದರು. ಶುದ್ಧೀಕರಣ ಸೂಚನೆ ಕೊಡಲು ನೇಮಕವಾದ ಸಮಿತಿಯವರು ನಿಯಮಗಳಲ್ಲಿ ತಿದ್ದುಪಡಿ ಮಾಡಬಹುದು; ಕಾಂಗ್ರೆಸದನ್ನು ಅಂಗೀಕರಿಸಿ ಕಾರ್ಯರೂಪದಲ್ಲಿ ತರಬಹುದು. ಕಲ್ಪನೆಯ ಕಡೆಗೆ ಕೈಯ್ಯಾಡಿಸದೆ ಬಿಡುವದಕ್ಕಿಂತ ಒಮ್ಮೆ ಗುಡಿಸುವದುತ್ತಮವೇನೋ ನಿಜ. ಆ ಕುರಿತು ಅಸಡ್ಡೆಯಿಂದಿರುವದೆಂದರೆ ಅದನ್ನೊಪ್ಪಿಕೊಂಡ ಅರ್ಥ ಬರಬಹುದು. ಆದರೆ ಕೇವಲ ನಿಯಮಗಳ ರಚನೆಯಿಂದ ಕಾಂಗ್ರೆಸಿನ ಪಾವಿತ್ರ್ಯವು ಶಾಶ್ವತವಾದೀತೇ—ಎಂಬ ಪ್ರಶ್ನೆಯಿದೆ. ಬರಿಯ ನಿಯಮಗಳು ಎಲ್ಲಿಯೂ ಏನನ್ನೂ ಸಂಪಾದಿಸಿದ ಉದಾಹರಣೆ ಇಲ್ಲ. ನಿಯಮದಲ್ಲಿ ನಿಷ್ಠೆ ಅಥವಾ ಶಕ್ತಿಯಿಲ್ಲದೆ ಅದು ಆಚರಣೆಯಲ್ಲಿ ಬರುವದು ಅಸಾಧ್ಯ. ದೇಶದ ಸದ್ಯಸ್ಥಿತಿಯಲ್ಲಿ ಕಾಂಗ್ರೆಸಿಗಿರುವ ಅಂತಹ ಶಕ್ತಿಯೆಂದರೆ ಮೆಂಬರರಲ್ಲಿ ಹೋರಾಟದ ಮನೋವೃತ್ತಿಯನ್ನು ತುಂಬುವದೊಂದೇ!

ಅಂದರೆ ಹೇಗೆ:-ದೇಶದ ಪರಿಸ್ಥಿತಿಯನ್ನು ಕಡೆಗಣಿಸಿ ಕಾಂಗ್ರೆಸ್ಸಿನಲ್ಲಿ ಶಿಸ್ತನ್ನುಂಟು ಮಾಡುವ ಒಂದೇ ಉದ್ದೇಶಕ್ಕಾಗಿ ಹೋರಾಟವನ್ನಾರಂಭಿಸಬೇಕೆ? ಎಂಬ ಪ್ರಶ್ನೆ ಬರಬಹುದು. ದೇಶವು ಹೋರಾಟಕ್ಕೆ ಸಿದ್ಧವಿರುವದೋ ಇಲ್ಲವೋ ಎಂಬುದನ್ನು ಮುಂದಿರಿಸಿಕೊಂಡು ನಾವೀಗ ತರ್ಕಿಸುವದಿಲ್ಲ. ಸ್ವಾತಂತ್ರ್ಯ ಸಾಧನೆಯೇ ರಾಷ್ಟ್ರಸಭೆಯ ಜೀವಾಳವಾದುದರಿಂದಲೇ ಅದು ಇಂದು ಜನಸಾಮಾನ್ಯರ ಸಂಸ್ಥೆಯಾಗಿದೆ. ಆ ರೀತಿಗನುಸಾರವಾದ ಚಟುವಟಿಕೆಯು ಕಾಂಗ್ರೆಸಿನ ಸ್ವಭಾವವಾಗಿ ಹೋಗಿದೆ. ಸದ್ಯದ ವಾತಾವರಣದಿಂದಾಗಿ 'ಕ್ಲೋರೋಫೋರ್ಮ್' ಕೊಟ್ಟು ಚಟುವಟಿಕೆಗಳನ್ನೆಲ್ಲಾ ನಿಲ್ಲಿಸಿದಂತಾಗಿಲ್ಲವೆ? ಹೀಗೆ ತಡೆಗಟ್ಟಲ್ಪಟ್ಟ ಜನಸಾಮಾನ್ಯರ ಸಂಚಲನಾಶಕ್ತಿಯು ಒಳಗಿಂದೊಳಗೆ ನಿಯಮಗಳಿಗೇನೇ ಧಕ್ಕೆ ಬಡಿಯ ಹತ್ತಿದರೆ ಅದರಲ್ಲಿ ಆಶ್ಚರ್ಯವೇನು?

ಸದ್ಯದ ಸ್ಥಿತಿಯಲ್ಲಿ ಕಾಂಗ್ರೆಸಿನ ಹುಟ್ಟುಬುದ್ಧಿಯ ಉಪಯೋಗ ಹೇಗೆ ಎಂಬುದನ್ನು ನೋಡೋಣ. ಕೌನ್ಸಿಲು ಕಾರ್ಯಕ್ರಮವು ಕಾಂಗ್ರೆಸಿನ ಸ್ವಾತಂತ್ರ್ಯ ಹೋರಾಟದ ಒಂದು ಭಾಗವೆಂದು ಅಂಗೀಕರಿಸಲ್ಪಟ್ಟಿತು. ಆದರೆ ಅದೇ ಈಗ ಸರ್ವತ್ರ ವ್ಯಾಪಿಸಿ ಹೋಗಿ 'ಅನ್ಯಥಾ ನಾಸ್ತಿ' ಎಂದಾಗಿದೆ. ಪಾರ್ಲಿಮೆಂಟರೀ ಸಬ್ ಕಮಿಟಿಯಿಂದ ಹಿಡಿದು ಸ್ಥಳೀಕ ಸಮಿತಿಗಳ ವರೆಗೆ ಚುನಾವಣೆಗಾಗಿ ಪ್ರತ್ಯೇಕ ಸಮಿತಿಗಳು ಸ್ಥಾಪಿಸಲ್ಪಟ್ಟರೂ ಕಾಂಗ್ರೆಸ್ ಕಮಿಟಿಗಳ ಪಾರ್ಲಿಮೆಂಟರೀ ಕಾರ್ಯಕ್ರಮದ ಹೊರತು ಬೇರಾವ ಕಾರ್ಯವನ್ನೂ ಮಾಡುತ್ತಿಲ್ಲ. ಕಾಂಗ್ರೆಸಿನ ನಿರ್ಣಯಗಳಲ್ಲಿ ಕೌನ್ಸಿಲು ಕಾರ್ಯಕ್ರಮಕ್ಕಿಂತಲೂ ರೈತ ಮಜೂರರ ಹಿತ ಸಾಧನೆ, ಜನತಾ ಸಂಪರ್ಕ ಮೊದಲಾದವುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಲ್ಪಟ್ಟಿದೆ. ಆದರೆ ಪಾರ್ಲಿಮೆಂಟರೀ ಕಾರ್ಯಕ್ರಮದ ಹೊರತು ಮಿಕ್ಕವೆಲ್ಲಾ ಮೂಲೆಗೊತ್ತಲ್ಪಟ್ಟಿವೆ. ಮದ್ರಾಸ್ ಪ್ರಾಂತ್ಯದಲ್ಲಿ ನಡೆದ ಹಲವು ಮಜೂರ ಮುಷ್ಕರಗಳನ್ನು ನಡೆಯಿಸಿದುದು ಕೂಲಿಗಾರರ ಸಂಘಗಳು ಹೊರತು ಕಾಂಗ್ರೆಸ್ ಸಮಿತಿಗಳಲ್ಲ. ಸಂದಿಗ್ಧ ಪರಿಸ್ಥಿತಿಯ ಸಮಯದಲ್ಲಿ ಮಂತ್ರಿಗಳು ಅಧಿಕಾರ ಪೂರ್ವಕ ಕೈಹಾಕಿ ಮುಷ್ಕರಗಳನ್ನು ಕೊನೆಗೊಳಿಸಿದ್ದರೆಂಬುದು ಅಭಿನಂದನೀಯವೇ. ಕಾಂಗ್ರೆಸು ಘೋಷಿಸಿರುವ ಮೂಲಭೂತ ಹಕ್ಕುಗಳಿಗೆಂತಹ ಧಕ್ಕೆ ತಗಲಿತ್ತು ಎಂಬುದು ಆ ಮುಷ್ಕರಗಳ ತೀರ್ಮಾನದ ವೇಳೆ ವಿದಿತವಾಗಿತ್ತು. ಆದರೂ ಕಾಂಗ್ರೆಸಿನ ಕಾರ್ಯಕ್ರಮವನ್ನನುಸರಿಸಿ ಮೂಲಭೂತ ಹಕ್ಕುಗಳಿಗಾಗಿ ಹೋರಾಟ ಹೂಡುವ ಜವಾಬ್ದಾರಿಯನ್ನು ಕಾಂಗ್ರೆಸ್ ಕಮಿಟಿಗಳು ವಹಿಸಿಕೊಂಡ ಉದಾಹರಣೆಗಳಿಲ್ಲ. ಚುನಾವಣೆಯ ಸಂಬಂಧದ ಕೆಲಸಗಳನ್ನು ಪಾರ್ಲಿಮೆಂಟರೀ ಕಮಿಟಿಗಳಿಗೇ ಒಪ್ಪಿ ಕಾಂಗ್ರೆಸ್ ಕಮಿಟಿಗಳಿಗೆಲ್ಲಾ ಮಜೂರರ, ರೈತರ ಮತ್ತು ಇತರ ಜನಸಾಮಾನ್ಯರ ಪರವಾಗಿ ಹೋರಾಡುವ ನಿಶ್ಚಿತ ಕಾರ್ಯಕ್ರಮಗಳನ್ನು ಹಾಕಿಕೊಡಬಾರದೇಕೆ? ಧುರೀಣರು ಆ ಕುರಿತು ಪ್ರಬಲ ಪ್ರಚಾರ ಕಾರ್ಯವನ್ನು ಕೈಕೊಳ್ಳಬಾರದೇಕೆ? ಬ್ರಿಟಿಷ್ ಸರಕಾರಕ್ಕೆ ಯುದ್ಧಾಹ್ವಾನ ಕೊಡಬೇಕೆನ್ನುವ ಮತ್ತು ದೇಶವಿಂದಿನ ಅವಶ್ಯ ತಯಾರಿಲ್ಲವೆನ್ನುವ ೨ ಪಕ್ಷಗಳ ಅಭಿಪ್ರಾಯವೂ ಜನತೆಯು ಹೋರಾಟಕ್ಕೆ ತಯಾರಾಗಬೇಕೆಂದೇ ಇರುವಾಗ ಆ ಕುರಿತು ಆಗತ್ಯವುಳ್ಳ ಕಾರ್ಯ ಕೈಕೊಳ್ಳುವುದಿಲ್ಲವೇಕೆ?

ಅಗತ್ಯವಾಗಿ ಕಾಂಗ್ರೆಸಿನ ಶುದ್ಧೀಕರಣವಾಗಬೇಕು; ಅದಕ್ಕೆ ತಕ್ಕಂತಹ ನಿಯಮನಿಬಂಧವೂ ಬೇಕು. ಈ ನಿರ್ಮಲೀಕರಣವು ಕಾಂಗ್ರೆಸ್ ಮೆಂಬರರ ಪಟ್ಟಿಯ ಕಸ ಜಾಡಿಸುವದರಲ್ಲೇ ಸಮಾಪ್ತಿಗೊಳ್ಳದೆ ಕಾಂಗ್ರೆಸ್ ಕಮಿಟಿಗಳಲ್ಲಿ ಜೀವಕಳೆ ತುಂಬುವ ಪ್ರಾಮುಖ್ಯಾಂಗವನ್ನು ಒಳಗೊಂಡಿರಬೇಕು. ಅನ್ಯಥಾ ಶುದ್ಧೀಕರಣವೆಂದರೆ ಹೇಗೆ? ——

ದಿ ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಓರಿಯಂಟಲ್ ವಿಮಾ ಕಂಪೆನಿಯ 1938ನೇ ಇಸವಿಯ ಆಡಳಿತ ಮಂಡಲದ ವರದಿಯೂ, 64ನೇ ವಾರ್ಷಿಕ ಮಹಾಸಭೆಯಲ್ಲಿ ಮುಂದಿಡಬೇಕಾದ ವಿಚಾರ ವಿವರಣೆಗಳ ವಿಷಯವೂ ನಮ್ಮ ಕೈಸೇರಿರುವುದು. ವಿಮಾ ಸಾಮ್ರಾಜ್ಯದಲ್ಲಿ ಅಖಂಡ ಭಾರತದಲ್ಲಿ ಅನುಪಮ ಸ್ಥಾನವನ್ನು ಪಡೆದ ಈ ವಿಮಾ ಸಂಸ್ಥೆಯು ವರ್ಷವರ್ಷಕ್ಕೆ ತನ್ನ ವ್ಯಾಪಾರ ವಹಿವಾಟುಗಳನ್ನು ಅಭಿವೃದ್ಧಿಯಿಂದ ಅತಿ ತೃಪ್ತಿಕರವಾದ ರೀತಿಯಲ್ಲಿ ಬೆಳೆಸುತ್ತಿರುವುದೆಂಬುವ ತಿರುಗೊಮ್ಮೆ ಈ ವರ್ಷದ ಸರ್ವತೋಮುಖವಾದ ಅಭಿವೃದ್ಧಿಯ ದಾಖಲೆಯು ಖಚಿತಗೊಳಿಸುತ್ತದೆ.

ಹಿಂದುಸ್ಥಾನದ ಹಿರಿಯ ಸಂಸ್ಥೆಯೆನಿಸಿದ ಓರಿಯಂಟಲ್ ವಿಮಾ ಕಂಪೆನಿಯು 1874ರಲ್ಲಿ ಸ್ಥಾಪನೆ ಹೊಂದಿತು; ಇಂದೀಗ ಓರಿಯಂಟಲ್ ವಿಮಾ ಕಂಪೆನಿಯು ಜಗತ್ಪ್ರಸಿದ್ಧವಾದ ವಿಮಾ ಸಂಸ್ಥೆಯಾಗಿ ದೇಶದ ಕೀರ್ತಿಯನ್ನು ವರ್ಧಿಸುವ ಮಹಾಸಂಸ್ಥೆಯಾಗಿರುವುದು. ಕಂಪೆನಿಯ ಆಡಳಿತ ಮಂಡಲವು ದೇಶದಲ್ಲಿ ಕೀರ್ತಿಗಳಿಸಿದ ಸಮರ್ಥ ಪುರುಷರಿಂದ ಕೂಡಿದುದಾಗಿದೆ; ಅಲ್ಲದೆ ಪ್ರಧಾನ ಉದ್ಯೋಗಸ್ಥ ಮಂಡಲವು ಜಗತ್ತಿನ ವಿಮಾ ವಾಣಿಜ್ಯ ವಿಚಾರದಲ್ಲಿ ಅತ್ಯಂತ ಪರಿಪಕ್ವ ಅನುಭವ ಶಿಕ್ಷಣ ಪಡೆದಿರುವ ಜನರಿಂದ ರೂಪಗೊಂಡಿರುವುದು ಕಂಪೆನಿಯ ಅನಿರೀಕ್ಷಿತ ಪ್ರಗತಿಗೆ ಸಾಧನವೆನ್ನಬಹುದು.

ವರದಿಯ ವರ್ಷದಲ್ಲಿ ಈ ಕಂಪೆನಿಯಿಂದ ರೂ. 97,685,395ರ 68,388 ವಿಮಾ ಸೂಚನಾ ಪತ್ರಗಳು ಅಂಗೀಕೃತವಾದುವು. ಕಂಪೆನಿಯಲ್ಲಿ ಈಗ ರೂ. 77,56,90,374 ಮೊತ್ತದ 3,88,597 ಪಾಲಿಸಿಗಳು ಚಾಲ್ತಿಯಲ್ಲಿವೆ, ಅಲ್ಲದೆ ರೂ. 73824ರಷ್ಟು ವರ್ಷಾಶನವನ್ನೀಯುವ 105 ಅನ್ಯುಯಿಟಿಗಳೂ ಇವೆ. ಈ ವರ್ಷದ ಒಟ್ಟು ಆಯವು ರೂ. 4,47,82,858-10-4 ಅದರಲ್ಲಿ ಪ್ರೀಮಿಯಮು ಆದಾಯವು 3,49,67,200-2-0. 1938ನೇ ವರ್ಷಾಂತ್ಯಕ್ಕೆ ಕಂಪೆನಿಯ ಭಂಡವಾಳವು ರೂ. 23,23,48,619-13-6. ಈ ಅಂಕೆ ಸಂಖ್ಯೆಗಳಿಂದ ಕಂಪೆನಿಯ ಮಹತ್ವಿಕೆಯನ್ನು ತಿಳಿಯಬಹುದಾಗಿದೆ ಮಾತ್ರವಲ್ಲದೆ ವರದಿಯ ವರ್ಷದ ಆಡಳಿತ ವೆಚ್ಚವು ಶೇಕಡಾ 22. ಮೊದಲಣ ವರ್ಷದಕ್ಕಿಂತ ಇದು ೧ರಷ್ಟು ಕಡಿಮೆಯಿರುವುದು ಶ್ಲಾಘನೀಯವಿದೆ. ಮಾತ್ರವಲ್ಲದೆ ರೂ. 135ರಂತೆ ಕಂಪೆನಿಯು ಪಾಲುಗಾರರಿಗೆ ಪಾಲು ೧ರ ಮುನಾಫೆ ಹಂಚಲಾಗಿದೆ ಕಂಪೆನಿಯು ತನ್ನ ಆಯವನ್ನು ಭದ್ರತೆಯುಳ್ಳ, ಲಾಭದಾಯಕವಾದ ಸೆಕ್ಯೂರಿಟಿಗಳ ಮೇಲೆ ಬಹು ಮುಂಜಾಗ್ರತೆಯಿಂದಲೂ, ವಿವೇಕದಿಂದಲೂ ವಿನಿಯೋಗಿಸುತ್ತಿರುವುದೆಂದು ವರದಿಯಿಂದ ಖಚಿತವಾಗುವುದು. ಹಾಗೂ ದೇಶದ ಮಹತ್ವಿಕೆಗೆ ಕಾರಣವಾದ ಭಾರತೀಯರು ಅಭಿಮಾನಪಡಬಹುದಾದ್ದು, ದೇಶೀಯ ಸಮರ್ಥ ಮುಖಂಡರ ಮುಂದಾಳುತನದಲ್ಲಿ, ಅನುಪಮ ಸ್ಥಾನವನ್ನಡರಿ ದೇಶದ ಕೀರ್ತಿಯನ್ನೇ ಪ್ರಪಂಚದಲ್ಲಿ ಸಾರುತ್ತಿರುವ, ಈ ದೇಶೀಯ ಆದರ್ಶ ವಿಮಾ ಸಂಸ್ಥೆಯು ಇನ್ನಷ್ಟು ಅಭಿವೃದ್ಧಿಯನ್ನು ಪಡೆದು ದೇಶದ ಉಜ್ವಲ ಕೀರ್ತಿಯನ್ನು ಬೆಳಗಿಸಲು ಮುಂದಾಗಲೆಂದು ನಾವು ಹಾರೈಸುವೆವು.

The Canara Industrial & Banking Syndicate Limited, BRAHMAVAR.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಬ್ರಹ್ಮಾವರ.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಜನರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಸಾಲಪಡೆಕೊಂಡ ನಂತರ ಸಾಲ ಪಡೆದ ಮೊಬಲಗುಗಳನ್ನಾಗಲೀ ಅವುಗಳ ಮೇಲಿನ ಬಡ್ಡಿಯನ್ನಾಗಲೀ ಕ್ಲಪ್ತವಾಯಿದೆಗೆ ಕೊಡದೆ ಬಾಕಿಮಾಡಿರುವುದರಿಂದಲೂ ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸುಗಳಲ್ಲಿ ಕೆಲವು ಜಾರಿಯಾಗಿಯೂ ಇನ್ನು ಕೆಲವು ಜಾರಿಯಾಗದೆ ಬಂದಿರುವುದರಿಂದಲೂ ಸದ್ರಿಯವರು ಅಡವಿಟ್ಟ ನಗಗಳನ್ನು ತಾ. 20-6 1939ರಲ್ಲು ಅಥವಾ ಅದರ ಮೊದಲೇ ಬಿಡಿಸಿಕೊಂಡು ಹೋಗದೆ ಇದ್ದರೆ ಅವರು ಅಡವಿಟ್ಟ ನಗಗಳನ್ನು ತಾ. **24—6—1939**ರಲ್ಲು ನಮ್ಮ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ ಘಂಟೆ 3ಕ್ಕೆ ಇನ್ನು ಪುನಃ ನೋಟೀಸು ಕೊಡದೆ ಬಹಿರಂಗವಾಗಿ ಏಲಂ ಮಾಡಲಾಗುತ್ತದೆಂಬುದನ್ನು ಈ ಮೂಲಕ ಸರ್ವ ಜನರಿಗೂ ತಿಳಿಸಲಾಗುತ್ತದೆ. ಏಲಂ ಕಾಯಂ ಮಾಡುವ ಹಕ್ಕು ಬೇಂಕಿನ ಮೇಲೆ ಹೊಂದಿಕೊಂಡಿರುವುದು.

ಲೋನ್ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು	ಬಡ್ಡಿ ಬಾಕಿಯಾದ ತಾರೀಕು
215/36	ನಾಜಿಂಗರಾವ್ ನಾಜಿ ಸುಬ್ಬಣ್ಣನಯ್ಯನವರ ಮಗ, ಕೆಳ ಕಡ್ಬೂರು ಬ್ರಹ್ಮಾವರ.	ರೂ. 10/-	30—10—38
306/37	ಮುತ್ತಯ್ಯ ಅಕ್ಕಸಾಲಿ, ಕುಪ್ಪಪ್ಪ ಅಕ್ಕಸಾಲಿ ಮಗ, ಮಟಪಾಡಿ, ಬ್ರಹ್ಮಾವರ	ರೂ. 30/-	30—6—38
155/38	ಜೋನ್ ಡಿ ಸೋಜ, ಅಲೆಕ್ಸ್ ಡಿ ಸೋಜರ ಮಗ, ಹಂದಾಡಿ, ಬ್ರಹ್ಮಾವರ.	ರೂ. 85/-	31—3—38
542/38	ರಾಮ ಮರಕಾಲ, ಸುಬ್ಬ ಮರಕಾಲನ ಮಗ, ಉಪ್ಪಿನಕೋಟೆ, ಮಾಬುಕಳ ಬ್ರಹ್ಮಾವರ.	ರೂ. 5/-	30—12—38

29-5-39

T. Dayananda Pai
Agent at Brahmavar.

ಗಾಂಧಿ ಜೋಯಿಸರ ಭವಿಷ್ಯ ಫಲ.

ನಿಮ್ಮ ಜನನ ತಾರೀಕು ಸಮಯ ಅಥವಾ ಪತ್ರ ಬರೆಯುವ ಘಳಿಗೆ ಮತ್ತು ಅಂದಾಜು ವಯಸ್ಸನ್ನು ತಿಳಿಸಿರಿ. ನಿಮ್ಮ ಕುಟುಂಬ, ವ್ಯಕ್ತಿ ಆರೋಗ್ಯ, ಸಂಪತ್ತು, ಆದಾಯ ವೆಚ್ಚಗಳು, ಅನಿರೀಕ್ಷಿತ ವೇಳೆಗಳು ಮತ್ತು ದುರದೃಷ್ಟಗಳು, ಪ್ರೇಮ, ಅದೃಷ್ಟದ ಬಣ್ಣ, ಸೋದ್ಯೋಗಳ ದೊರೆಯುವ ದಿನಗಳು ಮತ್ತು ಸಂಖ್ಯೆ ಇನ್ನಿತರ ಪ್ರಾಮುಖ್ಯ ವಿಷಯಗಳು ನಿಮ್ಮ ಬಗೆಗೆ ತಿಳಿಸಲ್ಪಡುವವು. ಪ್ರತಿತಿಂಗಳ ಭವಿಷ್ಯವನ್ನೊಳಗೊಂಡ ಒಂದು ವರುಷದ ಭವಿಷ್ಯಫಲಕ್ಕೆ ರೂಪಾಯಿ. 3. ಪ್ರತಿತಿಂಗಳ ಆಗುಹೋಗುಗಳ ಸಮೇತ ಐದು ವರುಷದ ಫಲಕ್ಕೆ ರೂಪಾಯಿ 12-8-0. ಸಾಹುಕಾರ್‌ಗೂ ಉದ್ಯೋಗಸ್ಥರಿಗೂ ಪ್ರತಿವಾದದ ಭವಿಷ್ಯವನ್ನು ಸೂಚಿಸುವ ಒಂದು ವರುಷದ ಫಲಕ್ಕೆ ರೂಪಾಯಿ 10. ಭವಿಷ್ಯದ ಕುರಿತು ಕೇಳಲಾಗುವ ಐದು ಪ್ರಶ್ನೆಗಳಿಗೆ ಸರಿಯಾದ ಉತ್ತರವು ಒಂದು ರೂಪಾಯಿ ಕಾಣಿಕೆ ಕೊಟ್ಟಲ್ಲಿ ತಿಳಿಸಲಾಗುವುದು (ವಿ. ಪಿ ಖರ್ಚು ಅಂಚೆ ಪ್ರತ್ಯೇಕ)

ಭವಿಷ್ಯ ಫಲದ ಕುರಿತು "ಸ್ವದೇಶ ಮಿತ್ರನ್" ಮದ್ರಾಸಿನ ದಿನ ಪತ್ರಿಕೆಯು ಈ ರೀತಿ ಬರೆಯುತ್ತದೆ. 'ಶ್ರೀ. ವಿ. ಕೆ. ಶಠಗೋಪಾಚಾರಿಯವರ ಭವಿಷ್ಯವಾಣಿಗಳ ಕುರಿತು ಮಹಾಜನರಿಗೆ ಪರಿಚಯ ಮಾಡಿಕೊಡುವ ಅಗತ್ಯವಿಲ್ಲ. ಮಹಾತ್ಮಾಜಯವರ ಬಂಧವಿಮೋಚನ, ಅಮೇರಿಕಾ ಖಂಡದ ಪ್ರೆಸಿಡೆಂಟ್ ರೂಸ್‌ವೆಲ್ಟರ ಚುನಾವಣೆಯು, ಜಯಶೀಲತೆ ಮೊದಲಾದವು ಶ್ರೀ. ಆಚಾರಿಯವರು ಹೇಳಿದಂತೆ ಫಲಿಸಿದುದೇ ಗಾಂಧಿ ಜೋಯಿಸರ ಭವಿಷ್ಯಫಲವು ಬ್ರಹ್ಮಾಂಡದಲ್ಲೆಲ್ಲಾ ಹಬ್ಬಲು ಯೋಗ್ಯನಿದರ್ಶನ. ಪತ್ರವ್ಯವಹಾರ ಇಂಗ್ಲಿಷಿನಲ್ಲೇ.

ವಿಳಾಸ: V. K Satagopachariar
Hanuman Jothisha Ashram
TIRUTTANI. S. India.

ಮಂಗಳೂರು

ರಾಜಕೀಯ ಕೈದಿಗಳ ಬಿಡುಗಡೆ.

ಕಳೆದ ತಾ. 21ನೇ ಸಾಯಂಕಾಲ ಜಿಲ್ಲಾ ಮಜೂರರ ಪರಿಷತ್ತಿನ ಅಧಿವೇಶನದಲ್ಲಿ ರಾಜಕೀಯ ಕೈದಿಗಳ ಬಿಡುಗಡೆಯ ವಿಚಾರವಾಗಿ ಒಂದು ಠರಾವು ಮಂಜೂರಾಯಿತು. ಪರಿಷತ್ತಿನ ಅಧ್ಯಕ್ಷರಾದ ಬ್ಯಾರಿಸ್ಟರ್ ಎ. ಕೆ. ಪಿಳ್ಳೆಯವರು ಈ ಠರಾವನ್ನು ಸಭೆಯ ಮುಂದಿರಿಸಿದರು.

ಅದೇ ದಿನ ಮಂಗಳೂರು ಟೌನ್ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ, ಶ್ರೀ. ಬಿ. ವಿ ಬಾಳಿಗರ ಅಧ್ಯಕ್ಷತೆಯಲ್ಲಿ ಸಭೆನಡೆದು ರಾಜಕೀಯ ಕೈದಿಗಳನ್ನು ಬಿಡುಗಡೆಮಾಡುವ ವಿಷಯ ಠರಾವಾಯಿತು.

ಜಿಲ್ಲಾ ಮಜೂರ ಪರಿಷತ್ತಿನಲ್ಲಾದ ಠರಾವುಗಳು— ಜಿಲ್ಲಾ ಮಜೂರ ಪರಿಷತ್ತಿನಲ್ಲಿ ಸುಮಾರು 9 ಠರಾವುಗಳು ಮಂಜೂರಾದುವು. ಮಜೂರರ ಹಿತಕ್ಕೆ ಬೇಕಾದವು ಇವುಗಳಲ್ಲಿ ಸೇರಿದ್ದುವು. ಮೋಟರ್ ಸರ್ವಿಸುಗಳನ್ನು ಸರಕಾರದವರು ವಹಿಸಿಕೊಂಡು ಜಿ. ಬೋರ್ಡಿನವರ ವಶಕ್ಕೆ ಕೊಟ್ಟು ನಡಿಸಬೇಕೆಂದೂ ಠರಾವು ಮಾಡಲಾಯಿತು.

New Staff!! *New Methods!!.*

The City School of Commerce
Udipi.

New batches of students will be admitted from 1st June 1939.

EXPERT TUITION
INDIVIDUAL ATTENTION
By

Qualified, Experienced and able tutors.
For further particulars Enquire at

City School of Commerce,
Santhekatte, Udipi.

ರೂಪಾಯಿ 28,000

ಎಲ್ಲಾ ಸರಿಯಾದ 14 ಉತ್ತರಗಳಿಗೆ ಹಂಚಲ್ಪಡುವುದು.

ನಮ್ಮ ಉತ್ತರಕ್ಕೆ ಹೋಲಿಕೆಯುಳ್ಳ (ಭದ್ರವಾಗಿರಿಸಿದ ಉತ್ತರದ ಯಾವ ಸಾಲಿಗಾದರೂ ಸರಿ ಹೋಗುವ) ಉತ್ತರಗಳಿಗೆ ಪ್ರತಿಯೊಂದಕ್ಕೆ ರೂ. 25/-ರಂತೆ 50 ಸಾದರಣೀಯ ಬಹುಮಾನಗಳನ್ನು ಕೊಡಲಾಗುವುದು. ಎಲ್ಲರಿಗಿಂತ ಅಧಿಕವಾದ ಮತ್ತು ಅವರ ಸಮಾಪದ ಉತ್ತರಗಳನ್ನು ಕಳುಹಿಸುವವರಿಗೆ ರೂ. 300/-ನ್ನು ಇರಿಸಲಾಗಿಯದೆ.

ಕೆಳಗೆ ಕೊಟ್ಟ ಚೌಕದಲ್ಲಿಯ ಸಾಲುಗಳನ್ನೇ ಅಡ್ಡಕ್ಕೂ ನೀಟಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸಿದಲ್ಲಿ ಮೊಬಲಗು 38 ಬರುವಂತೆ 2ರಿಂದ 17ರ ವರೆಗಿನ ಸಂಖ್ಯೆಗಳನ್ನು ಸೇರಿಸತಕ್ಕದ್ದು. ಕಳುಹಿಸುವ ಕೊನೆಯ ದಿನ 12-6-1939, ಫಲಿತಾಂಶವು 19—6—1939ರಲ್ಲು ಪ್ರಕಟಿಸಲ್ಪಡುವದು. ಪ್ರವೇಶ ಧನ ಒಂದು ಉತ್ತರಕ್ಕೆ ರೂ. 1/- ಮೂರಕ್ಕೆ ರೂ. 2/- 8 ಉತ್ತರಗಳ ಸಟ್ಟಿಗೆ ರೂ 5/-ರಂತೆ

ಶರ್ತಗಳು:—ಮೇಲೆ ಕಾಣಿಸಿದಂತೆ ಯುಕ್ತ ಮೌಲ್ಯದೊಂದಿಗೆ ಸಾಮಾನ್ಯ ಕಾಗದದ ಮೇಲೆ ಸ್ಪಷ್ಟವಾಗಿ ಬರೆದು ಬೇಕಾದಷ್ಟು ಉತ್ತರಗಳನ್ನು ಕಳುಹಿಸಬಹುದು. ಹಣವು ಮಣಿಯಾರ್ಡರ್ ಯಾ ಪೋಸ್ಟಲ್ ಆರ್ಡರು ದ್ವಾರಾ ರವಾನಿಸತಕ್ಕದ್ದು. ಜಮೆಯಾದ ಹಣದ ದಾಮಾಶಯದಲ್ಲಿ ಬಹುಮಾನಗಳು ಕೊಡಲಾಗುವುವು. ಆದರೆ ಮುಂಬಯಿಯ ಪ್ರಸಿದ್ಧವಾದೊಂದು ಬೇಂಕಿನಲ್ಲಿರಿಸಿದ ಉತ್ತರಕ್ಕೆ ಸರಿಯಾದ ಪ್ರತಿಯೊಂದು ಉತ್ತರಕ್ಕೆ ರೂ. 2000/- ಕೊಡುವ ಗ್ಯಾರಂಟಿಯಿದೆ. ಸ್ಟ್ಯಾಂಪು ಅಂಟಿಸಿದ ಉತ್ತರ ಸಹಿತವಾದ ಕವರನ್ನು ಫಲಿತಾಂಶ ತಿಳಿಯಲು ಉತ್ತರದೊಂದಿಗೆ ಲಗ್ತೀಕರಿಸತಕ್ಕದ್ದು. ವ್ಯವಸ್ಥಾಪಕರ ತೀರ್ಮಾನವು ಕಾಯಿದೆಶೀರ ಬಿಗಾವಾಗಿರತಕ್ಕದ್ದಾಗಿದೆ.

ನಿಮ್ಮ ಉತ್ತರಗಳನ್ನೂ ಹಣವನ್ನೂ ಕೆಳಗಣ ವಿಳಾಸಕ್ಕೆ ಕಳುಹಿಸಿರಿ

ಮೊದಲಣ ಸ್ಪರ್ಧೆಯಲ್ಲಿ ಭದ್ರಗೊಳಿಸಿದ ಉತ್ತರದ ಜವಾಬು 34

1ನೇ ಸಾಲು	8, 3, 10, 13
2ನೇ ಸಾಲು	5, 16, 11, 2
3ನೇ ಸಾಲು	12, 1, 6, 15
4ನೇ ಸಾಲು	9, 14, 7, 4

ಮೆನೇಜರ್,
ಪ್ರೆಸಿಡೆನ್ಸಿ ಕಮ್ಮರ್ಶಿಯಲ್ ಸಿಂಡಿಕೇಟ್, ಮುಂಬದೇವಿ
ಬೊಂಬಾಯಿ, 2

The Manager,
Presidency Commercial Syndicate, Mumbadevi,
BOMBAY 2

ಗಂಡಮಾಲೆ ರೋಗ

ಈ ಭಯಂಕರ ರೋಗವನ್ನು ಖಾತ್ರಿಯಾಗಿ ಗುಣಪಡಿಸುವ

POPULAR OINTMENT
(For T. B. Glands)

ಕೈಬಿಟ್ಟು ಹೋದ ಎಷ್ಟೋ ರೋಗಿಗಳು ನನ್ನ ಔಷಧಿಯನ್ನು ಉಪಯೋಗಿಸಿ ಸಂಪೂರ್ಣ ಗುಣಹೊಂದಿರುವರು. ಗುಣವಾಗದಿದ್ದರೆ ಹಣ ವಾಪಾಸು.

ಬಾಟ್ಲಿ 1ಕ್ಕೆ ರೂಪಾಯಿ 5/-. ಟಪ್ಪಾಲು ಹಾಸಲು ಪ್ರತ್ಯೇಕ.

ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

The Popular Stores,
Chemists & General Merchants,
Parel, BOMBAY No. 12

ನವೀನ ಶೋಧನೆ

ಹೇನುಗಳನ್ನು ನಾಶಮಾಡುವ "ಬಾಬಾ" ಉಪಯೋಗಿಸಿರಿ.

ಸ್ತ್ರೀ ಜಾತಿಗೆ "ಬಾಬಾ" ಎಂಬುದು ವರಪ್ರಸಾದ.

ತಲೆಯಲ್ಲಿ ಹೇನು ಆಗುವುದು ಇವರ ಸ್ಥಿತಿಯು ಹೇಸಿಯಾದ್ದರಿಂದ ಪ್ರಕೃತಿಯು ಕೆಡುತ್ತದೆ. "ಬಾಬಾ" ಈ ಎಣ್ಣೆಯನ್ನು ತಲೆಗೆ ಅಥವಾ ಕೂದಲಿಗೆ ಹಚ್ಚಿದರೆ ಖಾತ್ರಿಯಾಗಿ ಹೇನುಗಳನ್ನು ನಾಶ ಮಾಡಬಲ್ಲುದು. "ಬಾಬಾ" ಇದರಿಂದ ಅಪಾಯಕರವಿಲ್ಲ. "ಬಾಬಾ" ಎಲ್ಲಾ ಪಟ್ಟಣಗಳಲ್ಲಿ ಸಣ್ಣ ನೀಲಿ ಬಂಡು ದಪ್ಪಿಯ ವಾರಲು ಸಿಕ್ಕುತ್ತದೆ. ಕಿಮ್ಮತ್ತು ದಬ್ಬಿಗಕ್ಕೆ ರೂ. 0—2—6.

ಹಿಂದುಸ್ಥಾನ ಮತ್ತು ಬರ್ಮಾದ ಸೋಲ್ ಡಿಸ್ಟ್ರಿಬ್ಯೂಟೆರ್ಸ್:

ಸಾಯು ಬ್ರದರ್ಸ್,
ಪೋಟಿತಲವ, ಎಡ್ವರ್ಡ್ ಸಿನೇಮ ಎದುರು,
ಜಂಬುಳವಾಡಿ, ಕಾಳಬಾದೇವಿ ರೋಡು,
ಮುಂಬಾಯಿ.

ಶ್ರೀ. ಎ. ಬಿ. ಶೆಟ್ಟರ ಭಾಷಣ

ಉಡುಪಿ ಮುನಿಸಿಪಾಲಿಟಿಯವರು ನೂತನವಾಗಿ ಕಟ್ಟಿಸಿದ ಪುಸ್ತಕಭಂಡಾರದ ಪ್ರವೇಶೋತ್ಸವವನ್ನು ಜರಗಿಸುವಾಗ ಶ್ರೀ ಎ. ಬಿ. ಶೆಟ್ಟರು ಮಾಡಿದ ಭಾಷಣದ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.

ಉಡುಪಿ ಮುನಿಸಿಪಾಲಿಟಿಯವರು ಲೈಬ್ರರಿಗಾಗಿ ಹೊಸತಾಗಿ ಕಟ್ಟಿಸಿದ ಸುಂದರ ಕಟ್ಟಡದ ಪ್ರವೇಶೋತ್ಸವವೂ ನೂತನವಾಗಿ ನಿರ್ಮಿಸಿದ ಇಂಡಸ್ಟ್ರಿಯಲ್ ಮ್ಯೂಸಿಯಮಿನ ಪ್ರಾರಂಭೋತ್ಸವವೂ ತಾ. 22-5-39ನೇ ಸಂಜೆ 5-30ಕ್ಕೆ ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ ಪಾರ್ಲಿಮೆಂಟರಿ ಸೆಕ್ರೆಟರಿ ಇವರ ಹಸ್ತದಿಂದ ಜರಗಿಸಲ್ಪಟ್ಟಿತು. ಮುನಿಸಿಪಲ್ ಪರಿಸರವೆಲ್ಲಾ ತಳಿರುತೋರಣಗಳಿಂದ ಶೃಂಗರಿಸಲ್ಪಟ್ಟಿತ್ತು. ಮೊದಲು ಮೈನ್ ಶಾಲಾ ಕಟ್ಟಡದಲ್ಲಿ ಟೀಪಾರ್ಟಿ ಸತ್ಕಾರ ನಡೆಯಿತು. ಇದಕ್ಕೆ ಪುರಪ್ರಮುಖರನೇಕರು ಆಮಂತ್ರಿತರಾಗಿದ್ದರು. ಟೀಪಾರ್ಟಿಯಾದೊಡನೆ ಮುನ್ಸಿಪಲ್ ಆಫೀಸಿನ ಎದುರಂಗಣದಲ್ಲಿ ಸಾರ್ವಜನಿಕ ಸಭೆ ಜರಗಿತು. ಮುನ್ಸಿಪಲ್ ಚೆಯರ್‌ಮ್ಯಾನರಾದ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರು ಶ್ರೀ. ಎ. ಬಿ ಶೆಟ್ಟರಿಗೂ ಅವರೊಡನೆ ಚಿತ್ತೈಸಿದ ಡಿ. ಬೋ. ಪ್ರೆಸಿಡೆಂಟ್ ಡಾ. ಪಿಟ್ಟಿ ಶೆಟ್ಟರಿಗೂ ಹೂಮಾಲೆ ಹಾಕಿ ಉಚಿತಾಸನಗಳಲ್ಲಿ ಕುಳ್ಳಿರಿಸಿ ಬಿನ್ನವತ್ತಳೆಯೊಂದನ್ನು ಓದಿಹೇಳಿದರು. ಅದರಲ್ಲಿ ಮುನಿಸಿಪಾಲಿಟಿಯವರು ಮಾಡಿದ, ಮಾಡಲಿರುವ ಕಾರ್ಯಯೋಜನೆ, ಮುನ್ಸಿಪಾಲಿಟಿಗಿರುವ ಹಣದ ಅಭಾವ ಲೈಬ್ರರಿ ಮತ್ತು ಹೊಸತಾಗಿ ತೆರೆಯಲಾದ ಇಂಡಸ್ಟ್ರಿಯಲ್ ಮ್ಯೂಸಿಯಮಿನ ವಿಚಾರಾದಿಗಳು ಅಡಕವಾಗಿದ್ದವು.

ಶ್ರೀ. ಎ. ಬಿ. ಶೆಟ್ಟರು ಬಿನ್ನವತ್ತಳೆಗೆ ಉತ್ತರವೀಯುತ್ತ ಹೀಗೆಂದರು:—ಚೆಯರ್‌ಮ್ಯಾನರೆ, ಕೌನ್ಸಿಲರೆ ಮತ್ತು ಸಭಿಕರೆ, ನಮಗಿಂದು ಇಂತಹ ಸುಸಂಧಿಯನ್ನೊದಗಿಸಿದುದಕ್ಕಾಗಿ ತಮಗೆ ಆಭಾರಿಯಾಗಿದ್ದೇನೆ ಮೂರ್ತಿ ಚಿಕ್ಕದಾದರೂ ಉಡುಪಿಯ ಕೀರ್ತಿಯು ದೊಡ್ಡದಾಗಿದೆ. ನಾವು ಜಿಲ್ಲೆ ಬಿಟ್ಟು ಹೊರಗೆಲ್ಲಿಯಾದರೂ ಹೋದೊಡನೆ ಇದು ಸ್ಪಷ್ಟವಾಗುವುದು. ಉತ್ತರ ಹಿಂದೂಸ್ಥಾನಕ್ಕೆ ಹೋದರೂ ಅಲ್ಲಿನವರಿಗೆ ಉಡುಪಿಯ ಹೆಸರು ತಿಳಿದಿರುತ್ತದೆ ಉಡುಪಿಯು ಪ್ರಸಿದ್ಧ ಕ್ಷೇತ್ರವಾಗಿರುವುದೇ ಇದಕ್ಕೆ ಕಾರಣವಾಗಿದೆ. ಹೀಗೆ ಹೊರಗೆ ಹೆಸರುಗೊಂಡ ಉಡುಪಿಯ ವೈಶಿಷ್ಟ್ಯವನ್ನು ನೀವು ಕಾಯ್ದುಕೊಳ್ಳಬೇಡವೇ? ಹೆಸರಿಗೆ ತಕ್ಕಂತೆ ಉಡುಪಿಯನ್ನು ಆಧುನಿಕ ರೀತಿನೀತಿಗೊಪ್ಪುವಂತೆ ಇರಿಸಬೇಡವೇ? ಸದಾ ನಗುಮುಖದಿಂದಿರುವ ನಿಮ್ಮ ಚೆಯರ್‌ಮ್ಯಾನರು ಕೌನ್ಸಿಲರ ಸಹಕಾರದಿಂದ ಈ ಬಗ್ಗೆ ಸಾಕಷ್ಟು ಶ್ರಮಿಸುತ್ತಿದ್ದಾರೆ. ಉಡುಪಿಯು ಪುಣ್ಯಕ್ಷೇತ್ರದಿಂದಾಗಿಯೇ ಅಲ್ಲ; ಭಾರತದಲ್ಲೆಲ್ಲಾ ಹರಡಿರುವ ಉಡುಪಿ ಹೋಟೇಲುಗಳಿಂದಾಗಿಯೂ ಮದ್ರಾಸಿನಲ್ಲಿರುವ ಹಲವು ಡಾಕ್ಟರರೇ ಮೊದಲಾದ ಉಡುಪಿಯ ಪ್ರಭೃತಿಗಳಿಂದಾಗಿಯೂ ಅದು ಹೆಚ್ಚು ಖ್ಯಾತಿ ಪಡೆದಿದೆ. ಇಂತಹ ಉಡುಪಿಯು ಹೊರಗಣಿಂದ ಬರುವ ಯಾತ್ರಾರ್ಥಿಗಳನ್ನಾಗಲೀ ಪ್ರೇಕ್ಷಕರನ್ನಾಗಲೀ ತನ್ನೆಡೆಗೆ ಆಕರ್ಷಿಸುವಷ್ಟು ಸೌಕರ್ಯಗಳಿಂದೊಡಗೂಡಿರಬೇಡವೇ? ಕೇವಲ ಬಾಲ್ಯಾವಸ್ಥೆಯಲ್ಲಿರುವ ಈ ಮುನ್ಸಿಪಾಲಿಟಿಯು ರೇಡಿಯೋ, ವಿದ್ಯುದ್ದೀಪ, ಲೈಬ್ರರಿ ಮೊದಲಾದ ಸೌಕರ್ಯಗಳನ್ನು ಜನತೆಗೊದಗಿಸುತ್ತಿದೆ. ಕೆಲವು ವಿಷಯಗಳಲ್ಲಿ ಮಂಗಳೂರಿಗಿಂತಲೂ ಇದು ಮುಂದುವರಿದಿದೆ. ಆದರೂ ಇನ್ನೂ ಆಗತಕ್ಕ ಜನಹಿತಕಾರ್ಯಗಳು, ಸೌಕರ್ಯಗಳು ಅದೆಷ್ಟೋ ಇವೆ. ಆರೋಗ್ಯದ ಕಡೆಗೆ ಹೆಚ್ಚಿನ ಗಮನವೀಯಬೇಕಾಗಿದೆ ಧೂಳಿನ ಉಪದ್ರವನ್ನು ತಡೆಗಟ್ಟಲು ತಕ್ಕ ಯೋಜನೆ ಕೈಗೊಳ್ಳಬೇಕಾಗಿದೆ. ಆಧುನಿಕ ರೀತಿಯಲ್ಲಿ ನಗರವನ್ನು ರಚಿಸಿಕೊಳ್ಳಬೇಕಾಗಿದೆ. ಎಲ್ಲೆಲ್ಲಿಯೂ ಹೋಟೆಲಿನ ಪ್ರಸಿದ್ಧಿ ಪಡೆದ ಉಡುಪಿಯಲ್ಲೇ ಹೊರಗಣಿಂದ ಬರುವವರಿಗೆ ಸರ್ವಾನುಕೂಲ್ಯ ಹೊಟೆಲೊಂದಿಲ್ಲದಿರುವುದು ಶೋಚನೀಯವಲ್ಲವೇ? ಈ ಲೋಪವನ್ನು ಮುನ್ಸಿಪಾಲಿಟಿಯವರು ಯಾರನ್ನಾದರೂ ಪ್ರೋತ್ಸಾಹಿಸಿ ಹೊಟೆಲ್ ತೆರೆಸುವವರ ಮೂಲಕ ನಿವಾರಿಸಿಕೊಳ್ಳಲಿಡೆಯುಂಟು. ಮೈಸೂರು ಕೆಫೆ, ಮೋಡರ್ನ್ ಕೆಫ ಮೊದಲಾದ ಉಡುಪಿಯ ಯಾ ನಮ್ಮ ಜಿಲ್ಲೆಯವರದೇ ಆದ ಹೊಟೆಲುಗಳು ಅತ್ಯಂತ ಮಾದರಿಯ ಪ್ರಖ್ಯಾತ ಹೊಟೆಲುಗಳಾಗಿವೆ. ಅಂತಹ ಒಂದು ಹೊಟೆಲಾದರೂ ಉಡುಪಿಯಲ್ಲಿ ಇಲ್ಲದಿರುವುದು ವಿಚಿತ್ರವಲ್ಲವೇ? ಈಗಿನ ಉತ್ಸಾಹಿ ಮತ್ತು ಅನುಭವಶಾಲೀ ತರುಣ ಕಮಿಶನರು ನಗರಾಭಿವೃದ್ಧಿಯ ಕುರಿತು ತೋರಿಸುವ ಉತ್ಸಾಹವು ಸಂತೋಷಕರವಿದೆ. ಆದರೆ ಇದಕ್ಕೀಗ ಜನತೆಯೂ ಸಾಕಷ್ಟು ಪ್ರೋತ್ಸಾಹ ಕೊಡಬೇಕು.

ಈ ದಿನ ಲೈಬ್ರರಿಗೆ ಅತ್ಯಂತ ಮನೋಹರವಾದ ಹೊಸ ಕಟ್ಟಡವು ನಿರ್ಮಿತವಾಗಿದ್ದು ಪ್ರವೇಶ ನಡೆಯಲಿದೆ, ಲೈಬ್ರರಿಯ ಜತೆಯಲ್ಲಿ ಇಂಡಸ್ಟ್ರಿಯಲ್ ಮ್ಯೂಸಿಯಂ ತೆರೆವ ವ್ಯವಸ್ಥೆಯಾಗಿದೆ. ಇದು ಪ್ರಗತಿಪರ ಸೂಚನೆಯಾಗಿದೆ. ಈ ಕೈಗಾರಿಕೆ ವಸ್ತು ಸಂಗ್ರಹಾಲಯದ ತೆರೆಯೋಣದರಿಂದ ಸ್ಥಳೀಕ ಕಲಾ ಕೈಗಾರಿಕೆಯನ್ನು ಸಾಕಷ್ಟು ಪ್ರೋತ್ಸಾಹಿಸಿದಂತಾಗುವುದು. ಅಲ್ಲದೆ ಇಲ್ಲಿ ಏನೇನೆಲ್ಲಾ ಉತ್ಪಾದನೆಯಾಗುವುದೆಂಬುದನ್ನು ಒಂದೆಡೆಯಲ್ಲೇ ತೋರಿಸಿದಂತಾಗುವುದು. ಈ ಹೊಸ ಯೋಜನೆಯು ಜಯಶೀಲವಾಗಲೆಂದು ಹಾರೈಸುತ್ತೇನೆ.

ಪುಸ್ತಕಭಂಡಾರದ ಆವಶ್ಯಕತೆಯು ಈಗಿನ ಕಾಲದಲ್ಲಿ ಉಸಿರಾಟದಷ್ಟೇ ಅವಶ್ಯಕವಾಗಿದೆ. ಶಾಲೆಗಳಿಗೆ ಖರ್ಚುಮಾಡುವಂತೆ ವಾಚನಾಲಯಗಳಿಗೂ ಹಣವ್ಯಯಿಸಬೇಕು. ಶಾಲೆಬಿಟ್ಟು ಬಂದೊಡನೆ ವಾಚನಾಭಿರುಚಿಯನ್ನು ಹೆಚ್ಚಿಸುವ ವಾಚನಾಲಯಗಳಿಲ್ಲದಿದ್ದರೆ ಶಾಲೆಗಳಿಗಾಗಿ ವ್ಯಯಿಸಿದ ಹಣವು ದುರುಪಯೋಗಿಸಿದಂತೆಯೇ ಸರಿ, ಏಕೆಂದರೆ 4-5 ವರ್ಷಗಳಲ್ಲಿ ಶಾಲೆಯಲ್ಲಿ ಕಲಿತುದು ಶಾಲೆ ಬಿಟ್ಟು 4-5 ವರ್ಷಗಳಲ್ಲೇ ಅದು ಮರೆತು ಹೋಗುವುದು. ಆದ್ದರಿಂದ ಅವರಿಗೆ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಒದಗಿಸಿಕೊಡುವ ವಾಚನಾಲಯಗಳು ಅತ್ಯಾವಶ್ಯಕ. ಇದರಿಂದ ಸ್ವಾಯತ್ತ ವಿದ್ಯಾಭ್ಯಾಸಕ್ಕೂ ಆಸ್ಪದವಿದೆ. ವಾಚನಾಲಯಗಳಲ್ಲಿ ದಿನದಿನದ ಪ್ರಾಮುಖ್ಯ ವಾರ್ತೆಗಳನ್ನು ಸಂಗ್ರಹಿಸಿ ಹೇಳುವ ವ್ಯವಸ್ಥೆಯಿದ್ದರೆ ಹೆಚ್ಚೆಚ್ಚು ಜನರನ್ನು ಈ ಕಡೆಗೆ ಎಳೆಯಲು ಅನುಕೂಲವಿರುವುದು. ಇಂಗ್ಲೆಂಡ್ ಅಮೇರಿಕ ಜರ್ಮನಿ ಮೊದಲಾದ ಪಾಶ್ಚಾತ್ಯದೇಶಗಳಲ್ಲಿ ಲಕ್ಷಾಂತರ ಪುಸ್ತಕ ಪತ್ರಿಕೆಗಳಿರುವ ಎಷ್ಟೋ ಲೈಬ್ರರಿಗಳಿರುತ್ತವೆ. ಅವುಗಳಲ್ಲಿ ಮಕ್ಕಳಿಗಾಗಿಯೇ ಪ್ರತ್ಯೇಕವಿಭಾಗವೂ ಇದೆ. ನಮ್ಮಲ್ಲಿಯ ಹೆಚ್ಚಿನ ಲೈಬ್ರರಿಗಳ ಕೊರತೆಯೆಂದರೆ ಮಕ್ಕಳಿಗೆ ತಕ್ಕ ವಿಭಾಗವಿಲ್ಲದಿರುವುದು. ನೀವು

ಮಕ್ಕಳಿಗಾಗಿಯೇ ಕೆಲ ಪುಸ್ತಕ ಪತ್ರಿಕೆಗಳನ್ನು ಒದಗಿಸಿಕೊಡುವ ವ್ಯವಸ್ಥೆ ಮಾಡುವಿರಾಗಿ ನಂಬುತ್ತೇನೆ.

ಲೈಬ್ರರಿಯೆನ್ನೆಂದರೆ ಬರೀ ಪುಸ್ತಕಗಳನ್ನು ಕೂಟ್ಟು ಪಡೆವ ಯಂತ್ರವಲ್ಲ. ಪುಸ್ತಕ ಭಂಡಾರದಲ್ಲಿ ಜೀವಕಳೆ ತುಂಬುವ ಉತ್ಸಾಹಿಯಾಗಿರಬೇಕು. ಪುಸ್ತಕಭಂಡಾರವನ್ನು ಆಕರ್ಷಕ ರೀತಿಯಲ್ಲಿ ಇಡುವುದು ಅವನ ಕರ್ತವ್ಯ. ಅವನ ವರ್ತನೆಯು ಜನರ ಮನವನ್ನು ಆಕರ್ಷಿಸುವಂತಿರಬೇಕು ಪುಸ್ತಕಗಳನ್ನು ಅವನು ರಾಶಿ ಹಾಕದೆ ಕ್ರಮಬದ್ಧವಾಗಿ ಇಡುವಂತಾಗಬೇಕು. ಈ ಲೈಬ್ರೆರಿಯ ಪುಸ್ತಕ, ಪತ್ರಿಕೆಗಳ ಸಂಖ್ಯೆಯು ತೀರ ಕಡಮೆಯೆಂದು ಹೇಳಬಹುದು ಇದನ್ನು ಹೆಚ್ಚಿಸುವುದೂ ಆಧುನಿಕಕ್ಕೊಪ್ಪುವ ಪುಸ್ತಕ ಪತ್ರಿಕೆಗಳಿಂದ ಬೆಳಗಿಸುವುದೂ ಅತ್ಯಾವಶ್ಯಕವಾಗಿದೆ ಇದಕ್ಕೆ ಮುನಿಸಿಪಾಲಿಟಿಯಲ್ಲಿ ಹಣದ ಅಭಾವವಿದೆಯೆಂಬುದು ನಿಜ ಆದರೆ ಜನತೆಯಲ್ಲಿ ಔದಾರ್ಯವಿದೆ ನೀವು ಎಂಡ್ರ್ಯೂ ಕಾರ್ನೀಜಿಯ ಹೆಸರನ್ನು ಕೇಳಿರಬಹುದು. ಅವನೇ ಒಡವನಿದ್ದು ಮೇಲಕ್ಕೇರಿದವನು. ಜೀವಂದಿನಲ್ಲಿ ಅವನು ಯಾವ ಲೈಬ್ರರಿಯ ಪುಸ್ತಕಗಳಿಂದ ತನ್ನ ಜ್ಞಾನಭಂಡಾರವನ್ನು ಹೆಚ್ಚಿಸಿಕೊಳ್ಳುತ್ತಿದ್ದನೋ ಅದೇ ಲೈಬ್ರರಿಗೆ ಸಾವಿರಗಟ್ಟಲೆ ಹಣಸಹಾಯ ವಿತ್ತಿದ್ದಾನೆ. ಮಾತ್ರವಲ್ಲ ಒಂದೂವರೆಸಾವಿರ ಪುಸ್ತಕ ಭಂಡಾರಗಳಿಗೆ ಸಹಾಯ ಮಾಡಿದ್ದಾನೆ ಹಾಗೆಯೇ ನಮ್ಮಲ್ಲೂ ಅನೇಕ ಉದಾರಿಗಳಿದ್ದರೆ ಉಡುಪಿಯಲ್ಲೂ ಹೊರಗೂ ಹಲವು ಉದಾರ ಧನಿಕರಿದ್ದಾರೆ. ಅವಶ್ಯಕ ಹಣವನ್ನು ಲೈಬ್ರೆರಿಯಂಥ ಉತ್ತಮ ಕಾರ್ಯಗಳಿಗೆ ಒದಗುವಂತೆ ಮಾಡಬೇಕು. ಇಲ್ಲಿಯ ಎಷ್ಟೋ ಮಹನೀಯರು ಮದ್ರಾಸಿನಲ್ಲಿ ಅತ್ಯುನ್ನತರಾಗಿದ್ದಾರೆ ಅವರಿಂದ ಸಹಾಯ ಪಡೆದು ಈ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಳ್ಳಬಹುದು. ರೇಡಿಯೋವನ್ನು ದಾನವಾಗಿತ್ತ ಡಾ. ಯು ಎಲ್. ನಾರಾಯಣ ರಾಯರ ಮಾದರಿಯು ನಿಮ್ಮ ಮುಂದಿರುವಾಗ ನಿಮಗೆ ನಿರಾಶೆಯೇಕೆ? ಅಂತೂ ನಿಮ್ಮ ಪುಸ್ತಕಭಂಡಾರವು ಜ್ಞಾನಾರ್ಜನೆಯ ಆಗರವಾಗಲೆಂದು ಹಾರೈಸುತ್ತೇನೆ. ನಾನು ನಿಮಗಾಗಿ ನನ್ನ ಪಾಲಿನ ಕರ್ತವ್ಯವನ್ನು ಮಾಡಲು ಸದಾ ಸಿದ್ಧನಿದ್ದೇನೆ, ಎಂದು ಮುಂತಾಗಿ ಹೇಳಿದರು. ಶ್ರೀ ಆರೂರರು ಧನ್ಯವಾದಗಳನ್ನರ್ಪಿಸಿದರು. ಕೊನೆಗೆ ಶ್ರೀ ಎ ಬಿ ಶೆಟ್ಟರು ಲೈಬ್ರೆರಿ ಕಟ್ಟಡವನ್ನೂ ಮ್ಯೂಸಿಯಂನ್ನೂ ತೆರೆದು ಉತ್ತರೋತ್ತರ ಅಭಿವೃದ್ಧಿಯನ್ನು ಕೋರಿದರು.

Established] [1906

THE

UNITED INDIA

LIFE ASSURANCE Co., LTD.

HEAD OFFICE—MADRAS.

Trustee.—The Official Trustee to the Government of Madras.

Policies in force exceed SIX Crores.
Annual income exceeds - Rs. 30 lakhs.
Total assets exceeds - Rs. 110 lakhs.
Total claims paid exceed Rs. 40 lakhs.

The oldest & largest life assurance company of South India accepted by the Government as satisfactory for the purpose of exemption from the operation of the Provident Fund Rules to Teachers in aided Schools & for the purpose of utilisation of P. F. Contributions for payment of premiums on the lives of Government Local Board & Municipal servants.

For further particulars please apply to:—

THE BRANCH MANAGER,
THE UNITED LIFE ASSURANCE COMPANY, LTD.,
FELIX PAI BAZAR, MANGALORE, S. K.

K. R. Hebbar, B.A., ORGANISER, UDIPI, S. K. *OR* K. Keshava Shenoy, M.A., ORGANISER, Pentlaunpet, MANGALORE.

ವಾರದ ಭವಿಷ್ಯ

ಮುಂದಾಗುವುದನ್ನು ಇಂದೇ ತಿಳಿಯಿರಿ.

(ತಾ. 1-6-39ರಿಂದ ತಾ. 8-6-39ರ ವರೆಗೆ)

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ.

ಸಂ ನ.]

ಮೇಷರಾಶಿ—

ಗ್ರೀಷ್ಮಋತುವಿನ ತೀಕ್ಷ್ಣವಾದ ಬೇಗೆಯು ನಿಮ್ಮ ಅಂಗಾಂಗಗಳನ್ನು ದಹಿಸುವಂತೆ ಪರಜನರಿಂದ ಮಾಡಲ್ಪಟ್ಟ ಪರಿತಾಪವೂ ನಿಮ್ಮ ಅಂತರಾತ್ಮನನ್ನು ಬಹುವಾಗಿ ಪೀಡಿಸುತ್ತಿರುವುದು. ಉದ್ಯೋಗದಲ್ಲಿ ಸಾಕಷ್ಟು ತೃಪ್ತಿಯಿದ್ದರೂ ಕೂಡ ಖರ್ಚಿನ ಭಾಗಗಳು ಅಧಿಕವಾಗುವುದರಿಂದ ನಿಮ್ಮ ಆದಾಯ ಕಷ್ಟವು, ವಾರದ ಹೆಚ್ಚಿನ ಸಮಯವನ್ನು ಪ್ರವಾಸದಲ್ಲೇ ಕಳೆಯುವಿರಿ, ಮತ್ತು ಮಾರ್ಗದಲ್ಲಿ ಹೆಚ್ಚಿನ ದುಃಖಕ್ಕೊಳಗಾಗುವಿರಿ. ಆರೋಗ್ಯಭಾಗವೂ ಕೂಡ ಚೆನ್ನಾಗಿರದು. ಆತ್ಮೀಯಜನರ ಸಹಾಯದಿಂದಾಗಿ ಸ್ವೀಕೃತ ಕಾರ್ಯಗಳು ಕೊನೆಗೊಂಡಾವು. ಆದರೂ ಅಪೇಕ್ಷಿತ ಮಿತ್ರರ ವಿಯೋಗದಿಂದ ಸದಾ ಕ್ಲೇಶವನ್ನು ಹೊಂದುವಿರಿ. ಕುಟುಂಬ ಹಿತಕಾರಿಯಾದ ಕೆಲಸಗಳು ನಿಮ್ಮಿಂದ ಮಾಡಲ್ಪಡುವವು. ವಾರಾದಿಯ ಐದು ದಿನಗಳು ಅನಿಷ್ಟದಾಯಕಗಳಾಗಿದ್ದರೂ ಮುಂದಿನ ದಿನಗಳಲ್ಲಿ ಇಷ್ಟಸಿದ್ಧಿ ಮತ್ತು ಸುಖಪ್ರಾಪ್ತಿಯ ಯೋಗವಿರುತ್ತದೆ

ವೃಷಭರಾಶಿ—

ಆಪತ್ಸಮುದ್ರದಿಂದ ಪಾರಾಗಬೇಕಾದರೆ ಉಪಾಯವೆಂಬ ನಾವೆಯು ಅತ್ಯಾವಶ್ಯಕ. ಅದರಲ್ಲಿ ಕುಶಲನೆಂಬ ನಾವಿಕನೂ ಬೇಕು. ಹೀಗಿರುವಲ್ಲಿ ನರನು ಎಂತಹ ಭಯಂಕರವಾದ ವಿಪತ್ತನ್ನೂ ಕಡಿದಾಡಲು ಶಕ್ತನಾಗುವನು. ಪ್ರಕೃತದ ಪರಿಸ್ಥಿತಿಯಲ್ಲಿ ನಿಮ್ಮಲ್ಲಿ ಸಾಕಷ್ಟು ಬುದ್ಧಿ ಚಾತುರ್ಯವೂ ಅದಕ್ಕೆ ಬೇಕಾದ ಧನಬಲವೂ ಇರುವುದರಿಂದ ನಿಮಗೆ ಸಂಭವಿಸತಕ್ಕ ಆವ ಅನಿಷ್ಟಗಳನ್ನೂ ನೀವು ಗಣಿಸಗೆ ತರಲಾರಿರಿ. ಶರೀರ ದೌರ್ಬಲ್ಯದಿಂದ ದೇಹಾಯಾಸವಾಗುವುದಲ್ಲದೆ ಕೆಲವಂಶ ಧನವು ವ್ಯರ್ಥ ವ್ಯಯವಾಗುವುದು. ಸ್ವಪರ ಜನರಿಂದ ತಿರಸ್ಕಾರ, ಪರಾಭವಗಳು ಸಂಭವಿಸುವ ಸಂದರ್ಭವಿರುವುದು. ನೌಕರಿ ಮತ್ತು ಉದ್ಯೋಗದಲ್ಲಿ ಹೆಚ್ಚಿನ ಧನವ್ಯಯವಾಗುವುದಾದರೂ ವ್ಯಾಪಾರದಲ್ಲಿ ಒಳ್ಳೇ ಲಾಭವಾಗುವ ಯೋಗವಿರುವುದು. ತಾ, 3ರಿಂದ 6ರ ವರೆಗಿನ ದಿನಗಳು ವಿಶೇಷ ಹಾನಿಕಾರಕಗಳಿರುವುದರಿಂದ ಅನಾರೋಗ್ಯ ರಾಜಭಯಾದ್ಯನಿಷ್ಟಗಳು ಸಂಭವಿಸಲಿವೆ. ಜಾಗ್ರತೆ.

ಮಿಥುನರಾಶಿ—

ಕ್ರೋಧವು ಎಂತಹ ಜಿತೇಂದ್ರಿಯನಾದ ನರನನ್ನೂ ಕೂಡ ಒಂದೊಮ್ಮೆಗೆ ತನ್ನ ಆವೇಶ ಬಲದಿಂದ ಪ್ರಜ್ಞಾಶೂನ್ಯನನ್ನಾಗಿ ಮಾಡಿಬಿಡುವುದು. ಈ ಕಾಲದಲ್ಲಾತನು ಸನ್ಮಾರ್ಗದಿಂದ ಚ್ಯುತನಾಗಿ ಜನರ ಅಪವಾದಕ್ಕೆ ಸಿಲುಕುವನು. ಆದ್ದರಿಂದಲೇ ಈ ಕ್ರೋಧವನ್ನು ಷಡ್ವೈರಿಗಳಲ್ಲಿ ಒಂದನ್ನಾಗಿ ಪರಿಗಣಿಸಿರುವರು. ಈ ವಾರದಲ್ಲಿ ನೀವೀ ವೈರಿಯ ಬಲೆಗೆ ಸಿಲುಕುವ ಸಂಭವವಿದೆ. ಆದರೂ ಸಹನಾಶಕ್ತಿಯು ನಿಮಗೆ ಸಾಕಷ್ಟು ಇರುವುದರಿಂದ ಕೇಡಾಗದು. ಸನ್ಮಾರ್ಗದಲ್ಲಿ ಮುಂದರಿಯುತಕ್ಕ ನಿಮಗೆ ಅನುದಿನದ ಬೇಗೆಗೆ ಬೇಕಾದ ಧನವಸನಗಳು ದೊರೆಯುವವು. ವಸ್ತ್ರಾಭರಣವೂ ಕೂಡ ಸಿಗುವ ಚಿಹ್ನೆಗಳಿವೆ. ನಿಮ್ಮ ವಿರೋಧಿಗಳ ಪೀಡೆಯಿಂದಲೂ ಅನಾರೋಗ್ಯದಿಂದಲೂ ಅವ್ಯವಸ್ಥಿತರಾದ ನಿಮಗೆ ಮನಶ್ಶಾಂತಿಯು ದುರ್ಲಭವಾಗಿರುವುದು. ಅಕಸ್ಮಾತ್ ಅಪಘಾತಗಳಿಗೆ ಸಿಲುಕುವಿರಿ. ಆದ ಕಾರಣ ತಾ. 6, 7, 8 ಈ ದಿನಗಳಲ್ಲಿ ಹೆಚ್ಚಿನ ಜಾಗರೂಕರಾಗಿರಿ.

ಕರ್ಕಾಟಕರಾಶಿ—

ದೈವವು ಅನುಕೂಲವಾಗಿರುವಾಗ ಔದಾಸೀನ್ಯದಿಂದ ಕಾಲಹರಣಮಾಡುವುದು ಕಲ್ಯಾಣಾಪೇಕ್ಷೆಯಾದ ನರನ ಕರ್ತವ್ಯವಲ್ಲವು. ಪ್ರಕೃತದಲ್ಲಿ ನಿಮ್ಮ ದೈವವು ನಿಮಗೆ ಹೆಚ್ಚಿನಂಶ ಅನುಕೂಲವಾಗಿರುವುದು. ಪ್ರತಿಯೊಂದು ಭಾಗದಲ್ಲೂ ನೀವು ವಿಜಯಿಗಳಾಗುವಿರಿ, ಸಂಪದ್ಭಾಗವು ವೃದ್ಧಿಗೊಳ್ಳುವುದು. ದೇಹಾರೋಗ್ಯವೂ ಕೂಡ ಅನುಕೂಲವಾಗಿಯೇ ಇರುವುದು. ಮಿತ್ರ ವೃಂದದಿಂದಾವೃತರಾದ ನೀವು ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯಲಾರಿರಿ. ಅಂತೆಯೇ ನೀವೀ ಸಮಯವನ್ನು ಕಳೆಯುವಿರಿ. ಚಂಚಲವಾದ ಮನಸ್ಸು ಹಲವೇಳೆ ನಿಮ್ಮನ್ನು ಕುಮಾರ್ಗಕ್ಕೆ ಎಳೆದೀತು. ಅನ್ಯಕಕ್ಷಿ ಹೀನರಾದವರು ಜನರ ನಿಂದೆಗೆ ಗುರಿಯಾಗಲಿರುವರು. ಸಹಧರ್ಮಿಣಿಯೊಡನೆ ಸದಾ ಕಲಹವಾಗಲಿರುವುದು. ತಾ. 1 ಮತ್ತು 7, 8 ಈ ದಿನಗಳಲ್ಲಿ ಪ್ರಯಾಣಕ್ಕೆ ತೊಂದರೆಗಳೂ ಕಾರ್ಯಕ್ಕೆ ವಿಘ್ನವೂ ಬಂದೀತು.

ಸಿಂಹರಾಶಿ—

ಬಲವಂತನೇ ಭಾಗ್ಯವಂತನು ಎಂಬಂತೆ ಸದ್ಯದ ಗ್ರಹಸ್ಥಿತಿಯಲ್ಲಿ ನೀವು ಭಾಗ್ಯವಂತರೆನ್ನಬೇಕಾಗಿದೆ, ಗುರು ಶನಿ ಕೇತು ಈ ಮೂವರು ಅನಿಷ್ಟಸ್ಥಾನಗತರಾಗಿದ್ದರೂ ಕೂಡ ಇತರ ಅಧಿಕ ಗ್ರಹರ ಬಲವು ಕಲಹದ ನಾಟ್ಯ ಕೋರ್ಟು ವಿವಾದಗಳಲ್ಲೂ ಸ್ವೀಕೃತ ಕಾರ್ಯಗಳಲ್ಲೂ ವಿಜಯಿಗಳಾಗುವಿರಿ. ವಿಪಕ್ಷೀಯರನ್ನೂ ಕೂಡ ಮನವೊಲಿಸಿ ಸ್ವಪಕ್ಷೀಯರನ್ನಾಗಿ ಮಾಡಿಕೊಳ್ಳುವಿರಿ. ಉತ್ಪತ್ತಿಯ ಭಾಗವು ಉತ್ತಮವಾಗಿಯೇ ಇರುವುದು. ವಿದ್ಯಾರ್ಥಿ ಮತ್ತು ವಿದ್ಯೋಪಜೀವಿಗಳಿಗೂ ವ್ಯಾಪಾರಿ ಜನರಿಗೂ ಕಾಲವು ಅನುಕೂಲವಾಗಿರುವುದು. ಶರೀರದ ಆರೋಗ್ಯವು ಮಾತ್ರ ಸರಿಯಿರದು. ಧರ್ಮಹ್ರಾಸವು ನಿಮ್ಮಲ್ಲಿ ಹೆಚ್ಚುತ್ತಿರುವುದರಿಂದ ರೋಗ ಪೀಡೆಯೂ ಮಾರ್ಗಾಯಾಸದಿಂದ ಶೋಕವೂ ಧನವ್ಯಯವೂ ಅಧಿಕವಾಗುತ್ತಲಿರುವುದು. ತಾ 6-7-8 ಈ ದಿನಗಳು ಶತ್ರುನಿಗ್ರಹಕ್ಕೂ ಕಾರ್ಯಸಾಧನೆಗೂ ಅತ್ಯುತ್ತಮಗಳಾಗಿವೆ.

ಕನ್ಯಾರಾಶಿ—

ಇತರ ಎಲ್ಲಾ ಗ್ರಹರೂ ಪ್ರತಿಕೂಲರಾದರೇನು? ಸುರಗುರುಗಳಾದ ಬೃಹಸ್ಪತ್ಯಾಚಾರ್ಯರ ಪೂರ್ಣ ಕೃಪೆಯೂ ಅಸುರ ಗುರುಗಳಾದ ಶುಕ್ರಾಚಾರ್ಯರ ಸಂಪೂರ್ಣ ಸಹಾಯವೂ ಇರುವ ನಿಮಗೆ ಆವ ಭೀತಿ ಕೆಡುಕು ಇಲ್ಲವು. ಶತ್ರು ಜನರು ಸದಾ ನಿಮ್ಮ ಮೇಲೆ ತೀಕ್ಷ್ಣವಾದ ದೃಷ್ಟಿಯನ್ನಿಟ್ಟಿರುವುದರಿಂದ ಛಿದ್ರಾನ್ವೇಷಕರಾಗಿದ್ದು ವೃಥಾ ಪಶ್ಚಾತ್ತಾಪಕ್ಕೊಳಗಾಗಬೇಕಿರಿ. ರಾಜಕೀಯ ಭಾಗದಲ್ಲಿ ನಿಮಗೆ ವಿಪರೀತವೇ ಆಗುವುದಾದರೂ ನಿಮ್ಮ ಬುದ್ಧಿಬಲದಿಂದ ಅದನ್ನು ಪಾರುಗಾಣುವಿರಿ. ಸದ್ಯದ ನಿಮ್ಮ ವಿಮಪ್ರೀಯು ಉತ್ತಮವಿರುವುದು. ನಿಮ್ಮನ್ನು ನೋಡಿದೊಡನೆ ನಿಮ್ಮ ಪಾಶಕ್ಕೆ ಮರುಳಾಗಿ ಜನರು ನಿಮ್ಮವರಾಗಲಿರುವರು. ಇದೊಂದು ನಿಮ್ಮ ಮಹದದೃಷ್ಟವೆನ್ನಬೇಕು. ಮಕ್ಕಳು ಮಾತ್ರ ಏಕಕಾಲದಲ್ಲಿ ನಿಮ್ಮ ಮನಸ್ಸಿಗೆ ಪ್ರತಿಕೂಲವಾಗಿ ವರ್ತಿಸುವುದರಿಂದ ನೀವು ಮನದಲ್ಲೇ ಮರುಗುವಿರಿ. ತಾ. 3ರಿಂದ 6ರ ವರೆಗಿನ ದಿನಗಳು ಹೆಚ್ಚಿನ ಹಾನಿಕಾರಿಗಳಾಗಿರುವುದರಿಂದ ಆಪ್ತಮಿತ್ರರಲ್ಲಿ ಕಲಹ, ಅವಿಶ್ವಾಸ, ಭಯ ನಿಮಿತ್ತ ಶೋಕಶಂಕೆಗಳು ಅಭಿವೃದ್ಧಿಯಾಗುವವು.

ತುಲಾರಾಶಿ—

ಕಾಲಗತಿಯನ್ನತಿಕ್ರಮಿಸಲು ಜಗತ್ಸೃಷ್ಟಿ ಸ್ಥಿತಿ ಲಯಕರ್ತೃಗಳಾದ ಹರಿಹರ ಬ್ರಹ್ಮಾದಿಗಳಿಂದಲೂ ಶಕ್ಯವಲ್ಲವು. ಅಂತಹುದರಲ್ಲಿ ಕ್ಷಣಭಂಗುರ ಜೀವಿಗಳಾದ ನರರ ಪಾಡು ಹೇಳಬೇಕಿಲ್ಲವಷ್ಟೆ. ನಿಮ್ಮ ಪ್ರಾಕ್ಕೃತ ದುರ್ದೈವದಿಂದಾಗಿ ಈಗ ಈ ಕಠಿಣವಾದ ಅವಸ್ಥೆಯು ಬಂದಿರುವುದು. ಇಂದು ಜನನ್ನುಳಿದು ಇತರ ಸಕಲ ಗ್ರಹರ ವಿರುದ್ಧದೃಷ್ಟಿಯು ನಿಮ್ಮ ಮೇಲಿರುವುದೆಂದಾದಮೇಲೆ ನಿಮ್ಮ ಪರಿಸ್ಥಿತಿಯನ್ನು ಕೇಳಬೇಕೆ? ಆದೊಂದು ಕಾಲದಲ್ಲಿ ಅತ್ಯಂತ ಆಪ್ತರಾಗಿದ್ದ ಮಿತ್ರ ಜನರೂ ಕೂಡ ಈಗ ವಿರೋಧಿಗಳಾಗಿ ಇಲ್ಲದ ಅವಸ್ಥೆಗೆ ನಿಮ್ಮನ್ನು ಗುರಿಪಡಿಸುವರು. ಮಾನಸಿಕ ರೋಗದಿಂದ ಪೀಡಿತರಾದ ನಿಮಗೆ ಸುಖವೆಂಬುದು ಬಹಳ ದುರ್ಲಭವಾಗುವುದು. ಇಲ್ಲವೆಂದರೂ ತಪ್ಪಾಗದು, ಸ್ತ್ರೀ ವರ್ಗದವರಿಂದಲೂ ವಿಶೇಷತಃ ಆತ್ಮೀಯ ಸ್ತ್ರೀಯರಿಂದಲೂ ಹೆಚ್ಚಿನ ದುಃಖಕ್ಕೊಳಗಾಗುವಿರಿ. ಶಾರೀರಿಕ ಮಾನಸಿಕ ಸಾಂಸಾರಿಕ ಈ ಮೂರು ಭಾಗಗಳಲ್ಲಿ ನಿಮಗೆ ಹಿತವಿಲ್ಲವು. ಆದರೂ ನಿಮ್ಮ ಸುದೈವದಿಂದ ಆರ್ಥಿಕ ಅಡಚಣೆಗೆ ನೀವು ಸಿಲುಕದಿರುವುದು ಸಂತೋಷದ ಮಾತು. ತಾ. 3-4-5 ಈ ದಿನಗಳು ಇದ್ದುದರಲ್ಲಿ ಸ್ವಲ್ಪ ಮಟ್ಟಿಗೆ ಉತ್ತಮವೆಂದು ಹೇಳಬಹುದು.

ವೃಶ್ಚಿಕರಾಶಿ—

ಕಾರ್ಯದಲ್ಲಿ ಒಳ್ಳೇ ಸಾಹಸಿಗರೂ ಶೂರರೂ ಆದ ನಿಮಗೆ ಈ ವಾರದಲ್ಲಿ ಇಷ್ಟಾನಿಷ್ಟಗಳು ಮಿಶ್ರೀಭೂತವಾಗಿ ಅನುಭವಕ್ಕೆ ಬರಲಿವೆ. ಧನಸಂಗ್ರಹದಿಂದ ಮರ್ಯಾದೆಯನ್ನರಿತ ನಿಮಗೆ ಸಂಪದ್ಭಾಗದಲ್ಲಿ ಸ್ವಲ್ಪವೂ ಕೊರತೆ ಬಾರದು. ದೈಹಿಕಶಕ್ತಿಯೂ ಪರಿಜನ ಪುರಜನರ ಬಲವೂ ಚೆನ್ನಾಗಿರುವುದರಿಂದ ಯಾವ ಕಾರ್ಯದಲ್ಲೂ ನೀವು ಪರಾಜಯಹೊಂದಲಾರಿರಿ. ಪುಣ್ಯತೀರ್ಥ ಕ್ಷೇತ್ರಗಳ ದರ್ಶನದ ಸಲುವಾಗಿ ಧನವ್ಯಯಿಸುವಿರಿ. ಶತ್ರು ಜನರು ನಿಮ್ಮ ಇದಿರಿಗೆ ತೋರದಿದ್ದರೂ ಅಂತರಿಕವಾಗಿ ಕೆಲಸಮಾಡುತ್ತಲೇ ಇರುವರು. ಆಹಾರದೋಷದಿಂದಾಗಿ ಕೆಲವೊಮ್ಮೆ ತಾಪದಾಯಕವಾದ ಜ್ವರಾದಿಗಳು ಸಂಭವಿಸಬಹುದು. ವ್ಯಾಪಾರಭಾಗದಲ್ಲೂ ವಿದ್ಯಾವಿಚಾರದಲ್ಲೂ ಅಷ್ಟು ಒಳ್ಳಿತಿಲ್ಲವು. ತಾ. 1-2-6-7 ಈ ದಿನಗಳಲ್ಲಿ ಕಾರ್ಯಜಯ ಸ್ತ್ರೀಸುಖ, ಧನಲಾಭಗಳು ತೃಪ್ತಿಕರವಾಗಿರುವವು

ಧನುರಾಶಿ—

ವಿದ್ಯಾವಂತರಾಗಿದ್ದು ನಿರುದ್ಯೋಗದಿಂದ ಪೀಡಿತರಾಗಿ ವೃಥಾ ಕಾಲಹರಣಮಾಡತಕ್ಕವರಿಗೆ ಏನಾದರೊಂದು ಸ್ಥಾನ ಪ್ರಾಪ್ತಿಯಾಗುವ ಯೋಗವಿರುವುದು. ವಿದ್ಯಾರ್ಥಿಗಳಿಗೆ ಉತ್ತಮ ಫಲ ದೊರೆಯಲಿರುವುದು. ವಿದ್ಯೋಪಜೀವಿಗಳಿಗೂ ಉಪಾಧ್ಯಾಯರುಗಳಿಗೂ ಭಡತಿಯ ಚಿಹ್ನೆಗಳಿವೆ. ಸ್ವೀಕೃತಕಾರ್ಯಗಳು ನಿರ್ವಿಘ್ನದಿಂದ ಕೊನೆಗಾಣುವವು. ಆರೋಗ್ಯವು ಪೂರ್ಣತೃಪ್ತಿಕರವಾಗಿಲ್ಲವು, ಮೇಲಿನ ಅಧಿಕಾರಿಗಳ ಕೋಪಕ್ಕೆ ಸಿಲುಕುವ ಸಂಭವವಿದೆ. ಸವಿಪದ ಜನರಿಂದ ನಡೆಯತಕ್ಕ ಅನಾಹುತವು ಅಸಹನೀಯವಾಗುವುದು. ಗೃಹಕಲಹವು ಸ್ವಲ್ಪಮಟ್ಟಿಗೆ ಕಂಡುಬರುವುದು. ಉತ್ಪತ್ತಿಗಿಂತ ಖರ್ಚೇ ವಿಪರೀತವಾಗಿರುವುದರಿಂದ ಹಣದ ಬಿಕ್ಕಟ್ಟಿನಲ್ಲಿ ಮಾನರಕ್ಷಣೆಯ ಕಾರ್ಯವು ನಿಮ್ಮಿಂದ ಸಾಗದಾಗುವುದು. ತಾ. 1-2 ಮತ್ತು 6-7 ಈ ದಿನಗಳಲ್ಲಿ ವಿಪರೀತ ಖರ್ಚು.

ಮಕರರಾಶಿ—

ನಿಮಗೂ ತುಲಾರಾಶಿಯವರಿಗೂ ಯಾವ ಭಾಗದಲ್ಲೂ ಅಭ್ಯಂತರವಿಲ್ಲದಿರಬಹುದು. ಈ ವಾರವೂ ದುರ್ದೈವಿಗಳೇ ಆಗಿರುವಿರಿ. "ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ" ಎಂಬಂತೆ ಶುಭಾಶುಭಕರ್ಮಫಲವನ್ನು ಅನುಭವಿಸಿಯೇ ತೀರಿಸಬೇಕಷ್ಟೆ. ಆ ವಿಧಿನಿಯಮಾನುಸಾರವಾಗಿ ನೀವೀ ವಿಪತ್ಸಾಗರದಲ್ಲಿ ತೊಳಲಬೇಕಾಗಿದೆ. ಶತ್ರುಜನರ ಪೀಡೆಯೂ ರೋಗಬಾಧೆಯೂ ಅಸಹನೀಯವಾಗುವುದು. ಹೆಂಡತಿ ಮಕ್ಕಳು ಪರಸ್ಪರ ಕಲಹಪ್ರಿಯರಾಗಿ ಸಂಸಾರ ರಥವನ್ನು ನಿರಾತಂಕವಾಗಿ ಸಾಗಿಸಲು ಬಿಡಲೊಲ್ಲರು. ಹಿಡಿದ ಕಾರ್ಯವನ್ನು ಪೂರೈಸುವಷ್ಟರ ಶಕ್ತಿ ನಿಮಗೆ ಇರಲೊಲ್ಲದು. ಪ್ರಿಯಜನರ ವಿಯೋಗ ಆತ್ಮೀಯರ ವಿರಹ ಇವುಗಳಿಂದ ಚಿಂತಾಕುಲರಾಗಿ ಸದಾ ನಿರ್ವಿಣ್ಣರಾಗಿರುವಿರಿ. ಮನಸ್ಸಾದರೋ ಕಂಟಕದ ಗಾಳಿಗೆ ಸಿಲುಕಿದ ಹತ್ತಿಯಂತೆ ಕಂಡಾಬಟ್ಟೆ ಸುತ್ತುತ್ತಿರುವುದು. ಆದರೂ ಖರ್ಚಿನ ಮಟ್ಟಿಗೆ ಉತ್ಪತ್ತಿಯಿರುವುದರಿಂದ ಋಣಮಾಡಬೇಕಾಗಿಲ್ಲವು. ತಾ. 3-4-5 ಮತ್ತು 8 ಈ ದಿನಗಳು ಅನಿಷ್ಟಕಾರಿಗಳಾಗಿವೆ.

ಕುಂಭರಾಶಿ—

"ಉದ್ಯೋಗಿನಂ ಸಿಂಹಪುರುಷಮುಪೈತಿ ಲಕ್ಷ್ಮೀಃ" ಎಂದಂತೆ, ಉದಾಸೀನರಾಗಿ ಕುಳಿತರೆ ಆವುದೊಂದು ಕಾರ್ಯವೂ ಸಾಗದು. ಉದ್ಯೋಗದಲ್ಲಿ ಪ್ರವರ್ತಿಸಿ ನಿರಲಸನಾಗಿ ಸತತ ದುಡಿವ ತಕ್ಕ ನರನನ್ನು ಆ ಸುಶ್ರೀಯು ವರಿಸುವಳು. ಸದ್ಯದಲ್ಲಿ ನಿಮ್ಮ ಉನ್ನತಿಯ ಕಾಲ ಬಂದಿದೆ. ನೀವು ಒಳ್ಳೇ ಆರೋಗ್ಯವಂತರಿರುವುದರಿಂದ ಕಾರ್ಯಕರ್ತೃತ್ವಶಕ್ತಿಯು ನಿಮ್ಮಲ್ಲಿ ಚೆನ್ನಾಗಿರುವುದು. ಮಿತ್ರರು ಬಂಧುಗಳು ಇವರ ಬೆಂಬಲ ತುಂಬಾ ಇರುವುದು. ಪ್ರತಿಯೊಂದು ಭಾಗದಲ್ಲೂ ಧನಾಪ್ತಿಯು ಉತ್ತಮವಿರುವುದರಿಂದ ಧನ-ಜನ-ಬಲಯುಕ್ತರಾದ ನೀವು ಗಣನೀಯ ವ್ಯಕ್ತಿಗಳಾಗಿ ಪರಿಣಮಿಸುವಿರಿ. ತಾ. 6-7 ಈ ದಿನಗಳ ಮಟ್ಟಿಗೆ ಸ್ವಲ್ಪ ಶಟ್ಟರೋಗದಿಂದ ಅಬಲಾ ನಿಮಿತ್ತ ಮಾನಚ್ಯುತಿ, ಧನಹಾನಿ, ಮನೋಕ್ಲೇಶಗಳು ಸಂಭವಿಸಲಿವೆ. ಇಷ್ಟಾರ್ಥಗಳಿಗೂ ವಿಘ್ನಗಳು ಬರಲಿವೆ.

ಮೀನರಾಶಿ—

'ಅಜ್ಞಃ ಸುಖಮಾರಾಧ್ಯಃ ಸುಖತರಮಾರಾಧ್ಯತೇ ವಿಶೇಷಜ್ಞಃ ಜ್ಞಾನಲವದುರ್ವಿದಗ್ಧಂ ಬ್ರಹ್ಮಾಪಿ ನರಂ ನ ರಂಜಯತಿ" ಏನೂ ತಿಳಿಯದವನನ್ನು ಸುಖದಿಂದ ಸಂತೋಷಗೊಳಿಸಬಹುದು. ಸಂಪೂರ್ಣ ತಿಳಿದವನನ್ನು ಬಹಳ ಸುಖದಿಂದ ಪ್ರಸನ್ನನನ್ನಾಗಿ ಮಾಡಬಹುದು. ಅಜ್ಞಪ್ರಾಜ್ಞರ ಮಧ್ಯವರ್ತಿಗಳಾದ ಅಲ್ಪಜ್ಞರನ್ನು ತೃಪ್ತಿಪಡಿಸಲು ಬ್ರಹ್ಮನಿಂದಲೂ ಸಾಧ್ಯವಿಲ್ಲವು, ಎಂಬ ಭರ್ತೃಹರಿಯ ವಾಕ್ಯದಂತೆ ಸದ್ಯದ ಪರಿಸ್ಥಿತಿಯಲ್ಲಿ ನೀವು ಮಧ್ಯದವರ ಸಾಲಿಗೇ ಸೇರಿರುವಿರಿ. ನಿಮಗಾಗಿ ತಿಳಿಯದು; ಪರರು ಹೇಳಿದ್ದನ್ನು ಕೇಳಲಾರಿರಿ. ಈ ತರದ ಸ್ವಭಾವವು ನಿಮ್ಮದಾಗಿರುವುದು. ಇದರಿಂದಾಗಿಯೇ ನೀವು ರಾಜಭಯಕ್ಕೂ ಶತ್ರುಭಯಕ್ಕೂ ಒಳಗಾಗಿರುವಿರಲ್ಲದೆ ಹೆಚ್ಚಿನ ಧನವನ್ನು ವ್ಯಯಿಸುವಿರಿ. ಇತರ ಎಲ್ಲಾ ಭಾಗಗಳಲ್ಲೂ ನಿಮ್ಮ ಭಾಗ್ಯವು ಚೆನ್ನಾಗಿರುವುದರಿಂದ ವಿವಿಧ ಧನಾಪ್ತಿ ಸ್ಥಾನಪ್ರಾಪ್ತಿ ಇವುಗಳಿಂದಾಗಿ ಜನರಿಂದ ಗೌರವಾದರಗಳನ್ನು ಪಡೆಯುವಿರಿ. ಆರ್ಥಿಕ ಬಿಕ್ಕಟ್ಟಿನಿಂದ ಮುಕ್ತರಾಗಿ ಸುಖದಿಂದ ಕಾಲಯಾಪನೆ ಮಾಡುವ ದಿನವಿನ್ನೂ ಬಂದಿಲ್ಲವು. ತಾ. 1-2-8 ಈ ದಿನಗಳು ಚೆನ್ನಾಗಿಲ್ಲವು.



ಎಲ್ಲಾ ಔಷಧ ಅಂಗಡಿಗಳಲ್ಲೂ ಸಿಗುತ್ತದೆ. ವಿವರಣಾ ಪತ್ರಿಕೆ ಉಚಿತ.
ತಯಾರಕರು:— ಆಯುರ್ವೇದಾಶ್ರಮಂ, ಪೋ. ಬಾಕ್ಸ್ ೨೮೩, ಮದ್ರಾಸ್
ಸ್ಟಾಕಿಸ್ಟರು:— ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಮೈಸೂರು ಪ್ರಜಾಪ್ರತಿನಿಧಿ ಸಭೆ.

ಮೊದಲನೆಯ ದಿನದ ಕಾರ್ಯಕಲಾಪ!

ದಿವಾನರ ಅಧ್ಯಕ್ಷ ಭಾಷಣ

(ನವಯುಗದ ವಾರ್ತಾಹರರಿಂದ, ಅಸೆಂಬ್ಲಿ ಹಾಲ್ ಮೈಸೂರು, ಮಂಗಳವಾರ ಮೇ ೩೦.)

ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ವರ್ಧಂತಿ ಬಜೆಟ್ ಅಧಿವೇಶನವು, ಅದರ ಅಧ್ಯಕ್ಷರಾದ ದಿವಾನ್ ಸರ್. ಮಿರ್ಜಾ ಎಂ. ಇಸ್ಮಾಯಿಲ್‌ರವರ ಅಧ್ಯಕ್ಷತೆಯಲ್ಲಿ, ಜಗನ್ಮೋಹನ ಬಂಗಲೆಯಲ್ಲಿ, ಈ ದಿನ 12ಘಂಟೆಗೆ ಸರಿಯಾಗಿ ಪ್ರಾರಂಭವಾಯಿತು. ಅನೇಕ ಪ್ರೇಕ್ಷಕರುಗಳೂ, ವರ್ಧಂತಿಗೆ ಬಂದಿರುವ ಅತಿಥಿಗಳಲ್ಲಿ ಅನೇಕರೂ, ಅನೇಕ ಮಹಿಳೆಯರೂ ಬಂದು ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತಿದ್ದರು. ದಿವಾನ್ ಸಾಹೇಬರು ಕಾಲಕ್ಕೆ ಸರಿಯಾಗಿ ಬಂದು ತಮ್ಮ ಅಧ್ಯಕ್ಷ ಸ್ಥಾನವನ್ನು ಅಲಂಕರಿಸುವುದಕ್ಕೆ ಮುಂಚೆ, ಸದಸ್ಯರುಗಳೆಲ್ಲರೂ ಎದ್ದು ನಿಂತು, ಅಧ್ಯಕ್ಷರಿಗೆ ಸ್ವಾಗತವಿತ್ತರು. ತರುವಾಯ ಅಧ್ಯಕ್ಷರು ತಮ್ಮ ಪೀಠದಲ್ಲಿ ಮಂಡಿಸಲು, ಉಭಯ ಪಾರ್ಶ್ವಗಳಲ್ಲೂ ಪ್ರಥಮ ಮತ್ತು ದ್ವಿತೀಯ ಸಚಿವರುಗಳು ಕುಳಿತಿದ್ದರು. ಸರ್ಕಾರದ ಇತರ ಮುಖ್ಯಾಧಿಕಾರಿಗಳು ತಮ್ಮ ತಮ್ಮ ಆಸನದಲ್ಲಿ ಮಂಡಿಸಿದರು. ಅಧ್ಯಕ್ಷರ ಮುಂಭಾಗದಲ್ಲಿದ್ದ ಸ್ಥಾನಗಳಲ್ಲಿ ಸರ್ಕಾರದ ಸ್ಟೆನೋಗ್ರಾಫರುಗಳು ಕಾರ್ಯಕಲಾಪಗಳ ವರದಿಯನ್ನು ಬರೆದುಕೊಳ್ಳಲು ಕುಳಿತರು.

ಸಭೆಯು 12ಘಂಟೆಗೆ ಪ್ರಾರಂಭವಾಯಿತು. ದಿವಾನ್ ಸರ್. ಮಿರ್ಜಾರವರು ಕರತಾಡನಗಳ ಮಧ್ಯೆ ಎದ್ದು ತಮ್ಮ ಭಾಷಣವನ್ನೋದಿದರು. "ಅಧ್ಯಕ್ಷ ಭಾಷಣದಲ್ಲಿ ಅನೇಕ ವಿಚಾರ ವಿಸ್ತೃತ ವಿಷಯಗಳಿವೆ. ಭಾಷಣದ ಮೊದಲಲ್ಲಿ ಅಂತರ್ರಾಷ್ಟ್ರೀಯ ವಿಚಾರಕ್ಕೆ ಸಂಬಂಧಪಟ್ಟುದನ್ನು ಚರ್ಚಿಸಲಾಗಿದೆ. ತರುವಾಯ ಸಂಸ್ಥಾನದ ಎಲ್ಲಾ ಇಲಾಖೆ ಮತ್ತು ಸರ್ಕಾರಿ ಸಂಸ್ಥೆಗಳಿಗೂ, ಇತರ ಬಾಬುಗಳಿಗೂ, ಮುಂದಿನ ವರ್ಷ ಹೀಗೆ ಹಣವನ್ನು ಒದಗಿಸುವುದಲ್ಲದೆ ಹಂಚಲಾಗುವುದೆಂಬುದನ್ನೂ ತಿಳಿಸಿ, ಮುಂದಿನ ಸಾಲಿನಲ್ಲಿ ಸುಮಾರು ಒಂದು ಲಕ್ಷ ಐದು ಸಾವಿರ ರೂ. ಗಳ ಉಳಿತಾಯವಾಗುವುದೆಂಬುದನ್ನು ತಿಳಿಸಿದಾಗ, ಸಭೆಯಲ್ಲಿ ಹರ್ಷಚಿತ್ತದ ಧ್ವನಿಗಳನ್ನು ಮಾಡಲಾಯಿತು." ದಿವಾನರು ತಮ್ಮ ಭಾಷಣವನ್ನು ಸುಮಾರು ಒಂದು ಘಂಟೆಯ ಕಾಲ ಗಂಭೀರ ಧ್ವನಿಯಲ್ಲಿ ಓದಿದರು. ಅಧ್ಯಕ್ಷ ಭಾಷಣ ಮುಗಿದ ಮೇಲೆ, ಅಧ್ಯಕ್ಷರ ಇಂಗ್ಲಿಷ್ ಭಾಷಣದ ಕನ್ನಡದ ತರ್ಜುಮೆಯನ್ನು ಮೈಸೂರು ಸರಕಾರದ ಕನ್ನಡ ಟ್ರಾನ್ಸ್‌ಲೇಟರ್ ಆದ ಶ್ರೀ. ಸಿ. ಕೆ. ವೆಂಕಟನಾರಣಪ್ಪನವರು ಓದಿದರು.

ಸಭೆಯಲ್ಲಿ ಅನೇಕ ಸದಸ್ಯರುಗಳ ಸ್ಥಾನವು ಖಾಲಿಯಿತ್ತು. ಕಾಂಗ್ರೆಸ ನಿರ್ಣಯದ ಪ್ರಕಾರ ಅನೇಕ ಸದಸ್ಯರುಗಳು ತಮ್ಮ ಸ್ಥಾನಕ್ಕೆ ರಾಜಿನಾಮೆಯಿತ್ತಿದ್ದಾರೆ. ಅವರ ಕೆಲವು ಸ್ಥಾನಗಳಿಗೆ ಉಪಚುನಾವಣೆ ನಡೆದು, ಸದಸ್ಯರುಗಳು ಚುನಾಯಿತರಾಗಿದ್ದಾರೆ, ಆದರೂ ಇನ್ನೂ ಬಹಳ ಸ್ಥಾನಗಳು ಖಾಲಿಯಿದ್ದವು. ಕೆಲವರು ಬಿಳಿ ಖಾದಿ ಟೋಪಿ ಧರಿಸಿ ಬಂದಿದ್ದರು.

ಅಧ್ಯಕ್ಷಭಾಷಣ ಮುಗಿದಮೇಲೆ ಅನೇಕ ಪ್ರಶ್ನೋತ್ತರಗಳ ಮೇಲೆ ಚರ್ಚೆನಡೆಯಿತು. ಇದಾದನಂತರ ಹೊಸ ಸದಸ್ಯರುಗಳೆಲ್ಲರೂ ಎದ್ದುನಿಂತು "ಪ್ರಮಾಣವಚನವನ್ನು ಸ್ವೀಕರಿಸಿದರು." ಆಮೇಲೆ ಸರ್ಕಾರದಿಂದ ಮಂಡಿಸಲ್ಪಟ್ಟಿರುವ ಮಸೂದೆಗಳ ಮೇಲೆ ಚರ್ಚೆನಡೆಯಿತು. ಇಷ್ಟುಹೊತ್ತಿಗೆ ಸಭೆಯು ಫಲಹಾರಕ್ಕೆ ಎದ್ದಿತು.

ಫಲಹಾರವಾದ ಮೇಲೆ ಸಭೆಯು ಮಧ್ಯಾಹ್ನ ಪುನಃ ಸೇರಿ ಬಜೆಟ್‌ಮೇಲೆ ಬಹಳ ಚರ್ಚೆನಡೆಯಿತು. ಸಂಧ್ಯಾಕಾಲವಾದುದರಿಂದ ಸಭೆಯು ನಾಳೆಗೆ ಮುಂದುವರಿಯಿತು.

ಅಸೆಂಬ್ಲಿಯು ನಾಳೆಯಿಂದ ಮುಂದಿನ ಜೂನ್ ೮ನೇ ತಾ. ವರೆಗೆ ಅಂದರೆ ಒಟ್ಟು ಐದುದಿನಗಳಲ್ಲಿ ನಡೆಯುವುದು. ಅನೇಕ ಪ್ರಶ್ನೋತ್ತರಗಳು ನಡೆಯುವದು, ಬಜೆಟ್ ಮೇಲೆ ಚರ್ಚೆನಡೆಯುತ್ತದೆ. ಸದಸ್ಯರುಗಳು ಕಳುಹಿಸಿರುವ ಠರಾವುಗಳ ಮೇಲೆಯೂ ಚರ್ಚೆ ಮತ್ತು ಉತ್ತರ ನಡೆಯುತ್ತದೆ.

ಈ ಸಲ ನಡೆಯುವ ಅಸೆಂಬ್ಲಿಯಲ್ಲಿ ಚರ್ಚಿಸುವ ಸಲುವಾಗಿ ಏಳು ಮಸೂದೆಗಳೂ ಇಪ್ಪತ್ತೈದು ಠರಾವುಗಳೂ, ನೂರಿಪ್ಪತ್ತೊಂದು ಅಂಕೆಗಳೂ ಸೂಚಿಸಲ್ಪಟ್ಟಿವೆ. ಇವುಗಳಲ್ಲಿ ಪ್ರಾವಿಡೆಂಟ್ ಫಂಡ್ ವಿಶ್ವವಿದ್ಯಾನಿಲಯದ ಆಕ್ಟ ಮಸೂದೆ ತಿದ್ದುಪಡಿಯೂ, ವೋಟಿಂಗ್ ಪದ್ಧತಿ ತಿದ್ದುಪಡಿಯನ್ನೂ ಸೂಚಿಸಲಾಗಿದೆ, ಠರಾವುಗಳಲ್ಲಿ ಭಿಕ್ಷುಕರುಗಳನ್ನು ಹಿಮ್ಮೆಟ್ಟಿಸಲ್ಲಿ ಇಡುವುದು ಬಹು ಮುಖ್ಯವಾದ್ದು.

ಅಸೆಂಬ್ಲಿಯಲ್ಲಿ ಇಷ್ಟಲ್ಲದೆ ಅವಸರದ ಠರಾವು ಮತ್ತು ಸೂಚನೆಗಳನ್ನು ಕಂಡು ಚರ್ಚಿಸಲು ಅಧಿಕಾರವಿರುವುದರಿಂದ ಅಂಥವುಗಳು ಏನಾದರೂ ಬರಬಹುದು. ಒಟ್ಟಿನಲ್ಲಿ ಅಸೆಂಬ್ಲಿಯಲ್ಲಿ ಅನೇಕ ವಿಷಯಗಳ ಮೇಲೆ ಚರ್ಚೆ ನಡೆಸಲಾಗುತ್ತೆ.

ಅಸೆಂಬ್ಲಿಯ ಮುಂದಿನ ಕಾರ್ಯಕಲಾಪಗಳನ್ನು ಬರುವವಾರದ ಸಂಚಿಕೆಯಲ್ಲಿ ವಿವರವಾಗಿ ತಿಳಿಸಲಾಗುತ್ತೆ.

ಇದೀಗ

ಶಾಲಾ ಪ್ರಾರಂಭದ ಕಾಲ.

ವಿದ್ಯಾರ್ಥಿಗಳಿಗೂ, ಉಪಾಧ್ಯಾಯರಿಗೂ
ಬೇಕಾಗುವ ಯಾವತ್ತೂ ಶಾಲೋಪಯೋಗೀ
ಪುಸ್ತಕಗಳೂ ಸಾಹಿತ್ಯ ಸಾಮಗ್ರಿಗಳೂ
ಸುಲಭ ಬೆಲೆಗೆ ದೊರೆಯುತ್ತವೆ.
ವಿ. ಸೊ. ಜೂನ್ ತಿಂಗಳಲ್ಲಿ ವ್ಯಾಪಾರ ಮಾಡುವವರಿಗೆ
ಲಕ್ಕೀ ಟಿಕೇಟುಗಳೂ ಅವುಗಳ ಮೂಲಕ
ಇನಾಮುಗಳೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

Buy your School requirements from
Navabharat Book Depot,
UDIPI.

ಲೂಟಿ! ಲೂಟಿ!! ಖಾಲಿ ೩ ರೂಪಾಯಿಗೆ ಹೊಸ ವರ್ಷಕ್ಕೆ!



ಆಶ್ಚರ್ಯದ ಹೊಸ ನಮೂನೆ
ಒಂದು ನೂರರ ವರೆಗೆ ಮಾತ್ರ ವಿಶೇಷ ರಿಯಾಯತಿ.

ಶೀಘ್ರ, ವಿಕ್ರಯ ಆಗುತ್ತಿದೆ. ವಿಳಂಬ ಮಾಡಿದರೆ ಪಶ್ಚಾತ್ತಾಪ ಪಡಬೇಕಾದೀತು.

ತಾಜಾ ಅಮೆರಿಕನ್ ಅಲಾರ್ಮ್ ಪಿಸ್ತೂಲು

ಹೆಚ್ಚು ಸಂಖ್ಯೆಯಲ್ಲಿ ಕೊಂಡುಕೊಂಡರೆ ಧಾರಾಳ ಕಮಿಶನು ಇದೆ. ಚಿತ್ರದಲ್ಲಿರುವಂತೆ 7 ಇಂಚು ಉದ್ದ 15 ಪಿನ್ನುಭಾರ, ನೋಡಿದೊಡನೆ ವೈರಿಗಳು ಭೀತರಾಗುವರು. ಕಳ್ಳಕಾಕರು, ದುಷ್ಟ ಮೃಗಗಳು ಭಯಂಕರ ಶಬ್ದ ಕೇಳಿ ಪಲಾಯನ ಮಾಡುವವು. ಕೂಡಲೇ ಕೊಂಡುಕೊಂಡು ನಿಮ್ಮ ಒಡವೆಗಳನ್ನೂ ಆತ್ಮವನ್ನೂ ರಕ್ಷಿಸಿಕೊಳ್ಳಿರಿ. ಲೈಸನ್ಸಿಲ್ಲದೆ ಪ್ರತಿಯೊಬ್ಬನೂ ಉಪಯೋಗಿಸಬಹುದು ಇದರೊಂದಿಗೆ 300 ಗುಂಡುಗಳು ಉಚಿತ. 50 ಗುಂಡುಗಳನ್ನು ಏಕ ದಂ ಹೊಡೆಯುವ ಪಿಸ್ತೂಲಿಗೆ ರೂ. 3/-. ಒಂದೇ ಸಲ 70ಗುಂಡುಬಿಡುವುದಕ್ಕೆ ರೂ. 3/8-. 200 ಹಾರಿಸುವುದಕ್ಕೆ ರೂ. 4/- ಅಂಚೆ ವೆಚ್ಚ ಬೇರೆ 1000 ಗುಂಡುಗಳಿಗೆ ರೂ. 2/-ಎಕ್ಸ್ಟ್ರಾ ಡಬ್ಬಿಗೆ 0-8-0. ಪಿಸ್ತೂಲಿನ ಸುಂದರ ಪೆಟ್ಟಿಗೆಗೆ ರೂ. 1-8-0. (ನಿಮ್ಮ ಮತ್ತು ನಿಮ್ಮ ವಿಳಾಸವನ್ನು ಸ್ಪಷ್ಟ ಬರೆಯಿರಿ)

ದೊರೆಯುವ ಸ್ಥಳ:-

ಅಮೆರಿಕನ್ ಪಿಸ್ತೂಲು ಹೌಸ್,
ಪಿ. ಬಿ., ಬಾಕ್ಸ್ ನಂ. 27
N.Y.U.) ಅಮೃತಸರ [ಇಂಡಿಯಾ]

American Pistol Co.
P. B. No. 27 (N. Y. U.)
Amritsar (India).

ನವಯುಗಕ್ಕೆ ಏಜಂಟರಿಲ್ಲದಲ್ಲಿ ಏಜಂಟರು ಬೇಕಾಗಿದ್ದಾರೆ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

GONO KILLER ORIGINAL

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇಂಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ಸಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ. ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು, ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್ ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer **DR. D. N. JASANI**, Vitalbhai Patel Road, BOMBAY 4

ಇನ್ಕಮ್ ಟೇಕ್ಸ್

ನೋಟೀಸು

1-4-'39ರಿಂದ ಇನ್ಕಮ್ ಟೇಕ್ಸ್ ಕಾಯಿದೆಯಲ್ಲಿ ಅನೇಕ ವ್ಯತ್ಯಾಸಗಳಾಗಿವೆ. ನೀವು ಕೊಡುವ ಟೇಕ್ಸ್ ನಿಮ್ಮ ಉತ್ಪತ್ತಿಗೆ ಮಿಕ್ಕಿದ್ದಿದ್ದರೆ ನಿಮಗೆ ಆ ಬಗ್ಗೆ ಅಸಮಾಧಾನವಿದ್ದರೆ ಕೆಳಗಿನ ವಿಳಾಸಕ್ಕೆ ಬರೆದು ತಕ್ಕ ಅನುಭವವನ್ನು ಪಡಕೊಂಡು ನಿಮ್ಮ ಟೇಕ್ಸನ್ನು ಕಡಿಮೆಮಾಡಿಕೊಳ್ಳಬಹುದು. ಸಂದರ್ಭಾನುಸಾರ ನೀವು ಟೇಕ್ಸ್ ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು.

S S. Puranik

Govt-recognised
Income-Tax Practitioner
AUDITOR
P. O. Byndoor

THE
PREMIER BANK
OF INDIA, LIMITED
Head Office: MADRAS.
Branches:
MADURA & NELLORE.
CHAIRMAN
Dr. U.L.Narayana Rao.
'Bhujanga Nivas' Madras.
FIXED DEPOSITS
are now received at the following Rates:
For 6 Months at 3½% P. A.
12 Months at 4½% P. A.
24 Months at 5% P. A.
(Interest Paid Half-yearly.)
S. V. Rau D. Com.,
Managing Director

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿ ಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿಗಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಿಸುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸನುಕಲದಿಂದ ಚಿಕಿತ್ಸೆ ಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧಶೀಸೆ ಸೀಸೆ 1ಕ್ಕೆ ರೂ. 5—0—0

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೩೩, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

WANTED District and Taluka Organisers in Districts and Taluks of Karnataka on a monthly salary of Rs. 50/- and Rs. 20/-. Special facilities for initial business. Only influential and educated Organisers who can guarantee Rs. 50,000/- and Rs. 25,000/- per year need apply: Padubidri Bros., Bombay 8.

ಸ್ವೀಕಾರ ವಿಮರ್ಶೆ

ಗಾಯತ್ರೀ ಧ್ಯಾನ

ಶ್ರೀ. ಸ್ವಾಮಿ ಶಿವಾನಂದ ಸರಸ್ವತೀ ಋಷೀಕೇಶ, ಹಿಮಾಲಯ ಇವರಿಂದ ಪ್ರಣೀತವಾದ ಗಾಯತ್ರೀ ಧ್ಯಾನದ ಕನ್ನಡ ಅನುವಾದ. ದಿವ್ಯ ಜೀವನ ಸಂಘದ ಕುಂದಾಪುರ ಉಪ ಶಾಖೆಯಿಂದ ಉಚಿತವಾಗಿ ಹಂಚಲು ಪ್ರಕಟಿತವಾಗಿದೆ.

ಶ್ರೀ. ಸ್ವಾಮಿ ಶಿವಾನಂದ ಸರಸ್ವತಿಯವರು ಅನೇಕ ಧಾರ್ಮಿಕ ತತ್ವಗಳನ್ನು ಬರೆದು, ಆಧುನಿಕ ನಾಗರಿಕ ಜನಾಂಗಕ್ಕೆ ಹೇರಳ ಉಪಕಾರವಮಾಡಿದ್ದಾರೆ. ಇವರಿಂದ ರಚಿತವಾದ ಗ್ರಂಥಗಳು ಹೆಚ್ಚಾಗಿ ಆಂಗ್ಲೇಯ ಭಾಷೆಯಲ್ಲಿವೆ. ಇಂಥವುಗಳನ್ನು ಆಯಾಯ ದೇಶಭಾಷೆಯಲ್ಲಿ ಭಾಷಾಂತರಿಸಿದರೆ ತುಂಬಾ ಉಪಕಾರವಾದೀತು. ಇದೀಗ ಸ್ವಾಮಿಜಿಯವರ ಗಾಯತ್ರೀ ಧ್ಯಾನವನ್ನು ಕುಂದಾಪುರದಲ್ಲಿರುವ ದಿವ್ಯ ಜೀವನ ಸಂಘದವರು ಕನ್ನಡಿಸಿ, ಕನ್ನಡ ಜನತೆಗೆ ತುಂಬಾ ಉಪಕಾರಮಾಡಿದ್ದಾರೆ. ಇದರಲ್ಲಿ ಗಾಯತ್ರಿಯ ಭಾವಾರ್ಥ, ಜಪಗಳ ವಿಧಾನ, ಗಾಯತ್ರೀ ಮಹಿಮೆ, ಪ್ರಯೋಜನ ಮೊದಲಾದ ವಿಷಯಗಳು ಬಹು ಸೊಗಸಾಗಿ ವರ್ಣಿತವಾಗಿವೆ. ಇದರಿಂದ ಅಮೂಲ್ಯ ಫಲವನ್ನು ಧರ್ಮಾಭಿಮಾನಿಗಳು ಅವಶ್ಯ ಹೊಂದಬೇಕು.

ಶ್ರೀ. ರಾಮಾಂಜನೇಯ—(ಹರಿಕಥಾ) ಬರೆದವರು:—ಶ್ರೀ. ಮ. ಶಂಕರನಾರಾಯಣ ಸಾಮಗರು—ಬೆಲೆ ಒಂದು ಆಣೆ. ಪೌರಾಣಿಕ ವಿಚಾರಗಳನ್ನು ಆಧುನಿಕ ಜನತೆಯ ಮನಸ್ಸಿನ ಮಟ್ಟಕ್ಕೆ ನಿಲುಕುವಂತೆ ಸರಸವಾಗಿ ಸರಳತೆಯಿಂದ, ವರ್ಣಿಸುವ ಚಾತುರ್ಯವು ಶ್ರೀ. ಮಲ್ಪೆ ಸಾಮಗರಲ್ಲಿದೆ; ಇವರು ಬಯಲಾಟ, ತಾಳಮದ್ದಳೆ (ಯಕ್ಷಗಾನ) ಮೇಳಗಳು ಹರಿಕಥಾರಂಗದಲ್ಲಿ ಊರು ಪರವೂರುಗಳಲ್ಲಿ ಕೀರ್ತಿಗಳಿಸಿದ ತರುಣರು. ಶ್ರೀ. ರಾಮಾಂಜನೇಯದಲ್ಲಿ ಸಾಮಗರು ಭಕ್ತಿಯ ಪ್ರಾಧಾನ್ಯತೆಯನ್ನು ಮನಮುಟ್ಟುವಂತೆ ಸೂಕ್ಷ್ಮವಾಗಿ ವರ್ಣಿಸಿರುವರು. ಇದನ್ನು ಪ್ರಕಟಿಸಿದ ಕರ್ನಾಟಕ ಸಾಹಿತ್ಯ ಸಂಘದವರ ಕಾರ್ಯವು ಸ್ತುತ್ಯವಿದೆ.

ಶ್ರೀ. ಭಾರತೀ ವಾಚನಾಲಯ, ಮೈಲ್ಲಾಡಿ, ಸುರತ್ಕಲ್ (ದ. ಕ.)—ಈ ಸಂಸ್ಥೆಯ ಏಳನೇ ವರ್ಷದ ವರದಿಯನ್ನು ನಾವು ಸ್ವೀಕರಿಸಿರುವೆವು. ಜನಜೀವನದಲ್ಲಿ ವಾಚನಾಲಯದ ಮಹತ್ವಿಕೆಯು ಅಸಾಧಾರಣವಾದುದು. ವಾಚನಾಲಯದ ಅಮೂಲ್ಯ ಪ್ರಯೋಜನವು ದೊರೆಯುವಂತೆ, ಹಳ್ಳಿಗಳಲ್ಲಿ ತಕ್ಕ ಏರ್ಪಾಡು ನಡೆಯುವುದು ಆವಶ್ಯಕ; ಭಾರತೀ ವಾಚನಾಲಯದವರು ಜನತೆಯ ಉಪಯುಕ್ತತೆಗಾಗಿ ಪುಸ್ತಕ, ಪತ್ರಿಕೆಗಳು, ಅಭ್ಯಾಸವಂದಲ, ಕೈಬರಹದ ಪತ್ರಿಕೆ, ಹಿಂದೀ ತರಗತಿ ಹೀಗೆ ಹಲವೊಂದು ಕಾರ್ಯಗಳಲ್ಲಿ ಮುಂದರಿಯುವುದು ಕಾರ್ಯರಂಗಕ್ಕಿಳಿದಿರುವುದು ಅಭಿನಂದನೀಯ. ಆದರೆ ವರದಿಯ ಅಂಕೆ ಸಂಖ್ಯೆಯನ್ನು ಪರಾಂಬರಿಸಿದರೆ, ಈ ಸಂಸ್ಥೆಗೆ ಬೇಕಾದಷ್ಟು ಬೆಂಬಲ ದೊರೆಯಲಿಲ್ಲವೆಂದು ತೋರುವುದು. ಮುಂದಾದರೂ ಈ ಸಂಸ್ಥೆಯು ಮುನ್ನಡೆಯುವಂತೆ, ಅವಶ್ಯವೆನಿಸುವ ಕಾರ್ಯಭಾಗವನ್ನು ಇನ್ನಷ್ಟು ಉತ್ಸಾಹದಿಂದ ಈ ಸಂಸ್ಥೆಯ ಮಂಡಲದವರು ಕೈಕೊಳ್ಳುವರೆಂದು ನಮ್ಮ ನಂಬಿಕೆ. ಜನತೆಯೂ ಯುಕ್ತ ರೀತಿಯಿಂದ ಸಹಕರಿಸಿ, ಉಚ್ಚ ಧ್ಯೇಯವು ಯಶಸ್ವಿಯಾಗುವಂತೆ ನೆರವಾಗಲೆಂದು ನಮ್ಮ ಹಾರೈಕೆ.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬೈ—ಈ ಸಂಸ್ಥೆಯ 36ನೇ ವಾರ್ಷಿಕ ವರದಿಯನ್ನು ನಾವು ಆತ್ಮಾದರದಿಂದ ಸ್ವೀಕರಿಸಿರುವೆವು. ಸಮಾಜದ ಜನತೆಯ ಅಭ್ಯುದಯಕ್ಕಾಗಿ ಸ್ಥಾಪಿತವಾದ ಈ ಸಂಸ್ಥೆಯು ಕಳೆದ ಮೂವತ್ತಾರು ವರುಷಗಳಿಂದ ತನ್ನ ಪವಿತ್ರ ಉದ್ದೇಶವು ನೆರವೇರುವಂತೆ ಉದ್ಯೋಗಿಸುತ್ತಿದ್ದು, ಉತ್ತಮ ಸಂಘ ಸಂಸ್ಥೆಗಳಿಗೆ ಆದರ್ಶಪ್ರಾಯವಾಗಿ ಮುನ್ನಡೆಯುವುದೆಂದು ಇದರ ಕಾರ್ಯಕಲಾಪಗಳಿಂದ ತಿಳಿಯಬಹುದಾಗಿದೆ. ಸಮಾಜದವರಲ್ಲಿ ವಿದ್ಯಾ ಪ್ರಸಾರವಾಗುವಂತೆ ಸಾಕಷ್ಟು ರೀತಿಯಲ್ಲಿ ಸಹಕರಿಸುತ್ತಿರುವುದು ಅಭಿನಂದನೀಯವಿದೆ. ಕಳೆದ ವರ್ಷದಲ್ಲಿ ರಾತ್ರಿಶಾಲೆಯಲ್ಲಿ ವಿದ್ಯಾಭ್ಯಾಸಮಾಡುತ್ತಿದ್ದ ಬಾಲಕರ ಸಂಖ್ಯೆ 451, ವಿದ್ಯಾರ್ಥಿ ವೇತನ ಪಡೆದವರ ಸಂಖ್ಯೆ 22. ರೂ. 1039 ವೇತನರೂಪದಲ್ಲಿ ಹಂಚಲಾಗಿದೆ. ಇದರಿಂದ ಮೊಗವೀರ ವ್ಯವಸ್ಥಾಪಕ ಮಂಡಳಿಯ ಮಹತ್ವಿಕೆಯನ್ನು ಮನಗಾಣಬಹುದಾಗಿದೆ. ಮೊಗವೀರ ಸಮಾಜವು ಸಂಘಶಕ್ತಿಯನ್ನರಿತಿದೆ. ಸಮಾಜದೇಳಿಗೆಗಾಗಿ ಹೋರಾಟ ನಡೆಸಿ, ಸಾಕಷ್ಟು ಯಶಸ್ವಿಯಾಗಿದೆ. ಮುಂಬಾಯಿಯ ದಕ್ಷಿಣಕನ್ನಡಿಗರಲ್ಲಿ ಬೇರಾವ ಜಾತಿಯ ಸಂಘ ಸಂಸ್ಥೆಗಳು ಇದರಷ್ಟು ಮುಂದೆ ಬಂದಿಲ್ಲವೆಂದು ತಿಳಿಯಬಹುದಾಗಿದೆ. ಸಮಾಜದ ಹಿರಿಯ ಬಂಧುಗಳು ಸಮಾಜದಿಂದ ಪಾಲಿತರಾದ ಕಿರಿಯವರ್ಗವು ಈ ಸಂಸ್ಥೆಯು ಮುನ್ನಡೆಯುವಂತೆ ತಕ್ಕ ಸೇವೆಯನ್ನು ಸಲ್ಲಿಸುವರೆ ಹಿಂಜರಿಯದಿರಲಿ; ಪವಿತ್ರ ಸಂಸ್ಥೆಯ ಕಾರ್ಯೋದ್ಧಮವು ಇನ್ನಷ್ಟು ಯಶಸ್ವಿಯಾಗುವಂತೆ ಜನತೆಯು ಬೆಂಬಲವನ್ನೀಯಲಿ. ಈ ಆದರ್ಶ ಸಂಸ್ಥೆಯು ಬಾಳಿ ಬೆಳಗಲಿ, ಇನ್ನಷ್ಟು ಯಶಸ್ಸನ್ನು ಗಳಿಸಲಿ.

ಬಿಲ್ಲವರ ಎಸೋಸಿಯೇಶನ್— ಈ ಸಂಸ್ಥೆಯ ಸಪ್ತಮ ವಾರ್ಷಿಕ ವರದಿಯನ್ನು ನಾವು ಸಾದರಪೂರ್ವಕವಾಗಿ ಸ್ವೀಕರಿಸಿರುವೆವು. ಈ ಸಂಸ್ಥೆಯು ಸ್ವಜಾತಿಯ ಜನರಲ್ಲಿ ವಿದ್ಯಾಪ್ರಸಾರ, ದೀನದಲಿತರಿಗೆ ಕಷ್ಟಸಹಾಯ ಮೊದಲಾದ ಉಚ್ಚ ಉದ್ದೇಶಗಳಿಂದ ಸ್ಥಾಪಿತವಾಗಿದ್ದು, ಸಮಾಜದ ಅಭ್ಯುದಯಕ್ಕಾಗಿ ಶ್ರಮಿಸುತ್ತಿರುವುದು. ಈ ಸಂಸ್ಥೆಯು ವರ್ಷವರ್ಷಕ್ಕೆ ತನ್ನ ಸಾಹಸಶಕ್ತಿಯಿಂದ ಮುನ್ನಡೆಯುತ್ತಿರುವುದೆಂದು ವರದಿಯಿಂದ ವಿದಿತವಾಗುವುದು. ಮುಂಬಾಯಿಯಲ್ಲಿ ಬಿಲ್ಲವರ ಸಂಖ್ಯೆ ಕಡಿಮೆಯಿಲ್ಲ. ಈ ಸಂಸ್ಥೆಯ ಉಚ್ಚ ಉದ್ದೇಶವು ಇನ್ನಷ್ಟು ಯಶಸ್ವಿಯಾಗಿ ನೆರವೇರಬೇಕಾದರೆ, ಸಮಾಜದ ಬಂಧುಗಳಲ್ಲಿ ಪರಸ್ಪರ ಸಹಾನುಭೂತಿಯಿಂದ ಐಕ್ಯತೆಯಲ್ಲಿ ಹೋರಾಡುವ ಸ್ವಾಭಿಮಾನವು ನೆಲೆಗೊಳ್ಳುವುದು ಆವಶ್ಯಕ. ಬಿಲ್ಲವರ ಅಂಕೆ ಸಂಖ್ಯೆಯನ್ನು ಪರಾಂಬರಿಸಿದುದೇ ಆದರೆ, ಈ ಸಂಸ್ಥೆಯು ಇಷ್ಟರ ವರೆಗೇನೇ ಇನ್ನಷ್ಟು ಹೆಚ್ಚಾಗಿ ತನ್ನ ಪ್ರಭಾವವನ್ನು ಬೀರಬೇಕಿತ್ತೆಂದು ತೋರುವುದು. ಪ್ರತಿಯೊಬ್ಬ ಸಮಾಜದ ಬಂಧುವೂ ತನ್ನ ಹೊಣೆಗಾರಿಕೆಯನ್ನರಿತುಕೊಂಡು ಸ್ವಜನಾಭಿಮಾನದಿಂದ ಸಮಾಜಸೇವೆಯಲ್ಲಿ ತನ್ನ ಹೊಣೆಗಾರಿಕೆಯನ್ನು ನಿರ್ವಹಿಸಲು ಮುಂದಾಗಲೆಂದೂ, ಈ ಸಂಸ್ಥೆಯು ಇನ್ನಷ್ಟು ಶಕ್ತಿಯನ್ನು ಹೊಂದಿ, ವೃದ್ಧಿಯಾಗಲೆಂದೂ, ನಾವು ಹಾರೈಸುವೆವು.

N. S. S.

ಸರ್ಕಾರು

೧೯೩೯ನೇ ಇಸ್ವಿ ಆಯುಧಗಳ ನಿಬಂಧನೆಗಳ ರೂಲು ಳಿಪರ ಮೇರೆಗೆ, ನಾನ್-ಜುಡಿಶಿಯಲ್ ಸ್ಟಾಂಪು ಪೇಪರುಗಳ ರೂಪದಲ್ಲಿ ಲೈಸನ್ಸ್ ಫೀಸನ್ನು ತೆರುವ ಈಗಿನ ಪದ್ಧತಿಯನ್ನು ಸರಕಾರದವರು ರದ್ದು ಮಾಡಿರುವರಲ್ಲದೆ, ಅರ್ಮ್ಸ್ ಆಕ್ಟ್ ರೂಲುಗಳ ಮೇರೆಗೆ, ಎಲ್ಲಾ ಲೈಸನ್ಸುಗಳಿಗೆ ತೆರುವ ಯಾವತ್ತೂ ಫೀಸನ್ನು ನಗದಿಯಿಂದಲೇ ತೆರಬೇಕಾಗಿಯೂ ಸರಕಾರದವರು ಅಪ್ಪಣೆಮಾಡಿರುವರೆಂದು ಸರ್ವ ಜನರಿಗೂ ಈ ಮೂಲಕ ತಿಳಿಸಲಾಗಿದೆ. ಆದ್ದರಿಂದ, ಇನ್ನು ಮುಂದೆ, ಅರ್ಜಿದಾರರು, ಅರ್ಮ್ಸ್ ಆಕ್ಟ್ ರೂಲುಗಳ ಮೇರೆಗೆ, ರಿನ್ಯೂವಲ್ ಫೀಸ್, ಡುಪ್ಲಿಕೇಟ್ ಲೈಸನ್ಸ್ ಫೀಸ್ ಕೂಡಾ ಲೈಸನ್ಸ್ ಫೀಸುಗಳನ್ನು, ನಗದಿಯಿಂದಲೇ ಅತ್ಯಂತ ಸಮೀಪವಿರುವ ಸಬ್-ಟ್ರೆಜರಿಗಾಗಲೀ ಮನಿಯಾರ್ಡರ್ ಮೂಲಕ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗಾಗಲೀ ಕಳುಹಿಸತಕ್ಕದೆಂದೂ, ಲೈಸನ್ಸಿನ ಬಗ್ಗೆ ಗಿರುವ, ಲೈಸನ್ಸಿನ ರಿನ್ಯೂವಲ್ ಅಥವಾ ಲೈಸನ್ಸಿನ ಡುಪ್ಲಿಕೇಟಿನ ಬಗ್ಗೆ ಗಿರುವ ಪ್ರತಿಯೊಂದು ಅರ್ಜಿಯೊಂದಿಗೂ, ಅಗತ್ಯವಿರುವ ಚಲನ್ ಅಥವಾ ಮನಿಯಾರ್ಡರ್ ರಶೀದಿಯನ್ನು ಲಗ್ತೀಕರಿಸತಕ್ಕದೆಂದೂ ದಕ್ಷಿಣಕನ್ನಡ ಜಿಲ್ಲಾ ಮ್ಯಾಜಿಸ್ಟ್ರೇಟರು ಪ್ರಕಟಮಾಡಿರುತ್ತಾರೆ. ಹೀಗೆ ೧-೬-೧೯೩೯ರೊಳಗೆ ಕೈಸೇರದೆ ಯಾ ಅದರ ಅನಂತರ ಬಂದ ಅರ್ಜಿಗಳ ಕುರಿತು ಆಲೋಚಿಸಲಾಗಲಿಕ್ಕಿಲ್ಲ. ಒಂದು ಲೈಸನ್ಸ್ ಕೊಡಲು ಯಾ ಅದನ್ನು ರಿನ್ಯೂಮಾಡಲು ನಿರಾಕರಿಸಿದಲ್ಲಿ, ತೆತ್ತ ಲೈಸನ್ಸ್ ಫೀಸನ್ನು, ಅರ್ಜಿದಾರನ ಖರ್ಚಿನಿಂದ, ಮನಿಯಾರ್ಡರ್ ಮೂಲಕ, ಹಿಂದಿರಗಿಸಲಾಗುವುದು.

ಕೋರ್ಟ್ ಫೀ ಲೇಬಲುಗಳನ್ನು ಹಿಂದಿನಂತೆ ಮುಂದೆಯೂ ಅರ್ಜಿಗಳಿಗೆ ಅಂಟಿಸುತ್ತಿರಬೇಕು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಆಫೀಸ್, ಕ್ಯಾಂಪ್ ಕಾಸರಗೋಡು, ತಾ. 23-5-1939	(ದಸ್ಕತು) ಎಂ ವಿ. ವೆಲ್ಲೋಡಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್.

ನವಯುಗದಲ್ಲೇ ಜಾಹಿರಾತು ಕೊಡಿರಿ.

ಉಷ್ಣಕಾಲದಲ್ಲಿ ತಣ್ಣಗಾದ ಶರ್ಬತ್ತು ಕುಡಿದಾದರೂ ಕ್ಷಣಹೊತ್ತು ಉಷ್ಣಾದ ತೃಷೆಯನ್ನು ಪರಿಹರಿಸಿಕೊಳ್ಳಬಹುದು. ಪಂಖ ಯಾ ಬೀಸಣಿಗೆಗಳಿಂದ ಗಾಳಿ ತೆಗೆದುಕೊಂಡು ಕ್ಷಣಹೊತ್ತು ಮೈತಣ್ಣಗಿರಿಸಲೂ ಬಹುದು. ಪರಂತು ಉಷ್ಣತೆಯು ತಾಪದಿಂದ ಶರೀರದಲ್ಲಾಗುತ್ತಿರುವ ದುಷ್ಪರಿಣಾಮಗಳು ಮಾತ್ರ ದೂರವಾಗಲಾರವು.

ಹಾಗಾದರೆ

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಇವರ ಚಂದ್ರನಂತೆ ಶೀತಲವಾದ ಬಹುಗುಣಯುಕ್ತ

ಆಮಲಕೀ ತೈಲವನ್ನು

(Regd Trade Mark) ನಿತ್ಯವೂ ಉಪಯೋಗಿಸಿರಿ. ಇದರಲ್ಲಿ ಆಮಲಕಿಯೇ ಮೊದಲಾದ ಮಂಗಲಕಾರಕ ದ್ರವ್ಯ ಯಾ ಇನ್ನಿತರ ಸುಗಂಧಯುಕ್ತ ಮೂಲಿಕೆಗಳನ್ನೂ ಸೇರಿಸಿ ವಿಜಾತೀಯ ದ್ರವ್ಯಗಳಿಂದ ವಿರಹಿತ ಮಾಡಲ್ಪಟ್ಟ ವಿಶೋಧಿತ ತಿಲತೈಲದಿಂದಲೇ ಶಾಸ್ತ್ರೀಯ ವಿಧಿಯಂತೆ ಪ್ರಸ್ತುತವಾದ ಈ ತೈಲವನ್ನು ನಿತ್ಯವೂ ಉಪಯೋಗಿಸುತ್ತಿದ್ದರೆ ಇದರಲ್ಲಿರುವ ಅಮೋಘವಾದ ಸುಗಂಧ ಗುಣಗಳು ನಮ್ಮ ರೋಮರಂಧ್ರದೊಳಗೆ ಪ್ರವೇಶಿಸಿ ನಮ್ಮ ರಕ್ತಕ್ಕೆ ಕಂಪನ್ನುಂಟುಮಾಡಿ ತರ್ಮದಲ್ಲಾಗುತ್ತಿರುವ ದುಷ್ಪರಿಣಾಮಗಳನ್ನು ಬೇಗನೆ ಓಡಿಸುತ್ತದೆ. ಹಾಗೂ ಶರೀರದಲ್ಲಿಯ ದುರ್ಗಂಧಗಳನ್ನು ಹೋಗಲಾಡಿಸಿ ಕೇಶಮೂಲಗಳು ದೃಢವಾಗುವದಲ್ಲದೆ ಅಚ್ಚ ಕಪ್ಪಾದ ಕೂದಲುಗಳು ನಿಬಿಡವಾಗಿ ಬೆಳೆದು ಮೊದಲೇ ನರೆತ ಕೂದಲುಗಳು ಸಹ ಕಪ್ಪಾಗಿ ಮುಖಶ್ರೀಯು ಲಾವಣ್ಯಪೂರ್ಣವಾಗುವದು. ಮತ್ತು ಸುಖವಾದ ನಿದ್ರೆ ಹತ್ತುವುದು. ಇಂತಹ ನಿದ್ರೆಯಿಂದ ಸ್ಮೃತಿ, ಮೇಧಾ, ಉತ್ಸಾಹ, ವಿಚಾರಶಕ್ತಿ ಮೊದಲಾದ ಮಾನಸಿಕ ಶಕ್ತಿಗಳು ವಿಕಾಸ ಹೊಂದಿ ಚಿರಾರೋಗ್ಯ ಲಾಭವಾಗುವದು.

5 ತೊಲೆಯ ಸೀಸೆ 1ರ 0-6-0, 10 ತೊಲೆಯ ಸೀಸೆ 1ರ 0-11-0.

ಕಸ್ತೂರಿಯುಕ್ತ ಧನ್ವಂತರೀ ಗುಟಿಕಾ ವಾಯುಮಾತ್ರೆ.

ಬಾಲ, ವೃದ್ಧ, ಸ್ತ್ರೀ-ಪುರುಷರ ಗರ್ಭಿಣಿಯರ ಸರ್ವತರದ ಕೆಮ್ಮು, ಶಲಿತುಕ್ಕು, ಅಜೀರ್ಣ, ಹೊಟ್ಟೆಯುಬ್ಬರಿಕೆ, ಅತಿಸಾರ, ಇವುಗಳಲ್ಲಿ ಅಮೃತದ ಗುಣಕಾರಿಯಾಗಿದೆ. ಬಾಲಕರ ಅಪಸ್ಮಾರ, (ಬಾಲಗ್ರಹ) ಕಫ ಇತ್ಯಾದಿಗಳಲ್ಲಿ ಸಂಗ್ರಾಹ್ಯವಾದ ದಿವ್ಯ ಔಷಧಿಯಾಗಿದೆ.

ಕ್ರಯ: 12ಕ್ಕೆ 0-4-0, 25ಕ್ಕೆ 0-7-0, 50ಕ್ಕೆ 0-13-0, 100ಕ್ಕೆ 1-5-0, 500ಕ್ಕೆ 5-0-0, 1000ಕ್ಕೆ 9-0-0.

5 ಆಣೆ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತದೆ.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್)
ಕುಂಜಾಲ್, ಪೋಸ್ಟ್ ಬ್ರಹ್ಮಾವರ.

ನಮ್ಮ ಸ್ಟಾಕಿಸ್ಟರು:—

1. **Supply Agency Ltd., Udipi, S. K.**
2. **Nava Bharata Book Depot, Udipi, S K.**
3. **V. R Prabhu**, The Canara News & Books Agent, Batatawala Mansion; Lalbag, BOMBAY.

(ಹಿಂದಿನ ಪುಟದಿಂದ ಮುಂದರಿಸಿದ್ದು.)

ಕುಂಞಾಪ್ಪ—ಏನು! ಗಡಿಬಿಡಿ?

ದುನಿಯ—ಮತ್ತೇನು ಇಲ್ಲ ಬುದ್ಧೀ, ಅವಳು ನಿಮ್ಮ ಮೋಹಿನೀ ಬಹಳ ಕಂಗಾಲಾಗಿದ್ದಾಳೆ ಬುದ್ಧೀ!

ಕುಂಞಾಪ್ಪ—ಏನು? ಯಾಕೆ?

ದುನಿಯ—ಅವಳ ಆಭರಣಗಳನ್ನು ತಾವು ಅಡವು ಇಟ್ಟಿದ್ದು ಬಿಡಿಸಲಿಲ್ಲವಂತೆ. ಅದು ಅಲ್ಲದೆ ಈಗ ತಾವು ಮದ್ವಿಗಿದ್ವಿಮಾಡಿಕೊಂಡಿದ್ದೀರಿ. ಇನ್ನು ಅವಳ ಕಡೆಗೆ ತಮ್ಮ ದೃಷ್ಟಿ ತಿರುಗದೆ ಇದ್ದರೆ ಅವಳ ಬಾಳು ಹಾಳಲ್ಲಾ? ಈ ವ್ಯಸನದಿಂದ ಅವಳು ಅನ್ನ ಮುಟ್ಟೋದಿಲ್ಲ-ನೀರು ಕುಡಿಯೋದಿಲ್ಲ- ನಿದ್ದೆ ಮಾಡೋದಿಲ್ಲ ನೀವು ಬಂದು ಏನಾರು ಧೈರ್ಯ ಹೇಳಿ ವಿಲೆವಾರಿ ಮಾಡದಿದ್ದರೆ-ಅವಳು ಖಂಡಿತ ಇನ್ನು ಹೆಚ್ಚು ಸಮಯ ಬದುಕೋದಿಲ್ಲ ನೋಡಿ!

ಕುಂಞಾಪ್ಪ—ನಾನು ನಿನ್ನ ಹಿಂದೇ ಬರ್ತೆ-ನೀನು ಮುಂದೆ ಹೋಗು. ಈಗ ಬರ್ತೆ ಅಂತ ಹೇಳು-ನೆಂಟರು ಇದ್ದಾರೆ-ಆದರೂ ಚಿಂತೆಯಿಲ್ಲ-ಏನಾರೂ ವಿಲೆವಾರಿ ಮಾಡಿ ಕೂಡ್ಲೆ ಬರ್ತೆ-ನೀನು ಕೂಡ್ಲೆ ಹೋಗಿ ಅವಳಿಗೆ ಸಮಾಧಾನ ಮಾಡು.

ಕುಂಞಾಪ್ಪ— (ತಾಯಿ ಒಡನೆ) ಅಮ್ಮಾ, ಹೆಬ್ಬಾಗಿಲ ಮನೆಯಲ್ಲಿ ಇವತ್ತು ಎಲ್ಲಪ್ಪನ ಹೆಂಡ್ತಿಗೆ ಶೀಮಂತ. ಮುಂಡಗೆ ಜಡ್ಡಿಂದ ನೆಂಟರು ಬರುವ ಪ್ರಸಂಗ-ಬಸ್ರಿ ಹೆಂಗಸಿಗೆ ಇಡಲಿಕ್ಕೆ ಸ್ವಲ್ಪ ಚಿನ್ನ ಬೇಕೆಂದು ಎಲ್ಲಪ್ಪ ಹೇಳಿದ್ದಾನೆ-ವಜ್ರದ ಬೆಂಡೋಲೆ ಗಿಂಡೋಲೆ-ಬಳೆಯೆಲ್ಲಾ ಬೇಕಂತೆ-ಸ್ವಲ್ಪ ಮದ್ರಾಸಿನ ಸ್ಟೈಲಿದ್ದು ಇದ್ದರೆ ಮುಂಡಗೆ ಜಡ್ಡಿನವರ ಎದುರು 'ಜಿಗ್'ಮಾಡಬಹುದೆಂದು ಇದ್ದಾನೆ-ಅವಳದ್ದು ಆಭರಣ ಸ್ವಲ್ಪ ತೆಗಿಸಿಕೊಡಿ ಅಮ್ಮ ನಾಳೆ ಹಿಂದೆ ಬರ್ತ್ತ.

ತಾಯಿ ಕೂಸು ಕೆಡ್ತಿ—ಬಸ್ರಿ ತಂದೆ ಮನೆಗೂ ಅವನ್ನ ಕೊಂಡುಹೋಗ್ದಂತೆ ಜಾಗ್ರತೆ-ಮ.ಗಾ. ಅವಳು ಹಿಂದೆ ಹೋಗುವಾಗ ಹಾಕಿ ಕಳುಹಿಸಬೇಕಲ್ಲ!

ಕುಂಞಾಪ್ಪ—ಅದೇನೂ ಇಲ್ಲ, ಅಮ್ಮ ಅವರ ಎದ್ರಿಗೆ ಒಂದು ಗಳಿಗೆ 'ಜಿಗ್' ಮಾಡೋಕೆ ಮಾತ್ರ! ನಾನು ಬರುವಾಗಲೇ ಹಿಂದೆ ತಂದುಬಿಡ್ತೇನೆ!

(ಕುಂಞಾಪ್ಪ ಶೆಟ್ರು ಪೇಟೆಯಲ್ಲಿ ಮೋಹಿನೀ ಮನೆಯಲ್ಲಿ)

ಕುಂಞಾಪ್ಪ—ಏನೇ ಇಷ್ಟು ಕಂಗಾಲು! ನಾನೇನು ನಿನಗೆ ಮೋಸಮಾಡಿಬಿಡುತ್ತೇನೆಂದು ನೆನಸಿದಿಯೇ-ನಿಮಗೆ ವೇಶ್ಯೆಯರಿಗೆ ಎಲ್ಲರಲ್ಲಿಯೂ ನಿಮ್ಮ ಗುಣವೇ ಕಾಣ್ತಾ ಏನು!

ಮೋಹಿನಿ—ಅಲ್ಲಾ ದೇವ್ರು-ನಮಗೆ ಹಾಗೆ ಇರುವುದು ಸಾಜಾ! ಅಲ್ಲ ನಿಮ್ಮಂಥಾ ಗುತ್ತಿನವರು ಮೋಸಮಾಡಲಿಕ್ಕಿಲ್ಲ ಖರೆ-ಆದರೆ ಕೆಲವರು ನಮ್ಮನ್ನೇ ತಿಂದು ಬಿಡುವವರಿದ್ದಾರೆರ್ರೀ—

ಕುಂಞಾಪ್ಪ—ನೋಡು ನಿನ್ನ ಚಿನ್ನ ಬಿಡಿಸಲಿಕ್ಕಂತ ಬೇರೆ ಚಿನ್ನ ತಂದಿದ್ದೇನೆ.

ಮೋಹಿನಿ—ನನ್ನ ದೇವ್ರು, ನನ್ನೊಡೆಯಾ, ನನ್ನ ಜೀವದ ಜೀವ-ನನ್ನ ಭಾಗ್ಯ, ನನ್ನ ಪ್ರಾಣ, ಇವೆಲ್ಲ ಬಹಳ ಶೋಕಿನದು ಅಲ್ದೇ? ಇವೇ ನನಗೆ ಇರ್ಲಿ. ಅದನ್ನ ಬಿಡಿಸೋದೇ ಬೇಡ!

ಕುಂಞಾಪ್ಪ—ಇವು ನಮ್ಮ ಹೆಂಗಸರದ್ದು.

ಮೋಹಿನಿ—ಅಂದರೆ ನೀವು ಮದ್ವಿಯಾದವರದ್ದೇ?

ಕುಂಞಾಪ್ಪ—ಹೌದು.

ಜನರು
ಯಥಾರ್ಥವಾಗಿಯೂ
ಒಪ್ಪಿಕೊಳ್ಳುತ್ತಾರೆ:-
ಸ್ವಸ್ತಿಕ
ಪರ್ಫ್ಯೂಮ್ಡ್ ಕೆಸ್ಟರಾಯಿಲ್
ಗುಣದಲ್ಲೂ ಪರಿಮಳದಲ್ಲೂ ಸ್ವದೇಶಿ ಅಥವಾ ವಿದೇಶದ ಯಾವ ಕೂದಲೆಣ್ಣೆಯನ್ನಾದರೂ ಸೋಲಿಸುವ ಅತ್ಯುತ್ತಮವಾದ
ಹೇರ್ ಆಯಿಲ್
ಎಂದು
ಎಲ್ಲೆಲ್ಲೂ ವಿಕ್ರಯಿಸಲ್ಪಡುತ್ತದೆ
೪೩

ಮೋಹಿನಿ—ಈ ಒಡವೆಗಳು ಇಷ್ಟು ಚಂದ ಇರುವಾಗ ಅವರಿಷ್ಟು ಚಂದ ಇರಬೇಕ್ರೀ!

ಕುಂಞಾಪ್ಪ—ಥೂ! ಚಂದ! ನಿನ್ನ ಕಿರುಬೆರಳಿಗೆ ಬರಲಿಕ್ಕಿಲ್ಲ. ದುನಿಯಾ, ಏನಾ ಇದು! ಗಲಾಸ್ ಹೊರಗೆ ಬರೋದಿಲ್ವಾ (ಬಾಟ್ಲಿ ಬರುವುದು-ಕುಡಿಯುತ್ತ) ಚಂದವಾ ಅಂತ ಕೇಳ್ತಿಯಲ್ಲಾ-ನಿನ್ನ ರೂಪು, ನಿನ್ನ ಲಾವಣ್ಯ, ನಿನ್ನ ಬೆಡಗು, ನಿನ್ನ ಒಯ್ಯಾರ, ಹಾವ-ಭಾವ-ಬಿಂಕ-ಬಿನ್ನಾಣ ಇವೆಲ್ಲ ಅದಕ್ಕೆಲ್ಲಿ ಬಂದೀತು? ಇವು ಯಾವುದಾದರೂ ಒಂದು ಸಾಸ್ಸಿ ಕಾಳಿನಷ್ಟು ಇಕ್ಕಂತಿಯಾ? ಆ ಹುಡ್ಗೀನ್ನ ಮದ್ವಿಯಾದ್ದು ಸ ಖಸಡಿಯೋವಕಂತಿಯಾ? ಅದಕ್ಕಲ್ಲಾ ಇನ್ನು ಮುಂದೆಯೂ ನೀನೇ ಗತಿ! ನಿನಗೇ ಶರಣಾಂತೇನೆ! ಇದರ ಕರ್ಚು ವೆಚ್ಚ ಸಾಗಿಸೋದಕ್ಕೆ ದುಡ್ಡು ಬೇಕಲ್ಲಾ? ಆ ದುಡ್ಡು ನೋಡಿ ಮದ್ವಿಗೆ ಕೈ ಒಡ್ಡಿದ್ದದ್ದೇ ಬೇರೆ ಯಾವುದಕ್ಕೂ ಅಲ್ಲಾ! ಇಷ್ಟೇ ಟ ಸಿಡಿ ಇಲ್ದೇ ಮೋಹಿನೀ—

ಮೋಹಿನಿ—ಆದಿರಲಿ, ತೆಕ್ಕೊಂಡು ಬರುತ್ತೇನೆ. ನಿಮ್ಮ ನೆಂಟರು ಭಾರೀ ದೊಡ್ಡವರಂತಲ್ಲಾ?

ಕುಂಞಾಪ್ಪ—ಗೆಣಸುಗುತ್ತಿನವ್ರು ಶೇಟ್ ಗೆಣಸೀ-ನಮ್ಮ ಪಡ್ಪುಗುತ್ತಿನ ಗಟ್ಟಿ ಒಕ್ಕಲುಗಳ ಪ್ರಾಣ ಅವಕ್ಕೆ ಇಲ್ಲ ಮುಡ್ಲೇನೋ ಗಟ್ಟಿ ಇದ್ದುವಂಬ್ರು! ಈಗ ಆ ರಾಫ್ ತೋರ್ಸೋಕೆ ಹಾತೊರೆ! ಹಾರಿದ್ರಿಂತ ನನಗೇನೂ ನಷ್ಟವಿಲ್ಲಾನ್ನು. ಒಂದು ಐದುಸಾವಿರ ರೂಪಾಯಿ ಗರ್ಜಿನ ಬಗ್ಗೆ ವಿಲೆವಾರಿ ಮಾಡಿಕೊಂಡೆ ಪೂರ್ಣ ರೂಪಾಯಿ ಸಿಕ್ಕಲಿಲ್ಲ. ಸಿಕ್ಕದಿದ್ದರೇನು! ನೋಡು, ಚಿನ್ನ ತಂದಿದ್ದೇನೆ. ಅಬ್ಬರಕ್ಕೆ ಹೆಣ್ಣಿಗೆ ಹಾಕಿ ಕಳುಹಿಸಿಕೊಟ್ಟಿದ್ದು. ಅದನ್ನೇ ಹಿಡ್ಕೊಂಡು ಬಂದುಬಿಟ್ಟೆ! ಅವ್ರಗಳದ್ದು ಅಲ್ಲ, ಹೆಚ್ಚಿನವು ಹೆಣ್ಣಿನ ಮಾವಂದು. ಮದ್ರಾಸೀಲಿ ಡಾಕ್ಟರ್ ಅವರು. ಇದು ಹೋದ್ರೂ ಅವರಿಗೇನು ಮದ್ರಾಸೀಲಿ ಚಿನ್ನಕ್ಕೇನು ಕಡಿಮೆಯಿತ್ತಾ! ಇಂಥಾ ಗುತ್ತಿನ ರಾಫಿನ ಹೆಣ್ಣಿಗೆ ಕೈಕೊಟ್ಟರೆ ದುಡ್ಡಿನ ಗರ್ಜಿಬಿದ್ದಾಗ ಬ್ಯಾಂಕಿಗೆ ಅರ್ಜಿ ಹಾಕಿದ ಹಾಂಗೆ, ಹಣ ಬಂದು ಬಿಡೆ!

ನನ್ನ ಮೋಹಿನೀ ದರ್ಬಾರ್ ನಡೀತ್ತೆ!

ಮೋಹಿನಿ—ನನ್ನ ದೇವ್ರು ಬುದ್ಧೀ ಹೀಗೆ ಇರ್ಲಪ್ಪಾ! ಏನೋ ಪೂರ್ವಜನ್ಮದ ಸಂಬಂಧ! ಈ ಜನ್ಮದ ಮದ್ವಿ ಹಾಗೆ ಇಂದು ಬಿರುಗಿ ನಾಳೆ ಮುರಿಯೋದಲ್ಲ. ಜನ್ಮಾಂತರದಿಂದ ಬಂದ ಪ್ರೇಮದ ನಿರಿ ನನುಡ್ದಾ! ಹುಟ್ಟು-ಗುಟ್ಟು-ಜಾತಿ-ನೀತಿ ಎಂಬ ಎಂಥಾ ಕಟ್ಟನ್ನೂ ಮುರಿದು ಪೇರಿ ವಿಸಾರಿ ಮುಂದೆ ಜನ್ಮ ಜನ್ಮಾಂತರದ ತನಕವೂ ಹರಿಯುವ ಪ್ರೇಮ ಪ್ರಳಯದಲ್ಲಿ ತೇಲಾಡುವವರೇ ನಾವಲ್ಲಾ? ಬೇರೆ ಹತ್ತು ಮದ್ವಿ ಆದ್ರೂನೂ ನಮ್ಮ ಜನ್ಮಾಂತರದ ಸಂಬಂಧ ತಪ್ಪಿ ಹೋದೀತು! ತಪ್ಪಿಸೋಕೆ ಯಾರಿಂದಾದ್ರೂ ಸಾಧ್ಯ ಆದಿತಾ? ಅಯ್ಯೋ ನನ್ನ ದೇವ್ರು ಮದ್ವಿ ಗಲಾಟೆಯಿಂದ ಎಷ್ಟು ಒಟ್ಟಿ ಹೋದ್ರು! ಬಾಧಾವಿಸಾ ಹಾಲು ಕೊಡ್ಲಾ? ಅಥ್ವಾ, ಎಳೀಂದ್ರೆ! ಒಳಗೆ ಬನ್ನೀಂದ್ರೆ . . .

○ ○ ○ ○

(ಗೆಣಸು ಗುತ್ತಿನಲ್ಲಿ)

ಕನಕಾಕ್ಷಿ—ಶಾಂತೀ, ಏನಿದು? ಚಿನ್ನ ಹಾಕಿಕೊಂಡು ಬರಲಿಲ್ಲವಲ್ಲ? ಮದ್ರಾಸಿನ ಅಕ್ಕನ ಚಿನ್ನಾ ಅವು! ಬೇಗ ಅವರಿಗೆ ಭಾಂಗಿಮಾಡಿ ಕಳುಹಿಕೊಡ್ತೇನೆಂದಿದ್ದೆ!

ಶಾಂತಿ—ಎಲ್ಲೋ ಒಂದು ಸೀಮಂತಕ್ಕೆ ಬೇಕೊಂದ್ರು ಅವರು. ಮಾಯಿ ಕೊಡೋಂದ್ರು ಕೊಟ್ಟೆ ನಾನು ಹಿಂದೆ ಬರುವಾಗ ಅದು ಬಂದಿಲ್ಲ

ಗೋಪಾಲಕೃಷ್ಣ— ಗಲಾಟೆ ಮಾಡಬೇಡ-ಕೊಂಡರೆ ಇಲ್ಲ-ಇನ್ನೆರಡು ದಿನಗಳೊಳಗೆ ಬಾರದೆ ಎಲ್ಲಿ ಹೋತ್ತು!

(ಶಾಂತ ಒಟ್ಟಿಗೆ ಗಂಡನ ಮನೆಗ ಹೋಗಿದ್ದ ಬುಕ್ಕಿ ಯೊಡನೆ ಕನಕಾಕ್ಷಿ ಹೆಳ್ತಾರೆ)

ಕನಕಾಕ್ಷಿ—ನೋಡಾ ಬುಕ್ಕೀ, ಹ್ಯಾಗೆ ಗಂಡನ ಮನೆ ಸಮಾಚಾರ

ಬುಕ್ಕಿ—ಏನ ಹೇಳ್ಲಿ ಅಮ್ಮ! ಕೆಲ್ಸದವರಿಗೂ ಕೂ. ಹ. ದಿವಸಕ್ಕೆ ಸಿಂಹಾ ಮಾಡುವ ಬಗೆಯ ತೀರ-ಊಟ, ಕಾಫಿ, ತಿಂಡಿ ಎಲ್ಲಾ ಕಂಪ್ರೆ ಪ್ಯಾಟಿ, ಎ... ಇನಲ್ಲಿ ಹಾಗೆಲ್ಲ ಇರಾಕೆಲ್ಲಿ' ನನಗ ಹಿಂದ ಬರಲಿಕ್ಕ ಆಗೇ ಇರಲಿಲ್ಲ—ಸಂಜೆ ಎಷ್ಟು ದೀಪ್ದ—ಜೋಕೆಗಳೆಷ್ಟು!—ಗುಡಿಸುವಾಗ ಒಟ್ಟು ಕೆಲ್ಸದ ತಂಗು ನನಗೆ ಒಂದು ... ನ್ ತೋರಿಸಿ ಯಾಕ್-ಎದು ಇನ್ನ ನಮ್ಮ ಸಣ್ಣ ಒತ್ತಿಕೊಣೆಯಿಂದ ಎನ ಗಮ-ಗಮ! ಸಣ್ಣ ಸಣ್ಣ ಬಾಟ್ಲಿಗಳ ತುಂಬಾ ಇದ್ದವು-ಮಂಚ ಏನ! ಮಂಚ ಏನ್! ನನ್ನ ಎಯೆ ನ್! ಹೂವ್ವಿನ ಸೆಂಡ್ ಏನ!' ಸುಖಾಂದರೆ

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್
ಕೊಲೆರಾ ರೋಗಕ್ಕೆ ರಾಮಬಾಣ ಔಷಧ
೧೦೦ ಮಾತ್ರೆಗಳಿಗೆ ರೂ ೩—೮—೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೩—೦—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು. ಪಿ ನಾಯಕ

ಅಜಿ–ನನಗೆ ಹಿಂದೆ ಬರೋಕೆ ಕಾಲೇ ಬರಲಿಲ್ಲ–ಸಣ್ಣ ಒಡತಿ ಒಟ್ಟಿಗೆ ಇನ್ನೊಬ್ಬ್ರ ನಾನೇ ಹೋಗುತ್ತೆ ತಾಯೀ.

(ಗೋಪಾಲಕೃಷ್ಣ ಶೆಟ್ರು ಹೆಂಡತಿಯೊಡನೆ)

ಗೋಪಾಲಕೃಷ್ಣ— ಹೌದೇ, ನಮ್ಮ ಅಳಿಯನಿಗೆ "ತೊಡಮನೆ" ಹೇಳುವುದು ಬೇಡ್ವೇ?

ಕನಕಾಕ್ಷಿ– ಬೇಕು, ನಮ್ಮ ಶಾಂತಿಯು ಸಹಾ ಹಾಗೇ ಅಂತಿದ್ಳು–ಹೇಳುವದಾದರೆ ಬರೇ ಸಡ್ಗೋಶಿ ಮಾಡಬಾರದನ್ನುತ್ತಾಳೆ ಹುಡುಗರೆ ಮರ್ಯಾದೆ ಎಲ್ಲಾ ಕೀಳಿಯಿಂದ್ಲೇ ಆಗ್ಬೇಕೊಂತ ಅವಳ ಮನಸ್ಸು.

ಗೋಪಾಲಕೃಷ್ಣ—ಹಾಗಾದರೆ ಅವಳ ಹತ್ತಿರವೇ ಕೇಳು–ಏನು, ಎಷ್ಟು ಅಂತ?

ಕನಕಾಕ್ಷಿ (ಶಾಂತಿಯೊಡನೆ)— ಏನು ಮಗಾ, ನಿನ್ನ ಗಂಡನಿಗೆ 'ತೊಡಮನೆ' ಹೇಳಬೇಕೆಂತ ನಿನ್ನ ತಂದೆಯವರು ಕೇಳುತ್ತಾರೆ–ಏನು ಮಾಡಬೇಕು?

ಶಾಂತಿ—ಒಂದು ಹದಿನೈದು ಪವನಾದರೂ ಕೊಡುವುದು ಬೇಡ್ವಾ? ಒಂದು ಒಳ್ಳೇ ಜರಿಶಾಲು ತೆಗೆದುಕೊಳ್ಳಲಿ–ಅವರೊಟ್ಟಿಗೆ ತುಂಬಾ ಜನಬಂದಾರು–ಊಟ ಟೀಟೆ ಗಡ್ಡು ಮಾಡಬೇಕಲ್ವಾ?

○ ○ ○ ○

(ಎರಡು ವರ್ಷಗಳ ನಂತರ)

ಕನಕಾಕ್ಷಿ (ಗಂಡನೊಡನೆ)—ನೋಡಿ, ನೆಗ್ಗಿನ ಗುತ್ತಿನಿಂದ ಏನೋ ಗುಸು ಗುಸು ವರ್ತಮಾನ ಎದ್ದಿದೆ–ನಮ್ಮ ಆಳು ಅಯಿತುಗೆ ಅವರ ಒಕ್ಲು ಕುಂಬ್ಳೆಲ ಸಿಕ್ಕಿದಂತೆ–ಮದ್ರಾಸಿನಿಂದ ಏನೋ ಭಯಂಕರ ಸುದ್ದಿ–ತ್ಯಾಂಪಶೆಟ್ರು ಹೆಂಡ್ತಿ ಸಮೇತ ಅವಸರದಿಂದ ಮದ್ರಾಸಿಗೆ ಹೊರಟಿರುವರಂತೆ

ಗೋಪಾಲಕೃಷ್ಣ—ಏನಂತೆ? ಅಯಿತು ನನ್ನೇ ಇಲ್ಲಿ ಕರೆ–(ಅಯಿತು ಬಂದ ಮೇಲೆ) ಇಲ್ಲಿ ಬಾ, ಅಯಿತು–ಏನು? ನೆಗ್ಗಿನ ಗುತ್ತಿನ ಕುಂಬ್ಳೆಲ ಏನು ಹೇಳಿದ?

ಅಯಿತು—ಮತ್ತೇನಿಲ್ಲ ಬುದ್ಧಿ, ತಮ್ಮ ಮದ್ರಾಸಿನ ಡಾಕ್ಟರ್ ಬಾವನ ಅಳಿಯನು ಬಾಸ್ಕರ ಶೆಟ್ರು ಏನೋ ಮಾಡ್ಕೊಂಡು ಜೀವಾ ಕಳ್ಕೊಂಡರಂತ ಸುದ್ದಿ ಬಂದಿದೆಯಂಬ್ರು.

ಗೋಪಾಲಕೃಷ್ಣ—ಏನೋ ಹಾಗಾಗಿರಿಕ್ಕು ಸಾಕು! ಆ ಹುಡುಗನ ತಂದೆ ತ್ಯಾಂಪುಶೆಟ್ರು ಇತ್ತಲಾಗೆ ನನಗೆ ಸಿಕ್ಕಿದ್ರು. ನಮ್ಮ ಡಾಕ್ಟರ್ ಭಾವನನ್ನೂ ನೀವನ್ನೂ ಬಹಳ ದೂರುತ್ತಿದ್ದರು. ಹುಡುಗಿ ಲೀಲೆದ್ದು ಆಭರಣ ಗೀಭರಣ ಎಲ್ಲ ತೆಗ್ದಿದ್ದ ಅಂತಲೂ, ಭಾವ ಮತ್ತು ಅವಳು, ತ್ಯಾಂಪುಶೆಟ್ರು ಒಮ್ಮೆ ಅಲ್ಲಿ ಹೋದಾಗ ಅವರ ಹತ್ತರ ಪ್ರಸ್ತಾಪ ಎತ್ತಿದಂತೆ. ಬಹುಶಃ ತ್ಯಾಂಪುಶೆಟ್ರು ಹುಡುಗನಿಗೆ ಚೋರುಮಾಡಿರಬೇಕು–ಹಾಗಾಗಿ ಎರಡೂ ಕಡೆಯಿಂದಲೂ ಹುಡುಗನಿಗೆ ವರಿಗೆ ಕಾಸು ಸಿಕ್ಕಲಿಲ್ಲ. ಕೆಲಸ ಬೇರೆ ಇಲ್ಲ. ದುರಾಚಾರ ಹೆಚ್ಚಾಯ್ತು. ದುರ್ನ ಗರ್ಜಿಯಿಂದ ಪಾರಾಗೋದಕ್ಕೆ ಪ್ರಾಣ ತೆಕ್ಕೊಂಡನೋ ಏನೋ! ಪಾಪ ಲೀಲೆ!

ಕನಕಾಕ್ಷಿ—ಪಾಪ ಲೀಲೆ! ಅಕ್ಕನ ಶೋಕ ಎಷ್ಟಿರಬೇಕು!

○ ○ ○ ○

(ಮೂರು ವರುಷಗಳ ಮೇಲೆ)

ಗೋಪಾಲಕೃಷ್ಣ (ಕನಕಾಕ್ಷಿಯೊಡನೆ)— ಥಾದ್ದಂತೆ! ಅವಳು ಶಾಂತಿ ಹೇಳುವುದು? ಅವಳ ಗಂಡನ ತಂದೆ ಕೇರಿಗೆ ವರುಷ ಒಂದಾಗಿಲ್ಲ. ಆ ತಂದೆ ಇಟ್ಟ ಆಸ್ತಿಯ ಮೇಲೆ ಮೊದಲೇ ಗುಟ್ಟನಲ್ಲಿ ಮಾಡಿದ್ದ ಸಾಲದ ವ್ಯಾಜ್ಯ ಒಂದು ಅದು ಏಲಂ ಆಗಿ ಹೋಯ್ತು. ಇವಳಿಗೆ ಹಾಕಿದ ಚಿನ್ನಾಭರಣ ತಿರುಗಿ ಕಣ್ಣಿಂದ ಕಾಣಲೇ ಇಲ್ಲ ವರದಕ್ಷಿಣೆಯ ಬಾಕಿ ಹಣಕ್ಕೆ ವಜಾಪಟ್ಟು ಮಾಡಿಕೊಂಡ್ರನ್ನು! ಮೂರು ಸಾವಿರ ಬಾಕಿಗೆ ಆರು ಸಾವಿರದ ಚಿನ್ನಾಭರಣಗಳೂ ಮುಳುಗಿಹೋದ್ವು. ಅವುಗಳ ಬಗ್ಗೆ ಮದ್ರಾಸಿನ ಭಾವನಿಗೆ ಇನ್ನೂ ಹಣ ಪೂರಾ ಸಂದಿಲ್ಲ. ಒಟ್ಟು ಲೆಕ್ಕ ಹಾಕಿದರೆ ಈ ನೆಂಟಸ್ತಿಕೆಯಿಂದಾಗಿ ಸೋರಿಹೋದ ಹಣ ಎಷ್ಟಾಯಿತು ಗೊತ್ತೇ! ಗುತ್ತು ಇನ್ನೆಷ್ಟು ದಿನ ಉಳ್ದೀತೂಂತಿ! ಹೀಗಿದ್ದೂ ನಾನು ಇನ್ನೇನು ಮಾಡಬೇಕಂತೆ? ಹಗ್ಗ ತೆಕ್ಕೊಳ್ಳಬೇಕಂತೆಯಾ?

ಕನಕಾಕ್ಷಿ—ಇದೇ ಕಡೇ ಸಾರಿ ಅವಳ ಗಂಡನಿಗೆ ಒಂದು ಸಾವಿರ ರೂಪಾಯಿಗೆ ಜಾಮಿನು ಹಾಕಬೇಕಂತೆ–ಇಲ್ಲದಿದ್ದರೆ ಜೈಲಿಗೇ ಹೋಕಬೇಕವನು–ಹ್ಯಾಗೂ ಆಯಿತು. ಇಷ್ಟು ಮಾಡಿ ಸ್ವಲ್ಪದಲ್ಲಿ ಬಿಡುವುದು ಯಾಕೆ?

ಗೋಪಾಲಕೃಷ್ಣ—ಆಯಿತು–ನಿನ್ನ ಹೆಸರಲ್ಲಿ ಸ್ವಲ್ಪ ಉಂಟಲ್ಲ ಇನ್ನು–ನೀನೇ ಒಂದು ದಸ್ಕತ್ತು ಹಾಕು–ಹುಡುಗಿ ಬೇಕಾದರೆ, ಮಾಡಬೇಕಪ್ಪಾ!

ಕನಕಾಕ್ಷಿ—ಆಯಿತು ನಾನು ಹಾಕುತ್ತೇನೆ–ನಿಮ್ಮದೂ ಬೇಕಂತೆ.

ಗೋಪಾಲಕೃಷ್ಣ – ಹಾಗಾದರೆ ಹಾಗೆ. ಒಂದು ಸಾವಿರ ರೂಪಾಯಿಗೆ ಎಷ್ಟು ಗುತ್ತುಗಳ ಜಾಮೀನು ಬೇಕಂತೆ ಬ್ಯಾಂಕಿನವರಿಗೆ! ಅಯ್ಯೋ! ಗುತ್ತುಗಳೆಲ್ಲ ಇಷ್ಟು ಹಗುರವಾಗಿ ಹೋದವಲ್ಲಾ! ನಮ್ಮ ಟೊಳ್ಳೆಲ್ಲಾ ಹೊರಗೆ ಬಿದ್ದಮೇಲೆ ಅವರು ಕೇಳೋದೂ ಸರಿಯೇ. ನಮ್ಮ ಹಿರಿಯರ ರಾಫ್, ಕಿರಿಯರ ದರ್ಬಾರು ಇವ್ರಗಳಿಂದ ಗುತ್ತೆಲ್ಲ ಗುಂಡಿ ಪಾಲಾಗೋದೇ ಸರಿ.

○ ○ ○ ○

(ಐದು ವರುಷಗಳ ನಂತರ)

ಗೋಪಾಲಕೃಷ್ಣ—ಆಯಿತಲ್ಲಾ! ಶಾಂತಿ ಮದುವೆ ನಾಟಕ ಮುಗೀತಲ್ಲಾ! ನಿನಗೆ ತಂದೆ ಕೊಟ್ಟದ್ದು ಹೋಯಿತು! ನಾನು ಕೊಟ್ಟದ್ದು ಉಳಿಯಲಿಲ್ಲ. ನಿನ್ನೆ ಸಿವಿಲ್ ಜಯಿಲಿಗೆ ಅಳಿಯನಾಯ ಹೋದ್ನಂತೆ–ಅಂತೂ ಇಂತೂ ಶಾಂತಿಗೆ ಮೇಲಿಂದ ಮೇಲೆ ಮೂರು ಹೆಣ್ಣಾಯಿತು. ಈಗ ಹೊಟ್ಟೇಲೊಂದು! ಈ ಜಂಜಾಲನ್ನು ಇನ್ನು ನಾವು ಹೊತ್ತರೆ ಸರಿ! ಶಾಂತಿ ಏನಂತ್ಲು ಈಗ?

ಕನಕಾಕ್ಷಿ— ಹೇಳುವುದು ಮಣ್ಣು–ಅದೆಲ್ಲಾ ನಮ್ಮ ಹಣೆಬರಾ! ಪೂರ್ವಜನ್ಮದ ಕರ್ಮ! ಯಾರೇನು ಮಾಡೋದು!

ಗೋಪಾಲಕೃಷ್ಣ— ಪೂರ್ವಜನ್ಮದ್ದಾ, ಈ ಜನ್ಮದ್ದಾ? ನಾವು ಆಕಾಶಕ್ಕೆ ಹಾರಿ ಕೈಕಾಲು ಮುರ್ಕೊಂಡೂ ಆ ಮೇಲೆ ಹಣಬರಾ ಎನ್ನೋದೇ ನಮ್ಮ ಹಣೆಬರಾ. ನಾನು ಎಲ್ಲಿಯಾದರೂ ಹೋತ್ತೆ. ನನಗೆ ತಡೆಯೋಕೆ ಸಾಧ್ಯವಿಲ್ಲ. ಊರು ನಗೋದೊಂದು; ಒಳಗಿಂದ ಪಶ್ಚಾತ್ತಾಪದ ಬೆಂಕಿ ಉರಿಯೋದೊಂದು! ಅಂದು ಭಾವ ಪಟ್ಟು ಹೆಗ್ಗಡೇರ ಮಾತು ನಾವು ಕೇಳ್ತಿದ್ರೆ ಹೀಗಾಗ್ತಿತ್ತಾ ನಮ್ಮ ಅವಸ್ಥೆ!

ಕನಕಾಕ್ಷಿ— ಹಾಂಗಾಂದ್ರೆ!

ಗೋಪಾಲಕೃಷ್ಣ—ಗಜೇಟೀಲಿ ಬಂದಿತ್ತು! ಫೋಟೋಗ್ರಾಫ್ ಬಿದ್ದಿತ್ತು! ಕೇಗೆ ಭಾರೀ ಬರೆದಿತ್ತು! ಯಾರ್ಗೊಂತಿ! ಶಂಬೀ ಗಂಡನ್ನು! ಈ ಜಿಲ್ಲೆಗೇ ಡಿಸ್ಟ್ರಿಕ್ಟ್ ಕಲೆಕ್ಟ್ರು ಆಗಿ ನೇಮಕ ಆಗಿದೆಯಂಬ್ರು.

ಕನಕಾಕ್ಷಿ—ಏನ್, ಏನ! ಶಂಬಿ ಗಂಡ ಅಂಗರ! ಕಲ್ಕೆಟ್ರು ಆದ್ನಾ! ಅಯ್ಯೋ ದೇವ್ರೇ, ನಾವೇಥಾ ತಪ್ಪು ಮಾಡಿದ್ವಿ!

○ ○ ○ ○

ಬರುವ ಲೇಖನ—"ಸಿಗರೇಟ್"

ಜರ್ಮನರ ದೇಶಪ್ರೇಮ!

ಜರ್ಮನಿಯ ರೀಚ್ ಸ್ಟ್ಯಾಂಗ್ ಬೇಂಕಿನ ಹಿಂದಿನ ಅಧ್ಯಕ್ಷರಾಗಿದ್ದ ಮಿ. ಸ್ಕಾಚ್ಟ್ ಇವರು ಅಖಿಲ ಹಿಂದುಸ್ಥಾನದಲ್ಲಿ ಸಂಚರಿಸುತ್ತಿದ್ದಾರಷ್ಟೆ. ವಿರಾಮವೇತನ ಪಡೆಯುತ್ತಿರುವ ಮುದುಕ; ವಿಶ್ರಾಂತಿಯನ್ನು ವಿನೋದದಲ್ಲಿ ಕಳೆಯೋಣವೆಂದು ಬಂದೆನಲ್ಲದೆ ಹಿಂದುಸ್ಥಾನದ ಸಂಚಾರದಲ್ಲಿ ಅನ್ಯೋದ್ದೇಶವೇನೂ ನನಗಿಲ್ಲಪ್ಪಾ–ಎಂದು ಹೇಳುತ್ತಾ ಹೋಗುತ್ತಿದ್ದಾರೆ. ಮೊನ್ನೆ ಮದ್ರಾಸಿಗೂ ಬಂದಿಳಿದರು. ಅವರು ಬಂದೊಡನೆ ಪತ್ರಿಕಾ ಪ್ರತಿನಿಧಿಗಳು ಕೆಲವರು ಫೋಟೋ ತೆಗೆಯುವರೆ ಕೆಮರಾದೊಡನೆ ಮುಂದರಿದರು. ಜರ್ಮನ್ ಧೊರೆ ಒಡನೆ ಆತುರದಿಂದ ಪ್ರಶ್ನಿಸಿದರು "ಅದು ಜರ್ಮನ್ ಕೆಮರವೆ?" ಆ ಕಡೆಗೆ ಬಗ್ಗಿ ಪ್ರಶ್ನಿಸಿದ ಧೊರೆಗೆ ಬೇರೆ ಉತ್ತರದ ಆಗತ್ಯವಿರಲಿಲ್ಲ; ಯಂತ್ರವೇ ತನ್ನ ಪರಿಚಯಮಾಡಿಕೊಟ್ಟಿತು. ಸ್ಕಾಚ್ಟ್ ಧೊರೆಯ ಮುಖವರಳಿತು!

ಜರ್ಮನರಿಗೆ ತಮ್ಮ ದೇಶದ ಸಾಮಾನುಗಳ ಮೇಲಿರುವ ಪ್ರೇಮವು ಇದರಿಂದ ವ್ಯಕ್ತವಾಗುತ್ತದೆ. ತನ್ನ ಪ್ರತಿಬಿಂಬವು ಜರ್ಮನ್ ಕೆಮರಾದಲ್ಲಿ ಮಾತ್ರ ಮೂಡುವಂತಹದು; ಜರ್ಮನರ ಫೋಟೋ ಅನ್ಯರಾಷ್ಟ್ರಗಳ ಕೆಮರದಲ್ಲಿ ಬೀಳುವದಿಲ್ಲವೆಂದೇನೂ ಇಲ್ಲ. ಆದರೆ ತನ್ನ ಪ್ರತಿಬಿಂಬವನ್ನಾದರೂ ಪರರಾಷ್ಟ್ರೀಯ ಯಂತ್ರಗಳೇಕೆ ಸೆರೆಹಿಡಿಯಬೇಕು? ಎಂಬಷ್ಟು ದೇಶಾಭಿಮಾನ ಜರ್ಮನರದು. ಸಾವಿರ ಮೈಲುದೂರಕ್ಕೆ ಹೋದಲ್ಲಿಯಾದರೂ ತಮ್ಮಲ್ಲಿಯ ಗುಂಡುಸೂಜಿಯೊಂದನ್ನು ಕಂಡಾಗ ಜರ್ಮನರು ಮಿತ್ರನೊಬ್ಬನನ್ನು ಕಂಡಷ್ಟು ಆನಂದಗೊಳ್ಳುವರು. ಇವುಗಳಿಂದೆಲ್ಲಾ ಹಿಂದೀಯರು ಕಲಿಯತಕ್ಕದ್ದಿದೆ. ಮಿ. ಸ್ಕಾಚ್ಟರಂಥವರಿಗೆ ಮದ್ರಾಸಿನಲ್ಲಿ ಕೂಡ ಜರ್ಮನಿ ಕೆಮರಾವೇ ಮುಂದೆಬರಬೇಕನ್ನಿಸಿತು. ಅದೇ ಮುಂದೆ ಬಂತು; ಜತೆಯಲ್ಲಿ ಜರ್ಮನರ ದೇಶಾಭಿಮಾನವೂ ಬರುವಾಗ ಹಿಂದೀಯರ ರಾಷ್ಟ್ರ ಪ್ರೇಮವೂ ಮದ್ರಾಸಿನ ಕೆಮರಾವಿನ್ದ ಮೂಲೆಯಲ್ಲಿಯೇ ಸೇರಿ ಹೋಗಿರಬೇಕು!

ಡಾ| ಸ್ಕಾಚ್ಟರ ಫೋಟೋ ಬೇರೆ ಕೆಮರಾದಲ್ಲಿಯೂ ಬರುತಿತ್ತು; ಬೇರೆ ಕೆಮರಾದ ಫೋಟೋ ಮಾತ್ರ ಸ್ಕಾಚ್ಟರ ಹೃದಯ ಕೆಮರಾದಲ್ಲಿ ಬರುತ್ತಿದ್ದಿಲ್ಲ!

ಬಾಲ ಸಾಹಿತ್ಯ ಮಂಡಲ

ಲಿಮಿಟೆಡ್, ಮಂಗಳೂರು

ನಮ್ಮ ಹೊಸ ಪುಸ್ತಕಗಳು:—

1. ನೂತನ ಬಾಲಗಣಿತ IIIನೇ ದರ್ಜೆಗೆ.
2. " IV " "
3. " V " "
4. " VI " " ಅಥವಾ Iನೇ ಫಾರ್ಮಿಗೆ.
5. " VII " " II "
6. " VIII " " III "

ಗ್ರಂಥಕರ್ತರು—ಶ್ರೀ ಉಳ್ಳಾಲ ಮಂಗೇಶರಾವ್, ಬಿ. ಎ., ಎಲ್. ಟಿ

7. ನೂತನ ಸಾಮಾನ್ಯ ಗಣಿತ—IVನೇ ಫಾರ್ಮಿಗೆ–ಶ್ರೀ. ಬಿ. ಭುಜಂಗರಾವ್, ಬಿ. ಎ. (ವಿದ್ವಾನ್).
8. ಭಾರತದ ಇತಿಹಾಸ, VIIIನೇ ದರ್ಜೆಗೆ ಅಥವಾ IIIನೇ ಫಾರ್ಮಿಗೆ.
9. Do. IVನೇ ಫಾರ್ಮಿಗೆ.

ಈ ಮೇಲಿನ ಎಲ್ಲಾ ಪುಸ್ತಕಗಳು ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಕ್ಲಾಸು ಉಪಯೋಗಕ್ಕೆ ಮಂಜೂರಾಗಿವೆ. (Vide consolidated list dated 2nd may 1939, pages 117, 155, 157 and 159 of Fort St. George Gazette Supplement.)

BALASAHITYA MANDALA LTD.

MANGALORE, S. INDIA.

ಕೇವಲ ಧರ್ಮಾರ್ಥ!

ಈ ಜಾಹೀರಾತಿನ ಕೂಪನನ್ನು ತರುವವರಿಗೆ ಅವರ ಫೋಟೋವನ್ನು ಧರ್ಮಾರ್ಥವಾಗಿ ತೆಗೆದುಕೊಡಲಾಗುವುದು.

ತ್ವರೆ ಮಾಡಿರಿ! ಬೊಂಬಾಯಿ ಪಟ್ಟಣಿಗರೆ ತ್ವರೆ ಮಾಡಿರಿ!!

● ಈ ನಮ್ಮ ಫೋಟೋವನ್ನು ಎನ್‌ಲಾರ್ಜ್‌ಮೆಂಟಿಗೆ ಬರೇ ರೂ. 1/. ಮಾತ್ರ. (ಸೈಜ್ 6"x8").

ಹೊರಗಿನವರು ಈ ಕೂಪನಿನೊಂದಿಗೆ ತಮ್ಮ ಫೋಟೋ ಕಳುಹಿಸಿದರೆ ಅವನ್ನು 6'x8' ಸೈಜಿನಲ್ಲಿ ರೂ. 2-8-0ಕ್ಕೆ ಎನ್‌ಲಾರ್ಜ ಮಾಡಿಕೊಡಲಾಗುವುದು. 16x'20'ರ ದೊಡ್ಡ ಸೈಜಿಗೆ ರೂ. 5 ಮಾತ್ರ. ನಮ್ಮ ಆಫೀಸು ಸಮಯ ಬೆಳಿಗ್ಗೆ 9ರಿಂದ ಸಂಜೆ 7, ಆದಿತ್ಯವಾರ ಬೆಳಿಗ್ಗೆ ೧೦ರಿಂದ ಸಂಜೆ ೪ ಗಂಟೆ ತನಕ

ಕೆ. ಎಚ್. ಪಥಕ್

276, ಸೂರ್ಯಮಹಾಲ್ ಗಿರ್ಗಾಂವ್ ರೋಡು, ಬೊಂಬಾಯಿ 14 | ರೋಯಲ್ ಆರ್ಟ್ ಸ್ಟುಡಿಯೋ, 183 ಹೋರ್ನ್ಬಿ ರೋಡು, ಬೊಂಬಾಯಿ 14

WANTD: 80 candidates of both sexes who after expert training as film artistes and technicians are prepared to work for the College Film Company for two years on decent salary. Free hostel seat and other benefits. Illustrated Art Prospectus on 5 annas posatge. Prabhat Movietone College, Bombay 11

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಪ್ಪರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್

ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I **ಶೋಧನ ಗುಣ** —ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು

II **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು

III **ಸುಖಸೇವನ.**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು ಕ್ರಯ ಬಾಟ್ಲಿ 1ಕ್ಕೆ ರೂ 2-0 0

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ

ಮೈಸೂರು ಸ್ಟೇಟಿನ ಏಜಂಟರು – ಶ್ರೀ ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ನೇಕಡ 5¼ಯ ವರಗಿನ ಬಡ್ಡಿಯಲ್ಲಿಯೂ, ಸೇವಿಂಗ್ ಬ್ಯಾಂಕ್ ನೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R Punja, ಯಂ. ಆರ್. ಪೂಂಜ,

President & Manager, ಪ್ರಸಿಡೆಂಟ್ ಮತ್ತು ಮೆನೇಜರ್

DAIMONDS! DAIMONDS!

K R. K. SHET

Opposite Govt College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಜುನ್ನಾತ (first quality, selected) ಎವ್ವೆಸ್ತಿ ಡಮ್ನಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟೆಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ ಇವರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್,

ಗವರ್ನ್‌ಮೆಂಟ್ ಕೋಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ

ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,

Hampankatte, **MANGALORE**

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ ಆರೆಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು ಬೆಲೆ ಸೀಸೆ 1ಕ್ಕೆ 12 ಆಣೆ, ಟಪಾಲು ಖರ್ಚು ಬೇರೆ

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,

ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ.**

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಡುನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ ಬೆಲೆ 1—8—0

ಜೀವನಿ ಬಹಿಷ್ಟೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತು ಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ ಬೆಲೆ 1—0—0

ನಮ್ಮ ರಿಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು "ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ ಅಗತ್ಯವಾಗಿ ಇರಲೇಬೇಕಾದ್ದು

ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು "ಸದ್ವೈದ್ಯಶಾಲಾ,

ಬ್ರಾಂಚ್—**ಮಂಗಳೂರು.**

ನಿಮ್ಮ ಇಚ್ಛೆಯು ನೆರವೇರುವದು.

ಯಾವ ವಿಷಯದಲ್ಲಿ ನೀವು ನಿರಾಶರಾಗಿದ್ದೀರೋ ಅಂತಹ ವಿಷಯಗಳಲ್ಲಿ ನಿಮ್ಮ ಅಭೀಷ್ಟವನ್ನು ಸಾಧಿಸಲಿಕ್ಕೆ ನಮ್ಮ ವಶೀಕರಣಯಂತ್ರವನ್ನು ತರಿಸಿಕೊಳ್ಳಿರಿ

ಈ ಯಂತ್ರವನ್ನು ನಿಮ್ಮ ವಶ ಇರಿಸಿಕೊಂಡು ನಿಮಗೆ ಆಗಬೇಕಾದ ವಿಷಯವನ್ನು ಮನಸ್ಸಿನಲ್ಲಿ ಧ್ಯಾನಿಸಿದರೆ ನಿಜವಾಗಿಯೂ ನಿಮ್ಮ ಅಭಿಲಾಷೆಯು ಪೂರೈಸುವದು.

ಸೂರ್ಯನು ಪಶ್ಚಿಮದಲ್ಲಿ ಉದಯಿಸಿದರೂ ಈ ಯಂತ್ರವು ಎಂದಿಗೂ ನಿರರ್ಥಕವಾಗುವದಿಲ್ಲ. ಅತಿಪ್ರಯಾಸದಿಂದ ಈ ಯಂತ್ರವನ್ನು ತಯಾರುಮಾಡಿದೆ

ಯಂತ್ರ 1ಕ್ಕೆ ರೂ. 3-4-0 ವಿದೇಶಕ್ಕೆ 5 ಶಿಲಿಂಗ್ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ಅಮೇರಿಕನ್ ಮೆಸ್ಮೆರಿಸಮ್ ಹೌಸ್ **American Mismerism House**

ಪೋ ಬಾ ನಂ 27 (N Y U) P B No 27(N Y U)

ಅಮೃತಸರ (ಇಂಡಿಯಾ) Amritsar (India)

Rev. Fr. P. W. Farias,

ST. PAUL'S CHURCH,
Bolkunje Post, S. K.
Dated 4th January 1939.

To

THE JOINT MANAGERS,
The C. P. C. Co. Ltd., MANGALORE.

SIR

I thank you most sincerely for the promptness with which you arranged to take us to Mangalore and back during the grand occasion of the Diocesan Encharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the congress.

The glorious success of our congress is also due to your exertion in putting up the various lights some of which I hear were done voluntarily.

May the blessings of the Almighty fall on you all and may you be able to do much good to the public.

Renewing my thanks,
I remain,
Yours sincerely,
(*Sd.*) P. W. Farias.

To
THE JO NT MANAGERS,
THE COMBINED BOOKING AGENCY,
MANGALORE.

Sri Parshwanathaswamy
Panchakalyana Pooja Mahosthavam
VENOOR (S. Kanara 1939).

Dear Sirs,

Please permit us to express our thanks on behalf of the above committee for the efficient service rendered by your Combined Booking Agency staff at Venoor to the visitors of the Panchakalyana Pooja Mahosthamam celebrations held this year.

Our thanks are also due to Moodabidre Booking Clerk Mr. B Krishtnayya and also his other mates and Mr. Rughavendra Bhandary who was specially come down from Mangalore to see the needs of and comforts of the travelling Public.

Thanking you once again,
We remain,
Yours faithfully,
(*Sd.*) **M. Jagathpal,**
(*Sd.*) **M Pachappa Shetty,**
VENOOR, (*Sd.* in Canarese) **Anantharaju Shetty,**
Dated 6-2-'39. (Sd.) **B Chandappa Indra,**
(*Secretary, P. M. Committee*)
Members, Panchakalayana Mahosthawam Committee.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	3	0	0
ಚಂದ್ರಗುಪ್ತ ಚಕ್ರವರ್ತಿ	1	0	0
Goutama Budda	0	8	0
भगवद्गीता	0	2	0
ಮಧುವನ	1	8	0
ಒಂದೇ ತಿಂಗಳಲ್ಲಿ ಇಂಗ್ಲಿಷ್	0	8	0
ಎರಡೇ ವಾರಗಳಲ್ಲಿ ಓದುಬರಹ	0	1	0
ಗೀತೆಯ ಕೈಗನ್ನಡಿ	0	4	0
ಭಗವದ್ಗೀತೆ	0	2	0
ತುಳು ವ್ಯಾಕರಣ	0	8	0
ಸಾಮುದ್ರಿಕ ಶಾಸ್ತ್ರ	0	8	0
ಸತ್ಯನಾರಾಯಣ ಕತೆ	0	8	0
ಪುರಂದರದಾಸರ ಪದಗಳು ಭಾಗ ೧	0	4	0
,, ಭಾಗ ೨	0	4	0
,, ಭಾಗ ೩	0	4	0
ತುಳುನಾಡ್ ತಿಲಕ ಪಂಚಾಂಗ	0	1	0
ವೈಜಯಂತೀ ಪಂಚಾಂಗ	0	2	6
ಕುಕ್ಕುಟ ಪಂಚಾಂಗ	0	1	0

ಇತ್ಯಾದಿ ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors:*—**GENERAL SUPPLIES Ltd, Udipi**).

Supply Agency Limited.

(BANKERS.)

ESTD] **UDIPI** [1933

Authorised Capital Rs. 1,00,000
Subscribed & Paid up Rs. 30,760

RATE OF INTEREST FOR FIXED DEPOSITS.

3 to 6 Months 4% p. a.
7 to 11 ,, 5% ,,
12 to 18 ,, 6% ,,

SPECIAL RATE FOR LONG TERM DEPOSITS ON APPLICATION.

Current Accounts are accepted at 3% p. a.

JOIN ANY OF THE SCHEMES

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

PRINTED BY S. S. KARANTH AT THE THULUNAD PRESS, UDIPI
and Published by K. H SHETTY at "NAVAYUGA" OFFICE, UDIPI, South India.

Registered No. M. 3618

NAVAYUGA

ನವಯುಗ

8-6-1939

— ವಿದ್ಯಾರ್ಥಿಗಳು —

ಬಿಡಿ ಬಿಡಿ ಕುಣಿಯಬೇಕೆ?
ಕುಣಿ ಕುಣಿದು ಬಿಡಬೇಕೆ?

ಹಾಗಿದ್ದರೆ—

ಮುಚ್ಚಿದರೆ ಮುಗುಳಂತಿರುವ
ಬಿಚ್ಚಿದರೆ ಅರಳಂತಿರುವ

ಮುಗುಳು

ಬರೆದವರು: ಕೆ. ಹೊನ್ನಯ್ಯ ಶೆಟ್ಟಿ.
ಪದ್ಯಪುಸ್ತಕವನ್ನು ಅವರ ಕೈಗೆ ಕೊಡಿರಿ.

ಟೆಕ್ಸ್ಟಬುಕ್ ಕಮಿಟಿಯಿಂದ ಶಾಲೆಗಳ
ಉಪಯೋಗಾರ್ಥವಾಗಿ ಮಂಜೂರಾಗಿದೆ.

ಮುಗುಳಿನಲ್ಲಿ ಅಭಿನಯಕ್ಕೆ, ಕೋಲಾಟಕ್ಕೆ,
ನರ್ತನಕ್ಕೆ ಅನುಕೂಲವಾದ ಪದ್ಯಗಳೂ ಇವೆ.

ಬೆಲೆ: ೦—೨—೬ ಮಾತ್ರ.

ಮುಗುಳು



ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ.



ಕರಾಮಾತೀ ದರ್ಪಣ

ಇದೊಂದು ಉಚ್ಚ ತರದ ಕನ್ನಡಿ. ಯಾವ ವಯಸ್ಸಿನವರೂ ಇದನ್ನು ನೋಡಬಹುದು. ಕದ್ದು ಹೋದ ಮಾಲು ಎಲ್ಲಿದೆ? ಕಾಯಿಲೆ ಗುಣವಾದೀತೆ? ಇಲ್ಲವೆ? ದುಃಖ ಪರಿಹಾರ ಮಾರ್ಗ ಯಾವುದು? ಹೂಳಿಟ್ಟ ನಿಧಿ ಎಲ್ಲಿದೆ? ಕಷ್ಟದ ಕೆಲಸ ಕೈಗೂಡುವುದೆ? ಪ್ರೇಮ ಕಾರ್ಯ. ಪರೀಕ್ಷೆಗಳು, ಕೋರ್ಟು ವ್ಯವಹಾರಾದಿಗಳಲ್ಲಿ ವಿಜಯ ದೊರೆಯುವುದೇ? ಎಂಬುದನ್ನೆಲ್ಲ ಈ ಕನ್ನಡಿಯಿಂದ ತಿಳಿಯಬಹುದು. ಸ್ವರ್ಗಸ್ಥ ಮಾತಾಪಿತೃ, ಪುತ್ರಕಳತ್ರ, ಮಿತ್ರಬಾಂಧವರುಗಳೆಲ್ಲರ ಭೇಟಿಮಾಡಬಹುದು. ನೀವು ನೋಡದ, ಸ್ವಪ್ನದಲ್ಲಿಯೂ ನೋಡಲಸಾಧ್ಯವಾದವರನ್ನು ಸಹ ನೋಡಬಹುದು ಈ ಕನ್ನಡಿಯಲ್ಲಿ! ಬೆಲೆ ರೂ ೨—೮—೦

ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಇಂಗ್ಲಿಷಿನಲ್ಲೇ ಬರೆಯಿರಿ.

ದೊರೆಯುವ ಸ್ಥಳ:—

ಅಮೇರಿಕನ್ ಮೆಸ್ಮೆರಿಸಂ ಹೌಸ್,	AMERICAN MISMERISUM HOUSE,
ಪೋಸ್ಟು ಬಾಕ್ಸ್ ನಂ ೨೭,	Post Box No. 27
(N.Y.U.) ಅಮೃತಸರ [ಇಂಡಿಯಾ]	(N.Y.U.) Amritsar (INDIA)

೧೦ ಗಡಿಯಾರಗಳು ಬರೇ ೩॥ ರೂಪಾಯಿಗೆ



ಎಲ್ಲಾ ಜಮ್ಮೀ ಕೈಗಡಿಯಾರಗಳು, ೩ ಜಮ್ಮೀ ಕಿಸೆಗಡಿಯಾರಗಳು, ಹತ್ತು ಒಂದು ಗಟ್ಟಿಯುಂತ್ರದ ಸರಿ ಸಮಯ ತೋರಿಸುವ ಜರ್ಮನ ಟೈಂಪೀಸ, ೩೦ ಗಂಟೆಗೊಮ್ಮೆ ಕೀ, ೧೦ವರ್ಷದ ಗ್ಯಾರಂಟಿ ಈ ಗಡಿಯಾರವನ್ನು ವಿಲಾಯಿತಿಯಿಂದ ಹೆಚ್ಚು ಸಂಖ್ಯೆಯಲ್ಲಿ ತರಿಸಿದ್ದೇವೆ. ಈ ರಿಯಾಯ ತಿದರದಲ್ಲಿ ಕೇವಲ ೧೨,೦೦೦ ಗಡಿಯಾರಗಳನ್ನು ಮಾತ್ರವೇ ಮಾರುವುದು. ತ್ವರೆ ಮಾಡಿರಿ! ಸಂದರ್ಭ ತಪ್ಪಿಹೋದೀತು. ಇದರೊಂದಿಗೆ ೧೪ ಕ್ಯಾರೆಟ್ ರೋಲ್ಡ್‌ಗೋಲ್ಡ್ ಸಬ್ಜಿನ ಫೌಂಟನ್ ಪೆನು ಒಂದು, ದೃಷ್ಟಿಚಶ್ಮ ಒಂದು, ಮುತ್ತಿನ ಹಾರ ಒಂದು—ಇಷ್ಟು ಉಚಿತ, ಅಂಚೆವೆಚ್ಚ ಬೇರೆ. ಅತೃಪ್ತಿಯಾದರೆ ಹಣ ಹಿಂದೆ. ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ.

ದೊರೆಯುವ ಸ್ಥಳ:—

ಜರ್ಮನ್ ವಾಚ್ ಕಂಪೆನಿ,	German Watch Co.
ಪೋಸ್ಟು ಬಾಕ್ಸ್ ನಂ ೨೭	P. B. No. 27 (N.Y.U.)
(N.Y.U.) ಅಮೃತಸರ [ಇಂಡಿಯಾ]	AMRITSAR, (India),

—•— ಬಲು ಸುಲಭ ದರದಲ್ಲಿ —•—

● ಉತ್ಕೃಷ್ಟ ಊಟ ಉಪಹಾರಾದಿಗಳಿಗಾಗಿ ಇತ್ತ ಗಮನಿಸಿರಿ!

● ನಾವು ನಮ್ಮನ್ನೇ ವಿಶೇಷವಾಗಿ ಪ್ರಶಂಸಿಸಿ ಕೊಳ್ಳಬಾರದಷ್ಟೆ!

ಲಕ್ಷ್ಮೀ ನಿವಾಸ
ಹಿಂದೂ ಹೋಟೇಲು

(ಸ್ಥಾಪನೆ 1926)

ವಿಠಲ್ ಭಾಯಿ ಪಟೇಲ್ ರೋಡ್, ಗಿರ್ಗಾಂ, ಮುಂಬಯಿ.

Lakshmi Nivas Hindu Hotel

VITTALBHAI PATHEL ROAD,

GIRGAUM -- — BOMBAY.

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಬಹಳ ಸುಲಭ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು

ದಿಗಂಬರರಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸು ಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—T. V. ದೇವಕರ್ ಎಂಡ್ ಕಂಪೆನಿ,

ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co, *Nambulier Street*, G. T. MADRAS.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಮೃದ್ವಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಖ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಕಾಶೀಮಠದ ಕಟ್ಟೋಣ, ಉಡುಪಿ

ಬ್ರಾಂಚ್:—ಹೂವಮಾರ್ಕೆಟಿನ ಬಳಿ, ಮಂಗಳೂರು.

ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯ ವೆಂಬಂತೆ ಸಾಮಾನುಗಳು ಬಂದುಗಟ್ಟಲೆ ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

ESTD. 1921
FOUNDER
Sri. A. B. SHETTY, M.L.A.
Parliamentary Secretary, Govt of Madras.
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೮-೬-೧೯೩೯ | Vol. XVIII
ಸಂಚಿಕೆ ೪೦ | Udipi, Thursday 8—6—1939 | No. 40

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ. ೩—೪—೦
೬ ತಿಂಗಳಿಗೆ ರೂ. ೧—೧೨—೦.
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಮಾಚಾರಸಮಾವಲೋಕನ

ಚೇಂಬರ್ಲೀನರ ಕಿವಿಗೊಂದು ಶಂಖನಾದ!

ಕವಿ ಠಾಗೋರರೂ ಸಾಮ್ರಾಜ್ಯದಿನದಲ್ಲಿ ಬ್ರಾಡ್‌ಕಾಸ್ಟ್ ಸಂದೇಶವಿತ್ತರು. ಅವರ ಸಂದೇಶವು ಲಂಡನಿನಲ್ಲಿ ಬಹಳವಾಗಿ ಶ್ಲಾಘಿಸಲ್ಪಟ್ಟಿತಂತೆ; ಅದು ಬಂಗಾಳೀ ಕವಿತೆಯ ಶೈಲಿಯಲ್ಲಿತ್ತಂತೆ. ಕವೀಂದ್ರರು ತನ್ನ ಸಂದೇಶದಲ್ಲಿ ಮಾನವಸ್ವಾತಂತ್ರ್ಯಕ್ಕಾಗಿ ಹೋರಾಡುವ ಅಗತ್ಯವನ್ನು ಸೊಗಸಾಗಿಹಾಡಿತೋರಿಸಿದ್ದರು. ಸಂದೇಶವು ಈ ಕೆಳಗಿನ ಮಾತುಗಳೊಡನೆ ಅಂತ್ಯಗೊಂಡಿತ್ತು. "ಸ್ವರಕ್ಷಣೆಯ ಸಲುವಾಗಿ ಸತ್ರಾಣಿಗಳೆದಿರು ತ್ಯಾಗಮಾಡುವ ದೌರ್ಬಲ್ಯವನ್ನಂಗೀಕರಿಸಬೇಡಿ."

ಒಂದೆಡೆಯಿಂದ ಫೇಸಿಸ್ಟರ ರಣಕಹಳೆ, ಇನ್ನೊಂದೆಡೆಯಿಂದ ರವೀಂದ್ರರಂತಹ ಅಂತರಾಷ್ಟ್ರೀಯ ವ್ಯಕ್ತಿಗಳ ಶಂಖನಾದ! ಮುದಿ ಚೇಂಬರ್ಲೀನರು ಪರಿಸ್ಥಿತಿಯ ಕಡೆಗೆ ಕಣ್ಣು ಮುಚ್ಚಿದರೂ ಈ ಕಹಳೆಗಳ ಕಡೆಗೆ ಕಿವಿ ಮುಚ್ಚಿಕೊಂಡಿರಲು ಸಾಧ್ಯವೆ?

ಆತ್ಮಹತ್ಯೆಯ ಹೊಸ ದಾಖಲೆ!

ಆತ್ಮಹತ್ಯೆಗಳ ಹಲವಾರು ಕಾರಣಗಳನ್ನು ಪ್ರಪಂಚವು ಈ ವರೆಗೆ ಕಂಡಿದೆ. ತೀರಾ ವಿಚಿತ್ರವಾದ ಮತ್ತೊಂದು ಮಾದರಿಯು ಗಯಾದ ಬಳಿ ಪ್ರದರ್ಶಿಸಲ್ಪಟ್ಟಿತು. ದರ್ಭೇಶ್ವರ ಸಿಂಗನೆಂಬ ಕಾಂಗ್ರೆಸ್ ಕೃಷಿಕ ಕೆಲಸಗಾರನೊಬ್ಬನು ಕಾಂಗ್ರೆಸಿನ ಸದ್ಯದ ಧೋರಣೆಯಿಂದ ಅತೃಪ್ತಿ ಹೊಂದಿ ನಿರಾಶೆಯಿಂದ ಪ್ರಾಣ ಕಳಕೊಳ್ಳಲು ಪ್ರಯತ್ನಿಸಿದ; ಆದರಲ್ಲಿ ಕೂಡ ಅಪಜಯ ಹೊಂದಿ ಸಬ್ ಡಿವಿಜನಲ್ ಆಫೀಸರರ ಮುಂದೆ ಹಾಜರು ಮಾಡಲ್ಪಟ್ಟಾಗ ತನ್ನ ಹೃದಯದ ಬೇಗೆಯನ್ನು ಅಲ್ಲಿ ಬಿಚ್ಚಿ ತೋರಿಸಿದ. ಅವನಿಗೀಗ 25 ರೂ. ಜುಲ್ಮಾನೆ, ತಪ್ಪಿದರೆ 2 ತಿಂಗಳ ಸಾದಾ ಸಜೆ ವಿಧಿಸಲ್ಪಟ್ಟಿದೆ. ಇಂತಹ ಆತ್ಮಹತ್ಯ ಪ್ರಯತ್ನಗಳು ಗೊತ್ತುಗುರಿಯಾವುದು? ಕಾಂಗ್ರೆಸಿನ ಧೋರಣೆಯ ಬದಲಾವಣೆಯಾಗಬೇಕಾದರೆ ಆ ಕಾರ್ಯದ ತೊಡಕುಗಳೇನಿವೆಯೋ ಅವನ್ನು ಚಿಕಿತ್ಸೆಗೆಯಬೇಕು; ಜೀವ ತೆಗೆದುಕೊಳ್ಳುವವರ ಜೀವವೇ ಆ ತೊಡಕಾಗಿರುವದೇನು?

ಡಾ| ಘುಂಕರ ಶಂಖ

ಜರ್ಮನಿಯ ರೀಚ್ಸ್ ಬೇಂಕಿನ ಮಾಜಿ ಅಧ್ಯಕ್ಷ ಡಾ| ಸ್ಚಾಟರು ಹಿಂದುಸ್ಥಾನದಲ್ಲಿ ತಿರುಗುವಾಗಲೆಲ್ಲಾ 'ನಾನು ವಿಹಾರಾರ್ಥಕ್ಕಾಗಿ ಬಂದವ; ನನ್ನೊಡನೆ ಬೇರೇಕೆ ಕೇಳುವಿರಿ?' ಎನ್ನುತ್ತಿದ್ದಾರಲ್ಲಾ! ಅವರ ಸಂಚಾರದ ಗುಟ್ಟು ಈಗ ಹೊರಬಿದ್ದಿದೆ. ಜರ್ಮನಿಯ ಹೆರ್ ಘುಂಕರು ಡಾ| ಸ್ಚಾಟರ ಚಟುವಟಿಕೆಯೇನೂ ಸಾಕಾಗಲಿಲ್ಲವೆಂದು ತೀರಾ ನಿರಾಶೆಸೂಚಿಸಿದ್ದಾರೆ; ಭಾರತದ ಮಾರ್ಕೇಟುಗಳಲ್ಲಿ ಜರ್ಮನಿ ಸಾಮಾನುಗಳನ್ನು ತುಂಬಿಸುವ ಪ್ರಯತ್ನವನ್ನು ಸಾಕಷ್ಟು ತೃಪ್ತಿಕರವಾಗಿ ಡಾ| ಸ್ಚಾಟರು ಮಾಡಲಿಲ್ಲವೆಂದು ಅವರ ವಿಮರ್ಶೆ. ಶ್ರೀಗಳಾದ ಭುಲಾಭಾಯಿ ಸತ್ಯಮೂರ್ತಿ, ಜಿನ್ನಾ, ಸಾವರ್ಕರ್, ಭಾಯಿ ಪರಮಾನಂದ, ಸುಭಾಸ್ ಬೋಸ್, ನರಿಮನ್ ಮೊದಲಾದವರೊಡನೆ ಸಂಪರ್ಕ ಬೆಳೆಸಲು ಡಾ| ಸ್ಚಾಟರು ತಪ್ಪಿದುದರ ಕಾರಣವೇನೆಂದು ಅವರನ್ನೀಗ ಪ್ರಶ್ನಿಸಲಾಗಿದೆಯಂತೆ. ಗಾಂಧಿ ಮತ್ತು ನೆಹರುಗಳೊಡನೆ ಎಂದೂ ಸಂಭಾಷಿಸಲು ಹೋಗಬೇಡಿರೆಂದು ಮೊದಲೇ ಎಚ್ಚರಿಕೆ ಕೊಡಲ್ಪಟ್ಟಿತ್ತಂತೆ.

ಜರ್ಮನಿ ಸಾಮಾನುಗಳ ಮಾತು ಬಿಡಿ; ಡಾ| ಸ್ಚಾಟರಂತಹ ಜರ್ಮನ್ ಜನರು ಹಿಂದುಸ್ಥಾನದಲ್ಲಿ ಸಂಚಾರಕ್ಕಿಳಿಯುವಾಗ ಹಿಂದುಮುಂದು ನೋಡಿಕೊಳ್ಳಬೇಕಾಗುತ್ತದೆ. ಆದ್ದರಿಂದಲೇ ಡಾ| ಸ್ಚಾಟರು 'ನಾನು ಕೇವಲ ವಿಹಾರಾರ್ಥಿ' ಎಂಬ ಸೊಲ್ಲನ್ನು ಬಾಯಿಪಾಠ ಮಾಡಿಕೊಂಡು ಬಂದಿದ್ದರು; ಸಂದರ್ಭಾನುಸಾರ ಜರ್ಮನಿ ಭಾರತದ ಸಂಬಂಧವನ್ನೂ ಪ್ರೋತ್ಸಾಹಿಸಿ ಮಾತಾಡಿದ್ದರು. ಜರ್ಮನಿ ವಸ್ತುಗಳನ್ನಾದರೂ ಇದೇ ರೀತಿ ಅಡ್ಡಹಾದಿಯಿಂದಲೇ ಭಾರತದೊಳಗೆ ಹೊಗಿಸತಕ್ಕದ್ದೆಂದು ಡಾ| ಸ್ಚಾಟರಿಗಲ್ಲದೆ ಹೆರ್ ಘುಂಕರಿಗೇನು ಗೊತ್ತು?

ನೆಹರುಗಳು ಫೆಡರಲ್ ಮುಖ್ಯ ಮಂತ್ರಿಯಾಗುವರಂತೆ!

ಅಲಿಘರ್ ವಿಶ್ವವಿದ್ಯಾಲಯದ ವೈಸ್ ಚಾನ್ಸಲರ್ ಸರ್. ಸಿಯಾದ್ದಿನ್ ಅಹಮ್ಮದರು ವಿನೋದಜನಕ ವಾರ್ತೆಯೊಂದನ್ನು ಹೊರಗೆಡಹಿದ್ದಾರೆ. "ಜವಾಹಿರಲಾಲರು ಫೆಡರೇಶನಿನ ಮುಖ್ಯ ಮಂತ್ರಿಪದವನ್ನು ಅಂಗೀಕರಿಸಲು ಕೇಳಲ್ಪಟ್ಟಿರುವರು; ಮತ್ತು ಅವರದಕ್ಕೊಪ್ಪಿರುವರು ಎಂಬುದು ಸರ್ವವಿದಿತವಾಗಿರುವ ಒಂದು ಗುಟ್ಟು. ಕಮ್ಯೂನಿಸಮ್ ಪಕ್ಷದ ಮುಂಭಾಗದಿಂದ ವಿಧಾಯಕ ರೀತಿಗೆ ಮತ್ತು ಬೇಜವಾಬ್ದಾರೀ ವರ್ತನೆಯಿಂದ ಜವಾಬ್ದಾರೀ ನಡತೆಯ ಕಡೆಗೆ, ಪಂಡಿತರು ಇತ್ತೀಚೆಗೆ ರೂಪಾಂತರ ಹೊಂದಿರುವದನ್ನು ನೋಡುವಾಗ ಈ ವಾರ್ತೆ ನಿಜವೆಂದು ಕಾಣುತ್ತದೆ" ಎಂದು ಸರ್. ಸಿಯಾದ್ದೀನರ ಆಲಾಪ! ವಿಲಕ್ಷಣ ಸ್ವಪ್ನಗಳ ಸ್ಪರ್ಧೆಯೇರ್ಪಡಿಸಿದಲ್ಲಿ ಸರ್. ಸಿಯಾದ್ದೀನರ ಸ್ವಪ್ನವು ಬಹುಮಾನ ಪಡೆಯುವದರಲ್ಲಿ ಸಂದೇಹವಿಲ್ಲ!

ಪಂಡಿತರು ಖಂಡಿಸಿದರು

ಮೇಲಿನ ವಾದವ ಕುರಿತು ತಿರಸ್ಕಾರ ಸೂಚಿಸುತ್ತಾ ಪಂಡಿತ ನೆಹರುಗಳನ್ನುತ್ತಾರೆ—"ಸರ್ ಸಿಯಾದ್ದೀನ್ ಅಹಮ್ಮದರಂತಹ ಜವಾಬ್ದಾರಿಯನ್ನರಿತ ವ್ಯಕ್ತಿಗಳು ಇಂತಹ ಗಾಳಿ ಮಾತನ್ನಾಡುವದು ಆಶ್ಚರ್ಯವೇ ಸರಿ. ಈ ವಾದಕ್ಕೆ ಆಧಾರವೇನಾದರೂ ಇದ್ದರೆ ಅವರು ಅಗತ್ಯವಾಗಿ ತೋರಿಸಬೇಕು. ಸರ್ ಸಿಯಾದ್ದಿನರಿಗೆ ಸಾರ್ವಜನಿಕ ಜೀವನವೆಂದರೆ ಧ್ಯೇಯ, ನ್ಯಾಯ ಮೊದಲಾದುವನ್ನು ಮಾರಿ ಪಡೆಯುಕೊಳ್ಳುವ ಮಾರ್ಕೆಟಿನಂತೆ ತೋರುತ್ತಿರಬಹುದು. ಆದರೆ ಅವರೀ ವಿದ್ಯೆಯನ್ನು ಕಲಿಸಿದವರ ಕಡೆಗೇನೇ ಉಪಯೋಗಿಸಬೇಕಲ್ಲದೆ ಹೊರಗಿನವರ ಮೇಲೆ ಇಂತಹ ಅವಿವೇಕಪೂರ್ಣ ಅಸತ್ಯವನ್ನು ಚೆಲ್ಲಬಾರದೆಂದು ನಾನವರನ್ನು ಬೇಡುತ್ತೇನೆ."

ನೆಹರುಗಳಿಗೆ ಫೆಡರೇಶನಿನ ಮುಖ್ಯ ಮಂತ್ರಿಪದವಿ ಬೇಡವಾದಲ್ಲಿ ಬಿಡಲಿ! ಅವರ ಹೆಸರನ್ನು ಮಂತ್ರಿಪದವಿಗೆ ಸೂಚಿಸುವ ಉಪಕಾರಮಾಡಿದ ಸರ್ ಸಿಯಾದ್ದೀನರಿಗೆ ಪ್ರತ್ಯುಪಕಾರ ಮಾಡುವುದು ನೆಹರುಗಳ ಧರ್ಮವಷ್ಟೆ. ಪ್ರತಿಯಾಗಿ ಸರ್ ಸಾಹೇಬರನ್ನೇ ಆ ಪದವಿಗೆ ಪಂಡಿತರು ಸೂಚಿಸಬಹುದಿತ್ತಲ್ಲ!

ಮಂತ್ರಿಗಳಿಗೊಂದು ಮಂತ್ರ ಬೋಧೆ

ಮಂತ್ರಿಮಂಡಲದ ಸಭೆಗಳ ಅಧ್ಯಕ್ಷಸ್ಥಾನವನ್ನು ರಾಜ್ಯರಚನಾಕಾನೂನಿನನುಸಾರವಾಗಿ ಪ್ರಾಂತಿಕ ಗವರ್ನರರುಗಳೇ ವಹಿಸುತ್ತಿದ್ದಾರೆ. ಪ್ರಜಾಪ್ರಭುತ್ವವನ್ನು ಸುಖವಾಗಿ ಬೆಳೆಸಬೇಕಾದರೆ ಗವರ್ನರರು ಮಂತ್ರಿಮಂಡಲದ ಅಧ್ಯಕ್ಷಾಸನವನ್ನು ವಹಿಸದಿರಬೇಕು. ಇದಕ್ಕೆ ಗವರ್ನರರುಗಳ ಸಮ್ಮತಿಯಿಲ್ಲವಾದಲ್ಲಿ ಮಂತ್ರಿಗಳು ಪದ್ಧತಿಯ ಪಾಲಿಗೊಳಗಾ...



ಆತಂಕಿಸಬೇಕು. ಇದಕ್ಕೊಂದು ಉಪಾಯವೆಂದರೆ ಮಂತ್ರಿಗಳು ತಮ್ಮ ಸಭೆಯಲ್ಲಿ ದೇಶಭಾಷೆಯಲ್ಲೇ ಮಾತಾಡಲು ತೊಡಗುವದು. ಈ ರೀತಿಯನ್ನನುಸರಿಸಿದಲ್ಲಿ ಸಭೆಯ ಕಾರ್ಯಕ್ರಮಗಳು ವಿರಸವಾಗಿ ತೋರಿ ಗವರ್ನರರು ದೂರವಾಗುವರು ಎಂಬ ಹೊಸ ಮಂತ್ರಾಲೋಚನೆಯನ್ನು ಶ್ರೀ ಎಮ್. ಎನ್. ಸೋಮರು ಕೊಟ್ಟಿದ್ದಾರೆ. ಸೂಚನೆಯೇನೋ ಸೊಗಸಾಗಿ ಕಾಣುತ್ತದೆ. ಆದರೆ ಮಂತ್ರಿಗಳು ತಮ್ಮ ದೇಶಭಾಷೆಯಲ್ಲಿ ಮಾತಾಡಿದ್ದನ್ನು ಗವರ್ನರರು ತನ್ನ ದೇಶಭಾಷೆಯಲ್ಲಿ ಓದೇನೆಂದು ಪ್ರಶ್ನಿಸಬಹುದು. ಇದಕ್ಕಿಂತ ನ್ಲೇಂಛರನ್ನು ಮುಟ್ಟಬಾರದೆಂಬ ರೂಢ ಸನಾತನೀ ಧರ್ಮವನ್ನು ಹಿಂದೀ ಮಂತ್ರಿಗಳೂ ಹರಿಜನರನ್ನು ದೂರವಿಡಬೇಕೆಂಬ ದಕ್ಷಿಣಾಫ್ರಿಕದ ಧರ್ಮವನ್ನು ಬಿಳಿ ಗವರ್ನರರೂ ಅಭ್ಯಸಿಸಿಕೊಂಡು ಪರಸ್ಪರ ದೂರದಲ್ಲಿರಬಾರದೇಕೆ?

40-55ರ ಮಧ್ಯದಲ್ಲಿರುವವರೆಲ್ಲಾ ದಡ್ಡರು!

"ಇಂಗ್ಲೆಂಡಿನ ಎಲ್ಲಾ ಸರ್ಕಾರಿ ರಲ್ಲಿಯೂ ಸೋದಿಸಿ ನೋಡಿದಲ್ಲಿ 40 ರಿಂದ 55ರ ವರೆಗಿನ ಪ್ರಾಯದವರಲ್ಲಿ ಕಜ್ಜಿನ ಅಸಮರ್ಥತೆಯು ಕಂಡುಬರುತ್ತದೆ" ಎಂದು 'ಎಂಪ್ಸರ್ ಮೇಗಸಿನ್'ನಲ್ಲಿ ಸರ್ ಚಾರ್ಲ್ಸ್ ಪ್ಯಾಟ್ರಿಯವರು ಬರೆಯುತ್ತಾರೆ. ಆದರೆ ಚೇಂಬರ್ಲೇನರ ಆಡಳಿತೆಯ ಪರಿಣಾಮವಾಗಿ ಹಿಟ್ಲರನ ರಾಜ್ಯವು ಜಕೊಸ್ಲೋವೇಕಿಯದ ವರೆಗೆ ಹರಡಿದಂತೆ, ದಡ್ಡತನದ ಪ್ರಾಯಾವಧಿಯೂ ಎಪ್ಪತ್ತರ ಗಡಿಯವರೆಗೆ ವಿಸ್ತರಿಸಿದಂತೆ ಕಾಣುತ್ತಿರುವದಲ್ಲ!

ಬೋಂಬು ಮತ್ತು ಅಭಿನಂದನೆಗಳು!

ಹೇಂಕೋವಿನ ವಾಯವ್ಯ ಸರಹದ್ದಿನಲ್ಲಿ ಜಪಾನಿಯರ ಸೈನ್ಯವ್ಯೂಹವು ಚೀನೀಯರಿಂದ ಭೇದಿಸಲ್ಪಟ್ಟಿತು. ಜಪಾನರು ವಿಪರೀತ ನಷ್ಟಹೊಂದಿ ಹಿಮ್ಮೆಟ್ಟಿದರು. ಆ ನಷ್ಟವನ್ನು ತುಂಬಿಕೊಂಡು ಪುನಃ ಒಲ್ಲಿಗೇ ಬರುವಷ್ಟು ಸುಧಾರಿಸಿಕೊಳ್ಳಲು ಕಡಿಮೆಯೆಂದರೆ ಮೂರು ತಿಂಗಳಾದರೂ ಬೇಕಾಗುವುದಂತೆ. ಈ ವಿಜಯಕ್ಕಾಗಿ ಬ್ರಿಟಿಷ್ ಪಾರ್ಲಿಮೆಂಟಿನ ಮೆಂಬರರು ಹಲವರು ಚಿಯಾಂಗ್ ಕೈಶೇಕರಿಗೆ ಅಭಿನಂದನೆಗಳನ್ನು ಕಳುಹಿರುವರು. ಚೀನವು ಮಾನವ ಸ್ವಾತಂತ್ರ್ಯ ಮತ್ತು ಶಾಂತಿಗಾಗಿ ಮಾಡುತ್ತಿರುವ ಆತ್ಮಯಜ್ಞವನ್ನು ಶ್ಲಾಘಿಸಿ ಲೋಕಶಾಂತಿ ಕೂಡದಲ್ಲಿ ಚೀನಕ್ಕೊಂದು ಸ್ಥಾನವನ್ನು ಕೊಡುವ ಬಗ್ಗೆ ಸೂಚಿಸಿರುವರು. ಜಪಾನಿನ ಬೋಂಬಿನ ಮಳೆಯೆಷ್ಟು ಬಲವಾಗಿ ಜಡಿದರೇನು? ಇಂಗ್ಲಿಷರ ಧನ್ಯವಾದಗಳ ಸರಿಮಳೆಯೂ ಆಗುತ್ತಿರುವದಲ್ಲ! ಬ್ರಿಟಿಷರ ಈ ಬೆಂಬಲದಿಂದಲ್ಲಿ ಜಪಾನಿಯರ ವಿಮಾನಗಳ, ವಿಷವಾಯುಗಳ ಗ್ರಾಣ್ಯವಿದ್ದೀತೆ ಚಿಯಾಂಗ್ ಕೈಶೇಕರಿಗೆ?

ಸರ್. ಸಿಕಂದರರ ಹೆದರಿಕೆಯ ಮೂಲ

ಪಂಜಾಬಿನ ಮುಖ್ಯಮಂತ್ರಿ ಸರ್ ಸಿಕಂದರ್ ಹಯಾತ್ ಖಾನರು ಮತ್ತು ಮುಸ್ಲಿಮ್ ಲೀಗಿನವರು ಕಾಂಗ್ರೆಸೆಂದರೆ ಆಹುತಿ ಕೇಳುವ ಮಹಾಮಾರಿಯೆಂದು ಬೆದರುತ್ತಿದ್ದಾರೆ. ಬೆದರಿಕೆಗೆ ಕಾರಣ ವಿಷ್ಣ—ಕೇಂದ್ರ ಸರಕಾರದ ಸೈನ್ಯಸಂಗ್ರಹಣಾ ಮಸೂದೆಯನ್ನು ಕಾಂಗ್ರೆಸ್ ಪ್ರಾಂತ್ಯಗಳೆಲ್ಲಾ ವಿರೋಧಿಸಿದವು. ಸರ್ ಸಿಕಂದರರು ಮಾತ್ರ ಸುಸ್ವಾಗತವನ್ನು ಬಯಸಿದರು. ಯಾಕೆ ಗೊತ್ತೆ? ಪಂಜಾಬು ಪ್ರಾಂತ್ಯದಲ್ಲಿ ಸೈನಿಕರ ಸಂಖ್ಯೆ ಹೆಚ್ಚು. ಪೆನ್ಶನ ಮತ್ತು ಇತರ ಕಲಬುಗಾಗಿ ವರ್ಷಕ್ಕೆ ಹತ್ತು ಕೋಟಿ ರೂಗಳಷ್ಟು ಖರ್ಚು ಗುತ್ತದೆ. ಇವುಗಳನ್ನು ಪಡೆಯುವವರಲ್ಲಿ ಮುಸಲ್ಮಾನರೇ ಅಧಿಕ ಸಂಖ್ಯಾಕರು. ಕಾಂಗ್ರೆಸ್ಸಿನ ಧೋರಣೆ ಸರ್ವವಿದಿತವಾದುದು—ಸೈನ್ಯವನ್ನು ಕಡಿಮೆಮಾಡುವದು ಮತ್ತು ಜಗತ್ ಸೈನ್ಯವನ್ನು ನಿರ್ಮಿಸುವದು. ಮುಸಲ್ಮಾನ ಸೈನ್ಯದ ಬದಲಿಗೆ ಜನತಾ ಸೈನ್ಯವನ್ನು ನಿರ್ಮಿಸುವ ಕಾಂಗ್ರೆಸಿಂದೂಷ್ಟು ಸರ್ ಸಿಕಂದರರು ಹೆದರುವದು ಬೇಡವೇನು? ಸೈನ್ಯದಲ್ಲಾಗುವ ಬದಲಾವಣೆಯನ್ನು ಕಂಡೂ ಸುಮ್ಮನಿರುವವನು ಮಂತ್ರಿಯೆನ್ನಿಸಬಲ್ಲನೆ?

ಗಾಂಧಿ—ಸಮತಾವಾದಿಗಳೊಳಗಿರುವ ಬಿನ್ನತೆ

"ಜವಾಹರಲಾಲ್ ಮತ್ತು ಸಮತಾವಾದಿ ಸ್ನೇಹಿತರೊಳಗೂ ಭಿನ್ನಾಭಿಪ್ರಾಯವಿದೆ. ನನ್ನ ಮತ್ತು ಸಮತಾವಾದಿಗಳೊಳಗಿರುವ ವ್ಯತ್ಯಾಸವು ಜನಜನಿತವಿದೆ. ನಾನು ಮಾನವಸ್ವಭಾವ ಪರಿವರ್ತನೆಯಲ್ಲಿ ವಿಶ್ವಾಸವುಳ್ಳವನಿದ್ದೇನೆ, ಮತ್ತು ಅದಕ್ಕಾಗಿ ಕಷ್ಟವನ್ನನುಭವಿಸಬೇಕೆನ್ನುತ್ತೇನೆ. ಸಮತಾವಾದಿಗಳಿಗೆ ಇದರಲ್ಲಿ ನಂಬಿಕೆಯಿಲ್ಲ. ಆದರೆ ನಾವಿತ್ತಂಡದವರೂ ಪರಸ್ಪರ ಪ್ರೀತಿಸುತ್ತಿದ್ದೇವೆ. ಒಂದೊಂದೇ ಅವರು ನನ್ನ ಕಡೆಗೆ ಸರಿಯುತ್ತಿದ್ದಾರೆ. ಇಲ್ಲವೇ ನಾನೇ ಅವರ ಬಳಿಗೊತ್ತುತ್ತಿದ್ದೇನೆ.

ಪಂಡಿತ ಜವಾಹರಲಾಲರ ಹುಟ್ಟಿಗ ಒಬ್ಬರ ಹೊರತು ಇನ್ನೊಬ್ಬರಿಲ್ಲನೆಂಬಷ್ಟು ಹಾರ್ದಿಕ ಐಕ್ಯತೆಯು ನಮ್ಮೊಳಗಿದೆ. ಬುದ್ಧಿಮತ್ತೆಯಿಂದ ಉಂಟಾಗುವ ಭಿನ್ನಾಭಿಪ್ರಾಯಗಳು ನಮ್ಮ ಹೃದಯೈಕ್ಯತೆಯನ್ನು ಮುರಿಯಲಾರವು" ಎಂದು ಮಹಾತ್ಮಾ ಗಾಂಧಿಯವರನ್ನುತ್ತಾರೆ.

ಗಾಂಧಿ ನೆಹರುಗಳ ಹೃದಯಗಳು ಒಂದನ್ನೊಂದು ಸಂಧಿಸುವಾಗ ಉಕ್ಕೇರಿ ಚೆಲ್ಲುತ್ತವೆ, ಆ ರಸವೇ ಅಂಟಾಗಿ ನಿಲ್ಲುತ್ತದೆ. ಆದರೆ ಧನಿಕ-ದರಿದ್ರ, ರಾಜ-ಪ್ರಜೆ ಮೇಲ್ಜಾತಿ-ಕೀಳ್ಜಾತಿ, ಇವೆಲ್ಲಾ ಸಂಧಿಸಿಕೊಳ್ಳುವಾಗ ಎದೆಯು ಉಕ್ಕುವದೆಂದರೆ ಕ್ಷಿಪ್ರಬಾಹುಬಿಸು ರೂಪದಲ್ಲ! ಮಹಾತ್ಮರ ಪರಿವರ್ತನೆಯ ಮಂತ್ರವುಚ್ಚರಿಸುತ್ತಾ ಅವುಗಳ ಬಳಿ ಸಾರುವುದು ಕ್ಷೇಮದಾಯಕವೆ?

ರಾಜಕೋಟೆಯ ಶಿಷ್ಯ

ರಾಜಕೋಟೆಯಲ್ಲಿ ಮಹಾತ್ಮರು ಕೈಗೊಂಡ ಹೊಸ ಧೋರಣೆಯನ್ನು ಕಂಡು ಜಯಪುರ ಸಂಸ್ಥಾನವೂ ತನ್ನ ಧೋರಣೆಯನ್ನು ಮಾರ್ಪಡಿಸಿಕೊಂಡಿದೆ. ದರ್ಬಾರಿನ ನಿರ್ಣಯಗಳನ್ನೊಪ್ಪಿಕೊಳ್ಳಿರೆಂದು ರಾಜಕೋಟೆಯ ಪ್ರಜೆಗಳಿಗೆ ಬೋಧಿಸಿದಂತೆಯೇ ಜಯಪುರ ಪ್ರಜೆಗಳಿಗೂ ಗಾಂಧಿಯವರು ಬೋಧಿಸಬಹುದೆಂದು ಜಯಪುರ ದರ್ಬಾರಿನ ನಿರೀಕ್ಷೆ. ಆದ್ದರಿಂದ ಒಮ್ಮೆ ಜನಪ್ರಮುಖರೊಡನೆ ಸಂಧಾನ ಮಾಡುವ ಒಲವನ್ನು ತೋರಿಸಿದ್ದ ಜಯಪುರವು ಈಗ ತನ್ನ ಕೈಯನ್ನು ಹಿಂದಕ್ಕೆಳೆದುಕೊಂಡಿದೆ. ಬೋಗನಯೊಡ್ಡಲು ಪ್ರಜೆಗಳಿಗೆ ಕಲಿಸುವ ವ್ಯಾಯಾಮ ಶಿಕ್ಷಕ ಗಾಂಧಿಯವರಿರುವಾಗ ಅದಕ್ಕನುಸಾರವಾಗಿ ಸಂಸ್ಥಾನಿಕರೆಲ್ಲಾ ಏಕೆ ಅಂತಲಾಗಹೊಡೆಯಹತ್ತಿದ್ದಾರು! ಜಯಪುರ ಪ್ರಜೆಗಳ ನಿವೃತ್ತಿಗೆ ಶನೊಂದು ಮಹಾತ್ಮಾ ಗಾಂಧಿಯವರ ಭೇಟಿ ಮಾಡಿ ದೂರು ಕೊಟ್ಟರು. ಸಂಸ್ಥಾನಗಳ ಕುರಿತು ಹೇಗೆ ವರ್ತಿಸಬೇಕೆಂಬುದನ್ನು ತಾನು ಪರ್ಯಾಲೋಚಿಸುತ್ತಿರುವೆನೆಂದು ಗಾಂಧಿಯವರು ಉತ್ತರವಿತ್ತರಂತೆ. ಸದ್ಯದಲ್ಲೇ ಹೊಸ ರೀತಿಗನುಸಾರವಾಗಿ ಸಂಸ್ಥಾನಗಳ ಹೋರಾಟವಾರಂಭವಾಗಲಿರುವದಂತೆ. ಈ ಹೊಸ ರೀತಿಯಲ್ಲಿ, ಸಂಸ್ಥಾನದ ಪರಿಸ್ಥಿತಿಯನ್ನಲ್ಲ—ಅಲ್ಲಿಯ ದಿವಾನರುಗಳ ಶಕ್ತಿಯುಕ್ತಿಯನ್ನು ನೋಡಿ ಚಳವಳ ಹೂಡಬೇಕೆಂಬ ವಿಧ್ಯುಪಡಿಯಿರಬಹುದು!

ಬನ್ನ ಮತ್ತು ಬಣ್ಣ!

ಹೈದರಾಬಾದ ದಿನ ಸತ್ಯಾಗ್ರಹದ ವಾರ್ತೆಯನ್ನು ಮತ್ತು ಸ್ವಾಭಿಪ್ರಾಯವನ್ನು ಪ್ರಕಟಿಸುವ ಪತ್ರಿಕೆಗಳಿಗೆ ಹೊರಗಿನ ಪ್ರಾಂತಿಕ ಸರಕಾರಗಳೂ ಆತಂಕವನ್ನೊಡ್ಡಿವೆ. ಬೊಂಬಾಯಿ ಸರಕಾರವೂ ಸಂಜಾಬು ಸರಕಾರವೂ ಈ ಕುರಿತು ವಿಪರೀತ ಜಾಗರೂಕತೆ ವಹಿಸಿದಂತಿದೆ. ಜಾತೀಯ ಭಾವನೆಯನ್ನು ಉದ್ರೇಕಿಸುವದನ್ನು ತಡೆಗಟ್ಟದೆ

THE BOMBAY LIFE ASSURANCE CO LTD,

ಸ್ಥಾಪನೆ 1908

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪನಿ ಲಿಮಿಟೆಡ್

ಈ ಸಂಸ್ಥೆಯ ಸಾರ್ವತ್ರಿಕವಾದ ಅಭಿವೃದ್ಧಿಯೇ ಇದರ ಉನ್ನತಿಗೆ ಸಾಧನವು

ಹಿರಿಮೆಯ ಹೊಸ ವ್ಯಾಪಾರ ವಹಿವಾಟುಗಳು.

ವಿಮಾ ಅರ್ಜಿಗಳ ಮೊಬಲಗು ಎಷ್ಟು	ವರ್ಷ	ಪೂರ್ತಿಯಾದುದು
1 25,50,250	1934	1,04 33,750
1,50,48,915	1935	1 23,28,665
1,68,88,200	1936	1,36 01 500
1,72 579,75	1937	1 40 08,725
1,76,83 250	1938	1,44,91,000

1939 ವ್ಯಾಲ್ಯುವೇಶನ್ ವರ್ಷ

ಈಗಾಗಲೇ ಈ ಕಂಪನಿಯಲ್ಲಿ ವಿಮೆಯಿಳಿಸಿರಿ, ಮುನಾಫೆಯಲ್ಲಿ (Bonus) ಭಾಗಿಗಳಾಗಿರಿ.

ವಿಮೆಮಾಡಲು ಇಲ್ಲವೆ ಪ್ರತಿನಿಧಿಯಾಗಲು ಇಚ್ಛಿಸುವವರು ನಮ್ಮೊಡನೆ ವಿಚಾರಿಸುವುದು ಲಾಭದಾಯಕವಾಗಿದೆ

ಕೊಟಿಕಾರ್ ಬ್ರದರ್ಸ್, ಲಿಮಿಟೆಡ್,

ಮದ್ರಾಸ್ ಶಾಖೆಯ ಕಾರ್ಯದರ್ಶಿಗಳು

ದಿ ಬೋಂಬೆ ಲೈಫ್ ಬಿಲ್ಡಿಂಗ, ಸರ್ ಅ.ಆ.ಭ.ಯ ಸಮಲ್ದಾನ್ ರೋಡ್, ಗಾಂಧಿನಗರ, ಉಡುಪಿ

ಅಥವಾ ಯಾವುದಾದರೂ ಈ ಕೆಳಗಿನ ಆಫೀಸುಗಳಲ್ಲಿ ವಿಚಾರಿಸಿರಿ —

ರಥಬೀದಿ	ಪುತ್ಯಾರ,	337, ಮೌಂಟ್ ರೋಡ್,	ವಿಶ್ವೇಶ್ವರಪುರಂ ಸರ್ಕಲ್	ಚರ್ನಿರೋಡ್, ಗಿರ್ಗಾಂ	ಸೆಂಟ್ರಲ ಸ್ಟೇಶನ್ ರೋಡ್,
ಮಂಗಳೂರು	ಕಲ್ಲಿಕೋಟೆ	ಮದರಾಸ್	ಬೆಂಗಳೂರು ಸಿಟಿ	ಬೊಂಬಾಯಿ ನಂ 4	ತ್ರಿವಂಡ್ರಮ್

ಕಾಂಗ್ರೆಸಿನೊಳಗೆ ಪಕ್ಷಪ್ರತಿಪಕ್ಷಗಳಿಂದಾಗುವ ದುಷ್ಪರಿಣಾಮ

ಶೋಚನೀಯ ಅನುಭವ

ತ್ರಿಪುರಿಯು ಹಲವು ವಿಧದಿಂದ ಶೋಚನೀಯ ಅನುಭವಗಳನ್ನು ನಮಗೆ ಕೊಟ್ಟಿತು. ನಾವು ಹಲವರು ಭಾರವಾದ ಹೃದಯದೊಡನೆ ಅಲ್ಲಿಂದ ಮರಳಿದ್ದೆವು. ಪತ್ರಿಕೆಗಳೊಳಗಿನ ಪಕ್ಷಾನುಕರಣೆಯ ವಾಗ್ವಾದ ಮತ್ತು ಅವುಗಳಲ್ಲಿದ್ದ ಮಿತತಪ್ಪಿದ ವ್ಯಕ್ತಿದೂಷಣೆಗಳು ನನಗೆ ವೇದನೆಯನ್ನು ಕೊಟ್ಟವು. ಎರಡು ಪಕ್ಷಗಳ ರೀತಿಯಿಂದ ಹೊರಗೆ ನಿಂತುಬಿಡುವ ಹೊರತು, ಆ ವಿದ್ಯಮಾನಗಳನ್ನು ತಡೆಗಟ್ಟುವರೆ ಅನ್ಯಥಾ ನನ್ನಿಂದ ಸಾಧ್ಯವಿರಲಿಲ್ಲ. ಕಲ್ಕತ್ತಾದ ಸಭೆಯಲ್ಲಿ ನಾವೀ ಕಚ್ಚಾಟವನ್ನು ಪೂರ್ತಿಗೊಳಿಸಿ ನೆಟ್ಟಗೆ ಕಾರ್ಯಕ್ಷಮಳಿಯುವಂತಾಗುವರೆಂದು ನಾನು ಆಶಿಸಿದ್ದೆ. ನಾನು ನನ್ನ ಕೈಲಾದಷ್ಟು ಅದಕ್ಕಾಗಿ ಪ್ರಯತ್ನಿಸಿದೆನಾದರೂ ಜಯಹೊಂದಲಿಲ್ಲ.

ಕಲ್ಕತ್ತದಲ್ಲಿ ಸುಭಾಸ ಬಾಬುಗಳು ಮುಂದೊಡ್ಡಿದ ಎಲ್ಲಾ ಸೂಚನೆಗಳಿಗೂ ನನ್ನ ಸಮ್ಮತಿಯಿಲ್ಲವಾದರೂ, ಅವರು ತ್ರಿಪುರ ನಿರ್ಣಯವನ್ನು ಅಂಗೀಕರಿಸಿ ಕಾಂಗ್ರೆಸ್ಸಿನ ಒಮ್ಮತ್ಯಯ್ಯ ಚಟುವಟಿಕೆಯನ್ನು ಮುಂದೊತ್ತುವಂತಾಗಬೇಕೆಂದು ವಿವೇಕಯುಕ್ತರಾಗಿ ಪ್ರಯತ್ನಿಸಿದರೆಂಬುದನ್ನು ನಾನರಿತುಕೊಂಡೆ. ಇದು ಸಫಲವಾಗದಿರಲು ನ್ಯಾಯವಾದ ಕಾರಣವಾವುದೂ ನನಗೆ ತೋರುವದಿಲ್ಲ. ಆದರೆ ಏನೊಂದೂ ನ್ಯಾಯವಿಲ್ಲದ ವಿರೋಧವು ಮುಂದೆ ಬಂದು ಅವರು ರಾಜೀನಾಮೆಯನ್ನೀಯುವಂತಾಯಿತು. ಆ ರಾಜೀನಾಮೆಯ ಪರಿಸ್ಥಿತಿಯು ದೆಸೆಯಿಂದ ಸ್ವಾಗತೀಯವೇ; ಆದರೆ ಅದು ಕಾಂಗ್ರೆಸ್ಸಿನೊಳಗಿನ ವ್ಯಕ್ತಿಗಳೊಳಗೆ ಮತ್ತು ಸಮೂಹಗಳೊಳಗೆದ್ದಿದ್ದ ಭಿನ್ನತೆಯನ್ನು ಮತ್ತಷ್ಟು ಬಲಗೊಳಿಸಿದ್ದಕ್ಕಾಗಿ ನಾನು ವ್ಯಸನಪಡುತ್ತೇನೆ. ಮತ್ತಷ್ಟು ಶೋಚನೀಯವಾದ ಸಂಗತಿಯೆಂದರೆ ಪರಸ್ಪರ ಸೌಹಾರ್ದತೆಯ ಅಭಾವವು ಕಲ್ಕತ್ತೆಯ ಸಭೆಯಲ್ಲಿ ತೋರಿಬಂದುದು.

ಈ ಕಾರಣಗಳಿಂದಾಗಿ ನಾನು ಹೊಸ ವರ್ಕಿಂಗ್ ಕಮಿಟಿಯನ್ನು ಸೇರಲಿಲ್ಲ. ಹಳೆ ವರ್ಕಿಂಗ್ ಕಮಿಟಿಯ ಅನುರಾಗಕ್ಕೆ ನಾನು ಬಹುಕಾಲದಿಂದಲೂ ಹೊಂದಿಕೊಂಡಿರಲಿಲ್ಲ; ಆದರೆ ವಿಶಾಲ ಧ್ಯೇಯಗಳಿಗಾಗಿ ನಾನು ಕಮಿಟಿ ಮೆಂಬರನಾಗಿದ್ದುಕೊಂಡೇ ಬಂದಿದ್ದೆ. ವಿರೋಧ ಅಥವಾ ಅಸಹಕಾರದ ದೃಷ್ಟಿಯಿಂದಲ್ಲವಾದರೂ ಕಲ್ಕತ್ತದ ಘಟನೆಗಳಿಂದಾಗಿ ನನ್ನ ಸ್ಥಾನವು ಕಮಿಟಿಯ ಹೊರಗಿರುವದೆಂದು ನಾನರಿತುಕೊಳ್ಳಬೇಕಾಯಿತು. ನನ್ನ ಸಹಕಾರವು ರಾಜೇಂದ್ರ ಬಾಬುಗಳಿಗೆ ಸಂದರ್ಭ ಹೊದಗಿದಾಗಲೆಲ್ಲಾ ಇದ್ದೇ ಇದೆ. ಮತ್ತು ಪರಸ್ಪರ ಕೂಡಿಬಾರದ ಪರಿಸ್ಥಿತಿಯಲ್ಲಾದರೂ ಪ್ರಬಲ ಹೊಣೆಗಾರಿಕೆಗೆ ಹೆಗಲೊಡ್ಡಿದ ರಾಜೇಂದ್ರರ ಧೈರ್ಯಕ್ಕಾಗಿ ನಾನವರನ್ನು ಶ್ಲಾಘಿಸುತ್ತೇನೆ.

ಸ್ವಭಾವಹೇತು ಹಾಗೂ ಭಾವನಾಮಯ ತಿಕ್ಕಾಟ

ಈ ತಿಕ್ಕಾಟದ ಬೆಳವಣಿಗೆಯು ಭಾವನಾತ್ಮಕವಾದುದು; ಅದಕ್ಕೂ ಮಿಗಿಲಾಗಿ ಸ್ವಭಾವಹೇತುವಾದುದೆಂಬುದನ್ನು ಕಡೆಗ

ಪಂಡಿತ ನೆಹರುಗಳ ಬೋಧಪ್ರದ ಲೇಖನ

ಧುರೀಣರೊಳಗಿನ ತಾಕಲಾಟದ ನಡುವೆ ಸಿಕ್ಕಿ ಕಾಂಗ್ರೆಸ್ ಧೋರಣೆಯು ಪ್ರಾಮುಖ್ಯ ಭಾಗಕ್ಕೂ ಪೆಟ್ಟು ತಾಗಿದೆ. ಈ ನಷ್ಟಕ್ಕಾಗಿ ಪಂಡಿತ ನೆಹರುಗಳಷ್ಟು ಸಂತಾಪಗೊಂಡ ಇನ್ನೊಬ್ಬ ಧುರೀಣನಿಲ್ಲ. ದ್ವಿಪಕ್ಷಗಳನ್ನು ಒಂದುಗೂಡಿಸಲು ಶಕ್ತಿಮೀರಿ ಪ್ರಯತ್ನಿಸಿದರು; ಅದು ವಿಫಲವಾದಾಗ ದೂರ ನಿಂತರು—ಇಂದಿನ ಒಳಜಗಳದಲ್ಲಿ ಪಂಡಿತರ ಪಾಲು ಇಷ್ಟೆ. ಅವರು 'ನೇಶನಲ್ ಹೆರಾಲ್ಡ್' ಪತ್ರಿಕೆಯಲ್ಲಿ 'ಎ. ಐ. ಸಿ. ಸಿ ಯ ನಂತರ' ಎಂಬ ಶಿರೋನಾಮೆಯಿಂದ ಬರೆದಿದ್ದ ಲೇಖನಗಳ ಪ್ರಾಮುಖ್ಯ ಭಾಗಗಳನ್ನು ಇಲ್ಲಿ ಕೊಡಲಾಗಿದೆ.

ಣಿಸಿ ಬಿಟ್ಟರೆ ತಪ್ಪಾಗಲಾರದು. ಇದಕ್ಕೆ ಪರಸ್ಪರರಲ್ಲಿದ್ದ ಅಪನಂಬಿಕೆಯೊಂದೇ ಆಧಾರ. ತ್ರಿಪುರಿ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ ಪರಿಣಾಮವು ಯಾವನಾದರೊಬ್ಬನ, ಅಥವಾ ಯಾವುದಾದರೊಂದು ಧೋರಣೆಯ ಮೇಲೆ ಸೂಚಿಸಲ್ಪಟ್ಟ ಅವಿಶ್ವಾಸವಲ್ಲವೇ ಅಲ್ಲ; ಮತದಾರರಿದಿರು ಯಾವ ಧೋರಣೆಯನ್ನಾದರೂ ಇರಿಸಿ ಚುನಾಯಿಸಲು ಬಿಟ್ಟಿದ್ದಿಲ್ಲ. ಕೆಲವು ವಿದ್ಯಮಾನಗಳ ಮೇಲಿನ ಅಸಮಾಧಾನ ಮತ್ತು ಅವುಗಳ ಸುಧಾರಣೆಯ ಆವಶ್ಯಕತೆಯನ್ನಷ್ಟು ಸ್ಪಷ್ಟಪಡಿಸಿತ್ತು. ಅದರಲ್ಲಿ ನಾವೆಲ್ಲಾ ಕಲಿಯತಕ್ಕ ಪಾಠವೊಂದಿತ್ತು. ದುರ್ದೈವವಶಾತ್ ಆ ಪಾಠವು ಕಲಿಯಲ್ಪಡಲಿಲ್ಲ.

ಜ್ಞಾನ ಮತ್ತು ತಿಳುವಳಿಕೆಗೆ ದೊರೆತ ಈ ಧಿಕ್ಕಾರ-ಪರಿಸ್ಥಿತಿಯನ್ನು ತಿಳಿದುಕೊಳ್ಳದ ಅಸಮರ್ಥತೆ-ಇವು ಹಲವರಲ್ಲಿ ಪ್ರತೀಕಾರ ಬುದ್ಧಿಯನ್ನುಂಟುಮಾಡಿದವು.

ಮೇಲಧಿಕಾರೀ ಮಂಡಲವು 'ಫೆಸಿಸ್ಟ' ಆಗಿದೆಯೆ ?

ಕೆಲಸಮಯದಿಂದ ಕಾಂಗ್ರೆಸ್ ಮೇಲಧಿಕಾರೀ ಮಂಡಲವು ಫೆಸಿಸ್ಟ ತತ್ವಗಳನ್ನನುಸರಿಸುತ್ತಿದೆ ಎಂಬ ಬೊಬ್ಬೆ ಕೇಳಬರುತ್ತಿದೆ. ಆ ಮಂಡಲವು ತನ್ನ ಹೆಸರಿಗನುಗುಣವಾಗಿ ಹಲವು ತಪ್ಪುಗಳನ್ನು ಮಾಡಿರಬಹುದು. ಹಲವು ಬಾರಿ ಸತ್ಯಕ್ಕೂ ಅನು ಅಧಿಕಾರವನ್ನು ಪ್ರದರ್ಶಿಸಿರಬಹುದು. ಆದರೆ ಅದು ಫೆಸಿಸ್ಟ ಹಾದಿ ಹಿಡಿದಿದೆ ಎಂಬ ಆರೋಪವು ಅತಿ ಗರ್ವಪ್ಪೇ ಸರಿ. ಇಂದು ದೇಶದಲ್ಲಿ ಫ್ಯಾಸಿಸಮ್ಮಿನ ರೀತಿಯು ಹಲವೆಡೆಗಳಲ್ಲಿ ಸುಳಿದಿದೆ; ಅದರ ಒಂದಂಶವು ಕಾಂಗ್ರೆಸ್ಸಿನೊಳಗೂ ಸೇರಿ ಇದೆ. ಅದು ಮುಖ್ಯವಾಗಿ ರಾಜಕೀಯವಲ್ಲವೆಂದು ಹೆಸರಿಟ್ಟುಕೊಂಡಿರುವ ಸಂಸ್ಥೆಗಳಲ್ಲಿ ಜಾತೀಯತೆಯ ಬಣ್ಣದಿಂದ ಮಿರುಗುತ್ತಿದೆ. ಆದರೆ ಕಾಂಗ್ರೆಸ್ಸಿನ ಹಳೆಯ ಧುರೀಣತ್ವದಲ್ಲಿ ಬೇರಾವ ಕೊರತೆಗಳಿದ್ದರೂ, ಅದು ಮೇಲಿನ ರೀತಿಗೆ ಬಹಳ ದೂರದಲ್ಲಿದೆ. ವಿಲಕ್ಷಣ ವಿಷಯವೆಂದರೆ ಕಾಂಗ್ರೆಸನ್ನು ವಿಮರ್ಶಿಸುವವರ ದೊಡ್ಡ ಆರೋಪವು 'ಕಾಂಗ್ರೆಸಿನೊಳಗೆ ಫೇಸಿಸಮ್ ಹರಡಿದೆ' ಎಂಬುದೇ!

'ಫೋರ್ವರ್ಡ್ ಬ್ಲೋಕ್'

'ಫೋರ್ವರ್ಡ್ ಬ್ಲೋಕ್' ಎಂಬ ಹೊಸ ಪಕ್ಷಸ್ಥಾಪನೆಗೆ ಸುಭಾಸ ಬಾಬುಗಳು ಮುಂದಾದುದರ ಕಾರಣವನ್ನು ತಿಳಿಯುವದು ಸುಲಭ. ಆದರೆ ಅದರೊಳಗೆ ಹಲವು ಅಪಾಯಗಳು ಅಡಕವಾಗಿರುವ ಸಂಭವವಿರುವುದರಿಂದ ಅದೆಂದಿಗೂ ಅಪೇಕ್ಷಣೀಯವಾದುದಲ್ಲ. ಈ ತನಕ, ಇಂದು ಕಾಂಗ್ರೆಸನ್ನು ಚಾಲುಮಾಡುವ ವ್ಯಕ್ತಿಗಳ ಅಥವಾ ತಂಡದ ವಿರುದ್ಧವಾಗಿ ರೂಪುಗೊಂಡ ಒಂದು ಬಿಕ್ಕಟ್ಟಿನ ತಂಡವೆಂದಿಷ್ಟೇ ಅದರ ಪ್ರಸಿದ್ಧಿ. ಅದರಲ್ಲಿ ಸ್ಪಷ್ಟ ಧ್ಯೇಯಕ್ಕನುಸಾರವಾದ ನಿಶ್ಚಿತ ಧೋರಣೆಯೂ ಇಲ್ಲ. ರಾಜಕೀಯ ಅಥವಾ ಇತರ ವಿಭಾಗಗಳಿಂದ ಅನಪೇಕ್ಷಿತರಾದ ವ್ಯಕ್ತಿಗಳು ಪ್ರವೇಶಿಸದಂತಹ ತಡೆಯೂ ಇಲ್ಲ. ಫೇಸಿಸ್ಟ ಮತ್ತು ಜಾತೀಯ ಮನೋವೃತ್ತಿಯವರು ಅದರೊಳಗೆ ನುಗ್ಗಿ, ಕಾಂಗ್ರೆಸಿನ ಫೇಸಿಸಮ್ ವಿರುದ್ಧ ಮನೋವೃತ್ತಿಯನ್ನು ವಿರೋಧಿಸುವ ಆಟವನ್ನು ಆ ಮೂಲಕ ಆಡಲು ಸಾಧ್ಯವಿದೆ. ಸುಭಾಸರು ಅಂತಹ ವಿಷಮತೆಯನ್ನು ಹೇಗೆ ತಡೆಗಟ್ಟಬಲ್ಲರು? ಯುರೋಪಿನಲ್ಲಿ ಕೂಡ, ಫೇಸಿಸ್ಟರು ಪ್ರಥಮತಃ ಉಗ್ರವಾದದ ಜಯಕಾರವೆಬ್ಬಿಸಿಯೇ ಪ್ರಬಲರಾದರೆಂಬುದನ್ನು ಮರೆಯಬಾರದು.

ಶ್ರೀ ರೋಯಿಗಳ ಸೂಚನೆ

'ಫೋರ್ವರ್ಡ್ ಬ್ಲೋಕಿನ ನಿರ್ದಿಷ್ಟ ಧೋರಣೆಯೇ ಇಲ್ಲ. ಅಂತಹ ಧೋರಣೆಯೊಂದನ್ನು ಶ್ರೀ. ಎಮ್. ಎನ್. ರೋಯಿಗಳು ತನ್ನ ಸಮರ್ಥ ಲೇಖನ ಹಾಗೂ ಭಾಷಣಗಳ ಮೂಲಕ ವಿಶದೀಕರಿಸಿದ್ದಾರೆ. ಇದು ಅಂಗೀಕರಿಸಲ್ಪಟ್ಟರೆ ಕಾಂಗ್ರೆಸಿನ ಮೂಲರೂಪಕ್ಕೇನೆ ಅದು ವಿರುದ್ಧ ನಿಲ್ಲುವದೆಂಬುದರಲ್ಲಿ ಸಂದೇಹವಿಲ್ಲ. ನಾನು ಕಾಂಗ್ರೆಸಿನಲ್ಲಿ ಹಲವು ಸುಧಾರಣೆಗಳನ್ನು ಅಪೇಕ್ಷಿಸುವ ಮನುಷ್ಯ. ಆದರೆ ಈ ಬದಲಾವಣೆಗಳೆಲ್ಲಾ ಕಾಂಗ್ರೆಸಿನ ಇಂದಿನ ಕಾರ್ಯಗಳಿಗೆ ಹೊಂದಿಕೊಂಡು ಬೆಳವಣಿಗೆಯ ರೂಪದಲ್ಲಿ ಸಾಗಬೇಕಲ್ಲದೆ ಒಮ್ಮೆಯೇ ತೀವ್ರತೆಯನ್ನನುಸರಿಸಿ ಅದು ಮುರಿದು ಹೋಗುವಂತಿರಬಾರದು. ಅಂತಹ ವಿಪರೀತಾವಸ್ಥೆಯೊದಗಿದಲ್ಲಿ ನಾವು ಈ ವರೆಗೆ ಕಟ್ಟುತ್ತಾ ಬಂದಿದ್ದ ಸ್ವಾತಂತ್ರ್ಯ ಕಟ್ಟಡವು ಕುಸಿದುಬಿದ್ದು ಸಂಸ್ಥೆಯೊಳಗೆ ವಿಪರೀತೋದ್ದೇಶದ ಜನರು ತುಂಬಿಹೋಗುವ ಅಪಾಯವಿದೆ.

ರಾಜಕೋಟೆಯ ವಿದ್ಯಮಾನ

ರಾಜಕೋಟೆಯ ವಿದ್ಯಮಾನದಿಂದಾಗಿ ನಿಸ್ಸಹಾಯಕ ಮನೋವೃತ್ತಿಯು ಬೆಳೆದಿದೆ. ನನಗೆ ಅರ್ಥವಾಗದ ಸಂಗತಿಯಲ್ಲಿ ನಾನು ಕೈಹಾಕುವಂತಿಲ್ಲ; ಹಾಗೆಯೇ ರಾಜಕೋಟೆಯ ಐಂದ್ರಜಾಲವು ನನಗೆ ಅರ್ಥವಾಗುವುದಿಲ್ಲ. ಇದೇ ಪರಿಸ್ಥಿತಿಯು ದೊಡ್ಡ ಪರಿಮಾಣದಲ್ಲಿ ಅಖಿಲಭಾರತದ ರಾಜಕೀಯಕ್ಕೂ ಅನ್ವಯಿಸುತ್ತದೆ. ನಮ್ಮ ಸ್ವಾತಂತ್ರ್ಯ ಯುದ್ಧದಲ್ಲಿ ಮಹಾತ್ಮಾ ಗಾಂಧಿಯವರು ವಹಿಸಿರುವ ದೊಡ್ಡದಾದ ಹಾಗೂ ಪ್ರಭಾವಪೂರ್ಣವಾದ ಭಾಗವು ಚರಿತ್ರೆಯಲ್ಲಿ ಪ್ರಾಮುಖ್ಯಸ್ಥಾನವನ್ನು ಪಡೆಯತಕ್ಕದ್ದಿದೆ. ಅವರು ನಮ್ಮ ಭವಿಷ್ಯವನ್ನು ಉಜ್ವಲಗೊಳಿಸುವ ಆಟವನ್ನು ಮುಂದಿನ್ನಾದರೂ ಆಡಲಿಕ್ಕಿರುವರೆಂದು ನಾನು ಭಾವಿಸುತ್ತೇನೆ.

ಆದರೆ ನಾವು ಹಲವರು ಆ ರೀತಿಯನ್ನು ತಿಳಿಯುವದು ಕಷ್ಟವೇ ಸರಿ. ಇದು ಎಡಬಲ ಪಕ್ಷಭೇದದ ಮಾತಲ್ಲ; ರಾಜಕೀಯ ನಿರ್ಣಯಕ್ಕೆ ಸಂಬಂಧಿಸಿದುದೂ ಅಲ್ಲ. ನಾವು ಹಾರ್ದಿಕವಾದ ಅಥವಾ ಮನಃಪೂರ್ವಕವಾಗಿ ಒಪ್ಪದ ಒಂದು ನಿರ್ಣಯವನ್ನು ವಿಚಾರವೇನನ್ನೂ ಮಾಡದೆ ಅಂಗೀಕರಿಸುವದೆಂದರೆ, ಅದರಿಂದಾಗಿ ಮನಸ್ಸಿನಲ್ಲಿ ತಿಕ್ಕಾಟ ಮತ್ತು ಪ್ರತ್ಯೇಕತೆಯೊಂದು ನಿರ್ಮಾಣಗೊಳ್ಳುತ್ತದೆ. ಯಾವುದಾದರೊಂದು ಮಹಾ ಚಳವಳಿಯನ್ನು ಈ ರೀತಿಗನುಸಾರವಾಗಿ ನಡೆಸುವದು ಅಸಾಧ್ಯವೇ ಸರಿ. ಅದರಲ್ಲೂ ಪ್ರಜಾಸತ್ತಾತ್ಮಕವಾದ ಚಳವಳಿ ಹೂಡುವುದಂತೂ ತೀರಾ ಅಸಾಧ್ಯ. ಹೀಗಾಗಿ ನಮ್ಮಲ್ಲಿ ಹಲವರ ಮುಂದೆ ಇದೊಂದು ಸಮಸ್ಯೆಯಾಗಿಯೇ ನಿಂತಿದೆ.

ಪುಟ ೪ರಿಂದ

ನಿರ್ವಾಹವಿಲ್ಲವೆಂದು ಈ ಆಕ್ಷೇಪಕರವಾದ. ಹೈದರಾಬಾದಿನ ದಬ್ಬಾಳಿಕೆ ಮತ್ತು ಸತ್ಯಾಗ್ರಹ, ಇವೆರಡಕ್ಕೂ ಜಾತೀಯ ಸ್ವರೂಪ ಬಂದುಬಿಟ್ಟಿದೆ. ಯಾವ ರೂಪವೇ ಬಂದಿರಲಿ, ಇದು ಜನತೆಗೊದಗಿರುವ ವಿಪತ್ತೆಂಬುದನ್ನು ಒಪ್ಪದಿರಲಾಗುವದಿಲ್ಲ. ಹೀಗೆ ಒಪ್ಪಿಕೊಂಡರೂ, ಅದರ ಛಾಯೆಯಿದ್ದಲ್ಲಿ ತನಗೂ ಜಾತೀಯ ಬಣ್ಣ ಬಂದೀತು ಎಂಬ ಹೆದರಿಕೆಯಿಂದ ಕಾಂಗ್ರೆಸೂ ಈ ಚಳವಳಿಗೆ ದೂರವಾಗಿದೆ. ಹೈದರಾಬಾದಿನ ಜನರೆಷ್ಟು ಬನ್ನಬಡುತ್ತಿದ್ದರೂ ಅದಕ್ಕೊಂದು ಬಣ್ಣ ಬಂದಿದೆಯಲ್ಲಾ-ಅದರಿಂದಾಗಿ ರಕ್ಷಣೆಯಿಲ್ಲ! ಹೈದರಾಬಾದಿನ ದಬ್ಬಾಳಿಕೆಗೆ ಹಳ್ಳಿಗಳೊಳಗಿನ ಹೆಸರು ಹಾಸಿಗೆ ದೊರೆಯುವ ಪ್ರತ್ಯತಿಪಕ್ಷ ರಕ್ಷಣೆಯೇ ದೊರೆತಿದೆ!

ಕೇವಲ ಧರ್ಮಾರ್ಥ!

ಈ ಜಾಹೀರಾತಿನ ಕೂಪನನ್ನು ತರುವವರಿಗೆ ಅವರ ಫೋಟೋವನ್ನು ಧರ್ಮಾರ್ಥವಾಗಿ ತೆಗೆದುಕೊಡಲಾಗುವುದು.

ತ್ವರೆ ಮಾಡಿರಿ ! **ಬೊಂಬಾಯಿ ಪಟ್ಟಣಿಗರೆ ತ್ವರೆ ಮಾಡಿರಿ !!**

● ಈ ನಮ್ಮ ಫೋಟೋವನ್ನು ಎನ್‌ಲಾರ್ಜ್‌ಮೆಂಟಿಗೆ ಬರೇ ರೂ. 1/- ಮಾತ್ರ. (ಸೈಜ್ 6"×8").

ಹೊರಗಿನವರು ಈ ಕೂಪನಿನೊಂದಿಗೆ ತಮ್ಮ ಫೋಟೋ ಕಳುಹಿಸಿದರೆ ಅವನ್ನು 6"×8" ಸೈಜಿನಲ್ಲಿ ರೂ. 2-8-0ಕ್ಕೆ ಎನ್‌ಲಾರ್ಜ್ ಮಾಡಿಕೊಡಲಾಗುವುದು. 16"×20"ರ ದೊಡ್ಡ ಸೈಜಿಗೆ ರೂ. 5 ಮಾತ್ರ. ನಮ್ಮ ಆಫೀಸು ಸಮಯ ಬೆಳಿಗ್ಗೆ 9ರಿಂದ ಸಂಜೆ 7, ಆದಿತ್ಯವಾರ ಬೆಳಿಗ್ಗೆ 8ರಿಂದ ಸಂಜೆ 4 ಗಂಟೆ ತನಕ

ಕೆ. ಎಚ್. ಪಟೇಲ್

276, ಸೂರ್ಯಮಹಾಲ್ ಗಿಲ್ಡರ್ ರೋಡು, ಬೊಂಬಾಯಿ 14	ರೋಯಲ್ ಆರ್ಟ್ ಸ್ಟುಡಿಯೊ, 183 ಹೋರ್ನ್ಬಿ ರೋಡು, ಬೊಂಬಾಯಿ 14

ಓ ರಿ ಯ ೦ ಟ ಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನಕಾರ್ಯಾಲಯ—ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನುಹೊಂದಿಕೊಂಡಿರುವವರಿಗೆ ಮುದ್ದಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲಪ್ತ ಅವಧಿಗಳ ಚಿಕ್ಕಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ ಜೀವವಿಮೆ ಮಾಡುವುದೇ.

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯಂಟಲ್" ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ ಆರ್ಥಿಕ ಸ್ವಾತಂತ್ರ್ಯದ ತಳಹದಿ ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?
ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,	ಅ	ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸು,	ಥ	ಓರಿಯಂಟಲ್ ಲೈಫ್ ಆಫೀಸು,
ಮೈನ್‌ರೋಡ್, ಮಡಿಕೇರಿ, (ಕೊಡಗು.)	ವಾ	ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ORIENTAL Govt. Security Life Assurance Co., Ltd.

Prayag Mahila Vidyapith.
Mahila Training College.

The Prayag Mahila Vidyapith has decided to open a womens' Training College at Allahabad from 1st August 1939. The course of training will be for nine months only. Women who have passed the matriculation examination or its equivalent will be admitted. Ten stipends of Rs. 15/- a month will be awarded to resident pupil teachers. A deploma of P. T. D. will be given to the successful students. A hostel is attached to the college. A working knowledge of Hindi is essentail. Poesession of a Rashtra Bhasha Examination Certificate will be sufficient

Though employment is not actually guaranteed yet everyone of the successfull candidates will be able to get employment on reasonable salaries in the various girls High Schools of U. P.

South Indian women will naturally get preference at the time of employment as they do not observe purdah. Women wishing to get admission in the training college should immediately apply to the Registrar, Prayag Mahila Vidyapith, Allahabad.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 73/1939

1. ಸೂಲರ್ ಸುಬ್ಬಯ್ಯ ಶೆಟ್ಟಿ. ಪಳ್ಳದ ನಾಗಪ್ಪ ಶೆಟ್ಟಿ ಮಗ, ಕೂಡ್ಲು ಗ್ರಾಮದಲ್ಲಿರುವವ,
2. ಶಳ್ಳದ ಸುಬ್ಬಯ್ಯ ಶೆಟ್ಟಿ. ಪಳ್ಳದ ನಾಗಪ್ಪಶೆಟ್ಟಿ ಅಳಿಯ, ಕಾಸರಗೋಡು ಕೋಟೆಯಲ್ಲಿರುವವ. } ವಾದೀರು

ಮತ್ತು

ಶಿವರಾಮ ಭಟ್ಟ. ಶಾಸ್ತ್ರೀವ ತಾಪ್ರ ಭಟ್ಟರ ಮಗ. ಕುಟುಂಬದ ಯಜಮಾನ ಮತ್ತು ಅಡಳಿತೆದಾರ. ಕೂಡ್ಲುಗ್ರಾಮದಲ್ಲಿರುವವ ಕೂಡ 3ಜನರು. } ಪ್ರತಿ ವಾದಿರು

1ನೇ ಪ್ರತಿವಾದಿಯು ವಾದಿಗೆ ,ವ ಮೃತಪಟ್ಟ ಶಿವರಾಮ ಶೆಟ್ಟರಿಗೆ ತಾರೀಕು 13-11-1933ರಲ್ಲಿ ಬರಕೊಟ್ಟ ಅದವು ದಸ್ತಾವೇಜು ಮೇರೆಗೆ ವಾದಿಗೆ ಬರತಕ್ಕ ಅಸಲು, ಬಡ್ಡಿ ರೂಪಾ 1913-14-8ನ್ನು ಅದಕ್ಕೆ ಸಂಬಂಧಪಟ್ಟ ಆಸ್ತಿಗಳ ಮಾರಾಟದಿಂದ ಬರಮಾಡಿಕೊಳ್ಳುವರೆ ವಾದಿರು ಮಾಡಿದ ಮೇಲ್ಕಂಡ ದಾವೆಯು ತಾ. 16-6-39ಕ್ಕೆ ಪ್ರಥಮ ತನಿಖೆ ಬಗ್ಗೆ ಇಟ್ಟಿರುವುದರಿಂದ ಆ ಕುರಿತು 1ನೇ ಪ್ರತಿವಾದಿಗೆ ಆಕ್ಷೇಪ ಇದ್ರೆ ಆ ದಿವಸ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ರೆ ಏಕಪಕ್ಷವಾಗಿ ದಾವೆಯು ತೀರ್ಮಾನಿಸಲಾದೀತೆಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

ಕಾಸರಗೋಡು } K. Sundar Rama Shetty
1-6-39 } *Vakil for Plaintiffs.*

ಉಜ್ರೆ ಸಹಕಾರ ಸಂಘದ ರಜತೋತ್ಸವ

ನಂಬ್ರ 1090ನೇ ಉಜ್ರೆ ಸಹಕಾರ ಸಂಘದ ರಜತ ಮಹೋತ್ಸವವು ತಾ. 23-5-39ನೇ ಮಂಗಳವಾರ ಅಪರಾಹ್ನ ಘಂಟೆ 4-30ಕ್ಕೆ ಉಜ್ರೆ ಜನಾರ್ದನ ಹಾಯರ್ ಎಲಿಮೆಂಟರಿ ಶಾಲು ಕಟ್ಟಡದಲ್ಲಿ ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಾಗಿ ನೆರವೇರಿತು. ಈ ಸಮಾರಂಭಕ್ಕೆ ಊರ ಮತ್ತು ಪರವೂರ ಮಹನೀಯರಿಂದ ಕೂಡಿ ನೂರಾರು ಮುನ್ನೂರಕ್ಕಿಂತ ಮೇಲೆ ಜನರು ನೆರೆದಿದ್ದರು. ದ. ಕ. ಸಹಕಾರ ಸಂಘಗಳ ಡಿಪ್ಯುಟಿ ರಿಜಿಸ್ಟ್ರಾರರೂ, ಶ್ರೀಮಾನ್ ಮೊಳಹಳ್ಳಿ ಶಿವರಾಯರೂ ತಮಗೆ ಈ ಸಮಾರಂಭಕ್ಕೆ ಇತರ ಕಾರ್ಯಗಳ ದೆಸೆಯಿಂದ ಬರಲಾಗದ್ದಕ್ಕೆ ಸಂಘದ ಶ್ರೇಯಸ್ಸನ್ನಾಶಿಸಿ ಸಂದೇಶಗಳನ್ನು ಕಳುಹಿಸಿದ್ದರು.

ಪ್ರಾರ್ಥನಾನಂತರ ಶ್ರೀ. ಶೀನಗಿರಿ ಶಾನುಭಾಗರು ಸ್ವಾಗತ ಭಾಷಣ ಮಾಡಿದರು. ಸಂಘದ ಅಧ್ಯಕ್ಷ ಶ್ರೀ. ಅನಂತರಾಮ ಮಾಡಣ್ಣಾಯರು ರಜತೋತ್ಸವದ ವರದಿಯನ್ನೋದಿದ ಬಳಿಕ ಶ್ರೀಗಳಾದ ಎನ. ಕೆ. ಭಿಡೆಯವರು ಮತ್ತು ಪಾಂಡುರಂಗ ಕಾಮತರು ಸಂಘದ ಹಿತಸೂಚಿಸಿ ಮಾತನಾಡಿದರು. ಅನಂತರ ಅಧ್ಯಕ್ಷರು ಸಮಯೋಚಿತ ಭಾಷಣವನ್ನು ಮಾಡಿದರು. "ಕೇವಲ ನಿಃಸ್ವಾರ್ಥತೆಯಿಂದ ನಡೆಸಲ್ಪಡುವ ಒಂದು ಸಹಕಾರಿ ಸಂಘದ ರಜತೋತ್ಸವವನ್ನು ನಡೆಸುವುದೊಂದು ಮಹತ್ಕಾರ್ಯವಾಗಿರುತ್ತದೆ. ಇಂದು ಇಡೀ ದೇಶವೇ ಜನಾಂಗೋದ್ಧಾರ ಕೆಲಸದಲ್ಲಿ ಮಗ್ನವಾಗಿರುತ್ತದೆ. ಇಂತಹ ಯಾವುದೊಂದು ಕೆಲಸವನ್ನು ಮಾಡಲು ಸಹಕಾರ ಸಂಘಗಳು ಅತ್ಯಂತ ಫಲದಾಯಕವಾಗಿವೆ. ಲೇವಾದೇವಿಯು ಮೊದಲ್ಗೊಂಡು ಮನುಷ್ಯರ ಜೀವನಕ್ಕೆ ಸಂಬಂಧಿಸಿದ ಪ್ರತಿಯೊಂದು ವ್ಯವಸ್ಥೆಯನ್ನೊದಗಿಸಲು ಸಹಕಾರ ಸಂಘಗಳು ತುಂಬಾ ಅನುಕೂಲವಾಗಿವೆ. ಉಜ್ರೆಯಂತಹ ಈ ಹಳ್ಳಿಯಲ್ಲಿ ಉತ್ಸಾಹೀ ತರುಣರು ಮುಂದೆಬಂದು ಕೆಲಸಮಾಡುತ್ತಿರುವುದು ಒಂದು ಶುಭಸೂಚನೆಯಾಗಿದೆ. ಇಲ್ಲಿ ಲೇವಾದೇವಿ ಸಂಘವಲ್ಲದೆ, ಗ್ರೇನ್ ಬ್ಯಾಂಕ್ ಮತು ಸೇಕಾರರ ಸಂಘ ಕೂಡಾ ಇರುವುದು ಜನರ ಸಾರ್ವಜನಿಕ ದೃಷ್ಟಿಯನ್ನು ವ್ಯಕ್ತಪಡಿಸುತ್ತದೆ. ಇಲ್ಲಿನ ತರುಣರ ಉತ್ಸಾಹದಿಂದ ಈ ಸಂಘವು ಇಡೀ ಜಿಲ್ಲೆಗೆ ಮಾದರಿಯಾಗುವಂತೆ ಬೆಳೆಯಲೆಂದು ಆಶಿಸುತ್ತೇನೆ" ಎಂದು ಅಧ್ಯಕ್ಷಭಾಷಣದ ಸಾರಾಂಶವಾಗಿದ್ದಿತು. ನಂತರ ಧನ್ಯವಾದ ಸಮರ್ಪಣೆಯಾಗಿ ಸಭೆಯು ಮುಕ್ತಾಯವಾಯಿತು. ಕೊನೆಗೆ ನೆರೆದ ಕೂಟದ ಛಾಯಾಚಿತ್ರವನ್ನು ತೆಗೆಯಲಾಗಿ, ಫಲಾಹಾರ ಸತ್ಕಾರವೂ ನಡೆಯಿತು.

ಕಿನ್ನಿಗೋಳಿ—13ನೇ ಮೈಲುಕಲ್ಲಿನ ಸಮೀಪ ಒಬ್ಬ ಹೆಂಗಸು ಒಂದು ಸಣ್ಣ ಪೊದರಿನಿಂದ ಸೊಪ್ಪು ತೆಗೆವಾಗ ಅಲ್ಲಿಯೇ ಅವಿತಿದ್ದ ಒಂದು ದೊಡ್ಡ ನರಭಕ್ಷಕ ಚಿಟ್ಟೆಹುಲಿಯು ಅವಳ ಮೈಮೇಲೆ ಹಾರಿ ತುಂಬಾ ಗಾಯಪಡಿಸಿತು. ಇದನ್ನು ಶ್ರೀ. ವೆಂಕಟ್ರಾಯರು ಕೇಳಿ ಒಬ್ಬಂಟಿಗರಾಗಿ ಹೋಗಿ ಮತ್ತು ಹೆಂಗಸನ್ನು ಕೆಣಕಲು ಎದುರುನೋಡುತ್ತಿದ್ದ ಹುಲಿಯ ಎದುರಾಗಿ ನಿಂತು ಒಂದೇ ಸವನೆ ಹೊಡೆಬಿಟ್ಟರು. ಅದು ಗುರಿತಪ್ಪಿ ಆ ಹುಲಿಯು ಸದ್ರಿ ವೆಂಕಟ್ರಾಯರ ಮೇಲೆ ಹಾರಿ ಒಂದು ಗಂಟೆಯವರೆಗೆ ಹುಲಿಗೂ ರಾಯರಿಗೂ ಉರುಡಾಟವಾಗಿ ಮತ್ತೊಂದು ಸರ್ತಿ ಗುರಿಯಿಟ್ಟು ಹೊಡೆದ ಕಾರಣ ಹುಲಿಯು ಸತ್ತುಹೋಯ್ತು. ಹೆಂಗ್ಸಿಗೂ ವೆಂಕಟ್ರಾಯರಿಗೂ ತುಂಬಾ ಗಾಯಗಳಾಗಿದ್ದರೂ ಏನೂ ಅಪಾಯವಿಲ್ಲವೆಂದು ತಿಳಿದುಬರುತ್ತದೆ, ಹುಲಿಯು 7ವರೆ ಫೀಟ್ ಉದ್ದ 3ಫೀಟ್ ಎತ್ತರ ಇತ್ತು.

ಕಾರ್ಕಳ—ಮೇ ತಾ. 27ಕ್ಕೆ ಕಾರ್ಕಳ ರೇಂಜಿಗೆ ಶ್ರೀ ಬ್ರಿ. ವೆಂಕಟರಮಣ ಬಿ.ಎ.ಯಲ್.ಟಿಯವರು ಡಿಪ್ಯುಟಿ ಇನ್ಸ್‌ಪೆಕ್ಟರರ ಚಾರ್ಜು ವಹಿಸಿಕೊಂಡಿದ್ದಾರೆ. ತರುಣರೂ, ಉತ್ಸಾಹಿಗಳೂ ಆದ ಇವರ ಸರ್ವೀಸು ಕಾಲದಲ್ಲಿ ಈ ತಾಲೂಕಿನ ವಿದ್ಯಾ ಇಲಾಖೆಯು ಅಭಿವೃದ್ಧಿಗೆ ಬಂದೀತೆಂಬುದರಲ್ಲಿ ಅಡ್ಡಿಯಿಲ್ಲ.

ನಿಮ್ಮ ವ್ಯಾಪಾರವು ವೃದ್ಧಿಯಾಗಬೇಕೆ?
ಹಾಗಿದ್ದರೆ—
ನವಯುಗದಲ್ಲಿ
ಜಾಹೀರಾತು ಕೊಡಿರಿ.

ಶಾಲಾಮಕ್ಕಳಿಗೆ ಉಪಯುಕ್ತವಾದ ಪುಸ್ತಕಗಳು

ಕನ್ನಡ ಭಾಷಾ ಪಾಠಗಳು

	ಗಜಿಟ್ ಪುಟ	ಕ್ರಯ		
ಕನ್ನಡ ಮೂಲಪಾಠಕ ... (ಮೊದಲನೇ ದರ್ಜೆಗೆ ಉಪಯುಕ್ತವಾದುದು)	288	0	2	0

ಮೆಕ್ಕಿಲನರ ಪುಸ್ತಕಾವಳಿ

ಬಾಲಶಿಕ್ಷೆ ...	290	0	2	0
ಮೊದಲನೇ ಪುಸ್ತಕ ...	287	0	2	0
ಎರಡನೇ ,, ...	287	0	3	0
ಮೂರನೇ ,, ...	288/290	0	4	0
ನಾಲ್ಕನೇ ,, ...	288	0	5	0
ಐದನೇ ,, ...	290	0	6	0
ಆರನೇ ,, ...	290	0	7	0
ಏಳನೇ ,, ...	288	0	8	0

ನೂತನ ಸಾಮಾನ್ಯ ವಿಜ್ಞಾನ ಪಾಠಗಳು

ಮೊದಲನೇ ಪುಸ್ತಕ (2ನೇ ದರ್ಜೆಗೆ)	287	0	3	0
ಎರಡನೇ ಪುಸ್ತಕ (3ನೇ ದರ್ಜೆಗೆ)	287	0	3	0
ಮೂರನೇ ಪುಸ್ತಕ (4ನೇ ದರ್ಜೆಗೆ)	171	0	5	0
ನಾಲ್ಕನೇ ಪುಸ್ತಕ (5ನೇ ದರ್ಜೆಗೆ)	174	0	6	0
IV ಫಾರ್ಮಿನ ನೂತನ ಸಾಮಾನ್ಯ ವಿಜ್ಞಾನ	184	1	4	0

ಗಣಿತ ಪುಸ್ತಕಗಳು

ಬಾಲಗಣಿತ 1ನೇ ದರ್ಜೆಯದು	151	0	3	6
,, 2ನೇ ,,	151	0	5	0
,, 3ನೇ ,,	151	0	7	6
,, 4ನೇ ,,	151	0	8	6
,, 5ನೇ ,,	151	0	11	6

ಭೂಗೋಳಶಾಸ್ತ್ರ

ಚಿತ್ರಮಯ ದಕ್ಷಿಣಕನ್ನಡ (ಶ್ರೀ ಶಿವರಾಮ ಕಾರಂತರಿಂದ ವಿರಚಿಸಲ್ಪಟ್ಟ ನೂರಾರು ಚಿತ್ರಗಳಿಂದ ಕೂಡಿವೆ)	122	0	6	0
ದಕ್ಷಿಣ ಕನ್ನಡ ಜಿಲ್ಲೆಯ ಭೂಗೋಲ	129	0	5	6

ಕನ್ನಡ ಇಂಗ್ಲೀಷ್ ಗೋಳಗಳು—ನಕ್ಷೆಗಳು—ಜನಜೀವನ ಚಿತ್ರಗಳು—ಮೇಪ್ ಬುಕ್—ಎಟ್ಲಾಸ್ ಮುಂತಾದವುಗಳು.

ಕನ್ನಡ ಪದ್ಯ ಪುಸ್ತಕಗಳು

ಮೊದಲನೇ ಪದ್ಯ ಪುಸ್ತಕ	289	0	2	6
ಎರಡನೇ ಪದ್ಯ ಪುಸ್ತಕ	289	0	3	6

ಮೆಕ್ಕಿಲನರ ಪಾಠಪುಸ್ತಕಗಳ ಕೈಪಿಡಿ

ಎರಡನೇ ಪುಸ್ತಕ	0	2	0
ಮೂರನೇ ,, ...	0	2	6
ನಾಲ್ಕನೇ ,, ...	0	2	6
ಐದನೇ ,, ...	0	3	0
ಆರನೇ ಏಳನೇ ಪುಸ್ತಕ (ಒಟ್ಟಿಗೆ)	0	3	5

ಕನ್ನಡ ವ್ಯಾಕರಣ ಪಾಠಗಳು

ಕನ್ನಡ ಮೂಲವ್ಯಾಕರಣ	288	0	3	0
ಕನ್ನಡ ಬಾಲವ್ಯಾಕರಣ	288	0	3	3
ಕನ್ನಡ ಶಾಲಾವ್ಯಾಕರಣ	288	0	5	0

ಕನ್ನಡ ಕಥೆ ಪುಸ್ತಕಗಳು

	ಗಜಿಟ್ ಪುಟ	ಕ್ರಯ		
ಗುಬ್ಬೀ ಪಾಯಸ	287	0	0	6
ಗಡ್ಡದ ಅಜ್ಜಯ್ಯ	,,	0	1	6
ಕೆಂಚಮ್ಮ	,,	0	1	6
ಅಲೀಬಾಬನ ಕಥೆ	,,	0	2	3
ಸಂಯೋಗಿತೆ	,,	0	6	0
ಪಾಪ್ಲೋಸಿನ ಪಜೀತಿ	287	0	0	6
ಸಿಂಡರೆಲ್ಲ (3ನೇ ದರ್ಜೆಗೆ)	,,	0	1	6
ಕಾಗೆಯೂ ಗುಬ್ಬಿಯೂ (1ನೇ ದರ್ಜೆಗೆ)	288	0	2	3
ಮೌರ್ಯ ಸಿಂಹಾಸನ	,,	0	4	0
ಐತಿಹಾಸಿಕ ಕಥಾವಳಿ ...	,,	0	6	0

ಸಚಿತ್ರ ಚರಿತ್ರೆಗಳು

1ನೇ ದರ್ಜೆಗೆ	287	0	2	0
2ನೇ ,, ...	287	0	2	0
3ನೇ ,, ...	287	0	3	0
4ನೇ ,, ...	287	0	4	6
5ನೇ ,, ...	287	0	5	0
6ನೇ ,, ...	,,	0	6	0
7ನೇ ,, ...	,,	0	4	0

ಇಂಗ್ಲೀಷು ಮತ್ತು ಕನ್ನಡ 'ಮಿತ್ರ' ಕೋಪಿ ಪುಸ್ತಕಗಳು—ಕನ್ನಡ ಮೋಡೆಲ್ ಕೋಪಿ ಪುಸ್ತಕಗಳು—ಎಲ್ಲಾ ತರಗತಿಗಳಿಗೂ ಆಗತ್ಯ ಬೇಕಾದವುಗಳು.

ENGLISH READERS

NEW ERA

	Gazette Page	Price		
I Primer ...	65	0	5	0
II Primer	65	0	6	0
Book I	4	0	8	0
Book II	60	0	10	0
Book III	65	0	12	0

CORONATION

Primer I	56	0	3	0
Primer II	56	0	3	0
Primer I & II	57	0	6	0
Book I	60	0	6	0
Book II	60	0	8	0
Book III	60	0	10	0
Book IV ...	62	0	12	0

Complete English Course (By Kini.)

IV Form Part I	7	0	12	0
V Form Part II	7	1	0	0
Readings in English Literature (by Kini.)	5			
IV Form Part I		0	12	0
V Form Part II		1	0	0
Outlines of English History for IV & V Forms (to appear in separate supplement)	5	1	8	0

ಈ ಎಲ್ಲಾ ಪುಸ್ತಕಗಳೂ ಅಲ್ಲದೆ, ಎಲ್ಲಾ ಶಾಲಾ ಸಾಮಗ್ರಿಗಳೂ ನಮ್ಮಲ್ಲಿ ದೊರೆಯುತ್ತವೆ.

ಬಾಸೆಲ್ ಮಿಶನ್ ಬುಕ್ ಡಿಪೋ

(ಕೆನರಾಗ್ ಲಿಮಿಟೆಡ್) ಮಂಗಳೂರು.

—: ಶಾಖೆಗಳು :—

ಹಂಪನಕಟ್ಟೆ; ಮಂಗಳೂರು ಮತ್ತು ಹುಬ್ಬಳ್ಳಿ (ದ. ಮಹಾರಾಷ್ಟ್ರ)

ಅಂತರ್ರಾಷ್ಟ್ರೀಯ ವಾರ್ತೆಗಳು

ಸ್ಪೈನ್ ರಾಜ್ಯದ ಅಂತರ್ಯುದ್ಧವು—ಜರ್ಮನೀ—ಪೋಲಾಂಡು ರಾಜ್ಯಗಳ ವಿವಾದ.

ಅಮೇರಿಕಾ ಅಧ್ಯಕ್ಷರವರ ಸಂದೇಶವು.

ಸ್ಪೈನ್ ರಾಜ್ಯದಲ್ಲಿ 1936ನೆ ಇಸ್ವಿ ಜುಲೈ 17ನೆಯ ತಾರೀಖಿನಲ್ಲಿ ತಲೆದೋರಿದ ಅಂತರ್ಯುದ್ಧವು ಇಂದಿಗೆ ಮುಗಿಯಿತು. ಸುಮಾರು ಮೂರುವರ್ಷಗಳ ಕಾಲ ಎರಡುಕಡೆಯವರೂ ಇತರ ರಾಜ್ಯಗಳವರ ಸಹಾಯದಿಂದ ಅಂತರ್ಯುದ್ಧವನ್ನು ನಡೆಸಿದರು. ಇಂಗ್ಲೆಂಡು-ಫ್ರಾನ್ಸು ರಾಜ್ಯಗಳವರ ದ್ರೋಹದ ಮೂಲಕದಿಂದ ಪ್ರಜೆಗಳಿಂದ ಆರಿಸಲ್ಪಟ್ಟ ಪ್ರಭುತ್ವವು ಫ್ರಾಂಕೋವು ಸೇನಾನಾಯಕನಿಂದ ಜಯಿಸಲ್ಪಟಿತು. ಸೈನಿಕವಾಗಿ ಸ್ಪೈನ್ ರಾಜ್ಯದ ಸಮಸ್ಯೆಯನ್ನು ಪರಿಶೀಲಿಸಿದಲ್ಲಿ ಫ್ರಾಂಕೋವಿಗೆ ತಾತ್ಕಾಲಿಕವಾಗಿ ಜಯವುಂಟಾಯಿತೆಂದು ಹೇಳಬೇಕಾಗಿದೆ. ಆದರೆ ಸ್ಪೈನಿನ ಚರಿತ್ರೆಯನ್ನೂ ಈ ಸಮಯದಲ್ಲಿ ಕ್ಲಪ್ತವಾಗಿ ಆರ್ಥಿಕ ಪರಿಸ್ಥಿತಿಗಳನ್ನನುಸರಿಸಿ ಪರಿಶೀಲಿಸಿದಲ್ಲಿ ಆ ದೇಶದ ಭವಿಷ್ಯತ್ತಿನ ವಿಷಯವಾಗಿ ಸ್ವಲ್ಪ ಮಟ್ಟಿಗೆ ನಾವು ತಿಳಿಯಬಹುದು.—ಸ್ಪೈನ್ ದೇಶದ ಚರಿತ್ರೆಯನ್ನು ಮೂರುಭಾಗಗಳಾಗಿ ವಿಂಗಡಿಸಬೇಕಾಗಿದೆ.

1. 1931ನೆಯ ಇಸ್ವಿಯವರೆವಿಗೂ ನಡೆದಿದ್ದ ಪರಿಸ್ಥಿತಿಗಳು.

2. 1931-36ನೆಯ ಇಸ್ವಿಯ ವರೆಗೆ ನಡೆದ ಸಮಾಚಾರಗಳು.

3. 1936ನೆಯ ಇಸ್ವಿಯಲ್ಲಿ ಅಂತರ್ಯುದ್ಧವು ಪ್ರಾರಂಭವಾದದ್ದು.

1931ನೆಯ ಇಸ್ವಿಯ ಮೊದಲಿನ ಪರಿಸ್ಥಿತಿಗಳು. 1931ನೆಯ ಇಸ್ವಿಯ ವರೆಗೂ ಹದಿಮೂರನೆಯ ಅಲ್ಫಾನ್ಸೋವು ಅರಸನಾಗಿದ್ದನು. ಅವನ ಕಾಲದಲ್ಲಿ ಹಣವಂತರೂ ಸೈನ್ಯಾಧಿಕಾರಿಗಳೂ ಮತಾಧಿಕಾರಿಗಳೂ ಜಮೀನ್ದಾರರೂ ಅಧಿಕಾರವನ್ನು ನಡೆಸುತ್ತ ಬಂದರು. ಅವರ ಕಾಲದಲ್ಲಿ ಸ್ಪೈಯಿನಿನ ವಲಸೆರಾಜ್ಯಗಳಾದ ಕ್ಯೂಬಾ ಫಿಲಿಫೈನ್ ದ್ವೀಪಗಳು, ಪೋರ್ಟೊರೀಕೋ ಇತರ ರಾಜ್ಯಗಳವರ ವಶಗಳಾದವು. ಮೊರಾಕೋದಲ್ಲಿ ದೊಡ್ಡ ಯುದ್ಧವು ನಡೆಯಿತು. ಆಗ ಫ್ರಾನ್ಸು ಸ್ಪೈಯಿನಿಗೆ ಸಹಾಯಮಾಡದೆ ಹೋದಲ್ಲಿ ಮೊರಾಕೊವನ್ನು ಕೂಡ ಅಲ್ಫಾನ್ಸೋ ರಾಜನು ಕಳಕೊಳ್ಳುತ್ತಿದ್ದನು. ಇನ್ನೂ ಆರ್ಥಿಕ ಸ್ಥಿತಿಯು ಬಹು ವಿಷಾದಕರವಾದ ಸ್ಥಿತಿಯಲ್ಲಿದ್ದಿತೆಂದು ಹೇಳಬೇಕಾಗಿದೆ. ದೇಶದಲ್ಲಿರುವ ರೈಲುಗಳೆಲ್ಲವೂ ಫ್ರೆಂಚು, ಇಂಗ್ಲಿಷ್, ಬೆಲ್ಜಿಯಂ ಕಂಪೆನಿಯವರ ಕೈಯಿಂದಲೂ ಬಾರ್ಸಿಲೋನಾದಲ್ಲಿ ವಿದ್ಯುಚ್ಛಕ್ತಿಯು ಕನೇಡಿಯನ್ ಕಂಪೆನಿಯವರಿಂದಲೂ ಟೆಲಿಫೋನುಗಳು ಅಮೇರಿಕಾದ ಒಂದು ಕಂಪೆನಿಯವರಿಂದಲೂ, ರೀಯೋಟಿಂಟೋಗನಿಗಳು ಇಂಗ್ಲೀಷು ಕಂಪೆನಿಯವರಿಂದಲೂ ನಡೆಸಲ್ಪಡುತ್ತಿದ್ದವು. ಈ ಕಂಪೆನಿಗಳು ತಾವು ಮಾಡಿದ ಕೃಷಿಗೆ ನಾಲ್ಕು ಪಾಲೂ, ಕೆಲವು ವೇಳೆಯಲ್ಲಿ ಹತ್ತುಪಾಲು ಹೆಚ್ಚು ಲಾಭಗಳನ್ನು ಪಡೆದವು. ಜನಸಾಮಾನ್ಯರಲ್ಲಿ ಶೇಕಡಾ 50ಮಂದಿಯು ಅವಿದ್ಯಾವಂತರು. ಮಿಕ್ಕುಳಿದವರಾದರೂ ಓದಿದವರೆಂಬ ಮಾತ್ರೇ ಹೊರತು ತಮ್ಮ ಭಾವಗಳನ್ನು ಚೆನ್ನಾಗಿ ತಮ್ಮ ಭಾಷೆಯಲ್ಲಿ ತಿಳಿಯಪಡಿಸುವ ಶಕ್ತಿಯೂ ಕೂಡ ಇರಲಿಲ್ಲ. ದೇಶದಲ್ಲಿ ಕ್ಷಯ, ಸನ್ನಿಪಾತ ಜ್ವರಗಳು, ಸುಖರೋಗಗಳು, ಎಲ್ಲಾ ಮೂಲೆಗಳಲ್ಲಿಯೂ ಆವರಿಸಿದ್ದುವು. ಹಸುಕೂಸುಗಳ ಮರಣದ ವಿಷಯದಲ್ಲಿ ಸ್ಪೈಯಿನ್ ಪ್ರಪಂಚದಲ್ಲಿ ಎಲ್ಲಾ ರಾಜ್ಯಗಳಿಗೂ ಶಿರೋಭೂಷಣವಾಗಿದ್ದಿತು. ಕೆಲವು ನಗರಗಳಲ್ಲಿ ಪ್ರಜಾಕ್ಷೇಮಕ್ಕೆ ಬೆಂಬಲಪಡುವ ಸಂಸ್ಥೆಗಳು ಕೂಡ ಇದ್ದವುಗಳಲ್ಲ. ಎಲ್ಲಿ ನೋಡಿದರೂ ಭಿಕ್ಷಾಟನೆಯಿಂದ ಜೀವಿಸುವವರೇ ಕಂಡುಬರುತ್ತಿದ್ದರು. ರಾಜಕೀಯವಾಗಿ ಎಷ್ಟು ನಿರ್ಬಂಧವು ಇರಬೇಕೋ ಅಷ್ಟು ಅರಾಜಕೀಯವಾಗಿದ್ದಿತು. ಹಣವಂತರು ಲಂಚಗಳನ್ನು ಕೊಟ್ಟು ಇತರ ವಿಧಾನಗಳನ್ನು ಅವಲಂಬಿಸಿ ವರಮಾನದ ತೆರಿಗೆಯನ್ನು ಸಲ್ಲಿಸದೇಲೂ, ಕಡಿಮೆಯಾದ ತೆರಿಗೆಯನ್ನು ಸಲ್ಲಿಸಿ ಪ್ರಭುತ್ವಕ್ಕೆ ನಷ್ಟವನ್ನುಂಟುಮಾಡುತ್ತಿದ್ದರು. ಜಮೀನ್ದಾರರೂ ತಮ್ಮ ಜಮೀನುಗಳನ್ನು ಇತರರಿಗೆ ಒಪ್ಪಿಸಿ ಜಮೀನಿನ ಮೂಲಕದಿಂದ ಹಣವನ್ನು ತಮ್ಮ ಭೋಗಲಾಲಸೆಗಳಿಗೆ ವಿನಿಯೋಗಿಸುತ್ತಿದ್ದರು. ಒಟ್ಟಿನಲ್ಲಿ ಅಲ್ಫಾನ್ಸೋ ಅರಸರ ಕೆಳಗೆ ಸ್ಪೈಯಿನ್ ಪರಿಪಾಲನೆಯು ಎಷ್ಟು ನೀಚದೆಸೆಯಲ್ಲಿರಬೇಕೋ ಅಷ್ಟು ಹೀನಸ್ಥಿತಿಯಲ್ಲಿದ್ದಿತು.

ಅಲ್ಫಾನ್ಸೋ ಪ್ರಭುವಿನ ಮೇಲೆ ದಂಗೆ

ಈ ಸ್ಥಿತಿಗತಿಗಳಲ್ಲಿ ಅಲ್ಫಾನ್ಸೋ ಪ್ರಭುವಿನ ಮೇಲೆ ದಂಗೆಯೆದ್ದಿತೆಂದರೆ ಆಶ್ಚರ್ಯವೇನೂ ಇಲ್ಲ. ದಂಗೆ ಎದ್ದವರಲ್ಲಿ ಕೆಲವರು ಪರಿಸ್ಥಿತಿಗಳನ್ನು ಸಂಸ್ಕರಿಸಬೇಕೆಂಬ ಅಭಿಪ್ರಾಯದಿಂದಲೇ ಸಂಚರಿಸಿದರು. ಆದರೆ ಕೆಲವರು ಸ್ವಾರ್ಥಪರತ್ವದಿಂದ ದಂಗೆಯಲ್ಲಿ ಸೇರಿದರು. 1931ನೆಯ ಇಸ್ವಿಯ ಕೊನೆಯಲ್ಲಿ ಸ್ಪೈಯಿನಿನಲ್ಲಿ ಪ್ರಜಾಸ್ವಾಮ್ಯ ಸರ್ಕಾರವನ್ನು ಒಪ್ಪಿ ಆ ಸರ್ಕಾರದ ಆಜ್ಞೆಯಂತೆ ಪರಿಪಾಲಿಸುವುದೆಂದು ಆಣೆಮಾಡಿದರು. ಆ ರೀತಿ ಭಾಷೆ ಕೊಟ್ಟವರಲ್ಲಿ ಫ್ರಾಂಕೋ ಸೇನಾಪತಿಯು ಒಬ್ಬನು. ಪ್ರಜಾಕ್ಷೇಮಕ್ಕಾಗಿಯೇ ಪ್ರಜಾಸ್ವಾಮ್ಯ ಸರ್ಕಾರವು ಏರ್ಪಟ್ಟ ಕಾದ ಕಾರಣ ಆ ಸರ್ಕಾರದ ಅರ್ಪಣೆಗಳನ್ನು ಪಾಲಿಸುವುದು ತನ್ನ ಕರ್ತವ್ಯವೆಂದು ಫ್ರಾಂಕೋ ಸೇನಾಪತಿಯು ನಂಬಿದನು. ಮಿಕ್ಕ ಸೇನಾನಾಯಕರೆಲ್ಲರೂ ಗೌರವ ಭೃತ್ಯವನ್ನು ಸರ್ಕಾರದವರಿಂದ ಕೈಕೊಂಡು ವಿರಾಮ ವೇತನಗಳಾದರೂ ಫ್ರಾಂಕೋವು ಮಾತ್ರ ಸೇನಾಪತಿಯಾಗಿದ್ದು ಪ್ರಜಾಸ್ವಾಮ್ಯ ಪ್ರಭುತ್ವಕ್ಕೆ ಸಹಾಯಮಾಡುತ್ತಿರಬೇಕೆಂಬ ಅಭಿಪ್ರಾಯದಿಂದಲೇ ನಡೆಯುತ್ತಾ ಬಂದನು.

ರಿಪಬ್ಲಿಕನ್ ಪ್ರಭುತ್ವದ ಸ್ಥಾಪನೆ

ಆದರೆ 1931-36ನೆಯ ಇಸ್ವಿಗಳಲ್ಲಿ ಪ್ರಜಾಸ್ವಾಮ್ಯ ಸರ್ಕಾರವು ಏರ್ಪಡುತ್ತಲೇ ಸ್ಪೈಯಿನಿನಲ್ಲಿ ಎರಡು ಪಕ್ಷಗಳು ಉಂಟಾದುವು. ಸಾಂಪ್ರತವಾದಿಗಳು, ಸ್ವಾಮ್ಯವಾದಿಗಳು, ಅನಾರ್ಕಿಸ್ಟರು ಒಂದು ಕಡೆಯವರಾಗಿಯೂ, ಅಸಂತೃಪ್ತಿಹೊಂದಿದ ಅಲ್ಫಾನ್ಸೋ ರಾಜನ ಕಡೆಯವರು ಎರಡನೆಯ ಕಡೆಯವರಾಗಿ ಗಲಾಟೆಗೆ ಪ್ರಾರಂಭಿಸಿದರು. ಎರಡು ಕಡೆಯವರೂ ಗಲಾಟೆಯನ್ನೇ ಮಾಡುತ್ತಾ ಬಂದಲ್ಲಿ ಒಳ್ಳೆಯದಾಗಿದ್ದಿತು. ಆದರೆ ಅವರು ಆಯುಧ ಬಲವನ್ನು ಸಂಪಾದಿಸಿ ಸಂಘರ್ಷಣೆಗಳಿಗೆ ಇಳಿದರು. ದೊಡ್ಡ ಪಟ್ಟಣಗಳಲ್ಲಿಯೂ, ಗ್ರಾಮಗಳಲ್ಲಿಯೂ, ಖೂನಿಗಳು ನಡೆಯಲು ಪ್ರಾರಂಭವಾಯಿತು. ಅರಾಜಕವು ನಾಲ್ಕು ದಿಕ್ಕಿನಲ್ಲಿಯೂ ವ್ಯಾಪಿಸಿತು. ಆದರೂ ಪ್ರಜಾಸ್ವಾಮ್ಯ ಸರ್ಕಾರದವರು ಈ ಎರಡು ಕಡೆಯವರನ್ನು ಯಾವ ವಿಚಕ್ಷಣೆಯಿಲ್ಲದೆ ತಮ್ಮ ಬಲದಿಂದ ಅಡಗಿಸಿಬಿಟ್ಟದ್ದಲ್ಲಿ ಅಂತರ್ಯುದ್ಧವು ಪ್ರಾರಂಭವಾಗುತ್ತಿರಲಿಲ್ಲ. ಪ್ರಜಾಸ್ವಾಮ್ಯ ಸರ್ಕಾರದಲ್ಲಿಯೇ ಕೆಲವರು ಒಂದು ಕಡೆಯನ್ನೂ, ಕೆಲವರು ಎರಡನೇಯ ಪಕ್ಷವನ್ನೂ ಸೇರಿದರು. ಮಿಕ್ಕವರು ಇದೇ ಸಮಯವೆಂದು ಸ್ವಾರ್ಥಾಭಿವೃದ್ಧಿಗೆ ಸಹಾಯಪಡುವ ವಿಧಾನಗಳನ್ನು ಆಚರಿಸಲು ಸಂಸಿದ್ಧರಾದರು. 1936ನೆಯ ಇಸ್ವಿಯ ಹೊತ್ತಿಗೆ ರಾಜಕೀಯ ಪರಿಸ್ಥಿತಿಗಳು ಬಹು ವಿಷಮಸ್ಥಿತಿಗೆ ಬಂದವು. ಇದಕ್ಕೆ ಜೊತೆಯಾಗಿ ಸ್ವಾಮ್ಯವಾದಿಗಳು ಪಾರ್ಲಿಮೆಂಟಿನಲ್ಲಿ ಸಭ್ಯತ್ವವನ್ನು ಪಡೆಯದೆ ಹೋದಾಗ್ಯೂ ಪ್ರಜಾಸ್ವಾಮ್ಯ ಪ್ರಭುತ್ವದವರ ಮೇಲೆ ತಮ್ಮ ಆಧಿಕ್ಯವನ್ನು ವಿನಿಯೋಗಿಸಿ, ರಷ್ಯಾ ಸಹಾಯವನ್ನು ಹೊಂದಲಿಕ್ಕೂ ಪ್ರಚಾರಕ್ಕೆ ಅಲ್ಲಿಂದ ನಿಪುಣರನ್ನು ಸ್ಪೈಯಿನಿಗೆ ಕರೆಯಿಸಿದರು. ಈ ಮೂಲಕದಿಂದ ಮಿಕ್ಕುಳಿದ ಪಕ್ಷಗಳವರಿಗೆ ರಿಪಬ್ಲಿಕನ್ ಪ್ರಭುತ್ವದ ಮೇಲೆ ರೋಷ ಹುಟ್ಟಿತು.

ಫ್ರಾಂಕೋವಿನ ದಂಗೆ

ಈ ಪರಿಸ್ಥಿತಿಗಳನ್ನೆಲ್ಲಾ ಗಮನಿಸಿ ಶಾಂತಿಯನ್ನುಂಟುಮಾಡಿ ಸಕ್ರಮದಿಂದ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸಬೇಕೆಂದು ಫ್ರಾಂಕೋ ಸೇನಾಪತಿಯು 1931ನೆಯ ಇಸ್ವಿಯಲ್ಲಿ ದಂಗೆಯನ್ನು ಎತ್ತಿದನು. ಸೈನಿಕರ ಸಹಾಯದಿಂದಲೂ, ಮೂರ್ ಜಾತಿಯವರ ಸಹಾಯದಿಂದಲೂ, ಫ್ರಾಂಕೋ ಸೇನಾಪತಿಯು ಅಂತರ್ಯುದ್ಧಕ್ಕೆ ಹಾರಿದನು.

ಅನ್ಯ ರಾಜ್ಯವಾದ ರಷ್ಯಾ ಸಹಾಯವನ್ನು ಪ್ರಜಾಪ್ರಭುತ್ವವು ಅಂಗೀಕರಿಸಿತೆಂಬ ಕೋಪದಿಂದ ಫ್ರಾಂಕೋವು ತಾನು ದಂಗೆ ಎತ್ತಿದಂತೆಯೂ ಕೂಡ ಪ್ರಕಟಿಸಿದನು. ಆದರೆ ಫ್ರಾಂಕೋವಿಗೆ ಸಹಾಯಮಾಡಿದವರಲ್ಲಿ 1931ನೆಯ ಇಸ್ವಿಗೆ ಮೊದಲು ಅಲ್ಫಾನ್ಸೊ ಅರಸನಿಗೆ ಸಹಾಯಭೂತರಾದವರು ಇದ್ದರು. ಅವರೇ ಅಲ್ಲದೆ ಸ್ಪೈಯಿನ್ ರಾಜ್ಯದ ಹಣವಂತರು ರಾಜಕೀಯವಾದಿಗಳು ಕೆಲವರು ಕೂಡ ಇರುವರು. ಪ್ರಜಾಸ್ವಾಮ್ಯ ಪ್ರಭುತ್ವವು ರಷ್ಯಾ ರಾಜ್ಯದ ಸಹಾಯವನ್ನೂ ಒಪ್ಪಿಕೊಂಡಿತೆಂಬ ಮಾತೇ ಹೊರತು ಫ್ರಾಂಕೋ ನಾಯಕನು ತಾನು ಇತರ ರಾಜ್ಯಗಳಾದ ಇಟಲೀ-ಜರ್ಮನಿಯವರ ಸಹಾಯವನ್ನೂ ಅಪೇಕ್ಷಿಸಿ ದೇಶದೊಳಕ್ಕೆ ಅವರನ್ನು ಪ್ರವೇಶಿಸುವಂತೆ ಮಾಡಿದನು. ಇವರನ್ನು ಇನ್ನು ದೇಶಪರಿಪಾಲನೆಯಲ್ಲಿ ಜೋಕ್ಯವನ್ನುಂಟುಮಾಡದೆ ಹೊರಕ್ಕೆ ಕಳುಹಿಸುವರೋ ಅಥವಾ ಅವರಿಗೆ ದಾಸೋಹಂ ಎಂದು ಅವರ ಅಪ್ಪಣೆಯಂತೆ ಪರಿಪಾಲನೆಯನ್ನು ಕೊನೆಸಾಗಿಸುವನೊ ನೋಡಬೇಕಾಗಿದೆ.

ಫ್ರಾಂಕೋವು ಮಾಡಿದ ವಾಗ್ದಾನಗಳು

ಫ್ರಾಂಕೋ ಸೇನಾಪತಿಯು ತನ್ನ ಆಳ್ವಿಕೆಯಲ್ಲಿ ಕೆಲವು ಸಂಸ್ಕರಣೆಗಳನ್ನು ನೆರ

ಲೂಟಿ! ಲೂಟಿ!! ಖಾಲಿ ೩ ರೂಪಾಯಿಗೆ ಹೊಸ ವರ್ಷಕ್ಕೆ!



ಅಚ್ಚಾದ ಹೊಸ ನಮೂನೆ! ಒಂದು ಮಾಸದ ವರೆಗೆ ಮಾತ್ರ ವಿಶೇಷ ರಿಯಾಯಿತಿ.

ಶೀಘ್ರ ವಿಕ್ರಯ ಆಗುತ್ತಿದೆ. ವಿಳಂಬ ಮಾಡಿದರೆ ಪಶ್ಚಾತ್ತಾಪ ಪಡಬೇಕಾದೀತು.

ತಾಜಾ ಅಮೆರಿಕನ್ ಅಲಾರ್ಮು ಪಿಸ್ತೂಲು

ಹೆಚ್ಚು ಸಂಖ್ಯೆಯಲ್ಲಿ ಕೊಂಡುಕೊಂಡರೆ ಧಾರಾಳ ಕಮಿಷನು ಇದೆ. ಚಿತ್ರದಲ್ಲಿರುವಂತೆ 7 ಇಂಚು ಉದ್ದ 15 ಔನ್ಸುಭಾರ. ನೋಡಿದೊಡನೆ ಮೃಗಗಳು ಭೀತರಾಗುವವು. ಕಳ್ಳಕಾಕರು, ದುಷ್ಟ ಮೃಗಗಳು ಭಯಂಕರ ಶಬ್ದ ಕೇಳಿ ಪಲಾಯನ ಮಾಡುವವು. ಕೂಡಲೇ ಕೊಂಡುಕೊಂಡು ನಿಮ್ಮ ಒಡವೆಗಳನ್ನೂ ಆತ್ಮವನ್ನೂ ರಕ್ಷಿಸಿಕೊಳ್ಳಿರಿ. ಲೈಸನ್ಸಿಲ್ಲದೆ ಪ್ರತಿಯೊಬ್ಬನೂ ಉಪಯೋಗಿಸಬಹುದು ಇದರೊಂದಿಗೆ 300 ಗುಂಡುಗಳು ಉಚಿತ. 50 ಗುಂಡುಗಳನ್ನು ಏಕದಂ ಹೊಡೆಯುವ ಪಿಸ್ತೂಲಿಗೆ ರೂ. 3/-, ಒಂದೇ ಸಲ 70ಗುಂಡುಬಿಡುವುದಕ್ಕೆ ರೂ. 3/8-. 200 ಹಾರಿಸುವುದಕ್ಕೆ ರೂ. 4/- ಅಂಚೆ ವೆಚ್ಚ ಬೇರೆ 1000 ಗುಂಡುಗಳಿಗೆ ರೂ. 2/-ಎಣ್ಣೆ ಡಬ್ಬಿಗೆ 0-8-0. ಪಿಸ್ತೂಲಿಡುವ ಸುಂದರ ಪಟ್ಟಿಗೆಗೆ ರೂ. 1-8-0. (ನಿಮ್ಮ ಮತ್ತು ನಿಮ್ಮ ವಿಳಾಸವನ್ನು ಸ್ಪಷ್ಟ ಬರೆಯಿರಿ)

ದೊರೆಯುವ ಸ್ಥಳ:-

ಅಮೆರಿಕನ್ ಪಿಸ್ತೂಲು ಹೌಸ್, ಪಿ. ಬಿ. ಬಾಕ್ಸ್ ನಂ. 27 (N.Y.U.) ಅಮೃತಸರ [ಇಂಡಿಯಾ]

American Pistol Co.
P. B. No. 27 (N. Y. U.)
Amritsar (India).

ವೇರಿಸುವೆನೆಂದು ವಾಗ್ದಾನಪಡಿಸಿದ್ದಾನೆ. 1931ನೆಯ ಇಸ್ವಿಯವರೆವಿಗೂ ಪರಿಪಾಲನೆಯು ಕೇಂದ್ರೀಕರಿಸಲ್ಪಟ್ಟಿದ್ದರಿಂದ ಪ್ರಭುತ್ವವು ಜಯವಂತವಾಗಿ ನಿರ್ವಹಿಸಲ್ಪಡಲಿಲ್ಲವೆಂದು ಹೇಳಬೇಕಾಗಿದೆ. ಕಾಟಲೋನಿಯು, ಬಾಸ್ಕ ರಾಷ್ಟ್ರಗಳು ಸ್ವಪರಿಪಾಲನೆಯನ್ನು ಅನುಭವಿಸುತ್ತಿರುವುದರಿಂದ ಸ್ವಲ್ಪಮಟ್ಟಿಗೆ ವೃದ್ಧಿಹೊಂದಿರುವವು. ಅದೇ ರೀತಿಯಾಗಿ ಇದಿತರ ರಾಷ್ಟ್ರಗಳಿಗೂ ಕೂಡ ಸಾವಕಾಶವಿತ್ತಲ್ಲಿ ಪುರೋಭಿವೃದ್ಧಿಗೆ ಅವಕಾಶವುಂಟಾಗುವುದು. ಆದರೆ ಸ್ಪೈಯಿನನ್ನೆಲ್ಲಾ ಒಂದು ವಿಧಾನದ ಮೇಲೆ ಪರಿಪಾಲನೆಮಾಡಲು ಕಾರ್ಯಕ್ರಮವೇ ಹೂಡಿಸುತ್ತಿರುವೆನಾದ್ದರಿಂದ ಇನ್ನು ಮುಂದೆ ರಾಷ್ಟ್ರಗಳಿಗೆ ಸ್ವಪರಿಪಾಲನೆಯು ಅನಗತ್ಯವೆಂದು ಫ್ರಾಂಕೋ ಸೇನಾಪತಿಯು ಈಗ ಪ್ರಕಟಿಸಿರುವನು. ಈ ಪ್ರಕಟಣೆಯನ್ನು ಕಾಟಲೋನಿಯೂ, ಬಾಸ್ಕ ರಾಷ್ಟ್ರವಾಸಿಗಳು ಅಂಗೀಕರಿಸುವರೊ ಇಲ್ಲವೊ ನೋಡಬೇಕು. ಇತರ ರಾಜ್ಯಗಳವರಿಗೆ ಸ್ಪೈಯಿನ್ ರಾಜ್ಯ ಪರಿಪಾಲನೆಯಲ್ಲಿ ಅವಕಾಶವಿಲ್ಲದಂತೆ ಮಾಡುವೆನೆಂದು ಫ್ರಾಂಕೋವು ಎಷ್ಟು ಪ್ರಕಟಿಸಿದರೂ ಆ ಆಶಯವು ಇದುವರೆವಿಗೆ ಕಾರ್ಯರೂಪವನ್ನು ಪಡೆಯಲಿಲ್ಲ. ಕೊನೆಗೆ ಪ್ರಜಾಸ್ವಾಮ್ಯ ಸರ್ಕಾರದವರಾಗಲಿ ಕೊನೆಯ ದಿನಗಳಲ್ಲಿ ಇತರ ರಾಜ್ಯಗಳವರಿಗೆ ಸೇರಿದ ಸೈನಿಕರನ್ನು ಕಳುಹಿಸಿಬಿಟ್ಟರು. ಆದರೂ ಫ್ರಾಂಕೋ ಸೇನಾನಾಯಕನು ಇಟಲೀ-ಜರ್ಮನಿಯವರ ಸಹಾಯವನ್ನು ಇನ್ನೂ ತೆಗೆದುಕೊಳ್ಳುತ್ತಲೇ ಇರುವನು. ಫ್ರಾಂಕೋವು ಇಟಲೀ-ಜರ್ಮನಿಯವರ ಸಹಾಯವನ್ನು ಇನ್ನು ಅಪೇಕ್ಷಿಸುತ್ತಿರುವನೋ ಅಥವಾ ಆ ರಾಜ್ಯಗಳ ಸರ್ವಾಧಿಕಾರಿಗಳೇ ಫ್ರಾಂಕೋವನ್ನು ಬೆದರಿಸಿ, ಬೈದು, ಅವನನ್ನು ತಮ್ಮ ಆಧಿಪತ್ಯದಲ್ಲಿಟ್ಟುಕೊಂಡು ಒಂದು ಆಯುಧವಾಗಿ ಉಪಯೋಗಿಸಿಕೊಳ್ಳುವರೋ ಇನ್ನು ಮುಂದೆ ಸ್ಪೈಯಿನ್ನಿನಲ್ಲಿ ನಡೆಯುವ ವ್ಯವಹಾರಗಳು ಸ್ಪಷ್ಟಪಡಿಸುವುವು.

ಸ್ಪೈಯಿನ್ನಿನ ಭವಿಷತ್ತು

ಅಲ್ಫಾನ್ಸೋ ಅರಸನ ಪದಭ್ರಷ್ಟತೆಗೆ ಸಹಾಯಕೊಟ್ಟ ಹಣವಂತರ ಸಮೂಹದವರೆಲ್ಲರೂ ಈಗ ಫ್ರಾಂಕೋ ಸೇನಾಪತಿಗೆ ಆಡ್ಡಿಯಾಗಿರುವರು. ಅವರೇ ಇಲ್ಲವೆ ಜರ್ಮನಿಯ ನಾಜೀಪಕ್ಷದಂತಹ ಒಂದು ಸಂಗಡವು (ಫೆಲಂಗಿ ಸ್ಪಪಾರ್ಟಿ) ಸ್ಪೈಯಿನ್ನಿನಲ್ಲಿ ಹುಟ್ಟಿರುವುದು. ಅವರು ಫ್ರಾಂಕೋವಿಗೆ ಸಹಾಯಮಾಡುತ್ತಲಿರುವರು. ಇವರಿಗೂ ಹಣವಂತರ ವರ್ಗಕ್ಕೂ ಹುಲ್ಲು ಹಾಕಿದಲ್ಲಿ ಭುಗ್ಗಿನ್ನುವುದು. ಈ ಪರಸ್ಪರ ವಿರೋಧವುಳ್ಳ ಎರಡು ಕಡೆಯವರೂ ಫ್ರಾಂಕೋವಿಗೆ ಇದುವರೆವಿಗೂ ಸಹಾಯಮಾಡಿದರು. ಈಗ ಈ ಎರಡು ಕಡೆಗಳವರಿಗೂ ಫ್ರಾಂಕೋವನ್ನು ತಮ್ಮ ಆಧಿಕ್ಯತೆಯಲ್ಲಿಟ್ಟುಕೊಳ್ಳಬೇಕೆಂಬ ಆಲೋಚನೆಯಾಗಿದೆ. ಅಂತರ್ಯುದ್ಧವು ಕೊನೆಸಾಗಿದಷ್ಟು ಕಾಲವೂ ಫ್ರಾಂಕೋವಿನ ಸ್ಥಿತಿಯು ಚೆನ್ನಾಗಿಯೇ ಇರುವುದು. ಆದರೆ ಶಾಂತಿಯುಂಟಾಗುತ್ತಲೇ ಪರಿಪಾಲನಾಪದ್ಧತಿಗಳನ್ನು ಸ್ಥಾಪಿಸುವ ಅಗತ್ಯವುಂಟಾಗುತ್ತಲೇ ಫ್ರಾಂಕೋವು ಸಂಧಿಗ್ಧಾವಸ್ಥೆಯಲ್ಲಿ ಬಿದ್ದನು. ಆದುದರಿಂದಲೇ ಸ್ಪೈಯಿನ್ನಿನ ಅಂತರ್ಯುದ್ಧದಲ್ಲಿ ದ್ವಿತೀಯಾಂಕವು ಪ್ರಾರಂಭವಾಯಿತೆಂದು ಮೊದಲೇ ಬರೆದಿದ್ದೇವೆ. ಫ್ರಾಂಕೋವು ಇಟಲೀ-ಜರ್ಮನಿಯವರ ಆಧಿಕ್ಯದಿಂದ ತಪ್ಪಿಸಿಕೊಂಡು ಸ್ವತಂತ್ರ ಪರಿಪಾಲನೆಯನ್ನು ಸ್ಪೈಯಿನ್ನಿನಲ್ಲಿ ಏರ್ಪಡಿಸುವನೆ? ಇಲ್ಲವೆ ಇಬ್ಬರು ಮುಖಂಡರಿಗೂ ದಾಸೋಹಂ ಎಂದು ಅವರು ಹೇಳುತ್ತಿರುವಂತೆ ನಡೆದು ಸ್ಪೈಯಿನ್ ರಾಜ್ಯವನ್ನು ಪರಿಪಾಲಿಸುವನೊ? ಸರ್ವಾಧಿಕಾರಿಗಳು ಎದುರುಬಿದ್ದಲ್ಲಿ ಇನ್ನೊಂದು ದಂಗೆಯು ಪ್ರಾರಂಭವಾಗುವುದು ನಿಶ್ಚಯವು. ಸರ್ವಾಧಿಕಾರಿಗಳ ಆಜ್ಞೆಗಳನ್ನು ಕೊನೆಸಾಗಿಸುವನೊ? ಸ್ಪೈಯಿನ್ ಪ್ರಜೆಗಳೇ ಸಮಯವನ್ನು ಎದುರುನೋಡಿಕೊಂಡು ಇನ್ನೊಂದು ವಿಪ್ಲವವನ್ನು ಪ್ರಾರಂಭಿಸುವುದು ನಿಜವು.

ಪ್ರೋಲಾಂಡಿನ ಬಣ್ಣವು

ಮಧ್ಯ ಐರೋಪ್ಯಖಂಡ ಪರಿಸ್ಥಿತಿಗಳಲ್ಲಿ ಯಾವ ಬದಲಾವಣೆಯೂ ಉಂಟಾಗಲಿಲ್ಲ. ಮೇಮೆಲ್ ಆಕ್ರಮಣವು ಮುಗಿಯುತ್ತಲೇ ಜರ್ಮನಿಯು ತನ್ನ ಆಶೆಗಳನ್ನು ಪೋಲೆಂಡಿಗೆ ಸ್ಪಷ್ಟಪಡಿಸಿತು. ಆದರೆ ಪ್ರೋಲಾಂಡು ಈಗ ದೊಡ್ಡ ರಾಜ್ಯಗಳವರ ಸೈನಿಕ ಸಹಾಯವನ್ನು ಪಡೆಯುತ್ತಲೇ ನಿರಾಯಾಸದಿಂದ ಜರ್ಮನಿಯ ಕೋರಿಕೆಗಳನ್ನು ಸಫಲಪಡಿಸಲು ಅವಕಾಶವಿಲ್ಲವೆಂದು ಹೊರಪಡಿಸಿತು. ಪ್ರೋಲಾಂಡಿನ ಮೇಲೆ ಜರ್ಮನಿಯು ದಂಡಯಾತ್ರೆ ಮಾಡಿದಲ್ಲಿ, ಇಂಗ್ಲೆಂಡು-ಫ್ರಾನ್ಸಿನವರು ಜರ್ಮನಿಯೊಂದಿಗೆ ಯುದ್ಧಕ್ಕೆ ಇಳಿಯುವುದು ನಿಜವು. ರಷ್ಯಾ ಪ್ರೋಲಾಂಡಿಗೆ ಸಂಗಡಲೇ ಸಹಾಯಮಾಡಲು ಮುಂದಡಿ ಇಡುತ್ತಿರುವುದು. ಇಂಗ್ಲೆಂಡು-ರಷ್ಯಾ ಮಾತುಕತೆಗಳ ಮೂಲಕದಿಂದ ಈ ರಹಸ್ಯವು ಹೊರಬಿದ್ದಿತು. ಪ್ರೋಲಾಂಡಿಗೆ ರಷ್ಯಾ ಸಹಾಯವನ್ನು ಕೋರುವುದು ಇಷ್ಟವಿಲ್ಲದೆ ಹೋದರೂ ಇಂಗ್ಲೆಂಡು-ಫ್ರಾನ್ಸಿನವರು ರಷ್ಯಾವನ್ನು ಪ್ರೋಲಾಂಡು ಸಹಾಯಕ್ಕೆ ತಯಾರಾಗಿರಬೇಕೆಂದು ಎಚ್ಚರಿಸಿರುವರು. ರಷ್ಯಾ ಜರ್ಮನಿಯ ಮೇಲೆ ಕತ್ತಿಕಟ್ಟಲು ಸಂಸಿದ್ಧವಾಗಿರುವುದು. ಈ ಸ್ಥಿತಿಯಲ್ಲಿ ಪ್ರೋಲಾಂಡು ವ್ಯಾಪಾರಕ್ಕೆ ನಷ್ಟವನ್ನುಂಟುಮಾಡುವ ಉದ್ದೇಶದಿಂದ ಹಿಟ್ಲರನು ಮೆಮೆಲ್ಲಾಂಡನ್ನು ಆಕ್ರಮಿಸಿದರು.

ಪ್ರೋಲಾಂಡು ಹಾಕಿದ ಲಾಗ!

ಆದರೆ ಪ್ರೋಲಾಂಡು ಯಾವ ಆಧೈರ್ಯವನ್ನೂ ಕೊಂಡದೆ ಹಿಟ್ಲರನ ಲಾಗವನ್ನು ಸಾಗಗೊಡಿಸದಿರಲು ಇನ್ನೊಂದು ಲಾಗವನ್ನು ಹಾಕಿತು. ಬಾಲ್ಟಿಕ್ ಸಮುದ್ರದಲ್ಲಿರುವ ಗಿನಿಯಾ ರೇವಿನಿಂದ ಕಪ್ಪು ಸಮುದ್ರಕ್ಕೆ ಕಾಲುವೆಗಳನ್ನು ಅಗೆದು ಎರಡು ಸಮುದ್ರಗಳ ನಡುವೆ ಯಾನ ನೌಕೆಗಳಿಗೆ ಅನುಕೂಲಮಾಡಬೇಕೆಂದು ಪ್ರೋಲಾಂಡು ಆಲೋಚಿಸುತ್ತಿರುವುದು. ಈ ವಿಷಯವು ಇಂಗ್ಲೀಷ್ ಹಣವಂತರೊಂದಿಗೆ ಅವರು ಪ್ರೋಲಾಂಡು ವಿದೇಶಾಂಗ ಮಂತ್ರಿಯು ಚರ್ಚಿಸಿದಂತೆಯೂ ಇದಕ್ಕೆ ಸದಭಿಪ್ರಾಯವುಳ್ಳವರಾದಂತೆಯೂ ತಿಳಿಯಬರುತ್ತದೆ. ಈ ಲಾಗವು ಸಾಗಿದಲ್ಲಿ ಜರ್ಮನಿ ಉತ್ತರಸಮುದ್ರದಿಂದ ಕಪ್ಪುಸಮುದ್ರಕ್ಕೆ ರೈನ್ ಡಾನ್ಯೂಬ್ ನದಿಗಳ ಮೂಲಕದಿಂದ ಏರ್ಪಡಿಸಿಕೊಳ್ಳಲೆಣಿಸಿದ ಕಾಲುವೆಗಳ ಪದ್ಧತಿಗೆ ಏಟುಬೀಳುವುದೆಂದು ಹೇಳಬೇಕಾಗಿದೆ. ಪ್ರೋಲಾಂಡಿನ ಮೂಲಕ ವ್ಯಾಪಾರವನ್ನು ಚಲಾಯಿಸಲು ತುರ್ಕಿ, ಗ್ರೀಸು, ರುಮೇನಿಯಾ, ರಷ್ಯಾ ರಾಜ್ಯಗಳು ಪ್ರಯತ್ನಿಸುತ್ತಿರುವುವು. ಆಗ ಜರ್ಮನಿಯೊಂದಿಗೆ ವ್ಯಾಪಾರಮಾಡುವುದಾಗಲೀ, ಜರ್ಮನಿ ದೇಶದ ಮೂಲಕದಿಂದ ವ್ಯಾಪಾರ ಸರಕುಗಳನ್ನು ಸ್ಕಾಂಡಿನೇವಿಯಾ ದೇಶಗಳಿಗೆ ಕಳುಹಿಸುವುದಾಗಲೀ ಅಗತ್ಯವಿರುವುದಿಲ್ಲ. ಆರ್ಥಿಕವಾಗಿ ಜರ್ಮನಿಗೆ ಈ ಏಟು ತಗಲಿದಲ್ಲಿ ಸೈನಿಕವಾಗಿ ಆ ರಾಜ್ಯಕ್ಕೆ ವಿಜಯವುಂಟಾಗುವುದು ಕಷ್ಟವಾಗುವುದು. ಆಂಗ್ಲೇಯ ವರ್ತಕರೊ, ಫ್ರೆಂಚರೂ ಅಮೇರಿಕಾದವರ ಸಹಾಯದಿಂದ ಪ್ರೋಲಾಂಡಿಗೆ ಸಹಾಯವನ್ನು ಮಾಡಬಹುದು.

ಮಧ್ಯ ಐರೋಪ್ಯದ ಸ್ಥಿತಿಗತಿಗಳು!

ಐರೋಪ್ಯಖಂಡದಲ್ಲಿರುವ ಸಣ್ಣ ರಾಜ್ಯಗಳವರೆಲ್ಲರೂ ಸೈನ್ಯಗಳನ್ನು ಸಂಸಿದ್ಧಪಡಿಸಿರುವರು. ತಮ್ಮ ತಮ್ಮ ಸಂರಕ್ಷಣೆಗೆ ತಕ್ಕದಾದ ಕಟ್ಟುದಿಟ್ಟಗಳನ್ನು ಮಾಡಿಕೊಂಡಿರುವರು. ಸ್ವಿಜರ್ಲೆಂಡು, ಹಾಲೆಂಡು, ಡೆನ್ಮಾರ್ಕು, ಪ್ರೋಲಾಂಡು, ರುಮೇನಿಯಾ, ಯುಗೋಸ್ಲಾವಿಯಾ, ತುರ್ಕಿ, ಗ್ರೀಸ್, ಬಲ್ಗೇರಿಯಾ ರಾಜ್ಯಗಳೆಲ್ಲವೂ ಸೈನ್ಯಗಳನ್ನು ಸಂಸಿದ್ಧಪಡಿಸಿರುವುವು. ಸರಹದ್ದುಗಳ ಬಳಿ ಸಂರಕ್ಷಣೆ, ಕಾವಲು ಚುರುಕಿನಿಂದ ಪ್ರಾರಂಭಿಸಿರುವುದು. ಫ್ರಾನ್ಸಿನಲ್ಲಿ ಸೈನ್ಯಗಳನ್ನು ಜತೆಗೂಡಿಸಲು ಪ್ರಾರಂಭಿಸಿದ್ದಾರೆ. ಇಂಗ್ಲೆಂಡಿನಲ್ಲಿ ಆಯುಧ ಪುನರ್ನಿರ್ಮಾಣದ ಮುಗಿಯುವ ಕಾಲವು ಸಮೀಪಿಸುತ್ತಿರುವುದು. ಚೇಂಬರ್ಲೇಯಿನ್ ಮಂತ್ರಿಮಂಡಲದವರು ಈ ಸರಬರಾಯಿ ಏರ್ಪಡಿಸಲು ನಿಶ್ಚಯಿಸಿದರು. ಯುದ್ಧಕ್ಕೆ ಅಗತ್ಯವಾದ ಸಾಮಾನು ಸರಬರಾಯಿ ಮಾಡಲು ಸರಬರಾಯಿ ಇಲಾಖೆಯನ್ನು ಕ್ಯಾಬಿನೆಟ್ಟು ಮಂತ್ರಿಪದವಿ ಹುದ್ದೆಯುಳ್ಳ ಮಂತ್ರಿಯ ಆಡಳಿತವಾಗಿ ಏರ್ಪಡಿಸಲು ಚೇಂಬರ್ಲೇಯನ್ನರು ನಿಶ್ಚಯಿಸಿರುವರು. ಈ ಏರ್ಪಾಡಿನಿಂದ ಇಂಗ್ಲೆಂಡು ಸಂಪೂರ್ಣವಾಗಿ ಯುದ್ಧಮುಖವನ್ನು ಹಿಡಿದಿದೆ ಎನ್ನಬಹುದು.

ಅಮೇರಿಕಾ ಅಧ್ಯಕ್ಷನ ಸಂದೇಶವು

ಈ ನಡುವೆ ಅಮೇರಿಕಾ ಅಧ್ಯಕ್ಷರವರಾದ ರೂಜ್‌ವೆಲ್ಟರವರು ಇಬ್ಬರು ಸರ್ವಾಧಿಕಾರಿಗಳಿಗೂ ಶಾಂತ್ಯ ಸಂದೇಶರೂಪವಾಗಿ ಒಂದು ನಿರೂಪವನ್ನು ಕಳುಹಿಸಿರುವರು. ಮಧ್ಯ ಐರೋಪ್ಯ ಪರಿಸ್ಥಿತಿಗಳನ್ನು ಉದಾಹರಿಸುತ್ತಾ, ಅಂತರ್ರಾಷ್ಟ್ರೀಯ ನ್ಯಾಯಧರ್ಮಗಳಿಗೆ ವಿರೋಧವಾಗಿ ಇಬ್ಬರು ಮುಖಂಡರುಗಳು ಸಂಚರಿಸುತ್ತಿರುವರೆಂದೂ, ಇನ್ನು ಮುಂದೆ ಸ್ವತಂತ್ರ ರಾಜ್ಯಗಳ ಮೇಲೆಯಾಗಲೀ, ಅವರ ಪಲಸೆ ರಾಜ್ಯಗಳ ಮೇಲೆಯಾಗಲಿ ಮುತ್ತಿಗೆ ಹಾಕುವುದಿಲ್ಲವೆಂದು ನಿಷ್ಕಪಟವಾಗಿ ಭಾಷೆಮಾಡಬೇಕೆಂದೂ, ಸ್ವತಂತ್ರ ರಾಜ್ಯಗಳ ಹೆಸರುಗಳನ್ನು ಪ್ರಕಟಿಸಿರುವರು. ಈ ಷರತ್ತುಗಳನ್ನು ಹತ್ತು ವರುಷಗಳ ಕಾಲಪರಿಮಿತಿಯಲ್ಲಿ ಆಗಲಿ ಅಥವಾ 25 ವರುಷಗಳ ಕಾಲದವಧಿಗೆ ಆಗಲಿ ಮಾಡುವುದು ಅಗತ್ಯವೆಂದು ರೂಜ್‌ವೆಲ್ಟರವರು ಸೂಚಿಸಿರುವರು. ಈ ಷರತ್ತುಗಳಿಗೆ ಹಿಟ್ಲರ್ – ಮುಸೋಲೋನಿಯರು ಒಪ್ಪದೆ ಹೋದಲ್ಲಿ ಪ್ರಪಂಚದ ಯುದ್ಧವು ನಡೆಯುದೆ ಇರದೆಂದೂ, ಅದಕ್ಕೆ ಬಾಧ್ಯತೆಯು ಅವರದೇ ಆಗುವುದೆಂದೂ ಸ್ಪಷ್ಟಪಡಿಸಿದ್ದಾರೆ. ಪ್ರಪಂಚದಲ್ಲಿರುವ ಎಲ್ಲಾ ರಾಜ್ಯಗಳಲ್ಲಿಯೂ ರೂಜ್‌ವೆಲ್ಟರವರ ಸಂದೇಶವು ಪ್ರಜೆಗಳಲ್ಲಿ ಉತ್ಸಾಹವನ್ನುಂಟುಮಾಡಿರುವುದು. ಕೊನೆಗೆ ಜರ್ಮನಿ ಇಟಲೀ ರಾಜ್ಯಗಳಲ್ಲಿಯೂ ಕೂಡ ಪ್ರಜೆಗಳು ನಿಜಪರಿಸ್ಥಿತಿಗಳನ್ನು ತಿಳಿಯಲು ಅವಕಾಶವಾಯಿತು.

ಕೊಪ್ಪ ಶ್ರೀನಿವಾಸಸ್ವಾಮ್ಯಯ್ಯಂಗಾರ.
28-4-1939

Established] THE [1906

UNITED INDIA

LIFE ASSURANCE Co, LTD.
HEAD OFFICE—MADRAS.

Trustee:—The Official Trustee to the Government of Madras.

Policies in force exceed SIX Crores.
Annual income exceeds – Rs. 30 lakhs.
Total assets exceeds – Rs. 110 lakhs.
Total claims paid exceed Rs. 40 lakhs

The oldest & largest life assurance company of South India accepted by the Government as satisfactory for the purpose of exemption from the operation of the Provident Fund Rules to Teachers in aided Schools & for the purpose of utilisation of P. F. Contributions for payment of premiums on the lives of Government Local Board & Municipal servants.

For further particulars please apply to:—

THE BRANCH MANAGER,
THE UNITED LIFE ASSURANCE COMPANY, LTD.,
FELIX PAI BAZAR, MANGALORE, S. K.

K. R. Hebbar, B.A., ORGANISER, UDIPI, S. K. OR K. Keshava Shenoy, M.A., ORGANISER, Pentlaanpet, MANGALORE.

WANTED: 80 candidates of both sexes who after expert training as film artistes and technicians are prepared to work for the College Film Company for two years on decent salary Free hostel seat and other benefits. Illustrated Art Prospectus on 5 annas posatge. Prabhat Movietone College, Bombay 11

ನವಯುಗಕ್ಕೆ
ಏಜಂಟರಿಲ್ಲದ ಕಡೆಗಳಲ್ಲಿ
ಏಜಂಟರು ಬೇಕಾಗಿದ್ದಾರೆ

THE ASIAN ASSURANCE COMPANY, LTD.

ASIAN BUILDINGS — BOMBAY

THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,965	24,50,234
1935	2,52,08,418	18,39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency termes etc:—
Sri. B NARAYAN SHETTY, Organizer, Brahmavar.
„ M. SHIVARAMA RAO, Organizer, Puttur.

OR

Sri. J. A. PUTRAN, Branch Manager, Mangalore.

ಬಾಲ ಸಾಹಿತ್ಯ ಮಂಡಲ

ಲಿಮಿಟೆಡ್, ಮಂಗಳೂರು

ನಮ್ಮ ಹೊಸ ಪುಸ್ತಕಗಳು:—

1. ನೂತನ ಬಾಲಗಣಿತ IIIನೇ ದರ್ಜೆಗೆ.
2. „ IV „ „
3. „ V „ „
4. „ VI „ „ ಅಥವಾ Iನೇ ಫಾರ್ಮಿಗೆ.
5. „ VII „ „ II „
6. „ VIII „ „ III „

ಗ್ರಂಥಕರ್ತರು—ಶ್ರೀ ಉಳ್ಳಾಲ ಮಂಗೇಶರಾವ್, ಬಿ. ಎ., ಎಲ್. ಟಿ

7. ನೂತನ ಸಾದಾನ್ಯ ಗಣಿತ—IVನೇ ಫಾರ್ಮಿಗೆ—ಶ್ರೀ. ಬಿ. ಭುಜಂಗರಾವ್, ಬಿ. ಎ (ವಿದ್ವಾನ್).
8. ಭಾರತದ ಇತಿಹಾಸ, VIIIನೇ ದರ್ಜೆಗೆ ಅಥವಾ IIIನೇ ಫಾರ್ಮಿಗೆ.
9. Do. IVನೇ ಫಾರ್ಮಿಗೆ.

ಈ ಮೇಲಿನ ಎಲ್ಲಾ ಪುಸ್ತಕಗಳು ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಕ್ಲಾಸು ಉಪಯೋಗಕ್ಕೆ ಮಂಜೂರಾಗಿವೆ. (Vide consolidated list dated 2nd may 1939, pages 117, 155, 157 and 159 of Fort St. George Gazette Supplement.)

BALASAHITYA MANDALA LTD.

MANGALORE, S. INDIA.

ಗಂಡಮಾಲೆ ರೋಗ

ಈ ಭಯಂಕರ ರೋಗವನ್ನು ಖಾತ್ರಿಯಾಗಿ ಗುಣಪಡಿಸುವ

POPULAR OINTMENT

(For T. B. Glands)

ಕೈಬಿಟ್ಟು ಹೋದ ಎಷ್ಟೋ ರೋಗಿಗಳು ನಮ್ಮ ಔಷಧಿಯನ್ನು ಉಪಯೋಗಿಸಿ ಸಂಪೂರ್ಣ ಗುಣಹೊಂದಿರುವರು. ಗುಣವಾಗದಿದ್ದರೆ ಹಣ ವಾಪಾಸು.

ಬಾಟ್ಲಿ 1ಕ್ಕೆ ರೂಪ್ಯಾ 5/-. ಟಪ್ಪಾಲು ಹಾಸಲು ಪ್ರತ್ಯೇಕ.

ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

The Popular Stores,
Chemists & General Merchants,
Parel, BOMBAY No. 12

ಧಾತುಪುಷ್ಟಿ ಲೇಹ ಸುವರ್ಣ, ಸಾಲಾಮಿಶ್ರಿ, ಕಲ್ಲದ ಮಿಶ್ರ

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಿಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ 1ರ ರೂ 2—8—0.

ಮೇಹ ಕುಠಾರ—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಸೋಗದಿರುವಿಕೆ, ಮೂತ್ರಮಾಡುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು ಮೂತ್ರದಲ್ಲಿ ಧಾತು ಹೋಗುವುದು ಸೊಂಟನೋವು ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಅಲ್ಲದೆ ಇಪ್ಪತ್ತು ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ. ಡಬ್ಬಿ 1ರ ರೂ. 2-8-0.

ಕಸ್ತೂರಿ ಮಿಶ್ರಣ ದಶಮೂಲ— ಪ್ರಸವಾನಂತರ ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ 1ರ ರೂ. 1—8—0

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ನವಭಾರತ ಬುಕ್ ಡಿಪ್ಪೋ, ಉಡುಪಿ. ಶ್ರೀ ಕೃಷ್ಣ ಫಾರ್ಮಸಿ, ಕುಂದಾಪುರ. ವಿಟ್ಠಲ ನಾರಾಯಣಶೆಣ್ವೈ, ಪ್ರೇಸ್ಟರ್ ಮಿಲ್ಸ್ ಮಜಗಾಂ ಮುಂಬಯಿ.

THE

Canara Industrial & Banking Syndicate, Ltd.

(INCORPORATED IN BRITISH INDIA
LIABILITY OF SHAREHOLDERS LIMITED.)

ESTD. 1925

Head Office:- **UDIPI, (S. India.)**

SEASON DEPOSITS ARE ACCEPTED at 3½ per cent per annum.

Further particulars on application to any of

our thirty-five Offices.

Transport & Car Owners



ARE SPECIALLY INVITED TO VISIT
OUR SHOW ROOM
for economical transport maintenance.
CANARA AUTOMOBILES — MANGALORE.

AUGUSTINE & CO.

Stockits:—

Wellknown ceylon, Nilgri, Darjeeling & Assam Tea & Coffee All sorts of Hotel & family Tea Mixures as well as Coffee can be had at moderate rates.

ಮುಂಬಾಯಿಯಲ್ಲಿ ನಮ್ಮ ಗಿರಾಕಿಗಳು ಹಲವು ವರ್ಷಗಳಿಂದ ನಮ್ಮ ಚಾ ಕಾಫಿಯನ್ನು ಉಪಯೋಗಿಸಿ ಸಂತುಷ್ಟರಾಗಿದ್ದಾರೆ.

ಹೋಟೆಲುಗಳಿಗೆ ಬೇಕಾಗುವ ಟೀ ಮಿಕ್ಸರ್ ವ ಕಾಫಿ ಹುಡಿ, ಮನೆಗಳಿಗೆ ಬೇಕಾಗುವ ಚಾ-ಕಾಫಿ, ನಮ್ಮಲ್ಲಿ ಸದಾ ಮಿತ ಹಿತದರಕ್ಕೆ ದೊರೆಯುತ್ತದೆ. ಪ್ರಾಮಾಣಿಕತೆಯೇ ನಮ್ಮ ಆದರ್ಶ. ಗಿರಾಕಿಗಳ ಸೌಕರ್ಯವೇ ನಮ್ಮ ಧ್ಯೇಯ.

ಪರೀಕ್ಷಿಸಿರಿ! ಖಾತ್ರಿ ಮಾಡಿಕೊಳ್ಳಿರಿ.

ವಿಳಾಸ: ಆಗಸ್ಟಿನ್ ಎಂಡ್ ಕೋ, ಮೌಂಟುರೋಡು, ಮಜಗಾಂ, ಮುಂಬಯಿ.

MOUNT ROAD, MAZAGAON, BOMBAY.

ಇನ್ಕಮ್ ಟೇಕ್ಸ್

ನೋಟೀಸು

1–4–'39ರಿಂದ ಇನ್ಕಮ್ ಟೇಕ್ಸ್ ಕಾಯಿದೆಯಲ್ಲಿ ಅನೇಕ ವ್ಯತ್ಯಾಸಗಳಾಗಿವೆ. ನೀವು ಕೊಡುವ ಟೇಕ್ಸು ನಿಮ್ಮ ಉತ್ಪತ್ತಿಗೆ ಮಿಕ್ಕಿದ್ದದ್ದು ನಿಮಗೆ ಆ ಬಗ್ಗೆ ಅಸಮಾಧಾನವಿದ್ದರೆ ಕೆಳಗಿನ ವಿಳಾಸಕ್ಕೆ ಬರೆದು ತಕ್ಕ ಅನುಭವವನ್ನು ಪಡಕೊಂಡು ನಿಮ್ಮ ಟೇಕ್ಸನ್ನು ಕಡಿಮೆಮಾಡಿಕೊಳ್ಳಬಹುದು. ಸಂದರ್ಭಾನುಸಾರ ನೀವು ಟೇಕ್ಸ್ ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು.

S. S. Puranik

Govt-recognised
Income-Tax Practitioner
AUDITOR
P. O. Byndoor

THE
PREMIER BANK
OF INDIA, LIMITED.
Head Office: MADRAS.
Branches:
MADURA & NELLORE.
CHAIRMAN
Dr. U. L. Narayana Rao.
'Bhujanga Nivas' Madras.
FIXED DEPOSITS
are now received at the following Rates:
For 6 Months at 3½% P. A.
12 Months at 4½% P. A.
24 Months at 5% P. A.
(Interest Paid Half-yearly.)
S. V. Rau D. Com.,
Managing Director.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾನೇಕ ಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿ ೧ಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಸೀಸೆ 1ಕ್ಕೆ ರೂ. 5—0—0

'ಕಾಮಶಾಸ್ತ್ರ' ಧರ್ಮಾರ್ಥ, ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡುಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೬೪ ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

WANTED District and Taluk a Organisers in Districts and Taluks of Karnataka on a monthly salary of Rs. 50/- and Rs. 20/-. Special facilities for initial business. Only influential and educated Organisers who can guarantee Rs. 50,000/- and Rs. 25,000/- per year need apply: Padubidri Bros., Bombay 8.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R.I.A. 426/1939 in O S No. 362/1935

ಜಿ. ಲಕ್ಷ್ಮಮ್ಮ ಪೈ, ನರಸಿಂಹ ಪೈಯವರ ಮಗ, ಪುತ್ತೂರು ತಾಲ್ಲೂಕು, ಮುತ್ತೂರು ಗ್ರಾಮಸ್ಥ	ಅರ್ಜಿದಾರ
1. ರಾಮಕೃಷ್ಣಯ್ಯ, ಕಳಂಜ ಲಕ್ಷ್ಮೀನಾರ್ಣಪ್ಪಯ್ಯನವರ ಮಗ ಕಳಂಜ ಗ್ರಾಮಸ್ಥ 2. ವೆಂಕಟ್ರಮಣ ಹೆಬ್ಬಾರ, ಪರಾರಿ ಲಕ್ಷ್ಮಣ ಹೆಬ್ಬಾರರ ಮಗ ಕಳಂಜ ಗ್ರಾಮಸ್ಥ 3. ಗೋವಿಂದ ಭಟ್ಟ, ಮಿರಿ ನಾರಾಯಣ ಭಟ್ಟ ಮಗ, ಹಕ್ಕೆಡ್ಕ ಗ್ರಾಮಸ್ಥ	ಎದ್ರಿರು

ಮೇಲಿನ O. S. 362/35ನೇ ವ್ಯಾಜ್ಯದಲ್ಲಿ ಫೈನಲ್ ಡಿಕ್ರಿ ಕೊಡ್ಬೇಕಾಗಿ ಅರ್ಜಿದಾರನು ಬರಕೊಂಡ R. I. A. 426/1939 ನೇ ಅರ್ಜಿ ಮತ್ತು R. I. A. 424/39 ವ 425/39 ನೇ ಅರ್ಜಿಗಳು ಕೂಡಾ, 1ನೇ ಎದ್ರಿಗೆ ನೋಟೀಸು ಬಗ್ಗೆ ತಾ. **19-6-1939**ನೇ ದಿವ್ಸ ಹಗಲು 10ಘಂಟೆಗೆ ಸದ್ರಿ ಕೋರ್ಟಿನಲ್ಲಿ ನ್ಯಾಯ ಆಗಿರುವುದಾಗಿಯೂ ಸದ್ರಿ 1ನೇ ಎದ್ರಿಯು ಆ ವ್ಯಾಯಿಗೆ ಹಾಜರಾಗಲು ತಪ್ಪಿದ್ರೆ ಆತನನ್ನು ಶಿಕ್ಷಾ ಮಾಡಿ, ವ್ಯವಹರ್ಣ ಮುಂದರಿಸಲಾದೀತೆಂತಲೂ ಕೋರ್ಟ ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗುತ್ತದೆ.

ಪುತ್ತೂರು 3-6-39 **K. K. Shenai** *Pleader for petitioner*

ಸಂಗೀತ

ಕಲಿವವರಿಗೆ ಸುಸಂಧಿ

ದತ್ತಮಂದಿರ

(ಹೆಂಗಸರ ಗವರ್ನ್‌ಮೆಂಟ್ ಟ್ರೈನಿಂಗ್ ಶಾಲೆಯ ಎದುರು)

ಉಡುಪಿ

ಇಲ್ಲಿ ಸಂಗೀತವನ್ನು ಶಾಸ್ತ್ರೀಯ ರೀತ್ಯಾ ಅತಿ ಮಿತವರ್ಜಿಯಿಂದ ಕಲಿಸಲಾಗುತ್ತೆ. ಹೆಚ್ಚಿನ ಮಾಹಿತಿಗೆ ವಿಚಾರಿಸುವುದು.

ನರಸಿಂಹ ಸೇರಿಗಾರ್,
ಹಾರ್ಮೋನಿಯಂ ಮಾಸ್ತರ್

ಸಮಾಚಾರಸಂಗ್ರಹ

ಶಿಯಾ ಕೈದಿಗಳ ಪುಂಡಾಟಿಕೆ

ಕಾಶಿಯ ಜೈಲನ್ನು ಸಂದರ್ಶಿಸಲು ಹೋಗಿದ್ದ ಜೈಲು ಖಾತೆಯ ಪಾರ್ಲಿಮೆಂಟರಿ ಸೆಕ್ರೆಟರಿ ಶ್ರೀ. ಗೋಪೀನಾಥ ಶ್ರೀವತ್ಸವರನ್ನೂ ಅವರೊಡನಿದ್ದ ಇತರ ಪ್ರಮುಖ ವ್ಯಕ್ತಿಗಳನ್ನೂ 'ತಬರಾ' ಚಳವಳಿಯಿಂದ ಶಿಕ್ಷೆಗೊಳಗಾಗಿದ್ದ ಶಿಯಾ ಕೈದಿಗಳು ಮುತ್ತಿಗೆ ಹಾಕಿ ಧೂಳು ಕಲ್ಲುಗಳನ್ನೆಸೆದು ದೊಡ್ಡ ಗೊಂದಲವೆಬ್ಬಿಸಿದರು. ಶ್ರೀವತ್ಸವರಿಗೆ ಸಣ್ಣ ಜಖಮು ಕೂಡ ಆಗಿರುವದು. ಇದರ ಪರಿಣಾಮವಾಗಿ ಶಿಯಾ ಕೈದಿಗಳಿಗೆ ಕೊಡುತ್ತಿದ್ದ ಹೆಚ್ಚಿನ ಸೌಕರ್ಯಗಳನ್ನು ಜೈಲು ಸುಪರಿಂಟೆಂಡರು ರದ್ದು ಪಡಿಸಿರುವರು.

ರಾಜೀ ಪ್ರಯತ್ನ

ಶಿಯಾ ಮತ್ತು ಸುನ್ನೀ ಪಂಗಡದ ಪ್ರಮುಖರು ಮಹಾತ್ಮಾ ಗಾಂಧಿಯವರೊಡನೆ ತಮ್ಮ ಜಗಳದ ಕಾರಣವನ್ನು ನಿವೇದಿಸಿಕೊಂಡಿರುವರು. ಮಹಾತ್ಮರು ಇತ್ತಂಡದವರ ಹೇಳಿಕೆಯನ್ನು ಕೇಳಿಕೊಂಡು ಮೌಲಾನಾ ಅಬ್ದುಲ್ ಕಲಾಮ್ ಅಜಾದರಿಗೆ ತಂತಿಬಿಟ್ಟು ಮೌಲಾನರು ವರ್ಕಿಂಗ್ ಕಮಿಟಿ ಸಭೆಗಾಗಿ ಬೊಂಬಾಯಿಗೆ ಬರುವವರು ಲಕ್ನೋವಿನಲ್ಲಿ ನಿಂತು ಎರಡು ಪಕ್ಷೀಯರೊಳಗೆ ರಾಜಿ ಮಾಡಿಸಾತಕಬೇಕೆಂದು ತಿಳಿಸಿರುವರು.

ಟ್ರಾವಂಕೂರುಡೆಪ್ಯುಟೇಶನ್

ಟ್ರಾವಂಕೂರ್ ಕಾಂಗ್ರೆಸ್ ಕೆಲಸಗಾರರ ಡೆಪ್ಯುಟೇಶನೊಂದು ಗಾಂಧಿಯವರನ್ನು ಸಂದರ್ಶಿಸಿ 8 ಘಂಟೆಗಳ ತನಕ ಸಂಭಾಷಿಸಿರುವದು. ಮಹಾತ್ಮರು ಸಂಸ್ಥಾನಗಳ ಕುರಿತು ತನ್ನ ಧೋರಣೆಯನ್ನು ತಿಳಿಸಿ ತಿರುವಾಂಕೂರು ಸ್ಟೇಟ್ ಕಾಂಗ್ರೆಸಿನವರು ಅನುಕರಿಸಬೇಕಾದ ಕಾರ್ಯಕ್ರಮಗಳನ್ನೆಲ್ಲಾ ವಿವರವಾಗಿ ತಿಳಿಸಿದರು.

ಸೋಲಾಪುರದಲ್ಲಿ ಜಾತೀಯ ಉದ್ವೇಗ

ಬೊಂಬಾಯಿ ಸರಕಾರವು, ಹೈದರಾಬಾದಿನ ಸತ್ಯಾಗ್ರಹ ಸಮರಕ್ಕೆ ಬೆಂಬಲವೀಯುವ ಸೋಲಾಪುರ ಆರ್ಯ ಸಮಾಜದ ಮೇಲೆ ಪ್ರತಿಬಂಧಕಾಜ್ಞೆಯಿತ್ತಿರುವದು. ಬೊಂಬಾಯಿ ಸರಕಾರದ ವರ್ತನೆಯನ್ನು ಹಿಂದೂ ಧುರೀಣರಾದ ಶ್ರೀ ಸಾವರ್ಕರರು ತೀವ್ರವಾಗಿ ಖಂಡಿಸಿರುವರು. ಹಿಂದುಗಳ ಡೆಪ್ಯುಟೇಶನೊಂದು ಹೋಮ್ ಮಂತ್ರಿ ಶ್ರೀ ಕೆ. ಎಮ್. ಮುನ್ಶಿಯವರ ಬಳಿಗೆ ತೆರಳಿರುವದು.

ತಲ್ಚಾರ್ ಸಂಸ್ಥಾನದ ಸ್ಥಾನಭ್ರಷ್ಟರು

ಒರಿಸ್ಸಾ ಸಂಸ್ಥಾನಗಳ ಪ್ರಜೆ ಮತ್ತು ರಾಜರೊಳಗೆ ಕಳೆದ ಮಾರ್ಚಿಯಲ್ಲಾಗಿರುವ ಒಪ್ಪಂದಕ್ಕೆ ವಿರುದ್ಧವಾಗಿ ತಲ್ಚಾರ್ ರಾಜರು ಹೊರಿಸಿರುವ ನೆಲಕಂದಾಯವನ್ನು ವಿರೋಧಿಸಿ ಸುಮಾರು 15000 ಸಾವಿರ ಜನರು ಸ್ಥಾನಭ್ರಷ್ಟರಾಗಿರುವರೆಂದು ತಿಳಿದುಬರುತ್ತದೆ. ಒರಿಸ್ಸಾದ ಪ್ರಧಾನರಾದ ಶ್ರೀ. ವಿಶ್ವನಾಥ ದಾಸರು, ರಾಜಪ್ರತಿನಿಧಿ ಸರ್. ಬಿ. ಗ್ಲೇನ್ಸಿಯವರೊಡನೆ ಈ ಸಂಬಂಧದಲ್ಲಿ ಸುದೀರ್ಘ ಚರ್ಚೆ ನಡೆಸಿ ತಲ್ಚಾರಿನ ಪ್ರಶ್ನೆಯು ಕೇವಲ ಆರ್ಥಿಕ ಪ್ರಶ್ನೆಯೆಂದು ವಿದಿತಪಡಿಸಿರುವರು. ಸರ್. ಗ್ಲೇನ್ಸಿಯವರು ಸಹಾನುಭೂತಿಪರ ಉತ್ತರವಿತ್ತಿರುವರು.

ಮಾಜಿ ಜಡ್ಜರ ಪೆನ್ಶನಿಗೆ ಅರ್ಧಚಂದ್ರ ಪ್ರಯೋಗ

ತಿರುವಾಂಕೂರಿನ ಮಾಜಿ ಹೈಕೋರ್ಟು ಜಡ್ಜರಾದ ಶ್ರೀ. ಕೆ. ಪರಮೇಶ್ವರನ್ ಪಿಳ್ಳೆಯವರ ಪೆನ್ಶನನ್ನು ತಿರುವಾಂಕೂರು ಸರಕಾರವು ಮನ್ನಾಮಾಡಿರುವದು. ತಿರುವಾಂಕೂರಿನ ಕಾಂಗ್ರೆಸ್ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ ಶ್ರೀ. ಪಿಳ್ಳೆಯವರು ಭಾಷಣ ಕೊಟ್ಟಿರುವರೆಂದೂ 'ನವಕೇರಳಂ' ಪತ್ರಿಕೆಯಲ್ಲಿ ಆ ರೀತಿಯ ಲೇಖನಗಳನ್ನು ಕೊಟ್ಟಿರುವರೆಂದೂ ಸರಕಾರದ ಆರೋಪ. ಇದಕ್ಕುತ್ತರವಾಗಿ ಶ್ರೀ. ಪಿಳ್ಳೆಯವರು ಸರಕಾರದ ಆರೋಪವನ್ನಲ್ಲಗಳೆದು ರಾಜಕೀಯ ಕೆಲಸಗಾರರು ಇಂತಹ ತ್ಯಾಗಕ್ಕೆ ಸಿದ್ಧರಿರಬೇಕಾಗುವದೆಂದೂ ತನಗಾದ ಪ್ರಾಯಶ್ಚಿತ್ತವನ್ನು ಗಣಿಸದೆ ತಾನು ಎಂದಿನಂತೆ ಕರ್ತವ್ಯಮಾಡುವೆನೆಂದೂ ಹೇಳಿರುವರು.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

GONO KILLER ORIGINAL

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಶನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

Sole Manufacturer Dr. D. N. JASANI, Vitalbhai Patel Road, BOMBAY 4

THE
Canara Banking Corporation, Ltd.
(Incorporated in British India)
ESTD 1906

THREE YEARS' CASH CERTIFICATES
bearing interest at 4% p. a. in denominations of
Rs 50/-, 100/-, 500/-, 1,000/- & 5000/-
are now issued at
all our Branches.

For particulars call at or write to any of our nearest Branches

ನವಯುಗ

ಉಡುಪಿ, ಗುರುವಾರ, ತಾ. ೨-೬-೩೮

ಕಾಂಗ್ರೆಸ್ ಮಂತ್ರಿಗಳ ಪಾನನಿರೋಧ ಧೋರಣೆ

ಹಿಂದುಸ್ಥಾನದ ಹೆಚ್ಚಿನ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದೊಡನೆ ಅದು ಮೊದಲಾಗಿ ಪಾನನಿರೋಧ ಕಾರ್ಯವನ್ನು ಕೈಗೊಂಡುದರಲ್ಲಿ ಆಶ್ಚರ್ಯವೇನೂ ಇಲ್ಲ. ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಹಿಂದೀ ರಾಷ್ಟ್ರೀಯ ಸಭೆಯು ಸ್ವಾತಂತ್ರ್ಯಕ್ಕಾಗಿ ಹೂಡಿದ್ದ ಸಂಗ್ರಾಮದ ಮುಖ್ಯವಾದೊಂದು ರೀತಿಯು ಪಾನನಿಷೇಧವಾಗಿತ್ತು. ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸಮರದಲ್ಲಿ ಪಾನನಿರೋಧವು ಸೇರಿದುದು ತತ್ವದ ದೃಷ್ಟಿಯಿಂದಲ್ಲದೆ, ಆರ್ಥಿಕ ಪ್ರಶ್ನೆಯಾಗಿಯೂ ಅಲ್ಲ, ಬ್ರಿಟಿಷ್ ಸರಕಾರವನ್ನು ಬಗ್ಗುಬಡೆಯುವ ಸುಲಭೋಪಾಯವೆಂದೂ ಅಲ್ಲ. ಅಥವಾ ಆ ಕಾಲದಲ್ಲಿ ಸರಕಾರದ ವಿರೋಧವಾದರೂ ಚಳವಳಿಯೊಳಗಿನ ಉದ್ದೇಶದ ಕಾರಣವನ್ನು ಹೊಂದಿಕೊಂಡಿತ್ತು, ಕಾರ್ಯವನ್ನು ಹೊಂದಿಕೊಂಡಿರಲಿಲ್ಲ. ಪಾನನಿಷೇಧ ಮಾತ್ರದಿಂದ ಸರಕಾರವು ತಳಮಳಗೊಳಿಸಲ್ಪಡುವ ಸಂಭವನೀಯವಿದ್ದರೆ, ಅದು ಇಂದಿನ ಪರಿಸ್ಥಿತಿಯಿಂದ ಹೊರತು ಬಂದಿನ ನಾವು ಮಾತ್ರ ಹಸರಿಯಲ್ಲಿಲ್ಲ. ಆದರೆ ಗಾಂಧಿಯವರ ಧೋರಣೆಯು, ಹೋರಾಟದಲ್ಲಾಗಲೀ ವಿಧಾಯಕ ರೀತಿಯಲ್ಲಾಗಲೀ ತತ್ವಮಯವಾದುದು ಯುಕ್ತಿಯುಕ್ತವಾದುದಲ್ಲ ಇಂದು ಈ ತತ್ವದ ಆಚರಣೆಗೆ ಹೋರಾಟ ಬೇಕಿತ್ತು, ಇಂದು ಅದನ್ನು ನಿರಾತಂಕವಾಗಿ ಆಚರಣೆಯಲ್ಲಿ ತರುವ ಸೌಕರ್ಯ ಕಾಂಗ್ರೆಸಿಗೆ ದೊರೆತಿದೆ. ಕಾಂಗ್ರೆಸ್ ಮಂತ್ರಿಗಳು ಆ ಕಾರ್ಯಕ್ರಮವನ್ನೇ ಮುಂದಾಗಿ ಕೈಗೊಂಡಿರುತ್ತಾರೆ. ರಾಷ್ಟ್ರಸಭೆಯ ಹೃದಯದ ಪರಿಚಯ ಇದ್ದವರಿಗೆ ಇದರಲ್ಲೇನೂ ಆಶ್ಚರ್ಯ ಕಂಡು ಬರುವಂತಿಲ್ಲ.

ಕಾಂಗ್ರೆಸಿನೊಳಗಿಂದು ಬೇರೆ ಬೇರೆ ಹೆಸರನ್ನಿಟ್ಟುಕೊಂಡ ಪಕ್ಷಗಳಿವೆ. ಒಂದೊಂದರ ಸೈದ್ಧಾಂತಿಕ ಚಿತ್ರವನ್ನು ತಿಳಿಯಲಿಚ್ಛಿಸುವವರು ಸಂಸ್ಥೆಯೊಳಗೆ ಎರಡೇ ರೀತಿಗಳ ಭಿನ್ನಾಭಿಪ್ರಾಯವಿರುವುದನ್ನು ಕಾಣಬಹುದು. ಕಾಂಗ್ರೆಸಿನ ಗುರಿ ಮುಟ್ಟುವ ಶಕ್ತಿಯುಕ್ತಿಗಳನ್ನೇ ಅಧರಿಸಿಕೊಳ್ಳಬೇಕೆನ್ನುವವರ ಗುಂಪು ಒಂದು, ಎಲ್ಲವೂ ತತ್ವಗಳನ್ನೇ ಹೊಂದಿಕೊಂಡಿರಬೇಕೆನ್ನುವವರದಿನ್ನೊಂದು ಗುಂಪು. ಈ ಬಿನ್ನ ರೀತಿಗಳೊಳಗಿರುವ ವ್ಯತ್ಯಾಸವು ಇಂದಿನ ನಿರೋಧದ ಕಾರ್ಯಕ್ರಮದಿಂದ ಸ್ಪಷ್ಟವಾಗುತ್ತದೆ. ಮೊದಲನೆಯ ವರ್ಗದವರು ತತ್ವವಾದಿಗಳೂ ಕೂಡುವಂತಹ ಪ್ರಾಮುಖ್ಯತೆಯನ್ನು ಪಾನನಿಷೇಧಕ್ಕೀಯಬಾರದು. ಅವರ ದೃಷ್ಟಿಯು ಮುಂದಿರುವ ಸ್ವಾತಂತ್ರ್ಯವನ್ನೇ ರೂಪಿಸುವುದರ ಪಾನನಿಷೇಧವೊಂದು ದೊಡ್ಡ ಮೆಟ್ಟಲಲ್ಲ. ಆದರೆ ಕಾಂಗ್ರೆಸ್ ತತ್ವವಾದ, ಇಂದು ತತ್ವವಾದಿಗಳದೇ ಆಳ್ವಿಕೆ. ಕಾಂಗ್ರೆಸಿನೊಳಗೆ ಅವರಿಂದಲೇ ಎಲ್ಲವೂ ಮೊದಲಾಗಿ ಕೈಗೊಳ್ಳಲ್ಪಟ್ಟಿದೆ.

ಮಹಾತ್ಮರ ಪಟ್ಟಶಿಷ್ಯರಲ್ಲೊಬ್ಬರಾದ ಮಾನ್ಯ ಸಿ. ರಾಜಗೋಪಾಲಾಚಾರ್ಯರ ಆಳ್ವಿಕೆಯಲ್ಲಿರುವ ಮದ್ರಾಸು ಪ್ರಾಂತ್ಯದಲ್ಲಿ ಬೇರೆ ಕಡೆಗಳಿಗಿಂತ ಮೊದಲಾಗಿ ಪಾನನಿಷೇಧವು ಜಾರಿ ಮಾಡಲ್ಪಟ್ಟಿತು. ಈ ವರೆಗೆ ಸೇಲಂ, ಕಡಪ, ಚಿತ್ತೂರು ಜಿಲ್ಲೆಗಳಲ್ಲಿ ಪಾನನಿಷೇಧವು ಕಾನೂನು ಮೂಲಕ ಜಾರಿಯಾಗಿದೆ. ಕಾನೂನಿನಲ್ಲಿ ಇತ್ತೀಚೆಗೆ ತಿದ್ದುಪಡಿ ಬಾಷಣದಲ್ಲಿ ಮುಂದಿನ ವರುಷ ಹತ್ತು ಜಿಲ್ಲೆಗಳಿಗೆ ಈ ಕಾನೂನನ್ನು ಅನ್ವಯಿಸಲಾಗುವದೆಂದು ಮುಖ್ಯ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರ್ಯರೆಂದಿರುವರು. ಸರಕಾರವು ತಾನು ಹಿಡಿದ ಪಥದಲ್ಲಿ ಎಂದೂ ತತ್ತರಿಸದಂತೆ ಹಾಗೆ ಮುಂದೊತ್ತುವಾಗಲೇ ಹಿಡಿದು ಹಿಂದಕ್ಕೆ ಜಗ್ಗುವ ಆರ್ಥಿಕ ತೊಡಚಣೆಯಿದೆ. ಈ ತೊಡಕಿನ ಬಗ್ಗೆ ಯಾವ ಕಾಂಗ್ರೆಸ ಸರಕಾರಗಳೂ ಸಮರ್ಪಕವಾದ ವ್ಯಾಖ್ಯಾನವನ್ನಿತ್ತಿಲ್ಲ. ಈ ವರೆಗೆ ನಾಲ್ಕು ಜಿಲ್ಲೆಯಲ್ಲಿ ನಿಷೇಧವನ್ನು ಜಾರಿಗೆ ತಂದ ದೆಸೆಯಿಂದಾಗಿ ಬಜೆಟನ್ನು ಬಾಯಿಗೂಡಿಸುವರ ಹೊಸ ಕರಗಳನ್ನು ಹೊರಿಸಬೇಕಾಯಿತು. ಪ್ರಾಂತ್ಯದ ಜನತೆಯಂತೂ ಗುಣಗುಟ್ಟದೆ ತೆರಿಗೆಯೊಡ್ಡುವ ಕರವಾದ ಬುದ್ಧಿಯಿಂದ ತೆರಲು ಸಿದ್ಧವಿದ್ದಿಲ್ಲ. ಆದರೂ ಹೊಸ ತೆರಿಗೆಗಳನ್ನು ಹೇರಿಸದೆ ನಿರ್ವಾಹವಿಲ್ಲವೆಂದು ಮಾನ್ಯ ಆಚಾರ್ಯರು ಹೇಳಿದ್ದಾರೆ. ಪ್ರಧಾನರೇ ಅಂದಿರುವಂತೆ ಪ್ರಾಂತ್ಯದ ಮುಖ್ಯ ಉತ್ಪತ್ತಿ ಭೂ ಕಂದಾಯ. ಅದು ಮುಗ್ಗರಿಸ ಹತ್ತಾಗಿದೆ. ಕೈಕಸಗ ಎರಡನೆಯದೇ ಅಬಕಾರೀ ಉತ್ಪತ್ತಿ. ಈ ಉತ್ಪತ್ತಿಯನ್ನು ಪಡೆಯುವ ಹಣದ ಪಾಪ ಸಂಪಾದನೆ ಮಾಡಿದಂತೆ. ಹೀಗೆ ಮುಖ್ಯ ಮಂತ್ರಿಗಳು ಬೊಕ್ಕಸದಾಯವು 'ದೊಡ್ಡ ಹೊರೆಯಾಗಿದೆ' ಎಂದು ಅದರ ನಿವೇದನವನ್ನು ಮಾತ್ರ ಮಾಡಿ ಅಬಕಾರೀ ಹಣದ ದುರ್ವಾಸನೆಗಾಗಿ ಮೂಗು ಮುರಿದುಕೊಂಡು, ಅದನ್ನು ಬಿಟ್ಟೇ ಬಿಡುವ ಇಚ್ಛೆ ತೋರಿಸಿದ್ದಾರೆ. ಆರ್ಥಿಕ ದೃಷ್ಟಿಯಿಂದ ಇವರಡೂ ರೀತಿಗಳೂ ತಪ್ಪುಹೆಜ್ಜೆಗಳಾಗಬಹುದು. ಭೂಕಂದಾಯವು ಹೊರಲಾರದಷ್ಟಾಗಿದೆ ಎಂಬ ಬೊಬ್ಬೆಯು ದೀರ್ಘಕಾಲದಿಂದಿದೆ. ಪ್ರಾಂತ್ಯದ ಬೆಂಗೋಲೆಂದರೆ ರೈತನೆಂದು ಬೇರೆ ಹೇಳಬೇಕಾಗಿಲ್ಲ. ಕಾಂಗ್ರೆಸಿನ ಚುನಾವಣಾ ಘೋಷಣದಲ್ಲಿ ಭೂಕಂದಾಯವನ್ನರ್ಧದಷ್ಟು ಕಡಿಮೆಮಾಡುವ ಆಶ್ವಾಸನೆಯಿದ್ದಿತು. ಆದರೆ ರೈತರಿಗಿಂದು ಮಂತ್ರಿಗಳಿಂದ ಸಮಾಧಾನ ಸೂಚನೆ ಹೊರತು ಬೇರೇನೂ ದೊರೆಯುತ್ತಿಲ್ಲ. ಹೊಸ ಕರಗಳ ಶೋಧನೆ ಮಾಡುವ ಅಗತ್ಯಬಿದ್ದಿರುವ ಸರಕಾರವು ಕಂದಾಯ ಕಡಿಮೆಮಾಡುವ ಯೋಜನೆಯನ್ನೇ ಒದಿಗಿರಿಸಿದಂತಿದೆ. ಇದು ಪ್ರಕ್ಕೊ ಸಲ್ಲಕ್ಷಣವಲ್ಲ.

ಪಾನ ನಿಷೇಧವು ಕಾಂಗ್ರೆಸ್ ಸರಕಾರದ ಸಾಹಸ ಪೂರ್ಣ ಹೆಜ್ಜೆಯೆಂಬುದನ್ನು ಒಪ್ಪಿಕೊಳ್ಳಬೇಕು, ಪಾನವರ್ಜನೆಯು ಮಹಾಸದಾಚರಣೆಯೆಂಬುದನ್ನು ಒಪ್ಪಬೇಕು. ಮಾನ್ಯ ಆಚಾರ್ಯರು ಈ ಕಾನೂನಿನಿಂದ ಬಡಕೂಲಿಗಾರರಿಗಾಗುವ ಲಾಭವನ್ನು ಚೆನ್ನಾಗಿ ತಪ್ಪು ಬಿಡಿಸಿ ತೋರಿಸುತ್ತಾರೆ. ನಿಷೇಧ ಕಾನೂನು ಎಲ್ಲ ಕಡೆಗೂ ಬರಬೇಕೆಂದು ಆವಂತ್ರಿಸುವ ಜಿಲ್ಲೆಗಳೂ ಇವೆ. ಇಷ್ಟು ನ್ಯಾಯವೇ ಇದರಲ್ಲಿದೆ. ಆದರೆ ಪಾನ ಪದ್ಧತಿಯಿಂದ ಪಾಪವೊಂದೇ ತುಂಬಿದ್ದುದಲ್ಲ, ಸರಕಾರದ ಬೊಕ್ಕಸವೂ ತುಂಬುತ್ತಿತ್ತು. ಈ ವರೆಗೂ ಸರಕಾರದ ವ್ಯವಹಾರೀ ಬುದ್ಧಿಯಿಂದಾಗಿಯೇ ಅಬಕಾರಿ ಇಲಾಖೆಯು ಎದುಕೊಂಡು ಬದಿತ್ತು. ಇಂದಿನ ಕಾಂಗ್ರೆಸ್ ಸರಕಾರದನ್ನು ಕರ್ತವ್ಯವಿಸಿಕೊಳ್ಳುವಾಗ ತನ್ನ ಮೇಲೆ ಬೀಳುವ ಪೆಟ್ಟನ್ನು ನೋಡಿಕೊಳ್ಳಬೇಕು, ಆ ಪೆಟ್ಟನ್ನು ಒಡತೆರಿಗೆದಾರರ ತಲೆಯ ಮೇಲಕ್ಕೆ ವರ್ಗಾಯಿಸಲು ಸರಕಾರವು ನೋಡಬಾರದು. ಪಾನ ನಿಷೇಧವ ಸಲುವಾಗಿ ಹೊಸ ಹೊಸ ತೆರಿಗೆಗಳನ್ನು ಹೊರಿಸುತ್ತಾ ಬಂದು ಬಜೆಟನ್ನು ಸಮ ತೂಕಕ್ಕೆ ನಿಲ್ಲಿಸುವ ಪ್ರಯತ್ನವಾದರೆ, ಅದು ಒಂದು ತಪ್ಪನ್ನು ತಡೆದು ಹಾಕುವ ಮತ್ತೊಂದು ಅಪರಾಧವನ್ನು ಮಾಡಿದಂತೆಯೇ ಸರಿ. ಅದರಲ್ಲೂ ಒಂದು ಸತ್ಕಾರ್ಯಕ್ಕಾಗಿ ಹಲವು ತೆರಿಗೆಗಳು ಜಾರಿಗೆ ಬಂದಲ್ಲಿ 'ಮಾಡಿದ್ದೊಂದೇಯಾದರೂ ಬೇಡಿದ್ದು ನೂರು ಬಾರಿ' ಎಂಬಾತಿ ಜನರಲ್ಲಿ ಜಿಗುಪ್ಸೆಯುಂಟಾಗಬಹುದು. ನಮ್ಮ ಮುಖ್ಯ ಮಂತ್ರಿಗಳು ಪ್ರತಿಯೊಂದು ಕಾರ್ಯ ಹಲವು ದೃಷ್ಟಿಯ ಕಡೆಗೆ ನೀಡಿ ಪರಿಶೀಲಿಸುವವರು. ಪಾನ ನಿಷೇಧದಂತಹ ಸತ್ಕಾರ್ಯವನ್ನು ಮಾಡುವ ಆತುರದಲ್ಲಿ ಜನತೆಯು ಅನುಭವಿಸುವ ಹಣಕಾಸಿನ ತೊಂದರೆ ಹೆಚ್ಚಾಗಿ ಗಮನಿಸಬೇಕಾಗಿದೆ.

ತ್ರಿರಾಷ್ಟ್ರಗಳ ಒಪ್ಪಂದ

ಇಂಗ್ಲೆಂಡ್, ಫ್ರಾನ್ಸ್, ರಶ್ಯಗಳೊಳಗೆ ಪ್ರಾರಂಭವಾಗಿದ್ದ ಒಪ್ಪಂದದ ಮಾತುಕತೆ ಗೊಂದಲಕ್ಕೀಡಾಯಿತು. ಯಾಕೆಂದರೆ ಬ್ರಿಟನ್ ಫ್ರಾನ್ಸುಗಳೊಪ್ಪಿಸಿದ ಹೊಸ ಸೂಚನೆಗಳನ್ನು ರಶ್ಯವು ಅಂಗೀಕರಿಸಿಲ್ಲ. ಬಾಲ್ಟಿಕ್ ರಾಷ್ಟ್ರಗಳಿಗೆ ಇಂಗ್ಲೆಂಡು ಫ್ರಾನ್ಸುಗಳ ಭರವಸೆ ಈ ಸೂಚನೆಗಳಲ್ಲಿಲ್ಲ. ಹಿಟ್ಲರನು ಜೆಕೋಸ್ಲೋವೇಕಿಯದಲ್ಲಿ ಮಾಡಿದಲ್ಲಿ ಯಾವ ರೂಪದಿಂದಲಾದರೂ ಈ ರಾಷ್ಟ್ರಗಳೊಳಗೆ ನುಗ್ಗಿದನಾದರೆ ರಶ್ಯಕ್ಕೆ ಸುಮ್ಮನಿರಲು ಸಾಧ್ಯವಿಲ್ಲ. ಈ ಸಂಧಿ ಶರ್ತಗಳಂತೆ ಇಂಗ್ಲೆಂಡು ಫ್ರಾನ್ಸುಗಳು ಅಂತಹ ಸಂದರ್ಭದಲ್ಲಿ ರಶ್ಯವನ್ನು ಅನುಕರಿಸಬೇಕೆಂದೇನೂ ಇಲ್ಲ. ಒಪ್ಪಂದವೆಂದಾದ ಮೇಲೆ ಸಹಿ ಹಾಕಿದ ರಾಷ್ಟ್ರಗಳು ಸಮಾನತೆಯಿಂದ ಪರಸ್ಪರ ಸಹಾಯಮಾಡಿಕೊಳ್ಳುವಂತಿರಬೇಕು. ಇಂದಿನ ಒಪ್ಪಂದ ಸೂಚನೆಗಳಲ್ಲಿ ಕಾದಿಡಲ್ಪಟ್ಟ ವಿಷಯಗಳಿರುವದರಿಂದ ಅವನ್ನೊಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ರಶ್ಯವು ಉತ್ತರಕೊಟ್ಟಿರುವದು. ರಶ್ಯದ ಉತ್ತರದಲ್ಲಿ ಸಹಕಾರ ಸಾಧ್ಯವಾದ ಅಂಶವೂ ಇದೆ. ಆದ್ದರಿಂದ ರಾಜಿಯ ಆಶೆಯಿದೆ ಎನ್ನುತ್ತಿವೆ. ಇಂಗ್ಲೆಂಡು ಫ್ರಾನ್ಸುಗಳು ಅಂತು ರಶ್ಯ ಇನ್ನೂ ಸ್ವಲ್ಪ ಸುಧಾರಿಸುವ ಒಪ್ಪಂದ ಶರ್ತಗಳಲ್ಲಾಗಬೇಕಾಗಿದೆ. ಆಕ್ರಮಣಗಾರರು ಮುಂದೊತ್ತಿದಲ್ಲಿ ಸರಿಯಾದ ಪಾಠವನ್ನು ಕಲಿಸಿಬಿಡಬೇಕೆಂಬುದೇ ಸೋವಿಯೆಟಿನ ಇಚ್ಛೆ. ಅದರ ಧೋರಣೆಯು ಹೊಸತಾದುದೇನೂ ಅಲ್ಲ. ಯುರೋಪಿನ ಸಂದಿಗ್ಧ ಕಾಲಗಳಲ್ಲೆಲ್ಲಾ ಅಂತಹ ಧೋರಣೆಯನ್ನನುಸರಿಸುವ ಸೂಚನೆಯೊಡನೆ ರಶ್ಯವು ಮುಂದೆ ಬಂದಿತ್ತು. ಮುಖ್ಯತಃ ಬ್ರಿಟಿಷರಾಗ ಹಿಂಜರಿದಿದ್ದರು. ಈಗ ಧೋರಣೆಯನ್ನು ಮಾರ್ಪಡಿಸಿಕೊಂಡರೂ, ಅವರ ರಕ್ಷಣೋಪಾಯದಲ್ಲಿ ಯುಕ್ತಿಗಿಂತ ಪ್ರಮುಖ್ಯತೆ ಹೆಚ್ಚು. ಕಣ್ಣ ಮುಂದಿನ ತಮ್ಮ ಭವಣೆಗೊಂದು ಶಮನ ದೊರಕಿದರೆ ಸಾಕೆಂಬ ಅಭಿಪ್ರಾಯ. ರಶ್ಯವು ಅಂತಹ ದ್ವಂದ್ವತೆಯಿಂದ ವರ್ತಿಸಲು ಇಷ್ಟಪಡದ ಸ್ಪಷ್ಟವಾದ ರೀತಿಯನ್ನನುಸರಿಸಿದ, ಬ್ರಿಟಿಷರ ತಂತ್ರವು ಪೂರ್ತಿ ಅಪಜಯವೊಂದದೆ ಲೋಕಶಾಂತಿ ಸಾಧನೆಗೆ ತೊಡಕುಗಳು ತಪ್ಪಲಾರವಾದುದರಿಂದ ರಶ್ಯ ಸರಕಾರದ ಸುಸ್ಪಷ್ಟ ಸೂಚನೆಗಳು ಕಾಲೋಚಿತವಾದುವೆನ್ನಬೇಕು.

ಶಿಯಾ—ಸುನ್ನಿ ಸಂಗ್ರಾಮ

ಮುಸಲ್ಮಾನರ ಎರಡು ಪಕ್ಷಗಳಾದ ಶಿಯಾ ಮತ್ತು ಸುನ್ನಿಗಳೊಳಗೆ ಲಕ್ನೋವಿನಲ್ಲಿ ಪ್ರಾರಂಭವಾದ ಜಗಳವು ಕಳೆದ ಕೆಲವು ತಿಂಗಳುಗಳಿಂದ ಒಂದೇ ರೀತಿ ನಡೆಯುತ್ತಿದೆ. ಶಾಂತಿಪಾಲನೆಗಾಗಿ ಸರಕಾರವು ಶಿಯಾ ಪಂಥೀಯರ ಚಳವಳಿಕ್ಕೆ ತಡೆಹಾಕಿ, ಅಪ್ಪಣೆಯನ್ನುಲ್ಲಂಘಿಸಿದ ಶಿಯಾ ಸತ್ಯಾಗ್ರಹಿಗಳನ್ನು ಒಂದೇ ಸವನೆ ದಸ್ತಗಿರಿಮಾಡುತ್ತಿದೆ. ಅತ್ಯಾಶ್ಚರ್ಯದ ವಿಷಯವೆಂದರೆ, 'ಮುಸಲ್ಮಾನರೆಲ್ಲಾ ಒಟ್ಟಾಗಿ ಹೋರಾಡಬೇಕೆ'ಂದು ರಣಘರ್ಜನೆಯನ್ನೆಬ್ಬಿಸುತ್ತಿರುವ ಮಿ. ಜಿನ್ನಾರಂಥ ಧುರೀಣರು ಈ ಜಗಳದ ಕುರಿತು ಮುಯ್ನಿತ್ತಿದಿರುವರು! ಮಿ. ಜಿನ್ನಾರು ಶಿಯಾ ಪಂಥದವರು. ಹಿಂದುಸ್ಥಾನದ ಮಹಮ್ಮದೀಯ ರಾಜರು, ಶ್ರೀಮಂತರು, ಧುರೀಣರು ಇವರೆಲ್ಲಾ ಒಂದಲ್ಲೊಂದು ಪಕ್ಷಕ್ಕೆ ಸೇರಿದವರೇ. ಮೇಲಾಗಿ ಜಾತಿ, ಧರ್ಮವೇ ಸರ್ವಸ್ವವೆನ್ನುವವರೇ ಅಧಿಕ. ಇಂಥವರು ಈ ಧಾರ್ಮಿಕ ಜಗಳವನ್ನು ಇಷ್ಟೊಂದು ಭಯಂಕರವಾಗಲು ಬಿಟ್ಟಿದ್ದು ಲಾಂಛನಾಸ್ಪದ ಸಂಗತಿ. ಜಾತಿಮತ ವಾದಿಗಳ ಸಂಕುಚಿತತೆಯ ಒರಗಲ್ಲಾಗಿ ನಿಂತಿದೆ ಈ ತಿಕ್ಕಾಟ. ಅಣುವನ್ನು ಮಹತ್ತಾಗಿ ಮಾಡಿತೋರಿಸಿ, ಜನ

ಜಪಾನೀಯರ ಗಣನೀಯ ಅಪಜಯ —

ಸಾಮಾನ್ಯದ ಜಾತೀಯ ಮನೋವೃತ್ತಿಯನ್ನು ಕೆರಳಿಸಿ ಹೋರಾಟಕ್ಕೆ ಹುರಿದುಂಬಿಸಿ ಬಿಡುವುದು ಬಹು ಸುಲಭ. ಆ ಮೂಲಕ ಅಪೇಕ್ಷಿತ ಪ್ರತಿಫಲವಾದ ಧುರೀಣತ್ವವನ್ನು ದೊರಕಿಸಿಕೊಳ್ಳುವದೂ ಅಷ್ಟೇ ಸುಲಭ. ಆದರೆ ಹೀಗೆ ಕಲಿಸಲ್ಪಟ್ಟ ಕುಚೇಷ್ಟೆಯು ಬ್ರಹ್ಮಕಪಾಲದಂತೆ ತಮ್ಮ ಕೈಯನ್ನೇ ಕಚ್ಚಿಕೊಂಡಾಗ ಅದನ್ನು ಬಿಡಿಸಿಕೊಳ್ಳುವ ವಿದ್ಯೆ ಬಲ್ಲ ಧುರೀಣರಿಲ್ಲ! ಜಾತೀಯ ಜಗತ್ಪ್ರೇರಣೆಯಿಂದ ಮಹತ್ಕಾರ್ಯ ಮಾಡಿದೆವೆಂದು ಭಾವಿಸಿಕೊಳ್ಳುವ ಧುರೀಣರು ಶಿಯಾ ಸುನ್ನೀ ಸಂಗ್ರಾಮದಿಂದ ಪಾಠವನ್ನು ಕಲಿಯಬೇಕು. ಮುಸ್ಲಿಮ್ ಜಾತೀಯವಾದಿ ಧುರೀಣರಲ್ಲಿರುವ ಎತ್ತಿ ತೋರಿಸತಕ್ಕ ಕೊರತೆಯೆಂದರೆ ಮಿ. ಜಿನ್ನಾರಂಥವರೀ ವಿಷಯದಲ್ಲಿ ಪ್ರಯತ್ನವನ್ನು ಕೂಡ ಮಾಡಿಲ್ಲ. ಪ್ರತಿಷ್ಠಾ ಸಾಧಕರ ನಿಜರೂಪವು ಬಯಲಾಗುವದು ಇಂತಹ ಸನ್ನಿವೇಶಗಳಲ್ಲೇ ಸರಿ! ಈಗ ಮ. ಗಾಂಧಿಯವರ ಸೂಚನೆಯಂತೆ ಮೌಲಾನ ಅಬ್ದುಲ್ ಕಲಮ್ ಅಜಾದರು ಈ ರಾಜೀ ಪ್ರಯತ್ನಕ್ಕೆ ಕೈಹಾಕಿರುವದು ಶುಭವಾರ್ತೆಯೇ ಸರಿ.

ಶೋಚನೀಯ ಸಬ್ ಮೆರೀನ್ ಅಪಘಾತ.

ಬ್ರಿಟಿಷ್ ಸಬ್ ಮೆರಿನ್ 'ಥೆಟಿಸ್' ಇದಕ್ಕೊಳಗಾದ ದುರ್ದೆಶೆಯು ಬಹು ಶೋಚನೀಯವಾದುದು. ಇಂಗ್ಲಾಂಡು ಮಾತ್ರವಲ್ಲ, ಇಡೀ ಪ್ರಪಂಚವೇ ಅರಿಯುವ ರೀತಿಯಲ್ಲಿ ಉಸಿರುಗಟ್ಟಿ ಸಾಯುತ್ತಿದ್ದರೂ, ಸಬ್ ಮೆರೀನಿನೊಳಗಿನ ೮೯ ದುರ್ದೈವಿಗಳಿಗೆ ಯಾರಿಂದಲೂ ರಕ್ಷಣೆ ದೊರೆಯದಂತಾಗಿತ್ತು. ಇದು ಪ್ರಪಂಚದ ದುರ್ಘಟನೆಗಳಲ್ಲೊಂದೆನ್ನಬೇಕು. ಇಡೀ ಲೋಕವು ಇದಕ್ಕಾಗಿ ಸಹಸಂತಾಪ ಸೂಚಿಸಿದೆ. ಬ್ರಿಟಿಷ್ ಪತ್ರಿಕೆಗಳು ಈ ಅಪಘಾತದ ಕುರಿತು ಕೂಲಂಕಷ ವಿವರಣೆಯನ್ನು ಕೇಳಿವೆ. ಮಾನವನು ಪ್ರಕೃತಿಯ ಶಕ್ತಿಯನ್ನೆಲ್ಲಾ ವಿಜ್ಞಾನ ಬಲದಿಂದ ಉಪಯೋಗಿಸಕೊಳ್ಳಹತ್ತಿದ್ದಾನೆ. ಪ್ರಕೃತಿಯ ಮೇಲೆ ಅವನ ಅಧಿಕಾರವಿಂದು ನಡೆಯುತ್ತಿದೆ, ಆದರೂ ಎಲ್ಲವೂ ಅವನ ಅಂಕೆಗೊಳಪಟ್ಟಿಲ್ಲ. ಪ್ರಕೃತಿ ಮತ್ತು ಮಾನವರೊಳಗಿನ ಈ ಹೋರಾಟದಲ್ಲಿ ಮಾನವನ ಅಪಜಯಗಳು ಉಂಟಾಗುತ್ತಿವೆ. ಲಂಡನಿನ ಸಬ್ ಮೇರಿನ್ ಅಪಘಾತವು ಪ್ರಕೃತಿಯ ಶಕ್ತಿಯಿದಿರಲ್ಲಿ ಮಾನವನ ನಿಸ್ಸಹಾಯತೆಯನ್ನು ತೋರಿಸುತ್ತದೆ.

ಸೌಭಾಗ್ಯಸಿದ್ಧಿ ತಾಯಿತ

ದೇಹಸಂಪತ್ತು, ಕುಟುಂಬದ ಸುಖ-ಸೌಖ್ಯ, ಉದ್ಯೋಗದಲ್ಲಿ ಯಶಸ್ಸು, ವಿದ್ಯೆಯಲ್ಲಿ ಜಯ, ಕೋರ್ಟು ವ್ಯವಹಾರದಲ್ಲಿ ಗೆಲುವು, ದುರಾದೃಷ್ಟಗಳ ದುಷ್ಟಪೀಡೆ ನಿವಾರಣೆ ಇನ್ನಿತರ ಸುಖ-ಸೌಭಾಗ್ಯಾದಿ ಲಾಭಕ್ಕಾಗಿ 'ಜಯ ವಶೀಕರಣ' ತಾಯಿತವನ್ನೇ ಧರಿಸಿರಿ.

ಕ್ರಯ: ರೂ. 2-8-0. ವಿ. ಪಿ. 0-7-0

ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Hanuman Ashramam,
Tiruttani, S. India.

ದಿ. ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಈ ಸಂಸ್ಥೆಯ 1938ನೇ ವರ್ಷಾಂತ್ಯದ ಇಪ್ಪತ್ತೆಂಟನೇ ವರ್ಷದ ವರದಿಯೂ ಆಯವ್ಯಯ ಮತ್ತು ಶಿಲ್ಕು ನೊಬಲಗು ಪಟ್ಟಿಯೂ ನಮ್ಮ ಮುಂದಿರುವುದು. ಇದರಿಂದ ಕಂಪೆನಿಯು ಸರ್ವತೋಮುಖವಾದ ಪ್ರಗತಿಯನ್ನು ಹೊಂದಿ, ಮುನ್ನಡೆಯುತ್ತಿದೆಯೆಂಬುದು ವಿದಿತವಾಗುತ್ತದೆ. ವರದಿಯ ವರ್ಷದಲ್ಲಿ ಒಂದು ಕೋಟಿಗೂ ಮಿಕ್ಕಿದ ನೊಬಲಗಿನ ವಿಮಾ ಸೂಚನಾಪತ್ರಗಳು (Proposals) ಬಂದಿದ್ದುವೆಂಬುದು ಈ ಕಂಪೆನಿಯ ಇತಿಹಾಸದಲ್ಲಿ ಹೊಸದು, ಇದರಿಂದ ಕಂಪೆನಿಯ ಭವಿಷ್ಯವು ಇನ್ನಷ್ಟು ಜಾಜ್ವಲ್ಯಮಾನವಾಗಿ ವಿರಾಜಿಸಬಹುದೆಂದು ನಿರೀಕ್ಷಿಸಬಹುದಾಗಿದೆ.

ಕಳೆದ ಇಪ್ಪತ್ತೆಂಟು ವರ್ಷಗಳಿಂದ ಇದರ ವ್ಯವಹಾರ ದಿನದಿನಕ್ಕೆ ಅಸಾಮಾನ್ಯ ರೀತಿಯಲ್ಲಿ ಅಭಿವೃದ್ಧಿ ಹೊಂದುತ್ತದೆ ಎಂಬುವಕ್ಕೆ ಅದರ ಕಾರ್ಯಕಲಾಪಗಳೇ ಸಿದ್ಧವಾಗಿವೆ ವರದಿಯ ವರ್ಷದಲ್ಲಿ ರೂ. 76, 84, 687 ಮಾತ್ರದ 4931 ವಿಮಾ ಪತ್ರಗಳು ಸ್ವೀಕೃತವಾದುವು. ಮಾತ್ರವಲ್ಲದೆ ಈ ವರ್ಷದ ಪ್ರೀಮಿಯಮ್ ಆದಾಯವು ರೂ. 19,26,993-11-0 ಇರುವುದು. ಮತ್ತು ಕಂಪೆನಿಯ ಒಟ್ಟು ಆದಾಯವು ರೂ. 22,34,301-3-3 ಎಂಬುದು ಅಭಿನಂದನೀಯವಿದೆ. ವರ್ಷಾಂತ್ಯದಲ್ಲಿ ವಿಮಾ ಭಂಡವಾಳವು ರೂಪಾಯಿ 67,66,528-3-10ಕ್ಕೆ ಏರಿರುವುದು. ಚಾಲ್ತಿಯಲ್ಲಿರುವ ವಿಮೆಯ ಮೊತ್ತವು ರೂ. 361,56,764 ಎಂಬುದು ಅಭಿಮಾನಾಸ್ಪದವಾದ ವಿಷಯವಿದೆ. ಕಂಪೆನಿಯ ಮೇಲ್ಮೆಯು ರಭಸದಿಂದ ಸಾಗುತ್ತಿದೆಯೆಂಬುದು ಅದರ ಅಂತ್ಯ ಸಂಖ್ಯೆಗಳಿಂದ ಸ್ಪಷ್ಟವಾಗುತ್ತದೆ.

ಕಂಪೆನಿಯು ಭದ್ರತೆಯ ತಳಹದಿಯ ಮೇಲೆ ನಿಂತಿರುವುದೆಂಬುದನ್ನು ಅದರ ವಿಮಾ ಭಂಡವಾಳ ಮತ್ತು ಉತ್ಕೃಷ್ಟ ಭದ್ರತೆಯಿಂದ ಕೂಡಿದ ಅದರ ಆಸ್ತಿಯ ವಿನಿಯೋಗಗಳ ವಿಚಾರವು ವ್ಯಕ್ತಗೊಳಿಸುವುದು. ಕಂಪೆನಿಯು ವರದಿಯ ಮೊದಲಣ ವರ್ಷ ರೂ. 27,000ವನ್ನು ಕ್ಷೇಮನಿಧಿಗೆ ಸೇರಿಸಿರುವುದು ಮತ್ತು ರೂ 50,000ವನ್ನು ಕಳೆದ ವರ್ಷದಲ್ಲಿಯೂ ವರದಿಯ ವರ್ಷದಲ್ಲಿ ರೂ. 14,000ವನ್ನೂ ಆಸ್ತಿ ವಿನಿಯೋಗ ವಿರಳಿತ ಆಪದ್ಧನ ಭಂಡವಾಳಕ್ಕೂ ಜೋಡಿಸಿರುವುದೆಂಬುದು ಆಡಳಿತ ಮಂಡಲದ ಕಾರ್ಯ ಜಾಣ್ಮೆಯನ್ನೂ ಮುಂಜಾಗ್ರತೆಯನ್ನೂ ವ್ಯಕ್ತಗೊಳಿಸುವುದು. ಏಶಿಯನ್ ವಿಮಾಸಂಸ್ಥೆಯನ್ನು ವಿಮಾ ಸಾಮ್ರಾಜ್ಯದಲ್ಲಿ ಮೇಲೇರಿಸಿದ ಕೀರ್ತಿಯು ಆಡಳಿತ ಮಂಡಲದವರಿಗೆ ಸಲ್ಲುವದು; ನಾವೀ ಬಾರಿ ಇದಕ್ಕಾಗಿ ಆಡಳಿತ ಮಂಡಲವನ್ನೇ ಅಭಿನಂದಿಸುವೆವು. ಕನ್ನಡ ನಾಡಿನಲ್ಲಿ ಏಶಿಯಾನಿನ ಮೇಲ್ಮೆಗಾಗಿ ದುಡಿಯುತ್ತಿರುವ ಜನಪ್ರೀತ ಮಂಗಳೂರು ಶಾಖೆಯ. ಮೆನೇಜರರಾದ ಶ್ರೀಯುತ ಜೆ. ಎ ಪುತ್ರನರ ಕಾರ್ಯೋದ್ಯಮವೂ, ಉತ್ಕೃಷ್ಟ ಧ್ಯೇಯ ಸಾಧನೆಯೂ ಶ್ಲಾಘನೀಯವಿದೆ. ಈ ಸಂಸ್ಥೆಯು ಇನ್ನಷ್ಟು ಅಭಿವೃದ್ಧಿ ಹೊಂದಿ ಬಾಳಿ ಬೆಳಗಲೆಂದು ನಮ್ಮ ಹಾರ್ದಿಕೆಯಿದೆ.

ಜಪಾನಿಯರ ಗಣನೀಯ ಅಪಜಯ

ಉತ್ತರ ಹುಪೆ ರಣಕ್ಷೇತ್ರ ಜಪಾನಿಯರು ಚೀನೀಯರಿಂದ ಬಲವಾದ ಹೊಡೆತ ತಿಂದು ಹಿಮ್ಮೆಟ್ಟಿರುವರು. ಜಪಾನರ ಕಡೆಯಲ್ಲಿ ವಿಪರೀತ ಪ್ರಾಣ ನಷ್ಟವಾಗಿದೆ ಕಳೆದ ೨೩ ತಿಂಗಳ ಯುದ್ಧದಲ್ಲಿ ತಮ್ಮ ಕಡೆಯ ಸತ್ತವರನ್ನು ಮತ್ತು ಘಾಯಗೊಂಡವರನ್ನು ಬಿದ್ದಲ್ಲೇ ಬಿಟ್ಟು ಜಪಾನರೋಡಿದುದು ಇದೇ ಮೊದಲ ಬಾರಿಯಂತೆ. ಅಲ್ಲಿಯ ಯುದ್ಧದಲ್ಲಿ ಚೀನೀಯರಿಗೆ ವಿಷಮ ಪರಿಸ್ಥಿತಿಯುಂಟಾದೊಡನೆ ಟಿಯೆಂಟ್ಸಿನ ನಗರ ಸಭೆಯ ಹಿಂದಿನ ಅಧ್ಯಕ್ಷ ಜನರಲ್ ಚಾಂಗ್ತ್ರೆಚುಂಗ್ ಇವರು ಎರಡು ದಳಗಳನ್ನು ಸ್ವತಃ ಮುನ್ನಡೆಸಿ ಜಪಾನಿ ಸೈನಿಕರ ಮೇಲೆ ಬೆಯೊನೆಟ್ ತಿವಿತದೊಡನೆ ಬಿದ್ದರು. ಜಪಾನು ಸೈನ್ಯವು ಬಲವಾದ ಅಪಜಯ ಹೊಂದಿತು. ಚಿಯಾಂಗ್ ಕೈಶೇಕರು ಜನರಲ್ ಚುಂಗ್‌ರವರ ಧೈರ್ಯಕ್ಕಾಗಿ ಅಭಿನಂದಿಸಿರುವರು.

ಮದ್ರಾಸಿನ ಬಿಸಿ!

ಮದ್ರಾಸಿನಲ್ಲಿ ಈ ವರ್ಷ ಬಿಸಿಯು ಅಸಾಮಾನ್ಯವಾದುದಿದ್ದು ಪರಿಣಾಮವಾಗಿ ಕೆಲವರು ಮರಣಹೊಂದಿರುವರು. ಪೆರಂಬೂರಿನ ಕರ್ನಾಟಿಕ ಮಿಲ್ಲುಗಳ ಸಹಾಯಕ ಇಂಜಿನೀಯರೊಬ್ಬರು ಉಷ್ಣ ಕಿರಣದಿಂದಾಗಿ ಮೃತಪಟ್ಟಿರುವರು. ಕಳೆದ ತಾ. 3ರಲ್ಲಿ 109 ಡಿಗ್ರಿಗಳ ಉಷ್ಣವಿತ್ತಂತೆ

ಎಲ್ಲೋರಿನ ಬಳಿಯಲ್ಲಿ ಬೆಂಕಿ

ತಾ. 30ರಲ್ಲಿ ಎಲ್ಲೋರಿಗೆ ಐದು ಮೈಲು ದೂರದ ರಸ್ತೆ ಬದಿಯ ಹಳ್ಳಿಯೊಂದಕ್ಕೆ ದೊಡ್ಡ ಬೆಂಕಿ ಹಿಡಿದು ಊರಿನ 2/3 ರಷ್ಟು ಮನೆಗಳೆಲ್ಲಾ ಸುಟ್ಟು ಹೋಗಿವೆ. ನಾಲ್ಕು ವರ್ಷ ಪ್ರಾಯದ ಒಂದು ಮಗುವೂ ಒಬ್ಬ ಹೆಂಗಸೂ ಬೆಂಕಿಗಾಹುತಿಯಾಗಿರುವರು.

'ಏಸ್ಯಾಟಿಕ್ ಮಸೂದೆ' ಮಂಜೂರಾಯಿತು

ದಕ್ಷಿಣಾಫ್ರಿಕದ ಯೂನಿಯನ್ ಎಸೆಂಬ್ಲಿಯಲ್ಲಿ ಹಿಂದೀ ವಿರುದ್ಧ 'ಏಸ್ಯಾಟಿಕ್ ಮಸೂದೆ'ಯು ಮೂರನೇ ವಾಚನವೊಡನೆ ಮಂಜೂರಾಯಿತು. ಡಾ। ಮಲನ್‌ರವರು ಈ ಪ್ರಶ್ನೆಯಲ್ಲಿ ಕೈಹಾಕಿದ ಹಿಂದೀ ಸರಕಾರದ ವರ್ತನೆಯನ್ನು ಖಂಡಿಸಿದರು. ಹಿಂದೀಯರು ಈ ಮಸೂದೆಯನ್ನು ಪ್ರತಿಭಟಿಸಿದರೂ ಪ್ರಯೋಜನವಾಗಲಿಲ್ಲ.

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906
CANARA BANK
LIMITED

NOTICE

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 104/36 R I A 24/1939

ಸಪ್ರೋಕತ್ತನು ಮಲ್ಯ ಕೂಡಾ — ವಾದಿರು

ಮತ್ತು

ರುಕ್ಕಯ್ಯ ಸಟ್ಟಿ ಕೂಡಾ — ಪ್ರತಿವಾದಿರು

೨ನೇ ಪ್ರತಿವಾದಿ-ವಾಸು ಸಟ್ಟಿ, ರುಕ್ಕಯ್ಯ ಸೆಟ್ಟಿ ಆಳಿಯ ಮಂಗಳೂರು ತಾಲ್ಲೂಕು ಉಳಿಪಾಡಿ ಗ್ರಾಮಸ್ಥ. ಹಾಲಿ ಈಗ Coffee Hotel Keeper, Nana s Pet, Gondalis Chowk, Poona City ಎಂಬಲ್ಲಿರುತ್ತಾನೆ. ಮೇಲ್ಕಂಡ ದಾವೆಯಲ್ಲಿ ಕೊಡಬೇಕಾದ ಡಿಕ್ರಿಯನ್ನು ಎಪ್ಪಲೆಟ್ ಮಾಡಿ ಫೈನಲ್ ಡಿಕ್ರಿಕೊಡಬೇಕಾಗಿ ದಾಖಲು ಮಾಡಿದ ಸದ್ರಿ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ೨ನೇ ಪ್ರತಿವಾದಿಯ ಹಾಜರಾತಿ ಬಗ್ಗೆ ತಾ. 19-6-1939ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಆ ದಿವಸ ಬೆಳಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗದಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಲಾಗುತ್ತದೆ.

(ಕೋರ್ಟು ಹುಕುಂ ಪ್ರಕಾರ)

(Sd) **K. Venkatesha Pai.**
ಅರ್ಜಿದಾರರ ಕಡೆ ವಕೀಲ್.

ಕಾರ್ಕಳ, ತಾ. 6-6-1939

ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಯಿ

ಇದರ 36ನೇ ವರ್ಷಂತ್ಯುತ್ಸವವೂ, ಮೊಗವೀರ ಫ್ರೀ ನೈಟ ಸ್ಕೂಲಿನ ಪಾರಿತೋಷಕ ಸಂತೋಷದ ಸಮಾರಂಭವೂ ತಾ 28 5-39ರಲ್ಲಿ ಸರ್ ಕವಾಸ್ಜಿ ಜಹಾಂಗೀರ್ ಹೋಲಿನಲ್ಲಿ ಆನರೇಬಲ್ ಡಾ ಯಸ್ ಎಲ್. ಡಿ. ಆರ್ಸ್ ... ಪ್ರಿನ್ಸಿಪಾಲರಾದ, ಡಿ ಕ್ಟರ್, ಎ ಕೆ ಜಿ , ಎ ರೀನ್, ಯ.ವ. ಎ. ಪಿ. ಪಿ.ಎಚ್. ಡಿ. (ಕೇಂಬ್ರಿಜ್) ಇವರ ಸನ್ಮಾನ್ಯಾಧ್ಯಕ್ಷತೆಯಲ್ಲಿ ನಡೆಯಿತು.

ದೇವತಾ ಪ್ರಾರ್ಥನೆ, ಸ್ವಾಗತ ಪದ್ಯ, ಮತ್ತು ಮಂಡಳಿಯ ಸಂಕ್ಷಿಪ್ತ ಚರಿತ್ರೆಯ ವಾಚನವನ್ನು ಶ್ರೀ. ಟಿ ಎ ಕರ್ಕೇರರು ಮಾಡಿದರು. ಬಳಿಕ ವಿದ್ಯಾರ್ಥಿಗಳಿಗೆ ಪಾರಿತೋಷಕಗಳನ್ನೀಯಲಾಯಿತು.

ಮಂಡಳಿಯ ... ಶ್ರೀ ... ಭಟ್ಟ ... ಎ. ಮಾಸ್ತರರ ... ಧನವನ್ನಿತ್ತು ಮಂಡಳಿಯು ಸ್ಥಾಪಿತವಾದಂದಿನಿಂದ ಇದುವರೆಗೆ ಕೆಲಸಮಾಡಿ ಸದ್ಯ ತನ್ನ ಉದ್ಯೋಗದಿಂದ ನಿವೃತ್ತಿ ಹೊಂದಿ ಮಾತೃಭೂಮಿಗೆ ತೆರಳುತ್ತಿದ್ದುದರಿಂದ ಅವರಿಗೆ ಮಂಡಳಿಯ ಪರವಾಗಿ ಬೆಳ್ಳಿಯ ಕಾಸ್ಕೆಟಿನೊಳಗೆ (Casket) ಹಾಕಿ ಒಂದು ಮಾನಪತ್ರವನ್ನು ಅರ್ಪಿಸಲಾಯಿತು. ಶ್ರೀಯುತ ಮಾಸ್ತರರು ತಮಗೆ ಮಂಡಳಿಯವರಿಟ್ಟಿರುವ ಅಪಾರ ಪ್ರೇಮವನ್ನೂ ಅಭಿಮಾನವನ್ನೂ ಸೂಚಿಸಿ ಸಭೆಯವರಿಗೆ ಸಂತೋಷವಾಗುವಂತೆ ಪ್ರತ್ಯುತ್ತರವನ್ನಿತ್ತರು. ಬಳಿಕ ದಯಮಾಡಿಸಿದ್ದವರ ಸ್ವಾಗತ ... ರುಮಾರ್ಕ್ಸ್ ... ಸ್ವಾಮಿ ... ಯವರು, ರಾಕ್ಟರ್, ಯಸ್ ಜಿ. ಮಾಡ್ವೆ, ಪಿ. ಎಚ್ ಡಿ ಮಾ ಯಂ ಆರ್ ಶೆಟ್ಟಿ, ಡಾ. ಬೇಂಗರ್ಸ್ ಮತ್ತು ಶ್ರೀ ಕೆ ಯನ್. ಗ್ಯಾತ್ರಿಂಡೆ ಮೊದಲಾದವರು ಮಂಡಳಿಗೆ ಉತ್ತರೋತ್ತರ ಶ್ರೇಯಸ್ಸನ್ನು ಬಯಸಿ ಅನೇಕ ಹಿತಸೂಚನೆಗಳನ್ನಿತ್ತರು.

ಸಭಾಧ್ಯಕ್ಷರು ತನ್ನ ಉಪಸಂಹಾರ ಭಾಷಣದಲ್ಲಿ ಹೀಗೆಂದರು: ಈಗಿನ ಕಾಲದಲ್ಲಿ ಇತರ ಎಲ್ಲಾ ಜನಾಂಗವು ವಿದ್ಯೆಯಲ್ಲಿ ಅದೆಷ್ಟು ವೃದ್ಧಿ ಹೊಂದಿ ಮುಂದುವರಿದಿದ್ದಾಗ್ಯೂ ನಮ್ಮ ಹಿಂದುಸ್ಥಾನವು ಇನ್ನೂ ವಿದ್ಯಾವಿಹೀನರಾಗಿರುವುದನ್ನು ಕಂಡರೆ ಹಿಂದುಸ್ಥಾನದ ಆಮಾನಕ್ಕೆ ನಾಚಿಕೆಯಾಗದಿರದು.' ಅನ್ಯದೇಶದವರು ಹೀಗೆ ವಿದ್ಯಾವಂತರಾಗಲು ಆಯಾಯ ದೇಶದ ಸರಕಾರವೇ ಕಾರಣವಾಗಿದೆ. ನಿರಕ್ಷರಕುಕ್ಷಿತನವು ಈ ರೀತಿ ಹಿಂದುಸ್ಥಾನದಲ್ಲಿ ನೆಲೆಗೊಂಡಿದ್ದರಿಂದಲೇ ಅದನ್ನು ಹೋಗಲಾಡಿಸಲು ಮೊಗವೀರ ವ್ಯವಸ್ಥಾಪಕ ಮಂಡಳಿಯಂತಹ ಸಂಘಸಂಸ್ಥೆಗಳು ನಿರ್ಮಾಣವಾಗಲು ಕಾರಣವಾಯಿತು. ಇದರ ಸ್ಥಾಪಕರಿಗೆ ಮತ್ತು ಚಾಲಕರಿಗೆ ಎಷ್ಟು ಅಭಿನಂದನೆ ಮಾಡಿದರೂ ಸಾಲದು. ರಾತ್ರಿ ಶಾಲೆಗಳ ಪೈಕಿ ಮೊಗವೀರ ರಾತ್ರಿ ಶಾಲೆಯು ಅತೀ ದೊಡ್ಡದಾಗಿದೆ. ಈ ಶಾಲೆಯಲ್ಲಿ ಕಳೆದ 16 ವರ್ಷಗಳಲ್ಲಿ 4000ಕ್ಕೆ ಮಿಕ್ಕಿದ ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣವನ್ನು ಪಡೆದಿರುವರು. ಇದನ್ನು ಕಂಡು ಪ್ರತಿಯೊಬ್ಬ ಕನ್ನಡಿಗನೂ ಅಭಿಮಾನಪಡಬೇಕಾಗಿದೆ ಮಾತ್ರವಲ್ಲದೆ ಇದರ ಚಾಲಕರಿಗೆ ಅದನ್ನು ಪ್ರೋತ್ಸಾಹಕೊಡುವಂಥದ್ದು ಪ್ರತಿ ಒಬ್ಬನ ಅತ್ಯಂತ ಕರ್ತವ್ಯವಾಗಿದೆ.

ತಮ್ಮ ಸ್ತ್ರೀಯರಿಗೆ ವಿದ್ಯಾಭ್ಯಾಸಕೊಡದಿರುವುದರಿಂದಲೇ ಕನ್ನಡಿಗರು ವಿದ್ಯೆಯಲ್ಲಿ ಇಷ್ಟು ಹಿಂದೆ ಬಿದ್ದಿರುವರು. ಆದ್ದರಿಂದ ಬಾಲಕಿಯರಿಗೆ ಸಹ ವಿದ್ಯೆ ಕೊಡುವ ಏರ್ಪಾಡು ಮಾಡಬೇಕು. ಅಲ್ಲದೆ ಎಲ್ಲಾ ಕನ್ನಡಿಗರೂ ಒಟ್ಟು ಸೇರಿ ಕನ್ನಡಭಾಷೆಯನ್ನು ಅಭಿವೃದ್ಧಿ ಮಾಡಲಿಕ್ಕೆ ಪ್ರಯತ್ನಮಾಡಬೇಕು. ಅಂತ್ಯದಲ್ಲಿ ಶ್ರೀ ರಾಯರು ಈ ಮಂಡಳಿಯು ನಡಿಸಿಕೊಂಡು ಬರುವ ರಾತ್ರಿಶಾಲೆಗೆ ಬೇಕಾದಷ್ಟು ಸಹಾಯ ಮಾಡುವುದು ಸರಕಾರದ ಕರ್ತವ್ಯವಿದೆ ಎಂಬಿವೇ ಮೊದಲಾದ ಉಪಯುಕ್ತ ಬೋಧನೆಯನ್ನಿತ್ತು ಮಂಡಳಿಗೆ ಅಭಿವೃದ್ಧಿಯನ್ನು ಹಾರೈಸಿ ತಮ್ಮ ಭಾಷಣವನ್ನು ಮುಗಿಸಿದರು.

ಕರ್ನಾಟಕದ ಸುಪ್ರಸಿದ್ಧ ಸಂಗೀತ ವಿದ್ವಾನ್ ಜಿ ಆನಂದರಾಯರೂ, ಮತ್ತು ಅವರ ಪಾರ್ಟಿಯವರು ಕೊಳಲು, ಗಾಯನ ನರ್ತನ ಮೊದಲಾದವನ್ನು ಹಾಡಿ ಸಭಿಕರನ್ನು ಆನಂದಗೊಳಿಸಿದರು. ಶ್ರೀಯುತ ಯಚ್. ಕೆ. ಕುಂದರರು ಅಧ್ಯಕ್ಷರ ಮತ್ತು ನೆರೆದ ಸಭಿಕರ ಉಪಕಾರ ಸ್ಮರಿಸಿದ ನಂತರ ಸಭೆಯು ಕೊನೆಗೊಂಡಿತು

ಉ ಡು ಪಿ

ಮಣಿಪಾಲದಲ್ಲಿ ವಯಸ್ಕರ ವಿದ್ಯಾಭ್ಯಾಸ ಯೋಜನೆ—ಡಾ! ಟಿ ಮಾಧವ ಪೈಗಳವರ ನೇತೃತ್ವದಲ್ಲಿ ಮಣಿಪಾಲದಲ್ಲಿ ಪ್ರಾರಂಭವಾದ ವಯಸ್ಕರ ವಿದ್ಯಾಭ್ಯಾಸ ಯೋಜನೆಯ ಪ್ರಾರಂಭ ಸಭೆಯು ಶ್ರೀ. ಪಿ. ಎ. ಪೈಗಳವರ ಅಧ್ಯಕ್ಷತೆಯಲ್ಲಿ ತಾ. 4–6–39ರಲ್ಲಿ ಮಣಿಪಾಲ ಶಾಲೆಯಲ್ಲಿ ನಡೆಯಿತು. ಶ್ರೀಗಳಾದ ಕೆ. ಹೈದರ್ ಟಿ. ರಾಮರಾಯ ಪೈ, ಬಿ. ರಾಮಚಂದ್ರ, ಕಾಮತ , ಟಿ. ಜತನ್ನರವರೇ ಮೊದಲಾದವರು ವಯಸ್ಕರಿಗೆ ಅಕ್ಷರಾಭ್ಯಾಸದಿಂದ ದೊರೆವ ಪ್ರಯೋಜನ ಇತ್ಯಾದಿಗಳನ್ನು ವಿವರಿಸಿ ಮಣಿಪಾಲದಲ್ಲಿ ಆ ಯೋಜನೆಯ ಜಯಶೀಲತೆಗೆ ಇರುವ ಸೌಕರ್ಯಗಳನ್ನು ತಿಳಿಸಿ ಕೂಲಿಗಾರರ ಉತ್ಸಾಹದಿಂದ ಇದರಲ್ಲಿ ಭಾಗವಹಿಸಬೇಕೆಂದು ಕೇಳಿಕೊಂಡರು. ಅಧ್ಯಕ್ಷರು ಕೆಲಸಗಾರರ ಹಿತದೃಷ್ಟಿಯಿಂದ ಪ್ರಾರಂಭಿಸಲ್ಪಟ್ಟ ಈ ಯೋಜನೆಯನ್ನು ಉತ್ಸಾಹದಿಂದ ಮುಂದೊತ್ತುವದು ಎಲ್ಲರ ಆದ್ಯ ಕರ್ತವ್ಯವೆಂದು ವಿವರಿಸಿ ಭಾಷಣವಿತ್ತರು. ಕೆಲಸಗಾರರು ಬಹು ಸಂಖ್ಯೆಯಿಂದ ನೆರೆದಿದ್ದರಲ್ಲದೆ ಶಾಲೆಗೆ ಸೇರಲೊಪ್ಪಿರುವರು.

'ಕರ್ನಾಟಕ ಸೇವಾ ಮಂಡಳಿ' ಎಂಬ ಸಂಘವನ್ನು ಸದ್ಯದಲ್ಲೇ ಮಣಿಪಾಲದಲ್ಲಿ ತೆರೆಯುವ ಏರ್ಪಾಡಾಗುತ್ತಿದೆ. ಈ ಸಂಘದ ಆಶ್ರಯದಲ್ಲಿ ಭಾಷಣ, ಕೀರ್ತನೆ, ಯಕ್ಷಗಾನ, ಮೊದಲಾದವುಗಳ ಮೂಲಕ ಜನಜಾಗೃತಿಯನ್ನುಂಟು ಮಾಡುವ ಕಾರ್ಯವು ಕೈಗೊಳ್ಳಲ್ಪಡಲಿರುವದು. ಸಾರ್ವಜನಿಕರು ಪ್ರೋತ್ಸಾಹಿಸಬೇಕೆಂದೂ ಹೆಚ್ಚಿನ ಮಾಹಿತಿ ಬಗ್ಗೆ ತಮಗೆ ಬರೆದು ತಿಳಿಯಬಹುದೆಂದೂ ಸಂಘದ ವ್ಯವಸ್ಥಾಪಕರು ತಿಳಿಸುತ್ತಾರೆ.

ಕಿನ್ನಿಮೂಲ್ಕಿ—ತಾ. 1ರಂದ ವಯಸ್ಕರಿಗಾಗಿ ಶಾಲೆಯು ತೆರೆಯಲ್ಪಟ್ಟಿದೆ.

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು

ಗೇಟ್‌ವೇ ಸುಭದ್ರ ಸುಶೋಭಿತ ಖಾತ್ರಿಬಹುಮಾನಗಳು.

Guarentee Prizes
ನಮ್ಮ ಗ್ಯಾರಂಟಿ ಇನಾಮುಗಳು.

ರೂ. 42,000

ಎಲ್ಲಾ ಸರಿಯಾದ 20 ಉತ್ತರಗಳಿಗೆ ಹಂಚಲಾಗುವುದು.

ನಂಬ್ರ **5**

ಉತ್ತರವನ್ನು ಮುಂಬಾಯಿಯ ಪ್ರಸಿದ್ಧ ಬ್ಯಾಂಕಿನಲ್ಲಿ ಭದ್ರವಾಗಿರಿಸಲಾಗಿದೆ.

ಕನಿಷ್ಟ ರೂ 2,100 ಇದಕ್ಕೆ ಸರಿಯಾದ ಪ್ರತಿ ಉತ್ತರಕ್ಕೆ ಕೊಡಲಾಗುವುದು

ಹೆಚ್ಚು ಉತ್ತರ ಕಳುಹಿಸುವವರಿಗೆ ಕ್ರಮವಾಗಿ ರೂ. 500/- 300/- ಮತ್ತು 100/- ಕೊಡಲಾಗುವುದು



ನಮ್ಮ ಉತ್ತರಕ್ಕೆ ಹೋಲಿಕೆಯುಳ್ಳ ಉತ್ತರಗಳಿಗೆ ರೂ 15/- ರ 50 ಸಾಧಾರಣ ಬಹುಮಾನಗಳನ್ನು ಕೊಡಲಾಗುವುದು

ಕೆಳಗೆ ಕೊಟ್ಟ ಚೌಕದಲ್ಲಿಯ ಸಾಲುಗಳನ್ನು ಅಡ್ಡಕ್ಕೂ ನೀಟಕ್ಕೂ ಮೂಲೆಯಿಂದ ಮೂಲೆಗೂ ಕೂಡಿದಲ್ಲಿ ಜವಾಬು 50 ಬರುವಂತೆ 5ರಿಂದ 20ರ ವರೆಗಿನ ಸಂಖ್ಯೆಗಳನ್ನು ಸೇರಿಸತಕ್ಕದ್ದು. ಕಳುಹಿಸುವ ಕೊನೆಯ ದಿನ 15 6-39 ಫಲಿತಾಂಶವು 22-6-39ರಲ್ಲಿ ಪ್ರಕಟಣೆ ಹೊಂದುವುದು.

ಪ್ರವೇಶ ಧನ ಒಂದು ಉತ್ತರಕ್ಕೆ ರೂ 1/- ಮೂರಕ್ಕೆ ರೂ. 2/- 8 ಉತ್ತರಗಳ ಸೆಟ್ಟುಗಳಿಗೆ ರೂ 5 ರಂತೆ.

ಶರ್ತಗಳು—... ಕಾಗದದ ಮೇಲೆ ಸ್ಪಷ್ಟವಾಗಿ ಬರೆದು ಬೇಕಾದಷ್ಟು ಉತ್ತರಗಳನ್ನು ಕಳುಹಿಸಬಹುದು. ಹಣವು ಮಣಿಯಾರ್ಡರು ವ ಪೋಸ್ಟಲ್ ಆರ್ಡರು ... ರವಾನಿಸತಕ್ಕದ್ದು. ... ಮಣಿಯಾರ್ಡರು ಕೂಪನಿನಲ್ಲಿ ಮತ್ತು ಉತ್ತರ ಬರೆಯುವ ಕಾಗದದಲ್ಲಿ ಸರಿಯಾಗಿ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು. ಮಣಿಯಾರ್ಡರು ರಶೀದಿಯನ್ನು ಮತ್ತು ಫಲಿತಾಂಶ ತಿಳಿಯಲು ಅನುಕೂಲವಾಗುವಂತೆ ಉತ್ತರ ಸಹಿತವಾದ, ಸ್ಟಾಂಪು ಅಂಟಿಸಿದ ಕವರನ್ನು, ಕಳುಹಿಸುವ ಉತ್ತರದೊಂದಿಗೆ ಲಗ್ತೀಕರಿಸಬೇಕು. ವ್ಯವಸ್ಥಾಪಕರ ತೀರ್ಮಾನವೇ ಕೊನೆಯ ತೀರ್ಮಾನವು, ಬಹುಮಾನ ... ಆಗಿದೆ.

ಮೇಲಿನ ಇನಾಮು ಮಾತ್ರವಲ್ಲದೆ ಕನಿಷ್ಟಕ್ಕೆ ಮೂರು ಉತ್ತರಗಳನ್ನು ಕಳುಹಿಸುವವರಿಗೆ ಉತ್ಕೃಷ್ಟವ ಆಕರ್ಷಕ 1939ರ ಕ್ಯಾಲೆಂಡರೊಂದು ಉಚಿತ, 8 ಯಾ ಹೆಚ್ಚಿಗೆ ಉತ್ತರ ಕಳುಹಿಸುವವರಿಗೆ (ಒಂದೇ ಕವರಿನಲ್ಲಿ ಬೇರೆ ಬೇರೆ ಹೆಸರಿಂದ ಕಳುಹಿಸಿದ್ದು ಸ್ವೀಕಾರಾರ್ಹವಿದೆ) ಈ ಕೆಳಗಿನವುಗಳಲ್ಲಿ ಯಾವುದಾದರೊಂದನ್ನು ಕೊಡಲಾಗುವುದು 1 ಮೊದಲು ಮತ್ತು ಗ್ರಂಥಿ ಟಾನಿಕ್, 2 ನೇತ್ರ ಚಿಕಿತ್ಸಕ (ಕಣ್ಣಿಗೆ ದಿವ್ಯ ಔಷಧ.)

ಮೊದಲಿನ ಸ್ಪರ್ಧೆಯಲ್ಲಿ ಭದ್ರಗೊಳಿಸಿದ ಉತ್ತರದ ಜವಾಬು 46

೧ನೇ ಸಾಲು	19,	17,	6,	4,
೨ನೇ ಸಾಲು	5,	7,	16,	18,
೩ನೇ ಸಾಲು	8,	12,	11,	15,
೪ನೇ ಸಾಲು	14,	10,	13,	9,

ನಿಮ್ಮ ಉತ್ತರಗಳನ್ನೂ ಹಣವನ್ನೂ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ,

ಮೆನೇಜರ್,
ದಿ ಗೇಟ್‌ವೇ ಪ್ರೊಡಕ್ಟ್ಸ್
166 ಸಿ. ಜವೇರಿ ಬಜಾರ ಮುಂಬಯಿ 2

The Gateway Products,
166, C Javar Bazar, BOMBAY, 2.

ಮೈಸೂರಿನಲ್ಲಿ ಶ್ರೇಷ್ಠವರ್ಗದ ಬ್ರಾಹ್ಮಣರ ಉಪಹಾರ ವಸತಿ ಗೃಹಗಳು

ಆಧುನಿಕ ಸೌಕರ್ಯಗಳಿಂದ ಕೂಡಿದ ವಿಶಾಲವಾದ ಸಿಂಗ್ಲ್ ಡಬ್ಬಲ್ ಕೋಣೆಗಳ!

ಕುಟುಂಬ ಪರಿವಾರ ಸಮೇತರಾಗಿ ಬರುವವರಿಗೆ

ಉಳಕೊಳ್ಳುವರೆ ಅತೀ ಯೋಗ್ಯ ಸ್ಥಳ.

ಅರಮನೆ, ಬಜಾರ್, ಸ್ಟೇಶನ್ ... ಮುಖ್ಯಸ್ಥಳಗಳಿಗೆ ಅತಿ ಸಮೀಪ 'ಯಳಂದೂರು ಹೌಸಿನಲ್ಲಿ' ಅತಿ ಚತುರ ಮಾಲಿಕರಿಂದ ನಡೆಸಿಕೊಂಡು ಬರುವ

ಗಾರ್ಡನ್ ಹೋಟೇಲು

(ಫೋನ್ ನಂಬ್ರ:106) ಹಳೆ ಪೋಸ್ಟಾಫೀಸು ರೋಡ್ ಮೈಸೂರು.

ಇದೇ ಮಾಲೀಕರಿಂದ ಅರಮನೆಯ ಎದುರು ನವನಾಗರಿಕತೆಗೆ ತಕ್ಕಂತೆ ನಡೆಯಿಸಿಕೊಂಡು ಬರುವ ನವೀನ ಉಪಹಾರ ಗೃಹ

ಉಡುಪಿ ಆನಂದ ಭವನ

ಫೋನ್ ನಂಬ್ರ 317

ಮೈಸೂರಿಗೆ ಬಂದಲ್ಲಿ ಇದನ್ನು ಸಂದರ್ಶಿಸಲು ಮರೆಯದಿರಿ

ಬಸ್ ಟರ್ಮಿನಸ್ ರೆಸ್ಟೋರೆಂಟ್,ಮೈಸೂರು, ಕೃಷ್ಣರಾಜಸಾಗರ್ ರೆಸ್ಟೋರೆಂಟ್,ಚನ್ನಪಟ್ಟಣ,ಮೈಸೂರು

ಮದ್ರಾಸಿಗೆ ಬಂದಲ್ಲಿ

ಮೈಸೂರು ಕೇಫ್

ರೆಸ್ಟೋರೆಂಟ್ ಮತ್ತು ಬೋರ್ಡಿಂಗ್, ಲಾಡ್ಜಿಂಗ್ ಸಂದರ್ಶಿಸಲು ತಪ್ಪದಿರಿ

ಪ್ರೊಪ್ರೈಟರ್-ಕೆ. ಗುರುರಾಜಾಚಾರ್.

ಸ್ಥಾಪನ **ಕ್ರೌನ ರಬ್ಬರ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು. ಪೇಡೆಗಳ ಬೀಜ, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವದು.

CROWN RUBBER STAMP CO.,
Balmat Road, MANGALORE.

Inclnd by the Mysore Govt Stores Purchase Committee in the list of approved firms

ನಮ್ಮ ಹಿತಾಭಿಲಾಷಿಗಳಿಗೆಲ್ಲರಿಗೂ ಮಳೆಗಾಲದ ನಮ್ಮ ವಂದನೆಗಳು!

ಶ್ರೀ ರಾಮಕೃಷ್ಣ ಥಿಯೇಟರ್, ಉಡುಪಿ.

|| ಸುವರ್ಣಮಂಗಲ ಕುಂಕುಮಾಂಕಿತ ಸುಲಗ್ನಪತ್ರಿಕಾ ||

ಈಶೋ ವಿರಿಂಚಿಃ ಕುಮಲಾಪತಿಶ್ಚ |
ವಧೂವರಾಭ್ಯಾಂ ವರದಾ ಭವಂತು ||

ಸರ್ವೇಚ ದೇವಾಃ ಸಕಲಾ ಗ್ರಹಾಶ್ಚ |
ವಿಪ್ರಪ್ರಸಾದಾಚ್ಛುಭದಾ ಭವಂತು ||

|| ಶ್ರೀ ಕುಲದೇವತಾ ಪ್ರಸನ್ನಾ ||

ಪ್ರಿಯ ಮಹಾಶಯರೇ!

ಸ್ವಸ್ತಿ! ಶ್ರೀ ಇದೇ ಪ್ರಮಾಥಿ ಸಂ|ರದ ಜ್ಯೇಷ್ಠ ಬ. ೧೧ಯು (ತಾ. 13-6-39ನೇ) ಕುಜವಾರ ಸಾಯಂ. ಘಂಟೆ 6 15ಕ್ಕೆ ಒದಗುವ ಗೋಧೂಳಿ ಲಗ್ನ ಸುಮುಹೂರ್ತದಲ್ಲಿ

ಸುಪ್ರಸಿದ್ಧ ಪ್ರಭಾತ ಕಂಪೆನಿಯ ದುನಿಯಾ-ನ-ಮಾನೆ ಕಥಾನಾಯಕ ವೃದ್ಧ ವಕೀಲ
ಚಿ. ಕೇಶವಜೀಯವರು

ಸದರಿ ಕಂಪೆನಿಯ ದುನಿಯಾ-ನ-ಮಾನೆ ಕಥಾನಾಯಕಿ
ಸೌ. ಕುಮಾರಿ ನಿರ್ಮಲಾ ಬಾಯಿ

ಯವರನ್ನು ಪಾಣಿಗ್ರಹಣಮಾಡಿಕೊಳ್ಳುವರು.

ಶ್ರೀ ದೇವತಾನುಗ್ರಹದಿಂದ ಉಡುಪಿಯಲ್ಲಿ ಬಿಡದೆ 7 ದಿನಗಳ ತನಕ ನಡೆಯಲಿರುವ ಈ ವಿವಾಹ ಸಮಾರಂಭಕ್ಕೆ ತಾವು ಸರ್ವರೂ ಸಕುಟುಂಬ ಸಪರಿವಾರ ಇಷ್ಟಮಿತ್ರರೊಡನೆ ದಯವಿಟ್ಟು ಚಿತ್ತೈಸಿ,ಸಾಂಗ ಗೊಳಿಸಬೇಕಾಗಿ ವಿನಯಪೂರ್ವಕ ಅಪೇಕ್ಷಿಸುವ,

ತಮ್ಮಗಳ ಆಗಮನಾಭಿಲಾಷಿ,

ಶ್ರೀ ರಾಮಕೃಷ್ಣ ಥಿಯೇಟರ್, ಉಡುಪಿ.

ವಿ ಸೂ:-(೧) ಸಮಯ ಬುಧವಾರ, ಶನಿವಾರ, ಮತ್ತು ಆದಿತ್ಯವಾರಗಳಲ್ಲಿ ೩, ೬---೧೫ ಮತ್ತು ೯-೩೦ಕ್ಕೆ ಇತರ ದಿನಗಳಲ್ಲಿ ೬—೧೫ ಮತ್ತು ೯—೩೦ಕ್ಕೆ.

(೨) ಮಳೆಗಾಲವಾದ ಕಾರಣ ಚಪ್ಪರ ಮಂಟಪ ವಗೈರೆ ಕಟ್ಟಲು ಅನಾನುಕೂಲವಾದುದರಿಂದ ವಿವಾಹವು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ನಡೆಯುವುದು.

(೩) ಆಸುಪಾಸಿನಲ್ಲಿ ಮಳೆ, ನೆರೆಯು ಇರುವುದರಿಂದ ಸ್ವತಃ ಆಮಂತ್ರಣ ಕೊಟ್ಟು ಈ ಶುಭ ಕಾರ್ಯಕ್ಕೆ ಕರೆಯಲು ಕಷ್ಟವೆನಿಸಿದುದರಿಂದ,ಈ ಕಾರ್ಯಭಾರವನ್ನು 'ನವಯುಗ'ಕ್ಕೆ ಒಪ್ಪಿಸಿಯದೆ.

(೪) ಎಲ್ಲೆಲ್ಲೂ ಹಣದ ಅಡಚಣೆಯು ಇರುವುದರಿಂದ ಸಾಮಾನ್ಯ ದರಗಳಲ್ಲಿ ಕೊಡಲ್ಪಡುವ ಟಿಕೇಟುಗಳಲ್ಲದೆ ಇತರ ಯಾವ ಉಡುಗರೆಯನ್ನೂ ಅಂಗೀಕರಿಸುವುದಿಲ್ಲ.

ನೋಡಿರಿ!] [ತಾ. ೧೩—೬—೩೯ರಿಂದ

ಕುಂಕುಂ ಅಥವಾ ದುನಿಯಾ-ನ-ಮಾನೆ ಮರಾಠಿ

ನಡೆಯುವ ಚಿತ್ರ! ಮೆಸ್ಕಟ್‌ನವರ ಸೀರಿಯಲ್ ಚಿತ್ರ!

ಮಿಸ್ಟರಿ ಮೌಂಟನ್

ರಕ್ತವನ್ನು ಬಿಸಿಗೇರಿಸುವ ಸಾಹಸ ಚಿತ್ರ! ಕಾದಾಟ, ಬಡಿದಾಟ, ಹೊಡೆದಾಟ ಕುದುರೆಗಳ ಓಡಾಟ! ನಿಮಿಷನಿಮಿಷಕ್ಕೂ ರೋಮಾಂಚಿತ ಅವಾಂತರಗಳು!
ನೋಡಿದರೆ ಅವಾಕ್ಕಾಗಬೇಕು!

ಬರುತ್ತವೆ—ರಣಜಿತ್‌ನವರ "ತೂಫನ್ ಮೈಲ್"; ಇಂದ್ರಾ ಮುವಿಟೋನಿನವರ 'ಇಂಪೋಸಿಬಲ್" ಸಾಗರ ಮುವಿಟೋನಿನ ಸಬಿತಾದೇವಿ, ಮೋತಿಲಾಲ್ ನಟಿಸಿರುವ "ಸಿಲ್ವರ್ ಕಿಂಗ್", ಬಾಂಬೇ ಟಾಕೀಸ್ ನವರ ದೇವಿಕಾ ರಾಣಿ ಮತ್ತು ಅಶೋಕಕುಮಾರ್ ನಟಿಸಿರುವ "ಅಚ್ಯುತ ಕನ್ಯಾ" ಇತ್ಯಾದಿ ಇತ್ಯಾದಿ.

Our monsoon greetings to our friends and well wishers

Dear Friends!

While extending to you our monsoon greetings, we deem it our duty to thank you all for your kind co-operation and patronage for the past and the continued good-will for the present and future, which we assure you we will merit by our perpetual service in giving you the best entertainment. It may not be out of place, if we lay before you our difficulties and other circumstances that compelled us to make a slight change in the rates of admission to our Theatre.

Many of you are aware that we have been running the Theatre in a spirit of service without paying much attention to the income side. We were confident that with the co-operation and sympathy of the public, it was not difficult to make the Theatre self supporting. And, relying on the goodwill of the public, we continued to have 12 matinee shows at half rates, resulting in losses of over 300 Rupees every month.

Under the circumstances, we were obliged to stop half rates for matinees from 1st June, 1939 The concession for matinees was introduced for the benefit of poor people, but from experience, we found that it did not serve the purpose. To keep up our ideal of service for the benefit of the public, and to give also the benefit of cheap entertainment for the poor, we are issuing a limited number of tickets at 0—1—0 under separate seating arrangements. We are sure the present change will be better appreciated by the public.

But we regret much that we could not extend this concession to ladies for want of suitable accommodation.

There are many of our well wishers, who really want to give us their best co-operation for the betterment of the Theatre to make it self-supporting and useful to the public We are very glad that they are our real patrons and below we give them a few suggestions, which if they carry out will serve the purpose of their helping us and make the institution self supporting.

1. Do not expect any concession, except occupying an equivalent seat for which you have paid.
2. To entertain all is a very difficult job almost next to impossiblity Under the circumstances, do not tell your friends that a certain film is not good if it does not appeal to you, for you know that one man's food is another man's poison. Tastes differ, and what you do not like, your friend may like, and if you tell him your opinion of the film, you are depriving him of his entertainment, thereby indirectly causing a loss to your Theatre also without your intending to do so. Always recommend to your friends and relatives, constant visits to our Theatre, and thereby you will be helping to give a more firm footing to this useful enterprise, without any contributions from your pocket beyond a kind word about the institution
3. Whenever you have an occasion to entertain your friends, think well whether you can entertain them by a visit to the Theatre, for, your entertainment will be more valued by your guests, on account of the cent percent value you get in return.

We are sure that these few suggestions will help us materially if our patrons kindly take to it.

SRI RAMAKRISHNA THEATRE, UDIPI.

Running Programe *Mascot's* Serial

MYSTERY MOUNTAIN

A CENT PERCENT STUNT PICTURE!

Coming: Prabhat's DUNIA-NA-MANE

or UNEXPECTED (*Marathi;*)

Ranjit's 'TOOFAN-MAIL'; Indra Movietone's 'IMPOSSIBLE'; Sagar's 'SILVER-KING' Bombay Talkies 'ACHUT KANYA' etc. etc.

ನೋಟೀಸು

ಉಡುಪಿ ತಾಲೂಕು ಐರೋಡಿ ಗ್ರಾಮದ ವೆಂಕಟ್ರಮಣ ಕಾರಂತರ ವಿಧವೆ ನಾಗವೇಣಿಯಮ್ಮನು ಈ ಮೂಲಕ ಸರ್ವರಿಗೂ ತಿಳಿಯಪಡಿಸುವದೇನೆಂದರೆ: —

ತಾಲೂಕು ಮಂಜೂರು ಪಾರಂಪಳ್ಳಿ ಗ್ರಾಮದ ಪಡುಕೆರೆ ಪರಮೇಶ್ವರ ಉಪಾಧ್ಯಾಯ ಮತ್ತು ಸಣ್ಣಪ್ಪ ಉಪಾಧ್ಯಾಯ ಕೂಡಾ ಇಬ್ಬರು ಅವಿಭಕ್ತ ಸಹೋದರರಾಗಿದ್ದು ನಾನು ಸದ್ರಿ ಪರಮೇಶ್ವರ ಉಪಾಧ್ಯಾಯರ ಏಕಮಾತ್ರ ಪುತ್ರಿಯಾಗಿರುವಲ್ಲಿ ನನ್ನ ಅತಿ ಬಾಲ್ಯಾವಸ್ಥೆಯಲ್ಲಿಯೇ ನನ್ನ ತಂದೆಯು ಮೃತಪಟ್ಟ ನಂತರ ನನ್ನ ಖಾಸಾ ಚಿಕ್ಕತಂದೆ ಮೇಲ್ಕಾಣಿಸಿದ ಸಣ್ಣಪ್ಪ ಉಪಾಧ್ಯಾಯರು ನನ್ನ ತಂದೆಯು ಪಟ್ಟ್ಯದಾಖಲೆಯಿಂದ ತೀರ್ವೆ ಕೆತ್ತು ಅನುಭವಿಸಿಕೊಂಡು ಬರುತ್ತಿದ್ದ ಸದ್ರಿ ಪಾರಂಪಳ್ಳಿ ಗ್ರಾಮದ ನಂಬ್ರ 22ನೇ ಸಮಷ್ಟಿ ಹಳ್ಳ ಒಟ್ಟು ಆಸ್ತಿಯ ಪಟ್ಟೆಯನ್ನು ತನ್ನ ಹೆಸರಲ್ಲಿ ದಾಖಲು ಮಾಡಿಸಿಕೊಂಡು ನನ್ನನ್ನು ತನ್ನಲ್ಲಿ ಜನಿಸಿದ ಪುತ್ರಿಯೋಪಾದಿಯಲ್ಲಿ ಪೋಷಿಸಿಕೊಂಡು ಬಂದು ಸಮಷ್ಟಿ ಕುಟುಂಬದ ಆಡಳಿತ ನೋಡಿ ಬರುತ್ತಾ ನನ್ನನ್ನು ಐರೋಡಿ ವೆಂಕಟ್ರಮಣ ಕಾರಂತರು ಎಂಬವರಿಗೆ ಪಾಣಿಗ್ರಹಣ ಮಾಡಿಕೊಟ್ಟು ಈಗ ಸುಮಾರು ಹತ್ತು ಹನ್ನೊಂದು ವರ್ಷಗಳ ಕೆಳಗೆ ನಿಸ್ಸಂತತಿಯಾಗಿ ಮೃತಪಟ್ಟಿರುತ್ತಾರೆ. ಅವರು ಹಾಗೆ ಮೃತಪಟ್ಟ ನಂತರ ಸದ್ರಿ 22ನೇ ಪಟ್ಟಾ ಆಸ್ತಿಯು ದೌಹಿತ್ರ ಹಕ್ಕಿನ ಮೇಲೆ ನನ್ನ ವಶ ಸೇರಬೇಕಾದದ್ದಾಗಿದ್ದಾಗ್ಯೂ ನಿಸ್ಸಂತತಿಯಾದ ಆವರ ವಿಧವೆ ಸಣ್ಣಮ್ಮ ಎಂಬವಳು ಜೀವಂತಳಾಗಿ ಇರುವ ವರೆಗೆ ಸದ್ರಿ ಆಸ್ತಿಯನ್ನು ಅನುಭವಿಸಿ ಅದರ ಉತ್ಪತ್ತಿಯಿಂದ ತನ್ನ ಜೀವನ ನಡೆಸಿಕೊಂಡು ಬರುವ ಸ್ವತಂತ್ರವು ಅವಳಿಗಿರುವುದರಿಂದ ಅಷ್ಟರಮಟ್ಟಿನ ಸ್ವತಂತ್ರ ಶಿವ್ಯಾ ಮಂಜೂರು ಆಸ್ತಿಯನ್ನು ಇತರರಿಗೆ ಯಾವ ವಿಧದ ಪರಾಧೀನ ಮಾಡಲಿಕ್ಕೂ ಯಾವ ತೆರದ ಸಾಲ ವಗೈರೆ ತಗಾದೆಗ ಹೊಣೆಪಡಿಸಲಿಕ್ಕೂ ಕೂಡಾ ಅವಳಿಗೆ ಯಾವ ವಿಧದ ಎಷ್ಟರ ಮಟ್ಟಿನ ಹಕ್ಕೂ ಇರುವುದಿಲ್ಲ. ಸದ್ರಿ ಸಣ್ಣಮ್ಮನ ಅವಸಾನದ ನಂತರ ನಾನು ವ ನನ್ನ ಏಕಮಾತ್ರ ಪುತ್ರನಾದ ಸೀತಾರಾಮ ಕೂಡಾ ಇಬ್ಬರು ಮಾತ್ರ ಮುಖ್ಯ ವಾರಿಸ್ದಾರರಾಗಿ ಸದ್ರಿ ಸಣ್ಣಪ್ಪ ಉಪಾಧ್ಯಾಯರ ಸ್ವಾಧೀನದಲ್ಲಿದ್ದ ವಿಶಿಷ್ಟ ಚರಸ್ಥಿರ ಸೊತ್ತುಗಳನ್ನು ಸ್ವಾಧೀನ ಹೊಂದಿ ಶಾಶ್ವತವಾಗಿ ಅನುಭವಿಸಿ ಬರುವ ಹಕ್ಕು ನಮ್ಮದ್ದಾಗಿರುತ್ತದೆ. ಸದ್ರಿ ಪರಮೇಶ್ವರ ಉಪಾಧ್ಯಾಯರಾಗಲೀ ಸಣ್ಣಪ್ಪ ಉಪಾಧ್ಯಾಯರಾಗಲೀ ಮೃತಪಡುವ ಕಾಲದಲ್ಲಿ ಸಮಷ್ಟಿ ಕುಟುಂಬಾರ್ಥದ ಸಾಲವು ಏನೂ ಇರಲಿಲ್ಲ ಮತ್ತು ಆಸ್ತಿಯನ್ನು ಯಾವ ವಿಧದ ಪರಾಧೀನ ಮಾಡಿದ್ದೂ ಇಲ್ಲ. ಆದ್ದರಿಂದ ಸದ್ರಿ ಪರಮೇಶ್ವರ ಉಪಾಧ್ಯಾಯರ ಮತ್ತು ಸಣ್ಣಪ್ಪ ಉಪಾಧ್ಯಾಯರ ಅವಸಾನದ ನಂತರ ಮೇಲ್ಕಂಡ ಸಣ್ಣಮ್ಮನಿಂದ ಮಾಡಲ್ಪಟ್ಟಿರುವ ಯಾ ಇನ್ನು ಮುಂದೆ ಮಾಡಬಹುದಾದ ಯಾವ ತರದ ಸಾಲಕ್ಕಾಗಲೀ ಪರಾಧೀನಕ್ಕಾಗಲೀ ನಾನು ವ ನನ್ನ ಏಕಮಾತ್ರ ಪುತ್ರ ಸದ್ರಿ ಸೀತಾರಾಮನು ಯಾವ ವಿಧದಿಂದಲೂ ಎಷ್ಟರ ಮಟ್ಟಿಗೂ ಬದ್ಧರಲ್ಲ. ಸದ್ರಿ ಸಾಲ ವಗೈರೆಗೆ ಸದ್ರಿ ಸಣ್ಣಮ್ಮನ ದೇಹವೇ ಜವಾಬ್ದಾರಿಯಾಗಿರುತ್ತದೆ ಎಂಬ ಸಂಗತಿ ಸರ್ವರೂ ತಿಳಿದಿರತಕ್ಕದ್ದು.

|| ಈ ಎಡದು ಗೆರೆ

ನಾಗವೇಣಿಯಮ್ಮನ ರುಜು,

ಐರೋಡಿ, ತಾ. 3-6-1939.

ಇನ್ನಂಜೆ ಶ್ರೀ ವಿಷ್ಣುಮೂರ್ತಿ ಹಿಂದೂ ಶಾಲೆಯ ಪ್ರವೇಶೋತ್ಸವ

ಶ್ರೀ ವಿಷ್ಣುಮೂರ್ತಿ ಗ್ರಾಮಾಭಿವೃದ್ಧಿ ಸಂಘದವರು ಹಾಯರ್ ಎಲಿಮೆಂಟರಿ ಶಾಲೆಯನ್ನಾಗಿ ಮಾರ್ಪಡಿಸಲು ಹೊಸತಾಗಿ ಕಟ್ಟಿಸಿದ ಶಾಲಾ ಮಂದಿರ ಪ್ರವೇಶವು ತಾ. 31-5-39ರಲ್ಲಿ ಶ್ರೀ. ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಯಥಾಸಾಂಗವಾಗಿ ನೆರವೇರಿಸಲ್ಪಟ್ಟಿತು. ಉಂಡಾರು ಮಠದಲ್ಲಿ ಅತಿಥಿಗಳಿಗೆ ಉಪಹಾರ ಸತ್ಕಾರ ಮಾಡೊಡನೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನದಿಂದ ಹೊಸ ಕಟ್ಟೋಣಕ್ಕೆ ಅಧ್ಯಕ್ಷರನ್ನು ಬ್ಯಾಂಡ್ ವಾಲಗ ಮೊದಲಾದ ಬಿರುದಾವಳಿಗಳೊಂದಿಗೆ ಮೆರವಣಿಗೆ ಮೂಲಕ ಕರೆತರಲಾಯಿತು. ಶಾಲಾ ಕರಸ್ಪೋಡೆಂಟರೂ ಶ್ರೀ ವಿಷ್ಣುಮೂರ್ತಿ ಗ್ರಾಮಾಭಿವೃದ್ಧಿ ಸಂಘದ ಅಧ್ಯಕ್ಷರೂ ಆದ ಶ್ರೀ. ಶ್ರೀನಿವಾಸ ಮಿತ್ತಂತಾಯರು ಶಾಲಾ ಮಂದಿರ ತೆರೆಯುವಂತೆ ಅಧ್ಯಕ್ಷರನ್ನು ಕೇಳಿಕೊಳ್ಳಲು ಅಧ್ಯಕ್ಷರು ಶುಭವನ್ನು ಕೋರಿ ಶಾಲೆಯನ್ನು ತೆರೆದರು. ಬಳಿಕ ಶಾಲಾ ಕಟ್ಟಡದಲ್ಲಿ ಸಭೆ ಜರಗಿತು. ದೇವತಾಪ್ರಾರ್ಥನಾದಿಗಳಾಗಲು ಶ್ರೀ. ಮಿತ್ತಂತಾಯರು ಶ್ರೀ. ಸೋದೆ ಸ್ವಾಮಿರ ಸಂದೇಶವನ್ನು ಓದಿ ತನ್ನ ಮೆನೇಜರ ಭಾಷಣವನ್ನು ಮಾಡಿದರು. ಅದರಲ್ಲಿ ಗ್ರಾಮಾಭಿವೃದ್ಧಿ ಸಂಘಸ್ಥಾಪನೆಯ ವಿಚಾರ, ಶ್ರೀ. ಸೋದೆಸ್ವಾಮಿರ ಪ್ರೋತ್ಸಾಹ, ಗ್ರಾಮಸ್ಥರ ಸಹಕಾರ ಮೊದಲಾದವು ಅಡಕವಾಗಿದ್ದವು. ಬಳಿಕ ಮುಖ್ಯ ಅಧ್ಯಾಪಕರಾದ ಶ್ರೀ. ಶೀನ ಶೆಟ್ಟರು ಶಾಲೆಯ ಪ್ರಗತಿಪರ ವರದಿಯನ್ನೋದಿದರು. ಸಭಿಕರಲ್ಲಿ ಶ್ರೀಗಳಾದ ಕುರ್ಕಾಲು ಗಣಪಯ್ಯ ಸೆಟ್ಟಿ, ಸೀತಾರಾಮ ಡೋರೆ ಬಳ್ಳಾಲ, ಪಿ. ಲಕ್ಷ್ಮೀನಾರಾಯಣ ನಾಯಕ್, ಸಂಜೀವರಾವ್ ಮೊದಲಾದವರು ಸಂದರ್ಭೋಚಿತ ಭಾಷಣ ಮಾಡಿದರು. ಅದಾಗಿ ವಿದ್ಯಾರ್ಥಿಗಳಿಗೆ ಇನಾಂ ಹಂಚಲಾಯಿತು. ಮಕ್ಕಳ ವಿನೋದಗಳಾದ ಮೇಲೆ ಅಧ್ಯಕ್ಷರು ಸುರಸ ಭಾಷಣ ಮಾಡುತ್ತಾ ಶ್ರೀ. ಮಿತ್ತಂತಾಯರ ಕಾರ್ಯಶಕ್ತಿ ಉತ್ಸಾಹಗಳನ್ನೂ ಶ್ರೀ. ಕೆ. ಗಣಪಯ್ಯ ಶೆಟ್ಟರ ಸಹಕಾರ ಬುದ್ಧಿ, ಹಿಡಿದ ಕಾರ್ಯದಲ್ಲಿ ಹೋರಾಟ ಮೊದಲಾದವನ್ನೂ ಶಾಲೆಗೆ ಒಳ್ಳೆಯ ಭವಿಷ್ಯವಿದೆಯೆಂಬುದನ್ನೂ ಹಾಯರ್ ಎಲಿಮೆಂಟರಿ ಶಾಲೆಯಾಗಲು ತನ್ನಿಂದ ಸಾಧ್ಯವಾದಷ್ಟು ಕಾರ್ಯ ಮಾಡುವುದಾಗಿಯೂ ಹೇಳಿದರು. ಬಳಿಕ ಶ್ರೀ. ಮಿತ್ತಂತಾಯರು ಧನ್ಯವಾದಗಳನ್ನಿತ್ತರು. ಸಭಿಕರಿಗೆ ಪಾನಕ ಸತ್ಕಾರವಾಯಿತು. ಶ್ರೀ. ಆರೂರರು ಅಧ್ಯಕ್ಷಸ್ಥಾನವನ್ನು ಶ್ರೀ. ಕೆ. ಸೀತಾರಾಮ ಡೋರೆ ಬಲ್ಲಾಳರಿಗೆ ಬಿಟ್ಟುಕೊಟ್ಟು ತೆರಳಿದ ಮೇಲೆ ಚಂದ್ರಹಾಸ ನಾಟಕಾದಿಗಳು ನೆರವೇರಿದವು. ಪ್ರಕೃತಿಸೌಂದರ್ಯದಿಂದೊಡಗೂಡಿದ ಅತಿ ಮನೋಹರ ಸ್ಥಳದಲ್ಲಿ ವಿಶಾಲವೂ ಭವ್ಯವೂ ಆದ ಶಾಲಾ ಕಟ್ಟೋಣವನ್ನು ರಚಿಸಿ, ಶಾಲೆಯ ಮತ್ತು ಗ್ರಾಮದ ಏಳಿಗೆಗಾಗಿ ತನು ಮನಧನಗಳನ್ನರ್ಪಿಸಿ ಅಹರ್ನಿಶಿ ದುಡಿಯುತ್ತಿರುವ ಶ್ರೀ. ಮಿತ್ತಂತಾಯರ ಮಾದರಿಯು ಅನುಕರಣೀಯವಿದೆ. ಅವರಿಗೆ ಸರ್ವ ವಿಧದಲ್ಲಿಯೂ ಸಹಕಾರವನ್ನೀಯುತ್ತಿರುವ ಶ್ರೀ. ಕೆ. ಗಣಪಯ್ಯ ಶೆಟ್ಟರ ಔದಾರ್ಯವು ಅಭಿನಂದನೀಯವು. ಶಾಲೆಯು ಬೇಗನೆ ಹಾಯರ್ ಎಲಿಮೆಂಟರಿಯಾಗಲೆಂದು ಹಾರೈಕೆ.

ಪುಟ ೧೩ರಿಂದ

ದು. ಧನಬಲ ಜನಬಲದಿಂದ ಯುಕ್ತರಾದ ನೀವು ವಿಪಕ್ಷೀಯರನ್ನು ಹುಲ್ಲುಕಡ್ಡಿಯಂತೆ ತೃಣೀಕರಿಸುವಿರಿ, ವಿದ್ಯಾಭಿಲಾಷಿಗಳಿಗೂ ಕೃಷ್ಯುಪಜೀವಿಗಳಿಗೂ ಕಾಲವು ಅನುಕೂಲವಾಗಿಲ್ಲವು. ತಾ. 11, 12, ಈ ದಿನಗಳಲ್ಲಿ ಧನವ್ಯಾಸಗಳಿಗೆ ಹಾನಿಯೂ ಕಾರ್ಯಗಳಿಗ ವಿಘ್ನವೂ ಬಂದೀತು.

ಮೀನರಾಶಿ —

ಜನ್ಮದ್ವಿತೀಯಗತರಾದ ಗುರುಶನಿಗಳು ನಿಮಗೆ ಪ್ರತಿಕೂಲರಾಗಿರುವುದರಿಂದ ಧನವಿಷಯಕವಾದ ದುಃಖವೂ ಮುಖಹಾನಿಯೂ ಉಂಟಾಗುವುದು. ಮತ್ತು ರಾಹುಕೇತುಗಳಿಂದಾಗಿ ಧನಸಂಬಂಧವಾಗಿ ಕಲಹವು ಹುಟ್ಟುವುದು. ಇತರ ಗ್ರಹರೆಲ್ಲರೂ ನಿಮಗನುಕೂಲರಿರುವುದರಿಂದ ಸ್ವಜನರೂ ಕುಟುಂಬವೂ ವೃದ್ಧಿಗೊಳ್ಳುವುದು. ಸರಕಾರೀ ಉದ್ಯೋಗದಲ್ಲಿ ಉತ್ತಮ ಫಲದೊರೆವುದು. ಶತ್ರುಕ್ಷಯದಿಂದ ನಿಶ್ಚಿಂತರಾಗುವಿರಿ. ನಾನಾ ವಿಧಾನಗಳಿಂದ ಹಣವನ್ನು ಸಂಗ್ರಹಿಸಲು ಶಕ್ತರಾಗುವಿರಿ. ಸಮಾಜಕಾರ್ಯಗಳಲ್ಲಿ ಮುಂದಾಳಾಗಿ ಕೀರ್ತಿಭಾಗಿಗಳಾಗುವಿರಿ. ಪ್ರತಿಯೊಂದು ಕಾರ್ಯಗಳಲ್ಲೂ ವಿಜಯಿಗಳಾಗಿ ಜನತೆಯ ಸನ್ಮಾನಕ್ಕೆ ಪಾತ್ರರಾಗುವಿರಿ. ವೈದ್ಯರು ಕೃಷಿಕರು, ವಿದ್ಯೋಪಜೀವಿಗಳು ಮತ್ತು ನಟಗಾಯಕ ವೇಶ್ಯೆಯರಿಗೂ ಕಾಲವು ಅನುಕೂಲವಿರುವುದು. ತಾ. 11, 12 ಈ ದಿನಗಳಲ್ಲಿ ಮೃಷ್ಟಾನ್ನಭೋಜನ, ಇಷ್ಟವಸ್ತುಗಳ ಪ್ರಾಪ್ತಿ, ಶಯನ ಸುಖಗಳು ದೊರೆಯುವವು.

ನವೀನ ಶೋಧನೆ
ಹೇನುಗಳನ್ನು ನಾಶಮಾಡುವ "ಬಾಬಾ" ಉಪಯೋಗಿಸಿರಿ.

ಸ್ತ್ರೀ ಜಾತಿಗೆ "ಬಾಬಾ" ಎಂಬುದು ವರಪ್ರಸಾದ.

ತಲೆಯಲ್ಲಿ ಹೇನು ಆಗುವುದು ಇದರ ಸ್ಥಿತಿಯು ಹೇಸಿಯಾದ್ದರಿಂದ ಪ್ರಕೃತಿಯು ಕೆಡುತ್ತದೆ. "ಬಾಬಾ" ಈ ಎಣ್ಣೆಯನ್ನು ತಲೆಗೆ ಅಥವಾ ಕೂದಲಿಗೆ ಹಚ್ಚಿದರೆ ಖಾತ್ರಿಯಾಗಿ ಹೇನುಗಳನ್ನು ನಾಶ ಮಾಡಬಲ್ಲುದು. "ಬಾಬಾ" ಇದರಿಂದ ಅಪಾಯಕರವಿಲ್ಲ. "ಬಾಬಾ" ಎಲ್ಲಾ ಪಟ್ಟಣಗಳಲ್ಲಿ ಗಿಜ್ಞಿಯು ಬಂದು ದಟ್ಟಿಯು ಮಾರಲು ಸಿಕ್ಕುತ್ತದೆ. ಕಿಮ್ಮತ್ತು ದಬ್ಬಿಗೆ ರೂ. 0—2—6.

ಹಿಂದುಸ್ಥಾನ ಮತ್ತು ಬರ್ಮಾದ ಸೋಲ್ ಡಿಸ್ಟ್ರಿಬ್ಯೂಟರ್ಸ್: } ಪಾಠಕ ಬ್ರದರ್ಸ್, ದೋಭಿತಲಾವ, ಎಡ್ವರ್ಡ್ ಸಿನೇಮ ಎದುರು, ಪಂಬ್ಲನಾಥ, ಕಾಳಬಾದೇವಿ ರೋಡು, ಮುಂಬಾಯಿ,

---

(Regd Trade Mark)

ಉಷ್ಣಕಾಲದಲ್ಲಿ ತಣ್ಣಗಾದ ಪಾನೀಯಗಳಿಂದ ತಾತ್ಕಾಲಿಕವಾಗಿ ದಾಹ ತೃಷೆಯನ್ನು ಪರಿಹರಿಸಿಕೊಳ್ಳಬಹುದು. ಹಂಪಿ ಯಾ ಬೀಸಣಿಗೆಗಳಿಂದ ಗಾಳಿ ತೆಗೆದುಕೊಂಡು ಸೆಖೆಯನ್ನು ಶಮನಗೊಳಿಸಬಹುದು. ಪರಂತು ಉಷ್ಣತೆಯ ತಾಪದಿಂದ ಶರೀರದಲ್ಲಾಗುತ್ತಿರುವ ದುಷ್ಪರಿಣಾಮಗಳು ಮಾತ್ರ ದೂರವಾಗಲಾರವು.

ಹಾಗಾದರೆ

ಸ್ವದೇಶೀ ಔಷಧಿ ಭಂಡಾರ (ರಿಜಿಷ್ಟರ್ಡ್) ಇವರ ಚಂದ್ರನಂತೆ ಶೀತಲವಾದ ಬಹುಗುಣಯುಕ್ತ

ಆಮಲಕೀ ತೈಲವನ್ನು

ನಿತ್ಯವೂ ಉಪಯೋಗಿಸಿರಿ. ಇದರಲ್ಲಿ ಆಮಲಕಿಯೇ ಮೊದಲಾದ ಮಂಗಲಕಾರಕ ದ್ರವ್ಯ ಯಾ ಇತ್ಯಾದಿ ಸುಗಂಧಯುಕ್ತ ಮೂಲಿಕೆಗಳನ್ನು ಸೇರಿಸಿ ವಿಜಾತೀಯ ದ್ರವ್ಯಗಳಿಂದ ವಿರಹಿತ ಮಾಡಲ್ಪಟ್ಟ ವಿಶೋಧಿತ ತಿಲತೈಲದಿಂದಲೇ ಶಾಸ್ತ್ರೀಯ ವಿಧಿಯಂತೆ ಪ್ರಸ್ತುತವಾದ ಈ ತೈಲವನ್ನು ನಿತ್ಯವೂ ಉಪಯೋಗಿಸುತ್ತಿದ್ದರೆ ಇದರೊಳಗಿರುವ ಅಮೋಘವಾದ ಸುಗಂಧ ಗುಣಗಳು ನಿಮ್ಮ ರೋಮರಂಧ್ರದೊಳಗೆ ಪ್ರವೇಶಿಸಿ ನಿಮ್ಮ ರಕ್ತಕ್ಕೆ ತಂಪನ್ನುಂಟುಮಾಡಿ ಚರ್ಮದಲ್ಲಾಗುತ್ತಿರುವ ದುಷ್ಪರಿಣಾಮಗಳನ್ನು ಬೇಗನೆ ಓಡಿಸುತ್ತವೆ. ಹಾಗೂ ರಕ್ತದಲ್ಲಿಯ ದುರ್ಗಂಧಗಳನ್ನು ಹೋಗಲಾಡಿಸಿ ಕೇಶಮೂಲಗಳು ದೃಢವಾಗುವದಲ್ಲದೆ ಉದ್ದ ಕಪ್ಪಾದ ಕೂದಲುಗಳು ನಿಬಿಡವಾಗಿ ಬೆಳೆದು ಮೊದಲೇ ನರೆತ ಕೂದಲುಗಳು ಸಹ ಕಪ್ಪಾಗಿ ಮುಪ್ಪಿನ ಲಾವಣ್ಯಪೂರ್ಣವಾಗುವದು. ಮತ್ತು ಸುಖವಾದ ನಿದ್ರೆ ಹತ್ತುವುದು. ಇಂತಹ ನಿದ್ರೆಯಿಂದ ಸ್ಮೃತಿ, ಮೇಧಾ, ಉತ್ಸಾಹ, ವಿಚಾರಶಕ್ತಿ ಮೊದಲಾದ ಮಾನಸಿಕ ಶಕ್ತಿಗಳು ವಿಕಾಸ ಹೊಂದಿ ಆರೋಗ್ಯ ಲಾಭವಾಗುವದು.

5 ತೊಲೆಯ ಸೀಸೆ 1ರ 0-5-0, 10 ತೊಲೆಯ ಸೀಸೆ 1ರ 0-11-0.

ಕಸ್ತೂರಿಯುಕ್ತ ಧನ್ವಂತರೀ ಗುಟಿಕಾ ವಾಯುಮಾತ್ರೆ.

ಬಾಲ, ವೃದ್ಧ, ಸ್ತ್ರೀ-ಪುರುಷ ಮತ್ತು ಗರ್ಭಿಣಿಯರ ಸರ್ವ ತರದ ಶೂಲೆ, ತಲೆತಿರುಗು, ಅಜೀರ್ಣ, ಹೊಟ್ಟೆಯುಬ್ಬರಿಕೆ, ಅತಿಸಾರ, ಇವುಗಳಲ್ಲಿ ಅತ್ಯಂತ ಗುಣಕಾರಿಯಾಗಿದೆ. ಬಾಲಕರ ಅಪಸ್ಮಾರ, (ಬಾಲಗ್ರಹ) ಕಫ ಇತ್ಯಾದಿಗಳಲ್ಲಿ ಸಂಗ್ರಾಹ್ಯವಾದ ದಿವ್ಯ ಔಷಧಿಯಾಗಿದೆ.

ಕ್ರಯ: 12ಕ್ಕೆ 0-4-0, 25ಕ್ಕೆ 0-7-0, 50ಕ್ಕೆ 0-13-0, 100ಕ್ಕೆ 1-5-0, 500ಕ್ಕೆ 5-0-0, 1000ಕ್ಕೆ 9-0-0.

5 ಆಣೆ ಸ್ಟ್ಯಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತದೆ.

ಸ್ವದೇಶೀ ಔಷಧಿ ಭಂಡಾರ (ರಿಜಿಷ್ಟರ್ಡ್)

ಕುಂಜಾಲ್, ಪೋಸ್ಟ್ ಬ್ರಹ್ಮಾವರ.

ನಮ್ಮ ಸ್ಟಾಕಿಸ್ಟರು:—

1. Supply Agency Ltd., Udipi, S. K.
2. Nava Bharata Book Depot. Udipi, S. K.
3. V. R. Prabhu, The Canara News & Books Agent, Batatawala Mansion; Lalbag, BOMBAY.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಮೇಷರಾಶಿ—

ನಿಮ್ಮ ಮನಸ್ಸಿನ ಚಾಂಚಲ್ಯವೇ ನಿಮ್ಮಲ್ಲಿ ಪ್ರಾಪ್ತವಾಗಿರುವ ಕಾರ್ಯಭೀರುತ್ವಕ್ಕೆ ಮುಖ್ಯ ಕಾರಣವಾಗಿರುವುದು. ಮಾತ್ರವಲ್ಲದೆ ಆಪ್ತ ಜನರಲ್ಲಿನ ಅವಿಶ್ವಾಸವೂ ಕೂಡ ಮೂಲವಾಗಿರುವುದು. ಈ ದಾವ ದೋಷದಿಂದಾಗಿ ನಿಮ್ಮಲ್ಲಿ ಔದಾಸೀನ್ಯವೂ ನಿರುದ್ಯೋಗವೂ ಕೂಡ ಹೆಚ್ಚುವವು. ಸಂಪಾದ್ಯಾಗವು ಬಹಳ ಕೆಟ್ಟಿರುವುದು. ಉತ್ಪತ್ತಿಗಿಂತ ಇಮ್ಮಡಿಯಾಗಿ ಖರ್ಚುಗಳಾಗುವುವು. ನಿಮ್ಮ ಉತ್ಪತ್ತಿಯ ಭಾಗದಲ್ಲಿ ಶತ್ರುಗಳ ದೃಷ್ಟಿಯು ನೆಟ್ಟಿರುವುದರಿಂದ ಈ ಭಾಗಕ್ಕೆ ಹಲವಾರು ತೊಂದರೆ ತೊಡಕುಗಳು ಸಂಭವಿಸಲಿವೆ. ಆರೋಗ್ಯದ ಪಟ್ಟಿಗೂ ಈ ವಾರವು ಚೆನ್ನಾಗಿಲ್ಲವು. ನೌಕರಿ ವರ್ಗದವರು ಮೇಲಧಿಕಾರಿಗಳ ಮನಸ್ತೃಪ್ತಿಗಾಗಿ ಬಹಳ ಹೆಣಗಬೇಕಾಗುವುದು. ಪ್ರವಾಸಮಾಡಲು ಈ ಕಾಲವು ಹೆಚ್ಚಿನಂಶ ಉತ್ತಮವಾಗಿಲ್ಲವು. ಪತ್ನೀ—ಪುತ್ರರಿಗೂ ಕೂಡ ಹೆಚ್ಚಿನ ಅನಿಷ್ಟವಿರುವುದು. ಅಂತೂ ಸದಾ ಮನೋರೋಗದಿಂದ ಪೀಡಿತರಾಗುವಿರಿ. ತಾರೀಕು 11–12 ಈ ದಿನಗಳನ್ನುಳಿದು ಇತರ ದಿನಗಳಲ್ಲಿ ಕೆಲವಿಷ್ಟ ಮನೋರಥಗಳು ನೆರವೇರುವುವು.

ವೃಷಭರಾಶಿ—

ಸೌಮ್ಯ ಗ್ರಹರೆಲ್ಲರ ಅನುಗ್ರಹವು ನಿಮ್ಮ ಮೇಲೆ ಪರಿಪೂರ್ಣವಿರುವುದರಿಂದ ಇತರ ಪಾಪಗ್ರಹರು ಪ್ರತಿಕೂಲರಾಗಿದ್ದರೂ ಕೂಡ ಅಷ್ಟೊಂದು ಹಾನಿ ಸಂಭವಿಸದು. ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಮತ್ತು ವಿದ್ಯೋಪಜೀವಿಗಳಿಗೂ ಕೂಡ ಈ ವಾರವು ಸಕಲ ಭಾಗಗಳಲ್ಲೂ ಉತ್ತಮ ಫಲದಾಯಕವಾಗಿರುವುದು. ನಿರುದ್ಯೋಗಿಗಳು ಕೂಡ ಚಿಂತೆಯಿಂದ ಮುಕ್ತರಾಗುವರು. ವ್ಯಯಕ್ಕಿಂತಲೂ ಅಧಿಕವಾಗಿ ಧನಾಗಮವಿರುವುದರಿಂದ ಹಣದ ಭಾಗದಲ್ಲಿ ನಿಶ್ಚಿಂತರಾಗಿರುವಿರಿ. ಸ್ವೀಕೃತಕಾರ್ಯಗಳು ಹೆಚ್ಚಿನಂಶ ನಿಮ್ಮಿಂದ ಕೊನೆಗೊಳ್ಳುವವಲ್ಲದೆ ಕೆಲವು ಕಾರ್ಯಗಳಲ್ಲಿ ಪರಾಜಯಹೊಂದಿದರೂ ನಷ್ಟವಾಗಲಾರದು. ಭೋಗ್ಯವಸ್ತುಗಳು ಅನಾಯಾಸವಾಗಿ ದೊರೆಯುವವು. ಸಾಂಸಾರಿಕರಿಗೆ ಗೃಹಸುಖವು ಉತ್ತಮವಾಗಿರುವುದು. ಅಸತ್ಕಾರ್ಯಗಳಲ್ಲಿ ನೀವು ಧನವನ್ನು ಹೆಚ್ಚಾಗಿ ವ್ಯಯಿಸುವುದರಿಂದ ಜನಾಪವಾದಕ್ಕೆ ಪಾತ್ರರಾಗುವಿರಿ. ವಾರಾದಿಯ ಏಳು ದಿನಗಳು ಉತ್ತಮವಿರುವುದರಿಂದ ಹಲವು ರೀತಿಯಿಂದ ಧನಪ್ರಾಪ್ತಿಯೂ ಮಿತ್ರಸಮಾಗಮವೂ ಇಷ್ಟಸಿದ್ಧಿಯಿಂದಾಗಿ ಹೆಚ್ಚಿನ ಸಂತೋಷವೂ ಆಗಲಿದೆ.

ಮಿಥುನರಾಶಿ—

ಕುಲಾಚಾರಗಳಲ್ಲಿಯೂ ಧರ್ಮಕರ್ಮಗಳಲ್ಲಿಯೂ ಹೆಚ್ಚಿನ ಆದರವುಳ್ಳವರಿಗೆ ಈ ವಾರವು ಸಾಕಷ್ಟು ಉತ್ತಮವಾಗಿರುವುದು. ನಿಮ್ಮ ಅನುದಿನದ ಖರ್ಚಿಗೆ ಬೇಕಾದಷ್ಟು ಹಣವು ದೊರೆತೀತು. ಆದರೆ ಮರುದಿನಕ್ಕೆಂದು ಒಂದು ಕಾಸೂ ಉಳಿಯಲಾರದು. ಹೆಚ್ಚಾಗಿ ನಿಮಗೆ ನೀಚಜನರಿಂದಲೂ ನೀಚಕಾರ್ಯದಿಂದಲೂ ಧನಲಾಭವಾಗುವುದು. ಆದರೂ ಅವೆಲ್ಲವೂ ಸತ್ಕಾರ್ಯಗಳ ಸಲುವಾಗಿಯೇ ವೆಚ್ಚವಾಗುವುವು. ವಾಕ್‌ಸಂಬಂಧವಾಗಿ ಕೆಲವರೊಡನೆ ಕಲಹವಾಗಲಿರುವುದು. ಇದರಿಂದ ನಿಮ್ಮ ಮಾನಕ್ಕೆ ಹೆಚ್ಚಿನ ಹಾನಿ ಸಂಭವಿಸೀತು. ಜನರು ತಿರಸ್ಕಾರದೃಷ್ಟಿಯಿಂದ ನೋಡುವರು. ಅಕಸ್ಮಾತ್ತಾಗಿ ಕಾಲ್ನಡಿಗೆಯಲ್ಲೇ ಆಗಲಿ ಅಪಘಾತಕ್ಕೆ ಸಿಲುಕಿ ಗಾಯಹೊಂದಲಿರುವಿರಿ. ವಿದ್ಯಾರ್ಥಿಗಳಿಗೆ ಈ ವಾರವು ಅಧ್ಯಯನ ಭಾಗದಲ್ಲಿ ಎಳ್ಳಷ್ಟೂ ಹಿತಕರವಾಗಿಲ್ಲವು. ತಾ. 10ರಿಂದ ವಾರಾಂತ್ಯದವರೆಗೆ ಹೆಚ್ಚಿನ ಅನಿಷ್ಟಗಳು ತಲೆದೋರಲಾರವು.

ಕರ್ಕಾಟಕರಾಶಿ—

ಗ್ರಹರಾಜನಾದ ದಿವಾಕರನೂ ಸುರಾಸುರ ಗುರುಗಳಾದ ಬೃಹಸ್ಪತಿ ಶುಕ್ರಾಚಾರ್ಯರೂ ಕೂಡ ನಿಮ್ಮ ಭಾಗಕ್ಕೆ ಸಂಪೂರ್ಣ ಅನುಕೂಲರಾಗಿದ್ದರಿಂದ ಮೇಲೆ ಕೇಳಬೇಕೇ! ಇತರ ಗ್ರಹರ ಶಕ್ತಿಯನ್ನು ತಡೆದು ಸ್ವಶಕ್ತಿಯನ್ನೇ ಮುಂಬರಿಸಲು ಸಮರ್ಥರಾಗಿರುವರು. ಪ್ರತಿಯೊಂದು ಕಾರ್ಯಗಳೂ ನೆನೆಸಿದಂತೆ ಕೊನೆಹೊಂದುವವು. ಕಾರಣ ಅದಕ್ಕೆ ಬೇಕಾದ ಧನಬಲವೂ ಜನಬಲವೂ ಬುದ್ಧಿಚಾತುರ್ಯವೂ ನಿಮ್ಮಲ್ಲಿ ತುಂಬಾ ಇರುವವು. ಮಿತ್ರಜನರ ಬೆಂಬಲದಿಂದ ಹಲವು ಭಾಗಗಳಲ್ಲಿ ನೀವು ವಿಜಯಿಗಳಾಗುವಿರಿ. ಮಾತ್ರವಲ್ಲ ಒಳ್ಳೇ ಕೀರ್ತಿಯನ್ನೂ ಗಳಿಸುವಿರಿ. ಕೋರ್ಟುವಗೈರೆಗಳಲ್ಲಿನ ಕಾರ್ಯಗಳಲ್ಲೂ ಕೂಡ ವಿಜಯಿಗಳಾಗುವಿರಿ. ಆದರೂ ನಿಮಗೆ ಆರೋಗ್ಯವು ಮಾತ್ರ ಚೆನ್ನಾಗಿರದು. ಮನೆಯಲ್ಲಿ ಅನುದಿನವೂ ಸತಿಪತಿಗಳ ಜಗಳವಿದ್ದೇ ಇರುವುದು. ಆನಾರೋಗ್ಯದ ಸಲುವಾಗಿ ಕೆಲಮಟ್ಟಿಗೆ ಧನವ್ಯಯವಾದೀತು. ವಿದ್ಯಾರ್ಥಿಗಳ ಭಾಗಕ್ಕೆ ಈ ವಾರವು ಹಾನಿಕಾರಕವಾಗಿದೆ. ತಾ. 8ರಿಂದ 12ರ ವರೆಗಿನ ದಿನಗಳು ಹೆಚ್ಚಿನ ಪ್ರತಿಕೂಲಗಳಾಗಿರುವುವು.

ವಾರದ ಭವಿಷ್ಯ

ಮುಂದಾಗುವುದನ್ನು ಇಂದೇ ತಿಳಿಯಿರಿ.

(ತಾ. 8-6-39ರಿಂದ ತಾ. 15-6-39ರ ವರೆಗೆ)

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ. ಸಂ ನ.]

ಸಿಂಹರಾಶಿ—

ಇಷ್ಟಾನಿಷ್ಟಗ್ರಹರ ಬಲಸಾಮ್ಯವಿರೋಧದಿಂದ ನಿಮಗೀವಾರವು ಇಷ್ಟವಾ ಕಷ್ಟದಾಯಕವಾಗಿ ಪರಿಣಮಿಸದು. ಪರಸ್ಪರ ಭಿನ್ನಾಭಿಪ್ರಾಯದಿಂದ ನಿಮ್ಮಿಂದ ದೂರಾಗಿದ್ದವರು ಈಗ ನಿಮ್ಮನ್ನೇ ಶರಣುಹೋಗುವರು. ಸ್ವೀಕೃತ ಕೆಲಸಗಳಲ್ಲಿ ಜಯವೂ ಇಷ್ಟಸಿದ್ಧಿಯೂ ಉಂಟಾಗುವುದು. ಮಿತ್ರಬಲವು ನಿಮಗೆ ಪೂರ್ಣವಾಗಿರುವುದು. ಪತ್ನೀಪುತ್ರರಿಂದ ಯುಕ್ತವಾದ ಗೃಹಪರಿವಾರವು ನಿಮ್ಮ ಸಕಲ ಕಾರ್ಯಗಳಿಗೂ ನೆರವಾಗುವುದು. ಆದರೂ ನಿಮ್ಮ ದುರ್ವ್ಯವಹಾರ್ ಮಾತುಮಾತಿನ ಕಲಹವಾಗಲಿದೆ. ಆದಕಾರಣ ನಾಲಿಗೆಯನ್ನು ಬಿಗಿಹಿಡಿದಷ್ಟು ಒಳ್ಳಿತು. ಧರ್ಮಹ್ರಾಸವೂ ಅಸೂಯೆಯೂ ನಿಮ್ಮಲ್ಲಿ ಇತ್ತೀಚೆಗೆ ನೆಲೆಯಾಗತೊಡಗಿದೆ. ಇದು ನಿಮ್ಮ ಭಾವೀ ಕಲ್ಯಾಣಕ್ಕೆ ಕಂಟಕಪ್ರಾಯವಾಗಿರುವುದು. ಮಾರ್ಗಾಯಾಸವೂ ಅನಾರೋಗ್ಯವೂ ನಿಮ್ಮನ್ನು ಹೆಚ್ಚಾಗಿ ಪೀಡಿಸುವುದಲ್ಲದೆ ಉತ್ಪತ್ತಿಗಿಂತಲೂ ಅಧಿಕವಾಗಿ ಖರ್ಚುಮಾಡಿಸಿ ಹಣದ ಅಡಚಣೆಯಲ್ಲಿ ನಿಮ್ಮನ್ನು ಕೆಡಹಾಕುವವು. ವಾರಾದಿಯ ಮೂರು ದಿನಗಳ ಹೊರತು ಇತರ ದಿನಗಳು ರಾಜಭಯ ಉದರರೋಗಾದಿ ಅನಿಷ್ಟಕಾರಿಗಳಾಗಿರುವವು.

ಕನ್ಯಾರಾಶಿ—

ಆವ ಬಲವಿಲ್ಲದಿದ್ದರೂ ದೈವಬಲವೊಂದಿದ್ದರೆ ಸಾಕು, ಎಂಬ ಪೂರ್ವಜರ ನುಡಿಯು ಅಕ್ಷರಶಃ ಮಾನ್ಯವಾದುದು. ಪ್ರಕೃತದಲ್ಲಿ ನಿಮಗೆ ದೈವಬಲವು ಉತ್ತಮವಾಗಿರುವುದರಿಂದ ಈ ವಾರದಲ್ಲಿ ಸಂಭವಿಸಲಿರುವ ಹಲವಾರು ಆಪತ್ತುಗಳಿಂದ ಅನಾಯಾಸವಾಗಿ ಪಾರಾಗುವಿರಿ. ಲೇವಾದೇವಿ ಸಂಬಂಧವಾಗಿ ಕೋರ್ಟು ಕಛೇರಿಗಳಿಗೆ ಹೋಗಿ ಹೆಚ್ಚಿನ ಆಸಕ್ತಿಯಲ್ಲಿ ಬೀಳಲಿಕ್ಕಿರುವಿರಿ. ಕೆಲವು ಭಾಗದಲ್ಲಿ ನಿಮ್ಮವರೇ ನಿಮಗೆ ವಿರೋಧವಾಗಿ ವರ್ತಿಸುವರು. ಹಣದ ಬಿಕ್ಕಟ್ಟಿಗೆ ಸಿಲುಕಿಕೊಳ್ಳುವಿರಿ. ಅನಾರೋಗ್ಯದ ಭಯ ಸಂಭವಿಸಲಿದೆ. ಆದರೂ ಆ ನಿಮ್ಮ ಅದೃಷ್ಟಬಲದಿಂದಲೂ ಬುದ್ಧಿ ಚಾತುರ್ಯದಿಂದಲೂ ಮತ್ತು ವಾಕ್ಚಾತುರ್ಯದಿಂದಲೂ ಜನಗಣದಿಂದ ಗೌರವವನ್ನೂ ಪ್ರೀತಿಯನ್ನೂ ಸಂಪಾದಿಸುವಿರಿ. ಶತ್ರುಗಳು ದೂರಸರಿವರು. ಇಷ್ಟವಸ್ತುಗಳು ಸುಲಭವಾಗಿ ದೊರೆಯುವವು. ಸಾಂಸಾರಿಕ ಸುಖವು ತೃಪ್ತಿಕರವಾಗಿರುವುದು. ತಾ. 8ರಿಂದ 12ರ ವರೆಗಿನ ದಿನಗಳು ಉತ್ತಮ.

ತುಲಾರಾಶಿ—

ಶುಕ್ರೇತರ ಸಕಲ ಗ್ರಹರೂ ಪ್ರತಿಕೂಲ ಸ್ಥಾನದವರಾಗಿರುವುದರಿಂದ ನಿಮಗೀವಾರವು ಸುಖಮಯವಾಗಿ ಪರಿಣಮಿಸಲಾರದು. ಮನಸ್ಸು ಸದಾ ಭೀರುವಾಗಿರುವುದು. ಅರ್ಧಾಂಗಿಯು ನಿಮ್ಮ ಇಷ್ಟಕ್ಕೆ ವಿರೋಧವಾಗಿ ವರ್ತಿಸಿ ಆಗ್ರಹಕ್ಕೆ ಪಾತ್ರಳಾಗುವಳು. ಶತ್ರುಭಯವೂ ರೋಗಪೀಡೆಯೂ ಅಧಿಕವಾಗುವುದು. ತಾತ್ಕಾಲಿಕ ವೃತ್ತಿಯ ಕುಮಿತ್ರರಿಂದ ಹಲವಾರು ಅನಿಷ್ಟಗಳು ಸಂಭವಿಸಲಿವೆ. ವಿರೋಧಿಗಳ ಉಪಟಳದಿಂದ ಹಲಕೆಲವು ಕಾರ್ಯಗಳಲ್ಲಿ ಪರಾಜಿತರಾಗುವಿರಲ್ಲದೆ ಇದೇ ಶೋಕವೇ ನಿಮ್ಮ ಮನೋರೋಗಕ್ಕೆ ಮೂಲವಾಗುವುದು. ಹೆಚ್ಚೇಕೆ ಮೇಲಿಂದ ಮೇಲೆ ಅನಿಷ್ಟಗಳು ಬಿಡದೆ ಬರಲಿವೆ. ಈ ಕಾಲದಲ್ಲಿ ನೀವು ಎಲ್ಲಿಗೂ ಪ್ರಯಾಣ ಹೊರಡಬೇಡಿರಿ. ಮಾರ್ಗದಲ್ಲಿ ಹೆಚ್ಚಿನ ಕಷ್ಟನಷ್ಟಗಳು ಸಂಭವಿಸಲಿವೆ. ಆದರೂ ಆರ್ತತ್ರಾಣಪರಾಯಣನನ್ನು ಸದಾ ಸ್ತುತಿಸುತ್ತಾ ನವಗ್ರಹರ ತೃಪ್ತಿ ಮೂಲಕ ಮುಂಬರುವ ಅನಿಷ್ಟಗಳನ್ನು ನಿವಾರಿಸಿಕೊಳ್ಳಬಹುದು. ತಾ. 8, 9, 10ನೇ ದಿನಗಳು ಉತ್ತಮವಾಗಿಲ್ಲವು.



ತಯಾರಿಸುವವರು—
ಆಯುರ್ವೇದಾಶ್ರಮಂ, ಪೋ. ಬಾಕ್ಸ್‌ನಂ. ೨೮೭, ಮದ್ರಾಸು
ಸ್ಟಾಕಿಸ್ಟರು—
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ವೃಶ್ಚಿಕರಾಶಿ—

ಹೆಚ್ಚಿನ ಗ್ರಹರ ಅನುಗ್ರಹವು ನಿಮ್ಮ ಮೇಲಿದ್ದರೂ ನಿಮಗೆ ನಿಶ್ಚಿಂತೆಯಿಂದಿರಲಾಗದು. ಸ್ತ್ರೀಯರಿಂದ ಅಕಸ್ಮಾತ್ ಪೀಡೆಗಳಾಗಲೀ ಅನಿಷ್ಟಗಳಾಗಲಿ ಸಂಭವಿಸಲಿವೆ. ಪುಣ್ಯತೀರ್ಥ ಕ್ಷೇತ್ರಗಳ ಸಲುವಾಗಿ ಪ್ರಯಾಣ ಇವುಗಳ ಬಗ್ಗಾಗಿ ಸ್ವಲ್ಪಾಂಶ ಧನವು ವ್ಯಯವಾಗುವುದು. ಆದರೂ ಇತರ ಸಕಲ ಭಾಗಗಳಲ್ಲೂ ನೀವೇ ಧನ್ಯರು ಎಂದು ಹೇಳಬಹುದು. ಸ್ವಕೀಯ ಪರಾಕ್ರಮದಿಂದ ನೀಚ ಜನರಿಂದಲೂ ನೀಚವೃತ್ತಿಯವರಿಂದಲೂ ಧನಗಳಿಸುವಿರಿ. ಸ್ವೀಕೃತ ಕಾರ್ಯಗಳಲ್ಲಿ ಜಯವೂ ಬೇಕಾದಷ್ಟು ಧನವಸನಗಳ ಲಾಭವೂ ಆಗಲಿವೆ. ಆಪ್ತವೃಂದಕ್ಕೂ ಪತ್ನಿಯರಿಗೂ ಹೆಚ್ಚಿನ ಸುಖ ಸಂತೋಷಗಳು ಲಭಿಸುವವು. ಶತ್ರು ಜನರು ದಿನೇ ದಿನೇ ಕೃಷ್ಣಪಕ್ಷದ ಚಂದ್ರನಂತಾಗುತ್ತಿರುವರು. ಸದಾ ಸಧನರಾಗಿರುವಿರಿ. ಹೆಚ್ಚೇಕೆ ಸಕಲ ಸಂಸಾರಸುಖಗಳಿಂದ ಯುಕ್ತರಾಗಿ ಸಂತೋಷದಿಂದ ಕಾಲಕಳೆವಿರಿ. ತಾ. 13, 14, 15 ಸರ್ವೋತ್ಕೃಷ್ಟಗಳಾಗಿವೆ.

ಧನುರಾಶಿ—

ಸದ್ಯದ ಗ್ರಹಗಳ ಪರಿಸ್ಥಿತಿಯಲ್ಲಿ ನಿಮ್ಮ ಅದೃಷ್ಟವು ಬಹಳ ಹೀನಾಯಮಾನವಾಗಿದೆ. ಶತ್ರುಜನರು ದಿನದಿಂದ ದಿನಕ್ಕೆ ಹೆಚ್ಚುತ್ತಿರುವರು ಮಾತ್ರವಲ್ಲ ತಮ್ಮ ಕುಹಕೋಪಾಯಗಳಿಂದ ನಿಮ್ಮನ್ನು ಮೋಸದಲ್ಲಿ ಕೆಡಹಿ ತಮ್ಮ ಇಷ್ಟಾರ್ಥಸಿದ್ಧಿಯಿಂದ ಮೆರೆಯುತ್ತಿರುವರು. ಸ್ವಲ್ಪ ಉತ್ಪತ್ತಿಯಿಲ್ಲದಿದ್ದರೂ ರೋಗಾದಿಯ ಖರ್ಚು ಇದ್ದೇ ಇರುವುದು. ಉಷ್ಣಪಿತ್ಥ ಸಂಬಂಧವಾದ ರೋಗವು ತಲೆದೋರುವುದು. ರಾಜಕೀಯ ರಂಗದಲ್ಲಿ ಅನಿಷ್ಟಸಂಭವಿಸಲಿದೆ. ಸ್ವಕೀಯ ಗೃಹಜನರೆಲ್ಲರೂ ನಿಮಗೆ ಪ್ರತಿಕೂಲರೇ. ಸದ್ಯದಲ್ಲಿ ಆತ್ಮೀಯರೆಂಬ ಭಾವನೆಯುಳ್ಳವರೇ ನಿಮಗಿಲ್ಲವೆಂದರೂ ತಪ್ಪಾಗದು. ಸಂಬಂಧಿಕರ ಸಲುವಾಗಿ ಹೆಚ್ಚಿನ ಶೋಕಕ್ಕೆ ಗುರಿಯಾಗುವಿರಿ. "ನಡೆವಾಗ ಮುಡಿವಾಗ ಗಿವವೆಲ್ಲ ನೆಂಟರು ಕಡೆಗಿಲ್ಲ ಎಚ್ಚರಿಕೆ" ಎಂಬ ದಾಸರ ಉಕ್ತಿಯು ನಿಮ್ಮ ಸ್ಮೃತಿಪಥಕ್ಕೆ ಬರಲಿರುವುದು. ತಾ 8, 9, 10 ಈ ದಿನಗಳು ಇದ್ದುದರಲ್ಲಿ ಉತ್ತಮಗಳಾಗಿವೆ.

ಮಕರರಾಶಿ—

ಪೂರ್ವವಾರಕ್ಕಿಂತ ನಿಮ್ಮ ಸ್ಥಿತಿಯು ಎಷ್ಟೋ ಉತ್ತಮರೀತಿಯಲ್ಲಿರುವುದು. ಮಾತ್ರವಲ್ಲ ಕಳೆದ ವಾರಕ್ಕಿಂತ ಈ ವಾರವು ನಿಮಗೆ ಸ್ವಲ್ಪ ಶ್ರೇಯಸ್ಕರಿಯಾಗಿ ಪರಿಣಮಿಸಿದೆ. ಬಂಧುಮಿತ್ರರ ಸಹಕಾರವು ಚೆನ್ನಾಗಿರುವುದರಿಂದ ನೀವು ಸ್ವಯಂ ಸಮರ್ಥರಿದ್ದರೂ ಕೂಡ ಕಾರ್ಯ ಸಾಧಿಸುವುದರಲ್ಲಿ ಚತುರರಾಗಿರುವಿರಿ. ಶತ್ರುಜನರನ್ನು ಉಪಾಯದಿಂದಲೇ ಸದೆಬಡಿಯಲು ಯತ್ನಿಸಿ ಕೃತಕೃತ್ಯರಾಗುವಿರಿ. ಸಾಂಪತ್ತಿಕ ಭಾಗವು ಉತ್ತಮ ರೀತಿಗೆ ಬರಲಿದೆ. ಆದರೂ ನಿಮ್ಮ ಮಾನಸಿಕ ಮತ್ತು ಶಾರೀರಿಕ ಸುಖಕ್ಕೆ ತುಂಬಾ ಧಕ್ಕೆಯುಂಟಾಗಲಿದೆ. ಗೃಹಕಲಹಗಳು ಹುಟ್ಟಿ ಸಹಜಾತರಲ್ಲಿ ಭಿನ್ನಮತವನ್ನುಂಟುಮಾಡಲಿರುವವು. ಚರ್ಮರೋಗಗಳೂ ಕಜ್ಜಿ ಹುಣ್ಣು ವಗೈರೆಗಳೂ ವೃದ್ಧಿಹೊಂದುವವು. ವಿದ್ಯಾರ್ಥಿಗಳ ಭಾಗಕ್ಕೆ ಈ ವಾರವು ಉತ್ತಮವಿರುವುದು. ತಾ. 11, 12 ಹೊರತಾಗಿ ಇತರ ದಿನಗಳಲ್ಲಿ ಆಪ್ತಮಿತ್ರರಲ್ಲಿ ಅವಿಶ್ವಾಸ ಕಲಹ ಧನಹಾನಿಗಳಿಗೆ ಹಾನಿಕೋರತೆಗಳೂ ಸಂಭವಿಸಲಿವೆ. ಆದಕಾರಣ ಮುಂಜಾಗ್ರತೆಯಿಂದಿರಿ.

ಕುಂಭರಾಶಿ—

ನಿಮ್ಮ ಮಾನಸಿಕ ಸುಖಕ್ಕೂ ಭೋಗ್ಯವಸ್ತುಗಳಿಗೂ ಅನೇಕ ವಿಘ್ನಗಳು ಬರುವವು. ರಾಜಕೀಯ ಭಾಗದಲ್ಲಿ ಪ್ರಕೃತ ಮುಂದರಿಯಬೇಡಿ, ಮಾನಚ್ಯುತಿಯಾಗುವ ಸಂಭವವಿದೆ. ಚಿತ್ತಾಧಿಕ್ಯದಿಂದ ದುಃಸ್ವಪ್ನಗಳೂ ನಿದ್ರಾಭಂಗವೂ ಉಂಟಾಗುವುದು. ಕೌಟುಂಬಿಕ ಕಲಹವು ಅಧಿಕವಾಗಿ ಸಂಸಾರದಲ್ಲಿ ವಿರಕ್ತಿ ತೋರೀತು, ಮಾತ್ರವಲ್ಲ ಸ್ತ್ರೀಯರೊಡನೆ ಕಲಹವೂ ಆದೀತು. ಆದರೂ ಆರೋಗ್ಯದೇ ಭಾಗ್ಯವೆಂಬ ಲೋಕೋಕ್ತಿಯಂತೆ ಆರೋಗ್ಯಭಾಗ್ಯದಿಂದ ಯುಕ್ತರಾಗಿರುವಿರಿ. ಉದ್ಯೋಗದಲ್ಲೂ ಹಿಡಿದ ಕಾರ್ಯದಲ್ಲೂ ಉತ್ಪತ್ತಿಯು ಚೆನ್ನಾಗಿರುವುದು.

ಪುಟ ೧೯ಕ್ಕೆ

ಹಿಂದೂ ಸಮಾಜದ

ಪರಮ ವೈರಿ—ವರದಕ್ಷಿಣೆ

ಯುವಕರು ಸುಸಂಸ್ಕೃತರಾಗಿರುವರೆ?

ಒಂದಾನೊಂದು ಕಾಲದಲ್ಲಿ ಹಿಂದೂ ಸಮಾಜವು ಅತ್ಯಂತ ಉನ್ನತಸ್ಥಿತಿಯಲ್ಲಿತ್ತು. ಇಂದು ಅವರ ಅವನತಿಗೆ ರಾಜಕೀಯ ಕಾರಣವು ಮುಖ್ಯವಾಗಿದ್ದರೂ, ಒಂದು ಕಾರಣವು ಮಾತ್ರ ನಿಜ. ಅದೇ ಸಾಮಾಜಿಕ ಕುರೀತಿಗಳು. ಇದರಲ್ಲಿರುವ, ಈ ಸಭ್ಯ(?) ಸಮಾಜದಲ್ಲಿರುವ ಅಸಂಖ್ಯಾತ ಲೋಪಗಳನ್ನು ದೂರಮಾಡದಿದ್ದಲ್ಲಿ, ಈ ಸಮಾಜವು ಶೀಘ್ರದಲ್ಲಿಯೇ ಭಗ್ನವಾಗಿ ನಾಮಾವಶೇಷವಾಗಿ ಹೋಗುವುದು. ಭಾರತದ ಸಂಸ್ಕೃತಿಯು ರಕ್ಷಣೆಯಾಗಬೇಕಾಗಿದ್ದರೆ ಈ ಆಧುನಿಕ ಕಾಲದಲ್ಲೂ ಪ್ರಾಚೀನ ಭಾರತದ ಸಭ್ಯತೆಯು ಉಪಯೋಗವನ್ನು ಹೊಂದಬೇಕಾಗಿದ್ದರೆ, ಈ ದೋಷಗಳನ್ನೂ ಈ ದುಷ್ಟ ಪದ್ಧತಿಗಳನ್ನೂ ಈ ಅಂಥ ವಿಶ್ವಾಸಗಳನ್ನೂ ದೂರಮಾಡಲೇಬೇಕು. ಇದರಿಂದ ಕೆಲವರಿಗೆ ತೊಂದರೆಯಾಗಬಹುದು. ಆದರೆ ಸಾರ್ವತ್ರಿಕ ಹಿತದೃಷ್ಟಿಯಿಂದ ಕೆಲವರಿಗೆ ಆಗುವ ನಷ್ಟವು, ಅಪೇಕ್ಷಣೀಯವೇ ಆಗಿರುವುದು. ಶರೀರಕ್ಕೆ ನೋವಾಗುವುದೆಂದು ಜನರು ಗಾಯಗಳಿಗೆ ಇತರ ರೋಗಗಳಿಗೆ ಆಪರೇಶನ್ ಮಾಡಿಸಿಕೊಳ್ಳುವುದಿಲ್ಲವೆ?

ಹಿಂದೂ ಸಮಾಜದ ಅನೇಕ ದುಷ್ಟ ಪದ್ಧತಿಗಳಲ್ಲಿ ವರದಕ್ಷಿಣೆಯು ಬಹಳ ಭಯಂಕರವೂ, ಅನಿಷ್ಟಕರವೂ ಆಗಿದ್ದು, ಸಮಾಜವನ್ನು ಸಮೂಲವಾಗಿ ತಿನ್ನುತ್ತಿದೆ. ಇದರಿಂದಾಗಿರುವ ಆಗುತ್ತಿರುವ ಹಾನಿಯನ್ನು ಕೇಳಿ ರೋಮಾಂಚನವಾಗುವುದು. ಇಂತಹ ಹೃದಯ ವಿದ್ರಾವಕವಾದ ಘಟನೆಗಳನ್ನು ಕೇಳಿ ಸಹ ನವಯುವಕರು ಏನೂ ಮಾಡದಿರುವುದು ಸಮಾಜ ಮತ್ತು ದೇಶದ ದೌರ್ಭಾಗ್ಯವಲ್ಲವೆ! ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಸಿದ್ಧರಾಗಿರುವ ಯುವಕರ, ಮಾತುಮಾತಿಗೂ ಜೆರ ತಾಳವನ್ನಾಚರಿಸಲು ಸಿದ್ಧರಾಗಿರುವ ಈ ಆವೇಶಪೂರಿತರಾದ ಯುವಕರ ಕಿವಿಗೆ ಈ ವರದಕ್ಷಿಣೆಯ ಅನಾಹುತದ ಸುದ್ದಿಯೇ ಬೀಳುವಂತಿಲ್ಲ. ಕಾಲೇಜುಗಳಲ್ಲಿ ಶಿಕ್ಷಣವನ್ನು ಮುಗಿಸಿಕೊಂಡು ಬಂದಿರುವ ಯುವಕರು, ಆಟದ ಬೊಂಬೆಗಳಂತೆ, ನೂತನ ವಸ್ತ್ರಧಾರಣೆಮಾಡಿಕೊಂಡು, ಸ್ವಲ್ಪವೂ ನಾಚಿಕೆ ಇಲ್ಲದೆ, ವರದಕ್ಷಿಣೆಗಾಗಿ, ಮದುವೆಗೆ ಸಿದ್ಧರಾಗಿರುವುದನ್ನು ನೋಡಿದರೆ, ನಾಚಿಕೆಯಿಂದ ತಲೆತಗ್ಗಿಸಿಕೊಳ್ಳಬೇಕಾಗುತ್ತದೆ. ಇದು ಅವರ ಉಚ್ಚ ಶಿಕ್ಷಣದ ಫಲ! ದೊಡ್ಡ ದೊಡ್ಡ ಡಿಗ್ರಿಗಳನ್ನು ಹೊಂದುವಾಗ ಕೊಟ್ಟ ಪ್ರತಿಜ್ಞೆಯ ಫಲ. ಇದನ್ನು ನೋಡಿ ಏನು ಹೇಳಬೇಕೋ ತಿಳಿಯದಾಗಿದೆ.

ಇಂತಹ ಸ್ಥಿತಿಯಲ್ಲಿ ಪುರುಷರು ನಾರಿಗೆ ಸ್ವಾತಂತ್ರ್ಯವನ್ನು ಕೊಡುವರಂತೆ! ಒಂದು ಸ್ವಲ್ಪ ಹಣಕ್ಕೆ, ಒಂದು ಮೋಟಾರು ಸೈಕಲ್ಲಿಗೆ, ಸತ್ಯಾಗ್ರಹಮಾಡುವ ಇವರಿಂದ ಈ ವರದಕ್ಷಿಣೆಯ ವಿಚಾರದಲ್ಲಿ ಯಾವ ಆಸೆಯನ್ನು ತಾನೇ ಇಡಲಾದೀತು! ಭಾವೀ ಭಾರತದ ಭಾಗ್ಯವಿಧಾತರಿರಬಹುದು ಈ ವೀರ ತರುಣರು ಆದರೆ ಸ್ತ್ರೀಯರಿಗೆ ಇವರಿಂದ ಎಳ್ಳಷ್ಟೂ ಉಪಕಾರವಾಗುವ ಆಸೆ ಇಲ್ಲ. ಸ್ತ್ರೀಯರು ಇತ್ತೀಚೆಗೆ ಸ್ವಂತ ಕಾಲುಗಳ ಮೇಲೆ ನಿಲ್ಲಲು ಕಲಿಯುತ್ತಿರುವರೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ.

ತಂದೆಯು ವರದಕ್ಷಿಣೆಯನ್ನು ಕೊಡಲಾಗದವನಾಗಿದ್ದರೆ, ಆತನ ಹೆಣ್ಣು ಮಕ್ಕಳ ಜೀವನವು ಎಷ್ಟು ಭಯಂಕರವಾಗುವುದು? ಗೃಹಕಲಹ, ಪತಿ-ಪತ್ನಿಯರ ಮತಭೇದ ಇವೇ ಕನ್ಯೆಯು ತಂದೆಯ ಮನೆಯಿಂದ ಬರೀ ಕೈಯಲ್ಲಿ ಬರುವುದರ ಪರಿಣಾಮಗಳು. ತಮ್ಮ ಸಹೋದರರು ವಿದ್ಯಾವಂತರಾಗಿ ಈ ದುಷ್ಟ ಪದ್ಧತಿಯನ್ನು ನಿರ್ಮೂಲಮಾಡುವರೆಂದು ಸ್ತ್ರೀಯರು ಬಹಳ ಆಸೆಯನ್ನಿಟ್ಟುಕೊಂಡಿದ್ದರು. ಆದರೇನು? ಹೊಸ ಶಿಕ್ಷಣದ ಜೊತೆಗೆ, ವರದಕ್ಷಿಣೆಯನ್ನೂ ಕೇಳುವ ಮಾರ್ಗಗಳು ತೀರಾ ಹೊಸದೇ ಆಗಿವೆ. ಇಂಗ್ಲೆಂಡಿಗೆ ವ್ಯಾಸಂಗಕ್ಕೆ ಹೋಗುವುದು ಒಂದು ಇದರಲ್ಲಿ ಒಳ್ಳೇ ಪುರುಷ ಸಮಾಜ! ಒಳ್ಳೇ ದೇಶಸೇವೆ! ಇದು ಪತನದ ಅಂತಿಮ ಪರಾಕಾಷ್ಠತೆಯಲ್ಲವೆ?

ಸ್ತ್ರೀ ಸಮಾಜಕ್ಕಂತೂ ಈ ಪದ್ಧತಿಯಿಂದ ತೊಂದರೆಯನ್ನು ಅನುಭವಿಸುವುದು ಸಹಜವೇ. ಆದರೂ ಪುರುಷರು ಇದರಿಂದ ತೊಂದರೆಯನ್ನನುಭವಿಸುತ್ತಿಲ್ಲವೆನ್ನಲಾಗದು. ಈ ಅತ್ಯಾಸೆಯ ಪರಿಣಾಮವಾಗಿ, ಪುರುಷರಿಗೆ, ಉತ್ತಮ ಸಂಗಿಣಿಯು ದೊರೆಯಲಾರಳು. ಸ್ವಲ್ಪ ಹಣಕ್ಕಾಗಿ, ಅವರು ಸುಖಶಾಂತಿಯನ್ನು ಮಾಡಿಕೊಳ್ಳಬೇಕಾಗುವುದು. ಜಗತ್ತಿನಲ್ಲಿ ಹಣವೇ ಎಲ್ಲವನ್ನೂ ಒದಗಿಸುವ ವಸ್ತುವಲ್ಲ. ಪರದೇಶಕ್ಕೆ ಹೋಗಿ, ಶಿಕ್ಷಣಪಡೆದು ಬಂದ ಮೇಲಂತೂ ಈ ಸ್ತ್ರೀಯರ ಪಾಡು ಹೇಳಬೇಕಾಗಿಯೇ ಇಲ್ಲ. ಜಗತ್ತಿನ ಸ್ವಾರ್ಥಾಂಧತೆಯು ಬಹಳ ಹಾನಿಕರವಾದುದು. ಹೇಗೆಂದರೆ, ತಮ್ಮ ಸ್ವಂತ ಸಹೋದರಿಯರ ವಿವಾಹದಲ್ಲಿ ಮಾತ್ರ ಅವರು ಇದರ ಸುದ್ದಿಯನ್ನೇ ಮರೆಯುತ್ತಿರುವರು, ಆದರೆ ಈ ನಿಯಮವನ್ನು ತಮಗೆ ತಾವು ಮಾತ್ರ ಪಾಲಿಸಲಾರರು. ತಾವು ವಿವಾಹವಾಗುವಾಗ ಅಂಧರಾಗುವರು.

ಈ ಕೆಟ್ಟ ಪದ್ಧತಿಯಿಂದ ಅನೇಕ ಸಹೋದರಿಯರು ಕೌಮಾರ ಜೀವನದಲ್ಲೇ ಇರುವರು. ಕೆಲವರ ವಿವಾಹವು ಅಜ್ಜಂದಿರೊಡನೆ ಆಗಿ ಶಾಶ್ವತ ವೈಧವ್ಯವನ್ನನುಭವಿಸಬೇಕಾಗಿರುವುದು. ಈ ವಿಚಾರಗಳನ್ನು ಬರೆದಷ್ಟೂ, ಹೃದಯದ ಸಂಕಟವನ್ನು ಮತ್ತೆ ಮತ್ತೆ ನೆನೆಸಿಕೊಂಡಂತಾಗುವುದು. "ವಿನಾಶಕಾಲೇ ವಿಪರೀತಬುದ್ಧಿಃ" ಪ್ರಾಯಶಃ ಇದೇ ನಮ್ಮ ಸಮಾಜದ ಅಂತಿಮ ಗೀತೆ.

ಒಂದು ವಾಸ್ತವಿಕ ಘಟನೆ

ಹಿಂದೂಸಮಾಜದ ಈ ನಿರಂಕುಶ ಪಥದ ಬಲಿವೇದಿಕೆಯಲ್ಲಿ, ಎಷ್ಟೋ ಮಂದಿ ಏನೂ ತಿಳಿಯದ ಯುವತಿಯರು ಬಲಿಯಾಗಬೇಕಾಗಿದೆ. ಇಷ್ಟಾದರೂ ಸಮಾಜದ ಪಾಷಾಣ ಹೃದಯವು ಕರಗಿಲ್ಲ. ಈ ವರದಕ್ಷಿಣೆಯ ಹೆಸರಿನಲ್ಲಿ ಪಡೆಯುವ ಹಣದಿಂದ ಯಾವ ಸಂಸಾರವಾದರೂ ಐಶ್ವರ್ಯದಿಂದ ತುಂಬಿರುವುದೇ? ವಧುವಿನ ಪರಿವಾರದವರನ್ನು ಹಿಂಸಿಸಿ ಹೀರುವುದರಿಂದ ವರನ ಪರಿವಾರದವರು ಸುಖಿಸಿದಿರುವರೆ? ಇನ್ನೊಬ್ಬರ ನಾಶದಿಂದಲೇ ಸುಖವಾಗಿರಬೇಕೆನ್ನುವುದಾದಲ್ಲಿ ನೀತಿಶಾಸ್ತ್ರವನ್ನು ಕೂಡಲೇ ಬದಲಾಯಿಸಬೇಕು.

ನಿನ್ನೆ ಮೊನ್ನೆಯ ಸುದ್ದಿ. ಉಜ್ಜಯಿನಿಯದೊಂದು ರೋಮಾಂಚನ ಸಮಾಚಾರವನ್ನು ಕೇಳಿ. ಸ್ವರ್ಗೀಯ ಪ್ರಿನ್ಸಿಪಾಲ್ ಶ್ರೀ ತಾಟಕೇರವರ ಪುತ್ರಿಯು ವಿವಾಹಯೋಗ್ಯಳಿದ್ದಳು! 18 ವಯಸ್ಸಿನ ಸುಂದರ ತರುಣಿ! ವಿವಾಹದ ಸುದ್ದಿ ಎದ್ದ ಕೂಡಲೇ ಬಹಳ ದೊಡ್ಡ ಮೊಬಲಗನ್ನು ವರನಕಡೆಯವರು ಕೇಳಿದರು. ವಧುವಿನ ಕಡೆಯವರ ಕಷ್ಟಸ್ಥಿತಿಯನ್ನು ನೋಡಿ ಅವರ ಮನ ಕರಗಲಿಲ್ಲ. ಅಷ್ಟು ಹೆಚ್ಚು ಹಣವನ್ನು ಎಲ್ಲಿಂದ ತರಬೇಕೆಂಬುದೇ ಅವರಿಗಿದ್ದ ಚಿಂತೆ! ಹುಡುಗಿಯಾದರೋ ಶಿಕ್ಷಿತಳಾಗಿದ್ದಳು. ತನ್ನ ಪರಿವಾರದ ದುಃಖಕ್ಕೆ ತಾನೇ ಕಾರಣಳೆಂದು ಊಹಿಸಿದಳು. ಬಹಳವಾಗಿ ಯೋಚಿಸಿದಳು. ಮಾರ್ಗ ತೋರಲಿಲ್ಲ. ಸೀರೆಗೆ ಎಣ್ಣೆ ಹಚ್ಚಿಕೊಂಡು, ಬೆಂಕಿ ಹತ್ತಿಸಿಕೊಂಡುಬಿಟ್ಟಳು. ಅಗ್ನಿದೇವನ ಶರಣುಹೊಂದಿ, ಕರುಣರಹಿತವಾದ ಸಮಾಜದ ಅಗ್ನಿಕುಂಡದಿಂದ ಪಾರಾದಳು! ತಾನೂ ಪಾರಾಗಿ ತನ್ನವರನ್ನು ಆರ್ಥಿಕ ಸಂಕಟದಿಂದ ದೂರಮಾಡಿದಳು! ಹಿಂದೂ ಸಮಾಜದ ನಿರಂಕುಶತೆಯ ಜತೆಯಲ್ಲಿ ಸತಿಯಂತೆ ಪ್ರವೇಶಿಸಿ ಸ್ವರ್ಗದಲ್ಲಿ ಕುಳಿತು, ಅಟ್ಟಹಾಸ ಮಾಡುತ್ತಾ ಈ ಸಮಾಜವನ್ನು ಉದ್ಧರಿಸುವವರು ಯಾರಾದರೂ ಇರುವರೇ ಎಂದು ದಾರಿನೋಡುತ್ತಿರುವಳು.

—S. L. ಸುಬ್ರಹ್ಮಣ್ಯಂ, ಹರಿಹರ.

ಚಿತ್ರ ಸಮಾಚಾರ್

ಅಖಿಲ ಕರ್ನಾಟಕದ ಅಚ್ಚುಮೆಚ್ಚಿನ ಕನ್ನಡ ಚಲಚ್ಚಿತ್ರ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ. ೧.

ಏಜೆಂಟರಿಲ್ಲದ ಎಡೆಗಳಲ್ಲಿ ಏಜೆಂಟರು ಬೇಕು.

Best Monthly Journal for all advertise.

MANAGER:

"CHITRA SAMACHAR"

Chamarajapet, **Bangalore City**

New Staff!! *New Methods!!*

The City School of Commerce
Udipi.

New batches of students will be admitted from 1st June 1939.

EXPERT TUITION
INDIVIDUAL ATTENTION
By
Qualified, Experienced and able tutors.
For further particulars Enquire at
City School of Commerce,
Santhekatte, Udipi.

THE
PANGAL NAYAK BANK
Estd.] LIMITED. [1920.
ದಿ ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್.

Paid up Capital Rs. 1,82,100/-. Reserves Rs. 2,02,800/-
PRINCIPAL OFFICE: COURT ROAD, UDIPI.
OTHER OFFICES:
UDIPI, MANGALORE, KATAPADI, & KANHANGAD.

Season Deposits so as to bear interest at 4per cent per annum till the end of June 1939 are accepted.

Cumulative Deposits are also received on the usual terms.

Banking business of every description is transacted. Further particulars may be had on application.

ದಿ ವಿಜಯ ಬೇಂಕ್, ಲಿಮಿಟೆಡ್,
ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವಹಿವಾಟುಗಳು ಇಲ್ಲಿ ನಡಿಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಾತಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3 ತಿಂಗಳಿಗೆ	....	3½%
6 ,,	....	4%
1 ವರ್ಷಕ್ಕೆ	....	4½%
2 ,,	....	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ.

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತದೆ.

SRI VENKATRAMANA TEMPLE, KATAPADI, South Kanara

RENTAL ACCOUNT.

	Belthige Rice		Tholsulu Rice		Paddy		Cash		
To Balance	60½·	3¼·	43·	7·	30		299	14	9
„ Demand for the year	81·	6¾·	171¾·	1½·	113¼·	3½.	967	0	2
„ Advanced during the year	22½·	9·	31¼·	9			136	1	0
„ Balance							29	9	4
	164¼·	8½.	246¼·	7·	143¼	3½·	1432	9	3

	Belthige Rice M	S.	Tholsulu Rice M.	S.	Paddy M.	S.	Cash		
By Balance							29	0	0
„ Collections	94¼.	7¾	200¾.	7½.	143¼	3½	1121	9	9
„ Balance	70.	¾·	45¾.	10.			281	15	6
	164¼.	8½	246¾	7.	143¼	3½	1,432	9	3

RICE RENTAL ACCOUNT

To value or demand rice:			
Belthige 81· 6¾ muras @ Rs 4/4 a mura	344	4	0
Tholsulu 171·¾·1½ muras @ Rs. 3/8 a mura	602	0	0
Paddy 113¼·3½ murs @ Rs. 1/12 a mura	197	12	0
Rs.	1144	0	0

By Sale of Rice	672	12	2
„ Balance to General Fund	471	3	10
Rs.	1144	0	0

DEBTORS ACCOUNT

To Balance	367	2	6
„ Cash	1609	4	9
„ Balance	596	11	5
Rs.	2573	2	8

By Balance	548	3	11
„ Cash received	1517	15	6
„ Balance	506	15	3
Rs.	2,573	2	8

CHARITY FUND ACCOUNT

To Balance	16	15	6
„ Cash paid	19	11	3
„ Balance	260	3	1
Rs.	296	13	10

By Balance	197	0	3
„ Cash	99	13	7
Rs.	296	13	10

THASTHIK & MULGENI RENT ACCOUNT.

To Cash	5	5	0
„ Balance	25	3	9
Rs.	30	8	9

By Balance	16	13	2
„ Cash	13	11	7
Rs.	30	8	9

STATEMENT OF RECEIPTS & PAYMENTS FROM 28th OCTOBER 1935 TO 14th NOVEMBER 1936.

RECEIPTS

To Balance				6	3	7
„ Rent received				1050	12	4
„ Personal Accounts				1714	11	11
„ Sale of Rice				363	4	0
„ Sale of Paddy				226	11	11
„ Sale of Sundry articles				104	5	10
„ Saswatha Viniyogas				130	3	6
„ Dharahana Kanike				76	3	2
„ Other Viniyoges				90	10	9
„ Labhadhaya				87	5	7
„ Rent of vessels				57	8	1
„ Kanike				477	8	4
„ Charity Fund:						
Tirupathi Venkatramana	690	0	0			
Sukruthirtha Swamier	3	13	0			
Ekadesi Fund	1	8	1			
Bajana Saptaha Fund	6	2	5	701	7	6
„ Miscellanecns Receipts				47	5	0
Rs.				5134	3	6

PAYMENTS

By Assessment				450	0	3
„ Contribution						
H R E Board	36	13	0			
S.K.Temple Committee	73	10	0	110	7	0
„ Personal Accounts				1591	14	4
„ Purchases						
Rice	261	7	9			
Provisions	72	15	11	334	7	8
„ Repatrs				140	3	3
„ Cultivation Expenses				17	11	0
„ Cooly				15	1	11
„ Printing & Stationery				6	15	2
„ Portage				1	14	9
„ Travelling				6	15	6
„ Mulgeni Rent...				5	5	0
„ Salaries				185	8	0
„ Viniygas				849	2	0
„ Legal Exponses				857	5	11
„ Charity Fund Bajana Saptha Fund ...				5	14	3
„ Charity				14	6	0
„ Alade				20	15	11
„ Dharshina Kanike				70	11	2
„ Tenants' Account				139	15	0
„ Sundries (expenses incurred with the visit of Sukrathindra Thirtha Swamier)				288	14	2
„ Balance				1	5	3
Rs.				5134	3	6

ನಿಮಗೆ ಬೇಕಾದ ಶಾಲಾ ಪುಸ್ತಕಗಳನ್ನು
ನವಭಾರತ ಪುಸ್ತಕ ಭಂಡಾರದಿಂದಲೇ ಕೊಂಡುಕೊಳ್ಳಿರಿ.

SRI VENKATRAMANA TEMPLE, KATAPADI, South Kanara

INCOME & EXPENDITTUE ACCOUNT FOR THE YEAR ENDING 14th NOVEMBER 1936

To Salaries ...			185	8	0
„ Printing & Stationery ...			6	15	2
„ Postages ...			1	14	9
„ Travelling ...			6	15	6
„ Assessment ...			450	0	3
„ Repairs ...			140	3	3
„ Cooly ...			15	1	11
„ Cultivation Expenses ...			17	11	0
„ Purchase of Rice & Provisions ...			334	7	8
„ Legal Expenses ...			867	5	11
„ Charity ...			14	8	0
„ Mulgeni Rent ...			13	11	7
„ Contribution:					
H. R. E. Board	36	13 0			
S. K. Temple Committee	73	10 0	110	7	0
„ Vinioga Expenses ...			849	2	0
„ Alade ...			29	15	11
„ Dharshana Kanike ...			70	11	2
„ Sundries ...			288	14	2
		Rs.	3403	9	3

By Rent (cash) due ...	950	9	2
„ Rent (rice, Paddy) due at market valuation	933	0	0
„ Sale of provisions ...	104	5	10
„ Dharshana Kanike ...	76	3	2
„ Kanike ...	477	8	4
„ Labadhaya ...	87	5	7
„ Rent of vessels ...	57	8	1
„ Viniogas ...	90	10	9
„ Saswatha Viniogas ...	130	3	6
„ Interest ...	3	8	4
„ Miscellaneous Receipts ...	47	3	0
„ Excess of expenditure over income ...	435	7	6
Rs.	3403	9	3

BALANCE SHEET AS AT 14th NOVEMBER 1936

LIABILITIES

Personal Accounts ...					656	15	1
Rent received in advance ...					96	14	11
Charity Fund ...					955	12	4
Mulgeni Rent & Thasthik ...					33	10	4
General Fund:							
Balance as at 27-10-35	18888	0	9				
Less deficit for the year 435 7 6							
Balance of rice Account 343 0 1	778	7	7		18109	9	2
				Rs.	19852	13	10

ASSETS

Moveables:						
Gold & Silver	14017	2	0			
Copper etc,	4987	8	0	19004	10	0
Rent Outstanding ...				402	9	3
Personal Accounts ...				444	5	4
Cash ...				1	5	3
			Rs.	19852	13	10

RENTAL ACCOUNT. (1935-36)

	Belthige Rice M.	S.	Tholsulu Rice M.	S.	Paddy M.	S.	Cash		
To Balance	70·	¼·	45¼·	10			281	15	6
„ demand for the year	80¼	4¾	126¾·	3½·	170·	5·	960	9	2
„ advanced during the year	18·		32·				139	15	0
„ Interest							3	8	4
„ Balance					8·		96	14	11
	168¼·	5½·	204¼·	3·	178·	5·	Rs.1482	14	11

	Belthige Rice M	S	Tholsulu Rice M	S.	Paddy M.	S	Cash		
By Balance							29	9	4
„ collections	76½.	5.	149.	2½.	178·	5.	1050	12	4
„ Balance	91¼.	½.	55¼.	½.			402	9	3
	168¼.	5½	204¼.	3.	178.	5.	1482	14	11

PERSONAL ACCOUNT

To Balance ...		506	15	3
„ Cash ...		1591	14	4
„ Balance ...		656	15	1
	Rs.	2755	12	8

By Balance ...		596	11	5
„ Cash ...		1714	11	11
„ Balance ...		444	5	4
	Rs	2755	12	8

CHARITY FUND ACCONT

To Cash ...		5	14	3
„ Balance ...		955	12	4
	Rs.	961	10	7

By Balance ...		260	3	1
„ cash received ...		701	7	6
	Rs·	961	10	7

MULGENI AND THASTHIK ACCOUNT

	M.	S.			
To Cash	½·	7·	5	5	0
„ Balance ...			33	10	4
		Rs.	38	15	4

	M,	S			
By Balance ...			25	3	9
„ Due for the year ...	½·	7·	13	11	7
			38	15	4

RENTAL RICE ACCOUNT

To value of demand rice:			
Belthige 80¼·4½ muras @ Rs. 3/12 a mura	300	0	0
Tholsulu 126¾·3½ muras @ Rs 3/ a mura	378	0	0
Paddy 170· 5· muras @ Rs. 1/8 a mura	255	0	0
Rs	933	0	0

By Sale of Rice ...	589	15	11
„ Balance to General Fund...	343	0	1
Rs.	933	0	0

SRI VENKATRAMANA TEMPLE, KATAPADI, South Kanara

STATEMENT OF RECIPTS & PAYMENTS FROM 15th NOVEMBER 1936 to 3rd NOVEMBER 1937.

RECEIPTS

				Rs.	A.	P.
To Balance				1	5	3
„ Rent received				1183	7	0
„ Personal Accounts				2634	13	6
„ Sale of Rice & Paddy				455	3	1
„ Sale of Sundry articles				35	15	8
„ Saswatha Viniogas				246	7	3
„ other Viniogas				125	11	4
„ Darshana Kanike				39	9	2
„ Labhadaya				167	9	0
„ Rent of vessels				74	6	7
„ Kanike				199	7	9
„ Charity Fund:						
Tirupati Venkatramana	587	1	1			
Dharmastala Manjunatha	2	10	4			
Sukrathirtha Swamier	5	2	0			
Indrakanta Swamier	1	4	0			
Ekadesi Bajana Fund	1	6	6			
Bajana Saptaha fund	8	4	8	605	12	7
„ Legal Expenses recovered				167	0	0
„ Bad Debts recovered				20	0	0
„ Miscellaneous Receipts				50	0	9
Rs.				6006	12	11

PAYMENTS.

				Rs.	A.	P.
By Assessment				452	12	3
„ Contribution:						
H. R. E. Board	36	13	0			
S. K. Temple Committee	36	13	0	73	10	0
„ Personal Accounts				2636	14	4
„ Purchases of Rice & Provisions				214	2	4
„ Repairs to Buildings				270	15	6
„ Cultivation Expenses				28	10	9
„ Salaries				231	2	6
„ Viniogas				779	8	0
„ Legal Expenses				54	8	6
„ Charity Fund				6	15	5
„ Alade				46	14	7
„ Dharshana Kanike				29	5	11
„ Tenants Account				65	15	9
„ Repairs to vessels				16	2	7
„ Sundry Expenses				87	9	10
„ Remission to tenants				43	6	0
„ Thasthik & Mulgeni Rent				89	1	11
„ Property Purchased				870	4	5
„ Interest				0	8	0
„ Balance				8	4	4
Rs.				6006	12	11

INCOME & EXPENDIURE ACCOUNT FOR THE YEAR ENDING 3rd NOVEMBER 1937

				Rs.	A.	P.
To Salaries				231	2	6
„ Printing & Stationery						
„ Assessment				452	12	3
„ Repairs				270	15	6
„ Cultivation Expenses				28	10	9
„ Purchase of Rice & Provisions				214	2	4
„ Legal Expenses				54	8	6
„ Mulgeni Rent & Thasthik				57	15	7
„ Contribution-						
H.R.E.Board	36	13	0			
S.K. Temple Committee	36	13	0	73	10	0
„ Vinioga Expenses				779	8	0
„ Alade				46	14	7
„ Dharshna Kanike				29	5	11
„ Repairs of vessels				15	2	7
„ Remission to tenants				43	6	0
„ Interest				4	14	0
„ Sundries				87	9	10
„ Surplus for the year				892	1	8
Rs.				3283	12	0

	Rs.	A.	P.
By Rent due (Cash)	994	15	6
„ Rent due (rice, paddy at market value)	1035	12	0
„ Sale of provisions etc.,	35	15	8
„ Dharsana Kanike	39	9	2
„ Kanike	199	7	9
„ Labadaya	167	9	0
„ Rent of vessels	74	6	7
„ Viniogas	125	11	4
„ Saswatha Viniogas	246	7	3
„ Interest	126	13	0
„ Legal Expenses recovered	167	0	0
„ Bad Debts recovered	20	0	0
„ Miscellaneous	50	0	9
Rs.	3283	12	0

BALANCE SHEET AS 3rd NOVEMBER 1937

LIABILITIES:

				Rs.	A.	P.
Personal Accounts				623	5	9
Rent received in advance				50	14	3
Charity Fund				1554	9	6
Mulgeni Rent & Thasthik due				6	14	0
General Fund as at 14—11—36	18109	9	2			
Surplus for the year	892	1	8			
	19001	10	10			
Less Balance of rice A/c	580	8	11	18421	1	11
Rs.				20656	13	5

ASSETS

				Rs.	A.	P.
Property Purchased at cost				870	4	5
Moveables:						
Gold & Silver	14017	2	0			
Copper etc.,	4987	8	0	19004	10	0
Rent Outstanding				360	13	10
Personal Accounts				412	12	10
Cash				8	4	4
Rs.				20656	13	5

RENTAL STATMENT

	Belthige Rice M.	Belthige Rice S.	Tholsulu Rice M.	Tholsulu Rice S.	Paddy M.	Paddy S.	Cash Rs.	A.	P.
To Balance	$91\frac{3}{4}$	$\frac{1}{4}$	$51\frac{1}{4}$	$\frac{1}{4}$			402	9	3
„ Demand for the year	$112\frac{1}{4}$	$\frac{1}{4}$	$108\frac{1}{4}$	7	$83\frac{1}{4}$	$3\frac{1}{2}$	994	15	6
„ Advanced during the year			$29\frac{1}{4}$	10			65	15	9
„ Interest							126	13	0
„ Rent received in advance			$23\frac{3}{4}$	$5\frac{1}{4}$			50	14	3
	204	$1\frac{1}{4}$	214	$2\frac{1}{4}$	$83\frac{1}{4}$	$3\frac{1}{2}$	1641	3	9

	Belthige Rice M.	Belthige Rice S.	Tholsulu Rice M.	Tholsulu Rice S.	Paddy M.	Paddy S.	Cash Rs.	A.	P.
By Balance							96	14	11
„ Collectiors	$117\frac{3}{4}$	$10\frac{1}{4}$	$151\frac{1}{2}$	$8\frac{1}{4}$	$83\frac{1}{4}$	$3\frac{1}{2}$	1183	7	0
„ Balance	86	$1\frac{1}{2}$	$62\frac{1}{2}$	4			360	13	10
	204	$1\frac{1}{4}$	214	$2\frac{1}{4}$	$83\frac{1}{4}$	$3\frac{1}{2}$	1641	3	9

SRI VENKATRAMANA TEMPLE, KATAPADI, SOUTH KANARA

RICE ACCOUNT

To demand for the year								
Belthige 112¾ muras @ Rs 4/8 a mura 501 0 0				By Cash	455	3	1
Tholsulu 108¾ 7 muras @ Rs 3/12 a mura 406 14 0				„ Balance to General Fund	580	8	11
Paddy 80½ 3½ muras @ Rs 1/8 a mura 124 14 0	1035	12	0				
Rs	1035	12	0	Rs.	1035	12	0

MULGENI RENT ACCOUNT

To Cash — — — — —	80	1	11	By Balance	33	10	4
„ Balance — — .. —	6	14	0	„ Due for the year	57	15	7
				„ Interest	4	6	0
Rs.	95	15	11	Rs.	95	15	11

CHARITY FUND ACCOUNT

To Cash — — — — —	6	15	5	By Balance	955	12	4
„ Balance — — — —	1554	9	6	„ Cash	605	12	7
Rs.	1561	8	11	Rs.	1561	8	11

PERSONAL ACCOUNT

To Balance — — — —	444	5	4	By Balance	656	15	1
„ Cash — — — —	2636	14	4	„ Cash	2634	13	6
„ Balance — — — —	623	5	9	„ Balance	412	12	10
Rs.	3704	9	5	Rs.	3704	9	5

5, Errabalu Chetty St,
MADRAS,
Camp UDIPI.
17—9—1938.

Examined & found Correct.

K. GOPALKRISHNA RAO,
Registered Accountant, AUDITOR.

ಪ್ರಗತಿ ಪರ ಮೈಸೂರು

ಮೈಸೂರಿನ ಪ್ರಗತಿಗೆ ಕಾರಣಭೂತ ದಿವಾನರಾದ
ಸರ್. ಮಿರ್ಜಾ ಎಂ. ಇಸ್ಮಾಯಿಲರವರು

'ಮೈಸೂರುಸಂಸ್ಥಾನವು ಭರತಖಂಡದ ಇತರ ಪ್ರದೇಶಗಳಿಗೆ ಮಾದರಿಯಾಗಿದೆ' ಎಂದು ಹಲವರು ಹೇಳಿರುತ್ತಾರಷ್ಟೆ. ಅವರು ಹೇಳಿರುವುದು ಅಕ್ಷರಶಃ ನಿಜವೆನ್ನುವುದು ಈ ಕೆಳಗೆ ಕಂಡುಬರುವ ವಿಷಯಗಳಿಂದ ವ್ಯಕ್ತವಾಗುತ್ತದೆ. ಪ್ರಕೃತಿಮಾತೆಯ ವರಪ್ರಸಾದದಿಂದ ಲಭಿಸಿರುವ ಸಂಪತ್ತಿಗೆ ಮಾತ್ರವೇ ಅಲ್ಲ, ಸಂಸ್ಥಾನವು ದೇಶಾಭ್ಯುದಯ ಸಾಧನೆಗಾಗಿ ನಡೆಸಿರುವ ಇತರ ಹಲವು ಕೆಲಸ ಕಾರ್ಯಗಳಿಗೂ ಸಹ ಪ್ರಸಿದ್ಧವಾಗಿದೆ. ಈ ಕೆಳಗೆ ಕಂಡುಬರುವ ಸಂಗತಿಗಳು ಮೈಸೂರಿನ ವೈಶಿಷ್ಟ್ಯವನ್ನು ತೋರಿಸುತ್ತವೆ.

ಭರತ ಖಂಡದಲ್ಲಿ ಉತ್ಪತ್ತಿಯಾಗುವ ಚಿನ್ನದ-ಹೆಚ್ಚುಕಡಿಮೆ ಎಲ್ಲಾ ಭಾಗವೂ ಮೈಸೂರಿನಲ್ಲಿಯೇ ದೊರೆಯುತ್ತದೆ.

ಮೈಸೂರಿನ ಗಂಧದ ಮರವು ಅದರ ಸುವಾಸನೆಗೆ ಹೆಸರುವಾಸಿಯಾಗಿದೆ. ಇಷ್ಟು ಸುವಾಸನೆಯುಳ್ಳ ಮರವು ಇನ್ನೆಲ್ಲಿಯೂ ದೊರೆಯುವುದಿಲ್ಲವೆಂದು ಹೇಳಿದರೂ ಹೇಳಬಹುದು. ಸಂಸ್ಥಾನವು ಇಡೀ ಪ್ರಪಂಚಕ್ಕೆ ಬೇಕಾಗುವ ಗಂಧದಮರದ ಹೆಚ್ಚುಕಡಿಮೆ ಎಲ್ಲ ಭಾಗವನ್ನೂ ಒದಗಿಸುತ್ತದೆ.

1900ನೆಯ ಇಸವಿಯಲ್ಲಿಯೇ ಸರ್ಕಾರದವರು ಕಾವೇರಿ ನದಿಯಲ್ಲಿ ವಿದ್ಯುಚ್ಛಕ್ತಿಯನ್ನುತ್ಪತ್ತಿ ಮಾಡಲು ಮೊದಲು ಮಾಡಿದರು ಈ ರೀತಿ ವಿದ್ಯುಚ್ಛಕ್ತಿಯನ್ನುತ್ಪತ್ತಿ ಮಾಡುವ ಕಾರ್ಯಕ್ರಮಗಳ ಪೈಕಿ ಭರತಖಂಡದಲ್ಲಿ ಇದೇ ಮೊದಲನೆಯದು.

ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯು ಬ್ರಿಟಿಷ್ ಚಕ್ರಾಧಿಪತ್ಯದಲ್ಲಿರುವ ಅತ್ಯಂತ ದೊಡ್ಡದಾದ ಕಬ್ಬಿಣದ ಕಾರ್ಖಾನೆಗಳ ಪೈಕಿ ಎರಡನೆಯದಾಗಿದೆ. ಪೂರ್ವಾರ್ಧ ಗೋಳದಲ್ಲಿ ಇರುವ ಒಂದೇ ಒಂದು "ಚಾರ್ ಕೋಲ್ ಬ್ಲಾಸ್ಟ್ ಫರ್ನೇಸು" ಮೈಸೂರಿನಲ್ಲಿಯೇ ಇದೆ.

ಮೈಸೂರಿನಲ್ಲಿ ಕಚ್ಚಾ ರೇಷ್ಮೆಯು ಇತರ ಪ್ರದೇಶಗಳಿಗಿಂತ ಹೆಚ್ಚಾಗಿ ತಯಾರಾಗುತ್ತಿದೆ. ಭರತಖಂಡದಲ್ಲಿ ಸ್ಪನ್ ಸಿಲ್ಕು ಕಾರ್ಖಾನೆಯು ಇನ್ನೆಲ್ಲಿಯೂ ಸ್ಥಾಪಿತವಾಗಿಲ್ಲ. ಮೈಸೂರಿನಲ್ಲಿ ಸ್ಥಾಪಿತವಾಗಿ ನಡೆಯುತ್ತಿದೆ.

ಮೈಸೂರು ಕೆಮಿಕಲ್ ಮತ್ತು ಫರ್ಟಿಲೈಸರ್ಸ್ ಕಂಪೆನಿಯವರು ಸ್ಥಾಪಿಸಿರುವ ಸಿಂಥಟಿಕ್ ಅಮೋನಿಯಾ ಪ್ಲಾಂಟು ಭರತಖಂಡದಲ್ಲೇ ಮೊಟ್ಟಮೊದಲನೆಯದಾಗಿದೆ

ಮೈಸೂರಿನ ಸಕ್ಕರೆಯ ಕಾರ್ಖಾನೆಯು ಭರತಖಂಡದಲ್ಲಿ ಸಕ್ಕರೆಯನ್ನು ತಯಾರು ಮಾಡುವ ಕಾರ್ಖಾನೆಗಳ ಪೈಕಿ ಅತ್ಯಂತ ದೊಡ್ಡದಾಗಿದೆ.

ಕೃಷ್ಣರಾಜಸಾಗರದಲ್ಲಿರುವ ಬೃಂದಾವನವೆಂಬ ಉದ್ಯಾನವನವನ್ನು ಯುರೋಪಿನ ವರ್ಷೈಯಲ್ಸ್‌ಗೆ ಹೋಲಿಸಿರುತ್ತಾರೆ. ಸೌಂದರ್ಯದಲ್ಲಿ ಇದಕ್ಕೆ ಸಮನಾದ ಪ್ರದೇಶವು ಭರತಖಂಡದಲ್ಲಿ ಮತ್ತೊಂದಿಲ್ಲ.

ವಿದ್ಯಾಭ್ಯಾಸದ ವಿಷಯದಲ್ಲಿ ತಮ್ಮದೇ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ ಸಂಸ್ಥಾನಗಳ ಪೈಕಿ ಮೈಸೂರೇ ಮೊದಲನೆಯದಾಗಿದೆ.

ವೈದ್ಯಸಹಾಯದ ವಿಷಯದಲ್ಲಿ ಮೈಸೂರು ಬಹಳ ಮುಂದುವರಿದಿದೆ. ಬೆಂಗಳೂರಿನಲ್ಲಿರುವ ಮಿಂಟೋ ಆಸ್ಪತ್ರೆಯು ಅತ್ಯಂತ ಆಧುನಿಕ ಸಲಕರಣೆಗಳಿಂದ ಸುಸಜ್ಜಿತವಾಗಿದೆ ಎಂದು ಪ್ರಖ್ಯಾತವಾಗಿದೆ. ಮತ್ತು ಶ್ರೀ ವಾಣೀವಿಲಾಸ ಹೆಂಗಸರ ಆಸ್ಪತ್ರೆಯು ಭರತಖಂಡದ ಅತ್ಯಂತ ದೊಡ್ಡ ಆಸ್ಪತ್ರೆಗಳ ಪೈಕಿ ಎರಡನೆಯದಾಗಿದೆ.

ಕೊನೆಯದಾಗಿ, ಪೂರ್ವಾರ್ಧಗೋಳದಲ್ಲೆಲ್ಲಾ ಅತ್ಯಂತ ಎತ್ತರವಾದ ಜಲಪಾತವೂ, ಈಜಿಪ್ಟಿನ ರಾಮ್ಸೆಸಿನ ವಿಗ್ರಹಗಳೆಲ್ಲವುಗಳಿಗಿಂತ ಎತ್ತರವಾದ ಮತ್ತು ಅತ್ಯಂತ ದೊಡ್ಡದಾದ ಶಿಲಾವಿಗ್ರಹ (ಶ್ರೀ ಗೋಮಟೇಶ್ವರ ಸ್ವಾಮಿಯ ವಿಗ್ರಹ) ಮೈಸೂರಿನಲ್ಲಿಯೇ ಇದೆ

ನೋಟೀಸು

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್
ಕೋರ್ಟಿನಲ್ಲಿ

ಹುಬ್ಬಳ್ಳಿ S. C. No.421/1936
ಉಡ್ಪಿ R. E. P. No. ೩೩/೩೯
ಪೋಕುಡೆ ರಾಮಕೃಷ್ಣ ಭಟ್ಟ-ಅರ್ಜಿದಾರ
ಮತ್ತು
ಹಯಗ್ರೀವಾಚಾರ್ಯ—ಎದ್ರಿ
ಇವರೊಳಗೆ

ಮೇಲ್ಕಂಡ ಅಮಲ್ದಾರಿಯ ಎದ್ರಿ—ಉಡ್ಪಿತಾಲ್ಲೂಕು ಶಿವಳ್ಳಿ ಕಸಬಾ ಗ್ರಾಮದ ಸಗ್ರಿಯಲ್ಲಿರುವ ಗುರುರಾಜಾಚಾರ್ಯರ ಮಗ ಹಯಗ್ರೀವಾಚಾರ್ಯರಿಗೆ—

ಮೇಲ್ಕಂಡ ಅಮಲ್ದಾರಿಯಲ್ಲಿ ಸದ್ರಿ ಎದ್ರಿಗೆ ಜಿಗತಕ್ಕ ನೋಟೀಸು ಬಗ್ಗೆ ತಾರೀಕು 20-6-1939ಕ್ಕೆ ತನ್ನಿಗೆ ಇಟ್ಟಿರುವದ್ರಿಂದ ಆ ದಿವಸ ಸದ್ರಿ ಎದ್ರಿಯು ಈ ಕೋರ್ಟು ಮುಂದೆ 10 ಗಂಟೆಗೆ ಸ್ವತಃ ವ ಪ್ಲೀಡರ್ ಮುಖಾಂತರ ಹಾಜ್ರಾಗಿ ಆಕ್ಷೇಪಯಿದ್ರೆ ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ಎದ್ರಿಯ ಗೈರಹಾಜ್ರಿಯಿಂದ ಸದ್ರಿ ನಂಬ್ರವನ್ನು ತೀರ್ಮಾನಿಸಲಾದೀತು ಎಂಬ ಸಂಗ್ತಿ ಈ ಮೂಲಕ ಪ್ರಕಟಿಸೋಣಾಗಿಯದೆ.

ಉಡ್ಪಿ 1-6-39 } **P. Padmanabha Rao**, *Vakil for Petitioner*

New Kanara Swadeshi Laundry,

GAMDEVI, BOMBAY.

A reliable house for dry cleaning deing all sorts of rich garments.

ದಿ ನ್ಯೂ ಕೆನರಾ ಸ್ವದೇಶಿ ಲಾಂಡ್ರಿ,

ಗಾಮುದೇವಿ — ಮುಂಬಾಯಿ.

ಉತ್ತಮ ತರದ ಮಡಿ, ಉತ್ಕೃಷ್ಟ ರೀತಿಯ ರಂಗು—
ಇವುಗಳಿಗೆ ಪ್ರಸಿದ್ಧವಾದ ನಿಲಯ.

ವಿ. ಸೂ.—ಪರವೂರುಗಳಿಂದ ಉತ್ತಮ ಜರತಾರಿ ಸೀರೆ, ವಸ್ತ್ರ ಉಡುಗೆ ತೊಡಿಗೆಗಳ ರಂಗು ಹಾಕುವ, ಡ್ರೈಕ್ಲೀನಿಂಗ್ ವಗೈರೆ ಕಾರ್ಯವನ್ನು ಟಪಾಲು ದ್ವಾರಾ ಸ್ವೀಕರಿಸಿ ಸಕಾಲದಲ್ಲಿ ತಯಾರಿಸಿ ತಲುಪಿಸುವೆವು.

ಎಸ್. ಆರ್. ಶೆಟ್ಟಿ, ಪ್ರೊಪ್ರೈಟರ್. **G. V. Mahale**, Manager.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗೂ ನಮ್ಮ

ವಿಲಿಯಮ್ ಎಂಡ್ ಕೋ ರವರ

ದಾ॥ ಮತ್ತು ರೀಜಿ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್

ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು

ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲ ಎಂದು ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇವರ ಶೋಧನ, ರಸಾಯನ, ಸುಖಸೇವನ ಎಂಬ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

I. ಶೋಧನ ಗುಣ —ಶೋಧನದಿಂದ ಪ್ರಸವಾನಂತರ ಗರ್ಭಕೋಶದ ... ಕಶ್ಮಲವನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶ ... ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು

II ರಸಾಯನ ಗುಣ:—ರಸಾಯನದಿಂದ ಸೂತಿಕ ... ಬೆಳವಣಿಗೆ ಬಗ್ಗೆ ... ಪ್ರಸವಸಮಯ ... ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು

III ಸುಖಸೇವನ. - ಸುಖಸೇವನದಿಂದ ... ಈ ರಸಾಯನವು ಬಾಣಂತಿಯರ ಅರುಚಿ, ... ಬರುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವ ... ಯನ್ನು ಶೀಘ್ರದಿಂದ ನಿಲ್ಲಿಸುವದು.

... ಬಾಣಂತಿಗೆ ... ಬೇಕಾಗುವದು ...

ಎಸ್. ವಿ. ಶಾಸ್ತ್ರಿ, ಆಯುರ್ವೇದ ...

ವ್ಯವಸ್ಥಾಪಕರು ... - ಶ್ರೀ ... ತೀರ್ಥಹಳ್ಳಿ

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R Punja, ಯಂ. ಆರ್. ಪುಂಜ,

President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್

DAIMONDS! DAIMONDS!

K R. K. SHET

Opposite Govt College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ದರಗತಿಯ ಚುನ್ಯಾತ (first quality, selected) ಎಮ್ಮ ಸ್ವತಹ ತಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ ಇವರ ಅಂಗಡಿಯೊಂದನ್ನು ಗವರ್ನ್‌ಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್,

ಗವರ್ನ್‌ಮೆಂಟ್ ಕಾಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ

ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,

Hampankatte, **MANGALORE**

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ



ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ ಅಲಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು ಬೆಲೆ ಸೀಸೆ 1ಕ್ಕೆ 12 ಆಣೆ, ... ಆಣೆ

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ;

ಉಡುಪಿ ಸ್ಟಾಕಿಸ್ಟರು.- ನವಭಾರತ ಬುಕ್‌ಡಿಪೋ: ಉಡುಪಿ.

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತು ಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಡುನೋವು, ಹೊಟ್ಟೆಯುರಿ ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ ಬೆಲೆ 1—8—0

ಜೀವನಿ ಒಹಿಸ್ಟೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತು ಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ರಸಗಳಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು

"ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ

ಅಗತ್ಯವಾಗಿ ಇರಲೇಬೇಕಾದ್ದು

ವಿವರವಾದ ಕ್ಯಾಟಲಾಗಿಗೆ ಬರೆಯಿರಿ

ನಂಜನಗೂಡು ಸದ್ವೈದ್ಯಶಾಲಾ,

ಬ್ರಾಂಚ್—ಮಂಗಳೂರು.

ನಿಮ್ಮ ಇಚ್ಛೆಯು ನೆರವೇರುವದು.



ಯಾವ ವಿಷಯದಲ್ಲಿ ನೀವು ನಿರಾಶರಾಗಿದ್ದೀರೋ ಅಂತಹ ವಿಷಯಗಳಲ್ಲಿ ನಿಮ್ಮ ಅಭೀಷ್ಟವನ್ನು ಸಾಧಿಸಲಿಕ್ಕೆ ನಮ್ಮ ವಶೀಕರಣಯಂತ್ರವನ್ನು ತರಿಸಿಕೊಳ್ಳಿರಿ

ಈ ಯಂತ್ರವನ್ನು ನಿಮ್ಮ ಬಳಿ ಇರಿಸಿಕೊಂಡು ನಿಮಗೆ ಆಗಬೇಕಾದ ವಿಷಯವನ್ನು ಮನಸ್ಸಿನಲ್ಲಿ ಧ್ಯಾನಿಸಿದರೆ ನಿಜವಾಗಿಯೂ ನಿಮ್ಮ ಇಚ್ಛೆಯು ಪೂರೈಸುವದು

ಸೂರ್ಯನು ಪಶ್ಚಿಮದಲ್ಲಿ ಉದಯಿಸಿದರೂ ಈ ಯಂತ್ರವು ಎಂದಿಗೂ ನಿರರ್ಥಕವಾಗುವದಿಲ್ಲ ಅತಿಪ್ರಯಾಸದಿಂದ ಈ ಯಂತ್ರವನ್ನು ತಯಾರುಮಾಡಿದೆ

ಯಂತ್ರ 1ಕ್ಕೆ ರೂ. 2-4-0 ವಿದೇಶಕ್ಕೆ 5 ಶಿಲಿಂಗ್ ...

ಅಮೇರಿಕನ್ ಮೆಸ್ಮೆರಿಸಮ್ ಹೌಸ್ American Mismerism House

ಪೋ. ಬಾ ನಂ 27 (N Y U) P B No 27(N Y U)

ಅಮೃತಸರ (ಇಂಡಿಯಾ) Amritsar (India)

Rev. Fr. P. W. Farias,

St. Paul's Church,
Bolkunje Post, S. K.
Dated 4th January 1939.

To

THE JOINT MANAGERS.
The C P. C Co Ltd., MANGALORE

Sir

I thank you most sincerely for the promptness with which you arranged to take us to Mangalore and back during the grand occasion of the Diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the congress.

The glorious success of our congress is also due to your exertion in putting up the various lights some of which I hear were done voluntarily.

May the blessings of the Almighty fall on you all and may you be able to do much good to the public.

Renewing my thanks,
I remain,
Yours sincerely,
(*Sd.*) P. W. Farias.

To
THE JOINT MANAGERS,
THE COMBINED BOOKING AGENCY,
MANGALORE.

Sri Parshwanathaswamy
Panchakalyana Pooja Mahothsawam
VENOOR (S Kanara 1939).

Dear Sirs,

Please permit us to express our thanks on behalf of the above committee for the efficient service rendered by your Combined Booking Agency staff at Venoor to the visitors of the Panchakalyana Pooja Mahosthamam celebrations held this year.

Our thanks are also due to Moodabidre Booking Clerk Mr B Krishnayya and also his other mates and Mr. Raghavendra Bhandary who was specially come down from Mangalore to see the needs of and comforts of the travelling Public.

Thanking you once again,
We remain,
Yours faithfully,
(*Sd.*) **M. Jagathpal,**
(*Sd.*) **M Pachappa Shetty,**
VENOOR, (*Sd. in Canarese*) **Anantharaja Shetty,**
Dated 6-2-'39. (*Sd.*) **S Chandappa Indra,**
(*Secretary, P. M. Committee*)
Members, Panchakalyana Mahosthawam Committee.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	3	0	0
ಚಂದ್ರಗುಪ್ತ ಚಕ್ರವರ್ತಿ	1	0	0
Goutama Budda	0	8	0
भगवद्गीता	0	2	0
ಮಧುವನ	1	8	0
ಒಂದೇ ತಿಂಗಳಲ್ಲಿ ಇಂಗ್ಲಿಷ್	0	8	0
ಎರಡೇ ವಾರಗಳಲ್ಲಿ ಓದುಬರಹ	0	1	0
ಗೀತೆಯ ಕೈಗನ್ನಡಿ	0	4	0
ಭಗವದ್ಗೀತೆ	0	2	0
ತುಳು ವ್ಯಾಕರಣ	0	8	0
ಸಾಮುದ್ರಿಕ ಶಾಸ್ತ್ರ	0	8	0
ಸತ್ಯನಾರಾಯಣ ಕತೆ	0	8	0
ಪುರಂದರದಾಸರ ಪದಗಳು ಭಾಗ ೧	0	4	0
" ಭಾಗ ೨	0	4	0
" ಭಾಗ ೩	0	4	0
ತುಳುನಾಡ್ ತಿಲಕ ಪಂಚಾಂಗ	0	1	0
ವೈಜಯಂತೀ ಪಂಚಾಂಗ	0	2	6
ಕುಕ್ಕುಟ ಪಂಚಾಂಗ	0	1	0

ಇತ್ಯಾದಿ ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors:*—**GENERAL SUPPLIES Ltd., Udipi**)

Supply Agency Limited.

(BANKERS.)

ESTD] **UDIPI** [1933

Authorised Capital Rs **1,00,000**
Subscribed & Paid up Rs. **30,760**

RATE OF INTEREST FOR FIXED DEPOSITS.

3 to 6 Months 4% p. a.
7 to 11 " 5% "
12 to 18 " 6% "

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

PRINTED BY S. S. KARANTH AT THE THULUNAD PRESS, UDIPI
and Published by K. H SHETTY at "NAVAYUGA" OFFICE, UDIPI, South India.

Registered No. M. 3618

NAVAYUGA

ನವಯುಗ

15-6-1939

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪನಿ ಲಿಮಿಟೆಡ್

ಹೆಡ್ ಆಫೀಸು: ಉಡುಪಿ.

ಪ್ರಥಮ ಮೌಲ್ಯಮಾಪನ (Valuation) ದಲ್ಲಿಯೇ ಪಾಲಿಸಿದಾರರಿಗೆ ಲಾಭ (Bonus) ಹಂಚಿಯದೆ.

ಹೋಲ್ ಲ್ಯಾಫ್ (Whole Life) ಪಾಲಿಸಿಗಳಿಗೆ ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 15/-

ಎಂಡವ್‌ಮೆಂಟ್ (Endowment) ಪಾಲಿಸಿಗಳಿಗೆ ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/-

ಅಖಿಲ ಕರ್ಣಾಟಕದಲ್ಲಿ ಪಾಲಿಸಿದಾರರದೇ ಆದ ವಿಮಾಸಂಸ್ಥೆ ಇದೊಂದೇ.

ಲಾಭಾದಾಯದ ಪ್ರತಿ ಅಂಶವೂ ಪಾಲಿಸಿದಾರರಿಗೇ ಹಂಚಲ್ಪಡುತ್ತದೆ.

ಈಗಿಂದೀಗಲೇ ಈ ಕಂಪೆನಿಯಲ್ಲಿ ವಿಮೆ ಇಳಿಸಿ ವಿಮೆಯ ಸಂಪೂರ್ಣ ಪ್ರಯೋಜನವನ್ನು ಹೊಂದಿರಿ.

ಏಜಂಟರಾಗಬಯಸುವವರು ಕಂಪೆನಿಯ ಹೆಡ್ ಆಫೀಸಿಗೆ ಬರಕೊಳ್ಳುವುದು.

THE CANARA MUTUAL
ASSURANCE COMPANY LTD.



ಕರಾಮಾತೀ ದರ್ಪಣ

ಇದೊಂದು ಉಚ್ಚ ತರದ ಕನ್ನಡಿ ಯಾವ ವಯಸ್ಸಿನವರೂ ಇದನ್ನು ನೋಡಬಹುದು ಕದ್ದು ಹೋದ ಮಾಲು ಎಲ್ಲಿದೆ? ಕಾಯಿಲೆ ಗುಣವಾದೀತೆ? ಇಲ್ಲವೆ? ದ ಖಜಾನೆ ನಾಗ ಯಾವುದು? ಹುಟ್ಟಿದ್ದು ಎಲ್ಲಿದೆ? ಕಷ್ಟದ ಕೆಲಸ ಕೈಗೂಡುವುದೆ? ಪ್ರೇಮ ಕಾರ್ಯ, ಪರೀಕ್ಷೆಗಳು, ಕೋರ್ಟು ವ್ಯವಹಾರ ದಿಗಳಲ್ಲಿ ವಿಜಯ ದೊರೆಯುವುದೊ? ಎಂಬುದನ್ನೆಲ್ಲ ಈ ಕನ್ನಡಿಯಿಂದ ತಿಳಿಯಬಹುದು ಸ್ವರ್ಗಸ್ಥ ಮಾತಾಪಿತೃ ಪುತ್ರಕಳತ್ರ ಮಿತ್ರಬಾಂಧವರುಗಳೆಲ್ಲರ ಭೇಟಿಮಾಡಬಹುದು. ನೀವು ನೋಡದ, ಸ್ವಪ್ನದಲ್ಲಿಯೂ ನೋಡಲಸಾಧ್ಯವಾದವರನ್ನು ಸಹ ನೋಡಬಹುದು ಈ ಕನ್ನಡಿಯಲ್ಲಿ! ಬೆಲೆ ರೂ ೨—೮—೦

ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಇಂಗ್ಲಿಷಿನಲ್ಲೇ ಬರೆಯಿರಿ.

ದೊರೆಯುವ ಸ್ಥಳ —

ಅಮೇರಿಕನ್ ಮೆಸ್ಮೆರಿಸಂ ಹೌಸ್,
ಪೋಸ್ಟು ಬಾಕ್ಸ್ ನಂ ೨೭,
(N Y U) ಅಮೃತಸರ [ಇಂಡಿಯಾ]

AMERICAN MISMERISUM HOUSE,
Post Box No 27
(N Y U) Amritsar
(INDIA)

೧೦ ಗಡಿಯಾರಗಳು ಬರೇ ೩॥ ರೂಪಾಯಿಗೆ



ಏಳು ಜವೆಲ್ ಕೈವಾಚುಗಳು, ೨ ಜಮ್ಮಿಕಿಸೆಗಡಿಯಾರಗಳು, ಮತ್ತು ಒಂದು ಗಟ್ಟಿಯಂತ್ರದ ಸರಿ ಸಮಯ ತೋರಿಸುವ ಜರ್ಮನಿ ಟೈಂಪೀಸ್, ೩೦ ಗಂಟೆಗೊಮ್ಮೆ ಕೀ, ೧೨ ವರ್ಷದ ಗ್ಯಾರಂಟಿ ಈ ಗಡಿಯಾರವನ್ನು ವಿಲಾಯತಿಯಿಂದ ಹೆಚ್ಚು ಸಂಖ್ಯೆಯಲ್ಲಿ ತರಿಸಿದ್ದೇವೆ. ಈ ರಿಯಾಯತಿ ದರದಲ್ಲಿ ಕೇವಲ ೧೦,೦೦೦ ಗಡಿಯಾರಗಳನ್ನು ಮಾತ್ರವೇ ಮಾರುವುದು ತ್ವರೆ ಮಾಡಿರಿ! ಸಂದರ್ಭ ತಪ್ಪಿಹೋದೀತು ಇದರೊಂದಿಗೆ ೧೪ ಕ್ಯಾರೆಟ್ ರೋಲ್ಡ್‌ಗೋಲ್ಡು ನಿಬ್ಬಿನ ಫೌಂಟನ್ ಪೆನು ಒಂದು, ದೃಷ್ಟಿಚಕ್ರ ಒಂದು, ಮುತ್ತಿನ ಹಾರ ಒಂದು—ಇಷ್ಟು ಉಚಿತ, ಅಂಚೆವೆಚ್ಚ ಬೇರೆ ಅತೃಪ್ತಿಯಾದರೆ ದಣ ಹಿಂದ. ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ

ದೊರೆಯುವ ಸ್ಥಳ:—

ಜರ್ಮನ್ ವಾಚ್ ಕಂಪೆನಿ,
ಪೋಸ್ಟು ಬಾಕ್ಸ್ ನಂ ೨೭
(N.Y U) ಅಮೃತಸರ [ಇಂಡಿಯಾ]

German Watch Co
P B No 27 (N.Y U)
AMRITSAR, (India),

—— ಬಲು ಸುಲಭ ದರದಲ್ಲಿ ——

● ಉತ್ಕೃಷ್ಟ ಊಟ ಉಪಹಾರಾದಿಗಳಿಗಾಗಿ ಇತ್ತಗಮನಿಸಿರಿ!

● ನಾವು ನಮ್ಮನ್ನೇ ವಿಶೇಷವಾಗಿ ಪ್ರಶಂಸಿಸಿ ಕೊಳ್ಳಬಾರದಷ್ಟೆ!

ಲಕ್ಷ್ಮೀ ನಿವಾಸ ಹಿಂದೂ ಹೋಟೇಲು

(ಸ್ಥಾಪನೆ 1926)

ವಿಠಲ್ ಭಾಯಿ ಪಟೇಲ್ ರೋಡ್, ಗಿರ್ಗಾಂ, ಮುಂಬಯಿ.

Lakshmi Nivas Hindu Hotel

VITTALBHAI PATHEL ROAD,
GIRGAUM — — BOMBAY

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ ಪುರುಷರು

ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೋಹರ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸುಬಾರದು

ಫೋಟೋಗಳು ಸಹಿತ ಇರುವ ಪುಸ್ತಕ ರೂ 0-14-0

ಸಿಗುವ ವಿಳಾಸ —T. V. ದೇವಕರ್ ಎಂಡ್ ಕಂಪೆನಿ,
ನಂಬುಲಿಯರ್ ಬೀದಿ, ಜಿ. ಟಿ ಮದರಾಸು.

T V Devkar & Co, *Nambulier Street*, G T. MADRAS.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಆರಿಷ್ಟಾಸವಗಳು

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮಿ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಮೃದ್ವಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ! ಫಲ ಅಧಿಕ!!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ

BHUVANENDRA PRODUCTS LIMITED, KATAPADI, S. K.

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಕಾಶೀಮಠದ ಕಟ್ಟೋಣ, ಉಡುಪಿ

ಬ್ರಾಂಚ್ —ಹೂಮಾರ್ಕೆಟಿನ ಬಳಿ, ಮಂಗಳೂರು.

ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತ ಅನುಕೂಲ ಹಾಗೂ ಕೇಂದ್ರಸ್ಥಳ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯ ವೆಂಬಂತೆ ಸಾಮಾನುಗಳು ಬೇಲುಗಟ್ಟಲೆ ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾದೆ

ESTD. 1921
FOUNDER
Sri. A. B. SHETTY, M.L.A.
Parliamentary Secretary, Govt of Madras.
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೧೫-೬-೧೯೩೯ | Vol. XVIII
ಸಂಚಿಕೆ ೪೧ | Udipi, Thursday 15—6—1939 | No. 41

ಸ್ಥಾಪನೆ: ೧೯೨೧
ಚಂದಾ ವಿವರ:
೧ ವರ್ಷಕ್ಕೆ ರೂ. ೩—೪—೦
೬ ತಿಂಗಳಿಗೆ ರೂ. ೧—೧೨—೦.
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಮಾಚಾರಸಮಾವಲೋಕನ

ರಾಷ್ಟ್ರಸಭೆಯು ಪಾರ್ಲಿಮೆಂಟಿನಂತಲ್ಲ

'ವಿರುದ್ಧ ಪಕ್ಷಗಳು ಅಧಿಕಾರದಲ್ಲಿರುವ ಪಕ್ಷವನ್ನು ಸೋಲಿಸಿ ತಾವಾಸ್ಥಾನವನ್ನೇರುವಂತೆ ಪ್ರಯತ್ನಿಸುವ ಪದ್ಧತಿ ಪಾರ್ಲಿಮೆಂಟಿನೊಳಗಾಯಿತು; ನಮ್ಮ ಕಾಂಗ್ರೆಸೆಂದರೆ ಹಾಗಲ್ಲ, ಅದು ಒಂದು 'ಯುದ್ಧದಳ'. ಆದ್ದರಿಂದ ಅದರ ಒಕ್ಕಟ್ಟು ಸಡಿಲಾಗಬಾರದು" ಎಂದು ಕಾಂಗ್ರೆಸ್ ಸಮತಾವಾದಿ ಪಕ್ಷದ ಕಾರ್ಯದರ್ಶಿ ಶ್ರೀ ಜೈಪ್ರಕಾಶನಾರಾಯಣರೂ, ಶ್ರೀ ಪಿ. ಸಿ. ಘೋಷರೂ ಘೋಷಿಸುತ್ತಾರೆ. ಈ ದೃಷ್ಟಿಯಿಂದ ಸುಭಾಷಚಂದ್ರ ಭೋಸರ 'ಫೋರ್ವರ್ಡ್ ಬ್ಲೋಕಿ'ನ ಸ್ಥಾಪನೆಯು ಅನಗತ್ಯವೆಂದು ಅವರ ತೀರ್ಮಾನ. ನಮ್ಮ ಹಿಂದುಸ್ಥಾನದ ಪಕ್ಷಗಳೊಳಗೆ ಅಗತ್ಯವಾವುದು, ಅನಗತ್ಯವಾವುದು ಎಂಬುದನ್ನು ಶೋಧಿಸುವದು ಕೂಡ ಸುಲಭದ ಮಾತಲ್ಲ. ಮರಗಳೂ ಮನುಷ್ಯರಂತೆಯೇ ನೋವನ್ನರಿಯುತ್ತವೆ ಎಂಬ ಹೊಸ ಶೋಧವನ್ನು ಸರ್. ಜಗದೀಶಚಂದ್ರಭೋಸರ ಮೂಲಕ ಲೋಕಕ್ಕೇ ತಿಳಿಸಿದ ದೇಶ ಭಾರತ ಭೂಮಿ. ಅಂತಹ ಭೂಮಿಯಲ್ಲಿರುವ ಮನುಷ್ಯರಿಗೆ ತಮಗಾಗುವ ನೋವಿನ ಅರಿವಿಲ್ಲದೆ ಹೋದೀತೆ? ಬೇರಾವ ದೃಷ್ಟಿಯಿಂದ ಅನಗತ್ಯವಾದರೂ ನೋವಿನ ಶಮನಕ್ಕಾಗಿ ಪಕ್ಷದ ಅಗತ್ಯ ಕಂಡಲ್ಲಿ ಕೊನೆಯ ಪಕ್ಷ ಅದನ್ನಾದರೂ ಮಾಡಬೇಕಲ್ಲ!

ಸಾವರ್ಕರರ ಸಾವಿರಕರ

ಬ್ಯಾರಿಸ್ಟರ್ ವಿ. ಡಿ. ಸಾವರ್ಕರರು ಈಗ್ಗೆ ಹಿಂದೂ ಮಹಾಸಭೆಯ ಮುಂದಾಳುತನ ವಹಿಸಿ ತನ್ನ ಸ್ವಾಭಾವಿಕ ಚಟುವಟಿಕೆ, ಧೈರ್ಯ ಮತ್ತು ಕಷ್ಟ ಸಹನೆಯ ಅಮೂಲ್ಯ ಗುಣಗಳನ್ನು ಜಾತೀಯ ರಂಗದಲ್ಲಿ ಪೋಲುಮಾಡಿದ್ದಾರೆ. ಮ. ಗಾಂಧಿ ಮತ್ತು ಕಾಂಗ್ರೆಸನ್ನು ಮನಬಂದಂತೆ ನಿಂದಿಸಹತ್ತಿದ್ದಾರೆ. ಈಗ ಅವರ ಧ್ಯೇಯವೆಂದರೆ ಗಾಂಧಿ ಮತ್ತು ಕಾಂಗ್ರೆಸು ಮಾಡಿದುದಕ್ಕೆ, ಆಡಿದುದಕ್ಕೆಲ್ಲಾ ವಿರೋಧವೊಡ್ಡುವದೊಂದೇ. ಮಹಾತ್ಮರ 'ಅಂತರ್ವಾಣಿ' ಎಂಬ ಸೊಲ್ಲಿಗೆ ಪ್ರತಿಯಾಗಿ ಸಾವರ್ಕರರು "ನಾವು 'ಬಹಿರ್ವಾಣಿ'ಯನ್ನಾಧರಿಸಿ ಕೆಲಸಮಾಡುತ್ತೇವೆ" ಎಂದು ಅಣಕಿಸುತ್ತಾರೆ.

ಸಾವರ್ಕರರು ಭಾರತ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷ ರಾಜ್ಯಭಾರದ ವಿರುದ್ಧ ಹಿಂಸಾತ್ಮಕ ಕ್ರಾಂತಿಯನ್ನು ಸಾವಿರ ಕರದಿಂದ ಹೂಡಿದ್ದ ಗಂಡುಗಲಿ! ಅವರ ಹಿಂದಿನ ಅನುಯಾಯಿಗಳೆಲ್ಲಾ ಫಾಶಿ ಇಲ್ಲವೇ ಗಡಿಪಾರು ಶಿಕ್ಷೆಗೊಳಗಾಗಿದ್ದಾರೆ. ಸಾವರ್ಕರರು ಹಲವು ಸಲ ಪ್ರಾಣಾಪಾಯಕ್ಕೊಳಗಾದವರು; ಎಲ್ಲವನ್ನೂ ತನ್ನ ಜಾಣ್ಮೆಯಿಂದ ತಪ್ಪಿಸಿಕೊಂಡರು. ಈ ಬಾರಿ ಅವರು ಬಿಡುಗಡೆ ಹೊಂದಿದೊಡನೆ ಹಿಂದೂ ಮಹಾಸಭೆಯ ಧುರೀಣತ್ವ ವಹಿಸಿ, ರಾಷ್ಟ್ರ ಸ್ವಾತಂತ್ರ್ಯ ಸಮರದ ಮುಂಚೂಣಿಯಲ್ಲಿ ಅವರನ್ನು ಕಾಣುವೆವೆಂದಿದ್ದವರ ನಿರೀಕ್ಷೆಗಳನ್ನೆಲ್ಲಾ ಹುಸಿಮಾಡಿಬಿಟ್ಟರು. "ನೀವು ಕಾಂಗ್ರೆಸನ್ನೇಕೆ ಸೇರುವದಿಲ್ಲ?" ಎಂದು ಕೆಲವರು ಪ್ರಶ್ನಿಸಿದಾಗ ಸಾವರ್ಕರರು ಕೊಟ್ಟ ಸ್ಪಷ್ಟ ಉತ್ತರವು ಅವರ ರೂಪಾಂತರದ ಕಾರಣವನ್ನು ತಿಳಿಸುತ್ತದೆ. "ಕಾಂಗ್ರೆಸಿಗೆ ಸೇರುವವರು ಸದ್ಯದ ಧುರೀಣರ ಅನುಯಾಯಿಗಳಾಗಿ ಇರಬೇಕು ಹೊರತು ಹೊಸ ಧುರೀಣತ್ವಕ್ಕೆಡೆಯಿಲ್ಲ. ನಾನು ಎಂದಿಗೂ ಅನ್ಯರ ಅನುಯಾಯಿಯಾಗಿ ಕೆಲಸಮಾಡಲಾರೆ!" ಇದು ಸಾವರ್ಕರರ ಮಾತು.

ಸಾವರ್ಕರ್, ಜಿನ್ನಾ ತರಗತಿಯ ನಾಯಕರು ಕಾಂಗ್ರೆಸನ್ನು ದೂರುವದರ ಮರ್ಮವೇನೆಂಬುದು ಇದರಿಂದ ಗೊತ್ತಾಗುತ್ತದೆ. ನರಿಗೆ ದ್ರಾಕ್ಷೆ ಹಣ್ಣು ಹುಳಿಯಾದುದು ಎಟಕಲಾರದ ದೆಸೆಯಿಂದಲೇ. ಸಾವರ್ಕರರಲ್ಲಿ ಅನ್ಯರ ಅನುಯಾಯಿಯಾಗದಷ್ಟು ಸ್ವಾಭಿಮಾನ ಅಥವಾ ಹೆಗ್ಗಳಿಕೆಯಿರಬಹುದು. ಅನ್ಯರನ್ನು ಅನುಯಾಯಿಗಳನ್ನಾಗಿ ಮಾಡಿಕೊಳ್ಳುವಷ್ಟು ಯೋಗ್ಯತೆಯಿರುವದೆ?

ಗಾಂಧಿ ಟೋಪಿಯ ಗ್ರಹಚಾರಬಿಟ್ಟಿಲ್ಲ

ಬಿಳಿ ಟೋಪಿಯಿದ್ದ ತಲೆಯೊಳಗೆ ದುಷ್ಟ ಭಾವನೆಗಳಿರುವ ದುಸ್ಸಿದ್ಧಾಂತವೆಂಬ ಕಾಲವು ದೇಶದ ಹೆಚ್ಚಿನ ಪ್ರಾಂತಗಳ ಮಟ್ಟಿಗೆ ಕಳೆದರೂ ಪಂಜಾಬು ಪ್ರಾಂತವೊಂದು ಅದಕ್ಕಪವಾದ. ಸಂಯುಕ್ತಪ್ರಾಂತಿಕ ಸರಕಾರದ ಪಾರ್ಲಿಮೆಂಟರಿ ಸೆಕ್ರೆಟರಿ ಶ್ರೀ. ವಿ. ಎನ್. ತಿವಾರಿಯವರು ಸಿಮ್ಲಾದಲ್ಲಿ ಸೇರಿದ್ದ ಹೋಮ್ ಮೆಂಬರರ ಪರಿಷತ್ತಿಗಾಗಿ ತನ್ನ ನಿತ್ಯದ ಕಿರೀಟವಾದ ಗಾಂಧಿ ಟೋಪಿಯೇರಿಸಿಕೊಂಡು ರೈಲುಹತ್ತಿದರು. ಅವರು ಹೋದ ಸ್ಟೇಶನುಗಳಲ್ಲೆಲ್ಲಾ ಪಂಜಾಬು ಸಿ. ಐ. ಡಿ. ಆಫೀಸರರು ಇದಿರು ಬಂದು, ಹೋಗುವ ಸ್ಥಳ ಉದ್ದೇಶ, ಹೆಸರು ವಿಳಾಸಗಳನ್ನೆಲ್ಲಾ ಕೇಳಿಬರೆಕೊಳ್ಳುತ್ತಲೇ ಇದ್ದರು- ಒಬ್ಬ ಸಿ. ಐ. ಡಿ. ಅವರ ಬೆನ್ನು ಹಿಡಿದೇ ಬರುತ್ತಿದ್ದ. ಶ್ರೀ ತಿವಾರಿಯವರಿಗೆ, ತಾನು 1930ನೇ ಇಸವಿಯಲ್ಲಿಗೆ ಬಂದೆನೋ ಪಂಜಾಬಿಗೆ ಬಂದೆನೋ ಎಂಬ ಅನುಮಾನ ಬಂದು ಇದರ ಗುಟ್ಟೇನೆಂಬುದನ್ನು ವಿಚಾರಿಸಿದಾಗ, ಅವರ ತಲೆಯಲ್ಲಿದ್ದ ಗಾಂಧಿ ಟೋಪಿಯೇ ಇಷ್ಟನ್ನು ಮಾಡಿಸಿತು ಹೊರತು ಅನ್ಯರಲ್ಲ ಎಂದು ತಿಳಿಯಿತು. ಶ್ರೀ. ತಿವಾರಿಯವರು ಈ ವಿಷಯವನ್ನು ಸಿಮ್ಲಾದ ಹೋಮ್ ಮೆಂಬರರ ಪರಿಷತ್ತಿನ ಮುಂದಿಟ್ಟರು. ಮೆಂಬರರಿಗೆಲ್ಲಾ ಸಖೇದಾಶ್ಚರ್ಯವಾಯಿತು. ಅಲ್ಲಿ ಹಾಜರಿದ್ದ ಪಂಜಾಬಿನ ಪ್ರಧಾನ ಸರ್. ಸಿಕಂದರ ಹಯಾತ್ ಖಾನರು ಈ ಘಟನೆಗಾಗಿ ಪಶ್ಚಾತ್ತಾಪ ಸೂಚಿಸಿ ತಾನಿದಕ್ಕೆ ತಕ್ಕ ಕಾರ್ಯಕೈಕೊಳ್ಳುವೆನೆಂದು ಆಶ್ವಾಸನೆಯಿತ್ತರಂತೆ.

ಕೇಂದ್ರ ಸರಕಾರದ ಮೇಲೂ ಈ ಘಟನೆಯು ಪರಿಣಾಮಬಿದ್ದಿದೆ. ಇನ್ನು ಮುಂದೆ ಒಂದು ಪ್ರಾಂತದ ಪ್ರತಿನಿಧಿಯು ಇನ್ನೊಂದೆಡೆಗೆ ಹೋದಾಗ ಸ್ಥಳೀಯ ಪ್ರತಿನಿಧಿಯು ಮಾನ್ಯತೆಯು ಅವನಿಗೂ ದೊರೆಯುವಂತೆ ತಕ್ಕ ನಿಗಾಕೊಡುವ ಏರ್ಪಾಡನ್ನು ಕೇಂದ್ರಸರಕಾರವು ಸೂಚಿಸಲಿರುವದು.

ಇಲ್ಲಿಯೂ ಗಾಂಧಿ ಟೋಪಿಗೇ ಜಯವಾಯಿತು. ಸರಕಾರದ ಹೊಣೆಹೊತ್ತವರು ಗಾಂಧಿ ಟೋಪಿಯಿಟ್ಟುಕೊಂಡು ದೇಶದ ಎಲ್ಲೆಡೆಗಳಲ್ಲಿ ಸುಗಮವಾಗಿ ಸಾಗುವಂತೆ ಇಷ್ಟೆಲ್ಲಾ ಕೆಲಸಮಾಡುವ ಬದಲು ಅಂತಹ ಅಧಿಕಾರಿಗಳು ಬಿಳಿಟೋಪಿಯಿಡಬಾರದೆಂಬ ಒಂದೇ ನಿಯಮವಿಟ್ಟರಾಗದೆ? ಲೋರ್ಡ್ ಝೆಟ್ಲೆಂಡರು ಇಂಡಿಯಾ ಆಕ್ಟಿನಲ್ಲಿ ಯುದ್ಧಕಾಲಕ್ಕಾಗುವ ತಿದ್ದುಪಡಿಯನ್ನು ಸೂಚಿಸುವಾಗ ಈ ಕಾಲಕ್ಕಾಗುವ ಬಿಳಿಟೋಪಿ ನಿರೋಧಕ ತಿದ್ದುಪಡಿಯೊಂದನ್ನೂ ಸೇರಿಸಿಕೊಳ್ಳಬಾರದಿತ್ತೆ? ಸರ್. ಸಿಕಂದರರಂಥವರು ಆ ಬೆಂಬಲವನ್ನು ದೊರಕಿಸಿಕೊಳ್ಳಲು ತಪ್ಪಿದುದೇಕೆ?

THE
TROPICAL
INSURANCE COMPANY, LTD.
DELHI

CHAIRMAN:
SJT. SUBHAS CHANDRA BOSE.

WANTED an Asst. Organiser at Kundapur on salary, T. A. & D. A. The selected candidate will be on probation for 6 months and will be confirmed in the permanent service of the Co., with benefits of Provident Fund, etc, if he is found successful during the probation period. Preference will be given to those having previous experience. "Strict secrecy of correspondence assured". The application should reach the undersigned on or before the 28th of this month.

M. Sunder Ram Shetty,
BRANCH MANAGER,
Hampankatta, MANGALORE.
ಡಿ೮



ಮುಡಿಗೆ ತಂಪು ಮತ್ತು ಕೂದಲು ಬೆಳೆಯುವ
ಅನುಭವ ಸಿದ್ಧಗೊಳಿಸಿದ
ಗಾಂಧಿ (ಝಂಡಾಛಾಪ)
ರಜಿಸ್ಟರ್ಡ್
ಬ್ರಹ್ಮೀತೈಲ
ಒಮ್ಮೆ ಉಪಯೋಗಿಸಿ ಖಾತ್ರಿಮಾಡಿರಿ.
ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕು.
C. C. Mahajan & Co. Bombay 2
ಸಿ. ಸಿ. ಮಹಾಜನ & ಕಂ, ಮುಂಬಾಯಿ 2

ಭಾರತದಲ್ಲಿ ವೃತ್ತಪತ್ರಿಕಾ ಶಿಕ್ಷಣ

ವಿಶ್ವವಿದ್ಯಾಲಯಗಳು ಈ ವಿಚಾರದಲ್ಲಿ ಏನುಮಾಡಬಹುದು?

"ವೃತ್ತ ಪತ್ರಿಕೆಗಳು ನಮ್ಮ ಜೀವನದ ಒಂದು ಅನಿವಾರ್ಯ ಅಂಗದಂತೆ"

ಶ್ರೀ. ಸುಭಾಸಚಂದ್ರ ಭೋಸ್.

ಭಾರತದಲ್ಲಿ ಇಂದು ವೃತ್ತಪತ್ರಿಕೆಗಳ ಸ್ಥಾನವು ಬಹಳ ಮಹತ್ವದ್ದಾಗಿದೆ. ಆದರೆ ಸರಿಯಾದ ಶಿಕ್ಷಣವಿಲ್ಲದೆ, ಅನೇಕರು ಇಂತಹ ಮುಖ್ಯವಾದ ವೃತ್ತಿಯಲ್ಲಿ ತೊಡಗುತ್ತಿರುವುದು ಮಾತ್ರ ಬಹಳ ಆಶ್ಚರ್ಯಕರವಾದ ವಿಷಯ. ಈ ವೃತ್ತಿಯಲ್ಲಿ ಅಭಿವೃದ್ಧಿ ಹೊಂದಲು ಬಹಳ ಅನುಭವವಿರಬೇಕಾದುದು ಅನಿವಾರ್ಯ. ಈ ಅನುಭವವಾದರೋ ವೃತ್ತಪತ್ರಿಕೆಗಳ ಕಾರ್ಯಾಲಯದಲ್ಲಿದ್ದುಕೊಂಡೇ ಹೊಂದಬೇಕಾಗಿದೆ. ಯಾವ ರೀತಿ ಒಬ್ಬ ವಕೀಲರು, ಇಂಜನಿಯರು ಮೊದಲು ಶಿಕ್ಷಣವನ್ನು ಪಡೆದು, ನಂತರ ವ್ಯವಹಾರದ ಅನುಭವವನ್ನು ಹೊಂದಲು ಪ್ರತ್ಯಕ್ಷವಾಗಿ ನುರಿತವರಲ್ಲಿದ್ದು ಹೇಗೆ ಜ್ಞಾನಲಾಭವನ್ನು ಹೊಂದುವುದಗತ್ಯವೋ ಅದೇ ರೀತಿಯಲ್ಲಿ ಈ ವೃತ್ತಿಯಲ್ಲಿಯೂ ಮೊದಲು ನುರಿತವರಲ್ಲಿ ಅನುಭವಪಡೆಯುವುದಗತ್ಯ. ಈ ರೀತಿ ಕ್ರಮವಾದ ಶಿಕ್ಷಣವನ್ನೂ ಹೊಂದದೆ, ಆ ಕಾರ್ಯದಲ್ಲಿದ್ದು ಅನುಭವಹೊಂದದಿದ್ದಲ್ಲಿ ಅವರ ಜ್ಞಾನವು ಅಸಂಪೂರ್ಣವಾಗಿ ಸಂಕುಚಿತ ದೃಷ್ಟಿಯುಳ್ಳವನಾಗುವನು ಇದರಿಂದ ಜನಗಳಲ್ಲಿ ದುರಭಿಪ್ರಾಯಗಳೂ ಕೃತಕ ಭಾವನೆಗಳೂ ನೀಚ ಮನೋವೃತ್ತಿಯೂ ಉಂಟಾಗಿ ದೇಶಕ್ಕೆ ದೊಡ್ಡದೊಂದು ಕಂಟಕವಾಗಿ ಪರಿಣಮಿಸುವುದು. ನಮ್ಮವರು ವಿದ್ಯೆಯಲ್ಲಿ ಬಹಳ ಹಿಂದುಳಿದವರು. ಇಂಥವರ ಮೇಲೆ ಪತ್ರಿಕೆಗಳ ಪ್ರಭಾವವು ಬಹಳವಾಗಿ ಬೀಳುವುದರಿಂದ ವೃತ್ತಪತ್ರಿಕೆಯವರ ಜವಾಬ್ದಾರಿಯು ಬಹಳ ಗುರುತರವಾದಂತಾಯಿತು.

ವಿಶ್ವವಿದ್ಯಾಲಯಗಳ ಕರ್ತವ್ಯ

ಈ ವೃತ್ತಿಯು ಬಹಳ ಮುಂದುವರಿದಿರುವ ಇಂಗ್ಲೆಂಡ್ ಮತ್ತು ಅನೇಕ ದೇಶಗಳ ವಿಶ್ವವಿದ್ಯಾನಿಲಯಗಳಲ್ಲಿ ಈ "ಜರ್ನಲಿಸಂ"ಗಾಗಿ ಪ್ರತ್ಯೇಕ ಸ್ಥಾನವಿದ್ದು ಅಲ್ಲಿ ಉತ್ತೀರ್ಣರಾದವರಿಗೆ ಪ್ರಶಸ್ತಿ ಪತ್ರಗಳನ್ನು ಕೊಡುತ್ತಾರೆ ಇಷ್ಟೇ ಅಲ್ಲದೆ ಅನೇಕ ಖಾಸಗಿ ಶಿಕ್ಷಣಾಲಯಗಳಲ್ಲಿ ಸಹ ಇದಕ್ಕಾಗಿ ಉತ್ತಮವಾದ ಏರ್ಪಾಡನ್ನು ಮಾಡಿರುವರು ಕೆಲವು ಸಂಪಾದಕ ಮಂಡಳಿಯವರು ಟಪ್ಪಾಲುದ್ವಾರವೇ ಶಿಕ್ಷಣಕೊಡುವರು. ಇಂತಹ ಸಂಸ್ಥೆಗಳಲ್ಲಿ London school of jorunalism ಎಂಬುದೊಂದು. ಇಲ್ಲಿ ಕಥೆಗಳನ್ನು ಬರೆಯುವುದು ಸುದ್ದಿಗಳನ್ನು ಕಳಿಸುವುದು, ಲೇಖನಗಳನ್ನು ಬರೆಯುವುದು, ಮುಂತಾದ ಪತ್ರಿಕಾ ವ್ಯವಸಾಯಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಶಿಕ್ಷಣವನ್ನು ಕೊಡುವರು. ಇಂಗ್ಲೆಂಡಿನಲ್ಲಾದರೂ ಈ ಲಂಡನ್ ಯೂನಿವರ್ಸಿಟಿಯಲ್ಲದೆ ಇನ್ನೆಲ್ಲಿಯೂ 'ಡಿಗ್ರಿ'ಗಳನ್ನು ಕೊಡುತ್ತಿಲ್ಲ. ಭಾರತದ ಯೂನಿವರ್ಸಿಟಿಗಳಲ್ಲಿ ಸಹ ಈ ವಿಚಾರಕ್ಕೆ ಗಮನಕೊಡುವುದಾದರೆ ಜನಾಂಗದ ನೈತಿಕ ಬೆಳವಣಿಗೆಯಲ್ಲಿ ಬಹಳ ಪ್ರಗತಿಗಾಮಿಯಾದ ಮಾರ್ಗವನ್ನವಲಂಬಿಸಿದಂತಾಗುವುದು. ಜನಾಂಗವು ಅಶಿಕ್ಷಿತರ ಕೈಯಿಂದ ಮುಕ್ತಿಯನ್ನು ಹೊಂದುವುದು.

ಮುಂಬಯಿನಲ್ಲಿ "ಕಮರ್ಶಿಯಲ್ ಕಾಲೇಜು" ಸ್ಥಾಪಿತವಾಗುವುದಕ್ಕೆ ಮುಂಚೆ ಅನೇಕ ಖಾಸಗಿ ಶಾಲೆಗಳು "ಕಾಮರ್ಸ್"ನಲ್ಲಿ ಶಿಕ್ಷಣವನ್ನು ಕೊಡುತ್ತಿದ್ದುವು ಯೂನಿವರ್ಸಿಟಿಯವರು ಈಗ ಈ ವಿಷಯವನ್ನು ಕಲಿಸುವ ಏರ್ಪಾಡು ಮಾಡಿದಾಗಿನಿಂದ ಅನೇಕ ವಿದ್ಯಾರ್ಥಿಗಳು ಇದರಲ್ಲಿ ಉಚ್ಚ ಶಿಕ್ಷಣ ಹೊಂದಿ ಅಭಿವೃದ್ಧಿಗೆ ಬಂದಿರುವರು.

ಕಲಿಸತಕ್ಕ ವಿಷಯಗಳು

ಮುಂದಿನ ಪ್ರಶ್ನೆ ಏನೆಂದರೆ ಯೂನಿವರ್ಸಿಟಿಗಳು ಡಿಗ್ರಿಯನ್ನು ಇಟ್ಟಲ್ಲಿ ಅಲ್ಲಿ ಕಲಿಸಬಹುದಾದ ವಿಷಯಗಳಾವುವು? ಈ ಡಿಗ್ರಿಪರೀಕ್ಷೆಯ ಸ್ವರೂಪವೇನು? ಇದರಲ್ಲಿ ಶಿಕ್ಷಣ ಹೊಂದುವವರ ಆದರ್ಶವೇನಾಗಿರಬೇಕು? ಭಾರತದ ವಿಶ್ವವಿದ್ಯಾನಿಲಯಗಳಲ್ಲಿರುವ ನಿಯಮದಂತೆ ಇಂಟರ್ಮೀಡಿಯಟ್ (ಎಂಟ್ರೆನ್ಸ್) ಆಗದೆ ಕಾಲೇಜಿಗೆ ಪ್ರವೇಶವಿಲ್ಲ. ವೈದ್ಯಕೀಯ ಶಿಕ್ಷಣವನ್ನು ಹೊಂದಬೇಕಾದರೆ B. A. B Sc, ಆಗಿರಬೇಕು. ಆದುದರಿಂದ ಈ ಜರ್ನಲಿಸಂಗೂ ಇದೇ ರೀತಿ ಮಾಡಬಹುದು.

ಒಬ್ಬ ಜರ್ನಲಿಸ್ಟ್ ಆಗಲು, ವಿಶಾಲ ದೃಷ್ಟಿ, ವಿಶಾಲ ಹೃದಯ, ಉತ್ತಮ ಶಿಕ್ಷಣ ಮತ್ತು ಮನುಷ್ಯಮಾತ್ರದವರಲ್ಲಿ ಸಹಾನುಭೂತಿ ಇವುಗಳಿರಬೇಕು. ಇವರಿಗೆ (ಸೈಕಾಲಜಿ) ಮನಶ್ಶಾಸ್ತ್ರವು ತಿಳಿದಿರಬೇಕು. ಬಹಳ ವಿಷಯಗಳನ್ನರಿತಿರುವವರಾಗಿರಬೇಕು "ಪ್ರತಿ ವಸ್ತುವಿನ ವಿಚಾರದಲ್ಲಿ ಸ್ವಲ್ಪಸ್ವಲ್ಪವನ್ನು, ಮತ್ತು ಕೆಲವು ವಸ್ತುಗಳ ವಿಚಾರದಲ್ಲಿ ಎಲ್ಲವನ್ನೂ ತಿಳಿದಿರಬೇಕು" ಇನ್ನೂ ವಿಶೇಷ ಶಿಕ್ಷಣದ ವಿಚಾರ. ಭಾರತದಲ್ಲಂತೂ ಜರ್ನಲಿಸಂ ಅಂದರೆ ಕೇವಲ ರಾಜಕೀಯ ಪ್ರಚಾರಕ್ಕಾಗಿಯೇ ಇರುವ ಒಂದು ಸಂಸ್ಥೆ ಎಂಬ ಭಾವನೆಯುಂಟಾಗಿದೆ ಇದು ಸರಿಯಾಗಿಲ್ಲ, ಇಲ್ಲದಿರಲಿ, ಪತ್ರಿಕೆಗಳಲ್ಲಿ ರಾಜಕೀಯಕ್ಕೆ ಸಂಬಂಧಪಟ್ಟ ವಿಷಯಗಳೇ ಹೆಚ್ಚೇ ಹೊರತು ಉಳಿದ ವಿಚಾರಗಳು ಬಹಳ ಕಡಿಮೆ ಇರುವುವು ಆದುದರಿಂದ ಇಲ್ಲಿನ ವೃತ್ತಪತ್ರಿಕೆಯವರಿಗೆ ಈ ವಿಚಾರದಲ್ಲಿ ರಾಜಕೀಯ ಚಳುವಳಿ, ಅದರ ಮುಂಜಾಗ್ರತೆ, ಜಗತ್ತಿನ ಉಳಿದ ದೇಶಗಳ ರಾಜಕೀಯ ಪ್ರಗತಿ ಇವುಗಳನ್ನು ತಿಳಿದಿರಬೇಕು. ಒಬ್ಬ ಆಂಗ್ಲೇಯನು ಈ ರೀತಿ ಬರೆದಿದ್ದಾರೆ—ಒಬ್ಬ ಆದರ್ಶ ವೃತ್ತಪತ್ರಿಕೋದ್ಯೋಗಿಯು ಯಾರು? ಪ್ರಾಚೀನ ಮತ್ತು ಆಧುನಿಕ ಎರಡರ ಉತ್ತಮವಾದ ವಿಷಯಗಳನ್ನು ಗ್ರಹಿಸಿಕೊಂಡಿರಬೇಕು. ವಿಜ್ಞಾನ ಮತ್ತು ಇಂಜನಿಯರಿಂಗ್ ವಿಚಾರಗಳನ್ನು ತಿಳಿದಿರಬೇಕು. ಅನೇಕ ಭಾಷೆಗಳ ಚರಿತ್ರೆಯನ್ನೂ ತಿಳಿದಿರಬೇಕು. ಜೀವನಕ್ಕೆ ಸಂಬಂಧಪಟ್ಟ ಸಾಮಾಜಿಕ, ರಾಜಕೀಯ ವಿಚಾರಗಳ ಸಂಪೂರ್ಣ ಅನುಭವವನ್ನು ಪಡೆದಿರಬೇಕು. ಸಂಸ್ಕೃತಿ ಮತ್ತು ಜ್ಞಾನದ ಭಂಡಾರವಾಗಿರಬೇಕು. ತನ್ನ ಜ್ಞಾನಭಂಡಾರವನ್ನು ತನ್ನ ಹೃದಯದೊಳಗೆ ಮುಚ್ಚಿಟ್ಟುಕೊಂಡು, ಅದರೊಳಗಿರುವುದರಲ್ಲಿ ಸ್ವಲ್ಪ ಸ್ವಲ್ಪವಾಗಿ ಹೊರಕ್ಕೆ ತೆಗೆದು ವಾಚಕವೃಂದಕ್ಕೆ ಹಂಚಬೇಕು. ಯಾವುದರಲ್ಲೂ ಅತಿಯಾಗಿರದೆ, ಮಿತಿಯಿಂದಿರಬೇಕು.

ರಾಜಕೀಯದ ನಂತರ, ಈ ಪತ್ರಿಕೋದ್ಯಮದ ವಿಶೇಷ ಸ್ಥಾನಮಾನಗಳೇನು, ಇದರ ಮೂಲವಾವುದು, ಸಾರ್ವಜನಿಕರ ಮೇಲೆ ಇದರ ಪ್ರಭಾವವೇನು ಇವುಗಳನ್ನೂ ತಿಳಿಯಬೇಕಾಗುವುದು. ನಂತರ ಪತ್ರಿಕೆಗಳ ವ್ಯವಸ್ಥೆ. ಇದಕ್ಕಾಗಿಯೇ ಆ ಕಾರ್ಯಾಲಯಗಳಲ್ಲಿಯೇ ಇದ್ದು ಅನುಭವವನ್ನು ಹೊಂದಿರಬೇಕು, ಸಮಯಶೀಲತೆ, ಕಾರ್ಯಾಲಯದಲ್ಲಿ ಕೆಲಸಗಳನ್ನು ವಿಂಗಡಿಸುವಿಕೆ, ಮುದ್ರಣಾಲಯದ ವ್ಯವಸ್ಥೆ ಇವುಗಳೂ ಮುಖ್ಯ.

ಪ್ರಾಮುಖ್ಯ ವಿಷಯಗಳ ದೀರ್ಘವಾದ ವರದಿಯನ್ನು ಅಭಿಪ್ರಾಯ ಲೋಪವಿಲ್ಲದಂತೆ ಸಣ್ಣದಾಗಿ ಬರೆಯುವುದು ವಾಚಕರ ಮೇಲೆ ಉತ್ತಮ ಪರಿಣಾಮವಾಗುವಂತಹ ಸಚಿತ್ರ ವಿವರಣೆಗಳು, ಸಾಹಿತ್ಯ ಮತ್ತು ಗ್ರಂಥಗಳ ಮೇಲಿನ ವಿಮರ್ಶೆ ಇವುಗಳು ಈ ಶಿಕ್ಷಣದ ಅಂಗವಾಗಬೇಕು.

ಪತ್ರಿಕೆಗಳ ಲೇಖನಕ್ಕೂ ಇತರ ಲೇಖನಗಳಿಗೂ ಇರುವ ವ್ಯತ್ಯಾಸವೆಂದರೆ ಒಂದು ಗೊತ್ತಾದ ಸ್ವಲ್ಪವೇ ಅವಧಿಯಲ್ಲಿ ಗೊತ್ತಾದ ಸ್ವಲ್ಪವೇ ಜಾಗದಲ್ಲಿ, ಬರೆಯುವುದು ಒಂದು ವಿಧ. ಬಹಳ ಕಡಿಮೆ ಜಾಗದಲ್ಲಿ, ಜನಮನರಂಜನೆಯಾಗುವ, ಮುಖ್ಯ ವಿಷಯಗಳನ್ನೊಳಗೊಂಡಿರುವ ಲೇಖನಗಳನ್ನು ಬರೆಯುವುದು ಮತ್ತೊಂದು ವಿಧ. ಇದಕ್ಕೆ ಬಹಳ ಅನುಭವವಿರಬೇಕು. ಶಾಲೆಯಲ್ಲಿನ ಬಾಲಕರಂತೆ, ವಾಚಕವೃಂದವು ಪತ್ರಿಕೆಗಳಲ್ಲಿರುವುದನ್ನು ಓದುವುದು.

ಸಾರ್ವತ್ರಿಕ ವಿಚಾರಗಳಲ್ಲದೆ, ಕೆಲವು ವಿಶೇಷ ಲೇಖನಗಳೂ ಸಹ ಇರಬೇಕಾಗುತ್ತದೆ ಅವುಗಳಲ್ಲಿ ವಿಶೇಷ ಅಭಿರುಚಿಯಿರುವವರು ಅದನ್ನು ಆಸಕ್ತಿಯಿಂದ ಓದುವರು—Sporting Finance & commerce, ಇತ್ಯಾದಿ

S. L. ಸುಬ್ರಹ್ಮಣ್ಯಂ.

THE BOMBAY LIFE ASSURANCE CO, LTD.

ಸ್ಥಾಪನೆ 1908 ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಈ ಸಂಸ್ಥೆಯ ಸಾರ್ವತ್ರಿಕವಾದ ಅಭಿವೃದ್ಧಿಯೇ ಇದರ ಉನ್ನತಿಗೆ ಸಾಧನವು.

ಹಿರಿಮೆಯ ಹೊಸ ವ್ಯಾಪಾರ ವಹಿವಾಟುಗಳು.

ವಿಮಾ ಅರ್ಜಿಗಳ ಮೊಬಲಗು ಜಮೆ.	ವರ್ಷ	ಪೂರ್ತಿಯಾದ ದು
1,25,50,250	1934	1,04,33,750
1,50,48,915	1935	1,23,28,665
1,68,88,200	1936	1,36,01,500
1,72,579,75	1937	1,40,08,725
1,76,83,250	1938	1,44,91,000

1939 ವ್ಯಾಲ್ಯುವೇಶನ್ ವರ್ಷ.

ಈಗಾಗಲೇ ಈ ಕಂಪೆನಿಯಲ್ಲಿ ವಿಮೆಯಿಳಿಸಿರಿ, ಮುನಾಫೆಯಲ್ಲಿ (Bonus) ಭಾಗಿಗಳಾಗಿರಿ.

ವಿಮೆಮಾಡಲು ಇಲ್ಲವೆ ಪ್ರತಿನಿಧಿಯಾಗಲು ಇಚ್ಛಿಸುವವರು ನಮ್ಮೊಡನೆ ವಿಚಾರಿಸುವುದು ಲಾಭದಾಯಕವಾಗಿದೆ

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್,

ಮದ್ರಾಸ್ ಶಾಖೆಯ ಕಾರ್ಯದರ್ಶಿಗಳು.

ದಿ ಬೊಂಬೆ ಲೈಫ್ ಬಿಲ್ಡಿಂಗ, ಸರ್ ಫಾಲುಭಾಯಿ ಸಮಲ್ದಾಸ್ ರೋಡ್, ಗಾಂಧಿನಗರ, ಉಡುಪಿ

ಅಥವಾ ಯಾವುದಾದರೂ ಈ ಕೆಳಗಿನ ಆಫೀಸುಗಳಲ್ಲಿ ವಿಚಾರಿಸಿರಿ —

ರಥಬೀದಿ	ಪುತ್ತೂರ,	ಪೋ ಬಾಕ್ಸ ನಂ.337, ಮೌಂಟ್‌ರೋಡ್,	ವಿಕ್ಟೋರಿಯಾಪುರಂ ಸರ್ಕಲ್	ಹಾರ್ನಬಿರೋಡ್, ೧೧೧೯೦,	ಸೆಂಟ್ರಲ್ ಸ್ಟೇಷನ್ ರೋಡ್,
ಮಂಗಳೂರು	ಕಲ್ಲಿಕೋಟೆ	ಮದರಾಸ್.	ಬೆಂಗಳೂರು ಸಿಟಿ	ಬೊಂಬಾಯ್ ನಂ. 4	ತ್ರಿವಂಡ್ರಮ್.

New Staff!! New Methods!!

The City School of Commerce Udipi.

New batches of students will be admitted from 1st June 1939.

EXPERT TUITION INDIVIDUAL ATTENTION

By

Qualified, Experienced and able tutors.

For further particulars Enquire at

City School of Commerce, Santhekatte, Udipi.

ಕೆಚ್ಚೆದೆಯ ಮಲ್ಲ ಪಠಾನವೀರ ಒಬೀದುಲ್ಲಾ

ಡಾ| ಖಾನರು ಬಾಳುವ ಹಾದಿ ತೋರಿಸಲಿಲ್ಲ; ಹೊಳುವ ಸ್ಥಳ ಸೂಚಿಸಿದರು!

ಗಡಿನಾಡಿನ ಕಾಂಗ್ರೆಸ್|ಮುಖ್ಯ ಮಂತ್ರಿ ಡಾ. ಖಾನ್ ಸಾಹೇಬರ ಪುತ್ರ ಒಬೀದುಲ್ಲಾಖಾನನು ತನ್ನ ಬಂಧುಮಿತ್ರರೆಷ್ಟು ವಿರೋಧಿಸಿದರೂ ಕೇಳದೆ ಬಸ್ತಗಿರಿಗೊಳಗಾಗಿರುವನಷ್ಟೆ. ಪೇಶಾವರದ ಹಳ್ಳಿಯೊಂದರ ಜಮೀನ್ದಾರನೊಬ್ಬನು ಒಕ್ಕಲಿನವನ ಮೇಲೆ ಗೇಣಿ ವಸೂಲಿಗಾಗಿ ಸರಕಾರೀ ಸಹಾಯಪಡೆದು ಜಪ್ತಿಗೆ ಹೋಗಿದ್ದ. ಒಬೀದುಲ್ಲನು ಒಕ್ಕಲಿನವನ ಪಕ್ಷವಹಿಸಿ ಸರಕಾರೀ ಅಧಿಕಾರಿಗಳನ್ನು ತಡೆದ. ಡಾ. ಖಾನ್ ಸಾಹೇಬರಿಗೆ ರಿಪೋರ್ಟುಹೋಯಿತು. ಅವರು ಕೂಡಲೇ ಮಗನ ದಸ್ತಗಿರಿಯ ಹುಕುಂ ಕೊಟ್ಟರು. ಒಬೀದುಲ್ಲನು ಯಾವ ಶರ್ತಗಳಿಗೂ ಒಪ್ಪದೆ ಈಗ ಜೈಲಿನಲ್ಲಿದ್ದಾನೆ!

ತಲೆಬಗ್ಗಿಸಲರಿಯದ ತರುಣ!

ಒಬೀದುಲ್ಲಾಖಾನನು ಮಹಾ ಹಠವಾದಿ, ಹಿಡಿದ ಪಂಥವನ್ನು ಬಿಡಲರಿಯದ ಕಲ್ಲೆದೆಯ ಯುವಕ. 1934ರಲ್ಲಿ ಅವನು ತೋರಿಸಿದ್ದ ದೃಢತೆಯು ಪಠಾಣವೀರನಿಗೊಪ್ಪುವಂತಹದಿತ್ತು. ಒಬೀದುಲ್ಲಾನ ಹೆಸರಿನಲ್ಲಿದ್ದ ಭೂಮಿಯ ಕಂದಾಯವಾಗಿ ಅವನು ಸರಕಾರಕ್ಕೆ ಹೇರಳ ಹಣತೆರುವದಿತ್ತು. ಅದರ ಹೆಚ್ಚಿನಂಶವನ್ನು ಅವನು ಪಾವತಿ ಮಾಡಿ ರೂ. 300ಮಾತ್ರ ಬಾಕಿ ಮಾಡಿಕೊಂಡಿದ್ದ. ಅದಕ್ಕಾಗಿ ಅವನನ್ನು ದಸ್ತಗಿರಿಮಾಡಿ ಒಂದೂವರೆ ತಿಂಗಳ ಸಜೆ ವಿಧಿಸಲಾಯಿತು. ಅವನನ್ನಿಟ್ಟ ಸೆರೆಮನೆಯು ಪ್ರತ್ಯಕ್ಷ ನರಕವೆಂದು ಅವನಿಗೆ ತೋರಿದುದರಿಂದ, ಕೆಲವು ಸುಧಾರಣೆಗಳನ್ನೀಯದೆ ತಾನು ಆಹಾರ ಕೈಕೊಳ್ಳಲಾರೆನೆಂದು ಹಟತೊಟ್ಟು ಕುಳಿತುಬಿಟ್ಟ. 38 ದಿನಗಳ ಉಪವಾಸವಾದ ಮೇಲೆ ಅವನ ಶರ್ತಗಳನ್ನು ಸರಕಾರವೊಪ್ಪಿಕೊಂಡಿತು. ಮುಂದೆ ಕೆಲವೇ ದಿನಗಳಲ್ಲಿ ಬಿಡುಗಡೆ ಹೊಂದಿ, ತನ್ನ ತಂದೆಯಿಂದಲೇ ಚಿಕಿತ್ಸೆ ಪಡೆದ., ಸ್ವಂತಹಳ್ಳಿಗೆ ಮರಳಿದೊಡನೆ, ಗಡಿನಾಡಿನಲ್ಲಿ ಜಾರಿಯಲ್ಲಿದ್ದ ಓರ್ಡಿನನ್ಸಿಗನುಸಾರವಾಗಿ ಆಗಿನ ಸರಕಾರವವನನ್ನು ಪುನಃ ಕೈದುಮಾಡಿತು. ಅವನನ್ನು ಲುಧಿಯಾನಾ ಸೆರೆಮನೆಯಿಂದ ಮುಲ್ತಾನಾ ಜೈಲಿಗೂ ಅಲ್ಲಿಂದ ಸಿಯಾಲ್ಕೋಟ್ ಸೆರೆಮನೆಗೂ ವರ್ಗಾಯಿಸಿದರು. ಸ್ವಲ್ಪ ಸಮಯದಲ್ಲಿಯೇ ಅವನೆಷ್ಟು ವಿರೋಧಿಸಿದರೂ ಕಿವಿಗೊಡದೆ ಪುನಃ ಮುಲ್ತಾನ್ ಜೈಲಿಗೆ ಸರಕಾರವವನನ್ನು ವರ್ಗಾಯಿಸಿತು. ಅವನಾಜೈಲಿಗೆ ಕಾಲಿಟ್ಟುದು1934ನೇ ಫೆಬ್ರವರಿ, ತಾ.1ರಲ್ಲಿ ಉಪವಾಸವ್ರತಕ್ಕೆಗೊಂಡ ಒಬೀದುಲ್ಲಾಖಾನನು 78ದಿನಗಳ ವರೆಗೂ ಛಲಬಿಡದೆ ಮುಂದರಿಸಿದ. ಈ ಅವಧಿಯಲ್ಲಿ ಸರಕಾರವವನಿಗೆ ಬಲಾತ್ಕಾರದಿಂದ ಆಹಾರ ಪ್ರಯೋಗಿಸಲು ನೋಡಿತು. ಒಬೀದುಲ್ಲಾಖಾನನಿಗೆ ಸ್ಮೃತಿತಪ್ಪಿದಾಗ ಮಾತ್ರ ಆ ಪ್ರಯೋಗವು ಸಾಧ್ಯವಾಯಿತೇ ಹೊರತು ಸ್ಮೃತಿಯಲ್ಲಿ ಅವಿದ್ದ ಹೊತ್ತಿನಲ್ಲಿ ಸರಕಾರದ ಆ ಪ್ರಯತ್ನವನ್ನು ಕೂಡ ಅವನು ನಿಷ್ಫಲಗೊಳಿಸಿದ್ದ. ಹೀಗೆ 78ದಿನಗಳ ಉಪವಾಸವಾದ ಮೇಲೆ ಸರಕಾರವು ಹಾದಿಗೆ ಬಂದು ಅವನಿಚ್ಛೆಯಂತೆ ಸೆಯಿಲ್‌ಕೋಟ್ ಜೈಲಿಗವನನ್ನು ವರ್ಗಾಯಿಸಿತು. ಆಗಲೇ ಅವನು ಆಹಾರ ಸ್ವೀಕರಿಸಲೊಪ್ಪಿದ.

ಡಾ| ಖಾನ್ ಮತ್ತು ಗಫಾರ್ ಖಾನರ ದೃಢತೆ!

ಡಾ| ಖಾನ್ ಸಾಹೇಬ್‌ಮತ್ತು ಅಬ್ದುಲ್ ಗಫಾರ್ ಖಾನರ ಕರ್ತವ್ಯ ನಿಷ್ಠುರತೆಯು ಸ್ಪಷ್ಟಂಬುದಕ್ಕೂ ಇಂದಿನಂತೆ ಅಂದೂ ನಿದರ್ಶನ ದೊರೆತಿದೆ. ಗಡಿನಾಡಿನ ಓರ್ಡಿನೆನ್ಸಿನ ಮೇರೆಗೆ ಅವರ ಕುಟುಂಬವೇ ಕೈದುಮಾಡಲ್ಪಟ್ಟಿದ್ದಿತು. ಖಾನ್ ಸಹೋದರರಿಬ್ಬರೂ ಹಜ್ರೂರಿಬಾಗ್ ಸೆರೆಮನೆಯಲ್ಲಿದ್ದರು. ಮುಲ್ತಾನ್ ಜೈಲಿನಲ್ಲಿ ಒಬೀದುಲ್ಲಾನು ಕೈಗೊಂಡ ಉಪವಾಸದ ವಾರ್ತೆ ಎನಬಿಡದೆ ಪತ್ರಿಕೆಗಳಿಂದ ಅವರಿಗೆ ತಿಳಿಯುತ್ತಿತ್ತು. ಕೊನೆಕೊನೆಗೆ 'ಈಗ ಸಾಯಬಹುದು, ಇನ್ನೊಂದರೆ ಘಳಿಗೆಯಲ್ಲಿ ಮುಗಿಯಬಹುದು' ಎಂಬ ವರದಿಗಳು ಬರಹತ್ತಿದವು. ಖಾನ್ ಸಹೋದರರಿಬ್ಬರೂ ಅವನ ಹೆಣವನ್ನು ಹೇಗೆ ಸಾಗಿಸಬೇಕು ಮತ್ತು ಎಲ್ಲಿ ಹೂಳತಕ್ಕದ್ದು ಎಂಬ ಬಗ್ಗೆ ಸವಿವರವಾದ ಸೂಚನೆಗಳನ್ನು ಬರೆದು ಸರಕಾರಕ್ಕೆ ಕಳುಹಿಸಿಕೊಟ್ಟರು. ಈ ಸೂಚನೆಗಳಿದ್ದ ಪತ್ರವು ಕಳುಹಲ್ಪಟ್ಟ ಒಂದೆರಡು ದಿನಗಳಲ್ಲಿಯೇ ಸರಕಾರವು ಒಬೀದುಲ್ಲಾನಅಪೇಕ್ಷೆಯನ್ನು ಪೂರೈಸಿಕೊಟ್ಟ ವಾರ್ತೆ ಖಾನ್ ಸಹೋದರರಿಗೆ ತಲುಪಿತು!

ಒಬೀದುಲ್ಲಾನ ಉಪವಾಸಕ್ಕಾಗಿ ಅವನ ತಂದೆ ಖಾನ್ ಸಾಹೇಬರಾಗಲೀ ಚಿಕ್ಕ ತಂದೆ ಅಬ್ದುಲ್ ಗಫಾರ್ ಖಾನರಾಗಲೀ ಆಕ್ಷೇಪಿಸಲಿಲ್ಲ ಮಾತ್ರವಲ್ಲ, ಒಂದಿಷ್ಟು ವ್ಯಸನ ಕೂಡ ಸೂಚಿಸಲಿಲ್ಲ. ಅನ್ಯಕಾರಣಗಳಿಂದ ಅಂತಹ ಆಕ್ಷೇಪವನ್ನು ಅವರೊಪ್ಪುತ್ತಿದ್ದರೂ ಒಬೀದುಲ್ಲಾನದಕ್ಕೊಳಗಾಗುತ್ತಿದ್ದಿಲ್ಲ. ತಾನು ಹಿಡಿದ ಪಂಥವನ್ನು ಪ್ರಾಣವೊತ್ತೆಯಿಟ್ಟಾದರೂ ಸಾಧಿಸುವ ಹಠವವನದು!

ಅಂದು ಕರ್ತವ್ಯಪಾಲನೆಗಾಗಿ ಮಗನನ್ನು ಹೂಳುವ ಸ್ಥಳವನ್ನು ಡಾ| ಖಾನರು ಸೂಚಿಸಿದ್ದರು. ಇಂದು ಅದೇ ಕರ್ತವ್ಯಪಾಲನೆಗಾಗಿ ಮಗನನ್ನು ದಸ್ತಗಿರಿಮಾಡಿಸಿದರು; ಆಡಳಿತೆಯ ಬಣ್ಣ ಬದಲಾವಣೆಯನ್ನು ಗಮನಿಸದೆ ಅಂದಿನಷ್ಟೇ ದೃಢ ನಿರ್ಧಾರದಿಂದ ಇಂದೂ ತನ್ನ ಕರ್ತವ್ಯ ಪಾಲನೆಮಾಡಿದ ಒಬೀದುಲ್ಲಾನ ಕೆಚ್ಚಿದೆಯು ಅದಕ್ಕೂ ಮಿಗಿಲಾದುದು.

ನಿಮ್ಮ ವ್ಯಾಪಾರವು ವೃದ್ಧಿಯಾಗಬೇಕೆ?
ಹಾಗಿದ್ದರೆ—
ನವಯುಗದಲ್ಲಿ
ಜಾಹೀರಾತುಕೊಡಿರಿ.

ನವೀನ ಶೋಧನೆ
ಹೇನುಗಳನ್ನು ನಾಶಮಾಡುವ "ಬಾಬಾ"
ಉಪಯೋಗಿಸಿರಿ.

ಸ್ತ್ರೀ ಜಾತಿಗೆ "ಬಾಬಾ" ಎಂಬುದು ವರಪ್ರಸಾದ.

ತಲೆಯಲ್ಲಿ ಹೇನು ಆಗುವುದು ಇದರ ಸ್ಥಿತಿಯು ಹೇಸಿಯಾದ್ದರಿಂದ ಪ್ರಕೃತಿಯು ಕೆಡುತ್ತದೆ. "ಬಾಬಾ" ಈ ಎಣ್ಣೆಯನ್ನು ತಲೆಗೆ ಅಥವಾ ಕೂದಲಿಗೆ ಹಚ್ಚಿದರೆ ಖಾತ್ರಿಯಾಗಿ ಹೇನುಗಳನ್ನು ನಾಶ ಮಾಡಬಲ್ಲುದು. "ಬಾಬಾ" ಇದರಿಂದ ಅಪಾಯಕರವಿಲ್ಲ. "ಬಾಬಾ" ಎಲ್ಲಾ ಪಟ್ಟಣಗಳಲ್ಲಿ ಸಣ್ಣ ಸೀಲು ಬಂದು ಡಬ್ಬಿಯು ವಿಚಾರಲು ಸಿಕ್ಕುತ್ತದೆ. ಕಿಮ್ಮತ್ತು ಡಬ್ಬಿಗೆ ರೂ. 0—2—6.

ಹಿಂದುಸ್ಥಾನ ಮತ್ತು ಬರ್ಮಾದ ಸೋಲ್ ಡಿಸ್ಟ್ರಿಬ್ಯೂಟರ್ಸ್: } ಪಾಯ ಬ್ರದರ್ಸ್, ದೋಬಿತಲಾವ, ಎಡ್ವರ್ಡ್ ಸಿನೇಮ ಎದುರು, ಪಂಟಾಳವಾಡಿ, ಕಾಳಬಾದೇವಿ ರೋಡು, ಮುಂಬಾಯಿ.

ಲೂಟಿ! ಲೂಟಿ!! ಖಾಲಿ ೩ ರೂಪಾಯಿಗೆ ಹೊಸ ವರ್ಷಕ್ಕೆ

ಅಚ್ಚಾದ ಹೊಸ ನಮೂನೆ;
ಒಂದು ಮಾಸದ ವರೆಗೆ ಮಾತ್ರ ವಿಶೇಷ ರಿಯಾಯತಿ.



ಶೀಘ್ರ ವಿಕ್ರಯ ಆಗುತ್ತಿದೆ. ವಿಳಂಬ ಮಾಡಿದರೆ ಪಶ್ಚಾತ್ತಾಪ ಪಡಬೇಕಾದೀತು.

ತಾಜಾ ಅಮೆರಿಕನ್ ಅಲಾರ್ಮ್ ಪಿಸ್ತೂಲು

ಹೆಚ್ಚು ಸಂಖ್ಯೆಯಲ್ಲಿ ಕೊಂಡುಕೊಂಡರೆ ಧಾರಾಳ ಕಮಿಶನು ಇದೆ. ಚಿತ್ರದಲ್ಲಿರುವಂತೆ 7 ಇಂಚು ಉದ್ದ 15 ಔನ್ಸ್‌ಭಾರ. ನೋಡಿದೊಡನೆ ಪ್ರಾಣಿಗಳು ಭೀತರಾಗುವವು. ಕಳ್ಳಕಾಕರು, ದುಷ್ಟ ಮೃಗಗಳು ಭಯಂಕರ ಶಬ್ದ ಕೇಳಿ ಪಲಾಯನ ಮಾಡುವವು. ಕೂಡಲೇ ಕೊಂಡುಕೊಂಡು ನಿಮ್ಮ ಒಡವೆಗಳನ್ನು ಆತ್ಮವನ್ನು ರಕ್ಷಿಸಿಕೊಳ್ಳಿರಿ. ಲೈಸನ್ಸಿಲ್ಲದೆ ಪ್ರತಿಯೊಬ್ಬನೂ ಉಪಯೋಗಿಸಬಹುದು ಇಂದರೊಂದಿಗೆ 300 ಗುಂಡುಗಳು ಉಚಿತ. 50 ಗುಂಡುಗಳನ್ನು ಏಕ್‌ದಂ ಹೊಡೆಯುವ ಪಿಸ್ತೂಗೆ ರೂ. 3|–, ಒಂದೇ ಸಲ 70ಗುಂಡುಬಿಡುವುದಕ್ಕೆ ರೂ. 3|8–. 200 ಹಾರಿಸುವುದಕ್ಕೆ ರೂ. 4|– ಅಂಚೆ ವೆಚ್ಚ ಬೇರೆ 1000 ಗುಂಡುಗಳಿಗೆ ರೂ. 2|–ಎಣ್ಣೆ ಡಬ್ಬಿಗೆ 0–8–0. ಪಿಸ್ತೂಲಿಡುವ ಸುಂದರ ಪೆಟ್ಟಿಗೆಗೆ ರೂ. 1–8–0. (ನಿಮ್ಮ ಮತ್ತು ನಮ್ಮ ವಿಳಾಸವನ್ನು ಸ್ಪಷ್ಟ ಬರೆಯಿರಿ)

ದೊರೆಯುವ ಸ್ಥಳ:-

ಅಮೆರಿಕನ್ ಪಿಸ್ತೂಲು ಹೌಸ್, ಪಿ. ಬಿ. ಬಾಕ್ಸ್ ನಂ. 27 (N.Y.U.) ಅಮೃತಸರ [ಇಂಡಿಯಾ]

American Pistol Co. P. B. No. 27 (N. Y. U.) Amritsar (India).

New Kanara Swadeshi Laundry,
GAMDEVI, BOMBAY,
A reliable house for dry cleaning deing all sorts of rich garments.

ದಿ ನ್ಯೂ ಕೆನರಾ ಸ್ವದೇಶಿ ಲಾಂಡ್ರಿ,
ಗಾಮದೇವಿ — ಮುಂಬಾಯಿ.

ಉತ್ತಮ ತರದ ಮಡಿ, ಉತ್ಕೃಷ್ಟ ರೀತಿಯ ರಂಗು—
ಇವುಗಳಿಗೆ ಪ್ರಸಿದ್ಧವಾದ ನಿಲಯ.

ವಿ. ಸೂ.—ಪರಊರುಗಳಿಂದ ಉತ್ತಮ ಜರತಾರಿ ಸೀರೆ, ವಸ್ತ್ರ ಉಡುಗೆ ತೊಡಿಗೆಗಳ ರಂಗು ಹಾಕುವ, ಡ್ರೈಕ್ಲೀನಿಂಗ್ ವಗೈರೆ ಕಾರ್ಯವನ್ನು ಟಪ್ಪಾಲು ದ್ವಾರಾ ಸ್ವೀಕರಿಸಿ ಸಕಾಲದಲ್ಲಿ ತಯಾರಿಸಿ ತಲುಪಿಸುವೆವು.

ಎಮ್. ಆರ್. ಶೆಟ್ಟಿ, ಪ್ರೊಪ್ರೈಟರ್. G. V. Mahale, Manager.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಶಾಲಾಮಕ್ಕಳಿಗೆ ಉಪಯುಕ್ತವಾದ ಪುಸ್ತಕಗಳು

ಕನ್ನಡ ಭಾಷಾ ಪಾಠಗಳು

	ಗಜಿಟ್ ಪುಟ	ಕ್ರಯ		
ಕನ್ನಡ ಮೂಲಪಾಠಕ .. (ಮೊದಲನೇ ದರ್ಜೆಗೆ ಉಪಯುಕ್ತ ವಾದುದು.)	288	0	2	0

ಮೆಕ್ಕ್ರಿಲನರ ಪುಸ್ತಕಾವಳಿ

ಬಾಲಶಿಕ್ಷೆ ...	290	0	2	0
ಮೊದಲನೇ ಪುಸ್ತಕ ...	287	0	2	0
ಎರಡನೇ ,, ...	287	0	3	0
ಮೂರನೇ ,, ..	288/290	0	4	0
ನಾಲ್ಕನೇ ,, ...	288	0	5	0
ಐದನೇ ,, ...	290	0	6	0
ಆರನೇ ,, ...	290	0	7	0
ಏಳನೇ ,, ...	288	0	8	0

ನೂತನ ಸಾಮಾನ್ಯ ವಿಜ್ಞಾನ ಪಾಠಗಳು

ಮೊದಲನೇ ಪುಸ್ತಕ (2ನೇ ದರ್ಜೆಗೆ)	287	0	3	0
ಎರಡನೇ ಪುಸ್ತಕ (3ನೇ ದರ್ಜೆಗೆ)	287	0	3	0
ಮೂರನೇ ಪುಸ್ತಕ (4ನೇ ದರ್ಜೆಗೆ)	171	0	5	0
ನಾಲ್ಕನೇ ಪುಸ್ತಕ (5ನೇ ದರ್ಜೆಗೆ)	174	0	6	0
IV ಫಾರ್ಮಿನ ನೂತನ ಸಾಮಾನ್ಯ ವಿಜ್ಞಾನ	184	1	4	0

ಗಣಿತ ಪುಸ್ತಕಗಳು

ಬಾಲಗಣಿತ 1ನೇ ದರ್ಜೆಯದು	151	0	3	6
,, 2ನೇ ,,	151	0	5	0
,, 3ನೇ ,,	151	0	7	6
,, 4ನೇ ,,	151	0	8	6
,, 5ನೇ ,,	151	0	11	6

ಭೂಗೋಳಶಾಸ್ತ್ರ

ಚಿತ್ರಮಯ ದಕ್ಷಿಣಕನ್ನಡ (ಶ್ರೀ ಶಿವರಾಮ ಕಾರಂತರಿಂದ ವಿರಚಿಸಲ್ಪಟ್ಟ ನೂರಾರು ಚಿತ್ರಗಳಿಂದ ಕೂಡಿದೆ)	122	0	6	0
ದಕ್ಷಿಣ ಕನ್ನಡ ಜಿಲ್ಲೆಯ ಭೂಗೋಲ	129	0	5	6

ಕನ್ನಡ ಇಂಗ್ಲೀಷ್ ಗೋಳಗಳು—ನಕ್ಷೆಗಳು—ಜನಜೀವನ ಚಿತ್ರಗಳು—ಮೇಪ್ ಬುಕ್—ಎಟ್ಲಾಸ್ ಮುಂತಾದವುಗಳು.

ಕನ್ನಡ ಪದ್ಯ ಪುಸ್ತಕಗಳು

ಮೊದಲನೇ ಪದ್ಯ ಪುಸ್ತಕ	289	0	2	6
ಎರಡನೇ ಪದ್ಯ ಪುಸ್ತಕ	289	0	3	C

ಮೆಕ್ಕ್ರಿಲನರ ಪಾಠಪುಸ್ತಕಗಳ ಕೈಪಿಡಿ

ಎರಡನೇ ಪುಸ್ತಕ	0	2	0
ಮೂರನೇ ,, ...	0	2	6
ನಾಲ್ಕನೇ ,, ...	0	2	6
ಐದನೇ ,, ...	0	3	0
ಆರನೇ ಏಳನೇ ಪುಸ್ತಕ (ಒಟ್ಟಿಗೆ)	0	3	6

ಕನ್ನಡ ವ್ಯಾಕರಣ ಪಾಠಗಳು

ಕನ್ನಡ ಮೂಲವ್ಯಾಕರಣ ..	288	0	3	0
ಕನ್ನಡ ಬಾಲವ್ಯಾಕರಣ	288	0	3	3
ಕನ್ನಡ ಶಾಲಾವ್ಯಾಕರಣ ...	288	0	5	0

ಕನ್ನಡ ಕಥೆ ಪುಸ್ತಕಗಳು

	ಗಜಿಟ್ ಪುಟ	ಕ್ರಯ		
ಗುಬ್ಬೀ ಪಾಯಸ	287	0	0	6
ಗಡ್ಡದ ಅಜ್ಜಯ್ಯ	,,	0	1	6
ಕೆಂಚಮ್ಮ	,,	0	1	6
ಅಲಿಬಾಬನ ಕಥೆ	,,	0	2	3
ಸಂಯೋಗಿತೆ	,,	0	6	0
ಪಾಪ್ಪೋಸಿನ ಪಜೀತಿ	287	0	0	6
ಸಿಂಡರೆಲ್ಲ (3ನೇ ದರ್ಜೆಗೆ)	,,	0	1	6
ಕಾಗೆಯೂ ಗುಬ್ಬಿಯೂ (1ನೇ ದರ್ಜೆಗೆ)	288	0	2	3
ಮೌರ್ಯ ಸಿಂಹಾಸನ	,,	0	4	0
ಐತಿಹಾಸಿಕ ಕಥಾವಳಿ ...	,,	0	6	0

ಸಚಿತ್ರ ಚರಿತ್ರೆಗಳು

1ನೇ ದರ್ಜೆಗೆ	287	0	2	0
2ನೇ ,, ...	287	0	2	0
3ನೇ ,, ...	287	0	3	0
4ನೇ ,, ...	287	0	4	6
5ನೇ ,, ...	287	0	5	0
6ನೇ ,, ...	,,	0	6	0
7ನೇ ,, ...	,,	0	4	0

ಇಂಗ್ಲೀಷು ಮತ್ತು ಕನ್ನಡ 'ಮಿತ್ರ' ಕೋಪಿ ಪುಸ್ತಕಗಳು—ಕನ್ನಡ ಮೋಡೆಲ್ ಕೋಪಿ ಪುಸ್ತಕಗಳು—ಎಲ್ಲಾ ತರಗತಿಗಳಿಗೂ ಆಗತ್ಯ ಬೇಕಾದವುಗಳು.

ENGLISH READERS

NEW ERA	Gazette Page	Price		
I Primer ...	65	0	5	0
II Primer	65	0	6	0
Book I	4	0	8	0
Book II ...	60	0	10	0
Book III	65	0	12	0

CORONATION

Primer I	56	0	3	0
Primer II	56	0	3	0
Primer I & II	57	0	6	0
Book I	60	0	6	0
Book II	60	0	8	0
Book III ..	60	0	10	0
Book IV	62	0	12	0

Complete English Course (By Kini)

IV Form Part I	7	0	12	0
V Form Part II	7	1	0	0
Readings in English Literature (by Kini)	5			
IV Form Part I		0	12	0
V Form Part II		1	0	0
Outlines of English History for IV & V Forms (to appear in separate supplement)	5	1	8	0

ಈ ಎಲ್ಲಾ ಪುಸ್ತಕಗಳೂ ಅಲ್ಲದೆ, ಎಲ್ಲಾ ಶಾಲಾ ಸಾಮಗ್ರಿಗಳೂ ನಮ್ಮಲ್ಲಿ ದೊರೆಯುತ್ತವೆ.

ಬಾಸೆಲ್ ಮಿಶನ್ ಬುಕ್ ಡಿಪೋ

(ಕೆನರಾಗ್ ಲಿಮಿಟೆಡ್) ಮಂಗಳೂರು.

—: ಶಾಖೆಗಳು :—

ಹಂಪನಕಟ್ಟೆ, ಮಂಗಳೂರು ಮತ್ತು ಹುಬ್ಬಳ್ಳಿ (ದ. ಮಹಾರಾಷ್ಟ್ರ)

ಧಾತುಪುಷ್ಟಿ ಲೇಹ ಸುವರ್ಣ, ಸಾಲಾಮಿಶ್ರಿ, ಕಲ್ಪದ ಮಿಶ್ರ

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ,ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು, ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ 2—8—0.

ಮೇಹ ಕುಠಾರ— ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರಮಾಡುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು ಮೂತ್ರದಲ್ಲಿ ಧಾತು ಹೋಗುವುದು ಸೊಂಟನೋವು ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಅಲ್ಲದೆ ಇಪ್ಪತ್ತು ನಮೂನೆಯ ಮೇಹ ರೋಗಗಳಿಗೆ ದಿವ್ಯಔಷಧ. ಡಬ್ಬಿ 1ರ ರೂ. 2-8-0.

ಕಸ್ತೂರಿ ಮಿಶ್ರಣ ದಶಮೂಲ— ಪ್ರಸವಾನಂತರ ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ 1ರ ರೂ. 1—8—0

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ನವಭಾರತ ಬುಕ್ ಡಿಪ್ಪೋ, ಉಡುಪಿ.ಶ್ರೀ ಕೃಷ್ಣಫಾರ್ಮಸಿ, ಕುಂದಾಪುರ.ವಿಟ್ಠಲ ನಾರಾಯಣಶೆಣ್ಯೆ,ಟ್ರೇಮ್ ಟರ್ಮಿನಸ್ ಮಜಗಾಂ ಮುಂಬಯಿ.

ABSOLUTELY FREE!

Bring this coupon and you will get your own Photo absolutely free of charge

☞ The rate for the enlargement of the same Rupee one only (size 6"×8").

Send your old photo and you will get enlargement(6'×8' fo) Rs. 2—8—0. ony and big size 16'×20'for Rs. 5 only.

Our time every day 9 a. m. to 7 p. m. Sunday 9 a. m. to 4p. m.

K. H. PATHAK

276 Surya Mahal Girgaum Road BOMBAY, 4. | Royal Art Studio 183 Hornby Road BOMBAY, 1.

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿದೆ.

ಕುಶಲವ

ಶ್ರೀ| ಕೆ. ಕೆ. ಶೆಟ್ಟರು ಬರೆದಿರುವ

ನವ ಪೌರಾಣಿಕ ನಾಟಕ.

ಹಾಯರ್ ಎಲಿಮೆಂಟರಿ ಕ್ಲಾಸುಗಳ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದುದು.

ಪ್ರಕಾಶಕರು: ಕಿರಿಯರ ಪ್ರಪಂಚ, ಉಡುಪಿ.

ವಿಕ್ರಯಾಧಿಕಾರಿಗಳು:-

Navabharat Book Depot, Udipi.

ಬೊಂಬಾಯಿ

(ನವಯುಗದ ಬಾತ್ಮೀದಾರರಿಂದ)

ತಾ. 9-6-39

ರಾಷ್ಟ್ರಪತಿಗಳಿಗೆ ಸ್ವಾಗತ—ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರವರು ಕಳೆದ ಶನಿವಾರ ಮುಂಬಯಿಗೆ ಬಂದು ತಲ್ಪಲು ಅವರಿಗೆ ನಾಗರಿಕರು ಪ್ರಚಂಡ ಸ್ವಾಗತವನ್ನಿತ್ತು ಸನ್ಮಾನಿಸಿದರು ನೀಲಾಂಬರದಲ್ಲಿ ಹೇಲಾಡುತ್ತಿರುವ ಕರಿಮೋಡಗಳಂತೆ ಅಲ್ಲಲ್ಲಿ ಹಿಂದೂ ಮಹಾಸಭೆಯವರ ಕರಿನಿಶಾನೆಗಳು ನೇತಾಡುತ್ತಿದ್ದರೂ ಆಡಂಬರಕ್ಕೇನೂ ಕುಂದು ಬರಲಿಲ್ಲ. ಈ ಮಧ್ಯೆ ಕಲ್ಲು ಬಿಸಾಡಿಕೊಳ್ಳುವ 'ಕಜ್ಜಮುಟ್ಟುಲೆ'ಯಾಟವೂ ನಡೆದು ಹೋಯಿತು. ಬೊಂಬೇ ಟೋಕೀಸಿನವರು ರಾಷ್ಟ್ರಪತಿಯವರ ಮೆರವಣಿಗೆಯ ಚಲಚಿತ್ರವನ್ನು ತೆಗೆದು ಬುಧವಾರ ದಿವಸ ಅದನ್ನು ಕೋಂಗ್ರೆಸ್ ಮುಂದಾಳುಗಳೆದುರು ಪ್ರದರ್ಶಿಸಿದ್ದು ಪ್ರಶಂಸನೀಯ ಕೆಲಸ.

ಮಹಾತ್ಮಾಜಿಯವರು—ಆರೇಳು ದಿವಸ ಮುಂಬಯಿ ನಗರದಲ್ಲಿದ್ದುಕೊಂಡು ಹಲವು ಜನರನ್ನು ಭೆಟ್ಟಿಯಾಗಿ ಬೇಕಾದ ಸಲಹೆಗಳನ್ನು ಕೊಟ್ಟು ತಮ್ಮ 'ಕಾರುಬಾರು' ಮುಗಿಸಿಕೊಂಡು ಶೀಗಾಂಗೆ ಹೊರಟರು ಗುರುವಾರ ದಿವಸ. ಇದೇ ತಿಂಗಳ 21 ಕ್ಕೆ ಸರಿಯಾಗಿ ಬಂದು ಎ. ಐ. ಸಿ. ಸಿ.ಯ ಸಭೆಗೆ ತಮ್ಮ ಆಶೀರ್ವಾದವನ್ನೀಯುವರೆಂಬ ಬಾತ್ಮಿ ಇದೆ.

ಕೋನ್ಸ್ಟಿಟ್ಯೂಷನ ಸಬ್ ಕಮಿಟಿ.

ಈ ಕಮಿಟಿಯು ನಾಲ್ಕು ದಿವಸಗಳ ಚರ್ಚೆಯ ಅನಂತರ ಈ ಕೆಳಗಿನ ವಿಷಯಗಳನ್ನು ನಿಶ್ಚೈಸಿತು.

1. ಕೊಂಗ್ರೆಸ್ ಸದಸ್ಯರು ಈಗಿನಂತೆ ಪ್ರತಿವರ್ಷವೂ ಸದಸ್ಯತನದ ಫೋರ್ಮುಗಳನ್ನು ತುಂಬಿಸುವ ಅಗತ್ಯವಿಲ್ಲ. 2. ಬರ್ಮಾ ಮತ್ತು ನೇಶನಲ್ ಕೋಂಗ್ರೆಸಿಗೆ ಏನೂ ಸಂಬಂಧವಿರಕೂಡದು. 3. ಕಳೆದ ಮೂರು ವರ್ಷಗಳ ತನಕ ಯಾರ ಹೆಸರು ರಿಜಿಸ್ಟರಿನಲ್ಲಿಲ್ಲವೊ ಅವರು ಡೆಲಿಗೇಟರಾಗಲೀ ಅಥವಾ ಹುದ್ದೇದಾರರಾಗಲೀ ಆಗಕೂಡದು. 4. ಚುನಾವಣೆಯ ಚರ್ಚೆಗಳನ್ನು ವಿಚಾರಿಸುವರೆ ಪ್ರತ್ಯೇಕ ಟ್ರಿಬ್ಯುನಲುಗಳನ್ನು ನೇಮಿಸುವುದು. 5 ಎ ಐ. ಸಿ. ಸಿ. ಯಲ್ಲಿಯ ಸದಸ್ಯರಲ್ಲಿ ¾ ಅಂಶವು ಸಣ್ಣ ಸಣ್ಣ ಟೆರಿಟರಿಯ ಪ್ರತಿನಿಧಿಗಳಾಗಬೇಕು. ¼ ಅಂಶವು ಪ್ರಾಂತೀಯ ಕೋ. ಕ. ಗಳ ಮೂಲಕ ಆಗಬೇಕು

ಕರ್ನಾಟಕದ ಮುಂದಾಳುಗಳು ಗಾಂಧಿಯವರನ್ನು ಕಂಡರು— ಕರ್ನಾಟಕ ಪ್ರಾಂತೀಯ ಕೋಂಗ್ರೆಸ್ ಕಮಿಟಿಯವರು ಅಂದರೆ ಗಂಗಾಧರರಾವ ದೇಶಪಾಂಡೇ, ಡಾ| ಹರ್ಡೀಕರ್ ಮೊದಲಾದವರು, ರಾಮದುರ್ಗದಲ್ಲಿ ಈಚೆಗೆ ಘಟಿಸಿದ ಘಟನಾವಳಿಗಳ ಕುರಿತು ವಿಚಾರಿಸುವರೆ ಮಹಾತ್ಮಾಜಿಯವರನ್ನು ಮಂಗಳವಾರ ದಿವಸ ಕಂಡು ಒಂದು ಗಂಟೆ ಸಮಯ ಅವರೊಡನೆ ಕಳೆದರು.

ನೇಶನಲ್ ಪ್ಲೇನಿಂಗ್ ಕಮಿಟಿಯು- ಪಂಡಿತ ಜವಾಹರಲಾಲನೆಹರುಗಳ ಅಧ್ಯಕ್ಷತೆಯಲ್ಲಿ ಕಳೆದ ರವಿವಾರ ಸೇರಿದು ಹಲವು ಸಬ್ ಕಮಿಟಿಗಳನ್ನು ನೇಮಿಸಿದೆ. ಶ್ರೀ. ಜೆ. ಸಿ ಕುಮಾರಪ್ಪ (ಗ್ರಾಮ ಕೈಗಾರಿಕೆ ಸಂಘದ ಕಾರ್ಯದರ್ಶಿಯವರು)ನವರು ವಿಶಾಲ ರೀತಿಯ ಕೈಗಾರಿಕೆಗಳಿಂದ ಗ್ರಾಮ ಕೈಗಾರಿಕೆಗೆ ಹಾನಿತಗಲಬಹುದೆಂದು ರಿಪೋರ್ಟುಕೊಡಲು ಇದಕ್ಕೆ ಪ್ರತ್ಯುತ್ತರವಾಗಿ ಯಾವ ರೀತಿಯಲ್ಲಿ ಯಾವ ಕೈಗಾರಿಕೆಗೆ ಹಾನಿ ತಗಲುವದೆಂಬುದರಲ್ಲಿ ಚೆನ್ನಾಗಿ ವಿವರಿಸಿಕೊಡಬೇಕೆಂದು ಕಮಿಟಿಯು ಕೇಳಿಕೊಂಡಿದೆ. ಈ ಗ್ರಾಮಕೈಗಾರಿಕೆಯಲ್ಲಿ ಹತ್ತಿ, ಸಿಲ್ಕು, ಉಣ್ಣೆ, ಬಳೆ, ಸಾಬೂನು, ಸಕ್ಕರೆ, ಮೊದಲಾದವುಗಳೆಲ್ಲ ಕೂಡಿವೆ.

ಬಾರಕೂರು—ಹಾಲಿಕೊಡಿ ಎಲಿಮೆಂಟ್ರಿ ಶಾಲೆಯ ಹೊಸ ಕಟ್ಟೋಣದ ಪ್ರವೇಶೋತ್ಸವವು ತಾ, 11-6-39ರಲ್ಲು ಶ್ರೀ. ಬಾಂಗಾಳ ಲಕ್ಷ್ಮೀನಾರಾಯಣ ನಾಯ್ಕರವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾಪ್ರವೇಶವಾದೊಡನೆ ಮಕ್ಕಳಿಂದ ಪ್ರಾರ್ಥನೆಯಾಗಲು ಮೆನೇಜರರು ವರದಿ ಓದಿದರು. ಬಳಿಕ ಮಕ್ಕಳು ವಿವಿಧ ವಿನೋದಾವಳಿಗಳನ್ನು ಪ್ರದರ್ಶಿಸಿದರು. ಸಭೆಯಲ್ಲಿ ಶ್ರೀ. ಕುರ್ಕಾಲು ಗಣಪಯ್ಯ ಸೆಟ್ಟಿಯವರು ಶಾಲೆಯ ಕಟ್ಟೋಣ,ಅಧ್ಯಾಪಕವೃಂದ,ಶಾಲಾಸಾಹಿತ್ಯೋಪಕರಣ ಮಕ್ಕಳ ಸಂಖ್ಯೆ ಮತ್ತು ಚಟುವಟಿಕೆ, ಗ್ರಾಮಸ್ಥರ ಬೆಂಬಲ,ಒಕ್ಕಟ್ಟು,ಶಾಲೆಯ ಶಿಸ್ತು ಇತ್ಯಾದಿಗಳ ಕುರಿತು ಹೊಗಳಿ ಇಡೀ ಜಿಲ್ಲೆಯಲ್ಲಿ ಕ್ರೈಸ್ತರೂ ಹಿಂದುಗಳೂ ಕೂಡಿ ಒಮ್ಮನಸ್ಸಿನಿಂದ ನಡೆಯಿಸಿಕೊಂಡು ಬರುವ ಶಾಲೆಗಳಲ್ಲಿ ಇದೊಂದೆಂದೂ ಇನ್ನು ಮುಂದೆ ಸಹ ಅನ್ಯೋನ್ಯ ಪ್ರೀತಿಯಿಂದ ಇದೇ ರೀತಿಯಲ್ಲಿ ನಡೆಕೊಂಡು ಬಂದು ಶಾಲೆಯು ಮತ್ತಷ್ಟು ಉತ್ತಮ ಸ್ಥಿತಿಗೆ ಬರುವಂತೆ ಪ್ರಾರ್ಥಿಸಿ ತಮ್ಮ ಸುರಸ ಭಾಷಣವನ್ನು ಮುಗಿಸಿದರು. ಡಾಕ್ಟರ್ ಎ. ಶ್ರೀನಿವಾಸ ಹೆಬ್ಬಾರರು ಅದನ್ನು ಪುಷ್ಟೀಕರಿಸಿ, ಶಾಲೆಯ ಶ್ರೇಯಸ್ಸನ್ನು ಕೋರಿದರು. ಶ್ರೀ. ಎಮ್. ಸುಬ್ಬಣ್ಣಯ್ಯನವರು ಶಾಲೆಯ ಆಡಳಿತ ಕ್ರಮಾದಿಗಳನ್ನು ಕೊಂಡಾಡಿದರು. ಅನಂತರ ಅಧ್ಯಕ್ಷರು ಶಾಲೆಯು ಉತ್ತಮ ರೀತಿಯಲ್ಲಿದ್ದು ಎಲ್ಲಾ ಸಲಕರಣೆಗಳನ್ನು ಒದಗಿಸಿಕೊಟ್ಟು ಉತ್ತಮ ರೀತಿಯಲ್ಲಿ ನಡೆಯಿಸಿಕೊಂಡು ಬರುವ ಈ ಶಾಲೆಗೆ ಗ್ರಾಮಸ್ಥರೆಲ್ಲರೂ ಬೆಂಬಲಕೊಡುವದು ನ್ಯಾಯವೆಂದು ಇನ್ನು ಮುಂದೆ ಸಹ ಎಲ್ಲಾ ಗ್ರಾಮಸ್ಥರು ಬೆಂಬಲವನ್ನಿತ್ತು ಮತ್ತಷ್ಟು ಉತ್ತಮ ಸ್ಥಿತಿಗೆ ತರುವಂತೆ ತಾನು ಆಶಿಸುವುದಾಗಿಯೂ ಹೇಳಿ ಶಾಲೆಯ ಬಡ ಮಕ್ಕಳಿಗೆ ಸ್ಲೇಟು ಪುಸ್ತಕಗಳ ಬಗ್ಗೆ ರೂ. 5ನ್ನು ದಾನವಿತ್ತರು. ಧನ್ಯವಾದ ಸಮರ್ಪಣೆಯಾಗಿ ಫಲಹಾರದೊಡನೆ ಸಭೆಯು ಅಂತ್ಯವಾಯಿತು. ಶಾಲಾಭಿವೃದ್ಧಿಗಾಗಿ ಮನಃಪೂರ್ವಕ ಅತಿ ಸಾಹಸದಿಂದ ದುಡಿಯುತ್ತಿರುವ ಶ್ರೀ. ಬಿ. ಹೂವಪ್ಪನವರ ಸಾಹಸವು ಸ್ತುತ್ಯವಾದುದು.

ನೋಟೀಸು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. P. No. 18/1939

1 Mrs. ಜುಲಿಯಾನ ರೇಗೊ.		ಅರ್ಜಿದಾರರು
2 ಗ್ರೇಸ್ ಫಿಲೊಮೆನ್ ರೇಗೊ.	ಮೈನರರು, ಗಾರ್ಡಿಯನ	
3 ಪ್ಲೊಸಿಮೇರಿ ರೇಗೊ	ತಾಯಿ 1ನೇ ಅರ್ಜಿದಾರಳು	

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ:—

1ನೇ ಅರ್ಜಿದಾರಳ ಗಂಡ, 2, 3ನೇ ಮೈನರ ಅರ್ಜಿದಾರರ ತಂದೆ ಮೃತ ಸಿಮೋನ ರೇಗೊರಿಗೆ United India Life Assurance Co. Ltd., ಈ ಕಂಪೆನಿಯಿಂದ ನಂಬ್ರ 113.6ನೇ Endowment Assurance Policy ಪ್ರಕಾರ ಬರಬೇಕಾದ ಮತ್ತು ನೋಟುಗಳಿಂದಲೂ ಇತ್ಯಾದಿ ಬರತಕ್ಕ ಹಣಗಳನ್ನು ವಸೂಲು ಹಿಡಿಯುವರೇ ಅರ್ಜಿದಾರರು ಹಕ್ಕುದಾರರಾಗಿ ಸದ್ರಿ ಹಣವನ್ನು ವಸೂಲು ಮಾಡುವರೇ 1ನೇ ಅರ್ಜಿದಾರಳಿಗೆ ಸ್ವತಃ ವ ಮೈನರ 2, 3ನೇ ಅರ್ಜಿದಾರರ ಗಾರ್ಡಿಯನಳಾಗಿ ಸಹಾ ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ದಾಖಲು ಮಾಡಿದ ಮೊಕ್ಕದ್ದಮೆ ಅರ್ಜಿಯು ತಾ. 19 6-39ರಲ್ಲಿ ತನ್ನ ಬಗ್ಗೆ ಇಡಲಾಗಿಯದೆ. ಆಕ್ಷೇಪ ಹೇಳುವವರು ಸದರಿ ದಿವಸ ಬೆಳಿಗ್ಗೆ 10 ಘಂಟೆಗೆ ಸದರಿ ಕೋರ್ಟಿನ ಮುಂದೆ ಹಾಜರು ಮಾಡಿಕೊಳ್ಳತಕ್ಕದ್ದು.

Gratian C. Rego,
Pleader for Petitioners.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೂಂಮೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer DR. D. N. JASANI, Vitalbhai Patel Road, BOMBAY 4

ಗೆದ್ದವರಿಗೆ ಗೇಟ್‌ವೇಯವರ ಅತ್ಯಮೂಲ್ಯ ಬಹುಮಾನಗಳು

Guarentee Prizes
ನಮ್ಮ ಗ್ಯಾರಂಟಿ ಇನಾಮುಗಳು.

ರೂ. 42,000
ಎಲ್ಲಾ ಸರಿಯಾದ 20 ಉತ್ತರಗಳಿಗೆ ಹಂಚಲಾಗುವುದು

ನಂಬ್ರ 7

ಉತ್ತರವನ್ನು ಮುಂಬಾಯಿಯ ಪ್ರಸಿದ್ಧ ಬ್ಯಾಂಕಿನಲ್ಲಿ ಭದ್ರವಾಗಿರಿಸಲಾಗಿದೆ.
ಕನಿಷ್ಟ ರೂ 2.100 ಇದಕ್ಕೆ ಸರಿಯಾದ ಪ್ರತಿ ಉತ್ತರಕ್ಕೆ ಕೊಡಲಾಗುವುದು

ಹೆಚ್ಚು ಉತ್ತರ ಕಳುಹಿಸುವವರಿಗೆ ಕ್ರಮವಾಗಿ ರೂ. 500/- 300/- ಮತ್ತು 100/- ಕೊಡಲಾಗುವುದು.

ನಮ್ಮ ಉತ್ತರಕ್ಕೆ ಹೋಲಿಕೆಯುಳ್ಳ ಉತ್ತರಗಳಿಗೆ ರೂ. 15/- ರ 50 ಸಾಂತ್ವನೀಯ ಬಹುಮಾನಗಳನ್ನು ಕೊಡಲಾಗುವುದು.

ಕೆಳಗೆ ಕೊಟ್ಟ ಚೌಕದಲ್ಲಿಯ ಸಾಲುಗಳನ್ನು ಅಡ್ಡಕ್ಕೂ ನೀಟಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸಿದ್ದಲ್ಲಿ ಜುಮಲಾ 58 ಬರುವಂತೆ 7ರಿಂದ 22ರ ವರೆಗಿನ ಸಂಖ್ಯೆಗಳನ್ನು ಸೇರಿಸತಕ್ಕದ್ದು. ಕಳುಹಿಸುವ ಕೊನೆಯ ದಿನ 21-6-39 ಫಲಿತಾಂಶವು 29-6-39ರಲ್ಲಿ ಪ್ರಕಟಣೆ ಹೊಂದುವುದು.

ಪ್ರವೇಶ ಧನ ಒಂದು ಉತ್ತರಕ್ಕೆ ರೂ 1/- ಮೂರಕ್ಕೆ ರೂ. 2/- 8 ಉತ್ತರಗಳ ಸೆಟ್ಟುಗಳಿಗೆ ರೂ. 5 -ರಂತೆ.

ಶರ್ತಗಳು.— ಮೇಲೆ ಕಾಣಿಸಿದಂತೆ ಯುಕ್ತ ಮೌಲ್ಯದೊಂದಿಗೆ ಸಾಮಾನ್ಯ ಕಾಗದದ ಮೇಲೆ ಸ್ಪಷ್ಟವಾಗಿ ಬರೆದು ಬೇಕಾದಷ್ಟು ಉತ್ತರಗಳನ್ನು ಕಳುಹಿಸಬಹುದು. ಹಣವು ಮನಿಯಾರ್ಡರು ವ ಪೋಸ್ಟಲ್ ಆರ್ಡರು ಮೂಲಕ ರವಾನಿಸತಕ್ಕದ್ದು. ವಿಳಾಸವನ್ನು ಮನಿಯಾರ್ಡರು ಕೂಪನಿನಲ್ಲಿ ಮತ್ತು ಉತ್ತರ ಬರೆಯುವ ಕಾಗದದಲ್ಲಿ ಸರಿಯಾಗಿ ಇಂಗ್ಲೀಷಿನಲ್ಲೇ ಬರೆಯತಕ್ಕದ್ದು. ಮನಿಯಾರ್ಡರು ರಶೀದಿಯನ್ನು ಮತ್ತು ಫಲಿತಾಂಶ ತಿಳಿಯಲು ಅನುಕೂಲವಾಗುವಂತೆ ಉತ್ತರ ಸಹಿತವಾದ, ಸ್ಟಾಂಪು ಅಂಟಿಸಿದ ಕವರನ್ನು ಕಳುಹಿಸುವ ಉತ್ತರದೊಂದಿಗೆ ಲಗ್ತೀಕರಿಸಬೇಕು. ವ್ಯವಸ್ಥಾಪಕರ ತೀರ್ಮಾನವೇ ಕೊನೆಯ ತೀರ್ಮಾನವು, ಕಾಯಿದೇಶೀರ ಬಗಾವಾಗಿರತಕ್ಕದ್ದು ಆಗಿದೆ.

ಮೇಲಣ ಇನಾಮು ಮಾತ್ರವಲ್ಲದೆ ಕನಿಷ್ಠ ಪಕ್ಷ ಮೂರು ಉತ್ತರಗಳನ್ನು ಕಳುಹಿಸುವವರಿಗೆ ಅತ್ಯುತ್ತಮ, ಆಕರ್ಷಕ 1939ರ ಕ್ಯಾಲೆಂಡರೊಂದು ಉಚಿತ. 8 ಯಾ ಹೆಚ್ಚಿಗೆ ಉತ್ತರ ಕಳುಹಿಸುವವರಿಗೆ (ಒಂದೇ ಕವರಿನಲ್ಲಿ ಬೇರೆ ಬೇರೆ ಹೆಸರಿಂದ ಕಳುಹಿಸಿದ್ದು ಸ್ವೀಕಾರಾರ್ಹವಿದೆ.) ಈ ಕೆಳಗಣವುಗಳಲ್ಲಿ ಯಾವುದಾದರೊಂದನ್ನು ಕೊಡಲಾಗುವುದು. 1 ವೆಂಡಲು ಮತ್ತು ಗ್ರಂಥಿ ಟಾನಿಕ್ಕು 2 ನೇತ್ರ ಚಿಕಿತ್ಸಕ (ಕಣ್ಣಿಗೆ ದಿವ್ಯ ಔಷಧ.)

ಮೊದಲಣ ಸ್ಪರ್ಧೆಯಲ್ಲಿ ಭದ್ರಗೊಳಿಸಿದ ಉತ್ತರದ ಜುಮ್ಲಾ 54

೧ನೇ ಸಾಲು	10,	15,	21,	8,
೨ನೇ ಸಾಲು	20,	9,	11,	14,
೩ನೇ ಸಾಲು	7,	18,	16,	13,
೪ನೇ ಸಾಲು	17,	12,	6,	19,

ನಿಮ್ಮ ಉತ್ತರಗಳನ್ನೂ ಹಣವನ್ನೂ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ.

ಮೆನೇಜರ್,
ದಿ ಗೇಟ್‌ವೇ ಪ್ರೊಡಕ್ಟ್ಸ್
166 ಸಿ. ಜವೇರಿ ಬಜಾರ ಮುಂಬಯಿ 2
The Gateway Products,
166, C. Zavear Bazar, BOMBAY, 2.

ಸ್ಥಾಪನೆ: ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ, 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆವಶ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್‌ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವುದು.

CROWN RUBRER STAMP CO,
Balmat Road, MANGALORE.
Includ by the Mysore Govt. Stores, Parchase Committee in the list of approveFdirms

ಬಾಲ ಸಾಹಿತ್ಯ ಮಂಡಲಿ
ಲಿಮಿಟೆಡ್, ಮಂಗಳೂರು

ನಮ್ಮ ಹೊಸ ಪುಸ್ತಕಗಳು:—

1. ನೂತನ ಬಾಲಗಣಿತ IIIನೇ ದರ್ಜೆಗೆ.
2. ,, IV ,, ,,
3. ,, V ,, ,,
4. ,, VI ,, ,, ಅಥವಾ Iನೇ ಫಾರ್ಮಿಗೆ.
5. ,, VII ,, ,, II ,,
6. ,, VIII ,, ,, III ,,

ಗ್ರಂಥಕರ್ತರು—ಶ್ರೀ ಉಳ್ಳಾಲ ಮಂಗೇಶರಾವ್, ಬಿ. ಎ., ಎಲ್. ಟಿ

7. ನೂತನ ಸಾಮಾನ್ಯ ಗಣಿತ—IVನೇ ಫಾರ್ಮಿಗೆ-ಶ್ರೀ. ಬಿ. ಭುಜಂಗರಾವ್, ಬಿ. ಎ. (ವಿದ್ವಾನ್).
8. ಭಾರತದ ಇತಿಹಾಸ, VIIIನೇ ದರ್ಜೆಗೆ ಅಥವಾ IIIನೇ ಫಾರ್ಮಿಗೆ.
9. Do. IVನೇ ಫಾರ್ಮಿಗೆ.

ಈ ಮೇಲಿನ ಎಲ್ಲಾ ಪುಸ್ತಕಗಳು ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಕ್ಲಾಸು ಉಪಯೋಗಕ್ಕೆ ಮಂಜೂರಾಗಿವೆ. (Vide consolidated list dated 2nd may 1939, pages 117, 155, 157 and 159 of Fort St. George Gazette Supplement.)

BALASAHITYA MANDALA LTD.
MANGALORE, S. INDIA.

ಸತೀ ರೂಸ್‌ವೆಲ್ಟರ ಮನೆವಾರ್ತೆ ವಿಚಾರ

ಅತಿಥಿ ಸತ್ಕಾರಕ್ಕಾಗಿ ಇಲಿಹೆಗ್ಗಣಗಳಿಗೆ ಅರ್ಧಚಂದ್ರ ಪ್ರಯೋಗ

ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟರಷ್ಟು ಜನಪ್ರೀಯರಾದ ಅಧ್ಯಕ್ಷರಾಗಲೀ, ಅಧಿಕಾರಿಗಳಾಗಲೀ ಪ್ರಪಂಚದಲ್ಲಿ ಮತ್ತೊಬ್ಬರಿಲ್ಲವೆನ್ನಬಹುದು. ಸಾಮಾನ್ಯರೊಡನೆ ಸಂಪರ್ಕ ಬೆಳೆಯಿಸುವುದು; ಪತ್ರವ್ಯವಹಾರ ನಡೆಯಿಸುವುದು ಎಂದರೆ ಅವರಿಗಷ್ಟೂ ಉತ್ಸಾಹ! ಲೋಕದಲ್ಲಿ ಅತಿ ಹೆಚ್ಚಿನ ಪತ್ರಗಳು ಬರುತ್ತಿರುವ ವ್ಯಕ್ತಿಯೆಂದರೆ ರೂಸ್‌ವೆಲ್ಟರು. ಅವರ ಸುದೈವದಿಂದೆಂಬಂತೆ ತಕ್ಕ ಪತ್ನಿಯೂ ದೊರೆತಿದ್ದಾಳೆ. ರೂಸ್‌ವೆಲ್ಟರ ಪತ್ನಿಯಲ್ಲಿ ಅಧಿಕಾರದ ಠೀವಿ, ಅಹಂಕಾರವೆಂಬುದೆಳ್ಳಷ್ಟಿಲ್ಲ. ಬದಲಾಗಿ ಕರ್ತವ್ಯ ಜಾಗ್ರತಿಯೊಂದೇ ಇದೆ. ಈ ಕರ್ತವ್ಯ ತತ್ಪರತೆ ಎಷ್ಟರ ಮಟ್ಟಿಗಿದೆಯೆಂದರೆ ಅವರ ಮನೆವಾರ್ತೆಯ ಕಾರ್ಯಗಳಿಗೆ ತೊಂದರೆ ಬರುವಂತಿದ್ದರೆ, ಸನ್ಮಾನಕೂಟ, ಯಾ ವಿನೋದಗೋಷ್ಠಿಯ ಆಮಂತ್ರಣವನ್ನು ಕೂಡ ತಿರಸ್ಕರಿಸಿಬಿಡುತ್ತಾರೆ. ಅಧ್ಯಕ್ಷರ ಪತ್ನಿಯೆಂದು ತನ್ನ ಮೇಲ್ತನವನ್ನಷ್ಟೇ ತೋರಿಸುವ ಯಾವ ಕಾರ್ಯಕ್ಕೂ ಅವರು ಕೈಹಾಕುವಂತಿಲ್ಲ. ಅಮೇರಿಕವು ಐಶ್ವರ್ಯದ ನೆಲೆವೀಡು. ಅಲ್ಲಿಯ ಧನಿಕರೇ ಪ್ರಪಂಚದ ತುತ್ತತುದಿಯ ಧನಿಕರ ಸಾಲಿನಲ್ಲಿರುವವರು. ಆ ಶ್ರೀಮಂತರ ಪತ್ನಿಯರ ವೈಭವ, ವಿಲಾಸಗಳೆಲ್ಲಾ, ನಮ್ಮ ಪುರಾಣದ ಇಂದ್ರಲೋಕದ ವೈಭವದ ರೀತಿಯಲ್ಲೇ ಇವೆ. ಆದರೆ ರೂಸ್‌ವೆಲ್ಟರ ಪತ್ನಿಯರು ಮಾತ್ರ ಇದಕ್ಕೆ ಅಪವಾದ. ಸದಾಕಾಲ ಕೆಲಸದಲ್ಲಿರುವುದೇ ಅವರಿಗೊಗ್ಗುತ್ತದೆ.

ಅಧ್ಯಕ್ಷರಿಗೊಂದು ಆಧಾರ

ಯಾವನಾದರೊಬ್ಬ ದೊಡ್ಡ ಅಧಿಕಾರಿಯನ್ನು ಅವನ ಅಧಿಕಾರದ ಮಾನದಿಂದಲೇ ಅಳೆಯುವದು ಜನರ ಸ್ವಭಾವ. ಆದರೆ ಅಧಿಕಾರಿಗಳ ಮೇಲೂ ಹೆಚ್ಚಿನ ಪರಿಣಾಮವನ್ನುಂಟುಮಾಡುವದೆಂದರೆ ಅವರ ಮನೆಯ ಆಗುಹೋಗುಗಳು. ಎಷ್ಟೋ ಪ್ರತಿಭಾವಂತರನ್ನು ಮನೆವಾರ್ತೆಯು ಸೆರೆಹಿಡಿದು ಹಿಂದಕ್ಕೆಳೆದು ನಿಲ್ಲಿಸಿಕೊಂಡುದಿದೆ. ಈ ಮಟ್ಟಿಗೂ ಅಧ್ಯಕ್ಷ ರೂಸ್‌ವೆಲ್ಟರು ಭಾಗ್ಯಶಾಲಿಗಳು. ಅಮೇರಿಕದ ಅಧ್ಯಕ್ಷರು "ವೈಟ್ ಹೌಸ್" ಭವನದಲ್ಲೇ ವಾಸಿಸುವ ಕ್ರಮ. ಯಾರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರೂ ತಮ್ಮ ಅವಧಿಯ ತನಕ ಅಲ್ಲಿಯೇ ವಾಸಿಸುತ್ತಾರೆ ಈ ಅಧ್ಯಕ್ಷ ಭವನದ ಒಳವ್ಯವಸ್ಥೆಯನ್ನಿಡುವುದೇನೂ ಸಾಮಾನ್ಯದ ಮಾತಲ್ಲ. ಸಂಘಟನಾಶಕ್ತಿ, ಸೂಕ್ಷ್ಮಬುದ್ಧಿ, ಉದಾರತೆ, ಕಾರ್ಯನಿಷ್ಠುರತೆ ಇಷ್ಟೆಲ್ಲಾ ಇಲ್ಲದೆ ಆ ಅರಮನೆಯ ಮೇಲ್ವಿಚಾರಣೆ ನಡೆಯದು. ಈ ಗುಣಗಳೆಲ್ಲಾ ಸತೀ ರೂಸ್‌ವೆಲ್ಟರಲ್ಲಿ ಹಾಸುಹೊಕ್ಕಾಗಿರುವದರಿಂದಲೇ ಅದರ ಆಡಳಿತವೆಲ್ಲಾ ಅಧ್ಯಕ್ಷರ ಪತ್ನಿಯ ಕೈಯಲ್ಲಿದೆ. ಇಷ್ಟೇ ಅಲ್ಲ, ರಾಜಕೀಯ, ಆರ್ಥಿಕವಿಚಾರಗಳಲ್ಲಿ ಕೂಡ ಪ್ರೆಸಿಡೆಂಟರು ತನ್ನ ಪಳೊಡನೆ ಪರ್ಯಾಲೋಚಿಸುವದಿದೆಯೆಂಬ ವಾರ್ತೆಯಿದೆ. ಅನ್ಯರ ಅಭಿಪ್ರಾಯವನ್ನರಿತುಕೊಳ್ಳುವುದರಲ್ಲಿ ರೂಸ್‌ವೆಲ್ಟರಿಗಿರುವ ಅಭಿರುಚಿಯನ್ನೂ ಅವರ ಪತ್ನಿಯಲ್ಲಿರುವ ಚಾತುರ್ಯವನ್ನೂ ಬಲ್ಲವರು ಈ ಕುರಿತು ಆಶ್ಚರ್ಯಪಡಲಾರರು. ಈ ಸದ್ವ್ಯವಹಾರದ ದೆಸೆಯಿಂದಲೇ, ಜರ್ಮನ್ ಪತ್ರಿಕೆಗಳು ಅಮೇರಿಕಾಧ್ಯಕ್ಷರ ಮೇಲೆ ಕೆಸರೆರಚುವದಕ್ಕಾಗಿ 'ಹೆಂಡತಿಯಾಧೀನವಿರುವ ಗಂಡ' ಎಂದು ಸಂಬೋಧಿಸಿದ್ದುವು.

ಪ್ರೇತ ಮತ್ತು ಇಲಿ ಹೆಗ್ಗಣಗಳ ಕಾಟ

ಅಮೇರಿಕಾಧ್ಯಕ್ಷರ ಅರಮನೆಯೊಳಗಿನ ದೊಡ್ಡ ಕಾಟವೆಂದರೆ ಪ್ರೇತ ಮತ್ತು ಇಲಿ ಹೆಗ್ಗಣಗಳ ಸಂಚಾರ. ಆ ಭವನದಲ್ಲೇ ಹಿಂದಿನ ಅಧ್ಯಕ್ಷರ ಕೊಲೆಯಾಗಿತ್ತು. ಅವರ ಪ್ರೇತವು ಆ ಭವನದಲ್ಲಿ ಹಲವರಿಗೆ ಹಲವು ಬಾರಿ ಕಾಣಿಸಿಕ್ಕಿರುವದಂತೆ. 'ನಾನು ಏನಾದರೂ ಕೆಲಸದಲ್ಲಿರುವಾಗ ಹಿಂದಿನಿಂದ ಯಾರೋ ಬಂದಂತೆ ನನಗಾಗುವದು; ಆದರೆ ಯಾರನ್ನೂ ಕಾಣದೆ ಆಶ್ಚರ್ಯಪಟ್ಟಿದ್ದೇನೆ' ಎಂದು ಅಧ್ಯಕ್ಷ ಪತ್ನಿಯರನ್ನುತ್ತಾರೆ. ಇಲ್ಲಿ ಹೆಗ್ಗಣಗಳಂತೂ ವೈಟ್ ಹೌಸಿನಲ್ಲಿ ವಿಶೇಷ ಸಂಖ್ಯೆಯಲ್ಲಿವೆಯಂತೆ. ಈಗ ಇಂಗ್ಲೆಂಡಿನ ಸಾಮ್ರಾಟರೂ ಸಾಮ್ರಾಜ್ಞಿಯರೂ ಅಮೇರಿಕಕ್ಕೆ ಹೋಗಿ ರೂಸ್‌ವೆಲ್ಟ್ ದಂಪತಿಗಳ ಆತಿಥ್ಯಕ್ಕೊಳಗಾಗಿರುವರಷ್ಟೆ. ಈ ರಾಜ ದಂಪತಿಗಳ ಸ್ವಾಗತಕ್ಕಾಗಿ ಸತೀ ರೂಸ್‌ವೆಲ್ಟರು ವಿಶೇಷ ಮುಹನತ್ತನ್ನು ವಹಿಸಿದ್ದರು. ಒಂದೆರಡು ತಿಂಗಳುಗಳ ಹಿಂದೆಯೇ ಸರ್ವವಿಧದ ಸನ್ನಾಹವನ್ನಾರಂಭಿಸಿದ್ದರು. ಇಡೀ ಅರಮನೆಯಲ್ಲಿ ಒಂದೇ ಒಂದು ಇಲಿಮರಿ ಕೂಡ ಉಳಿಯದಂತೆ ಅವುಗಳ ಸಂತಾನ ನಿರ್ಮೂಲವಾಡಬೇಕೆಂದು ಅವರ ಕಟ್ಟಾಜ್ಞೆಯಾಗಿತ್ತು. "ರಾಣಿ ಎಲಿಜಬೆತರು ಈ ಇಲಿಗಳ ಕಾಟವನ್ನು ಕಂಡರಾದರೆ, 'ಮನೆ ಸರಿಯಾಗಿಡಲು ಬಾರದವಳು' ಎಂದು ನನ್ನನ್ನು ತಿಳಿದುಕೊಂಡಾರು" ಅಂದಿದ್ದರು ರೂಸ್‌ವೆಲ್ಟ್ ಪತ್ನಿ. ಈಗ ಚಕ್ರವರ್ತಿ, ಚಕ್ರವರ್ತಿನಿಯರು ಅಲ್ಲಿ ಅತ್ಯಪೂರ್ವ ಆತಿಥ್ಯಪಡೆಯುತ್ತಿದ್ದಾರೆ; ಅವರೊಳಗೆ ಸಂಭಾಷಣೆಯಾಗುವ ಹೊತ್ತಿಗೆ ಎಲ್ಲಿಯಾದರೊಂದು ಮೂಲೆಯಿಂದ ಇಲಿಗಳು 'ಕಿಚಿ ಕಿಚಿ' ಎಂದು ಇಂಗ್ಲಿಷ್ ಮಾತನಾಡಿಬಿಟ್ಟರೆ ಸತೀ ರೂಸ್‌ವೆಲ್ಟರ ಹೃದಯವಿನ್ನೆಂತಾಗಬಹುದು!

ಸಂಗೀತ
ಕಲಿವವರಿಗೆ ಸುಸಂಧಿ
ದತ್ತಮಂದಿರ
(ಹೆಂಗಸರ ಗವರ್ನ್‌ಮೆಂಟ್ ಟ್ರೈನಿಂಗ್ ಶಾಲೆಯ ಎದುರು)
ಉಡುಪಿ

ಇಲ್ಲಿ ಸಂಗೀತವನ್ನು ಶಾಸ್ತ್ರೀಯ ರೀತ್ಯಾ ಅತಿ ಮುತುವರ್ಜಿಯಿಂದ ಕಲಿಸಲಾಗುತ್ತೆ. ಹೆಚ್ಚಿನ ಮಾಹಿತಿಗೆ ವಿಚಾರಿಸಬಹುದು.

ನರಸಿಂಹ ಸೇರಿಗಾರ್,
ಹಾರ್ಮೋನಿಯಂ ಮಾಸ್ಟರ್

THE
Canara Banking Corporation, Ltd.
(Incorporated in British India.)
ESTD. 1906

THREE YEARS' CASH CERTIFICTAES
bearing interest at 4% p. a. in denomnations of
Rs 50/-, 100/-, 500/-, 1,000/- & 5000/-
are now issued at
all our Branches.

For particulars call at or write to any of our nearest Branches.

ಉಡುಪಿ, ಗುರುವಾರ, ತಾ. ೧೫-೬-೩೯

ಹಿಂದೀ ವಿರೋಧದ ಪುನರವತಾರವೇ?

ಮದ್ರಾಸ್ ಸರಕಾರವು ಹಿಂದಿಯನ್ನು ಖಡ್ಡಾಯವಾಗಿಟ್ಟುದೇ ತಡ, ಕಾಂಗ್ರೆಸ್ ವಿರೋಧಿಗಳು ಆ ಸಂದರ್ಭವನ್ನು ಕಳಕೊಳ್ಳದೆ ಸರಕಾರದ ವಿರುದ್ಧ ಚಳವಳವನ್ನೆಬ್ಬಿಸಿ ಬಿಟ್ಟರು. ಸ್ವಾರ್ಥ ಸಾಧಕರಿಗೆ ತಮ್ಮ ಅಂತರ್ಯವು ಪ್ರತಿಬಿಂಬಿಸದಂತಹ ಸ್ವಚ್ಛ ವಿರೋಧವಾವುದನ್ನೂ ಕಾಂಗ್ರೆಸಿನ ವಿರುದ್ಧವಾಗಿ ಎಬ್ಬಿಸಲು ಆ ವರೆಗೆ ಅನುವು ದೊರೆತಿರಲಿಲ್ಲ; ಜಾತಿ ದ್ವೇಷ, ಪಾನನಿಷೇಧ ಧೋರಣೆಯ ಖಂಡನೆ ಮೊದಲಾದ ಸಾಧನಗಳು ಅವರಿಗೆ ಜನ ಬೆಂಬಲವನ್ನೊದಗಿಸಿ ಕೊಡಲಿಲ್ಲ, ಆ ಮೂಲಕ ಇದಿರು ಬಂದ ವಿರೋಧಗಳೆಲ್ಲವೂ ಮೊಗ್ಗಿನಲ್ಲೇ ಬಾಡಿಹೋಗುವಂತಾಗಿತ್ತು. ಆದರೆ ಹಿಂದೀ ವಿರುದ್ಧ ಚಳವಳಿಯು ಮದ್ರಾಸಿನಲ್ಲಿ ಸಾಕಷ್ಟು ಹಬ್ಬಿತೆನ್ನಬಹುದು. ಇದಕ್ಕೆ ಸ್ವಭಾವಸಿದ್ಧ ಆಧಾರವೂ ದೊರೆತಿದೆ. ತಮ್ಮ ಮಾತೃ ಭಾಷೆಯಲ್ಲಿರುವ ತುಲನಾತೀತ ಪ್ರೇಮವೆಂಬುದು ಮಾನವ ಸಹಜ ಸದ್ಗುಣಗಳಲ್ಲೊಂದೆಂದು ಗಣಿಸಲ್ಪಟ್ಟಿದೆ. ಅಂತೆಯೇ ಮದ್ರಾಸಿನ ತಮಿಳು ಭಾಷಾಪ್ರೇಮವು ತಪ್ಪಲ್ಲ. ಹಿಂದಿಯನ್ನು ಖಡ್ಡಾಯವಾಗಿಟ್ಟುದರಿಂದ ತಮಿಳಿನ ಮೇಲೆ ದುಷ್ಪರಿಣಾಮವಾಗುವದೋ, ಸತ್ಪರಿಣಾಮವೋ ಎಂಬುದನ್ನು ವಿಚಾರಿಸಿ ತಿಳಿಯಲು ಸೂಕ್ಷ್ಮಬುದ್ಧಿ ಬೇಕು; ಆದರೆ ಹಿಂದಿಯು ತಮಿಳರೊಳಗೆ ಒತ್ತಾಯದಿಂದ ಒಳ ನುಗ್ಗುವ ದೃಶ್ಯವು ಜನಸಾಮಾನ್ಯರಿಗೂ ಗೋಚರಿಸುವಂತಹದು. ಹೀಗೆ ತಮಿಳರ ಕೆಲವರ ಬೆಂಬಲವನ್ನಾದರೂ ಹಿಂದೀ ವಿರೋಧಿಗಳು ದೊರಕಿಸಿಕೊಂಡುದರಲ್ಲಿ ಆಶ್ಚರ್ಯವಿಲ್ಲ.

ಆದರೆ ಹಿಂದೀ ವಿರೋಧಕ್ಕಾಗಿ ಗೆ ತಿದಿಯೊತ್ತುತ್ತಿರುವವರ ಉದ್ದೇಶವನ್ನು ಮರೆಯಲಾಗದು. ಕಾಂಗ್ರೆಸ್ ಸರಕಾರದ ಮೇಲೆ ಕೆಸರೆರಚಿ ಅದರ ಬಣ್ಣ ಕೆಡಿಸಬೇಕೆಂಬ ಒಂದೇ ಉದ್ದೇಶದಿಂದಿರುವ ಪಂಗಡಿಗರ ಕೈಯಲ್ಲಿದೆ ಈ ಚಳವಳ. ಹಿಂದಿಯು ರಾಷ್ಟ್ರಭಾಷೆಯೆಂಬ ದೃಷ್ಟಿಯಿಂದ ಕಲಿಸಲ್ಪಡುತ್ತಿದೆ. ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ಅದು ಪ್ರಾಂತಿಕ ಭಾಷೆಯೊಡನೆ ಸ್ಪರ್ಧಿಸುವದಕ್ಕಿಂತ ಮಿಗಿಲಾಗಿ ಸಹಾಯಕವಾಗಿ ನಿಲ್ಲುತ್ತದೆ. ಈ ವಾದದಲ್ಲಿ ಭಿನ್ನಾಭಿಪ್ರಾಯವಿರುವವರಿರಬಹುದು. ಹಿಂದಿಯು ಖಡ್ಡಾಯವಾಗುವುದರಿಂದ ತಮಿಳಿಗೆ ಬಾಧೆಯಿದೆ ಎಂಬವರ ವಾದವನ್ನು ಒಪ್ಪಿಕೊಂಡರೂ, ಮದ್ರಾಸಿನ ಚಳವಳಗಾರರ ಪಹರೆ, ವಿರೋಧ ಪ್ರದರ್ಶನ ಮೊದಲಾದುವುಗಳ ಅರ್ಥವಾಗುವದು ಕಷ್ಟ. ಬಾಗಿಲಲ್ಲಿ ಬರುವವರನ್ನು ತಡೆದಿಟ್ಟು, ಅದರಿಂದ ಶಾಲೆಗಳೊಳಗೆ ಕಾನೂನು ಮೂಲಕ ಹೊಕ್ಕ ಹಿಂದಿಯನ್ನು ಹೊರಗೆಳೆಯುವೆವೆನ್ನುವವರ ಕೃತ್ಯವನ್ನು ಏಂದ್ರಜಾಲವೆನ್ನಬೇಕು! ಸರಕಾರಕ್ಕೆ ಬಿಸಿತಾಗಿಸಿ ಅದನ್ನು ಬಗ್ಗಿಸುವೆವೆಂದು ಚಳವಳಗಾರರೆನ್ನಬಹುದು. ಚಳವಳವು ಆ ಗುರಿಯನ್ನು ಮುಟ್ಟುವದು ಅಸಾಧ್ಯವೆಂಬುದು ನಮ್ಮ ಪ್ರಾಂತಿಕ ಸರಕಾರದ ಪರಿಚಯವಿದ್ದವರಿಗೆ ಆದಿಯಲ್ಲೇ ಗೊತ್ತಾಗುವ ವಿಷಯ. ಹಿಂದಿಯು ತಮಿಳಿಗೆ ಹೇಗೆ ವಿಘಾತುಕವಾಗುದೆಂಬುದನ್ನು ಜನರಿಗೆ ಇದಿರು ಕಡೆಯ ಮುಂದಾಳುಗಳು ತಿಳಿಸಬೇಕಿತ್ತು. ಕಾಂಗ್ರೆಸ್ ಮಂತ್ರಿಗಳಿಗೆ ಬಿನ್ನಹ ಮೂಲಕ ತಿಳಿಸಿ ಮಾನ್ಯತೆ ದೊರೆಯದಿದ್ದಲ್ಲಿ ಜನತೆಗೆ ಆ ಅರಿವನ್ನು ಉಂಟುಮಾಡಿ, ಜನತೆಯ ಸ್ಪಷ್ಟಾಭಿಪ್ರಾಯವು ಹಿಂದೀ ಖಡ್ಡಾಯವಾಗುವುದಕ್ಕೆ ವಿರೋಧವಿದೆ ಎಂಬುದನ್ನು ಖಚಿತಪಡಿಸುತ್ತಿದ್ದರೆ ಕಾಂಗ್ರೆಸ್ ಮಂತ್ರಿಗಳದಕ್ಕೆ ತಲೆವಾಗದೆ ಹೋಗುತ್ತಿದ್ದಿಲ್ಲ. ಇದು ಹಿಂದಿಯನ್ನಷ್ಟೇ ವಿರೋಧಿಸುವವರು ಕೈಕೊಳ್ಳಬೇಕಾಗಿದ್ದ ಹಾದಿ. ಅಷ್ಟೆಲ್ಲಾ ಕಾರ್ಯದ ಮಾತಂತಿರಲಿ, ಹಿಂದೀ ಪ್ರಚಾರದಿಂದ ತಮಿಳು ಭಾಷೆಗಾವ ವಿಧದಿಂದ ಹಾನಿ ತಟ್ಟುವದೆಂಬುದನ್ನಾದರೂ ವಿವರಿಸಿದವರಿಲ್ಲ. ಕೇವಲ ಕಾಂಗ್ರೆಸ್ಸಿನ ಮತ್ತು ಮಂತ್ರಿಗಳ ವಿರುದ್ಧ ರಣಘೋಷ ಮತ್ತು ಈ ಚಳವಳದೊಡನೆ ತಂದುಹಾಕಿದರೂ ಅಂಟಿಕೊಳ್ಳಲಾಗದ ಜಾತೀಯ ದ್ವೇಷ—ಇಷ್ಟನ್ನೇ ಹಿಂದೀ ವಿರೋಧಿಗಳೆಬ್ಬಿಸುತ್ತಿದ್ದಾರೆ ಹೊರತು ಅನ್ಯಥಾ ಇಲ್ಲ. ಇವರಿಂದಾಗಿ ಕಾಂಗ್ರೆಸ್ಸನ್ನು ವಿರೋಧಿಸುವದೊಂದೇ ಚಳವಳದ ಗುರಿಯೆಂಬುದು ಸ್ಪಷ್ಟವಾಗುವದಿಲ್ಲವೆ? ಇದಕ್ಕೆ ಬೆಂಬಲವೀಯುವವರು ರಾಷ್ಟ್ರಘಾತುಕ ಕಾರ್ಯ ಸಾಧಿಸುತ್ತಿರುವರೆಂದು ಬೇರೆ ಹೇಳಬೇಕೆ?

ಇತ್ತೀಚೆಗೆ ಈ ಚಳವಳದ ಒಬ್ಬ ಕುಂದುತ್ತಾ ಬಂದಿತ್ತು. ಪಹರೆ ಸುದ್ದಿ ಕೇಳಿ ಬರುತ್ತಿರಲಿಲ್ಲ. ಈ ಶುಭ ಚಿಹ್ನೆಯು ಕಂಡುಬಂದೊಡನೆ ಕಾಂಗ್ರೆಸ್ ಸರಕಾರವು ಆ ಚಳವಳಕ್ಕಾಗಿ ಶಿಕ್ಷೆಗೊಳಗಾದವರನ್ನೆಲ್ಲಾ ಬಿಡುಗಡೆಪಡಿಸುವ ನಿರ್ಧಾರಮಾಡಿರುವದು ಸ್ತುತ್ಯವಿದೆ. ಇಂತಹ ಸಂದರ್ಭಗಳಲ್ಲೆಲ್ಲಾ ಮಾನ್ಯ ಸಿ. ರಾಜಗೋಪಾಲಾಚಾರ್ಯರ ಧೋರಣೆಯು ಸುಸ್ಪಷ್ಟವಿದೆ. ಕರ್ತವ್ಯ ಪಾಲನೆಗಾಗಿ ಕಠಿಣ ಧೋರಣೆಯನ್ನನುಸರಿಸಲು ಅವರು ಹಿಂಜರಿಯಲಾರರು. ಅದಕ್ಕೂ ಮಿಕ್ಕಿ ಕಠಿಣತೆಯನ್ನು ಇಟ್ಟುಕೊಳ್ಳಲಾರರು. ಶ್ರೀ. ಬಾಟ್ಲಿವಾಲರ ದಸ್ತಗಿರಿ ಮತ್ತು ಬಿಡುಗಡೆ, ಹಾಗೂ ಇಂದಿನ ಹಿಂದೀ ವಿರೋಧಿಗಳ ಬಿಡುಗಡೆ, ಇವೆಲ್ಲಾ ರಾಜಾಜಿಯವರ ಧೋರಣೆಗೆ ನಿದರ್ಶನಗಳು. ಆದರೆ ಚಳವಳಗಾರರು ಜೂನ್ ೧೬ರಿಂದ ಪುನಃ ಪಹರೆ ನಡಿಸುವ ರಣಭೇರಿ ಬಾರಿಸಿದ್ದಾರೆ. ಚಳವಳದ ಪುನರುತ್ಥಾನವಾಗುವ ಸನ್ನಾಹ ನಡೆದಿದೆ.

ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲೇಬೇಕಾಗಿದೆ. ಸರಕಾರವು ಪಹರೆಗಾರರನ್ನು ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಆಕ್ಟಿನನ್ವಯ ದಸ್ತಗಿರಿಮಾಡಿತು. ರಾಜಾಜಿಯವರ ನ್ಯಾಯವಾದ ಹಾದಿಯನ್ನು ಈ ಕಾನೂನು ಸುಗಮಗೊಳಿಸಿರಬಹುದು; ಕರ್ತವ್ಯ ಪಾಲನೆಗೆ ಅದರ ಸಹಾಯದ ಅಗತ್ಯಬಿದ್ದಿರಬಹುದು. ಕರ್ತವ್ಯದ ಅನಿವಾರವೇ ಧೋರಣೆ, ಕಾಂಗ್ರೆಸ್ ಧೋರಣೆಗೆ ಈ ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಆಕ್ಟು ವಿರುದ್ಧವಾದುದು. ಅದು ಕಾಂಗ್ರೆಸ್ ಚಳವಳದ ದಮನಕ್ಕಾಗಿ ಆಗಿನ ಸರಕಾರದಿಂದ ನಿರ್ಮಾಣಗೊಂಡಿತ್ತು. ಮಾತ್ರವಲ್ಲ, ವ್ಯಕ್ತಿಸ್ವಾತಂತ್ರ್ಯಕ್ಕೆ ಧಜೆಯೆಳೆಯುವ ಭಾಗವು ಅದರಲ್ಲಿ ದೊಡ್ಡ ಪರಿಮಾಣದಲ್ಲಿದೆ. ಆದ್ದರಿಂದ ಅದನ್ನಾಧರಿಸುವದೆಂದರೆ ಕಾಂಗ್ರೆಸ್ ಮಂತ್ರಿಗಳಿಗೊಂದು ಅವಮಾನವೆಂದೇ ಬಗೆಯಬೇಕು. ಒಬ್ಬೊಬ್ಬರಾಗಿ ಬಂದ ಪಹರೆಗಾರರನ್ನು ಈ ಕಾನೂನಿನ ವಿನಹ ದಸ್ತಗಿರಿಮಾಡಲಾಗುವದಿಲ್ಲ, ನಿಜ. ಆದರೆ ಪಹರೆಯು ಮಟ್ಟಿಗೆ, ಚಳವಳ ಕಾಲದ ಕಾಂಗ್ರೆಸ್ ರೀತಿಯನ್ನೇ ಅನುಸರಿಸಿ ದಸ್ತಗಿರಿಗೊಳಗಾದುದರಿಂದಲೇ ಹಿಂದೀ ವಿರೋಧಕರು ತಮ್ಮ ನಾವು ಮಾತ್ರ ಪಹರೆಗೆ ಇಷ್ಟಾದರೂ ಪ್ರಾಮುಖ್ಯತೆಯನ್ನು ದೊರಕಿಸಿಕೊಂಡರು. ಆ ಕಾನೂನನ್ನುಪಯೋಗಿಸಿ ಕಾಂಗ್ರೆಸ್ ಮಂತ್ರಿಗಳು ಹಲವರ ಸಂದೇಹಕ್ಕೊಳಗಾದರು. ರಾಜಾಜಿಯವರು ಹಿಂದೀ ವಿರೋಧದ ನಿಷ್ಫಲತೆ ಹಾಗೂ ದುಷ್ಪರಿಣಾಮವನ್ನು ಮಂದಟ್ಟಾಗುವಂತೆ ತೋರಿಸಿಕೊಟ್ಟರೂ, ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಆಕ್ಟಿನ ಪ್ರಯೋಗದ ಕುರಿತೆದ್ದಿರುವ ಸಂದೇಹವನ್ನು ನಿವಾರಿಸುವ ಗೊಡವೆಗೆ ಹೋಗಿಲ್ಲ. ಇದು ವ್ಯಸನಕರ. ಹಿಂದೀ ವಿರೋಧ ಚಳವಳದ ಪುನರವತಾರವಾಗುವಾಗ ಸರಕಾರವೂ ನೂತನ ಧೋರಣೆ ವಹಿಸುವದೆಂದು ನಾವು ನಂಬುತ್ತೇವೆ.

ದಿ ಪ್ರೊವಿನ್ಶಿಯಲ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಈ ಸಂಸ್ಥೆಯು 1929ರಲ್ಲಿ ಸ್ಥಾಪನೆ ಹೊಂದಿತು. ಕಳೆದ 10ವರ್ಷಗಳಿಂದ ವ್ಯಾಪಾರ ವಹಿವಾಟುಗಳನ್ನು ದಕ್ಷತೆಯಿಂದ ನಡೆಸಿ, ಇಂದೀಗ ವಿಮಾ ಸಾಮ್ರಾಜ್ಯದಲ್ಲಿ ಗಣನೀಯ ಸ್ಥಾನವನ್ನೇ ಹೊಂದಿ ಮುನ್ನಡೆಯುತ್ತಿದೆ. ಇದು ತನ್ನ ಮಿತವ್ಯಯದ ಆಡಳಿತೆಯಿಂದಲೂ, ಪೊಲಿಸಿದಾರರ ಹಿತಸಾಧನೆಯ ಧ್ಯೇಯ ಧೋರಣೆಯಿಂದಲೂ ಜನತೆಯ ಪ್ರೇಮವಿಶ್ವಾಸಕ್ಕೆ ಪಾತ್ರವಾಗಿರುವ ಸಂಸ್ಥೆಯಾಗಿದೆ. ಕಂಪೆನಿಯ ಆರ್ಥಿಕ ಪರಿಸ್ಥಿತಿಯೂ ತೃಪ್ತಿಕರವಾಗಿದೆಯೆಂಬುದು ವರದಿಯ ನಿರ್ದಿಷ್ಟವಿಚಾರದಿಂದ ತಿಳಿಯಬಹುದಾಗಿದೆ.

1938ನೇ ದಶಂಬ್ರ 31ಕ್ಕೆ ಅಂತ್ಯವಾಗುವ ವರ್ಷದ ವರದಿಯ ಮೇರೆಗೆ ಈ ಸಂಸ್ಥೆಗೆ ರೂ. 8,97,750 ಮೊಬಲಗಿನ ವಿಮಾಸೂಚನಾ ಪತ್ರಗಳು ಬಂದಿದ್ದವು, ಅದರಲ್ಲಿ ರೂ. 7,47,931 ಮೊಬಲಗಿನ 625 ವಿಮಾದರಖಾಸ್ತುಗಳು ಸ್ವೀಕೃತವಾದವು. ವರದಿಯ ಮೊದಲಣ ವರ್ಷದಲ್ಲಿ ಜೀವವಿಮಾಫಂಡು ರೂ ಪಾ ಯಿ 105,811-3-4 ಇದ್ದದ್ದು ವರದಿಯ ವರ್ಷದಲ್ಲಿ ರೂ. 1,32,914-11-5ಕ್ಕೆ ಏರಿರುವುದು ಅಭಿನಂದನೀಯವಿದೆ. ಕಂಪೆನಿಯು ಸಾಕಷ್ಟು ಭದ್ರವಾದ ತಳಹದಿಯ ಮೇಲೆ ನಿಂತಿರುವುದು. ಅದು ರೂಪಾಯಿ 1,40,000 ಮುಖಮೌಲ್ಯದ ಸರಕಾರಿ ಭದ್ರತೆಯ ವಿನಿಯೋಗವನ್ನು ಈ ಮೊದಲೇ ಪಡೆದಿದೆ. ಇದರ ಬೆಲೆಯು ರೂಪಾಯಿ 1,15,629-14-0ನಿಂತಿದೆ ಕಂಪೆನಿಯು ಕ್ಲೈಮುಗಳನ್ನು ಸಲ್ಲಿಸುವಾಗಲೆಲ್ಲಾ ಬಹುಜಾಗರೂಕತೆಯಿಂದ ಕಾರ್ಯಭಾಗವನ್ನು ನಿರ್ವಹಿಸುವುದು ಅಭಿನಂದನೀಯವಿದೆ ಆಡಳಿತ ವೆಚ್ಚವು ಕೂಡಾ ಮಿತವ್ಯಯವನ್ನನುಸರಿಸಿ ಕೊಂಡಿರುವುದೆಂಬುದು ಶ್ರೇಯಸ್ಕರ, ಮಾತ್ರವಲ್ಲ ಕಂಪೆನಿಯು ಜಾರಿಗೆ ಬರಲಿರುವ ಹೊಸ ಆಕ್ಟಿನ ಶರತ್ತುಗಳನ್ನು ಪೂರೈಸಲು ಸಾಕಷ್ಟು ಮುಂಜಾಗ್ರತೆ ತೆಗೆದುಕೊಂಡಿರುವುದೆಂಬುದು ಆಡಳಿತ ಮಂಡಳದ ಮುಂಜಾಗ್ರತೆಯನ್ನೂ ಕಾರ್ಯದಕ್ಷತೆಯನ್ನೂ ತೋರಿಸುತ್ತದೆ. ಕಂಪೆನಿಯು ತನ್ನ ಕಾರ್ಯಕ್ಷೇತ್ರವನ್ನು ವರ್ಷ ವರ್ಷಕ್ಕೆ ವಿಸ್ತರಿಸಿಕೊಂಡು, ಜನತೆಯ ಪ್ರೇಮ ಭರವಸೆಯ ಸಂಸ್ಥೆಯಾಗಿ ಮುಂದೆ ಸಾಗುತ್ತಿದೆ. ಕಳೆದ ವರ್ಷದಲ್ಲಿ ಮದರಾಸು ನಗರದಲ್ಲಿ ಒಂದು ಶಾಖೆಯನ್ನು ತೆರೆಯಲಾಯಿತು.

ಈ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಾದ ಶ್ರೀ ಬೋಳಾರ ವಿಟ್ಠಲರಾಯರು ಈ ಕಂಪೆನಿಯ ಶ್ರೇಯಸ್ಸಿಗಾಗಿ ಸತತ ದುಡಿಯುವವರು. ಇವರ ಕಾರ್ಯದಕ್ಷತೆ ದೀರ್ಘ ಅನುಭವ ಸೂಕ್ಷ್ಮತೆಗಳು ಈ ಕಂಪೆನಿಯ ಮೇಲ್ಮೆಗೆ ಬೆಂಗೋಲಾಗಿ ನಿಂತಿದೆ ಶ್ರೀ. ವಿಟ್ಠಲರಾಯರೇ ಮೊದಲಾದ ಸಮರ್ಥ ಮುಂದಾಳುಗಳಿಂದ ಮುಂದಾದ ಈ ಕಂಪೆನಿಯ ಶ್ರೇಯಸ್ಸು ಇನ್ನಷ್ಟು ಹೆಚ್ಚಾಗಲೆಂದು ನಮ್ಮ ಹಾರೈಕೆ.

ನೆಹರೂ-ರೋಯಿಗಳ ಭಿನ್ನ ಹಾದಿ

ಪಂಡಿತ ನೆಹರುಗಳು ಭಾರತದ ಸದ್ಯದ ರಾಜಕೀಯ ಪರಿಸ್ಥಿತಿಯನ್ನವಲೋಕಿಸುತ್ತಾ ಕಾಮ್ರೇಡ್ ಎಂ. ಎನ್. ರೋಯಿಗಳ ಧೋರಣೆಯನ್ನನುಸರಿಸಿದಲ್ಲಿ ಕಾಂಗ್ರೆಸಿನ ಅಸ್ತಿವಾರಕ್ಕೇನೆ ಧಕ್ಕೆ ತಗಲಬಹುದು, ಈ ತನಕ ಬೆಳೆಯಿಸಿಕೊಂಡು ಬಂದುದನ್ನು ಕತ್ತರಿಸಿದಂತಾಗಬಹುದು; ಹಲವು ಸುಧಾರಣೆಗಳಾಗಬೇಕಾದರೂ ಅವು ಬೆಳವಣಿಗೆಯ ರೂಪದಲ್ಲಿ ಹಿಂದಿನ ಧೋರಣೆಯನ್ನನುಸರಿಸಿಕೊಂಡಿರಬೇಕೆಂದು ಸೂಚಿಸಿದ್ದರು. ಇದಕ್ಕೆ ಶ್ರೀ. ರೋಯಿಗಳ ಉತ್ತರ ಹೊರಟಿದೆ; ಅದು ಸುಸ್ಪಷ್ಟವಾಗಿಯೇ ಇದೆ. ಹಳೆಯುವನ್ನು ತೆಗೆದೊಗೆಯದೆ ಹೊಸತನ್ನು ತುಂಬಿಸುವದೆಂದರೆ ಹೇಗೆ? ಎಂದು ರೋಯಿಗಳ ಪ್ರಶ್ನೆ. ಇಂತಹ ತೀವ್ರ ಬದ

(ಪುಟ ೧೪)

ಪ್ರಾಂತಿಕ ಮಂತ್ರಿಗಳ ಖಂಡನೆಯು ರಾಜದ್ರೋಹವಲ್ಲ.

ಹೊರದೇಶಗಳಲ್ಲಿ

ಕಾಂಗ್ರೆಸ್ ಘಟನೆಯ ತಿದ್ದುಪಡಿ ಸಂಸ್ಥಾನಗಳ ಪರಿಷತ್ತು.

ಹಿಂದೀಯರ ಪಾಡು ನಾಯಿಪಾಡು

ಗ್ವಿಡೆಲ್ಲೋ ರಾಣಿಯ ಬಿಡುಗಡೆ ಸಾಧ್ಯವೆ?

ಓಬಿದುಲ್ಲಾ ಖಾನರಿಗೆ ಕಠಿಣ ಶಿಕ್ಷೆ

ಸಂಸ್ಥಾನಗಳಲ್ಲಿ ಏಕರೀತಿಯ ಚಳವಳವು ಅಸಾಧ್ಯ

ಮಹಾತ್ಮಾಗಾಂಧಿಯವರು ಬೊಂಬಾಯಿಯಲ್ಲಿ ಮುಖ್ಯವಾಗಿ ಸಂಸ್ಥಾನಗಳ ಸಮಸ್ಯೆಯ ಪರಿಹಾರವೆಂಬ ಗಾಢಾಲೋಚನೆಯಲ್ಲಿರುವರು. ತಿರುವಾಂಕೂರು, ಕರ್ನಾಟಕ ಹೈದರಾಬಾದು ಮತ್ತು ಒರಿಸ್ಸಾ ಸಂಸ್ಥಾನಗಳ ಪರವಾಗಿ ಬೇರೆ ಬೇರೆ ಡೆಪ್ಯುಟೇಶನುಗಳು ಅವರನ್ನು ಭೇಟಿಮಾಡಿ ಸಂಭಾಷಿಸಿರುವವು. ಎಲ್ಲಾ ಸಂಸ್ಥಾನಗಳಲ್ಲಿಯೂ ಒಂದೇ ರೀತಿಯ ಚಳವಳವನ್ನಾರಂಭಿಸುವದು ಅಸಾಧ್ಯವೆಂದೂ, ಅವುಗಳ ಪರಿಸ್ಥಿತಿಯಲ್ಲಿ ಭಿನ್ನತೆಯಿರುವುದರಿಂದ ಸಂದರ್ಭನೋಡಿ ಒಪ್ಪಂದ ಯತ್ನ, ಖಾಸಗೀ ಸತ್ಯಾಗ್ರಹ, ಸಾರ್ವಜನಿಕ ಸತ್ಯಾಗ್ರಹ ಮೊದಲಾದ ವಿವಿಧೋಪಾಯಗಳನ್ನನುಸರಿಸಬೇಕಾಗಿರುವದೆಂದೂ ಗಾಂಧಿಯವರು ಸೂಚಿಸಿರುವರು. ತಲ್ಚೆರ್ ಸಂಸ್ಥಾನದ ಪ್ರಶ್ನೆಯು ಹೆಚ್ಚಿನ ಪ್ರಾಮುಖ್ಯತೆ ಪಡೆದಿದೆ. ತಿರುವಾಂಕೂರಿನಲ್ಲಿ ರಾಜಿಯಿಂದ ತೀರ್ಮಾನಿಸಬಹುದೆಂದು ಗಾಂಧಿಯವರ ನಿರೀಕ್ಷೆ.

ಹಿಂದುಸ್ಥಾನದಲ್ಲಿರುವ ವಿದೇಶೀಯರು

ಭಾರತದಲ್ಲಿರುವ ಪರದೇಶೀಯರ ಸಂಖ್ಯೆ ಕಳೆದ 1931ನೇ ಖಾನೇಶುಮಾರಿಯ ಪ್ರಕಾರ 128,000 ಇತ್ತು. ಈಗ ಅದು ಬಹಳವಾಗಿ ಬೆಳೆದುಹೋಗಿರುವದಂತೆ. ಯುದ್ಧ ಸಂಭವಿಸಿದರೆ ಇವರಲ್ಲಿ ಕೆಲವರಿಂದ ಅಪಾಯಗಳುಂಟಾಗುವ ಸಂಭವವಿದೆ. ಅದಕ್ಕಾಗಿಯೇ ಕಳೆದ ಕೇಂದ್ರ ಎಸೆಂಬ್ಲಿಯ ಅಧಿವೇಶನದಲ್ಲಿ ಒಂದು ಮಸೂದೆಯು ಮಂಜೂರಾಗಿತ್ತು. ಈ ಕಾನೂನಿಗನುಸಾರವಾಗಿ ವಿದೇಶೀಯರೆಲ್ಲರ ರಿಜಿಸ್ಟ್ರಿಯನ್ನಿಡುವ ನಿರ್ಬಂಧದಲ್ಲಿ ಇಂಡಿಯಾ ಸರಕಾರವಿದೆ.

ಪ್ರಾಂತಿಕ ಮಂತ್ರಿಗಳ ಖಂಡನೆಯು ರಾಜದ್ರೋಹವಲ್ಲ

ಬಂಗಾಳ ಮಂತ್ರಿಮಂಡಲವನ್ನು ಕಠಿಣವಾಗಿ ಟೀಕಿಸಿದ 'ಬಸುಮತಿ' ಎಂಬ ದೈನಿಕ ಪತ್ರಿಕೆಯ ಮೇಲೆ ನಡೆದಿದ್ದ ರಾಜದ್ರೋಹದ ಖಟ್ಲೆಯ ಕುರಿತು ತೀರ್ಮಾನ ನೀಯುತ್ತಾ ಕಲ್ಕತ್ತಾ ಹೈಕೋರ್ಟಿನವರು ಎ. ಪಿ. ಸಿ. ಯ 17 ನೆ ಕಲಮಿನನ್ವಯ ಪ್ರಾಂತಿಕ ಮಂತ್ರಿಗಳು ಎಗ್ಜಿಕ್ಯೂಟಿವ್ ಸರಕಾರದ ಒಂದು ಭಾಗವಾಗುವುದಿಲ್ಲವಾದ್ದರಿಂದ ಅವರ ಮೇಲಿನ ಟೀಕೆಯು ರಾಜದ್ರೋಹವಾಗುವುದಿಲ್ಲವೆಂದು ಉಲ್ಲೇಖಿಸಿರುವರು.

ಕೆಲಸಗಾರರಿಗೆ ಸುಭಾಸರ ಬುದ್ಧಿವಾದ

ಡೆಕ್ಕಾದ ಕೆಲಸಗಾರರ ಪ್ರಚಂಡ ಸಭೆಯೊಂದರಲ್ಲಿ ಭಾಷಣವೀಯುತ್ತಾ ಶ್ರೀ. ಸ. ಭಾಸಚಂದ್ರ ಭೋಸರು ಹಿಂದುಸ್ಥಾನದ ಔದ್ಯೋಗಿಕ ಸಂಸ್ಥೆಗಳ ಮಾಲೀಕರು ವಿಶೇಷ ಕಷ್ಟದಿಂದ ಕೆಲಸ ಸಾಗಿಸಬೇಕಾಗಿರುವುದರಿಂದ, ದೇಶೀಯ ಉದ್ಯೋಗಕ್ಕೆ ಧಕ್ಕೆ ತಗಲುವಂತಹ ಅನುಕೂಲತೆಗಳನ್ನು ಕೆಲಸಗಾರರಪೇಕ್ಷಿಸಬಾರದೆಂದೂ, ಮಾಲೀಕರಿಗೆ ಮುಂದಾಗಿ ಅವಕಾಶವೀಯದೆ ಮುಷ್ಕರವನ್ನಾರಂಭಿಸಕೂಡದಾಗಿಯೂ ಬುದ್ಧಿವಾದ ಹೇಳಿದರು.

ಆಶ್ರಿತಸಂಸ್ಥಾನಗಳಿಗೆ ಬ್ರಿಟಿಷ್ ಸರಕಾರದ ಸೂಚನೆಗಳು

ಕಾಮನ್ಸ್ ಸಭೆಯಲ್ಲಿ ಪ್ರಶ್ನೆ ಬಂದಾಗ ಕರ್ನಲ್ ಮ್ಯೂರ್ ಹೆಡ್ ಸಾಹೇಬರು ಹೀಗೆಂದರು—"ಸರಕಾರವು ಹಿಂದೀಸಂಸ್ಥಾನಗಳಿಗೆ ಫೆಡರೇಶನಿನ ಕುರಿತು ತನ್ನ ಸೂಚನೆಗಳನ್ನು ಕಳೆದ ಜನವರಿಯಲ್ಲಿ ಕಳುಹಿಸಿಕೊಟ್ಟಿದೆ. ಆರು ತಿಂಗಳುಗಳೊಳಗೆ ಉತ್ತರವನ್ನಪೇಕ್ಷಿಸಿದೆ. ಉತ್ತರ ಬಂದೊಡನೆ ಆ ಕುರಿತು ಶ್ವೇತಪತ್ರವೊಂದನ್ನು ಹೊರಡಿಸಲಾಗುವುದು."

ಓಬೀದುಲ್ಲಾ ಖಾನರಿಗೆ ಕಠಿಣ ಶಿಕ್ಷೆ

ಗಡಿನಾಡಿನ ಪ್ರಧಾನ ಡಾ| ಖಾನರ ಪುತ್ರ ಓಬೀದುಲ್ಲಾಖಾನರ ವಿಚಾರಣೆಯು ಇದೇ ತಾ. 9ರಲ್ಲಿ ಪೇಶಾವರದಲ್ಲಿ ನಡೆದು ಅವರಿಗೆ ಒಂದೂವರೆ ವರುಷದ ಕಠಿಣಶಿಕ್ಷೆ ವಿಧಿಸಲ್ಪಟ್ಟಿದೆ.

ಸಂಯುಕ್ತ ಪ್ರಾಂತ್ಯದಲ್ಲಿ ಜೈಲಧಿಕಾರಿಗಳ ಶಾಲೆ

ಜೈಲು ವಿಚಾರಣಾ ಸಮಿತಿಯ ವರದಿಗನುಸಾರವಾಗಿ ಸಂಯುಕ್ತಪ್ರಾಂತ್ಯದ ಸರಕಾರವು ಜೈಲರರ ಮತ್ತು ವಾರ್ಡರರ ತರಬೇತಿಗಾಗಿ ಶಾಲೆಯೊಂದನ್ನು ತೆರೆಯುವರೆ 1,20,000ರೂ. ಗಳನ್ನು ಮಂಜೂರುಮಾಡಿರುವುದು. ಈ ಶಾಲೆಯಲ್ಲಿ ಎಲ್ಲಾ ಜೈಲುಗಳಿಂದ 1825 ಮಂದಿ ಜೈಲರರು ಮತ್ತು ವಾರ್ಡರರನ್ನು ಬರೆಸಿ ಶಿಕ್ಷಣಕೊಡಲಾಗುವುದು.

ಗ್ವಿಡೆಲ್ಲೋ ರಾಣಿಯ ಬಿಡುಗಡೆ ಸಾಧ್ಯವೆ?

ಅಸ್ಸಾಮಿನ ಸಿಲ್ಹೆಟ್ ಪ್ರಾಂತ್ಯದ ಪರ್ವತರಾಣಿಯೆಂದು ಹೆಸರಾಂತ ಕಳೆದ ಚಳವಳದ ಸಮಯ ಬ್ರಿಟಿಷ್ ಸರಕಾರದ ವಿರುದ್ಧ ಬಂಡಾಯವೆಬ್ಬಿಸಿ ಮರಣಾವಧಿ ಶಿಕ್ಷೆಗೊಳಗಾಗಿದ್ದ ನಾಗರಾಣಿ ಗ್ವಿಡೆಲ್ಲೋ ಳನ್ನು ಬಿಡುಗಡೆಪಡಿಸಬೇಕೆಂಬ ಚಳವಳವೆದ್ದಿದೆ. ಅಸ್ಸಾಮಿನ ಕಾಂಗ್ರೆಸ್ ಮಂತ್ರಿಗಳು ಆ ಕುರಿತು ತಮ್ಮ ನಿಸ್ಸಹಾಯತೆಯನ್ನು ಸೂಚಿಸಿ ಕೇಂದ್ರ ಸರಕಾರದ ಇಚ್ಛೆಯೆಂದಿರುವರು. ಅಲ್ಲಿಯ ಮಹಿಳಾ ಸಭೆಯವರೂ ನಿಖಿಲ ಮಣಿಪುರಿ ಮಹಾಸಭೆಯವರೂ ಬಿಡುಗಡೆಗಾಗಿ ಒತ್ತಾಯಪೂರ್ವಕ ಕೇಳಿಕೊಂಡಿರುವರು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮುಂದೆಯೂ ಈ ಪ್ರಶ್ನೆ ಬರಲಿರುವದು. ಈಗ ಮಣಿಪುರ ಸಂಸ್ಥಾನ ದರ್ಬಾರಿನ ಅಧ್ಯಕ್ಷ ಮಿ. ಮೆಕ್ಡೊನಾಲ್ಡ್ ಐ. ಸಿ. ಯಸ್. ಇವರು ರಾಣಿ ಗ್ವಿಡೆಲ್ಲೋ ಕೊಲೆಗಾತಿಯೆಂದೂ, ಅವಳ ಬಿಡುಗಡೆಗಾಗಿ ಚಳವಳವೆಬ್ಬಿಸುವದು ನಿಷ್ಫಲವೆಂದೂ ಮಹಾಸಭೆಗೆ ಪತ್ರ ಬರೆದು ತಿಳಿಸಿರುವರು.

ಹೊರ ದೇಶಗಳಲ್ಲಿ ಹಿಂದೀಯರ ಪಾಡು ನಾಯೀ ಪಾಡು

ಬೊಂಬಾಯಿಯ ಅಖಿಲಭಾರತ ವ್ಯಾಪಾರೀ ಸಂಸ್ಥೆಗಳವರು ಪರದೇಶಗಳಲ್ಲಿ ಅದರಲ್ಲೂ ಬ್ರಿಟಿಷರ ವಸಾಹತುಗಳಲ್ಲಿ ಹಿಂದೀಯರ ಸ್ಥಿತಿಯು ದಿನ ಹೋದಂತೆ ಅವನತಿಗಿಳಿಯುತ್ತಿರುವದೆಂದೂ, ಇದಕ್ಕೆ ಬ್ರಿಟಿಷ್ ಸಾಮ್ರಾಜ್ಯ ಸರಕಾರದ ಅಸಡ್ಡೆ ಮತ್ತು ಇಂಡಿಯಾ ಸರಕಾರದ ದೌರ್ಬಲ್ಯವೇ ಕಾರಣವೆಂದೂ ಹೀಗೆಯೇ ಮುಂದರಿದಲ್ಲಿ ಭಾರತ ಮತ್ತು ವಸಾಹತು ಆಫೀಸುಗಳೊಳಗೆ ಶಾಂತಿದಾಯಕ ಸಂಬಂಧವುಳಿಯುವಂತಿಲ್ಲವೆಂದೂ ಪ್ರಕಟಿಸಿರುವರು.

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದದು ಮೈಸೂರು ಸೇಂಡಲ್ ಸೋಪು ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ..

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

ದಿಗ್ಬೋಯಿ ಮುಷ್ಕರ

ದಿಗ್ಬೋಯಿಯ ಆಸ್ಸಾಮ್ ಎಣ್ಣೆ ಗಿರಣಿಯಲ್ಲಿ ದೀರ್ಘ ಕಾಲದಿಂದ ಮುಷ್ಕರ ನಡೆಯುತ್ತಿರುವದಷ್ಟೆ. ಅದರ ರಾಜೀ ಯತ್ನಕ್ಕಾಗಿ ಬಾಬೂ ರಾಜೇಂದ್ರ ಪ್ರಸಾದರು ಕಲ್ಕತ್ತಕ್ಕೆ ಹೋಗಿ ಅಸ್ಸಾಮಿನ ಮಂತ್ರಿಗಳೊಡನೆಯೂ ಗಿರಣಿ ಮಾಲಕರ ಮತ್ತು ಕೆಲಸಗಾರರ ಪ್ರತಿನಿಧಿಗಳೊಡನೆಯೂ ಸಂಭಾಷಿಸಿರುವರು. ಕಲ್ಕತ್ತಾದಲ್ಲಿ ಈ ಸಂಬಂಧದಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಶ್ರೀ. ಎಮ್. ಎನ್. ರೋಯಿಗಳು ಕಾಂಗ್ರೆಸ್ ಮಂತ್ರಿಗಳ ಧೋರಣೆಯನ್ನು ಟೀಕಿಸಿ ಭಾಷಣವಿತ್ತರು.

ಕಾಂಗ್ರೆಸ್ ಘಟನೆಯ ತಿದ್ದುಪಡಿ

ಬೊಂಬಾಯಿಯಲ್ಲಿ ಸೇರಿದ್ದ ಕಾಂಗ್ರೆಸ್ ಸಂಘಟನಾ ಉಪಸಮಿತಿಯು ತನ್ನ ಕಾರ್ಯಗಳನ್ನು ಮುಗಿಸಿರುವದು. ಕಾಂಗ್ರೆಸಿನ ಘಟನೆಯಲ್ಲಿ ಹಲವು ತಿದ್ದುಪಡಿಗಳನ್ನದು ಸೂಚಿಸಿರುವದು. ಮುಖ್ಯವಾಗಿ ಕಾಂಗ್ರೆಸ್ ಮೆಂಬರರ ಕಾಯಂ ರಿಜಿಸ್ಟ್ರಿಯೊಂದನ್ನಿಡಬೇಕೆಂದೂ ಒಮ್ಮೆ ಮೆಂಬರನಾದವನು ತನ್ನ ಹಣ ಮತ್ತು ರಿಜಿಸ್ಟ್ರಿಗೆ ಸಹಿ ಹಾಕಿ ಕಾಯಂ ಮೆಂಬರನಾಗಿ ಇರಬೇಕೆಂದೂ, ಮೂರು ವರ್ಷ ರಿಜಿಸ್ಟ್ರಿಯಲ್ಲಿಲ್ಲದವರನ್ನು ಅಧಿಕಾರಸ್ಥಾನಕ್ಕೆ ಆರಿಸಕೂಡದೆಂದೂ ಸೂಚನೆಯಿದೆ.

ನೇಶನಲ್ ಪ್ಲೇನಿಂಗ್ ಕಮಿಟಿ

ರಾಷ್ಟ್ರೀಯ ಉದ್ಯೋಗಾಭಿವೃದ್ಧಿ ಮತ್ತು ಸಂಘಟನೆಗಾಗಿ ಕಾಂಗ್ರೆಸಿನಿಂದ ಸ್ಥಾಪಿಸಲ್ಪಟ್ಟ ಸಮಿತಿಯು ಮುಂಬಯಿಯಲ್ಲಿ ಕೂಡಿರುವುದು. ಪಂಡಿತ ನೆಹರುಗಳ ಸುದೀರ್ಘ ವಿವರಣೆಯೊಂದನ್ನು ಸಮಿತಿಯು ಪರ್ಯಾಲೋಚಿಸಿರುವುದು.

ಸಂಸ್ಥಾನಗಳ ಪರಿಷತ್ತು

ಅಖಿಲ ಭಾರತದ ದೇಶೀಯ ರಾಜರುಗಳ ಪರಿಷತ್ತು ಬೊಂಬಾಯಿಯ ತಾಜಮಹಾಲು ಹೋಟೆಲಿನಲ್ಲಿ ತಾ. 10ಕ್ಕೆ ನವಾನಗರದ ಜಾಮ್ ಸಾಹೇಬರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲ್ಪಟ್ಟಿತು. ಸುಮಾರು 50 ಮಂದಿ ಅರಸರೂ, 50 ಮಂದಿ ರಾಜಪ್ರತಿನಿಧಿಗಳೂ, ಸುಮಾರು 100 ಮಂದಿ ಸಂಸ್ಥಾನಿಕ ದಿವಾನರುಗಳೂ ಹಾಜರಿದ್ದರು. ಜಾಮ್ ಸಾಹೇಬರು ತನ್ನ ಪ್ರಥಮ ಭಾಷಣದಲ್ಲಿ ಸಂಸ್ಥಾನಿಕರೆಲ್ಲಾ ಫೆಡರೇಶನಿನ ಕುರಿತು ಒಮ್ಮತದಿಂದ ಏಕರೀತಿಯ ಹಾದಿಯನ್ನನುಸರಿಸಬೇಕೆಂದು ಹೇಳಿದರು.

ತಿರುವಾಂಕೋರು ಶಾಂತವಾಗುವದೆ?

ಮಹಾತ್ಮಾಗಾಂಧಿಯವರ ಸೂಚನೆಯಂತೆ ತಿರುವಾಂಕೂರಿನಲ್ಲಿ ಸತ್ಯಾಗ್ರಹವನ್ನು ನಿಲ್ಲಿಸಿ ಶಾಂತೋಪಾಯಗಳಿಂದ ಸರಕಾರದೊಡನೆ ವ್ಯವಹರಿಸಿ, ಸುಧಾರಣೆಗಳನ್ನು ಪಡೆಯಲಾಗುವದೋ ನೋಡಬೇಕೆಂಬ ನಿರ್ಣಯವನ್ನು ತಿರುವಾಂಕೂರು ಕಾರ್ಯಕಾರೀ ಮಂಡಲವು ಮಾಡಿರುವದು.

ಚೀನದಲ್ಲಿ ಬ್ರಿಟಿಷರ ಮರಣ
ರಾಜರಾಣಿಯರು ಅಮೇರಿಕದಲ್ಲಿ!

ಸಬ್ ಮೆರಿನ್ ನೀರೊಳಗೇ

ಬ್ಯಾಂಕ್ ಗುಮಾಸ್ತನೊಬ್ಬನ
ಭಯಂಕರ ಕೊಲೆ

ಸ್ಪೈನಿನಿಂದ ಮರಳಿದವರಿಗೆ ಹಿಟ್ಲರನ ಸತ್ಕಾರ

ಇಂಗ್ಲಿಷ್-ಜಪಾನುಗಳೊಳಗೆ ವೈಮನಸ್ಸು
ಆಟದ ನೆವದಿಂದ ಹೋರಾಟವೇ?

ಸ್ಪೈನಿನಿಂದ ಮರಳಿ ಬಂದವರಿಗೆ ಹಿಟ್ಲರನ ಸತ್ಕಾರ

ಸ್ಪೈನ್ ಯುದ್ಧದಲ್ಲಿ ಭಾಗವಹಿಸಿ ಮರಳಿ ಬಂದ ಜರ್ಮನ್ ಸ್ವಯಂಸೇವಕರಿಗೆ ಬರ್ಲಿನಿನಲ್ಲಿ ಸಂಭ್ರಮದ ಸ್ವಾಗತ ದೊರೆಯಿತು. ಅವರ ಸ್ವಾಗತ ಸಭೆಯಲ್ಲಿ ಭಾಷಣವೀಯುತ್ತಾ ಹಿಟ್ಲರನು ಜನರಲ್ ಫ್ರಾಂಕೋವಿಗೆ ಬೆಂಬಲವಿತ್ತು ತಾನು ಯುರೋಪನ್ನು ಬೊಲ್ಶೆವಿಸಮಿನ ಧಾಳಿಯಿಂದ ಕಾಪಾಡಿದೆನೆಂದೂ, ಮಹಾಯುದ್ಧದ ನಂತರ ಮೊದಲನೇ ಬಾರಿ ಜಯ ಸಂಪಾದಿಸಿದ ಈ ತರುಣ ಜರ್ಮನರು ಜರ್ಮನಿಯ ಜಯಿಸುವ ಶಕ್ತಿಯನ್ನು ಲೋಕಕ್ಕೆ ಪ್ರದರ್ಶಿಸಿದರೆಂದೂ, ಹೇಳಿ ಬ್ರಿಟಿಷ್, ಫ್ರಾನ್ಸುಗಳ ಪತ್ರಿಕೆಗಳು, ಜರ್ಮನಿಯು ಸ್ಪೈನನ್ನು ಗೆಲ್ಲುವ ಇಚ್ಛೆಯಿಂದಿದೆಯೆಂಬ ಸುಳ್ಳು ಪ್ರಚಾರವನ್ನು ಮಾಡುತ್ತಿದ್ದದನ್ನು ಖಂಡಿಸಿ, ಅಂತಹ ಉದ್ದೇಶವು ವಸಾಹತುಗಳನ್ನು ಕದ್ದಿಟ್ಟುಕೊಂಡಿರುವ ರಾಷ್ಟ್ರಗಳಿಗೆ ಮಾತ್ರ ಒಪ್ಪತಕ್ಕದೆಂದು ಜರೆದಿರುವನು.

ಜಪಾನು ಕಟ್ಟುಗೊಳಗಾಗಲು ಸಿದ್ಧವಿಲ್ಲ

ಜಪಾನು ಸದ್ಯಕ್ಕೆ ಇಟಲಿ, ಜರ್ಮನಿಗಳೊಡನೆ ಪ್ರತ್ಯಕ್ಷ ಒಪ್ಪಂದ ಮಾಡಿಕೊಂಡು ನಿಯಮಬದ್ಧವಾಗಿರಲು ತಯಾರಿಲ್ಲ. ಆದರೆ ರಶ್ಯಾವು ಯುದ್ಧಕ್ಕಿಳಿಯುವದಾದರೆ ತಾವೂ ಅನ್ಯೋನ್ಯದೆಡೆಯಿಂದ ಸಿದ್ಧರಾಗುವೆವು ಎಂದು ಜಪಾನಿನ ವಿದೇಶಾಂಗ ಮಂತ್ರಿ ಅರಿಟಾರವರು ರೋಮ್, ಬರ್ಲಿನುಗಳಿಗೆ ತಿಳಿಸಿರುವರು

ಫಿನ್‌ಲೇಂಡಿನ ತಟಸ್ಥ ಧೋರಣೆ

"ನಾವು ಅಪೇಕ್ಷಿಸದೆ ನಮ್ಮ ಸಹಾಯಕ್ಕೆಂದು ಯಾರಾದರೂ ಮುಂದೆ ಬಂದರೆ ಅವರನ್ನು ಆಕ್ರಮಣಗಾರರೆಂದು ಪರಿಗಣಿಸಲ್ಪಡುವೆವಲ್ಲದೆ ಹೊರಗಟ್ಟುವೆವು" ಎಂದು ಫಿನ್‌ಲೇಂಡಿನ ವಿದೇಶ ಸಚಿವ ಎಮ್. ಉರ್ಕೋರವರು ಉದ್ಘೋಷಿಸಿರುತ್ತಾರೆ.

ತಟಸ್ಥ ಪಕ್ಷ

ಲೆಟವಿಯಾ ಮತ್ತು ಲಿಸ್ತೋನಿಯಾ ರಾಜ್ಯಗಳೊಳನೆ ಆಕ್ರಮಣ ವಿರೋಧದ ಒಪ್ಪಂದವನ್ನು ಹಿಟ್ಲರನು ಮಾಡಿಕೊಂಡಿರುವನು. ಈ ತ್ರೈರಾಷ್ಟ್ರಗಳೊಳಗಿನ ಕರಾರು ಜೂನ್ ತಾ 7ರಲ್ಲಿ ಬರ್ಲಿನಿನಲ್ಲಿ ಸಹಿ ಮಾಡಲ್ಪಟ್ಟಿದೆ.

ಯೆಹೂದಿಗಳ ಆತ್ಮಹತ್ಯಾ ಪ್ರಯತ್ನ

ಜರ್ಮನಿಯಿಂದ ಹೊರಗಟ್ಟಲ್ಪಟ್ಟ ಯೆಹೂದಿಯರು ಅಲೆಕ್ಸಾಂಡ್ರಿಯಾ ಎಂಬಲ್ಲಿ ನಿಲ್ಲಲಿಚ್ಛಿಸಿದಾಗ ಅನುಮತಿ ದೊರೆಯದುದರಿಂದ ಎಂಟು ಮಂದಿ ವಿಷ ತೆಗೆದುಕೊಂಡರು; ಆದರೆ ಅವರನ್ನುಳಿಸಿ ಯೆಹೂದೀ ಆಸ್ಪತ್ರೆಯೊಳಗೆ ಸೇರಿಸಲಾಯಿತು

ಮೋಸ್ಕೋವಿನ ಇಂಗ್ಲಿಷ್ ಮಂಡಲ

ರಶ್ಯಾ ಇಂಗ್ಲೆಂಡ್ ಒಪ್ಪಂದಕ್ಕಾಗಿ ಇಂಗ್ಲೆಂಡಿನ ವಿದೇಶಾಂಗ ಕಾರ್ಯಾಲಯದ ಪ್ರತಿನಿಧಿಗಳ ಮಂಡಲವನ್ನು ಮೋಸ್ಕೋ ನಗರಕ್ಕೆ ಕಳುಹಿಸಲಾಗಿದೆ. ಆಶ್ವಾಸನೆಯನ್ನು ಅಪೇಕ್ಷಿಸದ ಬಾಲ್ಟಿಕ್ ರಾಷ್ಟ್ರಗಳಿಗೆ ಅಭಯವೀಯುವದಸಾಧ್ಯವೆಂದೂ ರಶ್ಯಾಸಂಧಾನ ಕೈಗೂಡುವ ಸಂಭವವೇ ಅಧಿಕನೆಂದೂ ಚೇಂಬರ್ಲೇನರು ಪಾರ್ಲಿಮೆಂಟಿನಲ್ಲಿ ಹೇಳಿರುವರು ಮೋಸ್ಕೋ ಮಂಡಲದ ನಾಯಕರಾಗಿ ಮಿ. ವಿಲಿಯಮ್ ಸ್ಟ್ರೇಂಜ್ ಇವರು ತೆರಳಿರುವರು. ಇತ್ತ ಬಾಲ್ಟಿಕ್ ಸಂಸ್ಥಾನಗಳ ಪೈಕಿ ಲೇಟ್ವಿಯಾ ಮತ್ತು ಅಸ್ಟೋನಿಯಾ ರಾಜ್ಯಗಳೊಡನೆ ಹಿಟ್ಲರನು ಒಪ್ಪಂದ ಮಾಡಿಕೊಂಡಾಗಿದೆ.

ಚೀನದಲ್ಲಿ ಬ್ರಿಟಿಷರ ಮರಣ

ಚೀನದ ಮಾಟಿಂಗ್ ಎಂಬಲ್ಲಿನ ಬ್ರಿಟಿಷರ ಹತ್ತಿಗಿರಣಿಯೊಂದರಲ್ಲಿದ್ದ ಆರ್. ಎಮ್. ಟಿಂಕ್ಲರ್ ಎಂಬವನು ಜಪಾನರಿಂದ ದಸ್ತಗಿರಿಮಾಡಲ್ಪಟ್ಟು ಮರಣಹೊಂದಿರುವನು. ಅದೇ ಮಿಲ್ಲಿನ ಮತ್ತೊಬ್ಬ ಇಂಗ್ಲಿಷರವನೂ ಮಡಿದಿರುವನು. ಈ ಗಿರಣಿಯಿದ್ದ ಪ್ರದೇಶವು ಜಪಾನರ ವಶದಲ್ಲಿದೆ; ಆದಿಯಲ್ಲಿ ಅಲ್ಲಿ ಗಿರಣಿ ರಕ್ಷಣೆಗೆ ಬ್ರಿಟಿಷ್ ಸೈನ್ಯವಿತ್ತು. ಜಪಾನರು ಆಶ್ವಾಸನೆ ಬರೆದುಕೊಟ್ಟುದರಿಂದ ಆ ಸೈನ್ಯವನ್ನು ಹಿಂದೆಗೆಯಲಾಗಿತ್ತು. ಆದರೆ ಜಪಾನರು ಕೆಲಸಗಾರರನ್ನು ಮುಷ್ಕರಕ್ಕೆ ಪ್ರೇರೇಪಿಸಿ, ಗಲಭೆಯೆಬ್ಬಿಸುವಂತೆ ಮಾಡಿ ಬ್ರಿಟಿಷ್ ಪ್ರಜೆಗಳ ಮರಣಕ್ಕೆ ಕಾರಣರಾಗಿರುವದರಿಂದ ಬ್ರಿಟಿಷ್ ಸರಕಾರವು ಆ ಕುರಿತು ತೀವ್ರ ನಿಷೇಧ ಸೂಚಿಸಿರುವದಲ್ಲದೆ, ಕಠಿಣ ಧೋರಣೆಯನ್ನನುಸರಿಸುವ ಲಕ್ಷಣಗಳು ಕಾಣುತ್ತಿವೆ.

ಬ್ರಿಟಿಷರು ಸಂಧಾನಾತುರರು!

ಪಾರ್ಲಿಮೆಂಟಿನ ಪ್ರಭು ಮಂದಿರದಲ್ಲಿ ವಿದೇಶ ಸಂಬಂಧದ ಕುರಿತು ವಿದೇಶಾಂಗ ಮಂತ್ರಿ ಲೋರ್ಡ್ ಹಲಿಫೇಕ್ಸರು ಈ ರೀತಿ ಜಾಹೀರು ಪಡಿಸಿದರು. "ಜರ್ಮನಿಯ ಅಭಿವೃದ್ಧಿಯಿಂದ ಯುರೋಪಿಗೆ ಹಿತವಿದೆ. ನಮ್ಮ ಯಥಾರ್ಥ ಉದ್ದೇಶವೆಂದರೆ ಲೋಕಶಾಂತಿಗಾಗಿ ನಮ್ಮ ವರ್ಚಸ್ಸನ್ನೆಲ್ಲ ಉಪಯೋಗಿಸುವದು. ಆದರೆ ರಾಷ್ಟ್ರಗಳ ಸ್ವಾತಂತ್ರ್ಯವು ಅನ್ಯಾಯವಾಗಿ ಅಪಹರಿಸಲ್ಪಟ್ಟ ಆ ಆಸೆಯ ದಿನಗಳು ದೂರವಾಗಿವೆ. ಮುಂದಕ್ಕೆ ಇಂತಹ ಆಕ್ರಮಣಗಳು ಬಲವಾಗಿ ತಡೆಗಟ್ಟಲ್ಪಡುವದು ಖಂಡಿತ. ರಾಷ್ಟ್ರಗಳ ಸ್ವಾತಂತ್ರ್ಯವು ಮನ್ನಿಸಲ್ಪಟ್ಟರೆ ನಮ್ಮ ಆರ್ಥಿಕ ಕ್ಷೇತ್ರಗಳನ್ನು ಸಾರ್ವತ್ರಿಕವಾಗಿ ತೆರೆದಿಡಲು ನಾವು ಸಿದ್ಧರಿರುವದಷ್ಟೇ ಅಲ್ಲ, ಆ ಕುರಿತು ಆತುರದಿಂದಿರುವೆವು."

'ಥೆಟಿಸ' ಸಬ್ ಮೆರಿನ್ ನೀರಿನೊಳಗೇ ಇರಬೇಕಂತೆ!

ಲೋಕಕ್ಕೇ ಖೇದವನ್ನುಂಟುಮಾಡಿ ೯೯ ಜನರೊಟ್ಟಿಗೆ ಸಮುದ್ರದೊಳಕ್ಕೆ ಮುಳುಗಿ ಹೋದ ಸಬ್ ಮೆರೀನ್ 'ಥೆಟಿಸ'ನ್ನು ಈ ವರೆಗೂ ಮೇಲಕ್ಕೆತ್ತಲಾಗಲಿಲ್ಲ. ಅದನ್ನು ಹಾಗೆಯೇ ಸಮುದ್ರದಲ್ಲಿ ಬಿಡಬೇಕೆಂದೂ, ಸಮುದ್ರ ಸಂಚಾರಕರಿಗೆ ಇದು ಕಾರ್ಯ ಸಹಜ ಮರಣವೆಂದೂ ತಮ್ಮ ಬಂಧುಗಳ ಹೆಣಗಳಿಗೆ ಇನ್ನು ತೊಂದರೆ ಕೊಡಬಾರದೆಂದೂ ಸತ್ತವರ ಬಂಧುಗಳು ವಿನಂತಿಸಿಕೊಂಡಿರುವರು. 'ಥೆಟಿಸ' ಅಪಘಡದ ಕೂಲಂಕಷ ವಿಚಾರಣೆಯು ನಡೆಯಲಿರುವದು.

ರಾಜರಾಣಿಯರು ಅಮೇರಿಕದಲ್ಲಿ

ಇಂಗ್ಲೆಂಡಿನ ಚಕ್ರವರ್ತಿ, ಚಕ್ರವರ್ತಿನಿಯರು ಕೆನಡಾದ ಪ್ರಯಾಣವನ್ನು ಮುಗಿಸಿಕೊಂಡು ಅಮೇರಿಕಕ್ಕೆ ತೆರಳಿ ಅತಿ ವಿಜೃಂಭಣೆಯಿಂದ ಸ್ವಾಗತ ಪಡೆದಿರುವರು. ಪ್ರೆಸಿಡೆಂಟ್ ರೂಸ್‌ವೆಲ್ಟರು ರಾಜದಂಪತಿಗಳನ್ನು ಸ್ವಾಗತಿಸಿ, ಇಂಗ್ಲೆಂಡು ಅಮೇರಿಕಗಳೊಳಗೆ ಇರುವ ಸ್ನೇಹವನ್ನು ವರ್ಣಿಸಿ ಮುಂದಕ್ಕೂ ಇದೇ ಸೌಹಾರ್ದತೆಯು ಮುಂದುವರಿಯುವದೆಂಬ ಭರವಸೆಯಿತ್ತರು. ಚಕ್ರವರ್ತಿಗಳೂ ಅದೇ ಅರ್ಥದ ಉತ್ತರವಿತ್ತರು. ರಾಜದಂಪತಿಗಳ ಆಗಮನದಿಂದ ಅಮೇರಿಕವಿಡೀ ಉಲ್ಲಾಸಗೊಂಡಿದೆ.

ಇಂಗ್ಲಿಷು-ಜಪಾನುಗಳೊಳಗೆ ವೈಮನಸ್ಸು

ಚೀನದ ಪೂಟಿಂಗಿನಲ್ಲಿರುವ ಬ್ರಿಟಿಷ್ ಸೊತ್ತು ರಕ್ಷಣೆ, ಬ್ರಿಟಿಷ್ ವಿರುದ್ಧ ಪ್ರಚಾರಕ್ಕೆ ತಡೆ, ಬ್ರಿಟಿಷ್ ಮಿಲ್ಲುಗಳಲ್ಲಿ ಚೀನೀಯರನ್ನೆತ್ತಿಕಟ್ಟುವ ಹಂಚಿಕೆಗೆ ತಡೆ ಮೊದಲಾದುವುಗಳನ್ನಪೇಕ್ಷಿಸಿ ಶಾಂಘಾಯಿಯಲ್ಲಿರುವ ಬ್ರಿಟನ್ ರಾಯಭಾರಿಯು ಜಪಾನರಿಗೆ ಒತ್ತಾಯದ ಸೂಚನೆ ಕಳುಹಿರುವನು. ಬ್ರಿಟಿಷರ ಕೊಲೆಗಾಗಿ ತೀವ್ರ ಖಂಡನೆಯನ್ನು ಜಪಾನರಿಗೆ ಕಳುಹಿಸಲಾಗಿದೆ. ಕರ್ನಲ್ ಸ್ಪೀಯರ್ ಎಂಬವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದೂ ಬ್ರಿಟಿಷರು ಕೇಳಿರುವರು. ಟಿಯೆಂಟ್ಸಿನ್ ಎಂಬಲ್ಲಿಯ ಬ್ರಿಟಿಷ್ ಕ್ಷೇತ್ರದಲ್ಲಿರುವ ಇಂಗ್ಲಿಷ್ ಅಧಿಕಾರಿಗಳಿಗೆ, ಅಲ್ಲಿರುವರೆಂದು ಊಹಿಸಲ್ಪಟ್ಟಿರುವ ನಾಲ್ಕು ಮಂದಿ ಚೀನೀ ಪ್ರಮುಖರನ್ನು ಎರಡು ದಿನಗಳೊಳಗೆ ಒಪ್ಪಿಸದಿದ್ದಲ್ಲಿ ಬ್ರಿಟಿಷ್ ಕ್ಷೇತ್ರವನ್ನು ನುಗ್ಗುವೆವೆಂದು ಬೆದರಿಕೆ ಹಾಕಿರುವರು. ಬ್ರಿಟಿಷರಾ ಬೆದರಿಕೆಗೆ ಸೊಪ್ಪು ಹಾಕದೆ ಹೋದುದರಿಂದ ಈ ಕುರಿತು ತಾವು ತಮ್ಮ ಇಚ್ಛೆಯಂತೆ ವರ್ತಿಸಲಿರುವೆವೆಂದು ಜಪಾನರನ್ನುತ್ತಾರೆ. ಟಿಂಕ್ಲರನ ಮರಣದ ಜವಾಬ್ದಾರಿಯನ್ನು ಜಪಾನರ ಮೇಲೆ ಹೊರಿಸಿ ಬ್ರಿಟಿಷರು, ಆ ಕುರಿತು ನಿಶ್ಚಲ ವಿರೋಧ ವಹಿಸಿರುವರು.

ಆಟದ ನೆವದಿಂದ ಹೋರಾಟವೆ?

ಬರುವ ವಾರದಲ್ಲಿ ಡಾನ್ಸಿಗ್ ನಗರದಲ್ಲಾಗುವ ಆಟದ ಮಹೋತ್ಸವದ ನೆವದಿಂದ ಜರ್ಮನಿಯ 40ಸಾವಿರ ಪ್ರಶ್ಯನ್ 'ಸ್ಟೋರ್ಮ್ ಟ್ರೂಪ' ದಳವು ಅಲ್ಲಿಗೆ ಹೋಗಲಿರುವದು. ಪ್ರಚಾರ ಮಂತ್ರಿ ಡಾ। ಗೋಬೆಲ್ಸನೂ ತೆರಳಲಿರುವನು. ಪೋಲೇಂಡ್ ಸರಕಾರವು ಈ ಸೈನ್ಯ ಪ್ರವೇಶಕ್ಕೆ ತಡೆಯೊಡ್ಡಿದಲ್ಲಿ ವಿಷಮ ಪರಿಸ್ಥಿತಿಯೇಳಬಹುದೆಂದು ನಂಬಲಾಗಿದೆ

ಬ್ಯಾಂಕ್ ಗುಮಾಸ್ತನೊಬ್ಬನ ಭಯಂಕರ ಕೊಲೆ

ಕೋಕನಾಡದಲ್ಲಿರುವ ಇಂಪೀರಿಯಲ್ ಬ್ಯಾಂಕಿನ ಶಾಖೆಯೊಂದರಲ್ಲಿ ಗುಮಾಸ್ತನಾಗಿದ್ದ ಸುಬ್ಬರಾಯನೆಂಬವನು ತನ್ನ ಮನೆಯ ಮಾಳಿಗೆಯಲ್ಲಿ ಮಲಗಿದ್ದನು. ಅವನ ತಂದೆತಾಯಿಗಳು ಸಿನೇಮಕ್ಕೆ ಹೋಗಿದ್ದರು. ಸುಮಾರು ೩ಗಂಟೆ ರಾತ್ರಿ ಸಮಯ ಚೂರಿ, ಖಡ್ಗ ಮತ್ತು ಪಿಸ್ತೂಲು ಧರಿಸಿದ್ದ ಮೂರು ಮಂದಿ ಅವನ ಬಳಿಗೆ ಬಂದರು. ಅವರು ಗುರುತು ಸಿಕ್ಕದಂತೆ ಮುಖದ ಮೇಲೆ ವಸ್ತ್ರ ಧರಿಸಿಕೊಂಡಿದ್ದರು. ತಲೆಗೆ ಟೊಪ್ಪಿಯಿದ್ದಿತು. ಸುಬ್ಬರಾಯನು ಎಚ್ಚತ್ತು ಈ ದುಷ್ಟರನ್ನು ಇದಿರಿಸಲು ಮುಂದಾದನು. ಆದರೆ ಸ್ವಲ್ಪ ಸಮಯದಲ್ಲೇ ಅವನು ಹೆಣವಾಗಿ ಬಿದ್ದ. ಅಷ್ಟರಲ್ಲಿ ನೆರೆಕರೆಯವರು ಓಡಿಬಂದರು. ಅವರಲ್ಲಿ ಒಬ್ಬನು ಕೊಲೆಗಡಿಕರ ಮೇಲೆ

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906
CANARA BANK
LIMITED

ಅತ್ಯಂತ ಕಡಿಮೆ ಕ್ರಯ!

ಮಕ್ಕಳಿಗೆ ಅತ್ಯುಪಯುಕ್ತವಾದ
ಯಾವತ್ತೂ ಮಾಹಿತಿ ಮತ್ತು
ಕೋಷ್ಟಕಗಳನ್ನೊಳಗೊಂಡ ಟೀಚರ್
ಪಬ್ಲಿಷಿಂಗ್ ಕಂಪೆನಿಯವರಿಂದ
ಪ್ರಕಟಿಸಲ್ಪಟ್ಟ

ಮಗ್ಗಿ ಪುಸ್ತಕಗಳು

ಸಣ್ಣ ಮಗ್ಗಿ ಪುಸ್ತಕ 0-0-6
ದೊಡ್ಡ ಮಗ್ಗಿ ಪುಸ್ತಕ 0-1-0
ವ್ಯಾಪಾರಸ್ಥರಿಗೆ ಆತ್ಯಾಕರ್ಷಣೀಯ
ದರಗಳು!

ಪ್ರತಿಗಳಿಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಪುಟ ೧೧ರಿಂದ

ಗುಂಡು ಹಾರಿಸಿದ. ಇಬ್ಬರು ಅಪರಾಧಿಗಳು ತಪ್ಪಿಸಿಕೊಂಡು ಓಡುತ್ತಿರುವಾಗ ಸಿಕ್ಕಿಬಿದ್ದರು. ಈ ಸಮಯದಲ್ಲಿ ಪೋಲೀಸರು ಬಂದರು. ಅಪರಾಧಿಗಳನ್ನು ಬಂಧಿಸಿದರು. ಈ ಕುರಿತು ತನಿಖೆ ನಡೆಯುತ್ತಿದೆ.

ಯೆಹೂದಿಗಳ ಗತಿ ಜೆಕ್ಕರಿಗೂ!

ಬೊಹೇಮಿಯದಲ್ಲಿ ಜರ್ಮನಿ ಪೋಲಿಸು ಆಫೀಸರನೊಬ್ಬನನ್ನು ಗುಂಡಿಟ್ಟು ಕೊಲ್ಲಲಾಗಿದೆ. ಇದರಿಂದ ಜೆಕ್ಕರ ಮೇಲೆ ಜರ್ಮನರ ವಕ್ರದೃಷ್ಟಿ ಬಿದ್ದಿದೆ. ಕ್ಲಾಡ್ನೊ ಜಿಲ್ಲೆಯು ಈ ಕೊಲೆಯ ಪರಿಹಾರವಾಗಿ ಅರ್ಧಮಿಲಿಯ ಜೆಕ್ ನಾಣ್ಯವನ್ನು ತೆರಬೇಕೆಂದು ಜರ್ಮನ್ ರಕ್ಷಣಾಧಿಕಾರಿಯು ಹುಕುಮಿತ್ತಿರುವನು. ಜೆಕ್ಕರ ಮೇಲೆ ವಿಪರೀತ ನಿರ್ಬಂಧವೂ ಜಾರಿಯಾಗಿದೆ.

ಪ್ರೇಮಿಗಳು

ಸಂಧ್ಯಾರಾಗದ ಸಮಯದಲಿ
ಪ್ರಶಾಂತಸಾಗರವೇಳೆಯಲಿ
ಸೇರಿದರೂ
ಪ್ರೇಮಿಗಳು.
ದಿಗಂತ ಧಾಮವ ದೂಡಿದರು
ಪತೀತಪಾವನ ಸಾರಿದರು
ರಾಗದಲೀ
ಪ್ರೇಮಿಗಳು.
ನೀಲಾಗಗನವ ಸೇರಿದರು
ಮುಗಿಲಾಮಯವನೋಡಿದರು
ಒಲುವಿನಲೀ
ಪ್ರೇಮಿಗಳು.
ಚಲುವಾಚುಕ್ಕಿಯನೋಡಿದರು
ಗೆಲುವಾಮೊಗವ ಬೀರಿದರು
ನಲ್ಮೆಯಲೀ
ಪ್ರೇಮಿಗಳು.
ಚಂದ್ರಾ ಬಿಂಬದಿ ನೆಲಸಿದರು
ತಮ್ಮಾ ಹೃದಯವ ಬೆರಸಿದರು
ಶಾಂತಿಯಲೀ
ಪ್ರೇಮಿಗಳು.
ಸೌಹಾರ್ದ್ಯಸಮ್ಮೇಲನ ಸಾರಿದರು
ಹೃದ್ಗತ ಜ್ವಾಲೆಯ ಹೊಳೆಸಿದರು
ಒಗೆತನದೀ
ಪ್ರೇಮಿಗಳು
ಮೃದು ಮಧುರವನು ಕೋರಿದರು
ಪ್ರಶಾಂತ ಪರಿಮಳ ಸಾರಿದರು
ಸಿದ್ಧದಲೀ
ಪ್ರೇಮಿಗಳು.

ಹೆಚ್. ಆರ್. ದಾಸ್, ಬೆಂಗಳೂರು.

ಉಡುಪಿ

ಮುನ್ಸಿಪಲ್ ಸಭೆ:—ಮುನ್ಸಿಪಲ್ ಕೌನ್ಸಿಲಿನ ಅರ್ಜಂಟ್ ಸಭೆಯೊಂದು ತಾ. ೯-೬-೩೯ರಲ್ಲಿ ಶ್ರೀ. ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಫಲಿಮಾರು ಸ್ವಾಮಿಯವರು ತಮ್ಮ ಮಠವನ್ನು ಜೀರ್ಣೋದ್ಧಾರ ಮಾಡುವರೆ ಕೌನ್ಸಿಲಿನ ಲೈಸೆನ್ಸು ಅಪೇಕ್ಷಿಸಿ ಮಾಡಿದ ಅರ್ಜಿ ತೀರ್ಮಾನಿಸಲಾಯಿತು.

ಶ್ರದ್ಧಾನಂದ ಭವನ:—ಕಳೆದ ಬುಧವಾರ ಸ್ಥಳೀಯ ಆರ್ಯಸಮಾಜದ ವತಿಯಿಂದ ಶ್ರದ್ಧಾನಂದ ಭವನವೆಂಬ ನೂತನ ಕಾರ್ಯಾಲಯವು ಎಡ್ವೊಕೇಟ್ ಶ್ರೀ. ಬಿ. ವಾಸುದೇವ ರಾಯರಿಂದ ತೆರೆಯಲ್ಪಟ್ಟಿತು. ಕಪ್ತೇನರ್ ಶ್ರೀ ಎನ್. ಶ್ರೀನಿವಾಸರಾಯರು 'ಓಂ' ಧ್ವಜವನ್ನೇರಿಸಿದರು. ಈ ಶುಭ ಸಮಾರಂಭದಲ್ಲೇ ಕ್ರೈಸ್ತ ಮತಾವಲಂಬಿಯಾದ ಒಂದು ಕುಟುಂಬವು ಶುದ್ಧಿ ಮಾಡಲ್ಪಟ್ಟು ಪಂಡಿತ ಧರ್ಮದೇವಜೀಯವರಿಂದ ವೈದಿಕ ಧರ್ಮದೀಕ್ಷೆಯನ್ನು ಕೊಡಿಸಲ್ಪಟ್ಟಿತು.

ಹೊಸ ಆನೆ:—ಮೈಸೂರು ದರ್ಬಾರಿನಿಂದ ಸಂಕ್ಷನ್ ಆದ ಆನೆಯೊಂದು ತಾ. ೧೨-೬-೩೯ರಲ್ಲಿ ಶ್ರೀ ಅದಮಾರು ಮಠಕ್ಕೆ ರಾಜಮರ್ಯಾದೆಯಿಂದ ಒಪ್ಪಿಸಲಾಯಿತು.

ಸಂಸಾರ ಸಂಭ್ರಮ ನಾಟಕ:—ಸ್ಥಳೀಕ ನಾಟ್ಯಕಲಾ ಪ್ರೇಮಿಗಳು ಕೆಲವರು ಸೇರಿ ಹಿಂದೂ ಮುಸ್ಲಿಂ ಎಮೆಚೂರ್ಸ್ ಎಂಬ ಹೆಸರಿನಿಂದ ಶ್ರೀ ಪಿ. ಶೀನಶೆಟ್ಟರಿಂದ ಬರೆಯಲ್ಪಟ್ಟ ಸಂಸಾರ ಸಂಭ್ರಮವೆಂಬ ಸಾಮಾಜಿಕ ನಾಟಕವನ್ನು ಅಂಜುಮಾನ್ ಕ್ಲಬ್ಬಿನ ಸಹಾಯಾರ್ಥವಾಗಿ ಇದೇ ತಾ. ೧೮ಕ್ಕೆ ರಾಮಕೃಷ್ಣ ಥಿಯೇಟರಿನಲ್ಲಿ ಅಭಿನಯಿಸಲಿರುವರು.

ಮಂಗಳೂರು

(ಸ್ವಂತ ವಾತ್ಮಿದಾರರಿಂದ) 11-9-1939

ಮಂಗಳೂರು ನಗರಸಭೆ—ಕಳೆದ ಸೋಮವಾರ ಸಾಯಂಕಾಲ ಮಂಗಳೂರು ನಗರಸಭೆಯ ಮೀಟಿಂಗು ಶ್ರೀ. ಬಿ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ವೆಬ್‌ಸ್ಟರ್ ಮಾರ್ಕೇಟಿನ ವಿಷಯವಾಗಿ ಮಿ. ಅಂದ್ರಾದೆಯವರು ಒಂದು ಠರಾವು ತಂದರು. ಶ್ರೀ. ರಂಗರಾವ್ ತಲಚೇರಿಕರರು ಅದನ್ನು ವಿರೋಧಿಸಿದ್ದಲ್ಲದೆ, ಮೊದಲು ಸೂಚನೆ ಕೊಡದೆ ಠರಾವನ್ನು ತರಬಹುದೇ ಎಂದು ಪಾಯಿಂಟ್ ಆಫ್ ಆರ್ಡರನ್ನು ತಂದರು. ಅಧ್ಯಕ್ಷರು ತಮ್ಮ ರೂಲಿಂಗನ್ನು ಕೊಡುತ್ತಾ ಸರಕಾರಿ ಹುಕುಮಿನ ಮೇಲೆ ಠರಾವು ತಂದುದರಿಂದ ಅದನ್ನು ಮುಂದಾಗಿ ತಿಳಿಸಬೇಕಿಲ್ಲವೆಂದರು. ಶ್ರೀ. ಅಂದ್ರಾದೆಯವರ ಠರಾವನ್ನು ಡಾ! ಉಪೇಂದ್ರ ಪೈಗಳು ಅನುಮೋದಿಸಿದರು. ಶ್ರೀ ರಂಗರಾಯರು ಠರಾವನ್ನು ವಿರೋಧಿಸಿದರು. ಆದರೂ ಬಹುಮತದಿಂದ ಠರಾವು ಮಂಜೂರಾಯಿತು. ಶ್ರೀ. ರಂಗರಾಯರೂ, ಮಿ. ಯಂ. ಎಸ್. ಶ್ರೇಷ್ಠರೂ ಠರಾವನ್ನು ವಿರೋಧಿಸಿದರು. ಇತರ ವಿಷಯಗಳ ಚರ್ಚೆ ನಡೆದು ತೀರ್ಮಾನವಾದ ಮೇಲೆ ಸಭಾಂತ್ಯವಾಯಿತು.

ಕನ್ಯಾಪಹರಣ—ಸ್ಥಳೀಯ ಬೋಳಾರದ ಓರ್ವ ಉಪಾಧ್ಯಾಯರೂ ಮತ್ತೊಬ್ಬ ವ್ಯಾಪಾರಿಯೂ ಸೇರಿ ಹನ್ನೆರಡು ವರ್ಷ ಪ್ರಾಯದ ಹುಡುಗಿಯೋರ್ವಳನ್ನು ಅಪಹರಿಸಿದರೆಂಬ ಆಪಾದನೆ. ಪೋಲೀಸರು ಆಪಾದಿತರನ್ನು ದಸ್ತಗಿರಿ ಮಾಡಿ, ಜಾಮೀನಿನ ಮೇಲೆ ಬಿಟ್ಟಿರುವರಂತೆ. ವಿಚಾರಣೆಯು ನಡೆಯುತ್ತಿದೆಯಾಗಿ ತಿಳಿದು ಬರುತ್ತದೆ.

ಸತ್ಕಾರಕೂಟ—ಮಂಗಳೂರಲ್ಲಿ ಮುನ್ಸೀಫರಾಗಿದ್ದ ಮಿ. ಟ್ಯಾಗರ್ಟರವರಿಗೆ ವರ್ಗವಾಗಿದೆಯಷ್ಟೆ. ಅವರು ಸದ್ಯದಲ್ಲಿಯೇ ಇಲ್ಲಿಂದ ಹೊರಡುವವರಾಗಿರುವರು. ಅವರ ಪತ್ನಿಯವರನ್ನು ಸ್ಥಳೀಯ ಲೇಡೀಸ್ ಕ್ಲಬ್ಬಿನವರು ಟೀಪಾರ್ಟಿ ಕೊಟ್ಟು ಸತ್ಕರಿಸಿದರು.

ಹರಿಕಥಾ ಕಾಲಕ್ಷೇಪ— ಮೈಸೂರಿನ ಪ್ರಸಿದ್ಧ ಕೀರ್ತನಕಾರರಾದ ಶ್ರೀ! ಬೇಲೂರು ಕೇಶವದಾಸರು ಸ್ಥಳೀಯ ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಒಂದು ಹರಿಕಥೆಯನ್ನು ಕಳೆದ ತಾ. 8ರಲ್ಲಿ ಮಾಡಿದರು.

ಕಾಂಗ್ರೆಸ್ ಸದಸ್ಯರನ್ನು ಸೇರಿಸುವುದು—ಕಾಂಗ್ರೆಸ್ ಸದಸ್ಯರನ್ನು ಸೇರಿಸಲು ಮಂಗಳೂರು ನಗರ ಕಾಂಗ್ರೆಸ್ ಕಮಿಟಿಯವರು ಓರ್ವ ಅಧಿಕಾರಿಗಳನ್ನು ನೇಮಿಸಿದ್ದಾರೆ. ಸದಸ್ಯರಾಗಲಿಚ್ಛಿಸುವವರು ಕಾಂಗ್ರೆಸ್ ಕಚೇರಿಗೆ ಹೋಗಿ ಹೆಸರು ದಾಖಲುಮಾಡಿಸಿ ಆ ಬಗ್ಗೆ ಒಂದು ಸರ್ಟಿಫಿಕೇಟು ಪಡೆಯಬೇಕಂ

ನಿಖಿಲ ಭಾರತೀಯ ವೈದ್ಯ ಸಂಘ-1939ನೇ ಮೇ 31ಕ್ಕೆ ಅಂತ್ಯವಾಗುವ ವರ್ಷದ ಲೆಕ್ಕಪಟ್ಟಿ ನಮ್ಮ ಬಳಿಗೆ ಬಂದಿದೆ. ಚಂದಾ ರೂ. 129-12-0 ಪೋಷಕ ದ್ರವ್ಯ (1) ನಗದಾಗಿ ರೂ. 66-8-0, ಪ್ರಥಮ ಜಿಲ್ಲಾ ವೈದ್ಯ ಪರಿಷತ್ತಿನ ಸ್ವಾಗತಕಮಿಟಿಯ ಸೆಕ್ರೆಟರಿಯಿಂದ ರೂಪಾಯಿ 132—10—10 ಪುಸ್ತಕ ಮಾರಾಟದಿಂದ ರೂ. 3-4-0 ಜುಮ್ಲಾ 332-2-10 ಜಮೆಯಾಗಿದ್ದು ಟಪ್ಪಾಲು, ಪ್ರಿಂಟಿಂಗ್ ವಗೈರೆಗೆ ರೂ. 138-5-2 ಖರ್ಚಾಗಿದ್ದು ಕೋಶಾಧಿಕಾರಿಗಳ ವಶ ರೂಪಾ 171-14-0 ಮತ್ತು ಕೈಯಲ್ಲಿ ರೂ. 21-15-8 ಉಳಿದಿರುತ್ತದೆಂದು ಲೆಕ್ಕದ ಪಟ್ಟಿಯಿಂದ ತಿಳಿದು ಬರುತ್ತದೆ.

ಈ ಸಂಘದ ಪ್ರಥಮ ವಾರ್ಷಿಕ ಸಾಮಾನ್ಯ ಸಭೆಯು ಮುಂದಿನ ಕಾರ್ಯಕ್ರಮಗಳನ್ನು ನಡೆಸುವದಕ್ಕಾಗಿ ಇದೇ ತಾ. 21ಕ್ಕೆ ಸಾಯಂಕಾಲ ಮಂಗಳೂರು ಜಪ್ಪಿನಲ್ಲಿರುವ ಉಮಾ ಆಯುರ್ವೇದಿಕ್ ಫಾರ್ಮಸಿಯಲ್ಲಿ ಜರಗುವುದು.

ಕಾಗದ ತಯಾರಿಸುವ ಕ್ಲಾಸ್—ಡಿಪ್ರೆಸ್ಡ್ ಕ್ಲಾಸ್ ಮಿಶನಿನವರು ತಾ. 15ರಿಂದ ಕಾಗದ ತಯಾರಿಸುವ ಕ್ಲಾಸ್‌ಗಳನ್ನು ತೆರೆಯಲಿರುವರು. ಈ ವರ್ಷ 10 ಜನರನ್ನು ಮಾತ್ರ ಇದಕ್ಕೆ ಸೇರಿಸಿಕೊಳ್ಳಲಾಗುವುದು. ಹೆಚ್ಚಿನ ವಿವರಗಳನ್ನು ಕಾರ್ಯದರ್ಶಿಗಳಿಂದ ಪಡೆಯಬಹುದು.

ಮಂಗಳೂರು ತೆರಿಗೆದಾರರ ಸಂಘ-ತಾ. 31-5-39ರಲ್ಲಿ ಸಭೆಯೊಂದು ಮಿ. ಜಿ. ಎ. ಸಾಲ್ಡಾನ ಎಂ. ಎಲ್. ಸಿಯವರ ಅಧ್ಯಕ್ಷತೆಯಲ್ಲಿ ಜರಗಿ ತೆರಿಗೆದಾರರ ಸಂಘವು ಸ್ಥಾಪಿಸಲ್ಪಟ್ಟಿದೆ. ಇದಕ್ಕೆ ಶ್ರೀಗಳಾದ ಜಿ ಎ ಸಾಲ್ಡಾನ ಎಂ. ಎಲ್. ಸಿ. (ಅಧ್ಯಕ್ಷ) S. ನಾಗರಾಜಯ್ಯ (ಕಾರ್ಯದರ್ಶಿ) ಕೆ. ಆರ್. ಆಚಾರ್, ಕೆ. ಗೋಪಾಲಕೃಷ್ಣ ರಾವ, ಎಂ. ಶಂಕರನಾರಾಯಣ ರಾವ್, ರಹೀಂ ಅಹಮ್ಮದ್, ಜೋರ್ಜ್ ಹರ್ಬರ್ಟ್, ಜೆ. ಎ. ಪುತ್ರನ್, ಅನಂತ ಉಪಾಧ್ಯಾಯ, ವಿಟ್ಠಪ್ಪ ಪ್ರಭು ಇವರು ಮೆನೇಜಿಂಗ್ ಕಮಿಟಿಯ ಸದಸ್ಯರಾಗಿ ಆರಿಸಲ್ಪಟ್ಟಿದ್ದಾರೆ. ತೆರಿಗೆದಾರರ ಹಿತಸಾಧನೆಯೇ ಈ ಸಂಘದ ಉದ್ದೇಶವಾಗಿದೆ. 0-4-0 ವಾರ್ಷಿಕ ವರಾಡವಿತ್ತು ಪ್ರತಿ ತೆರಿಗೆದಾರನು ಇದರ ಸದಸ್ಯನಾಗಬಹುದು.

ಜಿಲ್ಲಾ ಬಂಟರ ಯಾನೆ ನಾಡವರ ಸಂಘ—ಇದರ ವಾರ್ಷಿಕ ಮಹಾಸಭೆಯು ಇದೇ ಜೂನ್ ತಿಂಗಳ ತಾ. 25ನೇ ಆದಿತ್ಯವಾರ ಸಂಜೆ ಘಂಟೆ 4ಕ್ಕೆ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಕೂಡಬೇಕಾಗಿ ನಿಶ್ಚಯಿಸಿರುವುದರಿಂದ ಎಲ್ಲರೂ ಸಭೆಗೆ ದಯಮಾಡಿ ಬರಬೇಕಾಗಿ ಕಾರ್ಯದರ್ಶಿಗಳಾದ ಶ್ರೀ. ಟಿ. ನಾರಾಯಣ ಭಂಡಾರಿಗಳು ಪ್ರಾರ್ಥಿಸುತ್ತಾರೆ. ತಾ. 20-6-39 ಅದಿತ್ಯವಾರ ಘಂ. 3ಕ್ಕೆ ಕಾರ್ಯನಿರ್ವಾಹಕ ಕಮಿಟಿ ಸಭೆಯು 4ಕ್ಕೆ ಸಂಘದ ಮಹಾಸಭೆಯು ಜರಗುವುದು.

ಬಾಳೆಕುದುರು— ಶ್ರೀ ಮತ್ಪರಮಹಂಸೇತ್ಯಾದ್ಯನೇಕಬಿರುದಾಂಕಿತರಾದ ಇಲ್ಲಿನ ಶ್ರೀ ಮಠದ ಶ್ರೀ ನರಸಿಂಹಾಶ್ರಮ ಸ್ವಾಮಿಗಳವರು ಈಚೆಗೆ ಉಂಟಾದ ತಮ್ಮ ದೇಹಾಲಸ್ಯ ನಿಮಿತ್ತ ತಾ. 7-6-39ನೇ ಬುಧವಾರ ವೇ. ನೀಲಾವರ ಕೃಷ್ಣಯ್ಯ ಕಲ್ಕೂರರ ಪುತ್ರ "ಚಿ. ಶಂಕರನಾರಾಯಣ"ನೆಂಬ ವಟುವಿಗೆ ಸನ್ಯಾಸದೀಕ್ಷೆಯನ್ನು ಉಪದೇಶಿಸಿ ಶ್ರೀ. ಆನಂದಾಶ್ರಮ ಸ್ವಾಮಿಗಳೆಂಬ ಅಭಿಧಾನದಿಂದ ಶಿಷ್ಯರನ್ನಾಗಿ ಸ್ವೀಕರಿಸಿರುವರು. ಶ್ರೀ. ನರಸಿಂಹ ಸ್ವಾಮಿಯ ಗುರುಗಳ ದೇಹಾಲಸ್ಯವನ್ನು ನೀಗಿ ಗುರುಶಿಷ್ಯರಿಬ್ಬರಿಗೂ ಆಯುರಾರೋಗ್ಯವನ್ನು ಅನುಗ್ರಹಿಸಬೆಂದು ಪಾರ್ಥಕೆ

ಮೈಸೂರಿನಲ್ಲಿ ಶ್ರೇಷ್ಠವರ್ಗದ ಬ್ರಾಹ್ಮಣರ ಉಪಹಾರ ವಸತಿ ಗೃಹಗಳು.

ಗಾರ್ಡನ್ ಹೋಟೇಲ್

(ಫೋನ್ ನಂಬ್ರ 406) ಹಳೆ ಪೋಸ್ಟಾಫೀಸು ರೋಡ್ ಮೈಸೂರು.
ಆಧುನಿಕ ಸೌಕರ್ಯಗಳಿಂದ ಕೂಡಿದ ವಿಶಾಲವಾದ ಸಿಂಗ್ಲ್ ಡಬ್ಬಲ್ ಕೋಣೆಗಳು!
ಕುಟುಂಬ ಪರಿವಾರ ಸಮೇತರಾಗಿ ಬರುವವರಿಗೆ
ಉಳಕೊಳ್ಳುವರೆ ಅತೀ ಯೋಗ್ಯ ಸ್ಥಳ.

ಉಡುಪಿ ಆನಂದ ಭವನ

ಫೋನ್ ನಂಬ್ರ 347
ಇದೇ ಮ್ಯಾಲೀಕರಿಂದ ಅರಮನೆಯ ಎದುರು ನವನಾಗರಿಕತೆಗೆ ತಕ್ಕಂತೆ ನಡೆಯಿಸಿ
ಕೊಂಡು ಬರುವ ನವೀನ ಉಪಹಾರ ಗೃಹ
ಮೈಸೂರಿಗೆ ಬಂದಲ್ಲಿ ಇದನ್ನು ಸಂದರ್ಶಿಸಲು ಮರೆಯದಿರಿ
ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು. ಕೃಷ್ಣರಾಜ
ಸಾಗರ್ ರೆಸ್ಟೋರೆಂಟ್, ಕನ್ನಂಬಾಡಿ, ಮೈಸೂರು.
ಮದ್ರಾಸಿಗೆ ಬಂದಲ್ಲಿ **ಮೈಸೂರು ಕೇಫ್**
ರೆಸ್ಟೋರೆಂಟ್ ಮತ್ತು ಬೋರ್ಡಿಂಗ್, ಲಾಡ್ಜಿಂಗ್ ಸಂದರ್ಶಿಸಲು ತಪ್ಪದಿರಿ
ಪ್ರೊಪ್ರೈಟರ್ - ಕೆ. ಗುರುರಾಜಾಚಾರ್.

ಗಂಡಮಾಲೆ ರೋಗ

ಈ ಭಯಂಕರ ರೋಗವನ್ನು ಖಾತ್ರಿಯಾಗಿ ಗುಣಪಡಿಸುವ
POPULAR OINTMENT
(*For T. B. Glands*)
ಕೈಬಿಟ್ಟು ಹೋದ ಎಷ್ಟೋ ರೋಗಿಗಳು ನಮ್ಮ ಔಷಧಿಯನ್ನು ಉಪಯೋಗಿಸಿ
ಸಂಪೂರ್ಣ ಗುಣಹೊಂದಿರುವರು. ಗುಣವಾಗದಿದ್ದರೆ ಹಣ ವಾಪಾಸು.
ಬಾಟ್ಲಿ 1ಕ್ಕೆ ರೂಪಾ 5/- ಟಪ್ಪಾಲು ಹಾಸಲು ಪ್ರತ್ಯೇಕ.
ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
The Popular Stores,
Chemists & General Merchants,
Parel, BOMBAY No. 12

Established] [1906

THE

UNITED INDIA

LIFE ASSURANCE Co, LTD.

HEAD OFFICE—MADRAS.

Trustee:—The Official Trustee to the Government of Madras,

Policies in force exceed **SIX** Crores.
Annual income exceeds - Rs. **30** lakhs.
Total assets exceeds - Rs. **110** lakhs.
Total claims paid exceed Rs. **40** lakhs.

The oldest & largest life assurance company of South India accepted by the Government as satisfactory for the purpose of exemption from the operation of the Provident Fund Rules to Teachers in aided Schools & for the purpose of utilisation of P. F. Contributions for payment of premiums on the lives of Government Local Board & Municipal servants.

For further particulars please apply to:—

THE BRANCH MANAGER,

THE UNITED INDIA LIFE ASSURANCE CO. LTD.,

FELIX PAI BAZAR, MANGALORE, S. K.

K. R. Hebbar, B.A., ORGANISER, UDIPI, S. K. *OR* **K. Keshava Shenoy**, M.A., ORGANISER, Pentlannpet, MANGALORE.

ಪುಷ್ಪಗಂಧಾಮೋದಿತ

ಬಹುಗುಣಯುಕ್ತ

ಆಮಲಕೀ ತೈಲ

ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ, ಪ್ರೌಢ ಸ್ತ್ರೀ ಪುರುಷರಿಗೂ ನಿತ್ಯ ಕೇಶಪ್ರಸಾದನಾರ್ಥ ಉತ್ತಮವಾದ ಚಿತ್ತಾಕರ್ಷಕ ತೈಲ.

10 ತೊಲೆ ಸೀಸೆ 1ರ ಕ್ರಯ 0-11-0,
5 ತೊಲೆ „ „ „ 0-6-0.

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ

ಧಾನ್ವಂತರಿ ಗುಟಿಕಾ

ಅಜೀರ್ಣ, ಅತಿಸಾರ, ಉದರಶೂಲೆ, ಉಬ್ಬಸ, ಪಾರ್ಶ್ವಶೂಲೆ, ಕಟಿಶೂಲೆ, ಚುಚ್ಚುವ ಮತ್ತು ಎಳೆಯುವ ವೇದನೆ, ಸರ್ವವಾತರೋಗ, ಜ್ವರ, ಕೆಮ್ಮು, ಇವುಗಳಲ್ಲಿ ಗುಣಕಾರಿಯಾಗಿದೆ. ಹಾಗೂ ಆಬಾಲವೃದ್ಧ ಸ್ತ್ರೀ ಪುರುಷರಿಗೂ, ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಸಂಗ್ರಾಹ್ಯವಾದ ದಿವ್ಯ ಔಷಧಿಯಾಗಿದೆ.

ಮಾತ್ರೆ:— 12, 25, 50, 100, 500, 1000
ಕ್ರಯ: 0-4-0, 0-7-0, 0-13-0, 1-5-0, 5-0-0, 9-0-0

5 ಆಣೆ ಸ್ಟ್ಯಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತೇವೆ.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲ್
ಪೋಸ್ಟ್ ಬ್ರಹ್ಮಾವರ. ದ. ಕ.

ನಮ್ಮ ಸ್ವೀಕೃತರು:—

1. **V. R. Prabhu**, The Canara News & Books Agent, Batatawala Mansion; Lalbag, BOMBAY.
2. **General Supplies Ltd.**, Udipi, S. K.
3. **Nava Bharata Book Depot**, Udipi, S K.

Karnataka Free Night High-School,

Fort: BOMBAY.

ಪ್ರಕಟಣೆ.

ಕರ್ನಾಟಕ ಧರ್ಮಾರ್ಥ ರಾತ್ರಿ ಶಾಲೆ, ಮುಂಬಯಿ.

ಮುಂಬಾಯಿಯ ಮಹಾಜನರ ಅಪೇಕ್ಷೆಯ ಮೇರೆಗೆ, ಕರ್ನಾಟಕ ಧರ್ಮಾರ್ಥ ರಾತ್ರಿಶಾಲೆಯ ಆಡಳಿತ ಮಂಡಲದವರು ಈ ಶಾಲೆಯನ್ನು ಈ ವರ್ಷದಿಂದ ಹಾಯ್ ಸ್ಕೂಲನ್ನಾಗಿ ಮಾರ್ಪಡಿಸುವ ಯೋಜನೆಯನ್ನು ಮಾಡಿರುವರು. ಮುಂಬಾಯಿಯ ವಿದ್ಯಾರ್ಥಿಗಳು ಈ ಅಮೂಲ್ಯ ಸಂದರ್ಭವನ್ನು ತಮ್ಮೇಳಿಗೆಗಾಗಿ ಉಪಯೋಗಿಸಿಕೊಳ್ಳಬಹುದು. ಮೇಲಣ ತರಗತಿಗಳಿಗೆ ಸೇರಲಿಚ್ಛಿಸುವವರು ತಮ್ಮ ಯೋಗ್ಯತಾಪತ್ರ (Certificate)ದೊಂದಿಗೆ ಪ್ರವೇಶ ಕೋರತಕ್ಕದ್ದು. ವಿದ್ಯಾರ್ಥಿಗಳ ಯೋಗ್ಯತೆಯನ್ನು ಪರೀಕ್ಷಿಸಿ ಆಯಾಯ ತರಗತಿಗೆ ಸೇರಿಸಿಕೊಳ್ಳಲಾಗುವುದು.

M. S. Shetty,
Hon Secretary.

ಮೈಸೂರು ಪತ್ರ

(ನವಯುಗದ ಜಾತ್ಮೀದಾರರಿಂದ)

ಜೂನ್ 12,

ನಿವೃತ್ತರಾದರು—ವೃತ್ತಾಂತ ಪತ್ರಿಕೆಯ ಉಪಸಂಪಾದಕರಾಗಿ ಸುಮಾರು 40 ವರ್ಷಗಳಿಂದ ಕೆಲಸಮಾಡುತ್ತಿದ್ದ ಶ್ರೀ. ಟಿ. ಕೃಷ್ಣರಾಯರು ತಮ್ಮ ಹುದ್ದೆಯಿಂದ ನಿವೃತ್ತರಾಧರು. ಶ್ರೀಯುತರು ಆ ಪತ್ರಿಕೆಗೆ ಸೇರಿ ಸಲ್ಲಿಸಿರುವ ಸೇವೆಯು ಬಹಳ ಉನ್ನತವಾದುದು. ಕನ್ನಡ ಪತ್ರಿಕೋದ್ಯೋಗದ ಕೀರ್ತಿಯನ್ನು ಎತ್ತಿ ಮೇಲಕ್ಕೆ ಹಿಡಿದವರಲ್ಲಿ ಶ್ರೀಯುತರೂ ಒಬ್ಬರಾಗಿದ್ದಾರೆ.

ಆಗಮನ—ಗಾಯಕವಾದದ ನೂತನ ಮಹಾರಾಜರು ರಾಜಧಾನಿಗೆ ನಿನ್ನೆಯ ದಿನ ಆಗಮಿಸಿ ಲಲಿತಮಹಲ್ ಬಂಗಲೆಯಲ್ಲಿ ಬಿಡಾರಮಾಡಿದ್ದಾರೆ. ಇವರ ಆಗಮನದ ಗೌರವಾರ್ಥಕ್ಕಾಗಿ 21 ಕುಶಾಲ ತೋಪುಗಳನ್ನು ಹಾರಿಸಲಾಯಿತು.

ಶಂಕುಸ್ಥಾಪನೆ.

ದಿವಾನ್ ಸರ್ ಮಿರ್ಜಾರವರು ನೆರವೇರಿಸಿದರು.

ಮಂಡ್ಯ ಜಿಲ್ಲೆಯನ್ನು ಮುಂದಿನ ಜುಲೈ ತಿಂಗಳ 1ನೇ ತಾರೀಕಿನಿಂದ ಮಾಡಲಾಗುವುದೆಂದು 'ನವಯುಗ'ದಲ್ಲಿ ಹಿಂದೆಯೇ ತಿಳಿಸಲಾಗಿದೆ. ಇನ್ನು ಮುಂದೆ ಮೈಸೂರು ಸಂಸ್ಥಾನವು 9 ಜಿಲ್ಲೆಗಳಿಂದ ಕೂಡಿರುವುದು. ಮಂಡ್ಯ ಜಿಲ್ಲೆಯು ಪ್ರತ್ಯೇಕವಾಗುವುದರಿಂದ ಅಲ್ಲಿ ವಾಸವಾಗಿರುವ ಜನಗಳಿಗೆ ಸೌಕರ್ಯಗಳನ್ನು ಕಲ್ಪಿಸಿಕೊಡುವ ಸಲುವಾಗಿ ಒಂದೊಂದು ಕಾರ್ಯಗಳನ್ನಾಗಿ ಮಾಡಲಾಗುತ್ತಿದೆ. ಇದರಲ್ಲಿ ಮೆಟರ್ನಿಟಿಹೋಂ ಒಂದು.

ಈ ಮೆಟರ್ನಿಟಿ ಆಸ್ಪತ್ರೆಯನ್ನು ಕಟ್ಟಲು ಮಂಡ್ಯದಲ್ಲಿರುವ ಅನೇಕ ಮಹನೀಯರುಗಳು ಉದಾರವಾದ ಧನಸಹಾಯ ಮಾಡಿರುತ್ತಾರೆ. ಇದರ ಶಂಕುಸ್ಥಾಪನೆಯನ್ನು ನಡೆಸಲು ಈ ದಿನ ಒಂದು ಉತ್ಸವವನ್ನು ಏರ್ಪಡಿಸಲಾಗಿತ್ತು. ಇದರ ಸಲುವಾಗಿ ಆ ಪ್ರದೇಶವನ್ನು ಬಣ್ಣಬಣ್ಣದ ಬಾವುಟಗಳಿಂದ ಅಲಂಕರಿಸಲಾಗಿತ್ತು. ಸಂಸ್ಥಾನದ ವೈದ್ಯ ಇಲಾಖೆಯ ಮುಖ್ಯಾಧಿಕಾರಿಗಳೂ, ಇತರ ಮುತ್ತಸ್ಥಳೀಯ ವೈದ್ಯರುಗಳೂ, ಅನೇಕ ಮಾನ್ಯ ಮಹಿಳೆಯರೂ ಈ ಉತ್ಸವಕ್ಕೆ ಆಗಮಿಸಿದ್ದರು. ದಿವಾನರಾದ, ಸರ್ ಮಿರ್ಜಾ. ಎಂ. ಇಸ್ಮಾಯಿಲ್ ರವರು ಆಗಮಿಸಿದೊಡನೆಯೇ ಅವರಿಗೆ ಸುಸ್ವಾಗತವಿತ್ತು ಅವರಿಗಾಗಿ ಏರ್ಪಡಿಸಿದ್ದ ಆಸನದಲ್ಲಿ ಕುಳ್ಳಿರಿಸಲಾಯಿತು. ತರುವಾಯ ವೈದ್ಯ ಇಲಾಖೆಯ ಮುಖ್ಯಾಧಿಕಾರಿಗಳು ಒಂದು ವರದಿಯನ್ನೋದಿ ಅದರಲ್ಲಿ ವೈದ್ಯ ಇಲಾಖೆಯಲ್ಲಿ ನಡೆಯುತ್ತಿರುವ ಕಾರ್ಯ ಮತ್ತು ಕೆಲಸಗಳನ್ನು ವಿವರಿಸಿದರು. ಇದಾದ ನಂತರ ಅಧ್ಯಕ್ಷರಿಗೆ ಒಂದು ಸ್ವಾಗತಭಾಷಣದ ಪತ್ರಿಕೆಯನ್ನರ್ಪಿಸಿ ಅದನ್ನು ಓದಲಾಯಿತು.

ತರುವಾಯ ದಿವಾನರು ಸಭೆಯ ಜಯಜಯಕಾರಗಳ ನಡುವೆ ಎದ್ದು ತಮ್ಮ ಭಾಷಣವನ್ನೋದಿ ಮಂಡ್ಯವು ಬಹಳ ಅಭಿವೃದ್ಧಿಯಾಗುವುದೆಂದು ನಂಬಿ, ಹೊಸದಾಗಿ ಕಟ್ಟಲಾಗುವ ಮೆಟರ್ನಿಟಿ ಆಸ್ಪತ್ರೆಯ ಆವಶ್ಯಕತೆಯನ್ನು ತಿಳಿಸಿ, ಅದರ ಉಪಯೋಗವನ್ನು ಪ್ರತಿಯೊಬ್ಬರೂ ಪಡೆಯುವರೆಂದು ನಂಬಿ ಅದರ ಶಂಕುಸ್ಥಾಪನೆಯನ್ನು ನಡೆಸಿ . ಮೇಲೆ, ರಾಷ್ಟ್ರೀಯ ಗೀತೆಯಾದ ನಂತರ ಸಭೆಯು ಜಯಜಯಕಾರವಾದ ನಂತರ, ಶ್ರೀ.ಎನ್ ಮಹಾರಾಜರ ಶ್ರೇಯಃಪ್ರಾರ್ಥನೆಯೊಡನೆ ಮುಕ್ತಾಯಗೊಂಡಿತು.

ಲೈಬ್ರೆರಿ

ಮತ್ತು

ಸ್ಕೂಲ್‌ಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಕೆಟಲಾಗಿಗೆ ಬರೆಯಿರಿ.

ಪಿ. ಎ. ಉಪಾಧ್ಯಾಯ,
ಬುಕ್ ಸೆಲ್ಲರ್ ಅಂಡ್ ಪಬ್ಲಿಷರ್,
ಎ ಎಸ್. ಸ್ಟ್ರೀಟ್,
ಬೆಂಗಳೂರು ಸಿಟಿ.

ದಕ್ಷಿಣ ಕನ್ನಡ

ಪೆರಿಂಜೆ—ಇಲ್ಲಿಯ ಬಡಕೋಡಿ ಬೋರ್ಡ್ ಎಲಿಮೆಂಟರಿ ಶಾಲೆಯನ್ನು ಪೆರಿಂಜೆಯ ನೂತನ ಕಟ್ಟೋಣಕ್ಕೆ ವರ್ಗಾಯಿಸುವ ಸಮಾರಂಭವು ತಾ. 1-6-39ರಲ್ಲಿ ವೇಣೂರು ಸರ್ಕಲಿನ ಡಿ. ಬೋ. ಮೆಂಬರರಾದ ಶ್ರೀ. ಟಿ. ಕುಮಾರಯ್ಯ ಜೈನಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಸದರಿ ಪ್ರವೇಶೋತ್ಸವಕ್ಕೆ ಗ್ರಾಮದ ಅನೇಕ ಮಹನೀಯರು ಹಾಜರಿದ್ದು ಶಾಲೆಯು ಧ್ವಜಪತಾಕೆಗಳಿಂದ ಅಲಂಕರಿಸಿ ಶೃಂಗರಿತ್ತು. ಅಧ್ಯಕ್ಷರ ಪ್ರಾರಂಭದ ಭಾಷಣವಾದ ಕೂಡಲೇ ನೆರೆದ ಕೆಲವು ಸಭಿಕರ ಭಾಷಣವಾಯಿತು. ಅನಂತರ ಮುಖ್ಯ ಉಪಾಧ್ಯಾಯರಾದ ಕೆ. ಸುಂದರ ಶೆಟ್ರು ಸುಮಾರು 60 ಮಕ್ಕಳನ್ನು ಸೇರಿಸಿದರು. ತರುವಾಯ ಅಧ್ಯಕ್ಷರು ಸುರಸವಾದ ಭಾಷಣವಿತ್ತು ಕಟ್ಟೋಣದ ಮಾಲಿಕರನ್ನು ಪ್ರಶಂಸಿಸಿದರು. ಅಂತ್ಯದಲ್ಲಿ ತಿಂಡಿ ಫಲಾಹಾರದಿಂದ ಸಭೆಯು ಮುಕ್ತಾಯವಾಯಿತು.

ಕುಂದಾಪುರ ಶಾಲಾ ವರ್ಧಂತಿ – ಕುಂದಾಪುರ ಶಾಂತಿನಿಕೇತನ ಹಾಯರ್ ಎಲಿಮೆಂಟರಿ ಶಾಲಾ ವರ್ಧಂತಿ ಸಮಾರಂಭವು ಕಳೆದ ತಾ. 20ರಲ್ಲಿ ನಮ್ಮ ಜಿಲ್ಲಾ ಜಡ್ಜರಾದ ಶ್ರೀ. ರಾಜಗೋಪಾಲಾಚಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಕುಂದಾಪುರ ಮುನ್ಸೀಫರೂ ಮಿ. ಸಾಲ್ದಾನಾ, ಎಮ್. ಎಲ್. ಸಿ. ಮೊದಲಾದವರೂ ಬಿತ್ತ್ಯೈಸಿದ್ದರು. ಹೊಸದಾಗಿ ಕಟ್ಟಲ್ಪಟ್ಟ ಪಿನ್ಯಾಫ್ ಭವನದ ಪ್ರವೇಶೋತ್ಸವವೂ ಅಂದೇ ಮಾನ್ಯ ಜಡ್ಜರಿಂದ ನೆರವೇರಿಸಲ್ಪಟ್ಟಿತ್ತು. ಶ್ರೀಗಳಾದ ಕೆ. ಕೃಷ್ಣರಾವ್, ಜೋಸೆಫ್ ಹರ್ಬರ್ಟ್, ಶ್ರೀನಿವಾಸವರ್ಕಾಟಿಯವರು ಮೊದಲಾದವರ ಸಂದರ್ಭೋಚಿತವಾದ ಭಾಷಣಗಳೂ ಆದುವು. ಬಹುಮಾನ ವಿತರಣೆ, ಟೀಪಾರ್ಟಿ, ನಾಟಕ ಪ್ರದರ್ಶನ ಮುಂತಾದ ಕಾರ್ಯಕ್ರಮಗಳಿದ್ದುವು ಶಾಲಾಭಿವೃದ್ಧಿಗಾಗಿ ದುಡಿಯುತ್ತಿರುವ ಶ್ರೀ ಕಲ್ಯಾರ ಬಂಧುಗಳ ಸಾಹಸವು ಸ್ತುತ್ಯವಾಗಿದೆ.

ಬ್ರಹ್ಮಾವರ—ವಾರಂಬಳ್ಳಿ, ಹಾರಾಡಿ, ಬೈಕಾಡಿ ಗ್ರಾಮಗಳಿಗೆ ಸೇರಿದ ವಾರಂಬಳ್ಳಿ ಪಂಚಾಯತ ಬೋರ್ಡಿನ ಅಧ್ಯಕ್ಷರ ಚುನಾವಣೆಯು ತಾ. 12-6-39ರಲ್ಲಿ ಜರಗಿತು, ಶ್ರೀ. ಬಿ. ಶಿವರಾಮ ಶೆಟ್ರು ಪ್ರತಿಸ್ಪರ್ಧೆಯಿಲ್ಲದೆ ಸರ್ವಾನುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಚುನಾವಣೆಯಲ್ಲಿ ಸ್ಪರ್ಧೆ ಇರುವುದಾಗಿ ತುಂಬಾ ಚಳವಳಿದ್ದರೂ ಕೊನೆಗೆ ಏನೊಂದೂ ಗಲಾಟೆಯಿಲ್ಲದೆ ಶಾಂತವಾಗಿ ಚುನಾವಣೆ ನಡೆದುದು ಅಭಿನಂದನೀಯ.

ಇದೇ ತಾ. 2ರಲ್ಲಿ ಸೇರಿದ ಬ್ರಹ್ಮಾವರ ಪರಸ್ಪರ ಸಹಕಾರ ಸಂಘದ ಮಹಾಸಭೆಯಲ್ಲಿ ಸಂಘದ ರಜತೋತ್ಸವವನ್ನು ಯಶಸ್ವಿಯಾಗಿ ಜರಗಿಸಬೇಕೆಂಬ ನಿರ್ಣಯವಾಯಿತು.

PRAYAG MAHILA VIDYAPITH
Facilities for learning High HINDI

The prayag Mahila Vidyapith, Allahabad has been giving free food lodging and education to the twentyfive women coming from south India to Allahabad to learn high Hindi for the last several years and several batches have gone out and are working as Prachārikas in several places. Besides learning Hindi facilities are offered for study of English, music, painting etc. up to the highest standard i. e. Saraswati of the Vidyapith and M. A. of the Benares Hindu University.

Some of the women who have received training are working even in north India on good salaries and supporting their families. South Indian are in great demand in Northern India owing to the absence of Purdah among them. Those wishing to take advantage of these facilities sould apply at once to the Registrar, prayag Mahila Vidyapith, Allahabad. The college opens on the 5th July 1939.

ಫುಟ್ ೯ರಿಂದ

ಲಾವಣೆಗಿಂತ ಕಡಿಮೆಯದೆಲ್ಲಾ, ತ್ರಿಶಂಕು ಸ್ಥಾನದಂತೆ ಶ್ರೀ ರೋಯಿಗಳಿಗೆ ತೋರುತ್ತದೆ. ಅಂತು ಶ್ರೀ. ರೋಯಿಗಳ ಸಂಘದ ಅರ್ಥ ತಿಳಿಯಲು ಯಾರೂ ಪಣೆಯಬೇಕೆಂದಿಲ್ಲ. ಕಾಂಗ್ರೆಸಿನೊಳಗೆ ಹುಟ್ಟಿರುವ ಹೊಸ ಪಕ್ಷಗಳ ಪೈಕಿ ಈ ಪಟ್ಟಿಗೆ ರೋಯಿಸಂಘವು ಭಿನ್ನವಾದುದು. ಆದರೆ ಇದು ವ್ಯವಹಾರ್ಯವೇ, ಎಂಬ ಪ್ರಶ್ನೆಯಿದೆ. ಹೊಸ ಕಾರ್ಯಕ್ರಮವೇ ಬೇಕೆನ್ನುವ ರೋಯಿಗಳು ಅದನ್ನಾಚರಣೆಗೆ ತರಲು ಕಾಂಗ್ರೆಸೇ ಬೇಕು ಎಂಬುದನ್ನು ಮರೆಯುವುದಿಲ್ಲ. ಕಾರಣವೇನು? ಇಂದು ಅಖಿಲ ಭಾರತೀಯರ ಸಂಸ್ಥೆ ಹೊಂದಿರುವದಾದರೆ ಅದು ರಾಷ್ಟ್ರಸಭೆ ಮಾತ್ರ. ಜನಸಾಮಾನ್ಯರ ಬೆಂಬಲವು ಕಾಂಗ್ರೆಸಿಗಿದೆ. ಜನತಾ ಶಕ್ತಿಯು ಅಲ್ಲಿ ಕೇಂದ್ರೀಕೃತವಾಗಿದೆ. ಈ ಶಕ್ತಿಯ ಬೆಂಬಲವಿಲ್ಲದೆ ತನ್ನ ನೂತನ ಕಾರ್ಯಕ್ರಮವಾದರೂ ಸಾಗದೆಂಬುದು ರೋಯಿಗಳಿಗರಿತಿದೆ. ಆದರೆ ಆ ಶಕ್ತಿಯು ಯಾವ ರೂಪದಲ್ಲಿರುವದೋ ಆ ರೂಪಕ್ಕೆ ಹೊಂದಿಕೊಂಡೇ ಮುಂದಿನ ಬೆಳವಣಿಗೆಯಿರಬೇಕೆಂಬುದನ್ನವರು ಒಪ್ಪುವದಿಲ್ಲ. ರೂಪಕೆಡಿಸುವಾಗ ಶಕ್ತಿಯೂ ಕುಂದುವದೆಂದು ಪಂಡಿತನೆಹರುಗಳನ್ನುತ್ತಾರೆ; ರೂಪಕೆಡಿಸಿ ಶಕ್ತಿ ಹೆಚ್ಚಿಸಬೇಕೆಂದು ರೋಯಿಗಳು ವಾದಿಸುತ್ತಾರೆ. ಈ ಇಬ್ಬರು ಸ್ವಾತಂತ್ರ್ಯ ಪ್ರೇಮಿಗಳೊಳಗಿರುವ ಭೇದವಿಷ್ಟೆ!

ಆಶ್ರಿತರಾಜರ ಧ್ಯೇಯ ಏನು?

ಫೆಡರೇಶನನ್ನು ಹಿಂದುಸ್ಥಾನದ ಗಂಟಲೊಳಗೆ ತುರುಕಿಸುವದಕ್ಕೆ ಬ್ರಿಟಿಷರು ಅನುಮಾನಪಡುತ್ತಿದ್ದಾರೆಂಬುದು ಕೇವಲ ಊಹೆ. ಸಂದರ್ಭಕ್ಕನುಸಾರವಾಗಿ ಹೇಗೆ ವರ್ತಿಸಬೇಕೋ ಹಾಗೆ ವರ್ತಿಸಿ ಫೆಡರೇಶನನ್ನು ಜ್ಯಾರಿಗೆ ತರುವದೇ ಅವರ ಉದ್ದೇಶ. ಫೆಡರೇಶನಿಗೆ ಸೇರುವ ಕುರಿತು ಆಶ್ರಿತ ರಾಜರುಗಳಿಗೆ ಕಳೆದ ಫೆಬ್ರವರಿಯಲ್ಲೇ ಸೂಚನೆಗಳು ಬಂದಿರುವವೆಂದೂ, ಆರು ತಿಂಗಳೊಳಗೆ ಉತ್ತರ ಕೊಡಬೇಕೆಂದೂ ತಿಳಿಸಿದಂತೆ ಜುಲೈಯೊಳಗೆ ಸಂಸ್ಥಾನಿಕರು ತಮ್ಮ ಅಭಿಪ್ರಾಯವನ್ನು ತಿಳಿಸಲಿರುವರೆಂದೂ ಪಾರ್ಲಿಮೆಂಟಿನಲ್ಲಿ ನಡೆದ ಪ್ರಶ್ನೋತ್ತರಗಳಿಂದ ವಿದಿತವಾಗಿದೆ. ಆಶ್ರಿತ ರಾಜರಾದರೂ ತಮ್ಮ ಸ್ವಾಭಾವಿಕ ನಿದ್ರೆಯನ್ನುಳಿದು ಆಲೋಚನಾಮಗ್ನರಾಗಿರುವುದು ಕಂಡುಬರುತ್ತದೆ. ಬೊಂಬಾಯಿಯಲ್ಲಿ ಸಂಸ್ಥಾನಿಕರ ಪರಿಷತ್ತು ಜರಗುತ್ತಾ ಉಂಟು. ಫೆಡರೇಶನಿನ ಕುರಿತು ಸರ್ವರೂ ಒಂದೇ ಧೋರಣೆಯನ್ನನುಸರಿಸಬೇಕೆಂಬ ಸಲ್ಲಹೆಯೂ ಪರಿಷತ್ತಿನಲ್ಲಿ ಹಾಡಲ್ಪಟ್ಟಿದೆ. ಆ ಕುರಿತು ರಾಜರೊಳಗೆ ಮಂತ್ರಾಲೋಚನೆಯೂ ನಡೆಯುತ್ತಿದೆ ಭಾರತದ ಆಶ್ರಿತ ರಾಜರುಗಳು ಫೆಡರೇಶನನ್ನು ಧಿಕ್ಕರಿಸುವರೆಂಬ ಆಶೆಗೆಡೆಯಿಲ್ಲ. ತಮ್ಮ ಅನುಕೂಲತೆಗಳನ್ನು ಅವರು ಬ್ರಿಟಿಷರಿಂದ ಯಾಚಿಸಬಹುದು. ಇದರಿಂದಾಗಿ ಫೆಡರೇಶನನ್ನು ಅಸಂದಿಗ್ಧ ವಾಣಿಯಲ್ಲಿ ವಿರೋಧಿಸುತ್ತಿರುವ ಬ್ರಿಟಿಷ್ ಭಾರತದ ಕಾರ್ಯಕ್ಕಡ್ಡಿಯುಂಟಾಗದಿರದು.

ಈ ವಿಪತ್ತಿಗಿಂದ ಪರಿಹಾರವೂ ಗೋಚರಿಸುವದಿಲ್ಲ. ಸಂಸ್ಥಾನಗಳ ಪ್ರಜೆಗಳ ಸ್ವಾತಂತ್ರ್ಯಂದೋಲನವೊಂದೇ ಕಾಂಗ್ರೆಸಿನ ಮುಂದಿರುವ ಉಪಾಯ. ಆದರೆ ಮಹಾತ್ಮರು ಆ ಗುರಿಯನ್ನೂ ತಪ್ಪಿಸಿ ಸಂಸ್ಥಾನಿಕ ಪ್ರಜೆಗಳ ಸೌಲಭ್ಯಗಳನ್ನು ದೊರಕಿಸಿಕೊಂಡರಾಯಿತೆಂಬಲ್ಲಿಗೆ ತಂದಿಟ್ಟಿರುವರು. ಸಂಸ್ಥಾನಗಳ ಭಿನ್ನ ಭಿನ್ನ ಪರಿಸ್ಥಿತಿಗನುಸಾರವಾಗಿ ರಾಜರುಗಳೊಡನೆ, ಸಂಧಾನ, ಸಂಗ್ರಾಮಗಳನ್ನು ಪ್ರಜೆಗಳು ಅಂಗೀಕರಿಸಬೇಕೇ ಹೊರತು ಎಲ್ಲೆಡೆಗಳಲ್ಲಿ ಒಂದೇ ರೀತಿಯ ಚಳವಳ ಹೂಡುವದು ಅನುಚಿತವೆಂದು ಗಾಂಧಿಯವರು ಸ್ಪಷ್ಟವಾಗಿ ತಿಳಿಸಿರುವರು. ಈ ಹಾದಿಯಿಂದ ಫೆಡರೇಶನ್ ಸಂಬಂಧದಲ್ಲಿಯೂ ಪ್ರಜೆಗಳ ಅಭಿಪ್ರಾಯ ಮಾನ್ಯವಾಗುವಷ್ಟು ಅಧಿಕಾರ ಸಂಪಾದಿಸುವೆವೆನ್ನುವದು ಬಯಲು ಭ್ರಾಂತಿಯೋ ಸರಿ. ಹೀಗೆ ನಿರಾಂತಕವಾಗಿ ಆಶ್ರಿತ ರಾಜರುಗಳು ತಮ್ಮಾಟವಾಡ.ವಾಗ ಫೆಡರೇಶನ್ ವಿರೋಧ ಕಾರ್ಯವು ಕಾಂಗ್ರೆಸ್ಸಿಗೆ ಇನ್ನಷ್ಟು ಕಠಿಣವಾಗಲಿದೆ. ಈ ಸಮಸ್ಯೆಯನ್ನು ಮಹಾತ್ಮಾ ಗಾಂಧಿಯವರು ಹೇಗೆ ಬಗೆಹರಿಸುವರೋ ನೋಡಲಿಕ್ಕಿದೆ.

ಇಂಗ್ಲೆಂಡಿನಲ್ಲಿ ಚುನಾವಣೆ

ಇಂಗ್ಲೆಂಡಿನ ಮಹಾ ಚುನಾವಣೆಯು 18 ತಿಂಗಳೊಳಗೆ ಜರಗಲಿರುವದೆಂದು ತಿಳಿದು ಬರುತ್ತದೆ ತಾನು ಇದು ಯಾವಾಗ ಜರಗಬೇಕೆಂಬ ಕುರಿತು ಈ ವರೆಗೂ ನಿರ್ಧರಿಸಿಲ್ಲವೆಂದು ಸಭೆಯೊಂದರಲ್ಲಿ ಮಾತನಾಡುವಾಗ ಚೇಂಬರ್ಲೀನರಂದಿರುವರು.

ಹೈದರಾಬಾದು ಸತ್ಯಾಗ್ರಹಿಗಳ ಪ್ರಚಾರ ಸಂಚಾರ

ಹೈದರಾಬಾದು ಸಂಸ್ಥಾನದಲ್ಲಿ ನಡೆಯುತ್ತಿರುವ ಸತ್ಯಾಗ್ರಹದ ವಿಚಾರ ವಿವರವನ್ನು ಬೇರೆ ಬೇರೆ ಪ್ರಾಂತ್ಯಗಳ ಜನತೆಯ ಗಮನಕ್ಕೆ ತರುವ ವಿಚಾರದಲ್ಲಿ ಆರ್ಯಲೀಗಿನ ಪರವಾಗಿ ಒಂದು ಪ್ರತಿನಿಧಿಕೂಟವು ಹೊರಡಲಿರುವುದೆಂದು ತಿಳಿದುಬಂದಿದೆ. ಈ ಮಂಡಲದಲ್ಲಿ ಎಮ್. ಎಸ್. ಅನೆ, (ಕೇಂದ್ರ ನ್ಯಾಯವಿಧಾಯಕ ಸಭೆಯ ಸದಸ್ಯ) ಲಾಲಾ ದೇಶಬಂಧು ಗುಪ್ತ (ಪಂಜಾಬು ನ್ಯಾಯ.ವಿಧಾಯಕ ಸಭೆಯ ಸದಸ್ಯ) ವಿನಾಯಕರಾವ್, (ಪ್ರಿನ್ಸಿಪಾಲ್) ಜೀಬಿಚಂದ ಮೊದಲಾದವರು ಸೇರಿರುವರು. ಈ ಸಂಚಾರವು ಇದೇ ತಿಂಗಳ ತಾ. 20ರಲ್ಲಿ ಮುಂಬಾಯಿಯಲ್ಲಿ ಆರಂಭಗೊಳ್ಳುವುದರಲ್ಲಿದೆ.

ಶಿಯಾ ಸುನ್ನೀ ಹೋರಾಟ

ಲಕ್ನೋದಲ್ಲಿ ಶಿಯಾ-ಸುನ್ನಿಗಳ ಜಗಳವು ನಡೆಯುತ್ತಿದೆ. ತಿರುಗೊಂದು ಹೋರಾಟದಲ್ಲಿ ಒಬ್ಬ ಶಿಯಾ ಪಂಗಡದವನು ಮಡಿದನು. ಇಬ್ಬರು ಗಾಯಗೊಂಡು ಆಸ್ಪತ್ರೆ ಸೇರಿದರು.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 26/1939

ರತ್ನಿ ಯಾನೆ ಪದ್ಮಾವತಿ ಬ್ಯಾ — ಅರ್ಜಿದಾರಳು

ಮತ್ತು

ಯು. ನಾಗಪ್ಪ ಕಾಮತ್ — ಎದ್ರಿ

ಇವರೊಳಗೆ

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನಂದರೆ —

ಅರ್ಜಿದಾರಳ ಗಂಡನ ಎದ್ರಿಯ ಮಗ U. ರಾಮರಾಯ ಕಾಮತನು ತಾ. 26-4-1939ರಲ್ಲಿ ಉಡುಪಿ ತಾಲೂಕು ಮೂಡನಿಡಂಬೂರು ಗ್ರಾಮದ ಕಾಡಬೆಟ್ಟನಲ್ಲಿ ಮೃತಪಟ್ಟಿರುತ್ತಾನೆ. ಸದ್ರಿ U. ರಾಮರಾಯ ಕಾಮತನು Empire of India Life Assvrance Co, Ltd. ಈ ಕಂಪೆನಿಯಲ್ಲಿ No. 130916ನೆ ಪೋಲಿಸಿಯ ಇನ್ಸೂರು ಮಾಡಿದ ಐವೇಜು ವ ಬೋನಸ್ ಸಹಾ (ರೂ. 803ನ್ನು) ಪಡೆಯುವರೆ ಸಕ್ಸೆಶನ್ ಸರ್ಟಿಫಿಕೇಟು ಕೊಡ್ಬೇಕಾಗಿ ಅರ್ಜಿದಾರಳು ದಾಖಲು ಮಾಡಿದ ಸದ್ರಿ ಅರ್ಜಿಯು ತಾ. 3-7-39ಕ್ಕೆ ತನಿಖೆ ಬಗ್ಗೆ ಇಡೋಣಾಗಿಯದೆ. ಆಕ್ಷೇಪ ಹೇಳತಕ್ಕವರು ಸದ್ರಿ ದಿವಸ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಯಾ ವಕೀಲರ ಮುಖಾಂತರ ಜಾಹೀರುಮಾಡಿಕೊಳ್ಳತಕ್ಕದ್ದು, ಎಂಬ ಸಂಗ್ತಿ ಈ ಮೂಲಕ ಪ್ರಕಟಿಸೋಣಾಗಿಯದೆ.

ಉಡುಪಿ 14-6-39 | M. Vittal Kamath B.A.B.L. *Pleader for Petitioner*

THE ASIAN ASSURANCE COMPANY, LTD.

ASIAN BUILDINGS — — BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48 40,801	9,24,965	24,50,234
1935	2,52,08,418	18,39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency termes etc:—
Sri. B NARAYAN SHETTY, Organizer, Brahmavar.
,, M. SHIVARAMA RAO, Organizer, Puttur.
OR
Sri. J. A. PUTRAN, Branch Manager, Mangalore.

THE

PANGAL NAYAK BANK

Estd.] LIMITED. [1920.

ದಿ ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್.

Paid up Capital Rs. 1,82,100/-. Reserves Rs. 2,02 800/-

PRINCIPAL OFFICE; COURT ROAD, UDIPI.

OTHER OFFICES;

UDIPI, MANGALORE, KATAPADI, & KANHANGAD.

Season Deposits so as to bear interest at 4per cent per annum till the end of June 1939 are accepted.

Cumulative Deposits are also received on the usual terms.

Banking business of every description is transacted. Further particulars may be had on application.

ದಿ ವಿಜಯ ಬೇಂಕ್, ಲಿಮಿಟೆಡ್, ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವಹಿವಾಟುಗಳು ಇಲ್ಲಿ ನಡಿಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಾತಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3 ತಿಂಗಳಿಗೆ	....	3½%
6 ,,	....	4%
1 ವರ್ಷಕ್ಕೆ	....	4½%
2 ,,	....	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ.

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತದೆ.

ತನ್ನ ಜೀವಿತದ ಅಸ್ತಮಾನ ಕಾಲವನ್ನು ನಿರೀಕ್ಷಿಸತೊಡಗಿದ ಲಾಲಸೀ ಮಾನವನೋರ್ವನಿಗೆ ಆಗಲೇ ಪ್ರಫುಲ್ಲಿತಳಾದ ಕಮಲಿನಿಯೊಂದಿಗೆ ಕ್ರೀಡಿಸುವ ಪ್ರಬಲವಾದ ಕಾಂಕ್ಷೆ!

ಅವನ ಈ ಕಾಂಕ್ಷೆಗೆ ಪ್ರೋತ್ಸಾಹವೀಯಲು ಸಾಕಷ್ಟು ಧನಬಲವೂ ಇತ್ತು, ಜನಬಲವೂ ಇತ್ತು! - - - - - ಅವನಾಕಾಂಕ್ಷೆ ಈಡೇರಿತೇ!

- - - - - ಆದರೇನು? ಸುಶಿಕ್ಷಿತ ನಾರಿಯವಳು "ನೀರಾ"! ತನ್ನ ಭಾವೀಜೀವನ ವೃಕ್ಷದ ಬುಡಕ್ಕೆ ಕೊಡಲಿಯನ್ನಿಕ್ಕಿದವರೆಲ್ಲರ ಮೇಲೆ ಪ್ರತೀಕಾರದ ದ್ವಂದ್ವ ಯುದ್ಧಕ್ಕಾರಂಭಿಸಿದಳು! ಅವಳ ಹೃದಯದಲ್ಲಿ ಪ್ರತೀಕಾರಾಗ್ನಿಯು ಭುಗಿಭುಗಿಲ್ಲನೆ ಉರಿಯಹತ್ತಿತು! — ಅದನ್ನು ಶಮನಮಾಡುವ ಶಕ್ತಿ ಅವರಾರಿಗೂ ಇಲ್ಲದಾಯಿತು - - - - - ಕೊನೆಗೆ ತ್ರಾಹಿ ಎಂದ ಮುದುಕ ವಕೀಲ!

'ನೀನು ನನ್ನ ಹೆಂಡತಿಯಲ್ಲ—ನನ್ನ ಮಗಳು' ಎಂದ.

'ನಾನು ನಿಮ್ಮ ಮಗಳೆ? ಈ ಮಾತನ್ನು ಜಗತ್ತು ಒಪ್ಪೀತೆ'? ಎಂದಳು ನೀರಾ!

ಒಪ್ಪೀತೆ? . . . . . ನಿಜವಾಗಿಯೂ ಈ ಮಾತನ್ನು ಜಗತ್ತು ಮಾನ್ಯ ಮಾಡೀತೆ? . . . . ಮಾನ್ಯ ಮಾಡದಿರಲಾರದು! ಅದರಲ್ಲೂ ಈ ಪ್ರಭಾತ ಚಿತ್ರವನ್ನು ನೋಡಿಯಂತೂ ಮಾನ್ಯ ಮಾಡಲೇ ಬೇಕು!

ಏಕೆ? --- --- --- ಹೇಗೆ?

ನೋಡಿರಿ! - - - ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ - - - ತಾ. ೨೦—೬—೧೯೩೯ರಿಂದ

(ಪಿ. ಸೂ. ಈಗ ಮಳೆ ವಿಶೇಷವಿರುವುದರಿಂದ ಪರಸ್ಥಳೀಕರ ಸಾಕರ್ಯಕ್ಕಾಗಿ ತಾರೀಕು ೧೭ರಿಂದ ೨೦ಕ್ಕೆ ಮುಂದುವರಿಸಿಯದೆ.)

ಪ್ರಭಾತ ಚಿತ್ರ ರತ್ನ! ಸಾವಿರಕ್ಕೊಂದು!

ದಿಗ್ದರ್ಶಕ ಶಾಂತಾರಾಮರ ಅತ್ಯಮೋಘ ದಿಗ್ದರ್ಶನ!

ದುನಿಯಾ - ನ - ಮಾನೆ (ಮರಾಠಿ)

ಅಥವಾ

ಕುಂಕುಂ

Prabhat's Outstanding hit!
Director Shantharam's crowning achievement!

UNEXPECTED

(MARATHI) *From 20-6-1939 At*

SRI RAMAKRISHNA THEATRE, UDIPI.

A man in the fag end of his life aims at making a girl in her teens a victim to satiate his earthly desires! He has money, he has men to reach his goal!........, The girl is his own!

Poor "Neera"!........but she is a spirited girl, backed up with sufficient education and ennobling ideals! She defies social conventions, and puts up a brave front to those who are responsible to have nipped her blooming life in the bud! Her heated breath tends to curb down the supremacy of the old Vakil! He surrenders in the end!

"You are not my wife. You are my daughter!" he declares!

"Am I?.......But will the world recognise this?" she interrogates anxiously!

Will the world recognise? . . . . Yes! It will, especially on seeing

"DUNIA-NA-MANE"

which you too must see!

ಮರೆಯಬೇಡಿರಿ! ತಾರೀಕು **18—6—39**ಕ್ಕೆ ಮರೆಯಬೇಡಿರಿ!

"ಹಿಂದೂ ಮುಸ್ಲಿಮ್ ಎಮೆಚೂರ್ಸ್" ಇವರ ಸಮಾಜದ ಚಿತ್ರದರ್ಪಣವೆಂದೆನಿಸಿರುವ

"ಸಂಸಾರ ಸಂಭ್ರಮ" ಎಂಬ ನಾಟಕವನ್ನು ನೋಡಲು ಮರೆಯದಿರಿ!

ಇದು ನೀವು ನಂಬುವಿರಾ? ಬೇಗ್‌ರಾಜ್ ಎಂಬ ದೇಹಲಿಯ ವರ್ತಕನು 'ಬಾಗ್‌ಬಾನ್' ಚಿತ್ರವನ್ನು 33 ಸಲ ನೋಡಿದನಂತೆ!

ಅಂದರೆ ಈ ಚಿತ್ರದ ಅಮ್ಲುತ ಪರಿಪೂರ್ಣತೆಯು ಎಷ್ಟರ ಮಟ್ಟಗಿರಬಹುದು? ಒಂದು ಉತ್ಕೃಷ್ಟ ಚಿತ್ರವೆನಿಸಲು ಯಾವ ಅಂಗಗಳು ಕೂಡಿರಬೇಕೋ ಅವೆಲ್ಲವೂ ಇದರಲ್ಲಿ ಅಡಗಿರುವುವು.

ತಾ. 13—6—39ರಿಂದ ದಿನಂಪ್ರತಿ 2 ದೇಖಾವೆಗಳು. ಘಂ. 6-15 & 9-30ಕ್ಕೆ.

(ಪ್ರತಿ ಆದಿತ್ಯವಾರ ಬುಧವಾರ ಮತ್ತು ಶನಿವಾರಗಳಲ್ಲಿ ಘಂ 3ಕ್ಕೆ ಮೆಟಿನಿ.)

ಉಡುಪಿ ಶ್ರೀರಾಮಕೃಷ್ಣ ಥಿಯೇಟರಿನಲ್ಲಿ.

ಜನರಲ್ ಫಿಲಂ ಕಂಪೆನಿಯ ಸಾಮಾಜಿಕ ಚಿತ್ರ!

ಬಾಗಬಾನ್ ಅಥವಾ ಗಾರ್ಡನರ್

ಅಮರಜ್ಯೋತಿಯಲ್ಲಿ ತನ್ನ ಕೀರ್ತಿ	ವ	ಂಗೀಯ ವಿಖ್ಯಾತ
ಯನ್ನು ಅಮರವನ್ನಾಗಿ ಮಾಡಿಕೊಂಡ	ನ	ಟ ಹಾಗೂ ದಿಗ್ದರ್ಶಕ ಕಾರ್ದೇರರಿಂದ ದಿಗ್ದರ್ಶಿಸಲ್ಪಟ್ಟ
'ನಾಂದ್ರೇಕಾರ್'ಮತ್ತು ಬಿಮಲಾಕುಮಾರಿ,	ಪಾ	ಲಕ ರಹಿತನಾಗಿ ಸನ್ಯಾಸಿಯಾಗಿದ್ದ
ಸಿತಾರಾ, ಯಾಸ್ಮಿನ್, ನಾಜಿರ್ ಮೊದ	ಲ	ಕ್ಷ್ಮೀಪುತ್ರನೋರ್ವನ
ಲಾದವರು ನಟಿಸಿರುವ	ಕ	ರುಣಾಜನಕ ಪ್ರೇಮಕಥೆ.

ದುರ್ಗಾ ಎಂದರೆ ಬಾಲ ವಿಧವೆಯೋರ್ವಳು. ಅವಳ ಬಾಳು ನಾಯಿಗಿಂತ ಕೀಳಾಗಿತ್ತು. ಸಮಾಜದ ಕಣ್ಣುಗಳೆಮರು ಅವಳು ತಿರಸ್ಕೃತಳು. ಮನೆ ಬಿಟ್ಟು ಕೆಳಗಿಳಿದರೆ ಚತುರ್ದಿಕ್ಕುಗಳು ಬುಸುಗುಟ್ಟುತ್ತಿದ್ದುವು..........'ನೀನು ವಿಧವೆ' ಎಂದು..........ಯಾವುದಕ್ಕಾಗಿ?

ಆ ವಿಧವೆಗೆ ತಂದೆಯಾದ ಸುಪರಿಂಟೆಂಡೆಂಟರ ಬಂಗ್ಲೆಯಲ್ಲಿ ಕೆಲಸಮಾಡುತ್ತಿದ್ದ ಕೈದಿ ಸ್ವರೂಪನಲ್ಲಿ ಆದರ ಉಂಟಾಗುವುದು!.... ....ಅದೆಂತು?

ವಿಧವೆಗೆ ಎರಡನೇ ಮದುವೆ ಎಂದು ಮಂಟಪ ಕಟ್ಟಿ, ಮೆರವಣಿಗೆ ಬಂದಾಗ ವಿಧವೆಯ ಮೊದಲನೇ ಗಂಡ ಸಿದ್ಧನಿದ್ದ........ಅವನಾರು? ಆಗೇನಾಯಿತು?

ಕೈದಿಯೇ ಸುಪರಿಂಟೆಂಡೆಂಟರ ಆದರದ ಅಳಿಯನಾಗುವನು...........ಹೇಗೆ?

Durga was a young widow! She was despised by soceity shirked by friends and relatives! Her only sin, perhapes was by being a 'widow'.

A widow indeed! But the very thought of the existence of a soft corner in her heart for the Jaiblird Sarup, who was toiling in the Bungalow of her father, a Police Superintendent, used to cause the crimson rise in her cheeks!........How?

Her remarriage was fixed! .....but in the marriage pendal her de ceased husband was again up to take her hands!... ......who was he? What happend next?

The Jailbird was the Superintendant's nephew! How?

See General films Ltd's Super social

BAG BHAN OR GARDNER

Featuring.

Nandrekar, of Amara gyoti fame, Bhimla Kumari, Sirat, Jasmin.

Synopsis:—A Sadu in the outskirts of Agra is preaching his desciple Sarup that earthly love is not worth thinking. But Sarup is not Convinced. In the great fair of Janmashtami, Sarup is hauled up by the Police as a bad character. He is sentenced to jail.

Sarup is posted to the garden duty in the Superintendant's Bngalow. There he comes into conflict with the jamadar, who knocks him senseless. Durga, the daughter of the Superintendant, happens to nurse him. There rises tender feelings between them.

Durga does not know either her marriage or the death of her husband in her child-hood. Her parents too are trying to get her remarried, throwing away social conventions. Ranjith, a worst ruffian, but wealthy, is a suitor to her hands. Durga pays no attention to him. To avoid other rivals coming to woo her he breaks the news of Durga's widowhood, so that, should she marry, she can find none other than Rangit and Rangit alone. Ranjit's marriage with Durga is subsequently approved of by her parents. What will happen next?

—.— ಕಥಾ ಸಾರಾಂಶ —.—

ಆಗ್ರಾ ಪಟ್ಟಣದ ಸಮೀಪದಲ್ಲಿ ಒಂದು ಗುಡಿಸಲು. ಅದರಲ್ಲಿ ಒಬ್ಬ ಸಾಧು ತನ್ನ ಶಿಷ್ಯನಾದ ಸ್ವರೂಪನಿಗೆ ಉಪನ್ಯಾಸ ಮಾಡುತ್ತಿರುವನು. ಆದರೆ ಸ್ವರೂಪನ ಮನಸ್ಸು, ಆತನ್ನ ಎಂದೂ ನೋಡದೆ ಇರುವ ತರುಣಿಯ ಮೇಲಿರುವುದು. ಈ ಇಹಲೋಕಸುಖವು ಬಹಳ ಅಸ್ಥಿರವೆಂದು ಹೇಳಿದರೂ ಸ್ವರೂಪನು ಕೇಳಲಿಲ್ಲವು. ಅದಕ್ಕೆ ಸ್ವರೂಪನನ್ನು ಜನ್ಮಾಷ್ಟಮಿಗಾಗಿ ನಡೆಯುವ ದೊಡ್ಡ ಜಾತ್ರೆಗೆ ಹೋಗಿಬರುವಂತೆ ಹೇಳುವನು.

ಜಾತ್ರೆಯಲ್ಲಿ ಸ್ವರೂಪನು ತಾನು ಎಂದೂ ನೋಡದೆ ಇರುವ ನೋಟಗಳನ್ನು ನೋಡಿ ಚಕಿತನಾಗುತ್ತಿರಲು, ಇವನು ಯಾರೋ ಪುಂಡನಿರಬಹುದೆಂದು ಅಲ್ಲಿನ ಪೋಲೀಸಿನವರು ಇವನನ್ನು ದಸ್ತಗಿರಿಮಾಡಿ ಶಿಕ್ಷೆಯನ್ನು ವಿಧಿಸಿ ಜೈಲಿಗೆ ಹಾಕುವರು.

ಕಾರಾಗೃಹದಲ್ಲಿ ಸ್ವರೂಪನು ಅನೇಕ ತರದ ಜನರೊಂದಿಗೆ ಸೇರಬೇಕಾಗುವುದು. ಜೈಲಿನ ಅಧಿಕಾರಿಯು ತೋಟದ ಕೆಲಸಮಾಡುವುದಕ್ಕಾಗಿ ಸ್ವರೂಪನನ್ನು ಕಳುಹಿಸುವನು. ಅಲ್ಲಿ ಕೆಲಸಮಾಡುತ್ತಿರುವಾಗ ಜಮೇದಾರನಿಗೂ ಸ್ವರೂಪನಿಗೂ ಜಗಳವಾಗಿ ಸ್ವರೂಪನು ಏಟಿನಿಂದ ಕೆಳಬೀಳಲು ಮೋಹನ್‌ಲಾಲನ ಮಗಳಾದ ದುರ್ಗೆಳು ಇದನ್ನು ನೋಡಿ ಸ್ವರೂಪನನ್ನು ಒಳಗೆ ಕರೆತರುವಳು. ಡಾಕ್ಟರ್ ಹಂಸರಾಜನು ಬಂದುನೋಡಿ ಚಿಕಿತ್ಸೆಮಾಡುವನು. ಸ್ವರೂಪನು ದುರ್ಗೆಳಿಗೆ ಚಿಕ್ಕಂದಿನಲ್ಲಿ ಮದುವೆಯಾಗಿ ಕಳೆದುಹೋದ ತನ್ನ ಮಗನಿರಬಹುದೆಂದು ಡಾಕ್ಟರರಿಗೆ ಸ್ವಲ್ಪ ಸಂಶಯವುಂಟಾಯಿತು.

ದುರ್ಗೆಳು ಚಿಕ್ಕಂದಿನಿಂದ ಎಲ್ಲಾ ಸುಖದಿಂದ ಬೆಳೆದು ಬಂದಳು. ಅವಳ ಗಂಡನು ಯಾರು, ಅವನು ಮರಣಹೊಂದಿದ ವಿಷಯವಾಗಲಿ ಆವಳಿಗೆ ತಿಳಿಯದು. ಈ ಬಾಲ ವಿಧವೆಯನ್ನು ಮತ್ತೆ ಪುನರ್ವಿವಾಹಮಾಡಬೇಕೆಂದು ತಂದೆತಾಯಿಗಳು ಯೋಚಿಸುತ್ತಿರುವರು. ಇದಕ್ಕೆ ಪುರೋಹಿತರು ಸಮ್ಮತಿಸಲಿಲ್ಲ.

ಡಾಕ್ಟರ್ ಹಂಸರಾಜನ ಅಣ್ಣನ ಮಗನಾದ ರಣಜಿತನು ದುರಾಚಾರಿಯಾಗಿ ಜೀವಮಾನವನ್ನು ಕಳೆಯುತ್ತ, ತಾನು ದುರ್ಗೆಳನ್ನು ಪ್ರೀತಿಸುವದಾಗಿ, ಅನೇಕ ಪ್ರೇಮಪತ್ರಗಳನ್ನು ಬರೆಯುವನು. ತನ್ನ ಧ್ಯೇಯವನ್ನು ಕೈಸೇರಿಸಲು, ದುರ್ಗೆಳು ವಿಧವೆಯೆಂದು ಎಲ್ಲರಲ್ಲಿ ಹೇಳುವನು. ಇತರ ಗೆಳೆಯರು ದುರ್ಗೆಳನ್ನು ತೊರೆದು ಹೋಗುವರು.

ಸ್ವರೂಪನು ಕಾರಾಗೃಹದಿಂದ ಬಿಡುಗಡೆ ಹೊಂದಿದರೂ ಮೋಹನ್‌ಲಾಲನು ತೋಟದಲ್ಲಿ ಕೆಲಸಮಾಡುತ್ತಲೇ ಇರುವನು. ಸ್ವರೂಪನು ದುರ್ಗೆಳಲ್ಲಿ ಬಹಳ ಅನುರಾಗವುಳ್ಳವನಾಗುವನು. ಆದರೆ ದುರ್ಗೆಳು ತಾನು ವಿಧವೆಯೆಂದು ತನ್ನನ್ನು ಮರೆತುಬಿಡುವಂತೆ ತಿಳಿಸುವಳು. ಇತ್ತ ರಣಜಿತ್‌ನಿಗೆ ದುರ್ಗೆಳನ್ನು ಕೊಟ್ಟು ಪುನರ್ವಿವಾಹಮಾಡುವುದಾಗಿ ನಿಶ್ಚಯಿಸುವರು,..........? ಮುಂದೇನು?

ಇನ್ಕಮ್ ಟೇಕ್ಸ್
ನೋಟೀಸು

1-4-'39ರಿಂದ ಇನ್ಕಮ್ ಟೇಕ್ಸ್ ಕಾಯಿದೆಯಲ್ಲಿ ಅನೇಕ ವ್ಯತ್ಯಾಸಗಳಾಗಿವೆ. ನೀವು ಕೊಡುವ ಟೇಕ್ಸನ್ನು ನಿಮ್ಮ ಉತ್ಪತ್ತಿಗೆ ಮಿಕ್ಕಿದ್ದಿದ್ದ್ದು ನಿಮಗೆ ಆ ಬಗ್ಗೆ ಅಸಮಾಧಾನವಿದ್ದರೆ ಕೆಳಗಿನ ವಿಳಾಸಕ್ಕೆ ಬರೆದು ತಕ್ಕ ಅನುಭವವನ್ನು ಪಡಕೊಂಡು ನಿಮ್ಮ ಟೇಕ್ಸನ್ನು ಕಡಿಮೆಮಾಡಿಕೊಳ್ಳಬಹುದು. ಸಂದರ್ಭಾನುಸಾರ ನೀವು ಟೇಕ್ಸ್ ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು.

S. S. Puranik

Govt-recognised
Income-Tax Practitioner
AUDITOR
P. O. Byndoor

THE
PREMIER BANK
OF INDIA, LIMITED.
Head Office: MADRAS.
Branches:
MADURA & NELLORE.
CHAIRMAN
Dr. U. L. Narayana Rao.
'Bhujanga Nivas' Madras.
FIXED DEPOSITS
are now received at the following
Rates:
For 6Months at 3½% P. A.
12Months at 4½% P. A.
24Months at 5% P. A.
(Interest Paid Half-yearly.)
S. V. Rau D. Com.,
Managing Director

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿ ೧ಕ್ಕೆ ೧-೦-೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ಕೊಲೆ ಸೀಸೆ 1ಕ್ಕೆ ರೂ. 5-0-0

'ಕಾಮಶಾಸ್ತ್ರ' ಧರ್ಮಾರ್ಥ. ಪೋಷ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೬೪ ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

WANTED District and Taluk a Organisers in Districts and Taluks of Karnataka on a monthly salary of Rs. 50/- and Rs. 20/-. Special facilities for initial business. Only influential and educated Organisers who can guarantee Rs. 50,000/- and Rs. 25,000/- per year need apply: Padubidri Bros., Bombay 8.

'ಸಿಲ್ವರ್ ಕಿಂಗ್' ಚಿತ್ರದಲ್ಲಿಯ ಒಂದು ದೃಶ್ಯ.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!

ಶ್ರೀ ಕೆ. ಹೊನ್ನಯ್ಯ ಶೆಟ್ಟರು
ಮಕ್ಕಳಿಗಾಗಿ ಬರೆದಿರುವ ಕವಿತಾಸಂಗ್ರಹವದು

ಮುಗುಳು

ಟೆಕ್ಸ್ಟ ಬುಕ್ ಕಮಿಟಿಯಿಂದ ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾಗಿದೆ.

ಇದರಲ್ಲಿ ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅತ್ಯನುಕೂಲವಾದ ಪದ್ಯಗಳೂ ಅಡಕವಾಗಿವೆ.
ಒಂದರಿಂದ ಐದನೇ ತರಗತಿ ವರೆಗಿನ ಚಿಕ್ಕ ಮಕ್ಕಳ ಅಕ್ಕರೆಯ ಪದ್ಯಪುಸ್ತಕವಿದು.
ಪ್ರತಿಗಳು ಎಲ್ಲೆಲ್ಲಿಯೂ ದೊರೆಯುತ್ತವೆ.
ವಿಕ್ರಯಾಧಿಕಾರಿಗಳು:—

ನವಭಾರತ ಪುಸ್ತಕ ಭಂಡಾರ, ಉಡುಪಿ.

Transport & Car Owners

ARE SPECIALLY INVITED TO VISIT
OUR SHOW ROOM
for economical transport maintenance.
CANARA AUTOMOBILES - - - - - MANGALORE.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಫಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩-೮-೦	೧೦೦ ಮಾತ್ರೆಗಳಿಗೆ ರೂ. ೨-೮-೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಉಡ್ಪಿ ಡಿ. ಮು. ಕೋರ್ಟು
O. S. No. 99/1934
ಸದ್ರಿ ಉಡ್ಪಿ ಡಿ. ಮು. ಕೋರ್ಟು ಪರ್ಸನಲ್ ಡಿಕ್ರಿ R. I. A No 586/1936
ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟು
R. E. P. No. 156/1939
8ನೇ ಪ್ರ ಶ್ರೀಧರನಾರಾಯಣಯ್ಯ—
ಅರ್ಜಿದಾರ
ಮತ್ತು
ಶ್ರೀಧರ ಶ್ರೀನಿವಾಸಯ್ಯ ಸಹಾ 2 ಜನರು—
ಎದ್ರಿರು.

ಇವರೊಳಗೆ:—

2ನೇ ಎದ್ರಿ ಶ್ರೀಧರಗೋವಿಂದಾಚಾರ್ಯ 1ನೇ ಎದ್ರಿ ಶ್ರೀಧರ ಶ್ರೀನಿವಾಸಯ್ಯನ ಮಗ; ಉಡ್ಪಿ ತಾಲೂಕು ನಡ್ಸಾಲು ಗ್ರಾಮದಲ್ಲಿರುವವ. ಹಾಲಿ ಮೈಸೂರು ಸ್ಟೇಟ್ ಹಾಸನ್ ಜಿಲ್ಲಾ ಚೆನ್ನರಾಯಪಟ್ನದಲ್ಲಿ ಪಿ. ಗೋವಿಂದರಾವ್ ಎಂಬವರ ವಾಸದಲ್ಲಿರುತ್ತಾನೆಂತ ತಿಳಿದುಬರುತ್ತದೆ.

ಈತಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ; ನಿಮ್ಮ ಬಾಬ್ತು ಎಂದ್ರೆ ಸಾಲವಸೂಲಿಕ್ಕೆ ಏಲಮಿನಿಂದ ಸದ್ರಿ ಏಲಮಿಗೆ ಕಾರಣವಾದ ಡಿಕ್ರಿಯು ಭವಿಷ್ಯ ಇತಾ ಇನ್ನು ಜಾಸ್ತಿಯಾಗಿ ನಡ್ಸಾಲು ಪಂಚಾಯತ ಕೋರ್ಟು ಸಿವಿಲ್ ವ್ಯಾಜ್ಯದ ನಂಬ್ರ 150/1928 ಈ ಕೋರ್ಟು R. E P. No. 506/1934ನೇ ದಾವೆಯ ಕ್ರೆಡಿಟಿಗೆ ಈ ಕೋರ್ಟು ಡಿಪ್ರೋಜಿಟನಲ್ಲಿರುವ ರೂಪಾಯಿ 32-9-0ನ್ನು Order XXI Rule 52ರ ಪ್ರಕಾರ ಜಪ್ತಿ ಮಾಡಿಸಿ ಸದ್ರಿ ಐವೇಜನ್ನು ಈ ಡಿಕ್ರಿಯು ಸಮಾಧಾನದ ಬಗ್ಗೆ ಚಕ್ಕು ಮೂಲಕ ಡಿಕ್ರಿದಾರಗೆ ವಸೂಲ ಕೊಡಿಸಬೇಕಾಗಿ ಅರ್ಜಿದಾರನು ದಾಕಲ್ ಮಾಡಿದ ಸದ್ರಿ R.E P. No. 156/1939ನೇ ಅಪ್ಲಿಕೇಶನಿನ ತಾ. 20-6-1939ಕ್ಕೆ ನಿಮಗೆ ನೋಟೀಸಿನ ಬಗ್ಗೆ ಇಡೋಣಾಗಿಯದೆ. ಈ ಕುರಿತು ನೀವೇನಾದರೂ ಆಕ್ಷೇಪಿಸುವದಿದ್ದರೆ ಸದ್ರಿ ತಾರೀಕಿನಲ್ಲಿ ಪೂರ್ವಾಹ್ನ ಘಂಟೆ 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ನೀವು ವ್ಯವಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಗೈರ್ಹಾಜರ್ ಮಾಡಿ ಕೋರ್ಟಿನವರಿಗೆ ಯುಕ್ತ ಕಂಡ ರೀತಿ ತೀರ್ಮಾನಿಸಲಾದೀತು ಎಂಬದಾಗಿ ಈ ಮೂಲಕ ನಿಮಗೆ ತಿಳಿಯಪಡಿಸಲಾಗುತ್ತದೆ.

By order of the court.

I. N. Naik,
Pleader for Petitioner.

ಕಾರ್ಕಳ, ತಾ. 1-6-1939.

ಸೌಭಾಗ್ಯಸಿದ್ಧಿ ತಾಯಿತ

ದೇಹಸಂಪತ್ತು, ಕುಟುಂಬದ ಸುಖ-ಸೌಖ್ಯ, ಉದ್ಯೋಗದಲ್ಲಿ ಯಶಸ್ಸು, ವಿದ್ಯೆಯಲ್ಲಿ ಜಯ, ಕೋರ್ಟು ವ್ಯವಹಾರದಲ್ಲಿ ಮೇಲುಗೈ, ದುರಾದೃಷ್ಟಗಳ ದುಷ್ಪರಿಣಾಮ ನಿವಾರಣೆ ಇನ್ನಿತರ ಸುಖ-ಸೌಭಾಗ್ಯಾದಿ ಲಾಭಕ್ಕಾಗಿ 'ಜಯ ವಶೀಕರಣ' ತಾಯಿತವನ್ನೇ ಧರಿಸಿರಿ.

ಕ್ರಯ: ರೂ. 2-8-0. ವಿ. ಪಿ. 0-7-0
ಪ್ರತ್ಯೇಕ, ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Hanuman Ahsramam,
Tiruttani, S. India.

WANTED: 80 candidates of both sexes who after expert training as film artistes and technicians are prepared to work for the College Film Company for two years on decent salary. Free hostel seat and other benefits. Illustrated Art Prospectus on 5 annas posatge. Prabhat Movietone College, Bombay 11

ವಾರದ ಭವಿಷ್ಯ

ಮುಂದಾಗುವುದನ್ನು ಇಂದೇ ತಿಳಿಯಿರಿ.

(ತಾ. 15-6-39ರಿಂದ ತಾ. 22-6-39ರ ವರೆಗೆ)

●

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ವಾರ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ. ಸಂ ನ.]

●

ಮೇಷರಾಶಿ—

ಪ್ರತಿಯೊಂದು ಕಾರ್ಯವನ್ನು ಪೂರ್ವಾಪರ ವಿಚಾರಮಾಡಿ ಲಾಭಾಲಾಭಗಳ ಕಡೆಗೆ ವಿಶೇಷ ಗಮನವಿಟ್ಟು ಮುಂದರಿಸುವ ಸ್ವಭಾವದವರಾಗಿದ್ದರೂ ನೀವೀ ವಾರದಲ್ಲಿ ಸದ್ಯದ ಗ್ರಹರ ಪರಿಸ್ಥಿತಿಯಿಂದಾಗಿ ಸೂಕ್ಷ್ಮ ವಿಚಾರ ಮಾಡದೆ ಕಾರ್ಯವನ್ನು ನಡೆಸುವಿರಿ. ಸ್ವಕೀಯ ಅಸಾಂಘಿಕ್ಯವನ್ನು ಪ್ರದರ್ಶಿಸಿಕೊಳ್ಳದೆ ಕೃತಕೃತ್ಯರಾಗಿ ಬಹಳ ಪಶ್ಚಾತ್ತಾಪ ಪಡುವಿರಿ. ಬಾಹ್ಯತಃ ನೀವು ಸುಖಿಗಳು ಸಂತೋಷಿಗಳು ಎಂದು ಇತರರಿಗೆ ಕಂಡುಬರುವಂತೆ ವರ್ತಿಸಿದರೂ ನಿಮ್ಮ ಅಂತರಂಗವು ಬಹಳ ನೋವುಗೊಳಗಾಗಿರುವುದು. ಒಂದೆಡೆ ಸ್ಥಿರವಾಗಿ ನಿಲ್ಲಲು ನಿಮ್ಮ ಮನಸ್ಸು ಕೇಳಲಿಕ್ಕಿಲ್ಲ. ಗೃಹಪರಿವಾರವು ಅಷ್ಟು ತೃಪ್ತಿಕರವಾಗಿರುವುದಿಲ್ಲ. ಆಯವ್ಯಯಗಳು ಸಮಾನವಾಗಿರುವುದರಿಂದ ಹಣದ ತಗಾದೆಯುಂಟಾಗಲಾರದು. ವಿದ್ಯಾಭಿಲಾಷಿಗಳಿಗೂ ಉದ್ಯೋಗಿಗಳಿಗೂ ಮತ್ತು ಕಾಯಕಸ್ಥರಿಗೂ ಈ ವಾರವು ಹಿತಕರವಾಗಿಲ್ಲವು. ತಾ. 18-19 ಈ ದಿನಗಳು ಉಳಿದ ದಿನಗಳಿಂದ ಉತ್ತಮಗಳಾಗಿವೆ.

ವೃಷಭರಾಶಿ—

ಅಗ್ನಿಗೆ ಊರ್ಧ್ವಗತಿಯೂ ಮತ್ತು ಜಲಕ್ಕೆ ಅಧೋಗಮನವೂ ಹೇಗೆ ನಿಸರ್ಗಜನ್ಯವಾದ ಗುಣವಾಗಿರುವುದೋ ಅಂತೆಯೇ ಮನಸ್ಸಿಗೂ ಕೂಡ ಚಂಚಲತ್ವವು ನೈಸರ್ಗಿಕ ಗುಣವಾಗಿರುವುದು. ಈ ವಿಷಯವನ್ನೇ ಗೀತೆಯಲ್ಲಿ ಹೇಳಿರುವನು, "ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ದೃಢಂ". ಆದರೂ ಜಿತೇಂದ್ರಿಯರು ಧೀರರು ಅದನ್ನು ಬಲತ್ಕಾರದಿಂದ ಸ್ವಾಧೀನದಲ್ಲಿಟ್ಟುಕೊಳ್ಳುವರು. ನಿಮ್ಮಲ್ಲಿ ಇಂತಹ ಇಂದ್ರಿಯ ನಿಗ್ರಹ ಶಕ್ತಿಯು ಇರುವುದಾದರೆ ಈ ವಾರವು ಬಹಳ ಅನುಕೂಲಕಾರಿಯಾಗಿ ಪರಿಣಮಿಸೀತು. ಆರೋಗ್ಯವೂ ಆದಾಯವೂ ಉತ್ತಮವಾಗಿರುವುದು. ಭೋಗಾಭಿಲಾಷಿಗಳಾದ ನಿಮಗೆ ಏತತ್ಕಾಲದಲ್ಲಿ ಭೋಗ್ಯ ವಸ್ತುಗಳು ಅನಾಯಾಸವಾಗಿ ದೊರೆವವು. ಶತ್ರುಗಳಿಂದಾಗಿ ಕೆಲವು ಕಾರ್ಯಗಳಲ್ಲಿ ಪರಾಜಯವಾಗಲಿದೆ. ಇದರಿಂದ ಮಾನಸಿಕ ವ್ಯಥೆಯು ದ್ವಿಗುಣಿತವಾಗುವುದು. ತಾ. 18-19-22 ಈ ದಿನಗಳು ಪ್ರತಿಕೂಲಗಳಾಗಿವೆ.

ಮಿಥುನರಾಶಿ—

ಕಾರ್ಯಾರಂಭವನ್ನು ಎಲ್ಲರೂ ಮಾಡುವರು, ತತ್ಸಮಾಪ್ತಿಯನ್ನು ಮಾಡುವವರ ಸಂಖ್ಯೆ ತೀರಾ ವಿರಳ. ಆರಬ್ಧಾಂತಗಾಮಿತ್ವವು ಸಾಮಾನ್ಯ ಜನರಲ್ಲಿರತಕ್ಕ ಗುಣವಲ್ಲವು. ಈ ಸಲುವಾಗಿಯೇ ಪೂರ್ವಜರು ಅಡಿ ತಪ್ಪಬೇಡ, ಓಡಿ ಬೀಳಬೇಡ ಎಂಬುದಾಗಿ ಹೇಳಿರುವರು. ಅಂದರೆ ಹಿಡಿದ ಕಾರ್ಯವನ್ನು ಎಷ್ಟೇ ಕಷ್ಟ ಬಂದರೂ ಸಹಿಸಿಕೊಂಡು ಅದನ್ನು ಪೂರ್ತಿಗೊಳಿಸು ಎಂಬುದೇ ಇದರ ಮುಖ್ಯ ತಾತ್ಪರ್ಯ. ಈ ವಾರದಲ್ಲಿ ಗ್ರಹಾನುಕೂಲ್ಯವು ನಿಮಗೆ ಹೆಚ್ಚಿನದಾಗಿಲ್ಲದಿರುವುದರಿಂದ ಶತ್ರುಪೀಡೆಯಿಂದಲೂ ಸ್ವಯಮಶಕ್ತತೆಯಿಂದಲೂ ಹಿಡಿದ ಕಾರ್ಯವನ್ನು ಅರ್ಧದಲ್ಲೇ ಬಿಟ್ಟುಬಿಡುವಿರಿ. ಈ ಭಾಗದಲ್ಲಿ ಕೆಲವಂಶ ಧನವ್ಯಯವಾದದ್ದೇ ನಿಮಗೆ ಸಿಕ್ಕಿದ ಪ್ರತಿಫಲವೆನ್ನಬಹುದು; ವ್ಯವಹಾರ ಭಾಗದಲ್ಲಿ ಜನರೊಡನೆ ಹೆಚ್ಚಾಗಿ ಕಲಹವಾಗುವ ಸಂಭವವಿದೆ. ಇದಕ್ಕೆ ನಿಮ್ಮಲ್ಲಿನ ಮುಂಗೋಪವೇ ಕಾರಣವೆಂದೂಹಿಸಬೇಕಾಗಿದೆ. ದೈನ್ಯಂದಿನದ ಖರ್ಚು ವೆಚ್ಚಗಳಿಗೆ ಸಾಕಷ್ಟು ಉತ್ಪತ್ತಿಯು ಸಿಗಲಿರುವುದು. ತಾ. 15-16-17 ಮತ್ತು 20-21 ಈ ದಿನಗಳು ಹಿತಕರವಲ್ಲವು.

ಕರ್ಕಾಟಕರಾಶಿ—

ನಿಮ್ಮ ಆರ್ಥಿಕ ಭಾಗವು ಈ ವಾರದಲ್ಲಿ ಬಹಳ ಉತ್ತಮ ಸ್ಥಿತಿಗೆ ಬರುವುದು. ಯಾವಾಗಲೂ ಧನವು ನಿಮ್ಮಲ್ಲಿ ಓಡಾಡುವುದು. ಆದರೂ ಇಷ್ಟಗಳನ್ನು ಸಂಗ್ರಹಿಸಿಡಲು ನಿಮಗನುಕೂಲವಾಗಲೊಲ್ಲದೆ ಹೆಚ್ಚಿನ ಭಾಗವನ್ನು ಸತ್ಕ್ರಿಯಾ ರೂಪದಲ್ಲಿ ಖರ್ಚು ಮಾಡುವಿರಿ. ಇನ್ನು ಕೆಲವು ಭಾಗವು ಸ್ವಸುಖಕ್ಕಾಗಿ ವಿನಿಯೋಗಿಸಲಾಗುವುದು. ನೀವು ಒಳ್ಳೆಯ ಚತುರರೆನಿಸುವಿರಿ. ಆದರೆ ಕುಟುಂಬ ಕಲಹದಿಂದ ಪಾರಾಗುವುದು ನಿಮಗೆ ಶಕ್ಯವಲ್ಲ. ಮಿತ್ರ ಸಹಾಯವು ಉತ್ತಮವಾಗಿದ್ದರೂ ಶತ್ರು ಜನರ ಉಪದ್ರವವನ್ನು ಇದಿರಿಸುವಷ್ಟು ಶಕ್ತವಾಗಿಲ್ಲವು. ಅಕಾರ್ಯಕರಣದಿಂದಾಗಿ ಅಪವಾದಕ್ಕೆ ಗುರಿಯಾಗುವ ಸಂಭವವಿದೆ. ಆರೋಗ್ಯವು ತೃಪ್ತಿಕರವಾಗಿಲ್ಲವು. ವಿದ್ಯಾಭಿಲಾಷಿಗಳಿಗೆ ಕಾಲವು ಪ್ರತಿಕೂಲವಾಗಿದೆ. ತಾ. 18-19 ಮತ್ತು 22 ಈ ದಿನಗಳಲ್ಲಿ ಧನವ್ಯಯ ಕಾರ್ಯ ಹಾನಿ, ಮಾನಚ್ಯುತಿ ಇತ್ಯಾದಿಗಳು ಒದಗಲಿವೆ.

ಸಿಂಹರಾಶಿ—

ಮೃಗರಾಜನೂ ಸಿಂಹ, ನಿಮ್ಮ ರಾಶಿಯ ಹೆಸರೂ ಸಿಂಹ, ಅಂದರೆ ಮೃಗರಾಜನಾದ ಸಿಂಹವು ಮೃಗಗಳ ವಿಚಾರದಲ್ಲಿ ಹೇಗಿರುವುದೋ ಅಂತೆಯೇ ನೀವೂ ಪುರುಷ ಸಿಂಹರಾಗಿರುವಿರಿ. ಆದರೇನು? ಕಾಲಗತಿಯು ವಿಪರೀತ ಸ್ಥಿತಿಗೆ ಬಂದಿರುವುದರಿಂದಲೂ ನಿಮ್ಮ ಮೇಲೆ ಗುರ್ವನುಗ್ರಹವೂ ಕೂಡ ಇಲ್ಲದಿರುವುದರಿಂದ ಲೋಕದ್ಯ ನೀವು ಮುದಿಸಿಂಹದಂತಾಗಿರುವಿರಿ. ರಾಜಕೀಯ ವಿಚಾರದಲ್ಲಿ ಕೋರ್ಟು ಕೆಲಸಗಳಲ್ಲಿ ಕಷ್ಟದಿಂದ ಯಶೋಲಾಭವಿದೆ. ಧನವಾಗ ' ಪ್ರಾಪ್ತಿಯಿದೆ. ವಿಜಯದ ಚಿಹ್ನೆಗಳೂ ಸಾಕಷ್ಟಿವೆ. ಶತ್ರು ಜನರು ಮೈತ್ರೀಭಾವವನ್ನು ತಳೆವುದರಿಂದ ಮಿತ್ರವೃಂದವು ಇನ್ನಷ್ಟು ವೃದ್ಧಿಗೊಳ್ಳುವುದು. ಆರೋಗ್ಯವು ಮಾತ್ರ ಸಂಪೂರ್ಣ ಕೆಡಲಿದೆ. ಧರ್ಮಬುದ್ಧಿಯು ನಿಮ್ಮಲ್ಲಿ ಶಿಥಿಲವಾಗುತ್ತಿರುವುದು. ವ್ಯಾಪಾರದಲ್ಲಿ ಕೆಲಹ ನಷ್ಟಗಳು ದಿನೇದಿನೇ ಹೆಚ್ಚುವವು. ತಾ. 20-21 ಈ ದಿನಗಳು ವಿಶೇಷ ಹಾನಿಕಾರಕಗಳಾಗಿವೆ.

ಕನ್ಯಾರಾಶಿ—

ಈ ವಾರವು ಇಷ್ಟಾರ್ಥಪೂರಕವಾಗಿ ಪರಿಣಮಿಸದಿರದು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಕಲ ವಿಧದಿಂದಲೂ ಅನುಕೂಲವಿರುವುದು. ಒಳ್ಳೇ ಕೀರ್ತಿಗೆ ಪಾತ್ರರಾಗುವರು. ಮನಸ್ಸಿನಲ್ಲಿ ನೆನೆದ ಕಾರ್ಯಗಳು ಅನಾಯಾಸವಾಗಿ ಕಾರ್ಯರೂಪಕ್ಕೆ ಬರುವವು. ಶತ್ರುಗಳು ದಿನೇದಿನೇ ಕ್ಷೀಣ ದಸೆಯನ್ನು ಹೊಂದುತ್ತಿರುವರು. ಗೃಹಕೃತ್ಯದ ವಿಚಾರದಲ್ಲಿ ಸಕಲ ಭಾಗಗಳೂ ಸ್ವಾಧೀನವಾಗಿದ್ದರೂ ಅಪತ್ಯ ವಿಚಾರದಲ್ಲಿ ನಿಮಗೆ ಶೋಕವುಂಟಾಗುವುದು. ಕೆಲಸ ನಿಮಿತ್ತವಾಗಿ ರಾಜದ್ವಾರಕ್ಕೆ ಪ್ರವೇಶಿಸಬೇಕಾದ ಪ್ರಸಂಗಗಳೂ ಒದಗಬಹುದು. ಬೇಸಾಯಗಾರರಿಗೂ ಸೇವಾಜೀವಿಗಳಿಗೂ ಮತ್ತು ಯುವಜನವೃಂದಕ್ಕೂ ಕಾಲವು ಅನುಕೂಲವಿಲ್ಲವು. ನಿಮ್ಮ ಆದಾಯವು ಅತ್ಯುತ್ತಮ ಸ್ಥಿತಿಯಲ್ಲಿದ್ದರೂ ಕೆಲವೊಂದು ಅಕಾರ್ಯದಲ್ಲಿ ವ್ಯಯವಾಗತಕ್ಕ ಧನದಿಂದ ನಿಮ್ಮ ಅಂತರಾತ್ಮವು ಬಹಳ ವ್ಯಥೆಗೊಳ್ಳುವುದು. ತಾ. 18ರಿಂದ 21ರ ವರೆಗಿನ ದಿನಗಳು ಸರ್ವಾರ್ಥಸಿದ್ಧಿಪ್ರದಗಳಾಗಿವೆ.

ತುಲಾರಾಶಿ—

ಕೇವಲ ಶುಕ್ರಾಚಾರ್ಯರು ಮಾತ್ರ ನಿಮ್ಮ ಮೇಲೆ ಅನುಗ್ರಹಮಾಡಲು ಮುಂದೆ ಬಂದಿರುವರು. ಇತರ ಗ್ರಹರೆಲ್ಲರೂ ಒಕ್ಕಟ್ಟಾಗಿಯೋ ಎಂಬಂತೆ ಪ್ರತಿಕೂಲಸ್ಥಾನವನ್ನೇ ಹೊಂದಿರುವರು. ಆದಕಾರಣ ನಿಮ್ಮ ಮಿತ್ರಜನರೂ ನಿಮ್ಮನ್ನು ತ್ಯಜಿಸುವರು ಶತ್ರುಗಳೂ ಅವರ ಪೀಡೆಯೂ ದಿನ ದಿನಕ್ಕೂ ವೃದ್ಧಿ ಹೊಂದುತ್ತಾ ಬರುತ್ತಿದೆ. ಅದಕ್ಕನುಕೂಲವಾಗಿಯೋ ಎಂಬಂತೆ ದುರ್ಜನರ ಸಂಸರ್ಗವೂ ಹೆಚ್ಚುತ್ತಾ ಬರುತ್ತಿದೆ. ಲೇವಾದೇವಿ ವಿಷಯವಾದ ಕಲಹವೆದ್ದು ಕೋರ್ಟಿಗೆ ಹೋಗುವ ಪ್ರಕರಣವೂ ಬರುವ ಸಂಭವವಿದೆ. ಕ್ಷಣಕಾಲ ಒಂದೆಡೆ ಸ್ಥಿರವಾಗಿ ನಿಲ್ಲಲು ನಿಮಗೆ ಅನುಕೂಲವಿಲ್ಲವು. ಮನೋವ್ಯಥೆಯಿಂದ ಅನ್ನನೀರು ಕೂಡಾ ಸೇರದು; ನಿದ್ರೆಯೂ ಬಾರದು. ಇದರಿಂದ ಅನಾರೋಗ್ಯವೂ ಕಾಂತಿಕ್ಷಯವೂ ಉಂಟಾಗುವುದು. ವಾರಾಂತ್ಯದ ಮೂರು ದಿನಗಳು ಹೆಚ್ಚಿನ ಹಾನಿಕಾರಿಗಳಾಗಲಾರವು.

ವೃಶ್ಚಿಕರಾಶಿ—

"ಪ್ರಾಯೇಣ ಸಾಮಗ್ರ್ಯವಿಧೌ ಗುಣಾನಾಂ ಪರಾಙ್ಮುಖೀ ವಿಶ್ವಸೃಜಃ ಪ್ರವೃತ್ತಿಃ" ಎಂಬಂತೆ ಬ್ರಹ್ಮಸೃಷ್ಟಿಯ ಕ್ರಮವೇ ಈ ತೆರನಾಗಿರುವುದು. ಒಂದು ಕಡೆಯಲ್ಲಿ ಎಲ್ಲಾ ಒಳ್ಳೆಯ ಪದಾರ್ಥಗಳನ್ನು ಜೋಡಿಸಿ, ಒಂದೆರಡು ದುಷ್ಟವಾದವುಗಳನ್ನು ಸೇರಿಸುವುದು ಆತನ ಧರ್ಮವಾಗಿರುವುದು. ಹೇಗೆಂದರೆ ಸರ್ವೈಶ್ವರ್ಯಗಳಿಂದ ಕೂಡಿದವನಿಗೆ ಪುತ್ರಸಂಪತ್ತೊಂದಿಲ್ಲದಿರುವಿಕೆ, ಇತರ ಎಲ್ಲಾ ಸಂಪತ್ತುಗಳಿದ್ದರೂ ವಿದ್ಯಾವಿಹೀನನಾಗಿರುವಿಕೆ ಇತ್ಯಾದಿ. ಹಾಗೆಯೇ ನಿಮ್ಮಲ್ಲಿ ಸಕಲ ಸಂಪತ್ತೂ ಅನುಕೂಲಗಳೂ ಚೆನ್ನಾಗಿವೆ. ಆದರೂ ನಿಮಗೆ ಸಂಸಾರದಲ್ಲೇ ಕೆಲವೊಮ್ಮೆ ವಿರಕ್ತಿ ಬರುವುದು. ಕಾರಣ ಅರ್ಧಾಂಗಿಯು ಪ್ರತಿಕೂಲಳಾಗಿ ವರ್ತಿಸುವುದರಿಂದ ಸ್ತ್ರೀವರ್ಗವನ್ನೇ ನೀವು ದ್ವೇಷಿಸುವಿರಿ. ಅಂತೂ ನಿಮಗೆ ಗೃಹಕೃತ್ಯದಲ್ಲಿ ತೃಪ್ತಿಯಿಲ್ಲವು. ಇತರ ಭಾಗದಲ್ಲಿ ಅಂದರೆ ಹಿಡಿದ ಕಾರ್ಯದಲ್ಲಿ ಜಯಲಾಭಗಳು ಉತ್ತಮವಿವೆ. ವಿದ್ಯಾರ್ಥಿಗಳಿಗೆ ಕಾಲವು ಅತ್ಯುಪಯುಕ್ತವಾಗಿದೆ, ತಾ 18ರಿಂದ 21ರ ವರೆಗಿನ ದಿನಗಳು ಚೆನ್ನಾಗಿಲ್ಲವು.

ಧನುರಾಶಿ—

"ಅತ್ಯುತ್ಕಟೈಃ ಪುಣ್ಯಪಾಪೈರಿಹೈವ ಫಲಮಶ್ನುತೇ" ಎಂಬ ನ್ಯಾಯದಂತೆ ನರನು ತಾನು ಮಾಡತಕ್ಕ ಸುಕೃತ ದುಷ್ಕೃತ ರೂಪಗಳಾದ ಕರ್ಮಗಳು ಅತ್ಯಂತ ಬಲೀಯಗಳಾಗಿದ್ದರೆ ಅವುಗಳ ಫಲವನ್ನು ಕೂಡ ಇಹದಲ್ಲೇ ಭೋಗಿಸುವನು. ತದ್ರೀತಿಯಲ್ಲಿ ನಿಮ್ಮ ಇಹದ ದುಷ್ಕೃತಕರ್ಮವಿಶೇಷದಿಂದಲೋ ಎಂಬಂತೆ ಸಕಲ ಗ್ರಹರೂ ಪ್ರತಿಕೂಲರಾಗಿ ನಿಂತಿರುವರು. ಅಂದಮೇಲೆ ನಿಮ್ಮ ಪರಿಸ್ಥಿತಿ ಹೇಗೆ ನಿಲ್ಲಲಿದೆ, ಏನೇನು ಅನಿಷ್ಟಗಳು ನರನಿಗೆ ಸಂಭವಿಸಲು ಶಕ್ಯವಿದೆಯೋ ಸಾಮಾನ್ಯ ಅವೆಲ್ಲವುಗಳ ಅನುಭವವನ್ನೂ ಸದ್ಯ ನೀವು ಹೊಂದುವಿರೆಂದರೆ ಅದು ಅತಿಶಯೋಕ್ತಿಯಾಗದು. ಮುಂದೆ ಸಂಭವಿಸಲಿರುವ ಈ ಹಲವಾರು ದೋಷಗಳಲ್ಲಿ ಕೆಲವುಗಳಿಂದಾದರೂ ನೀವು ಮುಕ್ತರಾಗಬೇಕೆಂದಿದ್ದರೆ ಇಂದೇ ಆರಂಭಿಸಿರಿ ಈ ನವಗ್ರಹರಸ್ತುತಿಜಪಾದಿಗಳಿಗೆ. ನಿಮ್ಮ ಸ್ತೋತ್ರಾದಿಗಳಿಂದ ತುಷ್ಟರಾದೀ ಗ್ರಹರು ಶುಭವನ್ನುಂಟುಮಾಡದಿದ್ದರೂ ಅಶುಭವನ್ನು ಮಾಡದೆ ಉದಾಸೀನರಾದಾರು. ತಾ. 15ರಿಂದ 19ರ ವರೆಗೂ ಸ್ತುತಿ ಜಪಗಳಿಗೆ ಅನುಕೂಲದಿನವಾಗಿರುತ್ತದೆ.

ಮಕರರಾಶಿ—

ಹಿಂದಿನ ಪರಿಸ್ಥಿತಿಗಿಂತ ಇಂದಿನ ದಿನವು ನಿಮ್ಮ ಭಾಗಕ್ಕೆ ಎಷ್ಟೋ ಉತ್ತಮಸ್ಥಿತಿಗೆ ಬಂದಿರುವುದು. ಶುಭಾಶುಭಗ್ರಹರು ಸಮಾನ ಬಲರಾಗಿ ನಿಂತಿರುವುದರಿಂದ ಲಾಭಾಲಾಭಗಳೂ ಜಯಾಪಜಯಗಳೂ ಸಮಾನವಾಗಿ ಪರಿಣಮಿಸಲಿವೆ. ಉಷ್ಣಪಿತ್ಥ ದೋಷದಿಂದುಂಟಾಗಿರುವ ಶರೀರಪೀಡೆಯು ಬಹ್ವಂಶ ಗುಣವಾಗಲಿದೆ. ಶತ್ರುಗಳು ಕ್ಷೀಣರಾಗುತ್ತಿರುವರು. ಕಿಂಚಿದಿಷ್ಟಾರ್ಥಗಳ ಪ್ರಾಪ್ತಿಯಿಂದಾಗಿ ಮನಸ್ಸಿಗೊಂದು ತೆರನಾದ ಸಂತೋಷವಿಹುದು. ಆರ್ಥಿಕ ಪರಿಸ್ಥಿತಿಯಲ್ಲೂ ಕೂಡ ಬಹಳ ಸುಧಾರಣೆಯಾಗುವುದು. ಆದರೂ ಕೆಲವೊಂದು ಮುಖ್ಯ ಕಾರ್ಯಗಳು ಹಾನಿಹೊಂದುವುದರಿಂದ ಮನಸ್ಸಿಗೆ ಹೆಚ್ಚಿನ ವೇದನೆಯುಂಟಾಗಲಿದೆ. ಮನಸ್ಸು ನೈಸರ್ಗಿಕವಾದ ಚಾಂಚಲ್ಯವನ್ನು ಹೊಂದುವುದರಿಂದ ಕಾರ್ಯಕರ್ತೃತ್ವಶಕ್ತಿಯು ಕ್ಷೀಣವಾಗುವುದು. ತಾ. 18ರಿಂದ 21ರ ವರೆಗಿನ ದಿನಗಳು ಅನುಕೂಲಕಾರಿಗಳಾಗಿವೆ.

ಕುಂಭರಾಶಿ—

ಕುಟುಂಬಕಲಹವು ವೃದ್ಧಿಯಾಗಲಿದೆ. ಗಂಡ ಹೆಂಡರಿಗೂ ತಂದೆಮಕ್ಕಳಿಗೂ ಜಗಳವಾಗುವುದು. ಕೋರ್ಟುಕೆಲಸಗಳಲ್ಲಿ ಅಪಜಯ ಮಾತ್ರವಲ್ಲ ಮಾನಭಂಗದ ಪ್ರಸಂಗವೂ ಕೂಡ ಒದಗೀತು. ಶರೀರದಲ್ಲಿ ಒಂದಲ್ಲೊಂದು ವ್ಯಾಧಿಯು ಇದ್ದೇ ಇರುವುದು. ಎಲ್ಲಾ ಭಾಗಗಳಲ್ಲೂ ಖರ್ಚು ಮಿತಿಗಿಂತ ಅಧಿಕವಾಗಿ ವ್ಯಯವಾಗಲಿದೆ. ಆದರೂ ಆ ಬಗ್ಗೆ ನೀವು ಚಿಂತಿಸಬೇಕಾಗಿಲ್ಲ. ತಕ್ಕ ಉತ್ಪತ್ತಿಯು ಒಂದಲ್ಲೊಂದು ರೀತಿಯಿಂದ ದೊರೆಯುವುದು. ಕ್ಷುದ್ರ ಕಾರಣಗಳಿಂದಾಗಿ ಸ್ತ್ರೀಯರೊಡನೆ ಕಲಹವಾಗಲಿದೆ ಆದಕಾರಣ ವ್ಯವಹಾರದಲ್ಲಿ ವಿಶೇಷ ಜಾಗರೂಕರಾಗಿರಿ. ಗೃಹಕ್ಕಾಗಿ ಬೇಕಾದ ಗೃಹೋಪಕರಣಗಳು ಸಂಪೂರ್ಣವಾಗಿರುವುವು. ಏತತ್ಕಾಲದಲ್ಲಿ ನಿಮಗಿಂತಲೂ ಬಲದಲ್ಲೂ ಧನದಲ್ಲೂ ಅಧಿಕರಾದ ಶತ್ರುಗಳನ್ನು ಸಿಂಹದ ಮರಿಯು ಮದಭರಿತ ಆನೆಯನ್ನೆಂಟಂತೆ ಮರ್ದಿಸಲು ಶಕ್ತರಾಗಿರುವಿರಿ. ತಾ. 20, 21, 22, ಈ ದಿನಗಳು ಎಲ್ಲಾ ಕಾರ್ಯಗಳಿಗೂ ಉಪಯುಕ್ತ ದಿನಗಳಾಗಿವೆ.

ಮೀನರಾಶಿ—

ಸದ್ಯದಲ್ಲಿ ನೀವು ಪ್ರತಿಯೊಂದು ಕಾರ್ಯದಲ್ಲಿಯೂ ನಿರೀಕ್ಷಿತ ಲಾಭಾಲಾಭಗಳನ್ನು ಆಮೂಲಾಗ್ರವಾಗಿ ವಿಚಾರಿಸಿ ಮುಂದರಿಸಿರಿ. ನಿಮ್ಮಲ್ಲಿ ಸಾಕಷ್ಟು ಶಕ್ತಿಯಿಲ್ಲದಲ್ಲಿ ಅನ್ಯರ ಸಹಾಯವನ್ನು ಬಯಸಿರಿ. ನೀವು ಮಾಡತಕ್ಕ ಕಾರ್ಯದಲ್ಲಿ ಧನಪ್ರಾಪ್ತಿಯು ಬಹಳೇ ಉತ್ತಮವಾಗಿರುವುದಾದರೂ ಸ್ವಲ್ಪ ವಿಚಾರಹೀನರಾಗಿ ವರ್ತಿಸಿದಲ್ಲಿ ಅವೆಲ್ಲವೂ ವ್ಯಯವಾಗಿ ಎದೆಸೆಯುವದರಿಂದ ಸಾಲಮಾಡಬೇಕಾಗಿ ಬಂದೀತು. ಕೆಲವೊಂದು ಇಷ್ಟವಸ್ತುಗಳು ಲಭಿಸದಿದ್ದುದಕ್ಕಾಗಿ ವೃಥಾ ಚಿಂತಿಸುವಿರಿ. ಕುಟುಂಬಿಕರು ನಿಮಗೆ ಪ್ರಕೃತ ಸಹಾಯಕರಾಗಿರುವರು. ಅಂತೂ ಜನರಿಂದ ಮಾನಮನ್ನಣೆಗಳನ್ನು ಪಡೆದು ಕೀರ್ತಿಶಾಲಿಗಳಾಗುವಿರಿ. ವಿದ್ಯೋಪಜೀವಿಗಳಿಗೂ ವ್ಯಾಪಾರೀ ಜನತೆಗೂ ಕರುಣಜನವೃಂದಕ್ಕೂ ಹೆಚ್ಚಿನ ಇಷ್ಟಸಿದ್ಧಿಗಳು ನೆರವೇರಲಿರುವವು. ತಾ. 15, 16, 17, ಮತ್ತು 21 ಈ ದಿನಗಳು ಇಷ್ಟಾರ್ಥಗಳನ್ನು ಪೂರೈಸಲು ಸಮರ್ಥಗಳಾಗಿವೆ.



ಎಲ್ಲಾ ಔಷಧಿ ಅಂಗಡಿಗಳಲ್ಲೂ ಸಿಗುತ್ತದೆ. ವಿವರಣಾ ಪತ್ರಿಕೆ ಉಚಿತ.
ತಯಾರಕರು:— ಆಯುರ್ವೇದಾಶ್ರಮಂ, ಪೋ. ಬಾಕ್ಸ್ ೨೮೭, ಮದ್ರಾಸ್
ಸ್ಟಾಕಿಸ್ಟರು:— ಪೋಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಅಪ್ಪರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಸುಸೋಹವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು. ದ. ಕ.

ಮೈಸೂರು ಸ್ಟೇಟಿನ ಏಜಂಟರು:— ಶ್ರೀ. ಕೆ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,

President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K R. K. SHET

Oppesite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚೆನ್ನಾಗಿ (first quality, selected) ಇರುವ ನಮ್ಮಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇವನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,

ಗವರ್ನ್‌ಮೆಂಟ್ ಕೊಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ

ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,

Hampankatte, **MANGALORE.**

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ. ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1ಕ್ಕೆ 12 ಆಣೆ, ಟ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ,

ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ. ಉಡುಪಿ.**

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಡುನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ ಬಹಿಷ್ಠೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತುಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ್ **"ಶ್ರೀಕರ ಕಸ್ತೂರೀ ಮಾತ್ರೆ"** ಮತ್ತು **"ಶ್ರೀಕರ ಬಾಲಸಂಜೀವಿನಿ"** ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ ಅಗತ್ಯವಾಗಿ ಇರಲೇಬೇಕಾದ್ದು.

ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,

ಬ್ರಾಂಚ್—ಮಂಗಳೂರು.

ನಿಮ್ಮ ಇಚ್ಛೆಯು ನೆರವೇರುವದು.



ಯಾವ ವಿಷಯದಲ್ಲಿ ನೀವು ನಿರಾಶರಾಗಿದ್ದೀರೋ ಅಂತಹ ವಿಷಯಗಳಲ್ಲಿ ನಿಮ್ಮ ಅಭೀಷ್ಟವನ್ನು ಸಾಧಿಸಲಿಕ್ಕೆ ನಮ್ಮ ವಶೀಕರಣಯಂತ್ರವನ್ನು ತರಿಸಿಕೊಳ್ಳಿರಿ.

ಈ ಯಂತ್ರವನ್ನು ನಿಮ್ಮ ವಶ ಇರಿಸಿಕೊಂಡು ನಿಮಗೆ ಆಗಬೇಕಾದ ವಿಷಯವನ್ನು ಮನಸ್ಸಿನಲ್ಲಿ ಧ್ಯಾನಿಸಿದರೆ ನಿಜವಾಗಿಯೂ ನಿಮ್ಮ ಅಭಿಲಾಷೆಯು ಪೂರೈಸುವದು.

ಸೂರ್ಯನು ಪಶ್ಚಿಮದಲ್ಲಿ ಉದಯಿಸಿದರೂ ಈ ಯಂತ್ರವು ಎಂದಿಗೂ ನಿರರ್ಥಕವಾಗುವದಿಲ್ಲ. ಅತಿಪ್ರಯಾಸದಿಂದ ಈ ಯಂತ್ರವನ್ನು ತಯಾರುಮಾಡಿದೆ.

ಯಂತ್ರ 1ಕ್ಕೆ ರೂ. 2-4-0 ವಿದೇಶಕ್ಕೆ 5 ಶಿಲಿಂಗ್. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ಅಮೇರಿಕನ್ ಮಿಸ್ಮೆರಿಸಮ್ ಹೌಸ್ **American Mismerism House**

ಪೋ. ಬಾ. ನಂ. 27 (N.Y.U.) P. B No. 27(N. Y. U)

ಅಮೃತಸರ. (ಇಂಡಿಯಾ) Amritsar (India)

Rev. Fr. P. W. Farias,

St. Paul's Church,
Bolkunje Post, S. K.
Dated 4th January 1939.

To

THE JOINT MANAGERS,
The C P. C. Co. Ltd., MANGALORE.

Sir,

I thank you most sincerely for the promptness with which you arranged to take us to Mangalore and back during the grand occasion of the Diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the congress.

The glorious success of our congress is also due to your exertion in putting up the various lights some o which I hear were done voluntarily.

May the blessings of the Almighty fall on you all and may you be able to do much good to the public.

Renewing my thanks,
I remain,
Yours sincerely,
(*Sd.*) P. W. Farias.

To
THE JOINT MANAGERS,
THE COMBINED BOOKING AGENCY,
MANGALORE.

Sri Parshwanathaswamy
Panchakalyana Pooja Mahothsawam
VENOOR (S. Kanara 1939).

Dear Sirs,

Please permit us to express our thanks on behalf of the above committee for the efficient service rendered by your Combined Booking Agency staff at Venoor to the visitors of the Panchakalyana Pooja Mahosthamam celebrations held this year.

Our thanks are also due to Moodabidre Booking Clerk Mr. B Krishnnayya and also his other mates and Mr. Raghavendra Bhandary who was specially come down from Mangalore to see the needs of and comforts of the travelling Public.

Thanking you once again,
We remain,
Yours faithfully,
(*Sd.*) **M. Jagathpal,**
(*Sd.*) **M. Pachappa Shetty,**
VENOOR, (*Sd.* in Canarese) **Anantharaja Shetty,**
Dated 6-2-'39. (Sd.) **B. Chandappa Indra,**
(*Secretary, P. M. Committee*).
Members, Panchakalayana Mahosthawam Committee.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	3	0	0
ಚಂದ್ರಗುಪ್ತ ಚಕ್ರವರ್ತಿ	1	0	0
Goutama Budda	0	8	0
भगवद्गीता	0	2	0
ಮಧುವನ	1	8	0
ಒಂದೇ ತಿಂಗಳಲ್ಲಿ ಇಂಗ್ಲಿಷ್	0	8	0
ಎರಡೇ ವಾರಗಳಲ್ಲಿ ಓದುಬರಹ	0	1	0
ಗೀತೆಯ ಕೈಗನ್ನಡಿ	0	4	0
ಭಗವದ್ಗೀತೆ	0	2	0
ತುಳು ವ್ಯಾಕರಣ	0	8	0
ಸಾಮುದ್ರಿಕ ಶಾಸ್ತ್ರ	0	8	0
ಸತ್ಯನಾರಾಯಣ ಕತೆ	0	8	0
ಪುರಂದರದಾಸರ ಪದಗಳು ಭಾಗ ೧	0	4	0
„ ಭಾಗ ೨	0	4	0
„ ಭಾಗ ೩	0	4	0
ತುಳುನಾಡ್ ತಿಲಕ ಪಂಚಾಂಗ	0	1	0
ವೈಜಯಂತೀ ಪಂಚಾಂಗ	0	2	6
ಕುಕ್ಕುಟ ಪಂಚಾಂಗ	0	1	0

ಇತ್ಯಾದಿ. ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors:*— **GENERAL SUPPLIES Ltd., Udipi**).

Supply Agency Limited.

(BANKERS)

UDIPI

ESTD] [1933

Authorised Capital Rs. 1,00,000
Subscribed & Paid up Rs. 30,760

RATE OF INTEREST FOR FIXED DEPOSITS.

3 to 6 Months 4% p. a.
7 to 11 „ 5% „
12 to 18 „ 6% „

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

Registered No. M. 3618

NAVAYUGA

ನವಯುಗ

22-6-1939

ಪ್ರಭಾತ ಕಂಪೆನಿಯವರ ದುನಿಯಾ-ನ-ಮಾನೆ ಅಥವಾ ಕುಂಕುಮ ಚಿತ್ರದ
ಕುಮಾರಿ ವಸಂತಿ ಮತ್ತು ಶ್ರೀಮತಿ ಶಾಂತಾ ಆಪ್ಟೆ.

ತಾ. 20 ರಿಂದ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಪ್ರದರ್ಶಿಸಲ್ಪಡುತ್ತದೆ.

ಕರಾಮಾತೀ ದರ್ಪಣ

ಇದೊಂದು ಉತ್ತಮ ತರದ ಕನ್ನಡಿ. ಯಾವ ವಯಸ್ಸಿನವರೂ ಇದನ್ನು ನೋಡಬಹುದು. ಕದ್ದು ಹೋದ ಮಾಲು ಎಲ್ಲಿದೆ? ಕಾಯಿಲೆ ಗುಣವಾದೀತೆ? ಇಲ್ಲವೆ? ದುಃಖಪರಿಹಾರ ಮಾರ್ಗ ಯಾವುದು? ಹೂಳಿಟ್ಟ ನಿಧಿ ಎಲ್ಲಿದೆ? ಇಷ್ಟದ ಕೆಲಸ ಕೈಗೂಡುವುದೆ? ಪ್ರೇಮ ಕಾರ್ಯ, ಪರೀಕ್ಷೆಗಳು, ಕೋರ್ಟು ವ್ಯವಹಾರಾದಿಗಳಲ್ಲಿ ವಿಜಯ ದೊರೆಯುವುದೇ? ಎಂಬುದನ್ನೆಲ್ಲ ಈ ಕನ್ನಡಿಯಿಂದ ತಿಳಿಯಬಹುದು. ಸ್ವರ್ಗಸ್ಥ ಮಾತಾಪಿತೃ, ಪುತ್ರಕಳತ್ರ, ಮಿತ್ರಬಾಂಧವರು ಗಳೆಲ್ಲರ ಭೇಟಿಮಾಡಬಹುದು. ನೀವು ನೋಡದ, ಸ್ವಪ್ನದಲ್ಲಿಯೂ ನೋಡಲಸಾಧ್ಯವಾದವರನ್ನು ಸಹ ನೋಡಬಹುದು ಈ ಕನ್ನಡಿಯಲ್ಲಿ! ಬೆಲೆ ರೂ. ೨—೮—೦

ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಇಂಗ್ಲಿಷಿನಲ್ಲೇ ಬರೆಯಿರಿ.

ದೊರೆಯುವ ಸ್ಥಳ:—

ಅಮೇರಿಕನ್ ಮೆಸ್ಮೆರಿಸಂ ಹೌಸ್,
ಪೋಸ್ಟು ಬಾಕ್ಸ್ ನಂ ೨೭,
(N.Y.U.) ಅಮೃತಸರ [ಇಂಡಿಯಾ]

AMERICAN MISMERISUM HOUSE,
Post Box No. 27
(N.Y.U.) **Amritsar**
(INDIA)

೧೦ ಗಡಿಯಾರಗಳು ಬರೇ ೩॥ ರೂಪಾಯಿಗೆ



ಎಲು ದಮ್ಮೀ ಕೈವಾಚುಗಳು, ೨ ಡಮ್ಮಿ ಕಿಸೆಗಡಿಯಾರಗಳು, ಮತ್ತು ಒಂದು ಗಟ್ಟಿಯಂತ್ರದ ಸರಿ ಸಮಯ ತೋರಿಸುವ ಜರ್ಮನಿ ಟೈಂಪೀಸು, ೩೦ ಗಂಟೆಗೊಮ್ಮೆ ಕೀ, ೧೦ವರ್ಷದ ಗ್ಯಾರಂಟಿ ಈ ಗಡಿಯಾರವನ್ನು ವಿಲಾಯಿತಿಯಿಂದ ಹೆಚ್ಚು ಸಂಖ್ಯೆಯಲ್ಲಿ ತರಿಸಿದ್ದೇವೆ. ಈ ರಿಯಾಯತಿದರದಲ್ಲಿ ಕೇವಲ ೧೨,೦೦೦ ಗಡಿಯಾರಗಳನ್ನು ಮಾತ್ರವೇ ಮಾರುವುದು. ತ್ವರೆ ಮಾಡಿರಿ! ಸುಸಂದರ್ಭ ತಪ್ಪಿಹೋದೀತು. ಇದರೊಂದಿಗೆ ೧೪ ಕ್ಯಾರೆಟ್ ರೋಲ್ಡುಗೋಲ್ಡು ನಿಬ್ಬಿನ ಫೌಂಟನ್ ಪೇನು ಒಂದು, ದೃಷ್ಟಿಚಕ್ರ ಒಂದು, ಮುತ್ತಿನ ಹಾರ ಒಂದು—ಇಷ್ಟು ಉಚಿತ, ಅಂಚೆವೆಚ್ಚ ಬೇರೆ. ಅತೃಪ್ತಿಯಾದರೆ ಹಣ ಹಿಂದೆ. ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ.

ದೊರೆಯುವ ಸ್ಥಳ:—

ಜರ್ಮನ್ ವಾಚ್-ಕಂಪೆನಿ,
ಪೋಸ್ಟು ಬಾಕ್ಸ್ ನಂ. ೨೭
(N.Y.U.) ಅಮೃತಸರ [ಇಂಡಿಯಾ]

German Watch Co.
P. B. No. 27 (N.Y.U.)
AMRITSAR, (India),

—— ಬಲು ಸುಲಭ ದರದಲ್ಲಿ ——

● ಉತ್ಕೃಷ್ಟ ಊಟ ಉಪಹಾರಾದಿಗಳಿಗಾಗಿ ಇತ್ತ ಗಮನಿಸಿರಿ!

● ನಾವು ನಮ್ಮನ್ನೇ ವಿಶೇಷವಾಗಿ ಪ್ರಶಂಸಿಸಿ ಕೊಳ್ಳಬಾರದಷ್ಟೆ!

ಲಕ್ಷ್ಮೀ ನಿವಾಸ
ಹಿಂದೂ ಹೋಟೇಲು

(ಸ್ಥಾಪನೆ 1926)

ವಿಠಲ್ ಭಾಯಿ ಪಟೇಲ್ ರೋಡ್, ಗಿರ್ಗಾಂ, ಮುಂಬಯಿ.

Lakshmi Nivas Hindu Hotel
VITTALBHAI PATHEL ROAD,
GIRGAUM — — BOMBAY.

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು

ದಿಗಂಬರವಾಗಿರುವ ನಾಟ್ಯಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಎಂಡ್ ಕಂಪೆನಿ,**
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co., *Nambulier Street*, G. T. MADRAS.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅಂಪ್ಪಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘ್ನಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೈಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಕಾಶೀಮಠದ ಕಟ್ಟೋಣ, ಉಡುಪಿ

ಬ್ರಾಂಚ್:—ಹೊಮಾರ್ಕೆಟಿನ ಬಳಿ, ಮಂಗಳೂರು.

ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯ ವೆಂಬಂತೆ ಸಾಮಾನುಗಳು ಬೇಲುಗಟ್ಟಲೆ ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

ESTD. 1921 ಸ್ಥಾಪನೆ

FOUNDER
Sri. A. B. SHETTY, M.L.A.
Parliamentary Secretary, Govt of Madras.
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೨೨-೬-೧೯೩೯ | Vol. XVIII
ಸಂಚಿಕೆ ೪೨ | Udipi, Thursday 22—6—1939 | No. 42

ಚಂದಾ ವಿವರ:
೧ ವರ್ಷಕ್ಕೆ ರೂ ೩—೮—೦
೬ ತಿಂಗಳಿಗೆ ರೂ. ೧—೧೨—೦.
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಮಹಾತ್ಮಾ ಗಾಂಧಿಯವರೂ ಮೈಸೂರು ಸಂಸ್ಥಾನವೂ

ಮೈಸೂರು ಸ್ಟೇಟ್ ಕಾಂಗ್ರೆಸಿನ ಪ್ರತಿನಿಧಿಗಳು ವಾರ್ಧಾಕ್ಕೆ ಹೋಗಿ ಮಹಾತ್ಮರನ್ನು ಕಂಡರು. ಮಹಾತ್ಮರಿಗೆ ಎಂಡನೆಯವರಾದ ಪಂಡಿತ ನೆಹರು, ವಲ್ಲಭಾಯಿ ಪಟೇಲರನ್ನು ಕಾಣಲು ಈಗ ಹೊರಟಿದ್ದಾರೆ. 'ಸರಕಾರವು ದಯಪಾಲಿಸುವ ಸುಧಾರಣೆಯಲ್ಲಿ ಸಾರವಿಲ್ಲ. ನಮ್ಮ ಕಾಂಗ್ರೆಸು ಹೋರಾಟ ಹೂಡಲು ಸಿದ್ಧವಿದೆ' ಎಂದು ಮೈಸೂರಿನವರು ಹೇಳಿದಾಗ "ನಿಮ್ಮ ಹಾದಿ ನಿಶ್ಚಯಿಸಿಕೊಳ್ಳುವ ಪೂರ್ಣಹಕ್ಕು ನಿಮದೇ" ಎಂದು ಗಾಂಧಿಯವರು ಉತ್ತರಿಸಿದರಂತೆ. ಮುಂದಿನ ಆಲೋಚನೆಯನ್ನು ನೆಹರು ಮತ್ತು ಪಟೇಲರೊಂದಿಗೆ ಮಾಡಿಕೊಳ್ಳಿರೆನ್ನುತ್ತಾ ಗಾಂಧಿಯವರಂದರು—"ನೆಹರುಗಳಿಂದ ಜೋಡಣೆಯನ್ನರಿತು ವಲ್ಲಭಾಯಿಯವರಿಂದ ವಿವರವನ್ನು ತಿಳಿಯಿರಿ."

ಮೈಸೂರು ಕಾಂಗ್ರೆಸಿನವರು ವಾರ್ಧಕ್ಕೆ ಹೋಗಿ ಹೊಂಟು ವಾರ್ಧಾ ವಿದ್ಯಾಶಾಲೆಯನ್ನು ಹೊಕ್ಕು ಹೊರಟಂತಾಯಿತು! ಜೋಡಿಸುವದನ್ನು ನೆಹರುಗಳಿಂದಲೂ ಒಳತಯಾರಿಯನ್ನು ಪಟೇಲರಿಂದಲೂ ಕಲಿತುಕೊಂಡರೆ ಅಲ್ಲಿಗೆ ಪೂರ್ತಿ ತರಬೇತಿಯಾದಂತೆಯೇ ಸರಿ!

ಹಿಟ್ಟು-ಬೂದಿಯ ಮಿಲನದ ವಿರೋಧಿ!

ಸರದಾರಪಟೇಲರ ಕುರಿತು ಮಾತನಾಡುವಾಗ ಮಹಾತ್ಮರೆಂದರು "ವಲ್ಲಭಾಯಿಯವರು ಉಕ್ಕಿನ ಮನುಷ್ಯ. ಅವರಲ್ಲಿ ಪಂಡಿತ ನೆಹರು ಮತ್ತು ನನ್ನಲ್ಲಿರುವಂತಹ ಭಾವನಾತ್ಮಕ ಹಂಬಲುಗಳು ಕೂಡ ಇಲ್ಲದೆ ಸ್ವಚ್ಛ ಕರ್ತವ್ಯಬುದ್ಧಿಯಿದೆ. ಹಿಟ್ಟು ಮತ್ತು ಬೂದಿಯನ್ನು ಪ್ರತ್ಯೇಕಿಸಬಲ್ಲ ಅಸಾಧಾರಣ ಜಾಣ್ಮೆಯಿದೆ. ಕಲ್ಲಿನಂತಹ ಮಾನಸಿಕ ದೃಢತೆಯಿದೆ. ಸರ್ದಾರರು ಒಮ್ಮೆ ಒಂದು ನಿರ್ಧಾರಕ್ಕೆ ಬಂದರಾಯಿತು, ಅದನ್ನವರು ಸಾಧಿಸಿಯೇ ಬಿಡುವರು".

ಮೈಸೂರು ಕಾಂಗ್ರೆಸಿನವರಿಗೆ ವಲ್ಲಭಾಯಿಯವರನ್ನು ಶಿಫಾರಸುಮಾಡಿ ತನಗೆ ಜಯಪುರ, ತಿರುವಾಂಕೂರು, ತಲ್ಚಾರ್ ಸಂಸ್ಥಾನಗಳ ಕೆಲಸವಿರುವುದರಿಂದ, ತನ್ನನ್ನು ಬಿಡಬೇಕೆಂದು ಗಾಂಧಿಯವರು ಕೇಳಿಕೊಂಡರು. 'ನನಗೆ ಮೈಸೂರು ದೇಶ ಮತ್ತು ಮೈಸೂರಿನವರ ಮೇಲೆ ಬಹಳ ಪ್ರೇಮವಿದೆ. ಅಲ್ಲಿಯ ಪ್ರಸಿದ್ಧ ಸ್ಥಳಗಳನ್ನು ನೋಡಬೇಕೆಂಬ ಆಶೆಯೂ ಇದೆ. ಆದರೆ ಕರ್ತವ್ಯದ ಮೇಲಲ್ಲದೆ ನೋಟಕ್ಕಾಗಿ ಅಲ್ಲಿಗೆ ಬರಲು ಸಾಧ್ಯವಿಲ್ಲ' ಎಂದು ಮೈಸೂರಿಗೆ ಬನ್ನಿರೆಂದಾಗ ಗಾಂಧಿಯವರ ಉತ್ತರ. ದಿವಾನ್ ಸರ್. ಮಿರ್ಜಾ ಇಸ್ಮಾಯಿಲ್‌ರವರೂ ಆರೋಗ್ಯ ಸಂಪಾದನೆಗಾಗಿ ಮೈಸೂರಿಗೆ ಬಂದುಹೋಗಿರೆಂದು ಗಾಂಧಿಯವರನ್ನು ಆಮಂತ್ರಿಸಿದ್ದರು. ಮೇಲಿನ ಕಾರಣದಿಂದಾಗಿ ಅದನ್ನೂ ಗಾಂಧಿಯವರು ನಿರಾಕರಿಸಿದ್ದರು.

ಇನ್ನು ಹಿಟ್ಟು ಮತ್ತು ಬೂದಿಯನ್ನು ವಿಂಗಡಿಸಬಲ್ಲ ಪಟೇಲರ ಕೈಗೆ ಮೈಸೂರಿನ ಪ್ರಶ್ನೆ ಬರಬಹುದು. 'ನಮ್ಮಲ್ಲಿ ಹಿಟ್ಟು ರಾಶಿಯಿದೆ; ರೊಟ್ಟಿಮಾಡಲು ಅಪ್ಪಣೆ ಕೊಡಿರಿ' ಎಂದು ಹೋದವರಿಗೆ ಹಿಟ್ಟು-ಬೂದಿಯನ್ನು ಏರ್ಪಡಿಸುವವನು ದೊರೆತಂತಾಯಿತು. ಅವನ ಶುದ್ಧೀಕರಣದ ನಂತರ ರೊಟ್ಟಿಗಾಗುವಷ್ಟು ಹಿಟ್ಟು ನಿಂತರೆ ಮೈಸೂರಿನವರ ಭಾಗ್ಯ!

ಸಮಾಚಾರ ಸಮಾಲೋಚನ

ಟಿಯೆಂಟ್ಸಿನ್ ದಿಗ್ಬಂಧನ

ಚೀನದಲ್ಲಿ ಜಪಾನ್ ಮತ್ತು ಬ್ರಿಟನ್ ರಾಷ್ಟ್ರಗಳೊಳಗೆ ಆತುರದಾಯಕ ಘರ್ಷಣೆ ಎದ್ದಿದೆ. ಟಿಯೆಂಟ್ಸಿನ್ ಎಂಬಲ್ಲಿ ಬ್ರಿಟಿಷ್ ಮತ್ತು ಫ್ರೆಂಚರ ಕ್ಷೇತ್ರವಿದೆ. ಅದರ ಸುತ್ತುವಳಿಯವು ಜಪಾನರ ಸ್ವಾಧೀನವಾಗಿದೆ. ಬ್ರಿಟಿಷ್ ರಕ್ಷಣೆಯನ್ನು ತಾವು ಮಾಡುತ್ತೇವೆಂದು ಆಶ್ವಾಸನೆ ಕೊಟ್ಟು ಅಲ್ಲಿಯ ಇಂಗ್ಲಿಷರ ಸೈನ್ಯವನ್ನು ಹಿಂದೆಗೆಸಿದ್ದ ಜಪಾನರು, ಬ್ರಿಟಿಷರ ಗಿರಣಿ ಕೂಲಿಗಳಿಗೆ ಹುರುಪುಗೊಟ್ಟು ಗಲಭೆಯೆಬ್ಬಿಸಿದರು. ಪರಿಣಾಮವಾಗಿ ಇಬ್ಬರು ಇಂಗ್ಲಿಷರೂ ಮರಣಹೊಂದಿದರು. ಬ್ರಿಟನ್ ಸರಕಾರವು ಇದಕ್ಕಾಗಿ ಜಪಾನಿನ ಮೇಲೆ ಕೆರಳಿತು. ನಾಲ್ಕು ಮಂದಿ ಚೀನೀ ವಿದ್ರೋಹಿಗಳು ಬ್ರಿಟಿಷ್ ಕ್ಷೇತ್ರದೊಳಗೆ ಹೊಕ್ಕಿದ್ದಾರೆ. ಅವರನ್ನು ಕೂಡಲೇ ತಮಗೊಪ್ಪಿಸಬೇಕು-ಎಂದು ಜಪಾನರು ಕೇಳಿಕೊಂಡಾಗ ಬ್ರಿಟಿಷರದನ್ನು ಧಿಕ್ಕರಿಸಿಬಿಟ್ಟರು. ಇದರಿಂದ ಜಪಾನು ಅತಿರೇಕ ಸಿಟ್ಟುಗೊಂಡು ಬ್ರಿಟಿಷ್ ಕ್ಷೇತ್ರದ ಹಾದಿಯನ್ನೆಲ್ಲಾ ತಡೆಗಟ್ಟಿ ದಿಗ್ಬಂಧನಗೊಳಿಸಿರುವರು. ಆ ಕ್ಷೇತ್ರದೊಳಗೆ ಹೊರಗಿನವರಾರೂ ಹೋಗದಂತೆ ತಡೆಹಾಕಿರುವದಲ್ಲದೆ, ಬಡುವವರನ್ನು ಪೂರ್ತಿ ಜಡ್ತಿಮಾಡಿಬಿಡುತ್ತಿರುವರು. ಕೆಲಸಗಾರರನ್ನು ಒಳಗೆ ಬಿಡದೆ ಬ್ರಿಟಿಷ್ ಗಿರಣಿಗಳು ಖಾಲಿಬಿದ್ದಿವೆ. ದೊಡ್ಡ ಉಪದ್ರವೆಂದರೆ ಕ್ಷೇತ್ರದೊಳಗಿನವರಿಗೆ ಆಹಾರ ಸಾಮಗ್ರಿಗಳ ಸರಬರಾಯಿಯೂ ನಿಲ್ಲಿಸಲ್ಪಟ್ಟಿದೆ. ಜಪಾನಿನ ಧೋರಣೆಯು ದಿನದಿಂದ ದಿನಕ್ಕೆ ಕಠಿಣವಾಗುತ್ತಾ ಬರುತ್ತಿದೆ. ಬ್ರಿಟಿಷರು ಈ ಕುರಿತು ಗಾಢಾಲೋಚನೆಯಲ್ಲಿರುವರು. ಜಪಾನರ ಮೇಲೆ ಆರ್ಥಿಕ ಬಹಿಷ್ಕಾರವನ್ನು ಎಲ್ಲಾ ಕಡೆಗಳಿಂದಲೂ ಹಾಕುವ ಸನ್ನಾಹ ನಡೆಯುತ್ತಿದೆ. ಜಪಾನರ ಯುದ್ಧ ಹಡಗುಗಳೆರಡು ಬ್ರಿಟಿಷ್ ಕ್ಷೇತ್ರದ ದಡಕ್ಕೆ ಬಂದಿವೆ. ಇಡೀ ಚೀನದಲ್ಲಿ ಬ್ರಿಟಿಷರ ಧೋರಣೆಯೇ ಬದಲಾಗುವ ವಿನಹ ತಾವು ಈ ದಿಗ್ಬಂಧನವನ್ನು ಬಿಡುವಂತಿಲ್ಲವೆಂದು ಜಪಾನರನ್ನುತ್ತಾರೆ. ಇಟಲಿ, ಜರ್ಮನಿಗಳು, ಜಪಾನಿನ ಕೃತ್ಯವನ್ನು ಶ್ಲಾಘಿಸಿ 'ಶಹಭಾಸ್' ಎನ್ನುತ್ತಿವೆ.

ಈ ಚಿಕ್ಕಾಟವು ಹೇಗೆ ಬಗೆಹರಿಯುವದೆಂಬುದನ್ನು ನೋಡಲಿಕ್ಕಿದೆ. ನಾಲ್ಕು ಜನರನ್ನು ಬಿಟ್ಟುಕೊಡಿರೆಂದಾರಂಭಿಸಿದ ದಿಗ್ಬಂಧನವನ್ನು ಚಯಿಂಗ್ ಕೈಶೇಕರ ಪರವಾದ ಧೋರಣೆಯನ್ನೇ ಬಿಟ್ಟುಕೊಡಬೇಕೆಂಬಲ್ಲಿಗೆ ಈಗ ತಂದಿಟ್ಟಿದ್ದಾರೆ ಜಪಾನರು. ನಿಮ್ಮ ಆರ್ಥಿಕ ಬಹಿಷ್ಕಾರಕ್ಕೆ ನಮ್ಮ ಪ್ರತೀಕಾರ ತಯಾರಿದೆ ಎಂದು ಪ್ರತ್ಯೇಕವಾಗಿ ಹೆದರಿಸುತ್ತಲೂ ಇದ್ದಾರೆ. ಬ್ರಿಟಿಷರೊಂದು ದೊಡ್ಡ ಫಜೀತಿಯಲ್ಲಿ ಬಿದ್ದಂತಾಗಿದೆ. ಟಿಯೆಂಟ್ಸಿನಿನ ದಿಗ್ಬಂಧನವು ಜಾದೂಗಾರ ದಿಗ್ಬಂಧನದಂತೆ ಇಂಗ್ಲೆಂಡಿನ ಮುತ್ಸದ್ದಿಗಳನ್ನೂ ಯಾವ ಹಾದಿಗೂ ಚಲಿಸದಂತೆ ತಡೆದಿಟ್ಟಿದೆ! 'ಎಡವಿದ ಕಾಲು ಎಡವುದು ಅಧಿಕ' ಎಂಬ ಗಾದೆಗೆ ಇಂದು ಬ್ರಿಟನ್ನಿನ ಅವಸ್ಥೆಯೇ ನಿದರ್ಶನ!

ಅರಬ ಯಹೂದಿ ಇಬ್ಬರಿಗೂ ಸಮನ್ಯಾಯ!

ತಮ್ಮ ಪಾಲೆಸ್ತಾಯಿನ್ ಧೋರಣೆಯ ಕುರಿತು ಮಾತಾಡುತ್ತಾ ಮಿ. ಮಾಲ್ಕಮ್ ಮೆಕ್ಡೋನಾಲ್ಡರು ಯಹೂದಿಯರಿಗೂ ಅರಬರಿಗೂ ಸಮನಾದ ನ್ಯಾಯವನ್ನೊದಗಿಕೊಟ್ಟು ಅಲ್ಲಿ ಶಾಂತಿಯನ್ನು ಕಾಪಾಡುವದೇ ತಮ್ಮ ಧ್ಯೇಯವೆಂದು ದವಿವರ ಭಾಷಣವಿತ್ತರು. ಈ ದೊಡ್ಡ ಸಿಕ್ಕನ್ನು ಬಿಡಿಸುವುದರಲ್ಲಿ ಎಂತಹ ಕಷ್ಟವಿದೆ ಎಂಬುದನ್ನೂ ಹೇಳದೆ ಹೋಗಲಿಲ್ಲ. ಪೆಲೆಸ್ತೈನಿನಲ್ಲಿ ಬ್ರಿಟಿಷರು ಕಷ್ಟಪಡುತ್ತಿರುವರಾದರೆ ತಮ್ಮೊಳಗೆ ಗುಂಡಿನಾಟವಾಡುತ್ತಿರುವ ಯಹೂದಿ ಅರಬರೇನು ಸುಖಪಡುತ್ತಿರುವರೆ?

ಬ್ರಿಟಿಷರ 'ಸಮನ್ಯಾಯ'ದ ರೀತಿಯು ಎರಡು ಬೆಕ್ಕುಗಳ ದೋಸೆಯ ಪಾಲಿಡುವದರಲ್ಲಿ ಸಮನ್ಯಾಯವನ್ನನುಸರಿಸಿದ ಮಂಗನ ರೀತಿಯನ್ನನುಸರಿಸಿಲ್ಲವಾದರೆ ಇಷ್ಟೆಲ್ಲಾ ಗೊಂದಲವೇಕೆ? ಪೆಲೆಸ್ತೈನ್ ಗೊಂದಲಕ್ಕೊಂದು ಅಂತ್ಯವೇ ಇಲ್ಲವೇನು?

THE
TROPICAL
INSURANCE COMPANY, LTD.
DELHI

CHAIRMAN:
SJT. SUBHAS CHANDRA BOSE.

WANTED an Asst. Organiser at Kundapur on salary, T. A. & D. A. The selected candidate will be on probation for 6 months and will be confirmed in the permanent service of the Co., with benefits of Provident Fund, etc., if he is found successful during the probation period. Preference will be given to those having previous experience. "Strict secrecy of correspondence assured". The application should reach the undersigned on or before the 28th of this month.

M. Sunder Ram Shetty,
BRANCH MANAGER,
Hampankatta, MANGALORE.

"ಥೆಟಿಸ್" ಸಬ್‌ಮೆರಿನಿನೊಡನೆ ಬ್ರಿಟಿಷ್ ಹೆಗ್ಗಳಿಕೆಯೂ ಮುಳುಗಿತೆ?

ಪ್ರಕೃತಿಯ ಶಕ್ತಿಗೆ ಮಾನವಶಕ್ತಿ ಇದಿರೆ?

ಇತ್ತೀಚಿಗಿನ ಬಹುದೊಡ್ಡ ಸಮುದ್ರಾಪಘಡವೆಂದರೆ ಬ್ರಿಟಿಷರ ಜಲಾಂತರ್ಗಾಮಿ ನಾವೆಯಾದ 'ಥೆಟಿಸ್'ನದ್ದು. ಇದರಿಂದ ಇಂಗ್ಲೆಂಡು ಸಂತಾಪಗೊಂಡಿತ್ತಲ್ಲದೆ ಜನರ ಮನಸ್ಸಿನ ಮೇಲೆ ಅದು ಉಂಟುಮಾಡಿದ್ದ ಪರಿಣಾಮವಿನ್ನೂ ಹೋಗಿಲ್ಲ. ಇಡೀ ಪ್ರಪಂಚವೇ ಈ ವಾರ್ತೆಯಿಂದ ಆತುರಗೊಂಡಿತ್ತು. 'ಸಬ್‌ಮೆರಿನ್ ಮುಳುಗಡೆಗೆ ಹಾಕಿಬಿತ್ತು' ಒಳಗಿದ್ದವರನ್ನು ರಕ್ಷಿಸುವ ಪ್ರಯತ್ನ ನಡೆಯುತ್ತಿದೆ. ಎಲ್ಲವೂ ನಿಷ್ಫಲವಾಗಿ 98 ಜನರು ನೀರುಪಾಲಾದರು. ಈ ಘಟನೆಗಳು ಸಂಭವಿಸುತ್ತಿರುವಾಗಲೇ ಇಡೀ ಪ್ರಪಂಚವು ತಿಳಿಯುವಂತಾಗಿತ್ತು. ಲೋಕವು ಆ 98 ಜನರ ಪ್ರಾಣರಕ್ಷಣೆಯಾಗುವದನ್ನು ಅರಿಯಬೇಕೆಂದು ಹಾರೈಸಿತ್ತು. ಆದರೇನು? ಪ್ರಕೃತಿಯ ಅಗಾಧಶಕ್ತಿಗೆ ಕೋಟಿ ಕೋಟಿ ಮಾನವರ ಶಕ್ತಿಯಾಗಲೀ ಅಭಿಪ್ರಾಯವಾಗಲಿ ಈಡಾಗಬಲ್ಲುದೆ? 98ಮಂದಿಯೂ ನೀರೊಳಗೆ ಉಸುರುಕಟ್ಟಿ ಸತ್ತುಹೋದರು.

ಸಂದೇಹವೆದ್ದಿದೆ

ಇಂಗ್ಲೆಂಡಿನ ಪತ್ರಿಕೆಗಳೂ ಸಾರ್ವಜನಿಕರೂ ಈ ಕುರಿತು ವಿಚಾರಣೆ ನಡೆಯಬೇಕೆಂದು ಬಲವಾದ ಒತ್ತಾಯ ಹಾಕಿದದರಿಂದ ಸರಕಾರದ ಮತ್ತು ಸಾರ್ವಜನಿಕರ ಪರ ವಿಚಾರಣೆಯು ಈ ಅಪಘಡದ ಕುರಿತು ನಡೆಯುತ್ತಿದೆ. ಇಂಗ್ಲೆಂಡು 98 ಜನರ ಮರಣಕ್ಕಾಗಿ ಬರಿಯ ಮರಣಶೋಕವನ್ನಷ್ಟೇ ಪ್ರದರ್ಶಿಸುತ್ತ ಕುಳಿತಿಲ್ಲ. ಸತ್ತವರು ನಾವಿಕರಿಗೆ ಸಹಜವಾದ ವೀರಸ್ವರ್ಗವನ್ನು ಹೊಂದಿದರೆಂಬ ತೃಪ್ತಿಯನ್ನು ಅವರ ಸಂಬಂಧಿಕರೇ ಸೂಚಿಸಿದ್ದಾರೆ. ಆದರೆ ಅಪಘಡದ ರೀತಿಯು ಕುರಿತು ಆಶ್ಚರ್ಯಪಡಬೇಕಾದ ಕಾರಣಗಳಿರುವದರಿಂದ ವಿಚಾರಣೆಯು ಅಗತ್ಯಬಿತ್ತು.

ಸಂದೇಹಗಳಿಗೆ ಕಾರಣಗಳು ಈ ಕೆಳಗಿನವು. ಥೆಟಿಸ್ ಜಲಾಂತರ್ಯಾನವು ಲಿವರ್‌ಪೂಲಿನ ಸಮೀಪದಲ್ಲಿಯೇ ಮುಳುಗಿದುದು. ನಾವೆಯ ಉಪಕರಣಗಳು ಮತ್ತು ರಕ್ಷಣಾಸಾಧನಗಳು ಇದ್ದಿರುವಷ್ಟು ಉತ್ತಮ ತರಗತಿಯಲ್ಲಿ ಪ್ರಪಂಚದ ಬೇರೆಲ್ಲಿಯೂ ಇಲ್ಲ. ತುದಿ ಕವಚಿಹೋಗಿ ಮುಳುಗಹತ್ತಿದ ನಾವೆಯು ಒಂದೇಸವನೆ ಮುಳುಗಿಹೋಗಿರಲಿಲ್ಲ. ಅದು ತಳಹಿಡಿಯಲು ಕೆಲವು ಘಂಟೆಗಳು ಬೇಕಾಗಿದ್ದವು. ಮುಳುಗಹತ್ತಿದೊಡನೆ ಒಳಗಿದ್ದವರಿಗೆ ಪ್ರಾಣಾಪಾಯ ಘಟನೆಯು ತಿಳಿದುಬಂದಿತ್ತು. ಹಾಗೆ ಮುಳುಗಿದ ಮೇಲೂ ಅದರ ಮೇಲ್ಭಾಗವು ನೀರಮೇಲ್ಗಡೆ ಎದ್ದು ನಿಂತಿತ್ತು. ಸಾಲದುದಕ್ಕೆ ಅದರೊಳಗಿಂದ ೪ ಮಂದಿ ಹೊರಬಿದ್ದು ಬದುಕಿಬಂದಿದ್ದರು. ಇಷ್ಟೆಲ್ಲಾ ಇದ್ದರೂ, ಒಳಗಿದ್ದವರನ್ನು ಬದುಕಿಸಬೇಕೆಂದು ಕೊನೆಯ ಕ್ಷಣದ ವರೆಗೂ ಪ್ರಯತ್ನ ನಡೆದರೂ ಆ ಜೀವಗಳನ್ನುಳಿಸಲಾಗಲಿಲ್ಲ. ಈ ಅಪಘಡ ಒಂದು ವಾರಕ್ಕೆ ಮೊದಲು ಅಮೇರಿಕನ್ ಸಬ್ ಮೇರೀನ್ ಒಂದು ಹೀಗೆಯೇ ಮುಳುಗಿಹೋದರೂ ಒಳಗಿದ್ದವರನ್ನು ಒಬ್ಬರನ್ನೂ ಬಿಡದೆ ರಕ್ಷಿಸಲಾಗಿತ್ತು. ಥೆಟಿಸ್ ಅಪಘಾತದ ರೀತಿ ಅವಕ್ಕಿಂತ ಭಿನ್ನವಾಗಿತ್ತೇನೋ ನಿಜ. ಅದರ ತುದಿಯೇ ಸಮುದ್ರದೊಳಕ್ಕೆ ತೂರಿ ಹೋದುದರಿಂದ ರಕ್ಷಣೋಪಾಯಗಳು ಫಲಿಸದೆ ಹೋದುವೆಂದು ಸಂಬಂಧಪಟ್ಟವರನ್ನುತ್ತಾರೆ. ಆದರೂ ಬ್ರಿಟಿಷರ ಸಮುದ್ರ ನೈಪುಣ್ಯಕ್ಕೊಂದು ದೊಡ್ಡ ಅಪವಾದವನ್ನು ಈ ಘಟನೆ ತಂದೊಡ್ಡಿರುವದೆನ್ನಲಡ್ಡಿಯಿಲ್ಲ.

'ಸಮುದ್ರ ರಾಣಿಗಿದು' ಕುಂದು

ಈ ದಿನದ ವರೆಗೂ ಲೋಕದ ಪ್ರಬಲ ನಾವಿಕ ರಾಷ್ಟ್ರವೆಂದರೆ ಇಂಗ್ಲೆಂಡು. ಕಳೆದ ಲೋಕ ಮಹಾಯುದ್ಧದ ವಿಜಯಕ್ಕೆ ಗ್ರೇಟ್‌ಬ್ರಿಟನಿನ ಮಹಾ ನಾವಿಕ ದಳವೇ ಕಾರಣ. ಬ್ರಿಟನ್ನಿಗೆ 'ಸಮುದ್ರರಾಣಿ' ಎಂಬ ಬಿರುದಿದೆ. ಆ ಬಿರುದಿಗೊಂದು ಕೊರತೆಯನ್ನು ಥೆಟಿಸ್ ತಂದೊಡ್ಡಿದಷ್ಟು ವಿರುದ್ಧ ರಾಷ್ಟ್ರಗಳಿಂದ ಕೂಡ ಮಾಡಲಾಗಿರಲಿಲ್ಲ. ವೈರಿಗಳ ಹೊಡೆತದಿಂದ ಈ ಪೆಟ್ಟು ಬೀಳುತ್ತಿದ್ದರೆ ಬ್ರಿಟನ್ ಇಷ್ಟು ನಾಚುತ್ತಿದ್ದಿಲ್ಲ. ಆದರೆ ತನ್ನ ದುರ್ಬಲತೆ, ಅಚಾತುರ್ಯದ ಕುರುಹಾಗಿ ಆದ ಈ ಅಪಘಡದ ಕುರಿತು ಇಡಿಯ ಇಂಗ್ಲಾಂಡಿಗೆ ಇಂಗ್ಲಾಂಡೇ ನಾಚುತ್ತಿದೆ. ಹಿಂದೊಮ್ಮೆ ಲಂಡನಿನಲ್ಲಿ ಪ್ರಾಪಂಚಿಕ ನಾವಿಕ ಪರಿಷತ್ತು ಸೇರಿತ್ತು. ಅದರ ಪ್ರಾರಂಭ ಭಾಷಣದಲ್ಲಿ ದಿವಂಗತ ರಾಮ್ಸೇ ಮೆಕ್ಡೋನಾಲ್ಡರು ನಾವಿಕ ರಾಷ್ಟ್ರವೆಂದರೆ ಇಂಗ್ಲೆಂಡು ಎಂದು ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಂಡು ಮಿಕ್ಕ ರಾಷ್ಟ್ರಗಳವರ ಅಪ್ರೀತಿಗೆ ಪಾತ್ರರಾಗಿದ್ದರು. ಆದರೆ ಆ ಮಾತು ರುಚಿಸದವರಿಗಾದರೂ ಸಕಾರಣವಾಗಿ ಅದನ್ನು ಖಂಡಿಸುವರೆ ಎಡೆಯಿರಲಿಲ್ಲ. ಇಂದಿನ 'ಥೆಟಿಸ್' ಅಪಘಡದ ಪೆಟ್ಟಿನ ರುಚಿ ಬ್ರಿಟಿಷ್ ನಾವಿಕ ತಜ್ಞರಿಗೇ ಗೊತ್ತು! ಒಂದೆಡೆಯಿಂದ ಸರ್ವಾಧಿಕಾರಿಗಳು ಬ್ರಿಟಿಷರನ್ನು ಅವಮಾನಿಸುವ ಸಂದರ್ಭಗಳಾವುವನ್ನೂ ಹೀಗೆಯೇ ಹೋಗಗೊಡುತ್ತಿಲ್ಲ. ಕಾಲವು ಯುದ್ಧವನ್ನು ಕರೆಯುತ್ತಾ ಇದೆ. ಈ ಸಮಯದ ಅಪಘಡವಿದು ವಿರೋಧಿಗಳಿಗೆ ಹುರುಪು, ವಿಮರ್ಶಕರಿಗೊಂದು ಸಂದರ್ಭ, ಹಿತಚಿಂತಕರಲ್ಲಿ ಸಂದೇಹ-ಇಷ್ಟನ್ನೂ ಏಕಕಾಲದಲ್ಲಿ ಉಂಟುಮಾಡುವದರಿಂದ ಬ್ರಿಟನು ಒಳಗೊಳಗೆ ನಾಚುತ್ತಿದೆ.

ವಾರ್ಧಾ ವಿದ್ಯಾಯೋಜನೆಯ ತಿರುಳೇನು?

ಉಪಾಧ್ಯಾಯರಿಗೆ ಸರ್ದಾರರ ಬೋಧನೆ



ಗುಜರಾತು ವಿದ್ಯಾಪೀಠದಲ್ಲಿ ಜಿಲ್ಲಾ ಬೋರ್ಡ್ ಅಧ್ಯಾಪಕರ ತರಬೇತಿ ಕ್ಲಾಸನ್ನು ಜೂನ್ 12ರಲ್ಲಿ ತೆರೆಯುತ್ತಾ ಸರ್ದಾರ್ ವಲ್ಲಭಾಯಿ ಪಟೇಲರು ಮನನೀಯ ಭಾಷಣವಿತ್ತರು. ಅದರ ಸಾರಾಂಶವು ಹೀಗಿದೆ:

ಹೊಸ ಬೆಳಕನ್ನು ತೋರಿಸಿ ತಿಳುವಳಿಕೆಯನ್ನುಂಟುಮಾಡಿ ವಿದ್ಯಾರ್ಥಿಗಳನ್ನು ಯೋಗ್ಯನಾಗರಿಕರನ್ನಾಗಿ ಮಾರ್ಪಡಿಸುವದೇ ವಾರ್ಧಾ ವಿದ್ಯಾಯೋಜನೆಯ ಉದ್ದೇಶ. ಈ ಯೋಜನೆಯ ವಿರೋಧಗಳಲ್ಲಿ ಹೆಚ್ಚಿನವುಗಳಿಗೆ ಭಯ ಮತ್ತು ಸಾಹಸದ ಸ್ಫೂರ್ತಿಯ ಅಭಾವವೇ ಆಧಾರ.

ಈ ಯೋಜನೆಯು ಜಯಪ್ರದವಾಗುವುದು ಅಧ್ಯಾಪಕರನ್ನು ಹೊಂದಿಕೊಂಡು ಉಂಟು. ಉಪಾಧ್ಯಾಯರು ಉತ್ತೀರ್ಣರಾದರೆ ಆಗ ಅವರಲ್ಲಿ ಬೌದ್ಧಿಕ ಮತ್ತು ವಾಸ್ತವಿಕವಾದ ಕ್ರಾಂತಿಮಯ ಭಾವನೆಯುತ್ಪನ್ನವಾಗುವದು. ಅನ್ಯರನ್ನು ತಿದ್ದುವೆನೆನ್ನುವವರು ಮೊದಲು ತಮ್ಮನ್ನು ತಾವೇ ತಿದ್ದಿಕೊಳ್ಳಬೇಕು.

ಪುನರ್ನಿರ್ಮಾಣದ ಕಾಲ

ಇದು ಭಾರತ ರಾಷ್ಟ್ರೀಯ ಪುನರ್ಘಟನೆಯ ಕಾಲ. ಒಂದು ಅಧಿಕಾರವು ಚ್ಯುತಿಹೊಂದಿ ಆ ಸ್ಥಾನವನ್ನು ಮತ್ತೊಂದಾಕ್ರಮಿಸುತ್ತಿದೆ. ಭಾರತದ ಅಧಿಕಾರದಲ್ಲಿ ತಮಗೆ ಸ್ವಾಭಾವಿಕ ಪಾಲೇನೂ ಇಲ್ಲವೆಂದು ಬ್ರಿಟಿಷರಿಗೆ ಗೊತ್ತಿತ್ತು. ಅವರು ತಮ್ಮ ಅಧಿಕಾರವನ್ನು ಹಳ್ಳಿಗಳಲ್ಲಿ ಸ್ಥಾಪಿಸುವ ಮೂಲಕ ಆರಂಭಿಸಿದರು. ಜನರಿಗೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಅಂಕೆಯಲ್ಲಿಟ್ಟುಕೊಳ್ಳುವ ಅಧಿಕಾರವಿನ್ನೆ ಬೇರೂಳಿಸಿ ನಿಂತಿರುವ ಪಾಶ್ಚಾತ್ಯಪದ್ಧತಿಯು ಸುಲಭದಲ್ಲಿ ದಾರಿ ಬಿಟ್ಟುಕೊಡಲಾರದು. ಆದರೆ ಪ್ರಾಥಮಿಕ ವಿದ್ಯಾಕ್ಷೇತ್ರದ ಮಟ್ಟಿಗೆ ಯಾವ ತೊಂದರೆಯೂ ಇಲ್ಲ. ಪ್ರತಿಯೊಬ್ಬನೂ ಈಗಿನ ಶಿಕ್ಷಣಾ ಪದ್ಧತಿಯ ಕೊರತೆಯನ್ನು ತಿಳಿದಿರುತ್ತಾನೆ. ಅದರಲ್ಲಿ ಸುಧಾರಣೆಯನ್ನು ಅಪೇಕ್ಷಿಸುತ್ತಾನೆ. ಆದರೆ ಕಾರ್ಯಕ್ಕೆ ಕೈಯಿಕ್ಕುವ ಧೈರ್ಯವು ಕೆಲವರಿಗೆ ಮಾತ್ರವಿದೆ. ಮಿಕ್ಕವರು ಅನುಭವದಿಂದಾಗಿ ಮಾಡುವ ಊಹಾತ್ಮಕ ಅಂಜಿಕೆಗಳಿಂದ ಹಿಂಜರಿಯುತ್ತಾರೆ.

THE
BOMBAY LIFE ASSURANCE CO, LTD.
ಸ್ಥಾಪನೆ 1908
ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಈ ಸಂಸ್ಥೆಯ ಸಾರ್ವತ್ರಿಕವಾದ ಅಭಿವೃದ್ಧಿಯೇ ಇದರ ಉನ್ನತಿಗೆ ಸಾಧನವು.
ಹಿರಿಮೆಯ ಹೊಸ ವ್ಯಾಪಾರ ವಹಿವಾಟುಗಳು.

ವಿಮಾ ಅರ್ಜಿಗಳ ಮೊಬಲಗು ವಿವರ.	ವರ್ಷ	ಪೂರ್ತಿಯಾದುದು
1,25,50,250	1934	1,04,33,750
1,50,48,915	1935	1,23,28,665
1,68,88,200	1936	1,36,01,500
1,72,579,75	1937	1,40,08,725
1,76,83,250	1938	1,44,91,000

1939 ವ್ಯಾಲ್ಯುವೇಶನ್ ವರ್ಷ.
ಈಗಾಗಲೇ ಈ ಕಂಪೆನಿಯಲ್ಲಿ ವಿಮೆಯಿಳಿಸಿರಿ, ಮುನಾಫೆಯಲ್ಲಿ (Bonus) ಭಾಗಿಗಳಾಗಿರಿ.
ವಿಮೆಮಾಡಲು ಇಲ್ಲವೆ ಪ್ರತಿನಿಧಿಯಾಗಲು ಇಚ್ಛಿಸುವವರು ನಮ್ಮೊಡನೆ ವಿಚಾರಿಸುವುದು ಲಾಭದಾಯಕವಾಗಿದೆ.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್,
ಮದ್ರಾಸ್ ಶಾಖೆಯ ಕಾರ್ಯದರ್ಶಿಗಳು.
ದಿ ಬೊಂಬೆ ಲೈಫ್ ಬಿಲ್ಡಿಂಗ್, ಸರ್ ಚಾಲುಭಾಯಿ ಸಮಲ್ದಾಸ್ ರೋಡ್. ಗಾಂಧಿನಗರ, ಉಡುಪಿ
ಅಥವಾ ಯಾವುದಾದರೂ ಈ ಕೆಳಗಿನ ಆಫೀಸುಗಳಲ್ಲಿ ವಿಚಾರಿಸಿರಿ—

ರಥಬೀದಿ	ಪುತ್ತ್ಯಾರ,	ಪೋ. ಬಾಕ್ಸ್ ನಂ.337, ಮೌಂಟ್‌ರೋಡ್,	ವಿಶ್ವೇಶ್ವರಪುರಂ ಸರ್ಕಲ್	ಚರ್ಚರೋಡ್, ಗಿರ್ಗಾಂ,	ಸೆಂಟ್ರಲ್ ಸ್ಟೇಶನ್ ರೋಡ್,
ಮಂಗಳೂರು	ಕಲ್ಲಿಕೋಟೆ	ಮದರಾಸ್.	ಬೆಂಗಳೂರು ಸಿಟಿ	ಬೊಂಬಾಯಿ ನಂ. 4	ತ್ರಿವೆಂಡ್ರಮ್.

ಅಧ್ಯಾಪಕರ ಜವಾಬ್ದಾರಿ.

ಈ ಯೋಜನೆಯು ಅನುಕರಣೆಗೆಂದರೆ ಚರಕಾ ತಿರುಗಿಸುವದೊಂದೇ ಅಲ್ಲ. ಈಗ ಎಲ್ಲರೂ ಬಿಟ್ಟವರಾದರೂ ಕೋಟ್ಯವಧಿ ಮಹಿಳೆಯರು ಚರಕಾ ತಿರುಗಿಸುತ್ತಿದ್ದ ಕಾಲವೊಂದಿತ್ತು. ಅಧ್ಯಾಪಕರು ಚರಕಾದ ಹಿಂದಿರುವ ಮಾನಸಿಕ ಕ್ರಾಂತಿಯನ್ನು ಅನುಭವಿಸುವವರಿರಬೇಕು. ವಾರ್ಧಾಯೋಜನೆಯಂತೆ ತರಬೇತಾದ ಉಪಾಧ್ಯಾಯನು ಹಳ್ಳಿಯ ಮಕ್ಕಳಿಗೆ ಕಲಿಸುವವನು ಮಾತ್ರವಲ್ಲ; ಅವನು ಯಾವದೇ ವಿಷಯದಲ್ಲಿ ಮಾರ್ಗದರ್ಶಿತ್ವ ಅಥವಾ ಬೋಧನೆಯನ್ನು ಅಪೇಕ್ಷಿಸಿ ಬರುವ ಹಳ್ಳಿಗರಿಗೆ ಅವುಗಳನ್ನೀಯುವಂಥವನೂ ಇರಬೇಕು. ವಿದೇಶೀ ಸರಕಾರವು ತನ್ನ ಅಧಿಕಾರದ ಸ್ಥಾಪನೆಗಾಗಿ ಹಳ್ಳೀ ಕಾನ್ಸ್ಟೇಬಲ್ ಮತ್ತು ಪೋಲೀಸ್ ಪಟೇಲನನ್ನು ಹಳ್ಳಿಗಳನ್ನಾಳಲು ನೇಮಿಸಿತು. ಈ ಅಧ್ಯಾಪಕನೂ ಹಾಗೆಯೇ ಬೇರೆ ರೀತಿಯಿಂದ ಹಳ್ಳಿಯನ್ನಾಳುವವನಿರಬೇಕು. ಅವನು ಸ್ವಾರ್ಥಸ್ಪರ್ಧೆ ಇರುವ ವಿಷಯಗಳಲ್ಲಿ ಆ ಕಡೆ ಈ ಕಡೆ ಸೇರಬಾರದು. ರಾಷ್ಟ್ರೀಯ ಪುನರ್ನಿರ್ಮಾಣದ ಕಾರ್ಯದಲ್ಲಿ ಮಾತ್ರ ಈ ಉಪಾಧ್ಯಾಯನು ನ್ಯಾಯವಾದ ಭಾಗವನ್ನು ವಹಿಸಬೇಕು

TENDER NOTICE.

Tenders of rates to reach the Sub Assistant Director before 15-8-1939 are invited for transporting salt bags and stocking them in the fish-curing yards and salt golians on the West Coast from vessels or railway waggons and for sundry other works. Details and terms of contract can be obtained from the Sub Assistant Director of Fisheries (West Coast), Calicut.

Calicut, 14-6-'39

M. Jayaram Naidu,
Sub Assistant Director of Fisheries, West Coast.

ಇದಾರ್ ರಾಜರ ಉದಾರಬುದ್ಧಿ

ಸಂಸ್ಥಾನಕ್ಕೆ ಸುಧಾರಣೆ.

ಬೊಂಬಾಯಿ ಪ್ರಾಂತ್ಯದಲ್ಲಿದ್ದ ಇದಾರ್ ಸಂಸ್ಥಾನವು ಭಾರತದ ಪುಟ್ಟ ಸಂಸ್ಥಾನಗಳಲ್ಲೊಂದು. ಕೇವಲ 1669 ಚದರ ಮೈಲಿಗಳಿರುವ ರಾಜ್ಯ, ಜನಸಂಖ್ಯೆ ಸುಮಾರು ಎರಡೂವರೆ ಲಕ್ಷ ಮಾತ್ರ. ಈ ಚಿಕ್ಕ ರಾಜ್ಯದ ಭಾಗ್ಯ ಮಾತ್ರ ದೊಡ್ಡದೆನ್ನಬೇಕು. ಆದಿಯಿಂದಲೂ ಇದನ್ನಾಳುವ ರಾಜರು ಸುಧಾರಿತ ಮನೋವೃತ್ತಿಯವರೇ. ಕಳೆದ ಎರಡು ವರ್ಷಗಳಿಂದ 2000 ಜನರಿಗೊಂದರಂತೆ ಪಂಚಾಯತ ಬೋರ್ಡುಗಳು ಇಡೀ ಸಂಸ್ಥಾನದಲ್ಲಿ ಸ್ಥಾಪಿಸಲ್ಪಟ್ಟು ಚುರುಕಿನಿಂದ ಕೆಲಸಮಾಡುತ್ತ ಬಂದಿವೆ. ಅಲ್ಲಿ 137 ವಿದ್ಯಾಸಂಸ್ಥೆಗಳಿರುವವಲ್ಲದೆ, ಸಂಸ್ಥಾನಕ್ಕೊಂದು ಪ್ರತ್ಯೇಕ ಹೈಕೋರ್ಟು ಇದೆ.

ಹೊಸ ಸುಧಾರಣೆ

ಆದರೆ ಅಲ್ಲಿಯ ರಾಜರು ಕಾಲವೆಂತಹದೆಂಬುದನ್ನು ಅರಿತುಕೊಂಡು ಹೊಸ ಸುಧಾರಣೆಯ ಏರ್ಪಾಡಿಗಾಗಿ ಒಂದು ವಿಚಾರಣಾ ಸಮಿತಿಯನ್ನು ರಚಿಸಿದರು. ಆ ಕಮಿಟಿಯಲ್ಲಿ ಅಧಿಕಾರಿಗಳೂ ಅನಧಿಕಾರಿಗಳೂ ಪ್ರಜಾಪರಿಷತ್ತಿನ ಪ್ರತಿನಿಧಿಗಳೂ ಇದ್ದರು. ಕಮಿಟಿಯು ತನ್ನ ಒಮ್ಮತದ ಶಿಫಾರಸುಗಳನ್ನು ಈಗ ತಯಾರಿಸಿರುವದು. ರಾಜರು ಸದ್ಯದಲ್ಲಿಯೇ ಅದಕ್ಕನುಸಾರವಾಗಿ ಸುಧಾರಣೆಯನ್ನು ಜಾಹೀರು ಮಾಡಲಿರುವರು.

ಜನಪ್ರಾತಿನಿಧ್ಯವುಳ್ಳ ಒಂದು ಎಸೆಂಬ್ಲಿಯು ರಚಿಸಲ್ಪಡುವದು. ಪಂಚಾಯತಿಗಳು ಈ ಎಸೆಂಬ್ಲಿಗೆ ಪ್ರತಿನಿಧಿಗಳನ್ನು ಚುನಾಯಿಸತಕ್ಕದ್ದು ಹೊರತು ವೋಟರರಲ್ಲ. ಇದಕ್ಕೆ ದಿವಾನರು ಅಧ್ಯಕ್ಷರು. ಪ್ರಶ್ನೆ ಕೇಳುವ ಠರಾವು ತರುವ ಅಧಿಕಾರವು ಮೆಂಬರರಿಗೆಲ್ಲಾ ಇದೆ. ವಾರ್ಷಿಕ ಬಜೆಟನ್ನು ಪರಾಮರ್ಶಿಸಲು ಒಂದು ಸಬ್ ಕಮಿಟಿಯು ನೇಮಿಸಲ್ಪಡಬೇಕು. ಸುಧಾರಣೆಯ ಮತ್ತೊಂದು ವಿಶೇಷವೆಂದರೆ ವರ್ಗಾಯಿಸಲ್ಪಟ್ಟ ವಿಷಯಗಳೆಂದೇನೂ ಅದರಲ್ಲಿಲ್ಲ. ಚುನಾಯಿಸಲ್ಪಟ್ಟ ಹನ್ನೆರಡು ಮೆಂಬರರನ್ನು ಆರು ಸಬ್ ಕಮಿಟಿಗಳನ್ನಾಗಿ ನೇಮಿಸಲಾಗುವದು. ಒಂದೊಂದು ಸಬ್ ಕಮಿಟಿಯೂ, ವಿದ್ಯೆ, ಆರೋಗ್ಯ ವ್ಯವಸಾಯ, ಹಳ್ಳೀ ಸುಧಾರಣೆ, ಸ್ಥಳೀಕ ಸಂಸ್ಥೆಗಳು ಕೈಗಾರಿಕೆ ಮೊದಲಾದ ಬೇರೆ ಬೇರೆ ವಿಭಾಗಕ್ಕೆ ಸಂಬಂಧಪಟ್ಟಿರಬೇಕು.

ಹಿಂದೂಸ್ಥಾನದ ಪುಟ್ಟ ರಾಜ್ಯವೊಂದರ ಅರಸರು ಈ ರೀತಿ ಮಾರ್ಗದರ್ಶಕರಾಗಿರುವರು. ಇದಾರ್ ಸಂಸ್ಥಾನದಲ್ಲಿ ಮಿಕ್ಕ ಸಂಸ್ಥಾನಗಳಂತೆ ಅತೃಪ್ತಿಯಿದ್ದಿರಲಿಲ್ಲ. ಪುಟ್ಟ ರಾಜ್ಯವೆಂಬುದರಲ್ಲಿ ಚಳವಳಗಾರರ ಅಲಕ್ಷ್ಯಕ್ಕೂ ಅದು ಒಳಗಾಗಿತ್ತು. ಆದರೂ ಅಲ್ಲಿಯ ರಾಜರು ಕಾಲಮಹಾತ್ಮೆಯನ್ನರಿಯದೆ ಹೋಗಲಿಲ್ಲ. ಇದಾರಿನ ಈ ಸುಧಾರಣೆಯಲ್ಲಿ ಎಷ್ಟೇ ಕೊರತೆಯಿದ್ದರೂ ಅದು ಆಳುವವರ ಸ್ವಂತ ಪ್ರೇರಣೆಯಿಂದ ಪ್ರಜೆಗಳ ಕಷ್ಟತ್ಯಾಗಕ್ಕೆ ಬೆಲೆಯಾಗಿ ಬಾರದೆ ಅರಸರ ಪ್ರಜಾವಾತ್ಸಲ್ಯದ ಕುರುಹಾಗಿ ಮುಂದೆ ಬಂದುದರಿಂದ ಸಂತೋಷದ ಸಂಗತಿ. ಸರಿಯಾಗಿ ಯೋಚಿಸಿದಲ್ಲಿ ಅರಸರು ಸ್ವಕ್ಷೇಮದ ಸಲುವಾಗಿಯೇ ಅಂಗೀಕರಿಸಬೇಕಾದ ಹಾದಿ. ಬಂಧು, ಇದಾರ್ ರಾಜರುಗಳ ಮಾದರಿಯನ್ನು ಮಿಕ್ಕವರೂ ಏಕೆ ಅನುಕರಿಸಬಾರದು?

ಮುದುಳಿಗೆ ತಂಪು ಮತ್ತು ಕೂದಲು ಬೆಳೆಯುವು ದಕ್ಕೂ ಸಿದ್ಧಗೊಳಿಸಿದ

ಗಾಂಧಿ (ಝಂಡಾಛಾಪ)

ರಿಜಿಸ್ಟರ್ಡ್

ಬ್ರಹ್ಮೀತೈಲ

ಒಮ್ಮೆ ಉಪಯೋಗಿಸಿ ಖಾತ್ರಿಮಾಡಿರಿ.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕು.

C. C. Mahajan & Co. Bombay 2

ಸಿ. ಸಿ. ಮಹಾಜನ & ಕಂ, ಮುಂಬಾಯಿ 2

ನಿಮ್ಮ ವ್ಯಾಪಾರವು ವೃದ್ಧಿಯಾಗಬೇಕೆ?

ಹಾಗಿದ್ದರೆ—

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ

ನವಯುಗದಲ್ಲಿ

ಜಾಹೀರಾತುಕೊಡಿರಿ.

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನಕಾರ್ಯಾಲಯ—ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನು ಹೊಂದಿಕೊಂಡಿರುವವರಿಗೆ ಮುದ್ದಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲಪ್ತ ಅವಧಿಗಳ ಚಿಕ್ಕ ಸಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ **ಜೀವವಿಮೆ ಮಾಡುವುದೇ.**

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯಂಟಲ್"ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ ಆರ್ಥಿಕ ಸ್ವಾತಂತ್ರ್ಯದ ತಳಹದಿ ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?

ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲೈಫ್ ಆಫೀಸು,
ಮೈನ್‌ರೋಡ್, ಮಡಿಕೇರಿ, (ಕೊಡಗು.)

ಅಥವಾ

ಬ್ರಾಂಚ್ ಸೆಕ್ರಿಟರಿ,
ಓರಿಯಂಟಲ್ ಲೈಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ORIENTAL Govt. Security Life Assurance Co., Ltd.

ಶಾಲಾಮಕ್ಕಳಿಗೆ ಉಪಯುಕ್ತವಾದ ಪುಸ್ತಕಗಳು

ಕನ್ನಡ ಭಾಷಾ ಪಾಠಗಳು

	ಗಜೆಟ್ ಪುಟ	ಕ್ರಯ		
ಕನ್ನಡ ಮೂಲಪಾಠಕ ... (ಮೊದಲನೇ ದರ್ಜೆಗೆ ಉಪಯುಕ್ತವಾದುದು.)	288	0	2	0

ಮೆಕ್ಕಿಲನರ ಪುಸ್ತಕಾವಳಿ

ಬಾಲಶಿಕ್ಷೆ ...	290	0	2	0
ಮೊದಲನೇ ಪುಸ್ತಕ ...	287	0	2	0
ಎರಡನೇ ,, ...	287	0	3	0
ಮೂರನೇ ,, ...	288/290	0	4	0
ನಾಲ್ಕನೇ ,, ...	288	0	5	0
ಐದನೇ ,, ...	290	0	6	0
ಆರನೇ ,, ...	290	0	7	0
ಏಳನೇ ,, ...	288	0	8	0

ನೂತನ ಸಾಮಾನ್ಯ ವಿಜ್ಞಾನ ಪಾಠಗಳು

ಮೊದಲನೇ ಪುಸ್ತಕ (2ನೇ ದರ್ಜೆಗೆ)	287	0	3	0
ಎರಡನೇ ಪುಸ್ತಕ (3ನೇ ದರ್ಜೆಗೆ)	287	0	3	0
ಮೂರನೇ ಪುಸ್ತಕ (4ನೇ ದರ್ಜೆಗೆ)	171	0	5	0
ನಾಲ್ಕನೇ ಪುಸ್ತಕ (5ನೇ ದರ್ಜೆಗೆ)	174	0	6	0
IV ಫಾರ್ಮಿನ ನೂತನ ಸಾಮಾನ್ಯ ವಿಜ್ಞಾನ	184	1	4	0

ಗಣಿತ ಪುಸ್ತಕಗಳು

ಬಾಲಗಣಿತ 1ನೇ ದರ್ಜೆಯದು	151	0	3	6
,, 2ನೇ ,,	151	0	5	0
,, 3ನೇ ,,	151	0	7	6
,, 4ನೇ ,,	151	0	8	6
,, 5ನೇ ,,	151	0	11	6

ಭೂಗೋಳಶಾಸ್ತ್ರ

ಚಿತ್ರಮಯ ದಕ್ಷಿಣಕನ್ನಡ (ಶ್ರೀ। ಶಿವರಾಮ ಕಾರಂತರಿಂದ ವಿರಚಿಸಲ್ಪಟ್ಟು ನೂರಾರು ಚಿತ್ರಗಳಿಂದ ಕೂಡಿದೆ)	122	0	6	0
ದಕ್ಷಿಣ ಕನ್ನಡ ಜಿಲ್ಲೆಯ ಭೂಗೋಲ	129	0	5	6

ಕನ್ನಡ ಇಂಗ್ಲೀಷ್ ಗೋಳಗಳು—ನಕ್ಷೆಗಳು—ಜನಜೀವನ ಚಿತ್ರಗಳು—ಮೇಪ್ ಬುಕ್—ಎಟ್ಲಾಸ್ ಮುಂತಾದವುಗಳು.

ಕನ್ನಡ ಪದ್ಯ ಪುಸ್ತಕಗಳು

ಮೊದಲನೇ ಪದ್ಯ ಪುಸ್ತಕ	289	0	2	6
ಎರಡನೇ ಪದ್ಯ ಪುಸ್ತಕ	289	0	3	6

ಮೆಕ್ಕಿಲನರ ಪಾಠಪುಸ್ತಕಗಳ ಕೈಪಿಡಿ

ಎರಡನೇ ಪುಸ್ತಕ	0	2	0
ಮೂರನೇ ,, ...	0	2	6
ನಾಲ್ಕನೇ ,, ...	0	2	6
ಐದನೇ ,, ...	0	3	0
ಆರನೇ ಏಳನೇ ಪುಸ್ತಕ (ಒಟ್ಟಿಗೆ)	0	3	6

ಕನ್ನಡ ವ್ಯಾಕರಣ ಪಾಠಗಳು

ಕನ್ನಡ ಮೂಲವ್ಯಾಕರಣ	288	0	3	0
ಕನ್ನಡ ಬಾಲವ್ಯಾಕರಣ	288	0	3	3
ಕನ್ನಡ ಶಾಲಾವ್ಯಾಕರಣ	288	0	5	0

ಕನ್ನಡ ಕಥೆ ಪುಸ್ತಕಗಳು

	ಗಜೆಟ್ ಪುಟ	ಕ್ರಯ		
ಗುಬ್ಬೀ ಪಾಯಸ	287	0	0	6
ಗಡ್ಡದ ಅಜ್ಜಯ್ಯ	,,	0	1	6
ಕೆಂಚಮ್ಮ	,,	0	1	6
ಆಲಿಬಾಬನ ಕಥೆ	,,	0	2	3
ಸಂಯೋಗಿತೆ	,,	0	6	0
ಪಾಪ್ರೋಸಿನ ಪಜೀತಿ	287	0	0	6
ಸಿಂಡರೆಲ್ಲ (3ನೇ ದರ್ಜೆಗೆ)	,,	0	1	6
ಕಾಗೆಯೂ ಗುಬ್ಬಿಯೂ (1ನೇ ದರ್ಜೆಗೆ)	288	0	2	3
ಮೌರ್ಯ ಸಿಂಹಾಸನ	,,	0	4	0
ಐತಿಹಾಸಿಕ ಕಥಾವಳಿ ...	,,	0	6	0

ಸಚಿತ್ರ ಚರಿತ್ರೆಗಳು

1ನೇ ದರ್ಜೆಗೆ	287	0	2	0
2ನೇ ,, ...	287	0	2	0
3ನೇ ,, ...	287	0	3	0
4ನೇ ,, ...	287	0	4	6
5ನೇ ,, ...	287	0	5	0
6ನೇ ,, ...	,,	0	6	0
7ನೇ ,, ...	,,	0	4	0

ಇಂಗ್ಲೀಷು ಮತ್ತು ಕನ್ನಡ 'ಮಿತ್ರ' ಕೋಪಿ ಪುಸ್ತಕಗಳು—ಕನ್ನಡ ಮೋಡೆಲ್ ಕೋಪಿ ಪುಸ್ತಕಗಳು—ಎಲ್ಲಾ ತರಗತಿಗಳಿಗೂ ಅಗತ್ಯ ಬೇಕಾದವುಗಳು.

ENGLISH READERS

NEW ERA

	Gazette Page	Price		
I Primer	65	0	5	0
II Primer	65	0	6	0
Book I	4	0	8	0
Book II	60	0	10	0
Book III	65	0	12	0

CORONATION

Primer I	56	0	3	0
Primer II	56	0	3	0
Primer I & II	57	0	6	0
Book I	60	0	6	0
Book II	60	0	8	0
Book III	60	0	10	0
Book IV	62	0	12	0

Complete English Course (By Kini.)

IV Form Part I	7	0	12	0
V Form Part II	7	1	0	0
Readings in English Literature (by Kini.)	5			
IV Form Part I		0	12	0
V Form Part II		1	0	0
Outlines of English History for IV & V Forms (to appear in separate supplement)	5	1	8	0

ಈ ಎಲ್ಲಾ ಪುಸ್ತಕಗಳೂ ಅಲ್ಲದೆ, ಎಲ್ಲಾ ಶಾಲಾ ಸಾಮಗ್ರಿಗಳೂ ನಮ್ಮಲ್ಲಿ ದೊರೆಯುತ್ತವೆ.

ಬಾಸೆಲ್ ಮಿಶನ್ ಬುಕ್ ಡಿಪೋ

(ಕೆನರಾಗ್ ಲಿಮಿಟೆಡ್) ಮಂಗಳೂರು.

—: ಶಾಖೆಗಳು :—

ಹಂಪನಕಟ್ಟೆ, ಮಂಗಳೂರು ಮತ್ತು ಹುಬ್ಬಳ್ಳಿ (ದ. ಮಹಾರಾಷ್ಟ್ರ)

ಅನಾಥ ಅಬಲರಿಗೆ ದೇವರುಂಟೇ?

ಯಾರಲ್ಲಿ ಶಕ್ತಿಯಿದೆಯೋ, ಯಾರು ಧನಿಕರೋ, ಯಾರು ಮನುಷ್ಯರನ್ನು ತಮ್ಮ ದಾಸರನ್ನಾಗಿ ಮಾಡಬೇಕೆನ್ನುವರೋ, ಯಾರು ನಿರ್ಬಲರ ಸಂಪಾದನೆಯಿಂದ ತಾವು ಸುಖಿಗಳಾಗ ಬೇಕೆಂದಿರುವರೋ ಅಂತಹ ಸಬಲರೇ ದೇವರನ್ನುಂಟು ಮಾಡಿದವರು!

ವಿಚಾರ ಕ್ರಾಂತಿಯ ಹಿಂದೀ ಲೇಖನವೊಂದರ ಅನುವಾದವನ್ನು ನಮ್ಮ ವಾಚಕರಿಗಾಗಿ ಇಲ್ಲಿ ಕೊಡಲಾಗಿದೆ.

ಹಿಂದೊಬ್ಬರು 'ನಮ್ಮ ಅಜ್ಞಾನವೇ ನಮ್ಮದೇವರು' ಎಂದು ಹೇಳುತ್ತಿದ್ದರು. ಅದಕ್ಕಿಂತಲೂ 'ನಮ್ಮ ಅಸಮರ್ಥತೆಯೇ ದೇವರು' ಎನ್ನುವುದು ಹೆಚ್ಚು ಸಮಂಜಸವಾಗಿ ತೋರುತ್ತದೆ. ಹಿಂದಿನಕಾಲದಲ್ಲಿ ನಾವು ಅಜ್ಞಾನಿಗಳಾಗಿದ್ದೆವು; ಏನೂ ತಿಳಿಯದವರಾಗಿದ್ದೆವು; ಈ ಚಂದ್ರ, ಈ ಸೂರ್ಯ, ಈ ಪೃಥ್ವಿ, ಎಂತಹ ಬಿಸಿಲು ಎಂತಹ ವಿಚಿತ್ರವಾದ ಕಾಮನ ಬಿಲ್ಲು! ಇವೆಲ್ಲ ನಮ್ಮ ಮನಸ್ಸಿನಲ್ಲಿ ಆಶ್ಚರ್ಯವನ್ನು ಉಂಟುಮಾಡುತ್ತಿದ್ದುವು. ಅದನ್ನು ತಿಳಿದುಕೊಳ್ಳತಕ್ಕ ಶಕ್ತಿ ನಮ್ಮಲ್ಲಿರಲಿಲ್ಲ! ನಮ್ಮ ಶರೀರದಂತೆಯೇ ನಮ್ಮ ಬುದ್ಧಿಯೂ ದಪ್ಪವಾಗಿತ್ತು. ಅದರಿಂದಲೇ ನಾವೆಲ್ಲರೂ ಭಗವಂತ! ಇದೆಲ್ಲಾ ನಿನ್ನ ಮಹಿಮೆಯಪ್ಪ!"ಎಂದು ಹೇಳಿ ಸುಮ್ಮನಾಗುತ್ತಿದ್ದೆವು.

ಭಗವಂತ ಅಥವಾ ಅಜ್ಞಾನ

ವಿಜ್ಞಾನದಿಂದ ಕಂಡು ಕೇಳರಿಯದ ಎಷ್ಟೋ ವಸ್ತುಗಳು ಬೆಳಕಿಗೆ ಬಂದುವು. ದೂರದರ್ಶಕಯಂತ್ರ ಸೂಕ್ಷ್ಮದರ್ಶಕ ಯಂತ್ರಗಳು ಬಂದುವು ನಮ್ಮ ಶರೀರದೊಳಗಿನ ಗುಪ್ತವಸ್ತುಗಳೆಲ್ಲ ಮನುಷ್ಯನ ತಿಳುವಳಿಕೆಗೆ ನಿಲುಕಲಾರಂಭಿಸಿದುವು. ಅವನ ಸೂಕ್ಷ್ಮದೃಷ್ಟಿಗೆ ಮೀರಿದ ವಸ್ತುವೇ ಇಲ್ಲ ಈಗ.

ನಾವು ತಿಳಿಯಬೇಕಾದ ವಿಷಯಗಳು ಇನ್ನೂ ಬಹಳ ಇವೆ ಎಂಬುದರಲ್ಲಿ ಸಂಶಯವಿಲ್ಲ. ಇನ್ನೂ ಅಜ್ಞಾನವಿದ್ದೇ ಇದೆ. ಆದರೆ ಎಲ್ಲಕ್ಕಿಂತ ಹೆಚ್ಚಿನ ಅಜ್ಞಾನವೆಂದರೆ ಈಗ ದೇವರ ವೇಷದಲ್ಲಿ ನಮ್ಮ ಅಸಮರ್ಥತೆ ನಮ್ಮ ದೌರ್ಬಲ್ಯ ಎಂದು ತುಂಬಿರುವ ಆಭಾವನೆಗಳೇ, "ಆಪದ್ಬಾಂಧವರಾಮ, ಅನಾಥರಕ್ಷಕ ರಾಮ" ಆಹಾ! ಎಂತಹ ಸತ್ಯವಾದ ವಿಚಾರ. ರಾಮನು ಅನಾಥರಕ್ಷಕ, ನಿರ್ಬಲರ ಬಲ! ಹೌದು, ರಾಮನು ನಿರ್ಬಲರ, ಅಸಮರ್ಥರ ದೇವರು. ಸಮರ್ಥರಾಗಿರುವವರಿಗೆ, ಬಲವಂತರಿಗೆ, ರಾಮನಿಂದಾಗುವದಾದರೂ ಏನು? ಅವನ ಅಗತ್ಯದವರೂ ಏನು ಅವರಿಗೆ.

ಒಬ್ಬನು ಬಲವಾದವನು ಇತರರನ್ನು ಲೂಟಿಮಾಡುತ್ತಿರುವನು. ಏನು ಮಾಡಿದರೂ ಯಾರೂ ಕೇಳುವವರೇ ಇಲ್ಲ ಹೆಚ್ಚುಕಡಿಮೆ ಮಾತನಾಡಿರಿ ಜೋಕೆ! ಪುನಃ ಒದೆಗಳು ಬಿದ್ದಾವು! ಇನ್ನು ಅವರು ಮಾಡುವುದಾದರೂ ಏನು? "ರಾಮ ರಾಮ, ಭಗವಂತ ಕಾಪಾಡು ಕಾಪಾಡು." ಅಷ್ಟು ತಾನೇ!

ಇಷ್ಟೇ ಅಲ್ಲ. ಪ್ರವಾಹದಿಂದ ಬೆಳೆಯೆಲ್ಲಾ ಕೊಚ್ಚಿ ಹೋಗುತ್ತಿದೆ. ತೋಟವೆಲ್ಲ ಹಾಳಾಗಿ ಹೋಗುತ್ತಿದೆ ಗಗನ ಚುಂಬಿತ ಭವನಗಳು ಭೂಕಂಪದಿಂದ ನೆಲಸಮವಾಗುತ್ತಿವೆ. ಮುತ್ತಿನಂತಹ ಮಗುವು ನಮ್ಮನ್ನು ದುಃಖದಲ್ಲಿ ಬಿಟ್ಟು ಮರಣವನ್ನು ಹೊಂದುವುದು. ನಮ್ಮ ದೌರ್ಬಲ್ಯವು ನಮ್ಮನ್ನು ಆವರಿಸಿಕೊಳ್ಳುವುದು. ಸರಿ. 'ನಾ ಮಾಡಿದ ಕರ್ಮ ಬಲವಂತವಾದರೆ ನೀ ಮಾಡುವುದೇನೋ ದೇವಾ' ಎನ್ನುತ್ತ ರೋದಿಸುವೆವು. ಅಂದರೆ ಭಗವಂತನೆಂದರೆ— ಅಸಮರ್ಥತೆ ಎಂದಂತಾಯಿತು. ಅಸಮರ್ಥತೆ, ನಿರ್ಬಲತೆ, ದೌರ್ಬಲ್ಯ, ನಿಸ್ಸಹಾಯಕತೆ ಇವೆಲ್ಲ ಒಂದೇ ಮರದ ಶಾಖೆಗಳು ಅಷ್ಟೆ!

ಮುಂದಿನ ಪ್ರಶ್ನೆ ಏನೆಂದರೆ— ಒಂದು ವೇಳೆ ದೇವರು ಇರುವುದು ನಿಜವಾದರೆ ಅವನು ಕೇವಲ ನಿರ್ಬಲರಿಗೆ ಮಾತ್ರ ದೇವರೇ? ಉದಾಹರಣೆಗೆ ದ್ರೌಪದಿ, ಪ್ರಹ್ಲಾದ, ಗಜರಾಜ ಇವರ ಸಹಾಯಕ್ಕೆ ಬಂದ ಭಗವಂತನ ವಿಚಾರವನ್ನೂ ನೋಡೋಣ. ದ್ರೌಪದಿಯ ಕಥೆಯಂತೂ ಎಲ್ಲರಿಗೂ ಗೊತ್ತು. ಇಲ್ಲಿ ಇಷ್ಟು ಸಾಕು. ಕೌರವರ ಸಭೆಯಲ್ಲಿ ದ್ರೌಪದಿಗೆ ಮಾನಭಂಗವಾಗ ಹತ್ತಿತು. ಅವಳನ್ನು ನಗ್ನಳನ್ನಾಗಿ ಮಾಡತೊಡಗಿದರು. ಆಗ ಆಕೆಯ ಮಾನರಕ್ಷಣೆಗೆ ಯಾರೂ ಇರಲಿಲ್ಲ. ದೇವರಲ್ಲಿ ಮೊರೆ ಇಟ್ಟಳು. ವಸ್ತ್ರವು ಅಕ್ಷಯವಾಯಿತು. ನಿಜವಾಗಿಯೂ ಭಗವಂತನು ನಿರ್ಬಲರ ಬಲ.

ಇಲ್ಲಿ ನೋಡಿ. ಇನ್ನೊಬ್ಬ ನಿರ್ಬಲ ಅಬಲೆ, ಒಬ್ಬ ಬಡವನ ಹೆಂಡತಿ. ಪ್ರಸವ ವೇದನೆಗಾರಂಭವಾಗಿದೆ. ಮೊದಲನೆಯ ಪ್ರಸವ. ಗಂಡನಿಗೆ ಚಿಂತೆಯುಂಟಾಗಿದೆ. ಸೂಲಗಿತ್ತಿಯನ್ನು ಕರೆತರಬೇಕು. ಆದರೆ ಕೈಯಲ್ಲಿ ಕಾಸಿಲ್ಲ. ಸಾಹುಕಾರನನ್ನು ಕೇಳತರೋಣವೆಂದು ಹೊರಡುವನು. ಅಷ್ಟರಲ್ಲಿ ಸಾಹುಕಾರನ ಗುಮಾಸ್ತರು ದಾರಿಯಲ್ಲೇ ಬರುತ್ತಿರುವರು. "ಎಲ್ಲಿಗೆ ಹೊರಟೆಯೇ ನಡಿ, ಸಾಹುಕಾರರ ಸೊಸೆಯು ಇಂದು ತವರೂರಿಗೆ ಹೊರಟಿರುವರು, ನಿನ್ನನ್ನೂ ಕರೆಹೇಳಿದರು ನಡೆ' ಎನ್ನುವನು. ಕೂಲಿಯವನು "ಸ್ವಾಮಿ, ಮನೆಯಲ್ಲಿ ತೊಂದರೆ ಇದೆ. ಪತ್ನಿಗೆ ಪ್ರಸವವೇದನೆಯುಂಟಾಗಿದೆ" ಎನ್ನುವನು. "ಬದ್ಮಾಷ್, ನಿನ್ನ ಹೆಂಡತಿ ಸತ್ತರೆ ನಮ್ಮ ಸಾಹುಕಾರ್ರ ಮನೆಯ ಕೆಲಸ ನಿಲ್ಲುವದೇನೋ ಇಂತಹ ಶುಭದಿನ" ಸರಿ, ಸಾಹುಕಾರರ ಮನೆಗೆ ಹೋಗಲೇಬೇಕಾಯಿತು. ಮನೆಯಲ್ಲಿ ಅವನ ಪತ್ನಿಗೆ ತೊಂದರೆ ಹೆಚ್ಚಾಯಿತು. 'ರಾಮರಾಮ' ಎಂಬ ಆರ್ತಧ್ವನಿಯು ಹೊರಟು ಗಾಳಿಯಲ್ಲಿ ಲೀನವಾಗುತ್ತಿತ್ತು. ಕೂಲಿಯವನು ಹಿಂದಿರುಗಿ ಬಂದು ನೋಡುವುದಾದರೂ ಏನನ್ನು! ಸತ್ತ ಪತ್ನಿ ಮತ್ತು ಎಳೆಗೂಸನ್ನು!

ಈಗ ನೀವೇ ಹೇಳಿ, ದೇವರ ಅಗತ್ಯವಿದ್ದುದು ಈ ಹೆಂಗಸಿನ ಬಳಿಯಲ್ಲೋ ಅಥವಾ ದ್ರೌಪದಿಯ ಬಳಿಯಲ್ಲೋ? ಎಷ್ಟು ಗೋಳಾಡಿದರೂ ದೇವರು ಬರಲೇ ಇಲ್ಲ. ಇಷ್ಟೇ ಅಲ್ಲ ನಾವು ಪ್ರತಿನಿತ್ಯವೂ ನಮ್ಮ ನೆರೆಯಲ್ಲಿಯೇ, ಅನೇಕ ಮಂದಿ ಅಬಲೆಯರು ನಗ್ನರಾಗಿ ಮಾಡಲ್ಪಡುತ್ತಿರುವುದನ್ನು ನೋಡುತ್ತಿಲ್ಲವೇ? ಅದೂ, ಯಾವ ಅಪರಾಧವೂ ಇಲ್ಲದೆ ಕೇವಲ ನಿರ್ದೋಷಿಗಳಾಗಿ 'ರಾಮ, ರಾಮ, ಕಾಪಾಡು' ಎಂದು ರೋದಿಸುತ್ತಿರುವರು. ಆವರ ದೇವರು ಬಂದಿರುವನೆ? ಇಲ್ಲ. ಬರದಿರಲು ಕಾರಣವೇನು ಮತ್ತೆ?

ಪ್ರಹ್ಲಾದನ ವಿಚಾರ. ಇವನು ರಾಕ್ಷಸ ಜಾತಿಯಲ್ಲಿ ಹುಟ್ಟಿ, ತನ್ನ ವಂಶಕ್ಕೆ ವಿರೋಧವಾಗಿ ಜಪತಪ ಮಾಡುತ್ತಿದ್ದನು. ರಾಕ್ಷಸಪಂಥಿಯಾಗಿ ದೇವಪಂಥಿಯಾಗಲೆತ್ನಿಸುತ್ತಿದ್ದನು ತನ್ನ ಕುಲನಿಯಮಕ್ಕೆ ವಿರೋಧವಾಗಿ! ಇದನ್ನು ಅವರ ತಂದೆಯು ಹೇಗೆ ತಾನೇ ಸಹಿಸುವನು-ಅವರ ತಂದೆಯಲ್ಲ-ಯಾರ ತಂದೆಯೂ ಇಂತಹುದಕ್ಕೆ ಅವಕಾಶ ಕೊಡಲಾರನಲ್ಲವೆ? ಪ್ರಹ್ಲಾದನು ಒಪ್ಪಲಿಲ್ಲ. ಶಿಕ್ಷೆಮಾಡಲೇ ಬೇಕಾಯಿತು. ತನ್ನ ಶತ್ರುವಿನ ರೀತಿನೀತಿಯನ್ನನುಸರಿಸದ ಮಗನ ತಲೆಯನ್ನು ಕಡಿಯಲು ಉದ್ಯುಕ್ತನಾದನು. ಒಬ್ಬನೇ ಮಗ. ಆದರೂ ತಂದೆಯು ಕತ್ತರಿಯನ್ನೆತ್ತಿದನೋ ಇಲ್ಲವೋ ಕಂಬವನ್ನೊಡೆದು ಭಗವಂತನು ಬಂದು, ತಂದೆಯನ್ನು ತೀರಿಸಿ, ಮಗನಿಗೆ ರಾಜ್ಯ ಕೊಟ್ಟನು.

ನಿಮಗೆ ಕಣ್ಣುಗಳಿದ್ದರೆ ನೀವೀ ಪ್ರಪಂಚದಲ್ಲಿ ಎಷ್ಟು ಮಂದಿ ಹಿರಣ್ಯಕಶಿಪುಗಳನ್ನು ನೋಡಿಲ್ಲ. ಪ್ರಹ್ಲಾದರಿಗೂ ಸಹ ಕಡಿಮೆ ಇಲ್ಲ ಎನ್ನಿ. ಪ್ರಹ್ಲಾದನಂತೂ ತನ್ನ ಕುಲದ, ವಂಶದ, ದೇಶದ ವಿರೋಧವಾಗಿ ವರ್ತಿಸಹತ್ತಿದನು. ಆದರೆ ನಮ್ಮ ಈಗಿನ ಪ್ರಹ್ಲಾದರನ್ನು ನೋಡಿ-ಇವರು ಕೇವಲ ತಮ್ಮ ಕುಲ ಪರಿವಾರಕ್ಕೆ ಮಾತ್ರವಲ್ಲ, ಸಮಸ್ತ ದೇಶದ ಕಲ್ಯಾಣಕ್ಕೆಂದು ಕೂಗುತ್ತಿದ್ದಾರೆ. ಕೂಗುತ್ತ ಕೂಗುತ್ತ ಪ್ರಾಣವನ್ನೇ ಅರ್ಪಿಸುತ್ತಿದ್ದಾರೆ-ಆದರೆ ಇನ್ನೊಬ್ಬ ನರಸಿಂಹ ಮಾತ್ರ ಬಂದದ್ದನ್ನು ನೋಡಿದಿರಾ? ಇಲ್ಲ. ಪ್ರಹ್ಲಾದರು ಬೇಯುತ್ತಲೇ ಇರುವುದು, ಹಿರಣ್ಯಕಶಿಪು ಮಜಾಮಾಡುತ್ತಲೇ ಇರುವುದು, ಭಗವಂತನು ಕಾಲು ಚಾಚಿಕೊಂಡು ಕ್ಷೀರಸಮುದ್ರದಲ್ಲಿ ನಿದ್ರಿಸುತ್ತಿರುವುದು, ಏನರ್ಥ ಇದಕ್ಕೆ?

ಗಜರಾಜನ ವಿಚಾರ

ನಾಲ್ಕು ಕಾಲಿನ ಆನೆಯು ಮಾತ್ರಂತಿರಲಿ, ಇಂದು ಎಷ್ಟು ಮಂದಿ ಎರಡು ಕಾಲಿನ ಆನೆಗಳು- ಸಾವಿರಾರು ಮೊಸಳೆಗಳ ಬಾಯಿಯಲ್ಲಿ ಸಿಕ್ಕಿ-ಮೂಗಿನ ವರೆಗೆ ನೀರು ಬಂದುಬಿಟ್ಟದೆ-ಒದ್ದಾಡುತ್ತಿಲ್ಲ! ತ್ರಾಹಿ, ಭಗವಾನ್ ತ್ರಾಹಿ, ಎಂದು ಕೂಗುತ್ತಿರುವರು ಆದರೆ ಗರುಡವಾಹನನನ್ನು ಬಿಟ್ಟು ನಡೆದುಬರುತ್ತಿರುವ ಯಾವ ದೇವರೂ ಗೋಚರಿಸುವುದೇ ಇಲ್ಲ. ಕೋಟಿಗಟ್ಟಲೆ ಆನೆಗಳು ಕೂಗಿ ಕೂಗಿ ಪ್ರಾಣವನ್ನೇ ಅರ್ಪಿಸಿಬಿಟ್ಟುವು. ಈ ನದಿಯಲ್ಲಿ ಅವರೆಲ್ಲರ

THE
PANGAL NAYAK BANK
Estd.] LIMITED. [1920.
ದಿ ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್.
Paid up Capital Rs. 1,82,100/-. Reserves Rs: 2,02,800/-.
PRINCIPAL OFFICE: COURT ROAD, UDIPI.
OTHER OFFICES:
UDIPI, MANGALORE, KATAPADI, & KANHANGAD

Season Deposits so as to bear interest at 4per cent per annum till the end of June 1939 are accepted.

Cumulative Deposits are also received on the usual terms.

Banking business of every description is transacted. Further particulars may be had on application.

ದಿ ವಿಜಯ ಬೇಂಕ್, ಲಿಮಿಟೆಡ್,
ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವ್ಯವಹಾರಗಳು ಇಲ್ಲಿ ನಡಿಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಾತಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3 ತಿಂಗಳಿಗೆ	....	3½%
6 ,,	....	4%
1 ವರ್ಷಕ್ಕೆ	....	4½%
2 ,,	....	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತಿದೆ.

ಮೂಳೆಗಳು ಕೊಳೆಯುತ್ತ ಬಿದ್ದಿವೆಯಲ್ಲ! ಸ್ವಲ್ಪ ನೀರು ಕಡಿಮೆಯಾಯಿತೆಂದರೆ ಎಣಿಸುವಿರಂತೆ ದೇವರು ನಡೆದು ಬರುವ್ರದಿರಲಿ, ಗರುಡನೂ ಸಹ ಇಳಿದುಬರುವಂತೆ ಕಾಣುವುದಿಲ್ಲ.

ಇನ್ನು ಇವುಗಳ ವಿಚಾರಕ್ಕೆ ಹೋಗೋಣ. ಭಗವಂತನು ದ್ರೌಪದಿಯ ಸಹಾಯಕ್ಕೆ ಬಂದುದರ ಕಾರಣ ಗೊತ್ತೆ? ಅಲ್ಲಿ ಅರ್ಜುನನಗಾಂಡೀವವೂ ಭೀಮನ ಗದೆಯೂ ಇದ್ದುದರಿಂದ. ಪ್ರಹ್ಲಾದನ ಬಳಿ ಬಂದುದು ಅವನೊಬ್ಬ ರಾಜಪುತ್ರನಾಗಿನ್ದುದರಿಂದ. ಗಜರಾಜ ಇಲ್ಲಿಯೂ ರಾಜ ಎಂಬ ಶಬ್ದವೇ ಇದೆ ನೋಡಿ. ಆದೊಂದು ಗಜನ ಕೂಡ ಅಗಣಿತ ಇತರ ಗಜಗಳಿನ್ದುವೆಂಬುದನ್ನೂ ನೋಡಿರಿ. ದೇವರು ಒಂದುವೇಳೆ ಇದ್ದರೂ, ಸಬಲರ ದೇವರಿರುವನು. ರಾಜರಾಣಿಯರಿಗೆ ದೇವರಿರುವನು ರಾಜಪುತ್ರರಿಗಿರುವನು, ರಾಜರಿಗಿರುವನು, ಬಡವನಿಗೆ ದುರ್ಬಲನಿಗೆ, ಅಸಹಾಯಕನಿಗೆ, ಅಸಮರ್ಥನಿಗೆ ಇಲ್ಲ-ಖಂಡಿತ ಇಲ್ಲ

ಈ ಸಬಲರೇ ದೇವರನ್ನು ಸೃಷ್ಟಿಸಿದವರು ಎಂದು ಹೇಳಿದರೆ ನೀವು ಆಶ್ಚರ್ಯಪಡುವುದಿಲ್ಲ ತಾನೇ? ದೇವರೇ ನಮ್ಮನ್ನು ನಿರ್ಮಿಸಿದವನು ಎಂಬ ಮಾತನ್ನು ವಿಜ್ಞಾನವು ಸುಳ್ಳುಮಾಡಿಬಿಟ್ಟಿತು. ನಾವೇ-ಅಲ್ಲ ನಮ್ಮಲ್ಲಿಯ ಕೆಲವರು ಸಬಲರು-ಭಗವಂತನನ್ನು ಮಾಡಿದವರು. ಇದೇ ನಿಜವು.

ಇಂದು ಯಾವ ಭಗವಂತನ ರಾಜ್ಯವಿದೆಯೋ, ಆ ಭಗವಂತನು ಸಬಲರಿಂದಲೇ ಧನಿಕರಿಂದಲೇ ಆದವನು ಇಂದಿನ ಭಗವಂತನು ಇರುವುದು ಸ್ವರ್ಗದಲ್ಲಿ ಅಥವಾ ದೇವಸ್ಥಾನಗಳಲ್ಲಿ. ಯಾವ ಸ್ವರ್ಗ? ಎಲ್ಲಿ ಇಂದ್ರನಿರುವನೋ, ಎಲ್ಲಿ ಅಪ್ಸರ ಸ್ತ್ರೀಯರೂ, ಅಮೃತವೂ, ಕಲ್ಪವೃಕ್ಷ, ಕಾಮಧೇನುಗಳಿವೆಯೋ, ಎಲ್ಲಿ ಐರಾವತವಿದೆಯೋ, ಹೆಚ್ಚೇಕೆ? ಎಲ್ಲಿ ಎಲ್ಲ ವಿಧವಾದ ಸುಖಸಾಮಗ್ರಿಗಳುಂಟೋ ಅಲ್ಲಿ. ಮಂದಿರಗಳು, ಇವಂತೂ ಸ್ವರ್ಗದ ಪಾರ್ಥಿವ ರೂಪವೇ ತಾನೇ. ಪೂಜಾರಿಗಳು ದೇವರಿಗೆಂದು ಆನೆಗಳು, ಕುದುರೆಗಳು ಇವೆಲ್ಲ ಇರುವ ಜಾಗ ತಾನೇ?

ಆ ದೇವರ ಬಳಿ ಒಂದು ಲೇಖನಿ ಇದೆ. ಅವನು ಆ ಲೇಖನಿಯಿಂದ ಎಲ್ಲರ ಹಣೆಯ ಮೇಲೂ ಬರೆದು ಬಿಡುವನು. ಅದೇ ಅವನ "ಕರ್ಮ" ಯಾ "ಭಾಗ್ಯ"ವಂತೆ ಈ ಬರೆಹವು ಅಳಿಸಲಾಗದಂತಹುದು. ಈ ಬರವಣಿಗೆಯನ್ನನುಸರಿಸಿಯೇ ಅಂತೆ ಕೆಲವರಿಗೆ ಅರಮನೆ, ಕೆಲವರಿಗೆ ಜೋಪಡಿ ದೊರೆಯುವುದು, ಧನಿಕರಾಗುವುದೂ, ಬಡವನಾಗುವುದೂ, ಸುಖಿಯಾಗುವುದೂ, ದುಃಖಿಯಾಗುವುದೂ ಇದರಿಂದಲೇ. ತುಲಸೀ ಬಾಬಾ, ಜೋಗಿ ಇವರು ಹೇಳಿಬಿಟ್ಟಿರುವರಲ್ಲ 'ಕರ್ಮಗತಿಯನ್ನು ಮೀರುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ' ಎಂದು.

ಅನಾಥ ಅಬಲರಿಗೆ ದೇವರುಂಟೇ?

ಇಂದು ನೀವು ನೋಡುತ್ತಿರುವ ಧನಿಕರೆಲ್ಲ ಆ ಭಾಗ್ಯರೇಖೆಯ ಅನುಸಾರವಾಗಿಯೇ ಇರುವುದು. ಅಂದ ಮೇಲೆ ನೀವು ಬಡವರಾದರೆ, ಜಗತ್ತಿನ ಅಪರಾಧವೇನು? ಬೆಳಗಿನಿಂದ ಸಂಜೆ ವರೆಗೆ ಬೆವರು ಸುರಿಸಿ ಕೆಲಸ ಮಾಡಿದರೂ ರಾತ್ರಿ ಹಸಿವಿನಿಂದ ಸಾಯುವವರು ನೀವು! ಮತ್ತೆ ಕೆಲವರು ಅಲ್ಲಾಡದೆ ಬಿದ್ದಲ್ಲೇ ಬಿದ್ದಿರುವರು, ಮೋಜು ಮಾಡುವರು, ಒಳ್ಳೆಯ ಉಡುಪನ್ನೂ ಧರಿಸುವರು, ಸುಖಸಂಕಥಾ ವಿನೋದದಲ್ಲಿ ಕಾಲಕಳೆಯುವರು! ನೀವು ಪಾಲಕಿಯನ್ನು ಹೊರುವಿರಿ, ಅವರು ನಿಮ್ಮ ಮೇಲೆ ಸವಾರಿ ಮಾಡುವರು. ಅವರಿಗೆ ಸ್ನಾನ, ನಿಮಗೋ ಅವರ ಬಟ್ಟೆಯನ್ನು ಒಗೆಯುವ ಕೆಲಸ! ಅವರು ಕುದುರೆ ಮೇಲೆ ಸವಾರಿ ಮಾಡುವರು, ನೀವು ಆ ಕುದುರೆಯನ್ನು ಮಾಲೀಸ್ ಮಾಡುತ್ತಾ, ಅದರ ಲದ್ದಿಯನ್ನು ತೆಗೆಯುವಿರಿ. ಜ್ಯೇಷ್ಠದ ಉರಿಯುವ ಬಿಸಿಲಿನಲ್ಲಿ ನೀವು ಬೆವರು ಸುರಿಸಿ ದುಡಿಯಬೇಕು, ಅವರು ನೆರಳಿನಲ್ಲಿ ಬೆಟ್ಟದ ಮೇಲೆ ತಂಪಾದ ಊರುಗಳಲ್ಲಿ ಸುಖವಾಗಿರುವರು. ನಿಮ್ಮ ಮಗುವು ಖಾಯಿಲೆಯಿಂದ ಸಾಯುತ್ತಿದೆ. ಔಷಧಿ ಇಲ್ಲ-ಏಕೆ ಸರ್ಕಾರಿ ಆಸ್ಪತ್ರೆ ಇಲ್ಲವೇ? ಕ್ವಿನೈನ್ ತಂದು ಕುಡಿಸಿ, ಡಾಕ್ಟರು ಮಗುವಿಗೆ ಪಥ್ಯ ಹೇಳುವರು, ಹಾಲನ್ನೂ ಕುಡಿಸಬೇಕೆಂದು. ರಾವ್ ಬಹದ್ದೂರ ಮನೆಯ ಕಿಟಕಿಯಲ್ಲಿ ಸ್ವಲ್ಪ ಕಣ್ಣುಬಿಟ್ಟು ನೋಡಿ, ಅವರ ಮಗುವಿಗೆ ಎಲ್ಲೋ ಸ್ವಲ್ಪ ತಲೆನೋವಂತೆ! ಸಿವಿಲ್ ಸರ್ಜನರು ಬಂದಿರುವರು. ಅವರ ನಾಯಿಗೆ ಸ್ವಲ್ಪ ನ್ಯೈಜಿನ್ನಾಗಿಲ್ಲ. ಇದನ್ನು ಅವರು ರೂ.1500 ಕ್ಕೆ ವಿಲಾಯಿತಿಯಿಂದ ತಂದಿರುವರು. ಆ ನಾಯನ್ನು ದಾನಮಾಡುವರು ಮಗುವಿಗೆ ಗುಣವಾಗಲೆಂದು! ನಾಯಿಗೆ ಹಾಲು ತನ್ನಿ! ರಾಯರ ಮಗನು ಅದಕ್ಕೆ ಹಾಲು ಕುಡಿಸುವನು. ಸ್ವಲ್ಪ ಕುಡಿದು ಉಳಿದುದನ್ನು ಚೆಲ್ಲಿ ಬಿಡುತ್ತಿದೆ. ನಿಮ್ಮ ಮಗುವು ಒಂದು ತೊಟ್ಟು ಹಾಲಿಗೆ ಬಾಯಿ ಬಾಯಿಬಿಡುತ್ತಿದೆ. ಏನು ತಾನೆ ಮಾಡಬಲ್ಲಿರಿ? ದೇವರು ಬರೆದ ಹಣೆಬರಹ. ನಿಮ್ಮ ಭಾಗ್ಯ, ನಿಮ್ಮ ಕರ್ಮದ ಫಲ!

ದೇವರು ಕೊಟ್ಟ ಭಾಗ್ಯ! ಯಾರು ತಾನೇ ಏನು ಮಾಡಲಾದೀತು! ಎಲ್ಲರಿಗೂ ಅವರವರ ಕರ್ಮಕ್ಕನುಸಾರವಾಗಿಯೇ ಸುಖದುಃಖಗಳು ದೊರೆಯುವುವೆಂದ ಮೇಲೆ ಯಾರದೂ ಏನೂ ತಪ್ಪಿಲ್ಲವಲ್ಲ. ಈ ಭಾಗ್ಯವಾದರೂ ಏನು? ಗೊತ್ತೆ ಪೂರ್ವಜನ್ಮದಲ್ಲಿ ಪಡೆದುಕೊಂಡು ಬಂದದ್ದು. ಬಾಬುಗಳು ಹಿಂದಿನ ಜನ್ಮದಲ್ಲಿ ಪಡೆದುಬಂದಿದ್ದರು, ಈಗ ಅನುಭವಿಸುತ್ತಿರುವರು. ನಿಮಗೂ ಸುಖಬೇಕೋ, ಹಾಗಾದರೆ ಸುಮ್ಮನೆ ಸಂಪಾದಿಸಿ ಬಂದದನ್ನು ಸುಖದಿಂದ ಸ್ವೀಕರಿಸಿ, ರಾಮಭಜನೆ ಮಾಡುತ್ತ ಹೋಗಿ. ಮುಂದಿನ ಜನ್ಮದಲ್ಲಾದರೂ ಅರಮನೆ, ಐಶ್ವರ್ಯ ದೊರೆಯುವವು. ಖಂಡಿತ ದೊರೆಯುವುದು. ಈಗ ಶಬ್ದ ಮಾಡದೆ ಭಜನೆ ಮಾಡಿರಿ. ಮಾತಾಡಬೇಡಿ. ತಿಳಿಯಿತೆ?

ಮಾತಾಡಬೇಡಿ, ಹೌದು, ಪಾಪ ಬಡವರು ಮಾತಾಡಿದರೆ ಕೇಳುವವರಾದರೂ ಯಾರು? ಕಳ್ಳತನ, ಲೂಟಿ ಮಾಡಿದರೆ ಗೊತ್ತೇ ಇದೆಯಲ್ಲ ಜೈಲಿನ ವಾಸ! ಆ ಕೆಲಸ ಮಾಡಿದರೆಂದರೆ, ದೇವರು ನಿಮ್ಮನ್ನೂ ನರಕದಲ್ಲಿ ತಳ್ಳುವನು! ಭಯಂಕರ ನರಕದಲ್ಲಿ! ಆ ನರಕವೆಂತಹುದು ಗೊತ್ತೆ? ವೈತರಣೀ ನದಿ, ರೌರವ ಕುಂಡ, ಕುಂಭೀಪಾಕ! ಸಾವಿರಾರು ಹಾವು ಚೇಳುಗಳು, ಧಗಧಗಿಸುವ ಅಗ್ನಿ! ನಿಮ್ಮ ತಲೆಮೇಲೆ ಗರಗಸ, ಮಲಮೂತ್ರಗಳ ಕುಂಡಗಳು! ಹಾಯ್ ಹಾಯ್! ಇವೆಲ್ಲವೂ ನಿಮಗಾಗಿಯೇ ಕಾದುಕೊಂಡಿವೆ ಅಲ್ಲಿ. ಆದುದರಿಂದ ಸುಮ್ಮನಿರಿ, ಶಬ್ದಮಾಡದೆ ಭಜನೆ ಮಾಡುತ್ತ ಹೋಗಿರಿ!

ಇನ್ನಾದರೂ ತಿಳಿಯಿತೆ? ಈ ಭಗವಂತನನ್ನು ಮಾಡಿದವರು ಯಾರೆಂಬುದು?

ಯಾರಲ್ಲಿ ಶಕ್ತಿ ಇದೆಯೋ ಯಾರು ಧನಿಕರೋ ಯಾರು ಮನುಷ್ಯರನ್ನೂ ತಮ್ಮ ದಾಸರನ್ನಾಗಿ ಮಾಡಬೇಕೆನ್ನುವರೋ ಯಾರು ನಿರ್ಬಲರ ಸಂಪಾದನೆಯಿಂದ ತಾವು ಸುಖಿಗಳಾಗಬೇಕೆಂದಿರುವರೋ ಅಂತಹ ಸಬಲರೇ ದೇವರನ್ನು ಮಾಡಿದವರು. ತಮ್ಮ ಈ ಲೂಟಿಯು ಎಷ್ಟು ದಿನ ತಾನೇ ನಡೆಯಬಲ್ಲುದು? ಎಂಬ ಯೋಚನೆ ಬಂತು ಅವರಿಗೆ. ಈ ನಿರ್ಬಲರೆಲ್ಲ ದ್ರೋಹಿಗಳಾದರೆ? ಬಲವಿಲ್ಲದವರು ದರಿದ್ರರೇನೋ ಹೌದು, ಆದರೆ ಬಹಳ ಜನರಿರುವರಲ್ಲ, ಆಗ ಏನು ಗತಿ? ಆದುದರಿಂದಲೇ ಅವರು ಒಂದು ರಾಜ್ಯವನ್ನು ಮಾಡಿದರು. ಅದಕ್ಕೆ ಒಬ್ಬ ರಾಜನನ್ನೂ ಸೃಷ್ಟಿಸಿದರು. ಜೈಲನ್ನು ನಿರ್ಮಿಸಿದರು ಬೇಕಾದ ಸೈನ್ಯವನ್ನೂ ಸಿದ್ಧಮಾಡಿದರು. ಇಷ್ಟಾದರೂ ತೃಪ್ತಿಯಾಯಿತೆ? ಇಲ್ಲ. ಏಕೆಂದರೆ ಈ ಸೈನ್ಯವೇ ಹಿಂದಿರುಗಿ ಬಿದ್ದರೆ? ಜೈಲನ್ನೂ ಒಡೆದು ಹೊರಗೆ ಬಂದರೆ? ಇಲ್ಲ ಇದು ಸಾಧ್ಯವಿಲ್ಲ. ಅದಕ್ಕಾಗಿ ಬಹಳವಾಗಿ ಯೋಚಿಸಿ ಯೋಚಿಸಿ ತಲೆಯನ್ನೂ ಕೆಡಿಸಿಕೊಂಡರು, ಕ್ಷೀರ ಸಮುದ್ರವನ್ನು ಕಡೆದರು. ಅಲ್ಲಿಂದಲೇ ಹೊರಟನು "ಭಗವಂತ"ನು! ಎಂತಹ ಭಗವಂತ? ಅನಂತನು, ಅವ್ಯಯನು, ಅನಾದಿಯು, ಅಗೋಚರನು ಜಗತ್ತಿನಲ್ಲಿರುವ ಎಲ್ಲ 'ಅ' ಗಳೂ ಸೇರಿದ ಭಗವಂತ.

ಧನಿಕರಿಂದ ಸೃಷ್ಟಿಸಲ್ಪಟ್ಟ ಈ ಭಗವಂತನು ಅವರ ಕೃತಜ್ಞ ಸೇವಕನಾಗೇ ಇರುವನು. ಧನಿಕರು ನಿಶ್ಚಿಂತೆಯಿಂದ ನಿದ್ದೆ ಮಾಡುತ್ತಿದ್ದರೂ ಈ ಸೇವಕನು ಅವರ ಸೇವೆಯನ್ನು ಬಹಳ ಎಚ್ಚರಿಕೆಯಿಂದ ಮಾಡುತ್ತ ಅವರ ರಕ್ಷಣೆಯನ್ನೂ ಮಾಡುತ್ತಿರುವನು. ನೋಡಿ ಇಂತಹ ಒಳ್ಳೇ ದೇವರಿಗೆಂದು ಚಿನ್ನದ ಕಲಶದ ಮಂದಿರಗಳು ಚಿನ್ನ ಬೆಳ್ಳಿಯ ಆಭರಣಗಳು, ಮಂದಿರಗಳಲ್ಲಿ ಬೇಕು ಬೇಕಾದ ಭೋಗಸಾಮಗ್ರಿಗಳು ಇವೆಲ್ಲವನ್ನು ಈ ಧನಿಕರು ಮಾಡಿಕೊಟ್ಟಿರುವರು! ಈ ದೇವರಿಗೆ.

ಈ ಸಬಲರಿಗಿರುವ ಭಯವೇನು ಗೊತ್ತೇ? ಈ ನಿರ್ಬಲರ ಸಂಘಟನೆ. ಇವರು ಒಂದಾದರೆ ಈ ಸಬಲರ ಸರ್ವನಾಶವಾದಂತೆಯೇ ಸರಿ. ದೇವರು ತನ್ನನ್ನು ಸಾಕಿ ಸಲಹಿದವರಿಗೆ ಈ ರೀತಿ ನಾಶವಾಗಲವಕಾಶ ಕೊಡುವನೆ? ಇಲ್ಲ ಎಂದಿಗೂ ಇಲ್ಲ. ಅವನು ನಿರ್ಬಲರ ಶಕ್ತಿಯನ್ನು ಅಪಹರಿಸುವನು, ಅವರನ್ನು ಒಡೆಯುವನು ಹೇಗೆ? ನಿರ್ಬಲರ ಅನೇಕ ಜಾತಿಗಳು, ಪ್ರತಿ ಜಾತಿಗಳಲ್ಲಿಯೂ ಒಳಭೇದಗಳು. ಅವರೆಲ್ಲರ ಕೈಯಲ್ಲೂ ಒಂದೊಂದು ಚೂರಿಯನ್ನಿತ್ತು ಒಬ್ಬರ ಕೊರಳನ್ನು ಇನ್ನೊಬ್ಬರು ಕೊಯ್ಯುವಂತೆ ಪ್ರೇರಿಸುವನು.

ನೋಡಿ ಇದು ವರೆಗೆ ಎಷ್ಟು ಕಡೆ ರಕ್ತಪಾತವಾಗಿಲ್ಲ? ಆ ರಕ್ತವನ್ನೆಲ್ಲ ಸಂಗ್ರಹಿಸಿದರೆ ಗಂಗಾ, ಸಿಂಧು, ಆದಿ ನದಿಗಳು ರಕ್ತದಿಂದ ತುಂಬಿ ಹೋಗುವವು. ಸತ್ತವರ ಮೂಳೆಗಳನ್ನೆಲ್ಲ ಸೇರಿಸಿದರೆ, ಪ್ರಪಂಚದ ಎಲ್ಲ ಮಂದಿರಗಳೂ, ಮಸೀದಿಗಳೂ, ಚರ್ಚ್‌ಗಳೂ ತುಂಬಿಹೋಗುವುವು. ನೋಡಿದಿರಾ! ದೇವರ ಹೆಸರಿನಲ್ಲಿ ಆಗಿರುವ ಯಾತನೆಯನ್ನು! ಈ 20ನೆಯ ಶತಮಾನದಲ್ಲಿ ಸಹ ನಾವು ನೋಡುತ್ತಿರುವುದೇನು? ಹತಭಾಗೀ ದೇಶದಲ್ಲಿ ನಡೆಯುತ್ತಿರುವುದೇನು? ಸಬಲರು ಮಜ ಮಾಡುತ್ತಿರುವರು. ನಿರ್ಬಲರು ಒಬ್ಬರನ್ನೊಬ್ಬರು ಕೊಲೆಮಾಡುತ್ತಿರುವರು. ಎಲ್ಲೆಲ್ಲಿಯೂ ದಂಗೆ, ದರೋಡೆ, ರಕ್ತಪಾತ!

ನಿರ್ಬಲರೇ, ಅನಾಥರಕ್ಷಕನೆಂದು ನೀವು ದುಡಿಯುತ್ತಲೇ ಇರಿ. ಕೊಲ್ಲುತ್ತಿರಿ, ಇರಿಯುತ್ತಿರಿ, ಇದೇ ಸ್ವರ್ಗಕ್ಕೆ ಕರೆದೊಯ್ಯುವ ನೇರವಾದ ದಾರಿ.

ನೀವು ರೈತರು, ಕೂಲಿಯವರು, ಸಾಲಗಾರರು, ನಿಮ್ಮನ್ನು ಕೆಲವರು ಲೂಟಿಮಾಡುತ್ತಿರುವರು. ಅವರಾದರೂ ಯಾರು? ನಿಮ್ಮ ರಾಮನನ್ನೂ ನಿಮ್ಮ ಅಲ್ಲಾಹನನ್ನೂ ನಂಬುವವರೇ, ದೇವರ ಭಕ್ತರೇ? ನಿಮ್ಮನ್ನು ಲೂಟಿಮಾಡುವಾಗ ನೀವು ಸಹ ಅವರ ದೇವರ ಭಕ್ತರೆಂಬುದನ್ನು ಅವರು ಮರೆಯುವರು. ಏಕೆಂದರೆ ಆ ರೀತಿ

ಪುಟ ೧೬ಕ್ಕೆ

THE ASIAN ASSURANCE COMPANY, LTD.

ASIAN BUILDINGS - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,601	9,24,965	24,50,234
1935	2,52,08,418	18,39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency termes etc:—

Sri. B. Narayan Shetty, Organizer, Brahmavar
„ M. Shivarama Rao, Organizer, Puttur.

OR

Sri. J. A. PUTRAN, Branch Manager, Mangalore.

ಉಡುಪಿ

ಕಟ್ಟಿಗೆ ಮುಹೂರ್ತ—ಮುಂದಣ ವರುಷ ನಡೆಯಲಿರುವ ಶ್ರೀ ಅದಮಾರ್ ಮಠಾಧಿಪತಿಗಳ ಪರ್ಯಾಯದ ಸಲುವಾಗಿ ವಾಡಿಕೆಯಂತೆ ನಡೆದು ಬಂದ 'ಕಟ್ಟಿಗೆ ಮುಹೂರ್ತ' ಸಮಾರಂಭವು ಇದೇ ತಾ 19ನೇ ಸೋಮವಾರ ಬೆಳಗ್ಗೆ ಮಠದ ಜನರಲ್ ಏಜಂಟರಾದ ಶ್ರೀ ವೆಂಕೋಬ ಬಾಯರ್ರ ನೇತೃತ್ವದಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

ತಾಲೂಕು ವಿದ್ಯಾಸಮಿತಿ—ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲುಗಳು ಮನ್ನಾ ಮಾಡಲ್ಪಟ್ಟುದರಿಂದ ಅವುಗಳ ಬದಲಾದ ತಾಲೂಕು ವಿದ್ಯಾಸಮಿತಿಗಳು ಏರ್ಪಟ್ಟಿವೆ. ನಮ್ಮ ಉಡುಪಿ ಸಮಿತಿಯ ಸಭೆಯು ಇದೇ ತಾ 17ರಂದು ಡಿಪ್ಯುಟಿ ಇನ್ಸ್‌ಪೆಕ್ಟರರ ಆಫೀಸಿನಲ್ಲಿ ಚೆಯರ್‌ಮೇನ್ ಶ್ರೀ ವಕೀಲ್ ಕೆ. ಜೆ ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. ಎಯಿಡೆಡ್ ಶಾಲಾಮೇನೇಜರುಗಳ ಪರಿಷತ್ತನ್ನು ಬರುವ ಅಗೋಸ್ತು ತಿಂಗಳೊಳಗಾಗಿ ಜರಗಿಸುವ ಏರ್ಪಾಡು ಮಾಡಬೇಕಾಗಿ ನಿರ್ಣಯವಾಯಿತು. ಸೀನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ. ಸಂಜೀವರಾಯರು ಕಮಿಟಿ ಮೆಂಬರರಿಗೂ ಪತ್ರಿಕಾಪ್ರತಿನಿಧಿಗಳಿಗೂ ಟೀಪಾರ್ಟಿಯನ್ನಿತ್ತರು. ಮೆಂಬರರಲ್ಲಿ ಒಬ್ಬಿಬ್ಬರು ಪತ್ರಿಕಾಪ್ರತಿನಿಧಿಗಳಿಗೆ ಪ್ರವೇಶ ಕೊಡಬಾರದೆಂದು ಆಕ್ಷೇಪವೆತ್ತಿದರೂ ಚೆಯರ್‌ಮೇನರು ಪ್ರವೇಶಕೊಟ್ಟುದು ಸ್ತುತ್ಯವಾಗಿದೆ.

ಶ್ರೀ. ಗೋಪಾಲ ರೆಡ್ಡಿಯವರ ಆಗಮನ—ಲೋಕಲ ಸೆಲ್ಫ್ ಗವರ್ನಮೆಂಟ್ ಮಿನಿಸ್ಟರರಾದ ಶ್ರೀಮಾನ್ ಗೋಪಾಲರೆಡ್ಡಿಯವರು ಜುಲಾಯಿ ತಿಂಗಳ ಪ್ರಥಮ ವಾರದಲ್ಲಿ ದ. ಕ. ಜಿಲ್ಲೆಯ ಸಂಚಾರ ಕಾರ್ಯಕ್ರಮವನ್ನು ಕೈಕೊಂಡು ಉಡುಪಿಯನ್ನು ಸಹ ಸಂದರ್ಶಿಸಲಿರುವರೆಂದು ವದಂತಿ.

ತಾಲೂಕು ಕಾಂಗ್ರೆಸ್ ಕಮಿಟಿ—ಉಡುಪಿ ತಾಲೂಕು ಕಾಂಗ್ರೆಸ ಕಮಿಟಿಯ ಹೊಸ ವರ್ಷದ ಚುನಾವಣೆಯು ತಾ. 18-6-39ರಲ್ಲು ಅಪರಾಹ್ನ ಘಂಟೆ 2-30ಕ್ಕೆ ಜರಗಿತು. ಶ್ರೀ. ಜೋನ ಪಿ. ಸಿಕ್ವೇರಾ ಅಧ್ಯಕ್ಷರಾಗಿಯೂ ಶ್ರೀ ಬಿ ಗೋಪಾಲಕೃಷ್ಣ ಕಾಮತರು ಕಾರ್ಯದರ್ಶಿ, ಶ್ರೀ ಬಿ ಪದ್ಮನಾಭ ಪೈಯವರು ಕೋಶಾಧಿಕಾರಿಗಳಾಗಿಯೂ, ಶ್ರೀಗಳಾದ ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್, ಕುರುಕಾಲು ಗಣಪಯ್ಯ ಶೆಟ್ಟರು, ಎಚ್ ರಾಮಚಂದ್ರ ಪಾಟೀಲ, ಮತ್ತು ಕೆ. ಆರ್. ಗರುಡಾಚಾರ್ ಅವರು ಕಾರ್ಯಕಾರಿ ಸಮಿತಿಗೂ ಸರ್ವಾನುಮತದಿಂದ ಆರಿಸಲ್ಪಟ್ಟರು. ಹೊಸ ವರ್ಷದ ಬಜೆಟು, ತಾಲೂಕು ಕಮಿಟಿ ಸ್ಥಾನ ಬದಲಾವಣೆ ಈ ನಿರ್ಣಯಗಳು ಪಾಸಾದುವು. ತಾಲೂಕು ಕಮಿಟಿಯ ಆಫೀಸು ಬಾರಕೂರಿನಲ್ಲಿ ತೆರೆಯಲಾಯಿತು ಎಂದು ಬಿ ಜಿ ಕಾಮತ್, ಕಾರ್ಯದರ್ಶಿ ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿ, ಬಾರಕೂರು ಇವರು ತಿಳಿಸುತ್ತಾರೆ.

ಸಂಸಾರಸಂಭ್ರಮ ನಾಟಕ ಪ್ರದರ್ಶನ—ಉಡುಪಿ ಕ್ರಿಕೆಟ್ ಕ್ಲಬ್ ಮತ್ತು ಯಂಗ್ ಮೆನ್ಸ್ ಕ್ಲಬ್ಬಿನ ಸಹಾಯಾರ್ಥವಾಗಿ 'ಹಿಂದೂ ಮುಸ್ಲಿಮ್ ಎಮೆಚೂರ್ಸ್' ಎಂಬ ಉಡುಪಿಯ ಶಿಕ್ಷಿತ ತರುಣ ನಾಟ್ಯಕಲಾ ಪ್ರೇಮಿಗಳು ಶ್ರೀ. ಪಿ ಶೀನ ಶೆಟ್ಟರಿಂದ ಬರೆಯಲಾದ ಸಂಸಾರ ಸಂಭ್ರಮವೆಂಬ ಸಾಮಾಜಿಕ ನಾಟಕವನ್ನು ಸ್ಥಳೀಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಜಯಶೀಲವಾಗಿ ಅಭಿನಯಿಸಿದರು. ನಾಟಕಾಂತ್ಯದಲ್ಲಿ ಅಂದಿನ ಅಧ್ಯಕ್ಷರಾಗಿದ್ದ ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರು ಹಿಂದಿನ ಪೌರಾಣಿಕ ಮತ್ತು ಇಂದಿನ ಸಾಮಾಜಿಕ ನಾಟಕಗಳ ವಿಚಾರವಾಗಿ ಪ್ರಸ್ತಾಪಿಸಿ ಎಮೆಚೂರ್ಸ್ ನಾಟಕಸಂಘಗಳ ನಾಟಕಗಳನ್ನು ಕಲಾದೃಷ್ಟಿಯಿಂದ ನೋಡಿ ಪ್ರೋತ್ಸಾಹಿಸಬೇಕೆಂದೂ ಈ ತರುಣ ನಾಟ್ಯಕಲಾಭಿಮಾನಿಗಳ ಉತ್ಸಾಹವು ಪ್ರೋತ್ಸಾಹಕಾರ್ಹವಾದುದೆಂದೂ ಹೇಳಿ ನಟವರ್ಗವನ್ನು ಅಭಿನಂದಿಸಿದರು. ಥಿಯೇಟರಿನ ಮಾಲಕರಾದ ಶ್ರೀ. ಉಪೇಂದ್ರ ಪೈಗಳು, ನಾಟಕವನ್ನು ಬರೆದು ಅದನ್ನು ರಂಗಭೂಮಿಗೆ ತಂದು, ತಾನೂ ನಟಿಸಿ ಕಲಾಪ್ರೇಮವನ್ನು ತೋರಿಸಿದ್ದಕ್ಕಾಗಿ ಶ್ರೀ ಪಿ ಶೀನ ಶೆಟ್ಟರಿಗೆ ಒಂದು ವರ್ಷದ ಕೊಂಪ್ಲಿಮೆಂಟರಿ ಪಾಸನ್ನು ಬಹುಮಾನವಾಗಿತ್ತರು. ಶ್ರೀ ಪಿ. ಶೀನ ಶೆಟ್ಟರು ಎಮೆಚೂರ್ಸರ ಕಡೆಯಿಂದಲೂ ಶ್ರೀ. ಕಣ್ಣನ್ ನಂಬಿಯಾರರು ಮೆನೇಜ್‌ಮೆಂಟಿನ ಕಡೆಯಿಂದಲೂ ಧನ್ಯವಾದಗಳನ್ನರ್ಪಿಸಿದರು. ಶ್ರೀ. ಪದ್ಮನಾಭ ಶೆಟ್ಟರ ಗಾಯನ, ಗಾಂಭೀರ್ಯ, ಪಿ. ಶೀನ ಶೆಟ್ಟರ ಭಾವಪ್ರದರ್ಶನ ಮತ್ತು ಮಾತುಗಾರಿಕೆ, ಶ್ರೀ. ಉಮಾನಾಥರಾಯರ ಸೌಜನ್ಯ ಮತ್ತು ಹಾಡು, ಮಿ ಇಮಾಮ್ ಸಾಹೇಬರ ಸಂಗೀತ ಮತ್ತು ದುಃಖಪ್ರದರ್ಶನ, ಶ್ರೀ ವಿಟ್ಠಲರಾಯರ ಸ್ವಾಭಾವಿಕತೆ, ರಾಮಚಂದ್ರ ಕಾಮತರ ಸರಳತೆ ಇವು ನಾಟಕದ ಕಳೆಯನ್ನು ಹೆಚ್ಚಿಸಿದುವು. ಉಳಿದವರೂ ಸಾಕಷ್ಟು ಸ್ವಾಭಾವಿಕವಾಗಿ ಉತ್ತಮವಾಗಿಯೇ ಅಭಿನಯಿಸಿ ಜನಮೆಚ್ಚುಗೆ ಪಡೆದರು.

ದಕ್ಷಿಣ ಕನ್ನಡ

ಶಂಕರನಾರಾಯಣ – ಕಳೆದ ತಾ. 12ರಿಂದ ನಮ್ಮ ಶಂಕರನಾರಾಯಣ ಪೇಟೆ ಸುತ್ತುಮುತ್ತಲಿನ ಗ್ರಾಮಗಳಲ್ಲಿ ಶ್ರೀ. ಮ. ಶ. ಸಾಮಗ, ಹರಿದಾಸರ ಹರಿಕೀರ್ತನಗಳು ನಡೆಯುತ್ತಿವೆ. ಪುರಾಣ ಕತೆಗಳ ತಾತ್ಪರ್ಯ ವಿವರಿಸಿ ಇಂದಿನ ಪರಿಸ್ಥಿತಿಯನ್ನು ಸಾರಿಸುವ ನೈತಿಕ ನಿಯಮಗಳನ್ನು ಬೋಧಿಸುವ ಈ ಕೀರ್ತನ ಕ್ರಮಗಳನ್ನು ಮೆಚ್ಚಿ, ಶ್ರೀ. ಹರಿದಾಸರನ್ನು ಇಲ್ಲಿನ ನಿವಾಸಿಗಳು ಬಹುವಾಗಿ ಪ್ರಶಂಸಿಸುತ್ತಿದ್ದಾರೆ.

ಬೈಂದೂರು—ಇಲ್ಲಿಯ ಬೋರ್ಡುಮಿಡ್ಲ್ ಸ್ಕೂಲಿನ ಶ್ರೀ. ಕೆ. ಸಂಜೀವ ಶೆಟ್ಟಿ, ಬಿ. ಎ. ಎಲ್. ಟಿ, ಯವರು ಹೆಡ್ಮಾಸ್ತರರಾಗಿ ಬಂದ ಮೇಲೆ ಮಕ್ಕಳ ಸಂಖ್ಯೆಯು ದಿನೇ ದಿನೇ ಏರುತ್ತಿದೆ. ಇದಕ್ಕಾಗಿ ಡಿ. ಬೋ. ಮೆಂಬರರೂ ಉತ್ಸಾಹೀ ತರುಣರೂ ಆದ ಶ್ರೀ ಬಿ. ಸುಬ್ಬಣ್ಣ ಶೆಟ್ಟರು ಅವಿಶ್ರಾಂತವಾಗಿ ಪ್ರಯತ್ನಿಸುತ್ತಿದ್ದಾರೆ. ತನ್ನ ಸರ್ಕಲಿನ ಪ್ರತಿಯೊಂದು ಶಾಲೆಯನ್ನೂ ಉನ್ನತಿಗೆ ತರಬೇಕೆಂಬ ಇವರ ಆಶಯವು ಪ್ರಶಂಸನೀಯ. ಇವರಿಗೆ ಆಸ್ಪತ್ರೆ ನಿರ್ಮಾಣ ಮೊದಲಾದುವುಗಳ ಮೂಲಕ ಜನಹಿತಕಾರ್ಯಗಳನ್ನು ಸಾಧಿಸಿ ಬೈಂದೂರನ್ನು ಮುಂದೆ ತರಬೇಕೆನ್ನುವ ಇವರ ಪ್ರಯತ್ನವು ಅಭಿನಂದನೀಯ.

ಬಸ್ರೂರು—ತಾ. 10-6-39ರಲ್ಲಿ ಜರಗಿದ ಈ ಸರ್ಕಲಿನ ಉಪಾಧ್ಯಾಯರ ಕೂಟದಲ್ಲಿ ಶ್ರೀ ಬಿ ಶ್ರೀನಿವಾಸ ಪ್ರಭುಗಳವರು ವಾರ್ಧಾ ಶಿಕ್ಷಣ ಪದ್ಧತಿಯ ಕುರಿತು ತಮ್ಮ ಸವಿಸ್ತಾರದ ಭಾಷಣವಿತ್ತರು. ಈ ಹೊಸ ಪದ್ಧತಿಯಲ್ಲಿ ಸತ್ಯ, ಅಹಿಂಸೆಗಳೇ ಮೂಲ ಮಂತ್ರಗಳಾಗಿವೆ. ಶಿಕ್ಷಣ ಕ್ರಮದಲ್ಲಿ ನಮ್ಮ ದೃಷ್ಟಿಯು ಇನ್ನು ಪಟ್ಟಣಗಳ ಕಡೆಯಿಂದ ಹಳ್ಳಿಗಳ ಕಡೆಗೂ, ನಾನಾ ವಿಷಯಗಳಿಂದ ಮಗುವಿನ ಜೀವನದ ಕಡೆಗೂ, ಬರಿಯ ಮಾನಸಿಕ ಶಕ್ತಿಗಳ ಕಡೆಯಿಂದ ಪೂರ್ಣವಾದ ವ್ಯಕ್ತಿತ್ವದ ಕಡೆಗೂ ಸರಿಯುವಂತೆ ಮಾಡುವ ಕೈಗಾರಿಕೆಯ ಮೂಲಕ ಕೊಡಲ್ಪಡುವ ಶಿಕ್ಷಣವು ನಿಜವೂ ಆವಶ್ಯಕವೂ ಆಗಿದೆ. ದೈಹಿಕ ಮಾನಸಿಕ ಹಾಗೂ ಆತ್ಮಿಕ ಶಕ್ತಿಗಳನ್ನು ವೃದ್ಧಿಗೊಳಿಸುತ್ತದೆ. ಮಾಡುವ ಕೆಲಸದಲ್ಲಿ ಆಸಕ್ತಿಯನ್ನೂ ಗೌರವವನ್ನೂ ಹುಟ್ಟಿಸಿ, ತನ್ಮೂಲಕ ನಮ್ಮ ದೇಶದ ಅಪಾರವಾದ ಹಾಗೂ ಅಗ್ಗವಾದ ಜನಶಕ್ತಿ (man power)ಯನ್ನು ನಮ್ಮ ಹಳ್ಳಿ ಕೈಗಾರಿಕೆಗಳನ್ನು ಪುನರ್ಜೀವಿಸಲು ನಾವಿಂದು ಉಪಯೋಗಿಸಬೇಕು. ಹೀಗೆ ನಿರುದ್ಯೋಗವನ್ನು ನಿವಾರಿಸಿ ನಮ್ಮ ರಾಷ್ಟ್ರೀಯ ಜೀವನವನ್ನು ಸುಖಮಯವಾಗಿ ಮಾಡಿ, ನಮ್ಮ ದೇಶವು ಪೂರ್ವ ಪ್ರಾಚೀನ ಗೌರವವನ್ನು ಹೊಂದಿ ಹೇಗೆ ಮುಂದುವರಿಯುವಂತೆ ಮಾಡಬಹುದೆಂಬುದನ್ನು ಶ್ರೀ ಪ್ರಭುಗಳವರು ಮನಂಗಾಣುವಂತೆ ವಿವರಿಸಿದರು. (ಶ್ರೀಯುತರು ವಾರ್ಧಾ ಶಿಕ್ಷಣದ ಬೇರೆ ಬೇರೆ ವಿಷಯಗಳ ಕುರಿತು ಇದಕ್ಕೂ ಮೊದಲು ಉಪನ್ಯಾಸಗಳನ್ನು ಕೊಡುತ್ತಿದ್ದಾರೆ. ಇವರು ಮದ್ರಾಸ್ ಕಮಿಟಿಯು ಇತ್ತೀಚೆಗೆ ಪ್ರಕಟಿಸಿದ ಮೇರೆಗೆ, ಶಿಕ್ಷಣ ವಿಷಯದಲ್ಲಿ ಆ ಕಮಿಟಿಗೆ ಸೂಚನೆ ಸಲಹೆಗಳನ್ನಿತ್ತವರಲ್ಲಿ ಒಬ್ಬರಾಗಿರುತ್ತಾರೆ. ಅಲ್ಲದೆ ಕಳೆದ ಮೇ ತಿಂಗಳಿನಲ್ಲಿ ಕೊಯಮುತ್ತೂರಿನ ಪೆರಿಯನಾಯ್ಕನ್ ಪಾಳ್ಯದಲ್ಲಿ ನಡೆದ ವಾರ್ಧಾ ಶಿಕ್ಷಣದ ತರಬೇತಿ ಕೇಂಪಿನಲ್ಲಿ ನಮ್ಮ ಜಿಲ್ಲೆಯಿಂದ ಚುನಾಯಿಸಲ್ಪಟ್ಟು ತರಬೇತಿ ಹೊಂದಿರುತ್ತಾರೆ.)

SAVING MONEY AND TIME

Thousands of prudent and thriving businessmen prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD 1906
CANARA BANK LIMITED

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಕೈ ಚರ್ಮವನ್ನು ಸುಣ್ಣಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದ ಮೈಸೂರು ಸೇಂಡಲ್ ಸೋಪು ಜನಮನರಂಜನವು. ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟ್ ಸೋಪ್ ಫೇಕ್ಟರಿ, ಬೆಂಗಳೂರು

ಬಾಲ ಸಾಹಿತ್ಯ ಮಂಡಲ

ಲಿಮಿಟೆಡ್, ಮಂಗಳೂರು

ನಮ್ಮ ಹೊಸ ಪುಸ್ತಕಗಳು—

1. ನೂತನ ಬಾಲಗಣಿತ IIIನೇ ದರ್ಜೆಗೆ,
2. ,, IV ,, ,,
3. ,, V ,, ,,
4. ,, VI ,, ,, ಅಥವಾ Iನೇ ಫಾರ್ಮಿಗೆ
5. ,, VII ,, ,, II ,,
6. ,, VIII ,, ,, III ,,

ಗ್ರಂಥಕರ್ತರು—ಶ್ರೀ ಉಳ್ಳಾಲ ಮಂಗೇಶರಾವ್, ಬಿ. ಎ., ಎಲ್. ಟಿ.

7. ನೂತನ ಸಮಾನ್ಯ ಗಣಿತ—IVನೇ ಫಾರ್ಮಿಗೆ-ಶ್ರೀ. ಬಿ ಮ. ರಂಗರಾವ್, ಬಿ. ಎ. (ವಿದ್ವಾನ್)
8. ಭಾರತದ ಇತಿಹಾಸ, VIIIನೇ ದರ್ಜೆಗೆ ಅಥವಾ IIIನೇ ಫಾರ್ಮಿಗೆ,
9. Do IVನೇ ಫಾರ್ಮಿಗೆ

ಈ ಮೇಲಿನ ಎಲ್ಲಾ ಪುಸ್ತಕಗಳು ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಶಾಲಾ ಉಪಯೋಗಕ್ಕೆ ಮಂಜೂರಾಗಿವೆ (Vide consolidated list dated 2nd may 1939, pages 117, 155, 157 and 159 of Fort St. George Gazette Supplement)

BALASAHITYA MANDALA LTD.
MANGALORE, S. INDIA.

THE
Canara Banking Corporation, Ltd.
(Incorporated in British India)
ESTD. 1906

THREE YEARS' CASH CERTIFICATES
bearing interest at 4% p. a. in denominations of
Rs 50/-, 100/-, 500/-, 1,000/- & 5000/-
are now issued at
all our Branches.

For particulars call at or write to any of our nearest Branches.

ಉಡುಪಿ, ಗುರುವಾರ, ತಾ. ೨೨-೬-೩೯

ದುರ್ವಿಧಿಗೊಳಗಾಗಿರುವ ಬ್ರಿಟಿಷ್ ಸಾಮ್ರಾಜ್ಯ

ಇಂಗ್ಲೆಂಡಿನ ವಸಾಹತು ಮಂತ್ರಿಯಾಗಿರುವ ಮಿ. ಮೆಕ್ಡೊನಾಲ್ಡರೇ ಹಿಂದೊಮ್ಮೆ ಹೀಗೆಂದು ಉದ್ಗಾರ ತೆಗೆದಿದ್ದರು: “ಬ್ರಿಟಿಷ್ ಸಾಮ್ರಾಜ್ಯವು ವಿನಾಶದ ಕಡೆಗೆ ಸರಿಯುತ್ತಿದೆ ಎಂದು ಕೆಲವರು ಹೇಳಲಾರಂಭಿಸಿದ್ದಾರೆ; ಪರಿಸ್ಥಿತಿಯನ್ನು ಕಂಡಲ್ಲಿ ಇದು ಸುಳ್ಳೆನ್ನಲಾಗುವುದಿಲ್ಲ.” ಸಾಮ್ರಾಜ್ಯಾಂಗವಾದ ವಸಾಹತುಗಳ ಮಂತ್ರಿಯು ಸಾಮ್ರಾಜ್ಯ ರಕ್ಷಣೆಯ ಹೊಣೆ ಹೊತ್ತ ಅಧಿಕಾರಿಯ—ಬಾಯಿಂದ ಬಂದ ಮಾತುಗಳಿವು! ಪದ್ಧತಿಯಂತಾದರೆ, ಅನ್ಯರೀ ಮಾತುಗಳನ್ನಾಡಬೇಕು—ವಸಾಹತು ಮಂತ್ರಿಯದನ್ನು ಖಂಡಿಸಬೇಕು! ಸ್ವತಃ ಮಂತ್ರಿಯ ಬಾಯಿಂದಲೇ ಆ ಮಾತನ್ನು ಹೊರಡಿಸಿದ ಶಕುನವು ಅದೆಷ್ಟು ಸ್ಪಷ್ಟವಿರಬೇಕು!

ಕಳೆದ ಕೆಲವು ವರ್ಷಗಳಿಂದ ಬ್ರಿಟಿಷ್ ಸಾಮ್ರಾಜ್ಯದ ಪ್ರತಿಷ್ಠೆ ಕುಂದುತ್ತಾ ಬಂದಿದೆ, ಮಾತ್ರವಲ್ಲ. ಇದು ಅಲ್ಲಲ್ಲಿ ಧಕ್ಕೆಗೊಳಗಾಗಿ ಜರಿದು ಬೀಳುತ್ತಲೂ ಇದೆ. ಈ ಪತನವು ಅನ್ಯಾಯರೀತಿಯಲ್ಲಾಗಬೇಕಿತ್ತು. ಅನ್ಯ ಜನಾಂಗಗಳನ್ನು ಆಕ್ರಮಿಸುವ ಹಕ್ಕು ಯಾರಿಗೂ ಇಲ್ಲವೆಂದು ಸರ್ವಾಧಿಕಾರಿಗಳಿಗೆ ಕಲಿಸುವುದಕ್ಕಾಗಿ ಸಾರುತ್ತಿರುವ ಬ್ರಿಟಿಷರ ಸಾಮ್ರಾಜ್ಯವೇ ಅಕ್ರಮಣದ ಪ್ರತಿಫಲವಾಗಿದೆ. ತಮ್ಮ ಹಿಡಿತವನ್ನು ಸಡಲಿಸುವ ಮೂಲಕ ಪರಕೀಯ ಜನಾಂಗಗಳನ್ನು ಬ್ರಿಟಿಷರು ಸ್ವತಂತ್ರಗೊಳಿಸುತ್ತಿದ್ದಲ್ಲಿ, ಅಥವಾ ಆಳಲ್ಪಡುವ ಜನಾಂಗಗಳು ಬ್ರಿಟನಿನಿಂದ ಬಿಡಿಸಿಕೊಳ್ಳುತ್ತಿದ್ದರೆ ಆ ಮೂಲಕ ಸಾಮ್ರಾಜ್ಯ ಕಳೆದುಹೋಗುವುದು ನ್ಯಾಯವೇ ಇದೆ. ಅತ್ಯಂತ ವಿಲಕ್ಷಣವಿಷಯವೆಂದರೆ ಈ ನ್ಯಾಯವಾದ ಮಾರ್ಗವನ್ನು ಚತುರತೆಯಿಂದ ತಡೆಗಟ್ಟಲು ಬ್ರಿಟಿಷರಿಗೆ ಗೊತ್ತಿದೆ; ಆದರೆ ಆಕ್ರಮಣಗಾರರ ಕೈಯಿಂದ ಅದನ್ನುಳಿಸಿಕೊಳ್ಳಲು ಅವರಿಗರಿತಿಲ್ಲ! ಒಂದೇ ಮಾತಿನಲ್ಲಿ ಹೇಳುವುದಾದರೆ, ಮುಗುತಿ ಕಳಕೊಂಡ ಬ್ರಿಟಿಷ್ ಸಾಮ್ರಾಜ್ಯವು ತವರುಮನೆ ನೇರುವುದನ್ನು ಬಿಟ್ಟು ಕೈಹಿಡಿಪೆಳೆವವನ ಹಿಂದೆ ಹೋಗುತ್ತಿದೆ!

ಅಬಿಸೀನಿಯದಲ್ಲಿ ಬ್ರಿಟನಿನ ವ್ಯಾಪಾರ ವಹಿವಾಟಿತ್ತು; ಭೂಮಧ್ಯ ಸಮುದ್ರದ ಹಕ್ಕಿಗೂ ಅದಕ್ಕೂ ಸಂಬಂಧವಿತ್ತು; ಮುಸಲಿನಿಯದನ್ನು ಬ್ರಿಟಿಷರನ್ನಣಕಿಸುತ್ತಾ ನುಂಗಿದ! ಆಸ್ಟ್ರಿಯಾದೊಡನೆಯೂ ವ್ಯಾಪಾರದ ಸಂಬಂಧವಿತ್ತು—ಅದನ್ನು ಹಿಟ್ಲರ್ ಕಬಳಿಸಿದ! ಆ ಮೇಲೆ ಬಲಿ ಬಿದ್ದ ಸ್ಪೆಯಿನಿನೊಡನೆಯೂ ಇಂಗ್ಲೆಂಡಿಗೆ ಸಂಬಂಧವಿತ್ತು. ಈಗ ಬ್ರಿಟಿಷ್ ವ್ಯಾಪಾರದ ಕ್ಷೇತ್ರಗಳಲ್ಲೊಂದಾದ ಚೀನಾದಲ್ಲಿ ಪ್ರತ್ಯಕ್ಷ ಹೊಡೆತವೇ ಬೀಳಲಾರಂಭಿಸಿದೆ!

ಇನ್ನು ರಾಜಕೀಯ ವ್ಯವಹಾರದಲ್ಲಾದರೂ ಇಂಗ್ಲೆಂಡು ಇತ್ತೀಚೆಗೆ ಯಾವ ಪೌರುಷಯುಕ್ತ ಕಾರ್ಯವನ್ನೂ ಸಾಧಿಸಲಾರದೆ ಹಿಂದೆಬೀಳುತ್ತಾ ಬಂದಿದೆ, ಮ್ಯೂನಿಚ್ ಒಪ್ಪಂದದಂತಹ ಮಂಗಳಾರತಿಯನ್ನಲ್ಲದೆ ಇನ್ನಾವುದನ್ನೂ ಯಾರಿಂದಲೂ ಎತ್ತಿಕೊಳ್ಳಲು ಬ್ರಿಟಿಷರಿಂದಾಗಲಿಲ್ಲ. ಇಟಲಿ, ಜರ್ಮನಿಗಳೊಡನೆ ಇಂಗ್ಲೆಂಡು ಮಾಡಿಕೊಂಡಿರುವ ಒಪ್ಪಂದಗಳೆಂದರೆ ಮರ್ಯಾದೆಯ ನಟನೆಯೊಡನೆ ಅವುಗಳಿಗೆ ಶರಣುಹೊಕ್ಕಂತೆ!

ಫ್ಯಾಸಿಸ್ಟ್ ಸರ್ವಾಧಿಕಾರಿಗಳು ಶಕುನವನ್ನು ನಂಬುವದಿಲ್ಲವೆಂದು ಕಾಣುತ್ತದೆ! ಇಲ್ಲವಾದರೆ ಕಳೆದ ಮೂರು ವಾರಗಳಲ್ಲಾದ ಮೂರು ಸಬ್‌ಮೆರಿನ್ ಅಪಘಾತಗಳನ್ನವರು ತಮ್ಮ ಮಾತಿನಲ್ಲಿ ಉದಾಹರಿಸದೆ ಬಿಡುತ್ತಿದ್ದಿಲ್ಲ. ಮೊದಲನೆಯದು ಅಮೇರಿಕದಲ್ಲಿ; ಎರಡು ಮೂರನೇ ಅಪಘಾತಗಳು ಬ್ರಿಟನ್ ಫ್ರಾನ್ಸಿನಲ್ಲಿ!

ಹೀಗೆ ಬ್ರಿಟಿಷ್ ಸಾಮ್ರಾಜ್ಯವು ಎಲ್ಲೆಡೆಗಳಿಂದಲೂ ಸೋಲನ್ನನುಭವಿಸಬೇಕಾಗಿ ಬಂದಿದೆ. ಈಗಿನ ಟೆಯೆಂಟ್ಸಿನ್ ಬ್ರಿಟಿಷ್ ಕ್ಷೇತ್ರದ ದಿಗ್ಬಂಧನವಂತೂ ಬ್ರಿಟನಿನ ಕೆನ್ನೆಗಾದ ತಾಡನವೆನ್ನಬೇಕು. ಬ್ರಿಟನಿಗೆ ಬುದ್ಧಿ ಕಲಿಸಬೇಕೆಂದೇ ಜಪಾನರು ಟೆಯೆಂಟ್ಸಿನನ್ನು ಬಂಧನದಲ್ಲಿರಿಸಿ ಶುದ್ಧವಾದ ಭಾಷೆಯಲ್ಲಿ ಯುದ್ಧಾಹ್ವಾನ ಕೊಟ್ಟಿರುವರು. ಪ್ರಥಮತಃ ಈ ಠಿಕಾಣಿಟವು ನಾಲ್ವರು ಚೀನೀ ದ್ರೋಹಿಗಳನ್ನು ಬಿಟ್ಟುಕೊಡಬೇಕೆಂಬ ಜಪಾನರ ಅಪೇಕ್ಷೆಯನ್ನು ಬ್ರಿಟಿಷರು ಅಲ್ಲಗಳೆದುದರಿಂದಾಗಿ ಪ್ರಾರಂಭವಾಗಿದ್ದರೂ, “ಇನ್ನು ಅಷ್ಟೇ ಸಾಲದು; ಚಿಯಾಂಗ್ ಕೈಶೇಕರನ್ನು ಪ್ರೋತ್ಸಾಹಿಸುವ ಧೋರಣೆಯನ್ನು ಪೂರ್ತಿ ಬಿಟ್ಟುಕೊಡದೆ, ಬ್ರಿಟಿಷರು ತಮ್ಮ ಧೋರಣೆಯನ್ನು ಮಾರ್ಪಡಿಸದ, ನಾವಾವ ಸಂಧಾನಕ್ಕೂ ಒಪ್ಪುವಂತಿಲ್ಲ” ಎಂದು ಜಪಾನರೀಗ ಅಷ್ಟಗಾಲಿಟ್ಟು ದೃಢವಾಗಿ ನಿಂತಿದ್ದಾರೆ. ಈ ಚಕ್ರವ್ಯೂಹ ಕೋಟೆಯಿಂದ ಇಂಗ್ಲೆಂಡು ಹೊರನುಸುಳುವ ಬಗೆ ಹೇಗೆ? ಫೇಸಿಸ್ಟ್ ರಾಷ್ಟ್ರಗಳ ಪೂರ್ಣ ಬೆಂಬಲವನ್ನು ಪಡೆದ ಜಪಾನು ಬ್ರಿಟಿಷರ ಅಪಜಯವನ್ನಲ್ಲದೆ ಮಿಕ್ಕಾವ ತೀರ್ಮಾನಕ್ಕೂ ಒಪ್ಪುವಂತಿಲ್ಲ. ಇಂಗ್ಲೆಂಡು ಒಂದೋ ಜಪಾನರ ಶರ್ತಕ್ಕೊಪ್ಪಬೇಕು; ಇಲ್ಲವೇ ಹೋರಾಟಕ್ಕಿಳಿಯಬೇಕು. ಈಗಿನ ನಿರೀಕ್ಷೆಯಂತೆ ಆರ್ಥಿಕ ಬಹಿಷ್ಕಾರವನ್ನು ಹಾಕಿದರೂ ಅದು ಹೋರಾಟದಲ್ಲಿ ಪರಿಣಮಿಸದಿರದು. ಆ ಹೋರಾಟದಲ್ಲಾದರೂ ಜಯಿಸಬೇಕಾದರೆ ಅಮೇರಿಕದ ಬೆಂಬಲವು ಇಂಗ್ಲೆಂಡಿಗೆ ಬೇಕೇ ಬೇಕು; ಈ ಕುರಿತು ಅಮೇರಿಕದ ಧೋರಣೆಯೇನೆಂದು ತಿಳಿದಿಲ್ಲ. ಆದರೆ ಯುದ್ಧವಾದಲ್ಲಿ ಜಪಾನಿನ ಬೆಂಬಲಕ್ಕೆ ತಾವಿದ್ದೇವೆಂದು ಮುಸಲನಿ ಇಷ್ಟರಲ್ಲೇ ರಣಭೇರಿ ಬಾರಿಸಿದ್ದಾನೆ. ಆ ಮಟ್ಟಿಗೂ ಜಪಾನೇ ಸಿದ್ಧವಾಗಿ ನಿಂತಿದೆ. ಅಂತು ಬ್ರಿಟನಿನ ಸತ್ವಪರೀಕ್ಷೆಯಾಗುವ ಕಾಲವೀಗ ಬಂದಿದೆ. ಬ್ರಿಟಿಷ್ ಸಾಮ್ರಾಜ್ಯಕ್ಕೊದಗಿರುವ ದ ರ್ಘಟನಾ ಪರಂಪರೆಗಳಲ್ಲಿ ಟೆಯೆಂಟ್ಸಿನ್ ದಿಗ್ಬಂಧನವು ಮುಖ್ಯವಾದುದು. ಈಗಿನ ಕಾಲದಲ್ಲಿ ಸ್ವರಕ್ಷಣೆಗಾಗಿ ಅಲ್ಲದೆ, ಯಾವುದಾದರೊಂದು ಮಹತ್ತನ್ನು ಸಾಧಿಸುವದಕ್ಕಾಗಿ ಏನನ್ನೂ ಮಾಡಲಾರದಷ್ಟು ಬ್ರಿಟಿಷ್ ಸಾಮ್ರಾಜ್ಯವು ದುರ್ಬಲವಾಗಿದೆ. ರಕ್ಷಣೆಯನ್ನಾದರೂ ಮಾಡಿಕೊಳ್ಳಬಲ್ಲುದೇ ಎಂಬುದನ್ನು ಟೆಯೆಂಟ್ಸಿನ್ ಸಮಸ್ಯೆಯ ತೀರ್ಮಾನವು ತಿಳಿಸದಿರದು. ಅದರಿಂದಲೇ ಇಡೀ ಪ್ರಪಂಚದ ದೃಷ್ಟಿಯು ಆ ಕಡೆಗೆ ಹೊರಳಿದೆ.

ಹರಿಜನರ ದೇವಸ್ಥಾನ ಪ್ರವೇಶ

ಮಧುರೆಯಲ್ಲಿ ಸೇರಿದ್ದ ಹರಿಜನ ದೇವಸ್ಥಾನ ಪ್ರವೇಶ ಸಂಬಂಧದ ಪರಿಷತ್ತಿನಲ್ಲಿ ಭಾಷಣಮಾಡುವಾಗ ಮದ್ರಾಸಿನ ಪ್ರಧಾನರಾದ ಮಾನ್ಯ ರಾಜಗೋಪಾಲಾಚಾರ್ಯರು ದೇವಸ್ಥಾನ ಪ್ರವೇಶವೊಂದು ಸುಧಾರಣೆಯಷ್ಟೇ ಅಲ್ಲ, ಜನ್ಮಸಿದ್ಧ ಹಕ್ಕು; ಮೇಲ್ಜಾತಿಯವರು ಮಾನವರೆನ್ನಿಸಿಕೊಳ್ಳಬೇಕಾಗಿರುವ ಪ್ರಾಯಶ್ಚಿತ್ತವೆಂದು ಒತ್ತಿ ಒತ್ತಿ ಹೇಳಿದರು. ಆದರೆ ಮಾನ್ಯ ಆಚಾರ್ಯರ ಆಳ್ವಿಕೆಯಲ್ಲಿ ಮಲಬಾರೊಂದನ್ನು ಬಿಟ್ಟರೆ ಮತ್ತೆಲ್ಲಿಯೂ ಹರಿಜನ ದೇವಾಲಯ ಪ್ರವೇಶದ ಕಾನೂನು ಬಂದಿಲ್ಲ. ಮಲಬಾರಿನ ಕಾನೂನಾದರೂ ಹರಿಜನರನ್ನು ನೇರಾಗಿ ದೇವಸ್ಥಾನ ಹೊಗಿಸದೆ, ದೇವಸ್ಥಾನದ ಭಜಕರ ಮತಪಡೆದು ದೇವಸ್ಥಾನದ ದ್ವಾರದ ಬಳಿ ಹೋಗುವ ಸುತ್ತು ತೆಗೆಯಿಸುತ್ತದೆ. ಇದಕ್ಕೆ ಮಾನ್ಯ ಆಚಾರ್ಯರು ಹೇಳಿರುವಂತೆ ಸುಲಭ ಸಾಧ್ಯವಾದ ಕಾನೂನುಮಾಡುವ ಬದಲು ಜನಮತವನ್ನು ತಿದ್ದಿ ಕಾರ್ಯಸಾಧಿಸುವದು ಉತ್ತಮವೆಂಬ ಕಾರಣವಿರಬಹುದು. ಈ ಕಾರ್ಯವು ಅತ್ಯಗತ್ಯವಾದುದೆಂದು ಅಂಗೀಕರಣ ಪೂರ್ವಕ ಹೇಳುತ್ತಿರುವ ಆಚಾರ್ಯರು ಅಧಿಕಾರವಿದ್ದೂ ಅದನ್ನು ಕಾನೂನು ಮೂಲಕ ಸರ್ವೆಡೆಗಳಲ್ಲಿ ಜ್ಯಾರಿಮಾಡುವದೆಂದರೆ ಹಿಂಜರಿಯುತ್ತಿದ್ದಾರೆ. ಒಂದು ಕಾಲದಲ್ಲಿ ಗಾಂಧಿಯವರ ಪ್ರಾಣದಪೃಕ್ಷಿಆಮಿಲಭಾರತದ ಪ್ರಮುಖ್ಯ ಪ್ರಶ್ನೆಯಾಗಿದ್ದ ದೇವಾಲಯ ಪ್ರವೇಶವು ಕಾಂಗ್ರೆಸ್ ಮಂತ್ರಿಗಳ ಕೈಯಿಂದ ಇಷ್ಟು ಹಿಂದೆ ತಳ್ಳಲ್ಪಡುವುದೆಂದು ನಾವೂ ಊಹಿಸಿರಲಿಲ್ಲ. ಮಂದಿರ ಪ್ರವೇಶವು ಜನತೆಯ ಜನ್ಮಸಿದ್ಧ ಹಕ್ಕು ಎಂದು ಉದ್ಘೋಷಿಸುವ ರಾಜಾಜಿಯವರು ಅದರ ವಿರುದ್ಧವಾದ ಜನಮತಕ್ಕೆ ಇಷ್ಟೊಂದು ಪ್ರಾಮುಖ್ಯತೆಯನ್ನೇಕೆ ಕೊಡಬೇಕೊ? ಈ ವಿಷಯದಲ್ಲಿ ಇಂತಹ ಮಂದ ಹೆಜ್ಜೆಯನ್ನಿಡುವ ಆಗತ್ಯವೇನೋ!

ಸ್ಲೊವೇಕಿಯವನ್ನು ಪೂರ್ತಿ ನುಂಗಬಹುದು!

ಸ್ಲೋವೇಕಿಯದಲ್ಲಿ ನಾಜೀ ಸೈನಿಕರು ಬಂದು ನಿಲ್ಲಲಾರಂಭಿಸಿದ್ದಾರೆ; ಆದಷ್ಟು ಬೇಗನೇ ಸ್ಲೋವೇಕಿಯನ್ನು ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಳ್ಳುವ ರೀತಿ ತೋರುತ್ತದೆ. ಉತ್ತರ ಸ್ಲೋವೇಕಿಯದ ಬಳಿ ಪೋಲೆಂಡ್ ಸರಹದ್ದಿನಲ್ಲಿ ಜರ್ಮನ್ ಸೈನ್ಯ ಸಂಗ್ರಹವಾಗುತ್ತಿರುವದಂತೆ. ಈ ಘಟನೆಯಿಂದ ಆತುರವೆದ್ದಿದೆ.

ಚಕ್ರವರ್ತಿಗಳ ಪಯಣ

ಆರನೇ ಜೋರ್ಜ್ ಚಕ್ರವರ್ತಿಗಳು ಸಪತ್ನೀಕರಾಗಿ ಅಮೇರಿಕದ ಅತಿ ಸಂಭ್ರಮದ ಸ್ವಾಗತ ಸತ್ಕಾರಗಳನ್ನು ಪಡೆದು ಅಲ್ಲಿಂದ ಹೊರಟರು. ಇಂಗ್ಲೆಂಡಿನ ಚಕ್ರವರ್ತಿಗಳೂ ಅಮೇರಿಕದ ಅಧ್ಯಕ್ಷರೂ ಪರಸ್ಪರ ಭೇಟಿ ಪಡೆದುದು ಇದೇ ಮೊದಲನೆ ಬಾರಿಯಂತೆ. ಅಲ್ಲಿಂದ ನ್ಯೂಫೌಂಡ್ಲೇಂಡಿಗೆ ಹೋಗಿ ತಾ. 17ರಲ್ಲಿ ಇಂಗ್ಲೆಂಡಿಗಾಗಿ ಸ್ಟೀಮರು ಹತ್ತಿದರು. ಚಕ್ರವರ್ತಿಗಳು ಬ್ರಿಟಿಷ್ ನಾವೆಯಲ್ಲಿದ್ದಾಗ 1913ರಲ್ಲೊಮ್ಮೆ ನ್ಯೂಫೌಂಡ್‌ಲೇಂಡಿಗೆ ಹೋಗಿದ್ದರಂತೆ. ಅವರ ಪ್ರಯಾಣೋತ್ಸವದಿಂದ ಅಮೇರಿಕಾ ಇಂಗ್ಲೆಂಡುಗಳು ಅತ್ಯುತ್ಸಾಹಗೊಂಡಿವೆ.

ಇಟೆಲಿ ಜರ್ಮನಿಗಳ ನಾವಿಕ ಒಪ್ಪಂದ

ವಿಷಮಕಾಲ ಬಂದಾಗ ಒಗ್ಗಟ್ಟಿನಿಂದ ವರ್ತಿಸುವ ಸಲುವಾಗಿ ಜರ್ಮನಿ ಇಟಲಿಗಳೊಳಗೆ ನಾವಿಕ ಒಪ್ಪಂದವನ್ನು ರಚಿಸುವರೆ ಎರಡೂ ರಾಷ್ಟ್ರಗಳ ನಾವಿಕ ಮುಖ್ಯಾಧಿಕಾರಿಗಳು ಬರ್ಲಿನಿನಲ್ಲಿ ತಾ. 20ಕ್ಕೆ ಮಾತುಕತೆಗೆ ತೊಡಗಿರುವರು.

ಉಳಿಯಾರಗೋಳಿ ದೇಜುಶೆಟ್ಟರ ನಿಧನ—ಕಾಪಿನ ಉಳಿಯಾರಗೋಳಿಯ ಶ್ರೀಮಂತ ಬಂಟರ ಮನೆತನಕ್ಕೆ ಸೇರಿದ ಉಳಿಯಾರಗೋಳಿ ದೇಜುಶೆಟ್ರು ತಾ. 14-6-39ನೇ ಬುಧವಾರ ಮಧ್ಯಾಹ್ನ ಒಂದು ಗಂಟೆಗೆ ತನ್ನ 55ನೇ ವಯಸ್ಸಿನಲ್ಲಿ ದಿವಂಗತರಾದರೆನ್ನಲು ವಿಷಾದಿಸುತ್ತೇವೆ. ದಿವಂಗತರು, ದೂರದೃಷ್ಟಿಯುಳ್ಳವರೂ, ಸೂಕ್ಷ್ಮಾಲೋಚಕರೂ, ವಿವೇಕಶಾಲಿಗಳೂ, ಆಗಿದ್ದರು. ಬಡಜನರ ಬೆಂಬಲಕ್ಕೆ ಸದಾ ಕಾಲವೂ ಇರುತ್ತಿದ್ದರು. ಅವರ ಆ ಗಂಭೀರ ಮುಖ, ಸ್ವಚ್ಛವಾದ ಉಡಿಗೆ ತೊಡಿಗೆ, ನ್ಯಾಯದ ಕಡೆ ಹಿಡಿದು ಅವರು ಆಡುತ್ತಿದ್ದ ಆ ಅಧಿಕಾರಯುಕ್ತವಾದ ಮಾತುಗಳು, ಇವೆಲ್ಲಾ ಅವರಲ್ಲಿದ್ದ ಗುಣವಿಶೇಷಗಳು. ತಮ್ಮ ನಿಸ್ವಾರ್ಥ ಧೋರಣೆಯಿಂದ ಅನೇಕರ ವಾದವಿವಾದಗಳನ್ನು ನ್ಯಾಯಹೊಂದಿಸಿ, ಕಕ್ಷಿ ಪ್ರತಿಕಕ್ಷಿಗಳು ಒಂದುಗೂಡಿರುವಂತೆ ಮಾಡಿದ ಅವರ ನ್ಯಾಯವಿಚಕ್ಷಣಕ್ಕೆ ಅನೇಕ ನಿದರ್ಶನಗಳಿವೆ. ಅದು ಕಾರಣವೇ ಊರ ಪರವೂರ ಅನೇಕ ವಿವಾದಗಳು ಅವರೆದ್ದುರಿಗೆ ಬಂದು ನ್ಯಾಯವೊಂದಿ ಹೋಗುತ್ತಿದ್ದವು. ಬಡವರು, ತನ್ನ ಒಡನಾಡಿಗಳು ಕಷ್ಟದಲ್ಲಿದ್ದಾಗ, ತಾನಾಗಿ ಬಂದು ಅವರ ಬೆಂಬಲಕ್ಕೆ ನಿಲ್ಲುವದು ಅವರದೊಂದು ಸ್ವಭಾವ. ಹಿಡಿದ ಕಾರ್ಯವನ್ನು ಜಯಗೊಳಿಸಬೇಕೆಂಬುದು ಅವರ ಛಲ. ಕೆಲವರಿಗೆ ಅವರನ್ನು ನೋಡಿದ ಕೂಡಲೇ ಅವರೊಬ್ಬ ಆಡಂಭಾವಿಯಂತೆ ತೋರಬಹುದು. ಪರಂತು ಅವರೊಡನೆ ಕ್ಷಣಕಾಲ ಮಾತುಕತೆ ನಡೆಸಿದರೆ, ಅವರ ನಯನುಡಿಗಳು ಪ್ರೇಮದ ಮಾತುಗಳು, ಇವೆಲ್ಲಾ ತಿಳಿದುಬರುತ್ತಿತ್ತು. ಸರಿಯಾಗಿ ತನ್ನೊಳಗೆ ತಾನೇ ಯೋಚಿಸದೆ ಯಾವುದನ್ನೂ ವಿಚಾರಿಸದೆ ಒಂದೇ ಒಂದು ಶಬ್ದವು ಅವರ ಬಾಯಿಯಿಂದ ಹೊರಬೀಳುತ್ತಿದ್ದಿಲ್ಲ. ಅಂತಹ ಮಹನೀಯರ ನಿಧನದಿಂದ ಬಂಟ ಸಮಾಜಕ್ಕೂ ಊರಿಗೂ ಅಪಾರ ನಷ್ಟವಿದೆ. ಮೃತರ ವಿಶಾಲವಾದ ಮನೆ ಕುಟುಂಬ ಮತ್ತು ಆಪ್ತೇಷ್ಟರೊಡನೆ ನಾವೂ ಸಮಾನುತಾಪಪಡುವೆವು. ಅವರ ಆತ್ಮಕ್ಕೆ ಶಾಂತಿಯನ್ನು ಕೋರುವೆವು.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ತಾ. 18-6-39.

ಕೋರ್ಟು ಕಛೇರಿಗಳು—ಬೇಸಿಗೆ ರಜೆಯು ಮುಗಿದು ಕೋರ್ಟು ಕಛೇರಿಗಳು-ಜಿಲ್ಲಾ ಕೋರ್ಟು ಮತ್ತು ಸಬ್ ಕೋರ್ಟುಗಳು ಕಳೆದ ತಾ. 12ರಲ್ಲಿ ತೆರೆಯಲ್ಪಟ್ಟುವು. ಎಡಿಶನಲ್ ಕೋರ್ಟು ಸಹ ಅಂದೇ ತೆರೆಯಲ್ಪಟ್ಟಿತು.

ಪ್ರಾಥಮಿಕ ಶಾಲೆಗಳಲ್ಲಿ ಡ್ರಿಲ್—ಸೆಂಟ್ರಲ್ ಏರಿಯಾ ಹುಡುಗರ ಶಾಲೆಯಲ್ಲಿ ಕಳೆದ ತಾ. 10ರಲ್ಲಿ ಮದ್ರಾಸಿನ ಸೀನಿಯರ್ ಫಿಜಿಕಲ್ ಕಲ್ಚರಲ್ ಡೈರೆಕ್ಟರರಾದ ಪಿ. ಜಿ. ಎಫ್. ಎಂಡ್ರ್ಯೂಸರು ಪ್ರಾಥಮಿಕ ಶಾಲಾ ಉಪಾಧ್ಯಾಯರ ಮುಂದೆ ಭಾಷಣಮಾಡುತ್ತಾ, ಪ್ರಾಥಮಿಕ ಕ್ಲಾಸುಗಳಲ್ಲಿ ಮಕ್ಕಳಿಗೆ ಡ್ರಿಲ್ ಕಲಿಸತಕ್ಕ ಅಗತ್ಯವಿಲ್ಲವೆಂದೂ, ಡ್ರಿಲ್ ಬದಲಾಗಿ ಬೇರೆ ಬೇರೆ ತರದ ಆಟಗಳನ್ನು ಆಡಿಸಬಹುದೆಂದೂ ಅಭಿಪ್ರಾಯಪಟ್ಟರು. ಪ್ರಾಥಮಿಕ ಶಾಲೆಗಳಲ್ಲಿ ಜೂನಿಯರ್ ರೆಡ್ ಕ್ರಾಸ್ ಸಂಘಗಳನ್ನೂ ಏರ್ಪಡಿಸಬಹುದೆಂದು ಸೂಚಿಸಿದರು. ಶ್ರೀ. ಉಡುಪಿ ಗೋವಿಂದರಾಯರು ಧನ್ಯವಾದಗಳನ್ನರ್ಪಿಸಿದರು.

ಸತ್ಕಾರ ಕೂಟ—ನಿನ್ನೆಯ ದಿವಸ ಸ್ಥಳೀಯ ವಕೀಲ್ ಗುಮಾಸ್ತರ ಸಂಘದವರು ಕೆಲಸದಿಂದ ನಿವೃತ್ತರಾಗುವ ಜಿಲ್ಲಾ ಕೋರ್ಟು ಸೆಂಟ್ರಲ್ ನಾಜರ್ ಶ್ರೀ. ಬಿ. ಕೃಷ್ಣಯ್ಯನವರಿಗೂ ಮತ್ತು ಮಂಗಳೂರು ಮುನ್ಸಿಫ್ ಕೋರ್ಟು ಹೆಡ್ ಕ್ಲಾರ್ಕರಾದ ಶ್ರೀ. ಯು. ಗೋಪಾಲ ನಾಯ್ಕರಿಗೂ ಒಂದು ಸತ್ಕಾರವನ್ನಿತ್ತು ಮನ್ನಿಸಿದರು. ಶ್ರೀ. ಕೆ ಪಿ. ಭಕ್ತರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಜತೆಕಾರ್ಯದರ್ಶಿಗಳಾದ ಶ್ರೀ. ಕಡ್ರಿ ಮುತ್ತಪ್ಪನವರು ಮೇಲಿನ ಮಾನ್ಯ ಅತಿಥಿಗಳ ಗುಣಕಥನ ಮಾಡಿ ಅವರುಗಳು ಕ್ಲಾರ್ಕರಿಗೆ ಎಷ್ಟು ಸಹಾಯಕರಾಗಿದ್ದರೆಂಬುದನ್ನು ವಿವರಿಸಿ ಆ ಬಗ್ಗೆ ಅವರುಗಳನ್ನು ಅಭಿವಂದಿಸಿದರು. ಶ್ರೀಗಳಾದ ಕೃಷ್ಣಯ್ಯನವರೂ, ಗೋಪಾಲ ನಾಯ್ಕರೂ ತಮಗೀ ಗೌರವವನ್ನು ತೋರಿಸಿದ್ದಕ್ಕಾಗಿ ವಕೀಲರ ಕ್ಲಾರ್ಕರ ಸಂಘದವರನ್ನು ವಂದಿಸಿದರು. ಗ್ರೂಪ್ ಫೋಟೋ ತೆಗೆದ ಬಳಿಕ, ಲಘು ಫಲಾಹಾರವಾದ ಅನಂತರ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಸ್ವಾಸ್ಥ್ಯ ಸಂಘ—ತರುಣರ ದೇಹದಾರ್ಢ್ಯತೆಯನ್ನು ಬಲಗೊಳಿಸುವ ಉದ್ದೇಶದಿಂದ 1931ರಲ್ಲಿ ಸ್ಥಾಪಿತವಾದ ಮೇಲಿನ ಸಂಘವು ಎಡರು ತೊಡರುಗಳನ್ನು ದಾಟಿಯೂ ದಿನೇ ದಿನೇ ವೃದ್ಧಿಯಾಗುತ್ತಿದೆ. ಆ ಮಂದಿಯಿಂದ ಆರಂಭವಾದ ಈ ಸಂಸ್ಥೆಯಲ್ಲೀಗ ೧೬೦ಮಂದಿಗಳಿದ್ದಾರೆ, ನೂರಾರು ಜನರಿಗಿದು ವ್ಯಾಯಾಮ ತರಬೇತಿಯನ್ನಿತ್ತಿದೆ. ಕಳೆದ ೩ವರ್ಷದಿಂದ ಶಾಲಾ ಅಧ್ಯಾಪಕರಿಗೋಸ್ಕರ ಬೇರೆಯೇ ಕ್ಲಾಸುಗಳ ವ್ಯವಸ್ಥೆಮಾಡಿ, ಸುಮಾರು ೩೦೦ಮಂದಿ ಅಧ್ಯಾಪಕರುಗಳಿಗೆ ತರಬೇತಿಯನ್ನಿತ್ತಿದೆ. ಈಗ ತನ್ನದೇ ಆದೊಂದು ಕಟ್ಟಡವನ್ನು ನಿರ್ಮಿಸಿಕೊಂಡಿದೆ. ಕಳೆದ ಮಾರ್ಚ್ ಅಂತ್ಯಕ್ಕಾಗುವ ವರ್ಷಾಂತ್ಯದಲ್ಲಿ ಸಂಘಕ್ಕೆ ೧೭ಮಂದಿ ಆಜೀವ ಸದಸ್ಯರಿದ್ದರು. ೮೬ಮಂದಿ ವಿದ್ಯಾರ್ಥಿಗಳು ಸಂಘದ ಶಾಲೆಯಲ್ಲಿ ವ್ಯಾಯಾಮ ಅಭ್ಯಸಿಸುತ್ತಿದ್ದರು. ಇದೀಗ ಮುಂದೆ ಸಾರ್ವತ್ರಿಕವಾದ ವ್ಯಾಯಾಮ ಶಿಕ್ಷಣದ, ಆರೋಗ್ಯ, ಉಪದೇಶ, ಹಾಗೂ ಇತರ ಹಳ್ಳಿಗರ ಪುನಃಘಟನಾ ಕಾರ್ಯದಲ್ಲಿ ಸಂಘವು ಕೈಯಿಕ್ಕಲು ಯೋಚಿಸಿದೆ. ಈ ಕೆಲಸ ಹಾಗೂ ಕಟ್ಟಡದ ಸಂಪೂರ್ಣತೆ ಮೊದಲಾದುವುಗಳಿಗಾಗಿ ಸಂಘವು ಸಾರ್ವಜನಿಕ ಸಹಾಯವನ್ನು ಅಪೇಕ್ಷಿಸುತ್ತಿದೆ. ಧನಸಂಗ್ರಹಕ್ಕಾಗಿ ಸಂಘದ ವ್ಯಾಯಾಮ ಶಿಕ್ಷಕರಾದ ಶ್ರೀ. ಕೆ. ಕೆ. ಶೆಟ್ಟಿ (ವ್ಯಾಯಾಮ ವಿಶಾರದ) ಯವರು ಇದೇ 13ನೇ ತಾರೀಕಿಗೆ ಮುಂಬಯಿಗೆ ಹೊರಟಿರುವರು. ಮುಂಬಯಿ ಕನ್ನಡಿಗರು ಇವರಿಗೆ ತಕ್ಕ ಸಹಾಯವನ್ನೀಯಬೇಕಾಗಿ ಪ್ರಾರ್ಥನೆಯಿದೆ.

(*Sd.*) **R. R. Talcherikar,**
Secretary, S. S. M.

ನೀಲೇಶ್ವರದಲ್ಲಿ ಪ್ರಥಮ ರಾಷ್ಟ್ರೀಯ ಸಮ್ಮೇಲನ

ಡಾ| ವಿಟ್ಠಲ ಶೆಟ್ಟರ ಉದ್ಘಾಟನಾ ಭಾಷಣ—ಪ್ರಥಮ ಸಂಯುಕ್ತ ರಾಷ್ಟ್ರೀಯ ಸಮ್ಮೇಲನವು ನೀಲೇಶ್ವರದಲ್ಲಿ ಕಳೆದ ತಾ. ೧೧ನೇ ರವಿವಾರ 'ಕಲಶಂ' ಉತ್ಸವದ ದಿನ, ಹೊಸದುರ್ಗ ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ. ಎ. ಸಿ. ಕಣ್ಣನ್ ನಾಯರರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಬೋರ್ಡು ಅಧ್ಯಕ್ಷರಾದ ಡಾ. ಕೆ. ವಿಟ್ಠಲ ಶೆಟ್ಟರು ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು. ಅಪರಾಹ್ನ ಎರಡೂವರೆ ಗಂಟೆಗೆ ಇಲ್ಲಿಯ ಹೈಸ್ಕೂಲಿನೆದುರಿರುವ ಬೈಲು ಮೈದಾನದಲ್ಲಿ ಕೇರಳ ಪ್ರಾಂತೀಯ ಲೇಬರ್ ಸಂಘದ ಕಾರ್ಯದರ್ಶಿಯಾದ ಶ್ರೀ. ಗೋಪಾಲನ್‌ರವರು ತ್ರಿವರ್ಣ ಧ್ವಜವನ್ನೇರಿಸುತ್ತಾ ಅದರ ಮಹತ್ವವನ್ನು ವಿವರಿಸಿ ಭಾಷಣವಿತ್ತರು.

ಅನಂತರ ಹೈಸ್ಕೂಲ್ ಹಾಲಿನಲ್ಲಿ ಸಭೆ ಕೂಡಿತು. 'ವಂದೇ ಮಾತರಂ' ಹಾಡಲ್ಪಟ್ಟೊಡನೆ ಶ್ರೀ. ಸಿ. ಕೆ. ರಾಘವನ್ ನಂಬಿಯಾರು ಸ್ವಾಗತ ಭಾಷಣಮಾಡುತ್ತಾ ಜೇರು ದ್ಯಲಾಬ್ಲಾದ ಮೊದಲನೆ ಕಾಂಗ್ರೆಸ್ ಮಹಾಧಿವೇಶನದ ಬಳಿಕವೇ ನೀಲೇಶ್ವರದ ಜನತೆ ಜಾಗ್ರತವಾಗಿ ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿತೆಂದೂ ಕೀರ್ತಿಶೇಷ ಕಾರ್ನಾಡು ಸದಾಶಿವರಾಯರು ಪ್ರಸಿದ್ಧರಾಗಿದ್ದಾಗ ಅವರ ಪ್ರಭಾವದಿಂದ ಖಾದಿ ತಯಾರಿಯಲ್ಲಿ ನೀಲೇಶ್ವರವು ಬೆಳಕಿಗೆ ಬಂದಿತೆಂದೂ ಮುಂತಾಗಿ ತಿಳಿಸಿದರು.

ಡಾ. ಶೆಟ್ಟಿಯವರು ಈ ಸಮ್ಮೇಲನವು ನೀಲೇಶ್ವರದಂತಹ ಹಳ್ಳಿಯಲ್ಲೇ ಜರಗುತ್ತಿರುವುದಕ್ಕಾಗಿ ತಮ್ಮ ಸಂತೋಷವನ್ನು ಸೂಚಿಸಿ, ಹಳ್ಳಿಗಳಲ್ಲಿ ಸಾಧಾರಣವಾಗಿ ವಾರ್ತಾಪತ್ರಗಳನ್ನೋದುವವರ ಸಂಖ್ಯೆ ಬಹು ಕಡಿಮೆ. ನೀಳಡ ಜನರಷ್ಟೆ ಆಂಗ್ಲ ಭಾಷಾ ಪರಿಚಿತರು. ಈ ಪರಿಚಯವೂ ಪ್ರಯೋಜನಕ್ಕೆ ಬಾರದುದು. ಫ್ರಾನ್ಸ್, ಜರ್ಮನಿ ಮೊದಲಾದ ರಾಷ್ಟ್ರಗಳಲ್ಲಿ ನೂರರಲ್ಲಿ ನೂರು ಮಂದಿಯೂ ಸಾಕ್ಷರರಾಗಿದ್ದಾರೆ. ಡೆನ್ಮಾರ್ಕಿನಂತಹ ಸಣ್ಣ ರಾಜ್ಯದಲ್ಲಿ ಕೂಡಾ ಹಿರಿಯರಿಗಾಗಿ ನಾಲ್ಕು ಶಾಲೆಗಳಿವೆ. ರಷ್ಯವು ಬರೇ ೧೫ ವರ್ಷಗಳಲ್ಲಿ ನಿರಕ್ಷರತೆಯನ್ನು ನಿವಾರಿಸಿತು. ನಿಮ್ಮ ಪ್ರತಿನಿಧಿಗಳ ಮೂಲಕ ನೀವೇ ನಿಮ್ಮನ್ನಾಳಿಕೊಳ್ಳುತ್ತಿದ್ದೀರಿ. ಹಳ್ಳಿಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಅಗತ್ಯ ತುಂಬ ಇದೆ. ಈಗಿನ ಸರಕಾರವು ಇದನ್ನು ಪೂರೈಸಬೇಕಾದುದು ಸಹಜ. ಜಿಲ್ಲಾ ಬೋರ್ಡು ಈ ವಿಷಯದಲ್ಲಾಸಕ್ತಿಯನ್ನು ತೋರಿಸುತ್ತಿದೆ ಎಂದು ಹೇಳಿ ಬೋರ್ಡಿನ ಆರ್ಥಿಕ ಸ್ಥಿತಿಯನ್ನು ವಿವರಿಸಿ ಹೇಳಿದರು. ಫೆಡರೇಶನನ್ನು ಸರ್ವವಿಧದಿಂದಲೂ ಇದಿರಿಸಬೇಕೆಂದು ಸಾರಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು. ಬಳಿಕ ಅಧ್ಯಕ್ಷರು ತಮ್ಮ ಆರಂಭ ಭಾಷಣದಲ್ಲಿ ಬ್ರಿಟಿಷರ ಭಾರತಾಕ್ರಮಣವನ್ನೂ ಕಾಂಗ್ರೆಸ್ ಸಂಸ್ಥೆ ಜನ್ಮವೆತ್ತಿದುದನ್ನೂ ತಿಲಕ್ ಅಣ್ಣಾ, ಸ್ವಿಮಾನ್ ಕಮಿಶನ್‌ಗಳೊಡನೆ ಭಾರತೀಯರು ಹೂಡಿದ ಯುದ್ಧವನ್ನೂ ಕಾಂಗ್ರೆಸಿನಲ್ಲಿ ಪಕ್ಷಭೇದಗಳುಂಟಾದುದನ್ನೂ ನಮ್ಮ ಇಂದಿನ ಪರಿಸ್ಥಿತಿಯನ್ನೂ ಆಮೂಲಾಗ್ರವಾಗಿ ವಿವರಿಸಿದ ಮೇಲೆ ಭಾಷಣಕಾರರಾಗಿ ಆಹ್ವಾನಿತರಾಗಿದ್ದ ನೆಟ್ಟೂರು ಶ್ರೀ. ದಾಮೋದರನ್‌ರವರು ಸ್ವವಿಚಾರವನ್ನಿತ್ತು ಕೇರಳ ಪ್ರಾಂತೀಯ ನಿರ್ಮಾಣವನ್ನು ಪುಷ್ಟೀಕರಿಸಿದರು.

ಕೀರ್ತಿಶೇಷರಾದ ಶ್ರೀ. ರಾಮನ್ ಮೆನೋನ್ ಮತ್ತು ಜನಾಬ್ ಅಬ್ದುಲ್ ಕೋಯಾರವರ ಆತ್ಮಗಳಿಗೆ ಶಾಂತಿಯನ್ನಪೇಕ್ಷಿಸಿ ಠರಾವು; ಯುದ್ಧ ವಿರೋಧದ 'ರಾಷ್ಟ್ರದ ಹಕ್ಕುಗಳ' ಚಂದ್ರಗಿರಿಯ ದಕ್ಷಿಣಕ್ಕಿರುವ ಪ್ರಾಂತವನ್ನೆಲ್ಲ ಕೇರಳಕ್ಕೆ ಸೇರಿಸಬೇಕೆಂಬ ಮತ್ತು ಸಿಂಹಳದಲ್ಲಿ ಬನ್ನಬಡುತ್ತಿರುವ ಬಡ ಭಾರತೀಯರ ಪರವಾದ ಠರಾವುಗಳು ಮಂಜೂರಾದುವು.

ನೀಳೆಡ ೯೦ರಷ್ಟು ಮಲಯಾಳವಿರುವ ಕಾಸರಗೋಡು ತಾಲೂಕಿನ ಶಾಲೆಗಳಲ್ಲಿ ಮಲೆಯಾಳದಲ್ಲಿ ವಿದ್ಯಾಭ್ಯಾಸಕೊಡಿಸಬೇಕೆಂಬ ಠರಾವನ್ನು ಪಿ. ಸಿ. ಯಂ. ಎ. ರಾಸಕರು ಅನುಮೋದಿಸುತ್ತಾ ಬೋರ್ಡಿನವರ ವರ್ತನೆಯನ್ನಾಕ್ಷೇಪಿಸಿ ಭಾಷಣಮಾಡಿದರು. ಡಾ. ಶೆಟ್ಟರೆದ್ದು ನಿಂತು ಭಾಷಣಕರ್ತರ ತಪ್ಪು ಅಭಿಪ್ರಾಯವನ್ನು ತೋರಿಸಿಕೊಟ್ಟು ಸತ್ಯಸಂಗತಿಯನ್ನು ಸಭೆಯ ಮುಂದೆ ವ್ಯಕ್ತಗೊಳಿಸಿದರು.

ಇತರ ಕೆಲವು ಠರಾವುಗಳಾದ ಮೇಲೆ ಅಧ್ಯಕ್ಷರ ಉಪಸಂಹಾರ ಭಾಷಣದೊಂದಿಗೆ ಸಭೆಯು ಮುಕ್ತಾಯವಾಯಿತು.

THE

Canara Industrial & Banking Syndicate, Ltd.

(INCORPORATED IN BRITISH INDIA
LIABILITY OF SHAREHOLDERS LIMITED.)

ESTD. 1925

Head Office:- **UDIPI**, (S. India.)

SEASON DEPOSITS ARE ACCEPTED at 3½ per cent per annum.

Further particulars on application to any of our thirty-five Offices.

ಸ್ಥಾಪನೆ: ಕ್ರೌನ್ ರಬ್ಬರ್ ಸ್ಟ್ಯಾಂಪ್ ಕಂಪೆನಿ 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ಸಿಲ್ ಬೋರ್ಡು, ಪೇಪರುಗಳ ಬೇಜು, ಮೊನೋಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿ ಕೊಡಲಾಗುತ್ತದೆ. **CROWN RUBBER STAMP CO., Balmat Road, MANGALORE.**

Includ by the Mysore Govt. Stores, Purchase Committee in the list of approvedFirms

ಮತ್ತೊಂದು ಸಬ್ ಮೆರಿನ್ ಕಾಣೆಯಾಯಿತು

ಫ್ರೆಂಚರ ಸಬ್ ಮೆರಿನ್ 'ಫೆನಿಕ್ಸ್' ಎಂಬುದು ಇದೇ ತಾ. 14ರಲ್ಲಿ ಮತ್ತೊಂದು ಸಬ್ ಮೆರಿನಿನೊಂದಿಗೆ ಮುಳುಗಿದ್ದು ಈಗ ಕಾಣೆಯಾಗಿರುವುದು. ಅದನ್ನು ರಕ್ಷಿಸುವ ಉಪಾಯಗಳೆಲ್ಲಾ ನಿಷ್ಫಲವಾದುವೆಂದು ಫ್ರೆಂಚ್ ಅಧಿಕಾರಿಗಳು ಪ್ರಕಟಿಸಿರುವರು. ಕಾಮ್ರಾನ್ ಜಲಸಂಧಿಯ ೩೦ರು ಮೈಲು ದೂರದಲ್ಲಿ ಈ ಜಲಾಂತರ್ಗಾಮಿಯು 300 ಅಡಿಗಿಂತಲೂ ಹೆಚ್ಚಿನ ಆಳದಲ್ಲಿ ಮುಳುಗಿರುವದೆಂದು ತಿಳಿದು ಬರುತ್ತವೆ. ಬ್ರಿಟನ್ ಅಧಿಕಾರಿಗಳೂ, ಹೆರ್ ಹಿಟ್ಲರರೂ ಈ ಅಪಘಾತಕ್ಕಾಗಿ ದುಃಖ ಸೂಚಿಸಿರುವರು. ಇದರಲ್ಲಿ 67 ಜನರಲ್ಲದೆ ನಾಲ್ಕುಮಂದಿ ಆಫೀಸರರೂ ಇದ್ದರು. ಕಳೆದ ಮೂರು ವಾರದೊಳಗಾದ ಮೂರನೇ ಸಬ್ ಮೆರಿನ್ ಅಪಘಾತವಿದು!

ಇಂಗ್ಲೆಂಡಿಗೆ ಪ್ರಚಾರ ಮಂತ್ರಿ

ಬ್ರಿಟಿಷ್ ಮಂತ್ರಿಮಂಡಲಕ್ಕೆ ಒಬ್ಬ ಪ್ರಚಾರ ಮಂತ್ರಿಯನ್ನು ನೇಮಿಸಿಕೊಳ್ಳುವ ಆಲೋಚನೆಯನ್ನು ಚೇಂಬರ್ಲೆನ್ ಸರಕಾರವು ಮಾಡಿರುವದು. ಜರ್ಮನಿಯ ಪ್ರಚಾರ ಮಂತ್ರಿ ಡಾ| ಗೋಬೆಲ್ಸನ ಅಪಪ್ರಚಾರದ ದೆಸೆಯಿಂದ ಅಲ್ಲಿಯ ಜನತೆಗೆ ಮತ್ತು ಹೊರಗಿನವರಿಗೆ ಸತ್ಯಸ್ಥಿತಿಯನ್ನು ತಿಳಿಯಲು ಎಳ್ಳಷ್ಟು ಅವಕಾಶವಿಲ್ಲವಾಗಿದೆ. ಆದರೆ ಬ್ರಿಟಿಷರು ತಮ್ಮ ಮಂತ್ರಿಯ ಮೂಲಕ ಜರ್ಮನಿಯೊಳಗಿನ ಕಲ್ಪನೆಗಳ ಪ್ರಚಾರಮಾಡಲವಕಾಶಸಿಗಬಹುದು. ಬ್ರಿಟನಿನ ಈ ಉದ್ದೇಶವನ್ನರಿತು ಜರ್ಮನ್ ಪತ್ರಿಕೆಗಳೆಲ್ಲಾ ಒಂದೇಸವನೆ ಬೈಯ್ಯಲಾರಂಭಿಸಿವೆ.

ಜರ್ಮನ್ ರಾಯಭಾರಿಯ ತಂತ್ರ

ಲಿವರ್‌ಪೂಲಿನಲ್ಲಿ ಜೋಸೆಫ್ ಕೆಲ್ಲಿ ಎಂಬ ಆಂಗ್ಲೇಯನು ಬ್ರಿಟಿಷ್ ಸೈನ್ಯದ ಗುಟ್ಟನ್ನು ಜರ್ಮನಿಗೆ ಕೊಡುವ ಒಳಪಟ್ಟಾಟನಲ್ಲಿದ್ದನೆಂಬುದರಿಂದ ಅವನಿಗೆ 10 ವರುಷಗಳ ಸಜೆ ವಿಧಿಸಲ್ಪಟ್ಟಿದೆ. ಈ ಕುರಿತು ನಡೆದ ವಿಚಾರಣೆಯಿಂದ ಅಲ್ಲಿರುವ ಜರ್ಮನ್ ರಾಯಭಾರಿಯೂ ಒಳಸಂಚಿನಲ್ಲಿ ಭಾಗವಹಿಸಿದ್ದಾನೆಂದು ತಿಳಿದುಬಂದುದರಿಂದ ಅವನನ್ನು ಹಿಂದೆ ಕರೆಯಿಸಿಕೊಳ್ಳಿರೆಂದು ಬ್ರಿಟಿಷ್ ಸರಕಾರವು ಜರ್ಮನಿ ಸರಕಾರಕ್ಕೆ ತಿಳಿಸಿರುವದು. ಜರ್ಮನಿಯು ಬ್ರಿಟನಿನ ಮೇಲೆ ಕ್ರೋಧಗೊಂಡಿದೆ.

ಪೋಪ್ ಗುರುಗಳು ಮನಸ್ಸುಮಾಡಲಿ!

ಲೋಕಶಾಂತಿಗಾಗಿ ರಾಷ್ಟ್ರಗಳ ಪರಿಷತ್ತನ್ನು ಕರೆಯುವ ಕೆಲಸವನ್ನು ಪೋಪ್ ಗುರುಗಳು ಕೈಕೊಳ್ಳಬೇಕೆಂದು ಹಂಗೇರಿಯ ರೀಜೆಂಟರ ವಿನಂತಿ.

ಇನ್ಕಮ್ ಟೇಕ್ಸ್

ನೋಟೀಸು

1-4-'39ರಿಂದ ಇನ್ಕಮ್ ಟೇಕ್ಸ್ ಕಾಯಿದೆಯಲ್ಲಿ ಅನೇಕ ವ್ಯತ್ಯಾಸಗಳಾಗಿವೆ. ನೀವು ಕೊಡುವ ಟೇಕ್ಸ್ ನಿಮ್ಮ ಉತ್ಪತ್ತಿಗೆ ಮಿಕ್ಕಿದ್ದಿದ್ದು ನಿಮಗೆ ಆ ಬಗ್ಗೆ ಅಸಮಾಧಾನವಿದ್ದರೆ ಕೆಳಗಿನ ವಿಳಾಸಕ್ಕೆ ಬರೆದು ತಕ್ಕ ಅನುಭವವನ್ನು ಪಡೆದುಕೊಂಡು ನಿಮ್ಮ ಟೇಕ್ಸನ್ನು ಕಡಿಮೆಮಾಡಿಕೊಳ್ಳಬಹುದು. ಸಂದರ್ಭಾನುಸಾರ ನೀವು ಟೇಕ್ಸ್ ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು.

S. S. Puranik

Govt-recognised
Income-Tax Practitioner
AUDITOR
P. O. Byndoor

THE
PREMIER BANK
OF INDIA, LIMITED.
Head Office: MADRAS.
Branches:
MADURA & NELLORE.
CHAIRMAN
Dr. U. L. Narayana Rao.
'Bhujanga Nivas' Madras.
FIXED DEPOSITS
are now received at the following Rates:
For 6 Months at 3½% P. A.
12 Months at 4½% P. A.
24 Months at 5% P. A.
(Interest Paid Half-yearly.)
S. V. Rau D. Com.,
Managing Director

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ, ವೀರ್ಯವನ್ನು ಶುದ್ಧಿಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುತ್ತದೆ, ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಪೆಟ್ಟಿಗೆಗೆ ೧-೦-೦

ವಾಜೀಕರಣ ತೈಲ

ಚಿಕ್ಕಂದಿನ ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗಗಳಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲವಾಗಿ ಚಿಕಿತ್ಸೆ ಮಾಡುವುದಕ್ಕೆ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧಔನ್ಸ್ ಸೀಸೆ 1ಕ್ಕೆ ರೂ. 5-0-0

'ಕಾಮಶಾಸ್ತ್ರ'ದರ್ಪಣ. ಪುಸ್ತಕವು ಮಾಫತವಾಗಿ ಕಳುಹಿಸುವೆವು. ಒಂದು ಕಾರ್ಡುಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೭೪ ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

WANTED District and Taluka Organisers in Districts and Taluks of Karnataka on a monthly salary of Rs. 50/- and Rs. 20/-. Special facilities for initial business. Only influential and educated Organisers who can guarantee Rs. 50,000/- and Rs. 25,000/- per year need apply: Padubidri Bros., Bombay 8.

ಗೆದ್ದವರಿಗೆ ರೂ. 13,000 ಲಾಭ

ಸರಿಯಾದ ಉತ್ತರ ಕಳುಹಿಸುವವರಿಗೆ ರೂ. 10,000, ಅತ್ಯಧಿಕ ಉತ್ತರ ಕಳುಹಿಸುವವರಿಗೆ ರೂ. 1000, ಸ್ಪರ್ಧಿಗಳಿಗೆ ರೂ. 1000, 22-6-39ರಲ್ಲಿ ಇಲ್ಲವೆ ಆ ಮೊದಲು ಸರಿಯಾದ ಉತ್ತರ ಕಳುಹಿಸುವವರಿಗೆ ರೂ. 1000. ಉತ್ತರಗಳು ಏಕಪ್ರಕಾರವಾದಲ್ಲಿ ಮೇಲಣ ಬಹುಮಾನವು ಏಕಪ್ರಕಾರವಾಗಿ ಹಂಚಲ್ಪಡುತ್ತದು.



ಈ ಚೌಕದಲ್ಲಿಯ ಸಾಲುಗಳನ್ನು ಅಡ್ಡಕ್ಕೂ ನೀಟಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸಿದರೆ ಜುಮಲಾ 30 ಬರುವಂತೆ 0ಯಿಂದ 30ರ ವರೆಗಿನ ಸಂಖ್ಯೆಗಳನ್ನು ಸೇರಿಸತಕ್ಕದ್ದು. ಯಾವ ಸಂಖ್ಯೆಯನ್ನೂ ಒಂದು ಬಾರಿಗಿಂತ ಹೆಚ್ಚಾಗಿ ಉಪಯೋಗಿಸಕೂಡದು.

ಕಳುಹಿಸುವ ಕೊನೆಯ ದಿನ 27-6-39.

ಫಲಿತಾಂಶ ಪ್ರಕಟಣೆಯ ದಿನ 5-7-39.

ಪ್ರವೇಶ ಧನ.— ಒಂದು ಉತ್ತರಕ್ಕೆ ರೂ. 1/- ಮೂರಕ್ಕೆ ರೂ. 2/- 8 ಉತ್ತರಗಳ ಸೆಟ್ಟಿಗೆ ರೂ. 5 ರಂತೆ.

ಶರ್ತಗಳು:— ಮೇಲೆ ಕಾಣಿಸಿದ ದರದ ಮೇರೆಗೆ ಯುಕ್ತ ಮೌಲ್ಯದೊಂದಿಗೆ ಸಾಮಾನ್ಯ ಕಾಗದದಲ್ಲಿ ಸ್ಪಷ್ಟವಾಗಿ ಬರೆದು, ಬೇಕಾದಷ್ಟು ಉತ್ತರಗಳನ್ನು ಕಳುಹಿಸಿದರೂ ಸ್ವೀಕಾರವಿದೆ. ಹಣವನ್ನು ಮಣಿಯಾರ್ಡರು ಇಲ್ಲವೆ ಪೋಸ್ಟಲ್ ಆರ್ಡರು ದ್ವಾರಾ ರವಾನಿಸತಕ್ಕದ್ದು.

ಮುಂಬಯಿಯ ಪ್ರಸಿದ್ಧನಾದ ಬೇಂಕೊಂದರಲ್ಲಿ ಭದ್ರವಾಗಿರಿಸಿದ ಉತ್ತರಕ್ಕೆ ಸರಿಹೋಲುವ ಉತ್ತರವು ಸರಿಯಾದ ಉತ್ತರವೆಂದು ಗಣಿಸಲ್ಪಡುವುದು. ಬಹುಮಾನವು ಮೇಲಿನ ನಿಯಮಗಳನುಸಾರವಾಗಿ ವ್ಯತ್ಯಾಸ ಹೊಂದುವುದು. ಹಾಗೂ ಪೂರ್ತಿ ಕಳಿದ ಎಲ್ಲಾ ಹಣ ಹಂಚಲಾಗುವುದು. ಫಲಿತಾಂಶ ತಿಳಿಯುವುದಕ್ಕಾಗಿ ಕಳುಹಿಸುವ ಉತ್ತರದೊಂದಿಗೆ ವಿಳಾಸ ಸಹಿತವಾದ ಕವರನ್ನು ಸ್ಟಾಂಪು ಸಹಿತ ಲಗ್ತೀಕರಿಸತಕ್ಕದ್ದು. ವ್ಯವಸ್ಥಾಪಕರ ತೀರ್ಮಾನವೇ ಅಂತಿಮವು ತೀರ್ಮಾನವು ಬಾಧ್ಯವಾಗತಕ್ಕದ್ದೂ ಆಗಿದೆ.

ನಿಮ್ಮ ಉತ್ತರ ಮತ್ತು ಹಣವನ್ನು ಈ ಕೆಳಗಣ ವಿಳಾಸಕ್ಕೆ ಕಳುಹಿಸಿರಿ.

ಮೇನೇಜರ್,
ದಿ ಪ್ರೆಸಿಡೆನ್ಸಿ ಕಮರ್ಸಿಯಲ್ ಸಿಂಡಿಕೇಟ್, ಮುಂಬಾದೇವಿ, ಬೊಂಬಾಯಿ ೨

The Manager,
The Presidency Commercial Syndicate
Mumbadevi, BOMBY 2.

ನವೀನ ಪುಸ್ತಕಗಳು

೧. ಕೆರೆನೀರು— ಐತಿಹ್ಯ ಭೀಷಣ ಕಾದಂಬರಿ ೪೭೦ ಪುಟ ನುಣುಪು ಕಾಗದ ಬೆಲೆ ಎರಡೂವರೆ
೨. ಪನ್ನೆ— ಐತಿಹಾಸಿಕ ನಾಟಕ. ಪುಟ ೮೦, ನುಣುಪು ಕಾಗದ, ಬೆಲೆ ೬ ಆಣೆ.
೩. ಬಲಿದಾನ— ಬುದ್ಧ ಕಾಲೀನ ಐತಿಹಾಸಿಕ ಕಾದಂಬರಿ, ೨೬೬ ಪುಟ ಬೆಲೆ ರೂ. ೧-೪-೦
೪. ಎಚ್ಚಮ್ಮ ನಾಯಕ— ವಿಜಯನಗರಕ್ಕೆ ಸಂಬಂಧಿಸಿದ ಕಥಾನಕವು ೧೦೮ಪುಟ ಬೆಲೆ ೮ ಆಣೆ
೫. ಅಮಾತ್ಯ ನಂದಿನಿ— ಚಂದ್ರಹಾಸನ ಕಾಲದ ಪೌರಾಣಿಕ ಕಾದಂಬರಿ, ೩೬೦ ಪುಟ ಬೆಲೆ ರೂ. ೧-೮-೦

ವಿಳಾಸ:— ಶ್ರೀ ಶೇಷಾಚಲ ಪ್ರೆಸ್, ಪೊ. ಆನಂದವನ (ಹಾವೇರಿ) ಧಾರವಾಡ

ನಮ್ಮ ಎಲ್ಲಾ ಪುಸ್ತಕಗಳು ಉಡುಪಿಯಲ್ಲಿ ನವಭಾರತ ಪುಸ್ತಕ ಭಂಡಾರದಲ್ಲಿ ಸಿಗುತ್ತವೆ.

ನವಯುಗಕ್ಕೆ ಚಂದಾದಾರರಾಗಿರಿ.
ಮುಂದೆ ಪ್ರಕಟವಾಗುವ ನವಯುಗ ಸ್ಪರ್ಧೆಯನ್ನು ನಿರೀಕ್ಷಿಸಿ

ಲೈಬ್ರೆರಿ
ಮತ್ತು
ಸ್ಕೂಲ್‌ಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ **ದೊರೆಯುತ್ತವೆ**
ಕೆಟಲಾಗಿಗೆ ಬರೆಯಿರಿ.

ಪಿ. ಎ. ಉಪಾಧ್ಯಾಯ,
ಬುಕ್ ಸೆಲ್ಲರ್ ಆಂಡ್ ಪಬ್ಲಿಷರ್,
ಎ. ಎಸ್. ಸ್ಟ್ರೀಟ್,
ಬೆಂಗಳೂರು ಸಿಟಿ.

ಸಂಗೀತ
ಕಲಿಯುವವರಿಗೆ ಸುಸಂಧಿ
ದತ್ತಮಂದಿರ
(ಬೆಂಗಳೂರ ಗವರ್ನ್‌ಮೆಂಟ್ ಟ್ರೈನಿಂಗ್ ಶಾಲೆಯ ಎದುರು)
ಉಡುಪಿ

ಇಲ್ಲಿ ಸಂಗೀತವನ್ನು ಶಾಸ್ತ್ರೀಯ ರೀತ್ಯಾ ಮುತುವರ್ಜಿಯಿಂದ ಕಲಿಸಲಾಗುತ್ತೆ. ಹೆಚ್ಚಿನ ಮಾಹಿತಿಗೆ ವಿಚಾರಿಸುವುದು.

ನರಸಿಂಹ ಸೇರಿಗಾರ್,
ಹಾರ್ಮೋನಿಯಂ ಮಾಸ್ತರ್.

ಅತ್ಯಂತ ಕಡಿಮೆಕ್ರಯ!

ಮಕ್ಕಳಿಗೆ ಅತ್ಯುಪಯುಕ್ತವಾದ ಯಾವತ್ತೂ ಮಾಹಿತಿ ಮತ್ತು ಕೋಷ್ಟಕಗಳನ್ನೊಳಗೊಂಡ ಟೀಚರ್ ಪಬ್ಲಿಷಿಂಗ್ ಕಂಪೆನಿಯವರಿಂದ ಪ್ರಕಟಿಸಲ್ಪಟ್ಟ

ಮಗ್ಗಿ ಪುಸ್ತಕಗಳು

ಸಣ್ಣ ಮಗ್ಗಿ ಪುಸ್ತಕ 0-0-6
ದೊಡ್ಡ ಮಗ್ಗಿ ಪುಸ್ತಕ 0-1-0
ವ್ಯಾಪಾರಸ್ಥರಿಗೆ ಆಕರ್ಷಣೀಯ ದರಗಳು!

ಪ್ರತಿಗಳಿಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೋನೋಕಿಲರ್" (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇಂಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೩೦ ಮಾತ್ರೆಗಳ ಬುದ್ಧಿಲೊಂದಕ್ಕೆ ರೂ. ೩. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer **DR. D. N. JASANI,** Vitalbhai Patel Road, BOMBAY 4

ಅವಳು ನಡು ಹರೆಯದವಳು—ನೀರೆ; ಸಾಕಿ ಸಲಹಿದ 'ಮಾಮ'ನ ಗುರುತು ತನಗಿಲ್ಲವೆಂದಳವಳು! ಕೈಹಿಡಿದ ಮುದುಕ ಗಂಡನನ್ನು ಧಿಕ್ಕರಿಸಿದಳವಳು ಅವನ ಬೆದರಿಕೆಗಳಿಗೆ ಹೆದರಲಿಲ್ಲ, ಅವನ ಮಾತುಗಳನ್ನು ಸನ್ಮಾನಿಸಲಿಲ್ಲ, ಅವನನ್ನು ಮುಟ್ಟಿ ಬರಬಿಡಲಿಲ್ಲ! ಪ್ರಾಯಬದ್ಧ ಸವತಿಯ ಮಗನಿಗೆ ಬೆತ್ತದೇಟಿನಿಂದ ಪುರಸ್ಕರಿಸಿದಳು! ಅತ್ತೆಯ ದರ್ಪಕ್ಕೆ ಸೊಪ್ಪು ಹಾಕಿದಳು! . . . . ಹೆಚ್ಚೇಕೆ?

'ನೀರೆ' ಎಂದರೆ 'ಮಾರಿ' ಎಂದೆಣಿಸಿದರು ಅವರೆಲ್ಲರೂ!

ಆದರೆ!! . . . . ಅಂತ್ಯದಲ್ಲಿ ಅವಳೇ ಆದರ್ಶ ತರುಣಿ ಎಂದೆನಿಸಿಕೊಂಡಳು! ದಿಂಡೆ ಎಂದೆನಿಸಿಕೊಂಡವಳೇ ಗಂಡನ ಪ್ರಚಂಡ ಪ್ರಶಂಸೆಗೆ ಪಾತ್ರಳಾದಳು! ಅವರೆಲ್ಲರೂ ಅವಳ ಪೂಜ್ಯತೆಯನ್ನು ಕೊಂಡಾಡಿದರು! . . . ಅದು ಹೇಗೆ?

ಇಂತಹ ಗುಣಗಳು ನಿಮ್ಮಲ್ಲಿದ್ದೂ, 'ನೀರೆ'ಯಂತೆಯೇ ಲೋಕಮಾನ್ಯರಾಗಲು ಬಯಸುವಿರಾ?

ನೋಡಿರಿ! ತಾರೀಕು 20-6-1939ರಿಂದ ನೋಡಿರಿ!!

ಉಡುಪಿ ಶ್ರೀರಾಮಕೃಷ್ಣ ಥಿಯೇಟರಿನಲ್ಲಿ.

ಪ್ರತಿ ದಿನ ಘಂಟೆ 6-15 & 9-30ಕ್ಕೆ (ಪ್ರತಿ ಆದಿತ್ಯವಾರ ಬುಧವಾರ ಮತ್ತು ಶನಿವಾರಗಳಲ್ಲಿ ಘಂ 3ಕ್ಕೆ ಮೆಟಿನಿ)

'ಶಾಂತಾರಾಮ'ರ ಮೋಹರಿನ 'ಪ್ರಭಾತ' ಚಿತ್ರರತ್ನ!

ದುನಿಯಾ-ನ-ಮಾನೆ ಅಥವಾ ಕುಂಕುಮ

(ಮರಾಠಿ)

ಸಮಾಜದ ಚಿತ್ರ ವಿಚಿತ್ರ ಪ್ರಸಂಗಗಳನ್ನೂ, ವಿಚಾರಪರ ಸಮಸ್ಯೆಗಳನ್ನೂ ಕೂಡಿರುವ, ವಿಮರ್ಶಕರನ್ನೂ, ಪ್ರೇಕ್ಷಕರನ್ನೂ ಮುಗ್ಧಗೊಳಿಸಿರುವ ಸದಾಚಾರಸಂಪನ್ನತೆಯ ಬೆಳಕನ್ನು ದುಷ್ಟತಾಮ್ಯನಾದ ಪತಿಯಲ್ಲಿ ಬೆಳಗಿಸಿದ ವೀರನಾರಿಯ ಕಥಾಮಂಜರಿ!

ಅಮರ ಗಾಯನ! ಸುಮಧುರ ಕತೆ ವಾಸಂತಿಯ ನವೀನ ನಾಟ್ಯ ಮನಮುಗ್ಧಕರ ಅಭಿನಯ!

ಶಾಂತಾ ಆಪ್ಟೆ, ವಾಸಂತಿ, ಕೇಶವರಾವ್ ದಾತೆ, ಶಕುಂತಲಾಪರಾಂಜಪೆ, ಮೊದಲಾದವರೇ ಉತ್ಕೃಷ್ಟನಟರು

Isn't this surprising?

A girl in her teens could not recognise her own 'Mama,' who it was that brought her up since child-hood!

Should she not implicitly obey her husband —who though old, had gold,—to keep up the traditions of Society? She never did! Husband's very presence was repulsive to her! For his pleadings, she was deaf, for his threats, she was rebellious!

What audacity should she have to cane her own grown-up stepson? Above all, did she not play with fire by repealing the mother-in law's usual do-as-you please supreme overruling power?

They called her a devil in the girl's garment!

But with all this, ultimately her case was recognised as an exemplary one! Her husbands praise for her was deeper than his lips! . . . How? With any of these 'Neera's' traits, do you wish to rise in the estimate of the public? .. .. .. Well! we recommend you to see

'Dunia - na - Mane *or* Kunkum'

(MARATHI)

SRI RAMAKRISHNA THEATRE, UDIPI.

From 20—6—1939 Daily 2 Shows at 6-15 & 9-30 P. M.

Matinees at 3 P. M. on Wednesday, Saturday & Sunday.

It is a **Prabhat** *picture with* **Shantaram** *stamp on it!*

FEATURING:—

Shanta Apte, Vasanthi, Keshava Date, Shakuntala Paranjape & others.

DEPICTING

India's womanhood — an Unsolved problem of the day!

Ticket Rates: Reserved 1-2-0, Special 0-9-6, Gallery 0-5-11, Benches 0-4-0, 0-2-0

Next: This time with magic! See the miraculous Diamond, the source of spiritual power; Magic Bell that makes man Invisible, Magic Feather that works wonders—all in India movietone's **'Impossible' or 'Na-Honewale-Bat'**

ಬರುವ ಚಿತ್ರ: ಇಂಡಿಯಾ ಮೂವಿಟೋನಿನವರ 'ಇಂಪೋಸಿಬಲ್' ಅಥವಾ 'ನ-ಹೊನೆವಾಲಿ-ಬಾತ್.'

ಕ ಥಾ ಸಾ ರಾ ಂ ಶ

ಅನಾಥೆ ನೀರೆಯು ತನ್ನ ಚಿಕ್ಕಪ್ಪನ ಜಾಲದಲ್ಲಿ ಬಿದ್ದಿರುವ ಯುವತಿಯು. ಧನಪಿಶಾಚಗ್ರಸ್ತನಾದ ಚಿಕ್ಕಪ್ಪನು ಅದೇ ಊರಿನ ಪ್ರಸಿದ್ಧನಾದರೂ ಮುದುಕ ವಕೀಲ್ ಕೇಶವಜೀಯವರಿಗೆ ಹಣದ ಪ್ರತಿಫಲಕ್ಕಾಗಿ ಅವಳನ್ನು ಮದುವೆಮಾಡಿ ಕೊಡುವನು. ನೀರೆಯು ಸ್ವಭಾವತಃ ಹುರುಪಿನ ಹುಡುಗಿ; ಮಾತಾಪಿತೃಗಳಿಂದ ಅವಳಿಗೆ ದೊರೆತ ವಿದ್ಯೆಯ ವಿವೇಚನಾಶಕ್ತಿ ಅವಳಿಗಿರುವುದು. ಆದರೆ ಮದುವೆಯು ಮೋಸದಿಂದ ನಡೆದುಹೋಯಿತು. ನ್ಯಾಯದೃಷ್ಟಿಯಲ್ಲಿ ಅವಳು ಮುದುಕನ ಹೆಂಡತಿಯೇ. ಆದರೆ ವಿಚಾರದೃಷ್ಟಿಯಲ್ಲಿ ಆ ಮದುವೆಯು ಅಮಾನುಷಕೃತ್ಯವೆಂದು ಅವಳು ತಿಳಿದಿರುವಳು. ತನ್ನ ತಂದೆ ಅಥವಾ ಅಜ್ಜನ ಮೇಲಿಡಬಹುದಾದ ಪ್ರೀತಿಯೇ ಕೇಶವಜೀಯ ಪಾಲಿಗೆ! ವಿಷಯಸಂಬಂಧವಾದ ಯಾವ ಕೃತ್ಯಕ್ಕೂ ಎಡೆಗೊಡಲಿಲ್ಲ.

ಮನೆಯಲ್ಲಿ ಕೇಶವಜೀ ಮತ್ತು ಅವನ ನವೀನ ಪತ್ನಿಯಲ್ಲದೆ ವಿಧವೆ ಅತ್ತೆ, ಸುಶೀಲಳೆಂಬ ವಿಧವೆ ಮಗಳು, ಜೂಗಲ್ ಎಂಬ ಮಗ, ಶಾಂತಾ ಎಂಬ ಸೊಸೆ-ಇಷ್ಟು ಜನರ ಸಂಸಾರ ಅವನದು. ಅತ್ತೆಯೆಂದರೆ ಹೆಣ್ಣಿನ ರೂಪದಲ್ಲಿದ್ದ ಸಾಕ್ಷಾತ್ ಯಮನೆಂದರೂ ಸಲ್ಲುವುದು. ಅತ್ತೆಯುಂದಿರ ದರ್ಪವು ಅವಳನ್ನು ಬಿಟ್ಟಿದ್ದಿಲ್ಲ. ಆದರೆ ನೀರೆಯು ಮಾತ್ರ ಅವಳ 'ಅತ್ತೆತನ'ಕ್ಕೆ ನಿಗಾಕೊಡಲಿಲ್ಲ. ಸುಶೀಲಳು ಸಮಾಜದ ಉದ್ಧಾರಕ್ಕಾಗಿ ತನ್ನ ದೇಹವನ್ನು ವಿನಿಯೋಗಿಸಿದವಳು. ತಂದೆಯು ಇಂತಹ ಮುಪ್ಪಿನ ಕಾಲದಲ್ಲಿ ಮದುವೆಮಾಡಿಕೊಂಡ ಅವಹೇಳನವನ್ನು ತುಚ್ಛೀಕರಿಸಿ ಕಾಗದ ಬರೆಯುವಳು. ಜೂಗಲನು ತನ್ನ ಮುಂದುಗಾರಿಕೆಗೆ ತಂದೆಯಿಂದ ಹಣ ಸಿಗುತ್ತಿರುವುದರಿಂದ ಇನ್ನಾವ ವಿಷಯಕ್ಕೂ ತಲೆಗೊಡದ ಅರೆಮರುಳು. ಆರಂಭದಲ್ಲಿ ಈ ಮದುವೆಯು ಅವನನ್ನು ವ್ಯತ್ಯಾಸಗೊಳಿಸಲಿಲ್ಲ. ಆದರೆ ಮನೆಗೆ ಬಂದೊಡನೆಯೇ ನೀರೆಯನ್ನು ನೋಡುವನು. ತಾನು ಕಾಲೇಜಿನಲ್ಲಿರುವಾಗ ತನ್ನ ಮನವನ್ನಪಹರಿಸಿದ ಆ ನಲ್ಲೆಯೇ ಇದೀಗ ತನ್ನ ಚಿಕ್ಕಮ್ಮಳೆಂದು ಅವನಿಗೆ ತಿಳಿದು, ಅವಳನ್ನು ದುರಾಚಾರಕ್ಕೆ ಎಳೆಯಲು ಹಲವು ಬಗೆಯಿಂದ ಪ್ರಯತ್ನಿಸುವನು. ಆದರೆ ಕಷ್ಟದ ಬೇನೆಯಲ್ಲಿ ಬೇಯುತ್ತಿರುವ ನೀರೆಗೆ ಆಶಾತಂತುವೆಂದರೆ—ಚಿಕ್ಕ ಶಾಂತಳು ಮಾತ್ರ.

ಆದರೂ ನೀರೆಯು ಛಲವಾದಿ! ಕುಟುಂಬದ ಫೋಟೋ ತೆಗೆಯಲು ಸನ್ನಾಹಮಾಡಿದುದರಲ್ಲಿ ಭಾಗವಹಿಸಲು ನೀರೆಯು ಒಪ್ಪಲಿಲ್ಲ. ಇದರಿಂದ ಕಷ್ಟಪ್ರಸಂಗ ಒದಗುವುದೆಂದು ಅವಳಿಗೆ ತಿಳಿದಿದ್ದಿತು. ಆದರೆ ಆ ಗೊಡ್ಡು ಬೆದರಿಕೆಗೆ ಹೆದರಲಿಲ್ಲ. ಜೂಗಲನ ಅತ್ಯಾಚಾರದ ವರ್ತನೆಯನ್ನು ಖಂಡಿಸುವಳು.

ಕೇಶವಜೀಯು ಹಲವು ವಿಧದಲ್ಲಿ ನೀತಿ ಬೋಧಿಸಿ, ಇವಳನ್ನು ತನ್ನ ಪಾಲಿಗೆ ತರಬೇಕೆಂದು ಪ್ರಯತ್ನಿಸುವನು; ನಿಷ್ಫಲ! ಅವನ ಸಂಸಾರದಲ್ಲಿ ಭಾಗವಹಿಸುವ ನೀರೆಯಲ್ಲ, ಅತ್ತೆಯ ಪ್ರೇರಣೆಯಿಂದಲೂ, ತನ್ನ ಕೈಸಾಗದ ಆಶಾಭಗ್ನತೆಯಿಂದಲೂ ನೊಂದ ಕೇಶವಜೀಯೂ, ಜೂಗಲನೂ ನೀರೆಯನ್ನು ಇದೀಗ ಹಲವು ರೀತಿಯಲ್ಲಿ ಹಿಂಸಿಸುವರು. ಆದರೆ ಅವರೀರ್ವರೂ ತಾವು ಹಸಿದ ಕೇಸರಿಯನ್ನು ಕೆಣಕುತ್ತಿರುವೆವೆಂಬುದನ್ನು ತಿಳಿಯಲಾರದಾದರು.

ನೀರೆಯು ಧೈರ್ಯಗುಂದಲಿಲ್ಲ; ಶಕ್ತಿಮೀರಿ ಸಂಧಿಸುವಳು—ಅವರ ಉಪಟಳವನ್ನು! ಜೂಗಲನು ತನುಮನದಲ್ಲಿ ಪೆಟ್ಟುತಿಂದವನಾಗಿ ಹಿಂಜರಿಯುವನು. ಕೇಶವಜೀಯೊಬ್ಬನೇ ರಣಭೇರಿಯನ್ನು ಹೊಡೆಯುತ್ತಿರುವನು. ಆದರೆ ಕ್ರಮಶಃ ನೀರೆಯಿಂದ ಹೊರಹೊಮ್ಮುತ್ತಿರುವ ಅದೊಂದು ಉಜ್ವಲ ಪವಿತ್ರ ಜ್ವಾಲೆಯು ಅವನ ಪಾಪಪೂರಿತ ಮನಸ್ಸಾಕ್ಷಿಯನ್ನು ಸುಡಲಾರಂಭಿಸಿತು; ಅವನ ಮನಸ್ಸು ಬದಲಾವಣೆಯಾಗುವುದು; ತಾನು ಅದೆಂತಹ ಘೋರ ಪಾಪವನ್ನು ಮಾಡುತ್ತಿರುವನೆಂಬ ಅರಿವು ಅವನಲ್ಲಿ ಉಂಟಾಗುವುದು. ಈ ನಿರಪರಾಧಿ ಯುವತಿಗೆ ಮುದುಕನಾದ ತಾನು ಮಾಡುತ್ತಿರುವ ಅಪರಾಧಕ್ಕಾಗಿ ಪ್ರಾಯಶ್ಚಿತ್ತವೇನೆಂಬುದನ್ನು ಅವನು ಆಲೋಚಿಸಹತ್ತುವನು. ತಾನು 'ಗಂಡ'ನೆಂಬ ಭಾವನೆಯು ಅವನಲ್ಲಿ ಮಾಯವಾಗುವುದು, ಅದರ ಅಭಿಪ್ರಾಯಕ್ಕೆ ಸರಿಯಾಗಿ 'ತಂದೆ--ಮಗಳ' ಭಾವನೆಯು ಅವನಲ್ಲಿ ಹುಟ್ಟುವುದು.

ಆದರೆ ಸಮಾಜದ ದೃಷ್ಟಿಯಲ್ಲಿಯೂ ಇಂತಹ ಪರಿವರ್ತನೆ ಉಂಟಾಗುವುದೇ? . . . . ನೋಡಿರಿ! ರಜತಪರದೆಯಲ್ಲಿ!!

SYNOPSIS

A greedy Uncle assumes the guardianship of Neera now an orphan girl, and marries his ward to a prominent but aging local lawyer, who is a widower old enough to have been Neeras father-or even grandfather Neera, by nature, is a spirited girl, and is tricked into the marriage, for which her revolt is instant, natural and unshakable From the education she has received from her parents, she discerns that her legal position as Keshavaji wife is inevitable, but the marital relation-ship with the aged husband, she declines to acknowledge, so that, living in Kesha vaji's household, she maintains her honour, and verginity inviolate.

Besides Keshevaji's and his new wife, his househ-old includes a widowed aunt, bie widowed daughter Susbila, his son Jugal, and a young neice Shanta. As for the aunt, she is a veritable Mephistopheles in female form, whose role of a mother-in-law Neera refuses to recognise. Sushila, whose life she has dedicated fot social service, writed to her father condemning his marriage Jugol, ineresed only in drawing unlimited amounts from his father for pilaudering, is indifferent in the begining. Having come home, he recognises in Nura an old school mate, on whom he might have tried to be 'sweat' Her posititon as step mother means nothing to him, and pursues her with his immoral advances.

Little Shanta is the only soul which affords Neera as an oasis of sympathy in the veritable desert she finds herself in.

Nevertheless, Neera is stubborn. She refuses to join in the family group photo, even knowing fully well that this would result in tumult Her reply to Jugal's advances is a straight forward rebuff.

Keshavaji's attempt at persuasion is of no avail. Baffled by a sense of his own impotence and egged on in turn by the vengeful aunt, Keshavagi begins a campaign of systematic persecution of his wife Jugal brings about a crisis by trying to clinch proposal. Little do they deram that they are play ng with fire.

Neera bravely fights for her honour, when Jugal retreats beaten both physically and in spirit. Alone, Keshavaji faces his bride But the flame of virtuous indignation shooting out from her, manages to touch his smoteered conscience. He emerges from the ordeal soul awakened, his spirit transformed. He wants to atone for his sin, redeem the wrong he has done to this innocent girl. He renounces his position as husband and they are father and child.

But for all his sincerity, will the world recognies the newposition

DO SEE ON THE SCREEN

Coming: Sagar's **'Silver King'**; Ranjits' **'Toofanmail'**; 20th Foxs' **'Tarzan's Revenge'**, Bombay Talkies' **'Achut Kanya' etc.**

ಮುಂದಿನ ಚಿತ್ರ: ಸಾಗರ ಮೂವಿಟೋನಿನವರ 'ಸಿಲ್ವರ್ ಕಿಂಗ್', ರಣಜಿತ್‌ನವರ 'ತೂಫನ್‌ಮೈಲ್' ಫೋಕ್ಸ್‌ನವರ 'ಟಾರ್ಜನ್ಸ್ ರಿವೆಂಜ್', ಬಾಂಬೇ ಟಾಕೀಸಿನವರ 'ಅಚ್ಯುತ ಕನ್ಯಾ' ಇತ್ಯಾದಿ.

Every visit is a new delight at Sri Ramakrishna Theatre.

ವಾರದ ಭವಿಷ್ಯ

ಮುಂದಾಗುವುದನ್ನು ಇಂದೇ ತಿಳಿಯಿರಿ.

(ತಾ. 22-6-39ರಿಂದ ತಾ. 29-6-39ರ ವರೆಗೆ)

[ಜ್ಯೋತಿಷವು ಅಪ್ರತ್ಯಕ್ಷವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ. ಸಂ ನ.]

ಮೇಷರಾಶಿ—

ಸದಾ ಪರಿಭ್ರಮಣ ಶೀಲವು ನಿಮ್ಮ ಸ್ವಭಾವ ಜನ್ಯವಾಗಿರುವುದು. ಪರರ ಇಂಗಿತವನ್ನರಿತು ತದನುಕೂಲವಾಗಿ ವರ್ತಿಸುವುದರಲ್ಲೂ ನೀವು ಚತುರರಿರುವಿರಿ. ಆದಕಾರಣದಿಂದಲೇ ಮೇಲಧಿಕಾರಿಗಳ ಪ್ರಕೋಪವನ್ನು ಶಾಂತಗೊಳಿಸಿ ಪ್ರಸನ್ನರನ್ನಾಗಿ ಮಾಡಿಕೊಂಡಿರುವಿರಿ, ಈ ವಾರದಲ್ಲಿ ನಿಮಗೆ ಪ್ರವಾಸದಲ್ಲಿ ಹೆಚ್ಚಿನ ಹಾನಿಯಿರುವುದರಿಂದ ಸದ್ಯಕ್ಕೆ ಅವನ್ನು ಕೈಬಿಡುವುದೊಳ್ಳಿತು. ಸ್ವಕಾರ್ಯಗಳು ನಿಃಶಂಕೆವಾಗಿ ಮುಂದರಿಯುವವು. ಸಂಪದಭ್ಯಾಗವು ಉತ್ತಮ ಪರಿಸ್ಥಿತಿಗೆ ಬರುವುದು, ಆದರೂ ನಿಮ್ಮಲ್ಲಿ ಧನವು ಚಿರಕಾಲ ನಿಲ್ಲಲಾರದುದರಿಂದ ಅಚೆಯಿಂದ ಬಂದರೆ ಈಚೆಯಿಂದ ಖರ್ಚಾಗಿ ಹೋಗುವುದು. ಸ್ವದೇಹಕ್ಕೂ ಮನಸ್ಸಿಗೂ ಅನಾರೋಗ್ಯ ಚಿಂತೆಯೂ ತಪ್ಪಲಾರದು. ಅಂತೂ ಹಿಂದಿನ ದಿನಗಳಿಗಿಂತ ಬಹ್ವಂಶ ಸುಧಾರಣೆಯಾಗಿರುವುದು. ತಾ. 24ರಿಂದ 27ರ ವರೆಗಿನ ದಿನಗಳಲ್ಲಿ ಧನವಾಸಗಳ ಲಾಭವೂ ಕಿಂಚಿತ್ಸುಖವೂ ದೊರೆಯುವುದು.

ವೃಷಭರಾಶಿ—

ನಿಮ್ಮಲ್ಲಿ ಈಗೀಗ ಮನೋದೌರ್ಬಲ್ಯವೂ ಚಾಂಚಲ್ಯವೂ ಹೆಚ್ಚಿರುದು, ಕಷ್ಟಸಹಿಷ್ಣುತೆಯು ನಿಮ್ಮಲ್ಲಿ ಚೆನ್ನಾಗಿದ್ದರೂ ಸದ್ಯದ ಗ್ರಹಸ್ಥಿತಿಯಿಂದ ದೇಹಪೀಡೆಯೇ ಮೊದಲಾದ ಅನೇಕ ದುಃಖ ಪರಂಪರೆಗಳು ಮೇಲಿಂದ ಮೇಲಕ್ಕೆ ಬಂದು ಬಹಳ ಕಂಗಾಲಾಗುವಿರಿ. ನಿಮ್ಮ ಯೋಗ್ಯತಾನುಸಾರವಾಗಿ ಸಂಪಾದನೆಯಿದ್ದರೂ ಖರ್ಚು ವಿಪರೀತವಾಗುವುದರಿಂದ ಆರ್ಥಿಕ ಬಿಕ್ಕಟ್ಟಿಗೆ ಸಿಲುಕುವ ಸಂಭವವಿದೆ. ಪರಾಪೇಕ್ಷೆಯಿಲ್ಲದೆ ಸ್ವಯಂ ನೀವು ಯಾವ ಕಾರ್ಯವನ್ನು ಮಾಡಲೂ ಶಕ್ತರಾಗಲಾರಿರಿ. ನಿಮ್ಮ ದುಃಶ್ಚಾರಿತ್ರ್ಯ ಪ್ರಕಟವಾಗಿ ರಾಜಭಯಕ್ಕೂ ಶತ್ರುಗಳ ಬೆದರಿಕೆಗೂ ಒಳಗಾಗುವಿರಿ. ಸರ್ವೋಪಕರಣಗಳಿಂದ ಯುಕ್ತವಾದ ಕುಟುಂಬ ಸುಖವು ದೊರೆವುದು. ಸನಾತನೀ ಜನವೃಂದಕ್ಕೂ ವೈಶ್ಯ ವೇಶ್ಯಾ ನಟಗಾಯಕರಿಗೂ ಈ ವಾರವು ಹೆಚ್ಚಿನ ಹಾನಿಕಾರಿಯಾಗಿ ಪರಿಣಮಿಸದು. ವಾರಾದಿಯ ನಾಲ್ಕು ದಿನಗಳಲ್ಲಿ ಮಿತ್ರ ಕಲಹ ಕಾರ್ಯ ಹಾನಿಗಳಿಂದಾಗಿ ಮನೋರೋಗವು ಅಧಿಕವಾಗುವುದು.

ಮಿಥುನರಾಶಿ—

ನಿಮಗೀವಾರವು ಇಷ್ಟಾನಿಷ್ಟಗಳ ಸಮ್ಮಿಶ್ರಣದಿಂದ ಕೂಡಿರುವುದಾದಕಾರಣ ಹಿಂದಿನ ಪರಿಸ್ಥಿತಿಗಿಂತ ಸ್ವಲ್ಪ ಉತ್ತಮವಾಗಿಯೇ ಪರಿಣಮಿಸುವದೆಂದು ಹೇಳಬಹುದು. ಅನುದಿನದ ಖರ್ಚಿಗೆ ಬೇಕಾದಷ್ಟು ದ್ರವ್ಯವನ್ನು ನೀವು ಅನಾಯಾಸದಿಂದ ಸಂಪಾದಿಸುವಿರಿ. ಯಾರ ಹಂಗು ದಾಕ್ಷಿಣ್ಯಗಳಿಗೆ ಬಲಿಬೀಳದೆ ಸ್ವಕಾರ್ಯವನ್ನು ಸಾಧಿಸುವಿರಿ. "ಪ್ರಾಣಂ ವಾಪಿ ಪರಿತ್ಯಜ್ಯ ಮಾನಮೇವಾಭಿರಕ್ಷತು ಎಂಬ ನ್ಯಾಯದಂತೆ ಪ್ರಾಣಕ್ಕಿಂತಲೂ ಅಧಿಕವಾದ ಮಾನವನ್ನು ಕಾಯ್ದುಕೊಂಡು ಬರುವುದು ನಿಮ್ಮ ಕರ್ತವ್ಯವಾದರೂ ಈ ವಾರದಲ್ಲಿ ನಿಮಗೆ ಶತ್ರು ಜನರ ದೆಸೆಯಿಂದ ಮಾನವನ್ನುಳಿಸಿಕೊಳ್ಳುವುದು ಬಹಳ ಕಷ್ಟಕ್ಕೆ ಬರುವುದು. ರಾಜಕೀಯ ಭಾಗದಲ್ಲಿ ಫಲಿತಾಂಶವು ಉತ್ತಮವಾಗಲಾರದು. ವಿದ್ಯಾಭಿಲಾಷಿಗಳಿಗೆ ಕಾಲವು ಅನುಕೂಲವಾಗಿರುವುದು. ತಾ. 22-23 ಮತ್ತು 29 ದಿನಗಳಲ್ಲಿ ಇಷ್ಟ ಕಾರ್ಯಸಿದ್ಧಿ, ಸ್ತ್ರೀಸುಖ, ಶತ್ರುಜಯ ಧನಲಾಭಗಳಾಗುವವು.

ಕರ್ಕಾಟಕರಾಶಿ—

ಕುಲಧರ್ಮಗಳಲ್ಲಿ ಅನುರಕ್ತರಾಗಿ ಸದಾಚಾರ ಸಂಪನ್ನರಾಗಿರತಕ್ಕವರಿಗೆ ಈ ವಾರವು ಹೆಚ್ಚಿನ ಅನಿಷ್ಟಕಾರಿಯಾಗದು. ನಿಮ್ಮ ಸಂಪದ್ವಿಚಾರವು ಚಂದ್ರನಂತಿರುವುದು, ಕೆಲವೊಮ್ಮೆ ಹುಣ್ಣಿಮೆಯ ಚಂದ್ರನಂತೆ ವಿಶೇಷ ಧನಗಳಿಂದ ಯುಕ್ತವಾಗಿದ್ದು ಧನವಂತರೆಂದೆನ್ನಿಸಿಕೊಳ್ಳುವಿರಿ. ಇನ್ನು ಕೆಲವೇಳೆ ದರ್ಶದ ಚಂದ್ರನಂತೆ ಕೈಯಲ್ಲಿ ಕಾಸೊಂದೂ ಇಲ್ಲದೆ ಹಣಕ್ಕಾಗಿ ಬಹಳ ಪರಿತಪಿಸುವಿರಿ. ಆದರೆ ಈ ವಾರದಲ್ಲಿ ನಿಮಗೆ ಮಿತ್ರ ಜನರ ಸಹಕಾರದಿಂದಲೂ ಸ್ವಪ್ರಯತ್ನ ಸಾಹಸದಿಂದಲೂ ಧನಕ್ಕೇನೂ ಕಡಿಮೆಯಾಗದು ಕೆಲವೊಂದು ಭಾಗಗಳಲ್ಲಿ ನಿಮ್ಮ ವರ್ತನೆಯು ನಿಮ್ಮ ಮನೆಯವರಿಗೇ ಸರಿದೋರದಿರುವುದರಿಂದ ಪರಸ್ಪರ ವೈಮನಸ್ಸು ಉಂಟಾಗುವುದು. ಜನತೆಯಲ್ಲಿ ಆಗಾಗ ಕಲಹವಾಗಿ ಅವರ ತಿರಸ್ಕಾರಕ್ಕೆ ಪಾತ್ರರಾಗುವಿರಿ ಸುಖಿಗಾರಿಗಳಿಗೆ ಹೆಚ್ಚಿನ ಕೆಡುಕಾಗದು. ತಾ. 24-25 ಈ ದಿನಗಳು ಎಲ್ಲಾ ವಿಚಾರಗಳಲ್ಲೂ ಉತ್ತಮವಿವೆ.

ಸಿಂಹರಾಶಿ—

ಕ್ಷತ್ರಿಯ ಗ್ರಹರಾದ ರವಿಕುಜರೂ ಮತ್ತು ರಾಹುವೂ ನಿಮ್ಮ ಭಾಗಕ್ಕೆ ಅನುಕೂಲರಾಗಿರುವರು. ಆದಕಾರಣ ಕೋರ್ಟು ಕಛೇರಿ ಸಂಬಂಧವಾದ ಕಾರ್ಯಗಳಲ್ಲೂ, ಪರಾಕ್ರಮದಿಂದ ಸಾಧ್ಯವಾಗತಕ್ಕ ಕೆಲಸಗಳಲ್ಲೂ ನಿಮಗೆ ವಿಜಯಪ್ರಾಪ್ತಿಯಿದೆ. ದೇಹಾರೋಗ್ಯವೂ ಕೂಡ ಉತ್ತಮ ರೀತಿಯಲ್ಲಿರುವುದು, ಖರ್ಚಿಗೆ ಬೇಕಾದಷ್ಟು ದುಡಿಯಲು ನೀವು ಶಕ್ತರಿರುವುದರಿಂದ ಆರ್ಥಿಕ ಅಡಚಣೆಯುಂಟಾಗದು. ಕಾರ್ಯಾಕಾರ್ಯ ವಿಚಾರವಾಡದೆ ಕೋಪಗೊಳ್ಳುವುದು ನಿಮ್ಮ ಸಹಜ ಗುಣವಾಗಿದೆ. ಅಂತಹ ಸಾಮಾನ್ಯ ಮುಂಗೋಪಿಗಳೆಂದೂ ಹೇಳಬಹುದು. ಇದರಿಂದಾಗಿ ನೀವು ನಾನಾಮಾತಿಗೆ ಜಗಳಾಡುವಿರಿ. ಪ್ರವಾಸ ವಿಚಾರದಲ್ಲಿ ಈ ವಾರವು ಬಹಳ ಹಾನಿಕಾರಕವಾಗಿದೆ ಶತ್ರುಪೀಡೆಯು ಬಹ್ವಂಶ ಕಡಿಮೆಯಾದರೂ ಕೂಡ ಕೆಲವು ಕಾರ್ಯಗಳಲ್ಲಿ ಇವರಿಂದ ಪರಾಭವವೊದಗಿ ಅರ್ಥನಾಶಕ್ಕೆ ಪಾತ್ರರಾಗುವಿರಿ, ತಾ. 24-252-8-29 ಈದಿನಗಳಲ್ಲಿ ಧನನಾಶ, ಕಾರ್ಯವಿಘ್ನ ಕಲಹಗಳುಹೆಚ್ಚುವವು.

ಕನ್ಯಾರಾಶಿ—

"ಯೇನ ಕೇನಾಪ್ಯುಪಾಯೇನ ಪ್ರಸಿದ್ಧಪುರುಷೋ ಭವ" ಯಾವ ವಿಧದಿಂದಲಾದರೂ ಕೀರ್ತಿಶಾಲಿಯಾಗು, ನಾಲ್ಕು ಜನರು ನನ್ನ ಹೆಸರೆತ್ತಲಿ ಎಂದು ಆರ್ಯರ ಉಕ್ತಿ ಇರುವುದಷ್ಟೆ. ಇದಕ್ಕನುಕೂಲವಾಗಿ ತತ್ಕಾಲದ ಗ್ರಹಸ್ಥಿತಿಯೂ ಇರುವುದು ಉದಾಸೀನದಿಂದ ಆಲಸರಂತೆ ಕಾಲಹರಣ ಮಾಡುವ ಕಾಲವಿದಲ್ಲ. ಸಿಕ್ಕಿದಾಗ ಮುಕ್ಕಿದ್ದೇ ಬಂತೆಂಬಂತೆ ಶಕ್ತಿಯಿದ್ದಾಗ ಸಾಧಿಸಿದ್ದೇ ಬಂತು ನಿಮ್ಮ ಕರ್ತವ್ಯಶಕ್ತಿಗೂ ಮನೋವೈಶಾಲ್ಯಕ್ಕೂ ಜನತೆಯು ಮೆಚ್ಚಿರುವುದು, ಸಕಲ ವಿಧದಲ್ಲೂ ನಿಮಗೆ ಜನಸಹಾಯವು ಸಿಗುವದು. ಆದಾಯದಲ್ಲಿ ಕೆಲವಂಶವನ್ನು ಸತ್ಕ್ರಿಯಾಸಲುವಾಗಿ ವ್ಯಯಿಸುವಿರಿ. ಆಗಾಗ ಶರೀರದಲ್ಲಿ ಆಲಸ್ಯ ತೋರೀತು. ಮತ್ತು ಸ್ತ್ರೀಪುತ್ರರ ವಿಯೋಗದಿಂದ ಖೇದ ಉಂಟಾಗಲಿದೆ, ಈ ವಿಭಾಗದಲ್ಲಿ ಸ್ವಲ್ಪ ಹೆಚ್ಚಿನ ಜಾಗ್ರತೆಯಿಂದಿರಿ. ತಾ. 22 23-26-27 ಈ ದಿನಗಳಲ್ಲಿ ಆರೋಗ್ಯ ಮತ್ತು ಧನ-ವ್ಯಾಪಗಳಲ್ಲಿ ಜಾಗರೂಕರಾಗಿರಿ.

ತುಲಾರಾಶಿ—

ಆತ್ಮೀಯರು ಎಂಬ ಭಾವನೆಯು ನಿಮಗೆ ತಂಬಾ ಇರುವುದು, ಅವಶ್ಯಕತಾನುಸಾರವಾಗಿ ಬಂಧುಗಳಿಗೂ ಬಳಗದವರಿಗೂ ನೀವು ಉಪಕಾರಗಳನ್ನು ಮಾಡುವುದು ಹೆಚ್ಚಿಗೆ. ಇವರಿಂದ ಅಲ್ಲಸಲ್ಲದ ಮಾತುಗಳನ್ನು ಕೇಳುವುದು ಮತ್ತೂ ಹೆಚ್ಚಿಗೆ. ಇದಕ್ಕಲ್ಲವೇ ನಿಮ್ಮ ಮರ್ಮವನ್ನರಿಯಬೇಕು. ಈ ವಾರದಲ್ಲಿ ನಿಮಗೆ ಹೆಚ್ಚಿನ ಅಭಿರುಚಿಯುಳ್ಳ ವ್ಯಾಪಾರದಲ್ಲಿ ಸಾಕಷ್ಟು ಧನಹೋದೀತು. ಉಂಡಮನೆಗೊಂದು ತಿಂದಮನೆಗೊಂದು ರೀತಿಯಲ್ಲಿ ವರ್ತಿಸುವ ಮಿತ್ರರಂತಿರತಕ್ಕ ಶತ್ರುಗಳಿಂದ ಹೆಜ್ಜೆ ಹೆಜ್ಜೆಗೂ ಹಾನಿತಪ್ಪದು. ಮಾತ್ರವಲ್ಲ ದೀರ್ಘವಾದ ಮನೋವ್ಯಾಧಿಗೆ ನಿಮ್ಮನ್ನು ಗುರಿಮಾಡಲಿರುವರು. ತಾ. 24-25-28-29 ಈ ದಿನಗಳಲ್ಲಿ ಎಷ್ಟು ಜಾಗರೂಕರಾಗಿ ನಡೆದರೂ ಅಷ್ಟು ಹಿತಕರವು.

ವೃಶ್ಚಿಕರಾಶಿ—

ಕಳೆದ ವಾರಕ್ಕಿಂತ ನಿಮ್ಮ ಅದೃಷ್ಟವು ಈ ವಾರದಲ್ಲಿ ಕೀಳ್ತರಗತಿಗೆ ಬಂದಿರುವುದು. ಆದಕಾರಣ ಎಲ್ಲಾ ಭಾಗದಲ್ಲೂ ಸ್ವಲ್ಪ ವಿಚಾರಮಾಡಿ ಮುಂದರಿಯಬೇಕಾಗಿದೆ, ಶಿಷ್ಯಮಿತ್ರರ ಉಪಟಳವು ಸ್ವಲ್ಪ ಮಟ್ಟಿಗೆ ವೃದ್ಧಿಯನ್ನೈದುವುದು. ಮಾತ್ರವಲ್ಲ ನಿಮ್ಮ ಕೈಹಿಡಿದಾಕೆಯೂ ನಿಮಗೆ ಪ್ರತಿಕೂಲಳಾಗಿ ವರ್ತಿಸುವಳು. ಅಂತೂ ಗೃಹಕೃತ್ಯ ವಿಚಾರದ ಮಟ್ಟಿಗೆ ಮನಸ್ತೃಪ್ತಿಯಿಲ್ಲವು. ಆದರೆ ಉದ್ಯೋಗದಲ್ಲಿ ಪ್ರಗತಿ ಆದಾಯದಲ್ಲಿ ಉನ್ನತಿ ವ್ಯಯದಲ್ಲಿ ಮಿತಿ ಇವೆಲ್ಲವೂ ಇರುವವು. ಆರೋಗ್ಯದ ಮಟ್ಟಿಗೂ ಈ ವಾರವು ಉತ್ತಮವಾಗಿರುವುದು. ಆರ್ಥಿಕ ಸಂಪತ್ತಿನಿಂದ ಕೂಡಿದ ನಿಮಗೆ ದುಃಸ್ಸಾಧ್ಯವಾದ ಕಾರ್ಯವೊಂದೂ ಇರಲಾರದು. ತಾ. 26-27 ಈ ದಿನಗಳನ್ನು ಬಿಟ್ಟು ಉಳಿದ ದಿನಗಳು ಚೆನ್ನಾಗಿವೆ.

ಧನುರಾಶಿ—

ಬಧರುಹುಗಳನ್ನು ಹೊರತಾಗಿ ಮತ್ತಾವ ಗ್ರಹರೂ ನಿಮಗೆ ಅನುಕೂಲರಾಗಿಲ್ಲವು. ಆದಕಾರಣ ಸದ್ಯ ನೀವು ಎಷ್ಟೇ ಜಾಗರೂಕರಾಗಿ ವರ್ತಿಸಿದರೂ ಅಪಾಯಕ್ಕೆ ತುತ್ತಾಗದೆ ಇರಲಾರಿರಿ. ಯಾವ ಕಾರ್ಯದಲ್ಲೂ ಮುಂದಾಗಿ ಕೆಲಸಮಾಡಬೇಡಿರಿ. ರಾಜಭಯಕ್ಕೆ ಪಾತ್ರರಾಗಲಿರುವಿರಿ. ಅಧಿಕಾರೀ ಜನರ ದೃಷ್ಟಿಯು ನಿಮ್ಮ ಮೇಲೆ ಸದಾ ಇರುವುದು. ಪ್ರತಿಯೊಂದು ಕಾರ್ಯದಲ್ಲೂ ನಿಮಗೆ ಈ ವರೆಗೆ ಸಂಭವಿಸದ ಅಪೂರ್ವ ಘಟನೆಗಳು ಘಟಿಸುವವು. ಬಂಧುವರ್ಗದವರೂ ಕೂಡ ಶತ್ರುಜನರ ಪಕ್ಷವನ್ನು ವಹಿಸಿ ಕೆಲಸಮಾಡುವುದರಿಂದ ಹೆಜ್ಜೆ ಹೆಜ್ಜೆಗೂ ನಿಮಗೆ ಗಂಡಾಂತರಗಳು ಒದಗುವವು, ಪ್ರವಾಸಮಾಡಬೇಕಾದ ಪ್ರಸಕ್ತಿ ಬಂದರೂ ಮಾಡದಿರುವುದುತ್ತಮ. ಆರೋಗ್ಯವು ಕೆಡಲಿದೆ, ಆದಾಯವು ಅತ್ಯಲ್ಪವಾಗಿದ್ದು ಖರ್ಚುಗಳು ಸರ್ವತೋಮುಖದಿಂದ ಆಗುತ್ತಿಯವ ಕಾರಣ ಹಣದ ತಗಾದೆ ವಿಪರೀತವಾಗುವುದು. ಆದಕಾರಣ ನಿಮಗಿನ್ನಿಗಳಿಗೆ ತಾ. 24ರಿಂದ27ರ ವರೆಗೆ ಇಷ್ಟಗಳಲ್ಲದಿದ್ದರೂ ಅನಿಷ್ಟಗಳು ಕಡಿಮೆಯಾದಾವು.

ಮಕರರಾಶಿ—

ಈಗಿನ ಪರಿಸ್ಥಿತಿಯಲ್ಲಿ ಕಳೆದ ದಿನಗಳಷ್ಟೋ ಉತ್ತಮವಾಗಿ ಕಂಡುಬರಬಹುದು. ನಿಮ್ಮ ದುರದೃಷ್ಟವು ಬಲವತ್ತರವಾಗಿರುವುದರಿಂದ ಪ್ರಯತ್ನಕ್ಕೆ ತಕ್ಕ ಫಲವು ಎಂದಿಗೂ ದೊರೆಯುವಂತಿಲ್ಲ. ಮನಸ್ಸಿನ ಕಲ್ಪನೆಗಳು ಆಕಾಶದಲ್ಲಿ ಕಟ್ಟುವ ಅರಮನೆಗಳಂತೆ ಆಧಾರವಿಲ್ಲದವುಗಳಾಗುವವು. ಆದರೂ ನಿಮಗೆ ಸಂತೋಷದ ಸುದ್ದಿಯೆಂದರೆ ಬಂಧುಮಿತ್ರರ ಸಹಕಾರದಿಂದ ವಿರೋಧಿಗಳು ನಿಮ್ಮ ಸಮೀಪ ಬಾರಲಿಕ್ಕಿಲ್ಲರು. ಆರೋಗ್ಯವು ಮಧ್ಯಮರೀತಿಯಲ್ಲಿ ನಿಲ್ಲುತ್ತದು. ವ್ಯವಹಾರದಲ್ಲಿ ಜಾಗರೂಕರಾಗಿ ವರ್ತಿಸಿರಿ. ವೃಥಾ ಕಲಹದಿಂದ ವೈರವನ್ನು ಕಟ್ಟಿಕೊಳ್ಳುವ ಪ್ರಸಂಗಗಳು ಹಲವಾರು ಸಂಭವಿಸುವವು. ಎಲ್ಲದಕ್ಕೂ ಮುಂಚಿತವಾಗಿ ನೀವು ಮನೋನಿಗ್ರಹವನ್ನು ಮಾಡಿರಿ. ವಾರಾದಿಯ ನಾಲ್ಕು ದಿನಗಳನ್ನು ಬಹಳ ಕಷ್ಟದಿಂದ ಕಳೆಯಬೇಕಾಗುವುದು.

ಕುಂಭರಾಶಿ—

"ಪ್ರಯತ್ನ ಮೇಕವಾಗ್ರತೋ ನಿಧಾಯ ಭೂತಿಮಾಪ್ನುಹಿ" ಕಷ್ಟಪಡದೆ ಇಷ್ಟವೆಂದಿಗೂ ದೊರೆಯಲಾರದು, ಆದ ಕಾರಣ ಕಾರ್ಯದಲ್ಲಿ ಕೈಹಾಕಿ ಪ್ರಯತ್ನವನ್ನು ಮುಂದರಿಸಿದರೆ ನಿಶ್ಚಯವಾಗಿಯೂ ಸಂಪತ್ತನ್ನೂ ಮನೋರಥವನ್ನೂ ಹೊಂದುವಿರಿ ತತ್ಕಾಲದಲ್ಲಿ ನಿಮಗೆ ದೈಹಿಕ ಶಕ್ತಿಯು ಬಹಳ ಕಡಿಮೆಯಾಗಿ ಕಂಡುಬರುತ್ತದೆ. ಆದರೂ ಜನಬಲವು ನಿಮಗೆ ತುಂಬಾ ಇರುವುದರಿಂದ ಅದಾವ ಮಹತ್ತರವಾದ ಕಾರ್ಯವಾದರೂ ನಿಮಗೆ ತೃಣಪ್ರಾಯವೇ ಸರಿ ನೌಕರಿಗಳಿಗೂ ವ್ಯಾಪಾರಿಗಳಿಗೂ ಉತ್ತಮವಾದ ಫಲಪ್ರಾಪ್ತಿ ಇದೆ. ನಿಮಗೀವಾರದಲ್ಲಿ ಕಷ್ಟ ದುಃಖವೆಂಬುದರ ಅರಿವುಂಟಾಗದು. ನಿಮ್ಮ ಹಣದಲ್ಲಿ ಹೆಚ್ಚಿನಂಶವನ್ನು ಅಪವ್ಯಯದಲ್ಲೇ ವ್ಯಯಿಸುವಿರೆಂದು ಹೇಳಬೇಕಾಗಿದೆ. ಹೊಟ್ಟೆನೋವು ಕಣ್ಣುನೋವು ಇತ್ಯಾದಿಗಳು ಆಗಾಗ ಪೀಡಿಸುವವು. ತಾ. 22, 23. 28, 29 ಸರ್ವಾನುಕೂಲತೆಗಳಿಂದ ಕೂಡಿವೆ.

ಮೀನರಾಶಿ—

ಇತ್ತೀಚೆಗೆ ನಿಮ್ಮ ಕುಟುಂಬದಲ್ಲಿ ಮನಸ್ತಾಪಗಳು ಹುಟ್ಟಲಾರಂಭಿಸಿವೆ. ಪರಸ್ಪರ ಪುತ್ರಕಳತ್ರರಲ್ಲೂ ಕಲಹವಾಗುವುದು. ನಮ್ಮವರೇ ನಮಗಿಲ್ಲದ ಈ ಕಾಲದಲ್ಲಿ ಪರಕೀಯರ ಬೆಂಬಲ ಸಿಗುವುದು ಕಷ್ಟಸಾಧ್ಯ. ಆದಕಾರಣ ಯಾವ ಕಾರ್ಯಕ್ಕೂ ಮುಂದಾಗಿ ಹೋಗುತ್ತಿದಕ್ಕೆ ನೀವು ಭಯಪಡುವಿರಿ. ಆದರೆ ನಿಮ್ಮ ಪ್ರಯತ್ನವು ಅದೆಂದಿಗೂ ನಿಷ್ಫಲವಾಗಲಾರದು, ಜಲದಲ್ಲಿ ಉದ್ಭವಿಸತಕ್ಕ ಉಪ್ಪು ಮುತ್ತು ಇತ್ಯಾದಿಗಳ ವ್ಯಾಪಾರದಲ್ಲಿ ಒಳ್ಳೇ ಲಾಭವನ್ನು ಹೊಂದುವಿರಿ. ಸಿಕ್ಕಿದ ಧನವು ಕ್ಷಣಕಾಲ ನಿಮ್ಮಲ್ಲಿ ಸ್ಥಿರವಾಗಿ ನಿಲ್ಲಲಾರದು. ಆರೋಗ್ಯವೂ ಕೂಡ ನಿಮಗೆ ಉತ್ತಮವಾಗಿರುವದೆಂದು ಹೇಳಲಾಗದು. ತಾ. 22ರಿಂದ 25ರ ವರೆಗಿನ ದಿನಗಳು ಅನುಕೂಲಗಳಾಗಿರುವುದರಿಂದ ಸುಖ ಧನಲಾಭ, ವಾಹನಾದಿಗಳಲ್ಲಿನ ಯಾನ ಸ್ತ್ರೀಸುಖಗಳು ಲಭಿಸಲಿವೆ.

ಚೈತನ್ಯ ಮತ್ತು
ಹೊಸ ಹುರುಪು

ಸವೆದುಹೋದ ನರಗಳಿಗೆ ಚೈತನ್ಯಕೊಡಲು ರಕ್ತವನ್ನು ವೃದ್ಧಿಮಾಡಲು ಮತ್ತು ನಿಮಗೆ ತೇಜಸ್ಸನ್ನುಂಟುಮಾಡಲು ಪಂಡಿತ ಡಿ. ಗೋಪಾಲಾಚಾರ್ಲುರವರ ಜೀವಾಮೃತಂ ಅದ್ವಿತೀಯವಾದದ್ದಾಗಿದೆ. "ಜೀವಾಮೃತ"ವು ಆಶ್ಚರ್ಯರೀತಿಯಲ್ಲಿ ನಿಮ್ಮ ಎಲ್ಲಾ ನರಗಳಿಗೂ ಹೊಸ ಚೈತನ್ಯವನ್ನು ಕೊಟ್ಟು, ನೀವು ಸಂತೋಷವನ್ನು ಅನುಭವಿಸಲು ಸಹಕಾರಿಯಾಗಿದೆ.

ಜೀವಾಮೃತ

ತಯಾರಿಸುವವರು:—
ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೨೧೭, ಮದ್ರಾಸು
ಸ್ಟಾಕಿಸ್ಟರು:—
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಜೂನ್ 19

ಮೈಸೂರು ನ್ಯಾಯವಿಧಾಯಕ ಸಭೆ. ಮೊದಲನೆ ದಿನದ ಕಾರ್ಯಕಲಾಪಗಳು ದಿವಾನ್ ಅಧ್ಯಕ್ಷ ಭಾಷಣ

ಕ್ಯಾಂಪ್ ಬೆಂಗಳೂರು, 19ನೇ ಸೋಮವಾರ. ಮೈಸೂರು ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನವು ಅದರ ಅಧ್ಯಕ್ಷರಾದ ದಿವಾನ್ ಸರ್. ಮಿರ್ಜಾ ಯಂ. ಇಸ್ಮಾಯಿಲ್‌ರವರ ಅಧ್ಯಕ್ಷತೆಯಲ್ಲಿ ನೂತನ ಅಸೆಂಬ್ಲಿ ಭವನದಲ್ಲಿ ಈ ದಿನ 12 ಘಂಟೆಗೆ ಪ್ರಾರಂಭವಾಯಿತು.

ಅಧ್ಯಕ್ಷರು ತಮ್ಮ ಅಧ್ಯಕ್ಷ ಭಾಷಣವನ್ನೋದಿದರು. ಈ ಭಾಷಣದಲ್ಲಿ ಅನೇಕ ವಿಚಾರ ವಿಷಯಗಳಡಗಿವೆ. ಕೆಳಗಿನ ಸಭೆ (ಪ್ರಜಾಪ್ರತಿನಿಧಿ ಸಭೆ)ಯಲ್ಲಿ ಚರ್ಚಿಸಲ್ಪಟ್ಟ ವಿಷಯಗಳ ಮೇಲೆ ಕೆಲವು ವಿಷಯವನ್ನು ಅವರ ಭಾಷಣದಲ್ಲಿ ತಿಳಿಸಲಾಗಿದೆ. ಮೈಸೂರು ಸಂಸ್ಥಾನದ ಎಲ್ಲಾ ಇಲಾಖೆಗಳೂ ಯಾವ ರೀತಿಯಲ್ಲಿ ಹಣವನ್ನು ಖರ್ಚಿಸಲಾಗುತ್ತದೆಂದು ತಿಳಿಸಿದರು. ಅಧ್ಯಕ್ಷಭಾಷಣವನ್ನು ಸುಮಾರು ಒಂದು ಮುಕ್ಕಾಲು ಘಂಟೆಗಳ ಕಾಲ ಗಂಭೀರ ಧ್ವನಿಯಲ್ಲಿ ಓದಿದರು.

ಸಭೆಯಲ್ಲಿ ಅಷ್ಟು ಲವಲವಿಕೆಯಿರಲಿಲ್ಲ. ಕಾಂಗ್ರೆಸ್ ನಿರ್ಣಯದ ಪ್ರಕಾರ ಅನೇಕರು ತಮ್ಮ ಸ್ಥಾನಗಳಿಗೆ ರಾಜೀನಾಮೆಯಿತ್ತಿದ್ದರು. ಅವರೂ ಕೆಲವು ಸ್ಥಾನಗಳಿಗೆ ಉಪಚುನಾವಣೆ ನಡೆದಿದ್ದುದರಿಂದ ಕೆಲವರು ಆಗಮಿಸಿದ್ದರು. ಅಧ್ಯಕ್ಷ ಭಾಷಣವಾದ ಮೇಲೆ ಸರ್ಕಾರದವರೂ ಅಧ್ಯಕ್ಷರನ್ನೂ ಅಭಿನಂದಿಸಿ ಕೆಲವು ಸದಸ್ಯರು ಭಾಷಣ ಮಾಡಿದರು. ತರುವಾಯ 11 ಮಂದಿ ನೂತನ ಸದಸ್ಯರುಗಳು ಎದ್ದು ನಿಂತು ಪ್ರಮಾಣ ವಚನ ಮಾಡಿದ ಮೇಲೆ ಸ್ವಲ್ಪ ಹೊತ್ತು ಅನೇಕ ಮಸೂದೆಗಳ ಮೇಲೆ ಚರ್ಚೆ ನಡೆಸಿದರು. ಇಷ್ಟು ಹೊತ್ತಿಗೆ ಸಭೆಯು ಫಲಾಹಾರಕ್ಕೆ ಎದ್ದಿತು.

ಫಲಾಹಾರವಾದ ನಂತರ ಪುನಃ ಮಸೂದೆಗಳ ಮೇಲೆ ಅನೇಕ ಸದಸ್ಯರುಗಳು ಚರ್ಚೆ ನಡೆಸಿ ಕೆಲಸವನ್ನು ಅನುಮೋದಿಸಿದ ಮೇಲೆ ಸಭೆಯು ನಾಳೆಗೆ ಮುಂದುವರಿಯಿತು.

ಸಭೆಯು ನಾಳೆಯಿಂದ 5 ದಿನಗಳು ನಡೆಯುವುದು. ಕೆಲವು ಅನೇಕ ನಿರ್ಣಯ ಮತ್ತು ಮಸೂದೆ ಮೇಲೆ ಚರ್ಚೆ ನಡೆಸಲಾಗುತ್ತೆ. ಮೂರು, ನಾಲ್ಕು ಐದು ಮತ್ತು ಆರನೇ ದಿನಗಳಲ್ಲಿ ಗ್ರ್ಯಾಂಟ್ ಮತ್ತು ಕಟ್ ಮೋಷನ್ ಪರಿಶೀಲನೆ ನಡೆಯುತ್ತೆ. ನಾಳೆಯ ದಿನ ಬಡ್ಜೆಟಿನ ಮೇಲೆ ಚರ್ಚೆ.

ಸಭೆಯಲ್ಲಿ ಚರ್ಚಿಸುವ ಸಲುವಾಗಿ 79 ಪ್ರಶ್ನೆಗಳೂ, 24 ನಿರ್ಣಯಗಳೂ 17 ಮಸೂದೆಗಳೂ ಬಂದಿವೆ. ವಯಸ್ಕರ ಅನಕ್ಷರತೆಯನ್ನು ನಿರ್ಮೂಲ ಮಾಡುವುದಕ್ಕೆ ಒಡನೆಯೇ ತಕ್ಕ ಕಾರ್ಯಕ್ರಮ ನಡೆಸಬೇಕೆಂದೂ ರೈತರ ಸ್ಥಿತಿಯ ಬಗ್ಗೆ ಒಂದು ಅಧಿಕೃತ ಸರ್ವೆ ನಡೆಸಬೇಕೆಂದೂ ನ್ಯಾಯವಿಧಾಯಕ ಮತ್ತು ಪ್ರಜಾಪ್ರತಿನಿಧಿ ಸಭೆಯ ಅವಧಿಯನ್ನು ಮೂರರಿಂದ ಐದು ವರ್ಷ ಹೆಚ್ಚಿಸಬೇಕೆಂದೂ, ಸಂಸ್ಥಾನದಲ್ಲಿ ಎಲ್ಲಿ ಮಳೆ ಕಮ್ಮಿ ಬಂದು ರೈತರಿಗೆ ತೊಂದರೆ ಆಗಿದೆಯೋ ಅಲ್ಲಿ ಕಂದಾಯ ರಿಯಾಯಿತಿ ಕೊಡಬೇಕೆಂದೂ ಮತ್ತು ಮಿಡ್ಲಿಸ್ಕೂಲ್‌ನಲ್ಲಿ ಕಟ್ಟಿದ ಅತ್ಯಧಿಕ ಸಂಬಳ ಮಾಡಬೇಕೆಂದೂ ಅನೇಕ ಸದಸ್ಯರುಗಳು ಕಳುಹಿಸಿದ ಮಸೂದೆಗಳಲ್ಲಿ ಇವು ಮುಖ್ಯವಾದುವು.

ನಿರ್ಣಯಗಳಲ್ಲಿ ಸಾಧ್ಯವಾದಷ್ಟು ಕಮ್ಮಿ ಸಂಬಳ ತೆಗೆಯುವ ಅಧಿಕಾರಿಗಳನ್ನು ವರ್ಗಾಯಿಸಕೂಡದೆಂದೂ, ಕಾಫಿ, ಏಲಕ್ಕಿ ಮತ್ತು ಅಡಿಕೆ ವ್ಯವಸಾಯ ತೋಟದ ಸರ್ವೆ ನಡೆಸಿ ಅವುಗಳಿಗೆ ಹೆಚ್ಚು ಪ್ರೋತ್ಸಾಹಕೊಡಬೇಕೆಂದೂ ಇವೇ ಮುಖ್ಯ ವಾದವುಗಳು.

ಘನವಾದ ಸಂಗೀತ ಕಛೇರಿ ಮೈಸೂರು

ರಾಜಧಾನಿಯ ಜಗನ್ಮೋಹನ ಅರಮನೆಯಲ್ಲಿ ನಡೆಯುತ್ತಿರುವ ಅರಸರ ವರ್ಧಂತ್ಯುತ್ಸವವು ತಾ. 11-6-39ನೇ ಸಾಯಂಕಾಲ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಈ ಸಂತೋಷ ಸಮಾರಂಭದಲ್ಲಿ ಶ್ರೀಯುತ ಬಿ. ಎಸ್. ರಾಜಯ್ಯಂಗಾರ್‌ರವರ ಸುಶ್ರಾವ್ಯವಾದ ಹಾಡುಗಾರಿಕೆಯೂ, ಆಸ್ಥಾನ ವಿದ್ವಾನ್ ಶಿವರುದ್ರಪ್ಪನವರ ಪಿಟೀಲುವಾದನವೂ, ಮತ್ತು ಆಸ್ಥಾನ ವಿದ್ವಾನ್ ಶೇಷಪ್ಪನವರ ತಬಲವೂ ಏರ್ಪಾಡು ಮಾಡಲ್ಪಟ್ಟಿದ್ದಿತು. ಅನೇಕ ಘನ ವಿದ್ವಾಂಸರುಗಳಿಂದಲೂ ಮಾನ್ಯ ಅಧಿಕಾರಿಗಳಿಂದಲೂ ಕೂಡಿದ್ದಲ್ಲದೆ ಹೊರಗಡೆ ಸಾವಿರಾರು ಮಂದಿ ಮಹಾಶಯರುಗಳು ಲೌಡ್‌ಸ್ಪೀಕರಿನಿಂದ ಸಂಗೀತವನ್ನು ಕೇಳಿ ಕರ್ಣಾನಂದ ಪಟ್ಟರು. ಅನಂತರ ಶ್ರೀಮಾನ್ ಆಸ್ಥಾನ್ ವಿದ್ವಾನ್ ಸಂಗೀತಶಾಸ್ತ್ರರತ್ನ ಕೆ. ವಾಸುದೇವಾಚಾರ್ಯರವರು ಸಂಗೀತಗಾರರನ್ನೂ ಸಮಾರಂಭ

ಬೊಂಬಾಯಿ

(ನವಯುಗದ ಬಾತ್ಮೀದಾರರಿಂದ)

ಹವಾಗುಣ—ಪ್ರಥಮಬಾರಿ ಅತ್ತೆಮನೆಗೆ ಹೋಗುವ ಅಳಿಯನಂತೆ ಮೇಘರಾಜನು ಮುಂಬಯಿ ನಗರದಲ್ಲಿಳಿಯಲು ನಾಚುತ್ತಿರುವಂತೆ ಕಂಡು ಬರುತ್ತದೆ. ತನ್ನ ಪ್ರಿಯ ಸತಿಯನ್ನು ಮುಂದಕ್ಕೆ ಬಿಟ್ಟಿರುವನೋ ಎಂಬಂತೆ ಒಂದು ವಾರದಿಂದ ಆಗಾಗ ತನ್ನ ತಪ್ಪನೆಯನ್ನು ಸೆಳೆಯಿಂದ ನೋಡುತ್ತ ಸುಹ್ಲಾದವಾಯುವು ಸಾಗರದ ಮೇಲೆ ಚೆಲ್ಲುತ್ತಿರುವನು. ನೋಡುವನೋ ದಿನವಿಡೀ ಆಕಾಶದಲ್ಲಿ ಹಾರಾಡುತ್ತಿದ್ದರೂ, ಮಳೆಯೇನೂ ವಿಶೇಷ ಬೀಳುವುದಿಲ್ಲ. ಆದರೆ ಪ್ರತಿ ದಿವಸ ರಾತ್ರಿ ಹೊತ್ತಿಗೆ ಮಳೆ ಬಂದು ತಂಪನ್ನಿತ್ತು ಹೋಗಿಬಿಡುವುದು. ಆದರೂ ಉಷ್ಣತೆಯೇನೂ ಕಡಿಮೆಯಿಲ್ಲ. ಮುಂಬಯಿ ನಗರದ ಜನರು ಮೇಘರಾಜನ ಸ್ವಾಗತವನ್ನು ಎದುರುನೋಡುತ್ತಿರುವುದರಲ್ಲೇನೂ ವಿಶೇಷವಿಲ್ಲ!

ಶ್ರೀ| ಕೆ. ಎಂ. ಮುನ್ಷಿಯವರು—ಮದ್ಯಪಾನ ನಿಷೇಧದ ಸ್ವಯಂಸೇವಕರಿಗೆ ಭಾಷಣ ಕೊಡುತ್ತಿರುವಾಗ ಹೀಗೆಂದರು—ಆಗಸ್ಟ್ ಒಂದನೇ ತಾರೀಕಿನಿಂದ ನೀವು ಸರಿಯಾದ ಯುದ್ಧವನ್ನೇ ಹೂಡಬೇಕಾಗುವುದು. ಈ ಯುದ್ಧವು ಇತರ ಜನಾಂಗದ ಮೇಲೆಯಲ್ಲ. ಸಾವಿರಾರು ಜನರ ಜೀವವನ್ನೇ ತೊರೆದು ಅವರ ಸಂಸಾರವನ್ನೇ ನಾಶಗೊಳಿಸುತ್ತಿರುವ ಅತ್ಯಂತ ಭಯಂಕರವಾದೊಂದು ಭೂತದ ಮೇಲೆ. ಈ ಯುದ್ಧವು ಇತರ ಯುದ್ಧಗಳಂತಲ್ಲ ಯಾಕೆಂದರೆ ನಿಮ್ಮ ಶತ್ರುವು ನಿಮ್ಮ ಮನೆಯಲ್ಲೇ ಇರುವನು. ಮದ್ಯ ಕುಡಿಯುವುದರಲ್ಲಿ ವಿಶೇಷತೆಯನ್ನು ಕಂಡಿರುವ ನಿಮ್ಮ ಬಂಧುಗಳನ್ನೇ ಈ ಬಲೆಯಿಂದ ಬಿಡಿಸುವುದು ನಿಮ್ಮ ಕರ್ತವ್ಯವಾಗಿದೆ.

ನರೇಂದ್ರರುಗಳ ಮತ್ತು ಪ್ರತಿನಿಧಿಗಳ ಸಮ್ಮೇಳನವು—ಮುಂಬಯಿಯಲ್ಲಿ ಕೂಡಿ, "ಇನ್‌ಸ್ಟ್ರುಮೆಂಟ್ಸ್ ಆಫ್ ಎಕ್ಸೆಶನ್"ನ ಕುರಿತಾಗಿ ಹಲವು ದಿವಸ ಚರ್ಚೆ ನಡಿಸಿದರು. ನವನಗರದ ಮಹಾರಾಜನು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಹೊಸ ರೂಪವನ್ನು ತಾಳಿದ ಈ ಇನ್‌ಸ್ಟ್ರುಮೆಂಟ್ಸ್ ಆಫ್ ಎಕ್ಸೆಶನಿನಲ್ಲಿ ನಮಗೇನೂ ತೃಪ್ತಿ ಇಲ್ಲವೆಂದೂ, ಆದ್ದರಿಂದ ಇದಕ್ಕೆ ನಮ್ಮ ಸಮ್ಮತಿಯಿಲ್ಲವೆಂದೂ ಒಂದು ಠರಾವನ್ನು ಪಾಸುಮಾಡಿತು.

ಆಲ್ ಇಂಡಿಯಾ ಫೆಡರೇಶನನ್ನು ಸ್ಥಾಪಿಸುವ ಅಭಿಪ್ರಾಯವು ಬ್ರಿಟಿಷ್ ಸರಕಾರಕ್ಕೆ ಇರಲಿಕ್ಕಿಲ್ಲವೆಂಬುದರಲ್ಲಿ ತಮಗೆ ಸಂಪೂರ್ಣ ನಂಬಿಕೆಯಿದೆ ಎಂಬ ಸೂಚನೆಯನ್ನು ಕೊಟ್ಟು, ಸಂಯುಕ್ತ ರಾಜ್ಯಾಂಗ ಘಟನೆಗೆ ಸಮ್ಮತಿಯನ್ನಿತ್ತಿರುವರು.

ವನ್ನೇರ್ಪಡಿಸಿದ ಮಾ. ರಾ. ಪ್ರೊಪ್ರೈಟರ್ ಕೆ. ಗುರುರಾಜಾಚಾರ್ಯರನ್ನೂ ಶ್ಲಾಘಿಸಿ ಭಾಷಣವನ್ನು ಮಾಡಿದ ನಂತರ ಮಾನ್ಯ ಅತಿಥಿಗಳ ಸತ್ಕಾರ ನಡೆದು ಸಭೆಯು ಮುಕ್ತಾಯವಾಯಿತು.

ಪುಟ ೪ರಿಂದ

ಲೂಟಿಮಾಡದಿದ್ದರೆ ಅವರಿಗೆ ಗತಿ ಏನು? ನೀವೆಲ್ಲ ಸೇರಿ ಈ ಲೂಟಿಯನ್ನು ತಡೆಯಬೇಕೆನ್ನುವಿರಿ ಅಷ್ಟರಲ್ಲಾಗಲೇ "ಓಡಿ, ಓಡಿ, ದೇವರ ಅವಮಾನವಾಯಿತು, ಮಸೀದಿಗಳು ಅಪವಿತ್ರವಾದುವು" ಎಂಬ ಕೂಗು ಕೇಳಿಬರುವುದು. ಸರಿ ನೀವು ನಿಮ್ಮ ಲೂಟಿಯನ್ನೂ ತಡೆಯುವುದನ್ನೂ ಬಿಟ್ಟು ಇತರರನ್ನು ಕೊಲ್ಲಲು, ದೇವರನ್ನು ರಕ್ಷಿಸಲು ನುಗ್ಗುವಿರಿ!

ರಾತ್ರಿಹಗಲೂ ಲೂಟಿಮಾಡಲ್ಪಡುತ್ತಿರುವ, ಬೀಸಲ್ಪಡುತ್ತಿರುವ, ಕಾಲಿನಿಂದ ತುಳಿಯಲ್ಪಡುತ್ತಿರುವ ನೀವು, ಒಬ್ಬರಲ್ಲೊಬ್ಬರು ಕಲಹವಿಡುವ ನೀವು ರಕ್ತದ ಹೋಳಿಯನ್ನು ಪ್ರಾರಂಭಮಾಡುವಿರಿ. ನೀವು ರಕ್ತದ ಹೋಳಿ ಮಾಡುತ್ತೀರಿ ಅವರು ನೋಡುತ್ತ ಮೋಜುಮಾಡುತ್ತಿರಲಿ ಧನ್ಯ! ಧನಿಕರ ದೇವರೇ ಧನ್ಯ ನೀನು! ಅವರ ರಕ್ಷಣೆಯನ್ನು ಎಷ್ಟು ಎಚ್ಚರಿಕೆಯಿಂದ ಮಾಡುವಿ? ಹೂಂ ಹೇಳು, ದೇವರಿರುವುದು ಸಬಲರಿಗೋ ನಿರ್ಬಲರಿಗೋ?

S. L. ಸುಬ್ರಹ್ಮಣ್ಯಂ, ಹಂಪರ.

ನೋಟೀಸು

The Vijaya Bank Ltd., Coondapoor

ದಿ ವಿಜಯ ಬೇಂಕ್ ಲಿಮಿಟೆಡ್, ಕುಂದಾಪುರ

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ:—ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಅಡವಿನಮೇಲೆ ಪಡೆದ ಮೊಬಲಗನ್ನಾಗಲೀ, ಅದರ ಬಡ್ಡಿಯನ್ನಾಗಲೀ ಮ್ಯಾದಿಗೆ ಕೊಡದೆ ಇದ್ದುದರಿಂದಲೂ, ಸದ್ರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ವಾಪಸಾಗಿ ಬಂದುದರಿಂದಲೂ, ಸದ್ರಿ ಲೋನನ್ನು ಇನ್ನು ಹೆಚ್ಚಿಗೆ ಸಮಯ ಬಾಕಿ ಇಟ್ಟಲ್ಲಿ ಬೇಂಕಿಗೆ ನಷ್ಟವಾಗ ಬಹುದಾಗಿ ಕಂಡುಬರುವುದರಿಂದಲೂ, ಸದ್ರಿ ಲೋನಿನ ಅಸಾಮಿಯು ನಮಗೆ ಬರ ಎಲ್ಲಾ ಅಸಲು ಬಡ್ಡಿ ಹಣಗಳನ್ನು ಕೊಟ್ಟು ತಾ. 24-6-39ನೇ ಶನಿವಾರ ಮಧ್ಯಾಹ್ನ 1 ಘಂಟೆಯ ಒಳಗೆ ಬಿಡಿಸಿಕೊಂಡು ಹೋಗದೆ ಇದ್ದಲ್ಲಿ ತಾ. 26-3-39ನೇ ಸೋಮವಾರ ಮಧ್ಯಾಹ್ನ 3ಕ್ಕೆ ಸದರಿ ನಗಗಳನ್ನು ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಹಣಗಳಲ್ಲಿ ನಮಗೆ ಬರ ಅಸಲು ಬಡ್ಡಿ ಮತ್ತು ಎಲ್ಲಾ ಖರ್ಚು ವಗೈರೆ ಕಳೆದು ಹೆಚ್ಚಿಗೆ ಹಣ ಉಳಿದರೆ ಸದರಿಯವರ ಅಮಾನಾತು ಲೆಕ್ಕಕ್ಕೆ ಬಡ್ಡಿಯಿಲ್ಲದ ಜಮಾ ಮಾಡಲ್ಪಡುವುದು. ಏಲಮಿನಿಂದ ಹುಟ್ಟಿಬಂದ ಹಣ ಬೇಂಕಿಗೆ ಬರತಕ್ಕ ಹಣಕ್ಕೆ ಕಮ್ಮಿ ಬಿದ್ದರೆ ಸದರಿ ಅಸಾಮಿಯ ಮೇಲೆ ಹೆಚ್ಚಿಗೆ ಬರತಕ್ಕ ಹಣಗಳಿಗೆ ದಾವಾ ದಾಖಲು ಮಾಡಲಾದೀತು. ಏಲಂ ಅದೇ ದಿವಸ ಆಗದೆ ಇದ್ದಲ್ಲಿ ಬೇಂಕಿಗೆ ಯುಕ್ತ ಕಂಡ ದಿವಸಕ್ಕೆ ಮುಂದುವರಿಸಲ್ಪಡುವುದೆಂದು ತಿಳಿದಿರುವುದು.

ಲೋನು ನಂಬ್ರ ಮತ್ತು ಇಟ್ಟ ತಾರೀಕು	ಹೆಸರು ಮತ್ತು ವಿಳಾಸ	ಅಸಲು ರೂಪಾಯಿ
45/37 22-10-1937	ಕೆ. ಕೃಷ್ಣಯ್ಯ ಸೆಟ್ಟಿ, ಸುಬ್ಬಣ್ಣ ಸೆಟ್ರ ಮಗ, ಕೆ ಸೂರಪ್ಪ ಸೆಟ್ರ ಕ್ವಾರ್ಟರ್, ಕುಂದಾಪುರ	44—0—0
129/37 15-12-1937	ಟಿ. ಸಂಜೀವ ಸೆಟ್ಟಿ, C/o ಟಿ. ವಿಠಲ ಸೆಟ್ಟಿ, ಹೆಂಗವಳ್ಳಿ ಗ್ರಾಮ, ಪೋಸ್ಟ್ ಶಂಕರನಾರಾಯಣ.	275—0—0
231/37 3- 3-1938	ರಾಮಯ್ಯ ಸೆಟ್ಟಿ, ಅಬ್ಬಕ್ಕ ಸೆಡ್ತಿ ಮಗ, ಹಳನಾಡು ಬಿಲ್ಲಾರಬೆಟ್ಟು, ಪೋಸ್ಟ್ ಕಂಡ್ಲೂರು.	175—0—0
247/37 12- 3-1938	ರಾಮಯ್ಯ ಸೆಟ್ಟಿ ಅಬ್ಬಕ್ಕ ಸೆಡ್ತಿ ಮಗ, ಹಳನಾಡು ಬಿಲ್ಲಾರ ಬೆಟ್ಟು, ಪೋಸ್ಟ್ ಕಂಡ್ಲೂರು.	75—0—0
337/37 25- 4-1938	ಗೋವಿಂದ ಸೆಟ್ಟಿ, ಸೂರಪ್ಪ ಸೆಟ್ರ ಮೊಮ್ಮಗ, ಗುಡಿಕೇರಿ ಮನೆ, ಚಿತ್ತೂರು ಗ್ರಾಮ, ಪೋಸ್ಟ್ ವಂಡಸೆ.	70—0—0
386/37 25- 5-1938	ರಾಮಯ್ಯ ಸೆಟ್ಟಿ ಅಬ್ಬಕ್ಕ ಸೆಡ್ತಿಯ ಮಗ, ಹಳನಾಡು ಬಿಲ್ಲಾರ ಬೆಟ್ಟು ಪೋಸ್ಟ್ ಕಂಡ್ಲೂರು.	90—0—0
390/37 26- 5-1938	ಕೃಷ್ಣಪ್ಪ ಸೆಟ್ಟಿ, ಬೀರಣ್ಣ ಸೆಟ್ರ ಅಳಿಯ, ಸಾರ್ಕಲ್, ಕಾರ್ವಾಡಿ ಗ್ರಾಮ, ಪೋಸ್ಟ್ ಕಂಡ್ಲೂರು.	25—0—0
481/37 18- 7-1938	ಎಮ್. ಎಚ್. ಬಾಬಿಶಾ, ಬಪ್ಪು ಸಾಹೇಬರ ಮಗ, ಗಂಗೊಳ್ಳಿ, ಪೋಸ್ಟ್ ಗಂಗೊಳ್ಳಿ.	55—0—0
513/37 30- 7-1938	ಹಿರಿಯಣ್ಣ ಸೆಟ್ಟಿ ಕರಿಯಣ್ಣ ಸೆಟ್ರ ಅಳಿಯ, ಅಡ್ಡರ ಬೆಟ್ಟು, ಚಿತ್ತೂರು ಗ್ರಾಮ, ಪೋಸ್ಟ್ ವಂಡಸೆ.	50—0—0
578/38 19- 8-1938	ಯು. ಶೀನಪ್ಪ ಸೆಟ್ಟಿ, ಚಿಕ್ಕಮ್ಮ ಸೆಡ್ತಿಯ ಮಗ, ಬಾಗಾಳಕಟ್ಟೆ, ಮೊಳಹಳ್ಳಿ ಗ್ರಾಮ, ಪೋಸ್ಟ್ ಶಂಕರನಾರಾಯಣ.	200—0—0

OFFICE OF THE BANK, COONDAPOOR 17—6—1939

K. Sanjiva Hegde, *Agent.*

New Kanara Swadeshi Laundry,

GAMDEVI, BOMBAY.

A reliable house for dry cleaning deing all sorts of rich garments.

ದಿ ನ್ಯೂ ಕೆನರಾ ಸ್ವದೇಶಿ ಲಾಂಡ್ರಿ,

ಗಾಮದೇವಿ — ಮುಂಬಾಯಿ.

ಉತ್ತಮ ತರದ ಮಡಿ, ಉತ್ಕೃಷ್ಟ ರೀತಿಯ ರಂಗು—ಇವುಗಳಿಗೆ ಪ್ರಸಿದ್ಧವಾದ ನಿಲಯ.

ವಿ. ಸೂ.—ಪರವೂರುಗಳಿಂದ ಉತ್ತಮ ಜರತಾರಿ ಸೀರೆ, ವಸ್ತ್ರ ಉಡುಗೆ ತೊಡುಗೆಗಳ ರಂಗು ಹಾಕುವ, ಡ್ರೈಕ್ಲೀನಿಂಗ್ ವಗೈರೆ ಕಾರ್ಯವನ್ನು ಟಪ್ಪಾಲು ದ್ವಾರಾ ಸ್ವೀಕರಿಸಿ ಸಕಾಲದಲ್ಲಿ ತಯಾರಿಸಿ ತಲುಪಿಸುವೆವು.

ಎನ್. ಆರ್. ಶೆಟ್ಟಿ, ಪ್ರೊಪ್ರೈಟರ್. **G. V. Mahale,** Manager.

Transport & Car Owners

ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES - - - - - MANGALORE.

ಸರಕಾರದ ಹೊಸ ತೆರಿಗೆಯ ಧೋರಣೆ

ಡಾಕ್ಟರ್ ಪಟ್ಟಾಭಿಯವರ ಸಮರ್ಥನೆ.

ಪಟ್ಟಾಭಿಯವರು ಕೊಯಮುತ್ತೂರಿನ ನಗರ ಕಾಂಗ್ರೆಸ ಮಂಡಳಿಯ ವಿಷಯದಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತಾ 1857ರಿಂದ ದೇಶದ ಸ್ವಾತಂತ್ರ್ಯಕ್ಕಾಗಿ ಜರಗಿದ ಹೋರಾಟವನ್ನು ವಿವರಿಸಿ ಮದ್ರಾಸು ಕಾಂಗ್ರೆಸ ಮಂತ್ರಿಮಂಡಲದ ವಿಷಯ ಪ್ರಸ್ತಾಪಿಸಿದರು. ಮದ್ರಾಸು ಪ್ರಧಾನರಾದ ರಾಜಾಜಿಯವರು ತಮ್ಮ ಮದ್ಯಪಾನ ನಿಷೇಧ ಕಾರ್ಯದಲ್ಲಿ ಸಾಕಷ್ಟು ಯಶಸ್ವಿಯಾಗಿರುವರೆಂದರು. ಪ್ರಾಂತ್ಯದ ಹದಿನಾರು ಕೋಟಿ ಕಂದಾಯದಲ್ಲಿ 8 ಕೋಟಿ ಭೂಕಂದಾಯದಿಂದಲೂ, 4 ಕೋಟಿ ಮದ್ಯಪಾನದಿಂದಲೂ ಬರುವುದು. ಆದುದರಿಂದ ವಿದ್ಯೆ, ಆಸ್ಪತ್ರೆ, ಗ್ರಾಮಸುಧಾರಣೆ ಇತ್ಯಾದಿ ಜನೋಪಕಾರೀ ಕಾರ್ಯಗಳು ಈ ಮೂಲ ಉತ್ಪತ್ತಿಯೆಂದರೆ, ಕುಡಿಕತನದ ಹಣದಿಂದಾಗಬೇಕಾಗಿರುವುದು ಹಿಂದೂದೇಶದಲ್ಲಿ ಮದ್ಯಪಾನ ನಿಲ್ಲಿಸುವುದೆಂದರೆ 17 ಕೋಟಿ ರೂಪಾಯಿಯ ಉತ್ಪತ್ತಿಯ ದಾರಿಯನ್ನು ಕಡುಕೊಳ್ಳಬೇಕಾಗಿದೆ ಉಪ್ಪಿನ ಕರವನ್ನು ತೆಗೆದು ಹಾಕಬೇಕಾದರೆ ಆರುಕೋಟಿ ರೂಪಾಯಿ ಬೇಕು ಅಫೀಸು ತೆರಿಗೆಗಾಗಿ ಒಂದು ಕೋಟಿ ಹೀಗೆ ಈ ಮೂರು ವಿಷಯಗಳಿಗಾಗಿ 24 ಕೋಟಿ ರೂಪಾಯಿ ಬೇಕಾಗಿದೆ. ಸೈನ್ಯದ ಅಧಿಕಾರವು ಸ್ವಾಧೀನವಾದರೆ ಅದರ ವೆಚ್ಚ ಕಡಿಮೆ ಮಾಡಬಹುದು. ಇದರಿಂದ ಆಯವ್ಯಯದ ಪಟ್ಟಿಯನ್ನು ಸರಿಪಡಿಸಲು ಸುಲಭಸಾಧ್ಯವಿದೆ ಸಂಬಳದಲ್ಲ ಅರ್ಧಮಾಡಿದರೆ ತೀರ್ವೆಯಲ್ಲಿಯೂ ಅರೆವಾಸಿ ಇಳಿಸಬಹುದು ಈಗ ಕಾಂಗ್ರೆಸು ಮಂತ್ರಿಮಂಡಲಕ್ಕೆ ತೆರಿಗೆ ನಷ್ಟ ಹೊಂದುವುದಾದರ ಅಧಿಕಾರವಿದೆ. ಆದರೆ, ಅವರಿಗೆ ಸಂಬಳದ ಮೇಲೆ ಅಧಿಕಾರವಿಲ್ಲ ಆದುದರಿಂದ ಅದರಲ್ಲಿ ಕಡಿತಮಾಡಲು ಅಸಾಧ್ಯವಿದೆ, ಸರಕಾರವು ವಿಕ್ರಯ ತೆರಿಗೆ ಜಾರಿಗೆ ತರಬೇಕೆಂದಾಗ, ವ್ಯಾಪಾರಸ್ಥರು ವಿರುದ್ಧವಿದ್ದರು. ಯುರೋಪಿಯನರು ಹೊಗೆಸೊಪ್ಪು ತೆರಿಗೆಯ ಕುರಿತು ವಿರೋಧಿಸಿದರು. ಶ್ರೀಮಂತನು ಪೆಟ್ರೋಲ್ ತೆರಿಗೆಗೆ ವಿರುದ್ಧವಿದ್ದನು; ಬಡವನು ಸರಕಾರ ತೆರಿಗೆಗೆ ವಿರುದ್ಧವಿದ್ದನು. ಸರಕಾರವು ಯಾವ ತೆರಿಗೆಯನ್ನು ತೆರಲು ಮುಂದಾದರೂ, ಯಾವ ಘೋಷಣೆಯನ್ನು ತರಲು ನೋಡಿದರೂ ಅದರಿಂದ ಸಮಾಜದ ಒಂದಲ್ಲೊಂದು ಜಾತಿಗೆ ಅಥವಾ ಪಂಗಡಕ್ಕೆ ತೊಂದರೆಯಿದ್ದೇ ಇರುವುದು. ಪ್ರತಿಯೊಬ್ಬನು ತನ್ನನ್ನು ತುಂಬಾ ನಷ್ಟಕ್ಕೊಳಪಡಿಸುವ ಸಂದರ್ಭ ಇರುವ ಯಾವ ದೇಶದ ಕಾರ್ಯಕ್ರಮವನ್ನೂ ಮನ್ನಿಸಲಾರನು. ಪರೀಕ್ಷೆ ನಿಲ್ಲಿಸೋಣವೆಂದರೆ ಪ್ರೊಫೆಸರರು ಕೋಪಗೊಳ್ಳುವರು, ಖಾದಿ ಮಾರ್ಕೆಟ್ಟಿಗೆ ಸಾಧಿಸಿದರೆ, ಗಿರಣಿಯ ಯಜಮಾನರು ಸಿಟ್ಟಾಗುವರು. ಮದ್ಯಪಾನ ನಿಲ್ಲಿಸುವುದೆಂದರೆ, ಗುತ್ತೇದಾರರ ಸಿಟ್ಟು, ವ್ಯಾಜ್ಯ ಕಡಿಮೆ ಮಾಡಿ, ಗ್ರಾಮ ಪಂಚಾಯತಿ ಮಾಡೋಣವೆಂದರೆ ವಕೀಲರು ಮೂಗು ಮುರಿದುಕೊಳ್ಳುವರು, ಸಂಬಳದಲ್ಲಿ ಕಡಿತ ಮಾಡುವ ಯೋಚನೆ ನಡೆದಗೆ ಸರಕಾರಿ ಹುದ್ದೇದಾರರು ಮಾತೆತ್ತುವರು. ಇಡೀ ದೇಶಕ್ಕೆ ಅನ್ವಯಿಸುವ ಒಂದು ಸಾಮಾನ್ಯ ಭಾಷೆ ಇರಲಿಯೆಂದರೆ, ನಮ್ಮ ತಮಿಳು ಮಂದಿಯ ಆಗ್ರಹಕ್ಕೆ ಪಾತ್ರರಾಗಬೇಕಾಗುವುದು. ಹಾಗಾದರೆ ಕಾಂಗ್ರೆಸು ನಡೆಯುವುದು ಹೇಗಪ್ಪಾ ಎಂದು ಆಶ್ಚರ್ಯ ತೋರೀತು, ಎಲ್ಲರನ್ನು ಮೆಚ್ಚಿಸುವವನು ಯಾರನ್ನೂ ಮೆಚ್ಚಿಸಲಾರನು ಆದುದರಿಂದ ಕಾಂಗ್ರೆಸು ಮಂತ್ರಿಗಳು ಎಡಬಲಕ್ಕೆ ನೋಡದೆ, ತಮ್ಮ ಚುನಾವಣೆಯ ಕಾರ್ಯಕ್ರಮಕ್ಕನುಸಾರವಾಗಿ ಮುಂದೆ ನಡೆಯಬೇಕು.

ವಿಕ್ರಯ ತೆರಿಗೆ ಮತ್ತು ವ್ಯಾಪಾರಸ್ಥರು.- ಈ ಕುರಿತು ಪಟ್ಟಾಭಿಯವರು ಪ್ರಸ್ತಾಪಿಸಿ, ಸರಕಾರವು ಮಾರಾಟದಿಂದ ದೊರೆತ ರೂಪಾಯಿಯಲ್ಲಿ ಒಂದು ಪೈ ತೆರಿಗೆ ನಿರ್ಣಯಮಾಡಿದೆ. ಇದರಲ್ಲ ಗಣ ಗುಟ್ಟೇನಾದರೆ, ವಸ್ತುಗಳನ್ನು ಖರೀದಿ ಮಾಡುವವನು ಆದರೆ, ಈಗ ಮಾರುವವರು ವ್ಯಾಪಾರಸ್ಥರು ಈಗಾಗಲೇ ಸರಕುಗಳ ದರವೇರಿಸಿರುವರು. ಸರಕಾರವು ತಮ್ಮ ಲೆಕ್ಕಪತ್ರವನ್ನು ನೋಡುವುದೆಂದು ವರ್ತಕರ ಹೆದರಿಕೆ ನಿಜವಾಗಿ ವ್ಯಾಪಾರಿಗಳಿಗೆ ಇನ್ನೊಂದು ರೀತಿಯಿಂದ ಲಾಭವಿದೆ. ಮದ್ಯಪಾನದಿಂದ ದೊರೆಯುವ ಕಂದಾಯ 4 ಕೋಟಿ ಆದರೆ ಈ ಮದ್ಯಪಾನದ ನಿಜವಾದ ಕ್ರಯವೆಂದರೆ 17 ಕೋಟಿ. ಈ ಎಲ್ಲಾ ಹಣವೀಗ ಬಡವರ ಉಳಿತಾಯವಾಗುವುದು. ನಾನು ಸೇಲಮು ಜಿಲ್ಲೆಯ ಹೊಸೂರಿಗೆ ಹೋಗಿದ್ದಾಗ ಜನರನ್ನು ವಿಚಾರಮಾಡಿದೆ. ಈ ಐದು ತಿಂಗಳ ಅವಧಿಯೊಳಗೆ 10ರಿಂದ 30ರ ವರೆಗೆ ಜನರು ಉಳಿಸಿರುವರು. ಅವರು ಉಳಿಸಿದ ಹಣವು ಜಜಾರಿಗೆ ಹೋಗಿರುವುದು. ಇದರಿಂದ ವರ್ತಕರಿಗೆ ಹೆಚ್ಚು ಲಾಭವಾಗಿರುವುದು. ಮಂತ್ರಿಗಳಿಗ ಹಲವು ತೊಡಕುಗಳಿವೆ, ಈ ತನ್ಮಧ್ಯ ಅವರು ಧೀರತೆಯಿಂದ ಕಾರ್ಯ ಮುಂದೊತ್ತುತ್ತಿರುವರು ಆದುದರಿಂದ ಮಂತ್ರಿಗಳಿಗೆ ಜನರು ಬೆಂಬಲ ಕೊಡಬೇಕು. ಸ್ವರಾಜ್ಯಕ್ಕೆ ದಾರಿಮಾಡಿಕೊಡಬೇಕು" ಎಂದು ತಮ್ಮ ಅಮೋಘ ಭಾಷಣದಲ್ಲಿ ಹೇಳಿದರು. ಅನಂತರ ಭಾಷಾವಾರು ಪ್ರಾಂತ್ಯದ ಮಹತ್ವಿಕೆಯ ಕುರಿತು ಮಾತಾಡಿದರು.

ಪುಷ್ಪಗಂಧಾಮೋದಿತ
ಬಹುಗುಣಯುಕ್ತ
ಆಮಲಕೀ ತೈಲ

ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ, ಪ್ರೌಢ ಸ್ತ್ರೀ ಪುರುಷರಿಗೂ ನಿತ್ಯ ಕೇಶಪ್ರಸಾದನಾರ್ಥ ಉತ್ತಮವಾದ ಚಿಕಿತ್ಸಕ ತೈಲ.

10 ತೊಲೆ ಸೀಸೆ 1ರ ಕ್ರಯ 0-11-0,
5 ತೊಲೆ ,, ,, ,, 0- 6-0.

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ

ಧಾನ್ವಂತರಿ ಗುಟಿಕಾ

ಅಜೀರ್ಣ, ಅತಿಸಾರ, ಉದರಶೂಲೆ, ಉಬ್ಬಸ, ಪಾರ್ಶ್ವಶೂಲೆ, ಕಟಿಶೂಲೆ, ಚುಚ್ಚುವ ಮತ್ತು ಎಳೆಯುವ ವೇದನೆ, ಸರ್ವವಾತರೋಗ, ಜ್ವರ, ಕೆಮ್ಮು, ಇವುಗಳಲ್ಲಿ ಗುಣಕಾರಿಯಾಗಿದೆ ಹಾಗೂ ಆಬಾಲವೃದ್ಧ ಸ್ತ್ರೀ ಪುರುಷರಿಗೂ, ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಸಂಗ್ರಾಹ್ಯವಾದ ದಿವ್ಯ ಔಷಧಿಯಾಗಿದೆ.

ಮಾತ್ರೆ — 12 25, 50, 100, 500, 1000
ಕ್ರಯ: 0 4-0, 0-7-0, 0-13 0, 1-5-0, 5 0-0, 9-0-0.

5 ಆಣೆ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತದೆ

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲ್
ಪೋಸ್ಟ್ ಬ್ರಹ್ಮಾವರ. ದ. ಕ.

ನಮ್ಮ ಸ್ಟಾಕಿಸ್ಟರು —
1. **V. R Prabhu**, The Canara News & Books Agent, Batatawala Mansion, Lalbag, BOMBAY
2. **General Supplies Ltd, Udipi, S K**
3. **Nava Bharata Book Depot, Udipi, S. K.**

ಗಂಡಮಾಲೆ ರೋಗ

ಈ ಭಯಂಕರ ರೋಗವನ್ನು ಖಾತ್ರಿಯಾಗಿ ಗುಣಪಡಿಸುವ

POPULAR OINTMENT
(***For T. B Glands***)

ಕೈಬಿಟ್ಟು ಹೋದ ಎಷ್ಟೋ ರೋಗಿಗಳು ನಮ್ಮ ಔಷಧಿಯನ್ನು ಉಪಯೋಗಿಸಿ ಸಂಪೂರ್ಣ ಗುಣಹೊಂದಿರುವರು ಗುಣವಾಗದಿದ್ದರೆ ಹಣ ವಾಪಾಸು.

ಬಾಟ್ಲಿ 1ಕ್ಕೆ ರೂಪಾಯಿ 5/- ಟಪಾಲು ಹಾಸಲು ಪ್ರತ್ಯೇಕ.

ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

The Popular Stores,
Chemists & General Merchants,
Parel, BOMBAY No 12

ಧಾತುಪುಷ್ಟಿ ಲೇಹ ಸುವರ್ಣ, ಸಾಲಾಮಿಶ್ರಿ, ಕಲ್ಲಿದ ಮಿಶ್ರ

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಿಳುಪುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ 2-8-0.

ಮೇಹ ಕುಠಾರ— ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರಮಾಡುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು ಮೂತ್ರದಲ್ಲಿ ಧಾತು ಹೋಗುವುದು ಸೊಂಟನೋವು ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಅಲ್ಲದೆ ಇಪ್ಪತ್ತು ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ. ಡಬ್ಬಿ 1ರ ರೂ 2-8-0.

ಕಸ್ತೂರಿ ಮಿಶ್ರಣ ದಶಮೂಲ— ಪ್ರಸವಾನಂತರ ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ 1ರ ರೂ. 1-8-0

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್. ರಥಬೀದಿ ನಂಬ್ರ 11 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ನವಭಾರತ ಬುಕ್ ಡಿಪೋ, ಉಡುಪಿ ಶ್ರೀ ಕೃಷ್ಣ ಫಾರ್ಮಸಿ, ಕುಂದಾಪುರ. ವಿಟ್ಠಲ ನಾರಾಯಣಶೆಣೈ, ಟ್ರೇಮ್‌ಟರ್ಮಿನಸ್ ದಾದರ್ ಗಾಂವ ಮುಂಬಯಿ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಫಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೩—೮—೦	೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ವಿಶೇಷ ಸಂಚಿಕೆಗಳು

೧

ವಿದ್ಯಾ - ವಾಣಿಜ್ಯದ ೪ನೆಯ ಜನ್ಮೋತ್ಸವ ಸಂಚಿಕೆ—ಆಧುನಿಕ ಯುಗದಲ್ಲಿ ವಿದ್ಯಾ-ವಾಣಿಜ್ಯದ ಕಾರ್ಯವು ಮಹತ್ತರವಾದ್ದು, ವಿದ್ಯಾವಾಣಿಜ್ಯಗಳ ವ್ಯಾಪಕತೆಯ ಈ ಕಾಲದಲ್ಲಿ ಇವುಗಳ ವಿಚಾರ ವಿಷಯಗಳನ್ನು ಜನತೆಯು ತಿಳಿಯಕೊಳ್ಳಬೇಕಾದುದು ಅವಶ್ಯಕ. ಕನ್ನಡನಾಡಿನಲ್ಲಿ ವಿದ್ಯಾವಾಣಿಜ್ಯಗಳ ಕುರಿತಾಗಿ ಪತ್ರಿಕಾ ವ್ಯವಸಾಯಕ್ಕೆ ಕೈಯಿಕ್ಕಿ ಯಶಸ್ವಿಯಾಗಿ ನಡೆಸಿಕೊಂಡುಬಂದ ಕೀರ್ತಿಯು ಪರಿಪಕ್ವ ಅನುಭವಶಾಲಿಗಳಾದ ಶ್ರೀಯುತ ಜಿ. ವಿ. ದೊಡ್ಡ ವೀರಪ್ಪನವರದು. ಈ ವರ್ಷವೂ ಶ್ರೀಯುತರು ಸರ್ವಾಂಗ ಸೌಂದರ್ಯವುಳ್ಳ ಜನ್ಮೋತ್ಸವ ಸಂಚಿಕೆಯನ್ನು ಹೊರಡಿಸಿರುವರು. ಕನ್ನಡಿಗರು ಇವರ ಉಪಕಾರವನ್ನು ಮರೆಯುವಂತಿಲ್ಲ.

ಈ ನಾಲ್ಕನೇ ಜನ್ಮೋತ್ಸವ ಸಂಚಿಕೆಯು ಹಲವು ಅಮೂಲ್ಯ ಲೇಖನಗಳಿಂದ ಕೂಡಿ ಸೊಗಸಾಗಿದೆ. ಸರ್. ಎಂ. ವಿಶ್ವೇಶ್ವರಯ್ಯ, ಎಸ್. ಸತ್ಯಮೂರ್ತಿ, ಎ. ಸಿ. ಛಟರ್ಜಿ, ಆಚಾರ್ಯ ಕೃಪಾಲಾನಿ ಮೊದಲಾದ ಅಂತರ್ರಾಷ್ಟ್ರೀಯ ವ್ಯಕ್ತಿಗಳ ಅಮೂಲ್ಯ ಲೇಖನಗಳಿವೆ. ಶ್ರೀಯುತರುಗಳಾದ ದೇವುಡು, ದೊರೆಸ್ವಾಮಿ, ಶಟ್ಟಿ ಲೀಪಗಿರಿರಾವ್, ಗುರುರಾವ್, ಪಾಳೇಕಾರ್, ಎನ್. ಎಸ್. ಶ್ಯಾನಿ. ಡಿ. ಆರ್. ಚೆನ್ನೇಗೌಡ ಮೊದಲಾದವರ ಉತ್ಕೃಷ್ಟ ಲೇಖನಗಳನ್ನು ಒಳಗೊಂಡಿದೆ. ಹಲವು ಸೊಗಸಾದ ಕತೆ, ಕವನಗಳು ಈ ಉತ್ತಮ ಸಂಚಿಕೆಗೆ ಇನ್ನಷ್ಟು ಕಳೆಯೇರಿಸಿರುವುವು. ಹೊರ ಆವರಣವು ಬಹು ರಮ್ಯವಿದೆ. ವಿಷಯವಿಚಾರಗಳು ವಿಚಾರಪ್ರಚೋದಕವಾದವುಗಳು, ಅಮೋಘವಾದುವುಗಳು, ವಿದ್ಯಾ-ವಾಣಿಜ್ಯಗಳ ಜ್ಞಾನಾರ್ಜನೆಗೆ ಸಾಧನವಾದುವುಗಳು. ಶ್ರೀಮನ್ಮಹಾರಾಜರೇ ಮೊದಲಾದವರ ಚಿತ್ರಪಟಗಳು ಬಹು ಸೊಗಸಾಗಿ ಮೂಡಿವೆ. ಇಂಥಾ ವಿಶೇಷ ಸಂಚಿಕೆಯನ್ನು ವಿಶೇಷ ಶ್ರಮವಹಿಸಿ, ಶ್ರದ್ಧೆಯಿಂದ ಕನ್ನಡಿಗರ ಮುಂದಿರಿಸಿದ ಶ್ರೀ ದೊಡ್ಡ ವೀರಪ್ಪನವರ ಸಾಹಸ ಕಾರ್ಯವು ಸಾಮಾನ್ಯವಲ್ಲ. ಇವರ ಮುಂದಣ ಕಾರ್ಯಯೋಜನೆಗಳು ಇನ್ನಷ್ಟು ಸುಸೂತ್ರವಾಗಿ ಜರಗಲಿ, ನಮ್ಮ ನಾಡಿನ, ನಮ್ಮ ದೇಶದ, ನಮ್ಮ ಜನತೆಯ ಏಳಿಗೆಗೆ ಸಾಧನವಾಗಲಿ.

೨

ಶರಣ ಸಾಹಿತ್ಯದ ಬಸವ ಜಯಂತಿ ವಿಶೇಷ ಸಂಚಿಕೆ—ಅಖಿಲ ಕನ್ನಡ ನಾಡಿನಲ್ಲಿ ಪ್ರಸಿದ್ಧರಾದ ಕೀರ್ತನ ಕೇಸರಿ ಬ. ಶಿವಮೂರ್ತಿ ಶಾಸ್ತ್ರಿಗಳ ಸಂಪಾದಕತ್ವದಲ್ಲಿ ಹೊರಡುವ 'ಶರಣ ಸಾಹಿತ್ಯ'ವು ಪ್ರೌಢವರ್ಗದ ಮಾಸಪತ್ರಿಕೆ. ಶ್ರೀಯುತ ಶಿವಮೂರ್ತಿಗಳು ನುರಿತ ಬರಹಗಾರರು. ಉತ್ತಮ ಕಲಾವಿದರು. ಭಾಷಣಗಾರರಿರುವರು, ಇವರು ಉತ್ಕೃಷ್ಟ ಧ್ಯೇಯ ಸಂಪನ್ನರು, ಉತ್ಸಾಹಿಗಳು, ಹಿಡಿದ ಕಾರ್ಯವನ್ನು ಕೊನೆಮುಟ್ಟಿಸಲು ಸತತ ಉದ್ಯೋಗಿಸುವ ಪ್ರತಿಭಾ ಸಂಪನ್ನರು, ಶರಣ ಸಾಹಿತ್ಯವು ಧಾರ್ಮಿಕ ಮಹತ್ವಕ್ಕೆ, ಸಾಹಿತ್ಯ, ಲಿಂಗವಂತ ಸಂಸ್ಕೃತಿಗಳ ವಿಪುಲ ವ್ಯಾಖ್ಯಾನಸೆಯ. ಧ್ಯೇಯ ದೃಷ್ಟಿಯಿಂದ ಪತ್ರಿಕಾ ಪ್ರಪಂಚದಲ್ಲಿ ಎದ್ದು ಕಾಣಿಸಿದ ಪತ್ರಿಕೆ. ಕೀರ್ತನ ಕೇಸರಿಯವರು ತಮ್ಮ ಸಾಹಸ ಕೃತ್ಯದಲ್ಲಿ ಎಷ್ಟೊಂದು ಯಶಸ್ವಿಯಾಗಿರುವರು, ಶರಣ ಸಾಹಿತ್ಯದ ಧ್ಯೇಯವದೆಷ್ಟು ವ್ಯವಹಾರ್ಯವಾಗಿ ಮುಂದೆ ಸಾಗಿದೆ, ಎಂಬುದನ್ನು ಈ ವರ್ಷದ ಬಸವ ಜಯಂತಿಯ ಶರಣ ಸಾಹಿತ್ಯದ ವಿಶೇಷ ಸಂಚಿಕೆಯಿಂದ ತಿಳಿಯ ಬಹುದಾಗಿದೆ.

ಈ ವಿಶೇಷ ಸಂಚಿಕೆಯಲ್ಲಿ ಮುಖ್ಯವಾದ ಎರಡು ಭಾಗಗಳಿವೆ. ಮೊದಲನೆಯದು 'ಹಿಂದೂ ಧರ್ಮ ಮತ್ತು ಅದರ ಸಂಸ್ಕೃತಿ. ಎರಡನೆಯದು ಬಸವೇಶ್ವರ ಮತ್ತು ಆತನ ಮಹತ್ವ. ಮೊದಲನೆಯ ಭಾಗದಲ್ಲಿ ಹಿಂದೂ ಧರ್ಮ ಮತ್ತು ಅದರ ಸಂಸ್ಕೃತಿ-ಸಮಾಜ ಮತ್ತು ಹಿಂದೂ ಧರ್ಮದ ಮತಗಳ ವಿವಿಧ ವಿಚಾರ-ಇವುಗಳನ್ನೊಳಗೊಂಡ ಪ್ರತಿಭಾ ಸಂಪನ್ನರಾದ ಪಂಡಿತರುಗಳ ಹಲವು ಅಮೂಲ್ಯ ಲೇಖನಗಳಿವೆ. ಕನ್ನಡ ನಾಡಿನ ಪ್ರಸಿದ್ಧ ಲೇಖಕರಾದ ವೃದ್ಧಭಾನು ಡಿ. ಕೆ. ಭಾರದ್ವಾಜರ ಹಿಂದೂ ಧರ್ಮ, ಮೇ। ವೈ ನಾಗೇಶ ಶಾಸ್ತ್ರಿಗಳ ಹಿಂದೂ ಧರ್ಮ ಸ್ವರೂಪ, ಪಿ. ಬಿ. ಬೆಳಗಾಂವಿ ಬಿ. ಎ. ಎಲ್. ಎಲ್. ಬಿ. ಇವರ 'ಹಿಂದೂ ಸಂಘಟನೆಯೂ ಬಸವೇಶ್ವರನೂ' ಎಂಬ ಆರಂಭದ ಮೂರು ಲೇಖನಗಳು, ಹಿಂದೂ ಧರ್ಮದ ಸ್ವರೂಪ, ಅದರ ಮಹತ್ವಿಕೆಯನ್ನು ಬಹು ವಿಚಾರವತ್ತಾಗಿ ಅಂತಃಕರಣಕ್ಕೆ ಮುಟ್ಟುವಂತೆ ಬರೆದವುಗಳಾಗಿವೆ ಶ್ರೀಮಾನ್. ಕೆ. ಆರ್. ಶ್ರೀನಿವಾಸಯ್ಯಂಗಾರ್-ಎಂ. ಎ. ಇವರು, 'ಜೀವನಕ್ಕೆ ಧರ್ಮದ ಆವಶ್ಯಕತೆಯುಂಟೇ' ಎಂಬ ತಮ್ಮ ವಿಚಾರಪೂರ್ಣವಾದ ಅಮೋಘ ಲೇಖನದಲ್ಲಿ ಮಾನವನಿಗೆ ಧರ್ಮವೇಕೆ ಬೇಕು? ಎಂಬುದನ್ನು ಬಹು ಸುರಸವಾಗಿ ಚರ್ಚಿಸಿರುವರು, ಇನ್ನು ದ್ವೈತ, ವಿಶಿಷ್ಟಾದ್ವೈತ ಜೈನ, ಬೌದ್ಧ ಮತ್ತು ಚಾರ್ವಾಕದರ್ಶನಗಳನ್ನು ಕುರಿತ ಲೇಖನಗಳು ಬಹು ಸಾರವತ್ತಾಗಿ ಬರೆಯಲ್ಪಟ್ಟವುಗಳಾಗಿವೆ, ಮತ್ತು ಬೋಧಪರವಾದುವುಗಳಾಗಿವೆ.

ಬಸವೇಶ್ವರ ಮತ್ತು ಆತನ ಮಹತ್ವ-ಎಂಬ ಎರಡನೆಯ ಭಾಗದಲ್ಲಿ ವಿಭೂತಿ ಪುರುಷ ಶ್ರೀ. ಬಸವೇಶ್ವರನ ಚರಿತ್ರೆ, ಆತನ ಮಹತ್ಕಾರ್ಯಗಳು, ಆತನ ಧಾರ್ಮಿಕ ವಿಚಾರ ಮತ್ತು ಆತನ ಕುರಿತಾದ ನುಡಿಗಳ ಪ್ರಶಂಸೆ, ಬಸವ ಸಾಹಿತ್ಯ-ಇವೇ ಮೊದಲಾದ ಬಹು ಅಮೋಘ ಲೇಖನ, ಕವಿತೆಗಳಿವೆ, ಅದಲ್ಲದೆ ಬಸವೇಶ್ವರ, ಅಕ್ಕ ಮಹಾದೇವಿ, ಅಲ್ಲಮ ಪ್ರಭು, ಹೇಮರೆಡ್ಡಿ ಮೊದಲಾದ ಮಹಾತ್ಮರ ಚಿತ್ರಗಳೂ, ಭಾಗಮಂಡಿ, ಕವಾಡಿ ಮೊದಲಾದ ಕ್ಷೇತ್ರಚಿತ್ರಗಳೂ ಇದ್ದು, ಈ ಸಂಚಿಕೆಗೆ ಇನ್ನಷ್ಟು ಕಳೆಯೇರಿ ಕೊನೆಯಲ್ಲಿ ಲೇಖಕರ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟು, ಶಿವಮೂರ್ತಿಗಳು ವಾಚಕರನ್ನು ಉಪಕೃತರನ್ನಾಗಿ ಮಾಡಿದ್ದಾರೆ.

ಒಟ್ಟಾರೆ ಹೇಳುವದಾದರೆ, ಧಾರ್ಮಿಕ ವಿಚಾರದಲ್ಲಿ ಇಂಥಾ ಸಾಹಸವು ಕನ್ನಡ ಸಾಹಿತ್ಯದಲ್ಲಿ ಹೊಸದು. ಶರಣ ಸಾಹಿತ್ಯದ ಬಸವ ಜಯಂತಿ ವಿಶೇಷ ಸಂಚಿಕೆಯು ನಮ್ಮ ನಾಡಿನ ಸಾಹಿತ್ಯ ಸಾಮ್ರಾಜ್ಯದಲ್ಲಿ ಧರ್ಮದ ಬೆಳವಣಿಗೆಗೊಂದು ಆದರ್ಶ ಮಾರ್ಗವನ್ನು ಕಲ್ಪಿಸಿಕೊಟ್ಟಿದೆ. ಕೀರ್ತನ ಕೇಸರಿಯವರ ಸಾಹಸೋದ್ಯಮವು ಶ್ಲಾಘನೀಯವಿದೆ. ಶರಣ ಸಾಹಿತ್ಯವು ಸರ್ವತೋಮುಖ ಶಕ್ತಿಯನ್ನು ಹೊಂದಿ, ಇನ್ನಷ್ಟು ಬೆಳಗಲಿ, ಸಾಹಿತ್ಯ ಶರಣರ ಸೇವೆ ಶ್ರೇಯಸ್ಕರವಾಗಿ ನಡೆಯಲಿ.

ಎನ್. ಎಸ್. ಎನ್.

ಸೌಭಾಗ್ಯಸಿದ್ಧಿ ತಾಯಿತ

ದೇಹಸಂಪತ್ತು, ಕುಟುಂಬದ ಸುಖ ಸೌಖ್ಯ, ಉದ್ಯೋಗದಲ್ಲಿ ಯಶಸ್ಸು, ವಿದ್ಯೆಯಲ್ಲಿ ಜಯ, ಕೋರ್ಟ ವ್ಯವಹಾರಣೆಯಲ್ಲಿ ಮೇಲುಗೈ, ದುರಾದೃಷ್ಟಗಳ ದುಷ್ಟಪೀಡೆ ನಿವಾರಣೆ ಇನ್ನಿತರ ಸುಖ-ಸೌಭಾಗ್ಯಾದಿ ಲಾಭಕ್ಕಾಗಿ 'ಜಯ ವಶೀಕರಣ' ತಾಯಿತವನ್ನೇ ಧರಿಸಿರಿ.

ಕ್ರಯ: ರೂ. 2-8-0. ವಿ. ಪಿ. 0-7-0

ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Hanuman Ahsramam,
Tirutani, S. India.

WANTED: 80 candidates of both sexes who after expert training as film artistes and technicians are prepared to work for the College Film Company for two years on decent salary Free Hostel seat and other benefits. Illustrated Art Prospectus on 5 annas posatge. Prabhat Movietone College, Bombay 11

ಮೈಸೂರಿನಲ್ಲಿ ಶ್ರೇಷ್ಠವರ್ಗದ ಬ್ರಾಹ್ಮಣರ ಉಪಹಾರ ವಸತಿ ಗೃಹಗಳು.

ಗಾರ್ಡನ್ ಹೊಟೇಲ್

(ಫೋನ್ ನಂಬ್ರ:106) ಹಳೆ ಪೋಸ್ಟಾಫೀಸು ರೋಡ್ ಮೈಸೂರು.

ಆಧುನಿಕ ಸೌಕರ್ಯಗಳಿಂದ ಕೂಡಿದ ವಿಶಾಲವಾದ ಸಿಂಗ್ಲ್ ಡಬ್ಬಲ್ ಕೋಣೆಗಳು.!

ಕುಟುಂಬ ಪರಿವಾರ ಸಮೇತರಾಗಿ ಬರುವವರಿಗೆ

ಉಳಕೊಳ್ಳುವರೆ ಅತೀ ಯೋಗ್ಯ ಸ್ಥಳ.

ಉಡುಪಿ ಆನಂದ ಭವನ

ಫೋನ್ ನಂಬ್ರ 347

ಇದೇ ಪ್ಯಾಲೇಕರಿಂದ ಅರಮನೆಯ ಎದುರು ನವನಾಗರಿಕತೆಗೆ ತಕ್ಕಂತೆ ನಡೆಯಿಸಿಕೊಂಡು ಬರುವ ನವೀನ ಉಪಹಾರ ಗೃಹ

ಮೈಸೂರಿಗೆ ಬಂದಲ್ಲಿ ಇದನ್ನು ಸಂದರ್ಶಿಸಲು ಮರೆಯದಿರಿ

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು. ಕೃಷ್ಣರಾಜ ಸಾಗರ್ ರೆಸ್ಟೋರೆಂಟ್, ಕನ್ನಂಬಾಡಿ, ಮೈಸೂರು.

ಮದ್ರಾಸಿಗೆ ಬಂದಲ್ಲಿ

ಮೈಸೂರು ಕೇಫ್

ರೆಸ್ಟೋರೆಂಟ್ ಮತ್ತು ಬೋರ್ಡಿಂಗ್, ಲಾಡ್ಜಿಂಗ್ ಸಂದರ್ಶಿಸಲು ತಪ್ಪದಿರಿ

ಪ್ರೊಪ್ರೈಟರ್-ಕೆ. ಗುರುರಾಜಾಚಾರ್.

ಲೂಟಿ! ಲೂಟಿ!! ಖಾಲಿ ೩ ರೂಪಾಯಿಗೆ ಹೊಸ ವರ್ಷಕ್ಕೆ

ಅಚ್ಚಾದ ಹೊಸ ನಮೂನೆ

ಒಂದು ಮಾಸದ ವರೆಗೆ ಮಾತ್ರ ವಿಶೇಷ ರಿಯಾಯತಿ.



ಶೀಘ್ರ ವಿಕ್ರಯ ಆಗುತ್ತಿದೆ. ವಿಳಂಬ ಮಾಡಿದರೆ ಪಶ್ಚಾತ್ತಾಪ ಪಡಬೇಕಾದೀತು.

ತಾಜಾ ಅಮೆರಿಕನ್ ಅಲಾರ್ಮ್ ಪಿಸ್ತೂಲು

ಹೆಚ್ಚು ಸಂಖ್ಯೆಯಲ್ಲಿ ಕೊಂಡುಕೊಂಡರೆ ಧಾರಾಳ ಕಮಿಶನು ಇದೆ. ಚಿತ್ರದಲ್ಲಿರುವಂತೆ 7 ಇಂಚು ಉದ್ದ 15 ಚೆನ್ನುಭಾರ, ನೋಡಿದೊಡನೆ ವೈರಿಗಳು ಭೀತರಾಗುವರು. ಕಳ್ಳಕಾಕರು, ದುಷ್ಟ ಮೃಗಗಳು ಭಯಂಕರ ಶಬ್ದ ಕೇಳಿ ಪಲಾಯನ ಮಾಡುವವು ಕೂಡಲೇ ಕೊಂಡುಕೊಂಡು ನಿಮ್ಮ ಒಡವೆಗಳನ್ನೂ ಆತ್ಮವನ್ನೂ ರಕ್ಷಿಸಿಕೊಳ್ಳಿರಿ. ಲೈಸನ್ಸಿಲ್ಲದೆ ಪ್ರತಿಯೊಬ್ಬನೂ ಉಪಯೋಗಿಸಬಹುದು. ಇಂದರೊಂದಿಗೆ 300 ಗುಂಡುಗಳು. ಉಚಿತ. 50 ಗುಂಡುಗಳನ್ನು ಏಕದಂ ಹೊಡೆಯುವ ಪಿಸ್ತೂಲಿಗೆ ರೂ. 3/-. ಒಂದೇ ಸಲ 70ಗುಂಡುಬಿಡುತ್ತದಕ್ಕೆ ರೂ. 3/8-. 200 ಹಾರಿಸುವುದಕ್ಕೆ ರೂ. 4/- ಅಂಚೆ ವೆಚ್ಚ ಬೇರೆ 1000 ಗುಂಡುಗಳಿಗೆ ರೂ. 2/-ಎಣ್ಣೆ ಡಬ್ಬಿಗೆ 0-8-0. ಪಿಸ್ತೂಲಿಡುವ ಸುಂದರ ಪೆಟ್ಟಿಗೆಗೆ ರೂ. 1-8-0. (ನಿಮ್ಮ ಮತ್ತು ನಮ್ಮ ವಿಳಾಸವನ್ನು ಸ್ಪಷ್ಟ ಬರೆಯಿರಿ)

ದೊರೆಯುವ ಸ್ಥಳ:-

ಅಮೆರಿಕನ್ ಪಿಸ್ತೂಲು ಹೌಸ್,	**American Pistol Co.**
ಪಿ. ಒ. ಬಾಕ್ಸ್ ನಂ. 27	P. B. No. 27 (N. Y. U.)
(N.Y.U.) ಅಮೃತಸರ [ಇಂಡಿಯಾ]	**Amritsar (India).**

ಕೇವಲ ಧರ್ಮಾರ್ಥ!

ಈ ಜಾಹೀರಾತಿನ ಕೂಪನನ್ನು ತರುವವರಿಗೆ ಅವರ ಫೋಟೋವನ್ನು ಧರ್ಮಾರ್ಥವಾಗಿ ತೆಗೆದುಕೊಡಲಾಗುವುದು.

ತ್ವರೆ ಮಾಡಿರಿ ! ಬೊಂಬಾಯಿ ಪಟ್ಟಣಿಗರೆ ತ್ವರೆ ಮಾಡಿರಿ !!

● ಈ ನಮ್ಮ ಫೋಟೋವನ್ನು ಎನ್‌ಲಾರ್ಜ್‌ಮೆಂಟಿಗೆ ಬರೇ ರೂ. 1/ ಮಾತ್ರ. (ಸೈಜ್ 6"×8").

ಹೊರಗಿನವರು ಈ ಕೂಪನಿನೊಂದಿಗೆ ತಮ್ಮ ಫೋಟೋ ಕಳುಹಿಸಿದರೆ ಅದನ್ನು 6'×8' ಸೈಜಿನಲ್ಲಿ ರೂ. 2-8-0ಕ್ಕೆ ಎನ್‌ಲಾರ್ಜ ಮಾಡಿಕೊಡಲಾಗುವುದು. 16×'20'ರ ದೊಡ್ಡ ಸೈಜಿಗೆ ರೂ 5 ಮಾತ್ರ. ನಮ್ಮ ಆಫೀಸು ಸಮಯ ಬೆಳಿಗ್ಗೆ 9ರಿಂದ ಸಂಜೆ 7, ಆದಿತ್ಯವಾರ ಬೆಳಿಗ್ಗೆ 9ರಿಂದ ಸಂಜೆ 4 ಗಂಟೆ ತನಕ

ಕೆ. ಎಚ್. ಪಥಕ್

276, ಸೂರ್ಯಮಹಾಲ್	ರೋಯಲ್ ಆರ್ಟ್‌ಸ್ಟುಡಿಯೋ,
ಗಿರ್ಗಾಮ್‌ರೋಡು, ಬೊಂಬಾಯಿ 14	183 ಹೋರ್ನ್ಬಿರೋಡು, ಬೊಂಬಾಯಿ 14

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:—** ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:—** ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:—** ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು:— ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ ೬ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ ೩½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪುಂಜ,

President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇವರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,

ಗವರ್ನ್‌ಮೆಂಟ್ ಕೊಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,

Hampankatte, **MANGALORE.**

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ. ಅಳೆಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1ಕ್ಕೆ 12 ಆಣೆ, ಟ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,

ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ.**

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಡುನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ ಬಹಿಷ್ಠೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತು ಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು "ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ ಅಗತ್ಯವಾಗಿ ಇರಲೇಬೇಕಾದ್ದು.

ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,

ಬ್ರಾಂಚ್—ಮಂಗಳೂರು.

ನಿಮ್ಮ ಇಚ್ಛೆಯು ನೆರವೇರುವದು.



ಯಾವ ವಿಷಯದಲ್ಲಿ ನೀವು ನಿರಾಶರಾಗಿದ್ದೀರೋ ಅಂತಹ ವಿಷಯಗಳಲ್ಲಿ ನಿಮ್ಮ ಅಭೀಷ್ಟವನ್ನು ಸಾಧಿಸಲಿಕ್ಕೆ ನಮ್ಮ ವಶೀಕರಣಯಂತ್ರವನ್ನು ತರಿಸಿಕೊಳ್ಳಿರಿ.

ಈ ಯಂತ್ರವನ್ನು ನಿಮ್ಮ ವಶ ಇರಿಸಿಕೊಂಡು ನಿಮಗೆ ಆಗಬೇಕಾದ ವಿಷಯವನ್ನು ಮನಸ್ಸಿನಲ್ಲಿ ಧ್ಯಾನಿಸಿದರೆ ನಿಜವಾಗಿಯೂ ನಿಮ್ಮ ಅಭಿಲಾಷೆಯು ಪೂರೈಸುವದು.

ಸೂರ್ಯನು ಪಶ್ಚಿಮದಲ್ಲಿ ಉದಯಿಸಿದರೂ ಈ ಯಂತ್ರವು ಎಂದಿಗೂ ನಿರರ್ಥಕವಾಗುವದಿಲ್ಲ. ಅತಿಪ್ರಯಾಸದಿಂದ ಈ ಯಂತ್ರವನ್ನು ತಯಾರುಮಾಡಿದೆ.

ಯಂತ್ರ 1ಕ್ಕೆ ರೂ. 2-4-0. ವಿದೇಶಕ್ಕೆ 5 ಶಿಲಿಂಗ್. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

ಅಮೇರಿಕನ್ ಮೆಸ್ಮೆರಿಸಮ್ ಹೌಸ್ American Mismerism House

ಪೋ. ಬಾ. ನಂ. 27 (N.Y.U.) P. B. No. 27(N. Y. U.)

ಅಮೃತಸರ, (ಇಂಡಿಯಾ) **Amritsar (India)**

Rev. Fr. P. W. Farias,

St. Paul's Church,
Bolkunje Post, S. K.
Dated 4th January 1939.

To

THE JOINT MANAGERS,
The C P C Co Ltd., MANGALORE

Sir

I thank you most sincerely for the promptness with which you arranged to take us to Mangalore and back during the grand occasion of the Diocesan Encharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the congress.

The glorious success of our congress is also due to your exertion in putting up the various lights some of which I hear were done voluntarily.

May the blessings of the Almighty fall on you all and may you be able to do much good to the public.

Renewing my thanks,
I remain,
Yours sincerely,
(*Sd.*) P. W. Farias.

To
THE JOINT MANAGERS,
THE COMBINED BOOKING AGENCY,
MANGALORE.

Sri Parshwanathaswamy
Panchakalyana Pooja Mahothsawam
VENOOR (S. Kanara 1939).

Dear Sirs,

Please permit us to express our thanks on behalf of the above committee for the efficient service rendered by your Combined Booking Agency staff at Venoor to the visitors of the Panchakalyana Pooja Mahosthamam celebrations held this year.

Our thanks are also due to Moodabidre Booking Clerk Mr. B Krishnnayya and also his other mates and Mr. Ragbavendra Bhandary who was specially come down from Mangalore to see the needs of and comforts of the travelling Public.

Thanking you once again,
We remain,
Yours faithfully,
(*Sd.*) **M. Jagathpal,**
(*Sd.*) **M. Pachappa Shetty,**
VENOOR, (*Sd.* in Canarese) **Anantharaja Shetty,**
Dated 6-2-'39. (Sd.) **B. Chandappa Indra,**
(*Secretary, P. M. Committee*).
Members, Panchakalayana Mahosthawam Committee.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	3	0	0
ಚಂದ್ರಗುಪ್ತ ಚಕ್ರವರ್ತಿ	1	0	0
Goutama Budda	0	8	0
भगवद्गीता	0	2	0
ಮಧುವನ	1	8	0
ಒಂದೇ ತಿಂಗಳಲ್ಲಿ ಇಂಗ್ಲಿಷ್	0	8	0
ಎರಡೇ ವಾರಗಳಲ್ಲಿ ಓದುಬರಹ	0	1	0
ಗೀತೆಯ ಕೈಗನ್ನಡಿ	0	4	0
ಭಗವದ್ಗೀತೆ	0	2	0
ತುಳು ವ್ಯಾಕರಣ	0	8	0
ಸಾಮುದ್ರಿಕ ಶಾಸ್ತ್ರ	0	8	0
ಸತ್ಯನಾರಾಯಣ ಕತೆ	0	8	0
ಪುರಂದರದಾಸರ ಪದಗಳು ಭಾಗ ೧	0	4	0
,, ಭಾಗ ೨	0	4	0
,, ಭಾಗ ೩	0	4	0
ತುಳುನಾಡ್ ತಿಲಕ ಪಂಚಾಂಗ	0	1	0
ವೈಜಯಂತೀ ಪಂಚಾಂಗ	0	2	6
ಕುಕ್ಕುಟ ಪಂಚಾಂಗ	0	1	0

ಇತ್ಯಾದಿ ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors:*— **GENERAL SUPPLIES Ltd., Udipi).**

Supply Agency Limited.

(BANKERS.)

ESTD] **UDIPI** [1933

Authorised Capital Rs. **1,00,000**
Subscribed & Paid up Rs. **30,760**

RATE OF INTEREST FOR FIXED DEPOSITS.

3 to 6 Months 4% p. a.
7 to 11 ,, 5% ,,
12 to 18 ,, 6% ,,

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

Registered No. M. 3618

NAVAYUGA

ನವಯುಗ

29-6-1939



[ಅಂತರಂಗದ ಸೌಹಾರ್ದದಿಂದ.]

ಶ್ರೀ ಸುಭಾಸ ಭೋಸರು.

ಕಳೆದ ವಾರದಲ್ಲಿ ಮುಂಬಾಯಿಯಲ್ಲಿ ಸಂಭ್ರಮದ ಸ್ವಾಗತ ಪಡೆದು, ಅಲ್ಲಿಯ ಕವಾಸ್ಜಿ ಜಹಂಗೀರ್ ಹಾಲಿನಲ್ಲಿ ತಾ. 22ರಲ್ಲಿ ಜರಗಿದ ಪ್ರಥಮ ಅಖಿಲ ಭಾರತೀಯ ಫೋರ್ವರ್ಡ್ ಬ್ಲೋಕ್ ಪರಿಷತ್ತಿನ ಅಧ್ಯಕ್ಷ್ಯ ವಹಿಸಿ, ಫೋರ್ವರ್ಡ್ ಬ್ಲೋಕಿನ ಗೊತ್ತುಗುರಿಗಳನ್ನೂ ಸ್ಥಾಪನೆಯ ಅವಶ್ಯಕತೆಯನ್ನೂ ವಿವರಿಸಿ ಸುದೀರ್ಘ ಭಾಷಣವಿತ್ತರು.

೧೦ ಗಡಿಯಾರಗಳು ಬರೇ೩॥ ರೂಪಾಯಿಗೆ



ಏಳು ದವ್ಮೀ ಕೈವಾಚುಗಳು, ೨ ದಮ್ಮಿ ಕಿಸೆಗಡಿಯಾರಗಳು, ಮತ್ತು ಒಂದು ಗಟ್ಟಿಯಂತ್ರದ ಸರಿ ಸಮಯ ತೋರಿಸುವ ಜರ್ಮನಿ ಟೈಂಪೀಸ್, ೩೦ ಗಂಟೆಗೊಮ್ಮೆ ಕೀ, ೧೨ವರ್ಷದ ಗ್ಯಾರಂಟಿ ಈ ಗಡಿಯಾರವನ್ನು ವಿಲಾಯಿತಿಯಿಂದ ಹೆಚ್ಚು ಸಂಖ್ಯೆಯಲ್ಲಿ ತರಿಸಿದ್ದೇವೆ, ಈ ರಿಯಾಯತಿದರದಲ್ಲಿ ಕೇವಲ ೧೦,೦೦೦ ಗಡಿಯಾರಗಳನ್ನು ಮಾತ್ರವೇ ಮಾರುವುದು. ತ್ವರೆ ಮಾಡಿರಿ! ಸುಸಂದರ್ಭ ತಪ್ಪಿಹೋದೀತು. ಇದರೊಂದಿಗೆ ೧೪ ಕ್ಯರೆಟ್ ರೋಲ್ಡ್‌ಗೋಲ್ಡು ನಿಬ್ಬಿನ ಫೌಂಟನ್ ಪೇನು ಒಂದು, ದೃಷ್ಟಿಚಕ್ರ ಒಂದು, ಮುತ್ತಿನ ಹಾರ ಒಂದು—ಇಷ್ಟು ಉಚಿತ, ಅಂಚೆವೆಚ್ಚ ಬೇರೆ. ಅತೃಪ್ತಿಯಾದರೆ ಹಣ ಹಿಂದೆ, ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ.

ದೊರೆಯುವ ಸ್ಥಳ:—

ಜರ್ಮನ್ ವಾಚ್ ಕಂಪೆನಿ,
ಪೋಸ್ಟು ಬಾಕ್ಸ್ ನಂ. ೨೭
(N.Y.U.) ಅಮೃತಸರ [ಇಂಡಿಯಾ]

German Watch Co.
P. B. No. 27 (N.Y.U.)
AMRITSAR, (India),

ಮೈಸೂರಿನಲ್ಲಿ ಶ್ರೇಷ್ಠವರ್ಗದ ಬ್ರಾಹ್ಮಣರ ಉಪಹಾರ ವಸತಿ ಗೃಹಗಳು.

ಗಾರ್ಡನ್ ಹೋಟೇಲ್

(ಫೋನ್ ನಂಬ್ರ:406) ಹಳೆ ಪೋಸ್ಟಾಫೀಸು ರೋಡ್ ಮೈಸೂರು.
ಆಧುನಿಕ ಸೌಕರ್ಯಗಳಿಂದ ಕೂಡಿದ ವಿಶಾಲವಾದ ಸಿಂಗ್ಲ್ ಡಬ್ಬಲ್ ಕೋಣೆಗಳು!
ಕುಟುಂಬ ಪರಿವಾರ ಸಮೇತರಾಗಿ ಬರುವವರಿಗೆ
ಉಳಕೊಳ್ಳುವರೆ ಅತೀ ಯೋಗ್ಯ ಸ್ಥಳ.

ಉಡುಪಿ ಆನಂದ ಭವನ

ಫೋನ್ ನಂಬ್ರ 347
ಇಡೇ ಮ್ಯಾಲೀಕರಿಂದ ಅರಮನೆಯ ಎದುರು ನವನಾಗರಿಕತೆಗೆ ತಕ್ಕಂತೆ ನಡೆಯಿಸಿಕೊಂಡು ಬರುವ ನವೀನ ಉಪಹಾರ ಗೃಹ
ಮೈಸೂರಿಗೆ ಬಂದಲ್ಲಿ ಇದನ್ನು ಸಂದರ್ಶಿಸಲು ಮರೆಯದಿರಿ
ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು. ಕೃಷ್ಣರಾಜಸಾಗರ್ ರೆಸ್ಟೋರೆಂಟ್, ಕನ್ನಂಬಾಡಿ, ಮೈಸೂರು.
ಮದ್ರಾಸಿಗೆ ಬಂದಲ್ಲಿ

ಮೈಸೂರು ಕೇಫ್

ರೆಸ್ಟೋರೆಂಟ್ ಮತ್ತು ಬೋರ್ಡಿಂಗ್, ಲಾಡ್ಜಿಂಗ್ ಸಂದರ್ಶಿಸಲು ತಪ್ಪದಿರಿ
ಪ್ರೊಪ್ರೈಟರ್-ಕೆ. ಗುರುರಾಜಾಚಾರ್.

—·— ಬಲು ಸುಲಭ ದರದಲ್ಲಿ —·—

- ಉತ್ಕೃಷ್ಟ ಊಟ ಉಪಹಾರಾದಿಗಳಿಗಾಗಿ ಇತ್ತ ಗಮನಿಸಿರಿ!
- ನಾವು ನಮ್ಮನ್ನೇ ವಿಶೇಷವಾಗಿ ಪ್ರಶಂಸಿಸಿ ಕೊಳ್ಳಬಾರದಷ್ಟೆ!

ಲಕ್ಷ್ಮೀ ನಿವಾಸ
ಹಿಂದೂ ಹೋಟೇಲು

(ಸ್ಥಾಪನೆ 1926)
ವಿಠಲ್ ಭಾಯಿ ಪಟೇಲ್ ರೋಡ್, ಗಿರ್ಗಾಂ, ಮುಂಬಯಿ.

Lakshmi Nivas Hindu Hotel

VITTALBHAI PATHEL ROAD,
GIRGAUM — — BOMBAY.

ಮದನರತಿಕಾಮಶಾಸ್ತ್ರ ಎಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ತೋರಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು

ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಭೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ, ಸ್ತ್ರೀಯರನ್ನು ವಶ ಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಎಂಡ್ ಕಂಪೆನಿ,**
ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co., *Nambulier Street*, G. T. MADRAS.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ! ಫಲ ಅಧಿಕ!!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘ್ನಾಶಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್
ಕಾಶೀಮಠದ ಕಟ್ಟೋಣ, ಉಡುಪಿ
ಬ್ರಾಂಚ್:—ಹೂವಿನಮಾರ್ಕೆಟಿನ ಬಳಿ, ಮಂಗಳೂರು.
ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ. ಅನುಕೂಲ ಹಾಗೂ ಕೇಂದ್ರಸ್ಥಳ.

ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯವೆಂಬಂತೆ ಸಾಮಾನುಗಳು ಹೇಲುಗಟ್ಟಲೆ ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

ESTD. 1921 ಸ್ಥಾಪನೆ

FOUNDER
Sri. A. B. SHETTY, M.L.A.
Parliamentary Secretary, Govt of Madras.
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ ಸಂಚಿಕೆ ೪೩	ಉಡುಪಿ, ಗುರುವಾರ ೨೯-೬-೧೯೩೯ Udipi, Thursday 29—6—1939	Vol. XVIII No. 43

ಚಂದಾ ವಿವರ:
೧ ವರ್ಷಕ್ಕೆ ರೂ. ೩—೪—೦.
೬ ತಿಂಗಳಿಗೆ ರೂ. ೧—೧೨—೦.

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಮಾಚಾರ ಸಮಾವಲೋಕನ

ಮ್ಯೂರ್ ಹೆಡ್ಡರ ನಕಾರ!

"ನಮ್ಮನ್ನು ಸುಧಾರಿಸಿಕೊಂಡು ಹೋಗಿರಿ; ಈಗ ಕೊಟ್ಟದ್ದು ಸಾಲದು" ಎಂದು ಆಶ್ರಿತ ರಾಜರು ಫೆಡರೇಶನಿನ ಕುರಿತು ಚಂಡಿಹಿಡಿದು ಕುಳಿತಿರುವರಷ್ಟೆ. ಅವರ ಬಾಯಿಗೆ ಇನ್ನಷ್ಟು ದೊಡ್ಡ ತುಂಡನ್ನು ತುರುಕಿಸಿ ಜೋಗುಳ ಹಾಡುವ ಆಲೋಚನೆ

ಮ್ಯೂರ್ ಹೆಡ್ಡರು

ಯುಂಟೇ? ಎಂಬ ಪ್ರಶ್ನೆ ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಬಂತು. "ನಾವು ವೈಸರಾಯರ ಮೂಲಕ ಕಳೆದ ಜನವರಿಯಲ್ಲಿ ರಾಜರುಗಳಿಗೆ ಕಳುಹಿಸಿದ ಸೂಚನೆಗಳು ಎಲ್ಲಾ ವಿಷಯಗಳನ್ನೂ ದೀರ್ಘವಾಗಿ ಯೋಚಿಸಿಯೇ ತಯಾರಿಸಲ್ಪಟ್ಟವುಗಳಾದುದರಿಂದ ಅವುಗಳ ಕುರಿತು ಪುನರಾಲೋಚನೆಯಿಲ್ಲ" ಎಂದು ಭಾರತದ ಉಪಸಚಿವರಾದ ಕರ್ನಲ್ ಮ್ಯೂರ್ ಹೆಡ್ಡರು ಉತ್ತರವಿತ್ತರು. ಇಂದ ಮೇಲೆ ಆಶ್ರಿತ ರಾಜರಿಗೇನು ಗತಿ? ಬ್ರಿಟಿಷ್ ಸರಕಾರದ ಸೂಚನೆಗಳಿಗೆ 'ಜೀಯ, ಅಪ್ಪಣೆ!' ಎನ್ನುವ ಬದಲು 'ಇದು ಸಾಲದು!' ಎಂದು ಆಶ್ರಿತ ರಾಜರು ಹೇಳಲು ಕಲಿತುದು ಇದೇ ಮೊದಲ ಬಾರಿ! ಮೊದಲ ಪಾಠದಲ್ಲೇ ನಾಪಾಸಾಗುವ ಯೋಗ ಬಂತಲ್ಲ.

⁂

ಲಂಡನಿನಿಂದ ಹೈದರಾಬಾದು ವಾರ್ತೆ!

ಮ್ಯೂರ್ ಹೆಡ್ಡರು ಹಿಂದೀ ಸಂಸ್ಥಾನಗಳ ಒಳಗಿನ ಪ್ರಶ್ನೆಗೂ ಪಾರ್ಲಿಮೆಂಟಿನಲ್ಲಿ ಉತ್ತರಕೊಡುವ ಸಂದರ್ಭ ಬಂತು. ಬ್ರಿಟಿಷ್ ಭಾರತದ ಪ್ರಾಂತಿಕ ಸರಕಾರಗಳು ಸಂಸ್ಥಾನದ ಚಳವಳಿಗೆ ಸಹಾಯವೀಯುವ ತಮ್ಮಲ್ಲಿಯ ಸಂಘಸಂಸ್ಥೆಗಳ ಕುರಿತು ಕಾರ್ಯ ಕೈಗೊಂಡಿರುವವೆ? ಹಾಗೆ ಮಾಡುವ ಆಗತ್ಯವಿಲ್ಲವೆ? ಎಂಬ ಪ್ರಶ್ನೆ ಬಂದಾಗ ಉಪಸಚಿವರೆಂದರು—"ಸ್ವಂತ ಕಾರಣಗಳಿಂದಾಗಿ ಬೊಂಬಾಯಿ ಪ್ರಾಂತ್ಯವೊಂದು ಅಂತಹ ಗುಂಪುಗಳಿಗೆ ತಡೆಹಾಕಿದೆ. ಮಿಕ್ಕ ಪ್ರಾಂತ್ಯಗಳಲ್ಲಿ ಹಾಗೆ ಮಾಡಲಿಲ್ಲ, ಮತ್ತು ಮಾಡುವ ಅಗತ್ಯವೂ ಇಲ್ಲ. ಹೈದರಾಬಾದಿನ ಸಂಬಂಧದ ಪ್ರಶ್ನೆಯನ್ನು ಉತ್ತರಿಸುವಾಗ ಸತ್ಯಾಗ್ರಹ ಚಳವಳಿಂದಾಗಿ ಮೇ ಅಂತ್ಯದ ವರೆಗೆ 5000 ಮಂದಿಯು ದಸ್ತಗಿರಿಯಾಗಿರುವರೆಂದೂ, ಜೈಲಿನಲ್ಲಿರುವವರ ಆರೈಕೆಯು ಜಾಹೀರಾಗಿ ಟೀಕಿಸುವಂತಹ ಸ್ಥಿತಿಯಲ್ಲಿಲ್ಲವೆಂದೂ, ಆದಕ್ಕಾಗಿ ವಿಚಾರಣೆ ನಡೆಯಿಸುವ ಆಗತ್ಯವೂ ಇಲ್ಲವೆಂದೂ ಕರ್ನಲ್ ಮ್ಯೂರ್‌ಹೆಡ್ಡರೆಂದರು. ಯಾಕೆ ವಿಚಾರಣೆ ನಡೆಸಬೇಕು? ಹೈದರಾಬಾದ್ ಜೈಲಿನೊಳಗೆ ಒಬ್ಬೊಬ್ಬರೇ ಸಾಯುವ ವಾರ್ತೆಯೇನೋ ಬರುತ್ತಿದೆ. ಹೆಣದ ದೇಹದಲ್ಲಿ ಘಾಯಗಳಿದ್ದುವೆಂದು ಪರೀಕ್ಷಿಸಿದ ಡಾಕ್ಟರರೂ ಸರ್ಟಿಫಿಕೇಟು ಕೊಟ್ಟಿದ್ದರು; ಆದರೆ ಘೆಟಿಸ್ ಸಬ್ ಮೆರಿನಿನೊಳಗಿದ್ದವರಂತೆ ಉಸಿರುಕಟ್ಟಿ ಸತ್ತ ದಾಖಲೆಯೇ ಇಲ್ಲದಿರುವಾಗ ವಿಚಾರಣೆಯ ಆಗತ್ಯವೇನು? ಆದಕ್ಕೂ ವಿಚಾರಣೆ, ಇದಕ್ಕೂ ವಿಚಾರಣೆಯೆ?

⁂

ಮದ್ರಾಸೂ ಮುಂದೆ ಬಂದಿದೆ!

ಭಾರತದ ಉಪಸಚಿವರಿಗೆ ಹೈದರಾಬಾದಿನ ಕುರಿತು ಮಾತನಾಡುವ ಸಂದರ್ಭವು ಸ್ವಲ್ಪ ಮೊದಲಾಗಿ ಬಂದು ಬಿಟ್ಟಿತು. ಆದ್ದರಿಂದ ಬೊಂಬಾಯಿಯೊಂದರ ಹೆಸರನ್ನೇ ಅವರು ಎತ್ತುವಂತಾಯಿತು. ಅಥವಾ ಮಾನ್ಯ ರಾಜಗೋಪಾಲಾಚಾರ್ಯರು ತುಸು ವಿಳಂಬಿಸಲು ಹೋಗಿ ಬ್ರಿಟಿಷ್ ಮಂತ್ರಿಯ ಬಾಯಿಂದ ತನ್ನ ಪ್ರಾಂತ್ಯದ ನಾಮೋಚ್ಚಾರಣೆಯಾಗುವ ಸುವರ್ಣ ಸಂದರ್ಭವೊಂದನ್ನು ಕಳಕೊಂಡರೆನ್ನಬೇಕು. ಈಗ ಮದ್ರಾಸಿನಲ್ಲಿಯೂ ಹೈದರಾಬಾದು ಸಂಬಂಧದ ಸಭೆಗಳ ಮೇಲೆ 144ನೇ ಸೆಕ್ಷನು ಜ್ಯಾರಿಯಾಗಿದೆ. ಹಾಗೆಯೇ ಹೈದರಾಬಾದು ವಿರುದ್ಧ ಬರವಣಿಗೆಗಳ ಮೇಲೂ ಬಹಿಷ್ಕಾರ ಬಿದ್ದಿದೆ. ಮದ್ರಾಸ್ ಸರಕಾರದ ಈ ವರ್ತನೆಯು ಅಖಿಲ ಭಾರತದಲ್ಲಿ ಹಲವರ ಟೀಕೆಗೊಳಗಾಗಿದೆ. ತನ್ನ ವರ್ತನೆಯ ಅರ್ಥವೇ ಜನರಿಗೇಕೆ ತಿಳಿಯುವದಿಲ್ಲವೆಂದು ಮಾನ್ಯ ಆಚಾರ್ಯರು ತತ್ತರಿಸದಿರಲಾರರು. ಹೈದರಾಬಾದಿನ ಚಳವಳಿಯೊಡನೆ ಮದ್ರಾಸಿನವರಿಗೆ ಸಂಬಂಧ ಬೇಡವೆಂಬ ಸದುದ್ದೇಶದಿಂದ ಈ ತಡೆ ಹಾಕಿದರೆ ಅಖಿಲ ಭಾರತವೂ ಅದರಲ್ಲಿ ಸಂಬಂಧ ಕಟ್ಟಿಕೊಳ್ಳುವದೆಂದರೆ ಯಾವ ನ್ಯಾಯವಿದು?

⁂

ಕ್ರಾಂತಿಕಾರರ ಭ್ರಾಂತಿ!

ಮಾನ್ಯ ರಾಜಗೋಪಾಲಾಚಾರ್ಯರ ಈ ವರ್ತನೆಯನ್ನು ತೀವ್ರವಾಗಿ ಟೀಕಿಸುತ್ತಿರುವವರೆಂದರೆ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಸಾವರ್ಕರರು ಮತ್ತು ಎಂ. ಎನ್. ರಾಯಿಗಳು. ಸಾವರ್ಕರರಂತೂ ಕಟಿಬಿಗಿದು ಮದ್ರಾಸಿನ ಯುದ್ಧಾಹ್ವಾನವನ್ನು ಸ್ವೀಕರಿಸಿಯೇ ಸಿದ್ಧವೆನ್ನುತ್ತಿದ್ದಾರೆ. ಈ ಕಾನೂನನ್ನುಲ್ಲಂಘಿಸಲು ಸ್ವಯಂಸೇವಕರನ್ನು ಸಂಗ್ರಹಿಸಬೇಕೆಂದು ಉರಿದೆದ್ದಿದ್ದಾರೆ. ಮದ್ರಾಸಿನಲ್ಲಿ ನಾಗರಿಕ ಹಕ್ಕಿಗೇ ಧಕ್ಕೆ ತಗಲಿದೆ; ಮಂತ್ರಿಮಂಡಲದೊಳಗೆ ಏನೋ ಕೊಳೆತಂತೆ ಕಾಣುತ್ತದೆ. ಜನರದನ್ನು ಪ್ರತಿಭಟಿಸಬೇಕು ಎಂದು ರಾಯಿಗಳನ್ನುತ್ತಾರೆ. ಅಂತೂ ಈ ಘಟನೆಯು ಹೈದರಾಬಾದು ಸರಕಾರಕ್ಕೆ ಅಯಾಚಿತ ಅನುಗ್ರಹ! ಎಲ್ಲೆಲ್ಲಿ ಹೈದರಾಬಾದು ವಿರೋಧಿಗಳೇಳುತ್ತಾರೋ ಅಲ್ಲಲ್ಲಿ ಅವರಿಗೆ ಹೋರಾಟದ ಕ್ಷೇತ್ರ ದೊರೆಯುತ್ತದೆ! ಹಿಂದಿನ ಯುಗದ ಇಂದ್ರಜಿತುವಿನ ಮಾಯಾಯುದ್ಧವೆಂದರೆ ಹೀಗೆಯೇ ಇರಬಹುದು!

⁂

ಸಮತಾವಾದಿ ಪಕ್ಷದೊಳಗೆ ಸಮಸಾಲು

ಅಖಿಲ ಭಾರತ ಕಾಂಗ್ರೆಸ್ ಸಮತಾವಾದಿ ಪಕ್ಷದ ಕಾರ್ಯಕಾರೀ ಸಮಿತಿಯ ತಮ್ಮ ಸ್ಥಾನಗಳಿಗೆ ಶ್ರೀಗಳಾದ ಎಮ್. ಆರ್. ಮಸಾನಿ, ಅಶೋಕ ಮೆಹತಾ, ಅಚ್ಯುತ ಪಟ್ವರ್ಧನ, ಯೂಸಫ್ ಮೆಹರಾಲಿ ಮತ್ತು ಡಾ| ರಾಮಮನೋಹರ ಲೋಹಿಯಾರವರು ರಾಜಿನಾಮೆಯಿತ್ತಿರುವರು. ಪಕ್ಷದ ಮುಖ್ಯ ಕಾರ್ಯದರ್ಶಿ ಜೈಪ್ರಕಾಶ ನಾರಾಯಣರ ಧೋರಣೆಯು ಇವರಿಗೆ ಸರಿಬೀಳದಿದ್ದುದೇ ಕಾರಣವೆಂದು ತಿಳಿದುಬರುತ್ತದೆ. ಸೋಶಿಯಲಿಸ್ಟ್ ಮತ್ತು ಕಮ್ಯೂನಿಸ್ಟರೊಳಗೆ ಸಂಧಾನವಾಗುವ ವಿಷಯದಲ್ಲಿ ಹಾಗೂ 'ಫ್ರೋವರ್ಡ್ ಬ್ಲೋಕಿ'ನ ಕಡೆಗಿರಬೇಕಾದ ಧೋರಣೆಯಲ್ಲಿ ಪ್ರಮುಖ ಕಾರ್ಯದರ್ಶಿಯವರಿಗೂ ಈ ಮೆಂಬರರಿಗೂ ತೀವ್ರ ಮತಭೇದವಿದೆಯಂತೆ. ರಾಜಿನಾಮೆಯಿತ್ತಿರುವವರು ಸಮತಾವಾದಿಪಕ್ಷದ ಮೂಲಸ್ಥಾಪಕರಿದ್ದು ಅದೀಗ ಜೈ ಪ್ರಕಾಶನಾರಾಯಣರೊಬ್ಬರಲ್ಲೇ ಮೂರ್ತೀಭವಿಸಿ ನಿಲ್ಲಬೇಕಾಗಿ ಬಂದಿದೆ. ಸ್ವಾತಂತ್ರ್ಯಕ್ಕಾಗಿ ನೇರಾಗಿ ಧಕ್ಕೆ (Direct Action) ಬಡಿಯುವದೊಂದೇ ಹಾದಿಯೆಂದು ಅದಿಯಿಂದಲೂ ಹಾಡುತ್ತಿದ್ದ ಸಮತಾವಾದಿ ಪಕ್ಷವು ಕ್ರಿಪುರಿಯಲ್ಲೆದ್ದ ಅಂತಃಕಲಹದ ಸಂದರ್ಭದಲ್ಲಿ ಸ್ವರ ಬದಲಾಯಿಸಿ ಒಕ್ಕಟ್ಟು ಬೇಕೆಂಬ ಪಲ್ಲವಿ ಹಾಡಹತ್ತಿತು! ಹೀಗೆ ಕಾಂಗ್ರೆಸಿನೊಳಗೆ ಒಗ್ಗಟ್ಟು ಮಾಡುವ ಧೋರಣೆಯಿಂದಾಗಿಯೇ ಪಕ್ಷವು ಇಬ್ಭಾಗವಾಯಿತು. ವಿಶಾಲಧ್ಯೇಯಕ್ಕಾಗಿ ಸಣ್ಣ ಪುಟ್ಟ ಭಿನ್ನತೆಗಳನ್ನು ಬಿಟ್ಟುಕೊಡಬೇಕೆಂಬ ಪಂಡಿತ ಜವಾಹಿರಲಾಲರ ನೀತಿಯನ್ನು ಸಮತಾವಾದಿ ಪಕ್ಷವು ಅನುಸರಿಸಿತೆನ್ನಬಾರದೇಕೆ?

THE
TROPICAL
INSURANCE COMPANY, LTD.
NEW DELHI

CHAIRMAN:
SJT. SUBHAS CHANDRA BOSE.

FOUNDER DIRECTORS:

Pandit Motilal Nehru — Sjt. S. Srinivasa Iyengar
Dr. M. A. Ansari — Hakim Ajmal Khan

THIS LEADING NATIONAL COMPANY FOUNDED AND MANAGED BY FIVE CONGRESS PRESIDENTS INVITES APPLICATIONS FOR REPRESENTATION ON SALARY AND COMMISSION.

APPLY TO:

M. Sunder Ram Shetty, BRANCH MANAGER, Hampankatta, Mangalore.
OR
K. S. Ramamurthi, M.A. BRANCH SECRETARY, 160, Mount Road, Madras.

ಜಯಾಪಜಯಗಳು ನಮ್ಮ ಕೈಯಲ್ಲಿವೆ.

ನಾವು ಹೇಗೆ ಸ್ವತಂತ್ರರಾಗಬಹುದು?

ಲೇಖಕರು - ಶ್ರೀ ಬಿ ಯಸ್. ಹೆಗ್ಡೆ, ಬಿ ಎ, ಮುಂಬಯಿ.

ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ಬೇಕಾದ ಕ್ರಾಂತಿಕಾರೀ ಕಾರ್ಯಕ್ರಮವು ಸದ್ಯದ ಪರಿಸ್ಥಿತಿಯಲ್ಲಿ ಅಸಾಧ್ಯವೆಂದೇ ನಮ್ಮ ಮುಂದಾಳುಗಳ ಅಭಿಪ್ರಾಯವಿರುವಂತಿದೆ. ಹಾಗಿರುವಾಗ ಹಿಂದುಸ್ಥಾನದ ವಾತಾವರಣವು ಸ್ವರಾಜ್ಯ ಸಂಗ್ರಾಮಕ್ಕೆ ಅನುಕೂಲವಿಲ್ಲವೆಂದ ಮಾತು. ಹಾಗೆಂದರೆ ಎಂದೆಂದಿಗೂ ಪರಾಧೀನರಾಗಿರುವುದೇ ನಮ್ಮ ಭಾಗ್ಯವೆಂದಾಯಿತು. ರಾಜಕೀಯ ಸ್ವಾತಂತ್ರ್ಯವು ದೊರೆಯುವದೇ ನಮಗೆ ಹಿಂದುಸ್ಥಾನದ ಆ ರಾಷ್ಟ್ರೀಯತ್ವವು ತೋರುತ್ತಿರುವುದು ನಮ್ಮ ನೀತಿ ಒಪ್ಪಂದಕ್ಕೆ ಶರವಾಗಿ ಸಾಮ್ರಾಜ್ಯಶಾಹಿಯ ಪ್ರಯತ್ನದಿಂದ ಸಾಮ್ರಾಜ್ಯಾಧಿಕಾರಿಗಳಿಗೆ ಹಿಂದುಸ್ಥಾನದ ಸ್ವರಾಜ್ಯವನ್ನು ಗಳಿಸಿಕೊಳ್ಳಬೇಕಾಗುವದಲ್ಲದೆ ಹಿಂದೀ ಜನಾಂಗದ ಉದ್ಧಾರ ಮಾಡುವ ಸಂದರ್ಭವು ದೊರೆಯಲಾರದು. ಆದರೆ ಅಂತಾ ಸಂದರ್ಭವು ಒದಗುವುದು ಯಾವಾಗ? ಸಾಮ್ರಾಜ್ಯಾಧಿಕಾರಿಗಳ ಉದ್ದೇಶ ಏನೆಂದು ನಮಗೆ ಗೊತ್ತಿಲ್ಲವೇ? ಹಿಂದೂದೇಶವನ್ನು ತಮ್ಮ ಕೈಯಲ್ಲಿಟ್ಟುಕೊಳ್ಳುವುದೇ ಬ್ರಿಟಿಷ್ ಸಾಮ್ರಾಜ್ಯವು ತಾನಾಗಿಯೇ ಮಾಯವಾಗುವುದಿಲ್ಲ. ಪ್ರಾಂತಿಕ ಸರಕಾರದಿಂದ ನಮಗೆ ಎಳ್ಳಷ್ಟಾದರೂ ಅಧಿಕಾರದೊರೆತಿದೆ ಎಂದು ಭಾವಿಸುವವರು ಜೆಟಲೆಂಡ ಸಾಹೇಬರ ಕೆಳಗಿನ ಮಾತಿನ ಮೇಲೆ ಸ್ವಲ್ಪ ಗಮನವಿಡಬೇಕು.

“ಸರಕಾರದ ಹೊರೆಯನ್ನು ಕೊಟ್ಟದ್ದು ಏರೇ ಅವರ ಪರೀಕ್ಷೆಗಾಗಿ ಎಂಬುದೀಗ ಸರ್ವ ಸಮ್ಮತವಾದ ವಿಷಯವು” ಈಗ ನಮಗೆ ಸಿಕ್ಕಿರುವುದು ರಾಜನೈತಿಕ ಅಧಿಕಾರವಲ್ಲ. ಸರಕಾರವನ್ನು ನಡೆಸುವ ಹಿರಿ ಆ ಹೊರೆಯನ್ನು ಧರಿಸಲು ಇವರು ಯೋಗ್ಯರೇ ಎಂಬುದನ್ನು ನಿರ್ಧರಿಸುವ ಪರೀಕ್ಷೆಯು ಈಗ ನಡೆಯುತ್ತಿರುವುದು. ಅದಕ್ಕನುಗುಣವಾಗಿ ನಮ್ಮ ಮಂತ್ರಿಮಹಾಶಯರುಗಳು ಆ ಶಂಕಾತ್ಮಕ ಗೌರವಕ್ಕಾಗಿ ಹೆಣಗುತ್ತಿರುವರು

ಜನರ ಪ್ರತಿನಿಧಿಗಳ ಮೇಲೆ ಇಷ್ಟು ಔದಾರ್ಯ ತೋರಿಸುತ್ತ ಅವರಿಗೆ ಇಷ್ಟೊಂದು ಸಹಾಯ ಏಕ ಕೊಡುತ್ತಿರುವರು- ಸರಕಾರವು ಯಾರಿಂದಲೇ ನಡಿಸಿ ಬರಲಿ ಆದರೆ ಅದು ಇದುವರೆಗೂ ಸಾಮ್ರಾಜ್ಯ ವಾಹಿಯ ಅವಿಭಾಜ್ಯ ಅಂಗವಾಗಿರುವುದು ಹನ್ನೊಂದರಲ್ಲಿ ಎಂಟು ಪ್ರಾಂತಗಳಲ್ಲಿ ನಮ್ಮ (ಪ್ರತಿನಿಧಿಗಳ) ಸಮಸರಕಾರ (Parallel Govt.) ವೆಂಬ ಕಾಂಗ್ರೆಸು ವರ್ಕಿಂಗ್ ಕಮಿಟಿಯ ಜಂಭವು ಕೇವಲ ಪೊಳ್ಳೇ ಸರಿ. ಈಗ ನಡೆಯುತ್ತಿರುವುದು ಪ್ರತಿನಿಧಿಗಳಿಗೆ ಸಾಮ್ರಾಜ್ಯಶಾಹೀ ಸರಕಾರವನ್ನು ನಡೆಸಲು ಸಾಧ್ಯವಿದೆಯೇ ಎಂಬ ಪರೀಕ್ಷೆ. ಹಿಂದುಸ್ಥಾನದ ಜನರೊಡನೆ ವಿಚ್ಛೇದಾತ್ಮಕ ಕದನ ಬೇಡವೆಂದೇ ಅವರು ಪ್ರತಿನಿಧಿಗಳಿಗೆ ಇಷ್ಟೊಂದು ಮೈತ್ರಿ ತೋರಿಸುತ್ತಿರುವರು. ನಮ್ಮ ಮಂತ್ರಿವರ್ಯರುಗಳು ಅಂಥಾ ಜಗಳಕ್ಕೆ ಸಿದ್ಧರಾಗುವರೆಂದೇನೋ ಕಾಣುವುದಿಲ್ಲ ಬದಲಾಗಿ ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ತಾನಾಗಿಯೇ ನಮಗೆ ಅಧಿಕಾರಕೊಡುವುದೆಂಬ ಆಶೆಯಿಂದ ತೃಪ್ತರಾಗಿ ಕುಳಿತಿರುವರು

ಬರುವ ಅಖಿಲ ಭಾರತೀಯ ಕಾ. ಕಮಿಟಿಯಲ್ಲಿ ಜೆಟಲೇಂಡ್ ಸಾಹೇಬರಿಗೆ ಯೋಗ್ಯ ಉತ್ತರವನ್ನು ಕೊಟ್ಟರೆ ಮಾತ್ರ ಪರಿಸ್ಥಿತಿಯು ಬದಲಾಗಬಹುದು. ನಮ್ಮ ಅಧಿಕಾರವನ್ನು ನಮಗೆ ಕೊಡಿ ಎಂದು ಬೇಡುವ ಹೀನವೃತ್ತಿಯನ್ನು ಬಿಡಬೇಕಾಗಿದೆ. ಅಧಿಕಾರ ಪ್ರಾಪ್ತಿಗೆ ರಂಗಕ್ಕಿಳಿಯಲು ಸಿದ್ಧರಾಗಿರುವುದೇ ನಮ್ಮ ಕರ್ತವ್ಯವು. ಬರೇ ಸತ್ಯಾಗ್ರಹದಿಂದ ಅಧಿಕಾರ ಸ್ಥಾಪನೆಯಾಗಬಹುದೆಂಬುದು ಅಸಂಭವವು ಅಂಥಾ ಅಸ್ತ್ರದಿಂದ ಹೂಡಿದ ಯುದ್ಧದ ಪರಿಣಾಮವು ಸೋಲೆಂಬುದು ಈಗ ತಾನೆ ರಾಜಕೋಟದಲ್ಲಿ ನಿರ್ಣಯವಾಯಿತು. ತನ್ನ ಬ್ರಹ್ಮಾಸ್ತ್ರದ ಪ್ರಯೋಗವು ಬಹುಬೇಗವಾಯಿತೆಂದೂ, ಠಾಕೂರ ಸಾಹೇಬರ ಸಹಾನುಭೂತಿಯಿಂದಲೇ ನಮಗೆ ಸಿಗಬೇಕಾದುದೆಲ್ಲಾ ಸಿಗಬಹುದೆಂದೂ ಗಾಂಧಿಜಿಯವರು ಯೋಚಿಸಿದಂತೆ ಕಾಣುತ್ತದೆ. ಕಣ್ಣು ತೆರೆಯದೆ ಮುಂದೆ ನಡೆದರೆ ರಾಜಕೋಟದ ಕಥೆಯೇ ಪುನಃ ನಡೆಯುವುದೆಂಬುದರಲ್ಲಿ ಸಂದೇಹವಿಲ್ಲ. ಸ್ವಾತಂತ್ರ್ಯ ಸಾಧನೆಗೆ ಸತ್ಯಾಗ್ರಹವೇ ನಮ್ಮ ಆಯುಧವೆಂದು ಮುನ್ನಡೆಯುವುದರಿಂದ ಸೋಲು ಮತ್ತು ಮಾನನಷ್ಟಗಳಲ್ಲದೆ ಬೇರೇನೂ ಫಲ ಸಿಗಲಾರದೆಂಬುದಾ ನಿಶ್ಚಯ. ಅಧಿಕಾರವು ನಮ್ಮ ಕೈಗೆ ಸಿಕ್ಕಿತೆಂಬ ಮಿಥ್ಯಾಭಿಪ್ರಾಯವನ್ನು ಹರಡಲು ಸಾಮ್ರಾಜ್ಯಾಧಿಕಾರಿಗಳು ಆಡಳಿತ ನಮ್ಮ ಪ್ರತಿನಿಧಿಗಳ ನೆರವಾಗುತ್ತಿರುವರು.

ಬರುವ ಅ. ಭಾ. ಕಾ. ಕಮಿಟಿಯಲ್ಲಿ ಧೈರ್ಯದಿಂದ ವರ್ತಿಸಿದರೆ ಮಾತ್ರ ನಮ್ಮ ಸ್ವಾತಂತ್ರ್ಯ ಸಾಧನೆಯ ಕಾರ್ಯವು ನೆರವೇರಬಹುದು ಆದರೆ ಕಾಂಗ್ರೆಸು ಶುದ್ಧೀಕರಣವಾಗುತ್ತ ಕಡೆಗೆ ಒರೇ ಖಾದಿಧಾರಿಗಳ ಒಂದು ಸಣ್ಣ ಸಮಾಜವಾಗಬಹುದೆಂಬ ಹೆದರಿಕೆಯಾಗುತ್ತದೆ. ಕ್ರಾಂತಿಕಾರೀ ಕಾರ್ಯಕ್ರಮದಿಂದ ಸ್ವಾತಂತ್ರ್ಯ ಸಾಧನೆಯಾಗಬೇಕೆಂಬ ಅಭಿಪ್ರಾಯದವರನ್ನೆಲ್ಲಾ ಕಾಂಗ್ರೆಸಿನಿಂದ ಓಡಿಸುವುದೇ ಇಂದಿನ ರಾಜಕೀಯ ನೇತೃವೃಂದದ ದೃಢ ನಿಶ್ಚಯ. ಇಂದು ಕಾಂಗ್ರೆಸ್ ರಾಜನೀತಿಯೆಂದರೆ ಮಂತ್ರಿಪದ ಸ್ವೀಕಾರದ ಹೊರತು ಬೇರೇನಿಲ್ಲ.

ಇಷ್ಟರ ವರೆಗೆ ಕಾಂಗ್ರೆಸು ಕೈಗಟ್ಟಿ ಸಾಮ್ರಾಜ್ಯಾಧಿಕಾರಿಗಳ ದಯೆಯ ಭಿಕ್ಷೆಗಾಗಿ ನಿಂತಹಾಗೆ ಕಾಣುತ್ತಿದೆ ಹಾಗಿದ್ದರೆ ಪರಾಜಯದ ಹೊರತು ಬೇರೆ ಗತಿಯಿಲ್ಲವೆಂದಾಯಿತು. ಆದರೆ ಧೈರ್ಯದಿಂದ ಮುನ್ನಡೆದು ನಮ್ಮ ಅಧಿಕಾರವನ್ನು ಸಾಧಿಸಿಕೊಳ್ಳಲು ಹಿಂದುಸ್ಥಾನದವರೆಲ್ಲಾ ಸಿದ್ಧರಿದ್ದರೆ ಮಾತ್ರ ಸ್ವಾತಂತ್ರ್ಯದ ದಾರಿಯಾಗುವುದೆಂದು ತೋರುವುದು

ಸಾಮ್ರಾಜ್ಯಾಧಿಕಾರಿಗಳ ಮತ್ತು ಹಿಂದುಸ್ಥಾನದ ಪ್ರಜೆಗಳ ಲಾಭವು ದ್ವಂದ್ವಾತ್ಮಕವಾದುದರಿಂದ ಅವರೊಳಗೆ ಕದನವು ಅನಿವಾರ್ಯವು ನಮಗೆ ನಿರಾಶೆಯಾಗಬಾರದೆಂದು ನನ್ನ ಪ್ರಾರ್ಥನೆ.

ಕನ್ನಡ ಗ್ರಂಥಕರ್ತರಲ್ಲಿ ಹಾಗೂ ಪ್ರಕಾಶಕರಲ್ಲಿ ವಿಜ್ಞಾಪನೆ

ಮುಂಬಯಿ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಕನ್ನಡ ಗ್ರಂಥಗಳ ಸಂಖ್ಯೆಯು ತೀರ ಕಡಿಮೆಯಾಗಿದೆ ಇಷ್ಟು ವಿಶಾಲ ಭಾರತೀಯ ಭಾಷೆಗಳಲ್ಲಿಯ ಗ್ರಂಥ ಭಂಡಾರದ ಅಲ್ಲಿ ಸಾಕಷ್ಟು ಇದ್ದರೂ ನಮ್ಮ ಕನ್ನಡ ಗ್ರಂಥಗಳಿಗೆ ತಕ್ಕ ಸ್ಥಾನವು ಇಲ್ಲದಿರಲಿಕ್ಕೆ ನಮ್ಮ ಅನಾಸ್ಥೆಯೇ ಕಾರಣವೆಂದು ಹೇಳಬಹುದು ಮುಂಬಯಿ ಯುನಿವರ್ಸಿಟಿಯ ಗ್ರಂಥಾಲಯಕ್ಕಾಗಿ ಇಷ್ಟರಲ್ಲಿ ಹಣವಷ್ಟು ರಕ್ಷಿಸಲ್ಪಟ್ಟರೂ ಸಹ ಇಲ್ಲಿ ಇಡತಕ್ಕ ಕನ್ನಡ ಗ್ರಂಥಗಳ ಸಂಖ್ಯೆಯು ಸ್ವಲ್ಪ ಪ್ರಮಾಣದಲ್ಲಿ ಬೆಳೆದಿಲ್ಲ

ಈ ವಿಷಯದಲ್ಲಿ ನಾನು ಮತ್ತು ನನ್ನ ಸಂಗಡಿಗರು ಗ್ರಂಥಾಲಯದ ಗಮನಕ್ಕೆ ತಂದು ಯುನಿವರ್ಸಿಟಿಯ ಅಧಿಕಾರಿಗಳನ್ನು ಕೇಳಲಾಗಿ ಅವರು ಒಳ್ಳೆ ಸಮಾಧಾನಕರವಾದ ಉತ್ತರವನ್ನು ಕೊಟ್ಟು ನಮ್ಮ ಸೂಚನೆಗಳನ್ನು ಕೊಡಲು ಆ ವಿಷಯದಲ್ಲಿ ಪರಿಶೀಲಿಸತಕ್ಕ ಕೆಲಸವನ್ನು ಮಾಡಲು ಒಪ್ಪಿಕೊಂಡಿರುತ್ತಾರೆ

ಗ್ರಂಥಾಲಯದ ಮುಖ್ಯಾಧಿಕಾರಿಗಳು ನಮ್ಮ ಕಡೆಯಿಂದ ಬೇಕಾದ ಪುಸ್ತಕಗಳ ಪಟ್ಟಿಯನ್ನು, ಪುಸ್ತಕಗಳು ಸಿಗುವ ವಿಳಾಸಗಳನ್ನು ಕೇಳಿದಾರೆ ನಾವು ಗ ಮತ್ತು ನಮ್ಮ ಮಿತ್ರರಿಗೆ ಗೊತ್ತಿರುವ ಸಂಗತಿಗಳ ಮೇರೆಗೆ ನಾವು ಪಟ್ಟಿಯನ್ನು ತಯಾರಿಸಿ ಕಳುಹಿಸಲಿರುವೆವು ಆದರೆ ವಿಶಾಲ ಕರ್ನಾಟಕದಲ್ಲಿ ಪ್ರಸಿದ್ಧವಾಗುತ್ತಿರುವ ಎಲ್ಲಾ ಗ್ರಂಥಗಳ ಜ್ಞಾನವು ನಮಗೆ ಇರುವದು ಸಹಜವಲ್ಲವಾದುದರಿಂದ ಗ್ರಂಥಕರ್ತರೂ ಹಾಗೂ ಪ್ರಕಾಶಕರೂ ತಮ್ಮ ತಮ್ಮ ಗ್ರಂಥಗಳ ಬಗ್ಗೆ ಮುಂಬಯಿ ವಿಶ್ವವಿದ್ಯಾಲಯದ ಗ್ರಂಥಾಲಯದ ಮುಖ್ಯಾಧಿಕಾರಿಗಳಿಗೆ ಹಾಗೂ ಕನ್ನಡ ಅಭ್ಯಾಸ ಮಂಡಳದ ಸಭಾಸದರಿಗೆ ಮತ್ತು ಯುನಿವರ್ಸಿಟಿಯ ಕನ್ನಡ ಸದಸ್ಯರಿಗೆ ಆಗಾಗ ತಿಳಿಸುತ್ತಿರಬೇಕು. ತಮ್ಮ ಪುಸ್ತಕದ ಪಟ್ಟಿಯನ್ನು, ವಿಳಾಸ ಮುಂತಾದ ಸೂಚನೆಗಳನ್ನು, ಮೇಲ್ಕಾಣಿಸಿದ ಜನರಿಗೆ ಕಳುಹಿಸುತ್ತಿರಬೇಕು ಹೀಗಾದಲ್ಲಿ ಯುನಿವರ್ಸಿಟಿಯ ಲಾಯಬ್ರರಿಯಲ್ಲಿ ಕನ್ನಡ ಗ್ರಂಥ ಸಂಗ್ರಹವು ಬೆಳೆಯುವುದು ಅಭ್ಯಾಸ ಕ್ರಮದಲ್ಲಿ ಯೋಗ್ಯವಾದ ಗ್ರಂಥಗಳನ್ನು ಸೇರಿಸಲು ನಮಗೆ ಅನುಕೂಲವಾಗುವದು. ಹಾಗೂ ಗ್ರಂಥಕರ್ತರಿಗೆ ಮತ್ತು ಪ್ರಕಾಶಕರಿಗೆ ಧನಸಹಾಯವಾಗುವದು ಅಲ್ಲಿಯ ಕನ್ನಡ ಗ್ರಂಥಗಳ ಸಂಗ್ರಹವು ಸರ್ವಾಂಗ ಪರಿಪೂರ್ಣವಾಗುವಂತೆ ನೋಡಿಕೊಳ್ಳಬೇಕೆಂದು ನಾನು ಇಚ್ಛಿಸುತ್ತೇನೆ ಈ ಕಾರ್ಯಕ್ಕೆ ಸಂಬಂಧಪಟ್ಟ ಮಾಹಿತಿಯು ನಮಗೆ ದೊರೆಯಬೇಕೆಂದು ನನ್ನ ಪ್ರಾರ್ಥನೆ.

ಬಳವಂತರಾವ ದಾತಾರ,
ಮುಂಬಯಿ ವಿಶ್ವವಿದ್ಯಾಲಯದ ಸೇನೇಟಿನ ಹಾಗೂ ಕನ್ನಡ ಅಭ್ಯಾಸ ಮಂಡಳದ ಸದಸ್ಯರು

ಯಾವಾಗಲೂ ವಾರ್ತಾ ಪತ್ರಿಕೆಗಳನ್ನೋದಿರಿ

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದವು ಮೈಸೂರು ಸೇಂಡಲ್ ಸೋಪು ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು

ಅಖಿಲ ಕರ್ನಾಟಕ ಮಕ್ಕಳ ಕೂಟದ ಎರಡನೇ ಸಮ್ಮೇಳನ

ಅಖಿಲ ಕರ್ನಾಟಕ ಮಕ್ಕಳ ಕೂಟದ ಎರಡನೆಯ ಸಮ್ಮೇಳನವು ಜೂನ್ ತಿಂಗಳು 30 ಮತ್ತು ಜುಲೈ ಒಂದು ಎರಡನೇ ತಾರೀಖುಗಳು ಮೂರು ದಿನಗಳೂ ಬೆಂಗಳೂರಿನಲ್ಲಿ ನಡೆಯುವುದಾಗಿ ನಿಶ್ಚಯ ಮಾಡಿದೆ ಮಕ್ಕಳ ಸಮ್ಮೇಳನ, ಮಕ್ಕಳ ಕವಿ ಸಮ್ಮೇಳನ, ಮಕ್ಕಳ ನಾಟಕ, ವಿನೋದಗಳು, ಮಕ್ಕಳಿಗಾಗಿ ಹಿರಿಯರಿಂದ ಭಾಷಣಗಳು, ವಸ್ತು ಪ್ರದರ್ಶನ, ಶಿಶುಸಾಹಿತ್ಯ ಪ್ರದರ್ಶನವೇ ಮೊದಲಾದ ಕಾರ್ಯಕ್ರಮಗಳು ಏರ್ಪಾಡಾಗಿವೆ. ಅಲ್ಲಲ್ಲಿ ಮಕ್ಕಳ ಕೂಟಗಳನ್ನು ನಡೆಸುತ್ತಿರುವವರು. ಮಕ್ಕಳ ಸಮ್ಮೇಳನದಲ್ಲಿ ಸೇರಲಿರುವ ಠರಾವುಗಳನ್ನೂ ಚರ್ಚಿಸಲಿರುವ ವಿಷಯಗಳನ್ನೂ ಸಂದೇಶಗಳನ್ನೂ ದಯವಿಟ್ಟು ಕಳುಹಿಕೊಟ್ಟು ಕೂಟದ ಕಾರ್ಯವು ಯಶಸ್ವಿಯಾಗಿ ನಡೆಯಲು ನಮಗೆ ನೆರವಾಗಬೇಕಾಗಿದೆ.

ಆರ್ ಕಲ್ಯಾಣಮ್ಮ. ಅಧ್ಯಕ್ಷರು,
ಅಖಿಲ ಕರ್ನಾಟಕ ಮಕ್ಕಳ ಕೂಟ
ಸರಸ್ವತಿ ಕಾರ್ಯಾಲಯ, ಚಾಮರಾಜ ಪೇಟೆ,
ಬೆಂಗಳೂರು ನಗರ

ಕರ್ನಾಟಕ ನೂತನ ಸಂಗೀತ ಸಭಾ
ಮುಂಬಾಯಿ

ದುಃಖ ಸೂಚನೆ.

ಈ ಮೇಲಿನ ಸಭೆಯ ತರ್ಫೆ ಸದಸ್ಯರೂ ಕಲಾವಂತರೂ, ಆದ ಶ್ರೀ ತಿಮ್ಮಪ್ಪ ಶೆಟ್ಟಿಯವರು ಅಕಾಲ ಮರಣಕ್ಕೆ ತುತ್ತಾದುದು ಬಹಳ ದುಃಖದಾಯಕ ವಿಷಯವಾಗಿದೆ ಇವರ ಮರಣದಿಂದ ಇವರ ಕುಟುಂಬಿಕರಿಗಾದ ದುಃಖದಲ್ಲಿ ನಾವು ಕೂಡಾ ಸಹಭಾಗಿಗಳಾಗಿದ್ದೇವಲ್ಲದೆ ಇವರ ಪವಿತ್ರ ಆತ್ಮಕ್ಕೆ ಪರಮೇಶ್ವರನು ಚಿರಶಾಂತಿಯನ್ನೀಯಲೆಂದು ಪ್ರಾರ್ಥಿಸಿಕೊಳ್ಳುತ್ತೇವೆ ಎಂದು ಗೌರವ ಚಿಟಕಾರ್ಯದರ್ಶಿಗಳಾದ ಶ್ರೀಗಳಾದ ಜಿ ಡಿ ಕಾಂಚನ್, ಮತ್ತು ಆರ್ ಪಿ ಕರ್ಕೇರರು ತಿಳಿಸುತ್ತಾರೆ.



ಬಾಬೂರಾಜೇಂದ್ರ ಪ್ರಸಾದರು

ಸ್ವದೇಶ ವಿಚಾರ

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ

ಅಖಿಲ ಭಾರತ ರಾಷ್ಟ್ರಸಭೆಯ ಕಾರ್ಯಕಾರೀ ಸಮಿತಿಯ ಸಭೆಯು ತಾ 21ರಲ್ಲಿ ಬೊಂಬಾಯಿಯಲ್ಲಿ ಕೂಡಿಬಂತು ತಾ 21 ಮತ್ತು 22ರಲ್ಲಿ ಕಾಂಗ್ರೆಸ್ ಘಟನೆಯ ತಿದ್ದುಪಡಿಯ ಕುರಿತು ಸುದೀರ್ಘ ಚರ್ಚೆ ನಡೆಯಿತು ಕಾಂಗ್ರೆಸ್ ಘಟನಾಸಮಿತಿಯವರು ಕಲಮು 5 (c)ಗೆ ಸೂಚಿಸಿದ ತಿದ್ದುಪಡಿಯ ಮೇಲೆ ಎಡಪಕ್ಷದವರ ತೀವ್ರ ವಿರೋಧವಿತ್ತು ಅನ್ಯ ಸಾಮಸಂಸ್ಥೆಗಳ ಮೆಂಬರರಾಗುವವರು ಕಾಂಗ್ರೆಸ್ ಮೆಂಬರರಾಗಿರಕೂಡದೆಂಬ ಈ ತಿದ್ದುಪಡಿಯನ್ನು ಎಡಪಕ್ಷೀಯರ ಸಮಾಧಾನಕ್ಕಾಗಿ, ಅದು ರಾಷ್ಟ್ರಸಭೆಯ ಮಹಾಧಿವೇಶನದಲ್ಲೇ ಬರಬೇಕೆಂಬ ಗಾಂಧಿಯವರ ಸೂಚನೆಯಂತೆ ತೆಗೆದುಹಾಕಲಾಯಿತು. ಎ ಐ ಸಿ ಸಿ. ಯ ಚುನಾವಣಾಕ್ರಮದ ತಿದ್ದುಪಡಿಯು ಸಂಘಟನಾ ಸಮಿತಿಯವರ ಸೂಚನೆಯಂತೆ ಮಂಜೂರಾಯಿತು ಸಿಲೋನ್ ಮತ್ತು ದಕ್ಷಿಣ ಆಫ್ರಿಕದಲ್ಲಿ ಹಿಂದೀಯರಿಗೊದಗಿರುವ ಸಂಕಷ್ಟಗಳ ಪರಿಶೀಲನೆಯಾಯಿತಲ್ಲದೆ ಸಿಲೋನಿಗೊಬ್ಬ ಕಾಂಗ್ರೆಸ್ ರಾಯಭಾರಿಯನ್ನು ಕಳುಹುವ ಸೂಚನೆಯೂ ಆಯಿತು ದಿಗ್ಬೋಯಿ ಮುಷ್ಕರದ ಕುರಿತು ಬಾಬೂರಾಜೇಂದ್ರರ ಹೇಳಿಕೆಯಾಗಿ ಸಂಸ್ಥಾನಗಳ ಕಡೆಗಿರಬೇಕಾದ ಧೋರಣೆಯೇ ಮೊದಲಾದವುಗಳ ಕುರಿತು ನಿಷ್ಕರ್ಷಿಸಲ್ಪಟ್ಟಿತು ಕಾಂಗ್ರೆಸ್ ಮಂತ್ರಿಗಳು ಪ್ರಾಂತಿಕ ಕಾಂಗ್ರೆಸ್ ಸಮಿತಿಗಳ ಸಲಹೆಯನ್ನು ಕೇಳಿಕೊಳ್ಳುವ ಅಗತ್ಯವಿಲ್ಲವೆಂದೂ, ಮುಖ್ಯ ವಿಷಯಗಳನ್ನು ಪ್ರಾಂತಿಕ ಸಮಿತಿಗಳಿಗೆ ತಿಳಿಸತಕ್ಕದೆಂದೂ ಮಂತ್ರಿಗಳಿಗೂ ಸಮಿತಿಗೂ ಭಿನ್ನಾಭಿಪ್ರಾಯ ಬಂದಲ್ಲಿ ಪಾರ್ಲಿಮೆಂಟರೀ ಸಬ್‌ಕಮಿಟಿಯ ತೀರ್ಮಾನವೇ ಕೊನೆಯದೆಂದೂ ನಿರ್ಣಯಿಸಲಾಯಿತು, ಪ್ರಾಂತಿಕ ಸಮಿತಿಯ ಅಭಿಪ್ರಾಯ ಕೇಳದೆ ಕಾಂಗ್ರೆಸ್ ಮೆಂಬರರು ಎಲ್ಲಿಯೂ ಕಾಯಿದೇಭಂಗ ಚಳವಳ ಹೂಡಬಾರದಾಗಿ ನಿರ್ಧಾರವಾಯಿತು ಸಿಲೋನಿಗೆ ಹೋಗಿ ಅಲ್ಲಿಯ ಸರಕಾರದೊಡನೆ ಹಿಂದೀಯರ ಪರವಾಗಿ ಸಂಧಾನ ನಡೆಸುವರೆ ಪಂಡಿತ ಜವಾಹಿರಲಾಲರನ್ನು ಕಳುಹಿಸುವ ನಿರ್ಣಯವಾಗಿರುವುದು

ಅಖಿಲಭಾರತ ಸಮಿತಿ ಸಭೆ

ಏ ಐ ಸಿ ಸಿ ಯ ಸಭೆಯು ತಾ. 22ರಲ್ಲಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು, ಅದಕ್ಷರು ಒಕ್ಕಟ್ಟಿನ ಅವಶ್ಯಕತೆಯನ್ನು ವಿವರಿಸಿ ಶಿಸ್ತುಭಂಗದಿಂದಾಗುವ ಹಾನಿಯನ್ನು ತಿಳಿಸಿ, ಸಂದೇಶವನ್ನು ಓದಿಸಿ, ಆರಂಭದ ಭಾಷಣವಿತ್ತರು ಕಾರ್ಯಕಾರೀ ಸಮಿತಿಯವರ ಸೂಚನೆಗಳೆಲ್ಲವೂ ಸವಿವರವಾಗಿ ಚರ್ಚಿಸಲ್ಪಟ್ಟವು

ಆಶ್ರಿತರಾಜರು ಗಾಂಧಿಯವರ ಮರೆಹೋಗುವರೆ?

ಕೆಲವು ಮಂದಿ ಮುಖ್ಯ ಆಶ್ರಿತ ರಾಜರು ಮಹಾತ್ಮ ಗಾಂಧಿಯವರೊಡನೆ ತಮ್ಮ ಭವಿಷ್ಯ ನಿರ್ಮಾಣಕ್ಕಾಗಿ ಮಾತುಕತೆ ನಡೆಸುವ ಆತುರದಿಂದಿರುವರೆಂದು ಖಂಡಿತವಾಗಿ ತಿಳಿದುಬಂದಿದೆ ತಮ್ಮ ಆಪ್ತಿಕೆಯ ವಿರೋಧಿಯೆಂದು ಇವರಿಗೆ ಗಾಂಧಿಯವರನ್ನು ತಿಳಿದುಕೊಂಡಿದ್ದ ರಾಜರಲ್ಲಿ ಕೆಲವರು ದರೂ ಈಗ ಅವರನ್ನು ತಮ್ಮ ಮಿತ್ರರೆಂದು ಭಾವಿಸಹತ್ತಿರುವರು ಇದಕ್ಕೆ ಗಾಂಧಿಯವರು ಆಶ್ರಿತ ರಾಜ್ಯಗಳ ಕಡೆಗೆ ಅನುಸರಿಸಿರುವ ಹೊಸ ಧೋರಣೆಯೇ ಕಾರಣ ಸಂಸ್ಥಾನಗಳ ಒಳಾಡಳಿತ ಮತ್ತು ಪಡಶೀಶನಿನ ಕುರಿತು ಆಶ್ರಿತ ರಾಜರು ಮಹಾತ್ಮರ ಅಭಿಪ್ರಾಯ ಕೇಳಲಿರುವರು ಯಾವುದಾದರೂ ಒತ್ತ ಆತಂಕವೇಳದಿದ್ದಲ್ಲಿ ಗಾಂಧಿಯವರು ಬೊಂಬಾಯಿಯನ್ನು ಬಿಡುವ ಮೊದಲು ಈ ತಿಂಗಳ ಅಂತ್ಯದೊಳಗೆ ಕೆಲವು ರಾಜರು ಬಂದು ಗಾಂಧಿಯವರನ್ನು ಕಾಣಲಿರುವರೆಂದು ತಿಳಿದುಬರುತ್ತದೆ.

ಮಹಾತ್ಮರ ಬೋಧನೆ

ತನ್ನ ಸಂಸ್ಥಾನಿಕ ಧೋರಣೆಯನ್ನು ಟೀಕಿಸುವವರಿಗೆ ಉತ್ತರವಾಗಿ ಮಹಾತ್ಮಾ ಗಾಂಧಿಯವರು ಹೀಗನ್ನುತ್ತಾರೆ— ನಮ್ಮ ಬೇಡಿಕೆಯನ್ನು ಅದನ್ನು ಕಡಿಮೆ ಮಾಡಿ ಸಾಧಿಸುವದು ದೌರ್ಬಲ್ಯದ ಚಿಹ್ನೆಯಲ್ಲ ಸತ್ಯಾಗ್ರಹಿಯ ದರ್ಶನ, ದರ್ಬಲತೆ ಇರುವದು ಸ್ಥಾನಿಕ ಪರಿಸ್ಥಿತಿ ಮತ್ತು ಕಲಸಗಾರರ ಯೋಗ್ಯತೆಯನ್ನು ಹೊಂದಿಕೊಂಡು ಅದ್ದರಿಂದ ಮೊದಲಿಗೆ ಅತಿ ಕಡಿಮೆಯ ಬೇಡಿಕೆಯಾದ ಹಾಗೂ ಸ್ವರಾಜ್ಯದ ಮೊದಲನೇ ಮೆಟ್ಟಲಾದ ನಾಗರೀಕ ಸ್ವಾತಂತ್ರ್ಯವನ್ನು ದೊರಕಿಸಿಕೊಳ್ಳಬೇಕು.

ನಿಶ್ಚಯವಾದುದರಿಂದ ಅವರೊಳಗೆ ಕದನವು ನಿಶ್ಚಯವಾದುದು ಅದೇ ಇತಿಹಾಸದ ನಿರ್ಧಾರವು ಹಿಂದುಸ್ಥಾನದ ಪ್ರಜೆಗಳು ಇತಿಹಾಸ ನಿರ್ಮಾಣಕರಾಗಿ ಅಂಥಾ ಕದನಕ್ಕೆ ಸಿದ್ಧರಾಗಬೇಕು ಈ ಇತಿಹಾಸ ನಿಶ್ಚಿತವಾದ ಕಾರ್ಯವನ್ನು ಸಾಂಗಗೊಳಿಸಲು ನಮಗೆ ಹೊಸ ರೀತಿಯ ಆಯುಧ ಬೇಕಾಗಿದೆ. ಮೊದಲಾಗಿ ಖಾದಿ ಮನೋವೃತ್ತಿಯ ಬದಲಾಗಿ ರಾಜನೈತಿಕ ಜಾಗೃತಿಯು ಹೆಚ್ಚು ಅವಶ್ಯವಿದೆ ಖಾಂತಿಯ ಮೇಲಿನ ಪ್ರೇಮಕ್ಕಿಂತ ಸ್ವಾತಂತ್ರ್ಯದ ಮೇಲಿನ ಪ್ರೇಮವು ಹೆಚ್ಚಾಗಬೇಕು ಹಾಗಿದ್ದರೆ ಮಾತ್ರ ನಾವು ಸ್ವತಂತ್ರರಾಗಬಲ್ಲೆವು

ಜಮುನಾಲಾಲ ಬಜಾಜರ ಅನಾರೋಗ್ಯ

ಜಯಪುರದ ಪ್ರರಾಣ ದಾಟಿನ ಮನೆಯೊಂದರಲ್ಲಿ ಕೈದಿಯಾಗಿರಿಸಲ್ಪಟ್ಟಿದ್ದ ಸೇಟ್ ಜಮುನಾಲಾಲ ಬಜಾಜರನ್ನು ಮೇಯೋ ಜನರಲ್ ಆಸ್ಪತ್ರೆಗೆ ಕೊಂಡುಬಂದು ಎಕ್ಸ್‌ರೇ ಪರೀಕ್ಷೆ ನಡೆಸಲಾಯಿತು. ಅವರಿಗೆ ವಾರಕ್ಕೆರಡಾವರ್ತಿ ಇಲೆಕ್ಟ್ರಿಕ್ ಚಿಕಿತ್ಸೆ ನಡೆಯುತ್ತಿದೆ

ಬಂಗಾಳೆ ಸರಕಾರದ ಹೊಸ ಇಲಾಖೆಯ ರದ್ದತಿ

ಬಂಗಾಳದ ಡಿಟೆನ್ಯೂಗಳ ಮತ್ತು ರಾಜಕೀಯ ಕೈದಿಗಳ ಸಂಬಂಧಕ್ಕಾಗಿ 1930ರಲ್ಲಿ ಏರ್ಪಡಾಗಿದ್ದ ಹೋಮ್ (ರಾಜಕೀಯ) ಡಿಪಾರ್ಟ್‌ಮೆಂಟನ್ನು ಬಂಗಾಳ ಸರಕಾರ ರದ್ದುಪಡಿಸಿದೆ ರಾಜಕೀಯ ಕೈದಿಗಳ ಬಿಡುಗಡೆಯಾಗಿರುವದರಿಂದ ಈ ಇಲಾಖೆ ಅಗತ್ಯವಿಲ್ಲವೆಂದು ಸರಕಾರವು ತಿಳಿಸಿದೆ



ಮಹಿಳೆಗೆ ತಂಪೂ ಮತ್ತು ಕೂದಲು ಒಳ್ಳೆಯ ವೃದ್ಧಿ ಸಿದ್ಧಗೊಳಿಸಿದ

ಗಾಂಧಿ (ಧ್ವಂಡಾಭಾಪ)

ಏಷ್ಯದ

ಬ್ರಹ್ಮೀತೈಲ

ಒಮ್ಮೆ ಉಪಯೋಗಿಸಿ ಖಾತ್ರಿಮಾಡಿರಿ

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕು

C C Mahajan & Co Bombay 2

ಸಿ ಸಿ ಮಹಾಜನ ಕಂ, ಮುಂಬಯಿ 2

THE BOMBAY LIFE ASSURANCE CO, LTD

ಸ್ಥಾಪನೆ 1908

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಈ ಸಂಸ್ಥೆಯ ಸಾರ್ವತ್ರಿಕವಾದ ಅಭಿವೃದ್ಧಿಯೇ ಇದರ ಉನ್ನತಿಗೆ ಸಾಧನವು

ಹಿರಿಮೆಯ ಹೊಸ ವ್ಯಾಪಾರ ವಹಿವಾಟುಗಳು.

ವಿಮಾ ಅರ್ಜಿಗಳ ಮೊಬಲಗು ಮಿನೇಜು	ವರ್ಷ	ಪ್ರೀಮಿಯಂ ಆದಾಯ
1,25,50,250	1934	1,04 33 750
1 50 48,915	1935	1 23,28 665
1,68,88 200	1936	1,36 01,500
1,72 579,75	1937	1 40 08,725
1,76,83 250	1938	1,44 91 000

1939 ವ್ಯಾಲ್ಯುವೇಶನ್ ವರ್ಷ

ಈಗಾಗಲೇ ಈ ಕಂಪೆನಿಯಲ್ಲಿ ವಿಮೆಯಿಳಿಸಿರಿ, ಮುನಾಫೆಯಲ್ಲಿ (Bonus) ಭಾಗಿಗಳಾಗಿರಿ

ವಿಮೆಮಾಡಲು ಇಲ್ಲವೆ ಪ್ರತಿನಿಧಿಯಾಗಲು ಇಚ್ಛಿಸುವವರು ನಮ್ಮೊಡನೆ ವಿಚಾರಿಸುವುದು ಲಾಭದಾಯಕವಾಗಿದೆ

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್,

ಮದ್ರಾಸ್ ಶಾಖೆಯ ಕಾರ್ಯದರ್ಶಿಗಳು

ದಿ ಬೊಂಬೆ ಲೈಫ್ ಬಿಲ್ಡಿಂಗ್, ಸರ್ ಲಾಲುಭಾಯಿ ಸಮಲ್ದಾಸ್ ರೋಡ್, ಗಾಂಧಿನಗರ, ಉಡುಪಿ

ಅಥವಾ ಯಾವುದಾದರೂ ಈ ಕೆಳಗಿನ ಆಫೀಸುಗಳಲ್ಲಿ ವಿಚಾರಿಸಿರಿ—

ರಥಬೀದಿ	ಪುತ್ತ್ಯಾರ,	ಪೋ ಬಾಕ್ಸ್ ನಂ 337 ಮೌಂಟ್‌ರೋಡ್,	ವಿಶ್ವೇಶ್ವರಪುರಂ ಸರ್ಕಲ್	ಚರ್ನಿರೋಡ್, ಗಿರ್ಗಾಂ,	ಸೆಂಟ್ರಲ ಸ್ಟೇಶನ್ ರೋಡ್
ಮಂಗಳೂರು	ಕಲ್ಲಿಕೋಟೆ	ಮದರಾಸ್	ಬೆಂಗಳೂರು ಸಿಟಿ	ಬೊಂಬಾಯಿ ನಂ 4	ತ್ರಿವಂದ್ರಮ್

ಶಾಲಾಮಕ್ಕಳಿಗೆ ಉಪಯುಕ್ತವಾದ ಪುಸ್ತಕಗಳು

ಕನ್ನಡ ಭಾಷಾ ಪಾಠಗಳು

	ಗಜೆಟ್ ಪುಟ	ಕ್ರಯ		
ಕನ್ನಡ ಮೂಲಪಾಠಕ .. (ಮೊದಲನೇ ವರ್ಗಕ್ಕೆ ಉಪಯುಕ್ತವಾದುದು.)	288	0	2	0

ಮೆಕ್ಕಿ ಲನರ ಪುಸ್ತಕಾವಳಿ

ಬಾಲಶಿಕ್ಷೆ ...	290	0	2	0
ಮೊದಲನೇ ಪುಸ್ತಕ ...	287	0	2	0
ಎರಡನೇ ,, ...	287	0	3	0
ಮೂರನೇ ,, .	288/290	0	4	0
ನಾಲ್ಕನೇ ,, ...	288	0	5	0
ಐದನೇ ,, ...	290	0	6	0
ಆರನೇ ,, ...	290	0	7	0
ಏಳನೇ ,, ..	288	0	8	0

ನೂತನ ಸಾಮಾನ್ಯ ವಿಜ್ಞಾನ ಪಾಠಗಳು

ಮೊದಲನೇ ಪುಸ್ತಕ (2ನೇ ದರ್ಜೆಗೆ)	287	0	3	0
ಎರಡನೇ ಪುಸ್ತಕ (3ನೇ ದರ್ಜೆಗೆ)	287	0	3	0
ಮೂರನೇ ಪುಸ್ತಕ (4ನೇ ದರ್ಜೆಗೆ)	171	0	5	0
ನಾಲ್ಕನೇ ಪುಸ್ತಕ (5ನೇ ದರ್ಜೆಗೆ)	174	0	6	0
IV ಫಾರ್ಮಿನ ನೂತನ ಸಾಮಾನ್ಯ ವಿಜ್ಞಾನ	181	1	4	0

ಗಣಿತ ಪುಸ್ತಕಗಳು

ಬಾಲಗಣಿತ 1ನೇ ದರ್ಜೆಯದು	151	0	3	6
,, 2ನೇ ,,	151	0	5	0
,, 3ನೇ ,,	151	0	7	6
,, 4ನೇ ,,	151	0	8	6
,, 5ನೇ ,,	151	0	11	6

ಭೂಗೋಳಶಾಸ್ತ್ರ

ಚಿತ್ರಮಯ ದಕ್ಷಿಣಕನ್ನಡ (ಶ್ರೀ ಶಿವರಾಮ ಕಾರಂತರಿಂದ ವಿರಚಿಸಲ್ಪಟ್ಟ ನೂರಾರು ಚಿತ್ರಗಳಿಂದ ಕೂಡಿದ)	122	0	6	0
ದಕ್ಷಿಣ ಕನ್ನಡ ಜಿಲ್ಲೆಯ ಭೂಗೋಲ .	129	0	5	6

ಕನ್ನಡ ಇಂಗ್ಲೀಷ್ ಗೋಳಗಳು—ನಕ್ಷೆಗಳು—ಜನಜೀವನ ಚಿತ್ರಗಳು—ಮೇಪ್ ಬುಕ್—ಎಟ್ಲಾಸ್ ಮುಂತಾದವುಗಳು.

ಕನ್ನಡ ಪದ್ಯ ಪುಸ್ತಕಗಳು

ಮೊದಲನೇ ಪದ್ಯ ಪುಸ್ತಕ ...	289	0	2	6
ಎರಡನೇ ಪದ್ಯ ಪುಸ್ತಕ	289	0	3	6

ಮೆಕ್ಕಿ ಲನರ ಪಾಠಪುಸ್ತಕಗಳ ಕೈಪಿಡಿ

ಎರಡನೇ ಪುಸ್ತಕ	0	2	0
ಮೂರನೇ ,, ...	0	2	6
ನಾಲ್ಕನೇ ,, ...	0	2	6
ಐದನೇ ,, ...	0	3	0
ಆರನೇ ಏಳನೇ ಪುಸ್ತಕ (ಒಟ್ಟಿಗೆ)	0	3	6

ಕನ್ನಡ ವ್ಯಾಕರಣ ಪಾಠಗಳು

ಕನ್ನಡ ಮೂಲವ್ಯಾಕರಣ	288	0	3	0
ಕನ್ನಡ ಬಾಲವ್ಯಾಕರಣ	288	0	3	3
ಕನ್ನಡ ಶಾಲಾವ್ಯಾಕರಣ ...	288	0	5	0

ಕನ್ನಡ ಕಥೆ ಪುಸ್ತಕಗಳು

	ಗಜೆಟ್ ಪುಟ	ಕ್ರಯ		
ಗುಬ್ಬೀ ಪಾಯಸ	287	0	0	6
ಗಡ್ಡದ ಅಜ್ಜಯ್ಯ	,,	0	1	6
ಕೆಂಚಮ್ಮ	,,	0	1	6
ಆಲಿಬಾಬನ ಕಥೆ	,,	0	2	3
ಸಂಯೋಗಿತೆ	,,	0	6	0
ಪಾಪೋಸಿನ ಪಜೀತಿ	287	0	0	6
ಸಿಂಡರೆಲ್ಲ (3ನೇ ದರ್ಜೆಗೆ)	,,	0	1	6
ಕಾಗೆಯೂ ಗುಬ್ಬಿಯೂ (1ನೇ ದರ್ಜೆಗೆ)	288	0	2	3
ಮೌರ್ಯ ಸಿಂಹಾಸನ ...	,,	0	4	0
ಐತಿಹಾಸಿಕ ಕಥಾವಳಿ ...	,,	0	6	0

ಸಚಿತ್ರ ಚರಿತ್ರೆಗಳು

1ನೇ ದರ್ಜೆಗೆ ...	287	0	2	0
2ನೇ ,, ...	287	0	2	0
3ನೇ ,, ...	287	0	3	0
4ನೇ ,, ...	287	0	4	6
5ನೇ ,, ...	287	0	5	0
6ನೇ ,, ...	,,	0	6	0
7ನೇ ,, ...	,,	0	4	0

ಇಂಗ್ಲೀಷು ಮತ್ತು ಕನ್ನಡ 'ಮಿತ್ರ' ಕಾಪಿ ಪುಸ್ತಕಗಳು—ಕನ್ನಡ ಮೋಡೆಲ್ ಕಾಪಿ ಪುಸ್ತಕಗಳು—ಎಲ್ಲಾ ತರಗತಿಗಳಿಗೂ ಅಗತ್ಯ ಬೇಕಾದವುಗಳು.

ENGLISH READERS

NEW ERA	Gazette Page	Price		
I Primer ...	65	0	5	0
II Primer	65	0	6	0
Book I	4	0	8	0
Book II	60	0	10	0
Book III	65	0	12	0

CORONATION

Primer I ...	56	0	3	0
Primer II	56	0	3	0
Primer I & II	57	0	6	0
Book I	60	0	6	0
Book II	60	0	8	0
Book III ...	60	0	10	0
Book IV ...	62	0	12	0

Complete English Course (By Kini)

IV Form Part I	7	0	12	0
V Form Part II ...	7	1	0	0
Readings in English Literature (by Kini.) IV Form Part I	5	0	12	0
V Form Part II		1	0	0
Outlines of English History for IV & V Forms (to appear in separate supplement)	5	1	8	0

ಈ ಎಲ್ಲಾ ಪುಸ್ತಕಗಳೂ ಅಲ್ಲದೆ, ಎಲ್ಲಾ ಶಾಲಾ ಸಾಮಗ್ರಿಗಳೂ ನಮ್ಮಲ್ಲಿ ದೊರೆಯುತ್ತವೆ.

ಬಾಸೆಲ್ ಮಿಶನ್ ಬುಕ್ ಡಿಪೋ

(ಕೆನರಾಗ್ ಲಿಮಿಟೆಡ್) ಮಂಗಳೂರು.

—: ಶಾಖೆಗಳು :—

ಹಂಪನಕಟ್ಟೆ, ಮಂಗಳೂರು ಮತ್ತು ಹುಬ್ಬಳ್ಳಿ (ದ. ಮಹಾರಾಷ್ಟ್ರ)

ಮಧ್ಯರಾತ್ರಿಯ ಸಮಯ. ಜಗತ್ತೇ ನಿದ್ರಿಸುತ್ತಿತ್ತು. ಆದರೆ ಜೈಲಿನಲ್ಲಿದ್ದ ಒಬ್ಬ ಕೈದಿ, ಅವನಿಗೆ ನಿದ್ದೆ ಬಾರದು, ಮನಸ್ಸಿಗೆ ಶಾಂತಿಯಿಲ್ಲ. ತನ್ನವರು ಯಾವ ಗುಪ್ತ ಕಾರ್ಯದಲ್ಲಿ ಕೈಹಾಕಿದ್ದಾರೆ, ಎಷ್ಟು ಯಶಸ್ವಿಗಳಾಗಬಲ್ಲರು? ಎಂಬುದೇ ಅವನ ಮನದ ಮುಖ್ಯ ಯೋಜನೆಯಾಗಿತ್ತು. ಜೈಲಿನ ಕಾವಲುಗಾರನಿಗೆ ಅರ್ಧನಿದ್ರೆ. ನಿದ್ರೆ ಮಾಡುವಂತಿಲ್ಲ. ಸುಮ್ಮನೆ ಕೂತಿರುವಂತಿಲ್ಲ. ಏನೋ ಅರೆಮನಸ್ಕನಂತೆ ಅರೆ ನಿದ್ದೆ ಮಾಡುತ್ತಿದ್ದನು. ಕೈದಿಗೆ ಎಷ್ಟು ಹೊತ್ತಾದರೂ ನಿದ್ದೆ ಹತ್ತಲಿಲ್ಲ. ಸುಮನೋಹರ ಕಂಠವಿತ್ತು. ಹಾಡಲು ಉಪಕ್ರಮಿಸಿದ. ಕೇಳಿದವರೆಲ್ಲರೂ ಮತ್ತೆ ಮತ್ತೆ ಹಾಡು ಎಂಬಂತಿತ್ತು ಅವನ ಸಂಗೀತ.

ಆದರೆ ಕಾವಲುಗಾರನಿಗೆ ಅದು ಬೇಕಿರಲಿಲ್ಲ. ತನ್ನ ನಿದ್ದೆ ಕೆಡಬಾರದೆಂದು ಅವನ ಯೋಜನೆ. ಹಾಡು ಹೇಳುತ್ತಿದ್ದ ಕೈದಿಯ ಹತ್ತಿರ ಬಂದು ತನ್ನ ದೊಣ್ಣೆಯನ್ನು ಎತ್ತಿ ಒಂದೇಟು ಹೊಡೆದನು. ಅದು ಕೈದಿಯ ಕಂಠಕ್ಕೆ ಬಿತ್ತು. ಮನಸ್ಸಿನಲ್ಲಿ ನೊಂದುಕೊಂಡು ಕೈದಿಯು ಹಾಗೆಯೇ ಮಲಗಿಕೊಂಡನು. ಬೆಳಿಗ್ಗೆ ಎದ್ದು ನೋಡಿದರೆ ಅವನ ಧ್ವನಿಯೇ ಬದಲಾಯಿಸಿದೆ! ಕೈದಿಗೆ ತನ್ನ ಇಂಪಾದ ಧ್ವನಿಯು ರಾತ್ರಿ ತನ್ನ ಕಂಠಕ್ಕೆ ಬಿದ್ದ ಪೆಟ್ಟಿನಿಂದ ಮಾಯವಾಯಿತೆಂದು ಮನವರಿಕೆಯಾಯಿತು. ಕೊನೆಗೆ ತಾನು ಸೆರೆಯಲ್ಲಿದ್ದ ಕಾಲವೆಲ್ಲಾ ಹೆಚ್ಚು ಮಾತನಾಡದೆ ಮೂಕನಂತಾಗಿಬಿಟ್ಟನು. ಈ ತೊಂದರೆ ಇಂದು ರಶ್ಯಾದ 16 ಕೋಟಿ ಪ್ರಜೆಗಳ ಸರ್ವಾಧಿಕಾರಿಯಾಗಿದ್ದರೂ ಬಿಟ್ಟಿಲ್ಲ. ಅವನು ಮಾತನಾಡುವುದೇ ಸ್ವಲ್ಪ. ಮಾತನಾಡುವುದರಲ್ಲಿಯೂ ಕೊಂಚ ತೊದಲಿದ್ದಂತೆ ತೋರುತ್ತದೆ. ಅದು ಸೆರೆಮನೆಯಲ್ಲಿ ಆಗಾಗ್ಗೆ ಕಾವಲುಗಾರರಿಂದ ಮಾತಿಯನ್ನು ತಿವಿಯಿಸಿಕೊಳ್ಳುತ್ತಿದ್ದುದರ ಮತ್ತು ಮೂಕನಂತೆ ಸುಮ್ಮನೆ ಕೂತುಕೊಳ್ಳುತ್ತಿದ್ದುದರ ಪರಿಣಾಮ. ಅಂತಹ ತೊಂದರೆಗಳಿಗೆ ಸಿಕ್ಕಿ ನರಳಿದವನೇ ಇಂದಿನ ರಶ್ಯಾದ ನಾಯಕ 'ಜೋಸೆಫ್ ಸ್ಟಾಲಿನ್'

ಸ್ಟಾಲಿನ್ನನು ಈ ರೀತಿ ಒಂದು ಸಲ ಮಾತ್ರ ಸೆರೆಮನೆಗೆ ಹೋಗಿಲ್ಲ. 6 ಸಲ ಶಿಕ್ಷೆ ಅನುಭವಿಸಿದ್ದಾನೆ. 5 ಸಲ ದ್ವೀಪಾಂತರವಾಸ ಮಾಡಿದ್ದಾನೆ ಇವನು ಸ್ವಭಾವತಃ ಕ್ರೂರಿ, ಒರಟು ಮನುಷ್ಯ. ಜೊತೆಗೆ ಇವನ ಜೈಲಿನ ವಾಸಗಳೂ, ಕ್ರಾಂತಿಯ ಚಳುವಳಿಗಳೂ ಇವನನ್ನು ಮತ್ತಷ್ಟು ಕ್ರೂರಿಯನ್ನಾಗಿ ಮಾಡಿದವು. ರಶ್ಯಾದ ಕ್ರಾಂತಿಕಾರರ ಗುಂಪಿನಲ್ಲಿ ರಕ್ತದ ಕಾಲುವೆಯನ್ನು ಹರಿಸಿದವನೀತ. ಮಾನವರ ಮೃದು ಸ್ವಭಾವವನ್ನು ತ್ಯಜಿಸಿ ಜನರ ತಲೆಗಳನ್ನೂ ಕಡಿಸಿದವನು ಎಂದರೆ ಸ್ಟಾಲಿನ್ನನು. ಇವನಲ್ಲಿರುವ ಕಟುತರವಾದ ಕೋಪವನ್ನು ರಶ್ಯಾದ 16 ಕೋಟಿ ಪ್ರಜೆಗಳಿಗೆ ಹಂಚಿದರೂ ಮತ್ತಷ್ಟು ಉಳಿಯುತ್ತದೆಯೆಂದು ಹೇಳಬಹುದು. ಸಾವಿರಾರು ಜನರನ್ನು ಕೊಂದು ಮಾನವ ಹತ್ಯವನ್ನು ಮಾಡಿದ ಮಹಾಪ್ರಭು ಇವನು. ಇದುವರೆಗೆ ಇವನ ಕೋಪದ ಕತ್ತಿಗೆ ಗುರಿಯಾದವರ ರಕ್ತವೆಲ್ಲವನ್ನೂ ಕೂಡಿಸಿದ್ದರೆ ಒಂದು ರಕ್ತದ ಕೆರೆಯನ್ನೇ ಕಟ್ಟಬಹುದಾಗಿತ್ತು. ಸರ್ವಾಧಿಕಾರಿಯಾದಂದಿನಿಂದೀಚೆಗೆ ತನ್ನ ಮೇಲೆ ಪಿತೂರಿ ನಡೆಯಿಸುತ್ತಿರುವರೆಂದೂ ಮತ್ತು ದೇಶದ್ರೋಹಿಗಳೆಂದೂ ಸುಮಾರು 4000 ಜನರನ್ನು ಕೊಲ್ಲಿಸಿದ್ದಾನೆ.

- ರಶ್ಯದ ಕ್ರಾಂತಿಕಾರರ ಗುಂಪಿನಲ್ಲಿ ರಕ್ತದ ಕಾಲುವೆಯನ್ನು ಹರಿಸಿದವನಾರು?
- ಅತಿ ಕಠಿಣ ಹೃದಯನಾದರೂ ಕೈಹಾಕಿದ ಕೆಲಸವನ್ನು ಅತಿ ಜಾಗರೂಕತೆಯಿಂದ ಮಾಡುವವನಾರು?
- ಕೂಲಿಕಾರರ ಸಂಘದ ಮುಷ್ಕರಗಳಲ್ಲಿ ಮುಂದಾಳಾಗಿ ನಿಂತು ಸಂಘಕ್ಕೆ ನವಚೈತನ್ಯವನ್ನು ತಂದವನಾರು?
- ಕ್ರಾಂತಿಕಾರರ ಮುಂದಾಳಾಗಿ ಗಡಿಪಾರು ಮಾಡಲ್ಪಟ್ಟವನಾರು?
- ಸೋವಿಯೆಟ ರಾಜ್ಯಾಂಗ ಪದ್ಧತಿಯನ್ನು ಸಾರಿ ರಚಿಸಿದನಾರು?

ಜೋಸೆಫ್ ಸ್ಟಾಲಿನ್

ಸ್ಟಾಲಿನ್ನನು ಎಷ್ಟೇ ಕಠಿಣ ಹೃದಯನಾಗಲೀ, ರಾಜಕೀಯ ವಿಷಯದಲ್ಲಿ ಮಹತ್ತರವಾದ ಬುದ್ಧಿಯನ್ನಿಟ್ಟುಕೊಂಡಿದ್ದಾನೆ. ಅವನು ಯಾವ ಕೆಲಸಕ್ಕೆ ಕೈಹಾಕಲಿ ಅತಿ ಜಾಗರೂಕತೆಯಿಂದ ಸ್ವಲ್ಪವೂ ತಪ್ಪಿಹೋಗದ ಹಾಗೆ ಪ್ರತಿ ಭಾಗವನ್ನೂ ಪರಿಶೀಲಿಸಿ ವಿಶಾಲ ದೃಷ್ಟಿಯಿಂದ ಮಾಡುವ ಸ್ವಭಾವವುಳ್ಳವನು. ಯುಕ್ತಿಯಲ್ಲಂತೂ ಮಹಾನಿಪುಣ. ಇವನಲ್ಲಿ ಒಂದು ದೊಡ್ಡ ಗುಣವೆಂದರೆ ತನ್ನ ತಪ್ಪನ್ನು ನಿರ್ಭಯವಾಗಿ ಒಪ್ಪಿಕೊಳ್ಳುವುದು. ರಾಜತಂತ್ರದಲ್ಲಿ ಯಾವ ಕೆಲಸವನ್ನೇ ಮಾಡಲಿ ಲೆನಿನ್ನನ ಹೆಸರನ್ನು ಹಿಡಿದು ಮಾಡುತ್ತಾನೆ. ಇಡೀ ರಾಷ್ಟ್ರವೇ ಲೆನಿನ್ನನನ್ನು ಪೂಜಿಸುತ್ತಿದೆಯೆಂಬುದನ್ನು ತಿಳಿದು ಲೆನಿನ್ನನೂ ತಾನೂ ಒಂದೇ ಬೆಂಚಿನಲ್ಲಿ ಕುಳಿತಿರುವ ಲಕ್ಷ ಫೋಟೋಗಳನ್ನು ಮುದ್ರಿಸಿ ಹಂಚಿಸಿರುತ್ತಾನೆ.

ಜೋಸೆಫ್ ಸ್ಟಾಲಿನ್ನನ ನಿಜ ನಾಮಧೇಯ 'ಜೋಸೆಫ್ ಜಗಾಷಾ' ಎಂದು. ಇವನ ತಂದೆ ರಷ್ಯಾ ದೇಶದ ಜಾರ್ಜಿಯಾ ಎಂಬ ಪ್ರಾಂತ್ಯದಲ್ಲಿ ಚಮ್ಮಾರನಾಗಿ ಜೀವಿಸುತ್ತಿದ್ದನು. ಇವನು ಬಹಳ ಶಾಂತಸ್ವಭಾವದವನು. ರಾಜಕೀಯ ವಿಷಯಗಳೆಂದರೆ ದೂರ ಇರುತ್ತಿದ್ದನೇ ಹೊರತು ಅದರ ತಂಟೆಗೆ ಹೋಗುತ್ತಿರಲಿಲ್ಲ. ಇವನ ತಾಯಿಯು ಒಳ್ಳೇ ದೃಢಕಾಯದ ಹೆಂಗಸು. ಸದ್ಗುಣಶೀಲೆ. ಮಗನನ್ನು ಬಹಳವಾಗಿ ಪ್ರೀತಿಸುತ್ತಿದ್ದಳು. ಮುದ್ದಿಗಾಗಿ ಮಗನನ್ನು ತಂದೆತಾಯಿಗಳು "ಜೋಜು" ಎಂದು ಕರೆಯುತ್ತಿದ್ದರು. ಜೋಜುವು ಕೂಡ ತಾಯಿಯಲ್ಲಿ ಹೆಚ್ಚು ಭಕ್ತಿಯನ್ನಿರಿಸಿದ್ದ. ಜೋಜುವನ್ನು ಕ್ರೈಸ್ತಪಾದ್ರಿಯನ್ನಾಗಿ ಮಾಡಬೇಕೆಂದು ಅವನ ತಾಯಿಗೆ ತುಂಬಾ ಆಶೆ. ಆ ವಿಷಯವಾಗಿ ತನ್ನ ಮಗನಿಗೆ ಒಂದು ದಿನ ಮನಮುಟ್ಟುವಂತೆ ಬೋಧೆ ಮಾಡಿದಳು. ಅದರಂತೆ ಜೋಜುವು ಒಪ್ಪಿ ಕ್ರೈಸ್ತಪಾದ್ರಿಯಾಗಲು ವಿದ್ಯಾಭ್ಯಾಸಕ್ಕೆ ಮೊದಲು ಮಾಡಿದನು.

ಸ್ಕೂಲಿಗೆ ಸೇರಿದುದೇ ತಡ, ಬಹಳ ಆತುರದಿಂದ ಕಲಿಯತೊಡಗಿದನು. ಇವನ ಉಪಾಧ್ಯಾಯರೆಲ್ಲರೂ ಇವನನ್ನು ಕಂಡರೆ ಬಹಳ ಸಂತೋಷಪಡುತ್ತಿದ್ದರು. ಸ್ಟಾಲಿನ್ನನು ಸೋಮಾರಿಯಲ್ಲ, ಬಹಳ ಬುದ್ಧಿವಂತ. ಯಾವ ಕೆಲಸವನ್ನು ಮಾಡಬೇಕಾದರೂ ತೀವ್ರವಾಗಿಯೂ ಬಹಳ ನಾಜೂಕಾಗಿಯೂ ಮಾಡುತ್ತಿದ್ದನು. ಶಾಲೆಗೆ ಸೇರಿದ ಕೊಂಚ ದಿವಸಗಳಲ್ಲಿಯೇ ಅಲ್ಲಿನ ಉಪಾಧ್ಯಾಯರುಗಳ ಮನ್ನಣೆಗೆ ಪಾತ್ರನಾಗಿ ವೇತನವನ್ನೂ ಪಡೆದನು. ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಮುಂಚೆಯೇ ಅಂದರೆ ಇವನ ಹದಿನಾರನೇ ವಯಸ್ಸಿನಲ್ಲಿ ಟಿಫ್ಲಿಸ್ ನಗರದ 'ದೈವಜ್ಞಾನ ಪಂಡಿತಮಂಡಲಿ'ಯ ಸದಸ್ಯನಾದನು ಆದರೆ ಸ್ಟಾಲಿನ್ನನು ಈ ಮಂಡಲಿಯಲ್ಲಿ ಬಹಳ ದಿವಸವಿರಲು ಸಾಧ್ಯವಾಗಲಿಲ್ಲ. ತನ್ನ 17ನೇ ವಯಸ್ಸಿನಲ್ಲಿ 'ಸೋಶಿಯಲಿಸ್ಟ್ ಡೆಮೋಕ್ರಾಟಿಕ್' ಪಾರ್ಟಿಗೆ ಸೇರಿದನು.

ಇದು ಪಂಡಿತ ಮಂಡಲಿಯವರಿಗೆ ತಿಳಿದು ಇಲ್ಲಿಂದ ಅವನನ್ನು ಹೊರಡಿಸಿದರು. ಅನೇಕ ವಿದ್ಯಾರ್ಥಿಗಳು ಇವನಂತೆ ಕ್ರಾಂತಿಕಾರರ ಚಳುವಳಿಗೆ ಸೇರಿದ್ದರೂ ತಮ್ಮ ಗುಟ್ಟನ್ನು ಬಹಿರಂಗಪಡಿಸಲಿಲ್ಲ. ಆದರೆ ಸ್ಟಾಲಿನ್ನನ ದುರದೃಷ್ಟದಿಂದಲೋ ಅಥವಾ ಡೆಮೋಕ್ರಾಟಿಕ್ ಪಕ್ಷದ ದುರದೃಷ್ಟದಿಂದಲೋ ಇವನನ್ನು ಪಂಡಿತಮಂಡಲಿಯೂ ಬಹಿಷ್ಕರಿಸಿತು. ಅಲ್ಲದೆ ಇವನು ಮಾಡುತ್ತಿದ್ದ ಚಳುವಳಿಯನ್ನು ನೋಡಿ ಕಾಲೇಜಿನಿಂದಲೂ ಕೂಡ ಪಜಾ ಮಾಡಿಬಿಟ್ಟರು. ಅಲ್ಲಿಂದೀಚೆಗೆ ಸ್ಟಾಲಿನ್ನನು ಕ್ರೈಸ್ತಪಾದ್ರಿಯಾಗಬೇಕೆಂಬ ಆಶೆಯನ್ನು ತ್ಯಜಿಸಿ ಒಂದು ದೊಡ್ಡ ಕಾರ್ಖಾನೆಯಲ್ಲಿ ಲೆಕ್ಕ ಬರೆಯುವ ಕೆಲಸಕ್ಕೆ ನಿಂತನು. ಇದು ಇವನ ತಾಯಿಗೆ ಕೊಂಚವೂ ಸರಿಬೀಳಲಿಲ್ಲ.

ಸ್ಟಾಲಿನ್ನನು ತಾನು ಕ್ರಾಂತಿಕಾರನಾಗಬೇಕೆಂಬುದನ್ನು ಮಾತ್ರ ಮರೆಯಲಿಲ್ಲ. ಅಲ್ಲಿಯೂ ಕೂಡ ಮೆಲ್ಲಗೆ ಕ್ರಾಂತಿಕಾರರು ಎಲ್ಲೆಲ್ಲಿ ಏನು ಕೆಲಸ ಮಾಡುತ್ತಿರುವರೆಂದು ಹುಡುಕತೊಡಗಿದನು. ಇವನಿಗೆ ತಕ್ಕ ಸ್ನೇಹಿತನೂ ದೊರೆತನು. ಅವನ ಹೆಸರು ಅಲ್ಲಿ ವಾವಿಯೆಂದು. ಈ ಸರ್ಜ್ ಅಲ್ಲಿವಾವಿಯು ಟಿಫ್ಲಿಸ್ ನಗರದಲ್ಲಿ ಕೂಲಿಕಾರರ ಸಂಘವೊಂದನ್ನು ಏರ್ಪಡಿಸಿ ಸರಕಾರಕ್ಕೆ ವಿರುದ್ಧವಾಗಿ ಚಳವಳಿ ನಡೆಯಿಸುತ್ತಿದ್ದನು. ಸ್ಟಾಲಿನ್ನನು ಅಲ್ಲಿ ವಾವಿಯು ಏರ್ಪಡಿಸಿದ್ದ ಕೂಲಿಕಾರರ ಮುಖ್ಯ ಸದಸ್ಯನಾಗಿ

ಕಥಾಕುಂಜ ಗ್ರಂಥಮಾಲೆ

ಸಂಪಾದಕರು:- ಶ್ರೀ. ವ್ಯಾಟ ತಾಮರಾಯರು

ಕಳೆದ ನಾಲ್ಕೈದು ವರ್ಷಗಳಿಂದ ಕನ್ನಡನಾಡಿನ ಜನತೆಗೆ ಮೆಚ್ಚುಗೆಯಾಗಿರುವ ಕಥಾಕುಂಜ ಮಾಸಪತ್ರಿಕೆಯು ಕೆಲವು ಅನಿವಾರ್ಯ ಕಾರಣಗಳ ಮೂಲಕ ಜುಲೈ ತಿಂಗಳಿಂದ ಗ್ರಂಥಮಾಲೆಯಲ್ಲಿ ರೂಪಾಂತರವಾಗಿ ಹೊರಡುವದು.

ಈ ವರುಷದಲ್ಲಿ ೩ ಗ್ರಂಥಗಳು. ಪ್ರತಿಯೊಂದು ಗ್ರಂಥದಲ್ಲಿ ೧೫೦ ಪುಟಗಳು. ವಾರ್ಷಿಕ ಚಂದಾ ಅಂಚೆವೆಚ್ಚಸೇರಿ ೬-೮-೦ ಊರವರಿಗೆ ೩ ರೂ. ಜುಲೈ ತಿಂಗಳೊಳಗಾಗಿ ಮುಂಗಡ ಹಣ ಕಳಸಿದ ಚಂದಾದಾರರಿಗೆ ಮಾತ್ರ ಎರಡೇ ರೂಪಾಯಿ. ಈ ಸವಲತ್ತು ಹಿಂದಿನಿಂದ ಸಿಗಲಾರದು.

೧ನೆಯ ಗ್ರಂಥ	೨ನೆಯ ಗ್ರಂಥ
ಐದು ಕಥೆಗಳು	ಸಂಕಲಿತ ಕಥೆಗಳು

ಜಾಹೀರಾತು ಕೊಡುವವರೂ ಪುಸ್ತಕ ವ್ಯಾಪಾರಿಗಳೂ ತ್ವರೆ ಮಾಡಿರಿ!

ಮ್ಯಾನೇಜರ— ಕಥಾಕುಂಜ ಪ್ರಕಟನಾಲಯ,

ಹನುಮನ ಬೀದಿ, ಬೆಳಗಾವಿ.

New Kanara Swadeshi Laundry,

GAMDEVI, BOMBAY.

A reliable house for dry cleaning deing all sorts of rich garments.

ದಿ ನ್ಯೂ ಕೆನರಾ ಸ್ವದೇಶಿ ಲಾಂಡ್ರಿ,

ಗಾಮದೇವಿ — ಮುಂಬಾಯಿ.

ಉತ್ತಮ ತರದ ಮಡಿ, ಉತ್ಕೃಷ್ಟ ರೀತಿಯ ರಂಗು—

ಇವುಗಳಿಗೆ ಪ್ರಸಿದ್ಧವಾದ ನಿಲಯ.

ಪಿ. ಸೂ.—ಜರಿಪೊಡುಗಳಿಂದ ಉತ್ತಮ ಜರತಾರಿ ಶೀರೆ, ವಸ್ತ್ರ ಉಡುಗೆ ತೊಡಿಗೆಗಳ ರಂಗು ಹಾಕುವ, ಡ್ರೈಕ್ಲೀನಿಂಗ್ ವಗೈರೆ ಕಾರ್ಯವನ್ನು ಟಪ್ಪಾಲು ದ್ವಾರಾ ಸ್ವೀಕರಿಸಿ ಸಕಾಲದಲ್ಲಿ ತಯಾರಿಸಿ ತಲುಪಿಸುವೆವು.

ಎಮ್. ಆರ್. ಶೆಟ್ಟಿ, ಪ್ರೊಪ್ರೈಟರ್. G. V. Mahale, Manager.

ಜೋಸೆಫ್ ಸ್ಟಾಲಿನ್

ಬಹಳ ಕಷ್ಟಗಳಿನಿಂದ ಜಳವಳಿಗಾರಂಭಿಸಿದನು. ಕೂಲಿಕಾರರ ಸಂಘದ ಮುಷ್ಕರಗಳಲ್ಲಿ ಮುಂದಾಳಾಗಿ ನಿಂತು ಒಂದು ಹೊಸ ಜೀವಕಳೆಯನ್ನು ಸಂಘಕ್ಕೆ ತುಂಬಿದನು. ಸಂಘದ ಮುಷ್ಕರಗಳಲ್ಲಿಯೂ ಇನ್ನಿತರ ಚಳವಳಿಗಳಲ್ಲಿಯೂ ಮುಖಂಡನಾಗಿ ಎಲ್ಲರ ಮನಸ್ಸಿಗೂ ಸ್ವಜನಾನಾಯಕನೆಂದು ಕಾಣಿಸಿಕೊಂಡನು.

ಸ್ಟಾಲಿನನು ಸ್ವಭಾವತಃ ಧೈರ್ಯಶಾಲಿ. ಕಾರ್ಯದಮೇಲೆ ಲೆಕ್ಕಾಚಾರಹಾಕಿ ಕೆಲಸಮಾಡುತ್ತಾನೆ. ಆತನಿಗೆ ಹೆಚ್ಚು ಮಾತು ಬಾರದು. ಅವನು ಮಾತನಾಡಿದರೆ ಸಾಕು, ರಷ್ಯದ ಜನಜೀವನದಲ್ಲಿ ಮಹತ್ತರ ಬದಲಾವಣೆಯಾಗುವುದೆಂದು ಗೊತ್ತು. ಯಾವುದಕ್ಕೂ ಹೆದರದೆ ತನ್ನ ದೇಶಕ್ಕಾಗಿ ಹೋರಾಡಲು ಮುಂದಾದನು. ಸುಮಾರು 1912ರಲ್ಲಿ ರಷ್ಯಾದೇಶದ ಸರಕಾರವು ಜನಾಯಕನಾಯಿತು ಜನಗಳೆಲ್ಲರೂ ತಮಗೆ ಯಾವ ದೊರೆಯೂ ಬೇಡವೆಂದು ಮುಷ್ಕರ ಹಿಡಿಯತೊಡಗಿದರು. ಆ ವೇಳೆಗೆ ರಷ್ಯಾದಲ್ಲಿ ಕ್ರಾಂತಿಕಾರರ ಚಳವಳಿಯು ಹೆಚ್ಚಿದ್ದಿತು. ಆಗ ಸ್ಟಾಲಿನ್ನನೂ ಕೂಡ ಕ್ರಾಂತಿಕಾರರ ಮುಂದಾಳುಗಳೊಳಗೆ ಒಬ್ಬನೆಂಬುದು ಗೊತ್ತಾಯಿತು. ಸರಕಾರದವರು ಕ್ರಾಂತಿಕಾರರನ್ನು ನಿರ್ಮೂಲಮಾಡಬೇಕೆಂದು ಪ್ರತಿಯೊಬ್ಬನನ್ನೂ ಸೆರೆಹಿಡಿಯತೊಡಗಿದರು. ಆಗ ಇವನೂ ಸಹ ಸೆರೆಮನೆಯನ್ನು ಸೇರಬೇಕಾಯಿತು.

ಒಂದು ಸಲ ಇವನನ್ನು ಬಹಳ ಚಳಿ ದೇಶವಾದ ಸೈಬೀರಿಯಕ್ಕೆ ಗಡಿಪಾರುಮಾಡಿದರು. ಅಲ್ಲಿಗೆ ಇವನಾಟ ಮುಗಿಯಿತೆಂದು ಎಲ್ಲರೂ ಊಹಿಸಿದ್ದರು. ಆದರೆ ಸ್ಟಾಲಿನ್ನನು ತನ್ನ ಶಕ್ತಿ ಸಾಹಸಗಳಿಂದ ಅಲ್ಲಿಂದಲೂ ಪಾರಾಗಿ ತನ್ನ ದೇಶಕ್ಕೆ ಹಿಂತಿರುಗಿದನು. ಸೈಬೀರಿಯಾದಿಂದ ಬಂದ ಕೆಲವು ದಿವಸಗಳಲ್ಲಿಯೇ ಇವನಲ್ಲಿ ಒಂದು ನವಚೈತನ್ಯಕೆ ಹುಟ್ಟಿತು. ಇಂದು ರಷ್ಯಾದಲ್ಲಿ ಕಂಗೊಳಿಸುತ್ತಿರುವ ಸೋವಿಯಟ್ 'ರಾಜ್ಯಾಂಗ' ಪದ್ಧತಿಯನ್ನು ಜಾರಿಗೆ ತರಬೇಕೆಂದು 'ಕಮ್ಯೂನಿಸ್ಟ್ ಸಂಗದ' ಮುಖ್ಯ ಕಾರ್ಯದರ್ಶಿಯಾಗಿ ಬಹಳ ಕೆಲಸಮಾಡಿದನು. ಕೆಲವು ದಿವಸಗಳಲ್ಲಿ ಇವರು ಕಾರ್ಯದಲ್ಲಿ ಜಯಶೀಲರಾದರು. ಝಾರನನ್ನು ಪದಚ್ಯುತನನ್ನಾಗಿಮಾಡಿ ಜಯಭೇರಿ ಹೊಡೆದರು.

ದೇಶದಲ್ಲಿ ವಿಪ್ಲವವನ್ನು ಮಾಡಿ ಝಾರನನ್ನು ಸಿಂಹಾಸನದಿಂದ ಕೆಳಗುರುಳಿಸಿದುದೇನೋ ಆಯಿತು. ಆದರೆ ಕ್ರಾಂತಿಯಿಂದ ಅಲ್ಲೋಲಕಲ್ಲೋಲವಾಗಿರುವ ದೇಶವನ್ನು ವ್ಯವಸ್ಥೆಗೊಳಿಸುವುದು ಕಷ್ಟವಾಗಿ ಪರಿಣಮಿಸಿತು. ಆಗಿನ ಕ್ರಾಂತಿನಾಯಕನಾದ ಲೆನಿನ್ನನೂ ಅವನ ಸಂಗಡದವರೂ ಬಹಳವಾಗಿ ಆಲೋಚಿಸತೊಡಗಿದರು. ಒಬ್ಬೊಬ್ಬರೂ ಒಂದೊಂದು ಸಲಹೆಯನ್ನು ಮುಂದಿಟ್ಟರು. ಆದರೆ ಇದಾವುದೂ ಆಗಿನ ಸ್ಥಿತಿಗೆ ಸಮಂಜಸವಾಗಿ ತೋರಿಬರಲಿಲ್ಲ. ಇಂತಹ ಆಂದೋಲನದ ಕಾಲದಲ್ಲಿ ಸ್ಟಾಲಿನ್ನನು ಶುದ್ಧ ಕಮ್ಯೂನಿಸ್ಟ್ ತತ್ವಗಳಂತೆ ದೇಶವನ್ನು ರೂಪಗೊಳಿಸುವುದು ಅನರ್ಥಕಾರಿಯೆಂದೂ, ಜನಸಾಮಾನ್ಯಕ್ಕೆ ಈ ತತ್ವಗಳ ಪೂರ್ಣ ಪರಿಚಯವಿಲ್ಲವೆಂದೂ ಇದ್ದರಿಂದ ಕೂಲಿಗಾರರ ಹಿತದ ಸಲುವಾಗಿ ಸೋವಿಯೆಟ್ ರಾಜ್ಯಾಂಗ ಪದ್ಧತಿಯನ್ನು ಏರ್ಪಡಿಸುವುದು ಸರಿಯಾಗಿ ತೋರುತ್ತದೆಯೆಂದೂ ಸಲಹೆಯನ್ನು ಕಂದನು. ಈ ಸಲಹೆಯು ಆಗಿನ ವಾತಾವರಣಕ್ಕೆ ಸೂಕ್ತವಾಗಿ ಕಂಡುಬಂದುದರಿಂದ ರಷ್ಯದಲ್ಲಿ ಸೋವಿಯೆಟ್ ಸರ್ಕಾರವು ರಚಿತವಾಯಿತು. ಅಂದಿನಿಂದಲೂ ಈಗ ಅದೇ ಸರ್ಕಾರವು ರಾಜ್ಯಭಾರಮಾಡುತ್ತಿದೆ. ಇದರಲ್ಲಿ ಅನೇಕ ಮಾರ್ಪಾಟುಗಳಾಗಿ ಈಗ ಪರಿಪಕ್ವನಾದ ವ್ಯವಸ್ಥೆಗೆ ಬಂದಿದೆ.

ಸ್ಟಾಲಿನ್ನನು ನೋಡುವುದಕ್ಕೆ ಅವನಿಗಾಗಿರುವ ವಯಸ್ಸಿಗಿಂತ ಹೆಚ್ಚು ವಯಸ್ಸಿನವನಂತೆ ಕಾಣುವನು, ಅಂತೆಯೇ ಅವನಲ್ಲಿಯೂ ಹೆಚ್ಚು ಬುದ್ಧಿಶಕ್ತಿಯಿದೆಯೆಂದು ಹೇಳಬಹುದು. ಗಟ್ಟಿಮುಟ್ಟಾದ ದೇಹ, ನೂತನ ಭಾವಗಳಿಂದ ಅಡಗಿರುವ ಆತ್ಮಕ್ಕೆ ಯಾವುದನ್ನು ಬೇಕಾದರೂ ಎದುರಿಸಿ ನಿಲ್ಲುವನೆಂಬ ಧೈರ್ಯ. ಇವನನ್ನು ನೋಡಿದರೆ ಸಾಮಾನ್ಯವಾಗಿ ಯಾವಾಗಲೂ ಸೈನಿಕನು ತೊಡುವಂತಹ ಉಡುಪನ್ನು ತೊಡುತ್ತಾನೆ.

ನಮ್ಮ ದೇಶದಲ್ಲಿ ತೊಡುವಂತಹ ಉದ್ದವಾದ ಕತ್ತಿನವರೆವಿಗೂ ಗುಂಡಿಗಳನ್ನು ಹಾಕುವಂತಹ ಕಾಕಿಯ ಕೋಟು, ಒಂದು ಪಂಟಾಯಿ, ಹೆಚ್ಚಾಗಿ ತಲೆಯಮೇಲೆ ಏನನ್ನೂ ಇಡುವುದಿಲ್ಲ. ಇಂತಹ ಸಾಮಾನ್ಯ ಉಡುಪನ್ನು ಧರಿಸಿರುವ ವ್ಯಕ್ತಿಯು ಅಡಿಯಾಳಾಗಿದೆ ಅಲ್ಲಿಯ ಸರಕಾರ. ಏಕೆಂದರೆ ಸೋವಿಯಟ್ 'ರಾಜ್ಯಾಂಗ ವ್ಯವಸ್ಥೆಯನ್ನು ಸರಿಯಾಗಿ ನೋಡಿಕೊಳ್ಳುವ ಭಾರವು ರಷ್ಯದ ಕಮ್ಯೂನಿಸ್ಟ್ ಪಾರ್ಟಿಗೆ ಸೇರಿರುವುದು. ಬಹು ಮಂದಿ ಸೋವಿಯಟ್ ಅಧಿಕಾರಿಗಳು ಈ ಪಾರ್ಟಿಯ ಸದಸ್ಯರಾಗಿದ್ದಾರೆ. ಸ್ಟಾಲಿನ್ನನು ವಸ್ತುತಃ ರಷ್ಯಾದ ಮಹಾ ಪ್ರಧಾನನಲ್ಲ. ಕೇವಲ ಪಕ್ಷದ ಪ್ರಧಾನ ಕಾರ್ಯದರ್ಶಿ. ಆದರೂ ರಷ್ಯಾದ ಪ್ರಚಂಡ ಪರಿವರ್ತನೆಗೆ ಇವನೇ ಮುಖ್ಯ ಕಾರಣ. ಇವನಲ್ಲಿ ಅಂತಹದಕ್ಕೆ ಅಮಿತಧೈರ್ಯ ಮತ್ತು ಬುದ್ಧಿ ಇದೆ. ಆದರೆ ಇಂದು ಅವನು ಪಡೆಯುತ್ತಿರುವ 'ಸಂಬಳ' ತಿಂಗಳು ಒಂದಕ್ಕೆ ಕೇವಲ ಆರೂಕಾಲು ಪೌಂಡು ಅಂದರೆ ನೂರುರೂಪಾಯಿಗಳಿಗಿಂತ ಕಡಿಮೆಯಾಗಿದೆ.

ನೋಟೀಸು

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 27/1939

1. ಗಂಗಮ್ಮ 2. ಸತ್ಯಭಾಮ 3. ಸಾವಿತ್ರಿ	ಮೃತ ವೆಂಕಟಕೃಷ್ಣ ಸಾಮುಗನ ಮಕ್ಕಳು, ಮೈನರು. ರಕ್ಷಕ ದೊಡ್ಡ ತಂದೆ ಶ್ರೀನಿವಾಸ ಸಾಮುಗ ದಾಸಪ್ಪ ಸಾಮುಗರ ಮಗ, ಶಿವಳ್ಳಿ ಕಸಬಾ ಗ್ರಾಮ	ಅರ್ಜಿದಾರರು

ಸದ್ರಿ ಅರ್ಜಿದಾರರ ತಂದೆ ಮೃತ ವೆಂಕಟಕೃಷ್ಣ ಸಾಮುಗನ ಖಾತ್ರಿ ದಿ. ಕರ್ನಾಟಕ ಬೇಂಕ್ ಲಿ. ಟೆಡ್ ಉಡ್ಪಿ ಬ್ರೇಂಚ್‌ನ ಡಿಪೋಜಿಟ್ ರಶೀದಿ ನಂಬ್ರ 100/38ನೇಗೆ ಸದ್ರಿ ಬೇಂಕಿನಲ್ಲಿ ಡಿಪೋಜಿಟ್ ಇರುವ ರೂಪಾಯಿ 200-0-0ನ್ನು ಬಡ್ಡಿ ಸಮೇತ ವಸೂಲು ಮಾಡುವರೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಸದ್ರಿ ಅರ್ಜಿದಾರರು ದಾಖಲುಮಾಡಿದ ಮೇಲ್ಕಂಡ ಅರ್ಜಿಯು ತಾ 12-7-39ಕ್ಕೆ ಇಟ್ಟಿರುತ್ತದೆಂತಲೂ ಆ ಕುರಿತು ಆಕ್ಷೇಪ ಕೊಡಲುಳ್ಳವರು ಸದ್ರಿ ದಿವಸ ಬೆಳಿಗ್ಗೆ 10 ಘಂಟೆಗೆ ಸದ್ರಿ ಕೋರ್ಟಿನಮುಂದೆ ಹಾಜರಾಗಿ ಹಾಜರುಮಾಡಿಕೊಳ್ಳತಕ್ಕದ್ದೆಂತಲೂ ಈ ಮೂಲಕ ತಿಳಿಸಲಾಗುತ್ತದೆ.

21-6-39 Udipi | **K. Gururaja Rao,** *Counsel for Petitioners*

ಪುಷ್ಪಗಂಧಾಮೋದಿತ
ಬಹುಗುಣಯುಕ್ತ
ಆಮಲಕೀ ತೈಲ
ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ, ಪ್ರೌಢ ಸ್ತ್ರೀ ಪುರುಷರಿಗೂ ನಿತ್ಯ ಕೇಶಪ್ರಸಾದನಾರ್ಥ ಉತ್ತಮವಾದ ಚಿತ್ತಾಕರ್ಷಕ ತೈಲ.
10 ತೊಲೆ ಸೀಸೆ 1ರ ಕ್ರಯ 0-11-0,
5 ತೊಲೆ „ „ „ 0-6-0.

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ
ಧಾನ್ವಂತರಿ ಗುಟಿಕಾ
ಅಜೀರ್ಣ, ಅತಿಸಾರ, ಉದರಶೂಲೆ, ಉಬ್ಬಸ, ಪಾರ್ಶ್ವಶೂಲೆ, ಕಟಿಶೂಲೆ, ಬೆಚ್ಚುವ ಮತ್ತು ಎಳೆಯುವ ವೇದನೆ, ಸರ್ವವಾತರೋಗ, ಜ್ವರ, ಕೆಮ್ಮು, ಇವುಗಳಲ್ಲಿ ಗುಣಕಾರಿಯಾಗಿದೆ. ಹಾಗೂ ಆಬಾಲವೃದ್ಧ ಸ್ತ್ರೀ ಪುರುಷರಿಗೂ, ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಸಂಗ್ರಾಹ್ಯವಾದ ದಿವ್ಯ ಔಷಧಿಯಾಗಿದೆ.

ಮಾತ್ರೆ:—	12	25	50	100	500	1000
ಕ್ರಯ:	0-4-0	0-7-0	0-13-0	1-5-0	5-0-0	9-0-0

5 ಆಣೆ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತವೆ.
ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲ್
ಪೋಸ್ಟ್ ಬ್ರಹ್ಮಾವರ, ದ. ಕ.

ನಮ್ಮ ಸ್ಟಾಕಿಸ್ಟರು:—
1. V. R. Prabhu, The Canara News & Books Agent, Batatawala Mansion; Lalbag, BOMBAY.
2. General Supplies Ltd., Udipi, S. K.
3. Nava Bharata Book Depot, Udipi, S. K.

ಗಂಡಮಾಲೆ ರೋಗ
ಈ ಭಯಂಕರ ರೋಗವನ್ನು ಖಾತ್ರಿಯಾಗಿ ಗುಣಪಡಿಸುವ
POPULAR OINTMENT
(For T. B. Glands)
ಕೈಬಿಟ್ಟು ಹೋದ ಎಷ್ಟೋ ರೋಗಿಗಳು ನಮ್ಮ ಔಷಧಿಯನ್ನು ಉಪಯೋಗಿಸಿ ಸಂಪೂರ್ಣ ಗುಣಹೊಂದಿರುವರು. ಗುಣವಾಗದಿದ್ದರೆ ಹಣ ವಾಪಾಸು.
ಬಾಟ್ಲಿ 1ಕ್ಕೆ ರೂಪಾಯಿ 5/-. ಟಪ್ಪಾಲು ಹಾಸಲು ಪ್ರತ್ಯೇಕ.
ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
The Popular Stores,
Chemists & General Merchants,
Parel, BOMBAY No. 12

ಧಾತುಪುಷ್ಟಿ ಲೇಹ ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ
ಇದು ಬಲಹೀನರಿಗೆ ಅತ್ಯಪೇಕ್ಷಿತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ. 2-8-0.
ಮೇಹ ಕುಠಾರ— ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರಮಾಡುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು ಮೂತ್ರದಲ್ಲಿ ಧಾತು ಹೋಗುವುದು ಸೊಂಟನೋವು ಮುತ್ತ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಅಲ್ಲದೆ ಇಪ್ಪತ್ತು ನಮೂನೆಯ ಮೇಹ ರೋಗಗಳಿಗೆ ದಿವ್ಯಔಷಧ. ಡಬ್ಬಿ 1ರ ರೂ. 2-8-0.
ಕಸ್ತೂರಿ ಮಿಶ್ರಣ ದಶಮೂಲ— ಪ್ರಸವಾನಂತರ ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ 1ರ ರೂ. 1-8-0
ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.
ಔಷಧಿ ಸಿಕ್ಕುವ ಸ್ಥಳ:-ನವಭಾರತ ಬುಕ್ ಡಿಪ್ಪೋ, ಉಡುಪಿ. ಶ್ರೀ ಕೃಷ್ಣ ಫಾರ್ಮಸಿ, ಕುಂದಾಪುರ. ವಿಟ್ಠಲ ನಾರಾಯಣಶೆಣೈ, ಟ್ರೆಮ್‌ಟರ್ಮಿನಸ್ ಮಜಗಾಂ ಮುಂಬಯಿ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.
ಕೊಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩-೮-೦	೧೦೦ ಮಾತ್ರೆಗಳಿಗೆ ರೂ. ೨-೮-೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.
ಯು. ಪಿ. ಮೇಸ್ತ್ರಿ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

ಲಂಡನಿನಲ್ಲಿ
ಮೈಸೂರಿನ ಆಡಳಿತದ ಪ್ರಶಂಸೆ

ಲಾರ್ಡ್ ಸ್ಯಾಮ್ಯುಯಲ್‌ರವರು ಮೈಸೂರಿನ ಶ್ರೀಮನ್ಮಹಾರಾಜರವರನ್ನೂ ದಿವಾನರನ್ನೂ ಪ್ರಶಂಸಿಸಿದರು.

"ಬಹಳ ಕಾಲದ ಹಿಂದೆ, ಇಂಗ್ಲೆಂಡಿನ ಎಲಿಜಬೆತ್ ರಾಣಿಯವರು, ಪ್ರಜಾಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡುವಾಗ, ದೇವರು ನನ್ನನ್ನು ಈ ಉನ್ನತ ಪದವಿಗೇರಿಸಿದ್ದರೂ ಸಹ, ನಿಮ್ಮಂಥವರನ್ನು ಆಳುವುದು ನನ್ನ ಜೀವನದ ಮಹಾಭಾಗ್ಯವೆಂದೇ ನಾನು ಭಾವಿಸಿರುತ್ತೇನೆ" ಎಂಬುದಾಗಿ ತಿಳಿಸಿದ್ದರು. ಮೈಸೂರಿನ ಶ್ರೀಮನ್ಮಹಾರಾಜರವರೂ ಸಹ, ತಮ್ಮ ಪ್ರಜೆಗಳಿಗೆ ಇದೇ ಮಾತುಗಳನ್ನು ಹೇಳಬಹುದಾಗಿದೆ ಎಂಬುದಾಗಿ ಆಳುವ ಮಹಾಸ್ವಾಮಿಯವರ ವರ್ಧಂತಿಯ ಸಂಬಂಧದಲ್ಲಿ ಲಂಡನ್ನಿನಲ್ಲಿ ಏರ್ಪಟ್ಟಿದ್ದ ಔತಣ ಸಮಾರಂಭದಲ್ಲಿ ಭಾಷಣ ಮಾಡುತ್ತಾ, ರೈಟ್ ಆನರೇಬಲ್ ವೈಕೌಂಟ್ ಸಾಮ್ಯುಯಲ್‌ರವರು ತಿಳಿಸಿದರು.

"ಶ್ರೀಮನ್ಮಹಾರಾಜರವರಂತಹ ಪ್ರಭುಗಳನ್ನು ಪಡೆದಿರುವುದು ಮೈಸೂರಿನ ಭಾಗ್ಯವೇ ಸರಿ. ಶ್ರೀಮನ್ ಮಹಾರಾಜರವರು, ಪ್ರಜೆಗಳ ಯೋಗಕ್ಷೇಮದ ವಿಷಯದಲ್ಲಿ ತಮಗಿರುವ ಜವಾಬ್ದಾರಿಯನ್ನು ಸಂಪೂರ್ಣವಾಗಿ ಅರಿತಿರುತ್ತಾರೆ. ಅವರ ಪ್ರಜಾವಾತ್ಸಲ್ಯವು ಹಿರಿದು ಮತ್ತು ಅವರು ಅಸಾಧಾರಣ ರಾಜನೀತಿಜ್ಞರು. ಶ್ರೀಮನ್ ಮಹಾರಾಜರವರ ಲೋಕಾನುಭವವನ್ನೂ, ದೂರದರ್ಶಿತ್ವವನ್ನೂ, ವ್ಯಕ್ತಪಡಿಸಲು ಭರತಖಂಡದಲ್ಲಿ ಮಾತ್ರವೇ ಅಲ್ಲ, ಇಡೀ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿಯೇ ಅತ್ಯಂತ ದಕ್ಷರಾದ ಆಡಳಿತಗಾರರಲ್ಲೊಬ್ಬರಾದ ಸರ್. ಮಿರ್ಜಾ ಇಸ್ಮಾಯಿಲ್‌ರವರನ್ನು ಸಂಸ್ಥಾನದ ದಿವಾನ್‌ರವರನ್ನಾಗಿ ನೇಮಕಮಾಡಿರುವ ಸಂಗತಿಯೊಂದೇ ಸಾಕಾಗಿದೆ.

ಭತತಖಂಡದ ಮುಂದಿರುವ ಆ ಸಮಸ್ಯೆಗಳು--ಪ್ರಪಂಚದ ಜನರಲ್ಲಿ ಆರನೇ ಒಂದು ಭಾಗವಾದ ಭಾರತೀಯರ ಜೀವನದಲ್ಲಿ ಇಂದು ವಿಶೇಷ ಪರಿಣಾಮಕಾರಿಯಾದ ಬದಲಾವಣೆಗಳಾಗುತ್ತಿವೆ. ಭಾರತೀಯರ ಮುಂದಿರುವ ಸಮಸ್ಯೆಗಳು ದೊಡ್ಡವು. ಅವುಗಳ ಪರಿಹಾರವು ಜರೂರಾಗಿ ಆಗಲೇ ಬೇಕು. ಮೊದಲನೆಯದಾಗಿ ಜನಸಾಮಾನ್ಯದ ಜೀವನದ ಮಟ್ಟವನ್ನು ಮೇಲೆತ್ತುವ ಸಮಸ್ಯೆ. ಇದಕ್ಕೆ ಸೇರಿದಂತೆ, ಎರಡನೆಯದಾಗಿ ಹರಿಜನರ ಸಮಸ್ಯೆ. ಮೂರನೆಯದಾಗಿ ಹಿಂದೂ-ಮುಸಲ್ಮಾನರ ಸಮಸ್ಯೆ, ನಾಲ್ಕನೆಯದಾಗಿ ಪ್ರಾಂತಿಕ ಸರಕಾರಗಳು, ಸಂಯುಕ್ತ ರಾಜ್ಯಾಂಗದ ಕೇಂದ್ರ ಸರ್ಕಾರ. ದೇಶೀಯ ಸಂಸ್ಥಾನಗಳು ಇವುಗಳಿಗೆ ಪರಸ್ಪರ ಸಂಬಂಧವು ಹೇಗಿರಬೇಕೆಂಬ ಸಮಸ್ಯೆ.

ಮೈಸೂರಿನ ಮೇಲ್ಕಂಡ ಸಮಸ್ಯೆಗಳ ಪರಿಹಾರದ ಬಗ್ಗೆ ನಡೆದಿರುವ ಕೆಲಸಗಳು—ಮೇಲ್ಕಂಡ ಸಮಸ್ಯೆಗಳ ಪರಿಹಾರದ ಬಗ್ಗೆ ಮೈಸೂರಿನಲ್ಲಿ ಬಹಳ ಕೆಲಸವು ನಡೆದಿದೆ. ನಾನು ಸಂಸ್ಥಾನದ ಹಲವು ಭಾಗಗಳಲ್ಲಿ ಸಂಚರಿಸಿ ಹಲವು ಗ್ರಾಮಗಳನ್ನು ನೋಡಿದೆನು. ಗ್ರಾಮಗಳ ಪುರೋಭಿವೃದ್ಧಿಯ ವಿಷಯದಲ್ಲಿ ಶ್ರೀಮನ್ ಮಹಾರಾಜರವರಿಗೂ ಮತ್ತು ದಿವಾನ್‌ರವರಿಗೂ ಇರುವ ತೀವ್ರಾಸಕ್ತಿಯನ್ನು ಬಹಳವಾಗಿ ಕೇಳಿ ತಿಳಿದೆನು. ಈ ಸಂಬಂಧದಲ್ಲಿ ಮೈಸೂರಿನಲ್ಲಿ ಬಹಳ ಪ್ರಶಂಸನೀಯವಾದ ಕೆಲಸ ಕಾರ್ಯಗಳು ನಡೆದಿವೆ. ಕೆಲವು ಕಡೆಗಳಲ್ಲಿ ಬಹಳ ಉತ್ತಮವಾದ ಫಲಿತಾಂಶಗಳು ಕಂಡುಬಂದಿವೆ. ನಾನು 7 ಪ್ರಾಂತಗಳಲ್ಲಿಯೂ 7 ದೇಶೀಯ ಸಂಸ್ಥಾನಗಳಲ್ಲಿಯೂ ಸಂಚರಿಸಿದೆನು. ನಾನು ಅಲ್ಲಿ ಸ್ವತಃ ನೋಡಿ, ಕೇಳಿ, ಓದಿ ಹಲವು ವಿಷಯಗಳನ್ನರಿತೆನು. ನನ್ನ ಅಭಿಪ್ರಾಯದಲ್ಲಿ ಗ್ರಾಮಾಭಿವೃದ್ಧಿಯ ವಿಷಯದಲ್ಲಿ, ಪ್ರಾಂತಿಕ ಸರ್ಕಾರಗಳ ಪೈಕಿ ಪಂಜಾಬು ಮತ್ತು ದೇಶೀಯ ಸಂಸ್ಥಾನಗಳ ಪೈಕಿ ಮೈಸೂರು ಇವುಗಳಲ್ಲಿ ನಡೆದಿರುವಷ್ಟು ಕೆಲಸವು ಮತ್ತೆಲ್ಲಿಯೂ ನಡೆದಿಲ್ಲ. ಭರತಖಂಡದ 10 ಲಕ್ಷ ಹಳ್ಳಿಗಳನ್ನು ಮುಂದಕ್ಕೆ ತರುವ ಮಾರ್ಗವಾವುದು ಎಂಬುದನ್ನು ತಿಳಿಸಲು ಮೈಸೂರು ಮತ್ತು ಪಂಜಾಬು ಪ್ರಾಂತ್ಯಗಳು ಅತ್ಯುತ್ತಮವಾದ ನಿದರ್ಶನಗಳಾಗಿವೆ.

ಮೈಸೂರು ವಿಶ್ವವಿದ್ಯಾನಿಲಯವನ್ನು ನಾನು ನೋಡಿದೆನು. ಆ ವಿಶ್ವವಿದ್ಯಾನಿಲಯವನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಅಲ್ಲಿ 3,000 ಮಂದಿ ವಿದ್ಯಾರ್ಥಿಗಳಿದ್ದಾರೆ. ವಿಶ್ವವಿದ್ಯಾನಿಲಯದ ಸಂಘವೊಂದನ್ನುದ್ದೇಶಿಸಿ ಭಾಷಣಮಾಡುವ ಸುಯೋಗವೂ ನನಗೆ ಲಭಿಸಿತ್ತು. ಅದಕ್ಕಿಂತಲೂ ತಿಳುವಳಿಕೆಯನ್ನು ಪಡೆಯಲು ಆತುರವುಳ್ಳ ಮತ್ತು ಬುದ್ಧಿವಂತರಾದ ಜನರಿಂದ ಕೂಡಿದ ಸಭೆಯನ್ನುದ್ದೇಶಿಸಿ ನಾನು ಮಾತನಾಡಿಯೇ ಇಲ್ಲವೆಂದೇ ಹೇಳಬಹುದು.

ಕೈಗಾರಿಕೆಗಳ ಅಭಿವೃದ್ಧಿ— ಗ್ರಾಮಾಭಿವೃದ್ಧಿಗೆ ಹಣವನ್ನು ಒದಗಿಸುವುದಕ್ಕಾಗಿಯೂ ಮತ್ತು ನಗರನಿವಾಸಿಗಳಿಗೆ ಬೇಕಾದ ಸೌಕರ್ಯಗಳನ್ನೊದಗಿಸುವುದಕ್ಕಾಗಿಯೂ, ಭರತಖಂಡದ ದೇಶೀಯ ಸಂಸ್ಥಾನಗಳು ತಮ್ಮ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಿ ಆ ಮೂಲಕ ಹೆಚ್ಚು ವರಮಾನವನ್ನು ಪಡೆಯಬೇಕಾಗಿದೆ. ಸಂಸ್ಥಾನದ ಕೈಗಾರಿಕೆಗಳ ಬೆಳವಣಿಗೆಯನ್ನು ನಿಮ್ಮ ಅಧ್ಯಕ್ಷರವರು (ಮೈಸೂರಿನ ಟ್ರೇಡ್ ಕಮಿಷನರವರು) ನಿಮಗೆ ಈಗಾಗಲೇ ವಿವರಿಸುತ್ತಾರೆ. ಮೈಸೂರಿನ ಸುಯೋಗದಿಂದ ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯ ಸೌಕರ್ಯವಿದೆ. ಸಂಸ್ಥಾನದಲ್ಲಿ ಹಲವು ಕಡೆ ವಿದ್ಯುಚ್ಛಕ್ತಿಯನ್ನುತ್ಪತ್ತಿಮಾಡಿ ರಾಜ್ಯದ ಬಹು ಭಾಗಕ್ಕೆ ಶಕ್ತಿಯನ್ನೊದಗಿಸುತ್ತಿದ್ದಾರೆ. ಮೈಸೂರಿನಲ್ಲಿ ವಿದ್ಯುಚ್ಛಕ್ತಿಯು ಉತ್ಪತ್ತಿಯಾಗುವ ಕೇಂದ್ರಗಳ ಹೆಸರುಗಳು ಈ ಸಭೆಯಲ್ಲಿರುವವರಿಗೆ ಚೆನ್ನಾಗಿ ಗೊತ್ತಿರಬೇಕು. ನಾನು ಕೃಷ್ಣರಾಜ ಸಾಗರಕ್ಕೆ ಹೋಗಿದ್ದೆ. ಎರಡು ಮೈಲಿ ಉದ್ದವಾದ ಆ ಮಹಾ ಜಲಾಶಯವನ್ನು ನೋಡುವ ಅವಕಾಶವು ನನಗೆ ದೊರೆತಿದ್ದಿತು. ಇದಲ್ಲದೆ, ಸಂಸ್ಥಾನದಲ್ಲಿ ಇನ್ನೂ ಕೆಲವು ಕಡೆ ವಿದ್ಯುಚ್ಛಕ್ತಿಯನ್ನುತ್ಪತ್ತಿಮಾಡಲಾಗುತ್ತಿದೆ. ವಿದ್ಯುಚ್ಛಕ್ತಿಯ ಸಹಾಯದಿಂದ ಸಂಸ್ಥಾನದ ಕೈಗಾರಿಕೆಗಳು ಇಷ್ಟು ಅದ್ಭುತವಾದ ರೀತಿಯಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ.

ಜೀವನವನ್ನು ಸುಖಮಯವನ್ನಾಗಿ ಮಾಡುವ ಸೌಕರ್ಯಗಳನ್ನೊದಗಿಸುವ ವಿಷಯದಲ್ಲಿ ಸರ್ಕಾರದವರು ಹಿಂದುಳಿದಿಲ್ಲ. ನಾನು ಈಗ ತಾನೇ ತಿಳಿಸಿದ ಜಲಾಶಯದ ಪಕ್ಕದಲ್ಲಿಯೇ ಮನೋಹರವಾದ ಮತ್ತು ರಾತ್ರಿಯ ವೇಳೆಯಲ್ಲಿ ಅತ್ಯಂತ ಸುಂದರವಾದ ರೀತಿಯಲ್ಲಿ ಬಣ್ಣಬಣ್ಣದ ವಿದ್ಯುದ್ದೀಪಗಳಿಂದ ರಂಜಿಸುವ ಉದ್ಯಾನವೊಂದು ನಿರ್ಮಿತವಾಗಿದೆ. ದೂರದಿಂದ ಬಂದ ಪ್ರಯಾಣಿಕರು ಅಲ್ಲಿ ವಿಶ್ರಮಿಸಿ ಆನಂದಿಸುತ್ತಾರೆ. ಅಲ್ಲದೆ ಸಂಸ್ಥಾನದಲ್ಲಿ ಶಿಲ್ಪಕಲೆಯೇ ಮೂರ್ತಿವತ್ತಾಗಿ ನಿಂತಿದೆಯೋ ಎನ್ನಿಸುವಂತಹ ಹಲವು ಕಟ್ಟಡಗಳಿವೆ. ಮೈಸೂರಿನ ಮನೆಗಳು, ಮೈಸೂರಿನ ವೈದ್ಯಶಾಲೆಗಳು ಮತ್ತು ಇಂತಹ ಸಂಸ್ಥೆಗಳ ಕಟ್ಟಡಗಳು, ಇವುಗಳು ಅತ್ಯಂತ ಆಧುನಿಕ ರೀತಿಯಲ್ಲಿ ಕಟ್ಟಲ್ಪಟ್ಟಿವೆ. ಉದಾಹರಣೆಗಾಗಿ, ಸರ್ಕಾರದ ಸಾಬೂನಿನ ಕಾರ್ಖಾನೆಯ ಮುಂಭಾಗದ ಮಾದರಿಯನ್ನು ರಾಯಲ್ ಅಕೆಡೆಮಿಯ ಶಿಲ್ಪಶಾಸ್ತ್ರ ಶಾಖೆಯವರೂ ಸಹ ಮೆಚ್ಚಿಕೊಳ್ಳಬಹುದಾಗಿದೆ. ಇವೆಲ್ಲವುಗಳಿಗಿಂತ ರಾತ್ರಿಯ ವೇಳೆಯಲ್ಲಿ ವಿದ್ಯುದ್ದೀಪಗಳಿಂದಲಂಕೃತವಾದ ಅರಮನೆಯನ್ನು ನೋಡುವಾಗ, ನಾವು ಅಪ್ಸರಲೋಕದಲ್ಲಿರುವೆವೋ ಎಂದು ಭಾಸವಾಗುತ್ತದೆ. ಅಂದವಾದ ದೀಪಗಳಿಂದ ರಂಜಿಸುವ ಮೈಸೂರಿನ ಅರಮನೆಯು, ಭರತಖಂಡದಲ್ಲಿ ಮಾತ್ರವೇ ಅಲ್ಲ, ಇಡೀ ಪ್ರಪಂಚದಲ್ಲೇ ಅತ್ಯಂತ ಸುಂದರವಾದ ದೃಶ್ಯಗಳಲ್ಲೊಂದಾಗಿದೆ.

ಕೋಮುವಾರು ಭಾವನೆ—ಭರತಖಂಡದಲ್ಲಿ ಕೋಮುವಾರು ವೈಷಮ್ಯವು ಮೊದಲಿಗಿಂತಲೂ ಈಗ ಸ್ವಲ್ಪ ಹೆಚ್ಚಿದೆಯೆಂದು ತಿಳಿಯಲು ನನಗೆ ಬಹಳ ದುಃಖವಾಯಿತು. ನಾನು ಭರತಖಂಡವನ್ನು ಬಿಟ್ಟಮೇಲೆ ಅಲ್ಲಿ ನಡೆದ ವಿದ್ಯಮಾನಗಳಿಂದ, ನನ್ನ ಭಾವನೆಯು ಸರಿಯೆಂದೂ ಸಹ ತಿಳಿದುಬಂದಿದೆ. ಇದು ರಾಜಕೀಯ ಸುಧಾರಣೆಗಳ ಆಚರಣೆಯ ಪರೋಕ್ಷವಾದ ಫಲಿತಾಂಶಗಳಾಗಿವೆ. ಆದರೆ, ಈ ಸಂಬಂಧದಲ್ಲಿ ಮೈಸೂರು ಭರತಖಂಡಕ್ಕೇ ಸೊಗಸಾದ ಮಾದರಿಯಾಗಿದೆ. ಮೈಸೂರಿನ ಮಹಾರಾಜರವರು ಹಿಂದೂಗಳು. ದಿವಾನ್‌ರವರು ಮುಸಲ್ಮಾನರು. ಸಂಸ್ಥಾನದ ಹುದ್ದೆಗಳಿಗೆ ಎರಡು ಕೋಮಿನವರಿಗೂ ಯಾವ ಭೇದವೂ ಇಲ್ಲದಂತೆ ಪ್ರವೇಶವುಂಟು. ಉಳಿದ ಭಾಗದಲ್ಲಿ ನಡೆಯುತ್ತಿರುವ ವಿಷಾದಕರವಾದ ಕಲಹದೊಡನೆ ಹೋಲಿಸಿದರೆ, ಈ ವಿಷಯದಲ್ಲಿ, ಮೈಸೂರು ಇತರರಿಗೆ ಮಾರ್ಗದರ್ಶಿಯಾಗಿದೆ. ಹೊಸದಾಗಿ ಮಸೀದಿಗಳನ್ನು ಕಟ್ಟಿಸುವ ವಿಷಯದಲ್ಲಿ ಶ್ರೀಮನ್ ಮಹಾರಾಜರವರು ತಾವೇ ವಿಶೇಷ ಆಸಕ್ತಿಯನ್ನು ವಹಿಸುವುದೂ ಅಲ್ಲದೆ, ಇನ್ನೂ ಹಲವು ವಿಧಗಳಲ್ಲಿ, ಹಿಂದೂ ಧರ್ಮದ ಅತ್ಯಂತ ಶ್ರೇಷ್ಠವಾದ ಗುಣವಾದ ಪರಧರ್ಮಸಹಿಷ್ಣುತೆಯನ್ನು ಸಂಪೂರ್ಣವಾಗಿ ಪ್ರದರ್ಶಿಸುತ್ತಾರೆ.

ನಮ್ಮ ದೇಶದಲ್ಲಿಯೂ, ಇತರ ದೇಶಗಳಲ್ಲಿಯೂ ಈಚೆಗೆ ಒಂದು ಚಳುವಳಿಯು ನಡೆಯುತ್ತಿದೆ. ಅದು ಸರ್ವ ಧರ್ಮ ಸಮ್ಮೇಳನ ಚಳುವಳಿ. ಹಿಂದೂಗಳೂ, ಮುಸಲ್ಮಾನರೂ, ಕ್ರಿಶ್ಚಿಯನರೂ, ಬೌದ್ಧರೂ, ಕನ್‌ಫ್ಯೂಷಿಯಸಿನ ಮತದವರೂ, ಯೆಹೂದ್ಯರೂ ಈ ಚಳುವಳಿಯಲ್ಲಿ ಆಸಕ್ತಿಯನ್ನು ವಹಿಸುತ್ತಾರೆ. ಪ್ರತಿಯೊಬ್ಬರೂ, ಅನ್ಯ ಮತಗಳ ತತ್ವಗಳನ್ನು ಗ್ರಹಿಸಿ ಅವುಗಳಲ್ಲಿ ತಮಗೆ ಹೊಂದಿಕೆಯಾಗುವ ವಿಷಯಗಳನ್ನು ತೆಗೆದುಕೊಂಡು, ಸರ್ವರಿಗೂ ಸಮ್ಮತವಾಗುವಂಥ ಒಂದು ವಿಶ್ವಧರ್ಮ ಸ್ಥಾಪನೆಯಾಗಬೇಕೆಂಬುದೇ ಈ ಚಳುವಳಿಯ ಉದ್ದೇಶವಾಗಿದೆ. ಮಾನವರು ಒಬ್ಬರೊಡನೊಬ್ಬರು ಪ್ರೀತಿ ವಿಶ್ವಾಸಗಳಿಂದ ವರ್ತಿಸಿ ಜಗತ್ತಿನಲ್ಲಿ ಶಾಂತಿಯು ನೆಲಸಲೆಂಬುದೇ ಈ ಚಳುವಳಿಗಾರರ ಹಾರೈಕೆ. (ಸಶೇಷ)

THE ASIAN ASSURANCE COMPANY, LTD.

ASIAN BUILDINGS - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,965	24,50,234
1935	2,52,03,418	18,39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency termes etc—

Sri. B. Narayan Shetty, Organizer, Brahmavar
,, M. Shivarama Rao, Organizer, Puttur.

OR

Sri. J. A. PUTRAN, Branch Manager, Mangalore.

ತ್ರೈರಾಷ್ಟ್ರಗಳ ಸೂಚನೆಗೆ ಜಪಾನಿನ ಧಿಕ್ಕಾರ.

ಜಪಾನ ಸಂಆಕ್ರಮಣಕ್ಕೊಳಗಾಗಿರುವ ಚೀನದ ಕುಲಾಂಗ್ಸು ಎಂಬಲ್ಲಿಯ ಅಂತರ್ರಾಷ್ಟ್ರೀಯ ಕ್ಷೇತ್ರದ ಆಹಾರ ಸಾಮಗ್ರಿಗಳ ಆಮದಿನ ಹಾದಿಯನ್ನು ಜಪಾನರು ನಿಂಗಡಿಸಿದುದರಿಂದಾಗಿ ಆ ಕ್ಷೇತ್ರದಲ್ಲಿ ಸಾಮಗ್ರಿಗಳ ಬರಗಾಲ ಬೀಳಹತ್ತಿದೆ. ಬ್ರಿಟನ್ ಫ್ರಾನ್ಸ್, ಅಮೇರಿಕೆಗಳು ಒಂದಾಗಿ ಜಪಾನಿಗೆ ಕಳುಹಿಸಿದ 'ನೋಟಿ'ಗೆ 'ಅದು ಅನಿವಾರ್ಯವಾದ ವಿಷಯ' ಎಂದು ಜಪಾನು ಉತ್ತರಕೊಟ್ಟಿದೆ.

❀

ಟಿಯೆಂಟ್ಸಿನ್ ಸಮಸ್ಯೆ ಇದ್ದಂತೆ ಇದೆ!

ಟಿಯೆಂಟ್ಸಿನ್ ದಿಗ್ಬಂಧನವು ಹಾಗೆಯೇ ಇದೆ. ಜಪಾನರು ಬ್ರಿಟಿಷ್ ಪ್ರಜೆಗಳನ್ನು ಸಂಪೂರ್ಣ ಬತ್ತಲೆ ಮಾಡಿ ಪರೀಕ್ಷಿಸಿ ಅವಮಾನಿಸಿ ಹಮೇಶ ಹೋಗಬಿಟ್ಟರು. ಆಹಾರ ಸಾಮಗ್ರಿಯನ್ನೊಯ್ಯುತ್ತಿದ್ದ ಬ್ರಿಟಿಷ್ ಲಾರಿಯೊಂದು ನಿರಾತಂಕವಾಗಿ ಒಳಹೊಕ್ಕಿತು. ಬ್ರಿಟಿಷರ ಪಡೆಯು ಕ್ಷೇತ್ರದ ಕಾವಲನ್ನು ನಡೆಸುತ್ತದೆ. ಟಿಯೆಂಟ್ಸಿನಿನ ಕುರಿತು ನೇರಾಗಿ ಜಪಾನ್ ಸರಕಾರಕ್ಕೇನೆ ಕಳುಹಿಸಿದ ಬ್ರಿಟಿಷ್ ಪ್ರಶ್ನೆಗಳಿಗೆ ಈ ತನಕ ಉತ್ತರ ಬಂದಿಲ್ಲ ಟಿಯೆಂಟ್ಸಿನ ಸಮಸ್ಯೆಯನ್ನು ಸ್ಥಳೀಕ ಪ್ರಶ್ನೆಯಾಗಿ ಮಾಡಿ ಕಡೆದಾಯಬೇಕೆಂದು ಬ್ರಿಟಿಷರ ಅಂತರ್ಯವಿರುವಂತೆ ತೋರುತ್ತದೆ.

❀

ಸ್ವಟೋವಿನಲ್ಲಿ ಚೀನೀ ಪರಾಜಯ.

ಸ್ವಟೋವಿನ ಮೇಲೆ ಜಪಾನರು ಧಾಳಿಯಿಟ್ಟಾಗ ಚೀನೀ ಸೇನೆಯು ವೈದೆಗೆದು ನಿಂತು ಬಿಟ್ಟುಕೊಟ್ಟಿತು. ಪುನಃ ಅದನ್ನು ಸ್ವಾಧೀನಪಡಿಸಿಕೊಳ್ಳಲು ಮುಂದರಿದ ಚೀನೀಯರನ್ನು ಜಪಾನರು ಹಿಮ್ಮೆಟ್ಟಿಸಿರುವರೆಂದು ಟೋಕಿಯೋದ ವಾರ್ತೆ.

❀

ರಶ್ಯವು ಒಲ್ಲೆನೆನ್ನುತ್ತದೆ

ಸಂಧಾನಕ್ಕಾಗಿ ಮೋಸ್ಕೋವಿಗೆ ತೆರಳಿದ್ದ ಬ್ರಿಟಿಷ್ ರಾಯಭಾರಿ ಮಿ. ಸ್ಟ್ರಾಂಗರು ಇಂಗ್ಲಿಂಡ್ ಮತ್ತು ಫ್ರೆಂಚ್ ಪ್ರತಿನಿಧಿಗಳ ಸಮಕ್ಷಮದಲ್ಲಿ ರಶ್ಯಾದ ವಿದೇಶ ಮಂತ್ರಿ ಎಮ್. ಮೊಲೊಟೊವ್, ಇವರೊಡನೆ ಹೊಸ ಸೂಚನೆಗಳ ಕುರಿತು ಚರ್ಚಿಸಿದರು. ಬಾಲ್ಟಿಕ್ ರಾಷ್ಟ್ರಗಳಿಗೆ ರಶ್ಯಾವ ನಿರೀಕ್ಷಿಸಿದ ಮಾದರಿಯ ಆಶ್ವಾಸನೆಯು ಈ ಹೊಸ ಸೂಚನೆಗಳಲ್ಲಿ ಕೂಡ ಇಲ್ಲದಿರುವದರಿಂದ ಒಪ್ಪಿಗೆ ಕೊಡಲು ಸಾಧ್ಯವಿಲ್ಲವೆಂದು ಮೊಲೊಟೊವ್ ಹೇಳಿರುವರು. ಈ ಉತ್ತರವನ್ನು ಇಗ್ಲಂಡು ಫ್ರಾನ್ಸುಗಳಿಗೆ ತಿಳಿಸಲಾಗಿದೆ. ಅಲ್ಲಿಂದ ಸೂಚನೆಬರುವವರೆಗೆ ಸಂಧಾನದ ಮಾತುಕತೆಯನ್ನು ಮುಂದುವರಿಸಲಾಗಿದೆ.

❀

ಅಮೇರಿಕೆ ಇಂಗ್ಲಂಡು ಜಪಾನು ತಾಕಲಾಟ

ಸ್ವಾತೋವ್ ಬಂದರಿನಲ್ಲಿರುವ ವಿದೇಶೀ ಯುದ್ಧ ಹಡಗುಗಳೆಲ್ಲಾ ಅದನ್ನು ಬಿಟ್ಟುಹೋಗಬೇಕೆಂದು ಜಪಾನಿಯರಿತ್ತ ಆಜ್ಞೆಯನ್ನುಲ್ಲಂಘಿಸಿ ಅಮೇರಿಕಾ ಇಂಗ್ಲಂಡುಗಳ ಹಡಗುಗಳು ನಿಂತಿವೆ. ಆ ಕುರಿತು ಕಠಿಣ ಧೋರಣೆ ವಹಿಸದೆ ಜಪಾನು ಹಿಂಜರಿದಂತೆ ಕಾಣುತ್ತದೆ.

❀

ಪ್ರತೀಕಾರದ ಎಚ್ಚರಿಕೆ

ಟಿಯೆಂಟ್ಸಿನಲ್ಲಿ ಬ್ರಿಟಿಷ್ ಪ್ರಜೆಗಳಿಗೆ ಮಾಡಿದ ಅಪಮಾನದ ಕುರಿತು ಜಪಾನಿನ ರಾಯಭಾರಿಗಳನ್ನು ಕರೆಯಿಸಿ ಲೋರ್ಡ್ ಹೆಲಿಫೇಕ್ಸರು ಎಚ್ಚರಿಕೆಯಿತ್ತಿರುವರು. ಮುಂದಕ್ಕಿಂತಹ ಘಟನೆಗಳೊದಗದಂತೆ ಖಂಡಿತವಾಗಿ ನೋಡಲಾಗುವದೆಂದು ಮಿ. ಚೇಂಬರ್ಲಿನರು ಪಾರ್ಲಿಮೆಂಟಿನ ಪ್ರಶ್ನೆಗುತ್ತರವಿತ್ತಿರುವರು. ತಕ್ಷಣ ಪರಿಣಾಮವೀವ ಕಾರ್ಯವನ್ನು ಕೈಕೊಳ್ಳುವಷ್ಟಕ್ಕೆ ಪರಿಸ್ಥಿತಿ ಈ ವರೆಗೆ ಬಂದಿಲ್ಲವೆಂದು ಚೇಂಬರ್ಲಿನರ ಉತ್ತರ.

❀

ವಿದೇಶ ═══ ವಿಚಾರ

ರಾಜರಾಣಿಯರ ಆಗಮನ

ಅಮೇರಿಕ, ಕೆನಡಾದ ಸಂಚಾರವನ್ನು ಮುಗಿಸಿಕೊಂಡು ಚಕ್ರವರ್ತಿಯವರು ಇದೇ ತಾ ೨೨ರಲ್ಲಿ ಸಪತ್ನೀಕರಾಗಿ ಲಂಡನಿಗೆ ತಲಪಿರುವರು. ಅವರಿಗೆ ಅತ್ಯಂತ ಸಂಭ್ರಮದ ಸ್ವಾಗತ ಕೊಡಲ್ಪಟ್ಟಿತು 'ನಮ್ಮ ಸಮಯವು ಆಶ್ಚರ್ಯಕರ ರೀತಿಯಲ್ಲಿ ಕಳೆದುಹೋಯಿತು!' ಎಂದು ತಮ್ಮ ಪ್ರವಾಸದ ಕುರಿತು ಚಕ್ರವರ್ತಿಯರಂದರು.

❀

ಸ್ನೇಹಪೂರ್ವಕ ಸೂಚನೆ!

ಸ್ವಾಟೋವನ್ನು ಬಿಡಬೇಕೆಂದು ಜಪಾನರು ಅನ್ಯರಾಷ್ಟ್ರಗಳಿಗೆ ಸ್ನೇಹಪೂರ್ವಕ ಎಚ್ಚರಿಕೆಕೊಟ್ಟದ್ದಲ್ಲದೆ ಬಹಿಷ್ಕಾರ ಹಾಕಿದುದಲ್ಲವೆಂದು ಜಪಾನ್ ಕಡೆಯವರ ಪ್ರಕಟನೆಯಾಗಿದೆ.

❀

ವಿದ್ಯುಚ್ಛಕ್ತಿ ಹರಿಗೆಗೆ ಬಲಿ!

ಟಿಯೆಂಟ್ಸಿನ್ ಬ್ರಿಟಿಷ್ ಕ್ಷೇತ್ರಕ್ಕೆ ಜಪಾನರು ಹಾಕಿದ ಎಲೆಕ್ಟ್ರಿಕ್ ಆವರಣಕ್ಕೆ ಸಿಕ್ಕಿಕೊಂಡು ಚೀನೀಯನೊಬ್ಬನು ಮಡಿದುಬಿದ್ದಿದ್ದಾನೆ.

❀

ಫ್ರಾನ್ಸ್-ಟರ್ಕಿ ಒಪ್ಪಂದ

ಬ್ರಿಟಿಷ್ ಟರ್ಕಿ ಒಪ್ಪಂದದ ಮಾದರಿಯಲ್ಲಿಯೇ ಫ್ರಾನ್ಸ್ ಟರ್ಕಿ ಒಪ್ಪಂದವೂ ರಚಿಸಲ್ಪಟ್ಟು ಇತ್ತಂಡದವರ ಸಹಿ ಬಿದ್ದಿದೆ, ಅಲೆಗ್ಸಾಂಡ್ರೆಟ್ಟಾವನ್ನು ಈ ಒಪ್ಪಂದದಂತೆ ಫ್ರೆಂಚರು ಟರ್ಕಿಗೆ ಬಿಟ್ಟುಕೊಟ್ಟಿದ್ದಾರೆ. ಯುದ್ಧ ಕಾಲದಲ್ಲಿ ಪರಸ್ಪರರಿಗೆ ನೆರವಾಗುವದೇ ಈ ಒಡಂಬಡಿಕೆಯ ಸಾರ. ಟರ್ಕಿಯ ಎಸೆಂಬ್ಲಿಯಲ್ಲಿ ಈ ಒಪ್ಪಂದವನ್ನು ಮಾಡಿದ ಮುಖ್ಯ ಮಂತ್ರಿಗಳ ಮೇಲೆ ಒಮ್ಮತದ ವಿಶ್ವಾಸ ಸೂಚನೆಯಾಯಿತು. ಅಲೆಕ್ಸಾಂಡ್ರೆಟ್ಟವನ್ನು ಜುಲಾಯಿ 23ಕ್ಕೆ ಟರ್ಕಿಯು ಪಡೆದುಕೊಳ್ಳುವದು.

❀

ಮಂಚೂಕುವೋದ ಮೇಲೆ ಸೋವಿಯೆಟ್ ಧಾಳಿ

ಮಂಚೂಕುವೊ ಗಡಿಯ ಮೇಲೆ ರಷ್ಯಾ ವಿಮಾನಗಳು ಹಾರಿ ಮೇಲಿಂದ ಮೇಲೆ ಬಾಂಬು ಸುರಿಸಲು ತೊಡಗಿವೆ. ಇಂತಹ ಕೃತ್ಯವನ್ನು ಮುಂದುವರಿಸಿದಲ್ಲಿ ತೀವ್ರ ಪರಿಣಾಮಕಾರೀ ಕಾರ್ಯ ಕೈಕೊಳ್ಳಲಾದೀತೆಂದು ಜಪಾನ್ ಸರಕಾರವು ಬೆದರಿಕೆ ಹಾಕಿದೆ. ತಾ. 24ರಲ್ಲಿ 60ಸೋವಿಯೆಟ್ ವಿಮಾನಗಳು ಧಾಳಿ ನಡೆಸಿದಾಗ ಹನ್ನೆರಡನ್ನು ಗುಂಡಿಟ್ಟು ಕೆಡಹಲಾಯಿತೆಂದು ಜಪಾನರ ವಾರ್ತೆ.

❀

ರುಮೇನಿಯದ ಸಿದ್ಧತೆ

ರುಮೇನಿಯಾ, ಯುಗೊಸ್ಲೇವಿಯಾ, ಟರ್ಕಿ ಮತ್ತು ಗ್ರೀಸ್ ರಾಜ್ಯಗಳೊಳಗೆ ಯುದ್ಧಕಾಲದಲ್ಲಿ ಪರಸ್ಪರ ಸಹಾಯಮಾಡಿಕೊಳ್ಳುವ ಒಪ್ಪಂದವೊಂದನ್ನು ರುಮೇನಿಯದ ವಿದೇಶಾಂಗ ಮಂತ್ರಿಗಳು ಸಿದ್ಧಪಡಿಸುತ್ತಿರುವರು. ತನ್ನ ನೆರೆಯ "ಎಕ್ಸಿಸ್" ರಾಷ್ಟ್ರಗಳ ವಿರುದ್ಧವಾಗಿ ತಯಾರಾಗುತ್ತಿರುವ ಈ ಒಡಂಬಡಿಕೆಯು ಅಪಾಯಕರವೆಂದು ಇಟಲಿ ರಾಯಭಾರಿಯು ಎಚ್ಚರಿಸಿದರೂ, ತನ್ನ ಹಿತಸಾಧಿಸಿಕೊಳ್ಳುವ ಅಧಿಕಾರ ತನಗಿರುವದೆಂದು ರುಮೇನಿಯವು ಅದನ್ನು ಧಿಕ್ಕರಿಸಿರುವದು

❀

ಜರ್ಮನಿಯು ಯುಗೋಸ್ಲೇವಿಯಾವನ್ನು ಹಿಸುಕಿ ಎಣ್ಣೆ ತೆಗೆಯಿತು!

ಜರ್ಮನಿಯ ಬಲವಾದ ಬೇಡಿಕೆಯಂತೆ ಯುಗೋಸ್ಲೇವಿಯಾ ರಾಷ್ಟ್ರವು ತನ್ನಲ್ಲಿಯ ಎಣ್ಣೆಯ ಪ್ರದೇಶಗಳ ಉಪಯೋಗವನ್ನು ಜರ್ಮನಿಯ ಕಂಪೆನಿಯೊಂದಕ್ಕೆ ಬಿಟ್ಟುಕೊಡಲು ಒಪ್ಪಿಕೊಂಡಿತು.

❀

ಸ್ವಿಜರ್ಲೇಂಡಿಗೆ ಭರವಸೆ

ಸ್ವಿಜರ್ಲೇಂಡಿನ ಮೇಲೆ ಹಿಂಸಾತ್ಮಕ ಧಾಳಿಯಿಡುವ ಉದ್ದೇಶವು ತಮಗೇ ಇಲ್ಲವೆಂದೂ ಪತ್ರಿಕೆಗಳಲ್ಲಿ ಬರುವ ವಾರ್ತೆಗಳಿಗೆ ತಾವು ಹೊಣೆಗಾರರಲ್ಲವೆಂದೂ ಜರ್ಮನಿಯು ಸ್ವಿಜರ್ಲೇಂಡಿಗೆ ಭರವಸೆಕೊಟ್ಟಿರುವದು.

❀

ಸಿಂಗಾಪುರದಲ್ಲಿ ಯುದ್ಧಶೃಂಗಾರ!

ಪೂರ್ವದೇಶಗಳಲ್ಲ ಯುದ್ಧಸಿದ್ಧತೆಯ ಕುರಿತು ಆಂಗ್ಲೋ ಫ್ರಾನ್ಸ್ ನಾವಿಕ ದಳಪತಿಗಳು ನಿಶ್ಚಿತವಾದ ನಿರ್ಧಾರಕ್ಕೆ ಬಂದಿದ್ದಾರೆ. ಸಿಂಗಾಪುರವನ್ನು ಉಭಯರಾಷ್ಟ್ರಗಳ ಯುದ್ಧಕೇಂದ್ರವಾಗಿ ಮಾಡಿ ಇಂಗ್ಲಿಷ್ ಕಮಾಂಡರ್-ಇನ್-ಚೀಫ್, ಎರಡೂ ಕಡೆಯವರ ಅಧಿನಾಯಕತ್ವ ವಹಿಸುವದೆಂದು ನಿರ್ಧಾರವಾಗಿದೆ. ಜಪಾನರು ಚೀನಾದಲ್ಲಿ ಕೊಡುತ್ತಿರುವ ಉಪಟಳವೇ ಈ ಪೂರ್ವತಯಾರಿಗೆ ಕಾರಣ, ಅಮೇರಿಕೆಯೊಡನೆಯೂ ಸಂಬಂಧವಿಟ್ಟುಕೊಂಡು ಕಾರ್ಯ ಕೈಕೊಳ್ಳಲಾಗಿದೆ, ಆಂಗ್ಲೋ ಫ್ರೆಂಚರು ಇಲ್ಲಿ ಇರಿಸುವ ನಾವಿಕಪಡೆಯು ಪೂರ್ವದಿಕ್ಕಿನ ವಿರೋಧಿಗಳ ಬಲಕ್ಕಿಂತ ಸಣ್ಣದಾದರೂ ಹೆಚ್ಚಿನ ಬಲವಿರುವ ತನ್ನ ವಿರೋಧಿಗಳನ್ನು ಉಪದ್ರವಿಸಲು ಸಾಕಾಗಬಹುದಂತೆ. ಸಿಂಗಪುರ ಯುದ್ಧನಿಲ್ದಾಣದಲ್ಲಿ ಸರ್ವಸನ್ನಾಹ ನಡೆಯುತ್ತಿದೆ.

ಬಾಲ ಸಾಹಿತ್ಯ ಮಂಡಲ

ಲಿಮಿಟೆಡ್, ಮಂಗಳೂರು

ನಮ್ಮ ಹೊಸ ಪುಸ್ತಕಗಳು: —

1. ನೂತನ ಬಾಲಗಣಿತ IIIನೇ ದರ್ಜೆಗೆ.
2. ,, IV ,, ,,
3. ,, V ,, ,,
4. ,, VI ,, ,, ಅಥವಾ Iನೇ ಫಾರ್ಮಿಗೆ.
5. ,, VII,, ,, II ,,
6. ,, VIII,, ,, III ,,

ಗ್ರಂಥಕರ್ತರು—ಶ್ರೀ ಉಳ್ಳಾಲ ಮಂಗೇಶರಾವ್, ಬಿ. ಎ., ಎಲ್. ಟಿ.

7. ನೂತನ ಸಾಮಾನ್ಯ ಗಣಿತ—IVನೇ ಫಾರ್ಮಿಗೆ-ಶ್ರೀ. ಬಿ. ಭುಜಂಗರಾವ್, ಬಿ. ಎ. (ವಿದ್ವಾನ್).
8. ಭಾರತದ ಇತಿಹಾಸ, VIIIನೇ ದರ್ಜೆಗೆ ಅಥವಾ IIIನೇ ಫಾರ್ಮಿಗೆ.
9. Do. IVನೇ ಫಾರ್ಮಿಗೆ.

ಈ ಮೇಲಿನ ಎಲ್ಲಾ ಪುಸ್ತಕಗಳು ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಕ್ಲಾಸು ಉಪಯೋಗಕ್ಕೆ ಮಂಜೂರಾಗಿವೆ (Vide consolidated list dated 2nd may 1939, pages 117, 155, 157 and 159 of Fort St. George Gazette Supplement.)

BALASAHITYA MANDALA LTD.
MANGALORE, S. INDIA.

ಸೌಭಾಗ್ಯಸಿದ್ಧಿ ತಾಯಿತ

ದೇಹಸಂಪತ್ತು, ಕುಟುಂಬದ ಸುಖ-ಸೌಖ್ಯ, ಉದ್ಯೋಗದಲ್ಲಿ ಯಶಸ್ಸು, ಪರೀಕ್ಷೆಯಲ್ಲಿ ಜಯ, ಕೋರ್ಟು ವ್ಯವಹಾರದಲ್ಲಿ ಮೇಲುಗೈ, ದುರಾದೃಷ್ಟಗಳ ದುಷ್ಪೀಡೆ ನಿವಾರಣೆ ಇನ್ನಿತರ ಸುಖ-ಸೌಭಾಗ್ಯಾದಿ ಲಾಭಕ್ಕಾಗಿ 'ಜಯ ವಶೀಕರಣ' ತಾಯಿತವನ್ನೇ ಧರಿಸಿರಿ.

ಕ್ರಯ: ರೂ. 2-8-0. ವಿ. ಪಿ. 0-7-0

ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Hanuman Ahsramam,
Tirutani, S. India.

ನವಯುಗದಲ್ಲೇ

ಜಾಹಿರಾತು ಕೊಡಿರಿ.

ಮದ್ರಾಸು ಪ್ರಧಾನ ಮಂತ್ರಿಗಳ ಕುರಿತು ಟೀಕೆ.

ಶ್ರೀ ರಾಜಗೋಪಾಲಾಚಾರ್ಯರ ಹೇಳಿಕೆ!

ಮದ್ರಾಸು ಸಂಸ್ಥಾನದಲ್ಲಿ ಬೇಗನೆ

ಮದ್ಯಪಾನ ನಿರೋಧ!

ರಾಜಗೋಪಾಲಾಚಾರಿಯವರ ಅನುಭವ ಪೂರ್ಣ ಭಾಷಣ!

ಬೊಂಬಾಯಿಯಲ್ಲಿ ರಾಜಗೋಪಾಲಾಚಾರಿಯವರ ಅನುಭವಪೂರ್ಣ ಭಾಷಣ

ಇದೇ ತಾ 25ರಲ್ಲು ಬೊಂಬಾಯಿಯ ಕವಾಸ್ಜಿ ಜಹಂಗೀರ್ ಹಾಲಿನಲ್ಲಿ ಮಹಾಜನ ಸಭೆಯೊಂದು ಸರ್ದಾರ್ ಪಟೇಲರ ಅಧ್ಯಕ್ಷತೆಯಲ್ಲಿ ಜರಗಿತು. ಕಾಂಗ್ರೆಸ್ ಮುಖಂಡರನೇಕರು ಹಾಜರಿದ್ದರು. ಜನಸ್ತೋಮವು ಕಿಕ್ಕಿರಿದು ನೆರೆದಿದ್ದುದರಿಂದ ಅನೇಕರು ಸಭಾ ಮಂದಿರದ ಹೊರಗೂ ನಿಂತು ಭಾಷಣ ಕೇಳಬೇಕಾಗಿ ಬಂತು. ಅಂದಿನ ಸಭೆಯಲ್ಲಿ ಮದ್ರಾಸ್ ಸರಕಾರದ ಪ್ರಧಾನ ಸಚಿವರಾದ ಶ್ರೀಮಾನ್ ರಾಜಗೋಪಾಲಾಚಾರಿಯವರು ಮದ್ಯಪಾನ ನಿರೋಧ ಚಳವಳದ ಕುರಿತು ಭಾಷಣ ಮಾಡುತ್ತಾ ಹೀಗೆಂದರು. "ಕಾಂಗ್ರೆಸಿನ ಮೂಲಭೂತ ಶಕ್ತಿಸ್ವರೂಪೀ ಮಹಾತ್ಮಾಜಿಯವರ ಕಾರ್ಯಕ್ಷೇತ್ರವಾದ ಬೊಂಬಾಯಿ ನಗರದಲ್ಲಿ ಮದ್ಯಪಾನ ತ್ಯಾಗದ ಕುರಿತು ಭಾಷಣಗಳ ಆವಶ್ಯಕತೆಯನ್ನು ನಾನು ಎಂದೂ ಆಲೋಚಿಸಿರಲಿಲ್ಲ. ಕಾಂಗ್ರೆಸು ಅಧಿಕಾರಕ್ಕೆ ಬರುವ ವೇಳೆ ಸುಲಭಸಾಧ್ಯವೆಂದು ಭಾವಿಸಲಾಗಿದ್ದ ಅನೇಕ ವಿಷಯಗಳು ಇಂದು ಅನೇಕ ಕಂಟಕಗಳಿಗೆ ಒಳಗಾಗಿವೆ.

ಮದ್ಯಪಾನ ತ್ಯಾಗದ ಕುರಿತು ಹಿಂದೂಸ್ಥಾನಕ್ಕೂ ಪಾಶ್ಚಿಮಾತ್ಯ ದೇಶಗಳಿಗೂ ಇರುವ ತಾರತಮ್ಯ

ಹಿಂದೂಸ್ಥಾನದಲ್ಲಿ ಬಹಿರಂಗವಾಗಿ ಕುಡಿಯುವುದೆಂದರೆ ಅದೊಂದು ನಾಚಿಗೆಗೇಡುತನವೇ ಸರಿ. ತಮಗೆ ಕುಡಿಯುವ ಅಭ್ಯಾಸವಿದೆಯೆಂದು ತಮ್ಮ ಕುಟುಂಬಸ್ಥರಲ್ಲಿ ಹೇಳುವಷ್ಟರ ಮಟ್ಟಿಗೂ ಹಿಂದೀಯರು ಹಿಂದೆ ಸರಿಯುವರು. ಆದರೆ ಪಾಶ್ಚಿಮಾತ್ಯ ದೇಶದಲ್ಲಿ ಪ್ರತಿಯೊರ್ವನಿಗೂ ಕುಡಿಯುವ ಅಭ್ಯಾಸ ಇದ್ದೇ ಇದೆ. ಅಮೇರಿಕಾ ದೇಶದಲ್ಲಿ ಮದ್ಯಪಾನ ನಿರೋಧ ಚಳವಳವು ಯಶಸ್ವಿಯಾಗಲಿಲ್ಲವೆಂಬ ಮಾತು ಹಿಂದೂಸ್ಥಾನಕ್ಕೆ ಅನ್ವಯಿಸುವುದಿಲ್ಲ. ಹಿಂದೂಸ್ಥಾನದಲ್ಲಿ ನೂರರಲ್ಲ ಒಬ್ಬ ಮಾತ್ರ ಸದಾ ಕುಡಿಯುವ ಅಭ್ಯಾಸವುಳ್ಳವನು.

ಬೊಂಬಾಯಿ ಸರಕಾರವು ಮದ್ಯಪಾನ ನಿರೋಧ ಚಳವಳವನ್ನು ಮುಂದೊತ್ತುವರಿ ಮಾಡುವ ಕಾರ್ಯವನ್ನು ಅನೇಕರು ಇಂದು ಟೀಕಿಸುತ್ತಿರುವರು. ಬೊಂಬಾಯಿ ಸಂಸ್ಥಾನದಲ್ಲೇ ಮದ್ಯಪಾನವು ಇಲ್ಲದಂತಾಗಬೇಕೆಂಬುದಕ್ಕೆ ಎಲ್ಲರೂ ಒಪ್ಪುವುದಾದರೆ ಚಳವಳವನ್ನು ಹಳ್ಳಿಗಳಲ್ಲಿ ಆರಂಭಿಸಿದರೇನು? ಬೊಂಬಾಯಿಸಿಟಿಯಲ್ಲಿ ಆರಂಭಿಸಿದರೇನು? ಕಾಂಗ್ರೆಸ್ ಕಾರ್ಯಕ್ರಮಗಳಲ್ಲೊಂದಾದ ಮದ್ಯಪಾನ ತ್ಯಾಗವನ್ನು ಕಾರ್ಯತಃ ಪಾಲಿಸಬೇಕೆಂದಿದ್ದರೆ ಆರಂಭದ ಸುದಿನವನ್ನು ಏತಕ್ಕೆ ಮುಂದರಿಸಿರಬೇಕು?

ಮದ್ರಾಸಿನಲ್ಲಿ ವಿರೋಧವಿದ್ದಿಲ್ಲ

ಹಳ್ಳಿಗಳಲ್ಲಿ ಮದ್ಯಪಾನ ನಿರೋಧ ಚಳವಳವನ್ನು ಪ್ರಥಮತ ಆರಂಭಿಸುವಾಗ ಮದ್ರಾಸು ಸಂಸ್ಥಾನದಲ್ಲಿ ವಿರೋಧವಿದ್ದಿಲ್ಲ ಹೆಚ್ಚೇಕೆ? ತನ್ನ ಜಿಲ್ಲೆಯಲ್ಲೇ ಸರ್ವರೂ ಮದ್ಯಪಾನ ತ್ಯಾಗದ ಸುದಿನವನ್ನು ಹಾರೈಸುತ್ತಿದ್ದರು. ನನ್ನೀ ಚಳವಳವು ಮೂರು ಜಿಲ್ಲೆಗಳಲ್ಲಿ ಜಯಪ್ರದವಾಗಿ ಇತರ ಜಿಲ್ಲೆಗಳಲ್ಲಿ ಹರಡುವ ಪ್ರಸಂಗ ಬಂದಾಗ ಹೊಸ ತೆರಿಗೆಗಳ ಹೊರಿಸೋಣದ ಯೋಜನೆ ಬಂದಾಕ್ಷಣ ಜನರು ಮದ್ಯಪಾನ ನಿರೋಧದ ತೆರೆಯಲ್ಲಿ ನಿಂತು ವಿರೋಧಿಸಲಾರಂಭಿಸಿದರು. ತೆರಿಗೆಯನ್ನು ವಿರೋಧಿಸುವವರು ಮದ್ಯಪಾನ ಚಳವಳವು ಕೆಟ್ಟದೆಂದು ಹೇಳಲಿಲ್ಲ. ಮದ್ಯಪಾನ ನಿರೋಧ ಚಳವಳದಲ್ಲಿ ಜನರಿಗೆ ಎಷ್ಟು ವಿಶ್ವಾಸವಿದೆಯೆಂಬುವುದು ಹೊಸ ತೆರಿಗೆಗಳ ಅಪವಾದದ ಸ್ಫುಟದಲ್ಲಿ ಹಾಕಿದಂತಾಯಿತು. ಮದ್ರಾಸು ಸರಕಾರವು ಮದ್ಯಪಾನ ಚಳವಳದ ಕುರಿತು ಹೆಚ್ಚಿನ ಪ್ರಚಾರಕಾರ್ಯ ಮಾಡಬೇಕಾಗಿ ಬಂತು. ಈಗ ಆ ವಿಷಯದಲ್ಲಿ ಜನಜಾಗೃತಿಯುಂಟಾಗಿಯದೆ. ಆದುದರಿಂದ ಮದ್ರಾಸು ಸಂಸ್ಥಾನದ ಇನ್ನು ಕೆಲವು ಜಿಲ್ಲೆಗಳನ್ನು ಬರಿದು ಮಾಡುವ ಕಾರ್ಯದಲ್ಲಿ ಹೆಚ್ಚಿನ ಕಷ್ಟಗಳಿರಲಾರವು. ಮದ್ರಾಸು ಸಿಟಿಯಲ್ಲೇ ಏತಕ್ಕೆ ಪ್ರಥಮತಃ ಈ ಚಳವಳವನ್ನು ಆರಂಭಿಸಿಲ್ಲವೆಂದು ನೀವು ಕೇಳಬಹುದು. ಹೊಸ ತೆರಿಗೆಗಳ ಪ್ರಯೋಜನವು ಅವರಿಗೂ ದೊರೆಯುವಂತಾಗಬೇಕೆಂದೂ ಮಾತ್ರವಲ್ಲದೆ ಇಡೀ ಮದ್ರಾಸು ಸಂಸ್ಥಾನದಲ್ಲೆಲ್ಲಾ ಸದ್ಯವೇ ಮದ್ಯಪಾನ ಇಲ್ಲದಂತೆ ಮಾಡುವೆನೆಂಬ ಭರವಸೆಯಿತ್ತಿರುವರು. ಅದಕ್ಕೆ ಜನರು ಸೈಗುಟ್ಟಿರುವರು.

ವಿರೋಧಿಗಳ ಹೇರಿಂಗು

ಮದ್ರಾಸ್ ಸರಕಾರವು ಸೇಲ್ಸ್‌ಟ್ಯಾಕ್ಸ್ ಮಸೂದೆಯನ್ನು ತಂದೊಡನೆ ಬೊಂಬಾಯಿ ಸರಕಾರದ ಮೇಲ್ಪಂಕ್ತಿಯನ್ನು ಏತಕ್ಕೆ ಅನುಸರಿಸಕೂಡದೆಂದರು. ಬೊಂಬಾಯಿ ಸರಕಾರವು ಸಿಟಿಯಲ್ಲೇ ಮದ್ಯಪಾನ ನಿವಾರಣಾ ಚಳವಳವನ್ನು ಹೂಡಿದಾಕ್ಷಣ ಮದ್ರಾಸು ಸರಕಾರವು ಮಾಡಿದಂತೆ ಇಲ್ಲಿಯೂ ಹಳ್ಳಿಪಳ್ಳಿಗಳಲ್ಲಿ ಪ್ರಥಮತಃ ಪರೀಕ್ಷಾರ್ಥವಾಗಿ ಏತಕ್ಕೆ ಪ್ರಾರಂಭಿಸಕೂಡದು ಎಂದು ವಿರೋಧ ಪಕ್ಷದವರು ಕೂಗೆಬ್ಬಿಸಿದರು. ಹಿಂದೂಸ್ಥಾನದಲ್ಲಿ ಸತತ ಕುಡುಕರ ಸಂಖ್ಯೆಯು ಬಹಳ ಕಮ್ಮಿಯಾದುದರಿಂದ ಮದ್ಯಪಾನ ತ್ಯಾಗದ ಚಳವಳವನ್ನು ಸಂಪೂರ್ಣ ಯಶಸ್ವಿಯಾಗಿ ಮಾಡಲು ಸುಲಭ ಸಾಧ್ಯವಿದೆ. ಸರ್ವಸಾಧಾರಣ ಬಡಬಗ್ಗರೇ ಹೆಚ್ಚಾಗಿ ಈ ದುರ್ವ್ಯಸನಕ್ಕೆ ಬಲಿಬಿದ್ದಿರುವರು. ಇವರ ಕುಡಿತದ ದೆಸೆಯಿಂದಾಗಿ ಮದ್ರಾಸ್ ಸರಕಾರದ ಒಟ್ಟು ರೆವಿನ್ಯೂ ವಸೂಲಿಯಲ್ಲಿ ಕಾಲಂಶವು ಬಡಬಗ್ಗರ ಕುಡಿತದ ಹಣವಾಗಿರುತ್ತದೆ. ತದ್ರೀತಿ ಬೊಂಬಾಯಿ ಸರಕಾರದ ರೆವಿನ್ಯೂ ಜಮೆಯಲ್ಲಿ ಒಂದು ಮೂರನೇ ಅಂಶವು ಮದ್ಯಪಾನದ್ದಾಗಿರುತ್ತದೆ.

ಮದ್ರಾಸು ಪ್ರಧಾನರು ಮುಂಬಾಯಿ ಪ್ರಧಾನರಾಗಬೇಕೆಂತೆ-ಮದ್ಯಪಾನ ತ್ಯಾಗ ವಿರೋಧ ಚಳವಳಿಗಾರರ ಅಭಿಪ್ರಾಯ

ಮದ್ರಾಸು ಸರಕಾರದ ಪ್ರಧಾನ ಮಂತ್ರಿಗಳಾದ ಶ್ರೀಮಾನ್ ರಾಜಗೋಪಾಲಾಚಾರಿಯವರು ಮದ್ಯಪಾನ ನಿಷೇಧ ಚಳವಳದ ಕುರಿತು ಬೊಂಬಾಯಿಯಲ್ಲಿ ಭಾಷಣ ಮಾಡುತ್ತಾ ಹಳ್ಳಿಗಳಲ್ಲಾದರೇನು ಶಹರಗಳಲ್ಲಾದರೇನು ಚಳವಳವನ್ನು ಎಲ್ಲಿಯೂ ಆರಂಭಿಸಬಹುದೆಂದರಷ್ಟೆ. ಅದಕ್ಕೆ ಸಲುವಾಗಿಯೇ ಈ ಚಳವಳಕ್ಕೆ ವಿರುದ್ಧವುಳ್ಳವರು,ಹಳ್ಳಿಗಳಲ್ಲಿ ಪ್ರಥಮತಃ ಆರಂಭಿಸಿ ಜಯಪ್ರದರಾದ ಶ್ರೀ ಗೋಪಾಲಾಚಾರಿಯವರೇ ಮುಂಬಯಿ ಸರಕಾರದ ಸಚಿವರಾಗಿ ಮುಂಬಯಿ ಸಿಟಿಯಲ್ಲೇ ಮದ್ಯಪಾನ ತ್ಯಾಗದ ಚಳವಳವನ್ನು ಹೂಡಿರಯ್ಯಾ ಎಂದು ಅಭಿಪ್ರಾಯವುಳ್ಳ ಕರಪತ್ರಗಳನ್ನು ಹಂಚಿದರು. ಬೊಂಬಾಯಿ ಮತ್ತು ಮದ್ರಾಸು ಸರಕಾರಗಳ ಪ್ರಧಾನರಿಬ್ಬರೂ ಕರಪತ್ರಗಳನ್ನು ಕಂಡು ಹೊಟ್ಟೆ ತುಂಬಾ ನಗಾಡಿದರು.

ಮೂಲವ್ಯಾಧಿಗೆ

ವಿಶೇಷ ಗುಣಕಾರಿ.

ಮಹಾತ್ಮರವರ ಪ್ರಸಾದ

ಆಶ್ಚರ್ಯಕರವಾದ ಔಷಧಿ

ಸಾಮಾನ್ಯ ಅಥವಾ ರಕ್ತಸ್ರಾವ, ಹೊಸ, ಹಳೆ ಮೂಲವ್ಯಾಧಿಗೆ ರಾಮಬಾಣ ಔಷಧ.

ಅರ್ಶಮಾರಾ

ಇದನ್ನು ಒಮ್ಮೆ ಉಪಯೋಗಿಸಿದರೆ ಮೂಲವ್ಯಾಧಿ ಪೀಡಿತರ ನಾನಾ ತರದ ವೇದನೆ ರಕ್ತಸ್ರಾವ, ಉರಿವಿಕೆ ಇತ್ಯಾದಿ ಸಂಕಷ್ಟಗಳು ಕೂಡಲೇ ಪರಿಹಾರವಾಗುವವು. ಮೂರೇ ಮೂರು ದಿವಸಗಳಲ್ಲಿ ಮಾತ್ರೆಯಾಗಿ ಗುಣಪಡಿಸುವುದು. ಸಾವಿರಾರು ಜನರಿಂದ ಶಿಫಾರಸು ಪಡೆದಿರುವುದು. ಗುಣ ಕಂಡುಬಾರದಿದ್ದಲ್ಲಿ ಹಣ ವಾಪಾಸು.

ಬೆಲೆ ರೂ. 2-0-0

ಆರೋಗ್ಯ ಸದನ,

ದುರ್ಗಾದೇವಿ ಸ್ಟ್ರೀಟ್, ಮುಂಬಯಿ 4

ಡೆಟ್ ರಿಲೀಫ್ ಆಕ್ಟಿನ ಪರಿಣಾಮ ಸೇಕಡಾ 46·9ರಷ್ಟು ಸಾಲ ತಗ್ಗಿತು

ಕೃಷಿಕರ ಸಾಲಸಂದಾಯ ಮಸೂದೆಯು ಜ್ಯಾರಿಗೆ ಬಂದಂದಿನಿಂದ 286ಲಕ್ಷದಷ್ಟು ಇದ್ದ ಸಾಲಗಳು 152 ಲಕ್ಷಕ್ಕೆ ತಗ್ಗಿದುವು ಎಂಬುದಾಗಿ ಸರಕಾರದ ಪ್ರಕಟಣೆಯಿಂದ ತಿಳಿದುಬರುತ್ತದೆ.

ಲೇಜಿಸ್ಲೇಟಿವ್ ಎಸೆಂಬ್ಲಿ ಅಧಿವೇಶನ

ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿಯ ಚತುರ್ಥ ಅಧಿವೇಶನವು ಜುಲೈ ತಿಂಗಳ 3ನೇ ತಾರೀಕಿಗೆ ಆರಂಭವಾಗಲಿರುವುದು.

ಮದ್ರಾಸಿನಲ್ಲಿ ಮದ್ರಾಸ್ ಸರಕಾರದ ಖಂಡನೆ

ಹೈದರಾಬಾದು ದಿನಾಚರಣೆ ಮತ್ತು ಅದಕ್ಕೆ ಸಂಬಂಧಿಸಿದ ಕರಪತ್ರಗಳ ಹಂಚೋಣಕ್ಕೆ ತಡೆಯನ್ನು ಹಾಕಿದ ಮದ್ರಾಸ್ ಸರಕಾರದ ವರ್ತನೆಯನ್ನು ಖಂಡಿಸುವರೆ ಮದ್ರಾಸಿನ ತಿಲಕಘಾಟಿನಲ್ಲಿ ಡಾಕ್ಟರ್ ಪಿ ವರದರಾಜುಲು ನಾಯ್ಡು ಅವರ ಅಧ್ಯಕ್ಷತೆಯಲ್ಲಿ ಮಹಾಜನಸಭೆಯೊಂದು ಜರಗಿತು.

ವಾರ್ಧಾಯೋಜನೆಯಂತೆ ಅಧ್ಯಾಪಕರಿಗೆ ಮಾಸಿಕವೇತನವು ರೂಪಾಯಿ 6 ಅಲ್ಲ, ರೂ. 25-ಕಾಂಗ್ರೆಸ್ ಮುಖಂಡರೊಬ್ಬರ ಉದ್ಗಾರ

ಪಾಲ್ನಿ ಮುನಿಸಿಪಲ್ ಹೈಸ್ಕೂಲಿನ ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರ ಮುಂದೆ ವಾರ್ಧಾಶಿಕ್ಷಣದ ಕುರಿತು ಭಾಷಣವೀಯುವಾಗ ಶ್ರೀ. ಅವನಾಶಿಲಿಂಗಮ್ ಚೆಟ್ಟಿಯಾರ್ (ಕೇಂದ್ರ ನ್ಯಾಯವಿಧಾಯಕ ಸಭೆಯ ಸದಸ್ಯರು) ಇವರಿಗೆ ಸಭಿಕರಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿದರು. ವಾರ್ಧಾಯೋಜನೆಯಂತೆ ಉಪಾಧ್ಯಾಯರಿಗೆ ತಿಂಗಳೊಂದರ ಸಂಬಳ ಆರು ರೂಪಾಯಿ ಎಂಬುವುದು ನಿಜವೇ ಎಂಬ ಪ್ರಶ್ನೆ ಬಂತು. ಆರು ರೂಪಾಯಿಯಲ್ಲ ತಿಂಗಳಿಗೆ ಇಪ್ಪತ್ತೈದು ರೂಪಾಯಿ ಸಂಬಳವೆಂದರು ಶ್ರೀ. ಚೆಟ್ಟಿಯಾರರು.

25,000 ರೂಪಾಯಿಗಳು ಕಾಣೆ

ತಂಜಾವೂರು ಸೆಂಟ್ರಲ್ ಕೋಪರೇಟಿವ್ ಬ್ಯಾಂಕಿನಲ್ಲಿ ಇದೇ ತಾ. 24ರಲ್ಲಿ ಯಾರೋ ನಿಶಾಚರರು ಒಳಹೊಕ್ಕು ಭದ್ರವಾದ ಕೋಣೆಯಲ್ಲಿರಿಸಲ್ಪಟ್ಟ ಎರಡು ಬೀಗಗಳಿದ್ದ ಕಬ್ಬಿಣದ ಖಜಾನೆಯಿಂದ 25,000 ರೂಪಾಯಿಗಳ ಕರೆನ್ಸಿ ನೋಟುಗಳನ್ನು ಕಾಣೆ ಮಾಡಿಬಿಟ್ಟರು. ಪತ್ತೆ ನಡೆಸಲ್ಪಡುತ್ತಿದೆ.

ಎಲ್ಲಾ ತರದ

ಪುಸ್ತಕಗಳೂ

ನವಭಾರತ ಪುಸ್ತಕ ಭಂಡಾರದಲ್ಲಿ ದೊರೆಯುತ್ತವೆ.

THE
Canara Banking Corporation, Ltd.
(Incorporated in British India)
ESTD 1906

THREE YEARS' CASH CERTIFICATES
bearing interest at 4% p. a. in denominations of
Rs 50/-, 100/-, 500/-, 1,000/- & 5000/-
are now issued at
all our Branches.

For particulars call at or write to any of our nearest Branches.

ಉಡುಪಿ, ಗುರುವಾರ, ತಾ. ೨೯-೬-೩೯

ಪರದೇಶಗಳಲ್ಲಿ ಭಾರತೀಯರ ಪಾಡು!

'ಮನೆ ಕಾಣದವನು ನೆರೆಮನೆ ಕಂಡಾನೆ?' ಎಂಬುದೊಂದು ಗಾದೆ. ಪ್ರಕೃತ ಇದು ಭಾರತೀಯರಿಗನ್ವಯಿಸುವಷ್ಟು ಮತ್ತಾವ ಜನಾಂಗಕ್ಕೂ ಅನ್ವಯಿಸಲಾರದು. ಭಾರತೀಯರಿಗೆ ಸ್ವದೇಶದಲ್ಲಿ ಸ್ವಾತಂತ್ರ್ಯವಿಲ್ಲ; ಅದನ್ನವರು ಗಳಿಸಿಕೊಂಡಿಲ್ಲ. ಆ ಯೋಗ್ಯತೆಗೆ ತಕ್ಕಂತೆಯೇ ಅವರು ಹೋದೆಡೆಗಳಲ್ಲೆಲ್ಲಾ ಅತಿಥಿ ಸತ್ಕಾರ ದೊರೆಯುತ್ತಿದೆ

ಸಮುದ್ರದ ಸಣ್ಣ ಭಾಗವೊಂದರಿಂದುಗಿ ಹಿಂದುಸ್ಥಾನದಿಂದ ವಿಂಗಡಿಸಲ್ಪಟ್ಟಿರುವ ಸಿಲೋನಿನಲ್ಲಿ ಹಿಂದೀಯರನ್ನು ಹೊರಗಟ್ಟುತ್ತಿದ್ದಾರೆ. ಭಾರತ-ಸಿಲೋನುಗಳ ಸಂಸ್ಕೃತಿಯಲ್ಲಿ ಸಮಾನತೆಯಿದೆ, ವ್ಯಾಪಾರ ವಹಿವಾಟಿನ ನಿಕಟಸಂಬಂಧವಿದೆ. ಇಷ್ಟಿದ್ದೂ ಅಲ್ಲಿ ಭಾರತೀಯರಿಗೆ ಜರ್ಮನಿಯಲ್ಲಿ ಯಹೂದಿಯರಿಗೆ ದೊರೆಯುವಂತಹ ಪುರಸ್ಕಾರ ದೊರೆಯುತ್ತಿದೆ! ಸಿಲೋನ್ ಕೌನ್ಸಿಲಿನಲ್ಲಿ ಸಿಂಹಳೇತರರನ್ನು ಕೆಲಸದಿಂದ ತೆಗೆದುಹಾಕುವ ಠರಾಯಿದೆಯಾಗಿದೆ, ಅಲ್ಲಿ ಕೆಲಸಗಾರರಾಗಿರುವ ಸಿಲೋನೇತರರೆಂದರೆ ಹಿಂದೀಯರು. ಅವರ ಅಡಚಣೆಗಳು ಈಗ ಅತಿರೇಕಕ್ಕೇರಿವೆ.

ದಕ್ಷಿಣಾಫ್ರಿಕದಲ್ಲಿ ಮತ್ತೊಂದು ರೀತಿಯಲ್ಲಿ ಹಿಂದೀಯರನ್ನು ಅಸ್ಪೃಶ್ಯರ ಸಾಲಿಗೆ ಸೇರಿಸಲಾಗಿದೆ. ಅಲ್ಲಿಯ ಯೂನಿಯನ್ ಸರಕಾರವು ಏಷ್ಯಾಜನರನ್ನು ಬೇರ್ಪಡಿಸಲು ಮಾಡಿರುವ ಕಾಯಿದೆಯು ಭಾರತೀಯರ ನಾಗರಿಕ ಹಕ್ಕುಗಳನ್ನೆಲ್ಲಾ ಅಪಹರಿಸುತ್ತದೆ. ಅದನ್ನು ತಡೆದಿಡಲು ಕೈಗೊಂಡ ಸಾಮೋಪಾಯಗಳೆಲ್ಲಾ ನಿಷ್ಫಲವಾಗಿ ಈಗ ದ. ಆಫ್ರಿಕದ ಹಿಂದೀಯರಿಗೆ ಹೋರಾಟವೇ ಗತಿಯೆಂದಾಗಿದೆ.

ಬೊಂಬಾಯಿಯಲ್ಲಿ ಸೇರಿದ ಅಖಿಲ ಭಾರತ ರಾಷ್ಟ್ರಸಭಾ ಸಮಿತಿಯು ಇವೆರಡು ಕಡೆಗಳಿಗೂ ಸಾಕಷ್ಟು ಲಕ್ಷ್ಯವಿತ್ತಿರುವುದು ಸಿಲೋನ್ ಸರಕಾರದೊಡನೆ ವ್ಯವಹರಿಸಲು ಕಾಂಗ್ರೆಸ್ ರಾಯಭಾರಿಯಾಗಿ ಪಂಡಿತನೆಹರುಗಳದ್ದು ಕಳುಹಿಸುವ ನಿರ್ಧಾರವಾಗಿರುವದು ಸಂತೋಷದ ಸಂಗತಿ. ದಕ್ಷಿಣಾಫ್ರಿಕದ ಸರಕಾರದ ವರ್ತನೆಯನ್ನು ಖಂಡಿಸಿ ನಿರ್ಣಯವಾಯಿತು.

ಭಾರತದಂತೆಯೇ ದಕ್ಷಿಣಾಫ್ರಿಕ ಮತ್ತು ಸಿಂಹಳದ್ವೀಪವು ಬ್ರಿಟಿಷ್ ಸಾಮ್ರಾಜ್ಯದೊಳಗಿವೆ. ಆದರೂ ಭಾರತೀಯರ ಕಷ್ಟನಿವಾರಣೆಯ ಕುರಿತು ಹಿಂದೀ ಸರಕಾರವು ಮಾಡಿಕೊಂಡ ವಿನಂತಿಯನ್ನು ದಕ್ಷಿಣಾಫ್ರಿಕ ಸರಕಾರವು ತಿರಸ್ಕರಿಸಿತು. ಸಿಂಹಳ ಸರಕಾರವು ವ್ಯಾಪಾರ ಒಪ್ಪಂದಕ್ಕಾಗಿ ಮುಂದೆಬಂದಿರುವ ಈ ಸಂದರ್ಭದಲ್ಲೇ ಹಿಂದೀ ಸರಕಾರವು ಹಿಂದೀಯರ ಸಂಕಷ್ಟದ ಪ್ರಸ್ತಾಪವೆತ್ತುವಹಂತೆ. ಹೀಗೆ ಸಿಲೋನಿನ ಹಿಂದೀಯರ ಭವಿಷ್ಯದ ಕುರಿತು ಕೆಲವು ಶುಭಚಿಹ್ನೆಗಳು ತೋರಿಬರುತ್ತಿರುವವಾದರೂ, ಅವೆಲ್ಲಾ ಭಾರತದ ಕಡೆಯ ಪ್ರಯತ್ನಗಳು; ಸಿಲೋನು ಸರಕಾರವು ತನ್ನ ಧೋರಣೆಯನ್ನು ಮಾರ್ಪಡಿಸುವ ಲಕ್ಷಣಗಳು ಈ ವರೆಗೆ ಕಂಡುಬಂದಿಲ್ಲ.

ಬ್ರಿಟಿಷರ ಆಳ್ವಿಕೆಯಿದ್ದಲ್ಲಿ ಹಿಂದೀಯರ ಜೀವನಕ್ಕೆ ಬೆಲೆ ಕಡಿಮೆ. ಇಲ್ಲವಾದರೆ ಆ ಸ್ವದೇಶಗಳಲ್ಲಿ ಭಾರತೀಯರಿಗಾಗುವ ಅನ್ಯಾಯ, ಅಪಮಾನಗಳಿಗೊಂದು ಪರಿಹಾರವಿದ್ದೇ ಇರುತ್ತಿತ್ತು. ಅನ್ಯದೇಶಗಳಲ್ಲಿರುವವರ ಮಾನ, ಸೊತ್ತು, ಹಕ್ಕುಗಳ ರಕ್ಷಣೆಯ ಜವಾಬ್ದಾರಿಯು ದೇಶೀಯ ಸರಕಾರದ ಮೇಲಿದೆ. ಹಿಂದೀಸರಕಾರವು ಈ ತನ್ನ ಹೊಣೆಗಾರಿಕೆಯನ್ನು ಅರಿತುಕೊಂಡಿದೆ ಎಂಬುದಕ್ಕೆ ನಿದರ್ಶನವಾಗಿ ಅದು ಈ ವಿಷಯದಲ್ಲಿ ಕಾಂಗ್ರೆಸ್ ಸಮಿತಿಯು ತೋರಿಸಿದಷ್ಟೇ ಅಭಿರುಚಿಯನ್ನು ಪ್ರದರ್ಶಿಸಬೇಕಿತ್ತು. ಆದರೆ ಹಿಂದೀಯರ ಸಂಕಷ್ಟಗಳ ಅಳವರಿಯುವ ಅಭ್ಯಾಸವೇ ಇರದ ಭಾರತ ಸರಕಾರವು, ಔಪಚಾರಿಕವಾಗಿ ಮಾಡಬೇಕಾಗುವಷ್ಟನ್ನೇ ಮಾಡಿ ನೆಮ್ಮದಿಯಿಂದಿದೆ. ಪರಾಧೀನ ರಾಷ್ಟ್ರದ ನಿಸ್ಸಹಾಯಕ ಚೆಯೆಷ್ಟೆಂಬುದಕ್ಕೆ ಇದೂ ಒಂದು ನಿದರ್ಶನ.

ಕಾಂಗ್ರೆಸಿನ ಪ್ರೇರಣೆಯಿಂದಾಗಲೀ ತಮ್ಮ ಸ್ವೇಚ್ಛೆಯಿಂದಾಗಲೀ, ಸಾಧಿಸಿ ಗೆಲ್ಲಬೇಕಾದರೆ ಪರದೇಶಾಂತರ್ಗತ ಭಾರತೀಯರು ನಿಶ್ಶಸ್ತ್ರ ಹೋರಾಟವನ್ನೇ ಹೂಡಬೇಕು, ನಾಗರಿಕ ಹಕ್ಕುಗಳನ್ನು ಶಾಶ್ವತ ಕಾಯಿದೆ ರಚಿಸಿ ಅಪಹರಿಸುವಷ್ಟು ಮೈಯುಬ್ಬಿ ಹೋಗಿದ್ದ ಸರಕಾರಗಳೊಡನೆ ಹಲವು ಬಂಧನಗಳಿರುವ ಅವರು ಹೋರಾಡಬೇಕು. ಇದೆಂತಹ ದುಸ್ಸಾಧ್ಯ ಕಾರ್ಯವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ ಆದರೂ ಅನಿವಾರ್ಯ ವಿಪತ್ತೆಂದು ಅಂತಹ ಹೋರಾಟಕ್ಕಿಳಿಯುವ ಸಾಹಸವನ್ನು ದಕ್ಷಿಣಾಫ್ರಿಕದ ಹಿಂದೀಯರು ಕೈಗೊಂಡಿರುವರು. ಸಿಲೋನಿನ ಭವಿತವ್ಯತೆಯು ಪಂಡಿತ ಜವಾಹಿರಲಾಲರ ರಾಯಭಾರಿತ್ವವನ್ನು ಹೊಂದಿಕೊಂಡುಂಟು. ಅನ್ಯ ದೇಶಗಳಲ್ಲಿ ತಮ್ಮ ದೇಶಬಾಂಧವರು ಸಂಕಷ್ಟಗಳಿಗೆ ಸಿಲುಕಿರುವಾಗ ಮಾನಸಿಕ ಸಹಾನುಭೂತಿ ಪ್ರದರ್ಶನದಿಂದಲೇ ತೃಪ್ತರಾಗಬೇಕಾಗಿರುವ ಭಾರತೀಯರು ತಮ್ಮ ಸದ್ಯದ ದೈನ್ಯಾವಸ್ಥೆಯ ಮೂಲವನ್ನು ಕಂಡುಹಿಡಿದು ಅದನ್ನು ಬೇರುಸಹಿತ ಕಿತ್ತೊಗೆಯಲು ಸಿದ್ಧರಾದರೆ ಭವಿಷ್ಯದಲ್ಲಾದರೂ ಭರವಸೆಯನ್ನಿಡಬಹುದು.

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್, ಲಿಮಿಟೆಡ್ ಸುಭದ್ರವಾಗಿದೆ.

ದ. ಕ ಜಿಲ್ಲಾ ಕಲೆಕ್ಟರರ ತೀರ್ಮಾನ

ಆರೋಪದ ಅರ್ಜಿಯನ್ನು ತಳ್ಳಿ ಹಾಕಲಾಯಿತು.

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಲಿಮಿಟೆಡ್, ಇದರ ಆಡಳಿತೆದಾರರ ವಿರುದ್ಧ ಬಂದಿದ್ದ ಅರ್ಜಿಯೊಂದರ ಕುರಿತು ವಿಚಾರಣೆ ನಡೆಯಿಸಿ, ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರಾದ ಶ್ರೀ ದಿವಾನ್ ಬಹದೂರು ಎಮ್. ವಿ ಸೆಲ್ಲೋಡಿ, ಬಿ ಎ. ಇವರು ತಾ. 21-6-39ರಲ್ಲಿ ಕೊಟ್ಟ ತೀರ್ಮಾನದಲ್ಲಿ ಅರ್ಜಿಯು ದುರಭಿಪ್ರಾಯದಿಂದ ಬಂದುದೆಂದು ಉಲ್ಲೇಖಿಸಿರುವರು. ಈ ವಾದದ ಹೇತು ಕೆಳಗಿನಂತಿದೆ. ಶ್ರೀ. ಮಾಧವ ರಾಮಚಂದ್ರ ಕಾಮತರು ಈ ಬೇಂಕಿನ ಶೇರು ಹೋಲ್ಡರರಾಗಿ(ಟ್ರಾನ್ಸ್ಫರ್ ಪಡೆದು) 1938ರಲ್ಲಿ ಸೇರಿಸಲ್ಪಟ್ಟರು. ಒಡನೆಯೇ ಅವರು ಮಂಗಳೂರಿನ ಜ್ಯೋಂಟ್ ಸ್ಟೋಕ್ ಕಂಪೆನಿಯ ರಿಜಿಸ್ಟ್ರಾರರಿಗೆ ಬೇಂಕಿನ ಬೆಲೆನ್ಸ್‌ಶೀಟು ಸರಿಯಿಲ್ಲವೆಂದೂ ಡೈರೆಕ್ಟರರನ್ನು ಮತ್ತು ಆಫೀಸು ಸಿಬಂದಿಯವರನ್ನು ಆರೋಪಿಸಿಯೂ ಅರ್ಜಿಗಳನ್ನು ಕಳುಹಿಸಿದರು. ಸರಿಯಾಗಿ ವಿಚಾರಣೆ ನಡೆಸಿದ ಮೇಲೆ ಅಸಿಸ್ಟೆಂಟ್ ರಿಜಿಸ್ಟ್ರಾರರ ರಿಪೋರ್ಟನ್ನು ಆಧರಿಸಿ ಸರಕಾರದವರು ಈ ಅರ್ಜಿಯ ಕುರಿತು ಕಾರ್ಯ ಕೈಗೊಳ್ಳಲು ನಿರಾಕರಿಸಿದರು. 1939ನೇ ಫೆಬ್ರವರಿಯಲ್ಲಿ ನಡೆದ ಬೇಂಕಿನ ಶೇರ್‌ಹೋಲ್ಡರರ ಮಹಾಸಭೆಯಲ್ಲಿ ಶ್ರೀ ಮಾಧವ ರಾಮಚಂದ್ರ ಕಾಮತರೊಬ್ಬರ ವಿನಹಾ ಸರ್ವಾನುಮತದಿಂದ 1938ರ ಬೆಲೆನ್ಸ್ ಶೀಟನ್ನು ಮಂಜೂರು ಮಾಡಲಾಯಿತು. ಮಾತ್ರವಲ್ಲದೆ ಬೇಂಕುಗಳ ಬಿಕ್ಕಟ್ಟಿನ ಕಾಲದಲ್ಲಿ ಕಾರ್ಯನಿರ್ವಹಿಸಿದ ಡೈರೆಕ್ಟರರ ಸೇವೆಯನ್ನು ಶ್ಲಾಘಿಸಲಾಯಿತು. ಸರಕಾರದ ಹುಕುಂ ಮತ್ತು ಶೇರುದಾರರ ಮಹಾಸಭೆಯ ತೀರ್ಮಾನವು ಹೀಗಿದ್ದರೂ ಶ್ರೀ ಮಾಧವ ರಾಮಚಂದ್ರ ಕಾಮತರು, ಬೇಂಕಿನ ಮೂರು ವರುಷಗಳ ಬೆಲೆನ್ಸ್ ಶೀಟುಗಳಿಗೆ ಸಹಿ ಹಾಕಿದ್ದವರಲ್ಲಿ ಕೆಲವರ ಮೇಲೆ ದಾವೆ ಹೂಡಲು ಸಂಕ್ಷನ್ ಕೊಡಬೇಕೆಂದು ಕಲೆಕ್ಟರರ ಮುಂದೆ ಅರ್ಜಿ ದಾಖಲುಮಾಡಿದರು.

1936 ಮತ್ತು 1937ರ ಬೆಲೆನ್ಸ್ ಶೀಟುಗಳು ರಿಜಿಸ್ಟ್ರಾರರಿಂದ ಮಂಜೂರು ಮಾಡಲ್ಪಟ್ಟು ದಾಖಲೆಗೆ ಸೇರಿ ಹೋಗಿದ್ದುದರಿಂದಲೂ ಆ ವರ್ಷಗಳಲ್ಲಿ ಶ್ರೀ ಮಾಧವ ರಾಮಚಂದ್ರ ಕಾಮತರು ಶೇರ್ ಹೋಲ್ಡರರಾಗಿರದುದರಿಂದಲೂ ಅವುಗಳನ್ನಾಕ್ಷೇಪಿಸಲು ಅವರಿಗೆಡೆ ದೊರೆಯಲಿಲ್ಲ. ಜಿಲ್ಲಾ ಕಲೆಕ್ಟರರು ಅರ್ಜಿಯ ಕುರಿತು ಎರಡೂ ಕಡೆಯವರ ವಾದಗಳನ್ನು ಕೇಳಿ, ವಿಚಾರ ನಡೆಯಿಸಿ ಶ್ರೀ. ಎಮ್. ಆರ್. ಕಾಮತರು ದ್ವೇಷಾಸೂಯೆಗಳಿಂದ ಹೀಗೆ ಮಾಡಿದರೆಂದೂ, ಸೆಂಕ್ಷನ್ ಕೊಡುವರೆ ಯಾವ ಕಾರಣವೂ ಕಂಡು ಬರುವದಿಲ್ಲವೆಂದೂ ತೀರ್ಮಾನವಿತ್ತು ಅರ್ಜಿಯನ್ನು ತೆಗೆದುಹಾಕಿದರು.

ಈ ವಿದ್ಯಮಾನದಿಂದ ಸಾರ್ವಜನಿಕರು ಪಾಠಕಲಿಯತಕ್ಕದ್ದಿದೆ ಬೇಂಕಿಂಗ್ ವಹಿವಾಟು ಬಹಳ ಜವಾಬ್ದಾರಿಯುಳ್ಳದಿದ್ದು ಸರಕಾರದ ಲಕ್ಷ್ಯವಾ ಕಡೆಗಿದ್ದೇ ಇದೆ ದಿ ಕೆನರಾ ಬೇಂಕಿಂಗ್ ಕಾರ್ಪರೇಶನಿನಂತಹ ಪ್ರತಿಷ್ಠಿತ ಸದ್ಗೃಹಸ್ಥರು ಡೈರೆಕ್ಟರರಾಗಿ ಇರುವ ಸುಭದ್ರವಾದ ಬೇಂಕು ಜನರ ವಿಶ್ವಾಸಕ್ಕಾರ್ಹವಿದೆ. ಆದರೆ ದುರುದ್ದೇಶವುಳ್ಳವರು ಯಾವದಾದರೊಂದು ಪಿಕಲಾಟವೆಬ್ಬಿಸುವದೂ, ಜನರದರಿಂದ ಸಂಶಯಕ್ಕೀಡಾಗುವದೂ ಸುಲಭದ ಸಂಗತಿ ಇಂತಹ ಉಪಕೃತಿಗಳಿಂದ ಬೇಂಕುಗಳ ಜನೋಪಕಾರೀಕಾರ್ಯಗಳಿಗೆ ವಿಘ್ನವೊದಗಿದಲ್ಲಿ ಅದು ಸಾರ್ವಜನಿಕ ಹಿತಕ್ಕೊದಗುವ ಧಕ್ಕೆಯಲ್ಲದೆ ಮತ್ತೇನೂ ಅಲ್ಲ ಆದ್ದರಿಂದ ಜನತೆಯು ವಿಘ್ನಕಾರಿಗಳ ಬಲೆಗೆ ಬೀಳದೆ ಎಚ್ಚರಿಕೆಯಿಂದಿರಬೇಕಾಗಿದೆ

ಚೇಂಬರ್ಲೇನರ ಪ್ರಲಾಪ

ತಾ. ೨೧ರಲ್ಲಿ ಕನ್ಸರ್‌ವೇಟಿವ್ ಜಾಹೀರು ಪ್ರದರ್ಶನವೊಂದರಲ್ಲಿ ಭಾಷಣವೀಯುತ್ತಾ ಮಿ. ಚೇಂಬರ್ಲೇನರು "ನಾನು ಶಾಂತಿಗಾಗಿರುವ ಮನುಷ್ಯನಾಗಿದ್ದು ಅದಕ್ಕಾಗಿ ಶಕ್ತಿಮೀರಿ ದುಡಿದರೂ ಕಳೆದ ಹನ್ನೆರಡು ತಿಂಗಳುಗಳಿಂದ, ಲೋಕದ ಬೇರೆ ಬೇರೆ ಕಡೆಯ ಉಗ್ರವಾದಿಗಳಿಂದ ಟೀಕಿಸಲ್ಪಡುತ್ತಿರುವದು ನನ್ನ ದುರದೃಷ್ಟವೇ ಸರಿ" ಎಂದರು "ನಾನು ಶಾಂತಿಗೆ ಕೊಡುವಷ್ಟು ಬೆಲೆಯನ್ನು ಬೇರೆ ಯಾರೂ ಕೊಡಲಾರರಾದರೂ. ನಿಶ್ಶಸ್ತ್ರರಾಷ್ಟ್ರವೊಂದರ ಮಾತಿಗೆ ಈ ಕಾಲದಲ್ಲಿ ಬೆಲೆ ಬರುವಂತಿಲ್ಲವೆಂದು ನನಗೆ ಗೊತ್ತಿದೆ. ಈ ಒಂದು ವರುಷದ ಪ್ರಗತಿಯನ್ನು ಪರಿಶೀಲಿಸುವಾಗ ನಾವು ಯಾವ ಆಕ್ರಮಣವನ್ನಾದರೂ ನಿಶ್ಚಿಂತೆಯಿಂದ ಇದಿರಿಸಬಲ್ಲೆವೆಂದು ವಿಶ್ವಾಸವಿದೆ," ಎಂದು ಘಂಟಾಘೋಷವಾಗಿ ಹೇಳಿ, ಪರಸ್ಪರ ಸಂಭಾಷಣೆ ಸಹಕಾರಕ್ಕಲ್ಲದೆ ಜಬರುಮೆಗೆ ಬಗ್ಗುವಂತಿಲ್ಲವೆಂದು ಒತ್ತಿಹೇಳಿದರು

ಡಾ| ಗೋಬೆಲ್ಸನ ಗರ್ವೋಕ್ತಿ

ತಾ. ೨೫ರಲ್ಲಿ ನಾಜೀ ಪಕ್ಷದ ಸಭೆಯಲ್ಲಿ ಭಾಷಣವೀಯುತ್ತಾ ಜರ್ಮನಿಯ ಪ್ರಚಾರ ಮಂತ್ರಿ ಡಾ ಗೋಬೆಲ್ಸನು ಚೇಂಬರ್ಲೇನರ ಮಾತಿಗೆ ಅತಿ ಗರ್ವದ ಉತ್ತರವಿತ್ತಿರುವನು. 'ನಮಗೆ ಬ್ರಿಟನಿನ ಭರವಸೆ ಬೇಡ, ಕಾರ್ಯಬೇಕು ವಿಷಮಪರಿಸ್ಥಿತಿಯೊದ್ದಲ್ಲಿ ನಾವದನ್ನಿದಿರಿಸಲು ಸಿದ್ಧರಿರುವೆವು. ಪಗಡೆಯಾಟವಾಡುವವರು ಜಯಿಸಲಾರರು. ಬ್ರಿಟಿಷ್ ಮಂತ್ರಿಗಳು ಬೆದರಿಕೆ ಹಾಕಿದರೆ ನಾವದನ್ನು ಗಣಿಸುವಂತಿಲ್ಲ. ಆ ಬೆದರಿಕೆಯ ಹಿಂದೆ ಶಕ್ತಿಯಿಲ್ಲ. ಜರ್ಮನಿಯರು ಬ್ರಿಟಿಷರನ್ನು ಬಲ್ಲೆವಾಗಿದ್ದಾರೆ. ಇವರಿಂದೇನೂ ಮಾಡಲು ಸಾಧ್ಯವಿಲ್ಲ. ಒಮ್ಮೆ ಕೈಸರ್, ಸೈನ್ಯ ರಾಷ್ಟ್ರ ಇವೆಲ್ಲಾ ಆಗಿಹೋದುವು. ಆದರೆ ಅದು ಒಮ್ಮೆಗೇ ಆಯಿತು, ಇನ್ನೊಮ್ಮೆ ಎಂದಿಗೂ ಆಗಲಾರದೆಂದು ಗೋಬೆಲ್ಸನ ಹೂಂಕಾರ.

ಬೊಂಬಾಯಿಯಲ್ಲಿ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಅಧಿವೇಶನ

ಒಗ್ಗಟ್ಟಿಗಾಗಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಆಗ್ರಹಪೂರ್ವಕ ವಿನಂತಿ

ಕಾಂಗ್ರೆಸ್ ಘಟನೆಯ ತಿದ್ದುಪಡಿ.

ಪರರಾಷ್ಟ್ರಗಳಲ್ಲಿರುವ ಹಿಂದೀಯರಿಗೆ ಸಹಾನುಭೂತಿ.

ಜೂನ್ ತಾ. 24ರಲ್ಲಿ ಬೊಂಬಾಯಿಯ ಗ್ವಾಲಿಯಾಟ್ಯಾಂಕ್ ಚೌಕದ ಭವ್ಯವಾದ ಸಭಾಭವನದಲ್ಲಿ ಅಖಿಲಭಾರತ ರಾಷ್ಟ್ರ ಸಮಿತಿಯ ಜಾಹೀರು ಅಧಿವೇಶನವು ನೆರೆದು ಬಂತು. ಪ್ರೇಕ್ಷಕ ಗೆಲರಿಯು ಸುಮಾರು ಹತ್ತು ಸಾವಿರ ಜನರಿಂದ ತುಂಬಿಹೋಗಿತ್ತು. ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಧುರೀಣರುಗಳೊಂದಿಗೆ ಸಭಾಭವನವನ್ನು ಪ್ರವೇಶಿಸಿದಾಗ ಪ್ರಚಂಡ ಜಯಕಾರವೆದ್ದಿತು. ಸಭಿಕರು ಮುಖ್ಯವಾಗಿ ರಾಜೇಂದ್ರ ಪ್ರಸಾದ, ನೆಹರು, ಭೋಸರನ್ನು ಜಯಕಾರದಿಂದ ಸ್ವಾಗತಿಸಿದರು. ಸಭೆಯಲ್ಲಿ ಮೈಪುಳಕವೇರಿಸುವ ಉತ್ಸಾಹಾವೇಗವು ಕಂಡುಬರುತ್ತಿತ್ತು. ವೇದಿಕೆಯಲ್ಲಿ ವರ್ಕಿಂಗ್ ಕಮಿಟಿ ಮೆಂಬರರು, ಪ್ರಾಂತಿಕ ಮಂತ್ರಿಗಳು, ನೆಹರು, ಭೋಸ್ ಮೊದಲಾದ ಧುರೀಣರುಗಳು ಮಂಡಿಸಿದ್ದರು. ಮೆಂಬರರ ಹಾಜರಿಯು ತೃಪ್ತಿಕರವಿದ್ದಿತು. ವಂದೇ ಮಾತರಂ ಹಾಡನ್ನು ದೇಶಸೇವಿಕೆಯರು ಹಾಡಿದ ನಂತರ ಸಭಾಕಾರ್ಯಾರಂಭದ ಮೊದಲು ಗಲಭೆಯೆಬ್ಬಿಸಿದ ಕೆಲವು ಪುಂಡರನ್ನು ಸ್ವಯಂಸೇವಕರು ಹೊರಗೆ ಹಾಕಿದರು.

ಅಧ್ಯಕ್ಷರ ಭಾಷಣ

ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ಸಭೆಯ ಕಿವಿ ಗಡಚಿಕ್ಕುವ ಕರತಾಡನದೊಂದಿಗೆ ಪ್ರಾರಂಭ ಭಾಷಣವಿತ್ತರು. ಅವರ ಭಾಷಣದಲ್ಲಿ ದೇಶದ ಸ್ವಾತಂತ್ರ್ಯ ಸಾಧನೆಗಾಗಿ ಅಲ್ಪ ಭೇದಗಳನ್ನು ಮರೆತು ಎಲ್ಲರೂ ಒಗ್ಗಟ್ಟಾಗಬೇಕೆಂಬ ಹೃತ್ಪೂರ್ವಕ ಕರೆಯಿದ್ದಿತು. ಭಾಷಣದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ಅಂತರ್ರಾಷ್ಟ್ರೀಯ ಪರಿಸ್ಥಿತಿಯು ಅತ್ಯಂತ ವಿಷಮ ಸ್ಥಿತಿಗೆ ಮುಟ್ಟಿರುವ ಮತ್ತು ನಮ್ಮ ಅಂತರ್ರಾಷ್ಟ್ರೀಯ ಪ್ರಾಮುಖ್ಯ ಪ್ರಶ್ನೆಗಳು ಕೆಲವು ಬಿಕ್ಕಟ್ಟಿನ ಸ್ಥಿತಿಗೆ ಬಂದಿರುವ ಈ ಕಠಿಣ ಕಾಲದಲ್ಲಿ ಕಾಂಗ್ರೆಸನ್ನು ಮತ್ತು ರಾಷ್ಟ್ರವನ್ನು ನಡೆಸುವ ದೊಡ್ಡ ಹೊಣೆಗಾರಿಕೆಯನ್ನು ಕಾರ್ಯಕಾರೀ ಸಮಿತಿಯು ಹೊತ್ತಿದೆ. ಪ್ರಪಂಚವು ಬಿಕ್ಕಟ್ಟಿನ ಛಾಯಾವೃತವಾಗಿರುವ ಈ ಕಾಲದಲ್ಲಿ ಭಾರತವು ನಮ್ಮಿಂದ ಕಾರ್ಯದ ಒಗ್ಗಟ್ಟನ್ನು ಅಪೇಕ್ಷಿಸುತ್ತಿದೆ. ತಮ್ಮೊಳಗಿನ ಅಲ್ಪ ಭೇದಗಳನ್ನು ಬದಿಗೊತ್ತಿ ಭಾರತದ ಸ್ವಾತಂತ್ರ್ಯಾಪೇಕ್ಷಿಗಳೆಲ್ಲರೂ ಸಹಕಾರ ಪೂರ್ವಕವಾಗಿ ರಾಷ್ಟ್ರ ಸಭೆಯನ್ನು ಬಲಶಾಲಿ ಮತ್ತು ವಿಸ್ತೃತತರ ಸಂಸ್ಥೆಯನ್ನಾಗಿ ಮಾಡಬೇಕಾಗಿದೆ. ಇಂತಹ ಸಮಯದಲ್ಲಿ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಮತ್ತು ರಾಷ್ಟ್ರದ ಪೂರ್ಣ ವಿಶ್ವಾಸ ಮತ್ತು ಬೆಂಬಲವಿದ್ದರೇನೇ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸಬಲ್ಲದು. ಆ ರೀತಿ ವಿಶ್ವಾಸ ಸಂಪಾದಿಸಿ, ನಮ್ಮ ಮುಂದಿನ ಸಂಗ್ರಾಮಕ್ಕೆ ಸಿದ್ಧತೆಗೊಳಿಸಬೇಕೆಂಬುದೇ ವರ್ಕಿಂಗ್ ಕಮಿಟಿಯ ಉತ್ಕಟೇಚ್ಛೆ. ದುರ್ದೈವ ವಶಾತ್ ಭಿನ್ನಭಿನ್ನ ಹಾದಿಗಳು ಕಾಂಗ್ರೆಸಿನಲ್ಲಿ ತಲೆದೋರಿ, ಆಂತರಿಕ ತಿಕ್ಕಾಟಗಳಿದ್ದು ನಮ್ಮ ಚಳವಳವು ದುರ್ಬಲವಾಗಿದೆ. ಈ ಸಮಯದಲ್ಲಿ ತಿಕ್ಕಾಟಗಳನ್ನು ಅಂತ್ಯವಡಿಸಿ, ಕಲ್ಮಷಗಳನ್ನು ಕಿತ್ತೊಗೆದು ಸರ್ವರ ಬಯಕೆಯಾದ ಸ್ವಾತಂತ್ರ್ಯ ಸಂಪಾದನೆಗೆ ಕಾಂಗ್ರೆಸಿನ ಎಲ್ಲಾ ಶಕ್ತಿಗಳನ್ನು ಒಂದುಗೂಡಿಸಲು ಪ್ರಯತ್ನಿಸುವದು ಸ್ವತಂತ್ರ ಭಾರತದ ನಿರೀಕ್ಷಕರೆಲ್ಲರ ಕರ್ತವ್ಯ. ಈ ಉದ್ದೇಶದಿಂದಲೇ ವರ್ಕಿಂಗ್ ಕಮಿಟಿ ಕಾರ್ಯಕ್ಕಿಳಿದಿದೆ. ಮತ್ತು ಅದು ಎಲ್ಲ ಕಾಂಗ್ರೆಸ್ ಜನರ ಸಾನಂದ ಸಹಕಾರವನ್ನು ಹಾರೈಸುತ್ತಿದೆ.

ಲೋಕಯುದ್ಧದಲ್ಲಿ ಭಾರತ

ಲೋಕಯುದ್ಧದ ಅಪಾಯವು ಎಂದಾದರೂ ಇದ್ದೇ ಇದೆ; ಅದು ಕೆಲವೇ ತಿಂಗಳುಗಳ ಅಂತರದ ಮಾತು. ಇದು ಲೋಕ ವಿಪತ್ತಾದರೂ ದುಸ್ಸಂದರ್ಭವಶಾತ್ ಯುದ್ಧ ಪ್ರಾರಂಭವಾದಲ್ಲಿ ಭಾರತವನ್ನೂ ಅದರೊಳಗೆಳೆಯುವ ಹಂಚಿಕೆ ನಡೆಯುತ್ತಿದೆ. ಬ್ರಿಟಿಷ್ ಸರಕಾರವು ಇದಕ್ಕಾಗಿ ಹಲವು ಉಪಾಯಗಳನ್ನು ಮೊದಲೇ ಕೈಗೊಂಡಿದೆ. ಇಂಡಿಯಾ ಆಕ್ಟಿನಲ್ಲಾಗಿರುವ ತಿದ್ದುಪಡಿಯು ಯುದ್ಧಕಾಲದಲ್ಲಿ ಎಲ್ಲಾ ಅಧಿಕಾರವನ್ನು ಕೇಂದ್ರ ಸರಕಾರದ ಸ್ವಾಧೀನ ಮಾಡುವ ಮುಂದಿನ ಉಪಾಯವನ್ನು ಒಳಗೊಂಡಿದೆ. ಈ ಕೇಂದ್ರ ಸರಕಾರವು ಕೇವಲ ಬ್ರಿಟಿಷ್ ಸರಕಾರದ ಏಜೆಂಟ್ ಆಗಿದ್ದು ಅದು ಜನರಿಗೆ ಜವಾಬ್ದಾರಿಯುಳ್ಳದ್ದಲ್ಲ. ಹೀಗೆ ಯುದ್ಧವು ಭಾರತಕ್ಕೆ ಮುಖ್ಯವಾಗಿ ಸಂಬಂಧಿಸುವದಲ್ಲದೆ ಬ್ರಿಟಿಷ್ ಸಾಮ್ರಾಜ್ಯಕ್ಕಾಗಿ ನಮ್ಮನ್ನು ಹಳುಗೆಡಹುವ ಅಪಾಯವಿದೆ. ಆದ್ದರಿಂದ ನಾವು ನಮ್ಮನ್ನು ಯುದ್ಧದೊಳಗೆಳೆಯುವ ಎಲ್ಲಾ ಹಂಚಿಕೆಗಳನ್ನು ಇದಿರಿಸಲು ಸಿದ್ಧರಾಗಿರಬೇಕು. ಆ ಮೂಲಕ ಕಾಂಗ್ರೆಸಿನ ನಿಶ್ಚಲ ಧೋರಣೆಯನ್ನು ಕಾರ್ಯಕ್ಕೆ ಹಚ್ಚಬೇಕು.

ಹೊರ ದೇಶಗಳಲ್ಲಿರುವ ಭಾರತೀಯರ ಪಾಡು

ದೇಶದೊಳಗಿನ ಸಂಗತಿಗಳಲ್ಲದೆ, ಹೊರ ದೇಶಗಳಲ್ಲಿರುವ ಭಾರತೀಯರ ಪಾಡನ್ನು ನೋಡಿದರೆ ಅದು ಸಹಿಸಲಸಾಧ್ಯವಾಗಿದೆ. ಬರ್ಮಾದಲ್ಲಿ ಭಾರತೀಯರು ಇಷ್ಟರಲ್ಲೇ ಬೇಕಾದಷ್ಟು ಛಳಣೆಯನ್ನು ಅನುಭವಿಸಿದ್ದಾರೆ. ಸಿಲೋನಿನಲ್ಲಿ ಸಾವಿರಾರು ಹಿಂದೀಯರಿಗೆ ಅನ್ಯಾಯವನ್ನುಂಟುಮಾಡುವ ಹಂಚಿಕೆಗಳು ಕೈಗೊಳ್ಳಲ್ಪಟ್ಟಿವೆ. ಬೆಲ್ಜಿಯನ್ ಕೋಂಗೋವಿನಲ್ಲಿ ಹಿಂದೀ ಸಾಹುಕಾರರು ಸುಲಿಗೆ ಮತ್ತು ವಾದಗಳಿಗೊಳಗಾಗಿದ್ದಾರೆ. ಪೂರ್ವಾಫ್ರಿಕದಲ್ಲಿ ನಮ್ಮವರಿಗೆ ಅನ್ಯಾಯವಾಗುವ ರೀತಿನೀತಿಗಳು ಜ್ಯಾರಿಯಲ್ಲಿವೆ. ದಕ್ಷಿಣಾಫ್ರಿಕದ ಯೂನಿಯನ್ ಸರಕಾರವು ತಾನು ಹಿಂದೆ ಕೊಟ್ಟಿದ್ದ ಮಾತನ್ನು ಮುರಿದು ಹಿಂದೀಯರನ್ನು ಪ್ರತ್ಯೇಕಿಸುವ ಕಾನೂನು ಮಾಡಿದೆ. ನಮ್ಮ ದೇಶದ ಬಂಧುಗಳು ಅದನ್ನು ವಿರೋಧಿಸಿ ಚಳವಳ ಹೂಡುವ ಸನ್ನಾಹದಲ್ಲಿದ್ದಾರೆ.

ಸಾರ್ವಭೌಮ ಸರಕಾರದ ಖಂಡನೆ.

ಸಂಸ್ಥಾನಗಳಲ್ಲೆಲ್ಲಾ ಪರಿಸ್ಥಿತಿ ಹಾಳಾಗುತ್ತಾ ಬಂದಿದೆ. ಕೆಲವು ಸಂಸ್ಥಾನಿಕರ ಅಥವಾ ಅವರ ಉಪದೇಶಕರು ದಬ್ಬಾಳಿಕೆಯ ಧೋರಣೆ ವಹಿಸಿದ್ದಾರೆ. ಒರಿಸ್ಸಾ ಮತ್ತು ಕಾಥಿಯಾವಾಡಿನಲ್ಲಿ ಹಲವು ಶೋಚನೀಯ ಹಾಗೂ ಅಮಾನುಷಿಕ ಘಟನೆಗಳು ನಡೆದು ಹಲವರು ಮರಣ ಹೊಂದಿದರು; ಸಾವಿರಾರು ಮಂದಿ ಸ್ಥಳಭ್ರಷ್ಟರಾಗಿ ಅಲೆದಾಡುತ್ತಿರುವರು. ಸಂಸ್ಥಾನಗಳ ಹೋರಾಟವು ಭಾರತ ಸ್ವಾತಂತ್ರ್ಯ ಹೋರಾಟದ ಪ್ರಾಮುಖ್ಯಾಂಗವೆಂದೂ, ಅದರಿಂದ ದೂರವಿರಲು ಸಾಧ್ಯವಿಲ್ಲವೆಂದೂ ವರ್ಕಿಂಗ್ ಕಮಿಟಿಗೆ ಸರಿಯಾಗಿ ಗೊತ್ತಿದೆ. ತ್ರಿಪುರಿ ಕಾಂಗ್ರೆಸ್ ನಿರ್ಣಯದಂತೆ ಸಾಧ್ಯವಾಗುವ ವರೆಗೆ ಮುಂದುವರಿಯಬೇಕೆಂದು ವರ್ಕಿಂಗ್ ಕಮಿಟಿಯ ನಿರ್ಧಾರ. ಆದರೆ ಹೋರಾಟದ ಹೊಣೆಗಾರಿಕೆಯೆಲ್ಲ ಬಹುತೇಕವಾಗಿ ಸಂಸ್ಥಾನದ ಪ್ರಜೆಗಳ ಮೇಲೆಯೇ ಬೀಳುವುದರಿಂದ ಅವರು ತಮ್ಮಲ್ಲಿ ಸ್ವಾವಲಂಬನೆ ಮತ್ತು ಬಲವನ್ನು ಹೆಚ್ಚಿಸಿಕೊಳ್ಳದೆ ಮುಂದೊತ್ತಲಾರರು. ಸಂಸ್ಥಾನಗಳ ಹೋರಾಟದ ಒಂದು ಚಿಹ್ನೆಯೆಂದರೆ ಅದರಲ್ಲಿ ಬ್ರಿಟಿಷ್ ಸರಕಾರದ ಪ್ರತಿನಿಧಿಗಳು ಭಾಗವಹಿಸುತ್ತಿರುವುದು. ಸಾರ್ವಭೌಮ ಸರಕಾರವು ಹಲವು ಸನ್ನಿವೇಶಗಳಲ್ಲಿ ಸಂಸ್ಥಾನಿಕರ ದುರಾಡಳಿತೆಯ ಪರವಾಗಿ ತನ್ನ ಪ್ರತಿಷ್ಠೆಯನ್ನುಪಯೋಗಿಸಿರುವದಲ್ಲದೆ, ಪ್ರಜೆಗಳ ಮೇಲೆ ದಬ್ಬಾಳಿಕೆ ನಡೆಸುವದರಲ್ಲಿ ಭಾಗವನ್ನೂ ವಹಿಸಿರುವದು. ಬ್ರಿಟಿಷ್ ಸರಕಾರದ ಈ ಧೋರಣೆಯು, ಕಾಂಗ್ರೆಸು ಸಂಪೂರ್ಣ ಧಿಕ್ಕರಿಸುವ ಫೆಡರೇಶನಿನಲ್ಲಿರುವ ಅಪಾಯಕ್ಕೆ ಮತ್ತೊಂದು ನಿದರ್ಶನವನ್ನು ಕೊಡುತ್ತಿದೆ. ಈಗ ಫೆಡರೇಶನು ಒಂದು ಜೀವಂತ ಪ್ರಶ್ನೆಯಾಗಿ ಉಳಿದಿಲ್ಲವಾದರೂ, ಭಾರತದ ಮೇಲೆ ಅದನ್ನು ಹೊರಿಸುವ ಪ್ರಯತ್ನವು ಮತ್ತೊಮ್ಮೆ ನಡೆಯಬಹುದು. ಫೆಡರೇಶನು ಬರುತ್ತದಾದರೆ ರಾಷ್ಟ್ರವದನ್ನು ವಿರೋಧಿಸಬೇಕು; ಅದಕ್ಕಾಗಿ ತಯಾರಾಗಿರಬೇಕು.

ಭಾರತದ ಅಭಿಪ್ರಾಯವನ್ನು ಧಿಕ್ಕರಿಸುವ ಇಂಡಿಯಾ ಸರಕಾರದ ಸಾಮಾನ್ಯ ಧೋರಣೆಯು ಎಂದಿನಂತೆ ಮುಂದುವರಿಯುತ್ತಲೇ ಇದೆ ಮತ್ತು ಬ್ರಿಟಿಷರ ಪರಂಪರಾಗತ ಹಿತ ಸಂಬಂಧಗಳ ರಕ್ಷಣೆಯು ಭಾರತದ ರೈತರನ್ನು ಹಾಗೂ ಉದ್ಯಮಗಳನ್ನು ಬಲಿಗೊಂಡು ಸಾಗುತ್ತಲೇ ಇದೆ. ಇದಕ್ಕೆ ಕೇಂದ್ರ ಎಸೆಂಬ್ಲಿಯಲ್ಲಿ ಗಣನೀಯ ಬಹುಮತವು ವಿರುದ್ಧವಿದ್ದರೂ ಇಂಡೊ-ಬ್ರಿಟಿಷ್ ಒಪ್ಪಂದವನ್ನು ಎತ್ತಿ ಹಿಡಿದ ಇತ್ತೀಚೆಗಿನ ದೃಷ್ಟಾಂತವನ್ನು ಕೊಡಬಹುದು.

ಸದ್ಯ ಭಾರತವು ಅಭಿವೃದ್ಧಿಗೆ ತಡೆಯಾಗುವಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಗೆ ಬಂದಿದೆ. ತೀವ್ರವಾಗಿ ಮುಂದೊತ್ತದಿದ್ದಲ್ಲಿ ಹಿನ್ನೆಲೆಗೆ ಬೀಳಬೇಕಾಗುವದು ಖಂಡಿತ. ನಾವು ಬ್ರಿಟಿಷ್ ಸರಕಾರವು ಫೆಡರೇಶನನ್ನು ತರಲಿ, ಅದನ್ನು ವಿರೋಧಿಸುವ ಮೂಲಕ ಧ್ಯೇಯ ಸಾಧಿಸಿಕೊಳ್ಳೋಣ ಎಂದು ಕಾಯುತ್ತಾ ಕುಳಿತಿರಲು ಸಾಧ್ಯವಿಲ್ಲ. ವರ್ಕಿಂಗ್ ಕಮಿಟಿಯು ಲೋಕದ ಮತ್ತು ಭಾರತದ ಸದ್ಯ ಸ್ಥಿತಿಯಲ್ಲಿ, ನಮ್ಮ ಹಿತಕ್ಕಾಗಿ ಮತ್ತು ಲೋಕಶಾಂತಿಗಾಗಿ ಭಾರತದ ಸ್ವಾತಂತ್ರ್ಯವನ್ನು ಒಪ್ಪಿಕೊಂಡು ಅದನ್ನು ಜಾರಿಮಾಡುವ ಕಾರ್ಯ ಕೈಗೊಳ್ಳಬೇಕೆಂದು ಅಭಿಪ್ರಾಯಪಡುತ್ತದೆ.

ಜಾತೀಯತೆಯ ಉಪಟಳ

ಪ್ರಾಂತಿಕ ಸರಕಾರಗಳು, ನಮ್ಮೆಲ್ಲರ ಒಕ್ಕಟ್ಟಿನ ಬಲ ಮತ್ತು ಬಯಕೆಯ ಸಹಾಯದಿಂದ ಕಡೆಗಣಿಸಬೇಕಾದ ಹಲವು ಸಮಸ್ಯೆಗಳನ್ನು ಇದಿರಿಸಬೇಕಾಗಿ ಬಂದಿದೆ. ಕೆಲವು ಪ್ರಾಂತ್ಯಗಳಲ್ಲಿ ಜಾತೀಯ ಮತ್ತು ತಂಡಗಳೊಳಗಿನ ಗೊಂದಲವೆದ್ದು, ದಂಗೆ, ರಕ್ತಪಾತಗಳು ನಡೆಯುತ್ತಿವೆ. ಇಂತಹ ದುರ್ಘಟನೆಗಳು ಎಲ್ಲಾ ತರದ ಅಭಿವೃದ್ಧಿಗೂ ಹಾನಿಕಾರಕಗಳಿರುವದರಿಂದ, ಈ ಅವನತಿಯು ಬಹು ಶೋಚನೀಯವೆಂದು ವರ್ಕಿಂಗ್ ಕಮಿಟಿಯರಿತಿದೆ. ಈ ಜಾತೀಯ ಉಪಟಳವನ್ನು ಬೇರು ಸಹಿತ ಕಿತ್ತೊಗೆಯುವ ಕಾರ್ಯದಲ್ಲಿ ಕಾಂಗ್ರೆಸ್ ಜನರಿಗೆ ಮತ್ತು ಇತರರಿಗೆ ತನ್ನಿಂದ ಸಾಧ್ಯವಿರುವ ಬೆಂಬಲವನ್ನೀಯಲು ವರ್ಕಿಂಗ್ ಕಮಿಟಿಯು ಬಹಳ ಆತುರದಿಂದಿದೆ.

ಇವು ಮತ್ತು ಇತರ ಪ್ರಾಮುಖ್ಯ ಹಲವು ವಿಷಯಗಳು ಇಂದು ರಾಷ್ಟ್ರದ ಮುಂದಿವೆ. ಈ ಸಮಸ್ಯೆಗಳನ್ನೆಲ್ಲಾ ಬಿಡಿಸಬೇಕಾದರೆ ಕಾಂಗ್ರೆಸ್ ತನ್ನ ಮನೆಯನ್ನು ತಾನು ಸರಿಪಡಿಸದೆ ಗತ್ಯಂತರವಿಲ್ಲವೆಂಬುದು ಸ್ಪಷ್ಟವಾದ ವಿಷಯ. ಈಗ ನಮ್ಮನ್ನು ದುರ್ಬಲಗೊಳಿಸುವ ಒತ್ತಡ ಕಾಂಗ್ರೆಸಿನೊಳಗಿದೆ. ಕಾಂಗ್ರೆಸಿನ ಶಕ್ತಿಯ ಬೆಳವಣಿಗೆಯು ಹಲವು ಅನಪೇಕ್ಷಿತ ಅನುಭವಗಳನ್ನು ಕೊಟ್ಟಿದೆ. ನಮ್ಮ ಮೆಂಬರರ ಪಟ್ಟಿಯಲ್ಲಿ ರಕ್ಕಾ ಹೆಸರುಗಳೂ ಸೇರಿಹೋಗಿ ಸಂಸ್ಥೆಯನ್ನು ದುರ್ಬಲಗೊಳಿಸಿವೆ. ಕಾಂಗ್ರೆಸಿನೊಳಗೇನೇ ವಂಚಕರಿಗೆ ಹಾಗೂ ಕಾಂಗ್ರೆಸ್ ದ್ರೋಹಿಗಳಿಗೆ ಸ್ಥಳ ದೊರೆತಿದೆ.

ಘಟನೆಯ ತಿದ್ದುಪಡಿ

ಆದ್ದರಿಂದ ಅತ್ಯಗತ್ಯವಿರುವ ಮೊದಲ ಕಾರ್ಯವೆಂದರೆ ಕಾಂಗ್ರೆಸನ್ನು ಶುದ್ಧೀಕರಿಸಿ, ಅದು ಜನರ ನಿಯಮಬದ್ಧ ಪರಿಣಾಮಕಾರೀ ಸಾಧನವಾಗುವಂತೆ ಮಾಡುವದೊಂದೇ. ಕಾಂಗ್ರೆಸು ಹೋರಾಟದ

AND THIS TIME WITH MAGIC & MIRACLES

A miraculous diamond . the source of spiritual power;
A magic Belt . . . . rendering invisibility;
A magic Feather . . . Working wonders!

Aye! you come across hundreds of Diamonds, Thousands of Belts and millions of Feathers! Who knows? . . . one of them may have such miraculous powers!

See . . . ! Mark to examine every diamond, every Belt, every Feather you may find in your daily life, and try your chance if any are similar to those that we show you in

INDRA MOVIETONE'S

IMPOSSIBLE

OR

Na-Honewali-Bath.

at

SRI RAMAKRISHNA THEATRE, UDIPI.

From 28—6—1939

featuring

Baburao Pahelwan, Miss. Dasguptha, V. K. Das, Baby Nurjahan, & others.

Stunts you have not seen herebefore! Thrills you have not enjoyed hitherto! ....

Impossible things are made possible in IMPOSSIBLE!

ಈ ಸಲ ನೋಡಿ! ಇಂದ್ರಜಾಲ, ಮಾಯಾಮೋಡಿ!! ಈ ಸಲ ನೋಡಿ!!!

ಅದೊಂದು ವಜ್ರ . . . . ಅದರಲ್ಲಿ ಅಡಕವಾಗಿದೆ ಮಾಯಾಶಕ್ತಿ!
ಅದೊಂದು ಪಟ್ಟಿ . . . . ಅದರಿಂದಾಗುವುದು ಅಗೋಚರತೆ!
ಅದೊಂದು ಮಾಯಾ ಗರಿ . . . . . ಅದರಲ್ಲಿದೆ ವೈಚಿತ್ರ್ಯತೆ!

ಏ ಏ ಏ........! ನೀವು ನೂರಾರು ವಜ್ರಗಳನ್ನೂ, ಸಾವಿರಾರು ಪಟ್ಟಿಗಳನ್ನೂ, ವಿಲಿಯಾಂತರ ಗರಿಗಳನ್ನೂ ನೋಡುತ್ತಿರುವಿರಿ!........ಅಷ್ಟೂ ತಿಳಿಯದೆ? ಅವುಗಳಲ್ಲಿ ಯಾವುದಾದರೊಂದರಲ್ಲಿ ಅಂತಹ ಮಾಯಾಶಕ್ತಿಯಿರಬಹುದು! ಅದರಿಂದ ನೀವು ಇಷ್ಟಕಾರ್ಯ ಸಿದ್ಧಿ ಸಿಕೊಳ್ಳಬಹುದು!

ಮಾಯಾಶಕ್ತಿಯಿರುವ ಅಂತಹ ವಸ್ತುಗಳ ಗುರುತು ನಿಮಗೆ ತಿಳಿಯಬೇಕಲ್ಲವೆ?

ಅದಕ್ಕಾಗಿಯೇ ನೋಡಿ ಪರಿಚಯ ಪಡಕೊಳ್ಳಿರಿ — ಯಾವುದನ್ನು ನೋಡಿ?

ತಾರೀಕು 28-6-1939ರಿಂದ

ಉಡುಪಿ ಶ್ರೀರಾಮಕೃಷ್ಣ ಥಿಯೇಟರಿನಲ್ಲಿ.

ಇಂದ್ರಾ ಮೋವಿಟೋನಿನವರ

ಬಾಬುರಾವ್ ಪಹಿಲ್‌ವಾನ್, ಮಿಸ್. ದಾಸಗುಪ್ತ, ವಿ. ಕೆ. ದಾಸ್, ಬೇಬಿ ನೂರ್ಜಹಾನ್

ಮೊದಲಾದವರು ನಟಿಸಿರುವ

ಇಂಪೋಸಿಬಲ್ ಅಥವಾ ಆಗದ ಮಾತು

ಆಗದ ಮಾತು ಆಗಿ ಹೋಗಿದೆ ಈ ಚಿತ್ರದಲ್ಲಿ! ಇದುವರೆಗೂ ನೋಡದಂತಹ ನವೀನ ರೀತಿಯ ಕಾದಾಟಗಳನ್ನು ನೋಡುವಿರಿ!!

Impossible or Na-Honewali Bath

SYNOPSIS

We… forest Mr. Kumar with is wife Kishori was in Love Quer. On his interfering with the human sacrifice of Sharma & Rama to the miraculous demon by the wir… king Kamalaq, he himself was caught and imprisoned Kamalaq's wife Kapamchalla fell in love with Kumar, and rescuing him, gave him a magic Belt besides revealing to him the secret of a Diamond which was responsible for Kamalaq's miracles Kumar traced on to the Diamond and having got possession of it easily rescued Kishori and other prisoners, and the gay party started for Calcutta Kamalaq and his party also marched towards Calcutta under disguise, to recapture the prisoners, and snatch back the diamond. When Kumar was out, he raided the house took Kishori and others as prisoners, and the Diamond under his safe custody. Unfortunately the miraculous diamond was with Kumar himself, and the one taken by Kamalaq was an imitation one. On consulting the real diamond, he could know the whereabouts of his family. By means of the Magic Belt he fought & rescued them all again.

Kamalaq again raided the house and took the real diamond and lo . . Kumar & his family were his captives! . What happens next?

ಕ ಥಾ ಸಾ ರಾಂ ಶ

ಭೂಲೋಕಸಂಚಾರಕ್ಕೆ ತನ್ನ ಹೆಂಡತಿ ಕಿಶೋರಿಯೊಡನೆ ಕೊಹೆ ಕಾಫಾ ಎಂಬಲ್ಲಿಗೆ ಕುಮಾರನು ಬರುವನು. ಅಲ್ಲಿನ ರಾಜನಾದ ಕಮಲಾಕನು ಶರ್ಮ ಮತ್ತು ರಾಮ ಎಂಬೀರ್ವರನ್ನು ತನ್ನ ದೇವತೆಗೆ ನರಬಲಿ ಕೊಡಬೇಕೆನ್ನುವಾಗ ಕುಮಾರನು ಅಟಕಾಯಿಸುವನು. ಕಮಲಾಕನು ತನ್ನ ಮಾಯಯಿಂದ ಇವನನ್ನು ಬಂಧಿಸಿ ಸೆರೆಯಲ್ಲಿಡುವನು.

ಇತ್ತ ಕಮಲಾಕನ ರಾಣಿ ಕಾಂಪಾಂಚಲಳು ಕುಮಾರನಲ್ಲಿ ವ್ಯಾಮೋಹವುಳ್ಳವಳಾಗಿ, ಅವನನ್ನು ಸೆರೆಯಿಂದ ವಿಮೋಚನೆಮಾಡಿ ಅದೊಂದು ಮಾಯಾಜಾಲದ ಪಟ್ಟಿಯನ್ನು ಕೊಡುವುದಲ್ಲದೆ ತನ್ನ ಗಂಡನ ಜಾಲವಿದ್ಯೆಗೆ ಕಾರಣ ಭೂತವಾದ ಅದೊಂದು ವಜ್ರದ ಗುಟ್ಟನ್ನು ಹೇಳಿಕೊಡುವಳು. ಕುಮಾರನು ಆ ವಜ್ರವನ್ನು ಪಡಕೊಂಡು ಕಿಶೋರಿ ಮೊದಲಾದವರನ್ನು ಸೆರೆಯಿಂದ ತಪ್ಪಿಸಿ ಸಂತೋಷದಿಂದ ಕಲ್ಕತ್ತಕ್ಕೆ ಬರುವನು.

ಇತ್ತ ಕಮಲಾಕನು ತನ್ನ ದೇವತೆಯಿಂದ ಈ ವಿಷಯವನ್ನು ತಿಳಿದು, ವೇಷ ಪಲ್ಲಟಮಾಡಿಕೊಂಡು ತನ್ನ ಜನರೊಂದಿಗೆ ಕಲ್ಕತ್ತಕ್ಕೆ ಬರುವನು. ಕುಮಾರ ನಿಲ್ಲದ ವೇಳೆಯಲ್ಲಿ ಮನೆಯನ್ನು ಹೊಕ್ಕು ವಜ್ರವನ್ನೂ ವಶಪಡಿಸಿಕೊಂಡು ಕಿಶೋರಿಯನ್ನು ಸೆರೆ ಹಿಡಿದುಕೊಂಡು ಹೋಗುವನು. ಆದರೆ ನಿಜವಾದ ವಜ್ರವು ಮಾತ್ರ ಕುಮಾರನ ಕೈಯಲ್ಲಿಯೇ ಇದ್ದ ಕಾರಣ ಅದರ ಮೂಲಕ ತನ್ನ ಹೆಂಡತಿ ಎಲ್ಲಿರುವಳೆಂಬುದನ್ನು ತಿಳಿದುಕೊಂಡು ಮಾಯಾಪಟ್ಟಿಯ ಸಹಾಯದಿಂದ ಅವಳನ್ನು ಮರಳಿ ಪಡೆಯುವನು.

ಆದರೆ ಕಮಲಾಕನು ಇಷ್ಟಕ್ಕೆ ಬಿಡಲಿಲ್ಲ. ಸಾಧಿಸಿ ನಿಜವಾದ ವಜ್ರವನ್ನು ಮರಳಿ ಪಡೆದು ಇವರೆಲ್ಲರನ್ನೂ ಸೆರೆಯಾಳಾಗಿ ತರುವನು. ಮುಂದೇನು? --- ---?

Next— Sagar Movietone's superb smashing hit 'SILVER KING' featuring Motilal & Sabhita Devi.

ಬರುವ ಚಿತ್ರ—ಸಬಿತಾ ದೇವಿ ಮತ್ತು ಮೋತಿಲಾಲ್ ನಟಿಸಿರುವ ಸಾಗರ ಮೋವಿಟೋನಿನವರ ಉಜ್ವಲ ಚಿತ್ರ 'ಸಿಲ್ವರ್ ಕಿಂಗ್'

Coming **'Tarzan's Revenge'**, Bombay Talkies' **'Achut Kanya'** featuring— Devika Rani & Ashoka Kumar, **Prabhats' 'Gopala Krishna'** etc.

ಮುಂದಿನ ಚಿತ್ರ: 'ಟಾರ್ಜನ್ಸ್ ರಿವೆಂಜ್', ಬಾಂಬೇ ಟಾಕೀಸಿನವರ ದೇವಿಕಾರಾಣಿ ಮತ್ತು ಅಶೋಕಕುಮಾರ ನಟಿಸಿರುವ **'ಅಚ್ಯುತ ಕನ್ಯಾ'** ಪ್ರಭಾತ, ಗೋಪಾಲಕೃಷ್ಣ ಇತ್ಯಾದಿ

Why worry over the Dull Season? Secure our help in time! We will serve you to increase your sales! Your message will reach thousands of ears! Give one slide... and be astonished at the tremendous increase in sales! Enquire rates.

ಮಂದಗಾಲದಿಂದ ವ್ಯಾಪಾರಗಳಿಗೆ ಉಳಿಗಾಲವಿಲ್ಲವೆಂದೇಕೆ ಚಿಂತಿಸುವಿರಿ? ನಮ್ಮ ಸಹಾಯವನ್ನು ಕೇಳಿರಿ! ಸೇವೆಯೇ ನಮ್ಮ ಧ್ಯೇಯ! ನಿಮ್ಮ ವ್ಯವಹಾರ ವಿಚಾರವನ್ನು ಸಾವಿರಾರು ಜನರ ಕಿವಿಗೆ ಮುಟ್ಟಿಸುವೆವು! ಒಂದು ಸ್ಲೈಡನ್ನು ಕೊಟ್ಟು ಸಾಧಾರಣ ಸಾಧ್ಯವಾದಷ್ಟು ವ್ಯಾಪಾರವನ್ನು ಹೊಂದಿರಿ! ದರಗಳನ್ನು ವಿಚಾರಿಸಿರಿ.

Ticket Rates: Reserved 1-2-0, Special 0-9-6, Gallery 0-5-11, Benches 0-4-0, 0-2-0

ವಾರದ ಭವಿಷ್ಯ

ಮುಂದಾಗುವುದನ್ನು ಇಂದೇ ತಿಳಿಯಿರಿ.

(ತಾ 29-6-39ರಿಂದ ತಾ. 6-7-39ರ ವರೆಗೆ)

[ಜ್ಯೋತಿಷವು ಅಸ್ಪಷ್ಟವಾದುದಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ.

ಸಂ ಸ.]

ಮೇಷರಾಶಿ—

ಈ ವಾರದಲ್ಲಿ ನಿಮಗೆ ಬಾಹ್ಯ ಸುಖಕ್ಕೆ ಬೇಕಾದ ಸಕಲೋಪಕರಣಗಳ ಅನುಕೂಲತೆಯು ಚೆನ್ನಾಗಿದ್ದರೂ ಅಂತರಂಗಿಕ ಸುಖಕ್ಕೆ ನೋಯಿಸುವ ನೋವಿನಿಷ್ಟ್ಯಗಳು ಬರುತ್ತಿರುವುವು. ನೀವು ಸದಾ ವಿಷಯಾಂತರದಲ್ಲಿ ಮಗ್ನರಾಗಿರುವಿರೆಂದು ನಮ್ಮ ವದನವೇ ಸಾರುತ್ತಿದೆ. ಯಾವ ಗೋಜಿಗೂ ಹೋಗದೆ ವಿನೋದದಿಂದ ಕಾಲ ಕಳೆಯಬೇಕೆಂದರೂ ನಿಮ್ಮ ದಿನದಿನದ ಮನೆಯಿಂದ ಹೊರಟಿರುವಿರಿ. ಪಿತೃವರ್ಗದವರ ಸ್ಥಾನದಲ್ಲಿ ಪರೀತ ಪೀಡೆಗಿಂತಲೂ ಅಧಿಕವಾಗಿ ಇತರ ಪೀಡೆಗಳು ಸಂಭವಿಸುವವು. ಆದರೂ ನಿಮ್ಮ ಸ್ವಭಾವ ಗುಣವನ್ನು ಬಿಟ್ಟುಕೊಡುವುದಿಲ್ಲ. ಸಾಂಪತ್ತಿಕ ಭಾಗವು ಬಹಳ ಸುಧಾರಿಸುವುದು. ನಾಲ್ಕೈದು ದಿನಗಳು ವಿಶೇಷ ಫಲಕಾರಿಯಾಗಿರುವುದರಿಂದ ಇಷ್ಟಸಿದ್ಧಿ ಮನೋಲ್ಲಾಸಗಳು ಲಭಿಸಲಿರುವವು.

ವೃಷಭರಾಶಿ—

ವೃಥಾ ಅಧಿಕವಾಗಿ ಖರ್ಚನ್ನು ಮಾಡಿದ ಮಾತ್ರಕ್ಕೆ ಮಹಾಸೇನೆಗಿಂತಲೂ ಮಂತ್ರಾಲೋಚನೆಯಲ್ಲಿ ಅಗ್ರಗಣ್ಯನಾದ ಮಂತ್ರಿಯೇ ರಾಜನಿಗೆ ಮುಖ್ಯನಾಗಿ ಬೇಕಾದವನು. ತನ್ನ ಮಂತ್ರಶಕ್ತಿಯಿಂದಲೂ ಸಾಮದಾನಾದ್ಯುಪಾಯಗಳಿಂದಲೂ ಅವನು ಅರಸನನ್ನೂ ದೇಶವನ್ನೂ ಶತ್ರುಪೀಡೆಯಿಂದ ಮುಕ್ತರನ್ನಾಗಿ ಮಾಡುವನು. ಅಂತೆಯೇ ನಿಮ್ಮಲ್ಲಿ ಕೂಡ ಆತ್ಮರಕ್ಷಣೆಗೂ ಮುಂದಿನ ಕಲ್ಯಾಣಕ್ಕೂ ಬೇಕಾದ ಕುಶಾಗ್ರಬುದ್ಧಿಯು ವಿಶೇಷವಾಗಿ ಬಹುವಾಗಿರುವುದರಿಂದ ಅನಿಷ್ಟ ಗ್ರಹರಿಂದುಂಟಾಗುವ ಹಲವಾರು ಆಪತ್ತುಗಳಿಂದ ಪಾರಾಗುವಿರಿ. ಆದರೂ ಸ್ವಭಾವಸಿದ್ಧವಾದ ಮನೋದೌರ್ಬಲ್ಯವು ಕೆಲವು ಸಂದರ್ಭಗಳಲ್ಲಿ ನಿಮ್ಮ ಶ್ರೇಯಸ್ಸಿಗೆ ಕಂಟಕಪ್ರಾಯವಾಗಿರುವುದು. ಆಹಾರದೋಷದಿಂದ ಸ್ವಲ್ಪಮಟ್ಟಿನ ಅನಾರೋಗ್ಯವೂ ಸ್ವಲ್ಪ ಮಟ್ಟಿಗೆ ಪೀಡಿಸುವುದು. ದಾಂಪತ್ಯಕ್ಕೆ ಪಾತ್ರರಾಗಲಿರುವಿರಿ. ಇವುಗಳಲ್ಲಿ ತಾ. 29, 30, ಮತ್ತು 6 ಈ ದಿನಗಳೇ ಉತ್ತಮಗಳಾಗಿವೆ.

ಮಿಥುನರಾಶಿ—

ದಿವಾರಾತ್ರಿಗಳಿಂದ ವಿಶ್ರವಾದ ದಿನದಂತೆ ನಿಮಗೀವಾರವು ಮಿಶ್ರಫಲದಾಯಕವಾಗಿರುವುದು. ನಿಮ್ಮ ಯೋಗ್ಯತೆ ಮತ್ತು ಪರಿಶ್ರಮಕ್ಕೆ ತಕ್ಕುದಾದ ಫಲವು ಲಭಿಸುವುದು. ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಅನುಕೂಲತೆಯು ಹೆಚ್ಚುವುದು. ವ್ಯಾಪಾರಿಗಳಿಗೂ ಶ್ರಮಜೀವಿಗಳಿಗೂ ಇಷ್ಟಾರ್ಥವಾಗಿ ಫಲಪ್ರಾಪ್ತಿಯಾಗುವುದು. ಅನಾಯಾಸವಾಗಿ ಸ್ತ್ರೀಸುಖವೂ ತನ್ನ ಕಾಲಕ್ಕೆ ಧನಪ್ರಾಪ್ತಿಯೂ ಉಂಟಾಗುವುದು. ಉದರ ರೋಗಾದಿ ಚಿಕ್ಕ ಚಿಕ್ಕ ದೋಷಗಳು ಶರೀರವನ್ನು ಸದಾ ಬಾಧಿಸುತ್ತಿರುವವು. ಇದರಿಂದ ಉತ್ಸಾಹ ಶಕ್ತಿಯು ದಿನದಿಂದ ದಿನಕ್ಕೆ ಕುಗ್ಗುತ್ತ ಬರುವುದು. ವಾರದ ಅಂತ್ಯಾರ್ಧ ಭಾಗದಲ್ಲಿ ಹಿರಿಯರಿಂದ ಮಾನಹಾನಿಯೂ ಧನವ್ಯಯವೂ ಉಂಟಾಗುವ ಚಿಹ್ನೆಗಳಿವೆ. ಶರೀರದಲ್ಲಿ ವ್ರಣಾದಿಗಳೂ ಕೂಡಾ ಉತ್ಪನ್ನವಾದಾವು. ತಾ. 29ರಿಂದ 2ರ ವರೆಗೆ ಇಷ್ಟಸಿದ್ಧಿ ಧನಪ್ರಾಪ್ತಿ, ಆರೋಗ್ಯ ಸುಖಗಳು ದೊರೆಯುವವು.

ಕರ್ಕಾಟಕರಾಶಿ—

ದಿನದಿಂದ ದಿನಕ್ಕೆ ಲೋಕದಲ್ಲಿ ಬದಲಾವಣೆಗಳು ಆಗುತ್ತಾ ಹೋಗುತ್ತಿರುವುದು ಪ್ರಕೃತಿಯ ಸ್ವಾಭಾವಿಕ ಗುಣವಾಗಿದೆ. ರಾಜ್ಯಪಳಿತ, ರಾಜಶಾಸನ, ಆಚಾರ ವ್ಯವಹಾರ ಇತ್ಯಾದಿಗಳು ಪರಿವರ್ತನೆ ಹೊಂದಿದಂತೆ ನಿಮ್ಮ ಸ್ಥಿತಿಗತಿಗಳೂ ಸಹ ಪರಿವರ್ತನೆ ಹೊಂದುತ್ತಿದೆ. ಸತ್ಸಂಗಾಪೇಕ್ಷೆಗಳಾದ ನಿಮಗೆ ಕುಟುಂಬದ ಮತ್ತು ಸ್ವಂತದ ಖರ್ಚು ವೆಚ್ಚಗಳ ಸಲುವಾಗಿ ಸಾಕಷ್ಟು ಹಣ ದೊರೆಯುವುದು. ನಿಮ್ಮ ವಿಶಾಲ ಬುದ್ಧಿಯೇ ಈ ಭಾಗದಲ್ಲಿ ಮುಖ್ಯವಾಗಿ ಫಲಕಾರಿಯಾಗುವುದು. ಪತ್ನಿಯ ಆರೋಗ್ಯ ಕೆಡಲಿರುವುದು. ಕೆಲವು ವಿಚಾರಗಳಲ್ಲಿ ನಿಮ್ಮ ಮನಸ್ಸು ನಿಮ್ಮ ಹಿಡಿತದಿಂದ ತಪ್ಪಿಹೋಗುವುದರಿಂದ ಕಲಹ, ವೃಥಾ ಖರ್ಚು ಮತ್ತು ತಿರಸ್ಕಾರಗಳಿಗೊಳಗಾಗಲಿರುವಿರಿ. ವಿದ್ಯಾಭಿಲಾಷಿಗಳಿಗೆ ಸಂಪೂರ್ಣ ವಿರೋಧವಾಗಿರುವುದೀ ವಾರ. ತಾ. 1ರಿಂದ 3ರ ವರೆಗಿನ ದಿನಗಳು ನಿಮಗನುಕೂಲಗಳಾಗಿವೆ.

ಸಿಂಹರಾಶಿ—

"ಯತೋ ಧರ್ಮಸ್ತತೋ ಜಯಃ" ಎಂಬ ವಚನದಂತೆ ಅನ್ಯಾಯ ಅನಾಚಾರಗಳಿರುವಲ್ಲಿ ಸೋಲು ನಿಶ್ಚಯವು. ಯಾರು ಧರ್ಮವನ್ನು ಬಿಡದೆ ಆದರಂತೆ ವರ್ತಿಸುವರೋ ಅವರಿಗೆ ಸದಾ ವಿಜಯ ಪ್ರಾಪ್ತಿಯಾಗುವುದು. ಸತ್ಯದಲಿ ನಿಮ್ಮ ಧರ್ಮದಂದಲೋ ಎಂಬಂತೆ ನಿಮ್ಮಲ್ಲಿ ಧರ್ಮಾಗ್ನಿಯೂ ಪ್ರಜ್ವಲಿಸತೊಡಗಿದೆ. ಈ ಭಾಗದಲ್ಲಿ ನೀವು ಜಾಗ್ರತೆ ತೆಗೆದುಕೊಂಡರೆ ನಿಮಗೀವಾರವು ಬೆಟ್ಟದಷ್ಟು ಇಷ್ಟವನ್ನೇ ಕೊಡಲಿರುವುದು. ದೇಹಾರೋಗ್ಯ, ಶತ್ರುನಾಶ, ಕಾರ್ಯಸಿದ್ಧಿ, ಧನಲಾಭ ಇತ್ಯಾದಿಗಳು ದೊರೆಯಲಿವೆ. ಮಾತ್ರವಲ್ಲ, ಸನ್ಮಿತ್ರರ ಸಹಾಯಬಲದಿಂದ ಈ ಸ್ಥಿರಕಾರ್ಯಗಳಲ್ಲಿ ವಿಜಯಪ್ರಾಪ್ತಿಯೂ ಕೂಡ ಉಂಟಾಗಲಿವೆ. ಆದರೆ ನೀವು ಕುಕರ್ಮಗಳಿಗೆ ಧರ್ಮಬಾಹಿರರಾಗಿದ್ದಲ್ಲಿ ಸದ್ಯದ ಗ್ರಹಸ್ಥಿತಿಯಿಂದ ಕಾರ್ಯದಲ್ಲಿ ಅಪಜಯ, ಶತ್ರುಜನರಿಂದ ಸದಾ ಪೀಡೆ, ದೇಹದಲ್ಲಿ ಅನಾರೋಗ್ಯ, ಪ್ರವಾಸದಲ್ಲಿ ಕಷ್ಟ ಪರಂಪರೆಗಳು ಅವಶ್ಯವಾಗಿ ಸಂಭವಿಸಲಿವೆ. ತಾ. 3ರಿಂದ 6ರ ವರೆಗಿನ ದಿನಗಳು ಹೆಚ್ಚಿನ ಹಾನಿಕಾರಿಗಳಾಗಿರುವವು.

ಕನ್ಯಾರಾಶಿ—

ಮುತ್ತು ಬಿದ್ದರೆ ಹೆಕ್ಕಬಹುದು, ಮಾತು ಬಿದ್ದರೆ ಹೆಕ್ಕಲಾಗದು ಎಂಬೀ ಪ್ರಾಚೀನರ ವಚನವು ಅಕ್ಷರಶಃ ಮಾನ್ಯವಾದುದು. ಕಾರಣ ಒಂದು ಮುತ್ತಿಗೆ ಇಷ್ಟೇ ಬೆಲೆಯೆಂಬ ನಿರ್ಣಯವಿದೆ. ಮಾತಾದರೋ ಅತ್ಯಮೂಲ್ಯವಾದುದು. ಈ ವಾರದಲ್ಲಿ ನೀವೀ ಮಾತಿನ ಬೆಲೆಯನ್ನರಿಯಲಿರುವಿರಿ. ನಿಮ್ಮ ಮನೋರಥಗಳು ಅತ್ಯಲ್ಪಕಾಲದಲ್ಲಿ ಪೂರ್ಣವಾಗುವುವು. ಬುದ್ಧಿವಂತಿಕೆಯಿಂದಲೂ ವಾಕ್ಚಾತುರಿಕೆಯಿಂದಲೂ ಸಮಾಜದಲ್ಲಿ ಮನ್ನಣೆ, ಇಷ್ಟವಸ್ತುಗಳ ಪ್ರಾಪ್ತಿಯನ್ನು ಪಡೆಯಲಿರುವಿರಿ. ಆದರೂ ಪುತ್ರ ನಿಮಿತ್ತ ಶೋಕವು ನಿಮ್ಮನ್ನು ಬಿಟ್ಟಿರದು. ಉತ್ಪತ್ತಿ ಚೆನ್ನಾಗಿದ್ದರೂ ಅಕಾರ್ಯದಲ್ಲಿ ನಿಮ್ಮ ಹಣದ ಕೆಲವಂಶ ವ್ಯಯವಾಗುವುದರಿಂದ ಬಹಳ ಚಿಂತೆಗೊಳಗಾಗುವಿರಿ. ಆಕಸ್ಮಾತ್ ಕುಟುಂಬ ವಿರಹವುಂಟಾಗಲಿದೆ. ತಾ. 1ರಿಂದ 5ರ ವರೆಗೆ ಸ್ವಲ್ಪ ಜಾಗರೂಕರಾಗಿ ವರ್ತಿಸಿರಿ. ಮಿತ್ರಕಲಹ ಕಾರ್ಯವಿಘ್ನಗಳೊದಗಲಿವೆ.

ತುಲಾರಾಶಿ—

ಅನೇಕ ಸಲ ನಿಮಗೆ ಈ ಜೀವನದಲ್ಲಿ ನಿರಾಶೆ ತೋರಿರಬಹುದು. ತೋರುತ್ತಲೂ ಇರಬಹುದು. ಆದರೆ ಈಗಲೀಗ ಸ್ವಲ್ಪ ಆಶಾತಂತುವು ಕಂಡುಬರುತ್ತಲಿದೆ. ಮನಸ್ಸಿಗೆ ಶಾಂತಿಯೂ ಖರ್ಚಿಗೆ ತಕ್ಕ ಮಟ್ಟಿನ ಹಣವೂ ದೊರೆಯುತ್ತದೆ. ಆದರೂ ಕೂಡ ಸಂಸರ್ಗ ದೋಷವು ನಿಮ್ಮಿಂದ ದೂರವಾಗಿಲ್ಲವು. ನ್ಯಾಯಸ್ಥಾನದಲ್ಲಿ ಧನಸಂಬಂಧವಾದ ಕಲಹವೊದಗಿಸುವುದು. ವಿರೋಧಿಗಳ ಪೀಡೆಯು ಅತ್ಯಧಿಕವಾಗಿಯೂ ಶರೀರಬಾಧೆಯಿಲ್ಲದೆಯೂ ಬಹಳ ಕಷ್ಟಕ್ಕೆ ಸಿಲುಕುವಿರಿ. ನಿಂತಲ್ಲಿ ಕ್ಷಣಕಾಲ ನಿಲ್ಲದೆ ಅತ್ತಿತ್ತ ಅಲೆದಾಡುವಿರಿ. ಆರೋಗ್ಯ ವಿಚಾರದಲ್ಲಿ ಜಾಗರೂಕರಾಗಿರಿ. ತಾ. 1—2 ಬಿಟ್ಟು ಇತರ ದಿನಗಳಲ್ಲಿ ಧನಮಾನಗಳ ಹಾನಿ, ಮಿತ್ರಕಲಹ, ಕಾರ್ಯವಿಘ್ನ, ಅನಾರೋಗ್ಯ, ಪ್ರವಾಸ ಇತ್ಯಾದಿಗಳಿಂದ ಪೀಡಿಸಲ್ಪಡುವಿರಿ.

ವೃಶ್ಚಿಕರಾಶಿ—

ಕಾಲವು ಅತ್ಯನುಕೂಲಸ್ಥಿತಿಗೆ ಬಂದಿರುವುದು. ದೈವಬಲವು ಚೆನ್ನಾಗಿರುವುದು. ದೈವಬಲವಿರತಕ್ಕವನಿಗೆ ಅಸಾಧ್ಯವಾದ ಕಾರ್ಯವಾವುದೂ ಇರಲಾರದು. ನಿಮಗೂ ಕೂಡ ಅದ್ಭುತಪ್ರಾಯವಾಗಿ ಪರಿಣಮಿಸೀತು. ಹೀಗಿರುವಲ್ಲಿ ನೀವು ಭಾವೀ ಜೀವನದಲ್ಲಿ ಸುಖದಾಯಕವಾದ ಕಾರ್ಯದಲ್ಲಿ ಕೈಯಿಕ್ಕಿ ದುಡಿಯಿರಿ. ಅನಾಯಾಸದಿಂದ ಕಾರ್ಯವು ಮುಂದರಿವುದು, ಸಜ್ಜನರ ಸಹವಾಸವೂ ಹೆಚ್ಚುವುದು. ಸಂಪದ್ಭಾಗವು ಉತ್ತಮರೀತಿಗೆ ಬರುವುದು. ಸತ್ಕೀರ್ತಿಗೆ ಪಾತ್ರರಾಗುವಿರಿ. ನೌಕರಿಭಾಗದಲ್ಲಿ ಪದಪ್ರಾಪ್ತಿಯು ನಿಮ್ಮನ್ನು ಉತ್ತಮಸ್ಥಿತಿಗೆ ಬರುವುದು. ತತ್ಕಾಲದಲ್ಲಿ ನಿಮಗೆ ದೋಷವೆಂದರೆ ಶತ್ರುಭೀತಿಗಳ ಮಾನಸ್ಸು ಒಂದೇ ಆಗದಿರುವುದೇ. ತಾ. 29-30 ಮತ್ತು 3-4-5 ಈ ದಿನಗಳಲ್ಲಿ ಮೃಷ್ಟಾನ್ನಭೋಜನ ಸ್ತ್ರೀಸುಖ, ಜಯ, ಧನಲಾಭ.

ಧನೂರಾಶಿ—

ಸಂಸಾರಸಾಗರದಲ್ಲಿ ತೊಳಲಿ ಬಳಲಿ ಬೆಂಡಾದ ನಿಮಗೆ ಈ ಸಂಸಾರದಲ್ಲಿ ಎಳ್ಳಷ್ಟೂ ಸುಖವಿಲ್ಲವು. ಈ ತೆರನಾದ ಜೀವನಕ್ಕೂ ಇಂತಹ ಸಂಸಾರಕ್ಕೂ ಧಿಕ್ಕಾರವಿರಲಿ. ಇದಕ್ಕಿಂತ ಸನ್ಯಾಸಿಯಾಗಿದ್ದರೆ ಎಷ್ಟೋ ಚೆನ್ನಾಗಿತ್ತು ಎಂಬೀ ಮೊದಲಾದ ಆಲೋಚನಾತರಂಗಗಳು ಒಮ್ಮೊಮ್ಮೆ ನಿಮ್ಮ ತಲೆಯಲ್ಲಿ ಮೂಡುವವು. ಸಹಜ, ದೈವವೇ ಮುನಿದಿರುವಾಗ ಅರೇನು ಮಾಡಬಲ್ಲರು? ಮನುಷ್ಯ ಯತ್ನ ಒಂದೂ ಸಫಲವಾಗಲಾರದು. ಆದರೆ ಎಲ್ಲವೂ ವಿಧಿವಿಲಾಸ, ನಮ್ಮಿಂದೇನು ಸಾಗೀತು ಎಂತ ಉದಾಸೀನರಾಗಿ ಕುಳಿತುಕೊಳ್ಳುವುದಕ್ಕಿಂತ ಕಾರ್ಯದಲ್ಲುದ್ಯುಕ್ತರಾಗಿ ಆಸಕ್ತಿಯಿಂದ ಮುಂದರಿಸುವುದು ನಮ್ಮ ಕರ್ತವ್ಯ. ಹೀಗೆ ಮಾಡುವುದರಿಂದ ನಮಗೇನೂ ಲಾಭವಾಗದಿದ್ದರೂ ಅದರಲ್ಲಿ ನಮ್ಮ ತಪ್ಪಿಲ್ಲವು. "ಯತ್ನೇ ಕೃತೇ ಯದಿ ನ ಸಿಧ್ಯತಿ ಕೋತ್ರ ದೋಷಃ" ಎಂದಂತೆ ಜನಾಪವಾದದಿಂದ ಪಾರಾಗುವಿರಿ. ತತ್ಫಲವು ಇಂದಲ್ಲ ಬಿದ್ದರೆ ಮುಂದಾದರೂ ಸಿಗದಿರಲಾರದು. ತಾ. 1—2-6 ಈ ದಿನಗಳು ಅಷ್ಟೊಂದು ಅನಿಷ್ಟಗಳಾಗಿಲ್ಲವು.

ಮಕರರಾಶಿ—

ರವಿಯೊಬ್ಬನನ್ನುಳಿದು ಸಕಲ ಗ್ರಹ ಸಮೂಹವೇ ನಿಮಗೆ ಪ್ರತಿಕೂಲವಾಗಿ ನಿಂತಿರುವಾಗ ಪರಿಸ್ಥಿತಿಯು ಯಾವ ರೀತಿಯಲ್ಲಿ ನಿಂತೀತು. ನೀವೇ ಯೋಚಿಸಿರಿ. ಒಕ್ಕಟ್ಟಿನಲ್ಲಿ ಬಲವಿದೆ, ಎಂಬ ಗಾದೆಯನುಸಾರವಾಗಿ ಅನಿಷ್ಟ ಗ್ರಹ ಸಮೂಹದಲ್ಲಿ ಬಲಾಧಿಕ್ಯ ಬಂದುದರಿಂದ ನಿಮಗೂ ಕೂಡ ಅನಿಷ್ಟ ಫಲವೇ ಹೆಚ್ಚಾಗಿ ಬರಬೇಕಾಯಿತಷ್ಟೆ. ಅಷ್ಟರಿಂದಲೇ ನಿಮ್ಮ ಆರೋಗ್ಯವು ಈ ಮುಂಚೆಯೇ ಕೆಡಲಾರಂಭಿಸಿದೆ. ಮಾತನಾಡಿದವರೊಡನೆ ಜಗಳವೇ ಆಗುತ್ತಿದೆ. ಬಂಧುಗಳಂತೂ ನಿಮ್ಮ ಪಾಲಿಗೆ ಶತ್ರುಗಳಿಗಿಂತಲೂ ಕಡೆಯಾಗಿರುವರು. ಶತ್ರುಜನರಿಂದಾಗಿ ಈಷತ್ತೂ ಸುಖವಿಲ್ಲ. ಅಂತೂ ಈ ವಿಚಾರತರಂಗಗಳಿಂದ ನಿಮ್ಮ ಮಾನಸ್ಸೇ ವಿಕಾರ ಹೊಂದಿರುವುದು. ಆದಾಗ್ಯೂ ನಿಮ್ಮ ವರ್ತನೆಯು ಸರಿಹೋರದು. ಅಂತೂ ನಿಮಗೆ ಸುಖವೆಂಬುದು ಕನಸಿನಲ್ಲೂ ದುರ್ಲಭವು. ತಾ. 1-2-6 ಈ ದಿನಗಳು ಸಹನಾಶೀಲವಾಗಿವೆ.

ಕುಂಭರಾಶಿ—

ಅನೇಕ ವಿಚಾರಗಳಲ್ಲಿ ನೀವು ಸಾಧಾರಿಸಿರುವಿರಿ. ಕೆಲಸಮಯದಿಂದ ನಿಮಗೆ ಗ್ರಹಬಲವು ಕಾರ್ಯದಲ್ಲಿ ಉತ್ಸಾಹಶಕ್ತಿಯನ್ನು ಹೆಚ್ಚಿಸುತ್ತಿದೆ. ನಿಮ್ಮ ಕಾರ್ಯಗಳೂ ತಡೆಯಿಲ್ಲದೆ ಮುಂದರಿಯುತ್ತಿವೆ. ಅನವರತ ದುಡಿ ಮಾತು, ಸದ್ಯ ನೀವು ರಾಜಕೀಯ ವಿಚಾರದಲ್ಲಿ ಕೈಯಿಕ್ಕಬೇಡಿ. ಕೋರ್ಟು ಕೆಲಸಗಳನ್ನು ಸದ್ಯ ಮುಂದರಿಸಿರಿ. ಇಂದಿನ ವಾತಾವರಣವು ಈ ವಿಚಾರದಲ್ಲಿ ಕೆಟ್ಟದಾಗಿದೆ. ಒಂದೆರಡು ವಾರಗಳಲ್ಲೇ ಅದು ಸರಿಯಾಗಿ ಬರಲಿದೆ. ನಿಮ್ಮ ಉದ್ಯೋಗದಲ್ಲಿ ತುಂಬಾ ತೃಪ್ತಿಯಿದೆ. ಕುಟುಂಬ ವಿಚಾರದಲ್ಲೂ ಏನೂ ಕುಂದಿಲ್ಲವು. ಆರೋಗ್ಯವೂ ಚೆನ್ನಾಗಿ ಉಳಿಯುವುದು. ಆದರೂ ತಾ. 3-4-5ರಲ್ಲಿ ನೀವು ಹಣದ ವಿಷಯದಲ್ಲಿ ಆರೋಗ್ಯ ವಿಚಾರದಲ್ಲಿ ಹೆಚ್ಚು ಜಾಗ್ರತೆ ತೆಗೆದುಕೊಳ್ಳಿ. ಸಾಮಾನ್ಯ ಎಲ್ಲಾ ವಿಚಾರಗಳಲ್ಲೂ ಜಾಗರೂಕರಾಗಿರುವುದೊಳ್ಳಿತು.

ಮೀನರಾಶಿ—

ನಿಮ್ಮ ರಾಶಿಗೆ ಧನ ಭಾಗ್ಯ ಪತಿಯಾಗಿದ್ದ ಅಂಗಾರಕನು ತನ್ನ ಉಚ್ಚಸ್ಥಾನವಾದ ಮತ್ತು ನಿಮ್ಮ ಲಾಭಸ್ಥಾನವಾದ ಮಕರರಾಶಿಯಲ್ಲಿರುವವರೆಂದ ಮೇಲೆ ನಿಮಗೆ ಯಾವ ವಿಚಾರಕ್ಕೂ ತೊಂದರೆಯಿಲ್ಲ. ಕಾರಣ ಹಣವೊಂದಿದ್ದರೆ ಲೋಕದಲ್ಲಿ ಅಸಾಧ್ಯವಾದುದಾವುದೂ ಇರಲಾರದು. ಇದ್ದರಿಂದಲೂ 'ಸರ್ವೇ ಗುಣಾಃ ಕಾಂಚನಮಾಶ್ರಯಂತಿ' ಎಂದು ಭರ್ತೃಹರಿಯು ಹೇಳಿದುದು. ನಿಮ್ಮ ಸಂಸಾರ ವಿಚಾರದಲ್ಲಿ ಸ್ವಲ್ಪ ನಿಮಗೆ ಮನಸ್ತಾಪವುಂಟಾದೀತು. ಮತ್ತು ಒಂದಿನಂತೆ ಮುಂದಿನ ದಿನಗಳು ಮರ್ಯಾದೆಯಿಂದ ಕಳೆದಾವೋ ಇಲ್ಲವೋ ಎಂಬ ಶಂಕೆಯು ಆಗಾಗ ಉಂಟಾಗುತ್ತಿರಬಹುದು. ಅಲ್ಲದೆ ಖರ್ಚು ಕೂಡ ವಿಪರೀತ ಹೆಚ್ಚುವುದು. ತರುಣ ವ್ಯಾಪಾರಿಗಳಿಗೆ ಹೆಚ್ಚಿನ ಕೆಡುಕು ಕಾಣದು. ತಾ. 1ರಿಂದ 3ರ ವರೆಗೆ ಸಾಮಾನ್ಯ ಉತ್ತಮ.



ಎಲ್ಲಾ ಔಷಧಿ ಅಂಗಡಿಗಳಲ್ಲೂ ಸಿಗುತ್ತದೆ. ವಿವರಣಾ ಪತ್ರಿಕೆ ಉಚಿತ
ತಯಾರಕರು:— ಆಯುರ್ವೇದಾಶ್ರಮಂ, ಪೋ. ಬಾಕ್ಸ್ ೨೮೩, ಮದ್ರಾಸ್
ಸ್ಟಾಕಿಸ್ಟರು:— ಪೋಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ನವಸೃಷ್ಟಿ.

ಈ ವಿಭಾಗದಲ್ಲಿ ಪುಸ್ತಕಗಳ ವಿಮರ್ಶೆಯನ್ನು ಕೊಡಲಾಗುವುದು. ವಿಮರ್ಶೆಗೆ ಪುಸ್ತಕಗಳನ್ನು ಕಳಿಸುವವರು ಎರಡೆರಡು ಪ್ರತಿಗಳನ್ನು ಕಳಿಸಬೇಕಾಗುವುದು. ಸಂ. ನ.

● ಪನ್ನೆ ● ಋತುಸಂಹಾರ
● ಜನನಾಯಕ ● ಕರ್ಮಗೀತೆ

ಪನ್ನೆ—(ಐತಿಹಾಸಿಕ ಕಾದಂಬರಿ) ಲೇಖಕರು.—ಜಿ. ಆರ್. ಮಹಾಬಲ ಭಟ್ಟ; ವೇದಾಂತ ಶಿರೋಮಣಿ, ವೇದಾಂತ ವಿಶಾರದ,—ಇವರು. ಪ್ರಕಾಶಕರು, ಭಿ. ಪ. ಕಾಳೆ. ಶ್ರೀ. ಶೇಷಾಚಲ ಗ್ರಂಥಮಾಲೆ. ಆನಂದವನ, ಅಗಡಿ, ಬೆಲೆ ೬ ಆಣೆ.

ಈ ನಾಟಕವು 'ರಾಜ ಮುಕುಟ'ವೆಂಬ ಹಿಂದೀ ನಾಟಕವನ್ನು ಅನುಸರಿಸಿ ಬರೆದುದಾಗಿದೆ. 'ರಾಜ ಮುಕುಟದ' ಪಾತ್ರರಚನಾ ಕೌಶಲ, ಸಮುಚಿತ ಮಾಗ್ದರ್ಶಣೆಗಳು, ಶ್ರೀ. ಮಹಾಬಲ ಭಟ್ಟರ 'ಪನ್ನೆ'ಯಲ್ಲಿ ಪ್ರತಿಬಿಂಬಿಸುತ್ತವೆ. ಮೂಲ ನಾಟಕದ ಆಶಯಕ್ಕೆ ಭಂಗಬಾರದಂತೆ, ಈ ನಾಟಕವನ್ನು ಕನ್ನಡದಲ್ಲಿ ಬರೆದು ಶ್ರೀ. ಮಹಾಬಲ ಭಟ್ಟರು ಹಿಂದೀ ಅಭ್ಯಾಸವಿಲ್ಲದ ಕನ್ನಡಿಗರಿಗೆ ದೊಡ್ಡ ಉಪಕಾರವನ್ನೇ ಮಾಡಿದರೆಂದು ಹೇಳಬಹುದು.

'ರಾಜ ಮುಕುಟ'ವು ಅಸಾಧಾರಣ ರಸಭಾವ, ಶೈಲಿಯ ಬಿಗುವು, ಗಾಂಭೀರ್ಯವುಳ್ಳ ಪ್ರಸಿದ್ಧ ನಾಟಕವಿದೆ. ಇದರಲ್ಲಿ ಬಹುಕರವಾಗಿ ರಜಪೂತರ ಆ ಕಾಲದ ಜೀವನ ವಿಚಾರವನ್ನು ಒಡಮೂಡಿಸಿದ್ದರೂ, ಹಲವು ವಿಚಾರಗಳು ಇದೀ ಮಾನವ ಜೀವನದ ಆಶೆ, ಆಕಾಂಕ್ಷೆಗಳ, ತ್ಯಾಗ, ಲೋಭ, ಧ್ಯೇಯಗಳ ನಿರೂಪಣೆಯಂತಿವೆ. ಶ್ರೀಯುತ ಮಹಾಬಲ ಭಟ್ಟರ ಪನ್ನೆಯು ಸನ್ಮಾನ್ಯ ಪಂತರ 'ರಾಜ ಮುಕುಟ'ವನ್ನನುಸರಿಸಿಕೊಂಡು ನಡೆಯುವುದರಲ್ಲಿ ಯಶಸ್ವಿಯಾಗಿದೆ.

ಕರ್ತವ್ಯಬಾಹಿರನಾಗಿ, ಸುರಾಪಾನ ಸುಖಲಾಲಸೆಗೆ ಬಲಿಬಿದ್ದ ವಿಕ್ರಮನ ಭಯಾನಕ ಅವಸಾನ, ಅಧಿಕಾರಲಾಲಸೆಯಿಂದ ನೀತಿಬಾಹಿರರಾಗಿ ಅತೀವ ನೀಚ ಕೃತ್ಯಗಳನ್ನು ಮಾಡಲು ಮುಂದಾದ ಬನವೀರ ಮತ್ತು ರಣಜೀತರ ದುಷ್ಟ ಕೃತ್ಯಗಳು, ದುಷ್ಟ ಹೇತುವಿನಿಂದ, ಆಶೆ ಆಕಾಂಕ್ಷೆಗಳಿಂದ ಪ್ರೇರಿತಳಾದ ದಿಟ್ಟೆ ಶೀತಲಸೇನಿಯು ಭಯಾನಕ ಕೃತ್ಯದಲ್ಲಿ ಬನವೀರ ಮತ್ತು ರಣಜೀತರನ್ನು ಮುಂದೂಡಿ, ತಂದೊಡ್ಡಿದ ಭಯಾನಕ ವಿನಾಶದ ಮಾರ್ಗ,—ಇವೆಲ್ಲಾ ಬಹು ಅದ್ಭುತ ರಮ್ಯವಿವೆ. ಕರ್ಮಚಂದ್ರ, ಜಯಸಿಂಹ, ಬಹಾದುರ ಸಿಂಹ ಮೊದಲಾದ ರಜಪೂತ ಸರದಾರರ ಜೀವನ ರಹಸ್ಯವು ಹಿಂದಿನ ರಜಪೂತ ವೀರರ ಉಚ್ಚ ಜೀವನ ಧ್ಯೇಯ, ಸ್ವಾರ್ಥತ್ಯಾಗ, ಧರ್ಮ ಪಕ್ಷಪಾತ, ದೇಶಾಭಿಮಾನದ ಕುರಿತು ಉದಾಹರಣೆಯಾಗಿದೆ. ಕಥಾ ನಾಯಕಿಯಾದ ಪನ್ನೆಯ ಜೀವನವು ಎಷ್ಟು ಪವಿತ್ರವಾದುದು, ಅವಳೆಷ್ಟು ಧೀರೆ, ಸಾಹಸಬುದ್ಧಿಯವಳು, ಅವಳ ಬಲಿದಾನ ಔದಾರ್ಯವೆಷ್ಟು ಮಹತ್ತರವಾದುದು ಎಂಬುದನ್ನು ಅವಳು ತನ್ನ ಹೆತ್ತ ಮಗುವನ್ನೇ ಬಲಿದಾನ ಕೊಟ್ಟ ವಿಚಾರ, ಮುಂದೆ ಅವಳು ಉದಯನ ಅಭ್ಯುದಯಕ್ಕಾಗಿ ಸಹಿಸಿದ ಸಂಕಷ್ಟಗಳು, ನಡೆಸಿದ ಸಾಹಸ ಕೃತ್ಯಗಳು—ಕೊನೆಯಲ್ಲಿ ಕೊಲೆಗಡುಕನಾದ ಬನವೀರನನ್ನು ಕ್ಷಮಿಸಲು ಮುಂದಾದ ವಿಚಾರಗಳಿಂದ ತಿಳಿಯಬಹುದಾಗಿದೆ.

ಈ ನಾಟಕವು ಅಷ್ಟು ವಿಸ್ತಾರವಾದುದಲ್ಲ. ಆದರೆ, ಇದರಲ್ಲಿರುವ ವಿಚಾರ ಧ್ಯೇಯಗಳು ಬಹು ವಿಶಾಲ ವ್ಯಾಪನೆಯವುಗಳು. 'ರಾಜ ಮುಕುಟ'ವೆಂಬ ಹಿಂದೀ ನಾಟಕವನ್ನೇ ಸರ್ವತ್ರ ಅನುಸರಿಸಿ ಬರೆದಿರುವ ಈ ನಾಟಕಕ್ಕೆ 'ಪನ್ನೆ'ಯೆಂಬ ಹೆಸರನ್ನು ಬೇರೆ ಕೊಡುವುದಕ್ಕಿಂತ ಮೂಲ ಹೆಸರನ್ನೇ ಇರಗೊಡಿಸಿದ್ದರೆ ಚೆನ್ನಾಗುತ್ತಿತ್ತು. ಅಂತೂ ಮಹಾಬಲ ಭಟ್ಟರ ಭಾಷಾಶೈಲಿ, ಮೂಲ ಲೇಖಕರ ಆಶಯವನ್ನು ಪರಿಪಾಲಿಸುವ ಚಾತುರ್ಯವು ಶ್ಲಾಘನೀಯವಿವೆ.

ಋತುಸಂಹಾರ—ತಾರಾವಿಹಾರ ಗ್ರಂಥಮಾಲೆಯ ಎರಡನೆಯ ಬಾಣ, ಲೇಖಕರು ಶ್ರೀರಂಗ ಇವರು. ಪ್ರಕಾಶಕರು ತುಂಗಭದ್ರೆಯ ತಾರಾ ವಿಹಾರ ಗ್ರಂಥಮಾಲೆಯ ಸಂಪಾದಕರು. ಬೆಲೆ ೦—೬—೦.

ಪ್ರೊ. ಜಾಗಿರದಾರರು (ಶ್ರೀರಂಗ) ಕಲಾಸಂಪನ್ನರೆನಿಸಿ, ವಿಪುಲ ಪ್ರತಿಭೆಯುಳ್ಳವರಿದ್ದು ಕನ್ನಡನಾಡಿನಲ್ಲಿ ಪ್ರಸಿದ್ಧರಾದವರು. ತಾರಾವಿಹಾರ ಗ್ರಂಥಮಾಲೆಯ ಎರಡನೆಯ ಬಾಣವು ಹರಟೆಯ ಬೆಳಕಿನಲ್ಲಿ ಅಸಾಧಾರಣ ವ್ಯಕ್ತಿತ್ವದ ನಾವೀನ್ಯತೆಯಿಂದ ವಿಚಾರ ಬೋಧೆಯನ್ನೀಯುವಂತಹದ್ದಿದೆ. ಸಾಮಾಜಿಕ ಕೊರತೆಗಳನ್ನು ವಿಡಂಬನಾತ್ಮಕವಾದ ವಿಮರ್ಶೆಯಿಂದ ಬಯಲಿಗೆಳೆದು ಮನಸ್ಸಿಗೆ ನಾಟುವಂತೆ ಚಿತ್ರವಿಚಿತ್ರವಾಗಿ ಚಿತ್ರಿಸುವುದರಲ್ಲಿ ಶ್ರೀರಂಗರು ಎಷ್ಟು ಚತುರರಿರುವರೆಂಬುದಕ್ಕೆ ಋತುಸಂಹಾರವು ಇನ್ನೊಂದು ಉತ್ತಮ ನಿದರ್ಶನವಿದೆ. ಇದರಲ್ಲಿ ಪ್ರಯೋಗಹೊಂದಿದ ಹಲವು ಬಳಕೆಯ ಶಬ್ದಗಳು ದಕ್ಷಿಣ ಭಾಗದ ಕನ್ನಡಿಗರ ಪಂಚಯಕ್ಕೆ ದೂರದವುಗಳಾಗಿರಬಹುದು. ಆದರೆ, ಹರಟೆಯ ಭಾಗದಲ್ಲಿ ಇಂಥಾ ಪ್ರಯೋಗಗಳು ಸ್ವಾಭಾವಿಕತೆಯ ನೆವದಿಂದ ಸಾಧುವೆಂದು ಮನ್ನಿಸತಕ್ಕದ್ದಿವೆ. ಶ್ರೀರಂಗರ ಕಲಾವಂತಿಕೆಯ ವಿನೋದಮಯ ಚಮತ್ಕಾರಿಕ ವಿಡಂಬನಾತ್ಮಕವಾದ ಈ ಕೃತಿಯು ಸರ್ವತ್ರ ಪ್ರಶಂಸೆಯನ್ನು ಗಳಿಸುವಂತಹ ಹಿರಿಮೆಯುಳ್ಳದ್ದೆಂಬುದು ನಿರ್ವಿವಾದ. ತಾರಾವಿಹಾರ ಗ್ರಂಥಮಾಲೆಯವರು ಇಂಥಾ ಬಾಣಗಳನ್ನು ಶ್ರೀರಂಗರಂಥಾ ಕನ್ನಡವೀರರ ಬತ್ತಳಿಕೆಯಿಂದ ಇನ್ನಷ್ಟು ಹೆಚ್ಚಾಗಿ ಹೊರಹೊರಡಿಸಿ, ಸಾಹಿತ್ಯಭೂಮಿಯನ್ನು ಬೆಳಗಿಸಲೆಂದು ಹಾರೈಸುವೆವು.

ಜನನಾಯಕ—ಮನೋಹರ ಗ್ರಂಥಮಾಲೆಯ ೩೪ನೆಯ ಕುಸುಮ, ಲೇಖಕರು: ಶ್ರೀ. ವಿ. ಕೆ. ಗೋಕಾಕ ಇವರು. ಪ್ರಕಾಶಕರು: ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ. ಬೆಲೆ ೦—೧೪—೦.

ಜನನಾಯಕವು ಕನ್ನಡನಾಡಿನಲ್ಲಿ ಪ್ರಸಿದ್ಧ ಸಾಹಿತಿಗಳಾದ ಶ್ರೀಮಾನ್ ವಿ. ಕೆ. ಗೋಕಾಕ, M. A. (Bombay) B. A. (oxon) ಇವರು ಬರೆದ ನಾಟಕವು. ಈ ಲೇಖಕರು ಇನ್ನೂ ತರುಣರು. ಪೂರ್ವಾತ್ಯ ಪಾಶ್ಚಿಮಾತ್ಯ ಸಂಸ್ಕೃತಿ ಸಾಹಿತ್ಯದಲ್ಲಿ ಪಳಗಿದವರು. ಕನ್ನಡಸಾಹಿತ್ಯದಲ್ಲಿ ತಮ್ಮ ಆಧುನಿಕ ಭಾವನೆಗಳ ಪ್ರಭಾವವನ್ನು ಬೀರಿ, ವಿಶಿಷ್ಟ ಸ್ಥಾನವನ್ನು ಹೊಂದಿದವರು. ಜನನಾಯಕವು ಇವರ ಅಮೂಲ್ಯ ಲೇಖನಿಯಿಂದ ಹೊರಬಿದ್ದ ಉತ್ಕೃಷ್ಟ ನಾಟಕ. ಇದು ಕಲ್ಪನಾ ಕಥೆಯೆಂದರೂ ಓದುಗರು ಸಮಾಜದ ಇಂದಿನ ನಿಜ ಚಿತ್ರದಂತಿದೆಯೆಂದು ಭಾವಿಸಬಹುದು. ಶ್ರೀ ಗೋಕಾಕರ ನುಡಿಯಲ್ಲಿ ಜಾಣ್ಮೆಯಿದೆ, ಭಾವನೆಯಲ್ಲಿ ಅಂತಃಕರಣವಿದೆ, ವಿಮರ್ಶೆಯಲ್ಲಿ ಲಾಲಿತ್ಯವಿದೆ, ಸೂಕ್ಷ್ಮದೃಷ್ಟಿಯು ವಿಶಾಲ ಜಗತ್ತಿನ ತಿಳುವಿನ ಭಾವವು ಇವರ ಭಾವನೆಯ ತರಂಗಗಳಿಂದ ಎದ್ದು ಮೂಡುತ್ತಿದೆ.

ಜನನಾಯಕವು ಇಂದಿನ ಆಳರಸರ, ಶ್ರೀಮಂತ ಬಡವರ ಧರ್ಮಾಧರ್ಮಗಳ ಸ್ವಾತಂತ್ರ್ಯ ಹೋರಾಟಗಳ ಕೈಗನ್ನಡಿ. ಮದಾಂಧನಾದ ಜಹಗೀರುದಾರನ ದಬ್ಬಾಳಿಕೆಯನ್ನು ಸತ್ಯಸ್ವಾತಂತ್ರ್ಯ ಪ್ರೇಮಿಗಳಾದ ಹಳ್ಳಿಯ ಮುಂದಾಳುಗಳು ಖಂಡಿಸುವ ಕಥಾವಸ್ತುವು ಮನಮುಟ್ಟುವಂತೆ ಆಕರ್ಷಿತವಾಗಿ ಚಿತ್ರಿತವಾಗಿದೆ. ಜಹಗೀರುದಾರನು ಹಣಮಂತ್ಯ ದೇಸಾಯಿಯೆಂಬವನು. ಅವನ ಕಿವಿಯೂದಿ, ಅವನನ್ನು ಅನ್ಯಾಯದ ಹಾದಿಯಲ್ಲಿ ಮುನ್ನಡೆಸುವವನು ಸದಾಶಿವನೆಂಬ ಅಲ್ಪ ನೀಚ ಕಾರಕೂನನು. ದೇಸಾಯಿಯ ನಿರಂಕುಶ ವರ್ತನೆಯಿಂದ ಜಹಗೀರದಲ್ಲಿ ದೊಡ್ಡ ಅನಾಹುತವಾಗುವುದು. ಜನರು ಗೋಳಾಡತೊಡಗುವರು. ರಾಮಣ್ಣ, ಭೀಮಣ್ಣ ನಾಯಕರಂಥಾ ಸದ್ಗುಣಿಗಳು, ತಮ್ಮ ಸಂಕಷ್ಟಗಳಿಗೆ ಲಕ್ಷ್ಯ ಕೊಡದೆ, ಜನತೆಯ ಹಿತದೃಷ್ಟಿಯಿಂದ ಜಹಗೀರುದಾರನ ವರ್ತನೆಯನ್ನು ಖಂಡಿಸುವರು. ಪ್ರಪಂಚದ ಜ್ಞಾನವಿಲ್ಲದ, ಕರ್ತವ್ಯ ಜೀವನ ವಿಚಾರವನ್ನರಿಯದ ಪಟ್ಟಣದ ಸೊಬಗಿನಲ್ಲೇ ಬೆಳೆದ ತರುಣ ವಿದ್ಯಾರ್ಥಿಯಾದ ಜಹಗೀರುದಾರನ ಮಗ ಚಿಕ್ಕ ಶ್ರೀಮಂತನು ಕೂಡಾ ತಂದೆಯ ವರ್ತನೆಯನ್ನು ಖಂಡಿಸಿ ಜಹಗೀರುದಾರನ ಕೋಪಕ್ಕೆ ಒಳಗಾಗಿ ಬಂಧಿತನಾಗುವನು. ಹೀಗೆ ಗೊಂದಲವೆದ್ದು, ಕಮೀಶನರ ಮುಂದೆ ನ್ಯಾಯ ವಿಚಾರಣೆ ನಡೆಯುವುದು. ಜಹಗೀರುದಾರನು ಸ್ಥಾನಭ್ರಷ್ಟನಾಗುವನು, ದುಷ್ಟನಾದ ಸದಾಶಿವನು ಸೆರೆಮನೆಯನ್ನು ಸೇರುವನು. ಆದರೆ ಪಹರೆಯವರಿಂದ ಉಪಾಯದಲ್ಲಿ ತಪ್ಪಿಸಿಕೊಂಡು ಬಂದು, ತನ್ನ ನಂಬುಗೆಯ ಸೇವಕನೊಡನೆ ಕಗ್ಗತ್ತಲೆಯಲ್ಲಿ ಮನೆಯ ದಾರಿ ಹಿಡಿಯುತಿದ್ದ, ಜನನಾಯಕ ಭೀಮಣ್ಣನನ್ನು ವಧಿಸಬಹುವನು. ಅಷ್ಟರಲ್ಲಿ ಅವನ ಪಾಪದ ಫಲವೇ ಮೂರ್ತಿಮತ್ತಾಗಿ ಬಂದಂತೆ, ಗಂಗಜ್ಜನೆಂಬವನು ತನ್ನ ಸೇಡನ್ನು ತೀರಿಸಲು ಹಿಂಬಾಲಿಸಿ ಬಂದಿದ್ದು, ಅವನನ್ನು ವಧಿಸುವನು.

ತ್ಯಾಗಿಯೂ ಮಾನವೀಯನಾದ ಭೀಮಣ್ಣ ನಾಯಕನ ಶೀಲ ಸದ್ಗುಣಾದಿ ಗುಣಗಳು, ಅವನ ಆದರ್ಶ ಸಂಸಾರ, ಇವೆಲ್ಲ ಬಹು ಹೃದಯಂಗಮವಾಗಿ ಚಿತ್ರಿತವಾಗಿದೆ. ಇಂಥಾ ತ್ಯಾಗಶೀಲನಾದ ಜನ ನಾಯಕ ಭೀಮಣ್ಣನು ಈ ರೀತಿ ಅಕಸ್ಮಾತ್ತಾಗಿ ವಿನಾಕಾರಣ ಮೃತ್ಯುಗೀಡಾಗಬೇಕಾದಿತ್ತು. ಈ ನಾಟಕವು ಈ ರೀತಿಯಾಗಿ ವಿಷಾದಾಂತವಾಗಿ ಮುಗಿಯಬೇಕೇ ಎಂದು ವಾಚಕರು ಸಹಜವಾಗಿ ಎಣಿಸಬಹುದು. ಆದರೆ ಈ ವಿಷಯ ಶ್ರೀ ಗೋಕಾಕರು ಬಹುಸಮರ್ಪಕವಾದ ಮತ್ತು ಆನ್ಯಾಯವೆಂದರೂ, ಪ್ರಕೃತಿಯಲ್ಲಿ ನಾವು ಕಾಣುತ್ತಿರುವ ಯಥಾರ್ಥತೆಯ ವಿಚಾರವಿದು ಎನ್ನುವಂತೆ ತಮ್ಮ ಅಮೋಘವಾದ ಸುದೀರ್ಘ ಪ್ರಸ್ತಾವನೆಯಲ್ಲೇ ಪ್ರಸ್ತಾಪಿಸಿ ಈ ಸಂದೇಹದ ಬಗೆ ಹರಿಸಿರುವರು. ಪ್ರಕೃತಿಯು ಭೀಮಣ್ಣನಂಥಾ ಸದ್ಗುಣ ಮಣಿಗಳನ್ನು ತನ್ನ ಕ್ರೂರ ಭಯಾನಕ ದವಡೆಯಲ್ಲಿ ಅಕಸ್ಮಿಕವಾಗಿ ನುಚ್ಚುನೂರು ಮಾಡುವುದು ಅನ್ಯಾಯ; ಆದರೆ, ಜನಜೀವನಕ್ಕೆ ಅಲಂಕಾರಪ್ರಾಯರಾದ, ಬಾಳುವೆಯಲ್ಲಿ ನೆರವಾಗುವ, ಇಂಥಾ ವಿಭೂತಿಪುರುಷರನ್ನು ಒಡಗಿಸಿಕೊಟ್ಟು, ಕರುಣೆ ತೋರಿಸುವುದಿಲ್ಲವೆ? ಅಲ್ಲದೆ ಯಾತನೆಗೀಡಾದ ಸದ್ಗುಣತ್ವವು ಹೆಚ್ಚು ಹೆಚ್ಚು ಶುದ್ಧವಾಗಿ ಜನರಿಗೆ ಇನ್ನಷ್ಟು ಎದ್ದು ಕಾಣುತ್ತದೆ. ಅವರಲ್ಲಿ ಇದ್ದ ಬಿದ್ದ ದೋಷಗಳು ಯಾತನೆಯ ಪುಟಕ್ಕೆ ಸಿಕ್ಕು ಮಾಯವಾಗಿ ಅವರ ಹೃದಯವು ಇನ್ನಷ್ಟು ನಿರ್ಮಲವಾಗುವುದು, ಎಂದು ಗೋಕಾಕರು ಸಮಾಧಾನ ಹೇಳಿರುವರು.

ಜನನಾಯಕವು ಜನಮನವನ್ನು ಮುಟ್ಟುವ ಹೊಸ ಹಾದಿಯನ್ನನುಸರಿಸಿ ಬರೆದಿರುವ ಉತ್ತಮ ಶ್ರೇಣಿಯ ಆಧುನಿಕ ನಾಟಕ. ಶೈಲಿಯು ಪದವಿಹಾರಿ ಗಂಭೀರವಾಗಿಯೂ ಇಲ್ಲ. ಸ್ವಾಭಾವಿಕತೆಯ ನೆಪದಿಂದ ಹದ ತಪ್ಪಿಯೂ ಹೋಗಿಲ್ಲ. ಎಲ್ಲಾ ಕಡೆಯ ಕನ್ನಡಿಗರೂ ಸುಲಭವಾಗಿ ಓದಿ ತಿಳಿಯಲು, ಆಡಿತೋರಿಸಲು ಅನುಕೂಲವಾಗಿಯೇ ಇದೆ. ಗೋಕಾಕರಂಥಾ ಕಲಾವಿದರು ಕನ್ನಡ ಸಾಹಿತ್ಯದಲ್ಲಿ ಮುಂದಾಗುವುದು ಕನ್ನಡಿಗರಿಗೊಂದು ಭೂಷಣ, ಇಂಥಾ ಲೇಖಕರಿಂದ ಇನ್ನಷ್ಟು ಉತ್ಕೃಷ್ಟ ಕಾರ್ಯವನ್ನು ಕನ್ನಡನಾಡು ನಿರೀಕ್ಷಿಸಬಹುದು. ಮನೋಹರ ಗ್ರಂಥಮಾಲೆಯವರು, ಸಮಾಜದ ರೀತಿನೀತಿಯನ್ನು ಸ್ವಾಭಾವಿಕತೆಯಿಂದ ಚಿತ್ರಿಸುವ ಕಲಾಸಿರಿಯ ಪ್ರೌಢಲೇಖಕರಿಂದ ಈ ಜನನಾಯಕವನ್ನು ಬರೆಸಿ, ಪ್ರಕಾಶಗೊಳಿಸಿ, ಜನತೆಯನ್ನು ಉಪಕೃತರನ್ನಾಗಿ ಮಾಡಿರುವರು. ಈ ಉತ್ತಮ ಧ್ಯೇಯದ ಗ್ರಂಥಮಾಲೆಯ ಹಿರಿಮೆಯು ಇದರಿಂದಾಗಿ ಇನ್ನಷ್ಟು ಹೆಚ್ಚಿದಂತಾಯಿತು. ಇವರ ಕಲಾಭಿಮಾನವನ್ನು ಅಭಿನಂದಿಸುವೆವು.

ಕರ್ಮಗೀತೆ—ಪ್ರಕಾಶಕ:—ಕೆ. ಸದಾನಂದ ಗಣಪತಿಭಟ್ಟ, ಉಡುಪಿ. ಕ್ರಯ ೦—೧—೦

ಜೀವನಿಗೆ ಕರ್ಮದ ಫಲವು ತಪ್ಪಿದುದಲ್ಲ. ಅನುಭವಿಸಿಯೇ ತೀರಬೇಕು ಎಂಬ ಅಭಿಪ್ರಾಯವನ್ನು ನಂಬುವ ಜನರಿಗೆ ಯಾವಾವ ಕರ್ಮಕ್ಕೆ ಯಾವ ಫಲದೊರೆಯಲಿವೆಯೆಂಬುದನ್ನು ಕರ್ಮಗೀತೆಯ ಆಧಾರದಿಂದ ಈ ಸಣ್ಣ ಪುಸ್ತಕದಲ್ಲಿ ಶ್ರೀ ಭಟ್ಟರು ವಿವರಿಸಲು ಪ್ರಯತ್ನಿಸಿದ್ದಾರೆ, ಧರ್ಮಾಧರ್ಮಗಳ ಮೆಟ್ಟುಗಳು ಈ ಪುಸ್ತಕಕ್ಕೆ ಮೆರೆಯಬಹುದು. ಎಸ್. ಶೆಟ್ಟಿ.

Transport & Car Owners

ARE SPECIALLY INVITED TO VISIT
OUR SHOW ROOM
for economical transport maintenance.
CANARA AUTOMOBILES — — — — — MANGALORE.

ಸ್ಥಾಪನೆ: ಕ್ರೌನ ರಬ್ಬರ್ ಸ್ಟಾಂಪ್ ಕಂಪೆನಿ 1926
18 ಬಲ್ಮಠ ರಸ್ತೆ, ಮಂಗಳೂರು.
ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್‌ಬೋರ್ಡು, ಪೇಡೆಗಳ ಬೀಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವುದು.

CROWN RUBBER STAMP CO.,
Balmat Road, MANGALORE.
Includ by the Mysore Govt. Stores, Purchase Committee in the list of approved firms

WANTED: 30 candidates of both sexes who after expert training as film artistes and technicians are prepared to work for the College Film Company for two years on decent salary. Free hostel seat and other benefits. Illustrated Art Prospectus on 5 aunas posatge. Prabhat Movietone College, Bombay 11

ನಿಮ್ಮ ವ್ಯಾಪಾರವು ವೃದ್ಧಿಯಾಗಬೇಕೆ?
ಹಾಗಿದ್ದರೆ—
ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ
ನವಯುಗದಲ್ಲಿ
ಜಾಹೀರಾತುಕೊಡಿರಿ.

ಪ್ರತಿನಿಧಿಯಿಂದ

ಹೈದರಾಬಾದು ಚಳವಳಿಕ್ಕೆ ಬೆಂಬಲ

ತಾ. ೨೪ರಲ್ಲಿ ಡಾ. ಸಾವರಕರರ ಅಧ್ಯಕ್ಷತೆಯಲ್ಲಿ ಬೊಂಬಾಯಿ ಯಲ್ಲೊಂದು ಸಾರ್ವಜನಿಕ ಸಭೆ ಸೇರಿತ್ತು. ಸತ್ಯಾಗ್ರಹಿಗಳನ್ನು ಕಳುಹಿಕೊಡುವ ಸಮಾರಂಭ ನಡೆಯಿತು. ನಿನ್ನೆ ಸಂಜೆ ಬಾಪಟರೂ ಠಾಕರರೂ ಬರ್ತರು ಹೈದರಾಬಾದು ಚಳವಳಿಗಾಗಿ ಬೊಂಬಾಯಿಯಿಂದ ಒಟ್ಟಿಗೆ 750 ಸತ್ಯಾಗ್ರಹಿಗಳು ಕಳುಹಲ್ಪಟ್ಟಿರುವರು

ಮೈಸೂರವರಿಗೆ ಸರ್ದಾರರ ಸೂಚನೆ

ಜವಾಬ್ದಾರಿ ಸರಕಾರದ ಅಭಿಪ್ರಾಯ ಕೇಳಲು ತನ್ನಲ್ಲಿಗೆ ಬಂದಿದ್ದ ಮೈಸೂರು ಕಾಂಗ್ರೆಸ್ ಪ್ರತಿನಿಧಿಗಳಿಗೆ ನಿಮ್ಮ ಇನ್ನೊಮ್ಮೆ ದಿವಾನರೊಡನೆ ಸಂಧಾನಕ್ಕಾಗಿ ಕೇಳಿ ನೋಡಬೇಕು. ನಿಮ್ಮ ಯೋಜನೆಯೆಂದು ಖಂಡಿತವಿದ್ದರೆ ನ್ಯಾಯಕ್ಕಾಗಿ ಅವರನ್ನು ಸಂಧಿಸಬೇಕು. ಜನತೆಯ ಕಾಲ ಮಹಾರಾಜರನ್ನು ಒಮ್ಮೆ ದಿವಾನರನ್ನು ಖಾಸಗಿಯಾಗಿ ಭೇಟಿಯಾಗುವ ಸಾಲ್ಲಿತ್ತು ಬಾರದು ಎಂದು ಸರದಾರ ಪಟೇಲರು ಉಪದೇಶಿಸಿರುವರು

ರಾಜೀನಾಮೆ.

ನೇಶನಲ್ ಪ್ಲೇನಿಂಗ್ ಕಮಿಟಿಯ ಕಾರ್ಯದರ್ಶಿಯವರಾದ ಶ್ರೀ ಎಚ್. ವಿ. ಕಾಮತರವರು, ತಮ್ಮ ಕಾರ್ಯದರ್ಶಿತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿರುವರು. ಇವರು ಎಡ ಪಕ್ಷೀಯರ ಜೊತೆಯಲ್ಲಿ ಕೆಲಸ ಮಾಡುತ್ತಿದ್ದು, ಫೋರ್ವರ್ಡ್ ಬ್ಲೋಕಿನಲ್ಲಿ ಹೆಚ್ಚಿನ ಉತ್ಸಾಹವನ್ನು ತೆಗೆದುಕೊಳ್ಳುತ್ತಿರುವುದನ್ನು ನೋಡಿ, ಈ ಕಮಿಟಿಯ ಅಧ್ಯಕ್ಷರಾದ ಜವಾಹರಲಾಲ ನೆಹರರವರೇನೋ ಪತ್ರ ಬರೆದು, ಹೀಗೆ ಪ್ಲ್ಯಾನಿಂಗ್ ಕಮಿಟಿಯೊಂದಿಗೆ ವಿರುದ್ಧವಾಗಿ ಕೆಲಸಮಾಡಬಾರದೆಂದು ಹೇಳಿದ್ದರಂತೆ. ರಾಜಕೀಯ ವಿಷಯಗಳಿಂದ ದೂರವಿರಲು ಸಾಧ್ಯವಿಲ್ಲದ ಕಾರಣ ಇವರು ರಾಜೀನಾಮೆ ಕೊಡಬೇಕಾಯಿತು

ಬೊಂಬಾಯಿಯ ಸಭಾ ಕಲಹ

ಅಖಿಲ ಭಾರತ ಸಂಸ್ಥಾನಿಕ ಪ್ರಜಾಪರಿಷತ್ತಿನ ಸ್ಟ್ಯಾಂಡಿಂಗ್ ಕಮಿಟಿಯ ಸಭೆಯು ಡಾ| ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ಹಲವು ಘಟನಾತ್ಮಕ ವಿಷಯಗಳನ್ನು ತೀರ್ಮಾನಿಸಿಕೊಂಡಿತು ಕಾಂಗ್ರೆಸ್ ಸಮತಾವಾದಿ ಪಕ್ಷದ ಕಾರ್ಯಕಾರೀ ಸಮಿತಿಯ ಸಭೆ ನಡೆದು ಮೆಂಬರರ ರಾಜೀನಾಮೆಗಳ ಪರ್ಯಾಲೋಚನೆಯಾಯಿತು.

ಸೋಲಾಪುರದ ಬಹಿಷ್ಕಾರ ರದ್ದಾಯಿತು

ಸೋಲಾಪುರದ ಆರ್ಯಸಮಾಜದವರು ಶಾಂತಿ ಕಾಪಾಡುವ ಭರವಸ ಕೊಟ್ಟದ್ದರಿಂದ ಹೈದರಾಬಾದು ಸಂಬಂಧ ಸಭೆಗಳಿಗೆ ಹಾಕಿದ್ದ ಬಹಿಷ್ಕಾರವನ್ನು ಬೊಂಬಾಯಿ ಸರಕಾರವು ರದ್ದುಪಡಿಸಿರುವದು.

ಬನ್ನುವಿನ ಗಲಭೆ

ಪೇಶಾವರದ ಸಮೀಪ ಗಲಭೆಯ ಸ್ಥಳವಾದ ಬನ್ನು ಎಂಬಲ್ಲಿ ಸಹಕಿ ನಡಸುತ್ತಿದ್ದ ಪೋಲೀಸ್ ದಳದ ಮೇಲೆ ಪುಂಡರ ತಂಡವೊಂದು ಬಿದ್ದು ಒಬ್ಬ ಪೋಲೀಸನನ್ನು ಕೊಂದುಬಲ್ಲದೆ ಮತ್ತೊಬ್ಬನನ್ನು ತೀವ್ರ ಜಖಂ ಗೊಳಿಸಿರುವದು.

ಫೋರ್ವರ್ಡ್ ಬ್ಲೋಕಿನ ಪರಿಷತ್ತು

ಬೊಂಬಾಯಿ

೨೧-೬-೧೯೩೯.

(ನಮ್ಮ ಸ್ವಂತ ಬಾತ್ಮೀದಾರರಿಂದ)

ಫೋರ್ವರ್ಡ್ ಬ್ಲೋಕಿನ ಪ್ರಥಮ ಪರಿಷತ್ತು.

'ಫೋರ್ವರ್ಡ್ ಬ್ಲೋಕ್'ನ ಜನ್ಮದಾತರಾದ 'ದೇಶಗೌರವ' ಸುಭಾಸಚಂದ್ರ ಭೋಸರವರು ಒ ಧವಾರ ದಿವಸ ಮುಂಜಾನೆ ಮುಂಬಯಿಯಲ್ಲಿ ಬಂದಿಳಿದರು. ಆಗ, ಮುಂಬಯಿಯ ಸಾರ್ವಜನಿಕರು ನೂತನ ಫಜನೆಗೆ ಎದೆಗುಂದದೆ, ಭೋಸರವರಿಗೆ ಅತ್ಯಂತ ಗಂಭೀರವಾದ ಸ್ವಾಗತವನ್ನಿತ್ತು ಸನ್ಮಾನಿಸಿದರು

ಗುರುವಾರ ದಿವಸ ಸಂಜೆ 6-30 ಗಂಟೆಗೆ ಸಿ ಜೆ ಹೋಲಿನಲ್ಲಿ ಫೋರ್ವರ್ಡ್ ಬ್ಲೋಕಿನ ಪ್ರಥಮ ಪರಿಷತ್ತು, ದೇಶಗೌರವ ಸುಭಾಸಚಂದ್ರ ಭೋಸರ ಅಧ್ಯಕ್ಷತೆಯಲ್ಲಿ ಜರಗಿತು ಪ್ರವೇಶ ದೊರೆಯದೆ ಸಾವಿರಾರು ಮಂದಿ ಹಿಂದಿರುಗಬೇಕಾಯಿತು ಉತ್ಸಾಹ ಪೂರಿತ ಸಾವಿರಾರು ಮಂದಿ ರಸ್ತೆಯಲ್ಲಿ ನಿಂತುಕೊಂಡು ಭಾಷಣವನ್ನು ಕೇಳುತ್ತಿದ್ದರು.

ಸರ್ವ ಸಂಸ್ಥಾನ ಮತ್ತು ಪ್ರಾಂತಗಳ ಪ್ರತಿನಿಧಿಗಳು ಬಂದು ನೆರೆದಿದ್ದರು. ಸಾಮ್ಯವಾದಿ, ಸಮತಾವಾದಿ, ರೊಯಿಸ್ಟ್ ಮೊದಲಾದವರೆಲ್ಲ ಇದರಲ್ಲಿ ಭಾಗವಹಿಸಿದ್ದರು ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಎಫ್ ನರಿಮನ್‌ರವರು ತಮ್ಮ ಸ್ವಾಗತ ಭಾಷಣದಲ್ಲಿ, ನೇಶನಲ್ ಕೋಂಗ್ರೆಸಿನ ಜನ್ಮಸ್ಥಾನವೇ ಈ ಬ್ಲೋಕಿನ ಜನ್ಮಸ್ಥಾನವಾಗಿರುತ್ತದೆ ಇದು ದೈವೇಚ್ಛೆ. ಈಗಿನ ಪ್ರಥಮ ಕರ್ತವ್ಯವೇನೆಂದರೆ ಎಲ್ಲ "ಎಡಪಕ್ಷ"ದವರನ್ನು ಒಂದಡೆಗೆ ಸೇರಿಸಿ, ಕೋಂಗ್ರೆಸಿನೊಳಗೆ ಹೊಕ್ಕು, ನಮ್ಮ ಸ್ವಾತಂತ್ರ್ಯಕ್ಕೆ ಅಡ್ಡ ಬರುತ್ತಿರುವ ಫೇಸಿಸಮನ್ನು ಹೊಡೆದೋಡಿಸಿ, "ಡೆಮೋಕ್ರೆಸಿ"ಯನ್ನು ಸ್ಥಾಪಿಸುವುದು. ಈ ಕಾರ್ಯವನ್ನು ಕೈಗೊಳ್ಳಲು ಸುಭಾಸರಲ್ಲದೆ ಬೇರೆ ಯಾರೂ ಇಲ್ಲ ಇಂದಿನ ಕೋಂಗ್ರೆಸಿನಲ್ಲಿ ಪಾರ್ಟಿ ಪೋಲಿಟಿಕ್ಸ್' ಬಲಗೊಂಡು ಕೋಂಗ್ರೆಸ್ಸಿನ ಭ್ರಷ್ಟತೆಗೆ ಕಾರಣವಾಗಿದೆ. ಇದನ್ನು ನಾಶಗೊಳಿಸುವುದಕ್ಕಾಗಿ ಎಲ್ಲ ಎಡಪಕ್ಷದವರನ್ನು ಜೊತೆಗೂಡಿಸುವುದು ನಮ್ಮ ಪ್ರಥಮ ಕರ್ತವ್ಯ

ಶ್ರೀ ಸುಭಾಸಚಂದ್ರ ಭೋಸರವರು ತಮ್ಮ ಅಮೋಘವಾದ ಭಾಷಣದ ಮಧ್ಯೆ ಹೀಗೆಂದರು—"ಮುಂಬಯಿಯ ಜನತೆಯಲ್ಲಿರುವ ಉತ್ಸಾಹವನ್ನು ಕಂಡು ನನ್ನ ಸಂತೋಷವು ಇಮ್ಮಡಿಸಿತು ನಿಮ್ಮ ಅಕ್ಷಿಗಳಿಂದ ಹೊರಹೊಮ್ಮುತ್ತಿರುವ ಆ ದಿವ್ಯ ತೇಜಸ್ಸು, ಈ ಕಾರ್ಯದಲ್ಲಿ ಮುಂದರಿಯುವಂತೆ ಪ್ರೋತ್ಸಾಹಿಸುತ್ತಿದೆ" ಫೋರ್ವರ್ಡ್ ಬ್ಲೋಕಿನ ಮೂರು ಮುಖ್ಯ ಧ್ಯೇಯಗಳನ್ನು ವಿವರಿಸಿದ ನಂತರ, ಇವರು ಗಾಂಧಿಜಿಯವರ "New Technique" ನ ಕುರಿತು ಮಾತಾಡಿ, ಇದರಲ್ಲೇನೂ ವಿಶೇಷತೆ ಕಂಡುಬಾರದೆ, ನಾವು ಹೆಜ್ಜೆಯನ್ನು ಮುಂದಿಡುವ ಬದಲಾಗಿ ಹಿಂದಿಕ್ಕುತ್ತಿರುವೆವೆಂದರು. ಚಾರಿತ್ರಿಕ ಕಾಲದಿಂದಲೂ, ಎಡಪಕ್ಷವೇ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿತ್ತೆಂದರು. ಫಡರೇಶನಿನ ಕುರಿತು ಮಾತಾಡಿದ ನಂತರ ನೇಶನಲ್ ಪ್ಲೇನಿಂಗ್ ಮತ್ತು ಕೈಗಾರಿಕೆಯ ಮಟ್ಟಿಗೆ, ಭಾರತವು ರಶ್ಯದ ಉದಾಹರಣೆಯನ್ನು ಅನುಕರಿಸಬೇಕೆಂದರು.

ತಿರುವಾಂಕೂರು ದಿವಾನರ ತಿರಸ್ಕಾರ

ಸಿಲೋನಿನಲ್ಲಿರುವ ಹಿಂದೀಯರ ಪರಿಸ್ಥಿತಿಯನ್ನು ಚರ್ಚಿಸುವರೆ ಸಭೆ ಮುಂದು ವರಿಸಬೇಕೆಂದು ಬಂದ ಸೂಚನೆಯನ್ನು ತಿರುವಾಂಕೂರು ಎಸೆಂಬ್ಲಿಯಲ್ಲಿ ದಿವಾನರು ನಿಯಮವಿರುದ್ಧವೆಂದು ತೆಗೆದುಹಾಕಿದರು

ಸಿಲೋನ್ ಒಪ್ಪಂದದ ಕುರಿತು ಹಿಂದೀ ಸರಕಾರದ ಘೋಷಣೆ

ಸಿಲೋನ್ ಮತ್ತು ಹಿಂದ ಸ್ಥಾನಗಳಿಗೆ ವ್ಯಾಪಾರ ಒಪ್ಪಂದವಾಗುವ ಸೂಚನೆಗಳು ಮುಂದೆಬಂದಿವೆ ಈ ಸಂದರ್ಭದಲ್ಲಿ ಭಾರತ ಸರಕಾರವು ಸಿಲೋನಿನಲ್ಲಿರುವ ಹಿಂದೀಯರ ಸಂಕಷ್ಟನಿವಾರಣೆಯ ಶರ್ತಗಳನ್ನು ಮುಂದಿಡುವದೆಂದೂ, ಆ ಕುರಿತು ನಿಶ್ಚಲ ಘೋಷಣೆಮಹಿಸಿರುವದೆಂದೂ ತಿಳಿದುಬರುತ್ತದೆ

30,000 ರೂಪಾಯಿ

ಸರಿಯಾದ 15 ಉತ್ತರಗಳಿಗೆ ಇನಾಮಾಗಿ ಹಂಚಲಾಗುವುದು.



25 ರೂಪಾಯಿಗಳ ಐವತ್ತು ಬಹುಮಾನಗಳು ಕಾದಿಡಲ್ಪಟ್ಟಿವೆ (ಯಾವುದಾದರೊಂದು ಸಾಲಿನ ಸಂಖ್ಯೆಗಳು ಮೋಹರುಮಾಡಿಟ್ಟದಕ್ಕೆ ಸರಿಯಾದರೆ) ಹೆಚ್ಚಿನ ಉತ್ತರಗಳನ್ನು ಕಳುಹಿಸುವವರಿಗೆ ರೂ 300 ಮತ್ತು 150 ಪ್ರಥಮ ಮತ್ತು ದ್ವಿತೀಯ ಇನಾಮಾಗಿ ಕಾದಿಡಲ್ಪಟ್ಟದೆ

ಈ ಚೌಕದಲ್ಲಿಯ ಸಾಲುಗಳನ್ನು ಅಡ್ಡಕ್ಕೂ ನೀಟಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸಿದರೆ ಜುಮಲಾ 42 ಬರುವಂತೆ 3ರಿಂದ 18ರ ವರಗಿನ ಸಂಖ್ಯೆಗಳನ್ನು ಸೇರಿಸತಕ್ಕದ್ದು. ಯಾವ ಸಂಖ್ಯೆಯನ್ನೂ ಒಂದು ಬಾರಿಗಿಂತ ಹೆಚ್ಚಾಗಿ ಉಪಯೋಗಿಸಕೂಡದು.

ಕಳುಹಿಸುವ ಕೊನೆಯ ದಿನ 10-7-'39 ಪಲಿತಾಂಶ ಪ್ರಕಟಣೆಯ ದಿನ 17-7-'39

ಪ್ರವೇಶಧನ—ಒಂದು ಉತ್ತರಕ್ಕೆ ರೂ. 1/- ಮೂರಕ್ಕೆ ರೂ. 2/- 8 ಉತ್ತರಗಳ ಪ್ರತಿಯೊಂದು ಸೆಟ್ಟಿಗೂ ರೂ 6/ ರಂತೆ.

ಶರ್ತಗಳು: —ಮೇಲೆ ಕಾಣಿಸಿದ ದರದ ಮೇರೆಗೆ ಯುಕ್ತ ಮೌಲ್ಯದೊಂದಿಗೆ ಸಾಮಾನ್ಯ ಕಾಗದದಲ್ಲಿ ಸ್ಪಷ್ಟವಾಗಿ ಬರೆದು ಬೇಕಾದಷ್ಟು ಉತ್ತರಗಳನ್ನು ಕಳುಹಿಸಿದರೂ ಸ್ವೀಕಾರವಿದೆ. ಹಣವನ್ನು ಮಣಿಯಾರ್ಡರು ಇಲ್ಲವ ಪೋಸ್ಟಲ್ ಆರ್ಡರು ದ್ವಾರಾ ರವಾನಿಸತಕ್ಕದ್ದು.

ಮುಂಬಾಯಿಯ ಪ್ರಸಿದ್ಧವಾದ ಬೇಂಕೊಂದರಲ್ಲಿ ಭದ್ರವಾಗಿರಿಸಿದ ಉತ್ತರಕ್ಕೆ ಸರಿಹೋಲುವ ಉತ್ತರವು ಸರಿಯಾದ ಉತ್ತರವೆಂದು ಪರಿಗಣಿಸಲ್ಪಡುವುದು ಬಹುಮಾನವು ಶೇಖರಿಸಲ್ಪಡುವ ಸೊಬಲಗಿಗನುಸಾರವಾಗಿ ವ್ಯತ್ಯಾಸ ಹೊಂದುವುದು ಹಾಗೂ ರೂ 2000 ಇನಾಮಿಗೆ ಗ್ಯಾರಂಟಿಯಿದೆ. ಪಲಿತಾಂಶ ತಿಳಿಯುವುದಕ್ಕಾಗಿ ಕಳುಹಿಸುವ ಉತ್ತರದೊಂದಿಗೆ ವಿಳಾಸ ಸಹಿತವಾದ ಕವರನ್ನು ಸ್ಟಾಂಪು ಸಹಿತ ರಿಜಿಸ್ಟರಿಸತಕ್ಕದ್ದು ವ್ಯವಸ್ಥಾಪಕರ ತೀರ್ಮಾನವೇ ಅಖೈರಿ ತೀರ್ಮಾನವಿದ್ದು ಎಲ್ಲದಕ್ಕೂ ಲಗಾವಾಗತಕ್ಕದ್ದಿದೆ

ಜುಮಲಾ 38 ಬರುವ ಕಳೆದ ಬಾರಿಯ ಒಗಟಿನ ಉತ್ತರ ಈ ತೆರನಾಗಿದೆ —

1ನೇ ಸಾಲು	16,	4,	7,	11
2ನೇ ಸಾಲು	15,	3,	8,	12
3ನೇ ಸಾಲು	2,	14,	13,	9
4ನೇ ಸಾಲು	5,	17,	10,	6

ನಿಮ್ಮ ಉತ್ತರ ಮತ್ತು ಹಣವನ್ನು ಈ ಕೆಳಗಣ ವಿಳಾಸಕ್ಕೆ ಕಳುಹಿಸಿರಿ

ದಿ ಮೆನೇಜರ,

ಪ್ರೆಸಿಡೆನ್ಸಿ ಕಮರ್ಶಿಯಲ್ ಸಿಂಡಿಕೇಟ್

ಮುಂಬಾದೇವಿ, ಬೊಂಬಾಯಿ, 2

The Manager

Presidency Commercial Syndicate

Mumbadevi BOMBAY 2

TENDER NOTICE

Tenders of rates to reach the Sub Assistant Director before 15-6-1939 are invited for transporting salt bags and stocking them in the fish-curing yards and salt gollahs on the West Coast from vessels or railway waggons and for sundry other works Details and terms of contract can be obtained from the Sub Assistant Director of Fisheries (West Coast), Calicut

Calicut }
14 6 39 }

M Jayaram Naidu
Sub Assistant Director of Fisheries West Coast

No. Staff ! New Melkab!!

The City School of Commerce Udipi.

New batches of students will be admitted from 1st June 1939

EXPERT TUITION INDIVIDUAL ATTENTION

By

Qualified Experienced and able tutors

For further particulars Enquire at

City School of Commerce,
Santhekatte, Udipi.

ಜಗತ್ತಿನ ಆಶ್ಚರ್ಯಜನಕ ಸ್ತ್ರೀ

ಕುರುಡಿ, ಮೂಗಿಯಾದರೂ ಅಸಾಮಾನ್ಯೆ!

ಹೆಲೆನ್ ಕೆಲರ್‌ಳ ಮನೋರಂಜಕ ಜೀವನ ಘಟನೆ!

ನಮಗೆ ಈಕೆಯ ಜೀವನದ ಘಟನೆಗಳ ಪರಿಚಯವಾದರೆ ಲೋಕದಲ್ಲಿ ಎಂತೆಂತಹ ಆಶ್ಚರ್ಯಜನಕ ವಸ್ತುಗಳಿವೆಯೆಂಬುದು ಗೊತ್ತಾಗುವುದು. ಈಕೆಯು ಹುಟ್ಟಿದ ಒಂದು ವರುಷದೊಳಗಾಗಿಯೇ ಯಾವುದೋ ಒಂದು ರೋಗದ ಪರಿಣಾಮವಾಗಿ ಕಣ್ಣು, ಕಿವಿಗಳ ಶಕ್ತಿಯು ನಷ್ಟವಾಯಿತು. ಇಂತಹ ಕಷ್ಟಸ್ಥಿತಿಯಲ್ಲಿ ಆಕೆಯ ಅಲೌಕಿಕ ಬುದ್ಧಿಶಕ್ತಿಯು ಅವಳಿಗೆ ಆನಂದವನ್ನುಂಟುಮಾಡಿತು. ಈಕೆಯು ರಾಜ ರಾಣಿಯರೊಡನೆ ಸಹ ಮಾತನಾಡಿದ್ದಾಳೆ.

ಏನೇ ಸುಲೀವನ್ ಎಂಬ ಐರಿಷ್ ಮಹಿಳೆಯ ಸತತ ಪ್ರಯತ್ನದ ಪರಿಣಾಮದಿಂದಲೇ ಈ ರೀತಿ ಆದುದು. ಈ ಕೆಲಸವೇನು ಸಾಮಾನ್ಯವಾದುದಲ್ಲ. 10ನೇ ವಯಸ್ಸಿನಲ್ಲೇ ಅವಳು ಜೀವವಿಜ್ಞಾನ, ಭೂಗೋಳ, ಗಣಿತ ಆದಿಗಳನ್ನು ಕಲಿತಳು. ಹೊಸತೊಂದು ಜಗತ್ತನ್ನೇ ಕಾಣಲಾರಂಭಿಸಿದಳು. ಸ್ವಲ್ಪ ಕಾಲದಲ್ಲಿಯೇ ಅವಳು ಬ್ರೈಲೆಯ ಪುಸ್ತಕಗಳನ್ನೂ ಓದಲಾರಂಭಿಸಿದಳು.

ಗ್ರಂಥಗಳ ಅನುವಾದ

ನಂತರ ಹೆಲೆನಳು ಭಾಷೆಗಳ ಜ್ಞಾನಪ್ರಾಪ್ತಿಯನ್ನುಂಟುಮಾಡಿಕೊಳ್ಳಲಾರಂಭಿಸಿದಳು. "ಓಡ್ಸ್ ಆಫ್ ಪ್ಯಾರಿಷ್" ಎಂಬ ಪುಸ್ತಕದ ಅನುವಾದ ಮಾಡಿದಳು. ವಿಶ್ವವಿದ್ಯಾನಿಲಯವನ್ನು ಪ್ರವೇಶಿಸಿದಾಗ ಈಕೆಗೆ ಏನೇ ಸುಲೀವನಳ ಸಹಾಯವು ದೊರೆಯಿತು. ಇತರ ವಿದ್ಯಾರ್ಥಿಗಳಂತೆ ಈಕೆಯು ನೋಟ್ಸ್‌ಗಳನ್ನು ಬರೆದುಕೊಳ್ಳುತ್ತಿರಲಿಲ್ಲ. ಗ್ರ್ಯಾಜುಯೇಟ್ ಪರೀಕ್ಷೆಗೆ ಕುಳಿತಾಗ ಪ್ರಶ್ನೆಗಳ ಉತ್ತರಗಳನ್ನು ಉತ್ತಮ ರೀತಿಯಲ್ಲಿ ಟೈಪ್ ಮಾಡಿದ್ದಳು. ಅವುಗಳು ಈಗಲೂ ವಿಶ್ವವಿದ್ಯಾಲಯದ ಪ್ರದರ್ಶನಾಲಯದಲ್ಲಿವೆ.

ಹೆಲೆನಳು ಏನೇಯನ್ನು ಪ್ರೀತಿಸುತ್ತಿದ್ದಷ್ಟನ್ನು ಇತರ ಯಾವ ವಿದ್ಯಾರ್ಥಿಯೂ ಪ್ರೀತಿಸುತ್ತಿರಲಿಲ್ಲ. ಇವರಿಬ್ಬರ ಮಿತ್ರತ್ವವು ಒಡೆದುದು ಏನೇಳು 1936ರಲ್ಲಿ ಮರಣಹೊಂದಿದಾಗಲೇ. ಕುಮಾರಿ ಟಾಮ್ಸನ್ ಎಂಬ ಮತ್ತೊಬ್ಬ ಮಿತ್ರಳಿದ್ದಳು ಇವಳಿಗೆ. ಆಕೆಯು ಇವಳನ್ನು ಇಂಗ್ಲಂಡಿಗೆ ಕರೆದುಕೊಂಡುಹೋದಳು. ಆಕೆಯ ಪ್ರಯತ್ನದಿಂದಲೇ "ಹೆಲೆನ್ ಕೆಲರ್ ಜನರಲ್" ಎಂಬ ಪತ್ರದ ಜನ್ಮವಾದುದು.

ಬೆರಳಿನಿಂದ ಮಾತುಕತೆ!

ಹೆಲೆನಳಿಗೆ ಸಂಚಾಲನೆಯು ಶಬ್ದಕ್ಕೆ ಸಮಾನವಾಗಿದೆ. ವಕ್ತೃವಿನ ಮೂಗು, ಮುಖ, ಕಂಠಗಳ ಮೇಲೆ ಕೈ ಇಟ್ಟು ಮಾತನಾಡುವಳು. ಅವಳ ಸ್ಪರ್ಶನಾಶಕ್ತಿಯಂತೂ ಅದ್ಭುತವಾದುದು. ಅದರಿಂದಲೇ ಭಾವನೆ ಮತ್ತು ಚರಿತ್ರೆಯನ್ನೂ ಸಹ ತೋರಿಸಬಲ್ಲಳು. ಸಾಮ್ರಾಜ್ಞಿಯು ಇವಳನ್ನು ಮುಟ್ಟಿದಾಗ ಈಕೆಯು ಹೇಳಿದುದು ಆಶ್ಚರ್ಯಜನಕವಾಗಿದೆ. "ನನ್ನ ಮುಟ್ಟಿದ ಕೈಯು ತಾಯಿಯ ಕೈಯಂತಿತ್ತು. ಈಕೆಯು ಕಿವಿಗಳಲ್ಲಿ ದೀನ ದುಃಖಿಗಳು ತಮ್ಮ ಕಷ್ಟಗಳನ್ನು ಹೇಳಿಕೊಳ್ಳಬಲ್ಲರು."

ಜೀವನದ ಆನಂದ

ಆಕೆಯಲ್ಲಿನ ಇನ್ನೊಂದು ವಿಶೇಷವೇನೆಂದರೆ, ಜೀವನದ ಆನಂದವನ್ನು ಸವಿಯುವುದು. ನೀರಿನಲ್ಲಾಗಲಿ, ಕುದುರೆಯ ಮೇಲಾಗಲಿ ಅವಳಿಗೆ ಬಹಳ ಆನಂದ. ಗಾಳಿಯಲ್ಲಿ ತಿರುಗುವುದರಲ್ಲಿ ಬಹಳ ಆಸೆ. ಪೋಲಿಟಾಮ್ಸನ್‌ರೊಡನೆ ಈಕೆಯು ಸಿನೇಮಾಕ್ಕೆ ಸಹ ಹೋಗುವುದುಂಟು. ಪಶುಗಳಲ್ಲಿ ವಿಶೇಷ ಮಮತೆ. ಅವಳ ಮನೆಯಲ್ಲಿ ಅನೇಕ ಪ್ರಾಣಿಗಳಿವೆ.

ಆಕೆಯ ಬುದ್ಧಿಯು ಬಹಳ ಪರಿಶುದ್ಧವಾದುದು. ಆಕೆಯ ವಿಚಾರಗಳೂ ನಿರ್ಣಯಗಳೂ ಸ್ಪಷ್ಟವಾಗಿರುತ್ತವೆ. "ನಾನೆಂದೂ ಮನಸ್ಸಿನಲ್ಲಿ ಬೇಜಾರನ್ನು ಕಂಡವಳೇ ಅಲ್ಲ. ನನ್ನ ಹೃದಯದಲ್ಲಿರುವ ಮನೋವೃತ್ತಿಯು ದೀರ್ಘವಾಗಿ ವಿಚಾರಿಸುವುದು ನಂತರ ನಿರ್ಣಯಿಸುವುದು" ಎನ್ನುವಳು. ನಾನು ಕಿಟಕಿಯಿಂದ ಹೊರಗೆ ನೋಡಿ ಜನರೊಡನೆ ಮಾತನಾಡಲಾರೆ. ಆದರೆ ಅನುಭವಕ್ಕಾಗಿ ನನ್ನ ಸಾಮರ್ಥ್ಯದಲ್ಲಿ ಸಾಕಷ್ಟು ಶಕ್ತಿ ಇದೆ. ಕೈಗಳ ಚಲನೆ ಕಾಲಿನ ಧ್ವನಿ ಮತ್ತು ಪ್ರೀತಿ ಆನಂದವನ್ನೂ ಸಹ ಅನುಭವಿಸುವೆನು. ಇವೆಲ್ಲವೂ ನನ್ನ ತಲೆಯಲ್ಲಿ ಜಾಗಮಾಡಿಕೊಂಡಿವೆ" ಎನ್ನುವಳು.

ಏನೇ ಸುಲೀವನ್ ಸಹ ಕುರುಡಿಯಾಗಬೇಕಿತ್ತು. ಸುದೈವದಿಂದ ಉಳಿದುದರಿಂದ ತನ್ನ ಕೃತಜ್ಞತೆಯನ್ನು ಪ್ರಕಟಗೊಳಿಸುವ ಉದ್ದೇಶದಿಂದ ಹೆಲೆನಳೊಡನೆ ಜೀವಿಸಬೇಕೆಂದು ನಿಶ್ಚಯಮಾಡಿದಳು.

ಕುರುಡುಮಕ್ಕಳಿಗಾಗಿ

ಹೆಲೆನಳು 3 ವರ್ಷಗಳ ಕಾಲ ಅಮೇರಿಕದಲ್ಲಿ ಸಂಚರಿಸುತ್ತಿದ್ದಳು. ಹೋದಲ್ಲೆಲ್ಲಾ ಕುರುಡುಮಕ್ಕಳ ವಿಚಾರದಲ್ಲಿ ಭಾಷಣಮಾಡುತ್ತಿದ್ದಳು. ಕುರುಡರ ಸಂಸ್ಥೆಗಾಗಿ 3½ ಲಕ್ಷ ಪೌಂಡುಗಳ ದ್ರವ್ಯಸಂಗ್ರಹ ಮಾಡಬೇಕಾಗಿರುವುದರಿಂದ ಅವಳಿಗೆ ಬಿಡುವೇ ಇಲ್ಲದಂತಾಗಿದೆ.

ಇವಳು ತನ್ನ ಜೀವನದ ಒಂದು ಫಿಲ್ಮನ್ನು ಸಹ ತಯಾರುಮಾಡಿಸಿರುವಳು. ಆ ಚಿತ್ರವನ್ನು ತಯಾರಿಸುವ ಸಮಯದಲ್ಲಿ ಡೈರೆಕ್ಟರರ ಸೂಚನೆಗಳನ್ನು ಅವಳು ಹೇಗೆ ತಿಳಿದಳು ಎಂದು ಕೇಳಿದ್ದಕ್ಕೆ "ಜಾರ್ಜ್ ಫಾಸ್ಟರ್ ಪ್ಲೇಟ್‌ನು ನನಗಾಗಿ ಖಟಖಟ ಶಬ್ದದ ಸಿಗ್ನಲ್ ಮಾಡಿಕೊಂಡಿದ್ದನು" ಎಂದಳು.

ಚಾರ್ಲಿಯ ಪ್ರಭಾವ

ಇತರ ಸ್ತ್ರೀಯರಂತೆ ಹೆಲೆನಳೂ ಸಹ ಚಾರ್ಲಿಚಾಪ್ಲೆನ್ನನ ಪ್ರತಿಭೆಗೆ ಸೋತಳು. ಇವರಿಬ್ಬರೂ ಕ್ಯಾಲಿಫೋರ್ನಿಯದಲ್ಲಿ ಭೇಟಿಯಾದರು. ಅವನ ಮಿತ್ರ ಕೆರೋಸೋ ಈ ರೀತಿ ಹೇಳಿದನು. "ಈಕೆಯು ನನ್ನ ಬೆರಳುಗಳನ್ನು ತನ್ನ ತುಟಿಗಳ ಮೇಲಿಟ್ಟು ತನ್ನ ಶಬ್ದಗಳನ್ನು ತಿಳಿಸಿದಳು." ಶೀಲಿಯಾ ಪಿನ್ನನು ಆಕೆಯ ಪಕ್ಕಗಳಲ್ಲಿದ್ದುದನ್ನು ಆಕೆಯು ಕೇಳಿ ಸ್ಫೂರ್ತಿಯುತಳಾದಳು.

ಆಕಾಶದ ತಾರೆಗಳಂತೆ ಈ ಆಶ್ಚರ್ಯಜನಕ ಸ್ತ್ರೀಯ ವ್ಯಕ್ತಿತ್ವವು ಉಜ್ವಲವಾಗಿದೆ. ಅದರಲ್ಲಿ ಗಾಢವಾದ ದರ್ಶನಶಾಸ್ತ್ರವಿದೆ. ಯಾವ ಇಂದ್ರಿಯಗಳಿಂದ ಜೀವನವು ಸುಖಮಯವಾಗುವುದೋ, ಆ ಇಂದ್ರಿಯಗಳಿಲ್ಲದಿದ್ದರೂ ಆಕೆಯು ಸತ್ಯದ ಅನುಭವವನ್ನು ಗ್ರಹಿಸಿರುವಳು. ನಮಗೆ ಆ ಇಂದ್ರಿಯಗಳಿದ್ದು ಸಹ ಅದರ ಅನುಭವವಿಲ್ಲದಂತಾಗಿದೆ!

"ಪ್ರೇಮವೆಂದರೇನು" ಎಂಬ ಪ್ರಶ್ನೆಗೆ "ಅಯ್ಯೋ, ಪ್ರತಿ ಮನುಷ್ಯನು ಇನ್ನೊಬ್ಬನ ವಿಚಾರದಲ್ಲಿ ಹೊಂದುವ ಅನುಭವವೇ" ಎಂದುತ್ತರಕೊಟ್ಟಳಂತೆ!

ಪುತ್ತೂರಿಗೆ—ಶಿವಪುರ ಸಂಕದ ಕೆಲಸವು ಕೊನೆಗೊಳ್ಳುತ್ತ ಬಂತು. ಇನು ಸಮ್ಮವೇ ಜನ ಸಂಚಾರಕ್ಕೆ ತೆರೆಯಲ್ಪಡುವುದು. ಈ ಸಂಕವನ್ನು ಜಿಲ್ಲಾ ಬೋರ್ಡಿನವರು ಕಟ್ಟಿಸಿದ್ದು ಸ್ತುತ್ಯಾರ್ಹವಾಗಿದೆ. ಆದರೆ ಮೈಸೂರು ಮತ್ತು ನಮ್ಮ ಜಿಲ್ಲೆಯ ವ್ಯಾಪಾರಾದಿ ವ್ಯವಹಾರವು ಇನ್ನಷ್ಟು ಬೆಳೆಯಬೇಕಾದರೆ ಸುಗಮವಾಗಬೇಕಾದರೆ ಪುತ್ತೂರಿಗೆ ಹೊಳೆಗೂ ಸಂಕ ಅತ್ಯಾವಶ್ಯಕವಾಗಿದೆ. ಈ ಕುರಿತು ಸಂಬಂಧಪಟ್ಟವರು ಆದಷ್ಟು ಬೇಗನೇ ಲಕ್ಷ್ಯ ಹರಿಸುವರೇ ಎಂತ ಬಾಕಿ.

Notification under rule 48(1) of the Madras traffic rules.

It is hereby notified that on account of the repairs, the bridges in miles 6/6 and 10/7 of Road No. 11 are closed for all kinds of traffic until further notice.

K. Vittal Shetty,
President,
District Board, South Kanara,

Mangalore, 19th June 1939.

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906
CANARA BANK
LIMITED

ದಕ್ಷಿಣ ಕನ್ನಡ

ಬಾರಕೂರು—ದಕ್ಷಿಣ ಕನ್ನಡ ಜಿಲ್ಲಾ ಕೋಂಗ್ರೆಸ್ ಕಮಿಟಿಯ ಬಾರಕೂರು ಸರ್ಕಲಿನ ಚುನಾವಣೆಯು ತಾ. 25-6-39ರಲ್ಲು ಬಾರಕೂರಿನಲ್ಲಿ ಜರಗಿತು. ಶ್ರೀ. ಬಿ. ಗೋಪಾಲಕೃಷ್ಣ ಕಾಮತ್‌ರು ಮತ್ತು ಶ್ರೀ. ಬಿ. ಗೋಪಾಲರಾಯರು ಇವರಿಬ್ಬರು ಉಮೇದ್ವಾರರಾಗಿದ್ದರು.

ತಾ. 27-6-39ರಲ್ಲು ಉಡುಪಿ ತಾಲೂಕು ಕೋಂಗ್ರೆಸ್ ಕಮಿಟಿ ಆಫೀಸಿನಲ್ಲಿ ಮತಗಣನೆಯಾಗಿ ಶ್ರೀ. ಬಿ. ಗೋಪಾಲಕೃಷ್ಣ ಕಮ್ತಿಯವರಿಗೆ 125 ಓಟುಗಳೂ ಶ್ರೀ ಬಿ. ಗೋಪಾಲರಾವ್ ಇವರಿಗೆ 1 ಓಟೂ ಸಿಕ್ಕಿ ಶ್ರೀ ಬಿ. ಗೋಪಾಲಕೃಷ್ಣ ಕಮ್ತಿಯವರು 124 ಓಟುಗಳಿಗೆ ಜಯಶೀಲರಾಗಿರುತ್ತಾರೆ.

ಶ್ರೀ. ಬಿ. ಗೋಪಾಲರಾಯರು ಹಾಲಾಡಿಯಲ್ಲಿ ಪೋಲಿಂಗ್‌ಸ್ಟೇಶನ್ ಕೊಡಲಿಲ್ಲವೆಂಬ ಕಾರಣದಿಂದ ತನ್ನ ಉಮೇದ್ವಾರಿಕೆಯನ್ನು ಹಿಂತೆಗೆದಿರುವುದಾಗಿ ಒಂದು ಪ್ರಕಟಣೆ ಹೊರಡಿಸಿದ್ದಾರೆ. (ಸ್ಥಳಾಭಾವದಿಂದ ಅದನ್ನು ಪ್ರಕಟಿಸಲಾಗಲಿಲ್ಲ)

ಬೈಂದೂರು:—ಸ್ಥಳೀಕ ಮಾಧ್ಯಮಿಕ ಶಾಲೆಯ ಮಕ್ಕಳ ಸಂಖ್ಯೆಯು ದಿನೇ ದಿನೇ ಅಭಿವೃದ್ಧಿಯಾಗುತ್ತಿದ್ದು 4ನೇ ತರಗತಿಯನ್ನು ಇಭಾಗಮಾಡುವ ಸಂದರ್ಭ ಬಂದಿದೆ.

ಇಲ್ಲಿಗೆ ವರ್ಗಾಯಿಸಲ್ಪಟ್ಟ ಪೋಲೀಸ್ ಸಬ್ ಇನ್ಸ್‌ಪೆಕ್ಟರವರಾದ ಶ್ರೀ. ಕೆ. ಅಂತಪ್ಪ B.A. B.L. ರವರು ಕಳೆದ ವಾರ ತಮ್ಮ ಹುದ್ದೆಯ ಚಾರ್ಜನ್ನು ವಹಿಸಿಕೊಂಡಿರುವರು.

ಸ್ಥಳೀಕ ಮಾಧ್ಯಮಿಕ ಶಾಲಾ ಕಮಿಟಿಗೆ ಈ ಕೆಳಗಿನ ಮಹಾಶಯರುಗಳು ಜಿಲ್ಲಾ ಬೋರ್ಡು ಅಧ್ಯಕ್ಷರವರಿಂದ ಪುನಃ ಗೌರವ ಸದಸ್ಯರುಗಳಾಗಿ ನೇಮಿಸಲ್ಪಟ್ಟಿದ್ದಾರೆ. ಶ್ರೀಗಳಾದ 1. ಬಿ. ಸುಬ್ಬಣ್ಣ ಶೆಟ್ರು, 2. ಎನ್. ರೆ. ಸೂರ್ಯಣ್ಣ ಶೆಟ್ರು, 3. Rev. ಜಾಲ್. ಪಿ. ಎ. ಸೋಜರು, 4. ಡಾಕ್ಟರ್ ಕೆ. ಕೆ. ರೈಗಳು, 5. ಕೃಷ್ಣಭಕ್ತರು ಮತ್ತು 6. ಮೈ. ಮೊಯಿದೀನ್ ಸಾಹೇಬರು.

ತಾ. 11-6-39ರಲ್ಲು ಬೈಂದೂರು ಕೆಥೋಲಿಕ್ ಚರ್ಚಿನ ಮುಂಭಾಗದಲ್ಲಿ ಒಂದು ಸಾರ್ವಜನಿಕ ಸಭೆಯು ಶ್ರೀ. ಬಿ. ಸುಬ್ಬಣ್ಣ ಸೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಶೆಟ್ರು ಕೋಂಗ್ರೆಸ್ ಸರಕಾರದಿಂದ ಜನರಿಗುಂಟಾದ ಪ್ರಯೋಜನಗಳ ಕುರಿತು ಸಾಧಾರಣ 1 ಗಂಟೆಯ ತನಕ ಭಾಷಣವಿತ್ತರು. ತದನಂತರ ಮದ್ಯ ಕುಡಿತದಿಂದ ಉಂಟಾಗುವ ಹಾನಿಗಳನ್ನು ಸಭೆಯಲ್ಲಿ ಹಾಜರಿದ್ದ ಸುಮಾರು 300 ಜನ ಕ್ರೈಸ್ತರಿಗೆ ಸಾಧಾರಣ ½ ಗಂಟೆ ತನಕ ಹೇಳಿ, ಅವರು ತಾವು ಇಂದಿನಿಂದ ಪ್ರಥಮ ತಿಂಗಳಲ್ಲಿ ಆದಿತ್ಯವಾರವೂ, 2ನೇ ತಿಂಗಳಲ್ಲಿ ಪ್ರತಿ ಆದಿತ್ಯವಾರ ಮತ್ತು ಗುರುವಾರವೂ ಮತ್ತು ಅನಾಗ್ಗೆಯೂ ಹೀಗೆ 1 ವರ್ಷದಲ್ಲಿ ಸಂಪೂರ್ಣ ತ್ಯಜಿಸುತ್ತೇವಾಗಿ ಭರವಸೆ ಇತ್ತಿದ್ದಾರೆ. ಈ ಕೆಲ್ಸ ಮಾಡುವ ಬಗ್ಗೆ ಶ್ರೀ ಶೆಟ್ರು ಒಂದು ಕಮಿಟಿಯನ್ನು ಅವರಲ್ಲೇ ಆರಿಸಲ್ಪಟ್ಟ ಮೆಂಬರರಿಂದ ನಿರ್ಣಯಿಸಿರುವುದು ಸಂತೋಷಕರ. ಶ್ರೀ. ಶೆಟ್ರು ತಾನು ಈಗ ಕಟ್ಟಿಸುತ್ತಿರುವ ಬೈಂದೂರು ಪ್ರಸೂತಿಗಾರ ಕಟ್ಟಡಕ್ಕೆ ಧನಸಹಾಯಮಾಡಬೇಕಾಗಿಯೂ ಅವರಲ್ಲಿ ವಿನಂತಿಸಿಕೊಂಡರು.

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. 8/39

ಸುಬ್ಬಮ್ಮ—ಅರ್ಜಿದಾರಳು
ವೆಂಕಟ್ರಮಣಯ್ಯ ಕೂಡಾ ಎದ್ರಿರು,
ಸದ್ರಿ ಎದ್ರಿಯರಿಗೆ ಈ ಮೂಲಕ
ತಿಳಿಸುವುದೇನೆಂದ್ರೆ

ಅರ್ಜಿದಾರಳು ವಾರೀಸ್ ಸರ್ಟಿಫಿಕೇಟ್ ಕೊಡಿಸಬೇಕಾಗಿ ದಾಖಲ್ಲುಮಾಡಿದ ಮೇಲ್ಕಂಡ ಅರ್ಜಿಯು ವ್ಯಾಜ್ಯಯು ತಾ. 19-7-39ಕ್ಕೆ ತನ್ಕ ಬಗ್ಗೆ ಇಟ್ಟಿದೆ. ಆದ್ರಿಂದ ಸದರಿ ಅರ್ಜಿಯಲ್ಲಿ ಉದಾಹರಿಸಪಟ್ಟಿದ್ದ ಆದಿವಸ 10 ಗಂಟೆಗೆ ಸರಿಯಾಗಿ ಮೇಲ್ಕಂಡ ಕೋರ್ಟಿನಲ್ಲಿ ಸ್ವತಃ ವ ವಕೀಲರ ಮುಖಾಂತ್ರ ಹಾಜರು ಆಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷ ವಿಚಾರಣೆಯಿಂದ ತೀರ್ಮಾನಿಸಲಾಗುವುದು, ತಿಳಿದಿರಲಿ.

ಪುತ್ತೂರು, 21—6—'39. } C. S. Shastry, *Vakil for Petitioner*

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)
ತಾ 25 6 39

ನಗರ ಸಭೆ—ಕಳೆದ ತಾ. 19ನೇ ಸೋಮವಾರ ಸಾಯಂಕಾಲ 5 30ಕ್ಕೆ ಸರಿಯಾಗಿ ಮಂಗಳೂರು ನಗರ ಸಭೆಯ ಮೀಟಿಂಗು ಶ್ರೀ ಬಿ ವಿ ಎಂ ಕಾಗರ ಅಧ್ಯಕ್ಷತೆಯಲ್ಲಿ ಜರುಗಿತು. ಕೆಲ ಸರಕಾರಿ ಪತ್ರ ಮುಂತಾದ ಓದಿ ರೆಕಾರ್ಡ ಮಾಡಲ್ಪಟ್ಟವು. ಕೆಲವು ಬಿಲ್ಲುಗಳಿಗೆ ಹಣ ಮಂಜೂರುಮಾಡಲಾಯಿತು. ಮಾರ್ಕೆಟುಗಳ ದುರಸ್ತಿಗಾಗಿ ಇಟ್ಟಿರುವ ಹಣವನ್ನು ಎಲ್ಲಾ ಮಾರ್ಕೆಟುಗಳ ದುರಸ್ತಿ ಬಗ್ಗೆ ಉಪಯೋಗಿಸಬೇಕೆಂದೂ, ಮಿಸ್ಟರ್ ಎಂ ಅಬ್ಬಾಸರಿಗೆ ಪ್ರತ್ಯೇಕ ನಕ್ಷೆಯನ್ನು ಒದಗಿಸಬೇಕೆಂದೂ, ವಿ | ಫೀಸ್ ಅಲ್ಲಿ ಕಕ್ಷಿರ ಪತ್ರವನ್ನು ಸ್ಥಳೀಯಸಂಸ್ಥೆಗಳ ವ್ಯಕ್ತಿಗಳಿಂದ ಅನಾವರಣವಾಗಿಸಬೇಕೆಂದೂ ಆ ಒಗ್ಗೆ ವ್ಯಕ್ತಿಗಳನ್ನು ಕೇಳಿಕೊಳ್ಳಬೇಕೆಂದೂ, ಬರುವ ಅಕ್ಟೋಬರ ತಿಂಗಳ ವರೆಗೆ ಉಮೇದ್ವಾರರ ಗವಿಗಳನ್ನು ಪರೀಕ್ಷಿಸಲು ತೋಟಗಾರಿಗೆ ಎಡೆ ಇಲ್ಲದೆ ಕೊಡಬೇಕೆಂದೂ—ಇನ್ನೂ ಮಾಡಲಾದ ನಿರ್ಧಾರಗಳಾದುವು. ಇತರ ಕಲ ವಿಷಯಗಳು ಚರ್ಚಿಸಲ್ಪಟ್ಟು ಅವುಗಳ ಮೇಲೆ ನಿರ್ಧಾರಗಳಾದ ತರುವಾಯ ಸಭೆಯು ಮುಕ್ತಾಯವಾಯಿತು.

ಬೆಂದೂರು ವಾರ್ಡ್ ತೆರಿಗೆದಾರರ ಸಂಘ—ಬೆಂದೂರ ವಾರ್ಡ್ ಕೆಲ ಮತದಾರರು ಕಳೆದ ತಾ 18ನೇ ಒಾನ ವಾರ ಸಾಯಂಕಾಲ ಆರ್ಯಸಮಾಜ ಮಂದಿರದಲ್ಲಿ ಶ್ರೀ ಎಸ್ ರಾಮಚಂದ್ರ ಅಯ್ಯರರ ಅಧ್ಯಕ್ಷತೆಯಲ್ಲಿ ಸಮೇರಿ 1 ಬೆಂದೂರು ವಾರ್ಡಿನಿಂದ ಮ್ಯುನಿಸಿಪಲ್ ತೆರಿಗೆದಾರರ ಸಭೆಯನ್ನು ಸ್ಥಾಪಿಸಬೇಕೆಂದೂ, 2, ಈ ಸಂಘವು ಈ ವಾರ್ಡಿನ ಮತದಾರರ ಮತ್ತು ಈ ವಾರ್ಡಿನಲ್ಲಿ ನೆಲೆಸಿರುವ ಜನರ ಹಿತಕ್ಕಾಗಿ ದುಡಿಯಬೇಕೆಂದೂ, 3 ಈ ಸಂಘಕ್ಕೆ ಸದಸ್ಯರಾಗಿ ಸೇರುವವರು ವಾರ್ಷಿಕ ಒಂದಾಣೆ ಚಂದಾ ಹಣ ತರಬೇಕೆಂದೂ, ನಿಶ್ಚಯವಾಯಿತು, ಮತ್ತು ಸಂಘಕ್ಕೆ ಸದಸ್ಯರನ್ನು ಸೇರಿಸಲು ಐದು ಮಂದಿ ಸದಸ್ಯರಿರುವ ಒಂದು ಸಮಿತಿಯು ಏರ್ಪಟ್ಟಿತು. ಮಂಗಳೂರು ಮ್ಯುನಿಸಿಪಲ್ ರೇಟ್ ಪೇಯರ್ಸ್ ಎಸೋಸಿಯೇಶನಿಗೆ ಈ ಸಂಘವನ್ನು ಸಂಯೋಜಿಸುವ ವಿಷಯವನ್ನು ಮುಂದಿನ ಸಭೆಯಲ್ಲಿ ನಿರ್ಣಯಿಸಬೇಕೆಂದು ತೀರ್ಮಾನವಾಯಿತು.

ಸಹಾಯ—ಸ್ಥಳೀಯ ದೀನಬಂಧು ಅನಾಥಾಶ್ರಮದ ಸಹಾಯಾರ್ಥವಾಗಿ ಸ್ಥಳೀಯ ಶ್ರೀ ಕೃಷ್ಣ ಬಜಾರ ಮಾಲಿಕರ ಪತ್ನಿ ಶ್ರೀ ಮತಿ ರಮಾಬಾಯಿ ಶ್ರೀ ಬಿ ಲಕ್ಷ್ಮಣ ಪೈ ಮಾಸ್ತರ ಗಳ ದ ಒಂದು ಪರಿಕರವನ್ನು ಮಾಡಿಸಿ ಪಾತ್ರೆ ಸಾಮಾನುಗಳನ್ನು ದಾನಮಾಡಿದರು. ಶ್ರೀ ಶ್ರೀಪತಿರಾಯರ ಬಂದ ದಾನವು ಸ್ತುತ್ಯವಾದದ್ದು.

ಕೋ ಓಪರೇಟಿವ್ ಯೂನಿಯನ್—ಶ್ರೀ ಎಂ ರಾಮಕೃಷ್ಣ ಇವರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ಯೂನಿಯನ್ನಿನ ವಾರ್ಷಿಕ ಮಹಾಸಭೆಯು ಜರುಗಿ ಗತವರ್ಷದ ವರದಿ ಲೆಕ್ಕಪತ್ರಗಳು ಪರಿಶೀಲಿಸಲ್ಪಟ್ಟು ಮಂಜೂರುಮಾಡಲ್ಪಟ್ಟವು. ಇದೇ ಸಭೆಯಲ್ಲಿ ಹೊಸ ಅಧಿಕಾರಿಮಂಡಲದ ಚುನಾವಣೆಯೂ ನಡೆಯಿತು.

ಶ್ರೀರಾಮಕೃಷ್ಣ ಯುವಕ ಸಂಘ—ಈ ಸಂಘದ ವಾರ್ಷಿಕ ಸಭೆಯು, ಸಭೆಯ ಕಚೇರಿಯಲ್ಲಿ ಕಳೆದ ತಾ 18ನೇ ಭಾನುವಾರ ನಡೆಯಿತು. ಕಾರ್ಯದರ್ಶಿಗಳು ಗತವರ್ಷದ ವರದಿಯನ್ನು ಸಭೆಯ ಮುಂದಿಟ್ಟರು. ಹೊಸ ವರ್ಷದ ಆಡಳಿತ ಮಂಡಲಿಯ ಸದಸ್ಯರ ಚುನಾವಣೆ ನಡೆಯಿತು. ಶ್ರೀಗಳಾದ ಪಿ ವೆಂಕಟ ಹೆಗ್ಗಡೆ, (ಅಧ್ಯಕ್ಷರು) ಕೆ ನಾರಪ್ಪ ಶೆಟ್ಟಿ (ಉಪಾಧ್ಯಕ್ಷ) ಸಂಜೀವ ಭಂಡಾರಿ ಮತ್ತು ಶೀನಶೆಟ್ಟಿ (ಜತೆಕಾರ್ಯದರ್ಶಿಗಳು) ವತ್ತು ಕೆ ಗಣಪಶೆಟ್ಟಿ (ಕೋಶಾಧಿಕಾರಿ) ಹಲವರ ಭಾಷಣಗಳೂ, ಟೀಪಾರ್ಟಿ ಸತ್ಕಾರವೂ ನಡೆದ ತರುವಾಯ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಆನರೆರಿ ಎಸಿಸ್ಟೆಂಟ್ ಮೆಡಿಕಲ್ ಆಫೀಸರರು—ಸ್ಥಳೀಯ ಹೆಡ್‍ಕ್ವಾರ್ಟರ್ ಆಸ್ಪತ್ರೆಯ ವೆನರಿಯಲ್ ಡಿಪಾರ್ಟ್‍ಮೆಂಟಿಗೆ ಶ್ರೀ ಯು ಪದ್ಮನಾಭ ಮಲ್ಯರೂ, ಅದೇ ಆಸ್ಪತ್ರೆಯ ಸರ್ಜಿಕಲ್ ಇಲಾಖೆಗೆ ಶ್ರೀ ಯಂ ಪ್ರಭುಗಳೂ, ಕಾಸರಗೋಡು ಸರಕಾರಿ ಆಸ್ಪತ್ರೆಗೆ ಶ್ರೀ ಕೆ ಕೃಷ್ಣಭಟ್ಟರೂ, ಆನರೆರಿ ಆಸಿಸ್ಟೆಂಟ್ ಮೆಡಿಕಲ್ ಆಫೀಸರರಾಗಿ ಆರಿಸಲ್ಪಟ್ಟಿರುವರು. ಈ ಮಹನೀಯರುಗಳು ತಾವು ಅಧಿಕಾರವನ್ನು ವಹಿಸಿದಂದಿನಿಂದ ಐದು ವರ್ಷಗಳ ವರೆಗೆ ಈ ಹುದ್ದೆಗಳಿಗೆ ನೇಮಿಸಲ್ಪಟ್ಟಿರುವರು. ಹೊಸ ಆನರೆರಿ ಅಸಿಸ್ಟೆಂಟ ಮೆಡಿಕಲ್ ಆಫೀಸರರುಗಳಿಗೆ ನಮ್ಮ ಅಭಿನಂದನೆಗಳು.

ಯೇಣಗುಡ್ಡೆ ಪಂಚಾಯ್ತ್ ಕೋರ್ಟಿನಲ್ಲಿ

ಶಿ ವ್ಯಾ ಸಂಬ್ರ 3/39

ಶೀತಾರಾಮಭಟ್ಟ, ರಂಗಭಟ್ಟ ಮಗ ಯೇಣಗುಡ್ಡೆ ಗ್ರಾಮದ ಅಗ್ರಹಾರದಲ್ಲಿರುವವ } ವಾದಿ

ಮತ್ತು

ಸಿ. ಗೋವಿಂದರಾವ್ ಜನಾರ್ಧನಯ್ಯನವರ ಮಗ ಪಾಂಗಾಳಗ್ರಾಮದಲ್ಲಿರುವವ } ಪ್ರತಿವಾದಿ

ಇವರೊಳಗೆ

ಮೇಲ್ಕಂಡ ವ್ಯಾಜ್ಯದ ಪ್ರತಿವಾದಿ ಸಿ ಗೋವಿಂದರಾಯರಿಗೆ ಈ ಮೂಲಕ ತಿಳಿಯ ಪಡಿಸುವದೇನಂದರೆ—ಸದ್ರೀ ವ್ಯಾಜ್ಯವನ್ನು ತಾ 29-7-39ಕ್ಕೆ ತನ್ಖಿಗ ಇಟ್ಟಿದೆ. ಸದ್ರೀ ದಿವಸ ಪೂರ್ವಾಹ್ನ ಘಂಟೆ 11 ಕ್ಕೆ ನೀವು ಹಾಜರಾಗಿ ನಿಮ್ಮ ಬಚಾವಿನ ಉತ್ತರವನ್ನು ದಾಖ್ಲಮಾಡತಕ್ಕದ್ದು. ಇದಕ್ಕೆ ತಪ್ಪಿದರೆ ನಿಮ್ಮ ಗೈರ್ ಹಾಜರಿಯಿಂದ ಸದ್ರೀ ವ್ಯಾಜ್ಯವನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಗುಡ್ಡೆ
ತಾ 24 6 39 } ಕೆ. ಗಣಪಯ್ಯ ಸೆಟ್ಟಿ, ಪ್ರೆಸಿಡೆಂಟ್, ಯೇಣಗುಡ್ಡೆ ಪಂಚಾಯ್ತ್ ಕೋರ್ಟು

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಶ್ರೀ. ಜಯಚಾಮರಾಜೇಂದ್ರ ಸೇತುವೆಯ ಪ್ರಾರಂಭೋತ್ಸವ

ಮಂಡ್ಯದ ಬಳಿಯಿರುವ ಹಲಗೂರಿನ ಹತ್ತಿರ ಶಿಂಷಾ ನದಿಗೆ ಅಡ್ಡಲಾಗಿ ಹಾಕಿರುವ ಜಯಚಾಮರಾಜೇಂದ್ರ ಸೇತುವೆಯ ಪ್ರಾರಂಭೋತ್ಸವವನ್ನು ಶ್ರೀಮನ್ಮಹಾರಾಜರವರು ತಾ. 29-6-39ರಲ್ಲಿ ನೆರವೇರಿಸುವರು.

ಶ್ರೀ. ಸತ್ಯಮೂರ್ತಿಗಳು—ಬೆಂಗಳೂರಿನಲ್ಲಿ ವಿಶ್ರಾಂತಿ ಪಡೆಯುವ ಸಲುವಾಗಿ ಬಂದಿರುವ ಮದ್ರಾಸಿನ ಕಾಂಗ್ರೆಸ್ ಮುಂದಾಳುಗಳಾದ ಶ್ರೀಯುತ ಸತ್ಯಮೂರ್ತಿಗಳು ಕಳೆದವಾರಾಂತ್ಯದಲ್ಲಿ ಅನೇಕ ಕಡೆಗಳಲ್ಲಿ ಉಪನ್ಯಾಸ ಮಾಡಿದರು. ಈಗ್ಗೆ ಮುಂಬಯಿಗೆ ಹೊರಟಿರುವರು.

ಯುವತಿಗೆ ಪತ್ರ ಬರೆದ—ಸಾಗರದ ಮ್ಯುನಿಸಿಪಲ್ ಹೈಸ್ಕೂಲ್ ಮೊದಲನೆ ತರಗತಿಯಲ್ಲಿ ಓದುತ್ತಿದ್ದ ಭೋಜಕೃಷ್ಣರಾವ್ ಎಂಬ ಯುವಕನು ಅದೇ ಹೈಸ್ಕೂಲಿನಲ್ಲಿದ್ದ ಓರ್ವ ಯುವತಿಗೆ ಕೆಟ್ಟ ಕಾಗದ ಬರದನೆಂದ ಗೊತ್ತಾಗಲು ಆ ಯುವಕನನ್ನು ಒಂದು ವರ್ಷ ಡಿಬಾರ್ ಮಾಡಿರುತ್ತಾರೆ.

ಪೌರಸಭಾಧ್ಯಕ್ಷರು—ಮೈಸೂರು ಪೌರ ಸಭಾಧ್ಯಕ್ಷರಾಗಿದ್ದ ಶ್ರೀ ಎಂ ಎ ಶ್ರೀನಿವಾಸನ್‍ರವರನ್ನು ಸಂಸ್ಥಾನದ ಕೈಗಾರಿಕೋದ್ಯಮಗಳ ಕಾರ್ಯದರ್ಶಿಗಳನ್ನಾಗಿ ನೇಮಿಸಿದ್ದರಿಂದ ಆ ಸ್ಥಾನದಲ್ಲಿ ಶ್ರೀ ನವನೀತಂ ನಾಯ್ಡುರವರು ತಮ್ಮ ಪದವಿಯನ್ನು ಸ್ವೀಕರಿಸಿದರು.

ಚೀಫ್ ಇಂಜನೀಯರ್ ರಾಜಿನಾಮೆ—ಮೈಸೂರು ಸಂಸ್ಥಾನದ ಚೀಫ್ ಇಂಜನೀಯರ್ ದಿ| ಬಾ| ಯಸ್. ಯನ. ಅಯ್ಯಂಗಾರ್‍ರು ಯಾವುದೋ ಒಂದು ಮನಸ್ತಾಪ ಬಂದಿತೆಂದು ಹೇಳಲಾಗಿದೆ ಎಂಬುದರ ಮೇಲೆ ತಮ್ಮ ಪದವಿಗೆ ರಾಜಿನಾಮೆಯಿತ್ತಿರುತ್ತಾರೆ. ಇವರ ಸ್ಥಾನದಲ್ಲಿ ಶ್ರೀ ಶರಭೋಜರವರನ್ನು ನೇಮಿಸಲಾಗಿದೆ.

ದಸ್ತಗಿರಿ—ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ರಾಜದ್ರೋಹಕರವಾದ ಭಾಷಣಮಾಡಿದರೆಂಬ ಆಪಾದನೆಯ ಮೇಲೆ, ಅಲ್ಲಿಯ ಡಿ| ಮ್ಯಾ| ಹೊರಡಿಸಿದ ಒಂದು ವಾರಂಟಿನ ಮೇರೆ, ರಾಜಧಾನಿಯಲ್ಲಿ ಪೋಲೀಸರು, ಶ್ರೀ. ಮಳವಳ್ಳಿ ವೀರಪ್ಪನವರನ್ನು ಕ್ರಿ| ಪ್ರೊ| 144ನೇ ಸೆ| ಪ್ರ ಕಾರ ನೋಟೀಸ್ ದಸ್ತಗಿರಿಮಾಡಿ, ತುಮಕೂರಿಗೆ ಕೊಂಡೊಯ್ದರು. ಶ್ರೀಯುತರ ವಿಚಾರಣೆಯು ಸದ್ಯದಲ್ಲೇ ನಡೆಯುತ್ತ.

ರೈಲ್ವೆ ಕೆಲಸಗಾರರ ಸಂಘ—ಮೇಲ್ಕಂಡ ಸಂಘವನ್ನು ಸ್ಥಾಪಿಸಿಕೊಳ್ಳುವ ವಿಚಾರದಲ್ಲಿ ರೈಲ್ವೆ ಕೆಲಸಗಾರರೆಲ್ಲರೂ ಸೇರಿ ಒಂದು ದೊಡ್ಡ ಮನವಿ ಹೊರಡಿಸಿ ಕೆಲವು ವಿಷಯಗಳನ್ನು ತಿಳಿಸಿದ್ದಾರೆಂದು ತಿಳಿದುಬಬಂದಿದೆ.

ಶ್ರೀಮದ್ಯುವರಾಜರ ಭಾಷಣ—ಸುಪ್ರಸಿದ್ಧ ಪ್ರವಾಸಿಗಳಾದ ಶ್ರೀ| ದೇವದಾಂಪುಕರ್‍ ರವರು ತೆಗೆದಿರುವ ಅಮೇರಿಕಾ ದೇಶದ ಮತ್ತು ಇತರ ಕೆಲವು ಚಿತ್ರಪಟಗಳನ್ನು, ಶ್ರೀಮನ್ ಮಹಾರಾಜ ಮತ್ತು ಯುವರಾಜರ ಸಮ್ಮುಖದಲ್ಲಿ ಜಗನ್ಮೋಹನ ಬಂಗಲೆಯಲ್ಲಿ ಪ್ರದರ್ಶಿಸಿದರು. ಈ ಸಮಯದಲ್ಲಿ ಶ್ರೀಮದ್ಯುವರಾಜರು ಒಂದು ಭಾಷಣ ಮಾಡಿ ಶ್ರೀ| ಪುಕರ್‍ರವರ ಕಾರ್ಯವನ್ನು ಮೆಚ್ಚಿದರು.

ಶ್ರೀಮತಿ ಬೃಜಲಾಲ ನೆಹ್ರೂರವರು ಎಂ ದಿನ ತಿಂಗಳು ರಾಜಧಾನಿಗೆ ಬರುವರೆಂದು ಖಚಿತವಾಗಿ ತಿಳಿದಿದೆ.

ಸಂಗೀತ

ಕಲಿವವರಿಗೆ ಸುಸಂಧಿ

ದತ್ತ ಮಂದಿರ

(ಹೆಂಗಸರ ಗವರ್ನ್‍ಮೆಂಟ್ ಟ್ರೈನಿಂಗ್ ಶಾಲೆಯ ಎದುರು)

ಉಡುಪಿ

ಇಲ್ಲಿ ಸಂಗೀತವನ್ನು ಶಾಸ್ತ್ರೀಯ ರೀತ್ಯಾ ಮುತವರ್ಜಿಯಿಂದ ಕಲಿಸಲಾಗುತ್ತೆ. ಹೆಚ್ಚಿನ ಮಾಹಿತಿಗೆ ವಿಚಾರಿಸುವುದು

ನರಸಿಂಹ ಸೇರಿಗಾರ್,
ಹಾರ್ಮೋನಿಯಂ ಮಾಸ್ತರ್

ಚಿತ್ರ ಸಮಾಚಾರ್

ಇದೀ ಕರ್ನಾಟಕದಲ್ಲೇ ಚಲಚ್ಚಿತ್ರಗಳಿಗಾಗಿ ಮೀಸಲಾಗಿರುವ ಕನ್ನಡ ಮಾಸ ಪತ್ರಿಕೆ ಇದೊಂದೇ

- ಬಿಸಿ ಬಿಸಿ ಚಲಚ್ಚಿತ್ರ ಸುದ್ದಿಗಳು
- ಸುಂದರ ಚಿತ್ರಗಳು.
- ಮನಸೆಳೆವ ಕಥೆಗಳು.
- ವಿವಿಧ ವಿಚಿತ್ರ ವಾರ್ತೆಗಳು
- **Solutions to "ILLUSTRATED WEEKLY OF INDIA" Competitions.**

ಇತ್ಯಾದಿ – ಇತ್ಯಾದಿ – ಇತ್ಯಾದಿ ಗಳೊಂದಿಗೆ ಸುಂದರವಾಗಿ ಪ್ರಕಟವಾಗುವುದು

ಇದುವರಿವಿಗೊ

ನೀವು ಚಂದಾದಾರರಾಗಿದ್ದರೆ ಕೂಡಲೇ ಗಡಿಕಳ ವಾರ್ಷಿಕ ಚಂದಾದಾರರಾಗಿರಿ

For wide publicity & BEST RESULTS
Advertise in
"CHITRA SAMACHAR"
The only leading Anglo Kannada Films monthly
Rates Cheap-Results Quick
Apply — The Manager
'CHITRA SAMACHAR'
Chamarajapet Bangalore City

THE
PANGAL NAYAK BANK
Estd 1 LIMITED. [1920

ದಿ ಪಾಂಗಾಳನಾಯಕ್ ಬೇಂಕ್ ಲಿಮಿಟೆಡ್.

Paid up Capital Rs 1,82,100/- Reserves Rs 2,02 800/-.
PRINCIPAL OFFICE COURT ROAD, UDIPI.
OTHER OFFICES
UDIPI, MANGALORE, KATAPADI, & KANHANGAD

——o——

Season Deposits so as to bear interest at 4per cent per annum till the end of June 1939 are accepted

Cumulative Deposits are also received on the usual terms

Banking business of every description is transacted. Further particulars may be had on application.

ದಿ ವಿಜಯ ಬೇಂಕ್, ಲಿಮಿಟೆಡ್,
ಮಂಗಳೂರು

ಶಾಖೆಗಳು.—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವ್ಯವಹಾರಗಳು ಇಲ್ಲಿ ನಡೆಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಾತಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3 ತಿಂಗಳಿಗೆ	..	3½%
6 "	....	4%
1 ವರ್ಷಕ್ಕೆ	.	4½%
2 "	..	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ.

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನು ಪ್ರೋತ್ಸಾಹವನ್ನು ಕೋರುತ್ತದೆ.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್

ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು

ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುವು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು:- ಶ್ರೀ. ಹಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,

President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,

ಗವರ್ನಮೆಂಟ್ ಕೋಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ

ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,

Hampankatte, **MANGALORE.**

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುವು. ಇದು ಮಧುರವಾಗಿದೆ ಆಶಿಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1ಕ್ಕೆ 12 ಆಣೆ, ಟ ಖ ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ.

ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್ ಡಿಪೋ, ಉಡುಪಿ.**

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ

ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಡುನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅಪ್ಪಟವಾದ ಅಮೃತ. ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ **1—8—0**

ಜೀವನಿ

ಬಿಹಿಷ್ಟೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತು ಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ **1—0—0.**

ನಮ್ಮ ರಿಜಿಸ್ಟರ್ಡ್ **"ಶ್ರೀಕರ ಕಸ್ತೂರೀ ಮಾತ್ರೆ"** ಮತ್ತು **"ಶ್ರೀಕರ ಬಾಲಸಂಜೀವಿನಿ"** ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ ಅಗತ್ಯವಾಗಿ ಇರಲೇಬೇಕಾದದ್ದು.

ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,

ಬ್ರಾಂಚ್—ಮಂಗಳೂರು.

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿದೆ.

ಕುಶಲವ

ಶ್ರೀ ಕೆ. ಕೆ. ಶೆಟ್ಟರು ಬರೆದಿರುವ

ನವ ಪೌರಾಣಿಕ ನಾಟಕ.

ಹಾಯರ್ ಎಲಿಮೆಂಟರಿ ಕ್ಲಾಸುಗಳ ವಿದ್ಯಾರ್ಥಿಗಳಿಗೆ

ಅತ್ಯುಪಯುಕ್ತವಾದುದು.

ಪ್ರಕಾಶಕರು: ಕಿರಿಯರ ಪ್ರಪಂಚ, ಉಡುಪಿ.

ವಿಕ್ರಯಾಧಿಕಾರಿಗಳು:-

Navabharat Book Depot, Udipi.

Rev. Fr. P. W. Farias,

St. Paul's Church,
Bolkunje Post, S. K.
Dated 4th January 1939.

To

THE JOINT MANAGERS,
The C. P. C. Co. Ltd., MANGALORE.

Sir

I thank you most sincerely for the promptness with which you arranged to take us to Mangalore and back during the grand occasion of the Diocesan Encharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the congress.

The glorious success of our congress is also due to your exertion in putting up the various lights some of which I hear were done voluntarily.

May the blessings of the Almighty fall on you all and may you be able to do much good to the public.

Renewing my thanks,
I remain,
Yours sincerely,
(*Sd.*) P. W. Farias.

To
THE JOINT MANAGERS,
THE COMBINED BOOKING AGENCY,
MANGALORE.

Sri Parshwanathaswamy
Panchakalyana Pooja Mahothsawam
VENOOR (S. Kanara 1939).

Dear Sirs,

Please permit us to express our thanks on behalf of the above committee for the efficient service rendered by your Combined Booking Agency staff at Venoor to the visitors of the Panchakalyana Pooja Mahosthamam celebrations held this year.

Our thanks are also due to Moodabidre Booking Clerk Mr. B Krishnayya and also his other mates and Mr. Raghavendra Bhandary who was specially come down from Mangalore to see the needs of and comforts of the travelling Public.

Thanking you once again,
We remain,
Yours faithfully,
(*Sd.*) **M. Jagathpal,**
(*Sd.*) **M. Pachappa Shetty,**
VENOOR, (*Sd.* in Canarese) **Anantharaja Shetty,**
Dated 6-2-'39. (Sd.) **B. Chandappa Indra,**
(*Secretary, P. M. Committee*).
Members, Panchakalayana Mahosthawam Committee.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	....	....	....	3	0	0
ಚಂದ್ರಗುಪ್ತ ಚಕ್ರವರ್ತಿ	....	....	....	1	0	0
Goutama Budda	...	....	....	0	8	0
भगवद्गीता	....	....	....	0	2	0
ಮಧುವನ	...	....	....	1	8	0
ಒಂದೇ ತಿಂಗಳಲ್ಲಿ ಇಂಗ್ಲಿಷ್		....	...	0	8	0
ಎರಡೇ ವಾರಗಳಲ್ಲಿ ಓದುಬರಹ		....	....	0	1	0
ಗೀತೆಯ ಕೈಗನ್ನಡಿ	....	....	....	0	4	0
ಭಗವದ್ಗೀತೆ	....	....	....	0	2	0
ತುಳು ವ್ಯಾಕರಣ	....	....	....	0	8	0
ಸಾಮುದ್ರಿಕ ಶಾಸ್ತ್ರ	....	....	....	0	8	0
ಸತ್ಯನಾರಾಯಣ ಕತೆ	...	....	....	0	8	0
ಪುರಂದರದಾಸರ ಪದಗಳು ಭಾಗ ೧		....	....	0	4	0
,, ಭಾಗ ೨		....	....	0	4	0
,, ಭಾಗ ೩		....	....	0	4	0
ತುಳುನಾಡ್ ತಿಲಕ ಪಂಚಾಂಗ		....	....	0	1	0
ವೈಜಯಂತೀ ಪಂಚಾಂಗ		....	....	0	2	6
ಕುಕ್ಕುಟ ಪಂಚಾಂಗ	....	....	....	0	1	0

ಇತ್ಯಾದಿ. ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors:*—**GENERAL SUPPLIES Ltd., Udipi**).

Supply Agency Limited.

(BANKERS.)

ESTD] **UDIPI** [1933

Authorised Capital Rs. 1,00,000
Subscribed & Paid up Rs. 31,000

RATE OF INTEREST FOR FIXED DEPOSITS.

3 to 6 Months 4% p. a.
7 to 11 ,, 5% ,,
12 to 18 ,, 6% ,,

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.